ನವಯುಗ

5—5—1966

NAVAYUGA

೧೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಮೊದಲು—

ರಾಮಚಂದ್ರ ಪದವಿ ಪಡೆಯುವಲ್ಲಿ ಅಸಫಲನಾಗಿ ಜಾನಕಿಯನ್ನು ಮದುವೆಯಾಗಿ ಮಿತ್ರ ಕೇದಾರಿಯನ್ನು ಅಗಲಿ ಅಲವಂತಿಗೆ ಮರಳಿದ. ದುರ್ದೈವದಿಂದ ಶಿಬಿರ ಗುಮಾಸ್ತನಾದ; ಜಮೀನನ್ನು ಮಾರಿದ. ಆದರೆ ಆತನ ಅದೃಷ್ಟದ ಬಾಗಿಲು ತೆರೆಯಿತು. ಮಿ| ಕೆಡೆಲರಿಂದಾಗಿ ದೂಸಿಯಲ್ಲಿ ಉಪತಾಲೂಕಧಿಕಾರಿಯಾದ; ಕರ್ತವ್ಯ ಪಾಲಕನೆಂದು ಹೆಸರು ಪಡೆದ.

ರಾಮುವಿನ ಒಕ್ಕಲು ಮುರುಗ ತೊಪ್ಪೆಸಂಗದಿಂದ ಶ್ರೀಮಂತನಾದ. ದುರ್ವ್ಯಸನಗಳು ಬೀಡಾದ. ದೊಂಬಿಯೊಂದರಲ್ಲಿ ಬಂಧಿತನಾದ; ದಂಡನೆಯೂ ದೊರೆಯಿತು; ಆದರೆ, ಸೆರೆಮನೆಯಿಂದ ಪರಾರಿಯಾದ.

ಕೇದಾರಿ ಉದಯೋನ್ಮುಖ ವಕೀಲ, ಹಣದ ಚಿಂತೆಯೊಂದೇ—ಅದರ ಮುಂದೆ ಕೋಕಿಲಂ ಕೂಡಾ ಸಪ್ಪೆ. ಸುಂದರ ಸ್ವಪ್ನ ಕಾಣುತ್ತ ಭವ್ಯ ಭವಿಷ್ಯತ್ತನ್ನೇ ಚಿಂತಿಸುತ್ತಿದ್ದ.

ಮುಂದೆ—

ಮರುದಿನ ಮದ್ರಾಸಿನ ಕಡಲುಕರೆಯಲ್ಲಿ ಕೇದಾರಿಯು ಮೆರೆಯುತ್ತಿದ್ದನು. ಸಂತೋಷವು ಅವನಲ್ಲಿ ತುಂಬಿ ತುಳುಕಾಡುತ್ತಿತ್ತು. ಕಾಯಿದೆಯ ಔದ್ಯೋಗಿಕ ಹೋರಾಟದಲ್ಲಿ ಅವನು ಆಗಲೇ ಹಲವಾರು ವಿಧಗಳ ದಾಖಲೆಗಳನ್ನು ಮೀರಿಸಿದ್ದನು. ಅವನು ತಿರುಚಿನಾಪಳ್ಳಿಯಿಂದ ಮರಳಿದ ಮರುದಿನವೇ, ಮುರುಗನು ಕೈತುಂಬ ಕೊಟ್ಟಿದ್ದ ಹಣದಿಂದ, ಒಂದು ಕಾರನ್ನು ಖರೀದಿ ಮಾಡಿದನು. ಆಶೆ ಕೈಗೂಡಿತಾದರೂ ತನ್ನ ಆಲೋಚನೆಯ ಕೇವಲ ಒಂದು ಭಾಗ ಮಾತ್ರ ಮುಗಿಯಿತೆಂದು ಅವನು ಭಾವಿಸಿದ್ದನು. ಅವನ ಮಹತ್ವಾಕಾಂಕ್ಷೆಗೆ ಮಿತಿಯು ಎಲ್ಲಿಯೂ ಇದ್ದಿಲ್ಲ.

ಆಂಗ್ಲೇಯ ನ್ಯಾಯವಾದಿಗಳ ಇತಿಹಾಸದ ಹಾಳೆಗಳನ್ನು ತಿರುವಿ ಹಾಕಿ, ಸ್ವಲ್ಪ ಸಮಯದಲ್ಲಿ ಆ ರೀತಿ ಜಯಶಾಲಿಯಾಗಿರುವವರಾರೂ ಇಲ್ಲವೆಂಬುದನ್ನವನು ಕಂಡುಕೊಂಡನು. ಪ್ರಪಂಚದ ಪ್ರಚಂಡ ವ್ಯಕ್ತಿಗಳ ಸ್ವಾನುಭವದ ಇತಿಹಾಸ ಹಾಗೂ ಜೀವನ ಚರಿತ್ರೆಗಳನ್ನು ಅವನು ಓದಿಕೊಂಡಿದ್ದು, ಅವರ ನಮ್ರಪೂರ್ಣ ಜೀವನದ ಆರಂಭವನ್ನು ನೋಡಿಕೊಂಡು ಉತ್ಸಾಹ ಪಡೆದುಕೊಂಡಿದ್ದನು. ಆತನ ಆವಶ್ಯಕತೆಗಳ ನೈಸರ್ಗಿಕ ಕಲ್ಪನೆಯು ಪುಸ್ತಕಗಳಿಂದ ಚೈತನ್ಯವನ್ನು ಪಡೆದುಕೊಳ್ಳುತ್ತಿತ್ತು. ಧೈರ್ಯ ಹಾಗೂ ಉದ್ಯೋಗ ಶೀಲತೆ, ಆಕಾಂಕ್ಷೆ ಮತ್ತು ಮುಂದಕ್ಕೆ ತಳ್ಳಿಸಿಕೊಳ್ಳುವಿಕೆಗಳು ವ್ಯಕ್ತಿಯ ಚರಿತ್ರೆಯ ಪುಟಗಳನ್ನು ಅದೃಷ್ಟದ ರೇಖೆಯನ್ನೂ ವೃದ್ಧಿಗೊಳಿಸುತ್ತವೆ.

ಒಬ್ಬನೇ ಒಬ್ಬನು ಮಾತ್ರ ಕಿರೀಟಿಯಾಗಿರುವ ಹಲವಾರು ಜನರ ಪತನವಾದಲ್ಲಿ ಮಾತ್ರ ಒಬ್ಬನ ಉತ್ಥಾನವಾಗಬಹುದು. ಅದುವೆ ಜೀವನದ ನಿರ್ದಯಿ ನಿಯಮವಿದೆ.

ತನಗೆ ಇಷ್ಟಬಂದಂತೆ ನೋಡುತ್ತ ಗಿಡುಗನು ಆಕಾಶದಲ್ಲಿ ಹಾರಾಡುವಂತೆ ಅವನು ಚಲಿಸುತ್ತಿದ್ದನು. ಮನೆಯಲ್ಲಿ ಅವನು ಪ್ರೀತಿಯ ಗಂಡನಂತೆ ಕಂಡುಬರುತ್ತಿದ್ದನಲ್ಲದೆ ನಿಜವಾಗಿ ಪ್ರೀತಿಯುಳ್ಳವನಿದ್ದರೂ ಕೂಡಾ ಮದುವೆಯು ಒಂದು ಚೆಂದದ ಬೀಸುವಕಲ್ಲೆಂದು ಆತನು ತಿಳಿದುಕೊಂಡಿದ್ದನು. ಕಾಗೆಯಾದರೋ 'ಕಾ ಕಾ' ಎನ್ನುತ್ತಾ ಮನೆಯ ಮಾಡಿನಿಂದ ಮನೆಯ ಮಾಡಿಗೆ ಹಾರಾಡಬಹುದು. ಆದರೆ ಗೂಬೆಗೆ ಅದೆಲ್ಲಿ ಸಾಧ್ಯ!

ಕೋಕಿಲಂ ಪರಿಶುದ್ಧಳು, ಒಳ್ಳೆಯವಳು ಹಾಗೂ ಪ್ರೀತಿಯುಳ್ಳವಳು ಆಗಿದ್ದರೂ ಕೂಡಾ ಹೆಚ್ಚು ಕಡಿಮೆ ಆಕೆ ಸಮಾನವಾದ ಜೋಡಿ ಅಲ್ಲವೆಂಬುದರಲ್ಲಿ ಸಂಶಯವಿಲ್ಲ. ಆಕೆ ತೃಪ್ತಿಯುಳ್ಳವಳೂ, ಭೀರು, ಜಾಗರೂಕತೆಯುಳ್ಳವಳೂ ಹಾಗೂ ನಿರಾಕಾಂಕ್ಷಿ. ಅರೆಪಂಡಿತ ಅರೆಅರ್ಚಕನ ಮಗಳಿದ್ದು, ದೈನಂದಿನ ಆಹಾರಕ್ಕಾಗಿ ಮಾತ್ರ ಯೋಚಿಸುವವಳು. ತನ್ನ ಆತ್ಮಬಲದಿಂದ ಕಟ್ಟಿರುವ ಸಾಮ್ರಾಜ್ಯದ ಒಡೆತನವನ್ನು ತನ್ನ ಮಕ್ಕಳು ತೆಗೆದುಕೊಳ್ಳಬೇಕೆಂದಾತನು ಆಶಿಸಿದ್ದನು.

ತನ್ನಷ್ಟಕ್ಕೆ ತಾನು ಆಲೋಚಿಸುತ್ತ, ಯಾವದೋ ಕಲ್ಪನಾಲೋಕದಲ್ಲಿ ವಿಹರಿಸುತ್ತಿದ್ದು ಸಮುದ್ರ ದಂಡೆಯ ದಾರಿಯಲ್ಲಿ ಹೋಗುತ್ತಿದ್ದಾಗ, ಒಬ್ಬೊಬ್ಬರಿಗೆ ಡಿಕ್ಕಿ ಹೊಡೆದಾಗ, ಅವನನ್ನು ಅವರು ಎಚ್ಚರಿಸಿ ಬಿಟ್ಟುದುದರಿಂದ ತನ್ನ ಪಾತ್ರವನ್ನವನು ಅರಿತುಕೊಂಡನು; ಇಲ್ಲದಿದ್ದಲ್ಲಿ ಆಸ್ಪತ್ರೆಯ ಹಾಸಿಗೆಯ ಮೇಲೆ, ಕಟ್ಟುಪಟ್ಟಿಗಳಿಂದ ಬಿಗಿಯಲ್ಪಟ್ಟವನಾಗಿ, ಇರಬೇಕಾಗುತ್ತಿತ್ತು. ದಾರಿಯಲ್ಲಿ ನಡೆಯುತ್ತಿರುವಾಗ ಕನಸು ಕಾಣುವದರಿಂದಾಗುವ ಅಪಾಯವನ್ನರಿತ ಕೇದಾರಿಯು, ಪಕ್ಕದಲ್ಲಿದ್ದ ವರ್ತಮಾನ ಪತ್ರಿಕೆಗಳಂಗಡಿಯಿಂದ ಒಂದು ಆಂಗ್ಲ ದೈನಿಕ 'ಹಿಂದೂ'ವಿನ ಸಂಚಿಕೆಯನ್ನು ತೆಗೆದುಕೊಂಡು, ಸಮುದ್ರ ದಂಡೆಯ ಮಳಲ ಹಾಗೆಯೆ ಅವಸರದಿಂದ ಕಾಲು ಹಾಕಲಾರಂಭಿಸಿದನು. ತೆರೆಗಳ ಏರಿಳಿತವು ಅವನಿಗೆ ಆನಂದವನ್ನಿತ್ತುವು; ಹಾಗೆ ಅವನು ಪತ್ರಿಕೆಯ ವಾರ್ತಾಪುಟದತ್ತ ದೃಷ್ಟಿ ಹಾಯಿಸಿದನು. ಕಣ್ಣು ಸೆಳೆಯುತ್ತಿದ್ದ ದಪ್ಪ ಅಕ್ಷರಗಳ ಶಿರೋನಾಮೆಯ ಸಹಿತ ಈ ರೀತಿ ಬರೆದಿದ್ದುದನ್ನು ಆತನು ಕಂಡನು:

ತಿರುಚಿನಾಪಳ್ಳಿ ಕೇಂದ್ರ ಕಾರಾಗೃಹದಿಂದ ಎದೆಗಾರರ ಪರಾರಿ

[ನಮ್ಮ ಸ್ವಂತ ಸುದ್ದಿಗಾರರಿಂದ]

ರಾತ್ರಿ, ಸಾಧಾರಣ ಎರಡೂವರೆ ಘಂಟೆಯ ಹೊತ್ತಿಗೆ, ಮುವ್ವರು ಕೈದಿಗಳು ಸಾಹಸದಿಂದ ತಪ್ಪಿಸಿಕೊಂಡು ಓಡಿಹೋಗಿದ್ದಾರೆ. ಅವರಲ್ಲಿ ಒಬ್ಬನು ಇತ್ತೀಚೆಗೆ ದೊಂಬಿಯಲ್ಲಿ ಭಾಗವಹಿಸಿದ್ದುದರಿಂದ ಶಿಕ್ಷೆಗೊಳಪಟ್ಟಿದ್ದ ಮುರುಗ ಎಂಬವನಿದ್ದಾನೆ. ಇನ್ನುಳಿದ ಇಬ್ಬರ ಹೆಸರು ಇನ್ನೂ ತಿಳಿದು ಬಂದಿಲ್ಲ. ಕಾವಲುಗಾರರನ್ನು ಹಾಗೂ ಅಧಿಕಾರಿಗಳನ್ನು ಚೆನ್ನಾಗಿ ಕಟ್ಟಿ ಬಿಗಿದು ಹಾಕಿದ್ದಾರೆ. ನಗರ ರಕ್ಷಕರು ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡಿರುವಂತಾದರೂ, ಯಶದ ಮೇಲೆ ನಂಬಿಕೆ ಇಲ್ಲವೆನ್ನಲಾಗುತ್ತಿದೆ. ಯಾಕೆಂದರೆ ತಪ್ಪಿಸಿಕೊಂಡು ಹೋದವರಲ್ಲಿ ಓರ್ವ ಕೈದಿಯು ಸೆಂಗಲ್‌ಪೇಟೆಯಲ್ಲಿರುವ ಭಯಂಕರ ದರೋಡೆಗಾರರ ಮುಖಂಡನೆಂದು ನಂಬಲಾಗಿದೆ. (ತಂತಿಯಿಂದ)

ಸುದ್ದಿಯನ್ನೋದಿದ ಕೇದಾರಿಯು ವೈಶಿಷ್ಟ್ಯಪೂರ್ಣ ಗರ್ವದಿಂದ ಹಿಗ್ಗಿಹೋದನು. ತಾನು ಹೂಡಿದ ವಾದವು ಒಬ್ಬ ಪೌರೇಯನ ಮುದಿಕಿವಿಗಳ ಮೇಲೆ ಬಿದ್ದಾಗ ಪ್ರಯೋಜನವಾಗದಿದ್ದರೂ ವಿಧಿಯ ಲಕ್ಷ್ಯಕ್ಕೆ ಬಂದಿತೆಂದಾತನು ಭಾವಿಸಿದನು. ಸ್ವಸಂತುಷ್ಟಿಯ ಮುಗುಳ್ನಗೆಯನ್ನವನು ಬೀರಿದನು. ಆ ಕ್ಷಣದಲ್ಲೇ ಧನ್ಯವಾದದ ಪತ್ರವನ್ನು — ಹೆಚ್ಚಿಗೆ ಹಣಕ್ಕೆ ವಿನಂತಿಯನ್ನೂ — ಬರೆದು ಕಳುಹಿಸಬೇಕೆಂದಾತನು ಆಲೋಚಿಸಿದನು. ಆದರೆ, ಪರಾರಿಯಾಗುವ ಕೈದಿಗಳು ತಮ್ಮ ವ್ಯಾಜ್ಯದ ಸಲಹೆಗಾರನಿಗೂ ಪತ್ತೆಯನ್ನು ಕೊಟ್ಟು ಹೋಗುವದಿಲ್ಲವೆನ್ನುವದು ಒಡನೆ ಅವನ ಜ್ಞಾಪಕಕ್ಕೆ ಬಂತು.

ಉಚ್ಚನ್ಯಾಯಾಲಯದಲ್ಲಿ ಮಧ್ಯಾಹ್ನ ದೊರಕಿದ್ದ ಜಯವು ಕೇದಾರಿಯ ಮನಸ್ಸಿಗೆ ಅಮಲೇರಿಸಿತ್ತು. ಗೆಳೆಯರ ತಮಾಷೆಗಾಗಿ ತನ್ನ ಹಿರಿಯವನೊಬ್ಬನನ್ನು ಆವನು ಕೆಳಗೆಸೋಲಿ ಮಾಡಿದ್ದನು. 'ಹಿಂದೂ'ವಿನ ಇತರ ಪಂಕ್ತಿಗಳತ್ತ ದೃಷ್ಟಿ ಹಾಯಿಸಲೂ ಅವನಿಗೆ ಮನಸ್ಸು ಬರಲಿಲ್ಲ. ಅಂದು ಬೆಳಿಗ್ಗೆ ಹೂಡಿದ್ದ ವಾದವು ಅದರಲ್ಲಿ ಸುದ್ದಿಗಾರನಿಂದ ಚೆನ್ನಾಗಿ ಉಪ್ಪುಕಾರ ಹಚ್ಚಿಸಿಕೊಂಡು ಪ್ರಕಟವಾಗಿತ್ತು.

(ಹನ್ನೊಂದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	$5\frac{1}{2}$
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	$6\frac{1}{2}$
24 ತಿಂಗಳಿಂದ	36 ತಿಂಗಳ ಕೆಳಗೆ	$6\frac{3}{4}$
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	$7\frac{1}{4}$
60 ತಿಂಗಳಿಂದ	84 ತಿಂಗಳ ಕೆಳಗೆ	$7\frac{3}{4}$
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.



Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಮೆರಿಕದ ಉಪಾಧ್ಯಕ್ಷ ಹಂಫ್ರಿಯವರು ಇತ್ತೀಚಿಗೆ ಭಾರತಕ್ಕೆ ಬಂದಾಗ ಪ್ರಥಮವಾಗಿ ಲುಧಿಯಾನಾದಲ್ಲಿ ನಿಂತು ಪಂಜಾಬು ಎಗ್ರಿಕಲ್ಚರಲ್ ಕಾಲೇಜಿನಲ್ಲಿ ಉತ್ತಮ ತರದ ಗೋಧಿ ಬೆಳೆಯನ್ನು ಪರೀಕ್ಷಿಸುತ್ತಿದ್ದಾರೆ. ಅವರ ಜತೆಗೆ ಪಂಜಾಬಿನ ಹಂಗಾಮಿ ಗವರ್ನರ್ ಉಜ್ಜಾಲ್ ಸಿಂಗ್ ಮತ್ತು ವೈಸ್ ಚಾನ್ಸಲರ್ ಪಿ. ಎನ್. ಥಾಪರ್ ಇದ್ದಾರೆ.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೩೪	೫—೫—೧೯೬೬	No. 34

ಆಡಳಿತದಲ್ಲಿ ಸುಧಾರಣೆ

ಕೇಂದ್ರ ಸರಕಾರವು ಶ್ರೀ ಮುರಾರಜಿ ದೇಸಾಯರ ಹಿರಿತನದಲ್ಲಿ ನೇಮಿಸಿದ ಆಡಳಿತ ಸುಧಾರಣಾ ಆಯೋಗವು ಇದೀಗ ತನ್ನ ಕಾರ್ಯವನ್ನು ಸೂಕ್ತ ಮುತುವರ್ಜಿಯಿಂದ ಆರಂಭಿಸಿದೆ ಎಂಬುದು ಸಮಾಧಾನಕರವಾದ ಸಂಗತಿ. ಆಯೋಗವು ನೇಮಕಗೊಂಡ ಆರಂಭದಲ್ಲೇ ಸರಕಾರ ಹಾಗೂ ಆಯೋಗದ ಸದಸ್ಯರ ನಡುವಣ ಭಿನ್ನಾಭಿಪ್ರಾಯಗಳಿಂದ, ಅದರ ಉಪಯುಕ್ತತೆ ಹಾಗೂ ಸಫಲತೆಗಳ ಕುರಿತು ಎಲ್ಲರಿಗೂ ಸಂಶಯವಿದ್ದಿತು. ಆದರೆ ಇದೀಗ, ಅವುಗಳು ಕೊನೆಗೊಂಡು, ಕಾರ್ಯಪ್ರವೃತ್ತವಾಗಿರುವುದು ಸ್ವಲ್ಪ ಆಶಾದಾಯಕ ಪರಿಸ್ಥಿತಿಯನ್ನುಂಟು ಮಾಡಿದೆ.

ಸರಕಾರದ ಆಡಳಿತೆಯ ಕುರಿತು ಇಂದು ಬಹಳಷ್ಟು ಟೀಕೆ ಟಿಪ್ಪಣಿಗಳು ಕೇಳಿ ಬರುತ್ತಿವೆ. ಕೇಂದ್ರವೇ ಇರಲಿ, ರಾಜ್ಯಗಳೇ ಇರಲಿ, ಎಲ್ಲೂ ಆಡಳಿತ ಸಮರ್ಪಕವಾಗಿಲ್ಲ. ಸರಕಾರೀ ಯಂತ್ರವು ತನ್ನ ಪೂರ್ವ ಪರಂಪರೆಯಲ್ಲೇ ಮುಂದುವರಿದು, ಸಾಮಾನ್ಯ ಪ್ರಜೆಯ ಪಾಲಿಗೆ ಸರಕಾರವೆಂಬುದು ಬಿಡಿಸಲಾರದ ಒಗಟಾಗಿ ಪರಿಣಮಿಸಿದೆ. ವಿಲಂಬ, ಅಲಕ್ಷ್ಯತೆ, ಅಪ್ರಾಮಾಣಿಕತೆ ಹಾಗೂ ಭ್ರಷ್ಟಾಚಾರಗಳಿಂದ ಇಂದು ಸರಕಾರದ ಆಡಳಿತ ತೀರಾ ಹದಗೆಟ್ಟಿದೆ. ಯಾರು ಪ್ರಜೆಗಳ ಸೇವಕರಾಗಿರಬೇಕಾಗಿತ್ತೋ, ಅವರು ಪ್ರಜೆಗಳ ಮಾಲಕರಾಗಿದ್ದಾರೆ. ಸರಕಾರೀ ಕಛೇರಿಗಳಲ್ಲಿ, ಸಾಮಾನ್ಯರನ್ನು ಕೇಳುವವರೇ ಇಲ್ಲವಾಗಿದೆ, ಸಾಮಾನ್ಯ ಹಳ್ಳಿಯ ಆಡಳಿತದಾರರಿಂದ ಹಿಡಿದು ಮಂತ್ರಿಗಳ ವರೆಗೆ ಇದೇ ಪರಿಸ್ಥಿತಿ ತುಂಬಿಕೊಂಡಿದೆ.

ಪ್ರಜಾರಾಜ್ಯದಲ್ಲಿ ಆಡಳಿತ ಯಂತ್ರ ಲೋಪರಹಿತವಾಗಿರಬೇಕು. ಮಾಡಿದ ಅರ್ಜಿಯ ಇತ್ಯರ್ಥ ತ್ವರಿತದಲ್ಲಿ ಆಗಬೇಕು. ಅರ್ಜಿ ಬಂದಿದೆ; ಅರ್ಜಿದಾರನಿಲ್ಲ ಎಂಬ ಪರಿಸ್ಥಿತಿಗೆ ಅವಕಾಶ ಇರಕೂಡದು. ಸರಕಾರದ ಕಛೇರಿಗಳ ಆಡಳಿತದ ನಿಯಮ ನಿಬಂಧನೆಗಳು ಅತಿ ಸರಳವಾಗಿದ್ದು, ಸಾಮಾನ್ಯ ಜನರಿಗೂ ಅರ್ಥವಾಗಿರುವಂತೆ ಇರಬೇಕು. ಸರಕಾರಿ ಕಛೇರಿಗಳಲ್ಲಿ ಸೌಜನ್ಯತೆ, ಸೇವಾಬುದ್ಧಿ ಬೆಳೆಯಬೇಕು. ಕೇವಲ ಕಾನೂನುಗಳನ್ನು ನಿಯಮ ನಿಬಂಧನೆಗಳನ್ನಷ್ಟು ಸೃಷ್ಟಿಸಿ ಕಾರ್ಯಕಲಾಪಗಳನ್ನು ಇನ್ನಷ್ಟು ಜಟಿಲಗೊಳಿಸುವುದರಿಂದ ಯಾವ ಫಲವೂ ಲಭಿಸುವುದಿಲ್ಲ. ಅದು ಸರಕಾರದ ಆಡಳಿತ ಯಂತ್ರ ಹೆಚ್ಚಲು ನೆರವಾದೀತಲ್ಲದೆ ಇನ್ನಾವ ಪ್ರಯೋಜನವನ್ನೂ ಕೊಡಲಾರದು.

ಈ ಎಲ್ಲಾ ಲೋಪದೋಷಗಳು, ಕುಂದುಕೊರತೆಗಳು ಎಲ್ಲಾ ಆಫೀಸುಗಳಲ್ಲೂ ಇವೆ ಎಂದು ಎಲ್ಲರಿಗೂ ತಿಳಿದಿದೆ. ಸರಕಾರದ ಉಚ್ಚ ಸ್ಥಾನದಲ್ಲಿರುವವರಿಗೂ ಇದು ತಿಳಿದಿದೆ. ಆದರೆ ಇದಕ್ಕೆ ಪರಿಹಾರವೇನು ಎಂಬುದು ಯಾರಿಗೂ ತಿಳಿಯದಾಗಿದೆ. ತಿಳಿದಿದ್ದರೂ, ಅದನ್ನು ಅಳವಡಿಸುವ ಕಾರ್ಯ ಇನ್ನಷ್ಟು ಕಠಿಣತರವಾಗಿದೆ. ಭಾರತ ಸರಕಾರವು ಈ ಹಿಂದೆ ಆಡಳಿತ ಸುಧಾರಣೆಗಾಗಿ ಡಾ|| ಆಪ್ಲೆಬೈ ಹಾಗೂ ಸಂತಾನಂ ಇವರ ಹಿರಿತನದಲ್ಲಿ ಎರಡು ಆಯೋಗಗಳನ್ನು ರಚಿಸಿತ್ತು. ಆದರೆ ಈ ಆಯೋಗಗಳ ವ್ಯಾಪ್ತಿ ಈಗಿನ ಆಯೋಗದಷ್ಟು ಇರಲಿಲ್ಲ. ಮುರಾರಜಿ ಆಯೋಗವು ಕೇಂದ್ರ ಮಂತ್ರಿಮಂಡಲ ಹಾಗೂ ಕಾರ್ಯಾಲಯಗಳಿಂದ ಹಿಡಿದು ಜಿಲ್ಲಾ ಮಟ್ಟದ ಆಡಳಿತ ವರೆಗೆ ತನ್ನ ಕಾರ್ಯಕ್ಷೇತ್ರವನ್ನು ಹೊಂದಿದೆ. ಇಂತಹ ಅತಿ ಹಿರಿಯ ಹಾಗೂ ಜಟಿಲ ಸಮಸ್ಯೆಯ ಕುರಿತು ಈ ಆಯೋಗ ಅಭ್ಯಸಿಸಿ ತನ್ನ ಶಿಫಾರಸುಗಳನ್ನು ಮಾಡಬೇಕಾಗಿದೆ. ಇಂತಹ ವೈಶಾಲ್ಯ ಕಾರ್ಯಕ್ಷೇತ್ರವುಳ್ಳ ಆಯೋಗ ಈ ಹಿಂದೆ ನೇಮಿಸಲ್ಪಟ್ಟಿಲ್ಲ.

ಆಯೋಗದ ಕಾರ್ಯವ್ಯಾಪ್ತಿ ಹಾಗೂ ಅದರ ಸದಸ್ಯರ ಸಂಖ್ಯೆಗಳನ್ನು ಹೋಲಿಸಿದಾಗ, ಸದಸ್ಯರ ಸಂಖ್ಯೆ ತೀರಾ ಕಡಿಮೆ ಎಂದು ತೋರುವುದು. ಆದಕ್ಕಾಗಿ ಆಯೋಗದ ಆಶ್ರಯದಲ್ಲಿ ಆಯಾಯ ಕ್ಷೇತ್ರದಲ್ಲಿ ನಿಷ್ಣಾತರಾದ ತಜ್ಞರ ಸಮಿತಿಗಳು ಹಲವನ್ನು ನೇಮಿಸಲಾಗುವುದೆಂದು ಆಯೋಗದ ಸದಸ್ಯರಲ್ಲೊಬ್ಬರಾದ ಶ್ರೀ ಕೆ. ಹನುಮಂತಯ್ಯನವರು ಇತ್ತೀಚೆಗೆ ನುಡಿದರು. ಇಷ್ಟು ಮಾತ್ರವಲ್ಲದೆ ಇಪ್ಪತ್ತಕ್ಕೂ ಮಿಕ್ಕಿ ಅಧ್ಯಯನ ತಂಡಗಳನ್ನು ವಿವಿಧ ವಿಚಾರಗಳಅಧ್ಯಯನಕ್ಕಾಗಿನೇಮಿಸಲಾಗುವುದು. ಆರ್ಥಿಕ ನಿಯಂತ್ರಣ, ಸಿಬಂಧಿಯ ನೇಮಕ, ಭಡ್ತಿಯ ಧೋರಣೆ, ರಾಜ್ಯ ಹಾಗೂ ಜಿಲ್ಲೆಗಳ ಆಡಳಿತ, ಕೃಷಿ ಆಡಳಿತ, ಸಾರ್ವಜನಿಕ ವಿಭಾಗದ ಸಂಸ್ಥೆಗಳ ಆಡಳಿತ ಇತ್ಯಾದಿ ವಿಷಯಗಳ ಕುರಿತು ಅಧ್ಯಯನ ತಂಡಗಳು ವಿಶೇಷ ಚರ್ಚೆ ನಡೆಸಿ, ತಮ್ಮ ಅಭಿಪ್ರಾಯಗಳನ್ನು ತಿಳಿಸಲಿರುವರು.

ಈ ರೀತಿಯ ವ್ಯವಸ್ಥೆಯು ನಿಜಕ್ಕೂ ಉತ್ತಮವಾದುದು. ಇಂದು ಸರಕಾರವು ನೇಮಿಸುತ್ತಿರುವ ಹಲವು ಸಮಿತಿಗಳು ಸದಸ್ಯರ ಅಪಕ್ವ ಅನುಭವಗಳ ದೆಸೆಯಿಂದಾಗಿ ಯಾವುದೇ ಪುರುಷಾರ್ಥವನ್ನು ಸಾಧಿಸದಂತಾಗಿವೆ. ಯಾವ ಉದ್ದೇಶಕ್ಕಾಗಿ ಸಮಿತಿ ರಚಿಸಲ್ಪಟ್ಟಿತೋ ಆ ಕುರಿತು ಸ್ವಲ್ಪವೂ ಜ್ಞಾನ,ಅನುಭವವಿಲ್ಲದಿದ್ದವರು ಅದರ ಸದಸ್ಯರಾಗಿರುವುದರ ದೆಸೆಯಿಂದ ಸಮಿತಿಗಳು ನಿಷ್ಪ್ರಯೋಜಕ ಎನಿಸಿವೆ. ಶ್ರೀ ಹನುಮಂತಯ್ಯನವರೆಂದಂತೆ ಅನುಭವಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕಾಗಿದೆ. ಆಡಳಿತ ಸುಧಾರಣಾ ಆಯೋಗ ಈ ವಿಚಾರವನ್ನು ಮನಗಂಡು ತನ್ನ ಕಾರ್ಯ ವಿಧಾನವನ್ನು ಉಚಿತ ರೀತಿಯಲ್ಲಿ ಅಳವಡಿಸಿರುವುದು ನಿಜಕ್ಕೂ ಶ್ಲಾಘನೀಯ.

ಸಮಿತಿಗಳ ಕುರಿತು ಇನ್ನೊಂದು ಮಾತು. ಹೆಚ್ಚಿನ ಸಮಿತಿಗಳು ತಮ್ಮ ವರದಿಯೂ ಶಿಫಾರಸುಗಳನ್ನು ಕಳುಹಿಸುವಾಗ, ಯಾವ ಉದ್ದೇಶಕ್ಕಾಗಿ ಸಮಿತಿ ರೂಪುಗೊಂಡಿತೋ ಆ ಉದ್ದೇಶ ಅಥವಾ ಪರಿಸ್ಥಿತಿ ಮಾಯವಾಗಿ ಹೊಸ ಪರಿಸ್ಥಿತಿ ಉದ್ಭವಿಸಿದ ಸಂದರ್ಭಗಳೂ ಇವೆ. ಇದಕ್ಕೆ ಕಾರಣ ವರದಿ ಸಲ್ಲಿಸುವಾಗ ಉಂಟಾಗುವ ವಿಲಂಬ. ಹೀಗೆ ವಿಲಂಬವಾದರೆ ಅಂತಹ ಸಮಿತಿಗಳಿಂದ ಯಾವ ಪ್ರಯೋಜನವೂ ದೊರಿಯಲಾರದು.

ಈ ವಿಚಾರವನ್ನು ಮುರಾರಜಿ ಆಯೋಗ ಮನಗಂಡಂತೆ ಕಾಣುತ್ತದೆ. ಅದಕ್ಕಾಗಿ ಸಮಿತಿಯು ಆಯಾಯ ವಿಚಾರಗಳಲ್ಲಿ ಮಧ್ಯಂತರ ಶಿಫಾರಸು ಯಾ ವರದಿಗಳನ್ನು ಸಲ್ಲಿಸುವ ನಿರ್ಣಯ ಮಾಡಿದೆ. ಮಾತ್ರವಲ್ಲ ತಾನು ವರದಿ ಮಾಡಲಿರುವ ವಿಷಯಗಳಲ್ಲಿ ಯಾವುದಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಬೇಕೋ ಅದನ್ನು ಪ್ರಥಮವಾಗಿ ತೆಗೆದುಕೊಂಡು ವರದಿ ಸಲ್ಲಿಸುವ ನಿರ್ಣಯವನ್ನು ಈ ಆಯೋಗ ಮಾಡಿದೆ. ಇದು ನಿಜಕ್ಕು ಒಂದು ಉತ್ತಮವಾದ ಕಾರ್ಯ ವಿಧಾನ.

ಯಾವುದೇ ಸಮಿತಿಯು ತನ್ನ ಕಾರ್ಯದಲ್ಲಿ ಯಶಸ್ವಿಯಾಗಬೇಕಾದರೆ ಕೆಲವು ಮುಖ್ಯ ವಿಷಯಗಳು ಅದರಲ್ಲಿ ಅಡಕವಾಗಿರಬೇಕು. ತಜ್ಞರು ಹಾಗೂ ಉತ್ಸಾಹಿಗಳಾದ ಸದಸ್ಯರು, ಅನುಭವೀ ನೇತಾರ, ಸಹಕರಿಸುವ ಸಹಾಯಕರು, ತಾವು ಮಾಡಲಿರುವ ಕಾರ್ಯದ ಪೂರ್ಣ ಕಲ್ಪನೆಯಿರುವ ಸದಸ್ಯರು. ಮುರಾರಜಿ ಸಮಿತಿ ಈ ಎಲ್ಲಾ ಗುಣಗಳನ್ನು ಹೊಂದಿದೆ. ಹಾಗಾಗಿ ಇತರ ಸಮಿತಿಗಳ ಹಾದಿಯನ್ನು ಇದು ಹಿಡಿಯದೆ ನಮ್ಮ ಆಡಳಿತದಲ್ಲಿ ಸುಧಾರಣೆಗೆ ಯೋಗ್ಯ ಶಿಫಾರಸು ಮಾಡೀತೆಂದು ಆಶಿಸಬಹುದು.

ವಚನ ಸುಧೆ

ಸ್ತ್ರೀಷು ರಾಜಸು ಸರ್ಪೇಷು
ಸ್ವಾಧ್ಯಾಯ ಪ್ರಭು ಶತ್ರುಷು॥
ಭೋಗೇಷ್ವಾಯುಷಿ ವಿಶ್ವಾಸಂ
ಕಃ ಪ್ರಾಜ್ಞಃ ಕರ್ತುಮರ್ಹತಿ॥

ಹೆಣ್ಣು, ರಾಜ, ಸರ್ಪ, ಸ್ವಾಧ್ಯಾಯ, ಶಕ್ತಿವಂತ, ಶತ್ರು, ಭೋಗ ಮತ್ತು ಆಯುಷ್ಯಗಳಲ್ಲಿ ಪೂರ್ಣ ವಿಶ್ವಾಸವಿಡುವವನು ಬುದ್ಧಿವಂತನೆನಿಸಲಾರನು.

ನರಸಣ್ಣನ ಸರಸ

'ಮುಖ್ಯಮಂತ್ರಿಯಾಗಿರುವುದರ ಕೀರ್ತಿ ನಿಜಲಿಂಗಪ್ಪನವರ ಧರ್ಮಪತ್ನಿಗೆ ಸಲ್ಲುವುದಂತೆ, ಹಾಗಾದ್ರೆ, ಈ ರಾಜ್ಯ ಹೀಗಾಗಿರೋದರ ಕೀರ್ತಿ ಇನ್ಯಾರಿಗೆ ಸಲ್ಲಬೇಕೋ ರಾಮ್ರೇ ....'

ಅಭಿಪ್ರಾಯ

ದೇವರನ್ನು ಓಡಿಸುತ್ತಾರೆ, ಇವರು!

ಬರೆದವರು: ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿ

ಯಾವ ಯಾವ ದೇಶಗಳಲ್ಲಿ ರಾಜ್ಯಕ್ರಾಂತಿಯ ಬಿರುಗಾಳಿ ಬೀಸತೊಡಗಿತೋ ಅಲ್ಲೆಲ್ಲಾ ಸರ್ವ ಪ್ರಥಮ ಪ್ರಹಾರ ದೇವರ ಮೇಲೆ ಆಗಿರುತ್ತದೆ. ಇದಕ್ಕೆ ಕಾರಣವೇನು? ಇದರ ಮುಖ್ಯ ಕಾರಣ ಯಾವ ಪಂಡಿತರು, ಪಾದ್ರಿಗಳು ಮತ್ತು ಮೌಲ್ವಿಗಳು ದೇವರ ಅಸ್ತಿತ್ವ ಮತ್ತು ಆವನ ಪೂಜೆ ಪುರಸ್ಕಾರಗಳ ಹೊಣೆಗಾರಿಕೆ—ವಹಿಸಿಕೊಂಡಿರುತ್ತಾರೋ ಅವರೆಲ್ಲರೂ ರಾಜ ಮಹಾರಾಜರೇ ಮೊದಲಾದ ಶಾಸಕರ ಅಧೀನಸ್ಥರಾಗಿದ್ದರು.

ಫ್ರಾನ್ಸಿನ ರಾಜ್ಯ ಕ್ರಾಂತಿಯ ಕಾಲದಲ್ಲಿ ಅಲ್ಲಿಯ ಮುಖಂಡರು ಜನತೆಯನ್ನು ದೇವರ ಬದಲು ಬುದ್ಧಿಯ ಆರಾಧನೆ ಮಾಡಲಿಕ್ಕೆ ಪ್ರೇರೇಪಿಸಿದರು. ರಶ್ಯದ ಮಹಾಕ್ರಾಂತಿಯ ಕೇಂದ್ರ ಮಾಸ್ಕೋದಲ್ಲಿ ದೇವರ ಹೆಸರನ್ನೇ ನಾಮಾವಶೇಷಗೊಳಿಸುವುದಕ್ಕಾಗಿ ಒಂದು ದೊಡ್ಡ ಸಭೆ ಜರಗಿತ್ತು. ಮಾಸ್ಕೋದ ವಿಚಾರ ಹಾಗಿರಲಿ; ಎಲ್ಲಾ ದೇಶಗಳ ಕ್ರಾಂತಿಕಾರಿಗಳು ಎಲ್ಲಾ ಆತಂಕಗಳ, ಅತ್ಯಾಚಾರ ಇತ್ಯಾದಿ ವಿಪತ್ತುಗಳ ಮೂಲಾಧಾರ ದೇವರೇ ಎಂದು ಭಾವಿಸಿ ಅವನ ಅಸ್ತಿತ್ವವನ್ನೇ ಕಿತ್ತು ಬಿಸಾಡಲು ಯತ್ನಿಸಿದರು.

ಜಗತ್ತಿನಲ್ಲಿ ಸರ್ವಶ್ರೇಷ್ಠ ಕ್ರಾಂತಿಕಾರಿ ಜನಿಸಿದ್ದು ವೀರ ವಸುಂಧರೆ ಭಾರತ ಭೂಮಿಯಲ್ಲಿ. ಆ ಕ್ರಾಂತಿ ಪುರುಷನೇ "ಮಹಾತ್ಮ ಗೌತಮ ಬುದ್ಧ"ನು. ಅವನು ಊದಿದ ಮಹಾ ಕ್ರಾಂತಿಯ ಕಹಳೆಯಲ್ಲಿಯೂ ಪರಮಾತ್ಮನ ವಿರುದ್ಧವಾದ ನಾದವೇ ಹೊರಟಿತು. ಕಾರಣವೇನೆಂದರೆ ಆ ಕಾಲದ ಹಿಂದೂಗಳ ಗುರುಗಳೆನ್ನಿಸಿಕೊಂಡಿದ್ದ ಬ್ರಾಹ್ಮಣರು ಪರಮಾತ್ಮನ ಹೆಸರಲ್ಲಿ ವೇದ ಮಂತ್ರ ಪಠನೆ ಮಾಡುತ್ತಾ ನಿರಪರಾಧಿ ಪ್ರಾಣಿಗಳನ್ನು ದೊಡ್ಡ ಸಂಖ್ಯಾ ಪ್ರಮಾಣದಲ್ಲ ಬಲಿಕೊಡುತಿದ್ದರು. ದೇವರ ಹೆಸರು ಹೇಳಿ ನಾನಾ ಪ್ರಕಾರದ ಅನಿಷ್ಟಗಳ ಭಯ ತೋರಿಸಿ ಜನರ ಕಷ್ಟಾರ್ಜಿತವನ್ನು ಅಪಹರಿಸುತಿದ್ದರು. ಇಂದಿಗೂ ದೇವಮಂದಿರಗಳಲ್ಲಿ ಭಗವಂತನ ಹೆಸರಲ್ಲಿ ಸ್ತುತಿ ಪಾಠಮಾಡುತ್ತಾ ಪುರೋಹಿತ ಮತ್ತು ಪೂಜಾರಿ ವರ್ಗಗಳಿಂದಲ, ಸಾಧು-ಸಂತರೆನ್ನಿಸಿಕೊಳ್ಳುವವರಿಂದ ಜನರು ನಾನಾ ವಿಧಾನಗಳಿಂದ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಕೊಳ್ಳೆಗಳಿಗೆ ಈಡಾಗುತ್ತಿದ್ದಾರೆ.

ಮತ್ತೊಂದೆಡೆಯಿಂದ ಮುಸಲ್ಮಾನರು ಖುರಾನಿನ ಮತ್ತು ಅಲ್ಲಾನ ಹೆಸರಲ್ಲಿ ಧರ್ಮಯುದ್ಧದ ಘೋಷಣೆ ಮಾಡಿ ಸದಾ ಕಾಲ ಒಂದಲ್ಲ ಒಂದು ನೆವನದಿಂದ ಹಿಂದುಗಳ ಮೇಲೆ ಆಕ್ರಮಣ ಮಾಡುತ್ತಲೇ ಇದ್ದಾರೆ. ಈ ಎಲ್ಲಾ ಅನರ್ಥ ಪರಂಪರೆಗಳು ಸರ್ವತ್ರ ಹರಡಿರುವುದರಿಂದಲೇ ಜಗತ್ತಿನಲ್ಲಿ ಮಾನವ ಶಾಂತಿಗಾಗಿ ಉದ್ಭವಿಸಿದ ಕ್ರಾಂತಿ ದೂತರು "ಪರಮಾತ್ಮ" ಎಂಬ ಹೆಸರನ್ನೇ ನಾಶಮಾಡುವುದರಲ್ಲಿ ಆಶ್ಚರ್ಯವೇನಿದೆ? ಲೋಕದಲ್ಲಿ ಆಗುತ್ತಿರುವ ಘೋರ ಅನ್ಯಾಯಗಳನ್ನು ನೋಡುವಾಗ ದೇವರ ಅಸ್ತಿತ್ವ ಇಷ್ಟಾದರೂ ಉಳಿದದ್ದೇ ದೊಡ್ಡ ಅದ್ಭುತವೆನ್ನಬೇಕು.

ಖುರಾನಿನಲ್ಲಿ ವರ್ಣಿಸಿದಂತೆ ಏಳನೆಯ ಆಕಾಶದಲ್ಲಿರುವ ಅಲ್ಲಾನು ಅಥವಾ ಬೈಬಲಿನ ಹದಿನಾಲ್ಕನೆ ಸ್ವರ್ಗದಲ್ಲಿರುವ "ಜಿಹೋವ"ನು ಮತ್ತು ಹಿಂದೂಗಳ ವೈಕುಂಠ ವಾಸಿ ಮಹಾ ವಿಷ್ಣು ಮೊದಲಾದ ದೇವರುಗಳು ಈ ಕ್ರಾಂತಿಕಾರಿಗಳ ಕೈಗೆ ಸಿಗುತಿದ್ದರೆ ಅವರೆಲ್ಲರನ್ನೂ ಸಾಲಾಗಿ ನಿಲ್ಲಿಸಿ ಗುಂಡಿನ ಬಾಯಿಗೆ ಈಡು ಮಾಡಲು ಹಿಂಜರಿಯುತಿದ್ದಿಲ್ಲ. ಕಾಲ್ಪನಿಕವಾದ ಈ ಸಾವಿರಾರು ದೇವರುಗಳು ಪ್ರತ್ಯಕ್ಷ ಕಾಣಸಿಗದಿರುವುದರಿಂದಲೇ ನಾನಾ ರೀತಿಯ ಅದ್ಭುತಕಾರಕ ಕೃತಿಗಳ ಪ್ರಚಾರ ಮಾಡಿ ಅಜ್ಞಾನಿ ಜನರನ್ನು ಅನೇಕ ವಿಧಗಳಿಂದ ವಂಚಿಸುತ್ತಿದ್ದಾರೆ. ಜಗತ್ತಿನಲ್ಲಿ ಈ ವರೆಗೆ ಏನೆಲ್ಲಾ ಅನರ್ಥಗಳು ಪಾಪ ಕೃತ್ಯಗಳು ಮಾನವ ಸಂಹಾರ ಮೊದಲಾದ ಪೈಶಾಚಿಕ ಅತ್ಯಾಚಾರಗಳು ಆಗುತ್ತಾ ಬಂದಿವೆಯೋ ಅವೆಲ್ಲವೂ ದೇವರ ಹೆಸರಲ್ಲಿ ಧರ್ಮದ ವೇದಿಕೆಯಲ್ಲಿಯೇ ಜರಗಿವೆ. ಆದುದರಿಂದಲೇ ಕ್ರಾಂತಿಕಾರಿಗಳು ದೇವರ ಅಸ್ತಿತ್ವಕ್ಕೆ ತಿಲಾಂಜಲಿಯನ್ನಿತ್ತರು.

ಫ್ರಾನ್ಸಿನ ರಾಜ್ಯಕ್ರಾಂತಿಯಲ್ಲಿ ಅಸಂಖ್ಯಾತ ಜನರು ಕೊಲ್ಲಲ್ಪಟ್ಟರು. ಉತ್ತರ ಅಮೇರಿಕನರು ದಕ್ಷಿಣ ಅಮೇರಿಕದ ಸ್ವತಂತ್ರ ಜನಾಂಗವನ್ನು ಬಲಿ ಹಾಕಲಿಲ್ಲವೇ? ನಮ್ಮ ದೇಶದಲ್ಲಿ ಸಹ ದೇವರ ಭಕ್ತವರ್ಗ ಪ್ರತಿಯೊಂದು ಸಂಘ-ಸಂಸ್ಥೆ, ಕಾಂಗ್ರೆಸ್, ಕಮ್ಯುನಿಸ್ಟ್ ಮೊದಲಾದ ರಾಜಕೀಯ ಸಂಸ್ಥೆಗಳೊಳಗೆ ನುಸುಳಿ ವರಿಷ್ಟ ಅಧಿಕಾರ ಗದ್ದುಗೆಗಳಲ್ಲಿ ಕುಳಿತು ಅಪ್ರತ್ಯಕ್ಷವಾಗಿ ತಮ್ಮ ಸ್ವಂತ ಹಿತಾಸಕ್ತಿಗಳನ್ನು ಸಾಧಿಸುತ್ತಾ ಹಲವು ಕೆಲಸಗಾರರ ಮಧಿಮೆಯಿಂದ ತಾವು ಜನತಾ ಮುಖಂಡರೆನಿಸಿ ಬಾಹ್ಯ ಪ್ರಪಂಚದಲ್ಲಿ ತಾವು ಮಹಾದೇಶಪ್ರೇಮಿಗಳು — ದೈವಭಕ್ತರೆನ್ನಿಸಿಕೊಳ್ಳುವುದಿಲ್ಲವೇ? ಇದೆಲ್ಲವೂ, ಪರಮಾತ್ಮನ ಅಸ್ತಿತ್ವ ತಿಳಿದುಕೊಳ್ಳದೆ ತಮ್ಮದೇ ಆದ ಸ್ವೇಚ್ಛಾ ವರ್ತನೆಗಳೇ ನ್ಯಾಯ-ನೀತಿಗಳೆಂದು ನಂಬಿಕೊಂಡಿರುವುದರಿಂದ ಉಂಟಾದ ಸಾಮಾಜಿಕ ದುರಂತಗಳು.

ವೇದಗಳ ಅಧ್ಯಯನ, ಅಧ್ಯಾಪನ ಪ್ರವೃತ್ತಿ ಸರ್ವತ್ರ ಪ್ರಚಲಿತವಿದ್ದು ಅದರ ಮೂಲ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಮನನ ಮಾಡಿ ಅದರಂತೆ ತಮ್ಮ ಜೀವನ ವ್ಯವಹಾರವನ್ನು ನಿರೂಪಿಸಿಕೊಂಡು ಬರುತಿದ್ದರೆ ವರ್ತಮಾನ ಕಾಲದಲ್ಲಿ ವಿಶ್ವವ್ಯಾಪಿಯಾಗಿ ಬೆಳೆದು ಬಂದಿರುವ ಇಷ್ಟೊಂದು ಭಯಂಕರ ದುಷ್ಕೃತ್ಯಗಳಿಗೆ ಅವಕಾಶ ದೊರಕುತಿದ್ದಿಲ್ಲ. ಬುದ್ಧನು ಹಿಂಸಾಮಯ ಪ್ರಪಂಚದಲ್ಲಿ ಅತ್ಯದ್ಭುತವಾದ ಕ್ರಾಂತಿಯನ್ನು ಹೂಡಿ ಶಾಂತಿಯನ್ನು ನಿರ್ಮಿಸಿದನು; ಇದಕ್ಕಾಗಿ ಭಗವಂತನ ಆವಶ್ಯಕತೆಯನ್ನು ಅಲ್ಲಗಳೆದನು; ಪರಂತು ಅವನ ಅನುಯಾಯಿಗಳು ಅವನನ್ನೇ ದೇವರೆಂದು ಪರಿಗಣಿಸಿ ಅವನ ಪ್ರತಿಮೆ ಸ್ಥಾಪಿಸಿ ಒಂದು ಹೊಸ ದೇವರನ್ನು ನಿರ್ಮಿಸಿದರು. ಅಲ್ಲಿಯೂ ಅಂಥ ಪರಂಪರೆಗಳು ಮತ್ತೊಂದು ರೀತಿಯಿಂದ ಬೆಳೆದು ಬಂದುವು.

ಯಾವ್ಯಾವ ಕ್ರಾಂತಿಕಾರರು ಪರಮಾತ್ಮನ ಅಸ್ತಿತ್ವವನ್ನು ಅಲ್ಲಗಳೆದು ವೇದಗಳ ಅಪೌರುಷೇಯ ಸಿದ್ಧಾಂತಗಳನ್ನು ಸ್ವಲ್ಪವೂ ಮನನ ಮಾಡದೆ ಕೇವಲ ತಮ್ಮ ಬೌದ್ಧಿಕ ವಾದವೇ ಏಕಮೇವಾದ್ವಿತೀಯ ತತ್ವವೆಂದು ಹೇಳಿ ಕಾರ್ಯೋನ್ಮುಖರಾದರೋ ಅವರಾರೂ ತಮ್ಮ ಕ್ರಾಂತಿ ಸಮರದಲ್ಲಿ ಪೂರ್ಣ ಯಶಸ್ಸು ಪಡೆಯಲಿಲ್ಲ. ಕಾರಣವೇನೆಂದರೆ ಮಹಾನ್ ಕ್ರಾಂತಿ ಪುರುಷರಾದ ಯೇಸುಕ್ರಿಸ್ತ, ಮಹಮ್ಮದ್ ಪೈಗಂಬರ, ಹಿಂದೂಗಳ ಅನೇಕ ಆಚಾರ್ಯರು-ಸ್ವಾಮಿಗಳು ಪ್ರತಿಮೆಗಳಾಗಿ ಕುಳಿತು ಇಂದಿಗೆ ದೇವರ ಹೆಸರಲ್ಲಿ ಮಂಗಳಾರತಿಗಳನ್ನು ಸ್ವೀಕರಿಸುತ್ತಾ, ನಾನಾ ತರದ ಹರಕೆ, ಕಾಣಿಕೆಗಳನ್ನು ಒಳಗೆ ಹಾಕಿಸುತಿದ್ದಾರೆ. ಎಲ್ಲೆಲ್ಲಿಯೂ ವ್ಯಕ್ತಿ ಪೂಜೆಗೇನೇ ಪ್ರಾಧಾನ್ಯತೆ ಹೆಚ್ಚುತ್ತಿದೆ. ಒಳಗಡೆ ನಾನಾ ರೀತಿಯ ಕುಕರ್ಮಗಳ ಕೆಸರು ಸಂಗ್ರಹವಾಗುತ್ತಇದೆ. ಆರ್ಯಸಮಾಜದ ಪ್ರವರ್ತಕ ಸ್ವಾಮಿ ದಯಾನಂದ ಸರಸ್ವತಿಯವರೊಬ್ಬರನ್ನು ಬಿಟ್ಟರೆ ಉಳಿದ ಪ್ರತಿಯೊಬ್ಬ ಮತ ಸಂಪ್ರದಾಯಾಚಾರ್ಯರೂ ವಿಗ್ರಹರೂಪಗಳಾಗಿ ಮತ್ತು ಜೀವಂತದಲ್ಲಿ ಧೂಪ-ದೀಪ ನೈವೇದ್ಯ, ಕಾಮಿನಿ-ಕಾಂಚನಗಳ ಮೂಲಕ ಆರಾಧಿಸಲ್ಪಡುತಿದ್ದಾರೆ. ಇದರಿಂದಾಗಿ ಇಂದಿಗೆ ಪ್ರಾಚೀನ ಕಾಲದ ಋಷಿ-ಮುನಿ-ಆಚಾರ್ಯ ಪುರುಷರು ತೋರಿಸಿಕೊಟ್ಟಿರುವ ಜೀವನದ ಆದರ್ಶ ಮೂಲ ತತ್ವಗಳ ಜ್ಞಾನಲೋಪವಾಗಿ ಜನಸಮೂಹ ಮತ್ತಷ್ಟು ಅಂಧಕಾರ—ಅಧೋಗತಿಯ ಕಡೆಗೆ ಧಾವಿಸುತ್ತಿದೆ. ಎಂದಿನ ತನಕ ನಮ್ಮ ದೇಶದಲ್ಲಿ, ಅಲ್ಲಲ್ಲಿ—ಗದ್ದುಗೆಗಳನ್ನು ಸ್ಥಾಪಿಸಿ ಕುಳಿತುಕೊಂಡಿರುವ ಢೋಂಗಿ ಸನ್ಯಾಸಿಗಳು, ಬಾಬಾಗಳು, ಮಹಂತರು ಮೊದಲಾದವರ ಉಚ್ಚಾಟನೆಯಾಗುವುದಿಲ್ಲವೋ ಅಂದಿನ ತನಕ ಭಾರತೀಯ ಜನಾಂಗದಲ್ಲಿ ವಾಸ್ತವಿಕ ತತ್ವಜ್ಞಾನದ ತಿಳುವಳಿಕೆಯಾಗಲಾರದು; ನೈತಿಕ ಜೀವನ ನಿರ್ಮಾಣವಾಗದು. ಎಲ್ಲಾ ಅಜ್ಞಾನ ಪರಂಪರೆಗಳಿಗೆ, ದೇಶದಲ್ಲಿ ಅಲ್ಲಲ್ಲಿ ಕುಳಿತುಕೊಂಡ ಜನತೆಯನ್ನು ಮೋಸದ ಬಲೆಯಲ್ಲಿ ಸಿಲುಕಿಸುತ್ತಿರುವ ಬಾಬಾಗಳೇ ಮೂಲಕಾರಣರು. ಹೀನಾಯಮಾನವಾದ ಈ ಪರಿಸ್ಥಿತಿ ಇನ್ನೂ ಬಹುಕಾಲ ಮುಂದುವರಿದರೆ ದೇಶದಲ್ಲಿ ಇನ್ನೊಂದು ಮಹತ್ವಪೂರ್ಣವಾದ ಧರ್ಮ ಕ್ರಾಂತಿಯಾಗುವುದರಲ್ಲಿ ಸಂದೇಹವಿಲ್ಲ.

"ಅಸ್ಮಾಕಂ ವೀರಾ ಉತ್ತರೇ ಭವಂತು."

ಒಲಿವ ಹೃದಯ ಯಾವುದೊ!

ಪರಮಾತ್ಮನೀಯುತಿಹ ನೈಜತೆಯ
ಚೆಲುವಿಲ್ಲ,
ತರಿಸಲ್ಕೆ ಕೃತಕತೆಯ ತಿಳಿವುಮಿಲ್ಲ.
ಸಿರಿತನವ ಮೆರೆಸಲ್ಕೆಗಳಿಸಿರುವ ಹಣವಿಲ್ಲ.
ಹಿರಿಯರಿಂದುಳಿದಿರುವ ಧನವುಮಿಲ್ಲ.
ಹಲವಾರು ಪದವಿಗಳ ವಿದ್ಯೆಯನು
ಕಲಿತಿಲ್ಲ,
ಕಲಿತುದನು ಮೆರೆಸುವೊಂದರಿವು ಮಿಲ್ಲ.
ಕಂಠದಲಿ ಸಂಗೀತ ಶಾಸ್ತ್ರಗಳ ನೆರವಿಲ್ಲ,
ಕಂಠಕ್ಕೆ ಕಾಗೆಯೂ ಸೆಲ್ಲಲೊಲ್ಲ.
ಸೂಸುತಿರೆ ಪರಿಮಳವ ಪುಷ್ಪಗಳು
ರಸ ತುಂಬಿ
ಆಸರನು ತಳೆಯುವುದು ಬಗೆಯ ತುಂಬಿ.
ಎಸೆಯುತಿರೆ ತಳತಳಿಪ ಹಣ್ಣುಗಳ ಕಡು
ಚೆಲುವು
ಹಸಿವನ್ನು ತಾಳುವುದು ಹೃದಯ ಶುಕವು.
"ಧನವಿಲ್ಲ ಚೆಲುವಿಲ್ಲ ಕಲಿವಿಲ್ಲ;
ಏನಗಲ್ಲ!"
ವೆನುತಿಹನು ಮತಿಯೋಗಿ ತಾಳ್ವ ಸೊಲ್ಲ
ಅವನೆಂಬ ನುಡಿಯನ್ನು ವಿೂರ್ವಲ್ಲ
ಕಚ್ಚಿಲ್ಲ
ಅವ ಕರ್ಮ ನಟ ಸೂತ್ರಧಾರನಲ್ಲ!.
ರಸಿಕತೆಯ ಧನವೊಂದು; ಮಾನಧನ
ವಿನ್ನೊಂದು
ಬೆಸೆದಿರ್ಪುದೀ ಎರಡೆ ಧನವಿದಿಂದು.
ಆ ಹೃದಯವಾವುದೋ! ಎಲ್ಲಡಗಿಯಿರೆ
ಹುದೊ!
ಈ ಹೃದಯ ಪದನೆಂದು ಕಳಲಿತಿಹುದೊ!
—ಎನ್. ತಿಮ್ಮಣ್ಣ ಭಟ್.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 56 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪರಿಚಯ

ನಾಲಂದದ ವಿಶ್ವವಿದ್ಯಾಲಯ

ಬರೆದವರು : ಶ್ರೀ ಸ. ನಾರಾಯಣ

ವ್ಯಕ್ತಿಯ ಮನೋವಿಕಾಸಕ್ಕೆ, ಜ್ಞಾನದ ಬೆಳವಣಿಗೆಗೆ, ರಾಷ್ಟ್ರದ ಉದ್ಧಾರಕ್ಕೆ ಶಿಕ್ಷಣ ಆತ್ಯಗತ್ಯ ಎಂಬುದು ಅಂದಿನ-ಇಂದಿನ ಸಿದ್ಧಾಂತ. ವಿವೇಕಕ್ಕೆ, ಸಂಸ್ಕೃತಿಗೆ ಮೂಲ ಜ್ಞಾನ- ಆ ಜ್ಞಾನಕ್ಕೆ ಮೂಲ ವಿದ್ಯೆ— ಅದೂ ಸದ್ವಿದ್ಯೆ. ಶಿಕ್ಷಣದ ಪ್ರಗತಿಗೆ ಇಂದು ಸರ್ಕಾರ ಕೈಗೊಂಡಿರುವ ಕ್ರಮ— ಯೋಜನೆ ಅಪೂರ್ವವಾದುದು. ಇಂದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ನೂರಾರು ಶಾಲೆಗಳು—ಕಾಲೇಜುಗಳು ಎಲ್ಲವೂ ಜನತೆಯ-ರಾಷ್ಟ್ರದ ಏಳಿಗೆಯ ಸಲುವಾಗಿ. ಇಂದು ಭಾರತದಲ್ಲಿ ಹತ್ತಾರು ವಿಶ್ವವಿದ್ಯಾಲಯಗಳಿವೆ. ಹಿಂದೆಯೂ ಇದ್ದವು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಸಾಕ್ಷ್ಯಾಧಾರಗಳೂ ನಾಕಷ್ಟಿವೆ.

ಭಾರತದಲ್ಲಿ ಅಲ್ಪ ಸ್ವಲ್ಪ ಶಿಕ್ಷಣ ಪಡೆದು ಉನ್ನತ ವ್ಯಾಸಂಗಕ್ಕೆ ಅವನು ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗಿ ಅಲ್ಲಿ ಕೆಲಕಾಲ ಅಭ್ಯಸಿಸಿ ಬಂದರೆ ಅವನು ಮೇಧಾವಿ. ಪಂಡಿತ ಎಂಬ ಭಾವನೆ ನಮ್ಮಲ್ಲಿ ಇಂದಿಗೂ ಉಳಿದಿದೆ. ಅಭ್ಯಸಿಸಬೇಕು ಭಾರತದಲ್ಲಿ ಜ್ಞಾನ ಸಂಪತ್ತಿಲ್ಲವೇ? ವಿಶ್ವ ವಿದ್ಯಾನಿಲಯಗಳಿಲ್ಲವೇ? ಮೇಧಾವಿ ಶಿಕ್ಷಕರಿಲ್ಲವೇ? ಏನಿಲ್ಲ—ಎಲ್ಲವೂ ಉಂಟು. ಉಪಯೋಗಿಸಿ ಕೊಳ್ಳುವ, ಇರುವುದನ್ನು ಅರಿಯುವ ಪುಣ್ಯಾತ್ಮರೂ ಬೇಕಲ್ಲ? ಪಾಶ್ಚಾತ್ಯ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಿನ ವ್ಯಾಸಂಗ ಮಾಡಿ ಬಂದವನು, ಪದವಿ ಪಡೆದು ಬಂದವನು ಇಂದು 'ಪಂಡಿತ' ಎಂಬ ನಂಬಿಕೆ ನಮ್ಮದು.

ಭಾರತೀಯ ಜ್ಞಾನ, ಸಿರಿ, ಸಂಸ್ಕೃತಿ, ವಿದ್ಯೆಗಳ ಸಂಗತಿಗಳೆಲ್ಲವು ಇಂದು ನಮಗೆ ಗತಕಾಲದ ಇತಿಹಾಸದ ಸಂಗತಿಗಳು. ಆ ಇತಿಹಾಸದ ಸಂಗತಿಗಳಲ್ಲಿ ಸತ್ಯ ಅಡಗಿದೆಯೆಂಬ ಭಾವನೆ ನಮಗೆ ಉಂಟಾದರೆ ಎಷ್ಟೋ ಸಾರ್ಥಕವಾದೀತು, ಗತವೈಭವವನ್ನು ಸ್ಮರಿಸಿಕೊಂಡರೆ ಬರುವ ಭಾಗ್ಯವೇನು? ಎಂದು ಪ್ರಶ್ನಿಸಲೂ ಬಹುದು. ಅದಕ್ಕೆ ಉತ್ತರ ಇಷ್ಟೇ. ನಮ್ಮ ಶಕ್ತಿ, ಸಂಸ್ಕೃತಿ, ಶೀಲಗಳನ್ನು ನಾವು ಅರಿತಲ್ಲ—ಅರ್ಥ ಮಾಡಿಕೊಳ್ಳುವುದು ಅಗತ್ಯ.

ಪ್ರಾಚೀನ ಭಾರತದ ಇತಿಹಾಸದ ಪುಟಗಳಲ್ಲಿ ನಾಲಂದ ವಿಶ್ವವಿದ್ಯಾಲಯದ ಕೀರ್ತಿ, ವೈಭವ ಒಂದು ಸ್ಮರಣೀಯ ಅಧ್ಯಾಯ. ನಾಲಂದ ವಿಶ್ವವಿದ್ಯಾಲಯದ ಅಗಾಧ ಕೀರ್ತಿ ಅಂದು ದೇಶ ವಿದೇಶಗಳಲ್ಲಿಯೂ ಪ್ರಚಾರವಾಗಿತ್ತು.

ಪ್ರಾಚೀನ ಭಾರತದ ಐತಿಹಾಸಿಕ ಅಮೂಲ್ಯ ಸಂಗತಿಗಳನ್ನು ಅಭ್ಯಸಿಸುವಾಗ ಕೆಲವಾರು ವಿಷಯಗಳು ನಮಗೆ ಪದೇ ಪದೇ ನೆನಪಿಗೆ ಬರುತ್ತವೆ. ಜ್ಞಾನ ಪ್ರಸಾರಕ್ಕೆ—ವಿಸ್ತಾರಕ್ಕೆ ಮೂಲವಾದ ವಿದ್ಯೆಯ ಕೇಂದ್ರಗಳು ಹಲವಾರು. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ಕಂಚಿ, ಕಾಶಿ, ಕಾಶ್ಮೀರ, ನಾಲಂದ, ತಕ್ಷಶಿಲಾ, ಉಜ್ಜಯಿನಿ. ಇವುಗಳು ಜ್ಞಾನ ಕೇಂದ್ರಗಳು, ವಿದ್ಯಾ ಕೇಂದ್ರಗಳು.

ನಾಲಂದ ವಿಶ್ವವಿದ್ಯಾಲಯದ ಇತಿಹಾಸ— ಕೀರ್ತಿ ಅತಿಪ್ರಾಚೀನವಾದುದು. ಭಾರತಕ್ಕೆ ಭೇಟಿ ಇತ್ತಿದ್ದ ಚೀನಾ ದೇಶದ ಪ್ರವಾಸಿ ಇ-ಟ್ಸಿಂಗ್ ಎಂಬಾತನು ತನ್ನ ಬರಹದಲ್ಲಿ "ನಾಲಂದ ವಿಶ್ವವಿದ್ಯಾಲಯ ಇಡೀ ಜಂಬೂದ್ವೀಪದಲ್ಲಿಯೇ ಭವ್ಯ ಜ್ಞಾನ ದೇವಾಲಯ" ಎಂದು ಉದ್ಗಾರ ತೆಗೆದಿದ್ದಾನೆ. ಹಿಂದಿನ ಮೇಧಾವಿಗಳು ಮಾತ್ರವೇ ಏಕೆ, ಇಂದಿನ ಮೇಧಾವಿಗಳೂ ನಾಲಂದ ವಿಶ್ವವಿದ್ಯಾಲಯದ ವಿಷಯವಾಗಿ ಸಂಗ್ರಹಿಸಿದ ಸಂಗತಿಗಳನ್ನೂ ಕಂಡು ಆಶ್ಚರ್ಯಪಟ್ಟಿದ್ದಾರೆ—ಮೆಚ್ಚಿದ್ದಾರೆ. ಜ್ಞಾನದ ಕೇಂದ್ರವಾಗಿ ಮೆರೆದ ನಾಲಂದ ವಿಶ್ವವಿದ್ಯಾಲಯದ ಭವ್ಯ ಗತ ಇತಿಹಾಸ ಇಂದಿನ ವಿಶ್ವವಿದ್ಯಾಲಯಗಳಿಗೆ ಹಲಬಗೆಯಲ್ಲಿ ಮಾದರಿಯಾಗಿದೆ. ಇಂದಿನ ಭಾರತೀಯ ವಿದ್ಯಾಲಯಗಳು ಪ್ರಾಚೀನ ನಾಲಂದ ವಿಶ್ವವಿದ್ಯಾಲಯದ ಆಡಳಿತ-ರೀತಿ, ನೀತಿ, ಬೋಧನ ಕ್ರಮ, ಶಿಸ್ತು ಮೊದಲಾದುವುಗಳನ್ನು ಅನುಸರಿಸಬೇಕಾದ ಅಗತ್ಯವಿದೆ ಎಂಬ ಸೂಚನೆ ಅಪ್ರಾಕೃತವಾಗಬಾರದು.

ವಿದೇಶೀಯ ವಿಶ್ವ ವಿದ್ಯಾಲಯಗಳ ಶಿಕ್ಷಣ ಪದವಿ, ಪ್ರಶಸ್ತಿಗಳಿಂದ ಪುನೀತರಾಗುವ ಇಂದಿನ ಭಾರತೀಯ-ವಿದ್ಯಾರ್ಥಿಗಳಿಗೆ—ಜನತೆಗೆ ಅಂದು ಜಂಬೂ ದ್ವೀಪದಲ್ಲಿ ವೈಭವದಿಂದ ಮೆರೆದ ನಾಲಂದ ವಿಶ್ವ ವಿದ್ಯಾಲಯದಲ್ಲಿ ಅಭ್ಯಸಿಸಲು ದೇಶ ವಿದೇಶಗಳಿಂದ ತಂಡೋಪತಂಡವಾಗಿ ವಿದ್ಯಾಭಿಮಾನಿಗಳು ಬರುತ್ತಿದ್ದರು ಎಂಬುದು ಅಭಿಮಾನದ ಸಂಗತಿ.

"ಆಚಾರ್ಯ ದೇವೋ ಭವ" ಈ ಸಾಲು ಹೇಳುವುದಕ್ಕೆ ಮಾತ್ರವೇ ಅಂದು ಮೀಸಲಾಗಿ ಇರಲಿಲ್ಲ. ಆಚಾರ್ಯ ದೇವರಷ್ಟೇ ಆಗಿರಲಿಲ್ಲ. ಅಂದಿನ ಕಾಲಕ್ಕೆ, ದೇವರ ದೇವನಾಗಿದ್ದ. ಆಚಾರ್ಯ ಅಥವಾ ಗುರುವನ್ನೂ ಒಲಿಸಿಕೊಳ್ಳುವ ಕಾರ್ಯದಲ್ಲಿ ಅವನಿಂದ ವಿದ್ಯೆ ಪಡೆಯುವ ಕಾರ್ಯದಲ್ಲಿ ಶಿಷ್ಯರ ಆಚಾರ ವಿಚಾರಗಳ ಸಂಗತಿಯನ್ನು ನಿಷ್ಠೆಯ ಸಂಗತಿಯನ್ನು ಹಲವಾರು ಪ್ರಾಚೀನೇತಿಹಾಸಗಳು ಉದಾಹರಣೆಯಿಂದ ತಿಳಿಯಬಹುದಾಗಿದೆ.

ಅಂದು ಓರ್ವ ಅರಸನಿಗೆ ಮಾತ್ರವೇ ಅಲ್ಲ ಚಕ್ರವರ್ತಿಗೂ ಸಲ್ಲದ ಗೌರವ ಓರ್ವ ಆಚಾರ್ಯ (ಗುರು)ನಿಗೆ ದೊರೆಯುತ್ತಿತ್ತು. ಸಾಮ್ರಾಜ್ಯವನ್ನೇ ಆಳುತ್ತಿದ್ದ, ಭುಜಬಲದಿಂದ ಶತ್ರುವನ್ನೇ ನಡುಗಿಸುತ್ತಿದ್ದ, ಪೃಥ್ವಿಯ ಒಡೆಯ ಎಂದು ಮೆರೆಯುತ್ತಿದ್ದ ಸಾಮ್ರಾಟ ತನ್ನ ತಲೆಯ ಮೇಲಿನ ಮಣಿಮಯ ಮುಕುಟವನ್ನು ತೆಗೆದು ಆಚಾರ್ಯನಿಗೆ ಶಿರಬಾಗಿವಂದಿಸುತ್ತಿದ್ದ. ಅವರ ಅಡಿಯಲ್ಲಿ ನಿಲ್ಲುತ್ತಿದ್ದ. ಇದಕ್ಕಿಂತಲೂ ಹೆಚ್ಚಿನ ಗೌರವ ಗುರುವಿಗೆ ಬೇರೆ ಬೇಕೆ? ನಮ್ಮ ಸಂಸ್ಕೃತಿಗೆ ಇದಕ್ಕಿಂತಲೂ ಹೆಚ್ಚಿನ ಸಾಕ್ಷಿ ಬೇರೆ ಬೇಕೆ?

ನಾಲಂದ ವಿಶ್ವವಿದ್ಯಾಲಯದ ವಿದ್ವನ್ಮಣಿಗೆ ಘಂಟಾ ಮರ್ಯಾದೆ ಸಲ್ಲುತ್ತಿತ್ತು. ಅದು ಶ್ರೇಷ್ಠ ವಿದ್ವಾಂಸರಿಗೆ ಮಾತ್ರವೇ ಮೀಸಲಾಗಿದ್ದ ಮರ್ಯಾದೆ. ಇಲ್ಲಿನ ಮುಖ್ಯಾಧಿಕಾರಿಗೆ "ಪಂಡಿತ" ಎಂಬ ಹೆಸರಿತ್ತು. ಈ ಪದವಿ ಮತ್ತು ಹೆಸರು ಇಂದಿನ ನಮ್ಮ ಛಾನ್ಸಲರ್ ಹುದ್ದೆಗೆ ಸಮ. ಈ ಪದವಿ ಅವರು ಆಸೆಪಟ್ಟು ಪಡೆದುದಲ್ಲ. ಪ್ರಭಾವದಿಂದ ಬಂದುದಲ್ಲ. ಪ್ರತಿಭೆಯಿಂದ, ಜ್ಞಾನದಿಂದ ಲಭಿಸಿದ್ದು. ಅಂದಿನ ಕುಲಪತಿಗಳು ಒಂದು ವಿಶ್ವವಿದ್ಯಾಲಯದ ಪೂರ್ಣ ಹೊಣೆ ಹೊತ್ತು ವಿದ್ಯಾರ್ಥಿಗಳನ್ನೂ ಮಕ್ಕಳಂತೆ ಬೆಳೆಸಿ, ಅವರನ್ನು ಜ್ಞಾನದ ಜ್ಯೋತಿಗಳನ್ನಾಗಿ ರೂಪಿಸಿ ಕಳುಹಿಸುತ್ತಿದ್ದರು.

ಪಂಡಿತ ಎಂಬ ಪದವಿ ನಾಲಂದ ವಿಶ್ವವಿದ್ಯಾಲಯದ ಶ್ರೇಷ್ಠತಮ ಪದವಿ, ಹಿರಿಯಸ್ಥಾನ. ವಿಶ್ವವಿದ್ಯಾಲಯದ ಘಟಿಕೋತ್ಸವ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸುವವರಿಗೆ ಮಾತ್ರ ಆ ಸ್ಥಾನ ಮೀಸಲು. ರಾಜಮಹಾರಾಜರನ್ನು ಚಕ್ರವರ್ತಿಗಳು ಪ್ರೇಕ್ಷಕರೊಂದಿಗೆ ಕುಳಿತಿರಬೇಕಿತ್ತೇ ಹೊರತು, ಪಂಡಿತ ಸ್ಥಾನದಲ್ಲಿ ಕುಳಿತುಕೊಳ್ಳುವುದು ಹಾಗಿರಲಿ, ಆ ಸಾಲಿನಲ್ಲಿಯೂ ಕುಳಿತುಕೊಳ್ಳಲು ಅವಕಾಶವಿರಲಿಲ್ಲ. ಶ್ರೀ ಹರ್ಷವರ್ಧನ ಚಕ್ರವರ್ತಿ ನಾಲಂದ ವಿಶ್ವವಿದ್ಯಾಲಯಕ್ಕೆ ಭೇಟಿಗಾಗಿ ಬಂದಾಗ ಅಲ್ಲಿಯ ಮುಖ್ಯಾಧಿಕಾರಿಯಾಗಿ ಶೀಲಭದ್ರಾಚಾರ್ಯನಿದ್ದ. ಆತನಿಗೆ, ಶ್ರೀ ಹರ್ಷ ದಂಡಪ್ರಣಾಮ ಮಾಡಿದನಂತೆ ಶೀಲಭದ್ರಾಚಾರ್ಯ ಹೆಸರಿಗೆ ಮಾತ್ರವೇ ಪಂಡಿತ ಪದವಿಯನ್ನು ಸ್ವೀಕರಿಸಿ, ಸ್ಥಾನವನ್ನು ಅಲಂಕರಿಸದೆ ಪ್ರಾಧ್ಯಾಪಕನಾಗಿ ಪಾಠ ಹೇಳುತ್ತಿದ್ದನಂತೆ.

ಪಂಡಿತಸ್ಥಾನದಂತೆಯೇ ವಿಶ್ವವಿದ್ಯಾಲಯದ ಉಳಿದ ಅಧ್ಯಾಪಕ, ಪ್ರಾಧ್ಯಾಪಕ ಸ್ಥಾನಗಳೂ ಸಮಾನಶ್ರೇಷ್ಠ ಗೌರವವನ್ನು ಪಡೆದಿದ್ದವು. ಇಲ್ಲಿ ಇದ್ದ ಗುರುಗಳು ಹಣ ಪಡೆಯಲು ಪಾಠ ಹೇಳುತ್ತಿರಲಿಲ್ಲ. ಜ್ಞಾನ ಪ್ರಸಾರಕ್ಕಾಗಿ ಬೋಧಿಸುತ್ತಿದ್ದರು.

ನಾಲಂದ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ಸ್ಥಾನಕ್ಕೆ ಇದ್ದ ಮಹತ್ವಪೂರ್ಣ ಸ್ಥಾನಮಾನಗಳನ್ನು ಅರಿತು ಬ್ರಾಹ್ಮಣರು ಮಾತ್ರವೇ ಅಲ್ಲದೆ ಅರಸು ಮನೆತನದವರೂ ಜ್ಞಾನಾರ್ಜನೆ ಮಾಡಿ ಶಿಕ್ಷಣ ವೃತ್ತಿಯನ್ನು ಕೈಗೊಳ್ಳಲು ಮುಂದೆ ಬಂದರು. ಅಂತಹವರ ಪೈಕಿ ಶೀಲಭದ್ರಾಚಾರ್ಯನೂ ಒಬ್ಬನು.

ಶೀಲ ಭದ್ರಾಚಾರ್ಯ ರಾಜ ವಂಶೀಯ ಯುವರಾಜ. ಅರಸು ಪದವಿಗಿಂತಲೂ ಮಿಗಿಲಾಗಿದ್ದ ಅಧ್ಯಾಪಕ ಪದವಿಯನ್ನು ಪಡೆಯಲು ಆಶಿಸಿ ಸಂತೋಷದಿಂದ ತನ್ನ ಅಧಿಕಾರವನ್ನು ತಮ್ಮನಿಗೆ ಬಿಟ್ಟು ಕೊಟ್ಟು ನಾಲಂದ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ ಮುಂದೆ ಪ್ರಾಧ್ಯಾಪಕನಾಗುತ್ತಾನೆ. ಆಗ ಧರ್ಮಪಾಲ ನಾಲಂದ ವಿಶ್ವವಿದ್ಯಾಲಯದ ಪಂಡಿತನಾಗಿರುತ್ತಾನೆ. ಧರ್ಮಪಾಲ ಕಾಂಚಿ ಕ್ಷೇತ್ರದವನು. ಧರ್ಮಪಾಲರೊಂದಿಗೆ ವಾದಕ್ಕೆ ಬಂದ ದಾಕ್ಷಿಣಾತ್ಯ ವಿದ್ವಾಂಸನೊಂದಿಗೆ ಶೀಲಭದ್ರ ವಾದ ಹೂಡಿ ಅವನನ್ನು ಸೋಲಿಸುತ್ತಾನೆ. ಮುಂದೆ ನಾಲಂದ ವಿಶ್ವವಿದ್ಯಾಲಯದ ಪಂಡಿತನಾಗುತ್ತಾನೆ. ಸುಮಾರು ೯೦

(ಎಂಟನೇ ಪುಟ ನೋಡಿರಿ)

ಹನಿಯಾಗಿ ಒಸರುವ ಈ ಝರಿಯು
ಹರಿಯುವ ಮಹಾನದಿಯಾಗುವ ತನಕ
ಯಾರೊಬ್ಬರೂ ಆ ಹನಿಗಳನ್ನು ಲೆಕ್ಕಿಸಲಿಲ್ಲ............

25 ಪೈಸೆಯ ಚಿಕ್ಕ ನಾಣ್ಯವನ್ನು ಯಾರು ಲೆಕ್ಕಿಸುವರು? ಎಷ್ಟೋ ಬಾರಿ ಅದು ಕಳೆದು ಹೋಗುವುದುಂಟು. ಒಂದು ದಿನ, ಹತ್ತು ವರ್ಷ ವಯಸ್ಸಿನ ಪುಟ್ಟ ಬಾಲುವು ಈ ಬಗ್ಗೆ ಏನಾದರೂ ಮಾಡಬೇಕೆಂದು ನಿಶ್ಚಯಿಸಿದನು. ತಾಯಿಯೊಡನೆ ಅವನು, ಉಳಿತಾಯಕ್ಕಾಗಿ ದಿನಾಲು 25 ಪೈಸೆ ಕೊಡಬೇಕೆಂದು ಕೇಳಿದನು. ಅವಳೊಪ್ಪಿದಳು. ಈ ರೀತಿ ಪುಟ್ಟ ಬಾಲುವು ನಮ್ಮ ಪಿಗ್ಮಿ ಠೇವಣಿ ಸಂಯೋಜನೆಯ ಅತೀ ಎಳೆಯ ಸದಸ್ಯನಾದನು. ಪ್ರತಿ ದಿನವೂ ನಮ್ಮ ಪಿಗ್ಮಿ ಠೇವಣಿಯ ಸಂಗ್ರಾಹಕನು ಅವನ ಮನೆಯನ್ನು ತಾನಾಗಿಯೇ ಸಂದರ್ಶಿಸಿ 25 ಪೈಸೆಯನ್ನು ಪಡೆಯುತ್ತಲಿದ್ದನು. ಏಳು ವರ್ಷಗಳು ಬಹು ಬೇಗನೇ ಉರುಳಿದುವು. ಬಾಲುವು ಈಗ ಚಿಕ್ಕವನಾಗಿ ಉಳಿದಿಲ್ಲ. ಹಾಗೆಯೇ ಅವನ 25 ಪೈಸೆ ಕೂಡಾ. ಅವುಗಳು ಅವನೊಂದಿಗೇ ಬೆಳೆದಿವೆ...700 ರೂಪಾಯಿಯ ದೊಡ್ಡ ಮೊತ್ತವಾಗಿದೆ. ಬಾಲುವು ಈಗ ಒಂದು ಹೊಸ ವಾಚು, ಒಂದು ಹೊಸ ಸೈಕಲು ತೆಗೆದುಕೊಳ್ಳಬಹುದು– ಅಥವಾ ತನ್ನ ಕಾಲೇಜು ವಿದ್ಯಾಭ್ಯಾಸಕ್ಕೆ ಆ ಹಣವನ್ನು ಉಪಯೋಗಿಸಬಹುದು. ನೀವೆಲ್ಲ ಪುಟ್ಟ ಗೆಳೆಯರು ಅವನಂತೆಯೇ ಆಗುವಿರಿ ತಾನೇ?

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಶಾಖೆಗಳು:
200ಕ್ಕೂ ಮಿಕ್ಕಿವೆ.

ಚಲಾವಣಾ ಸಂಪತ್ತು
ರೂ. 80 ಕೋಟಿಗೂ ಮಿಕ್ಕಿದೆ.

ನಮ್ಮಲ್ಲಿ ಖಾತೆ ತೆರೆಯಲು ನಿಮ್ಮಲ್ಲಿರುವ ಯಾವ ಮೊತ್ತವೂ ಚಿಕ್ಕದಲ್ಲ.

ವಿಚಾರ ವೇದಿಕೆ

ಭಾರತದಲ್ಲಿ ರಾ

ಕೇವಲ ರಾಷ್ಟ್ರೀಯತೆಯಿಂದ ಯಾವುದೇ ರಾಷ್ಟ್ರ ನಿರ್ಮಾಣವಾಗುವುದಿಲ್ಲ. ಆದರೆ ಜನತೆ ಒಂದು ರಾಷ್ಟ್ರವಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ತಮ್ಮದೇ ಆದ ರಾಷ್ಟ್ರೀಯತೆಯನ್ನು ರೂಪಿಸಿಕೊಳ್ಳುತ್ತಾರೆ. ದೇಶದ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಟ ನಡೆಸಿದ ದಿನಗಳವು. ಹೋರಾಟದ ಆರಂಭ ಕಾಲದಲ್ಲಿ ನಮ್ಮ ರಾಜಕೀಯ ಮುಂದಾಳುಗಳು ನಾವು ಒಂದು ರಾಷ್ಟ್ರವೆಂಬ ಭಾವನೆಯನ್ನು ನಮ್ಮಲ್ಲಿ ಮೂಡಿಸಿದರು. ಆದರೆ ನಮ್ಮ ವಿರೋಧಿಗಳು ನಾವು ಒಂದು ರಾಷ್ಟ್ರವಲ್ಲವೆಂದು ಸಾಧಿಸುತ್ತಾ ಬಂದರು. ನಮ್ಮ ಭಾಷೆ ಧಾರ್ಮಿಕ ಆಚಾರ ವಿಚಾರಗಳು, ಮತ್ತು ಸಂಸ್ಕೃತಿಯಲ್ಲಿ ಆಗ ಕಂಡುಬರುತ್ತಿದ್ದ ವೈವಿಧ್ಯತೆಯೇ ಈ ಬಗೆಯ ವಿಚಾರಧಾರೆಗೆ ಕಾರಣೀಭೂತವಾಗಿತ್ತು. ನಮ್ಮ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ಕಂಡು ಬಂದ ಮೂಲಭೂತ ಭಿನ್ನಾಭಿಪ್ರಾಯಗಳು, ಜನಜಾಗೃತಿಯ ಅಭಾವ ಇವು ಈ ವಿಚಾರಕ್ಕೆ ಪುಷ್ಟಿ ನೀಡಿದವು.

ಶಾಂತಿ ಕಾಲದಲ್ಲಿ, ಯಾವುದೇ ರಾಷ್ಟ್ರದ ಪ್ರಜೆಯೇ ಇರಲಿ ಅವನು, ತನ್ನ ಬಗ್ಗೆ ಆಲೋಚಿಸಬೇಕು, ತನ್ನ ಕ್ಷೇಮಾಭ್ಯುದಯಕ್ಕಾಗಿ ಯತ್ನಿಸಬೇಕು. ತನ್ನ ಹಿತಾಸಕ್ತಿಗಳಿಗೆ ಬಾಧಕವೆಂದು ಕಂಡು ಬರುವ ಕಾನೂನುಗಳು ಮತ್ತು ಆಡಳಿತ ಕ್ರಮಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು. ಸಮಾಜದಲ್ಲಿ ಅಪೇಕ್ಷೆ—ಪ್ರತ್ಯಾಪೇಕ್ಷೆಗಳಿಂದ, ವಿಭಿನ್ನ ಹಿತಾಸಕ್ತಿಗಳಿಂದಾಗಿ ವಾತಾವರಣ ಗೊಂದಲಮಯವಾಗುತ್ತದೆ. ಮೂಲತಃ ಕೆಲವು ಪ್ರಕಟ ಮತ್ತು ಅಪ್ರಕಟಿತ ಶಕ್ತಿಗಳು ಇಂತಹ ಒಂದು ವಾತಾವರಣವನ್ನು ಸೃಷ್ಟಿಸುತ್ತವೆ. ವಿಶಿಷ್ಟ ಪ್ರಸಂಗಗಳಲ್ಲಿ ಶಾಂತಿ ಸುವ್ಯವಸ್ಥೆ ಅನಿವಾರ್ಯವಾಗುತ್ತದೆ. ಈ ಬಗೆಯ ಒಂದು ಸೌಹಾರ್ದದ ವಾತಾವರಣ ನೆಲೆಗೊಂಡಾಗ ರಾಷ್ಟ್ರೀಯತೆಯ ಕಲ್ಪನೆ ಹೆಚ್ಚು ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣವಿತ್ತು. ನಮ್ಮ ಅಪೇಕ್ಷೆಗಳು ಮತ್ತು ಹಿತಾಸಕ್ತಿಗಳ ನಡುವೆ ಸಂಘರ್ಷಣೆ ನಡೆದಿತ್ತು.

ನಿರಂತರ ಹೋರಾಟದ ಫಲವಾಗಿ ದೇಶವು ಸ್ವತಂತ್ರವಾಯಿತು. ನಾವು ನಮ್ಮ ಆದರ್ಶಗಳಿಗೆ ಅನುಗುಣವಾದ ಸಮಾಜ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಹಾಗೂ ನಮ್ಮದೇ ಆದ ರಾಷ್ಟ್ರೀಯತೆಯ ಕಲ್ಪನೆಯನ್ನು ನಿರ್ಮಿಸಿ ಕೊಳ್ಳಲು ಸ್ವತಂತ್ರರಾದೆವು. ನಮ್ಮದೇ ಆದ ರೀತಿಯಲ್ಲಿ ನಾವು ಈ ಮನೋಭಾವವನ್ನು ಬಲಗೊಳಿಸಿದೆವು.

ರಾಷ್ಟ್ರ ನಿರ್ಮಾಣದ ಸಂಕಲ್ಪ

ದೇವರ ಅನುಜ್ಞೆಯಿಂದ ಅಥವಾ ಅನಿವಾರ್ಯವೆನಿಸಿದ ಪ್ರಕೃತಿಯ ನಿಯಮಗಳಿಂದ ರಾಷ್ಟ್ರ ನಿರ್ಮಾಣವಾಗುವುದಿಲ್ಲ. ಮಾನವನ ಸಾಂಘಿಕ ಮನೋಭಾವವೇ ಎಲ್ಲಾ ಸಂಘ-ಸಂಸ್ಥೆಗಳ ನಿರ್ಮಾಣಕ್ಕೆ ಮುಖ್ಯ ಕಾರಣವಾಗಿದೆ. ಕುಟುಂಬದಲ್ಲಿ ಕಂಡುಬರುವ ಸಹಜವಾದ ಸಂಬಂಧಗಳು. ಈ ನಿಯಮಕ್ಕೆ ಹೊರತಾಗಿಲ್ಲ. ಈ ಸಂಬಂಧ ಕಾಲ ಕ್ರಮದಲ್ಲಿ ಪರಿವರ್ತನೆಗೊಂಡಿದೆ. ನಮ್ಮ ಇತಿಹಾಸ ಹಾಗೂ ಭೂಗೋಲಗಳಲ್ಲಿ ರಾಷ್ಟ್ರೀಯತೆಯ ಕಲ್ಪನೆಯನ್ನು ನಮ್ಮ ಮೇಲೆ ಒತ್ತಾಯದಿಂದ ಹೇರುವ ಯಾವ ಅಂಶಗಳೂ ಇಲ್ಲ. ನಾವು ಒಂದು ರಾಷ್ಟ್ರವಾಗಬೇಕೆಂಬ ಸಂಕಲ್ಪ ಮಾಡಿದರೆ, ಇತಿಹಾಸ ಮತ್ತು ಭೂಗೋಳಗಳಲ್ಲಿ ಈ ಅಂಶಗಳೇ ನಮ್ಮ ರಾಷ್ಟ್ರೀಯ ಮನೋಭಾವಕ್ಕೆ ಅಗತ್ಯವಾದ ಮೆರುಗನ್ನೂ ನೈತಿಕ ಬಲವನ್ನೂ ಕೊಡುತ್ತವೆ. ರಾಷ್ಟ್ರೀಯ ಮನೋಭಾವವಂತೂ ಈಗ ಇದ್ದೇ ಇದೆ. ಈ ಮನೋಭಾವವನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗಲು, ಹಾಗೂ ಅದನ್ನು ಇನ್ನಷ್ಟು ಬಲಗೊಳಿಸಲು ನಾವು ಅಭ್ಯಸಿಸಬೇಕು. ರಾಷ್ಟ್ರೀಯತೆಯ ಕಲ್ಪನೆಯು ಮುಖ್ಯವಾಗಿ ಮಾನವ ಸಹಜವಾದ ಪ್ರವೃತ್ತಿಯಾಗಿದೆ. ಅದರ ಪರಿತಗಳೂ ಅಷ್ಟೇ ಸಹಜವಾಗಿವೆ.

ಎರಡು ಮೂರು ವರ್ಷಗಳ ಹಿಂದೆ ಫ್ರಾನ್ಸಿನ ಜೀನ್—ಜಾಕ್ವಿಸ್ ರೂಸೋ ಸಾರ್ವಜನಿಕ ಸಂಕಲ್ಪ ಸಂಬಂಧವಾದ ಸಿದ್ಧಾಂತವೊಂದನ್ನು ಮಂಡಿಸಿದನು, 'ವ್ಯಕ್ತಿಗಳು ಸುಸಂಘಟಿತ ಸಮಾಜವನ್ನು ಸ್ಥಾಪಿಸಲು ಒಪ್ಪಿಕೊಂಡಾಗ ಪ್ರತಿಯೊಬ್ಬ ವ್ಯಕ್ತಿಯೂ ಈ ಸಾಮೂಹಿಕ ಸಂಕಲ್ಪಕ್ಕಾಗಿ ತನ್ನ ಸ್ವಾಭಾವಿಕವಾದ ಹಕ್ಕುಗಳನ್ನು ಬಿಟ್ಟು ಕೊಡುತ್ತಾನೆ". ಎಂಬುದೇ ರೂಸೋ ಸಿದ್ಧಾಂತದ ತಿರುಳು. ರೂಸೋ ತನ್ನ ಅಭಿಪ್ರಾಯವೇನು ಎಂಬುದನ್ನು ಇಲ್ಲಿ ನಿಖರವಾಗಿ ಹೇಳಿಲ್ಲ. ಸಾಮೂಹಿಕ ಸಂಕಲ್ಪವೆಂದರೆ ಬಹು ಜನರ ಅಭಿಪ್ರಾಯವೆಂದೂ ಅರ್ಥವಾಗುವುದಿಲ್ಲ; ವ್ಯಕ್ತಿಗತ ಆಸೆ—ಆಕಾಂಕ್ಷೆಗಳ ಸಾರವೂ ಅದಲ್ಲ; ಹಾಗಾದರೆ ಅದು ಏನು? ಇದೊಂದು ಹುಚ್ಚು ಕಲ್ಪನೆಯೆಂದು ನಾವು ಈ ವಿಚಾರವನ್ನು ತಳ್ಳಿಬಿಡಬಹುದು. ಅಥವಾ ಅದನ್ನು ಶ್ರದ್ಧೆಯಿಂದ ಅನುಮೋದಿಸಬಹುದು. ಹೀಗೆ ನಾವು ಈ ವಿಚಾರವನ್ನು ಅಂಗೀಕರಿಸಿದಾಗ, ತನ್ನ ಸಮಾಜ ಮತ್ತು ರಾಷ್ಟ್ರದ ಬಗೆಗೆ ವ್ಯಕ್ತಿಗೆ ಇರುವ ಮಮತೆಯು ಹೆಚ್ಚು ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಈ ಮಮತೆಯೇ ಎಲ್ಲ ಬಗೆಯ ವಿನಾಶಕಾರಿ ಪ್ರವೃತ್ತಿಯನ್ನು ಎದುರಿಸಿ ನಿಲ್ಲಬಲ್ಲದು.

ಪ್ರಜೆಗಳು ಸರ್ಕಾರವನ್ನು ಏಕೆ ಟೀಕಿಸುತ್ತಾರೆ? ಮತ್ತೆ ಅದಕ್ಕೆ ಏಕೆ ವಿಧೇಯರಾಗಿ ನಡೆದುಕೊಳ್ಳುತ್ತಾರೆ? ಎಂಬುದನ್ನು ನಾವು ಬಲ್ಲೆವು. ತಮ್ಮ ದುಃಖ ದುಮ್ಮಾನಗಳು ಸಮಾಜ ವ್ಯವಸ್ಥೆಯನ್ನು ಬದಲಿಸಲಾರವೆಂಬುದು ಅವರಿಗೆ ಗೊತ್ತಿದ್ದರೂ ಅವರು ಸಾಕ್ರೇಟಿಸ್‌ನಂತೆ ಏಕೆ ನರಳುತ್ತಾರೆ? ಎಂಬುದನ್ನು ನಾವು ತಿಳಿದುಕೊಳ್ಳಬಲ್ಲೆವು. ಯಾವುದೇ ಒಂದು ವಿಷಯವನ್ನು ಕುರಿತು ತೀರ್ಪು ಕೊಡುವಾಗ ವ್ಯಕ್ತಿಯು ಯಾವ ತಪ್ಪು ಮಾಡಬಹುದೋ ಅದೇ ತಪ್ಪನ್ನು, ಬಹು ಸಂಖ್ಯಾತರೂ ಮಾಡಬಹುದಾಗಿದೆ. ಈ ಕಾರಣದಿಂದಾಗಿ ವ್ಯಕ್ತಿಗಳ ಸಂಖ್ಯೆಗಿಂತಲೂ ವ್ಯಕ್ತಿಯ ಗುಣಾಂಶ ಮುಖ್ಯವಾಗಿದೆ. ಸತ್ಯ ಮತ್ತು ನ್ಯಾಯಗಳನ್ನು ಯಾವನು ಎತ್ತಿ ಹಿಡಿಯುತ್ತಾನೆಯೋ ಅವನೇ ನಿಜವಾದ ದೇಶಭಕ್ತ. ತನ್ನ ರಾಷ್ಟ್ರದ ಹಿತ ದೃಷ್ಟಿಯಿಂದ ಕರ್ತವ್ಯ ನಿರತನಾದ ವ್ಯಕ್ತಿಗಿಂತಲೂ ಅವನು ಮಿಗಿಲಾದ ದೇಶಪ್ರೇಮಿಯೆನ್ನಬಹುದು. ನಾವು ಯಾವುದೇ ವ್ಯಕ್ತಿ ಅಥವಾ ಪಕ್ಷಗಳಲ್ಲಿ ನಂಬುಗೆಯಿಡುವ ಬದಲು ಸಮಗ್ರ ಮಾನವ ಜನಾಂಗದಲ್ಲಿ ನಿಷ್ಠೆಯಿಡುವುದನ್ನು ಕಲಿತುಕೊಳ್ಳಬೇಕು. ಈ ಬಗೆಯ ಒಂದು ಶ್ರದ್ಧೆಯೇ ನಮ್ಮನ್ನು ಎಲ್ಲ ಸಂಕಟಗಳು ಮತ್ತು ಅಸಮಾಧಾನಗಳಿಂದ ಪಾರು ಮಾಡಬಲ್ಲುದು.

ಸಾಮೂಹಿಕ ಸಂಕಲ್ಪದ ಬಗ್ಗೆ ರೂಸೋನಿಗೆ ದೃಢವಾದ ನಂಬುಗೆಯಿತ್ತು. ಸಾಮೂಹಿಕ ಸಂಕಲ್ಪ ಅವಿನಾಶವೆಂದು ಅವನು ಭಾವಿಸಿದ್ದ. ಅವನು ಇತಿಹಾಸವನ್ನು ಇನ್ನಷ್ಟು ಅರಿತುಕೊಂಡಿದ್ದರೆ ಹೀಗೆ ಹೇಳುತ್ತಿರಲಿಲ್ಲ. ಆಡಳಿತಗಾರನ ಕಾರ್ಯದಿಂದ, ದಬ್ಬಾಳಿಕೆಯಿಂದ ಮತ್ತು ಇತರ ಆಘಾತಗಳಿಂದ ಜನರ ಸಾಮೂಹಿಕ ಸಂಕಲ್ಪ ನಾಶಗೊಳ್ಳಲಾರದೆಂದು ನಾವು ಒಪ್ಪಿಕೊಳ್ಳುತ್ತೇವೆ. ಜನರು ಕಾಲಕ್ರಮದಲ್ಲಿ ತಮ್ಮ ಮಧ್ಯ ಸಾಮೂಹಿಕವಾದ ಹಾಗೂ ವಾಸ್ತವವಾದ ಒಂದು ಸಂಕಲ್ಪವಿದೆಯೆಂಬುದನ್ನು ಅಲ್ಲಗಳೆದಾಗ ಈ ಸಂಕಲ್ಪವು ಜನರಿಂದಲೇ ನಾಶಗೊಳ್ಳುತ್ತದೆ. ಇಲ್ಲದಿದ್ದರೆ, ರಾಷ್ಟ್ರಗಳು ಹಾಗೂ ಸಂಸ್ಕೃತಿಗಳು ಚಿರಂತನವಾಗಿ ಬದುಕಬಹುದಾಗಿತ್ತು.

ಇಬ್ನ ಕಾಲ್ಡೂನಿನ ತತ್ವ

ರೂಸೋ ಒಬ್ಬ ಕನಸುಗಾರ, ಆದರ್ಶವಾದಿ. ಇತಿಹಾಸದ ತತ್ವವನ್ನು ಮೊತ್ತ ಮೊದಲಿಗೆ ಬೋಧಿಸಿದ ಅರಬ್ ಇತಿಹಾಸಕಾರ ಇಬ್ನಕಾಲ್ಡೂನ್ ವಾಸ್ತವ ವಾದಿಯಾಗಿದ್ದ. ಸಮಾಜದಲ್ಲಿ ಅನೇಕ ಪಂಗಡಗಳ ಭಾವನೆಗಳಿದ್ದರೂ ಈ ಎಲ್ಲ ಭಾವನೆಗಳು ಸಾಮೂಹಿಕ ಸಂಕಲ್ಪಕ್ಕೆ ಯಾವ

ಬಲ್ಗೇರಿಯಾದ ಪ್ರಥಮ ಮಹಿಳಾ ವಿಮಾನ ಚಾಲಿಕೆ ಮರಿಯಾ

ಯತೆಯ ಬೆಳವಣಿಗೆ

ದೇ ರೀತಿಯಲ್ಲಿ ಆತಂಕವೊಡ್ಡುವುದಿಲ್ಲವೆಂದೂ ಅವು ಸಾಮೂಹಿಕ ಸಂಕಲ್ಪದಲ್ಲಿ ಕರಗಿ ಹೋಗುತ್ತದೆಯೆಂದು ಹೇಳಿದ್ದಾನೆ. ಇಬ್ನ ಖಾಲ್ದೂನಿನ ಈ ಸಿದ್ಧಾಂತವು ಜೀವನದ ನೈಜತೆಯನ್ನು ಪ್ರತಿಬಿಂಬಿಸುತ್ತದೆ.

ಇಂದು ನೀವು ಯಾವುದೇ ರಾಷ್ಟ್ರದ ಬಗೆಗೆ ಆಗಲಿ, ವಿವರವಾದ ಅಧ್ಯಯನ ಕೈಗೊಂಡಾಗ, ಸಮಾಜದಲ್ಲಿ ದೊಡ್ಡ ಮತ್ತು ಸಣ್ಣ ಸಂಗಡಗಳ ಹಿತಾಸಕ್ತಿಗಳು ಇದ್ದುದು ಕಂಡು ಬರುತ್ತದೆ. ಜನರು ಈ ಸಂಗಡಗಳಿಗೆ ನಿಷ್ಠರಾಗಿರುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಅವರು ರಾಷ್ಟ್ರಕ್ಕೆ ನಿಷ್ಠರಾಗಿರುತ್ತಾರೆ. ಅವರ ಈ ನಿಷ್ಠೆಯಿಂದಲೇ ರಾಷ್ಟ್ರೀಯ ಐಕಮತ್ಯ ಅಬಾಧಿತವಾಗಿ ಮುಂದುವರಿಯುತ್ತದೆ.

ಸಮಾಜದಲ್ಲಿ ಗುಂಪುಗಳು, ಪಕ್ಷ ಸಂಗಡಗಳು ಮತ್ತು ಇತರ ಹಿತಾಸಕ್ತಿಗಳು ಅನಿವಾರ್ಯವಾಗಿವೆ. ಈ ಗುಂಪುಗಳ ನಡುವೆ ಮತ್ತು ಪಕ್ಷ ಸಂಗಡಗಳ ನಡುವೆ ಘರ್ಷಣೆಯ ಸಂಭವವೂ ಇರುತ್ತದೆ.

ಮಾನವ ಸ್ವಭಾವದಲ್ಲಿನ ಕೆಲವೊಂದು ಗುಣಗಳಿಂದ ಕೆಲವು ಮನೋವೃತ್ತಿಗಳಿಂದ ಹಾಗೂ ದೀರ್ಘಾವಧಿ ಹಿತಾಸಕ್ತಿಗಳನ್ನು ಕುರಿತ ಪ್ರಜ್ಞೆಯಿಂದ ಈ ಗುಂಪುಗಳು ಮತ್ತು ಪಕ್ಷ ಸಂಗಡಗಳು ಪರಸ್ಪರ ಸಹಕರಿಸುತ್ತವೆ. ರಾಷ್ಟ್ರವು ತನ್ನ ಅಧಿಕಾರದಿಂದ ಈ ಗುಂಪುಗಳ ಘರ್ಷಣೆಯನ್ನು ಹತೋಟಿಗೆ ತರುತ್ತದೆ. ಸಮಾಜದಲ್ಲಿ ಸಂಗಡಗಳ ಮನೋಭಾವವು ಮೊದಲಿನಿಂದಲೂ ಇದ್ದಿತೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಯಾವುದೇ ರಾಷ್ಟ್ರದ ಇತಿಹಾಸವನ್ನು ಕೂಲಂಕುಷವಾಗಿ ಅಭ್ಯಸಿಸಿದಾಗ ಸಮಾಜದಲ್ಲಿ ಸಾಮೂಹಿಕ ಸಂಕಲ್ಪದ ಅಸ್ತಿತ್ವವನ್ನು ಕುರಿತು ಸ್ಪಷ್ಟ ತಿಳುವಳಿಕೆಯಾಗುತ್ತದೆ.

ಭಾರತ ದೇಶದ ರಚನೆ

ಭಾರತದಲ್ಲಿ ಇಂದು, ವಿವಿಧ ಭಾಷೆ, ಧರ್ಮ, ಸಂಸ್ಕೃತಿಗಳ ಸಂಗಡಗಳಿವೆ. ಈ ಸಂಗಡಗಳ ಪರಂಪರೆಯು, ಇವೆಲ್ಲವುಗಳ ಮಧ್ಯ ಅನನ್ಯತೆಯಿರುವುದನ್ನು ಎತ್ತಿತೋರಿಸುತ್ತದೆ. ನಮ್ಮ ದೇಶದಲ್ಲಿ ಆರ್ಥಿಕ ಸಾಮಾಜಿಕ ಹಾಗೂ ತಾತ್ವಿಕ ಹಿತಾಸಕ್ತಿಗಳ ತಳಹದಿಯ ಮೇಲೆ ಅನೇಕ ಸಂಗಡಗಳು ಹುಟ್ಟಿಕೊಂಡಿವೆ. ನಮ್ಮ ಸಂವಿಧಾನವು ಈ ಸಂಗಡಗಳಿಗೆ ಕಾನೂನಿನ ರಕ್ಷಣೆ ನೀಡುತ್ತದೆ. ಇವೆಲ್ಲವೂ ದೇಶದ ಅಂಗಗಳೇ ಆಗಿವೆಯೆಂದು ಭಾವಿಸಿದೆ. ಆದರೆ ಜನ ಜೀವನದಲ್ಲಿ ಒಂದು ಪೀಳಿಗೆಯ ಬಳಿಕ ಇನ್ನೊಂದು ಪೀಳಿಗೆ ಬಂದಂತೆ, ಹೊಸ ಪರಿಸ್ಥಿತಿ ಉದ್ಭವಿಸುತ್ತದೆ. ಹೊಸ ಹೊಸ ಸವಾಲುಗಳನ್ನು ತಂದೊಡ್ಡುತ್ತದೆ. ಶಿಕ್ಷಣ ಮತ್ತು ಉದಾಹರಣೆಗಳೇ, ನಿರಂತರತೆಯನ್ನು ಕಾದುಕೊಳ್ಳಲು ಸಹಾಯಕವಾಗುತ್ತದೆ. ಜನಜೀವನದಲ್ಲಿ ನಿರಂತರತೆ ರಾಷ್ಟ್ರದ ಭದ್ರತೆಯ ಭರವಸೆಯನ್ನು ನೀಡುತ್ತದೆ.

ಇತರ ಯಾವುದೇ ರಾಷ್ಟ್ರದಂತೆ ನಾವೂ ಒಂದು ರಾಷ್ಟ್ರ. ನಮಗೂ ಒಂದು ಇತಿಹಾಸವಿದೆ. ಅದನ್ನು ಕಡೆಗಣಿಸಲು ಸಾಧ್ಯವಿಲ್ಲ. ನಾವು ಇತರ ರಾಷ್ಟ್ರಗಳ ಸ್ವರೂಪವನ್ನಾಗಲೀ ಅಥವಾ ಗುಣವಿಶೇಷಗಳನ್ನಾಗಲಿ ನಮ್ಮ ಮೇಲೆ ಬಲವಂತದಿಂದ ವಿಧಿಸಿಕೊಳ್ಳಲು ಸಿದ್ಧರಿಲ್ಲ.

ಪಶ್ಚಿಮದ ರಾಷ್ಟ್ರಗಳಲ್ಲಿ ವೈಮನಸ್ಸು ಹಾಗೂ ಯುದ್ಧಗಳಿಂದ ರಾಷ್ಟ್ರೀಯತೆಯ ಉದಯವಾಯಿತೆಂದು ಹೇಳಲಾಗುತ್ತಿದೆ. ಇದು ಇತಿಹಾಸಕ್ಕೆ ಸಂಬಂಧಪಟ್ಟ ವಿಷಯ. ನಮ್ಮ ದೇಶದಲ್ಲಿಯೂ ಆಡಳಿತಗಾರರ ನಡುವೆ ಯಾದವೀ ಕಲಹಗಳು ನಡೆದವು. ಈ ಕಲಹಗಳು ವಿಶ್ವದ ಇತರ ಕಡೆಗಳಲ್ಲಿ ನಡೆದ ಅಂತಃಕಲಹಗಳಂತೆಯೇ—ದೇಶದ ಐಕಮತ್ಯ ಮನೋಭಾವಕ್ಕೆ ಚ್ಯುತಿಯನ್ನು ತಂದವು. ಯುರೋಪಿನ ವಿವಿಧ ಜನಾಂಗಗಳು ಪರಸ್ಪರರ ಮೇಲೆ ತಪ್ಪುಗಳನ್ನು ಪ್ರಯೋಗಿಸಿದ್ದರೆ, ನಮ್ಮ ಮೇಲೆ ನಾವೇ ತಪ್ಪುಗಳನ್ನು ಹೊರಿಸಿಕೊಂಡಿದ್ದೇವೆ. ಇಂದು ತನ್ನ ನೈತಿಕ ಬಲವನ್ನು ಹೆಚ್ಚಿಸಿಕೊಳ್ಳ ಬಯಸುವ ಯಾವ ಭಾರತೀಯನೇ ಆಗಲಿ, ಮೊದಲು ಅವನು ಭಾರತೀಯ ಇತಿಹಾಸದಲ್ಲಿ ಈ ಹಿಂದೆ ಸಂಭವಿಸಿದ ಘಟನೆಗಳಿಗೂ ತನಗೂ ಸಂಬಂಧವಿಲ್ಲವೆಂದು ಭಾವಿಸ ಬಹುದು. ಆದರೆ ಅವನು ಹಾಗೂ ಈ ಘಟನೆಗಳ ನಡುವೆ ನಿಕಟ ಸಂಬಂಧವಿದೆ.

ಭಾರತೀಯ ಇತಿಹಾಸದಲ್ಲಿ ಅವನೊಬ್ಬ ಜಾತಿ ಮನೋವಾದಿಯಾಗಿದ್ದ. ಜಾತಿವಿಹೀನನಾಗಿದ್ದ. ಮತಾಂಧನಾಗಿದ್ದ. ಅದರಂತೆ ಮತಾಂಧತೆಯಿಂದ ನೊಂದವನಾಗಿದ್ದ. ಸೌಜನ್ಯದಿಂದ ಇತರರನ್ನು ನೋಯಿಸಿದವನಾಗಿದ್ದ, ಅದೇ ರೀತಿ ದೀನದಲಿತನಾಗಿದ್ದ. ವಿಚಾರ ಶಕ್ತಿಯನ್ನು ಬೆಳೆಸಿಕೊಳ್ಳಲು ಹಾಗೂ ಅವಸರದ ನಿರ್ಧಾರವನ್ನು ಕೈ ಬಿಡಲು ಅವನೀಗ ಭಾರತೀಯ ಇತಿಹಾಸದ ಶಕ್ತಿಗಳ ಸಮಗ್ರ ಸ್ವರೂಪವನ್ನು ವಿವರವಾಗಿ ಅಧ್ಯಯನ ಮಾಡಬೇಕಾಗಿದೆ. ಸ್ಪಷ್ಟವಾದ ಭಾರತೀಯ ಇತಿಹಾಸವನ್ನು ಅರಿತುಕೊಳ್ಳಲು, ಈ ಬಗೆಯ ತಿಳುವಳಿಕೆ ಅಗತ್ಯ. ಇದರಿಂದ ವಿಚಾರ ಪ್ರಚೋದನೆಗೊಂಡು ರಾಷ್ಟ್ರೀಯ ಕಲ್ಪನೆ ಬಲಗೊಳ್ಳುತ್ತದೆ.

ಭಾರತೀಯನ ವಿರಾಟ ರೂಪ

ಇಂದು ಭಾರತದಲ್ಲಿ ನಾವು ನಮ್ಮ ಸಮಾಜದ ಅಭಿನ್ನ ಅಂಗಗಳಾಗಿರುವ ಜನಾಂಗಗಳನ್ನು ವ್ಯಕ್ತಿಶಃ ಗುರುತಿಸುವ ಪರಿಪಾಠವನ್ನು ಬೆಳೆಸಿಕೊಂಡಿದ್ದೇವೆ. ಈ ಒಂದು ಪರಿಪಾಠದಿಂದಾಗಿ ಹಿಂದುಗಳು ನಮಗೆ ಹಿಂದುವಾಗಿಯೂ, ಮುಸ್ಲಿಮರು ಮುಸಲ್ಮಾನನಾಗಿಯೂ, ಸಿಕ್ಕರು, ಸಿಕ್ಕನಾಗಿಯೂ ಕಂಡುಬರುತ್ತಾರೆ. ಈ ಒಂದು ಪ್ರತ್ಯೇಕ ಭಾವನೆ ಕೊನೆಗೊಂಡು ನಾನು ಭಾರತೀಯ ಎಂಬ ಭಾವನೆಯು ಬಲಗೊಳ್ಳಬೇಕು. ಇದೇ ನಿಜವಾದ ರಾಷ್ಟ್ರೀಯತೆ. ಜಾತ್ಯಾತೀತ ಆದರ್ಶದ ಉದ್ದೇಶವಾದರೂ ಇದೇ ಆಗಿದೆ. ನಾನು ಭಾರತೀಯ ಎಂದು ಭಾವಿಸತೊಡಗಿದಾಗ, ನಮ್ಮ ಹೃದಯ ಮತ್ತು ಮನಸ್ಸುಗಳು ನಮ್ಮ ದೇಶದಷ್ಟೇ ವಿಶಾಲವಾಗುತ್ತವೆ.

ಈವರೆಗೂ 'ಭಾರತೀಯ' ಎಂಬ ಕಲ್ಪನೆ ಹುಟ್ಟಿರಲಿಲ್ಲವೆಂದು ಇದರ ಅರ್ಥವಲ್ಲ. ಆದರೆ ಈ ವರೆಗೆ ಸಂಕಟದ ಸಂದರ್ಭಗಳಲ್ಲಿ ಮಾತ್ರ ಭಾರತೀಯನ ವಿರಾಟ ವ್ಯಕ್ತಿತ್ವ ಪ್ರಕಟಗೊಳ್ಳುತ್ತಿತ್ತು. ದೈನಂದಿನ ಜೀವನದಲ್ಲಿ ಇದು ಕಂಡು ಬರುತ್ತಿರಲಿಲ್ಲ. ಎಲ್ಲ ಭಾರತೀಯರೂ ಇಂದು ನಿರ್ಮಿಸಬಯಸುವ ಹೊಸ "ಭಾರತೀಯ"ನ ಪ್ರತಿಮೆಯು ಈ ನಾಡಿನ ಸಾಮಾನ್ಯ ಮಣ್ಣಿನಿಂದ ರೂಪುಗೊಂಡಿರಬೇಕು. ಈ ಭಾರತೀಯನು ಎಲ್ಲ ವಿಧವಾದ ಸಂಕಷ್ಟಗಳನ್ನು ಎದುರಿಸುವ ಎದೆಗಾರಿಕೆಯುಳ್ಳವನಾಗಿರಬೇಕು.

ನಮ್ಮ ನಾಡಿನ ಮಣ್ಣಿನಲ್ಲಿ ಹುಟ್ಟುವ ಈ ನೂತನ ಭಾರತೀಯರು ಪಾಶ್ಚಿಮಾತ್ಯ ಶಿಕ್ಷಣಪಡೆದ ಭಾರತೀಯರು ಕಡೆಗಣಿಸುವ ಸಾಮಾನ್ಯ ವಿಷಯಗಳಿಗೆ ಪ್ರಾಧಾನ್ಯ ನೀಡುತ್ತಾನೆ. ಅವನು ತನ್ನ ಪರಿಸರವನ್ನು ಅರಿತುಕೊಂಡು ಅದನ್ನು ಪ್ರೀತಿಸುತ್ತಾನೆ. ಅವನಿಗೆ, ಈ ದೇಶದ ಹಗಲು....ಇರುಳುಗಳು, ಋತು ಮಾಸಗಳು, ಭೂಮಿ, ಆಕಾಶಗಳು, ತೋಟಗಳು, ಗಿಡಮರಗಳು, ನಿಸರ್ಗ ಸೌಂದರ್ಯ ಎಲ್ಲದರಲ್ಲಿ ಒಂದು ಹೊಸತನವನ್ನು ಕಾಣುತ್ತಾನೆ. ಈ ಸುಂದರವಾದ ಸೃಷ್ಟಿಗೂ ತನಗೂ ನಿಕಟ ಸಂಬಂಧವಿದೆ ಯೆಂಬುದನ್ನು ಅವನು ಅರಿತುಕೊಳ್ಳುತ್ತಾನೆ. ಅವುಗಳ ವಿಷಯದಲ್ಲಿ ಸಂವೇದನೆಯನ್ನು ವ್ಯಕ್ತಪಡಿಸುತ್ತಾನೆ.

ಸಾಮಾನ್ಯವಾದ ಆಸಕ್ತಿಗಳು, ಆಸೆ ಆಕಾಂಕ್ಷೆಗಳು ಅವನ ಜೀವನದ ಉಸಿರಾಗುತ್ತವೆ. ಅವನು ತನ್ನ ನಗರವು ಸುಂದರವಾಗಿ ನಿರ್ಮಲವಾಗಿಯೂ ಇರಬೇಕೆಂದು ಬಯಸುತ್ತಾನೆ. ನಗರದ ಐತಿಹಾಸಿಕ ಮಹತ್ವ ಕಣ್ಮರೆಯಾಗದಂತೆ ನೋಡಿಕೊಳ್ಳುತ್ತಾನೆ. ಅದರ ಅಭಿವೃದ್ಧಿಯನ್ನು ಕಂಡು ಹರ್ಷಿಸುತ್ತಾನೆ. ಸಾರ್ವಜನಿಕರ ಕಲ್ಯಾಣಕ್ಕಾಗಿ ಅಸ್ತಿತ್ವದಲ್ಲಿ ಬಂದಿರುವ ಸಂಸ್ಥೆಗಳು ಸುಗಮವಾಗಿ ಕೆಲಸ ಕಾರ್ಯಗಳನ್ನು ನಡೆಸುವುದೆಂದು ಅವನು ಹಾರೈಸುತ್ತಾನೆ. ಈ ಸಂಸ್ಥೆಗಳ ಕಾರ್ಯ ನಿರ್ವಹಣೆಯಲ್ಲಿ ಸಹೃದಯತೆಯಿಂದ ಸಹಕರಿಸುತ್ತಾನೆ.

(ಹತ್ತನೇ ಪುಟ ನೋಡಿರಿ)

ಸೀಟಿಗೆ ನೇಶನಲ್ ಎಸೆಂಬ್ಲಿಗೆ ಡೆಪ್ಯುಟಿಯಾಗಿ ಆರಿಸಲ್ಪಟ್ಟಿದ್ದಾಳೆ.

ನಾಲಂದದ ವಿಶ್ವವಿದ್ಯಾಲಯ

(ಐದನೇ ಪುಟದಿಂದ)

ವರ್ಷಗಳ ಕಾಲ ಜೀವಿಸಿದ್ದ ಶೀಲಭದ್ರಾಚಾರ್ಯ ತನ್ನ ಜೀವನವನ್ನೆಲ್ಲ ನಾಲಂದ ವಿಶ್ವವಿದ್ಯಾಲಯದ ಏಳಿಗೆಗೆ ವಿನಿಯೋಗಿಸುತ್ತಾನೆ. ವಯೋಧರ್ಮದ ಕಾರಣ ನಿವೃತ್ತಿಗೊಳಿಸಿ ಎಂದು ಶೀಲಭದ್ರಾಚಾರ್ಯ ಸೂಚಿಸಿದಾಗ ಅರಸು ಹರ್ಷವರ್ಧನ 'ತಮಗೆ ಸಮಾನರಾದ ಇನ್ನೊಬ್ಬರನ್ನು ಈ ಸ್ಥಾನದಲ್ಲಿ ಕೂಡಿಸಿ ನೀವು ಅವಶ್ಯಕವಾಗಿ ನಿವೃತ್ತರಾಗಿ' ಎಂದು ಪ್ರಾರ್ಥಿಸಿದನಂತೆ. ಪಂಡಿತ ಶೀಲಭದ್ರರ ದಕ್ಷ ಮಾರ್ಗದರ್ಶನದಲ್ಲಿ ನಾಲಂದ ವಿಶ್ವ ವಿದ್ಯಾಲಯದ ವೈಭವದ ಶಿಖರ ಮುಟ್ಟಿದುದನ್ನು ಕಂಡು ಮಗಧರಾಜ ಒಂದು ದೊಡ್ಡ ಗ್ರಾಮವನ್ನೇ ಆಚಾರ್ಯರಿಗೆ ದಾನವಾಗಿ ಕೊಡಲು ಯೋಚಿಸಿದನಂತೆ.ಮೊದಲು ಅವರು ಸ್ವೀಕರಿಸಲು ನಿರಾಕರಿಸಿ ಮುಂದೆ ಒತ್ತಾಯಕ್ಕೆ ಪಡೆದು ಗ್ರಾಮದ ಆದಯದಲ್ಲಿ ಸ್ವಲ್ಪವನ್ನೂ ತಮಗಾಗಿ ನಿಂಗಿಸಿಕೊಳ್ಳದೆ ವಿಶ್ವ ವಿದ್ಯಾಲಯದ ಧರ್ಮ ಕಾರ್ಯಗಳಿಗೆ ವಿನಿಯೋಗಿಸಿದರಂತೆ

ನಾಲಂದ ವಿಶ್ವ ವಿದ್ಯಾಲಯದ ಜ್ಞಾನಾರ್ಜನೆಗಾಗಿ ಬಂದ ಮೇಧಾವಿಗಳಿಗೆ ಮಾತ್ರ ಮೀಸಲಾಗಿತ್ತು. ಇಪ್ಪತ್ತು ವರ್ಷಗಳ ಕಾಲ ಪ್ರೌಢ ಶಿಕ್ಷಣಗಳನ್ನು ಮುಗಿಸಿ ಅನಂತರ ವಿಶ್ವ ವಿದ್ಯಾಲಯವನ್ನೇ ಪ್ರವೇಶಿಸಬೇಕಿತ್ತು. ಇಲ್ಲಿಯ ವ್ಯಾಸಂಗ ಕ್ರಮ ವಿನೂತನವಾಗಿತ್ತು. ವಿದ್ಯಾರ್ಥಿಗಳ ಜ್ಞಾನ ಅಭಿರುಚಿಯನ್ನು ಅನುಸರಿಸಿ ಶಿಕ್ಷಣ ಕೊಡುತ್ತಿದ್ದರು. ಗುರುಶಿಷ್ಯರ ಸಂಬಂಧ ಸಮರ್ಪಕವಾಗಿತ್ತು ಎಂಬುದು ಸ್ಪಷ್ಟವಾಗಿ ಅರಿವಾಗುತ್ತದೆ.

ವೇದ ವೇದಾಂಗಗಳೂ ಉಪನಿಷತ್ತುಗಳು, ವೈದಿಕ ದರ್ಶನಗಳು, ಅವೈದಿಕ ದರ್ಶನಗಳೂ ಸಂಗೀತ, ಸಾಹಿತ್ಯ, ರೇಖಾಗಣಿತ, ವಿಜ್ಞಾನ, ಶಿಲ್ಪಶಾಸ್ತ್ರ, ಗಣಿತ, ವೈದ್ಯ ಶಾಸ್ತ್ರ, ವ್ಯವಸಾಯ ಶಾಸ್ತ್ರ, ಖಗೋಳ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ ಮೊದಲಾದ ವಿದ್ಯೆಗಳನ್ನು ಅಭ್ಯಸಿಸಲು ಅನುಕೂಲವಿತ್ತು ನಾಲಂದ ವಿಶ್ವವಿದ್ಯಾಲಯದಲ್ಲಿ, ಪ್ರಾಧ್ಯಾಪಕರುಗಳು ಈ ಎಲ್ಲ ವಿಷಯಗಳನ್ನು ಹಸ್ತಗತ ಮಾಡಿಕೊಂಡು ವ್ಯಾಸಂಗ ಮಾಡಿಸುತ್ತಿದ್ದನು. ಸಕಲ ಶಾಸ್ತ್ರಗಳನ್ನು ಕಂಠಪಾಠ ಮಾಡಿರುತ್ತಿದ್ದರಂತೆ. ಹತ್ತು ಸಾವಿರ ಮಂದಿ ವಿಧ್ಯಾರ್ಥಿಗಳು, ಮೂರು ಸಾವಿರ ಮಂದಿ ಅಧ್ಯಾಪಕರುಗಳು ಈ ವಿಶ್ವವಿದ್ಯಾಲಯದಲ್ಲಿ ಇದ್ದರಂತೆ. ಒಬ್ಬೊಬ್ಬ ಅಧ್ಯಾಪಕರು ಕೇವಲ ಎಂಟು ಹತ್ತು ಮಂದಿ ವಿದ್ಯಾರ್ಥಿಗಳನ್ನು ಬಳಿಯಲ್ಲಿ ಇಟ್ಟುಕೊಂಡು ಅವರ ಶೀಲ—ಸ್ವಭಾವಗಳು ತಿದ್ದಿ ಪಾಠಗಳನ್ನು ಬೋಧಿಸುತ್ತಿದ್ದರಂತೆ. ಗುರು ಶಿಷ್ಯರಿಗೆ ನಿಕಟ ಸಂಪರ್ಕವಿತ್ತು. ಊಟ,ಆಟ, ಪಾಠಗಳ ಸಂದರ್ಭದಲ್ಲಿ ಎಲ್ಲರೂ ಒಂದೆಡೆಯಲ್ಲಿಯೇ ಇರುತ್ತಿದ್ದುದರಿಂದ ಅವರ ಬಾಂಧವ್ಯ ಮಧುರವಾಗಿರುತ್ತಿತ್ತು. ಗುರುಗಳ ಶಿಶ್ರೂಷೆಯನ್ನು ಶಿಷ್ಯರು, ಶಿಷ್ಯರ ಶಿಶ್ರೂಷೆಯನ್ನು ಗುರುಗಳು ಮಾಡುತ್ತಿದ್ದರಂತೆ. ಇನ್ನೂರು ಗ್ರಾಮಗಳ ಆದಾಯ ನಾಲಂದ ವಿಶ್ವವಿದ್ಯಾಲಯಕ್ಕೆ ಬರುತ್ತಿದ್ದುದರಿಂದ ಅಧ್ಯಾಪಕರು, ವಿದ್ಯಾರ್ಥಿಗಳು ಒಟ್ಟಾಗಿ ವ್ಯವಸಾಯ ಮಾಡುತಿದ್ದರು. ವಿದ್ಯಾಲಯದ ಆವರಣದಲ್ಲಿದ್ದ ವಸತಿಗೃಹಗಳಲ್ಲಿ ಗುರು ಶಿಷ್ಯರು ಒಟ್ಟಾಗಿ ವಾಸಿಸುತಿದ್ದರಂತೆ. ಈ ಬಗೆಯ ಸನ್ನಿವೇಶ—ವಾತಾವರಣಗಳ ದಿಸೆಯಿಂದ ಗುರುಶಿಷ್ಯರ ಅನ್ಯೋನ್ಯತೆಯುವೃದ್ಧಿಗೆ ಸದವಕಾಶ ತಾನಾಗಿಯೇ ಒದಗಿಬರುತ್ತಿತ್ತು. ವಿಶ್ವವಿದ್ಯಾಲಯ ಭಿಕ್ಷುಕನಿಗೆ ಅನ್ನ, ಬಟ್ಟೆ ಇಲ್ಲದವನಿಗೆ ವಸ್ತ್ರ, ರೋಗಿಗೆ ಚಿಕಿತ್ಸೆನಡೆಸುವ ಆಶ್ರಯ ಸ್ಥಾನವಾಗಿತ್ತು.

ನಾಲಂದ ವಿಶ್ವವಿದ್ಯಾಲಯದಲ್ಲಿ ಅಭ್ಯಸಿಸಿ ಪದವಿ ಪಡೆದ ವಿದ್ಯಾರ್ಥಿಗಳು ಪಂಡಿತರ ಅಪ್ಪಣೆಯ ಮೇರೆಗೆ ದೇಶವಿದೇಶಗಳಲ್ಲಿ ಸಂಚರಿಸಿ ಜ್ಞಾನಪ್ರಸಾರ ಮಾಡುತಿದ್ದರಂತೆ ಇದರಿಂದ ನಾಲಂದ ವಿಶ್ವ ವಿದ್ಯಾಲಯದ ವೈಭವದ ಕೀರ್ತಿ ದೇಶ ವಿದೇಶಗಳಲ್ಲಿ ಹರಡಲು ಅನುಕೂಲವಾಯಿತು. ಚೀನಾ, ಕೋರಿಯಾ, ಜಪಾನ್, ಸಿಲೋನ್, ಜಾವಾ, ಸುಮಾತ್ರ ಮುಂತಾದ ದೂರದೇಶದ ವಿದ್ವನ್ಮಣಿಗಳೂ ವಿದ್ಯಾರ್ಥಿಗಳೂ ನಾಲಂದ ವಿಶ್ವವಿದ್ಯಾಲಯಕ್ಕೆ ಬಂದು ವ್ಯಾಸಂಗ ಮಾಡುತಿದ್ದುದಕ್ಕೆ ನಿದರ್ಶನಗಳು ದೊರೆತಿವೆ. ಇಂದು ನಾಲಂದ ವಿಶ್ವವಿದ್ಯಾಲಯದ ಗತವೈಭವ ಕನಸು, ಆದರೆ ಅದು ಅಂದು ವೈಭವದ ಶಿಖರದಲ್ಲಿತ್ತು. ಅದೊಂದು ಸ್ಪಷ್ಟ ಸುಂದರ ಚಿತ್ರ.

ಜ್ಞಾನ ಕೇಂದ್ರವಾಗಿದ್ದುದರಿಂದ ಮಾತ್ರವೇ ಅಲ್ಲದೆ ಉತ್ತಮ ಗ್ರಂಥರಾಶಿಯಿಂದಲೂ ನಾಲಂದ ವಿಶ್ವವಿದ್ಯಾಲಯದ ಕೀರ್ತಿ ವಿಶೇಷವಾಗಿ ಹರಡಿತ್ತು. ನಾಲ್ಕು ಅಂತಸ್ತುಗಳ ಮೂರು ಮಹಾ ಸೌಧಗಳಲ್ಲಿ ನಾಲಂದ ವಿಶ್ವವಿದ್ಯಾಲಯದ ಜ್ಞಾನ ಗ್ರಂಥ ರೂಪದಲ್ಲಿ ಅಡಗಿತ್ತಂತೆ. ಉಳಿದ ಯಾವ ದೇಶದಲ್ಲಿಯೂ ಲಭಿಸದಂತಹ ಅಮೂಲ್ಯ ಜ್ಞಾನದ ತಿರುಳು ಗ್ರಂಥದಲ್ಲಿರುವುದನ್ನು ಅರಿತು ವಿಶೇಷವಾಗಿ ವಿದೇಶೀಯ ವಿದ್ವಾಂಸರು ನಾಲಂದಕ್ಕೆ ಬಂದು ನಕಲು ಮಾಡಿಕೊಂಡು—ತರ್ಜುಮೆ ಮಾಡಿಕೊಂಡು ಹೋಗುತ್ತಿದ್ದರಂತೆ.

ಹೀಗೆ ನಾನಾ ಬಗೆಯ ಭಿನ್ನ ವಿಚಾರಪೂರ್ಣ ಸತ್ವಶಾಲಿ ಸಂಗತಿಗಳ ಮೂಲಕ ನಾಲಂದ ವಿಶ್ವವಿದ್ಯಾಲಯದ ಗತ ವೈಭವದ ಚಿತ್ರ ನಮಗೆ ಮೂಡಿ ಬರುತ್ತಿದೆ. ನಾಲಂದವಿಶ್ವವಿದ್ಯಾಲಯದ ವೈಭವ ಇಂದಿಲ್ಲ—ಆದರೆ ಅದರ ಭವ್ಯ ಪರಂಪರೆಯ ಸ್ಮರಣೆ ಇಂದಿಗೂ ಜೀವಂತವಾಗಿ ಉಳಿದಿದೆ. ನಾಲಂದ ವಿಶ್ವವಿದ್ಯಾಲಯದ ಭಗ್ನಾವಶೇಷವನ್ನು ಇಂದಿಗೂ ಕಾಣಬಹುದಾಗಿದೆ. ಆದರೆ ವಿಪುಲ ಗ್ರಂಥರಾಶಿಗೆ? ಅದೆಷ್ಟು ದಿನ ಬೆಂಕಿಯಲ್ಲಿ ಉರಿದು ಹೋಯಿತೋ? ಕಾಲ ಚಕ್ರದ ಅಡಿಯಲ್ಲಿ ಅರೆದು ಹೋದ ನಾಲಂದದ ವೈಭವ ಗತ ಸ್ಮೃತಿಯಾಗಿ ಉಳಿದಿದೆಯಷ್ಟೆ.

ವಿಶ್ವ ಕವಿ ರವೀಂದ್ರರ ವಿಶ್ವಭಾರತಿ ವಿಶ್ವವಿದ್ಯಾಲಯದ ಸ್ವರೂಪಕ್ಕೆ ನಾಲಂದ ವಿಶ್ವವಿದ್ಯಾಲಯದ ಸ್ಫೂರ್ತಿ ನೀಡಿರಬಹುದೆಂದು ಊಹಿಸ ಬಹುದಾಗಿದೆ. ವಿಶ್ವಭಾರತಿ ಅದೇ ಭವ್ಯ ಪರಂಪರೆಯಲ್ಲಿ ಸಾಗುತ್ತಿರುವ ಚಿಕ್ಕ ನಾವೆ. ನಾಲಂದ ವಿಶ್ವವಿದ್ಯಾಲಯದ ಸಂಗತಿ ಭಾರತೀಯರ ಪ್ರಾಚೀನ ಚರಿತ್ರೆಯಲ್ಲಿ ಸ್ಮರಣೀಯ ಸುಂದರ ಅಧ್ಯಾಯ.

ನಾಲಂದ ತಕ್ಷಶಿಲೆಗಳಂತೆಯೇ ಕನ್ನಡನಾಡಿನಲ್ಲಿಯೂ ಕೆಲವು ವಿದ್ಯಾಲಯಗಳಿದ್ದವು ಎಂಬುದನ್ನು ಇಲ್ಲಿ ಸ್ಮರಿಸಬಹುದು; ವಿಜಯನಗರ, ಬೆಳ್ಳಗಾವೆ, ಐಹೊಳೆ, ಸಾಲೋಟಗಿ ಎಂಬುವು ಮುಖ್ಯವಾದುವು. ಇಂಡಿತಾಲೋಕಿಗೆ ಸೇರಿದ ಸಾಲೋಟಗಿಯಲ್ಲಿ ೯ನೆಯ ಶತಮಾನ (ನೃಪತುಂಗನ ಆಳ್ವಿಕೆ)ಯಲ್ಲಿ ಚಕ್ರಾಯುಧನೆಂಬವನು ವಿದ್ಯಾಲಯ ಸ್ಥಾಪಿಸಿದನಂತೆ, ವಿದ್ಯಾರ್ಥಿಗಳಿಗೆ ೫೦೦ ನಿವರ್ತನ ಭೂಮಿಯನ್ನು ದಾನವಾಗಿ ಕೊಟ್ಟನಂತೆ. ವಾಸಕ್ಕೆ ೨೭ ಮನೆಗಳನ್ನು ಕೊಟ್ಟನಂತೆ. ಅಧ್ಯಾಪಕರಿಗೆ ವಾಸಿಸಲು ಮನೆ, ಜೀವನಕ್ಕೆ ಭೂಮಿ ಕೊಟ್ಟನಂತೆ. ಮದುವೆ, ಉಪನಯನ ಮುಂತಾದ ಮಂಗಲ ಕಾರ್ಯಗಳ ಸಂದರ್ಭದಲ್ಲಿ ವಿದಾಲಯಕ್ಕೆ ಕಾಣಿಕೆಯಾಗಿ ಇಷ್ಟಿಷ್ಟೇ ಹಣವನ್ನು ಸಲ್ಲಿಸಬೇಕೆಂದು ನಿಗದಿ ಮಾಡಿದನಂತೆ. ಇದೊಂದು ಸ್ಪಷ್ಟ ಸುಂದರ ಚಿತ್ರ, ಅಳಿಯದೆ ಉಳಿದಿರಲೇ ಬೇಕಾದ ಚಿತ್ರ.

ಹೃದಯವು ಪೂರ್ಣವಾಗಿ ನಿಂತಾಗ?

ಹೃದಯದ ಶಸ್ತ್ರ ಚಿಕಿತ್ಸೆಯಾದಾಗ ಬದುಕುವ ಪ್ರಶ್ನೆಯನ್ನು ಕುರಿತು ಡಾಕ್ಟರುಗಳ ಚರ್ಚೆ.

ವೈದ್ಯ ವಿಭಾಗದಲ್ಲಿಯೂ ಇತರ ವಿಜ್ಞಾನ ವಿಭಾಗಗಳಂತೆ ಅನೇಕ ಪ್ರಯೋಗಗಳಿಂದಲೂ ಸಂಶೋಧನೆಗಳಿಂದಲೂ ಉತ್ತಮ ಫಲಗಳನ್ನು ಪಡೆಯುತ್ತಿದ್ದಾರೆ. ಹೃದಯದ ಶಸ್ತ್ರ ಚಿಕಿತ್ಸೆಯ ಕಾಲದಲ್ಲಿ ನಿಂತ ಹೃದಯವು ಮತ್ತೇ ಕೆಲಸ ಮಾಡುವಂತೆ ಮಾಡಲು ಪ್ರಯೋಗಗಳು ನಡೆದಿವೆ.

ಬಾಡ್ ಕ್ರೂಜ್‌ನಾಚ್ (ಡಾಡ್) ಶಸ್ತ್ರ ಚಿಕಿತ್ಸೆಗಳಲ್ಲಿ ಹೃದಯದ ಕವಾಟಗಳ ನ್ಯೂನ್ಯತೆಗಳನ್ನು ಸರಿಪಡಿಸಲು ಅಥವಾ ಹೃದಯದ ಭಿತ್ತಿಗಳಲ್ಲಿನ ನ್ಯೂನ್ಯತೆಗಳನ್ನು ತೆಗೆಯಲು ಮತ್ತು ರಕ್ತ ಚಲನೆಯ ಸ್ಥಿತಿಗಳನ್ನು ಸರಿಪಡಿಸಲೂ ಹೃದಯದ ಮಿಡಿತದ ಕಾರ್ಯವನ್ನು ನಿಲ್ಲಿಸಬೇಕಾಗುತ್ತದೆ. ಈಚೆಗೆ ಪಶ್ಚಿಮ ಜರ್ಮನಿಯಲ್ಲಿ ಬಾಡ್ ಕ್ರೂಜ್‌ನಾಚ್ ಎಂಬಲ್ಲಿ ಬಯೋ ಕೆಮಿನಿಸ್ಟ್‌ಗಳೂ ಫಿಜಿಯೋಲಾಜಿಸ್ಟ್‌ಗಳೂ ಅನಾಟಮಿಸ್ಟ್‌ಗಳೂ ಈಚೆಗೆ ಸಮಾವೇಶವಾದಾಗ ಹೃದಯದ ಶಸ್ತ್ರ ಚಿಕಿತ್ಸೆಯ ಸಮಸ್ಯೆಗಳನ್ನು ಸೈಂಟಿಫಿಕ್ ಕಾಂಗ್ರೆಸ್‌ನಲ್ಲಿ ಚರ್ಚಿಸಿದರು. ಜರ್ಮನಿಯ ರೀಸರ್ಚ್ ಅಸೋಸಿಯೇಷನ್‌ನ ಕಾರ್ಯವೇ ಈ ರೀತಿಯ ಸಮಸ್ಯೆಗಳ ವಿಚಾ

(ಪತ್ತನೇ ಪುಟ ನೋಡಿರಿ)

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಮಳೆ ಬೆಳೆ ಭವಿಷ್ಯ

ಈ ವರ್ಷವೂ ತೊಂದರೆ ತಪ್ಪಿದಲ್ಲ.

ವಿಖ್ಯಾತ ಜೋತಿಷ್ಯ ಶ್ರೀ ಬಿ. ವಿ. ರಾಮನ್‌ರವರ ಹೇಳಿಕೆ

"ಜಗತ್ತನ್ನೆಲ್ಲ ಹಿಡಿದು ಇಟ್ಟಿರುವವನು ಸೂರ್ಯ, ಜಗತ್ತಿನ ಕಣ್ಣು ಅವನು. ಇಡೀ ಜೀವರಾಶಿ ಬದುಕಿರುವುದು ಅವನಿಂದ. ನಾವು ಪ್ರಾಣಧಾರಣೆಗೆ ತಿನ್ನುವ ಅನ್ನ ಸೂರ್ಯನ ಪ್ರಭಾವದಿಂದಲೇ ಆಗಿರುವುದು. ಮಳೆ, ಬೆಳೆ, ಅತಿವೃಷ್ಟಿ, ಅನಾವೃಷ್ಟಿ ಎಲ್ಲದಕ್ಕೂ ಸೂರ್ಯನೇ ಕಾರಣ. ಆತನ ಪ್ರಭಾವದಿಂದ ಆಗುವುದೆಲ್ಲವನ್ನೂ ಇಂಥಿಂಥದ್ದು, ಇಂತಿಂಥ ಕಾಲದಲ್ಲೇ ಇಷ್ಟಿಷ್ಟೇ ಆಗುತ್ತದೆ ಎಂದು ೨+೨=೪ ಎನ್ನುವಷ್ಟು ನಿಖರವಾಗಿ ಹೇಳಬಹುದು" ಎನ್ನುತ್ತಾರೆ ಪ್ರಸಿದ್ಧ ಜೋತಿಷ್ಯ ಶ್ರೀ ರಾಮನ್.

'ಮಳೆ ಬೆಳೆ ಅಭಾವ ಪ್ರಪಂಚ ಹುಟ್ಟಿದಂದಿನಿಂದ ಇದೆ. ಈಗಲೂ ಇದೆ. ಮುಂದೂ ಇರುತ್ತದೆ. ಸೂರ್ಯ ಎಂದಿನ ತನಕವೂ ಇರುತ್ತಾನೋ ಅಂದಿನ ತನಕ ತಪ್ಪಿದ್ದಲ್ಲ. ಆದರೆ ಆಯಾ ವರ್ಷದ ಗ್ರಹಗತಿಗಳನ್ನು ಅಧ್ಯಯನಮಾಡಿ ಸೂರ್ಯನ ಚಲನ ವಲನ, ಯಾವ ಯಾವ ರಾಶಿಗಳಿಗೆ ಸೂರ್ಯ ಹೋಗುವಾಗ ಭೂಮಿಯ ಮೇಲೆ ಯಾವ ಪರಿಣಾಮ ಬೀಳುತ್ತದೆ ಎಂದೆಲ್ಲವನ್ನೂ ಹಿಂದೆ ಜ್ಯೋತಿಷಿಗಳು ಹೇಳುತಿದ್ದರು. ಅರಸರು ಅವುಗಳನ್ನು ಕೇಳಿ ಫಲಾಫಲಗಳನ್ನು ಎದುರಿಸಲು ತಕ್ಕ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಈಗ ಜೋತಿಷ್ಯ ಶಾಸ್ತ್ರಕ್ಕೆ ಸರಕಾರ ಬೆಲೆ ಕೊಡುತ್ತಿಲ್ಲ. ವಿಜ್ಞಾನದ ಬಗ್ಗೆ ಅರೆಬರೆ ಜ್ಞಾನವಿರುವವರನ್ನು ಹವಾಮಾನ ಕೇಂದ್ರದಲ್ಲಿ ನೇಮಿಸಿ ಅವರು ಹೇಳುವುದನ್ನೇ ರೈತರು ಕೇಳುವಂತೆ ಮಾಡಿ ಇಷ್ಟೆಲ್ಲ ಅನರ್ಥಗಳಿಗೆ ಕಾರಣವಾಗುತ್ತದೆ' ಎಂದು ನೊಂದು ನುಡಿದರು ಶ್ರೀ ರಾಮನ್. "ಆಹಾರ ಧಾನ್ಯ ಉತ್ಪಾದಿಸುವ ರೈತರಿಗೆ ಸರಕಾರವು ಸರಿಯಾದ ತಿಳುವಳಿಕೆ ಕೊಡಬೇಕು. ಸರಿಯಾದ ತಿಳುವಳಿಕೆಯನ್ನು ಜೋತಿಷ್ಯ ಶಾಸ್ತ್ರವು ಮಾತ್ರವೇ ಕೊಡಬಲ್ಲುದು. ಪಂಚಾಂಗದ ಫಲವೇ ಹಿಂದೆಲ್ಲ ದಿಕ್ಸೂಚಿಯಾಗಿತ್ತು'.

ಮುಂಬರುವ ವರ್ಷ ಬುಧನ ಪಾರುಪತ್ಯ ಈ ಸಾರಿ ಹೆಚ್ಚಾಗಿರುವುದರಿಂದ ರಾಜ್ಯ ಅಭಾವ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಅವನೇ ರಾಜ, ಅವನೇ ಮಂತ್ರಿ, ಅವನೇ ಮೇಘಾಧಿಪತಿ ಆಗಿದ್ದಾನೆ. ಮೇಘಾಧಿಪತಿಯಾದ ಬುಧ ನೀರ್ಮೋಡಗಳನ್ನು ಅನೇಕ ವೇಳೆ ಬಲವಾದ ಬಿರುಗಾಳಿಯಿಂದ ಹಾರಿಸಿಕೊಂಡು ಹೋಗುತ್ತಾನೆ. ಬಿಸಿಲಿನ ತಾಪ ತೀವ್ರವಾಗಿಯೇ ಇರುತ್ತದೆ. ಮಳೆಯ ಅಭಾವದಿಂದಾಗಿ ಸಾಂಕ್ರಾಮಿಕ ರೋಗಗಳು ತಲೆದೋರುತ್ತವೆ. ಆರಿದ್ರಾ, ಹಸ್ತ, ಚಿತ್ತಾ ಮಳೆ ಸಕಾಲದಲ್ಲಿ ಸಾಕಷ್ಟು ಬಾರದೆ ಬೆಳೆಗೆ ಆತಂಕವಾಗುತ್ತದೆ. ಮಿಡಿತೆಗಳ ಹಾವಳಿಯೂ ವಿಪರೀತವಾಗಿ ಬಂದ ಬೆಳೆ ಕೆಡುವ ಸಂಭವವೂ ಹೆಚ್ಚು'

ಶ್ರೀ ರಾಮನ್‌ರವರ ಲೆಕ್ಕಾಚಾರದಂತೆ "ಈ ವರ್ಷ ಬತ್ತ, ರಾಗಿ, ಜೋಳದ ಬೆಳೆ ಚೆನ್ನಾಗಿ ಆಗುವುದಿಲ್ಲ. ಕಡಲೆ, ಹುರುಳಿ, ಉದ್ದು ಈ ಧಾನ್ಯಗಳ ಬೆಳೆಗೆ ಪ್ರಕೃತಿ ಅನುಕೂಲಕರವಾಗಿದೆ. ಮೇ ೨೪ಕ್ಕೆ ಸೂರ್ಯ ರೋಹಿಣಿ ನಕ್ಷತ್ರಕ್ಕೆ ಬಂದಾಗ ಮಳೆ ಪ್ರಾರಂಭವಾಗುತ್ತದೆ. ಆದರೆ ಮಳೆ ಕಡಿಮೆ. ಜೂನ್ ೧೫ರ ವರೆಗೆ ಬೇಸಿಗೆ ತೀವ್ರವಾಗಿರುತ್ತದೆ. ಕುಜ ಸೂರ್ಯರು ಸೇರುವುದರಿಂದ ಸಿಡುಬು ಸೀತಾಳೆ, ಸಿಡುಬಿನಂತಹ ಸಾಂಕ್ರಾಮಿಕ ರೋಗ ತಲೆದೋರುತ್ತದೆ. ಸರಕಾರದ ಆರೋಗ್ಯ ಇಲಾಖೆ ಈಗಿನಿಂದಲೇ ನಿರೋಧ ಕ್ರಮವನ್ನು ತೆಗೆದುಕೊಳ್ಳಬೇಕು. ಜೂನ್ ೨ನೇ ತಾರೀಕಿನಿಂದ ಜೂನ್ ೨೧ರ ವರೆಗೆ ಬಿಸಿಲು ವಿಪರೀತವಿದ್ದರೂ ತಂಪು ಹವೆ ಇದ್ದು ಜೂನ್ ೧೫ರಿಂದ ೧೮ರ ವರೆಗಿನ ದಿನಗಳು ಸಾಧಾರಣ ಮಳೆ ವ್ಯಾಪಕವಾಗಿ ಬೀಳುತ್ತದೆ. ಪುನಃ ಜುಲೈ ೧೮ರ ವೇಳೆಗೆ ಸೂರ್ಯ ಪುಷ್ಯಕ್ಕೆ ಬರುವಾಗಲೂ ಬಿಸಿಲಿನ ಪ್ರಖರತೆ ತೀವ್ರವಾಗಿಯೇ ಇರುತ್ತದೆ.

ಆಗಸ್ಟ್ ೧೮–೧೯ರಂದು ಸೂರ್ಯ ಮಖಾ ನಕ್ಷತ್ರಕ್ಕೆ ಬಂದಾಗ ಒಳ್ಳೆ ಮಳೆ ಬೀಳುತ್ತದೆ. ಸೆಪ್ಟೆಂಬರ್ ಮೊದಲ ವಾರದಲ್ಲಿ ರಾಜ್ಯದ ಎಲ್ಲೆಡೆಗೂ ಸಾಕಷ್ಟು ಮಳೆ ಬೀಳುತ್ತದೆ ಅಕ್ಟೋಬರ್ ೧೦ರ ವೇಳೆಗೆ ಮುಂಗಾರು ಮಳೆಯು ಮುಗಿಯುವುದು ಎಂದಿರುವರು.

ಈ ಸಾರಿ ಮಳೆ ೨೦ ಭಾಗ ಇದ್ದರೆ ಹತ್ತು ಭಾಗ ಸಮುದ್ರ ಮೇಲೂ ಆರು ಭಾಗ ಬೆಟ್ಟ ಗುಡ್ಡಗಳ ಮೇಲೂ ಬೀಳುತ್ತದೆ. ಎಂತಲೇ ಅಭಾವ ಪರಿಸ್ಥಿತಿ, ಅತಿವೃಷ್ಟಿ, ಅನಾವೃಷ್ಟಿಯು ಹಾವಳಿಗೆ ದೇಶ ಗುರಿಯಾಗಬೇಕಾಗುತ್ತದೆ. ಜುಲೈ, ಆಗಸ್ಟ್ ವೇಳೆಗೆ ಆಹಾರ ಸಮಸ್ಯೆ ಉಲ್ಬಣಗೊಳ್ಳುವುದರಿಂದ ಸರಕಾರವು ಈಗಿನಿಂದಲೇ ಧಾನ್ಯ ಶೇಖರಣೆ ಮಾಡಿ ಪರಿಸ್ಥಿತಿಯನ್ನು ಎದುರಿಸಬೇಕು ಎಂದಿದ್ದಾರೆ ಅವರು.

(ಸ. ಕ.)

ಸಕ್ಕರೆ ಮುತ್ತು ಸುರಿದೀತು!

ಡಾಕ್ಟರ್--(ರೋಗಿಯನ್ನು ಪರೀಕ್ಷಿಸುತ್ತ) ನೋಡ್ರಿ........ನಿಮಗಾಗಿರೋದು 'ಅಪೆಂಡಿಸೈಟಿಸ್'.... ....ಆಪರೇಷನ್ ಕೇಸ್....

ರೋಗಿ—(ಗಡಬಡಿಸಿ) ಹಾಂ....... ತಡೀರ್ರಿ ಸ್ವಲ್ಪ........ನನಗೇನೂ ಆಗಿಲ್ಲ ಹಾಗಾದ್ರೆ...ನನ್ನ ತಮ್ಮನ ಉದರಕ್ಕೆ....

೦ ೦ ೦ ೦

ರಂಗ—ನೋಡೋ ಶಂಕ್ರ...ಆ ಕೆಳಗಿನ ಮನೆ ತಿಟ್ಟೂಗೆ ಸ್ಕಾಲರ್‌ಶಿಪ್ ದೊರಕಿತಂತಲ್ಲೋ......ಅವನಾವ (poor) ಅಂತ ಕೊಟ್ರೇ....

ಶಂಕ್ರು—ಹಿಹಿ...ಅವನು ಮಂತ್ರಿಗಳ ಮೊಮ್ಮಗ ಕಣೊ...

೦ ೦ ೦ ೦

ಟೀಚರ್--ಲೋ ತಿಮ್ಮ...ಗೋಲ್ಡನ್ ಎಲ್ಲಿ ಸಿಗುತ್ತದೆಯೋ?

ತಿಮ್ಮ—ತಮ್ಮ ಜೇಬಿನಲ್ಲಿ ಸಾರ್...

೦ ೦ ೦ ೦

ಗುಂಡು— ಪರೀಕ್ಷೇಲಿ ಮಂತ್ರಿಗಳ ಮಗ ಫೇಲಾದ್ನಂತಲ್ಲ...

ಮಾಮಾ— ಹೌದು ಗುಂಡೂ........ಈ ವರ್ಷ ನಂದೊಂದು ಪ್ರತಿಜ್ಞೆ ಫಲಿಸ್ತು....

೦ ೦ ೦ ೦

ಗೃಹಸ್ಥ—ಲೋ ಹುಡುಗ.... ಅಲ್ಲಿಂದೊಂದು ಕಲ್ಲಂಗಡಿ ತಗೊಂಡ್ಬಾರೋ....

ಹುಡುಗ—ಅದು ಮಣ್ಣಂಗಡಿ ಸಾರ್ .... ಕಲ್ಲಂಗಡಿ ಅಲ್ಲಾ....

೦ ೦ ೦ ೦

ತಿಮ್ಮ—ಕಳ್ಳ ಹಣಾ ಎಲ್ಲ ಜಪ್ತಿಮಾಡಿದ್ರಂತೆ ಮಂತ್ರಿಗಳು ರಾಂಗು...

ರಾಗು—ಅವರಿಗೆ ತಲೆ ಇಲ್ಲಾ ಕಣೊ..

ತಿಮ್ಮ— ಯಾಕೋ? ಏನಾಗಿದೆಯಂತೆ ತಲೆ?

ರಾಗು—ಅಲ್ಲ.... ಅಲ್ಲಿ ಸಿನಿಮಾ ನಟಿಯರ ಹಣ ಜಪ್ತಿ ಮಾಡೋದ್ಕಿಂತ; ತಂತಮ್ಮನೇನೆ ಮೊದ್ಲು ಮಾಡ್ಕೊಂಡಿದ್ದರೆ ಚೆನ್ನಾಗಿತ್ತು...

೦ ೦ ೦ ೦

ಟೀಚರ್—(ಮಳೆಸುರೀತಿತ್ತು) ಇದಾವ ಕಾಲವೋ ಬಸವ?

ಬಸವ - ಇದು ಕಲಿಕಾಲ, ಸರ್

ಟೀಚರ್—ಏನೂ? ಏನಂತೀಯಾ?

ಬಸವ—ಹೌದು ಸಾರ್...ನಂಮಜ್ಜಿ ದಿನಾ ಹೇಳ್ತಿದ್ರು ಇದು 'ಕಲಿಕಾಲ'ಂತ ....

—ಮಾ. ಅ. ಗಣಪತ್.

ಅಮೃತ ಬಿಂದು

ಸುಖಕ್ಕಾಗಿ ಸುಖವನ್ನು ಅರಸುವವನಿಗೆ ಸುಖ ದೊರೆಯದು. ಕರ್ತವ್ಯಕ್ಕಾಗಿ ಕರ್ತವ್ಯ ಮಾಡುವವನಿಗೆ ಸುಖವು ತಾನಾಗಿ ದೊರೆಯುವುದು.

೦ ೦ ೦

ಯಾವ ಮನುಷ್ಯನನ್ನೂ ದ್ವೇಷಿಸುವಷ್ಟರ ಕೆಳಮಟ್ಟಕ್ಕೆ ನನ್ನನ್ನು ನಾನು ಒಯ್ಯಲಾರೆ.

೦ ೦ ೦

ನಿಜವಾದ ಘನತೆ ಬೇರುಬಿಟ್ಟು ಹಬ್ಬುತ್ತದೆ. ಬೂಟಾಟಿಕೆಯ ಕೀರ್ತಿ ಸುಂದರವಾಗಿ ಕಂಡರೂ ಹೂವಿನಂತೆ ಶೀಘ್ರ ಮುದುಡಿ ಬೀಳುತ್ತದೆ.

೦ ೦ ೦

ಕರುಣೆ ತುಂಬಿದ ಹೃದಯವು ಸಂತಸದ ಅಮೃತಧಾರೆ ಹೊರ ಚೆಲ್ಲುವ ಕಾರಂಜಿಯಂತೆ. ಅದರ ಸುತ್ತ ಯಾವಾಗಲೂ ಕೃತಜ್ಞತಾ ನಗೆಯ ಕುಸುಮಗಳು ಅರಳುತ್ತಿರುತ್ತವೆ.

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು..........

ಭಾರತದ ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು. ದ. ಕ.

ಮಾರಾಟ ಡಿಪೋ: — ಸಂತೆಕಟ್ಟೆ, ಉಡುಪಿ.

ಹೃದಯವು ಪೂರ್ಣವಾಗಿ ನಿಂತಾಗ

(ಎಂಟನೇ ಪುಟದಿಂದ)

ರದಲ್ಲಿ ಸಂಶೋಧನೆಯನ್ನು ಮಾಡುವುದೇ ಆಗಿದೆ. ಅನೇಕ ವರ್ಷಗಳಿಂದಲೂ ಜರ್ಮನಿಯ ವಿಜ್ಞಾನಿಗಳು ಹೃದಯದ ಶಸ್ತ್ರ ಚಿಕಿತ್ಸೆಯ ಕಾಲವು ಹೆಚ್ಚಾದಾಗ ಮನುಷ್ಯನು ಬದುಕುವ ಪ್ರಶ್ನೆಯನ್ನು ಕುರಿತು ಸಂಶೋಧನೆಗಳನ್ನು ಮಾಡುತ್ತಲೇ ಇದ್ದಾರೆ. ಫ್ರಿಟ್ಜ್ ಥೈಸನ್ ಸ್ಟಿಫ್ಟಂಗ್ಸ್ ಎಂಬ ಸಂಸ್ಥೆಯು ಜರ್ಮನಿಯ ರೀಸರ್ಚ್ ಅಸೋಸಿಯೇಷನ್ ಮೂಲಕ ವರ್ಷಕ್ಕೆ ೬,೦೦,೦೦೦ ಡಿ. ಎಂ. ಗಳನ್ನು ಹೃದಯದ ಮೇಲಿನ ಸಂಶೋಧನೆಗಾಗಿ ಕೊಡುತ್ತಿದೆ.

ಶಸ್ತ್ರ ಚಿಕಿತ್ಸೆಯ ಕಾಲದಲ್ಲಿ ಹೃದಯದ ಮಿಡಿತವನ್ನು ನಿಲ್ಲಿಸಬೇಕಾಗುತ್ತದೆ. ಹಾಗೆ ಹೃದಯವು ನಿಂತಾಗ ದೇಹಕ್ಕೆ ಬೇಕಾದ ಆಮ್ಲಜನಕ ಮತ್ತು ಇತರ ಆಹಾರ ದ್ರಾವಣಗಳನ್ನು ಒದಗಿಸುವುದೂ ನಿಂತು ಹೋಗುತ್ತದೆ. ಈ ರೀತಿ ನಿಲ್ಲುವಿಕೆಯು ಕೇವಲ ಸ್ವಲ್ಪ ಕಾಲವಾದರೆ ಸರಿ ಹೋಗಬಹುದು. ಆದರೆ ಭಾರಿ ಶಸ್ತ್ರ ಚಿಕಿತ್ಸೆಗಳು ನಡೆದಾಗ ಹೃದಯವು ಹೆಚ್ಚು ಕಾಲ ನಿಂತು ರಕ್ತ ಸಂಚಾರವೂ ನಿಂತಾಗ ಅದನ್ನು ಪುನಹ ಮೊದಲಿನ ಚಲನೆಗೆ ತರಲು ಕೆಲವು ರಸಾಯನಿಕ ಕಾರ್ಯಗಳಿಂದ ಸಾಧ್ಯವೆಂದೂ "ಕಾರ್ಡಿಯೇಕ್ ಮೆಟಬಾಲಿಸಂ" ನಿಂದಲು ಸ್ವಲ್ಪ ಮಟ್ಟಿಗೆ ಸಾಧ್ಯವೆಂದೂ ಡಾಕ್ಟರುಗಳ ಸಮಾವೇಶದಲ್ಲಿ ತಿಳಿದು ಬಂದಿದೆ. ಈ ರೀತಿಯ ಶಸ್ತ್ರ ಚಿಕಿತ್ಸೆಗೆ ಮುಂಚೆ ಆಹಾರ ವಸ್ತುಗಳಿಂದ ಕೂಡಿದ ರಸಾಯನಿಕ ದ್ರವವನ್ನು ಹೃದಯದಿಂದ ಚಲಿಸುವಂತೆ ಮಾಡುವುದೂ ಅಲ್ಲದೆ ಆ ದ್ರವದಿಂದ ಮುಂದೆ ಯಾವ ವಿಧದ ಹೃದಯ ರೋಗವೂ ಬರದಂತೆ ನೋಡುವುದು. ಚಿಕಿತ್ಸೆಯ ಕಾಲದಲ್ಲಿ ಆಮ್ಲಜನಕದ ಸರಬರಾಜು ಇಲ್ಲದಿರುವುದರಿಂದ ಆಗುವ ನ್ಯೂನ್ಯತೆಗಳನ್ನು ತಪ್ಪಿಸುವುದೂ ಮುಖ್ಯವಾಗಿದೆ.

ಈ ರೀತಿಯ ಸಂಶೋಧನೆಗಳಲ್ಲಿ ಪಶ್ಚಿಮ ಜರ್ಮನಿಯು ಈಗಾಗಲೇ ಮುಖ್ಯ ಪ್ರತಿಯನ್ನು ಪಡೆದು ಅನೇಕ ವೈದ್ಯ ಶಾಲೆಗಳಲ್ಲಿ ಹೃದಯದ ಶಸ್ತ್ರ ಚಿಕಿತ್ಸೆಗಳು ನಡೆಯುತ್ತಿದೆ. ಅನೇಕರು ಶಸ್ತ್ರ ಚಿಕಿತ್ಸೆಗಾಗಿ ಕಾದಿದ್ದಾರೆ. ಈ ಮಧ್ಯೆ ಜರ್ಮನಿಯ ಹೃದಯ ವಿಭಾಗದ ಈ ಸಂಶೋಧನೆಯು ಅಂತರಾಷ್ಟ್ರೀಯ ಒಪ್ಪಿಗೆಯನ್ನು ಪಡೆದಿದೆ.

(ಏಳನೇ ಪುಟದಿಂದ)

ತನ್ನ ದೇಶವು ಸತ್ವಹೀನವಾಗುವುದನ್ನಾಗಲೀ, ಅಥವಾ ಗತವೈಭವದ ಸ್ಮರಣೆಯಲ್ಲಿ ಕಾಲಯಾಪನೆ ಮಾಡುವುದನ್ನಾಗಲಿ ಅವನು ನೋಡಲಾರ. ತನ್ನ ದೇಶವು ಇಂದು ಯಾವ ಸ್ಥಿತಿಯಲ್ಲಿದೆ? ಮುಂದೆ ಹೇಗೆ ಇರಬಹುದು? ಎಂಬಿವೇ ಮೊದಲಾದ ವಾಸ್ತವ ಸಂಗತಿಗಳನ್ನು ಕಂಡು ಮೆಚ್ಚಿಕೊಳ್ಳುತ್ತಾನೆ. ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅಸಮಾನ ಧೈರ್ಯ ನೀಡಬೇಕೆಂದು ಈ ಸೃಷ್ಟಿಕರ್ತನಾದ ಭಗವಂತನನ್ನು ಪ್ರಾರ್ಥಿಸುತ್ತಾನೆ. ಯುವಜನರಲ್ಲಿ ಜೀವನದ ಆನಂದವನ್ನೂ ಪ್ರೀತಿಗೆಯ ಉತ್ಸಾಹವನ್ನೂ ಕಂಡು ಕೃತಕೃತ್ಯನಾಗುತ್ತಾನೆ.

ಎಲ್ಲೆಲ್ಲಿ ಏನೇನು?

ಆಫೀಸು ಕಟ್ಟಡ ಉದ್ಘಾಟನೆ.

ವಿಟ್ಲ ಪಡ್ನೂರು ಪಂಚಾಯತದ ಆಫೀಸು ಕಟ್ಟಡದ ಉದ್ಘಾಟನೆಯನ್ನು ತಾ. 16-4-66 ರಂದು ಕೊಡಂಗಾಯಿ ಎಂಬಲ್ಲಿ ದ. ಕ. ಜಿಲ್ಲಾಧಿಕಾರಿ ಶ್ರೀ ಯಚ್. ಎಲ್. ನಾಗೇಗೌಡರು ನೆರವೇರಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ "ಭಾರತ ದೇಶವು ಅಭಿವೃದ್ಧಿ ಹೊಂದಬೇಕಾದರೆ ಪಂಚಾಯತುಗಳು, ತಾಲೂಕು ಅಭಿವೃದ್ಧಿ ಮಂಡಳಿಗಳು ಕರ್ತವ್ಯಗಳನ್ನು ಯೋಗ್ಯ ರೀತಿಯಿಂದ ಪಾಲಿಸುತ್ತಿರಬೇಕೆಂದೂ ಅವರು ಎಷ್ಟರ ಮಟ್ಟಿಗೆ ತನ್ನ ಕರ್ತವ್ಯವನ್ನು ಪೂರೈಸುವರೋ ಅಷ್ಟೇ ದೇಶವು ಉನ್ನತ ಸ್ಥಾನವನ್ನು ಹೊಂದುವುದೆಂದೂ ಹೇಳಿದರು" ಮುಂದುವರಿಸುತ್ತಾ ಅವರು ವಿಟ್ಲ ಪಡ್ನೂರು ಪಂಚಾಯತವು ಇನ್ನೂ ಹೆಚ್ಚಿನ ಕಾರ್ಯವನ್ನು ಮಾಡಿ ಮುನ್ನಡೆಯಲೆಂದರು. ಸಭಾಧ್ಯಕ್ಷತೆಯನ್ನು ವಹಿಸಿದ್ದ ಬಂಟ್ವಾಳ ತಾಲೂಕು ಬೋರ್ಡಿನ ಅಧ್ಯಕ್ಷೆ ಶ್ರೀಮತಿ ಲೀಲಾವತಿ ಕೆ. ರೈಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಹಿಳೆಯರಿಗೂ ಗಂಡಸರಂತೆ ಕೆಲಸಗಳನ್ನು ಪೂರೈಸಲು ಸಾಧ್ಯವಿದೆ ಎಂದು ಜಾನ್ಸಿ ಲಕ್ಷ್ಮೀಬಾಯಿ ಮೊದಲಾದವರ ಉದಾಹರಣೆಗಳಿಂದ ವಿವರಿಸಿ ಇಲ್ಲಿನ ಮಹಿಳಾ ಚೇರ್ಮೇನರನ್ನು ಶ್ಲಾಘಿಸಿದರು. ಮತ್ತು ಗ್ರಾಮಸ್ಥರು, ಪಂಚಾಯತು ಸದಸ್ಯರು ಒಮ್ಮನಸ್ಸಿನಿಂದ ಪಂಚಾಯತಿಗೆ ಸಹಕಾರ ನೀಡಬೇಕೆಂದು ಕೇಳಿಕೊಂಡರು.

ಆರಂಭದಲ್ಲಿ ಪಂಚಾಯತ್ ಚೇರ್ಮೇನರಾದ ಶ್ರೀಮತಿ ಸಿ. ದೇವಕಿ ಅಮ್ಮನವರು ಸ್ವಾಗತಿಸಿದರು. ಉದ್ಘಾಟನಾನಂತರ ಬಂಟ್ವಾಳ ತಾಲೂಕು ಬೋರ್ಡಿನ ಸದಸ್ಯ ಶ್ರೀ ಕೆ. ಅಣ್ಣಪ್ಪ ಭಂಡಾರಿಯವರು ರಾಷ್ಟ್ರೀಯ ನಾಯಕರ ಭಾವಚಿತ್ರಗಳ ಅನಾವರಣ ಮಾಡಿದರು. ಕೊನೆಗೆ ವೈಸ್ ಚೇರ್ಮೇನರಾದ ಶ್ರೀ ಪಿ. ಈಶ್ವರ ಭಟ್ಟರು ವಂದನಾರ್ಪಣೆಗೈದರು.

ವಾರ್ಷಿಕೋತ್ಸವ

ಪಡುಕಳತ್ತೂರು ಹಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾ. 26-4-66 ರಲ್ಲಿ ಶ್ರೀ ಭಾಸ್ಕರ ಶೆಟ್ಟಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲೆಗೆ ಬಾಕಿದ ನೂತನ ವಿದ್ಯುದ್ದೀಪದ ಉದ್ಘಾಟನೆಯನ್ನು ಉಡ್ಪಿ ರೇಂಜಿನ ಸಹಾಯಕ ವಿದ್ಯಾಧಿಕಾರಿ ಶ್ರೀ ಜೆ. ವಿ. ಸಿದ್ದೇಶ್ವರನವರು ಪೂರೈಸಿದರು. ಪ್ರಾತಃಕಾಲ ಶ್ರೀ ಎಫ್. ಟಿ. ಎಚ್. ರೊಡ್ರಿಗಸ್ ಇವರು ಧ್ವಜವಂದನೆ ನೆರವೇರಿಸಿದರು. ಸಂಜೆ ಶಾಲಾ ಮನೇಜರ ಶ್ರೀ ಅಣ್ಣಯ್ಯ ಯಾನೆ ವೆಂಕಪ್ಪನವರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖೋಪಾಧ್ಯಾಯ ಶ್ರೀ ಕೆ. ಶೇಷಪ್ಪಯ್ಯನವರು ವರದಿವಾಚನ ಮಾಡಿದರು. ಶ್ರೀ ಲಕ್ಷ್ಮೀನಾರಾಯಣ ಭಟ್ ರವರು ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಗಳಾದ ನಂತ ವಿದ್ಯಾರ್ಥಿನಿಯರಿಂದ "ದೇವಿಪ್ರಸಾದ" ಎಂಬ ಸಂಗೀತ ನಾಟಕವೂ, ಬಾಲಕರಿಂದ "ಧ್ರುವ ಸ್ವಾಮಿನಿ" ಎಂಬ ನಾಟಕವೂ, ಹಳೆವಿದ್ಯಾರ್ಥಿಗಳಿಂದ "ಮುಲ್ಲ ಇಲ್ಲದ ಪೊಣ್ಣು" ಎಂಬ ನಾಟಕಗಳೂ ಅಭಿನಯಿಸಲ್ಪಟ್ಟವು. ಶ್ರೀ ಜಿ. ಸೋಮನಾಥರಾಯರು ಧನ್ಯವಾದ ಸಮರ್ಪಿಸಿದರು.

ಬನ್ನಾಡಿ ಸೇತುವೆಯ ಶಿಲಾನ್ಯಾಸ

ಉಡುಪಿಯಿಂದ 16 ಮೈಲು ಉತ್ತರಕ್ಕಿರುವ ಬನ್ನಾಡಿ ಹೊಳೆಯ ಸೇತುವೆಯ ಶಿಲಾನ್ಯಾಸವನ್ನು ಮೈಸೂರಿನ ಕಂದಾಯ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಶ್ರೀ ಎಸ್. ಎಸ್. ಕೊಳ್ಕೆಬೈಲ್ ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಶ್ರೀ ಕೃಷ್ಣಪ್ಪನವರು ಮಾತನಾಡುತ್ತಾ, ಮಿಶ್ರ ಆಹಾರ ಪದ್ಧತಿಯಿಂದ ನಮ್ಮ ರೈತರ

ಜಾನುವಾರು ಮತ್ತು ಕೋಳಿಗಳ ಆರೋಗ್ಯಕರ ಬೆಳವಣಿಗೆಗೆ

ಹಾಲು ನೀಡುವ ಆರೋಗ್ಯದ ದನ ಎಂದರೆ ಹೆಚ್ಚು ಹಾಲು ಅವುಗಳಿಗೆ

MILKCAN BRAND

'ಮಿಲ್ಕ್ ಕ್ಯಾನ್' ಗುರುತಿನ ಜಾನುವಾರು ಆಹಾರವನ್ನು ಕೊಡಿರಿ.

ಹೆಚ್ಚಿನ ಮೊಟ್ಟೆಗಳು— ಕಡಿಮೆ ಮರಣ ಮತ್ತು ಇನ್ನೂ ಶೀಘ್ರ ಬೆಳವಣಿಗೆಗೆ

EGGBASKET BRAND

'ಎಗ್ ಬಾಸ್ಕೆಟ್' ಗುರುತಿನ ಕೋಳಿಗಳ ಆಹಾರ



ಜೀವಸತ್ವಗಳು, ಲೋಹಗಳು ಮತ್ತು ಎಂಟಿಬಯೊಟಿಕ್ಸ್‌ಗಳಿಂದೊಡಗೂಡಿದೆ.
ನಮ್ಮ ವೈಜ್ಞಾನಿಕ ಆಹಾರ ಕಾರ್ಯಕ್ರಮ ಮತ್ತು ಮಾಹಿತಿಗಳಿಗಾಗಿ ಬರೆಯಿರಿ.

ತಯಾರಕರು:

ಮೈಸೂರು ಫೀಡ್ಸ್ (ಪ್ರೈ) ಲಿಮಿಟೆಡ್,

230, ಹಳೆಯ ತರಗು ಪೇಟೆ, ಬೆಂಗಳೂರು-2.

ಫೋನ್: ಫೇಕ್ಟರಿ 28572 ಆಫೀಸು (PP) 22471.

ಸ್ಥಿತಿ ಬದಲಾಗುವುದು ಸಾಧ್ಯವಿದೆ ಮಾತ್ರವಲ್ಲದೆ, ದೇಶದ ಆಹಾರ ಸಮಸ್ಯೆಯು ಸಡಿಲಗೊಳ್ಳುತ್ತದೆ ಎಂದು ನುಡಿದರು. ಅವರು ಜಿಲ್ಲೆಯು ಸಾಧಿಸಿದ ಪ್ರಗತಿಯನ್ನು ಉಲ್ಲೇಖಿಸುತ್ತಾ, ದಿವಂಗತ ಯು. ಎಸ್. ಮಲ್ಯರಿಂದಾಗಿ ದ. ಕ. ಜಿಲ್ಲೆ ಬಹಳ ಪ್ರಗತಿ ಸಾಧಿಸಿದೆ, ಸಾರಿಗೆ ಸಂಪರ್ಕ ವಿಸ್ತಾರಗೊಂಡಿದೆ. ನಿತ್ಯಜೀವನಕ್ಕೆ ರಸ್ತೆ ಸೇತುವೆಗಳು ಮುಖ್ಯವಾಗಿವೆ ಎಂದು ನುಡಿದು, ಬನ್ನಾಡಿ ಸೇತುವೆಯಿಂದ ಆಯಾಯ ಗ್ರಾಮೀಣ ಜನರ ಜೀವನದ ಮುಖ ಬದಲಾಗಲೆಂದು ಹಾರೈಸಿದರು. ಬಳಿಕ ಅವರು ಜಪಾನೀ ರೈತನ ದುಡಿಮೆ ಜೀವನಗಳ ಪರಿಚಯ ಮಾಡಿ ಕೊಡುತ್ತಾ ನಮ್ಮ ರೈತರು ಅವರಂತೇ ದುಡಿದರೆ ಉನ್ನತ ಮಟ್ಟದ ಜೀವನ ಸಾಗಿಸಲು ಸಾಧ್ಯವೆಂದು ನುಡಿದರು. ಕೊನೆಯದಾಗಿ ಅವರು ಸ್ಥಳೀಯ ಅವಶ್ಯಕತೆಗಳ ಬಗ್ಗೆ ಪ್ರಸ್ತಾಪಿಸಿ, ಈ ಜಿಲ್ಲೆಯಲ್ಲಿ ಕೋಳಿ ಸಾಕಣೆಕೇಂದ್ರವಾಗೂ ಮಿಶ್ರತಳಿ ಹಸುವಿನ ಯೋಜನೆಗಳನ್ನು ತೆರೆಯಲಾಗುವುದೆಂದರು.

ಅಧ್ಯಕ್ಷ ಶ್ರೀ ಕೊಳ್ಕೆಬೈಲರು ಮಾತನಾಡುತ್ತಾ, ಮಂತ್ರಿಗಳು ಹಳ್ಳಿಗೆ ಬರುವಂತಾದುದಕ್ಕೆ ಆನಂದ ವ್ಯಕ್ತಪಡಿಸಿ, ಸುಪರಿಂಟೆಂಡೆಂಟ್ ಇಂಜಿನಿಯರ್ ಶ್ರೀ ಕೆ. ಸುಂದರ ನಾಯಕ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಕರಿಸಿದ್ಧಪ್ಪ ಮತ್ತು ಕಂಟ್ರಾಕ್ಟರ್ ಶ್ರೀ ಬಿ. ಮಹೇಶ ಹೆಗ್ಡೆಯವರ ಕಾರ್ಯದಕ್ಷತೆಯಿಂದಾಗಿ ಈ ಸೇತುವೆಯ ಕಾರ್ಯ ಶೀಘ್ರದಲ್ಲಾಗುವ ಭರವಸೆ ವ್ಯಕ್ತಪಡಿಸಿದರು.

ಆರಂಭದಲ್ಲಿ ಸುಪರಿಂಟೆಂಡೆಂಟ್ ಇಂಜಿನಿಯರ್ ಶ್ರೀ ಕೆ. ಸುಂದರನಾಯಕರು ಸ್ವಾಗತಿಸಿದರು. ಬನ್ನಾಡಿ ಪಂಚಾಯತಿನ ಪರವಾಗಿ ಅದರ ಅಧ್ಯಕ್ಷ ಶ್ರೀ ಬಿ. ಸದಾಶಿವ ಶೆಟ್ಟರು ಸ್ಥಳೀಯ ಅವಶ್ಯಕತೆಗಳ ಕುರಿತಾದ ಮನವಿಯನ್ನು ಸಚಿವರಿಗರ್ಪಿಸಿದರು. ಸಭಿಕರಪರವಾಗಿ ಶ್ರೀ ಬಿ. ಸುಬ್ಬಣ್ಣ ಹೆಗ್ಡೆಯವರು ಮಾತಾಡಿದರು. ಕೊನೆಯಲ್ಲಿ ಕುಂದಾಪುರ ಎಕ್ಸಿಕ್ಯುಟಿವ್ ಇಂಜಿನಿಯರ್ ಶ್ರೀ ಕರಿಸಿದ್ಧಪ್ಪನವರು ವಂದನಾರ್ಪಣೆಗೈದರು.

ವಾರ್ಷಿಕ ಮಹಾಸಭೆ

ಕುಂದಾಪುರ, ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ 58ನೇ ವಾರ್ಷಿಕ ಮಹಾಸಭೆಯು ತಾ. 30-4-66 ರಂದು ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಸಭಾಂಗಣದಲ್ಲಿ ಕಾರ್ಕಳ ತಾಲೂಕ್ ಬೋರ್ಡಿನ ಅಧ್ಯಕ್ಷ ಶ್ರೀ ಎನ್. ಮೋಹನದಾಸ್ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಸ್ವಾಗತ ಸಮಿತಿಯ ಅಧ್ಯಕ್ಷ ವಕೀಲ್ ಶ್ರೀ ಕೆ. ವೆಂಕಪ್ಪ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಸಂಘದ ಮತ್ತು ಉಪಭವನಗಳ ವರದಿ, ಕುಂದಾಪುರ ಉಪಭವನದ ಕಟ್ಟೋಣ ವಿಸ್ತರಣಾ ಸಮಿತಿಯ ವರದಿ ವಾಚನವಾದ ಬಳಿಕ ಸಮಾಜದ ಉತ್ಸಾಹಿ ಕಾರ್ಯಕರ್ತ ಶ್ರೀ ಎಡ್ವೋಕೇಟ್ ಜಿ. ಕುಶಲ ಹೆಗ್ಡೆಯವರಿಗೆ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ತಮ್ಮ ಸುವರ್ಣ ಪದಕವನ್ನು ಅಧ್ಯಕ್ಷರ ಮೂಲಕ ವಿತರಣೆ ಮಾಡಿಸಿದರು. ಬಳಿಕ ಸಮಾಜ ದೇಳಿಗೆಯ ಕುರಿತು ಅಧ್ಯಕ್ಷರ ಭಾಷಣವಾಯಿತು. (ಅಧ್ಯಕ್ಷರ ಭಾಷಣದ ಸಾರಾಂಶವನ್ನು ಬರುವ ವಾರ ಪ್ರಕಟಿಸಲಾಗುವುದು.) ಅನಂತರ ಸಭಿಕರ ಭಾಷಣಗಳು, ವಿಚಾರ ವಿನಿಮಯ, ಆಡಳಿತ ಕಮಿಟಿಯ ಚುನಾವಣೆ ನಡೆಯಿತು. ಶ್ರೀಗಳಾದ ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಬಿ. ಮಂಜಯ್ಯ ಹೆಗ್ಡೆ, ಬೋಳ ರಘುರಾಮ ಶೆಟ್ಟಿ, ಎಸ್. ಎಸ್. ಕೊಳ್ಕೆಬೈಲ್, ಎಂ. ಎಲ್. ಎ., ವೈ. ಗುಂಜಯ್ಯ ಶೆಟ್ಟಿ, ಎಂ. ಎಲ್. ಎ., ಪಿ. ಶ್ರೀನಿವಾಸ ಶೆಟ್ಟಿ, ಎಂ. ಎಲ್. ಸಿ., ಕೆ. ಆರ್. ಶೆಟ್ಟಿ, ಪಿ. ಎಮ್. ಹೆಗ್ಡೆ, ಎಡ್ವೋಕೇಟ್ ಎಸ್. ರಮಾನಂದ ಹೆಗ್ಡೆ ಮೊದಲಾದವರು ಸಭಾ ಕಾರ್ಯಗಳಲ್ಲಿ ಭಾಗವಹಿಸಿ ಅಭಿಪ್ರಾಯಗಳನ್ನಿತ್ತರು. ಮಧ್ಯಾಹ್ನ ಅತಿಥಿಗಳಿಗೆ ಶ್ರೀ ಚಾರಮಕ್ಕಿ ನಾರಾಯಣ ಶೆಟ್ಟರು ಭೋಜನದ ವ್ಯವಸ್ಥೆ ಮಾಡಿದ್ದರು.

ಹಿರಿಯಡ್ಕ ಜಾತ್ರೆ

ಮಹತೋಬಾರ್ ವೀರಭದ್ರ ಸ್ವಾಮಿ ದೇವಸ್ಥಾನದಲ್ಲಿ ವಾರ್ಷಿಕ ರಥೋತ್ಸವವು ತಾ. 4-5-66 ರಿಂದ ತಾ. 9-5-66 ರವರೆಗೆ ವಿಜೃಂಭಣೆಯಿಂದ ಜರಗಲಿರುವುದು.

ರೈತ್ರ ಮುರುಗ

(ಎರಡನೇ ಪುಟದಿಂದ)

ಸಂತೋಷದಿಂದಿದ್ದ ಕೇದಾರಿಯು ಒಂದು ಘಂಟೆಕಾಲ ಆ ಪತ್ರಿಕೆಯನ್ನು ಪಕ್ಕದಲ್ಲಿಟ್ಟುಕೊಂಡು, ಕೋಪದಿಂದ ಬೋರ್ಗರೆಯುತ್ತಿದ್ದ ಕಡಲಿನತ್ತ ನೋಡಿದನು. ನೀರಿನ ತೇವವನ್ನು ಹೊತ್ತುಕೊಂಡಿದ್ದ ಗಾಳಿಯು ಆಗಲೇ ಅವನ ಮುಖಕ್ಕೆ ತಾಗಿ ಉಲ್ಲಾಸವನ್ನಿತ್ತಿತು. ತಾಯಿಯ ಎದೆಯ ಮೇಲೆ ಉಲ್ಲಾಸಿ ಮಗು ಬೀಳುವಂತೆ ತೆರೆಗಳು ಎದ್ದು ಬೀಳುತ್ತಿದ್ದುವು. ಸಮುದ್ರದ ಮೇಲಣ ಗಾಳಿಯು ಅವನ ಗಲ್ಲವನ್ನು ಮೃದುವಾಗಿ ಸವರಿತು. ಅಂತಹ ವಾತಾವರಣದಲ್ಲಿ ಸಾಮಾನ್ಯ ಮನಸ್ಸಾದರೋ ಗೌರವ ಹಾಗೂ ಪ್ರೇಮದ ಕುರಿತು ಚಿಂತಿಸುತ್ತಿತ್ತು. ಕೇವಲ ಗಾಳಿಯ ಸ್ಪರ್ಶ ಮಾತ್ರದಿಂದ ಅಲ್ಲೋಲಕಲ್ಲೋಲವಾಗುವ ಕಡಲಿನಂತೆ ಆತನ ಮನಸ್ಸು ವಿಶ್ರಾಂತಿ ಇಲ್ಲದೆ ಅಸ್ವಸ್ಥದಿಂದಿತ್ತು. ಭಾವೀ ಕಲ್ಪಿತ ಕಟ್ಟಡಕ್ಕೆ ಅವನೊಂದು ನಕಾಶೆಯನ್ನು ತಯಾರಿಸುತ್ತಾ ಇದ್ದನು. ಆಕಾರ ಬದಲಾಯಿಸಿಕೊಳ್ಳುತ್ತ ಇರುವ ಸಮುದ್ರದ ಹೊಯಿಗೆಯ ಮೇಲೆ ಅವನು ಗಾಳಿಗೋಪುರಗಳನ್ನ ಕಟ್ಟುತ್ತಿದ್ದನು.

ಮುಗಿಲ ಸಿಂಹಾಸನವನ್ನು ಅವನು ವಶಪಡಿಸಿಕೊಳ್ಳಲಿಕ್ಕೆ ಸಾಕು. ಬಾಬರನು ಏನಾಗಿದ್ದ?—ಕೇವಲ ಈಟಿ ಮತ್ತು ಒಂದು ಕುದುರೆಯಿದ್ದ ಒಬ್ಬ ತುರುಕನಿದ್ದ. ಕಾಲವೂ ತನ್ನ ಉಪಕರಣಗಳನ್ನು ಬದಲಾಯಿಸಿಕೊಂಡಿದೆ. ಸ್ಥಳವು ಅಲ್ಲೇ ಇದೆ. ದೆಹಲಿಯ 'ಸಾರ್ವಭೌಮಿಕ ನಗರ'ವನ್ನು, ರಾಜ ಪ್ರತಿನಿಧಿಯ ಗಾದಿ ಅಥವಾ ಉರುಳುತ್ತಿರುವ ಕಾಲಚಕ್ರ, ಯಾವ ಹೆಸರನ್ನು ಬೇಕಾದರೂ ಕೊಡಲಿ, ಆ ಅಧಿಕಾರದ ಗದ್ದುಗೆಯನ್ನವನು ಮುತ್ತಲಿಕ್ಕೂ ಸಾಕು. ಹುಲುಸಾಗಿ ಬೆಳೆದಿರುವ ಹುಲ್ಲನ್ನು ನೋಡಿಕೊಂಡು ಹುಲಿಯು ತನ್ನ ಕೊಳ್ಳೆಯ ಕನಸನ್ನು ಕಾಣುವಂತೆ, ಆ ಮಳಲ ಮಡಿಲಲ್ಲಿ ಕೂತುಕೊಂಡಿದ್ದ ಕೇದಾರಿಯು ಅದು ಯಾವದೋ ಸುಖಸ್ವಪ್ನವನ್ನು ಕಾಣುತ್ತಿದ್ದ. ಈ ರೀತಿ ಸಾಧಾರಣ ಒಂದು ಘಂಟೆಯ ವರೆಗೆ ಸ್ಫೂರ್ತಿಯಿಂದ ಇದ್ದು, ಅಧಿಕಾರ ಹಾಗೂ ಐಶ್ವರ್ಯವನ್ನು ಪಡೆಯಲು ಹಲವಾರು ಹಂಚಿಕೆಗಳನ್ನು ಹಾಕುತ್ತಿದ್ದನು.

ಅಲ್ಲಿಂದ ಕೇದಾರಿಯು ನೇರವಾಗಿ ಮಾರ್ಕಂಡಂ ಅಯ್ಯರರ ಮನೆಗೆ ಹೋದನು. ಇತರ ದಿನಗಳಂತೆ ಅಂದೂ ಅವರು ಅತಿ ಕೆಲಸದಿಂದಾಗಿ ನರಳಾಡುತ್ತಿದ್ದರು.

"ನೀನು ಯಾವಾಗಲೂ ಪ್ರಕಾಶಿಸುವವನೇ ಇರುವೆ, ಕೇದಾರಿ. ಆದರಲ್ಲೂ ಇಂದು ನೀನು ಬಹಳ ಪ್ರಕಾಶಿಸುತ್ತಿರುವೆ! ಏನ್, ಜಯದ ಹೊಸ ಸುದ್ದಿ?" ಅವರು ಕೇಳಿದರು.

"ಏನೂ ಇಲ್ಲ, ಹದ್ದು ತನ್ನ ಆಹಾರಕ್ಕಾಗಿ ಕಾಯುತ್ತ ತಿರುಗುತ್ತಿರುವ ಹಾಗೆ ಇರುವ ಹಾಳು ವಕೀಲಿ ಉದ್ಯೋಗವು ನನಗೆ ತಲೆನೋವನ್ನುಂಟು ಮಾಡಿದೆ. ನಾವು ಮಾಡುತ್ತಿರುವದಾದರೂ ಏನು? ಒಂದು ವಿಧದಲ್ಲಿ ನಗರ ರಕ್ಷಕನ ಕೆಲಸವನ್ನೇ ಮಾಡುತ್ತಿದ್ದೇವೆ. ನಾವು ಸಮಾಜಕ್ಕೆ ಏನಾದರೂ ಒಳ್ಳೆಯದನ್ನು ಮಾಡುತ್ತಿದ್ದೇವೆಯೇ? ಭಂಡವಾಳಷಾಹಿಗಳ ಭಂಡವಾಳವನ್ನು ಬೆಳೆಸಿಕೊಟ್ಟು, ಅವರು ಮಾಡುತ್ತಿರುವ ದರೋಡೆಗಳಲ್ಲಿ ಪಾಲುದಾರರಾಗಿದ್ದುಕೊಂಡು ಬಡವರ ರಕ್ತದ ಕೊನೆಯ ತಟುಕನ್ನು ಹೀರುವ ಈ ಉದ್ಯೋಗವು ಆಲೋಚನಾಶಕ್ತಿ ಇರುವ ಹಾಗೂ ಮರ್ಯಾದೆಯ ಮನುಷ್ಯನಿಗೆ ಬಹಳ ನೀಚ ಹೇಸಿಗೆಯ ಕೆಲಸವಿದೆ. ಎಂದಾದರೂ ಇದರಿಂದ ತಪ್ಪಿಸಿಕೊಳ್ಳಲೇಬೇಕು. ಮನಸ್ಸು ಉತ್ತಮ ಸ್ಥಿತಿಯಲ್ಲಿರುವಾಗಲೇ ಏತಕ್ಕೆ ಆ ಕೆಲಸವನ್ನು ಮಾಡಬಾರದು? ನನ್ನ ಬಳಿ ಈಗ ಒಂದು ಒಳ್ಳೆಯ ಆಲೋಚನೆಯೂ, ಉತ್ತಮ ದೂರದೃಷ್ಟಿಯೂ ಇದೆ. ಈ ಬಳಲಿಸುವ ದಿನವಿಡೀ ದುಡಿಯಬೇಕಾಗಿರುವ ಕೆಲಸವನ್ನು ನಾನು ಬಿಡಬೇಕು."

"ಅದೇನದು ಕೇದಾರಿ? ದಯವಿಟ್ಟು ನನ್ನನ್ನು ಬಿಟ್ಟುಬಿಡಬೇಡ."

"ಇಲ್ಲ, ಎಂದಿಗೂ ಇಲ್ಲ. ನೀವು ಯಾವಾಗಲೂ ಮುಂದುಗಡೆ ಇರಬೇಕು, ನಾನು ಅನುಸರಿಸಿಕೊಂಡಿರಬೇಕು. ಅಲ್ಲಿ ಮುಗಿಲ ಸಿಂಹಾಸನವು ನಿಮಗಾಗಿ ಹಾಗೂ ನನಗಾಗಿ ಕಾಯುತ್ತಿದೆ. ಈ ಪ್ರಪಂಚದಲ್ಲಿ ವೇಗವೇ ವಿಜಯ ನಾವು ಶೀಘ್ರ ವರ್ತಿಸಬೇಕು."

"ನನಗೊಂದೂ ಅರ್ಥವಾಗಲಿಲ್ಲ, ಕೇದಾರಿ. ಎಂದಿಗಿಂತಲೂ ಇಂದು ನೀನು ರಹಸ್ಯವಾಗಿ ಬಿಟ್ಟಿರುವೆ, ಹಾಗೆ ವೈಭವದಿಂದಲೂ ಇರುವೆ."

"ನಾನೇನು? ಬಹುಶಃ ಆಲೋಚನೆಯು ಬಹಳ ಎತ್ತರದ್ದು ಹಾಗೂ ದೊಡ್ಡದಿರುವದರಿಂದ ಹಾಗೆ ಇರಬಹುದು. ಬರುವ ಚುನಾವಣೆಯಲ್ಲಿ ನಾವು ಭಾಗವಹಿಸಬೇಕು. ನಾಳೆಯೇ ನಾವು ಉಮೇದ್ವಾರರಾಗಿರುವದನ್ನು ಬಹಿರಂಗಪಡಿಸಿ ಅದಕ್ಕಾಗಿ ನೇರ ಕೆಲಸಮಾಡಬೇಕು. ನೀವು ದಹಲಿಯ ಲೋಕಸಭೆಗೂ ನಾನು ಇಲ್ಲಿಯ ವಿಧಾನ ಸಭೆಗೂ ನಿಲ್ಲುವ. ಇಬ್ಬರೂ ಸೇರಿ ಶ್ರಮಪಟ್ಟರೆ ಇಬ್ಬರಿಗೂ ಜಯಪಡೆಯಲು ಸುಲಭವಾಗುತ್ತದೆ. ಯಾರಿಗೂ ನಮ್ಮೆದುರು ನಿಲ್ಲುವ ಧೈರ್ಯ ಇರುವದಿಲ್ಲ."

"ದಹಲಿಯ ಲೋಕಸಭಾ!—ಅಸಾಧ್ಯ. ನಾನು ಎಲ್ಲಾ ವ್ಯಾಜ್ಯಗಳನ್ನು ಬಿಟ್ಟುಬಿಡಬೇಕಾದೀತು. ಕಲಸವು ಕೈಬಿಟ್ಟು ಹೋದೀತು, ಇಲ್ಲ."

"ಏನು? ಇನ್ನೂ ಧನಾರ್ಜನೆಯಿಂದ ನೀವು ಬೇಸತ್ತಿಲ್ಲವೇನು? ಸರಿ, ನಾನಾದರೋ ಸಂತೋಷದಿಂದ ಸ್ಥಿತಿಯನ್ನು ಬದಲಾಯಿಸಿ ದೆಹಲಿಗೆ ನಿಲ್ಲುತ್ತೇನೆ. ಹಾಗೆ ಮಾಡಿದಲ್ಲಿ ಅದು ಚಂದ ಕಾಣುವದಿಲ್ಲ. ಜನರು ಭೀಕರ ಚಾಡಿಗಳ ಸುರಿ ಮಳೆಯನ್ನೇ ಸುರಿದಾರು."

"ದೆಹಲಿಗೆ ಅಸಾಧ್ಯ. ನಾನಿನ್ನೂ ಸಾಕಷ್ಟು ಹಣ ಸಂಪಾದನೆ ಮಾಡಿಲ್ಲ—ಹಲವು ನೀರಿನಂತೆ ಹರಿದು ಹೋಗುತ್ತಿದೆ. ನನಗೆ ಐವರು ಹೆಣ್ಣುಮಕ್ಕಳೂ ಮೂರು ಗಂಡು ಮಕ್ಕಳೂ ಇದ್ದಾರೆಂಬುದು ನಿನಗೆ ಗೊತ್ತಿದೆ, ಕೇದಾರಿ. ನಿನ್ನ ಆಲೋಚನೆಯು ಉತ್ತಮವಿದ್ದೆಂದು ನನಗೆ ಗೊತ್ತಿದೆ. ನೀನು ಲೋಕ ಸಭೆಗೆ ನಿಲ್ಲು; ನೀನಾದರೋ ಮೇಲ್ಪಟ್ಟದ ವಿಷಯಗಳಿಗೆ ಕರಿ ಕೊಡಬಲ್ಲೆ. ನಿನಗದು ಒಪ್ಪುತ್ತದೆ; ನೀನು ತರುಣ ಹಾಗೂ ಬುದ್ಧಿವಂತ. ನನಗೆ ವಿಧಾನ ಸಭೆಯೇ ಸಾಕು. ನೀನು ಅಭಿಪ್ರಾಯಗಳತ್ತ ಲಕ್ಷ್ಯಕೊಡುವ ಮನುಷ್ಯನೇನು?—ನಿನ್ನ ಪದ ಸಂಗ್ರಹದಲ್ಲೇ ಹೇಳುವದಿದ್ದಲ್ಲಿ 'ಸಾರ್ವಜನಿಕ ಬಿರುಗಾಳಿ'. ನಾವಿಬ್ಬರೂ ಸೇರಿ ಕಾರ್ಯರಂಗಕ್ಕಿಳಿಯೋಣ."

"ಹಾಗೆಯೇ ಆಗಲಿ. ನಾನೇನೂ ಹೆದರಿಕೊಂಡಿಲ್ಲ.' ಇಷ್ಟು ಹೇಳಿದ ಕೇದಾರಿಯು ಅಲ್ಲಿಂದ ಬೇಗನೆ ತನ್ನ ಮುಖಂಡನನ್ನು ಬಿಟ್ಟು ಸಂತೋಷದಿಂದ ಹೊರಟನು. ಇನ್ನು ತಡಮಾಡಿದರೆ ಅವರು ಎರಡನೆ ಬಾರಿಯಲ್ಲಿ ಮನಸ್ಸು ಬದಲಾಯಿಸಿಯಾರೆಂಬ ಭಯ ಅವನಲ್ಲಿತ್ತು.

ದಾರಿಯಲ್ಲೂ ಅವನು ಸ್ಫೂರ್ತಿಯಿಂದಿದ್ದನು. ಇದು ಕೂಡಾ ಸುದೈವ. ಆದರೆ ಇಷ್ಟು ವರ್ಷಗಳಲ್ಲಿ ಅದೇನನ್ನೂ ಶೇಖರಿಸಿಟ್ಟಿಲ್ಲ ಎಂಬುದು ಎಂತಹ ವಿಷಾದನೀಯ ವಿಷಯ! ನನ್ನ ಬಳಿ ಕೇವಲ ಇಪ್ಪತ್ತು ಸಹಸ್ರ ರೂಪಾಯಿಗಳಿರುತ್ತಿದ್ದಲ್ಲಿ, ನೆಪೋಲಿಯನನ ಹೆಸರಿನ ಜೊತೆಯಲ್ಲಿ ನನ್ನದನ್ನೂ ಕೂಡಿಸಿ ಬಿಡುತ್ತಿದ್ದೆ. ಇನ್ನು ಕಾಯುವಂತಿಲ್ಲ. ಕಾರ್ಯಮಗ್ನನಾಗಲೇಬೇಕು, ಸುಲಕ್ಷಣಕವಿದೆ, ಜೀವನವು ಸಂಕ್ಷಿಪ್ತವಿದೆ.

(ಮುಂದುವರಿಯುವುದು.)

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಯೋಚಿಸಿ ಹೇಳಿರಿ

ಅಂತರ್ಜಗತ್ತಿನೊಡನೆ ಸಂಪರ್ಕ ಸಾಧ್ಯವೆ?

ಭೂವ್ಯಾತೀತವಾದ ನಾಗರಿಕತೆಗಳೊಡನೆ ಸಂಪರ್ಕ ಸಾಧ್ಯವೆಂದು ವಿಜ್ಞಾನಿಗಳು ಭಾವಿಸುತ್ತಾರೆಯೆ? ಜೆಕೊಸ್ಲೊವಾಕಿಯದ ವಿಜ್ಞಾನಿ ಡಾ. ರುಡಾಲ್ಫ್ ಪೆಸೆಕ್‌ರವರು ಅಂತಾರಾಷ್ಟ್ರೀಯ ಖಗೋಳಯಾನ ಸಂಸ್ಥೆಯ ಉಪಾಧ್ಯಕ್ಷರಾಗಿದ್ದಾರೆ. ಅವರು ಈ ಪ್ರಶ್ನೆಯ ಕುರಿತು ನಮ್ಮ ವಿಚಾರಗಳನ್ನು ಈ ಲೇಖನದಲ್ಲಿ ನೀಡಿದ್ದಾರೆ.

ನಮ್ಮ ರಹದಾರಿ ಪತ್ರಗಳಲ್ಲಿ (ಪಾಸ್‌ಪೋರ್ಟ್ಸ್) "ನಾಗರಿಕತೆ" ಎಂಬ ಕಲಮಿನಲ್ಲಿ ನಾವು ನಮ್ಮ ದೇಶಗಳ ಹೆಸರು ಸೂಚಿಸುವುದರ ಬದಲಾಗಿ "ವಿಶ್ವ"ಎಂದು ಬರೆಯಲು ಇನ್ನೂ ಎಷ್ಟು ಕಾಲ ಬೇಕು? ಭೂಮಿಯಾಚೆಯ ನಾಗರಿಕತೆಗಳೊಡನೆ ಸಂಪರ್ಕ ಸಾಧ್ಯವಿದೆಯೆ?

ಈ ಪ್ರಶ್ನೆಗಳಿಗೆ ಡಾ. ರುಡೋಲ್ಫ್ ಪೆಸೆಕ್‌ರವರು ಉತ್ತರ ನೀಡಬೇಕೆಂದು ಕೋರಲಾಯಿತು. ಆದರು ಜೆಕೊಸ್ಲೊವಾಕಿಯದ ವಿಜ್ಞಾನ ಅಕಾಡೆಮಿಯ ಸತ್ರ ಸದಸ್ಯರೂ, ಅವರ ಖಗೋಳಯಾನ ಆಯೋಗದ ಅಧ್ಯಕ್ಷರೂ, ಪ್ರಾಗ್ ನಗರದ ಜೆಕ್ ಪ್ರಾವಿಧಿಕ ವಿಶ್ವವಿದ್ಯಾಲಯದಲ್ಲಿ ಜಲಶಕ್ತಿಯಂತ್ರ ಮತ್ತು ಉಷ್ಣ ಶಕ್ತಿಯಂತ್ರ ವಿಜ್ಞಾನ ಪೀಠದ ಪ್ರಮುಖರೂ ಅಂತಾರಾಷ್ಟ್ರೀಯ ಖಗೋಳಯಾನ ಸಂಯುಕ್ತ ಸಂಸ್ಥೆಯ ಉಪಾಧ್ಯಕ್ಷರೂ ಆಗಿದ್ದಾರೆ.

"ಅಂತಾರಾಷ್ಟ್ರೀಯ ಖಗೋಳಯಾನ ಸಂಯುಕ್ತ ಸಂಸ್ಥೆಯನ್ನು ೧೯೫೦ರಲ್ಲಿ ಸ್ಥಾಪಿಸಿದಾಗ, ಅದನ್ನು 'ಕೇವಲ ಭ್ರಾಂತಿ ಕಲ್ಪನೆ'ಯೆಂದು ಹೆಸರಿಸಲಾಯಿತು. ಇಂದು ಕೃತಕ ಭೂ-ಉಪಗ್ರಹಗಳ ಹಾರಿಕೆಯು ಯಾರನ್ನೂ ಬೆರಗುಗೊಳಿಸದು. ನಾವು ಇನ್ನೂ ಚಂದ್ರಗ್ರಹದ ಮೇಲೆ ಇಳಿದಿಲ್ಲವೆಂದು ಆಶ್ಚರ್ಯಪಟ್ಟರೂ ಹೆಚ್ಚಿಲ್ಲ!"—ಎನ್ನುತ್ತ ಅವರು ಹೀಗೆ ಹೇಳಿದರು:

"ಇತರ ಜಗತ್ತುಗಳೊಡನೆಯ ಸಂಪರ್ಕವನ್ನು ಇದು ವರೆಗೆ ಎರಡು ಸಮ್ಮೇಲನಗಳು ಚರ್ಚಿಸಿವೆ. ಒಂದು ಸಮ್ಮೇಲನವು ಸಂ. ರಾ. ಅಮೆರಿಕದಲ್ಲೂ, ಇನ್ನೊಂದು ಸೋವಿಯೆತ್ ಒಕ್ಕೂಟದಲ್ಲೂ ನಡೆದುವು. ಅಂತಾರಾಷ್ಟ್ರೀಯ ಸಹಕಾರಕ್ಕೆ ಈಗ ಸಮಯ ಪರಿಪಕ್ವವಾಗಿದೆ. ನಮ್ಮ ರೇಡಿಯೋ ಖಗೋಳ ಶಾಸ್ತ್ರ, ರೇಡಿಯೋ ಯಂತ್ರಕಲಾ ಶಾಸ್ತ್ರ, ಸಂಕೇತ ಸಂಪರ್ಕ ವಿಜ್ಞಾನ (ಸೈಬರ್ನೆಟಿಕ್ಸ್), ಜೀವ ವಿಜ್ಞಾನ — ಇವುಗಳ ಪರಿಣಾಮಗಳ ಮೂಲಕ, ಇತರ ಜಗತ್ತುಗಳೊಡನೆ ನಾವು ಸಂಪರ್ಕ ಪ್ರಯತ್ನಗಳನ್ನು ಮಾಡಬಹುದು."

"ಪ್ರಾರಂಭ ದೆಶೆಯಲ್ಲಿ ನಾವು ತುಲನಾತ್ಮಕವಾಗಿ ಸಣ್ಣ ದೂರಗಳಿಗೆ—ಸ್ವಲ್ಪ ಹೆಚ್ಚು ಕಡಮೆ ಸಾವಿರ ಪ್ರಕಾಶ ವರ್ಷಗಳ ಮಟ್ಟಿಗೇ ನಮ್ಮ ಕಾರ್ಯವನ್ನು ಸೀಮಿತಗೊಳಿಸಿಕೊಂಡ ಪಕ್ಷದಲ್ಲಿ, ಹತ್ತು ವರ್ಷಗಳಲ್ಲಿ ೩,೬೪,೦೦೦ ನಕ್ಷತ್ರಗಳ ಬಗ್ಗೆ ತನಿಖೆ ನಡೆಸಬಲ್ಲೆವು. ಆ ಮೇಲೆ ನಾವು ಇನ್ನೂ ದೂರದ ಛಾಯಾ ಪುಂಜಗಳ ಬಗ್ಗೆ ಸಂಶೋಧನೆ ನಡೆಸಬಹುದು. ಸಂಪರ್ಕದ ಮಟ್ಟಿಗೆ ಹೇಳುವುದಾದರೆ, ಈ ನಕ್ಷತ್ರಗಳಿಗೆ ನಾವು ಹಾರಿ ಹೋಗಬೇಕಾದ ಆವಶ್ಯಕತೆಯೇನೂ ಇಲ್ಲ. ವಿದ್ಯುತ್ಕಾಂತ ತರಂಗಗಳು ಸಾಕು. ನಮ್ಮ ಮಟ್ಟದ ಪ್ರಯತ್ನವನ್ನು ಸಾಧಿಸಿರುವ ನಾಗರಿಕತೆಗಳು ಸೆಂಟಿ ಮೀಟರ್ ಮತ್ತು ಡೆಸಿ ಮೀಟರ್ ತರಂಗ ಕ್ಷೇತ್ರಗಳಲ್ಲಿ ನಿರ್ದೇಶಕ ಸಂಕೇತಗಳನ್ನು ಕಳಿಸಬಹುವೆಂದು ನಾವು ಭಾವಿಸುತ್ತೇವೆ. ಇನ್ನೊಂದು ಸಾಧ್ಯತೆಯೂ ಇದೆ. ನಮ್ಮ ಮಟ್ಟಕ್ಕಿಂತಲೂ ಉನ್ನತ ಪ್ರಗತಿಯನ್ನು ಸಾಧಿಸಿದ ನಾಗರಿಕತೆಗಳ ಅಸ್ತಿತ್ವದ ಬಗ್ಗೆ ಸಂದೇಹ ಪಡಲು ಯಾವ ಕಾರಣವೂ ಇಲ್ಲ. ಅವರಲ್ಲಿ ವಿಶೇಷ ಸಾಮರ್ಥ್ಯವಿದ್ದು, ಅವರು ಒಂದರಿಂದ ಒಂದು ಸಾವಿರ ಮೆ.ಗಾ ಹೆರ್ಜ್ ಕಂಪನಗಳಲ್ಲಿ ಅಸದೇಶಕ ಕಿರಣ ಪ್ರಸಾರವನ್ನು ಪ್ರೇಷಿಸಬಹುದು."

"ಕೃತಕ ಭಾಷೆಯ ಮೂಲಕ ಸಂಪರ್ಕವನ್ನು ಸುಗಮಗೊಳಿಸಲಾಗುವದು. ಗಣಿತ ಭಾಷಾಶಾಸ್ತ್ರವು ಅದನ್ನು ನಿರ್ಮಿಸಬಲ್ಲುದು."

'ಜೀವ ಪೋಷಣೆಯ ಸಾಮರ್ಥ್ಯವುಳ್ಳ ವಿಶ್ವ ಪರಿಸ್ಥಿತಿಗಳನ್ನು ನಾವು ಅರಿಯುವೆವು. ಅನೇಕ ಮುಂದುವರಿದ ನಾಗರಿಕತೆಗಳಿಂದ, ನಾವು ಸಮಾಚಾರವನ್ನು ಪಡೆಯಬಲ್ಲೆವು ಸಾಮಾಜಿಕ ವಿಕಾಸ ನಿಯಮಗಳನ್ನು ಚೆನ್ನಾಗಿ ತಿಳಿದು ಕೊಳ್ಳಲು ಅದು ನಮಗೆ ಸಹಾಯಕವಾಗುವದು. ಅಲ್ಲಿಂದ ನಮಗೆ ದೊರೆಯುವ ತಿಳಿವಳಿಕೆಯು ನಮ್ಮ ಯಂತ್ರಕಲಾ ವಿಜ್ಞಾನವನ್ನು ನೂರಾರು, ಸಾವಿರಾರು ವರ್ಷಗಳ ಮುಂದಕ್ಕೆ ರಾಕೆಟ್ ವೇಗದಿಂದ ಮುಂದೂಡುವುದು. ಒಂದು ಪ್ರಕಾಶ ವರ್ಷದಷ್ಟು ದೂರದಲ್ಲಿರುವ ಸ್ಥಳಕ್ಕೆ ಒಂಶಬ್ದಗಳ ದೂರ ಸಂದೇಶವನ್ನು ಸುಮಾರು ಐದು ಸೆಂಟುಗಳ ವೆಚ್ಚದಲ್ಲಿ ಕಳಿಸಿಕೊಡಬಹುದು. ಸ್ವಾಭಾವಿಕವಾಗಿಯೇ ದೂರಕ್ಕೆ ತಕ್ಕಂತೆ ಖರ್ಚೂ ಹೆಚ್ಚುವುದು. ವಿಶೇಷ ನಿಲ್ದಾಣವನ್ನು ನಿರ್ಮಿಸಲು ಸುಮಾರು ಮೂರು ಕೋಟಿ ಡಾಲರು ಬೇಕಾಗಬಹುದು. ಈ ಕೇಂದ್ರವನ್ನು ಮೂವತ್ತು ವರ್ಷಗಳ ವರೆಗೆ ನಡೆಸುವುದಕ್ಕೂ ಸಹ ಇಷ್ಟೇ ಹಣ ಬೇಕಾಗಬಹುದು. ಖಗೋಳಯಾನದ ಒಂದು ವರ್ಷದ ಖರ್ಚುಗಳೊಂದಿಗೆ ಹೋಲಿಸಿದರೆ ಈ ಮೊತ್ತವು ವಿಚಿತ್ರವೆನಿಸಬಹುದು. ಇಂತಹ ಕೇಂದ್ರಗಳು ಐದೋ, ಹತ್ತೋ ಇದ್ದ ಪಕ್ಷದಲ್ಲಿ, ಪ್ರಯೋಗಗಳನ್ನು ತಕ್ಷಣವೇ ಪ್ರಾರಂಭಿಸಬಹುದು."

"ವಿಶ್ವ ಸಂಸ್ಕೃತಿ ಮತ್ತು ವಿಶ್ವ ನಾಗರಿಕತೆ ಎಂಬ ಮಟ್ಟದಲ್ಲಿ ನಾವಿನ್ನು ಬೇಗನೆ ಆಲೋಚಿಸಲಾರಂಭಿಸಬೇಕಾಗುವುದು. ಭೂವ್ಯಾತೀತ ನಾಗರಿಕತೆಗಳೊಡನೆಯ ಸಂಪರ್ಕವು ನಮ್ಮಲ್ಲೂ, ನಮ್ಮ ಸುತ್ತಮುತ್ತಲೂ ಉಂಟು ಮಾಡುವ ಸಾಮಾಜಿಕ, ಮನೋವೈಜ್ಞಾನಿಕ ಪ್ರಭಾವವನ್ನು ನಾವು ಎಲ್ಲಕ್ಕೂ ಮೊದಲು ಖಂಡಿತವಾಗಿಯೂ ತನಿಖೆ ಮಾಡಬೇಕಾಗುವುದು."

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0-30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00

ಕೆಟಲಾಗಿಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

READ & ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

12—5—1966



೧೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ಜಾನಕೀಪತಿ ರಾಮಚಂದ್ರ ಪದವಿ ಪಡೆಯದೆ ಅಲವಂತಿಯ ಆಸ್ತಿಪಾಸ್ತಿಗಳನ್ನು ಮಾರಿ ಶಿಬಿರ ಗುಮಾಸ್ತನಾದ. ಸುದೈವದಿಂದ ಕೆಲೆಲರ ಶಿಫಾರಸಿನಿಂದ ದೂಸಿಯ ಉಪ ತಾಲೂಕಧಿ ಕಾರಿಯಾದ. ಕರ್ತವ್ಯ ನಿರತನಾದ ರಾಮು ದಕ್ಷ ಅಧಿಕಾರಿಯೆಂದು ಕೀರ್ತಿ ಗಳಿಸಿದ.

ರಾಮುವಿನ ಒಕ್ಕಲು ಮುರುಗ ಶ್ರೀಮಂತನಾದಂತೆ ದುರ್ವ್ಯಸನಗಳಿಗೆ ಬಲಿಬಿದ್ದ. ಕೊಂಬಿಯಲ್ಲಿ ಭಾಗವಹಿಸಿದನೆಂಬುದರಿಂದ ದಂಡನೆಗೆ ಗುರಿಯಾದರೂ ಸೆರೆಮನೆಯಿಂದ ತಪ್ಪಿಸಿ ಓಡಿದ ತೊಪ್ಪೈಯೊಡನೆ.

ರಾಮುವಿನ ಮಿತ್ರ ಕೇದಾರಿ ಉದಯೋನ್ಮುಖ ವಕೀಲನಾಗಿ ಸುಂದರ ಸ್ವಪ್ನ ಕಾಣುತ್ತಿದ್ದ. ಕೇದಾರಿ ಚುನಾವಣೆಯಲ್ಲಿ ನಿಂತು ಹೇಗಾದರೂ ಕೀರ್ತಿ—ಹಣ ಮಾಡುವ ಹವಣಿಕೆಯಲ್ಲಿದ್ದ.

ಮುಂದೆ—

ಕೇದಾರಿಯು ಮನೆಗೆ ಹಿಂತಿರುಗಿದಾಗ ಸುಮಾರು ಹನ್ನೊಂದು ಘಂಟೆಯಾಗಿತ್ತು. ಕುತೂಹಲದಿಂದ ಕೋಕಿಲಂ ಕೂಡಲೇ ಅವನನ್ನು ಸ್ವಾಗತಿಸಿದಳು. "ನೋಡೀಂದ್ರೆ, ಅಬ್ಬಾ! ಇದೆಷ್ಟು ತಡಮಾಡಿ ಬಂದಿದ್ದೀರಿ. ನನಗೆ ಬಹಳ ಭಯವಾಗಿತ್ತು. ನೀವು ಈ ಹೊಸ ಕಾರನ್ನು ತೆಗೆದುಕೊಂಡಂದಿನಿಂದ ತಡ ಮಾಡಿಯೇ ಬರುತ್ತಿದ್ದೀರಿ; ಅಲ್ಲದೆ ಈಗ ಯಾವದೂ ಮುಂಚಿನಂತಿಲ್ಲ."

"ಅಹ್ಹಾ! ಪುಟ್ಟ ತಿಳಿಗೇಡಿ ಹಕ್ಕಿ. ಮಕ್ಕಳೆಲ್ಲಿದ್ದಾವೆ? ಇಷ್ಟು ಬೇಗನೆ ಮಲಗಿದ್ದಾರೇನೇ?"

"ಇಷ್ಟು ಬೇಗ, ಈಗ ಘಂಟೆ ಹನ್ನೊಂದು!"

"ಹನ್ನೊಂದು! ನಾನಿಂದು ಘಂಟೆಯತ್ತ ನೋಡಿಯೇ ಇಲ್ಲ."

"ಅಥವಾ ಎಂದೂ"

"ಹೆಂಗಸರು ಯಾವಾಗಲೂ ಹಗರಣ ಪ್ರಿಯರು; ಒಂದಿಷ್ಟು ಕೆಲಸವನ್ನು ಇಡೀ ದಿನ ಮಾಡಿಕೊಂಡಿದ್ದು, ಸೋಮಾರಿಗಳಾಗಿರುವುದರಿಂದ ಅವರು ದೂರು ಕೊಡುತ್ತಾ ಇರುತ್ತಾರಲ್ಲದೆ ಇನ್ನೇನು ತಾನೇ ಮಾಡಿಯಾರು?"

"ಮನೆಯಲ್ಲಿ ಸೋಮಾರಿ! ದಯಾಳು ದೇವ, ಒಬ್ಬಳು ಕೆಲಸದಾಕೆ ಅಥವಾ ಅಡುಗೆಯವಳೂ ಸಹಾಯಕ್ಕೆ ಇಲ್ಲ. ಇದೆಲ್ಲಾ ನೋಡಿಕೊಂಡು ನಮ್ಮ ಐದು ಮಕ್ಕಳನ್ನೂ ಸಾಕಬೇಕು—ಪುಟ್ಟ ಮಕ್ಕಳನ್ನು ನಾನು ಪ್ರೀತಿಸುತ್ತೇನಾದರೂ ಕೆಲಸದತ್ತ ಕೆಟ್ಟ ದೃಷ್ಟಿಯಿಂದ ನೋಡಲಿಕ್ಕಾಗುವದಿಲ್ಲ—ಇಡ ಮೈಲಾಪುರದಲ್ಲಿ ನಮ್ಮದೊಂದು ವಿಚಿತ್ರ ಹಾಗೂ ಅಸಮಾನ ಮನೆ ಇದೆ. ಮನೆಯಲ್ಲಿ ಕೆಲಸದಾಕೆ ಇಲ್ಲದೆ, ಮನೆಯಾಕೆ ಅಗಸನ ಕತ್ತೆಯಂತೆ ದುಡಿಯುತ್ತಿದ್ದು, ಅದಕ್ಕೆ ಸರಿಯಾದ ಉಡುಪಿನಿಂದಿರುವಾಗ ಆಕೆಯ ಪತಿದೇವರು ಮೋಟಾರು ಕಾರಿನಲ್ಲಿ, ಆಡಂಬರದ ಉಡುಪಿನಲ್ಲಿ ಸಂಚರಿಸುತ್ತಾರೆ!"

"ನಮ್ಮ ಬಡತನದ ಪರಿಸ್ಥಿತಿಯಿಂದ ನನ್ನ ಮನಸ್ಸಿಗಾಗುವ ನೋವಿನ ಕುರಿತು ನಿನಗದೆಷ್ಟು ಬಾರಿ ಹೇಳುವದೇನೇ ಪ್ರಿಯೆ ಕೋಕಿಲಂ? ಬಾಹ್ಯಾಡಂಬರವು ಹಿಂಸಾತ್ಮಕ. ಹಣ ಸಂಪಾದಿಸಲು ಕಾರು ಬಂಡವಾಳ ಇದೆ. ದಡ್ಡರು ಅದನ್ನು ಮಿಗತೆಯ ಸಂಪತ್ತೆಂದು ಅರ್ಥ ಮಾಡಿಕೊಳ್ಳುತ್ತಾರೆ. ಆದರೆ ಅದನ್ನೇ ಒಬ್ಬ ಬುದ್ಧಿವಂತನು ಕತ್ತಲೆಯಲ್ಲಿ ಹಾಗೂ ಭೂಮಿಯಡಿಯಲ್ಲಿ ಬಂಗಾರವನ್ನೆತ್ತಲು ಶ್ರಮಿಕನಿಗೆ ಬೇಕಾಗುವ ಪಿಕ್ಕಾಸು ಮತ್ತು ಹಾರೆ ಎಂದು ತಿಳಿದುಕೊಂಡಿರುತ್ತಾನೆ. ತಾಳು ಕೋಕಿಲಂ, ಒಂದು ವರ್ಷ ಕಾದಿರು, ನಿನ್ನ ಕೊರಳು, ಮೂಗು ಮತ್ತು ಕಿವಿಗಳು ಚೆಂದ ಚೆಂದದ ಬಂಗಾರ ದೊಡವೆಗಳಿಂದ, ಮೃದು ಮೈಗೆ ನೋವಾಗುವಷ್ಟು, ಅದಂಭರವಾಗಿ ಅಲಂಕರಿಸಲ್ಪಡುವೆ. ಆಗಬೇಕಾದಷ್ಟು ಕೆಲಸಗಾರರನ್ನು ಇಟ್ಟುಕೊಳ್ಳೋಣ. ನಮ್ಮ ಮಕ್ಕಳು ರಾಜಕುಮಾರ, ಕುಮಾರಿಯರಂತೆ ಇರುತ್ತಾರೆ."

"ನಾಳೆಯ ನಿರೀಕ್ಷೆಯತ್ತ ನಾನು ಲಕ್ಷ್ಯಕೊಡುವುದಿಲ್ಲ. ಕೊನೆಯ ಹುಡುಗ ಬಿಸ್ಕಿಟಿಗಾಗಿ ಅತ್ತು ಅತ್ತು ಈಗ ತಾನೆ ನಿದ್ದೆ ಮಾಡುತಿದ್ದಾನೆ. ದೊಡ್ಡ ಹುಡುಗ ಇನ್ನೂ ಪಠ್ಯ ಪುಸ್ತಕಗಳನ್ನು ತೆಗೆದುಕೊಂಡಿಲ್ಲ. ಅವನ ಖಾಸಗಿ— ಶಿಕ್ಷಕರು ಸಂಬಳಕ್ಕಾಗಿ ತಗಾದೆ ಮಾಡುತಿದ್ದರು. ತನ್ನ ಶಾಲಾಸ್ನೇಹಿತೆಯರು ಉಟ್ಟುಕೊಂಡಂತಿರುವ ನವೀನ ಮಾದರಿಯ ಸೀರೆ ತನಗಿಲ್ಲವೆಂದು ಹುಡುಗಿಯು ಕಣ್ಣೀರು ಕರೆಯುತ್ತಿದ್ದಳು. ಕಳೆದ ಎರಡು ತಿಂಗಳಿನಿಂದ ನಾವು ಕೊಡಬೇಕಾದದ್ದೆಲ್ಲಾ ಬಾಕಿಯೇ ಇದೆ. ನಿಮ್ಮ ಕಾರು ನಮ್ಮೆಲ್ಲರ ಪ್ರಾಣವನ್ನು ನುಂಗುತ್ತಿದೆ. ನೀವು ತೆಗೆದುಕೊಂಡಿರುವ ಸಾವಿರ ರೂಪಾಯಿ ಸಾಲವನ್ನು ತಿರುಗಿಕೊಡಬೇಕೆಂದು ಅಣ್ಣ ಎರಡು ಸಲ ಕಾಗದ ಬರೆದಿದ್ದಾರೆ. ಇದೇ ಪ್ರಕಾರ.."

"ಏನೂ ಕೆಡುಕು ಸಂಭವಿಸಲಿಕ್ಕಿಲ್ಲ, ರಾಣಿ. ಕಳೆದ ತಿಂಗಳಲ್ಲಿ ನಾನು ಸಾವಿರದ ಐನೂರು ರೂಪಾಯಿ ಸಂಪಾದಿಸಿದ್ದೆ. ಇಂತಹ ಚಿಕ್ಕ ಪುಟ್ಟ ವಿಷಯಗಳತ್ತ ಗಮನ ಕೊಟ್ಟೆನೆಂದರೆ ಅವುಗಳನ್ನೆಲ್ಲಾ ಒಂದೇ ದಿನದಲ್ಲಿ ಮುಗಿಸಬಲ್ಲೆ, ಆರು ತಿಂಗಳು ತಾಳ್ಮೆಯಿಂದಿದ್ದು ನೋಡು. ದೊಡ್ಡ ದೊಡ್ಡ ಹೆಂಚಿಕೆಗಳನ್ನು ಹೂಡುವಾಗ ಮೊದಲ ಕೆಲವರ್ಷ ಸ್ವಲ್ಪ ನೀರು ಹಾಳಾಗಲು ಬಿಡಬೇಕಾಗುತ್ತದೆ. ಒಂದು ನದಿಗೆ ಆಣೆಕಟ್ಟು ಕಟ್ಟಿದಾಗ ನಿನ್ನ ಗದ್ದೆಯ ಬಾಯಿಗೆ ನೀರು ಬರಬೇಕಾದಲ್ಲಿ ಸ್ವಲ್ಪ ಸಮಯ ಕಾಯಬೇಕಾಗುತ್ತದೆ. ಒಮ್ಮೆ ಬಂತೆಂದರೆ, ಒಂದೇ ಒಂದು ಘಂಟೆಯಲ್ಲಿ ಪ್ರವಾಹವೇ ಬಂದು ಬಿಡುತ್ತದೆ."

"ನಿಮ್ಮ ಉಪಮೆ ಹಾಗೂ ಇತರ ಅಲಂಕಾರಗಳೆಲ್ಲಾ ಕಾಗದದ ಮೇಲೆ 'ಸಕ್ಕರೆ' ಎಂದು ಬರೆದು ಅದರ ರುಚಿ ನೋಡಿದಂತಿದೆ. ಅಂತಹ ಸಿಹಿಪದಾರ್ಥಗಳಿಂದ ನಾನು ಅನೇಕ ಬಾರಿ ಸಿಹಿಮಾಡಿಕೊಂಡಿದ್ದೇನೆ." ಕೋಕಿಲಂ ಗೌರವದಿಂದ ಮಾರುತ್ತರವಿತ್ತಳು.

"ಕೋಕಿಲಂ, ನೀನು ಜೀವನದ ವಿಷಯ ತಿಳಿದುಕೊಂಡಿಲ್ಲ. ಸಂಪತ್ತೆಂಬುದು ಜಲಾಶಯದಲ್ಲಿರುವ ಬುಗ್ಗೆ. ನೀನು ತೆಗೆದಷ್ಟು ಅದರಲ್ಲಿ ತುಂಬಿಕೊಂಡು ಬರುತ್ತದೆ. ನಿರ್ಬಲ ಹೃದಯ ಮಾತ್ರ ಅದನ್ನು ಅರಿತುಕೊಳ್ಳಲು ಅಸಮರ್ಥವಿದೆ. ವ್ಯಾವಹಾರಿಕ ಜೀವನದಲ್ಲಿ ಪಳಗಿರುವ ನನ್ನಂಥವನಿಗೆ ಜಯವು ನಿಶ್ಚಯ. ನಿನಗಾಗಿ ನಾನು ವಿಧಿಯೊಂದಿಗೂ ಹೋರಾಡಲು ಸಿದ್ಧನಿದ್ದೇನೆ. ಆದರೆ ಸ್ವಲ್ಪ ತಾಳು. ಕೆಲ ತಿಂಗಳು ಕಾದು ನೋಡು. ತಡವಾಗಿ ಬಂದ ಮಳೆ ಅದೆಷ್ಟು ಜನಪ್ರಿಯ ಇರುತ್ತದೆ! ನಾನೀಗ ರಾಜನಲ್ಲದಿದ್ದರೂ ನೀನಾಗ ರಾಣಿಯಾಗುವಿ. ನಾನೀಗ ಪ್ರವಾಹದ ತೆರೆಯ ತುದಿಭಾಗದಲ್ಲಿದ್ದೇನೆ. ನನ್ನ ಹೃದಯದೊಳಗೆ ದೊಡ್ಡ ದೊಡ್ಡ ಅಲೆಗಳೇಳುತ್ತಿವೆ. ಆದರೆ ನಿನ್ನ ರಚನೆಯೇ ಬೇರೆ ರೀತಿ ಇದೆ. ನಿನ್ನ ಅಥವಾ ಇತರರ ಬಲವೇನೆಂಬುದನ್ನು ನೀನು ತಿಳಿದುಕೊಂಡಿರುವದಿಲ್ಲ. ಹಾಗಿದ್ದರೂ ನಿನ್ನನ್ನು ದೂರುವದು ಸರಿಯಲ್ಲ. ನಿನ್ನ ಜೀವನವು ಅಡುಗೆ ಕೋಣೆಯಲ್ಲೇ ಕಳೆಯುವಂತಾಗಿದೆ. ಕೋಮಲ ಕರಗಳು ಸೌದೆಯನ್ನುರಿಸುವದಕ್ಕೆ ಉಪಯೋಗಿಸಲ್ಪಟ್ಟವು. ಸಹಿಸು, ಇನ್ನು ಕೆಲವೇ ತಿಂಗಳ ನಂತರ ನೋಡು. ಕೋಶವನ್ನು ಒಡೆದುಕೊಂಡು ಹೊರಗೆ ಬಂದು ಮೆರೆದಾಡುವ ಚಿಟ್ಟೆಯಂತೆ ನೀನು ಆಭರಣಗಳನ್ನು ಧರಿಸಿಕೊಳ್ಳುತೀ, ಕಣೇ."

ತನ್ನ ಮನೋಧೈರ್ಯದ ಹಾಗೂ ಅಲಂಕಾರ ಸಾಮ್ರಾಜ್ಯದ ತಳಹದಿಯೇ ಕುಸಿಯುತ್ತಿದೆಯೆಂದು ತಿಳಿದುಕೊಂಡ ಕೇದಾರಿಯು ಗಲಿಬಿಲಿಯಿಂದ ಸಿಕ್ಕಿ ಸಿಕ್ಕಿದ ರೂಪಕಗಳನ್ನು ರಾಶಿ ಹಾಕುತ್ತ ಹೋದನು.

ಮೋಹಕ ರೂಪಕ ಹಾಗೂ ಪ್ರವಾಹದಂತೆ ಹರಿಯುತ್ತ ಇರುವ ಮಾತಿನ ಮಧ್ಯೆ ಅಡ್ಡ ನಿಂತರೆ ಪ್ರಯೋಜನವಿಲ್ಲವೆಂದು ತಿಳಿದುಕೊಂಡ ಕೋಕಿಲಂ ರಾಣಿಯ ಗರ್ವದಿಂದ ಸುಮ್ಮನಾದಳು.

ತಾನು ಚುನಾವಣೆಯಲ್ಲಿ ಭಾಗವಹಿಸಲು ನಿಶ್ಚಯಿಸಿಕೊಂಡಿರುವದನ್ನು ಕೋಕಿಲಂಳಿಗೆ ತಿಳಿಸಲು ಅವನಿಗೆ ಧೈರ್ಯ ಬರಲೇ ಇಲ್ಲ. ಚುನಾವಣೆಯಲ್ಲಿ ಚೆಲ್ಲಬೇಕಾಗಿರುವ ಹಣದ ಮೊತ್ತವನ್ನು ಎಣಿಸಿಕೊಂಡಾಗ ಮೈ ಜುಮ್ಮೆಂದಿತು. ಮಧ್ಯರಾತ್ರಿಯ ಘಂ

(ಹದಿನೈದನೇಯ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. K nara

ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕರು:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಹರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

—— ಮುಖಪತ್ರದಲ್ಲಿ: ——

ಒಂದು ಪ್ರಾಚೀನ ಶಿಲ್ಪಕಲೆ.

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೩೫ | ೧೨—೫—೧೯೬೬ | No. 35

ಗೋಖಲೆ ಸಂಸ್ಮರಣೆ

ರಾಷ್ಟ್ರದ ಮಹಾಪುರುಷರ ಪುಣ್ಯತಿಥಿಯನ್ನು ಆಚರಿಸುವ ದಶಕಗಳು ಕಳೆದು, ಸ್ವತಂತ್ರ ಭಾರತವು ಅವರ ಶತಮಾನೋತ್ಸವಗಳನ್ನು ಆಚರಿಸುವ ದಿನಗಳೀಗ ಬರುತ್ತಿವೆ. ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ನಾಯಕರಾಗಿ, ದೇಶಸೇವಕರಾಗಿ, ದೇಶಕ್ಕಾಗಿ ಎಂತಹ ತ್ಯಾಗಕ್ಕೂ ಸಿದ್ಧರಾಗಿದ್ದ ಮಹಾ ವಿಭೂತಿಗಳೆಲ್ಲ ನಮ್ಮಿಂದ ದೂರವಾಗಿಯೇ ಹಲವಾರು ವರ್ಷಗಳು ಗತಿಸತೊಡಗಿವೆ— ಇಂದಿನ ಸ್ವತಂತ್ರ ಭಾರತದ ಎಳೆಯ ಜನಾಂಗಕ್ಕೆ ಅವರೆಲ್ಲರ ಹೆಸರುಗಳು ಬುದ್ಧ—ಯೇಸು ಕ್ರಿಸ್ತ ಮೊದಲಾದವರಂತೆಯೇ ಆಗಿ ಪರಿಣಮಿಸಿದರೂ ಆಶ್ಚರ್ಯವಲ್ಲ. ಹಾಗಿದ್ದರೂ ಈ ಮಹಾ ಸಾಧಕರಲ್ಲಿ ಕೆಲವರ ಹೆಸರನ್ನಾದರೂ ಭ್ರಾಂತೀಯರ ಮೇಲುಗು ಹಾಕುತ್ತಿರಬೇಕು— ಇವುಗಳಲ್ಲಿ ಗೋಪಾಲಕೃಷ್ಣ ಗೋಖಲೆಯವರದೂ ಒಂದು. ಅವರ ಶತಮಾನೋತ್ಸವವನ್ನು ನಾವು ತಾ. ೯ರಂದು ಆಚರಿಸಿದೆವು. ಹಿರಿಯ ನಾಯಕನಿಗೆ ಸಲ್ಲಬೇಕಾದ ಗೌರವದ ಒಂದಂಶವನ್ನಾದರೂ ನೀಡಿದೆವು.

ಹೋರಾಟದ ವೇಳೆಯಲ್ಲಿ ಗೋಖಲೆಯವರು ಮಂದಗಾಮಿ ಕಾಂಗ್ರೆಸಿಗರಾಗಿದ್ದರು. ತೀವ್ರಗಾಮಿಗಳಾಗಿದ್ದ ಬಾಲಗಂಗಾಧರ ತಿಳಕರಿಗೂ ಇವರಿಗೂ ಒಂದಲ್ಲ, ನೂರಾರು ಸಂದರ್ಭಗಳಲ್ಲಿ ಭಿನ್ನಾಭಿಪ್ರಾಯವೂ ಹುಟ್ಟಿಕೊಳ್ಳುತಿತ್ತು. ತಿಲಕರ ಗಂಟಲನಾದದ ಮಧ್ಯೆ ಗೋಖಲೆಯವರ ಮಂದಸ್ವರದ ಕೇಳದ ಸನ್ನಿವೇಶಗಳೂ ಇದ್ದುವು. ಆದರೇನೇ ಇದ್ದರೂ, ದೇಶಕ್ಕಾಗಿ, ದೇಶವಾಸಿಗಳ ಹಿತಕ್ಕಾಗಿ ಅವಶ್ಯವೆನಿಸಿದರೆ ನಗನಗುತ್ತಲೇ ತಿಲುಬೆಯೇರಬಲ್ಲ ಎದೆ ಅವರಿಗಿತ್ತು. ತಮ್ಮ ಜೀವನವನ್ನು ಅವರು ಬಳಸಿಕೊಂಡುದಾದರೂ ಅದಕ್ಕೇನೇ. ಅವರ ಮಾರ್ಗದರ್ಶನವಿಲ್ಲದ ದೀರ ಸೇವಾದೀಕ್ಷೆ ತೊಟ್ಟು, ಗುಲ್ಲುಗದ್ದಲವಿಲ್ಲದ ಕರ್ತವ್ಯ ತತ್ಪರರಾದವರ ಸಂಖ್ಯೆಯೇನು ಕಡಿಮೆಯಿದೆಯೆ?

ಗಾಂಧಿಜಿಯವರನ್ನು ನಾವು ರಾಷ್ಟ್ರಪಿತನೆಂದು ಗೌರವಿಸುತ್ತೇವೆ; ಮಹಾತ್ಮಾ ಎಂದು ಲೋಕವೇ ಅವರನ್ನು ಕರೆಯುತ್ತಿದೆ. ಈ ಗಾಂಧಿಯು ಮಹಾತ್ಮಾ ಪದವಿಗೇರಲು, ರಾಷ್ಟ್ರಪಿತನೆಂದು ಸನ್ಮಾನ ಪಡೆಯಲು, ಗೋಖಲೆಯವರು ಅವರಿಗಿತ್ತ ದೀಕ್ಷೆಯೇ ಕಾರಣ. ಮಹಾತ್ಮರು ಗೋಖಲೆಯವರನ್ನು ತಮ್ಮ ಗುರುವೆಂದು ಗೌರವಿಸುತ್ತಿದ್ದರು. ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ನ್ಯಾಯಕ್ಕಾಗಿ ಹೋರಾಡುತ್ತಿದ್ದ ವೇಳೆ, 'ನಿಮ್ಮ ಆವಶ್ಯಕತೆ ದಕ್ಷಿಣ ಆಫ್ರಿಕೆಗಿಂತಲೂ ಭಾರತಕ್ಕೆ ಹೆಚ್ಚಾಗಿದೆ' ಎಂಬ ಕಟು ಸತ್ಯವನ್ನು ಅವರಿಗೆ ಮನವರಿಕೆ ಮಾಡಿ, ಅವರನ್ನು ಭಾರತದ ರಾಜಕೀಯ ರಂಗಕ್ಕೆ ಎಳೆದು ತಂದ ಶ್ರೇಯಸ್ಸು ಗೋಖಲೆಯವರಿಗೆ ಸೇರಿದ್ದೆಂದೇ ಹೇಳಬೇಕು. ಮಹಾತ್ಮರು ಆ ಕಾಲದ ಎಲ್ಲ ನಾಯಕರೊಡನೆ ಮಾತನಾಡಿದರು; ಆದರೆ, ಪ್ರಭಾವಿತರಾದುದು ಗೋಖಲೆಯವರಿಂದ; ಗೋಖಲೆ—ಗಾಂಧೀಜಿಯವರ ವಿಚಾರಧಾರೆಯಲ್ಲಿ ಸಾಮ್ಯವಿತ್ತು. ಮುಂದೆ ಗಾಂಧೀಜಿಯವರು ಅಹಿಂಸಾತ್ಮಕ ಸತ್ಯಾಗ್ರಹ ಅಸಹಕಾರದ ರೂಪವನ್ನು ಸ್ವಾತಂತ್ರ್ಯ ಸಮರಕ್ಕೆ ನೀಡಿರುವುದು ಅವರ ಮೇಲೆ ಗೋಖಲೆಯವರ ಮಂದಗಾಮಿತನದ ಪ್ರಭಾವವೆಷ್ಟು ಬಿದ್ದಿದೆಯೆಂಬುದನ್ನು ತೋರಿಸುತ್ತದೆ.

ಗೋಖಲೆಯವರು ಒಡುಕಿದ್ದರೆ, ಇಂದಿಗೆ ನೂರು ವರ್ಷವಾಗುತ್ತಿತ್ತು. ಅವರೊಡನೆಯೇ ಹುಟ್ಟಿದ ಕೆಲವರಾದರೂ ಇಂದು ಭಾರತದಲ್ಲಿದ್ದಾರೆ; ಅವರಿಗೆ ಗೋಖಲೆಯವರ ಹೆಸರು ಗೊತ್ತಿದೆಯೆಂದು ಕಡಾಕಂಡಿತವಾಗಿ ಹೇಳುವಂತಿಲ್ಲ. ಆದರೆ, ಗೋಖಲೆಯವರು ಯಾವುದಕ್ಕಾಗಿ ಬದುಕಿದ್ದರೋ, ಯಾವುದಕ್ಕಾಗಿ ತಮ್ಮ ಸುಖಸ್ವಾರ್ಥವನ್ನು ತ್ಯಜಿಸಿ ಹೋರಾಡಿದ್ದರೋ ಆ ಸ್ವಾತಂತ್ರ್ಯದ ಸುಫಲವನ್ನು ತಮ್ಮ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳೊಡನೆ ಸವಿಯುತ್ತಿದ್ದಾರೆಂಬುದು ಸತ್ಯ.

ಕಾಂಗ್ರೆಸ್ ಒಂದು ಹೆಮ್ಮರ—ಗೋಖಲೆಯವರೊಂದು ಅದರ ಹಿರಿಶಾಖೆ. ಇದರ ಉಪ ಶಾಖೆಗಳಲ್ಲಿ ಗಾಂಧೀಜಿ ಒಬ್ಬರು—ಈ ಉಪ ಶಾಖೆಗಳಿಗೂ ನೂರಾರು ಕವಲುಗಳು ಹರಿದಿವೆ ಮುರಿದಿವೆ, ಮೂಡುತ್ತಿವೆ. ಉನ್ನತಾತ್ಮ ಗೋಖಲೆಯವರ ಹೆಸರು ಗಾಂಧೀಜಿ—ನೆಹರೂಜಿ, ಶಾಸ್ತ್ರೀಜಿ, ನೇತಾಜಿ- ಮೊದಲಾದವರಿಗೆ ಮೊದಲೇ ಸುಶೋಭಿಸುತ್ತಿದ. ಅವರ ಹೆಸರು ಪುಸ್ತಕದ ಬದನೆಕಾಯಿಯಾಗದೆ ಉಳಿಯಬೇಕು; ಏಕೆಂದರೆ, ಶಿಕ್ಷಿತ ಜನಾಂಗವೂ ಸೇವಾ ಜೀವನವನ್ನು ಅನುಷ್ಠಾನಕ್ಕೆ ತರುವ ಪ್ರೇರಕ ನಾಮಧೇಯ ಗೋಖಲೇಜಿ.

ಗೋಖಲೇಜಿ ಅಲ್ಪಾಯುಷಿಯಾದರು; ಅವರ ಹೋರಾಟ ಆಗ ಮುಗಿದಿರಲಿಲ್ಲ; ಒಂದು ನಿರ್ಣಯಕ ಹಂತಕ್ಕೂ ಮುಟ್ಟಿರಲಿಲ್ಲ' ಇಂದು ಆ ಹೋರಾಟ ಮುಗಿದಿದೆ; ಆದರೂ ರಾಷ್ಟ್ರ ನಮ್ಮಿಂದ ಇನ್ನೂ ಸೇವೆಯನ್ನು ಬಯಸುತ್ತಿದೆ—ಜನತಾ ಕಾರ್ಯದಲ್ಲಿ, ರಕ್ಷಣಾ ಕಾರ್ಯದಲ್ಲಿ. ಮಾತೃಭೂಮಿಯ ಕರೆಗೆ ಓಗೊಟ್ಟ ಗೋಖಲೇಜಿಯವರ ಪುಣ್ಯ ಸ್ಮರಣೆ ನಮ್ಮ ನಾಡಿ ನಾಡಿಗಳಲ್ಲಿ ಹೊಸ ಪ್ರಾಣವೂದಲಿ, ನಾಡ ಸೇವೆಯಲ್ಲಿ ನಮ್ಮೆಲ್ಲರನ್ನೂ ದೀಕ್ಷಿತಗೊಳಿಸಲಿ.

ವಚನ ಸುಧೆ

ನ ವಿಶ್ವಸೇದ ವಿಶ್ವಸ್ತೇ
ವಿಶ್ವಸ್ತೇ ನಾತಿವಿಶ್ವಸೇತ್
ವಿಶ್ವಾಸಾತ್ ಭಯ ಮುತ್ಪನ್ನಂ
ಮೂಲಾನ್ಯಪಿ ನಿಕೃಂತತಿ॥

ವಿಶ್ವಾಸ ಪಾತ್ರನಲ್ಲದವನಲ್ಲಿ ವಿಶ್ವಾಸವನ್ನು ಇಡಲೇ ಬಾರದು. ವಿಶ್ವಾಸ ಪಾತ್ರನಲ್ಲೂ ಅಧಿಕ ವಿಶ್ವಾಸವನ್ನಿಡ ಬಾರದು. ವಿಶ್ವಾಸದಿಂದ ಭಯೋತ್ಪನ್ನವಾದರೆ, ಅದು ವಿಶ್ವಾಸದ ಮೂಲವನ್ನೇ ತುಂಡರಿಸುವುದು.

ಬಂಗಾರದ ಜಿಂಕೆ

ಜನವೊಪ್ಪದಿದ್ದ ಚಿನ್ನ ನಿಯಂತ್ರಣಾಜ್ಞೆ ಅಂದು ವಿತ್ತಮಂತ್ರಿಯಾಗಿದ್ದ ಮುರಾರ್ಜಿ ಭಾಯಿಗೆ ಬೇಕಾಗಿತ್ತು: ಚೀನೀಯರ ದುರಾಕ್ರಮಣ - ಶಸ್ತ್ರಾಸ್ತ್ರಗಳ ಆವಶ್ಯಕತೆ— ವಿದೇಶ ವಿನಿಮಯದ ಅಭಾವ— ಇವು ಅವರಿಗೆ ಅಂದು ಊರುಗೋಲಾದುವು. ದೇಶಕ್ಕೆ ಬಂದಿರುವ ವಿಷಮ ಸನ್ನಿವೇಶದಲ್ಲಿ ಬಂದ ಈ ಆಜ್ಞೆಯು ಸಫಲವಾಗದಿದ್ದರೂ ಆಗಬಹುದೆಂದು ಕೆಲವರು ಸುಮ್ಮನಿದ್ದರೆ, ಮುರಾರ್ಜಿ ಆಗಿಯೇ ಆಗುವುದೆಂದರು. ಭಾರತೀಯರು ಅನಾದಿಯಿಂದಲೂ ಬಂಗಾರದ ಜಿಂಕೆಯ ಪ್ರಿಯರು. ಅವರಲ್ಲಿ ಸುವರ್ಣ ಪ್ರಿಯತೆಯನ್ನು ಕಡಿಮೆ ಮಾಡಿ, ಬಂಗಾರದ ಬಳಕೆಯನ್ನೂ, ಕಳ್ಳ ವ್ಯವಹಾರವನ್ನೂ ತಡೆ ಹಿಡಿದು ವಿದೇಶ ವಿನಿಮಯವನ್ನು ಹೆಚ್ಚಿಸುವ ಉದ್ದೇಶ ಆಜ್ಞಾಪಿತರದ್ದು. ಇದು ವರೆಗಿನ ಅನುಭವದಂತೆ ಈ ಉದ್ದೇಶ ಸಫಲವಾಗಲಿಲ್ಲ. ಅಂತರಿಕ ಚಿನ್ನ ಮಾರುಗಟ್ಟೆಗೆ ಬರಲಿಲ್ಲ ನಿಜ, ಆದರೆ ಬಂಗಾರದ ಜಿಂಕೆಯ ಮೇಲಿನ ಪ್ರೀತಿ, ಅದರ ಕಳ್ಳ ವ್ಯಾಪಾರಗಳು ನಿಲ್ಲಲಿಲ್ಲ. ಇದರಿಂದ ದೇಶದಲ್ಲಿ ಬಂಗಾರದ ಬೆಲೆ ಅಂತಾರಾಷ್ಟ್ರೀಯ ಮಟ್ಟದ ಮುಮ್ಮಡಿಯನ್ನೂ ಮೀರಿದೆ; ನಮ್ಮ ರೂಪಾಯಿಯು ತಲೆ ಕೆಳಗೆ ಹಾಕ ಬೇಕಾಗಿ ಬಂದಿದೆ, ವಿದೇಶಗಳಲ್ಲಿ ಅಲ್ಲಲ್ಲಿ ಮೌಲ್ಯ ವಿಚ್ಛೇದನದ ಅಪಸ್ವರ ಕೇಳಿ ಬರುವುದಕ್ಕೂ ಇದೇ ಕಾರಣವಿದ್ದರೂ ಇರಬಹುದು. ಇದೀಗ ಕಾಂಗ್ರೆಸ್ ಅಧ್ಯಕ್ಷರಾದಿಯಾಗಿಯೇ ಆಜ್ಞೆಯ ಸಫಲತೆಯ ಬಗ್ಗೆ ಸಂದೇಹ ವ್ಯಕ್ತಪಡಿಸ ತೊಡಗಿದ್ದಾರೆ. ಸ್ವಯಂ ಮುರಾರ್ಜಿಯವರಿಗೂ ತನ್ನ ಉಪಾಯ ಅಸಫಲವಾಗಿದೆಯೆಂದು ಮನವರಿಕೆಯಾಗಿದೆಯಂತೆ. ಮುಂಬರುವ ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಈ ಆಜ್ಞೆಯ ಬಗ್ಗೆ ಪುನರ್ವಿಚಾರ ಮಾಡುವ ಭರವಸೆಯನ್ನು ಸಚೀಂದ್ರ ಚೌಧುರಿಯವರು ನೀಡಿದ್ದಾರೆ. ಕಳ್ಳ ವ್ಯಾಪಾರ ನಿಲ್ಲಿಸುವ ಬಗ್ಗೆ ಉಚಿತ ಕ್ರಮ ಕೈಗೊಳ್ಳಲು ಏನಾದರೂ ಸಫಲ ಹೊಸ ಉಪಕ್ರಮವನ್ನು ತೊಡಗುವುದು ಮಾತ್ರ ಅಗತ್ಯವೆಂಬುದನ್ನು ಮರೆಯಬಾರದು.

ನರಸಣ್ಣನ ಸರಸ



'ಇನ್ನು ಪರ್ವಾಗಿಲ್ಲ, ನಾವು ಕೇಳಿದಷ್ಟು ಸಹಾಯವನ್ನು ಅಮೆರಿಕೆ ನೀಡುತ್ತದಂತೆ, ಒಂದು ನಾಲ್ಕು ಕಂಟ್ರಾಕ್ಟು ಸಿಗೋಕೆ ಅತಂಕವಿಲ್ಲಾಂತಾಯ್ತು....'

ಜೀರ್ಣಾಂಗಗಳನ್ನು ಸ್ವಚ್ಛಗೊಳಿಸುವ ದ್ರವ ಆಹಾರ

ಕೃತಕವಾಗಿ ತಯಾರಿಸಿದ ದ್ರವ ಆಹಾರವೊಂದರಿಂದ ಮನುಷ್ಯರ ಜೀರ್ಣಾಂಗಗಳ ಎಲ್ಲ ಸೂಕ್ಷ್ಮಾಣು ಜೀವಿಗಳನ್ನು ನಿರ್ಮೂಲಿಸಿದ ಪ್ರಯೋಗವೊಂದನ್ನು ಅಮೆರಿಕದ ವಿಜ್ಞಾನಿಗಳು ವರದಿ ಮಾಡಿದ್ದಾರೆ.

ಸ್ವಯಂ ಸೇವಕರೊಡನೆ 13 ವಾರಗಳ ವರೆಗೆ ನಡೆಸಲಾದ ಈ ಪ್ರಯೋಗವು ಕರುಳಿನ ವಿವಿಧ ರೋಗಗಳ, ಆಮಶಂಕೆ ಮತ್ತು ಯಕೃತ್ ರೋಗದ ಚಿಕಿತ್ಸೆಗಳಿಗೆ ಮಾರ್ಗದರ್ಶನ ನೀಡಬಲ್ಲುದು ಎಂದು ಸಂಶೋಧಕರು ಹೇಳಿದರು.

ಅಮೆರಿಕದ ಪ್ರಾಯೋಗಿಕ ಜೀವಶಾಸ್ತ್ರ ಸಂಸ್ಥೆಗಳ ಫೆಡರೇಷನ್ನಿನ 50ನೆಯ ವಾರ್ಷಿಕ ಸಭೆ ನಡೆದಾಗ, ಕ್ಯಾಲಿಫೋರ್ನಿಯದ ಸನ್ನಿವೇಲ್‌ನ ಯುನೈಟೆಡ್ ಏರ್ ಕ್ರಾಫ್ಟ್ ಕಾರ್ಪೊರೇಷನ್ನಿನ ಟೆಕ್ನಾಲಜಿ ಕೇಂದ್ರದ ಜೀವ ರಸಾಯನ ವಿಜ್ಞಾನಿಗಳ ತಂಡವೊಂದು ಈ ಪ್ರಯೋಗವನ್ನು ವರದಿ ಮಾಡಿತು.

ಈ ದ್ರವ ಆಹಾರದಲ್ಲಿ ದೇಹಕ್ಕೆ ಬೇಕಾದ ಎಲ್ಲ ಪೋಷಕ ಅಂಶಗಳಿವೆ. ಯಾವ ಔಷಧಿಗಳನ್ನೂ ಸೇರಿಸಿಲ್ಲ ಎಂದೀ ಸಂಶೋಧಕರು ಹೇಳಿದರು.

ಜೀರ್ಣಾಂಗಗಳನ್ನು ಸ್ವಚ್ಛಗೊಳಿಸಿದುದಷ್ಟೇ ಅಲ್ಲದೆ ಈ ಆಹಾರವು ಸ್ವಯಂ ಸೇವಕರ ರಕ್ತದಲ್ಲಿನ ಕೊಲೆಸ್ಟರಾಲ್‌ನ ಪ್ರಮಾಣವನ್ನು ಕಡಿಮೆ ಮಾಡಿತು. ಮತ್ತು ರಕ್ತದ ಒತ್ತಡವನ್ನು ತಗ್ಗಿಸಿತು ಎಂದಿವರು ಹೇಳಿದರು. ಹೃದ್ರೋಗಿಗಳಲ್ಲಿ ಅಪಧಮನಿಯ ರೋಗಿಗಳಲ್ಲಿ ಕೊಲೆಸ್ಟರಾಲ್‌ನ ಸಾಂದ್ರೀಕರಣವು ಅಧಿಕವಾಗಿದ್ದುದು ಕಂಡು ಬಂದಿದೆ.

ಈ ದ್ರವ ಆಹಾರದಲ್ಲಿ, ದೇಹಕ್ಕೆ ಅವಶ್ಯವಿರುವ ಪ್ರೋಟೀನಿನ ನಿರ್ಮಾಣಕ್ಕೆ ಬೇಕಾಗಿರುವ 10 ಮುಖ್ಯ ಅಮಿನೋ ಆಮ್ಲಗಳು, ಇತರ 8 ಅಮಿನೋ ಆಮ್ಲಗಳು; ಸರಳ ಸ್ವರೂಪದ ಸಕ್ಕರೆ (ಗ್ಲುಕೋಸ್); ಎಲ್ಲ ಮುಖ್ಯ ವಿಟಮಿನ್‌ಗಳು ಮತ್ತು ಖನಿಜಗಳು ಮತ್ತು ಸ್ವಲ್ಪ ಕೊಬ್ಬು ಇವೆ. ಈ ದ್ರವ ಆಹಾರಕ್ಕೆ ಕೃತಕ ರೀತಿಯಲ್ಲಿ ಕಿತ್ತಳೆ ಹಣ್ಣಿನ ಪಾನೀಯದ ರುಚಿಯನ್ನು ಒದಗಿಸಲಾಗಿದೆ.

ಕ್ಯಾಲಿಫೋರ್ನಿಯದ ಒಂದು ಜೈಲಿನ ರಿಸೆಪ್ಷನ್ ಕೇಂದ್ರದಲ್ಲಿ, ಆರೋಗ್ಯಶಾಲಿಗಳಾಗಿರುವ ವಯಸ್ಕ ಸ್ವಯಂ ಸೇವಕರ ಮೇಲೆ 13 ವಾರಗಳ ವರೆಗೆ ಈ ಆಹಾರವನ್ನು ಪ್ರಯೋಗಿಸಲಾಯಿತು. ಅವರು ದಿನಕ್ಕೆ ನಾಲ್ಕು ಬಾರಿ, ತಮಗೆ ಬೇಕಾದಷ್ಟು ಪ್ರಮಾಣಗಳಲ್ಲಿ ಈ ದ್ರವವನ್ನು ಕುಡಿದರು.

ಇವರನ್ನು ಅನೇಕ ಬಾರಿ ಪರೀಕ್ಷೆ ಮಾಡಿ ಇವರ ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಿದೆಯೆಂದು ವರದಿ ಮಾಡಿದರು. ಈ ಅವಧಿಯ ಈ ಸ್ವಯಂ ಸೇವಕರು ಶೀತ ಅಥವಾ ಇತರ ಯಾವುದೇ ಅಂಟು ರೋಗಗಳಿಗೆ ಗುರಿಯಾಗಲಿಲ್ಲ.

ಕೆಲವು ಸ್ವಯಂ ಸೇವಕರಲ್ಲಿ, ಸಾಮಾನ್ಯವಾಗಿ ದೇಹದಲ್ಲಿರುವ ಎಲ್ಲ ರೀತಿಯ ಬೆಕ್ಟೀರಿಯಗಳು ಮತ್ತು ಇತರ ರೀತಿಯ ಪತ್ತೆ ಹಚ್ಚಬಹುದಾದ ಸೂಕ್ಷ್ಮಾಣುಗಳು ನಿರ್ಮೂಲವಾದವು. ಪುನಃ ಮುಂಚಿನ ಆಹಾರ ಸೇವನೆ ಪ್ರಾರಂಭವಾದಾಗ, ಬೆಕ್ಟೀರಿಯಗಳು ಬೇಗನೆ ಬೆಳೆಯಲಾರಂಭಿಸಿದವು ಎಂದೀ ಸಂಶೋಧಕರು ವರದಿ ಮಾಡಿದರು.

• ವೈದ್ಯರು ಮತ್ತು ಮನೋ ವೈದ್ಯರು

ನವಜಾತ ಶಿಶುವಿನ ಲೈಂಗಿಕ ನಿಯಂತ್ರಣ ಸಾಧ್ಯವೆ?

ಗಂಡು, ಹೆಣ್ಣು ಮಕ್ಕಳ ಜನನ ಪ್ರಮಾಣವನ್ನು ನಿಯಂತ್ರಿಸುವುದು ಸಾಧ್ಯವೆಂದು ಸೋವಿಯೆತ್ ವಿಜ್ಞಾನಿ ವಿ. ಜೆವ್ಡೊಕ್ಯಾನ್‌ರವರು ಅಭಿಪ್ರಾಯ ಪಡುತ್ತಾರೆ. ಪ್ರಕೃತಿಯು ಈ ಕಾರ್ಯವನ್ನು 'ವಿಶಿಷ್ಟ ಯಾಂತ್ರಿಕ ವ್ಯವಸ್ಥೆಯ' ಮೂಲಕ ನಡೆಸುತ್ತದೆಯೆಂದೂ, ಅದು ವಯಸ್ಕರಲ್ಲಿರುವ ಸ್ತ್ರೀ ಪುರುಷ ಪ್ರಮಾಣವನ್ನು ಅವಲಂಬಿಸಿ ಕೊಂಡಿರುತ್ತದೆಯೆಂದೂ ಆಧಾರ ಕಲ್ಪನೆಯನ್ನು ಅವರು ಮಂಡಿಸಿದ್ದಾರೆ.

ವಯಸ್ಕರ ಮಧ್ಯೆ ಗಂಡು–ಹೆಣ್ಣುಗಳ ಪರಮಾಧಿಕ ಪ್ರಮಾಣದಲ್ಲಿ ಹೆಚ್ಚು–ಕಡಿಮೆ ಯಾದಾಗ ಈ ಯಾಂತ್ರಿಕ ವ್ಯವಸ್ಥೆಯು ಕಾರ್ಯ ಪ್ರವೃತ್ತವಾಗುತ್ತದೆಯೆಂದೂ, ಕಟ್ಟಕಡೆಗೆ ಪೂರ್ವಸ್ಥಿತಿಯನ್ನು ಅದು ಅಸ್ತಿತ್ವಕ್ಕೆ ತರುತ್ತದೆಯೆಂದೂ ಅವರು ತಿಳಿಸುತ್ತಾರೆ. ಈ ವಾದವನ್ನು ಸಮರ್ಥಿಸಲು ಅವರು ಜಗತ್ತಿನ ಜನಸಂಖ್ಯೆಯ ವೈದ್ಯಕೀಯ ಅಂಕಿ—ಅಂಶಗಳ ದಾಖಲೆಯನ್ನು ನೀಡುತ್ತಾರೆ. "ಯುದ್ಧ ಕಾಲದಲ್ಲಿ ಗಂಡು—ಹೆಣ್ಣು ಮಗುವಿನ ಜನ್ಮವು ವಯಸ್ಕರ ವಯಸ್ಸನ್ನು ಅವಲಂಬಿಸಿಕೊಂಡಿದ್ದುದು ಈ ಆಧಾರ ಕಲ್ಪನೆಗೆ ನಿದರ್ಶನವನ್ನೊದಗಿಸಿದೆಯೆಂದು ಅವರು ಹೇಳುತ್ತಾರೆ. ಗಂಡು ಮಕ್ಕಳ ಅಥವಾ ಹೆಣ್ಣು ಮಕ್ಕಳ ಲೆಕ್ಕದಲ್ಲಿ ಪರಿವಾರಗಳ ಸಂಖ್ಯೆಯನ್ನು ಹೋಲಿಸಿದ ಪಕ್ಷದಲ್ಲಿ, ಕೇವಲ ಗಂಡು ಮಕ್ಕಳು ಅಥವಾ ಹೆಚ್ಚು ಮಕ್ಕಳು ಮಾತ್ರವೇ ಇದ್ದ ಪರಿವಾರಗಳು ಸಮ ಸಂಖ್ಯೆಯ ಗಂಡು ಹೆಣ್ಣು ಮಕ್ಕಳಿದ್ದ ಪರಿವಾರಗಳಿಗಿಂತಲೂ ಹೆಚ್ಚಾಗಿವೆಯೆಂದು ಕಂಡು ಬಂದಿದೆ. ಇದರ ಜತೆಗೆ ಅಂಕಿ—ಅಂಶಗಳು ಇನ್ನೊಂದು ವಿಚಿತ್ರ ಪರಿಣಾಮವನ್ನು ಸೂಚಿಸಿವೆ.

ಯುದ್ಧ ಕಾಲದಲ್ಲಿ ಗಂಡು ಮಕ್ಕಳು ಹೆಚ್ಚಾಗಿ ಹುಟ್ಟುತ್ತಾರೆಂಬ ನಂಬಿಕೆ ನಿಜವಾದುದು. ಪ್ರಥಮ ಜಾಗತಿಕ ಯುದ್ಧ ಕಾಲಾವಧಿಯಲ್ಲಿ 1ರಿಂದ 2.5 ಶತಾಂಶದಷ್ಟು ಹೆಚ್ಚು ಗಂಡು ಮಕ್ಕಳು ಯುದ್ಧ ನಿರತ ಯೂರೋಪಿಯನ್ ದೇಶಗಳಲ್ಲಿ ಹುಟ್ಟಿದುವೆಂದು ಕಂಡು ಬಂದಿದೆ. ಎರಡನೆಯ ಯುದ್ಧ ಕಾಲಾವಧಿಯಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳಲ್ಲಿಯೂ ಸಹ ಹೀಗೆಯೇ ಆಯಿತು.

ಇನ್ನೊಂದು ವಿಷಯ: ತಾಯಿಯ ವಯಸ್ಸು ಹೆಚ್ಚಾದಷ್ಟೂ, ಆಕೆಗೆ ಗಂಡು ಮಗು ಹುಟ್ಟುವುದು ಅಪರೂಪ. ಯುವತಿಯರಿಗೆ ಹುಟ್ಟಿದ ಮಕ್ಕಳಲ್ಲಿ ಹೆಣ್ಣು—ಗಂಡುಗಳ ಪ್ರಮಾಣವು 100:120 ಆಗಿರುತ್ತದೆಯೆಂದೂ, ವಯಸ್ಸಾದ ಮಹಿಳೆಯರಲ್ಲಿ ಈ ಪ್ರಮಾಣವು 100:90 ಆಗಿರುತ್ತದೆಯೆಂದೂ ಅಂಕಿ—ಅಂಶಗಳಿಂದ ವ್ಯಕ್ತಪಡುತ್ತದೆ. ತಾಯಂದಿರಿಗೆ ಗಂಡು ಮಕ್ಕಳೇ ಮೊದಲು ಹುಟ್ಟುವುದು ಹೆಚ್ಚೆಂದೂ, ವಯಸ್ಸಾದಂತೆ ಈ ಪ್ರಮಾಣ ಕಡಿಮೆಯಾಗುತ್ತದೆಯೆಂದೂ ಕಂಡು ಬಂದಿದೆ.

ಪ್ರಕೃತಿಯಲ್ಲಿರುವ "ವಿಶಿಷ್ಟ ಯಾಂತ್ರಿಕ ವ್ಯವಸ್ಥೆಯು" ಕಾಲಾನುಕ್ರಮದಲ್ಲಿ ಲೈಂಗಿಕ ಸಮಾನತೆಯನ್ನು ಉಂಟು ಮಾಡುತ್ತದೆಯೆಂದು ಸೋವಿಯೆತ್ ತಜ್ಞರು ಈ ಸಮೀಕ್ಷೆಗಳ ಆಧಾರದ ಮೇಲೆ ತೀರ್ಮಾನಿಸಿದ್ದಾರೆ. ಈ ಬಗ್ಗೆ ಹೆಚ್ಚು ಸಂಶೋಧನೆಯನ್ನು ನಡೆಸುವುದರಿಂದ ಶಿಶು ಜನನದ ಲೈಂಗಿಕ ಪ್ರಮಾಣದ ಕೃತಕ ನಿಯಂತ್ರಣ ಸಮಸ್ಯೆಯನ್ನು ಬಗೆ ಹರಿಸಬಹುದೆಂದು ಅವರು ತಿಳಿಸುತ್ತಾರೆ.

ರಕ್ತರಂಜಿತ ಇತಿಹಾಸದ ಒಂದು ಪುಟ

ವೀರ ಬೈರಾಗಿ!

ಕೆ. ಎನ್. ಭಟ್, ಕಿರಾಡಿಪಾಲ್.

ಸಿಖ್ಖರ ಗುರು ಗೋವಿಂದ ಸಿಂಹರು ದಕ್ಷಿಣ ಭಾರತದ ಯಾತ್ರೆಗಾಗಿ ಹೊರಟಿದ್ದರು. ಈ ಪ್ರವಾಸ ಕಾಲದಲ್ಲಿ ಅವರಿಗೆ ತಪಸ್ವಿಯಂತೆ ತೋರುತ್ತಿದ್ದ ವೀರ ತರುಣನೋರ್ವನ ಪರಿಚಯವಾಯಿತು. ತಪಸ್ವಿಯಂತೆ ತೋರುತ್ತಿದ್ದ ಆ ತರುಣನು ಮೂಲತಃ ತಪಸ್ವಿಯಾಗಿರಲಿಲ್ಲ. ಧರ್ಮ ರಕ್ಷಣೆಗಾಗಿ ಕೈಯ್ಯಲ್ಲಿ ಕತ್ತಿ ಹಿಡಿದು ಹೋರಾಡಬಲ್ಲ ಧೀರ ತರುಣನಾಗಿದ್ದ. ಆತನು ಯಾವುದೋ ವೈರಾಗ್ಯ ಭಾವದಿಂದ ಕಾವೀ ವಸ್ತ್ರಧಾರಿಯಾಗಿದ್ದ. ಈ ತರುಣನ ಪರಾಕ್ರಮವೆಂದರೆ, ಆತ ಇಟ್ಟ ಗುರಿ, ಬಿಟ್ಟ ಬಾಣ ಎಂದೂ ಹುಸಿಯಾಗುತ್ತಿರಲಿಲ್ಲ. ಇಂತಹ ವೀರ ತರುಣನ ಪರಿಚಯವು ಮುಂದೆ ಗುರು ಗೋವಿಂದರನ್ನು ಸ್ನೇಹದ ಕಟ್ಟಿನಲ್ಲಿ ಬಿಗಿಯಿತು. ಗುರುಗಳಿಗೆ ಈತ ಪರಮ ಸ್ನೇಹಿತನಾದನು.

ಧರ್ಮ ಗ್ಲಾನಿಯುಂಟಾಗಿದ್ದ ಆ ಕಾಲದಲ್ಲಿ ಇಂತಹ ವೀರ ತರುಣನು ಕಾವೀ ವಸ್ತ್ರಧಾರಿಯಾಗಿ ಅರಣ್ಯ ಸಂಚಾರಿಯಾಗಿರುವುದು, ಗುರು ಗೋವಿಂದ ಸಿಂಹರಿಗೆ ಸರಿದೋರಲಿಲ್ಲ. ಆಗ ಗೋವಿಂದ ಸಿಂಹರು ಆ ತರುಣನಿಗೆ—'ಧರ್ಮ ರಕ್ಷಣೆಯ ಕಾರ್ಯದಲ್ಲಿ ಸಹಕರಿಸುತ್ತ ನೀನು ಸದಾ ನನಗೆ ಜೊತೆಗಾರನಾಗಿ ಇರಬೇಕು' ಎಂದು ಹೇಳಿಕೊಂಡರು. ಆಗ ಆ ತರುಣನು ಗುರುಗಳ ಮಾತಿಗೆ ಒಪ್ಪಿ—'ನೀನು ಸಿಖ್ಖರಿಗೆ ಗುರುವಾಗಿದ್ದರೂ, ನನಗೆ ಸ್ನೇಹಿತನಾಗಿರುವುದರಿಂದ, ನಿನ್ನ ಇಚ್ಛೆಯಂತೆ ನಡೆದುಕೊಂಡು, ನಿನ್ನ ಕಾರ್ಯದಲ್ಲಿ ಸಹಕರಿಸುತ್ತ ಇರುತ್ತೇನೆ ಎಂಬುದಾಗಿ ಮಾತುಕೊಟ್ಟನು. ವೀರನ ಈ ನಿರ್ಧಾರದಿಂದ ಸಂತೋಷಗೊಂಡ ಗುರು ಗೋವಿಂದ ಸಿಂಹರು, ತಾನು ಹಿಡಿಯುತ್ತಿದ್ದ ಖಡ್ಗವನ್ನೇ ಆ ತರುಣನಿಗೆ ಕಾಣಿಕೆಯಾಗಿ ಕೊಟ್ಟು ಆತನ ಬಗೆಗೆ ತನಗಿದ್ದ ಪ್ರೀತಿ ವಿಶ್ವಾಸಗಳನ್ನು ಪ್ರಕಟಿಸಿದರು. ಇದಾದ ಬಳಿಕ ಗುರುಗಳ ಆಜ್ಞೆಯಂತೆ ಆ ತರುಣನು ಪಂಜಾಬಿಗೆ ಹೊರಟು ಹೋದನು.

'ವೀರ ಬೈರಾಗಿ' ಎಂಬ ಹೆಸರಿನಿಂದ ಪ್ರಸಿದ್ಧನಾದ ಈ ತರುಣನು ಹಿಂದೂ ಧರ್ಮ ಸಂಸ್ಕೃತಿಗಳ ಉದ್ಧಾರಕ್ಕಾಗಿ ಸಂಘಟನೆಯ ಮಹಾ ಕಾರ್ಯದಲ್ಲಿ ತೊಡಗಿದನು. ಈ ವರ್ತಮಾನ ರಾಷ್ಟ್ರದ ನಾಲ್ದೆಸೆಗಳಿಗೂ ಹಬ್ಬಿತು.

ಭಾರತವು ಮುಸ್ಲಿಂ ಆಡಳಿತಗೊಳಪಟ್ಟಿದ್ದ ಆ ಕಾಲದಲ್ಲಿ ಹಿಂದುಗಳ ಸಂಘಟನೆಯೆಂದರೆ, ಅದು ಮುಸ್ಲಿಂ ಆಡಳಿತಕ್ಕೆ ಕುಠಾರಪ್ರಾಯವಾಗಿತ್ತು. ಆ ಕಾಲದಲ್ಲಿ ಸಾಮ್ರಾಟ್ ಬಹದ್ದೂರ್ ಷಹಾ ದಿಲ್ಲಿಯ ಸಿಂಹಾಸನದಲ್ಲಿದ್ದನು. ಜಟ್ಟಿಯಂತೆ ತೋರುತ್ತಿದ್ದ ಮಹಾ ಬಲಾಢ್ಯನೂ ಸಾಹಸಿಯೂ ಆದ ವೀರ ಬೈರಾಗಿಯ ಸಮಾಚಾರವನ್ನು ಕೇಳಿ ತಿಳಿದ ಬಾದಷಹನು ಕಿಡಿಕಿಡಿಯಾದನು. ಕೂಡಲೇ ಬಹದ್ದೂರ್ ಷಹನು ಭಾರೀ ಸೈನ್ಯದೊಡನೆ ಬೈರಾಗಿಯನ್ನು ಸೆರೆಹಿಡಿಯಲು ಸ್ವತಹ ಪಂಜಾಬಿಗೆ ಹೊರಟನು. ಬಾದಷಾಹನ ಈ ಅನಿರೀಕ್ಷಿತವಾದ ಧಾಳಿಯಿಂದಾಗಿ ಯಾವ ಮುನ್ಸೂಚನೆಯೂ ತಿಳಿಯದುದರಿಂದ ವೀರ ಬೈರಾಗಿಯೂ ಆತನ ಅನೇಕ ಅನುಯಾಯಿಗಳೂ ಬಾದಷಾಹನ ಕೈಸೆರೆಯಾದರು. ಮುಖ್ಯ ಕೈದಿಯಾಗಿದ್ದ ವೀರ ಬೈರಾಗಿಯನ್ನು ಸಂಕಲೆಗಳಿಂದ ಜಡಿದು ಕಟ್ಟಿ ತನ್ನ ಆನೆಯ ಮೇಲೆಯೇ ಕೂರಿಸಿಕೊಂಡು ಸ್ವತಹ ಬಾದಶಾಹನೇ ದಿಲ್ಲಿಗೆ ಹೊರಟನು. ಬೈರಾಗಿಯ ಅನುಯಾಯಿಗಳಿಗೆ ಸಾಮಾನ್ಯವಾದ ಕೈಕೋಳಗಳನ್ನು ತೊಡಿಸಲಾಗಿತ್ತು.

ಸುತ್ತಲೂ ಬಾದಶಾಹನ ಸೈನ್ಯ! ಅದರ ನಡುವೆ ವೀರ ಬೈರಾಗಿಯನ್ನು ಹೊತ್ತ ಬಾದಶಹನ ಆನೆ ಹೋಗುತ್ತಿದ್ದ ಆ ವೇಳೆ ಅಗಾಧ ಶಕ್ತಿ ಸಂಪನ್ನನಾದ ವೀರ ಬೈರಾಗಿಯು; ಕ್ಷಣಾರ್ಧದಲ್ಲೇ ತನ್ನನ್ನು ಬಿಗಿದಿದ್ದ ಸಂಕಲೆಗಳನ್ನು ಕಡಿದೊಗೆದು ಬಾದಶಾಹನು ಆನೆಯ ಮೇಲೆ ಇದ್ದಂತೆಯೇ ಕೆಳಗೆ ಹಾರಿ, ತನ್ನೆದುರಿಗಿದ್ದ ಸೈನಿಕನೋರ್ವನನ್ನು ಕುದುರೆಯಿಂದುರುಳಿಸಿ, ಆತನ ಖಡ್ಗವನ್ನೆತ್ತಿಕೊಂಡು, ಬೀಸುತ್ತ ಮಹಾ ಸಾಹಸದಿಂದ ನೂರಾರು ಮಂದಿ ಸೈನಿಕರ ಶಿರಚ್ಛೇದನಗೈದನು. ಇದೆಲ್ಲವೂ ಒಂದು ಕ್ಷಣದಲ್ಲೆಂಬಂತೆ ನಡೆದು ಹೋಯಿತು. ಇಂತು ಮಹಾ ಸಾಹಸವನ್ನು ತೋರಿಸಿದ ವೀರ ಬೈರಾಗಿಗೆ ಎದುರಾಗಲಾರದೆ, ಬಾದಶಹನೂ ಅಳಿದುಳಿದ ಸೈನಿಕರೂ ದಿಲ್ಲಿಗೆ ಓಡಿ ಹೋಗುತ್ತಿರಲು, ಬಂದನ ಮುಕ್ತರಾದ ವೀರ ಬೈರಾಗಿಯ ಅನುಯಾಯಿಗಳೂ ಸಹ ಬಾದಶಹನ ಸೈನ್ಯವನ್ನು ಸಾಧ್ಯವಾದಷ್ಟು ಓಡಿಸಿದರು. ಕೈಗೆ ಸಿಕ್ಕಿದ ವೀರ ಬೈರಾಗಿಯನು ಬಾದಶಹನಿಂದ ಕೊಂಡೊಯ್ಯಲಾಗಲಿಲ್ಲ! ಹೀಗೆ ಅದ್ಭುತ ವಿಜಯವನ್ನು ಪಡೆದ ವೀರ ಬೈರಾಗಿಯು ತನ್ನ ಸಹಚರರೊಡನೆ ಪಂಜಾಬಿಗೆ ಮರಳಿದನು. ವೀರ ಬೈರಾಗಿಯು ಈ ಸಾಹಸಕಾ

(ಇಪ್ಪತ್ತೆರಡನೇ ಪುಟ ನೋಡಿರಿ)

ಎಷ್ಟೋ ಜನ ಹೀಗೆ ಮಾಡುತ್ತಾರೆ....

ನೀವೂ ಏಕೆ ಹಾಗೆ ಮಾಡಬಾರದು?

ವಿ ಬ್ಯಾ ಹ ಉ

ಆ ಬ ಗ *

ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: "ವಿಜಯಾ ಬ್ಯಾಂಕ್ ಬಿಲ್ಡಿಂಗ್"

ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು-3

ಸೇವಿಂಗ್ಸ್ ಲೆಕ್ಕದ ಮೇಲೆ ಶೇಕಡ 4½ ಮತ್ತು ಫಿಕ್ಸೆಡ್ ಡಿಪಾಸಿಟ್ಟುಗಳ ಮೇಲೆ ಶೇಕಡ 8 ರವರೆಗೆ

ಮೈಸೂರು, ಕೇರಳ, ಮದ್ರಾಸು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ 57 ಶಾಖೆಗಳು

ಮೈಸೂರು ರಾಜ್ಯದಲ್ಲಿಯ ಶಾಖೆಗಳು:

ಉಡುಪಿ— ಫೋನ್: 49 * ಬೆಂಗಳೂರು— 1. ಮಲ್ಲೇಶ್ವರಂ 2. ಅಲಸೂರು 3. ಕೆಂಪೇಗೌಡ ರೋಡ್ * ಮಂಗಳೂರು— 1. ಲೈಟ್ ಹೌಸ್ ಹಿಲ್ ರೋಡ್, 2. ಹಂಪನಕಟ್ಟೆ * ಭಟ್ಕಳ * ಬ್ರಹ್ಮಾವರ * ಬೈಂದೂರು * ಚಾಮರಾಜನಗರ * ಚನ್ನಪಟ್ಣ * ಕುಂದಾಪುರ * ಧಾರವಾಡ * ದೊಡ್ಡಬಳ್ಳಾಪುರ * ಗದಗ * ಗೋಣಿಕೊಪ್ಪಲ * ಹುಬ್ಬಳ್ಳಿ * ಕಾರ್ಕಳ * ಕನಕಪುರ * ಕಾಪು * ಕೋಲಾರ * ಕೊಳ್ಳೆಗಾಲ್ * ಕೃಷ್ಣರಾಜಪೇಟೆ * ಮದ್ದೂರು * ಮಾಗಡಿ * ಮಳವಳ್ಳಿ * ಮಡಿಕೇರಿ * ಮೂಡಿಗೆರೆ * ಮೈಸೂರು * ನಂಜನಗೂಡು * ನೆಲಮಂಗಲ * ಪಾಂಡವಪುರ * ಪುತ್ತೂರು * ರಾಮನಗರ * ಸಿದ್ಧಾಪುರ

ಪರಿಚಯ

ಶ್ರೀ ಚೈತನ್ಯ ಮಹಾಪ್ರಭು

ಬರೆದವರು

,, ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ).

ವಂಗ ದೇಶದ ನದಿಯಾ ಜಿಲ್ಲೆಯ ನವದ್ವೀಪದ ರಾಜ್ಯಪಾಲಕನಾದ ಮುಸ್ಲಿಮ ಚಾಂದಕಾಜಿಯು ಸಿಟ್ಟಿನಿಂದ ಗಲಿಬಿಲಿ ಹೊಂದಿದ್ದನು. ಪ್ರಜೆಗಳು ಅವನನ್ನು ಲಕ್ಷಿಸುತ್ತಿರಲಿಲ್ಲ. ಹಲವು ಸಹಸ್ರ ಜನರು ಅವನ ಅರಮನೆ ಮುಂದೆ ಬಂದು ನಿಂತಿದ್ದರು. ಕೀರ್ತನೆಗಳನ್ನು ಹಾಡುತ್ತಿದ್ದರು. ಪ್ರತಿಯೊಬ್ಬನ ಹಸ್ತದಲ್ಲಿ ಒಂದು ದೀಪವೂ, ಒಂದು ಹೂವಮಾಲೆಯೂ ಇದ್ದುವು. ರಾಧಾಕೃಷ್ಣನ ಚರಿತವನ್ನು ಸೊಗಸಾಗಿ ಹಾಡುತ್ತಿದ್ದರು. ಆ ಗುಂಪಿನ ನಡುವೆ ಆಜಾನುಬಾಹು ಸುಂದರ ವ್ಯಕ್ತಿಯೊಬ್ಬನ. ಭಜನೆ ಮಾಡುತ್ತಿದ್ದನು. ಭಜನೆ ಮಾಡುವಾಗ ಕುಣಿಯುತ್ತಿದ್ದನು. ಅವನ ಹಿಂದೆ ಹಲವರು ಭಜನೆ ಮಾಡಿ ಕುಣಿಯುತ್ತಿದ್ದರು. ಎಲ್ಲರೂ ಸಂತೋಷಚಿತ್ತದಿಂದ ಹಾಡುತ್ತಿದ್ದರು, ಸುಂದರ ವ್ಯಕ್ತಿಯ ದಿವ್ಯ ಮುಖದಲ್ಲಿ ಕಾಂತಿಯು ಬೀರುತ್ತಿತ್ತು. ಚಾಂದಕಾಜಿಯು ಕೀರ್ತನೆಗಳಿಗೆ ಬಹಿಷ್ಕಾರ ಹಾಕಿದ್ದನು.

ಕಾಜಿಯು ಗುಂಪಿನ ಎದುರು ಬಂದು ನಿಂತನು. ಸುಂದರ ವ್ಯಕ್ತಿಯನ್ನು ನೋಡಿದೊಡನೆ, ಆತನ ಶಕ್ತಿಯು ಕುಗ್ಗಿ, ಆ ವ್ಯಕ್ತಿಗೆ ನಮಸ್ಕರಿಸಿದನು. ಅನಂತರ ಆ ವ್ಯಕ್ತಿಯ ಪಾದದಡಿಗೆ ಸಾಷ್ಟಾಂಗವೆರಗಿದನು. ಗುಂಪಿನಲ್ಲಿದ್ದ ಸಕಲರಿಗೂ ಆನಂದವಾಯಿತು. ಸುಂದರ ಪುರುಷನು ಚಾಂದಕಾಜಿಯನ್ನು ಅಪ್ಪಿ ಹಿಡಿದನು. ಕಾಜಿಯೂ ಭಜನೆ ಮಾಡಿ ಕುಣಿಯಲಾರಂಭಿಸಿದನು.

ಈ ಸುಂದರ ವ್ಯಕ್ತಿಯು ಯಾರು? ಈ ತೇಜೋನಿಧಿ ಪುರುಷೋತ್ತಮನು ಯಾರು? ಇವನು ನಿಮಾಯಿ ಪಂಡಿತನೆಂಬ ನಾಮಧೇಯದ ಶ್ರೀಕೃಷ್ಣ ಭಕ್ತನು. ಆತನನ್ನು ವಂಗ ದೇಶದ ಹಿಂದುಗಳು ಮಹಾತ್ಮಾ ಗೌರಾಂಗನೆಂದೂ ಚೈತನ್ಯ ಮಹಾಪ್ರಭು ಎಂದೂ ಸ್ತುತಿಸುತ್ತಿದ್ದರು. ಈತನು ಪ್ರಾಯದಲ್ಲಿ ಸಣ್ಣವನು. ಮಹಾ ಕುಲೀನನು, ಸುಂದರನು, ವಿವೇಕಿಯು, ಮಾತ್ರವಲ್ಲ ಸಂಸ್ಕೃತ ಭಾಷೆಯಲ್ಲಿ ಪಾರಂಗತನೂ ಆಗಿದ್ದನು. ಭಿಕ್ಷುಕನಂತೆ ತೆಂಗಿನ ಗೆರಟೆಯನ್ನೇ ಹಸ್ತದಲ್ಲಿ ಧರಿಸಿ ಇತರರು ಕೊಟ್ಟ ಆಹಾರದಿಂದ ದೇಹ ರಕ್ಷಣೆ ಮಾಡಿಕೊಳ್ಳುತ್ತಿದ್ದನು. ಹರಿದು ಹೋದ ಕಾಷಾಯವೇ ಅವನ ವಸ್ತ್ರಭೋಗ. ಸದಾಕಾಲ ಶ್ರೀಕೃಷ್ಣ ನಾಮವನ್ನು ಸುಸ್ವರದಿಂದ ಹಾಡುತ್ತಿದ್ದನು. ಆತನು ದರಿದ್ರನಾಗಿ ಬಾಳಿದರೂ, ಅನೇಕಾನೇಕ ಶ್ರೀಮಂತರು ಅವನ ದಾಸರಾಗಿದ್ದರು. ಅವನನ್ನು ಅವತಾರ ಪುರುಷನೆಂದು ತಿಳಿದಿದ್ದರು' ಆತನ ಶಿಷ್ಯರಲ್ಲಿ ಗೀತೆಯ ಭಕ್ತಿಯೋಗವನ್ನು ಆಗಾಗ್ಗೆ ವಿವರಿಸುವ ಕ್ರಮವಿತ್ತು. ಪ್ರೇಮವೇ ಪರಮಾತ್ಮನೆಂದು ಅವನ ಸಿದ್ಧಾಂತ. ಸಕಲರನ್ನು ನಿರ್ಮಲ ಚಿತ್ತದಿಂದ ಪ್ರೀತಿಸುತ್ತಿದ್ದನು.

ಹದಿನೈದನೆಯ ಶತಮಾನದಲ್ಲಿ ನವದ್ವೀಪದಲ್ಲಿ ಹಲವು ಪ್ರಸಿದ್ಧವಾದ ಸಂಸ್ಕೃತ ಪಾಠ ಶಾಲೆಗಳಿದ್ದವು. ಕಲ್ಕತ್ತದಿಂದ ೬೦ ಮೈಲು ದೂರವಿರುವ ಪವಿತ್ರವಾದ ಭಾಗೀರಥಿ ನದಿಯ ತೀರದಲ್ಲಿ ಈ ನಗರವು ಶೋಭಿಸುತ್ತದೆ.

ಆ ನಗರದ ಮಹಾ ವಿದ್ವಾಂಸನಾದ ನೀಲಾಂಬರ ಚಕ್ರವರ್ತಿ ಎಂಬವನಿಗೆ ಶಚಿದೇವಿ ಎಂಬ ಹೆಸರಿನ ಬಹುರೂಪವತಿಯಾದ ಕುಮಾರಿ ಇದ್ದಳು. ಆಕೆಯನ್ನು ಜಗನ್ನಾಥಮಿಶ್ರನೆನ್ನುವ ವಿದ್ವಾಂಸನೊಬ್ಬನು ವಿವಾಹವಾದನು. ಈ ದಂಪತಿಗಳಿಗೆ ಹಲವು ಹೆಣ್ಣು ಶಿಶುಗಳು ಜನಿಸಿ ಆ ಶಿಶುಗಳೆಲ್ಲ ಮೃತ್ಯುವಶವಾದವು. ಅನಂತರ ಆ ದಂಪತಿಗಳಲ್ಲಿ ಒಬ್ಬ ಕುವರನು ಜನಿಸಿದನು. ಅವನನ್ನು ವಿಶ್ವರೂಪನೆಂದು ನಾಮಕರಣ ಮಾಡಿದರು. ೧೪-೨-೧೪೮೬ರಂದು ಶಚಿಯು ಇನ್ನೊಂದು ಗಂಡು ಶಿಶುವನ್ನು ಹೆತ್ತಳು. ಆ ದಿನ ಫಾಲ್ಗುಣ ಮಾಸದ ಹುಣ್ಣಿಮೆಯಾಗಿತ್ತು. ಆ ಶಿಶುವೇ ಚೈತನ್ಯನು. ಮಾತೆಯು ಆತನನ್ನು ನಿಮಾಯಿಯೆಂದು ಕರೆದಳು ನಿಮಾಯಿ ಎಂದರೆ ಅರ್ಧವ್ಯಕ್ತನು ಎಂದು ಗೂಢಾರ್ಥ ಮಾಡಬಹುದು. ಸ್ವರ್ಣದಂತೆ ಶೋಭಿಸುವ ಈ ಸುಂದರ ಶಿಶುವನ್ನು ಊರಿನವರು ಗೌರಾಂಗನೆಂದೂ, ಗೌರಹರಿಯೆಂದೂ ಕರೆಯಲಾರಂಭಿಸಿದರು. ಉದ್ದ ಶರೀರದವನಾಗಿ, ನೋಡಲಿಕ್ಕೆ ಗೌರಾಂಗನು ಬಹಳ ರೂಪವಂತನಾಗಿದ್ದನು. ಕಣ್ಣುಗಳು ಕಮಲ ಪುಷ್ಪದ ಎಸಲುಗಳಂತಿದ್ದವು. ಪ್ರತಿಯೊಬ್ಬರೂ ಶಿಶುವನ್ನು ಮುದ್ದಿಸುತ್ತಿದ್ದರು. ಹಾಗೆ ಮುದ್ದಿಸುವಾಗ, ಮುದ್ದಿಸುವವರಿಗೆ ರೋಮಾಂಚನವಾಗುತ್ತಿತ್ತು. ಆತನು ಶ್ರೀ ದಾಸಕ್ತನಾದುದರಿಂದ ಆತನನ್ನು ಕೆಲವರು ಬಾಲಗೋಪಾಲನೆಂದು ಕರೆಯುತಿದ್ದರು.

ಆತನು ಅಳುತಿದ್ದಾಗ, ತಾಯಿಯು "ಹರಿ, ಹರಿ," ಎಂದೊಡನೆ ಅಳುವುದನ್ನು ನಿಲ್ಲಿಸಿ ನಗುತ್ತಿದ್ದನು. ಹೃತ್ಯದಲ್ಲಿ ವಿಶಾದನು. ಆತನು ಕುಣಿಯುವಾಗ ಪ್ರೇಕ್ಷಕರು ಆನಂದ ಭಾಷ್ಪವನ್ನು ಸುರಿಸುತಿದ್ದರು. ಚಿಕ್ಕಂದಿನಲ್ಲಿ ಒಬ್ಬಂಟಿಗನಾಗಿ ನದೀತೀರದ ವರೆಗೆ ಹರಿಹರಿದು ಹೋಗುತಿದ್ದ ಭಾಗೀರಥಿ ತೀರವೆಂದರೆ ಆತನಿಗೆ ವಿಶೇಷ ಪ್ರೀತಿಯು. ತಾಯಿಯು ಯಾವಾಗಲೂ ಅವನನ್ನು ಹಿಂಬಾಲಿಸಿಕೊಂಡೇ ಇದ್ದಳು. ಆಕೆಯು ಮಹಾ ಪತಿವ್ರತೆಯು. ಸಾವಿತ್ರಿ ದೇವಿಗೆ ಆಕೆಯನ್ನು ಹೋಲಿಸಬಹುದು. ಒಂದು ದಿನ ತಾಯ್ತಂದೆಯರು ಹೊರಗೆ ಹೋದ ವೇಳೆ ನಿಮಾಯಿಯು ಮನೆಯಲ್ಲಿ ಒಂದು ನಾಗರ ಹಾವನ್ನು ಕಂಡನು. ನಿಮಾಯಿಯು ಅದರ ಬಳಿ ನಿಂತು ಹಾಡಲಾರಂಭಿಸಿದಾಗ ಅದು ಹೆಡೆಯನ್ನು ಅಲುಗಾಡಿಸಲಾರಂಭಿಸಿತು. ಆ ಸಮಯ ಅವನ ತಂದೆಯು ಅಲ್ಲಿ ಬಂದನು. ಅವನಿಗೆ ವಿಶೇಷ ಗಾಬರಿಯಾಯಿತು. ತಾಯಿಯೂ ಬಂದಳು. ತಾಯಿ ಬಂದೊಡನೆ, ಆ ಸರ್ಪವು ಅಲ್ಲಿಂದ ಪಲಾಯನವಾಯಿತು.

ಆ ಊರಿನಲ್ಲಿ ಆ ಕಾಲದಲ್ಲಿ ಮುರಾರಿ ಗುಪ್ತನೆಂಬ ವೈದ್ಯನೊಬ್ಬನಿದ್ದನು. ಆವನು ಯೋಗ ವಾಶಿಷ್ಠವನ್ನು ಚೆನ್ನಾಗಿ ಮನನ ಮಾಡಿದ್ದನು. ಆತನು ತತ್ವಜ್ಞಾನಿಯೂ ಆಗಿದ್ದನು. ಒಂದು ದಿನ ಆತನು ನಿಮಾಯಿಯ ಪಿತನಲ್ಲಿ ತತ್ವವನ್ನು ವಿವರಿಸುತ್ತಿದ್ದಾಗ, ನಿಮಾಯಿಯು ಅವನಂತೆ ನಟಿಸಿ ಹಾಸ್ಯ ಮಾಡಿದನು.

(ಹನ್ನೊಂದನೇ ಪುಟ ನೋಡಿರಿ)

ಜಾನುವಾರು ಮತ್ತು ಕೋಳಿಗಳ
ಆರೋಗ್ಯಕರ ಬೆಳವಣಿಗೆಗೆ

ಹಾಲು ನೀಡುವ ಆರೋಗ್ಯದ ದನ
ಎಂದರೆ ಹೆಚ್ಚು ಹಾಲು
ಆವುಗಳಿಗೆ

MILKCAN BRAND

'ಮಿಲ್ಕ್ ಕ್ಯಾನ್'
ಗುರುತಿನ ಜಾನುವಾರು
ಆಹಾರವನ್ನು ಕೊಡಿರಿ.

ಹೆಚ್ಚಿನ ಮೊಟ್ಟೆಗಳು—
ಕಡಿಮೆ ಮರಣ ಮತ್ತು ಇನ್ನೂ
ಶೀಘ್ರ ಬೆಳವಣಿಗೆಗೆ



EGGBASKET BRAND

'ಎಗ್ ಬಾಸ್ಕೆಟ್'
ಗುರುತಿನ ಕೋಳಿಗಳ ಆಹಾರ

ಜೀವಸತ್ವಗಳು, ಲೋಹಗಳು ಮತ್ತು ಎಂಟಿಬಯೊಟಿಕ್ಸ್‌ಗಳಿಂದೊಡಗೂಡಿದೆ.
ನಮ್ಮ ವೈಜ್ಞಾನಿಕ ಆಹಾರ ಕಾರ್ಯಕ್ರಮ ಮತ್ತು ಮಾಹಿತಿಗಳಿಗಾಗಿ ಬರೆಯಿರಿ.

ತಯಾರಕರು:
ಮೈಸೂರು ಫೀಡ್ಸ್ (ಪ್ರೈ) ಲಿಮಿಟೆಡ್,
230, ಹಳೆಯ ತರಗು ಪೇಟೆ, ಬೆಂಗಳೂರು-2.
ಫೋನ್: ಫೇಕ್ಟರಿ 28572 ಆಫೀಸು (PP) 22471.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 773/1965

ಶೀನ ಶೆಟ್ಟಿ— ವಾದಿ

ಮತ್ತು

ಉಮ್ಮಕ್ಕ ಪೂಜಾರ್ತಿ ಕೂಡಾ—

ಪ್ರತಿವಾದಿರು.

2ನೇ ಪ್ರತಿವಾದಿ ಶ್ರೀ ಪೂರಲ ಸಾಲಿಯಾನ್, ಉಮ್ಮಕ್ಕ ಹೆಂಗ್ಸಿನ ಮಗ, ಉಡ್ಪಿ ತಾಲೂಕು, ಪಾಡೂರು ಗ್ರಾಮದ ಪಾದೂರು ಗುತ್ತಿನ ಹತ್ತಿರ— ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲಿನ ದಾವೆಯಲ್ಲಿ ವಾದಿರು ಕೇಳಿದ ಎರಡು ವರ್ಷಗಳ ಚಾಲಗೇಣಿ ಗೇಣಿ ಬಾಕಿ ಬಗ್ಗೆ, ನಿಮ್ಮ ಹಾಜರಾತಿ ಬಗ್ಗೆ ತಾರೀಕು 2—6—1966 ರಂದು ಇಟ್ಟಿರುತ್ತದೆ. ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಷ್ಟಮಾಡಿ ಸದ್ರಿ ವ್ಯಾಜ್ಯವನ್ನು ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

(Sd.) ಬೋಳ ರಘುರಾಮ ಶೆಟ್ಟಿ.

ವಾದಿ ಕಡೆ ಎಡ್ವಕೇಟ್.

ಕಾರ್ಕಳ ತಾ. 3—5—1966

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು
ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಂ. ಪಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ಭವ್ಯ ಭವಿಷ್ಯತ್ತಿನ ನಿರ್ಮಾಣಕ್ಕಾಗಿ ಒಂದಾಗಿ ದುಡಿಯೋಣ!

— ಬಂಟರ ಯಾನೆ ನಾಡವರ ಸಂಘ, ದಕ್ಷಿಣ ಕನ್ನಡ, ಮಂಗಳೂರು, ಇದರ 58ನೇ ಮಹಾಸಭೆಯು ಕುಂದಾಪುರದಲ್ಲಿ ಜರಗಿದಾಗ, ಕಾರ್ಕಳ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಎನ್. ಮೋಹನದಾಸ ಅಡ್ಯಂತಾಯರು ಮಾಡಿದ ಅಧ್ಯಕ್ಷ ಭಾಷಣದ ಸಾರ—

ಸಂಘದ ಮಹಾಸಭೆಯನ್ನು ಪ್ರತಿವರ್ಷವೂ ಮಂಗಳೂರಿನಲ್ಲೆ ಜರಗಿಸುವುದಕ್ಕಿಂತ ಜಿಲ್ಲೆಯ ಬೇರೆ ಬೇರೆ ಕೇಂದ್ರಗಳಲ್ಲಿ ಜರಗಿಸುವುದರಿಂದ ಜನಸಂಪರ್ಕವು ಅಧಿಕವಾಗಿ ಸಂಘವು ಜನಪ್ರಿಯ ಮತ್ತು ಬಲಶಾಲಿಯಾಗಲು ಸಹಾಯವಾಗುತ್ತದೆ. ಆ ದೃಷ್ಟಿಯಲ್ಲಿ ಈ ವರ್ಷದ ಮಹಾಸಭೆಯನ್ನು ಜಿಲ್ಲೆಯ ಉತ್ತರ ಭಾಗವಾದ ಕುಂದಾಪುರದಲ್ಲಿ ಜರಗಿಸಲು ಏರ್ಪಾಡು ಮಾಡಿದ್ದು ಶ್ಲಾಘನೀಯ. ಕುಂದಾಪುರ ತಾಲೂಕಿನ ನಾಡವ ಬಂಧುಗಳ ಸಮಾಜ ಪ್ರೇಮ ಮತ್ತು ಅಭಿಮಾನಗಳು ಗಣನೀಯವಾಗಿದ್ದು ನಮ್ಮ ಜಿಲ್ಲೆಯ ಇತರ ಸಮಾಜ ಬಾಂಧವರಿಗೆ ಮೇಲ್ಪಂಕ್ತಿಯಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ನಮ್ಮ ದೇಶದ ಮುಖಂಡರು ಜಾತೀಯತೆಯನ್ನು ಖಂಡಿಸಿ ದೇಶದಲ್ಲಿ ಜಾತ್ಯಾತೀತ ಸಮಾಜವನ್ನು ರಚಿಸಬೇಕೆಂದು ಪಣತೊಟ್ಟು ಆದರ್ಶ ಜನಾಂಗವೊಂದನ್ನು ಕಟ್ಟಲು ಪ್ರಯತ್ನಿಸುತ್ತಿರುವ ಈ ಸಂದರ್ಭದಲ್ಲಿ ಬಂಟರ ಯಾನೆ ನಾಡವರ ಸಮಾಜದವರು ಒಂದು ಜಾತೀಯ ಸಂಘವನ್ನು ಬೆಳೆಸಿಕೊಂಡು ಹೋಗುವುದು ಎಷ್ಟರ ಮಟ್ಟಿಗೆ ಸಮಂಜಸ ಎಂಬ ವಿವೇಚನೆಯು ತಿಳುವಳಿಕೆಯುಳ್ಳ ಪ್ರತಿಯೊಬ್ಬನಲ್ಲೂ ಮೂಡುವುದು ಸಹಜ. ಒಂದು ಕಡೆಯಲ್ಲಿ ಜಾತ್ಯತೀತ ಸಮಾಜ ರಚನೆಯ ಪ್ರಚಾರ—ಇನ್ನೊಂದು ಕಡೆ ವಾಸ್ತವಿಕವಾಗಿ ದೇಶದಾದ್ಯಂತ ಜಾತೀಯ ಸಂಘ ಸಂಸ್ಥೆಗಳ ಬೆಳವಣಿಗೆ. ನಮ್ಮ ಜಿಲ್ಲೆಯ ವಿಚಾರವನ್ನೆ ಪರಿಶೀಲಿಸಿದರೂ ಇಲ್ಲಿಯ ಎಲ್ಲ ಪ್ರಮುಖ ಜಾತೀಯ ಸಂಘಗಳು ಪ್ರಗತಿಪಥದಲ್ಲಿ ಮುನ್ನಡೆದು ದೃಢವಾದ ಸಂಘಟನಾ ಶಕ್ತಿಯನ್ನು ಪ್ರದರ್ಶಿಸುತ್ತಿವೆ. ಪರಜಾತಿಯವರ ಮೇಲೆ ದ್ವೇಷಾಸೂಯೆಗಳನ್ನು ತಾಳದೆ ಭ್ರಾತೃಪ್ರೇಮವನ್ನಿಟ್ಟುಕೊಂಡು ಅನ್ಯೋನ್ಯತೆಯನ್ನು ಬೆಳೆಸಿಕೊಂಡು ಬಂದು ಸ್ವಂತ ಜಾತಿಯವರ ಸರ್ವತೋಮುಖವಾದ ಏಳಿಗೆಯನ್ನು ಬಯಸಿ ಜಾತೀಯ ಬಾಂಧವರನ್ನು ಸಂಘಟಿಸಿ ವ್ಯವಸ್ಥಿತವಾದ ಸಂಘವನ್ನು ನಿರ್ಮಿಸಿ ಅದರ ಬೆಳವಣಿಗೆಗೆ ಪ್ರಯತ್ನಪಟ್ಟರೆ ಅದು ಸಂಕುಚಿತ ಜಾತೀಯತೆ ಎನಿಸದು. ದೇಶದ ಐಕ್ಯತೆ ಮತ್ತು ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸಂಘವು ದೇಶದ ಒಂದು ಪುಟ್ಟ ಅಂಗವಾದ ನಮ್ಮ ಸಮಾಜದ ಉದ್ಧಾರ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದರೆ ದೇಶದ ಹಿತ ಸಾಧನೆಯಲ್ಲಿ ನಾವು ನಮ್ಮ ಅಳಿಲಸೇವೆಯನ್ನು ಮಾಡಿದಂತೆ ಆಗುತ್ತದೆಂಬುದು ನಿರ್ವಿವಾದ. ಆದುದರಿಂದ ನಾವು ಕೂಡಾ ಇತರ ಜಾತೀಯ ಸಂಘಗಳ ಜೊತೆಯಲ್ಲೆ ಆರೋಗ್ಯಕರವಾದ ಸ್ಪರ್ಧೆಯಲ್ಲಿದ್ದ ಸಹಕಾರದಿಂದ ಮುಂದುವರಿಯೋಣ. ಒಂದು ವೇಳೆ ಇತರ ಜಾತೀಯ ಸಂಸ್ಥೆಗಳು ನಮ್ಮನ್ನು ದ್ವೇಷಿಸಿದರೂ ನಾವು ಅಂತಹ ಹೀನ ಮಟ್ಟಕ್ಕಿಳಿಯದೆ ಸೇವಾ ಭಾವನೆಯಿಂದ ಇತರರೂ ನಮ್ಮ ಸೋದರರೆಂಬ ತಿಳುವಳಿಕೆಯಿಟ್ಟುಕೊಂಡು ನಾವು ಬದುಕಿ ಇತರರನ್ನು ಬಾಳಲು ಬಿಡೋಣ. ಹೀಗಾದರೆ ನಮ್ಮ ಸಂಘವು ನಮ್ಮ ರಾಷ್ಟ್ರ ನಾಯಕರು ಪ್ರತಿಪಾದಿಸುವ ಜಾತ್ಯಾತೀತ ತತ್ವಕ್ಕೆ ವಿರೋಧವಾಗಿ ಹೋದಂತಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ.

ನಮ್ಮ ಸಂಘವು ಜೀವಂತವೂ ಸಕ್ರಿಯವೂ ಆಗಬೇಕಿದ್ದರೆ ಮುಖ್ಯವಾಗಿ ನಮ್ಮ ಸಮಾಜದ ಎಲ್ಲ ವ್ಯಕ್ತಿಗಳ ಸಂಪರ್ಕವು ಅದಕ್ಕೆ ಇರಬೇಕಾದುದು ಅತ್ಯಾವಶ್ಯಕ. ಸಂಘವು ನಮ್ಮ ಸಮಾಜದ ಕೆಲವೇ ಮಂದಿ ಪ್ರತಿಷ್ಠಿತ ಶ್ರೀಮಂತರ ವಿನೋದಕೂಟ ಎಂಬ ಭಾವನೆಯು ನಮ್ಮ ಸಮಾಜದ ಅನೇಕ ವ್ಯಕ್ತಿಗಳಲ್ಲಿ ಮೂಡಿದೆ. ಸಾಮಾನ್ಯ ಜನರಿಗೆ ಈ ಸಂಘದಲ್ಲಿ ಸ್ಥಾನವಿಲ್ಲವೆಂಬ ಭಾವನೆ ಅನಿವಾರ್ಯವಾಗಿ ಮೂಡಿ ಬಂದಿದೆ. ಇದರ ಪರಿಣಾಮವಾಗಿ ನಮ್ಮ ಸಂಘದ ಕೇಂದ್ರ ಸ್ಥಳವಾದ ಮಂಗಳೂರಿನಲ್ಲಿಯೇ ಸಂಘದೊಡನೆ ಸ್ಪರ್ಧೆ ನಡೆಸಲು ಇನ್ನೊಂದು ಸಂಘದ ಸ್ಥಾಪನೆಯಾಗಿದೆ ಎಂಬ ವಿಚಾರವನ್ನು ನೀವು ಕೇಳಿರಬಹುದು. ಇಂತಹ ಭಾವನೆಗಳಿಗೆ ಅವಕಾಶ ಉಂಟಾದದ್ದು ಸಮಾಜದ ಹಿತದೃಷ್ಟಿಯಿಂದ ಒಳಿತಲ್ಲ. ಬಡವ ಬಲ್ಲಿದನೆಂಬ ಭೇದವಿಲ್ಲದೆ ಸಮಾಜದ ಎಲ್ಲ ವ್ಯಕ್ತಿಗಳಿಗೂ ಸಮಾನ ಅವಕಾಶವನ್ನು ಕೊಟ್ಟು ನಮ್ಮ ಸಂಘ ಬೆಳೆಯಬೇಕು. ಗ್ರಾಮಾಂತರಗಳಲ್ಲಿ ಬಡತನದಿಂದ ಬಳಲುತ್ತಿರುವ ಎಷ್ಟೋ ಮಂದಿ ಸಮಾಜ ಬಂಧುಗಳಿಗೆ ನಮ್ಮ ಸಂಘದ ವಿಚಾರವೇ ತಿಳಿದಿಲ್ಲ. ಅವರೆಲ್ಲರನ್ನೂ ಸಂಘಕ್ಕೆ ಸೇರಿಸಿಕೊಂಡು ಎಲ್ಲರ ಸಹಕಾರ ಸೂಚನೆಗಳೊಂದಿಗೆ ಎಲ್ಲ ಸಮಾಜ ಬಾಂಧವರ ಏಳಿಗೆಗಾಗಿ ಸಂಘವು ದುಡಿಯುವಂತಾಗಬೇಕು. ಆಗ ಮಾತ್ರ ಈ ಸಂಘವು ಸಜೀವವೂ ಸಕ್ರಿಯವೂ ಆದೀತು.

ಆದರೆ ಈಗ ಜಾರಿಗೆ ಬಂದಿರುವ ಅಳಿಯಸಂತಾನ ಆಕ್ಟು ಮತ್ತು ಮೈಸೂರು ಭೂಸುಧಾರಣಾ ಮಸೂದೆಗಳಿಂದಾಗಿ ನಮ್ಮ ಸಮಾಜದ ಈ ವಿಶಿಷ್ಟ ಸ್ಥಾನಮಾನಗಳಿಗೆ ಎಲ್ಲಿ ಧಕ್ಕೆಯುಂಟಾದೀತೋ ಎಂಬ ಭಾವನೆ ನಮ್ಮ ಸಮಾಜದ ಹಿತಚಿಂತಕರಲ್ಲಿ ಉಂಟಾಗಿರುವುದು ಸಹಜವೇ ಆಗಿದೆ. ಈ ಕಾನೂನುಗಳಿಂದ ನಮ್ಮ ಸಮಾಜದ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ಆದಷ್ಟು ಮಟ್ಟಿಗೆ ನಿವಾರಿಸಿಕೊಂಡು ನಾವು ಮುನ್ನಡೆಯಬೇಕಾಗಿದೆ. ನಮ್ಮ ಆಸ್ತಿಗಳನ್ನು ಕೋರ್ಟು ಕಚೇರಿಗಳಿಗೆ ಹೋಗದೆ ನಮ್ಮ ನಮ್ಮೊಳಗೇ ಹಣ, ಸಮಯ ಮತ್ತು ಶ್ರಮ ವ್ಯಯ ಮಾಡದೇ ಅಳಿಯಸಂತಾನ ಕಾನೂನಿಗೆ ಅನುಗುಣವಾಗಿ ವಿಭಾಗಿಸಿಕೊಂಡು ನಮ್ಮ ಪಾಲಿಗೆ ಬಂದ ಆಸ್ತಿಯಲ್ಲಿ ಈಗಿನ ಸುಧಾರಿತ ರೀತಿಯಲ್ಲಿ ಲಾಭದಾಯಕವಾಗಿ ಸ್ವಂತ ವ್ಯವಸಾಯ ಮಾಡಬೇಕು.

ಮಣ್ಣಿನ ಮಕ್ಕಳು ನಾವು. ಕೃಷಿಯೇ ನಮ್ಮ ಮೂಲ ಕಸಬು. ಮಣ್ಣಿನ ಮೇಲಿನ ನಮ್ಮ ಹಿಡಿತವನ್ನು ಎಂದೆಂದಿಗೂ ಬಿಡಬಾರದು. ಬಿಟ್ಟಲ್ಲಿ ನಮಗೆ ಭವಿಷ್ಯವೇ ಇಲ್ಲ. ಅಲ್ಪ ಸ್ವಲ್ಪ ಮಂದಿ ನೌಕರಿಯಲ್ಲಿಯೋ ವ್ಯಾಪಾರದಲ್ಲಿಯೋ ಉದ್ಯಮಗಳಲ್ಲಿಯೋ ಮುಂದೆ ಬಂದಿರಬಹುದು. ಅವುಗಳಲ್ಲಿಯೂ ಮುಂದೆ ಬರಲು ಪ್ರಯತ್ನ ಮಾಡಬಾರದೆಂದು ನಾನು ಹೇಳುವುದಲ್ಲ. ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಪ್ರತಿಷ್ಠಿತ ಸ್ಥಾನಗಳನ್ನು ಪಡೆಯಲು ನಾವು ಅವಿರತ ಯತ್ನ ಮಾಡಬೇಕು. ಆ ಯೋಗ್ಯತೆಯೂ ನಮ್ಮಲ್ಲಿ ಇದೆಯೆಂಬುದನ್ನು ನಮ್ಮ ಯುವಜನರು ಸಮರ್ಪಕವಾಗಿ ತೋರಿಸಿ ಕೊಡುತ್ತಿರುವುದು ಅಭಿಮಾನದ ಸಂಗತಿ. ಇಂದು ನಮ್ಮ ದೇಶ ಆಹಾರದ ಕೊರತೆಯನ್ನು ಎದುರಿಸುತ್ತಿದೆ. ಈ ಕೊರತೆಯನ್ನು ನಿವಾರಿಸುವ ಭಗೀರಥ ಪ್ರಯತ್ನದಲ್ಲಿ ನಮ್ಮ ಸರಕಾರ ತೊಡಗಿದೆ. ಈ ಪರಿಸ್ಥಿತಿಯ ಸದುಪಯೋಗವನ್ನು ಮಾಡಿಕೊಂಡು ಕೃಷಿಕರಾದ ನಮ್ಮ ಜನಕ್ಕೆ ತಮ್ಮ ಮತ್ತು ದೇಶದ ಉದ್ಧಾರವನ್ನು ಮಾಡುವ ಸುಸಂದರ್ಭ ದೊರಕಿದೆ. ಇದರ ಸಂಪೂರ್ಣ ಪ್ರಯೋಜನವನ್ನು ನಾವು ಪಡೆಯಬೇಕು. ನಮ್ಮ ಸಮಾಜದ ವಿದ್ಯಾವಂತ ತರುಣರು ಸಣ್ಣ ಪುಟ್ಟ ನೌಕರಿಗೆ ಸೇರಿ ಅತೃಪ್ತಿಯ ಜೀವನ ನಡೆಸುವುದಕ್ಕಿಂತ ಸುಧಾರಿತ ರೀತಿಯ ವ್ಯವಸಾಯವು ಹೆಚ್ಚು ಲಾಭದಾಯಕವೆಂಬುದನ್ನು ಮನಗಾಣಬೇಕು. ಈ ವಿಚಾರದಲ್ಲಿ ನಮ್ಮ ಸಂಘವೂ ತಾಟಸ್ಥ್ಯ ವಹಿಸುವುದು ಯೋಗ್ಯವಲ್ಲ. ಈ ದಿಕ್ಕಿನಲ್ಲಿ ನಮ್ಮ ಸಮಾಜ ಬಾಂಧವರಿಗೆ ಯಾವ ರೀತಿಯ ಸಹಾಯ ನೀಡಬಹುದೆಂಬುದನ್ನು ಅದು ವಿಚಾರಿಸಬೇಕು.

ನಮ್ಮ ಸಮಾಜದ ಮಕ್ಕಳ ವಿದ್ಯಾಭ್ಯಾಸ ಮತ್ತು ವಿದ್ಯಾವಂತರಾದ ಮೇಲೆ ಅವರ ವಿದ್ಯೆಗನುಗುಣವಾದ ಉದ್ಯೋಗ ದೊರೆಯುವಂತೆ ಸಂಘವು ಇನ್ನೂ ಹೆಚ್ಚಿನ ಪ್ರಯತ್ನ ಮಾಡಬಹುದು. ಬಡ ವಿದ್ಯಾರ್ಥಿಗಳಿಗೆ ವೇತನ ಕೊಡಲು ನಮ್ಮ ಸಂಘದಲ್ಲಿರುವ ಹಣ ಏನೂ ಸಾಲದು. ಆ ನಿಧಿಯನ್ನು ಹೆಚ್ಚಿಸುವಲ್ಲಿ ನಮ್ಮ ಸಮಾಜದ ಶ್ರೀಮಂತರು ಇನ್ನೂ ಮುಂದೆ ಬರಬೇಕು. ವೇತನ ಪಡೆದವರು ವಿದ್ಯಾವಂತರಾಗಿ ಸಂಪಾದನೆಗೆ ತೊಡಗಿದ ನಂತರ ಸಂಘವನ್ನು ಮರೆಯದೆ ವೇತನದ ಪ್ರಯೋಜನವನ್ನು ಇತರ ವಿದ್ಯಾರ್ಥಿಗ-

(ಏಳನೇ ಪುಟದಿಂದ)

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ಠೇವಣಾತಿ ವಿಧಾನ

ದಿನಕ್ಕೆ 25 ಪೈಸೆ
7 ವರುಷಗಳಲ್ಲಿ
ರೂ. 700/-

ಪಿಗ್ಮಿ

ದಿನಕ್ಕೆ 25 ಪೈಸೆಗಳಂತಹ ಪುಡಿ ಕಾಸುಗಳೊಟ್ಟಾಗಿ ಬೇಂಕಿನಲ್ಲಿ ಸಂಗ್ರಹವಾಗುವ ನಿಧಿಯು ಭವಿಷ್ಯದ ಸಂಕಷ್ಟಗಳಿಂದ ನಿಮ್ಮನ್ನು ಪಾರು ಮಾಡಬಲ್ಲುದು.

ಸಿಂಡಿಕೇಟಿನ 209 ಶಾಖೆಗಳಲ್ಲಿ ವಿಚಾರಿಸಿರಿ:

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

........ವಿಶ್ವವ್ಯಾಪೀ ಬ್ಯಾಂಕಿಂಗ್ ವ್ಯವಹಾರಕ್ಕೆ

ಕೊಯಮುತ್ತೂರಿನ

ಕಬ್ಬಿನ ಸಂಶೋಧನಾ ಸಂಸ್ಥೆ

ಬರೆದವರು : ಶ್ರೀ ಎ. ಎಂ. ರಾಜ

ಕೊಯಮುತ್ತೂರಿನಲ್ಲಿ ಪ್ರಾರಂಭಿಸಲಾಗಿರುವ ಒಂದು ದ್ವಿರಾಷ್ಟ್ರೀಯ ಸಂಶೋಧನ ಕಾರ್ಯಕ್ರಮವು ಭಾರತ—ಅಮೆರಿಕಗಳ ಕಬ್ಬಿನ ರೈತರ ನಡುವ ಸಂಪರ್ಕಗಳನ್ನು ಅಧಿಕಗೊಳಿಸಲಿದೆ.

ಮಿಶ್ರ ತಳಿಯ ಕಬ್ಬಿನ ಜಾತಿಗಳನ್ನು ರೂಪುಗೊಳಿಸುವ ಸಂಶೋಧನ ಕಾರ್ಯಗಳಿಗಾಗಿ ಜಗತ್ಪ್ರಸಿದ್ಧವಾಗಿರುವ ಕೊಯಮುತ್ತೂರಿನ ಷುಗರ್‌ಕೇನ್ ಬ್ರೀಡಿಂಗ್ ಇನ್ಸ್ಟಿಟ್ಯೂಟ್ ಈಗ ಅಮೆರಿಕದ ಸಹಾಯದಿಂದ ನಡೆಸಲಾಗುತ್ತಿರುವ ಒಂದು ಪ್ರಾಜೆಕ್ಟಿನಲ್ಲಿ ನಿರತವಾಗಿದೆ. ಭಾರತ—ಅಮೆರಿಕಗಳಲ್ಲಿ ಕಬ್ಬಿನ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಬೇಕಾದ ಯೋಗ್ಯ ರೀತಿಯ ತಳಿಗಳನ್ನು ಕಂಡು ಹಿಡಿಯುವುದು ಈ ಯೋಜನೆಯ ಉದ್ದೇಶ.

ಭಾರತದಲ್ಲಿ ಪಂಜಾಬ್ ಮತ್ತು ಉತ್ತರ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಕಬ್ಬು ಬೆಳೆಸಲಾಗುತ್ತಿದೆ. ಇಲ್ಲಿನ ಹವಾ ಪರಿಸ್ಥಿತಿಗಳು ಅಮೆರಿಕದ ಕಬ್ಬಿನ ಬೆಳೆಯ ಮುಖ್ಯ ಕೇಂದ್ರಗಳಿರುವ ಲೂಯಿಯಾನ್ ಮತ್ತು ಫ್ಲಾರಿಡದ ಹವಾ ಪರಿಸ್ಥಿತಿಗಳಿಗೆ ಸದೃಶವಾಗಿವೆ.

೧೯೬೩ನೆಯ ಅಕ್ಟೋಬರ್‌ನಲ್ಲಿ ಈ ಇನ್ಸ್ಟಿಟ್ಯೂಟು ಒಂದು ಹೊಸ ಪ್ರಾಜೆಕ್ಟನ್ನು ಪ್ರಾರಂಭಿಸಿತು. ಅಮೆರಿಕದ ಮತ್ತು ಭಾರತದ ಅತ್ಯುತ್ತಮ ತಳಿಗಳನ್ನು ಕಾಡು ದರ್ಭೆಯ ಗಿಡಗಳೊಡನೆ ಕಸಿಮಾಡಿ ಹೊಸ ತಳಿಯನ್ನು ಸೃಷ್ಟಿಸುವುದು ಈ ಪ್ರಾಜೆಕ್ಟಿನ ಉದ್ದೇಶ. ಕಾಡು ದರ್ಭೆಯ ಗಿಡಗಳು ಅನೇಕ ಪ್ರತಿಕೂಲ ಪರಿಸ್ಥಿತಿಗಳನ್ನು ವಿರೋಧಿಸುವ ಶಕ್ತಿಯನ್ನು ಪಡೆದಿವೆ.

ಕ್ರಿಮಿಗಳನ್ನು ಮತ್ತು ರೋಗಗಳನ್ನು ನಿರೋಧಿಸುವ ಶಕ್ತಿಯನ್ನು ಪಡೆದಿರುವ ಮತ್ತು ಕೆಲವು ಪ್ರತಿಕೂಲ ಪರಿಸ್ಥಿತಿಗಳಲ್ಲಿ ಉಪಯೋಗಿಸಬಹುದಾದ ಹೊಸ ಕಬ್ಬಿನ ತಳಿಗಳನ್ನು ಸಿದ್ಧಗೊಳಿಸುವುದೇ ಈ ಪ್ರಾಜೆಕ್ಟಿನ ಉದ್ದೇಶ.

ಅಮೆರಿಕದ ವ್ಯವಸಾಯ ಇಲಾಖೆ (ಯುಎಸ್‌ಡಿಎ) ಯ ಸಹಕಾರದೊಡನೆ, ಈ ಇನ್ಸ್ಟಿಟ್ಯೂಟು ನಡೆಸುತ್ತಿರುವ ಈ ಪಂಚವಾರ್ಷಿಕ ಯೋಜನೆಗೆ ಅಮೆರಿಕದ ಪಿ. ಎಲ್. —೪೮೦ರ ಒಂದು ಗ್ರಾಂಟಿನ ಸಹಾಯವೂ ದೊರೆತಿದೆ. ಈ ಪ್ರಾಜೆಕ್ಟಿಗೆ ಒಟ್ಟು ೧೫ ಲಕ್ಷ ರೂಪಾಯಿಗಳ ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ.

ರೆಡ್ ರಾಟ್, ಮೊಸಾಯಿಕ್, ಸ್ಮಟ್ ಮತ್ತು ರಾಟೂನ್ ಸ್ಟಂಟಿಂಗ್ ಮುಂತಾದ ಕಬ್ಬಿನ ರೋಗಗಳಿಗೆ ನಿರೋಧಕ ಶಕ್ತಿಯುಳ್ಳ ತಳಿಗಳನ್ನು ಅಭಿವೃದ್ಧಿಗೊಳಿಸಲು, ಈ ಇನ್ಸ್ಟಿಟ್ಯೂಟಿನಲ್ಲಿ ಅಮೆರಿಕದ ಮತ್ತು ಭಾರತದ ಕಬ್ಬಿನ ಸಸಿಗಳನ್ನು ಅತ್ಯುತ್ತಮ ಜಾತಿಯ ದರ್ಭೆಯ ಸಸಿಗಳೊಡನೆ ಕಸಿಮಾಡಲಾಗುವುದು. ಹೊಸತಾಗಿ ನಿರ್ಮಿತವಾಗುವ ತಳಿಗಳು ನೀರಿನ ಕೊರತೆ ಮತ್ತು ಚಳಿಯನ್ನು ಇದಿರಿಸಿ ಬಾಳಬಲ್ಲವು.

ಈ ತಳಿಗಳ ಸಂಶೋಧನೆಯಲ್ಲಿ, ಇನ್ಸ್ಟಿಟ್ಯೂಟಿನೊಡನೆ, ಕೇರಳದ ಪಾಲ್‌ಘಾಟನಲ್ಲಿರುವ ಮತ್ತು ಪಂಜಾಬಿನ ಕರ್ನಾಲ್‌ನಲ್ಲಿರು ಅದರ ಎರಡು ಸಬ್-ಸ್ಟೇಷನ್‌ಗಳು ನಿಕಟವಾಗಿ ಸಹಕರಿಸುತ್ತಿವೆ. ಕೇರಳದ ಕಣ್ಣಾನೂರಿನಲ್ಲಿರುವ ಈ ಇನ್ಸ್ಟಿಟ್ಯೂಟಿನ ಜಮೀನಿನಲ್ಲಿ ಪ್ರಪಂಚದ ಎಲ್ಲೆಡೆಗಳ ಕಬ್ಬಿನ ತಳಿಗಳ ಸಂಗ್ರಹವಿದೆ. ಫ್ಲಾರಿಡಾದ ಕ್ಯಾನಲ್ ಪಾಯಿಂಟ್‌ನಲ್ಲೂ ಇಂಥ ಒಂದು ಕಬ್ಬಿನ ಸಂಗ್ರಹದ ಕ್ಷೇತ್ರವಿದೆ. ಈ ಎರಡು ಕೇಂದ್ರಗಳು ಕಬ್ಬಿನ ವಿವಿಧ ಜಾತಿಗಳನ್ನು ವಿನಿಮಯ ಮಾಡಿಕೊಳ್ಳುತ್ತಿವೆ. ಪ್ರಪಂಚದಲ್ಲೇ ಅತ್ಯಾಧುನಿಕವೆನ್ನಬಹುದಾದ ಕಬ್ಬಿನ ಜಾತಿಗಳ ಸಂಗ್ರಹ ಈ ಎರಡು ಕೇಂದ್ರಗಳಲ್ಲಿದೆ.

ಕಳೆದ ಎರಡು ವರ್ಷಗಳಲ್ಲಿ ೧೦೦ಕ್ಕಿಂತ ಹೆಚ್ಚು ಬಾರಿ ಕಾಡು ದರ್ಭೆಯ ಸಸಿಯೊಡನೆ ಕಬ್ಬಿನ ಕಸಿ ಮಾಡಿ ಪ್ರಯೋಗಗಳನ್ನು ನಡೆಸಲಾಗಿದೆ.

ಕೊಯಮುತ್ತೂರು ಇನ್ಸ್ಟಿಟ್ಯೂಟು ಮತ್ತು ಯುಎಸ್‌ಡಿಎಯವರು ಅಭಿವೃದ್ಧಿಗೊಳಿಸಿದ ವಿಧಾನಗಳ ಮೇರೆಗೆ ಸುಮಾರು ೫೦,೦೦೦ ಬೀಜಾಂಕುರಗಳನ್ನು ಬೆಳೆಸಿ ಅವುಗಳ ರೋಗಗಳ ಬಗೆಗೆ ಹಾಗೂ ಶೀತ ನಿರೋಧಕ ಶಕ್ತಿಯ ಬಗೆಗೆ ಪರಿಶೀಲನೆ ನಡೆಸಲಾಯಿತು.

ಈ ಪ್ರಾಜೆಕ್ಟಿನ ಮೇರೆಗೆ, ರೋಗಗಳನ್ನು ಹಾಗೂ ಶೀತವನ್ನು ನಿರೋಧಿಸುವ ಶಕ್ತಿಯುಳ್ಳ ೩೦ ತಳಿಗಳನ್ನು ಸಿದ್ಧಗೊಳಿಸಲಾಗಿದೆ. ಕ್ಯಾನಲ್ ಪಾಯಿಂಟ್‌ನಲ್ಲಿ ತಳಿ ಮಿಶ್ರಣ ಕಾರ್ಯಕ್ಕಾಗಿ ಇವುಗಳನ್ನು ಯು. ಎಸ್. ಡಿ. ಎ. ಯವರಿಗೆ ಒದಗಿಸಲಾಗಿದೆ.

೧೯೬೮ರಲ್ಲಿ ಈ ಪ್ರಾಜೆಕ್ಟ್ ಪೂರ್ತಿಗೊಳ್ಳುವಾಗ ಸುಮಾರು ೧೦೦ ಮೂಲ ತಳಿಗಳನ್ನು ಸಿದ್ಧಗೊಳಿಸಬಹುದೆಂದು ಇನ್ಸ್ಟಿಟ್ಯೂಟ್ ನಿರೀಕ್ಷಿಸುತ್ತಿದೆ. ಇವು ಭಾರತ ಮತ್ತು ಅಮೆರಿಕದಲ್ಲಿ ಕಬ್ಬಿನ ವ್ಯಾಪಾರೀ ಉತ್ಪಾದನೆಗೆ ಆಧಾರವಾಗುವುವು.

ಇನ್ಸ್ಟಿಟ್ಯೂಟಿನ ಡೈರೆಕ್ಟರ್ ಡಾ| ಜೆ. ತುಳಜಾರಾಮ್ ರಾವ್ ಅವರು ಸಂದರ್ಶನವೊಂದರಲ್ಲಿ ಈ ಪ್ರಾಜೆಕ್ಟಿನ ಬಗೆಗೆ ಹೀಗೆಂದರು "ಇದು ವಿಜ್ಞಾನದಲ್ಲಿ ಅಂತರಾಷ್ಟ್ರೀಯ ಸಹಕಾರದ ಇನ್ನೊಂದು ನಿದರ್ಶನ ಇದರಿಂದ ಭಾರತ, ಅಮೆರಿಕಗಳಷ್ಟೇ ಅಲ್ಲದ ಪ್ರಪಂಚದ ಎಲ್ಲ ಕಬ್ಬು ಬೆಳೆಯುವ ದೇಶಗಳೂ ಪ್ರಯೋಜನ ಪಡೆಯುವುವು".

ಭಾರತದ ಕಬ್ಬಿನ ಬೆಳೆಯ ಪ್ರದೇಶದಲ್ಲಿ ಶೇಕಡ ೯೫ರಷ್ಟು ಭಾಗದಲ್ಲಿ ಕೊಯಮುತ್ತೂರಿನ ಕಬ್ಬಿನ ತಳಿಗಳನ್ನು ಬೆಳೆಸಲಾಗುತ್ತಿದೆ. ಕೊಯಮುತ್ತೂರಿನ ಕೆಲವು ತಳಿಗಳನ್ನು ಇತರ ೨೨ ದೇಶಗಳಲ್ಲೂ ಬೆಳಸಲಾಗುತ್ತಿದೆ ಎಂದು ಡಾ| ರಾವ್ ಹೇಳಿದರು.

ಭಾರತದಲ್ಲಿ ೬೩ ಲಕ್ಷ ಎಕರೆಗಳಲ್ಲಿ ಕಬ್ಬು ಬೆಳಸಲಾಗುತ್ತಿದೆ. ಸಕ್ಕರೆ ಕೈಗಾರಿಕೆಯು ಭಾರತದ ಅತಿ ದೊಡ್ಡ ಕೈಗಾರಿಗಳಲ್ಲಿ ಎರಡನೆಯದು ೧೯೬೪—೬೫ರಲ್ಲಿ ಭಾರತದಲ್ಲಿ ೧೨೨ ದಶಲಕ್ಷ ಟನ್‌ಗಳಷ್ಟು ಕಬ್ಬಿನ ಉತ್ಪಾದನೆಯಾಯಿತು. ೧೯೬೫—೬೬ರಲ್ಲಿ ೨೩ ಲಕ್ಷ ಟನ್‌ಗಳಷ್ಟು ಬಿಳಿ ಸಕ್ಕರೆಯನ್ನು ಉತ್ಪಾದಿಸಲಾಯಿತು. ಇದರಲ್ಲಿ ೩ ಲಕ್ಷ ಟನ್‌ಗಳಷ್ಟು ಸಕ್ಕರೆಯನ್ನು ರಫ್ತು ಮಾಡಲಾಯಿತು. ಸಕ್ಕರೆಯ ರಫ್ತಿನಿಂದಾಗಿ ಸುಮಾರು ೧೭ ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ಲಭಿಸಿತು. ಭಾರತದ ಸಕ್ಕರೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿದ ರಾಷ್ಟ್ರ ಅಮೆರಿಕ. ೨೦೦,೦೦೦ ಟನ್ ಭಾರತೀಯ ಸಕ್ಕರೆಯನ್ನು ಅಮೆರಿಕ ಆಮದು ಮಾಡಿತು.

ಚತುರ್ಥ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಬಿಳಿ ಸಕ್ಕರೆಯ ಉತ್ಪಾದನೆ ೪೪ ಲಕ್ಷ ಟನ್‌ಗಳಷ್ಟಾಗುವುದೆಂದು ಡಾ|| ರಾವ್ ಹೇಳುತ್ತಾರೆ. ಕಬ್ಬಿನ ಸಾಂದ್ರ ವ್ಯವಸಾಯದಿಂದ ಈ ಉತ್ಪಾದನೆಯನ್ನು ಸಾಧಿಸಲಾಗುವುದು.

'ಈಗ ಎಕರೆಗೆ ಸರಾಸರಿ ೧೫ ಟನ್‌ಗಳಷ್ಟು ಹುಟ್ಟುವಳಿಯಿದೆ. ಚತುರ್ಥ ಯೋಜನೆಯ ಅಂತ್ಯದೊಳಗೆ ಇದನ್ನು ೨೨ ಟನ್‌ಗಳಿಗೆ ಏರಿಸಲು ಸಾಧ್ಯವೆಂದು ನಾವು ನಿರೀಕ್ಷಿಸುತ್ತೇವೆ ನಾವೀಗ ನಡೆಸುತ್ತಿರುವಂಥ ಪ್ರಾಜೆಕ್ಟ್‌ಗಳು ಈ ಗುರಿಯನ್ನು ಸಾಧಿಸಲು ನಮಗೆ ಸಹಾಯಕವಾಗುವುವು" ಎಂದು ಡಾ| ರಾವ್ ಹೇಳಿದರು.

ಡಾ|| ರಾವ್ ಅವರು ೧೯೬೪ರಲ್ಲಿ ಅಮೆರಿಕವನ್ನು ಸಂದರ್ಶಿಸಿದಾಗ, ಈ ಪ್ರಾಜೆಕ್ಟಿನ ವಿವರಗಳನ್ನು ಅಮೆರಿಕದ ಅಧಿಕಾರಿಗಳೊಡನೆ ಚರ್ಚಿಸಿದರು. ಉಷ್ಣವಲಯದ ಭಾರತ, ಹವಾಯ್ ಮತ್ತು ಪ್ಯುಯರ್ಟೋರಿಕೋಗೆ ಯೋಗ್ಯವಾಗುವಂಥ ತಳಿಗಳನ್ನು ಅಭಿವೃದ್ಧಿಗೊಳಿಸಲು ಭಾರತೀಯ ಮತ್ತು ಹವಾಯಿಯ ಕಬ್ಬಿನ ಜಾತಿಗಳನ್ನು ಕಸಿಮಾಡುವ ಇನ್ನೊಂದು ಕಾರ್ಯಕ್ರಮದಲ್ಲೂ ಯುಎಸ್‌ಡಿಎ ಸಹಕರಿಸುವುದೆಂದವರು ನಿರೀಕ್ಷಿಸುತ್ತಾರೆ. ಈ ಕಾರ್ಯಕ್ರಮದ ವಿವರಗಳನ್ನೀಗ ಸಿದ್ಧಗೊಳಿಸಲಾಗುತ್ತಿದೆ.

ಕೊಯಮುತ್ತೂರಿನ ಷುಗರ್ ಕೇನ್ ಬ್ರೀಡಿಂಗ್ ಇನ್ಸ್ಟಿಟ್ಯೂಟ್‌ನಲ್ಲಿ ನಡೆಸಿದ ಪ್ರಯೋಗಗಳಿಂದ ದೃಢವಾದ ಮಿಶ್ರ ತಳಿಯ ಕಬ್ಬಿನ ಉತ್ಪಾದನೆಯಾಗಿದೆ. ಇದರಿಂದಾಗಿ ಕೆಲವು ವರ್ಷಗಳ ಮುಂಚೆ ಕಬ್ಬನ್ನು ಬೆಳೆಸುವ ಸಾಧ್ಯತೆ ಇಲ್ಲದಿದ್ದ ಪ್ರದೇಶಗಳ ಈಗ ಬೆಳೆಯಲು ಸಾಧ್ಯವಾಗಿದೆ

ಕಬ್ಬಿಗೆ ಪ್ರಾಚೀನ ಇತಿಹಾಸವಿದೆ. ಭಾರತದಲ್ಲಿ ಕಬ್ಬು ಹಾಗೂ ಸಕ್ಕರೆ ಪ್ರಾಗೈತಿಹಾಸಿಕ ಕಾಲದಿಂದಲೂ ಬಳಕೆಯಲ್ಲಿದ್ದವು.

'ನಿನ್ನ ಮನಸ್ಸನ್ನು ವಶೀಕರಿಸಲು ನಿನಗೆ ಕಬ್ಬಿನ ಹಾರ ತೊಡಿಸಿದ್ದೇನೆ' ಎಂದು ಅಥರ್ವಣ ವೇದದ (ಕ್ರಿ. ಪೂ. ೫೦೦೦) ಶ್ಲೋಕವೊಂದರಲ್ಲಿ ಹೇಳಲಾಗಿದೆ.

ಕಬ್ಬು ಮತ್ತು ಅದರ ಉತ್ಪನ್ನಗಳ ಜ್ಞಾನವು ಭಾರತದಿಂದ ಲಭಿಸಿದುದೆಂದು ಕ್ರಿಸ್ತನ ಜನನಕ್ಕಿಂತ ಎಂಟುನೂರು ವ

ಕಳೆದ ನವೆಂಬರದಲ್ಲಿ ಬಲ್ಗೇರಿಯಾವನ್ನು ಸಂದರ್ಶಿಸಿದ ಭಾರತದ ...
ಬಲ್ಗೇರಿಯದ ನೇಶನಲ್ ಎಸೆಂಬ್ಲಿಯ ಅಧ್ಯಕ್ಷ ಜೋ...

ಒಂದು ಗಂಟೆ ಕಳೆದರೆ ಸಾಕು, ಭಾರತದಲ್ಲಿ 1,300 ಮಕ್ಕಳು ಜನಿಸುತ್ತವೆ. ಪ್ರತಿದಿನ ದೇಶದ ಜನಸಂಖ್ಯೆ 30,00 ದಂತೆ ಏರುತ್ತದೆ. ವರ್ಷ ಕಳೆದಾಗ 12 ದಶಲಕ್ಷ ಜನ ಹೆಚ್ಚಾಗಿರುತ್ತಾರೆ.

ನಮ್ಮ ದೇಶದ ಭೂ ಪ್ರದೇಶ ವಿಶ್ವದಲ್ಲಿಯ ಭೂ ಪ್ರದೇಶದ ಶೇಕಡ 2.2 ರಷ್ಟಿದೆ. ಆದರೆ ಭಾರತದ ಜನಸಂಖ್ಯೆ ಲೆಕ್ಕದ ಹಾಕಿದರೆ, ವಿಶ್ವದ ಜನಸಂಖ್ಯೆಯಲ್ಲಿಯ ಶೇಕಡ 12·8 ರಷ್ಟಿದೆ. ಆರೋಗ್ಯ ಸುಧಾರಣೆಯ ಕಾರ್ಯಕ್ರಮಗಳಿಂದ ಸಾವಿರಕ್ಕೆ 48·6 ಜನ ಮರಣ ಹೊಂದುತ್ತಿದ್ದುದು

ರ್ಷಗಳ ಮುಂಚೆ ಚೀಣೀ ಲೇಖಕರು ಬರೆದಿದ್ದಾರೆ.

ವಾಸ್ತವವಾಗಿ ತ್ಸಾಯ್ ಹೆಂಗ್ ಎಂಬ ಚೀಣೀ ಚಕ್ರವರ್ತಿ ಸುಮಾರು ಕ್ರಿ. ಪೂ. ೬೦೦ ರಲ್ಲಿ ಸಕ್ಕರೆಯ ತಯಾರಿಕೆಯ ವಿದ್ಯೆಯನ್ನು ಕಲಿಯಲು ಭಾರತಕ್ಕೆ ತನ್ನ ಪ್ರತಿನಿಧಿಗಳನ್ನು ಕಳುಹಿಸಿದನು. ಬಹುಶಃ ವಿದೇಶಗಳಲ್ಲಿನ ತಯಾರಿಕಾ ವಿಧಾನವನ್ನು ಕಲಿಯಲು ತಾಂತ್ರಿಕ ಆಯೋಗವೊಂದನ್ನು ಕಳುಹಿಸಿದ ಪ್ರಥಮ ನಿದರ್ಶನವಿದು.

ಅಲೆಕ್ಸಾಂಡರ ಚಕ್ರವರ್ತಿ ಭಾರತೀಯ ದಂಡಯಾತ್ರೆಯನಂತರ ಗ್ರೀಸಿನಲ್ಲಿ ಕಬ್ಬಿನ ಬೆಳೆಯನ್ನು ಒಳಕೆಗೆ ತಂದನು. ಕಬ್ಬು ಅಲೆಕ್ಸಾಂಡರನೊಂದಿಗೆ ಪರ್ಸಿಯ, ಈಜಿಪ್ಟ್, ಉತ್ತರ ಆಫ್ರಿಕ ಮತ್ತು ಸ್ಪೈನಿಗೆ ವಿಜಯ ಯಾತ್ರೆ ಮಾಡಿತು. ಕ್ರಿಸ್ಟೋಫರ್ ಕೊಲಂಬಸನು ಎರಡನೆಯ ಬಾರಿ ಜಲಯಾನ ಮಾಡಿದಾಗ ಅಮೇರಿಕದಲ್ಲೂ ಕಬ್ಬಿನ ಪ್ರವೇಶವಾಯಿತು.

...ಯೋಗದೊಂದಿಗೆ
...ನನ್ನು.

ದೆಹಲಿಯಲ್ಲಿ

ಆದರ್ಶ ಕುಟುಂಬ ಯೋಜನಾ ಕಾರ್ಯಕ್ರಮ

16ಕ್ಕೆ ಇಳಿದಿದೆ. ಅದೇ ಜನಸಂಖ್ಯೆ ನಾಸಿರಕ್ಕೆ 41ರಂತೆ ಇದೆ. ಅದನ್ನು 18ಕ್ಕೆ ಇಳಿಸದೇ ಕಾಗಿದೆ ಇಲ್ಲವಾದರೆ, ಯೋಜನೆಗಳ ಕಾರ್ಯಗಳಿಂದ ನಡೆಕೆ ಆರ್ಥಿಕಾಭಿವೃದ್ಧಿಯ ಫಲವನ್ನು ಬೆಳೆಯುತ್ತಿರುವ ಜನಸಂಖ್ಯೆಯೇ ತಿಂದುಹಾಕುತ್ತದೆ.

ಈ ಕಾರಣಗಳಿಂದ ಈಗ ಸಾವಿರಕ್ಕೆ 41 ಜನ ಹೆಚ್ಚುತ್ತಿರುವ ಸಂಖ್ಯೆಯನ್ನು 1970ರ ಹೊತ್ತಿಗೆ 25ಕ್ಕೆ ಇಳಿಸಬೇಕೆಂದೂ 1985ರ ಹೊತ್ತಿಗೆ ಅದನ್ನು 18ಕ್ಕೆ ಇಳಿಸಬೇಕೆಂದೂ ಕೇಂದ್ರ ಸರ್ಕಾರವು ಗುರಿಯನ್ನು ಸೂಚಿಸಿದೆ. ಆದರ ಪರಿಣಾಮವಾಗಿ, 1975ರ ಹೊತ್ತಿಗೆ 605 ದಶಲಕ್ಷ ಜನ ಸಂಖ್ಯೆಯೂ 1985ರ ಹೊತ್ತಿಗೆ 693 ದಶಲಕ್ಷ ಜನಸಂಖ್ಯೆಯೂ ಭಾರತದಲ್ಲಿ ಇರುತ್ತದೆ. ಇದು ಮಹತ್ವಾಕಾಂಕ್ಷೆಯ ಗುರಿ ಎನಿಸಿದರೂ, ಕುಟುಂಬ ಯೋಜನೆಯ ಕಾರ್ಯಕ್ರಮಗಳನ್ನು ಅಧಿಕಗೊಳಿಸಿ ಗುರಿಯನ್ನು ಸಾಧಿಸಲು ಪ್ರಯತ್ನಿಸಲಾಗುವುದು. ಈ ಉದ್ದೇಶದಿಂದ ೧೯೭೬ನೇ ಮೇ ೧ನೇ ತಾರೀಕಿನಿಂದ ತೀವ್ರ ತರವಾಗಿ ಕುಟುಂಬ ಯೋಜನೆಯ ಚಳುವಳಿಯನ್ನು ಪ್ರಾರಂಭಿಸಲಾಗುವುದು.

ಕುಟುಂಬ ಯೋಜನೆಯ ಕೇಂದ್ರಗಳನ್ನು ಅಧಿಕ ಸಂಖ್ಯೆಯಲ್ಲಿ ಈಗಾಗಲೇ ಸ್ಥಾಪಿಸಲಾಗಿದೆ. ಈ ವರ್ಷದ ಜನವರಿ ತಿಂಗಳಲ್ಲಿ 16,970 ಕೇಂದ್ರಗಳು ಇದ್ದವು. ಅವು ಕುಟುಂಬ ಯೋಜನಾ ಸಕ್ರಿಯ ಪ್ರಚಾರ ಕಾರ್ಯವನ್ನು ಕೈಗೊಂಡಿವೆ. ಅವುಗಳಲ್ಲಿ 14,830 ಕೇಂದ್ರಗಳು ಹಳ್ಳಿಗಳಲ್ಲಿವೆ. ಅನೇಕ ಪ್ರಯೋಗಗಳ ಪರಿಣಾಮವಾಗಿ ವಂಕಿಯನ್ನು ಜನನ ನಿಯಂತ್ರಣದ ಕಾರ್ಯಕ್ಕೆ ಬಳಸಲು ನಿರ್ಧರಿಸಲಾಗಿದೆ. ಇದು ಭಾರತಕ್ಕೆ ಅತಿ ಅನುಕೂಲವಾಗಿದೆ. 1965ರಲ್ಲಿಯೇ 5 ಲಕ್ಷ ವಂಕಿಗಳನ್ನು ಪ್ರಯೋಗಿಸಲಾಯಿತು. ವಂಕಿಗಳ ಪ್ರಯೋಗಗಳನ್ನು ಅನುಭವ ಪಡೆದ ವೈದ್ಯರು ಮಾತ್ರ ಮಾಡುತ್ತಾರೆ. ಪ್ರತಿದಿನ 15,000 ಪ್ಲಾಸ್ಟಿಕ್ ವಂಕಿಗಳನ್ನು ತಯಾರಿಸುವ ಒಂದು ಕಾರ್ಖಾನೆಯನ್ನು ಸಹ ಆರಂಭ ಮಾಡಲಾಗಿದೆ. ಶಸ್ತ್ರ ಚಿಕಿತ್ಸೆಗೂ ಪ್ರೋತ್ಸಾಹ ನೀಡಲಾಗುತ್ತಿದೆ. ಕಳೆದ 9 ವರ್ಷಗಳಲ್ಲಿ 11 ಲಕ್ಷ ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗಿದೆ. 1975—76ರ ಹೊತ್ತಿಗೆ 130 ಲಕ್ಷ ವಂಕಿಗಳನ್ನು ಪ್ರಯೋಗಿಸಲು ನಿರ್ಧರಿಸಲಾಗಿದೆ.

ತರಪೇತು ಹೊಂದಿದ ಸಿಬ್ಬಂದಿ, ಉಪಕರಣಗಳು, ವಾಹನ ಸೌಕರ್ಯ ಮತ್ತು ಸರಬರಾಜು—ಇವುಗಳ ಕೊರತೆಯಿಂದ ತತ್‌ಕ್ಷಣ ಕುಟುಂಬ ಯೋಜನೆಯ ಕಾರ್ಯಕ್ರಮವನ್ನು ದೇಶಾದ್ಯಂತ ತ್ವರಿತಗೊಳಿಸಲು ಸಾಧ್ಯವಾಗುತ್ತಿಲ್ಲ. ಭಾರತದ ಬಾರಿ 47 ಜಿಲ್ಲೆಗಳಲ್ಲಿಯೇ ದೇಶದ ಮೂರನೇ ಭಾಗ ಜನಸಂಖ್ಯೆ ಇದ್ದಾರೆ. ಈ ಜಿಲ್ಲೆಗಳಲ್ಲಿ ವ್ಯಾಪಕ ಕುಟುಂಬ ಯೋಜನೆಯ ಕಾರ್ಯಕ್ರಮ ಜಾರಿಗೆ ತರಲು ಬೇಕಾದ ಎಲ್ಲ ಸೌಕರ್ಯಗಳು ದೊರೆಯುವುದರಿಂದ, ಈ ಜಿಲ್ಲೆಗಳಲ್ಲಿ ಕಾರ್ಯಕ್ರಮವನ್ನು ತ್ವರಿತಗೊಳಿಸುವುದು ಉಚಿತವೆನಿಸುತ್ತವೆ. ಇದರಿಂದ ತಕ್ಕಷ್ಟು ಫಲಿತಾಂಶವೂ ದೊರೆಯಬಹುದು. ಅಲ್ಲದೆ ವೈದ್ಯರಿಗೆ, ಕುಟುಂಬಯೋಜನೆಯ ಕಾರ್ಯಕರ್ತರಿಗೆ ಉತ್ತಮ ಅನುಭವಗಳು ದೊರೆತು, ದೇಶದ ಇತರ ಭಾಗಗಳಿಗೆ ಯೋಜನೆಯನ್ನು ಅನ್ವಯಿಸುವಾಗ, ಅದರಿಂದ ಲಾಭವನ್ನು ಪಡೆಯಬಹುದು.

ದೆಹಲಿಯಲ್ಲಿ ವ್ಯಾಪಕ ಕುಟುಂಬ ಯೋಜನಾ ಕಾರ್ಯಕ್ರಮ

ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ನಡೆದ ಯಾವ ಕಾರ್ಯವಾಗಲೀ ದೇಶದ ಇತರ ಭಾಗಗಳಲ್ಲಿ ಅದು ತನ್ನ ಪರಿಣಾಮವನ್ನು ಬೀರದೆ ಇರುವುದಿಲ್ಲ. ಅಂತೆಯೇ ಕೇಂದ್ರ ಆರೋಗ್ಯ ಹಾಗೂ ಕುಟುಂಬ ಯೋಜನಾ ಮಂತ್ರಿ ಶಾಖೆಯು ದೆಹಲಿಯಲ್ಲಿ ತತ್‌ಕ್ಷಣದಿಂದ ಕುಟುಂಬ ಯೋಜನೆಯ ವ್ಯಾಪಕ ಕಾರ್ಯಕ್ರಮವನ್ನು ಜಾರಿಗೆ ತರಲು ನಿರ್ಧರಿಸಿದ

ಈ ವ್ಯಾಪಕ ಕುಟುಂಬ ಯೋಜನೆಯ ಕಾರ್ಯಕ್ರಮವನ್ನು ದೆಹಲಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಅನುಷ್ಠಾನಕ್ಕೆ ತರುವ ಉದ್ದೇಶದಿಂದ ದೆಹಲಿಯ ಮೇಯರು, ಚೀಫ್ ಕಮಿಷನರ್‌ರು ಮೆಡಿಕಲ್ ಅಸೋಸಿಯೇಷನ್ನಿನ ಅಧ್ಯಕರು, ದೆಹಲಿಯಲ್ಲಿರುವ ಕುಟುಂಬ ಯೋಜನಾ ಸಂಸ್ಥೆಗಳು, ಪತ್ರಿಕಾ ಕರ್ತರು, ಸಿನಿಮಾ ಮಾಲಿಕರು ಮತ್ತು ಮಹಿಳಾ ಮುಖಂಡರುಗಳೊಡನೆ ಕುಟುಂಬ ಯೋಜನೆಯ ಸಚಿವರು, ಕಾರ್ಯದರ್ಶಿಗಳು ಮತ್ತು ಕಮಿಷನರುಗಳು ಚರ್ಚೆಗಳನ್ನು ಮತ್ತು ಸಭೆಗಳನ್ನು ನಡೆಸಿದರು. ವಾಣಿಜ್ಯ ಸಂಸ್ಥೆ, ಪ್ರಮುಖ ಕಾರ್ಖಾನೆಗಳು ಮತ್ತು ಇತರ ಸಮಾಜಿಕ ಸಂಸ್ಥೆಗಳೊಡನೆ ಕುಟುಂಬ ಯೋಜನೆ ಬಗ್ಗೆ ಇನ್ನೂ ಹೆಚ್ಚಿನ ಸಮಾಲೋಚನೆಗಳನ್ನು ನಡೆಸಲಾಗುತ್ತಿವೆ.

ದೆಹಲಿ ರಾಜ್ಯದಲ್ಲಿ 34 ಲಕ್ಷ ಜನರು 573 ಚದರ ಮೈಲಿಗಳಲ್ಲಿ ವಾಸ ಮಾಡುತ್ತಿದ್ದಾರೆ. ದೆಹಲಿಯಲ್ಲಿ ಜನನ ಸಂಖ್ಯೆ ಏರಿಕ 1951—61ರಲ್ಲಿ ಶೇಕಡ 5ರಂತೆ ಇತ್ತು. ಈಗ ಉದ್ದೇಶಿಸಿರುವ ವ್ಯಾಪಕ ಕುಟುಂಬ ಯೋಜನೆಯ ಕಾರ್ಯಕ್ರಮಕ್ಕಾಗಿ ದೆಹಲಿ ಪ್ರದೇಶವನ್ನು 60 ಪ್ರಾದೇಶಿಕ ಭಾಗಗಳನ್ನಾಗಿ ಮಾಡಿ, ಪ್ರತಿಯೊಂದು ಭಾಗದಲ್ಲಿ ವಾಸಿಸುವ ಸುಮಾರು 50,000 ಜನಕ್ಕೆ ಕುಟುಂಬ ಯೋಜನೆಯ ಸಮಗ್ರ ವ್ಯಾಪಕ ಸೇವೆಯು ಮುಟ್ಟುವಂತ ವ್ಯವಸ್ಥೆ ಮಾಡಲಾಗಿದ. ಜನ ಸಂಖ್ಯೆ ಪ್ರಕಾರ ದೆಹಲಿಯಲ್ಲಿ ಕನಿಷ್ಟ 61 ಕುಟುಂಬ ಯೋಜನೆಯ ಕೇಂದ್ರಗಳಿರಬೇಕಾಗುತ್ತದ. ಆದರೆ, ಈಗ 100 ಕೇಂದ್ರಗಳು ಕೆಲಸ ಮಾಡುತ್ತಿವೆ. ಗ್ರಾಮ ಪ್ರದೇಶದಲ್ಲಿ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕೆಲಸ ಮಾಡುತ್ತಿವೆ. 1965ನೇ ಜುಲೈ 15ರಂದು ವಂಕಿ ಪ್ರಯೋಗದ ಕಾರ್ಯವನ್ನು ಆರಂಭಿಸಲಾಯಿತು. 1966ನೇ ಫೆಬ್ರುವರಿ ಕೊನೆಯ ಹೊತ್ತಿಗೆ ಸುಮಾರು 23293 ವಂಕಿಯನ್ನು ಪ್ರಯೋಗಿಸಲಾಗಿದೆ. ಪ್ರಸ್ತುತ 15 ಶಸ್ತ್ರ ಚಿಕಿತ್ಸೆ ಕುಟುಂಬ ಯೋಜನಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಆದರಲ್ಲಿ ಒಂದು ಸಂಚಾರಿ ಕೇಂದ್ರವೂ ಸೇರಿದೆ. 1960ರಲ್ಲಿ ಆರಂಭವಾದಾಗ 171 ಸಂತಾನ ಹರಣ ಚಿಕಿತ್ಸೆಯನ್ನು ಕೈಗೊಂಡಿದ್ದರೆ, ಇಲ್ಲಿಯ ತನಕ 14,543 ಶಸ್ತ್ರ ಚಿಕಿತ್ಸೆಯನ್ನು ನಡೆಸಲಾಗಿದೆ. 1965ನೇ ಇಸವಿಯಲ್ಲಿಯೇ 3409 ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಕೈಗೊಳ್ಳಲಾಗಿದೆ.

ದೆಹಲಿ ರಾಜ್ಯದಲ್ಲಿಯ ಸರ್ಕಾರಿ ಖಾಸಗಿ ಹಾಗೂ ಸ್ವಯಂಸೇವಾ ಸಂಸ್ಥೆಗಳ ಸಂಪೂರ್ಣ ಸಹಕಾರ ಸಹಯೋಗದಿಂದ ನಗರದಲ್ಲಿಯ 1000 ಜನಕ್ಕೆ 50 ಕುಟುಂಬಗಳಂತೆಯೂ ಗ್ರಾಮಾಂತರದಲ್ಲಿಯ 1000 ಜನಕ್ಕೆ 25 ಕುಟುಂಬಗಳಂತೆಯೂ ಈ ಕುಟುಂಬಯೋಜನೆಯ ಸೇವೆ ತಲುಪಿ ಅವರು ಜನನ ನಿಯಂತ್ರಣ ಕಾರ್ಯವನ್ನು ಶಸ್ತ್ರ ಚಿಕಿತ್ಸೆ ರೂಢಿಗತವಾದ ಪದ್ಧತಿಯ ಮೂಲಕ ಜಾರಿಗೆ ತರಬೇಕೆನ್ನುವ ಉದ್ದೇಶವನ್ನು ಸಾಧಿಸಲಾಗುವುದೆಂದು ನಿರೀಕ್ಷಿಸಲಾಗಿದೆ. ಈ ಗುರಿಯನ್ನು ಸರಿಸುಮಾರಾಗಿ ಸಾಧಿಸಿದರೂ, ಮುಂದಿನ ಎರಡು ವರ್ಷಗಳಲ್ಲಿ ಜನನ ಸಂಖ್ಯೆಯಲ್ಲಿ ನಾಟಕೀಯ ಪರಿಣಾಮಕಾರಿಯಾದ ಇಳುವರಿಯಾಗಿರುವುದನ್ನು ಕಾಣಬಹುದು. ಇಲ್ಲಿ ಪಡೆಯುವ ಅನುಭವಗಳು, ದೇಶದ ಇತರ ಭಾಗಗಳಲ್ಲಿ ವ್ಯಾಪಕ ಕುಟುಂಬ ಯೋಜನೆಯನ್ನು ಜಾರಿಗೆ ತರಲು ಉತ್ತೇಜನವನ್ನೂ ವಿಶ್ವಾಸವನ್ನೂ ನೀಡುವುದರಲ್ಲಿ ಸಂಶಯವಿಲ್ಲ. ಹೀಗೆ ರಾಷ್ಟ್ರಕ್ಕೆ ಆದರ್ಶ ನೀಡುವ ಕುಟುಂಬ ಯೋಜನೆ ಕಾರ್ಯಕ್ರಮವು ದೆಹಲಿಯಲ್ಲಿ ರೂಪಗೊಂಡಿದೆ.

ಅಮೃತ ಬಿಂದು

ಸಮಯದ ಸವೆತಕ್ಕೆ ಬಗ್ಗದ ಮತ್ತು ಕುಗ್ಗದ ವಸ್ತುಗಳೇ ಸ್ವರ್ಗೀಯವಾದುವುಗಳು. ಉದಾಹರಣೆಗೆ ದಯೆ, ಪ್ರೀತಿ, ನ್ಯಾಯಶೀಲತೆ, ವಿಶಾಲ ಮನೋಭಾವ ಇತ್ಯಾದಿ.

o o o

ಉದಾರ ದಾನಿಯಾದ ನ್ಯಾಯವಾದಿ ಮತ್ತು ನ್ಯಾಯ ತಕ್ಕಡಿಯನ್ನು ಬಿಡದ ಉದಾರಿ ಇವರಿಬ್ಬರೂ ಕೂಡ ಸದ್ದುಗದ್ದಲಗಳಿಲ್ಲದೆಯೇ ಭಗವಂತನ ಸಿಂಹಾಸನದ ಬಳಿಸೇರುವರು.

o o o

ಸ್ವರ್ಗದ ಸೋಪಾನವನ್ನು ನಾನು ಏರುವ ಮೊದಲು ನನ್ನೊಳಗೆ ನಾನು ಸ್ವರ್ಗ ನಿರ್ಮಿಸಿಕೊಂಡಿರಬೇಕು.

o o o

ಪವಿತ್ರ ಜೀವನವೆಂದರೆ ಏಕಾಂತ, ತ್ಯಾಗ ಪ್ರಶಾಂತ, ಸದಾ ಚಿಂತನೆಯ ವಿರಕ್ತ ಜೀವನವಲ್ಲ ದೈವಿಕ ಸತ್ಯದಿಂದ, ಅನಂತ ವಿಶ್ವಾಸದಿಂದ ಹಿತ ಹಾಗೂ ನಿಕಟವಾಗಿರುವ ಜೀವನ ಈ ಜಗತ್ತಿನಲ್ಲಿ ನಾವು ಬದುಕಿರುವಾಗಲೇ ಜಗತ್ತಿಗೆ ಅಂಟಿಕೊಳ್ಳದ ಜೀವನ.

ಭವ್ಯ ಭವಿಷ್ಯತ್ತಿನ ನಿರ್ಮಾಣಕ್ಕಾಗಿ ಒಂದಾಗಿ ದುಡಿಯೋಣ

(ಹತ್ತನೇ ಪುಟ ನೋಡಿರಿ)

ಳೂ ಪಡೆಯಲು ಅನುಕೂಲವಾಗುವಂತೆ ನಾವು ಪಡೆದಿರುವ ಹಣವನ್ನು ಮರುಪಾವತಿ ಮಾಡಬೇಕು.

ನಮ್ಮ ಸಮಾಜದ ಮಕ್ಕಳು ಅಧಿಕ ಸಂಖ್ಯೆಯಲ್ಲಿ ಹಳ್ಳಿಯಿಂದ ವಿದ್ಯಾಭ್ಯಾಸಕ್ಕಾಗಿ ಪೇಟೆಗೆ ಬರುವವರಿರುತ್ತಾರೆ. ಇಂದಿನ ವರೆಗೆ ಅವರ ಹೆತ್ತವರು ಹೆಚ್ಚು ವಿದ್ಯಾವಂತರಾಗಿಲ್ಲದಿರುವುದರಿಂದ ತಮ್ಮ ಮಕ್ಕಳು ಯಾವ ವಿಷಯಗಳ ಬಗ್ಗೆ ವ್ಯಾಸಂಗ ನಡೆಸುತ್ತಾರೆ ಅವರ ಅಭಿರುಚಿ ಏನು, ಅವರಿಗೆ ಯಾವ ಉದ್ಯೋಗ ಹಿಡಿಸೀತು ಎಂಬುದನ್ನು ತಿಳಿಯಲಾರದವರಾಗಿದ್ದಾರೆ. ಹುಡುಗರಿಗಂತೂ ತಮಗೆ ಮುಂದಿನ ಜೀವನದಲ್ಲಿ ಯಾವ ಯಾವ ಅವಕಾಶಗಳಿವೆ ಎಂಬ ವಿಚಾರ ಮೊದಲೇ ತಿಳಿದಿರುವುದಿಲ್ಲ. ಯಾವ ವಿಷಯಗಳನ್ನು ಆರಿಸಿ ವ್ಯಾಸಂಗ ಮಾಡಿದರೆ ಹುಡುಗರ ಭವಿಷ್ಯ ಉಜ್ವಲವಾದೀತು ಎಂಬ ಮಾಹಿತಿಯನ್ನು ಒದಗಿಸಿಕೊಡಲು ವ್ಯಾಸಂಗ ಮತ್ತು ಉದ್ಯೋಗ ಸಲಹಾ ಸಮಿತಿಯನ್ನು career guidance committee ರಚಿಸಿ ತನ್ಮೂಲಕ ವಿದ್ಯಾರ್ಥಿಗಳಿಗೆ ಯೋಗ್ಯವಾದ ಸಲಹೆಗಳನ್ನು ನೀಡುವ ವ್ಯವಸ್ಥೆ ಮಾಡಬೇಕು.

ನಮ್ಮ ಸಮಾಜದ ಮದುವೆಗಳು ಮಿತಿ ಮೀರಿದ ದುರ್ವ್ಯಯದ ವ್ಯವಹಾರವಾಗಿ ಪರಿಣಮಿಸಿ ನಮ್ಮ ಸಮಾಜದ ಹಣವೆಲ್ಲ ಪೇಟೆಪಟ್ಟಣಗಳಲ್ಲಿ ಸೋಲುಹೋಗುವ ಪರಿಸ್ಥಿತಿಯುಂಟಾಗಿದೆ ಎಂಬ ವಿಚಾರವನ್ನು ವಿಷಾದದಿಂದ ನಾನು ಹೇಳಬೇಕಾಗಿದೆ. ಮದುವೆಯೆಂಬುದು ಸಂತೋಷದ ಕಾರ್ಯವಾಗಿದ್ದು ಮದುವೆ ಮಾಡಿಸಿದ ಹೆತ್ತವರು ತೃಪ್ತಿಯ ಉಸಿರು ಬಿಡಬೇಕಾದದ್ದು ಸಾಮಾನ್ಯವಾಗಿ ನಾವು ಅಪೇಕ್ಷಿಸಬೇಕಾದ ವಿಷಯ. ಆದರೆ ಈಗಿನ ನಮ್ಮ ಸಮಾಜದ ಮದುವೆಗಳು ಹೆತ್ತವರನ್ನು ಸಾಲದ ಮಡುವಿನಲ್ಲಿ ಇಳಿಸಿ ಅವರ ಜೀವನವನ್ನೇ ದುಃಖಮಯವಾಗುವಂತೆ ಮಾಡುತ್ತಿವೆ. ಇದಕ್ಕೆ ಕಾರಣ ಇಂದಿನ ವರದಕ್ಷಿಣೆ--ಉಡುಗೊರೆಗಳ ಪದ್ಧತಿ, ಮದುವೆಗೆ ವಿಪರೀತ ವೆಚ್ಚ ಮಾಡುವ ಸಂಪ್ರದಾಯ ಮತ್ತು ಮದುವೆಗಳು ಪೇಟೆ ಪಟ್ಟಣಗಳಲ್ಲಿ ನೆರವೇರುವ ರೂಢಿ.

ಸಮಾಜದ ಕುಂದು ಕೊರತೆಗಳನ್ನು ಕಾನೂನಿನಿಂದ ನಿವಾರಿಸುವುದು ಸುಲಭಸಾಧ್ಯವಲ್ಲ ಎಂಬುದಕ್ಕೆ ವರದಕ್ಷಿಣೆ ನಿಷೇಧ ಕಾನೂನು ಒಳ್ಳೆಯ ಉದಾಹರಣೆಯಾಗಿದೆ. ನಮ್ಮ ಸಮಾಜದ ಮುಂದಾಳುಗಳೇ ಈ ದಿಕ್ಕಿನಲ್ಲಿಯೂ ಮುಂದಾಗಿ ಬಂದು ವರದಕ್ಷಿಣೆ ಸ್ವೀಕರಿಸದಂತೆ ನಮ್ಮ ಯುವಕರನ್ನೂ ಹೆತ್ತವರನ್ನೂ ಒತ್ತಾಯಿಸಬೇಕು. ಹಾಗೆಯೇ ಮದುವೆಯೆಂದರೆ ದುರ್ವ್ಯಯಕ್ಕೆ ಇನ್ನೊಂದು ಹೆಸರಲ್ಲ; ಅದು ಹೆತ್ತವರು, ಸಮೀಪದ ಬಂಧುಗಳು ಮತ್ತು ಊರ ಕೆಲವು ಹಿರಿಯರು ಸೇರಿ ನಡೆದ ಒಂದು ಸಂತೋಷ ಕೂಟ ಎಂಬ ಭಾವನೆ ನಮ್ಮ ಜನರಲ್ಲಿ ಮೂಡಿಬರುವಂತೆ ಪ್ರಯತ್ನ ಮಾಡಬೇಕು. ಆಮಂತ್ರಣ ಪತ್ರಿಕೆಗಳೆಂದರೆ ಬೇಕಾದವರು ಬೇಡಾದವರು ಎಲ್ಲ ಬಂದು ಕಪ್ಪಕಾಣಿಕೆಗಳನ್ನು ನೀಡಬೇಕೆಂದು ಒತ್ತಾಯಿಸುವ ವಾರಂಟು ಆಗಿರದೆ ಯುವಜನರು ದಾಂಪತ್ಯ ದೀಕ್ಷೆಯನ್ನು ವಹಿಸುವರೆಂಬುದನ್ನು ಸಮಾಜಕ್ಕೆ ತಿಳಿಯಪಡಿಸುವ ತಿಳುವಳಿಕೆ ಪತ್ರಗಳಾಗಿದ್ದರೆ ಸಾಕು.

ಈ ಮೊದಲೇ ಹೇಳಿದಂತೆ ಸಂಘವು ನಮ್ಮ ಸಮಾಜದ ಸೇವೆಗಾಗಿ ಸಂಗ್ರಹಿಸಿದ ಹಣ ಅತ್ಯಲ್ಪ. ಸಮಾಜ ಸೇವಾ ಮನೋಭಾವದಿಂದ ನಮ್ಮಲ್ಲಿ ಅನೇಕ ಜನ ಶ್ರೀಮಂತರು ಉದಾರ ಧನಸಹಾಯ ನೀಡಿದ್ದಾರೆ ನೀಡುತ್ತಿದ್ದಾರೆ, ಇನ್ನೂ ನೀಡಬಹುದು. ಆದರೆ ನಮ್ಮಲ್ಲಿ ಶ್ರೀಮಂತರ ಸಂಖ್ಯೆ ಕಡಿಮೆಯಿರುವುದರಿಂದ ಅವರಿಂದ ಸಂಗ್ರಹಿಸಿದ ಹಣ ನಮ್ಮ ಆವಶ್ಯಕತೆಗಳನ್ನು ಪೂರೈಸಲು ಸಾಕಾಗಲಾರದು. ಸಂಗ್ರಹವಾದ ಅತ್ಯಲ್ಪ ನಿಧಿಯೂ ಸಮೃದ್ಧವಾಗಿ ಬೆಳೆಯುವಂತಹ ಅವಕಾಶವನ್ನೂ ನಾವು ಕೊಟ್ಟಿಲ್ಲ. ಹೆಚ್ಚು ಲಾಭಾಂಶ ನೀಡುವ ಉದ್ಯಮಗಳಲ್ಲಿ ಅದನ್ನು ವಿನಿಯೋಗಿಸುವ ಪ್ರಯತ್ನವನ್ನು ಸಂಘ ಮಾಡಬಹುದು. ನಿಧಿಯು ಅಭಿವೃದ್ಧಿಯಾಗುವಂತೆಯೂ ನಮ್ಮ ಸಮಾಜಕ್ಕೆ ಉಪಕಾರವಾಗುವಂತೆಯೂ ಈ ಹಣವನ್ನು ವಿನಿಯೋಗಿಸಲು ಯೋಜನೆಗಳನ್ನು ಮಾಡಬಹುದು. ನಮ್ಮ ಕೃಷಿಕರಿಗೆ ಬೇಕಾಗುವ ಪಂಪು ಸೆಟ್ಟುಗಳು, ಪವರ್ ನೇಗಿಲುಗಳು ಮುಂತಾದವುಗಳನ್ನು ವಿತರಣೆ ಮಾಡುವ ಮಧ್ಯವರ್ತಿ ಸಂಸ್ಥೆಗಳಲ್ಲಾಗಲೀ ನಿರ್ಮಾಣ ಮಾಡುವ ಉದ್ಯಮಗಳಲ್ಲಾಗಲೀ ಸಂಘದ ಹಣವನ್ನು ವಿನಿಯೋಗಿಸಿದಲ್ಲಿ ಅಪಾರ ಲಾಭವಾಗಬಹುದು. ಬಂಡವಾಳ ಹಾಕಬಲ್ಲ ಶ್ರೀಮಂತರೂ ಸಂಘವೂ ಸೇರಿ ಇಂತಹ ಉದ್ಯಮಗಳನ್ನು ಆರಂಭಿಸುವುದು ಅಸಾಧ್ಯವೂ ಅಲ್ಲ. ಈ ನಿಟ್ಟಿನಲ್ಲಿ ನಮ್ಮ ಪ್ರತಿಷ್ಠಿತ ವ್ಯಕ್ತಿಗಳೂ ಸಂಘವೂ ಯೋಚಿಸಬೇಕಾಗಿ ಕೋರುತ್ತೇನೆ.

ನಮ್ಮ ಜಿಲ್ಲೆಯಲ್ಲಿ ನಮ್ಮ ಸಮಾಜದ ಜನರು ಬಹು ಸಂಖ್ಯಾಕರಾಗಿರುವುದರಿಂದ ಅವರಲ್ಲಿ ಪರಸ್ಪರ ಅಭಿಪ್ರಾಯ ಭೇದಗಳು ಪಕ್ಷ ಪಂಗಡಗಳು ಇರುವುದು ಸ್ವಾಭಾವಿಕವಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಈ ಅಭಿಪ್ರಾಯ ಭೇದಗಳು ಪ್ರಬಲವಾಗಿ ಕಾಣಿಸಿಕೊಂಡು ಪರಸ್ಪರ ಸ್ಪರ್ಧೆಯಲ್ಲಿ ಪರ್ಯವಸಾನಗೊಳ್ಳುವುದು ಬಹಳ ಸಾಮಾನ್ಯವಾಗಿದೆ. ಆದರೆ ಜಾತೀಯ ಭೇದಗಳು ಅಲ್ಲಿಯೇ ಕೊನೆಗೊಳ್ಳದೆ ವೈಯಕ್ತಿಕ ದ್ವೇಷದ ರೂಪವನ್ನು ತಾಳುತ್ತಿರುವುದು ಚಿಂತಾಜನಕವಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಯಾವುದೇ ಮತ ಭೇದಗಳಿದ್ದರೂ ವೈಯಕ್ತಿಕ ಜೀವನಕ್ಕೆ ಅದು ಹರಡದಂತೆ ನೋಡಿಕೊಂಡು ಪರಸ್ಪರ ಸೌಹಾರ್ದವನ್ನು ಉಳಿಸಿಕೊಂಡು ಬರಬೇಕೆಂದು ನಾನು ನನ್ನ ಸಮಾಜಬಂಧುಗಳನ್ನು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಸಮಾಜವೆಂದರೆ ಅನೇಕ ವ್ಯಕ್ತಿಗಳ ಸಮುದಾಯ. ಯಾವ ಸಮಾಜದ ವ್ಯಕ್ತಿಗಳು ಕಾರ್ಯಶೀಲರಾಗಿರುತ್ತಾರೋ ಆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಸಾಹಸಿಯಾಗಬೇಕು, ಕಾರ್ಯಶೀಲನಾಗಬೇಕು. ಮನುಷ್ಯ ತನ್ನ ಉದ್ಧಾರಕ್ಕಾಗಿ ಮುಖ್ಯವಾಗಿ ತಾನೇ ಪ್ರಯತ್ನಿಸಬೇಕು. "ಸಾಹಸಿಯಾದವನು ಸುವರ್ಣ ಪುಷ್ಪಗಳನ್ನು ಕೊಯ್ಯುತ್ತಾನೆ" ಎಂಬ ಕವಿವಾಕ್ಯ ನಮ್ಮ ಯುವಕರ ಧ್ಯೇಯ ವಾಕ್ಯವಾಗಬೇಕು. ನಮ್ಮ ಹಿರಿಯರು ಸಾಹಸಿಗಳಾಗಿದ್ದರು, ರಾಜ್ಯಕಟ್ಟಿ ಅರಸರಾಗಿದ್ದರು, ಸೇನಾಧಿಪತಿಗಳಾಗಿದ್ದರು, ವೀರಯೋಧರಾಗಿದ್ದರು. ಯಾವ ಸಮಾಜಕ್ಕೆ ಉಜ್ವಲವಾದ ಭೂತಕಾಲವಿಲ್ಲವೋ ಅದಕ್ಕೆ ಉಜ್ವಲವಾದ ಭವಿಷ್ಯವೂ ಇಲ್ಲ ಎಂದು ಹೇಳುತ್ತಾರೆ. ನಮ್ಮ ಸಮಾಜದ ಭೂತಕಾಲ ಅತ್ಯಂತ ಉಜ್ವಲವಾಗಿತ್ತು. ನಮ್ಮ ಭವಿಷ್ಯತ್ತೂ ಉಜ್ವಲವಾಗುವುದರಲ್ಲಿ ಸಂಶಯವಿಲ್ಲ. ಆ ಭವ್ಯ ಭವಿಷ್ಯತ್ತಿನ ನಿರ್ಮಾಣಕ್ಕಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಹೆಣಗೋಣ.

ಜೈ ಹಿಂದ್

ಬೇಕಾಗಿದ್ದಾರೆ
ವರದಕ್ಷಿಣೆ ಬೇಡ.

ಬಂಟರ (ನಾಡವರ) ಜಾತಿಯವನಾಗಿರುವ ಮದ್ರಾಸ್ ಗವರ್ನ್‌ಮೆಂಟ್ ರಿಟಾಯರ್ಡ್ ಗಜೆಟೆಡ್ ಆಫೀಸರನ ಮಕ್ಕಳಿಗೆ-ಎಂದರೆ(1) ಬಿ. ಎ. ಪಾಸಾಗಿದ್ದು ಸಪೂರವಾಗಿಯೂ, 5ಫೀಟ್ 2 ಇಂಚ್ ಉದ್ದವಾಗಿಯೂ, ರೂಪವತಿಯಾಗಿಯೂ ಇರುವ 21ವರ್ಷ ಪ್ರಾಯದ ಮಗಳಿಗೆ ಮದುವೆಯಾಗಲು ಅದೇ ಜಾತಿಯ ಡಾಕ್ಟರ್, ಇಂಜಿನೀಯರ್ ಅಥವಾ ಇತರ ಯೋಗ್ಯ ಉದ್ಯೋಗದಲ್ಲಿರುವ 30ವರ್ಷ ಪ್ರಾಯದೊಳಗಿನ ಹುಡುಗನು ಬೇಕಾಗಿದ್ದಾನೆ ಮತ್ತು ಇವಳ 3 ಅಣ್ಣಂದಿರಿಗೆ, ಎಂದರೆ-- (2) ಮದ್ರಾಸಿನಲ್ಲಿ ತಿಂಗಳಿಗೆ ರೂ.600ಸಂಬಳ ಪಡೆಯುತ್ತಿರುವ, ಆಫೀಸರ್ ಕೆಲಸದಲ್ಲಿರುವ 32ವರ್ಷ ಪ್ರಾಯದವನಿಗೆ 18ರಿಂದ 25ವರ್ಷದೊಳಗಿನ ಒಬ್ಬಳು ಹುಡುಗಿ;(3) ಮದ್ರಾಸಿನಲ್ಲಿ ತಿಂಗಳಿಗೆ ರೂ.300 ಸಂಬಳಪಡೆಯುತ್ತಿರುವ26 ವರ್ಷ ಪ್ರಾಯದವನಿಗೆ ಮತ್ತು (4) ಮದ್ರಾಸಿನಲ್ಲಿ ತಿಂಗಳಿಗೆ ರೂ 250ಸಂಬಳ ಪಡೆಯುತ್ತಿರುವ 25ವರ್ಷ ಪ್ರಾಯದವನಿಗೆ—15ರಿಂದ 18ವರ್ಷದೊಳಗಿನ ಇಬ್ಬರು ಹುಡುಗಿಯರು ಮದುವೆ ಬಗ್ಗೆ ಬೇಕಾಗಿದ್ದಾರೆ.ವರದಕ್ಷಿಣೆ ಎಂಬ"ಡಾರಿ" ಕೊಡುವುದು ಬೇಡಾ. ಹುಡುಗಿಯರು, ರೂಪವಂತರೂ, ವಿದ್ಯಾವಂತರೂ, ಗುಣವತಿಯರೂ ಆಗಿದ್ದು ಸಪೂರವಾಗಿಯೂ ಉದ್ದವಾಗಿಯೂ ಇರಬೇಕು. 3ಮಂದಿ ಹುಡುಗರೂ ಮದ್ರಾಸ್ ಯುನಿವರ್ಸಿಟಿ ಗ್ರಾಜುವೇಟುಗಳಾಗಿಯೂ, ಪೋಸ್ಟ್ ಗ್ರಾಜುವೇಟುಗಳಾಗಿಯೂ, ಕ್ರಿಕೆಟ್ ಆಡುವವರಾಗಿಯೂ, 5 ಫೀಟ್ 6 ಇಂಚ್ ಉದ್ದವಿದ್ದು, ಗುಣವಂತರಾಗಿಯೂ ಸುಂದರರಾಗಿಯೂ ಇದ್ದಾರೆ. ಮದ್ರಾಸಿನಲ್ಲಿ ಇವರಿಗೆ ದೊಡ್ಡ ಸ್ವಂತ ಮನೆ ಇದೆ. ಮನಸ್ಸುಳ್ಳವರು—

Box No. 50 C/o Navayuga Weekly
P. B. No. 22,
Udipi, S. K.

ಎಂಬ ಎಡ್ರೆಸ್ಸಿಗೆ, ಹುಡುಗನ ∣ ಹುಡುಗಿಯರ ಜಾತಕ ಸಮೇತ ಬರೆಯಿರಿ.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P. ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು........

ಧನ (¼ H.P. to 30 H.P.) ಇಲೆಕ್ಟ್ರಿಕ್ ಮೋಟಾರು ಮತ್ತು ಪಂಪು ಸೆಟ್ಟುಗಳು........

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಶ್ರೀ ಚೈತನ್ಯ ಮಹಾಪ್ರಭು

(ಆರನೇ ಪುಟದಿಂದ)

ಮುರಾರಿಯು ಕೋಪದಿಂದ ರೇಗಿದನು. ದಿನ ನಿಮಾಯಿಯು ಗೃಹದಲ್ಲೇ ಊಟಕ್ಕೆ ನಿಂತನು. ಊಟದ ಸಮಯ ನಿಮಾಯಿಯು ಓಡಿಬಂದು ಮುರಾರಿಯ ಬಟ್ಟಲಿಂದ ಸ್ವಲ್ಪ ಅನ್ನವನ್ನು ತೆಗೆದು ತಿಂದುಬಿಟ್ಟನು. ಮುರಾರಿಯು ಬೆರಗಾದನು. ನಿಮಾಯಿಯು ತೊದಲು ನುಡಿಗಳಿಂದ ಮುರಾರಿಯನ್ನು ಕರೆದು ಈ ರೀತಿ ಜರೆದನು "ಮುರಾರಿ, ನಿನ್ನ ಸುಳ್ಳು ತತ್ವಗಳನ್ನು ಬಿಟ್ಟುಬಿಡು. ಶ್ರೀ ಹರಿಯ ಪೂಜನವನ್ನು ಶ್ರದ್ಧೆಯಿಂದ ಮಾಡಿ ನಿನ್ನ ಆತ್ಮಬಲವನ್ನು ವೃದ್ಧಿಸು." ಮುರಾರಿಯು ತಣ್ಣಗಾದನು. ನಿಮಾಯಿಯು ದೇವಸಂಭೂತ ಕುಮಾರನೆಂದು ತಿಳಿದನು. ಆತನ ಪಾದದಡಿಗೆ ಬಿದ್ದನು. ಈ ರೀತಿ ವರ್ತಿಸುವುದು ತಪ್ಪೆಂದು ನಿಮಾಯಿಯ ತಾತನು ಮುರಾರಿಗೆ ತಿಳಿಸಿದನು. ಆ ಸಮಯ, ನಿಮಾಯಿಯ ಅಣ್ಣ ವಿಶ್ವರೂಪನಿಗೆ ೧೬ ವರ್ಷ ಪ್ರಾಯವು. ಆತನು ಕೂಡ ಸುಂದರನೂ ವಿವೇಕಿಯೂ ಆಗಿದ್ದನು. ಆತನಲ್ಲಿ ಚೇಷ್ಟೆಗಳಿರಲಿಲ್ಲ. ಆತನ ವಿವಾಹಕ್ಕಾಗಿ ಪಿತನು ಯೋಚಿಸುತ್ತಿರುವಾಗ, ತಾನು ಸನ್ಯಾಸಿಯಾಗುವೆನೆಂದು ಪಿತನಲ್ಲಿ ಧೈರ್ಯದಿಂದ ಹೇಳಿದನು. ಒಂದು ದಿನ ರಾತ್ರೆ ಭಗವದ್ಗೀತೆಯ ಪುಸ್ತಕದ ಪ್ರತಿಯೊಂದನ್ನು ಕೈಯಲ್ಲಿ ಹಿಡಿದು ಭಾಗೀರಥಿ ನದಿಯನ್ನು ಈಜಿ ಪುರತ್ಯಾಗ ಮಾಡಿದನು.

ಆತನು ಕಾಣದಿದ್ದಾಗ ತಾಯ್ತಂದೆಯರಲ್ಲಿ ಶೋಕವು ಅತಿರೇಕವಾಯಿತು. ತಾಯಿಯು ಮೂರ್ಛಿತಳಾದಳು, ಉಪವಾಸವನ್ನು ಆಚರಿಸಿದಳು. ಆಗ ಬರೇ ೭ ವರ್ಷ ಪ್ರಾಯದ ನಿಮಾಯಿಯು ಆಕೆಯನ್ನು ಸಂತೈಸಿ ಈ ರೀತಿ ನುಡಿದನು:— 'ಅಮ್ಮಾ, ವಿಶ್ವರೂಪನ ಬದಲಿಗೆ, ನಿನಗೆ ನಾನಿರುವೆನು. ನಿನ್ನ ಯಾವತ್ತು ಕೆಲಸಗಳನ್ನು ನಾನು ನಿರ್ವಹಿಸುವೆನು.'

ಅನಂತರ ನಿಮಾಯಿಯು ಸಂಸ್ಕೃತ ಸಾಹಿತ್ಯದ ಕಡೆಗೆ ಲಕ್ಷ್ಯವಿಟ್ಟು ಪಾಂಡಿತ್ಯವನ್ನು ಸಂಪಾದಿಸಿದನು. ಅವನ ಮಾತಾಪಿತರಿಗೆ ಬಹಳ ಆನಂದವಾಯಿತು. ಆತನಿಗೆ ಒಂಭತ್ತು ವರ್ಷ ತುಂಬಿದಾಗ ಯಜ್ಞೋಪವೀತ ಧಾರಣವಾಯಿತು. ಅಂದಿನಿಂದ ಆತನ ತಂದೆಯು ಅವನನ್ನು ವಿಶ್ವಂಭರನೆಂದು ಕರೆಯಲಾರಂಭಿಸಿದನು. ಆತನ ವಿದ್ವತ್ತು ಏರೇರಿ ಬಂತು. ಪರಮಾತ್ಮನ ಲೀಲೆಯು ವಿಚಿತ್ರಮಯವು. ಬಾಲಕನಿಗೆ ಹತ್ತು ವರ್ಷಗಳು ತುಂಬುವ ಮೊದಲೇ ಪಿತನು ದೈವಾಧೀನನಾದನು. ಎರಡು ದಿನಗಳ ಜ್ವರವು ಆತನ ಪ್ರಾಣವನ್ನು ಹಾರಿಸಿತು. ಆತನ ಪತ್ನಿಯು ಶೋಕಿತಳಾದರೂ, ಪುತ್ರನ ಅಭ್ಯುದಯವೇ ತನ್ನ ಮುಂದಿನ ಧರ್ಮವೆಂದು ಎಣಿಸಿದಳು. ಗಂಗಾದಾಸ ನಾಮದ ಸುಪ್ರಸಿದ್ಧ ಸಂಸ್ಕೃತ ಪಂಡಿತನಲ್ಲಿ ಪುತ್ರನ ವಿದ್ಯೆಯು ಸಾಂಗವಾಗಿ ನಡೆಯಿತು. ಶಾಲೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದನು. ಆಗ ಅವನ ವಯಸ್ಸು ೧೪. ಅಷ್ಟು ಚಿಕ್ಕ ವಯಸ್ಸಿನಲ್ಲೆ ಸಂಸ್ಕೃತ ವ್ಯಾಕರಣದ ವಿಷಯ ಒಂದು ವ್ಯಾಖ್ಯಾನವನ್ನು ಬರೆದನು. ಅನಂತರ ತರ್ಕಶಾಸ್ತ್ರವನ್ನು ಕಲಿತನು. ತಾರ್ಕಿಕರಲ್ಲಿ ಅಗ್ರಗಣ್ಯನಾದ ವಾಸುದೇವನೆಂಬವನು ಆತನ ಗುರುವಾದನು. ತರ್ಕದಲ್ಲೂ ಅತ್ಯಂತ ನಿಪುಣನಾದನು. ಆ ಕಾಲದ ಮಹಾ ತಾರ್ಕಿಕನಾದ ರಘುನಾಥನೆಂಬವನನ್ನು ಸೋಲಿಸಿದನು. ತರ್ಕ ಶಾಸ್ತ್ರದ ವಿಷಯ ಒಂದು ವ್ಯಾಖ್ಯಾನವನ್ನು ಬರೆದನು. ರಘುನಾಥನು ಬೇಸರಪಟ್ಟು ಅಳಲಾರಂಭಿಸಿದನು. ತನ್ನಿಂದ ತನ್ನ ಶಿಷ್ಯನು ಮಿಗಿಲಾದನೆಂದು ಚಿಂತಿಸಿದನು. ತಕ್ಷಣ ನಿಮಾಯಿಯು ತಾನು ಬರೆದ ತರ್ಕಶಾಸ್ತ್ರದ ವ್ಯಾಖ್ಯಾನದ ಹಸ್ತ ಪ್ರತಿಯನ್ನು ಭಾಗೀರಥಿ ನದಿಯಲ್ಲಿ ಬಿಸುಟ್ಟು, ಈ ಶಾಸ್ತ್ರದಿಂದ ಏನೂ ಪ್ರಯೋಜನ ಸಿಗದು ಎಂದು ರಘುನಾಥನನ್ನು ಸಂತೈಸಿದನು. ದೇಶಕ್ಕೆ ಒಂದು ಉತ್ತಮ ಪುಸ್ತಕವು ನಷ್ಟವಾಯಿತೆಂದು ಎಲ್ಲ ವಿದ್ವಾಂಸರೂ ವ್ಯಸನಿಸಿದರು. ನಿಮಾಯಿಯು ಭಕ್ತಿ ಯೋಗವನ್ನೇ ತನ್ನ ಮುಂದಿನ ಧ್ಯೇಯವಾಗಿ ನಿರ್ಣಯಿಸಿದನು.

೧೬ ವರ್ಷಗಳಾದೊಡನೆ ಒಂದು ಖಾಸಗಿ ಪಾಠ ಶಾಲೆಯನ್ನು ಸ್ಥಾಪಿಸಿ ತಾನಲ್ಲಿ ಅಧ್ಯಾಪಕನಾದನು. ಅದು ಅವನ ಹಿರಿಯರ ವೃತ್ತಿಯು. ಇಡೀ ನಡಿಯಾ ಜಿಲ್ಲೆಯಲ್ಲಿ ಅವನ ಶಾಲೆಯು ಪ್ರಸಿದ್ಧಿ ಹೊಂದಿತು. ಹಲವು ದೂರದ ಊರಿನ ತರುಣರು ದ್ವೀಪಕ್ಕೆ ಬಂದು ಆ ಶಾಲೆಯನ್ನು ಸೇರಿದರು. ಹಲವು ವಿದ್ಯಾರ್ಥಿಗಳು ಪ್ರಾಯದಲ್ಲಿ ಅವನಿಂದಲೂ ಹಿರಿಯರಾಗಿದ್ದರು. ಅವರಿಗೆ ತಕ್ಕ ಮನ್ನಣೆಯನ್ನು ಕೊಡುತ್ತಿದ್ದನು. ಕೆಲವು ಶಿಷ್ಯರು ಮಾತ್ರ ಆವನ ಮೇಲೆ ಮತ್ಸರವನ್ನು ಹೊಂದಿದರು. ಒಳ್ಳೆಯವರ ಗುಂಪಿನಲ್ಲಿ, ಕೆಟ್ಟವರು ಕೂಡ ಇರುವುದು ವಾಡಿಕೆಯು.

ನಿಮಾಯಿಯ ಮಾತೆಯು ಮಗನಿಗೆ ವಿವಾಹವಾಗಬೇಕೆಂದು ಕೇಳಿಕೊಂಡಳು. ಒಂದು ರೂಪವತಿ ಕನ್ನಿಕೆಯನ್ನು ಕೂಡಾ ಗೊತ್ತು ಮಾಡಿದಳು. ಮಾತೆಗೆ ನಿಮಾಯಿಯು ಸಂಪೂರ್ಣ ವಿಧೇಯನಾಗಿದ್ದನು. ಆವಳನ್ನು ದೇವರೆಂದೇ ಭಾವಿಸಿದ್ದನು. ಆ ಕನ್ನಿಕೆಯು ವಲ್ಲಭಾಚಾರ್ಯನೆಂಬ ಹೆಸರಿನ ಪಂಡಿತರ ಗುಣವಂತೆ ಮತ್ತು ರೂಪವತಿಯಾದ ಮಗಳು. ನಿಮಾಯಿಯು ಆಕೆಯನ್ನು ಸಂತೋಷದಿಂದ ವಿವಾಹವಾದನು– ಅವಳನ್ನು ಅಗಾಧವಾಗಿ ಪ್ರೀತಿಸುತ್ತಿದ್ದನು. ದಂಪತಿಗಳ ಪ್ರೇಮವು ಆದರ್ಶವಾಗಿತ್ತು. ಆಕೆಯ ನಾಮಧೇಯ ಲಕ್ಷ್ಮಿ ಎಂದು. ನಿಮಾಯಿಯ ಶಾಲೆ ಹೆಸರುವಾಸಿಯಾಯಿತು. ಅದು ದೇವಸ್ಥಾನವೆಂದು ಹಲವರು ನೆನಸಿದರು. ಆಗ ನಿಮಾಯಿಯ ಆರೋಗ್ಯವು ಸ್ವಲ್ಪ ಕೆಡುತ್ತ ಬಂದು ಹಲವು ವಾರಗಳ ತನಕ ಆತನು ನಿರ್ಬಲನಾಗಿದ್ದನು. ಆತನ ಕೆಲವು ಶತ್ರುಗಳು, ಆತನನ್ನು ಹುಚ್ಚನೆಂದು ಹೇಳಲಾರಂಭಿಸಿದರು. ಅನಂತರ ಆರೋಗ್ಯವು ಸರಿಯಾದಾಗಲೂ, ಹಲವರು ಆತನನ್ನು ಉನ್ಮತನೆಂದೂ ಹೀಯಾಳಿಸುತಿದ್ದರು. ಅನಂತರ ಆತನು ಧ್ಯಾನಾಭಿಲಾಷಿಯಾದನು. ಪಾರಮಾರ್ಥಿಕ ಜೀವನವೇ ತನ್ನ ಜೀವನವೆಂದು ನಿಶ್ಚಯ ಮಾಡಿಕೊಂಡನು. ವಂಗದೇಶದ ಇತರ ಪ್ರದೇಶಗಳ ಸಂಚಾರಮಾಡಬೇಕೆಂಬ ಆಶೆಯು ಆವನಲ್ಲಿ ಮೊಳಗಿತು. ತಾಯಿಯನ್ನು ವಿಚಾರಿಸಿದಾಗ ಅವಳು ತನ್ನ ಸಮ್ಮತಿಯನ್ನಿತ್ತಳು. ಹಲವು ಜಿಲ್ಲೆಗಳಲ್ಲಿ ಸಂಚರಿಸಿದನು. ಆತನ ಪಾಂಡಿತ್ಯಕ್ಕೆ ಎಲ್ಲರೂ ತಲೆದೂಗಿದರು. ೧೮ ತಿಂಗಳುಗಳ ತನಕ ಸಂಚರಿಸಿ ಪುನಃ ನವದ್ವೀಪಕ್ಕೆ ಬಂದನು. ಆತನು ಸಂಚಾರದಲ್ಲಿ ಊರಹೊರಗಿದ್ದಾಗ ಆತನ ಸುಪತ್ನಿ ಲಕ್ಷ್ಮಿಯು ಸರ್ಪದ ಕಡಿತದಿಂದ ಮೃತ್ಯುವಶಳಾಗಿದ್ದಳು. ಈ ಸಂಘಟನದಿಂದ ನಿಮಾಯಿಯಲ್ಲಿ ವೈರಾಗ್ಯವು ಉದ್ಭವಿಸಿತು. ಪತ್ನಿ ವಿಯೋಗಕ್ಕಾಗಿ ಬಹಳ ಶೋಕಪಟ್ಟನು. ತಾನು ಸತ್ತೆನೆಂದೇ ಭಾವಿಸಿದನು. ತನ್ನ ಆತ್ಮ ಶಕ್ತಿಯ ಒಂದಂಶವು ಸತ್ತು ಹೋಯಿತೆಂದನು. ಆತನ ಪತ್ನೀಪ್ರೇಮವು ಅಪಾರವಾದುದು. ಕನಸಿನಲ್ಲಿ ದಿನನಿತ್ಯ ಪತ್ನಿಯನ್ನೇ ಕಂಡು ಅಳಲಾರಂಭಿಸಿದನು. ಆ ವಿಯೋಗದ ನೋವನ್ನು ತಡೆಯಲಾರದೇ ಹುಚ್ಚನಂತಾದನು. ಕೆಲವು ತಿಂಗಳುಗಳು ಕಳೆದ ಅನಂತರ ಮೊದಲಿನಂತಾದನು. ಶಾಲೆಯ ಕಡೆಗೆ ದೃಷ್ಟಿಯಿಟ್ಟು, ವಿದ್ಯಾರ್ಥಿಗಳ ಸಂಖ್ಯೆಯನ್ನು ಏರಿಸಿದನು. ಹಲವು ಧನಿಕರು ಈತನ ಶಾಲೆಗೆ ಧನವನ್ನು ದಾನವಾಗಿ ಸುರಿದರು. ತಾಯಿಗೆ ಸದಾಕಾಲ ವಿಧೇಯನಾಗಿ ನಡೆದನು. ಮನೆ ವಾರ್ತೆ ಜಾಗ್ರತೆಯನ್ನು ಸಂಪೂರ್ಣ ತಾಯಿಗೆ ಬಿಟ್ಟುಕೊಟ್ಟನು.

ಆಗ ಒಂದು ದಿನ ಆ ಪಟ್ಟಣಕ್ಕೆ ಕೇಶವ ಕಾಶ್ಮೀರಿ ಎಂಬ ಹೆಸರುವಾಸಿಯಾದ ವಿದ್ವಾಂಸನು ಬಂದನು. ಆತನು ಸರಸ್ವತಿಯ ದತ್ತಪುತ್ರನೆಂದು ಹಲವರು ಹೇಳುತಿದ್ದರು. ಆತನು ಮಹಾಜ್ಞಾನಿಯು, ಉತ್ತಮಭಾಷಣಕರ್ತನು ಸರಸ್ವತಿಯು ಆತನ ಜಿಹ್ವಾಗ್ರದಲ್ಲಿ ನೆಲಸಿದ್ದಳು. ಆತನ ಭಾಷಣ ಶ್ರವಣಕ್ಕೆ ಸಾವಿರಾರು ಜನರು ಗುಂಪಾಗುತಿದ್ದರು. ನಿಮಾಯಿಯ ಶತ್ರುಗಳು ಕಾಶ್ಮೀರಿಗೂ, ನಿಮಾಯಿಯ ಒಂದು ತರ್ಕವಾದಕ್ಕಾಗಿ ಕರೆಯಿಸಿದ್ದರು. ನಿಮಾಯಿಯನ್ನು ಅಪಮಾನಗೊಳಿಸುವುದೇ ಆ ವೈರಿಗಳ ಉದ್ದೇಶವಾಗಿತ್ತು. ನಿಮಾಯಿಯು ತರ್ಕವಾದದಲ್ಲಿ ಕೇಶವಕಾಶ್ಮೀರಿಯನ್ನು ಸಂಪೂರ್ಣ ಸೋಲಿಸಿದನು. ಕಾಶ್ಮೀರಿಯು ತನ್ನ ಸೋಲನ್ನು ಒಪ್ಪಿ ನಿಮಾಯಿಗೆ ವಿದ್ಯಾಸಾಗರನೆಂಬ ಬಿರುದನ್ನು ದಯಪಾಲಿಸಿದನು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 57 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ವೀರ ಬೈರಾಗಿ!

(ಐದನೇ ಪುಟದಿಂದ)

ರ್ಯದಿಂದ ಸಿಕ್ಖರಲ್ಲಿ ನವಶಕ್ತಿಯು ಸಂಚಾರವಾಯಿತು.

ಈ ವಿಜಯ ಯಾತ್ರೆಯಲ್ಲಿ ವೀರಬೈರಾಗಿಗೆ ದೊರೆತ ಬಾದಶಹನ ಕಡೆಯವರ ದ್ರವ್ಯ ಮತ್ತು ಅನೇಕ ಸಾಮಾಗ್ರಿಗಳಲ್ಲಿ ವೀರ ಬೈರಾಗಿಯು ಸ್ವಲ್ಪ ಅಂಶವನ್ನೂ ಸಹ ತನ್ನ ಸ್ವಂತಕ್ಕಾಗಿ ಇಟ್ಟುಕೊಳ್ಳಲಿಲ್ಲ; ಬಾದಶಹನ ಮಹಾ ಸೈನ್ಯವನ್ನು ಕ್ಷಣಾರ್ಧದಲ್ಲಿ ಕಡಿಕಡಿದುರುಳಿಸಿ ಪರಾಭವಗೊಳಿಸಿದ ವೀರ ಬೈರಾಗಿಗೆ ಈಗ ಸೀಖ್ ಜನಾಂಗದ ಮುಖಂಡತ್ವದ ಪಟ್ಟ ಸುಲಭವಾಗಿ ಲಭಿಸುತ್ತಿತ್ತು. ಆದರೆ ವೀರ ಬೈರಾಗಿಯು ವಿರಕ್ತ ಸನ್ಯಾಸಿಯಾಗಿದ್ದುದರಿಂದ ಅವನು ಅದಾವುದನ್ನೂ ಅಪೇಕ್ಷಿಸಲಿಲ್ಲ.

ಇತ್ತ ದಿಲ್ಲಿಯ ಬಾದಶಹನ ಕ್ರೋಧ ಮುಗಿಲು ಮುಟ್ಟಿತ್ತು. ಅಷ್ಟಾದರೂ ಬಾದಶಹನಿಂದ ಮತ್ತೇನೂ ಮಾಡಲಾಗಲಿಲ್ಲ. ಆ ಬಳಿಕ ಫರೂಕನೆಂಬವನು ದಿಲ್ಲಿಯ ಸಿಂಹಾಸನವನ್ನೇರಿದನು. ವೀರ ಬೈರಾಗಿಯನ್ನು ಹಿಡಿಯಲು ಫರೂಕನು ಉಪಾಯದ — ಮಾರ್ಗವನ್ನು ಹುಡಿದನು. ಆ ಕಾಲದಲ್ಲಿ ಕಾಶ್ಮೀರದ ಸುಬೇದಾರನಾಗಿದ್ದ ಅಬ್ದುಲ್ ಮಹಮ್ಮದನಿಗೆ— ಹೇಗಾದರೂ, ಯಾವುದಾದರೂ ಉಪಾಯದಿಂದ ಬೈರಾಗಿಯನ್ನು ಸೆರೆ ಹಿಡಿಯಬೇಕೆಂದು ಗುಪ್ತವಾಗಿ, ಬಾದಶಹನು ಹೇಳಿ ಕಳುಹಿಸಿದನು. ಮಹಮ್ಮದ್ ಖಾನನು ಚತುರನಾಗಿದ್ದ ಕಾರಣ ವೀರ ಬೈರಾಗಿಯನ್ನು ಹಿಡಿಯಲು ಮೋಸ— ಮತ್ತು ವಂಚನೆಯ ದಾರಿಯನ್ನು ಹಿಡಿದನು. ಮತ್ತು ಸಿಕ್ಖ ಜನತೆಯನ್ನು ಕೆರಳಿಸಲು ಈ ರೀತಿಯ ಸಂದೇಶವೊಂದನ್ನು ಪಂಜಾಬಿಗೆ ಕಳುಹಿಸಿದನು— ‘ಬಾದಶಹರಿಗೆ ಸಿಕ್ಖರ ಮೇಲೆ ಸ್ವಲ್ಪವೂ ದ್ವೇಷವಿಲ್ಲ. ಅವರು ಬಾದಶಹರ ಮಿತ್ರರಾಗಿರುವುದರಿಂದ ಸಿಕ್ಖರ ಮುಖಂಡನಿಗೆ ಅವರು ರಾಜ್ಯದ ಗದ್ದುಗೆಯನ್ನು ಕೊಡಲು ಸಿದ್ಧರಿರುವರು. ಆದರೆ ಆ ವೀರ ಬೈರಾಗಿಯ ಉಪಟಳದಿಂದ ಇವೆಲ್ಲವೂ ಅಸಾಧ್ಯವಾಗಿದೆ. ಆತನೇನೂ ಸಿಕ್ಖ ಜನಾಂಗಕ್ಕೆ ಸೇರಿದವನಲ್ಲ. ಆತನನ್ನು ನೀವೆಲ್ಲರೂ ನಿಮ್ಮ ಪಂಗಡದಿಂದ ಬಿಟ್ಟು ಬಿಡಬೇಕು’ ಎಂಬುದೇ ಈ ನಯವಾದ ಸಂದೇಶವಾಗಿತ್ತು.

ಸಿಕ್ಖರು ಮಹಮ್ಮದನ ನಯವಾದ ಮೋಸದ ಮಾತಿಗೆ ಮರುಳಾಗಿ ಹೋದರು ಮತ್ತು ವೀರ ಬೈರಾಗಿಗೆ— ‘ನೀವು ಈಗ ಸೀಖ್ ಧರ್ಮವನ್ನು ಸ್ವೀಕರಿಸಿದರೆ ಈಗ ಎಲ್ಲವೂ ಸರಿ ಹೋಗುವುದು ಎಂದು ಒತ್ತಾಯ ಪಡಿಸಿದರು. ಆದರೆ ವೀರ ಬೈರಾಗಿಯು ಇಂತಹ ಪ್ರಲೋಭನಗಳಿಗೆ ಒಳಗಾಗುವವನಾಗಿರಲಿಲ್ಲ. ಆತನು ಸಿಕ್ಖರಿಗೆ ಸ್ಪಷ್ಟವಾಗಿ—‘ನಾನು ಮತಾಂತರ ಹೊಂದಲು ನನ್ನ ಹಿಂದೂ ಧರ್ಮವು ಯಾವ ದೃಷ್ಟಿಯಿಂದಲೂ ಕೀಳ್ಮಟ್ಟದ್ದಾಗಿಲ್ಲ. ಯಾವುದೇ ಲೌಕಿಕ ವ್ಯವಹಾರ ಕಾರಣಗಳಿಗಾಗಿ ಅಥವಾ ಮುಖಂಡತ್ವದ ಆಸೆಗಾಗಿ ನಾನು ನನ್ನ ಧರ್ಮವನ್ನು ಬಿಟ್ಟು, ಬೇರೊಂದು ಧರ್ಮವನ್ನು ಸ್ವೀಕರಿಸಲಾರೆ ಎಂದು’ ಹೇಳಿದನು.

ವೀರ ಬೈರಾಗಿಯ ಈ ಮಾತಿನಿಂದ ಸಿಕ್ಖರು ಅಸಮಾಧಾನಗೊಂಡರು. ಐಕ್ಯದಲ್ಲಿ ಒಡಕುಂಟಾಗಿ ಕೆಲವೇ ಮಂದಿ ಮಾತ್ರ ಬೈರಾಗಿಯ ಸಹಾಯಕರಾಗಿ ಉಳಿದರು. ಮಹಮ್ಮದನಿಗೆ ಬೇಕಾದುದೂ ಅದೇ ಆಗಿತ್ತು. ಈ ಸಂದರ್ಭವನ್ನು ಬಿಡದೆ ಮಹಮ್ಮದನು ಬೈರಾಗಿಯನ್ನು ಬೆನ್ನಟ್ಟಿದನು. ವೀರ ಬೈರಾಗಿ ಮತ್ತು ಆತನ ಸಂಗಡಿಗರಾದ ೭೪೦ ಮಂದಿ ಅನುಯಾಯಿಗಳೂ ಸಹ ಸೆರೆ ಹಿಡಿಯಲ್ಪಟ್ಟರು. ಕೂಡಲೇ ಅವರೆಲ್ಲರನ್ನೂ ದಿಲ್ಲಿಗೆ ಕಳುಹಿಸಿ ಬಾದಶಹನ ಮುಂದೆ ನಿಲ್ಲಿಸಲಾಯಿತು.

‘ನೀವೆಲ್ಲರೂ ಮುಸಲ್ಮಾನೀ ಧರ್ಮವನ್ನು ಸ್ವೀಕರಿಸುವಿರಾದರೆ ಮಾತ್ರ ಬದುಕಿ ಉಳಿಯುವಿರಿ. ಇಲ್ಲದಿದ್ದರೆ ಸಾಯುವಿರಿ’ ಎಂದು ಬಾದಶಹನು ಗರ್ಜಿಸಿದನು. ಆದರೆ ವೀರ ಬೈರಾಗಿ ಮತ್ತು ಆತನ ಸಂಗಡಿಗರಲ್ಲಿ ಯಾರೂ ಸಹ ಧರ್ಮಭ್ರಷ್ಟರಾಗಲು ಒಪ್ಪಲಿಲ್ಲ. ಆ ಬಳಿಕ ಅವರೆಲ್ಲರನ್ನೂ ಒಂದು ದಿನಕ್ಕೆ ಒಂದು ನೂರು ಜನರಂತೆ ಕ್ರಮವಾಗಿ ನಿರ್ದಯವಾಗಿ ಕೊಲೆ ಮಾಡಲಾಯಿತು.

ಹೀಗೆ ಒಂದು ವಾರ ಕಳೆದೊಡನೆ ವೀರ ಬೈರಾಗಿಯನ್ನು ನಗರದ ಹೊರಗೆ ನಿಶ್ಚಿತವಾದ ಸ್ಥಳಕ್ಕೆ ಕರೆದೊಯ್ದು ಆತನಿಗೆ ಕೊಡಬೇಕಾದ, ಸ್ವತಃ ಬಾದಶಹನಿಂದಲೂ ನೋಡುತ್ತಿರಲು ಅಸಾಧ್ಯವಾದ ರೀತಿಯ ಹಿಂಸೆಯ ಯೋಜನೆಯನ್ನು ಕಾರ್ಯಾಚರಣೆಗೆ ತರಲಾಯಿತು.

ವೀರ ಬೈರಾಗಿಯು ಸಂಕಲೆಗಳಿಂದ ಬಿಗಿಯಲ್ಪಟ್ಟಿದ್ದನು! ಮೊದಲೇ ಸೆರೆ ಹಿಡಿದು ಕರೆದುಕೊಂಡು ಬಂದಿದ್ದ ವೀರ ಬೈರಾಗಿಯ ಏಕ ಮಾತ್ರ ಪುತ್ರನನ್ನು ತಂದೆಯಾದ ಬೈರಾಗಿಯ ಎದುರಿಗೇ ದರದರನೆ ಎಳೆದು ತರಲಾಯಿತು. ಮತ್ತು ನಿರ್ದಯವಾಗಿ, ತಂದೆಯ ಎದುರಿಗೇ ಮಗನ ಎದೆಯನ್ನು ಸೀಳಿ, ಕರುಳನ್ನು ಚೆಲ್ಲಲಾಯಿತು! ಈ ನಿರ್ದಯೀ ಕೃತ್ಯ ಅಷ್ಟಕ್ಕೇ ನಿಲ್ಲಲಿಲ್ಲ. ವೀರ ಬೈರಾಗಿಯ ಅಂಗಾಂಗಗಳನ್ನು ಸುಲಿದು, ಆ ಸುಲಿದ ಭಾಗಗಳಿಗೆ ಕೆಂಡದಿಂದ ಸುಟ್ಟ ಬಳಿಕ ಬೆಂದ ಆ ಸ್ಥಳದ ಮಾಂಸವನ್ನು ಚಿಮಿಟಿಗಳಿಂದ ಕುಕ್ಕಿ ಕುಕ್ಕಿ ಕೀಳಲಾಯಿತು! ಇಷ್ಟೆಲ್ಲ ಬಗೆಯ ಕ್ರೂರ ಹಿಂಸೆಯನ್ನು ಕೊಡುತ್ತಿದ್ದರೂ, ವೀರ ಬೈರಾಗಿಯ ಮುಖದಲ್ಲಿ ನೋವಿನ ಯಾವ ಭಾವವೂ ಕಾಣಿಸದಿದ್ದುದನ್ನು ಕಂಡ ಬಾದಶಹನು— ಅತ್ಯಂತ ವಿಸ್ಮಿತನಾಗಿ—‘ಎಯ್! ನಿನಗೆ ಈ ಪರಿಯಿಂದ ಹಿಂಸೆ ಕೊಡುತ್ತಿದ್ದರೂ ನೀನು ಸುಮ್ಮನೆ ಕಲ್ಲಿನಂತೆ ನಿಂತಿರುವೆಯಲ್ಲ? ಇದೇನಯ್ಯಾ! ನಿನ್ನ ವಿಚಿತ್ರ ವರ್ತನೆ? ನಿನಗೆ ನೋವಾಗುವುದಿಲ್ಲವೆ?” ಎಂದನು. ಆಗ, ಆ ಅದ್ಭುತ ವೀರನು—‘ನಶ್ವರವಾದ ಈ ದೇಹಕ್ಕೆ ನೀವುಗಳು ಏನು ಮಾಡಿದರೂ ಪ್ರಯೋಜನವಿಲ್ಲ! ಆತ್ಮವು ಅಮರವೂ ದುಃಖರಹಿತವೂ ಆಗಿರುವುದು. ಆತ್ಮವನ್ನು ಅರಿತವನಿಗೆ ಮಾತ್ರ ಈ ವಿಚಾರ ತಿಳಿದೀತು!” ಎಂದನು.

ವೀರ ಬೈರಾಗಿಯ ಈ ದೃಢಮನೋಭಾವವನ್ನು ಕಂಡು— ಬಾದಷಹನೂ ಇತರರೂ ಸಹ ಅವಾಕ್ಕಾಗಿ ಹೋದರು! ಆ ಬಳಿಕ ಆ ನಿರ್ದಯೀ ಬಾದಶಹನು ವೀರ ಬೈರಾಗಿಯ ದೇಹವನ್ನು ಆನೆಯ ಕಾಲಿನ ಅಡಿಗೆ ಹಾಕಿಸಿ ಛಿನ್ನಭಿನ್ನಗೊಳಿಸಿ ತೃಪ್ತಿಯ ಉಸಿರ್ಗರೆದನು!

ಧರ್ಮ ರಕ್ಷಣೆಗಾಗಿ ಬಲಿಯಾದ ವೀರ ಬೈರಾಗಿಯು ಇತಿಹಾಸದಲ್ಲಿ ಅಮರನಾಗಿರುವನು!

(‘ಪುರುಷಾರ್ಥ’ದಿಂದ.)

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ.

R. I. A. 191/1966 in O. S. 89/1964

ಹೇಮಾವತಿ ಹೆಗ್ಗಡ್ತಿ— (ವಾದಿ) ಅರ್ಜಿದಾರಳು.

ನೀಲು ಹೆಂಗ್ಸು ಸಹಾ— (ಪ್ರತಿವಾದಿರು) ಯದ್ರಿರು.

ಎದ್ರಿರು.

1.	ನೀಲು ಹೆಂಗ್ಸು	ವೆಂಕು ಹೆಂಗ್ಸಿನ ಮಕ್ಕಳು.
3.	ಅಂಣು ಮ್ಯೊಲಿ	
4.	ಮುಂಜಮ್ಮ ಹೆಂಗ್ಸು	
6.	ಅಪ್ಪು ಮ್ಯೊಲಿ	ದಾರಾಮು ಹೆಂಗ್ಸಿನ ಮಕ್ಕಳು.
7.	ಅಂಣು ಮ್ಯೊಲಿ	
8.	ಗಿರಿಜ ಹೆಂಗ್ಸು	
9.	ಚೆನ್ನಣ ಮ್ಯೊಲಿ	1ನೇ ಪ್ರತಿವಾದಿ ನೀಲು ಹೆಂಗ್ಸಿನ ಮಕ್ಕಳು
10.	ಮುಕ್ರು ಹೆಂಗ್ಸು	
11.	ಚೆನ್ನಪ್ಪ ಮ್ಯೊಲಿ— 2ನೇ ಪ್ರತಿವಾದಿ ಟೀಕು ಹೆಂಗ್ಸಿನ ಮಗ	
14.	ಅಮ್ಮು ಮ್ಯೊಲಿ	4ನೇ ಪ್ರತಿವಾದಿ ಮುಂಜಮ್ಮ ಹೆಂಗ್ಸಿನ ಮಕ್ಕಳು.
15.	ಕಾಳಿ ಹೆಂಗ್ಸು	
16.	ಧರ್ಣು ಹೆಂಗ್ಸು— ಸೀತು ಹೆಂಗ್ಸಿನ ಮಗಳು.	
17.	ಮುತ್ತು ಹೆಂಗ್ಸು	5ನೇ ಪ್ರತಿವಾದಿ ಎಲಿಯಪ್ಪೆ ಹೆಂಗ್ಸಿನ ಮಕ್ಕಳು.
18.	ನಾರಾಯಣ ಮ್ಯೊಲಿ	
19.	ನಾಗು ಹೆಂಗ್ಸು	
20.	ಅಮ್ಮಿ ಮ್ಯೊಲಿ	
21.	ಬಾಬು- 4ನೇ ಪ್ರತಿವಾದಿ ಮುಂಜಮ್ಮನ ಮಗ.	
22.	ನೀಲಮ್ಮ	16ನೇ ಪ್ರತಿವಾದಿ ಧರ್ಣು ಹೆಂಗ್ಸಿನ ಮಕ್ಕಳು.
23.	ಗಿರಿಜ	
26.	ಅಪ್ಪಿ ಹೆಂಗ್ಸು— 17ನೇ ಪ್ರತಿವಾದಿ ಮುತ್ತು ಮಗಳು.	

ಎಲ್ಲರೂ ಬೆಳ್ತಂಗಡಿ ತಾಲ್ಕು ವೇಣೂರು ಗ್ರಾಮದ ಮಾರ್ಗಮನೆ ಎಂಬಲ್ಲಿರುವವರು. ಯಿವರೀಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:—

ಮೇಲ್ಕಂಡ ವ್ಯಾಜ್ಯದ ಪ್ರಿಲಿಮಿನರಿ ಡಿಕ್ರಿ ವಿಧಿ ಮೇರೆಗೆ ಅರ್ಜಿದಾರಳಿಗೆ ಬಹಾ ಪೈಸ್ಲೆ ಆವಜಿಗೆ ಜವಾಬ್ದಾರಿ ಯಿರುವ ಆಸ್ತಿ ಏಲಂ ಕುರಿತು ಫೈನಲ ಡಿಕ್ರಿ ಕೊಡಿಸಬೇಕೆಂತ ವಗೈರೆ ಅರ್ಜಿದಾರಳು ನಿಮ್ಮ ವಗೈರರ ಮೇಲೆ ಮಾಡಿದ ಮೇಲಿನ ಅರ್ಜಿ ತಾ. 4-6-1966ಕ್ಕೆ ತನ್ಕಿಗೆ ಯಿಟ್ಟಿರುತ್ತದೆ. ಸದ್ರಿ ಅರ್ಜಿ ಕುರಿತು ನಿಮ್ಮ ಆಕ್ಷೇಪಗಳೇನಾದರೂ ಯಿದ್ದರೆ ಸದ್ರಿ ವ್ಯಾಢೆ ದಿನ ಪೂರ್ವಾಹ್ನ ಗಂಟೆ 10 ಕ್ಕೆ ನೀವು ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿವ್ಯಾ ಮಾಡಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾದೀತು.

By order of the Court.

B. K. Suryanarayana Rao.
Advocate for Petitioner

ಬೆಳ್ತಂಗಡಿ, ತಾ. 28-4-1966

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 21/1966

ವೀರಮ್ಮ ಹೆಂಗ್ಸು ಕೂಡಾ— ವಾದಿರು.

ಯಮುನ ಹೆಂಗ್ಸು ಕೂಡಾ— ಪ್ರತಿವಾದಿರು.

ಈ ವ್ಯಾಜ್ಯದ ಪ್ರತಿವಾದಿರು

4. ಅಪ್ಪಣ್ಣ ಪೂಜಾರಿ 5. ಬಾಬು ಪೂಜಾರಿ.

ಪಾಚೋಳಿ ಯಾನೆ ಪದ್ಮ ಹೆಂಗ್ಸಿನ ಮಕ್ಕಳು, ಬೆಳ್ತಂಗಡಿ ತಾಲ್ಕು ಸುಳ್ಕೇರಿಮೊಗ್ರು ಗ್ರಾಮದ ಪಟ್ಲ ಎಂಬಲ್ಲಿರುವವರು- ಯಿವರೀಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ವಾದಿರು, ಅವಾರ್ಡ ಪರಿಹಾರದಿಂದ ಆಸ್ತಿ ಸ್ವಾಧೀನತೆ ವಗೈರೆ ನಿವೃತ್ತಿಗಳಿಗೆ ನಿಮ್ಮ ಮೇಲೆ ಕೂಡಾ ಮಾಡಿರುವ ಮೇಲಿನ ದಾವೆಯನ್ನು ತಾ. 7—6—1966ಕ್ಕೆ ತನ್ಕಿಗೆ ಯಿಟ್ಟಿರುತ್ತದೆ. ಸದ್ರಿ ದಾವೆಯಲ್ಲಿ ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ಸದ್ರಿ ವ್ಯಾಢೆ ದಿನ ಪೂರ್ವಾಹ್ನ ಗಂಟೆ 10 ಕ್ಕೆ ನೀವು ಸ್ವತಃ ಯಾ ವಕೀಲ್ ದ್ವಾರಾ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿವ್ಯಾ ಮಾಡಿ ದಾವೆಯನ್ನು ತೀರ್ಮಾನಿಸಲಾದೀತು.

(By Order of the Court)

B. K. Suryanarayana Rao.
Advocate for Plaintiffs

ಬೆಳ್ತಂಗಡಿ, ತಾ. 28—4—1966

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

...ಲ್ಲೆಲ್ಲಿ ಏನೇನು?

...ಡನಾಡು ಚೆನ್ನುಡ ಬೀಡು!

...ನಾಡು ಕನ್ನಡ ಚೆನ್ನುಡ ಬೀಡು. ಓ ...ವಿಯೊಡ "ಕಲಂಡಯ್ಕು" ನೆಂದಂತೆ— ...ನಾಲಗೆಯುಳ್ಳವಂ ಬಗೆವೊಡೆಂದುಂ ...ಕ್ಕುಳನಾ|ನೆಲನಂ ಮುತ್ತಿನ ಮೂನಿಸ ...ನವಿಶೇನಂ ಬಲ್ಲರಿಂಬೆಸೊಂದು ಬಲ್ಲುಲಿ ...ನೆತಾಳ್ದು ಕನ್ನಡ ಮೆನಿಪ್ಪಾನಾಡು ...ಪು|ಲ್ಲಲರಿಂ ಪೊತಕೊಳ್ಗಳಿಂ ...ಕಾಲೂರ್ಗಳಿಂ ಕೆಯ್ಗಳಿಂ"ಅಂದಂತೆ ...ಡಿನ ವರ್ಣನೆ ಮಾಡಲು ಅಸಾಧ್ಯವೆ ...ವಾಗಿದೆ. ಏಕೆಂದರೆ ಇಲ್ಲಿಯ ಪ್ರಕೃತಿ ...ರ್ಯ ಮೆಚ್ಚುವಂತಿದೆ. ಪಶ್ಚಿಮಕ್ಕೆ ಸಾ ...ದೊಡ್ಡದಾದ ಸಮುದ್ರ. ಬಹು ರಮ್ಯ ...ಣಿಸುತ್ತದೆ. ಮಲೆನಾಡಿನ ಸೌಂದ ...ಗೆ ತಂಪನ್ನೂ, ಮನಸ್ಸಿಗೆ ಇಂಪನ್ನೂ ...ಧಗಿಸುತ್ತದೆ. ಇಲ್ಲಿಯೇ ನೀಲಗಿರಿ ಬೆ ...ಸಾಲಾಗಿ ಹಬ್ಬಿಕೊಂಡಿವೆ. ಗುಡ್ಡಗಾ ...ದಯನ್ನ, ಜೋಗದ ಜಲಪಾತ ಬ ...ವಾಗಿ ಕಾಣಿಸುತ್ತಿವೆ. 1500 ಘೂ ...ಮೇಲಿಂದ ಶರಾವತಿ ನದಿಯು ಧು ...ರುವ ದೃಶ್ಯ ಮನ ತಣಿಸುತ್ತದೆ. ...ಡಿ ಅಣೆಕಟ್ಟು, ವೃಂದಾವನ ಕಣ್ಣ ...ಊಟ ಮಾಡಿಸುತ್ತವೆ. ಬೆಳಗಾವಿ ಜಿ ...ಗೋಕಾಕದ ಘಟಪ್ರಭಾ ನದಿಯ ಜ ...ತಂತಿಯ ಫಾಲ್ಸು ಹೆಸರುಗಳಿಸಿವೆ. ...ಡಗಿನ ಬೀಡಾಗಿದೆ. ಕೋಲಾರ ...ಣಿಯಾಗಿದೆ. ಕವಿ "ಬಾಲಚಂದ್ರ" ...ಅಂದಂತೆ "ಕರ್ನಾಟಕದ ಹಂಪೆ ...ರೂಪಾಕ್ಷ, ಬೇಲೂರು ಚೆನ್ನ ...ರ ಗುಡಿಯೇ ಅಂದ" ಹಾಗೂ ...ಯರೇ ವೀರರು ಎನ್ನಲು ಕಿತ್ತೂರ ಚೆ ...ಸಾಕ್ಷಿ. ಎನಲು ನಿತ್ಯಾನಂದ ಹೀಗೆ ...ಇಲ್ಲಿಯ ದೇವಸ್ಥಾನಗಳಲ್ಲಿ ಮುಖ್ಯ ...ಲೂರ ಚೆನ್ನಕೇಶ್ವರ, ಶ್ರವಣಬೆಳ್ಗೊ ...ಮಟೇಶ್ವರ, ಉಡುಪಿಯ ಶ್ರೀಕೃಷ್ಣ, ...ವಿರೂಪಾಕ್ಷ ದೇವಸ್ಥಾನಗಳು ಭಾರ ...ಖ್ಯಾತಿಹೊಂದಿವೆ. ಬಿಜಾಪುರದ ಗೋ ...ಟ ಜಗತ್ಪ್ರಸಿದ್ಧವಾಗಿದೆ. ಕರ್ನಾಟ ...ಚಿಮಾನೆತನಗಳಲ್ಲಿ ವಿಜಯನಗರ, ಬೇ ...ತ್ತೂರು, ಹಳೆಬೀಡು, ಬಿಜಾಪುರ ಇವೆಲ್ಲ ...ಬರುತ್ತವೆ. ಇಲ್ಲಿ ಎಲ್ಲತರದ ಹೂಗಿಡಗ ...ಮಲ್ಲಿಗೆ, ಜಾಜಿ, ಸಂಪಿಗೆ ನಾನಾ ...ಹೂಗಳೂ, ಹಣ್ಣಿನ ಗಿಡಗಳು, ಸಾಕ ...ವೆ. ಇಲ್ಲಿಯ ನದಿಗಳು ಶಾಂತವಾಗಿಜು ...ವೆಂದು ಹರಿಯುತ್ತವೆ. ಮಲಪ್ರಭಾ, ...ಭಾ, ಕೃಷ್ಣಾನದಿಗಳು ಕೂಡುವ ಸ್ಥ ...ದಲ ಸಂಗಮ ಚೆನ್ನಾಗಿದೆ. ಕಾವೇರಿ, ...ಕಾಳೀ ನದಿಗಳು ಸುಂದರವಾಗಿ ...ವೆ. ಏನೇ ಅಂದರು ನಮ್ಮ ಚಿನ್ನದ ಬೀ ...ಕನ್ನಡನಾಡನ್ನು ವರ್ಣಿಸಲು ಅಸಾಧ್ಯ ...

ಶ್ರೀ ಶಂಕರತನಯ. "ಬಿ. ಎಸ್."
(ಬೆಳಗಾವಿ)
ಮುಗುಟಖಾನ ಹುಬ್ಬಳ್ಳಿ

...ಸ್ಕೃತಿಕ ಕಾರ್ಯಕ್ರಮಗಳು

...ಶ್ಲೂರು ವಿಶ್ವೇಶ್ವರ ದೇವರ ಮಹೋತ್ಸ ...ಂಗವಾಗಿ ತಾ. 14-4-66ರಂದು ದಾ ...ಶ್ಲೂರು ಯುವಕ ಮಂಡಲವು ಪಲಿಮಾ ...ಮಭಜನಾ ಮಂದಿರ, ಕೆಮುಂಡೇ ...ಶ್ವನಾಥ ಭಜನಾ ಮಂಡಲಿಯವರ ಸ ...ಯೊಂದಿಗೆ ಸಾಮೂಹಿಕ ಭಜನಾ ಕಾ ...ರ್ಯಕ್ರಮವನ್ನು ನಡೆಸಿತು.

...15-4-66ರಂದು ಶ್ರೀ ಯಚ್. ...ಚಾರ್ಯರು ಗಜಗೌರೀವ್ರತವೆಂಬ ...ಭಾಗವನ್ನು ಆಯ್ದು ಹರಿಕಥೆ ಮಾಡಿ ...ಶ್ರೀ ವೈ. ಜಗದೀಶರಾಯರು ವೈ. ವಿ. ...ಧರರಾಯರು ಮತ್ತು ಹರಿದಾಸ ಉಡು ...ಹಿಮ್ಮೇಳನ ವಾದಕರಾಗಿದ್ದರು. ಅಂತ್ಯ ...ದಲ್ಲಿ ಸುಬ್ರಾಯ ಭಟ್ಟರವರು ಹರಿದಾ ...ಗಾನ ಮಾಡಿದರು. ಯುವಕ ಮಂಡ ...ಅಧ್ಯಕ್ಷ ಶ್ರೀ ವೈ. ರಾಮಚಂದ್ರ ಭ ...ರು ಧನ್ಯವಾದ ಸಮರ್ಪಿಸಿದರು.

16-4-66ರಂದು ಶ್ರೀ ಬಿಂ. ನಾರಾಯಣಾ ಚಾರ್ಯರಿಂದ ಭಾಗವತದ ಧಕ್ಷಾಧ್ವರ ಮತ್ತು ಅಂಬರೀಷ ಚರಿತ್ರೆಯ ಪುರಾಣ ವಾಚನವು ನಡೆಯಿತು.

ತಾ. 17-4-66ರಂದು ಸಂಗೀತ ವಿದ್ವಾನ್ ಡಾ| ಬಾಲಕೃಷ್ಣರಾಯರಿಂದ ಸಂಗೀತ ಕಛೇರಿಯು ಜರಗಿತು. ಶ್ರೀ ಜಗದೀಶರಾಯರು ಮತ್ತು ಹರಿದಾಸ ಉಡುಪರು ಹಿಮ್ಮೇಳನ ನುಡಿಸಿದರು. ಕೊನೆಗೆ ಶ್ರೀ ವೈ. ರಾಮಚಂದ್ರ ಭಟ್‌ರವರು ಧನ್ಯವಾದ ಸಮರ್ಪಿಸಿದರು.

ದಿ. ಡಾ. ಬಾಳಿಗರ ಜನ್ಮ ದಿನಾಚರಣೆ

ಮಣಿಪಾಲ, ಎ. ೨೬— ಮುಂಬಯಿಯ ಪ್ರಸಿದ್ಧ ಶಸ್ತ್ರಚಿಕಿತ್ಸಕರಾಗಿದ್ದ ಡಾ|| ಎ. ವಿ. ಬಾಳಿಗಾರವರಿಗೆ ಇಂದಿಲ್ಲಿ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಅವರ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ|| ಬಾಳಿಗರ ಅನುವರ್ತಿ ಶ್ರೀ ರಜನಿ ಪಟೇಲ್‌ರವರು ಮಾತನಾಡುತ್ತಾ ಡಾ|| ಬಾಳಿಗರು ಅಂತರ್ರಾಷ್ಟ್ರೀಯ ಸಹಕಾರದಲ್ಲಿ ನಂಬಿಗೆ ಹೊಂದಿದ್ದ ಮಾನವತಾವಾದಿಯಾಗಿದ್ದರೆಂದರು. ಅವರು ಯಾವಾಗಲೂ ಇತರರ ಅಭಿಪ್ರಾಯಗಳನ್ನು ಸ್ವಾಗತಿಸುತಿದ್ದುದರಿಂದ ಎಲ್ಲ ವರ್ಗಗಳ ಪ್ರೀತ್ಯಾದರಗಳನ್ನು ಗಳಿಸಿದ್ದರೆಂದರು. ಅವರ ವಿಶೇಷ ಉದಾರತೆ ನಮಗೆಲ್ಲ ಅನುಕರಣೀಯವಾಗಿದೆ ಎಂದೂ, ಹಾಗೆ ಮಾಡದಿದ್ದರೆ ಜನ್ಮ ದಿನಾಚರಣೆ ವ್ಯರ್ಥಗೊಳ್ಳುವುದೆಂದೂ ಶ್ರೀ ಪಟೇಲ್ ಹೇಳಿದರು.

ಮಂಗಳೂರಿನ ಡಾ|| ಎಂ. ಎಸ್. ಶಾಸ್ತ್ರಿಯವರು ಮಾತನಾಡಿ ಭಾರತ ಮತ್ತು ರಷ್ಯಾ ದೇಶಗಳೊಳಗೆ ಸ್ನೇಹ ಹಾಗೂ ಸೌಹಾರ್ದವನ್ನು ವರ್ಧಿಸುವುದಕ್ಕಾಗಿ ಡಾ||ಬಾಳಿಗರು ಭಾರತ-ರಷ್ಯಾ ಸಾಂಸ್ಕೃತಿಕ ಸಂಘವನ್ನು ಸ್ಥಾಪಿಸಿ ಬೆಳೆಸಿದ್ದನ್ನು ಶ್ಲಾಘಿಸಿದರು.

ಡಾ|| ಬಾಳಿಗರ ಸಹಪಾಠಿಯಾಗಿದ್ದ ಉಡುಪಿಯ ಡಾ|| ಪಿ. ಆರ್. ನಾಯಕ್ ರವರು ಮಾತನಾಡಿ ಡಾ|| ಬಾಳಿಗರು ಉತ್ತಮ ವಿದ್ಯಾರ್ಥಿಯಾಗಿದ್ದರೆಂದೂ, ಪ್ರಸಿದ್ಧಿಗಳಿಸಿದ ನಂತರ ಉದಾರ ದಾನಿಗಳಾದರೆಂದೂ ನುಡಿದರು.

ಕಸ್ತೂರಬಾ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರ್ ಡಾ|| ಟಿ ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿ ಶಸ್ತ್ರ—ಚಿಕಿತ್ಸೆಗಾಗಿ 200 ಹಾಸಿಗೆಗಳನ್ನುಳ್ಳ ಕಸ್ತೂರ್ಬಾ ಜನರಲ್ ಆಸ್ಪತ್ರೆಯು ಡಾ|| ಎ. ವಿ. ಬಾಳಿಗಾ ಶಸ್ತ್ರ ಚಿಕಿತ್ಸಾ ಸಂಸ್ಥೆಗೆ ಉದಾರ ಧನಸಹಾಯ ಮಾಡಬೇಕೆಂದು ಮನವಿಮಾಡಿಕೊಂಡರು. ಶ್ರೀ ರಮೇಶ ಪೈಯವರು ಸಂದೇಶಗಳನ್ನು ಓದಿದರು. ಡಾ|| ಬಾಳಿಗಾ ಶಸ್ತ್ರ ಚಿಕಿತ್ಸಾ ಸಂಸ್ಥೆಯ ಮುಖ್ಯಾಧಿಕಾರಿ ಡಾ|| ಎಂ. ವಿ. ಪೈಯವರು ವಂದನಾರ್ಪಣೆ ಮಾಡಿದರು.

ಎಕಾಡೆಮಿ ಓಫ್ ಜನರಲ್ ಎಜ್ಯುಕೇಶನಿನ ಸಂಸ್ಥಾಪನಾ ದಿನಾಚರಣೆ

ಕಳೆದ ತಾ. 30ರಂದು, ಡಾ| ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ, ಮಣಿಪಾಲದ ಎಕಾಡೆಮಿ ಓಫ್ ಜನರಲ್ ಎಜ್ಯುಕೇಶನಿನವರು ಏರ್ಪಡಿಸಿದ್ದ ಸಂಸ್ಥಾಪನಾ ದಿನಾಚರಣೆಯು ಉಡುಪಿ ವಿ. ಜೆ. ಯೂನಿಯನ್ ಕ್ಲಬ್ ಸಭಾಂಗಣದಲ್ಲಿ ಜರಗಿತು. ಜತೆಯಲ್ಲೇ ಎಕಾಡೆಮಿಯ ಸಂಸ್ಥಾಪಕ ಡಾ| ಟಿ. ಮಾಧವ ಪೈಗಳ ಹುಟ್ಟು ಹಬ್ಬದ ದಿನಾಚರಣೆಯೂ ನೆರವೇರಿತು.

ಆರಂಭದಲ್ಲಿ ಎಕಾಡೆಮಿಯ ಉಪಾಧ್ಯಕ್ಷ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ಸ್ವಾಗತಿಸಿ, ಕಳೆದ ಹಲವಾರು ವರುಷಗಳಿಂದ ಡಾ| ಪೈಯವರು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ವಿವರಿಸಿದರು. ಡಾ| ಪೈಗಳಿಗೆ ಸುಮಾರು 26 ಸಂಸ್ಥೆಗಳಿಂದ ಅವರ ಹುಟ್ಟು ಹಬ್ಬದ ನಿಮಿತ್ತ ಹೂಹಾರಾರ್ಪಣೆ ಗೈಯಲಾಯಿತು.

ಅಧ್ಯಕ್ಷರು ಮಾತನಾಡುತ್ತಾ, ಡಾ| ಪೈಯವರ ಕಾರ್ಯಗಳನ್ನು ಶ್ಲಾಘಿಸಿ, ಅವರಿಂದು ಎದುರಿಸುತ್ತಿರುವ ಟೀಕೆಗಳನ್ನು ಖಂಡಿಸಿ, ದೇಶದ ಶೈಕ್ಷಣಿಕ ಅಭಿವೃದ್ಧಿಗೆ ಖಾಸಗೀ ಸಂಸ್ಥೆಗಳು ಹಲವಾರು ರಾಷ್ಟ್ರಗಳಲ್ಲಿ ತುಂಬಾ ಸಹಕರಿಸಿರುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಲ್ಲದೇ ವಿದ್ಯಾ ಮಟ್ಟದಲ್ಲಿ ಸುಧಾರಣೆ, ಬದಲಾವಣೆ ಸ್ವಲ್ಪ ಮಟ್ಟಿಗಾದರೂ ಆಗಿರುವುದಾದರೂ ಖಾಸಗೀ ಸಂಸ್ಥೆಗಳ ಪ್ರಯತ್ನದಿಂದ ಎಂದು ನುಡಿದರು. ಮುಂದುವರಿಯುತ್ತಾ ಅವರು, ಎಲ್ಲಿಯ ವರೆಗೆ ವ್ಯಕ್ತಿಗೆ ವಿದ್ಯೆಯ ಮೇಲೆ ಪ್ರೀತಿ ಹುಟ್ಟುವುದಿಲ್ಲವೋ ಅಲ್ಲಿಯವರೆಗೆ ವಿದ್ಯೆಯಲ್ಲಿ ಸುಧಾರಣೆ ಸಾಧ್ಯವಿಲ್ಲವೆಂಬ ಮಾತನ್ನು ಒತ್ತಿ ಹೇಳಿದರು. ಕೊನೆಯಲ್ಲಿ ಡಾ| ಕಾರಂತರು, ಡಾ| ಪೈಗಳ ತ್ಯಾಗ ಹಾಗೂ ಸಾಹಸಮಯ ಜೀವನ ನಮ್ಮನಿಮ್ಮ ಆದರ್ಶವಾಗಲಿ ಎಂದು ಆಶಿಸಿದರು.

ಶ್ರೀ ಟಿ. ರಮೇಶ ಪೈಗಳು ಮಾತಾಡುತ್ತಾ, ಡಾ|| ಎ. ವಿ. ಬಾಳಿಗಾರವರ ಸ್ಮಾರಕಾರ್ಥವಾಗಿ ಮಣಿಪಾಲದಲ್ಲಿ 32 ಲಕ್ಷ ರೂ. ವೆಚ್ಚದಲ್ಲಿ 330 ಬೆಡ್‌ಗಳಿಂದ ಕೂಡಿದ ಡಾ|| ಎ. ವಿ. ಬಾಳಿಗಾ ಇನ್ಸಿಟ್ಯೂಟ್ ಆಫ್ ಸರ್ಜರಿ ಹೊಸ ವಿಭಾಗದ ಕಾರ್ಯಾರಂಭವಾಗಿದೆಯೆಂದೂ, ಈ ಆರಂಭದ ದಿಸೆಯಲ್ಲಿಯೇ $2\frac{1}{2}$ ಲಕ್ಷ ರೂ.ಗಳಿಗೂ ಮಿಕ್ಕಿದ ಕೊಡುಗೆಯು ದಾನಿಗಳಿಂದ ಬಂದಿದೆಯೆಂದೂ ನುಡಿದು ಆ ಕುರಿತಾದ ವರದಿಯೊಪ್ಪಿಸಿದರು.

ಈ ಸಮಾರಂಭದ ಮುಖ್ಯ ಅತಿಥಿಗಳಾದ ಜಮಖಂಡಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ರುಬೆನ್‌ರವರು ಭಾಷಣಮಾಡುತ್ತಾ ಡಾ||ಪೈಗಳನ್ನು ಶ್ಲಾಘಿಸಿದರು.

ಡಾ| ಪೈಗಳು ಮಾತಾಡುತ್ತಾ, ತಮ್ಮ ಕಾರ್ಯಗಳಲ್ಲಿ ಸಹಕರಿಸಿದವರನ್ನು ಸ್ಮರಿಸುವುದು ತಮ್ಮ ಕರ್ತವ್ಯವೆಂದು ನುಡಿದರು. ಎಕಾಡೆಮಿಯು 30 ಶೈಕ್ಷಣಿಕ ಸಂಸ್ಥೆಗಳ ಮೂಲಕ ಸಲ್ಲಿಸುತ್ತಿರುವ ಸೇವೆಯನ್ನು ವಿವರಿಸಿ, ಆ ದಿಸೆಯಲ್ಲಿ ತಮ್ಮ ಪ್ರಯತ್ನಗಳನ್ನು ವಿವರಿಸಿದರು. ಮುಂದುವರಿಯುತ್ತಾ ಅವರು ರೆಸಿಡೆನ್ಸಿಯಲ್ ಯುನಿವರ್ಸಿಟಿ, ಸ್ತ್ರೀಯರ ಕಾಲೇಜು, ಸಂಗೀತ ಕಾಲೇಜುಗಳನ್ನು ಸ್ಥಾಪಿಸುವ ಇರಾದೆಯನ್ನು ವ್ಯಕ್ತಪಡಿಸಿದರು.

ಎಕಾಡೆಮಿಯ ಬೇರೆ ಬೇರೆ ಶೈಕ್ಷಣಿಕ ಸಂಸ್ಥೆಗಳಲ್ಲಿ ದುಡಿಯುತಕ್ಕ ಪ್ರಾಧ್ಯಾಪಕರುಗಳಿಗೆ ಪ್ರಶಸ್ತಿ ಪತ್ರಗಳನ್ನು ಈ ಸಂದರ್ಭದಲ್ಲಿ ನೀಡಲಾಯಿತು. ಕೊನೆಯಲ್ಲಿ ಶ್ರೀ ಎ. ಜೆ. ಆಲ್ಸೆಯವರು ಧನ್ಯವಾದ ಸಮರ್ಪಿಸಿದರು.

ಹೊರ ರೋಗಿಗಳ ವಿಭಾಗದ ಉದ್ಘಾಟನೆ

ಮಂಗಳೂರು ಸಹಕಾರೀ ವೆನ್‌ಲಾಕ್ ಆಸ್ಪತ್ರೆಯ ಹೊರರೋಗಿಗಳ ಬ್ಲಾಕನ್ನು, ಕೇಂದ್ರ ಸಾರಿಗೆ ಮತ್ತು ನಾಗರಿಕ ವಿಮಾನ ಯಾನ ಶಾಖಾ ಸಚಿವ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ಕಳೆದ ತಾ ೯ರಂದು ಶ್ರೀ ನಿಜಲಿಂಗಪ್ಪನವರು ಉದ್ಘಾಟಿಸಿದರು. ಮಾನ್ಯ ಅತಿಥಿಗಳೆಲ್ಲರನ್ನೂ ಕೊಂಬು ಕಹಳೆಗಳಿಂದ ಸ್ವಾಗತಿಸಲಾಯಿತು. ಆರೋಗ್ಯ ಮಂತ್ರಿ ಡಾ|| ಕೆ. ನಾಗಪ್ಪ ಆಳ್ವರವರು ಸ್ವಾಗತಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಅಭಿವೃದ್ಧಿ ಕಾರ್ಯಗಳಲ್ಲಿ ವೈದ್ಯಕೀಯ ವ್ಯವಸ್ಥೆಯ ಪಾತ್ರ ಮಹತ್ವವಾದುದು. ಕಾಯಿಲೆದಾರರ ಹಾಗೆ ತಡೆಯಲು ಏನು ಮಾಡಬೇಕು ಎಂದು ತಿಳಿದುಕೊಳ್ಳುವ ಆಸೆ ನಮ್ಮಲ್ಲಿ ಬರಬೇಕು ಎಂದರು.

ಶ್ರೀ ನಿಜಲಿಂಗಪ್ಪನವರು ಉದ್ಘಾಟಿಸುತ್ತಾ, ಆಸ್ಪತ್ರೆಗಾಗಿ ಇನ್ನೂ ನೂರು ಲಕ್ಷ ರೂ.ಗಳ ಅಗತ್ಯವಿರುವುದನ್ನು ಪ್ರಸ್ತಾಪಿಸಿ ಅದು ಸ್ಥಳೀಯರಿಂದಲೇ ಒದಗಿ ಬಾರದಿದ್ದಲ್ಲಿ ಅದನ್ನು ಸರಕಾರವು ಕೊಡುವ ಕುರಿತು ಪರ್ಯಾಲೋಚಿಸಲಾಗುವುದೆಂದರು. ಕೊನೆಯಲ್ಲಿ ಡಾ| ಎಸ್. ಶ್ರೀನಿವಾಸನ್‌ರವರು ವಂದನಾರ್ಪಣೆಗೈದರು. ಬಳಿಕ ಮನರಂಜನಾ ಕಾರ್ಯಗಳು ನೆರವೇರಿದವು.

ಪಣಂಬೂರಿನಲ್ಲಿ ಶ್ರೀ ಸಿ. ಎಂ. ಪೂಣಚ್ಚ

ಪಣಂಬೂರಿನಲ್ಲಿ ಬಂದರದ ತಡೆ ಗೋಡೆಯ ಶಿಲಾನ್ಯಾಸ ಗೈಯುತ್ತಾ ಶ್ರೀ ಸಿ. ಎಂ. ಪೂಣಚ್ಚನವರು, ಇಂದು ನಮಗೆ ಅತ್ಯವಶ್ಯವಿರುವ ವಿದೇಶಿ ವಿನಿಮಯವನ್ನು ಗಳಿಸಲು ಬಂದರಗಳ ಪಾತ್ರ ಮಹತ್ವಪೂರ್ಣವಾಗಿದ್ದು ದೇಶದ ಎಲ್ಲಾ ಸಣ್ಣ ಪುಟ್ಟ ಬಂದರುಗಳನ್ನು ಅಭಿವೃದ್ಧಿ ಪಡಿಸುವುದು ಅತೀ ಅಗತ್ಯವಿದೆ ಎಂದು ನುಡಿದರು.

ಆರಂಭದಲ್ಲಿ ಪ್ರಾರ್ಥನಾನಂತರ, ಆರೋಗ್ಯ ಮಂತ್ರಿ ಡಾ|| ಕೆ. ನಾಗಪ್ಪ ಆಳ್ವರವರು ಭಾಷಣಮಾಡಿ, ಬಂದರದ ನಿರ್ಮಾಣ ಕಾರ್ಯ ಶೀಘ್ರವಾಗಲಿ ಎಂದು ಹಾರೈಸಿದರು. ಬಳಿಕ ಸ್ವರಾಜ್ಯದ ಲೋಕೋಪಯೋಗಿ ಶಾಖಾ ಸಚಿವ ಶ್ರೀ ವೀರೇಂದ್ರ ಪಾಟೀಲರು ಮಾತನಾಡಿ ಶುಭಕೋರಿದರು. ಬಂದರದ ರಚನೆ ಸಂಪೂರ್ಣಗೊಂಡರೆ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಯಾವ ರೀತಿಯ ಸಹಾಯ ದೊರೆಯಬಹುದೆಂಬ ವಿಚಾರವನ್ನು ರಾಜ್ಯದ ವಿಧಾನ ಸಭಾಧ್ಯಕ್ಷ ಶ್ರೀ ಬಿ. ವೈಕುಂಠಬಾಳಿಗಾರವರು ತಮ್ಮ ಭಾಷಣದಲ್ಲಿ ಮನೋಜ್ಞವಾಗಿ ವಿವರಿಸಿದರು.

ಅಧ್ಯಕ್ಷರೂ ಬಂದರದ ಕೆಲಸ ಶೀಘ್ರವಾಗಿ ಮುಗಿಯುವಂತಾಗಲೆಂದು ಹಾರೈಸಿ, ಪಣಂಬೂರಿನಲ್ಲಿ ಸ್ಥಾಪಿಸಬಹುದಾದ ವಿವಿಧ ಉದ್ದಿಮೆಗಳ ಕುರಿತು ಸೂಚಿಸಿದರು.

ಕೊನೆಯಲ್ಲಿ ರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರಿಂದ ಬಂದ ಶುಭ ಸಂದೇಶವನ್ನು ಓದಿದ ಬಂದರ ಯೋಜನೆಯ ಚೀಫ್ ಎಂಜಿನಿಯರ್ ಶ್ರೀ ಇಫ್ತಿಕಾರ್ ಅಹಮ್ಮದ್‌ರವರು ವಂದನಾರ್ಪಣೆ ಗೈದರು.

ಕರ್ನಾಟಕ ಯಕ್ಷಗಾನ ನಾಟಕ ಸಭಾ
ಮಂಗಳೂರು

ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿರುವ ಕರ್ನಾಟಕ ಥಿಯೇಟರಿನಲ್ಲಿ
7—5—66ನೇ ಶನಿವಾರದಿಂದ ರಾತ್ರಿ 9-30ಕ್ಕೆ

ನಳ ದಮಯಂತಿ

ಎಂಬ ಕಥಾಭಾಗವನ್ನು ಅಭಿನಯಿಸುವರು.

ವಿಟ್ಲ ಬಾಬು ರಾಯರ ವರ್ಣರಂಜಿತ ನವ್ಯವಾಗೂ ಭವ್ಯ
ಸೀನು ಸೀನೆರಿಗಳು

ನೀವೆಂದೂ ನೋಡದ ಕಣ್ಮನಾನಂದಕರ ಯಕ್ಷಗಾನ ಪ್ರದರ್ಶನ.

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಸೇತ್ರಾವತಿ ಸೇತುವೆಯ ಉದ್ಘಾಟನೆ

ಇದೇ ತಾ. 6ರಂದು ಪೂರ್ವಾಹ್ನ ಶ್ರೀ ಸಿ. ಎಂ. ಪೂಣಚ್ಚನವರು ನೇತ್ರಾವತಿ ನದಿಯ ಮೇಲೆ ರಚಿಸಲಾದ ನೂತನ ಸೇತುವೆಯನ್ನು ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಪ್ರಾರಂಭದಲ್ಲಿ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಸ್ವಾಗತಿಸುತ್ತಾ ಈ ಸೇತುವೆಯ ಪ್ರಯೋಜನವನ್ನು ವಿವರಿಸಿದರು.

ಶ್ರೀ ಪೂಣಚ್ಚನವರು ಉದ್ಘಾಟಿಸುತ್ತಾ, ಇವಿನ್ನೂ "ರಾಷ್ಟ್ರೀಯ ಹೆದ್ದಾರಿಯ ಪಟ್ಟಿಯಲ್ಲಿ ಅಡಕವಾಗಿಲ್ಲ" ಎಂಬ ವಿಷಯವನ್ನು ಬಹಿರಂಗ ಪಡಿಸಿ, ಅದನ್ನು ಬೇಗನೇ ಕರಾವಳಿಯ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಯೋಜನೆಯಲ್ಲಿ ಸೇರುವಂತೆ ಹಾರೈಸಿದರು.

ಅಧ್ಯಕ್ಷರು ಮಾತನಾಡುತ್ತಾ, ಈ ಸೇತುವೆಯ ನಿರ್ಮಾಣವನ್ನೂ ನಿರ್ಮಾಪಕರನ್ನೂ ಸ್ವಾಗತಿಸಿ, ಈ ರೀತಿಯ ಅಭಿವೃದ್ಧಿ ಕಾರ್ಯಗಳಲ್ಲಿ ಅತ್ಯಂತ ಶ್ರದ್ಧೆ ಹಾಗೂ ಆಸಕ್ತಿ ವಹಿಸಿ ಅದಕ್ಕಾಗಿ ಬಹುವಾಗಿ ಶ್ರಮಿಸಿದ ದಿನಂಗತ ಶ್ರೀ ಯು. ಎಸ್. ಮಲ್ಯರನ್ನು ಜ್ಞಾಪಿಸಿಕೊಂಡರು.

ಸಭೆಯಲ್ಲಿ ಉಪಸ್ಥಿತರಿದ್ದ ಆರೋಗ್ಯ ಸಚಿವ ಡಾ॥ ನಾಗಪ್ಪ ಆಳ್ವರೂ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೊನೆಯಲ್ಲಿ ಸಂಪರ್ಕ ಮತ್ತು ಕಟ್ಟಡಗಳ ವಿಭಾಗದ ಚೀಫ್ ಇಂಜಿನಿಯರ್ ಶ್ರೀ ಕೆ. ಬಸಣ್ಣ ಇವರು ವಂದನಾರ್ಪಣೆ ಗೈದರು.

ಮಣಿಪಾಲ್ ಕ್ಲಿನಿಕ್

ಇದೇ ತಾ. 2ರಂದು ಕೊಪ್ಪ ತಾಲೂಕಿನ ಕುದ್ರೆಗುಂಡಿ ಎಂಬಲ್ಲಿ ಡಾ॥ ಎ. ವಿಠಲ ಹೆಗ್ಡೆಯವರು "ಮಣಿಪಾಲ್ ಕ್ಲಿನಿಕ್" ಎಂಬ ಚಿಕಿತ್ಸಾಲಯವನ್ನು ತೆರೆದಿರುವರು.

ಬಾಲವಿಹಾರ ನಿರ್ಮಾಣ ಕಾರ್ಯದ ಪ್ರಾರಂಭೋತ್ಸವ

ಮಂಗಳೂರಿನ ನೆಹರೂ ಮೈದಾನದಲ್ಲಿ ಬಾಲವಿಹಾರ ಉದ್ಯಾನದ ನಿರ್ಮಾಣ ಕಾರ್ಯದ ಪ್ರಾರಂಭೋತ್ಸವವನ್ನು ತಾ. 6ರಂದು ಶ್ರೀ ನಿಜಲಿಂಗಪ್ಪನವರು, ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನೆರವೇರಿಸುತ್ತಾ, ಮಕ್ಕಳ ಕ್ರೀಡೆ ವಿಹಾರ ಮತ್ತು ಆರೋಗ್ಯಯುತ ಬೆಳವಣಿಗೆಯನ್ನು ನಿರ್ಲಕ್ಷಿಸುವ ಯಾವುದೇ ದೇಶ ಉನ್ನತಿಯನ್ನು ಸಾಧಿಸಲಾರದು ಎಂದರು.

ಪ್ರಾರಂಭದಲ್ಲಿ ರೋಟರಿಕ್ಲಬ್ಬಿನ ಉಪಾಧ್ಯಕ್ಷ ರೋಟೇರಿಯನ್ ಎಂ. ಜಿ. ಕಾಮತ್‌ರವರು ಸ್ವಾಗತಿಸಿದರು. ಬಳಿಕ ನಗರ ಸಭಾಧ್ಯಕ್ಷ ಶ್ರೀ ಜಿ. ಸೋಮಶೇಖರರಾವ್‌ರವರು, ಶತಮಾನೋತ್ಸವವನ್ನು ಆಚರಿಸಲಿರುವ ನಗರ ಸಭೆಗೆ ರೋಟರಿ ಕ್ಲಬ್ಬಿನವರು ಬಾಲವಿಹಾರ ಉದ್ಯಾನ'ವನ್ನು "ಕೊಡುಗೆ"ಯಾಗಿತ್ತುದಕ್ಕೆ ಕೃತಜ್ಞತೆ ಸಲ್ಲಿಸಿ ಅದರ ಮೇಲ್ವಿಚಾರಣೆಗಾಗಿ ಅಧ್ಯಾಪಕರೊರ್ವರ ನೇಮಕ ಮಾಡಲಾಗುವುದೆಂದು ತಿಳಿಸಿದರು. ಅಧ್ಯಕ್ಷರ ಭಾಷಣಾನಂತರ ರೋಟೇರಿಯನ್ ಎಸ್. ಎನ್. ಶಣೈಯವರು ವಂದನಾರ್ಪಣೆ ಗೈದರು.

ನಿಧನ

ತಾ. 27-4-66ರಂದು ಶ್ರೀ ಮುಸ್ಸಿಯ್ಯೆ ಯೆಳೆಯಂಣ ಶೈಗಳು ತನ್ನ 77ನೇ ವಯಸ್ಸಿನಲ್ಲಿ ನಿಧನರಾದರು. ಸುಳ್ಯ ತಾಲೂಕಿನ ಆಢ್ಯ ಮನೆತನದವರಾದ ಇವರು ಉದಾರಿಗಳೂ ಜನೋಪಕಾರಿಗಳೂ ಆಗಿದ್ದರು. ಇವರಿಗೆ ಇಬ್ಬರು ಗಂಡು ಮಕ್ಕಳೂ ಹೆಣ್ಣು ಮಕ್ಕಳೂ ಇರುವರು.

ಶತಮಾನೋತ್ಸವ

ಕುತ್ತೆತ್ತೂರು ಭಕ್ತ ಶ್ರೀ ಗೋವಿಂದದಾಸರ ಸುಪುತ್ರರಾದ ಶ್ರೀ ಕೆ. ಸೀತಾರಾಮರಾಯರು ಮತ್ತು ಸಹೋದರರು ತಮ್ಮ ಮಾತೃಶ್ರೀ ಗಂಗಾ ಬಾಯಿಯವರ ಶತಮಾನೋತ್ಸವವನ್ನು 25-4-1966ರಿಂದ 29-3-66ರ ವರೆಗೆ ಮದ್ರಾಸ್ ಧರ್ಮ ಪ್ರಕಾಶನದಲ್ಲಿ ವಿಜೃಂಭಣೆಯಿಂದ ಆಚರಿಸಿದರು. 28 ಮತ್ತು 29ನೇ ತಾರೀಖುಗಳಲ್ಲಿ ಕ್ರಮವಾಗಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥರೂ, ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರೂ ಅಧ್ಯಕ್ಷತೆಯನ್ನು ವಹಿಸಿದ್ದರು. ಆವರು ತಮ್ಮ ಅಧ್ಯಕ್ಷಭಾಷಣದಲ್ಲಿ ಮಾತೃ ಭಕ್ತಿಯ ಮಹತ್ವವನ್ನು ಒತ್ತಿ ಹೇಳಿದರು. ಶತಮಾನೋತ್ಸವ ಸ್ಮಾರಕ ಸಂಚಿಕೆಯನ್ನು ಶ್ರೀ ಡಾ॥ ಬಹದ್ದೂರ್ ಬಿ. ವೆಂಕಟಾಚಾರ್ಯರು ಉದ್ಘಾಟಿಸಿದರು. ಶ್ರೀ ಕೆ. ಸೀತಾರಾಮರಾಯರು ಕೊಟ್ಟಿರುವ ದ್ರವ್ಯದಿಂದ ನಂಜನಗೂಡಿನ ಪಂಡಿತ ಸಂಶೋಧನೆ ಮತ್ತು ಶ್ರೀ ವಾದಿರಾಜ ತೀರ್ಥರ ತೀರ್ಥ ಪ್ರಬಂಧವನ್ನು ಶ್ರೀ ಯಸ್. ಪಿ. ಭೀಮಭಟ್ಟರ ಕನ್ನಡ ಭಾಷಾಂತರದೊಡನೆ ಪೇಜಾವರ ಶ್ರೀಗಳವರು ಉದ್ಘಾಟಿಸಿದರು.

ಶ್ರೀಮತಿ ಯಂ. ಎಸ್. ಸುಬ್ಬುಲಕ್ಷ್ಮಿ, ರಾಧಾದೇವಿ, ಕೆ. ಸೀತಾರಾಮದೇವರಾವ್ ಇವರ ಪುತ್ರಿ ಶ್ರೀಮತಿ ಗೀತಾವಾಸುದೇವರಾವ್ ಇವರ ಸಂಗೀತ ಕಚೇರಿಗಳೂ, ಭರತನಾಟ್ಯ, ಹಾಸ್ಯ, ಮಾತೃಭಕ್ತಿಯ ಕುರಿತು ಹರಿಕಥೆಗಳೂ, ಧಾರ್ಮಿಕ ಚಲನ ಚಿತ್ರ ಪ್ರದರ್ಶನವೂ ಜರಗಿದವು. ಈ ಉತ್ಸವಕ್ಕೆ ಪ್ರಧಾನ ಪಂಡಿತರುಗಳೂ 800ಕ್ಕಿಂತಲೂ ಹೆಚ್ಚಿನ ಬಂಧುಗಳೂ ಬಂದಿದ್ದರು.

ಬ್ರಹ್ಮೋಪದೇಶ ಸಮಾರಂಭ.

ಧರ್ಮಸ್ಥಳದ ಧರ್ಮದರ್ಶಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರ ಪುತ್ರರಾದ ಚಿ॥ ಸುರೇಂದ್ರಕುಮಾರ್ ಮತ್ತು ಚಿ॥ ಹರ್ಷೇಂದ್ರಕುಮಾರ್ ಇವರಿಗೆ ಬ್ರಹ್ಮೋಪದೇಶ ಕೊಡುವ ಸಮಾರಂಭವು ತಾ. 6-5-66ನೇ ಬೆಳಿಗ್ಗೆ ಧರ್ಮಸ್ಥಳ ಬೀಡಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಸಮಾರಂಭದ ತರುವಾಯ ಶ್ರೀಮತಿ ಸಂಗೀತರತ್ನ ವಾಪಚೂಡಾಮಣಿ ಮತ್ತು ಪಾರ್ಟಿಯವರ ಸಂಗೀತಕಚೇರಿ ಜರಗಿತು. ಸಂಜೆ 6 ಗಂಟೆಯಿಂದ ಜರಗಿದ ಸತ್ಕಾರ ಸಮಾರಂಭಕ್ಕೆ ಊರು ಪರಊರುಗಳಿಂದ ಆಪ್ತ ಮಹನೀಯರನೇಕರು ಆಗಮಿಸಿದ್ದರು. ಅನಂತರ ಶ್ರೀಮತಿ ಸಂಗೀತರತ್ನ ವಾಪಚೂಡಾಮಣಿ ಮತ್ತು ಪಾರ್ಟಿಯವರ ಲಘುಸಂಗೀತ, ಬೆಂಗಳೂರಿನ ಉದಯ ಆರ್ಕೆಸ್ಟ್ರದವರ ಆರ್ಕೆಸ್ಟ್ರಾ, ಪದ್ಮ ಭೂಷಣ ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿ ಮತ್ತು ಬಳಗದವರಿಂದ ಗಾಯನ ಕಚೇರಿ ಜರಗಿತು. ಮಧ್ಯರಾತ್ರಿಯಿಂದ ಶ್ರೀ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ನಾಟಕ ಸಭಾದವರಿಂದ ಯಕ್ಷಗಾನ ಬಯಲಾಟ ಪ್ರದರ್ಶಿಸಲ್ಪಟ್ಟಿತು.

ಶೆಟ್ಟಿ ಆರ್ಟ್ಸ್ ಸ್ಟುಡಿಯೊ ಉದ್ಘಾಟನೆ

ಮಂಗಳೂರಿನ ಕೆ. ಎಸ್. ರಾವ್ ರೋಡಿನಲ್ಲಿ ಹೊಸತಾಗಿ ತೆರೆಯಲಾದ ಎಯರ್ ಕಂಡೀಶನ್ ಸೌಲಭ್ಯದ "ಶೆಟ್ಟಿ ಆರ್ಟ್ಸ್ ಸ್ಟುಡಿಯೋ'ದ ಉದ್ಘಾಟನ ಸಮಾರಂಭವು ಇದೇ ತಾ. 8ರಂದು ರಾಜ್ಯದ ಆರೋಗ್ಯ ಮಂತ್ರಿ ಡಾ॥ ಕೆ. ನಾಗಪ್ಪ ಆಳ್ವರಿಂದ ನೆರವೇರಿಸಲ್ಪಟ್ಟಿತು. ಆರಂಭದಲ್ಲಿ ಸಂಸ್ಥೆಯ ಮಾಲಕರಾದ ಶ್ರೀ ಎಸ್. ಕೆ. ಶೆಟ್ಟಿ ಮತ್ತು ಟಿ. ಟಿ. ಶೆಟ್ಟಿಯವರು ಸ್ವಾಗತಿಸಿದರು. ಎಡ್ವಕೇಟ್ ಶ್ರೀ ಎ. ಆನಂದ ಶೆಟ್ಟಿಯವರು ಸ್ವಾಗತ ಭಾಷಣ ಗೈದರು. ಡಾ॥ ಆಳ್ವರು ತಮ್ಮ ಭಾಷಣದಲ್ಲಿ ಬೆಳೆಯುತ್ತಿರುವ ಮಂಗಳೂರು ನಗರಕ್ಕೆ ಈ ರೀತಿಯ ಸ್ಟುಡಿಯೋಯು ಅಗತ್ಯವೆಂದು ಹೇಳಿ ಇದಕ್ಕೆ ಉಜ್ವಲ ಭವಿಷ್ಯಕೋರಿದರು. ಕೊನೆಗೆ ಶ್ರೀ ಎಂ. ಎಲ್. ಶೆಟ್ಟರು ಧನ್ಯವಾದವನ್ನರ್ಪಿಸಿದರು.

ಕೃತಜ್ಞತಾ ಸಮರ್ಪಣೆ.

ನನ್ನ ಪುತ್ರ ಚಿ॥ ಸುಂದರನ ವಿವಾಹ ಸಮಾರಂಭವು ವ್ಯಕಾರಿ ಜಡ್ಡಮಾರು ಸಂಕಬ್ಯ ಶೆಟ್ಟಿ ಪುತ್ರಿ ಚಿ॥ ಸೌ॥ ಲಕ್ಷ್ಮಿಯೊಂದಿಗೆ ಇದೇ ತಾ. 6-6-66ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಮ್ಮೆಲ್ಲರ ಸಹಕಾರ ಹಾಗೂ ಆಶೀರ್ವಾದದಿಂದ ವಿಜೃಂಭಣೆಯಿಂದ ನೆರವೇರಿತು.

ಈ ಶುಭ ಸಮಾರಂಭಕ್ಕೆ ಆಗಮಿಸಿ ವಧೂವರರನ್ನು ಆಶೀರ್ವದಿಸಿದ, ಉಡುಗರೆಗಳನ್ನಿತ್ತ, ಹಾಗೂ ಶುಭಕೋರಿಕೆಯನ್ನು ಕಳುಹಿಸಿಕೊಟ್ಟ ಮಹನೀಯರೆಲ್ಲರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸಲು ಅಸಾಧ್ಯವಾದುದರಿಂದ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಕಮ್ಮಾರು ಪಡುಮನೆ ಆದಪ್ಪಶೆಟ್ಟಿ.

ನಿಮಗೂ ತಿಳಿದಿರಲಿ

ಮದುವಣಗಿತ್ತಿಯರ ಪ್ರೇಮ ಭಂಗಿಗಳು

ಪಶ್ಚಿಮ ಜರ್ಮನಿಯಲ್ಲಿ ಹೆಂಗಸರು ಅತ್ಯಾಧುನಿಕವಾದ ಗುತ್ತನೆಯ ಉಡುಪುಗಳನ್ನು ಧರಿಸಲು ಬಯಸುತ್ತಿದ್ದಾರೆ. ಅಲ್ಲಿನ ಅಲಂಕಾರ ರೀತಿ ಮತ್ತು ಬಟ್ಟೆಗಳ ರೀತಿಯು ಬಗೆ ಬಗೆಯ ಬದಲಾವಣೆಗಳನ್ನು ಹೊಂದುತ್ತಿದೆ. ಮದುವೆಯಾಗಲಿರುವ ಯುವತಿಯರು ಆತ್ಯಾಕರ್ಷಕವಾದ ಉಡುಪುಗಳನ್ನು ಧರಿಸಿ ಪ್ರೇಮಭಂಗಿಗಳಲ್ಲಿ ಕಾಣುವುದು ಈಗಿನ ಹೊಸ ಅಭ್ಯಾಸವಾಗಿದೆ. ಪಶ್ಚಿಮ ಜರ್ಮನಿಯಲ್ಲಿ ಈಚೆಗೆ ನಡೆಸಿದ ವಿಚಾರಣೆಯಿಂದ ಪಶ್ಚಿಮ ಬರ್ಲಿನ್‌ನಲ್ಲಿ ಶೇಕಡ ೭೦ ಮಂದಿ ಹೆಂಗಸರು ನೆಲದ ವರೆಗೆ ಇರುವ ಉಡುಪುಗಳನ್ನು ಅಂಗಡಿಗಳಲ್ಲಿ ಕೊಳ್ಳುತ್ತಿರುವುದಾಗಿಯೂ ಶೇಕಡ ೬೦ ಮಂದಿ ಮದುವಣಗಿತ್ತಿಯರು ತಮಗಾಗಿ ತಯಾರಾಗುತ್ತಿರುವ ಬಟ್ಟೆಗಳ ಅಂಗಡಿಗಳಿಂದಲೇ ಕೊಳ್ಳುತ್ತಿರುವುದೂ ವ್ಯಕ್ತವಾಗಿದೆ. ಇದೇ ರೀತಿಯ ವಿಚಾರಣೆಗಳನ್ನು ಜರ್ಮನಿಯ ಇತರ ನಗರಗಳಲ್ಲಿಯೂ ನಡೆಸಿದಾಗ ಇವೇ ಫಲಿತಾಂಶಗಳು ತಿಳಿದು ಬಂದಿವೆ. ನೆಲದ ವರೆಗೂ ಬರುವ ಗವನುಗಳನ್ನೂ, ತೋಳು ಮತ್ತು ನಡುವಿನ ವರೆಗೆ ಬರುವ ಬಟ್ಟೆಗಳನ್ನೂ, ಅವುಗಳಿಗೆ ಲೇಸು, ಫೈಯಲೇ, ಜಾರ್ಜೆಟ್ ಮತ್ತು ಚಿಫಾನ್ ಬಟ್ಟೆಗಳನ್ನು ಉಪಯೋಗಿಸಲು ಅಪೇಕ್ಷಿಸುತ್ತಾರೆ.

ಈಗಿನ ಆಧುನಿಕ ಮದುವಣಗಿತ್ತಿಯ ಭಂಗಿಗಳು "ಕಂಪ್ಲೀಟ್" ಡ್ರೆಸ್ಸುಗಳು ಅಂದರೆ ಉದ್ದವಾದ ತೂಗಾಡುವ ಕೋಟುಗಳು, ಇವುಗಳಿಗೆ ಮೇಲೆ ಲೇಸುಗಳನ್ನು ಹಾಕಿರುವುದು, ಬಹಳ ಬೆಲೆ ಬಾಳುವ ಬಟ್ಟೆಗಳಿಂದಲೂ ಹೊಲಿದು ಸಿದ್ಧಪಡಿಸಲಾಗಿರುತ್ತದೆ. ಮೇಲು ಹೊದಿಕೆ ಮತ್ತು ತಲೆಗೆ ಕಟ್ಟುವ ಬಟ್ಟೆಗಳು ಹೆಚ್ಚು ಮುಖ್ಯವಾದುವು. ಈಗಿನ ಕಾಲದಲ್ಲಿ ಸಾಮಾನ್ಯವಾಗಿ ಹಾಕಿಕೊಳ್ಳುವ ಮೇಲು ಹೊದಿಕೆಯ ಬಟ್ಟೆಗಳು ಬಿಳಿಯವು. ಇಂತಹ ಬಟ್ಟೆಗಳನ್ನೇ ೨೦೦ ವರ್ಷಗಳ ಹಿಂದೆ ಜರ್ಮನಿಯಲ್ಲಿ ಉಪಯೋಗಿಸುತ್ತಿದ್ದರು. ಮದುವಣಗಿತ್ತಿ ಎಂಬ ಸೂಚನೆಯೇ ಎಂದು ಅದನ್ನು ಭಾವಿಸಿದ್ದರು. ಈ ರೀತಿಯ ಉಡುಪುಗಳನ್ನೇ ಪಶ್ಚಿಮ ದೇಶಗಳು ಉಪಯೋಗಿಸುತ್ತಿವೆ. ಉಡುಪುಗಳು ಉದ್ದವಾಗಿ ಅಥವಾ ಚಿಕ್ಕದಾಗಿಯೂ ಅದನ್ನು ಕಿರೀಟಕ್ಕೆ ಸೇರಿಸಿಯೂ ಅದಕ್ಕೆ ಸೇರಿದ ಹಾಗೆ ಎರಡು ಹೂವಿನ ಹಾರಗಳೂ ಇರುವುವು.

ಆತ್ಯಾಕರ್ಷಕವಾದ ಉಡುಪಿನ ಮನರಂಜನೆಯೆಂದರೆ ಅನೇಕ ತರಹದ ಸಡಿಲವಾದ ಲೇಸಿನ ಹುಡ್‌ಗಳು ನೆಲದ ವರೆಗಿನ ಕೋಟುಗಳೂ, ಇವುಗಳ ಮೇಲೆ ಲೇಸಿನ ಕೆಲಸಗಳೂ ಇವುಗಳ ಸ್ಥಾನಗಳಲ್ಲಿ ತೋಳಿಲ್ಲದ ನಡುವಿನ ವರೆಗಿನ ಉಡುಪುಗಳೂ ಆಕ್ರಮಿಸಿವೆ. ಮತ್ತ್ಯಾವ ಕಾಲದಲ್ಲಿಯೂ ಇಲ್ಲದ ಬೆಲೆ ಬಾಳುವ ಉಡುಪುಗಳೇ ಈಗಿನ ನಮೂನೆಯಾಗಿದೆ. ಸಾಮಾನ್ಯವಾಗಿ ಸ್ತ್ರೀಯರು ಒಂದು ಸಲವಾದರೂ ತಮ್ಮ ಜೀವನದಲ್ಲಿ ಮಹಾರಾಣಿಯರಂತೆ ಅಲಂಕಾರ ಮಾಡಿಕೊಳ್ಳಬೇಕೆಂದು ಬಯಸುವುದು ಈಗಿನ ಭಾವನೆಯಾಗಿದೆ. ಆದಕ್ಕೆ ತಕ್ಕಂತೆ ಹೊಲಿಯುವವರೂ ಹೊಲಿಗೆಯ ಮಾದರಿಗಳನ್ನು ಬದಲಾಯಿಸುತ್ತ ಜನರ ಅಭಿಲಾಷೆಗಳಿಗೆ ತಕ್ಕ ಹಾಗೆ ಉಡುಪುಗಳನ್ನು ತಯಾರಿಸಲು ಸಿದ್ಧರಾಗುತ್ತಿದ್ದಾರೆ.

ವಿಶ್ವರೂಪನ ಈಕ್ಷಿಸು...

ದಿವಿ ಸೂರ್ಯ ಸಹಸ್ರಸ್ಯ
ಭವೇದ್ಯುಗ ಪದುತ್ಥಿತಾ
ಯದಿಭಾಃ ಸದೃಶೀಸಾ ಸ್ಯಾತ್
ಭಾಸಸ್ತಸ್ಯ ಮಹಾತ್ಮನಃ

—ಗೀತಾ

ಒಂದು ಸಾವಿರ ಗೀತಾ.
ರವಿಯ ಕಿರಣಗಳ್
ಒಮ್ಮೆ ಧರಣಿಗೆ ಹರಿದರೆ
ವಿಶ್ವರೂಪನ
ಒಂದು ತೇಜಕೆ
ಸರಿ ಸಮಾನವು ಸಾರಿರೆ ॥ ೧ ॥
ನೀನೆ ದಿವ್ಯನು
ನೀನೆ ಭವ್ಯನು
ನಿನ್ನ ಮನವದು ಪಾವನ
ದೇವ ನಿನ್ನಯ
ಚರಣಕೆನ್ನಯ
ಮನವು ಪಾಡ್ವುದು ಕೀರ್ತನ ॥ ೨ ॥
ನಿನ್ನ ಪಾಡಿದ
ನಿನ್ನ ಕೂಡಿದ
ಎನ್ನ ಮನದೊಳು ಚೇತನಾ
ನಿನ್ನ ಹಸ್ತದ
ಪುಣ್ಯ ಸ್ಪರ್ಶದಿ
ಪಾವನವು ನನ್ನೀಮನ ॥ ೩ ॥
ನಿನ್ನ ಮೂರ್ತಿಯು
ಲೋಕ ಕೀರ್ತಿಯು
ಭಗವದ್ಗೀತೆಯ ಸಾರಿದೆ
ಜ್ಞಾನ ದೀವಿಗೆ
ಇತ್ತು ಭೂವಿಗೆ
ನಿನ್ನ ಮೈಮೆಯ ತೋರಿದೆ ॥ ೪ ॥
ನಿನ್ನ ಧರ್ಮಕೆ
ನಿನ್ನ ಕರ್ಮಕೆ
ಭಕ್ತ ಕೋಟಿಯು ಮಣಿಯಿತು
ನಿನ್ನ ತೇಜಕೆ
ಮಾಯದಾಟಕೆ
ಇಡಿಯ ಜಗ ಶಿರಬಾಗಿತು ॥ ೫ ॥
ದೇವ ನಿನ್ನಯ
ಚರಣ ಕೆನ್ನಯ
ಮನವು ಸರ್ವ ಸಮರ್ಪಿತ
ನಿನ್ನ ಚರಣದ
ಪುಣ್ಯ ಸ್ಪರ್ಶದಿ
ಎನ್ನ ಮೈ ಕೈ ಪುಲಕಿತ ॥ ೬ ॥
ನಿನ್ನ ಮಾಯೆಯೊಳು
ನಿನ್ನ ತೇಜದೊಳು
ಪಾಪ ದ್ರೌಪದಿಗುಳಿಯಿತು
ನಿನ್ನ ವಾಕ್ಯವು
ವೇದ ವಾಕ್ಯವು
ಭಕ್ತ ಜನರ ಮನ ಬೆಳಗಿತು ॥ ೭ ॥
ನಿನ್ನ ಲೀಲೆಯು
ಪುಷ್ಪ ಮಾಲೆಯು
ಗೋಪಿಕಾ ಸ್ತ್ರೀ ಹಿಡಿದಿರೆ
ನಿನ್ನ ಮಾಯೆಯು
ಲೋಕ ನೀತಿಯು
ಭಕ್ತ ಬಂಧುವು ಸವಿದಿರೆ ॥ ೮ ॥
ಭಕ್ತಿ ಸಾಗರ
ಸುಧೆಯ ಆಗರ
ವಿಶ್ವರೂಪನ ಈಕ್ಷಿಸು
ನಿನ್ನ ಪಾದದ
ನಿನ್ನ ಪಾದುಕೆ
ಯೊತ್ತಿ ನನ್ನನೆ ರಕ್ಷಿಸು ॥ ೯ ॥

—ಕುತ್ಯಾರುಗುತ್ತು ರವೀಂದ್ರ ಶೆಟ್ಟಿ.

ರೈತ್ರ ಮುರುಗ

(ಎರಡನೇ ಪುಟದಿಂದ)

ಡಿಯು ಕೋಕಿಲಗಳ ಶೋಕದಿಂದ ಹೆಚ್ಚಾಯಿತು.

ಆದರೆ ಆ ನಿಶಾಕಾಲದ ಗಂಭೀರ ನೀರವತೆಯು ಕೇದಾರಿಯು ಆಲೋಚನಾ ಬಂಡಿಯ ಯಂತ್ರದ ದಿಕ್ಕನ್ನು ಬದಲಾಯಿಸಿತು. ಆಗ ಅವನು ತನ್ನ ಹಿಂದಿನ ದಿನಗಳ—ರಾಮುವಿನೊಂದಿಗೆ ನಡೆಸುತ್ತಿದ್ದ ಸರಳ ಜೀವನದ—ನೆನಪು ಮಾಡಿಕೊಂಡನು. ಏನಿದ್ದರೂ ತಾನು ಹೋರಾಡುವದು ಮಾತ್ರ ನಿಶ್ಚಯ, ಜಯ ಇಲ್ಲವೇ ಸಾವನ್ನು ತಾನು ಪಡೆಯ ಬೇಕೆಂದಾತನು ನಿಶ್ಚಯಿಸಿ ಕೊಂಡನು.

೦ ೦ ೦

೩೮

ಕೇದಾರಿಯು ಆ ರೀತಿ ದೊಡ್ಡ ದೊಡ್ಡ ಹಂಚಿಕೆಗಳ ಕುರಿತು ಯೋಚಿಸುತ್ತಾ ಇದ್ದಾಗ, ರಾಮುವು ಪತ್ನಿ ಮತ್ತು ರಾಮೇಶ್ವರ ಯಾತ್ರೆಯನ್ನು ಮುಗಿಸಿದನು. ಯಾತ್ರೆಯ ಆರಂಭದಲ್ಲಿ ಮಾಡಿದ್ದ ಆಲೋಚನೆಯಂತೆ ಅವನು ಒಂದು ದಿನ ಆಲವಂತಿಯಲ್ಲಿ ಕಳೆದು ಸೀತೆಯನ್ನು ಕಂಡು, ಆ ಹಳ್ಳಿಯ ವಿಷಯಗಳನ್ನು ತಿಳಿದು ಕೊಳ್ಳುವದಿತ್ತು. ಆದರೆ ದೂಸಿಯಲ್ಲಿ ಸರೋವರದ ದುರಸ್ತಿಯ ಕೆಲಸದಿಂದಾಗಿ ಒಡನೆ ಹಿಂತಿರುಗಬೇಕಾಯಿತು. ಕೆಲ ತಿಂಗಳು ಅವನು ಬಹಳ ಶ್ರಮವಹಿಸಿಕೊಂಡು ದುಡಿದುದರ ಪರಿಣಾಮವಾಗಿ ಮಳೆಗಾಲದಲ್ಲಿ ಪಾಲಾರಿನ ಪ್ರವಾಹದ ಪೂರ್ಣ ನೀರನ್ನು ಪಡೆದಿಟ್ಟು ಕೊಳ್ಳುವಂತಾಯಿತು.

ಪಾಲರ್ ವಿಲಕ್ಷಣ ಹಾಗೂ ನಿರಂಕುಶ ನದಿ. ಅದು ಕಡಿದಾದ ನಂದಿದುರ್ಗದಲ್ಲಿ ಹುಟ್ಟಿಕೊಂಡು ಮೈಸೂರಿನ ಪೀಠಭೂಮಿಯ ಒಂದಂಶವನ್ನು ಖಾಲಿಮಾಡಿಕೊಂಡು ಹರಿಯುತ್ತಿದೆ. ಅದರಲ್ಲೂ, ತಪ್ಪಿದ ಮಳೆಗಾಲದಲ್ಲಿ ಮಳೆ ಬಂದಿತೆಂದರೆ, ನೀರಿನ ಪ್ರವಾಹವು ಸಮುದ್ರದಂತೆ ಕಂಡು ಬರುತ್ತದೆ. ವರ್ಷದ ಇನ್ನುಳಿದ ಸಮಯದಲ್ಲಿ ಅಲ್ಲಿ ಇಲ್ಲಿ ಮಾತ್ರ ಜಲಾಶಯಗಳನ್ನು ಕಾಣಬಹುದಲ್ಲದೆ, ಉಳಿದ ಸ್ಥಳಗಳಲ್ಲಿ ಹೊಯಿಗೆಯ ಹಾಸಿಗೆ ಇರುತ್ತದೆ. ಆದುದರಿಂದ ಆ ಒಂದು ವಾರದಲ್ಲಿ ಶೇಖರಿಸಿಟ್ಟುಕೊಂಡ ನೀರು ವರ್ಷವಿಡೀ ದೂಸಿಗೆ ಪ್ರಯೋಜನಕ್ಕೆ ಬರುವಂತೆ ದೊಡ್ಡ ಒಂದು ಅಣೆಕಟ್ಟನ್ನೇ ಕಟ್ಟಬೇಕಾಗಿತ್ತು.

ತನ್ನ ಯೋಜನೆಯು ಕೈಗೂಡಿದುದನ್ನು ತನ್ನ ಕಣ್ಣುಗಳಿಂದಲೇ ಕಾಣಲು ರಾಮು ಕುತೂಹಲದಿಂದಿದ್ದನು. ಅದರಲ್ಲೂ ಯುಕ್ತಕಾಲದಲ್ಲಿ ಮಳೆಗಾಲ ಆರಂಭವಾದುದರಿಂದ ಅವನ ಹೃದಯವೂ ಸಂತೋಷದಿಂದ ವಿಕಸಿತವಾಗಿತ್ತು. ಕಾಲುವೆ ಜೋಡಣೆಯ ಕಾರ್ಯವೂ ಮುಗಿದಿತ್ತು. ಒಂದು ರಾತ್ರಿಯೊಳಗೆ ಕೆರೆಯು ಅರ್ಧ ತುಂಬಿತ್ತು; ನಲ್ವತ್ತೆಂಟು ಘಂಟೆಯೊಳಗೆ ಕೆರೆಯು ತುಂಬಿ ತುಳುಕುವಂತಾಯಿತು. ಅಂತಹ ಸ್ಥಿತಿಯನ್ನು ಆ ಬಡರೈತರು ಅದುವರೆಗೆ ಕಂಡಿರಲಿಲ್ಲ. ದೂಸಿ—ಮಾಮಂದೂರ್ ಸರೋವರವು ಮಾತ್ರ ಇಪ್ಪತ್ತು ಹಳ್ಳಿಗಳಿಗೆ ಎರಡು ವರ್ಷದ ಮಟ್ಟಿಗೆ ಆಶ್ವಾಸನೆ ಇತ್ತುದುದಲ್ಲದೆ ಪಕ್ಕದ ಸಂಬಂಧಿಸಿಕೊಂಡಿರುವ ಕೆರೆಗಳನ್ನೂ ತುಂಬಿಸಿತು.

ಎಲ್ಲರ ಮುಖದಲ್ಲೂ ಸಂತಸದ ಮುಗುಳ್ನಗೆ ನಲಿದಾಡುತ್ತಿತ್ತು. ಗದ್ದೆಯಲ್ಲಿ ಹುಲುಸಾದ ಪೈರು ತುಂಬಿರುವಾಗ ರೈತನ ಮುಖದಲ್ಲಿ ಮುಗುಳ್ನಗೆಯು ತನ್ನ ವಿಜಯ ವೈಜಯಂತಿಯನ್ನು ಹಾರಾಡಿಸಲು ಹಿಂಜರಿಯುವದಿಲ್ಲ. ಆ ಮುಗುಳ್ನಗೆಯಲ್ಲಿ ಅದೆಂತಹ ಶಾಂತಿಹಾಗೂ ದೈವತ್ವ ಅಡಗಿಕೊಂಡಿರುತ್ತದೆ! ಜಯದ ಬೇರಾವ ರೀತಿಗೂ ಮುಗುಳ್ನಗೆಯು ಕಿರೀಟವನ್ನಿಡುವದಿಲ್ಲ. ವಕೀಲರಿಗೆ, ರಾಜಕಾರಣಿಗಳಿಗೆ, ಸೇನಾನಿಗಳಿಗೆ, ವ್ಯವಹಾರ ಕುಶಲರಿಗೆ ಅಥವಾ ರಾಜರಿಗೆ ಕೂಡಾ ಆ ರೀತಿ ಅದು ಕಿರೀಟವನ್ನಿಡುವದಿಲ್ಲ.

ತನ್ನ ಸಾಹಸ ಹಾಗೂ ನಿಷ್ಕಪಟ ಯೋಜನೆಯಿಂದ ಈ ರೀತಿಯ ಅಭ್ಯುದಯವನ್ನು ಕಂಡ ರಾಮುವಿಗೆ ಆಶ್ಚರ್ಯವಾಯಿತು. ಅಲ್ಲಿಯ ಐವತ್ತನಾಲ್ಕು ಹಳ್ಳಿಗಳಲ್ಲಿದ್ದವರೂ ಅಲ್ಲದೆ ಅಕ್ಕಪಕ್ಕದ ಗ್ರಾಮದವರೂ ಸೇರಿ ತಮ್ಮ ಸಂತೋಷದ ಪ್ರದರ್ಶನವನ್ನು, ಗ್ರಾಮೀಣ ಹಾಗೂ ಸಾತ್ವಿಕ ರೀತಿಯಲ್ಲಿ ಮತ್ತು ಸರಳವಾಗಿ, ಅಲ್ಲದೆ ಅವನನ್ನು ಆಶೀರ್ವದಿಸುವದರಲ್ಲಿ ತೋರಿಸಿದರು.

ಆ ವರ್ಷ ರಾಮು ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಿದನು. ಜಾನಕಿಯು ತಾಯಿಯಾಗುವ ಸೂಚನೆ ತೋರಿಬಂದ ಒಂದು ವಾರದ ನಂತರ ದೀಪಾವಳಿ ಬಂತು. ರಾಮೇಶ್ವರ ಯಾತ್ರೆ ಹಾಗೂ ಹಲವಾರು ಜನರ ಆಶೀರ್ವಾದ ನಿಜವಾಗಿಯೂ ಫಲವನ್ನಿತ್ತಿತು.

"ರಾಣಿ, ಇದು ಗಂಡು ಕೂಸಾಗಿದ್ದು, ಸೀತೆಗೆ ತಮ್ಮನಾಗುತ್ತಾನೆ ಎಂಬುದು ನನ್ನ ನಂಬಿಕೆ. ಬಡವರ ಆಶೀರ್ವಾದ ಎಂದೂ ಹಾಳಾಗುವದಿಲ್ಲ."

ಜಾನಕಿಯು ಅವನ ಅಭಿಪ್ರಾಯಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿದಳು.

ರಾಮುವಿಗೆ ಮಾತೇ ಹೊಳೆಯಲಿಲ್ಲ. ಪಿತೃತ್ವ ಹಾಗೂ ಅಮರತ್ವವೂ ಅವನಿಗೆ ಒಂದೇ ಆಗಿತ್ತು. ಅವನು ಗಾಬರಿಪಟ್ಟುಕೊಂಡಿದ್ದನಲ್ಲದೆ ಸಂತೋಷಿಯೂ ಆಗಿದ್ದ.

ದೀಪಾವಳಿಯ ಸಮಯ ತನ್ನ ಸಂಬಂಧಿಕರಿಗೆ, ಆಶ್ರಯದಲ್ಲಿ ಇರುವವರಿಗೆ ಹಾಗೂ ಗೆಳೆಯರಿಗೆ ಹೊಸ ಹೊಸ ಬಟ್ಟೆಗಳನ್ನು ಸಂತೋಷದ ಬಹುಮಾನವಾಗಿ ಹಂಚಿದನು. ಪುಟ್ಟ ಸೀತೆಯೊಂದಿಗೆ ಪಟಾಕಿ ಹಾಗೂ ಸಿಡಿಮದ್ದುಗಳನ್ನು ಸುಡುವದರಲ್ಲಿ ಭಾಗವಹಿಸಿದನು. ಸೀತೆ ಆಗಾಗ ತಾನೂ ಪಟಾಕಿ ಹೊಡೆಯುತ್ತೇನೆಂದು ಹಟ ಹಿಡಿಯುತ್ತಿದ್ದಳು. ಸಿಡಿಮದ್ದು ಸಿಡಿಯುವಾಗ ಅವಳು ಕೈಚಪ್ಪಾಳೆ ಹೊಡೆಯುತ್ತಿದ್ದಳು. ಇದೆಲ್ಲಾ ದೀಪಾವಳಿಯ ಸಂಭ್ರಮ.

ಮರುದಿನ ಬೆಳಿಗ್ಗೆ ಅವನಿಗೊಂದು ಸರಕಾರೀ ಪತ್ರ ಬಂತು. ಅದನ್ನು ಕಂಡೊಡನೆ ಅವನಿಗೆ ಏಕಕಾಲದಲ್ಲೇ ಸಂತೋಷವೂ ಆಶ್ಚರ್ಯವೂ ಆಯಿತು. ಒಡನೆ ಅದನ್ನು ತೆರೆದು ಓದಲಾರಂಭಿಸಿದನು'

ಮದ್ರಾಸು,
ನವಂಬರ ೭.

ಪ್ರಿಯ ಶ್ರೀ ರಾಮಚಂದ್ರ,

ನಿರೀಕ್ಷಣೆಗಿಂತಲೂ ಒಳ್ಳೆಯ ರೀತಿಯಲ್ಲಿ ಮುಗಿದಿರುವ ದೂಸಿ—ಮಾಮಂದೂರ್ ಸರೋವರದ ಯೋಜನೆಯ ಯಶಸ್ಸಿನ ಕುರಿತು ಸರಕಾರೀ ವಲಯ ಹಾಗೂ "ಮದ್ರಾಸ್ ಮೆಯಿಲ್" ಪತ್ರಿಕೆಯ ಮೂಲಕ ತಿಳಿದು ಬಂತು. ಅದು ನನಗೆ ಬಹಳ ಸಂತೋಷವನ್ನಿತ್ತಿದೆ. ಯೋಜನೆಯಿಂದ ಸರೋವರಕ್ಕೆ ಮಾತ್ರ ಲಾಭವಾದುದಲ್ಲದೆ ಅಕ್ಕಪಕ್ಕದ ಹಲವಾರು ಚಿಕ್ಕ ಪುಟ್ಟ ನೀರಾವರಿ ಕೆರೆಗಳು ಕೂಡಾ ಹೆಚ್ಚಿನ ನೀರನ್ನು ಪಡೆದು ಕೊಂಡಿವೆಎಂಬುದು ಗಮನವನ್ನು ಸೆಳೆಯುವಂತಹದ್ದಿದೆ. ಅಷ್ಟುಮಾತ್ರವಲ್ಲ, ಯಾರು ದರೋಡೆಕೋರರಾಗಿದ್ದರೋ, ಕಾಡು—ಕಳ್ಳರಾಗಿದ್ದರೋ ಅವರು ಈಗ ಅಲ್ಲಿ ಶಾಂತರಾಗಿ ಬೇಸಾಯಗಾರರಾಗಿ ನೆಲಸಿರುವದು, ಮಹತ್ವಪೂರ್ಣ ವಿಷಯವಿದೆ. ನಿನ್ನ ಸಾಧನೆಯು ಪ್ರಶಂಸನೀಯ ಎಂಬುದರಲ್ಲಿ ಸಂಶಯವಿಲ್ಲ. ಚರಿತ್ರೆಯನ್ನು ಚೆನ್ನಾಗಿ ವ್ಯಾಸಂಗ ಮಾಡಿರುವ ನನ್ನ ಒಬ್ಬ ಪ್ರಖ್ಯಾತ ಭಾರತೀಯ ಸ್ನೇಹಿತನು ಮೊನ್ನೆ ಒಂದು ವಿಷಯವನ್ನು ತಿಳಿಸಿದನು. ಪಲ್ಲವ ರಾಜರ ಕಾಲದಲ್ಲಿ ಬಡವರು ಶಾಂತಿಯಿಂದ ಸುಭಿಕ್ಷೆಯಿಂದಯಿದ್ದಂತೆ ಈಗ ನಿನ್ನಿಂದ ಅವರು ಅಲ್ಲಿದ್ದಾರೆಂದು ಅವನು ಹೇಳಿದನು. ಈ ಘಟನೆಯಲ್ಲಿ ನನ್ನದೂ ಒಂದು ಚಿಕ್ಕ ಪಾತ್ರವಿದೆ ಎಂಬುದು ನನಗೆ ಹೆಮ್ಮೆಯ ವಿಷಯವಿದೆ.

ಆದರೆ ಈ ಯಶಸ್ಸು ನಿನ್ನನ್ನು ಇನ್ನೂ ಕಷ್ಟಕರ ಕಾರ್ಯದತ್ತ, ಕರೆಯುತ್ತಿದೆ. ನಿನ್ನ ಕೆಲಸದಿಂದ ಸಂಪ್ರೀತರಾಗಿರುವ ಪ್ರಾಂತ್ಯಪಾಲರು ನೀನು ಬಹಳ ಅತ್ಯಾವಶ್ಯಕ ಉದ್ಯೋಗಿ ಎಂದು ತಿಳಿದಿದ್ದಾರೆ. ಕಳೆದ ಮೂರು ತಿಂಗಳಿನಿಂದ ಮದ್ರಾಸು ಲೂಟಿಗಾರರಿಂದಾಗಿ ತತ್ತರಿಸಿ ಹೋಗಿರುವ ಸಂಗತಿ ಬಹುಶಃ ನಿನಗೆ ತಿಳಿದಿರಬಹುದು. ಅವರ ಕೊಳ್ಳೆಗೆ ಬಲಿಯಾದವರಲ್ಲಿ ನಾನೂ ಒಬ್ಬನಿದ್ದೇನೆ. ಮೊನ್ನೆ ನನ್ನ ಮನೆ ಲೂಟಿ ಆದಾಗ ಕೆಲ ಅತ್ಯ ಮೂಲ್ಯ ಸ್ಮಾರಕಗಳು ಹಾಗೂ ಎಲ್ಲೂ ದೊರಕದ—ಪರಂಪರೆ ಪರಂಪರೆಯಿಂದ ಬಂದಿರುವ—ಜಂಗಮ ಸ್ವತ್ತುಗಳನ್ನು ನಾನು ಕಳೆದುಕೊಂಡಿದ್ದೇನೆ. ಮೂರು ತಿಂಗಳಲ್ಲಿ ಅಸಾಧಾರಣ ನಗರ ರಕ್ಷಕರನ್ನು ತರಿಸಿಕೊಂಡೆವು. ಏನು ಪ್ರಯೋಜನ! ದಕ್ಷ ಅಧಿಕಾರಿಗಳು ಕಲ್ಪನೆಗಳಲ್ಲಿ ಪಳಗಿರುವವರೇ ವಿನಃ ಕಾರ್ಯಂಗದಲ್ಲಲ್ಲ.

ನಾನೀಗ ನ್ಯಾಯ ಮತ್ತು ಕ್ರಮ ಖಾತೆಯ ಮೊದಲ ಸದಸ್ಯನೆಂಬುದು ನಿನಗೆ ಗೊತ್ತಿರಬಹುದು. ಇಲ್ಲಿಯ ನಗರ ರಕ್ಷಕರು ಈ ಕೊಲೆಗಡುಕರ ವಿಷಯ ಆಶ್ಚರ್ಯಕಾರಕ ಕಥೆಗಳನ್ನು ಹೇಳುತ್ತಾರೆ. ಆ ಕೊಲೆಗಡುಕರು ಸರಕಾರಿ ಕಚೇರಿಗಳನ್ನೂ ಬಾಕಿ ಬಿಟ್ಟಿಲ್ಲ. ನಿಜವಾಗಿ ಹೇಳುವದಾದಲ್ಲಿ ಅವರು ಆಂಗ್ಲೇಯರತ್ತ, ಪೌರ ಉದ್ಯೋಗಗಳಲ್ಲಿರುವವರತ್ತ ಹಾಗೂ ನಗರ ರಕ್ಷಕರತ್ತ ಹೆಚ್ಚು ಗಮನಕೊಟ್ಟಿದ್ದಾರೆ. ಹಾಗಿರುವದರಿಂದ, ಇಡಿ ಚಳುವಳಿಯ ಹಿಂಭಾಗದಲ್ಲಿ ಬಂಗಾಲದ ಕೆಲ ಬಂಡುಗಾರರು ಹಾಗೂ ಹಲವು ರಾಜಕೀಯ ಕ್ರಾಂತಿಕಾರಿಗಳಿದ್ದು, ನೇತೃತ್ವವನ್ನು ವಹಿಸಿಕೊಂಡಿದ್ದಾರೆಂಬ ಭಾವನೆಯನ್ನು ಸರಕಾರವು ಹೊಂದಿದೆ. ಅದು ಸರಿ ಎಂಬುದು ನನ್ನ ಭಾವನೆಯಲ್ಲ.

ನಿಜ, ನಿನಗೆ ನಗರ ರಕ್ಷಕ ಖಾತೆಯ ಕೆಲಸದ ಅನುಭವ ಇಲ್ಲ ಎನ್ನುವದು ನನಗೆ ಗೊತ್ತು, ಆದರೆ ನಿನ್ನಂತಹವರನ್ನು—ಯಾರ ಮನಸ್ಸು ಬದಲಾಗುವದಿಲ್ಲವೋ, ಅವರನ್ನು—ನಾನು ನಂಬುತ್ತೇನೆ. ಈಗ ಈ ಕಾರ್ಯಕ್ಕೆ ಬೇಕಾಗಿರುವದು, ಆ ದರೋಡೆಯ ಮೂಲಕಾರಣವನ್ನು ಕಂಡು ಹಿಡಿದು, ಅದಕ್ಕೆ ಔಷಧೋಪಾದಿಯಲ್ಲಿ ಕಾರ್ಯಪ್ರವೃತ್ತರಾಗುವ ಜನರು. ಆ ಜನರು ಸ್ವ-ಇಚ್ಛೆಯಿಂದ ಮುಂದೆ ಬಂದವರಿರಬೇಕು. ಈ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಲು ನಿನಗಿಂತ ಉತ್ತಮನನ್ನು ನಾ ಕಾಣೆ.

ನೀನು ವಿಶಿಷ್ಟ ಅಧಿಕಾರಿಯಾಗಿ ಈ ಕೆಲಸದತ್ತ ಗಮನ ಕೊಡಲಾರೆಯಾ? ನಿನಗೆ ಬೇಕಾದಷ್ಟು ನಗರ ರಕ್ಷಕರನ್ನು ಹಾಗೂ ಆಸರೆಯನ್ನು ನಾನು ಕೊಡುತ್ತೇನೆ.

ನಾಗಲಾಪುರಂನ ಹಳೆಯ ದರೋಡೆಗಾರರ ಗುಂಪು ಸರಕಾರವನ್ನು ವಿರೋಧಿಸುವ ಕೆಲವರ ನೇತೃತ್ವದಲ್ಲಿ ಸೋಂಕು ರೋಗದಂತೆ ಇತ್ತ ಬಂದಿದೆಂಬುದು ನನ್ನ ಅಭಿಪ್ರಾಯ. ಅವರ ವಂಶಪಾರಂಪರ್ಯದಿಂದ ಬಂದಿರುವ ಮುಖಂಡನು ಇತ್ತೀಚೆಗೆ ತಿರುಚಿನಾಪಳ್ಳಿಯ ಕಾರಾಗೃಹದಿಂದ ತಪ್ಪಿಸಿಕೊಂಡಿದ್ದಾನೆ. ಬಹುಶಃ ಆತನನ್ನು ಅಲ್ಲಿ ನಿಕೃಷ್ಟ ರೀತಿಯಲ್ಲಿ ಕಂಡಿರಬಹುದು, ಅವನೀಗ ಸರಕಾರದ ಮೇಲೆ ಸೇಡು ತೀರಿಸಿಕೊಳ್ಳುತ್ತಿರಬಹುದು. ನೀನು ನೋಡುವಂತೆ ನಾನೀಗ ನೋಡಲಾರಂಭಿಸಿದ್ದೇನೆ. ಇಲ್ಲಿಯ ಅತಿ ದುಃಖಾವಸ್ಥೆಗೆ ಅರ್ಥವಾಸಿ ಮನುಷ್ಯರೇ ಕಾರಣರಿದ್ದಾರೆ.

ಈ ಕೆಲಸವು ನಿನಗೆ ಮೆಚ್ಚಿಗೆಯಾದಲ್ಲಿ ತಂತಿಯ ಮೂಲಕ ತಿಳಿಸಿ, ಸೋಮವಾರ ಮದ್ರಾಸಿನಲ್ಲಿ ಕೆಲಸಕ್ಕೆ ಸೇರು.

ನನ್ನ ಪತ್ನಿಯ ಹಾಗೂ ನನ್ನ ಆಶೀರ್ವಾದಗಳು.

ನಿನ್ನ ಪ್ರಾಮಾಣಿಕ,
ಯಚ್. ಕೆಡೆಲ್.

(ಮುಂದುವರಿಯುವುದು.)

READ & ADVERTISE IN NAVAYUGA WEEKLY



NAVAYUGA 12—5—1966
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಆಧುನಿಕ ನೀಲಕಂಠ

ಯುವಕ ಅಧಿಕಾರಿ—ರಾಜಗೋಪಾಲನ್

ಬೆಂಗಳೂರಿಗೆ ೪೦ ಮೈಲಿಗಳ ದೂರದಲ್ಲಿರುವ ಕನಕಪುರದಲ್ಲಿ ಈಚೆಗೆ ರಾಷ್ಟ್ರೀಯ ಶಿಸ್ತು ಯೋಜನೆಯ ತರಬೇತಿ ಶಿಬಿರವೊಂದು ನಡೆಯಿತು. ಈ ತರಬೇತಿ ಪಡೆಯುತ್ತಿದ್ದ ವಿದ್ಯಾರ್ಥಿಯೊಬ್ಬರಿಗೆ ರಾತ್ರಿ ವಿಷಪೂರಿತ ಹಾವೊಂದು ಕಚ್ಚಿ ಆತನ ಪರಿಸ್ಥಿತಿ ಚಿಂತಾಜನಕವಾಯಿತು. ಬೆಂಗಳೂರಿನಲ್ಲಿರುವ ನ್ಯಾಷನಲ್ ಫಿಟ್‌ನೆಸ್ ಕೋರ್ ಮುಖ್ಯಾಧಿಕಾರಿಗಳೂ ಶಿಬಿರದ ಕಮಾಂಡಂಟರೂ ಆದ ಶ್ರೀ ಕೆ. ರಾಜಗೋಪಾಲನ್ನರು ಮಾತ್ರ ಎದೆಗುಂದದೆ ಸಾವಿನೊಡನೆ ಸಮರ ನಡೆಸಿ, ತಮ್ಮ ಸಂಗಾತಿಯ ಪ್ರಾಣ ಉಳಿಸಿದ ರೋಮಾಂಚಕಾರಿ ಕಥೆಯನ್ನು ಇಲ್ಲಿ ಓದಿರಿ. ಈ ಸಾವಿನೊಡನೆ ನಡೆದ ಸಮರದ ಸಾಕ್ಷಿಯಾಗಿದ್ದ ಶಿಬಿರದ ವೈದ್ಯ ಡಾ। ಬಿ. ಡಿ. ಕೃಷ್ಣಮೂರ್ತಿ ಅವರು ಬರೆದ ಪತ್ರದ ಆಧಾರದ ಮೇಲೆ ಈ ಲೇಖನ ಸಿದ್ಧವಾಗಿದೆ.

ಆ ಶನಿವಾರ ಬೆಳಗಿನ ಜಾವ ಇಡೀ ಕನಕಪುರವೇ ನಿದ್ರಾ ದೇವಿಯ ತೆಕ್ಕೆಯಲ್ಲಿದ್ದಂತೆ ಕಾಣುತ್ತಿತ್ತು. ಕನಕಪುರದ ಪುರಸಭಾ ಪ್ರೌಢ ಶಾಲೆಯಲ್ಲಿದ್ದ ವಿದ್ಯಾರ್ಥಿಗಳ ಶಿಬಿರವೂ ನಿದ್ರಾದೇವಿಯ ಪ್ರಭಾವಕ್ಕೊಳಪಟ್ಟಿರಬೇಕು. ಇಡೀ ದಿನ ಪ್ರಯಾಸಕರದ ವ್ಯಾಯಾಮ, ಅಂಗ ಸಾಧನೆಗಳಲ್ಲಿ ತೊಡಗಿದ್ದು ತುಂಬಾ ದಣಿದಿದ್ದ ರಾಷ್ಟ್ರೀಯ ಶಿಸ್ತು ಯೋಜನೆಯ ಶಿಕ್ಷಣಾರ್ಥಿಗಳು ನಿದ್ರಾದೇವಿಯ ಆಲಿಂಗನದಲ್ಲಿ ಸಿಕ್ಕಿ ನಿದ್ರಾಪರವಶರಾಗಿದ್ದರೆ ಅದು ಹೆಚ್ಚೇನಲ್ಲ. ಆದರೆ ಈ ನಿಶ್ಶಬ್ದತೆ ಇದ್ದಕ್ಕಿದ್ದಂತೆಯೆ ಕಲಕಿತು. "ಅಯ್ಯೋ ಹಾವು, ಹಾವು, ಹಾವು ಕಚ್ಚಿದೆ" ಎಂಬ ಆರ್ಭಟದಿಂದ.

ಶಿಬಿರವಾಸಿಗಳೆಲ್ಲರೂ ಈ ಆರ್ತನಾದ ಕೇಳಿ, ಧ್ವನಿ ಹಿಂಬಾಲಿಸಿ ಧಾವಿಸಿದರು, ದುರ್ಘಟನೆ ನಡೆದ ಸ್ಥಳದತ್ತ. ರಾಮಯ್ಯ ಎಂಬ ಶಿಕ್ಷಣಾರ್ಥಿಯೊಬ್ಬರು ವಿಷಪೂರಿತ ಹಾವಿನ ಕೋಪಕ್ಕೆ ತುತ್ತಾಗಿದ್ದರು. ಅವರ ಬಲಗಾಲಿನ ಮೂರನೆಯ ಬೆರಳಿಗೆ ಹಾವು ಕಚ್ಚಿತ್ತು. ತರಬೇತಿ ಶಿಬಿರದ ಕಮಾಂಡೆಂಟ್‌ರಾದ ಶ್ರೀ ಕೆ. ರಾಜಗೋಪಾಲನ್ ಶಿಬಿರವಾಸಿಗಳ ಕೂಗಾಟ ಚೀರಾಟಗಳನ್ನು ಕೇಳಿ ಆ ಕಡೆಯತ್ತ ಧಾವಿಸಿದರು; ಒಮ್ಮೆ ರಾಮಯ್ಯನವರತ್ತ ದೃಷ್ಟಿ ಹಾಯಿಸಿದರು. ಶಾಂತಿ ಮತ್ತು ಚಿತ್ತಸ್ಥೈರ್ಯದಿಂದ ರಾಜಗೋಪಲನ್‌ರವರು ವಿಷ ಮೇಲೇರದಂತೆ ಮಾಡುವ ಉದ್ದೇಶದಿಂದ ಒಂದು ಹಗ್ಗ ತೆಗೆದುಕೊಂಡು ರಾಮಯ್ಯನವರ ಬಲಗಾಲನ್ನು ಬಲವಾಗಿ ಕಟ್ಟಿದರು. ಬೇಗನೆ ಒಂದು ಹೊಸ ಬ್ಲೇಡನ್ನು ತರಿಸಿ ಹಾವು ಕಚ್ಚಿದ ಸ್ಥಳದಲ್ಲಿ ಆಳವಾಗಿ ಕತ್ತರಿಸಿದರು; ಮತ್ತು ಅಲ್ಲಿ ಗುಂಪು ಸೇರಿದ್ದವರನ್ನು ಕುರಿತು "ಇಲ್ನೋಡಿ, ಈ ಗಾಯ ಆಗಿದೆಯಲ್ಲ. ಅಲ್ಲಿ ನೀವು ಬಾಯಿ ಇಟ್ಟು ವಿಷ ಹೀರಿ ಉಗುಳಬೇಕಾಗುತ್ತೆ.

ನಿಮ್ಮಲ್ಲಿ ಯಾರಾದರೂ ಮುಂದೆ ಬಂದು ಈ ಕೆಲಸ ಮಾಡಿ ಪುಣ್ಯ ಕಟ್ಟಿಕೊಳ್ಳಿ. ನಾನೇ ಈ ಕೆಲಸ ಮಾಡೋಣ ಎಂದರೆ ಬಾಯಲ್ಲಿ ಹುಣ್ಣಾಗಿದೆ ಎಂದರು. ಹಾವು, ಹಾವು ಕಚ್ಚಿದ ಅಸಾಮಿಯನ್ನು ನೋಡಿ ದಿಗ್ಭ್ರಾಂತರಾಗಿದ್ದ, ಗಾಬರಿಗೊಂಡಿದ್ದ ಜನರಲ್ಲಿ ಆ ಸಮಯದಲ್ಲಿ ಯಾರೂ ಮುಂದೆ ಬರಲು ಸಿದ್ಧರಾಗಿರಲಿಲ್ಲ. ಕಾಲ ಮೀರಿ ಹೋಗುತ್ತಿದೆ. ರಾಮಯ್ಯನವರಂತೂ ಸಾವಿನೊಡನೆ ಸೆಣಸುತ್ತಿದ್ದಾರೆ. ಇನ್ನು ಸ್ವಾರಸ್ಯವಿಲ್ಲವೆಂದು ಬಗೆದು ತಮ್ಮ ಜೀವದ ಹಂಗನ್ನು ತೊರೆದು ರಾಜಗೋಪಾಲನ್ನರು ತಾವೇ ಹಾವು ಕಚ್ಚಿದ ಸ್ಥಳಕ್ಕೆ ತಮ್ಮ ತುಟಿಗೂಡಿಸಿ ವಿಷ ಹೀರಿ, ವಿಷವನ್ನು ಹೊರಕ್ಕೆ ಉಗುಳಲಾರಂಭಿಸಿದರು. ವಿಷ ಉಗುಳಿದ ನಂತರ "ಯಾರಾದರೂ ಬೇಗ ಡೆಟ್ಟಾಲ್ ಸೆಲ್ಯೂಷನ್ ತನ್ನಿ...." ಎಂದರು. ಡೆಟ್ಟಾಲ್ ಸಲ್ಯೂಷನನ್ನು ಬಾಯಿಗೆ ಹಾಕಿಕೊಂಡು ಬಾಯಿ ಮುಕ್ಕಳಿಸಿದರು. ಈ ಆಧುನಿಕ 'ನೀಲಕಂಠ'ರ ಅದ್ಭುತ ಸಾಹಸದ ಫಲವಾಗಿ ರಾಮಯ್ಯನವರ ಜೀವ ಉಳಿಯಿತು.

ಸಂಗಾತಿಯ ಪ್ರಾಣವನ್ನೇನೋ ಉಳಿಸಿದರು. ಆದರೆ ರಾಜಗೋಪಾಲನ್ನರಿಗೆ ಚೆನ್ನಾಗಿ ಗೊತ್ತಿತ್ತು, ತಾವು ಈ ಅಪಾಯಕಾರಿ ಸಾಹಸವನ್ನು ಕೈಗೊಳ್ಳುವುದರ ಮೂಲಕ ಸಾವಿನೊಡನೆ ಸರಸವಾಡುತ್ತಿದ್ದೇನೆ ಎಂಬುದು. ಅವರ ನಿರೀಕ್ಷೆ ಸುಳ್ಳಾಗಲಿಲ್ಲ. ಅವರ ದೇಹ ಸ್ಥಿತಿ ಕಳವಳಕಾರಿಯಾಯಿತು. ಮುಖ ನೀಲಿ ಬಣ್ಣಕ್ಕೆ ತಿರುಗಲಾರಂಭಿಸಿತು. ನಾಡಿ ಬಡಿತ ಕುಗ್ಗಿತು. ಕೈ ಕಾಲುಗಳು ತಣ್ಣಗಾಗಲು ಪ್ರಾರಂಭಿಸಿವು. ಹೃದಯ ಡಬ ಡಬ ಹೊಡೆಯುತ್ತಿತ್ತು. ವಿದ್ಯಾರ್ಥಿಗಳಿಗೆ ಮುಖ್ಯವಾಗಿ ರಾಮಯ್ಯನವರ ಮನಸ್ಸಿನ ಮೇಲೆ ದುಷ್ಪರಿಣಾಮ ವಾಗಬಾರದೆಂಬ ಉದ್ದೇಶದಿಂದ ರಾಜಗೋಪಾಲನ್ನರು ಚಿತ್ತಸ್ಥೈರ್ಯದಿಂದ ತಮ್ಮ ಕೊಠಡಿಗೇ ತೆರಳಿದರು. ಕೂಡಲೆ ಶಿಬಿರದ ವೈದ್ಯರಾದ ಡಾ। ಟಿ. ಡಿ. ಕೃಷ್ಣಮೂರ್ತಿಯವರನ್ನು ಕರೆತರಲಾಯಿತು. ಅವರು ಬಂದು ಕುಗ್ಗುತ್ತಿರುವ ಹೃದಯವನ್ನು ಪ್ರಚೋದಿಸುವ ಬಗ್ಗೆ ಕೊನೆಯ ಕ್ರಮವಾಗಿ ಇಂಜೆಕ್ಷನ್ ಕೊಟ್ಟರು. ದೇಹದಲ್ಲಿ ಸುಮಾರು ೯೦ ನಿಮಿಷಗಳವರೆಗೆ ಅವರ ಕೈಕಾಲುಗಳನ್ನು ಉಜ್ಜಲಾಯಿತು. ಕೆಲವು ಸಮಯದ ನಂತರ ವೈದ್ಯರ ಸಲಹೆಯ ಮೇರೆಗೆ ರಾಜಗೋಪಾಲನ್‌ರನ್ನು ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗೆಂದು ಬೆಂಗಳೂರಿಗೆ ಒಯ್ಯಲಾಯಿತು. ಅವರು ಬೇಗನೆ ಗುಣ ಮುಖ ಕರ್ತವ್ಯ ನಿರತರಾದರು.

ಈ ಘಟನೆಯ ಬಗ್ಗೆ ಡಾ। ಕೃಷ್ಣಮೂರ್ತಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಈ ಸಾಹಸಿ ಯುವಕ ಅಧಿಕಾರಿಯ ಅನುಪಮ ಧೈರ್ಯ ಸ್ಥೈರ್ಯಗಳಿಂದಾಗಿ ವಿದ್ಯಾರ್ಥಿಯೊಬ್ಬನ ಪ್ರಾಣ ಉಳಿಯಿತು. ಈ ಆಧುನಿಕ ನೀಲಕಂಠನಿಗೆ ಕನಕಪುರದ ಇಡೀ ಜನಸ್ತೋಮವೇ ಪ್ರಣಾಮಗಳನ್ನು ಅರ್ಪಿಸುತ್ತದೆ. ನಾನೊಬ್ಬನೇ ಏಕೆ ಎಲ್ಲ ವಿದ್ಯಾರ್ಥಿಗಳು, ಸಿಬ್ಬಂದಿಯವರು ಕಣ್ಣಾರೆ ಈ ಘಟನೆಯನ್ನು ನೋಡಿದ್ದೇವೆ ಎಂದು ತಿಳಿಸಿದರು.

ಈ ಸಾಹಸ ಕಾರ್ಯವನ್ನು ಪತ್ರಿಕೆಗಳ ಮೂಲಕ ಜನತೆಗೆ ತಿಳಿಸುವುದಾಗಿ ಅವರಿಗೆ ತಿಳಿಸಿದಾಗ, ರಾಜಗೋಪಾಲನ್ನರು "ದಯವಿಟ್ಟು ಈ ಕೆಲಸ ಮಾತ್ರ ಮಾಡಬೇಡಿ" ಎಂದರಲ್ಲದೆ, ಯಾರೊಂದಿಗೂ ಈ ಘಟನೆಯನ್ನು ಕುರಿತು ಪ್ರಸ್ತಾಪಿಸಲಿಲ್ಲ.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20

ಕಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ಪಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ
ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯ
ಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ.
0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿ
ಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ದಯಮ ಪ್ರತಿಗಳಿಗೆ ವಿಚಾರಿಸಿರಿ :-
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

19—5—1966



NAVAYUGA

೨೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ —

ಜಾನಕೀ ಪತಿ ರಾಮಚಂದ್ರ ಪದವಿ ಪಡೆಯದ ಆಲವಂತಿಯ ಆಸ್ತಿಪಾಸ್ತಿಗಳನ್ನು ಮಾರಿ ಶಿಬಿರ ಗುಮಾಸ್ತನಾದ. ಸುದೈವದಿಂದ ಕೆಡೆಲರಿಂದಾಗಿ ದೂಸಿಯ ಉಪತಾಲೂಕಧಿಕಾರಿಯಾದ; ಕರ್ತವ್ಯ ನಿರತ ದಕ್ಷ ಅಧಿಕಾರಿಯೆನಿಸಿದ; ಕೀರ್ತಿಗಳಿಸಿದ.

ರಾಮುವಿನ ಒಕ್ಕಲು ಮುರುಗ ಶ್ರೀಮಂತಿಕೆಯೊಡನೆ ದುರ್ವ್ಯಸನಕ್ಕೆ ಬಲಿಯಾದ. ಆತನೂ ತೊಪ್ಪೆಯೂ ದಂಡನೆಗೆ ಗುರಿಯಾದರು; ಆದರೆ ಸೆರೆಮನೆಯಿಂದ ಪರಾರಿಯಾದರು.

ರಾಮುವಿನ ಮಿತ್ರ ಕೇದಾರಿ ಉಭಯೋನ್ಮುಖ ವಕೀಲನಾದ; ಸುಂದರ ಸ್ವಪ್ನ ಕಾಣುವುದರಲ್ಲೇ ಇದ್ದ. ಚುನಾವಣೆಗೆ ನಿಲ್ಲುವ ಯುಚ್ಚುತಾಗಿತ್ತು. ಈಗಾತ ಮೋಟಾರು ಕಾರಿನ ಒಡೆಯ.

ಪ್ರಭಾವಿ ಕೆಡಲರಿಗೆ ಲೂಟಿಗಾರರನ್ನು ದಮನಿಸುವ ಚಿಂತೆ ಹಿಡಿದಿತ್ತು. ಅವರು ಈ ಕೆಲಸಕ್ಕೆ ರಾಮುವಿನ ಸಹಾಯ ಬಯಸಿದ್ದರು.

ಮುಂದೆ —

ರಾಮು ಹಿಂದೆ ಮುಂದಕ್ಕೆ ನೋಡಬೇಕಾಯಿತು. ಆ ತರಹದ ಹೊಸ ಹಾಗೂ ಅಪಾಯಕರ ಕೆಲಸಕ್ಕೆ ರಾಮು ಸೇರಕೂಡದೆಂಬುದು ಜಾನಕಿಯ ಅಭಿಪ್ರಾಯ. ಆದರೂ ರಾಮು ಸೇರಿದನು. ಹೊಸ ಉದ್ಯೋಗವೆಂದರೆ ವಿರಹ, ಅಪಾಯ ಹಾಗೂ ಅವಿಶ್ರಾಂತ ಪ್ರಯಾಣವೆಂಬುದನಳೆಣಿಕೆ. ಅವನು ಬಿಡುವು ತೆಗೆದುಕೊಂಡು ಒಟ್ಟಿಗಿರಬೇಕೆಂಬುದು ಅವಳ ಹಂಬಲ.

ಆದರೆ ಶ್ರೀ ಕೆಡೆಲರ ವಿನಯಭರಿತ ಪತ್ರದ ಮೂಲಕ ಕೊಡಲ್ಪಟ್ಟಿರುವ ಆಜ್ಞೆಯನ್ನು ನಿರಾಕರಿಸಲು ಸಾಧ್ಯವೇನು? ಕೆಡೆಲರನ್ನು ಸಂತೋಷಪಡಿಸಲು ಹಾಗೆ ಒಂದು ವಾರ ಕೆಲಸದಲ್ಲಿದ್ದು, ಹೇಗಾದರೂ ಮಾಡಿ ಬಿಡುವು ಪಡೆದುಕೊಂಡು ಬರುತ್ತೇನೆಂದು ಜಾನಕಿಯನ್ನು ಸಂತೈಸಿ, ಅವನು ಕೆಲಸಕ್ಕೆ ಸೇರಲು ನಿಶ್ಚಯಿಸಿದನು.

ರಾಮು ಒಬ್ಬನೇ ಮದ್ರಾಸಿಗೆ ಬಂದು ಸೋಮವಾರ ಶ್ರೀ ಕೆಡೆಲರನ್ನು ಕಂಡನು; ಸಂಬಂಧಪಟ್ಟ ಅಧಿಕಾರಿಗಳ ಬಳಿ ಎಲ್ಲಾ ವಿವರಗಳನ್ನು ಪಡೆದುಕೊಂಡನು. ಕೆಲಸ ಅವನ ಮನಸ್ಸನ್ನು ಸೆರೆ ಹಿಡಿಯಿತು. ಅವನು ತನ್ನ ಹಂಚಿಕೆಗೆ ಸರಿಯಾದ ರೂಪವನ್ನು ಕೊಟ್ಟನು. ಅವನ ಆಲೋಚನೆಯು ಅಪಾಯಪೂರ್ಣ ಹಾಗೂ ತಪ್ಪು ಅಭಿಪ್ರಾಯಗಳದ್ದೆಂದು ನುರಿತ ಕೆಲವರ ಅಭಿಪ್ರಾಯವಿದ್ದರೂ ಕೂಡಾ ಅವನು ನಾಗಲಾಪುರ ಮಿನಿಪರ್ವತದ ಬುಡಕ್ಕೆ ಹೊರಟನು. ಅವನಿಗೆ ನಡೆಸಬೇಕಾಗಿರುವ ಕಾರ್ಯದಲ್ಲಿ ಉತ್ಸಾಹ ಇತ್ತು. ದರೋಡೆಗಾರರ ಕೂಟದ ಕುರಿತಾದ ಮಾಹಿತಿಯನ್ನು ಅದರ ಕೇಂದ್ರ ಕಾರ್ಯಾಲಯದಿಂದಲೇ ಪಡೆದುಕೊಳ್ಳಬೇಕೆಂಬುದು ಅವನ ಆಶೆ. ಶೀಘ್ರ ಹಾಗೂ ಅನಿರೀಕ್ಷಿತವಾಗಿ ಮುತ್ತಿಗೆ ಹಾಕಿ, ಅವರನ್ನು ಸೆರೆ ಹಿಡಿದು ಮೆಲ್ಲ ಮೆಲ್ಲನೆ ದಯೆಯಿಂದ ನೋಡಿಕೊಳ್ಳಬೇಕೆಂದು ಅವನು ಯೋಚಿಸಿಕೊಂಡಿದ್ದನು. ತನ್ನೊಂದಿಗೆ ಅವನೊಂದು ಆರಿಸಿದ ರಕ್ಷಕ ಪಡೆಯನ್ನು ತೆಗೆದುಕೊಂಡು ಹೋದನು.

ಕಡಿದಾಗಿ ಅಂಕುಡೊಂಕಾಗಿ ಪರ್ವತ ಶಿಖರಕ್ಕಿದ್ದ ದಾರಿ ಇದ್ದಲ್ಲಿಗೆ ರಾಮು ಬಂದನು. ಪರ್ವತಗಳು ಬಹಳ ಎತ್ತರದವಲ್ಲದಿದ್ದರೂ, ದಟ್ಟನೆಯ ಕಾಡಿಗೆ ಆಸರೆಯನ್ನಿತ್ತಿದ್ದುವು. ಎಲ್ಲೆಲ್ಲೂ ಚಿಕ್ಕ ಪುಟ್ಟ ಮುಳ್ಳಿನ ಪೊದರುಗಳು ಆ ಕಾಡಿನಲ್ಲಿದ್ದುವು. ಏರು ಬಹು ಕಡಿದಾಗಿತ್ತು. ಕಳ್ಳರ ಗುಂಪಿದ್ದಲ್ಲಿಗೆ ಹೋಗಲು ಅಂತಹ ಮೂರು ಪ್ರದೇಶಗಳನ್ನು ದಾಟಿ ಹೋಗಬೇಕು. ಅಲ್ಲದೆ ಆ ಅಡವಿಯಲ್ಲಿ ಕಾಡು ಹಂದಿಗಳು, ಚಿರತೆಗಳು ಮತ್ತು ಹಲವಾರು ವಿಧದ ಹಾವುಗಳು ಇವೆ ಎಂದು ಕೆಲವರು ಅವನಿಗೆ ಹೇಳಿದ್ದರು.

ಅವನಲ್ಲಿಗೆ ಬಂದಾಗ ಭಾಸ್ಕರನು ಪಶ್ಚಿಮಾಂಬುಧಿಯತ್ತ ಪ್ರಯಾಣ ಬೆಳೆಸಿದ್ದನು. ಅವನು ಆ ರಾತ್ರಿಗಾಗಿ ಅಲ್ಲೇ ಡೇರೆ ಹೊಡೆದನು. ಆದೆಷ್ಟು ಅಂದದ ದನಕರುಗಳು! ಅವುಗಳನ್ನು ಮೇಯಿಸುವ ಸರಳ ಗೊಲ್ಲರು ಹಿಂದೆಯೇ ಇರುತ್ತಿದ್ದರು. ಅವರಾದರೋ ತಮ್ಮ ಸೆರೆಯುವರಂತಿರದೆ, ಆದಿಯುವ ಚಾಳಿಗೆ ಬಲಿ ಬಿದ್ದಿರಲಿಲ್ಲ. ರಾತ್ರಿ ಅವನು ಹಾಲು ಕುಡಿದಾಗ ತಾನು ಗೊಲ್ಲನೊಬ್ಬನ ಮನೆಯಲ್ಲಿ ಹುಟ್ಟುತ್ತಿದ್ದರೆ ಅದೆಷ್ಟು ಒಳ್ಳೆಯದಾಗುತ್ತಿತ್ತೆಂದು ಭಾವಿಸಿದನು. ಅಂತಹ ಹಾಲಿನ ರುಚಿಯನ್ನು ಅವನದುವರೆಗೂ ನೋಡಿರಲಿಲ್ಲ.

ನಿಸರ್ಗದಲ್ಲಿ ತರತರದ ವೈವಿಧ್ಯತೆಯಿಂದ ಹಾಗೂ ರಮಣೀಯವಾಗಿ ಕಂಗೊಳಿಸುತಿತ್ತು. ಪರ್ವತದ ಇಳಿಜಾರಿನಲ್ಲಿ ದಟ್ಟವಾಗಿ ಗಿಡಗಳು ಬೆಳೆದು ಅದಕ್ಕೆ ಹಸುರು ಬಣ್ಣವನ್ನಿತ್ತಿದ್ದುವು. ಹತ್ತಿರದಲ್ಲಿದ್ದ ನೀರಿನ ಪ್ರವಾಹ ಮಕ್ಕಳ ಗಾಯನದಂತೆ ನಾದವನ್ನುಂಟುಮಾಡುತ್ತಿತ್ತು. ಕಾಡು ಹೂಗಳ ಸುಗಂಧವನ್ನು ಲೇಪಿಸಿಕೊಂಡಿದ್ದ ಗಾಳಿಯು ಅತ್ತಿತ್ತ ಚಲಿಸುತ್ತ ಇರುತ್ತಿತ್ತು. ಎಲ್ಲೆಲ್ಲೂ ನಿರಂಕುಶತೆ ಹಾಗೂ ರಮಣೀಯತೆ. ತಮ್ಮ ತಮ್ಮ ಪ್ರಭೆಯನ್ನು ಬೀರಿದ್ದುವು. ತನ್ನ ಮಹತ್ವಾಕಾಂಕ್ಷೆಯ ಮಸಿ ಹಾಗೂ ಹೊಗೆಯಿಂದ ಅಲ್ಲಿಯ ನಿಸರ್ಗವನ್ನಿನ್ನೂ ನರನು ಕಪ್ಪುಮಾಡಿಲ್ಲ. ತನ್ನೆದುರು ನಿಸರ್ಗ ಚೆಲ್ಲಿ ಹಾಲು ಮತ್ತು ಜೇನು ತಟತಟನೆ ಬೀಳುತ್ತಿದೆ ಎಂದಾತನು ಭಾವಿಸಿಕೊಂಡಿದ್ದನು. ಆ ಸ್ಥಳದಲ್ಲಿ ಆ ರೀತಿ, ತಾನು ಅದೆಂದಿಗೂ ಕಳೆದುಕೊಂಡು ಹಾಲು ಜೇನುಗಳಿಂದಲೇ ಬದುಕುತ್ತಿದ್ದರೆ — ಆ ಖಾಳು! ರಾಮು ಆಲೋಚನೆಯ ಪ್ರವಾಹದಲ್ಲಿ ತೇಲಿ ಹೋದನು.

ಆ ಆಲೋಚನಾ ಅಲೆಯಿಂದ ಅವನು ತಿರುಗಿ ತನ್ನ ಕಾರ್ಯರಂಗಕ್ಕೆ ಹಿಂತಿರುಗಿ ಪಾಕ ತತ್ವಜ್ಞಾನಿಯಾದನು. ಅಲ್ಲಿ, ಬೆಟ್ಟದ ಮೇಲಿರುವವರು ದರೋಡೆಗಾರರಾಗಿರುವಾಗ-ಇಲ್ಲಿ, ಬೆಟ್ಟದ ಬುಡದಲ್ಲಿ ಈ ಜನರು ಇನಿಷ್ಟು ಪ್ರಾಮಾಣಿಕರಾಗಿ ಹಾಗೂ ನಿಷ್ಕಪಟಿಗಳಾಗಿ ಹೇಗಿದ್ದಾರೆ? ಪರಿಸ್ಥಿತಿ ಹಾಗೂ ಅನುವಂಶಿಕತೆ — ಅವನ ಪ್ರಶ್ನೆಕ್ಕೆ ಅವನು ಗೊಣಗಟ್ಟಿಕೊಂಡನು. ಮೌನವಾಗಿ ಬೆಟ್ಟದ ಮೇಲೇರಿ ಹೋಗಿ ದರೋಡೆಗಾರರಿಗೆ ಆಶ್ಚರ್ಯವನ್ನುಂಟುಮಾಡಲು ಬೆಳಗ್ಗೆ ಎರಡು ಘಂಟೆಗೆನೇ ತಯಾರಾಗಿರಲು ಎಲ್ಲರಿಗೂ ತಿಳಿಸಿ, ರಾಮು ವಿಶ್ರಾಂತಿ ಪಡೆದನು. ಹಗಲಿನಲ್ಲಿ ನಲ್ವತ್ತು ಮೈಲು ದೂರ ಪ್ರಯಾಣ ಮಾಡಿದ್ದುದರಿಂದ ಅವನು ಸೋತಿದ್ದನು.

ರಾಮು ಕೇವಲ ಅರೆ ತಾಸು ಮಲಗಿದ್ದಿರಬಹುದು ಅಷ್ಟರಲ್ಲಿ ಶಿಬಿರದಿಂದ ಬೊಬ್ಬೆ ಕೇಳಿ ಬಂತು. ಕೂಟದ ಗುಪ್ತಚಾರರು ರಾಮು ಬಂದಿದ್ದ ವಿಷಯವನ್ನು ಮುಂಚೆಯೇ ತಿಳಿದು ಕೊಂಡಿದ್ದರು. ಮುತ್ತಿಗೆಕಾರರು ಒಂದಿಷ್ಟು ಶಬ್ದಮಾಡದೆ ಹಾಗೂ ಒಂದೂ ಗುಂಡು ಹಾರಿಸದೆ, ರಾಮುವಿನ ದಳದವರ ಸಾಮಗ್ರಿಗಳೆಲ್ಲವನ್ನೂ, ಕೋವಿ ಹಾಗೂ ಇತರ ಸುಡುಮದ್ದುಗಳನ್ನು ಮತ್ತು ಖಡ್ಗಗಳನ್ನು ವಶಪಡಿಸಿಕೊಂಡಿದ್ದರು. ಹಗಲಿನ ಪ್ರಯಾಣದಿಂದಾಗಿ ರಾತ್ರಿ ಎಲ್ಲರಿಗೂ ಚೆನ್ನಾಗಿ ನಿದ್ದೆ ಬಂದಿತ್ತು. ಹಾಗಾಗಿ ರಾಮು ಮತ್ತು ಸಂಗಡಿಗರು ಕೈದಿಗಳಾದರು.

ಅವನು ಬಂಧನಕ್ಕೊಳಗಾದಾಗ ಅವನಿಗೆ ಭಯವೆಂದರೇನೆಂದು ಗೊತ್ತಾಗಲಿಲ್ಲ. ತನ್ನ ಧೈರ್ಯವನ್ನು ಎಣಿಸಿಕೊಂಡಾಗ ಅವನಿಗೆ ಆಶ್ಚರ್ಯವಾಯಿತು. ತನ್ನ ದೀರ್ಘ ಹಂಚಿಕೆಯಲ್ಲಿ ಇದೊಂದು ಘಟಿಸಬೇಕಾಗಿರುವ ಉಪ ಹಂಚಿಕೆ ಎಂದೇ ಅವನು ಭಾವಿಸಿಕೊಂಡನು.

ಒಂದು ಗೊಗ್ಗರ ಆದರೂ ತಾರುಣ್ಯದ ಸ್ವರವು ಅವನನ್ನು ಸ್ವಾಗತಿಸಿತು: 'ಸ್ವಾಮೀ, ನೀವು ಈ ತಂಡದ ಮುಖಂಡರಿದ್ದೀರೆಂಬುದು ನನ್ನ ಭಾವನೆ. ಈ ಪರ್ವತಗಳು ನಿಮಗೆ ಸುಸ್ವಾಗತವನ್ನೀಯುತ್ತವೆ. ನಿಮ್ಮನ್ನು ಸ್ವಾಗತಿಸಲಿಕ್ಕೆಂದು ಕಳುಹಿಸಲ್ಪಟ್ಟಿರುವ ನಾನು, ದಳದ ಮುಖಂಡನ ಮಗನಿದ್ದೇನೆ. ಬಯಲಿನಲ್ಲಿರುವ ನಾಗರೀಕತೆಯ ಜೀವನ ನಡೆಸುತ್ತಿರುವ ಮಂದಿಗೆ ಮಾತ್ರ ನಾವು ಅಪಾಯಕಾರಿಗಳಿದ್ದೇವೆ. ನಿಮ್ಮನ್ನು ಮನೆಗೆ ಕರೆದು ಕೊಂಡು ಹೋಗಿ, ನಮ್ಮ ಬಲದ ಪರಿಚಯವನ್ನು ಮಾಡಿಕೊಟ್ಟು, ತಿರುಗಿ ಕಳುಹಿಸಬೇಕೆಂದು ತಂದೆಯವರ ಆಜ್ಞೆಯಾಗಿದೆ. ಹಾಗೆ ಮಾಡುವುದರಿಂದ ನೋಲನ್ನೊಪ್ಪಿ

(ಪದಿನೈದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6¼
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kna ra

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಶ್ವೇತಭವನದಲ್ಲಿ ಏರ್ಪಡಿಸಲಾದ ಭೋಜನ ಕೂಟದಲ್ಲಿ ಪ್ರಧಾನ ಮಂತ್ರಿಣಿ ಇಂದಿರಾ ಗಾಂಧಿಯವರೊಂದಿಗೆ ಅಧ್ಯಕ್ಷ ಮತ್ತು ಶ್ರೀಮತಿ ಜಾನ್ಸನ್ನರು.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೩೬	೧೯—೫—೧೯೬೬	No. 36

ವಚನ ಸುಧೆ

ಅರ್ಥಾನಾಮೀಶ್ವರೋ ಯಃ
ಸ್ಯಾದಿಂದ್ರಿಯಾಣಾ ಮನೀಶ್ವರಃ
ಇಂದ್ರಿಯಾಣಾಮನೈಶ್ವರ್ಯಾದೈ
ಶ್ವರ್ಯಾದ್ ಭ್ರಶ್ಯತೇ ಹಿ ಸಃ॥

ಐಶ್ವರ್ಯ ಸಂಪನ್ನನಾಗಿದ್ದರೂ ಇಂದ್ರಿಯ ವಶನಾದವನು ಇಂದ್ರಿಯಗಳಿಂದ ಪರಾಜಿತನಾಗುತ್ತಾನೆ; ಐಶ್ವರ್ಯದಿಂದಲೂ ಪ್ರವಂಚಿತನಾಗುತ್ತಾನೆ.

ಒಂಟಿ ಕಾಲಿಗೆ ಚಪ್ಪಲಿ

ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಮುಂದಿನ ಜನವರಿ-ಫೆಬ್ರವರಿಯಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಇದಕ್ಕಾಗಿ ರಾಜಕೀಯ ವಲಯದಲ್ಲಿ ನವಚೇತನ ಹರಡತೊಡಗಿದೆ. ಕಾಂಗ್ರೆಸ್ಸನ್ನು ಸೋಲಿಸುವುದನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಹಲವು ವಿರೋಧ ಪಕ್ಷಗಳು ಒಂದಾಗಿ ಹೋರಾಡುವ ಸೂಚನೆಗಳು ಕಾಣುತ್ತಿವೆ. ಪಂ| ನೆಹರೂ ಇಲ್ಲದೆ ಮೊದಲ ಬಾರಿಗೆ ನಡೆಯುವ ಮುಂದಿನ ಚುನಾವಣೆಯನ್ನು ಕಾಂಗ್ರೆಸ್ಸು ಗೆಲ್ಲುವುದು ಖಂಡಿತ; ಆದರೆ, ಇದಕ್ಕಾಗಿ ಅದು ಬಹುಮೂಲ್ಯ ತೆರಬೇಕಾಗುವುದು ಖಂಡಿತವೇ. ಚುನಾವಣೆಯ ಸಂಗತಿಯೇ ಮುಖ್ಯವಾಗಿ ಚರ್ಚಿಸಲ್ಪಡುವ ಎ.ಐ.ಸಿ.ಸಿ.ಯ ಅಧಿವೇಶನವೊಂದು ಶೀಘ್ರವಾಗಿ ಬೊಂಬಾಯಿಯಲ್ಲಿ ಸೇರಲಿರುವುದು. ಅಲ್ಲಿ ಮರಾಠಿಗರಿಂದ ಬದುಕಿಕೊಳ್ಳುವುದು ಕಾಂಗ್ರೆಸ್ ನಾಯಕರಿಗೆ ತ್ರಾಸವಾಗಿದೆ. ಕರ್ನಾಟಕ—ಮಹಾರಾಷ್ಟ್ರಗಳ ಗಡಿ ತಂಟೆಗೆ ಪರ್ವತಾಕಾರವಿತ್ತು ಗುಲ್ಲೆಬ್ಬಿಸುವುದು ಮರಾಠಿಗಳ ಸ್ವಭಾವವಾಗಿ ಬಿಟ್ಟಿದೆ. ಚುನಾವಣೆಗಳು ಹತ್ತಿರ ಬಂದಂತೆ ಈ ಗುಲ್ಲು ತಾರಕಕ್ಕೆ ಮುಟ್ಟಿದೆ. ಹಾಗಾಗಿ ಚುನಾವಣೆಯ ಗತ್ತುಗಾರಿಗೆಯನ್ನು ಅವರು ತೋರಿಸುತ್ತಿದ್ದಾರೆಂದರೂ ತಪ್ಪಲ್ಲ. ಇದನ್ನು ಗಮನಿಸಿಯೋ ಏನೋ, ಪ್ರಧಾನಿ ಇಂದಿರಾ ಗಾಂಧಿಯವರು ಈ ತಂಟೆಯನ್ನು ಪರಿಶೀಲಿಸಲು ಆಯೋಗವೊಂದನ್ನು ನೇಮಿಸುವುದಾಗಿ ಹೇಳಿದ್ದಾರೆ. ಇದೂ ಚುನಾವಣೆಯ ಗತ್ತು ಎಂದು ಹೇಳಬಹುದು.

ಆದರೆ, ವಾಸ್ತವಿಕ ಸಂಗತಿಯನ್ನು ನಾವು ಮರೆಯುವಂತಿಲ್ಲ. ಬರಿಯ ಗತ್ತುಗಾರಿಕೆಯ ಪ್ರದರ್ಶನದಿಂದ ಧರ್ಮವನ್ನು ಮೀರಿ ಸತ್ಯವನ್ನು ಮೀರಿ ಜನತೆಗೆ ಅನ್ಯಾಯ ಬಗೆಯುವುದು ಸರಿಯಲ್ಲ. ಮಹಾರಾಷ್ಟ್ರಕ್ಕೆ ಕರ್ನಾಟಕದೊಡನೆ ಮಾತ್ರ ಗಡಿತಂಟೆಯಿದೆ ಎನ್ನೋಣ. ನಿಯೋಜಿತ ಆಯೋಗವು ಮಹಾರಾಷ್ಟ್ರದ ಬಗ್ಗೆ ಮಾತ್ರ ಸೀಮಿತವಾದಂತಾಯಿತು. ಕರ್ನಾಟಕಕ್ಕೆ ನಾಲ್ಕೂ ಕಡೆ ತಂಟೆಯಿದೆ. ಇದನ್ನು ಪರಿಹರಿಸಲು ಇಂದಿರಾ ಗಾಂಧಿಯೇಕೆ ಮುಂದೆ ಬರುವುದಿಲ್ಲ? ಕೇರಳ, ಮದ್ರಾಸ, ಆಂಧ್ರಗಳ ಕಡೆಯಿಂದ, ಕರ್ನಾಟಕದ ಕಡೆಯಿಂದ ಇದು ವರೆಗೆ ಪುಂಡಾಟಿಕೆ ನಡೆದಿಲ್ಲ; ಗುಲ್ಲು ಎದ್ದಿಲ್ಲ. ಆದುದರಿಂದ ಅವರತ್ತ ಗಮನ ಹರಿಸಬೇಕಾಗಿಯೂ ಇಲ್ಲ—ಈ ಅಲಕ್ಷ್ಯ ಭಾವದಿಂದಲೇ? ಬರಿಯ ಮರಾಠಿಗರನ್ನು ತೃಪ್ತಿಪಡಿಸುವ ಸಲುವಾಗಿಯೇ ಪ್ರಧಾನಿಯವರ ಹೇಳಿಕೆ ಹೊರಟಿದೆಯೆಂಬುದರಲ್ಲಿ ಯಾವ ಸಂದೇಹಕ್ಕೂ ಎಡೆಯಿಲ್ಲ. ಅವಕಾಶ ಸಾಧಿಸಿಕೊಂಡು ಅವರು ಗುಡಿಯಲ್ಲಿ ಗೊಂದಲವೆಬ್ಬಿಸುತ್ತ ಇದ್ದಾರೆ. ಕೇಂದ್ರ ಮಂತ್ರಿ ಮಂಡಳದಲ್ಲೂ ಅವರ ಕೂಗನ್ನು ಕೇಳಲು ನಾಲ್ಕು ಕಿವಿಗಳಿವೆ. ಇತ್ತೀಚೆಗೆ ಅವರು ಹಲವು ಬಾರಿ ಈ ಗಡಿ ತಂಟೆಯ ಬಗ್ಗೆ ಒತ್ತಾಯ ಹೇರಲು ಪ್ರಯತ್ನಿಸಿದ್ದುದನ್ನೂ ಅವರ ಒತ್ತಾಯದ ಮುಂದೆ ಪ್ರಧಾನಿಯವರು ತಲೆಬಾಗಿದ್ದನ್ನೂ ನಾವು ಕಾಣುತ್ತೇವೆ. ರಾಜ್ಯ ಪುನರ್ವಿಂಗಡಣೆಯಾಗಿ ಹತ್ತು ವರ್ಷಗಳು ಕಳೆದರೂ ಇನ್ನೂ ಗಡಿತಂಟೆಯನ್ನು ಪರಿಹರಿಸಲು ಶಕ್ತವಾಗಿಲ್ಲವೆಂದರೆ, ಅದು ಒಂದು ತರಹದ ದುರ್ಬಲತೆಯೆಂದೇ ಹೇಳಬೇಕು. 'ಇವ ಬಿಡ; ಅವ ಕೊಡ' ಎಂಬ ನೀತಿಯನ್ನು ರಾಜ್ಯಗಳು ಅನುಸರಿಸುತ್ತಿರುವುದೇ ಇದಕ್ಕೆ ಮುಖ್ಯ ಕಾರಣವೆನ್ನಬೇಕು. ಗೊಂದಲ; ಸತ್ಯಾಗ್ರಹ, ಕರಿನಿಶಾನೆ ಪ್ರದರ್ಶನ—ಮೊದಲಾದ ಪುಂಡಾಟಗಳಿಗೆ ಈ ದುರಾಗ್ರಹವೇ ಕಾರಣ. ಈ ನೀತಿಯನ್ನು ತ್ಯಜಿಸಿ ಎಲ್ಲರೂ ಭಾರತೀಯರು, ಭಾಷೆ-ಆಡಳಿತೆಯ ವೃಷ್ಟಿಯಿಂದ ಮಾತ್ರ ಹೊಂದಾಣಿಕೆಯಾಗುತ್ತಿದೆ ಎಂದು ಎಲ್ಲರೂ ತಿಳಿದು ವರ್ತಿಸಿದರೆ ಒಂದು ತಿಂಗಳೊಳಗಾಗಿ ಗಡಿ ತಂಟೆ ಪರಿಹಾರಗೊಳ್ಳುವುದು ಸಾಧ್ಯವಿದೆ. ಆದರೆ ಯಾರು ಸಿದ್ಧರಾದರೂ ಮರಾಠಿಗಳು ಇದಕ್ಕೆ ತಯಾರಿಲ್ಲ; ಇದಕ್ಕೆ ಭೂತಕಾಲವೇ ಜ್ವಲಂತ ಸಾಕ್ಷಿ.

ಮಹಾರಾಷ್ಟ್ರ — ಕರ್ನಾಟಕ ಗಡಿ ತಂಟೆ ಪರಿಹಾರದ ನಿಯೋಜಿತ ಆಯೋಗ ಸ್ಥಾಪನೆ ಕರ್ನಾಟಕಕ್ಕೆ ಎಳ್ಳಷ್ಟೂ ಸಮ್ಮತವಿಲ್ಲ. ನಾಲ್ಕೂ ಕಡೆಯಲ್ಲಿ ಗಡಿ ತಂಟೆಯನ್ನು ಹೊಂದಿರುವ ಕರ್ನಾಟಕದ ಒಂದು ಮೂಲೆಗೆ ಒಂದು ತರದ ವ್ಯವಸ್ಥೆಯಾದರೆ ಉಳಿದೆಡೆ ಅಶಾಂತಿ ಹರಡುವುದು ಸಹಜ. ಆದುದರಿಂದ ಪ್ರಧಾನಿಯವರು ಗಡಿತಂಟೆಯನ್ನು ಪರಿಹರಿಸಲು ಉತ್ಸುಕರಿರುವುದಾದರೆ, ದಕ್ಷಿಣದ ಎಲ್ಲ ರಾಜ್ಯಗಳ ಮಟ್ಟಿಗೂ ಅನ್ವಯಿಸುವಂತೆ ಆಯೋಗವನ್ನು ರಚಿಸಬೇಕು. ಇದರಲ್ಲಿ ಯಾವ ಪೂರ್ವಗ್ರಹಕ್ಕೂ ತುತ್ತಾಗದ ನಿಷ್ಪಕ್ಷಪಾತಿ ಸದಸ್ಯರಿರಬೇಕು. ಭಾಷೆ ಮತ್ತು ಆಡಳಿತೆಗಳ ದೃಷ್ಟಿಯಿಂದ ಅಲ್ಪ ಹೊಂದಾಣಿಕೆಯನ್ನು ಮಾತ್ರ ಮಾಡುವಂತೆ ಸಲಹೆ ಮಾಡುವ ಅಧಿಕಾರ ಇದಕ್ಕೆ ನೀಡಬೇಕು. ಹೀಗೆ ಮಾಡಲು ಪ್ರಧಾನಿಯವರಿಗೆ ಇಷ್ಟವಿಲ್ಲವಾದರೆ, ಬರಿಯ ಮಹಾರಾಷ್ಟ್ರೀಯರನ್ನು ಮಾತ್ರ ತೃಪ್ತಿಪಡಿಸಿ ಉಳಿದವರನ್ನು ಕೆರಳಿಸುವುದು ಉಚಿತವಲ್ಲ. ಹೇಗೂ ಹತ್ತು ವರ್ಷಗಳ ಕಾಲ ಕಳೆಯಿತು. ಇನ್ನೂ ತುಸು ಕಾಲ ಕಳೆಯಲಿ. ಆಗ, ಗಡಿತಂಟೆಯ ಪ್ರಶ್ನೆ 'ಸತ್ತ ಪ್ರಶ್ನೆ'ಯಾಗಲೂ ಸಾಧ್ಯವಿದೆ; ಪರಿಹಾರಕ್ಕೆ ಸಮುಚಿತ ಪರಿಸ್ಥಿತಿಯುಂಟಾದರೂ ಆಗಬಹುದು. ಒಂಟಿ ಕಾಲಿಗೆ ಚಪ್ಪಲಿ ತೊಡಿಸುವುದು ಕರ್ನಾಟಕದ ಯಾವ ಪ್ರಾಣಿಗೂ ಬೇಕಿಲ್ಲ—ಇದನ್ನು ಇಂದಿರಾಜಿ ಗಮನಿಸಲಿ.

ಹೀಗೂ ಇದೆ

ಬೊಂಬಾಯಿ- ಪುಣೆ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಪ್ರಯಾಣಿಸುತ್ತಿದ್ದ 'ಮಂತ್ರಿಯೊಬ್ಬರಿಗೆ' ಉಪಾಹಾರ ಏರ್ಪಡಿಸಲು ಇಡಿಯ ಗಾಡಿಯನ್ನೇ ತಡೆ ಹಿಡಿದ ಪ್ರಸಂಗವೊಂದು ವರದಿಯಾಗಿದೆ. ಮಹತ್ವದ ವ್ಯಕ್ತಿಗಳ ಅನುಕೂಲಕ್ಕಾಗಿ ಅನಾವಶ್ಯಕವಾಗಿ ಗಾಡಿಯನ್ನು ತಡೆಹಿಡಿಯಬಾರದು—ಎಂಬ ಆದೇಶ ರೇಲ್ವೆ ಅಧಿಕಾರಿಗಳಿಗಿದೆ. ಆದರೆ, ಇದನ್ನು ಮೀರಿ ಕಲ್ಯಾಣದಲ್ಲಿ ರೇಲ್ವೇ ಅಧಿಕಾರಿಗಳು, ರೈಲನ್ನು ತಡೆಹಿಡಿದು ಸಾವಿರಾರು ಯಾತ್ರಿಕರಿಗೆ ತೊಂದರೆಯನ್ನುಂಟು ಮಾಡಿಸಿದರು. ಇಂತಹುದೇ ಒಂದು ಪ್ರಸಂಗ ಗ್ರಾಂಡ್ ಟ್ರಂಕ್ ಎಕ್ಸ್‌ಪ್ರೆಸ್‌ನಲ್ಲೂ ನಡೆದಿತ್ತು. ಇದೇಕೆ ಹೀಗೆ ಎಂದು ಕೇಳಿದರೆ ರೇಲ್ವೆ ಸಚಿವರ ಉತ್ತರ ತೀರ ಸರಳ. ಹೀಗೆ ಮಾಡಬಾರದೆಂದು ಆದೇಶ ಮೊದಲೇ ಇದೆ; ಈಗ ಮತ್ತೊಮ್ಮೆ ಆದೇಶ ನೀಡಲಾಗುವುದು? ಇದರಿಂದ ಏನು ಸಾಧಿಸಬಹುದು? ಆದೇಶ ಮೀರಿದ ರೇಲ್ವೆ ಅಧಿಕಾರಿಯನ್ನು ಏತಕ್ಕೆ ವಿಚಾರಣೆಗೆ ಗುರಿಮಾಡಬಾರದು? ಒಂದು ವೇಳೆ ಸದ್ಯದ ನಿಯಮಗಳಲ್ಲಿ ಇದಕ್ಕೆ ಅವಕಾಶವಿಲ್ಲವಾದರೆ, ವರ್ತನೆಯ ನಿಯಮಾವಳಿಯನ್ನು ತಿದ್ದುಪಡಿಯಾದರೂ ಮಾಡಬೇಕು. ಮಂತ್ರಿಗೆ ಉಪಾಹಾರ ಬೇಕಾದರೆ, ಇಳಿದು ಮತ್ತೊಂದು ಗಾಡಿಯಲ್ಲಿ ಸಂಚರಿಸಲಿ; ಅಥವಾ ಸ್ಪೆಶಲ್ ಗಾಡಿ ಬಿಡಲಿ; ಬದಲು ಯಾವ ಯಾವ ಊರಿಗೋ ಏನೇನು ಕಾರಣದಿಂದಲೋ ಪ್ರಯಾಣಿಸುತ್ತಿರುವ ಸಾವಿರಾರು ಪ್ರಯಾಣಿಕರಿಗೆ ಉಪದ್ರವ ಮಾಡದಿರಲಿ. ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಹುಟ್ಟಿ ಬರಲಿ.

ನರಸಣ್ಣನ ಸರಸ



ಚೌಧುರಿಯವರು ಚಿನ್ನ ನಿಯಂತ್ರಣ ಕಾಯಿದೆ ಸಫಲವಾಗಿದೆಯೆನ್ನುತ್ತಿದ್ದಾರಲ್ಲಾ ....ಇನ್ನು....?

'ಕಾಮರಾಜನೇ ಶರಣೆನ್ನಪ್ಪಾ...'

ಸಂಶೋಧನೆ

ತಾಜ ಮಹಾಲಿನ ಶಿಲ್ಪಿ ಯಾರು?

ಬರೆದವರು
ಶ್ರೀ ಇ. ಅಂದ್ರಾನೋವ್.

ಆಗ್ರಾ ನಗರಕ್ಕೆ ಪ್ರಪಂಚದ ಎಲ್ಲ ಕಡೆಗಳಿಂದಲೂ ಸಾವಿರಾರು ಜನ ಪ್ರೇಕ್ಷಕರು ಬರುತ್ತಿರುತ್ತಾರೆ— ಪ್ರಪಂಚದ ಶ್ರೇಷ್ಠ ವಾಸ್ತುಶಿಲ್ಪದ ಪ್ರತೀಕವಾದ ತಾಜ ಮಹಾಲನ್ನು ನೋಡುವುದಕ್ಕಾಗಿ.

ಈ 'ಅಮೃತ ಶಿಲೆಯ ಕಾವ್ಯಕೃತಿ'ಯ ಪ್ರಧಾನ ವಾಸ್ತು ಶಿಲ್ಪಿಯು ೧೭ನೆಯ ಶತಮಾನದಲ್ಲಿ ಆಗ್ರಾದಲ್ಲಿ ವಾಸಿಸುತ್ತಿದ್ದ ಉಸ್ತಾದ್ ಈಸಾಖಾನ್ ಎಂದು ಭಾರತೀಯರು ನಂಬುತ್ತಾರೆ. ೩೦೦ ವರ್ಷಗಳ ಹಿಂದೆ ಭಾರತದಲ್ಲಿ ಜೆರೋನಿಮೊ ವೆರೋನೆಯೊ ಎಂಬಾತನು ವಾಸಿಸುತ್ತಿದ್ದನೆಂದೂ ಆತನೇ ತಾಜಮಹಾಲಿನ ನಿರ್ಮಾತೃ ಎಂದೂ ಕೆಲವರು ಪಶ್ಚಿಮ ಯೂರೋಪಿನ ಇತಿಹಾಸಕಾರರು ಹೇಳುತ್ತಾರೆ; ಫ್ರಾನ್ಸಿನ ಆಸ್ಟಿನ್‌ದ ಬೋರ್ದೋರವರ ಹೆಸರನ್ನು ಇತರರು ಸೂಚಿಸುತ್ತಾರೆ.

ಭಾರತೀಯರಿಗಂತೂ ಇದು ರಾಷ್ಟ್ರೀಯ ಪ್ರತಿಷ್ಠೆಯ ವಿಷಯ. ಏಶಿಯದ ಪ್ರಾಚ್ಯ ಖಂಡದ ಮೇಲೆ ಪಾಶ್ಚಾತ್ಯರ ಆದ್ಯತೆಯನ್ನೂ, ಶ್ರೇಷ್ಠತೆಯನ್ನೂ ಹೇಗಾದರೂ ರುಜುವಾತು ಪಡಿಸಬೇಕೆಂದು ಐರೋಪ್ಯರು ಬಯಸುತ್ತಾರೆಂದು ಅವರು ಭಾವಿಸುತ್ತಾರೆ.

ಇವರಲ್ಲಿ ಯಾರ ಮಾತು ಸರಿಯಾದುದು?

ಗತಕಾಲದ ಛಾಯೆಗಳು –

ಆಗ್ರಾ ಪಟ್ಟಣದಲ್ಲಿ ಮೊಘಲ್ ಚಕ್ರವರ್ತಿಗಳು ವಾಸಿಸುತ್ತಿದ್ದ ಕಾಲವೊಂದಿತ್ತು. ೧೭ನೆಯ ಶತಮಾನದಲ್ಲಿ ಷಾಜಹಾನ್ ಚಕ್ರವರ್ತಿಯು ಆಳುತ್ತಿದ್ದ ಕಾಲವೇ ಅದರ "ಸುವರ್ಣಯುಗ. ಆತನ ಕೋರಿಕೆಯ ಮೇರೆಗೆ ಭವ್ಯ ಪ್ರಾಸಾದಗಳನ್ನೂ, ಮಂದಿರಗಳನ್ನೂ ನಿರ್ಮಿಸಲಾಯಿತು. ೧೬೩೧ರಲ್ಲಿ ಆ ಚಕ್ರವರ್ತಿಯ ಮೆಚ್ಚಿನ ಮಡದಿಯು ತೀರಿಕೊಂಡಾಗ 'ಜಗತ್ತಿನ ಎಂಟನೆಯ ಅದ್ಭುತ'ವಾಗಬಲ್ಲ ಸಮಾಧಿ ಮಂದಿರವನ್ನು ಆಕೆಗಾಗಿ ನಿರ್ಮಿಸಬೇಕೆಂದು ಷಾಜಹಾನ್ ಆಜ್ಞಾಪಿಸಿದನು. ಇಪ್ಪತ್ತು ಸಾವಿರ ಜನ ಕಾರ್ಮಿಕರು ೨೨ ವರ್ಷಕಾಲ ಕೆಲಸಮಾಡಿ, ಯಮುನಾ ನದಿಯ ತೀರದಲ್ಲಿ ಈ ಬಿಳಿಯ ಸ್ಫಟಿಕ ಮಂದಿರವನ್ನು ನಿರ್ಮಿಸಿದರು.

ಸುಮಾರು ೧೫೦ ವರ್ಷಗಳ ತರುವಾಯ ಬ್ರಿಟಿಷ್ ಪಡೆಗಳು ಆಗ್ರಾ ಪಟ್ಟಣಕ್ಕೆ ಮುತ್ತಿಗೆ ಹಾಕಿದುವು. ಅದರ ಅನೇಕ ಅದ್ವಿತೀಯ ಕಟ್ಟಡಗಳನ್ನು ನಾಶಗೊಳಿಸಿದುವು. ಆ ಕಟ್ಟಡಗಳ ಕಲ್ಲುಗಳಿಂದ ಬ್ರಿಟಿಷ್ ಸೇನೆಗೆ ತಾತ್ಕಾಲಿಕ ವಸತಿಗಳನ್ನು ನಿರ್ಮಿಸಲಾಯಿತು. ಅಮೂಲ್ಯವಾದ ಸ್ಫಟಿಕ ಶಿಲೆಯನ್ನು ಹರಾಜು ಮಾಡಿದರು. ತರುವಾಯ ೧೮೩೦—೩೫ರಲ್ಲಿ ಭಾರತದ ಬ್ರಿಟಿಷ್—ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕ್ ಆಗ ಸುಮಾರು ೨,೦೦,೦೦೦ ರೂಪಾಯಿ ಬೆಲೆಯುಳ್ಳದ್ದೆಂದು ಲೆಕ್ಕಕಟ್ಟಲಾಗಿದ್ದ ತಾಜ ಮಹಾಲನ್ನು ಕೂಡ ಸ್ವಲ್ಪ ಸ್ವಲ್ಪವಾಗಿ ಹರಾಜು ಮಾಡಬೇಕೆಂದು ನಿರ್ಧರಿಸಿದ್ದುದನ್ನು ಕಾರ್ಯಗತಗೊಳಿಸಿದ್ದ ಪಕ್ಷದಲ್ಲಿ ಈಗ ತಾಜ್‌ಮಹಾಲ್ ಉಳಿಯುತ್ತಿರಲಿಲ್ಲ. ೧೮೩೧ರ ಜುಲೈ ದಿನಾಂಕ ೨೬ರಂದು ಕಲಕತ್ತ ನಗರದ 'ಜಾನ್ ಬುಲ್' ಎಂಬ ಇಂಗ್ಲಿಷ್ ವಾರ್ತಾಪತ್ರಿಕೆಯು ತಾಜ್ ಮಹಲನ್ನು ಕೆಡವಿದರೆ ದೇಶದ "ನೇಟಿವ್" ಜನತೆಯು ಗದ್ದಲಗಳಾಗಬಹುದೆಂಬ ವದಂತಿ ಇದೆಯೆಂದು ಪ್ರಕಟಿಸಿದ್ದುದು ಆ "ನಾಗರಿಕ" ವಿಧ್ವಂಸಕರ ಭೀತಿಯನ್ನು ವ್ಯಕ್ತ ಪಡಿಸುತ್ತದೆ.

ಪ್ರಚಲಿತ ಶತಮಾನಾರಂಭದಲ್ಲಿ ಭಾರತದ ವೈಸ್‌ರಾಯ್ ಲಾರ್ಡ್ ಕರ್ಜನ್ ಬಹಿರಂಗವಾಗಿಯೇ ಭಾರತೀಯರ ಬಗ್ಗೆ ತಿರಸ್ಕಾರ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದು, ತಾಜಮಹಾಲಿಗಿಂತಲೂ ಸುಂದರವಾದ 'ಇಪ್ಪತ್ತನೆಯ ಶತಮಾನದ ತಾಜ"ನ್ನು ವಿಕ್ಟೋರಿಯ ರಾಣಿಯ ಗೌರವಾರ್ಥವಾದ ವಸ್ತು ಸಂಗ್ರಹಾಲಯವಾಗಿ ಕಲ್ಕತ್ತೆಯಲ್ಲಿ ನಿರ್ಮಿಸಬೇಕೆಂದು ನಿರ್ಧರಿಸಿದನು. ೭೬,೦೦,೦೦೦ ರೂಪಾಯಿ ವೆಚ್ಚದಲ್ಲಿ, ೧೯೦೬ರಿಂದ ೧೯೨೧ರವರೆಗೆ ಈ ವಿಕ್ಟೋರಿಯ ಸ್ಮಾರಕವನ್ನು ನಿರ್ಮಿಸಲಾಯಿತು. ಇದು ವಸಾಹತು ಯುಗದ ಸ್ಮಾರಕ. ಅಷ್ಟೇನೂ ಅಂದವಾದ ಕಟ್ಟಡವೇನೂ ಅಲ್ಲ.

೩೨೨ ವರ್ಷಗಳ ಹಿಂದೆ ೧೬೪೧ರ ಜನವರಿ ತಿಂಗಳಲ್ಲಿ ಪೋರ್ತುಗಲ್ಲಿನ ಕ್ಯಾಥೊಲಿಕ್ ಪಾದ್ರಿ ಸೆಬಾಸ್ಟಿಯೆನ್ ಮಾನ್ರಿಕೆಯವರು ಆಗ್ರಾ ನಗರಕ್ಕೆ ಬಂದಿದ್ದು, ಆಗ ನಿರ್ಮಿಸಲಾಗುತ್ತಿದ್ದ ತಾಜ ಮಹಲನ್ನು ಕಂಡರು. ಅವರು ಆಗ್ರದಲ್ಲಿ ಒಂದು ತಿಂಗಳು ಕಾಲ ಇದ್ದರು. ಆಗ ಆಗ್ರಾದ ಜೆಸ್ಯೂಯಿಟ್ ಕಾಲೇಜಿನ ಮುಖ್ಯಸ್ಥರಾಗಿದ್ದ ಪಾದ್ರಿ ಜೊಸೆಫ್ ಡಿ ಕಾಸ್ಟ್ರೊರವರ ಕುರಿತು ಬರೆಯುತ್ತ, ತಮ್ಮ "ಭಾರತದಲ್ಲಿ 'ಮಿಶನ್' (ಧಾರ್ಮಿಕ ಪಂಥ) ಯಾತ್ರೆ" ಎಂಬ ಪುಸ್ತಕದಲ್ಲಿ ವೆನಿಸಿನ ಜೆರೊನಿಮೊ ವೆರೊನೆಯೊ ಎಂಬಾತನು ಈ ಕಟ್ಟಡಗಳ ವಾಸ್ತುಶಿಲ್ಪಿಯೆಂದು ಮಾನ್ರಿಕೆ ತಿಳಿಸಿದ್ದಾರೆ. ಜೆರೋನಿಮೋ ಒಂದು ಪೋರ್ತುಗೀಸ್ ನೌಕೆಯಲ್ಲಿ ಭಾರತಕ್ಕೆ ಬಂದಿದ್ದು, ೧೬೪೦ರ ಆಗಸ್ಟ್ ದಿನಾಂಕ ೨ ರಂದು ಲಾಹೋರಿನಲ್ಲಿ ಮೃತರಾದರು.

ಮೊನ್ರಿಕೆಯವರ ಕೃತಿಯನ್ನು ಹೋಸ್ಟೆನ್ ಎಂಬ ಜೆಸ್ಯೂಯಿತ್ ಪಾದ್ರಿಯೂ ಹ್ಯಾಸಿಂಥ್ ಎಂಬ ಕ್ಯಾಥೋಲಿಕ್ ಪಾದ್ರಿ ಈಗ ಲಂಡನಿನಲ್ಲಿ ಪ್ರಕಟಿಸಿದ್ದಾರೆ. ಜೆರೊನಿಮೊ ವೆರೋನೆಯೊ ಮತ್ತು ಉಸ್ತಾದ್ ಈಸಾಖಾನ್ ಒಬ್ಬರೇ ಎಂದು ಅವರು ವಾದಿಸುತ್ತಾರೆ. ಇದಕ್ಕೆ ಯಾವ ದಾಖಲೆಯನ್ನೂ ಅವರು ನೀಡಿಲ್ಲ 'ಉಸ್ತಾದ್ ಈ ಸಾ' ಎಂಬ ಹೆಸರನ್ನು ಅವರು ಯಜಮಾನ ಏಸು, ಎಂದು ಅನುವಾದಿಸಿ, ಅದು ಜೆರೊನಿಮೋಗೆ ದೊರೆತ ಪದವಿಯೆಂದು ಅವರು ನಿರೂಪಿಸಿದ್ದಾರೆ. ಗೌರವ ಸೂಚಕವಾಗಿ 'ಖಾನ್' ಎಂಬ ಶಬ್ದವನ್ನು ಬಳಸಲಾಗಿದೆಯೆಂದು ಅವರು ಹೇಳುತ್ತಾರೆ.

ಸ್ಪಾನಿಷ್ ಜೆಸೂಯಿಟ್ ಪಾದ್ರಿ ಹೆನ್ರಿ ಹೆರಾಸರೂ ಕೂಡ ಇದೇ ವ್ಯಾಖ್ಯೆ ನೀಡಿದ್ದಾರೆ. ಆಗ್ರಾದಲ್ಲಿ ಜೆಸೂಯಿಟ್ ಪಾದ್ರಿಗಳು ಇದ್ದಾರೆ. ತಾಜಮಹಾಲನ್ನು ಕ್ಯಾಥೊಲಿಕರು ವಿನ್ಯಾಸಗೊಳಿಸಿದರೆಂಬುದು ಅವರ ಪ್ರಚಾರದ ಮಾತು ಎಂದು ಹೇಳಬಹುದಾಗಿದೆ. ಯುರೋಪಿಯನ್ ಕ್ಯಾಥೊಲಿಕರು ಸಂಸ್ಕೃತಿ, ಕಲೆ ಮತ್ತು ತಾಂತ್ರಿಕ ಜ್ಞಾನ ಪ್ರಸಾರಕರೆಂದು ನಿರೂಪಿಸುವುದು ಅವರ ಬಯಕೆ.

ಭಾರತದಲ್ಲಿ ಬ್ರಿಟಿಷ್ ಲೆಫ್ಟನೆಂಟ್-ಕರ್ನಲ್ ಆಗಿದ್ದ ಸರ್ ಡಬ್ಲ್ಯು. ಎಚ್. ಸ್ಲೀಮನ್ ಎಂಬಾತನು ೧೮೪೪ರಲ್ಲಿ ಆಸ್ಟಿನ್‌ದ ಬೋರ್ದೋ ವಾದವನ್ನು ಮುಂದಿಟ್ಟರು. ಆತನ ವಾದಕ್ಕೂ ಯಾವುದೇ ದಾಖಲೆ ಇಲ್ಲವಾದರೂ, ತಾಜಮಹಾಲ್ ನಿರ್ಮಾಣಕ್ಕೆ ಉಭಯತಃ ಬೋರ್ದೋ ಮತ್ತು ವೆರೋನೆಯೋ ಕಾರಣರೆಂದು ಪಾಶ್ಚಾತ್ಯ ಪತ್ರಿಕೆಗಳು ಬರೆಯತೊಡಗಿದುವು. ಈ ಸ್ಪರ್ಧೆಯಲ್ಲಿ ಈಗ ಬೋರ್ದೋ ಗೆಲ್ಲುವ ಲಕ್ಷಣ ಕೂಡ ಕಂಡು ಬರುತ್ತದೆ. "ಬ್ರಿಟಾನಿಕ" ವಿಶ್ವಕೋಶದ ಇತ್ತೀಚಿನ ಸಂಸ್ಕರಣದಲ್ಲಿ ಆತನ ಹೆಸರನ್ನು ಸೇರಿಸಿಕೊಳ್ಳಲಾಗಿದೆ. ಹಿಂದಿನ ಸಂಸ್ಕರಣಗಳಲ್ಲಿ ಅದನ್ನು ತಿರಸ್ಕರಿಸಲಾಗಿತ್ತು.

ದಿಲ್ಲಿಯಲ್ಲಿ ಕೆಂಪುಕೋಟೆಯ ಅರಮನೆಯನ್ನೂ ಷಾ ಜಹಾನ್ ದೊರೆಯೇ ನಿರ್ಮಿಸಿದನು. ಆತನ ಸಿಂಹಾಸನವಿದ್ದ ಸ್ಥಳದಲ್ಲಿ ಕೆಂಪು, ವಜ್ರ, ಮರಕತ ಮತ್ತು ಮುತ್ತುಗಳ ಕೆತ್ತನೆ ಕೆಲಸವನ್ನು ಬೋರ್ದೋ ಮಾಡಿದ್ದುದಾಗಿ ತಿಳಿಯುತ್ತದೆ. ಆತನು ರತ್ನಾಭರಣ ತಯಾರಕನೆಂದು ಹೇಳಲಾಗಿದೆಯೇ ಹೊರತು, ವಾಸ್ತು ಶಿಲ್ಪಿಯೆಂದು ಅದರಲ್ಲಿ ಸೂಚಿಸಿಲ್ಲ.

"ಸಿಲೋನ್ ಮತ್ತು ಭಾರತ ದೇಶಗಳ ಲಲಿತ ಕಲೆಯ ಇತಿಹಾಸ" ಎಂಬ ಒಂದು ಪುಸ್ತಕವಿದೆ. ತಾಜ ಮಹಾಲನ್ನು ಆಗ್ರಾದಲ್ಲಿ ವಾಸಿಸುತ್ತಿದ್ದ ಜೆರೋನಿಮೊ ವೆರೋನೆಯೋ ವಿನ್ಯಾಸಗೊಳಿಸಿದರೆಂದೂ, ಆತನು ಲಾಹೋರಿಗೆ ಹೋದಾಗ ಅಲ್ಲಿ ಮೃತರಾದರೆಂದೂ, ಆಗ್ರಾದಲ್ಲೇ ಆತನನ್ನು ಸಮಾಧಿ ಮಾಡಲಾಯಿತೆಂದೂ ಬ್ರಿಟಿಷ್ ಸಂಶೋಧಕ ವಿನ್‌ಸೆಂಟ್ ಎ. ಸ್ಮಿತ್ ಅದರಲ್ಲಿ ಬರೆದಿದ್ದಾರೆ. ಆಗ್ರಾದ ಪಾದ್ರಿ ಸಾಂತೊ ಸ್ಮಶಾನ ಕ್ಷೇತ್ರದಲ್ಲಿ ಕೆಂಪು ಸಮಾಧಿ ಕಲ್ಲೊಂದು ಇದೆ. ೧೬೪೦ರ ಅಗಸ್ಟ್ ದಿನಾಂಕ ೨ರಂದು ಲಾಹೋರಿನಲ್ಲಿ ಮೃತರಾದ ಜೆರೋನಿಮೊ ವೆರೋನೆಯೋರವರ ಸಮಾಧಿ ಅದೇ ಎಂದು ಅದರಿಂದ ತಿಳಿದು ಬರುವುದು.

ಈ ಸಮಾಧಿಯ ಕುರಿತು ಅಲ್ಲಿ ಮಾತನಾಡಿದರೆ, ಪಾಲಿವಾಲ್ ಉದ್ಯಾನದಲ್ಲಿ ಒಂದು ಸಣ್ಣ ಸಮಾಧಿ ಮಂದಿರವಿದೆಯೆಂದೂ, ಅದರ ಬಳಿ ಎರಡು ಗೋರಿಗಳಿವೆಯೆಂದೂ, ಅವುಗಳಲ್ಲೊಂದರಲ್ಲಿ ಉಸ್ತಾದ್‌ಈಸಾ ಖಾನ್‌ರನ್ನು ಮಣ್ಣು ಮಾಡಲಾಗಿದೆಯೆಂದೂ ಹೇಳುತ್ತಾರೆ. ಈ ಸಮಾಧಿಯ ಬಗ್ಗೆ ಹೀಗೆ ಹೇಳುತ್ತಾರೆ.

'ಇದು ಉಸ್ತಾದ್ ಈ ಸಾಖಾನರದು. ಅವರು ಆಗ್ರಾದ ನಕ್‌ಷಾಯ್ ನವೀಸಿಯಾನ್ ಪರಿವಾರದ ಮೂಲ ಪುರುಷರು. ಆ ಮನೆತನದಲ್ಲಿ ಅನೇಕ ಜನ ಉತ್ತಮ ಶಿಲ್ಪಿಗಳು ಹುಟ್ಟಿದರು. ತಾಜ ಮಹಾಲಿನ ತರುವಾಯ ಏನೂ ಇವರು ವಿನ್ಯಾಸಗೊಳಿಸಲಿಲ್ಲ. ಅದರ ವಿನ್ಯಾಸದ ವಿವರಗಳೆಲ್ಲವನ್ನೂ ಆತನು ತಯಾರಿಸಿ, ಮರದಲ್ಲಿ ಅದರ ನಮೂನೆಯನ್ನು ಸಿದ್ಧಗೊಳಿಸಿಕೊಟ್ಟ. ತರುವಾಯ ತಾಜ ಮಹಲಿಗೆ ಸಮನಾದ ಇನ್ನೊಂದು ಕಟ್ಟಡವನ್ನು ಆತನು ಎಂದಿಗೂ ವಿನ್ಯಾಸ ಗೊಳಿಸದಿರಲೆಂದು ಷಾಜಹಾನ್ ಆತನ ಎರಡೂ ಕೈಗಳನ್ನು ಕತ್ತರಿಸಿಬಿಟ್ಟರು; ಆ ಮೇಲೆ ಉಸ್ತಾದರಿಗೆ ಷಾಜಹಾನ್ ಅಮೂಲ್ಯ ಬಳುವಳಿಗಳನ್ನು ನೀಡಿ, ಉನ್ನತ ವೇತನವನ್ನು ಕೊಟ್ಟು, ತಾಜಮಹಲ್ ಕಟ್ಟಡ ನಿರ್ಮಾಣ ಕಾರ್ಯದ ಮೇಲ್ವಿಚಾರಣೆಗಾಗಿ ನಿಯಮಿಸಿಕೊಂಡರು."

ಇದೆಲ್ಲವೂ ಆಖ್ಯಾಯಿಕೆ. ವಾಸ್ತವಾಂಶಗಳಿಗೆ ಹಿಂದಿರುಗುವುದಾದರೆ, ತಾಜ ಮಹಾಲಿನ ಮೂವರು ಆಧಾರ—ಕಲ್ಪನೆಯ ವಾಸ್ತು ಶಿಲ್ಪಿಗಳೂ - ಉಸ್ತಾದ್ ಈಸಾಖಾನ್, ವೆರೋನೆಯೋ ಮತ್ತು

(ಹದಿಮೂರನೇ ಪುಟ ನೋಡಿರಿ)

ಇದೀಗ ಪ್ರಕಟವಾಗಿದೆ!

ಮೇರಿ ಕೊಟ್ಟ ಬೆಂಡೋಲೆ

ಯಸ್. ಸದಾಶಿವರಾಯರ ಕಥಾಸಂಕಲನ.

ಮುನ್ನುಡಿ: ನಿರಂಜನ

ತ್ರಿವರ್ಣ ರಕ್ಷಾಪತ್ರ   ಬೆಲೆ: ರೂ. ೧=೫೦

ಪ್ರತಿಗಳಿಗೆ—
ನವಯುಗ ಪ್ರೆಸ್, ಉಡುಪಿ

ಪರಿಚಯ

ವಿಜಯನಗರದ ಆದಿಶಕ್ತಿ-ವಿದ್ಯಾರಣ್ಯ

ಬರೆದವರು : ಶ್ರೀ ಸ. ನಾರಾಯಣ.

ದಕ್ಷಿಣ ಭಾರತವನ್ನು ಏಕಚ್ಛತ್ರದ ಅಡಿಯಲ್ಲಿ ಸುಮಾರು ೧೩೩೬ರಿಂದ ೩೦೦ ವರ್ಷಗಳ ವರೆಗೆ ಭವ್ಯತೆಯಿಂದ ಆಳಿ ಮೆರೆದ ಕೀರ್ತಿ ವಿಜಯನಗರಕ್ಕೆ ಸೇರುತ್ತದೆ. ವಿಜಯನಗರದ ಚರಿತ್ರೆ ಇಂದು ಕೇವಲ ಇತಿಹಾಸ, ಗತ ವೈಭವ. ಆದರೆ ಅಂದಿನ ವಿಜಯನಗರ ಸಿರಿ, ಸಂಸ್ಕೃತಿಗಳ ಭವ್ಯಕ್ಷೇತ್ರ. ಇಂದು ಕೇವಲ ಹಾಳು ಹಂಪೆ.

ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ವ್ಯಾಪಿಸಿರುವ ಭವ್ಯ ಬೃಹತ್ ಭಾರತದಲ್ಲಿ ಅಂದು ನೂರಾರು ಅರಸರು, ರಾಜ್ಯಗಳು, ಪಾಳೆಯಗಳು ಇದ್ದುದು ಅತಿಶಯೋಕ್ತಿ ಏನಲ್ಲ. ಸಿರಿಯ ಆಸೆಗೆ ಮಾರು ಹೋದ ಮುಸಲ್ಮಾನ ದಾಳಿಕಾರರು ನಾಶವನ್ನು ಸುಲಿಗೆ ನಡೆಸಿ ಭಾರತೀಯ ಸಂಸ್ಕೃತಿ, ಧರ್ಮ, ದೇವಾಲಯಗಳಿಗೆ ಕೇಡುಂಟು ಮಾಡಿದುದು ಮಾತ್ರವಲ್ಲದೆ, ಭಾರತೀಯರ ಅನೈಕ್ಯಮತ್ಯ — ಅಸಹಕಾರಗಳನ್ನು ದುರುಪಯೋಗ ಪಡಿಸಿಕೊಂಡು ತಾನೇ ದಿಲ್ಲಿಯ ಅರಸರಾಗಿ ಮೆರೆಯಲಾರಂಭಿಸಿದರು. ಮಹಮದ್ ಘೋರಿ, ಮುಸ್ಲಿ, ಮಹಮದ್ ಬಿನ್ ತೊಗಲಕ್, ಮಲ್ಲಿಕಾಪೂರ್, ಔರಂಗಜೇಬ ಮೊದಲಾದವರು ಭಾರತಕ್ಕೆ ಹಚ್ಚಿರುವ ಕಲಂಕವನ್ನು ಸಪ್ತ ಸಮುದ್ರಗಳ ಜಲದಿಂದ ತೊಳೆದು ಶುಭ್ರಗೊಳಿಸಲೂ ಸಾಧ್ಯವಿಲ್ಲ.

ಮುಸಲ್ಮಾನ ಅರಸರ ಆಳಿಕೆ— ಆಸೆಗಳು ಕೇವಲ ಉತ್ತರ ಭಾರತಕ್ಕೆ ಮಾತ್ರವೇ ಸೀಮಿತವಾಗಿ ಉಳಿಯದೆ ದಕ್ಷಿಣ ಭಾಂತದ ಕಡೆಗೂ ಸಾಗಿತು. ಮುಸಲ್ಮಾನರಿಂದ ಹಿಂದೂ-ಧರ್ಮ—ಸಂಸ್ಕೃತಿಗಳಿಗೆ ನಡೆದ ಅನಾಹುತ ಅತ್ಯಾಚಾರ ಅಲ್ಪವಲ್ಲ. ಮಲ್ಲಿಕಾಪೂರನ ಧಾಳಿಯಿಂದ ದಕ್ಷಿಣದ ಹೆಸರಾಂತ ಅರಸು ಮನೆತನಗಳು ನಾಮಾವಶೇಷವಾಗಿ ಹೋದ ತರುವಾಯ, ಮಹಮದ್‌ಬಿನ್ ತೊಗಲಕ್ ಆನೆಗೊಂದಿಯನ್ನು ಕಬಳಿಸಲು ಹೊಂಚು ಹಾಕಿದ. ಸಕಾಲದಲ್ಲಿ ಪ್ರಕೃತಿಯ ರಕ್ಷಣೆಯಲ್ಲಿ ಉಳಿದಿದ್ದ ಏಕೈಕ ಬಲಿಷ್ಟ ರಾಜ್ಯ ಒಂದು ಎಂದರೆ ಆನೆಗೊಂದಿ ಒಂದೇ ಆಗಿತ್ತು.

ಹಿಂದೂಧರ್ಮ ಸಂಸ್ಕೃತಿಗಳಿಗೆ ಕಲೆದೋರಿದ ವಿಪತ್ತನ್ನು ಗಮನಿಸಿ ಅಸಹಕಾರ, ಅನೈಕ್ಯಮತ್ಯಗಳಿಂದ ವಿನಾಶದ ಹಾದಿಯಲ್ಲಿ ಸಾಗುತ್ತಿದ್ದ ಭಾರತೀಯರನ್ನು ಎಚ್ಚರಗೊಳಿಸಿ, ಅವರಿಗೆ ಸ್ವಸ್ವರೂಪದರ್ಶನ ಮಾಡಿಸಿ, ಮುಸಲ್ಮಾನರ ಅತ್ಯಾಚಾರ ಅನಾಚಾರಗಳನ್ನು ಪ್ರತಿಭಟಿಸಿ ಹೋರಾಡಲು ಮುಂದಾದವರು ಓರ್ವ ಅರಸಲ್ಲ, ಅಥವಾ ಓರ್ವ ರಾಜಕಾರಣಿಯಲ್ಲ, ಓರ್ವ ರಾಜನೀತಿಜ್ಞನಲ್ಲ—ಸರ್ವಸಂಗಗಳನ್ನು ತ್ಯಜಿಸಿದ ಓರ್ವ ಯತಿ. ಆ ಯತಿಯೇ ವಿದ್ಯಾರಣ್ಯರು. ಅವರು ಶೃಂಗೇರಿಯ ಶಾರದಾ ಪೀಠದಲ್ಲಿ ವಿರಾಜಮಾನರಾಗಿ ಬೆಳಗಿದ ಆಚಾರ್ಯ ಪರಂಪರೆಯವರು.

ಮೊಟ್ಟಮೊದಲಿಗೆ ಬರಲಿದ್ದ ವಿಪತ್ತನ್ನು ಗಮನಿಸಿ, ವಿರೋಧಿಗಳ ಮನೋಭಾವವನ್ನು ಅರಿತು ಹಿಂದೂ ಧರ್ಮ—ಸಂಸ್ಕೃತಿಗಳ ರಕ್ಷಣೆಗೆ—ಪುನರುದ್ಧಾರಕ್ಕೆ ಹೋರಾಡಿದವರು ವಿದ್ಯಾರಣ್ಯರು. ಸರ್ವಸ್ವವನ್ನು ತ್ಯಜಿಸಿದ್ದ ಯತಿಗಳು ತಮ್ಮ ಮೋಕ್ಷ ಸಾಧನೆಗೆ ಮೂಗು ಹಿಡಿದು ಕುಳಿತು ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬಹುದಿತ್ತು. ನಾಡುನುಡಿಗಳನ್ನು ಧರ್ಮವನ್ನು ಉಳಿಸಬೇಕು ಉದ್ಧರಿಸಬೇಕು ಎಂಬ ಕೆಚ್ಚು ಈ ವೀರ ಸನ್ಯಾಸಿಯಲ್ಲಿ ಮೂಡಿತು. ಆದಕಾರಣವೇ ಪೀಠವನ್ನು ಬಿಟ್ಟು ತುಂಗಭದ್ರಾ ತೀರದ ಹಂಪೆಗೆ ಬಂದು ಕಾರ್ಯೋನ್ಮುಖರಾದರು. ತಾಯ್ನಾಡಿನ ರಕ್ಷಣೆಗಾಗಿ—ಹಿಂದೂಧರ್ಮದ ಉದ್ಧಾರಕ್ಕಾಗಿ ಪಣತೊಟ್ಟು ನಿಂತರು. ಅವರ ಅಭಿಮಾನ—ಆತ್ಮ ತೇಜಸ್ಸು ಅಮೋಘವಾದದ್ದು. ಅವರ ಸಂಕಲ್ಪ ಸಾಧನೆಗೆ ತಪೋಬಲ, ದೈವದೊಲವು ತಾನಾಗಿಯೇ ಒದಗಿ ಬಂದುವು. ಹಂಪೆಯ ಪವಿತ್ರ ಕ್ಷೇತ್ರದಲ್ಲಿ ನಿಂತು ಒಮ್ಮೆ ಸಿಂಹಾವಲೋಕನ ಮಾಡಿ ಘರ್ಜಿಸಿದ ಈ ವೀರ ಸಿಂಹದ ಕೂಗಿಗೇ ಕಾಡು ಮಾತ್ರವೇ ಅಲ್ಲ ನಾಡೂ ಎಚ್ಚೆತ್ತು ನಿಂತಿತು.

ವಿದ್ಯಾರಣ್ಯರ ಭವ್ಯ ಬೃಹತ್ ಕಲ್ಪನೆ ಅವರು ಜೀವಂತವಾಗಿರುವಾಗಲೇ ಸಾಧಿತವಾಯಿತು. ದಕ್ಷಿಣ ಭಾರತಕ್ಕೆ ಅದರಲ್ಲಿಯೂ ಕರ್ನಾಟಕಕ್ಕೆ ವಿಶಿಷ್ಟ ಸ್ವರೂಪವನ್ನು ಇತ್ತವರು ವಿದ್ಯಾರಣ್ಯರು. ಅಂದಿನ ವಿಜಯನಗರವೆಂದರೆ ಇಡೀ ದಕ್ಷಿಣ ಭಾರತ. ಹೊಸ ಹಳ್ಳಿಯಲ್ಲಿ ದೊರೆತ ಎರಡನೆ ಹರಿಹರನ ತಾಮ್ರ ಶಾಸನದಲ್ಲಿ "ಮಹಾನು ಭಾವಾನಾಂ ಕ್ರಿಯಾಶಕ್ತಿವಿದ್ಯಾರಣ್ಯ ಶ್ರೀ ಚರಣಾನಾಂ ಉಪದೇಶ ಜನಿತ ತತ್ವ ಪ್ರಕಾಶಕ" ಎಂಬ ವಾಕ್ಯವಿದೆ. ಇದರಿಂದ ವಿದ್ಯಾರಣ್ಯರ ಘನತೆ ತಾನಾಗಿಯೇ ವ್ಯಕ್ತವಾಗುತ್ತದೆ.

ವಿದ್ಯಾರಣ್ಯರ ಯೋಜನೆಯ ಸಾಧನೆಗೆ ತಕ್ಕ ವೀರ ಕ್ಷತ್ರಿಯರೇ ದೊರೆಯುತ್ತಾರೆ. ಅರಸು ಕುಲದವರಾಗಿದ್ದು ಮುಸಲ್ಮಾನರ ದಾಳಿಯಿಂದ ದಿಕ್ಕೆಟ್ಟು ಗುಪ್ತ ವೇಷದಿಂದ ಇದ್ದ ಹುಕ್ಕ ಬುಕ್ಕ ಸಹೋದರರು ತಾವಾಗಿಯೇ ಯತಿಗಳಲ್ಲಿಗೆ ಬಂದು ತಮ್ಮ ಅರಿಕೆಯನ್ನು ವ್ಯಕ್ತಪಡಿಸಿ ಅನುಗ್ರಹ ಬೇಡುತ್ತಾರೆ. ವೀರ ಕ್ಷತ್ರಿಯರಿಬ್ಬರ ಸಹಕಾರ ದೊರೆತ ನಂತರ ವಿದ್ಯಾರಣ್ಯರ ತಪೋಬಲಕ್ಕೆ ವಜ್ರ ಶಕ್ತಿ ಬರುತ್ತದೆ. ಹಿಂದೂ ಧರ್ಮ ಸಂಸ್ಕೃತಿಗಳ ರಕ್ಷಣೆಗೆ, ಪುನರುದ್ಧಾರಕ್ಕೆ ಯೋಗ್ಯವಾದ ಸಾಮ್ರಾಜ್ಯ ಮೈತಾಳುತ್ತದೆ—ವಿರೋಧಿ ಮುಸಲ್ಮಾನರನ್ನು ಬಗ್ಗು ಬಡಿದು ವಿಜಯನಗರ ಸಾಮ್ರಾಜ್ಯದ ಶಕ್ತಿಯ ಮೂಲ ಶ್ರೀ ವಿದ್ಯಾರಣ್ಯರು.

ವಿದ್ಯಾರಣ್ಯರ ಜನನ ೧೨೯೬. ಅವರ ಪೂರ್ವಾಶ್ರಮ ನಾಮ ಮಾಧವರೆಂದು. ಸಾಯಣ ಮತ್ತು ಭೋಗನಾಥ ಇವರ ತಮ್ಮಂದಿರು. ೧೩೩೧ರಲ್ಲಿ ಮಾಧವರು ಗುರುಗಳ ಅಪ್ಪಣೆಯಂತೆ ಸನ್ಯಾಸ ಸ್ವೀಕರಿಸಿ 'ವಿದ್ಯಾರಣ್ಯ' ಎಂಬ ಹೆಸರಿನಿಂದ ಶೃಂಗೇರಿಯ ಪೀಠವೇರುತ್ತಾರೆ. ಇವರು ವಿದ್ಯಾಶಂಕರರ ಆಪ್ತ ಶಿಷ್ಯರು. ವಿದ್ಯಾರಣ್ಯರು ಸನ್ಯಾಸ ಸ್ವೀಕರಿಸುವ ಪೂರ್ವದಲ್ಲಿ ಜ್ಞಾನದ ತೌರಾಗಿದ್ದ ಕಂಚಿಕ್ಷೇತ್ರದಲ್ಲಿ ವಿದ್ಯಾಭ್ಯಾಸ ಮಾಡಿದರೆಂಬ ಸಂಗತಿ ಸ್ಪಷ್ಟವಾಗಿದೆ. ಅವರ ಜನನ ಜೀವನಗಳ ಬಗೆಗೆ ಹಲವಾರು ದಂತಕತೆಗಳು ಬಳಕೆಯಲ್ಲಿವೆ; ಕೆಲವು ನಿಜವೆಂದು ನಂಬಲೂ ಸಾಧ್ಯ; ಕೆಲವು ಊಹಿಸಲೂ ಅಸಾಧ್ಯ. ಒಟ್ಟಿನಲ್ಲಿ ವಿದ್ಯಾರಣ್ಯರು ತಪೋಧನರು. ಅಪರೋಕ್ಷ ಜ್ಞಾನಿಗಳೂ, ಯೋಗಿಗಳೂ, ರಾಷ್ಟ್ರಾಭಿಮಾನಿಗಳೂ ಎಂಬುದು ನಿಜ. ತಾಯ್ನಾಡು—ಧರ್ಮಗಳ ರಕ್ಷಣೆಗಾಗಿ ಜನತೆಯಲ್ಲಿ ಜಾಗ್ರತಿಯನ್ನೂ ಮೂಡಿಸಿ, ಅವರ ಜಡತೆಯನ್ನೂ ನೀಗಲು ಪ್ರಯತ್ನಿಸಿ—ಅವರನ್ನು ಎಚ್ಚರಿಸಲು ಮುಂದಾಗಿ ಯಶಸ್ವಿಯಾದವರು ಎಂಬುದು ನಿರ್ವಿವಾದ. ವೇದವೇದಾಂತಗಳಲ್ಲಿ ಪೂರ್ಣಪಾಂಡಿತ್ಯ ಪಡೆದ ಮೇಧಾವಿಗಳು. ವಿದ್ಯಾರಣ್ಯರು ಸಂಸ್ಕೃತ ವಾಙ್ಮಯಕ್ಷೇತ್ರಕ್ಕಾಗಿಯೂ ವರ ಸೇವೆ ಸಂದಿದೆ. ಅವರ ಅಪಾರ ಕೃತಿ

(ಮುಂದಿನ ಪುಟ ನೋಡಿರಿ)

ಜಾನುವಾರು ಮತ್ತು ಕೋಳಿಗಳ
ಆರೋಗ್ಯಕರ ಬೆಳವಣಿಗೆಗೆ



ಹಾಲು ನೀಡುವ ಆರೋಗ್ಯದ ದನ
ಎಂದರೆ ಹೆಚ್ಚು ಹಾಲು
ಅವುಗಳಿಗೆ

MILKCAN BRAND

'ಮಿಲ್ಕ್ ಕ್ಯಾನ್'
ಗುರುತಿನ ಜಾನುವಾರು
ಆಹಾರವನ್ನು ಕೊಡಿರಿ.

ಹೆಚ್ಚಿನ ಮೊಟ್ಟೆಗಳು—!,
ಕಡಿಮೆ ಮರಣ ಮತ್ತು ಇನ್ನೂ
ಶೀಘ್ರ ಬೆಳವಣಿಗೆಗೆ



EGGBASKET BRAND

'ಎಗ್ ಬಾಸ್ಕೆಟ್'
ಗುರುತಿನ ಕೋಳಿಗಳ ಆಹಾರ

ಜೀವಸತ್ವಗಳು, ಲೋಹಗಳು ಮತ್ತು ಎಂಟಿಬಯೊಟಿಕ್ಸ್‌ಗಳಿಂದೊಡಗೂಡಿದೆ.
ನಮ್ಮ ವೈಜ್ಞಾನಿಕ ಆಹಾರ ಕಾರ್ಯಕ್ರಮ ಮತ್ತು ಮಾಹಿತಿಗಳಿಗಾಗಿ ಬರೆಯಿರಿ.

ತಯಾರಕರು:
ಮೈಸೂರು ಫೀಡ್ಸ್ (ಪ್ರೈ) ಲಿಮಿಟೆಡ್,
230, ಹಳೆಯ ತರಗು ಪೇಟೆ, ಬೆಂಗಳೂರು-2.
ಫೋನ್: ಫ್ಯಾಕ್ಟರಿ 28572 ಆಫೀಸು (PP) 22471.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಪರಿಚಯ

ಶ್ರೀ ಚೈತನ್ಯ ಮಹಾಪ್ರಭು

ಬರೆದವರು

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ).

(ಕಳೆದ ಸಂಚಿಕೆಯಿಂದ)

ನಿಮಾಯಿಯ ಖ್ಯಾತಿಯು ಇಡಿ ವಂಗದೇಶದಲ್ಲಿ ವಿಸ್ತರಿಸಿತು. ಅವನನ್ನು ಪಂಡಿತ ಶಿರೋಮಣಿಯೆಂದು ಶ್ಲಾಘಿಸಿದರು. ಅವನ ಮಾತೆಯ ಸಂತೋಷಕ್ಕೆ ಪಾರವೇ ಇಲ್ಲ. ನಿಮಾಯಿಯು ಪುನರ್ವಿವಾಹಕ್ಕೆ ಒಪ್ಪಲಿಲ್ಲವೆಂಬುದು ಮಾತ್ರ ಆ ಮಾತೆಯ ಚಿಂತೆಯಾಗಿತ್ತು. ತಾಯಿಯು ಪ್ರತಿದಿನ ಒತ್ತಾಯಪಡಿಸಿದಾಗ ಆಕೆಯನ್ನು ದೇವರೆಂದೇ ತಿಳಿದ ನಿಮಾಯಿಯು ಆಕೆಯ ಚಿಂತೆಯನ್ನು ಪರಿಹರಿಸಲೋಸುಗ ಸನಾತನ ಮಿಶ್ರನೆನ್ನುವ ಒಬ್ಬ ಧನಿಕ ಪಂಡಿತನ ಕುಮಾರಿ ವಿಷ್ಣುಪ್ರಿಯೆ ಎಂಬವಳನ್ನು ಮದುವೆಯಾದನು. ಆಗ ಅವನ ತಾಯಿಯು ಆನಂದಭರಿತಳಾದಳು.

ವಿಷ್ಣುಪ್ರಿಯೆಯೂ ನಿಮಾಯಿಯೂ ಅತ್ಯಂತ ಪ್ರೇಮ ದಂಪತಿಗಳಾದರು. ಆಕೆಯೂ ಪಾರಮಾರ್ಥಿಕ ದೃಷ್ಟಿಯಲ್ಲಿ ದಾಂಪತ್ಯವನ್ನು ಮುಂದರಿಸಿದಳು. ಆದರೂ ನಿಮಾಯಿಯು ಮೃತಳಾದ ಲಕ್ಷ್ಮಿಯ ನೆನಪನ್ನು ಮಾಡುತ್ತಲೇ ಇದ್ದನು.

ಒಂದು ದಿನ ಗಯಾ ಯಾತ್ರೆಗಾಗಿ ಮಾತೆಯ ಅಪ್ಪಣೆ ಪಡೆದು ಹೊರಟನು. ಪಿತೃ ಕಾರ್ಯವನ್ನು ಅಲ್ಲಿ ಬಹಳ ಶ್ರದ್ಧೆಯಿಂದ ನಡೆಯಿಸಿದನು. ಅಲ್ಲಿರುವ ವಿಷ್ಣು ದೇವಾಲಯದಲ್ಲಿ ಹಲವರು ಭಜನೆ ಮಾಡುತ್ತಲಿದ್ದರು. ತಾನೂ ಅವರೊಂದಿಗೆ ಸೇರಿ ಭಜನೆ ಮಾಡಿದನು. ಎರಡೂ ಕಣ್ಣುಗಳಿಂದ ಆನಂದಭಾಷ್ಪವು ಸುರಿಯಿತು. ಆತನ ವದನವು ಆಗ ತೇಜೋನ್ಮಯವಾಗಿ ಪ್ರಕಾಶಿಸುತ್ತಿತ್ತು. ಭಜನೆಯ ಕಾಲದಲ್ಲಿ ಆತನು ಕ್ಷೀಣನಾದಾಗ ಅಲ್ಲಿರುವ ಭಜಕರು ಆತನ ಶುಶ್ರೂಷೆ ಮಾಡಿದರು. ಹಾಗೆ ಶುಶ್ರೂಷೆ ಮಾಡಿದವರಲ್ಲಿ ಈಶ್ವರಪುರಿ ಎಂಬವರು ಒಬ್ಬರು. ಅವರು ಮಹಾ ವಿದ್ವಾಂಸರು. ನಿಮಾಯಿಗೆ ಅವರ ಪರಿಚಯ ಚಿಕ್ಕಂದಿನಿಂದಲೇ ಇತ್ತು. ನಿಮಾಯಿಯು ಈಶ್ವರಪುರಿಯ ಕಾಲಡಿ ಬಿದ್ದು ತನ್ನನ್ನು ದೈವನಿಷ್ಠನಾಗಿ ಮಾರ್ಪಡಿಸಿರಿ ಎಂದು ಬೇಡಿಕೊಂಡನು. ಪುರಿಗೆ ಆನಂದವಾಯಿತು. ಶುಭದಿನದಲ್ಲಿ ಒಳ್ಳೇ ಮುಹೂರ್ತದಲ್ಲಿ ಒಂದು ಪರಿಶುದ್ಧವಾದ ಗುಪ್ತ ಮಂತ್ರವನ್ನು ಪುರಿಯು ನಿಮಾಯಿಗೆ ಬೋಧಿಸಿದನು. ಅಂದಿನಿಂದ ನಿಮಾಯಿಯು ಶ್ರೀಕೃಷ್ಣನ ದಿವ್ಯಸ್ವರೂಪವನ್ನು ಕಣ್ಣಾರೆ ಕಾಣಬೇಕೆಂಬ ತವಕದಿಂದ ಪ್ರತಿ ನಿಮಿಷ ಹರಿನಾಮವನ್ನು ಉಚ್ಚರಿಸಲಾರಂಭಿಸಿದನು.

ಗಯಾ ಯಾತ್ರೆ ಮುಗಿಸಿ ಊರಿಗೆ ಹಿಂದಿರುಗಿದನು. ಊರವರು ಆತನ ದರ್ಶನಕ್ಕಾಗಿ ಕಿಕ್ಕಿರಿದು ನೆರೆದರು. ಆತನ ಶಿಷ್ಯರೆಲ್ಲ ಆತನ ಬಳಿ ಬಂದರು. ಆತನ ಬದಲಾವಣೆ ಹೊಂದಿದ ಮುಖದ ತೇಜವನ್ನು ಕಂಡು ಆಶ್ಚರ್ಯಪಟ್ಟರು. ಆತನ ಮುಖದಲ್ಲಿ ಸಂತೋಷದ ಚಿಹ್ನೆ ತೋರಲಿಲ್ಲ. ವೈರಾಗ್ಯದ ಭಾವವೇ ಕಾಣುತ್ತಿತ್ತು. ಆತನನ್ನು ಆತನ ಮುಖ್ಯ ಶಿಷ್ಯ ವರ್ಗದವರು ಪರಮಾತ್ಮನ ಅವತಾರವೆನ್ನಲಾರಂಭಿಸಿದರು.

ಆತನಲ್ಲಿ ಲವಲೇಶವಾದರೂ ಸಿಟ್ಟುಗೊಳ್ಳಬಾರದು, ನಮ್ರತೆಯು ಆತನಲ್ಲಿ ತುಂಬಿ ತುಳುಕಲಾರಂಭಿಸಿತು. ಪ್ರತಿಯೊಬ್ಬರನ್ನೂ ನಮಸ್ಕರಿಸಲಾರಂಭಿಸಿದನು. ಆತನ ಪ್ರೀತಿಯ ತಾಯಿಯು, ಆತನ ಸ್ಥಿತಿಯನ್ನು ಕಂಡು ಗಾಬರಿಗೊಂಡಳು. ಪದೇ ಪದೇ ಆತನು ದಿಕ್ಕನ್ನು ನೋಡಿ- "ಓ ಕೃಷ್ಣನೇ ನೀನು ಎಲ್ಲಿರುವೆ' ಎಂದು ಕೃಷ್ಣನನ್ನು ಕರೆಯುವನು, ಇದನ್ನು ಕಂಡ ಆತನ ತಾಯಿಯು ತನ್ನ ಮಗನಲ್ಲಾದ ವ್ಯತ್ಯಾಸ ಭಾವಕ್ಕೆ ಯಾವ ಕಾರಣವೆಂದು ತಿಳಿಯದೇ ತಳಮಳಿಸತೊಡಗಿದಳು. ಪ್ರೇತ ಬಾಧೆ ಇರಬಹುದೆಂದೂ ನೆನಸಿದಳು. ಆದರೆ ಆತನ ರೋಗಕ್ಕೆ ಪರಮಾತ್ಮನ ಸಾನ್ನಿಧ್ಯವೇ ಔಷಧವಾಗಿತ್ತು.

ಆತನು ಇಡಿ ದಿನ ಭಜನೆಯನ್ನೇ ತನ್ನ ಕರ್ಮವಾಗಿ ಮಾಡಿಕೊಂಡನು. ಶಾಲೆಯ ಅಧ್ಯಾಪಕತನವನ್ನು ತ್ಯಜಿಸಿದನು. ಶಾಲೆಯನ್ನು ತೀರಾ ಮರೆತುಬಿಟ್ಟನು. ಒಂದೊಂದು ದಿನ ಶಿಷ್ಯರ ಒತ್ತಾಯದಿಂದ ಶಾಲೆಗೆ ಕಲಿಸಲು ಹೋದರೆ, ಅಲ್ಲೂ ಹರಿಭಜನೆ ಮಾಡಿ ಮೂರ್ಛೆ ಹೊಂದುತಿದ್ದನು. ಶಿಷ್ಯರು ಬಹಳ ವ್ಯಸನಪಟ್ಟರು.

ಒಂದು ದಿನ ನಿಮಾಯಿಯು (ಚೈತನ್ಯ) ಶಾಲೆಗೆ ಹೋಗಿ ತನ್ನ ಶಿಷ್ಯರನ್ನು ಕರೆದು ಈ ರೀತಿ ನುಡಿದನು. ಶಿಷ್ಯರೇ ನಿಮಗೆ ನಾನು ಪಾಠ ಹೇಳುವಾಗ, ನನ್ನ ಕಣ್ಣೆದುರಿನಲ್ಲಿ ಕೊಳಲನ್ನು ಊದಿ ಶ್ರೀ ಕೃಷ್ಣನು ನಿಂತಂತೆ ನನಗೆ ಭಾಸವಾಗುತ್ತದೆ. ಆಗ ನಾನು ಪಾಠವನ್ನು ಮರೆತುಬಿಡುತ್ತೇನೆ. ಇನ್ನು ಮುಂದೆ ನೀವು ಪ್ರತ್ಯೇಕ ಉಪಾಧ್ಯಾಯನನ್ನು ಬರಮಾಡಿ, ನನ್ನಿಂದ ಕಲಿಸಲು ಸಾಧ್ಯವಿಲ್ಲ." ಈ ಮಾತುಗಳನ್ನು ಉಸುರಿ ಶಾಲೆಯಿಂದ ಹೊರಬಂದನು. ಶಿಷ್ಯರು ಕೂಗಲಾರಂಭಿಸಿದರು. ಇಲ್ಲಿಗೆ ಆತನ ಭೌತಿಕ ಉದ್ಯೋಗವು ಸಮಾಪ್ತಿಯಾಯಿತು—ಜೈಶ್ರೀಹರಿ—

ನಿಮಾಯಿಯು ಎಲ್ಲಾ ಎಡೆಗಳಲ್ಲಿ ಎಲ್ಲಾ ವಸ್ತುಗಳಲ್ಲಿ ತನಗೆ ಶ್ರೀಕೃಷ್ಣ ಪರಮಾತ್ಮನು ತೋರುತ್ತಿರುವನೆಂಬುದಾಗಿ ಬೇರೆ ಯಾವ ವಿಚಾರಕ್ಕೂ ಮನಸ್ಸಿರಲಿಲ್ಲ. ಹರಿಯ ನಾಮವನ್ನು ಹಾಡಿ ಕೈಯಲ್ಲಿ ತಾಳಗಳನ್ನು ಧರಿಸಿ ಕುಣಿಯಲಾರಂಭಿಸಿದನು. ಎಲ್ಲಾ ಜಾತಿಯ ಜನರು, ಗಂಡಸರೂ, ಹೆಂಗಸರೂ, ವೃದ್ಧರೂ, ಚಿಕ್ಕವರೂ ಅವನೊಡನೆ ಕುಣಿದು ಹರಿನಾಮವನ್ನು ಹಾಡಲು ಆರಂಭಿಸಿದರು. ಊರೆಲ್ಲ ಹರಿನಾಮಮಯವಾಯಿತು. ಹಲವರಲ್ಲಿ ಪಾರಮಾರ್ಥಿಕ ದೃಷ್ಟಿಯು ಹುಟ್ಟಲಾರಂಭಿಸಿತು. ಪ್ರೇಮ ಮತ್ತು ಭಕ್ತಿಗಳ ದ್ವಾರಾ ಪರಮಾತ್ಮನನ್ನು ಕಂಡು ಹಿಡಿಯುವುದು ಸುಲಭ ಉಪಾಯವೆಂದು ನೆರೆದ ಜನರಿಗೆ ತಿಳಿಸಲಾರಂಭಿಸಿದನು.

ನದಿಯಾ ಜಿಲ್ಲೆಯು ಹರಿನಾಮ ಸ್ಮರಣೆಯಿಂದ ಪ್ರೇಮಮಯವಾಯಿತು. ನಿಮಾಯಿಯು ಚೈತನ್ಯ ಮಹಾಪ್ರಭುವಾದನು. ಆತನ ವೈರಿಗಳಲ್ಲಿ ಕೆಲವರು ನಾಶವಾದರು. ಆ ನಾಶಕ್ಕೆ ಅವನು ಕಾರಣಭೂತನಲ್ಲ— ಅವರ ದುರ್ಮಾರ್ಗದಿಂದಲೇ ಅವರು ನಾಶವಾದರು. ನವದ್ವೀಪದಲ್ಲೂ ಇಡಿ ನದಿಯಾ ಜಿಲ್ಲೆಯಲ್ಲೂ ಪ್ರತಿ ಹಿಂದುವೂ ಶ್ರೀಕೃಷ್ಣನನ್ನು ಪೂಜಿಸಲಾರಂಭಿಸಿದರು. ಶುದ್ಧ ವೈಷ್ಣವನಾಗಿ ತಾನು ದರಿದ್ರರ ಸೇವೆಮಾಡಿ ಧನ್ಯನಾದನು. ಸುಖ-ದುಃಖಗಳನ್ನು ಒಂದೇ ರೀತಿ ತುಲನೆ ಮಾಡಿದನು. ಗೀತೆಯ ಭಕ್ತಿಮಾರ್ಗವೂ, ಜ್ಞಾನಮಾರ್ಗವೂ, ತ್ಯಾಗಮಾರ್ಗವೂ ಆತನನ್ನು ಸಂಪೂರ್ಣ ಆವರಿಸಿದುವು. ಹರಿಧ್ಯಾನ, ಹರಿಕೀರ್ತನವೇ ಆತನ ಕರ್ಮಗಳಾದವು. ಉದ್ದುದ್ದ ಭಾಷಣಗಳಿಗೆ ಆತನು ವಿರುದ್ಧನು.

ಆತನ ಹರಿಭಜನೆ ಹೆಚ್ಚಿಚ್ಚಾದಾಗ, ಆತನಲ್ಲಿ ಕೆಲವು ದುಷ್ಟರು ಶತ್ರುತ್ವವನ್ನು ಸಾಧಿಸಿದರು. ಈತನು ಎಲ್ಲಾ ಜಾತಿಯವರನ್ನು ತನ್ನ ಗುಂಪಿಗೆ ಸೇರಿಸಿ ಶ್ರೀಕೃಷ್ಣನ ಸೇವೆಯನ್ನು ಮಾಡುತ್ತಾನೆಂದು ಉತ್ತಮ ವರ್ಗದ ಕೆಲವು ಬ್ರಾಹ್ಮಣರೂ, ಈತನು ದರಿದ್ರರನ್ನು ತನ್ನ ಸಾಲಿನಲ್ಲಿ ನಿಲ್ಲಿಸುತ್ತಾನೆಂದು, ಕೆಲವು ಧನವಂತರು— ಈತನಿಗೆ ಶತ್ರುಗಳಾದರು. ಅದು ಕಲಿಯುಗದ ಮಹಿಮೆಯು. ಆತನಿಗೂ ಶೂದ್ರರಲ್ಲೂ ಹರಿಜನರಲ್ಲೂ ತುಂಬಾ ಪ್ರೇಮವಿತ್ತು. ಶತ್ರುಗಳು ಒಂದಾಗಿ ಮುಸ್ಲಿಮ್ ರಾಜ್ಯಪಾಲನಲ್ಲಿ ಚೈತ್ಯನ ಪ್ರಭಾವವನ್ನು ದೂಷಿಸಿ ಈತನು ಊರಿಗೆ ಮಾರಿಯಂತಿದ್ದಾನೆ ಎಂದರು. ಆತನ ಕೀರ್ತನೆಗಳು ಅರ್ಥವಿಲ್ಲದ ತಮಾಷೆ ಎಂದರು. ಮುಸ್ಲಿಮ ರಾಜನು ಕೂಡಲೆ ಕೀರ್ತನಗಳು ತನ್ನ ರಾಜ್ಯದಲ್ಲಿ ನಡೆಯಬಾರದೆಂದು ಶಾಸನವಿತ್ತನು. ನಿಮಾಯಿಯು ಆ ಶಾಸನಕ್ಕೆ ಮನ್ನಣೆಗೊಡಲಿಲ್ಲ. ತನ್ನ ಅನೇಕ ಶಿಷ್ಯರಿಗೂ ಆ ಶಾಸನವನ್ನು ತಿರಸ್ಕರಿಸಬೇಕೆಂದು ಉಪದೇಶಿಸಿದನು. ಒಂದು ದಿನ ಸಾವಿರಾರು ಶಿಷ್ಯರನ್ನು ಒಳಗೊಂಡು ಅರಮನೆ ಮುಂದೆ ನಿಂತು ರಾಜಿಯ ಎದುರೇ ಎಲ್ಲರೂ ಹರಿಭಜನೆ ಮಾಡಿದರು. ರಾಜಿಯು ಆಶ್ಚರ್ಯಭರಿತನಾದನು. ಆತನಲ್ಲೂ ದೈವಕಳೆ ಇತ್ತು. ಕೂಡಲೇ ತನ್ನ ಶಾಸನವನ್ನು ಹಿಂದೆಗೆದು ನಿಮಾಯಿಗೆ ಸಾಷ್ಟಾಂಗವೆರಗಿದನು. ಇದು ಹರಿಯ ಲೀಲೆ ಎನ್ನುವುದರಲ್ಲಿ ಸಂಶಯವಿಲ್ಲ. ಹರಿಭಜಕರಿಗೆ ಹೆದರಿಯಿಲ್ಲ.

ವೈರಿಗಳು ಸುಮ್ಮನಿರಲಿಲ್ಲ. ಕಡುಕರೂ, ಕೊಲೆಪಾತಕಿಗಳಾದ ಇಬ್ಬರ್ ಪ್ರಚಂಡಚೋರರನ್ನು ನಿಮಾಯಿಯನ್ನು ದಂಡಿಸಲಿಕ್ಕಾಗಿ ನೇಮಿಸಿದರು. ಆ ಚೋರರ ಹೆಸರು—ಮಾಧಾಯಿ ಮತ್ತೆ ಜಗಾಯಿ ಅವರು ಅತಿ ಕ್ರೂರರು. ಮೊದಲಾಗಿ ಈ ಚೋರರು ಚೈತನ್ಯನ ಮುಖ್ಯ ಶಿಷ್ಯ ನಿತ್ಯಾನಂದನೆಂಬವನನ್ನೇ ಚೆನ್ನಾಗಿ ಹೊಡೆದರು. ಆತನ ಶಿರವು ಒಡೆದು ರಕ್ತಧಾರೆಯು ಸುರಿಯುತ್ತಿತ್ತು. ಚೈತನ್ಯ ಪ್ರಭು ಅಲ್ಲಿಗೆ

(ಹನ್ನೊಂದನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. 4/1966.

ನಾಗಣ್ಣ ಶೆಟ್ಟಿ —ವಾದಿ.

ಗಿರಿಜ ಶೆಡ್ತಿ ಸಹಾ —ಪ್ರತಿವಾದಿರು.

3. ಶಿವಣ್ಣ ಮಾಡ, ನರಸಿ ಶೆಡ್ತಿರ ಮಗ,

5. ಲಿಂಗಿ ಮಾಡ್ತಿ, ಶೀನಿ ಮಾಡ್ತಿರ ಮಗಳು, ಕಾರ್ಕಳ ತಾಲ್ಲೂಕು ಪಳ್ಳಿ ಗ್ರಾಮದ ಅಲ್ದಿಮಾರ ಎಂಬಲ್ಲಿರುವವರು,

3, 5ನೇ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ,

ವಾದಿಯು ವಳಗೆ ನೀವು ಕೊಡಾ ಮೂಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಆಸ್ತಿ ಬಾಬ್ತು ವಾದಿಗೆ ಕಳದ ಸುಭಕ್ರತು, ಶೋಭಕ್ರತು ಮತ್ತು ಕ್ರೋಧಿ ಸಂ|ಗಳ ಅಂತ್ಯಕ್ಕೆ ಬರಪಕ್ಕ 3 ವರುಷಗಳ ಮೂಲಗೇಣಿ ಬಡ್ಡಿ ಕೂಡಿ ರೂಪಾಯಿ 306—42ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 1—6—1966ಕ್ಕೆ ನಿಮಗೆ ಆಖೈರ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟಿನ ಹುಕ್ಕುಂ ಪ್ರಕಾರ ತಿಳಿಸಿಯದೆ,

K. V. Kamath.

Advocate for Plaintiff.

ಕಾರ್ಕಳ, ತಾ. 7—5—1966

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 57 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ದೇಶ ಪ್ರೇಮದ ಸ್ಫೂರ್ತಿ

ಗೋಪಾಲಕೃಷ್ಣ ಗೋಖಲೆ

ಮೇ ತಿಂಗಳ ೯ನೇ ತಾರೀಖು, ನೂರು ವರ್ಷಗಳ ಹಿಂದೆ ಜನಿಸಿದ ಗೋಪಾಲಕೃಷ್ಣ ಗೋಖಲೆಯವರು, ಕೇವಲ ೪೯ ವರ್ಷಗಳ ಕಾಲ ಜೀವಿಸಿ, ಭಾರತದ ಅತಿ ಶ್ರೇಷ್ಠ ರಾಷ್ಟ್ರ ನಿರ್ಮಾಪಕರಲ್ಲಿ ಒಬ್ಬರಾಗಿ ಬೆಳಗಿದರು. ಅವರ ಜೀವನ ಪರಿಚಯ ಮಾಡಿಕೊಳ್ಳುವುದೆಂದರೆ, ದೇಶ ಪ್ರೇಮದ ಸ್ಫೂರ್ತಿಯನ್ನು ಪಡೆದಂತೆ. ಅವರ ಪುಣ್ಯ ಸ್ಮರಣೆಯನ್ನು ಎಲ್ಲರೂ ಇಂದು ಮಾಡಿಕೊಂಡು ಅವರಿಗೆ ಗೌರವ ಅಂದು ಸಲ್ಲಿಸಿತು.

ಗೋಖಲೆಯವರು ಮಧ್ಯಮ ಕುಟುಂಬ ವರ್ಗದಲ್ಲಿ ಜನಿಸಿ, ೧೩ನೇ ವರ್ಷದವರಿದ್ದಾಗ ತಂದೆಯನ್ನು ಕಳೆದುಕೊಂಡರು. ಅನಂತರ ಹಿರಿಯಣ್ಣನವರ ಆಶ್ರಯದಲ್ಲಿ ಬೆಳೆದ ಅವರು ೧೮ನೇ ವಯಸ್ಸಿನಲ್ಲಿ ಮುಂಬೈ ಎಲ್ಫಿನ್‌ಸ್ಟೀನ್ ಕಾಲೇಜಿನಲ್ಲಿ ಪದವೀಧರರಾಗಿ ಹೊರಬಂದ ಸಮಯದಲ್ಲಿಯೇ ಫರಗೋಸನ್ ಕಾಲೇಜಿನಲ್ಲಿ ಚರಿತ್ರೆ ಮತ್ತು ರಾಜಕೀಯ ಅರ್ಥಶಾಸ್ತ್ರದ ಪ್ರೊಫೆಸರ್ ಆಗಿ ನೇಮಕಗೊಂಡರು. ಅಲ್ಲಿ ಅವರು ನೀಡುತ್ತಿದ್ದ ಉಪನ್ಯಾಸಗಳು ಉತ್ಕೃಷ್ಟವಾಗಿದ್ದವು. ಅದೂ ಬರ್ಕ್‌ನ 'ಫ್ರಾನ್ಸಿನ ಕ್ರಾಂತಿ'ಯ ಬಗ್ಗೆ ನೀಡುತ್ತಿದ್ದ ಅವರ ಉಪನ್ಯಾಸಗಳನ್ನು ಕುರಿತು "ಬುದ್ಧಿ ಮತ್ತೆಯ ಹಬ್ಬದೂಟದಂತಿದ್ದ ಆ ಉಪನ್ಯಾಸಗಳು ದೇವತೆಗಳ ಸಭೆಗೆ ಯೋಗ್ಯವಾಗಿದ್ದೀತೇ ಹೊರತು, ಅವರ ಸುತ್ತಲೂ ಇದ್ದ ಕುಬ್ಜಮತಿಯರಿಗಲ್ಲ" ಎಂದು ವರ್ಣಿಸಲಾಗಿದೆ.

ಕಾಲೇಜಿಗೆ ಸೇರಿದ ಕಾಲದಲ್ಲಿ ಅಂದಿನ ಅತಿ ಶ್ರೇಷ್ಠ ಭಾರತೀಯರೆನಿಸಿದ್ದ ಶ್ರೀ ಜಸ್ಟೀಸ್ ರಾನಡೆಯವರ ಸಂಪರ್ಕವನ್ನು ಪಡೆದರು. ಗೋಖಲೆಯವರ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ರಾನಡೆಯವರ ಪ್ರಭಾವ ಹಿರಿಯ ಪಾತ್ರವನ್ನು ವಹಿಸಿತು. 'ರಾಜಕೀಯ ಅರ್ಥ ಶಾಸ್ತ್ರ'ದಲ್ಲಿ ... ವರ್ಷಗಳ ಸತತ ಅಭ್ಯಾಸವನ್ನು ರಾನಡೆಯವರ ನೇತೃತ್ವದಲ್ಲಿ ಗೋಖಲೆಯವರು ನಡೆಸಿದರು. ರಾನಡೆಯವರನ್ನು ಗೋಖಲೆಯವರು ತಮ್ಮ ಗುರುವೆಂದು ಭಾವಿಸಿ ಅವರಿಗೆ ಅತ್ಯಂತ ಗೌರವವನ್ನು ಸಲ್ಲಿಸುತ್ತಿದ್ದರು. ಇವರ ಪ್ರಭಾವದಿಂದ ಗೋಖಲೆಯವರು ರಾಜಕೀಯ ಹಾಗೂ ಸಮಾಜ ಸೇವೆಗೆ ತಮ್ಮನ್ನು ಮುಡುಪಾಗಿಟ್ಟುಕೊಂಡರು. ಸಾರ್ವಜನಿಕ ಸೇವೆಯ ... ಗೋಖಲೆಯವರು ತಮ್ಮ ತತ್ವದಿಂದ ಎಂದಿಗೂ ವಿಮುಖರಾಗುತ್ತಿರಲಿಲ್ಲ.

ಜನತೆಯ ಪ್ರಾಮಾಣಿಕ ಸೇವಕನಲ್ಲಿರಬೇಕಾದ ಗುಣಗಳಾದ ಸತ್ಯ ನಿಷ್ಠೆ, ಕರ್ತವ್ಯ ಪ್ರಜ್ಞೆಯಲ್ಲಿ ನಿರಾಳತೆ, ಪ್ರಾಮಾಣಿಕವಾದ ಉದ್ದೇಶ, ಶೀಲಗುಣಗಳಿಗೆ ನಮ್ರತೆ—ಇವುಗಳನ್ನು ಗೋಖಲೆಯವರು ಕಿರಿತನದಲ್ಲಿಯೇ ಜೀವನದಲ್ಲಿ ಅಳವಡಿಸಿಕೊಂಡರು.

ದಕ್ಷಿಣದ ಉದಯೋನ್ಮುಖ ತಾರೆ

ರಾನಡೆಯವರ ಒತ್ತಾಯದ ಮೇಲೆ ಪೂನಾದ ಸಾರ್ವಜನಿಕ ಸಭಾದ ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿ ಗೋಖಲೆಯವರು ಕೆಲಸ ಮಾಡಿದರು. ಸಾರ್ವಜನಿಕ ಸಭಾಸಂಸ್ಥೆಯು ಭಾರತದಲ್ಲಿ ಆಗಿನ ಮುಖ್ಯ ರಾಜಕೀಯ ಸಂಸ್ಥೆಯಾಗಿದ್ದಿತು. ಅವರನ್ನು ಡೆಕ್ಕನ್ ಸಭಾದ ಗೌರವ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಲಾಯಿತು. ಪೂನಾದ ಇಂಗ್ಲಿಷ್ ಮತ್ತು ಮರಾಠಿ ಭಾಷೆಯ ಸುಧಾರಕ್ ವಾರಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದರು. ಮುಂಬೈ ಪ್ರಾಂತೀಯ ಸಮ್ಮೇಳನದ ಕಾರ್ಯದರ್ಶಿಗಳಾಗಿ ನಾಲ್ಕು ವರ್ಷ ಸೇವೆ ಸಲ್ಲಿಸಿದರು. ೧೮೮೯ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಸೇರಿದರು, ಉಪ್ಪಿನ ತೆರಿಗೆಯನ್ನು ಇಳುವರಿ ಮಾಡಲು ತಂದಿದ್ದ ನಿರ್ಣಯದ ಬಗ್ಗೆ ಮಾತನಾಡಬೇಕೆಂದು ಜುಲೈ ತಿಂಗಳಿಂದು ಅವರನ್ನು ಕೇಳಿದಾಗ, ಅಂತೆಯೆ ಪ್ರತಿಭಾನ್ವಿತರಾಗಿ ಭಾಷಣ ಮಾಡಿದರಲ್ಲದೇ, ೧೯೦೬ರಲ್ಲಿ ತೆರಿಗೆಯು ಇಳುವರಿಯಾಗುವ ವರೆಗೂ ಅದರ ವಿರುದ್ಧ ಹೋರಾಡಿದರು. ಸೇವಾಕಾಂಕ್ಷೆಯ ಮತ್ತು ಸಾರ್ವಜನಿಕರ ಸೇವಾ ಕಾರ್ಯದ ಅರಿವು ಅವರಲ್ಲಿ ಎದ್ದು ಕಾಣುತ್ತಿದ್ದಿತು. ಅದ್ದರಿಂದಲೇ ಅವರನ್ನು 'ದಕ್ಷಿಣದ ಉದಯೋನ್ಮುಖ ತಾರೆ' ಎಂದು ಕರೆಯಲಾಗುತ್ತಿತ್ತು.

ಭಾರತದಲ್ಲಿ ಸಾರ್ವಜನಿಕ ವೆಚ್ಚದ ಪ್ರಶ್ನೆಯನ್ನು ಪರಿಶೀಲಿಸಲು ನೇಮಕವಾಗಿದ್ದ ವೆಲ್ಬಿ ಕಮಿಷನ್ನಿನ ಮುಂದೆ ಸಾಕ್ಷ್ಯ ನೀಡಲು ಸರ್ ದಿನ್‌ಷಾ ವಾಚರೊಡನೆ ಗೋಖಲೆಯವರನ್ನು ೧೮೯೭ರಲ್ಲಿ ಇಂಗ್ಲೆಂಡಿಗೆ ಕಳುಹಿಸಿಕೊಡಲಾಯಿತು. ವೆಲ್ಬಿ ಕಮಿಷನ್ನಿನ ವರದಿಯ ಫಲಿತಾಂಶವು ಅಷ್ಟು ಪ್ರಮುಖವಲ್ಲವಾದರೂ, ಇದರಿಂದ ಗೋಖಲೆಯವರು ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅಖಿಲ ಭಾರತ ವ್ಯಕ್ತಿಯಾಗಿ ರೂಪುಗೊಳ್ಳಲು ಸಹಾಯಕವಾಯಿತು.

ಗೋಖಲೆಯವರ ಜೀವನದ ಸಂಧಿಕಾಲ

ಗೋಖಲೆಯವರು ೧೯೦೨ರಲ್ಲಿ ಅಂದರೆ ಅವರ ೩೬ನೇ ವಯಸ್ಸಿನಲ್ಲಿ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಚುನಾಯಿತರಾದರು. ಈ ಕೌನ್ಸಿಲ್‌ಗೆ ಮತ್ತೆ ಮೂರು ಬಾರಿ ಎಡೆಬಿಡದೆ ಚುನಾಯಿತರಾದರು. ಈ ಚುನಾವಣೆಯು ಅವರ ಜೀವನದ ಸಂಧಿಕಾಲವಾಯಿತೆನ್ನಬಹುದು. ೧೯೦೨ರಿಂದ ೧೯೧೧ರ ವರೆಗೆ ಅನೇಕ ಪ್ರಮುಖ ಭಾಷಣಗಳನ್ನು ಮಾಡಿದರು. ಆ ಭಾಷಣಗಳಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಹಣಕಾಸಿನ ಸಮಸ್ಯೆಗಳ ಬಗ್ಗೆ ಮಾಡಿದ ಭಾಷಣಗಳು ಅತ್ಯುತ್ತಮ ಹಾಗೂ ವೈಶಿಷ್ಟ್ಯಪೂರ್ಣವಾಗಿವೆ. ಗೋಖಲೆಯವರು ತಮ್ಮ ಭಾಷಣಗಳಲ್ಲಿ ಜವಾಬ್ದಾರಿ ಸರ್ಕಾರ ಬೇಕೆಂದೂ ಜನರಿಗೆ ಸಾಮಾನ್ಯ ಹಕ್ಕು ಬಾಧ್ಯತೆಗಳನ್ನು ನೀಡಬೇಕೆಂದೂ ಕೇಳಿದ್ದಾರೆ. ಯಾವ 'ಸುಸಂಸ್ಕೃತ ಸರ್ಕಾರವೂ ಪ್ರಜೆಗಳ ಸಾಮಾನ್ಯ ಹಳ್ಳಿಯ ಅಕ್ಷರಾಭ್ಯಾಸಕ್ಕೆ ಪ್ರೋತ್ಸಾಹ ನೀಡದೆ ಇರದೆಂದೂ ಅಭಿಪ್ರಾಯ ಪಡುತ್ತಿದ್ದರು.

ಪ್ರಮುಖ ರಾಜಕೀಯ ಧೋರಣೆಗಳು ಸಾರ್ವಜನಿಕ ಸೇವೆಯ ಹುದ್ದೆಗಳ ಪ್ರಶ್ನೆ ಶಿಕ್ಷಣದ ಪ್ರಗತಿ ಮತ್ತು ಸಹಕಾರ ಸಾಲ ಮುಂತಾದ ವಿಚಾರಗಳ ಮೇಲೆ ಭಾರತದ ಅಭಿಪ್ರಾಯಗಳನ್ನು ರೂಪಿಸುವಲ್ಲಿ ಗೋಖಲೆಯವರು ಸಾಕಷ್ಟು ಪ್ರಭಾವ ಬೀರಿದರು. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಾ "ಪತ್ರಿಕೆಯು ಒಂದು ದೃಷ್ಟಿಯಲ್ಲಿ ಸಾರ್ವಜನಿಕರ ಹಿತವನ್ನು ರಕ್ಷಿಸುವ ಸರ್ಕಾರವಿದ್ದ ಹಾಗೆ; ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಮಾಡಲು ಕಾನೂನನ್ನು ಉಪಯೋಗಿಸಿದರೆ, ಸಾರ್ವಜನಿಕ ಹಿತಗಳ ಮೇಲೆ ಪ್ರತಿಕೂಲವಾಗಿ ಪರಿಣಾಮವುಂಟಾಗಿ ಕೊನೆಯಲ್ಲಿ ಸರ್ಕಾರದ ಮೇಲೆ ಅದರ ಪ್ರತಿಕ್ರಿಯೆಯಾಗದಿರದು" ಎಂದು ಘೋಷಿಸಿದ್ದರು. ಶಿಕ್ಷಣದ ಮೂಲಕ ದೇಶವನ್ನು ಕಟ್ಟಬಹುದು ಎಂಬುವ ವಿಚಾರದಲ್ಲಿ ಅವರಿಗೆ ನಿಶ್ಚಲ ವಿಶ್ವಾಸವಿತ್ತು. ಸರ್ಕಾರವು ಉಳಿದ ನಾಗರಿಕ ರಾಷ್ಟ್ರಗಳಂತೆ ಜನರನ್ನು ಅಕ್ಷರಸ್ಥರನ್ನಾಗಿ ಮಾಡುವ ತನ್ನ ಕರ್ತವ್ಯವನ್ನು ನಿರ್ವಹಿಸಬೇಕೆಂದು ಗೋಖಲೆಯವರು ಘೋಷಿಸಿದರು. ೬ ರಿಂದ ೧೦ ವರ್ಷಗಳೊಳಗಿರುವ ಬಾಲಕರಿಗೆ ಒತ್ತಾಯವಾಗಿ ಶಿಕ್ಷಣವನ್ನು ನೀಡಬೇಕೆಂದು ಅವರು ಹೇಳಿದರು. ಆದರೆ, ಸರ್ಕಾರವು ಅವರ ಸಲಹೆಯನ್ನು ಸ್ವೀಕರಿಸಲಿಲ್ಲ. ಆದರೆ ಮದ್ರಾಸ್ ಮತ್ತು ಅಲಹಾಬಾದಿನಲ್ಲಿ ಪ್ರಾಥಮಿಕ ಶಿಕ್ಷಣ ಲೀಗ್‌ಗಳನ್ನು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಮೂಲಕ ಸ್ಥಾಪಿಸಿ, ತಮ್ಮ ಉದ್ದೇಶ ಸಾಧನೆಗಾಗಿ ದೇಶದಲ್ಲಿ ಚಳುವಳಿಯನ್ನು ಪ್ರಾರಂಭಿಸಿದರು.

ಭಾರತದ ಸಾರ್ವಜನಿಕ ಜೀವನಕ್ಕೆ ಗೋಖಲೆಯವರು ಉಚ್ಚಮಟ್ಟದ ಪ್ರಜಾಪ್ರತಿನಿಧಿಯಾಗಿ ಕೌನ್ಸಿಲಿನಲ್ಲಿ ಮಾಡಿದ ಭಾಷಣಗಳು ವೈವಿಧ್ಯಪೂರ್ಣವಾಗಿವೆಯಲ್ಲದೇ, ಸುಸಂಬದ್ಧವಾಗಿವೆ. ಸಾರ್ವಜನಿಕ ಸೇವಾ ಹುದ್ದೆಗಳಲ್ಲ ಮತ್ತು ಪರೀಕ್ಷೆಗಳಲ್ಲಿ ನಡೆಯುತಿದ್ದ ಅನ್ಯಾಯದ ಸರ್ಕಾರವನ್ನು ಗೋಖಲೆಯವರು ಮುಚ್ಚು ಮರೆಮಾಡದೆ ರೂಪಿಸಿದರು. ಇವು ರಾಷ್ಟ್ರದ ಪ್ರಮುಖ ಸಮಸ್ಯೆಗಳಾಗಿದ್ದವು.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ

೧೯೦೫ರಲ್ಲಿ ಸ್ಥಾಪಿಸಿದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯು ಗೋಖಲೆಯವರು ರಾಷ್ಟ್ರಕ್ಕೆ ನೀಡಿದ ಅತ್ಯುತ್ತಮ ಕಾಣಿಕೆ. ಈ ಸೊಸೈಟಿಯು ಅಂಗ ರಚನೆಯು ಗುಣ ಹಾಗೂ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಬಗ್ಗೆ ಪ್ರಾಧಾನ್ಯತೆಯನ್ನು ಕೊಟ್ಟಿದೆ. ಸಾರ್ವಜನಿಕ ಜೀವನದಲ್ಲಿ ಅಂತಃಶುದ್ಧಿಯನ್ನು ತರಬೇಕು. ರಾಷ್ಟ್ರ ಪ್ರೇಮದ ಮುಂದೆ ಮಿಕ್ಕ ವಿಚಾರಗಳು ಕನಿಷ್ಠವಾಗಿ ಕಾಣುವಂತೆ ಹೃದಯವನ್ನು ರಾಷ್ಟ್ರ ಪ್ರೇಮದಿಂದ ತುಂಬಬೇಕು ಎಂಬುದಾಗಿ ಸೊಸೈಟಿಯು

(ಹದಿನಾರನೇ ಪುಟ ನೋಡಿರಿ)

.... ಕೇವಣಾತಿಗಾಗಿ
ಬ್ಯಾಂಕಿನ ವರೆಗೆ ಬರಬೇಕಾಗಿಲ್ಲ.

.... ಸರದಿ ತಪ್ಪಿದರೆ
ಏನನ್ನೂ ಕಳೆದುಕೊಳ್ಳಬೇಕಾಗಿಲ್ಲ.

.... ಅಗತ್ಯ ಬಿದ್ದಲ್ಲಿ ಸಾಲ ಪಡೆಯಲು
ಬೇರೆ ಜವಾಬ್ದಾರಿ ಹುಡುಕಬೇಕಾಗಿಲ್ಲ.

ಇದು ಜನಪ್ರಿಯ ದೈನಿಕ ಉಳಿತಾಯ ಯೋಜನೆ

"ಪಿಗ್ಮಿ"

(ಒಂದು ರೂಪರೇಖೆ)

ದಿನ ಒಂದಕ್ಕೆ

25 ಪೈಸೆ | 1 ರೂಪಾಯಿ

7 ವರುಷಗಳಲ್ಲಿ

ರೂ. 700 | ರೂ. 2,800

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 80 ಕೋಟಿಗೂ ಮಿಕ್ಕಿ.

ಭಾರತ:

ಅಮೆರಿಕನ್

ಇದು ಸರಿಯುವ ಅವ ಅಮೆರಿಕನ್

೧

ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಮಾರ್ಚ್ ತಿಂಗಳ ಕೊನೆಯಲ್ಲಿ ಜಗತ್ತಿನ ಸುಸಂಪನ್ನ ರಾಷ್ಟ್ರ ಅಮೆರಿಕೆಯನ್ನು ಸಂದರ್ಶಿಸಿದರು. ಎರಡು ರಾಷ್ಟ್ರಗಳ ನಡುವೆ ಸಾಕಷ್ಟು ತಿಳುವಳಿಕೆಯನ್ನು ಉಂಟು ಮಾಡುವುದೇ ಈ ಭೆಟ್ಟಿಯ ಮುಖ್ಯ ಉದ್ದೇಶವಾಗಿತ್ತು. ಇದು ಸಂಪೂರ್ಣ ಸಫಲವಾಗಿದೆಯೆಂದು ಇಂದಿರಾ ಗಾಂಧಿ ಮರಳಿ ಬಂದೊಡನೆಯೇ ಹೇಳಿದ್ದಾರೆ.

ಇಂದಿರಾಜಿಯವರು ಪ್ರಧಾನಿಯಾದ ಬಳಿಕ ಮೊತ್ತಮೊದಲಿಗೆ ಮಾಡಿದ ಅಧಿಕಾರಿಕ ವಿದೇಶ ಸಂದರ್ಶನವದು. ದೇಶದಲ್ಲಿ ಸಂಸತ್ತು ಸಭೆ ಸೇರುತಿದ್ದರೂ ಅತ್ಯಗತ್ಯವಾದ ಸಂದರ್ಶನವೆಂದು ಅವರು ಅದನ್ನು ಮತ್ತೆ ಮುಂದೆ ಹಾಕುವುದಾಗಲಿಲ್ಲ. ದಿ॥ ಪ್ರಧಾನಿ ಲಾಲಬಹದ್ದೂರರು ಫೆಬ್ರವರಿಯ ಮೊದಲ ದಿನಗಳಲ್ಲಿ ಮಾಡಬೇಕಾಗಿದ್ದ ಈ ಭೆಟ್ಟಿಯನ್ನು ಇಂದಿರಾಜಿಯವರು ಮಾಡಬೇಕಾಗಿ ಬಂತು. ಅಮೆರಿಕನ್ ಅಧ್ಯಕ್ಷ ಜಾನ್ಸನ್ ಭಾರತೀಯ ಪ್ರಧಾನಿಯನ್ನು ಸ್ವಾಗತಿಸಲು ಬಹು ಕುತೂಹಲಚಿತ್ತರಾಗಿದ್ದರು, ಭಾರತೀಯ ಪ್ರಧಾನಿಗಳಿಗೂ ಜಾನ್ಸನ್ನರೊಡನೆ ಮಾತನಾಡುವುದೂ ಅಧಿಕ ಅಗತ್ಯದ್ದಿತ್ತು.

ಭಾರತ-ಪಾಕಿಸ್ತಾನಗಳ ನಡುವೆ ಸಶಸ್ತ್ರ ಹೋರಾಟ ನಡೆದ ಬಳಿಕ ಅಮೆರಿಕೆಯು ನೀಡುವ ನೆರವನ್ನು ಸಂಪೂರ್ಣ ನಿಲ್ಲಿಸಿತ್ತು. ಉಭಯ ದೇಶಗಳ ನಡುವೆ ತೃಪ್ತಿಕರವಾದ ಸಂಬಂಧ ಉಂಟಾಗುವುದನ್ನು ಅಮೆರಿಕೆ ಬಯಸುತ್ತದೆ. ಶಾಂತಿಪ್ರಿಯ ರಾಷ್ಟ್ರ ಭಾರತವು ಶಾಂತಿಯನ್ನು ಕೆದಕಬಾರದು— ಇದು ಅಮೆರಿಕನ್ ರಾಜನೀತಿಯ ಒಳತಂತ್ರ. ಭಾರತದ ಕಾಶ್ಮೀರ ನೀತಿಯನ್ನು ನಿರ್ವಿಕಾರ ಮನಸ್ಸಿನಿಂದ ಮನನ ಮಾಡದೆ ಹೋದ ಅಮೆರಿಕನರಿಗೆ ಕಾಶ್ಮೀರವು ಯಾರ ಸೊತ್ತೂ ಅಲ್ಲ, ಅದೊಂದು ವಿವಾದಗ್ರಸ್ತ ಪ್ರದೇಶ— ಈ ತಿಳುವಳಿಕೆ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಹರಡಿದೆ. ಪಾಕಿಸ್ತಾನದ ಅನ್ಯಾಯ ನೀತಿ, ಭಾರತದ ನ್ಯಾಯಪರತೆ ಎರಡನ್ನೂ ಸಮಾನ ತಕ್ಕಡಿಯಲ್ಲಿ ತೂಗುವ ಕುತಂತ್ರದಿಂದಾಗಿ ಭಾರತವು ಪಡಬಾರದ ಪಾಡು ಪಡುವಂತಾಗಿದೆ. ಭಾರತದ ಹಣಕಾಸಿನ ವ್ಯವಸ್ಥೆ ಮತ್ತು ಆಹಾರಿಕ ವ್ಯವಸ್ಥೆಗಳೆರಡೂ ಕೆಟ್ಟು ಹೋಗಿವೆ ಎರಡನೆಯದಕ್ಕೆ ಪ್ರಕೃತಿಯ ಪ್ರಕೋಪವು ಕಾರಣವಾದರೆ, ಮೊದಲನೆಯದರ ಮೂಲ ಪಾಕ್ ಅನ್ಯಾಯ ಪ್ರವೃತ್ತಿಯೆಂದೇ ಹೇಳಬೇಕು. ಈ ಸಂದರ್ಭವನ್ನು ಸಾಧಿಸಿ ಅಮೆರಿಕೆಯು ವಾಗ್ದಾನ ಮಾಡಿದ್ದ ನೆರವನ್ನು ಸಹಾ ತಡೆಹಿಡಿಯಿತು, ಮುಂದಿನ ನೆರವನ್ನು ನಿಲ್ಲಿಸಿತು — ತಪ್ಪು ತಿಳುವಳಿಕೆ ಬೆಳೆಯಿತು.

ಅಮೆರಿಕನ್ ನೆರವಿಲ್ಲದೆ ನಾವು ಪಟ್ಟ ಬವಣೆಯೇನೂ ಸ್ವಲ್ಪವಲ್ಲ. ವಿದೇಶೀ ವಿನಿಮಯವಿಲ್ಲದೆ ನಮ್ಮ ಅನೇಕ ಉದ್ದಿಮೆಗಳು ಕೂರ ತೊಡಗಿವೆ. ವಿದೇಶೀ ವಿನಿಮಯವನ್ನು ಗಳಿಸಬಲ್ಲ ಉದ್ದಿಮೆಗಳೂ ಕೆಲಸ ನಿಲ್ಲಿಸುವಂತಹ ಪ್ರಮೇಯ ಬಂದಿದೆ ಇದರ ಭೀಕರ ಪರಿಣಾಮ ಈ ಆರ್ಥಿಕ ವರ್ಷದಲ್ಲಿ ಆರಂಭವಾದೀತು; ಮುಂದಿನ ವರ್ಷವದು ನೋಡುವನ್ನೇರಿತ್ತು. ದೇಶದ ಆಂತರಿಕ ಉಪಯೋಗಕ್ಕೂ ಅವಶ್ಯಕ ಪದಾರ್ಥಗಳ ಕೊರತೆ ಉಲ್ಬಣಗೊಳ್ಳುತ್ತದೆ. ಹೀಗೆಯೇ ಮುಂದುವರಿದರ, ಭಾರತದ ಆರ್ಥವ್ಯವಸ್ಥೆಯು ಸಂಪೂರ್ಣ ಕುಸಿಯುವುದು ಖಂಡಿತ.

ಆದುದರಿಂದ, ಪ್ರಧಾನಿ ಇಂದಿರಾ ಗಾಂಧಿಯವರು ಅಮೆರಿಕೆಯಲ್ಲಿ ಜಾನ್ಸನ್ನರನ್ನು ಭೆಟ್ಟಿಯಾದರು. ಬಿಚ್ಚು ಮನಸ್ಸಿನಿಂದ ಮಾತನಾಡಿದರು. ಭಾರತದ ನಿಲುವು ಯೇನೆಂಬುದನ್ನು ವಿವರಿಸಿದರು. ಭಾರತದ ಶಾಂತಿಪ್ರಿಯತೆಯನ್ನು ಉದಾಹರಣೆಯೊಂದಿಗೆ ಸ್ಪಷ್ಟೀಕರಿಸಿದರು. ಕಚ್ಛ್-ರಣದ ವಿವಾದದಲ್ಲಿ ನಡೆಸಿದ ಒಡಂಬಡಿಕೆಯನ್ನು ಉದಾಹರಿಸಿದರು, ತಾಷ್ಕೆಂಟ್ ಘೋಷಣೆಗೆ ಸಹಿ ಹಾಕಿದುದನ್ನು ಎತ್ತಿ ತೋರಿಸಿದರು. ಈ ಘೋಷಣೆಯನ್ನು ಭಾರತವು ಅಕ್ಷರಶಃ ಪಾಲಿಸುತ್ತಿರುವುದನ್ನು ಉಲ್ಲೇಖಿಸಿದರು. ಪಾಕ್ ನಿಲುವೆಯೇನೆಂದು ವಿವರಿಸಿ ಅದು ಬುಡವಿಲ್ಲದ್ದು ಎಂದು ಸಾರಿದರು

ಭಾರತವು ಶಾಂತಿಪ್ರಿಯ ರಾಷ್ಟ್ರವಾಗಿರುವಾಗ ಅದು ಶಸ್ತ್ರವೆತ್ತಬಾರದು— ಎಂದು ಕೆಲವರ ವಾದ ಇಂತಹರು ನಮ್ಮ ನೀತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದೇ ಹೇಳಬೇಕು. ಶಾಂತಿ ಎಂದರೆ ಅಸಮಾರ್ಥ್ಯವಲ್ಲ. ನಮ್ಮನ್ನು ಹುಲಿಸುಂಗ ಬಂದಾಗ ಶಾಂತಿ ಶಾಂತಿ ಎನ್ನುತ್ತ ಕೂರುವುದು ! ವಿವೇಕವೆಂದು ಯಾರು ಹೇಳುತ್ತಾರೆ? ನಾವಾಗಿ ಅಶಾಂತಿಯನ್ನು ಹರಡುವುದಿಲ್ಲ. ತಾನಾಗಿಯೇ ನಮ್ಮನ್ನು ಕೆರಳಿಸ ಬಂದವರನ್ನು ಮುಂದುವರಿಯಗೊಡುವುದು ಆತ್ಮ ಪರಾಜಯವಲ್ಲದೆ ಮತ್ತೇನು? ಪಾಕಿಸ್ತಾನ ಕಾಶ್ಮೀರದಲ್ಲಿ ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ಮಾಡಿದ ಸಶಸ್ತ್ರ ಸಮರ ಮತ್ತನನ್ನು ಪ್ರತಿಭಟಿಸಲು ಭಾರತ ಕೈಕೊಂಡ ದೃಢ ನಿಲುವುಗಳನ್ನು ಇಂದಿರಾ ಗಾಂಧಿಯವರು ವಿವರಿಸಿದರು, ಬಣ್ಣದ ಕನ್ನಡಕ ತೊಟ್ಟ ಕಣ್ಣುಗಳ ಮುಂದೆ ಪ್ರತಿಬಿಂಬಿಸಿದರು. ಆದರೆ, ಅವರೆಷ್ಟನ್ನು ಮನವರಿಕೆ ಮಾಡಿಕೊಂಡರು ಎಂಬುದು ಬೇರೆಯೇ ಪ್ರಶ್ನೆ.

ಕಾಣ ಬೇಕಾದವರನ್ನೆಲ್ಲಾ ಕಂಡು, ಆಡಬಹುದಾದುದನ್ನೆಲ್ಲಾ ಆಡಿ, ಇಂದಿರಾ ಗಾಂಧಿಯವರು ಮರಳಿ ಬಂದರು ತಮ್ಮ ಸಂದರ್ಶನ ತೃಪ್ತಿಕರ, ಯಶಸ್ವಿ ಮತ್ತು ಫಲಪ್ರದವೆಂದರು. ಯಾವ ದೃಷ್ಟಿಯಲ್ಲಿ?

ಅಮೆರಿಕವು ನಿಲ್ಲಿಸಿದ ನೆರವನ್ನು ಮತ್ತೆ ಮುಂದುವರಿಸುವುದೆ? ನಮ್ಮ ಮುಂದಿನ ಯೋಜನೆಗಳಿಗೆ ಸಹಾಯ ನೀಡುವುದೆ?

— ಇಂದಿರಾ ಗಾಂಧಿಯವರ ಸಂದರ್ಶನದ ಉದ್ದೇಶ ಹಣ ತರುವುದಲ್ಲ. ಆದರೂ ಇಂಡೊ-ಅಮೆರಿಕನ್ ಪ್ರತಿಷ್ಠಾನವೊಂದರ ಸ್ಥಾಪನೆಯಾಗಲಿದೆ; ಜಾಗತಿಕ ಬ್ಯಾಂಕಿನ ಚೌಕಟ್ಟಿನೊಳಗಡೆ ಏನೇನೆಲ್ಲ ಮಾಡುವ ಅವಕಾಶವಿದೆಯೋ ಅವೆಲ್ಲವನ್ನೂ ಅಮೆರಿಕೆ ಮಾಡಲು ಸಿದ್ಧವಿದೆಯೆಂಬ ಭರವಸೆ ದೊರೆತಿದೆ ಆಹಾರ ಪೂರೈಕೆಯನ್ನು ತ್ವರಿತಗೊಳಿಸಲಾಗಿದೆ.

ಅಮೆರಿಕವು ಭಾರತದ ಕಾಶ್ಮೀರ ನೀತಿಯನ್ನು ಒಪ್ಪಿಕೊಂಡಿತೆ? ಪಾಕ್ ಕಾರಸ್ಥಾನವನ್ನು ಅದು ಮನವರಿಕೆ ಮಾಡಿಕೊಂಡಿತೆ?

— ಇಂದಿರಾಜಿ ಊದುವ ಶಂಖ ಊದಿದರು. ಇದರ ಧ್ವನಿ ಆಳವಾಗಿ ಇಳಿದಿಲ್ಲವೆನ್ನುವುದು ಸಾಧ್ಯವಿಲ್ಲ. ಆದರೆ ಹದಿನೆಂ

೨

...ಡುವ

...ಣ್ಣದ ಕನ್ನಡಕ

...ಬಂದೀತು? ಇಂಡೊ-
...ಅಸೀಮ ಶಕ್ತಿ.

೨

...ಟು ವರ್ಷಗಳಿಂದಲೂ ಮೆಲುಕು ಹಾಕುತ್ತ ಬಂದಿರುವ ಆಹಾರವನ್ನು ಉಗುಳುವುದು ಅಷ್ಟು ಸಂಭವವಲ್ಲ. ತಾವು ಇಷ್ಟು ದಿನಗಳಿಂದ ಅನುಸರಿಸಿದ ನೀತಿಯನ್ನು ದಿನ ಬೆಳಗಾಗುವುದರೊಳಗೆ ಬದಲಿಸಲು ಯಾರಿಗೆ ತಾನೇ ಸಾಧ್ಯ?

ಹಾಗಾದರೆ, ಇಂದಿರಾ ಸಾಧಿಸಿದ್ದೇನು? —ಸತ್ಯವನ್ನು ಮತ್ತೊಮ್ಮೆ ಸತ್ಯವೆನ್ನಲು ಬಂದ ಕರೆಯನ್ನವರು ಸದುಪಯೋಗಪಡಿಸಿಕೊಂಡರು.

ಎಲ್ಲಕ್ಕಿಂತ ಹೆಚ್ಚಾಗಿ ಇಂದಿರೆಯು ರಾಜಕೀಯ ವಲಯದಲ್ಲಿಯೂ ಅಮೆರಿಕನ್ ಜನತೆಯಲ್ಲಿಯೂ ಅಳಿಯಲಾರದ ಪ್ರಭಾವ ಬೀರಿದರು ಎನ್ನುತ್ತಾರೆ. ಇದರ ಪರಿಣಾಮ ಬೇಕಾಗಿರಲಿ, ಬೇಡವಾಗಿರಲಿ ಅಮೆರಿಕನ್ ನೀತಿಯ ಮೇಲೆ ಆಗುವುದೆಂದು ಹಲವರು ಹೇಳುತ್ತಾರೆ. ಇದು ಇದ್ದರೂ ಇರಬಹುದು.

ಶ್ರೀಮತಿ ಗಾಂಧಿಯವರ ಹಿಂದೆ ನಮ್ಮ ಯೋಜನಾ ಮಂತ್ರಿ ಅಶೋಕ ಮೆಹತಾ ಅಮೆರಿಕೆಗೆ ಹೋಗಿ ಬಂದರು. ನಾಲ್ಕನೆಯ ಯೋಜನೆಗೆ ಅಮೆರಿಕೆಯಿಂದ ಎಷ್ಟು ಸಹಾಯ ದೊರೆಯಬಹುದೆಂಬ ವಿಚಾರ ವಿನಿಮಯ ಮಾಡಿಲಿಕ್ಕೆ. ಇವರಿಗೆ ನಿಶ್ಚಿತವಾದ ಅಂಕೆ ಸಂಖ್ಯೆಗಳು ಲಭಿಸಲಿಲ್ಲ. ಭಾರತವು ಬಯಸಿದಷ್ಟು ಸಹಾಯವನ್ನು ಅಮೆರಿಕನ್ ಕಾಂಗ್ರೆಸ್ಸಿನ ಒಪ್ಪಿಗೆಗೊಳಪಟ್ಟು ನೀಡಲು ಅದು ಮನಸ್ಸು ಮಾಡಿದೆಯೆಂದು ಸುದ್ದಿ. ಕಾಂಗ್ರೆಸ್ಸು, ಇಂದಿರಾ ಮಾತುಕತೆ ಯಾದೊಡನೆಯೇ ಆಹಾರ ಪೂರೈಕೆಯ ಬಗ್ಗೆ ತೋರಿದ ಉದಾರತೆಯನ್ನು ಆರ್ಥಿಕ ರಂಗದಲ್ಲಿಯೂ ತೋರಿಸುವುದೆ? ಇದು ಸದ್ಯ ಕಲ್ಪನಾತೀತವಾಗಿದೆ.

ಇನ್ನು ಬಾಕಿಯಿರುವುದು ಅರ್ಥಮಂತ್ರಿ ಸುಚೀಂದ್ರ ಚೌಧುರಿಯವರ ಅಮೆರಿಕನ್ ಭೆಟ್ಟಿ. ತಾಷ್ಕೆಂಟ್ ಘೋಷಣೆಯನ್ನು ಅನುಸರಿಸುವಲ್ಲಿ ಪಾಕಿಸ್ತಾನ ತೋರಿಸುತ್ತಿರುವ ಅಸಡ್ಡೆ—ಭಾರತದ ಅಸ್ಥಿಗಳು ಮಿತ್ರ ರಾಷ್ಟ್ರಗಳಿಗೆ ಅಪರಿಚಿತವಲ್ಲ. ಆದರೆ, ಅಮೆರಿಕೆ—ಭಾರತಗಳ ಮಧ್ಯೆಯಿರುವುದು ತಪ್ಪು ತಿಳುವಳಿಕೆಯ ತೆಳ್ಳನೆಯ ಪರದೆಯೊಂದು. ಇದು ಇಂದು ನಿನ್ನೆಯದಲ್ಲ; ಸಾಂಪ್ರದಾಯಿಕವಾಗಿ ಇಳಿದುಬಂದ ಈ ಪರದೆಯನ್ನು ಸರಿಸುವುದು ಅಮೆರಿಕೆಯ ಕೆಲಸ; ತಕ್ಕ ಪ್ರೇರಣೆ ನೀಡುವುದು ಭಾರತದ ಕರ್ತವ್ಯ.

ಇಂದಿರಾಗಾಂಧಿಯವರ ಮತ್ತಿತರ ಮಂತ್ರಿಗಳ ಭೆಟ್ಟಿಗಳು ಈ ಪರದೆ ಸರಿಸುವಲ್ಲಿ ಕುಸುಮಾದರೂ ನೆರವಾಗಿದ್ದರೆ, ಅದೇ ಬಹುದೊಡ್ಡ ಲಾಭ.

ಚಿತ್ರಗಳು

೧. ಅಮೆರಿಕೆಯ ಶ್ವೇತಭವನದಲ್ಲಿ ಅಧ್ಯಕ್ಷ ಜಾನ್ಸನ್ನರೊಡನೆ ಪ್ರಧಾನಿ ಗಾಂಧಿಯವರು ಗೌರವರಕ್ಷೆಯನ್ನು ವೀಕ್ಷಿಸಿದರು.

೨. ಪ್ರಧಾನಿ ಗಾಂಧಿಯವರು ಅಮೆರಿಕೆಯ ವಿದೇಶ ಸಚಿವ ಡೀನ್‌ರಸ್ಕರೊಡನೆ ಚರ್ಚಿಸುತ್ತಿದ್ದಾಗ ಇವರಿಬ್ಬರ ನಡುವೆ ಭಾರತದಲ್ಲಿ ಅಮೆರಿಕೆಯ ರಾಯಭಾರಿ ಚೆಸ್ಟರ್ ಬೌಲ್ಸ್ ಕೂಡ ಸೇರಿಕೊಂಡರು.

೩. ನ್ಯೂಯಾರ್ಕಿನ ಲಿಂಕನ್ ಕಲಾ ಕೇಂದ್ರವನ್ನು ಅದರ ಅಧ್ಯಕ್ಷ ಜಾನ್ ಡಿ. ರೋಕ್‌ಫೆಲ್ಲರ್ IIIರೊಡನೆ ಸಂದರ್ಶಿಸಿದಾಗ, ನಾಗರಿಕರು ಪ್ರಧಾನಿ ಗಾಂಧಿಯವರನ್ನು ಆದರದಿಂದ ಸ್ವಾಗತಿಸಿದರು.

ನೇರಳೆ ಮತ್ತು ನೀಲಗಿರಿ ಮರಗಳಿಂದ ಅಂಟಿಬಯೊಟಿಕ್ ಔಷಧಿಗಳು

— ಸೆರ್ಗೇಯ ಶಾಂತ್ಸಿರ್ —

ಎ. ಪಿ. ಎನ್. ಬಾತ್ಮೀದಾರರು.

ಕ್ರಿಮಿಯದ ಯಾಲ್ತಾದಲ್ಲಿರುವ ರಾಜ್ಯ ಸಸ್ಯ ವೈಜ್ಞಾನಿಕ ತೋಟದ ಸಿಬ್ಬಂದಿಯ ಸದಸ್ಯರೂ ಸಸ್ಯ ವಿಜ್ಞಾನ ಪಂಡಿತರೂ ಆದ ಅನ್ನಾ ದೆಗ್ತ್ಯಾರೇವಾ ಮಿರ್ಟಲ್ (ನೇರಳೆ ಜಾತಿಯ ಮರ) ಮತ್ತು ಯೂಕಲಿಪ್ಟಸ್ (ನೀಲಗಿರಿ ಮರ) ಮರಗಳ ಎಲೆಯಿಂದ ಅಂಟಿಬಯೊಟಿಕ್ ಔಷಧಿಗಳನ್ನು ತಯಾರಿಸುವ ಕ್ರಮವನ್ನು ವಿಕಾಸಿಸಿದ್ದಾರೆ.

ಈ ಮರಗಳಲ್ಲಿರುವ ರೋಗಪರಿಹಾರಕ ಗುಣಗಳು ಪ್ರಾಚೀನ ಕಾಲದಿಂದಲೂ ತಿಳಿದಿವೆಯೆಂದು ಅನ್ನಾ ದೆಗ್ತ್ಯಾರೇವಾ ಹೇಳುತ್ತಾರೆ. ವೈದ್ಯಕೀಯ ವಿಜ್ಞಾನದಲ್ಲಿ ಇವುಗಳನ್ನು ಔಷಧಿಯಾಗಿ ಬಳಸಲಾಗುತ್ತಿದೆ. ನೀಲಗಿರಿ ಮತ್ತು ನೇರಳೆ (ಮಿರ್ಟಲ್) ತೈಲಗಳಲ್ಲಿರುವ ಒಂದು ರಾಸಾಯನಿಕ ದ್ರವವಾದ ಸಿನೆಯೋಲೆಯಿಂದ ಒಂದು ಔಷಧಿ ಪರಿಣಾಮ ಉಂಟಾಗುತ್ತದೆಯೆಂದು ಬಹುಕಾಲದಿಂದ ನಂಬಲಾಗುತ್ತಿತ್ತು. ಏನಿದ್ದರೂ ಸುಮಾರು 80 ಜಾತಿಯ ಹಾಗೂ ಬಗೆಗಳ ನೀಲಗಿರಿ ಮರಗಳ ಅಭ್ಯಾಸದಿಂದ ಕಂಡು ಬಂದಿರುವುದೇನೆಂದರೆ ಅವುಗಳ ವಿಕಾಣು ಜೀವಿ ವಿರೋಧಿ ಕ್ರಿಯೆ ಭಿನ್ನಭಿನ್ನವಾಗಿದೆ. ಮತ್ತು ಇದು ಹುಟ್ಟಿಸುವ ತೈಲ ಮತ್ತು ಸಿನೆಯೋಲೆಗಳ ಪ್ರಮಾಣವನ್ನೇನೂ ಆಧರಿಸಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅತ್ಯಂತ ಕಡಮೆ ಪ್ರಮಾಣದಲ್ಲಿ ಸಿನೆಯೋಲೆ ಇರುವಂಥದು (ನೀಲಗಿರಿ) ಮಿಶ್ರಣಗಳಿಗಿಂತ ಕ್ರಿಯೆಯಲ್ಲಿ ಅಧಿಕವಾಗಿದೆಯೆಂದು ಕಂಡು ಬಂದಿದೆ.

ಈ ಸಸ್ಯದ ಪರಿಹಾರಕ ಶಕ್ತಿ ರಾಸಾಯನಿಕವಾಗಿ ಬೇರ್ಪಟ್ಟ ಒಂದು "ಪದಾರ್ಥ"ವಾಗಿದೆ, ಕ್ಷಯ, ಡಿಫ್ತೀರಿಯ ಮೊದಲಾದುವುಗಳ ವಿಕಾಣು ಜೀವಿಗಳಿಗೆ ಮಾರಕವಾಗಿದೆ. ನೇರಳೆ ಮರದಿಂದ ತಯಾರಿಸಿದ ಅಂಟಿಬಯೊಟಿಕ್ 'ಪದಾರ್ಥ'ಗಳಲ್ಲೂ ಪರಿಹಾರಕ ಗುಣಗಳಿರುವುದು ಕಂಡುಬಂದಿದೆ. ಗಿನಿಯ ಹಂದಿಗಳಿಗೆ ಅಂಟುವ ಕ್ಷಯರೋಗ ಚಿಕಿತ್ಸೆಯಲ್ಲಿ ಇದು ಅತ್ಯುನ್ನತ ಪರಿಣಾಮಕಾರಿಯೆಂದು ಕೀಯೆವ್ ವೈದ್ಯಕೀಯ ವಿದ್ಯಾಪೀಠದ ವಿಜ್ಞಾನಿಗಳು ದೃಢಪಡಿಸಿದ್ದಾರೆ.

ಮೃತರಾದವರಿಗೆ ಕೀರ್ತಿಯ ಅಮರತೆ ಇರಬೇಕು; ಜೀವಂತವಿರುವವರಿಗೆ ಪ್ರೇಮದ ಅಮರತೆ ಬೇಕು.

o o o o

ಬಿತ್ತದವನು ಹೇಗೆ ಕೊಯ್ಯಲಾರನೋ ಕೃಷಿ ಮಾಡದವನು ಹೇಗೆ ಫಲ ಪಡೆಯಲಾರನೋ ಅದೇ ರೀತಿ ಪ್ರಯತ್ನಿಸದವನಿಗೆ ಪ್ರತಿಫಲವಿಲ್ಲ.

o o o o

ದುಡಿಮೆಯು ಶರೀರವನ್ನು ಆರೋಗ್ಯದಲ್ಲಿಡುತ್ತದೆ. ಮನಸ್ಸನ್ನು ಪರಿಶುದ್ಧಗೊಳಿಸುತ್ತದೆ. ಹೃದಯವನ್ನು ಪಕ್ವಗೊಳಿಸುತ್ತದೆ. ಕಿಸೆಯನ್ನು ತುಂಬಿಸುತ್ತದೆ.

ಭಾರತಕ್ಕೊಂದು ಎಚ್ಚರಿಕೆ

ಕೆಂಪು ಚೀನವು ಮೂರನೆಯ ಗಂಟೆ ಬಾರಿಸಿತು

ಕೆಂಪು ಚೀನಾ ಮತ್ತೊಂದು ಅಣು ಬಾಂಬನ್ನು ಸ್ಫೋಟಗೊಳಿಸಿತು — ಇದು ಅದರ ಮೂರನೆಯ ಬಾಂಬು.

ಮೊದಲ ಮತ್ತು ಮೂರನೆಯ ಅಣು ಬಾಂಬ್‌ಸ್ಫೋಟದ ನಡುವೆ ಎರಡು ವರ್ಷಗಳಿಗೂ ಕಡಿಮೆ ಅವಧಿಯಿದೆ—ಎಂದರೆ, ಕೆಂಪು ಚೀನಾದಲ್ಲಿ ಅಣ್ವಸ್ತ್ರ ವಿಜ್ಞಾನ ತೀರ ಪ್ರಗತಿಪರವಾಗಿಯೇ ಸಾಗಿದೆ; ಮುಂದೆಯೂ ಸಾಗುತ್ತದೆ. ಏಷ್ಯಾದ ನಾಯಕತ್ವದ ಮೇಲೆ ಸದಾ ಕಣ್ಣಿಟ್ಟುಕೊಂಡಿರುವ ಚೀನಾಕ್ಕೆ ಹೀಗೆ ಮಾಡದೆ ಹೋದರೆ ಉಪಾಯವೂ ಇಲ್ಲ. ತನಗೆ ನಾಯಕತ್ವವನ್ನು ನೀಡಲು ಚಿಕ್ಕಪುಟ್ಟ ರಾಷ್ಟ್ರಗಳು ಸಿದ್ಧವಿಲ್ಲವೆಂಬುದೀಗ ಅದಕ್ಕೆ ಸರಿಯಾಗಿ ಮನದಟ್ಟಾಗಿರುವುದರಿಂದ ಶಕ್ತಿ ಪ್ರದರ್ಶನ—ಬೆದರಿಕೆ—ಗದರಿಕೆಗಳಿಂದಾದರೂ ತನ್ನ ಬೇಳೆ ಬೇಯಿಸಿಕೊಳ್ಳಬೇಕು ಎಂಬುದದರ ಹೆಬ್ಬಯಕೆ. ಆದರೆ, ಅದರ ಈ ಹಂಬಲ ಆಕಾಶ ಕುಸುಮವಾದರೂ ಆಶ್ಚರ್ಯ ಪಡಬೇಕಾಗಿಲ್ಲ.

ಕೆಂಪು ಚೀನಾ ಅಣುಬಾಂಬು ಸ್ಫೋಟಗೊಳಿಸಿದೊಡನೆಯೇ ಅಮೆರಿಕೆಯು ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸಿತು. ೧೯೬೪ರಲ್ಲಿ ಮೊದಲ ಕೆಂಪು ಬಾಂಬು ಒಡೆದಾಗಲೇ ತಾನು ನೀಡಿದ್ದ ಹೇಳಿಕೆಯೊಂದನ್ನು ಮತ್ತೊಮ್ಮೆ ಪಠಿಸಿತು— ಅಣ್ವಸ್ತ್ರ ವಿರುದ್ಧ ಹೋರಾಡುವ ಯಾವುದೇ ರಾಷ್ಟ್ರಕ್ಕೆ ಅಮೆರಿಕೆಯು ತನ್ನ ಬೆಂಬಲ ನೀಡುವುದು. ವಾತಾವರಣದಲ್ಲಿ ಅಣ್ವಸ್ತ್ರ ಸ್ಫೋಟ ಮಾಡುವುದರಿಂದ ಜಗತ್ತಿನ ಅನೇಕ ಜನರ ಮೇಲೆ ದುಷ್ಪರಿಣಾಮವಾಗುವುದರಿಂದ ಅದನ್ನು ಪ್ರತಿಬಂಧಿಸಲಾಗಿದ್ದರೂ ಪ್ರತಿಬಂಧವನ್ನು ಮುರಿದು, ಚೀನಾವು ಮುಂದುವರಿದುದನ್ನು ಅಮೆರಿಕೆಯು ತೀವ್ರವಾಗಿ ಗಮನಿಸಿದೆ.

ಕೆಂಪು ಚೀನಾ ಯಾವ ಬಣಕ್ಕೂ ಸೇರಿಲ್ಲ. ಅದು ಬಂಡವಳಶಾಹಿಯಂತೂ ಅಲ್ಲವೇ ಅಲ್ಲ; ಸಾಮ್ಯವಾದಿಗಳ ಸಾಲಿನಲ್ಲೂ ಅದಕ್ಕೆ ಸರಿಯಾದ ಸ್ಥಾನವಿಲ್ಲ. ತಟಸ್ಥ ರಾಷ್ಟ್ರಗಳ ಪಂಕ್ತಿಯಿಂದ ಅದನ್ನು ಹೊರದಬ್ಬಲಾಗಿದೆ. ಹಾಗಾಗಿ ಕೆಂಪು ಚೀನಾ ಏಕಾಕಿಯಾಗಿ ನಾಲ್ಕನೆಯ ಬಣವೊಂದರ ನಾಯಕನೆನಿಸಿದೆ. ಯಾರೂ ಏನೆಂದರೂ ಅದರ ಪರಿಣಾಮ ಕೆಂಪುಚೀನಾದ ಮೇಲೆ ಆಗುವುದಿಲ್ಲ.

ಕೆಂಪು ಚೀನಾವು ಅಣ್ವಸ್ತ್ರವುಳ್ಳ ರಾಷ್ಟ್ರವಾಗುವುದು ಜಾಗತಿಕ ಶಾಂತಿಗೆ ತೀರ ಗಂಡಾಂತರವೆಂದು ಇಡಿಯ ಜಗತ್ತಿನ ಅಭಿಪ್ರಾಯ. ಅಣ್ವಸ್ತ್ರ ತಮ್ಮ ಬಳಿಯಲ್ಲಿ ಇಟ್ಟುಕೊಂಡವರೂ ಇಲ್ಲದವರೂ ಒಂದಾಗಿಯೇ ಈ ತೀರ್ಮಾನಕ್ಕೆ ಬಂದಿದ್ದಾರೆ. ಉದಾಹರಣೆಗೆ ಅಮೆರಿಕೆಯು ಸ್ಫೋಟಗೊಳಿಸಿದರೆ, ಅದರಿಂದ ಶಾಂತಿಗೆ ಭಂಗ ಬರುವುದಿಲ್ಲ. ಏಕೆಂದರೆ, ಅದರ ಬಾಲಬಡುಕ ರಾಷ್ಟ್ರಗಳು ಅನೇಕವಿವೆ. ಆದರೆ ಕೆಂಪು ಚೀನಾ ಮಾಡಿದ್ದು ಮಾತ್ರ ಅಮಾನವತೆ. ಬಣ್ಣದ ಕನ್ನಡಕದ ದೃಷ್ಟಿಯಿದು. ಅಣ್ವಸ್ತ್ರ ಸ್ಫೋಟ ಎಲ್ಲಿಯೇ ನಡೆಯಲಿ, ಯಾರೇ ನಡೆಸಲಿ, ಅದು ಗಂಡಾಂತರಕಾರಿ—ಇದು ಭಾರತದ ಖಚಿತಾಭಿಪ್ರಾಯ. ಅಣ್ವಸ್ತ್ರವೊಂದು ಪಂಜು ಇದ್ದಂತೆ—ಅದನ್ನು ಹೊಂದಿದ ರಾಷ್ಟ್ರಗಳು ಕೋತಿಗಳಂತೆ. ಕೈಯಲ್ಲಿ ಪಂಜು ಹಿಡಿದ ಕೋತಿ ಯಾವ ಸಮಯ ಯಾರ ಮನೆಗೆ ಬೆಂಕಿ ಇಟ್ಟೀತೆಂದು ಹೇಳುವುದು ಯಾರಿಗೆ ಸಾಧ್ಯ?— ಇದು ಹಿಂದೊಮ್ಮೆ ರಾಜಾಜಿ, ಕಾಂಗ್ರೆಸ್ಸಿನಲ್ಲಿರುವಾಗ ಅಂದಿದ್ದ ಮಾತು. ಇಂದು ರಾಜಾಜಿ ಸ್ವತಂತ್ರ ಪಕ್ಷದ ನಾಯಕರಾಗಿದ್ದಾರೆ. ದ್ರಾವಿಡ ಮುನ್ನೇತ್ರ ಕಜಗಂ ಮದ್ರಾಸದಲ್ಲಿ ಮುಂದಿನ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಬೇಕೆಂದು ವಾದಿಸುತ್ತಾರೆ— ಅಂತೂ ಏನೋ ಒಂದು ಅನ್ನುತ್ತಾ ಇರುತ್ತಾರೆ. ಆದರೆ, ಅಣ್ವಸ್ತ್ರಗಳ ಮಟ್ಟಿಗೆ ಅವರಂದಿದ್ದ ಉಪಮೆ ತ್ರಿಕಾಲ ಸತ್ಯ.

ಕೆಂಪು ಚೀನಾದ ಬಾಂಬ್ ಸ್ಫೋಟದಿಂದ ಸಂತುಷ್ಟವಾದ ರಾಷ್ಟ್ರವೊಂದಿದ್ದರೆ ಅದು ಪಾಕಿಸ್ತಾನ. ಸ್ಫೋಟವನ್ನು ಸ್ವಾಗತಿಸಲೂ ಇಲ್ಲ; ನಿರಾಕರಿಸಲೂ ಇಲ್ಲ ಅಂದರೆ ಯುವಕ—ಯುವತಿಯರ ಮೊದಲ ದೃಷ್ಟಿ ಪ್ರಣಯವನ್ನು ಸ್ವಾಗತಿಸಲೂ ಇಲ್ಲ; ನಿರಾಕರಿಸಲೂ ಇಲ್ಲವೆಂಬಂತೆ. ಏಕೆಂದರೆ, ನನೆಗುದಿಗೆ ಬಿದ್ದ ಪಾಕಿಸ್ಥಾನಕ್ಕೆ ಏನು ಮಾಡಬೇಕೆಂಬುದೀಗ ಅರ್ಥವಾಗುತ್ತಿಲ್ಲ—ಅಥವಾ ಕರ್ತವ್ಯವನ್ನು ಅರ್ಥಮಾಡಿಕೊಂಡ ಉದಾಹರಣೆಗಳೇ ಪಾಕ್‌ರಾಜಕಾರಣದ ಇತಿಹಾಸದಲ್ಲಿ ಇಲ್ಲವೆಂದರೂ ತಪ್ಪಾಗಲಾರದು. ಅಮೆರಿಕದ ಬಾಲ ಹಿಡಿದವರು ನೂರಾರು ಜನವಿರುವಾಗ, ತಾನೂ ಅವರಲ್ಲಿ ಒಬ್ಬನಾಗುತ್ತೇನೆಯೇ ಹೊರತು ತನ್ನ ಸ್ಥಾನಮಾನಗಳಿಗೆ ಬೆಲೆ ದೊರೆಯುವುದಿಲ್ಲ; ಅವುಗಳ ವಿಕಾಸಕ್ಕೆ ಆಸ್ಪದವಿಲ್ಲ; ಆದರೆ, ಕೆಂಪು ಚೀನಾದ ಬಾಲ ಹಿಡಿದರೆ, ತಾನದರ ಪ್ರಥಮ ಶಿಷ್ಯನಾಗುತ್ತೇನೆ— ಎಂಬುದು ಪಾಕ್ ಭುಟ್ಟೋರ ವಿಚಾರಧಾರೆ. ಆದರೆ, ಕೆಂಪು ಚೀನಾದ ಸಹಜ ಸ್ವರೂಪ ದರ್ಶನವನ್ನು ಅವರು ಪರಿಪೂರ್ಣ ಮಾಡಿಕೊಂಡಿಲ್ಲದಿರುವುದರಿಂದಲೋ ಏನೋ, ತುಸು ಮೇಲೆ ಕೆಳಗೆ ನೋಡುತ್ತಾರೆ. ಇರುವ ಗಂಡನನ್ನು ಬಿಟ್ಟು ಹೊಸ ಗಂಡನ ಕೈಹಿಡಿಯುವಾಗಿನ ಪಾಶ್ಚಾತ್ಯ ನಾಗರಿಕ ಸುಸಂಸ್ಕೃತ ಮಹಿಳೆಯಂತಾಗಿದೆ ಅವರ ಮನೋವೃತ್ತಿ.

ಹಾಗಿದ್ದರೂ ರಾಜಕೀಯ ವಲಯದಲ್ಲಿ ಚೀನಾದ ಈ ಬಾಂಬು ಸ್ಫೋಟ ತೃಪ್ತಿಯ ನೆಲೆಯನ್ನೇ ತಂದಿತು: ಅಣುಶಕ್ತಿ ರಾಷ್ಟ್ರಕೂಟದಲ್ಲಿ ಚೀನಾದ ಸ್ಥಾನ ಇದರಿಂದ ಬಲಗೊಳ್ಳುವುದೆಂದು ತಿಳಿಯಲಾಯಿತು. ಅದ್ಭುತ ಸಾಧನೆಯೆಂದು ಪಾಕ್ ಅಣುಶಕ್ತಿ ಆಯೋಗದ ಅಧ್ಯಕ್ಷ ಪ್ರೊ| ಉಸ್ಮಾನಿಯವರು ಅಂದು ಸುಮ್ಮಗಾದರು.

ಕೆಂಪು ಚೀನಾದ ಮೂರನೆಯ ಬಾಂಬು-ಭಾರತೀಯರಿಗಿನ್ನೊಂದು ಸ್ಪಷ್ಟವಾದ ಎಚ್ಚರಿಕೆಯೆಂದು ಹೇಳುವವರೂ ಕೆಲವರಿದ್ದಾರೆ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಸೋವಿಯತ್ತನ್ನುಳಿದರೆ, ಚೀನಾ ಮತ್ತು ಭಾರತಗಳೇ ಏಷ್ಯಾದ ಬೃಹತ್ ರಾಷ್ಟ್ರಗಳು. ಇವುಗಳ ನಡುವೆ ನಾಯಕತ್ವದ ಬಗ್ಗೆ ಪೈಪೋಟಿ ಹುಟ್ಟುವುದು ಸಹಜ. ಏಕಾಕಿಯಾಗಿ ಕೆಂಪುಚೀನಾ ಭಾರತದ ತಲೆತಗ್ಗಿಸಿ ಮೆಟ್ಟುವ ಹವಣಿಕೆಯಲ್ಲಿದೆ. ಮಾತು—ಒಡಂಬಡಿಕೆ, ನ್ಯಾಯ, ಧರ್ಮ ಇತ್ಯಾದಿ ಇತ್ಯಾದಿಗಳನ್ನು ಗಾಳಿಗೆ ತೂರಿ ಅದು ದೈತ್ಯನಂತೆ ವರ್ತಿಸುವುದಕ್ಕೆ ಇದೇ ಕಾರಣ. ಭಾರತದ ಪ್ರತ್ಯಕ್ಷ ಪರೋಕ್ಷ ಶತ್ರುಗಳು ಕೆಂಪು ಚೀನೀ ಘಟಸರ್ಪದ ಬಾಲವನ್ನು ತೀರ ತುದಿಯಲ್ಲಿ ಬೆಳಿಂದ ಮುಟ್ಟುವುದಕ್ಕೂ ತೊಡಗಿದ್ದಾರೆ.

ಇಂದು ದೇಶದ ಮುಂದಿರುವ ದೊಡ್ಡ ಪ್ರಶ್ನೆಯೆಂದರೆ, ಸಂರಕ್ಷಣೆ ಮತ್ತು ಆಂತರಿಕ ಅಭಿವೃದ್ಧಿ. ಬಾಹ್ಯ ಒತ್ತಡಗಳಿಂದಾಗಿ ನಮ್ಮ ಮೊದಲ ಕರ್ತವ್ಯ ಕಠಿನತರವಾಗಿದೆಯಾದರೆ, ಆಂತರಿಕ ಅಶಾಂತಿಯಿಂದ ಎರಡನೆಯದೂ ಕ್ಲಿಷ್ಟವೆನಿಸಿದೆ. ಕೆಂಪು ಚೀನಾ ನೇಫಾ ಹಾಗೂ ಉತ್ತರದ ಗಡಿಯಲ್ಲಿ ದೊಂಬರಾಟವಾಡಿ ಕಂಗೆಡಿಸಿದ ಎರಡೇ ವರ್ಷಗಳಲ್ಲಿ ಪಾಕಿಸ್ತಾನ ಪಶ್ಚಿಮದಲ್ಲಿ ಆಕ್ರಮಣ ಮಾಡಿತು. ಸಂಪೂರ್ಣ ಸೋತು ಹೋದರೂ ಬಾಲವೆತ್ತಿ ಹಾರಾಡತೊಡಗಿದೆ. ರಾಜಕೀಯ ಸ್ವಾರ್ಥಲೋಲುಪರು ಅದಕ್ಕೇ ಒತ್ತಾಸೆ ನೀಡುತಿದ್ದಾರೆ. ಹಾಗಾಗಿ ಭಾರತದ ಸಂರಕ್ಷಣೆಯ ಹೊಣೆಗಾರಿಕೆ ತೀರ ಹೆಚ್ಚಿದೆ; ಕಗ್ಗಂಟೂ ಆಗಿದೆ.

ಕೆಂಪು ಚೀನಾವು ಭಾರತವನ್ನು ಆಕ್ರಮಿಸಿದರೆ, ಅಮೆರಿಕೆಯು ನೆರವು ನೀಡುವುದು—ಎಂಬುದನ್ನು ನಂಬಬಹುದು. ಆದರೆ, ವಿದೇಶೀ ನೆರವನ್ನೇ ನಂಬುತ್ತ ನಾವು ಕುಳಿತರೆ ಗಂಡಾಂತರ ತಪ್ಪಿದ್ದಲ್ಲ. ನಾವು ಮುಂದುವರಿಯುವಾಗ ಪರದೇಶೀಯರು ನಮ್ಮ ಕೈ ಹಿಡಿಯಬಹುದೇ ಹೊರತು, ಅವರನ್ನೇ ನಂಬಿ ಕುಳಿತರೆ ನಡುನೀರಲ್ಲಿಯೇ ಕೈಬಿಡಬಹುದು. ಕೆಂಪು ಚೀನಾ ನಮ್ಮ ಮೇಲೆ ದಂಡೆತ್ತಿ ಬಂದಾಗ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ನೀಡಿ ಎಂದು ಅಮೆರಿಕೆಯೂ ವಾದಮಾಡಲಾರದೆಂದು ಏನು ವಿಶ್ವಾಸ? ಹಾಗಾಗಿ ನಮ್ಮ ಕಾಲ ಮೇಲೆಯೇ ನಾವು ನಿಲ್ಲಲೇಬೇಕು. ದಕ್ಕಾಗಿ ಆಂತರಿಕವಾಗಿ ನಾವು ಬಲಶಾಲಿಯಾಗಲೇಬೇಕು. ನಮ್ಮ "ಬೇಕು"ಗಳ ಸಂಕುಚಿತ ಪ್ರವೃತ್ತಿಯನ್ನು ಅದುಮಿ ಹಿಡಿದು ನಮ್ಮ ಸ್ವಾತಂತ್ರ್ಯ,ಸಾರ್ವಭೌಮತೆಯ ಸಂರಕ್ಷಣೆಯತ್ತ ಗಮನ ನೀಡಲೇಬೇಕು.

ಭಾರತವೂ ಅಣುಬಾಂಬನ್ನು ತಯಾರಿಸುವುದೆ?-ಇದಿಂದು ಬರಿಯ ಭಾರತೀಯರು ಮಾತ್ರವಲ್ಲ,ವಿದೇಶಿಯರೂ ಕೇಳುತ್ತಿರುವ ಪ್ರಶ್ನೆ. ಶಾಂತಿಪ್ರಿಯ ರಾಷ್ಟ್ರ ಭಾರತವು ಮಾರಕಾಸ್ತ್ರವನ್ನು ತಯಾರಿಸುವುದು ವಿದೇಶಿಗಳಿಗೆ ಸಮ್ಮತಿಯಿಲ್ಲ. ಅಣ್ವಸ್ತ್ರಗಳು ತಮ್ಮ ಗುತ್ತಿಗೆಯೆಂದು ತಿಳಿದುಕೊಂಡಿರುವ ಗತ್ತುಗಾರ ರಾಷ್ಟ್ರಗಳು ಬೇಡ; ನಾವಿದ್ದೇವೆ. ದೇಶದ ಒಳಗಡೆಯೂ ಬೇಕುಬೇಡಗಳು ತುಯ್ಯಲಾಡುತ್ತಿವೆ. ವಿದೇಶಿ ಪತ್ರಿಕಾ ಪ್ರತಿನಿಧಿಗಳಿಗೆ ಇದೊಂದು ಬಲವಾದ ಪ್ರಶ್ನೆ.

ಪಂ| ನೆಹರುರವರು ಭಾರತವು ಅಣುಶಕ್ತಿಯನ್ನು ಮಾನವ ಕಲ್ಯಾಣಕ್ಕಾಗಿಯೇ ಬಳಸುವುದೆಂದು ಸಾರಿದ್ದರು. ಸಾರಿದಂತೆ ನಡೆದೂ ಬಂದಿದ್ದರು. ಅವರ ಉತ್ತರಾಧಿಕಾರಿ ಲಾಲಬಹದೂರರೂ ಅದೇ ಪಡಿನೆಳಲಲ್ಲಿ ಮುಂದುವರಿದರು; ಜತೆಗೊಂದು ದನಿಗೂಡಿಸಿದರು; ಭಾರತವೂ ಸಂದರ್ಭ–ಸನ್ನಿವೇಶಗಳಿಂದ ದೂರವಾಗಲಾರದು. ಪರಿಸ್ಥಿತಿಯು ಹೇಗೆ ನಿಲ್ಲುವುದೆಂದು ನೋಡಬೇಕು. ಇಂದಿನ ಪ್ರಧಾನಿ ಇಂದಿರಾ ಗಾಂಧಿಯವರೂ ಇದೇ ನಿಲುಮೆಯನ್ನು ತಳೆದಿದ್ದಾರೆ. ಕಲ್ಯಾಣಕಾರಕ ಉದ್ದೇಶಗಳನ್ನೇ ಮುಂದಿಟ್ಟು ಭಾರತವು ಮುಂದುವರಿಯುವುದು. ಆದರೂ, ಸ್ವರಕ್ಷಣೆಯ ಮುಂದೆ ಇತರ ಎಲ್ಲ ಧರ್ಮಗಳೂ ಗೌಣ.

ಒಟ್ಟಿನಲ್ಲಿ ಹೀಗೆ ಹೇಳಬಹುದು. ಅಮೆರಿಕೆ ಮೊದಲಾದವರ ವಿದೇಶಿ ನೆರವು ಇಂದು ತೂಗುದೀಪವಾಗಿದೆ. ಉಯ್ಯಾಲಾಡುವ ವಿದೇಶೀ ಭರವಸೆಗಳನ್ನೇ ನಂಬಿ ಭಾರತವು ಕುಳಿತಿರುವುದು ಸಾಧ್ಯವಿಲ್ಲ. ಒಂದು ವಿದೇಶೀಯರ ಚದುರಂಗದ ದಾಳ ಮತ್ತೊಂದು ಕಡೆ ಶತ್ರುಗಳ ಪೀಡೆ, ಇನ್ನೊಂದು ಕಡೆ ದೇಶಿಯರ ಇಚ್ಛೆಗಳು ಒಂದಾಗಿ ಮುಪ್ಪುರಿಗೊಂಡಾಗ, ಲಾಲ ಬಹದೂರರು ಹೇಳಿದಂತೆ ಪರಿಸ್ಥಿತಿಯ ಒತ್ತಡವು ಹೆಚ್ಚಾದಾಗ ಭಾರತವೂ ಅಣುಬಾಂಬನ್ನು ತಯಾರಿಸಬೇಕಾದೀತು; ಸರ್ವನಾಶದಿಂದ ದೇಶವನ್ನುಳಿಸಲು ಸ್ವಲ್ಪ ನಾಶವನ್ನು ಮಾಡಲೇ ಬೇಕಾಗಬಹುದು.

—ರಾಶಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಪತಾಳ, ಎಂ.ಬಿ.ಬಿ.ಎಸ್.,

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಒಡಿಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

ದುಡಿಮೆಯ ಹವ್ಯಾಸವನ್ನು ತನ್ನ ಮಕ್ಕಳಿಗೆ ಹಚ್ಚುವ ತಂದೆತಾಯಿಂದಿರು ಕೋಟಿ ವಿಧಿಗಿಂಥಾ ಅಮೂಲ್ಯ ಸಂಪತ್ತನ್ನು ಅವರಿಗೆ ಒದಗಿಸಿಟ್ಟಂತೆ.

o o o o

ಜೇನು ನೊಣ ತಾನು ಕೆಲಸ ಮಾಡುತ್ತಿರುವಾಗಲೇ ಝೇಂಕಾರನಾದ ಮಾಡಿ ತನ್ನ ಕಾಯಕವನ್ನೇ ಆನಂದವನ್ನಾಗಿ ಪರಿವರ್ತಿಸಿಕೊಳ್ಳುತ್ತದೆ. ಮನುಷ್ಯನೂ ಹಾಗೆ ಮಾಡಿಕೊಳ್ಳಬೇಕು.

o o o o

ಇತರರಿಂದ ಸತ್ಯ ಅಪೇಕ್ಷಿಸುವವನು ತಾನು ಸತ್ಯನಿರತನಿರಬೇಕು; ಜಗತ್ತನ್ನು ಬದಲಾಯಿಸಬೇಕೆನ್ನುವವನು ತನ್ನನ್ನು ತಾನು ಬದಲಾಯಿಸಿಕೊಳ್ಳಬೇಕು.

ಶ್ರೀ ಚೈತನ್ಯ ಮಹಾಪ್ರಭು

(ಆರನೇ ಪುಟದಿಂದ)

ಒಡನೆ ಧಾವಿಸಿ ಅಲ್ಲಿ ನಿಂತಿದ್ದ ಈರ್ವ ಚೋರರನ್ನು ಅಪ್ಪಿಕೊಂಡನು. ಅವರ ಚಿತ್ತವು ಬೆಣ್ಣೆಯೋಪಾದಿ ಕರಗಿ, ಅವರಿಬ್ಬರೂ ಚೈತನ್ಯನ ಪಾದದಡಿ ಬಿದ್ದು ಕ್ಷಮೆಯನ್ನು ಯಾಚಿಸಿದರು. ಅದು ಕಾರಣ ಆತನ ಶತ್ರುಗಳು ಯಾವ ಕಂಚೇಷ್ಟೆಗೂ ಲಾಭದೊರಕಲಿಲ್ಲ ಚೈತನ್ಯ ಪ್ರಭುವಿನಲ್ಲಿ ದಿನ ಹೋಗುತ್ತಾ ವೈರಾಗ್ಯವು ಏರೇರಿ ಹೋಯಿತು. ಆಗಾಗ್ಗೆ ಶ್ರೀಕೃಷ್ಣನ ನಾಮ ಹಾಡಿ ಮೂರ್ಛಿತನಾಗುತ್ತಿದ್ದನು. ಭೌತಿಕ ಸುಖಗಳನ್ನೆಲ್ಲಾ ಸಂಪೂರ್ಣ ತ್ಯಜಿಸಿಬಿಟ್ಟನು. ಕೇವಲ ಭಿಕ್ಷುಕನಾಗಿ ಹರಕು ವಸ್ತ್ರಗಳನ್ನು ಧರಿಸಿದನು, ಮನೆ ಬಿಟ್ಟು ವೃಂದಾವನಕ್ಕೆ ಹೋಗಿ ವಾಸಿಸುವ ಯೋಚನೆ ಮಾಡಿದನು. ತಾಯಿಯು ಬಹಳ ವ್ಯಸನಪಟ್ಟಳು. ತನಗೋಸ್ಕರ ಮಾತ್ರವಲ್ಲ ಸಮಸ್ತ ಮಾನವರ ಸುಖಕ್ಕಾಗಿ ತಾನು ಮನೆ ಬಿಡುವೆನೆಂದು ತಾಯಿಗೆ ಸಂತೈಸಿಸಿದನು. ಬಹಳ ಹೊತ್ತಿನ ವರೆಗೆ ವಾದ ನಡೆಸಿದ ಮೇಲೆ ಆ ಜ್ಞಾನಿ ಮಾತೆಯು ಸಂತೋಷದಿಂದ ತನ್ನ ಸಮ್ಮತವನ್ನಿತ್ತಳು. ಆ ಸಮ್ಮತ ಲಭಿಸಿದಾಗ ಆತನು ದಿವ್ಯ ರೂಪದಿಂದ ಪ್ರಕಾಶಿಸಿದನು; ತಾಯಿಯ ಪಾದದಡಿಗೆ ಬಿದ್ದು ಅವಳೇ ತನ್ನ ದೇವತೆಯು ಎಂದು ಗಟ್ಟಿಯಾಗಿ ಹರಿಭಜನೆ ಮಾಡಿದನು.

ಅನಂತರ ತನ್ನ ಪ್ರಾಣ ಪ್ರಿಯೆಯನ್ನು ಕರೆದು ಇದೇ ವಿಷಯವನ್ನು ತಿಳಿಸಿದನು, ಅವಳು ಮೊದಲು ಕಂಗಾಲಾಗಿ ಕಣ್ಣೀರು ಸುರಿಸಿದಳು. ಅನಂತರ ಬಹಳ ಹೊತ್ತಿನ ತನಕ ವಾದ ನಡೆಸಿದಾಗ ಆ ಜ್ಞಾನಿ ಪತ್ನಿಯು ತನ್ನ ಸಮ್ಮತವನ್ನು ಕೊಟ್ಟಳು. ಮಧ್ಯ ರಾತ್ರಿ ಚೈತನ್ಯನು ಶಯ್ಯಾಗೃಹದಲ್ಲಿ ಪತ್ನಿಯೊಂದಿಗಿದ್ದು ತನ್ನಿಂದ ಪತ್ನಿಗೂ, ಮಾತೆಗೂ ಆಗುವ ವಿರಹವನ್ನು ಚಿಂತಿಸಿದನು. ಈತನು ಕೃಪಾ ಸಾಗರನೆನ್ನಬಹುದು. ಪತ್ನಿಗೆ ನಿದ್ರೆ ಬಂದಾಗ, ತನ್ನ ಸ್ಥಾನದಲ್ಲಿ ಒಂದು ತಲೆ ದಿಂಬಿರಿಸಿ, ಕೌಪೀನ ವಸ್ತ್ರಧಾರಿಯಾಗಿ ತಾಯಿಯು ನಿದ್ರಿಸಿರುವ ಕೋಣೆಗೆ ಬಂದು, ಅವಳ ಪಾದಗಳನ್ನು ಮುಟ್ಟಿ ನಮಸ್ಕರಿಸಿ, ಅವಳ ನಿದ್ರೆಯನ್ನು ಭಂಗ ಮಾಡದೇ, ಪತ್ನಿಯ ಬಳಿ ಮತ್ತೆ ಹೋಗಿ ಅವಳ ಮುಖವನ್ನು ಬಹು ಹೊತ್ತು ಅವಲೋಕನ ಮಾಡಿ, ಅವಳ ಕೈಗಳ ಮೇಲೆ ಮುದ್ದಿಟ್ಟು, ಬಾಗಿಲನ್ನು ತೆರೆದು, ಅಪರ ರಾತ್ರಿ ವೇಳೆ ಗೃಹ ತ್ಯಾಗ ಮಾಡಿ ಸಂಪೂರ್ಣ ಅವಧೂತ ಸನ್ಯಾಸಿಯಾದನು. ಹಿಂದಿನ ಭೌತಿಕ ಕರ್ಮಗಳನ್ನೆಲ್ಲಾ ಮರೆತು ಬಿಟ್ಟನು.

ಹೊರಗೆ ಬಂದವನೇ, ಗಂಗಾತೀರಕ್ಕೆ ಹೋಗಿ ಅಲ್ಲಿ ಸನ್ಯಾಸಿಯ ಹಾಗೆ ಮುಂಡಿಸಿದ್ದ ತನ್ನ ಗುರು ಕೇಶವಭಾರತಿಯರ ಪಾದದಡಿ ಬಿದ್ದನು. ಆ ಗುರುವಿಗೆ ಇವನ ದರ್ಶನದಿಂದ ಪರಮಾತ್ಮ ಶ್ರೀಕೃಷ್ಣನ ದರ್ಶನವಾದಂತಾಯಿತು. ಗುರುವನ್ನು ಕುರಿತು 'ನನ್ನನ್ನು ಸನ್ಯಾಸ ಮಾರ್ಗಕ್ಕೆ ತಂದು ಬಿಡು" ಎಂದನು. ಗುರುವು ಆತನ ಹೆಸರು ಬದಲಾಯಿಸಿ 'ನೀನು ಇಂದಿನಿಂದ ಸಂಪೂರ್ಣ ತ್ಯಾಗಿಯೂ, ಸನ್ಯಾಸಿಯೂ ಆದೆ—ಇನ್ನು ನಿನ್ನನ್ನು ಸಕಲ ದೇವಭಕ್ತ ಹಿಂದುಗಳು ಶ್ರೀಕೃಷ್ಣ ! ಚೈತನ್ಯ ಮಹಾಪ್ರಭು ಎನ್ನುವರು. ನೀನು ಆ ನಾಮದಿಂದ ಬೆಳಗಿ ಪರಮಾತ್ಮನಲ್ಲಿ ಒಂದಾಗೂಡು' ಎಂದು ಹರಸಿದರು—

ಚೈತನ್ಯ ಪ್ರಭುತ್ವ ಸನ್ಯಾಸಿಯಾದ ವಾರ್ತೆಯು ಇಡೀ ವಂಗದಲ್ಲಿ ಹಬ್ಬಿತು. ಹಲವು ಶಿಷ್ಯರು ಆತನಿದ್ದಲ್ಲಿ ಓಡಿಬಂದು ಆತನನ್ನು ಪುನಃ ತನ್ನ ಊರಿಗೆ ಬರಬೇಕೆಂದು ಪ್ರಾರ್ಥಿಸಿಕೊಂಡರು. ನಿತ್ಯಾನಂದ ಮತ್ತು ನಾಲ್ವರು ಇತರ ಶಿಷ್ಯರು ತಾವೂ ಆವನನ್ನು ಹಿಂಬಾಲಿಸಿದರು. ಇತರರನ್ನು ಸಂತೈಸಿ ಹಿಂದೆ ಕಳುಹಿಸಿದನು. ತನ್ನ ದಿವ್ಯಮಾತೆಯ ಅಪೇಕ್ಷೆಯಂತೆ ಪುರಿ ನಗರಕ್ಕೆ ಹೋಗಿ ತನ್ನ ಉಳಿದ ಜೀವಮಾನವನ್ನು ಧ್ಯಾನದಲ್ಲಿ ಅಲ್ಲೇ ಕಳೆದನು.

ಊರಿಗೆ ಹೋದವನು ಜಗನ್ನಾಥಸ್ವಾಮಿಯು ಇರುವ ಗರ್ಭಗೃಹವನ್ನು ಹೊಕ್ಕಗು ದೇಗುಲದ ಅರ್ಚಕರು ಬಹಳವಾಗಿ ಆಕ್ಷೇಪಿಸಿದರು. ಆಗ ಅಲ್ಲಿದ್ದ ವಾಸುದೇವ ಸಾರ್ವಭೌಮನೆಂಬ ಸನ್ಯಾಸಿಯು ತನ್ನ ಹಳೆಯ ಶಿಷ್ಯನ ಪರಿಚಯ ಹಿಡಿದು ಚೈತನ್ಯನನ್ನು ತನ್ನ ಆಶ್ರಮಕ್ಕೆ ಕರೆತಂದನು. ಕೆಲವು ದಿನಗಳೊಳಗೆ ವಾಸುದೇವ ಸಾರ್ವಭೌಮನೂ ಚೈತನ್ಯನ ಶಿಷ್ಯನಾದನು. ಗುರುವು ಶಿಷ್ಯನ ಶಿಷ್ಯನಾದನು. ಇದನ್ನು ಶುದ್ಧ ನಿರಹಂಕಾರವೆನ್ನುವರು. ಇದಕ್ಕೆ ಅಪಾರವಾದ ಆತ್ಮ ಬಲವು ಅತ್ಯಗತ್ಯವು. ಶ್ರೀ ಕೃಷ್ಣ ಪರಮಾತ್ಮನೇ ಮಾನವ ರೂಪದಲ್ಲಿ ಬಂದು ಪುರಿಯಲ್ಲಿ ನೆಲೆಮಾಡಿರುವನೆಂದು ತಿಳಿದು ಸಹಸ್ರಾರು ಯಾತ್ರಿಕರು ಚೈತನ್ಯನ ದರ್ಶನ ಮಾಡಿ ಕೃತಾರ್ಥರಾದರು. ಅದ್ವೈತಿಗಳೂ, ವಿಶಿಷ್ಟಾದ್ವೈತಿಗಳೂ, ವೈಷ್ಣವರೂ ಎಲ್ಲರೂ ಬಂದು ಆತನ ಆಶೀರ್ವಾದವನ್ನು ಪಡೆದರು. ಬುದ್ಧಮತದವರು ಕೂಡ ಬಂದು ಆತನ ಆಶೀರ್ವಾದಕ್ಕೆ ಪಾತ್ರರಾದರು. ಆತನ ವ್ಯಕ್ತಿತ್ವಕ್ಕೆ ದೇವಸಮಾನನೆಂದು ಹಿಂದುಗಳು ಭಾವಿಸಿದರು. ಆತನ ಹಳೆಯ ಶತ್ರುಗಳಲ್ಲಿ ಅನೇಕರು ಆತನನ್ನು ಶ್ಲಾಘಿಸಲಾರಂಭಿಸಿ, ಆತನಲ್ಲಿ ಬಂದು ಕ್ಷಮೆಯನ್ನು ಯಾಚಿಸಿದರು. ೧೫೩೩ರ ಒಂದಾನೊಂದು ಶುಭದಿನದಲ್ಲಿ ತನ್ನ ಧರ್ಮಕರ್ಮವನ್ನು ಅಂತ್ಯಗೊಳಿಸಿ ಶ್ರೀಕೃಷ್ಣ ಚೈತನ್ಯ ಮಹಾಪ್ರಭುಗಳು ಪರಮಾತ್ಮನಲ್ಲಿ ಅಧೀನರಾದರು ಚೈತನ್ಯ ಮಹಾಪ್ರಭುಗಳ ಪೂಜನವನ್ನು ಈಗಲೂ ಭರತಖಂಡದಲ್ಲಿ ಹಲವರು ಮಾಡಿ ಅವರು ಪರಮಾತ್ಮನ ಅವತಾರವೆಂದೇ ಭಾವಿಸುವರು. ಅವರ ಆತ್ಮವು ಪರಮಾತ್ಮನಲ್ಲಿ ಐಕ್ಯವಾಗಿದೆ ಎಂಬುದರಲ್ಲಿ ಎಳ್ಳಿನಷ್ಟು ಸಂದೇಹವಿಲ್ಲ.

—

ವಿಜ್ಞಾನ

ಮಾನವ ಹೃದಯವನ್ನು ಬದಲಾಯಿಸಬಲ್ಲೆವು

ಪೊಕ್ಟೋರ್ಸ್ ವಿಶ್ವವಿದ್ಯಾಲಯದ ಪ್ರಸಿದ್ಧ ವೈದ್ಯರು ಪತ್ರಿಕಾ ಸಂಪಾದಕರ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

ಪ್ರಶ್ನೆ: "ಹೃದಯ ಶಸ್ತ್ರ ಚಿಕಿತ್ಸೆಯ ವಲಯದಲ್ಲಿ ಯಾವ ಅತ್ಯಾಧುನಿಕ ಕಾರ್ಯಭಾರಗಳನ್ನು ನೀವು ಈಗ ಸಾಧಿಸುತ್ತಿದ್ದೀರಿ?"

ಉತ್ತರ: "ಗೋಳಾಕಾರದ ಕೃತಕ ಕವಾಟಗಳಿಂದ ರೋಗಗ್ರಸ್ತವಾದ ಹೃದಯ ಕವಾಟವನ್ನು ಬದಲಾಯಿಸುವುದರಲ್ಲಿ ಈಗಾಗಲೇ ನಾವು ಸಫಲರಾಗಿದ್ದೇವೆ. ಈಗ ನಾವು ಎರಡು ಅತ್ಯಂತ ಮುಖ್ಯ ವಿಷಯಗಳ ಕುರಿತು ಕಾರ್ಯ ತತ್ಪರರಾಗಿದ್ದೇವೆ: (೧) ರೋಗಿಯ ಶರೀರಕ್ಕೇ ಹೊಲಿಯಲಾಗುವ ಕೃತಕ ಹೃದಯದ ಬದಲಾವಣೆ, (೨) ಆರೋಗ್ಯವಂತ ವ್ಯಕ್ತಿಯ ಶರೀರದಿಂದ ರೋಗಗ್ರಸ್ತ ವ್ಯಕ್ತಿಗೆ ಹೃದಯವನ್ನು ಬದಲಾಯಿಸುವ ಕ್ರಮ.

"ಕೃತಕ ಹೃದಯವು ದೀರ್ಘಕಾಲದ ಸಮಸ್ಯೆ. ಅದಕ್ಕಾಗಿ ಜಲಶಕ್ತಿ ಚಲನ ಶಾಸ್ತ್ರದ ಮತ್ತು ವಿದ್ಯುನ್ಮಾಪೀ (ಎಲೆಕ್ಟ್ರಾನಿಕ್ಸ್) ವಿಜ್ಞಾನ ಶಾಖೆಗಳ ತಾಂತ್ರಿಕರು ಡಾಕ್ಟರರೊಡನೆ ಸಹಕರಿಸ ಬೇಕಾಗುತ್ತದೆ. ಈಗಾಗಲೇ ಈ ಕ್ಷೇತ್ರದಲ್ಲಿ ಸ್ವಲ್ಪ ಪ್ರಗತಿಯನ್ನು ಸಾಧಿಸಲಾಗಿದೆ. ರೋಗಿಯ ಶರೀರದ ಬಳಿಯ ಪೂರಕ ಯಂತ್ರ ರಚನೆಯ ಪ್ರಥಮ ಘಟ್ಟದಲ್ಲಿ ಈಗ ನಾವಿದ್ದೇವೆ.

ಇನ್ನೊಬ್ಬ ವ್ಯಕ್ತಿಯ ಹೃದಯದ ವರ್ಗಾವಣೆಯ ಎರಡನೆಯ ಕಾರ್ಯಭಾರವು ಅತ್ಯಂತ ಜಟಿಲ ಸಮಸ್ಯೆ. ಅದಕ್ಕಾಗಿ ಅತ್ಯುತ್ತಮ ಶಸ್ತ್ರ ಚಿಕಿತ್ಸೆಯೂ, ಸಹಕಾರಿ ತಾಂತ್ರಿಕ ವಿಧಾನವೂ ಬೇಕು. ಇಷ್ಟೇ ಅಲ್ಲ. ಇತರ ಅನೇಕ ಸಮಸ್ಯೆಗಳ ಬಗ್ಗೆ ಪ್ರಾವೀಣ್ಯವೂ ಅಗತ್ಯ. ಉದಾಹರಣೆಗೆ ಸ್ಥಳಾಂತರಿಸಲಾದ ಹೃದಯವು ಹೇಗೆ ಕೆಲಸ ಮಾಡಲು ಸಮರ್ಥವಾಗುವುದೆಂಬುದನ್ನು ಅರಿಯ ಬೇಕಾಗುತ್ತದೆ. ಈ ಸಂದರ್ಭದಲ್ಲಿ ಪ್ರಾಯೋಗಿಕ ರೋಗ ನಿಧಾನ ಶಾಸ್ತ್ರ ಸಂಸ್ಥೆಯ ಡಾ| ದ. ನಾನ್ ವಿಯೆಡರ್ಮನ್ ರವರ ಸಹಕಾರ ನಮಗೆ ಲಭಿಸಿದೆ. ಇಲ್ಲಿಯೂ ನಾವಿನ್ನೂ ಮೊದಲನೆಯ ಘಟ್ಟದಲ್ಲಿದ್ದೇವೆ. ನಮ್ಮ ಪ್ರಯೋಗ ಶಾಲೆಗಳಲ್ಲಿ ನಾವು ಈಗಾಗಲೇ ನಾಯಿಗಳ ಹೃದಯಗಳನ್ನು ತೆಗೆದು, ಪುನಃ ಅವುಗಳನ್ನು ಆಯಾ ಸ್ಥಳದಲ್ಲೇ ಸ್ಥಾಪಿಸಿದ್ದೇವೆ. ಎರಡನೆಯ ಘಟ್ಟದಲ್ಲಿ ಒಂದು ನಾಯಿಯ ಹೃದಯವನ್ನು ಇನ್ನೊಂದರ ಶರೀರದಲ್ಲಿ ಜೋಡಿಸುವೆವು. ಮೊದಲನೆಯ ಘಟ್ಟವು ಯಶಸ್ವಿಯಾಗಿದೆ. ನಾಯಿಗಳು ಜೀವಂತವಾಗಿದ್ದು ಒಳ್ಳೆಯ ಪ್ರಗತಿ ಸಾಧಿಸಿವೆ."

ಪ್ರಶ್ನೆ: "ಮನುಷ್ಯರಲ್ಲಿ ಉಂಟಾಗುವ ಹೃದ್ರೋಗಗಳ ಚಿಕಿತ್ಸೆಗೆ ಇದರ ಮಹತ್ವ ಎಷ್ಟು ಮಟ್ಟಿಗೆ ಇದೆ?"

ಉತ್ತರ: ದೇಹದ ಹೊರಗಡೆ ಇರುವ ಕೃತಕ ಹೃದಯದ ಮೂಲಕ ಅನೇಕ ಗಂಟೆಗಳ ವರೆಗೆ ರೋಗಿಯ ರಕ್ತ ಪರಿಚಲನೆಯನ್ನು ಮುಂದುವರಿಸುತ್ತಿರುವುದು ಈಗ ಸಾಧ್ಯವಾಗಿದೆ ಇನ್ನು ಮುಂದೆ ನಾವು ರೋಗಗ್ರಸ್ತ ಶರೀರಕ್ಕೆ ಬದಲಾಗಿ ಕೃತಕ ಹೃದಯವನ್ನು ಬಳಸುವುದು ಸಾಧ್ಯವೆಂಬ ಭರವಸೆ ನಮಗಿದೆ. ಆರೋಗ್ಯವಂತ ಹೃದಯವನ್ನು ಬಳಸುವ ಪ್ರಯತ್ನವೂ ಎರಡನೆಯ ಘಟ್ಟದಲ್ಲಿ ಸಫಲವಾಗಬಹುದು. ಆಕಸ್ಮಿಕಕ್ಕೆ ತುತ್ತಾದ ವ್ಯಕ್ತಿಯ ಶರೀರದಿಂದ ಆರೋಗ್ಯವಾದ ಹೃದ್ಯಕ್ತಿವನ್ನು ತೆಗೆದುಕೊಂಡು ಈ ಸ್ಥಳಾಂತರ ಸ್ಥಾಪನೆಯ ಕಾರ್ಯವನ್ನು ನಾವು ಮಾಡಬಯಸುತ್ತೇವೆ. ಆದೇ ನಮ್ಮ ಉದ್ದೇಶ. ಇದು ಪ್ರಾರಂಭ ಮಾತ್ರ. ಇಷ್ಟರಲ್ಲಿಯೇ ನಾವು ನಾಯಿಗಳ ಹೃದಯಗಳನ್ನು ಬದಲಾಯಿಸುವ ಪ್ರಯೋಗಗಳನ್ನು ಕೈಗೊಳ್ಳುವೆವು."

—

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H.P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(½ H.P. ಯಿಂದ 2. H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಸ್ಟೀಟರ್ ಸ್ಟಾರ್ಟರುಗಳು...........

ಭಾರತದ ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು.1.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.

ಮಾರಾಟ ಡಿಪೋ: – ಸಂತೆಕಟ್ಟೆ, ಉಡುಪಿ.

ವಿಜಯನಗರದ ಆದಿಶಕ್ತಿ-ವಿದ್ಯಾರಣ್ಯ

(ಐದನೇ ಪುಟದಿಂದ)

ಭವ ಅಭಿಮಾನಗಳ ಮೂಸೆಯಲ್ಲಿ ಹೊಸ ರಾಜ್ಯವಷ್ಟೇ ಏಕೆ ಹೊಸ ಲೋಕವೆಲ್ಲ ಸೃಷ್ಟವಾಗಿದ್ದರೂ ಅಚ್ಚರಿಪಡಬೇಕಾಗಿರಲಿಲ್ಲ.

ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದು ವಿದ್ಯಾರಣ್ಯರಿಗೆ ಅಕ್ಷರಶಃ ಒಪ್ಪುತ್ತದೆ. ಇತಿಹಾಸ ಸಂಶೋಧಕರಲ್ಲಿ ವಿದ್ಯಾರಣ್ಯರ ಜೀವನದ ಬಗ್ಗೆ ಭಿನ್ನಾಭಿಪ್ರಾಯವಿದೆ. ವಿಜಯನಗರ ರಾಜ್ಯದ ಸಂಸ್ಥಾಪಕ ವಿದ್ಯಾರಣ್ಯರೇ ಬೇರೆ ಮಾಧವರೇ ಬೇರೆ. ಮಾಧವರು ವಿದ್ಯಾರಣ್ಯರೇ ಎಂಬ ಅಂಶವನ್ನು ಎತ್ತಿ ಹಿಡಿದು ವಾದ-ಪ್ರತಿವಾದ ಮಾಡಿದ್ದಾರೆ. ಮಾಧವರೇ ವಿದ್ಯಾರಣ್ಯರು. ವಿದ್ಯಾರಣ್ಯರೇ ವಿಜಯನಗರದ ಸಂಸ್ಥಾಪಕರು ಎಂಬ ಸಂಗತಿ ದಾನ ಶಾಸನ, ಉದ್ಗ್ರಂಥ, ಸಂಪ್ರದಾಯ ಮೊದಲಾದುವುಗಳಿಂದ ಮತ್ತು ವಿಜಯನಗರದವರು ಶೃಂಗೇರಿಯ ಪೀಠದ ಬಗ್ಗೆ ಇಟ್ಟಿದ್ದ ಶ್ರದ್ಧೆ, ಭಕ್ತಿ, ಮೊದಲಾದುವುಗಳಿಂದ ತಿಳಿಯ ಬರುತ್ತದೆ.

ವಿದ್ಯಾರಣ್ಯರ ಉಜ್ವಲ ಪ್ರತಿಭೆಯನ್ನು ಪಂಚಯ ಮಾಡಿಕೊಳ್ಳಲು ನಂದೀ ತಿಮ್ಮಣ್ಣನ ಪಾರಿಜಾತಾಪಹರಣ, ರಾಜನಾಥನ 'ಅಚ್ಯುತ ರಾಯಾಭ್ಯುದಯ' ಮೊದಲಾದ ಗ್ರಂಥಗಳು ಸಹಕಾರಿಯಾಗಿವೆ. ಧರ್ಮ ಪ್ರಧಾನವಾದ ವಿಜಯನಗರ ರಾಜ್ಯ ಸ್ಥಾಪನೆಗೆ ವೀರರ ಕೈಯ ಖಡ್ಗಗಳು ಕಾರಣವಲ್ಲ. ವಿದ್ಯಾರಣ್ಯರ ಆತ್ಮಬಲ, ತಪೋಬಲಗಳು ಕಾರಣ.

ದಕ್ಷಿಣ ಭಾರತದ ಅಸಂಖ್ಯಾತ ಚಿಕ್ಕ ಪುಟ್ಟ ರಾಜ್ಯಗಳೂ ಮುಸಲ್ಮಾನ ದಾಳಿಯಿಂದ ಹೇಳ ಹೆಸರಿಲ್ಲದಂತೆ ಅಳಿದು ಹೋಗದೆ ಉಳಿಯುವಂತೆ ರಕ್ಷಿಸಲೂ, ಹಿಂದೂ ಧರ್ಮ ಸಂಗತಿಗಳ ಭವ್ಯತೆಯನ್ನು ಮತ್ತೆ ಮೆರೆಸಲು ವಿಧರ್ಮೀಯರ ಅಧರ್ಮವನ್ನು ತಡೆಗಟ್ಟಲು ವಿಜಯನಗರ ಸಾಮ್ರಾಜ್ಯ ವಿದ್ಯಾರಣ್ಯರ ಅನುಗ್ರಹದೊಂದಿಗೆ ಹರಿಹರರಾಯನ ಆಳ್ವಿಕೆಯಲ್ಲಿ ೧೩೩೬ರಲ್ಲಿ ಆರಂಭವಾಗುತ್ತದೆ.

ಒಂದನೆಯ ಹರಿಹರ, ಬುಕ್ಕರಾಯ ಪ್ರೌಢದೇವರಾಯ, ಶ್ರೀಕೃಷ್ಣದೇವರಾಯ ಮತ್ತು ರಾಮರಾಯ ಇವರು ವಿಜಯನಗರವನ್ನು ಆಳಿದ ಅರಸರಲ್ಲಿ ಮುಖ್ಯರಾದವರು ಸುಮಾರು ೨೩೦ ವರ್ಷಗಳಿಗೂ ಹೆಚ್ಚು ಕಾಲ ಭವ್ಯತೆಯಿಂದ, ದಕ್ಷಿಣ ಭಾರತದ ಕೀರ್ತಿ ಕಲಶದಂತೆ ಮೆರೆದ ವಿಜಯ ನಗರ ಸಾಮ್ರಾಜ್ಯ ೧೫೬೫ರಲ್ಲಿ ನಡೆದ ತಾಲಿಕೋಟೆ ಯುದ್ಧದಲ್ಲಿ ನೆಲಸಮವಾಗುತ್ತದೆ.

ವಿದ್ಯಾರಣ್ಯರು ತಮ್ಮ ಕಾಲ, ಆಯುಷ್ಯ, ತಪಶ್ಶಕ್ತಿಯನ್ನು ಧರ್ಮಸಾಮ್ರಾಜ್ಯ ಸ್ಥಾಪನೆಗೆ ವಿನಿಯೋಗಿಸುತ್ತಾರೆ. ಅವರು ಹಿರಿಯ ಬಾಳು ಹಿರಿಯ ವ್ಯಕ್ತಿತ್ವ. ಸುಮಾರು ೯೦ ವರ್ಷ ಕಾಲ ಬದುಕಿದ್ದ ವಿದ್ಯಾರಣ್ಯರು ತಮ್ಮ ಕನಸು ನನಸಾದುದನ್ನು ಕಣ್ಣಾರ ಕಂಡು ಆನಂದಿಸುತ್ತಾರೆ. ಹರಿಹರ ಮತ್ತು ಬುಕ್ಕರಾಯರಿಬ್ಬರಿಗೂ ಮಂತ್ರಿಗಳಾಗಿರುತ್ತಾರೆ. ಸಾಮ್ರಾಜ್ಯದ ಹಿತೈಷಿಗಳಾಗಿ ಉಳಿದಿರುತ್ತಾರೆ. ೧೩೮೬ರಲ್ಲಿ ಅವರು ಜೀವನ್ಮುಕ್ತರಾಗುತ್ತಾರೆ. ವಿದ್ಯಾರಣ್ಯರ ಸಮಾಧಿಯನ್ನು ಇಂದಿಗೂ ಹಂಪೆಯ ವಿರೂಪಾಕ್ಷೇಶ್ವರ ದೇವಾಲಯದ ಆವರಣದಲ್ಲಿ ಕಾಣಬಹುದಾಗಿದೆ.

ಭಾರತೀ ತೀರ್ಥರು ವಿದ್ಯಾರಣ್ಯರ ಮತ್ತೊಬ್ಬ ಗುರುಗಳು. ಗುರುಗಳ ಉಪದೇಶ, ಸಲಹೆಗಳು ವಿದ್ಯಾರಣ್ಯರ ಮನಸ್ಸಿನ ಮೇಲೆ ಬೀರಿದ ಪ್ರಭಾವ ವಿಶೇಷ. ಸಾಮಾಜಿಕ, ರಾಜಕೀಯ ಆರ್ಥಿಕ ಕ್ಷೇತ್ರದಲ್ಲಿ ಹೊಸ ಬಗೆಯ ಸಂಪ್ರದಾಯವನ್ನು ಬಳಕೆಗೆ ತಂದರು. ನಾಡಿಗೆ ಜನತೆಗೆ ಹೊಸ ದೃಷ್ಟಿಯನ್ನು ಕೊಟ್ಟು ತಾವೇ ಮೂಡಿಸಿದ ಹೊಸ ಪ್ರಭೆಯಿಂದ ಮನದ ಕತ್ತಲೆಯ ಕೋಣೆಯನ್ನು ಕಳೆದರೂ ಜಡತೆ, ಅಂಧತೆ, ಆಲಸ್ಯ, ಅಧೈರ್ಯದಿಂದ ಮೂಲೆ ಗುಂಪಾಗಿದ್ದ ಜನತೆಯನ್ನು ತಮ್ಮ ಸಿಂಹವಾಣಿಯಿಂದ ಬಡಿದೆಬ್ಬಿಸಿ ಹೊಸ ಸ್ಫೂರ್ತಿ, ಶಕ್ತಿಗಳನ್ನು ಮೂಡಿಸಿ ಅವರನ್ನು ಪುರುಷಸಿಂಹಗಳನ್ನಾಗಿ ಮಾಡಿದರು, ರಾಜ್ಯದಲ್ಲಿ ರಾಜ ಪ್ರಜೆಯ, ಧರ್ಮ — ಸಂಸ್ಕೃತಿ, ಸಂಪ್ರದಾಯಗಳ ಸಂಬಂಧವನ್ನೇ ಸ್ಪಷ್ಟವಾಗಿ ನಿರೂಪಿಸಿದರು. ವಿಜಯನಗರ ಸಾಮ್ರಾಜ್ಯ ಅವರ ದಕ್ಷ ಸಾಧನೆ. ಅಚಲ ಶ್ರದ್ಧೆಗಳಿಗೆ ಉತ್ತಮ ನಿದರ್ಶನ.

ಸಂಸ್ಕೃತ ಸಾಹಿತ್ಯದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿದ್ದ ವಿದ್ಯಾರಣ್ಯರು ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ 'ಸಂಗೀತ ಸಾರ' ಎಂಬ ಗ್ರಂಥವನ್ನು ರಚಿಸಿದರು. ವಿಜಯನಗರದಲ್ಲಿ ಬೆಳೆದ ಸಾಹಿತ್ಯ— ಮತ್ತೀಯ ಸಾಹಿತ್ಯಕ್ಕೆ ವಿದ್ಯಾರಣ್ಯರ ಹಿನ್ನೆಲೆ ಇದೆ. "ಸಂಗೀತ ಸುಧಾ" ಗ್ರಂಥದ ಕರ್ತೃ ಮಧುರೆಯ ರಘುನಾಥ ನಾಯಕ ತನ್ನ ಗ್ರಂಥದಲ್ಲಿ 'ಸಂಗೀತ ಸಾರ ಸಮವೇಕ್ಷ್ಯ ವಿದ್ಯಾರಣ್ಯ ಭವ ಶ್ರೀ ಓರಣ ಪ್ರಣೀತಂ' ಎಂದು ಹೇಳಿದ್ದಾನೆ. ವಿದ್ಯಾರಣ್ಯರ. ಸಂಗೀತ ಶಾಸ್ತ್ರದಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದಿದ್ದರು ಎಂಬುದಕ್ಕೆ ಅವರು ಹೇಳುವ ಆಲಾಪನಾಕ್ರಮ, ಇಡಪು, ಮುಕ್ತಾಯ, ಓರಣ, ಪುಕರಣೆ ಮುಂತಾದ ಸಂಗತಿಗಳ ಪ್ರಸ್ತಾಪವೇ ಆಧಾರವಾಗಿವೆ.

ಚೈತನ್ಯ ಪೂರ್ಣ ಬಾಳ್ವೆಯಿಂದ ನಾಡಿನ ಸ್ವರೂಪವನ್ನು ಬದಲಿಸಿದ ಮಹಾವ್ಯಕ್ತಿ ವಿದ್ಯಾರಣ್ಯರು. ಅವರ ಸ್ವಭಾವ—ಪ್ರಭಾವಗಳು ನಾಡಿನ ಜನಮನವನ್ನು ತೊಳೆದ ಗಂಗೆ ಯಮುನೆಯರು.

ಒಂದು ಬಾರಿ ತುಂಗಾ ನದಿಯಲ್ಲಿ ಮಿಂದು ವಿರೂಪಾಕ್ಷೇಶ್ವರ ದೇವಾಲಯದ ಕಡೆಗೆ ಬರುತ್ತಿದ್ದರು ವಿದ್ಯಾರಣ್ಯರು. ಒಂದು ಆಶ್ಚರ್ಯಕರ ಘಟನೆ ಅವರನ್ನು ದಿಗ್ಭ್ರಮೆಗೊಳಿಸಿತು. ಹಿಡಿಯಲು ಬಂದ ಬೇಟೆಯ ನಾಯಿಯನ್ನೇ ಬೆದರದೆ ಅಟ್ಟಿಸಿಕೊಂಡು ಹೋಯಿತಂತೆ ಒಂದು ಮೊಲ. ವಿದ್ಯಾರಣ್ಯರು ಅಚ್ಚರಿಗೊಂಡು "ಈ ನೆಲ ವೀರ ಭೂಮಿ, ಶತ್ರುವಿಗೇ ಏಕೆ-ಸಾವಿಗೂ ಅಂಜದಂತಹ ಭೂಮಿ" ಎಂದು ತಿಳಿದು ಅಲ್ಲಿಯೇ ವಿಜಯನಗರದ ಮೊದಲ ಶಿಲೆಯನ್ನು ನೆಡಿಸಿದರಂತೆ.

ನೂತನ ಸಾಮ್ರಾಜ್ಯ ಸ್ಥಾಪನೆಗೆ ಸನ್ನಾಹಕ್ಕೆ ಹಣವಾದರೂ ಎಲ್ಲಿಂದ ಬರಬೇಕು. ವಿದ್ಯಾರಣ್ಯರು ಭುವನೇಶ್ವರಿಯನ್ನು ಕುರಿತ ತಪಸ್ಸು ಮಾಡಿದರಂತೆ. ಅವರ ಭಕ್ತಿ ಭಾವಗಳಿಗೆ ಮೆಚ್ಚಿದ ಭುವನೇಶ್ವರಿ ಪ್ರತ್ಯಕ್ಷವಾಗಿ 'ನಿನ್ನ ಕೋರಿಕೆ ಏನು? ಮಾಧವ' ಎಂದಳಂತೆ. ವಿದ್ಯಾರಣ್ಯರು "ತಾಯಿ ನಾನು ದೊಡ್ಡ ಕೆಲಸಕ್ಕೆ ಕೈ ಹಾಕಿದ್ದೇನೆ ಅದನ್ನು ಮುಗಿಸಬೇಕು. ಹೊಸ ರಾಜ್ಯ ರಾಜಧಾನಿ ನಿರ್ಮಾಣಕ್ಕೆ ಹೊನ್ನು ಬೇಕು. ನಾನು ಅಪೇಕ್ಷಿಸಲಾದ ಅರಮನೆಗೆ ಹೊನ್ನಿನ ಮಳೆ ಸುರಿಸು" ಎಂದು ಪ್ರಾರ್ಥಿಸಿದರಂತೆ ತಾಯಿ ಮಗನ ಪ್ರಾರ್ಥನೆಗೆ ಸಂತೋಷಿಸಿ 'ತಥಾಸ್ತು' ಎಂದಳಂತೆ ಮುಂದೆ ವಿಜಯನಗರದಲ್ಲಿ ಹೊನ್ನಿನ ಮಳೆ ಸುರಿಯಿತು ಎಂದು ಹೇಳುತ್ತಾರೆ. ಆದರೆ ನಂಬುವುದಂತೂ ಕಷ್ಟ.

ವಿಜಯನಗರದಲ್ಲಿ ಹೊನ್ನಿನ ಮಳೆ ಸುರಿಯದೆ ಇರಬಹುದು, ಆದರೆ ವಿದ್ಯಾರಣ್ಯರು ಮಣ್ಣಿನ ನೆಲದಲ್ಲಿ ಹೊನ್ನಿನ ನಗರವನ್ನೂ ಸೃಷ್ಟಿಸಿದರು. ವಿಜಯನಗರ ಗುರಿಯ ನೆಲೆಯಾಗಿಯೇ ಮೆರೆದು ಮರೆಯಾಯಿತು. ತಮ್ಮ ಅಸದೃಶ ಸೇವೆ ಸಾಧನೆಗಳಿಂದ ವಿದ್ಯಾರಣ್ಯರು ವಿಜಯನಗರದ ಸ್ವರೂಪವನ್ನೇ ಬದಲಿಸಿದರು. ಅವರು ಮಾಡಿದ ತಪ್ಪನ್ನು ಅವರೊಬ್ಬರಿಗಾಗಿಯಲ್ಲ, ನಾಡಿಗಾಗಿ ಜನತೆಗಾಗಿ, ಧರ್ಮಕ್ಕಾಗಿ. ಇಂದು ಭವ್ಯ ವಿಜಯನಗರವೂ ಇಲ್ಲ. ತಪೋನಿಧಿ ವಿದ್ಯಾರಣ್ಯರು ಇಲ್ಲ, ಇಲ್ಲ ನಿಜ. ಆದರೆ ವಿದ್ಯಾರಣ್ಯ ಮತ್ತು ವಿಜಯನಗರ ಎಂಬ ಹೆಸರುಗಳು ಕನ್ನಡಿಗನ ಹೃದಯವನ್ನು ಅರಳಿಸುವ ಹೆಸರುಗಳು ಆದರ್ಶಸೇವೆಯ ಅನುಕರಣೀಯ ತಪೋಬಲದ ಸಂಕೇತ ವಿದ್ಯಾರಣ್ಯರು.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು: 126 ಬೆಲೆ: ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಗೋಪಾಲಕೃಷ್ಣ ಗೋಖಲೆ

(ಏಳನೇ ಪುಟದಿಂದ)

ಘೋಷಣೆಗಳಲ್ಲಿ ಘೋಷಿಸಲಾಗಿವೆ. ಗೋಖಲೆಯವರ ರಾಜಕೀಯವನ್ನು ಅಂತಃಶುದ್ಧಿಗೊಳಿಸಬೇಕೆಂಬ ನುಡಿಯನ್ನು ಗಾಂಧೀಜಿಯವರು ಆಗಾಗ್ಗೆ ನೆನಪು ಮಾಡಿಕೊಳ್ಳುತ್ತಿದ್ದರಲ್ಲದೇ ತಮ್ಮ ಪ್ರತಿನಿತ್ಯದ ಕಾರ್ಯಕ್ಕೆ ಹಿನ್ನೆಲೆಯಾಗಿಟ್ಟುಕೊಂಡಿದ್ದರು. ಗೋಖಲೆಯವರು ರಚನಾತ್ಮಕ ವಿಚಾರವೇತ್ತರೆಂಬುದನ್ನು ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯು ಸ್ಪಷ್ಟಪಡಿಸಿದೆ. ಅವರ ಲೇಖನಗಳು ಭಾಷಣಗಳು ಮತ್ತು ರಾಜಕೀಯ ಕಾರ್ಯಗಳನ್ನು ಮರೆತರೂ ಅವರು ಜನತಾ ಸೇವೆಗಾಗಿ ಸ್ಥಾಪಿಸಿದ ಸೊಸೈಟಿಯು ಭಾರತ ಚರಿತ್ರೆಯಲ್ಲಿ ಸಂಸ್ಮರಣೀಯವಾಗಿ ನಿಲ್ಲದೇ ಬಿಡದು. ಗೋಖಲೆಯವರು ಭಾವನಾ ಪ್ರಪಂಚದ ವ್ಯಕ್ತಿಗಳಾಗದೇ ಪ್ರವರ್ತಕ ಅತ್ಯುತ್ತಮ ಆದರ್ಶ ಕಾರ್ಯಕರಾಗಿದ್ದರು; ಧರ್ಮದ ಮೇಲೆ ಸ್ವಲ್ಪವೇ ಮಾತನಾಡಿದರೂ ಅವರು ಅಜ್ಞೇಯತಾವಾದಿಗಳಾಗಿರಲಿಲ್ಲ. ಅವರ ಧರ್ಮವು ಮೂಲತಃ ನೀತಿ ಪ್ರಧಾನವಾಗಿತ್ತು ವ್ಯಕ್ತಿಗತವಾಗಿತ್ತು; ಯಾವ ಪಂಥವನ್ನಾಗಲೀ ಸಂಸ್ಥೆಯ ರೂಪವನ್ನಾಗಲೀ ಅನುಸರಣೆ ಮಾಡುವ ಧರ್ಮವಾಗಿರಲಿಲ್ಲ.

೧೯೦೫ರಲ್ಲಿ ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿ ಗೋಖಲೆಯವರು ಚುನಾಯಿತರಾದರು. ಬಂಗಾಳದ ವಿಭಾಗದ ಬಗ್ಗೆ ಎದ್ದ ವಿಚಾರಗಳನ್ನು ಕುರಿತು ಜನತಾಭಿಪ್ರಾಯವನ್ನು ಸಂಸ್ಕರಿಸಲು ಇಂಗ್ಲೆಂಡಿಗೆ ತೆರಳಿದ ನಿಯೋಗಕ್ಕೆ ಗೋಖಲೆಯವರನ್ನು ಆಯ್ಕೆ ಮಾಡಲಾಗಿತ್ತು. ಆಗ್ಗೆ ಇಂಡಿನಲ್ಲಿ ಹಿಂದಿನಗಳಿದ್ದ ಗೋಖಲೆಯವರು ಮಾಡಿದ ಭಾಷಣಗಳು ತೀಕ್ಷ್ಣವೂ ಸರಳವೂ ಆಗಿದ್ದವು.

ಗೋಖಲೆ ಮತ್ತು ದಕ್ಷಿಣ ಆಫ್ರಿಕ

ದಕ್ಷಿಣ ಆಫ್ರಿಕಾದಲ್ಲಿಯ ಭಾರತಮೂಲದ ಜನರ ಹಿತರಕ್ಷಣೆಯ ಕೆಲಸವನ್ನು ಅವರು ಕೈಗೊಂಡರು. ಈ ಕಾರ್ಯವು ಗಾಂಧೀಜಿಯವರು ಗೋಖಲೆಯವರ ಸಮೀಪಕ್ಕೆ ಬರುವುದಕ್ಕೆ ಕಾರಣವಾಯಿತು. ಗೋಖಲೆಯವರ ಸಹವಾಸವನ್ನು ಗಾಂಧೀಜಿಯವರು ಅತ್ಯಮೂಲ್ಯವೆಂದು ಭಾವಿಸಿದರು. ಅವರ ಅನುಯಾಯಿ ತಾನೆಂದು ಗಾಂಧೀಜಿ ಹೇಳಿದರು. ೧೯೦೯ರಲ್ಲಿ ಲಾಹೋರಿನ ಕಾಂಗ್ರೆಸ್ ಅಧಿವೇಶನದಲ್ಲಿ ದಕ್ಷಿಣ ಆಫ್ರಿಕದ ಬಗ್ಗೆ ಗೋಖಲೆಯವರು ಗೊತ್ತುವಳಿಯನ್ನು ಮಂಡಿಸಿದರು. ಆಗ್ಗೆ ಸತ್ಯಾಗ್ರಹದ ಬಗ್ಗೆ ಮಾತನಾಡುತ್ತ ಗೋಖಲೆಯವರು

"...ಇದರ ಸ್ವರೂಪ ಮೂಲತಃ ಆತ್ಮರಕ್ಷಣೆಯದೇ ಆಗದೆ, ಅದು ನೈತಿಕ ಮತ್ತು ಆಧ್ಯಾತ್ಮಿಕ ಅಸ್ತ್ರಗಳಿಂದ ಹೋರಾಡುವುದು. ದಬ್ಬಾಳಿಕೆಯನ್ನು ಪ್ರತಿರೋಧಿಸಿ ಸತ್ಯಾಗ್ರಹಿಯು ತನ್ನನ್ನು ತಾನೇ ಶಿಕ್ಷಿಸಿಕೊಳ್ಳುತ್ತಾನೆ. ಪಾಶವೀ ಶಕ್ತಿಯ ವಿರುದ್ಧ ಆತ್ಮಬಲವನ್ನು ಉಪಯೋಗಿಸುತ್ತಾನೆ. ಮನುಷ್ಯನಲ್ಲಿಯ ಪಾಶವೀ ಜೀವನವನ್ನೆದುರಿಸಲು, ಮನುಷ್ಯನಲ್ಲಿಯ ದೈವೀಜೀವನವನ್ನು ನಿಲ್ಲಿಸುತ್ತಾನೆ. ದಬ್ಬಾಳಿಕೆಯ ವಿರುದ್ಧ ಸಹಿಷ್ಣುವಾಗಿರುತ್ತಾನೆ. ಭೌತಿಕ ಬಲದೆದುರು ಮನೋಬಲವನ್ನು ಮುಂದೆ ಮಾಡುತ್ತಾನೆ. ಅನ್ಯಾಯದ ವಿರುದ್ಧ ತಾಳ್ಮೆಯನ್ನೂ, ವಾಮ ಮಾರ್ಗದ ವಿರುದ್ಧ ಸರಿಯಾದ ಮಾರ್ಗವನ್ನೂ ಸತ್ಯಾಗ್ರಹಿಯು ಸೂಚಿಸುವನು" ಎಂದು ಘೋಷಿಸಿದರು.

ಬ್ರಿಟೀಷ್ ಭಾರತದಲ್ಲಿಯ ಗುಲಾಮಗಿರಿ ಕಾರ್ಮಿಕ ವ್ಯವಸ್ಥೆಯನ್ನು ವಿರೋಧಿಸಿ ಗೋಖಲೆಯವರು ೧೯೧೦ ಇಂಪೀರಿಯಲ್ ಲೆಜಿಸ್ಲೇಟೀವ್ ಕೌನ್ಸಿಲ್‌ನಲ್ಲಿ ಒಂದು ಮಸೂದೆಯನ್ನು ತಂದರು. ಭಾರತ ಸರ್ಕಾರವು ಅದನ್ನು ಒಪ್ಪಿ ತನ್ನ ಬೆಂಬಲವನ್ನು ನೀಡಿತು. ದಕ್ಷಿಣಾ ಆಫ್ರಿಕಾಕ್ಕೆ ಗೋಖಲೆಯವರು ಭೇಟಿ ಕೊಟ್ಟು ತಮ್ಮ ಉಜ್ವಲ ಭಾಷಣಗಳಿಂದ ಹಾಗೂ ನಿಷ್ಠಾವಂತಿಕೆಯ ನಡುವಳಿಕೆಯಿಂದ ಅಲ್ಲಿಯ ಜನರ ಮನಸ್ಸನ್ನು ಆಕರ್ಷಿಸಿದರು. ಗುಲಾಮ ಕಾರ್ಮಿಕರ ಮೇಲಿನ ಶುಲ್ಕವನ್ನು ತೆಗೆದುಹಾಕುವಂತೆ ಜನರಲ್ ಸ್ಮಟ್ಸ್‌ರನ್ನು ಒತ್ತಾಯ ಮಾಡಿದರು.

ಭಾರತದಲ್ಲಿಯ ಸಾರ್ವಜನಿಕ ಸೇವೆಗಳ ಬಗ್ಗೆ ವಿಚಾರಣೆ ಕೈಗೊಳ್ಳಲೆಂದು ರಚಿತವಾದ ರಾಯಲ್ ಕಮೀಷನ್ನಿನ ಸದಸ್ಯರೆಂದು ಗೋಖಲೆಯವರನ್ನು ೧೯೧೨ರಲ್ಲಿ ನಿಯಮಿಸಲಾಯಿತು. ಗೋಖಲೆಯವರು ಮಾಡಬೇಕಾದ ಕೆಲಸ ಶ್ರಮದಾಯಕವಾಗಿತ್ತು. ಕಮೀಷನ್ನಿನ ಕೆಲಸ ಪೂರ್ತಿಗೊಳ್ಳುವುದನ್ನು ನೋಡಲು ಗೋಖಲೆಯವರು ಬದುಕಲಿಲ್ಲ. ಕಾರ್ಯಬಾಹುಲ್ಯವು ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿತು.

೧೯೧೫ರ ಹೊತ್ತಿಗೆ ಅವರ ದೇಹಾರೋಗ್ಯದ ಸ್ಥಿತಿ ತೀರ ವಿಷಮವಾಗಿದೆ ಎಂಬುದು ಸ್ಪಷ್ಟವಾಯಿತು. ಫೆಬ್ರುವರಿ ೧೯ರಂದು ಅವರು ದೈವಾಧೀನರಾದರು. ಗೋಖಲೆಯವರು ನಿಧನರಾಗುವ ಸಮಯದಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರು ಅವರ ಶಯ್ಯೆಯ ಸನಿಹದಲ್ಲಿದ್ದಾಗಲೂ, ಗೋಖಲೆಯವರ ನೀಡಿದ ಚರಮ ಸಂದೇಶವು, ಅವರ ರಾಷ್ಟ್ರಪ್ರೇಮವನ್ನು ಸ್ಪಷ್ಟಪಡಿಸುತ್ತಿದೆ.

"ನನ್ನ ಬಗ್ಗೆ ಜೀವನ ಚರಿತ್ರೆಯನ್ನು ಬರೆಯುವುದಾಗಲಿ, ನನ್ನ ಮೂರ್ತಿಯನ್ನು ರಚಿಸಿ ನಿಲ್ಲಿಸುವುದರಲ್ಲಾಗಲೀ, ವೇಳೆಯನ್ನು ಹಾಳು ಮಾಡಬೇಡಿ; ಭಾರತದ ಸೇವೆಯಲ್ಲೇ ನಿಮ್ಮ ಸರ್ವಸ್ವವನ್ನು ಧಾರೆಯೆರೆಯಿರಿ. ಅಂದರೇನೇ ಭಾರತ ಮಾತೆಯ ನಿಜವಾದ ನಿಷ್ಠೆಯ ಸೇವಕರೆಂದು ಪರಿಗಣಿತರಾಗುವಿರಿ".

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ತಾಜ ಮಹಾಲಿನ ಶಿಲ್ಪಿ ಯಾರು?

(ನಾಲ್ಕನೇ ಪುಟದಿಂದ)

ಬೋರ್ದೋ— ಅದರ ನಿರ್ಮಾಣ ಕಾಲದಲ್ಲಿ ಭಾರತದಲ್ಲಿದ್ದರು. ಅವರ ಪೈಕಿ ತಾಜ ಮಹಾಲನ್ನು ವಿನ್ಯಾಸಗೊಳಿಸಿದವರು ಯಾರು?

ತಾಜ ಮಹಾಲ್ ಕಟ್ಟಡದ ಕಡೆ ನೋಡಿದರೆ, ಅದರಲ್ಲಿ ಲೇಶಾಂಶವಾದರೂ ಪಶ್ಚಿಮ ಯುರೋಪಿಯನ್ ಪ್ರಭಾವ ಕಂಡು ಬರುತ್ತಿಲ್ಲವೆಂದು ಧಾರಾಳವಾಗಿ ಹೇಳಬಹುದು. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಆ ಕಾಲದಲ್ಲಿ ಭಾರತ ವಾಸ್ತುಶಿಲ್ಪವು ಯುರೋಪಿಯನ್ ಪ್ರಮಾಣಗಳಿಗೆ ಎಷ್ಟು ಮಾತ್ರವೂ ಕಡಮೆಯದಾಗಿರಲಿಲ್ಲ; ಕೆಲವು ವಿಷಯಗಳಲ್ಲಿ ಅದು ಶ್ರೇಷ್ಠವಾಗಿತ್ತು. ಅದೇ ಕಾರಣದಿಂದಲೇ ಪಾಶ್ಚಾತ್ಯ ನಿಪುಣರು ಭಾರತೀಯರಿಂದ ಶೈಲಿಯನ್ನು ಎರವಾಗಿ ಪಡೆದಿರುವುದು ಸಾಧ್ಯವಿದೆ. ಸ್ಪೆಯಿನಿನಲ್ಲಿಯೂ, ದಕ್ಷಿಣ ಫ್ರಾನ್ಸಿನಲ್ಲಿಯೂ ಮಧ್ಯಯುಗದ ಕ್ಯಾಥೊಲಿಕ್ ಇಗರ್ಜಿಗಳ ದ್ವಾರಗಳಲ್ಲಿ ವಿಚಿತ್ರ ಪುಷ್ಪ ವಿನ್ಯಾಸಗಳನ್ನೂ ಭಾರತದ 'ಮಕರ' ಅಥವಾ 'ಕೀರ್ತಿ ಮುಖ' ಶೈಲಿಯ ದೈತ್ಯಾಕಾರದ ವಿಗ್ರಹಗಳನ್ನೂ ಕಾಣಬಹುದಾಗಿದೆ.

೧೬೪೯ರಲ್ಲಿ ಪ್ರಕಟವಾದ ಜಾರ್ಮೆಲೈಟ್ ಸನ್ಯಾಸಿ ಫಿಲೆಪ್ಪೆಯಲ್ಲಿ ಪರ್ಯಟನಾನುಭವಗಳಲ್ಲಿಯೂ, ಆ ಕಾಲದ ಇತರ ಅನೇಕ ದಾಖಲೆಗಳಲ್ಲಿಯೂ ಆಸ್ಟಿನ್‌ದ ಬೋರ್ದೋ ಕುರಿತು 'ಸ್ವರ್ಣಕಾರ' ಎಂಬುದಾಗಿ ಮಾತ್ರವೇ ಉಲ್ಲೇಖಿಸಲಾಗಿದೆ. ದಿಲ್ಲಿಯಲ್ಲಿ ಷಾ ಜಹಾನ್ ಸಿಂಹಾಸನಕ್ಕೆ ಮುತ್ತು—ರತ್ನಗಳನ್ನು ಆತನು ಕುಂದಣಗೊಳಿಸಿದನು. ೧೬೫೮ ರಿಂದ ೧೬೬೭ರವರೆಗೆ ಮೊಘಲ್ ದರ್ಬಾರಿನಲ್ಲಿ ವೈದ್ಯರಾಗಿದ್ದು ಅನಂತರ ಫ್ರಾನ್ಸಿನಲ್ಲಿ ತನ್ನ ಪರ್ಯಟನಾನುಭವಗಳನ್ನು ಪ್ರಕಟಿಸಿದ ಫ್ರಾಂಕೊಯಿ ಬೆರ್ನಿಯೆರ್ ಕೂಡ ಹೀಗೆಯೇ ಬರೆದಿದ್ದಾರೆ. ತಮ್ಮ ಕೃತಿಯಲ್ಲಿ ಆತನು ತಾಜ ಮಹಲನ್ನು ತುಂಬ ಮೆಚ್ಚಿಕೊಂಡಿದ್ದಾರೆ. ಆದರೆ ಅದರ ನಿರ್ಮಾಣ ಕಾರ್ಯದಲ್ಲಿ ಬೋರ್ದೋ ಕೈ ಹಾಕಿದ್ದುದಾಗಿ ಆತನು ಎಲ್ಲಿಯೂ ಬರೆದಿಲ್ಲ. ೧೬೬೦ರ ಸುಮಾರಿಗೆ ಭಾರತದಲ್ಲಿ ಇನ್ನಿಬ್ಬರು ಫ್ರೆಂಚ್ ನಾಗರಿಕರು—ರತ್ನಾಭರಣ ನಿರ್ಮಾಣಕ್ಕ ಜಾನ್ ಬಾಪ್ಟಿಸ್ಟ್ ತೆವೆರ್ನಿಯರ್ ಮತ್ತು ಜಾನ್ ದೆ ತೆವೆನೋತ್—ಇದ್ದರು. ಅದರೂ ತಾಜಮಹಾಲನ್ನು ಕಂಡು ತುಂಬಾ ಮೆಚ್ಚಿಕೊಂಡಿದ್ದರು. ಅದರ ವಿನ್ಯಾಸ ಕಾರ್ಯದಲ್ಲಿ ಬೋರ್ದೋ ಆಗಲಿ, ಮತ್ತೆ ಯಾರಾದರೂ ಪಶ್ಚಿಮ ಯುರೋಪಿಯನ್ ನಾಗರಿಕನಾಗಲೀ ಭಾಗವಹಿಸಿದ್ದುದ್ದಾಗಿ ಅವರು ಕೂಡ ಎಲ್ಲಿಯೂ ಸೂಚಿಸಿಲ್ಲ.

ಜೆರೊನಿಮೊ ವೆರೋನೆಯೋ ವಿಷಯ ಹೇಳುವುದಾದರೆ, ಆತನೇ ಉಸ್ತಾದ್ ಈಸಾಖಾನ್ ಎಂಬ ವಾದವನ್ನು ಎರಡು ಕಾರಣಗಳಿಂದ ಅಸಂಭವವೆನ್ನಬೇಕಾಗುತ್ತದೆ. ಮೊದಲನೆಯದಾಗಿ ಈ ಈರ್ವರ ಗೋರಿಗಳೂ ಆಗ್ರಾದಲ್ಲಿವೆ. ಎರಡನೆಯದಾಗಿ, ಉಸ್ತಾದ್ ಈಸಾಖಾನ್ ಎಂಬ ಹೆಸರಿನಲ್ಲಿರುವ 'ಈಸಾ' ಶಬ್ದವು ಆತನ ಸಮಕಾಲೀನರಾಗಿದ್ದ ಅನೇಕ ಮಂದಿ ಮುಸಲ್ಮಾನರ ಹೆಸರುಗಳಲ್ಲಿ ಕಂಡು ಬಂದಿದೆ. ಜೆಸ್ಯೂಯಿಟ್ ಪಾದ್ರಿಗಳು 'ಈಸಾ' ಶಬ್ದವನ್ನು 'ಕ್ರಿಸ್ತ' ಎಂದು ಅನುವಾದಿಸುವುದು ಸರಿಯೆನ್ನಲಾಗದು.

ಇನ್ನೊಂದು ಮುಖ್ಯ ವಿವರಣೆಯಿದೆ. ಈಸ್ಟ್ ಇಂಡಿಯಾ ಕಂಪೆನಿಯ ಪೀಟರ್ ಮುನಡೇಯವರು ಭಾರತಕ್ಕೆ ಎರಡು ಸಲ ೧೬೩೦—೩೪ ಮತ್ತು ೧೬೫೫—೫೬ ಭೇಟಿಕೊಟ್ಟಿದ್ದರು. ಕ್ಯಾಥೊಲಿಕ್ ಪಾದ್ರಿ ಫ್ರಾನ್ಸಿಸ್ ಕೋರ್ಸಿಯೂ ಅದೇ ಕಾಲಾವಧಿಯಲ್ಲಿ ಭಾರತಕ್ಕೆ ಭೇಟಿ ಕೊಟ್ಟಿದ್ದರು. ಅವರಿಬ್ಬರೂ ಆಗ್ರಾದಲ್ಲಿ ಜೆರೊನಿಮೊ ವೆರೋನೆಯೋರವರನ್ನು ಆತನು ಲಾಹೋರಿಗೆ ಹೊರಡುವ ಮುನ್ನ ಕಂಡಿದ್ದರು. ಅವರಿಬ್ಬರೂ ತಮ್ಮ ಭೇಟಿಗಳನ್ನು ವಿವರಿಸಿದ್ದಾರೆ. ಅವರೀರ್ವರೂ ಆತನನ್ನು 'ಸ್ವರ್ಣಕಾರ"ರೆಂದು ಕರೆದಿದ್ದಾರೆಯೇ ಹೊರತು ತಾಜಮಹಾಲಿನ ವಾಸ್ತುಶಿಲ್ಪಿಯೆಂದು ಎಲ್ಲಿಯೂ ತಿಳಿಸಿಲ್ಲ.

ಭಾರತೀಯ ಇತಿಹಾಸಕಾರರು ಇತ್ತೀಚೆಗೆ ಮಾಡಿರುವ ಸಂಶೋಧನೆಗಳನ್ನು ಗಮನಿಸಿದರೆ, ಬೋರ್ದೋ ಅಥವಾ ವೆರೋನೆಯೋ ಹೆಸರುಗಳನ್ನು ತಾಜಮ

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

 ಆರನೇ ಪುಟ ನೋಡಿ

ಹಾಲಿನ ನಿರ್ಮಾಣ ಕಾರ್ಯಕ್ಕೆ ಸಂಬಂಧಿಸಿದ ಮೊಘಲ್ ಕಾಲಾವಧಿಯ ಬಖೈರುಗಳಲ್ಲಿ ಕಾಣಲು ಪ್ರಯತ್ನಿಸುವುದು ನಿರರ್ಥಕ. ಅವುಗಳಲ್ಲಿ ಅತ್ಯಂತ ಮುಖ್ಯವಾದ "ದಿವಾನಿ—ಇ - ಅಫ್ರಿದಿ"ಯಲ್ಲಿ ತಾಜಮಹಾಲಿನ ಮುಖ್ಯ ನಿರ್ಮಾತೃಗಳ ಹೆಸರುಗಳಿವೆ. ಅವರಲ್ಲಿ ಉಸ್ತಾದ್ ಈಸಾಖಾನ್ ಹೆಸರೂ ಇದ್ದು, ಕಲ್ಲು ಕುಟಿಗ, ಆಗ್ರಾ ನಾಗರಿಕ ಎಂದು ಸೂಚಿಸಲಾಗಿದೆ. ಇತರ ದಾಖಲೆಗಳಲ್ಲಿಯೂ ಆತನು ಆಗ್ರಾ ನಾಗರಿಕನೆಂದೂ, ತಾಜಮಹಾಲ್ ನಿರ್ಮಾತೃವೆಂದೂ ನಿರೂಪಿಸಲಾಗಿದೆ.

ಷಾ ಜಹಾನರ ಕಾಲದ ಕೆಲವು ಹಣಕಾಸಿನ ದಸ್ತೈವಜುಗಳನ್ನೂ, ಸಂಬಳ ಬಟವಾಡೆ ದಾಖಲೆಗಳನ್ನೂ ಭಾರತದ ಇತಿಹಾಸಕಾರರಾದ ಶ್ರೀ ಎಚ್. ಕನ್ಸರ್ ರವರೂ, ಅವರ ಸಹೋದ್ಯೋಗಿಗಳೂ ಪರಿಶೀಲಿಸಿದ್ದಾರೆ. ನಿಪುಣ ಕಲ್ಲುಕುಟಿಗ ಉಸ್ತಾದ್ ಈಸಾಖಾನ್ ತಿಂಗಳಿಗೆ ೧೦೦೦ ರೂಪಾಯಿ ವೇತನಗಳನ್ನು ತಾಜಮಹಾಲ್ ನಿರ್ಮಾಣ ಕಾರ್ಯದಲ್ಲಿ ಪಡೆಯುತ್ತಿದ್ದುದಾಗಿ ದಾಖಲೆಯಿದೆ. ಆತನ ಸಹೋದ್ಯೋಗಿಗಳು ಇನ್ನೂ ಮೂರು ಜನ—ಭಾರತದ ಮೊಹಮ್ಮದ ಸಯ್ಯದ್, ಅಫ್ಘಾನಿಸ್ತಾನದ ಕಾಂದಹಾರಿನ ಮಹಮ್ಮದ್ ಹನೀಫ್ ಮತ್ತು ಶಿರಾಜಿನ ಅಮಾನತ್‌ಖಾನ್—ಸಾವಿರ ರೂಪಾಯಿ ವೇತನ ಪಡೆಯುತ್ತಿದ್ದರೆಂದು ಕಂಡು ಬರುತ್ತದೆ. ಚಿರಂಜೀಲಾಲ್ ಎಂಬಾತನಿಗೆ ೮೦೦ ರೂಪಾಯಿ ವೇತನ ಸಿಕ್ಕುತ್ತಿತ್ತು. ಅಂತೆಯೇ ಬಾಗ್‌ದಾದ್, ಸಿರಿಯ, ಸಮರ್ಕಂದ್ ಕಟ್ಟಡ ನಿರ್ಮಾತೃಗಳು ಕೆಲವರು ತಿಂಗಳಿಗೆ ೩೦೦ ರಿಂದ ೫೦೦ ರೂಪಾಯಿ ವೇತನ ಪಡೆಯುತ್ತಿದ್ದರು.

ಈ ಪಟ್ಟಿಯಲ್ಲಿ ಉನ್ನತ ವೇತನ ಪಡೆಯುತ್ತಿದ್ದ ಅತ್ಯಂತ ನಿಪುಣ ಅನುಭವಿಕ ನಿರ್ಮಾತೃಗಳ ಹೆಸರುಗಳಿವೆ. ಉಸ್ತಾದ್ ಈಸಾಖಾನಂಗೆ ಅವರ ಇತರ ಕೆಲವು ಮಂದಿ ಸಹದ್ಯೋಗಿಗಳಿಗಿಂತ ಹೆಚ್ಚೇನೂ ದೊರೆಯುತ್ತಿರಲಿಲ್ಲ. ತಾಜ್ ಮಹಾಲ್ ಕಟ್ಟಡದ ನಿರ್ಮಾಣದಲ್ಲಿ. ಅದರ ಗೋಡೆಗಳ ಅಲಂಕರಣ, ಗುಮ್ಮಟ ಮತ್ತು ಗೋಪುರಗಳ ನಿರ್ಮಾಣ ಕಾರ್ಯ, ಇವೆಲ್ಲವೂ ಪ್ರಾಯಶಃ ಯುರೋಪ್ಪ ವಾಸ್ತುಶಿಲ್ಪಿಯ ರಚನೆಯೂ ಆಗಿರಲಾರದೆಂದೂ, ಪ್ರತಿಭಾವಂತ ತಜ್ಞವೃಂದದ ಪ್ರಯತ್ನಫಲವಾಗಿರಬೇಕೆಂದೂ ಭಾರತೀಯ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಪರ್ಶಿಯಾ, ಅಫ್ಘಾನಿಸ್ತಾನ ಮತ್ತು ಇತರ ಅರಬ್ ದೇಶಗಳ, ಈಗಿನ ಸೋವಿಯತ್ ಉಜ್ಬೆಕಿಸ್ತಾನ ಭೂಭಾಗದ ಅನೇಕ ಜನ ಕಟ್ಟಡ ನಿರ್ಮಾತೃಗಳು ತಮ್ಮ ಭಾರತೀಯ ಸಹದ್ಯೋಗಿಗಳೊಟ್ಟಿಗೆ—ಅವರಲ್ಲಿ ಮುಸಲ್ಮಾನರೂ ಮತ್ತು ಹಿಂದುಗಳೂ ಸಹ ಇದ್ದರು— ಕೆಲಸ ಮಾಡುತ್ತಾ, ಶಿಲಾಶಿಲ್ಪದಲ್ಲಿ ತಮ್ಮ ರಾಷ್ಟ್ರೀಯ, ಧಾರ್ಮಿಕ ಸಂಸ್ಕೃತಿಗಳನ್ನು ತಾಜ್‌ಮಹಾಲ್ ರೂಪದಲ್ಲಿ ವ್ಯಕ್ತಪಡಿಸಿದರು. ಇಲ್ಲಿ ಹಿಂದೂಸ್ತಾನದ ಹಿಂದು ಮತ್ತು ಮುಸ್ಲಿಂ ಜನತೆಯ, ಪರ್ಶಿಯನ್ನರ, ಅಫ್ಘನರ, ಅರಬರ ಮತ್ತು ಉಜ್ಬೆಕರ ಸಮರಸ ಸಂಯೋಜನೆಯಿಂದ 'ಜಗತ್ತಿನ ಎಂಟನೆಯ ಅದ್ಭುತ"ವನ್ನು ನಿರ್ಮಿಸಲಾಯಿತು.

ಎಲ್ಲೆಲ್ಲಿ ಏನೇನು?

ಸಂಗೀತ ಕಲಾನಿಲಯದ ವಾರ್ಷಿಕೋತ್ಸವ

ಪಾದೂರು, ಮೈಸೂರು ರಾಜ್ಯದ ಆರೋಗ್ಯ ಮಂತ್ರಿ ಡಾ|| ನಾಗಪ್ಪ ಆಳ್ವಾರವರ ಅಧ್ಯಕ್ಷತೆಯಲ್ಲಿ ತಾ 8ರಂದು ಕಲಾನಿಲಯದ ವಾರ್ಷಿಕೋತ್ಸವವು ಜರಗಿತು. ಶ್ರೀ ಕೆ. ವಾಸು ಶೆಟ್ಟರು ಅಧ್ಯಕ್ಷರಿಗೆ ಹಾರವನ್ನು ಅರ್ಪಿಸಿದರು. ಸ್ವಾಗತ ಭಾಷಣವನ್ನು ಶ್ರೀ ಬಿ. ಭಾಸ್ಕರ ಶೆಟ್ಟಿ, ಎಂ. ಎಲ್. ಎ. ಇವರು ಮಾಡಿದರು. ನಿಲಯದ ಮತ್ತು ಗ್ರಾಮಸ್ಥರ ಪರವಾಗಿ ಮಾನಪತ್ರವನ್ನು ಶ್ರೀ ಕೆ. ವಾಸುಶೆಟ್ಟರು ಮಂತ್ರಿಗಳಿಗೆ ಅರ್ಪಿಸಿದರು. ವರದಿಯನ್ನು ನಿಲಯದ ಸಂಚಾಲ ಶ್ರೀ ಎಂ. ಯಸ್. ಶೆಟ್ಟಿಯವರು ಓದಿದರು. ಡಾ|| ಯು. ಕೆ. ಆಚಾರ್ಯರು ನಿಲಯದ ಕುರಿತು ಮಾತಾಡಿದರು. ನಿಲಯದ ಮುಂದಿನ ಯೋಜನೆಯನ್ನು ಶ್ರೀ ಕಾ. ವಾ. ಆಚಾರ್ಯರು ಓದಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಯಂ. ಯಸ್. ಶೆಟ್ಟಿಯವರ ಮತ್ತು ಅವರ ಹಿಂದಿನ ಸ್ನೇಹದ ಸವಿ ನೆನಪನ್ನು ಮಾಡಿ, ರಾಜಕೀಯ ರಂಗದಲ್ಲಿ ಅವರು ಮಾಡಿದ ತ್ಯಾಗವನ್ನು ಪ್ರಸಂಶಿಸಿ ಸ್ವಾತಂತ್ರ್ಯದ ನಂತರ ಕಲಾಸೇವೆಗೆ ಇಳಿದದ್ದು ಅದೂ ಹಳ್ಳಿಯನ್ನು ತನ್ನ ಪ್ರಯೋಗ ಶಾಲೆಯನ್ನಾಗಿ ತೆಗೆದುಕೊಂಡ ವಿಚಾರದಲ್ಲಿ ಸಂತೋಷವನ್ನು ವ್ಯಕ್ತಮಾಡಿ ಸಂಗೀತವೇ ಜೀವನದಲ್ಲಿ ಶಾಂತಿಯನ್ನೀಯುವ ಕಲೆಯೆಂದೂ ಮುಕ್ತಿಮಾರ್ಗಕ್ಕದು ಮೊದಲ ಸೋಪಾನವೆಂದೂ ಪ್ರತಿಪಾದಿಸಿದರು. ಶ್ರೀ ಪಿ. ಎನ್. ವಿ. ಉಪಾಧ್ಯಾಯರು ಧನ್ಯವಾದವನ್ನರ್ಪಿಸಿದರು. ಬಳಿಕ "ಧ್ರುವಸ್ವಾಮಿನಿ" ನಾಟಕವು ನಿಲಯದ ಬಾಲಕರಿಂದ ಅಭಿನಯಿಸಲ್ಪಟ್ಟು ಸಭೆಯು ಮುಕ್ತಾಯವಾಯಿತು.

ತಾ. 9_5_66ರಂದು ಎರಡನೆಯ ದಿನದ ಕಾರ್ಯ ಕಲಾಪವು ಶ್ರೀ ಬಿ. ಭಾಸ್ಕರಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಾರವನ್ನು ಶ್ರೀ ಜಗನ್ನಾಥ ಶೆಟ್ಟಿ ಅಚ್ಚುಟ್ಟುಗುತ್ತು ಇವರು ಅರ್ಪಿಸಿದರು. ಸ್ವಾಗತ ಭಾಷಣವನ್ನು ಯು. ಬಿ. ಯಂ. ಸಿ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಕೆ. ವಾಸುಶೆಟ್ಟಿಯವರು ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಿಲಯದ ಸಂಚಾಲಕರಾದ ಎಂ. ಯಸ್. ಶೆಟ್ಟಿಯವರ ಕಾರ್ಯವನ್ನು ಶ್ಲಾಘಿಸಿ, ಪ್ರತಿಹಳ್ಳಿಯೂ ಇಂತಹ ಕಲಾಕ್ಷೇತ್ರದ ಬೆಳವಣಿಗೆಯ ಆಗತ್ಯ ಎಂದರು.

ಶ್ರೀ ಪಿ. ಎನ್. ವಿ. ಉಪಾಧ್ಯಾಯರು ಧನ್ಯವಾದವನ್ನು ಅರ್ಪಿಸುತ್ತಾ ಪಂಚಾಯತ್ತಿನವರು ಸೇತುವೆ ಮತ್ತು ರೂರಲ್ ಡಿಸ್ಪೆನ್ಸರಿಯ ಬೇಡಿಕೆಗಳನ್ನು ಅವರು ಮುಂದೆ ಇಟ್ಟು ಸಾಧ್ಯವಾದಷ್ಟು ಬೇಗನೆ ಅವನ್ನು ಪೂರೈಸುವ ವ್ಯವಸ್ಥೆ ಮಾಡಬೇಕೆಂದರು. ಬಳಿಕ ವಿದ್ಯಾರ್ಥಿನಿಯರ ಪಾದುಕಾ ಪಟ್ಟಾಭಿಷೇಕ ಮತ್ತು 'ವಿಶಾಖದತ್ತ'

ರಾಜೀವಿ' ನಾಟಕವು ಯಶಸ್ವಿಯಾಗಿ ಆಡಲ್ಪಟ್ಟವು.

ಕೀರ್ತನಯಜ್ಞದ ಮಂಗಳೋತ್ಸವ

ದೆಹಲಿ ಕರ್ನಾಟಕ ಸಂಘವು ಕೀರ್ತನ ಕೇಸರಿ, ದಾಸರತ್ನ ಶ್ರೀ ಭದ್ರಗಿರಿ ಕೇಶವದಾಸ್ ರವರಿಂದ ಎಪ್ರಿಲ್ ತಾ. 6ರಿಂದ ತಾ. 30ರ ವರೆಗೆ ಏರ್ಪಡಿಸಿದ್ದ "ಭಾರತೀಯ ಸಂತರು" ಕೀರ್ತನಯಜ್ಞವು ಇಂದು ಕೇಂದ್ರ ಗೃಹ ಸಚಿವ ಶ್ರೀ ಜಿ. ಎಲ್. ನಂದಾರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಮಂಗಲಗೊಂಡಿತು.

ಕರ್ನಾಟಕ ಸಂಘದ ಅಧ್ಯಕ್ಷರೂ, ಲೋಕ ಸಭಾ ಉಪಾಧ್ಯಕ್ಷರೂ ಆದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಸ್ವಾಗತ ಭಾಷಣ ಮಾಡಿದ ನಂತರ ಶ್ರೀ ಭದ್ರಗಿರಿ ಕೇಶವದಾಸರಿಂದ ಆಂಗ್ಲಭಾಷೆಯಲ್ಲಿ ಸಂತಮೀರಾಬಾಯಿ ಹರಿಕಥೆ ನಡೆಯಿತು. ಸಂಸ್ಥೆಗಳು ಶ್ರೀ ಭದ್ರಗಿರಿ ಕೇಶವದಾಸರಿಗೆ ಪುಷ್ಪಹಾರವನ್ನರ್ಪಿಸಿದುವು. ನಂತರ ಕರ್ನಾಟಕ ಸಂಘ ಮತ್ತು ಕರೋಲ್‌ಬಾಗಿನ ಪ್ರಜೆಗಳು ಶ್ರೀ ಕೇಶವದಾಸರಿಗೆ "ಭಕ್ತಿರಸನಿಧಿ" ಎಂಬ ಬಿರುದನ್ನೊಡಗೊಂಡ ಪ್ರಶಸ್ತಿ ಪತ್ರವನ್ನು ಅರ್ಪಿಸಿದ್ದನ್ನು ಶ್ರೀ ಜಿ. ಎಲ್. ನಂದಾರವರು ದಾಸರಿಗೆ ನೀಡಿದರು.

ಶ್ರೀ ಜಿ. ಎಲ್. ನಂದಾರವರು ಭಾಷಣಮಾಡುತ್ತಾ ಪ್ರಸ್ತುತ ಸಂದರ್ಭದಲ್ಲಿ ಭಗವದ್ಭಕ್ತಿ, ಮತ್ತು ದೈವೀಕ ಚಿಂತನೆ ಅತಿ ಅಗತ್ಯವಾದುದೆಂತಲೂ, ಬುದ್ಧಿಶಕ್ತಿಯಿಂದ ನಡೆಸಲಾಗದ ಅನೇಕ ಸೇವೆಗಳನ್ನು ಸಂತರು ಮಾಡುವರೆಂದು, ತಿಳಿಸಿದರು. ಶ್ರೀ ಭದ್ರಗಿರಿ ಕೇಶವದಾಸರು ಭಾರತದ ಎಲ್ಲೆಡೆ ಈ ಪ್ರವಾಹವನ್ನು ಹರಿಸಿ ಜನರನ್ನು ತೃಪ್ತಿಪಡಿಸಲೆಂದೂ ಶ್ರೀ ಪುರಂದರವಿಠಲನು ಅವರಿಗೆ ಆಯುರಾರೋಗ್ಯಾದಿಗಳನ್ನು ಕರುಣಿಸಲೆಂದೂ ಆಶಿಸಿದರು. ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ. ಕೆ. ತಿರುಮಲೇಶ್‌ರವರು ವಂದನಾರ್ಪಣೆ ಗೈದರು.

ವಿಧಾನ ಪರಿಷತ್ತಿಗೆ ಶ್ರೀ ಅಡಿಗರ ಆಯ್ಕೆ

ದಕ್ಷಿಣಕನ್ನಡ ಸ್ಥಳೀಯ ಆಡಳಿತ ಸಂಸ್ಥೆಗಳ ಮತದಾರ ಕ್ಷೇತ್ರದಿಂದ ಮೈಸೂರು ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ, ಕಾಂಗ್ರೆಸ್ ಪಕ್ಷದ ಪರಿಯಿಂದ ಸ್ಪರ್ಧಿಸಿದ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಪ್ರಬಲ ಬಹುಮತದಿಂದ ಆರಿಸಿಬಂದಿರುವರು. ಇವರ ಎದುರಿಗೆ ಶ್ರೀ ಎಂ. ಡಿ. ಅಧಿಕಾರಿಯವರು (ಸ್ವತಂತ್ರ) ಸ್ಪರ್ಧಿಸಿದ್ದರು.

ಶ್ರೀನಿವಾಸ ಮಲ್ಯ ಸ್ಮಾರಕ ನಿಧಿ

ದಿ. ಶ್ರೀ ಯು. ಶ್ರೀನಿವಾಸ ಮಲ್ಯರ ಹೆಸರನ್ನು ಚಿರಸ್ಥಾಯಿಗೊಳಿಸುವುದಕ್ಕಾಗಿ "ಯು. ಶ್ರೀನಿವಾಸ ಮಲ್ಯ ಮೆಮೋರಿಯಲ್ ಫಂಡ್" ಎಂಬ ನಿಧಿಯನ್ನು ಸೊಸೈಟಿ ರಿಜಿಸ್ಟ್ರೇಷನ ಕಾಯಿದೆಯಂತೆ ರಜಿಸ್ಟ್ರ ಮಾಡಲಾಗಿದೆ. ಶ್ರೀ ವಿ. ಎಸ್. ಕುಡ್ವ (ಅಧ್ಯಕ್ಷರು) ಶ್ರೀ ಎಂ. ಶ್ರೀನಿವಾಸ ನಾಯಕ್ (ಉಪಾಧ್ಯಕ್ಷ

ಕರ್ನಾಟಕ ಯಕ್ಷಗಾನ ನಾಟಕ ಸಭಾ

ಮಂಗಳೂರು

ಇವರು ನೆಹರು ಮೈದಾನಿನಲ್ಲಿ ಕಟ್ಟಿಸಿರುವ ಕರ್ನಾಟಕ ಥಿಯೇಟರಿನಲ್ಲಿ

7—5—66ನೇ ಶನಿವಾರದಿಂದ ರಾತ್ರಿ 9-30ಕ್ಕೆ

ನಳ ದಮಯಂತಿ

ಎಂಬ ಕಥಾಭಾಗವನ್ನು ಅಭಿನಯಿಸುವರು.

ವಿಟ್ಲ ಬಾಬು ರಾಯರ ವರ್ಣರಂಜಿತ ನವ್ಯ ಹಾಗೂ ಭವ್ಯ ಸೀನು ಸೀನರಿಗಳು

ನೀವೆಂದೂ ನೋಡದ ಕಣ್ಣಾನಂದಕರ ಯಕ್ಷಗಾನ ಪ್ರದರ್ಶನ.

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ತಮ್ಮ ಬಾಕಿಯನ್ನು ಕಳುಹಿಸಿಕೊಟ್ಟು ಸಹಕ[illegible]ಸುವಂತೆ ವಿನಂತಿಸುತ್ತೇವೆ.

—ಮೆನೇಜರ್, ನವಯುಗ

ರು) ಶ್ರೀ ಯು. ರಾಜಾರಾಮ ಮಲ್ಯ (ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳು) ಡಾ. ಕೆ. ಬಾಳಪ್ಪ ಶೆಟ್ಟಿ (ಜತೆಕಾರ್ಯದರ್ಶಿಗಳು) ಮೊದಲಾದವರು ಈ ನಿಧಿಯ ಪದಾಧಿಕಾರಿಗಳಾಗಿರುವರು.

ವೈದ್ಯಕೀಯ ವಿಶೇಷವಾಗಿ ಅನೇಕಾಲು ದತ್ತು ಕ್ಷಯರೋಗಿಗಳಿಗೆ ನೆರವು ನೀಡುವಿಕೆ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸುವಿಕೆ, ಅನಾಥಾಲಯ, ವಿರಾಮಧಾಮ ಮೊದಲಾದುವುಗಳನ್ನು ಸ್ಥಾಪಿಸಿ, ಅವನ್ನು ನಡೆಸುವಿಕೆ ಮತ್ತು ಗುಡಿಕೈಗಾರಿಕೆ, ಹಾಗೂಕೈ ಕಸುಬುಗಳಿಗೆ ಉತ್ತೇಜನ ನೀಡುವಿಕೆ ಇವೇ ಮೊದಲಾದುವು ಈ ನಿಧಿಯ ಪ್ರಧಾನ ಉದ್ದೇಶಗಳಾಗಿವೆ.

ದಾನ ಮತ್ತು ಚಂದಾಹಣಗಳನ್ನು ಅಧ್ಯಕ್ಷರಿಗಾಗಲೀ, ಕಾರ್ಯದರ್ಶಿಗಳಿಗಾಗಲೀ [illegible] ಕಳುಹಿಸಬಹುದು. ಜಿಲ್ಲೆಯ ಜನತೆಯ ಅಭಿವೃದ್ಧಿಗಾಗಿಯೇ ಜೀವನವನ್ನು ಸವೆಸಿದ ಶ್ರೀ ಮಲ್ಯರ ನಿಧಿಗೆ ಉದಾರವಾಗಿ ದಾನ ಚಂದಾಗಳನ್ನು ನೀಡಿ, ಸದಸ್ಯರಾಗುವಂತೆ ಜಿಲ್ಲೆಯ ಮಹಾಜನರನ್ನು ವಿನಂತಿಸಲಾಗಿದೆ.

ಶ್ರೀ ಅಡಿಗರಿಗೆ ಸತ್ಕಾರ ಕೂಟ.

ವಿಧಾನ ಪರಿಷತ್ತಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆಗೊಂಡಿರುವ ಶ್ರೀ ಕೆ. ಸೂರ್ಯನಾರಾಯಣ ಅಡಿಗರನ್ನು ಕರ್ನಾಟಕ ಬ್ಯಾಂಕಿನ ನೌಕರ ವರ್ಗದವರು, ಶ್ರೀ ಎಸ್. ನಂಜಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಉಪಹಾರ ಕೂಟವನ್ನಿತ್ತು ಸತ್ಕರಿಸಿದರು.

ಸಭಿಕರಲ್ಲಿ ಹಲವರು ಮಾತನಾಡಿ ಶ್ರೀ ಅಡಿಗರಿಗೆ ಶುಭಕೋರಿ, ಅವರು ಬ್ಯಾಂಕಿನ ಕಾರ್ಯಕಲಾಪಗಳಲ್ಲಿ ಇನ್ನೂ ಹೆಚ್ಚಿನ ಪಾತ್ರ ವಹಿಸುವಂತೆ ಭಿನ್ನವಿಸಿದರು. ಅಧ್ಯಕ್ಷರ ಮಾತನಾಡಿದ ಬಳಿಕ ಶ್ರೀ ಜೆ. ಆರ್. ಬೀಡು ಇವರು ಧನ್ಯವಾದ ಸಮರ್ಪಿಸಿದರು.

ಉಡ್ಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No. 30/1965

Sri F. X. D. ಪಿಂಟೊ— ವಾದಿ,

ಮತ್ತು

ಚೌಕಿ ಸುಬ್ಬಯ್ಯ-ಖಾರ್ವಿ, ಗೋವಿಂದನ ಮಗ— ಕುಂದಾಪುರ ತಾಲೂಕು ಕಿರಿ ಮಂಜೇಶ್ವರ ಗ್ರಾಮದಲ್ಲಿರುವವ

—ಪ್ರತಿವಾದಿ

ಇವರೊಳಗೆ

ವಾದಿಗೆ ಪ್ರತಿವಾದಿಯು ತಾ. 20.9.65 ರಲ್ಲು ರೂಪಾಯಿ 5000/-ಕ್ಕೆ ಬರಕೊಟ್ಟ ಕಡು ದಸ್ತಾವೇಜು ಪ್ರಕಾರ ಬಹಾ-ಅಸಲು ಬಡ್ಡಿ ಕೂಡಾ ರೂಪಾಯಿ 12108-25ಕ್ಕೆ ದಾಖಲು ಮಾಡಿದ ಮೇಲಿನ ದಾವೆಯು ಪ್ರತಿವಾದಿಯ ನೋಟೀಸಿನ ಬಗ್ಗೆ ತಾ. 4.6.1966ಕ್ಕೆ ಇಟ್ಟಿದೆ. ಪ್ರತಿವಾದಿಯ ಸ್ವತಹಾ ಯಾ ವಕೀಲರ ದ್ವಾರಾ ಸದ್ರಿ ನಂಬ್ರದಲ್ಲಿ ಮೇಲ್ಕಂಡ ಕೋರ್ಟು ಮುಂದೆ ತಾ. 4—6—1966ನೇ ಪೂರ್ವಾಹ್ನ ಘಂಟೆ 10 ಕ್ಕೆ ಹಾಜರಾಗುವರೆ ತಪ್ಪಿದರೆ ಪ್ರತಿವಾದಿಯ ಗೈರು ಹಾಜ್ರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವದು.

(Sd.) Gratian C. Rego
Vakil for Plaintiff

ಉಡ್ಪಿ, ತಾ. 16—5—1966

ವರ್ಗ-ಊಳಿಗ

ಇತ್ಯಾದಿ ಯಾವತ್ತೂ ತರದ ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿ, ಫಾರ್ಮುಗಳು ದೊರೆಯುತ್ತವೆ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.

ಕ್ರೈತ್ರ ಮುರುಗ

(ಎರಡನೇ ಪುಟದಿಂದ)

ಕೊಳ್ಳಲೇ ಬೇಕಾಗಿರುವ ಇಂತಹ ಸುಚ್ಛ ಪ್ರವಾಸದಲ್ಲಿ ಇನ್ನು ಮುಂದೆ ಭಾಗ ವಹಿಸಲಿಕ್ಕಿಲ್ಲ. ನಮ್ಮ ಒಳಿ ಜೇನು, ಹಾಲು ಮತ್ತು ರಾಗಿ ಇವೆ. ಈ ಬೆಟ್ಟಗಳಿಗೆ ಬಂದವರಲ್ಲರೂ- ನಮ್ಮನ್ನು ಕಣಕಲು ಬಂದರೂ— ನಮ್ಮ ಉತ್ತಮ ಅತಿಥಿಗಳಾಗುತ್ತಾರೆ. ಏರಿ ಹೋಗಬೇಕಾಗಿ ಇರುವ ದಾರಿ ಬಹಳ ಕಡಿದಾಗಿದ್ದು ಕಲ್ಲುಮಯವಾಗಿರುವುದರಿಂದ ನಿಮ್ಮಂತಹವರ ಪಳಗದ ಕಾಲುಗಳು ಈ ಜಾರುವ ಬಂಡೆಗಳ ಹಾಗೂ ಚಿಕ್ಕ ಪುಟ್ಟ ಕಲ್ಲುಗಳ ಮೇಲೆ ನಿಲ್ಲದೆ ಜಾರಬಹುದಾದುದರಿಂದ ನಿಮ್ಮನ್ನು ಆಸನದಲ್ಲಿ ಕರೆದುಕೊಂಡು ಬರಬೇಕೆಂದು ತಂದೆಯವರು ಸ್ಪಷ್ಟವಾಗಿ ಹೇಳಿದ್ದಾರೆ. ಉಳಿದವರು ಮಾತ್ರ ನಡೆದುಕೊಂಡು ಬರಬೇಕಾಗುತ್ತದೆ. ದಯಮಾಡಿ ಬರೋಣವಾಗಲೀ.'

ದಯವಿಟ್ಟು ನೀನು ಯಾರೆದು ತಿಳಿಸುವಿಯಾ?"

'ನಿಮಗದನ್ನು ನಾನು ಮೊದಲೇ ತಿಳಿಸಿದ್ದೇನೆ ಸ್ವಾಮಿ. ನಾನು ಪ್ರಮುಖನ ಪ್ರಥಮ ಪುತ್ರನಿದ್ದೇನೆ.'

"ಮತ್ತು ಸಿಂಹಾಸನದ ಯುವರಾಜನ ಆತಿಥ್ಯವನ್ನು ಸ್ವೀಕರಿಸುತ್ತೇವೆ. ನಾವೆಣಿಸಿರುವದರ ವಿರುದ್ಧ ರೀತಿಯಲ್ಲಿ ಘಟನೆಗಳು ನಡೆಯುತ್ತಿವೆ. ಇಲ್ಲ ಹೃತ್ಪೂರ್ವಕವಾಗಿ ನೀಡಲಾಗುತ್ತಿರುವ ಈ ಆತಿಥ್ಯವನ್ನು ಸ್ವೀಕರಿಸುವ ಸಂದರ್ಭವೂ ಒಳ್ಳೆಯದೇ ಸರಿ. ಒಳ್ಳೆಯದು ನಿಮ್ಮ ಡೋಲಿಯಲ್ಲಿ ನಾನು ಬರುತ್ತೇನೆ.'

ರಾಮು ಪಲ್ಲಕ್ಕಿಯಲ್ಲಿ ಕುಳಿತುಕೊಂಡು, ಪಲ್ಲಕ್ಕಿ ಸವಾರಿಯನ್ನು ಅನುಭವಿಸಿದನು. ಅವನ ಶಿಬಿರದಲ್ಲಿದ್ದವರನ್ನು ಯುದ್ಧಕಾಲದಲ್ಲಿ ಕೈದಿಗಳನ್ನೊಯ್ಯುವಂತೆ ಕೊಂಡು ಹೋದರು.

ನಿಶ್ಚಿತ ಸ್ಥಾನವನ್ನು ತಲುಪಿದೊಡನೆ, ಅದನ್ನು ಕಂಡು ಅವನಿಗೆ ಅತ್ಯಾಶ್ಚರ್ಯವಾಯಿತು.

ಪರ್ವತ ಶಿಖರದಲ್ಲಿ ವೈಭವ ಪೂರ್ಣ ಸತ್ಕಾರಕ್ಕೆ ಅಣಿಮಾಡಲಾಗಿತ್ತು. ಆ ಸ್ಥಳವು ಬಹಳ ರಮ್ಯವಾಗಿದ್ದು ಪಕ್ಕದಲ್ಲೇ ಜಲ ಪ್ರವಾಹವಿತ್ತು. ಒಂದು ವಿಶಾಲ ಆಸನದ ಮೇಲೆ ಮುರುಗನೂ ಆ ಗುಂಪಿನ ಮುಖಂಡನೂ—ಸೆರೆಯಾಗ್ರಹದಿಂದ ತಪ್ಪಿಸಿಕೊಂಡಿದ್ದವನು — ಕುಳಿತುಕೊಂಡಿದ್ದರು. ಆ ಪರ್ವತದ ಜನರಿಗೆ ಮುರುಗನು ಮರ್ಯಾದಾ ಪ್ರಜೆಯೂ ಸ್ನೇಹಿತ, ತತ್ವಜ್ಞಾನಿ ಹಾಗೂ ಮಾರ್ಗದರ್ಶಕ ನಾಗಿದ್ದುಕೊಂಡು, ಚರ್ಮಕ್ಕೆ ಎಣ್ಣೆಯು ಕೊಡುವಂತೆ, ಅವರಿಗೆ ಬಯಲಿನ ಯುದ್ಧ ಶಕ್ತಿ ಹಾಗೂ ಸೌಜನ್ಯತೆಯನ್ನು ಕೊಟ್ಟಿದ್ದನು. ದಾಳಿಕಾರ ವಿಭಾಗಕ್ಕೆ ತೊಪ್ಪೈಯು ಸೇನಾಧಿಪತಿಯಾಗಿದ್ದನು. ಅವನ ಕೈಯಲ್ಲಿ ಒಂದು ಉದ್ದದ ಚಾಟಿ ಇತ್ತು. ಆ ಚಾಟಿಯು ಒಂದು ತರದ ಸಮುದ್ರದ ಮೀನಿನ ಬಾಲ. ಅದರಿಂದ ಹೊಡೆದರೆ ಅದು ತನ್ನ ಗುರುತನ್ನು ಚರ್ಮದ ಮೇಲೆ ಉಳಿಸುತ್ತದೆ. ಅವನು ಕೆಂಕಳಲ್ಲಿ ಒಂದು ಉದ್ದದ ದಂಡವನ್ನೂ ಹಿಡಿದುಕೊಂಡಿದ್ದರು. ಆ ನೀಳಿ ಬಣ್ಣದ ಪರ್ವತದಲ್ಲಿ ಅನೇಕ ದೀಪಗಳು ಮಿನುಗುತ್ತಿದ್ದವು. ದೂರದಲ್ಲಿ ಕತ್ತೆಕಿರುಬಗಳು ಬೊಬ್ಬಿಡುತ್ತಿದ್ದವು.

ಮುರುಗನು ರಾಮುವನ್ನೂ, ರಾಮು ಮುರುಗನನ್ನೂ ನೋಡಿದರು. ಅಂತಹ ಮುಖವನ್ನು ನೋಡಿದ್ದುದರ ಜ್ಞಾಪಕವನ್ನುಂಟು ಮಾಡಿಕೊಳ್ಳಲು ತೊಪ್ಪೈಯು ಪ್ರಯತ್ನಿಸುತ್ತಿದ್ದನು. ಕ್ಷಣಕಾಲ ಆಶ್ಚರ್ಯವೇ ಎಲ್ಲೆಲ್ಲಿಯೂ ಕವಿದಿತ್ತಾದರೂ, ಎಲ್ಲರೂ ನೋಡುತ್ತಿದ್ದಂತೆ ಮುರುಗನು ಎದ್ದು ರಾಮುವಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು.

'ಇದು ನೀನೋ, ಮುರುಗ, ನನ್ನ ಕಣ್ಣುಗಳನ್ನು ನಾನು ನಂಬಲೇ, ಅಥವಾ ನಾನು ಕೇವಲ ಕನಸು ಕಾಣುತ್ತಿದ್ದೇನೆಯೇ? ಇದು ನೀನೋ, ಮುರುಗ? ನೀನು ಅದು ಹೇಗೆ ಕಾದಂಬರಿಯ ನಾಯಕನಂತಾದೆ?—ಹೇಳು ಮುರುಗ ನಿನ್ನ ಕಥೆಯನ್ನು. ನಾಯಕ ಹಾಗೂ ಇನ್ನೊಬ್ಬನೊಡನೆ ಕಾರಾಗೃಹದಿಂದ ತಲೆ ತಪ್ಪಿಸಿಕೊಂಡು ಓಡಿ ಹೋಗಿದ್ದ ಮುರುಗನು ನೀನಲ್ಲವೇ? ಈ ಎಲ್ಲಾ ತೊಂದರೆಯ ಮಡುವಿನಲ್ಲಿ ನೀನು ಅದ ಹೇಗೆ ಸಿಕ್ಕಿಕೊಂಡೆ?"

"ಹೌದು, ಸ್ವಾಮಿ, ನಾನೇ ಮುರುಗನಿದ್ದೇನೆ, ನಿಮ್ಮ ಅಲವಂತಿಯ ಮುಂಚಿನ ಆಳುವವ. ನಿಮ್ಮ ಸ್ವಾಧೀನಕ್ಕೆ ಈ ದೇಹವನ್ನೊತ್ತಿದ್ದೇನೆ; ಕ್ಷಮೆಯನ್ನೂ ಯಾಚಿಸುತ್ತಿದ್ದೇನೆ. ನಮ್ರತೆಯಿಂದ ಹಾಗೂ ಸಂತೋಷದಿಂದ ನಿಮ್ಮ ಸಮ್ಮುಖದಲ್ಲಿ ನ್ಯಾಯಕ್ಕೆ ಮಣಿಯಲು ಸಿದ್ಧನಿದ್ದೇನೆ."

ಮುರುಗ ನಿನಗೆ ಒಂದು ಚಲೋ ತೋಟ ಹಾಗೂ ಪ್ರಾಮಾಣಿಕತನದಿಂದ ಜೀವಿಸಲು ಸಾಕಾಗುವ ಸಂಬಳ ಗಳಿಸುವಂತೆ ಗೆಲಸನ್ನ ನಾನು ಕೊಟ್ಟಿದ್ದೆ. ಅಂತಹ ಬದಲಾವಣೆ ನಿನ್ನಲ್ಲಾಯಿತು? ನೀನು ಅದು ಹೇಗೆ ಮಾರ್ಗರಹಿತ ಈ ಪರ್ವತದ ಮೇಲೆ ಬಂದೆ? ನಿನ್ನ ಪೂರ್ಣ ಕಥೆಯನ್ನು ಹೇಳು. ನಾಶಿಗ ನಿನ್ನ ಕೈದಿಯಾಗಿರುವದು ನಿಜವಾದರೂ ಒಮ್ಮೆ ಸಹಾಯ ಮಾಡಿರುವ ದಸಿಯಾಗಿದ್ದೆನಲ್ಲವೇ?

'ಸ್ವಾಮೀ ವಿಧ್ವಂಸನಂತ ಮಾತಾಡುವುದಕ್ಕೆ ಕ್ಷಮಿಸಿರಿ. ನಾಶಿಗ ವಿಶ್ವದ ವಿದ್ಯಾಲಯದಲ್ಲಿ ವಿಧ್ವಂಸನಾಗಿದ್ದೇನೆ. ನನ್ನ ಜೀವನವು ನನಗನೇಕ ಅನುಭವಗಳನ್ನುಂಟುಮಾಡಿದೆ. ಪ್ರತಿ ಸಾಲಿನ ಮೂಲ ಶೋಧಕರಿಗೆ, ಅವರು ತಪ್ಪು ಮಾಡಿದಿದ್ದರೂ, ಶಿಕ್ಷೆ ಕೊಡಲಾಗುತ್ತದೆ. ನಾನೆಂದ ಉಪ—ದಂಡಾಧಿಕಾರರ ಕಾರ್ಯಾಲಯದಿಂದ ಸಂತೋಷದಿಂದ, ನಗು ನಗುತ್ತ, ಕೇಕೆ ಹಾಕುತ್ತ ಪನಗ ಥ ಪಿಸಿದ್ದ ಎಂದೆಂದಿಗೂ ತಾಟ ನನ್ನವಾಗುತ್ತದೆಂಬದೇ ಆ ಸಂತೋಷಕ್ಕೆ ಕಾರಣ. ನೀವೆಂದು ನನಗೆ ಅವಹಾದ ನವನೀತ್ತಾಗ, ನನಗೆ ಬೇಕಾದ್ದುದಕ್ಕಿಂತಲೂ ಹೆಚ್ಚಿಗೆಯೇ ಕೊಟ್ಟಿದ್ದೀರಿ. ಕ್ರಮಶಃ ಭೋಗ ವಿಲಾಸದಲ್ಲಿ ಕ್ರೀಡೆಯಾಡಲಾರಂಭಿಸಿದೆ. ಸರಕಾರವು ಆಕರ್ಷಕವಾಗಿ ಕೊಡುತ್ತಿದ್ದಂತಹ ಮದ್ಯವನ್ನು ಕುಡಿಯಲಾರಂಭಿಸಿದೆ.'

ತೊಪ್ಪೈಯತ್ತ ಬಾಳು ತೋರಿಸುತ್ತ ಮುರುಗನು ಕ್ಷಣಕಾಲ ಸುಮ್ಮನಾದನು.

"ಇಲ್ಲಿ ನಿಂತಿರುವ ತೊಪ್ಪೈಯು ನನ್ನ ಮಾಲೀಕರ ಕಡೆ ರನ ಭೂತ ಇದ್ದನೆ. ನನ್ನ ಚಿಕ್ಕ ಹಳ್ಳಿಯಲ್ಲಿ ಮದ್ಯದಂಗಡಿ ಇದ್ದಿಲ್ಲವೆಂಬುದು ನಿಮಗೆ ಗೊತ್ತಿದೆ. ಸರಕಾರವು ಒಂದು ಗುತ್ತಿಗೆಯನ್ನು ತೆರೆಯಲು ಇಚ್ಛಿಸಿತ್ತು. ನನ್ನ ಈ ಗಳಿಯನು ತಿಳಿದೇ ಅಲೋಚನೆಯಲ್ಲಿದ್ದನ, ನನ್ನಲ್ಲೂ ಆ ಅಂಕುರಿಸಿತು. ನನ್ನ ತಂಗಿನ ಮಂಗಗಳಿಂದ ಬಂಗಾರವನ್ನು ಪಡೆಯಲು ನಾನು ಮದ್ಯದಂಗಡಿಯನ್ನು ಗುತ್ತಿಗೆಗೆ ಪಡೆದುಕೊಂಡೆನು. ಅದರಿಂದ ಒಡೆಯರ ಶಾಪ ಹಾಗೂ ಶ್ರೀಮಂತರ ಹಗೆತನ ನನ್ನನ್ನು ಕಾಡಿತು. ಆಕರ್ಷಣೀಯ ತೋಟದ ಯಜಮಾನನಾಗಿರುವದನ್ನು ಅವರು ಸಹಿಸದಾದರು. ಒಬ್ಬ ಪಡ್ಯಾಚಿ ಒಂದು ತೋಟದ ಮನೆಯಲ್ಲಿ ದೊರೆಯ ಹಾಗೆ ಬದುಕಿಕೊಂಡಿರುವದನ್ನು ಅವರಿಂದ ನೋಡಲಿಕ್ಕಾಗಲಿಲ್ಲ. ಆ ಕಳ್ಳಂಗಡಿಯು ನನ್ನ ಪತನದ ಮೂಲ ಕಾರಣವಾಯಿತು, ನನ್ನ ಪೆಟ್ಟಿಗೆ ಬರಿದಾಯಿತು, ನನ್ನ ಪೆಟ್ಟಿಗೆ ಬಾದಾಯಿತು. ಆ ತ್ಮಕ್ಕೆ ಕಳಂಕ ಬಂತು. ಮನಸ್ಸಾಕ್ಷಿಗೆ ದ್ರೋಹವಾಯಿತು. ಉದ್ವೇಗ ಹಾಳಾಯಿತು. ವಿತ್ತವ್ಯಯ ಪಿದವಾಯಿತು. ಪ್ರಾಮಾಣಿಕತನಕ್ಕೆ ಸಂಭವವಾಯಿತು. ನನ್ನ ಭದ್ರತೆಗೆ ಜಾಮೀನು ಇಲ್ಲದಂತಾಯಿತು. ಹೀಗೆ ಎಲ್ಲವನ್ನೂ— ಉತ್ತಮ ನಾಗರೀಕ ಜೀವನವನ್ನು — ಕಳೆದುಕೊಂಡೆನು. ಕೊನೆಗದು ನನ್ನನ್ನು ಅನಾಗರಿಕ ಅದರೂ ಸುಹೃದಯಿ ಮಾನವರಿರುವ ಈ ಕಾಡು ಪ್ರದೇಶಕ್ಕೆ ಕರೆದುಕೊಂಡು ಬಂದಿತು."

'ಆದರೆ, ಮುರುಗ, ಈ ಪಂಬಿಗಾರರ ಗುಂಪಿಗೆ ನೀನು ಅದ ಹೇಗೆ ಮುಖಂಡನಾದಿ ಎಂಬ ಕಥೆಯನ್ನು ಸ್ಪಷ್ಟವಾಗಿ ತಿಳಿಸಲಿಲ್ಲ. ಹೆಂಡದಂಗಡಿಯ ಗುತ್ತಿಗೆದಾರರು ಕೊಲೆಗಾರರ ಮುಖಂಡರಾಗಬೇಕೆಂದೇನಿಲ್ಲ."

"ಸ್ವಾಮೀ, ಕಥೆಯನ್ನು ಚುಟುಕಾಗಿ ಹೇಳುತ್ತೇನೆ. ಸ್ವಾತಂತ್ರ್ಯದಿಂದ ಸರವು ನಗೆ ನಾನು ಹೇಗದಿಂತಿದ್ದಲ್ಲಿ ಬೇರೆಯವರನ್ನು ದೂಷಿಸಬಹುದಿತ್ತು. ಹೆಂಡದಂಗಡಿಯು ಎಲ್ಲವನ್ನೂ ನುಂಗುವಂತಹದ್ದಿದೆ. ಅದರ ಗುತ್ತಿಗೆದಾರನು ಹಲವಾರು ಜನರ ರಹಸ್ಯಗಳನ್ನು ತಿಳಿಯುತ್ತಾಂಡವನಿರುತ್ತಾನೆ. ನಮ್ಮ ಹಳ್ಳಿಯಲ್ಲಿ ಕೃಷಿ ಸಂಬಂಧದ ಒಂದು ಬಂಡ ನಡೆಯಿತು. ಅದರಲ್ಲಿ ಕೆಲವು ನಗರರಕ್ಷಕರಿಗೆ ಪೆಟ್ಟು ಬಿತ್ತು. ಒಳಸಂಚಿನ ವಿಷಯ ನನಗ ಚನ್ನಾಗಿ ಗೊತ್ತಿದೆ. ಆದರ ಅದರಲ್ಲಿ ನನ್ನದೇನೂ ಪಾತ್ರ ಇರಲಿಲ್ಲ. "ಭಯ ನ್ಯಾಯಾಧೀಶನ ಮುಂದ ನಾನು ಎಳೆಯಲ್ಪಟ್ಟನು. ನನ್ನ ಸ್ಥಿತಿಗತಿಯತ್ತ ಗಮನ ಕೊಡುವ ಗೋಜಿಗೇನೇ ಅವನು ಹೋಗಲಿಲ್ಲ. ಹೌದು, ನನ್ನ ಬಳಿ ಇದ್ದುದೆಲ್ಲವನ್ನೂ ನ್ಯಾಯವಾದಿಗಳಿಗೆ, ನಗರರಕ್ಷಕರಿಗೆ ಹಾಗೂ ಸ್ನೇಹಿತರಿಗೆ ಎತ್ತು ಒಂದು ಬಿಗದವರಿಗ ಗಿ ಖರ್ಚು ಮಾಡಿ ಒಂದು ವರ್ಷದ ಶಿಕ್ಷೆಯನ್ನು ಅನುಭವಿಸಬೇಕಾಯಿತು. ನಾನು ನಿರಪರಾಧಿ, ಆದರೆ ಶ್ರೀಮ್ಮರ್ಧದಲ್ಲಿ ನಾನು ತಪ್ಪಿತಸ್ಥನಿದ್ದೇನೆ. ನಾನು ಕೈಯನ್ನು ಬಡವರಿಗೂ ಅವರ ದೈನಂದಿನ ಆಹಾರವನ್ನು ದೊರಕಿಸಿಕೊಡುತ್ತೇನೆ. ಅದಲ್ಲವನ್ನು ನ ನೀಗ ಕಾಣುತ್ತಿದ್ದೇನೆ. ದೇವರು ಪ್ರಬಲ ಹಾಗೂ ನ್ಯಾಯಪೂರ್ಣ ಇದ್ದಾನೆ.'

"ಅವರಿಗೆ ನಿನ್ನ ಈಗಿನ ಪುರವಣಿಕೆ ಬೇಕಾಗಿಲ್ಲ, ಮುರುಗ, ಒಂದು ವರ್ಷದ ನಂತರ ನೀನೇತಕ್ಕೆ ಹಿಂದಕ್ಕೆ ಹಳ್ಳಿಗೆ ಹೋಗಲಿಲ್ಲ? ನೀನು ಅದು ಹೇಗೆ ಈ ಹೊಸ ಬಳಗವನ್ನು ಹಾಗೂ ಮುಖಂಡತ್ವವನ್ನು ಸಂಪಾದಿಸಿಕೊಂಡೆ?"

'ನಾನು ಹೇಗೆ ಹಾಗೂ ಎಲ್ಲಿಗೆ ಹೋ

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಗಲಿಕ್ಕೆ ಸಾಧ್ಯವಿತ್ತು? ಓರ್ವ ತಪ್ಪಿಸಿಕೊಂಡು ಹೋಗಿರುವ ಕೈದಿ—ಅವನು ಕುಷ್ಟರೋಗಿ ಅಲ್ಲವೇನು? ತೊಪ್ಪೈಯು ದಂಗೆ ಎದ್ದು ಕಾರಾಗೃಹದಿಂದ ತಪ್ಪಿಸಿಕೊಂಡನು. ನಾನು ಅವನನ್ನು ಮುಖಂಡನೊಂದಿಗೆ ಅನುಸರಿಸಿದೆ. ಜೀವವು ಮಧ್ಯಗಾಳಿಯಲ್ಲಿ ನೇತಾಡುತ್ತ ತೊಂದರೆಗೊಳಪಟ್ಟಿದ್ದಾಗ ಮುಖಂಡನು ನಮಗೆ ಆಶ್ರಯಸ್ಥಾನವನ್ನಿತ್ತನು. ಅವನು ನನ್ನ ಕಥೆಯನ್ನು ಕೇಳಿ ವ್ಯಸನವನ್ನು ವ್ಯಕ್ತಪಡಿಸಿದನು. ಈ ಬೆಟ್ಟಗಳಲ್ಲಿ ರಕ್ಷಣೆಯನ್ನೀಯುವ ಧೈರ್ಯದ ಮಾತುಗಳನ್ನು ನನಗೆ ಕೊಟ್ಟಿದ್ದಾನೆ. ನೀವು ಬೇಟೆಯಾಡುವ ಈ ಉಗ್ರ ಜನರು ನೀತಿ, ಗುಣ, ಸತ್ಯ ಹಾಗೂ ಕರುಣೆಯಲ್ಲಿ, ನಿಮ್ಮನಾಗರಿಕರೆಂದೆನಿಸಿಕೊಂಡು ಪಟ್ಟಣಗಳಲ್ಲಿ ಅಲೆದಾಡುವವರಿಗಿಂತ ಉತ್ತಮರಿದ್ದಾರೆ. ಈ ಕ್ಷಣದ ವರೆಗೂ ನಾವು ಯಾವ ಬಡವನನ್ನೂ ಸುಲಿಗೆ ಮಾಡಿರುವದಿಲ್ಲ. ನಮ್ಮ ದೈನಂದಿನ ಹಾರಕ್ಕೆ ದಾರಿ ತೋರಿಸಿ ಕೊಡಿರಿ. ಆಗ ನಾವು ಸಂತೋಷದಿಂದ ಈ ಪರ್ವತ ಗುಹೆಗಳನ್ನು ಬಿಟ್ಟುಬಿಡುತ್ತೇವೆ. ಅಲವಂತಿ ಹಾಗೂ ಪವಿತ್ರ ನದಿಯ ಸಿಹಿ ನೀರಿಗಾಗಿ ನಾನು ಹಲುಬುತ್ತಿದ್ದೇನೆ. ಈ ಕೆಲ ಸಮಯದಿಂದ ನನ್ನ ಹೆಂಡತಿ ಮಕ್ಕಳ ವಿಷಯ ನನಗೇನೂ ಗೊತ್ತಿರುವದಿಲ್ಲ, ಸುದ್ದಿಯೇ ಇಲ್ಲ.

"ಒಳ್ಳೆದು, ಮುರುಗ. ಹಿಂದಿನಂತೆ ಈಗಲೂ ನೀನು ನಿಜವನ್ನೇ ಹೇಳುವವ ಹಾಗೂ ಆಲೋಚನಾಶಕ್ತಿಯುಳ್ಳವನಿರುವೆ. ಒಂದೇ ಒಂದು ತಪ್ಪು ಹೆಜ್ಜೆಯು ನಿನ್ನ ಜೀವನದ ಓಟವನ್ನೇ ನಾಶಮಾಡಿ ಬಿಟ್ಟಿದೆ. ಹೆಂಡದಂಗಡಿ ಹಾಗೂ ನಿನ್ನ ಸ್ನೇಹಿತನ ಆತ್ಮಹತ್ಯೆಯೇ ಆ ತಪ್ಪು ಹೆಜ್ಜೆ. ಈ ಪರ್ವತ ಪ್ರದೇಶದಲ್ಲಿ ನೀವು ಎಷ್ಟು ಮಂದಿ ಇದ್ದೀರಿ?"

ತನ್ನ ಮಾತಿನ ಪೆಟ್ಟಿಗೆಯ ಬಾಗಿಲನ್ನು ತೆರೆಯಲು ಸಮಯ ಹೊಂಚು ಹಾಕುತಿದ್ದ ಮುಖಂಡನು ಮುರುಗನ ಬಳಿ ನಿಂತುಕೊಂಡಿದ್ದನು. ಅವನು ಉತ್ತರ ಕೊಟ್ಟನು.

'ನಾವಿಲ್ಲಿ ಮುನ್ನೂರು ಕುಟುಂಬಗಳಿದ್ದೇವೆ. ನಮ್ಮ ಬಳಿ ಹೇರಳ ಹಣವಿದೆ—ಮೂರು ಲಕ್ಷಕ್ಕಿಂತಲೂ ಹೆಚ್ಚು ಇದೆ. ಎಲ್ಲವನ್ನೂ ತಗೆದುಕೊಳ್ಳಿರಿ. ನಿನ್ನ ಪಕ್ಷ ಒಂದು ಆಜ್ಞಾಪತ್ರಿಕೆಯಾದರೂ ಪ್ರತಿ ಒಬ್ಬನನ್ನು ಕಾದುನಿಂತಿದೆ. ಅದನ್ನು ರದ್ದುಗೊಳಿಸಿರಿ. ಶಾಂತ ಜೀವನವನ್ನು ನಡೆಸುವಂತೆ, ಜಗತ್ತಿನಲ್ಲಿ ಉತ್ತಮ ಪೌರರಾಗಿರುವಂತೆ ನಮ್ಮ ಜೀವನವನ್ನು ಬದಲಾಯಿಸಿರಿ."

ಮುರುಗನು ಮಧ್ಯಸ್ಥಿಗೆಗಾರನಂತೆ ಮಾತಾಡಲಾರಂಭಿಸಿದನು. ಅವನ ಸ್ವರ ಹಾಗೂ ಕಣ್ಣುಗಳು ಆನಂದವನ್ನು ಸೂಚಿಸುತಿದ್ದುವು." ನಮಗೆ ಪ್ರತಿಯೋರ್ವರಿಗೆ ಮೂರು ಎಕರೆ ನೆಲ ಹಾಗೂ ಒಂದು ದನವನ್ನು ಕೊಡಿರಿ. ಪ್ರಪಂಚದ ನೈಜಸಂಪತ್ತಿನ ತಯಾರಿಕೆಗಾಗಿ ನಾವು ಹಗಲು ರಾತ್ರಿ ದುಡಿಯುತ್ತೇವೆ. ನಾವು ಎಣ್ಣೆಯನ್ನೀಯುವ ಬೀಜಗಳನ್ನೂ ಹತ್ತಿ ಹಾಗೂ ಧಾನ್ಯಾದಿಗಳನ್ನು ಬೆಳೆಸುತ್ತೇವೆ. ಕೈಕಟ್ಟಿಸಿ ನಮ್ಮನ್ನು ಸೆರೆಮನೆಯಲ್ಲಿಡಬೇಡಿ. ಅದೇನೂ ಪ್ರತಿಫಲವನ್ನೀಯದು. ಹೊರಜಗತ್ತಿಗೆ ದಾರಿಯನ್ನು ತೋರಿಸಿರಿ. ಸ್ವಾಮೀ ನಮ್ಮನ್ನು ರಕ್ಷಿಸಿರಿ. ನಮ್ಮ ಮುಕ್ತಿಗಾಗಿ ದೇವರು ನಿಮ್ಮನ್ನು ಈ ಉದಯಕಾಲದ ಪವಿತ್ರ ವೇಳೆಯಲ್ಲಿ ಕಳುಹಿಸಿದ್ದಾರೆ.'

ಭಾವನಾಪ್ರೇರಿತನಾಗಿದ್ದ ಮುರುಗ ರಾಮುವಿಗೆ ಉದ್ದಂಡ ನಮಸ್ಕಾರಮಾಡಿದನು. ಮುಖಂಡನು ಅವನನ್ನು ಅನುಸರಿಸಿದನು.

ಕ್ಷಣಕಾಲ ರಾಮು ಯೋಚಿಸಿಕೊಂಡು, ಮೆಲ್ಲನೆ ಹೇಳಲಾರಂಭಿಸಿದ.

"ಎದ್ದೇಳು, ಮುರುಗ, ಭಯಪಡಬೇಡ. ಒಂದು ಆಲೋಚನೆ ಹೊಳೆದಿದೆ. ನಿನ್ನನ್ನು ನೋಡಿದಾದಿನಿಂದ ಹಳೆಯ ನೆನಪುಗಳು ಮರುಕಳಿಸುತ್ತಿವೆ. ಈ ಅರ್ಣಿನದಿ ನಿಮ್ಮ ಈ ಪರ್ವತದ ಆಟದ ಮಗು- ಮಳೆಗಾಲದಲ್ಲಿ ಯಥೇಷ್ಟ ನೀರನ್ನು ಕೊಟ್ಟರೂ ಒಂದೇ ಒಂದು ದಿನದಲ್ಲದನ್ನು ಸಮುದ್ರದಲ್ಲಿ ಹಾಳುಮಾಡಿಬಿಡುತ್ತದೆ. ಆ ನದಿಯು ಕಣಿವೆಯಿಂದ ಬಯಲಿಗೆ ಕವಲು ಒಡೆಯುವಲ್ಲಿ ಅದಕ್ಕೊಂದು ಉತ್ತಮ ಅಣೆಕಟ್ಟನ್ನು ಹಾಕಬೇಕು. ಇಲ್ಲಿ ಪೊದರುಗಳಿಗಾಶ್ರಯವಿತ್ತು, ಹಲವಾರು ಮೈಲುಗಳಷ್ಟು, ಹಾಳಾಗಿ ಮಲಗಿರುವ ಈ ದೊರಗು ನೆಲವನ್ನು ಹಸುರು ಗದ್ದೆಯನ್ನಾಗಿ, ನಗುತ್ತಿರುವ ಹಳ್ಳಿಯನ್ನಾಗಿ ಮಾರ್ಪಡಿಸಬೇಕು. ಅದೆಲ್ಲ ನಿಮ್ಮ ಹಣ ಹಾಗೂ ಶ್ರಮದಿಂದ ನಿಮಗಾಗಿ ರಚಿಸಲ್ಪಡಬೇಕು. ಈ ವಿಷಯವನ್ನು ಸರಕಾರದ ಗಮನಕ್ಕೆ ನಾನು ತರುತ್ತೇನೆ. ಆರಂಭದ ದಿನ ನಿಮಗೆಲ್ಲರಿಗೂ ಒಂದೊಂದು ನೊಗ ಮತ್ತು ನೇಗಿಲನ್ನು ನಾನು ಬಹುಮಾನವಾಗಿ ಕೊಡುತ್ತೇನೆ."

ನಾಗಲಾಪುರಂ ಹಾಗೂ ಅಲ್ಲಿಯ ಹಳೆಯ ಮತ್ತು ಹೊಸ ಜನರ ಚರಿತ್ರೆಗೆ ಮುರುಗನು ರಾಮುವಿನ ಒಂದು ಪ್ರಥಮ ಘಟನೆ. ಅವನು ಬಂದಂದಿನಿಂದ ಎಲ್ಲರ ಮೇಲೂ ತನ್ನ ಪ್ರಭಾವವನ್ನು ಬೀರಿದ್ದನು.

ತಿರುಚಿನಾಪಳ್ಳಿಯ ಕಾರಾಗೃಹದಿಂದ ತಪ್ಪಿಸಿಕೊಂಡು ಬಂದಂದಿನಿಂದ ಮುರುಗನ ಸಹವಾಸವು ಮುಖಂಡನ ಜೀವನವನ್ನು ಬದಲಾಯಿಸಲಾರಂಭಿಸಿತ್ತು.

ಮುರುಗನ ಕಣ್ಣುಗಳು ರೈತನ ಶಾಂತ ಜೀವನದ ಮೇಲಿನ ಪ್ರೀತಿಯ ಕಿರಣಗಳನ್ನು ಬೀರುತ್ತಿದ್ದುವು. ಮುಖಂಡನ ಕಣ್ಣುಗಳೂ ಅಂತಹ ಕಿರಣಗಳನ್ನು ಸೂಸುತ್ತಿದ್ದುವು. ಹಾಗಾಗಿ ಅವನು ಸಂತೋಷದಿಂದ ತನ್ನ, ದಾಳಿಕಾರನ ಅಧಿಕಾರದ ಮುದ್ರೆಕೋಲನ್ನು ತೊಪ್ಪೈಯ ಆಕ್ರಮಣಕ್ಕಾಗಿ ಹಾಗೂ ಪ್ರತೀಕಾರಕ್ಕಾಗಿ ಮುಂದಕ್ಕೆ ಧಾವಿಸುತ್ತಿರುವ ಕೈಯ್ಯಲ್ಲಿ ಬಿಟ್ಟು ಶಾಂತ ಜೀವನವನ್ನು ನಡೆಸಲಾರಂಭಿಸಿದ್ದ. ಅವನಿಗೆ ಗುರು ಮುರುಗನು ಸುಮ್ಮನೆ ಅವನನ್ನು ಅನುಸರಿಸುತ್ತಿದ್ದ. ಅವನು ಆಶ್ಚರ್ಯ ಚಕಿತನಾಗದೆ ಸಂತೋಷದಿಂದಲೇ ಬದಲಾವಣೆಗಳಿಗೆ ಆಹ್ವಾನವೀಯುತ್ತಿದ್ದ. ಅದುವೆ ರಾಮುವನ್ನು ಕಂಡೊಡನೆ ಹೊಸ ದಿವ್ಯ ಬಾಳಿನ ಬೆಳಕನ್ನು ತೋರಿಸಿತ್ತು.

ಪೂರ್ಣ ಕಂಗೆಟ್ಟಿದ್ದ ತೊಪ್ಪೈಯ ಮನಸ್ಸು ಅಲ್ಲಿ ಇಲ್ಲಿ ಸುತ್ತಾಡುತ್ತಿತ್ತು. ತನ್ನ ಕಣ್ಣುಗಳನ್ನೇ ಅವನು ನಂಬಲಿಲ್ಲ. ಆದರೂ ಅವನಿಗೆ ಸತ್ಯ ಸಮೀರನ ಪರಿಚಯವಾಗುತ್ತ ಬಂತು. ಆ ಕಾಂತಿಮಯ ನೋಟದ ಅಪರಿಚಿತ ವ್ಯಕ್ತಿ ಬೇರೆ ಯಾರು ಇರದೆ ಮುರುಗನ ಸ್ವಾಮಿ, ಅಲವಂತಿಯ ರಾಮು, ಎಂದು ಅವನಿಗೆ ತಿಳಿಯಿತು. ಮಣ್ಣಿನೊಳಗೆ ಬೇರು ಬಿಟ್ಟಿರುವ ಮರ, ಗಾಳಿಯ ಗಡಿಬಿಡಿ ಇಲ್ಲದೆ, ಬೇಸಿಗೆಯ ಕಾಲದಲ್ಲಿ ಸೌಮ್ಯ ಮಳೆಯನ್ನು ಸ್ವೀಕರಿಸುವಂತೆ ರಾಮುವಿನ ನೋಟ ಹಾಗೂ ಸ್ವರಗಳಿಂದ ಅವನು ಹಿಡಿದು ನಿಲ್ಲಿಸಲ್ಪಟ್ಟಿದ್ದನು.

ಪರ್ವತದ ಇಳಿಜಾರಿನಲ್ಲಿ ಕೆಲವು ಪರಿಮಳದ ಹೂವಿನ ಮರಗಳಿದ್ದುವು. ಅವು ವರ್ಷ ವರ್ಷವೂ ಅಗಲವಾದ ಎಲೆಗಳನ್ನು ಕೊಡುತ್ತಿದ್ದುವು. ಆದರೆ ಒಂದು ಅನಿರೀಕ್ಷಿತ ರಾತ್ರಿ ಅದೊಂದು ಅತ್ಯದ್ಭುತ ಶಕ್ತಿಯು ಗುಡುಗು-ಮಿಂಚುಗಳ ರೂಪದಲ್ಲಿ ಬಂದು ಆ ಮರಕ್ಕೆ ಮುತ್ತನ್ನಿತ್ತಿತ್ತು. ಆ ಮರವು ಹೂವಿನ ಮೊಗ್ಗೆಗಳನ್ನೀಯಲಾರಂಭಿಸಿತು. ಆದರೆ ಅಂದಿನಿಂದ ಆ ಮರದಲ್ಲಿ ಎಲೆಗಳಿಲ್ಲ. ಆದರೂ ಬುಡದಿಂದ ತುದಿಯ ವರೆಗೆ ಬಾಡದ ಬಿಳಿ ಹಾಗೂ ಸುಗಂಧಯುಕ್ತ ಪುಷ್ಪಗಳನ್ನು ಕೊಡುತ್ತ, ಆ ಮರವು ಅದೆಷ್ಟೋ ವರ್ಷಗಳಿಂದ ಸಾಲಂಕೃತ ನವ ವಧುವಿನಂತೆ ನಿಂತುಕೊಂಡಿದೆ.

ತೊಪ್ಪೈಯು ಆ ಜಾತಿಯವನೆನ್ನಬಹುದು. ರಾಮುವಿನ ಅದ್ಭುತ ಶಕ್ತಿ ತೊಪ್ಪೈಯಲ್ಲಿದ್ದ ಹಳೆಯ ಎಲೆಗಳನ್ನು ತೆಗೆದು ಬಿಸಾಡಿ ಹೊಸ ಹೂಗಳನ್ನು ಕೊಡುವಂತೆ ಪರಿವರ್ತಿಸಿದೆ. ಹೌದು. ಪ್ರಪಂಚದಲ್ಲಿರುವ ಎಲ್ಲಾ ಕೆಟ್ಟ ಜನರು ದುರ್ಜನರೇ ಇರುತ್ತಾರೆ. ಆದರೆ ಒಮ್ಮೆ ಅನಿರೀಕ್ಷಿತ, ಎಣಿಸಲಾಗದಂತಹ, ದೈವಿಕ ಶಕ್ತಿಯ ಅನುಭವ ಅವರಿಗಾಯಿತೆಂದರೆ ಅಂದರೆ ಆ ದುರಭ್ಯಾಸದ ಶವ ಸಂಸ್ಕಾರವಾಗಿಬಿಡುತ್ತದೆ.

(ಮುಂದುವರಿಯುವುದು.)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-60ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.

ನವಯುಗ

26—5—1966



೨೦
ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವೊದಲು—

ಜಾನಕೀಪತಿ ರಾಮುಚಂದ್ರ ಪದವಿ ಪಡೆಯದೆ ಆಲವಂತಿಯ ಅಸ್ತಿಪಾಸ್ತಿಗಳನ್ನು ಮಾರಿ ಕಲೆಕ್ಟರ್ ಕಡೆಲರ ಶಿಬಿರ ಗುಮಾಸ್ತನಾದ. ಸುದೈವದಿಂದ ಕಡಲರ ಸಿಫಾರಸಿನ ಮೇಲೆ ದೂಸಿಯ ಉಪತಾಲೂಕಧಿಕಾರಿಯಾದ. ಕರ್ತವ್ಯ ದಕ್ಷ ರಾಮುವಿಗೆ ಕಡಲರ ಗೃಹ ಖಾತೆಯಲ್ಲೇ ಉನ್ನತ ಹುದ್ದೆಯೂ ದೊರೆಯಿತು.

ರಾಮುವಿನ ಒಕ್ಕಲು ಮುರುಗ ಶ್ರೀಮಂತನಾದಂತೆ ದುರ್ವ್ಯಸನಗಳಿಗೂ ಬಲಿಯಾದ ದೊಂಬಿಯಲ್ಲಿ ಭಾಗವಹಿಸಿದನೆಂಬುದರಿಂದ ದಂಡನೆಗೆ ಗುರಿಯಾದರೂ ಸೆರೆಮನೆಯಿಂದ ತಪ್ಪಿಸಿ ಹೋಗಿ ದರೋಡೆಗಾರ ತಂಡದ ಗುರುವಾದ. ರಾಮು ಸಾಹಸ–ಮಾನವತೆಗಳ ಸಹಾಯದಿಂದ ದರೋಡೆಗೋರರ ಮನಪ್ರೊಲಿಸಿದ.

ರಾಮುವಿನ ಮಿತ್ರ ಕೇದಾರಿ ಉದಯೋನ್ಮುಖ ವಕೀಲನಾದ. ಸುಂದರ ಸ್ಪಷ್ಟಶೀಲ ಕೇದಾರಿ ಚುನಾವಣೆಗೆ ನಿಂತು ಕೀರ್ತಿ ಹಣಮಾಡುವ ಯೋಚನೆಯಲ್ಲಿದ್ದ.

ಇನ್ನು ಮುಂದೆ—

ಚುನಾವಣೆ ಆಗ ತಾನೇ ಮುಗಿದಿತ್ತು. ಯಶಾಂಗನೆ ಕೇದಾರಿಗೆ ಒಲಿದಿದ್ದಳು. ತೊಡಕಿನ ಹಾಗೂ ಕ್ರಮಬದ್ಧ ಸಮಾಜದಲ್ಲಿ ಧೈರ್ಯಕ್ಕೆ ಶ್ರಮಕ್ಕೆ, ಬುದ್ಧಿಶಕ್ತಿಗೆ ಹಾಗೂ ಮುಂದಾಲೋಚನೆಗೆ ಅದು ಕೇವಲ ಬಹುಮಾನ. ಸಂಪಾದನೆಯತ್ತ ಗಮನ ಹರಿಸಿದರೆ ಅನ್ನಿಂದ ತಾನೇ ಸಂಪಾದನೆ ಆಗುತ್ತದೆ. ಅಂದಿನ ವರೆಗೆ ಅವನನ್ನು ರಹಸ್ಯವಾಗಿ ಕಾಡುತ್ತಿದ್ದ ಹಾಗೂ ದೂರುತ್ತಿದ್ದ ಅವನ ಸೂಕ್ಷ್ಮಗ್ರಾಹಕ ಆದರೆ ಅಸೂಯಾಪರ ಸ್ನೇಹಿತರು ಉಪಾಯವಿಲ್ಲದೆ ಈಗ ಚೆನ್ನಾಗಿ ಹೊಗಳಲು ಪ್ರಾರಂಭಿಸಿದರು.

ಕೇದಾರಿಗೆ ಈಗ ಎಲ್ಲೆಲ್ಲೂ ಸ್ನೇಹಿತರು ಸಿಗಲಾರಂಭಿಸಿದರು. ಬಡವ ಬಲ್ಲಿದ ಬೇಧವಿಲ್ಲದೆ ಅವನಿಗೆ ಸತ್ಕಾರ ಕೂಟವನ್ನೇರ್ಪಡಿಸಿದರು. ಅವನ ದೆಹಲಿಯ ಪ್ರಯಾಣವು ಸಂತೋಷದಾಯಕವಾಗುವಂತೆ ಅವರು ಸಹಾಯ ಮಾಡಿದರು. ಅವರೆಲ್ಲರ ಮನಸ್ಸಿನಲ್ಲಿ ಸಂದರ್ಭ ಸಿಕ್ಕಿದಾಗ ಕೇದಾರಿ ತಮಗೆ ಸಹಾಯ ಮಾಡಿಯಾನು ಎಂಬ ಆಶೆ ಇತ್ತು. ಚುನಾವಣೆ ತನ್ನನ್ನು ಸಾಲಕ್ಕಿಳಿಸಿದುದನ್ನು ಆ ಸಮಯದಲ್ಲಿ ಆತನು ಮರೆತು ಬಿಟ್ಟನು. ಮನೆಯಲ್ಲಿ ತನ್ನ ಹೆಂಡತಿ ಮಕ್ಕಳು ಕಷ್ಟಪಡುತ್ತಿರುವುದೂ ಆಗ ಜ್ಞಾಪಕಕ್ಕೆ ಬರಲಿಲ್ಲ. ಅಂತಹ ಚಮತ್ಕಾರ ಆಗ ಮಾತ್ರ ಸಾಧ್ಯ.

ಶ್ರೀ ಮಾರ್ಕಂಡಮ್ ಅಯ್ಯರ್ ವಿಧಾನ ಸಭೆಗೆ ಆರಿಸಲ್ಪಟ್ಟಿದ್ದರು. ಆದರೆ ಕೇದಾರಿಗೆ ಸಿಕ್ಕಿರುವಂತಹ ಅಧಿಕ ಯಶಸ್ಸು — ಮತಗಳಲ್ಲಾಗಲೀ, ಸತ್ಕಾರಗಳಲ್ಲಾಗಲೀ—ಅವರಿಗೆ ದೊರಕಿರಲಿಲ್ಲ. ಅವರ ಮಾತ್ಸರ್ಯದ ಕಿಚ್ಚಿಗದು ಮೆಲ್ಲಗೆ ಸೀಮೆ ಎಣ್ಣೆಯನ್ನು ಸುರುವಿದಂತಾಯಿತು.

ತನ್ನ ತರುಣ ಮಿತ್ರನು ನ್ಯಾಯಾಲಯದಲ್ಲಿ ಯಶೋಧುಂಧುಭಿ ಎನ್ನು ಮೊಳಗಿಸುವನೆಂಬುದು ಅಯ್ಯರಿಗೆ ಗೊತ್ತಾಗಿದ್ದರೂ, ಈ ರೀತಿ ದೆಹಲಿಯ ವರೆಗೂ ಅದು ಕೇಳಿಸೀತು ಎಂಬುದನ್ನು ಅವರು ಯೋಚಿಸಿರಲಿಲ್ಲ. ನಿಜವಾಗಿ, ಕೇದಾರಿಯು ಬಲಾತ್ಕಾರದಿಂದ ಮುಖವನ್ನು ಮುಂದಕ್ಕೆ ತರುತ್ತಿದ್ದನಾದುದರಿಂದ ಗಿರಿಗೆ ಜುಲುಮಿನಿಂದ ಉಳುಕನ್ನು ಪಡೆದುಕೊಳ್ಳುತ್ತಾನೆಂದು ರಹಸ್ಯವಾಗಿ ಅವರು ಸಂತೋಷಪಟ್ಟುಕೊಳ್ಳುತ್ತಿದ್ದರು. ಇಬ್ಬರಿಗೂ ಸತ್ಕಾರಕೂಟಕ್ಕೆ ಆಮಂತ್ರಣ ಬರುತ್ತಿದ್ದರೂ ಅಲ್ಲಿ ಕೇದಾರಿಯು ಮುಖ್ಯ ಅತಿಥಿಯಾಗಿರುತ್ತಿದ್ದ. ಹೌದು. ಮದರಾಸಿಗೂ ದೆಹಲಿಗೂ ಬಹಳ ಅಂತರವಿದೆ. ಜನಜಂಗುಳಿ, ಆದರಲ್ಲೂ ಸ್ನೇಹಿತರ ಸಭೆಗಳು ಕೇವಲ ಅವನ ಕರಗಳ ಸ್ಪರ್ಶಕ್ಕಾಗಿ ಹಾತೊರೆಯುತ್ತಿದ್ದುವು. ಮಾರ್ಕಂಡಮ್ ಕೂಡಾ ಅಂತಹ ಸಭೆಗಳಲ್ಲಿ ತನ್ನ ಆಲೋಚನೆಗಳನ್ನು ಅಡಗಿಸಿಟ್ಟು ಕೊಂಡು ಜನರ ಕೂಟದೊಂದಿಗೆ ಒಂದಾಗಿ ಸಂದರ್ಭಕ್ಕೆ ಸರಿಯಾಗಿ ವರ್ತಿಸುತ್ತಿದ್ದರು. ಶಕ್ತಿಯೆದುರಿಗೆ ಮಾನವನು ವಿಚಿತ್ರ ರೀತಿಯಲ್ಲಿ ವರ್ತಿಸುತ್ತಾನೆ.

ಮಾರ್ಕಂಡಮ್ ಅವರಿಗಿಂತ ಕೇದಾರಿಗೆ ಹೆಚ್ಚು ಗೌರವ ಕೂಟಗಳು ಕೊಡಲ್ಪಟ್ಟವು. ಮುಂದಾಲೋಚನೆಯ ಮಾಹಿತಿ ಇರದಿದ್ದ ಅವನ ಮಿತ್ರರು ಮುಕ್ತಿಗೆ ಹಾಕಿ ಅವನಿಗೆ ಉಜ್ವಲ ಭವಿಷ್ಯತ್ತು ಕಾದು ನಿಂತಿದೆ ಎಂದು ಆಡಿಕೊಳ್ಳುತ್ತಿದ್ದರು. ದೆಹಲಿಗೆ ಕೇಂದ್ರಸರಕಾರದ ಗದ್ದುಗೆ ಇರುವ ಸ್ಥಳಕ್ಕೆ ಐಂದ್ರಜಾಲಿಕ ಆಕರ್ಷಣೆ ಇದೆ. ಜನರೆಲ್ಲರೂ ಕೇದಾರಿಗೆ ಗೌರವ ಸಲ್ಲಿಸುತ್ತ ಇರುವದನ್ನು ಕಂಡ ಮಾರ್ಕಂಡಂರವರ ಹೆಮ್ಮೆಯ ಗಿಡಕ್ಕೆ ಬಿಸಿನೀರು ಹಾಕಿದ ಹಾಗಾಯಿತು. ತನ್ನ ತರುಣ ಸ್ನೇಹಿತನನ್ನು ಅವರು ದೆಹಲಿಯ ಲೋಕಸಭೆಗೆ ಅಭ್ಯರ್ಥಿಯನ್ನಾಗಿ ನಿಲ್ಲಲು ಸೂಚಿಸಿದ್ದಾಗ, ಅವನ ಪಾಲಿಗೆ ಖಂಡಿತವಾಗಿ ಸೋಲು ಕಟ್ಟಿಟ್ಟ ಗಂಟು ಎಂದವರು ಮನಸ್ಸಿನಲ್ಲಿ ತೀರ್ಮಾನಿಸಿಕೊಂಡಿದ್ದರು.

ಚುನಾವಣೆ ಮುಗಿದು ಒಂದು ತಿಂಗಳು ಕಳೆದು ಹೋಯಿತು. ಚೆಂದದ ತಾಕೂರ್‌ದಾಸ್ ತೋಟದ ಬಯಲಿನಲ್ಲಿ ಕೊನೆಯ ಮಹಾಗೌರವ ಕೂಟವನ್ನು ಅವನಿಗೆ ಕೊಡಲಾಯಿತು. ಅದು ಒಬ್ಬ ದೊಡ್ಡ ಗುಜರಾಥಿ ವ್ಯಾಪಾರಿಯಿಂದ ಕೊಡಲ್ಪಟ್ಟಿತು. ತಿಂಗಳ ಬೆಳಕಿನಲ್ಲಿ ಆ ಮಹಾಲು ತಾಜಮಹಾಲಿನಂತೆ ಕಂಗೊಳಿಸುತ್ತಿತ್ತು; ಮದ್ರಾಸಿನ ರಿಜ್ ಎಂದೂ ಕರೆಯಬಹುದು. ವಿಶಾಲ ಮದ್ರಾಸು ನಗರದ ಕೊನೆಯಲ್ಲಿ ಅದು ವೈಭವದಿಂದ ತಲೆ ಎತ್ತಿ, ಆದರೆ ದೊಡ್ಡಸ ಮಾಧಿಯ ರೀತಿಯಲ್ಲಿ ಮೌನವಾಗಿ ನಿಂತಿತ್ತು; ಏಕಾಂತತೆಯ ಶೋಭೆಯನ್ನೂ ಅದು ಕಳೆದಿತ್ತು. ಸತ್ಕಾರದ ನಂತರ ಹೆಚ್ಚಿನ ಅತಿಥಿಗಳು ಹೋಗಿದ್ದರು. ಆದರೆ ಕೆಲವರು ಮಾತ್ರ ಚಂದ್ರಕಾಂತ ಶಿಲೆಯ ಪಡಸಾಲೆಯಲ್ಲಿ ಹಾಗೂ ತೆರೆದಿರುವ ಬಿಸಿಲು ಮಾಳಿಗೆಯಲ್ಲೂ ಆತೃಪ್ತಿಯ ಕಣ್ಣುಗಳಿಂದ ತೆಳ್ಳನೆ ಹರಡಿರುವ ಚಂದ್ರನ ಬೆಳಕನ್ನು ಸ್ಪರ್ಶಿಸುತ್ತ ಆಹ್ಲಾದಿಸುತ್ತಿದ್ದರು.

ಮಾರ್ಕಂಡಂ ಮತ್ತು ಕೇದಾರಿ ಇಬ್ಬರೂ ಒಟ್ಟಿಗೆ ಬಿಸಿಲು ಮಾಳಿಗೆಯಲ್ಲಿ ತಡೆ ಇಲ್ಲದೆ ಸಂಚರಿಸುತ್ತ ಗಾಳಿಯ ಹಾಗೂ ಬಹು ದೂರದ ವರೆಗೆ ಕಾಣುತ್ತಿದ್ದ ಸಿರಿವಂತಿಕೆಯ ದೃಶ್ಯದ ಸುಖವನ್ನು ಅನುಭವಿಸುತ್ತಿದ್ದರು. ಮಾರ್ಕಂಡಂ ತನ್ನ ಉದ್ದದ, ಸಪೂರದ ಹಾಗೂ ಅತ್ಯಾಶೆಯ ದೇಹವನ್ನು ದಿಂಬಿನ ಖುರ್ಚಿಯ ಮೇಲೆ ಪವಡಿಸಿದ್ದರು. ಲಘು ಶರೀರದ ಕೇದಾರಿ ಒಂದು ಸಣ್ಣ ಬೆತ್ತದ ಖುರ್ಚಿಯಲ್ಲಿ ಚೆನ್ನಾಗಿ ಕುಳಿತುಕೊಂಡಿದ್ದನು. ಆ ಖುರ್ಚಿಯ ನಾಲ್ಕು ಕಾಲುಗಳೂ ಎತ್ತರದ ಮರಗಳಿಂದ ಕಾರಣ ನಯ ನೆಲದ ಮೇಲೆ ಅತ್ತ ಇತ್ತ ಅಲುಗಾಡುತ್ತಿತ್ತು. ಅದನ್ನೇಕೆ ಆರಿಸಿ ಕೊಂಡಿದ್ದನೆಂಬುದು ಅವನಿಗೇನೇ ಗೊತ್ತಿರಲಿಲ್ಲ. ಅದರಿಂದೆದ್ದು ಬೇರೆ ಉತ್ತಮ ಆಸನಕ್ಕೆ ಹೋಗಲಿಕ್ಕೆ ಅವನಿಗೆ ಮನಸ್ಸು ಬರಲಿಲ್ಲ; ಅದೂ ಏಕೆಂಬುದು ಅವನಿಗೆ ಗೊತ್ತಿರಲಿಲ್ಲ. ಆದಕ್ಕೆಲ್ಲದಕ್ಕೂ ನಾಚಿಕೆಯೇ ಕಾರಣವಿರಬೇಕು.

ಮದ್ರಾಸಿನಲ್ಲಿದ್ದ ಅತಿ ಎತ್ತರದ ಬಿಸಿಲು ಮಹಡಿಗಳಲ್ಲೊಂದಿದ್ದು, ಅತಿ ದೂರದ ವರೆಗಿನ ದೃಶ್ಯವನ್ನು ಕಾಣಲು ಸಹಾಯ ಮಾಡುತ್ತಿತ್ತು. ನಾಲ್ಕು ಮರಗಳ ಆಚೆ ಅಲ್ಲಲ್ಲಿ ತೋಟಗಳು ಎದ್ದು ಕಾಣುತ್ತಿದ್ದುವು. ಅವರು ನೋಡುತ್ತಿದ್ದಂತೆಯೇ ಉಗಿ ಬಂಡಿಯು ಕೂಗುತ್ತ ಓಡಿ ಬಂತು. ಅದು ಭಾರವನ್ನೆಲ್ಲಾ ಹೊತ್ತು ಕೊಂಡು ವೇಗವಾಗಿ ಮುಂದಕ್ಕೋಡಲು ಪ್ರಯತ್ನಿಸುತ್ತಿತ್ತು. ವೇದನೆಯನ್ನು ತಾಳಲಾರದೆಯೋ ಅಥವಾ ಇದೇನು ಮಹಾ ಎನ್ನುತ್ತ 'ಕೂ' ಎಂದು ಆರ್ಭಟಿಸುತ್ತಿತ್ತು. ಅದು ಪವಿತ್ರ ರಾಮೇಶ್ವರಕ್ಕೆ ಯಾತ್ರಿಕರನ್ನು ಕೊಂಡೊಯ್ಯುತ್ತಿದ್ದ 'ಸಿಲೋನ್ ಬೋಟ್' ಮೆಯಿಲ್ ಇತ್ತು.

ದಪ್ಪನೆಯ ಹಸಿರಿನ ಮಧ್ಯದಲ್ಲಿದ್ದ ಬಿರುಕಿನಿಂದ, ಬಿಸಿಲು ಮಹಡಿಯಲ್ಲಿದ್ದ ಕೇದಾರಿಯು ಚಲಿಸುತ್ತಿದ್ದ ಉಗಿಬಂಡಿಯನ್ನು ನೋಡಿದನು. ಬಂಡಿಯು ವಿದ್ಯುದ್ದೀಪಗಳಿಂದ ಸುಸಜ್ಜಿತವಾಗಿತ್ತು. ವಿದ್ಯುದ್ದೀಪಗಳು! ಹಸಿರು ವರ್ಣದ ನೀಲಮಣಿ— ಅಂದರೆ ಹಳೆಯ ಸಾಮಾನು—ಹಳೆ ಕಣಾತದಿಂದಾಗಿದ ಇತ್ರೀಚುಪ್ರ ತಾರೆಯರ ಬಳಿನಲ್ಲಿ ಆ ದೀಪಗಳು ತಮ್ಮ ಪ್ರಕಾಶವನ್ನು ಪ್ರಕಟಿಸಲು ನಾಚುತ್ತಿದ್ದುವು. ಗತ ಘಟನೆಗಳ ಜ್ಞಾಪಕ ಒಂದೊಂದಾಗಿ ಬಂದು ಕೇದಾರಿಯನ್ನು ಮುತ್ತಿಕೊಂಡುವು. ಚಲಿಸುತ್ತಿರುವ ಬಂಡಿಯು ನಂಳಿಂಟದ ಧ್ವನಿ

(ಹದಿನೈದನೇ ಪುಟನೋಡಿರಿ)

(ಹದಿನೈದನೇ ಪುಟನೋಡಿರಿ)

8%	ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು				
					ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	....		5½
6 ತಿಂಗಳಿಂದ	12 ತಿಂಗಳ ಕೆಳಗೆ	....	....		6
12 ತಿಂಗಳಿಂದ	24 ತಿಂಗಳ ಕೆಳಗೆ	....	....		6½
24 ತಿಂಗಳಿಂದ	36 ತಿಂಗಳ ಕೆಳಗೆ	....	....		6¾
36 ತಿಂಗಳಿಂದ	48 ತಿಂಗಳ ಕೆಳಗೆ	....	....		7
48 ತಿಂಗಳಿಂದ	60 ತಿಂಗಳ ಕೆಳಗೆ	....	....		7¼
60 ತಿಂಗಳಿಂದ	84 ತಿಂಗಳ ಕೆಳಗೆ	....	....		7½
84 ತಿಂಗಳಿಂದ	120 ತಿಂಗಳ ಕೆಳಗೆ	....	....		8
ಸೇವಿಂಗ್ಸ್ ಖಾತೆಯ ಮೇಲೆ		...	....		4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ನ್ಯೂಯಾರ್ಕ್ ನಗರದಲ್ಲಿ ಪ್ರಧಾನಿ ಇಂದಿರಾ ಗಾಂಧಿಯವರಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ಅವರ ಎಡಬಲಗಳಲ್ಲಿ ಶ್ರೀಮತಿ ಜಾನ್ ಲಿಂಡ್ಸೆ ಮತ್ತು ಮೇಯರ್ ಶ್ರೀ ಜಾನ್ ಲಿಂಡ್ಸೆಯವರನ್ನೂ ಕಾಣಬಹುದು.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೩೭	೨೬—೫—೧೯೬೬.	No. 37

ಹಂಸಗಳ ಶೋಧ

ಮುಂಬಯಿಯಲ್ಲಿ ಸೇರಿದ ಎ. ಐ. ಸಿ. ಸಿ. ಸಭೆಯ ಕಾರ್ಯಕಲಾಪಗಳ ವರದಿಗಳೇನೇ ಇರಲಿ, ಇಲ್ಲಿಂದ ದೇಶದಲ್ಲಿ ಚುನಾವಣೆಯ ಗಾಳಿ ಬೀಸಲು ಆರಂಭವಾಯ್ತು ಎಂಬುದು ಸ್ಪಷ್ಟ. ಮುಂದಿನ ವರ್ಷ ಫೆಬ್ರವರಿ ಪೂರ್ವಾರ್ಧದಲ್ಲಿ ದೇಶದಲ್ಲಿ ನಾಲ್ಕನೆಯ ಬಾರಿಗೆ ಸಾರ್ವತ್ರಿಕ ಚುನಾವಣೆ ನಡೆಯುತ್ತದೆ. ಕಾಮರಾಜ—ಇಂದಿರಾ ಗಾಂಧಿಯವರು ಜಂಟಿಯಾಗಿಯೇ ಚುನಾವಣಾ ತಂತ್ರದಲ್ಲಿ ಜಯಗಳಿಸುತ್ತಾರೆ, ಅಧಿಕಾರ ಸೂತ್ರ ಕಾಂಗ್ರೆಸ್‌ನ ಕೈಗಳಲ್ಲಿಯೇ ಮತ್ತೆ ಐದು ವರ್ಷಗಳ ಕಾಲ ನಿರಾತಂಕವಾಗಿ ಉಳಿಯುತ್ತದೆ—ಇದು ಕಾಂಗ್ರೆಸಿಗರ ಸಾಮಾನ್ಯ ಅಭಿಪ್ರಾಯ. ಇದನ್ನು ನಿರಾಧಾರವೆಂದು ಅಲ್ಲಗಳೆಯುವಂತಿಲ್ಲ. ಪ್ರಚಲಿತ ಸನ್ನಿವೇಶಗಳಿಂದ ತೂಗಿ ನೋಡುವುದಾದಲ್ಲಿ ಇದೇ ಸರಿಯೆಂದು ತೋರುತ್ತದೆ; ಆದರೂ ಕಾಂಗ್ರೆಸ್‌ನ ಜಯವು ಅದು ಆರಿಸುವ ಹುರಿಯಾಳುಗಳನ್ನೂ ಅವರ ಸಮಾಜ ಸೇವಾ ವೈಖರಿಯನ್ನೂ ತುಂಬ ಹೊಂದಿಕೊಂಡಿರುವುದೆಂದು ಹೇಳದೆ ನಿರ್ವಾಹವಿಲ್ಲ.

ಮತದಾರ ಕ್ಷೇತ್ರದಿಂದ ಉಮೇದ್ವಾರರನ್ನು ಆರಿಸುವುದು ಆತನ ಆಯ್ಕೆಯಾದ ನಂತರ ತನ್ನ ಮತದಾರ ಕ್ಷೇತ್ರದಲ್ಲಿ ಸಂಚಾರ ಮಾಡಿ, ಜನತೆಯ ಕಷ್ಟ-ಸುಖಗಳನ್ನು, ಬೇಕು—ಬೇಡಗಳನ್ನು ಮನವರಿಕೆ ಮಾಡಿಕೊಂಡು ಸರಕಾರದ ಗಮನಕ್ಕೆ ತರಬೇಕು; ತನ್ನ ಮೌಲಿಕ ಅಭಿಪ್ರಾಯಗಳನ್ನೂ ಆಡಳಿತೆಯಲ್ಲಿ ಸಲಹೆ ಸೂಚನೆಗಳನ್ನೂ ಸನ್ನಿವೇಶವನ್ನರಿತು ನೀಡಬೇಕು, ಜನಹಿತವನ್ನು ಸಾಧಿಸಬೇಕು—ಇದಕ್ಕಾಗಿ; ಆದರೆ, ತಮ್ಮ ಕರ್ತವ್ಯ ಪಾಲನೆಯಲ್ಲಿ ನಿರತರಾದ ಪ್ರತಿನಿಧಿಗಳು ಎಷ್ಟು? ಮತದಾರರ ಮುಖವನ್ನೇ ಕಾಣದ ಹುರಿಯಾಳುಗಳೂ ಇದ್ದರು, ಅವರು ಗೆದ್ದೂ ಇದ್ದರು—ಇದು ಗತಕಾಲದ ಮಾತು. ಇಂದು ಪರಿಸ್ಥಿತಿ ಹೀಗಿರುವುದಿಲ್ಲ. ಚುನಾವಣೆಯೆಂದರೇನೆಂಬುದನ್ನು ತಿಳಿಯುವ ಪ್ರಜ್ಞೆ ಮತದಾರರಲ್ಲಿ ಮೂಡಿದೆ. ಒಂದು ಪ್ರದೇಶದ ಒಬ್ಬ ವ್ಯಕ್ತಿ ಇನ್ನೊಂದು ಪ್ರದೇಶದಲ್ಲಿ ಪ್ರತಿನಿಧಿಯಾಗಿ ನಿಲ್ಲುವುದರಿಂದ ಆಯ್ಕೆಗೊಂಡ ಮೇಲೆ ಅವನಿಗೂ ಮತದಾರರಿಗೂ ಸಂಪರ್ಕ ಕಡಿಮೆಯಾಗುವುದೆಂಬುದನ್ನೂ ಆದುದರಿಂದ ಆತನು ಜನತೆಯನ್ನು ಸರಿಯಾಗಿ ಪ್ರತಿನಿಧಿಸಲಾರನೆಂಬುದನ್ನೂ ಗಮನಿಸಬೇಕಾಗುತ್ತದೆ. ಬಹು ಖ್ಯಾತಿಯ ಕೆಲವೇ ಜನರನ್ನು ಬಿಟ್ಟರೆ, ಉಳಿದವರೆಲ್ಲರೂ ಪ್ರಾದೇಶಿಕ ಪರಿಚಯವನ್ನಷ್ಟೇ ಹೊಂದಿದವರು, ಇಂತಹವರನ್ನು ತನ್ನ ಹುರಿಯಾಳುವೆಂದು ಪಕ್ಷ ಆಯ್ಕೆ ಮಾಡಿದರೆ, ಮತದಾರ ಸಾಧಾರಣರ ಅಭಿಪ್ರಾಯ ಇದಕ್ಕೆ ಪ್ರತಿಕೂಲವಾಗಿಯೇ ಇರುವುದೆಂದು ಹೇಳಬಹುದು.

ಇತ್ತೀಚೆಗೆ ಕಾಂಗ್ರೆಸ್ ಪಕ್ಷದಲ್ಲಿ ಚುನಾವಣೆಯ ವಿಷಯದಲ್ಲಿ ತುಸು ಚರ್ಚೆ ನಡೆಯಿತು. ಪಕ್ಷೀಯ ಅಭ್ಯರ್ಥಿಗಳನ್ನು ಆಯುವ ಕ್ರಮಗಳ ಬಗ್ಗೆ ವಿಮರ್ಶೆಯೂ ನಡೆಯಿತು. ರಾಜ್ಯ ಮಟ್ಟದಲ್ಲಿ ದುರ್ವ್ಯವಹಾರಗಳಿಗೆ ಅಧಿಕ ಆಸ್ಪದವಿರುವುದರಿಂದ ಕೇಂದ್ರ ಆಯ್ಕೆಯ ಸಮಿತಿಗೇನೇ ಸರ್ವಾಧಿಕಾರ ನೀಡಬೇಕು— ಇದು ಒಂದು ಅಭಿಪ್ರಾಯ. ಕೇಂದ್ರವು ರಾಜ್ಯದ ಅಭ್ಯರ್ಥಿಗಳ ಬಗ್ಗೆ ಅನಭಿಜ್ಞವಾಗಿರುವುದೇ ಹೆಚ್ಚು. ಆದುದರಿಂದ, ರಾಜ್ಯ ಮಟ್ಟದ ಆಯ್ಕೆಯೇ ನಡೆಯಬೇಕು — ಇದೂ ಇನ್ನೊಂದು ವಾದ. ಆಯ್ಕೆಯನ್ನು ಮಾಡುವಾಗ ಉಮೇದ್ವಾರನು ಪ್ರಚಲಿತ ಸದಸ್ಯನಿದ್ದರೆ, ಆತನು ಮಾಡಿದ ಸೇವೆಯನ್ನೂ ಗಮನಿಸಬೇಕು ಎಂಬುದೊಂದು ಸೂಚನೆ. ಹೀಗೆಯೇ ಅಭಿಪ್ರಾಯ—ಸೂಚನೆಗಳನ್ನು ಕೊಡುತ್ತ ಹೋದರೆ ಇದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಪ್ರತಿಯೊಂದರಲ್ಲಿಯೂ ಹುರುಳೂ ಇದೆ, ಜೊಳ್ಳೂ ಇದೆ. ಇಂತಹ ಪ್ರಸಂಗಗಳಲ್ಲಿ ಇದು ಹೀಗೆಯೇ ಎಂಬ ಅಂತಿಮ ಸಿದ್ಧಾಂತ ಮಾಡುವುದು ದಾರ್ಷ್ಟ್ಯವಾದೀತು—ಹಾಗಿದ್ದರೂ ಈ ಅಭಿಪ್ರಾಯಗಳನ್ನು ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲ. ಚುನಾವಣೆಗಳಲ್ಲಿ ಅಭ್ಯರ್ಥಿಯನ್ನು ಆಯ್ಕೆ ಮಾಡುವುದೇ ಸೇ. ೭೫ರಷ್ಟು ಯಶಕ್ಕೆ ಕಾರಣವಾಗುತ್ತದೆಂಬುದನ್ನು ಮರೆಯಬಾರದು.

ಅಭ್ಯರ್ಥಿಯು ಅದೇ ಪ್ರದೇಶದವನಿದ್ದರೆ, ತುಂಬ ಅನುಕೂಲ. ಸಾಮಾನ್ಯವಾಗಿ ಪ್ರತಿ ಕ್ಷೇತ್ರದಲ್ಲಿಯೂ ಸಮರ್ಥ ಪ್ರತಿನಿಧಿಯಾಗಬಲ್ಲ ಅರ್ಹತೆಯಿದ್ದವರು ಇದ್ದೇ ಇರುತ್ತಾರೆ, ಬಕಗಳ ಮಧ್ಯೆ ಹಂಸವು ಅಡಗಿರುತ್ತದೆ. ಅದನ್ನು ಆರಿಸಿ ತೆಗೆಯುವುದೂ ಒಂದು ತಂತ್ರ. ಈ ತಂತ್ರವನ್ನು ಬಳಸಿ ಉಚಿತ ಆಯ್ಕೆಯನ್ನು ಮಾಡಬೇಕಲ್ಲದೆ ಬಕವನ್ನೇ ಆರಿಸಿದರೆ ಅಥವಾ ಅನ್ಯ ಪ್ರದೇಶದಿಂದ ರಾಜಹಂಸವನ್ನು ತಂದರ ಮತದಾರರು ಮೆಚ್ಚಲಾರರು. ಈ ಶೋಧೆಯನ್ನು ಆರಂಭದಿಂದಲೇ ಸಮರ್ಥವಾಗಿ ಕಾಂಗ್ರೆಸ್ಸು ನಿರ್ವಹಿಸುತ್ತ ಬರಬೇಕು.

ಭಯನಿರಸನವಿಲ್ಲ?

ಬಹುಕಾಲದಿಂದ ದೇಶದಲ್ಲಿ ವ್ಯವಸ್ಥಿತವಾದ ತುರ್ತು ಪರಿಸ್ಥಿತಿಯು ಚುನಾವಣೆಗಳಿಗೆ ಮೊದಲು ಹಿಂತೆಗೆದು ಕೊಳ್ಳುವ ಲಕ್ಷಣಗಳು ಕಂಡುಬರ ತೊಡಗಿವೆಯೆ? ಗೃಹಮಂತ್ರಿ ನಂದಾರೇ ಮೊದಲಾಗಿ ಎಲ್ಲರೂ ಈ ತುರ್ತು ಪರಿಸ್ಥಿತಿಯನ್ನು ಕೊನೆಗೊಳಿಸುವ ಬಗ್ಗೆ ಪರಿಶೀಲಿಸುವುದಾಗಿ ಅವಶ್ಯಕಂಡರೆ ಗಡಿ ರಾಜ್ಯಗಳಲ್ಲಿ ಮಾತ್ರ ಉಳಿಸಿ ಕೊಂಡು ಉಳಿದೆಡೆಗಳಲ್ಲಿ ಹಿಂದೆಗೆಯುವುದಾಗಿ ಹೇಳಿದ್ದರು. ಸದಸ್ಯರ ಬಲವಾದ ಆಗ್ರಹವೇ ಇದಕ್ಕೆ ಕಾರಣ. ಈಗ, ಜಮ್ಮೂ—ಕಾಶ್ಮೀರ, ಅಸಾಮು, ನಾಗಪ್ರದೇಶ, ಮಣಿಪುರ ಮತ್ತು ತ್ರಿಪುರಾಗಳಲ್ಲಿ ಮಾತ್ರ ಭಾರತ ರಕ್ಷಣಾ ಕಾಯಿದೆಯನ್ನುಳಿಸಿ ಉಳಿದೆಡೆಯಿಂದ ಇದನ್ನು ಹಿಂತೆಗೆದುಕೊಳ್ಳಲು ಸರಕಾರ ನಿರ್ಧರಿಸಿದೆ—ತುರ್ತು ಪರಿಸ್ಥಿತಿಯನ್ನು ಕೊನೆಗೊಳಿಸುವಲ್ಲಿದು ಮೊದಲ ಹೆಜ್ಜೆ ಎಂದಿದೆ. ಇದರಿಂದಲೇ ಇರಬೇಕು, ಈ ಕಾಯಿದೆಯನ್ವಯ ಬಂಧಿತರಾಗಿದ್ದವರೆಲ್ಲರನ್ನೂ ಹೆಚ್ಚಿನ ರಾಜ್ಯಗಳಲ್ಲಿ ಮೊದಲೇ ಬಿಡುಗಡೆ ಮಾಡಿದ್ದು. ಕಂಪು ಚೀನಾ ಆಕ್ರಮಣ ಮಾಡಿದಾಗ ಆರಂಭವಾದ ತುರ್ತು ಪರಿಸ್ಥಿತಿಯನ್ನು ಕೊನೆಗಾಣಿಸಲು ಕಾಲ ಪರಿಪಕ್ವವಾಗಿಲ್ಲ ಎಂಬುದು ಕೇಂದ್ರದ ಅಭಿಪ್ರಾಯವಿರುವಂತಿದೆ—ಆದರೆ, ಇಷ್ಟು ಸುದೀರ್ಘ ಕಾಲಾವಧಿಯು ಕಳೆದರೂ ಇನ್ನೂ ಮೂಲಭೂತ ಹಕ್ಕುಗಳನ್ನು ಮೊಟಕು ಮಾಡುವುದು ಪ್ರಜಾಸತ್ತೆಯ ಕ್ಷೇಮದೃಷ್ಟಿಯಿಂದ ಸಮಂಜಸವಲ್ಲ. ಸುವ್ಯವಸ್ಥಿತ ಆಂತರಿಕ ಆಡಳಿತೆ ಮತ್ತು ಸಮರ್ಪಕ ಸಂರಕ್ಷಣಾ ಸಿದ್ಧತೆ ದೇಶದಲ್ಲಿದೆಯೆಂದಾದಲ್ಲಿ ತುರ್ತು ಪರಿಸ್ಥಿತಿ ಕೊನೆಗೊಳಿಸಲು ಮೀನ ಮೇಷ ಎಣಿಸಬೇಕಿಲ್ಲ. ಸರಕಾರದ ವರ್ತನೆಯನ್ನು ನೋಡುವಾಗ ಅದರ ಭಯ ನಿವಾರಣೆಯಾಗಿಲ್ಲವೆಂಬೇ ತಿಳಿಯಬೇಕಾಗುತ್ತದೆ. ಆದರೂ ಈಗ ಇಡುವ ಮೊದಲ ಹೆಜ್ಜೆ ಬೇಗನೆ ಗುರಿ ಸೇರಲಿ— ಇದು ಎಲ್ಲರ ಆಶಯ.

ವಚನ ಸುಧೆ

ಪಂಚೇಂದ್ರಿಯಸ್ಯ ಮರ್ತ್ಯಸ್ಯ
ಛಿದ್ರಂ ಚೇದೇಕಮಿಂದ್ರಿಯಂ।
ತತೋಽಸ್ಯ ಸ್ರವತಿ ಪ್ರಜ್ಞಾ
ದೃತೇಃ ಪಾತ್ರಾದಿವೋದಕಮ್॥

ಪಂಚೇಂದ್ರಿಯವಂತ ಮಾನವನ ಒಂದು ಇಂದ್ರಿಯವು ದೋಷಯುಕ್ತವಾದರೂ ಸಾಕು, ಮಡಕೆಯ ತೂತಿನಿಂದ ನೀರು ಹರಿಯುವಂತೆ, ಅದರಿಂದ ಆತನ ಬುದ್ಧಿಶಕ್ತಿಯು ನಶ್ಯವಾಗ ತೊಡಗುವುದು.

ನರಸಣ್ಣನ ಸರಸ



"ನಮ್ಮ ರಾಜ್ಯದಲ್ಲಿ ಬರಗಾಲವಿದ್ದ ಸಂಗತಿ ಇಂದಿರಾಗಾಂಧಿಗೇ ಗೊತ್ತಿಲ್ಲಾಂತ...."

"ಅಷ್ಟೇ ಇರ್‍ಬೇಕು ಬರಗಾಲ ಕಾಮಗಿರಿಗೆ ಎಂ ಕೇಳಿದ್ರೆ ಏರಡೇ ಕೊಟ್ಟದ್ದು...."

ವೇಣು

ಗೇಹೆ ರಾಜ್ಯದಲ್ಲಿ

ಕನ್ನಡದ ಪಂಚಲೋಹತನ

"ಸ್ವಲ್ಪ ಇಲ್ಲಿ ಕೇಳೀಂದ್ರೆ..."

"ಸ್ವಲ್ಪ ಕೇಳೋದೇನೆ? ಅಲ್ಪ ಜ್ಞಾನಕ್ಕಿಂತ ಅಜ್ಞಾನವೇ ಲೇಸು ಅಂತ ಯಾರೋ ಒಬ್ಬ ಹೇಳಿದ್ದಾನೆ..."

'ಯಾರು ಏನೇ ಹೇಳ್ಲಿ, ನೀವೇನು ಹೇಳ್ತೀರಿ?"

'ನಾನು? ನಾನೂ ಹಾಗೇನೇ ಹೇಳೋವ...."

'ನಿಲ್ಲಿ....ಸ್ವಲ್ಪ...ನೋಡಿ, ಈಗ ಸಿಕ್ಕಿಬಿದ್ರಿ ನೋಡಿ....'

ಆಲ್ವೇ, ಈಗ ಸಿಕ್ಕಿ ಬೀಳೋದೇನು ಬಂತು? ಸಿಕ್ಕಿ ಬಿದ್ದು ವರ್ಷ ಮೂರು ಕಳೆಯುತ್ತ ಬಂತು...."

'ಅಂದ್ರೆ?"

'ಅಂದ್ರೂ ಇಲ್ಲ; ತೊಂದ್ರೂ ಇಲ್ಲ...'

'ನೋಡಿ, ನೀವು ಹೀಗೆ ಒಗಟು ನುಡೀತಾ ಹೋದ್ರೆ...."

"ಇದು ಒಗಟೂ ಅಲ್ಲ; ಸಗಟೂ ಅಲ್ಲ'

'ಹ್ಞಾ, ಮತ್ತೆ'

'ಇದ್ದದ್ದನ್ನು ಇದ್ದಂತೆ ನುಡಿಯುವ ಸತ್ಯ..."

'ಇರ್ಲಿ, ಈಗ ಸಿಕ್ಕಿ ಬಿದ್ದುದು ನಾನೋ ನೀವೋ ಅಂತ?"

'ಅಂದ್ರೆ...'

"ಹೇಳಿ ನೋಡೋಣ.."

'ಪಂಪ್ವಾಗಿಲ್ಲ ಕಣೇ ನೀನು...."

"ಹ್ಞಾ, ಮುಂದುವರ್ಲಿ, ನಾನು ಏನೋ ಅಂತಿದ್ದೆ...."

'ಎಷ್ಟಾದರೂ...."

'ನಿಮ್ಮ ಕೈಗಳಲ್ಲಿ ಸಿಕ್ಕಿ ಬಿದ್ದವಳಲ್ಲವೆ?'

"ಏ, ನೀನೇನು ಸಿಕ್ಕಿ ಬಿದ್ದೀಯೆ? ನಾನೇ ನಿನ್ನಲ್ಲಿ ಸಿಕ್ಕಿ ಬಿದ್ದು ವಿಲಿ ವಿಲಿ ಒದ್ದಾಡೋದಲ್ವೆ?'

'ನಾನೂನೂ ಹಾಗೇನೇ. ಇದಕ್ಕಿಂತ ನಿಮ್ಮ ಕೈಹಿಡಿಯದಿದ್ರೇನೆ ಆರಾಮ ಎನ್ನಿಸಿತ್ತು...."

'ಏನೋಪ್ಪ. ಹೆಂಗಸು ಅಂದ್ಮೇಲೆ ಅವಳಿಗೊಬ್ಬ ಗಂಡ ಅಂಬೋವ, ಗಂಡಸು ಆದ್ಮೇಲೆ ಅವನಿಗೊಬ್ಬ ಹೆಂಡ್ತಿ ಅಂಬೋಳು ಇರಬೇಕೂಂತ ಹೇಳ್ತಾರೆ.... ಅವ್ರ ಒಳ್ಳೇ ರೀತಿಯಿಂದ ಇದ್ರೆ ಸಂತೋಷ ಇಲ್ಲಾದ್ರೆ ಸಂ ಥಿಂಗ್ ಈಜ್ ಬೆಟರ್ ದಾನ್ ನತ್ಥಿಂಗ್....'

'ನೋಡಿ, ನಾನು ಅಂದದ್ದೂ ಅದೇ..'

"ಯಾವಾಗ?"

"ನೀವೊಬ್ರು.... ಮರಿಯೋ ರೋಗ ನಿಮಗೇ ಮಾರಿ ಹೋಗಿದೆ ತೋರುತ್ತೆ..."

'ಇಲ್ಲ ಕಣೇ, ನಿನಗೂ ಅದ್ರಲ್ಲಿ ಸಮಪಾಲಿದೆ...."

"ಒದುಕಿದೆ ಸದ್ಯ. ನನಗೆಲ್ಲಿ ಪಾಲುಕೊಡದೆ ಬೀದಿಪಾಲು ಮಾಡ್ತೀರೋಂತ ಹೆದ್ರಿ ಕೊಂಡಿದ್ದೆ...."

'ಭಯವೆಂಬುದು ಸ್ತ್ರೀಯರ ರಕ್ಷಗುಣ."

"ನೋಡಿ, ನೀವು ಹೀಗೆಲ್ಲಾ ಅಂದ್ರೆ ಸಹಿಸೋಳು ನಾನಲ್ಲ...."

'ಬೇಡಮ್ಮಾ ಯಾಕೆ ಚರ್ಚೆ? ಏನೋ ಅಂದೆಯಂತಂದೆಯಲ್ಲಾ?"

"ಅದೇ, ಅಲ್ಪಜ್ಞಾನಕ್ಕಿಂತ ಅಜ್ಞಾನವೇ ಲೇಸು ಅಂದದ್ದಕ್ಕೆ ಸಂಥಿಂಗ್ ಈಜ್....'

'ಓ, ಹಾಗೆ; ಅದ್ರೆ ಒಂದು ಮಾತು. ಈ ಗಾದೆಗಳೆಲ್ಲ ಗಣಿತದ ಸೂತ್ರಗಳ ಹಾಗೆ ಎಲ್ಲೆಲ್ಲು ನಿರ್ಭೀಕವಾಗಿ ಅನ್ವಯವಾಗೋಲ್ಲ. ಎಲ್ಲಿ ಹೇಗೆ ಬೇಕೋ ಹಾಗೆ ಅನ್ವಯ...'

'ಅಂದ್ರೆ ಇಂದಿನ ಭಾವಗೀತೆ—ನವ್ಯಗೀತೆಯಿದ್ದ ಹಾಗೆ....?' -

"ಅದು ಹೇಗೋ? ಅಂತೂ ಅವುಗಳದೂ ಒಂದು ರೀತಿ...."

"ನೀವುಅನ್ನೋದು ಸರೀನ್ನಿ.ನಿಮ್ಮ ಇಂದಿನ ಕವಿಗಳ ಗೀತೆ ಅಂದ್ರೆ ಕನ್ನಡ ಬರೋವ್ರಿಗೆ ಅರ್ಥವಾಗೋಲ್ಲ...."

"ಯಾಕೆ ಹಾಗೆ ಹೇಳ್ತೀಯೆ?"

"ಮತ್ತೇನು ಅನ್ನ ಬೇಕು?"

"ನಿನಗೆ ಕನ್ನಡ ಬರೋಲ್ಲಾಂತ ಕವಿಗನ್ನ ಬೊಟ್ಟು ಮಾಡ್ತೀಯ?"

"ಅಲ್ರಿ, ಒಂದಿಷ್ಟು ಪದಗಳನ್ನು ತೂರಿಬಿಟ್ಟೆ, ಅದು ನವ್ಯ ಕವಿತೆಯಾಗುತ್ಯೆ?'

'ಯಾರು ಹಾಗೆಂದರು? ನಮಗೆ ಅರ್ಥವಾಗದ್ದನ್ನು ಸಾಹಿತ್ಯವಲ್ಲಾಂತ ಹೇಳೋಕೆ ನಾವೆಷ್ಟರವರು? ಕವಿಗಳ ಅಪೂರ್ವಶಕ್ತಿಯ ಮುಂದೆ ನಾವು ನಿಲ್ಲುವೆವೆ?"

'ಯಾಕೆ? ಅವರೇನು ಮಾಡ್ತಾರೆ?"

"ಮಾಡೋದೇನು? ಅವರು ಕಲ್ಲಲ್ಲಿ ನಾರೆತ್ತುತ್ತಾರೆ...."

'ಭಾರಿ ಒಳ್ಳೆದಾಯ್ತು. ಈ ನಾರನ್ನಾದ್ರೂ ವಿದೇಶ ವಿನಿಮಯ ಸಂಪಾದನೆಗೆ ಉಪಯೋಗಿಸಬಹುದಲ್ಲ....'

'ಒಳ್ಳೆ ಚುದುರೆ ಕಣೇ ನೀನು...ಮತ್ತೆ ನೋಡು, ಅವರು ಶಾಪಾನುಗ್ರಹ ಸಮರ್ಥರು....'

'ಅದು ನಿಜಾನ್ನಿ. ಶಾಪ ಪಡೆದುಕೊಳ್ಳೋಕೂ ಅನುಗ್ರಹ ಪಡೆಯೋಕೂ ಅವರು ಸಮರ್ಥರು.'

'ನೀನು ಹೀಗೆಲ್ಲಾ ಕವಿಗಳನ್ನ ಗೇಲಿ ಮಾಡುವುದೆಂದರೆ ಏನು? ಕೇಳಿಲ್ಲವೇ ನೀನು, ಫ್ರಾನ್ಸ್, ಜರ್ಮನಿ, ಮೊದಲಾದ ದೇಶಗಳಲ್ಲಿ ನಡೆದ ಮಹಾ ಕ್ರಾಂತಿಗಳಲ್ಲಿ ಕವಿಗಳೂ ಭಾಗವಹಿಸಿದ್ದರು....'

'ಏನಂತೆ? ನಮ್ಮ ಪಂಪ, ರನ್ನ ಮೊದಲಾದವರಂತೆ ಅವರೂ ಕಟಕಾಚಾರ್ಯರಾಗಿದ್ದರೇನು?'

'ಹಾಗೇನೂ ಇಲ್ಲ. ಕ್ರಾಂತಿ ಪ್ರೇರಕ ಕಾವ್ಯಗಳನ್ನು ಬರೆದವರು. ಅವನ್ನು ಓದಿದ ದೇಶೀಯರು ಸ್ವಾತಂತ್ರ್ಯ ಪ್ರೇಮದಿಂದ ಒಡಿದೆದ್ದರು."

"ಅವರ ಕಾವ್ಯ ಓದಿದವರಿಗೆ ಅರ್ಥವಾಗಿದೆ ಆದುದರಿಂದಲೇ ಅವರು ಪ್ರೇರಕ ಶಕ್ತಿಯಾದರು. ಮತ್ತೆ ನಮ್ಮ ಕವಿಗಳಂತೆ ಅರ್ಥವಾಗದ ಭಾಷೆಯಲ್ಲಿ ಬರೆದರೆ?"

"ಜನತೆಯನ್ನು ತನ್ನ ಮಟ್ಟಕ್ಕೆ ಎತ್ತರಿಸುವುದೂ ಕವಿಯ ಕರ್ತವ್ಯವಲ್ಲವೆ?"

"ಏನು ಕರ್ತವ್ಯವೋ? ಕನ್ನಡ ಲಿಪಿಯಲ್ಲಿ ಬರೆದುದೆಲ್ಲಾ ಕನ್ನಡವಾಗದೆಂದು ತಿಳಿದು ಕೊಳ್ಳುವುದೂ ಆತನ ಪರಮ ಕರ್ತವ್ಯವಲ್ಲವೆ?"

'ಅದೂ ಹೌದೂನ್ನು. ಆದರೂ ಕನ್ನ(ಡ) ಬಾರದ ಕನ್ನಡ ಮಕ್ಕಳು ಕನ್ನಡವನ್ನೇ(...)ತು ಅರಿತುಕೊಂಡಾರು?'

'ನೀವನ್ನೋದು ನಮಗೆಲ್ಲಾ ಕನ್ನ(ಡ) ಬರೋದಿಲ್ಲಾಂತ್ಲೆ?'

'ಹಾಗೇನಲ್ಲ; ಸರಿಯಾಗಿ ಬರೋ(...)ಲ್ಲಾಂತ..."

"ಸರಿಯಾಗಿ ಬರೋದಾದೂ ಹೇಗೆ(...) ನಿಮ್ಮ ಕವಿಗಳು ಆಡೋ ಕನ್ನಡ ಇ(...)ತ್ತೊಂದು, ನಾಳೆ ಮತ್ತೊಂದು. ಒಬ್ಬ(...) ಒಂದು ಕನ್ನಡ ಆಡಿದ್ರೆ ಮತ್ತೊಬ್ಬ (...)ರೊಂದು ಆಡ್ತಾನೆ. ನೋಡಿ, ಹೀಗೆ (...)ದೆ ಇರ್ಲಿಲ್ಲ....'

'ಸರಿಯೇ...ಎಲ್ಲ ಕವಿಗಳೂ ಮುಖ(...)ನ್ನೂ ಕಮಲವನ್ನೂ ಒಟ್ಟಿಗೆ ಗದ್ದು(...) ಯೇರಿಸುತಿದ್ದರು. ಈಗ ಹಾಗೇನಿಲ್ಲ. ವಾ(...) ಣಕನೊಂದಿಗೂ ಹಾಡಬೇಕು; ರಾ(...) ಹಂಸನೊಂದಿಗೂ ಈಜಾಡಬೇಕು....'

"ನೋಡಿ, ಹಾಗಿರುವಾಗ ಏನು ಮ(...)ಡಬೇಕು?'

"ಹ್ಞಾ; ಇದು ಸರಿಯೆನ್ನು. ಪ್ರಜಾಪ(...)ಭುತ್ವದಲ್ಲಿ ಪ್ರಜಾಶಕ್ತಿಯ ಮುಂದೆ ತ(...) ಬಾಗಬೇಕು ನಿಜ. ಆದರೆ, ಕವಿಯು ತ(...) ತಗ್ಗಿಸಲು ಇದು ವರೆಗೆ ಯಾರೂ ಸಮರ್ಥರಾಗಿಲ್ಲ.'

'ಅಲ್ರಿ, ಇದೂ ಒಂದು ಮಾತೆ?'

"ಯಾಕೆ?"

"ಇದುವರೆಗೆ ಯಾರೂ ಸಮರ್ಥರಾ(...)ಲ್ಲವಾದ್ರೆ, ಮುಂದೆಯೂ ಯಾರೂ ಸಮರ್ಥರಾಗಬಾರದೆ?'

"ಹೇಗೆ?"

'ಅದು ಹೇಗೇ ಇರಲಿ; ಕವಿಗಳು ಸದಾ ನಿರಂಕುಶರು ಅನ್ನೋ ಮಾತ್ನಲ್ಲಿ ನನ(...) ವಿಶ್ವಾಸವಿಲ್ಲ...."

'ಯಾಕೆ?'

"ನೋಡಿ ಸ್ವಯಂ ಭಗವಂತನ ಮೇ(...)ಲೂ ಭಕ್ತ ಜನರ ಅಂಕುಶವಿರುವಾಗ..'

"ಹಾಗೇನು ನಿಜಾನ್ನು. ಕವಿಗಳ ಮೇ(...)

(ಹದಿಮೂರನೇ ಪುಟ ನೋಡಿರಿ)

ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: "ವಿಜಯಾ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರಸ್ತೆ — ಮಂಗಳೂರು-3

ಮೈಸೂರು, ಕೇರಳ, ಮದ್ರಾಸು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ
57 ಶಾಖೆಗಳು

ಮೈಸೂರು ರಾಜ್ಯದಲ್ಲಿಯ ಶಾಖೆಗಳು:

ಉಡುಪಿ— ಫೋನ್: 40 * ಬೆಂಗಳೂರು— 1. ಮಲ್ಲೇಶ್ವರಂ 2. ಅಲ್ಸೂರ್ 3. ಕೆಂಪೇಗೌಡ ರೋಡ್ * ಮಂಗಳೂರು— 1. ಲೈಟ್ ಹೌಸ್ ಹಿಲ್ ರೋಡ್, 2. ಹಂಪನಕಟ್ಟೆ * ಭಟ್ಕಳ * ಬ್ರಹ್ಮಾವರ * ಬೈಂದೂರು * ಚಾಮರಾಜನಗರ * ಚನ್ನಪಟ್ಣ * ಕುಂದಾಪುರ * ಧಾರವಾಡ * ದೊಡ್ಡಬಳ್ಳಾಪುರ * ಗದಗ * ಗೋಣಿಕೊಪ್ಪಲ * ಹುಬ್ಬಳ್ಳಿ * ಕಾರ್ಕಳ * ಕನಕಪುರ * ಕಾಪು * ಕೋಲಾರ * ಕೊಳ್ಳೆಗಾಲ್ * ಕೃಷ್ಣರಾಜಪೇಟೆ * ಮದ್ದೂರು * ಮಾಗಡಿ * ಮಳವಳ್ಳಿ * ಮಡಿಕೇರಿ * ಮೂಡಿಗೆರೆ * ಮೈಸೂರು * ನಂಜನಗೂಡು * ನೆಲಮಂಗಲ * ಪಾಂಡವಪುರ * ಪುತ್ತೂರು * ರಾಮನಗರ * ಸಿದ್ದಾಪುರ

ಪರಿಚಯ

ವಾಲ್ಮೀಕಿ ಮತ್ತವನ ರಾಮಾಯಣ

ಬರೆದವರು
ಶ್ರೀ ಸ. ನಾರಾಯಣ

ರಾಮಾಯಣ ಕಾವ್ಯ ಸಂಸ್ಕೃತ ವಾಙ್ಮಯದಲ್ಲಿ ದೊರೆಯುವ ಮೊದಲ ಮಹತ್ ಕೃತಿ ಭಾರತೀಯ ಸಂಸ್ಕೃತ ಸಾಹಿತ್ಯ ಪರಂಪರೆಯ ಆದಿ ಕಾವ್ಯ ಪುರುಷೋತ್ತಮ ಶ್ರೀ ರಾಮಚಂದ್ರನ ಚರಿತ್ರೆಯ ದಿವ್ಯ ಗ್ರಂಥ. ಭಾರತೀಯ ಸಂಸ್ಕೃತಿಯ ಆದರ್ಶಗಳನ್ನೂ ಪ್ರತಿಬಿಂಬಿಸುವ ರನ್ನಗನ್ನಡಿ.

ರಾಮಾಯಣದ ಕಥೆ ಕೇವಲ ಸಂಸ್ಕೃತದಲ್ಲಿ ಮಾತ್ರವೇ ಅಲ್ಲದೆ ಭಾರತೀಯ ವಾಙ್ಮಯದಲ್ಲಿಯೇ ಏಕಮೇವಾ ದ್ವಿತೀಯವಾಗಿ ಮೆರೆದಂತಹುದು. ಆದಿ ಕವಿಯ ಪ್ರತಿಭಾ ಪಾಂಡಿತ್ಯಗಳ ರಸಗಂಗೆಯಾಗಿ ಹರಿದ ಈ ಕಾವ್ಯಧಾರೆ ಭಾರತೀಯರ ಮನೆ ಮನಗಳನ್ನು ಸದಾ ಬೆಳಗಿಸುವ ದಿವ್ಯ ಜ್ಯೋತಿ. ರಾಮಾಯಣ ಮಹಾಭಾರತದಷ್ಟು ದೊಡ್ಡ ಗ್ರಂಥವಲ್ಲ. ಆದರೆ ಇದರಲ್ಲಿ ಅಡಗಿರುವ ಸತ್ಯ ಅಪಾರ.

ಆದಿ ಕವಿಯ ಕಥೆಯು ರಾಮಾಯಣದಂತೆಯೇ ಸ್ವಾರಸ್ಯಪೂರ್ಣ ಸುಂದರ ಸಂಗತಿ. ರಘುಕುಲ ತಿಲಕ ಶ್ರೀರಾಮಚಂದ್ರನ ಲೋಕೋತ್ತರ ಚರಿತ್ರೆಯನ್ನು ವಾಲ್ಮೀಕಿ ಮಹರ್ಷಿ ಸತ್ಯಪೂರ್ಣವಾಗಿ ಸೃಷ್ಟಿಸಿದ್ದಾನೆ. ವಾಲ್ಮೀಕಿ ಕವಿ ಹುಟ್ಟಿನಿಂದ ಬೇಡರ ಕುಲದವನು. ಪೂರ್ವಾಶ್ರಮದಲ್ಲಿ ದಾರಿಯಲ್ಲಿ ಕಳ್ಳತನದಿಂದ ಪ್ರಯಾಣಿಕರನ್ನು ಬಂಧಿಸಿ ಅವರಲ್ಲಿ ಇದ್ದುದನ್ನು ದೋಚಿ, ಕೊಲೆ ಸುಲಿಗೆಗಳಿಂದ ಜೀವಿಸುತ್ತಿದ್ದಂತಹ ಅನಾಗರಿಕ. ಇಂತಹ ವ್ಯಕ್ತಿಯಿಂದ ರಾಮಾಯಣ ಮಹಾಕಾವ್ಯ ಸೃಷ್ಟಿಯಾಯಿತೆ? ಎಂದು ಆಶ್ಚರ್ಯವಾಗುತ್ತದೆ. ಜನ್ಮ ಜನ್ಮಗಳ ಸಂಸ್ಕಾರ ಬಲ. ದೈವಾನುಗ್ರಹ ಇದ್ದರೆ ಯಾವುದು ತಾನೇ ಸಾಧ್ಯವಿಲ್ಲ?

ಒಂದು ಬಾರಿ ವ್ಯಾಧನ ಮನ ಪರಿವರ್ತನೆಯಾಗುವಂತಹ ಘಟನೆ ನಡೆಯುತ್ತದೆ. ನಾರದ ಮಹರ್ಷಿಗಳ ಸೂಚನೆಯಂತೆ ತನ್ನ ಬಂಧುಬಾಂಧವರನ್ನು 'ನನ್ನ ಪಾಪದಲ್ಲಿ ಸಮಭಾಗಿಯಾಗುತ್ತೀರಾ?' ಎಂದು ಪ್ರಶ್ನಿಸುತ್ತಾನೆ. ಅವರೆಲ್ಲರೂ ಒಪ್ಪದೆ ನಿರಾಕರಿಸಿದಾಗ, ಪುಣ್ಯಕ್ಕೆ ಎಲ್ಲರೂ ಭಾಗಿಗಳು ಆದರೆ ಪಾಪಿತನನೊಬ್ಬನಿಗೆ ಎಂದು ತಾನು ನಡೆಸುತ್ತಿದ್ದ ಕೃತ್ಯಗಳ ಬಗ್ಗೆ ಜಿಗುಪ್ಸೆ ಹುಟ್ಟಿ ನಾರದರ ಉಪದೇಶದಂತೆ ರಾಮಧ್ಯಾನ ಮಾಡುತ್ತಾ ಕಾಡಿನಲ್ಲಿ ಕುಳಿತುಕೊಳ್ಳುತ್ತಾನೆ. ವರ್ಷಗಳು ಕಳೆದರೂ ಅವನಿಗೆ ಅರಿವಾಗುವುದಿಲ್ಲ; ಅವನ ಮೇಲೆ ಹುತ್ತವೇ ಬೆಳೆದಿರುತ್ತದೆ. ನಾರದರು ಅದೇ ಹಾದಿಯಲ್ಲಿ ಹಿಂದಿರುಗಿ ವ್ಯಾಧನ ಏಕಾಗ್ರತೆ, ತಪಸ್ಸುಗಳನ್ನು ಕಂಡು ಆಶ್ಚರ್ಯಪಟ್ಟು, ಹೊರಬರುವಂತೆ ಸೂಚಿಸುತ್ತಾರೆ. ವ್ಯಾಧ ಹುತ್ತದಿಂದ ಹೊರಬರುತ್ತಾನೆ. ವಾಲ್ಮೀಕಿ ಎಂದರೆ ಹುತ್ತ. ಹುತ್ತದಿಂದ ಹೊರ ಬಂದುದರಿಂದ ವಾಲ್ಮೀಕಿ ಎಂಬ ಹೆಸರು ಪಡೆಯುತ್ತಾನೆ. ರಾಮಾಯಣದ ಕಥೆಯನ್ನು ನಾರದರು ವಾಲ್ಮೀಕಿಗೆ ತಿಳಿಸುತ್ತಾರೆ.

ರಾಮಧ್ಯಾನದಿಂದ, ರಾಮನಾಮ ಸ್ಮರಣೆಯ ಮಹಿಮೆಯಿಂದ ವಾಲ್ಮೀಕಿಯ ಪೂರ್ವಜನ್ಮದ ಪಾಪವೆಲ್ಲವೂ ಕಳೆದು ಹೋಗಿರುತ್ತದೆ. ಪರಮ ಸಾತ್ವಿಕರಾಗಿ ಯಜ್ಞಯಾಗಾದಿಗಳನ್ನೂ, ತಪಸ್ಸು ಆಹ್ನಿಕಗಳನ್ನೂ ಮಾಡಿಕೊಂಡು ವಾಲ್ಮೀಕಿ ಅರಣ್ಯದಲ್ಲಿಯೇ ವಾಸಿಸುತ್ತಾರೆ. ಅವರ ಜೀವನದಲ್ಲಿ ನಡೆದ ಮತ್ತೊಂದು ಮುಖ್ಯ ಘಟನೆ ಅವರನ್ನು ಆದಿಕವಿಯನ್ನಾಗಿ, ರೂಪಿಸಿ, ಲೋಕೋತ್ತರ ಕೃತಿಯನ್ನು ರಚಿಸುವಂತೆ ಮಾಡುತ್ತದೆ.

ಒಮ್ಮೆ ವಾಲ್ಮೀಕಿ ಮಹರ್ಷಿ ಆಶ್ರಮದ ಸಮೀಪದ ತಮಸಾ ನದಿಗೆ ಸ್ನಾನಕ್ಕಾಗಿ ಹೋಗುತ್ತಿದ್ದರು. ಕ್ರೌಂಚ ಪಕ್ಷಿಗಳೆರಡು ವನಶ್ರೀಯ ಆನಂದಮಯ ವಾತಾವರಣದಲ್ಲಿ, ವನದ ಮೇಲ್ಭಾಗದಲ್ಲಿ, ಆಕಾಶಮಂಡಲದಲ್ಲಿ ಸಂತೋಷದಿಂದ ಹಾರುತ್ತಿದ್ದವು. ಮಧುರ ದಾಂಪತ್ಯವೆಂದು ತೋರುತ್ತದೆ ಆ ಕ್ರೌಂಚ ದಂಪತಿಗಳದು. ಮಹರ್ಷಿ ಆನಂದದಿಂದ ಆ ಪಕ್ಷಿಗಳೆರಡನ್ನೂ ನೋಡುತ್ತ ಸಾಗುತ್ತಿದ್ದರು. ಇದ್ದಕ್ಕಿದ್ದಂತೆಯೇ ಮರದ ಮರೆಯಲ್ಲಿದ್ದ ಬೇಡ ಬಿಟ್ಟ ಬಾಣ ಗಂಡು ಪಕ್ಷಿಗೆ ತಗುಲಿ ಪಕ್ಷಿ ರಕ್ತಮಯವಾಗಿ ಬಾಣಸಹಿತ ಆತನ ಸಮೀಪದಲ್ಲಿಯೇ ಬೀಳುತ್ತದೆ. ಹೆಣ್ಣು ಪಕ್ಷಿ ರೋದನ ಪ್ರಕೃತಿಯನ್ನು ಆವರಿಸಿತು. ವಾಲ್ಮೀಕಿಯ ಕರುಣೆಯ ಕಟ್ಟೊಡೆಯಿತು. ಸ್ವಧರ್ಮಚಾರಿಯಾದ ಬೇಡನನ್ನು ಅಧರ್ಮಚಾರಿಯೆಂದು ತೀರ್ಮಾನಿಸಿ ಶಾಪ ಕೊಡುವಲ್ಲಿಗೆ ಹೋಯಿತು ಪರಿಸ್ಥಿತಿ. ಅತೀವ ದುಃಖದಿಂದ ವಾಲ್ಮೀಕಿ ಬೇಡನನ್ನು ಶಪಿಸಿದನು:

"ಮಾನಿಷಾದ ಪ್ರತಿಷ್ಠಾಂ ತ್ವಮಗಮಃ
ಶಾಶ್ವತೀಃ ಸಮಾಃ।
ಯತ್ ಕ್ರೌಂಚ ಮಿಥುನಾದೇಕಮ
ವಧೀಃ ಕಾಮಮೋಹಿತಮ್'॥"

ಮರುಕ್ಷಣದಲ್ಲಿಯೇ ಕೋಪದಕ್ಷರತದಲ್ಲಿ ಎಂತಹ ಅಕಾರ್ಯಮಾಡಿ ಬಿಟ್ಟೆ ಎಂದು ವ್ಯಥೆಪಟ್ಟರು. ಅವರ ನೊಂದ ಹೃದಯ ಪಶ್ಚಾತ್ತಾಪದಿಂದ ಪರಿತಪಿಸುತಿತ್ತು. ವಾಲ್ಮೀಕಿ ದುಃಖದಿಂದಲೇ ತಮ್ಮ ಮನದ ಅಳಲನ್ನು ಶಿಷ್ಯ ಭರದ್ವಾಜನ ಮುಂದೆ ತೋಡಿಕೊಂಡು ತಾನುಹೇಳಿದುದು ಶ್ಲೋಕಮಾತ್ರವಾಗಲಿ, ಶಾಪವಾಗುವುದು ಬೇಡ ಎಂದು ಹೇಳಿದರಂತೆ.

ತಮಸಾನದಿಯಲ್ಲಿ ಸ್ನಾನವಿಧಿಗಳನ್ನೂ ಮುಗಿಸಿಕೊಂಡು ಆಶ್ರಮಕ್ಕೆ ಹಿಂತಿರುಗಿ ಧ್ಯಾನಮಗ್ನರಾದರು ವಾಲ್ಮೀಕಿ ಮಹರ್ಷಿ. ವಾಲ್ಮೀಕಿಗಳ ಮನದ ದುಗುಡವನ್ನು ಪರಿಹರಿಸಲು, ಅವರಿಗೆ ಸಮಾಧಾನ ಹೇಳಲು ಚತುರ್ಮುಖ ಬ್ರಹ್ಮನೇ ಪ್ರತ್ಯಕ್ಷನಾಗಿ ಬಂದನಂತೆ.

ಬ್ರಹ್ಮದೇವ ವಾಲ್ಮೀಕಿಗೆ ಕೆಲವುಸಮಾಧಾನದ ಮಾತುಹೇಳಿ:

"ಶ್ಲೋಕ ಏವ ತ್ವಯಾ ಬದ್ಧೋ|
ನಾತು ಕಾರ್ಯಾ ವಿಚಾರಣಾ
ಮಚ್ಛಂದಾ ದೇವತೇ ಬ್ರಹ್ಮನ್|
ಪ್ರವೃತ್ತೇಯಂ ಸರಸ್ವತೀ
ರಾಮಸ್ಯ ಚರಿತಕೃತ್ಸ್ನಂ।
ಕುರುತ್ವಮೃಷಿ ಸತ್ತಮ
ಧರ್ಮಾತ್ಮನೋ ಗುಣವತೋ|
ಲೋಕೇ ರಾಮಸ್ಯ ಧೀಮತಃ
ವೃತ್ತಂ ಕಥಯ ವೀರಸ್ಯ|
ಯಥಾತೇ ನಾರದಾಚ್ಛ್ರುತಮ್
ರಹಸ್ಯಂ ಚ ಪ್ರಕಾಶಂ ಚ |
ಯದ್ವೃತ್ತಂ ತಸ್ಯ ಧೀಮತಃ
ಕುರು ರಾಮ ಕಥಾಂ ಪುಣ್ಯಾಂ|
ಶ್ಲೋಕ ಬದ್ಧಾಂ ಮನೋರಮಾ ಮ
ಯಾವತ್ ಸ್ಥಾಸ್ಯಂತಿ ಗಿರಯಃ|
ಸರಿತಶ್ಚ ಮಹೀತಲೇ,

ಎಂದು ಹೇಳಿದನಂತೆ.

ಬೇಡನನ್ನೂ ಕುರಿತು ಹೇಳಿದುದರಲ್ಲಿ ಛಂದೋಬದ್ಧವಾದ ಶ್ಲೋಕವೇ ಸೃಷ್ಟಿಯಾಗಿದೆ. ಅದಕ್ಕಾಗಿ ಶೋಕವೇಕೆ? ಆ ನನ್ನ ಛಂದೋ ಸ್ವರೂಪಿಣಿ ಶಾರದೆ ನಿನ್ನಲ್ಲಿ ಸೇರಿದ್ದಾಳೆ. ವೀರನೂ, ಧೀಮಂತನೂ, ಧರ್ಮಾತ್ಮನೂ, ಆದ ರಾಮನ ಚರಿತೆಯನ್ನು ನಾರದ ಉಪದೇಶದಂತೆಯೇ ರಚಿಸು. ಜಗತ್ತಿನಲ್ಲಿ ಗಿರಿ ನದಿ ವನಗಳು ಇರುವ ವರೆವಿಗೂ ರಾಮಾಯಣದ ಕಥೆ ಪ್ರಚಾರದಲ್ಲಿರುತ್ತದೆ ಎಂಬುದೇ ಬ್ರಹ್ಮನ ಸಂದೇಶ.

ಬ್ರಹ್ಮನ ಬೋಧ ವಾಲ್ಮೀಕಿಯಮೇಲೆ ಪರಿಣಾಮ ಬೀರದಿರಲಿಲ್ಲ. ಆ ವೇಳೆಗೆ ನಾರದರು ಹೇಳಿದ ಶ್ರೀರಾಮನಕಥೆಯನ್ನೂ ಸ್ಮೃತಿ ಪಟಲದ ಮೇಲೆ ಉಳಿದಿತ್ತು. ಅಂದಿನಿಂದಲೇ ಆರಂಭವಾಯಿತು ಆದಿ ಕಾವ್ಯ ರಾಮಾಯಣದ ರಚನೆ ವಾಲ್ಮೀಕಿಗಳಿಂದ.

ರಾಮಾಯಣ ಕೇವಲ ಲೌಕಿಕ ಚರಿತ್ರೆಯಲ್ಲ, ಆದರ್ಶ ಎಂಬ ಲೋಕೋತ್ತರ ಚರಿತ್ರೆ. ಪುರುಷೋತ್ತಮ ಶ್ರೀರಾಮಚಂದ್ರನ ದಿವ್ಯ ಕಥೆ. ವಾಲ್ಮೀಕಿಯ ಕೃತಿಯಲ್ಲಿ ಎಲ್ಲಿಯಾಗಲಿ ಸತ್ಯಕ್ಕೆ ದೂರವಾದ ಕಲ್ಪನೆಯಾಗಲಿ, ಅನೃತವಾಗಲಿ ಇಲ್ಲ. 'ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿ

(ಹನ್ನೆರಡನೇ ಪುಟ ನೋಡಿ)

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೊಸುಪರ ಕತೆಗಳು	2—00
ನುಡಿಮುತ್ತುಗಳು	1—20

ಕಿಟಲುಗಿಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕೆನರಾ ಬ್ಯಾಂಕ್
ಜ್ಯುಬಿಲಿ ವಿದ್ಯಾನಿಧಿಯ
ಸಾಲರೂಪದ ಶಿಷ್ಯ ವೇತನಗಳು

ಭಾರತದಲ್ಲಿ ಕಾಲೇಜುಗಳಲ್ಲಿ ತಾಂತ್ರಿಕ ಶಿಕ್ಷಣವನ್ನು ಪಡೆಯಲು ಆರ್ಥಿಕ ಸಹಾಯದ ಆವಶ್ಯಕತೆ ಇರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾಲವನ್ನು ನೀಡಲು, ಕೆನರಾ ಬ್ಯಾಂಕ್, ತನ್ನ ಜ್ಯುಬಿಲಿ ವಿದ್ಯಾನಿಧಿಯ ಮೂಲಕ ಸೂಕ್ತ ವ್ಯವಸ್ಥೆಯನ್ನು ಮಾಡಿದೆ.
ಅರ್ಜಿ ಫಾರ್ಮುಗಳಿಗಾಗಿ ಸೆಕ್ರೆಟರಿ, ಕೆನರಾ ಬ್ಯಾಂಕ್ ಜ್ಯುಬಿಲಿ ಎಜುಕೇಶನ್ ಫಂಡ್, ಕೆನರಾ ಬ್ಯಾಂಕ್ ಬಿಲ್ಡಿಂಗ್, 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು—2 ಇವರಿಗೆ ಒಂದು ರೂಪಾಯಿ ಮನಿಯಾರ್ಡರು ಮಾಡಿ ಬರೆಯಿರಿ. ಮನಿಯಾರ್ಡರು ಕೂಪನಿನಲ್ಲಿ ಅರ್ಜಿದಾರರ ಹೆಸರು ಮತ್ತು ವಿಳಾಸ ಕೆಪಿಟಲ್ ಅಕ್ಷರಗಳಲ್ಲಿ ಬರೆದಿರಬೇಕು. ಈ ಕುರಿತು ಯಾವುದೇ ವಿವರ ಬೇಕಾಗಿದ್ದಲ್ಲಿ ಉತ್ತರಕ್ಕೆ ಸಾಕಷ್ಟು ಅಂಚೆ ಚೀಟು ಇಟ್ಟು ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡಿರಿ.
ನಿರ್ದಿಷ್ಟಪಡಿಸಿದ ಫಾರ್ಮುಗಳಲ್ಲಿ ಅರ್ಜಿ ತಲಪಲು ಕೊನೆಯ ದಿನಾಂಕ 30—6—1966
ಜುಲೈಯೊಳಗೆ ಆಯ್ಕೆಯು ಕೊನೆಗೊಂಡು ಆ ಬಳಿಕ ಕೆನರಾ ಬ್ಯಾಂಕ್‌ನಿಂದ ಸಾಲವು ಕೊಡಲ್ಪಡುವುದು.

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906)
— ರಾಷ್ಟ್ರ ಸೇವೆಯಲ್ಲಿ —
ರಿಜಿಸ್ಟರ್ಡ್ ಕಛೇರಿ: ಮಂಗಳೂರು. ಆಡಳಿತ ಕಛೇರಿ: ಬೆಂಗಳೂರು.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0-30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ :-
ನವಯುಗ ಪ್ರೆಸ್, ಉಡುಪಿ.

ನೀವು ಅವಶ್ಯ ಗಮನಿಸಿರಿ

ತಾಡ ವೃಕ್ಷಗಳಿಂದ ತರತರದ ಸಂಪತ್ತು

ಬರೆದವರು: ಶ್ರೀ ಕೆ. ಜಿ. ಹೆಗಡೆ, ಮುಂಬಯಿ

ಮಹಾತ್ಮಾ ಗಾಂಧೀಜಿಯವರ ಸೇವಾ ಗ್ರಾಮದಲ್ಲಿನ ಅರ್ಧಕ್ಕರ್ಧ ನರಿಮಕ್ಕಳು "ಎ" ಜೀವಾತುವಿನ ಅಭಾವದಿಂದ ಉದ್ಭವಿಸುವ ಒಂದು ರೋಗದಿಂದ ನರಳುತ್ತಿದ್ದರು. ಗಾಂಧೀಜಿಯವರ ನೇತೃತ್ವದಲ್ಲಿ ಅವುಗಳಿಗೆ ತಾಡ ಬೆಲ್ಲವನ್ನು ತಿನಿಸಲಾಯಿತು. ಹಾಲಿನೊಂದಿಗೆ ದಿನಾಲೂ ತಾಡ ಎಣ್ಣೆಯನ್ನೂ ಕುಡಿಸಲಾಯಿತು ನಾಲ್ಕಾರು ವಾರಗಳಲ್ಲಿ ಒಂದು ಮಗುವಿಗಾದರೂ ಬೇನೆಯಿಲ್ಲ.

ಈ ಸಂಗತಿ ಗಾಂಧೀಜಿಯವರ ಕೊನೆಯ ಪರಿಶೋಧನೆಯಲ್ಲಿ ಅಡಕವಾಗಿದೆ. ಇದೊಂದು ನಿದರ್ಶನ ಮಾತ್ರ. ಆದರೆ ತಾಡ ವೃಕ್ಷಗಳಿಂದ ವಿವಿಧ ಸಂಪತ್ಸಾಧನೆಯ ವಿಚಾರಗಳನ್ನು ಕಂಡುಕೊಳ್ಳಬಹುದಾಗಿದೆ.

"ತಾಡ ವೃಕ್ಷದಿಂದ ಉತ್ಪಾದಿಸಬಲ್ಲ ನೀರಾದಿಂದ ಜೇನು ತುಪ್ಪಕ್ಕಿಂತಲೂ ಮಧುರವಾದ ಬೆಲ್ಲವನ್ನೂ ತಯಾರಿಸಬಹುದು. ಈ ಬೆಲ್ಲ ಕಬ್ಬಿನ ಬೆಲ್ಲಕ್ಕಿಂತಲೂ ಶ್ರೇಷ್ಠವಾಗಿದೆ. ಕೋಟಿಗಟ್ಟಲೆ ರೂಪಾಯಿಗಳಷ್ಟು ಬೆಲ್ಲವನ್ನು ತೆಗೆಯಬಹುದು. ಈ ಬೆಲ್ಲದಲ್ಲಿ ಭೂಗತ ಖನಿಜ, ಉಪ್ಪು ಮತ್ತು ಧಾತುಗಳು ಅಂತರ್ಗತವಾಗಿವೆ. ನಮ್ಮ ದೇಶದ ಬಡತನವನ್ನು ನೀಗಲು ಇದೊಂದು ಹಾದಿ. ದಾರಿದ್ರ್ಯವನ್ನು ದೂರ ಮಾಡಲು ವಿಷಹರವಾದ ಚಿಕಿತ್ಸೆಯಿದು" ಎಂದು ಗಾಂಧೀಜಿಯವರು ನುಡಿದಿರುವರು.

ಇಂಡಿಯಾ, ಆಫ್ರಿಕಾ, ದಕ್ಷಿಣ ಅಮೆರಿಕಾ ಮುಂತಾಗಿ ಜಗತ್ತಿನ ಉಷ್ಣ ವಲಯದ ಎಲ್ಲಾ ಪ್ರದೇಶಗಳಲ್ಲಿ ತಾಡ ಗಿಡಯೂ ಅದರ ಜಾತಿಗೆ ಸೇರಿದ ಮರಗಳು ಬೆಳೆಯುತ್ತಿವೆ. ಕಾಂಗೋ, ಬರ್ಮಾ, ಸಿಲೋನ, ಇಂಡೋಚೈನಾ, ಇಂಡೋನೇಶಿಯಾ ಮತ್ತು ಮಲಯಾ ದೇಶಗಳಲ್ಲಿ ತಾಡ ವನಗಳ ಔದ್ಯೋಗಿಕ ಕೇಂದ್ರ ಮತ್ತು ಕಾರ್ಖಾನೆಗಳಿವೆ. ಅಲ್ಲಿ ತಾಡ ವನದ ಸಂಪತ್ತನ್ನು ಅನೇಕ ರೀತಿಯಲ್ಲಿ ಬಳಸಲಾಗುತ್ತದೆ.

ತಾಳೆಯ ಮರದಿಂದ ಬರೇ ಬೆಲ್ಲ ಮಾತ್ರವಲ್ಲ ದೈನಂದಿನ ಬಳಸಬಲ್ಲ ಅನೇಕ ವಸ್ತು ಒಡವೆಗಳನ್ನು ರಚಿಸಬಹುದು. ಅನಾದಿ ಕಾಲದಿಂದಲೂ ತಾಡ ವೃಕ್ಷಗಳಿಂದ ಬೆಲ್ಲವನ್ನು ತಯಾರಿಸುತ್ತಾರೆ. ಮದ್ರಾಸು, ಆಂಧ್ರ, ಕೇರಳ ಬಂಗಾಲ ಮತ್ತು ಮೈಸೂರು ರಾಜ್ಯದ ಕೆಲವು ಭಾಗಗಳಲ್ಲಿ ಇದರ ಬೆಲ್ಲವನ್ನು ಈಗಲೂ ತಯಾರಿಸುತ್ತಾರೆ, ಆದರೆ ಈ ಕೈಗಾರಿಕೆಯನ್ನು ಭಾರತಾದ್ಯಂತ ಬೃಹತ್ ಪ್ರಮಾಣದಲ್ಲಿ ಬೆಳೆಸಲು ಸಾಧ್ಯವಿದೆ. ಮತ್ತು ನಮ್ಮ ದೇಶದ ಆರ್ಥಿಕೋನ್ನತಿಯ ದೃಷ್ಟಿಯಿಂದ ಈ ಉದ್ಯಮದ ವಿಕಸನೆಯಾಗಬೇಕಾಗಿದೆ.

ತಾಡ ವೃಕ್ಷಗಳಿಂದ ಸಕ್ಕರೆ ಮಾಡುವ ವಿಧಾನ ನಮ್ಮ ಪೂರ್ವಜರಿಗೆ ಗೊತ್ತಿತ್ತು. ಸುಮಾರು ಹದಿನೇಳನೆಯ ಶತಮಾನದಲ್ಲಿ ಇದು ಬಳಕೆಗೆ ಬಂತು. ಬಂಗಾಲದ ಬರದ್ವಾನ ಜಿಲ್ಲೆಯ ಗಿಲಖರಲ್ಲೇ ಈ ಸಕ್ಕರೆಯ ಕಾರ್ಖಾನೆಯೊಂದು ನಿರ್ಮಾಣವಾಗಿತ್ತು. ಸಾಮೂಹಿಕ ಸಹಕಾರ ಮತ್ತು ಶಾಸ್ತ್ರೀಯ ಮಾರ್ಗಗಳ ಅಭಾವದಿಂದಾಗಿ ಈ ಉದ್ಯಮ ಹೀನಾವಸ್ಥೆಯನ್ನು ಹೊಂದಿತು. ಗಾಂಧೀಜಿಯವರು ಈ ಕೈಗಾರಿಕೆಯನ್ನು ಪುನರುಜ್ಜೀವಿಸಿದರು. ಸ್ವಾತಂತ್ರ್ಯ ನಂತರದ ನಮ್ಮ ಸರಕಾರವೂ ಇದನ್ನು ಕೃಷಿ ಮಂತ್ರಿ ಮಂಡಲದೊಳಗೆ ಅಳವಡಿಸಿತು. ಆದೀಗ ಈ ಉದ್ಯಮ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲದ ಪರಿ ಪರಿಶ್ರಮದಿಂದ ಜೀವಿತದಲ್ಲಿದ್ದು, ಪ್ರಗತಿ ಪಥದಲ್ಲಿ ಮುಂದುವರಿಯುತ್ತದೆ.

ತಾಳೆ, ತೆಂಗು ಮತ್ತು ಸಾಬಕ್ಕಿಯ ವೃಕ್ಷಗಳು ಹೂ ಬಿಡುವ ಋತುವಿನಲ್ಲಿ ಹಾಳೆಗಳನ್ನು ಬಿಡುತ್ತವೆ. ತಾಳೆಯ ಮರಗಳಲ್ಲಿ ಗಂಡು ಮರ ಡಿಸೆಂಬರದಿಂದ ಫೆಬ್ರವರಿಯ ತನಕ ಮತ್ತು ಹೆಣ್ಣು ಮರ ಫೆಬ್ರವರಿಯಿಂದ ಮಾರ್ಚಿ ತಿಂಗಳ ವರೆಗೆ ಹಾಳೆಗಳು ಬಿಡುತ್ತವೆ. ಅಂದಿನಿಂದ ಸುಮಾರು ಆರೇಳು ತಿಂಗಳು ಈ ಮರಗಳಿಂದು ರಸವನ್ನು ಎತ್ತಲು ಬರುತ್ತದೆ.

ತೆಂಗು ವರ್ಷವೊಂದರಲ್ಲಿ ಸುಮಾರು ಹದಿನೆರಡು ಹಾಳೆಗಳನ್ನು ಬಿಡುತ್ತದೆ. ಪ್ರತಿಯೊಂದು ಹಾಳೆಯನ್ನು ಒಂದು ತಿಂಗಳ ವರೆಗೆ ಕಟ್ಟಿ ಯಾ ತಟ್ಟಿ (Tapping) ರಸವನ್ನು ಎತ್ತಬಹುದಾಗಿದೆ.

ಸಾಬಕ್ಕಿಯ ಮರದಿಂದ ವರ್ಷವಿಡೀ ರಸವನ್ನು ಸಂಗ್ರಹಿಸಬಹುದು.

ಖರ್ಜೂರದ ಗಿಡಗಳಿಂದಲೂ ರಸ ಸಂಗ್ರಹಣೆ ಸಾಧ್ಯವಿದೆ. ಆದರೆ ಬೇರೆಲ್ಲ ಮರಗಳಂತೆ "ಹಾಳೆ"ಗಳಿಂದ ಅದರ ರಸ ಶೇಖರಣೆಯಲ್ಲ ಮರದ ಕಂಠ ಶಿಖರ ಭಾಗದಿಂದ

ರಸ ಶೇಖರಣೆಯ ಕೆಲಸಕ್ಕೆ ಮರವನ್ನೇರ ಬೇಕಾಗುತ್ತದೆ. ನಮ್ಮಲ್ಲಿ ನಿಪುಣ ಕಾರ್ಮಿಕರಿಗೇನೂ ಕೊರತೆಯಿಲ್ಲ. ಬೆಳಿಗ್ಗೆ ಮತ್ತು ಸಾಯಂಕಾಲ ಹೀಗೆ ಎರಡು ಹೊತ್ತು ರಸವನ್ನು ಸಂಗ್ರಹಿಸಲಾಗುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ವಿಧಾನಗಳಿಂದ ರಸವನ್ನು ಶೇಖರಿಸುತ್ತಾರೆ ಸಾಮಾನ್ಯವಾಗಿ ಒಬ್ಬ ಮನುಷ್ಯ ಸರಾಸರಿ ಮೂವತ್ತು ಮರಗಳ ರಸ ಸಂಗ್ರಹ ಕಾರ್ಯವನ್ನು ವಹಿಸಬಲ್ಲನು. ಒಂದು ದೃಷ್ಟಿಯಿಂದ ಇದು ಕೂಡಾ ಕಷ್ಟ ಸಾಧ್ಯವೆ ಮತ್ತು ಆಪತ್ತಿನಿಂದ ಕೂಡಿದುದು.

ದಿನಾಲೂ ಮರವನ್ನು ಏರುವ ಮತ್ತು ಇಳಿಯುವ ಈ ಸಂಪ್ರದಾಯದಲ್ಲಿ ಅದೀಗ ಸುಧಾರಣೆಗಳಾಗಿವೆ. ಮರದಿಂದ ಮರಕ್ಕೆ ಬಲವಾಗಿ ಹಗ್ಗ ಬಿಗಿದು ಹಾದಿ (Rope way) ಅಥವಾ ಬಿದಿರು ಬಿಗಿದ ದಾರಿ (Bamboo way) ಮಾಡಿದ್ದು ಕಾರ್ಮಿಕನು ಮರವನ್ನು ಹತ್ತುವ ಮತ್ತು ಇಳಿಯುವ ಪ್ರಸಂಗಗಳಲ್ಲಿ ಉದ್ಭವಿಸಲು ಸಾಧ್ಯವಾದ ಆಪತ್ತುಗಳನ್ನು ದೂರ ಮಾಡಬಹುದು. ಇಲ್ಲವೆ ಶ್ರಮವನ್ನು ಕಡಿಮೆ ಮಾಡಲು ಬರುವುದು. ಬಿದಿರು ಸಿಗಲಾರದ ಇಲ್ಲದ ಪ್ರದೇಶಗಳಲ್ಲಿ ತಾಡ ಮರದ ನಾರಿನಿಂದಲೂ ಹಗ್ಗಗಳನ್ನು ಮಾಡುವ ವೇಳೆಯಲ್ಲಿ ರಚಿಸಬಹುದಾಗಿದೆ.

ಈ ಮಾದರಿಯಲ್ಲಿ ಕೆಲಸಗಾರನೊಬ್ಬ ಮೂವತ್ತು ಮರಗಳ ಬದಲು ನೂರರಿಂದ ನೂರಮೂವತ್ತು ಮರಗಳ ರಸ ಸಂಗ್ರಹಣೆ ಮಾಡಲು ಸಾಧ್ಯವಿದೆಯೆಂದು ಕಂಡುಹಿಡಿಯಲಾಗಿದೆ.

ತೆಂಗು, ತಾಡ ಮತ್ತು ಸಾಬಕ್ಕಿ ಮರಗಳಿಂದ ಮತ್ತು ಖರ್ಜೂರದ ಮರಗಳಿಂದ ದೊರಕುವ ಈ ಸಿಹಿರಸವೇ ನೀರಾ

ನೀರಾ ಕುಡಿಯಲು ಸ್ವಾದಿಷ್ಟವಾಗಿದೆ. ಪುಷ್ಟಿದಾಯಕವೂ ರುಚಿಕರವೂ ಆಗಿದೆ. ಮುಂಬಯಿಯ ಶಾಲೆಯೊಂದರ ಮಕ್ಕಳಿಗೆ ದಿನಾಲು ನೀರಾ ಕುಡಿಸಿ ಪರೀಕ್ಷಿಸಿದಾಗ ಆರೋಗ್ಯದ ದೃಷ್ಟಿಯಿಂದ ಕಬ್ಬಿಣ ಮತ್ತು ಜೀವಾತುಗಳ ಕೊರತೆಯನ್ನು ನೀಗಲು ಸಹಾಯಕಾರಿಯೆಂದು ನಿರ್ಣಯವಾಗಿದೆ.

ನೀರಾ ಜನಪ್ರಿಯವೇಯವೆಂದು ಪರಿಗಣಿಸಲ್ಪಡುವುದಾದರೂ ಅದಿನ್ನೂ ಎಲ್ಲಾ ಪ್ರಾಂತ್ಯಗಳಲ್ಲಿ ಪ್ರಚಲಿತವಾಗಿಲ್ಲ. ಅದಕ್ಕೂ ಹಲವಾರು ಅಡೆತಡೆಗಳಿವೆ ಕೇಂದ್ರ. ರಾಜ್ಯಗಳಲ್ಲಿ ಹೆಚ್ಚಿನ ಮರಗಳನ್ನು ನೀರಾ ತೆಗೆಯಲು ಬಳಸ ಬಾರದೆಂಬ ಶರ್ತವಿದೆ. ಇನ್ನು ಕೆಲವೆಡೆ ಅತ್ಯಧಿಕ ಕರವನ್ನೂ ಎತ್ತಲಾಗುತ್ತಿದೆ. ಮತ್ತು ಹಲವು ಪ್ರದೇಶಗಳಲ್ಲಿ ನೀರಾ ಮಾರಾಟಕ್ಕೂ ತೊಂದರೆ ಗಳಿವೆ. ಹೀಗಾದ್ದಾಗ್ಯೂ ೧೯೫೩ರಲ್ಲಿ ಹತ್ತು ಲಕ್ಷ ಗ್ಯಾಲನ್ನು ನೀರಾ ಮಾರಾಟವಾಗಿದ್ದು ಅದೀಗ ಸುಮಾರು ೪೦ ಲಕ್ಷ ಗ್ಯಾಲನ್ನುಗಳಷ್ಟು ಹೆಚ್ಚಿದೆಯೆಂಬುದು ಸಂತೋಷದ ಸಂಗತಿ.

ತಾಳೆಯ ಬೆಲ್ಲ(ಓಲೆಯ ಬೆಲ್ಲ)ವನ್ನೂ ತಾಳೆಯ ಮರದ ಹಾಳೆಗಳಿಂದ ತೆಗೆದ ರಸವನ್ನು ಕುದಿಸಿ ಉತ್ಪಾದಿಸಲಾಗುತ್ತದೆ. ಮದರಾಸು, ಆಂಧ್ರ ಮತ್ತು ಬಂಗಾಲಗಳ ಪಾರಂಪರ್ಯವಾಗಿ ಉತ್ಪಾದಿಸಲಾಗುತ್ತಿದೆ ಮತ್ತು ಬಹಳ ಜನಪ್ರಿಯವಾಗಿದೆ. ಪಾನ ಪ್ರತಿಬಂಧ ಕಾಯಿದೆ ಜ್ಯಾರಿಗೆ ಬರುವ ಮೊದಲು ಮದರಾಸಿನ ಪ್ಯಾರೀ ಮತ್ತು ಕಂಪನಿಯವರು ಇದರಿಂದ ಸಕ್ಕರೆಯನ್ನು ತಯಾರಿಸುತ್ತಿದ್ದರು.

ಉತ್ತಮ ಜಾತಿಯ ಬೆಲ್ಲವನ್ನು ತಯಾರಿಸಬೇಕಾದರೆ ಸುಣ್ಣ ಹಾಕಿದ ನೀರಾದಿಂದ ಸುಣ್ಣವನ್ನು ಬೇರ್ಪಡಿಸಬೇಕು. ಸ್ವಲ್ಪ ಸೂಪರ್ ಫಾಸ್ಫೇಟು ಅಥವಾ ಸಲ್ಫ್ಯೂರಿಕ್ ದ್ರಾವಕವನ್ನು ಸೇರಿಸಿ ಗಾಳಿಸಿದರೆ ಸುಣ್ಣ ಮತ್ತು ಇತರ ಕಲ್ಮಶಗಳು ಬೇರಾಗುತ್ತವೆ ಬಳಿಕ ಇದನ್ನು ೧೧೫ಂ ರಿಂದ

(ಹತ್ತನೇ ಪುಟ ನೋಡಿರಿ)

ಜಾನುವಾರು ಮತ್ತು ಕೋಳಿಗಳ ಆರೋಗ್ಯಕರ ಬೆಳವಣಿಗೆಗೆ



ಹಾಲು ನೀಡುವ ಆರೋಗ್ಯದ ದನ ಎಂದರೆ ಹೆಚ್ಚು ಹಾಲು ಅವುಗಳಿಗೆ

'ಮಿಲ್ಕ್ ಕ್ಯಾನ್' ಗುರುತಿನ ಜಾನುವಾರು ಆಹಾರವನ್ನು ಕೊಡಿರಿ.

ಹೆಚ್ಚಿನ ಮೊಟ್ಟೆಗಳು— ಕಡಿಮೆ ಮರಣ ಮತ್ತು ಇನ್ನೂ ಶೀಘ್ರ ಬೆಳವಣಿಗೆಗೆ



'ಎಗ್ ಬಾಸ್ಕೆಟ್' ಗುರುತಿನ ಕೋಳಿಗಳ ಆಹಾರ

ಜೀವಸತ್ವಗಳು, ಲೋಹಗಳು ಮತ್ತು ಎಂಟಿಬಯೊಟಿಕ್ಸ್‌ಗಳಿಂದೊಡಗೂಡಿದೆ.
ನಮ್ಮ ವೈಜ್ಞಾನಿಕ ಆಹಾರ ಕಾರ್ಯಕ್ರಮ ಮತ್ತು ಮಾಹಿತಿಗಳಿಗಾಗಿ ಬರೆಯಿರಿ.

ತಯಾರಕರು:
ಮೈಸೂರು ಫೀಡ್ಸ್ (ಪ್ರೈ) ಲಿಮಿಟೆಡ್,
230, ಹಳೆಯ ತರಗು ಪೇಟೆ, ಬೆಂಗಳೂರು-2.
ಫೋನ್: ಫೇಕ್ಟರಿ 28572 ಆಫೀಸು (PP) 22471.

ಚಾರು ಚಯನ

ನಾಲ್ಕನೆಯ ಯೋಜನೆಯಲ್ಲಿ ಕಡಿತ?

ಇಂಡೋನೇಶ್ಯಾದ ಜೀವಾವಧಿ ಅಧ್ಯಕ್ಷ ಸುಕರ್ಣರು ಗರಿಗೆದರಿ ಕೆಂಪು ಚೀನಾದತ್ತ ಹಾರಿದರು ಎಂಬುದಕ್ಕಿಂತ ಅಂದಿನ ವಿದೇಶ ಮಂತ್ರಿ ಸುಬಾಂಡ್ರಿಯೋ ಹಾರಿಸಿದರು ಎಂಬುದೀಗ ಹೆಚ್ಚು ಸಮಂಜಸವಾಗಿದೆ. ಆದರೆ, ಇಂಡೋನೇಶ್ಯದ ನಾಗರಿಕರು ಕೆಂಪನ್ನು ಮೆಚ್ಚಲಿಲ್ಲ; ಹಸುರೇ ಅವರಿಗೆ ಬೇಕಾಯಿತು. ಹಾಗಾಗಿ ಆಂತರಿಕ ಕ್ರಾಂತಿ ನಡೆದುದನ್ನೂ ಪ್ರಶ್ನಾತೀತ ಅಧ್ಯಕ್ಷ ಸುಕರ್ಣರೂ ತಮ್ಮ ತಲೆ ತಗ್ಗಿಸಿದುದನ್ನೂ ನಾಮ ಮಾತ್ರ ಅಧ್ಯಕ್ಷರಾಗಿ ಉಳಿಯಲು ಅವರು ಒಪ್ಪಿದುದನ್ನೂ ಎಲ್ಲರೂ ಅರಿತಿದ್ದೇವೆ.

ಮಲೇಸ್ಯಾದೊಡನೆ ವಿರಸವುಂಟಾದಗಳಿಗೆಯಿಂದ ಇಂಡೋನೇಶ್ಯಾದ ಪಾಪಕೃತಿಗಳು ಮೇರೆ ಮೀರಿದುವು. ಸಂಯುಕ್ತ ರಾಷ್ಟ್ರಸಂಘವನ್ನು ತ್ಯಜಿಸುವಷ್ಟರಲ್ಲಿಯೇ ತೃಪ್ತವಾಗಿದೆ. ಅದಕ್ಕೆ ಪ್ರತಿ ಸಂಸ್ಥೆಯೊಂದನ್ನು ಕಟ್ಟುವುದಕ್ಕೂ ಅದು ಮುಂದುವರಿಯಿತು. ಆದರೆ ಹಾರುತ್ತಿರುವ ಹಕ್ಕಿಯ ಪುಕ್ಕ ತಪ್ಪಿತು; ಅದು ಭೂಮಿಯಲ್ಲಿ ಬಿದ್ದು ಬಿಟ್ಟಿತು. ಸುಹರ್ತೋಯವರ ಅರೈಕೆಯಲ್ಲಿ ಸುಕರ್ಣ ಪಕ್ಷಿ ತೆಪ್ಪಗೆ ಮಲಗಿದೆ.

ಇದೀಗ, ಇಂಡೋನೇಶ್ಯ ತನ್ನ ಪಾಪಕೃತ್ಯಗಳ ಬಗೆಗೆ ಪಶ್ಚಾತ್ತಾಪಪಡುತ್ತಿದೆ. ಪಾಪವನ್ನು ತೊಳೆಯಲು ಉತ್ಸುಕವಾಗಿದೆ. ವಿಶ್ವಸಂಸ್ಥೆಯಲ್ಲಿ ಮತ್ತೆ ಸ್ಥಾನವನ್ನು ಪಡೆಯುವ ಇಚ್ಛೆ ಅದಕ್ಕೀಗ ಉಂಟಾಗಿದೆ. ಮಲೇಶ್ಯಾ—ಭಾರತಗಳೊಡನೆ ತಾನೇ ಹುಟ್ಟಿಸಿದ್ದ ವಿರಸವನ್ನು ಹೋಗಲಾಡಿಸುವ ಕುತೂಹಲದಿಂದಿದೆ. ಕಳೆದುಕೊಂಡ ಅಮೆರಿಕನ್ ಸ್ನೇಹವನ್ನು ಮತ್ತೆ ಪಡೆಯಲು ಅದು ಹವಣಿಸುತ್ತಿದೆ; ಮುರುಟಿದ ಬಳ್ಳಿಗೆ ನೀರೆರೆದು ಮತ್ತೆ ತಲೆಯೆತ್ತಿ ನಿಲ್ಲಬೇಕು—ಇದು ಅದರ ಹೆಬ್ಬಯಕೆ. ಸುಕರ್ಣ—ಇಂಡೋನೇಶ್ಯದ ಅಬ್ಬರ ಬಲುಲಾಟದ ದರಬಾರವನ್ನು ನೆನಪಿಗೆ ತಂದರೂ ಹೀಗೂ ಆಗುವುದಿದೆ ಎಂಬ ಪಾಠವನ್ನು ಸಮಕಾಲಿನರಿಗೆ ಕಲಿಸುತ್ತದೆ. ಇತಿಹಾಸದ ದಾರಿಯಲ್ಲಿ ಮಹತ್ವಪೂರ್ಣ ಘಟನೆಯಾಗುತ್ತದೆ.

೦ ೦ ೦

ಹಿಂದುಳಿದವರು—ಮುಂದುವರಿದವರು ಎಂಬ ಸಮಸ್ಯೆ ಎಲ್ಲ ಕಾಲದಲ್ಲೂ ಇದ್ದುದೇ. ನಮ್ಮ ಸಂವಿಧಾನದಲ್ಲಿ ಈ ನಾಮಗಳನ್ನು ಉಲ್ಲೇಖಿಸಿರುವುದರಿಂದ ರಾಜಕೀಯ ರಂಗದ ಪ್ರಮುಖ ಪ್ರಶ್ನೆಗಳಲ್ಲಿ ಇದೂ ಒಂದಾಗಿ ಪರಿಣಮಿಸಿದೆ. ಹಿಂದುಳಿದವರು ಯಾರು ಎಂಬುದನ್ನು ನಿರ್ಧರಿಸುವ ಅಧಿಕಾರ ರಾಜ್ಯ ಸರಕಾರಕ್ಕೆ ಇರುವುದು. ಈ ಅಧಿಕಾರವನ್ನು ಕಾಲ್ಚೆಂಡಿನಂತೆ ಬಳಸಿಕೊಳ್ಳುವುದು ರಾಜ್ಯ ಸರಕಾರಗಳ ಹಣೆಬರಹವಾಗಿ ಪರಿಣಮಿಸಿದೆ.

ಹಿಂದುಳಿದ ವರ್ಗಗಳಿಗೆ ಹಲವಾರು ಸೌಲಭ್ಯಗಳು ದೊರೆಯುತ್ತವೆ. ನೌಕರಿಗಳಲ್ಲಿ, ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ಬೇಗನೇ ಅವಕಾಶ ದೊರೆಯುತ್ತದೆ; ಆರ್ಥಿಕ ಸಹಾಯವೂ ದೊರೆಯುತ್ತದೆ. ಹಾಗಾಗಿ ಎಲ್ಲರೂ ಹಿಂದುಳಿದವರೆಂದು ದಾಖಲು ಮಾಡಿಕೊಳ್ಳಲು ಆತುರಪಡುತ್ತಾರೆ. ಈ ಸಂಗತಿ ನಾಗನಗೌಡ ಸಮಿತಿಯು ಕಾರ್ಯತತ್ಪರವಾದಾಗ ಸರಿಯಾಗಿ ಬೆಳಕಿಗೆ ಬಂದಿತ್ತು. ಅಲ್ಪ ಲಾಭಕ್ಕಾಗಿಯೇ ಹಿಂದುಳಿದವರೆಂದು ಸಮಾಜ ಕರೆದುಕೊಳ್ಳಲು ಬಯಸುವುದೆಂದರೆ; ಸಾಮಾಜಿಕ ಪ್ರಜ್ಞೆ ನಮ್ಮಲ್ಲಿ ಏನೂ ಬೆಳೆದಿಲ್ಲವೆನ್ನಲೇಬೇಕು.

ಈ ಹವ್ಯಾಸಕ್ಕೆ ಇರುವ ಏಕಮೇವ ಕಾರಣವೆಂದರೆ, ಜಾತಿಯ ಆಧಾರದಿಂದ ಹಿಂದುಳಿಯುವಿಕೆಯನ್ನು ಅಳೆಯುವುದು. ಮೇಧಾವಿಗಳೂ ಬುದ್ಧಿ ಜೀವಿಗಳೂ ಈ ಪ್ರಣಾಳಿಕೆಯನ್ನು ಖಂಡಿಸುತ್ತಾರೆ; ಮೈಸೂರು ಸರಕಾರದ ಹಿಂದುಳಿದವರ ವರ್ಗವನ್ನು ನಿರ್ಧರಿಸುವ ಹಲವಾರು ಆಜ್ಞೆಗಳು ನ್ಯಾಯಾಲಯದಲ್ಲಿಯೇ ಬಿದ್ದು ಹೋಗಿವೆ. ಆರ್ಥಿಕ ಮಾನದಂಡದಿಂದಲೇ ಹಿಂದುಳಿಯುವಿಕೆಯನ್ನು ನಿರ್ಧರಿಸಬೇಕು-ಇದು ಮಾನವೀಯ ನೀತಿ; ಯುಗವಾಣಿ ಕೇಂದ್ರ ಸರಕಾರದ ಅಭಿಪ್ರಾಯವಾದರೂ ಇದೆ.

ಇತ್ತೀಚಿಗೆ ಕೇಂದ್ರದ ಉದ್ದಿಮೆ ಖಾತೆಯ ಮಂತ್ರಿ ಡಿ. ಸಂಜೀವಯ್ಯನವರು ಈ ಅಭಿಪ್ರಾಯವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್ ಸಂಸ್ಥೆಯಲ್ಲಿ ನಿಷ್ಠೆಯಿಂದ ದುಡಿಯುತ್ತಿರುವ, ರಾಜಕೀಯದಲ್ಲಿ ಸಾಕಷ್ಟು ಪಳಗಿರುವ ಸಂಜೀವಯ್ಯನವರು ಈ ನಿಲುವಿಗೆ ದೃಢವಾಗಿ ಅಂಟಿರುವುದು ಪ್ರಶಂಸನೀಯವೇ. ಇದೆ ತರದ ದೃಢತೆಯನ್ನು ಅವರು ತಡೆದು ಸರಕಾರಿ ವಲಯದಲ್ಲೂ ಒತ್ತಾಯ ತರಲು ಪ್ರಯತ್ನಿಸಬೇಕು. ಹೀಗಾದಲ್ಲಿ ಮಾತ್ರವೇ ಮಾನವತೆಗೆ ಬಹು ಕಾಲದಿಂದ ಅಂಟಿಕೊಂಡಿರುವ ಕಲಂಕ ತೊಳೆ ಹೋಗುತ್ತದೆ.

೦ ೦ ೦

ಯಾರು ಯಾರನ್ನೊ ನಂಬಿ ತಯಾರಿಸಿದ ಮನೆಯ ಮುಂಗಡ ಪತ್ರದಂತೆ ನಮ್ಮ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಗತಿಯಾಗಿದೆ. ವಿದೇಶೀ ನೆರವನ್ನೇ ಬಲವಾಗಿ ನಂಬಿ ತಯಾರಿತವಾದ ನಮ್ಮ ಈ ಯೋಜನೆಯು ಅಂತಿಮವಾಗಿ ಇನ್ನೂ ರೂಪಕ್ಕೆ ಬಂದಿರುವುದಿಲ್ಲವಾದರೂ ಈ ರೂಪ ಕೊಡಲು ನಾನಾ ಪ್ರಯತ್ನಗಳು ಸಾಗುತ್ತಲೇ ಇದೆ. ಅಶೋಕ ಮೆಹತಾರು ಅಮೆರಿಕನ್ ಯಾತ್ರೆ ಮಾಡಿದರು; ಸಂದರ್ಶನ ಯಶಸ್ವಿಯಾಯಿತು ಎಂದರು; ಬಯಸುವುದಕ್ಕಿಂತ ಹೆಚ್ಚು ನೆರವು ಅಮೆರಿಕೆಯು ನೀಡುವುದು ಎಂದೂ ಹೇಳಲಾಯಿತು. ಅದರೊಡನೆಯೇ ಬ್ರಿಟನ್—ಫ್ರಾನ್ಸ್—ರಶ್ಯಗಳನ್ನು ಮೆಹತರು ಸಂದರ್ಶಿಸುವರೆಂದೂ ವರದಿ ಹೊರಟಿದೆ. ಸಂಪನ್ಮೂಲಗಳ ಕೊರತೆ ಹಾಗೂ ವಿದೇಶೀ ನೆರವಿನ ಅನಿಶ್ಚಿತತೆಗಳಿಂದಾಗಿ ಚತುರ್ಥಯೋಜನೆಯ ಗಾತ್ರದಲ್ಲಿ ಕಡಿತವಾಗುವ ಸಾಧ್ಯತೆಯ ಬಗ್ಗೆ ಊಹಾಪೋಹಗಳು ನಡೆಯುತ್ತವೆ.

ರೂ. ೨೧,೫೦೦ ಕೋಟಿ ವೆಚ್ಚದ ಈ ಬೃಹದ್ಯೋಜನೆಯು ವಿದೇಶೀ ಬಂಡವಾಳವನ್ನೇ ಬಲವಾಗಿ ನಂಬಿಕೊಂಡಿತ್ತು. ದೇಶೀಯ ಸಂಪನ್ಮೂಲಗಳನ್ನು ಶಕ್ಯವಿದ್ದಷ್ಟು ಬಳಸಿಕೊಳ್ಳಲು ನಿರ್ಧರಿಸಲಾಗಿದ್ದರೂ, ಯೋಜನೆಯನ್ನು ಪೂರೈಸುವುದು ಸುಲಭವಲ್ಲವೆಂದು ಹಿಂದೆಯೇ ಹೇಳಲಾಗಿತ್ತು. ಪಾಕಿಸ್ತಾನ—ಭಾರತಗಳ ನಡುವಣ ಸಂಬಂಧ ತೀರ ಕೆಟ್ಟಿರುವುದರಿಂದ ಅಮೆರಿಕೆ ಮೊದಲಾದ ಪಾಶ್ಚಾತ್ಯ ದೇಶಗಳು ಹದಿಗಿಯ ಹಾಕತೊಡಗಿವೆ. ಈ ಸೂಚನೆ ಇಂದಲ್ಲ, ವಿರಸ ಪ್ರಬಲಗೊಂಡಾಗಲೇ ತಿಳಿದಿತ್ತು.

ಹಿಂದಿನ ಕೇಂದ್ರ ಅರ್ಥಸಚಿವ ಕೃಷ್ಣಮಾಚಾರಿಯವರು ನಾಲ್ಕನೆಯ ಯೋಜನೆಯು ೧೮,೦೦೦ ಕೋಟಿ ರೂಪಾಯಿ ಮೊತ್ತದ್ದಾಗಿದ್ದರೆ ಸಾಕೆಂದು ಅಭಿಪ್ರಾಯ ಪಟ್ಟಿದ್ದರಂತೆ. ಕಾಂಗ್ರೆಸ್ ಅಧ್ಯಕ್ಷ ಕಾಮರಾಜರೂ ಇದನ್ನು ಬೆಂಬಲಿಸಿದ್ದರಂತೆ. ಆದರೆ, ಆಗ ಈ ಬಗ್ಗೆ ವಿಶೇಷ ಗಮನ ನೀಡದೆ ಉಳಿದವರು ತಪ್ಪು ಮಾಡಿದ್ದರಂತೆ. ಈಗಿನ ಪರಿಸ್ಥಿತಿಯಲ್ಲಿ ಯೋಜನೆಯ ಗಾತ್ರವನ್ನು ಇಳಿಸದೆ ನಿವೃತ್ತಿ ಇಳಿಸುವುದು ಸಾಧ್ಯವಿಲ್ಲ ಎಂಬಂತಾಗಿದೆ. ಬಿಸಿತುಪ್ಪವನ್ನು ಗಂಟಲಲ್ಲಿ ಸುರಿದುಕೊಂಡಂತಾಗಿದೆ. ಇದರಿಂದ ಹೇಗೆ ಪಾರಾಗಿ ಕೊಂಡೇವು?

—ರಾಶಿ

ಶ್ರೀ ಕೆ. ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.



ನಿಮ್ಮ ವ್ಯಾಪಾರಗಳೋ, ದೈನಿಕ ಆದಾಯವನ್ನು ತರುವ ಚಿಕ್ಕಪುಟ್ಟ ಉದ್ಯಮಗಳೋ ಇದ್ದರೆ ಈ ಮಾತು ನಿಮಗೊಂದು ಆರ್ಥಿಕಸೂತ್ರವಾಗಿ ಪರಿಣಮಿಸಬಲ್ಲುದು.

ವರ್ಷದಲ್ಲಿ ಪ್ರತಿದಿನವೂ ಒಂದು ರೂಪಾಯಿಯನ್ನು ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಠೇವಣಿ ಖಾತೆಯ ಮೂಲಕ ಉಳಿಸಿರಿ. ನಿಮ್ಮ ಠೇವಣಿ ಪಕ್ವವಾದಾಗ, ಏಳು ವರ್ಷಗಳ ಅನಂತರ, ನೀವು ಮರಳಿ ಪಡೆಯುವ ಮೊತ್ತ ರೂ. 2,600/-. ಕೆಲವು ದಿನಗಳಲ್ಲಿ ಉಳಿಸುವುದು ಅಸಾಧ್ಯವಾದರೂ ಪ್ರಮಾದವೇನೂ ಇಲ್ಲ. ಬ್ಯಾಂಕಿನಲ್ಲಿ ನಿಮ್ಮ ಹಣ ಬಡ್ಡಿಯೊಡನೆ ದಿನದಿನವೂ ಬೆಳೆಯುತ್ತಲೇ ಇರುತ್ತದೆ.

ನಿಮ್ಮ ಅಭಿವೃದ್ಧಿಗಾಗಿ
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಇಂದಿರೆಯುಂಡ ಅಮೆರಿಕನ್ ಹಾಸ್ಯಗುಳಿಗೆ

ಪ್ರಧಾನಿ ಇಂದಿರಾ ಗಾಂಧಿಯವರನ್ನು ಮಾರ್ಚಿ ೨೮ರಂದು ಅಮೆರಿಕೆಯ ನೇಶನಲ್ ಪ್ರೆಸ್ ಕ್ಲಬ್ಬಿನವರು ಗೌರವಿಸಿದರು. ದಿ ವಾಶಿಂಗ್‌ಟನ್ ಕ್ಲಬ್ಬಿನದೊಂದು ಸತ್ ಸಂಪ್ರದಾಯ. ಇಲ್ಲಿ ಮಹಿಳೆಯರಿಗೆ ಪ್ರವೇಶವಿಲ್ಲ. ಇಲ್ಲವೆಂದರೆ ಇಲ್ಲವೇ ಇಲ್ಲ ಎಂದರ್ಥವಲ್ಲ. ಪುರುಷರಿಂದ ಉಪಾಹಾರಕ್ಕೆ ಹಾಗೂ ಮಾತುಕತೆಗೆ ಆಮಂತ್ರಿತರಾದ 'ಗೆಳತಿ ಮಹಿಳೆ'ಯರಿಗೆ ಮಾತ್ರ ಪ್ರವೇಶ.

ಆದರೆ, ತನ್ನ ಬಹುಕಾಲದಿಂದಲೂ ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬಂದ ಈ ಸಂಪ್ರದಾಯವನ್ನು ಕ್ಲಬ್ಬು ಮುರಿಯಿತು 'ಪುರುಷರಿಗೆ ಮಾತ್ರ' ಎಂದಿದ್ದ ಪ್ರವೇಶವನ್ನು ಇಂದಿರಾ ಗಾಂಧಿಯವರಿಗೆ ತೆರೆಯಿತು ಅಷ್ಟುಮಾತ್ರವಲ್ಲದೆ ಅಲ್ಲಿನ ವಿಮೆನ್ ಪ್ರೆಸ್ ಕ್ಲಬ್ ಎಂಬ ಮಹಿಳಾ ಸಂಸ್ಥೆಯನ್ನೂ ಅತಿಥೇಯವನ್ನಾಗಿ ಸೇರಿಸಿಕೊಂಡು ಮಹಿಳಾ ಪ್ರಧಾನಿಯನ್ನು ಗೌರವಿಸಿತು. ಸಂಪ್ರದಾಯ ಭಂಗದಿಂದ ಕುತೂಹಲಗೊಂಡ ಅಮೆರಿಕನ್ ಪತ್ರಕರ್ತರು ಬಹು ಸಂಖ್ಯೆಯಲ್ಲಿ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಅಮೆರಿಕನ್ ಸೆನೇಟಿನ ಇಬ್ಬರು ಮಹಿಳಾ ಸದಸ್ಯರೂ ಮತ್ತಿತರರೂ ಭಾರತೀಯ ಪ್ರಧಾನಿಯ ಸ್ವಾಗತಕ್ಕೆ ಬಯಸಿದರು.

ಶ್ರೀಮತಿ ಗಾಂಧಿಯವರು ಸಂಪ್ರದಾಯ ಮುರಿದು ನೆರೆದ ಈ ಕೂಟವನ್ನು ಉದ್ದೇಶಿಸಿ ಮಾತನಾಡಿದರು— "ಪುರುಷರ ಈ ಕ್ಲಬ್ಬಿನಲ್ಲಿ ಸಹೋದ್ಯೋಗಿ ಮಹಿಳೆಯರೂ ಸಮಾವೇಶಗೊಂಡುದು ನನಗೆ ತುಂಬ ಸಂತೋಷವಾಗಿದೆ" ಎಂದು ಆಕೆ ಅಂದಾಗ, ಮಹಿಳಾ ಪತ್ರಕಾರಿಯರೂ ಪುರುಷರೂ ಕರತಾಡನಗೈದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಪ್ರಧಾನಿಯವರು ಇದೇ ಕ್ಲಬ್ಬಿನಲ್ಲಿ ತನ್ನ ತಂದೆ ಜವಾಹರಲಾಲರು ಕೆಲವು ವರ್ಷಗಳಿಗೆ ಹಿಂದೆ ಮಾತನಾಡಿದ ಘಟನೆಯನ್ನು ನೆನಪಿಸಿದರು. ೧೯೬೧ರಲ್ಲಿ ತಾನೂ ತಂದೆಯೂ ಅಧ್ಯಕ್ಷ ಕೆನೆಡಿಯವರೊಂದಿಗೆ ತೆಗದುಕೊಂಡಿದ್ದ ಚಿತ್ರ ಸಂಪುಟವನ್ನು ತನಗಿತ್ತಾಗ ಕೃತಜ್ಞತೆಯಿಂದ ಸ್ವೀಕರಿಸಿದರು.

ಪತ್ರಕರ್ತರು ಹಲವಾರ ಪ್ರಶ್ನೆಗಳನ್ನು ಕೇಳಿದರು. ಕೆಂಪು ಚೀನಾದೊಡನೆ ಭಾರತೀಯ ಸಂಬಂಧ, ಆರ್ಥಿಕ ಪ್ರಗತಿ, ಕೃಷಿರಂಗದಲ್ಲಿ ಅಭಿವೃದ್ಧಿ ಮತ್ತು ಸಂತಾನನಿಯಂತ್ರಣ ಕಾರ್ಯಕ್ರಮಗಳು ಇವುಗಳು ಮುಖ್ಯ ವಿಷಯವಾಗಿದ್ದುವು.

"ಕೆಂಪು ಚೀನಾವು ೧೯೬೨ರಲ್ಲಿ ಆಕ್ರಮಣ ಮಾಡಿದಂದಿನಿಂದ ನಮ್ಮಿಬ್ಬರ ಸಂಬಂಧ ಸ್ನೇಹದಿಂದ ದೂರವಾಗಿದೆ' ಎಂದು ಗಾಂಧಿಯವರು ಭಾರತದ ಇಂದಿನ ಸಂಬಂಧವನ್ನು ವಿವರಿಸಿದರು 'ದಕ್ಷಿಣ ಏಸ್ಯಾದಲ್ಲಿ ಕೆಂಪು ಚೀನಾ ಪಟ್ಟ ಭದ್ರಸ್ಥಾನವನ್ನು ಅಪೇಕ್ಷಿಸುತ್ತದೆ. ಈ ಪ್ರದೇಶದಲ್ಲಿ ಎಷ್ಟು ಸಾಧ್ಯವೋ ಅಷ್ಟು ಕಿರುಕುಳವನ್ನುಂಟು ಮಾಡುವುದೇ ಅದರ ಮುಖ್ಯ ಉದ್ದೇಶ ಮತ್ತು ನೀತಿ. ಅದುದರಿಂದಲೇ ಕೆಂಪು ಚೀನಾವು ತಾಷ್ಕೆಂಟ್ ಘೋಷಣೆಗೆ ಅತಿ ದೂರವಿದೆ."

ಸಮಾರಂಭದ ಕೊನೆಯಲ್ಲಿ ಹಾಸ್ಯರಸದ ಕಾರಂಜಿಯೇ ಪುಟಿಯಿತು. ಸದಸ್ಯನೋರ್ವ ಇಂದಿರಾ ಗಾಂಧಿಯವರನ್ನು ಪ್ರಶ್ನಿಸಿದ "ಅಮೆರಿಕನ್ ಮಹಿಳೆಯರಲ್ಲಿ ಸೀರೆಯ ಉಡುಗೆಯನ್ನು ಪ್ರೋತ್ಸಾಹಿಸುವುದರ ಬಗ್ಗೆ ತಮ್ಮ ಅಭಿಪ್ರಾಯವೇನು?'

ಇಂದಿರಾ ನಗುಮುಖದಿಂದಲೇ ಉತ್ತರಿಸಿದರು: "ನನಗೆ ವೈಯಕ್ತಿಕ ಅಧಿಕಾರದಲ್ಲಿ ವಿಶ್ವಾಸವಿದೆ. ಮಹಿಳೆಯರೇ ಸೀರೆಯನ್ನು ಉಡಬೇಕು ಆಗ ತಾವೆಷ್ಟು ಅಂದವಾಗಿ ಕಾಣುವವೆಂಬುದನ್ನು ಅನುಭವ ಮಾಡಿಕೊಳ್ಳಬೇಕು, ಮತ್ತು ತಾವು ಸೀರೆಯನ್ನು ಉಡಬಹುದೇ ಹೇಗೆ ಎಂಬುದನ್ನು ಅವರೇ ನಿರ್ಧರಿಸಬೇಕು."

ಅಮೆರಿಕೆಯಲ್ಲಿನ ಹಾಸ್ಯ ಪ್ರಸಂಗಹೀಗೆ ಕೊನೆಗೊಂಡಿತು

ಮೇಲಿನಚಿತ್ರದಲ್ಲಿ ಭಾರತೀಯ ಪ್ರಧಾನಿಯವರು ನೇಶನಲ್ ಪ್ರೆಸ್ ಕ್ಲಬ್ಬಿನ ಸತ್ಕಾರಕೂಟದಲ್ಲಿ ಮಾತನಾಡುತ್ತಿರುವುದನ್ನು ವೀಕ್ಷಿಸಬಹುದು.

ಕೃಷಿಕರಂಗ

ಗೊಬ್ಬರ ಹಾಕಿ ಗೊಬ್ಬರ ಬೆಳೆಯಿರಿ

ಹಸುರು ಗೊಬ್ಬರವೆಂದರೆ ನಮ್ಮ ಮನಸ್ಸಿಗೆ ಮೊದಲಿಗೆ ಹೊಳೆಯುವುದು ಹುರುಳಿ, ಅಲಸಂಡೆ, ಅಪ್ಸೆಣಬು ಮೊದಲಾದ ಹಸುರು ಗಿಡಗಳು. ಇವೆಲ್ಲವೂ ದ್ವಿದಳ ಧಾನ್ಯಗಳ ಜಾತಿಗೆ ಸೇರಿದವು ಹಸುರು ಗೊಬ್ಬರದ ಉಪಯೋಗಕ್ಕೆ ಬರುವ ಗಿಡಗಳ ಮಹತ್ವ ಅತ್ಯಧಿಕ. ಮಣ್ಣಿಗೆ ಸಾರಜನಕವನ್ನು ನೀಡುವುದು, ಮಣ್ಣಿನಲ್ಲಿ ತೇವವನ್ನು ಹಿಡಿದಿಡುವುದು, ಮಣ್ಣಿನ ಪದರುಗಳಲ್ಲಿ ಗಾಳಿಯ ಓಡಾಟಕ್ಕೆ ದಾರಿ ಮಾಡುವುದು, ಮಣ್ಣಿನ ರಚನೆಯನ್ನು ಉತ್ತಮಗೊಳಿಸುವುದು, ಇವೆಲ್ಲ ಹಸುರು ಗೊಬ್ಬರದ ಕೆಲಸಗಳು. ಇಷ್ಟೇ ಅಲ್ಲದೆ ಈ ಬೆಳೆ ಎಲ್ಲೇ ಆಗಲಿ ಎಂತಹ ಮಣ್ಣಿನಲ್ಲೇ ಆಗಲಿ ಅಭಿವೃದ್ಧಿ ಹೊಂದವಂತಿರಬೇಕು. ಈ ಯೆಲ್ಲಾ ಗುಣಗಳೂಗ್ಲೈರಿಸೀಡಿಯಾ,ಗಿಡದಲ್ಲಿದೆ. ಗ್ಲೈರಿಸೀಡಿಯಾವು ಬೆಳೆಗಳಿಗೆ ಅವಶ್ಯವಾದ ಹಸುರು ಗೊಬ್ಬರವನ್ನೊದಗಿಸುತ್ತದೆ. ಮೆಣಸಿನ ಹಂಬುಗಳಿಗೆ ಆಧಾರವಾಗಿಯೂ ಚಾ, ಕಾಫಿ ಸಸಿಗಳಿಗೆ ಒಳ್ಳೆಯ ನೆರಳನ್ನು ಕೊಡುವ ಮರವಾಗಿಯೂ ಉಪಯೋಗವಾಗುತ್ತದೆ.

ಗ್ಲೈರಿಸೀಡಿಯಾ ಟೊಂಗೆಗಳನ್ನು ಗಿಡ

ಅಮೆರಿಕೆಯಲ್ಲಿ ಇಂದಿರೆಗೆ ಅಪೂರ್ವ ಸತ್ಕಾರ

ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಮಾರ್ಚಿ ತಿಂಗಳಲ್ಲಿ ಅಮೆರಿಕನ್ ಸಂದರ್ಶನದಲ್ಲಿದ್ದಾಗ ಮಾರ್ಚಿ ೨೮ರಂದು ವಾಶಿಂಗ್‌ಟನ್ನಿನಲ್ಲಿ ಭಾರತೀಯ ರಾಯಭಾರಿ ಕಚೇರಿಯಲ್ಲಿ ಸುಮಾರು ೧,೫೦೦ ಭಾರತೀಯ ನಾಗರಿಕರು ಅವರನ್ನು ಸತ್ಕಾರವಿತ್ತು ಗೌರವಿಸಿದರು. ಭಾರತೀಯರಲ್ಲದೆ ಅಮೆರಿಕೆಯ ಉಚ್ಚ ಅಧಿಕಾರಿಗಳೂ ಇದರಲ್ಲಿ ಭಾಗವಹಿಸಿದ್ದರು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ಉಚ್ಚ ಮಟ್ಟದ ಅಧಿಕಾರಿಗಳು, ರಾಜಕೀಯ ನಾಯಕರು, ಭಾರತದಲ್ಲಿನ ಹಿಂದಿನ ಅಮೆರಿಕನ್ ರಾಯಭಾರಿಗಳು, ವಾಶಿಂಗ್‌ಟನ್ ಡಿಪ್ಲೊಮೆಟಿಕ್ ಕಾರ್ಪ್ಸಿನ ಸದಸ್ಯರೂ ಆಮಂತ್ರಿತರಿದ್ದರು

ಈ ಸತ್ಕಾರ ಸಮಾರಂಭಕ್ಕೆ ಭಾರತೀಯ ಕಳೆ ಬಂದಿತ್ತು. ಏಕೆಂದರೆ, ಇಂದಿರಾ ಗಾಂಧಿಯವರಂತೆಯೇ ಅಲ್ಲಿ ಸಮಾವೇಶಗೊಂಡಿದ್ದ ಹೆಚ್ಚಿನ ಮಹಿಳೆಯರು ಭಾರತೀಯ ಉಡುಪು ಸೀರೆಯನ್ನೇ ಉಟ್ಟಿದ್ದರು. ಭಾರತದಲ್ಲಿನ ಅಮೆರಿಕನ್ ರಾಯಭಾರಿ ಚೆಸ್ಟರ್ ಬೌಲ್ಸ್‌ರವರ ಹೆಂಡತಿ ನಸುನೀಲಿಯ ಸೀರೆಯನ್ನು ಉಟ್ಟುಕೊಂಡು ಬಂದಿದ್ದರು.

ಮೇಲಿನ ಚಿತ್ರದಲ್ಲಿ ಈ ಸಮಾರಂಭದಲ್ಲಿ ಭಾರತೀಯರನ್ನು ಉದ್ದೇಶಿಸಿ ಇಂದಿರಾ ಮಾತನಾಡುತ್ತಿರುವುದನ್ನು ಕಾಣಬಹುದು ಹಿನ್ನೆಲೆಯಲ್ಲಿ ಭಾರತೀಯ ಮಾಜಿ ಪ್ರಧಾನಿಗಳಾದ ಪಂ. ನೆಹರು ಮತ್ತು ಲಾಲ್ ಬಹದೂರರ ಚಿತ್ರಗಳನ್ನೂ ನೋಡಬಹುದು.

ನೆಟ್ಟ ಒಂದು ವರ್ಷದ ನಂತರವೇ ಪ್ರತಿ ಆರು ತಿಂಗಳಿಗೊಂದು ಬಾರಿ ಕತ್ತರಿಸುತ್ತ ಬರಬಹುದು ಚೆನ್ನಾಗಿ ಬೆಳೆದ ಒಂದು ಗ್ಲೈರಿಸೀಡಿಯಾ ಗಿಡ ವರ್ಷಕ್ಕೆ ೨೦ ರಾತಲುಗಳಷ್ಟು ಹಸುರು ಗೊಬ್ಬರವನ್ನೊದಗಿಸುತ್ತದೆ. ಇದು ನೀಡುವ ಸಂಪೂರ್ಣ ಸೇಂದ್ರಿಯ ಗೊಬ್ಬರದಲ್ಲಿ ಸೇ. ೨.೯ ರಷ್ಟು ಸಾರಜನಕವೂ ಸೇ. ೦.೫ ರಷ್ಟು ರಂಜಕವೂ ಸೇ. ೨.೭ ರಷ್ಟು ಪೊಟೇಷ್ ಕೂಡ ಇರುವುದಾಗಿ ನಡೆಸಿದ ಪ್ರಯೋಗಗಳಿಂದ ಗೊತ್ತಾಗಿದೆ.

ಮೆಣಸಿನ ಹಂಬುಗಳಿಗೆ ಇದು ಒಳ್ಳೆಯ ಆಧಾರ ನೀಡುತ್ತದೆ. ಹಾಲವಾಣ ಮೊದಲಾದ ಇತರ ಗಿಡಗಳೂ ಈ ಕೆಲಸಕ್ಕೆ ಬರುತ್ತವೆ ನಿಜ. ಆದರೆ, ಗ್ಲೈರಿಸೀಡಿಯಾದಲ್ಲಿ ಇತರ ಗಿಡಗಳಲ್ಲಿಲ್ಲದ ಕೆಲವು ವಿಷ ಗುಣಗಳಿರುತ್ತವೆ ಇದು ಕತ್ತರಿಸಿದಷ್ಟೂ ಸೊಂಪಾಗಿ ಬೆಳೆಯುತ್ತದೆ. ನಾಟುವುದೇ ತಡ ಬಹು ಶೀಘ್ರವಾಗಿ ಬೆಳೆಯತೊಡಗುತ್ತದೆ. ಇಳಿಜಾರು ಭೂಮಿಯೆಂದರೆ ಈ ಗಿಡಕ್ಕೆ ಅತೀವ ಮೆಚ್ಚು.

ಗ್ಲೈರಿಸೀಡಿಯಾ ಗಿಡವು ಸುಮಾರು ೧೫ರಿಂದ ೨೦ ಅಡಿಗಳಷ್ಟು ಎತ್ತರ ಬೆಳೆಯುತ್ತವೆ. ರೆಂಬೆಗಳ ತುಂಡುಗಳನ್ನು ೨ ಅಡಿ ಘನಾಕೃತಿಯ ಗುಂಡಿಗಳಲ್ಲಿ ಆರು ಅಡಿ ಅಂತರವಿರುವಂತೆ ನೆಡಬೇಕು.

ಒಂದೊಂದು ಗುಂಡಿಗೆ ೧—೧½ ರಾತಲಿನಷ್ಟು ಸೂಪರ್ ಫಾಸ್ಫೇಟು ಮತ್ತು ಒಂದೆರಡು ಬುಕ್ಕೆ ಹಟ್ಟಿ ಗೊಬ್ಬರವನ್ನು ನೆಡುವಾಗ ಹಾಕಬೇಕು. ಗಿಡವು ಸುಮಾರು ಆರು ಅಡಿ ಎತ್ತರಕ್ಕೆ ಬೆಳೆದ ನಂತರ ಮೊದಲ ಬಾರಿ ರೆಂಬೆಗಳನ್ನು ಕಡಿಯಬೇಕು. ಆಗ ಕೆಳಗಿನ ಟೊಂಗೆಗಳನ್ನು ಮಾತ್ರ ಕತ್ತರಿಸಿ ಮೇಲ್ಭಾಗದಲ್ಲಿ ಎರಡು ಟೊಂಗೆಗಳನ್ನು ಬೆಳೆಯಲು ಬಿಡಬೇಕು. ಗ್ಲೈರಿಸೀಡಿಯಾದ ಕಾಂಡವು ನುಣುಪಾಗಿರುವುದರಿಂದ ಹಂಬುಗಳು ಗಿಡದ ತುದಿ ಮುಟ್ಟುವವರೆಗೂ ಅವನ್ನು ಕಟ್ಟಬೇಕು. ಇಲ್ಲದಿದ್ದರೆ, ಹಂಬುಗಳು ನೆಲದ ಮೇಲೆ ಬಿದ್ದು ಹೋಗುವುವು. ಇದರ ಎಲೆಗಳಿಂದ ಒದಗುವ ಗೊಬ್ಬರವು ಮೆಣಸಿನ ಹಂಬುಗಳಿಗೇ ಉಪಯೋಗವಾಗುವುದು.

ಇದು ಉತ್ತಮ ನೆರಳಿನ ಗಿಡವೆನಿಸಿಕೊಂಡಿದೆ ಈ ನಡುವೆ ಕೇರಳ, ಚಿಕ್ಕಮಗಳೂರು ಪ್ರದೇಶಗಳಲ್ಲಿನ ಕಾಫಿ, ಚಹಾ ತೋಟಗಳಲ್ಲಿ ಗ್ಲೈರಿಸೀಡಿಯಾವನ್ನು ನೆರಳಿಗಾಗಿ ಹೇರಳವಾಗಿ ಬೆಳಸುತ್ತಾರೆ. ಇದು ಕಳೆಗಳ ಬೆಳವಣಿಗೆಗೆ ಮಟ್ಟಹಾಕಿ ಮಣ್ಣಿನ ಸವಕಲನ್ನು ತಡೆಗಟ್ಟುತ್ತದೆ.

ರೈತರು ಗ್ಲೈರಿಸೀಡಿಯಾವನ್ನು ಬೆಳೆಸಿ ಸೊಪ್ಪು ಗೊಬ್ಬರ, ಸೌದೆ ಎಲ್ಲವನ್ನೂ ಪಡೆಯಬಹುದು, ಇನ್ನೊಂದು ವಿಷಯವನ್ನು ಮರೆಯಬಾರದು. ಒಂದು ವರ್ಷದ ರೆಂಬೆಗಳಿಂದಲೇ ೮ರಿಂದ ೯ ಅಂಗುಲ ಉದ್ದದ ತುಂಡುಗಳನ್ನು ಕತ್ತರಿಸಿಕೊಳ್ಳಬೇಕು. ಇಂತಹ ನೂರು ತುಂಡುಗಳನ್ನು ಒಟ್ಟು ಸೇರಿಸಿ ಅವುಗಳ ಬುಡವನ್ನು ಚೆನ್ನಾಗಿ ಬೆಳೆಯಲು ಹುರುಪೀಯ ಬಹುದಾದ ಔಷಧದ ದ್ರಾವಕದಲ್ಲಿ ಅದ್ದಬೇಕು. (ಈ ದ್ರಾವಕವನ್ನು ಇಂಡೋಲ್ ಬ್ಯುಟಿರಿಕ್ ಆಮ್ಲ ಅಥವಾ ನೆಫ್ತಲೀನ್ ಎಸಿಟಿಕ್ ಆಮ್ಲದ ಪುಡಿಯನ್ನು ಒಂದು ಸೇರು ಹಣ್ಣೀರಿನಲ್ಲಿ ಅರ್ಧ ಟೀ ಚಮಚದಂತೆ ಕರಗಿಸಿ ತಯಾರಿಸ ಬಹುದು) ೨೦-೨೪ ಗಂಟೆಗಳ ಕಾಲ ತುಂಡುಗಳನ್ನು ದ್ರಾವಕದಲ್ಲಿ ಅದ್ದಿಟ್ಟನಂತರ ಅವುಗಳನ್ನು ಗುಂಡಿಯಲ್ಲಿ ನೆಡಲು ಉಪಯೋಗಿಸ ಬೇಕು.

ತಾಳೆ ವೃಕ್ಷಗಳಿಂದ ತರತರದ ಸಂಪತ್ತು

(ಅಳಿನೇ ಪುಟದಿಂದ)

೧೧೫° ವರೆಗೆ ಕುದಿಸಿ ಅಚ್ಚುಗಳಿಗೆ ಒತ್ತಿದರೆ ಮೂರಾಟದ ಬೆಲ್ಲ ಸಿದ್ಧವಾಗುತ್ತದೆ. ಈ ರೀತಿ ತಯಾರಿಸಿದ ಬೆಲ್ಲದಲ್ಲಿ ರುಚಿ, ಬಣ್ಣ ಮತ್ತು ತಾಳೆರಸದ ಎಲ್ಲಾ ಸತ್ವಗಳೂ ಇರುತ್ತವೆ.

ವಿಷಮಜ್ವರ ಪೀಡಿತರ ಶುಶ್ರೂಷೆಗೆ ಈ ಬೆಲ್ಲ ಬಹಳ ಹಿತಕಾರಿಯೆಂದು ಪ್ರಯೋಗಗಳಿಂದ ಕಂಡು ಹಿಡಿದು ಬಹಿರಂಗಪಡಿಸಲಾಗಿದೆ. ಸಕ್ಕರೆ, ಗ್ಲೂಕೋಸು ಮತ್ತು ಡೆಕ್ಸ್‌ಟ್ರೋಲ್ (Dextrol) ಇವುಗಳ ಬದಲು ತಾಳೆ ಬೆಲ್ಲ ಕೊಡಬಹುದೆಂದು ಮೇಲಿನ ಪ್ರಯೋಗಗಳಿಂದ ದೃಢಪಡಿಸಲಾಗಿದೆ.

ತಾಳೆ ಬೆಲ್ಲದಂತೆ ತಾಳೆ ಸಕ್ಕರೆಯನ್ನೂ ಮಾಡುವ ಕ್ರಮ ವಿಧಾನವನ್ನು ನಮ್ಮ ದೇಶದ ಜನರು ಬಲ್ಲರು. ಆದರೆ ಇದನ್ನು ಕಬ್ಬಿನ ಸಕ್ಕರೆಯ ಕಾರ್ಖಾನೆಯಂತೆ ತಯಾರಿಸುವ ಬದಲು ಗುಡಿ ಕೈಗಾರಿಕಾ ಕ್ರಮದಂತೆ ಉತ್ಪಾದಿಸುವುದು ಉಚಿತವೆಂದು ನಂಬಲಾಗಿದೆ. ಹಳ್ಳಿ ಅಥವಾ ಗ್ರಾಮೀಣ ಬೇಡಿಕೆಯನ್ನು ಹೊಂದಿಕೊಂಡು ¾, ½ ಮತ್ತು ೧ ಟನ್ನು ಸಕ್ಕರೆಯನ್ನು ಪ್ರತಿದಿನ ತಯಾರಿಸಬಹುದು.

ನೂರು ಪಾಲು ನೀರಾದಿಂದ ಎಂಟು ಪಾಲು ಸಕ್ಕರೆಯು ಸಿಗುವುದು. ಸಕ್ಕರೆಯ ಉದ್ಯಮದಲ್ಲಿ ಕಾಕಂಬಿ (Mollassos) ವಿತರಣೆ ಒಂದು ಸಮಸ್ಯೆಯಂತೆ. ಆದರೆ ತಾಳೆ ಬೆಲ್ಲದ ತಯಾರಿಕೆಯಲ್ಲಿ ಈ ಕಾಕಂಬಿಯನ್ನು ಮಿಠಾಯಿ, ಶರಬತ್ತು, ಮಧುಪ್ರಾಶ ಮುಂತಾದ ತಿನಸು ಪಾನೀಯಗಳಿಗೆ ಉಪಯೋಗಿಸಲು ಬರುತ್ತದೆ. ಹಣ್ಣುಗಳನ್ನು ಜೋಪಾನವಾಗಿಡುವ ಮತ್ತು ಆಕಳ ತಿನಸನ್ನು ಮಾಡಲೂ ಕಾಕಂಬಿ ಕೆಲಸಕ್ಕೆ ಬರುವುದು. ಅಲ್ಲದೆ ಕಾಕಂಬಿಯಿಂದ ಹುಳಿರಸ (Vinegar) ನ್ನು ತಯಾರಿಸುತ್ತಾರೆ.

ಕಬ್ಬಿನ ರಸದಿಂದ ಸುಲಭದಲ್ಲೇ ಅಥವಾ ನೇರಾಗಿ ಕಲ್ಲು ಸಕ್ಕರೆಯನ್ನು ಮಾಡಲು ಬರುವಂತಿಲ್ಲ. ಇಲ್ಲವೆ ಪ್ರಯಾಸಕರ. ಆದರೆ ತಾಳೆ ರಸವನ್ನು ಸುಲಭದಲ್ಲೇ ತಯಾರಿಸಬಹುದು. ಮದರಾಸು ಮತ್ತು ಬಂಗಾಲಗಳಲ್ಲಿ ಈ ರೀತಿಯಲ್ಲಿ ಕಲ್ಲುಸಕ್ಕರೆಯನ್ನು ತಯಾರಿಸುತ್ತಾರೆ. ಶುದ್ಧಮಾಡಿದ ನೀರಾವನ್ನು ೧೧೨° ರಿಂದ ೧೧೫° ಕುದಿಸಿ ಹರಳು ಪಾತ್ರೆಗಳಲ್ಲಿ ಚೆಲ್ಲಿ ಬಿಟ್ಟರೆ ಮೂವತ್ತು ದಿನಗಳಲ್ಲೇ ಅತ್ಯುತ್ತಮ ತಾಳೆ ಕಲ್ಲು ಸಕ್ಕರೆಯಾಗುವುದು. ಈ ಸಕ್ಕರೆಯನ್ನು ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿ ಧಾರಾಳವಾಗಿ ಉಪಯೋಗಿಸಲಾಗುತ್ತದೆ. ಮತ್ತು ಇದು ಬೇರೆ ಸಕ್ಕರೆ ಗಿಂತಲೂ ಶ್ರೇಷ್ಠವಾಗಿದೆ.

ತಾಳೆ ಸಕ್ಕರೆಯನ್ನು ಕುದಿಸಿಯೂ ಕಲ್ಲು ಸಕ್ಕರೆಯನ್ನು ರಚಿಸುತ್ತಾರೆ. ಈ ವಿಧಾನದಲ್ಲಿ ಹತ್ತು ದಿನಗಳಲ್ಲೇ ಕಲ್ಲು ಸಕ್ಕರೆಯನ್ನು ಪಡೆಯಬಹುದು.

ತಾಳೆಯ ಮರದ ವಿವಿಧ ಭಾಗಗಳನ್ನು ವಿವಿಧ ರೀತಿಯಲ್ಲಿ ಉಪಯೋಗಿಸಲು ಬರುವುದು. ಇದರಿಂದ ತಾಳೆರಸ ತೆಗೆಯುವ ಕೆಲಸಗಾರರ ಕುಟುಂಬಗಳಿಗೂ ಉದ್ಯೋಗ ಕಲ್ಪಿಸಿದಂತಾಗುವುದು.

ತಾಳೆ ಮರದಿಂದ ನಾರನ್ನು ತೆಗೆಯಲು ಬರುವುದು. ವರ್ಷಂಪ್ರತಿ ಕೋಟಿಗಟ್ಟಲೆ ರೂಪಾಯಿ ಬೆಲೆ ಬಾಳುವ ನಾರು ವಿದೇಶಗಳಿಗೆ ಭಾರತದಿಂದ ನಿರ್ಯಾತವಾಗುತ್ತಿದೆ. ಈ ತಾಳೆಯ ಎಲೆಯ ಬುಡವನ್ನು ಮರದ ಸುತ್ತಿಗೆಯಿಂದ ಮೃದುವಾಗಿ ಬಡಿದರೆ ನಾರು ಸಿಗುತ್ತದೆ. ಇದನ್ನು ಬಾಚಿ ಶುದ್ಧ ಮಾಡಿದರೆ ಒಳ್ಳೆಯ 'ಎಳೆ' ಗಳು ಸಿಗುತ್ತವೆ. ಈ ನಾರಿನಿಂದ ಜಾತಿ ವಿಜಾತೀಯ 'ಬ್ರಶ್ಶು'ಗಳನ್ನು ರಚಿಸುತ್ತಾರೆ.

ಕಲ್ಪ ವೃಕ್ಷವೆಂದು ಹೆಸರು ಹೊಂದಿದ ತೆಂಗಿನ ಮರದಂತೆ ತಾಳೆ ವೃಕ್ಷದ ಪ್ರತಿಯೊಂದು ಭಾಗವೂ ಒಂದಲ್ಲ ಒಂದು ದಿನೋಪಯೋಗೀ ಕೆಲಸಕ್ಕೆ ನೆರವಾಗಬಲ್ಲುದು.

ಖರ್ಜೂರದ ಎಲೆಗಳಿಂದ ಚಾಪೆ, ಹಗ್ಗ, ಮಂಚದ ಟೇಪುಗಳು, ಕಾಲೊರಸು ಮುಂತಾದ ವಸ್ತುಗಳನ್ನು ತಯಾರಿಸಲು ಬರುವುದು. ತಾಳೆಯ ಎಲೆಯ ನಾರನ್ನು ಬೆತ್ತದ ಬದಲಾಗಿ ಕೈ ಕುಸುರಿ ಕೆಲಸಗಳಲ್ಲಿ ಉಪಯೋಗಿಸಬಹುದು.

ನಮ್ಮ ದೇಶದಲ್ಲಿ ಎಂಟು ಕೋಟಿ ತಾಳೆಯ ಮರಗಳಿವೆ. ಇವನ್ನೆಲ್ಲ ಬೆಲ್ಲ, ಸಕ್ಕರೆ ಮತ್ತು ಇನ್ನಿತರ ನಿತ್ಯೋಪಯೋಗಿ ವಸ್ತುಗಳ ನಿರ್ಮಾಣಕ್ಕೆ ಬಳಸಿದಲ್ಲಿ ನಮ್ಮ ಸಹಜವಾದ ಸಂಪತ್ತು ಸರಿಯಾಗಿ ಉಪಯೋಗಿಸಿದಂತಾಗುವುದು. ಅಷ್ಟೇ ಅಲ್ಲ ರಾಷ್ಟ್ರೀಯ ಸಂಪತ್ತು ಸಾವಿರಾರು ಜನರಿಗೆ ಉದ್ಯೋಗವನ್ನು ಕಲ್ಪಿಸುವಲ್ಲಿ ಸಹಕಾರಿಯಾಗಬಲ್ಲುದು. ಈ ತೆರನಾಗಿ ನಿರುದ್ಯೋಗವನ್ನು ತುಸು ಮಟ್ಟಿಗೆ ನಿವಾರಿಸಿದಂತಾಗುವುದು.

ಈ ಎಲ್ಲ ಪ್ರಕರಣದ ಮೇಲೆ ವಿಶೇಷ ಮಾಹಿತಿಯನ್ನು ಪಡೆಕೊಳ್ಳ ಬಯಸುವವರು ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳ, ತಾಳೆ ಬೆಲ್ಲ ವಿಭಾಗ, ಪೋಸ್ಟ್ ದಹಾಣು (DAHANU) ಠಾಣಾ ಜಿಲ್ಲೆ ಇವರಿಗೆ ಬರೆದು ಪಡೆಕೊಳ್ಳಬಹುದು.

ತಾಳೆ ಬೆಲ್ಲದ ಉದ್ಯಮವನ್ನು ನಂಬಿರಲಿರುವ ಜನ ಸಂಖ್ಯೆಯ ಬೇಡಿಕೆಯ ಪ್ರಮಾಣವನ್ನು ಇಟ್ಟುಕೊಂಡು ಮುಂದುವರಿಸಬೇಕಾದರೆ ಈಗಾಗಲೇ ದೇಶದಲ್ಲಿದ್ದ ನೂರು ನಾಲ್ವತ್ತು ಸಾವಿರ ರೇಲ್ವೇ ಹಾದಿಯ ಇಕ್ಕೆಡೆಗಳಲ್ಲೂ ಇದನ್ನು ನೆಡಬಹುದೆಂದು ಸೂಚಿಸಲಾಗಿದೆ. ಅಲ್ಲದೆ ಮೂರುವರೆ ಲಕ್ಷ ಮೈಲು ಉದ್ದದ ನಮ್ಮ ರಾಷ್ಟ್ರೀಯ ಹೆದ್ದಾರಿ (Highways)ಗಳ ಅಕ್ಕಪಕ್ಕದಲ್ಲೂ ನೆಡಬಹುದು. ಈ ಸೂಚನೆ ಯಾ ಯೋಜನೆ ಎಷ್ಟೊಂದು ಮಹತ್ವದ್ದಾಗಿದೆ. ಆಶಾಪೂರ್ಣವೂ ಆಗಿದೆ.

ಸದ್ಯ ಭಾರತದಲ್ಲಿ ಒಂದು ಲಕ್ಷ ಟನ್ನುಗಳಷ್ಟು ತಾಳೆ ಬೆಲ್ಲ ತಯಾರಾಗುತ್ತಿದೆ. ಇದಕ್ಕಾಗಿ ನಾಲ್ವತ್ತು ಲಕ್ಷ ಮರಗಳನ್ನು ಉಪಯೋಗಿಸಲಾಗುತ್ತಿದೆ. ಮತ್ತು ಒಂದೂಮುಕ್ಕಾಲು ಲಕ್ಷ ಜನರು ರಸವೆತ್ತುವ ಕಾರ್ಯದಲ್ಲಿ ನಿರತರಾಗಿರುವರು. ಈ ರೀತಿ ನೂರು ಆರು ಕೋಟಿ ರೂಪಾಯಿ ಬೆಲೆಯಷ್ಟು ಬೆಲ್ಲ ಭಾರತದಲ್ಲಿ ತಯಾರಾಗುತ್ತಿದೆ.

ಕಬ್ಬಿನಿಂದ ಇಷ್ಟು ಬೆಲ್ಲವನ್ನು ತಯಾರಿಸಬೇಕಾದರೆ ಕನಿಷ್ಠ ಐವತ್ತುಸಾವಿರ ಎಕರೆ ಜಮೀನು ಬೇಕಾಗುವುದೆಂದು ಅಂದಾಜು ಮಾಡಲಾಗಿದೆ. ಆದ್ದರಿಂದ ಈ ರೀತಿ ಉದ್ಯಮ ಐವತ್ತು ಸಾವಿರ ಎಕರೆ ಭೂಮಿಯನ್ನು ಬೇರೆ ಅತ್ಯಗತ್ಯ ಆಹಾರವನ್ನು ಬೆಳೆಯಲು ಬಿಟ್ಟಂತಾಯಿತು. ಈ ರೀತಿ ತಾಳೆ ಬೆಲ್ಲದ ಉದ್ಯಮ "ಹೆಚ್ಚು ಆಹಾರ ಬೆಳೆಸಿರಿ" ಆಂದೋಲನಕ್ಕೂ ಸಹಾಯ ಸಲ್ಲಿಸುತ್ತಿದೆ ಎಂಬುದು ಎಷ್ಟು ಸಮಂಜಸವಾಗಿದೆ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 57 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಟೆಲಿಗ್ರಾಂ: 'ಸುದರ್ಶನ್'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು—೧

ಸತ್ಯ ಸಂಗತಿಗಳು

ಅಮೂಲ್ಯವಾದ ಇಂಡಿಯಾದ ಕಲೆಗಳು

ಪಶ್ಚಿಮ ಜರ್ಮನಿಯಲ್ಲಿನ ಇಂಡಿಯಾದ ರಾಯಭಾರಿ ಶ್ರೀ ಆರ್. ಕೆ. ಬ್ಯಾನರ್ಜಿ ಮತ್ತು ಜರ್ಮನಿಯ ಮಂತ್ರಿ ಅಧ್ಯಕ್ಷರೂ ಆದ ಶ್ರೀ ಬೇಡನ್ ವುರ್ಟೆನ್‌ಬರ್ಗ್ ಡಾ. ಕೀಸಿಂಗರ್‌ರವರು 'ಇಂಡಿಯಾದ ಕಲೆ'ಯ ಪ್ರದರ್ಶನವನ್ನು ಉದ್ಘಾಟಿಸಿದರು. ಪ್ರದರ್ಶನವು ಕೆಲವು ತಿಂಗಳುಗಳ ವರೆಗೆ ತೆರೆದಿಡಲಾಗುವುದು. ಏಷ್ಯಾದಕ್ಷಿಣ ರಾಷ್ಟ್ರಗಳ ಕಲಾಪ್ರದರ್ಶನಗಳಲ್ಲಿ ಇದೇ ದೊಡ್ಡದು. ಈ ಪ್ರದರ್ಶನದಲ್ಲಿ ಸುಮಾರು ೩೩೩ ವಸ್ತುಗಳನ್ನು ಯುರೋಪ್ ಮತ್ತು ಏಷ್ಯಾ ರಾಷ್ಟ್ರಗಳಿಂದ ಪ್ರದರ್ಶನಕ್ಕಿಡಲಾಗುವುದು. ವಿಶೇಷವಾದ ವಸ್ತುಗಳನ್ನು ಜರ್ಮನಿಯ ಪ್ರದರ್ಶನ ಶಾಲೆಯಿಂದ ಕೊಡಲಾಗಿದೆ. ಕಲಾ ಪ್ರತಿಮೆಗಳೂ ಕಂಚಿನ ವಿಗ್ರಹಗಳೂ ಮರದ ಕೆತ್ತನೆಯ ಸಾಮಾನುಗಳೂ ಸಣ್ಣವು ಮತ್ತು ದೊಡ್ಡ ವಸ್ತುಗಳೂ ಬಟ್ಟೆಯ ಮೇಲಿನ ಚಿತ್ರಗಳೂ ಪ್ರದರ್ಶನದಲ್ಲಿಡಲಾಗಿದೆ.

ದಶ ವರ್ಷ ಜನ್ಮೋತ್ಸವ

ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಟಿ. ವಿ. ಗೋಪುರಗಳ ಪಿತನ ದಶವರ್ಷಗಳ ವರ್ಷಿಕೋತ್ಸವವನ್ನು ನಡೆಸಲಾಗುತ್ತಿದೆ. ೩೩ಕ್ಕೂ ಮೇಲ್ಪಟ್ಟ ಟಿ. ವಿ. ಗೋಪುರಗಳು ಅನೇಕ ದೇಶಗಳಲ್ಲಿ ೧೦೦ ಮೀಟರುಗಳ ಎತ್ತರಕ್ಕೆ ಮೇಲ್ಪಟ್ಟಿವೆ. ಜರ್ಮನಿಯಲ್ಲಿರು ಗೋಪುರವು ೨೧೭ ಮೀಟರುಗಳ ಎತ್ತರವೂ ಇದ್ದು ಅದನ್ನು ಸಿಮೆಂಟಿನ ಸೂಜಿಯಾಕಾರದ ಸ್ತಂಭದ ಮೇಲೆ ನಿಲ್ಲಿಸಲ್ಪಟ್ಟಿದೆ. ಇದೇ ಮಾದರಿಯ ಗೋಪುರವನ್ನು ಜೋಹಾನ್ಸ್‌ಬರ್ಗ್‌ನಲ್ಲಿಯೂ ವಿಯನ್ನ ಮತ್ತು ಸಂಯುಕ್ತ ರಾಷ್ಟ್ರಗಳಲ್ಲಿಯೂ ಕಟ್ಟಲಾಗಿದೆ. ಸ್ಟುಟ್‌ಗರ್ಟನಲ್ಲಿರುವಂತಹ ಗೋಪುರವನ್ನೇ ಉಕ್ಕಿನಿಂದ ಜಪಾನಿನಲ್ಲಿ ನಿರ್ಮಿಸಲಾಗಿದೆ. ಮಾಸ್ಕೋನಲ್ಲಿ ಕಟ್ಟುತ್ತಿರುವ ಟಿ. ವಿ. ಗೋಪುರವು ಈಗಾಗಲೇ ೩೩೦ ಮೀಟರುಗಳ ಎತ್ತರವಾಗಿದ್ದು ಅದು ಪೂರ್ಣವಾಗುವ ವೇಳೆಗೆ ೫೦೦ ಮೀಟರುಗಳ ಎತ್ತರವಾಗುವುದೆಂದು ತಿಳಿದುಬಂದಿದೆ. ಸ್ಟುಟ್‌ಗರ್ಟನಲ್ಲಿರುವ ಟಿ. ವಿ. ಗೋಪುರಗಳ ಪಿತನ ಮೇಲೆ ಈಗಾಗಲೇ ೭–೮ ಮಿಲಿಯನ್ ಪ್ರೇಕ್ಷಕರು ನಿಂತು ಸುತ್ತುಮುತ್ತಲಿನ ಪ್ರಕೃತಿ ದೃಶ್ಯಗಳನ್ನು ನೋಡಿ ಆನಂದಿಸಿದ್ದಾರೆ. ಅದರ ಮೇಲ್ಭಾಗದಲ್ಲಿರುವ ರೆಸ್ಟೋರೆಂಟ್ ಪ್ರಾರಂಭವಾಗಿ ಹತ್ತು ವರ್ಷಗಳಾಗಿವೆ. ಈ ಗೋಪುರವನ್ನು ಕಟ್ಟಲು ೫೭೦ರಲ್ಲಿ ೩.೭ ಮಿಲಿಯನ್ ಡಿ. ಎಂ.ಗಳು ಖರ್ಚಾಗಿವೆ. ಜರ್ಮನಿಯ ಟೆಕ್ನಾಲಜಿಕಲ್ ಶಾಖೆಯವರು ಅಧಿಕವಾದ ಸನ್ಮಾನಗಳನ್ನು ಸಲ್ಲಿಸಿದ್ದಾರೆ.

ಸಂಘದ ಹಾಡುಗಳಿಗೆ ಜಯ

ಪಶ್ಚಿಮ ಜರ್ಮನಿಯಲ್ಲಿ ಸಂಘದ ಹಾಡುಗಳಿಗೇ ಹೆಚ್ಚು ಪ್ರಾಶಸ್ತ್ಯ ಬರುತ್ತಿದೆ. ಉಚ್ಚ ಕಂಠದ ಬೀಟ್ಲ್ ಸಂಗೀತಗಳಿಗೆ

(ಹದಿಮೂರನೇ ಪುಟ ನೋಡಿರಿ)

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಸಾಹಿತ್ಯಯೋಗಿ– ಸಂಪಾದಕರು: ಕೆ. ವೆಂಕಟರಾಯಾಚಾರ್ಯ. ಪ್ರಕಾಶಕರು: ವಿಜಯ ಸಾಹಿತ್ಯ ಮಾಲೆ, ಸುರತ್ಕಲ್, ದ. ಕ. ಪುಟಗಳು: ೬೪. ಬೆಲೆ: ರೂ. ೧-೫೦.

ಕಾರವಾರದಲ್ಲಿ ನಡೆದ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ, ಕವಿ ಕಡೆಂಗೋಡ್ಲು ಅವರ ಜೀವನ-ಗ್ರಂಥಗಳ ಬಗೆಗೆ ಅವರ ಮಿತ್ರರು – ಶಿಷ್ಯರು ಬರೆದ ಪರಿಚಯ ಕೃತಿಗಳ ಸಂಕಲನವಿದು. ಶ್ರೀಯುತರು ಉತ್ತಮ ಕವಿಗಳೆಂದು ಹಿಂದೆಯೇ ಹೆಸರು ಪಡೆದವರು; ಅದೇನು ಕಾರಣದಿಂದಲೋ, ಕವಿತೆ ಬರೆಯುವುದಕ್ಕೆ ವಿರಾಮವಿತ್ತರೂ ಅವರ ಕವಿ ಹೃದಯ ವಿರಾಮ ಹೊಂದಲಿಲ್ಲ. ಉತ್ತಮ ಲೇಖನಕಾರರು, ಭಾಷಣಕಾರರು, ಕತೆಗಾರರು, ಕನ್ನಡದ ಕಟ್ಟಾಳು, ಎಲ್ಲರಿಗೂ ದೊಡ್ಡಣ್ಣ ಕಡೆಂಗೋಡ್ಲು ಅವರು. ಈ ಯೆಲ್ಲ ವಿಚಾರಗಳನ್ನು ಕನ್ನಡಿಗರ ಮುಂದಿಡುವ ಈ ಕೃತಿ ಆಕಾರದಲ್ಲಿ ಮಾತ್ರ ಪುಟ್ಟದು. ಸಾಹಿತ್ಯಕಾರರ ಬಹುಮುಖ ಪ್ರತಿಭೆಯನ್ನು ಕನ್ನಡಿಗರ ಮನೆಮನೆಗೂ ಮುಟ್ಟಿಸಬಲ್ಲ ಶಕ್ತಿ ಇದಕ್ಕಿದೆ. ಸಂಪಾದಕರ ಶ್ರಮ ಸಾರ್ಥಕವಾಗಿದೆ; ಇದಕ್ಕೆ ತಕ್ಕ ಬೆಲೆಯನ್ನು ಕನ್ನಡಿಗರು ಕೊಡಬೇಕು.

ರಹಸ್ಯ ಕಥೆಗಳು: ಲೇಖಕರು: ಮಾಮಾಪಾಸಕರ್. ಪ್ರಕಾಶಕರು: ಪರಾಗ ಪ್ರಕಾಶನ, ತೆಂಕಪೇಟೆ, ಉಡುಪಿ. ಪುಟಗಳು: ೫೮. ಬೆಲೆ: ರೂ ೧–೦೦.

ಮಾಮಾಪಾಸಕರ್‌ರ ಚೊಚ್ಚಲ ಕೃತಿ ಈ 'ರಹಸ್ಯಕಥೆಗಳು.' ಇದರಲ್ಲಿ ಆರು ಎಳಗತೆಗಳು ಸಂಗ್ರಹವಾಗಿವೆ. ಪತ್ತೇದಾರಿ ಮಾದರಿಯಲ್ಲಿವೆ—ಅಶ್ಲೀಲಪದಗಳ ಬಳಕೆಯಿಂದ ಲೈಂಗಿಕ ಪುಸ್ತಕದ ಮಾದರಿ ಇಲ್ಲಿ ಇಲ್ಲವೇ ಇಲ್ಲ. ಕಥೆಗಳ ವಸ್ತುವಾದರೂ ಹೊಸತು, ಹೊಸ ಬಗೆಯವು.

ಲಾಡುಗಳ ಕಾರಣದಿಂದ ದೊಡ್ಡದರೋಡೆಯೊಂದರ ಪತ್ತೆಯಾದ ವಿಚಾರ "ಲಾಡು ತಂದ ಮೃತ್ಯು'ವಿನಲ್ಲಿದೆ. ನಮಸ್ಕಾರದ ಮೂಲಕ ದರೋಡೆ ಮಾಡುವ ನಾಗರಿಕ ವೃಂದದ ಕಥನವೇ 'ನಮಸ್ಕಾರ' "ಮಿರಾಜಿನಲ್ಲಿ ಕೊಲೆ"– ಆತ್ಮಕರವಾದ ಕಥೆ. ಮನಸ್ಸಿನ ಏರಿಳಿತಗಳು ಸಮುದ್ರದ ತೆರೆಗಳಂತೆ ವ್ಯಂಜಿತವಾಗಿವೆಯಿಲ್ಲಿ. "ಮನೆಗೆ ಬಂದ ಯಮ' ಶ್ರೀಮಂತನೊಬ್ಬನ ಮಾನಸಿಕ ಪೀಡೆಯ ಕಥನವಾದರೆ, ಕೊಲೆಗಟುಕ ವಂಚಕನೊಬ್ಬನ ದುಷ್ಕೃತ್ಯ ಸತ್ಯದ ಶ್ರುತಿಯಲ್ಲಿದೆ. ಕೊನೆಯದಾದ 'ಸಾಕ್ಷಿ' ಪತ್ರಿಕಾ ವ್ಯವಸಾಯದ ಒಂದು ವಿಡಂಬನೆಯನ್ನು ಪ್ರತಿಪಾದಿಸುತ್ತದೆ.

ಇಲ್ಲಿನ ಕಥೆಗಳಲ್ಲಿ ಬಳಸಿದ ಭಾಷೆ ಶೈಲಿ ಸರಳವಿದೆ. ದೊಡ್ಡ ದೊಡ್ಡ ನಗರಗಳಲ್ಲಿಯೇ ನಡೆಯಬಹುದಾದ ಈ ಕಾಲ್ಪನಿಕ ಘಟನೆಗಳು ದೊಡ್ಡ ಕಾದಂಬರಿಯ ವಿಷಯಗಳೂ ಆಗಬಹುದು. ಆದರೂ ಮಾಮಾಪಾಸಕರ್‌ರವರು ಹೀಗೆ ಮಾಡದೆ, ಓದುಗರ ಅಭಿರುಚಿಗೆ ಭಂಗತಾರದೆ, ಬರಿಯ ಕಲ್ಪನಾ ಪ್ರಪಂಚಕ್ಕೆ ಒಂದು ಕ್ಷಣ ಹಾರಿಸಿಬಿಡುತ್ತಾರೆ. ಒಂದರ ಹಿಂದೊಂದೆಂಬಂತೆ ರಹಸ್ಯಗಳನ್ನು ಬಿಚ್ಚಲು ಪ್ರಯತ್ನಿಸುತ್ತಾರೆ. ತನ್ನದೇ ಆದ ವಿಧಾನದಿಂದ ಬಿಚ್ಚಿಯೂ ಇದ್ದಾರೆ. ಪಾಠಕರ ಕುತೂಹಲವನ್ನು ಕೆರಳಿಸಿದ್ದಾರೆ. ರಹಸ್ಯ ಶಂಖಲೆಯ ದೃಷ್ಟಿಯಿಂದ ಮೊದಲ ಮೂರು ಕಥೆಗಳನ್ನು ಹೆಸರಿಸಬಹುದಾದರೆ, ಮನೋರಂಜನೆ ದೃಷ್ಟಿಯಿಂದ ಕೊನೆಯ ಮೂರು ಚಿಕ್ಕವಾದರೂ ಚೊಕ್ಕವಿವೆ.

"ಮಾಮಾ" ರಲ್ಲಿ ಬರೆಯುವ ಕಸುವಿದೆ; ಉತ್ಸಾಹವೂ ಇದೆ. ಕಾಲ್ಪನೆಯ ಕನಸು ಕಾಣುವ ಹೃದಯವಿದೆ. ಅವರ ಈ ಮೊದಲ ಕೃತಿ ಆಶಾದಾಯಕವಿದೆ.

ಗ್ರಹಗತಿ— ಬರೆದವರು ಮತ್ತು ಪ್ರಕಾಶಕರು: ಎನ್. ಕೆ. ಜೋಗಳೇಕರ, ಜ್ಯೋತಿಷ್ಯ ಕಾರ್ಯಾಲಯ, ರವಿವಾರ ಪೇಟೆ, ಧಾರವಾಡ—೧. ಪುಟಗಳು: ೭೪ ಬೆಲೆ: ರೂ. ೧—೫೦

ಜ್ಯೋತಿಷ್ಯ ಶಾಸ್ತ್ರಕ್ಕೆ ಮಾನವ ಜೀವನದಲ್ಲಿ ಪ್ರಮುಖ ಸ್ಥಾನವಿದೆ. ತನ್ನ ಗ್ರಹಗತಿಯನ್ನು ಮೊದಲೇ ತಿಳಿದುಕೊಂಡು ಸುಖದಲ್ಲಿ ಹಿಗ್ಗದೆ ದುಃಖದಲ್ಲಿ ಕುಗ್ಗದೆ ಮನುಷ್ಯ ಮುಂದುವರಿಯಬೇಕು. ಇದಕ್ಕೆಂದೆ ಪ್ರಸಿದ್ಧ ಜ್ಯೋತಿಷಿ ಜೋಗಳೇಕರರು ಈ 'ಗ್ರಹಗತಿ'ಯನ್ನು ಬರೆದು, ಜ್ಯೋತಿಷ್ಯ ಶಾಸ್ತ್ರದ ಒಂದು ಅಧ್ಯಾಯವನ್ನು ವಿವೇಚಿಸಿದ್ದಾರೆ.

ನಿಯತ ಕಾಲಿಕ ಭವಿಷ್ಯವನ್ನು ಬರೆಯುವ ಕ್ರಮಗಳು, ಗ್ರಹಗತಿಯನ್ನು ನೋಡುವ ವಿಧಾನಗಳು, ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗುವ ಭವಿಷ್ಯದಲ್ಲಿ ದ್ದು ತೋರುವ ಭಿನ್ನತೆಗಿರುವ ಕಾರಣಗಳು ಇವುಗಳನ್ನು ಕೊನೆಗಾಣಿಸುವ ಬಗೆಗಳು ಇಲ್ಲಿ ಚರ್ಚಿತವಾಗುತ್ತವೆ. ಭವಿಷ್ಯವನ್ನು ಬೇರೆ ಬೇರೆ ದೃಷ್ಟಿಯಿಂದ ಗ್ರಹಗತಿಯನ್ನು ನೋಡುವುದರಿಂದ ಅವುಗಳಲ್ಲಿ ಅಂತರ ವಿರುವುದುಂಟು ಎನ್ನುತ್ತಾರೆ ಲೇಖಕರು. ಜ್ಯೋತಿಷ ಗ್ರಂಥ ಕರ್ತರೂ ಆದಇವರು ಸರಳ ರೀತಿಯಲ್ಲಿ ಗೋಚರದಲ್ಲಿ ಗ್ರಹಗಳು ಕೊಡುವ ಶುಭಾಶುಭ ಫಲಗಳನ್ನೂ ಇವನ್ನು ಬರೆಯುವ ಕ್ರಮವನ್ನೂ ಸವಿಸ್ತಾರವಾಗಿ ಇಲ್ಲಿ ವಿವೇಚಿಸಿದ್ದಾರೆ. ಜ್ಯೋತಿಷ್ಯದಲ್ಲಿ ಜನಸಾಮಾನ್ಯರಿಗೆ ನಂಬಿಗೆ ಹುಟ್ಟುವುದು ಅಗತ್ಯವಾದುದರಿಂದ ಭವಿಷ್ಯವಾದಿಗಳೆಲ್ಲರೂ ಒಂದೇ ಕ್ರಮವನ್ನನುಸರಿಸುವುದು ಅಗತ್ಯವೆಂಬುದರಿಂದ ಈ ಕೃತಿ ಸಕಾಲಿಕವಿದೆ; ಸರ್ವರಿಗೂ ಉಪಾದೇಯವಿದೆ.

ಕಿರುಬಾಲ – (ಮಕ್ಕಳ ಕವನಗಳು) ಬರೆದವರು: ಶಾಂಭಟ್, ಕೂಳೂರು. ಪ್ರಕಾಶನ: ಗೀತಾ ಪ್ರಕಾಶನ, ಕಾಸರಗೋಡು. ಪುಟಗಳು: ೨೮ ಬೆಲೆ: ರೂ. ೦–೪೫.

ಮಕ್ಕಳಿಗೆ ಕವನ ಕಲಿಸುವ ಉದ್ದೇಶಗಳಲ್ಲಿ ಸಾಹಿತ್ಯ ಗೌಣ; ಅವರಲ್ಲಿ ಉತ್ಸಾಹ, ಸಂತೋಷ, ಕ್ರೀಡೆ, ಕ್ರಿಯೆಗಳನ್ನು ಪ್ರಚೋದಿಸುವುದೇ ಪ್ರಧಾನ. ಇದಕ್ಕೆ ನೆರವಾಗುವ ಸಾಹಿತ್ಯ ಗದ್ಯವಿರಲಿ, ಪದ್ಯವಿರಲಿ, ಶಿಶು ಸಾಹಿತ್ಯವಾಗುವುದು—ಇದು ವಿಖ್ಯಾತ ಕವಿ ಕಡೆಂಗೋಡ್ಲು ಅವರ ಅಭಿಪ್ರಾಯ. ಮಕ್ಕಳೊಡನೆ ಮಗುವಾಗಿ, ಅವರ ಸುಖ-ದುಃಖಗಳನ್ನು, ಭಾವಾವೇಶ, ಉದ್ವೇಗಗಳನ್ನು, ಉತ್ಸಾಹ ಕ್ರೀಡೆಗಳನ್ನು ಹೃದಯಗತ ಮಾಡಿದವರು ಮಾತ್ರ ಅವುಗಳಿಗೆ ತಕ್ಕಂತೆ ಸಾಹಿತ್ಯ ನಿರ್ಮಿಸಬಲ್ಲರು.

ಎಳೆ ವಯಸ್ಸಿನ ಅಧ್ಯಾಪಕ ಶಾಂಭಟ್ಟರು ಈ ದಿಸೆಯಲ್ಲಿ ಒಂದು ಪ್ರಯತ್ನ ಮಾಡಿದ್ದಾರೆ. ಇಲ್ಲಿ ಸುಂದರ ಭಾವನೆ, ಸಾಹಿತ್ಯಗಳ ಸಂಮಿಶ್ರಣಗಳ ಹಲವು ಉದಾಹರಣೆಗಳಿವೆ:

ಮಕ್ಕಳ ಆಟವ ನೋಡಿದೆವೆಂದರೆ
ಸಗ್ಗವು ಕಣ್ಣಿಗೆ ತೋರುವುದು
ಸುಗ್ಗಿಯ ಸವಿಯನು ಬೀರುವುದು
ಹುಗ್ಗಿಯ ಹೋಳಿಯನೆ ಹರಿಸುವುದು॥

ಇಲ್ಲಿನ ಸಗ್ಗ, ಸುಗ್ಗಿಯ ಸವಿ, ಹುಗ್ಗಿಯ ಹೊಳೆಗಳ ಅರ್ಥ ಮಕ್ಕಳಿಗೆ ಆಗದೆ ಇರಬಹುದು; ಆದರೆ, ಕವಿತೆಯಲ್ಲಿನ ಓಟ, ಬಂಧ ಹೃದಯ ಸ್ಪರ್ಶಿಯಾಗಿವೆ. ಶಿಶು ಸಾಹಿತ್ಯದ ಮುಖ್ಯ ಉದ್ದೇಶ ಸಾಧಿಸಿದೆ.

'ಕಿರುಬಾಲ"ಬಾಲರಲ್ಲಿಯೇ ಕೂಡ ನಲಿದಿಲ್ಲ. ಆತ ಇತಿಹಾಸವನ್ನೂ ಮುಗುಚಿಹಾಕಿದ್ದಾನೆ, ಭೂಗೋಲವನ್ನೂ ಸುತ್ತಿದ್ದಾನೆ; ನೀತಿ ಶಾಸ್ತ್ರದತ್ತವೂ ಗಮನ ಹರಿಸಿದ್ದಾನೆ. ದೇಶಸೇವೆಯಲ್ಲೂ ಆತನ ಕೈವಾಡವಿದೆ. ಹೀಗೆ 'ಕಿರುಬಾಲ", ಒಂದೇ ಮಾತಿನಲ್ಲಿ ಹೇಳುವುದಾದರೆ, ಪ್ರಯೋಗದಲ್ಲೂ ಯಶಗಳಿಸ ಬಲ್ಲ ಕೃತಿಗಳಲ್ಲಿ ಒಂದು. —ಗೋರಾ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ
ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು: 126 ಬೆಲೆ: ರೂ. 1-50
ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್
ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.
ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—
ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.
ಮಾರಾಟ ಡಿಪೋ: – ಸಂತೆಕಟ್ಟೆ, ಉಡುಪಿ.

ವಾಲ್ಮೀಕಿ ಮತ್ತವನ ರಾಮಾಯಣ

(ಐದನೇ ಪುಟದಿಂದ)

ಪ್ಯತಿ" ಎಂದ ಬ್ರಹ್ಮ ವಾಕ್ಯದಲ್ಲಿ ಲೋಪ ಬರುವುದುಂಟೆ? ಕಾವ್ಯವಾಗಿರುವ ವಾಲ್ಮೀಕಿಗಳ ಮಾತಿನಲ್ಲಿ ಅಪ್ಪಿ ತಪ್ಪಿಯೂ ಅನೃತ ಬಂದಿಲ್ಲ. ನಿಸರ್ಗ ಸೌಂದರ್ಯ, ಶಕ್ತಿ, ಸಂಪತ್ತುಗಳು ರಾಮಾಯಣದಲ್ಲಿ ಹೇರಳವಾಗಿವೆ.

ಮಾನವನ ಬಾಳಿಗೆ ಬೆಳಕು ನೀಡಬಲ್ಲಂತಹ ಮಹತ್ಕೃತಿ ರಾಮಾಯಣ ಕಾವ್ಯ. ಪಾತ್ರಗಳ, ಕಥೆ, ಸನ್ನಿವೇಶ, ಘಟನೆಗಳು ಎಲ್ಲವೂ ಆದರ್ಶಮಯ. ಸೌಂದರ್ಯಮಯ. ಅನಂತ ಶಕ್ತಿಯ ಅಗಾಧ ಪರಿಸರಣ ರಾಮಾಯಣ ಕಾವ್ಯ. ರಾಮಾಯಣದಲ್ಲಿ ಎಲ್ಲದಕ್ಕು ಮುಖ್ಯವಾಗಿ ಕಾಣ ಬರುವುದು ಪ್ರಕೃತಿಯ ಸಹಜ ಸೌಂದರ್ಯ, ಆದರ್ಶ ಗುಣಗಳ ವ್ಯಕ್ತಿಗಳು, ಅಗಾಧ ಅಸುರೀ ಶಕ್ತಿಗಿಂತಲೂ, ಧರ್ಮಕ್ಕೆ ಗೆಲುವು ಎಂಬ ಸಂಗತಿಗಳು ಸ್ಪಷ್ಟವಾಗಿವೆ.

ರಾಮಾಯಣ ಆದಿಕಾವ್ಯ ಮೇಲಾಗಿ ಮಹಾಕಾವ್ಯ. ಸರ್ವಾಂಗ ಸುಂದರವಾದ ಮಹಾಕಾವ್ಯವನ್ನು ರಚಿಸಿದರು ಆದಿಕವಿ ವಾಲ್ಮೀಕಿ. ವಾಲ್ಮೀಕಿಗೆ ಮತ್ತು ರಾಮಾಯಣಕ್ಕೆ ನಿಕಟ ಸಂಬಂಧವಿದೆ. ಕವಿಯ ಜೀವನದ ಕಥೆಯೂ ರಾಮಾಯಣದ ಒಂದು ಭಾಗವಾಗಿ ಸೇರಿಹೋಗಿದೆ. ಶ್ರೀ ರಾಮನಾಮ ಪ್ರಭಾವದಿಂದಲೇ ವ್ಯಾಧ ತನ್ನ ಪೂರ್ವಾಶ್ರಮದ ಸಮಸ್ತ ಸಂಗತಿಗಳನ್ನು ಮರೆತು ಋಷಿಯಾದ, ಜ್ಞಾನಿಯಾದ, ಪಂಡಿತನಾದ ಅಷ್ಟೇ ಏಕೆ ನ್ವಾರಸ್ಯಮಯ ಸುಂದರ ಛಂದೋಬದ್ಧ ಶ್ಲೋಕವನ್ನು ರಚಿಸುವಷ್ಟು ಶಕ್ತಿ ಪಡೆದ ಎಂದಮೇಲೆ ಶ್ರೀ ರಾಮನಾಮದ ಅಗಾಧ ಶಕ್ತಿಯನ್ನು ಅರಿಯುವುದು ಬಹುಸುಲಭ.

ವಾಲ್ಮೀಕಿ ರಾಮಾಯಣವನ್ನು ರಚಿಸಿದರು. ರಾಮಾಯಣ ವಾಲ್ಮೀಕಿಯನ್ನೂ ಮಹಿಮಾನ್ವಿತ ವ್ಯಕ್ತಿಯನ್ನಾಗಿ, ಆದಿಕವಿಯನ್ನಾಗಿ ನಿರೂಪಿಸಿತು. ಭಾರತೀಯರಿಗಂತೂ ರಾಮಾಯಣ ಆದರ್ಶಕಾವ್ಯ. ಶ್ರೀ ರಾಮನು ಆದರ್ಶ ಪುರುಷ. ಆದರೆ ರಾಮಾಯಣ ಆರ್ಯರ ದ್ರಾವಿಡರ ಭೇದದ ಮೂಲ, ಕವಿ ದ್ರಾವಿಡರನ್ನು ತೆಗಳಿದ್ದಾನೆ. ಹಳಿದಿದ್ದಾನೆ, ದಕ್ಷಿಣದ ಇತಿಹಾಸ, ಸಂಸ್ಕೃತಿಕ, ನಾಗರಿಕತೆಗಳಿಗೆ ಭಂಗಬಂದಿದೆ, ಹೋಗಲಾಡಬೇಕು ಎಂದು ವಾದಿಸುವುದು ಹಿತಕಾರಿಯಲ್ಲ- ಮೂರ್ಖತನಕ್ಕೆ ಸಾಕ್ಷಿ.

ವಾಲ್ಮೀಕಿ ರಾಮಾಯಣವು ಕಳಂಕ ರಹಿತ ಕಲಾ ಪೂರ್ಣ ಕೃತಿ ಎಂದು ಹೇಳಬಹುದಾಗಿದೆ. ಇದಕ್ಕೆ ಅದರ ಜನಪ್ರಿಯತೆಯೇ ಸಾಕ್ಷಿ. ಆಸೇತು ಹಿಮಾಚಲ ಪರ್ಯಂತ ರಾಮಾಯಣ ಮಹಾಕಾವ್ಯ ತನ್ನ ಕೀರ್ತಿಯನ್ನು ಹರಡಿದೆ. ಭಾರತದಲ್ಲಿ ಮಾತ್ರವೇ ಅಲ್ಲದೆ ಹೊರನಾಡುಗಳಲ್ಲಿಯೂ ರಾಮಾಣದ ಕೀರ್ತಿ ಹರಡಿರುವುದು ಮತ್ತೊಂದು ವೈಶಿಷ್ಟ್ಯ. ಅಷ್ಟೇ ಅಲ್ಲದೆ ಜಾವಾ, ಇಂಡೋನೇಷ್ಯಾ, ಸುಮಾತ್ರಾ, ಸಿಲೋನ್, ಸಯಾಂ ಮೊದಲಾದ ನಾಡುಗಳಲ್ಲಿಯೂ ವಿವಿಧ ರಾಮಾಯಣಗಳು ಬಳಕೆಯಲ್ಲಿವೆ. ಜೈನ ಬೌದ್ಧ ಕವಿಗಳು, ರಾಮಾಯಣದ ಕಥೆಯನ್ನು ತಮ್ಮ ಧರ್ಮ, ತತ್ವ ಸಂಪ್ರದಾಯಗಳಿಗೆ ಅನುಸಾರವಾಗಿ ನಿರೂಪಿಸಿ ಪ್ರಸಾರ ಮಾಡಿರುವುದು ಸಹಜ ಸಂಗತಿಯೇ ಆಗಿದೆ. ಭಾರತದಲ್ಲಿಯೂ ಹಲವಾರು ಭಾಷೆಗಳಲ್ಲಿ ರಾಮಾಯಣದ ಕಥೆ ಅನೇಕ ಕವಿಗಳಿಂದ ರಚಿಸಲ್ಪಟ್ಟಿದೆ. ಎಲ್ಲ ಕಥೆಗಳಿಗೂ ವಾಲ್ಮೀಕಿ ರಾಮಾಯಣದ ಕಥೆಯೇ ಆಧಾರ ಎಂಬುದು ಸ್ಪಷ್ಟ. ಆಯಾ ಕವಿಗಳು ತಮ್ಮ ಪ್ರತಿಭೆ ಪಾಂಡಿತ್ಯ, ಸಂಸ್ಕಾರಗಳಿಗೆ ಅನುಸಾರವಾಗಿ ಕಥೆಯನ್ನೂ ಮಾರ್ಪಾಡು ಮಾಡಿ ಜನಮನರಂಜನೆಗಾಗಿ ಅರ್ಪಿಸಿದ್ದಾರೆ.

ವಾಲ್ಮೀಕಿ ರಾಮಾಯಣದಂತೆಯೇ ತುಲಸೀ ದಾಸರ 'ತುಲಸೀರಾಮಾಯಣ'ವೂ ಜನಪ್ರಿಯ ಕೃತಿ. ದಕ್ಷಿಣದಲ್ಲಿ ಅದೂ ತಮಿಳಿನಲ್ಲಿ ಕಂಬ ರಾಮಾಯಣ ಏಕಮೇವಾದ್ವಿತೀಯ ಕೃತಿ, ಕನ್ನಡದಲ್ಲಿ ತೊರವೆಯ ನರಹರಿಯ ತೊರವೆಯ ರಾಮಾಯಣ ಮತ್ತೊಂದು ಉತ್ತಮ ಕೃತಿ. ಹೀಗೆ ವಾಲ್ಮೀಕಿ ರಾಮಾಯಣ ಜನಪ್ರಿಯ ಆದರ್ಶ ಕಥಾವಸ್ತುವನ್ನು ಅಯ್ದು ಪುರುಷೋತ್ತಮ ಶ್ರೀ ರಾಮಚಂದ್ರನ ದಿವ್ಯ ಚರಿತ್ರೆಯನ್ನು ಹಲವಂದಿ ಹಲ ಬಗೆಯಲ್ಲಿ ನಿರೂಪಿಸಿದ್ದಾರೆ. ಒಂದೊಂದರ ಶಕ್ತಿಯೂ ಒಂದೊಂದು ವಿಧ, ಒಂದೊಂದರ ಶಕ್ತಿಯೂ ಅಗಾಧ ಒಂದೊಂದರ ಸೌಂದರ್ಯವೂ ಒಂದೊಂದು ಬಗೆ.

ರಾಮಾಯಣ ಮಹಾ ಕಾವ್ಯ ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾ ಕಾಂಡ, ಸುಂದರಕಾಂಡ, ಮತ್ತು ಯುದ್ಧಕಾಂಡ ಎಂಬ ಆರು ಭಾಗಗಳಿಂದ ಕೂಡಿದ ಕೃತಿ.

ಅಯೋಧ್ಯೆಯ ಅರಸು ದಶರಥ, ಮಿಥಿಲೆಯ ಅರಸು ಜನಕ, ಶ್ರೀರಾಮ ಅವನ ಮೂವರು ತಮ್ಮಂದಿರು ಭರತ, ಲಕ್ಷ್ಮಣ, ಶತ್ರುಘ್ನ, ಕೌಸಲ್ಯೆ, ಸುಮಿತ್ರೆ ಮತ್ತು ಕೈಕೆಯಿರು, ವಶಿಷ್ಠ, ವಿಶ್ವಾಮಿತ್ರರು, ಸೀತಾದೇವಿ, ಶ್ರೀರಾಮ ಭಕ್ತ ಆಂಜನೇಯ, ರಾವಣ, ಕುಂಭಕರ್ಣ, ವಿಭೀಷಣ, ಸುಮಂತ ಗುಹ, ಸುಗ್ರೀವ, ವಾಲಿ ಮೊದಲಾದವರು ವೃತ್ತಾಂತಗಳು ಹೃದಯಂಗಮವಾಗಿ ಚಿತ್ರಿತವಾಗಿವೆ. ಪುರುಷೋತ್ತಮ ಶ್ರೀರಾಮಚಂದ್ರ ಕಾವ್ಯದ ನಾಯಕ. ಜನಕ ನಂದಿನಿ ವೈದೇಹಿ ಕಥಾನಾಯಿಕೆ. ಇವರ ಸುತ್ತ ಹೆಣೆದಿರುವ ಅನುಪಮ ಕಥೆಯಲ್ಲಿ ಬರುವ ಸನ್ನಿವೇಶ, ಘಟನೆ, ಪಾತ್ರಗಳು ಯಥಾವತ್ತಾಗಿವೆ.

ಶ್ರೀರಾಮಚಂದ್ರ ಆದರ್ಶ ಪುತ್ರನಾಗಿ ಅರಸನಾಗಿ, ಪತಿಯಾಗಿ, ಅಣ್ಣಗಾಗಿ, ಮಾನವನಾಗಿ ಮೆರೆದಿದ್ದಾನೆ. ಆದರ್ಶ ಪತಿವ್ರತೆ ಸೀತಾದೇವಿಯ ಪಾತ್ರ ಗೌರೀ ಶಂಕರದಷ್ಟೇ ಉನ್ನತವಾಗಿ, ಗಂಗೆಯಷ್ಟೇ ಪವಿತ್ರವಾಗಿ ಉಳಿದಿದೆ.

ಕವಿ ತನ್ನ ಕಾವ್ಯದಲ್ಲಿ ಸಮಕಾಲೀನ ಜೀವನವನ್ನು, ಸಂಸ್ಕೃತಿಯನ್ನು ಚಿತ್ರಿಸಿದ್ದಾನೆ. ಇದೊಂದು ಅಮರ ಕಾವ್ಯವಾಗಿ ಉಳಿದಿದೆ. ವಾಲ್ಮೀಕಿಯ ಜೀವನದಲ್ಲಿ ಮತ್ತೊಂದು ಸನ್ನಿವೇಶಒದಗಿ ಬರುತ್ತದೆ ದೈವಾನುಗ್ರಹದಿಂದ ಲೋಕಾಪವಾದಕ್ಕೆ ಗರ್ಭಿಣಿ ಪತ್ನಿಯನ್ನು ರಾಮಚಂದ್ರ ಕಾಡಿಗಟ್ಟುತ್ತಾನೆ. ಪರಮಪಾವನೆ ಜಾನಕಿಯನ್ನು ವಾಲ್ಮೀಕಿ ಮಹರ್ಷಿಗಳೇ ತಮ್ಮ ಆಶ್ರಮದಲ್ಲಿಟ್ಟುಕೊಂಡು ಕಾಪಾಡುತ್ತಾರೆ. ಅಲ್ಲಿ ಲವಕುಶರ ಜನನವಾಗುತ್ತದೆ. ಮುಂದೆ ಶ್ರೀರಾಮನೊಂದಿಗೆ ಲವಕುಶರು ಒಂದುಗೂಡುತ್ತಾರೆ.

ಉತ್ತರ ರಾಮ ಚರಿತೆ ಜೈಮಿನಿ ಭಾರತ ಮೊದಲಾದ ಕೃತಿಗಳಲ್ಲಿ ಈ ಕಥಾಂಶವನ್ನು ಕಾಣಬಹುದಾಗಿದೆ. ವಾಲ್ಮೀಕಿ ಮಹರ್ಷಿಯ ಸತ್ವಪೂರ್ಣ ಶೈಲಿಯಲ್ಲಿ, ಸುಂದರ ಕಥಾವಸ್ತುವಿನಲ್ಲಿ ಕುಂದನ್ನಂತು ಎಣಿಸುವಂತಿಲ್ಲ. (ಎಣಿಸುವವರು ಇದ್ದಾರೆ). ಆದರ್ಶ ಅರಸು ಮನೆತನದ ಅಮರ ಕಥೆಯನ್ನು ಕವಿ ಅಂದವಾಗಿ ಚಿತ್ರಿಸಿದ್ದಾನೆ. ಅದು ಕಲ್ಪನೆಯ ಕಥೆ ಎಂದು ಹೇಳಿದರೂ ಕಳಂಕವಿಲ್ಲ. ರಾಮಾಯಣದ ಕಥೆ, ಶ್ರೀರಾಮನ ಧೀರ ಆದರ್ಶ ಅನುಪಮ ವ್ಯಕ್ತಿತ್ವದ ಮಹತ್ವ ನಿನ್ನೆ — ಇಂದಿಗೆ ಮುಗಿಯುವಂತದಲ್ಲ. ಎಂದೆಂದಿಗೂ ಬೆಳಕು ಬೀರುವ ಉಜ್ವಲ ಕಾಂತಿ ಅದು.

ಅಮೃತ ಬಿಂದು

ಆತನು ಅರಸನಿರಲಿ ಯಾ ಗೃಹಸ್ಥನಿರಲಿ ಸಿರಿವಂತನಿರಲಿಯೂ ಬಡವನಿರಲಿ, ತನ್ನ ಮನೆಯಲ್ಲಿ ಶಾಂತಿಯ ಸಾಕ್ಷಾತ್ಕಾರ ಮಾಡಿಕೊಂಡವನು ಮಾತ್ರ ಸುಖಿ ಎಂದೆನಿಸುವನು.

o o o

ನಿರೀಕ್ಷೆಯ ಆಧಾರದ ಮೇಲೆ ಮನುಷ್ಯನ ಜೀವನ ನಿಂತಿದೆ. ಕಷ್ಟದ ಕಡಲಲ್ಲಿ ನಿರಾಸೆಯ ತಿಮಿರದಲ್ಲಿ, ನಿರುತ್ಸಾಹದ ಮರುಭೂಮಿಯಲ್ಲಿ ಆತನಿಗೆ ಚೇತನ ಕೊಡುವ ಒಂದೇ ವಸ್ತು ನಿರೀಕ್ಷೆಯೂ ಭವಿಷ್ಯದ ಆಸೆ.

o o o

ಆನಂದ ಮತ್ತು ನಾಳಿನ ಆಸೆ ಇವೆರಡಿರುವವನು ಬಡವನಾದರೂ ಶ್ರೀಮಂತನೆ. ದುಃಖ ಮತ್ತು ನಾಳಿನ ಭಯ ಇವೆರಡಿರುವವನು ಶ್ರೀಮಂತನಾದರೂ ಕಡುಬಡವನೆ!

o o o

ದೈನ್ಯತೆ, ವಿನಯ ಎಂಬುವು ನೆಲದೊಳಗಿನ ಬೇರಿನಂತೆ. ಆದರ ಬಲದಿಂದಲೇ ಮೇಲಿರುವ ಮರ ಚಿಗುರಿ ಫಲ ಕೊಡುತ್ತದೆ.

o o o

ನಿಂತ ನೀರಿನೊಳಗೆ ಶೀಘ್ರವಾಗಿ ಕ್ರಿಮಿ ಪ್ರವೇಶಿಸುವಂತೆ, ಚಿಂತಿಸದ ಸೋಮಾರಿ ಮನಸು ದುಷ್ಟ ಪ್ರವೃತ್ತಿಗಳ ನಿವಾಸವಾಗುತ್ತದು.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ತ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಸತ್ಯ ಸಂಗತಿಗಳು

(ಹತ್ತನೇ ಪುಟದಿಂದ)

ಪ್ರಾಶಸ್ತ್ಯವು ಕಡಿಮೆಯಾಗಿದೆ. ಇಸ್ರೇಲ್ ದಂಪತಿಗಳಾದ ಈಸ್ತರ್ ಮತ್ತು ಅಬಿಓಫ್ಯಾರಿಮ್‌ರವರ ಸಂಘದ ಹಾಡುಗಳು 'ನ್ಯೂ ಸಾಂಗ್ಸ್ ಆಫ್ ದಿ ವರ್ಲ್ಡ್' ಎಂಬ ಹೆಸರಿನಲ್ಲಿ ಬಹಳ ಪ್ರಸಿದ್ಧಿಗೆ ಬಂದಿದೆ. ಇವರ ಹಾಡುಗಳ ರೆಕಾರ್ಡುಗಳು ಪ್ರೆಸ್ಸಿನಿಂದ ಹೊರಕ್ಕೆ ಬರುವುದರಲ್ಲಿಯೇ ೨೫,೦೦೦ಕ್ಕೆ ಮೇಲ್ಪಟ್ಟು ಆರ್ಡರುಗಳು ಬಂದಿದ್ದವು. ಸೆಪ್ಟೆಂಬರ್ ೬ರಲ್ಲಿ ಒಫ್ ಮ್ಯೂರಿಮ್ಸ್ ಎಂಬ ಉತ್ತಮವೆಂದೂ ಎರಡು ಉದ್ದವಾದ ಹಾಡುಗಳು ಬಹಳ ಆದರಣೀಯವಾಯಿತು. ಸಾಂಗ್ಸ್ ಆಫ್ ದಿ ವರ್ಲ್ಡ್ ಪ್ರಥಮ ಸ್ಥಾನವನ್ನೂ ಒಂಬತ್ತನೆಯ ಸ್ಥಾನವು ಸೋಲದಿ ಆಫ್ ದಿ ಸ್ಪೇಟ್ ಎಂಬುದಕ್ಕೂ ಬಂದಿವೆ. ರೆಕಾರ್ಡುಗಳನ್ನು ಮಾರುವ ಅಂಗಡಿಗಳ ಮುಂದೆ ಜನರು ಸಾಲಾಗಿ ಕಾದು ನಿಂತು ಕೊಂಡುಕೊಳ್ಳಲು ಆತುರರಾಗಿರುತ್ತಾರೆ. ೨೫ ವರ್ಷ ವಯಸ್ಸಿನ ಈಸ್ತರ್ ಮತ್ತು ಆಕೆಯ ಗಂಡ ಇಬ್ರಾಹಿಮ್ ಇವರು ಬೊಲೀವಿಯಾ ದೇಶದವರು. ಇವರು ಹಳೇ ಕಾಲದ ಸಾಂಘಿಕ ಹಾಡುಗಳನ್ನು ನವೀನ ರೀತಿಯಲ್ಲಿ ಹಾಡಿದುದೇ ಈ ಆಕರ್ಷಣೆಗೆ ಕಾರಣವಾಯಿತು. ಇವರು ಪ್ರಪಂಚದ ಅನೇಕ ದೇಶಗಳನ್ನು ಸುತ್ತಿ ತಮ್ಮ ಹಾಡುಗಳಿಂದ ಜನರನ್ನು ಆಕರ್ಷಿಸಿದ್ದಾರೆ. ಇವರು ಹೋದ ದೇಶಗಳಲ್ಲಿನ ರೈಲ್ವೇ ನಿಲ್ದಾಣ ಮತ್ತು ವಿಮಾನ ನಿಲ್ದಾಣ ಮತ್ತು ಅಲ್ಲಿನ ವೇದಿಕೆಗಳ ಸ್ಥಳಗಳನ್ನು ನೋಡಲು ಅವಕಾಶವಾಯಿತೇ ವಿನಹ ಹೆಚ್ಚು ಕಾಲ ಕಳೆಯಲು ಅವಕಾಶವಾಗಲಿಲ್ಲ ತಮ್ಮ ಪ್ರಸಿದ್ಧಿಗೆ ಕಾರಣವಾದ ಮೂಸಿಚ್ಚನ್ನೇ ಜನ್ಮಸ್ಥಾನವಾಗಿ ಕಳೆಯಲು ಅಲ್ಲೇ ವಾಸಕ್ಕೆ ಮನೆಯನ್ನು ಮಾಡಿಕೊಂಡಿದ್ದಾರೆ.

ಅಪೂರ್ಣ ಜನನದ ಸಂಖ್ಯೆ

ಪಶ್ಚಿಮ ಜರ್ಮನಿಯಲ್ಲಿನ ಕೆಲಸಗಾರರು ಜನ ಸಂಖ್ಯೆಯಲ್ಲಿ ಮೂರನೇ ಒಂದು ಭಾಗದಷ್ಟು ಜನರು ಸ್ತ್ರೀಯರು ಪ್ರಪಂಚದಲ್ಲಿ ಜಪಾನಿನೊಡನೆ ಹೋಲಿಸಿದಾಗ ನಾಲ್ಕನೆಯ ಸ್ಥಾನವನ್ನು ಪಡೆಯುತ್ತದೆ. ರಷ್ಯದಲ್ಲಿ ಶೇಕಡ ೬೦ ಮಂದಿ ಸ್ತ್ರೀಯರು ಪೂರ್ವ ಜರ್ಮನಿಯಲ್ಲಿ ೩೭ ಶತದಷ್ಟೂ ಆಸ್ಟ್ರಿಯದಲ್ಲಿ ೩೭ ಶತವೂ ಇರುವುದು ವ್ಯಕ್ತವಾಗಿದೆ. ಜರ್ಮನಿಯಲ್ಲಿ ಕೇವಲ ೩೦ ಶತದಷ್ಟು ಸ್ತ್ರೀಯರು ಕೆಲಸ ಮಾಡುತ್ತಾರೆ. ಸ್ತ್ರೀಯರು ಕೆಲಸ ಮಾಡಿ ಸಂಸಾರದ ಸುಖ ಸಾಧನಗಳಾದ ಟಿ. ವಿ. ರೆಫ್ರಿಜರೇಟರ್ ಮತ್ತು ಒಂದು ಕಾರನ್ನು ಕೊಳ್ಳುವಷ್ಟು ಹಣವನ್ನು ಸಂಪಾದಿಸಿಕೊಳ್ಳಲು ಮಾತ್ರ ಕೆಲಸಮಾಡುವುದು ವ್ಯಕ್ತವಾಗಿದೆ. ಹೀಗೆ ಕೆಲಸ ಮಾಡಲು ಹೋಗುವ ಸ್ತ್ರೀಯರಲ್ಲಿ ಅಪೂರ್ಣ ಜನನವಾಗುವವರ ಸಂಖ್ಯೆಯು ಹೆಚ್ಚಾಗುತ್ತಿದೆ. ಪಶ್ಚಿಮ ಜರ್ಮನಿಯ ಜನನ ಸಂಶೋಧನ ವಿಭಾಗದ ಡಾ. ಹೆಚ್. ಡಬ್ಲ್ಯು. ವೆಸ್ಟರ್‌ಲಿಂಗ್‌ರವರ ಪರಿಶೋಧನೆಗಳಿಂದ ಕೆಲಸಗಳನ್ನು ಸ್ತ್ರೀಯರಲ್ಲಿ ಸಾಮಾನ್ಯ ಅಪೂರ್ಣ ಜನನ ಸಂಖ್ಯೆಯು ಮೂರರಷ್ಟು ಹೆಚ್ಚಾಗಿರುವುದು ತಿಳಿದು ಬಂದಿದೆ. ಇದು ಬಹುಶಃ ಸ್ತ್ರೀಯಿಂದ ಹೆಚ್ಚು ಕೆಲಸ ಮಾಡಿಕೊಳ್ಳುವುದೇ ಎಂದು ಅವರಿಗೆ ತಕ್ಕ ಕೆಲಸಗಳನ್ನು ಮಾತ್ರ ಕೊಡಬೇಕೆಂದು ಅವರು ತಿಳಿಸಿದ್ದಾರೆ.

ಕನ್ನಡದ ಪಂಚಲೋಹತನ

(ನಾಲ್ಕನೇ ಪುಟದಿಂದ)

ಲೆ ಅಂಕುಶವಿಡ ವಹಿಂದ್ರೆ ನಿಮ್ಮಂತಹ ಹೆಂಡಂದಿರು...."

"ಅಬ್ಬಾ ನೀವೆ?"

'ಯಾಕೆ?'

"ಮತ್ತೂ ತಂದು ಇಟ್ಟಿಡ್ಡು ನನ್ನ ಬಾಯಿಗೇನೇ...."

'ಮತ್ಯಾರ....'

'ಸಾಕುಮಾಡೀಂದ್ರೆ.. ನೋಡಿ, ನೀವು ಬೇಕಾದ್ರೆ ನೂರು ಹೇಳಿ, ನನ್ನ ಅಭಿಪ್ರಾಯವೆಂದ್ರೆ ...'

'ಹೇಳು ಹೇಳು, ಪ್ರಜಾಶಕ್ತಿಯಲ್ಲಿ ಎಲ್ಲರಿಗೂ ಅಭಿಪ್ರಾಯ ಪ್ರಕಟಣೆಮಾಡುವ ಸ್ವಾತಂತ್ರ್ಯವಿದೆ...."

'ನೋಡಿ, ಈ ಸ್ವಾತಂತ್ರ್ಯವಿದ್ದದ್ದರಿಂದ್ಲೇ ಕವಿಗಳು ಅರ್ಥವಾಗದ ಕನ್ನಡದಲ್ಲಿ ಬರೆಯೋದ ...."

"ಇಲ್ವೆ, ಅರ್ಥವಾಗದೆ ಇದ್ರೆ ಅಭಿಪ್ರಾಯ ಹೇಗಾದೀತು ನೋಡು?"

"ಯಾರಿಗೆ ಅರ್ಥವಾಗದೆ ಹೋದ್ರೂ ಕವಿಗೂ ಅತನ ಬಾಲಬಡಕರಿಗೂ ಆಗುತ್ತಿಲ್ಲ...'

'ಸರಿ. ಮತ್ತೆ ಅರಿಯದ ಕನ್ನಡ ದ್ವಂದ್ವದಿಂದ ಕಡೂರುತ್ತಿಯಲ್ಲ?"

"ನೋಡಿ, ಬಹುಜನ ಸುಖಾಯ ಕಾವ್ಯ ಇರಬೇಕು. ಹಿಂದಿನ ಕಾಲದಂತೆ ಕೆಲವೇ ಜನರ ಗುತ್ತಿಗೆಯಂತಿದ್ದರೆ ಏನು ಚಂದ?'

"ಅಂದ್ರೆ ಜನರ ಮಟ್ಟಕ್ಕೆ ಕವಿ ಇಳಿಯಬೇಕೂಂತ ಅನ್ನೋದು..."

'ಹಾಗಲ್ಲ, ಬಹು ಜನರಿಗೆ ಅರ್ಥವಾಗುವ ಕನ್ನಡದಲ್ಲಿ ಬರೆಯಬೇಕೂಂತ...."

'ಆಗ ಜನ ಮತ್ತೂ ಇಳಿದು ಬಡುತ್ತೆ. ಕಡ್ಲೆಕಾಳು ತಿಂದ ಹಲ್ಲಿಗೆ ಈಗ ಬಾಳೆ ಹಣ್ಣು ಜಗಿಯೋಕೂ ತ್ರಾಣವಿಲ್ಲ....'

'ಕನ್ನಡ ಮಾಧ್ಯಮವಾಗಲೆ ಬೇಕು ಮೊದಲೀ ಕವಿಗಳಿಗೆ ಅಂತ ಹಾಡಿದ್ದಾರಲ್ಲ ಒಬ್ಬ ಕವಿ..."

"ಹ್ದೂ, ನರಸಿಂಹ ಸ್ವಾಮಿಯರ ಬೇಕು...'

'ಹಾಗೆ ಆಗ ಬೇಕು.'

"ಅದೇ ತಾಪತ್ರಯದ್ದು.'

"ಯಾಕೆ?"

"ಲೋಹಗಳಲ್ಲಿ ಪಂಚಲೋಹ ಹೆಚ್ಚಿನದ್ದೇತೆ. ಹಾಗೆಯೇ ನಮ್ಮ ಪಂಚ ಕನ್ನಡ ಭಾಷೆ ಭಾರಿ ದೊಡ್ಡದು.... ಆದ್ರಿಂದ್ಲೇ ನಮ್ಮ ಕಾವ್ಯಗಳೂ ಉನ್ನತ ಮಟ್ಟದವು."

"ಅಂದ್ರೆ?"

'ವ್ಯಾಕಾಸುರ ಮಹಾಸುರ, ಕೊಹಾಸುರ, ಹೈಕಾಸುರ ಮತ್ತು ಮುಂಕಾಸುರ ರೆಂಬ ಐವರು ಸಹೋದರರು ಒಂದಾಗಿದ್ದಾರೆ. ಅವರ ಬೇರೆ ಬೇರೆ ತರಹದ ನುಡಿಗಳು ಒಬ್ಬರಿನ್ನೊಬ್ಬರಿಗೆ ಅರ್ಥವಾಗೋದು ಹೇಗೆ?"

'ಪಂಚಲೋಹತನವೋ ಪಂಚಲೋಹತನವೋ.... ಏನೇ ಇರ್ಲಿ, ಇಲ್ಲಾದ್ರೂ ಅಷ್ಟೇನೇ...."

'ಏನು ಮಾಡೋದು? ಕಾವ್ಯ ಸಂಸಾರದಲ್ಲಿ ಕವಿ ಏಕೈಕ ಪ್ರಜಾಪತಿ. ಆವನ ಲೆಕ್ಕಣಿಕೆಗೆ ಅಂಕುಶ ಹಾಕೋದೂ ನಿನ್ನ ನಾಲಿಗೆಗೆ ಕಡಿವಾಣ ಜೋಡಿಸೋದೂ ಒಂದೇ...."

"ಅಂತೂ ನನ್ನನ್ನೇ ಮತ್ತೂ ಮತ್ತೂ ಸಸಾರ ಮಾಡ್ತೀರಿ. ಇರ್ಲಿ. ಸದ್ಯ ನೀವಾದ್ರೂ ಕವಿಗಳ ಹಾಗೆ ಉನ್ನತರಿದ್ದೀರಲ್ಲಾ...."

'ಹಾಗೇನಿಲ್ಲೇ....'

"ಸಾಕು ಬೇಡೀಂದಲ್ಲಾ, ಬನ್ನಿ....ಕೈ ಹಿಡಿದವ್ರಿಗೆ ಯಾವಾಗ್ಲೂ ಹಾಗೇ..."

"ಕೈಹಿಡಿದವ್ರಿಗೂ..."

"ಎಂಥದು ಇದು, ಇಲ್ಲಿ ಬನ್ನೀಂದ್ರೆ..."

'ಹ್ದೂಂ..."

'ಶೂ......"

—ಗೋರಾ.

ಪಕ್ಷಿಗೀತ

ಶ್ರೀ

೧

ತಿಳಿ ನೀಲಿಮದ ಬಾನ ಮೂಡದಾಡುಂ
ಬೊಲದಿ
ಅಲ್ಲೊಂದು ಇಲ್ಲೊಂದು ಬೆಳ್ಳಿ
ಮೋಡ!
ಕಲಕಲ ನಿನಾದದಲಿ ಇಕ್ಕೆಲದಿ ಕಲೆ
ಕುಣಿಸಿ
ಪೈರು ಹಾಡುತಲಿತ್ತು "ಹಸುರು
ಹಾಡ!"

೨

ಭೂರಮೆಯ ಸ್ಪರ್ಶಕ್ಕೆ ರೋಮಾಂಚನಂ
ಗೊಂಡು
ಸರಿವಪೋಲ್ ತಂಬೆಲರು
ಬೀಸುತಿತ್ತು!
ಅರಳಿದ್ದ ಕುಸುಮಗಳ ಸೌರಭದ
ರಾಶಿಯನು
ಸರಿದಾಡಿದಲ್ಲೆಲ್ಲ ಸೂಸುತಿತ್ತು!

೩

ಮೂಡಣದ ದಿಸೆವಣ್ಣ ರಂಗಿನೋ
ಕುಳಿಯಲ್ಲಿ
ರಸೆಯೊಡನೆ ಚೆಲ್ಲಾಟವಾಡೆ ಕೂಡಿ
ನಾದ ಸೌಂದರ್ಯದೀ ಸ್ವರ್ಗೀಯ
ನೋಟದಲಿ
ಅರು ಮೂಡಿದರೆನ್ನ ಮನಕೆ ನೋಡಿ!

೪

ಅಲ್ಲಿ ಹಸುರಿನ ಮೇಲೆ ನೀಲಬಾನಿನ
ಕೆಳಗೆ
ಹಾಡುತ್ತಲಿತ್ತೊಂದು ಹಕ್ಕಿ ಗಾನ!
ಆದರ ಆಲಾಪನೆಯ ನಾದ ರಸವನು
ಜೀವ—
ಜಾಲ ಸವಿಯುತಲಿತ್ತು ತಾಳಿ ಮೌನ!

೫

"ಶಾಂತ, ನಿರ್ಮಳ ಗಾಳಿಯಲಿ
ಪುಟ್ಟ ರೆಕ್ಕೆಗಳ
ಬಿಚ್ಚಿಹೆಗುರದಿ ಹಾಡಿ ಹಾರಿ ಏರಿ,
ಸಂಗೀತ ಬಲೆಯಲ್ಲಿ ಮನಗಳನು
ಸೆಳೆಯುತಲೆಂ
ದೆಳಸುವೆಯ ಓ! ಹಕ್ಕಿ ಬಾರಿ ಬಾರಿ?

೬

ವಿಶ್ವ ಸೃಷ್ಟಿಯದಾತ ನಿನ್ನ ನುಣ್
ಕೊರಳಿನಲಿ
ಯಾವ ತರಹದ ಜಾಲ
ಅಡಗಿಸಿಹನು?
ನನ್ನದೀ ಗಂಟಲಲ್ಲಿ ಗೊಗ್ಗರದ
ದನಿಯನ್ನು
ಯಾಕಾಗಿ ಈ ತೆರಂ ಕೂಡಿಸಿಹನು?

೭

ಎನಗೆ ನಿನ್ನಯ ಹಾಗೆ
ಬಾನಂಗಣದ ತುಂಬ
ಹಾಡುತ್ತ ಹಾರುತ್ತ ನಲಿಯುವಾಸೆ
ಜೀವನದ ಕ್ಷಣ ಕ್ಷಣವು
ನಾದ ತರಂಗದಲಿ
ಐಕ್ಯಗೊಳಿ ಮರೆಯದೇ
ಕ್ಷುತ್ ಪಿಪಾಸೆ?

೮

ನೀಲದಾಗಸದಲ್ಲಿ ಇನ್ನು ಮೇಲೇರುತಲಿ
ಇನ್ನೊಂದು ಸೊಗಸಾದ
ಹಾಡ ಹಾಡು!
ಹಲವು ಚಿಂತೆಗಳೊಂದು ಕೂಡಿ
ತಬ್ಬಿದ ಮನವ
ನಿನ್ನ ದನಿಯಲಿ ಲೀನವಾಗ ಮಾಡು!

—ಯಸ್. ಕೃಷ್ಣ ಮುಕಾರಿ,
ಮಂಗಳೂರು

ಇದೀಗ ಪ್ರಕಟವಾಗಿದೆ!

ಮೇರಿ ಕೊಟ್ಟ ಬೆಂಡೋಲಿ

ಯೆಸ್. ಸದಾಶಿವರಾಯರ ಕಥಾಸಂಕಲನ.

ಮುನ್ನುಡಿ: ನಿರಂಜನ

ತ್ರಿವರ್ಣ ರಕ್ಷಾಪತ್ರ ಬೆಲೆ: ರೂ. ೧=೮೦

ಪ್ರತಿಗಳಿಗೆ—
ನವಯುಗ ಪ್ರೆಸ್, ಉಡುಪಿ

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ವಿಜ್ಞಾನದಿಂದ ಆರೋಗ್ಯ ಲಾಭ

ಕ್ಯಾನ್ಸರ್ ಸಂಶೋಧನೆಯಲ್ಲಿ ಹೊಸ ವಿದ್ಯಮಾನಗಳು

ಕ್ಯಾನ್ಸರನ್ನು ಗುಣಪಡಿಸುವ ವಿಧಾನದ ಸಂಶೋಧನೆಯು ವೈದ್ಯಕೀಯ ಸಂಶೋಧನೆಗಳಲ್ಲೇ ಅತ್ಯಂತ ಸಂತೋಷಕರವಾದ ಘಟನೆಯಾಗಬಲ್ಲುದು. ಆದುದರಿಂದ ಈ ಕ್ಷೇತ್ರದಲ್ಲಿ ಆಶಾದಾಯಕ ಸಂಶೋಧನೆಗಳಾಗಿವೆಯೆಂಬ ವರದಿಯು ಎಲ್ಲ ಜನರಲ್ಲಿ ಕುತೂಹಲವನ್ನು ಹುಟ್ಟಿಸುತ್ತದೆ. ಇಂಥ ವರದಿಗಳೊಡನೆ, ಎಲ್ಲ ಸಂದರ್ಭಗಳಲ್ಲೂ, ಕಾರ್ಯವಿನ್ನೂ ಪ್ರಾಥಮಿಕ ಹಂತದಲ್ಲಿದೆ ಎಂಬ ಎಚ್ಚರಿಕೆಯನ್ನೂ ಕೊಡಲಾಗುತ್ತಿದೆ.

ವೇನ್ ಸ್ಟೇಟ್ ವಿಶ್ವವಿದ್ಯಾನಿಲಯ ಮತ್ತು ಡಿಟ್ರಾಯ್ಟ್ ಕ್ಯಾನ್ಸರ್ ರೀಸರ್ಚ್ ಇನ್ಸ್ಟಿಟ್ಯೂಟಿನ ಸಂಶೋಧಕರ ತಂಡವೊಂದು, ಕಳೆದ ನಾಲ್ಕು ವರ್ಷಗಳಲ್ಲಿ ಕೆಲವು ಕ್ಯಾನ್ಸರ್ ರೋಗಿಗಳ ಚಿಕಿತ್ಸೆಯಲ್ಲಿ ಸಫಲತೆ ಲಭಿಸಿದುದನ್ನು ವರದಿ ಮಾಡಿದೆ. ರೋಗಿಯ, ಕ್ಯಾನ್ಸರ್ ಹುಣ್ಣಿನ ಕಣಗಳನ್ನು ಮೊಲದ ರಕ್ತದೊಡನೆ ಮಿಶ್ರಮಾಡಿ ಸಿದ್ಧಗೊಳಿಸಿದ ವ್ಯಾಕ್ಸೀನನ್ನು ರೋಗಿಗಳಿಗೆ ಚುಚ್ಚಿ ಈ ಪ್ರಯೋಗಗಳನ್ನು ನಡೆಸಲಾಯಿತು. ಹೀಗೆ ಚುಚ್ಚಿ ದೇಹಕ್ಕೆ ಸೇರಿಸಲಾದ ವಸ್ತುವನ್ನು ಪರಕೀಯವೆಂದು ದೇಹವು ಗುರುತಿಸುವುದರಿಂದ, ಅದರ ವಿರುದ್ಧ ಹೋರಾಡಲು ಆಂಟಿಬಡಿಗಳನ್ನು ಉತ್ಪಾದಿಸುತ್ತದೆ. ಈ ಸಂದರ್ಭದಲ್ಲಿ ದೇಹವು ಕ್ಯಾನ್ಸರನ್ನೂ ಪರಕೀಯವೆಂದು ಗುರುತಿಸಿ, ಕ್ಯಾನ್ಸರ್ ವಿರೋಧಿ ಆಂಟಿಬಡಿಗಳನ್ನು ಉತ್ಪಾದಿಸುತ್ತದೆ. ಎಂದು ಡೆಟ್ರಾಯ್ಟ್‌ನ ಸಂಶೋಧಕರು ವರದಿ ಮಾಡಿದ್ದಾರೆ.

ಈ ಹೊಸ ವ್ಯಾಕ್ಸೀನಿನಿಂದ ಚಿಕಿತ್ಸಿಸಲಾದ ರೋಗಿಗಳ ಸಂಖ್ಯೆ ಬಹು ಕಡಿಮೆಯಾಗಿರುವುದರಿಂದಲೂ ಚಿಕಿತ್ಸೆಯ ಸಫಲತೆಯು ಕೇವಲ ಪರಿಮಿತ ಪ್ರಮಾಣದ್ದಾಗಿರುವುದರಿಂದಲೂ ಈ ವರದಿಯ ಬಗೆಗೆ ವಿಶೇಷ ಆಶಾಭಾವನೆ ತಾಳಬಾರದು. ಮುಂದುವರಿದ ಕ್ಯಾನ್ಸರ್ ರೋಗದಿಂದ ನರಳುತ್ತಿದ್ದ, ನಿರಾಶಾಜನಕ ಸ್ಥಿತಿಯಲ್ಲಿದ್ದ ಇಪ್ಪತ್ತು ಮಂದಿ ರೋಗಿಗಳಿಗೆ ಚಿಕಿತ್ಸೆ ಮಾಡಲಾಯಿತು. ಇವರಲ್ಲಿ ಹತ್ತು ಮಂದಿ ಮೃತರಾದರು; ಇಬ್ಬರಿಗೆ ಗುಣವಾದಂತೆ ತೋರುತ್ತದೆ, ಎಂಟು ಮಂದಿಗೆ "ವ್ರಣದ ಅಭಿವೃದ್ಧಿ ಸ್ತಬ್ಧವಾಗಿದೆ."

ಅಮೆರಿಕನ್ ಮೆಡಿಕಲ್ ಅಸೋಸಿಯೇಷನಿನ ಮಾರ್ಚ್ ೨೧ರ ಸಂಚಿಕೆಯಲ್ಲಿ ಈ ಪ್ರಯೋಗವನ್ನು ಚರ್ಚಿಸಲಾಗಿದೆ. ಮಾರ್ಚ್‌ನಲ್ಲಿ ಕ್ಲೀವ್‌ಲೆಂಡಿನಲ್ಲಿ ಜರುಗಿದ ಇಂಟರ್ ನ್ಯಾಷನಲ್ ಅಕಾಡಮಿ ಆಫ್ ಪೆಥಾಲಜಿಯ ಸಮ್ಮೇಳನದಲ್ಲಿ ಈ ವಿಷಯವನ್ನು ಕುರಿತು ಒಂದು ಪ್ರಬಂಧವನ್ನು ಓದಲಾಯಿತು. ಕ್ಯಾನ್ಸರ್ ಸಂಶೋಧನೆಗೆ ಸಹಾಯ ಮಾಡುತ್ತಿರುವ ಅತಿ ದೊಡ್ಡ ಖಾಸಗಿ ಸಂಘವಾಗಿರುವ ಅಮೆರಿಕನ್ ಕ್ಯಾನ್ಸರ್ ಸೊಸೈಟಿಯು ಡೆಟ್ರಾಯ್ಟ್‌ನ ಈ ಪ್ರಯೋಗವನ್ನು "ಪ್ರೋತ್ಸಾಹಕರ" ಎಂದು ವರ್ಣಿಸಿತು; ಆದರೆ ಇದು ಕೇವಲ ಪ್ರಾರಂಭದಶೆಯಲ್ಲಿದೆ ಎಂದೂ ಹೇಳಿತು.

ಈ ಸಂಶೋಧನಾ ಕ್ಷೇತ್ರದಲ್ಲಿ ಭವಿಷ್ಯದಲ್ಲಿ ಜರುಗಲಿರುವ ವಿದ್ಯಮಾನಗಳನ್ನು ನಿಕಟವಾಗಿ ಪರಿಶೀಲಿಸಲಾಗುವುದೆಂಬುದರಲ್ಲಿ ಸಂದೇಹವಿಲ್ಲ. ಇದು ಬೇಗನೆ ಪೂರ್ಣ ಫಲದಾಯಕವಾಗಬಹುದು, ಅಥವಾ ಮುಂಚಿನ ಅನೇಕ ಪ್ರಯೋಗಗಳಂತೆ ನಿಷ್ಪ್ರಯೋಜಕವಾಗಲೂಬಹುದು.

ಏತನ್ಮಧ್ಯೆ ಕ್ಯಾನ್ಸರ್ ಬಗೆಗೆ ಇತರ ಸಂಶೋಧನೆಗಳನ್ನು ಮುಂದುವರಿಸಲಾಗುವುದು. ಅಮೆರಿಕಾ ಸರಕಾರವು ಈ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ವಿಶೇಷ ಅಧ್ಯಯನಕ್ಕಾಗಿ ಪ್ರತಿ ವರ್ಷ ೨೨೪ ದಶಲಕ್ಷ ಡಾಲರುಗಳನ್ನು ವಿನಿಯೋಗಿಸುತ್ತಿದೆ. ನ್ಯಾಷನಲ್ ಕ್ಯಾನ್ಸರ್ ಇನ್ಸ್ಟಿಟ್ಯೂಟ್, ಪರಮಾಣುಶಕ್ತಿ ಆಯೋಗ, ಅಥವಾ ಅಟರನ್ಸ್ ಆಡ್ಮಿನಿಸ್ಟ್ರೇಷನ್‌ನವರು ಕೆಲವು ಸಂಶೋಧನೆಗಳನ್ನು ನಡೆಸುತ್ತಾರೆ. ಅಮೆರಿಕಾ ಸರಕಾರದ ಗ್ರ್ಯಾಂಟುಗಳ ಸಹಾಯದಿಂದ ಅಮೆರಿಕದ ವಿಶ್ವವಿದ್ಯಾನಿಲಯಗಳಲ್ಲಿ ಅಥವಾ ಆಸ್ಪತ್ರೆಗಳಲ್ಲಿ ಅಧ್ಯಯನಗಳನ್ನು ನಡೆಸಲಾಗುತ್ತಿದೆ; ಅಲ್ಲದೆ, ಕೆಲವು ವಿದೇಶಗಳಲ್ಲೂ ಅಧ್ಯಯನಗಳನ್ನು ನಡೆಸಲಾಗುತ್ತಿದೆ.

ಅಮೆರಿಕದ ಖಾಸಗಿ ಸಂಸ್ಥೆಗಳು ನಡೆಸುವ ಅಥವಾ ರಾಜ್ಯ ಮತ್ತು ಸ್ಥಳೀಯ ಸರಕಾರದ ಬೆಂಬಲದಿಂದ ನಡೆಸಲಾಗುತ್ತಿರುವ ಸಂಶೋಧನೆಗಳನ್ನು ಸೇರಿಸಿದರೆ, ಅಮೆರಿಕದಲ್ಲಿ ಸರಕಾರೀ ಹಾಗೂ ಖಾಸಗಿ ಬೆಂಬಲದಿಂದ ನಡೆಸುವ ಕ್ಯಾನ್ಸರ್ ಸಂಶೋಧನಾ ಕಾರ್ಯಕ್ರಮದ ವಾರ್ಷಿಕ ಬಜೆಟ್‌ನ ಪ್ರಮಾಣವು ೩೧೩ ದಶಲಕ್ಷ ಡಾಲರುಗಳಷ್ಟಾಗುತ್ತದೆ.

ಇತರ ದೇಶಗಳಲ್ಲೂ ವಿಜ್ಞಾನಿಗಳು ತಮ್ಮ ಸ್ವಂತ ಅಧ್ಯಯನಗಳನ್ನು ನಡೆಸುತ್ತಿದ್ದಾರೆ.

ಈ ಬಹುವಿಧ ಪ್ರಯತ್ನಗಳಿಂದ ಲಭಿಸಿರುವ ಜ್ಞಾನದಿಂದಾಗಿ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಿಂದ ಪ್ರಾರಂಭದೆಶೆಯಲ್ಲಿ ರೋಗವನ್ನು ಗುರುತಿಸಲು ಸಾಧ್ಯವಿರುವುದರಿಂದಾಗಿ, ಕ್ಯಾನ್ಸರ್‌ನಿಂದ ಗುಣಹೊಂದಿರುವರೆಂದು ಪರಿಗಣಿಸಲಾಗಿರುವ ಜನರ ಸಂಖ್ಯೆ ಅಧಿಕವಾಗುತ್ತದೆ. ಐದು ವರ್ಷಗಳ ಅವಧಿಯಲ್ಲಿ ಕ್ಯಾನ್ಸರ್ ಮರುಕಳಿಸದಿದ್ದರೆ ಅಂಥ ರೋಗಿಗಳನ್ನು ಗುಣಹೊಂದಿದವರೆಂದು ಪರಿಗಣಿಸಲಾಗುತ್ತಿದೆ. ಎವತ್ತು ವರ್ಷಗಳ ಮುಂಚೆ ಹತ್ತರಲ್ಲೊಬ್ಬ ಕ್ಯಾನ್ಸರ್ ರೋಗಿ ಇಂಥ ಗುಣಹೊಂದಿದ ಗುಂಪಿಗೆ ಸೇರುತ್ತಿದ್ದನು. ಇಂದು ಮೂವರಲ್ಲೊಬ್ಬ ರೋಗಿಯು ಐದು ವರ್ಷಗಳ ವರೆಗೆ ಕ್ಯಾನ್ಸರ್‌ನಿಂದ ಮುಕ್ತಿ ಪಡೆದಿರುವ ವರ್ಗಕ್ಕೆ ಸೇರುತ್ತಾನೆ.

೧೯೨೨ ರಲ್ಲಿ ಇನ್‌ಸುಲಿನ್‌ನ ಶೋಧವಾಗಿ ಉಪಯೋಗವಾಗುವ ವರೆಗೆ, ಮಧುಮೇಹದ ರೋಗಿಗೆ ಶೀಘ್ರ ಮರಣ ಖಚಿತವೆಂದು ಭಾವಿಸಲಾಗುತ್ತಿತ್ತು. ೧೯೫೦ರಲ್ಲಿ ಜೋನಸ್ ಇ.ಸಾಲ್ಕ್ ಅವರ ವ್ಯಾಕ್ಸಿನಿನ ಪ್ರಯೋಗವಾಗುವವರೆಗೆ ಪೋಲಿಯೋ ರೋಗದ ವಿರುದ್ಧ ರಕ್ಷಣೆಯಿರಲಿಲ್ಲ. ಈ ಎರಡು ಸಂಶೋಧನೆಗಳು, ರೋಗವನ್ನು ಗುಣಮಾಡುವವುಗಳಲ್ಲವಾದರೂ ಒಂದು ರೋಗವನ್ನು ಹತೋಟಿಯಲ್ಲಿಡುತ್ತದೆ, ಇನ್ನೊಂದು ರೋಗ ಬಾರದಂತೆ ನಿರೋಧಕ ಶಕ್ತಿಯನ್ನು ನೀಡುತ್ತದೆ. ಈ ಎರಡು ರೋಗಗಳ ಚಿಕಿತ್ಸೆಯಲ್ಲಾಗಿರುವ ಇಂಥ ಪ್ರಗತಿಯು, ಕ್ಯಾನ್ಸರ್ ಚಿಕಿತ್ಸೆಯಲ್ಲೂ ಪ್ರಗತಿಯಾಗಬಲ್ಲದೆಂಬ ಆಶಾಭಾವನೆಗೆ ಪುಷ್ಟಿ ನೀಡುತ್ತದೆ.

ಕ್ಯಾನ್ಸರ್ ಸಂಶೋಧನೆಯ ಕ್ಷೇತ್ರದಲ್ಲಿ; ರೋಗ ಪರೀಕ್ಷೆಯ ವಿಧಾನಗಳನ್ನು ಉತ್ತಮಗೊಳಿಸಲು, ಚಿಕಿತ್ಸೆಯ ಹೊಸ ವಿಧಾನಗಳನ್ನು ಕಂಡು ಹಿಡಿಯಲು, ಶಸ್ತ್ರಕ್ರಿಯೆ, ರೇಡಿಯೇಷನ್ ಮತ್ತು ಕೆಮೋಥೆರಪಿಯ ಈಗಿನ ಉಪಯೋಗಗಳಲ್ಲಿ ಸುಧಾರಣೆಗಳನ್ನು ಕಂಡುಹಿಡಿಯಲು, ಮತ್ತು ರೋಗವನ್ನು ನಿರೋಧಿಸುವ ವಿಧಾನವನ್ನು ಕಂಡುಹಿಡಿಯಲು ಪ್ರಯತ್ನಗಳನ್ನು ಮುಂದುವರಿಸಲಾಗುತ್ತಿದೆ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ಎಲ್ಲೆಲ್ಲಿ ಏನೇನು?

ಸಹಕಾರಿ ಮಂತ್ರಿಯವರ ಸಂದರ್ಶನ

ಉಡುಪಿ 15: ಸಹಕಾರ ಸಚಿವ ಶ್ರೀ ಕೆ. ಪುಟ್ಟಸ್ವಾಮಿ ಮತ್ತು ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಸಿ.ಎ. ಜಮಖಂಡಿಮಠರವರು ಉಡುಪಿ ತಾಲೂಕು ವ್ಯವಸಾಯ ಉತ್ಪನ್ನ ಸಹಕಾರ ಮಾರಾಟ ಸಂಘವನ್ನು ಸಂದರ್ಶಿಸಿದರು. ಇವರೊಡನೆ ಶ್ರೀ ಪುಟ್ಟಸ್ವಾಮಿ ವೈಸ್ ಪ್ರೆಸಿಡೆಂಟ್, ಮೈಸೂರು ಸಹಕಾರಿ ಬ್ಯಾಂಕ್, ಸಹಕಾರಿ ಇಲಾಖೆಯ ಇತರ ಅಧಿಕಾರಿಗಳು ಅಲ್ಲದೆ ನಮ್ಮ ಜಿಲ್ಲೆಯ ಸಹಕಾರಿ ಧುರೀಣರು ಕೂಡಾ ಆಗಮಿಸಿದ್ದರು. ಸಂಘದ ಡೈರೆಕ್ಟರರಾದ ಶ್ರೀ ಎ. ಜಿ. ಅಲ್ಸೆಯವರು ಅತಿಥಿಗಳಿಗೆ ಸ್ವಾಗತಿಸಿ ಹಾರ ಅರ್ಪಿಸಿ ಸಹಕಾರ ಸಂಘದ ಸ್ಥಿತಿಗತಿಯನ್ನು ವಿವರಿಸಿ, ಮೆಂಬರರಿಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಕೊಡಲು ಈ ಸಂಘವು ಪ್ರಯತ್ನಿಸುತ್ತಿರುವುದು. ಆದರೆ ಕೆಲವೊಂದು ಸಲ ರಾಸಾಯನಿಕ ಗೊಬ್ಬರ ಮೊದಲಾದ ಸವಲತ್ತುಗಳು ಸಕಾಲದಲ್ಲಿ ಸಿಗದ ಕಾರಣ ಈ ವಿಚಾರದಲ್ಲಿ ಮಂತ್ರಿಯವರು ಮತ್ತು ರಿಜಿಸ್ಟ್ರಾರವರು ಸ್ವಲ್ಪ ಸಹಾಯಮಾಡಬೇಕೆಂದು ಕೇಳಿಕೊಂಡರು. ಇದರುತ್ತರವಾಗಿ ರಿಜಿಸ್ಟ್ರಾರವರು ಸೇವಾ ಸಹಕಾರಿ ಸಂಘಗಳಿಗೆ ರೂ. 6000/- ದಂತೆ ಸರಕಾರವು ಪಾಲು ಭಂಡವಾಳವನ್ನು ಕೊಡುವುದೆಂದಲ್ಲದೆ, ಈ ರೀತಿಯ ಸಹಾಯದಿಂದ ಸೇವಾ ಸಹಕಾರ ಸಂಘವು ತಮ್ಮ ಪಾಲು ಭಂಡವಾಳವನ್ನು ಹೆಚ್ಚಿಸಿಕೊಂಡು ಇನ್ನೂ ಹೆಚ್ಚಿನ ವ್ಯವಹಾರವನ್ನು ಮಾಡಬಹುದಲ್ಲದೆ, ಇದರ ತಾಯಿಯಂತಿರುವ ಮಾರಾಟ ಸಂಘದಲ್ಲಿ ಹೆಚ್ಚಿನ ಸಾಲವನ್ನು ಪಡೆದುಕೊಳ್ಳಬಹುದೆಂದರು. ಅವರು ಮುಂದುವರಿಸುತ್ತ ಉಡುಪಿ ತಾಲೂಕಿನಲ್ಲಿ ೬೩ ಸಹಕಾರ ಸಂಘಗಳು ರಾಸಾಯನಿಕ ಗೊಬ್ಬರಗಳನ್ನು ತಮ್ಮ ತಮ್ಮ ಗ್ರಾಮಗಳಲ್ಲಿಯೇ ಕೃಷಿಕರಿಗೆ ವಿತರಣೆ ಮಾಡುತ್ತಿರುವುದನ್ನು ನೋಡಿದರೆ ಸಹಕಾರ ಸಂಘಗಳು ಕೃಷಿಕರಿಗೆ ತುಂಬಾ ನೆರವು ನೀಡುತ್ತಿದೆ ಎಂದು ತಿಳಿಯುತ್ತದೆ. ನಿಜವಾಗಿಯೂ ಈ ವಿಚಾರವನ್ನು ತಿಳಿದು ನಾನು ತುಂಬಾ ಸಂತೋಷಪಡುತ್ತೇನೆ. ಏಕೆಂದರೆ ಇತರ ತಾಲೂಕುಗಳಲ್ಲಿ ಕೇವಲ ೧೧ - ೧೫ ಸಂಘಗಳು ಮಾತ್ರ ರಾಸಾಯನಿಕ ಗೊಬ್ಬರಗಳನ್ನು ವಿತರಣೆ ಮಾಡುತ್ತಿವೆಯೆಂದರು. ಎಲ್ಲಿ ಸೇವಾ ಸಹಕಾರಿ ಸಂಘಗಳು ಗ್ರಾಹಕರ ಸಾಹಿತ್ಯವನ್ನು ಒದಗಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿ 'ಇದನ್ನು ತಾಲೂಕು ಮಟ್ಟದಲ್ಲಿ ಮಾರಾಟ ಸಂಘವು ಒದಗಿಸಿಕೊಡುವ ವಿಚಾರದನ್ನು ಕೈಕೊಳ್ಳಬೇಕೆಂದು ತಿಳಿಸಿದರು. ಮುಖ್ಯ ಅತಿಥಿಗಳಾದ ಸಚಿವ ಶ್ರೀ ಪುಟ್ಟಸ್ವಾಮಿಯವರೂ ಸರಕಾರವು ತನ್ನಿಂದಾದಷ್ಟು ಸಹಾಯವನ್ನು ಮಾಡುವುದಲ್ಲದೆ ಅಂತರ್ ಕೃಷಿಗೆ ಬೇಕಾದ ರಾಸಾಯನಿಕಗೊಬ್ಬರವು ಸರಿಯಾಗಿ ದೊರಕಲು ತನ್ನಿಂದಾದಷ್ಟು ಸಹಾಯಮಾಡುವೆನೆಂದರು ಮುಂದುವರಿಯುತ್ತಾ ಈ ಸಂಘದ ಕಾರ್ಯಕಲಾಪಗಳನ್ನು ಶ್ಲಾಘಿಸಿ ಡೈರೆಕ್ಟರರು ಸಂಘದ ಏಳಿಗೆಗಾಗಿ ಆದಷ್ಟು ನಿಗವಹಿಸಿಕೊಳ್ಳಬೇಕೆಂದು ಹೇಳಿ ಈ ಸಂಘವನ್ನು ಸಂದರ್ಶಿಸಿ ನಿಮ್ಮೆಲ್ಲರನ್ನು ಭೇಟಿಮಾಡಲು ದೊರಕಿದ ಈ ಸಂದರ್ಭಕ್ಕೆ ತಾನು ಸಂತೋಷಪಡುತ್ತೇನೆಂದು ಹೇಳಿದರು. ಕೊನೆಯದಾಗಿ ಶ್ರೀ ಕೆ. ಗಣಪಯ್ಯಶೆಟ್ಟರವರು ಧನ್ಯವಾದ ಸಮರ್ಪಿಸಿದರು.

ಉಡುಪಿ ಲಾ ಕಾಲೇಜ್ ಕಟ್ಟಡದ ಶಂಕು ಸ್ಥಾಪನೆ.

ಉಡುಪಿ ಲಾ ಕಾಲೇಜ್ ಕಟ್ಟಡದ ಶಂಕುಸ್ಥಾಪನಾರಂಭವು ಮೇ 21ರಂದು ಮೈಸೂರು ರಾಜ್ಯದ ವಿದ್ಯಾಮಂತ್ರಿ ಶ್ರೀ ಎಸ್. ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಮೈಸೂರು ರಾಜ್ಯಪಾಲ ಶ್ರೀ ವಿ. ವಿ. ಗಿರಿ ಇವರಿಂದ ನೆರವೇರಿಸಲ್ಪಟ್ಟಿತು. ಅವರು ಕಟ್ಟಡದ ಶಂಕು ಸ್ಥಾಪನೆಗೈಯುತ್ತಾ ಕಾನೂನಿನ ಮಾಹಿತಿಯನ್ನು ಇಂಜಿನಿಯರಿಂಗ್, ಮೆಡಿಕಲ್ ಕಲಿತವರು ಸಹ ಹೊಂದಿರುವುದು ಅತ್ಯವಶ್ಯವೆಂದೂ ಆಡಳಿತದ ಪರಿಶುದ್ಧತೆಗೂ ಕಾನೂನಿನ ಜ್ಞಾನ ಅವಶ್ಯವೆಂದೂ ಜನತೆಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಕೀಲರ ಪಾತ್ರ ಗುರುತರವಾಗಿರುವುದೆಂದೂ ಹೇಳಿ ಡಾ! ಮಾಧವ ಪೈಗಳು ಶೈಕ್ಷಣಿಕ ಕ್ಷೇತ್ರದಲ್ಲಿಸಲ್ಲಿಸಿರುವ ಸೇವೆಯನ್ನು ಕೊಂಡಾಡಿದರು.

ಆರಂಭದಲ್ಲಿ ಡಾ! ಮಾಧವ ಪೈಗಳು ಸ್ವಾಗತಿಸಿ ಏಳಡೆಯಿಯು 30 ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುತ್ತಲಿದ್ದು 10 ಸಾವಿರ ವಿದ್ಯಾರ್ಥಿಗಳು ಈ ಸಂಸ್ಥೆಯ ಮೂಲಕ ಶಿಕ್ಷಣ ಪಡೆದಿರುವರೆಂದು ತಿಳಿಸಿದರು. ಪ್ರಿನ್ಸಿಪಾಲ್ ಶ್ರೀ ಜಿ. ಡಿ. ದೇಶಪಾಂಡೆಯವರು ಸಂದೇಶಗಳನ್ನು ಓದಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಎಸ್. ಆರ್. ಕಂಠಿಯವರು ಮಾತಾಡುತ್ತಾ ಇಲ್ಲಿನ ಶೈಕ್ಷಣಿಕ ಮಟ್ಟವು ಉನ್ನತವಾಗಿದೆ ಎಂದೂ ವಕೀಲ ವೃತ್ತಿಯು ಅಗತ್ಯವೆಂದೂ ರಾಜಕೀಯದಲ್ಲಿ ಹೆಚ್ಚಾಗಿ ವಕೀಲರೇ ಇದ್ದಾರೆಂದೂ ತಿಳಿಸಿದರು. ಡಾ| ಪೈಗಳು ಒಂದು ಎಗ್ರಿಕಲ್ಚರಲ್ ಕಾಲೇಜನ್ನೂ ತೆರೆಯಬೇಕೆಂದೂ ಕೇಳಿಕೊಂಡರು. ಕೊನೆಯಲ್ಲಿ ಪ್ರಿನ್ಸಿಪಾಲ್ ಶ್ರೀ ಜಿ. ಡಿ. ದೇಶಪಾಂಡೆಯವರು ಧನ್ಯವಾದ ಸಮರ್ಪಿಸಿದರು.

ಕೃತಜ್ಞತಾ ಸಮರ್ಪಣೆ.

ನಮ್ಮ ಪುತ್ರ ಚಿ| ರಮಾನಂದನ ವಿವಾಹ ಸಮಾರಂಭವು ದಿ| ಜೆಪ್ಪು ಬೀಡು ಮಂದಾರ ಬಲ್ಲಾಳರ ಪುತ್ರಿ ಕುಮಾರಿ ಸುವಾಸಿನಿಯೊಂದಿಗೆ ಇದೇ ತಾ. 22—5—66ರಂದು ಮಂಗಳೂರಿನ ಟೌನ್ ಹಾಲಿನಲ್ಲಿ ತಮ್ಮೆಲ್ಲರ ಸಹಕಾರ ಹಾಗೂ ಆಶೀರ್ವಾದದಿಂದ ವಿಜೃಂಭಣೆಯಿಂದ ನೆರವೇರಿತು.

ಈ ಶುಭ ಸಮಾರಂಭಕ್ಕೆ ಆಗಮಿಸಿ ವಧೂವರರನ್ನು ಆಶೀರ್ವದಿಸಿದ, ಉಡುಗೊರೆಗಳನ್ನಿತ್ತ, ಹಾಗೂ ಶುಭಕೋರಿಕೆಯನ್ನು ಕಳುಹಿಸಿ ಕೊಟ್ಟ ಮಹನೀಯರಿಗೆಲ್ಲ ಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸಲು ಅಸಾಧ್ಯವಾದುದರಿಂದ ಈ ಮೂಲಕ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

ಸೀತಾ ಸದನ } ಶ್ರೀಮತಿ ಮತ್ತು ಶ್ರೀ
ಮಂಗಳೂರು-3 } ಸಿ. ಎಮ್. ಹೆಗ್ಡೆ.

ರೈತ್ರ ಮುರುಗ

(ಎರಡನೇ ಪುಟದಿಂದ)

ಯಲ್ಲೂ ವಿಚಿತ್ರವಾದ್ದಾದರೂ ಜ್ಞಾಪಕ ಪಡಿಸುವಂತಹ ಸಂಗೀತನಾದ ಕೇಳಿಬರುತ್ತದೆ. ಆಲೋಚನೆಯ ಅಶ್ವ ಅವನನ್ನು ತನ್ನ ಮೇಲೆ ಹೊರಿಸಿಕೊಂಡು ನಾಗಾಲೋಟದಿಂದ ಓಡುತ್ತಿತ್ತು.

ಕಪೂರ ಸ್ವರದಿಂದ ಕೇದಾರಿಯು ಮಿತ್ರನ ಮಹಡಿಗೆ ಅಸ್ಥಿಭಾರವನ್ನು ಹಾಕಿದನು. "ಸರ್, ಮಾರ್ಕಂಡಂ, ಈ ಚಲಿಸುತ್ತಿರುವ ಬಂಡಿ ನನ್ನಲ್ಲಿ ಹಲವಾರು ವಿಷಯಗಳ ನೆನಪನ್ನು ಹುಟ್ಟಿಸುತ್ತಿದೆ. ವಿದ್ಯಾಲಯದ ಜೀವನವನ್ನು ಕಣ್ಮುಂದೆ ನಿಲ್ಲಿಸುತ್ತಿದೆ. ಹಿಂದೊಮ್ಮೆ ಇದೇ ರಸ್ತೆಯಲ್ಲಿ ವಿದ್ಯಾರ್ಥಿಯಾಗಿ ಕಾಲಕಳೆದಿದ್ದೆ. ಇದೇ ಮುಖ್ಯ ರಸ್ತೆಯ ಇನ್ನೊಂದು ತುದಿಯಲ್ಲಿರುವ ಚಿಕ್ಕದಾದರೂ ಚೊಕ್ಕಟವಾಗಿದ್ದ ಮನೆಯಲ್ಲಿ ನಾನಿದ್ದೆ. ಆಗ ನನ್ನ ಸ್ನೇಹಿತ ರಾಮು, ಈ ಚಲಿಸುವ ಬಂಡಿಯ ಸ್ವರವನ್ನು ಆಲಿಸಲು ನನಗೆ ಕಲಿಸಿಕೊಟ್ಟಿದ್ದನು. ಅದು ಅರ್ಥಪೂರ್ಣ ಹಾಗೂ ಸಂದೇಶಮಯವಿದೆ. ನಾನಾಗ ಆಶ್ಚರ್ಯದಿಂದ ಆದರೆ ದಾರ್ಶನಿಕನಂತೆ ಇಣುಕುತ್ತಿದ್ದೆ. ಆಗ ನಾನು ಅನೇಕಾನೇಕ ಗಾಳಿಗೋಪುರಗಳನ್ನು ಕಟ್ಟುತ್ತಿದ್ದೆನಾದರೂ ಈ ರೀತಿಯ...."

ಅವನು ಸಂಕೋಚ ಪಡುತ್ತ ಮುಂದುವರಿಸಿದನು.

'ಒಬ್ಬನು ಮೇಲಿನ ಸ್ಥಾನಕ್ಕೆ ಹೋದಂತೆ ಅವನ ಮನಸ್ಸಿಗೆ ಸಮಾಧಾನ ಇರುವದಿಲ್ಲವೆಂದು ರಾಮು ಆಗಾಗ ಹೇಳುತ್ತಿದ್ದ. ನಾನಾಗ ಅವನಿಗೆ ಬೈಯ್ಯುತ್ತಿದ್ದೆ. ಕಿರೀಟ, ರಾಜ, ರಾಣಿ... ಇವೆಲ್ಲವೂ ಪ್ರಪಂಚವನ್ನು ಹುಚ್ಚುಗೊಳಿಸಲಿಕ್ಕಾಗಿರುವಂತಹವುಗಳೆಂದು ನಾನು ಹೇಳುತ್ತಿದ್ದೆ. ಮೇಲಿನ ಸ್ಥಾನಕ್ಕೆ ಹೋದಂತೆ, ಉತ್ತಮ ಗುಣ ಬರುತ್ತದೆ ಎಂದು ನಾನು ವಾದಿಸುತ್ತಿದ್ದೆ. ಅವನು ಅಂದು ಹೇಳುತ್ತಿದ್ದುದನ್ನು ನಾನೀಗ ಒಪ್ಪುತ್ತೇನೆ. ಕಲಾಶಾಲೆಯಲ್ಲಿ ರಾಮು ನನ್ನ ಅತ್ಯುತ್ತಮ ಸ್ನೇಹಿತನಾಗಿದ್ದ. ಅವನು ಕುಲೀನನೂ ವಿಚಾರಶೀಲನೂ, ತತ್ವಜ್ಞಾನಿ ಹಾಗೂ ಶಾಂತಚಿತ್ತನೂ ಆಗಿದ್ದನು. ಆದರೆ ಇತ್ತೀಚೆಗೆ ನಾನವನನ್ನು ನೋಡಿಯೇ ಇಲ್ಲ. ಒಂದು ಮಾತ್ರ ಒಮ್ಮೆ ನಿಮ್ಮ ಕಾರಿನಲ್ಲಿ ಹೋಗುತ್ತ ಇದ್ದಾಗ ಕ್ಷಣಕಾಲ ನೋಡಿದ್ದೆ. ಅವನು ಹೇಳುತ್ತಿದ್ದುದನ್ನು ಮಿಥ್ಯಹೆಮ್ಮೆಯಿಂದಾಗಿ ಜೀವನದಲ್ಲಿ ಅಳವಡಿಸಿಕೊಳ್ಳದೆ ನಾನು ತಪ್ಪು ಮಾಡಿದ್ದೇನೆ."

'ಅವನೀಗ ಯಾವ ಉದ್ಯೋಗದಲ್ಲಿದ್ದಾನೆ?' ಪರಿವೆ ಇಲ್ಲದೆ ಮಾರ್ಕಂಡಂ ಕೇಳಿದರು.

'ಹಿಂದೆ ಅವನು ಕಡಪ್ಪದಲ್ಲಿ ಶಿಬಿರ—ಗುಮಾಸ್ತನಾಗಿದ್ದ; ಈಗ ಪರಿಷತ್ತಿನ ಸದಸ್ಯರಾಗಿರುವ ಕೆಡೆಲರ ಕೈಕೆಳಗೆ ಅವನು ಕೆಲಸದಲ್ಲಿದ್ದಾನೆ. ಬಹುಶಃ ಈಗ ಮುಖ್ಯ ಗುಮಾಸ್ತನಾಗಿರಬಹುದು.'

"ಒಮ್ಮೆ ಶ್ರೀ ಕೆಡೆಲರ ಶಿಬಿರ-ಗುಮಾಸ್ತ! ನೀನು ಹೇಳುತ್ತಿರುವ ಮನುಷ್ಯನು ಅವನೇ ಆದಲ್ಲಿ, ಅವನೀಗ ಸರಕಾರಿ ಉದ್ಯೋಗಸ್ಥರಿಂದ ಬಹಳಷ್ಟೆನ್ನಾಗಿ ಮರ್ಯಾದಿಸಲ್ಪಡುವವನಾಗಿದ್ದು ಅವರ ಹೊಗಳಿಗೆ ಪಾತ್ರನಾಗಿದ್ದಾನೆ. ಅವನ ವಿಷಯ ನಾನೂ ಕೇಳಿದ್ದೇನೆ. ಶ್ರೀಮಾನ್ ಕೆಡೆಲರು ಅವನನ್ನು ದೇವತೆಯೆಂದೇ ಭಾವಿಸಿಕೊಂಡಿದ್ದಾರಲ್ಲದೆ, ಅವನೊಬ್ಬ ಅತ್ಯುತ್ತಮ ತರದ ಹಿಂದೂವೆಂದು ಆರಾಧಿಸುತ್ತಿದ್ದಾರೆ. ಪ್ರಾಂತ್ಯಪಾಲರಿಗೆ ಕೂಡಾ ಅವನ ಪರಿಚಯವಿದೆ; ಅವರು ಅವನನ್ನು ಆದರ್ಶ ಅಧಿಕಾರಿ ಎಂದು ಮರ್ಯಾದಿಸುತ್ತಾರೆ. ರಾಜಕೀಯ ದರೋಡೆಗಾರರ ನಿರ್ಮೂಲನ ಕಾರ್ಯಕ್ಕಾಗಿ ಇತ್ತೀಚೆಗೆ ಅವನನ್ನು ವಿಶೇಷ ಅಧಿಕಾರಿಯನ್ನಾಗಿ ನೇಮಿಸಿದ್ದಾರೆ. ಇನ್ನು ಕೆಲವೇ ದಿನಗಳೊಳಗೆ ಅವನು ಜಿಲ್ಲಾಧಿಕಾರಿಯಾಗಿ ಬಂದಲ್ಲಿ ನನಗೇನೂ ಆಶ್ಚರ್ಯವಾಗಲಿಕ್ಕಿಲ್ಲ. ಅವನು ಪರಿಷತ್ತಿನ ಭಾವಿಸದಸ್ಯ ಎಂದು ಕೆಲವರು ಭಾವಿಸಿಕೊಂಡಿದ್ದಾರೆ. ಶ್ರೀಯುತ ಕೆಡೆಲರು ನಿವೃತ್ತರಾಗುವ ಮೊದಲು ತನ್ನ ಗಾದಿಯ ಮೇಲೆ ಅವನನ್ನು ಕೂತುಕೊಳ್ಳಿಸಬಹುದು. ನೀನು ಸೂಚಿಸಿದ ರಾಮು ಅವನೇ ಎಂದು ನಾನು ನಂಬುತ್ತೇನೆ. ಅವನು ನಿನ್ನ ಸಹಪಾಠಿಯಾಗಿದ್ದನೇನು?"

"ಹೌದು, ನನ್ನ ಸಹಪಾಠಿ ಹಾಗೂ ನಿಕಟ ಸ್ನೇಹಿತನಾಗಿದ್ದ. ಸಭ್ಯ ರಾಮು ವಿಧಾನ ಪರಿಷತ್ತಿನ ಭಾವಿ ಸದಸ್ಯ! ಅಷ್ಟು ಬೇಗನೆ ಆ ರೀತಿ ಅವನು ಮೇಲಕ್ಕೆ ಬರಬಹುದೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ."

ಕೇದಾರಿಗೆ ನಿಜವಾಗಿ ಸ್ಮೃತಿ ತಪ್ಪಿದಂತಾಗಿತ್ತು. "ರಾಮು ತನ್ನ ಯಶಸ್ಸಿನ ಕುರಿತು ಏನೂ ಬರೆದಿಲ್ಲ. ಎಂತಹ ದುಃಖದಾಯಕ ವಿಷಯ! ಅವನೊಡನೆ ಇದ್ದ ಸಂಬಂಧವನ್ನು ನಾನು ಕಳೆದುಕೊಂಡಿದ್ದೇನೆ. ಅದೇ ಮನುಷ್ಯ ಅವನೆಂಬುದನ್ನು ನೀವು ಖಂಡಿತವಾಗಿ ಹೇಳಬಲ್ಲಿರಾ?"

"ನಿಜ. ಸಚಿವ ಕಾರ್ಯಾಲಯದಿಂದ ಹಾಗೂ ಶ್ರೀಮಾನ್ ಕೆಡೆಲರಿಂದ ಆರಾಧಿಸಲ್ಪಡುತ್ತಿರುವದು ಓರ್ವ ಶಿಬಿರ ಗುಮಾಸ್ತ—ರಾಮು—ಮಾತ್ರ."

ಈ ಒಂದು ಪರ್ಯವಸಾನದ ಕುಣುಕು ಮಾಯಾಜಾಲದಂತೆ ಕೆಲಸ ಮಾಡಿತು. ಮಾನವನು ಅನೇಕ ಮಿಶ್ರಿತ ಗುಣಗಳ, ಆಲೋಚನೆಗಳ ನೆನಪುಗಳ ಹಾಗೂ ಹುಟ್ಟುಗುಣಗಳ ಆಶ್ಚರ್ಯಕರ ಮಿಶ್ರಣ. ಕಲ್ಪನಾ ತರಂಗದಲ್ಲಿ ಕೇದಾರಿ ಸಿಕ್ಕಿಕೊಂಡನು. ಕಷ್ಟದಲ್ಲಿ ಸಿಲುಕಿಕೊಂಡಿರುವ ಮನುಷ್ಯರ ಮನೋನೆಲೆಯನ್ನು ಕಂಡು ಹಿಡಿಯುವದರಲ್ಲಿ ನಿಷ್ಣಾತ ಮಾರ್ಕಂಡಂ ಕಳ್ಳ ನೋಟದಿಂದ ಅವನನ್ನು ಪರೀಕ್ಷಿಸುವದರಲ್ಲಿ ತಲ್ಲೀನರಾದರು.

ಕೇದಾರಿಯ ಮನಸ್ಸು ಆಲೋಚನಾ ಗಗನದಲ್ಲಿ ರೆಕ್ಕೆಬಿಟ್ಟು ಓಡಾಡುತ್ತಿತ್ತು. ರಾಮುವಿನ ಯಶಸ್ಸಿನ ಬೆಳಕಿನಲ್ಲಿ ತನ್ನ ಜೀವನದ ತತ್ವಗಳ ವಿಮರ್ಶೆ ಮಾಡದೆ ಇರಲು ಅವನಿಂದಾಗಲಿಲ್ಲ. ಈ ಪೂರ್ಣ ವಿಷಯ ಅಸಾಧ್ಯದಂತೆ ಅವನಿಗೆ ಕಂಡು ಬಂತು.

"ನಿಮಗದರಲ್ಲಿ ವಿಶ್ವಾಸ ಇದೆ ತಾನೇ?" ಕೇದಾರಿ ಪುನಃ ಕೇಳಿದನು.

"ನಂಬಿಕೆ ಇದೆ. ನಿನ್ನ ಸ್ನೇಹಿತ ಒಮ್ಮೆ ಶಿಬಿರ-ಗುಮಾಸ್ತನಾಗಿದ್ದಲ್ಲಿ ಇದೆಲ್ಲಾ ನಿಜ. ಅವನ ಸ್ನೇಹಿತರು ಅವನನ್ನು ಇಂದೂ ಪ್ರೀತಿಯಿಂದ ಶಿಬಿರ-ಗುಮಾಸ್ತನಂತೆ ತಿಳಿದುಕೊಂಡಿದ್ದಾರೆ."

'ಎಂದಾದರೂ ನೀವು ಅವನನ್ನು ನೋಡಿದ್ದೀರಾ?'

"ಇಲ್ಲ."

ಕೇದಾರಿಯು ಪುನಃ ಆಲೋಚನಾ ಸರೋವರದಲ್ಲಿ ಧುಮುಕಿದನು. ಮಾರ್ಕಂಡಂ ಕೂಡಾ ತನ್ನದೇ ಆದ ಆಲೋಚನೆಗಳ ಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದರು. ಕಳೆದ ವಾರದಿಂದ ಕೇದಾರಿಗೆ ಒಂದು ಕೌತುಕಕಾರಿ ರೀತಿಯಲ್ಲಿ ವಿಷಯಗಳೆಲ್ಲಾ ರೂಪುಗೊಳ್ಳುತ್ತಿದ್ದುವು-ಅಲ್ಲ, ರೂಪುಗೊಳಿಸಲ್ಪಡುತ್ತಿದ್ದುವು. ಎಡವಿ ಬೀಳುತ್ತಿರುವವರ ಆತ್ಮವೇ ಗಮನವಿಡುತ್ತಿದ್ದ ಮಾರ್ಕಂಡಂ ಕೆಲವೊಮ್ಮೆ ಅವರಿಗೆ ಸಹಾಯ ಮಾಡುತ್ತಿದ್ದರೂ ಹೆಚ್ಚಾಗಿ ಶೀಘ್ರ ಬೀಳುವಂತಾಗಲು ಸಹಾಯ ಮಾಡುತ್ತಿದ್ದರು. ತನ್ನ ಕಿರುಬೆರಳಿನ ಚಲನೆಮಾತ್ರದಿಂದ ಚುನಾವಣೆಯ ನಂತರದ ಕೇದಾರಿಯ ಜೀವನದ ಮಣ್ಣನ್ನು ಮರ್ದಿಸುತ್ತಿದ್ದ ಕುಂಬಾರನ ಚಕ್ರವನ್ನವರು ತಿರುಗಿಸಿಬಿಟ್ಟರು.

ಮೋಡವೊಂದು ಬಿರುಗಾಳಿಯ ರಭಸದಿಂದ ಚಂದ್ರನನ್ನು ಅಡಗಿಸಿಟ್ಟುಕೊಂಡು ಮೃದು ತಿಂಗಳ ಬೆಳಕನ್ನು ಹೀರಿರುವ ಸಮಯವೇ ವಿಧಿ ನಿಶ್ಚಿತ ತಂತಿಯ ಮೇಲೆ ಬೆರಳಾಡಿಸಲು ಯೋಗ್ಯಸಮಯವೆಂದು ಮಾರ್ಕಂಡಂ ಭಾವಿಸಿದರು. ಭವಿಷ್ಯತ್ತಿನ ಕುರಿತು ಆಲೋಚಿಸುತ್ತಿದ್ದಂತೆ ಅಶುಭದ ತಾಳವೇ ಕೇಳಿಬರುತ್ತಿದೆ ಎಂದೆಣಿಸಿಕೊಂಡು ಕೇದಾರಿ ಕೊಂಚ ನಡುಗಿದನು.

'ಈ ಮೋಡದಿಂದ ಮುಚ್ಚಲ್ಪಟ್ಟಿರುವ ಚಂದ್ರ' ಮಾರ್ಕಂಡಂ ನಿಧಾನವಾಗಿ ಉಪಮೆಯನ್ನು ಕೊಡುತ್ತ, 'ನನ್ನ ಜೀವನದ ಒಂದು ಘಟನೆಯನ್ನು ಜ್ಞಾಪಕಕ್ಕೆ ತರುತ್ತಿದೆ. ಈ ಚುನಾವಣೆಯು ಹಣವನ್ನು ನೀರಿನಂತೆ ಖರ್ಚುಮಾಡುವಂತೆ.......' ಹೇಳಲಾರಂಭಿಸಿದರು.

'ನಾನೂ ಅದೇ ಅಭಿಪ್ರಾಯಕ್ಕೆ ಬಂದಿದ್ದೇನೆ. ನನ್ನ ವಿಷಯದಲ್ಲೂ ಹಾಗೆ ಆಗಿದೆ, ಸ್ವಾಮಿ. ನಿಮ್ಮೊಂದಿಗೆ ನಾನು ಬಿಚ್ಚು ಮನಸ್ಸಿನಿಂದ ಹೇಳಬೇಕಾಗಿದೆ. ಚುನಾವಣೆ ನನ್ನನ್ನು ಪೂರ್ಣ ದಿವಾಳಿಖೋರನನ್ನಾಗಿ ಮಾಡಿದೆ. ನನ್ನ ಭವಿಷ್ಯತ್ತೋ ಅದು ನೈಸರ್ಗಿಕ ಪ್ರಕಾಶಮಯ ಬೆಳ್ಳಿಯ ಬಿಲ್ಲೆ ಇಲ್ಲದಿರುವ ಬಾನಿನಂತೆ ಅಂಧಕಾರಮಯವಾಗಿಬಿಟ್ಟಿದೆ. ನನಗೆ ಸಹಾಯ ಮಾಡಲು ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ." ಕೇದಾರಿಯು ಅಸಾಧಾರಣ ಸ್ವರದಿಂದ ವಿನಂತಿಸಿಕೊಂಡನು.

ಮಾರ್ಕಂಡಂರವರಿಗೆ ಕೇದಾರಿಯ ಆರ್ಥಿಕ ಸಂಕಷ್ಟದ ಪರಿವೆ ಇತ್ತು.

'ನಮ್ಮದೊಂದು ಹಾಳಾದ ಉದ್ಯೋಗ, ಕೇದಾರಿ. ನಾನು ಹಲವಾರು ವರ್ಷಗಳಿಂದಲೂ ಸಂಪಾದಿಸುತ್ತಿರುವೆನಾದರೂ ಕೂಡಿಸಿಡಲು ನನಗೇನೂ ಸಿಕ್ಕಿರುವುದಿಲ್ಲ. ನನ್ನ ಮನೆ ಒಂದೆಡೆ ಅರಮನೆ ಬೆಳೆಯುತಿದ್ದಲ್ಲಿ ಇನ್ನೊಂದೆಡೆ ಛತ್ರದಂತಿದೆ. ಅದು ನನ್ನ ಸಂಪಾದನೆಯ ಅರ್ಧಾಂಶವನ್ನು ನುಂಗಿದೆ....'

'ಹಾಗೇನು! ನನ್ನ ಸ್ನೇಹಿತ ರಾಮುವಿನ ಮಾತುಗಳಲ್ಲಿ ಹೇಳುವುದಾದರೆ, ನಾವು ಇತರರನ್ನು ಸ್ವಾರ್ಥಕ್ಕಾಗಿ ದುರ್ವಿನಿಯೋಗಿಸಿ ಕೊಂಡಲ್ಲಿ, ಶರ್ತಿಯಂತೆ ನಮ್ಮನ್ನಿತರರು ಅವರ ಸ್ವಕಾರ್ಯಕ್ಕಾಗಿ ದುರ್ವಿನಿಯೋಗಿಸಿಕೊಳ್ಳುತ್ತಾರೆ. ನಾವು ಮೂರು ಗೆರೆಗಳನ್ನು ಬರೆಯಲಿಕ್ಕಾಗಿ ಕಕ್ಷಿಗಾರನಿಂದ ನೂರು ರೂಪಾಯಿಗಳನ್ನು ವಸೂಲು ಮಾಡಿಕೊಂಡಲ್ಲಿ ಇತ್ತ ನಮ್ಮ ಕಾರಿನ ಚಕ್ರ ಒಡೆದು ಹೋಗುತ್ತದೆ; ಎಣ್ಣೆ ವ್ಯಾಪಾರಿಗಳು, ಗುತ್ತಿಗೆದಾರರು, ಗಾರೆ ಕೆಲಸದವರು, ಕಲ್ಲುಕುಟ್ಟಿಗರು ಹಾಗೂ ಇತರ ಹಲವಾರು ರೀತಿಯ ಜನರು ನಮ್ಮ ರಕ್ತದ ಮೇಲೆ ಜೀವಿಸಿಕೊಂಡಿದ್ದಾರೆ. ಜೀವನವು ಒಂದು ವಿಚಿತ್ರ ಗಂಟು. ಆಲೋಚನಾಕಾರನಿಗೆ ಅದು ಕ್ರೂರ. ಕಾರ್ಯ ತತ್ಪರನಿಗೆ ಅದೆಂದಿಗೂ ಬಿಡಿಸಲ್ಪಟ್ಟು ಇರುವ ಸಣ್ಣ ಪುಟ್ಟ ಗಂಟುಗಳುಳ್ಳ, ಉದ್ದ ನೂಲಿನ ಎಳೆ ಇದೆ."

'ನೀನು ಹೇಳಿದುದೆಲ್ಲಾ ಸಂಪೂರ್ಣ ಸತ್ಯ ಕೇದಾರಿ,' ಮಾರ್ಕಂಡಂ ಹೇಳಿದರು.

'ಇನ್ನು ಮುಂದಾದರೂ ಮನೆಯನ್ನು

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು........

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(¼ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

ಮುದಿನ್ಸೈಚು

NAVAYUGA 26—5—1966

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಒಂದು ವ್ಯವಸ್ಥೆಗೆ ತರಬೇಕು. ನನ್ನ ಜೀವನ ನೌಕೆಯು ಹಾಯಿ ಬಿಚ್ಚಬೇಕಾದಲ್ಲಿ, ಈಗ ಇಪ್ಪತ್ತು ಸಹಸ್ರ ರೂಪಾಯಿಗಳ ಆವಶ್ಯಕತೆ ಇದೆ. ನೀವು, ಮಾರ್ಕಂಡಂ, ನನ್ನ ಧನಿಯೋ, ಸಹಾಯಕರೋ, ಸ್ನೇಹಿತರೋ, ದಾರ್ಶನಿಕರೋ ಹಾಗೂ ಮಾರ್ಗದರ್ಶಕರೋ ಈಗ ಸಹಾಯ ಮಾಡದಿದ್ದಲ್ಲಿ ಬೇರೆ ಇನ್ನಾರು ಸಹಾಯಮಾಡಿಯಾರು? ಅದನ್ನೆಲ್ಲಾ ನಾನು ಎರಡು ವರ್ಷಗಳಲ್ಲೇ ಹಿಂತಿರುಗಿಸುತ್ತೇನೆ. ಈಗ ನನ್ನ ಸಂಪಾದನೆ ಚೆನ್ನಾಗಿದೆ. ಇನ್ನು ಮೇಲೆ ದೆಹಲಿಯಲ್ಲಿ ನನ್ನ ಸ್ಥಾನದ ಮೇಲಿನಿಂದ ಎರಡರಷ್ಟು ಸಂಪಾದಿಸಬಲ್ಲೆ."

"ಕೇದಾರಿ, ಆವಶ್ಯಕ ಸಮಯದಲ್ಲಿ ನಿನಗೆ ಸಹಾಯ ಮಾಡಲು ನಾನು ಇಚ್ಛಿಸುತ್ತೇನೆ. ಆದರೆ ನೀನು ಒಟ್ಟು ಮಾಡಿರುವ ಹೊಯಿಗೆಯ ರಾಶಿ ತೆರೆಯ ಶಕ್ತಿಯೆದುರು ಏನೂ ಮಹಾ ಇರುವದಿಲ್ಲ. ಅದರ ಕುರಿತು ಕಳೆದ ವಾರವೇ ನಿನಗೆ ಎಚ್ಚರಿಕೆ ಕೊಡಬೇಕಾಗಿ ನಾನೆಣಿಸಿದ್ದೆ. ಶತ್ರುಗಳು ನಮ್ಮನ್ನು ಸೆರೆಹಿಡಿಯಲು ಬಲೆ ಬೀಸಿದ್ದಾರೆ. ಅದನ್ನು ಹರಿದೊಗೆಯಲು ನಾನು ಪ್ರಯತ್ನಿಸಿದೆ. ಇದನ್ನೆಲ್ಲಾ ನಿನಗೆ ತಿಳಿಸಿ, ಸಂತೋಷದ ಸತ್ಕಾರ ಕೂಟಗಳನ್ನು ಹಾಳು ಮಾಡಲು ನನಗೆ ಮನಸ್ಸು ಬರಲಿಲ್ಲ. ನಿನ್ನ ಚುನಾವಣೆಯು ಅಸಿಂಧುವೆಂದು ಸಾರಬೇಕಾಗಿ ನ್ಯಾಯಾಲಯಕ್ಕೆ ಚೆಟ್ಟಿಯು ದೂರುಕೊಂಡು ಹೋಗಿದ್ದಾನೆ.

ಸರ್ಪದ ಮೇಲೆ ಬೆಳ್ಳ ಕಣ್ಣಿಡುವಂತೆ ನೋಡುತ್ತ, ಮಾರ್ಕಂಡಂ ದುಃಖ ಸೂಚಕ ಸ್ವರದಲ್ಲಿ ಜಾಗ್ರತೆಯಾಗಿ ಸರಸರನೆ ಹೇಳಿ ಬಿಟ್ಟರು. ಉಗುರುಗಳು ಒಳಗಿದ್ದರೂ ಪ್ರಕಾಶಿಸುತ್ತಿರುವ ತಲೆಯ ಮೇಲೆ ಪ್ರಾಣ ನಾಶವಾಗುವಂತೆ ತಿವಿಯಲು ಸಿದ್ಧವಾಗಿತ್ತು.

"ನನ್ನ ಚುನಾವಣೆ ಅಸಿಂಧುವೆಂದುತ್ತ ಸಾರಲು?" ಪೆಂಚು ಹಾಕಿಕೊಂಡು ಕೂತಿದ್ದ ಸೈನ್ಯವು ಒಬ್ಬ ಸೈನಿಕನ ಕತ್ತಿನ ಮೇಲೆ ಹೊಡೆದಾಗ ಅವನು ಅರಚುವಂತೆ ಕೇದಾರಿ ಕೂಗಿ ಹೇಳಿದನು.

"ಹೌದು, ಹೌದು, ಹಾಗೆಯೇ. ಇದೊಂದು ಪ್ರಯೋಸಕರ ಹೋರಾಟ. ನಿನ್ನ ಕೆಲ ಗೆಳೆಯರು ಕೂಡಾ ಆಚೆ ಬದಿಗೆ ಹೋಗುತ್ತಾರೆ."

ಇದೊಂದೂ ನನಗೆ ಗೊತ್ತಾಗಲಿಲ್ಲ. ಈ ಚಹಾ ಕೂಟಗಳಲ್ಲಿ ಹುಚ್ಚಾಟವಾಡುತ್ತ ಸಮಯ ಕಳೆದೆನು. ಕಾಫಿ ಆವಿಯಿಂದ ವಾಸನೆ ನೋಡುವ ಗುಣವನ್ನೇ ನಾನು ಕಳೆದು ಕೊಂಡಿದ್ದೇನೆ. ಹೊಗೆ ಕಂಡು ಬರುವ ಮುಂಚೆಯೇ ಕಾಲಿನಿಂದೊದೆದು ಚಿಕ್ಕದಾಗಿದ್ದ ಕಿಡಿಯನ್ನು ನಂದಿಸಬೇಕಾಗಿತ್ತು. ಇದನ್ನೆಲ್ಲಾ ನನಗೇತಕ್ಕೆ ಮೊದಲೇ ತಿಳಿಸಲಿಲ್ಲ, ಗೆಳೆಯ ಮಾರ್ಕಂಡಂ? ಎಂತಹ ವಿಷಾದನೀಯ ವಿಷಯ!"

"ನೀನು ಜಯಹೊಂದಿ ಸಂತೋಷಪಡುತ್ತಿರುವದನ್ನು ಹಾಳು ಮಾಡಲು ಇಚ್ಛಿಸದೆ, ಅಲ್ಲದೆ ನಿನಗಾಗಿ ಆ ವಿಷವೃಕ್ಷದ ಚಿಗುರನ್ನು ಅಲ್ಲೇ ಚಿವುಟಿ ಬಿಸಾಡಲು ನಾನು ಪ್ರಯತ್ನಿಸಿದೆ. ಅದು ವಿಷಮ ಪರಿಸ್ಥಿತಿಗೆ ಹೋಗಲಿಕ್ಕಿಲ್ಲವೆಂದು ನನಗೆ ಈಗಲೂ ಆಶೆ ಇದೆ. ಈಗ ನಾವಿಬ್ಬರೂ ಸೇರಿ ಅದರ ತಲೆಯನ್ನು ತುಳಿಯಲೇಬೇಕು. ಆದರೆ ಅರ್ಜಿಯನ್ನವನು ಕೊಟ್ಟಿದ್ದಲ್ಲಿ, ನಿನಗದು ಕಠಿಣ ಕಾರ್ಯವಾಗಬಹುದು—ಏಕೆಂದರೆ...."

"ಏಕೆಂದರೆ...."

"ಏಕೆಂದರೆ, ಹೊರಿಸಿರುವ ಆರೋಪಗಳನ್ನೆಲ್ಲಾ ಅವರು ನಿಜವೆಂದು ಸಾಧಿಸಬಹುದು. ಲಂಚಖೋರತನ ಹಾಗೂ ಅಂತಹ ಅನೇಕ ಅನ್ಯಾಯಪೂರ್ಣ ಕಾರ್ಯಗಳೇ ಅವರು ಹೊರಿಸಿರುವ ಅಪರಾಧಗಳು. ಹೌದು, ಚುನಾವಣೆಯಲ್ಲಿ ಗೆಲ್ಲಬೇಕಾದರೆ ಅವೆಲ್ಲಾ ಅಗತ್ಯ. ಚುನಾವಣೆಯಲ್ಲಿ ನೇರವಾಗಿ ಹೋರಾಡುವದು ಅದೆಂತು ಸಾಧ್ಯ?" ವಿಷಾದವನ್ನು ವ್ಯಕ್ತಪಡಿಸುವ ಸ್ವರದಿಂದ ಮಾತಾಡುವವರಂತೆ ಮಾರ್ಕಂಡಂ ಸ್ಪಷ್ಟವಾಗಿ ತಿಳಿಸಿದರು.

"ನಿಮ್ಮ ಬುದ್ಧಿವಾದದಂತೆ ಹಾಗೂ ನಿಮ್ಮ ನೇತೃತ್ವದಲ್ಲಿ ನಾನು ಕೆಲಸಮಾಡಿದೆ. ಅದೇ ಕಾರ್ಯವನ್ನು ನಾವು ಅನೇಕ ಸಲ ಮಾಡಿದ್ದೇವೆ...." ಕೇದಾರಿ ಕಹಿಯಾಗಿ ಹೇಳಿದ.

"ಜೀವನ ಅಂತಹದ್ದಿದೆ, ಕೇದಾರಿ: ಅದು ಹಾಗಿದೆ ಅನ್ನುವದೂ ದುಃಖದಾಯಕವಿದೆ. ಹಲವಾರು ಜನರು ಕದಿಯುತ್ತಾರೆ. ಆದರೆ ಸಿಕ್ಕಿ ಬೀಳುವದು ಕೇವಲ ಕೆಲವರು ಮಾತ್ರ. ಸಾಮಾನ್ಯವಾಗಿ, ತನ್ನಿಂದ ಹೊತ್ತುಕೊಂಡು ಹೋಗಲು ಸಾಧ್ಯವಾಗುವದಕ್ಕಿಂತಲೂ ಜಾಸ್ತಿ ಕದಿಯುವವನೇ ಸಿಕ್ಕಿ ಬೀಳುತ್ತಾನೆ."

ಕರುಣಾಜನಕ ಸ್ವರದಿಂದ, ಶೂನ್ಯ ಹೃದಯಿಯಂತೆ ಮಾರ್ಕಂಡಂ ಮುಂದರಿಸಿದರು. "ಈ ದೆಹಲಿಯ ವ್ಯವಹಾರವು ಬಹಳ ಗಂಭೀರದ್ದಾಗಿದ್ದು ಪ್ರಾಮುಖ್ಯ ವಿಷಯ ಸ್ಥಾನಿಕ ಸಭೆಗಳತ್ತವಾದಲ್ಲಿ ಯಾರು ಗಮನವೀಯುತ್ತಾರೆ? ಹಾಗಿರುವದರಿಂದ ನೀನು ಹೋರಾಟದ ಹೊಡೆತವನ್ನು ಸಹಿಸಿಕೊಳ್ಳಲೇ ಬೇಕಾಗುತ್ತದೆ. "ನನ್ನ ಐರ್ಶ್ವರ್ಯದ ಸಹಾಯದಿಂದ ಖಂಡಿತವಾಗಿ ನಿನಗೆ ಸಹಾಯಮಾಡುತ್ತೇನೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಿನ್ನ ಒಬ್ಬಂಟಿಗನಾಗಿ ನಾನು ಬಿಡಲಾರೆ."

ಭಾವನೆಗಳನ್ನು ಬಚ್ಚಿಟ್ಟುಕೊಳ್ಳುವುದರಲ್ಲಿ ಕಾಲು ಶತಮಾನಗಳಿಂದಲೂ ಪಳಗಿರುವ ಹಳೆಯ ಹೆಗ್ಗಣ, ಮಾರ್ಕಂಡಂಗೆ ಈಗ ಮನಸ್ಸಿನೊಳಗೇನೇ ನಗದಿರಲು ಸಾಧ್ಯವಾಗಲಿಲ್ಲ; ಅದು ಮೇಲಕ್ಕೆ ಬಂತು.

ಕೇದಾರಿ ಅದನ್ನು ಕಂಡುಕೊಂಡನು. ತನ್ನ ಯಶಸ್ಸಿನಿಂದಾಗಿ ಹೊಟ್ಟೆಕಿಚ್ಚು ಪಟ್ಟುಕೊಂಡು ಮಾರ್ಕಂಡಂ ಆಡುತ್ತಿರುವ ಆಟ ಕೇದಾರಿಗೆ ಗೊತ್ತಾಯಿತು. ಕೈ ಕೈ ಹಿಡಿದುಕೊಂಡು ಮಿತ್ರರೂ ಶತ್ರುಗಳೂ ಸೇರಿಕೊಟ್ಟಿರುವ ಹಂದಿಯನ್ನು ಕಸಾಯಿಖಾನೆಗೆ ತಳ್ಳಲು ಹಗ್ಗ ಹಾಕುತ್ತಿರುವಂತೆ ತನಗೂ ಹಗ್ಗ ಹಾಕುತ್ತಿದ್ದಾರೆಂದಾತನು ತಿಳಿದುಕೊಂಡನು.

ಸಂಭಾಷಣೆಯನ್ನು ಮುಂದುವರಿಸಲು ಕೇದಾರಿಗೆ ಮನಸ್ಸು ಬರಲಿಲ್ಲ. ಅವನ ಐಂದ್ರಜಾಲಿಕ ಮನಸ್ಸಿಗೆ ಎಲ್ಲವೂ ಮನದಟ್ಟಾಯಿತು. ಮಾರ್ಕಂಡಂ ತನ್ನ ಪಶು ಬಲದಿಂದ, ಹಕ್ಕಿಯ ತ್ವರಿತ ವೇಗದಿಂದ ಮನುಷ್ಯರ ಕುಯುಕ್ತಿಯ ಮನಸ್ಸಿನಿಂದ ಹೀಗೆ ಮಾನವನ ಕೀಳ್ತರಗತಿಯ ಹಾಗೂ ಉಚ್ಚತರಗತಿಯ ಉಪಾಯಗಳನ್ನೆಲ್ಲವನ್ನೂ ಉಪಯೋಗಿಸಿಕೊಂಡು, ಚೆಂಡನ್ನು ಗಮ್ಯಸ್ಥಾನಕ್ಕೆ ಹಾಕಲು ಪ್ರಯತ್ನಿಸುತ್ತಿದ್ದಾರೆಂದು ಅವನು ನಿಶ್ಚಯಿಸಿಕೊಂಡನು.

ತಾನು ಕೇವಲ ಸಾಹಸಪ್ರಿಯತೆಯಿಂದ ಹಾಗೂ ಲಾಭಪೂರ್ಣ ಸಾಧನೆಯಿಂದಾಗಿ ಇಷ್ಟರವರೆಗೆ ನಡೆದುಕೊಂಡು ಬಂದಿರುವ ಭಯಂಕರ ಆದೇ ಸತ್ತು ಬಳಸಿಕೊಂಡು ಇರುವ ದಾರಿಯನ್ನು ಕಾರಣವಿಲ್ಲದ ಆದರೆ ಅವಸರದ ಅಂಜಿಕೆಯಿಂದ ಈಗ ಕೇದಾರಿಯು ನೋಡಿದನು. ಈಗ ಸುರಕ್ಷತೆಯತ್ತ ಹಿಂದೆ ಸರಿಯುವಂತಿಲ್ಲ; ತನ್ನಿಂದಾದಷ್ಟು ಹೋರಾಡಲೇಬೇಕು. ಸಹ-ಪ್ರಯಾಣಿಕರು ಕೆಲವೊಮ್ಮೆ ಕಿಸೆಗಳ್ಳರಾಗುವದೂ ಉಂಟು ಎನ್ನುವದು ಈಗ ಅವನಿಗೆ ಗೊತ್ತಾಯಿತು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್.ಬಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ



Edited, Printed & Published by K. H. Shetty at the Navayuga Press, Udipi, S. India.

ನವಯುಗ

2—6—1966

NAVAYU

೧೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ಜಾನಕೀ ಪತಿ ರಾಮಚಂದ್ರ ಪದವಿ ಪಡೆಯದೆ ಅಲವಂತಿಯ ಅಸ್ತಿಪಾಸ್ತಿಗಳನ್ನು ಮಾರಿ ಕಿಟಿರ ಗುಮಾಸ್ತನಾದ, ಸುದೈವದಿಂದ ಕುಂಬಾತ ಸರಕಾರದಲ್ಲಿ ಉನ್ನತ ಪದವಿಗೇರಿದ, ಕೀರ್ತಿಗಳಿಸಿದ.

ರಾಮುವಿನ ಮಿತ್ರ ಕೇದಾರಿ ಉದಯೋನ್ಮುಖ ವಕೀಲನಾದ. ಚುನಾವಣೆಯಲ್ಲಿ ಲೋಕಸಭೆಗೆ ಆಯ್ಕೆಯಾದ. ಸ್ವಪ್ನ ನಿರತನಾದ ಆತ ತನ್ನ ಇತಿಮಿತಿಯನ್ನೂ ಮರೆತು ಹಾರುತ್ತಿದ್ದ.

ರಾಮುವಿನ ರೈತನಾಗಿದ್ದ ಮುರುಗ ಜಮೀನ್ದಾರನಾದ. ದುರ್ವ್ಯಸನಗಳಿಗೆ ಬಲಿಯಾದ. ಸೆರೆಯಾದ. ತಪ್ಪಿಸಿಕೊಂಡು ಲೂಟಿಗಾರರ ಯಜಮಾನನಾದ. ರಾಮುವಿನ ದೂರದರ್ಶಿತನದಿಂದ ಲೂಟಿಗಾರರು ಸರ್ಕಾರದ ವಶವಾಗುವವರಿದ್ದರು.

ಮುಂದೆ —

ಹರಿಯುತ್ತಿರುವ ಅಥವಾ ಶೇಖರವಾಗಿರುವ ನೀರನ್ನು ಕಂಡಾಗಲೆಲ್ಲ ಕೇದಾರಿಯ ಮನಸ್ಸು ಅದರಿಂದ ಆಕರ್ಷಿಸಲ್ಪಡುತ್ತಿತ್ತು. ಕಡಲು ಕೆರೆಯಲ್ಲಿ ಅಥವಾ ಕೆರೆಯ ದಂಡೆಯ ಬಳಿ ಆತ ನಿಂತನೆಂದರೆ ಅವನಿಗೆ ಸಮಯ ಸರಿಯುತ್ತಿರುವದು ಗಮನಕ್ಕೆ ಬರುತ್ತಿರಲಿಲ್ಲ. ಮಳೆಯಲ್ಲಿ ಗಾಳಿ ಸ್ತಬ್ಧವಾಗಿರುವಂತೆ ಅವನೂ ನಿಂತು ಬಿಡುತ್ತಿದ್ದ. ಜಲಾಗಾರದಲ್ಲಿರುವ ದ್ರವದ ಚೆಂದವನ್ನು ಕಾಣಲವನಿಗೆ ರಾಮು ಕಲಿಸಿ ಕೊಟ್ಟಿದ್ದನು.

ಶಾಂತ ಮುಖಮುದ್ರೆಯ ಸಮುದ್ರದಲ್ಲಿ ಸಣ್ಣ ಹಾಗೂ ಸೌಮ್ಯ ಅಲೆಗಳು ದಡದ ಮೇಲೆ ಮೆಲ್ಲ ಮೆಲ್ಲನೆ ಬಂದು ಪುನಃ ಆ ಸಮುದ್ರದಲ್ಲಿ ಲೀನವಾಗುವಾಗ ರಾಮುವಿಗೆ ಬಹಳ ಆನಂದವಾಗುತ್ತಿತ್ತು. ಆದರೆ ಮಳೆಗಾಲದಲ್ಲಿ ದೊಡ್ಡ ಅಲೆಗಳು ಅರ್ಭಟಿಸುತ್ತ ಬಂದು ದಂಡೆಗೆ ಅಪ್ಪಳಿಸಿದಾಗಲೇ ಕೇದಾರಿಗೆ ಸಂತೋಷವಾಗುತ್ತಿತ್ತು. ಅದು ಅವರಿಬ್ಬರ ಜೀವನದ ಭಾವಾರ್ಥವನ್ನು ಬಹಿರಂಗ ಪಡಿಸುತ್ತಿತ್ತು.

ಘಳಿಗೆ ಘಳಿಗೆಗೆ ಬದಲಾಗುತ್ತಿರುವ ಸಮುದ್ರದಲ್ಲಿ ಒಂದು ಬಲಶಾಲಿ ತೆರೆ, ದೊಡ್ಡ ಸರ್ಪವು ಹೆಡೆಯೆತ್ತಿಕೊಂಡು ಓಡಿ ಬಂದು ಕಚ್ಚುವಂತೆ, ತನ್ನ ಪೂರ್ಣ ಶಕ್ತಿಯಿಂದ ಓಡಿ ಬಂದು, ದಡಕ್ಕೆ ಅಪ್ಪಳಿಸುವದು ಬಹಳ ದುಃಖದಾಯಕ ದೃಶ್ಯವಾದರೂ ಬಹಳ ಉತ್ತೇಜಕ ದೃಶ್ಯವೂ ಇದೆ. ಅದರಲ್ಲೇ ಏಕ ಕಾಲದಲ್ಲಿ ಗುಡುಗು ಮಿಂಚುಗಳನ್ನು ಕಾಣಬಹುದು. ಅಷ್ಟ ದೊಡ್ಡ ಮುದ್ದೆ ಕ್ಷಣ ಕಾಲದಲ್ಲಿ ದಡಕ್ಕೆ ಬಡಿದೊಡನೆ ಕೇವಲ ಹನಿ ಮತ್ತು ನೊರೆಯಾಗಿ ನಿರ್ನಾಮವಾಗಿ ಬಿಡುತ್ತದೆ. ಆ ದೇ ಅಲೆ! ಸಮುದ್ರಕ್ಕಿಂತಲೂ ಮೇಲೆ ಹೋರಾಡುತ್ತ ಓಡಿ ಬರುತ್ತಿರುವದು ಅದೆಷ್ಟು ಅಂದ! ಸಾವಿನಲ್ಲೂ ಆಕರ್ಷಣೀಯ ಶಕ್ತಿ ಇದೆ! ಮಳೆಗಾಲದ ಸಮುದ್ರದ ಅಲೆಯಂತೆ, ಎಂದೂ ಚೆಂದವಿರುವ, ಯಾವಾಗಲೂ ನಾಶವನ್ನೇ ಗರ್ಭದಲ್ಲಡಗಿಸಿಟ್ಟುಕೊಂಡಿರುವ ಅಲೆಯಂತೆ ಇದೆ, ಮಹತ್ವಾಕಾಂಕ್ಷೆ.

ಕೇದಾರಿಯು ಬಳಿ ಅಂಕಹ ಬೊಮಿ ಹಾಗೂ ಸಮುದ್ರಗಳ ಮೇಲಣ ರೂಪಕ ಬಹಳವಿತ್ತು. ಅವುಗಳೇ ಅವನನ್ನು ಕ್ರಿಯಾಶೀಲನಾಗುವಂತೆ ಉತ್ತೇಜಿಸುತಿದ್ದವು; ಕಲಿಸುತಿದ್ದವು; ಹಾಗೂ ಮಾರ್ಗದರ್ಶನ ಮಾಡುತಿದ್ದವು. ಆದರೆ ಅಲೆಯ ತುದಿಯ ಮೇಲಿರುವ ಹೊಳೆಯುತ್ತಿರುವ ಬಿಳಿ ಅವನ ದೃಷ್ಟಿಯನ್ನು ಸೆರೆಹಿಡಿದಿರಲಿಲ್ಲ; ಹಾಗು ತನ್ನ ನೈಜವೈಶಿಷ್ಟ್ಯದ ಮರ್ಮವನ್ನು ತಿಳಿಸಿರಲಿಲ್ಲ. ಈಗ ಅದನ್ನವನು ಕಂಡುಕೊಂಡನು; ಹಾಗೆ ಅದನ್ನು ಕಳೆದು ಬಿಡಲು ಸಿದ್ಧನಾದನು.

ಠಾಕೂರ್‌ದಾಸ್ ತೋಟದ ಸತ್ಕಾರ ಕೂಟದಿಂದ ಮನೆಗೆ ಹಿಂತಿರುಗಿ ಬಂದ ಕೇದಾರಿಯು ಹೆಂಡತಿಯ ಬಳಿ ಒಂದು ಶಬ್ದವನ್ನೂ ಆಡಲಿಲ್ಲ. ಅವನು ಬಂದಿದ್ದಾಗ ಅವಳು ತನ್ನ ಮಕ್ಕಳೊಂದಿಗೆ, ನಿಜವಾದ ಮಾತೆಯಂತೆ, ಶಾಂತವಾಗಿ ಮಲಗಿಕೊಂಡಿದ್ದಳು. ಮುಂಬರಲಿರುವ ಘಟನೆಗಳ ಕುರಿತು ಯೋಚಿಸುತ್ತ ಮಲಗಿದ ಕೇದಾರಿಗೆ ನಿದ್ರಾದೇವಿ ಒಲಿಯಲೊಪ್ಪಲಿಲ್ಲ. ಆದರೆ ಅವನು ನಿಜವಾಗಿ ಕಪ್ಪೆಯ ಹಾಗೆ ಶಾಂತವಾಗಿ, ಭಯದಿಂದ, ಸಣ್ಣತನದ ಜೀವನವನ್ನು ನಡೆಸಲು ಇಷ್ಟಪಡಲಿಲ್ಲ. ಅದುವೇ ಅವನಿಗೆ ಯಶಸ್ಸನ್ನು ತಂದಿತ್ತು.

ಒಂದು ದಿನ ಅಲ್ಲದಿದ್ದರೆ ಇನ್ನೊಂದು ದಿನ ತನಗೂ ಮಾರ್ಕಂಡಮ್ಮಗೂ ಬಲವಾದ ತಿಕ್ಕಾಟ ನಡೆಯಲಿಕ್ಕಿದೆ ಎಂದು ಅವನು ತಿಳಿದುಕೊಂಡನು. ಆದರೆ ಸದ್ಯಕ್ಕದು ಅವನಿಗೆ ಬೇಡವಾಗಿತ್ತು. ಅದನ್ನು ಬುದ್ಧಿವಂತಿಕೆಯಿಂದ ತಪ್ಪಿಸಲು ಅವನು ಯೋಚಿಸಿದನು. ಹೇಗಾದರೂ ತಾನು ತರುಣ ನೇತಾ ಆಗಬೇಕೆಂದವನು ನಿಶ್ಚಯಿಸಿಕೊಂಡನು.

ತನ್ನ ವಿಶಿಷ್ಟ ರೀತಿಯ ಬುದ್ಧಿವಂತಿಕೆ ಹಾಗೂ ಧೈರ್ಯದಿಂದ ತಾನು ಜಿಗಿದೆದ್ದು ನಿಲ್ಲಲೇಬೇಕೆಂದವನು ನಿಶ್ಚಯಿಸಿದನು. ಕಣಿವೆಯ ಮತ್ತೊಂದು ಬದಿಹೆಚ್ಚು ಕಡಿದು ಬಹಳ ಕಡಿತದಾಗಿದ್ದು ಜಾರುತಿದ್ದು, ಹೆಜ್ಜೆ ಇಡಲು ಬಹಳ ಕಷ್ಟವಾಗುತ್ತಿತ್ತು. ಭದ್ರತೆಯ ಬದಿಯಲ್ಲಿ ಸ್ನೇಹಿತರೂ ಶತ್ರುಗಳೂ ಒಟ್ಟಾಗಿ ನಿಂತು ಕೊಂಡು ಅವನ ಮೇಲೆ ಕಲ್ಲಿನ ಸುರಿಮಳೆಯನ್ನು ಕರೆಯಲು ಯೋಜನೆ ಹೂಡಿದ್ದರು. ಸರಿ ಹಾಗೆ ಮಾಡಲಿ ಅವರು. ಆದರೆ ಅವನ ಹರಡಿ ಬಿದ್ದಿರುವ ಅಪಮಾನದ ಕಲ್ಲುಗಳನ್ನೆಲ್ಲಾ ತಾಳ್ಮೆಯಿಂದ ಒಟ್ಟುಮಾಡಿ, ಅವರ ಕಣ್ಣೆದುರಿಗೇನೇ ಒಂದು ಕೋಟೆಯನ್ನು ಕಟ್ಟಬಹುದು. ಒಂದು ದಿನ ಯಾವುದರೂ ತನ್ನ ಗೆಳೆಯರಂತೆ ಅವನ ಕೂಪಮಂಡೂಕ ಜೀವನವನ್ನು ನಡೆಸಲು ಸಿದ್ಧನಿರಲಿಲ್ಲ.

ಕೋಕಿಲಂ ಮಲಗಿದ್ದಲ್ಲಿಂದ ಇನ್ನೊಂದು ಪಕ್ಕಕ್ಕೆ ಹೊರಳುತ್ತ ಆಶ್ಚರ್ಯಜನಕ ಹಾಗೂ ದುಃಖದಾಯಿ ಮಾತುಗಳನ್ನು ಗೊಣಗುಟ್ಟಿದಳು. ಕೇದಾರಿ ಎದ್ದು ಕುಳಿತುಕೊಂಡು ನಿರೀಕ್ಷಿಸಲಾರಂಭಿಸಿದ. ಹೌಸಿ ಚಂದ್ರನು ಗಾಳಿ ಹಾಗೂ ಮೋಡಗಳಿಂದ ಕದಡತೆ ಕಂಗೊಳಿಸುತ್ತಿದ್ದನು. ಮಾರ್ಕಂಡಮ್ಮನ ಮಾತ್ಸರ್ಯ ಪೂರ್ಣ ತಂಟೆಯಿಂದಾಗಿ ಕೇದಾರಿಯು ಬೆದರಿ ತಳಮಳಗೊಂಡಿದ್ದನು. ಈ ಕ್ಷುಲ್ಲಕ ವಿಷಯಗಳಿಗೆಲ್ಲಾ ಕೇದಾರಿ ಸೊಪ್ಪು ಹಾಕುವವನಲ್ಲವೆಂದು ತಿಳಿಸಲು ಪ್ರಭಾತ ಕಾಲ ಕಾಯುತ್ತಿತ್ತು. ಅವನು ನಿದ್ರಾಂಗನೆಯನ್ನೊಲಿಸಿಕೊಳ್ಳಲು ಬಹಳ ಪ್ರಯತ್ನಿಸಿದನು. ಊಟದ ಭಾರ ಒಂದೆಡೆ, ಆಲೋಚನೆಗಳ ತಿಕ್ಕಾಟ ಇನ್ನೊಂದೆಡೆ, ಎಲ್ಲದಕ್ಕಿಂತಲೂ ಹೆಚ್ಚಾಗಿ ಮಾರ್ಕಂಡಂ ಅವನ ಮೆದುಳನ್ನು ಬಿಸಿಮಾಡಿದ್ದರು. ಅದರಿಂದ ಅವನಿಗೆ ನಿದ್ರೆ ಬರಲೇ ಇಲ್ಲ.

ಕೆಟ್ಟ ಕನಸ್ಸನ್ನು ಕಂಡವಳಂತೆ ಕೋಕಿಲಂ ಪುನಃ ಗೊಣಗುಟ್ಟಿದಳು. ಕೇದಾರಿಗೆ ಇನ್ನು ಸುಮ್ಮನಿರಲಾಗಲಿಲ್ಲ. ಆಕೆಯ ಪಕ್ಕಕ್ಕೆ ಬಂದು, "ಕೋಕಿಲಂ ನಿದ್ದೆಯಲ್ಲಿ ಚಡಪಡಿಸುವದು ಬಹಳ ಅಪರೂಪ. ಪಾಪದ ಜೀವ! ನನ್ನ ಕಾರು, ಚುನಾವಣೆ- ಇವುಗಳ ಗರ್ವದಿಂದಾಗಿ ಈ ತಿಂಗಳಲ್ಲಿ ಇವಳನ್ನು ಹಾಗೂ ಮಕ್ಕಳನ್ನು ಪೂರ್ತಿ ಮರೆತು ಬಿಟ್ಟಿದ್ದೆ. ಹರಿದಿರುವ ಹಾಸಿಗೆಯ ಮೇಲೆ ಪಾಪ, ಮಲಗಿಕೊಂಡಿದ್ದಾರೆ. ಕೋಕಿಲಂ ಕರುಣಾಮಯಿ, ಅವಳು ಸ್ವಲ್ಪಮಟ್ಟಿಗಾದರೂ ಅಧಿಕಾರ ತೋರಿಸಬೇಕಾಗಿತ್ತು. ಹೇಗಿದ್ದರೂ, ಇನ್ನು ಮುಂದೆ ಸಂಪಾದಿಸಿಕೊಳ್ಳಲು ಸಮಯ ಹಾಗೂ ಸಂದರ್ಭ ಇದೆ. ಆದುದರಿಂದ.... ನನ್ನ ಖರ್ಚನ್ನು ಕಮ್ಮಿ ಮಾಡಿ ಮಳೆಗಾಲಕ್ಕೆ ಸ್ವಲ್ಪ ಕೂಡಿಸಡಬೇಕು. ಪ್ರಿಯ ಕೋಕಿಲಂ, ಏಕೆ ನರಳಾಡುತ್ತಿರುವ?" ಎಂದ

"ಇದು ನೀವೇನು ಪ್ರಿಯಾ? ಈಗಾದರೂ ನನ್ನ ಪಕ್ಕಕ್ಕೆ ಬಂದಿರಲ್ಲಾ. ಈಗ ಘಂಟೆ ಎಷ್ಟಾಗಿದ್ದೀತೆಂದ್ರಿ? ನೋಡಿ, ಈಗ ನಾನೊಂದು ಭಯಂಕರ ಕನಸನ್ನು ಕಂಡೆ. ಸೂರ್ಯೋದಯಕ್ಕೆ ಇನ್ನು ಒಂದೇ ಒಂದು ಜಾವ ಇರುವದಾದಲ್ಲಿ ಕನಸು ನಿಜವಾಗುವದೇ ಸರಿ. ಅಯ್ಯೋ! ಅದು ಬಹು ಭಯಂಕರ ಕನಸು, ಪ್ರಾಣೇಶ, ಆದೂ ನಿಮ್ಮ ವಿಷಯದಲ್ಲಿ, ಜಾಗರೂಕರಾಗಿ..."

"ಅದೇನು ಕನಸು? ಹೇಳು ನನಗೆ, ನಾನು ಅಂಜುಬುರುಕನಿರುವದಿಲ್ಲ; ಹೇಳು ನನಗೆ." ಆಕೆಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಬೆರಳಿನಿಂದ ಕಣ್ಣೀರನ್ನೊರಸಿದನು.

(ಹನ್ನೊಂದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ' ದಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಲೋಕ ನಾಯಕ ಜವಾಹರಲಾಲ ನೆಹರುರವರ ಎರಡನೆಯ ಪುಣ್ಯ ತಿಥಿಯನ್ನು ದೇಶದಾದ್ಯಂತ ಕಳೆದ ತಾ. ೨೭ರಂದು ಆಚರಿಸಲಾಯಿತು.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೩೮	೨—೬—೧೯೬೬	No. 38

ವಚನ ಸುಧೆ

ತ್ರಿವಿಧಂ ನರಕಸ್ಯೇದಂ:
ದ್ವಾರಂ ನಾಶನಮಾತ್ಮನಃ||
ಕಾಮಃ ಕ್ರೋಧಸ್ತಥಾ ಲೋಭ
ಸ್ತಸ್ಮಾದೇತತ್ತ್ರಯಂತ್ಯಜೇತ್||

ಕಾಮ, ಕ್ರೋಧ ಮತ್ತು ಲೋಭ—ಇವು ಮೂರು ಆತ್ಮವನ್ನು ನಾಶಮಾಡುವ ನರಕದ್ವಾರಗಳು. ಅದುದರಿಂದ ಇವನ್ನು ತ್ಯಜಿಸಬೇಕು.

ಎ. ಐ. ಸಿ. ಸಿ. ಅಧಿವೇಶನ

ಮುಂಬಯಿಯಲ್ಲಿ ಜರಗಿದ ಎ. ಐ. ಸಿ. ಸಿ. ಸಭೆಯು ಹಲವು ವೈಶಿಷ್ಟ್ಯಗಳಿಂದೊಡಗೂಡಿದ್ದು, ದೇಶದ ಪ್ರಚಲಿತ ಸಮಸ್ಯೆಗಳ ಕುರಿತು ಗಂಭೀರವಾಗಿ ಪರಿಶೀಲಿಸಿತು. ಈ ಬಾರಿಯ ಅಧಿವೇಶನ ಮುಂದೆ ಅತಿ ಮಹತ್ವದ ವಿಚಾರಗಳಾವುವೂ ಇರಲಿಲ್ಲ. ಕಾಂಗ್ರೆಸ್ ಚುನಾವಣಾ ಮಂಡಲದ ಆಯ್ಕೆಯೇ ಈ ಬಾರಿಯ ಅಧಿವೇಶನದ ಮುಖ್ಯ ವಿಷಯವೆಂದು ತೋರುತ್ತದೆ. ಹಾಗಾಗಿ, ಈ ಬಾರಿ ಮೊತ್ತಮೊದಲ ಬಾರಿಗೆ ಅಧಿಕಾರೇತರ ಗೊತ್ತುವಳಿಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು ಹೊಸ ಪರಂಪರೆಯನ್ನು ಸ್ಥಾಪಿಸಿದೆ ಎಂದು ಹೇಳಬಹುದು.

ಖಾಸಗಿ ಗೊತ್ತುವಳಿಗಳಿಗೆ ಪ್ರಾಶಸ್ತ್ಯ ನೀಡುವುದರ ಮೂಲಕ ಜನಸಾಮಾನ್ಯರ ಅಭಿಪ್ರಾಯ ಅಧಿವೇಶನದಲ್ಲಿ ಬಿಂಬಿತವಾಗುವಂತಾಗಿದೆ. ಚಿನ್ನ ನಿಯಂತ್ರಣ ಆಜ್ಞೆಯನ್ನು ರದ್ದುಗೊಳಿಸಬೇಕೆನ್ನುವ ಖಾಸಗಿ ನಿರ್ಣಯವನ್ನು ಹಿಂದಿನ ಉಪ ಆರ್ಥಿಕ ಸಚಿವೆಯಾಗಿದ್ದ ಶ್ರೀಮತಿ ತಾರಕೇಶ್ವರಿ ಸಿನ್ಹಾರವರು ಮಂಡಿಸಿ ದೇಶದ ಜನರ ಸಾಮಾನ್ಯಾಭಿಪ್ರಾಯವನ್ನು ಸೂಚಿಸಿದರು. ಚಿನ್ನ ನಿಯಂತ್ರಣವು ನಿರೀಕ್ಷಿಸಿದ ಫಲವನ್ನು ತಂದಿಲ್ಲ. ಬದಲು ಅದರಿಂದ ಅನೇಕ ದುಷ್ಪರಿಣಾಮಗಳೇ ಆಗಿವೆ ಎಂದು ಅವರು ವಾದಿಸಿದರು. ಶ್ರೀ ಕಾಮರಾಜರು ಈ ಕುರಿತು ಸರಕಾರ ತೀವ್ರವಾಗಿ ಪರಿಶೀಲಿಸುವುದೆಂದು ಆಶ್ವಾಸನೆ ಇತ್ತ ಬಳಿಕ ಗೊತ್ತುವಳಿ ಹಿಂದೆಗೆಯಲ್ಪಟ್ಟಿತು.

ಭಾಷಾ ಸಮಸ್ಯೆ, ಭಾರತ-ಅಮೇರಿಕ ಶಿಕ್ಷಣ ಪ್ರತಿಷ್ಠಾನ ಹಾಗೂ ರಸಾಯನ ಗೊಬ್ಬರ ನೀತಿ ಮೊದಲಾದ ವಿಷಯಗಳೂ ಚರ್ಚೆಗೆ ಬಂದುವು. ಈ ರೀತಿ ಖಾಸಗಿ ಗೊತ್ತುವಳಿಗಳ ಚರ್ಚೆಯು ಪ್ರಧಾನವಾಗಿದ್ದುದರಿಂದ ಅಧಿವೇಶನವು ಒಂದು ದಿನ ಹೆಚ್ಚಾಗಿಯೇ ನಡೆಯಿತು. ಈ ಗೊತ್ತುವಳಿಗಳ ಚರ್ಚೆಯ ಫಲಶ್ರುತಿ ಏನೇ ಇರಲಿ ಕಂಡಾ ಕಾಂಗ್ರೆಸ್ ಸದಸ್ಯರಿಗೆ ತಮ್ಮ ಮನೋಗತವನ್ನು ತಿಳಿಯಪಡಿಸುವ ಸದವಕಾಶ ಮಾತ್ರ ಲಭಿಸಿತೆಂದು ಹೇಳಬಹುದು.

ಮುಂದಿನ ವರುಷ ಜರಗುವ ಮಹಾ ಚುನಾವಣೆಯ ಮೇಲಿನ ದೃಷ್ಟಿ ಈ ಅಧಿವೇಶನದ ಪ್ರಾಮುಖ್ಯ ವಿಷಯವಾಗಿತ್ತು. ಚುನಾವಣಾ ಮಂಡಲದ ಆಯ್ಕೆಯಲ್ಲಿ ತೀವ್ರ ಸ್ಪರ್ಧೆ ಇದ್ದಿತ್ತು. ಕಾಂಗ್ರೆಸ್ ನೆಹರೂರವರಿಲ್ಲದೆ ಮೊತ್ತಮೊದಲ ಬಾರಿಗೆ ಸಾರ್ವತ್ರಿಕ ಚುನಾವಣೆಯನ್ನೆದುರಿಸುತ್ತಿದೆ. ಕಾಂಗ್ರೆಸಿನ ಬಲಾಬಲಗಳ ವಿವೇಚನೆ ಈ ಕಾಲ ಮಾಡಬೇಕಾದುದು ಅತೀ ಆಗತ್ಯ. ಯಾವ ರಾಜ್ಯಗಳಲ್ಲಿ ಕಾಂಗ್ರೆಸ್ ಪ್ರಬಲ ಪ್ರತಿಸ್ಪರ್ಧೆಯನ್ನೆದುರಿಸಬೇಕಾಗುವುದೋ ಆ ರಾಜ್ಯಗಳ ಮಟ್ಟಿಗೆ ಹುರಿಯಾಳುಗಳ ಆಯ್ಕೆ ಜಾಗರೂಕತೆಯಿಂದ ಆಗಬೇಕಾಗಿದೆ. ಬಂಗಾಲ, ಕೇರಳ ಹಾಗೂ ಒರಿಸ್ಸಾಗಳಲ್ಲಿ ಇಂತಹ ಪರಿಸ್ಥಿತಿ ಇದೆ. ಬಂಗಾಲ ಹಾಗೂ ಕೇರಳಗಳಲ್ಲಿ ಬಂಡುಗಾರ ಕಾಂಗ್ರೆಸಿಗರು ತಮ್ಮದೇ ಆದ ಸಂಸ್ಥೆ ಸ್ಥಾಪಿಸಿ ಚುನಾವಣಾ ರಂಗಕ್ಕಿಳಿಯುವ ಸನ್ನಾಹ ಮಾಡಿದ್ದಾರೆ. ಇದು ಕಾಂಗ್ರೆಸಿನ ವಿಜಯಕ್ಕಿರುವ ಮೂಲ ಆತಂಕ. ಈ ರಾಜ್ಯಗಳಲ್ಲಿ ಯಾವುದಾದರೊಂದು ಬಗೆಯ ಒಡಂಬಡಿಕೆಗೆ ಬರಬೇಕಾದುದು ವಿಜಯದ ದೃಷ್ಟಿಯಿಂದ ಅತ್ಯಗತ್ಯ.

ಈ ಬಾರಿಯ ಅಧಿವೇಶನದ ಇನ್ನೊಂದು ವೈಶಿಷ್ಟ್ಯವೆಂದರೆ ಗಡಿ ತಂಟೆಯ ಕುರಿತಾದ ಚಟುವಟಿಕೆಗಳು. ಮೈಸೂರು ಮಹಾರಾಷ್ಟ್ರ ಗಡಿ ತಂಟೆಯ ಕುರಿತು ಮರಾಠಿಗರು ತಮ್ಮ ಎಲ್ಲಾ ರೀತಿಯ ಕುಹಕ ಬುದ್ಧಿಯನ್ನು ತೋರಿಸಿ ಮನವೊಲಿಸುವ ಯತ್ನ ನಡೆಸಿದರು. ಮೈಸೂರು ಸರಕಾರವು ಈ ಸಂದರ್ಭ ಎಪ್ಪತ್ತು ಪುಟಗಳ ಒಂದು ಪುಸ್ತಕವನ್ನು ಪ್ರಕಟಿಸಿ, ಮರಾಠಿಗರ ನಿಲುವೇ ಅಸಮರ್ಪಕವಾದುದು ಎಂದು ತೋರಿಸಿತು. ಕಾಂಗ್ರೆಸ್ ಸದಸ್ಯರಲ್ಲಿ ಈ ಪುಸ್ತಕ ಉತ್ತಮ ಪರಿಣಾಮವನ್ನುಂಟು ಮಾಡಿತೆಂದು ವಾದಿಸಲಾಗಿದೆ. ಆದರೆ ಮರಾಠಿಗರು ತಮ್ಮ ವಾದವನ್ನು ಮಂಡಿಸಿದ ರೀತಿ ಅಷ್ಟು ಪರಿಣಾಮಕಾರಿಯಾಗಿಲ್ಲ.

ಮುಂಬರುವ ಚುನಾವಣೆಯ ಮೊದಲು ಗಡಿ ಸಮಸ್ಯೆ ಬಗೆಹರಿಯಬೇಕೆಂಬ ಒತ್ತಾಯವನ್ನು ಮರಾಠಿಗರು ಹೇರುತ್ತಿದ್ದಾರೆ. ಅವರು ಕುಹಕೋಪಾಯಗಳಿಂದ ಪ್ರಧಾನಿಯವರ ಮನವೊಲಿಸುವ ಹಂಚಿಕೆ ಹೂಡಿದ್ದಾರೆ. ಆದರೆ ಇಂತಹ ಒತ್ತಾಯಕ್ಕೆ ಕೇಂದ್ರ ಸರಕಾರ ಬಲಿ ಬೀಳಬಾರದು.

ಕಾಂಗ್ರೆಸ್ ಜನಸಾಮಾನ್ಯರ ಸಂಸ್ಥೆಯಾಗಿ ಉಳಿಯಬೇಕಾಗಿದ್ದರೆ ಅಧಿವೇಶನದಲ್ಲಿ ಖಾಸಗಿ ಗೊತ್ತುವಳಿಗೆ ಅಧಿಕ ಪ್ರಾಶಸ್ತ್ಯ ದೊರೆಯಬೇಕಾದುದು ಅತಿ ಅಗತ್ಯ. ಈ ರೀತಿಯ ಅವಕಾಶವನ್ನು ಕೊಡುವುದರಿಂದ ಜನಸಾಮಾನ್ಯರ ಭಾವನೆಗಳು ಉಚ್ಚ ಮಟ್ಟದಲ್ಲಿ ವಿದಿತಗೊಳ್ಳಲು ನೆರವಾಗುತ್ತದೆ. ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಈ ಹೊಸ ಪರಂಪರೆಯನ್ನು ಹಾಕಿ ಕೊಟ್ಟಿರುವುದು ನಿಜಕ್ಕೂ ಶ್ಲಾಘನೀಯ.

ಮುಂಬರುವ ಸಾರ್ವತ್ರಿಕ ಚುನಾವಣೆಗಳನ್ನು ಇದಿರಿಸಬೇಕಾದ ಕಾಂಗ್ರೆಸ್ ಸಂಸ್ಥೆಯಲ್ಲಿ ಸಮಯೋಚಿತವಾದ ಚಟುವಟಿಕೆ ಹೆಚ್ಚಾಗಿದೆ. ಕಾಂಗ್ರೆಸಿನ ಚುನಾವಣಾ ಸಿದ್ಧತೆಗಳಿಗೆ ಮುಂಬಯಿಯ ಅಧಿವೇಶನ ನಾಂದಿ ಹಾಕಿತೆಂದು ಹೇಳಬಹುದು.

ಸುವರ್ಣ ಮಹೋತ್ಸವ

ಬ್ರಹ್ಮಾವರ ಸಹಕಾರೀ ವ್ಯವಸಾಯಿಕ ಬೇಂಕಿನ ಸುವರ್ಣ ಮಹೋತ್ಸವ ಸಮಾರಂಭವನ್ನು ಮೈಸೂರು ರಾಜ್ಯ ಸಹಕಾರಿ ಸಚಿವ ಶ್ರೀ ಕೆ. ಪುಟ್ಟಸ್ವಾಮಿಯವರು ಕಳೆದ ತಾ. 15ರಂದು ಶ್ರೀ ಎಸ್. ನರ್ಸಪ್ಪಯ್ಯ ಎಂ. ಎಲ್. ಸಿ.ಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸುತ್ತಾ, ಸಹಕಾರಿ ಬೇಂಕಿನ ಕಾರ್ಯಕಲಾಪಗಳನ್ನು ವಿವರಿಸಿ, ಅಧಿಕ ಆಹಾರ ಉತ್ಪಾದನೆಗಾಗಿ ಸಹಕಾರೀ ಸಂಸ್ಥೆ ದುಡಿಯಬೇಕೆಂದು ಹೇಳಿ ಬ್ಯಾಂಕಿನವತಿಯಿಂದ ಪ್ರಕಟಿಸಲ್ಪಟ್ಟ ನೆನಪಿನ ಸಂಚಿಕೆಯನ್ನು ಉದ್ಘಾಟಿಸಿದರು.

ಪ್ರಾರಂಭದಲ್ಲಿ ಬೇಂಕಿನ ಅಧ್ಯಕ್ಷ ಶ್ರೀ ಬಿ. ವಿ. ಮಾಧವ ರಾಯರು ಸ್ವಾಗತಿಸಿದರು. ಶ್ರೀ ಎಂ. ಕೃಷ್ಣ ಕಿಣಿಯವರು ಸಂದೇಶಗಳನ್ನೋದಿದರು. ಕಾರ್ಯದರ್ಶಿ ಶ್ರೀ ಬಿ. ರಾಮಕೃಷ್ಣ ಆಚಾರ್ಯರು ಸಂಸ್ಥೆಯ ಐವತ್ತು ವರುಷಗಳ ಅಭಿವೃದ್ಧಿಯ ವರದಿಯನ್ನೋದಿದರು.

ದ. ಕ. ಜಿಲ್ಲಾ ಸಹಕಾರಿ ಚಳುವಳಿಯ ಪಿತಾಮಹ ಶ್ರೀ ಮೊಳಹಳ್ಳಿ ಶಿವರಾಯರು, ಬೇಂಕಿನ ಸ್ಥಾಪಕ ಹಿರಿಯರುಗಳಾದ ಶ್ರೀ ಶಿವರಾಮ ಕರ್ನಿಕ, ಶ್ರೀ ವಾರಂಬಳ್ಳಿ ಸುಬ್ರಾಯ ಇವರುಗಳ ಭಾವಚಿತ್ರಗಳನ್ನು ಕ್ರಮವಾಗಿ ಶ್ರೀ ಸಿ. ವಿ. ಜಮಖಂಡಿಮಠ್, ಶ್ರೀ ಬಿ. ನಾರಾಯಣ ನಾಯಕ್, ಶ್ರೀ ಬಿ. ಜಗಜೀವನದಾಸ ಶೆಟ್ಟರು ಅನಾವರಣಗೈದರು. ಸಂಸ್ಥೆಗೆ ಶುಭಕೋರಿ ಶ್ರೀ ಎಸ್. ಧರ್ಮಸಾಮ್ರಾಜ್ಯರು ಮಾತನಾಡಿದರು. ಶ್ರೀ ಬೈಕಾಡಿ ವೆಂಕಟಕೃಷ್ಣ ರಾವ್, ಮೈಸೂರು ಸೆಂಟ್ರಲ್ ಬೇಂಕಿನ ಅಧ್ಯಕ್ಷ ಶ್ರೀ ಪುಟ್ಟಸ್ವಾಮಿ ಭಾಷಣಮಾಡಿದರು.

ನಿಯೋಜಿತ ಅಧ್ಯಕ್ಷರಾದ ಶ್ರೀ ಎಸ್. ಎಸ್. ಕೊಳ್ಕೆಬೈಲ್ ಎಂ. ಎಲ್. ಎ. ಇವರು ಬರೆದು ಕಳುಹಿಸಿದ ಅಧ್ಯಕ್ಷ ಭಾಷಣವನ್ನು ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು ಓದಿದ ಮೇಲೆ ಅಧ್ಯಕ್ಷ ಶ್ರೀ ನರ್ಸಪ್ಪಯ್ಯನವರು ಬೇಂಕಿನ 50 ವರುಷಗಳ ಸೇವೆಯನ್ನು ಪ್ರಶಂಸಿಸಿ, ಶುಭಕೋರಿದರು. ಶ್ರೀ ಎ. ಶೀನಪ್ಪ ಶೆಟ್ಟರು ವಂದನಾರ್ಪಣೆಗೈದರು.

ನರಸಣ್ಣನ ಸರಸ

"ಚಿನ್ನ ನಿಯಂತ್ರಣ ಆಜ್ಞೆಯ ರದ್ದುಗೊಳಿಸ್ಬೇಕೊಂತ ಶ್ರೀಮತಿ ತಾರಕೇಶ್ವರಿ ಸಿನ್ಹಾರೇ ಕಾಂಗ್ರೆಸ್ ಅಧಿವೇಶನದಲ್ಲಿ ಹೇಳಿದ್ರಂತಲ್ಲ?"

"ಹೆತ್ತ ತಾಯೇ ಮಗೂನ ಕೊಂದುಬಿಡಿ ಅಂದ ಹಾಗಾಯ್ತು, ಇನ್ನು ಪುನರ್ಧಾರಣೇನ ನೋಡ್ತಾ ಇರು—"

ಅಂತ್ಯ ಜರಿಗೂ ಸ್ಥಾನವಿತ್ತ

ಶ್ರೀರಾಮಾನುಜಾಚಾರ್ಯರು

ಬರೆದವರು: ಶ್ರೀ ಸ. ನಾರಾಯಣ

ಗುರುಗಳೊಬ್ಬರು ತಮ್ಮ ಶಿಷ್ಯನಿಗೆ ಅಷ್ಟಾಕ್ಷರಿ ಮಂತ್ರೋಪದೇಶ ಮಾಡಿ ಅವನಿಗೆ ಆ ವಿಷಯವಾಗಿ ಎಚ್ಚರಿಕೆ ಕೊಡುತ್ತಾ—'ಈ ಮಂತ್ರವನ್ನು ಅರ್ಹರಲ್ಲದವರಿಗೆ ತಿಳಿಸಿದರೆ ಅನಾಹುತವಾಗುತ್ತದೆ. ಆದರಿಂದ ಅರ್ಹರಲ್ಲದವರು ಅಥವಾ ಪಾಪಿಗಳು ಪುಣ್ಯ ಪಡೆಯುತ್ತಾರೆ.ನಿನಗೆ ನರಕ ಪ್ರಾಪ್ತವಾಗುತ್ತದೆ" ಎಂದರು. ಶಿಷ್ಯನಿಗೆ ಗುರುಗಳು ಉಪದೇಶಿಸಿದ ಅಷ್ಟಾಕ್ಷರಿ ಮಂತ್ರವನ್ನು ಕೇಳಿ ಪರಮಾನಂದವಾಯಿತು. ಹಾಗೆಯೇ ತನಗೊಬ್ಬನಿಗೆ ಪಾಪ ಪ್ರಾಪ್ತವಾಗಿ ಅಧಿಕ ಸಂಖ್ಯೆಯಲ್ಲಿ ಜನರು ಗುಪ್ತ ಶಾಪದಿಂದ ವಿಮುಕ್ತರಾಗುತ್ತಾರೆ ಎಂಬ ಸಂಗತಿಯೂ ಅವನ ಗಮನಕ್ಕೆ ಬಂತು.

ಶಿಷ್ಯ ದೇವಾಲಯದ ಗೋಪುರದ ಮೇಲೆ ನಿಂತು ಜನಕೋಟಿಯನ್ನು ಕರೆದು ಗುರುಗಳು ಉಪದೇಶಿಸಿದ್ದ ಮಂತ್ರವನ್ನು ಗಟ್ಟಿಯಾಗಿ ಉಚ್ಚರಿಸಿ ನೀವು ಈ ಮಂತ್ರದ ಸ್ಮರಣೆ ಮತ್ತು ಧ್ಯಾನದಿಂದ ಪಾಪದಿಂದ ವಿಮುಕ್ತರಾಗಿ" ಎಂದು ತಿಳಿಸಿದ.

ಗುರುಗಳಿಗೆ ಶಿಷ್ಯನ ನಡವಳಿಕೆಯಿಂದ ಕೋಪ ಬಂತು. ಶಿಷ್ಯ ಗುರುಗಳಲ್ಲಿ'ನಿಮ್ಮ ಅಪ್ಪಣೆ ಮೀರಿ ವರ್ತಿಸಿದ್ದೇನೆ. ನನ್ನ ಅಪರಾಧಕ್ಕೆ ಶಿಕ್ಷೆ ವಿಧಿಸಿ ಎಂದು ನಮ್ರನಾಗಿ ವಿನಂತಿ ಮಾಡಿಕೊಂಡ. ಗುರುಗಳಿಗೆ ಶಿಷ್ಯನ ಬಗ್ಗೆ ಅಪರಿಮಿತ ಅಭಿಮಾನ ಮೂಡಿಬಂತು. ಸಮಸ್ತರ ಸಂಕಟವನ್ನು ಪರಿಹಾರಮಾಡಿ ಅವರ ಸಂಕಟವನ್ನು ಸಂತೋಷದಿಂದ ಸ್ವೀಕರಿಸಿ ನರಕಕ್ಕೆ ಹೋಗಲು ಸಿದ್ಧನಿರುವ ಶಿಷ್ಯನ ಬಗೆಗೆ ಹೆಮ್ಮೆ ತಾಳಿದರು. ಶಿಷ್ಯನ ಮಾನವೀಯ ಅಂತಃಕರಣಕ್ಕೆ ಮಾರು ಹೋಗಿ ಆಶೀರ್ವದಿಸಿದರು.

ಈ ಶಿಷ್ಯರೇ ಮುಂದೆ ದಕ್ಷಿಣಭಾರತದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತ ತತ್ವಗಳ ಪ್ರತಿಪಾದಕರಾಗಿ ರಾಮಾನುಜಾಚಾರ್ಯ ಎಂಬ ಹೆಸರಿನಿಂದ ಕೀರ್ತಿ ಪಡೆದ ಮಹಾ ಪುರುಷರು. ಮಂತ್ರೋಪದೇಶ ಮಾಡಿ ಶಿಷ್ಯನಿಗೆ ಮೋಕ್ಷದ ದಾರಿಯನ್ನು ತೋರಿಸಿ ಕೊಟ್ಟ ಮಹಾನುಭಾವರು. ರಾಮಾನುಜಾಚಾರ್ಯರ ಗುರುಗಳಲ್ಲೊಬ್ಬರಾದ ಗೋಷ್ಠಿಪೂರ್ಣ (ತಿರುಕ್ಕೋಟ್ಟಿಯೂರುನಂಬಿ)ರು. ಇವರು ಶ್ರೀರಂಗದ ಶ್ರೀ ವೈಷ್ಣವಾಚಾರ್ಯ ಆಳವಂದಾರರ ಶಿಷ್ಯರು.

ಹಲಬಗೆಯ ಧರ್ಮಗಳ ಘರ್ಷಣೆಯಲ್ಲಿ ಜನರಿಗೆ ಧರ್ಮತತ್ವಗಳ ಬಗೆಗೆ ಅಭಿಮಾನ, ನಂಬಿಕೆ, ನಿಷ್ಠೆ ಇಲ್ಲವಾದ ಸಂದರ್ಭದಲ್ಲಿ ಶ್ರೀ ರಾಮಾನುಜಾಚಾರ್ಯರ ಅವತಾರವಾಯಿತು. ಧರ್ಮಗಳ ಸಾರವನ್ನು ಅರಿಯದೆ ಅವುಗಳ ವಿಶೇಷಾರ್ಥದಿಂದ ಧರ್ಮದ ಅಡಿಗೆ ಚ್ಯುತಿ ಬಂದಾಗ ಧರ್ಮದ ಪುನರುದ್ಧಾರಕರಾಗಿ ಆಚಾರ್ಯರು ವಿಶೇಷ ಸೇವೆಸಲ್ಲಿಸುತ್ತಾರೆ. ರಾಮಾನುಜಾಚಾರ್ಯರಿಗೆ ಮುಂಚೆಯೇ ಹಲವಾರು ವೈಷ್ಣವ ಆಚಾರ್ಯರು ಆಗಿ ಹೋದರು. ಶ್ರೀ ವೈಷ್ಣವ (ವಿಶಿಷ್ಟಾದ್ವೈತ) ಸಿದ್ಧಾಂತ ತತ್ವಗಳನ್ನು ಕ್ರೋಢೀಕರಿಸಿ, ಜನಮನಕ್ಕೆ ಒಪ್ಪಿಗೆಯಾಗುವಂತೆ ವಿವರಿಸಿ, ಶ್ರೀ ವೈಷ್ಣವ ಧರ್ಮಕ್ಕೆ ವಿಶೇಷ ಪೂಜ್ಯತೆ ಹಿರಿಮೆಯನ್ನು ತಂದಿತ್ತು ಕೀರ್ತಿವಂತರಾಗುತ್ತಾರೆ ರಾಮಾನುಜಾಚಾರ್ಯರು.

ರಾಮಾನುಜಾಚಾರ್ಯರ ಜೀವನ ವಿಶೇಷತೆಗಳನ್ನು ಅರಿಯಲು ಅವರ ಶಿಷ್ಯರಾದ ತಿರುವರಂಗತ್ತ ಮುದಾನಾರರ ನಂಬಿತಾದಿ ಎಂಬ ತಮಿಳು ಪ್ರಬಂಧ ಮತ್ತು ವಡುಹನಂಬಿ ಎಂಬುವರ ಯತಿರಾಜವೈಭವ, ವೇದಾಂತ ದೇಶಿಕರ ಯತಿರಾಜ ಸಪ್ತತಿ ಮತ್ತು ಮಣವಾಳ ಮಹಾ ಮುನಿಗಳ ಯತಿರಾಜ ವಿಂಶತಿ ಕೃತಿಗಳು ಸಾಕಷ್ಟು ಸಾಕ್ಷ್ಯಾಧಾರಗಳನ್ನು ಒದಗಿಸಿ ಕೊಡುತ್ತವೆ.

ಮದ್ರಾಸು ರಾಜ್ಯದ ಪೆರಂಬುದೂರಿನಲ್ಲಿ ಕ್ರಿ. ಶ. ೧೦೧೭ರ ವರ್ಷ ಆಸುರಿ ಸೋಮಯಾಜಿ ಮತ್ತು ಅವರ ಧರ್ಮಪತ್ನಿ ಕಾಂತಿ ಯತಿಯವರ ಪುತ್ರರಾಗಿ ರಾಮಾನುಜಾಚಾರ್ಯರು ಜನ್ಮ ತಾಳುತ್ತಾರೆ! ಕಾಂತಿಯತಿ ತಿರುಪತಿಯ ಶ್ರೀ ವೆಂಕಟೇಶ್ವರನ ಸೇವಾನಿರತರಾಗಿದ್ದ ಶ್ರೀ ಶೈಲಪೂರ್ಣರ(ತಿರುಮಲನಂಬಿ) ಸಹೋದರಿ. ರಾಮಾನುಜಾಚಾರ್ಯರ ಜೀವನದ ವಿಕಾಸ ಮನಃಪರಿವರ್ತನೆ, ಸೇವಾದೀಕ್ಷೆ ಮೊದಲಾದುವುಗಳ ಮೇಲೆ ಹೆಚ್ಚು ಪರಿಣಾಮ ಬೀರಿದವರು ಶ್ರೀ ಶೈಲಪೂರ್ಣರು. ಆಚಾರ್ಯರ ಕೀರ್ತಿ ಮತ್ತು ಪ್ರತಿಭೆಗೆ ಅವರೇ ಮುಖ್ಯ ಕಾರಣ ಎಂದು ಹೇಳಿದರೂ ಅಡ್ಡಿ ಇಲ್ಲ.

ರಾಮಾನುಜರು ಚಿಕ್ಕಂದಿನಿಂದಲೂ ಪ್ರತಿಭಾಶಾಲಿಗಳೇ ಆಗಿದ್ದರು. ಅವರದು ವಿವೇಕಪೂರ್ಣ ಪಾಂಡಿತ್ಯ. ಕಿರಿಯ ವಯಸ್ಸಿನಿಂದಲೂ ಅವರಲ್ಲಿ ದೇವರು, ಧರ್ಮ, ಗುರುಹಿರಿಯರ ಬಗೆಗೆ ಶ್ರದ್ಧಾ ಭಕ್ತಿಗಳು ಬೆಳೆದು ಬಂದಿದ್ದವು.

ಆ ಕಾಲದಲ್ಲಿ ಕಾಂಚಿ ಮತ್ತು ಶ್ರೀರಂಗ ಕ್ಷೇತ್ರಗಳು ಜ್ಞಾನ ಕೇಂದ್ರಗಳು ಮಾತ್ರವೇ ಆಗಿರದೆ ಮಹಿಮಾಪೂರ್ಣ ಪುಣ್ಯಕ್ಷೇತ್ರಗಳೂ ಆಗಿದ್ದವು. ಮೊದಲು ರಾಮಾನುಜರು ತಮ್ಮ ಚಿಕ್ಕಮ್ಮನ ಮಗ ಗೋವಿಂದ ಭಟ್ಟರೊಂದಿಗೆ ಯಾದವ ಪ್ರಕಾಶರಲ್ಲಿ ವಿದ್ಯಾಭ್ಯಾಸ ನಡೆಸುತ್ತಾರೆ. ಗುರು ಶಿಷ್ಯರಲ್ಲಿ ಹಲಬಗೆಯ ವಿರಸ ಪ್ರಕರಣಗಳು ನಡೆದವೆಂದು ತೋರಿಬರುತ್ತದೆ. ಹಾಗೆಯೇ ರಾಮಾನುಜರ ಕೀರ್ತಿ, ಪ್ರತಿಭೆಯನ್ನು ಬೆಳಕಿಗೆ ತರುವ ಘಟನೆಗಳೂ ನಡೆಯುತ್ತವೆ. ಶ್ರೀರಂಗದಲ್ಲಿದ್ದ ಆಚಾರ್ಯ ಆಳವಂದಾರರು ಕಾಂಚಿಯಲ್ಲಿ ವೇದಾಂತಾಭ್ಯಾಸದಲ್ಲಿ ತೊಡಗಿದ್ದ ಪ್ರತಿಭಾಪೂರ್ಣ ವ್ಯಕ್ತಿ ಎಂದು ಕೀರ್ತಿ ಪಡೆದಿದ್ದ ರಾಮಾನುಜರನ್ನೂ ತಮ್ಮಲ್ಲಿಗೆ ಕರೆಸಿಕೊಂಡು, ಶ್ರೀರಂಗದ ಆಚಾರ್ಯ ಪೀಠಕ್ಕೆ ಇವರಿಗಿಂತಲೂ ಯೋಗ್ಯರಾದವರು ದೊರೆಯುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ.

ಯಾದವ ಪ್ರಕಾಶಕರು ತಂದೊಡ್ಡುವ ಕಠಿಣ ಪ್ರಸಂಗಗಳಿಂದ ರಾಮಾನುಜರು ಪಾರಾಗಿ ಕಾಂಚಿಗೆ ಹಿಂತಿರುಗುತ್ತಾರೆ. ಅವರಿಗೆ ದೈವ ಸಹಾಯವೇ ಒದಗಿ ಬಂದಿರುತ್ತದೆ.

ಕಿರಿಯ ವಯಸ್ಸಿನಲ್ಲಿಯೇ ತಂದೆಯವರಿಂದ ದೂರವಾಗಿದ್ದ ರಾಮಾನುಜರು ತಾಯಿಯ ಅಪ್ಪಣೆಯಂತೆ ಗೃಹಸ್ಥಾಶ್ರಮ ಜೀವನ ಕೈಗೊಳ್ಳುತ್ತಾರೆ. ಅವರ ಕುಟುಂಬ ಜೀವನ ಸಮರ್ಪಕವಾಗಿರಲಿಲ್ಲವೆಂಬುದು ಸ್ಪಷ್ಟವಾಗಿ ಹಲಬಗೆಯಲ್ಲಿ ಕಾಣಬರುತ್ತದೆ. ಈ ಕಾರಣದಿಂದ ಮೊದಲೇ ವರದರಾಜ ಸ್ವಾಮಿಯ ಕೈಂಕರ್ಯದಲ್ಲಿ ಲೀನವಾಗಿದ್ದ ಅವರ ಮನಸ್ಸು ವೇದಾಂತದ ಕಡೆಗೂ ಹರಿಯುತ್ತದೆ.

ಗುರುಗಳ ಅಂತಿಮ ಅಪೇಕ್ಷೆಯಂತೆ ಬ್ರಹ್ಮಸೂತ್ರಕ್ಕೆ ಸುಲಭ ಭಾಷೆಯಲ್ಲಿ ವ್ಯಾಖ್ಯಾನ ರಚಿಸಲು ಸಂಕಲ್ಪಿಸುತ್ತಾರೆ ಆಚಾರ್ಯರು. ವೈಷ್ಣವ ಧರ್ಮ ರಹಸ್ಯವನ್ನರಿಯಲು ಭಗವತ್ಪ್ರೇರಣೆಯಂತೆ ರಾಮಾನುಜರು ಶ್ರೀರಂಗಕ್ಕೆ ಪ್ರಯಾಣ ಬೆಳೆಸುತ್ತಿರುವಾಗ ಮಾರ್ಗ ಮಧ್ಯದಲ್ಲಿಯೇ ಗುರುಶಿಷ್ಯರ ಭೇಟಿಯಾಗಿ ಇಬ್ಬರಿಗೂ ಅವ್ಯಕ್ತ ಆನಂದವಾಗುತ್ತದೆ. ಪೆರಿಯನಂಬಿಯವರ ಮೂಲಕ ಮಧುರಾಂತಕರ ದೇವಾಲಯದಲ್ಲಿ ರಾಮಾನುಜರು ಪಂಚ ಸಂಸ್ಕಾರದೊಂದಿಗೆ ವೈಷ್ಣವ ಧರ್ಮ ರಹಸ್ಯವನ್ನು ಅರಿತುಕೊಳ್ಳುತ್ತಾರೆ. ಒಂದು ಬಾರಿ ಹೆಂಡತಿಯ ನಡತೆಯಿಂದ ಬೇಸತ್ತ (ಹೆಂಡತಿಯಿಂದ ಗುರುಗಳಿಂದ ಅಪಮಾನ) ರಾಮಾನುಜರು ವೈರಾಗ್ಯ ತಾಳಿ ಸನ್ಯಾಸವನ್ನು ಸ್ವೀಕರಿಸುತ್ತಾರೆ.

ರಾಮಾನುಜಾಚಾರ್ಯರ ಕೀರ್ತಿಯೊಂದಿಗೆ ಶಿಷ್ಯರ, ಧರ್ಮಾನುಯಾಯಿಗಳ ಸಂಖ್ಯೆಯೂ ಬೆಳೆಯುತ್ತಾ ಹೋಗುತ್ತದೆ. ಆಚಾರ್ಯರು ಸಮಗ್ರ ಭಾರತದ ಯಾತ್ರೆ ಕೈಕೊಂಡು ಆಸೇತು ಹಿಮಾಚಲ ಪರ್ಯಂತ ಕೀರ್ತಿಪಡೆದಿರುವ ಪ್ರಮುಖ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಾರೆ. ಕಾಶ್ಮೀರದ ಶ್ರೀನಗರದಲ್ಲಿ ಬ್ರಹ್ಮಸೂತ್ರಕ್ಕೆ ಬೋಧಾಯನಾಚಾರ್ಯರ ಬೋಧಾಯನ ವೃತ್ತಿಯನ್ನನುಸರಿಸಿ ಶ್ರೀ ಭಾಷ್ಯವನ್ನು ಬರೆಯುತ್ತಾರೆ ವಾಗ್ದೇವಿಯಾದ ವೀಣಾಪಾಣಿಯಿಂದಲೇ "ಭಾಷ್ಯಕಾರ" ಎಂಬ ಬಿರುದು ಸಂಪಾದಿಸಿದ ಮಹಿಮಾ ಪುರುಷರು ರಾಮಾನುಜಾಚಾರ್ಯರು.

ದಕ್ಷಿಣಕ್ಕೆ ಹಿಂತಿರುಗಿದ ರಾಮಾನುಜಾಚಾರ್ಯರು ಶ್ರೀ ರಂಗದಲ್ಲಿರುವಾಗ ಚೋಳರಾಜ(ಕುಲೋತ್ತುಂಗ)ನಿಂದ ಕಿರುಕುಳ ದೊರೆಯಿತು ಈ ಕಾರಣದಿಂದ ದ ಕನ್ನಡನಾಡಿನ ಕಡೆಗೆ ಬಂದು ಅಂದಿನ ಹೊಯ್ಸಳ ಅರಸ ಬಿಟ್ಟಿದೇವನ ಆಳಿಕೆಯಲ್ಲಿ ಇದ್ದರು ಎಂದು ಗೊತ್ತಾಗುತ್ತದೆ. ಆದರೆ ಆಚಾರ್ಯರು ಧರ್ಮಪ್ರಸಾರಕ್ಕಾಗಿ ನಾಡನ್ನು ಸುತ್ತುತ್ತಾ ಬಂದಿರಬಹುದು. ಅಲ್ಲದೆ ಜ್ಞಾನಿಗಳೂ, ಮಹಿಮಾಪೂರ್ಣರೂ ಆದ ಆಚಾರ್ಯರ ವಚನಸುಧೆ ಬಿಟ್ಟಿದೇವ ಪ್ರಭಾವಿತನಾಗಿರುವುದರಲ್ಲಿ ಆಶ್ಚರ್ಯವಿಲ್ಲ.

(ಐಂಭತ್ತನೇ ಪುಟ ನೋಡಿರಿ)

"ಹೊಲದ ಉತ್ಪನ್ನ ಹೆಚ್ಚಿಸುವ ಹಂಬಲ ನಿಮಗಿರುವುದಾದರೆ ನಿಮ್ಮ ನೆರವಿಗೆ ನಾವಿದ್ದೇವೆ"

ಕೃಷಿ ಆರ್ಥಿಕ ನೆರವಿನ ವಿಭಾಗ,

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ನೀವು ನೂರು ಎಕ್ರೆಗಿಂತ ಹೆಚ್ಚುವರಿ ಭೂಮಿಯ ಮಾಲಕರಾಗಿದ್ದು, ಆಹಾರ ಧಾನ್ಯ, ಹಣ್ಣುಹಂಪಲು, ತರಕಾರಿ ಬೆಳೆಸುವರೆ, ಕೋಳಿ ಸಾಕಣೆ, ಹಾಲು ಉತ್ಪಾದನೆ—ಇವೇ ಮೊದಲಾದ ಉದ್ಯಮದಲ್ಲಿ ತೊಡಗಿದ್ದರೆ—ನೀವು ತೊಡಗಿದ ಉದ್ಯಮವನ್ನು ಮುಂದುವರಿಸಿಕೊಂಡು ಹೋಗದಿರಲು ಹಣದ ಮುಗ್ಗಟ್ಟು ಒಂದು ಕಾರಣವಾಗಿದ್ದರೆ........ನಿಮ್ಮ ಉದ್ಯಮದ ವಿಚಾರ ಹೆಚ್ಚಿನ ಮಾಹಿತಿ ಬೇಕಿದ್ದರೆ........

ನಿಮ್ಮವರೇ ಆದ ಸಿಂಡಿಕೇಟ್ ಬ್ಯಾಂಕಿನ ಕೃಷಿ ಆರ್ಥಿಕ ನೆರವಿನ ವಿಭಾಗದವರು ನಿಮ್ಮೊಡನೆ ಸಹಕರಿಸಲು ತುಂಬಾ ಉತ್ಸುಕರಾಗಿದ್ದಾರೆ.

ಉತ್ತಮ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಖರೀದಿ, ಬೀಜ ಉತ್ಪಾದನಾ ಕೃಷಿ, ಜಮೀನು ಅಭಿವೃದ್ಧಿ ಕಾರ್ಯಗಳು, ನೀರಾವರಿಯ ವ್ಯವಸ್ಥೆ, ಪಂಪು ಸೆಟ್ಟುಗಳ ಖರೀದಿ, ಉಳುಮೆ ಯಂತ್ರ, ಯಾಂತ್ರಿಕ ನೇಗಿಲು, ಸ್ಪ್ರೇಯರ್ ಇತ್ಯಾದಿಗಳ ಖರೀದಿ, ಪಶು ಸಂಗೋಪನೆ ಮತ್ತು ಕೋಳಿ ಸಾಕಣೆ—ಈ ಉದ್ದೇಶಗಳಿಗಾಗಿ ಸಾಲ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವುದಾದರೂ ಶಾಖೆಗೆ ಭೇಟಿ ಕೊಡಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ನೆಹರೂರನ್ನು ಸ್ಮರಿಸೋಣ

ಅಮರ ನೆಹರೂ ಅವರ ಅಮರವಾಣಿ

ಮೇ ೨೭ರಂದು ಜವಾಹರಲಾಲ ನೆಹರೂ ಅವರ ಎರಡನೆಯ ಪುಣ್ಯತಿಥಿಯನ್ನು ದೇಶದಾದ್ಯಂತ ಆಚರಿಸಲಾಯಿತು. ನೆಹರೂ ಅವರು ವಿವಿಧ ಸಂದರ್ಭಗಳಲ್ಲಿ ಮಾಡಿದ ಭಾಷಣಗಳು ಮತ್ತು ಬರೆದ ಲೇಖನಗಳಲ್ಲಿನ ಮಹತ್ವಪೂರ್ಣ ಅಂಶಗಳನ್ನು ಓದುಗರಿಗಾಗಿ ಇಲ್ಲಿ ಸಂಗ್ರಹಿಸಿಕೊಡಲಾಗಿದೆ.



ಯುದ್ಧ ಮತ್ತು ಶಾಂತಿ

ಪ್ರತ್ಯಕ್ಷ ಯುದ್ಧದ ಅನುಪಸ್ಥಿತಿ ಎಂದರೆ ಶಾಂತಿ ಎಂದೇನೂ ಅಲ್ಲ. ಅದು ಪ್ರಕ್ಷೋಭೆಯನ್ನು ಕಡಿಮೆ ಮಾಡುವ ಹಾಗೂ ಶಾಂತಿಯುತ ವಾತಾವರಣವನ್ನು ನಿರ್ಮಿಸುವ ಒಂದು ಯತ್ನ.

("ನೆಹರೂರ ಮನ." ಲೇಖನದಿಂದ)

ಕೇಡು ಅಥವಾ ಅನ್ಯಾಯವನ್ನು ಎದುರಿಸುವಾಗ ನಾವು ಸಹನೆಯನ್ನು ಕಳೆದುಕೊಳ್ಳದೆ ಶಾಂತಿಯಿಂದ ವರ್ತಿಸಬೇಕು. ನಮ್ಮ ವಿರೋಧಿಗಳಿಗೂ ನಾವು ಸದಾ ಸ್ನೇಹ ಹಸ್ತವನ್ನು ಮುಂದೆ ಚಾಚಬೇಕು.

(ಲಂಡನ್ನಿನ ಬಿ. ಬಿ. ಸಿ.ಯಲ್ಲಿ ೧೯೫೧ ಜನವರಿ ೧೨ರಂದು ಪ್ರಸಾರವಾದ ಭಾಷಣದಿಂದ)

ಶಾಂತಿ ಒಂದು ಉತ್ಕೃಷ್ಟ ಗುಣ. ಅದು ಒಂದು ಜೀವನ ವಿಧಾನ. ಸಾಧನೆಯ ಮಾರ್ಗ. ನಾವು ಸಾಧಿಸ ಬಯಸುವ ಒಂದು ಆದರ್ಶ. ನೀವು ಶಾಂತಿಯ ಬಗ್ಗೆ ಮಾತನಾಡುತ್ತ, ಯುದ್ಧ ಸಿದ್ಧತೆಯಲ್ಲಿ ತೊಡಗಿದರೆ, ನೀವು ಮಾತನಾಡುತ್ತಿರುವ ಶಾಂತಿ ಖಂಡಿತ ದೋಷಪೂರಿತವಾಗಿದೆ.

(ಪಾರ್ಲಿಮೆಂಟಿನಲ್ಲಿ ೧೯೫೨ ಜೂನ್ ೧೨ರಂದು)

ವಿಶ್ವ ಶಾಂತಿಯ ಬಗ್ಗೆ ಮಾತನಾಡಲಾಗುತ್ತಿದೆ. ವಿಶ್ವದ ಅನೇಕ ರಾಷ್ಟ್ರಗಳು ಈ ಆದರ್ಶ ಸಾಧನೆಗಾಗಿ ಒಪ್ಪಂದಗಳಿಗೆ ಸಹಿಹಾಕಿವೆ. ಈ ಒಪ್ಪಂದಗಳು ಏರ್ಪಟ್ಟರುವಾಗಲೂ ಶಸ್ತ್ರಾಸ್ತ್ರಗಳು ಬೆಳೆಯುತ್ತಲೇ ಇವೆ. ಶಾಂತಿ ದೇವತೆಗೆ ಸುಂದರವಾದ ಮಾತುಗಳಿಂದ ಶ್ರದ್ಧಾಂಜಲಿ ಸಲ್ಲಿಸಲಾಗುತ್ತಿದೆ. ಯುದ್ಧದ ಕಾರಣಗಳನ್ನು ನಿವಾರಿಸಿದಾಗ ಮಾತ್ರ ಶಾಂತಿ ಸಾಧ್ಯವಾಗಬಲ್ಲದು.

(ಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಿದ ಭಾಷಣದಿಂದ)

ಆಕ್ರಮಣಕ್ಕೆ ತಲೆಬಾಗುವುದರಿಂದ ಕೇಡು ಅಥವಾ ಅನ್ಯಾಯಕ್ಕೆ ಮಣಿಯುದರಿಂದ, ಶಾಂತಿಯನ್ನು ಕುರಿತು ಮಾತನಾಡುತ್ತ ಯುದ್ಧ ಸಿದ್ಧತೆ ಮಾಡಿಕೊಳ್ಳುವದರಿಂದ, ಶಾಂತಿ ಸಾಧ್ಯವಾಗಲಾರದು.

(ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ೧೯೪೯ ಅಕ್ಟೋಬರ್ ೧೭ರಂದು ಮಾಡಿದ ಭಾಷಣದಿಂದ)

ದ್ವೇಷ—ಅಸೂಯೆ ಮತ್ತು ಹಿಂಸೆಗಳಿಂದ ಶಾಂತಿ ಸ್ಥಾಪನೆ ಅಸಾಧ್ಯವೆಂಬುದು ಯುದ್ಧಗಳಿಂದ ನಾವು ಕಲಿತುಕೊಂಡಿರುವ ಪಾಠ. ಮಾನವ ಕುಲವನ್ನು ನಾಶಮಾಡಿದ ಎರಡು ಮಹಾ ಸಮರಗಳು, ಹಿಂಸೆಯಿಂದ ಹಿಂಸೆ, ಅಸೂಯೆಯಿಂದ ಅಸೂಯೆ ಹುಟ್ಟುತ್ತವೆಯೆಂದು ಸ್ಪಷ್ಟಗೊಳಿಸಿವೆ.

(ವಿಶ್ವಸಂಸ್ಥೆಯ ಸರ್ವ ಸದಸ್ಯರ ಸಭೆಯಲ್ಲಿ ೧೯೪೮ರ ನವೆಂಬರ್ ೩ರಂದು ಮಾಡಿದ ಭಾಷಣ)

ಹಿಂಸೆಯ ಮಾರ್ಗ ಅಪಾಯಕಾರಿ. ಹಿಂಸೆಯಿದ್ದ ಕಡೆ ಸ್ವಾತಂತ್ರ್ಯ ಬಹು ದಿನ ಉಳಿಯಲಾರದು.

(ಅಲಹಾಬಾದಿನಲ್ಲಿ ೧೯೪೮ರ ಫೆಬ್ರವರಿ ೧೨ರಂದು ಮಾಡಿದ ಭಾಷಣದಿಂದ)

ಪ್ರಸ್ತುತ ಅಣುಯುಗದಲ್ಲಿ ಯುದ್ಧದ ಬಗ್ಗೆ ಆಲೋಚನೆ ಮಾಡುವುದೇ ಹುಚ್ಚುತನ. ಏಕೆಂದರೆ ಯುದ್ಧವು—ಒಂದು ರಾಷ್ಟ್ರವನ್ನೇ ಅಲ್ಲ—ಅದರಲ್ಲಿ ಭಾಗವಹಿಸಿದ—ಎಲ್ಲಾ ರಾಷ್ಟ್ರಗಳನ್ನು ನಾಶಗೊಳಿಸುತ್ತದೆ. ಇಂದು ವಿಶ್ವದಲ್ಲಿ ಯುದ್ಧವನ್ನು ಬಯಸುವ ರಾಷ್ಟ್ರ ಯಾವುದೂ ಇಲ್ಲವೆಂಬ ಸತ್ಯವು ಬೃಹತ್ ರಾಷ್ಟ್ರಗಳಿಗೂ ಮನದಟ್ಟಾಗಿದೆ. ಯುದ್ಧದಾಹಿಗಳು ಈಗ್ಗೆ ಮಾತನಾಡುವುದು ಸಂಪೂರ್ಣ ತಪ್ಪು.

(ಲೋಕಸಭೆಯಲ್ಲಿ ೧೯೫೫ರ ಫೆಬ್ರುವರಿ ೨೫ರಂದು ಮಾಡಿದ ಭಾಷಣದಿಂದ)

ನೈತಿಕ ಮೌಲ್ಯಗಳ ಸಮಾಧಿಯ ಮೇಲೆ ಸ್ಥಾಪನೆಗೊಳ್ಳುವ ಶಾಂತಿ ಶಾಂತಿಯೇ ಅಲ್ಲ. ಅದು ಮಾನವ ಜನಾಂಗ ಅಥವಾ ಸಮಾಜದ ಅಧಃಪತನದ ಸೂಚಕ. ವಿಶ್ವದಲ್ಲಿ ಅಧಃಪತನಕ್ಕೆ ಕಾರಣವಾಗುವ ಒಂದು ಪ್ರಬಲ ಶಕ್ತಿಯೆಂದರೆ ಯುದ್ಧ. ಮಾನವರು ಯುದ್ಧಕಾಲದಲ್ಲಿ, ಶಾಂತಿ ಕಾಲಕ್ಕಿಂತ ಹೆಚ್ಚು ಶ್ರದ್ಧೆಯಿಂದ ಕಾರ್ಯತತ್ಪರರಾಗುತ್ತಾರೆ. ಈ ದೃಷ್ಟಿಯಿಂದಲೂ ಯುದ್ಧ ಒಂದು ವಿನಾಶಕಾರಿ ಘಟನೆ. ವಿಶ್ವದಲ್ಲಿ ನೈತಿಕ ಮೌಲ್ಯಗಳನ್ನು ನಾವು ರಕ್ಷಿಸಿಕೊಳ್ಳಬೇಕಾದರೆ ಯುದ್ಧವನ್ನು ತ್ಯಜಿಸಬೇಕು.

(ನಾರ್ಮನ್ ಕಸಿನ್ಸ್ ಅವರ "ನೆಹರೂರೊಂದಿಗೆ ಸಂಭಾಷಣೆ"ಎಂಬ ಪುಸ್ತಕದಿಂದ)

ಅಂತಿಮ ವಿಶ್ಲೇಷಣೆಯಲ್ಲಿ, ಯುದ್ಧದ ಕಾರಣಗಳು ಜನರ ಮನಸ್ಸಿನಲ್ಲಿಯೇ ಇವೆ. ಜನತೆಯ ಹೃದಯ—ಮನಸ್ಸುಗಳಲ್ಲಿ ಯುದ್ಧದ ಭಾವನೆಗಳು ಹುಟ್ಟದಿದ್ದರೆ, ಯುದ್ಧಗಳಾದರೂ ಏಕೆ ಸಂಭವಿಸುತ್ತಿದ್ದವು.

(ಸೋವಿಯತ್ ಪ್ರಧಾನ ಮಂತ್ರಿಗಳ ಗೌರವಾರ್ಥ ೧೯೬೦ರ ಫೆಬ್ರುವರಿ ೧೨ರಂದು ಏರ್ಪಡಿಸಿದ ಪೌರ ಸನ್ಮಾನ ಸಮಾರಂಭದಲ್ಲಿ ಮಾಡಿದ ಭಾಷಣದಿಂದ)

ಸಹ ಜೀವನ ಮತ್ತು ಅಣುಶಕ್ತಿ

ಇಂದಿನ ವಿಶ್ವದಲ್ಲಿ ನಾವು ಸಹ ಜೀವನ ತತ್ವವನ್ನು ಅಧಿಕ ನಿಷ್ಠೆಯಿಂದ ಪಾಲಿಸಬೇಕು. ಈ ಬಗೆಯ ಸಹಕಾರದಿಂದ ಮಾತ್ರವೇ ವಿಶ್ವದ ರಾಷ್ಟ್ರಗಳು ಹೆಚ್ಚು ನಿಕಟವಾಗ ಬಲ್ಲವು. ಈ ದಿಶೆಯಲ್ಲಿ ಬಲವಂತ ಕೂಡದು. ಏಕೆಂದರೆ ಅದು ದಂಡಿನ ಆಳತೆಗೆ ಕಾರಣವಾಗ ಬಹುದು. ಇಂತಹ ಆಳ್ವಿಕೆಯು ವ್ಯಕ್ತಿಯ ಅಥವಾ ಸಮಾಜದ ಅಭಿವೃದ್ಧಿಯ ದೃಷ್ಟಿಯಿಂದ ಅಪಾಯಕಾರಿ.

(ನಾರ್ಮನ್ ಕಸಿನ್ಸ್ ಅವರ "ನೆಹರೂರೊಂದಿಗೆ ಸಂಭಾಷಣೆ" ಎಂಬ ಪುಸ್ತಕದಿಂದ)

ಭವಿಷ್ಯದಲ್ಲಿ ನೀವು ನಿರ್ಮಿಸಬಯಸುವ ಭಾರತ ಹಾಗೂ ಅದಕ್ಕಾಗಿ ನಿಮಗೆ ಬೇಕಾಗುವ ಶಕ್ತಿಯ ಸ್ಪಷ್ಟ ಕಲ್ಪನೆ, ನಿಮಗೆ ಇದ್ದರೆ, ಇಂದಿನಿಂದ ಮುಂದೆ,ಶಾಂತಿಯುತ ಉದ್ದೇಶಕ್ಕಾಗಿ ಅಣುಶಕ್ತಿ ಉದ್ದೇಶಕ್ಕಾಗಿ ಉತ್ಪಾದನೆ ಅನಿವಾರ್ಯವೆಂಬುದನ್ನು ನೀವು ಅರಿತುಕೊಳ್ಳುತ್ತೀರಿ.

(ಟ್ರಾಂಬೆನಲ್ಲಿ ೧೯೬೧ರಲ್ಲಿ ಮಾಡಿದ ಭಾಷಣದಿಂದ)

ರಾಜಕೀಯ ಮಟ್ಟದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗಿ ಕಾರ್ಯ ಪ್ರವೃತ್ತವಾಗದಿದ್ದರೆ, ಒತ್ತಾಯ ಹಿಂಸೆ ಅಥವಾ ಕ್ರಾಂತಿ ಇವುಗಳನ್ನುಳಿದು ಅನ್ಯಮಾರ್ಗದಿಂದ ಸುಧಾರಣೆಯನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುವುದಿಲ್ಲ. ಆದರೆ ಶಾಂತಿಯುತ ವಿಧಾನಗಳು, ವಯಸ್ಕ ಮತದಾನ ಇವು ಪ್ರಚಲಿತವಿರುವ ರಾಷ್ಟ್ರದಲ್ಲಿ ಹಿಂಸೆಯಿಂದ ಪರಿವರ್ತನೆಗೆ ಯತ್ನಿಸುವುದು ಸಂಪೂರ್ಣ ತಪ್ಪು. ಇಂತಹ ಒಂದು ಕ್ರಮವನ್ನು, ನನ್ನ ಅಭಿಪ್ರಾಯದಲ್ಲಿ, ತರ್ಕ ಅಥವಾ ವಾದದಿಂದ ಜನರ ಅಭಿಪ್ರಾಯವನ್ನು ಬದಲಿಸಲು ಸಮರ್ಥರಾಗದ ಕೆಲವು ಜನರು ಅಧಿಕಾಂಶ ಜನರ ಮೇಲೆ ತಮ್ಮ ವಿಚಾರಗಳನ್ನು ಹಿಂಸೆಯಿಂದ ಹೇರುವ ಯತ್ನವಾಗಿದೆ. ಅದು ಖಂಡಿತವಾಗಿಯೂ ಪ್ರಜಾಪ್ರಭುತ್ವವೇ ಅಲ್ಲ.

(ಲೋಕಸಭೆಯಲ್ಲಿ ೧೯೫೫ರ ಫೆಬ್ರುವರಿ ೨೫ರಂದು ಮಾಡಿದ ಭಾಷಣದಿಂದ)

ಪ್ರಜಾಪ್ರಭುತ್ವವೆಂದರೆ—ನನ್ನ ಅಭಿಪ್ರಾಯದಲ್ಲಿ — ಸಮಸ್ಯೆಗಳನ್ನು ಶಾಂತಿಯುತ ಮಾರ್ಗದಿಂದ ಬಗೆಹರಿಸುವ ಯತ್ನವಾಗಿದೆ. ಪ್ರಜಾಪ್ರಭುತ್ವವು ವ್ಯಕ್ತಿಗೆ ಅಭಿವೃದ್ಧಿಯ ಅವಕಾಶಗಳನ್ನು ಕಲ್ಪಿಸುತ್ತದೆ. ಇಂತಹ ಅವಕಾಶವು—ಅರಾಜಕತೆಗೆ ಕಾರಣ ಆಗತಕ್ಕದ್ದಾಗುವುದೆಂದೇನೂ ಅಲ್ಲ. ಸಾಮಾಜಿಕ ಸಂಸ್ಥೆಯೊಂದು ಭದ್ರವಾಗಿ ಉಳಿಯ ಬೇಕಾದರೆ ಶಿಸ್ತು ಸುಸಂಘಟಿತ ಪ್ರಜಾಪ್ರಭುತ್ವದಲ್ಲಿ ಶಿಸ್ತು ಆತ್ಮ ಪ್ರೇರಣೆಯಿಂದಲೇ ಬರುತ್ತದೆ. ಶಿಸ್ತು ಇರದಿದ್ದರೆ ಪ್ರಜಾಪ್ರಭುತ್ವವೇ ಇರದು.

(೧೯೫೭ರ ಫೆಬ್ರುವರಿ ೨೫ರಂದು ಪಾರ್ಲಿಮೆಂಟರಿ ಪ್ರಜಾ ಪ್ರಭುತ್ವ ಕುರಿತ ವಿಚಾರಗೋಷ್ಠಿಯಲ್ಲಿ)

ಪ್ರಜಾಪ್ರಭುತ್ವವು ನಾಗರಿಕರಿಗಾಗಿ ಇದೆ. ಅನಾಗರಿಕರಿಗಾಗಿ ಅಲ್ಲ. ಜನರು ಮೂಲತಃ ಅನಾಗರಿಕರಾಗಿದ್ದರೆ ಪ್ರಜಾಪ್ರಭುತ್ವ ಅವರಿಗೆ ಯೋಗ್ಯವಲ್ಲ. ಅವರಿಗೆ ಸರ್ವಾಧಿಕಾರ ಅಥವಾ ಇನ್ನಾವುದೇ ಬಗೆಯ ಆಡಳಿತೆ ಬೇಕು. ನಾವು ಸುಸಂಸ್ಕೃತರು ಎಂದು ನಟನೆ ಮಾಡುವುದಿಲ್ಲ. ಅನೇಕ ವೇಳೆ ನಾವೂ ಅಸಭ್ಯ ರೀತಿಯಲ್ಲಿ ವರ್ತಿಸುತ್ತೇವೆ. ದುಷ್ಟ ಭಾವಕ್ಕೆ ಒಳಗಾಗುತ್ತೇವೆ. ಚುನಾವಣೆಗಳ ಕಾಲದಲ್ಲಿ ಇದು ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಆಗ ಯಾವುದೇ ಸುಸಂಸ್ಕೃತ ಸಮಾಜವೂ ಸಮರ್ಥಿಸಿಕೊಳ್ಳದ ರೀತಿಯಲ್ಲಿ ಜನರು ಮಾತನಾಡುತ್ತಾರೆ.

(೧೯೬೨ರ ಮಾರ್ಚ್ ೧೯ರಂದು ಲೋಕ ಸಭೆಯಲ್ಲಿ ಮಾಡಿದ ಭಾಷಣ)

ಪ್ರಜಾಪ್ರಭುತ್ವವು ಕೇವಲ ರಾಜಕೀಯ ಅಥವಾ ಆರ್ಥಿಕ ಪ್ರಜಾಪ್ರಭುತ್ವವೆಂದು ಅರ್ಥವಲ್ಲ. ಅದು ಒಂದು ಮಾನಸಿಕ ವ್ಯವಸ್ಥೆ. ಏಕೆಂದರೆ ಎಲ್ಲವೂ ಮಾನವನ ಮನಸ್ಸಿನ ಪ್ರತಿಬಿಂಬ. ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡುವುದೇ ಪ್ರಜಾಪ್ರಭುತ್ವದ ಉದ್ದೇಶ. ಇಂತಹ ಒಂದು ವ್ಯವಸ್ಥೆಯಲ್ಲಿ, ವ್ಯಕ್ತಿ ಸ್ವಾತಂತ್ರ್ಯದ ಬೆಳವಣಿಗೆಗೂ ಪೂರ್ಣ ಅವಕಾಶವಿದೆ. ಸಹಿಷ್ಣುತೆ, ತಾಳ್ಮೆಯಿಂದ ಆಲಿಸುವ ಗು

(ಮುನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 57 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಇಂದಿರಾಜಿಂ



ಬೊಂಬಾಯಿಯಲ್ಲಿ ಸೇರಿದ ಎ. ಐ. ಸಿ. ಸಿ. ಅಧಿವೇಶನದಲ್ಲಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಗಂಡು ಮಾತುಗಳನ್ನು ಆವೇಶಪೂರ್ಣವಾಗಿಯೇ ಆಡಿದರೆಂದು ವರದಿಯಾಗಿದೆ. ಮಹಾತ್ಮಾ ಗಾಂಧಿ ಮತ್ತು ಜವಾಹರಲಾಲ ನೆಹರುರವರು ರೂಪಿಸಿರುವ ಕಾಂಗ್ರೆಸ್ ನೀತಿಯನ್ನು ಪಾಲಿಸುವುದು ತನ್ನಿಂದ ಸಾಧ್ಯವಾಗದೆ ಹೋದರೆ, ಮತ್ತೆ ತಾನು ಅಧಿಕಾರದಲ್ಲಿ ಉಳಿಯದೆ ಹೊರಟು ಹೋಗುವುದಾಗಿಯೂ ಒಂದು ವೇಳೆ ಹಾಗೆ ಮಾಡದೆ ಹೋದರೆ, ಅವರ ಹೆಸರಿಗೆ ಕಳಂಕ ತಂದಂತಾದೀತೆಂದೂ ಶ್ರೀಮತಿ ಗಾಂಧಿಯವರು ಘೋಷಿಸಿದರು.

ಪ್ರಧಾನಿಯವರು ಈ ರೀತಿ ಹೇಳುವಾಗ ಅವರು ಭಾವಾವೇಶ ಪ್ರೇರಿತರಿದ್ದರೆಂದು ತೋರುತ್ತದೆ. ಆದುದರಿಂದಲೇ ಹೆಚ್ಚಿನವರು ಹೇಳಬಾರದ, ಹೇಳಲಾರದ ಮಾತುಗಳನ್ನು ಈಕೆ ಹೇಳಿ ಬಿಟ್ಟರು. ನೆಹರೂರವರ ಮಗಳಿಗೆ ಇದು ತಕ್ಕುದಾದ ಮಾತು. ಕಾಂಗ್ರೆಸ್ ನೀತಿಯ ಪಾಲನೆಯು ತನ್ನಿಂದ ಕಠಿಣತರವೆಂದು ಅನುಭವಕ್ಕೆ ಬಂದ ದಿನವೇ ರಾಜಿನಾಮೆ ಇತ್ತು. ಹೊರಬರುವ ಧೀರ ಮಹಿಳೆ ಈಕೆ. ಅಧಿಕಾರದ ಮೋಹವೇಕೆಗೆ ಎಳ್ಳನಿತೂ ಇಲ್ಲವೆಂಬುದಕ್ಕೆ ಹಿಂದೆಯೇ ಅನೇಕ ನಿದರ್ಶನಗಳನ್ನು ಇತ್ತ ಇಂದಿರಾಗಾಂಧಿಯವರು ಆಡಿದಂತೆ ನಡೆವವರು.

ಜವಹರರ ಮೇಲೆ ಎಲ್ಲರಿಗೂ ಮೆಚ್ಚು. ಅವರು ರೂಪಿಸಿ ಪಕ್ಷಕ್ಕೆ, ದೇಶಕ್ಕೆ, ಜಗತ್ತಿಗೆ ನೀಡಿದ್ದ ನೀತಿ ಪಕ್ಷಕ್ಕೆ ಮಾನ್ಯ ದೇಶಕ್ಕೆ ಮಾನ್ಯ ಮತ್ತು ಜಗತ್ತಿಗೆ ಮಾನ್ಯ. ಅಂತಹ ನೀತಿಯಿಂದ ಇಂದಿನ ಸರಕಾರ ದೂರಸರಿಯುತ್ತಿದೆ—ಎಂಬುದು ಇಂದಿನ ಟೀಕಾಕಾರರ ಪ್ರಬಲ ಅಸ್ತ್ರ. ಇದಕ್ಕೆ ಇಂದಿರಾ ಬಿಟ್ಟ ಪ್ರತ್ಯಸ್ತ್ರದಲ್ಲಿ ಸತ್ಯತೆ ಅಡಗಿದ್ದರೂ ಅದು ಹೆಚ್ಚಿನವರಿಗೆ ಮೆಚ್ಚುಗೆ ತಂದೀತೆ?—ಆಕೆ ಎಂದರು: ನೆಹರೂಎಂದರೆ ಯಾರು? ಅವರು ಈ ರಾಷ್ಟ್ರದನಾಯಕರಾಗಿದ್ದರು. ನನ್ನ ತಂದೆಯವರೂ ಹೌದು; ನನ್ನ ಒಡನಾಡಿಯೂ ಹೌದು. ಅವರು ನೀತಿ ರೂಪಿಸುವಾಗ ನಾನೂ ಅವರೊಂದಿಗೇನೇ ಇರುತಿದ್ದೆ. ನಾವು ಒಟ್ಟಾಗಿಯೇ ಕೆಲಸ ಮಾಡುತಿದ್ದೆವು. ಇದರಿಂದ ನೆಹರೂ ನೀತಿಯಿಂದ ತಾನು ಅನಭಿಜ್ಞೆ ಎಂದು ದೂರುವವರಿಗೆ ಅದರ ಸೃಷ್ಟಿಯಲ್ಲಿ ತನ್ನಂಶವೂ ಇತ್ತು; ತನಗದು ಪೂರ್ಣ ಪರಿಚಿತ ಎಂದಾಕೆ ಸ್ಪಷ್ಟಪಡಿಸುವ ಪ್ರಯತ್ನ ಮಾಡಿದರು.

ತನ್ನ ಬಗೆಗೆ ತಾನೇ ಇತ್ತುಕೊಂಡ ಪ್ರಶಸ್ತಿ ಪತ್ರ ಮಾತ್ರವಿದಲ್ಲ. ಏಕೆಂದರೆ ಈ ಮಾತು ಅಕ್ಷರಶಃ ಸತ್ಯ. ತಂದೆ-ಮಗಳ ಸಂಬಂಧ ಆ ರೀತಿಯಿತ್ತು—ಇದು ಯಾರಿಂದಲೂ ಅಡಗಿಕೊಂಡಿಲ್ಲ. ಆದರೆ, ತಂದೆಯೂ ತಾನೂ ಒಂದಾಗಿ ನೀತಿರೂಪಿಸುತ್ತಿದ್ದೆವು ಎಂಬುದು ಅಪ್ರಿಯ ಸತ್ಯವಾಗಿ ಪರಿಣಮಿಸೀತೆ? ಒಂದು ವೇಳೆ ಹಾಗಾದರೆ ಪರಿಣಾಮ ನೆಟ್ಟಗಾಗದು. ಏನಿದ್ದರೂ ಪ್ರಕೃತದ ಪರಿಸ್ಥಿತಿಯಲ್ಲಿ ಈ ಗಂಡು ಮಾತು ಗಂಡಾಂತರಕ್ಕೆ ನಾಂದಿಯಾಗದು.

೦ ೦ ೦ ೦

ಕೇಂದ್ರ ಚುನಾವಣಾ ಸಮಿತಿಗೆ ಆಯ್ಕೆಯಾಗಲಿದ್ದ ಐದು ಮಂದಿ ಸದಸ್ಯರಲ್ಲಿ ಸಂಜೀವರೆಡ್ಡಿಯವರು ಹೆಚ್ಚಿನ ಮತಗಳನ್ನು ಗಳಿಸಿ ಪ್ರಥಮವಾಗಿ ಆಯ್ಕೆಗೊಂಡರು. ದಕ್ಷಿಣ ಭಾರತಕ್ಕೆ ಸಿಕ್ಕ ಪ್ರಾತಿನಿಧ್ಯ ಬರಿಯ ನೇ.೨೦ ಮಾತ್ರ. ಸ್ಪರ್ಧಿಸಿದ ಇನ್ನೊಬ್ಬ ದಕ್ಷಿಣ ಭಾರತೀಯ ಕೆಂಗಲ್ ಹನುಮಂತಯ್ಯನವರು ಪರಾಜಿತರಾದರು. ಹನುಮಂತಯ್ಯನವರು ಕೇಂದ್ರ ಕಾಂಗ್ರೆಸ್ ವರಿಷ್ಠರಪಟ್ಟಿಯಲ್ಲಿ ನೆಹರೂ ಕಾಲದಲ್ಲಿಯೂ ಇರಲಿಲ್ಲ; ಅವರ ನೀತಿಯನ್ನೇ ಮುಂದುವರಿಸುವವರ ಕಾಲದಲ್ಲಿಯೂ ಇರುವುದಿಲ್ಲ. ಇವರ ಪರಾಜಯಕ್ಕಿಂತಲೂ ನಿಜಲಿಂಗಪ್ಪನವರು ಸ್ಪರ್ಧಿಸದೆ ಇರುವುದರಲ್ಲೇ ರಹಸ್ಯ ಹೆಚ್ಚು.

ದಕ್ಷಿಣ ಭಾರತಕ್ಕೆ ಎರಡು ಪ್ರಾತಿನಿಧಗಳನ್ನು ನೀಡಬೇಕೆಂದೂ ಎನ್. ಸಂಜೀವರೆಡ್ಡಿಯವರು ಒಬ್ಬರಾದರೆ, ಎಸ್. ನಿಜಲಿಂಗಪ್ಪನವರು ಎರಡನೆಯವರಾಗಬೇಕೆಂದೂ ಕೆಲವರ ಅಭಿಪ್ರಾಯವಿತ್ತು. ನಿಜಲಿಂಗಪ್ಪನವರಿಗೆ ಅನೇಕ ಬೆಂಬಲಿಗರೂ ಇದ್ದರು. ಹಾಕಿದ್ದರೂ ಇವರೇಕೆ ಸ್ಪರ್ಧಿಸಲಿಲ್ಲ.

ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಇಂದು ಅಧಿಕಾರದಲ್ಲಿ ಉಳಿದಿರುವುದಾದರೆ ಅದಕ್ಕೆ ದಕ್ಷಿಣ ಭಾರತದ ರಾಜ್ಯಗಳೇ ಆಧಾರ. ಲಾಲಬಹದೂರರನ್ನು, ಆ ಮೇಲೆ ಇಂದಿರಾ ಗಾಂಧಿಯವರನ್ನು ನಾಯಕತ್ವಕ್ಕೆ ತರುವಾಗಲೂ ಅವರ ಭದ್ರ ಬೆಂಗಾವಲಿಗೆ ಇದ್ದವರು ದಾಕ್ಷಿಣಾತ್ಯರು. ನಿಜಲಿಂಗಪ್ಪನವರಾದರೂ ಕಾಮರಾಜರು ಹಾಕಿದ ಗೆರೆಯನ್ನು ದಾಟುವವರಲ್ಲ. ಎಂತಲೇ ದಕ್ಷಿಣಕ್ಕೆ ಎರಡು ಪ್ರಾತಿನಿಧ್ಯ ಸಿಗುವ ಲಕ್ಷಣವಿಲ್ಲವೆಂದೂ ಒಂದು ವೇಳೆ ನಿಜಲಿಂಗಪ್ಪನವರೂ ಸ್ಪರ್ಧಿಸಿದರೆ, ಮತಗಳು ವಿಭಜನೆ ಹೊಂದಿ ಇಬ್ಬರೂ ಪರಾಜಿತರಾಗುವ ಸಂಭವವಿದೆಯೆಂದೂ ಆದುದರಿಂದ ಪೊದರಿನಲ್ಲಿರುವ ಎರಡು ಹಕ್ಕಿಗಳಿಗಿಂತ ಕೈಯಲ್ಲಿರುವ ಒಂದೇ ಅಮೂಲ್ಯದ್ದೆಂದೂ ಅವರು ತಿಳಿಸಿ ಹೇಳಿದ ಬಳಿಕ ನಿಜಲಿಂಗಪ್ಪನವರು ಹಿಂದೆ ಸರಿದರು.

ನೀಲಂ ಎಲ್ಲರಿಗಿಂತ ಅಧಿಕ ಮತ ಪಡೆದು ಚುನಾಯಿತರಾದರು; ಇವರಿಗೆ ದೊರೆತ ಮತಗಳು ದಕ್ಷಿಣ ಭಾರತಕ್ಕೆ ದೊರೆತ ಮತಗಳೆಂದು ಕಾಮರಾಜರೇ ಪರೋಕ್ಷವಾಗಿ ಹೇಳಿದ್ದಾರೆ. ಒಂದು ವೇಳೆ ನಿಜ

ಯನ

ಗಂಡು ಹೆಜ್ಜೆ

ಸ್ಥಾನೆಯ ಬಗ್ಗೆ ವಿಚಾರ ವಿನಿಮಯ ನಡೆಯುತ್ತಿರುವಂತೆಯೇ ದೇಶದ ಒಳಗಡೆ ಪ್ರತಿಕೂಲ ಅಭಿಪ್ರಾಯಗಳು ವ್ಯಕ್ತವಾಗಿವೆ.

ಈ ಪ್ರತಿಕೂಲತೆಗೆ ಕಾರಣವೇನು? ಅಮೇರಿಕನ್ ಒಂಡವಾಳದ ಬಳಕೆಯ ವಿರುದ್ಧ ಏಳುತ್ತಿರುವ ಅಪಸ್ವರವೇ ಅಲ್ಲ. ಇಲ್ಲಿನ ಅಂಜಿಕೆ ಬೇರೆಯೇ. ಈ ನಿಯೋಜಿತ ಪ್ರತಿಷ್ಠಾನದಲ್ಲಿ ಅಮೇರಿಕೆಯ ಪಾತ್ರವೂ, ಪ್ರಾತಿನಿಧ್ಯವೂ ಮಹತ್ವದಿರುವುದರಿಂದ ಇದರ ತೆರೆಯ ಹಿಂದೆ ಅಮೇರಿಕನ್ ಗುಪ್ತಚಾರ ಪಡೆ ಸೇರಿಕೊಂಡು ಭಾರತದಲ್ಲಿಯೂ ತನ್ನ ಬೇರು ಬಿಟ್ಟೀತು—ಬಿಡವ ಸಂಭವವಿದೆ ಎಂಬ ಅಂಜಿಕೆ ಇದರ ವಿರೋಧಿಗಳಲ್ಲಿ ಮನೆಮಾಡಿದೆ. ಈ ಭಯಕ್ಕೆ ಕಾರಣವೂ ಇಲ್ಲದಿಲ್ಲ.

ಯಾವುದೇ ಒಂದು ಕಾರ್ಯವನ್ನು ಕೈಗೊಳ್ಳುವುದಕ್ಕೆ ಮೊದಲು ನೂರುಬಾರಿ ಯೋಚಿಸಬೇಕು ಪೂರ್ವಾಪರ ವಿವೇಚನೆಯಿಲ್ಲದೆ ಮುನ್ನಡೆದರೆ ಮತ್ತೆ ಪಶ್ಚಾತ್ತಾಪ ಪಡಬೇಕಾದೀತು. ಪಕ್ಷದ ಒಳಗೆಯೂ ಹೊರಗೆಯೂ ಈ ಪ್ರತಿಷ್ಠಾನದ ಬಗ್ಗೆ ವ್ಯಕ್ತವಾದ ಅಭಿಪ್ರಾಯಗಳನ್ನು ಪರಿಶೀಲಿಸಿ ಅಂತಿಮವಾಗಿ ಈಸಂಬಂಧದಲ್ಲಿ ನಿರ್ಧಾರವನ್ನು ಕೈಗೊಳ್ಳುವುದು ಎಂಬ ಕಾಮರಾಜರ ಭರವಸೆ ನ್ಯಾಯ ಸಮ್ಮತವಾದುದು ವಿದೇಶೀಯ ಹಣದಿಂದ ದೇಶದಲ್ಲಿ ಈ ಬಗೆಯ ಕಾರ್ಯ ಆರಂಭಿಸುವುದಕ್ಕೆ ಮೊದಲು ಎಲ್ಲ ನಿಟ್ಟಿನಲ್ಲಿಯೂ ಅದರ ದುಷ್ಪರಿಣಾಮಗಳ ಸಾಧ್ಯಾಸಾಧ್ಯತೆಗಳನ್ನು ವಿವೇಚಿಸಬೇಕು. ಈ

ಲಿಂಗಪ್ಪನವರೂ ನಿಂತಿದ್ದರೆ ಕಾಮರಾಜರ ಭವಿಷ್ಯ ಕತ್ತಲಾಗುತಿತ್ತು ಎನಿಸುತ್ತದೆ.

ಪ್ರಧಾನಿ ಇಂದಿರಾ ಗಾಂಧಿಯವರು ತಮ್ಮ ಅಮೇರಿಕನ್ ಸಂದರ್ಶನ ವೇಳೆ ಸಂಪಾದಿಸಿಕೊಂಡು ಬಂದ ಭಂಡವಾಳವೆಂದರೆ ಸದಾಚ್ಛೆ—ಸದಾಶಯಗಳು ಮತ್ತು ಭಾರತ—ಅಮೇರಿಕನ್ ಪ್ರತಿಷ್ಠಾನ. ಸಂಯುಕ್ತ ಸದಸ್ಯರುಳ್ಳ ಈ ನಿಯೋಜಿತ ಪ್ರತಿಷ್ಠಾನದ ಮುಖ್ಯ ಉದ್ದೇಶ ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸುವುದು. ಇದರ

೨

ದಿಸೆಯಲ್ಲಿ ಎ. ಐ. ಸಿ. ಸಿ ಮಾಡಿದ ನಿರ್ಧಾರ ಸಮರ್ಪನೀಯ.

ಚಿತ್ರಗಳು

೧. ಅಧ್ಯಕ್ಷ ಜಾನ್ಸನ್ ಮತ್ತು ಪ್ರಧಾನಿ ಇಂದಿರಾಗಾಂಧಿಯವರು ತಮ್ಮ ನಿರ್ಧಾರಕ ಮಾತುಕತೆಗಳ ನಂತರ ಹೊರಬಂದಾಗ ಪತ್ರಿಕಾಕರ್ತರ ನಡುವೆ ಸಿಕ್ಕಿಬಿದ್ದ ಸನ್ನಿವೇಶ.

೨. ಉತ್ತರ ಪ್ರದೇಶ ಕೃಷಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಪಂತನಗರದಲ್ಲಿ ಸೇರಿದ 'ಕಿಸಾನ್ ಮೇಲಾ'ದಲ್ಲಿ ಉತ್ತರ ಪ್ರದೇಶದ ರೈತನೊಬ್ಬನಿಗೆ ಎರಡು ಚೀಲಗಳಷ್ಟು ಸುಧಾರಿಸಿದ ಜೋಳದ ಬೀಜಗಳನ್ನು ಅಮೇರಿಕೆಯ ಚಾರ್ಜ್ ಡಿ'ಅಫೈರ್ಸ್ ಆದ ಜೋಸೆಫ್ ಎಸ್. ಗ್ರೀನೇ ಅವರು ನೀಡಿದರು.

೩. ನ್ಯೂಯಾರ್ಕ್ ಸಿಟಿಯ ಮೇಯರ್ ಲಿಂಡ್‌ಸೇ ತನ್ನ ಗೌರವಾರ್ಥ ನೀಡಿದ ಉಪಹಾರ ಕೂಟದಲ್ಲಿ ಇಂದಿರಾಗಾಂಧಿ ಉತ್ಸಾಹಪೂರ್ಣ ಮುಖಮುದ್ರೆಯಲ್ಲಿ ಮಾತನಾಡುತ್ತಿದ್ದಾರೆ.

೪. ಪ್ರಧಾನಿ ಇಂದಿರಾಗಾಂಧಿಯವರು ಲಿಂಕನ್ ಸೆಂಟರ್‌ನಲ್ಲಿ ಸಂಚರಿಸಿ ಪ್ರಫುಲ್ಲಿತರಾಗುತ್ತಿರುವ ನೋಟ

೫. ನ್ಯೂ ಮದ್ರಾಸ್ ಫೇಕ್ಟರಿಯ ಉನ್ನತ ವೋಲ್ಟೇಜಿನ ಇನ್ಸುಲೇಟರ್ಸನ್ನ ತಯಾರಿಸುವಲ್ಲಿ ಪರಿಪೂರ್ಣತೆಯನ್ನು ಗಳಿಸಿದಾಗ ಸುಮಾರು ಮೂರು ಕೋಟಿಯಷ್ಟು ವಿದೇಶವಿನಿಮಯವನ್ನು ಉಳಿಸುವುದು. ಮೊರಾರ್‌ನಲ್ಲಿರುವ ಈ ಕಾರಖಾನೆಯಲ್ಲಿ ಇನ್ಸುಲೇಟರ್‌ಗಳಿಗೆ ಅಂತಿಮ ಸ್ಪರ್ಶ ನೀಡುತ್ತಿರುವ ದೃಶ್ಯವಿದು.

೫

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—60
ಅನುವಾದಿತ ಕತೆಗಳು	1—20
ಸಂಚಸವನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಜ್ಞಾನ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶ ವಿದೇಶದ ಮಹಾಜೀವಿಗಳು	1—60
ಹೆಂಗುಸರ ಕತಗಳು	2—00
ನುಡಿಮುತ್ತುಗಳು	1—20

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಅಭಿಪ್ರಾಯ

ತೆರಿಗೆಯಿಂದ ಹೊಸ ಸಮಸ್ಯೆಗಳು

ತಿಳಿಸಿದವರು: ಶ್ರೀ ಎಂ. ನಾರಾಯಣ ಭಟ್ಟ.

ಭಾರತವು ಆಂಗ್ಲೇಯರ ದಾಸ್ಯ ಶೃಂಖಲೆಯಿಂದ ಸ್ವತಂತ್ರವಾದ ತರುವಾಯ ಕಾಶ್ಮೀರ ಪ್ರಶ್ನೆ, ಚೀನೀ ಆಕ್ರಮಣ, ಪಾಕ್ ಆಕ್ರಮಣ, ಹಣದ ಅಡಚಣೆ, ಆಹಾರ ಸಮಸ್ಯೆ, ಜನ ಸಂಖ್ಯೆಯು ಹೆಚ್ಚಳವೇ ಮೊದಲಾದ ಹಲವಾರು ಸಮಸ್ಯೆಗಳು ತಲೆದೋರಿದುವು. ಈ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುವ ದಾರಿಯಲ್ಲಿ ನಾವೀಗ ತೀವ್ರಗತಿಯಿಂದ ಮುನ್ನಡೆಯುತ್ತಿದ್ದೇವೆ. ಅದೂ ಸಾಲದೆನ್ನುವಂತೆ ನಮ್ಮ "ತಿಳಿಗೇಡಿತನ"ದಿಂದಾಗಿ ಹಲವಾರು ಸಮಸ್ಯೆಗಳು ಹುಟ್ಟಿಕೊಳ್ಳುವುದು ವಿಶಾದನೀಯವೇ ಸರಿ. ಈ ವರ್ಷದ "ಬಜೆಟ್"ನಲ್ಲಿ ಹೆಚ್ಚಿಸಿದ ಬಡ್ಡಿಯು ಮೇಲಣ ತೆರಿಗೆಯೂ ಇನ್ನೂ ಕೆಲವು ಸಮಸ್ಯೆಗಳು ಹುಟ್ಟಿಕೊಳ್ಳುವುದಕ್ಕೆ ಅವಕಾಶವನ್ನು ಒದಗಿಸಿದುದು ನಮ್ಮ ದೌರ್ಭಾಗ್ಯವೆನ್ನಬಹುದು.

ಸರಕಾರವು ತನ್ನ ವೆಚ್ಚವನ್ನು ಮೊದಲು ನಿರ್ಣಯಿಸಿ ತರುವಾಯ ಆ ಮೊತ್ತವನ್ನು ಒಂದುಗೂಡಿಸಿದರೆ, ಜನರು ತಮ್ಮ ವೆಚ್ಚವನ್ನು ತಮ್ಮ ಸಂಪಾದನೆಗೆ ಸೀಮಿತಗೊಳಿಸಬೇಕು.

ಸರಕಾರವು ತನಗೆ ಬೇಕಾದ ಮೊತ್ತವನ್ನು ಒಟ್ಟುಗೂಡಿಸಲು ಉಪಯೋಗಿಸುವ ಅಸ್ತ್ರವೇ "ತೆರಿಗೆ". ಹಿಂದೆ ಪ್ರಜೆಗಳು ತಮ್ಮ ಆದಾಯದ ಆರನೇ ಒಂದಂಶವನ್ನು ತೆರಿಗೆಯ ರೂಪದಲ್ಲಿ ತೆರಬೇಕಿತ್ತು. ಇದನ್ನು "ಷಷ್ಟ" ಯಾ 'ಷಡ್ಭಾಗ' ಎಂದು ಕರೆಯುತ್ತಾರೆ. ಇಂದು ಸರಕಾರವು ವೆಚ್ಚ ಮಾಡಬೇಕಾದ ಮೊತ್ತವು ಹೆಚ್ಚುತ್ತಾ ಬಂದಂತೆ ತೆರಿಗೆಯಲ್ಲೂ ಹೆಚ್ಚಳವು ಕಂಡು ಬರುವುದು ಸಹಜ.

"ಸಮಾಜವಾದದತ್ತ ಬಾಗಿದ ನಮ್ಮ ದೇಶದಲ್ಲೂ ತೆರಿಗೆಯ ಈ "ಚಿತ್ರಹಿಂಸೆ" ಇನ್ನೂ ನಡೆಯುತ್ತಾ ಇದೆ. 'ಪ್ರಜಾತಂತ್ರ' ರಾಜ್ಯವಾದ ಭಾರತದಲ್ಲಂತೂ ನ್ಯಾಯ ಸಮ್ಮತವಾದ ತೆರಿಗೆಯ ಪದ್ಧತಿಯಿರಬೇಕಿತ್ತು. ಆದರೆ ನಮ್ಮ ಜನರ ನಿಸ್ವಾರ್ಥ ಸೇವೆಯ ಶೂನ್ಯತೆಯು ಜನರ ವಿಶಾದನೆಯನ್ನು ಓರ್ವ ನಿರಂಕುಶ ಪ್ರಭುವನ್ನು ಆಹ್ವಾನಿಸುತ್ತದೆ. ತೆರಿಗೆಯನ್ನು ಹೊರಿಸುವಾಗಲೂ ತೆರುವಾಗಲೂ ಬೇಕಷ್ಟು ಭ್ರಷ್ಟಾಚಾರ, ಅನಾಚಾರಗಳು ನಡೆಯುತ್ತವೆ. ಲಕ್ಷಾಧಿಪತಿಗಳಾದ ಜನರೂ ಅಧಿಕಾರಿಗಳಿಗೆ "ಗಿಂಬಳ"ಕೊಟ್ಟು 'ಪ್ರತ್ಯೇಕ್ಷ ತೆರಿಗೆ'ಯಿಂದ ಪಾರಾದರೂ "ಅಪ್ರತ್ಯಕ್ಷ ತೆರಿಗೆ"ಯಿಂದ ತಪ್ಪಿಸಿಕೊಳ್ಳಲು ಸಾಧ್ಯತೆಯೇ ಇಲ್ಲವೆನ್ನಿ!

೧೯೬೩ ಎಪ್ರಿಲ್ ೧ರಿಂದ ಪ್ರಾರಂಭವಾದ "ಆರ್ಥಿಕ ವರ್ಷ'ದಲ್ಲಿ ಕೆಲವು ವಸ್ತುಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸಿದ್ದಾರೆ. ಯೇ ವಿನಃ ಹೊಸ ತೆರಿಗೆಗಳನ್ನು ಹೊರಿಸಿದುದು ಅಪೂರ್ವ. ತೆರಿಗೆಯನ್ನು ಹೊರಿಸಿದ ದೇನೋ ದೇಶದ ಹಿತದೃಷ್ಟಿಯಿಂದಬಳಿತು. ಆದರೆ ಅಲ್ಲಿ ಪೂರ್ವಾಪರ ಯೋಚನೆಯನ್ನು ಮಾಡದಿದ್ದುದು ವಿಶಾದನೀಯ.

ತೆರಿಗೆಯನ್ನು ಹೊರಿಸುವಾಗಲೂ ನಮ್ಮ ನಾಯಕರಿಗೆ ಕೆಲವು ವಸ್ತುಗಳ ಮೇಲೆ "ಅಭಿಮಾನ" ಉಪ್ಪಿನ ಮೇಲೆ ಆಂಗ್ಲೇಯರು ತೆರಿಗೆಯನ್ನು ಹೊರಿಸಿದಾಗ ಮಹಾತ್ಮಾಗಾಂಧೀಜಿಯವರು 'ಉಪ್ಪಿನ ಸತ್ಯಾಗ್ರಹ"ವನ್ನು ಕೈಗೊಂಡರು. ಇಂದು ಉಪ್ಪಿನ ಮೇಲೆ ಯಾಕೆ ತೆರಿಗೆಯನ್ನು ಹೊರಿಸಬಾರದು? ಗಾಂಧೀಜಿಯವರು ಪುನರ್ಜನ್ಮವನ್ನು ತಾಳಿ ಬಂದಾರೆಂಬ ಹೆದರಿಕೆಯೇ? ಉಪ್ಪಿನ ಮೇಲೆ ತೆರಿಗೆಯನ್ನು ಹೊರಿಸಿದರೆ, ಜನರು ತೆರುವುದು 'ಜನತಾ ಸರಕಾರ'ಕ್ಕೆ ಅಂದ ಮೇಲೆ 'ಉಪ್ಪಿನ ಸತ್ಯಾಗ್ರಹ"ದ ಎರಡನೆಯ ಅವತಾರದ ಬೆದರಿಕೆ ಏತಕ್ಕೆ?

ಕೆಲವು ತಿಂಗಳುಗಳ ಹಿಂದೆ ನಮ್ಮ ದೇಶದಲ್ಲಿ ಕೆಲವು ಹತ್ತಿಗಿರಣಿಗಳು ಮುಚ್ಚಲ್ಪಟ್ಟವು. ತಯಾರಿಸಲ್ಪಟ್ಟ ಬಟ್ಟೆಯ ಮಾಲು ವಿಕ್ರಯಿಸಲ್ಪಡದೆ ಉಳಿದಿರುವುದೇ ಇದಕ್ಕೆ ಕಾರಣವೆನ್ನಬಹುದು. 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಎಂಬ ದಾಸರ ಪದಗಳನ್ನಾಲಿಸಿದಾಗ ಜನಜೀವನದಲ್ಲಿ ಬಟ್ಟೆಯ ಪಾತ್ರದ ಅರಿವು ನಮಗುಂಟಾಗುತ್ತದೆ. ಅದು ಅತ್ಯಾವಶ್ಯಕ ಸಾಮಗ್ರಿಯಾಗಿದ್ದರೂ ಜನರು ಅದನ್ನು ಕೊಂಡುಕೊಳ್ಳದಿರಲು ಕಾರಣವೇನು? ಅದು ಮತ್ತಾವುದಕ್ಕೂ ಅಲ್ಲ—ಬೆಲೆಯಲ್ಲುಂಟಾದ ಹೆಚ್ಚಳವೇ ಇದಕ್ಕೆ ಕಾರಣ.

ಒಂದು ವಸ್ತುವಿನ ಬೆಲೆಯೇರಲು ಮೊದಲನೇ ಕಾರಣವೇ ಕಚ್ಚಾಮಾಲಿನ ಬೆಲೆಯಲ್ಲುಂಟಾಗುವ ಹೆಚ್ಚಳ, ಎರಡನೆಯದಾಗಿ ತೆರಿಗೆ, ಮೂರನೆಯದಾಗಿ ವ್ಯಾಪಾರಸ್ಥರ ಲಾಭಾಂಶದಲ್ಲಿ ಹೆಚ್ಚಳ. ಇದು ತೀರ ಅಪೂರ್ವ. ಯಾಕೆಂದರೆ, ಇಂದು ಮಾರುಕಟ್ಟೆಯಲ್ಲಿ ತೀವ್ರವಾದ ಸ್ಪರ್ಧೆಯಿರುವುದರಿಂದ ಲಾಭಾಂಶವು ಅತ್ಯಲ್ಪವೇ ಸರಿ. ಆದುದರಿಂದ ಮೊದಲ ಎರಡು ಕಾರಣಗಳೇ ಬೆಲೆಯೇರಿಕೆಗೆ ಕಾರಣಗಳು.

ಮೊದಲಿಗೇನೇ ನಮ್ಮ ದೇಶದ ಕಾರ್ಖಾನೆಗಳು ಬಹಳ ದುರ್ಬಲವಾಗಿವೆ. ಅದೂ ಸಾಲದೆನ್ನುವಂತೆ ಅದರ ಮೇಲೆ ಹೊರಲಾರದ ತೆರಿಗೆಯ ಹೊರೆ! ಹಿಂದೊಂದು ಕಾಲದಲ್ಲಿ ಭಾರತದ ವಸ್ತುಗಳಿಗೆ ಪ್ರಪಂಚದ ಮಾರುಕಟ್ಟೆಯಲ್ಲಿ ಒಳ್ಳೆಯ ಬೇಡಿಕೆಯಿತ್ತು. ಆದರೆ ಇಂದು ಅಮೆರಿಕಾ, ಇಂಗ್ಲೆಂಡ್, ಜಪಾನ್ ಮೊದಲಾದ ರಾಷ್ಟ್ರಗಳು ಅದನ್ನು ಕಿತ್ತುಕೊಂಡಿವೆ. ಜಪಾನ್ ತನ್ನ ಕಾರ್ಖಾನೆಗಳಿಗೆ ಬೇಕಾದ ಹತ್ತಿಯ ಹತ್ತರಲ್ಲೊಂದಂಶವನ್ನೂ ಬೆಳೆಯುತ್ತಿಲ್ಲ. ಆದರೂ ಪ್ರಪಂಚದ ಮಾರುಕಟ್ಟೆಯಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಜಪಾನಿನ ಜನರ ಶ್ರಮ ಸಹಿಷ್ಣುತೆ ಹಾಗೂ ಆಧುನಿಕ ಯಂತ್ರೋಪಕರಣಗಳ ಬಳಸುವಿಕೆಯೇ ಕಾರಣ. ಜಪಾನಿನ ಒಂದೊಂದು ಮನೆಯೂ ಒಂದೊಂದು ಚಿಕ್ಕ ಕಾರ್ಖಾನೆಯೇ ಆಗಿದೆ.

ನಮ್ಮ ದೇಶದಲ್ಲೂ ನಾವೇಕೆ ಆಧುನಿಕ ಯಂತ್ರೋಪಕರಣಗಳನ್ನು ಬಳಸಬಾರದು ಎನ್ನುವ ಪ್ರಶ್ನೆ ಸಹಜವಾಗಿ ಮೂಡಬಹುದು. ಭಾರತದ ವಾತಾವರಣವು ಇದಕ್ಕೆ ಪ್ರತಿಕೂಲವಾಗಿದೆ. ಮೊದಲನೆಯದಾಗಿ ಇದಕ್ಕೆ ಬಹಳಷ್ಟು ವೆಚ್ಚ ತಗಲಬಹುದು. ಎರಡನೆಯದಾಗಿ, ಹೆಚ್ಚಿನ ಯಂತ್ರಗಳ ಬಳಸುವಿಕೆ ಎಂದರೆ ಕಡಮೆ ಮಾನವ ಶ್ರಮ. ಪರಿಣಾಮವಾಗಿ ಹೆಚ್ಚಿನ ಕೆಲಸಗಾರರು ನಿರುದ್ಯೋಗಿಗಳಾಗಬಹುದು. ಈ ರೀತಿಯಲ್ಲಿ ನಿರುದ್ಯೋಗಿಗಳಿಗೆ ಉತ್ತಮ ರೀತಿಯ ಉದ್ಯೋಗವನ್ನು ಒದಗಿಸಲು ನಾವು ಸಿದ್ಧರಾಗಿದ್ದಲ್ಲಿ ಮಾತ್ರ ಆಧುನಿಕ ಯಂತ್ರೋಪಕರಣಗಳನ್ನು ಬಳಸಬಹುದು.

ಈ ವರ್ಷ ಬಟ್ಟೆಯ ಮೇಲಣ ತೆರಿಗೆಯನ್ನು ಹೆಚ್ಚಿಸಿದುದು ಇನ್ನೂ ಕೆಲವು ಸಮಸ್ಯೆಗಳನ್ನು ತಂದೊಡ್ಡಿದೆ. ತೆರಿಗೆಯ ಹೆಚ್ಚಳದಿಂದ ಸಿಗುವಷ್ಟೇ ಮೊತ್ತವು ನಮಗೆ ಬಟ್ಟೆಯ ಸಾಮಗ್ರಿಗಳ ರಫ್ತಿನಿಂದ ಸಿಗಬಹುದಾಗಿತ್ತು. ತೆರಿಗೆಯ ಹೆಚ್ಚಳದ ಪರಿಣಾಮವಾಗಿ ನಾವು ನಮ್ಮ ವಿದೇಶೀ ವ್ಯಾಪಾರವನ್ನು ಕಳೆದುಕೊಂಡುದು ಮಾತ್ರವಲ್ಲ ಅದರೊಂದಿಗೆ ಇನ್ನೂ ಕೆಲವು ಸಮಸ್ಯೆಗಳಿಗೆ ಅವಕಾಶವನ್ನೊದಗಿಸಿದೆವು.

ಒಂದು ವಸ್ತುವಿನ ಬೆಲೆ ಏರಿದೊಡನೆ ಅದು ಜನರ ಮೇಲೆ ಪರಿಣಾಮವನ್ನು ಬೀರುವುದು. ಬೆಲೆ ಏರಿದೊಡನೆ ಆ ವಸ್ತುವಿನ ಬೇಡಿಕೆಯಲ್ಲಿ ಕಡಿತವುಂಟಾಗುವುದು ಸಹಜ. ಪರಿಣಾಮವಾಗಿ ಕಾರ್ಖಾನೆಗಳಲ್ಲಿ ತಯಾರಿಸಲ್ಪಟ್ಟ ಮಾಲು ವಿಕ್ರಯಿಸಲ್ಪಡುವುದಿಲ್ಲ. ಹೀಗೆ ಉಳಿದ ಮಾಲು ಕಾರ್ಖಾನೆಯ ಮುಂದುವರಿಕೆಗೆ ತಡೆಯನ್ನು ಉಂಟು ಮಾಡಬಹುದು. ಇದರಿಂದಾಗಿ ಮುಚ್ಚಲ್ಪಟ್ಟ ಕಾರ್ಖಾನೆಯ ಮಿಲಿಯಗಟ್ಟಲೆ ಕೆಲಸಗಾರರು ನಿರುದ್ಯೋಗಿಗಳಾಗಬಹುದು.

ನಿರುದ್ಯೋಗಸ್ಥ ಜನರ ಜೀವನಮಟ್ಟವು ಬಹಳಷ್ಟು ಕೆಳಗೆ ಬರುವುದು. ಉದರ ನಿರ್ವಹಣೆಯೇ ಅವರ ಮುಂದಿನ ಕನಸಾಗಿ ಉಳಿಯಬಲ್ಲುದು. ಇಂತಹ ಪರಿಸ್ಥಿತಿಯಲ್ಲಿ ಜನರು ಜೀವನಕ್ಕೆ ಅತ್ಯಾವಶ್ಯಕವೆನಿಸಿದ ಸಾಮಗ್ರಿಗಳನ್ನು ಮಾತ್ರ ಕೊಂಡುಕೊಳ್ಳಲು ಶಕ್ತರು. ಇತರ ಕೆಲವು ವಸ್ತುಗಳನ್ನು ಜನರು ಪಡೆಯಲು ನಿಶ್ಶಕ್ತರಾದಾಗ, ಇಂತಹ ವಸ್ತುಗಳನ್ನು ತಯಾರಿಸುವ ಕೆಲವು ಕಾರ್ಖಾನೆಗಳು ಮುಚ್ಚಲ್ಪಡಬಹುದು. ಪುನಃ ಈ ಕಾರ್ಖಾನೆಯ ಕೆಲಸಗಾರರು ನಿರುದ್ಯೋಗಿಗಳಾಗಬಹುದು. ಇದನ್ನು ಒಂದು "ಅಂಟುರೋಗ" ಎಂದು ಕರೆದರೆ ತಪ್ಪಾಗಲಾರದೇನೋ! ಹೀಗೆ ಒಂದರಿಂದ ಇನ್ನೊಂದರಂತೆ ಸಮಸ್ಯೆಗಳುಂಟಾಗುತ್ತವೆ.

ಕೃಷಿ ಕ್ಷೇತ್ರದಲ್ಲಿ ಹೀಗೇನೆ. "ಕೃಷಿತೋ ನಾಸ್ತಿ ದುರ್ಭಿಕ್ಷಂ" ಎಂದಿದ್ದರೂ ಇಂದು ಭಾರತೀಯ ಕೃಷಿಕನ ಪರಿಸ್ಥಿತಿ ಚಿಂತಾಜನಕವಾಗಿದೆ. ಕೃಷಿಗೆ ಬೇಕಾದ ಉಪಕರಣಗಳು ಅಪೂರ್ವ. ನಮ್ಮ ಸರಕಾರ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಪ್ರೋತ್ಸಾಹವನ್ನು ಕೊಟ್ಟರೂ ಭಾರತೀಯ ಬಡಕೃಷಿಕನಿಗೆ ಇದು ಯೋಜನೆಯಲ್ಲಿಯೇ ಉಳಿದಿದೆ. ಅವನಿಂದು 'ಸಾಲದಲ್ಲೇ ಜನಿಸಿ, ಸಾಲದಲ್ಲೇ ಜೀವಿಸಿ, ಸಾಲದಲ್ಲೇ ಅಸುನೀಗಬೇಕಾದ ಪ್ರಸಂಗ ಬಂದೊದಗಿದೆ. ಸರಕಾರವು ಕೃಷಿಕನಿಗೆ ಬೇಕಾದ ಭೂಮಿಯನ್ನೂ (ಭೂಮಿರಹಿತನಿಗೆ) ಹಣವನ್ನು ಒದಗಿಸುವ "ಯೋಜನೆ"ಯನ್ನು ಪ್ರಾರಂಭಿಸಿದೆ. ಅಲ್ಲಿಯೂ ಭ್ರಷ್ಟಾಚಾರ "ಗಿಂಬಳ" ಕೊಟ್ಟರೆ ಮಾತ್ರ ಅವನಿಗೆ ಸೌಲಭ್ಯ. 'ಮಾಮೂಲು' ಕೊಡಲು ಅಶಕ್ತನಾದ ಬಡ ಕೃಷಿಕನಿಗೆ "ತ್ರಿಶಂಕು ಸ್ವರ್ಗ"ವೇ ಗತಿ, ಇಂತಹ ಪರಿಸ್ಥಿತಿಯಲ್ಲಿ ಉತ್ತಮ ಬೆಳೆ ಎಲ್ಲಿಂದ ಸಿಗಬೇಕು? ಉತ್ತಮ ಬೆಳೆ ಸಿಕ್ಕಿದರೆ ತಾನೇ ಹೊಟ್ಟೆ ತುಂಬಿಸಿ ಕೊಳ್ಳಬೇಕು? ಇಂದಿನ ಇಂತಹ ಪರಿಸ್ಥಿತಿಯಲ್ಲಿ ಆಹಾರ ಸಮಸ್ಯೆಯು

(ಹನ್ನೆರಡನೇ ಪುಟ ನೋಡಿರಿ)

ಶ್ರೀ ರಾಮಾನುಜಾಚಾರ್ಯರು

(೩೬ನೇ ಪುಟದಿಂದ)

ಜೈನ ಧರ್ಮದ ಶ್ರದ್ಧಾವಂತ ಭಕ್ತನಾಗಿದ್ದ ಹೊಯ್ಸಳ ಅರಸು ಬಿಟ್ಟಿದೇವ ರಾಮಾನುಜಾಚಾರ್ಯರ ತಪೋ ಪ್ರಭಾವದಿಂದ ತನ್ನ ಮಗಳ ಕಾಯಿಲೆ ದೂರವಾಗಿ ಆರೋಗ್ಯ ಪಡೆದುದನ್ನು ಕಂಡು ಅವರ ಅಪಾರ ಮಹಿಮೆಗೆ ಮಾರುಹೋಗಿ ಶ್ರೀ ವೈಷ್ಣವ ದೀಕ್ಷೆ ಪಡೆದು 'ವಿಷ್ಣುವರ್ಧನ' ಎನ್ನುವ ಹೆಸರಿನಿಂದ ಶ್ರೀವೈಷ್ಣವ ಧರ್ಮ ಪ್ರಸಾರಕ್ಕೆ ಸಹಕಾರಿಯಾಗುತ್ತಾನೆ. ಆಚಾರ್ಯರ ಅಪೇಕ್ಷೆಯಂತೆ ವಿಷ್ಣುವರ್ಧನ ಕಟ್ಟಿಸಿದ ಕನ್ನಡದ ಕೀರ್ತಿಯನ್ನು ಎತ್ತಿಸಾರುವ ಪಂಚ ನಾರಾಯಣ ದೇವಾಲಯಗಳ ಕಲಾ ವೈಭವವನ್ನು ಇಂದಿಗೂ ಕಾಣಬಹುದು.

ಕಾಂಚಿ ಮತ್ತು ಶ್ರೀರಂಗಗಳಂತೆ ತಿರುನಾರಾಯಣಪುರ (ಮೇಲುಕೋಟೆ)ವೂ ಕನ್ನಡ ನಾಡಿನಲ್ಲಿ ಶ್ರೀವೈಷ್ಣವ ಧರ್ಮ, ತತ್ವ ಸಿದ್ಧಾಂತಗಳನ್ನು ಪ್ರಚಾರ ಮಾಡುವ ಕೇಂದ್ರವಾಯಿತು. ದೆಹಲಿಯ ನವಾಬನ ಮಗಳ ಬಳಿಯಲ್ಲಿದ್ದ ಚೆಲುವ ನಾರಾಯಣನನ್ನು ಮರಳಿ ತಂದು ತಿರುನಾರಾಯಣಪುರದಲ್ಲಿ ಪ್ರತಿಷ್ಠಾಪಿಸಿ ಪೂಜಾಕೈಂಕರ್ಯಕ್ಕೆ ವ್ಯವಸ್ಥೆ ಮಾಡಿದರು ಆಚಾರ್ಯರು.

ತಾವು ನಿರೂಪಿಸಿ ಬಳಕೆಗೆ ತಂದ ಧರ್ಮ ತತ್ವಗಳು, ಸಿದ್ಧಾಂತ ಯಾವ ಕಾರಣದಿಂದಲೂ ನಶಿಸಬಾರದೆಂದು ಆಶಿಸಿದ ರಾಮಾನುಜಾಚಾರ್ಯರು ಅವುಗಳ ಭದ್ರತೆ ಮತ್ತು ಪ್ರಸಾರಕ್ಕಾಗಿ ಎಪ್ಪತ್ತನಾಲ್ಕು ಮಂದಿ ಶಿಷ್ಯರನ್ನು ನೇಮಿಸಿ ಮತ್ತು ಸಲಹೆಗಳನ್ನಿತ್ತು ತಮ್ಮ ಸೇವೆಯನ್ನು ಒಂದು ಹಂತಕ್ಕೆ ತಂದರು. ಈ ಬಗೆಯಲ್ಲಿ ನಿಷ್ಕಾಮ ಪೂರ್ಣ ಧರ್ಮ ದೇವರುಗಳ ಸೇವೆ ಸಲ್ಲಿಸಿದ ಆಚಾರ್ಯರು ತಮ್ಮ ೧೨೦ನೆಯ ವಯಸ್ಸಿನಲ್ಲಿ (ಕ್ರಿ. ಶ. ೧೧೩೭)ರಲ್ಲಿ ಶ್ರೀಮನ್ನಾರಾಯಣನಲ್ಲಿ ಲೀನರಾದರು.

ಧರ್ಮ ಸಂಸ್ಥಾಪನೆಗಾಗಿ ಆದಿಶೇಷನೇ ರಾಮಾನುಜರ ಅವತಾರವೆತ್ತಿದ ಎಂದು ನಂಬುತ್ತಾರೆ. ತಮ್ಮ ೧೨೦ ವರ್ಷಗಳ ತುಂಬು ಜೀವನದಲ್ಲಿ ಆಚಾರ್ಯರು ಅನನ್ಯ ಸೇವೆಯನ್ನು ಸಲ್ಲಿಸಿ ಕೀರ್ತಿವಂತರಾಗಿದ್ದಾರೆ. ಅವರದು ಭಕ್ತಿ ಪಂಥ. ಅವರಲ್ಲಿ ಅನನ್ಯ ಶರಣತೆ ತುಂಬಿ ಬಂದಿತ್ತು. ಮೋಕ್ಷ ಸಾಧನೆಗೆ ಜ್ಞಾನ, ಕರ್ಮಗಳಿಗಿಂತಲೂ ಭಕ್ತಿಮಾರ್ಗವೇ ಶ್ರೇಷ್ಠ ಎಂಬುದನ್ನು ಪ್ರತಿಪಾದಿಸಿ ಜಯಶಾಲಿಗಳಾಗಿದ್ದಾರೆ.

ರಾಮಾನುಜಾಚಾರ್ಯರು ಪೂರ್ಣ ಜ್ಞಾನ ಮತ್ತು ಪಾಂಡಿತ್ಯವನ್ನು ಪಡೆದಿದ್ದುದರಿಂದ ವಾದಕ್ಕೆ ಬಂದ ವಿವಿಧ ಧರ್ಮಗಳ ಪಂಡಿತ ಪ್ರಮುಖರನ್ನು ಸಾಧಾರಣ— ಸ್ವಾನುಭವಗಳ ಸಿದ್ಧಾಂತದೊಂದಿಗೆ ವಾದಿಸಿ ಅವರನ್ನು ತಮ್ಮ ಧರ್ಮಕ್ಕೆ ಶರಣರಾಗುವಂತೆ ಮಾಡುತ್ತಿದ್ದರು. ಆಚಾರ್ಯರು ಪ್ರತಿಪಾದಿಸಿದ ಧರ್ಮ ಶ್ರೀ ವೈಷ್ಣವ ಧರ್ಮ ಅಥವಾ ವಿಶಿಷ್ಟಾದ್ವೈತ ಧರ್ಮ ಸಮಲೀನ ಸ್ಥಿತಿಯನ್ನು ಎಲ್ಲಾ ಧರ್ಮಗಳ ಸ್ವೇಚ್ಛಾಚಾರವನ್ನು ಪರಿಶೀಲಿಸಿ ಭಗವಂತನ ಪ್ರಾಪ್ತಿಗೆ ಅತಿ ಸುಲಭವಾದ ಭಕ್ತಿಮಾರ್ಗವನ್ನು ತೋರಿ ಜನತೆಯನ್ನು ಉದ್ಧಾರ ಮಾಡಿದ ಕೀರ್ತಿ ರಾಮಾನುಜಾಚಾರ್ಯರದು.

ಆಚಾರ್ಯರದು ಮಾನವತೆ ಮತ್ತು ಅನುಕಂಪದಿಂದ ತುಂಬಿದ ಹೃದಯ. ಅಂತ್ಯ ಜಾತಿಯವರೆಂದು ಬಹಿಷ್ಕೃತರಾದ ಜನಾಂಗದವರನ್ನು ತಮ್ಮ ಸಾಲಿಗೆ ಸೇರಿಸಿಕೊಂಡು "ಹರಿಜನ"ರೆಂದು ಹೆಸರುಕೊಟ್ಟು ದೇವಾಲಯಗಳಲ್ಲಿಯೂ ಪ್ರವೇಶ ದೊರಕಿಸಿ ಕೊಟ್ಟ ಮಹಾನುಭಾವರು ಇವರು. ಒಂದು ಸತ್ಯ ಪ್ರವಾಯವನ್ನು ಅಂದೇ ಮೇಲುಕೋಟೆಯಲ್ಲಿ ಬಳಕೆಗೆ ತಂದರು.

ಆತ್ಮಾರ್ಪಣ ಮನೋಭಾವದಿಂದ ಸೃಷ್ಟಿ—ಸ್ಥಿತಿ—ಲಯಗಳಿಗೆ ಕಾರಣನೂ, ಮಹಾಮಹಿಮನೂ ಆದ ವಿಷ್ಣು(ನಾರಾಯಣ)ವನ್ನೂ ನಂಬಿ ಪೂಜಿಸುವವನಿಗೆ ಭಗವಂತನ ಪ್ರಾಪ್ತಿ ಖಂಡಿತ. ಇದರಲ್ಲಿ ಮೇಲು— ಕೀಳು, ಹಿರಿಯ—ಕಿರಿಯ, ಪಾಪಿ—ಪುಣ್ಯವಂತ ಎನ್ನುವ ಭೇದವಿಲ್ಲ ಎಂಬುದನ್ನು ಪ್ರಕಟಿಸಿದರು ಆಚಾರ್ಯರು.

ಅವರಿಂದ ಧಾರ್ಮಿಕ ಕ್ಷೇತ್ರಕ್ಕೆ ಸೇವೆ ಸಂದಿರುವಂತೆಯೇ ವಾಙ್ಮಯ ಕ್ಷೇತ್ರಕ್ಕೂ ಸಂದಿದೆ. ರಾಮಾನುಜಾಚಾರ್ಯರು ಶ್ರೀಭಾಷ್ಯವನ್ನಲ್ಲದೆ, ಭಗವದ್ಗೀತೆಗೆ ವ್ಯಾಖ್ಯಾನವನ್ನೂ, ವೇದಾಂತ ದೀಪ, ವೇದಾಂತಸಾರ, ವೇದಾರ್ಥಸಾರ ಸಂಗ್ರಹ ಎಂಬ ಗದ್ಯ ಗ್ರಂಥಗಳನ್ನು ರಚಿಸಿದ್ದಾರೆ. ರಾಮಾನುಜಾಚಾರ್ಯರ ಕಾರ್ಯ ಕ್ಷೇತ್ರ ಕೇವಲ ತಮಿಳುನಾಡು ಮಾತ್ರವೇ ಆಗಿರದೆ ಕನ್ನಡನಾಡಿನಲ್ಲಿಯೂ ವಿಸ್ತಾರಗೊಂಡಿತ್ತು. ಅಷ್ಟೇ ಅಲ್ಲದೆ ಭಾರತಾದ್ಯಂತವೂ ವ್ಯಾಪಿಸಿತ್ತು.

ಕೇವಲ ಧರ್ಮವನ್ನು ಮಾತ್ರವಲ್ಲದೆ ಜನತೆಯನ್ನು ಉದ್ಧಾರಮಾಡಿ ಏಳಿಗೆಯ ಮಾರ್ಗಕ್ಕೆ ತಂದು ಬಿಟ್ಟು ಸಾಗಬೇಕಾದ ದಾರಿಯನ್ನು ತೋರಿಸಿದ ಯುಗಪುರುಷರು ರಾಮಾನುಜಾಚಾರ್ಯರು.

ಶ್ರೀ ರಾಮಾನುಜಾಚಾರ್ಯರು ಅವರ ಶ್ರೀ ವೈಷ್ಣವಧರ್ಮ ಯಾವ ಬಗೆಯಲ್ಲಿಯೂ ಕಿರಿದಾದುದಲ್ಲ. ಅವರು ಅವರ ಧರ್ಮ ಗಂಗೆಯಷ್ಟೇ ಪವಿತ್ರ, ಗೌರೀಶಂಕರದಷ್ಟೇ ಉನ್ನತ, ಚಂದ್ರ ಸೂರ್ಯರಂತೆಯೇ ನಿತ್ಯ ಶಾಶ್ವತ.

ಧರ್ಮೋಪನಯನ

ತಾ. 11—5—66ರಲ್ಲಿ ಮದ್ರಾಸ್ ಧರ್ಮಪ್ರಕಾಶದಲ್ಲಿ ಭಕ್ತ ಶ್ರೀ ಗೋವಿಂದದಾಸರ ಧರ್ಮಪತ್ನಿ ಶ್ರೀಮತಿ ಗಂಗಾಬಾಯಿಯವರ ಧರ್ಮನಿಧಿಯಿಂದ 63 ತ್ರಿಮತಸ್ಥ ಬಾಲಕರಿಗೆ ಧರ್ಮೋಪನಯನವು ವಿಶೇಷ ವೈಭವದಿಂದ ನಡೆಯಿತು. ತಾ. 10—5—66ರಲ್ಲಿ, ಸಂಜೆ ಬಾಲಕರ ಬಂಧು ಬಾಂಧವರನ್ನು ವಾದ್ಯವೈಭವದಿಂದ ಸ್ವಾಗತಮಾಡಿ ರಾತ್ರಿ ಉದಕ ಶಾಂತಿಯು ನಡೆಯಿತು. ತಾರೀಕು 11—5—66ರಲ್ಲಿ ವಟುಗಳ ತಂದೆ ತಾಯಿ ಅಥವಾ ಸಂರಕ್ಷಕರಿಗೆ ಸೀರೆ ದೋತ್ರಗಳನ್ನು, ವಟುಗಳಿಗೆ ಬೇಕಾದ ಜಲಪಾತ್ರಗಳನ್ನು ಕೊಟ್ಟಮೇಲೆ ಸುಪ್ರೀಮ್ ಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಟಿ. ಎಲ್. ವೆಂಕಟ್ರಾಮ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ಎಲ್ಲಾ ಬಾಲಕರಿಗೂ ಏಕಕಾಲದಲ್ಲಿ ಬ್ರಹ್ಮೋಪದೇಶವು ನಡೆಯಿತು. ಅಧ್ಯಕ್ಷರು ಮಾತನಾಡುತ್ತಾ, ದ್ರವ್ಯಯಜ್ಞಕ್ಕಿಂತ ಜ್ಞಾನಯಜ್ಞ ಶ್ರೇಷ್ಠ, ಬ್ರಹ್ಮಜ್ಞಾನಕ್ಕೆ ತಳಹದಿಯಾದ ಈ ಉಪನಯನವು ಬ್ರಹ್ಮೋತ್ಸವವೆನಿಸುತ್ತದೆ. ನಾಸ್ತಿಕವಾದವು ತ್ಯಜ್ಯವಾದದು ಆಸ್ತಿಕವಾದವನ್ನೇ ಸ್ವೀಕರಿಸಬೇಕು. ಉಪನಯನವು ಬ್ರಹ್ಮಜ್ಞಾನಕ್ಕೆ ಕಾರಣವಾದ ಎರಡನೆಯ ಜನ್ಮ. ಗುರುಕುಲವಾಸದ ಆವಶ್ಯಕತೆ, ಸ್ವರಶುದ್ಧಿಯಿಂದ ಮಂತ್ರಪಠನವೇ ದೇವತೆಗಳಿಗೆ ಪ್ರಿಯವಾದದ್ದು, ಸಂಸ್ಕೃತ ಜ್ಞಾನದಿಂದಲೇ ವೇದಾರ್ಥವನ್ನು ತಿಳಿಯಲು ಸಾಧ್ಯ.

ಇವೇ ಮುಂತಾದ ವಿಷಯಗಳನ್ನು ಸಾಧಿಸಿ ಸರ್ವಧರ್ಮಗಳಿಗೂ ಮೂಲವಾದ ಧರ್ಮೋಪನಯನವನ್ನೂ ಅದು ಮುಗಿದ ಕೂಡಲೇ ಒಂದು ತಿಂಗಳಿನ ವರೆಗೆ ನಡೆಯಲಿರುವ ಗುರುಕುಲವಾಸದ ವ್ಯವಸ್ಥೆಯನ್ನು ಮಾಡಿಸಿದ ಈ ಧರ್ಮಸಂಸ್ಥೆಯ ಮುಖ್ಯ ಟ್ರಸ್ಟಿಗಳಾದ ಶ್ರೀ ಕೆ. ಸೀತಾರಾಮರಾಯರನ್ನು ಹೊಗಳಿದರು.

ಸಂಜೆ ಡಾ| ವಿ. ರಾಘವನ್ ಅವರ ಅಧ್ಯಕ್ಷತೆಯಲ್ಲಿ ದೊಡ್ಡ ಸಭೆಯು ನಡೆಯಿತು. ಸಂದೇಶಗಳನ್ನೂ ಶ್ರೀ ಜಿ. ಕೆ. ತಿಮ್ಮಣ್ಣಾಚಾರ್ಯರು ಪಠಣಮಾಡಿದರು. ಅಧ್ಯಕ್ಷರು ಮಾತನಾಡುತ್ತಾ ಗಾಯತ್ರೀ ಮಾತೆಯಿಂದ ಏರ್ಪಡುವ ಎರಡನೆಯ ಜನ್ಮವು ಸಕಲ ವೈದಿಕರಿಗೂ ಅತಿಮುಖ್ಯವೆಂದು ಇದರ ಸುವ್ಯವಸ್ಥಿತ ಏರ್ಪಾಡುಗಳನ್ನು ಮಾಡಿದ ಈ ಧರ್ಮ ಸಂಸ್ಥೆಯ ಧರ್ಮಕರ್ತರಾದ ಶ್ರೀ ಕೆ. ಸೀತಾರಾಮರಾಯರ ಪ್ರಯತ್ನವು ಸರ್ವಮಾನ್ಯವೆಂದು ಹೇಳಿದರು.

ಹಲವರ ಶುಭಾಶೀರ್ವಾದಗಳಾದ ಬಳಿಕ ಶ್ರೀ ಸೀತಾರಾಮರಾಯರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಇದೀಗ ಪ್ರಕಟವಾಗಿದೆ!

ಮೇರಿ ಕೊಟ್ಟ ಬೆಂಡೋಲೆ

ಯಸ್. ಸದಾಶಿವರಾಯರ ಕಥಾಸಂಕಲನ.
ಮುನ್ನುಡಿ: ನಿರಂಜನ

ತ್ರಿವರ್ಣ ರಕ್ಷಾಪತ್ರ — ಬೆಲೆ: ರೂ. ೧=೮೦

ಪ್ರತಿಗಳಿಗೆ—
ನವಯುಗ ಪ್ರೆಸ್, ಉಡುಪಿ

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೊಟೆಲ್ ಶಿವಪ್ರಸಾದ

ಫೋನ್: 77 — ಕುಂದಾಪುರ, ದ. ಕ.

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು..........

ಭಾರತದ ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಗೇಹ ರಾಜ್ಯದಲ್ಲಿ

ಕೊನೆಗೂ ಎರಡು ಬಿಂದು ಕಣ್ಣೀರೇ....

೫

"ಮರಾಠಿಗಳು ಇಷ್ಟೆಲ್ಲಾ ಮಾಡ್ತಾರೆಂತ ನಾನು ಕನಸಿನಲ್ಲೂ ಕಲ್ಪಿಸಿರಲಿಲ್ಲ..."

"ಆದರೂ ನೋಡು, ಕೆಲವೊಮ್ಮೆ ಕಲ್ಪನೆಗೂ ನಿಲುಕಲಾರದುದು ಸತ್ಯವಾಗುವುದಿದೆ."

"ಅದು ಹೌದೂಂಚನ್ನಿ. ಇಲ್ಲವಾದರೆ, ಚಳವಳ ಮಾಡುವ ವಿಧಾನವೆಂದರೆ ಇದುವೇನೆ?"

"ಅಯ್ಯೋ ಪಾಪವೆ! ಹೆಂಗಸರ ಕಣ್ಣು ಸಮುದ್ರದಲ್ಲಿಯೇ ತೇಲುತ್ತಿದೆ ಅನ್ನೋದು ಸ್ಪಷ್ಟವಾದಂತಾಯ್ತು....'

"ಅಲ್ರಿ, ನೋಡಿ, ಎಂತಹ ಹೃದಯವಿದ್ರಾವಕ ದೃಶ್ಯವಿದು....ಒಂದೇ ಬೋಗಿಯಲ್ಲಿ ಏಳು ಗಂಡಸರು, ಏಳು ಹೆಂಗಸರು ಸತ್ತು ಹೋದರಂತೆ...ಇವರಲ್ಲಿ ನಾಲ್ಕೈದು ವರ್ಷದ ಹಸುಗೂಸೂ ಇದ್ದಿತಂತೆ...'

'ಹ್ಞೂಂ..."

'ಗರ್ಭಿಣಿ ಸ್ತ್ರೀ...".

"ಸಾಕಮ್ಮ, ಅದನ್ನೆಲ್ಲಾ ಏನು ಅನ್ನೋದು? ಕಡಿದ ನೀರು ಕಟ್ಟೆಗೆ ಬರುವುದಿಲ್ಲ....'

'ಅದು ಸರೀನ್ನಿ. ಆದರೂ ಇದನ್ನೆಲ್ಲ ನೆನೆದಾಗ ಕುತ್ತಿಗೆ ಕಟ್ಟಿ ಬರುತ್ತದೆ; ಕಣ್ಣಿನಲ್ಲಿ ನೀರು ಕೋಡಿ ಹರಿಯುತ್ತದೆ."

'ಹೆಂಗಸರ ಪ್ರಬಲಾಸ್ತ್ರ ಹೀಗೆಲ್ಲಾ ವ್ಯರ್ಥವಾಗಿ ಹೋದರೆ ಹೇಗೆ?"

"ಸಾಕು ಬಿಡೀಂದ್ರೆ ೨೨ ಜನರು ಅದೇ ಕ್ಷಣ ನಿಧನರಾದಾಗ, ೨೧ ಜನ ತೀವ್ರ ಜಖಂಗೊಂಡಾಗ ನಿಮಗೆ ಎಳ್ಳನಿತೂ ಕನಿಕರ ಮೂಡಲಿಲ್ಲ?"

'ಅಯ್ಯೋ, ಯಾಕೆ ರೇಗ್ತೀಯಾ?'

'ನೋಡಿ, ರಾಷ್ಟ್ರಪತಿಗಳೂ ತಮ್ಮ ಶೋಕ ಪ್ರದರ್ಶನ ಮಾಡಿದ್ದಾರೆ....'

'ಸರಿಯಮ್ಮ, ಆದರೆ ನೋಡು, ಬರಿಯ ಕನಿಕರ, ಸಹಾನುಭೂತಿ, ಶೋಕ ಪ್ರದರ್ಶನಗಳಿಂದ ಸತ್ತವರು ಮರಳುತ್ತಾರೆಯೆ? ಗಾಯಗೊಂಡವರು ಗುಣ ಹೊಂದುತ್ತಾರೆಯೆ?"

'ಅಂದರೆ, ಶೀಘ್ರ ವಿಧಿವಾದಿಗಳಾಂತಾಯ್ತು..."

'ಯಾಕೆ?'

'ರಾಮೇಶ್ವರಕ್ಕೆ ಹೋದರೇನು,ಶನೀಶ್ವರನ ಕಾಟ ತಪ್ಪಲಿಲ್ಲ ಅಂದ ಹಾಗೆ ಅವರವರ ಪ್ರಾರಬ್ಧಕರ್ಮ ಊರು ಬಿಟ್ಟರೂ ದೂರವಾಗಲಿಲ್ಲ; ಈ ದುರಂತಕ್ಕೆ ಗುರಿಯಾದರೂಂತ ತಾನೇ ನೀವಂದದ್ದು?'

'ದುರಂತದ ಪರಿಣಾಮದ ಬಗ್ಗೆ ಮತ್ತೇನು ಅನ್ನೋದು? ನಮ್ಮ ದೇಶದಲ್ಲಿ ಇದೆಯಲ್ಲಾ ಒಂದು ವಿಧಿ ಅನ್ನೋದು? ಕಾರ್ಯಕೆಟ್ಟ ಮೇಲೆ ಅದರ ದುಷ್ಪರಿಣಾಮದ ಪಾಪವನ್ನು ವಿಧಿಯ ತಲೆಯ ಮೇಲೆ ಹೊರಿಸಿ ಬಿಡುವ ಸತ್ ಸಂಪ್ರದಾಯ...."

'ಅಂದ್ರೆ?'

"ನೋಡು, ದೇಸೂರ ಬಳಿಯಲ್ಲಿ ಅಪಘಾತಕ್ಕೆ ಗುರಿಯಾದ ಬೆಂಗಳೂರು–ಪೂನಾ ಎಕ್ಸ್‌ಪ್ರೆಸ್ ಬೆಂಗಳೂರಿಂದ ಹೊರಡುವಾಗ ಸುದೈವಿಯಾಗಿಯೇ ಹೊರಟಿತ್ತು.'

"ಹೇಗೆ ಹೇಳುತ್ತೀರಿ?"

'ಆಗ ಅದು ದುರ್ದೈವಿಯಾಗಿರಲಿಲ್ಲ; ಆದುದರಿಂದ ಮುಂದೆ ಬೀರೂರು; ಹರಿಹರ, ಹುಬ್ಬಳ್ಳಿ, ಧಾರವಾಡ ಇವೆಲ್ಲವನ್ನೂ ದಾಟುವಾಗಲೂ ಅದು ದುರ್ದೈವಿಯಾಗಿರಲಿಲ್ಲ; ಮತ್ತೆ ದೇಸೂರಿನಲ್ಲಿ ಅಪಘಾತ ಸಂಭವಿಸುವ ಒಂದು ಕ್ಷಣ ಮೊದಲಿನ ವರೆಗೂ ಅದು ಸುದೈವಿ; ಇಂಜಿನು ಹಳಿ ತಪ್ಪಿತು, ಗಾಡಿ ಮಗುಚಿ ಬಿತ್ತು—ಸರಿ ಅಲ್ಲಿಗೆ ದುರ್ದೈವಿ....'

'ಏನು ಹೇಳೋದು ನೀವು?'

"ಕೇಳು, ಇನ್ನೂ ಸ್ವಾರಸ್ಯ....ಒಂದೇ ಗಾಡಿಯಲ್ಲಿ ಆರು ಬೋಗಿಗಳು ಹಳಿತಪ್ಪಿಲ್ಲ; ಅವು ಸುದೈವಿ ಬೋಗಿಗಳಾದವು. ಹಳಿ ತಪ್ಪಿದ ಬೋಗಿಗಳಲ್ಲಿನ ಪ್ರಯಾಣಿಕರಲ್ಲಿ ಸತ್ತರು ಕೆಲವರು, ಇವರಿಗೆ ಬೋಗಿ ಅದೃಷ್ಟವಿಧಿ; ಗಾಯಗೊಂಡವರಿಗೆ ಅರೆ ಅದೃಷ್ಟ, ಬದುಕುಳಿದವರಿಗೆ ಮಹಾ ಸುದೈವಿ....ನೋಡು, ಕಾಣದ ವಿಧಿ, ಮಾಕ ಗಾಡಿಯನ್ನು ಯಾರು ಯಾರು ಹೇಗೆ ಕರೆಯಬಹುದೂಂತ..."

'ಅದು ಏನೇ ಇರಲಿ, ಅದ್ರಲ್ಲೆಲ್ಲಾ ಚರ್ಚೆ ಯಾಕೆ? ನನಗಂತೂ ಈ ಅಪಘಾತವು ಮರಾಠಿಗಳದೇ ದುಷ್ಕೃತ್ಯದಿಂದಾದುದಾದರೆ ಮುಂದೇನೂಂತ ಕಾಣಿಸೋದಿಲ್ಲ...."

'ಇದರಲ್ಲಿ ಸಂದೇಹಕ್ಕೆ ಆಸ್ಪದಕಡಿಮೆ. ಇದರ ಆಸುಪಾಸು ಮರಾಠಿಗಳ ಕೀಟಲೆಯ ಕೇಂದ್ರ. ಆದ್ರೆ ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದಕ್ಕೂ ಬೆಂಗಳೂರು–ಪೂನಾ ರೇಲು ಗಾಡಿಗೂ ಯಾವ ಬಾದರಾಯಣ ಸಂಬಂಧಾಂತ....'

'ಸಂಬಂಧ ಇಲ್ಲದೆ ಏನ್ರಿ! ಕರ್ನಾಟಕದಿಂದ ಬರುತ್ತಿರುವ ಎಕ್ಸ್‌ಪ್ರೆಸ್ ಅಲ್ಲವೆ?'

'ಅದು ಹೌದು.'

"ಇಲ್ಲವಾದ್ರೆ ಫಿಶ್ ಪ್ಲೇಟ್ ಮತ್ತು ನಟ್ ಬೋಲ್ಟ್‌ಗಳನ್ನು ಕಾಚಿ ರಾತಿಮೂಡಿಟ್ಟಿರೋದು ಯಾಕೇಂತ? ಯಾವ ಯಾವದೋ ಊರಿನವರು ಎಲ್ಲೆಲ್ಲಿಗೋ ಹೋಗುವವರಿರುವಾಗ, ಅವರ ಪ್ರಾಣಕ್ಕೆ, ದೇಹಕ್ಕೆ, ಸುಖ ಪ್ರವಾಸಕ್ಕೆ ಹಾಗೂ ದೇಶಕ್ಕೆ ಈ ಪುಂಡಾಟಿಕೆ ಅಡ್ಡ ಬರೋದು ಯಾವ ಮಾನವತ್ವ?'

"ನ್ಯಾಯ––ಅನ್ಯಾಯದ, ಮಾನವತೆ —ಅಮಾನವತೆಯ ತಿಲಾಂಶ ಜ್ಞಾನವಿದ್ದವರು ಇಂತಹ ದುಷ್ಕೃತ್ಯಕ್ಕೆ ಎಳಸುವುದಿಲ್ಲ."

'ಹೀಗೆಯೇ ಮುಂದುವರಿದರೆ?'

'ಮುಂದುವರಿಯಗೊಡಬಾರದು."

'ಹೇಗೆ?'

"ಹೇಗೇಂದ್ರೆ....ಹ್ಞೂಂ, ನೋಡು, ಗಡಿ ವಿವಾದ—ಅದಕ್ಕಾಗಿ ನಡೆಸುವ ಚಳುವಳಿಯಿಂದ ಈ ಕೃತ್ಯ ಪ್ರೇರಿತವೆಂದಲ್ಲವೆ ಹೇಳುವುದು?'

"ಹ್ಞೂಂ....'

"ಅದು ಇನ್ನಿಲ್ಲದಂತೆ ಮಾಡಬೇಕು...'

'ಅದು ಹೇಗೆ?'

'ಕರ್ನಾಟಕ–ಮಹಾ ರಾಷ್ಟ್ರಗಳೆರಡನ್ನೂ ಒಂದು ಸೇರಿಸಿ ಏಕರಾಜ್ಯ ನಿರ್ಮಾಣವಾಗಬೇಕು....'

"ಮುಂದೆ...."

'ಹೀಗೆ ಮಾಡುವುದರಿಂದ ಈ ಗಡಿ ವಿವಾದ–ಪುಂಡಾಟಿಕೆ ನಿಲ್ಲುವುದಲ್ಲದೆ ಇದರೊಡನೆ ಗೋವೆಯ ಮಹಾ ಪ್ರಶ್ನೆಯೂ ಸರಳವಾಗಿ ಬಗೆ ಹರಿಯುವುದು...'

'ಭಾರೀ ಚಲೋ ಆಲೋಚನೆ....ಆದರೆ ಮೇಲೆ ಕೇರಳ, ತಮಿಳುನಾಡು ಆಂಧ್ರಗಳನ್ನೂ ಇದಕ್ಕೆ ಸೇರಿಸಿ ಬಿಟ್ಟರೆ ಮತ್ತೆ ದಕ್ಷಿಣದಲ್ಲಿ ಗಡಿ ವಿವಾದವೇ ಇಲ್ಲವೆಂದಾಗಿ ಶಾಂತಿ ನೆಲಸುತ್ತದೆ ಅಲ್ವೆ?"

"ಅದು ಮಾತ್ರ ಕಷ್ಟ...'

'ಏಕೆ?'

'ಪುಂಡ ಜನರು ಎಂದಿಗೂ ಸುಮ್ಮನಿರುವುದಿಲ್ಲ. ಅವರಿಗೊಂದು ಸತ್ಯಾಗ್ರಹವೋ, ದುರಾಗ್ರಹವೋ ಏನಾದರೂ ಬೇಕು. ಅದಕ್ಕಾಗಿ ಅವರು ಏನಾದರೊಂದು ಮಾಡ ತೊಡಗುತ್ತಾರೆ....'

'ಏನು ಮಾಡಬಹುದು?'

"ತಾರಾಸಿಂಗರನ್ನು, ಫತ್ತೇಸಿಂಗರನ್ನು ಅನುಕರಿಸಬಹುದು..."

'ಅಂದರೆ, ವಿಭಜನೆಯ ಬಗ್ಗೆ ಮತ್ತೆ ಹೋರಾಟ ಮಾಡಬಹುದು···"

'ಬಹುದು ಏನು, ಮಾಡುತ್ತಾರೆ....ಹೇಳಿಲ್ಲವೆ, ಪುನರಪಿ ಜನನಂ ಪುನರಪಿ ಮರಣಂ....ಅಂತ. ಹಾಗೆ...."

'ಹಾಗಾದರೆ, ಈ ಪುಂಡರನ್ನು ದಂಡಿಸುವ ಯಾವ ವಿಧಾನವೂ ಇಲ್ಲವೆ?"

"ಇಲ್ಲದೆ ಉಂಟೆ? ನಾನು ನಿನ್ನನ್ನು ದಂಡಿಸುವುದಿಲ್ಲವೆ ಹಾಗೆ.'

'ಓ, ವಿನೋಬಾರ ರೀತಿಯಿಂದ?'

'ಹ್ಞೂಂ... "

'ಅದು ಕಾನೂನಿಗೆ ವಿರುದ್ಧವಲ್ಲವೆ?'

'ನನಗೂ ನಿನಗೂ ಮಾನವತೆಯ ಕಾನೂನೊಂದೇ ಬಂಧನ, ಈ ಕಿಡಿಗೇಡಿಗಳನ್ನೂ ಅದು ಸರಿದಾರಿಗೆ ತಂದೀತೋ ಪ್ರಯತ್ನಿಸಬಹುದು. ಆದಕ್ಕೆ ಮಹಾರಾಷ್ಟ್ರ—ಕರ್ನಾಟಕ ಒಂದಾದರೂ ಆಗಬಹುದು..."

"ಇವೆಲ್ಲಿ ಆಗುತ್ತೆ....ಕನ್ನಡವನ್ನೇ ಬಿಡಬೇಕೂಂತನ್ನೋವ್ರು...."

'ನೋಡು, ಬಂಗಾಲ — ಬಿಹಾರಗಳ ಮಧ್ಯೆ ಇಂತಹುದೇ ವಿವಾದವಿತ್ತು. ನಾವು ಒಂದಾಗುವ ಸಾಧ್ಯತೆಯಿದೇಂತ ಅಲ್ಲಿನ ಮುಖ್ಯ ಮಂತ್ರಿಗಳು ಹೇಳಿದ್ದೇ ತಡ, ಗಡಿ ವಿವಾದ ನಿಂತು ಬಿಟ್ತು...."

'ಭಾರೀ ಚಲೋದು ಇದು. ಆದ್ರೆ ಮರಾಠಿಗರನ್ನು ಸರಿದಾರಿಗೆ ತರೋಕೆ ಅವರಂತೆಯೇ ದಾನವತೆಯೇ ಬೇಕು....'

"ನೋಡು ಹಾಗನ್ನಬೇಡ. ಏನೋ ಕೆಲವರು ಹಾಗಿರಬಹುದು. ಕೈಯ ಬೆರಳುಗಳೆಲ್ಲಾ ಸಮಾನವಿದೆಯೆ?'

"ಓ, ನೋಡಿ, ಈವತ್ತು ತೆಂಗಿನ ಕತ್ತ ಕೀಳುವಾಗ ಕೈಬೆರಳು ಗಾಯವಾಯ್ತು. ಆಯ್....'

'ಅಯ್ಯೋ, ಪಾಪವೆ! ಎಲ್ಲಿ ನೋಡೋಣ...."

"........"

'ಏನಿದು? ಮೊದಲೇ ಚಿಗುರೆಲೆಯಾದ ಬೆರಳುಗುರು ಕ್ರಮಶಃ ಕೆಂಪಾಗಿದೆ?"

"ಸಾಕು ಬಿಡೀಂದ್ರೆ ... ಸುರುವಾಯ್ತು ನಿಮ್ಮದೊಂದು...ಹೊರಡಿ ನೋಡೋಣ ...."

'ಕೊನೆಗಾದ್ರೂ ನಿನ್ನ ಶೋಕತಾಪದ ...."

'ಮತ್ತೆಂಥದು? ಅದನ್ನೆಲ್ಲಾ ಕಟ್ಟಿಕೊಂಡು...."

'ಅಷ್ಟೇ....ಕೊನೆಗೂ ಎರಡು ಬಿಂದು ಕಣ್ಣೀರಿನಲ್ಲೇ ಸಂದಾಯ....ನಾಳೆ ನನಗೂ....'

'ಶೂ... ಬಾಯಿ ಮುಚ್ಚಿ...."

'ಹ್ಞೂಂಸದ್ಯ ...ಅಷ್ಟಾದ್ರೆ ಸಾಕು...'

— ಗೋರಾ.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಕೃತಜ್ಞತಾ ಸಮರ್ಪಣೆ

ನನ್ನ ಪುತ್ರಿ ಚಿ। ಸೌ। ಶ್ಯಾಮಲ ಇವಳ ವಿವಾಹ ಸಮಾರಂಭವು ಶ್ರೀ ಬಸ್ರೂರು ತೀಜಪ್ಪ ಶೆಟ್ರ ಪುತ್ರ ಚಿ| ಸುಧಾಕರನೊಂದಿಗೆ ತಾ. 29-5-66ರಂದು ಕುಂದಾಪುರ ಕಲಾಮಂದಿರದಲ್ಲಿ ತಮ್ಮೆಲ್ಲರ ಸಹಕಾರ ಹಾಗೂ ಆಶೀರ್ವಾದದಿಂದ ವಿಜೃಂಭಣೆಯಿಂದ ನೆರವೇರಿತು.

ಈ ಶುಭ ಸಮಾರಂಭಕ್ಕೆ ಆಗಮಿಸಿ ವಧೂವರರನ್ನು ಆಶೀರ್ವದಿಸಿದ, ಉಡುಗರೆಗಳನ್ನಿತ್ತ ಹಾಗೂ ಶುಭಕೋರಿಕೆಯನ್ನು ಕಳುಹಿಸಿ ಕೊಟ್ಟ ಮಹನೀಯರಿಗೆಲ್ಲ ಪ್ರತ್ಯಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸಲು ಅಸಾಧ್ಯವಾದ ಪ್ರಯುಕ್ತ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಬಿ. ಎಸ್. ಜಗನ್ನಾಥ ಶೆಟ್ಟಿ
ಕಂಟ್ರಾಕ್ಟರ್, ಕುಂದಾಪುರ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ರೈತ ಮುರುಗ

(ಎರಡನೇ ಪುಟ ದಿಂದ)

"ಅದು ಭಯಾನಕವಿದೆ, ರಾಜ್, ಒಂದು ಕಡಿದಾದ ಪರ್ವತವನ್ನು ಏರಲು ನಿಮ್ಮನ್ನು ಕೇಳಿಕೊಂಡರು. ಅಲ್ಲಿಂದ ಒಂದು ಆಳವಾದ ಕಣಿವೆಗೆ ಜಿಗಿಯಲು ಹೇಳಿದರು. ಕಣಿವೆಯಲ್ಲಿ ಬೋರ್ಗರೆಯುತ್ತಿರುವ ನದಿ ಹರಿಯುತ್ತಿತ್ತು. ಮೊದಲು ಜನಜಂಗುಳಿ ನಿಮಗೆ ಜಯಕಾರ ಹಾಕಿತು. ಎಲ್ಲರಿಗೂ ಆಶ್ಚರ್ಯವಾಗುವಂತೆ ನೀವು ಮೇಲಕ್ಕೆ ಹೋದಿರಿ, ಅಲ್ಲಿಂದ ಹಕ್ಕಿಯ ಹಾಗೆ ಹಾರಿದಿರಿ. ನಿಮ್ಮ ಪ್ರತಿಸ್ಪರ್ಧಿಗಳು ಕೂಡಾ ಹಾಗೆ ಹೋದರು, ಆದರೆ ಅಷ್ಟು ಸುಲಭದಿಂದಲ್ಲ. ನೀವು ಬಹುಮಾನವನ್ನು ಪಡೆದಿರಿ. ಆದರೆ ಹಾಗೆ ಜಿಗಿದುದರಿಂದ ನಿಮಗೆ ಬಹಳ ಆಯಾಸವಾಗಿರುತ್ತದೆ. ಅನಂತರ ಸ್ವಲ್ಪ ಸ್ವಲ್ಪ ಸ್ಮೃತಿ ತಪ್ಪುತ್ತದೆ. ಬಂಡೆಯು ಬಹಳ ಕಡಿದಾಗಿದ್ದು ಜಾರುವಂತಹದ್ದಿದೆ. ನಿಮ್ಮ ಕಾಲುಗಳ ಹಿಡಿತ ತಪ್ಪುತ್ತವೆ. ಆಗ – ಅಯ್ಯೋ! — ಪ್ರತಿಸ್ಪರ್ಧಿಗಳು ನಿಮ್ಮ ಕಾಲನ್ನೆಳೆಯುತ್ತಾರೆ. ಹಿಂದಿನಿಂದ ಪ್ರೇಕ್ಷಕರು ನಿಮ್ಮ ಮೇಲೆ ಕಲ್ಲೆಸೆಯುತ್ತಾರೆ. ನಿಮ್ಮನ್ನು ಆಳದ ಕಣಿವೆಯೊಳಗೆ ನೂಕಿ ಬಿಡುತ್ತಾರೆ. ನೀವು ಭಯಂಕರ ಸ್ವರದಿಂದ ಕೂಗುತ್ತ ತಲೆ ಕೆಳಗೆ ಕಾಲು ಮೇಲಾಗಿ ಬಿದ್ದು ಬಿಡುತ್ತೀರಿ. ಪರ್ವತದ ಇಳಿಜಾರಿನಲ್ಲಿರುವ ದಟ್ಟವಾದ ಮರಗಳು ನಿಮ್ಮನ್ನು ಅಡಗಿಸಿ ಇಟ್ಟುಕೊಳ್ಳುತ್ತವೆ. ನೀವು ಮೇಲೆ ಸಿಡಿದಾಗಾದ ಶಬ್ದ ಮಾತ್ರ ನನಗೆ ಕೇಳಿ ಬರುತ್ತದೆ. ಬೇರೇನೂ ಕಾಣಲಿಲ್ಲ. ನಾನಾಗ ಕೂಗಿಕೊಂಡೆ. ಆಗ ಎಚ್ಚರವಾಯಿತು. ನೋಡುವಾಗ ನೀವಿಲ್ಲಿ ಕುಳಿತುಕೊಂಡಿದ್ದೀರಿ. ಆದರಿಂದಾಗಿ ಅದು ಬರಿಯ ಸ್ವಪ್ನವೆಂದು ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಕ್ಕಿದೆ." ಬಹಳ ಆಪರೂಪವಾಗಿ ಅಳುತಿದ್ದ ಕೋಕಿಲಂ, ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

'ನೆಮ್ಮದಿಯಿಂದಿರು, ಅದು ಕೇವಲ ಕನಸು ಕಾಣೆ,' ಮಾತಾಡುತ್ತಿದ್ದಾಗಲೇ ಕೇದಾರಿ ನಡುಗುತ್ತಿದ್ದನು.

'ಈಗ ಹೊತ್ತೇಷ್ಟಾಯಿತು?"

"ಮೂರು ಘಂಟೆ, ಬೆಳಗಾಗಲು ಇನ್ನೂ ಎರಡು ಗಂಟೆ ಇದೆ."

"ಹ್ಞಾ! ಅದು ನಿಜವಾಗುತ್ತದೆ,ರಾಜ್, ಎಚ್ಚರಿಕೆಯಿಂದಿರಿ. ಯಾವದೋ ಭಯಂಕರ ಪೀಡೆ ನಿಮಗಾಗಿ ಕಾದಿಸಿಂತಿದೆ;ನಾಚಿಕೆ, ಅಪಮಾನ ಅಥವಾ ಜೀವಕ್ಕೆ ಏನಾದರೂ ಅಪಾಯ ಇರಬಹುದು. ನಾನು ಜ್ಯೋತಿಷಿಯ ಮಗಳಿದ್ದೇನೆ. ನಾನು ಹೇಳಿದುದು ಸುಳ್ಳಾಗಲಿಕ್ಕಿಲ್ಲ."

'ಅಸಾಧ್ಯ! ಪ್ರಿಯೆ, ಅಂತಹದೇನೂ ಘಟಿಸಲು ಸಾಧ್ಯವಿರುವದಿಲ್ಲ. ಅದು ಕೇವಲ ದುಸ್ವಪ್ನ. ಕೋಕಿಲಂ, ಅದು ಬಹುಶಃ ಮಾತ್ರಜನಕಾಗದ ಉಪದ್ರದಿಂದಿರಬಹುದು. ಈ ಕೆಲ ತಿಂಗಳಿನಿಂದ ನಿನ್ನದೇಹಕ್ಕೆ ಸುಖವೇ ಇಲ್ಲ. ನಿನ್ನ ಕಣ್ಣುಗಳು ಇದನ್ನು ಸಾರುತ್ತಿವೆ. ರಾಣಿ, ಅಧಿಕಾರದಿಂದ ದೃಢವಾಗಿ ಹೇಳಬೇಕು. ನಾಳೆ ವೈದ್ಯರನ್ನು ಕರೆದು ತರುತ್ತಾನೆ. ಗೃಹಸ್ಥಜೀವನವನ್ನು ಚೆನ್ನಾಗಿ ನಡೆಸಲು ನಾಗರಿಕತೆಯು ನನ್ನನ್ನು ಬಿಡಲಿಲ್ಲ, ನಾನೀಗ ಬದಲಾವಣೆ ಹೊಂದಿದ್ದೇನೆ. ಇನ್ನು ಮುಂದೆ ನಿನ್ನ ಬಳಿಯಲ್ಲೇ ನಾನಿರುತ್ತೇನೆ."

'ನೋಡಿಂದ್ರೆ, ನನ್ನ ಬಲಗಣ್ಣು ಹೇಗೆ ಹಾರುತ್ತಿದೆ ನೋಡಿ. ಅದು ಏನೋ ಕೇಡುಕನ್ನು ಸೂಚಿಸುತ್ತಿದೆ. ಅಯ್ಯೋ! ಭಗವಂತ, ನಮ್ಮನ್ನು, ಮಕ್ಕಳನ್ನು ರಕ್ಷಿಸಿರಿ."

ಕೋಕಿಲಂ ಜೋರಾಗಿ ಅಳಲಾರಂಭಿಸಿದಳು. ಇನ್ನು ಸಳ್ಳು ಪೊಳ್ಳು ಆಶ್ವಾಸನೆಗಳನ್ನು ಕೊಟ್ಟು ಆಕೆಯನ್ನು ಸಂತೈಸಲು ಕೇದಾರಿಯಿಂದಾಗಲಿಲ್ಲ. ಅವನ ಹೃದಯ ಒಳಗಿಂದೊಳಗೆ ಮಿಡಿಯುತ್ತಿತ್ತು. ಆವನು ಹೆಂಡತಿ, ಮಕ್ಕಳ ಎದುರಿಗೆ ಕಣ್ಣೀರು ಸುರಿಸಿದುದು ಇದೇ ಪ್ರಥಮ ಬಾರಿ.

ಚೆನ್ನಾಗಿ ಅತ್ತಾಗ ದುಃಖಿ ಮನುಷ್ಯನ ಹೃದಯ ಹಗುರವಾಗುವಷ್ಟು ಬೇರೆ ಯಾವಾಗಲೂ ಆಗುವದಿಲ್ಲ. ಕೇವಲ ಅರೆತಾಸಿನೊಳಗೆ ಕೋಕಿಲಂ ಮತ್ತು ಕೇದಾರಿ ಶಾಂತವಾಗಿ ನಿದ್ರಾಲೋಕವನ್ನು ಸೇರಿದರು ಪರಸ್ಪರ ಸಹಾಯ ಹಾಗೂ ಧೈರ್ಯಕ್ಕಾಗಿ ಒಬ್ಬರನ್ನೊಬ್ಬರು ತೋಳುಗಳಿಂದ ಬಂಧಿಸಿಕೊಂಡಿದ್ದರು. ಆಲಿಂಗನದ ಸಮಯ ಪ್ರೀತಿ ತನ್ನಿಂದ ತಾನೇ ಅವನ್ನು ಕೊಡದಿರುವದಿಲ್ಲ.

— ೪೨ —

ಈ ಸಲ ರಾಮು ಮದ್ರಾಸಿಗೆ ಬಂದಾಗ ಅವನಿಗೆ ಬಿಡುವು ಇರಲಿಲ್ಲ. ನಾಗಲಾಪುರಂ ಪರ್ವತ ಪ್ರದೇಶದಲ್ಲಿದ್ದ ಜನರ ಹಕ್ಕು ಬಾಧ್ಯತೆಗಳನ್ನು ಕಾಯಿದೆ ಪ್ರಕಾರ ತೆಗೆದು ಹಾಕಿರುವದನ್ನು ಪುನಃ ತೆಗೆಸಿಕೊಡುವ ಜವಾಬ್ದಾರಿಯುತ ಕಾರ್ಯದಲ್ಲಿ ಬಿಡುವಿಲ್ಲದವನಾಗಿದ್ದ. ತನ್ನ ಅದ್ಭುತ ಆಲೋಚನೆಯನ್ನು ಸರಕಾರವು ಸ್ವೀಕರಿಸುತ್ತದೋ, ಇಲ್ಲವೋ, ಎಂಬ ಅಪನಂಬಿಕೆ ಅವನಲ್ಲಿ ಮನೆಮಾಡಿತ್ತು. ಕೆಲರಿಗೆ ರಾಮುವಿನ ಮೇಲೆ ಪೂರ್ಣ ನಂಬಿಕೆ ಇದ್ದುದರಿಂದ ಅವನ ಉದ್ದೇಶಕ್ಕೆ ಪೂರ್ಣ ಜಯಸಿಕ್ಕಿತು. ಅವನ ಲೋಕ ನುರಾಗವುಳ್ಳ ಹಂಚಿಕೆಗಳನ್ನು ಪತ್ರಿಕೆಗಳು ಹಾಗೂ ಸಾರ್ವಜನಿಕರು ಮುಕ್ತಕಂಠದಿಂದ ಹೊಗಳುತ್ತ ಇದ್ದರು. ವೈಯುಕ್ತಿಕವಾಗಿ ಪ್ರಾಂತ್ಯಪಾಲರಿಗೂ ಬಹಳ ಸಂತೋಷವಾಗಿತ್ತು. ಕೇವಲ ಒಂದು ಹಿಡಿ ಶ್ರೀಮಂತರಿಗಾಗಿ ಕಾನೂನಿನ ಆಧಾರದ ಮೇಲೆ ದಿನಕಳೆಯುವ ಬದಲು, ಹಲವಾರು ಬಡ ಬಗ್ಗರಿಗೆ ಸಹಾಯಾರ್ಥವಾಗಿ ಅಧಿಕಾರವನ್ನು ಪಯೋಗಿಸಿಕೊಳ್ಳುವದು ಮೇಲೆಂದ ಅವರು ಅಭಿಪ್ರಾಯಪಟ್ಟರು.

ಒಂದು ದಿನ ರಾಮು ಸಮುದ್ರ ದಂಡೆಯ ಮೇಲೆ ನಡೆಯುತ್ತಿದ್ದ. "ಬತ ಕೇದಾರಿ! ಆಕಾಶ ಬಾಣದಂತೆ ಮೇಲಕ್ಕೆ ಹೋದವ ಒಂದೇ ಒಂದು ದಿನದಲ್ಲಿ ದೊಪ್ಪನೆ ಕೆಳಗೆ ಬಿದ್ದಿದ್ದಾನೆ, ತನ್ನ ಅರಮನೆಯಂತೆ ಇರುವಮನೆಯನ್ನು ಹಾಗೂ ಹೆಂಡತಿಮಕ್ಕಳನ್ನು ಬಿಟ್ಟು ಪರಾರಿಯಾಗಿದ್ದಾನೆ." ನ್ಯಾಯವಾದಿಯಂತೆ ಕಂಡು ಬರುತ್ತಿದ್ದವನೊಬ್ಬನು ತನ್ನ ಬಳಿಯಲ್ಲಿದ್ದವನಿಗೆ ಹೇಳುತ್ತಿದ್ದ ಮಾತು ಅಕಸ್ಮಾತ್ ರಾಮುವಿನ ಕಿವಿಯ ಮೇಲೆ ಬಿತ್ತು.

ರಾಮು ತನ್ನ ಕಾರ್ಯಗಳಲ್ಲೇ ತನ್ಮಯನಾಗಿದ್ದರೂ, ಕೇದಾರಿಯು ಕಷ್ಟದಲ್ಲಿ ಸಿಲುಕಿಕೊಂಡಿದ್ದಾನೆಂಬ ವಿಷಯವನ್ನು ತಿಳಿದುಕೊಂಡನು. ಕೇದಾರಿ ಲೋಕ ಸಭೆಗೆ ಚುನಾಯಿಸಲ್ಪಟ್ಟದ್ದು ಹಾಗೂ ಸತ್ಕಾರ ಕೂಟಗಳನ್ನು ಪಡೆಯುತ್ತಿದ್ದುದನ್ನು ಆವನು ಪತ್ರಿಕೆಗಳಲ್ಲಿ ಓದಿದ್ದನು. ಹಾಗೆಯೇ ಅವನ ಚುನಾವಣೆ ಅಸಿಂಧುವೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವ ಅರ್ಜಿಗಳು ಬಂದಿರುವದೂ ಅವನಿಗೆ ಗೊತ್ತಾಗಿತ್ತು. ಈ ಅಶುಭ ಚಿನ್ಹೆ ಬೇಗನೆ ಮಾಯವಾಗಬಹುದೆಂದಾತನ ಣಿಸಿಕೊಂಡಿದ್ದನು.

ಈಗ, ಮದ್ರಾಸಿನಿಂದಾತ ಪರಾರಿಯಾಗಿದ್ದಾನೆಂಬುದನ್ನು ಕೇಳಿದೊಡನೆ ಕೋಕಿಲಂ ಹಾಗೂ ಆಕೆಯ ಮಕ್ಕಳ ಚಿತ್ರ ಅವನ ಕಣ್ಮುಂದೆ ಬಂತು. ಕೂಡಲೇ ಅವರನ್ನು ಕಾಣಬೇಕೆಂದಾತನೆಣಿಸಿಕೊಂಡನು.

ಅದೇ ಸಂದರ್ಭದಲ್ಲಿ ಪತ್ರಿಕೆಗಳನ್ನು ಮಾರುತ್ತಿದ್ದ ಹುಡುಗನ ಸ್ವರ ಅವನನ್ನು ಎಚ್ಚರಿಸಿತು. ಕೂಡಲೇ ಹಣ ಕೊಟ್ಟು ಅಂದಿನ ಪತ್ರಿಕೆಯನ್ನು ಪಡೆದುಕೊಂಡನು. ಅವನಿಗೆ ಪೂರ್ತಿ ವಾರ್ತೆಗಳನ್ನೋದುವಷ್ಟು ತಾಳ್ಮೆ ಇರಲಿಲ್ಲ. ಕೇವಲ ಶಿರೋನಾಮೆಗಳನ್ನು ಮಾತ್ರ ಅವನು ಓದುತ್ತಿದ್ದನು. ಒಂದೆಡೆ ದಪ್ಪಕ್ಷರಗಳಲ್ಲಿ, "ಲೋಕ ಸಭೆಗೆ ಕೇದಾರಿಯ ಚುನಾವಣೆ ಅಸಿಂಧು, ಲಂಚಕೋರತನ ಹಾಗೂ ಅಸಭ್ಯತನ ಇತ್ಯಾದಿ ಭಯಂಕರ ಆಪಾದನೆಗಳು ಬೆಳಕಿಗೆ ಬಂದುವು." ಬರೆದುದ್ದು ಅವನ ಕಣ್ಣುಗಳನ್ನು ಆಕರ್ಷಿಸಿತು. ಅದನ್ನು ಪೂರ್ಣ ಓದುವ ಮನಸ್ಸು ಅವನಿಗಾಗಲಿಲ್ಲ. ಕೆರೆಯ ಚೌಕದಲ್ಲಿರುವ ಕೇದಾರಿಯ ಅರಮನೆ ಸದೃಶ್ಯ ವಾಸಸ್ಥಾನದತ್ತ ಅವನು ಧಾವಿಸಿದನು.

ನಿಜ, ಕಡಲುಕರೆಯ ಕಿವಿ ಮಾತು ಸುಳ್ಳಾಗಿರಲಿಲ್ಲ. ಕೇದಾರಿಗೆ ತನ್ನ ಚುನಾವಣೆಯ ಪ್ರಕರಣದ ಮನವಿಗೆ ಸಿಗುವ ತೀರ್ಪನ್ನು ಮುಂಚೆಯೇ ನಿಶ್ಚಯಿಸಿಕೊಂಡಿದ್ದನು. ಯಾಕೆಂದರೆ ಅವನನ್ನು ನ್ಯಾಯಾಲಯಕ್ಕೆ ಎಳೆದಿದ್ದವರು ಅವನಿಗಿಂತ ಹೆಚ್ಚು ಬುದ್ಧಿವಂತರೂ ಇಲ್ಲ, ಉತ್ತಮ ಗುಣಸಂಪನ್ನರು ಅಲ್ಲ; ಆದರೆ ಕೇವಲ ಹಣವಂತರಿದ್ದರು. ಕೇದಾರಿಯ ಬಳಿಯೂ ಅದೇ ಸಾವಿರ ರೂಪಾಯಿ ಇರುತ್ತಿದ್ದಲ್ಲಿ ಜಯವು ಅವನ ಕಟ್ಟಿಟ್ಟಗಂಟಾಗುತ್ತಿತ್ತು. ಅದು ಅವನಿಗೆ ಮಾತ್ರವಲ್ಲ – ಅವನ ಗುಣಕ್ಕಾಗಿ—ಸಾರ್ವಜನಿಕರಿಂದ ಸತ್ಕಾರಕೂಟಗಳನ್ನು ಒದಗಿಸುತ್ತಿತ್ತು. ಜೀವನದ ಓಟದಲ್ಲಿ ವಿಜಯಕ್ಕೆ ವಿಚಿತ್ರ ಐಂದ್ರಜಾಲಿಕ ಶಕ್ತಿಇದೆ. ಬೆಲೆಇರುವದು ಫಲಿತಾಂಶಕ್ಕೆ; ಯಾವರೀತಿಯಾದರೂ ಚಿಂತಿಲ್ಲ, ಜಯಸಿಗಬೇಕು!

ಕೇವಲ ಸಾಹಸ ಹಾಗೂ ಧೈರ್ಯದಿಂದ ಒಬ್ಬ ಬಡವನು ಮುಂದಕ್ಕೆ ಬರಬಹುದು, ಹಾಗೇ ಶ್ರೀಮಂತರ ಸಾಲಿನಲ್ಲಿಸೇರಬಹುದು. ಅವನು ಕೂಡಾ ಹಾಗೆ ಅವರೊಂದಿಗಿದ್ದನು. ಕೇವಲ ಹಣಮಾತ್ರಲಗ ಮಾತಾಡಬಲ್ಲುದು. ಧೈರ್ಯಶಾಲಿಗಳ ಮೆದುಳುಗಳಿಗೆ ದ್ವಿತೀಯ ಸ್ಥಾನ.

ಠಾಕೂರ್‌ದಾಸ್ ತೋಟದಲ್ಲಿದ್ದ ತೆರೆದ ಬಿಸಿಲು ಮಹಡಿಯಲ್ಲಿದ್ದ ಚಂದ್ರನ ಬೆಳಕು ಕೇದಾರಿಯನ್ನು ಮೌನಿಯನ್ನಾಗಿ ಮಾಡಿದುದಲ್ಲದೆ ತಾತ್ವಿಕ ಬದಲಾವಣೆಯನ್ನುಂಟುಮಾಡಿತು. ಮಾರ್ಕಂಡೇಯರವರ ವರದಿ ಸತ್ಯವಾದಲ್ಲಿ ಜೀವನಗತಿಯೇ ಬದಲಾಗುತ್ತದೆ.

ಬಂದು ನಿರ್ದಿಷ್ಟಕಾರ್ಯದ ಸಫಲತೆಗಾಗಿ ನಾವು ಹಗಲು ರಾತ್ರಿ ಎನ್ನದೆ ಪೂರ್ಣ ಮನಸ್ಸಿನಿಂದ, ಪ್ರಾಣದಾಗೂವ್ಯಯದತ್ತ ಗಮನ ಕೊಡದೆ, ದುಡಿಯುತ್ತೇವೆ, ಇನ್ನೇನು, ವಿಜಯ ವೈಜಯಂತಿಯನ್ನು ಹಾರಾಡಿಸಿದಂತೆ; ಅನ್ನುವಾಗ, ಆ ಆನಂದವನ್ನು ಯಾರಾದರೂ ನಾಶಮಾಡಿಬಿಡುತ್ತಾರೆ. ಆಗ ಪೂರ್ಣ ವಸ್ತುವು ತನ್ನ ಗುಣವನ್ನು ಬಿಟ್ಟುಕೊಡುತ್ತದೆ. ಪ್ರಾಮಾಣಿಕತೆಗೆ ಫಲಕೊಡದಿದ್ದಲ್ಲಿ ಕೊನೆಯಲ್ಲಿ ನಡೆಡೆಯುವುದು ಅಷ್ಟೇ.

ಹೀಗೆ ತತ್ವಗಳನ್ನು ಆಲೋಚಿಸುತ್ತ ಹೋದಾಗ, ಆತನ. ಇಪ್ಪತ್ತು ಸಾವಿರ ರೂಪಾಯಿಗಳನ್ನುಹಿಂದಕ್ಕೆ ಕೊಡಲಿಕ್ಕಿದೆ ಎಂಬುದು ಕೇದಾರಿಗೆ ಜ್ಞಾಪಕಕ್ಕೆ ಬಂತು. ಮೇಲ್ಪಳದ ಗೊಪ್ಪರದಿಂದಾಗಿ ಗಿಡದಲ್ಲಿ ಬೇಗನೇ ಹೂ ಬಂದಿದೆ. ಆದರೆ ಕೆಳಗೆ ಗಟ್ಟಿಯಾಗಿ ಆವೆಮಣ್ಣು ಕುಳಿತಿರುವದರಿಂದ ಬೇರು ಆಳಕ್ಕೆ ಹೋಗುವ ಹಾಗಿಲ್ಲ. ಮುರಿಯುವದೇನೋ ಸುಲಭವೆಂದು ಒಮ್ಮೆ ಕಂಡು ಬಂದಿತ್ತು. ಅವನ ಸ್ನೇಹಿತರು ಹಾರಿ ಪಿಕ್ಕಾಸುಗಳನ್ನು ಕದ್ದೊಯ್ದಿದ್ದಾರೆ. ಕೇವಲ ಬೆರಳಿನಿಂದ ಆ ಕೆಲಸ ಅಸಾಧ್ಯವೇ ಸರಿ. ಈ ಬಿಸಿಯಾಗಿರುವ ಹಾಗೂ ಶೂನ್ಯವಾಗಿ ಕಂಡು ಬರುತ್ತಿರುವಂತಹ ಸಮಯದಲ್ಲಿ ಸಹಾಯ ಮಾಡಲು ತನಗೊಬ್ಬ ಆಪ್ತ ಸ್ನೇಹಿತನಿರುತ್ತಿದ್ದಲ್ಲಿ' ಎನ್ನುತ್ತಿತ್ತು ಹೃದಯ.

ಹೃದಯ ಹಾತೊರೆಯುತ್ತಿದ್ದ ಹೊತ್ತಿನಲ್ಲಿ, ರಾಮುವನ್ನು ಬೇಟಿಮಾಡಿ, ಅವನ ಕಾಲುಹಿಡಿದು ಕ್ಷಮೆಕೋರಿ, ತನ್ನ ಅವಸ್ಥೆಯನ್ನು ಅವನಿಗೆ ತಿಳಿಸಬೇಕೆಂದು ಕೇದಾರಿಗೆ ಮನಸ್ಸಾಯಿತು. ಹಿಂದೆ ಕ್ರಿಸ್ತೀಯ ಕಲಾ ಶಾಲೆಯಲ್ಲಿ ಪ್ರವೇಶಕ್ಕೆ ಅಪ್ಪಣೆಪಡೆಯಲು ಬಂದಿದ್ದಾಗ, ಸ್ನೇಹಿತರಾರೂ ಇಲ್ಲದೆ ಒಬ್ಬಂಟಿಗನಾಗಿ ನಿಂತಿದ್ದ ಕೇದಾರಿ ತನ್ನ ಪೂರ್ಣ ಕಥೆಯನ್ನು ರಾಮುವಿಗೆ ಹೇಳಿದ್ದನು. ಪುನಃ ಹಾಗೆ ಮಾಡಲು ಆತನು ಇಚ್ಛಿಸಿ, ಅದಕ್ಕಾಗಿ ರಾಮುವನ್ನು ಕಾಣಲು, ಮದ್ರಾಸಿನಿಂದ ಒಮ್ಮೆಲೆ ಹೊರಟು ಬಿಟ್ಟನು. ಆದರೆ ಅದೇ ಸಮಯದಲ್ಲಿ ರಾಮು ಮದ್ರಾಸಿಗೆ ಬಂದದ್ದು ಅವನಿಗೆ ಗೊತ್ತಿರಲಿಲ್ಲ.

(ಮುಂದುವರಿಯುವುದು)

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

NAVAYUGA 2—6—1966
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ತೆರಿಗೆಯಿಂದ ಹೊಸ ಸಮಸ್ಯೆಗಳು

(ಎಂಟನೇ ಪುಟದಿಂದ)

ನ್ನೆಂತು ಪರಿಹರಿಸ ಬೇಕು? "ಭವತಿ ಭಿಕ್ಷಾಂದೇಹಿ"ಯೇ ಭಾರತೀಯ ಜನರ ಲಲಾಟ ಲಿಖಿತವೆ?

ನಿರುದ್ಯೋಗಿಗಳಾದ ಜನರ ಜೀವನ ಮಟ್ಟವು ಬಹಳಷ್ಟು ಕೆಳಗಿಳಿಯುವುದೆಂದು ಈ ಮೊದಲೇ ಹೇಳಿದ್ದೇನಷ್ಟೆ? 'ಉದರ ನಿಮಿತ್ತಂ ಬಹುಕೃತ ವೇಷಂ" ಎನ್ನುವಂತೆ ನಿರುದ್ಯೋಗಿಗಳಾದ ಬಡಜನರು ಉದರ ನಿರ್ವಹಣೆಗಾಗಿ ಮಾನವ ಹತ್ಯೆಯನ್ನು ಮಾಡಲೂ ಹಿಂಜರಿಯಲಾರರು. 'ಬಂಗಾಲದ ಬರಗಾಲ"ದ ದಿನಗಳಲ್ಲಿ ಮಾನವ ಮಾಂಸವನ್ನೇ ಭುಜಿಸಿದ ಉದಾಹರಣೆಗಳೆಷ್ಟೋ ಇವೆ. ಮಾತ್ರವಲ್ಲ ಜನಸಂಖ್ಯೆಯ ಹೆಚ್ಚಳಕ್ಕೂ ಆಹಾರದಭಾವವೇ ಒಂದು ಕಾರಣವೆನ್ನಬಹುದು. ಬಡಜನರ ಸಂಸಾರವು ಯಾವಾಗಲೂ ಹಿರಿದಾಗಿರುವುದನ್ನು ಕಾಣುತ್ತೇನೆ. ಜನಸಂಖ್ಯೆಯ ಹೆಚ್ಚಳವು ಇತರ ಹಲವಾರು ಚಿಕ್ಕಪುಟ್ಟ ಸಮಸ್ಯೆಗಳನ್ನು ತಂದೊಡ್ಡಬಹುದು. ಜನಸಂಖ್ಯೆಯ ಹೆಚ್ಚಳವೋ 'ರಕ್ತಬೀಜನ" ನೆನಪನ್ನುಂಟು ಮಾಡುತ್ತದೆ.

ಒಂದು ದೇಶದ ಉನ್ನತಿಯಾಗಬೇಕಾದರೆ ಆ ದೇಶದ ಆರ್ಥಿಕ ಪರಿಸ್ಥಿತಿಯು ಹತೋಟಿಯಲ್ಲಿರಬೇಕು. ಭಾರತದಲ್ಲೀಗಾಗಲೇ ಆರ್ಥಿಕ ಬಿಕ್ಕಟ್ಟು ಬಂದೊದಗಿದೆ. ಇದಕ್ಕೂ ನಿರುದ್ಯೋಗ ಸಮಸ್ಯೆಯೇ ಕಾರಣೀಭೂತವೆಂದರೆ ತಪ್ಪಾಗಲಾರದೇನೋ? ಜನರು ನಿರುದ್ಯೋಗಸ್ಥರಾದಾಗ ಅವರಿಗೆ ಉದ್ಯೋಗವನ್ನು ಒದಗಿಸಿ ಕೊಡಲೇಬೇಕು. ಆಗ ಆ ಜನರು ಒಂದೊಂದೇ ವಸ್ತುವನ್ನು ಪಡೆಯಲು ಶಕ್ತರಾಗಬಲ್ಲರು. ಪರಿಣಾಮವಾಗಿ ವಸ್ತುಗಳ ಬೇಡಿಕೆಯು ಹೆಚ್ಚುವುದರೊಂದಿಗೆ ಹೊಸ ಹೊಸ ಉದ್ಯಮಗಳೂ ಪ್ರಾರಂಭವಾಗಿ ಜನರ ಜೀವನ ಮಟ್ಟವು ಉತ್ತಮವಾಗಬಲ್ಲುದು.

ಜನರ ಕೈಯಲ್ಲಿ "ಹಣ"ವಿದ್ದರೆ ಮಾತ್ರ ಅವರು ತಮ್ಮ ಜೀವನಾವಶ್ಯಕ ಸಾಮಗ್ರಿಗಳನ್ನು ಕೊಳ್ಳಬಲ್ಲರು. ಇದಕ್ಕಾಗಿ 'ಪಂಪ್ ಪ್ರೈಮಿಂಗ್'' ಎಂಬ ಹೊಸ ಅಸ್ತ್ರವನ್ನೇ ಉಪಯೋಗಿಸಬೇಕು. "ನಿರುದ್ಯೋಗಸ್ಥರಿಗೆ ಉತ್ತಮ ತರದ ಉದ್ಯೋಗವನ್ನು ಕಲ್ಪಿಸಲಾಗದಿದ್ದಲ್ಲಿ ಬರೇ ಹೊಂಡಗಳನ್ನು ತೋಡಿಸಿ ಮುಚ್ಚಿಸಿ, ಆ ಳದಲ್ಲಿ ಒಂದಿಷ್ಟು ನೋಟುಗಳನ್ನಿರಿಸಿ ತೆಗೆಯ ಹೇಳಿ. ಆಗ ಜನರು ಆಲಸಿಗಳಾಗುವ ಸಂಭವವೂ ಕಡಿಮೆಯಾಗುವುದರೊಂದಿಗೆ ಅವರಿಗೆ ಹಣವೂ ದೊರಕುವುದು— ಇದು ಹಿರಿಯ ಅರ್ಥಶಾಸ್ತ್ರಜ್ಞರ ಅಭಿಪ್ರಾಯ.

ಒಂದೊಂದು ಸಮಸ್ಯೆಯಿಂದಲೂ ಒಂದೊಂದು ಸಮಸ್ಯೆ ತಲೆದೋರುತ್ತದೆ. ಹೀಗೆ ತಲೆದೋರುವ ಸಮಸ್ಯೆಗಳೊಂದನ್ನು ಬಗೆಹರಿಸದೆ "ನಮ್ಮ ತಿಳಿಗೇಡಿತನ' ದಿಂದಾಗಿ ಇನ್ನೂ ಹಲವಾರು ಸಮಸ್ಯೆಗಳನ್ನು ತಂದೊಡ್ಡುತಿದ್ದೇವೆ. ಹಿಂದೆ "ಸಂಪತ್ತಿನ ನೆಲೆಬೀಡು" ಎಂದೆಣಿಸಲ್ಪಟ್ಟ ಭಾರತದ 'ಪುಣ್ಯಭೂಮಿ" ಇಂದು "ಸಮಸ್ಯೆಗಳ ಹುಟ್ಟೂರು'. ಈ ಸಮಸ್ಯೆಗಳೂ ಸಾಲದೆನ್ನುವಂತೆ ಇನ್ನೂ ಹಲವಾರು ಸಮಸ್ಯೆಗಳು ಬಂದೊದಗಿವೆ.

"ಒಂದು ದೇಶದ ಉನ್ನತಿಯಾಗಬೇಕಾದರೆ ಆ ದೇಶವು ಸಮಸ್ಯೆಗಳನ್ನು ಎದುರಿಸುತ್ತಿರಬೇಕು" ಎನ್ನುವುದೇನೋ ನಿಜ. ಆದರೆ ಪ್ರಜಾ ಸ್ವಾತಂತ್ರ್ಯಕ್ಕೇನೇ ಹೆಚ್ಚಿದ ಪ್ರಾಧಾನವನ್ನು ಕೊಡುವ ನಮ್ಮ ದೇಶದಲ್ಲಿ ಇದನ್ನು ಸಾಧಿಸುವುದು ಕಷ್ಟಸಾಧ್ಯ. ರಷ್ಯದಲ್ಲಿ ಇದನ್ನು ಸರಿಯೆಂದು ಸಾಧಿಸಲಾಯಿತು. ಕೇವಲ ನಾಲ್ಕುವರೆ ದಶಕಗಳಲ್ಲಿ ಅದು ಎಲ್ಲಾ ಸಮಸ್ಯೆಗಳನ್ನೂ ಪರಿಹರಿಸಿ ಪ್ರಗತಿಹೊಂದಿತು. ಇಂದು ರಷ್ಯವು ಅಮೇರಿಕಾದ ಪ್ರತಿಸ್ಪರ್ಧಿ. ಅಮೇರಿಕಾವು ಎರಡು ಶತಮಾನಗಳ ಕಾಲದಲ್ಲಿ ಏನನ್ನು ಸಾಧಿಸಿತೋ ಅಷ್ಟನ್ನೇ ಅಥವಾ ಅದಕ್ಕಿಂತಲೂ ಹೆಚ್ಚಿನದನ್ನು ರಷ್ಯವು ಕೇವಲ ನಾಲ್ಕುವರೆ ದಶಕದಲ್ಲಿ ಸಾಧಿಸಿತು. ರಷ್ಯದ ಪ್ರಗತಿಗೆ ಅಲ್ಲಿಯ ಜನರ ನಿಸ್ವಾರ್ಥ ತ್ಯಾಗಬುದ್ಧಿ, ದೇಶಪ್ರೇಮ ಹಾಗೂ ಲೆನಿನ್, ಸ್ಟಾಲಿನ್ ಹಾಗೂ ಕಲಿಲಿನ್ ಮೊದಲಾದವರ ನಾಯಕತ್ವವೇ ಮೂಲಕಾರಣ. ನಮ್ಮ ದೇಶದಲ್ಲೂ ಅಂತಹ ನಾಯಕರು ಬಹಳ ಅಪೂರ್ವ; ನಾಯಕರನ್ನು ಅನುಸರಿಸುವ ತಾಳ್ಮೆಯಂತೂ ಇಲ್ಲವೇ ಇಲ್ಲ.

ಹೊರನೋಟಕ್ಕೆ ತೆರಿಗೆಯ ಹೆಚ್ಚಳವು ಕ್ಷುಲ್ಲಕವಾಗಿ ಕಾಣಬಹುದು. ಆದರೆ ಅದರ ದುಷ್ಪರಿಣಾಮವನ್ನು ನಾವಿನ್ನೂ ಸಂಪೂರ್ಣವಾಗಿ ಮನಗಂಡಿಲ್ಲ. ಈ ಮೊದಲೇ ಹೇಳಿದಂತೆ ತೆರಿಗೆಯು ಕೆಲವು ಸಮಸ್ಯೆಗಳು ತಲೆದೋರಲು ಕಾರಣ. ಒಂದು ಕಿಡಿಕಿಚ್ಚು ದೊಡ್ಡ ಹತ್ತಿಯ ಮೂಟೆಯನ್ನು ಸುಟ್ಟು ಬೂದಿ ಮಾಡುವಂತೆ, ತೆರಿಗೆಯಲ್ಲುಂಟಾದ ಅಲ್ಪಸ್ವಲ್ಪ ಹೆಚ್ಚಳವು ಕೆಲವು ಸಮಸ್ಯೆಗಳ ಹೆಚ್ಚಳಕ್ಕೆ ಕಾರಣೀಭೂತವಾಗಬಲ್ಲದು.

ಈ "ಅಂಟು ರೋಗ"ವನ್ನು ದೂರೀಕರಿಸಲು ನಾವು ನಿರಂತರವಾಗಿ ಶ್ರಮಿಸಬೇಕು. ಉತ್ಕಟವಾದ ದೇಶಪ್ರೇಮ ಪ್ರತಿಯೊಬ್ಬರಲ್ಲೂ ಬೆಳೆಯಬೇಕು. ಭ್ರಷ್ಟಾಚಾರವನ್ನು ದೂರೀಕರಿಸಿ ದೇಶದ ಉನ್ನತಿಗೋಸ್ಕರ ನಾವೂ ಟೊಂಕ ಕಟ್ಟಿ ನಿಂತು ನಮ್ಮ ಅಳಿಲ ಸೇವೆ'ಯನ್ನು ಸಲ್ಲಿಸೋಣ. ದೇಶದ ಪ್ರಗತಿಯ ಹಿತದೃಷ್ಟಿಯಿಂದ ಒಳಿತಲ್ಲದ ಕೆಲಸ ಕಾರ್ಯಗಳನ್ನು ದೂರೀಕರಿಸಲು ಪ್ರಯತ್ನಿಸಿ, ಅಂಧಕಾರದಿಂದ ಬೆಳಕಿನತ್ತ ಚಲಿಸೋಣ.

ಅಮರ ನೆಹರೂ ಅವರ ಅಮರವಾಣಿ

(ಐದನೇ ಪುಟದಿಂದ)

ಣ ಪ್ರಜಾಪ್ರಭುತ್ವದ ಅಭಿವೃದ್ಧಿಗೆ ಅಗತ್ಯ.

(ನಾರ್ಮನ್ ಕಸಿನ್ಸ್ ಅವರ ನೆಹರೂರೊಡನೆ ಸಂಭಾಷಣೆ ಎಂಬ ಪುಸ್ತಕದಿಂದ)

ಪ್ರತಿಯೊಂದು ಸರಕಾರವೂ ರಕ್ಷಣೆಗೆ ಆದ್ಯತೆ ನೀಡಲೇ ಬೇಕು. ಹಾಗಾದರೆ ರಕ್ಷಣೆ ಎಂದರೆ ಏನು? ರಕ್ಷಣೆಯೆಂದರೆ ಅನೇಕ ಜನರು ಕೋವಿಗಳನ್ನು ಹಿಡಿದುಕೊಂಡು ಕವಾಯತು ಮಾಡುವುದು ಎಂದು ಭಾವಿಸುತ್ತಾರೆ. ನಿಜ. ಶಸ್ತ್ರ ಯೋಧರ ಪಡೆಗಳಿಂದ ಮತ್ತು ಯುದ್ಧೋಪಕರಣಗಳಿಂದ ರಕ್ಷಣಾ ವ್ಯವಸ್ಥೆ ನಿರ್ಮಾಣಗೊಳ್ಳುತ್ತದೆ. ಆದರೆ ಮನಸ್ಥೈರ್ಯ, ಇವೇ ಮೊದಲಾದವು ರಕ್ಷಣಾ ವ್ಯವಸ್ಥೆಯಲ್ಲಿ ಅಡಕವಾಗಿವೆ. ದೇಶದ ಸಾಮರ್ಥ್ಯ ಮತ್ತು ಸಂಪನ್ಮೂಲಗಳು ಮತ್ತು ರಕ್ಷಣಾ ವ್ಯವಸ್ಥೆಗಳ ನಡುವೆ ಸಮತೋಲವಿರಬೇಕು. ಈ ಸಮತೋಲವನ್ನು ಬಹಳಷ್ಟು ಕದಲಿಸಬಾರದು. ಸಮತೋಲಕ್ಕೆ ಭಂಗ ಬಾರದ ರೀತಿಯಲ್ಲಿ ದೇಶದ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಲು ಒಂದೇ ಒಂದು ಮಾರ್ಗವಿದೆ. ನೀವು ನಿಮ್ಮ ಮನಸ್ಥೈರ್ಯವನ್ನು ಹೆಚ್ಚಿಸಿಕೊಳ್ಳಿ. ಯಾವ ವಿಪತ್ತೇ ಬರಲಿ ಶತ್ರುವಿಗೆ ಎಂದೂ ಶಿರಬಾಗೆವು ಎಂದು ದೃಢ ಸಂಕಲ್ಪ ಮಾಡಿ.

(೧೯೫೦ರ ಡಿಸೆಂಬರ್ ೭ರಂದು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಿಂದ)

ಪರಸ್ಪರ ಹೊಗಳಿಕೆಯಲ್ಲೇ ನಾವು ಕಾಲ ಕಳೆಯಬಾರದು. ಕ್ರೀಡೆಗೆ ಒಂದು ಕಾಲ ಬಿದ್ದಂತೆ ಕರ್ತವ್ಯಕ್ಕೂ ಒಂದು ಕಾಲವಿದೆ, ಇದು ಕರ್ತವ್ಯದ ಕಾಲ. ನಾವು ಮುಂದಿನ ಪೀಳಿಗೆಯ ಕಲ್ಯಾಣಕ್ಕಾಗಿ ಈಗ ಶ್ರಮಿಸಬೇಕು.

(೧೯೪೯ರ ಜನವರಿ ೨೨ರಂದು ಲಕ್ನೋ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ಮಾಡಿದ ಭಾಷಣದಿಂದ)

ಸಮಗ್ರತೆ ಮತ್ತು ಐಕಮತ್ಯ

ಭಾರತ ಗಣರಾಜ್ಯದ ನಾಗರಿಕರಾದ ನಾವು ನಮ್ಮ ಕಾಲ ಮೇಲೆ ಭದ್ರವಾಗಿ ನಿಂತುಕೊಳ್ಳಬೇಕು. ಯಾರಿಗೂ ತಲೆಬಾಗಿಸದೆ—ಗಿರಿ ಶಿಖರದಂತೆ ಗೌರವದೊಂದಿಗೆ ಬದುಕಬೇಕು. ಐಕಮತ್ಯ ಸಾಧನೆ ನಮ್ಮ ಮೂಲ ಮಂತ್ರವಾಗಬೇಕು. ದೇಶದಲ್ಲಿ ಈಗಾಗಲೇ ಕೆಲಮಟ್ಟಿಗೆ ರಾಜಕೀಯ ಐಕ್ಯತೆ ಸಾಧ್ಯವಾಗಿದೆ. ಆದರೆ ಈ ಐಕ್ಯತೆ ಇನ್ನಷ್ಟು ಆಳವಾಗಿರಬೇಕು. ಅಂದರೆ ಭಾರತದ ನಲವತ್ತು ಕೋಟಿ ಜನರ ಹೃದಯಗಳ ಸಮ್ಮಿಳನವಾಗಬೇಕು. ನಾವೆಲ್ಲರೂ ಒಂದೆಂಬ ಭಾವನೆ ಮೂಡಿ ಬರಬೇಕು. ದೇಶದ ಏನೆಲ್ಲ ವೈವಿಧ್ಯಗಳ ಮಧ್ಯದಲ್ಲೂ ಈ ಭಾವನೆಯನ್ನು ಕಾದುಕೊಂಡು ಬರಬೇಕು.

(ಬೆಂಗಳೂರಿನಲ್ಲಿ ೧೯೫೫ರ ಅಕ್ಟೋಬರ್ ೭ರಂದು ಮಾಡಿದ ಭಾಷಣದಿಂದ)

ದೇಶದಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳ ಬೆಳವಣಿಗೆಯಿಂದ ಹಾಗೂ ರಾಜ್ಯಗಳಲ್ಲಿ ಜವಾಬ್ದಾರಿಯುತ ಸರ್ಕಾರಗಳ ಸ್ಥಾಪನೆಯಿಂದ ಮಾತ್ರ ನಿಜವಾದ ಭಾವೈಕ್ಯ ಸಾಧ್ಯವಾಗಬಲ್ಲುದು.

(೧೯೪೮ರ ಮೇ ೫ರಂದು ಭಾರತದ ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣದಿಂದ)

ಸೋಮಾರಿತನವು ಬಹು ನಿಧಾನವಾಗಿ ನಡೆಯುವುದರಿಂದ ಬಡತನವು ಅದನ್ನು ಬೇಗ ಹಿಡಿದುಕೊಳ್ಳುವುದು.



ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

9-6-1966

NAVAYUG

೨೦ ಪೈಸೆ

ಧಾರಾವಾಹಿ ಕಾದಂಬರಿ

ಕೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ಜ್ಞಾನಶೀಲಪತಿ ರಾಮಚಂದ್ರ ಪದವಿ ಪಡೆಯದೆ ಆಲವಂತಿಯಲ್ಲಿನ ತನ್ನ ಆಸ್ತಿಪಾಸ್ತಿಗಳನ್ನು ಮಾರಿ ಶಿಬಿರ ಗುಮಾಸ್ತನಾದ. ಸುಸ್ಥೈರ್ಯದಿಂದ ಮುಂದಾತ ಸರಕಾರದಲ್ಲಿ ಉನ್ನತ ಪದವಿಗೇರಿ ಕೀರ್ತಿಗಳಿಸಿದ.

ರಾಮುವಿನ ಕೈತನಾಗಿದ್ದ ಮುರುಗ ಜಹಗೀರ್ದಾರನಾದ. ದುರ್ವ್ಯಸನಗಳಿಗೆ ಬಲಿಯಾದ. ಸೆರೆಯಾದ. ತಪ್ಪಿಸಿಕೊಂಡು ಊಟಗಾರರ ಯಜಮಾನನಾದ. ರಾಮುವಿನ ದೂರದರ್ಶಿತ್ವ ಮತ್ತು ಮಾನವತೆಯಿಂದ ಊಟಗಾರರೂ ಸದ್ಗೃಹಸ್ಥರಾದರು.

ರಾಮುವಿನ ಮಿತ್ರ ಕೇದಾರಿ ವಕೀಲನಾದ. ಚುನಾವಣೆಯಲ್ಲಿ ಲೋಕ ಸಭೆಗೆ ಆಯ್ಕೆಯಾದ. ತನ್ನ ಇತಿಮಿತಿಯನ್ನು ಮೀರಿ ಆಕಾಶದಲ್ಲಿ ಗೋಪುರ ಕಟ್ಟುತ್ತಿದ್ದ. ಒಂದು ದಿನ ಇದ್ದಕ್ಕಿದ್ದಂತೆ ಕೇದಾರಿ ಪರಾರಿಯಾದ. ಈ ಸುದ್ದಿ ರಾಮುವಿಗೂ ತಿಳಿಯಿತು.

ಮುಂದೆ—

ಕೇದಾರಿಯ ಭವ್ಯ ವಾಸಸ್ಥಾನಕ್ಕೆ ರಾಮು ಬಂದಾಗ ಘಂಟೆ ಆರು ಸೂಚಿಸುತ್ತಿತ್ತು. ಸಾಯಂಕಾಲ ಆ ಮೃದು ಬೆಳಕು ಕೆರೆಯ ಮೇಲೂ, ಗೋಪುರದ ಮೇಲೂ, ದೇವಸ್ಥಾನದ ಬಳಿಯೂ ಚೆಲ್ಲಲ್ಪಟ್ಟಿತ್ತು. ದೇವಸ್ಥಾನದ ಘಂಟೆಗಳು ನಾದಗೈಯುತ್ತ ಆಸ್ತಿಕರಿಗೆ ಅವರವರ ಪೂಜೆಯ ಜ್ಞಾಪಕವನ್ನು ಉಂಟುಮಾಡುತ್ತಿದ್ದುವು. ಒಂದು ಚಚ್ಚೌಕದ ನಡುವೆ ದೇವಸ್ಥಾನವನ್ನು ಹಾಗೂ ಕೆರೆಯನ್ನು ಕಟ್ಟಿದ್ದರು. ಕೆರೆಯ ಸುತ್ತೂ ನಾಲ್ಕು ಬದಿಯಲ್ಲಿ ರಸ್ತೆಗಳು ಓಡುತ್ತಿವೆ. ಶ್ರೀಮಂತ ಹಾಗೂ ವೈಭವ ಪೂರ್ಣ ಕಾರುಗಳು ವಜ್ರಗಳಿಂದಲಂಕೃತರಾಗಿರುವ ಹಾಗೂ ಬಣ್ಣಬಣ್ಣದ ಬಟ್ಟೆಗಳನ್ನುಟ್ಟುಕೊಂಡಿದ್ದ ಬಲಹೀನ ಹೆಂಗಸರನ್ನು ಹೊತ್ತುಕೊಂಡು ಅತ್ತಿತ್ತ ತಿರುಗಾಡುತ್ತಿದ್ದುವು. ಪ್ರತಿಯೊಂದು ಇಟ್ಟಿಗೆ ಹಾಗೂ ಕಲ್ಲಿನ ಮೇಲೆ ಸಿರಿವಂತಿಕೆ ಕುಣಿದಾಡುತ್ತಿತ್ತು. ಅದನ್ನು ನ್ಯಾಯವಾದಿಗಳ ಕೆರೆಯ ಚೌಕವೆಂದೇ ಕರೆಯುತ್ತಿದ್ದರು. ದೇವಸ್ಥಾನದಲ್ಲಿ ಪೂಜೆ ಮಾಡುವ ನಾಲ್ಕು ಬ್ರಾಹ್ಮಣರು ಮಾತ್ರ ಮುಂಚೆ ಅಲ್ಲಿ ವಾಸವಾಗಿದ್ದರು. ಈಗ ಅಲ್ಲಿ ಇಪ್ಪತ್ತೈದು ಪರಗಣೆಗಳಿಂದ ಬರುತ್ತಿರುವ ವ್ಯಾಜ್ಯಪ್ರಿಯರ ಪ್ರವಾಹ ಹರಿಯುತ್ತದೆ.

ಆ ಚೌಕದ ಅತ್ಯುತ್ತಮ ಮನೆಗಳಲ್ಲಿ ಕೇದಾರಿಯ ಸ್ವಂತ ಮನೆ ಒಂದಾಗಿತ್ತು. ಆ ಪರಿಸರದಲ್ಲಿ ಅದು ಎದ್ದು ಕಾಣುತ್ತಿತ್ತು. ಚಂದ್ರಕಾಂತ ಶಿಲೆಗಿಂತಲೂ ಬೆಳ್ಳಗಾಗಿಯೂ ನಯವಾಗಿಯೂ ಅದು ಪ್ರಕಾಶಿಸುತ್ತಿತ್ತು. ಕೇದಾರಿಯ ಇತ್ತೀಚಿಗಿನ ಕಥೆಯನ್ನು ಕೇಳಿದ್ದ ರಾಮುವಿಗೆ ಆ ಮನೆಯನ್ನು ನೋಡಿ, ಸಂಶಯ ಬಂತು. ಆದರೆ ಮನೆಯೆದುರು—ಚೆನ್ನಾಗಿ ಕೆತ್ತಲ್ಪಟ್ಟು, ಮುಗುಳ್ನಗುತ್ತ, ಹೊಳೆಯುತ್ತಿರುವ ಅಕ್ಷರಗಳಿದ್ದ ನಾಮಫಲಕ ಅವನಲ್ಲಿ ಧೈರ್ಯವನ್ನುಂಟುಮಾಡಿತು. ಉತ್ತಮ ಆಸನಗಳಿಂದ ತುಂಬಿದ್ದ ಅವನ ಕಾರ್ಯಾಲಯ ಮತ್ತು ಚಪ್ಪರ, ಹೊದಿಕೆಯಲ್ಲಿದ್ದ ಹೂತ್ತಗೆಗಳು ವಿರಾಮ ರಹಿತ ಉದ್ಯೋಗದ ತಮ್ಮ ಕಥೆಯನ್ನು ಹೇಳುತ್ತಿದ್ದುವು. ಮುಂಬಾಗಿಲು ಅರ್ಧ ತೆರೆದಿತ್ತು. ರಾಮು ಒಮ್ಮೆ ಒಳಗೆ ದೃಷ್ಟಿಹಾಯಿಸಿದನು, ಮತ್ತೆ ತನ್ನತ್ತ ನೋಡಿಕೊಂಡನು. ಅವನು ಬಹಳ ಬೆಲೆಬಾಳುವ ಬಟ್ಟೆಗಳನ್ನು ಧರಿಸಿಕೊಂಡಿರಲಿಲ್ಲ. ಆಸ್ಥಳಕ್ಕೆ ಸರಿಯಾಗಿ ತನ್ನ ಉಡುಪು ಇಲ್ಲವೆಂದು ಅವನು ಭಾವಿಸಿಕೊಂಡನು.

ಉದ್ದನೆಯ, ಸಪೂರದ ಆದರೂ ಕಾಂತಿಯುಕ್ತ ದೇಹವುಳ್ಳ ಓರ್ವ ಲಲನಾಮಣಿಯು ಹತ್ತು ವರ್ಷಪ್ರಾಯದ ಹುಡುಗಿಗೆ ಹೆರಳು ಹಾಕುತ್ತ ಇದ್ದಳು ಆಕೆಯ ಸುತ್ತಲೂ ಮಕ್ಕಳಿದ್ದುವು. ಅದರಲ್ಲಿದ್ದ ಅತೀ ಸಣ್ಣ ಮಗು ತನ್ನ ತಾಯಿಯ ಬೆನ್ನಿಗೆ ಗುದ್ದುತ್ತ ತನ್ನತ್ತ ತಾಯಿಯ ಗಮನವನ್ನು ಸೆಳೆಯಲು ಪ್ರಯತ್ನಿಸುತ್ತಿತ್ತು; ಅದು ಆಗಾಗ ತಾಯಿಯನ್ನು ಕರೆಯುತ್ತಿತ್ತು ಮತ್ತು ಅಳುತ್ತಿತ್ತು. ಹೌದು, ಆ ತಾಯಿಯೇ ಕೋಕಿಲಂ—ಮನೆಯ ಯಜಮಾನಿ. ರಾಮು ಆಕೆಯನ್ನು ಒಮ್ಮೆ ಮಾತ್ರ ನೋಡಿದ್ದ—ಅದೂ ಕೆಲ ವರ್ಷಗಳ ಹಿಂದೆ, ಎಲ್ಲೆಲ್ಲೂ ನಾಚಿಕೆ ವರ್ತಿಸುತ್ತಿದ್ದಾಗ—ಆಕೆಯ ಮದುವೆಯಂದು. ಅಂದು ಕೂಡಾ ಆಕೆ ಅಂದವಾಗಿಯೇ ಇದ್ದಳು—ಕಾಲಚಕ್ರದ ನೆರಳು ಸ್ಮೃತಿ ಪಂಚೆಯ ಮೇಲೆ ಹಾಯ್ದು ಹೋಗಿ ಅದೆಲ್ಲವನ್ನೂ ಮಾರ್ಪಡಿಸಿತ್ತು. ಮೊದಲ ಮಳೆಯ ಹನಿ ಬಿದ್ದೊಡನೆ, ಬಾಡಿ ಹೋಗಿದ್ದ ಹುಲ್ಲು ತನ್ನ ಹಿಂದಿನ ಬಣ್ಣವನ್ನು ಪಡೆದುಕೊಳ್ಳುವಂತೆ, ಆಕೆಯ ದರ್ಶನ ಮಾತ್ರದಿಂದ ಎಲ್ಲವೂ ಜ್ಞಾಪಕಕ್ಕೆ ಬಂತು.

ಈ ಎಲ್ಲಾ ಪ್ರದರ್ಶನಗಳ ನಡುವೆ ಆಕೆ ಸಾದಾ ಉಡುಪನ್ನು ಉಟ್ಟುಕೊಂಡು, ಮನೆಯ ಕೆಲಸಗಳನ್ನು ಮಾಡುತ್ತಿರುವದನ್ನು ಕಂಡು ರಾಮುವಿಗೆ ಬಹಳ ಸಂತೋಷವಾಯಿತು. ಆಡಂಬರದ ಹಳದಿ ವರ್ಣದ ರೇಷ್ಮೆ ಸೀರೆಯನ್ನು ಉಟ್ಟುಕೊಂಡಿರುವ ಸ್ಥೂಲ ದೇಹದ ಸ್ತ್ರೀ, ಆರಾಮಾಸನದಲ್ಲೊರಗಿಕೊಂಡು, ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದುಕೊಂಡು, ಕನ್ನಡಕದ ನಡುವಿನಿಂದ ಪ್ರಪಂಚದತ್ತ ಬೇಸರಪೂರ್ಣ ನೋಟವನ್ನು ಬೀರುತ್ತಿರುವ ಮಹಿಳೆಯನ್ನು ತಾನು ಕಾಣಬಹುದು ಎಂದೆಣಿಸಿಕೊಂಡಿದ್ದ. ಅವನ ನಿರೀಕ್ಷೆ ಸಫಲವಾಗಲಿಲ್ಲ. ಮಾತೆಯು ಮಕ್ಕಳತ್ತ ತನ್ನ ಪೂರ್ಣ ಗಮನವನ್ನಿತ್ತಿರುವದರಿಂದ ಹಾಗೂ ತನ್ನದೇ ಆದ ಆಲೋಚನಾ ಲೋಕದಲ್ಲಿ ಅಡ್ಡಿ ತಡೆ ಇಲ್ಲದೆ ವಿಹರಿಸುತ್ತಿದ್ದುದರಿಂದ, ಮುಂಬಾಗಿಲಿನ ದಾರಿಯನ್ನು ಕತ್ತಲೆ ಮಾಡುತ್ತಿರುವ ಹೊಸಬನಂತೆ ಬಂದಿರುವವನತ್ತ ಆವಳ ಲಕ್ಷ್ಯ ಹರಿದಿರಲಿಲ್ಲ. ಸ್ತ್ರೀಯರನ್ನು ಮುಖದಲ್ಲಿ ಇನ್ನಷ್ಟು ಪರಿಳಿತದಿಂದ ಮೃದು—ಮಧುರವಾಗಿ ಹೊರಬರುತ್ತಿದ್ದ ರಾಮುವಿನ ವೈಶಿಷ್ಟ್ಯಪೂರ್ಣ ಧ್ವನಿಯು—"ಶ್ರೀಯುತ ಕೇದಾರಿಯವರು ಮನೆಯಲ್ಲಿದ್ದಾರೆಯೇ?"—ಕೇಳಿ ಬಂದಿತು.

ಮುಖವನ್ನು ಮೇಲೆತ್ತದೆ, "ಇಲ್ಲ' ಎಂಬ ಉತ್ತರ ಆಕೆಯಿಂದ ಬಂತು.

ಆಕೆಯ ಸಾನಿಧ್ಯ ಹಾಗೂ ಅಂದದ ಕಣ್ಣೆವೆಗಳಿಂದಾಗಿ ರಾಮು ಸ್ವಲ್ಪ ಉದ್ಧವಾದನು. ಅಪರಿಚಿತನು ಹೋದನೋ ಎಂದು ನೋಡಲು ಯಾಂತ್ರಿಕವಾಗಿ ಕೋಕಿಲಂ ತಲೆಯನ್ನು ಮೇಲೆತ್ತಿದಳು. ಅವರ ಕಣ್ಣುಗಳು ಕೂಡಿದುವು. ಒಡನೆ ರಾಮು ತಿರುಗಿ ಮಾರ್ಗದತ್ತ ಹೆಜ್ಜೆಗಳನ್ನು ಹಾಕಿದನು. ಉದಯ ರವಿಯ ಕಿರಣವು ತಾವರೆಯ ಮೊಗ್ಗಿಗೆ ತಾಗಿದಾಗ ಆಗುವಂತೆ, ಕೋಕಿಲಮ್ಮಗೆ ತನ್ನ ಜೀವನದಲ್ಲಿ ಬೆಳಕು ಹರಿದಂತಾಯಿತು. ಕನಸು ಕರಗಿ ಹೋಗಿ ಜೀವನದಲ್ಲಿದು ಕಣ್ಮುಂದೆ ಬಂದು ನಿಂತಂತಾಯಿತು. ಕೆಲವರ್ಷಗಳ ಹಿಂದೆ, ತನ್ನ ಮದುವೆಯಂದು, ಮೆಲ್ಲನೆ ಕದ್ದು, ರಾಮುವಿನತ್ತ ಒಮ್ಮೆ ದೃಷ್ಟಿ ಹಾಯಿಸಿದ್ದಳು. ಆ ಜ್ಞಾಪಕ ಮರೆತು ಹೋಗುತ್ತ ಬಂದಿತ್ತು. ಆಕೆ ಗೋಡೆಯತ್ತ ತನ್ನ ದೃಷ್ಟಿಯನ್ನೋಡಿಸಿದಳು. ತನ್ನ ಗಂಡನಿಗೆ ರಾಮು ಮಾಡಿದ್ದ ಸಹಾಯದ ಜ್ಞಾಪಕಾರ್ಥವಾಗಿ ಪ್ರತಿ ದಿನವೂ ಆಕೆ ಅಲ್ಲಿ ತೂಗಹಾಕಿದ್ದ ರಾಮುವಿನ ಭಾವಚಿತ್ರಕ್ಕೆ ಗೌರವವನ್ನು ಸಲ್ಲಿಸುತ್ತಿದ್ದಳು. ರಾಮುವಿನ ಭಾವಚಿತ್ರದಲ್ಲಿದ್ದ ಮೂರ್ತಿ ಆಕೆಯ ಹೃದಯ ಮಂದಿರದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತ್ತು. ಸ್ತ್ರೀಯರಿಗೆ ಮಾತ್ರ ಸಾಧ್ಯವಾಗುವ ರೀತಿಯಲ್ಲಿ, ಒಡನೆ ಅವನ ಗುರುತನ್ನು ಆಕೆ ಹಿಡಿದಳು. ಕೂಡಲೇ ಎದ್ದು ನಿಂತು, ಹಿರಿಯ ಮಗಳ ಹತ್ತಿರ ಆಗ ತಾನೇ ಹೋಗುತ್ತಿದ್ದ ಮಾವನನ್ನು ಕರೆಯಲು ಹೇಳಿದಳು.

ಆಶ್ಚರ್ಯಚಕಿತನಾದ ರಾಮು ಹಿಂತಿರುಗಿದನು. ಅವನ ಹೃದಯದಲ್ಲಿ ಗುಪ್ತ ಜ್ಯೋತಿ ಪ್ರಕಾಶಿಸುತ್ತಿತ್ತು. ರಾಮುವಿನ ಸಮೀಪಕ್ಕೆ ಕೋಕಿಲಂ ಬಂದು ತಂಗಿಯ ಮಮತೆಯಿಂದ ಅವನಿಗೆ ಸಾಷ್ಟಾಂಗ ನಮಸ್ಕರಿಸಿದಾಗ ತನ್ನ ಕಣ್ಣುಗಳನ್ನೇ ತಾನು ನಂಬಲು ಕಷ್ಟವಾಯಿತು.

"ಸ್ವಾಮೀ, ನಾನು ಮರ್ಯಾದೆಗೆಟ್ಟವಳಂತೆ ವರ್ತಿಸಿದ್ದಾದಲ್ಲಿ ಕ್ಷಮಿಸಿರಿ. ನಾವು ದುಃಖದಿಂದ ಅಳುತ್ತಿರುವ ಈ ಸಮಯದಲ್ಲಿ ಕಪಿಲೇಶ್ವರ ದೇವರೇ ನಿಮ್ಮನ್ನು—ನನ್ನ ಅಣ್ಣನನ್ನು—ಇಲ್ಲಿಗೆ ಕಳುಹಿಸಿದ್ದಾರೆ. ಮೂರು ದಿನಗಳ ಹಿಂದೆ ಅವರು ಮನೆ ಬಿಟ್ಟು ಹೋಗಿದ್ದಾರೆ. ಎಲ್ಲಿಗೆ ಹೋಗಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ, ಮತ್ತು ಈ ಮಕ್ಕಳು..."

(ಹನ್ನೊಂದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	....	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಮೇರಿಕದ ಪ್ರವಾಸ ಮುಗಿಸಿ ಇತ್ತೀಚೆಗೆ ನವದೆಹಲಿಗೆ ಹಿಂದಿರುಗಿ ಬಂದಾಗ ಪ್ರಧಾನಿ ಇಂದಿರಾ ಗಾಂಧಿಯವರಿಗೆ ತರುಣಿಯೋರ್ವಳು ಗೌರವಪೂರಕ ಹಾರಾರ್ಪಣೆ ಗೈಯುತ್ತಿರುವುದು.

ನವಯುಗ

ಸಂಪುಟ ೪೫ | ಉಡುಪಿ | Vol. 45
ಸಂಚಿಕೆ ೩೯ | ೯—೬—೧೯೬೬ | No. 39

ವಚನ ಸುಧೆ

ಆತ್ಮನೇ ಪತಿತೋ ವಹ್ನಿ:
ಸ್ವಯಮೇವೋಪಶಾಮ್ಯತಿ॥
ಅಕ್ಷಮಾವಾನ್ ಪರಂ ದೋಷೈ
ರಾತ್ಮಾನಂ ಚೈವ ಯೋಜಯೇತ್॥

ಹುಲ್ಲಿಲ್ಲದಲ್ಲಿ ಬಿದ್ದ ಬೆಂಕಿಯು ಕೆಂಡವು ತನಗೆ ತಾನೇ ಆರಿಹೋಗುತ್ತದೆ. ಕ್ಷಮಾಹೀನನಾದವನು ತನ್ನನ್ನೂ ಇತರರನ್ನೂ ದೋಷಭಾಗಿಗಳನ್ನಾಗಿ ಮಾಡುತ್ತಾನೆ.

ನ್ಯಾಯವಾದ ಹೋರಾಟ

ಮುಂಬಯಿಯ ಎ. ಐ. ಸಿ. ಸಿ.ಯು ಗಡಿ ತಂಟೆಯ ಪರಿಹಾರಕ್ಕೆ ಪರಮಾಧಿಕಾರವುಳ್ಳ ಏಕ ಸದಸ್ಯ ಆಯೋಗವನ್ನು ನೇಮಿಸುವ ಸಂಬಂಧದ ಗೊತ್ತುವಳಿಗೆ ಕನ್ನಡಿಗರಿಂದ ತೀವ್ರ ಪ್ರತಿಭಟನೆ ದೊರೆತಿದೆ. ಈ ಆಯೋಗದ ನೇಮಕವು ಈಗ ಅಗತ್ಯವಿಲ್ಲ; ಅಥವಾ ಆಯೋಗವೊಂದರ ಮೂಲಕವೇ ಬಗೆಹರಿಸಬೇಕಾದಷ್ಟು ದೊಡ್ಡ ತಂಟೆಯೂ ಇಲ್ಲಿಲ್ಲ; ಮತ್ತು ಎಲ್ಲ ರಾಜ್ಯಗಳಿಗೂ ಸಂಬಂಧಿಸಿದಂತೆ ಇಂತಹ ಆಯೋಗವನ್ನು ರಚಿಸದೆ ಬರಿಯ ಕೇರಳ, ಮಹಾರಾಷ್ಟ್ರ-ಕರ್ನಾಟಕಗಳಿಗೆ ಮಾತ್ರ ಆಯೋಗ ನೇಮಿಸುವ ವಿಚಾರ ಅನಪೇಕ್ಷಣೀಯವಾದದ್ದು — ಎಂದು ಮುಂತಾದ ಅಭಿಪ್ರಾಯಗಳ ಹಿಂದೆ ಏಕ ಸದಸ್ಯ ಆಯೋಗದಿಂದ ಕನ್ನಡಿಗರಿಗೆ ನ್ಯಾಯ ದೊರಕಲಾರದು ಎಂಬ ಭಯ ಮನೆ ಮಾಡಿದೆ. ತೋರಿ ಬರುವ ಪ್ರತಿಭಟನೆಯು ತೀವ್ರವಾಗುತ್ತಲೂ ಇದೆ.

ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಎ.ಐ.ಸಿ.ಸಿ.ಯಲ್ಲಿ ಈ ಗೊತ್ತುವಳಿಯನ್ನು ವಿರೋಧಿಸಲಿಲ್ಲ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಕೇರಳದ ಕಾಸರಗೋಡಿನ ಒಂದು ಭಾಗ ಕರ್ನಾಟಕಕ್ಕೆ ಸೇರಬೇಕೆಂದು ಹೇಳುವ ಅವರು ಈ ನಿರ್ಣಯವನ್ನು ಬೆಂಬಲಿಸಲೇ ಬೇಕಾಗುತ್ತದೆ. ಇಂತಹ ಆಯೋಗ ನೇಮಿತವಾದರೆ ಮಾತ್ರ ಕಾಸರಗೋಡು ಕನ್ನಡಕ್ಕೆ ಬಂದೀತು. ಆದರೆ ನಾವಿಲ್ಲಿ ಗಮನಿಸಬೇಕಾದ ಇತರ ಅಂಶಗಳಿವೆ. ಮುಖ್ಯವಾದ ತಂಟೆಯಿರುವುದು ಮಹಾರಾಷ್ಟ್ರ ಕರ್ನಾಟಕಗಳ ನಡುವೆ. ಮರಾಠಿಗಳ ಪುಂಡಾಟಿಕೆಯಿಂದ ಗಡಿ ಪ್ರದೇಶದಲ್ಲಿ ಒಮ್ಮೊಮ್ಮೆ ಗಂಭೀರ ಪರಿಸ್ಥಿತಿ ತಲೆದೋರುತ್ತಿದೆ. ಮೊನ್ನೆಯ ದೇಸೂರ ಬಳಿಯ ರೈಲು ಅಪಘಾತಕ್ಕೂ ಈ ಪುಂಡಾಟಿಕೆಯೇ ಕಾರಣವೆಂಬುದು ದೃಢವಾದರೆ ಮತ್ತೆ ವಿಶ್ವಬ್ಧತೆಯನ್ನು ತೋರಿಸಲು ಕನ್ನಡಿಯೇಕೆ? ಮರಾಠಿಗರು ಕನ್ನಡದ ನೆಲದ ಮೇಲೆ ತಮ್ಮ ಅಧಿಕಾರವನ್ನೇ ಜಮಾಯಿಸುತ್ತ ಬಂದಿದ್ದಾರೆ. ಬೆಳಗಾಂವಿ, ಉತ್ತರ ಕನ್ನಡದ ಉತ್ತರ ಭಾಗ ಮತ್ತಿತರ ಅಲ್ಪ ಪ್ರದೇಶಗಳು ತಮಗೆ ಸೇರಬೇಕೆಂದು ಅವರು ಹೇಳುತ್ತಾರೆ ವಾಸ್ತವಿಕವಾಗಿ ಕನ್ನಡದ ಕೆಲ ಪ್ರದೇಶಗಳು ಮಹಾರಾಷ್ಟ್ರದಲ್ಲಿ ಇಂದು ಸೇರಿವೆ. ಸೊಲ್ಲಾಪುರ, ಕೊಲ್ಹಾಪುರ, ದಕ್ಷಿಣ ಸತಾರಾ ಜಿಲ್ಲೆಗಳ ಕೆಲ ಭಾಗಗಳು ನಮಗೂ ಬರಬೇಕಾಗಿವೆ. ಆದರೆ ಮರಾಠಿಗಳು ತಾವು ಕೊಡಬೇಕಾದುದರ ಬಗ್ಗೆ ಮೌನವಿದ್ದು ಬರಬೇಕಾದುದಕ್ಕೆ ಮಾತ್ರ ಕೈ ಮುಂದೆ ಮಾಡುತ್ತಾರೆ. ಇಂತಹ ಪ್ರವೃತ್ತಿಯಿಂದ ಸಮಸ್ಯೆ ಪರಿಹಾರವಾಗಲಾರದು. ಕರ್ನಾಟಕದ ಜನರೂ ಸರಕಾರವೂ ಗಡಿ ಪ್ರದೇಶದಲ್ಲಿ ಅಲ್ಪಸ್ವಲ್ಪ ಹೊಂದಾಣಿಕೆಯನ್ನು ಸಾಧಿಸಿ ಯಾರಿಗೂ ಅನ್ಯಾಯವಾಗದಂತೆ ಗಡಿತಂಟೆಯನ್ನು ಪರಿಹರಿಸಲು ಹಿಂದೆಯೇ ಒಪ್ಪಿದ್ದಾರೆ. ಎ. ಐ. ಸಿ. ಸಿ.ಯ ವೇಳೆ ರಾಜ್ಯ ಸರಕಾರದ ವಾರ್ತಾ ಇಲಾಖೆಯೊಂದು ಪುಸ್ತಿಕೆಯನ್ನು ಪ್ರಕಟಿಸಿ ಅದರಲ್ಲಿ ಕನ್ನಡದ ನಿಲುಮೆಯೇನೆಂಬುದನ್ನು ಬಿಚ್ಚು ಮಾತುಗಳಿಂದ ವಿವರಿಸಿದೆ. ಬರಿಯ ಭಾಷೆಯ ತಳಹದಿಯಲ್ಲೇ ವಿಂಗಡಣೆ ಮಾಡದೆ, ಆಡಳಿತ, ಸಾರಿಗೆ ಸಂಪರ್ಕ, ವಿದ್ಯನ್ಮಂಡಲ, ಪೂರಯ್ಕೆ ನೀರಾವರಿ ಮೊದಲಾದ ವ್ಯವಸ್ಥೆಗಳಿಗೆ ಹೊಂದಿಕೊಳ್ಳುವಂತೆಯೂ ನೋಡಿಕೊಳ್ಳಬೇಕು ಎಂಬವಾದದಲ್ಲಿ ಮಾನವತೆ ಇದೆ. ಅದು ಹೊರತು, ಸ್ವಾರ್ಥಸಾಧನೆಯನ್ನೇ ಮುಖ್ಯೋದ್ದೇಶವನ್ನಾಗಿಟ್ಟುಕೊಂಡರೆ, ಅದರಿಂದಲೇ ತಂಟೆ ಪರಿಹಾರಗೊಳ್ಳುವುದಿಲ್ಲ.

ಎ ಐ ಸಿ ಸಿ ಯ ನಿರ್ಣಯದ ಮೇಲೆ ಕನ್ನಡಿಗರಿಗೆ ತೀವ್ರ ಅಸಮಾಧಾನವಾಗಿದೆ. ಇದು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಸೌಮ್ಯ ಸ್ವರೂಪದ ಪ್ರತಿಭಟನೆ ವ್ಯಕ್ತವಾಗುತ್ತಿದೆ. ಉತ್ತರದ ಗಡಿ ಪ್ರದೇಶದ ಕನ್ನಡಿಗರು ಈ ಸಂಬಂಧದಲ್ಲಿ ಒಂದಾಗಿದ್ದಾರೆ; ತಮ್ಮ ಮೇಲೆ ಆಗುವ ಅನ್ಯಾಯದ ಪರಿಮಾರ್ಜನೆಗೆ ಹೋರಾಡಲು ಸಿದ್ಧರಾಗಿದ್ದಾರೆ. ತಮ್ಮ ಈ ಹೋರಾಟವನ್ನು ಬಿಗಿಗೊಳಿಸಲು ವ್ಯಾಪಕವಾಗಿಸಲು ತೊಡಗಿದ್ದಾರೆ. ಅವರ ಈ ಉತ್ಸಾಹ ಮುಂದುವರಿದರೆ, ಹೋರಾಟವು ಬಲಗೊಳ್ಳುವುದು ಖಂಡಿತ. ಅನ್ಯಾಯದ ವಿರುದ್ಧ ನಡೆಯುವ ಈ ಹೋರಾಟವು ನ್ಯಾಯಬದ್ಧವೇ ಇದೆ ಎನ್ನದೆ ನಿವೃತ್ತಿಯಿಲ್ಲ. ಆದರೆ, ಒಂದು ಸಂಗತಿ, ನ್ಯಾಯಕ್ಕಾಗಿ ನಡೆಯುವ ಹೋರಾಟ ಅನ್ಯಾಯದ ದಾರಿ ತುಳಿಯದಿರಲಿ; ಪುಂಡಾಟಿಕೆ, ಹಿಂಸೆ, ಅತ್ಯಾಚಾರಗಳಿಗೆ ಆಸ್ಪದವಾಗದಿರಲಿ. ಮಹಾತ್ಮಾ ಗಾಂಧಿಜಿಯವರು ತೋರಿಸಿದ ಅಹಿಂಸಾತ್ಮಕ ರೂಪದಲ್ಲಿಯೇ ಕನ್ನಡಿಗರ ಹೋರಾಟ ನಡೆಯಲಿ. ಎದುರುಗಡೆಯಿಂದ ಪುಂಡಾಟಿಕೆ ಆರಂಭವಾದರೂ ತಾವು ಆದರತ್ತ ಒಲಿಯದಿರಲಿ. ನ್ಯಾಯಕ್ಕಾಗಿ ಮಾಡುವ ಹೋರಾಟವು ಜಯಶೀಲವಾಗಲಿ.

ರಾಹುಮುಕ್ತ ಚಂದ್ರ

ಮಲೇಶ್ಯಾ—ಇಂಡೋನೇಶ್ಯಗಳ ಸಂಬಂಧ ರಾಹುಗ್ರಸ್ತ ಚಂದ್ರನಂತೆ ಕೆಟ್ಟು ಹೋಗಿತ್ತು. ಆದರೆ ಇದೀಗ ರಾಹುವಿನಿಂದ ಬಿಡುಗಡೆ ಹೊಂದಿದ ಚಂದ್ರನಂತಾಗತೊಡಗಿದೆ. ಕೆಂಪು ಚೀನಾದ ಬಲೆಗೆ ಬಿದ್ದ ಇಂಡೋನೇಶ್ಯಾ ಮಲೇಶ್ಯಾದೊಡನೆ ದ್ವೇಷಕಟ್ಟಿಕೊಂಡಿತು. ಆದರೆ, ದೇಶದಲ್ಲಾದ ಕೆಂಪು ವಿರೋಧಿ ಆಂತರಿಕ ಕ್ರಾಂತಿಯಿಂದಾಗಿ ವಿದೇಶ ಮಂತ್ರಿ ಸುಬಾಂಡ್ರಿಯೋ ಪತಿತರಾದರು; ಕಮ್ಯೂನಿಸ್ಟ್ ಪಕ್ಷಕ್ಕೆ ಬಹಿಷ್ಕಾರಬಿತ್ತು. ಸುಹ್ರಟೋ ಅವರ ಮಾರ್ಗದರ್ಶನದಲ್ಲಿ ನಾಮಮಾತ್ರ ಅಧ್ಯಕ್ಷ ಸುಕರ್ಣರು ಮಲೇಶ್ಯಾದೊಡನೆ ಸ್ನೇಹ ಬೆಳೆಸಲು ಮುಂದೆ ಬಂದಿದ್ದಾರೆ. ತುಂಕು ಅಬ್ದುಲ್ಲರನ್ನು ಭೇಟಿಯಾಗಲು ಅವರು ಸಿದ್ಧರಿದ್ದಾರೆ. ಇತ್ತೀಚೆಗೆ ಉಭಯ ದೇಶಗಳ ಮಂತ್ರಿಮಟ್ಟದ ಸಭೆಯ ಹಿನ್ನೆಲೆಯಲ್ಲಿ ಸ್ನೇಹಪ್ರವಾಹವೇ ಕೋಡಿ ಹರಿಯಿತು. ಇದು ಸ್ವತಂತ್ರ ಜಗತ್ತಿನ ದೃಷ್ಟಿಯಲ್ಲಿ ಶುಭಸೂಚನೆ. ಕೆಂಪುಚೀನಾದ ಮಹತ್ವಾಕಾಂಕ್ಷೆಗೊಂದು ಬಲವಾದ ಏಟು; ಇದರಿಂದ ಅದು ಥಕ್ಕನೆ ಚೇತರಿಸಿಕೊಳ್ಳಲಾರದು.

ಅಭ್ಯರ್ಥಿಗಳ ಆಯ್ಕೆ

ಮಣಿಪಾಲ, ಜೂನ್ ೧— ಇಲ್ಲಿಯ ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ॥ ಟಿ.ಎಂ.ಎ. ಪೈಯವರು ಕಸ್ತೂರಬಾ ಮೆಡಿಕಲ್ ಕಾಲೇಜಿಗೆ ಪ್ರವೇಶ ಬಯಸಿ ಬಂದವರನ್ನುದ್ದೇಶಿಸಿ ಮಾತನಾಡುತ್ತಾ ಅವರಿಗೆಲ್ಲರಿಗೂ ಇಲ್ಲಿ ವಿದ್ಯಾಭ್ಯಾಸ ಸಿಗುವಂತೆ ತಾವು ನಿರಂತರವಾಗಿ ಶ್ರಮಿಸುವುದಾಗಿ ತಿಳಿಸಿದರು. ಕಾಲೇಜಿಗೆ ಸೇರಿಸಿಕೊಳ್ಳುವುದಾಗಿ ಅಭ್ಯರ್ಥಿಗಳ ಆಯ್ಕೆಗಾಗಿ ಇಂಟರ್‌ವ್ಯೂ ಮತ್ತು ಪರೀಕ್ಷೆ ಆರಂಭವಾಗುವ ಮುನ್ನ ಅವರು ಭಾಷಣಮಾಡುತ್ತ ವಿಶ್ವವಿದ್ಯಾನಿಲಯ ಮತ್ತು ಸರಕಾರದಲ್ಲಿ ಬದಲಾವಣೆಯಾಗುತ್ತಿರುವ ಧೋರಣೆಗಳಿಗೆ ಹೊಂದಿಕೊಳ್ಳಲು ಎಕಾಡೆಮಿ ಪ್ರಯತ್ನಿಸುತ್ತಿದೆ ಎಂದರು.

ಕಾಲೇಜಿನ ಡೀನ್ ಡಾ॥ ಎ. ಕೃಷ್ಣರಾವ್ ಪ್ರಿನ್ಸಿಪಾಲ್ ಡಾ॥ ಎಂ. ವಿ. ಚಾರಿ, ಮುಖ್ಯಾಧಿಕಾರಿ ಡಾ॥ ಸಿ. ಎಚ್. ಶಿವರಾಮನ್ ಮತ್ತು ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಎಸ್. ಎನ್. ಅಡಿಗರನ್ನೊಳಗೊಂಡ ಸಮಿತಿಯು ದೇಶದ ಎಲ್ಲ ಕಡೆಗಳಿಂದ ಹಾಗೂ ವಿದೇಶಗಳಿಂದ ಬಂದಿರುವ ಅಭ್ಯರ್ಥಿಗಳ ಪೈಕಿ ಅತ್ಯುತ್ತಮರಾದವರನ್ನು ಆಯ್ಕೆ ಮಾಡಲಿದೆ.

ನರಸಣ್ಣನ ಸರಸ

"ಸಭಾಯಿ ಪೇಳ್ತಾರೆ, ಚಿಣ್ಣಸ್ತ್ರಕ ಯಾರು ಮಾಡ್ಬೇಕಾದ್ದೆ ಸಂಪತ್ತು ದೇಶದಲ್ಲಿ ಕೋಡಿ ಹರೀಬೇಕೊಂತ....'

"ಸಿಕ್ಕಲ್ಲಾ ಹಾಂಗಾದ್ರೆ, ವಿದೇಶೀ ನೆರವು ಹಡೀಬಾರ್ದು, ಅಣುಬಾಂಬು ಮಾಡ್ಬೇಕೊಂತ ಕೂಗೋರಿಗೆ ಉತ್ರ...."

ಗೇಹ ರಾಜ್ಯದಲ್ಲಿ

ಯೋಗ್ಯತೆಗೆ ತಕ್ಕ ಜತೆ

‘ಅಲ್ಲಾ ಗಂಟೆ ಎಷ್ಟಾಯಿತೂಂತಾದ್ರೂ ಗೊತ್ತಿದೆಯೇನು?’

‘ಇಲ್ಲದೆ ಏನಂತೆ, ಅದಷ್ಟಂತೂ ಆಗಿರೋದು ನೂರಕ್ಕೆ ನೂರರಷ್ಟು ಖರೇನ್ನಿ’

‘ಅದನ್ನ ಹೇಳೋಕೆ ನೀವೇ ಬರಬೇಕೇನು?’

‘ಮತ್ತೆ....?’

‘ತುಸು ಬುದ್ಧಿಯಿದ್ದ ಯಾವನಾದ್ರೂ ಹೇಳ್ತಾನು. .’

"ಸದ್ಯ ಬದುಕಿದೇನ್ನಿ..."

"ಯಾಕೆ?"

"ಮತ್ತೆ ಸಾಯ್ಬೇಕಿತ್ತೇನು? ನಾನು ಸತ್ರೆ ನಿನಗೆ ನೆಮ್ಮದಿಯೇನು? ಅಯ್ಯೋ ನನ್ನ ಪ್ರಾರಬ್ಧವೆ! ಹುಡುಕಿ ಹುಡುಕಿ ಎಂತ ಹುಡುಗಿಯನ್ನು ಗಂಟು ಹಾಕಿಕೊಂಡೆನಪ್ಪಾ...."

‘ಅಲ್ರಿ, ಯಾಕೆ ಇಷ್ಟೆಲ್ಲಾ ರಂಪಾಟ ಮಾಡ್ತೀರೀಂತ....’

"ಮತ್ತೆ ಮಾಡೋದಾದ್ರೂ ಏನು? ಕೈ ಹಿಡಿದ ಮಡದಿಯೇ ಗಂಡನನ್ನು ಸಾಯೆಂದ ಮೇಲೆ...’

‘ಅಲ್ಲ, ನಾನೆಲ್ಲಿ ಹಾಗೆಂದೆ?’

‘ಮತ್ತಾಗ, ಅಂದದ್ದಾದ್ರೂ ಏನು?"

"ಏನು?’

"ಯಾಕೆ ಬದುಕಿದಿರೀಂದೆಯಲ್ಲಾ....’

"ಅಯ್ಯೋ, ನೀವೊಬ್ರು. ನಾನು ಒಂದು ಅಂದ್ರೆ ನೀವೊಂದಕ್ಕೆ ಅದನ್ನ ಎಳ್ಕೊಂಡು ಗೋಳು ಹೊಯ್ಕೋದು. ಸಾಕಾಯ್ತು ನೋಡಿ ನಿಮ್ಮ ಸಹವಾಸ...."

"ಸರಿ, ಹಾಗಾದರೆ ನಾಳೆಯಿಂದ ಮತ್ತೊಬ್ಬರ ಸಹವಾಸಕ್ಕೆ ತೊಡಗುವವಳೂಂತಾಯ್ತು...."

ಛಿ, ಏನು ಅಭದ್ರ ಮಾತಾಡ್ತೀರೀಂತ. ಸಾಕಾಯ್ತೂಂತಾದ ಕೂಡ್ಲೆ ಎಲ್ಲಾ ಬೇರೆ ಹೋಗ್ತಾರೆಯೇನು?"

‘ಇಲ್ಲ, ಇಲ್ಲ, ಮತ್ತೂ ಮತ್ತೂ ಅವ್ರ ಬಳೀಲೇ ಇದ್ದು ಸಾತಾಯಿಸ್ತಾ ಇರ್ತಾರೆ ನಿನ್ನ ಹಾಗೆ...."

"ಹೌದಪ್ಪ, ನಾನೊಬ್ಳು ನಿಮ್ಗೆ ಹೆಚ್ಚಿನವ್ಳು...."

"ಮತ್ಯಾರಮ್ಮ ಕಡಿಮೆಯವ್ರು....?

‘ಸದ್ಯ ನನ್ನ ಪುಣ್ಯದಿಂದ ಯಾರೂ ಇಲ್ಲಾನ್ನಿ...."

‘ಅಷ್ಟು ಪುಣ್ಯ ಮಾಡಿರೋದ್ರಿಂದ್ಲೇ ನನ್ನಂತಹ ಗಂಡ ಸಿಕ್ಕಿರೋದು ನಿನ್ಗೆ__"

"ಈಗ ಹಾಗೇನೇ ಹೇಳ್ಬೇಕು ನೋಡಿ’

‘ಈಗಾಂತೇನು, ಆಗಾಂತೇನು ಯಾವಾಗ್ಲೂ ಹಾಗೇ ಹೇಳ್ಬೇಕು, ಹಾಗೆ ಹೇಳ್ತಿರ್ಬೇಕು......"

‘ಸರಿಯಪ್ಪ ಕಾಂಗ್ರೆಸ್ ಸಂಸ್ಥೆಗೆ ಮುರಾರ್ಜಿ ಒಬ್ಬ ಪುಣ್ಯ ಪುರುಷ, ನನಗೆ ನೀವೊಬ್ರು.’

‘ನೋಡು’ ನೀನು ಹಾಗೆಲ್ಲಾ ಅಂದ್ರೆ ನನ್ಗೆ ರೇಗುತ್ತೆ....’

"ಯಾಕೆ ರೇಗ್ಬೇಕೂಂತ?"

‘ಮತ್ತೆ ಇಲ್ಲದಿದ್ದದ್ದು ಎಲ್ಲಾ ಉಪ್ಪು ಖಾರ ಹುಳಿ ಹಸಿಮೆಣಸು ಎಲ್ಲಾ ಸೇರ್ಸಿ ಅರ್ಗಣ ಮುದ್ದೆ ಮಾಡಿ ಗಂಟಲಿಗೆಸೆದ್ರೆ ಹೇಗಾದೀತು ಹೇಳು?’

ಇಲ್ಲಿ ಕೇಳೀಂದ್ರೆ ನಿನ್ನೆ ನೀವು ತಂದದ್ದು ಹಸಿಮೆಣ್ಸೋ ಹಣ್ಣು ಮೆಣ್ಸೋ?"

‘ನಾನಂದದ್ದು ಅಂಗ್ಡಿಯವನ ಬಳಿ ಕಾಯಿ ಮೆಣ್ಸು ಯಾನೆ ಹಸಿಮೆಣಸು ಕೊಡೂಂತ. ಅವ ಉದಾರ ಮನಸ್ಸಿನಿಂದ ಹದಿನೈದು ಕಾಯಿ, ಆರು ಪೂರಾ ಹಣ್ಣು ಮತ್ತೆ ಬಂದಾರು ಅರೆ ಹಣ್ಣು ಕೊಟ್ಟಾನ್ನು.’

‘ಅಲ್ರಿ ಹಣ್ಣಾದ್ದನ್ನ ಮಾಡೋದಾದ್ರೂ ಏನು?"

"ನೋಡು ನೀನು ಹಿಗೇಲ್ಲಾ ಮಾಡಿದ್ರೆ ಹೇಗೆ? ಹೇಳಿದ್ದು ಹಸಿಮೆಣ್ಸು, ಅದು ಹಣ್ಣಾದ ಮಾತ್ರಕ್ಕೆ ಬೇಯ್ಸಿದಂತಾಯಿತೇನು?

"ಬಳ್ಳಿ ಅಂಗಡಿಯವನ ವಕಾಲತ್ತಾಯ್ತು. ಅದ್ರಿಂದ್ಲೇ ನೋಡಿ, ಎಲ್ಲಾ ಮಾಗಿಹೋಗಿದೆ....’

"ಹೋಗ್ಲಿ ಬಿಡು. ಅವು ಮಾಗಿದ ಹಾಗೆಯೇ ನಾವೂ ಮಾಗ್ಬೇಕು. ನಮ್ಮ ಮುರಾರ್ಜಿ ಮಾಗುತ್ತ ಬರುತ್ತಿಲ್ಲವೆ, ಹಾಗೆ..’

"ಹಾದು ನೋಡಿ. ಅವ್ರೊಬ್ಬ ಜನ. ಏನೇ ಆಗಲಿ, ಕಾಂಗ್ರೆಸ್ ತತ್ವಗಳನ್ನು ಅವ್ರ ಮೀರಿ ಹೋಗೊಲ್ಲ ನೋಡಿ........ ಮತ್ತೆ ದಿನಕ್ಕೆ ನಾಲ್ಕು ಬಾರಿ ಬಣ್ಣ ಬದಲಿಸೋ ಓತಿ ಕಾಟಗಳ ಹಾಗೆ...."

‘ನೋಡು, ಅಂತಹ ಕೆಲವರಾದ್ರೂ ಇಂದಿಗೂ ಕಾಂಗ್ರೆಸ್ಸಿನಲ್ಲಿದ್ದಾರೆ. ಅಂತಲೇ ಕಾಂಗ್ರೆಸ್ ಉಳಿದಿದೆ.’

‘ಅಂದ್ರೆ, ಅವ್ರೆಲ್ಲಾ ಹೋದ ಮೇಲೆ?’

"ಎಲ್ಲಿಗೆ ಹೋಗೋದು?"

"ಅಲ್ಲ, ಒಂದಲ್ಲ ಒಂದು ದಿನ ಎಲ್ಲರೂ ಹೋಗಲೇ ಬೇಕಾದಲ್ಲಿಗೆ ಬೇಡವಾದರೂ ಹೋಗಲೇ ಬೇಕಲ್ಲ?"

‘ಓ, ಹಾಗೆ. ಆ ಮೇಲೆ, ಮತ್ಯಾರಿಗಾದ್ರೂ ಅಂತಹ ಹುಚ್ಚು ತಗಲುತ್ತೆ. ಈಗ ನೋಡು, ಕೆಂಗಲ್ ಹನುಮಂತಯ್ಯನವರಿಲ್ಲವೆ, ಹಾಗೆ."

‘ಅದು ಸರೀನ್ನಿ. ಅವರು ಉತ್ತಮ ಆಡಳಿತಗಾರರು...’

‘ಮತ್ತೆ ಮುರಾರ್ಜಿ?’

"ಅವರು ಹಠವಾದಿಗಳು ಅನ್ನಿಸ್ತಾರೆ.

‘ಓಹೋ, ಕೆಂಗಲ್ಲರು ಹಠವಾದಿಗಳಲ್ಲವೇನೆ?’

‘ಏನೋ ನಾನರಿಯೆ...."

‘ಹೌದು, ನೋಡು, ಹಠ ಹಿಡಿದೇ ವಿಧಾನ ಸಭೆ ಕಟ್ಟಿಸಿ ತಾವು ಬೇಕಷ್ಟು ಅಪವಾದ ಕೇಳಿದ್ರು, ಜತೆಗೆ ಯಾರ್ಯಾರಿಗೋ ದೊರೆಯಬಹುದಾಗಿದ್ದ ಲಕ್ಷಾಂತರ ರೂಪಾಯಿ ಬಾಡಿಗೆಗೆ ಕೈ ಕೊಟ್ರು... ಹೇಗೆ"

"ಕತ್ತೆ ಪುರಾಣ ಬೆಳೆಯುತ್ತೇನ್ನಿ...."

‘ಅಂತಹ ಸಾಹಸಿಯ ಕಥೆ ನಿನಗೆ ಕತ್ತೆ ಪುರಾಣವಾಯ್ತಲ್ಲ....’

"ಹಾಗಲ್ರಿ, ಪುರಾಣ—ಹರಿಕಥೆ ಅಂದ್ರೆ ನನಗೇನು ಮೆಚ್ಚುಗೆಯಲ್ಲ...."

‘ಮತ್ತೆ ಪಟ್ಟಾಂಗದ ಪೆಟ್ಟಿಗೆಯಂದ್ರೆ ಮಾತ್ರ ಜೀವ ಬಿಡ್ತೀನೋಡು...’

‘ಇಲ್ಲ, ನಾನು ಜೀವ ಬಿಡೋಲ್ಲ....’

"ಬಿಡ್ಬೇಕು ಅಂದವ್ರು ಯಾರು?"

‘ಯಾರೂ ಇಲ್ಲಾನ್ನಿ. ಸದ್ಯ ನಿಮ್ಮ ಪುರಾಣ ಮುಗಿಯಿತೆ?’

‘ಮೆಚ್ಚದವರ ಮುಂದೆ ಹರಿಕಥೆ ಯಾತಕ್ಕೆ?’

"ಅಲ್ರಿ, ಮೆಚ್ಚುತ್ತಾರಂತ್ಲೇ ಎಲ್ರೂ ಹರಿಕಥೆ ಮಾಡ್ತಾರಾ?"

‘ಮತ್ತೆ?"

"ಮಾಡ್ಬೇಕು ಮತ್ತೆ ಮೆಚ್ಚಿಸ್ಬೇಕು...’

‘ಈಸಬೇಕು, ಈಸಿ ಜೈಸಬೇಕು..."

‘ಹ್ಞಾಂ....ಹಾಗೇನೇ....’

"ಸರಿ, ನೋಡು ಕರ್ನಾಟಕ ರಾಜ್ಯವನ್ನು ಶಾಸನ ಬದ್ಧವಾಗಿ ನಿರ್ಮಿಸುವಲ್ಲಿ ಕೆಂಗಲ್ ತೋರಿದ ಸಾಹಸ ಅವರ್ಣನೀಯವಾದುದು. "ಹಳೆ ಮೈಸೂರಿಗ"ರ ಕಟು ಟೀಕೆ ಇಂದಿಗೂ ಅವರ ಈ ಸಾಹಸದ ಮೇಲೆ ಇದೆ...."

‘ಹೌದೆ? ಅದು ನನಗೆ ಗೊತ್ತೇ ಇರಲಿಲ್ಲ...ಆದ್ರೆ ನೋಡಿ, ಮುರಾರ್ಜಿಯವರು ಮಾತ್ರ ಪೂರಾ ಹಠವಾದಿಗಳು...’

‘ಯಾಕೆ ಹಾಗಂತಿ?"

‘ಯಾಕೆ ಅಂದ್ರೆ? ಮತ್ತೆ ನೋಡಿ, ಚಿನ್ನ ನಿಯಂತ್ರಣ ಮಾಡಿ ಎಷ್ಟು ತಾಪತ್ರಯ ಮಾಡ್ಬಿಟ್ರು... ಬೇಡಾಂದ್ರೂ ಕೇಳ್ಲಿಲ್ಲ..."

"ನಿನಗೆ ತಾಪತ್ರಯವಾದ್ರೂ ನಾನು ಬದುಕಿದೇನ್ನ...’

"ಹಾಗೆ?"

‘ಇಲ್ದಿದ್ರೆ ನಿನ್ನ ಬಾಯಿಂದ ಬದುಕೋದಕ್ಕಿತ್ತೆ?"

"ಹೌದಪ್ಪ. ಪಾಪ, ಭಾರಿ ಬಂಗಾರದಿಂದ ಮೈ ಮುಚ್ಚಿಸೋ ಗಂಡ್ಸು ನೀವು.’

‘ಮತ್ತೂ ನನ್ನತ್ತಲೇ ತಿರುಗಿತು ಬಾಣ...’

‘ಮತ್ತೆ?’

"ನೋಡು, ಮುರಾರ್ಜಿ ನೀನೂ ನಿನ್ನಂತವರೂ ಹೇಳುವ ಹಾಗೆ ಹಠವಾದಿಗಳಲ್ಲ ತತ್ವವಾದಿಗಳು; ನೀತಿವಾದಿಗಳು..."

"ಹೇಗೆ?"

"ಕೇಳು, ಇಲ್ಲೇ ಇದೆ ಅವರ ಹೇಳಿಕೆ

‘ಅಲ್ರಿ, ಸುಂಸುಮ್ನೆ ಯಾಕವರ ಹೇಳಿಕೆ.."

"ಹಾಗಲ್ವೆ, ಮೊನ್ನೆ ಮುಂಬಯಿಯಲ್ಲಿ ಕೇಳಿದ್ರು ಪತ್ರಿಕಾಕರ್ತರು ಅವರನ್ನ.."

"ಏನೂಂತ?"

"ನಿಮ್ಮನ್ನು ಹಠವಾದಿಗಳು ಅನ್ನುತ್ತಾರೆ. ನೀವು ನಿಜವಾಗಿಯೂ ಹಠವಾದಿಗಳೆ? ಅಂತ...."

‘ಅದಕ್ಕೆ....?’

‘ಅದಕ್ಕೆ ನಾನು ಯಾವ ವಿಷಯದಲ್ಲಿ ಹಠವಾದಿಗಳೆಂಬ ಬಗ್ಗೆ ತಿಳಿಸಬೇಕೆಂದರು...."

"ಹೇಳ್ಬೇಕಾಗಿತ್ತು ಆಗ...."

‘ಮತ್ತೆ ಹೇಳದೆ ಇರ್ತಾರೆಯೆ? ಸಂಯುಕ್ತ ಮಹಾರಾಷ್ಟ್ರ ರಾಜ್ಯ, ಪಾನನಿರೋಧ, ಚಿನ್ನ ನಿಯಂತ್ರಣ...’

‘ಹ್ಞಾಂ, ಅದಕ್ಕೇನೆಂದರು?"

"ಅನ್ನೋದೇನು? ಯಾವುದೇ ರಾಜ್ಯ ವಿಭಜನೆಗೆ ತಾನು ವಿರುದ್ಧ. ಆದ್ದರಿಂದ ಮಹಾರಾಷ್ಟ್ರ ರಚನೆಗೆ ವಿರೋಧ ವ್ಯಕ್ತಪಡಿಸಿದೆ. ಕಾಂಗ್ರೆಸ್ಸು ರಾಜ್ಯ ವಿಭಜನೆಯ ನಿರ್ಧಾರ ಮಾಡಿದಾಗ, ಮುಂದೆ ನಾನೂ ಸರ್ವ ವಿಧದ ಸಹಾಯ ಮಾಡಿದೆ..

(ಒಂಭತ್ತನೇ ಪುಟ ನೋಡಿರಿ)

ಜಿಲ್ಲೆಯ ರೈತರಿಗೆ ನಮ್ಮ ಕಾಣಿಕೆ............

ತ್ಯಾಚುಂಗ್—65 ಭತ್ತದ ತಳಿ

ಹೊಲ ಗದ್ದೆಗಳಲ್ಲಿ ದುಡಿಯುವ ರೈತರೇ ದೇಶದ ಸಂಪತ್ತಿನ ಉತ್ಪಾದಕರು. ರೈತರ ಸಂಪತ್ತನ್ನು ಹೆಚ್ಚಿಸುವ ನಮ್ಮ ಹಂಬಲದ ಪ್ರತೀಕವೆನಿಸಿದೆ— ‘ತ್ಯಾಚುಂಗ್—65.’

ಈ ಹೊಸ ಭತ್ತದ ತಳಿಯನ್ನು ಉಪಯೋಗಿಸಿಕೊಂಡು ರೈತರು ತಮ್ಮ ಸಂಪತ್ತನ್ನು ಬಹು ಸುಲಭವಾಗಿ ದ್ವಿಗುಣಗೊಳಿಸಲು ಸಾಧ್ಯ. ಇದರಿಂದ ತಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಣೆಯಲ್ಲದೆ, ದೇಶದ ಮುಂದಿರುವ ಆಹಾರ ಸಮಸ್ಯೆಯನ್ನು ಬಿಡಿಸುವುದರಲ್ಲೂ ಸಹಭಾಗಿಯಾಗುವ ಸುಸಂದರ್ಭ.

ಸಾಗುವಳಿ ಯೋಗ್ಯ ಭೂಮಿ, ಸಾಕಷ್ಟು ಅನುಭವ ಮತ್ತು ಸಾಮರ್ಥ್ಯ ಇವು ಕೆಲವು ನಮ್ಮಿಂದ ಸಾಲ ಪಡೆಯುವರೆ ನಿಮ್ಮಲ್ಲಿರ ಬೇಕಾದ ಅರ್ಹತೆಗಳು.

ಉತ್ತಮ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಖರೀದಿ, ಬೀಜ ಉತ್ಪಾದನಾ ಕೃಷಿ, ಜಮೀನು ಅಭಿವೃದ್ಧಿ ಕಾರ್ಯಗಳು, ನೀರಾವರಿ ವ್ಯವಸ್ಥೆ ಮತ್ತು ಪಂಪುಸೆಟ್ಟುಗಳ ಖರೀದಿ, ಉಳುಮೆ ಯಂತ್ರ ಮತ್ತಿತರ ಯಾಂತ್ರಿಕ ಉಪಕರಣಗಳ ಖರೀದಿ, ಪಶು ಸಂಗೋಪನೆ ಮತ್ತು ಕೋಳಿ ಸಾಕಣೆ— ಈ ಉದ್ದೇಶಗಳಿಗಾಗಿ ಸಾಲ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಗೆ ಭೇಟಿ ಕೊಡಿರಿ.

ಕೃಷಿ ಆರ್ಥಿಕ ನೆರವಿನ ವಿಭಾಗ,

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ.

ಭಾರತದ ರಾಜಗುರು

ಗೋಖಲೆಯವರ ನುಡಿ ಸತ್ಯವಾಯಿತು

ಬರೆದವರು: ಶ್ರೀ ಪಿ. ಕೋದಂಡ ರಾವ್.

ಗೋಪಾಲ ಕೃಷ್ಣ ಗೋಖಲೆಯವರನ್ನು ಮಹಾತ್ಮಾ ಗೋಖಲೆ, ಮಹಾನುಭಾವ ಗೋಖಲೆ ಎಂದು ಮಹಾತ್ಮಾ ಗಾಂಧಿಯವರೆ ಕರೆದಿದ್ದಾರೆ. ಅಪ್ರತಿಮ ದೇಶಭಕ್ತರೂ ರಾಜಕೀಯ ಧುರಂಧರರೂ ಎಂದೆನಿಸಿದ, ದಾದಾಭಾಯಿ ನವರೋಜಿ, ಸರ್ ಫಿರೋಜಶಹಾ ಮೆಹ್ತಾ, ಮಹದೇವ ಗೋವಿಂದ ರಾನಡೆ ಮತ್ತು ಬಾಲ ಗಂಗಾಧರ ತಿಳಕ್ ಅಂತಹವರನ್ನು ಬಿಟ್ಟುಕೊಟ್ಟು, ಮಹಾತ್ಮಾ ಗಾಂಧಿಯವರು ಗೋಖಲೆಯವರನ್ನು ತಮ್ಮ 'ರಾಜಗುರು' ಎಂದು ಸ್ವೀಕರಿಸಿ, "ಮಾನ್ಯಗೋಖಲೆಯವರು ಸ್ಫಟಿಕದಷ್ಟು ನಿರ್ಮಲ ಮಗುವಿನಷ್ಟು ಮುಗ್ಧ ಸಿಂಹದಷ್ಟು ಶೂರ. ತಪ್ಪನ್ನು ಧಿರೋದಾತ್ತವಾಗ್ಯೊಪ್ಪಿಕೊಳ್ಳುವ ವೀರ. ರಾಜಕೀಯ ಕ್ಷೇತ್ರದಲ್ಲಿ ಪರಿಪೂರ್ಣ ವ್ಯಕ್ತಿ" ಎಂದು ಕೊಂಡಾಡಿದ್ದಾರೆ.

'ನಮ್ಮ ರಾಷ್ಟ್ರೀಯ ಪ್ರಜ್ಞೆಯ ಯೋಧ, ಸಂತ; ಭಾರತದ ಐಕ್ಯವನ್ನು ಸಂಘಟಿಸುವ ಕಾರ್ಯದಲ್ಲಿ ಅವರ ಬಾಳು ಒಂದು ಪವಿತ್ರ ಕರ್ಮಯೋಗ, ಅವರ ಸಾವು ಒಂದು ಬಲಿದಾನ.' ಎಂದು ಗೋಖಲೆಯವರನ್ನು ಶ್ರೀಮತಿ ಸರೋಜಿನಿ ನಾಯ್ಡು ಅವರು ಬಣ್ಣಿಸಿದ್ದಾರೆ.

ಗೋಖಲೆಯವರು ಕ್ರಿಸ್ತ ಶಕ ೧೮೬೬ ಮೇ ೯ರಂದು ಜನ್ಮ ತಾಳಿದರು. ತಮ್ಮ ಇಪ್ಪತ್ತನೇ ವರ್ಷದಲ್ಲಿಯೇ ಸಾರ್ವಜನಿಕ ಜೀವನಕ್ಕೆ ಧುಮುಕಿ ಡೆಕ್ಕನ್ ಎಜ್ಯುಕೇಷನ್ ಸೊಸೈಟಿಯನ್ನು ಸೇರಿ, ಅತ್ಯಲ್ಪ ವೇತನದ ಮೇಲೆ ಇಪ್ಪತ್ತು ವರ್ಷದ ವರೆಗೆ ಸಂಸ್ಥೆಗೆ ಸೇವೆ ಸಲ್ಲಿಸುವುದಾಗಿ ಮಾತು ಕೊಟ್ಟರು. ಚಿಕ್ಕ ಪ್ರಾಯದಲ್ಲಿ ತಮ್ಮ ೪೯ನೇ ವರ್ಷಕ್ಕೆ ಗೋಖಲೆಯವರು ೧೯೧೫ ಫೆಬ್ರವರಿ ೧೯ರಂದು ಸ್ವರ್ಗಸ್ಥರಾದರು. ಇಷ್ಟು ಅಲ್ಪಾವಧಿಯ ಜೀವಿತದಲ್ಲೂ ಗೋಖಲೆಯವರು ಅಸಮಾನ ರೀತಿಯಲ್ಲಿ ಅತ್ಯುಚ್ಚ ಸಾರ್ವಜನಿಕ ಸೇವೆಯನ್ನು ಸಲ್ಲಿಸಿದ್ದಾರೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅತಿ ಚಿಕ್ಕ ಪ್ರಾಯದ ಅಧ್ಯಕ್ಷರು ಗೋಖಲೆಯವರೇ ಆಗಿದ್ದಾರೆ—ಭಾರತೀಯನಿಗೆ ದೊರೆಯಬಹುದಾದ ಸರ್ವ ಶ್ರೇಷ್ಠ ಗೌರವವು ಕಾಂಗ್ರೆಸ್ಸಿನ ಅಧ್ಯಕ್ಷ ಪದವೇ ಇದ್ದು, ಗೋಖಲೆಯವರು ಆ ಸ್ಥಳಕ್ಕೆ ಚುನಾಯಿತರಾದಾಗ ಅವರಿಗೆ ಕೇವಲ ೩೯ ವರ್ಷ. ದೇಶಕ್ಕಾಗಿ ಅವರು ಸಲ್ಲಿಸಿದ ಅಪ್ರತಿಮ ಸೇವೆಯನ್ನು, ಅವರ ಶ್ರೇಷ್ಠ ವ್ಯಕ್ತಿತ್ವವನ್ನು ಗುರುತಿಸಿ ಅವರಿಗೆ ಅಧ್ಯಕ್ಷ ಪದವನ್ನಿತ್ತು ದೇಶವು ಮರ್ಯಾದೆ ಸೂಚಿಸಿತು. ಭಾರತಕ್ಕೆ ಸ್ವರಾಜ್ಯವನ್ನು ದೊರಕಿಸುವ ಹೋರಾಟವೇ ಗೋಖಲೆಯವರ ಜೀವನದ ಪರಮೋಚ್ಚ ಗುರಿಯಾಯಿತು. ದೊರೆತ ಸ್ವರಾಜ್ಯದ ಬಗ್ಗೆ ಕೆಲಸಮಾಡುವದು ಸ್ವಾತಂತ್ರ್ಯೋತ್ತರ-ಕಾಲದ ಪರಮ ಗುರಿಯಾಗಿದೆ.

ಸಾರ್ವಜನಿಕ ಸೇವೆಗಳಲ್ಲಿಯ ನೌಕರರು ಎಲ್ಲರೂ ಭಾರತೀಯರೇ ಇರಬೇಕೆಂಬ ಪ್ರಶ್ನೆ ಗೋಖಲೆಯವರನ್ನು ಬಾಧಿಸಿದ್ದು, ಆ ಪ್ರಶ್ನೆ ಅವರ ಮನೀಷೆಯಂತೆ ಮಾರ್ತಗೊಂಡು ಕೇವಲ ಐತಿಹಾಸಿಕ ಆಸ್ಥೆಯ ವಿಷಯವಾಗಿದೆ. ಅವರು ಯಾವ ಚೈತನ್ಯದಿಂದ ಸೇವೆ ಸಲ್ಲಿಸಿರುವರೋ ಅದು ಸಂತತವಾದ ಅನಂತವಾದ ಮೌಲ್ಯದ್ದಾಗಿದೆ. ತೀರ ಚಿಕ್ಕ ಕಾವ್ಯದಲ್ಲೂ ಅನಂತ ಅರ್ಥವು ಹುದುಗಿದಂತೆ ಎಂಬ ರವೀಂದ್ರನಾಥ ಠಾಕೂರರ ಭಾಷೆಯಂತೆ, ಗೋಖಲೆಯವರ ಚೈತನ್ಯವು ಮುಂದಿನ ಪೀಳಿಗೆಗೆ ಸದೈವ ಸ್ಫೂರ್ತಿಯ ಕಲಿಯಾಗಿ ನಿಂತಿದೆ.

ನಮ್ಮ ಬದುಕದೆ ನಾವು ಭವ್ಯಮಾಡಲು ಬಹುದು—

ಪುಣ್ಯವಂತರ ಬಾಳು ಅದನೆಸಾರುವದು

ಕಾಲಚಕ್ರದ ಮಳಲ ಮೇಲೆ ಹೆಜ್ಜೆಯ ಗುರುತು —

ಗಳ ಬಿಟ್ಟುನಾವೆಲ್ಲ ಮರೆಯಾಗಬಹುದು.

—ಎಂದು ಹಾಡಿದ ಲಾಂಗ್‌ಫೆಲೋ ಕವಿಯ ಆದರ್ಶವನ್ನು ಗೋಖಲೆಯವರು ಬಾಳಿದರು!

ಗೋಖಲೆಯವರ ಗುರು ಜಸ್ಟೀಸ ಮಹಾದೇವ ಗೋವಿಂದ ರಾನಡೆ, ತಮ್ಮ ಗುರುವಿನ ಬಗ್ಗೆ ಹೇಳುತ್ತ, ರಾನಡೆಯವರ ವ್ಯಕ್ತಿತ್ವದ ಸಮೀಪಕ್ಕೆ ಸುಳಿದ ಯುವಕರು ಪವಿತ್ರ ಸ್ಥಳದಲ್ಲಿಯಂತೆ ಹೀನವಾದದ್ದನ್ನು ಉಚ್ಚರಿಸುತ್ತಿರಲಿಲ್ಲವಷ್ಟೇ ಅಲ್ಲ, ಅಯೋಗ್ಯ ವಿಚಾರಗಳನ್ನು ಕೂಡ ತಲೆಯಲ್ಲಿ ತರಲು ಅಂಜುತ್ತಿದ್ದರು" ಎಂದು ಗೋಖಲೆಯವರು ನುಡಿದಿದ್ದಾರೆ. ಈ ಮಾತನ್ನು ಗೋಖಲೆಯವರ ವಿಷಯದಲ್ಲೂ ನಾವು ನಿಃಸಂಕೋಚವಾಗಿ ಹೇಳಬಹುದು.

ಹದಿನೆಂಟು ವರ್ಷಗಳ ಸುದೀರ್ಘ ಪರಿಶ್ರಮ ಸೇವೆಯನ್ನು ಫರ್ಗೂಸನ್ ಕಾಲೇಜಿನಲ್ಲಿ ಸಲ್ಲಿಸಿ, ರಾಷ್ಟ್ರೀಯ ಸೇವೆಯ ಬ್ರಹದ್ ಕ್ಷೇತ್ರಕ್ಕೆ ಧುಮುಕಲು ಕಾಲೇಜಿನಿಂದ ನಿವೃತ್ತರಾದರು. ಅಂತಃಕರಣವನ್ನು ನಾಟುವ ಅವರ ಬೀಳ್ಕೊಡುಗೆಯ ಭಾಷಣದಲ್ಲಿ, ಈ ರೀತಿ ಹೇಳಿದ್ದಾರೆ—

"ತಾರುಣ್ಯದ ಭರಭರಾಟೆಯ ಔಷಧದಲ್ಲಿ ಎಷ್ಟೋ ವರ್ಷಗಳಹಿಂದೆ ನಾನುಕೈಕೊಂಡ ಪ್ರತಿಜ್ಞೆಯು ಗಂಭೀರ, ಗಹನ ಕರ್ತವ್ಯಗಳನ್ನು ಪಾಲಿಸು ಎಂದು ದೇವದೇವನು ನನಗೆ ಹೇಳಿ ಹರ್ಷಪಟ್ಟದ್ದಕ್ಕೆ ನಾನು ಅಭಾರಿಯಾಗಿದ್ದೇನೆ, ಅನಂತವಾಗಿ ಅಭಾರಿಯಾಗಿದ್ದೇನೆ........

ನಾನು ಇದನ್ನೆಲ್ಲ ಬಿಟ್ಟುಕೊಟ್ಟು ಸಾರ್ವಜನಿಕ ಜೀವನದ ಅಲ್ಲೋಲ ಕಲ್ಲೋಲದ ಅನಿಶ್ಚತೆಯ ಸಾಗರಕ್ಕೆ ಧುಮುಕುತ್ತಿದ್ದೇನೆ. ನನ್ನ ಅಂತರಾಳದ ಧ್ವನಿಯು ಈ ಶ್ರಮ ಕೈಕೊಳ್ಳಲು ಒತ್ತಾಯಿಸುತ್ತಿದೆ. ದೇಶದ ಅತ್ಯುತ್ತಮ ಹಿತಸಾಧನೆಯ ಕರ್ತವ್ಯ ಬುದ್ಧಿ ಮಾತ್ರದಿಂದ ನಾನೀಗ ಹೊಣೆಗಾರಿಕೆಯಲ್ಲಿ ಏನೂ ಕಡಿಮೆ ಇಲ್ಲದ ಆದರೆ ಹೆಚ್ಚಿನ ಸ್ವಾತಂತ್ರ್ಯದ ಸ್ಥಾನ ಪಡೆಯಲು ಪ್ರಯತ್ನಿಸುತ್ತಿದ್ದೇನೆ.

ಈ ದೇಶದಲ್ಲಿ ಸಾರ್ವಜನಿಕ ಜೀವನಕ್ಕೆ ಹೇಳಿಕೊಳ್ಳುವ ಪುರಸ್ಕಾರಗಳೇನೂ ಇಲ್ಲ, ಆದರ ಬದಲು ಸಾರ್ವಜನಿಕ ಜೀವನವು ಟೀಕ್ಷೆಗಳ ನಿರಾಶೆಗಳ ಭೂಮಿಕೆಯಾಗಿದೆ....ಮಾಡಬೇಕಾದ ಕೆಲಸವು ಅಗಣಿತವಾಗಿದೆ, ಕೆಲಸದ ಆ ಬದಿಯಲ್ಲಿ ಏನು ಕಾದಿದೆಯೋ ಯಾರು ಹೇಳ ಬಲ್ಲರು? ಅದು ಎಂತು ಪರ್ಯವಸಾನ ಹೊಂದುವದೆಂಬುದು ತಿಳಿಯದ ಮಾತು. ಈ ವಿಷಯದ ಬಗ್ಗೆ ನನ್ನಂತೆ ವಿಚಾರ ಸರಣಿಯುಳ್ಳವರೆಲ್ಲ ಆಶೆ ವಿಶ್ವಾಸಗಳಿಂದ ಕಾರ್ಯಚರಣೆಗೆ ತಮ್ಮನ್ನು ಅರ್ಪಿಸಿಕೊಂಡು, ನಿರಪೇಕ್ಷಭಾವನೆ ದುಡಿಮೆಯಿಂದ ಲಭಿಸಬಹುದಾದ ಸಮಾಧಾನವನ್ನರಸಬಹುದು!

೧೯೦೫ರಲ್ಲಿ ಗೋಖಲೆಯವರು ಮನೆಯಲ್ಲಿ ಸರ್ವಂಟ್ಸ ಆಫ್ ಇಂಡಿಯಾ ಸೊಸೈಟಿಯನ್ನು ಸ್ಥಾಪಿಸಿದರು. ಗೋಖಲೆಯವರ ಕರ್ತವ್ಯ ಕಲ್ಪನೆಯ ವೇದವಾಕ್ಯವು ಅನಂತಕಾಲದವರೆಗೂ ನಿಲ್ಲಬಲ್ಲುದುದಾಗಿದೆ. ಅದನ್ನವರು ಸರ್ವಂಟ್ಸ ಆಫ್ ಇಂಡಿಯಾ ಸೊಸೈಟಿಯ ಘಟನೆಯ ಮುನ್ನುಡಿಯಲ್ಲಿ ಈ ರೀತಿ ಮೂಡಿಸಿದ್ದಾರೆ.—

ಸಾರ್ವಜನಿಕ ಜೀವನಕ್ಕೆ ಇತ್ತಿತ್ತ ಹೆಚ್ಚಿನ ಮುನ್ನಣೆ ಸಿಗುತ್ತಿದೆ. ನಮ್ಮ ಮಾತೃಭೂಮಿಯ ಬಗ್ಗೆ ನಮ್ಮಲ್ಲಿ ಆದರ ಬೆಳೆಯುತ್ತ ಹೃದಯಾಂತರಾಳದ ಭಾವೋದ್ರೇಕದ ಪ್ರೀತಿಯ ವಿಷಯವಾಗಿದೆ....ಇಲ್ಲಿಯ ವರೆಗೆ ಸಾಧಿಸಿದ್ದು ತುಂಬಾ ಸಮಾಧಾನ ತರುವ ಮಾತಾಗಿದೆ.

–ಇದರ ಅರ್ಥ ಇಷ್ಟೆ, ಕಾಡಿನ ಮರಗಳನ್ನು ಕಡಿಯಲಾಗಿದೆ, ಅಡಿಪಾಯ ಹಾಕಲಾಗಿದೆ, ಭವ್ಯ ಕಟ್ಟಡದ ರಚನೆಯ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಮತ್ತು ಮಹತ್ಕಾರ್ಯದ ಗಾತ್ರಕ್ಕೆ ಅನುಗುಣವಾಗಿ ನಿಷ್ಠೆ ತೋರಿ ತ್ಯಾಗಮಾಡಿ ಸದ್ಯದ ಪರಿಸ್ಥಿತಿಯಲ್ಲಿ ಕಾರ್ಯ ಕರ್ತರೆಲ್ಲ ಕೆಲಸ ಮಾಡಬೇಕಾಗಿದೆ.

ನಮ್ಮ ಸಾರ್ವಜನಿಕ ಜೀವನವನ್ನು ಉದಾತ್ತಗೊಳಿಸಬೇಕಾಗಿದೆ. ದೇಶಾನುರಾಗದಿಂದ ನಮ್ಮ ಹೃದಯವು ತುಂಬಬೇಕು; ಮತ್ತು ಅದರೆದುರು ಉಳಿದ ವಿಷಯಗಳೆಲ್ಲ ಕ್ಷುಪದಾರ್ಥವೆಂದೆನಿಸಬೇಕು. ರಾಷ್ಟ್ರಕ್ಕಾಗಿ ಬಲಿದಾನ ಮಾಡುವ ಪ್ರಸಂಗ ಬಂದಾಗಲೆಲ್ಲ ಜಾಜ್ವಲ್ಯ ದೇಶಭಕ್ತಿ ಹೊರಸೂಸಬೇಕು. ಸಂಕಟಗಳೇನೇ ಬರಲಿ, ಗಂಡಾಂತರವೇನೇ ಇರಲಿ ಗುರಿಯಿಂದ ವಿಮುಖರಾಗದಂಥ ಅಳುಕದ ಹೃದಯವಿರಲಿ. ಈಶ್ವರೇಚ್ಛೆಯಲ್ಲಿ ಯಾವುದರಿಂದಲೂ ವಿಚಲಿತವಾಗದ ಅನನ್ಯ ಭಕ್ತಿ ಇರಲಿ– ಈ ವಿಚಾರ ಧಾರೆಯಿಂದ ಸುಸಜ್ಜಿತರಾದ ಕಾರ್ಯಕರ್ತರು ಜೀವನ ಧ್ಯೇಯ ಸಾಧಿಸಲು ಹೊರಡಬೇಕು, ಮತ್ತು ದೇಶ ಸೇವೆಯಲ್ಲಿ ತಮ್ಮನ್ನೇ ಅರ್ಪಿಸಿಕೊಳ್ಳುವ ಭಾವನೆಯಿಂದ ಸಿಗಬಹುದಾದ ಆನಂದಾತಿರೇಕವನ್ನು ಪಡೆಯಬೇಕು...."

ಉದಾತ್ತಭಾವನೆಗಳನ್ನು ಉದಾತ್ತವಾಗಿಯೇ ಹೇಳಿದ್ದಾರೆ ಗೋಖಲೆಯವರು.

ಗೋಖಲೆಯವರು ಒಮ್ಮೆ ಕ್ಷಮೆ ಕೋರುವ ಪ್ರಸಂಗ ಬಂದಿತು. ಅವರ ಕ್ಷಮಾಯಾಚನೆಯ ಘಟನೆಯು ಅವರ ಶೀಲಶ್ರೀಯನ್ನು ಬೆಳಗಿಸಿದೆ, ಅವರ ಅನುಕಂಪನ ಜೀವನದ ಮೇಲೆ ಬೆಳಕು ಬೀರಿದೆ. ತಮ್ಮ ಇಪ್ಪತ್ತೊಂಬತ್ತು ವಯಸ್ಸಿನಲ್ಲಿಯೆ ಗೋಖಲೆಯವರು ಭಾರತದ ಆರ್ಥಿಕ ವಿಷಯದ ಮೇಲಿನವೆಲ್ಬಿ ಆಯೋಗದೆದುರು ಲಂಡನ್ನಿನಲ್ಲಿ ಸಾಕ್ಷಿ ನುಡಿದರು. ಅವರ ಸಾಕ್ಷಿ "ಅದ್ಭುತ" ವಾದದ್ದೆಂದು ಪರಿಗಣಿತವಾಯಿತು. ಅವರ ಸಾಕ್ಷಿ ಭಾರತದ ಪರವಾಗಿ ನುಡಿದದ್ದೆಂದು ತೀರ್ಮಾನಿಸಲಾಯಿತು. ಇದರಿಂದ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 57 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಭಾರತ

ಜವಾಹರಲಾ

ಭಾರತದಲ್ಲಿ ವೈಜ್ಞಾನಿಕ ವಿಚಾರಧಾರೆಯ ಅಡಿಪಾಯ ಹಾಕಿದ ಮೊದಲ ವ್ಯಕ್ತಿ ಜವಾಹರಲಾಲರು. ತಾನು ಪ್ರಧಾನಿಯಾಗಿದ್ದ ಹದಿನೇಳು ವರ್ಷಗಳಲ್ಲಿ ಅವರು ವೈಜ್ಞಾನಿಕ ಅಭಿವೃದ್ಧಿ ಮತ್ತು ಅದರ ಅನುಷ್ಠಾನಕ್ಕೆ ವಿಶೇಷ ಬೆಂಬಲ ನೀಡಿದರು. ಅವರಿಗೆ ವಿಜ್ಞಾನ ಮತ್ತು ವೈಜ್ಞಾನಿಕ ವಿಧಾನಗಳಲ್ಲಿ ವಿಶ್ವಾಸವಿತ್ತು. 'ವಿಜ್ಞಾನ ಮತ್ತು ತಂತ್ರ ಶಾಸ್ತ್ರದ ಹೊರತು ನಾವು ಪ್ರಗತಿ ಸಾಧಿಸಲಾರೆವು' ಎಂದು ಅವರು ಹೇಳುತಿದ್ದರು! 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಅವರು ವಿಜ್ಞಾನದ ಮಹತ್ವದ ಕುರಿತು ಹೀಗೆ ಬರೆದಿದ್ದಾರೆ. ಇಂದಿನ ರಾಷ್ಟ್ರ ಮತ್ತು ಜನಗಳು ವಿಜ್ಞಾನವನ್ನು ಅನುಷ್ಠಾನಕ್ಕೆ ತರುವುದು ಅನಿವಾರ್ಯ. ಅದನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಸಾಲದು. ಜೀವನದ ಪರಿಪೂರ್ಣತೆಗೆ ಹಾಗೂ ಸಮಸ್ಯೆಗಳ ನಿವಾರಣೆಗೆ ಅದು ಅತ್ಯಗತ್ಯ. ಸಾಹಸ ಪ್ರಧಾನ, ವಿಮರ್ಶಾತ್ಮಕ, ವೈಜ್ಞಾನಿಕ ವಿಧಾನ ಸತ್ಯಶೋಧನೆ, ಹಾಗೂ ನೂತನ ಜ್ಞಾನ ಸಂಪಾದನೆ, ಹೊಸ ಹೊಸ ಸಾಕ್ಷ್ಯಗಳ ಮುಂದೆ ಹಳೆಯ ಸಿದ್ಧಾಂತಗಳನ್ನು ಬದಲಿಸುವ ದಾಕ್ಷ್ಯಿಣ್ಯ ಮನೋಭಾವ, ಕಠೋರ ಮಾನಸಿಕ ಶಿಸ್ತು—ಇವೆಲ್ಲ ಗುಣಗಳು ವೈಜ್ಞಾನಿಕ ವಿಧಾನದ ಅನುಷ್ಠಾನದಲ್ಲಿ ಮುಖ್ಯ ಅಂಶಗಳಾಗಿವೆ. ವೈಜ್ಞಾನಿಕ ವಿಧಾನ ಮತ್ತು ಮನೋವೃತ್ತಿ ನಮ್ಮ ಜೀವನದ ಒಂದು ವಿಧಾನವಾಗಬೇಕು; ವಿಚಾರ ಸರಣಿಯು ಒಂದು ಕ್ರಮವಾಗಬೇಕು; ನಾವು ಇತರರೊಡನೆ ವ್ಯವಹರಿಸುವ ಹಾಗೂ ಸಹ ಜೀವನ ನಡೆಸುವ ಒಂದು ಪದ್ಧತಿಯಾಗಬೇಕು."

ನಮ್ಮ ದೇಶವನ್ನು ಪರಂಪರಾಗತವಾದ ಬಡತನದ ಆಳದಿಂದ ಮೇಲೆತ್ತುವುದು ನೆಹರುರವರ ಪ್ರಧಾನ ಕರ್ತವ್ಯವಾಗಿತ್ತು. ಅವರು ಸುಭದ್ರವಾದ, ಸಂಪತ್ಸಮೃದ್ಧವಾದ, ಅಭಿವೃದ್ಧಿಗೆ ಸಮಾನಾವಕಾಶವಿರುವ ಭಾರತವನ್ನು ಕಟ್ಟಲು ಬಯಸಿದ್ದರು.

ಜವಾಹರರು ಪ್ರಧಾನಿಯಾಗಿದ್ದರು, ಅಣುಶಕ್ತಿ ಶಾಖೆಯನ್ನೂ ತನ್ನೊಡನೆ ಇಟ್ಟುಕೊಂಡಿದ್ದರು. ಜತೆಗೆ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು. ಅವರ ಬೆಂಬಲದಿಂದಲೇ ದೇಶವು ಪ್ರಗತಿ

ಉತ್ತರ ವಿಯತ್ನಾಮವು ಅನ್ಯಾಯವಾಗಿ ಹೊರಿಸಿದ ತೆರಿಗೆಯನ್ನು ತೆರಲಾರೆವೆಂದು ಪ್ರತಿಭಟಿಸಿದ ದಕ್ಷಿಣ ವಿಯತ್ನಾಮದ ಸುಮಾರು ೫೦ ಪ್ರಜೆಗಳನ್ನು ವಿಯತ್‌ಕಾಂಗ್ ಗೆರಿಲ್ಲಾಗಳು ಬಂಧಿಸಿದರು. ಇವರ ರಕ್ಷಣೆಗೆ ದಕ್ಷಿಣ ವಿಯತ್ನಾಮಿ ಸೇನೆ ನುಗ್ಗಿದ ಕ್ಷಣದಲ್ಲೇ ಗೆರಿಲ್ಲಾಗಳು ಇವರನ್ನು ಗುಂಡಿಕ್ಕಿ ಕೊಂದುಬಿಟ್ಟರು. ಹೀಗೆ ಕೊಲೆಯಾದ ಒಬ್ಬಾತನನ್ನು ಇಲ್ಲಿ ನೋಡಿರಿ. ಕಟ್ಟಿದ ಸಂಕೋಲೆಗಳು ಹಾಗೆಯೇ ಇವೆ; ಎದೆಯೊಳಗೆ ಪ್ರಾಣದ ಬದಲು ಗುಂಡು ನೆಲಸಿದೆ.

ಇದು ಯಾರ ಸಮಾಧಿಯೂ ಅಲ್ಲ; ಸಮಾಧಿ ಸೇರಲು ತಯಾರಾಗುತ್ತಿರುವ ದಕ್ಷಿಣ ವಿಯತ್ನಾಮದ ಪ್ರಜೆಗಳ ಮೃತ ದೇಹ. ಆಕೆಯ ಪತಿ ಮತ್ತು ಪುತ್ರರನ್ನು ವಿಯತ್‌ಕಾಂಗ್‌ಗಳು ಸೈಗಾನದ ದಕ್ಷಿಣಕ್ಕೆ ದಾಳಿಮಾಡಿ ಕೊಂದುಬಿಟ್ಟರು. ಅನಾಥೆ ಬೌದ್ಧೆಯಾದ ಆಕೆ ತನ್ನ ಧರ್ಮದ ಸಂಪ್ರದಾಯವನ್ನು ಮೀರಲಾರದೆ ಅವರ ಅಂತ್ಯ ಸಂಸ್ಕಾರದ ತಯಾರಿಯನ್ನು ಕಣ್ಣೀರ ಕೋಡಿ ಹರಿಸುತ್ತ ಮಾಡುತ್ತಿದ್ದಾಳೆ. ಮೃತ ಶರೀರವನ್ನು ದಕ್ಷಿಣ ವಿಯತ್ನಾಮದ ಧ್ವಜದಿಂದ ಹೊದಿಸಿರುವುದನ್ನೂ ಹಿನ್ನಲೆಯಲ್ಲಿ ಶೋಕ ಸಂಕೇತಗಳನ್ನೂ ವೀಕ್ಷಿಸಿರಿ.



ಇಪ್ಪತ್ತೆರಡು ವಯಸ್ಸಿನ ಆರ್ಥರ್ ಆಶೆ ನೀಗ್ರೋ ಆದರೂ ಉತ್ತಮ ಟೆನ್ನಿಸ್ ಆಟಗಾರ. ಅಮೆರಿಕನ್ ಡೇವಿಸ್ ಕಪ್ ಟೀಮಿನಲ್ಲಿ ಮೊತ್ತಮೊದಲಿಗೆ ಆಟವಾಡುವ ಭಾಗ್ಯದ ಬಾಗಿಲು ಈ ನೀಗ್ರೋವಿಗೆ ಇದೀಗ ತಾನೇ ತೆರೆದಿದೆ.

ಆಶಾ ಕಿರಣ

ಮಾರ್ಗದಲ್ಲಿ ಮುಂದುವರಿಯಿತು. ಈ ಎರಡೂ ಸಂಸ್ಥೆಗಳ ಆರಂಭದಿಂದ ತನ್ನ ಕೊನೆಯುಸಿರು ಇರುವ ತನಕವೂ ಅವರು ತಮ್ಮ ಕಾರ್ಯವನ್ನು ದಕ್ಷತೆಯಿಂದಲೇ ನಿರ್ವಹಿಸಿದರು.

ದೇಶದ ಅಭಿವೃದ್ಧಿ ಮತ್ತು ಕೈಗಾರಿಕಾ ಪ್ರಗತಿಗಳು ಅನ್ಯೋನ್ಯಾಶ್ರಿತಗಳೆಂದು ನೆಹರೂರ ಅಭಿಮತ. ಆಧುನಿಕ ತಂತ್ರ ಶಾಸ್ತ್ರದ ಬಳಕೆಯಿಂದ ಈ ಪ್ರಗತಿ ಸಾಧ್ಯವೆಂದೂ ಅವರ ನಂಬುಗೆ. ಭಾರತದ ವಿಜ್ಞಾನಿಗಳಲ್ಲಿ ಅವರಿಗೆ ವಿಶ್ವಾಸ ತುಂಬ. "ಭಾರತದಲ್ಲಿ ಇಂದು ಪ್ರಥಮ ದರ್ಜೆಗೆ ಸೇರಿದ ಯುವಕ ವಿಜ್ಞಾನಿಗಳ ತಂಡವಿದೆ. ನಮ್ಮ ಪ್ರಯೋಗಾಲಯಗಳಲ್ಲಿ ಮತ್ತು ಶಾಲೆಗಳಲ್ಲಿ ಹೆಚ್ಚಿನ ಶಿಕ್ಷಣಕ್ಕೆ ಅವಕಾಶವಿದ್ದರೆ, ಇನ್ನೂ ಹೆಚ್ಚಿನ ಇಂತಹ ವಿಜ್ಞಾನಿಗಳನ್ನು ಪಡೆಯ ಬಹುದು. ಇದನ್ನು ನಾವು ಅರಿತುಕೊಳ್ಳಬೇಕು." ಎಂದವರೊಮ್ಮೆ ಭಾಷಣ ಮಾಡುತ್ತ ಹೇಳಿದ್ದರು.

ಟ್ರಾಂಬೆಯಲ್ಲಿನ ಅಣುಶಕ್ತಿ ಕೇಂದ್ರಗಳಿಗೆ ನೆಹರು ಆಗಾಗ ಭೇಟಿಯೊಯುತಿದ್ದರು. ಅವರು ಈ ಕೇಂದ್ರದ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ವಿಜ್ಞಾನಿಗಳೊಡನೆ ಚರ್ಚೆ ನಡೆಸುತಿದ್ದರು; ಇದರಿಂದ ನೆಹರೂ ಹಾಗೂ ವಿಜ್ಞಾನಿಗಳು ಪರಸ್ಪರರನ್ನು ಹೆಚ್ಚು ತಿಳಿದುಕೊಳ್ಳುತಿದ್ದರು; ಹುರುಪಿನಿಂದ ಕಾರ್ಯ ತತ್ಪರರಾಗುತಿದ್ದರು.

"ನಾವು ಇಂದಿನ ಹಿತಕ್ಕಾಗಿ ಕಾರ್ಯನಿರತರಾಗಿದ್ದೇವೆ. ನಾಡಿನ ಭವ್ಯ ಭವಿಷ್ಯತ್ತಿನ ಮೇಲೆ ಹತೋಟಿಯಿಟ್ಟುಕೊಳ್ಳುತ್ತೇವೆ. ಆದುದರಿಂದಲೇ ನಾನು ಅಣುಶಕ್ತಿ ಕೇಂದ್ರಕ್ಕೆ ಭೇಟ್ಟಿ ನೀಡಿದಾಗಲೆಲ್ಲ ಈ ಕೇಂದ್ರದ ಭವ್ಯ ಗೋಪುರವನ್ನು ತನ್ಮಯತೆಯಿಂದ ನೋಡುತ್ತೇನೆ; ಆದ್ದರಿಂದ ಉತ್ಸಾಹಿತನಾಗುತ್ತೇನೆ. ಈ ಕೇಂದ್ರದಲ್ಲಿನ ಸಾವಿರಾರು ವಿಜ್ಞಾನಿಗಳ ಕಾರ್ಯವನ್ನು ತುಂಬು ಆಸಕ್ತಿಯಿಂದ ಗಮನಿಸುತ್ತೇನೆ. ಅವರ ಕಾರ್ಯವೂ ಕೇಂದ್ರದ ಗೋಪುರಕ್ಕಿಂತಲೂ ಹೆಚ್ಚಾಗಿ ನನ್ನ ಮನಸ್ಸಿನಲ್ಲಿ ಮನೆಮಾಡಿದೆ. ಈ ವಿಜ್ಞಾನಿಗಳ ತೇಜೋಪೂರ್ಣವಾದಮುಖಗಳನ್ನುನೋಡಿದಾಗ ಅವರ ಶಕ್ತಿ, ಉತ್ಸಾಹ, ಯಾವುದೋ ಒಂದು ಅವ್ಯಕ್ತ ವಸ್ತುವಿನ ಶೋಧನೆಗಾಗಿಕಾತರಿಸುತ್ತಿದೆಎಂದುಕಂಡುಬರುತ್ತದೆ. ಈ ಅವ್ಯಕ್ತ ವಸ್ತು ಯಾವುದು? ಯಾವುದಕ್ಕಾಗಿ ಅವರು ಶೋಧನೆ ಕೈಗೊಂಡಿದ್ದಾರೆ? ಸತ್ಯಕ್ಕಾಗಿ. ಅವರ ಶೋಧನೆಯ ಸತ್ಯವು ಸ್ವರೂಪದಲ್ಲಿ ವ್ಯಾಪಕವಾಗಿದೆ; ವೈವಿಧ್ಯಪೂರ್ಣವಾಗಿದೆ. ನಾನು ನಮ್ಮ ಯುವಕ ಯುವತಿಯರ ಮುಖಗಳನ್ನು ಹರುಷದಿಂದ ನೋಡುತ್ತೇನೆ. ಏಕೆಂದರೆ ನನಗೆ ಅವರು ನಾಳಿನ ಭಾರತದ ಪ್ರತಿರೂಪ, ಅವರೇ ರಿಯಾಕ್ಟರುಗಳನ್ನು ಮತ್ತಿತರ ಯಂತ್ರಗಳನ್ನು ನಿರ್ಮಿಸಬಲ್ಲರು; ಭಾರತದ ಭಾಗ್ಯವನ್ನೇ ತೆರೆಯಬಲ್ಲರು; ದೇಶದ ವಿಚಾರ ಧಾರೆಯನ್ನೇ ಬದಲಿಸಬಲ್ಲರು. ನಾನು ಟ್ರಾಂಬೆ ಅಣುಶಕ್ತಿ ಕೇಂದ್ರಕ್ಕೆ ಬಂದಾಗಲೆಲ್ಲ ಈ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಯುವಕರನ್ನು ನೋಡಿ ಸಂತಸಪಡುತ್ತೇನೆ. ಏಕೆಂದರೆ, ಅವರೇ ನಮ್ಮ ಭವಿಷ್ಯದ ಆಶಾಕಿರಣ, ಭಾರತದ ಭವಿಷ್ಯ, ಸತ್ಯ ಶೋಧನೆಯ ಮಹದಾಶೆ, ಹಳೆಯ ಕಂದಾಚಾರಗಳ ನಿರ್ಮೂಲನ ಮತ್ತು ನವಮಾರ್ಗ ಭ್ರಮಣದ ಬಯಕೆಗಳು ಇದರಲ್ಲಿ ಅಡಗಿವೆ."—ಇದು ಪಂ| ನೆಹರೂರವರು ಸ್ವೈರಸ್ ಅಣುರಿಯಾಕ್ಟರದ ಉದ್ಘಾಟನಾ ವೇಳೆ ಮನ ಬಿಚ್ಚಿಆಡಿದ ಮಾತು.

ಕೊಲಂಬಿಯಾದೇಶದ ಹೆಳವನೊಬ್ಬನು ಅಮೆರಿಕನ್ ಶಾಂತಿದಳದ ಸೇವಿಕೆಯೊರ್ವಳ ದೃಷ್ಟಿಗೆ ಬಿದ್ದನು. ವೇತ್ರಗಳ ಸಹಾಯವಿಲ್ಲದೆ ನಡೆಯಲಾರದ ಈ ಜಾನ್ ಚಾವೆಟಳ ಹೇಳಿಕೆಯಂತೆ ಆಪರೇಶನ್ ಮಾಡಿಸಿಕೊಳ್ಳಲು ನಗುನಗುತ್ತಲೇ ಅಮೆರಿಕೆಗೆ ಬಂದ. ಐದುವರ್ಷದ ಈ ಹಸುಳೆಯ ವಿಮಾನ ಸಾರಿಗೆ ವೆಚ್ಚವನ್ನು ಸಂತಮರಿಯಾ (ಆತನ ಹುಟ್ಟೂರು)ದ ರೋಟರಿ ಕ್ಲಬ್ ನೀಡಿತ್ತು. ನಲಿದಾಡುವ ಚಿಂತೆಯಿಂದ ಈ ಹೆಳವನು ಕಂಗೆಟ್ಟಿದ್ದರೂ ತನ್ನ ಇಷ್ಟಾರ್ಥ ನೆರವೇರುವುದೆಂದೀತ ಹಸನ್ಮುಖನಾಗಿದ್ದಾನೆ.



ಗೋಡೆಯ ಚೆಲುವು ಮನೆಯ ಆಕರ್ಷಣೆ. ಅದಕ್ಕಾಗಿಯೇ ಗೋಡೆಗೆ ಪ್ಲಾಸ್ಟರ್ ಪರೆಯನ್ನು ಹೊದಿಸುತ್ತಾರೆ. ಈ ಸೂಕ್ಷ್ಮ ಕೆಲಸವನ್ನು ಮಾಡಲು ಸೂಕ್ತ ತರಬೇತಿ ಅಗತ್ಯ. ನ್ಯೂಯಾರ್ಕ್ ನಗರದ ಉದ್ಯೋಗ ತರಬೇತಿ ಕೇಂದ್ರವೊಂದರಲ್ಲಿ ಶಿಕ್ಷಕನು ಪ್ರತ್ಯಕ್ಷವಾಗಿ ಈ ವಿದ್ಯೆಯನ್ನು ಶಿಕ್ಷಣಾರ್ಥಿಗಳಿಗೆ ಕಲಿಸುತ್ತಿರುವುದನ್ನು ಇಲ್ಲಿ ಕಾಣಬಹುದು.

ಈ ನುಡಿಗಳಲ್ಲಿ ಆತ್ಮೀಯತೆಯಿದೆ; ಯುವ ವಿಜ್ಞಾನಿಗಳಿಗೆ ಮಾರ್ಗದರ್ಶನವಿದೆ. ಅಣುಶಕ್ತಿ ಆಯೋಗದ ಅಧ್ಯಕ್ಷರಾಗಿದ್ದ ಡಾ| ಬಾಬಾರವರು ನೆಹರುಗಳ ಕುರಿತು ಹೀಗೆಂದಿದ್ದರು: "ನಾವೆಲ್ಲರೂ, ಮುಖ್ಯವಾಗಿ ಭಾರತದ ಯುವಕಯುವತಿಯರು, ಜೀವನದ ಸಮಸ್ಯೆಗಳನ್ನು ಬಿಡಿಸುವಲ್ಲಿ, ವೈಜ್ಞಾನಿಕ ಮನೋವೃತ್ತಿ ಬೆಳಸಿಕೊಳ್ಳುವಲ್ಲಿ ಹಾಗೂ ಸತ್ಯಶೋಧನೆಯಲ್ಲಿ ನೆಹರು ಅವರು ತೋರಿಸಿದ ಮಾರ್ಗವನ್ನು ಅನುಸರಿಸಬೇಕು."

ಗೋಖಲೆಯವರ ನುಡಿ ಸತ್ಯವಾಯಿತು

೮

(ಐದನೇ ಪುಟದಿಂದ)

ಗೋಖಲೆಯವರಿಗೆ ತುಂಬಾ ಸಮಾಧಾನವಾಯಿತು.

ಈ ಕೆಲಸಕ್ಕಾಗಿ ಅವರು ಲಂಡನ್ನಿನಲ್ಲಿದ್ದಾಗ ಭಾರತದಲ್ಲಿ ಪ್ಲೇಗ್ ರೋಗ ಪರಿಹಾರ ಕಾರ್ಯದಲ್ಲಿ ತೊಡಗಿದ ಕೆಲವು ಬ್ರಿಟಿಷ್ ಸೈನಿಕರು ಭಾರತೀಯ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದರೆಂಬ ದೂರು ಬಂದಾಗ, ಗೋಖಲೆಯವರು ಈ ದೂರುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿಬಿಟ್ಟರು. ಗೋಖಲೆಯವರು ಮರಳಿ ಭಾರತಕ್ಕೆ ಬಂದಾಗ, ಮುಂಬೈ ಸರ್ಕಾರವು ಗೋಖಲೆಯವರು ಪ್ರಕಟಿಸಿದ ದೂರುಗಳನ್ನು ಆಹ್ವಾನಿಸಿತು. ಗೋಖಲೆಯವರಿಗೆ ದೂರುಗಳನ್ನು ಕಳಿಸಿದವರೆಲ್ಲ ಹಿಂತೆಗೆದು ನೀವು ಇದನ್ನು ಪ್ರಸಿದ್ಧಿಸಬೇಕೆಂದು ನಾವೇನು ಹೇಳಿದ್ದಿಲ್ಲ ಎಂದು ಜಾರಿಕೊಂಡರು. ತದನಂತರ ಅತ್ಯಂತ ಸಭ್ಯ ಗೃಹಸ್ಥರಾದ ಗೋಖಲೆಯವರು ಮುಂಬೈ ಸರ್ಕಾರಕ್ಕೂ ಬ್ರಿಟಿಷ್ ಸೈನಿಕರಿಗೂ ಅನಿರ್ಬಂಧ ಕ್ಷಮೆಯಾಚನೆ ಬೇಡಿದರು. ಬ್ರಿಟಿಷ್ ಆಫೀಸರನಾಗಿದ್ದ ಶ್ರೀ ರಂಡ್ ಅವರು ಆಗ ಕಾಯಿಲೆ ಬಿದ್ದಿದ್ದರು. ಗೋಖಲೆಯವರು ಶ್ರೀ ರಂಡ್ ಅವರ ಬಗ್ಗೆ ಮಾಡಿದ ಉಲ್ಲೇಖನವು ಗೋಖಲೆಯವರ ಅನುಕಂಪದ ಮೇರೆಯನ್ನು ಸೂಚಿಸುವಂತಿದೆ. 'ಜನತೆಯ ಸಂಕಟದಲ್ಲಿ ದುಃಖ ಭಾಗಿಯಾಗಿ ಈಗ ಬೇನೆ ಬಿದ್ದು ನರಳುವ ಅಧಿಕಾರಿಗೆ ನಾಡಿನ ನಾಲ್ಕೂ ದಿಕ್ಕಿನ ಸಾಂತ್ವನವನ್ನು ಪ್ರೀತ್ಯಾದರವನ್ನು ತೋರಿಸಬೇಕು" ಗೋಖಲೆಯವರ ಹೃದಯದ ಔದಾರ್ಯವು ಕೆಳಗಿನ ಮಾತಿನಲ್ಲಿ ಸ್ಫುಟವಾಗುತ್ತಿದೆ:—

"ಈ ದೇಶದಲ್ಲಿಯ ಕೆಲ ಇಂಗ್ಲೀಷ್ ಜನರು ನನ್ನ ಬಗ್ಗೆ ನ್ಯಾಯಸಮ್ಮತವಾದ, ಉದಾರವಾದ ರೀತಿಯಲ್ಲಿ ನಡೆದುಕೊಂಡಷ್ಟು ಸಹ ನಾನು ಇಂಗ್ಲೆಂಡಿನ ಜನತೆಗೆ, ಪ್ಲೇಗ್ ರೋಗ ನಿರೋಧಕ ಚಟುವಟಿಕೆಯಲ್ಲಿ ತೊಡಗಿದ ಇಂಗ್ಲೀಷ್ ದಳಕ್ಕೆ, ನಾನು ನ್ಯಾಯವಾಗಿ ನಡೆದುಕೊಳ್ಳಲಿಲ್ಲ"

ಗೋಖಲೆಯವರು ಕ್ಷಮೆಯಾಚನೆ ಮಾಡಿದ್ದನ್ನು ಭಾರತದ ಕೆಲ ಜನರು ತೀವ್ರವಾಗಿ ಖಂಡಿಸಿದರು. ಇದರಿಂದಾಗಿ ಗೋಖಲೆಯವರು ಬಹಳ ಸಂಕಟಕ್ಕೀಡಾದರು. ಸಾರ್ವಜನಿಕ ಜೀವನದಿಂದ ಪೂರ್ತಿಯಾಗಿ ನಿವೃತ್ತಿ ಹೊಂದಲೂ ವಿಚಾರ ಮಾಡಿದರು. ಆದರೆ ಅವರ ಕೆಲ ಉದಾರ ಧೋರಣೆಯ ಭಾರತೀಯ ಮತ್ತು ಇಂಗ್ಲೆಂಡಿನ ಸ್ನೇಹಿತರು ಗೋಖಲೆಯವರು ಸಾರ್ವಜನಿಕ ಜೀವನದಿಂದ ಹಿಂತೆಗೆಯಬಾರದೆಂದು ಮನವೊಲಿಸಿದರು. ಆಗ ಅವ 'ಕರ್ತವ್ಯ ಮತ್ತು ಗೌರವಗಳಿಗೆ ಅನುಗುಣವಾಗಿ ಉಳಿದಿರುವ ಒಂದೇ ಒಂದು ಮಾರ್ಗವನ್ನು ನಾನು ಹಿಡಿದೆ ಎಂಬುದನ್ನು ನನ್ನ ದೇಶಬಾಂಧವರು ಕಂಡುಕೊಳ್ಳುವ ಒಂದು ದಿನ ಬಂದೇ ಬರುತ್ತದೆ. ಸದ್ಯಕ್ಕೆ ಅಂತಹ ದಿನ ನಿರೀಕ್ಷೆಯಲ್ಲಿಯೇ ನನಗೆ ತೃಪ್ತಿ. ತಾನು ಮಾಡಿದ ಕೃತಿಗೆ ಸಾರ್ವಜನಿಕ ಅನುಮೋದನೆ ದೊರೆತಾಗ ಪ್ರತಿಯೊಬ್ಬನು ಆನಂದತುಂದಿಲನಾಗುವನು. ಅನುಮತಿ, ಈ ದೇಶದಲ್ಲಿ ಸಾರ್ವಜನಿಕ ಜೀವನಕ್ಕಿರುವ ಒಂದೇ ಒಂದು ಬಹುಮಾನವೂ ಆಗಿದೆ. ಆದರೆ ಅದೇನು ನಮ್ಮ ಅಸ್ತಿತ್ವದ ಶ್ರೇಷ್ಠತಮ ಉದ್ದೇಶವೇನೂ ಅಲ್ಲ. ಶ್ರೇಷ್ಠತಮ ಉದ್ದೇಶದ ಹತ್ತಿರ ಹತ್ತಿರವೂ ಬರುವದಿಲ್ಲ. ಹರ್ಬರ್ಟ್ ಸ್ಪೆನ್ಸರನ ಶಬ್ದದಲ್ಲಿ, ಹೇಳುವದಾದರೆ—ಅದು ಬರುತ್ತಿದ್ದರೆ, ಒಳ್ಳೆಯದು, ಬರದಿದ್ದರೆ ಅದು ಅಷ್ಟು ಒಳ್ಳೆಯದಾಗಿರಲಿಕ್ಕಿಲ್ಲ. ಆದರೂ ಅದು ಕೂಡಾ ಒಳ್ಳೆಯದೆ!

ಗೋಖಲೆಯವರ ಕೆಲ ಕಟ್ಟು ವಿಮರ್ಶಕರು ಸಾರ್ವಜನಿಕ ಜೀವನದಿಂದ ಗೋಖಲೆಯವರು ಸಂಪೂರ್ಣ ನಿವೃತ್ತಿ ಹೊಂದಲೇ ಬೇಕೆಂದು ಪಟ್ಟು ಹಿಡಿದಾಗ ಗೋಖಲೆಯವರು—

"ಸಾರ್ವಜನಿಕ ಕರ್ತವ್ಯವನ್ನು ಯಾರ ಹೇಳಿಕೆಯಿಂದಲೂ ಪ್ರಾರಂಭಿಸಿಲ್ಲ, ಅದರಂತೆ ಯಾವನೊಬ್ಬನ ಇಚ್ಛೆಯಂತೆ ಅದನ್ನು ಬಿಡಲೂ ಸಾಧ್ಯವಿಲ್ಲ" ಎಂದು ಹೇಳಿದರು.

ಅಧಿಕ ಉತ್ಸಾಹ ಮತ್ತು ಶ್ರದ್ಧೆಯಿಂದ ತಮ್ಮ ಸಾರ್ವಜನಿಕ ಕೆಲಸದ ಎಳೆಗಳನ್ನು ಪೋಣಿಸುತ್ತ ಗೋಖಲೆಯವರು ಅನಾಸಕ್ತಿಯ ಸಾರ್ವಜನಿಕ ಸೇವೆಯಲ್ಲಿ ಇನ್ನೂ ಹೆಚ್ಚಿನ ಶಿಖರವನ್ನೇರಿದರು.

ಸಂವಿಧಾನದ ಮೂಲಕವಾಗಿಯೇ, ಅದು ಕೂಡಾ ಬ್ರಿಟಿಷ್ ಸಾಮ್ರಾಜ್ಯದ ಮೇರೆಯಲ್ಲಿಯ ಸ್ವರಾಜ್ಯವನ್ನು ಸಂಪಾದಿಸುವ ಗುರಿ ಗೋಖಲೆಯವರದಾಗಿತ್ತೆಂದು ಸ್ಥೂಲವಾಗಿ ಹೇಳಬಹುದು. ಗೋಖಲೆಯವರ ಸಮಕಾಲೀನ ತೀವ್ರಗಾಮಿಗಳು ಯಾವುದೇ ಮಾರ್ಗ ಅನುಸರಿದರೂ ಕಳಚಿಕೊಂಡು ಹೊರಬೀಳ ಬೇಕು ಎಂಬ ಅಭಿಪ್ರಾಯದವರಾಗಿದ್ದರು. ಬ್ರಿಟಿಷ್ ಆಡಳಿತದಲ್ಲಿ ಭಾರತೀಯರು ತಮ್ಮ ದೇಶದಲ್ಲಿಯೇ ಸೌದೆ ಸೀಳುವ, ನೀರನ್ನು ಸೇದುವ ದಂಡನೆಗೆ ಗುರಿಯಾಗಿದ್ದಾರೆ, ಹೊಣೆಗಾರಿಕೆಯ ಸ್ಥಾನಗಳನ್ನೆಲ್ಲ ಪರಕೀಯ ಬ್ರಿಟಿಷರೇ ಆಕ್ರಮಿಸಿದ್ದಾರೆ. ಬ್ರಿಟಿಷ್ ಆಡಳಿತೆ ಭಾರತೀಯರನ್ನು ಕುಗ್ಗಿಸಿದೆ ಎಂಬ ವಿಷಯ ತೀವ್ರ ಗಾಮಿಗಳ ಮನಸ್ಸಿನಂತೆ ಗೋಖಲೆಯವರ ಮನಸ್ಸಿನಲ್ಲೂ ಕಡಿಮೆ ಕೊರೆಯುತ್ತಿರಲಿಲ್ಲ. ತಮ್ಮನ್ನು ಟೀಕಿಸಿದವರಿಗೆ ಗೋಖಲೆಯವರು, ಪರದಾಸ್ಯ ಶೃಂಖಲೆಯಲ್ಲಿ ನಮ್ಮ ದೇಶವು ತೊಳಲಾಡುವದನ್ನು ಕಂಡು ಆನಂದ ಪಡುವಷ್ಟು ನಾವು ಕ್ಷುದ್ರ, ಗೌರವಹೀನರಾಗಿದ್ದೇವೆಂದು ನೀವು ಭಾವಿಸಿರುವಿರಾ?' ಎಂದು ಮಾರ್ಮಿಕವಾಗಿ ಹೇಳಿದ್ದಾರೆ. "ಸಾಧ್ಯವಿದ್ದರೆ ಇಂದೇ ನಮ್ಮ ದೇಶ ಸ್ವತಂತ್ರವಾಗುವದನ್ನೇ ನಾನು ಬಯಸುತ್ತೇನೆ" "ಆದರೆ ಅದು ಸಾಧ್ಯವೇ?" ಎಂದು ಮರುಸವಾಲಾಕಿದ್ದಾರೆ ಗೋಖಲೆಯವರು.

ಭಾರತದಲ್ಲಿ ಅವ್ಯವಸ್ಥೆಯನ್ನುಂಟು ಮಾಡುವ ಕೆಲಸ ಸುಲಭ. ಭಾರತದಲ್ಲಿ ಅವ್ಯವಸ್ಥೆ ಶತಮಾನಗಳಿಂದಲೇ ಉಳಿದು ಬಂದ ಸ್ಥಿತಿಯಾಗಿದೆ—ಎಂದೆಲ್ಲ ಗೋಖಲೆಯವರು ನೊಂದುಕೊಂಡರು. ತಲ್ಲಣಗೊಂಡ ನಾಡಿಗೆ ಬ್ರಿಟಿಷ್ ಆಡಳಿತವು ಶಾಂತಿ ಸುವ್ಯವಸ್ಥೆಯನ್ನು ತಂದಿದೆ. ಶಾಂತಿ ಸುವ್ಯವಸ್ಥೆಯು ನೆಲಸದಿದ್ದರೆ ಯಾವ ಪ್ರಗತಿಯೂ ಸಾಧ್ಯವಿಲ್ಲ; ಇಂಗ್ಲೆಂಡಿನಲ್ಲಿ ಉಚ್ಚ ಭಾವನೆ, ಉಚ್ಚ ವಿಚಾರಗಳನ್ನು ಪ್ರಾತಿನಿಧಿಕವಾಗಿ ತೋರಿಸಿದ ಆ ಕಾಲದ ಅನೇಕಾನೇಕ ಬ್ರಿಟಿಷ್ ಮುತ್ಸದ್ದಿಗಳು ಭಾರತದಲ್ಲಿ ಬ್ರಿಟಿಷರು ಮಾಡಿದ ಎಲ್ಲಕ್ಕೂ ಶ್ರೇಷ್ಠ ಕಾರ್ಯವೆಂದರೆ ಭಾರತೀಯರ ಕ್ರಮೇಣ ಆಡಳಿತದಲ್ಲಿ ಪಾಲುಗಾರರನ್ನಾಗಿ ಮಾಡಿ, ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದ ಸ್ನೇಹಿತ ಭಾರತವನ್ನು ಬಿಟ್ಟು ತೆರಳುವದೇ ಆಗಿದೆ ಎಂದು ಘೋಷಿಸಿದ್ದಾರೆ. ಘೋಷಣೆಯ ಮಾತನ್ನು ಕೃತಿಗಿಳಿಸುದಲ್ಲಿ ಹಿನ್ನಡೆ ಅಡತಡೆಗಳು ಬಂದಿದ್ದರೂ, ರಾಜಕೀಯ ಸುಧಾರಣೆಗಳ ಅನೇಕ ಕಾನೂನುಗಳನ್ನು ರಚಿಸುವದರ ಮೂಲಕ ಕೊಟ್ಟ ವಚನ ಪಾಲಿಸಲಾಗಿದೆ. ಪ್ರತಿ ಕಾನೂನು ಭಾರತೀಯರಿಗೆ ಹೆಚ್ಚಿನ ಅಧಿಕಾರ ಇತ್ತಿದೆ. ಕೊನೆಗೆ ೧೯೪೭ರ ಭಾರತೀಯ ಸ್ವಾತಂತ್ರ್ಯ ಕಾನೂನಿನಿಂದ ಅಧಿಕಾರ ಹಸ್ತಾಂತರದ ಕೆಲಸ ಪೂರ್ತಿಗೊಂಡಿತು ಮತ್ತು ಭಾರತವು ಕಾಮನ್‌ವೆಲ್ತ್‌ದ ಪರಿಪೂರ್ಣ ಸದಸ್ಯ ರಾಷ್ಟ್ರವಾಗಿ ಉಳಿಯಿತು. ಬಾಲಗಂಗಾಧರ ತಿಲಕರು ತಮ್ಮ ಜೀವಿತದ ಕೊನೆ ಕೊನೆಯ ವರೆಗೂ ಪ್ರತಿಗಾಮಿ ಧೋರಣೆಯನ್ನೇ ತಳೆದರೂ, ೧೯೨೦ರ ಕಾಂಗ್ರೆಸ್ ಪ್ರಜಾಸತ್ತಾತ್ಮಕ ಪಕ್ಷದ ಘೋಷಣಾ ಪತ್ರದಲ್ಲಿ ವಿಭಿನ್ನ ದೃಷ್ಟಿಕೋಣವನ್ನು ತೋರಿಸಿದ್ದಾರೆ. ಇದರಲ್ಲಿ ತಿಲಕರು ಭಾರತಕ್ಕೆ ಸ್ವಯಮಾಧಿಪತ್ಯ-ಸ್ವರಾಜ್ಯ-ಬೇಕು, ಮತ್ತು ಬ್ರಿಟಿಷ್ ಕಾಮನ್‌ವೆಲ್ತ್ ಉಳಿದ ರಾಷ್ಟ್ರಗಳೊಂದಿಗೆ ಸರಿಸಮಾನ ಸ್ಥಾನಮಾನ ಸಿಗಬೇಕು ಎಂದು ಹೇಳಿದ್ದಾರೆ. ಬ್ರಿಟಿಷರು ಕಟ್ಟಿದ ಸಂಪ್ರದಾಯಗಳು, ಸ್ವಾತಂತ್ರ್ಯದ ಕಲ್ಪನೆ ಮತ್ತು ಸಾಮ್ರಾಜ್ಯ ಇವು ತಿಲಕರಿಗೆ ಬೇಕಾದ ವಿಷಯಗಳಾಗಿದ್ದವು. "ಬ್ರಿಟಿಷ್ ಆಳಿಕೆಯು ನಮಗೆ ಅಗಣಿತ ಲಾಭವನ್ನು ತಂದು ಕೊಟ್ಟಿದೆ ಎಂಬ ಮಾತು ಒಳ್ಳೆಯದೆ. ಆಗಿದೆ. ಬ್ರಿಟಿಷ್ ಆಡಳಿತವು ಆಧುನಿಕ ಅಧಿಕಾರ ವಿಧಾನಗಳನ್ನು ನಮಗೆ ದಯಪಾಲಿಸಿತಷ್ಟೇ ಅಲ್ಲ, ಭಾರತದ ವಿವಿಧ ಜನಾಂಗಗಳನ್ನು ವಿಭಿನ್ನ ಕುಲಗಳನ್ನು ಒಂದೆಡೆ ತಂದು, ಕಾಲಾನುಕ್ರಮದಲ್ಲಿ ಅಖಂಡ ಭಾರತವು ತಲೆ ಎತ್ತಲು ಆಸ್ಪದ ಮಾಡಿಕೊಟ್ಟಿತು. ಸ್ವಾತಂತ್ರ್ಯ ಪ್ರೇಮಿ ಬ್ರಿಟಿಷರಲ್ಲದೆ ಮತ್ತಾರಾದರೂ ನಮ್ಮನ್ನಾಳಿದರೆ ಇಂತಹ ರಾಷ್ಟ್ರೀಯ ಆದರ್ಶವನ್ನು ನಾವು ಬೆಳೆಸಿಕೊಳ್ಳಲು ಸಹಾಯ ಮಾಡುತ್ತಿದ್ದರು ಎಂದು ನನಗೇನು ಅನಿಸುವದಿಲ್ಲ. ಭಾರತದ ಬಗ್ಗೆ ಹೃದಯದಲ್ಲಿ ಕಳಕಳಿ ಇರುವ ಯಾವನಿಗೂ ಮೇಲಿನ ಮಾತಿನ ಯಥಾರ್ಥತೆಯ ಬಗ್ಗೆ ಬ್ರಿಟಿಷ್ ಆಳಿಕೆಯ ಇಂತಹ ಬೇರೆ ಉಪಯುಕ್ತತೆಯ ಬಗ್ಗೆ ಸಂದೇಹವಿರಲಾರದು" ಈ ಬಗೆಯ ವಿಚಾರಗಳನ್ನು ವ್ಯಕ್ತಪಡಿಸುವಾಗ ತಿಲಕರು ಗೋಖಲೆಯವರನ್ನೇ ಪ್ರತಿಧ್ವನಿಸಿದ್ದಾರೆ.

ಇತಿಹಾಸದಲ್ಲಿ ಯಾವದೇ ಒಂದು ರಾಷ್ಟ್ರವಾದರೂ ಸಂವಿಧಾನ ರೀತಿಯಿಂದ ಸ್ವಾತಂತ್ರ್ಯ ಪಡೆದ ಒಂದಾದರೂ ಉದಾಹರಣೆಯನ್ನು ತೋರಿಸಿ ಎಂದು ಗೋಖಲೆಯವರನ್ನು ಆಹ್ವಾನಿಸಲಾಯಿತು. ಅದಕ್ಕೆ ಗೋಖಲೆಯವರು ಹೇಳಿದರು—"ನೋಡಿ! ಇತಿಹಾಸದ ಕೊನೆಯ ಪುಟಗಳನ್ನು ಇನ್ನೂ ಬರೆದಿಲ್ಲ. ಬಹುಶಃ ಇತಿಹಾಸದ ಕೊನೆಯ ಆಖ್ಯಾಯಿಕೆಯನ್ನು ಬರೆಯುವ ಭಾಗ್ಯ ಇಂಗ್ಲೆಂಡ್ ಮತ್ತು ಭಾರತಕ್ಕೆ ಲಭಿಸಿರಬೇಕು.

ಗೋಖಲೆಯವರ ಆಸೆ ಕೊನೆಗೂ ನನಸಾಯಿತು. ಬ್ರಿಟಿಷ್ ಪಾರ್ಲಿಮೆಂಟ್ ೧೯೪೭ರಲ್ಲಿ ಭಾರತದ ಸ್ವಾತಂತ್ರ್ಯ ಕಾನೂನನ್ನು ರಚಿಸಿದನ್ವಯ ಭಾರತಕ್ಕೆ ಘಟನಾತ್ಮಕ ಸ್ವಾತಂತ್ರ್ಯ ದೊರೆಯಿತು. ಸ್ವತಂತ್ರ ಭಾರತವು ಬ್ರಿಟಿಷ್ ಕಾಮನ್ ವೆಲ್ತ್‌ದಲ್ಲಿಂದು ಉಳಿದು, "ಬ್ರಿಟಿಷ್ ಸಾಮ್ರಾಜ್ಯದ ಮೇರೆಯಲ್ಲಿಯ ಭಾರತದ ಸ್ವಾತಂತ್ರ್ಯ" ಎಂಬ ಗೋಖಲೆಯವರ ರಾಜಕೀಯ ಭವಿಷ್ಯವಾಣಿಯನ್ನು ಋಜು ಮಾಡಿದೆ!

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧ್ವನಿ ಇಲೆಕ್ಟ್ರಿಕ್ ಮೋಟಾರು ಮತ್ತು
(¼ H.P. to 30 H.P.) ಪಂಪು ಸೆಟ್ಟುಗಳು.......

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಯೋಗ್ಯತೆಗೆ ತಕ್ಕ ಜತೆ

(ನಾಲ್ಕನೇ ಪುಟದಿಂದ)

'ಸರಿ, ಒಂದು... ಮುಂದೆ...?"

'ಪಾನ ನಿರೋಧ ಕಾಂಗ್ರೆಸ್ಸಿನ ನೀತಿ ನಾನು ನಿಷ್ಠಾವಂತ ಕಾಂಗ್ರೆಸಿಗ. ಆದ್ದರಿಂದ ಅದಕ್ಕೇ ಅಂಟಿಕೊಂಡಿದ್ದೇನೆ....'

'ಶಹಬಾಸ್...ಎರಡು. ಮುಂದೆ....'

"ಚಿನ್ನ ನಿಯಂತ್ರಣ ಕೇಂದ್ರ ಮಂತ್ರಿಮಂಡಳದ ಒಮ್ಮತದ ನೀತಿ. ಆದರಲ್ಲಿ ತನ್ನ ಹಠವೇನೂ ಇಲ್ಲ..."

'ಇದು ನಂಬುವುದಕ್ಕೂ ಸಾಧ್ಯವಿಲ್ಲ." "ಅದೊಂದೂ ನನಗೊತ್ತಿಲ್ಲ" 'ಗೊತ್ತಿಲ್ದಿದ್ದ್ರೂ ಆಗಬೇಕಾದ್ದೂ ಏನು ಇಲ್ಲ ಆದ್ರೂ ನೋಡಿ, ಅವರು ಸ್ವಲ್ಪ ಅಹಂಕಾರಿಯಿರಬೇಕು. ಅಹಂಕಾರಕ್ಕೆ ಉದಾಸೀನವೇ ಮದ್ದು....'

"ಉದ್ದುರುಟುತನಕ್ಕೆ ಗುದ್ದೇಮದ್ದು.'

"ಅಯ್ಯೋ..."

'ಕೊಬ್ಬಿದ ಎಮ್ಮೆಗೆ ಕೊರಡೇ ಮದ್ದು...."

'ಅಯ್ಯೋ ಬೇಡಾಂದ್ರೆ...ಬಲಿತ ರೋಗಕ್ಕೆ ಬರೆಯೇ ಮದ್ದು..."

'ಕೈ ಹಿಡಿದವರಿಗೆ ಹೆಗ್ಗಣವೂ ಮುದ್ದು...."

"ಕೂಡಿದವಳಿಗೆ ಕೋಡಗ ಮುದ್ದು..'

"ಕುರುಬನ ರೋಗಕ್ಕೆ ಕುರಿಯ ಪಿತ್ತವೇ ಮದ್ದು...."

'ನಾಯಿಯ ಹುಣ್ಣಿಗೆ ಬೂದಿಯೆ ಮದ್ದು."

'ಪರ್ವಾಗಿಲ್ಲ ಕಣೆ, ಅವರವರ ಯೋಗ್ಯತೆಗೆ ಅವರವರ ಗುಣಗಳಿಗೆ ಅವರವರ ಸಂಸ್ಕೃತಿಗೆ ತಕ್ಕ ಜತೆ ದೊರಕುವುದು ಎಂಬುದು ಸುಳ್ಳಲ್ಲ....'

'ನೋಡಿ. ಸದ್ಯ ಇಲ್ಲಿಗೇ ನಿಲ್ಸಿ. ಮಳೆ ಗುಡುಗು ಮಿಂಚು ಸುರುವಾಯ್ತು. ಈಗಾಗ್ಲೇ ಆಯ್ತು ತಾಸು ಒಂಭತ್ತು."

"ಅರ್ಥವಾಯ್ತು ಕಣೇ..... ನಾಳೆಯಿಂದ ಆದಷ್ಟು ಲಗೂನೇ ಬರ್‍ತೀನೆ...."

"ಬಾಯಲ್ಲಾದ್ರೂ ಬರ್‍ತೀನೆ ಅಂದ್ರಲ್ಲಾ... ಹ್ಞೂ, ಏಳಿ, ಬೇಗ ಊಟ ಮಾಡಿ...'

'ಹೌದು.... ಆದ್ಮೆಲ್ಲಾ ತಡ ಮಾಡೋ ಆಸಾಮಿಯಲ್ಲ....'

"ಅದು ನನ್ಗೂ ಗೊತ್ತು...."

"ನಿನ್ಗೂ ಗೊತ್ತು..."

"ಹ್ಞಾಂ..."

—ಗೋರಾ.

ಕೆವಲು ದಾರಿ—ಕೆಂಪು ದೀಪ

ಮೋಡದೆಡೆಯಲ್ಲಿ ಮಿಂಚು

ಹತ್ತು ವರುಷಗಳಷ್ಟು ಹಿಂದೆ—

ಅಂದಿನ ಪ್ರಧಾನಿ ಜವಾಹರಲಾಲರು ಹೇಳಿದ್ದು: ಭಾರತ-ಪಾಕಿಸ್ತಾನಗಳು ಯಾವುದೇ ಪ್ರಸಂಗದಲ್ಲಿಯೂ ಯುದ್ಧಕ್ಕಿಳಿಯ ತಕ್ಕದ್ದಲ್ಲ— ಈ ಬಗ್ಗೆ ಒಂದು ಒಪ್ಪಂದಕ್ಕೆ ಬಂದರೆ,ನಮ್ಮ ಸಮಸ್ಯೆಗಳು ತೀವ್ರ ಬಗೆಹರಿಯುವುವು. ಪ್ರಶ್ನೆಗಳ ಇತ್ಯರ್ಥವನ್ನು ಮುಂದೂಡುವುದು ಯುದ್ಧಕ್ಕಿಳಿಯುವುದಕ್ಕಿಂತ ಕ್ಷೇಮಕರ.

ಭವಿಷ್ಯದರ್ಶಿ ನೆಹರೂರವರ ವಾಣಿ ತಾಷ್ಕೆಂಟ್ ಘೋಷಣೆಯಲ್ಲಿ ಪೂರ್ಣ ಅಭಿವ್ಯಕ್ತವಾಯ್ತು. ತಾಷ್ಕೆಂಟ್ ಘೋಷಣೆ ಶಾಂತಿಯ ಮಂತ್ರ.

ಶಾಂತಿಯೆಂದರೆ ಕೇವಲ ಯುದ್ಧ ನಿಷೇಧವಲ್ಲ. ಸಹಯೋಗದ, ಪ್ರಗತಿಯ ವಾತಾವರಣ ನಿರ್ಮಿಸುವುದೇ ನೈಜ ಶಾಂತಿ.

ಈ ಅರ್ಥದಲ್ಲಿಯೇ ೧೯೬೦ರಲ್ಲಿ ನೆಹರು ಅಯೂಬರಿಗೆ ಬರೆದಿದ್ದರು—ನಮ್ಮ ನಮ್ಮ ಜನತೆಯ ಜೀವನ ಮಟ್ಟವನ್ನು ಎತ್ತರಿಸಲೆಂದು ಅಭಿವೃದ್ಧಿಯ ಬೃಹತ್ ಕಾರ್ಯಕ್ರಮದಲ್ಲಿ ನಾವು ತೊಡಗಿದ್ದೇವೆ; ಇದಕ್ಕಾಗಿಯೇ ನಮ್ಮನ್ನು ಅರ್ಪಿಸಿಕೊಂಡಿದ್ದೇವೆ. ಅಧ್ಯಕ್ಷರೆ, ಪಾಕಿಸ್ತಾನದ ಸಂಬಂಧದ ಪ್ರಶ್ನೆ ಬಂದಾಗ, ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನ ನೀಡುತ್ತೇವೆ, ನಾವು ಪಾಕ್‌ನೊಡನೆ ನಮಗೆ ತಂಟೆಗೆ ಬೀಳುವ ಮನಸ್ಸಿಲ್ಲ. ನಾವಾಗಿ ಯಾವ ತಂಟೆಯನ್ನೂ ಆರಂಭಿಸುವುದಿಲ್ಲ. ಮೈತ್ರಿ ಮತ್ತು ಸಹಕಾರಗಳಲ್ಲಿಯೇ ಭಾರತ—ಪಾಕಿಸ್ತಾನಗಳಿಗೆ ಉತ್ತಮ ಭವಿಷ್ಯವಿದೆ.

ಒಮ್ಮೆ ನಿಂತು ಹೋಗಿದ್ದ ಭಾರತ—ಪಾಕ್ ಸಂಬಂಧ ಮತ್ತೆ ಕುದುರುವ ಲಕ್ಷಣ. ಉಭಯ ರಾಷ್ಟ್ರಗಳ ನಡುವೆ ವ್ಯಾಪಾರ ಸಂಬಂಧ ಮತ್ತೆ ಪ್ರಾರಂಭ. ಇದು ಯೋಗಾಯೋಗ. ಜವಹರಲಾಲರ ಶಾಂತಿಯ ಕನಸು ನನಸಾಗುವುದರ ಒಂದು ಲಕ್ಷಣ—ನಮ್ಮ ಕರ್ತವ್ಯಪಾಲನಾ ಪಥದಲ್ಲಿ ಒಂದು ಹೆಜ್ಜೆ.

೧೯೬೫ರ ಸಪ್ಟೆಂಬರದ ಹೋರಾಟ ಉಭಯರಲ್ಲಿ ಸಂಬಂಧ ಸ್ಥಗಿತ. ೧೯೪೮-೪೯ರಲ್ಲಿ-ಭಾರತ ಪಾಕ್ ವಾಣಿಜ್ಯ ವ್ಯಾಪಾರ ರೂ. ೧೮೪ ಕೋಟಿ ಆಂದರೆ, ೧೯೬೪-೬೫ರಲ್ಲಿ ಬರಿಯ ೨೫ ಕೋಟಿ!

ಇದೇಕೆ ಹೀಗೆ?

ವ್ಯಾಪಾರ ಹೆಚ್ಚಳದ ಬದಲು ಕಡಿತ! ಸಮೂನಾಂತರ ವ್ಯಾಪಾರ ನೀತಿಯ ಪರಿಣಾಮ.

ತಾಷ್ಕೆಂಟ್ ಸಾರಿತು. ಉಭಯರ ನಡುವೆ ವ್ಯಾಪಾರ—ಆರ್ಥಿಕ ಸಹಕಾರ ಬೆಳೆಯಬೇಕು.

ದೇಶಕ್ಕೆ ಯಾವುದು ಲಾಭವೋ ಅದನ್ನು ಹಿಡಿಯುತ್ತದೆ. ಪಾಕ್ ಪಿ. ಐ. ಎ. ವಿಮಾನ ಸಂಚಾರ ಆರಂಭಿಸಲು ಬಯಸುತ್ತದೆ. ಆದರೆ, ಆವಶ್ಯಕವಾದ ನದೀ ಹಡಗ ಸಂಚಾರ ಪಾಕಿಗೆ ಬೇಡ. ಭಾರತದ ಆನೇಕ ಹಡಗುಗಳು ಇನ್ನೂ ಆದರ ಮುಷ್ಟಿಯಲ್ಲೇ ಉಳಿದಿವೆ.

ನಾರಿಗೆ, ಸಂಪರ್ಕ ಮತ್ತು ವಾಣಿಜ್ಯಗಳಲ್ಲಿ ಸಹಕಾರ ಅಗತ್ಯ, ತಾಷ್ಕೆಂಟ್ ಒಡಂಬಡಿಕೆ ಬಯಸಿದ್ದೂ ಇದನ್ನೇ; ನಾವು ಸಾಧಿಸಬೇಕಾದುದೂ ಇದೇ.

ಚೀನಾದ ಅಪಪ್ರಚಾರ—ದುಷ್ಕೃತ್ಯಗಳತ್ತ ಪಾಕ್ ಮಾಲಿಕೆ.

ಈಗ ಮತ್ತೊಂದು ಸ್ವರ—ಮೋಡದೆಡೆಯ ಮಿಂಚು—

· ವಿದೇಶ ಮಂತ್ರಿ ಭುಟ್ಟೋ ಮಂತ್ರಿ ಪದವಿ ಬಿಟ್ಟು ರಕ್ತದಲ್ಲಿ ರಾಯಭಾರಿಯಾಗುವರು—

ಅಯೂ[illegible] ಭಾರತದೊಡನೆ ಮಾತುಕತೆಗೆ [illegible]ಗುವರು—

[illegible] ಭುಟ್ಟೊ ಹೊರಡದೆ ಪಾಕಿಗೆ [illegible]ಗದು.

ಭಾರತೀಯರಿಗೆ ತಿಳಿದ ವಿಚಾರ ಅಯ್ಯೂಬರಿಗೆ ಗೊತ್ತಿಲ್ಲವೆ ಹೋದೀತೆ!

ವಾರ್ಷಿಕೋತ್ಸವ ಮತ್ತು ಪ್ರಮಾಣ ಪತ್ರ ವಿತರಣೋತ್ಸವ

ಹಿಂದೀ ಪ್ರಚಾರ ಸಮಿತಿ, ಉಡುಪಿ(ರಿ) ಇದರ ವಾರ್ಷಿಕೋತ್ಸವ ಮತ್ತು ಪ್ರಮಾಣ ಪತ್ರ ವಿತರಣೋತ್ಸವವು ಕಳೆದ ತಾ 23ರಂದು ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಶ್ರೀ ಬಿ. ವೆಂಕಟಸುಬ್ಬಯ್ಯ, ಅಸಿಸ್ಟೆಂಟ್ ಡಿವಿಜನಲ್ ಮೆನೇಜರ್, ಎಲ್. ಐ. ಸಿ. ಉಡುಪಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಉಪಾಧ್ಯಕ್ಷರಾದ ಶ್ರೀ ಎ. ಕೃಷ್ಣರಾವ್ ಇವರು ಸ್ವಾಗತ ಭಾಷಣಮಾಡಿದರು. ಕುಮಾರಿ ಯು. ಚಂದ್ರಭಾಗಿಯವರು ಸಮಿತಿಯ ಚಟುವಟಿಕೆಗಳ ವರದಿಯನ್ನು ಒಪ್ಪಿಸಿದರು. ಶ್ರೀ ಯು. ಕೆ. ಶೆಣೈ ಇವರು ವಿವಿಧ ಹಿಂದೀಪರೀಕ್ಷೆಗಳಲ್ಲಿ ಜಯಶೀಲರಾದವರಿಗೆ ಪ್ರಮಾಣ ಪತ್ರಗಳನ್ನೂ ಸರ್ವ ಪ್ರಥಮ ದ್ವಿತೀಯ ಮತ್ತು ತೃತೀಯ ಉತ್ತೀರ್ಣರಾದವರಿಗೆ ಬಹುಮಾನಗಳನ್ನೂ ವಿತರಿಸಿದರು.

ಅಧ್ಯಕ್ಷಸ್ಥಾನದಿಂದ ಶ್ರೀ ಬಿ. ವೆಂಕಟಸುಬ್ಬಯ್ಯನವರು ಮಾತನಾಡುತ್ತಾ 'ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯ ಭಾಷೆಗಳ ಮೇಲೆ ಇಂಗ್ಲಿಷಿನ ಪ್ರಾಬಲ್ಯ ಹೆಚ್ಚಾಗಿದ್ದು ಅವುಗಳ ಬೆಳವಣಿಗೆಗೆ ಅವಕಾಶವಿರಲಿಲ್ಲ. ಇಂಗ್ಲಿಷನ್ನು ಹೆಚ್ಚಿನವರು ಉದ್ಯೋಗದ ನಿಮಿತ್ತ ಅಭ್ಯಸಿಸುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಜತೆ ದೇಶದಲ್ಲಿ ಭಾಷೆಯ ಕುರಿತು ಜಾಗೃತಿಯೂ ಆಗಿ ಜನ ತಮ್ಮ ಭಾಷೆಯ ಮೇಲೆ ಅಭಿಮಾನ ತಾಳುವಂತಾಯಿತು. ಆ ದೇಶದಲ್ಲಿ ಸಂಸ್ಕೃತವು ಪ್ರಾಚೀನ ಭಾಷೆಯಾದರೆ, ಹಿಂದಿಯು ಬಹುಜನರು ಮಾತಾಡುವ ಭಾಷೆಯಾಗಿದೆ. ಹಾಗಾಗಿ ಅದಕ್ಕೆ ಪ್ರಾಧಾನ್ಯ ದೊರೆತಿದೆ. ಹಿಂದಿಯು ಭಾರತದ ರಾಷ್ಟ್ರಭಾಷೆಯಾಗಬೇಕೆಂದು ಯಾರೂ ಸತ್ತಾಯ ಕರುಪ್ರಿಂ ಸರಿಯಲ್ಲ. ಭಾಷೆಯ ಹೆಸರಿನಲ್ಲಿ ಇಂದು ದೇಶಾದ್ಯಂತ ಲೂಟಿ, ವಿಧ್ವಂಸಕ ಕೃತ್ಯಗಳು ಜರಗುತ್ತಿವೆ. ಇದು ನಿಜಕ್ಕೂ ಶೋಚನೀಯ. ಯಾವ ಭಾಷೆಗಳಿಗೆ ಯಾವ ಸ್ಥಾನ ಕೊಡಬೇಕೆಂಬ ವಿಚಾರವನ್ನು ಕೂಲಂಕುಶವಾಗಿ ವಿಮರ್ಶಿಸಿ ನಿರ್ಣಯಕ್ಕೆ ಬರುವುದೊಳಿತು. ದೊರೆತು ಯಾರ ಒತ್ತಾಯ ಅಥವಾ ದಾಕ್ಷಿಣ್ಯಕ್ಕೆ ಕಟ್ಟುಬೀಳಬಾರದು. ಎಲ್ಲರಲ್ಲೂ ಪರಭಾಷೆಯ ಕುರಿತು ಸಹಿಷ್ಣುತೆ ಇರಬೇಕಾದುದು ಅಗತ್ಯ' ಎಂದರು.

ಮನೋರಂಜನೆಯ ಅಂಗವಾಗಿ ಸಮಿತಿಯ ಸೋದರಿಯರು "ರೇಶ್ಮೀ ಟೈ" ಎಂಬ ಹಿಂದೀ ನಾಟಕವನ್ನೂ ಗೆಳೆಯರು "ಹರಿದಾ ಕುಂಕುಮ" ಎಂಬ ಕನ್ನಡ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯಕರು ಧನ್ಯವಾದವಿತ್ತರು.

ಲೋಕ ಸೇವಾ ವೃಂದದ ಹೊಸ ಪ್ರಕಾಶನ

ಲೋಕ ಸೇವಾ ವೃಂದದ 'ಭಾರತ ದರ್ಶನ' ಎಂಬ ಗ್ರಂಥ ಪ್ರಕಾಶನದ ಉದ್ಘಾಟನೆಯು ಶೃಂಗೇರಿ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಯಸ್. ರಾಮಚಂದ್ರ ಭಟ್ಟರಿಂದ ನೆರವೇರಿತು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಮಂಜಾಯಿಯ ಶ್ರೀ ಟಿ. ಆರ್. ಕೃಗ ಳ ಸಂಸ್ಥೆಯ ಮತ್ತು ತಮ್ಮ ಸಂಬಂಧವನ್ನು ವಿವರಿಸಿ, ಅದರ ಲೋಕೋಪಯೋಗಿ ಕಾರ್ಯಗಳು ಅಭಿವೃದ್ಧಿಗೊಳ್ಳಲಿ ಎಂದು ಹಾರೈಸಿದರು.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77

ಕುಂದಾಪುರ, ದ. ಕ.

ಎಲ್ಲೆಲ್ಲಿ ಏನೇನು?

ನವದೆಹಲಿಯಲ್ಲಿ ಶ್ರೀ ಭದ್ರಗಿರಿ ಕೇಶವದಾಸರ ಯಶಸ್ವೀ ಕಾರ್ಯಕ್ರಮ

ನವದೆಹಲಿಯ ರಾಮಕೃಷ್ಣಪುರದ ಶ್ರೀ ಶಾರದಾ ಸಮಾಜವು ಶ್ರೀ ಕೇಶವದಾಸರಿಂದ ಏರ್ಪಡಿಸಿದ 'ಭಕ್ತಿವಿಜಯ' ಕೀರ್ತನ ಕಾರ್ಯಕ್ರಮವನ್ನು ಕಳೆದ ಮೇ. ತಾ. 3ರಂದು ಕೇಂದ್ರ ರಕ್ಷಣಾ ಸಚಿವ ಶ್ರೀ ವೈ. ಬಿ. ಚವ್ಹಾಣರು ಉದ್ಘಾಟಿಸಿದರು. ಸಮಾಜದ ಕಾರ್ಯದರ್ಶಿ ಶ್ರೀಮತಿ ಆರ್. ಬಾಲಮ್ಮನವರು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ ಚವ್ಹಾಣರು ಭಾಷಣಮಾಡುತ್ತಾ ಭಾರತದ ಕೀರ್ತನಕಲೆಗೆ ಜನರಲ್ಲಿ ಧರ್ಮವನ್ನು ನೆಲೆಗೊಳಿಸುವ ವಿಶೇಷ ಶಕ್ತಿಯಿಂದೂ ಈ ಕಲೆಯನ್ನು ಶ್ರೀ ಕೇಶವದಾಸರು ಅನೇಕ ಭಾಷೆಗಳಲ್ಲಿ ಪ್ರಚಾರಮಾಡುತ್ತಿರುವುದು ಶ್ಲಾಘನೀಯವೆಂದರು. ಶ್ರೀ ಶಾರದಾ ಸಮಾಜವು ಶ್ರೀ ಕೇಶವದಾಸರಿಗೆ ಅರ್ಪಿಸಿದ 'ಭಕ್ತಿರಸಾಮೃತವರ್ಷಕ" ಎಂಬ ಪ್ರಶಸ್ತಿಯಿಂದೊಡಗೂಡಿದ ಪತ್ರಿಕೆಯನ್ನು ಶ್ರೀ ಸಿ. ಆರ್. ಪಟ್ಟಾಭಿರಾಮನ್‌ರವರು ದಾಸರಿಗೆ ನೀಡಿದರು ಮತ್ತು ಶ್ರೀ ಕೇಶವದಾಸರ ಅನೇಕ ಕಲಾ ಪ್ರೌಢಿಮೆಯನ್ನು ಪ್ರಶಂಸಿಸಿದರು.

ಮೇ ತಾ. 11ರಂದು ಶ್ರೀ ಕೇಶವದಾಸರಿಂದ ರಾಷ್ಟ್ರಪತಿ ಭವನದ ಕಲಾಪ್ರದರ್ಶನಮಂದಿರದಲ್ಲಿ "ಭಕ್ತ ಪುರಂದರದಾಸರು" ಎಂಬ ಬಗ್ಗೆ ಹರಿಕಥೆ ನಡೆಯಿತು. ಕೀರ್ತನೆಯ ಬಳಿಕ ಡಾ. ರಾಧಾಕೃಷ್ಣನ್‌ರವರು ಶ್ರೀ ಕೇಶವದಾಸರ ಕೀರ್ತನ ಕಲೆಯ ಪಾಂಡಿತ್ಯವನ್ನು ಮೆಚ್ಚಿ ಹರಸಿದರು.

ಮೇ ತಾ. 16ರಂದು ಕೇಂದ್ರ ಕೈಗಾರಿಕಾ ಸಚಿವ ಶ್ರೀ ಡಿ. ಸಂಜೀವಯ್ಯನವರು ಇಲ್ಲಿನ ದಕ್ಷಿಣ ಭಾರತೀಯ ಸಮಾಜವು ಶ್ರೀ ಕೇಶವದಾಸರಿಂದ ಏರ್ಪಡಿಸಿರುವ "ಮಹಾಭಾರತ" ಕೀರ್ತನ ಮಾಲೆಯನ್ನು ಉದ್ಘಾಟಿಸಿದರು. ಕೇಶವದಾಸರಿಂದ "ಭೀಷ್ಮಭಕ್ತಿ" ಕಥೆಯಾದ ಬಳಿಕ ಕಾರ್ಯದರ್ಶಿ ಶ್ರೀ ಎಂ. ಎಸ್. ರಾಮಚಂದ್ರನ್ ವಂದನಾರ್ಪಣೆಗೈದರು.

ಸಹಕಾರ ಶಿಕ್ಷಣಾ ಶಿಬಿರ.

ಶಿರ್ವ, ಸಹಕಾರ ಶಿಕ್ಷಣಾಧಿಕಾರಿ ಶ್ರೀ ಬಿ. ಡಿ. ಕೃಷ್ಣಮೂರ್ತಿ ಮತ್ತು ಭೂಮಿ ಅಭಿವೃದ್ಧಿ ಅಧಿಕಾರಿ ಶ್ರೀ ದೊಡ್ಡ ತಿಮ್ಮಯ್ಯನವರ ನೇತೃತ್ವದಲ್ಲಿ ಇತ್ತೀಚೆಗೆ ಶಿರ್ವದಲ್ಲಿ ಸಹಕಾರ ಶಿಕ್ಷಣ ಶಿಬಿರವೇರ್ಪಡಿಸಲಾಗಿದ್ದು, ಶಿರ್ವ, ಕುತ್ಯಾರು, ಪಾದೂರು ಸೇವಾ ಸಹಕಾರ ಸಂಘಗಳ ಮತ್ತು ಶಿರ್ವ ಕೆಥೋಲಿಕ್ ಸಹಕಾರಿ ಸಂಘದ ಡೈರೆಕ್ಟರುಗಳು ಭಾಗವಹಿಸಿದ್ದರು. ಶಿರ್ವ ಪಂಚಾಯತ್ ಅಧ್ಯಕ್ಷ ಶ್ರೀ ಎಮ್. ಸದಾಶಿವ ಹೆಗ್ಡೆಯವರು ಸರ್ಟಿಫಿಕೇಟುಗಳನ್ನು ವಿತರಣೆಗೈದರು. ಶ್ರೀ ಕೆ. ವಾಸುದೇವಶೆಟ್ರಿ ಧನ್ಯವಾದವಿತ್ತರು.

ಕನ್ನಡ ರತ್ನ ಪರೀಕ್ಷೆ ಮುಂದಕ್ಕೆ ಹಾಕಲಾಗಿದೆ.

ಈ ಸಲ ಸಾಹಿತ್ಯ ಪರಿಷತ್ತಿನ ಕನ್ನಡ ರತ್ನ ಪರೀಕ್ಷೆಗೆ ಕುಳಿತವರಲ್ಲಿ ಶೇ. 60ಕ್ಕೆ ಹೆಚ್ಚು ಮಂದಿ, ಪಠ್ಯಪುಸ್ತಕಗಳು ಸಿಕ್ಕದ ಕಾರಣ ರತ್ನ ಪರೀಕ್ಷೆಯನ್ನು ದಸರಾ ರಜದಲ್ಲಿ ನಡೆಸಬೇಕೆಂದು ಕೋರಿಕೆ ಕಳುಹಿಸಿಕೊಟ್ಟಿದ್ದಾರೆ. ವಾಸ್ತವವಾದ ಈ ತೊಂದರೆಯನ್ನು ಗಮನಿಸಿ ಸಾಹಿತ್ಯ ಪರಿಷತ್ತು ರತ್ನ ಪರೀಕ್ಷೆಯನ್ನು ದಸರಾ ರಜಕ್ಕೆ ಮುಂದೂಡಿದೆ. ಹೊಸತಾಗಿ ಪರೀಕ್ಷೆಗೆ ಕುಳಿತುಕೊಳ್ಳಲು ಬೇಡಿಯವರಿಗೆ ಅವಕಾಶವಿರುವುದಿಲ್ಲ.—ಎಂದು ಪರಿಷತ್ತಿನ ಅಧಿಕಾರಿಗಳು ಪ್ರಕಟಿಸಿದ್ದಾರೆ.

ವಾರ್ಷಿಕೋತ್ಸವ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ದಿನಾಂಕ 22—5—66ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಜರಗಿಸಲ್ಪಟ್ಟಿತು.

ಸಮಾರಂಭದ ಅಂಗವಾಗಿ ರಾತ್ರಿ ಭಕ್ತ ಸುಧನ್ವ ಎಂಬ ಯಕ್ಷಗಾನ ತಾಳಮದ್ದಳೆಯು ನಡೆಸಲ್ಪಟ್ಟಿತು.

ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಸದಸ್ಯರಿಂದ ತದನಂತರ 'ಶ್ರೀಕೃಷ್ಣವಿಜಯ" ಎಂಬ ಕಥಾಭಾಗದ ಯಕ್ಷಗಾನ ನಾಟಕವು ಪ್ರದರ್ಶಿಸಲ್ಪಟ್ಟಿತು.

ಆರಂಭದಲ್ಲಿ ಡಾ| ರಮಾನಂದ ಬನಾರಿಯವರು ಸ್ವಾಗತ ಭಾಷಣಮಾಡಿ ಸಂಸ್ಥೆಯ ಮುನ್ನಡೆಯ ಕುರಿತು ತಿಳಿಯಪಡಿಸಿದರು.

ಘಟ್ಟಿ

ನೆನಪಿಡಿರಿ

ಪ್ರಜಾಪ್ರಭುತ್ವ ಮತ್ತು ಆಡಳಿತ ವ್ಯವಸ್ಥೆ

ಬರೆದವರು:
ಶ್ರೀ ಮೊರಾರ್ಜಿ ದೇಸಾಯಿ
(ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರು)

ಪ್ರಜಾಪ್ರಭುತ್ವದ ಮಾರ್ಗ ಸುಗಮಗೊಳ್ಳಲು ಆಡಳಿತ ಶುದ್ಧಿ ಅತ್ಯಗತ್ಯ. ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಶ್ರೀ ಮೊರಾರ್ಜಿ ದೇಸಾಯ್ ಅವರು ಇತ್ತೀಚೆಗೆ ಆಕಾಶವಾಣಿ ದೆಹಲಿ ಕೇಂದ್ರದಿಂದ ಪ್ರಸಾರ ಭಾಷಣ ಮಾಡುತ್ತ "ಸಾರ್ವಜನಿಕರು ಆಡಳಿತ ಯಂತ್ರ ಶುದ್ಧೀಕರಣದ ಸಮಸ್ಯೆಯನ್ನು ಮುಕ್ತ ಮನಸ್ಸಿನಿಂದ ಪರಿಶೀಲಿಸಬೇಕು ಮತ್ತು ಈ ವಿಷಯದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕಳುಹಿಸಿಬೇಕು" ಎಂದು ಕೋರಿದ್ದಾರೆ.

ಆಡಳಿತ ಸುಧಾರಣಾ ಆಯೋಗದವರು ಆಡಳಿತ ಯಂತ್ರದ ಶುದ್ಧಿಗಾಗಿ ಕೈಗೊಂಡಿರುವ ಅಧ್ಯಯನ ತುಂಬಾ ಗಹನವಾಗಿದೆ. ಸಾಮಾನ್ಯವಾಗಿ ಎಲ್ಲಾ ವಿಷಯಗಳೂ ಈ ಅಧ್ಯಯನದ ಚೌಕಟ್ಟಿಗೆ ಒಳಪಡುತ್ತವೆ. ಆಯೋಗದವರು, ಅಭ್ಯಸಿಸುವ ವಿಷಯಗಳಲ್ಲಿ ಹತ್ತು ಅತಿ ಮುಖ್ಯವಾಗಿವೆ. ಕೇಂದ್ರ ಸರ್ಕಾರದ ಆಡಳಿತ ಯಂತ್ರದ ಪರಿಶೀಲನೆ ಎಲ್ಲಾ ಮಟ್ಟಗಳ ಯೋಜನಾ ವ್ಯವಸ್ಥೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ; ಹಣಕಾಸಿನ ಆಡಳಿತ ವ್ಯವಹಾರಗಳು, ಸಿಬ್ಬಂದಿ ವ್ಯವಸ್ಥೆ; ಆರ್ಥಿಕ ವ್ಯವಹಾರಗಳು, ರಾಜ್ಯ ಮಟ್ಟದ ಆಡಳಿತ ವ್ಯವಸ್ಥೆ; ಜಿಲ್ಲೆಯ ಆಡಳಿತ, ಕೃಷಿ ಸಂಬಂಧವಾದ ಆಡಳಿತ, ಪೌರರ ಕುಂದು ಕೊರತೆಗಳ ನಿವಾರಣೆ ಇವೇ ಆ ಹತ್ತು ವಿಷಯಗಳು.

ಇಷ್ಟೊಂದು ವಿಸ್ತೀರ್ಣವಾದ ರಕ್ಷೆಯುಳ್ಳ ಆಯೋಗವು ನೇಮಕಗೊಂಡಿರುವುದು ಇತ್ತೀಚಿನ ವರ್ಷಗಳಲ್ಲಿ ಇದೇ ಮೊದಲು. ದೇಶವು ಸ್ವತಂತ್ರವಾದ ೧೮ ವರ್ಷಗಳ ಬಳಿಕ ಹಾಗೂ ಮಹಾ ಚುನಾವಣೆಗೆ ಒಂದು ವರ್ಷ ಮುಂಚೆ, ಈ ಆಯೋಗವು ನೇಮಕಗೊಂಡಿದೆ. ಭವಿಷ್ಯತ್ತಿನಲ್ಲಿ ಆಡಳಿತ ಸುಧಾರಣೆಗೆ ಕೈಗೊಳ್ಳಬಹುದಾದ ದಿಟ್ಟ ಕ್ರಮಗಳನ್ನು ಇದು ಸೂಚಿಸುತ್ತದೆ.

ಎರಡನೆಯ ವಿಶ್ವ ಸಮರದ ನಂತರ ರಾಷ್ಟ್ರಗಳು ತ್ವರಿತಗತಿಯಲ್ಲಿ ಅಭಿವೃದ್ಧಿ ಸಾಧಿಸ ತೊಡಗಿದವು. ಫಲ ಸ್ವರೂಪವಾಗಿ, ಮಾನವ ಜೀವನವನ್ನು ಸುಖಮಯಗೊಳಿಸುವ ಬಗ್ಗೆ ಹೊಸ ಹೊಸ ವಿಚಾರಗಳು ಹುಟ್ಟಿಕೊಂಡವು. ಈ ಗುರಿಯನ್ನು ಸಾಧಿಸಲು ಸಂಪತ್ ಸಾಧನೆಗಳನ್ನು ಬಳಸಿದ್ದರಿಂದ ಸರ್ಕಾರದ ಹೊಣೆಗಾರಿಕೆಯು ಅಷ್ಟೇ ತೀವ್ರವಾಗಿ ಹೆಚ್ಚಿತು.

ಅಭಿವೃದ್ಧಿಗಾಗಿ ವಿಶ್ವದಾದ್ಯಂತ ನಡೆದ ಈ ಸ್ಪರ್ಧೆಯಲ್ಲಿ, ಆಡಳಿತ ಸುಧಾರಣೆಯ ಅಪೇಕ್ಷೆ ವ್ಯಕ್ತಪಟ್ಟಿರುವುದು. ಹಾಗೂ ಈ ಅಪೇಕ್ಷೆಯನ್ನು ಅಲ್ಪಾವಧಿಯಲ್ಲೇ ಈಡೇರಿಸಿಕೊಳ್ಳುವ ನಿರ್ಧಾರ ವ್ಯಕ್ತಪಟ್ಟಿರುವುದು ಅಭಿನಂದನೀಯವೇ ಸರಿ. ಸರ್ಕಾರದ ಆಡಳಿತ ವ್ಯವಸ್ಥೆ ಒಂದು ಯಂತ್ರವಿದ್ದಂತೆ. ಈ ಯಂತ್ರದ ಚಕ್ರಗಳು ಚಲಿಸುವಾಗ ಒಂದು ಬಗೆಯ ಸಾಮರಸ್ಯ ಸರಳತೆ ವ್ಯಕ್ತವಾಗಬೇಕು. ಚಲನೆ ತ್ವರಿತಗತಿಯದಾಗಿರಬೇಕು. ಉತ್ಪಾದನಾ ಸಾಮರ್ಥ್ಯ ಮತ್ತು ಉತ್ಸಾಹ ಸ್ಫುಟವಾಗಿ ವ್ಯಕ್ತಗೊಳ್ಳಬೇಕು.

ಆಡಳಿತ ವ್ಯವಸ್ಥೆಯನ್ನು ಮಿತವ್ಯಯದಿಂದ ನಡೆಸಬೇಕು. ದಕ್ಷತೆಯಿಂದ ಅದರ ಸಂಘಟನೆ ಮಾಡಬೇಕು. ಅಷ್ಟೇ ಚಾಕಚಕ್ಯತೆಯಿಂದ ಅದಕ್ಕೆ ಮಾರ್ಗದರ್ಶನ ನೀಡಬೇಕು. ಸಮರ್ಥ ರೀತಿಯಲ್ಲಿ ಈ ವ್ಯವಸ್ಥೆಯ ಉಸ್ತುವಾರಿ ನಡೆಯಬೇಕು. ಜಾಗೃತ ಸಾರ್ವಜನಿಕರ ಅಭಿಪ್ರಾಯವು ಆಡಳಿತದಲ್ಲಿನ ಯಾವುದೇ ಲೋಪದೋಷಗಳನ್ನು ಸಹಿಸಲಾರದು.

ಈ ಒಂದು ಸಂಗತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡೇ ನಾವು ಸರ್ಕಾರಿ ಸೇವೆಯಲ್ಲಿ ದಕ್ಷತೆ ಹೆಚ್ಚುವಂತೆ ಹಾಗೂ ಆಡಳಿತ ಯಂತ್ರವು ಸರ್ಕಾರದ ಸಾಮಾಜಿಕ ಮತ್ತು ಆರ್ಥಿಕ ಕಾರ್ಯ ನೀತಿಗಳನ್ನು ಅನುಷ್ಠಾನದಲ್ಲಿ ತರಲು ಸಮರ್ಥ ಸಾಧನವಾಗುವಂತೆ ನೋಡಿಕೊಳ್ಳಲು ಅಗತ್ಯವಾದ ಕ್ರಮಗಳನ್ನು ಪರಿಶೀಲಿಸಬೇಕಾಗಿದೆ.

ಆಡಳಿತವು ಜನರ ಆಶೋತ್ತರಗಳನ್ನು ಪೂರೈಸಬಲ್ಲದು ಎಂಬ ಬಗ್ಗೆ ಸಾರ್ವಜನಿಕರಲ್ಲಿ ದೃಢ ವಿಶ್ವಾಸವನ್ನು ಮೂಡಿಸುವುದು ನಮ್ಮ ಇನ್ನೊಂದು ಕರ್ತವ್ಯವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ನಮ್ಮ ಕಾರ್ಯವು ರಾಜ್ಯದ ಕನಸನ್ನು ಸಾಗಿಸುವ ಮಾರ್ಗವನ್ನು ಕಂಡು ಹಿಡಿಯುವುದೇ ಆಗಿದೆ. ಅಲ್ಪ ವೆಚ್ಚದಿಂದ ಸಾಧ್ಯವಾದಷ್ಟು ಶೀಘ್ರವಾಗಿ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಆಲೋಚಿಸುವುದು ನಮ್ಮ ಇನ್ನೊಂದು ಮುಖ್ಯ ಕಾರ್ಯವಾಗಿದೆ.

ಕ್ಲಿಷ್ಟವಾದ ಹಾಗೂ ಮಹತ್ತರವಾದ ಈ ಕಾರ್ಯದಲ್ಲಿ ಆಯೋಗ ಸಾರ್ವಜನಿಕರ ಸಹಕಾರ, ಹಾಗೂ ತಜ್ಞರ ನೆರವು ಅತ್ಯಗತ್ಯವಾಗಿವೆ. ಈ ಕಾರಣದಿಂದ ಆಯೋಗದವರು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಯನ ತಂಡಗಳನ್ನು ನೇಮಿಸಲು ನಿರ್ಧರಿಸಿದ್ದಾರೆ. ಪ್ರತಿಯೊಂದು ತಂಡಕ್ಕೂ ಓರ್ವ ಸಮರ್ಥ ವ್ಯಕ್ತಿ ಅಧ್ಯಕ್ಷರಾಗಿರುವರು.

ಈ ತಂಡಗಳು ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಪರಿಶೀಲಿಸಿ, ಶಿಫಾರಸು ಮಾಡುವುವು. ಈಗಾಗಲೇ, ಖ್ಯಾತ ಸಾರ್ವಜನಿಕ ಸೇವಾ ತಜ್ಞರು, ಯೋಜನಾ ಆಯೋಗದ ಸದಸ್ಯರು, ಕೆಲವು ಜನ ಮಂತ್ರಿಗಳು ಮತ್ತು ಸರ್ಕಾರಿ ಅಧಿಕಾರಿಗಳಿಂದ ಆಡಳಿತ ಸುಧಾರಣೆಯ ಬಗ್ಗೆ ಸಲಹೆಗಳನ್ನು ಪಡೆಯುವ ಸೌಭಾಗ್ಯ ದೊರೆತಿದೆ.

ಆಯೋಗದ ಸದಸ್ಯರು ಅಧ್ಯಯನ ಕಾರ್ಯಕ್ರಮದ ಅಂಗವಾಗಿ ದೇಶದ ವಿವಿಧ ರಾಜ್ಯಗಳಲ್ಲಿ ಪ್ರವಾಸ ಕೈಗೊಳ್ಳುವರು. ಸಾರ್ವಜನಿಕರ ಕುಂದುಕೊರತೆಗಳ ವಿಷಯವಾಗಿ ಈ ವಿಭಾಗದ ಜನಾಭಿಪ್ರಾಯ ಅರಿತುಕೊಳ್ಳುವದೇ ಪ್ರವಾಸದ ಉದ್ದೇಶವಾಗಿದೆ.

ಆಡಳಿತ ಸುಧಾರಣಾ ಆಯೋಗದ ಅಧ್ಯಯನ ತಂಡಗಳು ಈ ವರ್ಷದ ಅಕ್ಟೋಬರ್ ತಿಂಗಳ ಹೊತ್ತಿಗೆ ತಮ್ಮ ವರದಿಗಳನ್ನು ಸಲ್ಲಿಸುವ ನಿರೀಕ್ಷೆಯಿದೆ. ಮುಂಬರುವ ಚುನಾವಣೆಗಳಿಂದಾಗಿ ಅಧ್ಯಯನ ತಂಡಗಳ ಕೆಲಸ ಕಾರ್ಯಗಳಿಗೆ ಸ್ವಲ್ಪ ವೆಚ್ಚವಾಗುವುದಾದರೂ, ಅಧ್ಯಯನ ತಂಡದವರು ಈ ಸಮಯವನ್ನು ಆಯೋಗದ ಅಂತಿಮ ಅಧ್ಯಯನಕ್ಕೆ ಅನುಕೂಲವಾಗುವ ವರದಿಗಳನ್ನು ಮತ್ತು ಇತರ ವಿವರಗಳನ್ನು ಸಿದ್ಧಗೊಳಿಸಲು ಉಪಯೋಗಿಸಿಕೊಳ್ಳುವರು.

೧೯೬೭ರ ಮಾರ್ಚಿ ತಿಂಗಳಿಂದ ಸೆಪ್ಟಂಬರ್‌ವರೆಗಿನ ಅವಧಿಯಲ್ಲಿ ಆಯೋಗದವರು ಆಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ನಿರ್ದಿಷ್ಟವಾದ ವಿವರಗಳನ್ನು ಸಂಗ್ರಹಿಸುವರಲ್ಲದೆ, ಈ ವಿವರಗಳನ್ನೇ ಆಧಾರವಾಗಿಟ್ಟುಕೊಂಡು ಆಡಳಿತ ವ್ಯವಸ್ಥೆಯ ಸುಧಾರಣೆಯ ಬಗ್ಗೆ ದೇಶಾದ್ಯಂತ ಜನಾಭಿಪ್ರಾಯವನ್ನು ತಿಳಿದುಕೊಳ್ಳಲು ಆರಂಭಿಸುವರು. ಅನಂತರ ತಮ್ಮ ವರದಿಯನ್ನು ಸಿದ್ಧಗೊಳಿಸುವರು.

ಆಡಳಿತ ಸುಧಾರಣೆ ಸುಲಭವಾದ ಕಾರ್ಯವೇನೂ ಅಲ್ಲ. ಈ ದಿಶೆಯಲ್ಲಿ ಮುನ್ನಡೆಯುವ ನಮಗೆ ಹೆಜ್ಜೆ ಹೆಜ್ಜೆಗೂ ಮಹಾ ಜನಗಳಾದ ನಿಮ್ಮೆಲ್ಲರ ಸಂಪೂರ್ಣ ಸಹಕಾರ ಹಾಗೂ ಸೌಹಾರ್ದ ಅಗತ್ಯ— ದೇವರಲ್ಲಿ ಮತ್ತು ದೇಶಬಂಧವರಲ್ಲಿ ವಿಶ್ವಾಸವಿಟ್ಟು ನಾವು ಈ ಮಹಾಕಾರ್ಯ ಕೈ ಗೊಂಡಿದ್ದೇವೆ. ನೀವು ರಾಷ್ಟ್ರೀಯ ಮಹತ್ವದ ಈ ವಿಷಯವನ್ನು ಗ್ರಹಿಸಿಕೊಂಡು ನಮ್ಮ ಕಾರ್ಯದಲ್ಲಿ ಸಂಪೂರ್ಣ ಸಹಕಾರ ನೀಡಿದಾಗ ನಮ್ಮ ಶ್ರಮ ಸಾರ್ಥಕವಾಯಿತೆಂದು ನಾವು ಭಾವಿಸುತ್ತೇವೆ.

ವರ್ಗ-ಊಳಿಗ

ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.

ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಕ್ರೈತ್ರ ಮುರುಗ

(ಎರಡನೇ ಪುಟದಿಂದ)

"ಏಳು ಕೋಕಿಲಂ, ನನ್ನ ಗುರುತು ನಿನಗೆ ಹೇಗೆ ಸಿಕ್ಕಿತು?'

'ಗೋಡೆಯಲ್ಲಿ ನೇತಾಡುತ್ತಿರುವ ಭಾವಚಿತ್ರ ನನ್ನ ಹೃದಯದಲ್ಲಿ ಕೆತ್ತಲ್ಪಟ್ಟಿದೆ. ನನ್ನ ಅವರಾದರೋ ನಿನಗೆ ಕೃತಜ್ಞರಾಗಿ ಬಿಟ್ಟರು. ಆದರೆ ಈಗ......"

'ಏನದು ಅವಾಂತರ, ಕೋಕಿಲಂ? ನಾನು ಕಳೆದ ಸಲ ಮದ್ರಾಸಿಗೆ ಬಂದಿದ್ದಾಗ ಎಲ್ಲೆಲ್ಲೂ ಕೇದಾರಿಯ ಹೆಸರು ಕೇಳಿ ಬರುತ್ತಿತ್ತು—ಅದು ಐಂದ್ರಜಾಲಿಕವಾಗಿ ಕೆಲಸಮಾಡುತ್ತಿತ್ತು. ಚುನಾವಣೆಯು ಅವನನ್ನು ದಾರಿ ತಪ್ಪಿಸಿ ನಾಶಮಾಡಿರಬಹುದೆಂಬುದು ನನ್ನ ಶಂಕೆ....'

"ಚುನಾವಣೆಯು ಅವರಿಗೆ ಕೇವಲ ಅದೃಷ್ಟ ತುಂಬಿ ಬಂದ ಸಮಯವೇ ಸರಿ. ಕೆಲ ವರ್ಷಗಳ ಹಿಂದೆಯೇ ಅದೃಷ್ಟ ಅವರಿಗೆ ಅಂಟಿತ್ತು; ನಿಮ್ಮನ್ನು ಅವರು ಕಡೆಗಣಿಸಲಾರಂಭಿಸಿದಂದೇ ಅದೃಷ್ಟ ಅವರಿಗೆ ಅಂಟಿತ್ತು. ಮಹತ್ವಾಕಾಂಕ್ಷೆ ಮತ್ತು ನಿರ್ಭೀತಿಯಿಂದ ತನ್ನ ಬಳಿ ಇದ್ದುದ್ದನ್ನು ಪೂರ್ಣ ಖರ್ಚು ಮಾಡುತ್ತಿದ್ದರಲ್ಲದೆ, ಅದಕ್ಕೆ ಅನುಕೂಲವಾಗುವಂತಹ ತತ್ವಗಳನ್ನು..."

ಆಕೆಯ ಬುದ್ಧಿವಂತಿಕೆಯು ಮಾತುಗಳು ರಾಮುವನ್ನು ಆಶ್ಚರ್ಯಚಕಿತನನ್ನಾಗಿ ಮಾಡಿದುವು.

'ನಮ್ಮ ಕಲ್ಯಾಣಕರ್ತ, ನಿಮ್ಮ ಬಳಿ ಪೂರ್ಣ ಕಥೆಯನ್ನು ಹೇಳಿ ಹೃದಯವನ್ನು ಹಗುರಗೊಳಿಸಿಕೊಳ್ಳಲು ನನಗೆ ಮನಸ್ಸಾಗಿದೆ. ಸಹೋದರನಂತೆ ನನ್ನತ್ತ ವಾತ್ಸಲ್ಯವಿರಲಿ. ಇಂದು ರಾತ್ರಿ ಇಲ್ಲೆ ಇರಿ. ಇವರ ಹೃದಯದಲ್ಲೂ ಆದರ ಆತಿಥ್ಯಗಳಿಗೆಡೆ ಇದೆ. ನಿಮ್ಮ ಆಗಮನದ ವಾರ್ತೆಯನ್ನು ಕಣ್ಣಿಗೆ ಕಾಣದ ಒಂದು ಅದ್ಭುತ ಶಕ್ತಿಯು ಅವರಿಗೆ ತಿಳಿಸಿ, ಅಲ್ಲಿಗೆ ಒಂದು ಘಂಟೆಯೊಳಗೆ ಹಿಂತಿರುಗುವಂತೆ..."

"ನೀನು ಹೇಳಿದುದೆಲ್ಲಾ ನನಗೆ ಚೆನ್ನಾಗಿ ಗೊತ್ತಾಯಿತು, ಕೋಕಿಲಂ. ಅವಾಂತರದ ದಿನಗಳಲ್ಲೂ ಈ ಮಕ್ಕಳ ಮಧ್ಯೆ ಸರಳತೆಯಿಂದಿರುವದನ್ನೂ ಸ್ವಜೀವನವನ್ನು ನಡೆಸುತ್ತಿರುವದನ್ನು ನೋಡಿ ನನಗೆ ಆನಂದವಾಗಿದೆ, ಅಲ್ಲದೆ ಹೆಮ್ಮೆಪಟ್ಟುಕೊಳ್ಳುವಂತಾಗಿದೆ. ನಿನ್ನನ್ನು ಕೇದಾರಿಯು ಅರಿಸಿಕೊಳ್ಳುವಂತೆ ಒತ್ತಾಯ ಪಡಿಸಿದವನು ನಾನೆಂಬುದು ನಿನಗೆ ಗೊತ್ತಿರಲಿಕ್ಕಿಲ್ಲ..."

'ನಿಜ, ನನಗೆ ಗೊತ್ತಿದೆ." ಕೊಂಚ ನಾಚಿಕೆ ಪಟ್ಟುಕೊಳ್ಳುತ್ತ ಕೋಕಿಲಂ ಒಪ್ಪಿಕೊಂಡಳು." ನನ್ನೊಂದಿಗೆ ಹಾಗೂ ನನ್ನ ಮಕ್ಕಳೊಂದಿಗೆ ಇಂದು ರಾತ್ರಿ ನೀವು ಇಲ್ಲೇ ಊಟಮಾಡಬೇಕು. ಅವರು ಮನೆಯಲ್ಲಿಲ್ಲವೆಂಬ ನೆವನ ನುಡಿಯಬಾರದು. ನಾನು..."

"ಇಲ್ಲ, ಕೋಕಿಲಂ, ಇಲ್ಲ, ಹಾಗೇನಿಲ್ಲ. ನಾಳೆ ಬೆಳಿಗ್ಗೆ ಜಾನಕಿಯೊಂದಿಗೆ ನಾನಿಲ್ಲಿಗೆ ಬರುತ್ತೇನೆ, ನಿನ್ನ ಹತ್ತಿರ ಹಲವಾರು ವಿಷಯಗಳ ಕುರಿತು ಮಾತಾಡಬೇಕೆಂದಿದ್ದೇನೆ. ಇಂದು ರಾತ್ರಿ ಆಕೆ ಬರಲಿಕ್ಕಿದ್ದಾಳೆ. ಅವಳನ್ನು ಕರೆದುಕೊಂಡು ಬರಲು ಒಂದಾಳನ್ನು ಉಗಿಬಂಡಿ ನಿಲ್ದಾಣಕ್ಕೆ ನಾನು ಕಳುಹಿಸುತ್ತೇನೆ. ಸಾಧಾರಣ ಒಂದು ತಿಂಗಳ ವರೆಗೆ ಆಕೆ ಮದ್ರಾಸಿನಲ್ಲಿರುತ್ತಾಳೆ. ಆಕೆ ಏಳು ಘಂಟೆಯ ಬಂಡಿಯಲ್ಲಿ ಬರುತ್ತಾಳೆ."

"ಹಾಗಿದ್ದಲ್ಲಿ ಅವಳನ್ನಿಲ್ಲಿಗೇನೇ ಕರೆದುಕೊಂಡು ಬರಲು ನಿಲ್ದಾಣಕ್ಕೆ ನಾನು ಕಾರು ಕಳುಹಿಸುತ್ತೇನೆ.'

'ಅಮ್ಮಾ, ಮಾವಿಗೆ ಎಷ್ಟು ಮಕ್ಕಳಿವೆ ಎಂದು ಮಾಮನನ್ನು ಕೇಳಿರಿ...." ಅವನನ್ನು ಒಳಗೆ ಕರೆದಿದ್ದ ಹುಡುಗಿ ಮಾತೆತ್ತಿದಳು.

"ಹೌದು, ನಾನು ಕೇಳಬೇಕಾಗಿದ್ದ ಪ್ರಶ್ನೆಯನ್ನೇ ಆಕೆ ಕೇಳಿದ್ದಾಳೆ.'

"ಒಂದು ಹುಡುಗಿ ಹಾಗೂ ಒಂದು ಸಣ್ಣ ಹುಡುಗ, ಮಗು." ಆಕೆಯ ಗಲ್ಲವನ್ನು ತಟ್ಟುತ್ತ ಅವನು ಉತ್ತರವಿತ್ತನು. ಮಕ್ಕಳು ಕೈ ತಟ್ಟಿದುವು. ಚಿಕ್ಕ ಮಕ್ಕಳ ನಿಷ್ಕಲ್ಮಷ ಪ್ರಪಂಚದಲ್ಲಿ ಎಲ್ಲವೂ ಸಂತೋಷ ಸಾಗರವೇ ಇದೆ.

"ಕಾರು ಕಳುಹಿಸುವದು! ಎಂದಿಗೂ ಆಗತ್ಯವಿಲ್ಲ. ಯಾರಾದರೂ ನಿಲ್ದಾಣಕ್ಕೆ ಹೋಗಿ, ಇಲ್ಲಿಗೆ ಬರಲು ಅವಳಿಗೆ ದಾರಿ ತಿಳಿಸಿದಲ್ಲಿ, ನಾವು ಸಾಧಾರಣವಾಗಿ ಉಪಯೋಗಿಸುವ ಜಟಕಾದಲ್ಲಿ ಆಕೆ ಬರಬಹುದು.'

'ಆದರೆ, ಕಾರು ಇರುವಾಗ ಏತಕ್ಕೆ ಕಳುಹಿಸಬಾರದು? ಆದರ ದಿವಸಗಳು ಎಣಿಸಲ್ಪಟ್ಟಿವೆ. ಇಂತಹ ಸುಪ್ರಮಾಸಕ್ಕಾಗಿ ಬಹುಶಃ ಆದರ ಕೊನೆಯ ಸವಾರಿಯನ್ನೇತಕ್ಕೆ ಉಪಯೋಗಿಸಿಕೊಳ್ಳಬಾರದು?'

'ಕೋಕಿಲಂ, ಇಷ್ಟು ಧೈರ್ಯಗೆಟ್ಟು ಅದೇತಕ್ಕೆ ಕಥೆ ಹೇಳುತ್ತಿ?"

'ಕ್ರಮವಾಗಿ ಪೂರ್ಣ ಕಥೆ! ನಿಮಗೆ ಗೊತ್ತಾಗಲಿಕ್ಕಿದೆ; ಎಲ್ಲವನ್ನೂ ನಾವು ಕಳೆದುಕೊಂಡಾಗಿದೆ. ಆಟ ಮುಗಿದಿದೆ. ಚುನಾವಣೆಯು ಅಸಿಂಧುವೆಂದು ಸಾರಲ್ಪಟ್ಟಲ್ಲಿ ಸಾರಲ್ಪಟ್ಟೇ ಪಡುತ್ತದೆ; ಅವರು ಹಾಳಾದಂತೆಯೇ ಸರಿ."

ಇತ್ತೀಚೆಗಿನ ಹೊಸ ಸುದ್ದಿಯನ್ನು ರಾಮು ಆಕೆಗೆ ತಿಳಿಸಲಿಲ್ಲ.

"ಹಳ್ಳಿ ಜೀವನಕ್ಕೆ ಸಮಾನಾದ ಜೀವನ ಬೇರೆ ಇಲ್ಲ. ನನ್ನ ಅವರ ಮಹತ್ವಾಕಾಂಕ್ಷೆಗೆ ಮಿತಿ ಇಲ್ಲ. ದಂಡೆಗೆ ಬಂದು ಅಪ್ಪಳಿಸುವ ಸಮುದ್ರದ ಹಾಗೆ ಅವರಿಗೂ ವಿಶ್ರಾಂತಿ ಎಂಬುದೇ ಇಲ್ಲ. ಈ ಹಾಳು ಶುಷ್ಕ ಮದ್ರಾಸು ನಮ್ಮನ್ನು ಹಾಳು ಮಾಡಿತು. ಅವರು ಒಂದೇ ಒಂದು ದಿನ ವಿರಾಮವಾಗಿರಲಿಲ್ಲ."

'ಯಾವಾಗಲೂ ನಾನು ಹಾಗೇ ಆಲೋಚಿಸುತ್ತಿದ್ದೆ. ಅಲ್ಲದೆ ಹೇಳುತ್ತಿದ್ದೆ. ಆದರೆ, ಕೋಕಿಲಂ, ನೀನು ಧೈರ್ಯಗೆಡಬೇಕಾಗಿಲ್ಲ. ಕೇದಾರಿಯ ಪ್ರಕೃತಿ ಚೆನ್ನಾಗಿದೆ. ವಾತಾವರಣ ಅವನನ್ನು ಹಾಳುಮಾಡಿತು. ಹಿಂದಿನಂತೆ ಪುನಃ ಅವನು ಉತ್ತಮ ದಿನಗಳನ್ನು ಕಾಣುತ್ತಾನೆ."

"ಅದಕ್ಕೆ ಬಹಳ ತಡವಾಗಿರಬಹುದೆಂದು ನನಗೆ ಭಯವಾಗುತ್ತದೆ. ಒಂದು ಅಥವಾ ಎರಡು ವರ್ಷಗಳ ಹಿಂದೆ ನೀವಿಲ್ಲಿರುತ್ತಿದ್ದಲ್ಲಿ....."ಕೋಕಿಲಂ ಗೊಣಗುಟ್ಟಿದಳು.

ಕಾರು ಬಂದು ಶಬ್ದ ಮಾಡುವ ವರೆಗೂ—ಎಂಟು ಗಂಟೆಯ ವರೆಗೂ—ಅವರು ಉತ್ಸುಕತೆಯಿಂದ ಮಾತನಾಡಿದರು. ಆ ಕಾರಿನಿಂದ ಜಾನಕಿ ಮತ್ತು ಅವಳ ಮಕ್ಕಳು ಮಾತ್ರ ಹೊರಗೆ ಬಂದುದಲ್ಲವೆ ಕೇದಾರಿಯೂ ಬಂದನು.

ಕಾರಿನಿಂದ ಹೊರಗೆ ಬಂದ ಕೇದಾರಿಯು, ರಾಮುವಿನ ಕಾಲುಗಳನ್ನು ಹಿಡಿದು, ನಮಸ್ಕಾರ ಮಾಡುತ್ತ ಕಗ್ಗಿಸಿದ ಹಾಗೂ ಪಶ್ಚಾತ್ತಾಪ ಪೂರ್ಣ ಸ್ವರದಿಂದ, "ರಾಮು, ನನ್ನ ತಪ್ಪುಗಳನ್ನು ಮನ್ನಿಸು—ಕಲಾಶಾಲೆಯ ಪ್ರೇಮದಿಂದಲಾದರೂ ಕ್ಷಮಿಸು. ನಾನು ಕೃತಘ್ನ! ನನ್ನ ಪಾಪಕ್ಕೆ ಆಗಲೇ ಪ್ರಾಯಶ್ಚಿತ್ತ ಬಂದೊದಗಿದೆ. ಎಲ್ಲವೂ ಈಗ ಅನುಭವಕ್ಕೆ ಬರುತ್ತಿದೆ—ಆದರೆ, ಅಯ್ಯೋ, ಬಹಳ ತಡವಾಗಿ ಬಿಟ್ಟಿತು!"

"ಕೇದಾರಿ, ಈ ತಂದೆ ಸ್ವಾಗತ ಸ್ನೇಹಿತರ ಮಧ್ಯೆ ನಡೆಯಲಿಕ್ಕಿಲ್ಲ. ಇದು ಬಹಳ ಹಳೆಯ ಕಾಲದ ರೀತಿ...'

"ನಿನಗಿಂತ ನಾನು ಚಿಕ್ಕವನಿದ್ದೇನೆ. ನಾನು ನಿನಗೆ ಋಣಿಯಾಗಿದ್ದೇನೆ. ನಿನ್ನ ಕಾಲು ಹಿಡಿಯದಿದ್ದಲ್ಲಿ ನನ್ನ ಮನಸ್ಸಿಗೆ ಸಮಾಧಾನ ಆಗುವದಿಲ್ಲ. ಇದು ಮಹಾ ಬದಲಾವಣೆಯ ಒಂದು ಸಂಕೇತ ಮಾತ್ರ. ಇದಕ್ಕಾಗಿಯೇ ಮೂರು ದಿನಗಳ ಹಿಂದೆ, ನಿನ್ನನ್ನು ಹುಡುಕಿಕೊಂಡು, ಮದ್ರಾಸಿನಿಂದ ಹೊರಟು ಹೋಗಿದ್ದೆ. ದೂಸಿಯಲ್ಲಿ ಜಾನಕಿ ಸಿಕ್ಕಿದುದರಿಂದ ಕ್ಲಪ್ತಕಾಲದಲ್ಲಿ ಒಟ್ಟಿಗೆ ಬರುವಂತಾಯಿತು."

'ಉತ್ತಮ ಯೋಜನೆ! ಇದರಲ್ಲಿ ಮಂಗಲಮಯ ಬೆಳಕು ಇದೆ.'

"ಈಗಿನಿಂದ, ನಾನು ಹೊಸ ದಿನವನ್ನು ಹಾಗೂ ಹೊಸ ಜೀವನವನ್ನು ಆರಂಭಿಸುತ್ತೇನೆ. ರಾಮು, ನಿನ್ನ ಗುಲಾಮನನ್ನಾಗಿ ನನ್ನನ್ನು ತೆಗೆದುಕೊಂಡು..."

"ಹೇಳು, ಹಿಂದಿನಂತೆ ಗೆಳೆಯ ನಾನು........"

ಕ್ಷಣಕಾಲ ತಡೆದು ರಾಮು ಮುಂದರಿಸಿದ. "ನಿನ್ನ ಚುನಾವಣೆ ಅಸಿಂಧು ಎಂದು ಸಾರಲ್ಪಟ್ಟಿದೆ. ನಾನೇನೂ ಬೇಸರಪಡುವದಾಗಿಲ್ಲ. ಅತಿ ಮಹತ್ವಾಕಾಂಕ್ಷೆಯ ಜೀವನವು ಹಗೆತನದಿಂದ ತುಂಬಿ...."

ಚುನಾವಣೆ ಅಸಿಂಧುವೆಂದಾಯ್ತು! ತೀರ್ಪಿತ್ತಾಯ್ತೇನು! ಆದರೆ, ಫಲಿತಾಂಶ ನನಗೆ ಮೊದಲೇ ಗೊತ್ತಾಗಿತ್ತು. ಆದುದರಿಂದಲೇ ನನಗೆ ಆಶ್ಚರ್ಯವಾಗಲಿಲ್ಲ."

"ಹೌದು, ಅದು ಹಾಗೆ ಇದೆ, ಇಂದಿನ ಸಾಯಂಕಾಲದ ವೃತ್ತ ಪತ್ರಿಕೆಗಳಲ್ಲಿ...'

"ಒಳ್ಳೇದು. ಅದು ಹಾಗೆಯೇ ಆಗಲಿ. ಮಾರ್ಕಂಡಂ ಸಂತೋಷ ಪಡಲಿ, ರಾಮು, ನಿನ್ನ ಬಳಿ ಹೇಳಲು ನನ್ನ ಹತ್ತಿರ ನೂರಾರು ವಿಷಯಗಳಿವೆ, ಈಗ ನಾವು ಹೊರಗೆ ಹೋಗಿ ಬರೋಣ. ಜಾನಕಿ ಮತ್ತು ಕೋಕಿಲಂ ಒಬ್ಬರನ್ನು ಇನ್ನೊಬ್ಬರು ಚೆನ್ನಾಗಿ ತಿಳಿದುಕೊಳ್ಳಲಿ. ರಾತ್ರಿ ಬಹಳ ಹೊತ್ತಾಗಿದೆ. ಚಂದ್ರನು ಅದಕ್ಕೆ ಕಾಂತಿಯನ್ನಿತ್ತಿದ್ದಾನೆ. ಆಕಾಶ ಮಧ್ಯದಲ್ಲಿ ಆತ ಬಿಳಿಯ ಗುಲಾಬಿಯ ಹಾಗೆ ಚಂದವಾಗಿದ್ದಾನೆ. ಮೊದಲಿನ ರೀತಿಯಂತೆ ಒಂದು ಘಂಟೆ ಕಡಲು ಕರೆಯಲ್ಲಿ ಕಳೆಯೋಣ. ಇನ್ನು ಮುಂದಕ್ಕೆ ನಾನು ನ್ಯಾಯವಾದಿಯಾಗಿರಲು ಇಷ್ಟಪಡುವದಿಲ್ಲ. ನಿನ್ನ ಬುದ್ಧಿವಾದದಂತೆ ಸನ್ಯಾಸಿ ಜೀವನವನ್ನು....'

"ನನ್ನ ಬುದ್ಧಿವಾದದಂತೆ! — ನಾನೇನೂ ಸನ್ಯಾಸಿ ಇರುವದಿಲ್ಲ. ಅದರ ಬದಲು, ಪೂರ್ಣ ಉಡುಪನ್ನು ಧರಿಸಿಕೊಂಡಿರುವ ಹಾಗೂ ಪ್ರಪಂಚದ ನೂರಾರು ವಿಷಯಗಳಲ್ಲಿ ಮಗ್ನನಾಗಿರುವ ಉನ್ನತ ಸರಕಾರಿ ಉದ್ಯೋಗಸ್ಥನಿದ್ದೇನೆ.'

"ಆದರೂ ಕೆಲಸದಲ್ಲಿರುವಂತೆಯೇ ನೀನು ಸನ್ಯಾಸಿಯ ಹಾಗೆ ದಿನ ಕಳೆಯುತ್ತಿರುವೆ. ಮೂರೇ ಮೂರು ದಿನಗಳಲ್ಲಿ ನಿನ್ನ ಜೀವನದ ಸಂದೇಶ ಹಾಗೂ ಅರ್ಥವನ್ನು ನಾನು ತಿಳಿದುಕೊಂಡಿದ್ದೇನೆ. ಅದನ್ನೇ ಅಂದಿನ ವರೆಗೂ ನಾನೂ ತಿಳಿದುಕೊಂಡಿರಲಿಲ್ಲ. ಈಗ ನನ್ನ ನೋಟ ಬದಲಾಗಿದೆ.'

'ಸರಿ, ಕೇದಾರಿ ಊಟವಾದ ಮೇಲೆ ಒಂದು ಘಂಟೆಕಾಲ ನಾವು ಕಡಲು ಕರೆಯಲ್ಲಿರೋಣ. ತಿಂಗಳ ಬೆಳಕಿರುವ ರಾತ್ರಿಯು ತತ್ವದರ್ಶಕವಾಗಿಯೂ ಮಹಾ ಸಂಧಾನದ ದೂತನಾಗಿಯೂ ಇರುತ್ತದೆ."

(ಮುಂದುವರಿಯುವುದು)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914. ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧



NAVAYUGA 9-6-1966
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಚಾರುಚಯನ

ಬಲವಾದ ಜೋಕಾಲಿ—ಪಾರ್ಕಿಳಂ ನೀತಿ

ಮುಂದಿನ ಗಾಂಧೀಜಯಂತಿಯ ಹೊತ್ತಿಗೆ ನಿರ್ಮಾಣಗೊಳ್ಳುವ ಪಂಜಾಬಿ ಸುಬಾ ಮತ್ತು ಹರಿಯಾಣಾ ರಾಜ್ಯಗಳ ರಚನೆಗೆ ೧೯೬೧ರ ಜನಗಣನೆಯನ್ನೇ ಆಧಾರವಾಗಿಟ್ಟುಕೊಳ್ಳುವುದು ಈಗ ಒಂದು ನಿರ್ಣಯದ ರೂಪಕ್ಕೆ ಬಂದಿದೆ. ಶೀಘ್ರದಲ್ಲಿಯೇ ವಿಭಜನೆ—ಪುನಾರಚನೆಯ ಕಾರ್ಯ ಮೊದಲಾಗಿ ಸಂಸತ್ತಿನ ಮಳೆಗಾಲದ ಅಧಿವೇಶನದ ಮುಂದೆ ತತ್ಸಂಬಂಧಿತ ಮಸೂದೆಯು ಬರುವುದು ಅಗತ್ಯವಾಗಿದೆ. ಇದಕ್ಕಾಗಿ ರಾಜ್ಯ ಕೇಂದ್ರ ಸರಕಾರಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿವೆ. ಪಂಜಾಬಿಗಳ, ಮುಖ್ಯವಾಗಿ ಅಕಾಲಿಗಳ ಈ ಬಯಕೆ ಅಕಾಲಿಕವಾದರೂ ದೇಶದ ಆಂತರಿಕ ದೃಷ್ಟಿಯಿಂದ ಅದನ್ನು ನೀಡದೆ ಗತ್ಯಂತರವಿಲ್ಲ ಎಂಬ ಸ್ಥಿತಿ ಬಂದಿರುವುದು. ಇದೇ ದುಸ್ಥಿತಿ ಇನ್ನುಳಿದೆಡೆ ತಲೆದೋರದಿರಲಿ ಎಂದು ಮಾತ್ರ ಹಾರೈಸಬೇಕಾಗಿದೆ.

೦ ೦ ೦

ಭಾಷೆ ಮತ್ತು ವಿಭಜನೆಯ ಗಾಳಿಯನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೂ ಹರಡಿಸುವ ಕುತಂತ್ರ ನಡೆದಂತೆ ಭಾಸವಾಗುತ್ತಿದೆ. ಶಿಕ್ಷಣ ಮಂತ್ರಿ ಎಂ. ಸಿ. ಚಗಲಾ ಅವರನ್ನು ಕೇಳಿದ ಒಂದು ಪ್ರಶ್ನೆಯೇ ಇದಕ್ಕೆ ಸಾಕ್ಷಿ. ಆದರೆ, ಚಗಲಾ ಖಂಡತುಂಡವಾದ ಮಾತುಗಳಲ್ಲಿ ಇದರ ಸಾಧ್ಯತೆಯನ್ನು ನಿರಾಕರಿಸಿದರು. ಭಾಷೆಯ ತಳಹದಿಯಲ್ಲಿ ನಾವು ದೇಶವನ್ನು ಈಗಾಗಲೇ ಬೇಕಾದ ಹಾಗೆ ತುಂಡರಿಸಿಕೊಂಡಿದ್ದೇವೆ. ಇನ್ನೂ ವಿಭಜಿಸುವುದು ಸಾಧ್ಯವಿಲ್ಲ.

ನಿಜ. ರಾಜ್ಯ ಪುನಾರಚನೆಯ ವೇಳೆ, ಅನಂತರ ದೇಶದಲ್ಲಿ ವಿಭಜನೆಯ ಹಲವು ಬೇಡಿಕೆಗಳು ಮುಂದೆ ಬಂದುವು. ಇವೆಲ್ಲವೂ ಮೊದ ಮೊದಲಿಗೆ ಅನ್ಯಾಯ—ಅರಾಷ್ಟ್ರೀಯ—ಅಶಾಸ್ತ್ರೀಯ ಮೊದಲಾಗಿ ಕಂಡು ಬಂದರೂ ಮುಂದೆ ನ್ಯಾಯ, ರಾಷ್ಟ್ರೀಯ ಹಾಗೂ ಶಾಸ್ತ್ರೀಯವಾಗಿ ಪರಿಣಮಿಸಿದುವು. ರಾಜ್ಯ ಪುನರ್ಘಟನೆ-ಭಾಷೆಯ ತಳಹದಿಯಲ್ಲಿಯೇ ಅಸಾಧ್ಯವೆಂದು ಕಾಂಗ್ರೆಸ್ಸು ಅಭಿಪ್ರಾಯಪಟ್ಟಿತ್ತು. ದ್ವಿಭಾಷಿ ಮುಂಬಯಿಯ ವಿಭಜನೆಯಿಲ್ಲ ಎಂದು ಸಾರಿತ್ತು. ನಾಗಾರಿಗೆ ಪ್ರತ್ಯೇಕ ರಾಜ್ಯ ನಿರ್ಮಾಣ ಸಾಧ್ಯವಿಲ್ಲ ಎಂದೂ ಘೋಷಿಸಿತ್ತು...ಹಾಗೆಯೇ ಪಂಜಾಬೀ ಸುಬಾಕ್ಕೆ ಧಿಕ್ಕಾರವನ್ನು ಹಾಕಿತ್ತು. ಕಾಲಾಯ ತಸ್ಮೈ ನಮಃ—ಕಾಂಗ್ರೆಸ್ ತನ್ನ ಅಭಿಪ್ರಾಯವನ್ನು ಕಾಲಕಾಲಕ್ಕೆ ಬದಲಾಯಿಸುತ್ತ ಬಂತು ಅಥವಾ ಬದಲಾಯಿಸಲೇಬೇಕಾಯ್ತು. ಆದರೆ, ಈ ಗಾಳಿ ಜಮ್ಮು—ಕಾಶ್ಮೀರಕ್ಕೆ ಬೀಸುವುದರಿಂದ ಅನಾಹುತ ಖಂಡಿತ.

ಜಮ್ಮು—ಕಾಶ್ಮೀರದ ಪ್ರಜೆಗಳು ಭಾರತ ಒಕ್ಕೂಟದಲ್ಲಿ ಸುಖವಾಗಿ ಬದುಕುತ್ತಿದ್ದಾರೆ. ಪಾಕಿಸ್ತಾನದ ವಕ್ರದೃಷ್ಟಿ ತಮ್ಮ ಮೇಲಿದೆಯೆಂಬುದನ್ನವರು ಸರಿಯಾಗಿ ತಿಳಿದುಕೊಂಡಿದ್ದಾರೆ. ಭಾಷೆಯ ಆವರಣ ತೀರ ಸಂಕುಚಿತವೆಂಬುದನವರು ಮನವರಿಕೆ ಮಾಡಿಕೊಂಡಿದ್ದಾರೆ. ಮತ್ತೈಕ್ಯ - ಭಾವೈಕ್ಯದ ಸಂಕೇತವಾಗಿ ಬಾಳುವ ಕಾಶ್ಮೀರಿಗಳ ಸರಳತೆಯ ದುರುಪಯೋಗವನ್ನು ಯಾರಾದರೂ ಪಡೆದುಕೊಳ್ಳ ಹವಣಿಸಿದರೆ, ಅದರಿಂದ ಶತ್ರುಗಳ ದಾರಿ ಸುಗಮವಾಗುವುದು. ಆದುದರಿಂದ ಯಾರೇ ಇರಲಿ, ರಾಷ್ಟ್ರದ ಭದ್ರತೆ—ನೆಮ್ಮದಿಗಾಗಿ ಕಾಶ್ಮೀರ ರಾಜ್ಯದೊಳಗೆ ಯಾವುದೇ ವಿಷಗಾಳಿಯನ್ನು ಒಯ್ಯಬಾರದು.

೦ ೦ ೦ ೦

ಬೊಂಬಾಯಿಯ ಷಣ್ಮುಖಂ ನಗರದ ಕಾಂಗ್ರೆಸ್ ಅಧಿವೇಶನ ಏನನ್ನು ಸಾಧಿಸಿತು? ಮುಂದಿನ ಸಾರ್ವತ್ರಿಕ ಚುನಾವಣೆಗೆ ಅಭ್ಯರ್ಥಿಗಳನ್ನು ಆರಿಸಲು ಚುನಾವಣಾ ಸಮಿತಿಯೊಂದರ ಆಯ್ಕೆ ಮಾಡಿತು. ಗಡಿ ತಂಟೆಗಳ ಪರಿಹಾರಕ್ಕೆ ಏಕ ಸದಸ್ಯ ಆಯೋಗವೊಂದನ್ನು ನಿರ್ಮಿಸುವ ನಿರ್ಧಾರಕ್ಕೆ ಬಂದಿತು. ಉಳಿದ ಕಾರ್ಯಕ್ರಮಗಳು ಮಾಮೂಲಿನವು. ಮಾಮೂಲಿನಂತೆ ಅಧಿವೇಶನದ ವೇಳೆಯಲ್ಲಿ ಹೊರಗಡೆ ಕರಿನಿಶಾನೆ, ಮತಪ್ರದರ್ಶನವೂ ಇದ್ದುವು. ಮರಾಠಿಗಳ 'ಘಮು' (ಗೊಂದಲ)ನ ಪರಿಚಯ ಪ್ರಧಾನಿ ಇಂದಿರಾ ಗಾಂಧಿಯವರಿಗೆ, ತುಸುವೇನು, ಹೆಚ್ಚೇ ಬೇಸರವನ್ನು ತಂದಿತು.

ಕರ್ನಾಟಕದ ನೆಲವನ್ನು ಕಬಳಿಸುವ ಸಂಚು ಮರಾಠಿಗರದ್ದು. ಇದಕ್ಕಾಗಿಯೇ ಒಂದಲ್ಲ ನೂರು ಬಗೆಯ ಚಳುವಳಿಯನ್ನು ಅವರು ಮಾಡುತ್ತಲೇ ಬಂದಿದ್ದಾರೆ. ಆದರೆ, ಇವರ ಚಳವಳಿಯು ಗೊಂದಲ ಹಿಂಸೆಗಳಿಗೆ ಪ್ರೇರಕವೂ ಕಾರಣವೂ ಆಗುತ್ತಿದೆ. ದೇಸೂರ ಬಳಿಯ ರೇಲು ಅಪಘಾತದ ಹಿಂದೆ ಈ ದುರಾಗ್ರಹಿಗಳ ಕಿಡಿಗೇಡಿತನದ ಕೈವಾಡವೂ ಇದೆಯೆಂಬುದು ನಿಜವಾದರೆ, ಪುರುಷಾರ್ಥಸಾಧಕನಲ್ಲದೆ ಸ್ವಾರ್ಥ ಸಾಧನೆಗಾಗಿ ಇವರು ದಾನವತೆಯತ್ತಲೂ ವಾಲಲು ಸಿದ್ಧರೆಂದಂತಾಗುವುದು. ಈ ಪುಢಾರಿಗಳಿಗೆ ಕೆಲವು ಧುರೀಣರ ಕೃಪಾಶೀರ್ವಾದವು ಇದೆಯೆಂದ ಮೇಲೆ ಕಳ್ಳು ಕುಡಿದ ಮಂಗನಿಗೆ ಚೇಳು ಕಡಿದಂತೆಯೇ ಆಯಿತು. ಕರ್ನಾಟಕ—ಮಹಾರಾಷ್ಟ್ರ ಗಡಿಯಲ್ಲಿ ನಡೆಯುತ್ತಿರುವ ಎಲ್ಲ ದುರ್ಘಟನೆಗಳಿಗೂ ಈ ಪುಡಾರಿಗಳೇ ಕಾರಣ ಪುರುಷರು.

ಕರ್ನಾಟಕವು ಸಣ್ಣ ತರಹದ ಹೊಂದಾಣಿಕೆಯನ್ನು ಮಾಡಲು ಸಿದ್ಧವಿದೆ. ಬರಿಯ ಭಾಷೆಯ ತಳಹದಿಯಲ್ಲಿ ಮಾತ್ರವಲ್ಲ, ಆಡಳಿತೆ ವ್ಯವಸ್ಥೆ, ಸಂಚಾರ ಸೌಕರ್ಯ ನೀರಾವರಿ-ವಿದ್ಯುತ್ ಸೌಲಭ್ಯ ಮೊದಲಾದುವುಗಳನ್ನೂ ಗಮನದಲ್ಲಿಟ್ಟುಕೊಂಡು ಈ ಬಗೆಯ ಹೊಂದಾಣಿಕೆಯನ್ನು ಮಾಡಬೇಕು ಎಂದು ಕನ್ನಡಿಗರ ಆಶಯ. ಈ ಸಂಬಂಧದಲ್ಲಿ ರಾಜ್ಯದ ವಾರ್ತಾಶಾಖೆಯೊಂದು ಪುಸ್ತಿಕೆಯನ್ನು ತಯಾರಿಸಿ, ಅದನ್ನು ಎ ಐ ಸಿ ಸಿಯಲ್ಲಿ ಹಂಚಿದೆಯಂತೆ. ಇದು ನ್ಯಾಯೋಚಿತವಾದದ್ದು, ಪ್ರಶಂಸನೀಯವಾದದ್ದು.

ಅದೇನೇ ಇದ್ದರೂ ಸಾರ್ವತ್ರಿಕ ಚುನಾವಣೆಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ಸು ವಾತಾವರಣವನ್ನು ಕೆಡಿಸಲು ಸಿದ್ಧವಿಲ್ಲ. ಈಗಾಗಲೇ ದೇಶದ ಒಳಗೂ ಹೊರಗೂ ತಾಂಡವವಾಡುತ್ತಿರುವ ನೂರಾರು ಸಮಸ್ಯೆಗಳು ಆಡಳಿತೆಯನ್ನು ಶಿಥಿಲಗೊಳಿಸುತ್ತಿರುವಾಗ ಮತ್ತೂ ಹೆಚ್ಚಿನ ಗೊಂದಲಗಳಿಗೆ ನಾಂದಿ ಹಾಕಿಕೊಳ್ಳಲು ಅದಕ್ಕೆ ಇಷ್ಟವಿಲ್ಲ. ಆದುದರಿಂದ ಇಂದು ಅದು ಅನುಸರಿಸುವ ಮತ್ತು ಅನುಸರಿಸಲೇ ಬೇಕಾದುದು ಪಾರ್ಕಿಳಂ ನೀತಿ. ಮೊಣಕೈಗೆ ಬೆಲ್ಲ ಸವರುವುದು ಮಾತ್ರ. ಆದಕ್ಕೆಂದೇ ಗಡಿ ವಿವಾದ ಪರಿಹಾರಕ್ಕೆ ಏಕ ಸದಸ್ಯ ಆಯೋಗವನ್ನು ನೇಮಿಸಲು ಗೊತ್ತು ಮಾಡಿದುದು.

ಈ ಆಯೋಗ ನೇಮಕವಾಗುವುದು ಯಾವಾಗ? ನಿಜಲಿಂಗಪ್ಪನವರು ಹೇಳುವಂತೆ ಸಾರ್ವತ್ರಿಕ ಚುನಾವಣೆಗಳು ಮುಗಿದ ಮೇಲೆ....ಇದು ನಂಬಬಹುದಾದ ಮಾತು. ಕನ್ನಡಿಗರಿಗಂತೂ ಸಮಾಧಾನ; ಮರಾಠಿಗಳಿಗೂ ಸಾಂತ್ವನ. ಚುನಾವಣೆಗಳು ಮುಗಿದ ಬಳಿಕ ಮತ್ತೆ ಐದು ವರ್ಷ ಜೋತಾಡಲು ಬಲವಾದ ಜೋಕಾಲಿ ಯಾಗುವುದು—ಇದು.

—ರಾಶಿ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ:ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ· 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ· ಅಥವಾ
ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ·
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

ನವಂಸರಗ

16—6—1966

೧೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.
(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ಜಾನಕೀಪತಿ ರಾಮಚಂದ್ರ ಪದವಿಗಳಿಸಿದ ಆಲವಂತಿಯ ಅಸ್ತಿಪಾಸ್ತಿಗಳನ್ನು ಮಾರಿ ಶಿಬಿರ ಗುಮಾಸ್ತನಾಗಿ; ಸುದೈವದಿಂದ ಸರಕಾರದಲ್ಲಿ ಉನ್ನತ ಪದವಿಗೇರಿದ, ಕೀರ್ತಿಗಳಿಸಿದ.

ರಾಮುವಿನ ರೈತನಾಗಿದ್ದ ಮುರುಗ ಜಮೀನ್ದಾರನಾದ. ದುರ್ವ್ಯಸನಗಳಿಗೆ ಬಲಿಬಿದ್ದ ಊಟಿಗಾರರ ಯಜಮಾನನಾದ. ರಾಮುವಿನ ನೇತೃತ್ವದಲ್ಲಿ ಊಟಿಗಾರರೆಲ್ಲ ಸದ್ಗೃಹಸ್ಥರಾಗುವವರಿದ್ದರು.

ರಾಮುವಿನ ಮಿತ್ರ ಕೇದಾರಿ ಉದಯೋನ್ಮುಖ ವಕೀಲನಾದ. ಚುನಾವಣೆಯಲ್ಲಿ ಲೋಕಸಭೆಗೆ ಆಯ್ಕೆಯಾದ. ಆದರೆ, ಆತನ ಆಯ್ಕೆ ರದ್ದಾಯಿತು—ಆಕಾಶದಲ್ಲಿ ವಿಹರಿಸುತ್ತಿದ್ದ ಕೇದಾರಿ—ಪಾತಾಳಕ್ಕೆ ಕುಸಿದ. ಅನೇಕ ವರ್ಷಗಳ ಬಳಿಕ ಕೇದಾರಿ ರಾಮು ಒಬ್ಬರನ್ನೊಬ್ಬರು ಭೆಟ್ಟಿಯಾದರು.

ಮುಂದೆ—

ಊಟ ಮಾಡುತ್ತಿದ್ದಾಗ ಕೇದಾರಿ ಮೌನಿಯಾಗಿದ್ದನಲ್ಲದೆ ಉದಾಸೀನ ಮನೋಭಾವದಿಂದಿದ್ದನು. ಮೆದುಳು ಹಲವಾರು ಹಂಚಿಕೆಗಳನ್ನು ಹಾಕುತ್ತಿತ್ತು. ಕೈ ಮಾತ್ರ ಯಾಂತ್ರಿಕವಾಗಿ ಬಾಯಿಗೆ ಹೋಗುತ್ತಿತ್ತು. ಕೋಕಿಲಂ ಮಾತ್ರ ಎಲ್ಲರನ್ನೂ ಮುಗ್ಧರನ್ನಾಗಿಸುವ ಗೃಹಿಣಿ. ಬಡವರು ಸಿರಿವಂತರು ಇತ್ಯಾದಿ ಬೇದಭಾವನೆ ಅವಳ ಬಳಿ ಇಲ್ಲ. ರಾಮುವಿನ ಸಾನಿಧ್ಯವಂತೂ ಆಕೆಗೊಂದು ವೈಶಿಷ್ಟ್ಯಪೂರ್ಣ ಆನಂದವನ್ನಿತ್ತಿದೆ. ಆ ಆನಂದವನ್ನು ಹೆಣ್ಣು ಹೃದಯಕ್ಕೆ ಮಾತ್ರ ಉಚ್ಚರಿಸಲು ಗೊತ್ತು. ರಾಮು ಅತಿಥಿಯಾಗಿ ಬಂದು ತನ್ನ ಮನೆಯಲ್ಲಿ ತಂಗಿರುವದು ಆಕೆಗೆ ದೇವರೇ ಬಂದು ತಂಗಿದಂತಾಗಿದೆ. ಹೊಸ ಶ್ರದ್ಧೆ ಹಾಗೂ ಸಂತೋಷದಿಂದ ಆಕೆಯು ಗಾಳಿಯಲ್ಲೇ ಸಂಚರಿಸುವವಳ ಹಾಗಾಗಿದ್ದಳು. ಶ್ರದ್ಧೆ ಹಾಗೂ ಜಾಗ್ರತೆಯಿಂದ ಸ್ವತಃ ಆಕೆ ರಾಮುವಿಗೆ ಬಡಿಸಿದಳು.

ರಾಮುವಿನೊಟ್ಟಿಗೆ ಕುಳಿತುಕೊಂಡಿದ್ದ ಕೇದಾರಿಯಲ್ಲಿ ಐಂದ್ರಜಾಲಿಕ ಬದಲಾವಣೆಯಾಗಿರುವದನ್ನು ಅವನೇ ಕಂಡುಕೊಂಡನು. ತಿನ್ನುವದರಲ್ಲೂ ಅದೊಂದು ವಿಧದ ನೈಸರ್ಗಿಕ ಸುಖಪಡಗಿಕೊಂಡಿದೆ ಎಂಬುದವನ ಗಮನಕ್ಕೆ ಬಂತು. ಶ್ರೀಮಂತರ ಗಂಭೀರ ಮೌನವನ್ನು ಹಾಗೂ ಬಡವರ ಶಾಂತಪೂರ್ಣ ಸಹಾಯವನ್ನು ಯಾವಾಗಲೂ ರಾಮು ತಾತ್ವಿಕ ದೃಷ್ಟಿಯಿಂದ ನೋಡುತ್ತಿದ್ದನು. ಕೋಕಿಲಂ ಪ್ರೀತಿಯಿಂದ ಬಡಿಸುತ್ತ ಇದ್ದುದರಿಂದಲೂ ಉತ್ತಮ ಆಹಾರಗಳಿದ್ದುದರಿಂದ ರಾಮು ಊಟ ಬಹಳ ಚೆನ್ನಾಗಿದ್ದುದನ್ನು ಕಂಡುಕೊಂಡನು. ಊಟವಾದೊಡನೆ ರಾಮು ಮತ್ತು ಕೇದಾರಿ ಕಡಲು ಕರೆಗೆ ಹೋದರು.

ಮಕ್ಕಳ ಹಾಗೆ ಆಶ್ಚರ್ಯಪಡುವ ಗುಣ ಜಾನಕಿಯಲ್ಲಿನ್ನೂ ಇತ್ತು. ಮೈಲಾಪುರದ ಸಿರಿವಂತಿಕೆ ಹಾಗೂ ಭೋಗದ ಕುಂತು ಆಕೆ ಹದಿನೈದು ಶ್ರಮೂಂಕದ ಮುತ್ತುಮುದಲ ಬೀದಿಯಲ್ಲಿದ್ದಾಗ ಕೇಳಿದ್ದಳು. ಕೇದಾರಿಯ ಮನೆಯನ್ನು ಪ್ರಥಮ ಬಾರಿ ನೋಡಿದೊಡನೆ ಅವಳಿಗೆ ಆಶ್ಚರ್ಯವಾಗಿತ್ತು. ಅದರಲ್ಲೂ ಕೋಕಿಲಂಳನ್ನು ಕಂಡೊಡನೆ ಅವಳ ಆಶ್ಚರ್ಯ ಹೆಚ್ಚಾಗಿತ್ತು. ದನಸ್ಸಿನಂತಹ ಆಕೆಯ ದೇಹ, ಚಲನೆಯ ಚಂದ, ಮುದ್ದಾದ ಮುಖ, ಹಳ್ಳಿಗರ ಪರಿಪೂರ್ಣ ಹೃದಯ, ಸರಳ ಮಾತು ಹಾಗೂ, ಇತರ ವೈಶಿಷ್ಟ್ಯಗಳೆಲ್ಲವೂ ಜಾನಕಿಯನ್ನು ಒಂದು ಹೊಸ ಜಗತ್ತಿಗೆ ಒಯ್ದಿದ್ದುವು. ಸರಳ ಮೆಚ್ಚುಗೆಯಿಂದ ಕೋಕಿಲಂಳ ಮುಖವನ್ನೇ ಆಕೆ ನೋಡುತ್ತಿದ್ದಳು. ಅವಳ ಮಗಳು ಸೀತಾ ಕೂಡಾ ಕೇದಾರಿಯ ಮನೆಯ ವಿದ್ಯುದ್ದೀಪಗಳನ್ನು ಕಂಡು ಆಶ್ಚರ್ಯಚಕಿತಳಾಗಿದ್ದಳು.

ಊಟವಾದ ನಂತರ ಎಲೆ ಅಡಿಕೆಯನ್ನು ಹಾಕಿಕೊಳ್ಳುತ್ತಿದ್ದಂತೆ ಕೋಕಿಲಂ ಮಾತಿಗಾರಂಭಿಸಿದಳು. "ನಮ್ಮ ಈಗಿನ ಈ ಕಷ್ಟಕಾಲದಲ್ಲಿ ಸ್ನೇಹಿತನನ್ನು ಕಳುಹಿಸಿ, ದೇವರು ನಮ್ಮನ್ನು ಆಶೀರ್ವದಿಸುವರೆಂದು ನಾನು ಕನಸು ಕೂಡಾ ಕಂಡಿರಲಿಲ್ಲ."

'ನಿನಗೇನು ತೋಂದರೆ ಕೋಕಿಲಂ—ಮರದ ಮೇಲೆ ಹಾರಾಡುತ್ತಿರುವ ಪಕ್ಷಿಗೆ? ನಿನ್ನನ್ನು ತಿಳಿದುಕೊಳ್ಳಲು ನನ್ನಿಂದಾಗುವದಿಲ್ಲ. ಕೇದಾರಿಯವರೂ ಇದೇ ಧಾಟಿಯಲ್ಲಿ ಮಾತಾಡುತ್ತಾರೆ. ಈ ಭವ್ಯ ಅಲಂಕಾರಾದಿಗಳನ್ನು ಕಂಡಾಗ, ಪುನಃ ಪುನಃ ನೋಡುವಂತೆ ನನ್ನಲ್ಲಿ ಆಶೆ ಉಂಟಾಗುತ್ತಿರುವದನ್ನು ಕಂಡು ನನಗೆ ನಾಚಿಕೆಯಾಗುತ್ತದೆ. ವರ್ಚಸ್ಸು ಹಾಗೂ ರೂಪಿನಿಂದೊಡಗೂಡಿರುವ ನೀನು ರಾಣಿಯ ಹಾಗೆ ಕಂಗೊಳಿಸುತ್ತಿರುವೆ. ಕೋಕಿಲಂ, ನಿನಗ್ಯಾವದರ ಕೊರತೆಯೂ ಇಲ್ಲ. ವ್ಯಸನಾಕ್ರಾಂತ ಸ್ವರ ಹಾಗೂ ಆಶ್ಚರ್ಯಕರ ನೋಟಗಳಿಗೆ ನಿಮ್ಮಲ್ಲಿ ಆಶ್ರಯವೇ ಇಲ್ಲ. ನಾನು ನೋಡಿರುವ ಮನೆಗಳಲ್ಲಿ—ಸಂಪತ್ತು ಹಾಗೂ ಮಕ್ಕಳಿರುವ ಮನೆಗಳಲ್ಲಿ-ಇದೇ ಅತ್ಯುತ್ತಮದ್ದಿದೆ. ಕೇದಾರಿ ಅದೃಷ್ಟವಂತರಿದ್ದಾರೆ.'

"ಆದರೆ, ಪ್ರಿಯೆ ಜಾನಕಿ ಈ ಎಲ್ಲಾ ಬಾಹ್ಯ ಹೊಳಪು ಒಳಗಿನ ಅನೇಕ ಅಸಹ್ಯವಸ್ತುಗಳನ್ನು ಮರೆಮಾಚುತ್ತಿದೆ. ನಿನಗೆ ಪಟ್ಟಣವಾಸದ ವಿಷಯ ಗೊತ್ತಿಲ್ಲ. ಈ ಶ್ರೇಷ್ಠ ಜೀವನವು ಸುಳ್ಳು ಹಾಗೂ ತೋರಿಕೆಯದ್ದಿದೆ; ಹೂವಿನೊಳಗೆ ಕಣ್ಣಿಗೆ ಕಾಣದಂತೆ ಅಡಗಿಕೊಂಡಿರುವ ಕೊಳೆಯಂತಿದೆ ನಮ್ಮ ಜೀವನ. ಇಡೀ ಕಥೆಯನ್ನು ಈಗಲೇ ಬೇಕಾದರೆ ನಿನಗೆ ಹೇಳುತ್ತೇನೆ!"

"ಆ ರೀತಿಯ ಕಥೆಯನ್ನು ನಾನು ಕೇಳಲೇಬಾರದು. ನಿನ್ನೊಂದಿಗೆ ನಾನೀಗ ಬಹಳ ಸಂತೋಷದಲ್ಲಿದ್ದೇನೆ. ನಿನ್ನ ದುಃಖಮಯ ಕಥೆಯನ್ನು ಹೇಳಿ ಅದನ್ನು ಹಾಳುಗೆಡವ ಬೇಡ, ಕಣೇ. ನಾನು ಕೇದಾರಿಗೆ ದೂರದಿಂದ ತಂಗಿ ಬೀಳುತ್ತೇನೆಂಬ ವಿಷಯ ನಿನಗೆ ಗೊತ್ತಿರಬಹುದು."

'ಹೌದು, ಗೊತ್ತಿದೆ.'

'ನಾನು ಮತ್ತು ನನ್ನ ತಾಯಿ ಬಡತನದಿಂದ ನರಳುತ್ತ, ಸ್ನೇಹಿತರಿಲ್ಲದೆ, ಏಕಾಂಗಿ ಜೀವನವನ್ನು ನಡೆಸುತ್ತಿದ್ದಂತಹ ಸಮಯದಲ್ಲಿ ನನ್ನವರನ್ನು ದೊರಕಿಸಿಕೊಟ್ಟಿರುವ ಭಾಗ್ಯದೇವತೆ ಕೇದಾರಿ ಎಂಬುದು ನಿನಗೆ ತಿಳಿದಿರಬಹುದು."

"ಅದೂ ನನಗೆ ಗೊತ್ತಿದೆ. ಆದರೆ ಅದು ಕೇವಲ ಬದಲು ಇದೆ. ನನ್ನ ಸ್ವಾಮಿಯನ್ನು ರಾಮು ಗೊತ್ತುಪಡಿಸಿದ್ದಕ್ಕೆ ಬದಲಿಗೆ ಅವರು...."

"ಅದು ಹೆಚ್ಚು ಕಡಿಮೆ ಒಂದು ಅಪ್ರತ್ಯಕ್ಷ ರೀತಿ..."

ಆಗ ಸೀತೆ ಬಂದು ತಾಯಿಯೊಂದಿಗೆ ಸೇರಿಕೊಂಡಳು.

"ಅಮ್ಮಾ ಇದೆಷ್ಟು ಚೆಂದದ ಮನೆ! ಅಪ್ಸರೆಯರ ಲೋಕದಂತೆ ಎಲ್ಲೆಲ್ಲೂ ಪ್ರಕಾಶಿಸುತ್ತಿದೆ! ಇನ್ನು ಮುಂದಕ್ಕೆ ನಾವಿಲ್ಲೇ ಏತಕ್ಕೆ ಇರಬಾರದಮ್ಮಾ? ಎಲ್ಲಾ ಮಕ್ಕಳಿಗೂ ಸಾಕಾಗುವಷ್ಟು ಆಟದಗೊಂಬೆಗಳು ಇಲ್ಲಿವೆ. ನನ್ನ ಚಿಕ್ಕಮ್ಮನಿಗೆ ಒಂದು ಗೊಂಬೆ ಮೋಟಾರು ಕಾರನ್ನೇತಕ್ಕೆ ತೆಗೆದುಕೊಂಡು ಕೊಡಬಾರದು ಅದುಕ್ಕಾಗಿ ಅವನು ಅಳುತ್ತಿದ್ದಾನಲ್ಲಾ."

'ನಿನ್ನ ತಂದೆಯವರು ಶ್ರೀಮಂತರಿರುವದಿಲ್ಲ, ಸೀತಾ. ಅದೆಲ್ಲವನ್ನೂ ನೀನು ಪಡೆದುಕೊಳ್ಳಲು ಸಾಧ್ಯ ಇರುವದಿಲ್ಲ."

"ಯಾಕಮ್ಮಾ ಸಾಧ್ಯವಿಲ್ಲಾ? ಅವರಿಗೂ ಕೆಲಸದವರಿದ್ದಾರೆ. ಅಂಗಿಗಳಿವೆ, ಮೇಲಂಗಿಗಳಿವೆ ಅಲ್ಲದೆ ಕೈಯಲ್ಲಿ ಬೆತ್ತವೂ ಇದೆ. ಸಲಾಂ ಹೊಡೆಯಲು ಜನರೂ ಇದ್ದಾರೆ....'

'ತಂದೆಯವರು ಬಂದೊಡನೆ ಅವರೊಡನೆ ಕೇಳು."

"ಪ್ರಿಯ ಸೀತಾ, ಇವೆಲ್ಲಾ ನಿನ್ನವೇ ಇವೆ ಕಣೇ. ಅದನ್ನು ತೆಗೆದುಕೊಳ್ಳು; ಬೇಕಾದಷ್ಟನ್ನು ತೆಗೆದುಕೋ. ನೀನು ತಾಯಿಯನ್ನು ಕೇಳಬೇಕಾಗಿಲ್ಲ. ನಿನ್ನ ತಂದೆಯವರು ಪ್ರಪಂಚದಲ್ಲಿ ಅತ್ಯಂತ ಶ್ರೀಮಂತರಿದ್ದಾರೆ. ಸ್ವಲ್ಪವೂ ಕಷ್ಟಪಡದ ಸುಸ್ವರದಲ್ಲಿ ಕೋಕಿಲಂ ಹೇಳಿದಳು.

"ನಿಜ, ಅಪ್ಪ ಬಹಳ ಪಾಪ. ಆದರೆ ಅಮ್ಮ ಮಾತ್ರ ಯಾವಾಗಲೂ ವಿರೋಧಾಭಿಪ್ರಾಯ ಉಳ್ಳವರೂ, ಗೋಳುಗೊಳ್ಳುವವರೂ ಇದ್ದಾರೆ. ನನ್ನನ್ನು ಯಾವಾಗಲಾದರೂ ಚಿವುಟದಲ್ಲಿ ನಾನು ಹೋಗಿ ಅಪ್ಪನವರ ಬಳಿ ಬಿಕ್ಕಿ ಬಿಕ್ಕಿ ಹೇಳುತ್ತಿದ್ದೆ. ಅವರು ನನ್ನನ್ನೆತ್ತಿಕೊಂಡು, ತಲೆ ಅಥವಾ ಭುಜದ "ಮೇಲೆ ಮುತ್ತೀಯುವ ವರೆಗೂ ಬೆನ್ನು ತಟ್ಟುತ್ತಾರೆ."

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6¼
24 ತಿಂಗಳಿಂದ	36 ತಿಂಗಳ ಕೆಳಗೆ	6½
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Telephone 226.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೦	೧೬—೬—೧೯೬೬	No. 40

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಹಂಗೇರಿಯ ಟ್ರೇಡ್ ಯೂನಿಯನ್ ಆರೋಗ್ಯ ಕಾರ್ಯಕರ್ತರ ಎಮೆಚ್ಯೂರ್ ಡ್ಯಾನ್ಸ್ ಕ್ಲಬ್ ಇವರಿಂದ ಪ್ರದರ್ಶಿಸಲ್ಪಟ್ಟ ಚಕ್ರ ನೃತ್ಯದ ನೋಟ.

ಕೀರ್ತಿವೆತ್ತ ಸೇನಾಪತಿ

ಭಾರತದ ಭೂ ಸೇನೆಯ ಮಹಾ ದಂಡನಾಯಕರಾಗಿ ಅನುಪಮ ಸೇವೆ ಸಲ್ಲಿಸಿರುವ ಜನರಲ್ ಜಯಂತನಾಥ ಚೌಧರಿಯವರು ನಿವೃತ್ತರಾಗಿದ್ದಾರೆ. ಅವರ ಸ್ಥಾನವನ್ನು ಜನರಲ್ ಪದವಿಯೊಡನೆ ಲೆ| ಜ| ಕುಮಾರಮಂಗಲಂ ವಹಿಸಿಕೊಂಡಿದ್ದಾರೆ. ಶಾಂತಿಪ್ರಿಯ ದೇಶವೊಂದರಲ್ಲಿ ಸೇನೆಯ ಹೊಣೆಗಾರಿಕೆ ಅತ್ಯಂತ ಹಿರಿದಾದುದು. ಇಲ್ಲಿ ಸೇನಾನಾಯಕರಿಗೆ ಸಂಯಮದಿಂದ ವರ್ತಿಸಬೇಕಾಗುವುದು. ಪ್ರಜಾಪ್ರಭುತ್ವದ ಭದ್ರ ಪಂಚಾಂಗದಲ್ಲಿ ನಿಂತಿರುವ ಶಾಂತಿಪ್ರಿಯವಾದ ನಮ್ಮ ದೇಶದ ಸೇನೆಯು ಶಾಂತಿಸೇನೆಯೆಂದೂ ಒಪ್ಪುವುದು. ಆದರೆ, ನಮ್ಮ ಶಾಂತಿಯನ್ನು ಕೆಡಿಸಲು ಯಾರಾದರೂ ಆಕ್ರಮಣ ಮನೋಭಾವನೆ ತೋರಿಸಿದರೆ, ಆಗ ನಾವು ಹೋರಾಡಲೇ ಬೇಕಾಗುವುದು; ದೇಶದ ಸಮಗ್ರತೆ, ಏಕತೆ, ಭದ್ರತೆಗಳನ್ನು ರಕ್ಷಿಸಬೇಕಾಗುವುದು.

ಸ್ವಾತಂತ್ರ್ಯಕ್ಕೆ ಮೊದಲು, ದ್ವಿತೀಯ ಲೋಕ ಸಂಗ್ರಾಮದ ವೇಳೆ ಚೌಧರಿಯವರ ವ್ಯಕ್ತಿತ್ವ ಪ್ರಕಾಶಕ್ಕೆ ಬರತೊಡಗಿತು. ನಾನಾ ಸೈನಿಕ ಪದವಿಗಳಲ್ಲಿ ಇವರು ಶೋಭೆಯಿತ್ತರು. ದೇಶವು ಸ್ವಾತಂತ್ರ್ಯ ಪಡೆದ ಎಳೆಯಲ್ಲೇ ಹೈದರಾಬಾದ ರಜಕಾರರ ಸೊಕ್ಕನ್ನು ಅಣಗಿಸಲು ಕೈಕೊಂಡ ಪೋಲೀಸ್ ಕಾರ್ಯಾಚರಣೆಯ ನಾಯಕರಾಗಿ ಹೈದರಾಬಾದು ಸಂಸ್ಥಾನವನ್ನು ಭಾರತ ಒಕ್ಕೂಟದೊಳಗೆ ತರಲು ನೆರವಾದರು. ಮುಂದೆ, ಪೋರ್ಚುಗೀಸರ ಕಪಿಮುಷ್ಟಿಯಿಂದ ಗೋವಾ ದಮನ ಮತ್ತು ದಿವಿಗಳನ್ನು ವಿಮೋಚನೆಗೊಳಿಸಲು ನಡೆದ ಕಾರ್ಯಾಚರಣೆಯ ವೇಳೆ ಇವರು ದಕ್ಷಿಣ ವಿಭಾಗದ ಸೇನಾಪತಿಯಾಗಿ ಕಾರ್ಯಾಚರಣೆಯ ನಾಯಕ ಮೇ| ಜ| ಕ್ಯಾಂಡೆಥ್‌ರಿಗೆ ಸೂಕ್ತ ಮಾರ್ಗದರ್ಶನವಿತ್ತರು. ಕಳೆದ ಸಪ್ಟಂಬರದಲ್ಲಿ ಕಾಶ್ಮೀರದ ಮೇಲೆ ವಕ್ರದೃಷ್ಟಿಯಿಟ್ಟು ನಮ್ಮ ಪವಿತ್ರ ನೆಲದ ಮೇಲೆ ಆಕ್ರಮಣ ಮಾಡಿದ ಪಾಕಿಸ್ತಾನವನ್ನು ಬಗ್ಗಿಸಿದ ಮಹಾ ಶ್ರೇಯಸ್ಸು ಜ| ಚೌಧರಿಯವರಿಗೆ ಸೇರಿದ್ದು. ಅವರ ಅನುಭವ, ಮಾರ್ಗದರ್ಶನ, ಪ್ರಜ್ಞಾಶಕ್ತಿಗಳಿಂದಲೇ ಭಾರತದ ಕೀರ್ತಿ ಪತಾಕೆ ಮತ್ತೆ ವಿಂಧ್ಯ ಹಿಮಗಿರಿಗಳುನ್ನತಿಯ ಮೀರಿತು. ಅಮೆರಿಕೆಯ ಪ್ಯಾಟನ್ ಟಾಂಕುಗಳೆಲ್ಲವೂ ಧೂಳಿಧೂಸರಿತವಾದುವು. ಪಾಕ್ ಸರ್ವಾಧಿಕಾರ ಭಾರತದ ಪ್ರಜಾತಂತ್ರದ ಮುಂದೆ ತಲೆ ಬಾಗಲೇ ಬೇಕಾಯಿತು. ತನ್ನ ಕಿರೀಟಕ್ಕೆ ನವಿಲುಗರಿಯೇರಿಸಿರುವ ಜ| ಚೌಧರಿಯವರು ನಿವೃತ್ತರಾಗುವುದು ಸೇವಾ ನಿಯಮಗಳನ್ವಯ ಅನಿವಾರ್ಯವಾದದ್ದು. ಅದು ಅನಪೇಕ್ಷಣೀಯವಾದರೂ ಅನಿವಾರ್ಯ.

ಭಾರತವು ಜ| ಚೌಧರಿಯವರಿಂದ ತುಂಬ ಉಪಕೃತವಾಗಿದೆ; ಅವರಿಗೆ ಋಣಿಯಾಗಿದೆ. ಅವರ ಸೇವೆಯನ್ನು ಇನ್ನೂ ಪಡೆಯ ಬಯಸುತ್ತದೆ. ಜ| ಚೌಧರಿಯವರನ್ನು ಕೆನೆಡಾದಲ್ಲಿ ಭಾರತದ ಹೈಕಮಿಶನರರೆಂದು ನೇಮಕ ಮಾಡಲಾಗಿದೆ; ಅವರು ಕೆಲವು ದಿನಗಳಲ್ಲಿ ತಮ್ಮ ಹೊಸ ಹುದ್ದೆಯನ್ನು ಸ್ವೀಕರಿಸಲಿರುವರು. ಸೇನಾ ವಲಯದಲ್ಲಿ ಸೇವೆ ಸಲ್ಲಿಸಿದವರಿಗೆ ನಾಗರಿಕ ರಂಗದ ಹುದ್ದೆ ದೊರೆಯುವುದು ಕಡಿಮೆ. ಜ| ಶ್ರೀ ನಾಗೇಶ ಮೊದಲಾದ ಬೆರಳೆಣಿಕೆಯ ಕೆಲವರನ್ನುಳಿದರೆ ಇಂತಹ ನಿದರ್ಶನಗಳೂ ಇಲ್ಲ. ಆದರೆ, ಚೌಧರಿಯವರು ಕಾಮನ್‌ವೆಲ್ತಿನ ಹಿರಿಯ ಸದಸ್ಯ ಕೆನೆಡಾದಲ್ಲಿ ಭಾರತವನ್ನು ಪ್ರತಿನಿಧಿಸುವರು. ಹಲವಾರು ಗಂಡಾಂತರ—ಆಂತರಿಕ ಮತ್ತು ಬಾಹ್ಯಗಳ ನಡುವೆ ತೂಗುತ್ತಿರುವ ಭಾರತವು ಅವುಗಳಿಂದ ಮುಕ್ತವಾಗುವುದಕ್ಕೆ ಕಾಮನ್‌ವೆಲ್ತ್ ರಾಷ್ಟ್ರಗಳ ನೆರವೂ ಬೇಕಾಗಿದೆ. ಮುಖ್ಯವಾಗಿ ಆಹಾರ ಹಾಗೂ ವಿದೇಶ ವಿನಿಮಯದ ಕೊರತೆಗಳಿಗೆ ನಾವು ತಕ್ಷಣ ಉತ್ತರವರಿಸಬೇಕಾಗಿದೆ. ರಣರಂಗದಲ್ಲಿ ದೇಶದ ಗೌರವರಕ್ಷೆಯೆನಿಸಿದ ಚೌಧರಿ ನಾಗರಿಕ ರಂಗದಲ್ಲಿಯೂ ಹಾಗೇ ಅನಿಸಲಿ.

ಆದರ್ಶ ಪರಂಪರೆ ಹಾಕಿಕೊಟ್ಟ ಚೌಧರಿಯವರ ಉತ್ತರಾಧಿಕಾರಿ ಕುಮಾರಮಂಗಲಂ ಇವರೂ ಸೇನೆಯ ನಾನಾ ಹುದ್ದೆಗಳಲ್ಲಿದ್ದು ನುರಿತವರು. ಚೌಧರಿಯವರ ಗರುಡಿಯಲ್ಲಿಯೇ ಪಳಗಿದವರು. ದೇಶದ ಮುಂದೆ ಬರತಕ್ಕ ಆಹ್ವಾನ—ಅದು ಕೆಂಪು ಚೀನದಿಂದ ಇರಲಿ, ಪಾಕಿಸ್ತಾನದ ಕಡೆಯಿಂದ ಬರಲಿ, ಇಲ್ಲವೇ ಯಾವ ಮೂಲೆಯದೇ ಇರಲಿ—ವನ್ನು ಸಂತೋಷದಿಂದ ಸ್ವೀಕರಿಸಿ, ದೇಶದ ಗೌರವ ರಕ್ಷಣೆಯನ್ನು ಇವರೂ ಮಾಡುವರೆಂದು ದೃಢ ವಿಶ್ವಾಸದಿಂದ ಭಾರತೀಯರು ಕುಮಾರ ಮಂಗಲಂರಿಗೆ ಮಂಗಲ ಕೋರುತ್ತಾರೆ.

ಶಸ್ತ್ರಕ್ರಿಯೆ

ಇಲ್ಲ, ಇಲ್ಲವೇ ಇಲ್ಲ ಎಂದಿದ್ದ ರೂಪಾಯಿಯ ಅಪಮೌಲ್ಯ ತೀರ ಅನಿರೀಕ್ಷಿತವಾಗಿ ಬಂತು. ಭಾರತ ಸರಕಾರ ರೂಪಾಯಿಯ ಬಾಹ್ಯ ಮೌಲ್ಯವನ್ನು ಬಹಳಷ್ಟು ಕಳೆದು ಕೊಂಡಿತು (ಸೇ. ೩೬||) ಆಂತರಿಕ ಮೌಲ್ಯ ಇಳಿದಿಲ್ಲ, ನಿಜ—ಅಂಕೆ ಸಂಖ್ಯೆಗಳಲ್ಲಿ ಮಾತ್ರ. ಆದರೆ, ಬೆಲೆಯಲ್ಲಿ ನಮ್ಮ ಇಂದಿನ ರೂಪಾಯಿ ಹಿಂದಿನ ರೂಪಾಯಿಯ ಒಪ್ಪಕ್ಕೂ ನಿಲ್ಲುವುದಿಲ್ಲ— ಇದು ಇಂದು ಹುಟ್ಟಿದ ಕೂಸಿಗೂ ತಿಳಿದಿರುವ ಸತ್ಯ. ಬಾಹ್ಯ ಮೌಲ್ಯ ವಿಚ್ಛೇದನ ದೇಶದ ಆರ್ಥಿಕೋನ್ನತಿಗೆ ಅನಿವಾರ್ಯವಾಗಿತ್ತು, ಇದರಲ್ಲಿ ಯಾವ ವಿದೇಶೀಯರ ಕೈವಾಡ, ಪ್ರೇರಣಾ ಶಕ್ತಿಯಿಲ್ಲ—ಇಂದು ಸರಕಾರದ ಸಮರ್ಥಕರ ಅಂಬೋಣ. ಇದರಿಂದ ವಿದೇಶೀ ನೆರವು ನಮಗೆ ಅಧಿಕ ಸಿಗುವುದು, ಆಯಾತ ಕಡಿಮೆಯಾಗಿ ನಿರ್ಯಾತ ಹೆಚ್ಚುವುದು, ಸ್ವದೇಶಿ ಉದ್ದಿಮೆಗಳು ಬೆಳೆದು ನಿಲ್ಲುವುವು— ಇದು ಅವರ ನಿರೀಕ್ಷೆ. ಇವುಗಳೆಲ್ಲಾ ಎಷ್ಟು ಸಾಧುವೆಂದು ಈಗಲೇ ಹೇಳುವುದಕ್ಕಾಗುವುದಿಲ್ಲ. ಚಿನ್ನದ ಕಳ್ಳ ವ್ಯಾಪಾರ ತಡೆಗಟ್ಟಲು, ಜನಮೋಹವನ್ನು ಕಡಿಮೆ ಮಾಡಲು ಅದನ್ನು ನಿಯಂತ್ರಿಸಿದ್ದರ ಪರಿಣಾಮವೆಲ್ಲಿ ಮುಟ್ಟಿತು? ಇರಲಿ. ಸ್ವಯಂ ಕಾಂಗ್ರೆಸಿಗರಲ್ಲಿಯೇ, ಮಂತ್ರಿಗಳಲ್ಲಿಯೇ ಅಪ ಮೌಲ್ಯದ ಬಗ್ಗೆ ಭಿನ್ನಾಭಿಪ್ರಾಯವಿದೆ; ಅಸಮಾಧಾನವೂ ಇದೆ. ಭಾರತದ ರೂಪಾಯಿಯ ಮೇಲಾದ ಈ ಶಸ್ತ್ರಕ್ರಿಯೆ ಸುಖಾಂತವಾದರೆ ಚಿಂತೆಯಿಲ್ಲ; ಆದರೆ ಬದಲು...? ಆದರೆ, ಮನುಷ್ಯ ಸಾಯಲು ಸಿದ್ಧನಾಗಿಯೇ ಹುಟ್ಟಬೇಕು; ಮತ್ತೆ ಶಸ್ತ್ರಕ್ರಿಯೆಗೆ ಅಂಜಿದರೆ ಹೇಗೆ?

ವಚನ ಸುಧೆ

ಹಿಂಸಾ ಬಲಮಸಾಧೂನಾಂ
ರಾಜ್ಞಾಂ ದಂಡವಿಧಿರ್ಬಲಂ
ಶುಶ್ರೂಷಾತು ಬಲಂ ಸ್ತ್ರೀಣಾಂ
ಕ್ಷಮಾ ಗುಣವತಾಂ ಬಲಮ್॥

ಹಿಂಸೆಯು ದುರ್ಜನರ, ದಂಡನೆಯು ರಾಜರ, ಸೇವೆಯು ಸ್ತ್ರೀಯರ, ಕ್ಷಮೆಯು ಗುಣವಂತರ ಶಕ್ತಿಯಾಗಿದೆ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R E P 22/66
in O. S. 521/62

ಸಂಕಮ್ಮ ಸಹಾ—ಅರ್ಜಿದಾರರು
ಮತ್ತು
ಗುಣವತಿ ಸಹಾ—ಎದುರಿರು,

1ನೇ ಎದುರಿ ಗುಣವತಿ, ಸೇಸಮ್ಮನ ಮಗಳು, ಬೆಳ್ತಂಗಡಿ ತಾಲ್ಕು ಅಂಡಿಂಜೆ ಗ್ರಾಮದಲ್ಲಿರುವವಳು.

ದಾವಾ ಆಸ್ತಿಗೆ ಕೋರ್ಟು ರಿಸೀವರ್ ನೇಮಕವಾಗುವಂತೆ ಅರ್ಜಿದಾರರು ಮಾಡಿದ ಮೇಲಿನ ಅಮಲ್ದಾರಿಯು ತಾ. 27-6-1966 ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆದ್ದರಿಂದ ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಸದ್ರಿ ವ್ಯಾದೆ ದಿನ ಬೆಳಿಗ್ಗೆ 11ಗಂಟೆಗೆ ನೀವು ಸ್ವತಹಾ ಯಾ ವಕೀಲರ ದ್ವಾರ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರಿ ನೋಡಿ ಸದ್ರಿ ಅಮಲ್ದಾರಿಯನ್ನು ತೀರ್ಮಾನಿಸಲಾದೀತು.

N. J. KADAMBA
Advocate for Petitioner

ಬೆಳ್ತಂಗಡಿ, 9—6—66

ನರಸಣ್ಣನ ಸರಸ



"ಶಾಸಕರೆಲ್ಲಾ ಒಂದೊಂದು ಕಾರಣ ಹಿಡಿದು ರಾಜಿನಾಮೆ ಕೊಟ್ಟರೆ,...."

'ರಾಜಾಜಿ ಹೇಳಿದಂತೆ ನಿಷ್ಪಕ್ಷಪಾತವಾಗಿ ಚುನಾವಣೆ ನಡೆದೀತೆ?'

ಗೇಹರಾಜ್ಯದಲ್ಲಿ

ತಲೆಯ ಹೊಡೆದವ ಹುಣ್ಣಿಗೌಷಧಿ ಹಾಕುವನೆ?

"ಕೇಳಿದ್ರ್ಯಾ?"

'ಏನನ್ನ?'

"ಕನ್ನಡಿಗರು ಹತವೀರ್ಯರು ಹತಪೌರುಷರೂಂತ ದೂರ್ತಾ ಇದ್ರು...."

'ಹಾಗೆಲ್ಲಿ ಹೇಳ್ತಾರೆಯೆ? ಕನ್ನಡಿಗರಿಗಿರೋದು ಒಂದೇ ಬಿರುದು ನತದೃಷ್ಟರೂಂತ...'

"ವೀರ್ಯ ನಮ್ಮಲ್ಲಿದ್ರೆ ನಮ್ಮ ಅದೃಷ್ಟವನ್ನ ನಾವೇ ಬರೆಯ ಬಲ್ಲೆವು ನೋಡಿ.."

'ಬರಿಯ ವೀರ್ಯವಿದ್ರೆ ಸಾಲ್ದು...'

'ಮತ್ತೆ?'

'ಬರೆಯೋ ಅದೃಷ್ಟಾನೂ ಬೇಕು....'

"ಇದೇನು ಹೀಗೆ ನೀವೂ ಅದೃಷ್ಟವಾದಕ್ಕೆ ಹೊರಳುತ್ತೀರಿ?"

"ಎಲ್ಲ ವಾದಗಳಿಗಿಂತಲೂ ಮೇಲಿನದು ಅದು...."

'ಪೌರುಷವಾದದ ಪ್ರಥಮ ಪುರಸ್ಕರ್ತರಾದ ನೀವು ಅದೃಷ್ಟವಾದವನ್ನು ಬೆಂಬಲಿಸುವುದೆಂದರೆ..."

'ಘೋರ ನ್ಯಾಯ__"

'ಸರಿಯಾಗೇ ಹೇಳಿದ್ರಿ....'

'ಮತ್ತೆ ನಾನು ತಪ್ಪು ಹೇಳಿದ್ದಾದ್ರೂ ಯಾವಾಗ?"

"ನಿಲ್ಲಿ ಹೇಳ್ತೇನೆ...."

'ಇಷ್ಟು ದೂರ ನಡ್ಕೊಂಡು ಬಂದಿದ್ದಾನೆ, ಆಯಾಸವಾಗಿದೆ, ಆರಾಮವಾಗಿ ಒಂದೈದು ನಿಮಿಷ ಕೂತುಕೊಳ್ಳಿ ಅಂತ ಒಂದಿಷ್ಟು ದಯ, ಎಳ್ಳಷ್ಟು ಭಯ...."

'ಹೌದೌದು, ದಯ ಭಯ ಎಲ್ಲಾ ಇರೋದು ನಿಮಗೆ ಮಾತ್ರ...'

"ಆದ್ರೆಲ್ಲಾ ಪ್ರತ್ಯಕ್ಷ?"

"ಯಾರು?"

'ಮತ್ಯಾರು, ಭಾಗೀರಥಿ....'

'ಎಲ್ಲಿ?'

"ಅದನ್ನೂ ಹೇಳಬೇಕೆ?

'ಎಲ್ಲವನ್ನೂ ಹೇಳೋವ್ರಿಗೆ ಇದೇನು ಅವಾಚ್ಯವೆ?"

'ಹಾಗೇನೂ ಇಲ್ಲ ನೋಡು' ತುಂಬಿದ ಬಂಡಿಗೆ ಮೊರವೇನು ಭಾರವಾದೀತು?"

"ಅಜೀರ್ಣವಾದ ಹೊಟ್ಟೆಗೆ ಲಾಡುಭಾರವಾಗೋದಿಲ್ವೆ?"

'ಆ ಮಾತು ಬೇರೆ ಈ ಮಾತು ಬೇರೆ. ಈಗ ನೀನು ಹೇಳ್ಲೇಬೇಕೂಂತ ಚಂಡಿ ಹಿಡಿಯೋದಾದ್ರೆ...."

'ನಾನು ಚಂಡಿಯೂ ಹಿಡಿಯೋದಿಲ್ಲ ಹಿಂಡಿಯೂ ಇಡೋದಿಲ್ಲ...'

'ಅದು ಖರೆ. ನೀನು ಹಿಂಡಿಯೂ ಬಿಡೋದಿಲ್ಲ. ಹಿಂಡಿ ಹಿಪ್ಪೆಮಾಡಿ ಎಸೆದು ಬಿಡ್ತೀಯ. ಮರಾಠಿಗಳ ಹಾಗೆ...."

"ಆ ಮರಾಠಿಯವರ್ನ ದೂರವಿಡಿ. ಹೇಳಿ ಈಗಲಾದ್ರೂ ನಮ್ಮ ಕನ್ನಡಿಗರಲ್ಲಿ ಪೌರುಷ ಪ್ರವಾಹ ಏಕ್‌ದಂ ಹರಿಯ ತೊಡಗಿತಲ್ಲಾ'

"ಹ್ಞಾಂ, ತಡವಾಗಿಯಾದ್ರೂ ಮಳೆ ಸುರೀತೊಡಗಿತು. ಆದರೆ, ಈ ಮಳೆ ಹುಚ್ಚಾಗಬಾರದು; ಹರಿವ ನೆರೆಯೂ ಹುಚ್ಚುನೆರೆ ಆಗಬಾರದು. ಹೀಗೆ ಆದ್ರೆ ಕನ್ನಡಿಗರ ವೀರ್ಯ ಸಾತ್ವಿಕ ವೀರ್ಯವಾಗುವುದು..."

'ನೋಡಿ, ರಾಜನ್ಯರಿಪು ಪರಶುರಾಮನ ಕುಲದವರು ನಾವು. ಕಲಿಹನುಮನ ವಂಶಜರು ನಾವು..."

"ಸರಿಯಮ್ಮ, ನಮ್ಮ ವಂಶದವರೆಲ್ಲಾ ಹಿರಿಯರೇ, ದೊಡ್ಡವರೇ, ಪುರುಷಸಿಂಹರೇ ಹೌದು. ಆದರೆ ನಾವು? ಹತ್ತಿಯ ಬೀಜವನ್ನು ನೋಡಿ ಹತ್ತಿಗೆ ಬೆಲೆ ಕಟ್ತಾರೆಯೆ?"

ನಾವೂ ಅದರಂತೆಯೇ ವೀರರು ಎನ್ನುವುದನ್ನು ತೋರಿಸ ತೊಡಗಿದ್ದೇವೆಯಲ್ಲಾ...."

'ಹಾಗೆ ಹೇಳು. ನಮ್ಮ ಅಜ್ಜನ ಕಾಲದಲ್ಲಿ ನಾಲ್ಕು ಆನೆ ಸಾಕುತಿದ್ದರು, ಅಪ್ಪನ ಕಾಲದಲ್ಲಿ ಎಂಟು ಕುದುರೆಗಳು ಡಬ್ಬಿ ತುಪ್ಪ ಕುಡಿಯುತಿದ್ದವು. ಅಂತ ಪ್ರಶಸ್ತಿ ಓದಿದ್ರೆ ಏನು ಲಾಭ? ನಮ್ಮ ಗತಿ ನೋಡು, ಬಾಡಿಗೆ ಕೊಡೋಕೆ ದಿನ ತಡವಾದ್ರೆ ಆಗೋಳಿ ಮರದ ನೆರಳೇ ಗತಿ—ಅಲ್ಲಿಯೂ ನಮ್ಮ ಹಾಗೆ ಎಷ್ಟು ಜನ ಬರ್ತಾರೋ.... ಮತ್ತೆ ಉಳಿದದ್ದು..."

'ಅದು ಸರೀನ್ನಿ. ಆದೇನೇ ಇರ್ಲಿ, ಕನ್ನಡಿಗರ ಸತ್ಯಾಗ್ರಹ ಸುಳಧಾಳದಲ್ಲಿ ಆರಂಭವಾಯ್ತು...."

'ಹ್ಞಾಂ, ಅದು ಒಳ್ಳೆಯ ಆರಂಭ; ಅದು ಸ್ವಾತಂತ್ರ್ಯವೀರರ ಶ್ರೇಷ್ಠ ಸ್ಥಳ ಗಾಂಧೀಜಿಯವರ ಸತ್ಯಾಗ್ರಹದ ಕರ್ನಾಟಕದ ಕೇಂದ್ರವೂ ಹೌದು."

'ಹಾಗೇ ನೋಡಿ, ಈ ನ್ಯಾಯವಾದ ಹೋರಾಟದಲ್ಲಿ ಭಾಗವಹಿಸಲು ರಾಜ್ಯದ ಎಲ್ಲೆಡೆಯಿಂದ ಸ್ವಯಂ ಸೇವಕರು ಉತ್ಸಾಹದಿಂದಿದ್ದಾರೆ...."

'ಕನ್ನಡದ ಏಕೀಕರಣವನ್ನು ಸಂಪೂರ್ಣಗೊಳಿಸಲು ಕಾಲಪಕ್ವವಾಗುತ್ತ ಬಂದಂತೆ ಕಾಣುತ್ತವೆ ಅಲ್ಲವೆ?"

'ಮತ್ತೆಂಥದು? ಈ ಚಳವಳಿಯ ಗಾಳಿ ರಾಜ್ಯದ ಮೂಲೆಮೂಲೆಗೂ ಹರಡುತ್ತಿದೆ. ಕನ್ನಡಿಗರೂ ಅವರ ಸರಕಾರವೂ ಕನ್ನಡದಲ್ಲಿರುವ ಕನ್ನಡ ನೆಲವನ್ನು ಉಳಿಸಿಕೊಳ್ಳಲು, ಕನ್ನಡವಾಗಿದ್ದು ಕನ್ನಡದ ಹೊರಗಿರುವ ಕನ್ನಡದ ನೆಲವನ್ನು ಗಳಿಸಿಕೊಳ್ಳಲು ಇದೀಗ ಒಂದಾಗುತಿದ್ದಾರೆ...."

"ಹೌದೂನ್ನು. ರಾಜ್ಯ ಸಚಿವ ಸಂಪುಟವೂ ಒಂದು ತರಾ ಆಡುತ್ತಿದೆ...."

"ಅಂದರೆ?"

"ಸಾರ್ವತ್ರಿಕ ಚುನಾವಣೆಗಳ ನಂತರ ವೇಗಡೆ ಆಯೋಗ ನೇಮವಾಗಲೀಂತ.."

"ಅಲ್ರಿ, ನಮ್ಮ ಸತ್ಯಾಗ್ರಹ ಆಯೋಗದ ನೇಮಕಕ್ಕೇನೇ ಪ್ರತಿಭಟನೆ ವಿರೋಧ ವ್ಯಕ್ತಪಡಿಸಲು ಅಲ್ಲವೆ?'

'ಹೌದು...ರಾಜ್ಯ ಸರಕಾರಕ್ಕೆ ಪ್ರಾದೇಶಿಕ ಕಾಂಗ್ರೆಸ್ಸಿನಿಂದಲೂ ಹೆಚ್ಚು ಚುನಾವಣೆಯ ಚಿಂತೆ ಹತ್ತಿದಂತಿದೆ. ಗೋವೆಯ ಬಗ್ಗೆ...'

'ಅದು ನಿಮ್ಮ ಟೋಪಿಯವ್ರ ರೋಗ. ಅವ್ರು ಸರಕಾರದೊಳಗಿದ್ದರೂ ಟೋಪಿಯವ್ರು ತಾವು ಅನ್ನೋದನ್ನ ಮರೆಯೋದಿಲ್ಲ...."

"ಅದು ಹ್ಯಾಗಮ್ಮ ಮರೆಯೋದು!"

'ಇರ್ಲಿ, ಆ ಬಗ್ಗೆ ಚರ್ಚೆಯಾಕೆ? ಅದ ಹೇಳಿ, ಈ ಚಳವಳಿಯ ಭವಿಷ್ಯ..."

'ಭವಿಷ್ಯ ಹೇಳೋಕೆ ಜ್ಯೋಯಿಸರಲ್ಲಿ ಹೋಗಬೇಕು...."

"ಅದು ನೀವು ಹೇಳೋದು ಬೇಡ, ಹೇಳಿ, ನಮ್ಮ ಹೋರಾಟ ನ್ಯಾಯವಾದುದು ಹೌದೇ ಅಲ್ಲವೆ?'

'ನಮಗೆ ನಮ್ಮದು ನ್ಯಾಯ....'

'ಮತ್ತೆ...'

"ನೋಡು, ಮರಾಠಿಗರೂ ಇದೇ ಮಾದರಿಯ ಸತ್ಯಾಗ್ರಹ ಆರಂಭಿಸಿದರೆ—ಆರಂಭಿಸುತ್ತಾರೆ—ಆಗ..."

"ಅವರದ್ದು ಅನ್ಯಾಯ....'

"ಅದು ತಪ್ಪು. ಅವರಿಗೆ ಅವರದ್ದು ನ್ಯಾಯ....'

"ಹಾಗಾದರೆ ಇದಕ್ಕೆ ಪರಿಹಾರ?"

"ಪರಿಹಾರ? ಮರಾಠಿಗರೂ ಕನ್ನಡಿಗರೂ ಯಾವುದಾದರೊಂದು ಒಮ್ಮತಕ್ಕೆ ಬರಬೇಕು. ಅದಕ್ಕೆ ತಕ್ಕಂತೆ ನಡೆದುಕೊಳ್ಳಬೇಕು....'

"ಅದು ಆಗದ ಮಾತು. ಕಾರವಾರ, ಬೆಳಗಾವಿಯನ್ನೇ ನುಂಗೋ ಆಸೆಗಣ್ಣು ಅವರದ್ದು. ಗೋವೆಯನ್ನೂ ಜೀರ್ಣಿಸುವ ಶಕ್ತಿಯಿದೇಂತ ಬಡಾಯಿ ಅನ್ನುವವರು ಅವರು. ನಾವು ಹಾಗೇನೂ ಇಲ್ಲ. ಸಣ್ಣಪುಟ್ಟ ಹೊಂದಾಣಿಕೆಗೆ ಸಿದ್ಧರೇ ಇದ್ದೇವೆ.."

"ಅದೇ ಸರಿ. ಸಂಧಿ—ಒಡಂಬಡಿಕೆ ಸಮಬಲರಲ್ಲಿ, ಸಮಾನರಲ್ಲಿ ನಡೆಯುತ್ತದೆ. ಕೈ—ಕೈ ಒಂದುಗೂಡುತ್ತವೆ. ಕೈ ಮತ್ತು ಕಾಲುಗಳು ಒಂದಾಗುವುದುಂಟೆ?

'ಹಾಗಾದರೆ, ಇದಕ್ಕೆ ಪರಿಹಾರ?"

'ಪರಿಹಾರ ನೀವು ಹೇಳ್ಬೇಕು....'

"ಅಂದ್ರೆ..."

"ಈಗ ನಮ್ಮನ್ನ ಯಾರು ಹೇಳ್ತಾರೆ?"

'ಮತ್ತೆ ನಮ್ಮನ್ನ....'

"ಈಗ ಎಲ್ಲಿ ಹೋದ್ರೂ ನಿಮ್ಮದೇ ಕಾರುಭಾರ...."

'ಅರ್ಥವಾಗಿಲ್ಲ...."

"ಪಾಪ, ನಮ್ಮವ್ರು, ನಮ್ಮವ್ರೂಂತ ಹೇಳಿಕೊಳ್ಳೋಕೆ ಭಾರಿ ಆಸನ. ಆದ್ರೆ ಸಮಸ್ಯೆ ಮುಂದೆ ಬಂದಾಗ ಪರಿಹಾರ ಹೇಳೋಕೆ ಯಾಕೆ ಮುಚ್ಚುಬಾಯಿ?'

"ಏನು ಹೇಳ್ತೀರಾ ನೀವು....'

'ದೇಶ ಆಳೋ ಕೈ ಇವತ್ತು ನಿಮ್ಮದು...'

'ಹೋ... ಹಾಗೆ.... ನಮ್ಮ ಇಂದಿರಾನ ಕುರಿತು ಹೇಳ್ತಾ ಇದ್ದೀರಿ ಅಲ್ವೆ'

"ಮತ್ಯಾರ ಬಗ್ಗೆ? ಈ ಸಂಬಂಧದಲ್ಲಿ ನಿರ್ಣಯಕ್ಕೆ ಬರೋದು ಅವರಿಗೆ ಸೇರಿದ್ದು. ನಿನ್ನ ಉಡಿಯಲ್ಲಿ ಏನಾದ್ರೂ ಪರಿಹಾರದ ಬೀಜ ಇದ್ರೆ ಕಳ್ಸಿಕೊಡು...ತಲೆಗೆ ಹೊಡೆದವನು ಹುಣ್ಣಿಗೆ ಔಷಧವಾದ್ರೂ ಹಾಕಲಿ....'

'ಅದೂ ಅಶಕ್ಯ. ನಾವು ಕಳ್ಸಿಕೊಡೋದು ರೇಲಿನಲ್ಲಿ. ಅದನ್ನ ನಡುವೆ ತಡೆಯೋದು....'

"ಒಂದು ನೆನಪಿರ್ಲಿ. ನಾವು ತಡೆಯೋದು ಮಾತ್ರ, ಲೂಟಿ ಮಾಡೋದಿಲ್ಲ. ಒಂದು ವೇಳೆ ಧೈರ್ಯಬಾರದಿದ್ರೆ ವಿಮಾನ ಮೂಲಕ ಕಳ್ಸಿ ಬಿಡು....'

(ಹದಿಮೂರನೇ ಪುಟ ನೋಡಿರಿ)

ಜಿಲ್ಲೆಯ ರೈತರಿಗೆ ನಮ್ಮ ಕಾಣಿಕೆ..........

ತ್ಯಾಚುಂಗ್—65 ಭತ್ತದ ತಳಿ

ಹೊಲ ಗದ್ದೆಗಳಲ್ಲಿ ದುಡಿಯುವ ರೈತರೇ ದೇಶದ ಸಂಪತ್ತಿನ ಉತ್ಪಾದಕರು. ರೈತರ ಸಂಪತ್ತನ್ನು ಹೆಚ್ಚಿಸುವ ನಮ್ಮ ಹಂಬಲದ ಪ್ರತೀಕವೆನಿಸಿದೆ—'ತ್ಯಾಚುಂಗ್—65.'

ಈ ಹೊಸ ಭತ್ತದ ತಳಿಯನ್ನು ಉಪಯೋಗಿಸಿಕೊಂಡು ರೈತರು ತಮ್ಮ ಸಂಪತ್ತನ್ನು ಬಹು ಸುಲಭವಾಗಿ ದ್ವಿಗುಣಗೊಳಿಸಲು ಸಾಧ್ಯ. ಇದರಿಂದ ತಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಣೆಯಲ್ಲದೆ, ದೇಶದ ಮುಂದಿರುವ ಆಹಾರ ಸಮಸ್ಯೆಯನ್ನು ಬಿಡಿಸುವುದರಲ್ಲೂ ಸಹಭಾಗಿಯಾಗುವ ಸುಸಂದರ್ಭ.

ಸಾಗುವಳಿ ಯೋಗ್ಯ ಭೂಮಿ, ಸಾಕಷ್ಟು ಅನುಭವ ಮತ್ತು ಸಾಮರ್ಥ್ಯ ಇವು ಕೆಲವು ನಮ್ಮಿಂದ ಸಾಲ ಪಡೆಯುವರೆ ನಿಮ್ಮಲ್ಲಿರ ಬೇಕಾದ ಅರ್ಹತೆಗಳು.

ಉತ್ತಮ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಖರೀದಿ, ಬೀಜ ಉತ್ಪಾದನಾ ಕೃಷಿ, ಜಮೀನು ಅಭಿವೃದ್ಧಿ ಕಾರ್ಯಗಳು, ನೀರಾವರಿ ವ್ಯವಸ್ಥೆ ಮತ್ತು ಪಂಪುಸೆಟ್ಟುಗಳ ಖರೀದಿ, ಉಳುಮೆ ಯಂತ್ರ ಮತ್ತಿತರ ಯಾಂತ್ರಿಕ ಉಪಕರಣಗಳ ಖರೀದಿ, ಪಶು ಸಂಗೋಪನೆ ಮತ್ತು ಕೋಳಿ ಸಾಕಣೆ– ಈ ಉದ್ದೇಶಗಳಿಗಾಗಿ ಸಾಲ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಗೆ ಭೇಟಿ ಕೊಡಿರಿ.

ಕೃಷಿ ಆರ್ಥಿಕ ನೆರವಿನ ವಿಭಾಗ,

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಸಾರಸ್ವತ ಲೋಕ

...ಂದಿದೆಯ ಶರಣ ಸಾಹಿತ್ಯ

ಬರೆದವರು:
ಶ್ರೀ ಸ. ನಾರಾಯಣ

ಕ್ರಿ. ಶ. ೧೨ನೆಯ ಶತಮಾನ ಕನ್ನಡ
ಡಿನ ಇತಿಹಾಸದಲ್ಲಿ ಪರ್ವ ಕಾಲ.
ಜಕೀಯ, ಸಾಮಾಜಿಕ, ಧಾರ್ಮಿಕ
ವನದಲ್ಲಿ ಹೊಸ ಬೆಳಕು—ಭಾವನೆ
ಮೂಡಿ ನೆರೆದ ಕಾಲ. ಅಲ್ಲಿಯ ವ
ಸಂಪ್ರದಾಯದ ಜಾಡಿನಲ್ಲಿಯೇ ನ
ಬಂದ ಸಾಹಿತ್ಯವೂ ಧರ್ಮದಂತೆ
ಸ ಸ್ವರೂಪ ತಾಳಿತು, ಧಾರ್ಮಿಕ
ಂತಿಯಂತೆಯೇ ವಿಚಾರ ಕ್ರಾಂತಿ
ಆಯಿತು. ನವೀನ ಸಾಹಿತ್ಯ ಒಂ
ಹೊಸ ರೂಪು ತಾಳಿ ಹೊಸ ಸಂಪ್ರ
ಯವನ್ನು ಬಳಕೆಗೆ ತಂದಿತು. ಇದು
ಣ ಸಾಹಿತ್ಯ, ಶಿವಶರಣರ ಸಾಹಿತ್ಯ,
ಶೈವ ವಾಙ್ಮಯ.

ಧರ್ಮ—ಸಾಹಿತ್ಯ ಕೇವಲ ಕಲಿತವರ
ಸತ್ತಾಗಿ, ಒಂದೇ ಜನಾಂಗದ ಅಧಿ
ರಕ್ಕೆ ಒಳಪಟ್ಟಿದ್ದುದು, ಜನಸಾಮಾನ್ಯ
ಸಮಾನ ಸ್ವಾತಂತ್ರ್ಯ— ಅಧಿಕಾರ
ಲ್ಲದಿರುವುದು ಸಮಾಜದಲ್ಲಿ ಹೊಸ ಬ
ಸಂಪ್ರದಾಯಕ್ಕೆ ಅವಕಾಶ ಮಾಡಿ
ಟ್ಟಿದ್ದು ಅನಿವಾರ್ಯ.

ಹನ್ನೆರಡನೆಯ ಶತಮಾನದ ವರೆಗೆ
ವಲ ಕೆಲವರ ಸ್ವತ್ತಾಗಿದ್ದ ಧರ್ಮ,
ಹಿತ್ಯ ಅಲ್ಲಿಂದ ಮುಂದೆ ಸಾರ್ವಜನಿ
ಜನ ಸಾಮಾನ್ಯರ ಧರ್ಮ-ಸಾಹಿತ್ಯ
ಗಿ ಮಾರ್ಪಾಟಾದುವು. ಜನ ಮನೋ
ಕಾಸ ಮತ್ತು ಸಮಾಜದ ಉದ್ಧಾರಕ್ಕೆ
ಗತ್ಯವಾದ ಶ್ರೇಷ್ಠತಮ ಜನತಾಸಾಹಿ
ಮೊದಲಿಗೆ ವೀರಶೈವ ವಚನಕಾರ
ದ ಬೆಳೆಯಿತು.

ಕನ್ನಡನಾಡಿನ ಜನಜೀವನದ, ಸಮಾ
ದ, ಧರ್ಮದ, ಸಾಹಿತ್ಯದ ಒಳ ಕೋಣೆ
ನ್ನು ಪ್ರವೇಶಿಸಿ, ಶುಚಿಗೊಳಿಸಿ ಶುಭ್ರ
ಳಿಸಿದವರು ಮೊದಲಿಗೆ ವೀರಶೈವ ವ
ನಕಾರರು (ಶರಣರು) ಅನಂತರ ಹರಿ
ಸ ಪಂಥದವರು. ಹರಿಯೇ ಸರ್ವೋ
ಮ. ಹರಿಸೇವೆಯೇ ಶ್ರೇಷ್ಠ ಎಂದು
ಳಿದ ತತ್ವವನ್ನೇ ಮೊದಲಿಗೆ ಶಿವಶರಣ
ಶಿವನೇ ಶ್ರೇಷ್ಠ, ಜಗತ್ತು ಶಿವನ ಆ
ಂಬಲ ಎಂದು ಶಿವನನ್ನು ತ್ರಿಕರಣ
ರ್ವಕವಾಗಿ ಆರಾಧಿಸಿ ಹೇಳಿದರು.
ಶರಣರಿಂದ ಅನಂತರ ಹರಿದಾಸರಿಂದ
ಡಿನ ಇತಿಹಾಸದಲ್ಲಿ ಮತ್ತೊಂದು ಹೊ
ಅಧ್ಯಾಯ ಒಂದು ಆರಂಭವಾಯಿತು.
ಮಾನವನ ಮನೋಭಾವನೆಯನ್ನು,
ನ ಸಂಸ್ಕಾರ ಸಂಸ್ಕೃತಿಗಳನ್ನು ಉ
ವಿಚಾರ ಶ್ರೇಣಿಗೆ ಕರೆದೊಯ್ಯಲು
ಗ್ಯವಾದ ಸಾಹಿತ್ಯ ಶ್ರೇಷ್ಠ ಸಾಹಿ
ಆ ಬಗೆಯ ಉನ್ನತ ಮಟ್ಟದ ಸಾ
ವಚನ ಸಾಹಿತ್ಯ. ಉನ್ನತ ಮಟ್ಟ
ತತ್ವಗಳನ್ನು, ಆಚಾರ-ವಿಚಾರಗಳ
ಜನ ಮನ ಮುಟ್ಟುವಂತೆ ಮೊದ
ಸಾರಿದ ಕೀರ್ತಿ ಶರಣ ಸಾಹಿತ್ಯಕ್ಕೆ
ಲ್ಲುತ್ತದೆ.

ಈಶ್ವರನೇ ದೇವರು, ಶರಣರೇ ಅವ
ನ ಪ್ರಿಯ ಭಕ್ತರು. ಈಶ್ವರ ಮತ್ತು ಅವ
ನ ಶರಣರ ಹೊರತು ಅನ್ಯರನ್ನು ಸ್ತುತಿಸ
ಬಾರದು ಎಂಬ ಕಟ್ಟುನಿಟ್ಟಿನ ಸಂಪ್ರದಾ
ಯವನ್ನು ಅನುಸರಿಸಿದವರು ವೀರ
ಶೈವ ಸಾಹಿತಿಗಳು. ಅವರಿಗೆ ಭವ ದೇ
ವರು. ಶರಣ ಪ್ರತ್ಯಕ್ಷ ದೇವರು.

ಶರಣ ಸಾಹಿತ್ಯಕ್ಕೆ, ವೀರ ಶೈವ ಧ
ರ್ಮಕ್ಕೆ ಪ್ರತಿ ಭಾ ವಂ ತ ತೇಜಸ್ಸನ್ನು,
ಸ್ವಶಕ್ತಿಯನ್ನು ತಂದು ಕೊಟ್ಟವರು ಬಸ
ವಣ್ಣನವರು. ಶಕ್ತಿಹೀನತೆಯಿಂದ ಮೂ
ಢ ಸಂಪ್ರದಾಯಗಳ ಕೋಟೆಲೆಯಿಂದ
ಮೂಲೆಗುಂಪಾಗಿದ್ದ ವೀರಶೈವ ಧರ್ಮ
ವನ್ನು ನಿಷ್ಠೆ, ಶ್ರದ್ಧೆ, ಸತ್ವಗಳಿಂದ ಬಸವ
ಣ್ಣನವರು ಬೆಳೆಸಿದರು—ಬೆಳಗಿಸಿದರು.

ಜನತೆಯ ಉದ್ಧಾರಕ್ಕೆ ಸಮಾಜದ ಏ
ಳಿಗೆಗೆ, ಧರ್ಮದ ಅರ್ಥವ್ಯಾಪ್ತಿಗೆ ಆಗ
ತ್ಯವಾದ ವಿಷಯಗಳನ್ನು ಆಡಿದ ರೀತಿಯ
ಲ್ಲಿಯೇ ಅನುಸರಿಸಿ ಅವನ್ನು ಜನಸಾಮಾ
ನ್ಯರ ಅಂತರಂಗದಲ್ಲಿ ಅರಿವಾಗುವಂತೆ
ಬೋಧಿಸಿದವರು ಬಸವಣ್ಣನವರು. ಅವ
ರ ಕಾಲದಲ್ಲಿ ಧಾರ್ಮಿಕ ಜೀವನ ವಿಚಾ
ರ ಪೂರ್ಣ ಸಾಹಿತ್ಯ ಹುಲುಸಾಗಿ ಬೆಳೆ
ಯಿತು. ಈ ಸಾಹಿತ್ಯದ ಸಿರಿಬೆಳೆಯೇ ಶ
ರಣ ಸಾಹಿತ್ಯದ ಮೊದಲ ಹಂತ.

ಬಸವಣ್ಣನವರಿಗೆ ಪೂರ್ವದಲ್ಲಿಯೂ
ಮತ್ತು ಅನಂತರದಲ್ಲಿಯೂ ವೀರಶೈವ
ಸಾಹಿತ್ಯ ನಾಡಿನಲ್ಲಿ ಪ್ರಭಾವ ಬೀರಿ ಬೆಳೆ
ದಿತ್ತು—ಉಳಿದಿತ್ತು. ಆದರೆ ಅವರ ಕಾಲ
ದಲ್ಲಿ ಅದಕ್ಕೊಂದು ಸ್ಥಾನ ದೊರೆಯಿತು.
ಅದರ ಪ್ರಭಾವಕ್ಕೆ ಪ್ರಾಶಸ್ತ್ಯ ದೊರೆ
ಯಿತು.

ಶರಣ ಸಾಹಿತ್ಯಕ್ಕೆ ಆದ್ಯರು ಬಸವಣ್ಣ
ನವರಲ್ಲ. ಆದರೆ ಶರಣಸಾಹಿತ್ಯಕ್ಕೆ ಅವರ
ಸೇವೆ-ಕೊಡುಗೆ ಅಲ್ಪವಲ್ಲ. ಶಿವಶರಣರು
ದೇವ ಭಾಷೆಯಾದ ಸಂಸ್ಕೃತದ ಅಂತರಾ
ರ್ಥ, ತತ್ವಗಳನ್ನು ಧಾರ್ಮಿಕ ಸಂಗತಿಗ
ಳನ್ನು ಅರಿತಿದ್ದರೂ ಜನಸಾಮಾನ್ಯರಿಗೆ ಅ
ರಿವಾಗುವಂತೆ ಬೋಧಿಸಲು ನಾಡಿನ ಜನ
ತೆಯ ತಾಯ್ನುಡಿಯನ್ನು ಬಳಸಿಕೊಂಡು
ದು ಇಲ್ಲಿಯ ವೈಶಿಷ್ಟ್ಯ.

ವೀರಶೈವ ಸಾಹಿತ್ಯದ ಪ್ರಾಕಾರದಲ್ಲಿ
ಕಾಣ ಬರುವ ವಚನ ಸಾಹಿತ್ಯ ವಿನೂ
ತನ ಸ್ವರೂಪ ತಾಳಿ ಬೆಳೆದುದು ಬಸವ
ಣ್ಣನವರ ಕಾಲದಲ್ಲಿ ಎಂಬುದು ನಿರ್ವಿ
ವಾದ ಸಂಗತಿ. ಅವರಿಗೆ ಪೂರ್ವದಲ್ಲಿ
ಅಂದರೆ ೧೦ನೆಂರಲ್ಲಿ ಜೇಡರ ದಾಸಿಮ
ಯ್ಯ, ಮೆರೆ ಮಿಂಡಯ್ಯ, ಒಬ್ಬ ಬಾಚ
ಯ್ಯ, ವಲೇಶ್ವರದ ಕೇಶಯ್ಯ, ಆದಯ್ಯ,
ಹಾವಿನ ಹಳ್ಳ ಕಲ್ಲಯ್ಯ ಎಂಬ ಮೊದ
ಲಾದ ವಚನಕಾರರು ಅನೇಕ ವಚನಗ
ಳನ್ನು ರಚಿಸಿದ್ದುದಾಗಿ ತಿಳಿಯ ಬರು
ತ್ತದೆ. ಇವರೆಲ್ಲರಲ್ಲಿ ಜೇಡರ ದಾಸಿಮಯ್ಯ
ನಿಗೆ ವಿಶೇಷ ಸ್ಥಾನ. ಬಸವಣ್ಣನವರು ಸಹ
ಇವರ ವಚನಗಳಿಂದ ಪ್ರಭಾವಿತರು ಎಂ
ಬುದನ್ನು ಇಲ್ಲಿ ಸ್ಮರಿಸಬಹುದು. ಜೇಡರ
ದಾಸಿಮಯ್ಯ ಇತಿಹಾಸ ಪ್ರಸಿದ್ಧ ವ್ಯಕ್ತಿ.
ಧರ್ಮದ ಕೆಚ್ಚು, ಸಾಹಿತ್ಯದ ಹುಚ್ಚು,
ಈತನಿಗೆ ಹೆಚ್ಚು ಎಂಬುದು ಕೆಲವು ಆಧಾ
ರಗಳಿಂದ ತಿಳಿದು ಬರುತ್ತದೆ. ಮೊದಲನೆ
ಯ ಚಾಲುಕ್ಯ ಅರಸ ಜಯಸಿಂಹನ ಪ
ಟ್ಟ ಮಹಿಷಿ ಸುಗ್ಗಲಾ ದೇವಿಯ ಗುರು
ವಾಗಿದ್ದ ದಾಸಿಮಯ್ಯ ದೊರೆಯ ಆಸ್ಥಾನ
ದಲ್ಲಿ ಜೈನ ಪಂಡಿತರೊಂದಿಗೆ ವಾದ ಮಾ
ಡಿ ವೀರಶೈವ ಧರ್ಮ ಸರ್ವ ಶ್ರೇಷ್ಠ ಧ
ರ್ಮ ಎಂದು ನಿರೂಪಿಸಿ ಅರಸನನ್ನು ವೀರ
ಶೈವ ಧರ್ಮಕ್ಕೆ ಪರಿವರ್ತಿಸಿದಂತೆ ನಂಬಿ
ಕೆ ಇದೆ.

ಜೇಡರ ದಾಸಿಮಯ್ಯನವರ ಎಲ್ಲ ವ
ಚನಗಳೂ 'ರಾಮನಾಥಾ' ಎಂಬ ಅಂಕಿ
ತದಲ್ಲಿವೆ. ಇವರ ವಚನ ಸಂಪ್ರದಾಯ
ವೇ ಬಸವಣ್ಣನವರ ವಚನ ರಚನೆಗೆ
ಮಾರ್ಗದರ್ಶನ ನೀಡಿರಬಹುದೆಂಬುದು
ಖಚಿತ. ಬಸವಣ್ಣನವರು ಮಹಾ ಕಾವ್ಯ
ರಚನೆಗೆ ಕೈ ಹಾಕಲಿಲ್ಲ. ನೂತನ ಸಂಪ್ರ
ದಾಯವನ್ನು ಸಾಹಿತ್ಯ ಕ್ಷೇತ್ರದಲ್ಲಿ ಬಳ
ಕೆಗೆ ತರಬೇಕೆಂದು ಇಚ್ಛಿಸಲಿಲ್ಲ. ತಮ್ಮ
ಅನುಭವಗಳನ್ನು ಆಧ್ಯಾತ್ಮಿಕ ತತ್ವಗ
ಳೊಂದಿಗೆ ಸೇರಿಸಿ ಜನಸಾಮಾನ್ಯರ ಭಾ
ಷೆಯಲ್ಲಿ ಹೇಳಿದರು. ಅವು ವಚನಗಳಾಗಿ

(ಹನ್ನೆರಡನೇ ಪುಟ ನೋಡಿರಿ)

ವಿಜಯಾ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಚೇರಿ: "ವಿಜಯಾ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರಸ್ತೆ — ಮಂಗಳೂರು-3

ಮೈಸೂರು, ಕೇರಳ, ಮದ್ರಾಸು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ
57 ಶಾಖೆಗಳು
ಮೈಸೂರು ರಾಜ್ಯದಲ್ಲಿಯ ಶಾಖೆಗಳು:
ಉಡುಪಿ— ಫೋನ್: 49 * ಬೆಂಗಳೂರು— 1. ಮಲ್ಲೇಶ್ವರಂ 2. ಅಲ್ಸೂರು 3. ಕೆಂಪೇಗೌಡ ರೋಡ್ * ಮಂಗಳೂರು— 1. ಲೈಟ್ ಹೌಸ್ ಹಿಲ್ ರೋಡ್, 2. ಹಂಪನಕಟ್ಟೆ * ಭಟ್ಕಳ * ಬ್ರಹ್ಮಾವರ * ಬೈಂದೂರು * ಚಾಮರಾಜನಗರ * ಚನ್ನಪಟ್ಣ * ಕುಂದಾಪುರ * ಧಾರವಾಡ * ದೊಡ್ಡಬಳ್ಳಾಪುರ * ಗದಗ * ಗೋಣಿಕೊಪ್ಪಲ * ಹುಬ್ಬಳ್ಳಿ * ಕಾರ್ಕಳ * ಕನಕಪುರ * ಕಾಪು * ಕೋಲಾರ * ಕೊಳ್ಳೆಗಾಲ್ * ಕೃಷ್ಣರಾಜಪೇಟೆ * ಮದ್ದೂರು * ಮಾಗಡಿ * ಮುಲವಳ್ಳಿ * ಮಡಿಕೇರಿ * ಮೂಡಿಗೆರೆ * ಮೈಸೂರು * ನಂಜನಗೂಡು * ನೆಲಮಂಗಲ * ಪಾಂಡವಪುರ * ಪುತ್ತೂರು * ರಾಮನಗರ * ಸಿದ್ಧಾಪುರ

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ
S. C. 366/65
U. S. ನಾಯಕ್....... ವಾದಿ
ಮತ್ತು
M. ಭೋಜರಾಜ ಹೆಗ್ಡೆ....ಪ್ರತಿವಾದಿ
ಮುವರಿಗಳಿಗೆ

ಪ್ರತಿವಾದಿ—
M. ಭೋಜರಾಜ ಹೆಗ್ಡೆ—ಟ್ರಾನ್ಸ್‌ಪೋರ್ಟ್ ಕಂಟ್ರಾಕ್ಟರ್ ಮತ್ತು ಮೈನ್ಸ್ ಸಪ್ಲಾಯರ್—ಕಾರ್ಕಳ ತಾಲೂಕು ಕಡ್ತಲ ಗ್ರಾಮ, ಇವರಿಗೆ—

ನೀವು ವಾದಿರ ಕೂಡೆ ನಡಿಸಿದ ಲೇವಾದೇವಿ ಬಾಬ್ತು ನಿಂಮಿಂದ ಬರತಕ್ಕ ಹಣಕ್ಕೆ ವಾದಿರು ಮಾಡಿದ ಮೇಲ್ಕಂಡ ದಾವೆಯಲ್ಲಿ ನಿಮಗೆ ನಾಲ್ಕು ಸಾರಿ ನೋಟೀಸು ಮಾಡ್ಸಿದಾಗ್ಯೂ ತಪ್ಪಿಸಿಕೊಂಡಿರುತ್ತೀರಿ. ಸದ್ರಿ ಸಂಬ್ರ ತಾ 30-6-66ಕ್ಕೆ ನಿಂಮ ನೋಟೀಸಿನ ಬಗ್ಗೆ ಇಟ್ಟಿದೆ. ಆ ದಿವಸ ನೀವು ಸ್ವತಹಾ—ವಕೀಲರ ಮುಖಾಂತರ 11 ಗಂಟೆಗೆ ಹಾಜ್ರಾಗಿ ನಿಂಮ ಉಜ್ರಿಹಾರಕೆಯಿದ್ರೆ ದಾಖಲು ಮಾಡಬೇಕು. ಇಲ್ಲವಾದ್ರೆ ನಿಂಮ ಗೈರಹಾಜ್ರಿಯಲ್ಲಿ ಏಕಪಕ್ಷವಾಗಿ ತೀರ್ಪು ಕೊಡಲಾಗುವುದು.

(ಕೋರ್ಟು ಹುಕುಂ ಪ್ರಕಾರ)

(Sd) B. Yogishwara Holla
Advocate for Plaintiff
Udipi, 3—6—66

ಪ್ರಾಮಾಣಿಕತೆಗೆ ಹೆಸರಾದ

ಮುಂಬಯಿಯ ಮೋಟಾರು ಸಾರಿಗೆ

BEST ಸಂಸ್ಥೆಯ ಕಾರ್ಯಕಲಾಪಗಳ ಸ್ಥೂಲ ನೋಟ

ಲೇಖಕ: ಶ್ರೀ ಕೆ. ಜಿ. ಹೆಗಡೆ, ಮುಂಬಯಿ.

ಮಹಾ ಶಹರ್ ಮುಂಬಯಿಯ ಪೂರ್ವದಲ್ಲಿನ ದಹಿಸಾರ ಮತ್ತು ಪಶ್ಚಿಮದಲ್ಲಿನ ಮುಲುಂದ, ಈ ಉಪ ನಗರಗಳ ನಡುವೆ ಅಂದರೆ ಸುಮಾರು ಐನೂರು ಕಿಲೋ ಮೀಟರುಗಳಷ್ಟು ಪರಿಸರಣ (ವಿಸ್ತಾರ) ದೊಳಗೆ B.E.S.T. ಬಸ್ಸುಗಳು ಓಡಾಡುತ್ತಿವೆ.

ಮುಂಜಾವಿನ ಗಂಟೆ ೪ ಕ್ಕೆ ಮೊದಲ ಬಸ್ಸು ಹೊರಡುತ್ತದೆ. ಕೊನೆಯ ಬಸ್ಸು ರಾತ್ರಿ ಒಂದು ತಾಸಿಗೆ ಮರಳುತ್ತದೆ. ಆದರೆ ಎರಡು ಕ್ಷೇತ್ರದಲ್ಲಿ (ಮಾರ್ಗ ನಂಬ್ರ ೧ ಮತ್ತು ೬೫) ಅಹೋರಾತ್ರಿ ಬಸ್ಸುಗಳು ತಿರುಗುತ್ತಲೇ ಇರುತ್ತವೆ.

ಮೋಟಾರು ಬಸ್ಸುಗಳ ಅಂಕೆ ಸಂಖ್ಯೆ ಹೀಗಿದೆ. ಸುಮಾರು ೬೦೦ ಒಂದು ಅಂತಸ್ತಿನವುಗಳು ಮತ್ತು ೭೫೦ ಎರಡು ಅಂತಸ್ತಿನವುಗಳು.

ಸರ್ವ ಸಾಧಾರಣವಾಗಿ ಡೇಯ್ಮಲರ್ (Daimler) ಗೈ (Guy) ಲೇಲೇಂಡ (Ley lamd) ಮತ್ತು ತಾತಾ ಮರ್ಸಿಡಿಸ್ ಬೆಂಜಗಳಿಂಥ ಇವುಗಳು ಕೂಡಿವೆ.

೧೯೪೭ರಲ್ಲಿ ಬಸ್ಸುಗಳು ಪ್ರತಿದಿನ ಎರಡೂವರೆ ಲಕ್ಷ ಪ್ರಯಾಣಿಕರನ್ನು ಸಾಗಿಸುತ್ತಿದ್ದವು. ಆದರೆ ಈಗ ಸಾಧಾರಣ ಇಪ್ಪತ್ತು ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯುತ್ತಿವೆ! ಅಂದರೆ ಕೇಂದ್ರ ಮತ್ತು ಪಶ್ಚಿಮ ರೈಲ್ವೆಯವರಿಗಿಂತಲೂ ಹೆಚ್ಚಿನ ಪ್ರವಾಸಿಗಳನ್ನು ಹೊತ್ತು ಸುತ್ತು ತಿರುಗುತ್ತವೆ.

ಸಂಸ್ಥೆಯ ಮೋಟಾರುಗಳು ಮದುವೆ ಮುಂಜಿಗಳಿಗೆ, ಹಬ್ಬ ಹರಿದಿನಗಳ ಪ್ರವಾಸಕ್ಕೆ ಅಥವಾ ಇನ್ನಿತರ ಪ್ರವಾಸೀ ಕಾರಣದ ಅಗತ್ಯ ಕಂಡಾಗ ಸಾರ್ವಜನಿಕರಿಗೆ ನಿಯಮಿತ ದರದಲ್ಲಿ ಬಾಡಿಗೆಗೆ ಸಿಗುತ್ತವೆ.

ಸುಮಾರು ಹತ್ತು ಕೋಟಿಗಿಂತಲೂ ಹೆಚ್ಚಿನ ಆದಾಯ ಈ ಬಸ್ಸುಗಳಿಂದ ದೊರಕುತ್ತಿದೆ—ಸಾಧಾರಣ ಮೂರು ಲಕ್ಷ ರೂಪಾಯಿಗಳು ದಿನಾಲೂ. ಈ ಆದಾಯದಲ್ಲಿ ವರ್ಷಂಪ್ರತಿ ಮೂವತ್ತು ಲಕ್ಷ ರೂಪಾಯಿ ಸರಕಾರಕ್ಕೆ, ಲಾಯಿಸೆನ್ಸ್ ಮುಂತಾದುವುಗಳ ರೂಪದಲ್ಲೇ ವೆಚ್ಚವಾಗುತ್ತದೆ.

BEST ಸಂಸ್ಥೆಯವರು ಮೊದಲು ಟ್ರಾಮು ಬಂಡಿಗಳನ್ನು ನಡೆಸುತ್ತಿದ್ದರು. ವಿದ್ಯುಚ್ಛಕ್ತಿಯಿಂದೋಡುವ ಈ ಬಂಡಿಗಳು ೧೮೭೭ ರಿಂದ ಪ್ರಾರಂಭವಾಗಿ ಸುಮಾರು ಐವತ್ತು ವರ್ಷ ನಗರದಲ್ಲಿ ಓಡಾಡಿದುವು. ಬಸ್ಸುಗಳ ಮಹೋನ್ನತ ಪ್ರಗತಿಯ ದೆಸೆಯಿಂದಾಗಿ ಟ್ರಾಂಗಳ ಓಡಾಟ ಲಾಭದಾಯಕವಲ್ಲವೆಂದು ೧೯೬೪ರಲ್ಲಿ ಅವನ್ನು ಸಂಪೂರ್ಣ ರದ್ದು ಮಾಡಲಾಯಿತು.

ಅದೀಗ ಇವುಗಳ ಮೊದಲಿಯಲ್ಲೇ ೧೫ ಟ್ರಾಲಿ ಬಸ್ಸುಗಳು ಗೋವಾಲಿಯಾ ಟ್ಯಾಂಕ್ ಮತ್ತು ಮಝಗಾಂ ಮಾರ್ಗದಲ್ಲಿ ಓಡುತ್ತವೆ. ಈ ಬಸ್ಸುಗಳು ಮೂವತ್ತೈದು ಸಾವಿರಕ್ಕಿಂತಲೂ ಹೆಚ್ಚಿನ ಪ್ರಯಾಣಿಕರನ್ನು ಕೊಂಡೊಯ್ಯುತ್ತಿವೆ. ಮತ್ತು ಮೂರು ಸಾವಿರದ ಐನೂರು ರೂಪಾಯಿಗಳಷ್ಟು ದಿನಾಲೂ ಸಂಪಾದಿಸಿ ಕೊಡುತ್ತವೆ. ಈ ಬಸ್ಸು ಟ್ರಾಂ ಬಂಡಿಯಂತೆ ವಿದ್ಯುಚ್ಛಕ್ತಿಯಿಂದ ಚಲಿಸಲ್ಪಡುವುದು. ಮತ್ತು ರಬ್ಬರಿನ ಗಾಲಿಗಳಿಂದ ಕೂಡಿದ್ದಾಗಿದೆ. ಇವನ್ನು ಪರಿಶೋಧನಾ ದೃಷ್ಟಿಯಿಂದ ನಡೆಸುತ್ತಾರೆ. ನಾಳೆ ಲಾಭದಾಯಕವೆಂದು ಕಂಡು ಬಂದಲ್ಲಿ ಹೆಚ್ಚಿನ "ಟ್ರಾಲಿ" ಬಸ್ಸುಗಳನ್ನು ಹಾಕುತ್ತಾರೆ.

ಮುಂಬಯಿ ಮಹಾ ನಗರದ ಜನಸಂಖ್ಯೆಯೀಗ ಐವತ್ತು ಲಕ್ಷಕ್ಕೂ ಮಿಕ್ಕಿದೆ! ಇದು ದೈನಂದಿನ ಬೆಳೆಯುತ್ತಲೇ ಇದೆ. ಈ ಪ್ರಮಾಣದಲ್ಲಿ ಬೆಳೆಯುತ್ತ ಹೋದಲ್ಲಿ ಮುಂದೊಂದು ದಿನ ಕೂಟು ರೈಲುಗಳ ಅಗತ್ಯವಿದೆ. ಅತ್ಯಗತ್ಯವೆಂದು ಆ ಬಗ್ಗೆ ಯೋಜನೆಗಳು ನಡೆಯುತ್ತಲೇ ಇವೆ. ಕಾರಣಾಂತರಗಳಿಂದ ಇಲ್ಲವೆ ಹಣದ ಅಡಚಣೆಯಿಂದ ಆ ಯೋಜನೆಗಳಲ್ಲಿ ಯೋಜನಾ ರೂಪದಲ್ಲೇ ನಿಂತು ಬಿಟ್ಟವೆ.

ಮುಂಬಯಿ ಬಸ್ಸುಗಳ ಟಿಕೇಟಿನ ದರ ಇಡಿಯ ಭಾರತದಲ್ಲೇ ಕಡಿಮೆ ಮಟ್ಟದ್ದಾಗಿದೆ. ಪ್ರಾಯಶಃ ಇಷ್ಟೊಂದು ಕಡಿಮೆ, ಜಗತ್ತಿನಲ್ಲಿ ಎಲ್ಲೂ ಇಲ್ಲವೆನ್ನಬಹುದೇನೋ!

ಪ್ರತಿಯೊಂದು ಬಸ್ಸು ೫೦ರಿಂದ ೯೨ ಪ್ರಯಾಣಿಕರನ್ನು ಸಾಗಲು ಅರ್ಹವಾಗಿದೆ. ಆದರೆ ಸರಾಸರಿ ಬರೇ ೬೮ ಜನ ಮಾತ್ರ ಪ್ರಯಾಣಿಸುವರೆಂದು ತಿಳಿಯಲಾಗಿದೆ.

ಎರಡು ವರ್ಷಗಳ ಹಿಂದೆ ಇಷ್ಟವಿದ್ದಂತೆ "ಬೇಕಾದೆಡೆ ಪ್ರಯಾಣ ಮಾಡಬಲ್ಲ" ಟಿಕೇಟುಗಳನ್ನು ಪ್ರಾರಂಭಿಸಲಾಗಿತ್ತು. ಬರೇ ಒಂದು ರೂಪಾಯಿಗೆ ಬೆಳಗಿನಿಂದ ರಾತ್ರಿಯ ವರೆಗೆ ತನುಮನದಣಿಯೆ ಪ್ರಯಾಣ ಮಾಡಬಹುದಾಗಿದೆ. ರವಿವಾರದಂದು ಸುಮಾರು ಐವತ್ತು ಸಾವಿರ ಇಂತಹ ಟಿಕೇಟುಗಳ ಮಾರಾಟವಾಗುತ್ತಿದೆ.

ಮುಂಬಯಿ ಬಸ್ಸುಗಳ ಸಂಚಾರಕ್ಕೆ ಏಳು ಸಾವಿರಕ್ಕೂ ಮಿಕ್ಕಿದ ಕಂಡಕ್ಟರುಗಳ ಪಡೆಯಿದೆ. ನಾಲ್ಕು ಸಾವಿರದಷ್ಟು ಚಾಲಕರಿದ್ದಾರೆ. ಇವರೆಲ್ಲ ದಕ್ಷಿಣದಿಂದ ಕೇರಳ ಮೊದಲ್ಗೊಂಡು ಉತ್ತರಕ್ಕೆ ಉತ್ತರ ಪ್ರದೇಶ ಹಿಮಾಲಯದ ವರೆಗಿನ ಜನರು! ಸೌರಾಷ್ಟ್ರ ಬಂಗಾಲದವರೂ ಇದ್ದಾರೆ. ಅಂದರೆ ಸಮಗ್ರ ಭಾರತದ ವಿವಿಧ ಪ್ರಾಂತ ಭಾಷೆ ರೀತಿ ನೀತಿಗಳ ಜನರು ಬಸ್ಸುಗಳನ್ನು ಓಡಿಸುತ್ತಾರೆ.

ಸದ್ಯ ಬಸ್ಸು ಕಂಡಕ್ಟರನಿಗೆ ತಿಂಗಳೊಂದರ ರೂ. ೧೮೦/- (ತಲಬು ೫೫ + ತುಟ್ಟಿ ಭತ್ತೆ ೧೨೫) ಸಿಗುತ್ತದೆ. ಡ್ರೈವರನಿಗೆ ರೂ. ೨೧೫/- (ತಲಬು ೯೦ + ತುಟ್ಟಿ ಭತ್ತೆ ೧೨೫) ಕೊಡುತ್ತಾರೆ.

ಕಂಡಕ್ಟರನಿಗೆ ವರ್ಷಂಪ್ರತಿ ನಾಲ್ಕು ಸಮವಸ್ತ್ರವನ್ನು ಕೊಡಲಾಗುವುದು. ಡ್ರೈವರನಿಗೆ ನೂರು ಮತ್ತು ಮೇಲ್ತನಿಖೆಯ ಸಿಬ್ಬಂದಿಯವರಿಗೆ ಐದರಂತೆ ಸಿಗುತ್ತದೆ. ಈ ಅಂಗಿ "ಪಟಲೂನು" ಗಳನ್ನು ಹೊಲಿಸಲು ಸುಮಾರು ನಾಲ್ಕು ಲಕ್ಷ ಮೀಟರುಗಳಷ್ಟು ಬಟ್ಟೆ ಸಂಸ್ಥೆಗೆ ಬೇಕಾಗುತ್ತದೆ.

BEST ನೌಕರ ವರ್ಗದ ತಿಂಗಳ ತಲಬು ರೂ. ಐವತ್ತು ಲಕ್ಷಕ್ಕೂ ಮಿಕ್ಕಿರುವುದು.

ಇಷ್ಟೊಂದು ಬಹುದೊಡ್ಡ ಪ್ರಮಾಣದ ಸಾರಿಗೆ ಸಂಸ್ಥೆಯ ಮೋಟಾರು ಓಡಾಟದಲ್ಲಿ ಅಪಘಾತಗಳಿಲ್ಲವೇ ಎಂದು ನೀವು ಕೇಳಬಹುದು. ಸರ್ವ ಸಾಧಾರಣವಾಗಿ ಇಲ್ಲಿನ ಅಪಘಾತಗಳ ಸಂಖ್ಯೆ ಪ್ರಪಂಚದಲ್ಲಿನ ಸರಾಸರಿಯನ್ನು ಮೀರಿಲ್ಲ. ಸಾಮಾನ್ಯವಾಗಿ ಕೆಳಗೆ ನಮೂದಿಸಿದ ಪ್ರಮಾಣದಲ್ಲಿದೆ. ಕನಿಷ್ಠ ಆರುಸಾವಿರ ಕಿಲೋ ಮೀಟರ್ ಓಡಾಟದಲ್ಲಿ ಒಂದು ಡಿಕ್ಕಿ. ಅರುವತ್ತು ಸಾವಿರ ಕಿ. ಮೀ. ಓಡಾಟದಲ್ಲಿ ಒಬ್ಬನಿಗೆ ನೋವು ಗಾಯ. ಹತ್ತು ಲಕ್ಷ ಕಿ. ಮೀ. ಓಡಾಟದ ಬಳಿಕ ಒಬ್ಬನ ಸಾವು. ಈ ಮರಣದ ದರದ ಹೆಚ್ಚುಕಡಿಮೆ ಚಂದ್ರಮಂಡಳಕ್ಕೂ ಭೂಮಿಗೂ ಇರುವ ಅಂತರ ಎಂದನ್ನ[illegible]ಲೆ ನೀವೇ ಯೋಚಿಸಿ ಕೊಳ್ಳಿ!

ಅಪಘಡಗಳ ಸಂಖ್ಯೆ ಹಿಡಿತದಲ್ಲಿಡಲು ಮೋಟಾರು ಬಸ್ಸುಗಳ ಬ್ರೇಕನ್ನು ಯಾಂತ್ರಿಕ ಶಕ್ತಿಯಿಂದ ಚಲಿಸುತ್ತಾರೆ. ಅವನ್ನು ಕಾಲಕಾಲಕ್ಕೆ ಪರಿಶೀಲಿಸುತ್ತಾರೆ. ಪೋಲೀಸರು ಅದೆಷ್ಟೇ ಬಾರಿ ಪರೀಕ್ಷಿಸಿದಾಗಲೂ BEST ಬಸ್ಸಿನ ಬ್ರೇಕುಗಳು ಉತ್ತಮ ಅವಸ್ಥೆಯಲ್ಲೇ ಇರುತ್ತವೆ.

ಇದಕ್ಕೆ ಕಾರಣ ಕಷ್ಟವಿಲ್ಲ. ಪ್ರತಿದಿನಾಲೂ ಸಣ್ಣ ರೀತಿಯಲ್ಲಿ ಪ್ರತಿಯೊಂದು ಬಸ್ಸಿನ ಪರೀಕ್ಷೆಯಾಗುತ್ತದೆ. ಪ್ರತಿ ವಾರಕ್ಕೊಮ್ಮೆ ಕೂಲಂಕಷವಾಗಿ ಪರಿಶೀಲಿಸಲಾಗುವುದು. ಬಸ್ಸುಗಳಿಗೆ ಹೆಚ್ಚಿನ ರಿಪೇರಿ ಅಗತ್ಯವೆಂದು ಕಂಡರೆ ಕೂಡಲೇ ಅವನ್ನು ಗ್ಯಾರೇಜಿಗೆ ಕಳುಹಿಸಿ ಕೊಡಲಾಗುತ್ತದೆ. ಅಲ್ಲಿ ಎಂತಹ ಬಸ್ಸುಗಳೂ ತಜ್ಞರ ಕೈಯಲ್ಲಿ ಪಳಗುತ್ತವೆ. ನೇರಾದ ಬಳಿಕವೇ ಅವು ಬೀದಿಯನ್ನು ಕಾಣುವುವು.

ಬಸ್ಸುಗಳ ಹೊರ ಭಾಗವನ್ನೆಲ್ಲ ಈಗ ಭಾರತದಲ್ಲೇ ಕಟ್ಟಲಾಗುತ್ತಿದೆ. ಬಹು ಭಾಗವನ್ನೆಲ್ಲ ಎಲ್ಯೂಮಿನಿಯಂನಿಂದ ನಿರ್ಮಿಸಲಾಗುತ್ತದೆ. ಇದು ಗಟ್ಟಿ ಮಾತ್ರವಲ್ಲ ತುಕ್ಕು ಮತ್ತು ಇನ್ನಿತರ ತೊಂದರೆಗಳನ್ನೂ ಇದಿರಿಸಬಲ್ಲುದಾಗಿದೆ. ಸಾಮಾ

(ಹದಿನಾರನೇ ಪುಟ ನೋಡಿರಿ)

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು..........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. No. 33/1966

ಗೋಪಿ ಹೆಂಗ್ಸು ಕೂಡಾ....ವಾದಿರು

ನೇಮು ಪೂಜಾರಿ ಕೂಡಾ—ಪ್ರತಿವಾದಿರು

1 ನೇ ಪ್ರತಿವಾದಿ-ನೇಮು ಪೂಜಾರಿ, ಕಾಂತಿಯ ಹೆಂಗ್ಸಿನ ಮಗ, ಬೆಳ್ತಂಗಡಿ ತಾಲ್ಲೂಕು ನ್ಯಾಯತರ್ಪು ಗ್ರಾಮ—ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ

ವಾದಿರು ನೀವು ವಗೈರೆಯರ ಮೇಲೆ ಹಿಸೆಬಗ್ಗೆ ಮಾಡಿದ ಮೇಲಿನ ದಾವೆಯು ತಾ. 6-7-66 ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿದಿವಸ ನ್ಯಾಯ್ಬಾರು ಕೋರ್ಟು ಮುಂದೆ ನೀವು ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉದಪಡಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿಯದೆ.

(Sd) C. S. Shastry,
Vakil for pltf.

ಪುತ್ತೂರು, ತಾ. 4-6-1966

ಅಭಿಪ್ರಾಯ

ಗಡಿ ಆಯೋಗದ ನೇಮಕ

ಲೇಖಕರು
ಶ್ರೀ ಕೆ. ಆರ್. ಕಾರಂತ್, ಬೆಂಗಳೂರು

ಮೈಸೂರು ಮಹಾರಾಷ್ಟ್ರ ಹಾಗೂ ಮೈಸೂರು ಕೇರಳ ಗಡಿ ಪ್ರದೇಶಗಳ ಭವಿಷ್ಯದ ಬಗ್ಗೆ ಏಕ ಸದಸ್ಯ ಆಯೋಗ ರಚಿಸಬೇಕೆಂದು ಮುಂಬಯಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮಾಡಿದ ನಿರ್ಣಯದಿಂದ ಮೈಸೂರು ರಾಜ್ಯದ ಮಂತ್ರಿವಲಯಗಳಲ್ಲಿ ತೀವ್ರ ಕಳವಳ ಹಾಗೂ ಅತೃಪ್ತಿಗಳುಂಟಾಗಿವೆ. ಎ. ಐ. ಸಿ. ಸಿ. ಸಭೆ ನಡೆಯುವುದಕ್ಕೆ ಮುನ್ನವೇ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಹೇಳಿಕೆ ನೀಡಿ, ತಮ್ಮ ರಾಜ್ಯದ ಪ್ರಚಲಿತ ಗಡಿಗಳಲ್ಲಿ ಹತ್ತು ಮೈಲಿ ದೂರದ ವರೆಗೂ ಸಣ್ಣ ಮಟ್ಟ ಬದಲಾವಣೆಗಳಿಗೆ ಸಿದ್ಧ; ಯಾವುದೇ ಆಯೋಗ ರಚಿಸಬೇಕಾದರೂ ಅಖಿಲ ಭಾರತ ಮಟ್ಟದಲ್ಲಿ ರಚಿಸಬೇಕು – ಎಂದು ಸಾರಿದ್ದರು. ಇದು ಸರಿಯಾದ ನಿಲುವಲ್ಲವೆಂದು ನಾನು ಒತ್ತಿ ಹೇಳಬೇಕಾಗಿದೆ. ಇಲ್ಲಿಯ ವರೆಗೂ ಮುಖ್ಯಮಂತ್ರಿಗಳೂ, ಅವರ ಮಂತ್ರಿ ಮಂಡಲವೂ, ಇಲ್ಲಿಯ ಕಾಂಗ್ರೆಸ್ ಪಕ್ಷ ಅನುಸರಿಸಿಕೊಂಡು ಬರುತ್ತಿರುವ ನಿಲುವೇ ಸರಿಯಾದುದಲ್ಲ. ಕೈಯಲ್ಲಿರುವ ಭಾಗಗಳನ್ನು ಮಾತ್ರ ಇಟ್ಟುಕೊಳ್ಳುವುದರಲ್ಲಿ ಅವರು ಸಂತೃಪ್ತರಾಗಿರುವರೇ ಹೊರತು, ೧೯೫೬ರ ರಾಜ್ಯಪುನರ್ವಿಂಗಡಣೆಯ ಕಾಲದಲ್ಲಿ ನೆರೆ ರಾಜ್ಯಗಳಿಗೆ ಸೇರಿ ಅತ್ಯಂತ ಅನ್ಯಾಯ — ಸಂಕಷ್ಟಗಳಿಗೀಡಾಗಿರುವ ಕನ್ನಡಿಗರ ಸಲುವಾಗಿ ತಮ್ಮ ಕಿರುಬೆರಳನ್ನು ಎತ್ತಲೂ ಸಿದ್ಧರಾಗಿಲ್ಲ.

ಕಾಸರಗೋಡಿನ ಕಸಿವಿಸಿ

ಚಂದ್ರಗಿರಿ ನದಿಗೆ ಉತ್ತರದಲ್ಲಿರುವ ಹಾಗೂ ಕೇರಳಕ್ಕೀಗ ಸೇರಿರುವ ಎರಡು ಲಕ್ಷ ಕಾಸರಗೋಡು ಕನ್ನಡಿಗರ ಕಷ್ಟ ಹೇಳತೀರದು. ಆ ಪ್ರದೇಶದ ಪ್ರತಿನಿಧಿಯಾಗಿ ಮದ್ರಾಸ್ ಶಾಸನ ಸಭೆಯಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿರುವ ನನಗೆ, ಅಲ್ಲಿಯ ಹಳ್ಳಿ ಹಳ್ಳಿಗಳ ಜನತೆಯ ಸ್ಥಿತಿಗತಿ ಚೆನ್ನಾಗಿ ಗೊತ್ತು. ಅದು ಹಟಾತ್ತಾಗಿ ಕೇರಳದ ಅಧೀನಕ್ಕೆ ಹೋದುದರಿಂದ ಅಲ್ಲಿಯ ಜನಕ್ಕೆ ಅಪರಿಮಿತ ವೇದನೆಯಾಗಿದೆ.

೧೯೫೬ಕ್ಕೆ ಹಿಂದೆ ಮದ್ರಾಸ್ ಶಾಸನ ಸಭೆಯು ಕಾಸರಗೋಡನ್ನು ಮೈಸೂರು ರಾಜ್ಯಕ್ಕೆ (ಕರ್ನಾಟಕಕ್ಕೆ) ಸೇರಿಸಬೇಕೆಂದು ಮತವಿತ್ತಿತ್ತು. ಕಾಂಗ್ರೆಸ್ ನೇಮಿಸಿ ನಾಲ್ವರು ಸದಸ್ಯರ ಸಮಿತಿಯೂ ಇದಕ್ಕೆ ಬೆಂಬಲ ಸೂಚಿಸಿದ್ದಿತು. ಆದರೆ ಕೊನೆಯ ನಿಮಿಷದಲ್ಲಿ, ನೀಲಗಿರಿ ಜಿಲ್ಲೆಯ ಮಲೆಯಾಳ ಬಹು ಸಂಖ್ಯೆಯ ಗೂಡಲೂರು ತಾಲೂಕನ್ನು ಕೇರಳಕ್ಕೆ ಸೇರಿಸಬೇಕೆಂದು ನಿರ್ಧರಿಸಿದಾಗ, ಮದ್ರಾಸ್ ಮುಖ್ಯಮಂತ್ರಿ ಶ್ರೀ ಕಾಮರಾಜರು ರಾಜಿನಾಮೆ ಸಲ್ಲಿಸುವುದಾಗಿ ಬೆದರಿಸಿದರು. ಇದರ ಪರಿಣಾಮವಾಗಿ ಕೇಂದ್ರ ಸಂಪುಟವು ಕೂಡಲೇ ಸಭೆ ಸೇರಿ, ಹಿಂದಿನ ತೀರ್ಮಾನಗಳನ್ನೆಲ್ಲಾ ಬದಲಿಸಿ, ಗೂಡಲೂರನ್ನು ಮದ್ರಾಸಿಗೆ ಇಟ್ಟುಕೊಂಡು ಅದಕ್ಕೆ ಪ್ರತಿಫಲವೆಂಬಂತೆ ಕಾಸರಗೋಡನ್ನು ಕೇರಳಕ್ಕೆ ದಾನವಾಗಿತ್ತಿತು.

ಈ ಪ್ರದೇಶದ ಜನರು ೧೯೫೬ರಿಂದ ಅತ್ಯಂತ ತೀವ್ರ ಕಷ್ಟಗಳೀಡಾಗಿದ್ದಾರೆ. ಕನ್ನಡ ಜನತೆ ಎಷ್ಟೇ ಪ್ರತಿಭಟಿಸುತ್ತಿದ್ದರೂ ಕೇರಳದ ಸರ್ಕಾರವು ಈ ಪ್ರದೇಶದ ಮಲೆಯಾಳಂಗೆ ಪರಿವರ್ತಿಸಲು ಉದ್ದೇಶಪೂರ್ವಕವಾಗಿ ಶ್ರಮಿಸುತ್ತಿದೆ. ಸ್ಥಳೀಯ ಜನರ 'ಕಾಸರಗೋಡು ಕರ್ನಾಟಕ ಏಕೀಕರಣ ಸಮಿತಿ' ಎಂಬ ಸುವ್ಯವಸ್ಥಿತ ಸಂಸ್ಥೆಯೊಂದನ್ನು ಸ್ಥಾಪಿಸಿಕೊಂಡು, ಅದರ ಆಶ್ರಯದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಚುನಾವಣೆಗೆ ನಿಂತುಕೊಂಡಿದ್ದಾರೆ; ಈ ಸಮಿತಿಯವರು ಹಲವಾರು ಸನ್ನಿವೇಶಗಳನ್ನು ನಡಸಿದ್ದು, ಅವುಗಳಲ್ಲಿ ಕೆಲವದರಲ್ಲಿ ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೇ ಸ್ವತಃ ಭಾಗವಹಿಸಿ, ಅವರ ಪರವಾಗಿ ತಾವು ಹೋರಾಡುವುದಾಗಿಯೂ ಆಶ್ವಾಸನ ಇತ್ತಿದ್ದಾರೆ.

ವಿಸ್ಮಯಕಾರಿ ಹೇಳಿಕೆ

ಆದರೆ ಹಿಂದೆ ಕೇರಳದಲ್ಲಿ ಪಟ್ಟಂಥಾನು ಪಿಳ್ಳೆ ಹಾಗೂ ಶಂಕರ್‌ರವರ ಸಂಪುಟದಲ್ಲಿ ನ್ಯಾಯಾಂಗ ಮತ್ತು ರೆವಿನ್ಯೂ ಮಂತ್ರಿಗಳಾಗಿದ್ದ ಪಿ. ಎಸ್. ಪಿ. ನಾಯಕ ಶ್ರೀ ಕೆ. ಚಂದ್ರಶೇಖರನ್‌ರವರು ಕಾಸರಗೋಡಿನಲ್ಲಿ ಗಡಿ ಪ್ರಶ್ನೆಯೇ ಇರಲಿಲ್ಲ ಈಗಲೂ ಇಲ್ಲವೆಂದು ಹೇಳಿರುವುದಾಗಿ ವರದಿಯಾಗಿದೆ. ಅವರ ಈ ಹೇಳಿಕೆ ಸರಿಯಲ್ಲವೆಂದು ನಾನು ಸ್ಪಷ್ಟಪಡಿಸಬೇಕಾಗಿದೆ.

ಈ ಪ್ರಶ್ನೆಯನ್ನು ಮೇಲಿಂದ ಮೇಲೆ ಕೇರಳ ಸರಕಾರದ ಮುಂದೆ ೧೯೫೬ರಿಂದ ಇಡಲಾಗಿದೆ. ಶ್ರೀ ಇ. ಎಂ. ಎಸ್. ನಂಬೂದಿರಿಪಾಡರು ಮುಖ್ಯಮಂತ್ರಿಗಳಾಗಿದ್ದಾಗ ನಾನೇ ಒಂದು ನಿಯೋಗವನ್ನು ಅವರಲ್ಲಿಗೆ ಕೊಂಡೊಯ್ದಿದ್ದೆ; ಅವರೂ ಮತ್ತು ಆಗಿನ ನ್ಯಾಯಾಂಗ ಮಂತ್ರಿಗಳೂ ಸಾಧ್ಯಕಂಡ ಎಲ್ಲವನ್ನೂ ಮಾಡುವುದಾಗಿ ವಾಗ್ದಾನವಿತ್ತಿದ್ದರು.

ಇಷ್ಟೇಕೆ, ಇನ್ನೂ ಒಂದು ವಾಸ್ತವಾಂಶವನ್ನು ಇಲ್ಲಿ ಹೇಳಬಲ್ಲೆ. (ಇದನ್ನು ಶ್ರೀ ಚಂದ್ರಶೇಖರನ್ ರಂತಹವರು ನಿರಾಕರಿಸಲು ಹೋಗುವುದಿಲ್ಲವೆಂದು ನಂಬುತ್ತೇನೆ) ೧೯೫೭ರಲ್ಲಿ ಲೋಕಸಭಾ ಚುನಾವಣೆಗಳಿಗೆ ಕಾಸರಗೋಡು ಕ್ಷೇತ್ರದಿಂದ ಪಿ. ಎಸ್. ಪಿ. ಯ ಪರವಾಗಿ ನಿಲ್ಲಬೇಕೆಂದು ನನಗೆ ಸೂಚಿಸಲ್ಪಟ್ಟಾಗ, ಆಗ ಮುಖ್ಯಮಂತ್ರಿಗಳಾಗಿದ್ದ, ಶ್ರೀ ಥಾನು ಪಿಳ್ಳೆಯವರು ಶ್ರೀ ಚಂದ್ರಶೇಖರನ್ ಸಮ್ಮುಖದಲ್ಲಿಯೇ ನನಗೂ ಕರ್ನಾಟಕ ಸಮಿತಿಯ ಸದಸ್ಯರಿಗೂ ಸುಸ್ಪಷ್ಟ ಭರವಸೆ ನೀಡಿದರು. ಕಾಸರಗೋಡಿನ ಪ್ರಶ್ನೆ ಹಾಗೂ ಅಲ್ಲಿಯ ಜನರಿಗಾಗುವ ಅನ್ಯಾಯವನ್ನು ಕೇರಳ ಸರ್ಕಾರವು ಕೇಂದ್ರ ಸರ್ಕಾರದ ಮುಂದೆ ಎತ್ತಿ ಹಿಡಿಯುವುದಾಗಿ ಅವರು ತಿಳಿಸಿದರು.

ಈ ಭರವಸೆಗಳೂ ಆಶ್ವಾಸನೆಗಳೂ ಗಾಳಿಯ ಪಾಲಾಗದಿರಲೆಂದೂ ಇದರಲ್ಲಾ ಶ್ರೀ ಚಂದ್ರಶೇಖರನ್‌ರಂತಹ ಮುಖಂಡರು ಕಾಸರಗೋಡಿನ ಪ್ರಶ್ನೆಯೇ ಇರಲಿಲ್ಲ, ಅಥವಾ ಈಗಲೂ ಇಲ್ಲ ಎಂಬುದಾಗಿ ಹೇಳುವ ದುಸ್ಸಾಹಸ ಮಾಡದಿರಲೆಂದೂ ಆಶಿಸುತ್ತೇನೆ.

ಮೈಸೂರು ರಾಜ್ಯದ ಗಡಿ ಭಾಗಗಳಿಗೆ ಹೊಂದಿಕೊಂಡಂತೆ ಇರುವ ಸೊಲ್ಲಾಪುರದಲ್ಲೂ ಇದೇ ಅವಸ್ಥೆಯಿದೆ; ಅಲ್ಲಿಯೂ ಬಹುತೇಕ ಕನ್ನಡಿಗರಿದ್ದಾರೆ. ಅವರೂ ತಾವು ಮೈಸೂರಿಗೆ ವರ್ಗಾವಣೆಯಾಗಬೇಕೆಂದು ಮೇಲಿಂದ ಮೇಲೆ ಚಳವಳಿ ಮಾಡುತ್ತಿದ್ದಾರೆ. ಈ ಬಗ್ಗೆಯೂ ಶ್ರೀ ನಿಜಲಿಂಗಪ್ಪ ಮತ್ತು ಸಹೋದ್ಯೋಗಿಗಳು ಹೊಂದಿರುವ ನೀತಿ ನಕಾರಾತ್ಮಕವಾಗಿದೆಯೆಂದು ತಿಳಿಸಲು ವಿಷಾದವಾಗುತ್ತದೆ. ಅವರಾಗಲೀ ಅವರ ಸರ್ಕಾರವಾಗಲೀ, ಈ ಜನರಿಗೆ ಸಹಾಯ ನೀಡಲು ಇಲ್ಲವೇ ಅವರು ಮೈಸೂರಿಗೆ ಬರುವಂತೆ ಮಾಡುವುದಕ್ಕಾಗಿ ಗಡಿ ಆಯೋಗ ರಚನೆಯಾಗುವಂತೆ ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ತಮ್ಮ ವಾದ ಮಂಡನೆಗೆ ಕೈಗೊಂಡ ಕ್ರಮ ವಿಧಾನಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿದೆ, ಈ ನಿಲುವು.

ಬೆಳಗಾವಿ ನಗರ

ನಿಪ್ಪಾಣಿಯಿಂದ ಆಚೆಗೆ ಸುಮಾರು ೨೦ ಮೈಲಿ ದೂರದ ವರೆಗೆ, ಬೆಳಗಾವಿ ಜಿಲ್ಲೆಯ ಉತ್ತರ ಮತ್ತು ನೈರುತ್ಯ ಭಾಗದಲ್ಲಿ ಮಹಾರಾಷ್ಟ್ರೀಯರ ಜನಸಂಖ್ಯೆ ಅಧಿಕವಿದ್ದು, ಅವರ ಮಹಾರಾಷ್ಟ್ರಕ್ಕೆ ಸೇರಲು ಇಚ್ಛೆಯಿತ್ತಿರಬಹುದು. ಆದರೆ ಬೆಳಗಾವಿ ನಗರದ ಬಗ್ಗೆ ಮಹಾರಾಷ್ಟ್ರೀಯರ ಬೇಡಿಕೆ ಸಂಪೂರ್ಣ ನಿರಾಧಾರವಾದುದು. ಈ ವಾರ ಕೂಡಾ ಶ್ರೀ ನಿಜಲಿಂಗಪ್ಪನವರು ಹೇಳಿದ ಹಾಗೆ, ಬೆಳಗಾಂ ನಗರದಲ್ಲಿ ಕನ್ನಡಿಗರ ಇಲ್ಲವೇ ಮಹಾರಾಷ್ಟ್ರೀಯರ ಶೇಕಡಾವಾರು ಶೇ. ೪೦ರಷ್ಟು ಆದರೆ ಅದರ ಸುತ್ತುಮುತ್ತಲಿರುವ ಪ್ರದೇಶದಲ್ಲೆಲ್ಲಾ ಬಹುತೇಕ ಕನ್ನಡ ಜನರೇ ಇರುವುದರಿಂದ, ಕೇವಲ ನಗರದ ಸಂಖ್ಯೆಯ ಆಧಾರದ ಮೇಲೆ ನಿರ್ಧರಿಸುವುದಕ್ಕಾಗುವುದಿಲ್ಲ.

ಹಿಂದಿನ ಕಾಲದಲ್ಲಿ ಮರಾಠರ ಆಡಳಿತದಲ್ಲಿ, ಅನೇಕ ಮಂದಿ ವರ್ತಕರು ಬೆಳಗಾವಿ ನಗರಕ್ಕೆ ಬಂದು ನೆಲೆಸಿದ್ದುದರಿಂದ, ಅದೇ ರೀತಿ ಬಳ್ಳಾರಿ ನಗರದಲ್ಲೂ ತೆಲುಗು ಜನರು ಶೇ. ೫೦ಕ್ಕಿಂತ ಹೆಚ್ಚಿದ್ದರು. ಆ ನಗರವನ್ನು ಆಂಧ್ರಕ್ಕೆ ಸೇರಿಸಬೇಕೆಂದು ಭಾರೀ ಚಳವಳಿಯೂ ನಡೆದದ್ದುಂಟು. ಆದರೆ ಜಸ್ಟಿಸ್ ವಾಂಛೂರವರು (ಈಗ ಅವರು ಸುಪ್ರೀಂ ಕೋರ್ಟ್ ನ್ಯಾಯಾಧೀಶರು) ನೀಡಿದ ಸಮಂಜಸ ಹಾಗೂ ನ್ಯಾಯಯುತ ತೀರ್ಮಾನದ ಪ್ರಕಾರ ಅದು ಕರ್ನಾಟಕಕ್ಕೆ ಹೋಯಿತು. ಬೆಳಗಾವಿ ನಗರದ ಭವಿಷ್ಯವೂ ಅದೇ ರೀತಿ ಆಗಿರುವುದು ನ್ಯಾಯವೇ ಸರಿ. ಇನ್ನು ಕೊಂಕಣಿಯು ಮರಾಠಿಯ ಉಪಭಾಷೆಯೆಂಬ ಪೊಳ್ಳು ವಾದದ ಮೇಲೆ ಕಾರವಾರವನ್ನು ಮರಾಠಿಗರು ಕೇಳುವುದಂತೂ ಸಂಪೂರ್ಣ ಅನ್ಯಾಯ ಹಾಗೂ ಅಕ್ರಮ ನೀತಿ.

ಅದೇನೇ ಇರಲಿ, ಎಲ್ಲಾ ಪ್ರಶ್ನೆಗಳನ್ನೂ ಒಟ್ಟಿಗೆ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂಬುದಕ್ಕಿಂತ ಇಂತಹ ಪ್ರಶ್ನೆಗಳ ಪರಿಶೀಲನೆಗೆ ನೇಮಿಸಲಾಗುವಂತಹ ವ್ಯಕ್ತಿಗಳು ಯಾವುದೇ ಪಕ್ಷದ ಕಡೆಗೆ ವಾಲ

(ಹದಿನಾರನೇ ಪುಟ ನೋಡಿ)

ಕೆನರಾ ಬ್ಯಾಂಕಿನ ಕೊಡುಗೆ
ಪ್ರಥಮ ರ್‍ಯಾಂಕಿನ ಕಾಮರ್ಸ್ ಪದವೀಧರರಿಗೆ
ನಗದು ಬಹುಮಾನ

ಕೆನರಾ ಬ್ಯಾಂಕ್ ಲಿಮಿಟೆಡ್ — ಇದರ ವಜ್ರ ಮಹೋತ್ಸವದ ನೆನಪಿಗಾಗಿ 'ಬ್ಯಾಂಕಿಂಗ್' ವಿಶಿಷ್ಟ ವಿಷಯವಾಗಿ ಬಿ. ಕಾಂ. ಡಿಗ್ರಿ ಪರೀಕ್ಷೆಯಲ್ಲಿ (1965—66 ರ ಎಕೆಡೆಮಿಕ್ ವರ್ಷದ ಅಂತ್ಯದಲ್ಲಿ ಏರ್ಪಡಿಸಿದ) ಪ್ರಥಮ ರ್‍ಯಾಂಕ್ ಗಳಿಸಿ ಉತ್ತೀರ್ಣರಾದ ಈ ಕೆಳಗಿನ ಹದಿನೈದು ವಿಶ್ವವಿದ್ಯಾನಿಲಯಗಳ ಪ್ರತಿ ವಿದ್ಯಾರ್ಥಿಗೆ ರೂ.100/-ರ ನಗದು ಬಹುಮಾನ ಕೊಡಲು ಆಶಿಸಲಾಗಿದೆ.

(1) ಆಂಧ್ರ, (2) ಅಣ್ಣಾಮಲೈ, (3) ಬೆಂಗಳೂರು, (4) ಬೊಂಬಾಯಿ
(5) ಕಲ್ಕತ್ತ, (6) ದಿಲ್ಲಿ, (7) ಗುಜರಾಥ್, (8) ಕರ್ನಾಟಕ
(9) ಕೇರಳ, (10) ಮದ್ರಾಸು, (11) ಮೈಸೂರು, (12) ನಾಗಪುರ
(13) ಒಸ್ಮಾನಿಯಾ, (14) ಪೂನಾ, (15) ವೆಂಕಟೇಶ್ವರ.

ಹೆಚ್ಚಿನ ವಿಶೇಷ ನಿಯಮಗಳಿಗೆ —
ಇನ್‌ಫಾರ್ಮೇಶನ್ ಆಫೀಸರ್, ಕೆನರಾ ಬ್ಯಾಂಕ್ ಲಿಮಿಟೆಡ್,
ಆಡಳಿತ ಆಫೀಸು, ಪೋಸ್ಟ್ ಬಾಕ್ಸ್ ನಂ. 648,
ಬೆಂಗಳೂರು-2.
ಇವರಿಗೆ ಬರೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಕಛೇರಿ: ಮಂಗಳೂರು
ಆಡಳಿತ ಕಛೇರಿ: ಬೆಂಗಳೂರು
1966 — ವಜ್ರ ಮಹೋತ್ಸವದ ವರುಷ

ಭಾರತದ ಕೀರ್ತಿ ಕಲಶ ೭

ಒಂದು ಬೆಳೆವಲ್ಲಿ ಮೂರು ಬೆಳೆ-ಆಹಾರ ಉದ್ದಿ

೧

ದಾಮೋದರ ಕಣಿವೆ ಯೋಜನೆ—ಭಾರತದ ಯೋಜನಾಬದ್ಧ ಅಭಿವೃದ್ಧಿಯ ಜ್ವಲಂತ ದ್ಯೋತಕ.

ಡಿ ವಿ ಸಿ (ದಾಮೋದರ ವ್ಯಾಲಿ ಕಾರ್ಪೊರೇಶನ್) ೯,೩೫೦ ಚದರ ಮೈಲು ವಿಸ್ತೃತ ಪ್ರದೇಶಕ್ಕೆ ಕೃಷಿಗೆ ನೀರನ್ನು ಪೂರೈಸಿದೆ. ಉದ್ದಿಮೆಗಳಿಗೆ ವಿದ್ಯುತ್ತನ್ನು ಒದಗಿಸಿದೆ. ಪೂರ್ವ ಬಿಹಾರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಕ್ರಾಂತಿ ಕಹಳೆಯನ್ನೂದಿದೆ.

ಹದಿನೆಂಟು ವರ್ಷಗಳಿಗೆ ಮೊದಲು-ದಾಮೋದರ ಕಣಿವೆಯೋಜನೆಯು ಪ್ರಾರಂಭವಾಯಿತು—ಅಂದಿನಿಂದ ಇಂದಿನ ವರೆಗೆ—

● ಡಿವಿಸಿಯ ನಾಲ್ಕು ಮುಖ್ಯ ಅಣೆಕಟ್ಟುಗಳಲ್ಲಿ ಎರಡು ಅಖಿಲಭಾರತದಲ್ಲಿಯೇ ದೊಡ್ಡವು.

● ಆರು ಡಿವಿಸಿ ವಿದ್ಯುದಾಲಯಗಳು ದೇಶದ ಹತ್ತರಲ್ಲೊಂದಂಶ ಶಕ್ತಿ ಉತ್ಪಾದಿಸುವುವು.

● ೧,೫೫೦ ಮೈಲುದ್ದದ ಕಾಲುವೆಗಳು ಒಣ ಭೂಮಿಗಳಿಗೆ ನೀರುಣಿಸುವುವು.

● ಚಂದ್ರಾಪುರದಲ್ಲೊಂದು ಥರ್ಮಲ್ ಕಾರಖಾನೆ, ದುರ್ಗಾಪುರದಲ್ಲೊಂದು ಉಕ್ಕಿನ ಕಾರಖಾನೆ, ಮತ್ತೊಂದು ಇದ್ದಲು ಶುದ್ಧೀಕರಿಸುವ ಕಾರಖಾನೆಗಳು ಇಲ್ಲಿ ಜನ್ಮವೆತ್ತಿ ಈ ಪ್ರದೇಶದ ಔದ್ಯಮಿಕ ಅಭಿವೃದ್ಧಿಗೆ ನಾಂದಿ ಹಾಡಿವೆ.

● ಎಲ್ಲಕ್ಕಿಂತ ಮಿಗಿಲಾಗಿ, ಆಹಾರ ಸ್ವಾವಲಂಬನೆಯ ಗುರಿಯತ್ತ ಭಾರತವನ್ನೊಯ್ಯುವಲ್ಲಿ ಈ ಯೋಜನೆಯು ತನ್ನ ಮಹತ್ವದ ಕಾಣಿಕೆ ನೀಡಿದೆ.

ಬರಡು ಭೂಮಿಗೆ ವರದಾನ

ಯೋಜನೆಯಲ್ಲೊಂದು ಭೂಸ್ಥಿತಿಯನ್ನು ಸುಧಾರಿಸುವ ಮತ್ತದನ್ನು ರಕ್ಷಿಸುವ ಕಾರ್ಯಕ್ರಮವಿದೆ. ಇದರಲ್ಲಿ ಸಾವಿರಾರು ಎಕ್ರೆ ಬರಡು ಭೂಮಿಯನ್ನು ಹಸನು ಮಾಡಲಾಗುತ್ತದೆ. ಮೊದಲು ಒಂದೇ ಒಂದು ಬೆಳೆ ಬೆಳೆಯುತಿದ್ದಲ್ಲಿ ಇಂದು ಮೂರು ಬೆಳೆಗಳನ್ನು ಪಡೆಯುವಂತಾಗಿದೆ. ಡಿವಿಸಿಯ ಮಾರ್ಗದರ್ಶಕ ಡಾ| ಪಿ. ಸಿ. ಸೇನರ ಹೇಳಿಕೆಯಂತೆ ಬಿಹಾರ ಮತ್ತು ಪಶ್ಚಿಮ ಬಂಗಾಳದ ೭,೯೦೦ ಚದರ ಮೈಲುಗಳಿಗೂ ಮೀರಿದ ಪಡುಭೂಮಿಯಿಂದು ಸಾಗುಭೂಮಿಯಾಗಿದೆ. ಬರಡು ಭೂಮಿಗೆ ಡಿವಿಸಿ ಒಂದು ವರದಾನವೆನಿಸಿದೆ.

ಹುಲುಸು ಬೆಳೆ

ಕೈಕೊಂಡ ಕಾರ್ಯಕ್ರಮಗಳು ಯಶಸಿಗಳಿಸಿದುವು. ಒಂದು ಎಕ್ರೆಯಲ್ಲಿ ಮೂವತ್ತು ಕಿಲೋಗ್ರಾಮ್ ಧಾನ್ಯವೂ ಬೆಳೆಯುವುದು ಕಠಿನವಾಗಿತ್ತು. ಅಲ್ಲಿ ಇಂದು ೭೨೦ ಕಿಲೋಗ್ರಾಮ್ ಬೆಳೆಯುತ್ತಿದೆ.

ಮುಂದಿನ ವರ್ಷದಲ್ಲಿ ಡಿ ವಿ ಸಿ ಮತ್ತೊಂದು ಹೆಜ್ಜೆ ಮುಂದಿಡುವುದು. ೪,೫೦೦ ಎಕ್ರೆ ಬರಡುಭೂಮಿಯನ್ನು ಹಸನು ಮಾಡಿ ೨೦,೦೦೦ ಟನ್ ಧಾನ್ಯ ತೆಗೆಯುವ ಉತ್ತಮ ಯೋಜನೆ ಅದರದ್ದು.

ಮುಖವೇ ಕಥೆ ಹೇಳುತ್ತದೆ.

ಹಸುರು–ಹಳದಿ ಪೈರು ಗದ್ದೆಗಳೆದೆದ್ದು ತೋರುವ ನಗು ಮೊಗಗಳಲ್ಲೆ ಡಿವಿಸಿಯ ಕೃಷಿ ಕಾರ್ಯಕ್ರಮದ ಯಶಸ್ಸು ವ್ಯಕ್ತವಾಗುತ್ತದೆ; ಈ ಯೋಜನೆಯು ಜನರಲ್ಲಿ ಸಂತೋಷ ಮೂಡಿಸಿದೆ ಎಂಬುದು ಗೊತ್ತಾಗುತ್ತದೆ.

ಪೂಲೋ ಮಹತೋ ಒಬ್ಬ ರೈತ. ಹಜಾರಿಬಾಗದಿಂದ ಕೆಲವೇ ಮೈಲು ದೂರದ ಜಗದೀಶಪುರದಲ್ಲಿ ಈತನ ಹೊಲವಿದೆ. ಒಂದು ದಿನ ಅನಿರೀಕ್ಷಿತವಾಗಿಯೇ ಈತನ ಮನೆ ಬಾಗಿಲಿಗೆ ಡಿವಿಸಿಯ ಕಾರ್ಯಕ್ರಮ ಬಂತು—ಅನುಗ್ರಹವೇ ಎನಿಸಿತು. ಈತನ ಭೂಮಿ ಗುಡ್ಡದ ಮೇಲಿದೆ, ಕೆಳಗೆ ಹರಿಯುವ ದೊಡ್ಡ ತೋಡು—ಈ ಗುಡ್ಡವನ್ನು ಕೊರೆಯುತ್ತಲೂ ಇತ್ತು. ಕಳೆದ ವರ್ಷ ಡಿವಿಸಿ ಆತನ ನೆರವಿಗೆ ನಿಂತಿತು.–ಆತನ ಭೂಮಿಯ ಬಳಿಯೇ ತೋಡಿಗೆ ಒಂದು ಚಿಕ್ಕ ಅಣೆಕಟ್ಟು ಕಟ್ಟಿತು–ಭೂಮಿಯ ಸವೆತ ಇದರಿಂದ ತಪ್ಪಿತು. ನೀರನ್ನೂ ಸಂಗ್ರಹಿಸಿತು. ಡಿವಿಸಿಯ ಪ್ರೇರಣೆಯಿಂದ ಪೂಲೋ ತನ್ನ ಭತ್ತದ ಪೈರನ್ನು ಕೊಯ್ದ ಬಳಿಕ, ಗೋದಿಯನ್ನು ಬಿತ್ತಿದ.

ಇನ್ನು ಮುಂದಿನ ಕಥೆಯನ್ನು ಪೂಲೋವಿನ ಹಸನ್ ಮುಖದಿಂದಲೇ ಕೇಳಿ: "ನಾನಿದುವರೆಗೆ ಗೋದಿ ಬಿತ್ತಿದವನಲ್ಲ. ಡಿವಿಸಿಯವರ ಪ್ರೇರಣೆಯಿಂದ ನೋಡೋಣವೆಂದು ಅದನ್ನು ಬಿತ್ತಿದೆ. ನೀವೆಲ್ಲರೂ ನೋಡುತ್ತಿರುವಂತೆ ಬೆಳೆ ಹಸನಾಗಿದೆ. ನಮ್ಮ ಫಸಲನ್ನು ನಾವು ಶೀಘ್ರವಾಗಿ ಕೊಯ್ಯುವವರಿದ್ದೇವೆ" — ಇದನ್ನು ಹೇಳುವಾಗ ಆತನ ಮುಖ ಹೆಮ್ಮೆಯಿಂದ ಅರಳುತ್ತದೆ.

ಭಾಗೀರಥಿಗೆ ನಮೋನಮಃ

ಪೂಲೋವಿನ ಮೇಲೆ ಡಿವಿಸಿಯ ಪ್ರಭಾವ ಬಿದ್ದಿದೆ ತುಂಬ. ಅವನಿಗೆ ಅದರ ಮೇಲೆ ವಿಶ್ವಾಸವೂ ಹುಟ್ಟಿದೆ ಮೊದಲೊಂದು ಬೆಳೆ ಭತ್ತ ನೀಡುತಿದ್ದವನ ಗದ್ದೆ ಗೋದಿಯನ್ನೂ ಕೊಡುತ್ತಿದೆ. ಇತ್ತಿಯಲ್ಲಿ ಆತ ಬೆಂಡೆಕಾಯಿಯ ತೋಟ ಮಾಡಿದ್ದಾನೆ. ಅವನು ಉದ್ಗರಿಸುತ್ತಾನೆ— "ಅಣೆಕಟ್ಟೆಯಲ್ಲಿ ನಲೆನಿಂತ ಭಾಗೀರಥಿಗೆ ನಮೋನಮಃ ನನ್ನ ಭೂಮಿಯಲ್ಲಿ ಈ ಬಾರಿ ಮೂರು ಬೆಳೆಯನ್ನು ಕೊಯ್ಯುತ್ತೇನೆ. ಈ ತಾಳು ಭೂದೇವಿಯು ಇಷ್ಟಲ್ಲ ಬೆಳೆಯಬಲ್ಲಳೆಂದು ನಾನು ಅರಿತಿರಲೇ ಇಲ್ಲ"

ಪೂಲೋ ಗೋದಿಯ ಬೆಳೆಯಿಂದ ರೂ. ೩೫೦ನ್ನು ಪಡೆಯುವ ಆಶೆಯ ಹೊಂದಿದ್ದಾನೆ. ಅವನು ಹೇಳುತ್ತಾನೆ— "ಬೆಂಡೇಕಾಯಿಯು ಒಳ್ಳೆಯದಾದರೆ, ಇನ್ನೂ ರೂ. ೪೫೦ನ್ನು ಗಳಿಸಬಲ್ಲೆ"

ದೇವರೇ ಬಂದ

ಡಿವಿಸಿಯ ಕಾರ್ಯಕ್ರಮಗಳಿಂದ ಲಾಭಗಳಿಸುತ್ತಿರುವ ಅನೇಕರಲ್ಲಿ ಪೂಲೋ ಮಹತೋ ಒಬ್ಬ. ಈ ಬಗೆಯ ಯೋಜನೆಯಿಂದ ನಿಮಗೇನಾದರೂ ಲಾಭವಾಗಿದೆಯೋ ಎಂದು ಬಹ್ರುಲಾಲರನ್ನು ಕೇಳಿದಾಗ ಅವರು ವಿಸ್ಮಿತರಾದರು:

"ಏನನ್ನುತ್ತೀರಿ ನೀವು? ಈ ಬರಡು ನೆಲದಲ್ಲಿ ನಾವೆಲ್ಲರೂ ಒಂದು ಬೆಳೆಗಿಂತ ಹೆಚ್ಚು ಬೆಳೆದಿಲ್ಲವೆಂಬುದು ನಿಮಗೆ ಗೊತ್ತಿಲ್ಲವೇನು? ಡಿವಿಸಿಯ ಮಾತಿನಂತೆ ನಡೆಯುವದು ಎಂದರೆ ಸಮಯ ಮತ್ತು ಶಕ್ತಿಯ ಅಪವ್ಯಯವೆಂದು ನಂಬಿದ್ದೆವು. ಆದರೆ ಅವರು ಬಿಡಬೇಕಲ್ಲ? ತಲೆಯ ಮೇಲೆ ಭೂತ ಸವಾರಿ ಮಾಡಿದಂತೆ ನಿಂತರು. ಕೊನೆಗೆ ಹೇಗಾದರೂ ಈ ಮಾರಿ ಹೋಗಲಿ ಎಂದು ಒಪ್ಪಿದೆವು. ಅವರು ಇತ್ತ ಬೀಜ, ಗೊಬ್ಬರಗಳನ್ನು ಪಡೆದು ಉದಾಸೀನದಿಂದಲೇ ಬಿತ್ತಿದೆವು. ಆದರೆ, ಏನಾಶ್ಚರ್ಯ ಈಗ ನೋಡಿ, ನಮ್ಮ ತಲೆ ಮೇಲೆ ಭೂತವಲ್ಲ,ದೇವರೇ ಬಂದು ಕುಳಿತಂತಾಯಿತು—ನಮ್ಮ ಬಡತನ ದೂರವಾಗುವುದು."

ನಾವು ಮುಂದುವರಿವೆವು

ಕಾಳಿ ಮಹತೋ ಜಗದೀಶ ಪುರದ ನಾಯಕ.ಇಡಿ ಗ್ರಾಮ ವಾಸಿಗಳ ಪರವಾಗಿ ಅವರು ಹೇಳುತ್ತಾರೆ:—

"ಡಿವಿಸಿಯು ನಮ್ಮ ಆಯವನ್ನು ಹೇಗೆ ಹೆಚ್ಚಿಸಬಹುದೆಂಬುದನ್ನು ತೋರಿಸಿಕೊಟ್ಟಿದೆ. ನಾವು ಇದನ್ನರಿತುಕೊಂಡೆವು. ಅದೇ ದಾರಿಯಲ್ಲಿ ಮುಂದುವರಿವೆವು; ಉನ್ನತಿಯನ್ನು ಸಾಧಿಸುವೆವು."

ಅವರ ಮುಂದಿನ ಯೋಜನೆ ನೋಡಿ. ಕಾಳಿ ಮಹತೋ ಮಾತ್ರ ತರು ಸದ್ಯದಲ್ಲೇ ವಿದ್ಯುಚ್ಛಕ್ತಿಯ ಸಂಬಂಧ ಪಡೆಯಲು

...ೋದರ ಕಣಿವೆ ಯೋಜನೆ

...ಬೆಳೆಯುದಲ್ಲಿ ಹುಲುಸು
...ಮಹತ್ತರ ಕ್ರಾಂತಿ

ಅರ್ಜಿ ಸಲ್ಲಿಸುವರು ಪಂಪು ಸೆಟ್ಟನ್ನು ಇಡುವರು, ಅಣೆಕಟ್ಟಿನ ಜಲಾಶಯದ ನೀರಿನಿಂದ ಅಧಿಕ ಬೆಳೆಸುವರು.

ಡಿವಿಸಿಯ ಕಾರ್ಯಕ್ರಮಗಳಿಂದ ಉನ್ನತಿ ಹೊಂದಿದ ನೂರಾರು ಹಳ್ಳಿಗಳಲ್ಲಿ ಜಗದೀಶಪುರವೊಂದು. ಇದೇ ಬಗೆಯ ಕಾರ್ಯಕ್ರಮ ವಿಶಾಲ ಕಣಿವೆಯ ಹಳ್ಳಿ ಹಳ್ಳಿಯನ್ನೂ ಮುಟ್ಟುತ್ತಿದೆ. ಅಧಿಕ ಉತ್ಪಾದನೆಗೆ, ಸಮೃದ್ಧತೆಗೆ ಪ್ರೇರಕ ಶಕ್ತಿಯಾಗಿದೆ.

ನೀರಿನ ಪೂರೈಕೆ, ಮಣ್ಣಿನ ಸಂರಕ್ಷಣೆ ಮತ್ತು ಸುಧಾರಣೆಗಳಿಂದ ಒಂದು ಬೆಳೆ ವಲ್ಲಿ ಮೂರು ಬೆಳೆಯುತ್ತದೆ, ಅಧಿಕ ಉತ್ಪಾದನೆಯನ್ನು ತರುತ್ತದೆ. ಬೆಳೆಗಳ ಬದಲಾವಣೆಯಿಂದಲೂ ಉತ್ಪತ್ತಿಯನ್ನು ಹೆಚ್ಚಿಸುವುದು ಸಾಧ್ಯವಾಗಿದೆ.

"ಮೊದಲು ಏನೂ ಬೆಳೆಯದಿದ್ದ ಭೂಮಿಯಲ್ಲಿ ಇಂದು ಪೈರು ಬೆಳೆಯುತ್ತದೆ. ಏರು ತಗ್ಗಿನ ಬರಡು ನೆಲದಲ್ಲಿ ಕಾಡುಗಳು ಹುಲ್ಲುಗಾವಲುಗಳೂ ಕಂಗೊಳಿಸುತ್ತವೆ. ಕಣಿವೆಯ ಕೆಲವು ಪ್ರದೇಶದ ಮಣ್ಣು ಕೃಷಿಗೆ ಉತ್ತಮವಾಗಿಲ್ಲ. ಇಂತಹ ಸ್ಥಳಗಳಲ್ಲಿ ಧಾನ್ಯ ಬೆಳೆಯುವುದರ ಬದಲು ಮರನಾಟುವುದರತ್ತ ರೈತರ ಮನ ಪೊಲಿಸಲಾಗುತ್ತಿದೆ." — ಸೇನ್ ಹೇಳುತ್ತಾರೆ.

ಅನ್ಯುನ್ನತವಾದ ಕೃಷಿಗೆ ನಿರುಪಯುಕ್ತವಾದ ಸುಮಾರು ೯೪ ಸಾವಿರ ಎಕ್ರೆ ನೆಲದಲ್ಲಿ ಈಗಾಗಲೇ ಕಾಡುಗಳು ಬೆಳೆದಿವೆ. ಕಣಿವೆ ಪ್ರದೇಶದಲ್ಲಿ ಉತ್ತಮ ಜಾತಿಯ ಮರ "ಸಿಸ್ಸೊ" ಬಿದಿರು ಮೆಳೆ, ಕರಿಜಾಲೀ ಮರಗಳ ಹಸುರನ್ನು ಕಾಣಬಹುದು. ಬೇಸಗೆಯ ಉರಿಯಲ್ಲಿ ಉರಿಯುವ, ಒಣಗುವ ಹೊಲಗಳಿಗೆ ಈ ಮರಗಳು ಹುಸು ತಂಪನ್ನೀಯುತ್ತವೆ. ಮಳೆಗಾಲದಲ್ಲಿ ನೆರೆಯಿಂದಾಗಿ ಮಣ್ಣು ಕೊರೆದುಹೋಗದಂತೆ ಇವು ರಕ್ಷಿಸುತ್ತವೆ. ಈ ಕಾಡುಗಳು ಬೆಳೆದುವೆಂದರೆ, ಪ್ರತಿಎಕ್ರೆಯೂ ವರ್ಷವೊಂದರ ರೂ. ೧೫೧ರ ಮೋಸನ್ನು ಕೊಡುವ ನಿರೀಕ್ಷೆಯಿದೆ.

ಕೀರ್ತಿಕಲಶ

ದಾಮೋದರ ಕಣಿವೆಯಲ್ಲಿ ನಾಲ್ಕು ವಿವಿಧೋದ್ದೇಶಿತ ಅಣೆಕಟ್ಟುಗಳಿವೆ. ತಿಲೈಯಾ, ಕೋನಾರ್ ಮೈಥಾನ್ ಮತ್ತು ಪಂಚತ್ ಹಿಲ್—ಇವು ಹಲವಾರು ಮೈಲುದ್ದ ಹರಿಯುವ ದಂಡೆಗಳು. ಈ ನಾಲ್ಕು ಜಲಾಶಯಗಳಲ್ಲಿ ಸಂಗ್ರಹಿತವಾದ ನೀರು ನೀರಾವರಿ ಮತ್ತು ವಿದ್ಯುದುತ್ಪಾದನೆ ಧಾರಾಳವೆನಿಸುವುದು. ಡಿವಿಸಿಯ ಜಲಾಶಯಕ್ಕೆ ನಿಕಟವಿರುವ ಸುಮಾರು ೪೦ ಸಾವಿರ ಎಕ್ರೆ ಭೂಮಿಯನ್ನು ಸಾಗುವಳಿ ಮಾಡುತ್ತಿದೆ. ಇಲ್ಲಿನ ಫಸಲಾದರೂ ಆಶ್ಚರ್ಯಕರ್ತ್ತವು. ಉದಾಹರಣೆಗೆ, ತಿಲೈಯಾದ ಬಳಿಯಲ್ಲಿ ಒಂದೇ ಎಕ್ರೆಯಲ್ಲಿ ೪೫, ೧,೧೦೦ ರೂಪಾಯಿ ಬೆಲೆ ಬಾಳುವಷ್ಟು ಕಲ್ಲಂಗಡಿ ಹಣ್ಣು ಬೆಳೆದಿದೆ.

ಈ ಪ್ರದೇಶಗಳಲ್ಲಿ ನೀರಿನ ಪೂರೈಕೆಯು ಧಾರಾಳವಿರುವುದರಿಂದ ಯಾವ ಬೆಳೆಯನ್ನಾದರೂ ಬೆಳೆಯಬಹುದು —ಭತ್ತ, ಗೋದಿ, ಕಲ್ಲಂಗಡಿ, ಟೊಮೆಟೋ, ಬೇಂಡೆ ಮತ್ತಿತರ ತರಕಾರಿಗಳು ಇಲ್ಲಿ ಹುಲುಸಾಗುತ್ತವೆ.

ದಾಮೋದರ ಕಣಿವೆ ಯೋಜನೆಯು ಬರಿಯ ಬಿಹಾರ ಮತ್ತು ಪಶ್ಚಿಮ ಬಂಗಾಳಗಳ ಕೀರ್ತಿಯಲ್ಲ, ಸಮಸ್ತ ಭಾರತದ ಕೀರ್ತಿ ಕಲಶ. ಇದರಂತಹುದೇ ಅನೇಕ ಯೋಜನೆಗಳು ದೇಶದ ಬೇರೆ ಬೇರೆಡೆಯಲ್ಲಿ ತಲೆಯೆತ್ತಿವೆ. ದೇಶದ ಆಹಾರೋತ್ಪಾದನೆ ಮತ್ತು ಉದ್ದಿಮೆಯ ರಂಗದಲ್ಲಿ ಬೃಹತ್ ಕ್ರಾಂತಿಯನ್ನೆಬ್ಬಿಸಿ, ಪ್ರಗತಿ—ಸಮೃದ್ಧಿಯತ್ತ ಜನತೆಯನ್ನು ಒಯ್ಯುತ್ತಿವೆ.

ಸಮಸ್ತ ಭಾರತೀಯರು ಅಭಿಮಾನಪಟ್ಟುಕೊಳ್ಳಬೇಕಾದ ಯೋಜನೆಗಳಲ್ಲಿ ದಾಮೋದರ ಅಗ್ರಮಾನ್ಯ.



೧

ಚಿತ್ರಗಳು

೧. ತಿಲೈಯಾ ಜಲಾಶಯದ ಹಿನ್ನೆಲೆಯ ಸೌಂದರ್ಯ ನೋಡಿರಿ. ಇಲ್ಲಿಯ ನೀರಿನಿಂದಲೇ ಎಕರೆ ಭೂಮಿಯು ರೂ. ೧,೧೦೦ನ್ನು ಸಂಪಾದಿಸಿಕೊಟ್ಟಿತು. ರೈತನೊಬ್ಬ ಕಲ್ಲಂಗಡಿಯ ಎಣಿಗೆಯನ್ನು ಸರಿಗೊಳಿಸುತಿದ್ದಾನೆ. ಆತನ ಮುಖದಲ್ಲಿ ಪ್ರಸನ್ನತೆಯ ಸೆಲೆ ಮೂಡಿ ನಲಿಯುತ್ತಿದೆ.

೨. ಜಗದೀಶಪುರದ ಮುಗ್ಧ ರೈತ ಬಹ್ರುಲಾಲ್. ತನ್ನ ಹೊಲದಲ್ಲಿ ಗೋದಿ ಬೆಳೆಯುವುದೆಂಬ ಸಂಗತಿ ಅವನಿಗೆ ಗೊತ್ತಿರಲಿಲ್ಲ. ಡಿವಿಸಿಯ ಪ್ರೇರಣೆ ದೊರೆತ ಬಳಿಕ ಆತನೂ ತನ್ನ ಗ್ರಾಮದ ಇತರ ರೈತರಂತೆ ಎರಡನೆ ಬೆಳೆಯಾಗಿ ಗೋದಿ ಬೆಳೆಯುತ್ತಾನೆ. ತನ್ನ ಉತ್ಪಾದನೆಯನ್ನು ಹೆಚ್ಚಿಸುವುದರೊಂದಿಗೆ ದೇಶದ ಉನ್ನತಿಯಲ್ಲೂ ತನ್ನ ಪಾಲಿದೆ ಎಂದಾತ ಸಂತೋಷಿಸುತ್ತಿದ್ದಾನೆ, ಹೊಸತಾಗಿ ಬೆಳೆದು ನಿಂತ ಗೋದಿಯ ಗಿಡಗಳ ನಡುವೆ.

೨

ತೂಗು, ತೂಗು...............

೩. ಅಹಮ್ಮದಾಬಾದಿನ ಶ್ರೀಮತಿ ಸಾವಿತ್ರಿಬೆನ್ ಇಂದ್ರಜಿತ್ ಪರೀಖರು ೧೨ನೆಯ ವಯಸ್ಸಿನಿಂದಲೇ ಕಲಾರಾಧಕರಾಗಿ ಬೆಳೆದು ಬಂದವರು. ನಿರುಪಯೋಗಿ ಮರದ ತುಂಡೊಂದರಲ್ಲಿ ಕೆತ್ತನೆಯ ಕೆಲಸ ಪ್ರಾರಂಭಿಸಿದ ಈಕೆ ಇಂದು ಅತ್ಯುತ್ತಮವಾದ ಉಯ್ಯಾಲೆಯನ್ನು ಕೆತ್ತಿದ್ದಾರೆ. ದುಡಿಮೆಯೇ ದೇವರು ಎನ್ನುವ ಪರೀಖ್ ಗೆರಟೆ, ಕನ್ನಡಿ ಚೂರು, ಹುಲ್ಲುಗಳಿಂದಲೂ ಕಲಾ ವಸ್ತುಗಳನ್ನು ರಚಿಸುವ ಹವ್ಯಾಸ ಹೊಂದಿದ್ದಾರೆ.

ಈಕೆಯು ಶ್ರೀಮತಿ ಕೆನಡಿ, ರಾಣಿ ಎಲಿಜಬೆಥ್ ಮೊದಲಾದ ಪ್ರತಿಷ್ಠಿತರಿಗೆ ಭಾರತೀಯ ಪ್ರಧಾನಿ ನೀಡಿದ ಕಾಣಿಕೆಗಳನ್ನು ನಿರ್ಮಿಸಿದವರು.

ಲಾಲ್ ಬಹದೂರ್ ಶಾಸ್ತ್ರಿಯವರು ಅಮೆರಿಕನ್ ಸಂದರ್ಶನ ಮಾಡುವುದೆಂದು ಗೊತ್ತಾದ ಬಳಿಕ ಅಹಮ್ಮದಾಬಾದಕ್ಕೆ ತೆರಳಿದಾಗ ಶ್ರೀಮತಿ ಪರೀಖರು ಶ್ರೀಮತಿ ಜಾನ್ಸನ್ನಂಗೆ ಕಾಣಿಕೆ ನೀಡಲು ಒಂದು ಉಯ್ಯಾಲೆಯನ್ನು ರಚಿಸುವುದಾಗಿ ಹೇಳಿದರು. ಆದರೆ, ಝೂಲಾವನ್ನು ಒಪ್ಪಿಸಲು ಶಾಸ್ತ್ರಿ ಬದುಕುಳಿಯಲ್ಲ. ಅವರ ಉತ್ತರಾಧಿಕಾರಿ ಶ್ರೀಮತಿ ಇಂದಿರಾಗಾಂಧಿಯವರು ತನ್ನ ಸಂದರ್ಶನದ ವೇಳೆ ಈ ಉಯ್ಯಾಲೆಯನ್ನು ಭಾರತೀಯರ ಪ್ರೀತಿಯ ಕಾಣಿಕೆಯಾಗಿ ಅರ್ಪಿಸಿದರು.

ಇಂದು ಅಧ್ಯಕ್ಷರ ಶ್ವೇತ ಭವನದ ಕೋಣೆಯೊಂದರಲ್ಲಿ ಈ ಭಾರತೀಯ ಝೂಲಾ ಪ್ರೀತಿಯಿಂದ ಶ್ರೀಮತಿ ಜಾನ್ಸನ್ನರನ್ನು ಕರೆಯುತ್ತಿದೆ, ತೂಗು ತೂಗು.

ಚಿತ್ರದಲ್ಲಿ ಶ್ರೀಮತಿ ಗಾಂಧಿಯವರು ಝೂಲಾದಲ್ಲಿ ಮಂಡಿಸಿರುವುದನ್ನು ಕಾಣಬಹುದು.

ಉಡುಪಿಯಲ್ಲಿ ಶ್ರೀ ಬಿ. ಯಂ. ಕಾರ್ಯಪ್ಪ

ಉಡುಪಿ ರೋಟರಿ ಕ್ಲಬ್ ಮತ್ತು ಕ್ಷಯರೋಗ ಸಂಘ, ಉಡುಪಿ ಶಾಖೆಯ ಸಂಯುಕ್ತ ಅಧಿವೇಶನವನ್ನು ಉದ್ದೇಶಿಸಿ ಮಾತಾಡುತ್ತಾ ಅಖಿಲಭಾರತ ಕ್ಷಯರೋಗ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಯಂ. ಕಾರ್ಯಪ್ಪನವರು, ಕ್ಷಯರೋಗಿಗಳಿಗಾಗಿ ತೆರವಾಗಿರುವ ೩೬ಸಾವಿರ ಬೆಡ್ಡುಗಳಲ್ಲಿ ಸುಮಾರು ೭೦ಸಾವಿರವಾದರೂ ಖಾಲಿ ಇದೆ. ಈ ಪರಿಸ್ಥಿತಿಯು ಕ್ಷಯರೋಗ ನಿವಾರಣೆಗೆ ಪೋಷಕವಾಗಿಲ್ಲ. ಆದುದರಿಂದ ಕ್ಷಯರೋಗ ಸಂಘಗಳು ಈ ಕುರಿತು ಪ್ರಚಾರಮಾಡಬೇಕಾಗಿದೆ. ಆಸ್ಪತ್ರೆಗಳ ಸಂಪೂರ್ಣ ಪ್ರಯೋಜನವನ್ನು ರೋಗಿಗಳು ಪಡೆಯುವಂತಾಗಿರಬೇಕು ಎಂದು ನುಡಿದರು. ಮುಂದುವರಿಯುತ್ತಾ ಅವರು, ಮಣಿಪಾಲದಲ್ಲಿರುವ ಆಸ್ಪತ್ರೆ ಮತ್ತಿತರ ಸೌಕರ್ಯಗಳನ್ನು ಗಮನಿಸಿ ಒಂದು ತರಬೇತಿ ಹಾಗೂ ಪ್ರತ್ಯಕ್ಷ ದರ್ಶನ ಕೇಂದ್ರವನ್ನು ತೆರೆಯುವ ಯೋಜನೆಯಿದೆಯೆಂದೂ ಹೇಳಿದರು.

ಪ್ರಾರಂಭದಲ್ಲಿ ಉಡುಪಿ ಸಂಘದ ಕಾರ್ಯದರ್ಶಿ ಡಾ| ಕೆ. ಮೋಹನದಾಸ ಪೈಯವರು ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಸಿ, ಸಂಘದ ವರದಿಯೊಪ್ಪಿಸಿದರು. ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ಶ್ರೀ ಕುಕ್ಕಾಲ್ ವಾಸುದೇವ ಕಿಣಿ ಮತ್ತು ಡಾ|| ಕೊಟ್ಟಕಾರ್ ವಿಠಲದಾಸ ಪೈಗಳು ಒಂದೊಂದು ಬೆಡ್ಡನ್ನು ದಾನವಾಗಿ ನೀಡಲು ರೂ. ೩ಸಾವಿರದಂತೆ ಚೆಕ್ಕನ್ನು ಮುಖ್ಯ ಅತಿಥಿಗಳ ಮೂಲಕ ಡಾ| ಟಿ. ಮಾಧವ ಪೈಗಳಿಗೆ ಒಪ್ಪಿಸಿದರು. ಡಾ| ಪೈಗಳು ಈ ಕೊಡುಗೆಯನ್ನು ಸ್ವೀಕರಿಸುತ್ತಾ ಇಷ್ಟರ ತನಕ ಸುಮಾರು ೩ ಲಕ್ಷ ರೂ. ನಿಧಿ ಸಂಗ್ರಹವಾಗಿದೆಯೆಂದು ತಿಳಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಕೆ. ಪೈಯವರು ವಹಿಸಿದ್ದು ಡಾ| ಸಿ. ಎಚ್. ಶಿವರಾಮರ್ನರವರು ಧನ್ಯವಾದ ಸಮರ್ಪಿಸಿದರು.

ಚಾರುಚೆಂದನ

ಕನ್ನಡಿಗರಿಗೆ ತ್ರಿಶಂಕು

ತನ್ನ ಹತ್ತೊಂಬತ್ತು ತಿಂಗಳುಗಳ ಅತ್ಯಲ್ಪ ಪದಾವಧಿಯಲ್ಲಿ ಲಾಲ್‌ಬಹದೂರ್ ಶಾಸ್ತ್ರಿಯವರು ತನ್ನ ಜೀವಮಾನವಿಡಿ ದುಡಿಯುತ್ತಿದ್ದ ಜನ ಸೇವೆಯನ್ನು ಪರಾಕಾಷ್ಠೆಗೆ ಮುಟ್ಟಿಸಿದರು; ಜನತೆಯ ಪ್ರೀತಿ ಮತ್ತು ಗೌರವಗಳನ್ನು ಅಶೇಷವಾಗಿ ಪಡೆದರು. ಮಹಾತ್ಮಾ ಗಾಂಧಿ ಮತ್ತು ಪಂಡಿತ ನೆಹರುರಿಂದ ಸ್ಫೂರ್ತಿ ಸಂಪಾದಿಸಿದ ನಾಯಕರ ಸಾಲಿನಲ್ಲಿ ನಿಲ್ಲುವ ಸಮರ್ಥರು ಇವರು; ಅವರು ಅನುಸರಿಸಿದ ತತ್ವ ಮತ್ತು ಗುರಿಗಳನ್ನೇ ಬಿಗಿಯಾಗಿ ಹಿಡಿದು, ಅವುಗಳ ಸಾಧನೆಯನ್ನೇ ತಮ್ಮ ಜೀವಿತದ ಧ್ಯೇಯವನ್ನಾಗಿ ಮಾಡಿಕೊಂಡವರು ಇವರು.

ಶಾಸ್ತ್ರಿ ಬಂಗಾರದ ತೊಟ್ಟಿಲಲ್ಲಿ ಹುಟ್ಟಿ ಬರಲಿಲ್ಲ. ಇಂದ್ರನ ಪದವಿಯಾಗಲಿ, ಕುಬೇರನ ಸಂಪತ್ತಾಗಲೀ ಅವರಿಗೆ ಇರಲಿಲ್ಲ. ಶಾಸ್ತ್ರಿ ಒಬ್ಬ ಸಾಮಾನ್ಯ ಭಾರತೀಯ, ನಲುವತ್ತು ಕೋಟಿಯಲ್ಲಿ ಒಬ್ಬನಾಗಿ ಹುಟ್ಟಿದರು, ಬೆಳೆದರು. ಅವರೊಬ್ಬ ಜನಸಾಮಾನ್ಯರ ಮನುಷ್ಯ. ನಿಸ್ವಾರ್ಥತೆ, ಸರಳ ಪ್ರತಿಷ್ಠೆ, ಮಾನವತೆಗಳಿಗೆ ಇನ್ನೊಂದು ಹೆಸರು ಲಾಲ್ ಬಹದ್ದೂರ್.

ಶಾಸ್ತ್ರಿ ನಮ್ಮನ್ನಗಲಿದರು. ಅದು ಎಂದು? ದೇಶಕ್ಕೆ ಅವರ ನಾಯಕತ್ವ, ಮಾರ್ಗದರ್ಶನ ಇನ್ನೂ ಅತ್ಯಗತ್ಯವೆನಿಸಿದ್ದ ವಿಷಮ ಸನ್ನಿವೇಶದಲ್ಲಿ! ತನ್ನ ಸಾವಿಗೆ ಕೆಲವು ಕ್ಷಣ ಮೊದಲೇ ಸಹಿ ಮಾಡಿದ ತಾಷ್ಕೆಂಟ್ ಘೋಷಣೆಯನ್ನೇ ತನ್ನ ಅಮರ ಸ್ಮಾರಕವಾಗಿಟ್ಟು ತೆರಳಿದರು. ಅವರ ಈ ಸ್ಮಾರಕವೇ ಅವರಿಗೆ ಸಾಕು.

ಆದರೆ, ಅವರು ನಮಗೆ ಮಾಡಿದ ಸೇವೆಗಾಗಿ ನಾವೂ ಅವರಿಗೆ ಏನಾದರೂ ಮಾಡಬೇಕು—ಅದು ನಮ್ಮ ಕರ್ತವ್ಯ. ಅವರ ಹೃದಯಕ್ಕೆ ಒಪ್ಪುವ ಅತ್ಯಂತ ಪ್ರಿಯವಾದ ಕಾರ್ಯವನ್ನು ನಾವು ಕೈಗೊಳ್ಳಬೇಕು—ಅದೇ ಅವರಿಗೆ ನಾವು ಸಮರ್ಪಿಸುವ ಉಚಿತ ಸ್ಮಾರಕ.

ಅದು ಏನು? ಶ್ರೀ ಸಾಮಾನ್ಯನ ಉನ್ನತಿ ಸಾಧನೆ—ಮುಖ್ಯವಾಗಿ ಹಳ್ಳಿಗರ ಅಭಿವೃದ್ಧಿ. ಎರಡನೆಯದು - ವಿದ್ಯಾಭ್ಯಾಸದ ಸೌಲಭ್ಯಗಳಿಂದ ವಂಚಿತರಾದ ಬಡ ವಿದ್ಯಾರ್ಥಿಗಳಿಗೆ ಸಹಾಯ. ಬಡತನದ ಬೇಗೆಯಲ್ಲಿ ಶಿಕ್ಷಣ ಪಡೆದ ಶಾಸ್ತ್ರಿ ಮನಸ್ಸಿಗೆ ಇದು ಒಪ್ಪುವಂತಹುದೇ.

ಈ ಉದ್ದೇಶ ಸಾಧನೆಗೆ ದೇಶದಲ್ಲಿ ಒಂದು ಟ್ರಸ್ಟ್ ರಚಿತವಾಗಿದೆ. ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಶನಲ್ ಮೆಮೋರಿಯಲ್ ಟ್ರಸ್ಟಿನ ಅಧ್ಯಕ್ಷರೂ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರೇ. ಅವರೊಂದು ವಿನಂತಿಯನ್ನು ಹೊರಡಿಸಿ, ಈ ಟ್ರಸ್ಟಿಗೆ ಉದಾರವಾದ ದಾನವನ್ನು ನೀಡಬೇಕೆಂದು ಕೇಳಿಕೊಂಡಿದ್ದಾರೆ.

ತಮ್ಮ ಬಂಗಾರದ ನಾಯಕನ ಅಮರ ಸ್ಮಾರಕ ರಚಿಸಲು ಭಾರತೀಯರು ಮುಕ್ತ ಹಸ್ತದ ಕಾಣಿಕೆ ನೀಡಬೇಕು.

ಂ ಂ ಂ ಂ

ಪಂಜಾಬದ ವಿಭಜನೆಯ ಪ್ರಶ್ನೆ ಇತ್ಯರ್ಥವಾಗಿದೆ. ಪಂಜಾಬಿ - ಸುಬಾ ಮತ್ತು ಹರಿಯಾನಾ ರಾಜ್ಯಗಳು ರೂಪುಗೊಳ್ಳುತ್ತವೆ. ನಿಯೋಜಿತ ರಾಜ್ಯಗಳ ನಾಯಕತ್ವದ ಮೇಲೆ ಹಲವಾರು ನಾಯಕರು ಈಗಾಗಲೇ ಕಣ್ಣಿಟ್ಟಿದ್ದಾರೆ. ಮೊದಲಿಂದಲೂ ಪಂಜಾಬವೊಂದು ನಾಯಕತ್ವದ ಬಗ್ಗೆ ಸಮಸ್ಯಾ ರಾಷ್ಟ್ರವೇ ಆಗಿತ್ತು. ಪ್ರತಾಪಸಿಂಹ ಕೈರೊನರು ಬಹುಕಾಲ ನಾಯಕತ್ವ ನಿರ್ವಹಿಸಿದ್ದು ನಿಜ. ಆದರೆ ಇವರ ಸಾಮರ್ಥ್ಯಕ್ಕಿಂತ ಅವರ ಕಾರುಬಾರ ಹಾಗೂ ಅಂದಿನ ಪ್ರಧಾನಿ ನೆಹರೂರವರ ಅನುಗ್ರಹವೇ ಇದಕ್ಕೆ ಕಾರಣವಿತ್ತು. ಅವರ ಪದಚ್ಯುತಿಯಾದ ನಂತರದ ರಾಮಕಿಶನ್ ಸಚಿವ ಸಂಪುಟ ತೂಗುತ್ತಾ ಮಾಲುತ್ತ ಇದೆ. ಅಲ್ಲಿನ ಅಶಾಂತತೆಯನ್ನೇ ಶಾಂತತೆಯೆಂದು ಕರೆಯುವ ಅಭ್ಯಾಸ ಈಗ ಸಾಮಾನ್ಯವಾಗಿದೆ.

ವಿಭಜನೆಯ ನಿರ್ಧಾರದ ಜತೆಯೇ ಎರಡೂ ರಾಜ್ಯಗಳಲ್ಲಿ ರಾಷ್ಟ್ರಪತಿಗಳ ಆಳಿಕೆ ಪ್ರಾರಂಭವಾಗಬೇಕು ಎಂಬ ವಾದವೊಂದಿತ್ತು. ಕಾಂಗ್ರೆಸ್ಸು ವರಿಷ್ಠರು ಆಗ ಇದಕ್ಕೆ ಒಪ್ಪಲಿಲ್ಲ. ಚುನಾವಣೆಗಳು ಹತ್ತಿರ ಬರುವಾಗ ಇಂತಹ ಕ್ರಮ ಅನಪೇಕ್ಷಣೀಯ. ಜನತೆಗೆ ತಮ್ಮ ರಾಜ್ಯವಿತ್ತು ಅದರ ಆಡಳಿತೆಯನ್ನು ಕಸಿದುಕೊಳ್ಳುವ ನೀತಿ ಅನಿವಾರ್ಯವಲ್ಲವಾದರೆ ಸಮಂಜಸವಲ್ಲ.

ಆದರೆ, ಇಂದು ಪರಿಸ್ಥಿತಿಗಳ ತಿರುವು ಮುರುವಾಗ ಹತ್ತಿದೆ. ಎರಡೂ ನಿಯೋಜಿತ ರಾಜ್ಯಗಳು ಪ್ರಜಾಸತ್ತಾತ್ಮಕವಾಗಿ, ಚುನಾವಣೆಯ ಹಿನ್ನೆಲೆಯಲ್ಲಿ ಸಮರ್ಥವಾಗಿ ನಡೆಯಲಾರವು. ಗಡಿ ಪ್ರದೇಶದ ಬಗ್ಗೆ ತೀವ್ರಗಮನವಿಡುವುದೂ ಅತ್ಯವಶ್ಯವಾದುದರಿಂದ, ಸಾರ್ವತ್ರಿಕ ಚುನಾವಣೆಗಳು ಮುಗಿಯುವ ವರೆಗೆ ಎರಡು ರಾಜ್ಯಗಳಲ್ಲಿ ರಾಷ್ಟ್ರಪತಿಗಳ ಆಳಿಕೆಯನ್ನು ಸಾರುವ ಬಗ್ಗೆ ಕಾಲ ಪರಿಪಕ್ವವಾಗ ಹತ್ತಿದೆ. ಆಸ್ತಿ—ಪಾಸ್ತಿಗಳು ಮೊದಲಾದ ಎಲ್ಲವುಗಳ ವಿಭಜನೆಯೂ ಆ ಹೊತ್ತಿಗೆ ಸಂಪೂರ್ಣವಾಗುವುದು. ಆರು ತಿಂಗಳಲ್ಲಿ ಎರಡು ಬಾರಿ ಎದುರಿಸಬೇಕಾಗಿ ಬರುವ ನಾಯಕತ್ವದ ಸಮಸ್ಯೆಯನ್ನು ಒಂದೇ ಬಾರಿ ಕಾಂಗ್ರೆಸಿಗೆ ನೋಡಿಕೊಂಡರಾಯಿತು.

ಪಂಜಾಬದಲ್ಲಿ ಇಂದು ಸರ್ದಾರ ಸ್ವರ್ಣಸಿಂಗರಿಗಿರುವ ಗೌರವ ಅದ್ವಿತೀಯ. ಆದುದರಿಂದಲೇ ಈ ಸಂಬಂಧದ ಯಾವುದೇ ನಿರ್ಣಯವಾಗ ಬೇಕಾದಲ್ಲಿ ಸಿಂಗರ ಅಭಿಪ್ರಾಯ ತಿಳಿಯಬೇಕು; ಅಥವಾ ಅವರ ಒಪ್ಪಿಗೆಯೂ ಬೇಕು. ತನ್ನ ವಿದೇಶ ಸಂಚಾರ ಮುಗಿಸಿ ಮರಳಿ ಬಂದಿರುವ ಸಿಂಗ್ ಈಗಾಗಲೇ ಈ ಪ್ರಶ್ನೆಯನ್ನು ಪರಿಶೀಲಿಸ ತೊಡಗಿರಬಹುದು. ಕೆಲವೇ ದಿನಗಳಲ್ಲಿ ಹೈಕಮಾಂಡಿನ ನಿರ್ಣಯ ಬಹಿರಂಗವಾಗಬಹುದು.

ಂ ಂ ಂ ಂ

ಬೆಳಗಾವ್ ಮತ್ತು ಕಾರವಾರಗಳವೇ ಲೆಮಹಾರಾಷ್ಟ್ರದ ಎರಡು ಕಣ್ಣುಗಳು ಅನ್ಯಾಯವಾಗಿ ದೃಷ್ಟಿ ಹಾಯಿಸುತ್ತಿವೆ. ಕಾಸರಗೋಡಿನ ಮೇಲೆ ಕನ್ನಡಿಗರ ನ್ಯಾಯ ದೃಷ್ಟಿಯಿದೆ. ಗಡಿತಂಟೆಯ ಪರಿಶೀಲನೆಗೆ ಆಯೋಗ ನೇಮಿಸುವ ಸಂಬಂಧದ ವಿವಂಚನೆ ಹೇಳತೀರದು. ಇದುವರೆಗೆ ಸೌಮ್ಯರಾಗಿದ್ದ ಕನ್ನಡಿಗರು ಕೆರಳಿದ ಸರ್ಪವಾಗಿದ್ದಾರೆ. ಬೆಳಗಾಂವಿಯಲ್ಲಿ ಭಾರಿ ಚಳವಳದ ಸಿದ್ಧತೆ ನಡೆಯುತ್ತಿದೆ. ಕಾರವಾರದ ಮೇಲೆ ದೃಷ್ಟಿಯಿಟ್ಟವರ ಕಣ್ಣುಗಳನ್ನು ಕಿತ್ತು ಬಿಡುವಷ್ಟು ಶಕ್ತಿಯು ಸಂಚಯವಾಗುತ್ತಿದೆ. ಇದು ಶುಭ ಚಿಹ್ನೆ.

ಕೇರಳದ ಲ್ಲಿ ಬೆಯೂ ಆಯೋಗ ರಚನೆಯ ಬಗ್ಗೆ ಅಭಿಪ್ರಾಯ ಪ್ರಕಟವಾಗಿದೆ. ಚುನಾವಣೆಯ ನಂತರವೇ ಈ ಆಯೋಗವನ್ನು ನೇಮಿಸಬೇಕು ಎಂಬುದು ಅದರ ವಾದ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಸದ್ಯ ಕೇರಳವಿರುವುದು ರಾಷ್ಟ್ರಪತಿಗಳ ಆಳಿಕೆಯಲ್ಲಿ. ಗಡಿ ಸಮಸ್ಯೆಯಂತಹ ಮಹತ್ವದ ಪ್ರಶ್ನೆಯನ್ನು ಇತ್ಯರ್ಥಮಾಡಲು ಪ್ರಜಾಪ್ರಾತಿನಿಧಿಕ ಸರಕಾರದ ಕೈಗಳಿಗೇ ಕೊಡಬೇಕು. ಇದನ್ನೂ ಅಲ್ಲಗಳೆಯುವಂತಿಲ್ಲ.

ಮಂತ್ರಿಗಳು ಬೆಳಗಾವಿ ಮೊದಲಾದುವನ್ನು ಬೇಡುವ ಬೇಡಿಕೆಗಳು ಮಹಾಜನ್ ಆಲಿ ಆಯೋಗದ ಮುಂದೆ ಇಟ್ಟಂಥವುಗಳೇ—ಅವುಗಳಲ್ಲಿ ಹೊಸತೇನೂ ಇಲ್ಲ. ಆ ಆಯೋಗವು ಎಲ್ಲಾ ಪ್ರಶ್ನೆಗಳನ್ನೂ ಪರಿಶೀಲಿಸಿ ಗಡಿ ಗೊತ್ತು ಮಾಡಿದೆ. ಆದುದರಿಂದ ಒಮ್ಮೆ ನಿರ್ಧಾರವಾದ ಗಡಿಯನ್ನು ಮತ್ತೆ ವಿಮರ್ಶಿಸುವುದು ನ್ಯಾಯವಲ್ಲ. ಅಲ್ಪ ಸ್ವಲ್ಪ ಹೊಂದಾಣಿಕೆಗೆ ಮಾತ್ರ ಅವಕಾಶವಿದೆ. ಇದು ಉತ್ತರ ಕರ್ನಾಟಕದ ಗಡಿಯ ಬಗ್ಗೆ ನಾವು ತಳೆದ ನೀತಿ.

ಇದನ್ನೇ ದಕ್ಷಿಣದ ಗಡಿಗೂ ಅನ್ವಯಿಸಿದರೆ ಹೇಗೆ?

ಕನ್ನಡದ ಧ್ವನಿಯಲ್ಲಿ ಎರಡು ರಾಗಗಳು ಆಗತ್ಯವಿವೆ. ಈ ತ್ರಿಶಂಕುವಿಂದಲೇ ಕೇಂದ್ರದಲ್ಲಿ ಕನ್ನಡದ ಗಡಿ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳುವವರು ಯಾರೂ ಇಲ್ಲವೆಂಬಂತಾಗಿದೆ.

—ರಾತಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL–4.17–4/65–66 dated 26–4–1966.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 57 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಸೌಂದರ್ಯ

ಜೀವಿಯ ಬಯಕೆಯು
ನಿನ್ನನು ಅರಸಿದೆ
ಓ ಬೆಡಗಿನ ಸೌಂದರ್ಯ!
    ಅರಳುವ ಸುಮನದಿ
    ಬಿರಿಯುವ ಕಮಲದಿ
    ನೀನೇ ತುಂಬಿರುವೆ!
ಚಿಗುರಿದ ಗಿಡದಲಿ
ಹಸುರಿನ ಎಲೆಯಲಿ
ನಿನ್ನದೆ ನಿಜರೂಪ!
    ಪೌಡರು, ಸ್ನೋಗಳ
    ನೋರಿಗೆ ಹಚ್ಚಲು
    ನೀನೂ ಅಲ್ಲಿರುವೆ!
ಹಾರುವ ಹಕ್ಕಿಗೆ
ಈಜುವ ಮೀನಿಗೆ
ನಿನ್ನದೆ ಲೇಪನವು!
    ಉಲಿಯುವ ನವಿಲಲಿ
    ನಲಿಯುವ ಮೃಗದಲಿ
    ನೀನೇ ನೆಲೆಸಿರುವೆ!
ಬೃಂದಾವನದಲ್ಲಿ
ತಿಂಗಳ ಬೆಳಕಲಿ
ಕಣ್ಗಳ ಕೊರೆಯಿಸುವೆ!
    ವಜ್ರದ ಉಂಗುರ
    ಬಂಗಾರದ ಸರ
    ಇದು ನಿನ್ನದೆ ರಸವಾಳ!
ಕೆತ್ತಿದ ಪ್ರತಿಮೆಯು
ಮಣ್ಣಿನ ಗೊಂಬೆಯು
ಹೃದಯದಿ ನೆಲೆಸಿರುವೆ!
    ಪ್ರಕೃತಿಯು ನಿನ್ನದು
    ನಮ್ರತೆಯಿಂದಲಿ
    ತನ್ನಲಿ ಬಂಧಿಸಿದೆ!
ಯಾರೂ ದೂರದ
ವೈರವ ಬೆಳೆಸದ
ವದ್ಭುತ ನೀನಾದೆ!
    ಎಲ್ಲರ ಆಶೆಯು
    ಕುಡಿಮಿಂಚಾಗಿಹೆ
    ಧನ್ಯಳು ನೀ ಸೌಂದರ್ಯ!

—ಕಾ. ರಾ. ಸಾರಂಗ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R. C. O. P. 38/1965

M. ನಾರಾಯಣ ಭಟ್ಟ—ಅರ್ಜಿದಾರ

ಮತ್ತು

ಅಬ್ದುಲ್ ಖಾದ್ರಿ ಸಾಹೇಬ...ಎದ್ರಿ—

ಇವರೊಳಗೆ

ಸದ್ರಿ ಎದ್ರಿ— ಅಬ್ದುಲ್ ಖಾದ್ರಿಸಾಹೇಬ... ಉಮ್ಮರ್ ಸಾಹೇಬರಮಗ, ಉಡುಪಿ ಮುನಿಸಿಪಾಲಿಟಿಯ ಗುಂಡಿಬೈಲುವಾರ್ಡಿನ DoorNo. 2—1—27ರಲ್ಲಿರುವವ ಯವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ನಿಮ್ಮ ಸ್ವಾಧೀನದಲ್ಲಿರುವ ಬಾಬ್ತು ಅರ್ಜಿದಾರನ ಹಕ್ಕಿನ ಉಡುಪಿ ಮುನಿಸಿಪಾಲಿಟಿಯ Door no. 2—1—27ನೇ ಕಟ್ಟಡವನ್ನು ಸ್ವಾಧೀನತೆಕೇಳಿ ಅರ್ಜಿದಾರನು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಖು 17—6—66ಕ್ಕೆ ಯಿಟ್ಟದೆ—ಆಕ್ಷೇಪಣೆಯಿದ್ದರೆ ಆ ದಿವ್ಸ ಪೂರ್ವಾಹ್ನ 11ಗಂಟೆಗೆ ಸದ್ರಿ ಕೋರ್ಟಿನಮುಂದೆ ಹಾಜರಾಗಿ ಹಾಜರಾಗಿ ಹೇಳಿ ಮಾಡಿಕೊಳ್ಳಬಹುದು—ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು—

K. BALACHANDRA RAO
Advocate for Petioner
Udipi, Dated 7—6—1966

ಸೇವೆಯ ಪ್ರತೀಕ

SERVING TO GROW-GROWING TO SERVE • CANARA BANK LTD. 1906-1966

ಹಸ್ತವೊಂದು ಗಿಡವೊಂದರಲ್ಲಿ ಅರಳಿದ ಅಮೂಲ್ಯ ವಜ್ರಪುಷ್ಪ— ಇವುಗಳ ರೂಪರೇಖೆಯೇ ಕೆನರಾ ಬ್ಯಾಂಕಿನ ಸೇವೆಯ ಪ್ರತೀಕ.

ತನ್ನ ಹಾಗೂ ತನ್ನ ದೇಶದ ಸಮೃದ್ಧಿಗಾಗಿ ಸತತ ದುಡಿದ ಓರ್ವ ಶ್ರೇಷ್ಠ ವ್ಯಕ್ತಿಯ ಪ್ರಯತ್ನದ ಫಲವಿದು. ಇಂತಹ ಉಜ್ವಲ ಧ್ಯೇಯವೇ ಮೈತಾಳಿ ಬ್ಯಾಂಕಿನ ಪ್ರಾರಂಭ ಹಾಗೂ ಪ್ರಗತಿಯನ್ನು ನಿರೂಪಿಸುವ ಶಾಶ್ವತವಾದ ಪ್ರತೀಕವೊಂದರ ಉದಯವಾಗಿದೆ.

1906ರಲ್ಲಿ ಸಣ್ಣ ಸಂಸ್ಥೆಯಾಗಿ ಪ್ರಾರಂಭಿಸಲ್ಪಟ್ಟು ಇದೀಗ ಬೃಹತ್ ಬ್ಯಾಂಕಿಂಗ್ ಸಂಸ್ಥೆಯಾಗಿ ಬೆಳೆದು ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಇದು ವ್ಯಕ್ತಿಯೋರ್ವನ ನಿಸ್ಪೃಹ ಪ್ರಯತ್ನದ ಫಲದ ಪ್ರತೀಕ. ಸೇವೆಯ ವ್ಯಾಪ್ತಿಯು ದೇಶದಲ್ಲೆಲ್ಲಾ ಹರಡಿ ವಜ್ರದಂತೆ ಪ್ರತಿಫಲಿಸುತ್ತಿದೆ. ಇದೀಗ ಕೆನರಾ ಬ್ಯಾಂಕು ಭಾರತದ ಏಳು ಬೃಹತ್ ಬ್ಯಾಂಕುಗಳಲ್ಲೊಂದಾಗಿದೆ ಹಾಗೂ 60 ವರ್ಷಗಳ ಸೇವೆಯ ಪ್ರಗತಿಯ ಫಲವಾಗಿ ವಜ್ರಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲಿದೆ. ಹೌದು! 60 ವರ್ಷಗಳಿಂದಲೂ ಒಂದೇ ಉಜ್ವಲಧ್ಯೇಯ. ಪ್ರಗತಿಗಾಗಿ ಸೇವೆ — ಸೇವೆಗಾಗಿ ಪ್ರಗತಿ

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು ಲೈಟ್‌ಹೌಸ್ ಹಿಲ್, ಮಂಗಳೂರು
ಆಡಳಿತ ಕಛೇರಿ 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು-2.

SISTA'S-CB

ಗಂಡೆದೆಯ ಶರಣ ಸಾಹಿತ್ಯ

(ಐದನೇ ಪುಟದಿಂದ)

ಉಳಿದವು. ಕನ್ನಡ ಸಾಹಿತ್ಯದ ಅಣಿ ಮುತ್ತುಗಳಾದುವು.

ಶರಣರು ತಮ್ಮ ವಚನಗಳಲ್ಲಿ—ಸಾಹಿತ್ಯದಲ್ಲಿ ಅಗಾಧ ತತ್ವಗಳನ್ನು ಅಳವಡಿಸಿಲ್ಲ. ಅರ್ಥಗರ್ಭಿತವಾಗಿಯೂ ನುಡಿದಿಲ್ಲ. ಅವರ ಮಾತುಗಳಲ್ಲಿ ಅಪಾರ ಲೋಕಾನುಭವ, ಲೋಕ ಕಲ್ಯಾಣ ಚಿಂತನೆ ಅಡಗಿದೆ.

ಶಿವಶರಣರ ಉದ್ದೇಶ್ಯ ಸಾಹಿತ್ಯ ನಿರ್ಮಾಣ—ಪ್ರಸಾರವಾಗಿರಲಿಲ್ಲ. ಆದರೆ ಅವರು ಹೇಳಿದ ಎಲ್ಲ ಮಾತುಗಳೂ ತೇಜೋಮಯ ಶಕ್ತಿ ಪಡೆದು, ಸಾಹಿತ್ಯ ಸ್ವರೂಪವನ್ನು ತಿದ್ದಿ, ನಾಡಿನಲ್ಲಿ ಹೊಸ ಸಂಪ್ರದಾಯವನ್ನು ಬಳಕೆಗೆ ತಂದವು. ಅವರ ಮಾತು ಮಾಣಿಕ್ಯವಾಗಿ, ಜ್ಯೋತಿರ್ಲಿಂಗವಾಗಿ ಪರಿಣಮಿಸಿತು.

ಜೇಡರ ದಾಸಿಮಯ್ಯನವರ ಪೂರ್ಣ ಪ್ರಭಾವಕ್ಕೆ ಒಳಗಾದ ಬಸವಣ್ಣನವರ ಆಧ್ಯಾತ್ಮಿಕ ಜೀವನ, ವಚನ ಸಾಹಿತ್ಯ ರಚನೆ ವೀರಶೈವ ಸಾಹಿತ್ಯ ಕ್ಷೇತ್ರದಲ್ಲಿ ಒಂದು ವಿಶೇಷ ಹಂತ. ಬಸವಣ್ಣನವರ ಸಮಕಾಲೀನರಾಗಿದ್ದ ನೂರಾರು ಮಂದಿ ಶಿವಶರಣ ಶರಣೆಯರು ಅಣ್ಣನವರು ಬೋಧಿಸಿ ಬೆಳಕಿಗೆ ತಂದ ವೀರಶೈವ ಧರ್ಮ ತತ್ವಗಳನ್ನೂ ನಾಡಿನ ಮೂಲೆ ಮೂಲೆಗೆ ಹಂಚಿದರು. ಬಸವಣ್ಣನವರ ಆಧ್ಯಾತ್ಮಿಕ, ಸಾಹಿತ್ಯ ಸಂಪ್ರದಾಯವನ್ನು ಅನುಸರಿಸಿದವರು ಹಲವರು ಅವರ ಪೈಕಿ ಅಕ್ಕಮಹಾದೇವಿ, ಅಲ್ಲಿಯ ಪ್ರಭು ಚೆನ್ನ ಬಸವಣ್ಣ, ಸಿದ್ಧರಾಮಣ್ಣ, ಚೌಡಯ್ಯ, ಮಾಚಯ್ಯ, ಚಂದಿಯ್ಯಾ ಮುಂತಾದವರು ಮುಖ್ಯರಾದವರು.

೧೨ನೆಯ ಶತಮಾನದಲ್ಲಿ ಮೊಳಗಿದ ಶರಣ ವಾಣಿಯಲ್ಲಿ ಜಡವಾಗಿದ್ದ ನಾಡ ಜನತೆಯನ್ನೂ ಬಡಿದೆಬ್ಬಿಸುವ ಶಕ್ತಿ ಇತ್ತು, ಮೌಢ್ಯ ಪರಂಪರೆ ಕಳೆದು ಹೊಸ ಸಂಪ್ರದಾಯ ಬಳಕೆಗೆ ಬಂದಿತು. ನಾಡಿನ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಹಿತ್ಯ—ರಂಗಗಳಲ್ಲಿ ಹೊಸ ಶಕ್ತಿಯೊಂದು ಹೊಳೆಯಿತು.

ಶರಣರು ರಚಿಸಿದ—ಹಾಡಿದ ಸಾಹಿತ್ಯದಲ್ಲಿ ಅನರಿಗಾಗಿಯೇ ಉಳಿಯ ಬೇಕೆಂಬ ದೃಷ್ಟಿಯಿಂದ ಸೃಷ್ಟಿಯಾದುದಲ್ಲ. ಈ ಸಾಹಿತ್ಯ ಜನ ಜೀವನ ಹಸನಾಗಲೆಂದು—ಹಿರಿದಾಗಲೆಂಬ ಆಸೆಯಿಂದ ಮೂಡಿ ಬಂತು. ಶರಣ ಸಾಹಿತ್ಯದಲ್ಲಿ ಗಹನ ವಿಷಯಗಳಿಗೆ ವಿಚಾರ ಪೂರ್ಣ ಕೃತ್ಯಗಳಿಗೆ ಕೊರತೆಯಿಲ್ಲ. ನಿಷ್ಠೆ, ಆತ್ಮ ವಿಶ್ವಾಸ, ಸ್ವಶಕ್ತಿ, ಧರ್ಮ, ಸತ್ಯ, ನೀತಿ, ನ್ಯಾಯಗಳನ್ನು ಅಳವಡಿಸಿಕೊಂಡು ರೂಪುಗೊಂಡ ಸಾಹಿತ್ಯ ವಿಶಿಷ್ಟ ಶಕ್ತಿ ಸಾಮರ್ಥ್ಯಗಳಿಂದ ತಲೆ ಎತ್ತಿ ನಿಂತಿದುದರಲ್ಲಿ ಆಶ್ಚರ್ಯವಿಲ್ಲ.

ನಾಡಿನ ಜನ ಮನದಲ್ಲಿ ಉಳಿದಿದು ಮೌಢ್ಯತೆ, ಆಲಸ್ಯ, ಅಲ್ಪತನಗಳು ಮರೆಯಾಗಿ ಜಾಗೃತಿ ಉಂಟಾಗಲು ಶರಣ ಸಾಹಿತ್ಯದ ಪ್ರಭಾವ—ಪಾತ್ರ ವಿಶೇಷ ಎಂಬುದು ವಿಚಾರ ಯೋಗ್ಯ. ಜೇಡರ ದಾಸಿಮಯ್ಯನ ವರಿಂದ ಆರಂಭವಾದ ವಚನ ಸುಧೆ ಬಸವಣ್ಣ ಮತ್ತು ಅವರ ಅನುಯಾಯಿಗಳ ವರೆಗೆ ಏಕ ಪ್ರಕಾರವಾಗಿ ಹರಿದು ಅನಂತರ ತನ್ನ ಗತಿಯನ್ನು ಬದಲಿಸುತ್ತದೆ. ಮುಂದೆ ಹರಿಹರ ರಾಘವಾಂಕನ ಕಾಲದಲ್ಲಿ ಅದರ ಸ್ವರೂಪ ಮತ್ತೊಂದು ರೀತಿಯಲ್ಲಿ ಪ್ರಕಟವಾಗುತ್ತದೆ.

ವೀರಶೈವ ಧರ್ಮ, ಸಾಹಿತ್ಯಗಳಿಗೆ ಪ್ರಭಾವಿತರಾಗಿದ್ದ ವೀರಶೈವ ಕವಿಗಳಲ್ಲಿ ಅದ್ವಿತೀಯರು ಎಂದು ಮೆರೆದ ಹಂಪೆಯ ಹರಿಹರ ಮತ್ತು ಅವನ ಸೋದರಳಿಯ ರಾಘವಾಂಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೇ ಹೊಸ ಸಂಪ್ರದಾಯವನ್ನು ಸೃಷ್ಟಿಸಿ ಕನ್ನಡ ವಾಙ್ಮಯದಲ್ಲಿ ವೀರಶೈವ ಕವಿಗಳಿಗೆ ಅವರ ಕಾವ್ಯಗಳಿಗೆ ಉನ್ನತ ಸಾಧನವನ್ನು ಗಳಿಸಿಕೊಟ್ಟಿತು. ರಗಳೆ ಎಂಬ ಹೊಸ ಸಂಪ್ರದಾಯದ ಪದ್ಯ ರಚನೆಯನ್ನು ಹರಿಹರ, ಅಚ್ಚ ಕನ್ನಡ ಛಂದಸ್ಸಾದ ಷಟ್ಪದಿಯನ್ನು ರಾಘವಾಂಕ ಬಳಕೆಗೆ ತಂದು ಕೀರ್ತಿಶಾಲಿಗಳಾದರು.

ವಚನಗಳಷ್ಟೇ ಶರಣ ಸಾಹಿತ್ಯವಲ್ಲ, ವೀರಶೈವ ಕವಿಗಳು ರಚಿಸಿದ ಕಾವ್ಯ, ಕವನ, ವಚನಗಳೆಲ್ಲವೂ ಶರಣ ಸಾಹಿತ್ಯದಲ್ಲಿ ಸೇರಿವೆ. ವೀರಶೈವ ಸಾಹಿತ್ಯದ ಮತ್ತೊಂದು ಹೆಸರು ವಚನ ಸಾಹಿತ್ಯ ಎಂದು. ವಿಶೇಷತಃ ವೀರಶೈವ ಕವಿಗಳೆಲ್ಲರೂ ಶರಣರು. ಅದು ಶರಣ ಸಾಹಿತ್ಯ ಎನಿಸಿಕೊಂಡರೇನು? ವೀರಶೈವ ಸಾಹಿತ್ಯ ಎನಿಸಿಕೊಂಡರೇನು? ಅದರಲ್ಲಿರುವ ಸತ್ವ-ತತ್ವ-ಶಕ್ತಿ ನಮಗೆ ಬೇಕು.

ಬಸವಣ್ಣನವರು ಹಾಡಿದ ಹೊಸ ಸಂಪ್ರದಾಯದ ಹಾಡನ್ನೆ ಕ್ರಮವಾಗಿ ಅವರ ಸಮಕಾಲೀನ ಮತ್ತು ಮುಂದಿನ ವಚನಕಾರರು, ಕವಿಗಳು ಮುಂದುವರಿಸಿಕೊಂಡು ಬಂದಿದ್ದಾರೆ. ಹರಿಹರ ರಾಘವಾಂಕರ ತರುವಾಯ ಪುಲಿಗೆರೆಯ ಸೋಮ ಕವಿ, ಭೀಮ ಕವಿ, ಪದ್ಮಣಾಂಕ, ಮಹಾಲಿಂಗದೇವ, ಲಕ್ಕಣ ದಂಡೇಶ, ಜಕ್ಕಣಾರ್ಯ ಚಾಮರಸ, ಚೆನ್ನ ಬಸವಣಾಂಕ, ವಿರೂಪಾಕ್ಷ ಪಂಡಿತ, ಸರ್ವಜ್ಞ, ಷಡಕ್ಷರಿದೇವ ಮೊದಲಾದ ವೀರಶೈವ ಕವಿಗಳು ತಮ್ಮ ಶ್ರೇಷ್ಠ ಮಟ್ಟದ ಕೃತಿರತ್ನಗಳಿಂದ ಶರಣ ಸಾಹಿತ್ಯ ಭಂಡಾರವನ್ನು—ಕನ್ನಡ ಕಾವ್ಯ ಮಂದಿರವನ್ನು ತುಂಬಿದ್ದಾರೆ. ಕನ್ನಡ ಸಾಹಿತ್ಯ ಮಂದಿರದ ಸೌಂದರ್ಯಕ್ಕೆ ಶ್ರೀಮಂತಿಕೆಗೆ ಇವರೆಲ್ಲರ ಸೇವೆ ಸಂದಿದೆ. ತನ್ನ ತ್ರಿಪದಿಗಳಿಂದ ಕನ್ನಡ ನಾಡಿನ ಜನತೆಗೆ ಚಿರಪರಿಚಿತನಾದ ಸರ್ವಜ್ಞ ಕವಿ, ಜ್ಞಾನಿ, ನಿರ್ಭೀತ. ಇವನದು ಗಂಡೆದೆ, ಗಂಡು ಶೈಲಿ. ಇವನ ದಿಟ್ಟತನದ ವಾಣಿಗೆ ಗುಡುಗು ಗುಡುಗಿರಬಹುದು! ಎನಿಸುತ್ತದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವೀರಶೈವ ಕವಿಗಳ—ಸಾಹಿತ್ಯದ ಸ್ಥಾನ—ಪಾತ್ರ ಹಿರಿದು ಎಂಬ ಅಂಶವನ್ನು ಮತ್ತೊಮ್ಮೆ ಸ್ಮರಿಸಿದರೆ ಅನುಚಿತವೆನಿಸಲಾರದು. ಮೊಟ್ಟಮೊದಲಿಗೆ ಆತ್ಮ ವಿಶ್ವಾಸ, ಸ್ವಶಕ್ತಿಯನ್ನೂ ಅರಿತು ಅಂಜದೆ ಅಡಿಯಿಟ್ಟವರು ವೀರ ಶೈವ ಕವಿಗಳು—ಶರಣರು ಎಂದು ಧಾರಾಳವಾಗಿ ಹೇಳಬಹುದು. ಅಂಜಿಕೆಯನ್ನು ಅರಿಯದ ಕಂಡುದನ್ನು ಕಂಡಂತೆಯೇ ಕಂಡಿತವಾಗಿ ಹೇಳುವ ದಿಟ್ಟತನ ಶರಣರದು. ಶರಣರು ಜನರಿಗಷ್ಟೇ ಅಲ್ಲ. ಜವನಿಗೂ ಅಂಜಿದವರಲ್ಲ. ಆ ಆತ್ಮ ವಿಶ್ವಾಸ, ಧೈರ್ಯಗಳೇ ಅವರ ಹಿರುಮೆಗೆ— ಗೆಲುವಿಗೆ ಕಾರಣ.

ಪಾಂಡಿತ್ಯ ಪ್ರದರ್ಶನಕ್ಕಾಗಲಿ, ಪ್ರಭಾವ ಮೆರೆಸುವುದಕ್ಕಾಗಲಿ ಆಶಿಸಿದವರಲ್ಲ ವೀರ ಶೈವ ಕವಿಗಳೂ-ಶರಣರು. ವೀರ ಶೈವ ಶರಣರ—ಕವಿಗಳ ಉಗಮದ ವರೆಗೆ ಒಂದೇ ಬಗೆಯ, ಸಂಪ್ರದಾಯ, ಶ್ರದ್ಧೆಗಳಲ್ಲಿ ಬೆಳೆದು ಬಂದಿದ್ದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಜೀವನ—ಅವರ ಪ್ರವೇಶದ ನಂತರ ಜಾಗ್ರತವಾಗಿ ಹೊಸ ಹೆಜ್ಜೆಯಿಟ್ಟು ಹೊಸ ಹಾದಿಯಲ್ಲಿ ಸಾಗಿದವು. ನಾಡಿನ ಏಳಿಗೆಯ ದೃಷ್ಟಿಯಿಂದ ಈ ಸಂಪ್ರದಾಯ ಅಗತ್ಯವಾಗಿತ್ತು.

ವೀರಶೈವ ಧಾರ್ಮಿಕ ರಂಗದಲ್ಲಿ ಸಾಹಿತ್ಯರಂಗದಲ್ಲಿ ಪುರುಷರಿಗಿರುವಂತೆ ಸ್ತ್ರೀಯರಿಗೂ ಸಮಾನ ಸ್ಥಾನ, ಸ್ವಾತಂತ್ರ್ಯ ಲಭಿಸಿದುದು ಗಣನೀಯ ಸಂಗತಿ. ಅಕ್ಕಮಹಾದೇವಿ, ಮುಕ್ತಿಯಕ್ಕ, ನೀಲಮ್ಮ, ಗಂಗಾಂಬಿಕೆ ಮೊದಲಾದವರ ಸಾಧನೆ ಅನುಕರಣೀಯ.

ಶರಣ ಸಾಹಿತ್ಯ ವಿಪುಲವಾಗಿ ಬೆಳೆದು ಉಳಿದಿದೆ. ವಚನ, ಚಂಪೂ ಕಾವ್ಯ, ಷಟ್ಪದಿ, ರಗಳೆ, ಶತಕ, ತ್ರಿಪದಿ ಮೊದಲಾದ ಪ್ರಾಕಾರಗಳಲ್ಲಿ ಕಂಗೊಳಿಸಿದೆ. ವೀರಶೈವ ಸಾಹಿತ್ಯದ ಶಕ್ತಿ-ಸೌಂದರ್ಯ ಅಪಾರ. ದಾಸ ಸಾಹಿತ್ಯ ನಾಡಿನ ಜನ ಮನೋವಿಕಾಸ, ಸಮಾಜೋದ್ಧಾರಕ್ಕೆ ಮೀಸಲಾದಂತೆಯೇ ಶರಣ ಸಾಹಿತ್ಯ ವೀರಶೈವ ಧರ್ಮವೇ ಶ್ರೇಷ್ಠ, ಶಿವನೇ ದೇವರು ಎಂದಷ್ಟೇ ಹೇಳದೆ ಜನತೆಯಲ್ಲಿ ಧರ್ಮ, ಸತ್ಯ, ನ್ಯಾಯ, ತತ್ವಗಳ ಚಿಂತನೆಗೆ, ಆತ್ಮ ವಿಶ್ವಾಸ, ಸ್ವಸ್ವರೂಪ ದರ್ಶನಕ್ಕೆ ಅನುವು ಮಾಡಿಕೊಟ್ಟಿದೆ. ಅಗಾಧ ಶಕ್ತಿಯ ಸಂಕೇತವಾಗಿರುವ ಸತ್ವಪೂರ್ಣ ಸುಂದರ ಶರಣ ಸಾಹಿತ್ಯ ನಾಡಿನ ಅಮೂಲ್ಯ ಆಸ್ತಿ ಎಂದು ಹೇಳುವಲ್ಲಿ ಸಂದೇಹವೇನಾದರೂ ಇದೆಯೆ?

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್. ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್
ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ
ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ
ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಗಡಿ ಆಯೋಗದ ನೇಮಕ

(ಐದನೇ ಪುಟದಿಂದ)

ದಂತಹ ಸ್ವತಂತ್ರ ನಿಷ್ಪಕ್ಷಪಾತ ಮನೋಭಾವದ ವಶಾಗಿರುವಂತೆ ನೋಡಿಕೊಳ್ಳುವುದು ಅತಿ ಮುಖ್ಯ. ನ್ಯಾಯ ಪಂಚಾಯತಿಯು ಸ್ವತಂತ್ರವೂ ನ್ಯಾಯಯುಕ್ತವೂ ಆಗಿಲ್ಲದಿದ್ದರೆ ಎಷ್ಟೇ ಉನ್ನತ ತತ್ವಗಳನ್ನು ನಾವು ಅವರ ಮುಂದೆ ಎತ್ತಿ ಹಿಡಿದರೂ ನಿರರ್ಥಕವಾಗುವುದು.

ಅಸಮಂಜಸ ವಾದ.

ಕೇವಲ ಭಾಷೆಯನ್ನೇ ಹಿಡಿದು ವಾದಿಸುವುದೂ ಸರಿಯೆನಿಸದು. ಕೋಲಾರ ಚಿತ್ರದುರ್ಗ ಜಿಲ್ಲೆಗಳ ಗಡಿ ಭಾಗಗಳಲ್ಲಿ ತೆಲುಗು ಮಾತನಾಡುವವರು ಬಹಳ ಮಂದಿ ಇದ್ದರೂ ಅವರು ಆಂಧ್ರಕ್ಕೇನೂ ಸೇರ ಬಯಸರು. ಏಕೆಂದರೆ, ಮೈಸೂರು ರಾಜ್ಯದೊಡನೆ ಅವರ ಬಾಂಧವ್ಯ ಆತ್ಮೀಯವಾಗಿದೆ. ಇದೇರೀತಿ ಸೇಲಂ ಜಿಲ್ಲೆಯ ಹೊಸೂರು ತಾಲೂಕಿನಲ್ಲಿ ಶೇ. ೩೫ರಿಂದ ೪೦ರಷ್ಟು ತೆಲುಗಿನವರಿದ್ದರೂ ಅವರನ್ನೇನಾದರೂ ರಾಜ್ಯ ಬದಲಾಯಿಸಲು ಕೋರಿದರೆ, ಮೈಸೂರಿಗೆ ಸೇರಲು ಬಯಸಾರೇ ಹೊರತು, ಆಂಧ್ರಕ್ಕೆ ಸೇರಲು ಇಚ್ಛಿಸರು.

ನೀಲಗಿರಿ ಜಿಲ್ಲೆಯ ಕನ್ನಡ ಪ್ರದೇಶಗಳನ್ನು ಮೈಸೂರು ರಾಜ್ಯದವರು ಸಾಕಷ್ಟು ಲಕ್ಷ್ಯ ಕೊಡದೆ ಹೋದುದರಿಂದ ಕಳೆದುಕೊಂಡರೆಂಬುದು ಇಲ್ಲಿ ಗಮನಾರ್ಹ.

ಅಂತೂ ಗಡಿ ವಿವಾದಗಳನ್ನು ಪರಿಹರಿಸಬೇಕಾದರೆ ಬಹು ಸಂಖ್ಯಾತರ ಭಾಷೆ, ಗತಇತಿಹಾಸ, ಅವರ ಸಂಸ್ಕೃತಿ, ಅವರ ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳು ಹಾಗೂ ಆಡಳಿತ ಸೌಕರ್ಯ— ಎಲ್ಲಕ್ಕಿಂತ ಹೆಚ್ಚಾಗಿ ಜನತೆಯ ಆಶಯ —ಇವುಗಳನ್ನೇ ನಿರ್ದೇಶಕ ಸೂತ್ರಗಳಾಗಿ ಹೊಂದಬೇಕು.

ಅನುಚಿತ ತಂತ್ರ

ಆದರೆ ಉಪವಾಸ ಸತ್ಯಾಗ್ರಹ ಮತ್ತು ಒತ್ತಾಯ ತಂತ್ರಗಳನ್ನು ಮಾತ್ರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೂ ಕೇಂದ್ರ ಸರಕಾರವೂ ಮಾನ್ಯ ಮಾಡುತ್ತಿರುವುದು ವಿಚಿತ್ರ ಹಾಗೂ ಅನ್ಯಾಯದ ವಿಷಯ. ಮೊದಲಿನಿಂದಲೂ ಹೀಗೆಯೇ ಆಗುತ್ತಿದೆ. ವಾಸ್ತವವಾಗಿ ಕಾಸರಗೋಡು ಜನತೆಯು ಪುರರ್ವಿಂಗಡನಾ ಕಾನೂನಿಗೆ ಮೊದಲೂ ಮತ್ತು ಅನಂತರವೂ ಕೇಂದ್ರ ಗೃಹ ಮಂತ್ರಿಗಳ ಬಳಿಗೂ ಹಾಗೂ ಕಾಂಗ್ರೆಸ್ ಅಧ್ಯಕ್ಷರ ಬಳಿಗೂ ಅನೇಕಾನೇಕ ಬಾರಿ ನಿಯೋಗಗಳಲ್ಲಿ ಹೋಗಿದ್ದರೂ, ಪ್ರತಿ ಬಾರಿಯೂ ಅವರು ಕಾಸರಗೋಡಿನ ಪ್ರಶ್ನೆ ನ್ಯಾಯಯುತವಾದುದೆಂದು ಹೇಳಿ ಆ ಬಗ್ಗೆ ಏನಾದರೂ ಮಾಡುವುದು ಅವಶ್ಯವೆಂದು ವಾಗ್ದಾನವಿತ್ತಿದ್ದರೂ ಇದು ವರೆಗೆ ಏನೂ ಆಗಿರಲಿಲ್ಲ. ಈಗಲಾದರೂ ಆಯೋಗ ನೇಮಿತವಾಗಿರುವುದು ಒಂದು ಸಂತೋಷದ ವಿಷಯ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಕವಲುದಾರಿ—ಕೆಂಪು ದೀಪ

ತಲೆಸಿಡಿತದ ಆಸ್ಪ್ರೊ ಬೆಲೆಕಡಿತವೆ?

ರೂಪಾಯಿಯ ಮೌಲ್ಯವಿಚ್ಛೇದನವಾಯಿತಂತೆ, ಒಂದು ರೂಪಾಯಿಗೆ ಆರುವ ತ್ತೈಪೈಸೆ ದೊರೆಯುವುದಂತೆ..

ಇದು ಮುಂಜಾನೆ ಎಲ್ಲೆಡೆಯೂ ಹರಡಿದ ಸುದ್ದಿ.

ಸುದ್ದಿ ಕೇಳಿದ ಕೆಲವರು ನಂಬಲಿಲ್ಲ. ನಮ್ಮ ಮಂತ್ರಿಗಳ ಮೇಲೆ ಅವರಿಗೆ ಪೂರ್ಣ ವಿಶ್ವಾಸ—ತಮ್ಮಲ್ಲಿರುವುದಕ್ಕಿಂತಲೂ ಅಧಿಕ.

ಮಂತ್ರಿಗಳು ಅನ್ನುತ್ತಿದ್ದರು—ಮೊನ್ನೆಮೊನ್ನೆಯ ವರೆಗೂ ಘೋಷಿಸುತ್ತಿದ್ದರು. ರೂಪಾಯಿಯ ಮೌಲ್ಯವಿಚ್ಛೇದನವಿಲ್ಲವೆಂದು.

ಈ ವಾರ್ತೆ ಸುಳ್ಳು—ಪೂರಾ ಸುಳ್ಳು

ಬ್ಯಾಂಕುಗಳಿಗೆ ರಜೆ—ಕೆಲವೇ ಮಂದಿಯ ಮನಸ್ಸಿನಲ್ಲಿ ಸಂದೇಹದ ಶಂಕೆಯ ಬೆಂಕಿಯ ನಾಲಗೆ ತಲೆಯೆತ್ತಿತು—ಏನಿದು ಹೀಗೆ? ನಾನಿಟ್ಟ ಹಣ ವಾಪಾಸು ದೊರೆಯುತ್ತೋ ಇಲ್ಲವೋ?

ಹೊರಗಡೆ ಊರಿಗೆ ಬಂದದ್ದು, ತನಗೊಬ್ಬನಿಗೇನು ಎಂದು ವೇದಾಂತವಾಡಿದರೂ 'ಅಯ್ಯೋ ಹೋಯಿತಲ್ಲಾ" ಎಂದು ಕೈಚಿಕ್ಕಿಕೊಂಡವರು ಇನ್ನು ಕೆಲವರು.

"ಪರವಾಯಿಲ್ಲ, ನಮಗೇನು? ಆದರೆ ಅದೇ ರೀತಿಯಲ್ಲಿ ಮನೆಬಾಡಿಗೆ ಸಾಮಾನುಗಳ ಬೆಲೆಯಲ್ಲೂ ಕಡಿತವಾದರೆ ಸಾಕು" ಎನ್ನುವವರೇ ಅನೇಕ ಜನರು.

ಆದರೆ, ಒಂದು ಮಾತು ನಿಜ. ಈ ಎಲ್ಲಾ ಶಂಕೆ—ಸಮಾಧಾನಗಳು ಸುದ್ದಿಯ ವಿವರ ತಿಳಿಯದೆ, ಅರ್ಥವಾಗದೆ ನಡೆದ ಗೊಂದಲಗಳು ಮಾತ್ರ.

ನಿಜ ಸುದ್ದಿಯೇ ಬೇರೆ—

ಆಂತರಿಕವಾಗಿ ರೂಪಾಯಿಯ ಬೆಲೆ ಇಳಿದಿಲ್ಲ. ಒಂದು ರೂಪಾಯಿಗೆ ನೂರು ನಯೇ ಪೈಸೆಯೇ ಬೆಲೆ.

ವಿದೇಶಿ ಮಾರುಕಟ್ಟೆಯ ಮಟ್ಟಿಗೆ ಮಾತ್ರ ಈ ಬೆಲೆ ನೂರಕ್ಕೆ ೩೬.೫ರಷ್ಟು ಇಳಿದಿದೆ.

ಇದರ ಪರಿಣಾಮ?

ಅಮೆರಿಕನ್ ಡಾಲರಿನ ಬೆಲೆ ರೂ. ೪. ೭೬ ರಿಂದ ರೂ. ೭. ೫೦ ಕ್ಕೆ ಏರಿತು; ಪೌಂಡು ಸ್ಟರ್ಲಿಂಗ್‌ನ ಬೆಲೆ ರೂ. ೧೩. ೩೩ ರಿಂದ ರೂ. ೨೧. ೦೦ ಹೆಚ್ಚಿತು.

ಅನೇಕ ಸಮಯದಿಂದ ದೇಶದಲ್ಲಿ ನಿರೀಕ್ಷಿಸಿದ್ದ, ವಿದೇಶಗಳಲ್ಲಿ ತರ್ಕಿಸಲಾಗುತಿದ್ದ ಮೌಲ್ಯ ವಿಚ್ಛೇದನವೀಗ ನಿರ್ಣಯವಾದಂತಾಯಿತು.

ದ್ವಿತೀಯ ಮಹಾಯುದ್ಧಾನಂತರದಲ್ಲಿ ಇದೀಗ ಎರಡನೆ ಬಾರಿಗೆ ಇಂತಹ ವಿಚ್ಛೇದನ ನಡೆಯಿತು.

ದೇಶದ ಹಿತದೃಷ್ಟಿಯಿಂದ ರೂಪಾಯಿಯ ಮೌಲ್ಯವನ್ನು ಹಿಂತೆಗೆದು ಕೊಳ್ಳಬೇಕು ಎಂಬ ಸಲಹೆ ಇಂದಲ್ಲ, ಹಲವು ಸಮಯಕ್ಕೆ ಮೊದಲೇ ಜಾಗತಿಕ ಬ್ಯಾಂಕು ಮಾಡಿದೆ.

ಅಮೆರಿಕೆಯಿಂದಲೂ ಇದೇ ತರಹದ ಸಲಹೆ ಬಂದಿತ್ತು.

ಪ್ರಧಾನಿ ಗಾಂಧಿಯವರ ಅಮೆರಿಕನ್ ಸಂಚಾರದ ವೇಳೆಯೂ ಇದೇ ಪ್ರತಿಧ್ವನಿ ಕೇಳಿಸುತಿತ್ತು—ಆಗ ಅದನ್ನು ಕೆಳಗಿವಿ ಕೇಳಲಾಯಿತಂತೆ—

ಯೋಜನಾ ಸಚಿವರ ಅಮೆರಿಕನ್ ಭೆಟ್ಟಿಯ ಸಮಯ ಈ ಧ್ವನಿ ಮತ್ತೂ ಏರಿತು. ಅರ್ಥ ಸಚಿವರು ಇದರ ಸಾಧ್ಯತೆಯನ್ನು ನಿರಾಕರಿಸಿದರೂ ಕೊನೆಗೊಮ್ಮೆ ಘೋಷಿಸಿಯೇ ಬಿಟ್ಟರು.

ಇದರಿಂದ ಲಾಭವೇನು?

ಭಾರತವು ರಫ್ತು ಮಾಡುವ ವಸ್ತುಗಳ ಬೆಲೆ ಜಾಗತಿಕ ಮಾರುಕಟ್ಟೆಯಲ್ಲಿ ಇಳಿಯುವುದು, ಕಾರಣ, ಭಾರತದ ಉತ್ಪಾದನೆಗಳಿಗೆ ವಿದೇಶಗಳಲ್ಲಿ ವಿಶಾಲವಾದ ಮಾರುಕಟ್ಟೆ ದೊರೆಯುವುದು; ಇದರಿಂದ ದೇಶದ ವ್ಯಾಪಾರವು ಸಚೇತವಾಗುವುದು.

—ಆದರೆ, ಆಯಾತ ವಸ್ತುಗಳ ಬೆಲೆಯು ಏರುವುದು.

ಆದುದರಿಂದ ಬೆಲೆ ಕಡಿತದಿಂದ ನಿರ್ಯಾತಗಳು ಹೆಚ್ಚಿ ಆಯಾತವು ಕಡಿಮೆಯಾಗಿ ಉಳಿತಾಯ ಮಿಗಿದರೆ ಮಾತ್ರ ಈ ಮೌಲ್ಯ ವಿಚ್ಛೇದನಕ್ಕೊಂದು ಅರ್ಥ. ವಿದೇಶೀಯರಿಗೆ ನಾವು ತೆರಬೇಕಾಗಿರುವ ಸಾಲ ಮತ್ತು ಅದರ ಬಡ್ಡಿಗಳನ್ನು ಸಂದಾಯ ಸಲು ನಮಗೆ ಸಾಮರ್ಥ್ಯ.

ಮೌಲ್ಯ ವಿಚ್ಛೇದನವನ್ನು ಯಾವ ವಿದೇಶೀ ಶಕ್ತಿಗಳ ಮುಂದೆ ತಲೆಬಾಗಿ ಮಾಡಿರದೆ, ದೇಶದ ಹಿತದೃಷ್ಟಿಯಿಂದ ಮಾಡಿದ್ದು—ಅದು ಅರ್ಥ ಮಂತ್ರಿಯವರ ಹೇಳಿಕೆ.

ಇದರ ಸತ್ಯಾಸತ್ಯಗಳು ಏನೇ ಇರಲಿ, ನನೆಗುದಿಗೆ ಬಿದ್ದಿದ್ದ ಪ್ರಶ್ನೆ ಇತ್ಯರ್ಥವಾಯಿತು; ಪರಿಣಾಮ ಕಾದು ನೋಡೋಣ. ಬೆಲೆ ಕಡಿತದಿಂದ ತಲೆಸಿಡಿತ ಪ್ರಾರಂಭವಾಗದಿರಲಿ.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ

ತಲೆಯ ಹೊಡೆದವ ಹುಣ್ಣಿಗೌಷಧಿ ಹಾಕುವನೆ?

(ನಾಲ್ಕನೇ ಪುಟದಿಂದ)

"ಇಲ್ಲ. ಸಲಹೆಯೇನೋ ಒಳೆಯದೇ. ಆದರೆ ನೋಡಿ, ನಮ್ಮ ಬಳೀ ಬೀಜ ದಿಲ್ಲೀಹವಾಮಾನದಲ್ಲಿ ಮೊಳಕೆ ಬರೋದಿಲ್ಲ."

'ಅದು ಹ್ಯಾಗೆ ಹೇಳ್ತಿ?"

"ಅಷ್ಟೂ ಗೊತ್ತಾಗೋದಿಲ್ವೆ?"

"ಹೇಗೇಂತ?"

'ಹ್ಞಾಂ..ನಮ್ಮ ಗುಣ ನಮಗೆ......'

"ಆವಾದ್ರೆ ಸರಿ...."

'ಅಲ್ರಿ ಈಗ ಏನು ಮಾಡೋದೂಂತ?'

"ಮಾಡೋದೇನು? ಈ ಆಯೋಗದ ಬಗ್ಗೆ, ಗೋವಾದ ಬಗ್ಗೆ ಒಂದೆರಡು ವಾರದಲ್ಲಿ ಇಂದಿರಾಜಿ ಹೇಳಿಕೆ ಕೊಡಲಿದ್ದಾರಂತೆ...."

"ಅಲ್ರಿ ಇಬ್ಬರು ಗಂಡು ಹುಡುಗರ ಮಧ್ಯೆ ಇಂದಿರಮ್ಮ ಏನುಮಾಡಬೇಕು"

'ಅದನ್ನು ಅವರೇ ನಿರ್ಧರಿಸಬೇಕು.'

"ಅಲ್ರಿ ಸಮಾಧಾನ ಮಾಡಿದ್ರೆ ಒಬ್ರೂ ಕೇಳ್ಬಿದ್ರೆ...."

'ಕೇಳುವ ಹಾಗೆ ಮಾಡಬೇಕು..."

"ಅದು ಹೇಗೆ?'

'ಅದೆಲ್ಲಾ ನಮಗೆ ಯಾಕೆ?"

"ಆದ್ರೂ....'

"...ಹೇಳ್ಲೇಬೇಕೇ? ಹ್ಞಾಂ ಕೇಳು. ನೋಡು, ಚಂಡಿಗಡ ಕೇಂದ್ರದ ಅಧೀನವಿದ್ದು ಹರಿಯಾನಾ—ಪಂಜಾಬಿ ಸುಭಾಗಳೆರಡರ ರಾಜಧಾನಿಯಾಗಬೇಕಂತೆ. ಹಾಗೆಯೇ..."

'ಒಳ್ಳೇ ಕಥೆ...ಉಭಯತರರು ಬೇಡುವ ನೆಲವನ್ನು ಕೇಂದ್ರದ ಅಧೀನವಾಡಿ ಬಿಡುವುದು...."

"ಆಗಲೇ ಸರಿಯಾಗುತ್ತೆ ಇಲ್ಲದ್ದು ಸಿಗೋದಿಲ್ಲ, ಇದ್ದದ್ದೂ ಹೋಗುತ್ತೆ ಅನ್ನೋದು..."

'ಅದಕ್ಕಿಂತ ನೀವೊಮ್ಮೆ ಹೇಳಿದ ಹಾಗೆ ಒಂದೇ ರಾಜ್ಯ ಮಾಡಿ ಬಿಟ್ರೆ ಇನ್ನೂ ಸರಿಹೋಗುತ್ತೆ ...'

'ಹ್ಞಾಂ....ನಮ್ಮ ವಿವಾದ ಪರಿಹಾರಕ್ಕೆ ಅದೊಂದೇ ಮಾರ್ಗವೋ ಏನೋ...."

"ಹೋಗ್ಲಿ, ಬಿಡಿ...ನೋಡೋಣ ಏನಾಗುತ್ತೇಂತ....'

'ಇನ್ನೇನಾಗೋದು? ಊಟ ಆಗುತ್ತೆ, ಹಾಸಿಗೆ ಹಾಸುತ್ತೆ....ಮಲಗುತ್ತೆ...."

"ಹ್ಞಾಂ....ಬನ್ನಿ..."

—ಗೋರಾ.

ನವಯುಗ
ವಿನಂತಿ

ಕನ್ನಡದಲ್ಲಿ ವಾರಪತ್ರಿಕೆಗಳೇ ಇಲ್ಲದ ಆ ಕಾಲದಲ್ಲಿ ಕನ್ನಡಿಗರಲ್ಲಿ ರಾಷ್ಟ್ರೀಯ ಭಾವನೆಯನ್ನು ಪಸರಿಸಿ ನವಯುಗದ ಸಂದೇಶವನ್ನೂ ಅವರೆಲ್ಲರಿಗೆ ತಲಪಿಸಿ ರಾಷ್ಟ್ರೋದ್ಧಾರಕ್ಕಾಗಿ ಕಳೆದ ೪೫ ವರ್ಷಗಳಿಂದಲೂ ದುಡಿಯುತ್ತಿರುವ ಪತ್ರಿಕೆ ನವಯುಗ. ಕಾಲಕಾಲಕ್ಕೆ ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ, ಜನಮನೋರಂಜಕವಾದ ವಿಷಯಗಳಿಂದಲೂ ವಿಷಯ ಪರಿಪ್ಲುತ ಲೇಖನಾದಿಗಳಿಂದಲೂ ಅಡಕವಾಗಿದ್ದು ಪ್ರತಿವಾರವೂ ನಿಶ್ಚಿತ ದಿನದಂದು ಪ್ರಕಟವಾಗಿ ಚಂದಾದಾರರ ಕೈ ತಪ್ಪದೆ ಸೇರುತ್ತದೆ.

ಪತ್ರಿಕೆಗಳು ಸ್ವಾವಲಂಬಿಯಾಗಿರಬೇಕಾದರೆ, ಚಂದಾದಾರರ ಸಂಖ್ಯೆ ಹೆಚ್ಚಿರಬೇಕಲ್ಲದೇ, ಇವರೆಲ್ಲರೂ ತಮ್ಮ ಚಂದಾ ಹಣವನ್ನು ಸಕಾಲದಲ್ಲಿ ರವಾನಿಸುತ್ತಿರಬೇಕು. ಪತ್ರಿಕೋದ್ಯಮವೇ ಕಷ್ಟಮಯವಾಗಿ ಪರಿಣಮಿಸುತ್ತಿರುವ ಈ ಸಮಯದಲ್ಲಿ ಚಂದಾದಾರರೆಲ್ಲರೂ ತಮ್ಮ ಬಾಕಿ ಚಂದಾವನ್ನು ಈ ಕೂಡಲೇ ಮನಿ ಆರ್ಡರ್ ಮೂಲಕವಾಗಿಯಾಗಲಿ, 'ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್'ನ ಯಾವ ಶಾಖೆಯಲ್ಲಾದರೂ ನವಯುಗದ ಖಾತೆಗೆ ತುಂಬುವುದರ ಮೂಲಕವಾಗಲಿ ಕಳಿಸಿ ನೆರವಾಗಬೇಕಾಗಿ ವಿನಂತಿ.

ಹಾಗೆಯೇ ತಮ್ಮ ಚಂದಾವನ್ನು ಕ್ರಮವಾಗಿ ಮುಂದುವರಿಸಿಕೊಂಡು ಹೋಗುವುದಲ್ಲದೆ ತಮ್ಮ ಮಿತ್ರರು, ಬಂಧುಗಳಲ್ಲಿಯೂ ನವಯುಗದ ವಿಶಾಲವಾದ ರಾಷ್ಟ್ರೀಯ ಗುರಿಯನ್ನು ವಿವರಿಸಿ ಅವರನ್ನೂ ಚಂದಾದಾರರಾಗುವಂತೆ ಪ್ರೇರೇಪಿಸಿ ಈ ಪ್ರೇರಣೆಯು ಸಫಲವಾಗುವಂತೆ ನೋಡಬೇಕಾಗಿ ಕೋರುತ್ತೇವೆ.

ಚಂದಾದಾರರೇ ಒಂದು ಪತ್ರಿಕೆಯ ನಿಜವಾದ ಆಸ್ತಿ. ಚಂದಾದಾರರು ಕ್ರಮವಾಗಿ ತಮ್ಮ ಹಣವನ್ನು ತೆರುತ್ತ ಬಂದರೆ, ಇವರ ಸಂಖ್ಯೆಯು ಹೆಚ್ಚುತ್ತ ಬಂದರೆ, ಆಗ, ಪತ್ರಿಕೆಯೂ ನಿರ್ಭೀತವಾಗಿದ್ದು, ಸ್ವತಂತ್ರವಾಗಿದ್ದು ಬೆಳೆದು ಬರಲು ಅನುಕೂಲವಾಗುವುದು. ನಮ್ಮ ಈ ನಮ್ರ ವಿನಂತಿಯನ್ನು ಸಹೃದಯತೆಯಿಂದ ಮನ್ನಿಸಿ ತಮ್ಮ ಬಾಕಿ ಚಂದಾ ಹಣವನ್ನು ಇನ್ನೂ ತಡಮಾಡದೆ ಕೂಡಲೇ ಕಳುಹಿಸಿ ಕೊಡಬೇಕಾಗಿ ವಿನಂತಿಸುತ್ತೇವೆ.

ಇಂತು ತಮ್ಮ ವಿಶ್ವಾಸಿ,
ಕೆ. ಹೊನ್ನಯ್ಯ ಶೆಟ್ಟಿ,
ವ್ಯವಸ್ಥಾಪಕ-ಸಂಪಾದಕ.

Navayuga Enterprise Ltd.
Registered Office: Palukote, Udipi

NOTICE

The register of members and Share transfer books of the Company will remain closed from 15th June to 10th July 66 (both days inclusive).

(By order of the Board)

Udipi
Date 2-6-1966 } K. H. Shetty, Mg. Director.

ಎಲ್ಲೆಲ್ಲಿ ಏನೇನು?

ಬೆಳ್ತಂಗಡಿ ತಾಲೂಕು ಟಿ. ಬಿ. ಸಂಸ್ಥೆಯ ಉದ್ಘಾಟನೆ

ಕಳೆದ ತಾ ೨ರಂದು, ಬೆಳ್ತಂಗಡಿ ತಾಲೂಕು ಟಿ. ಬಿ. ಸಂಸ್ಥೆಯ ಉದ್ಘಾಟನೆಯನ್ನು ಅ. ಭಾ. ಕ್ಷಯರೋಗ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಯಂ. ಕಾರ್ಯಪ್ಪನವರು ಡಾ|| ಬಿ. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಪ್ರಾರಂಭದಲ್ಲಿ ಶ್ರೀ ಜಿ. ಎನ್. ಭಿಡೆಯವರು ಸ್ವಾಗತಿಸಿದ ಬಳಿಕ, ಟಿ. ಬಿ. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ|| ಉಮೇಶರಾಯರು ಜಿಲ್ಲಾ ಸಂಸ್ಥೆಯ ಪರಿಚಯ ಮಾಡಿಕೊಟ್ಟರು.

ಶ್ರೀ ಬಿ. ಎಂ. ಕಾರ್ಯಪ್ಪನವರು ಅಖಿಲ ಭಾರತ ಟಿ. ಬಿ. ಸಂಸ್ಥೆಯ ಬೆಳವಣಿಗೆ, ಕಾರ್ಯಕ್ರಮಗಳ ಪರಿಚಯ ಮಾಡಿ, ಬೆಳ್ತಂಗಡಿಯಲ್ಲಿ ಈ ಶಾಖೆಯನ್ನು ತೆರೆಯಲು ಸಹಕಾರ ನೀಡಿದವರಿಗೆ ತಮ್ಮ ಕೃತಜ್ಞತೆಗಳನ್ನರ್ಪಿಸಿದರು. ಅಧ್ಯಕ್ಷರು ಮಾತಾಡುತ್ತಾ, ಜನತೆ ಟಿ. ಬಿ.ಯ ವಿರುದ್ಧ ಹೆಚ್ಚು ಆಸಕ್ತಿಯಿಂದ ಹೋರಾಡ ಬೇಕೆಂದು ತಿಳಿಸಿದರು. ಕೊನೆಯಲ್ಲಿ ಬಿ. ಡಿ. ಓ. ಕುಮಾರ ಶಶಿಕಲಾರವರು ಧನ್ಯವಾದ ಸಮರ್ಪಿಸಿದರು.

ವಾರ್ಷಿಕೋತ್ಸವ

ಆದಿಉಡುಪಿ ಹಾಯರ್ ಎಲಿಮೆಂಟರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಉಡುಪಿಯ ಎಡ್ವಕೇಟ್ ಪಿ. ಶಿವಾಜಿ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಶ್ರೀ ಪಿ. ಜಯಾನಂದ ಶೆಟ್ಟರು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಶ್ರೀ ಕೆ. ಕೃಷ್ಣರಾಜ ಭಟ್ಟರು ಸಂಘದ ಕಾರ್ಯ ಚಟುವಟಿಕೆಗಳ ವಾರ್ಷಿಕ ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿತರಣೆಗೈದರು. ಹಳೆವಿದ್ಯಾರ್ಥಿಗಳಿಂದ ನಾಟಕಾಭಿನಯವಾದ ಬಳಿಕ ಶ್ರೀ ಕೆ. ಕೃಷ್ಣರಾಜ ಭಟ್ಟರು ವಂದನಾರ್ಪಣೆಗೈದರು.

ಹರೇಕಳ ಹೈಸ್ಕೂಲ್ ಉದ್ಘಾಟನೆ—

ಕಳೆದ ತಾ ೭ರಂದು ಹರೇಕಳದಲ್ಲಿ ಹೊಸತಾಗಿ ಸ್ಥಾಪಿತವಾದ ಶ್ರೀ ರಾಮಕೃಷ್ಣ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು ಆರೋಗ್ಯಮಂತ್ರಿ ಡಾ|| ಕೆ. ನಾಗಪ್ಪ ಆಳ್ವರಿಂದ, ಶ್ರೀ ಎಸ್. ಮುಕುಂದ ರಾವ್ ಎಂ. ಎಲ್. ಸಿ. ಯವರ ನೇತೃತ್ವದಲ್ಲಿ ನೆರವೇರಿತು.

In the Court of the Munsif of Karkala

O. S. No. 16/1966

Between

Rudru Shedthi — Plaintiff

Ramanna Hegde — Defendant

To the defendant

Ramanna Hegde, nephew of Sheenappa Hegde and son of Sheethamma Hegadthi, residing in Hinduguddc of Mudradi village, Karkala Taluk.

Please take notice that the plaintiff has instituted the above suit for Rs. 820/- due under a pronote and subsequent interest and costs and the said suit stands posted to 21—6—66 for your appearance; you are hereby required to appear before the said Court at 11 A. M. on the said date and plead your defence if any failing which the suit will be decided exparte.

N. B. Shetty,
Advocate for Plaintiff.

Karkal, Dated 10—6—66.

ಪ್ರಾರ್ಥನೆ, ಸ್ವಾಗತ ಗೀತೆಗಳ ನಂತರ ಸಂಘದ ಅಧ್ಯಕ್ಷ ಶ್ರೀ ಪಿ. ಶೀನಪೂಂಜರು ಸ್ವಾಗತ ಭಾಷಣ ಮಾಡಿದರು. ಡಾ| ಆಳ್ವರು ಉದ್ಘಾಟಿಸಿ ಇತ್ತೀಚೆಗಿನ ವಿದ್ಯಾ ಪ್ರಗತಿಯನ್ನು ವಿವರಿಸಿದ ಬಳಿಕ ಶ್ರೀಗಳಾದ ಪಿ. ಶಂಕರ ಆಳ್ವ ಎಂ. ಪಿ., ಎಂ. ಶ್ರೀನಿವಾಸ ನಾಯ್ಕ ಎಂ. ಎಲ್. ಎ. ಇವರು ಗ್ರಾಮಸ್ಥರ ಪ್ರಯತ್ನವನ್ನು ಶ್ಲಾಘಿಸಿ ಮಾತನಾಡಿದರು.

ಈ ಸಭೆಗೆ ಪ್ರತಿಷ್ಠಿತ ಮಹನೀಯರನೇಕರು ಆಗಮಿಸಿದ್ದರು.

ವಾರ್ಷಿಕ ಮಹಾಸಭೆ:—

ಶಿರ್ವ, ಮೆಡಿಕಲ್ ರಿಲೀಫ್ ಎಸೋಸಿಯೇಶನ್ (ರಿ), ಶಿರ್ವ, ದ. ಕ.—ಇದರ ವಾರ್ಷಿಕ ಮಹಾಸಭೆಯು ತಾ. 5—6—66 ರಂದು ಡಾ| ವೈ. ಆರ್. ಶೆಟ್ರಿ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರಿಂದ ಸ್ವಾಗತ ಭಾಷಣ ಕಾರ್ಯದರ್ಶಿ ಶ್ರೀ ಕೆ. ವಾಸುದೇವ ಶೆಟ್ರಿಂದ ವಾರ್ಷಿಕ ವರದಿವಾಚನ, ಆರ್ಥಿಕ ಕಾರ್ಯದರ್ಶಿ ಡಾ| ಯಮ್. ರಾಜಶೇಖರ ಹೆಗ್ಡೆಯವರಿಂದ ಪರಿಶೋಧಿತ ಲೆಕ್ಕ ಮತ್ತು ಅಂದಾಜು ಆಯ ವ್ಯಯಗಳ ಮಂಡನೆಯಾಗಿ ಮಂಜೂರು ಮಾಡಲ್ಪಟ್ಟಿತು. ಅನಂತರ ಈ ಕೆಳಗಿನ ಸದಸ್ಯರನ್ನೊಳಗೊಂಡ ಹೊಸ ಆಡಳಿತ ಮಂಡಳಿಯು ಸರ್ವಾನುಮತದಿಂದ ಆರಿಸಲ್ಪಟ್ಟಿತು.

ಡಾ| ವೈ. ಆರ್. ಶೆಟ್ಟಿ (ಅಧ್ಯಕ್ಷ), ಡಾ| ಯು. ಕೆ. ಆಚಾರ್ ಮತ್ತು ಶ್ರೀ ಎಲ್. ಮೆಂಡೋನ್ಸ್ (ಉಪಾಧ್ಯಕ್ಷರು), ಡಾ| ಕೆ. ಆರ್. ವೆಂಕಟಕೃಷ್ಣ (ಕಾರ್ಯದರ್ಶಿ), ಶ್ರೀ ಕೆ. ವಾಸುದೇವ ಶೆಟ್ಟಿ (ಜತೆಕಾರ್ಯದರ್ಶಿ), ಡಾ| ಯಮ್. ರಾಜಶೇಖರ ಹೆಗ್ಡೆ (ಆರ್ಥಿಕ ಕಾರ್ಯದರ್ಶಿ), ಡಾ| ಕೆ. ಮೋಹನ್‌ದಾಸ ಪೈ, ಡಾ| (ಶ್ರೀಮತಿ) ಶ್ರೀದೇವಿ ಕೆ. ನಂಬಿಯಾರ್, ಶ್ರೀ ಬಿ. ಜಯರಾಮ ಶೆಟ್ಟಿ, ಶ್ರೀ ಕೆ. ರಘುರಾಮ ಹೆಗ್ಡೆ ಮತ್ತು ಶ್ರೀ ಕೆ. ಯಮ್. ಜೋಳ್ಕಿ (ಸದಸ್ಯರು).

ಶ್ರೀ ಎಸ್. ಟಿ. ಕೆ. ಶೆಟ್ರಿ, ಶ್ರೀ ಆರ್. ಎಸ್. ಶೆಟ್ರಿ ಮತ್ತು ಶ್ರೀ ರಾಮಣ್ಣ ಎಸ್. ಶೆಟ್ರಿ ಉಪಸ್ಥಿತರಿದ್ದು ಸಹಕಾರವೀಯುವುದಾಗಿ ಆಶ್ವಾಸನೆ ಇತ್ತರು. ಅಧ್ಯಕ್ಷರ ಭಾಷಣಾನಂತರ ಶ್ರೀ ಕೆ. ವಾಸುದೇವ ಶೆಟ್ರಿ ಧನ್ಯವಾದಗಳನ್ನಿತ್ತರು.

ಅ| ಭಾ| ಶಸ್ತ್ರವೈದ್ಯರ ಸಮ್ಮೇಳನ

ಮಣಿಪಾಲ, ಜೂನ್ ೯— ಭಾರತದ ಶಸ್ತ್ರವೈದ್ಯರ ಸಂಘದ ೨೬ನೇ ವಾರ್ಷಿಕ ಸಮ್ಮೇಳನ ಬರುವ ಡಿಸೆಂಬರ್ ೨೭ರಿಂದ ೩೦ರ ವರೆಗೆ ಇಲ್ಲಿ ನಡೆಯುವುದೆಂದು ಸಮ್ಮೇಳನದ ವ್ಯವಸ್ಥಾಪಕ ಕಾರ್ಯದರ್ಶಿ ಡಾ|| ಎಂ. ಪಿ. ಪೈಯವರು ಪತ್ರಿಕಾ ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ.

In The Court of the Munsif of Karkala

O. S. No. 43/1966.

Mahabala Shetty — Plaintiff

Chikkamma Shedthi, Defendant

To the defendant

Chikkamma Shedthi, daughter of Chandamma Shedthi, Kuchur Doddamane, Kuchur Village of Karkala Taluk

Whereas the plaintiff has instituted the above suit for Rs. 196-75 due towards annuity and subsequent interest and costs of suit and the said suit stands posted to 23—6—1966; you are hereby required to appear before the said Court at 11 A. M. on the said date and plead your defence if any failing which the suit will be decided in your absence.

N. B. Shetty.
Advocate for plaintiff.

Karkala, 10—6—66.

ಪ್ರಥಮ ಬಾರಿಗೆ ಸ್ವಾತಂತ್ರ್ಯಾನಂತರ ಪ್ರದೇಶದಲ್ಲಿ ನಡೆಯಲಿದ್ದು ದೇಶ ವಿದೇಶಗಳ ಪ್ರಸಿದ್ಧ ಶಸ್ತ್ರವೈದ್ಯರು ಭಾಗವಹಿಸಲಿರುವ ಈ ಸಮ್ಮೇಳನದ ಸ್ವಾಗತ ಸಮಿತಿಯ ಸದಸ್ಯರಾಗಿ ದಾಖಲಾತಿ ಮಾಡಿಕೊಳ್ಳಬೇಕೆಂದು ಅವರು ವೈದ್ಯರುಗಳಿಗೆ ಮನವಿ ಮಾಡಿಕೊಂಡಿದ್ದಾರೆ.

ಮುಂಡ್ಕೂರಲ್ಲಿ ಹೈಸ್ಕೂಲು ಉದ್ಘಾಟನೆ

ಮುಂಡ್ಕೂರಲ್ಲಿ ನೂತನವಾಗಿ ಪ್ರಾರಂಭಿತವಾದ ಮುಂಡ್ಕೂರು ವಿದ್ಯಾವರ್ಧಕ ಹೈಸ್ಕೂಲಿನ ಉದ್ಘಾಟನೆಯನ್ನು ವಿಧಾನ ಸಭಾ ಸದಸ್ಯ ಶ್ರೀ ಎಸ್. ಡಿ. ಸಾಮ್ರಾಜ್ಯರವರು, ಕಾರ್ಕಳ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎನ್. ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಪ್ರಾರಂಭದಲ್ಲಿ ಶ್ರೀ ಎಂ. ಶಿವಣ್ಣ ಶೆಟ್ಟರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ವಿಶ್ವನಾಥ ಕೆ. ಕಾಮತ್‌ರವರಿಂದ ವರದಿವಾಚನ ನಡೆಯಿತು. ಶಾಲಾ ಕರೆಸ್ಪೋಂಡೆಂಟ್ ಶ್ರೀಮತಿ ವಸಂತಿ ಎನ್. ಮುಂಡ್ಕೂರ್‌ರವರು ಸಂದೇಶಗಳನ್ನೋದಿದರು. ಶ್ರೀ ಭಾಸ್ಕರ ಶೆಟ್ಟಿ, ಡಾ|| ಕೆ. ಎಂ. ಬಾಬು ಶೆಟ್ಟಿ, ಡಾ|| ವಿ. ಆರ್. ಕೊರಡ್ಕಲ್ ಹಾಗೂ ಶ್ರೀ ಟಿ. ಜಿ. ರಾವ್ ಮೊದಲಾದವರು ಶಾಲೆಗೆ ಶುಭಕೋರಿ ಮಾತನಾಡಿದರು.

ಕೊನೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎ. ಟಿ. ಶೆಟ್ಟಿಯವರು ವಂದನಾರ್ಪಣೆಗೈದರು.

ಕೃತಜ್ಞತಾ ಸಮರ್ಪಣೆ

ದಿನಾಂಕ 12—6—66ರಂದು ಕಾರ್ಕಳ ಜೈಹಿಂದ್ ಟಾಕೀಸಿನಲ್ಲಿ ಜರಗಿದ ನನ್ನ ದ್ವಿತೀಯ ಪುತ್ರಿ ಚಿ| ಸೌ| ಅಶಲತಾ ಮತ್ತು ದಿ| ವೆಂಕಟಯ್ಯ ಶೆಟ್ರ ಪುತ್ರ ಚಿ| ರಾಮಣ್ಣ; ನನ್ನ ತೃತೀಯ ಪುತ್ರಿ ಚಿ| ಸೌ| ಸುವರ್ಣಲತಾ ಮತ್ತು ದಿ| ಎಂ. ರಾಜು ಹೆಗ್ಡೇರ ಪುತ್ರ ಚಿ| ಜಯರಾಮ ಇವರ ವಿವಾಹ ಸಮಾರಂಭಕ್ಕೆ ಆಗಮಿಸಿ ಉಡುಗೊರೆಯಿತ್ತು ಆಶೀರ್ವದಿಸಿದ ಮತ್ತು ಶುಭ ಸಂದೇಶಗಳನ್ನು ಕಳುಹಿಸಿದ ಬಂಧು ಮಿತ್ರರಿಗೆ ಈ ಮೂಲಕ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕೆದಿಯೂರು ರಘುನಾಥ ಶೆಟ್ಟಿ,
ನಿತ್ಯಾನಂದ ಸದನ, ಕಾರ್ಕಳ.

ಕೃತಜ್ಞತೆಗಳು

ನನ್ನ ಪುತ್ರ ಚಿ| ಮಹಾಬಲನ ವಿವಾಹವು ಶ್ರೀ ಬ್ರಹ್ಮಾವರ ಪಡುಮನೆ ಮಹಾಲಿಂಗ ಶೆಟ್ಟರ ಪುತ್ರಿ ಚಿ| ಸೌ| ವಿಶಾಲಾಕ್ಷಿಯೊಂದಿಗೆ ಕುಂದಾಪುರ ಪೂರ್ಣಿಮಾ ಥಿಯೇಟರಿನಲ್ಲಿ ತಾ. 12-6-66ರಂದು ನೆರವೇರಿದ ಸಂದರ್ಭದಲ್ಲಿ ಚಿತ್ತೈಸಿ ಉಡುಗೊರೆಯಿತ್ತು ಆಶೀರ್ವದಿಸಿದ ಹಾಗೂ ಶುಭ ಸಂದೇಶಗಳನ್ನು ಕಳುಹಿಸಿದ ಬಂಧುಮಿತ್ರರಿಗೆಲ್ಲಾ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಈ ಮೂಲಕ ಸಮರ್ಪಿಸುತ್ತೇನೆ.

ಎನ್. ಮಾರಪ್ಪ ಶೆಟ್ಟಿ.
ಬಿಜೈ, ಮಂಗಳೂರು.

ಕೃತಜ್ಞತೆಗಳು

ತಾ. 6—6—66ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿದ ನನ್ನ ಪುತ್ರ ಚಿ| ರಾಜೇಂದ್ರಕೃಷ್ಣ ಮತ್ತು ದಿ| ಶೇಷ ಶೆಟ್ರ ಪುತ್ರಿ ಚಿ| ಸೌ| ಸುಲೋಚನ; ನನ್ನ ಪುತ್ರಿ ಚಿ| ಸೌ| ಪೂರ್ಣಿಮಾ ಮತ್ತು ದಿ|| ಶೇಷ ಶೆಟ್ರ ಪುತ್ರ ಚಿ| ರಮಾನಾಥ ಇವರ ವಿವಾಹಕ್ಕೆ ಬಂದು ಉಡುಗೊರೆಯಿತ್ತು ಆಶೀರ್ವಚಿಸಿದ ಮತ್ತು ಶುಭ ಸಂದೇಶಗಳನ್ನು ಕಳುಹಿಸಿದ ಮಿತ್ರ ಬಂಧು ಬಾಂಧವರಿಗೆನ್ನ ವಂದನಾಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮುದ್ರಾಡಿ ಕೃಷ್ಣಯ್ಯ ಶೆಟ್ಟಿ.

READ & ADVERTISE IN NAVAYUGA WEEKLY

ಕೈತ್ರ ಮುರುಗ

(ಎರಡನೇ ಪುಟದಿಂದ)

ಜಾನಕಿಯು ವಿಷಯದ ಒಟ್ಟು ಬರಿದಾಗವ ವರೆಗೂ ಹಾಗೂ ಅವಳು ನಿದ್ರಾಂಗನೆಗೆ ಮೊರೆ ಹೋಗುವವರೆಗೂ ಅವರು ಬಹಳ ವಿಷಯಗಳ ಕುರಿತು ಮಾತಾಡಿದರು ಜಾನಕಿಯು ಕೇವಲ ಮುಗ್ಧ ಸ್ವಭಾವದ, ಅಂದದ ಹಾಗೂ ಮಗುವಿನಂತೆ ಸರಳ ಸ್ವಭಾವದವಳೆಂದು ಕೋಕಿಲಂ ಅಭಿಪ್ರಾಯ ಮಾಡಿಕೊಂಡಳು ನಿಸರ್ಗದ ಅತಿಮುಖ್ಯ ಸಂಕೀರ್ಣ ಜೀವನದಲ್ಲಿ ಮೋಸವನ್ನಾಗಿ ರಚಿಸಲ್ಪಡುವ ಸಂಕೇತವಾಕೆ ಎಂದು ತೀರ್ಮಾನಿಸಿಕೊಂಡಳು. ಕೋಕಿಲಂಳ ಕುರಿತು ಜಾನಕಿಗೆ ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬರಲಿಕ್ಕಾಗದಿದ್ದರೂ ಅವಳಲ್ಲಿ ಆಕರ್ಷಕ ಒಲವು ಇದೆ ಎಂದು ತಿಳಿದುಕೊಂಡಳು. ಕೇದಾರಿ ಹಾಗೂ ರಾಮು ತಿರುಗಿ ಬರುವವರೆಗೆ ಎಚ್ಚರದಿಂದಿರಬೇಕೆಂದು ಕೋಕಿಲಂ ಪ್ರಯತ್ನಿಸಿದರೂ ನಿದ್ರಾತಾಯಿ ತನ್ನ ಕೂಸನ್ನು ತನ್ನ ತೊಡೆಯ ಮೇಲೆ ಉತ್ಸುಕತೆಯಿಂದ ಮಲಗಿಸಿಕೊಂಡಳು.

— ಳಳ —

ತತ್ವಗಳನ್ನು ಆಲೋಚಿಸುವವನಿಗೆ ಹಾಗೂ ಸತ್ಯದ ಶೋಧನೆಗೆ ಹೊರಟವನಿಗೆ ಸಮುದ್ರದ ದಂಡೆಯಲ್ಲಿರುವ ಮರಳು ದಿಣ್ಣೆಯು ನಿಸರ್ಗದತ್ತ ಅತ್ಯುತ್ತಮ ಮೃದು ಹಾಸಿಗೆ ಆ ಉಸುಭಾವರೋ ಎಂದೆಂದೂ ಹೊಸತಾಗಿಯೇ ಇರುತ್ತದೆ. ಅದರ ಮೇಲೆ ರಾಮು ಮತ್ತು ಕೇದಾರಿ ವಿಶ್ರಾಂತಿಗಾಗಿ ಕುಳಿತು ಕೊಂಡರು

ರಾತ್ರಿ ವೇಳೆಯಲ್ಲಿ ಹೊತ್ತು ಹೋಗುವದು ಗೊತ್ತಾಗುವದೇ ಇಲ್ಲ. ಕಡಲು ಕರೆಯ ರಸ್ತೆಯಲ್ಲಿ ಓಡಾಡುತ್ತಿದ್ದ ವಾಹನಗಳ ಸದ್ದೂ ಕಡಿಮೆ ಆಗುತ್ತ ಬಂದಿತ್ತು. ತಣ್ಣಗಿನ ಗಾಳಿ ಶಾಂತವಾಗಿ ಬೀಸುತ್ತಿತ್ತು ಯೊಂಡದಂತೆ ಸಮುದ್ರ ಸೌಮ್ಯವಾಗಿತ್ತು. ಅಲೆಗಳು ಕಿನಾರೆಯ ಕಿವಿಯಲ್ಲಿ ಮೃದು—ಮೃದುವಾಗಿ ಸಮುದ್ರ-ಸಂಗೀತವನ್ನು ಹಾಡುತ್ತಿದ್ದವು. ರಾಣಿಯು ಮದುವೆಯ ಸಮಯದಲ್ಲಿ ಕಂಗೊಳಿಸುವಂತೆ, ಪೂರ್ಣ ಚಂದ್ರನು ಆಕಾಶದಲ್ಲಿ ಪ್ರಕಾಶಿಸುತ್ತಿದ್ದನು. ಅಲೆಗಳಿಗಿಂತ ಅದೆಷ್ಟೋ ಮೇಲೆ, ಆಗಸ ದಂಚಿಗಿಂತಲೂ ಮೇಲೆ ಹಾಗೂ ನಭದ ನೀಲಿ-ಬೂದು ಮಿಶ್ರಿತ ಬಣ್ಣದಿಂದ ಕಿರಣಗಳನ್ನು ಚಲ್ಲುತ್ತಾ, ವೈಭವದಿಂದ ಚಂದ್ರನು ಮೆರೆಯುತ್ತಿದ್ದನು. ಚಂದ್ರನಿಗಿಂತಲೂ ಸ್ವಲ್ಪ ಮೇಲಕ್ಕೆ ಗುರುವು ವಜ್ರದಂತೆ ಮಿನುಗುತ್ತಿದ್ದನು.

ಮಳಲಿನ ಮೇಲೆ ರಾಮು ಮಲಗಿದನು. ತಲೆಯನ್ನು ಅಂಗೈ ಮೇಲೆ ಇಟ್ಟುಕೊಂಡು ಮಗ್ಗುಲಿನಲ್ಲಿ ಕೇದಾರಿಯು ಮಲಗಿದನು. ಅತ್ತ—ಭೂಮಿಯ ಮೇಲೆ, ಸಮುದ್ರದಲ್ಲಿ ಹಾಗೂ ಆಕಾಶದಲ್ಲಿ— ಎಲ್ಲೆಲ್ಲೂ ಶಾಂತಿ ಹಾಗೂ ತತ್ವಜ್ಞಾನ ಹಬ್ಬಿಕೊಂಡಿತ್ತು.

ಅಲ್ಲಿ, ಆಕಾಶದಲ್ಲಿ ವಜ್ರದಂತೆ ಮಿನುಗುತ್ತಿರುವದು ಗುರು ನಕ್ಷತ್ರ ಮನುಷ್ಯನಿಗೆ ಘನತೆ ಹಾಗೂ ಕೀರ್ತಿಯನ್ನುಂಟುಮಾಡುವ ಶಕ್ತಿ ಅದಕ್ಕಿದೆ "

ರಾಮು ಚಂದ್ರನತ್ತ ನೋಡುತ್ತ ಹೇಳಿದ.

'ಹಾಗಿದ್ದಲ್ಲಿ ನನ್ನ ಜನನ ಕಾಲದಲ್ಲಿ ಗುರುಬಲ ಬಹಳ ಕಮ್ಮಿ ಇದ್ದಿರಬೇಕು, ನನಗೆ ಹೇಳು, ರಾಮು ನೀನು ಜ್ಯೋತಿಷ್ಯ ತಿಳಿದವನಿರುವೆ, ನನ್ನ ಜಾತಕದಲ್ಲಿ ಏನು ದೋಷವಿದೆ? ನನ್ನದರಲ್ಲಿ ಗುರು ಕೆಟ್ಟ ನಕ್ಷತ್ರವಾಗಿ '

'ನಾನೋರ್ವ ಜ್ಯೋತಿಷಿ! ಜಾತಕದಲ್ಲೇನೂ ದೋಷ ಇರುವದಿಲ್ಲ ದೋಷ ಇರುವದು ನಮ್ಮಲ್ಲೆ ಪಟ್ಟಣವಾಸ ಅದರಲ್ಲೂ ನ್ಯಾಯವಾದಿ ಉದ್ಯೋಗದಲ್ಲಿದ್ದರೆ, ಒಳ್ಳೆಯ ಸ್ಥಾನದಲ್ಲಿರುವ ಗುರು ಕೂಡಾ ಇನ್ನೊಂದು ಚಿಟುಕು ನಸ್ಯವನ್ನು ಬೇಡಲು ಕೆಲ ಮೈಲುಗಳಾಚೆ ಕುಂಟುತ್ತ ಹೋಗಬಹುದು. ಪರಿಸ್ಥಿತಿಯು ಪ್ರಪಂಚವನ್ನಾಳುತ್ತದೆ, ಕೇದಾರಿ. ಮನುಷ್ಯನು ಕುಂಬಾರನ ಚಕ್ರಕ್ಕೆ ಸಿಲುಕಿರುವ ಕೇವಲ ಆವೆಮಣ್ಣು.

'ಆದರೆ ರಾಮು, ನನ್ನ ಪತನ ಈ ರೀತಿಯಾಗುತ್ತದೆಂದು ನಾನು ಕನಸು ಕೂಡಾ ಕಂಡಿರಲಿಲ್ಲ ಅದೂ ಎಷ್ಟು ಬೇಗ! ಅಷ್ಟು ಬೇಗ ಸಿಡಿಲು ಬಡಿದರೂ ಜೀವನ ಹಾಳಾಗಲಿಕ್ಕಿಲ್ಲ. ಈ ಪ್ರಪಂಚದಲ್ಲಿ ಶಿಕ್ಷೆಗೆ ಸಮತೆ ಎಂಬುದು ಗೊತ್ತಿರುವದಿಲ್ಲ. ನನ್ನ ವಿಷಯವನ್ನೇ ತಗದುಕೊಂಡು ನೋಡು, ಹಿಂದಕ್ಕೆ ನೂರಾರು ಜನರು ಇದೇ ರೀತಿ ಮಾಡಿದ್ದರು, ಈಗಲೂ ಹಾಗೆ ಮಾಡುವವರು ಇದ್ದಾರೆ ಮನುಷ್ಯ ಸ್ವಭಾವದ ಇತಿಶ್ರೀಯ ವರೆಗೂ ಅಂತಹ ಜನರು ಸಮಾಜದ ಆಟದಲ್ಲಿ ಗೆಲುವು ಹಾಗೂ ಹಣಕ್ಕಾಗಿ ಇತರರನ್ನು ಎತ್ತಿ ಕಟ್ಟುತ್ತಿರುತ್ತಾರೆ. ಹೆಚ್ಚು ಕಡಿಮೆ ಮನುಷ್ಯ ಸ್ವಭಾವವು ಒಳಿತು ಕೆಡುಕುಗಳ ವೈಶಿಷ್ಟ್ಯಪೂರ್ಣ ಮಿಶ್ರಣ '

ಕೋಪಾಗ್ನಿಯ ಬಿಸಿ ತಾಗಿದ ಕೇದಾರಿಯು ಸ್ವರವನ್ನೇರಿಸಿ ಮಾತಾಡಲಾರಂಭಿಸಿದನು ಅವನ ತಿಳಿಯಾಗಿದ್ದ ಕಣ್ಣುಗಳಿಂದ ಬೆಂಕಿಯ ಕಿಡಿಗಳು ಉದುರುವಂತೆ ಕಂಡು ಬರುತ್ತಿತ್ತು. ಅಂತಹ ಜಯಶಾಲಿ ಹಾಗೂ ದೋಷಪೂರ್ಣ ಜನರು ಎಲ್ಲಿದ್ದಾರೆ ಈಗ? ಅವರೀಗ ಎತ್ತರದ ವೇದಿಕೆಯ ಮೇಲೆ ನಿಂತುಕೊಂಡು ನಿನಗೂ ನನಗೂ ಉಚ್ಚತರದ ನೀತಿ ಶಾಸ್ತ್ರವನ್ನು ಬೋಧಿಸುತ್ತ ಇದ್ದಾರೆ ಅಷ್ಟೆಲ್ಲಾ ಯಾಕೆ? ಆ ಮಾರ್ಕಂಡಂನನ್ನು ನೋಡು. ಕೆಡುಕ. ದಾರಿಯನ್ನು ಉದಾಹರಣೆ ಸಹಿತ ನನಗೆ ಕಲಿಸಿಕೊಟ್ಟ ಅವನು ನಷ್ಟವಿಲ್ಲದೆ ಹೊರಗೆ ಬಂದು, ಈಗ ವಿಧಾನ ಸಭೆಯಲ್ಲಿ ಕುಳಿತು ಕೊಂಡಿದ್ದಾನೆ. ಅಲ್ಲಿಂದ ದೇಶದ ಒಳಿತು ಹಾಗೂ ಪ್ರಪಂಚದ, ಪ್ರಜೆಗಳ ಹಿತದ ಕುರಿತು ಭಾಷಣ ಕೊಡುತ್ತಿದ್ದಾನೆ. ಇದು ಬಹಳ ಅವಿಚಾರಿ ಹಾಗೂ ಕ್ರೂರ ಪ್ರಪಂಚ. ಅಂತಹ ಮನುಷ್ಯ, ಕೇವಲ ಮತ್ಸರ ಹಾಗೂ ದರಾಕಾಂಕ್ಷೆಯಿಂದ ನನ್ನ ನಾಶಕ್ಕೆ ಕಾರಣನಾದನು ಅದಕ್ಕೆ ಕಾರಣವೇನು? ನಾನು ಅವನಿಗಿಂತ ಕಿರಿಯವನಿದ್ದು, ಅದನದ್ದಕ್ಕಿಂತ ಮೇಲಿನ ಸ್ಥಾನಕ್ಕೆ ಆರಿಸಲ್ಪಟ್ಟಿರುವದೇ ಕಾರಣ. ಆ ಹಂಚಿಕೆಯನ್ನು ನನ್ನ ಬಾಯಿಯಿಂದಲೇ, ನನ್ನ ಆರ್ಥಿಕ ಅಸಹಾಯಕ ಪರಿಸ್ಥಿತಿಯನ್ನು ಅರಿತುಕೊಂಡ ಮೇಲೆ ಹೂಡಿದನು. ಆದರೂ ಆಗ ನನ್ನ ಕೈಯ್ಯಲ್ಲಿ ನಗದು ಅಥವಾ ಒಡವೆ ಆಭರಣ ಹಾಗೂ ಇತರ ರೂಪದಲ್ಲಿ ಕೇವಲ ಸಾವಿರ ರೂಪಾಯಿ ಇರುತ್ತಿದ್ದಲ್ಲಿ ಅವನನ್ನು ತೂಗು ಹಾಕುತ್ತಿದ್ದ—ಹಾಗೆ ನಾನೀಗ ಭಾರತದ ರಾಜಧಾನಿ ದಹಲಿಯಲ್ಲಿ ಇದ್ದುಕೊಂಡು ಭಾರತದ ರಾಜಕೀಯದ ಕೈಸವ ಪ್ರಪಂಚದಲ್ಲಿ ಆಳಿಕೊಂಡಿರುತ್ತಿದ್ದ!'

ಮಾತಿನ ಬಿರುಕಿನ ಸಮಯ ಅಸಂತೋಷದಿಂದ ರಾಮು ಚಂದ್ರನತ್ತ ಓರೆಗಣ್ಣಿನಿಂದ ನೋಡಿದನು.

ಈಗ ಇನ್ನೂ ಹೆಚ್ಚು ಸ್ಪಷ್ಟವಾಗಿರುವ ಹಾಗೂ ತತ್ವಗಳಿಂದ ಒಡಗೂಡಿರುವ, ಆ ಹಳೆಯದಾದರೂ ಪರಿಚಿತ ಓರೆಗಣ್ಣಿನ ನೋಟದರ್ಥ ಕೇದಾರಿಗಾಯಿತು. ಆಗ ಅವನು ಸ್ವರವನ್ನು ಬದಲಾಯಿಸಿ "ಪುನಃ ನನ್ನ ಹೃದಯದಲ್ಲಿ ವಿಷಪೂರ್ಣ ಭಾವನೆಗೇಕೆ ಕೈಹಾಕಿಕೊಡಬೇಕು? ಇನ್ನು ಮುಂದೆ ನಾನು ಆ ಆಟವನ್ನಾಡುವದಿಲ್ಲ. ನನಗೆ ಸಾಧ್ಯವಾದರೂ ನಾನು ಹಗೆ ತೀರಿಸಿಕೊಳ್ಳಲು ಪ್ರಯತ್ನಿಸುವದಿಲ್ಲ. ಸರಿ, ತನ್ನ ಜಯದ ಫಲವನ್ನು ಮಾರ್ಕಂಡಂ ಅನುಭವಿಸಲಿ. ನಾನವನ ಕುರಿತು ಆಲೋಚಿಸುವದಿಲ್ಲ. ಆಳ್ವಿಕೆಗೆ ಹಾತೊರೆಯುತ್ತಿರುವ ಈ ಪ್ರಪಂಚದಲ್ಲಿ ನನಗೇನಿದೆ? ಏನೂ ಇಲ್ಲ. ಆದರೆ ಪ್ರಚಲಿತ ಪರಿಸ್ಥಿತಿಯಲ್ಲಿ ನನ್ನ ಪತನವು ಅದು ಹೇಗೆ ನ್ಯಾಯಬದ್ಧವಾದುದೆಂದು ನೀನು ಹೇಳಬಲ್ಲೆ?"

"ಪ್ರಿಯ ಕೇದಾರಿ, ನಿನಗೆ ತಿಳಿದೇ ಇದೆ ತಪ್ಪಿಲ್ಲವೆಂದು ಸಾಧಿಸಲು ನನ್ನಿಂದ ಸಾಧ್ಯವೂ ಇಲ್ಲ ನಮಗಿಂತ ಅದು ಅನತಿ ದೂರದಲ್ಲಿದೆ ಬಹುಮಾನವು ಮತ್ತು ಶಿಕ್ಷೆ ಇವು ಮನುಷ್ಯರ ಜೀವನದಲ್ಲಿ ಸೇರಿಕೊಂಡಿವೆ. ಅವುಗಳ ವಿಷಯ ನಮಗೇನೂ ತಿಳಿದಿರುವದಿಲ್ಲ, ಆದರೆ ತಿಳಿದುಕೊಳ್ಳಲಿಕ್ಕೆ ಸಾಧ್ಯವಿದೆ. ತಿಳಿದುಕೊಂಡಷ್ಟರಿಂದ ಈ ಜೀವನದ ತಡೆಯಲ್ಪಟ್ಟಿರುವ ಪ್ರವಾಹವನ್ನು ದಾಟಲು ಅದು ಸಾಕಾಗುತ್ತದೆ. ಹಾಗಾಗಿ ದಾರಿ ಗೊತ್ತಿಲ್ಲದ ಸಮುದ್ರದಲ್ಲಿ ಸಾಹಸ ಪ್ರದರ್ಶಿಸಿ ಪ್ರಯೋಜನವೇನು? ನೀನು ತೀರ್ಪು ಕೊಡಬೇಡ. ಇನ್ನು ನೀತಿ, ಅನೀತಿಯ ಪ್ರಶ್ನೆ ಎಲ್ಲಿ ಬರುತ್ತದೆ? ನೀತಿಯು ಮಾನವ ರಚಿತ ಜಾಡು ಎಂಬುದರಲ್ಲಿ ಸಂಶಯವಿಲ್ಲ. ಆದರೆ 'ಶಾಶ್ವತ ಸತ್ಯದ ಮೇಲೆ ರಚಿಸಿರುವ ನಿಯಮಗಳೆಲ್ಲವೂ ವಿಶ್ವನಿಯಮದ ದೃಷ್ಟಿಯಿಂದಲೇ ರಚಿಸಲ್ಪಟ್ಟಿವೆ, ದಡಗಳಿಂದ ಸಂಕುಚಿಸಲ್ಪಟ್ಟಿರುವ ನದಿಯು ಕೊನೆ ಇಲ್ಲದ ಸಮುದ್ರವನ್ನು ಮುಟ್ಟುವ ಹಾಗೆ ಅವು ರಚಿಸಲ್ಪಟ್ಟಿವೆ, ವ್ಯರ್ಥವಾಗಿ ಆಡ್ಡಾಡುತ್ತಿರುವ ನೀರಿನ ಹನಿ ತನ್ನನೊಂದಷ್ಟು ಸ್ವಾತಂತ್ರ್ಯದಿಂದ ವ್ಯರ್ಥವಾಗಿ ಹಾಳಾಗಿ ಹೋಗುತ್ತದೆ. ಅದೇ ನೀರು ನಿನ್ನಲ್ಲಿ, ದಂಡೆಯನ್ನೇ ಕೊರೆಯುತ್ತ, ಅದನ್ನು ಒಡೆದುಕೊಂಡು ರಭಸದಿಂದ ಸಿಕ್ಕಿದತ್ತ ಹರಿದು ಕೊನೆಗ ಎತ್ತವೂ ದಾರಿ ಕಾಣದೆ ಪ್ರಪಾತದಲ್ಲಿ ಬಿದ್ದು ಬಿಟ್ಟಿದೆ. ಹ್ಞ! ಕೇದಾರಿ, ಕೊಳ್ಳಿಗೆ ಹಾಗೂ ಜಯಕ್ಕೆ ಅವುಗಳ ನೈಸರ್ಗಿಕ ಹಾಗೂ ನೈತಿಕ ನಿಯಮಗಳಿವೆ. ಅವುಗಳತ್ತ ನೀನು ಕಡೆಗಣ್ಣಿನಿಂದಲೂ ನೋಡಿರುವದಿಲ್ಲ ಗಾರೆ ತಯಾರಿಸುವ ಮೊದಲೇ ನೀನು ಕಲ್ಲೂ ಹಾಗೂ ಗಾರೆಯನ್ನು ರಾಶಿಹಾಕಿ ಬಿಟ್ಟೆ. ಕ್ಷಣಿಕ ಸ್ಪರ್ಶ ಮಾತ್ರದಿಂದ ಕಟ್ಟಡವು ಅಲುಗಾಡಿತು."

ಉಣ್ಣೆಯಂತಹ ಮೋಡವೊಂದು ಚಂದ್ರನನ್ನು ಮುತ್ತಿಬಿಟ್ಟಿತು. ಚಂದ್ರನು ಪುನಃ ಹೊರಗೆ ಬರುವ ವರೆಗೆ ರಾಮು ಮಾತು ನಿಲ್ಲಿಸಿದನು.

(ಮುಂದುವರಿಯುವುದು)

NAVAYUGA 16—6—1966
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಮುಂಬಯಿಯ ಮೋಟಾರು ಸಾರಿಗೆ

(ಆರನೇ ಪುಟದಿಂದ)

ನ್ಯವಾಗಿ ಬಸ್ಸುಗಳನ್ನು ಲಂಡನ್ ಬಸ್ಸುಗಳ ಮಾದರಿಯಲ್ಲೇ ಕಟ್ಟಲಾಗುತ್ತದೆ.

ಸಾವಿರಾರು ಬಸ್ಸುಗಳನ್ನು ಎಷ್ಟೊಂದು ಜಾಗ್ರತೆಯಿಂದ ನಡೆಸಿದರೂ, ನೋಡಿಕೊಂಡಿದ್ದರೂ, ಕೆಲವೊಮ್ಮೆ ಅನಿರೀಕ್ಷಿತವಾಗಿ ಅವು "ಸತ್ಯಾಗ್ರಹ"ವನ್ನು ಕೈಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ! ಅಂತಹ ಪ್ರಸಂಗಗಳಲ್ಲಿ ಅವನ್ನು ಸರಿಪಡಿಸಲು ಯೂ ಅವುಗಳ "ಬೇನೆ"ಯನ್ನು ಸುಧಾರಿಸಲು ಎಂಟು ಸುಸಜ್ಜಿತ ಬ್ರೇಕ್ ಡಾನ್ ವ್ಯಾನ್‌ಗಳ ವ್ಯವಸ್ಥೆಯಿದೆ. ಕಿಂಗ್ಸ್‌ವೇ ಗ್ಯಾರೇಜಿನಿಂದ ಇವುಗಳ ಚಲನವಲನಗಳನ್ನು ನೋಡಿಕೊಳ್ಳಲಾಗುತ್ತಿದೆ. ಗಾಡಿ ಹಾಳಾಯಿತೆಂದು ಟೆಲಿಫೋನ್ ವರದಿ ಸಿಕ್ಕಿದ ಕೂಡಲೇ ಅವನ್ನು ಓಡಿಸಿ ಶೀಘ್ರ ಗಮನವನ್ನು ಕೊಡಲಾಗುವುದು.

ಬಸ್ಸುಗಳ ಓಡಾಟದ ಕೇಂದ್ರ ಏರ್ಪಾಟು ಬಾಂಬೆ ಸೆಂಟ್ರಲಿನಿಂದಾಗುತ್ತದೆ. ಇಲ್ಲಿ ಇಪ್ಪತ್ತನಾಲ್ಕು ತಾಸು ಕೂಡಾ ಬಸ್ಸುಗಳ ಓಡಾಟದ ಮೇಲೆ ಸಂಪರ್ಕವನ್ನು ಇಟ್ಟುಕೊಂಡು ಪ್ರತಿಯೊಂದು ಸಣ್ಣ ಯಾ ದೊಡ್ಡ ಅಪಘಾತಗಳಾದಾಗ, ಢಿಕ್ಕಿ ಅಥವಾ ಇನ್ನಿತರ ಯಾಂತ್ರಿಕ ತೊಂದರೆ ತಗಾದೆಗಳು ಉದ್ಭವಿಸಿದಾಗ ನಿವಾರಣೆಗೆ ನಿಗಾ ಕೊಡಲಾಗುತ್ತದೆ.

ಬಸ್ಸು ಪ್ರಯಾಣದ ಸಮಸ್ಯೆಗಳಿಗೆ ಕೂಡಲೇ ಪರಿಹಾರವನ್ನು ಇಲ್ಲಿಂದ ಸೂಚಿಸಲಾಗುತ್ತದೆ. ಟೆಲಿಫೋನ್ ಮತ್ತು ರೇಡಿಯೋಗಳಿಂದ (High Frequency Radio Transmitter) ಇಲ್ಲಿ ಸಂಪರ್ಕವನ್ನು ಇಟ್ಟುಕೊಂಡು ಎಂತಹ ಕಠಿಣ ಪರಿಸ್ಥಿತಿಯನ್ನು ಸಡಲಿಸ ಬರುತ್ತದೆ.

ಸಾಮಾನ್ಯ ಶಿಕ್ಷಣ, ಒಳ್ಳೆಯ ತರಬೇತಿ ಮತ್ತು ಯೋಗ್ಯರೆನಿಸಿದ ಕಂಡಕ್ಟರುಗಳನ್ನೇ ನೇಮಿಸಿದ್ದರೂ ಸಾರ್ವಜನಿಕ ಪ್ರಯಾಣಿಕರಿಂದ ದೂರು, ಫಿರ್ಯಾದಿಗಳು ಇಲ್ಲವೆಂದಿಲ್ಲ. ಆದರೆ ದಿನಾಲೂ ಪಯಣಿಸುವ ಇಪ್ಪತ್ತು ಲಕ್ಷ ಪಯಣಿಗರಲ್ಲಿ ಸರಾಸರಿ ಬರೇ ಇಪ್ಪತ್ತೈದು ಪತ್ರಾರೋಪಗಳು ಬರುತ್ತಿವೆಯಂತೆ! ಒಂದು ದೃಷ್ಟಿಯಿಂದ ಈ ಸಂಖ್ಯೆ ಸಂಸ್ಥೆಯ ವಿಶಿಷ್ಟ ಪಟುತೆ ಮತ್ತು ವಿಚಕ್ಷಣೀಯ ಕಾರ್ಯಕಲಾಪಗಳ ಪ್ರಶಂಸನೀಯ ಪ್ರದರ್ಶನವಾಗಿದೆ. ಇನ್ನೊಂದು ರೀತಿಯಿಂದ ನೋಡಿದರೆ ಮುಂಬಯಿಯಲ್ಲಿನ "ಯಾಂತ್ರಿಕ" ನಾಗರಿಕನಿಗೆ ಕಂಪ್ಲೇಂಟು ಬರೆಯುವಷ್ಟು ಪುರಸೊತ್ತು ಸಿಕ್ಕಿದರೆ ತಾನೆ, ಆತ ಪೋಸ್ಟು ಮಾಡುವ ಗೋಜಿಗೆ ಹೋದಾನು.

BEST ಸಂಸ್ಥೆಯೀಗ ನಗರ ಸಭೆಯ ಆಡಳಿತದಲ್ಲಿದೆ. ಒಂಭತ್ತು ಮಂದಿ ಸದಸ್ಯರಿಂದೊಡಗೂಡಿದ ಒಂದು ಕಮಿಟಿಯಿದೆ. ಇದಕ್ಕೊಬ್ಬ ಚೆಯರ್‌ಮೇನರಿದ್ದಾರೆ. ಅವರೇ ನಗರ ಸಭೆಯ ಪತಿಯಿಂದ ಸಂಸ್ಥೆಯ ಸೂತ್ರಧಾರಿ. ಆದರೆ ಬೇರೆ ಕಾರ್ಯಕಲಾಪಗಳ, ಆಡಳಿತದ ಮೇಲ್ವಿಚಾರಗಳನ್ನು ನೋಡಲು ಒಬ್ಬ ಜನರಲ್ ಮ್ಯಾನೇಜರರಿದ್ದಾರೆ.

೧೯೪೭ರಲ್ಲಿನ ನಗರ ಸಭಾ ರಾಷ್ಟ್ರೀಕರಣದ ಮಸೂದೆಯ ರೀತ್ಯಾ BEST ಖಾಸಗಿ ಸಂಸ್ಥೆಯಿಂದ ನಗರ ಸಭೆಯ ಸ್ವಾಧೀನ ಬಂದು ಸಾರ್ವಜನಿಕರ ಸೊತ್ತಾಯಿತು. ಅಂದು ಸುಮಾರು ಹತ್ತು ಕೋಟಿ ರೂಪಾಯಿಗಳಿಗೆ ಕೊಂಡಿದ್ದ ಈ ಸಂಸ್ಥೆ ಈಗ ಬಂದರೆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಮೂರುಪಟ್ಟು ಲಾಭದಾಯಕ ಮತ್ತು ಭದ್ರ ಪರಿಸ್ಥಿತಿಯಲ್ಲಿದೆ.

ಇಪ್ಪತ್ತು ಲಕ್ಷ ಜನರ ಸಂಚಾರದ ಗೊಂದಲದಲ್ಲೂ ಟಿಕೇಟಿಲ್ಲದೆ ಪ್ರವಾಸ ಮಾಡುವ ಒಬ್ಬಿಬ್ಬ ಕುಟಿಲ ಕುಶಾಗ್ರಮತಿಗಳು ಇಲ್ಲವೆಂದಿಲ್ಲ. ಅಂತಹರನ್ನು ಅನಿರೀಕ್ಷಿತವಾಗಿ ಹುಡುಕಿ ತೆಗೆಯುವ ಸಿಬ್ಬಂದಿಯಿದೆ. ತಲಾ ರೂ. ೩ರಿಂದ ೧೦ರ ವರೆಗೆ ಅಂತಹವರಿಗೆ ದಂಡವನ್ನು ವಿಧಿಸಲಾಗುವುದು. ೧೯೬೪ರಲ್ಲಿ ಸುಮಾರು ಹದಿನೇಳು ಸಾವಿರ ರೂಪಾಯಿ ಇಂತಹ ನ್ಯಾಯಬಾಹಿರ ಪ್ರವಾಸಿಗಳಿಂದ ಎತ್ತಲಾಗಿದೆ!

ತಾಸಿಗೆ ಮೂವತ್ತು ಮೈಲುಗಳಷ್ಟು ಬಸ್ಸುಗಳನ್ನು ಓಡಿಸಲು ಅನುಮತಿಯಿದ್ದರೂ ಮುಂಬಯಿಯ ನಿಬಿಡ ಜನ ಸಂದಣಿಯ ನಿಮಿತ್ತ ಬಸ್ಸುಗಳು ಸಾಧಾರಣ ಆರು ಮೈಲಿ ವೇಗದಲ್ಲಿ ನಡೆಯುತ್ತವೆ. ಆದರೆ ಜನ ನಿಬಿಡವಿಲ್ಲದ ಪ್ರದೇಶಗಳಲ್ಲಿ ಈ ವೇಗವನ್ನು ಹದಿನೈದು ಮೈಲಿಗಳಷ್ಟು ಹೆಚ್ಚಿಸಲಾಗಿದೆ.

ಸಾವಿರಾರು ಬಸ್ಸುಗಳಿದ್ದರೂ ಬೆಳಗ್ಗೆ ಮತ್ತು ಸಾಯಂಕಾಲದ ಹೊತ್ತುಗಳಲ್ಲಿ ಬಸ್ಸಿಗಾಗಿ ಕಾದು ನಿಲ್ಲುವ ಜನರ ಅವಸ್ಥೆ ಕರುಣಾಜನಕವಾಗಿದೆ. ಮತ್ತು "ಕ್ಯೂ" ಸಾಮಾನ್ಯವಾಗಿದೆ. ಪ್ರಯಾಣಿಕರ ಒತ್ತಡವನ್ನು ಕಡಿಮೆ ಮಾಡಲೆಂದು ನಿಂತುಕೊಂಡೇ ಪಯಣಿಸುವ ಬಸ್ಸುಗಳನ್ನೀಗ ಹಾಕಿರುತ್ತಾರೆ. ಗಂಟೆಗಟ್ಟಲೆ ಬೀದಿಗುಂಟ "ಕ್ಯೂ" ನಿಲ್ಲುವ ಬದಲು ಪ್ರಯಾಣಿಕರು ನಿಂತಾದರೂ ಬೇಗನೆ ಮನೆ ಸೇರಲು ಬಯಸುವರೆಂಬುದನ್ನು ಮನಗಂಡು ಇಂತಹ ಬಸ್ಸುಗಳ ಚಲನೆ ಪ್ರಾರಂಭವಾಗಿಯದೆ. ಇಪ್ಪತ್ತೇಳು ಜನರ ಪ್ರಯಾಣ ಕೂತು; ಐವತ್ತೇಳು ಜನರು ನಿಂತು.

ಈ ಸಂಸ್ಥೆ ಜಾಹೀರಾತುಗಳಿಂದಲೂ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಸಂಪಾದಿಸುತ್ತದೆ. ಬಸ್ಸುಗಳ ಎಡ, ಬಲ ಮತ್ತು ಹಿಂಬದಿಗಳಲ್ಲಿ ಸಾರ್ವಜನಿಕ ಜಾಹೀರಾತುಗಳಿಗೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ.

ಇದಲ್ಲದೆ ನಗರ ಸಭೆಯ BEST ಮಂಡಲ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ನೋಡಿಕೊಳ್ಳುತ್ತಿದೆ.

ಮುಂಬಾಯಿಯ ಸುತ್ತು ಮುತ್ತಣ ಪ್ರಸಿದ್ಧ ಪ್ರೇಕ್ಷಣೀಯ ಕಾಣಗಳಿಗೂ ಬಸ್ಸುಗಳಲ್ಲಿ ಓಡಾಟ ಸಾಧ್ಯವಿದೆ. ಆದರೆ ಇದು ರವಿವಾರ ಮತ್ತು ರಜಾದಿನಗಳಲ್ಲಿ ಮಾತ್ರ. ಬೇಕೆಂದಾದಲ್ಲಿ ಆಧುನಿಕ "ಏರ್ ಕಂಡೀಶಂಡ್" ಲಕ್ಸುರೀ ಕೋಚುಗಳ ವ್ಯವಸ್ಥೆಯೂ ಇದೆ.

ನೌಕರ ವರ್ಗದವರಿಗೆ ಕಡಿಮೆ ಬೆಲೆಯಲ್ಲಿ ಚಾ—ಪಾನೀಯಗಳ ಏರ್ಪಾಟಿದೆ. ವೈದ್ಯಕೀಯ ವ್ಯವಸ್ಥೆಯಿದೆ. ಆಟಪಾಟಗಳ ಸೌಕರ್ಯವನ್ನೂ ನಿರ್ಮಿಸಲಾಗಿದೆ. ನೌಕರ ಯಾ ಕಾರ್ಮಿಕ ವರ್ಗದ ಮರಿ ಮಕ್ಕಳು ಕಲಿಯಲೆಂದು ಸುಮಾರು ರೂ. ೩೦,೦೦೦ ವಿದ್ಯಾ ಹಮ್ಮಿಣಿಯ ವಿತರಣೆಯಾಗುತ್ತಿದೆ. ಡ್ರೈವರ್ ಮತ್ತು ಕಂಡಕ್ಟರುಗಳಿಗೆ ಕಾರ್ಯದಕ್ಷತೆ ಮತ್ತು ಆದರಣೀಯತೆ ಇವುಗಳನ್ನೂ ಹೊಂದಿಕೊಂಡು ಜನಪ್ರಿಯರೆನಿಸಿದವರಿಗೆ ಇನಾಮುಗಳನ್ನು ಕೊಡುವ ಸಂಪ್ರದಾಯವೂ ಇದೆ.

ಪ್ರಯಾಣಿಕರು ಮರೆತು ಅಥವಾ ನಿರ್ಲಕ್ಷದಿಂದ ಕಳೆದುಕೊಂಡ ಚಿಲ್ಲರೆ ಸಾಮಾನುಗಳಿಗಾಗಿ ಒಂದು ಆಫೀಸಿದೆ. ಇಲ್ಲಿ ಎಲ್ಲಾ ಅಂತವಸ್ತುಗಳನ್ನು ಜಮಾಯಿಸಿ ಬೇಡಿಕೆ ಬಂದಂತೆ ಪರಿಶೀಲಿಸಿ ಕೊಡುವ ಪರಿಪಾಠ ಅಭಿನಂದನೀಯವಾಗಿದೆ. ಕೊಡೆಯಿರಲಿ, ಕಿಸೆ ಗಡಿಯಾರ ಇರಲಿ, ನೋಟುಗಳಿಂದ ತುಂಬಿದ್ದ ಪಾಕೀಟಿರಲಿ, ರತ್ನ-ಮುತ್ತುಗಳಿಂದ ತುಂಬಿದ ಚೀಲಯಾ ಆಭರಣದ ಪೆಟ್ಟಿಗೆ ಅಥವಾ ಕರಂಡಕವಿರಲಿ. ಬಸ್ಸಲ್ಲಿ ಕಳೆದುಕೊಂಡವರಲ್ಲಿ ಮರಳಿ ಪಡಕೊಳ್ಳದವರ ಸಂಖ್ಯೆ ಬಲು ವಿರಳ. ಆದರೋ ಕಿಸೆಗಳ್ಳರ ಪಾಲಾದರೆ ಆ ಸಂಗತಿ ಬೇರೆ. ಅಂತೂ BESTರ ವರ ಪ್ರಾಮಾಣಿಕತೆ ಹೆಸರು ಹೋಗಿದೆ.

ಮುಂಬಯಿಯ ಸುಮಾರು ಮುಕ್ಕಾಲು ಪಾಲು ಜನ ಸಂಚಾರದ ಸಾರಿಗೆ ಕಾರ್ಯಭಾರವನ್ನು ಬಸ್ಸುಗಳು ನಿರ್ವಹಿಸಿದರೂ, ಮುಂಬರುವ ದಿನಗಳಲ್ಲಿ ಇದು ಅಸಾಧ್ಯವೆಂದು ತಜ್ಞರ ತೀರ್ಮಾನವಾಗಿದೆ. ಅದುವೆ ಸಮುದ್ರ ಗುಂಟ ಪಯಣ, ಕಾಲುವೆ ಪಯಣ ಮತ್ತು ಭೂ ಅಂತರ್ಗತ ರೈಲು ಮುಂತಾಗಿ ನಾನಾ ಬಗೆ ಯೋಜನೆಗಳು ರೂಪಗೊಳ್ಳುತ್ತವೆ. ಅದುವರೆಗೆ ಸಾರಿಗೆ ಒಂದು ಸಮಸ್ಯೆಯಾಗಿಯೇ ಉಳಿಯುತ್ತದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

23—6—1966

NAVAYUGA

೨೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಮೊದಲು—

ಜಾನಕೀಪತಿ ರಾಮಚಂದ್ರ ಬಲವಂತಿಯ ತನ್ನ ಆಸ್ತಿಪಾಸ್ತಿಯನ್ನು ಮಾರಿ ಶಹರ ಸೇರಿದ. ಶಿಬಿರಗುಮಾಸ್ತನಾಗಿದ್ದ ಅವನು ಗೃಹ ಶಾಖೆಯಲ್ಲಿ ಅಧಿಕಾರಿಯಾದ.

ರಾಮುವಿನ ರೈತ ಮುರುಗ ಜಮೀನ್ದಾರನಾದ, ದುರ್ವ್ಯಸನಗಳಿಗೆ ಬಲಿಬಿದ್ದ, ಸೆರೆಯಾದ, ತಪ್ಪಿಸಿಕೊಂಡು ಸುಂದರ ಗುರುವಾದ. ರಾಮುವಿನ ಮಾನವತೆಯಿಂದ ಊಟಿಗಾರರೂ ಮಾನವರಾದರು.

ರಾಮುವಿನ ಮಿತ್ರ ಕೇದಾರಿ—ಸ್ವಪ್ನ ಲೋಕದಲ್ಲಿ ವಿಹರಿಸುವ ಪಕ್ಷಿಯಾದ. ಆದರೆ ರೆಕ್ಕೆ ಮುರಿದಾಗ, ಭೂಮಿಯ ಮೇಲೆ ಉರುಳಿದ. ಅಲ್ಲಿ ಎದ್ದು ನಿಲ್ಲಲು ಹಳೆಯ ಸ್ನೇಹಿತ ರಾಮುವಿನ ನೆರವೇ ಬೇಕಾಯ್ತು.

ಮುಂದೆ—

"ಕೇದಾರಿ, ಇಡೀ ಪ್ರಪಂಚವೀಗ ಅಂಕುಡೊಂಕಾಗಿದೆ. ಹಲವಾರು ವಸ್ತುಗಳ ಕೀಲಿ ತಪ್ಪಿವೆ. ಅವುಗಳು ಹೊಸ ಆಕಾರ ಹಾಗೂ ರೂಪಕ್ಕಾಗಿ ಒಂದರೊಡನೆ ಇನ್ನೊಂದು ಕಾದಾಡುತ್ತಿವೆ. ಈಗ ಅವೆಲ್ಲವೂ ಕರಗಿಸುವ ಪಾತ್ರೆಯಲ್ಲಿ ಇವೆ; ಎರಕ ಇನ್ನೂ ಸಿದ್ಧವಾಗಿಲ್ಲ. ಒಲೆಯಲ್ಲಿ ಬೆಂಕಿ ನಿವಾಸಗೊಂಡಿದೆ. ಕರಿ ಮತ್ತು ಹೊಗೆ ಗಾಳಿಯಲ್ಲಿ ತುಂಬಿ ಹೋಗಿವೆ ಮತ್ತು ಸಾಮಾನ್ಯ ಶ್ರಮಿಕನನ್ನು ಆಯಾಸಗೊಳಿಸಿವೆ. ಶಾಂತಿ ಪೂರ್ಣ, ಚೈತನ್ಯಮಯ ಮತ್ತು ದೈವತ್ವಕ್ಕೆ ಸಮೀಪ ಆಗಿರುವ ಶತಮಾನಕ್ಕೆ ಬೇಕಾಗುವ ಹೊಸ ಮನುಷ್ಯನನ್ನು ತಯಾರಿಸಲು ಶ್ರೇಷ್ಠ ಮನಸ್ಸು ಹಾಗೂ ಎರಕ ಇನ್ನೂ ಸಿದ್ಧವಾಗಿಲ್ಲ."

ರಾಮು ಉಸಿರು ತೆಗೆದುಕೊಳ್ಳಲು ಸ್ವಲ್ಪ ಸಮಯ ಸುಮ್ಮಗಾದನು. ಒಂದು ನಿಟ್ಟುಸಿರು ಬಿಟ್ಟು ಮತ್ತೆ ಮುಂದರಿಸಿದನು:

ಉದಾಹರಣೆಗಾಗಿ, ನಿನ್ನನ್ನೇ ಕೇಳುತ್ತೇನೆ. ತನ್ನ ದೈನಂದಿನ ಜೀವನಕ್ಕೆ ಬೇಕಾಗುವದಕ್ಕಿಂತಲೂ ಹೆಚ್ಚು, ಯಾರೇ ಆಗಲಿ, ಏತಕ್ಕೆ ಪಡೆದು ಕೊಳ್ಳಬೇಕು? ನ್ಯಾಯವಾದಿಯಾಗಿದ್ದುಕೊಂಡು, ನೀನು, ಇತರ ಕೆಳತರಗತಿಯವರ ದುಡಿಮೆ ಹಾಗೂ ಶಕ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತ ಹೋದಿ. ನ್ಯಾಯವಾದಿಯ ಕೆಲಸಕ್ಕೆ ನೂರು ರೈತರ ಪರಿಶ್ರಮವನ್ನು ಹೋಲಿಸಬಹುದು. ಅದೇ ರೀತಿ ಸಾಗಿದ ನಿನ್ನನ್ನು ಘಟನೆಗಳ ಆವೇಗವು ಸ್ವಾಧೀನ ಪಡಿಸಿಕೊಂಡಿತು.'

"ಹಾಗಿದ್ದಲ್ಲಿ, ಮಹಾರಾಯ ರಾಮು, ನೀನು ಪೂರ್ಣ ವಿರಾಮದ ಜೀವನವನ್ನು ಬೋಧಿಸುತ್ತಿಯೇನು?'

ಚಂದ್ರನನ್ನು ಕೆಡವಲಿಕ್ಕಾಗಿ ಆಕಾಶಕ್ಕೆ ಬಿಸಾಡಿದ ಹೊಸ ಹೂವಿನ ಮೂಲವನ್ನು ಕೇದಾರಿಯ ಸೂಕ್ಷ್ಮ ಮನಸ್ಸು ಒಡನೆ ಕಂಡುಕೊಂಡಿತು.

"ನೀನು ಸರಿ, ಕೇದಾರಿ. ಅದೂ ಪ್ರಪಂಚದ ಧ್ಯೇಯ. ತಡೆ ಇಲ್ಲದೆ ಬೆವರು ಹಾಗೂ ಶ್ರಮದ ಮೂಲಕ ಮಾನವನು ಶಾಂತಿ ಹಾಗೂ ವಿರಾಮಕ್ಕಾಗಿ ಹೋರಾಡುತ್ತಿದ್ದಾನೆ. ದೃಷ್ಟಿಯ ದಾನವೆಂದರೆ ಚಲನೆಯ ದಾನ. ಅದು ಮಹಾ ಅಪಾಯಕರ ಹಾಗೂ ತೊಡಕಾದ ದಾನ. ಅದನ್ನು ತೊಡಕಿನ ಆಕಾರದಿಂದಲೇ ಸಾಕಬೇಕಾಗುತ್ತದೆ. ಜೀವನ—ಅದು ಅದರ ಆಹಾರದ ಸಂಪಾದನೆಗಾಗಿ ವಿಧಿ ವಶಗೊಳಿಸಲ್ಪಟ್ಟಿದೆ. ಅದಕ್ಕಾಗಿ ದುಡಿಯಬೇಕು, ಹೋರಾಡಬೇಕು ದುಡಿಮೆಯು ನನಗೂ ನಿನ್ನ ಸ್ನೇಹಿತರಿಗೂ ಅತಿ ದುಃಖಾವಸ್ಥೆ. ಎಲ್ಲಿ ದುಡಿಮೆ ಇದೆಯೋ ಅಲ್ಲಿ ಹೋರಾಟವೂ ಇರುತ್ತದೆ. ಹೊಗೆ ಇಲ್ಲದೆ ಬೆಂಕಿ ಇರುವದಿಲ್ಲ. ಬದಲಾವಣೆಯಾಗುತ್ತಾ ಇರುವ ಈ ಪ್ರಪಂಚದಲ್ಲಿ ಉತ್ತಮ ಮಟ್ಟದ ಜೀವನಕ್ಕೆ ಹೋಗುವ ವರೆಗೆ ದುಃಖಾವಸ್ಥೆ, ಬಡತನಗಳ ಮೂಲಕ ದುಡಿಮೆ ಹಾಗೂ ಅತಿದುಡಿಮೆಯ ಮೂಲಕ, ನೋವು ನಷ್ಟಗಳ ಮೂಲಕ ದುಡಿಯುತ್ತಿರಬೇಕಾಗುತ್ತದೆ. ಆದರೆ ತನ್ನ ವಿಷಯಾಸಕ್ತ ಸಂತೋಷಕ್ಕಾಗಿ ಇತರರ ಜೀವನ ಹಾಗೂ ಚೇತನವನ್ನು ಸ್ವಾಧೀನಪಡಿಸಿಕೊಂಡು, ಸ್ವಕಾರ್ಯಕ್ಕಾಗಿ ವಿನಿಯೋಗಿಸಿಕೊಳ್ಳುವಂತಹ ಕಾರ್ಯವನ್ನು ಮಾಡದ ರೀತಿಯಲ್ಲಿ ವರ್ತಿಸಬೇಕು. ಆಹಾರವನ್ನು ಗಳಿಸುವ ತನ್ನ ಮೂಲ ಉದ್ದೇಶಕ್ಕಾಗಿ ಮಾನವನೀಗ ಚಲನೆ ಹಾಗೂ ಅದರ ಕಾಣಿಕೆಗಳನ್ನು ಬಳಸಿಕೊಳ್ಳುತ್ತಿದ್ದಾನೆ. ಅವುಗಳನ್ನೇ ಅವನು ಅದೊಂದು ದಿನ ಪ್ರಪಂಚದ ಸ್ವಾತಂತ್ರ್ಯಕ್ಕಾಗಿ ಹಾಗೂ ಆತ್ಮ ವಿಶ್ವಾಸಕ್ಕಾಗಿ ಉಪಯೋಗಿಸಿಕೊಳ್ಳಬಹುದು. ನೋಡು, ಅದೇ ಆ ಮೌನನಕ್ಷತ್ರಗಳತ್ತ ನೋಡು, ಎಲ್ಲಿಯೋ ಇವೆ. ಆದರೂ ಈ ಲೋಕಕ್ಕೆ ಬೆಳಕನ್ನು ಕೊಡುತ್ತಿವೆ. ಆ ನಕ್ಷತ್ರವಾದರೋ ತನ್ನ ದೈನಂದಿನ ಪ್ರಕಾಶಕ್ಕಾಗಿ ದುಡಿಯ ಬೇಕಾಗಿ ಇಲ್ಲ. ಅವು ನೇರವಾಗಿ ಅದನ್ನು ಸೂರ್ಯನಿಂದ ಪಡೆಯುತ್ತವೆ. ಎಲ್ಲಾ ಪ್ರಗತಿಯು ನಕ್ಷತ್ರಗಳ ಮೇಲೆ ಹೊಂದಿಕೊಂಡಿದೆ. ವಿಕಾಸವು ಜ್ಯೋತಿಷ್ಯಸಿದ್ಧಾಂತದ ವಿಶ್ವವಿದೆ.'

'ಅಂದರೆ, ಅಂದರೆ..ರಾಮು, ಮನುಷ್ಯನು ಉಚ್ಚ ರೀತಿಯಲ್ಲಿದ್ದು, ವಿರಳನಾಗಿರಬೇಕೆಂದು ನೀನು ವಾದಿಸುವದು ತಾನೇ. ಅವನು ತನ್ನದೇ ಆಹಾರಕ್ಕಾಗಿ ಕೂಡಾ ಗೆಲ್ಲುಗಳನ್ನೂ ಅಲುಗಾಡಿಸದಂತಹ ಅದೊಂದು ರೀತಿಯ ತರಕಾರಿಯಾಗಬೇಕೆಂದು ನೀನು ಹೇಳುವದಷ್ಟೇ?"

ರಾಮುವಿನ ವಾಕ್ಪ್ರವಾಹದ ಅನುಭವ ಕೇದಾರಿಗಾಯಿತು.

'ನೀನು ಹಾಗೆ ಹೇಳಿದರೂ ಅದು ತಪ್ಪಲ್ಲ ಕೇದಾರಿ, ವಿಷಯಗಳತ್ತ ನೀನು ಬೇರೊಂದು ರೀತಿಯ ದೃಷ್ಟಿಯಿಂದಲೇ ನೋಡುತ್ತಿ. ನಿನ್ನ ಬುದ್ಧಿಪೂರ್ಣ ಅಂತಃಸ್ಫೂರ್ತಿ ಹಾಗೂ ನಿಷ್ಕಲಂಕ ಜ್ಞಾನಸತ್ವ ಮಾತಿನ ಮುಸುಕಿನಿಂದ ಹೊರಗೆ ಬರುತ್ತದೆ; ಒಳಗೆ ವಿಷಯ ಇರುತ್ತದೆ. ಅಂತಹ ಕಾಣಿಕೆಯ ಅನುಗ್ರಹ ನನಗೆ ಆಗಿಲ್ಲ. ತರಕಾರಿಯೂ ತುಚ್ಛೀಕರಿಸಲ್ಪಡುವಂತಹದಿರುವುದಿಲ್ಲ. ಅವು ಹಲವಾರು ವಿಧಗಳಲ್ಲಿ ಉತ್ತಮ ಇವೆ. ಅವೆಷ್ಟು ಸಾಧು ಇವೆ! ತನ್ನ ಆಹಾರಕ್ಕಾಗಿ ಅವು ಸಿಹಿಯಾಗಿರುವದಿಲ್ಲ. ತನ್ನ ಆಹಾರಕ್ಕಾಗಿ ನೆರೆಕರೆಯವನನ್ನು ಸ್ವಾಹಮಾಡಿಕೊಳ್ಳುವದಿಲ್ಲ. ಪ್ರತಿದಿನವೂ ನಾನೂ ನೀನೂ ಮಾಡುವಂತೆ ಅವು ತಮ್ಮ ಆಹಾರಕ್ಕಾಗಿ ಇನ್ನೊಬ್ಬನನ್ನೂ ಸ್ವಾರ್ಥದಿಂದ ವಿನಿಯೋಗಿಸಿಕೊಳ್ಳುವದಿಲ್ಲ. ಅವು ಹೂವಿನ ರೂಪದಲ್ಲಿರುವಾಗಲೂ ಸೂರ್ಯನೊಂದಿಗೆ ನಗುತ್ತವೆ. ಫಲದಾಯಕ ಮಳೆಬಂದಲ್ಲಿ ಅವು ಭೂಮಿಗಿಳಿದು ಬಿಡುತ್ತವೆ.'

"ಆದರೆ ಅದು ಮಂದ ಹಾಗೂ ಸ್ತಬ್ಧ, ರಾಮು. ಹಾಗಿರಲಿಕ್ಕೆ ಯಾವ ಪ್ರಾಣಿಯೂ ಇಷ್ಟ ಪಡಲಿಕ್ಕಿಲ್ಲ; ಇನ್ನು ಮನುಷ್ಯನಾದರೋ ಎಂದೂ ಇಷ್ಟಪಡಲಿಕ್ಕಿಲ್ಲ. ಅವನು ಆಲೋಚನೆ ಮಾಡಬಲ್ಲನು, ಕೆಲಸ ಮಾಡಬಲ್ಲನು. ಕಾಲದ ಮಹಿಮೆಯ ಅರಿವು ಅವನಿಗೆ ಚೆನ್ನಾಗಿ ಇದೆ. ಹಾಗಿರುವದರಿಂದ ತಪ್ಪೇನಿದೆ?"

'ಆದರೆ ಅದಕ್ಕಾಗಿ ಅವನು ತೆರಬೇಕಾಗಿರುವ ಮೌಲ್ಯವಷ್ಟು! ಚಲಿಸುವಾಗ ಶಕ್ತಿ ಖರ್ಚಾಗುತ್ತದೆ. ನಿಸರ್ಗದ ಒಂದು ಕಾಣಿಕೆಯು ಇನ್ನೊಂದನ್ನು ಬಲಿತೆಗೆದುಕೊಳ್ಳುತ್ತದೆ."

(ಹದಿನೈದನೇ ಪುಟ ನೋಡಿರಿ)

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್. ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

'elephone 226.

Estd. 1921

AVAYUGA

ing Kannada Weekly

JDIPI, S. Kanara

ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ು ವಿಶೇಷ ಸಂಚಿಕೆಗಳು ಸೇರಿ
ಕೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಾಹೀರಾತು ದರಗಳು:

ಮಿತ (ಕೆಜುವಲ್)
ಂಟಿಮೀಟರಿಗೆ ರೂ. 2-00
ಂತ (ಕಂಟ್ರಾಕ್ಟ್)
ೆಂಟಿಮೀಟರಿಗೆ ರೂ. 1-50

ಸೂಚನೆಗಳು

ಬಂಧುಗಳಿಗೆ

ತ್ರ ಕಿರಿದಾಗಿದ್ದು ಹಿರಿದರ್ಥದಿಂದ ೇಕು. ಕಾಲು ತಾವಿನ ಪ್ರಮಾಣ ಯ ಒಂದೇ ಮಗ್ಗುಲಲ್ಲಿ ಬದಿ ಗಳನ್ನು ಬಿಟ್ಟು ಸುಸ್ಪಷ್ಟವಾದ ಿಂದ ಬರೆಯಲ್ಪಡಬೇಕು. ಅ ಅನುವಾದಿತವಾದರೆ ಅವುಗಳ ನ್ನೂ ತಿಳಿಸಬೇಕು.

ದಾರರಿಗೆ—

ಣವನ್ನಾಗಲೀ ಜಾಹೀರಾತಿನ ಗನ್ನಾಗಲೀ ಸಿಂಡಿಕೇಟ್ ಬೇಂಕಿ ುವುದೇ ಶಾಖೆಯಲ್ಲಿ ಯಾವ ಇಲ್ಲದೆ 'ನವಯುಗ'ದ ಖಾತೆಗೆ ಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ನ್ಯೂಯೋರ್ಕಿನಲ್ಲಿ ಟೆಲಿವಿಜನ್ ಮೂಲಕ ಪತ್ರಿಕಾ ಪಂಪತ್ತನ್ನು ಉದ್ದೇಶಿಸಿ ಮಾತನಾಡಲು ಪೂರ್ವ ತಯಾರಿಯಲ್ಲಿರುವ ಪ್ರಧಾನಿ ಇಂದಿರಾ ಗಾಂಧಿಯವರು. ಪಕ್ಕದಲ್ಲಿ ಕಾರ್ಯಕ್ರಮದ ಸಂಯೋಜಕ ಲೋರೆನ್ಸ್ ಸ್ಪಿವಾಕ ಇದ್ದಾರೆ.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೧	೨೩—೬—೧೯೬೬	No. 41

ಕಳ್ಳ ತ್ರಕ್ಕಡಿ, ತೂಗಿದ್ದೇ ಸರಿ

ಅಧ್ಯಕ್ಷ ಜಾನ್ಸನ್ನರೊಂದು ಪತ್ರವನ್ನು ಬರೆದು ಅಮೇರಿಕೆಯು ಭಾರತಕ್ಕೆ ಶಕ್ಯ ಹಾಗೂ ಲಭ್ಯವಿರುವ ಎಲ್ಲಾ ನೆರವನ್ನು ನೀಡುವುದಾಗಿ ತಿಳಿಸಿದ್ದಾರೆ. ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ. ಅವರ ಸಂದರ್ಶನ, ಅಶೋಕ ಮೆಹತಾರ ಭೆಟ್ಟಿಯ ವೇಳೆಯಲ್ಲೂ ಜಾನ್ಸನ್ ನೀತಿ ಇದಕ್ಕೆ ಸಹಾಯಕವಾಗಿಯೇ ಇದ್ದಿತ್ತು. ರಾಜ ತಂತ್ರಜ್ಞರ ನಿರೀಕ್ಷೆಯಂತೆ ಅಮೇರಿಕೆಯು, ಭಾರತವು ನಿರೀಕ್ಷಿಸುವುದಕ್ಕಿಂತಲೂ ಹೆಚ್ಚಿನ ಸಹಾಯ ನೀಡುವುದು. ಇದಕ್ಕೆ ಇತ್ತೀಚಿಗಿನ ವಿದ್ಯಮಾನಗಳು ಸಾಕ್ಷಿ ಹೇಳುತ್ತವೆ. ಕಳೆದ ಸಪ್ಟಂಬರ ತಿಂಗಳಿಂದ ತಡೆ ಹಿಡಿಯಲಾಗಿದ್ದ ಆರ್ಥಿಕ ನೆರವನ್ನು ಮತ್ತೆ ಆರಂಭಿಸುವ ಬಗ್ಗೆ ಅಮೇರಿಕೆಯು ಅಧಿಕೃತವಾಗಿ ಕ್ರಮ ಕೈಗೊಂಡಿದೆ. ಆದರೂ ಈ ನಡುವೆಯೂ ಅದು ಕಾರಖಾನೆಗಳಿಗೆ ಕಚ್ಚಾ ಸರಕುಗಳನ್ನು ಒದಗಿಸಲು ನೀಡಿದ ಸಾಲ ಮತ್ತು ಮಾಡಿದ ಆಹಾರ ಪೂರಯ್ಕೆಯನ್ನು ಭಾರತವು ಮರೆಯಲಾರದು.

ಕಳೆದ ವರ್ಷದಲ್ಲಿ ಮಂಜೂರಾಗಿದ್ದ ಅಮೇರಿಕನ್ ಹಲವು ಸಾಲಗಳೂ ತಡೆ ಹಿಡಿಯಲ್ಪಟ್ಟವು—ಭಾರತ-ಪಾಕಿಸ್ತಾನಗಳ ನಡುವಣ ತಿಕ್ಕಾಟದಿಂದಾಗಿ. ಶಸ್ತ್ರಾಸ್ತ್ರ ಪೂರೈಕೆಯಂತೂ ನಿಂತೇ ಹೋಯಿತು, ೪೩೫ ಮಿಲಿಯ ಡಾಲರ್‌ಗಳ ಸಾಲದಲ್ಲಿ ಬರಿಯ ೭೫೪ ಮಿಲಿಯ ಮಾತ್ರ ನಮಗೆ ಲಭಿಸಿತ್ತು. ಈ ಬಾಕಿಯೂ ಪ್ರಕಲಿತ ವರ್ಷಕ್ಕೆ ೯೦೦ರಿಂದ ೧,೦೦೦ ಮಿಲಿಯ ಡಾಲರ್ ಯೋಜನೇತರ ನೆರವಾಗಿ ಸದ್ಯವೇ ನಮಗೆ ಅಮೇರಿಕೆಯಿಂದ ದೊರೆಯುವ ನಿರೀಕ್ಷೆಯಿದೆ. ಆರ್ಥಿಕ ನೆರವನ್ನು ತಡೆಹಿಡಿಯಲು ಭಾರತ-ಪಾಕಿಸ್ತಾನಗಳ ನಡುವೆ ವೈಮನಸ್ಯ—ಹೋರಾಟಗಳೆದ್ದುದೇ ಕಾರಣ. ಭಾರತದ ಪವಿತ್ರ ನೆಲದ ಮೇಲೆ ಪಾಕಿಸ್ತಾನ ಅಕ್ರಮವಾಗಿ ಆಕ್ರಮಣ ಮಾಡಿ ತಮಗೆ ಎಷ್ಟು ಬಗೆಯ ಪೀಡೆ ಕೊಟ್ಟಿತು ಎಂಬುದನ್ನು ಭಾರತೀಯರೆಂದೂ ಮರೆಯಲಾರರು; ಇದರ ಪರಿಣಾಮವಾಗಿ ನಮ್ಮ ಸಂರಕ್ಷಣೆಗೆ ಆಗತ್ಯವಾದ ಶಸ್ತ್ರಾಸ್ತ್ರ ಸರಬರಾಜು ನಿಂತಿತು; ಅಭಿವೃದ್ಧಿ ಯೋಜನೆಗಳಿಗೆ ಆರ್ಥಿಕ ನೆರವು ಕೈಬಿಟ್ಟು ಹೋಯಿತು—ನಮ್ಮದಾರಿ ನ್ಯಾಯದ್ದಾದರೂ ಅದು ಹಲವರ ಕಣ್ಣು ಕುಕ್ಕಿತು. ದೇಶದಲ್ಲಿ ಮಳೆಯ ಅಭಾವವೂ ಸೇರಿ ಎಲ್ಲ ಸಂಕಟಗಳೂ ಒಂದಾಗಿ ನಮ್ಮನ್ನು ಕಾಡಿದುವು—ಅದು ನಮಗೊಂದು ಪರೀಕ್ಷಾ ಕಾಲವಿತ್ತು—ನಾವದರಲ್ಲಿ ಗೆದ್ದೆವೆಂದೇ ಹೇಳಬೇಕು.

ಭಾರತ—ಪಾಕಿಸ್ತಾನಗಳ ನಡುವಣ ಸಂಬಂಧ ತಿಳಿಗೊಂಡಿದೆಯೆ? ಹೇಳುವಂತಹುದೇನೂ ಇಲ್ಲ. ಹೋರಾಟವೊಂದು ನಡೆಯುವುದನ್ನು ಬಿಟ್ಟರೆ, ಮತ್ತೇನಿದೆ? ಆಯ್ಯೂಬರಿರಲಿ, ಸದ್ಯವೇ ನಿವೃತರಾಗುವ ವಿದೇಶ ಮಂತ್ರಿ ಭುಟ್ಟೋ ಮಹಾಶಯರಿರಲಿ, ತಮ್ಮ ಮಾತಿನ ದಾಟಿಯನ್ನು ಏನೇನೂ ಬದಲಾಯಿಸಿಲ್ಲ. ಮಂತ್ರಿ 'ಮಟ್ಟದ ಮಾತುಕತೆಯೊಂದು ಮತ್ತೆ ಸೇರಬೇಕೆಂಬ ಏಕಮೇವ ಗೊತ್ತುವಳಿಯೊಡನೆ ಮುಕ್ತಾಯಗೊಂಡಿದೆ—ಮತ್ತೆ ಅದು ಸೇರುವ ಲಕ್ಷಣ ಸದ್ಯಕ್ಕಿಲ್ಲ, ತಾವು ಸಂರಕ್ಷಣಾ ವೆಚ್ಚದ ಪ್ರಮಾಣವನ್ನು ಹೆಚ್ಚಿಸುತ್ತ ಈ ವೆಚ್ಚವನ್ನು ಕಡಿಮೆ ಮಾಡಬೇಕೆಂದು ಫೀಲ್ಡ್ ಮಾರ್ಶಲ್ ಭಾರತಕ್ಕೆ ಕರೆ ನೀಡುತ್ತ ತಮ್ಮ ಗತ್ತುಗಾರಿಕೆಯನ್ನು ತೋರಿಸ ಹೊರಟಿದ್ದಾರೆ. ಭಾರತವು ತಾಷ್ಕೆಂಟ್ ಘೋಷಣೆಯ ಪ್ರತಿ ಅಂಶವನ್ನೂ ಇದ್ದಕ್ಕಿದ್ದಂತೆ ಕಾರ್ಯರೂಪಕ್ಕೆ ತರಲು ಉತ್ಸುಕವಿದೆ; ತರುತ್ತಿದೆ. ಆದರೆ, ಪಾಕ್ ವಿಸ್ತರಣಾವಾದಿಗಳಿಗೆ ಅದು ಬೇಕಾಗಿರುವಂತಿಲ್ಲ. ವಾತಾವರಣ ತಿಳಿಯಾಗಿರದಿದ್ದರೂ ಅಮೇರಿಕೆ ಆರ್ಥಿಕ ನೆರವನ್ನು ಮತ್ತೆ ಆರಂಭಿಸಲು ತೊಡಗಿದ್ದೇಕೆ? ಅದರ ಮಾತಿನಲ್ಲೆ ಹೇಳುವುದಾದರೆ, 'ಕಳೆದ ಆರುತಿಂಗಳಲ್ಲಿ ಅಧ್ಯಕ್ಷರೂ ಇತರ ಅಧಿಕಾರಿಗಳೂ ಪಾಕ್ ಅಧ್ಯಕ್ಷ, ಭಾರತದ ಪ್ರಧಾನಿ ಹಾಗೂ ಅವರವರ ಸರಕಾರದ ಸದಸ್ಯರೊಡನೆ ಮಾತುಕತೆ ನಡೆಸುವ ಅವಕಾಶ ಹೊಂದಿದ್ದರು. ಈ ಅವಧಿಯಲ್ಲಿ ಕಾಶ್ಮೀರದ ಹೋರಾಟದಿಂದ ವಿಕ್ಷುಬ್ಧಗೊಂಡ ಪರಿಸ್ಥಿತಿ ಶಾಂತವಾಗಿದೆ. ಎರಡೂ ದೇಶಗಳು ತಮ್ಮದೇ ಆದ ಉನ್ನತ ಭವಿಷ್ಯವುಳ್ಳ ಆರ್ಥಿಕ ಯೋಜನೆಗಳನ್ನು ಹೊಂದಿವೆ. ಜಾಗತಿಕ ಬ್ಯಾಂಕ್, ಭಾರತ ಮತ್ತು ಪಾಕಿಸ್ತಾನ ಸಹಾಯ ಮಂಡಲಗಳ ಕಕ್ಷೆಯಲ್ಲಿ ಅಮೇರಿಕೆಯು ದಕ್ಷಿಣ ಏಶ್ಯಾದಲ್ಲಿ ಪರಸ್ಪರ ಸಹಾಯ ನೀಡುವಲ್ಲಿ ಆಸಕ್ತವಾಗಿದೆ. ಈ ಚೌಕಟ್ಟಿನೊಳಗೆ ಭಾರತ ಮತ್ತು ಪಾಕಿಸ್ತಾನಗಳಿಗೆ ಆರ್ಥಿಕ ನೆರವನ್ನು ಶೀಘ್ರದಲ್ಲಿ ಪುನರಾರಂಭಿಸಲಾಗುವುದು.

ಅಮೇರಿಕನ್ ನೆರವು ಲಭ್ಯವಾಯಿತೆಂದರೆ, ನಮ್ಮ ಯೋಜನೆಗಳಿಗೆ ಆರ್ಥಿಕ ಕೊರತೆಯು ಪರಿಣಾಮಕಾರಕವಾಗಿ ಕಡಿಮೆಯಾಗುವುದು. ಪಾಕ್ ಮಂತ್ರಿ ಮಂಡಳದಿಂದ ಭುಟ್ಟೋ ನಿವೃತ್ತಿ ಮತ್ತು ಭಾರತದ ರೂಪಾಯಿಯ ಬಾಹ್ಯ ಮೌಲ್ಯ ಛೇದನಗಳು ಅಮೇರಿಕೆಯು ಈ ಹೆಜ್ಜೆಯಿಡಲು ಪ್ರೇರಕವಾಗಿದ್ದರೂ ಇರಬಹುದು. ಅದೇನೇ ಇರಲಿ, ಅಮೇರಿಕೆಯ ಈ ನಿರ್ಧಾರವನ್ನು ಸ್ವಾಗತಿಸಬೇಕು. ಅದರೊಡನೆ ಶಸ್ತ್ರಾಸ್ತ್ರ ನೆರವನ್ನೂ ಅದು ಮೊದಲಿಸಬೇಕು. ಏಕೆಂದರೆ, ಅಮೇರಿಕೆಯಿಂದ ಪಡೆದ ಶಸ್ತ್ರಾಸ್ತ್ರಗಳನ್ನು ವಾಗ್ದಾನವನ್ನು ಮುರಿದು ಭಾರತದ ವಿರುದ್ಧ ಬಳಸಿದ ವಿಶ್ವಾಸ ದ್ರೋಹಿ ಪಾಕಿಸ್ತಾನ ಭಾರತವು ಚೀನೀಯ ಆಕ್ರಮಣದ ವಿರುದ್ಧ ರಕ್ಷಣೆ ಮಾಡಿಕೊಳ್ಳಲು ಸೈನಿಕ ಸಹಾಯ ಬಯಸುತ್ತಿದೆಯೇ ಹೊರತು ಪಾಕಿಸ್ತಾನದೊಂದಿಗೆ ಹೋರಾಡುವುದಕ್ಕಲ್ಲ; ಹೋರಾಟವೂ ನಮಗೆ ಬೇಡ. ಆದರೆ, ನ್ಯಾಯಾನ್ಯಾಯಗಳನ್ನೂ ಕಳ್ಳ ತಕ್ಕಡಿಯಲ್ಲೇ ತೂಗುವ ಪಾಶ್ಚಾತ್ಯರು ಈ ತತ್ವವನ್ನು ಒಪ್ಪುದಿಲ್ಲ. ಈ ದುರವಸ್ಥೆಯೂ ಬೇಗನೆ ನಿಂತು, ಕೆಂಪು ಚೀನಾದ ವಿನಾಶಕಾರಿ ಆಕ್ರಮಣ ನೀತಿಗೆ ಮುಟ್ಟುಗೋಲು ಹಾಕುವಂತೆ ಭಾರತವನ್ನು ಸುಸಜ್ಜಿತಗೊಳಿಸುವಲ್ಲಿ ಅಮೇರಿಕೆಯೂ ತನ್ನ ಪಾಲಿನ ಕರ್ತವ್ಯ ಪಾಲಿಸಲು ಇನ್ನೂ ಹಿಂಜರಿಯಬಾರದು.

ವಚನ ಸುಧೆ

ತಂತವ: ಪ್ಯಾಯಿತಾ ನಿತ್ಯಂ
ತನವೋ ಬಹುಲಾ: ಸಮಾ:॥
ಬಹೂನ್ ಬಹುತ್ವಾದಾಯಾ ಸಾನ್
ಸಹಂತೀತ್ಯುಪಮಾ ಸತಾಮ್॥

ಪ್ರತಿನಿತ್ಯ ನೀರುಣ್ಣುವ ಬಳ್ಳಿಗಳು ತೆಳ್ಳಗಿದ್ದರೂ ಹುಲುಸಾಗಿ ಬೆಳೆಯುವದರಿಂದ ಅನೇಕ ವರ್ಷಗಳ ತನಕ ಅನೇಕ ತರದ ಅಘಾತವನ್ನು ಸಹಿಸುತ್ತವೆ. ಸತ್ಪುರುಷರು ದುರ್ಬಲರಾಗಿದ್ದರೂ ಸಾಮೂಹಿಕ ಶಕ್ತಿಯಿಂದ ಸಬಲರಾಗುತ್ತಾರೆ.

ಸೂತ್ರ ಶೋಧನೆ

ಇತ್ತೀಚೆಗೆ ಕೇಂದ್ರ ಸರಕಾರದ ನೌಕರರ ತುಟ್ಟಿ ಭತ್ತೆಯನ್ನು ಎತ್ತರಿಸುವಾಗ ರಾಜ್ಯ ಸರಕಾರಗಳು ಅದಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸಿದ್ದವು. ಅಸಮಾಧಾನ ವ್ಯಕ್ತಪಡಿಸಿದ್ದವು. ಕೇಂದ್ರದ ನೌಕರರ ಭತ್ತೆಏರಿದಂತೆ ರಾಜ್ಯ ಸರಕಾರದನೌಕರರ ಬೇಡಿಕೆಗಳೂ ಹೆಚ್ಚುತ್ತವೆ; ಆರ್ಥಿಕ ಬಲವಿಲ್ಲದ ರಾಜ್ಯ ಸರಕಾರ ಈ ಹೊರೆಯನ್ನು ಹೇಗೆ ಹೊರಬೇಕು ಎಂಬುದಿವರ ವಾದ. ಜೀವನ ವೆಚ್ಚವು ಏರುತ್ತಿರುವಾಗ ವೇತನವನ್ನು ಹೆಚ್ಚಿಸಬೇಕು; ಇಲ್ಲವೇ ವೆಚ್ಚವನ್ನು ಕಡಿಮೆ ಮಾಡಬೇಕು. ಮಾರುಕಟ್ಟೆಯನ್ನು ಮುಷ್ಟಿಯೊಳಗಿಟ್ಟುಕೊಳ್ಳುವುದು ಸರಕಾರದಿಂದ ಸಾಧ್ಯವೆ? ಇದಕ್ಕಾಗಿ ಏನು ಮಾಡಬೇಕು? ಹೊಸ ವಿಧಾನವೊಂದನ್ನರಸಬೇಕೆಂದು ಗೊತ್ತಾಯಿತು. ಈ ಹೊಸ ವಿಧಾನದ ಮೂಲವೇನು? ತನ್ನ ನೌಕರರಿಗೆ ಜೀವನಾವಶ್ಯಕ ವಸ್ತುಗಳನ್ನು ಮಿತದರದಲ್ಲಿ ಒದಗಿಸುವುದೆ? ಅಥವಾ ಮತ್ತೇನಾದರೂ ಹೊಸತನವಿದೆಯೆ? ಕೇಂದ್ರ ಸರಕಾರವು ತುಟ್ಟಿ ಭತ್ತೆಯನ್ನು ನೀಡುವ ತತ್ವಗಳನ್ನು ಪರಿ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



'ಅಸಾಮಿನ ಮತ್ತೊಂದು ಗುಡ್ಡ ನಾಡಿನ ಜನರು ಭಾರತ ಪ್ರಜಾಪ್ರಭುತ್ವದೊಳಗಡೆ ಪ್ರತ್ಯೇಕ ರಾಜ್ಯ ಬೇಡಿ ಬಂದಿದ್ದಾರೆ....'
"ನಾವೂ ಅಂತಹ ರಾಜ್ಯ ಏಕೆ ಬೇಡಬಾರದು?"

ಗೇಹ ರಾಜ್ಯದಲ್ಲಿ

ಹೋರೀನ ನಂಬಿ ನೀರಿಗಿಳಿಬ್ಯಾಡ್ರೇ....

ಶಿವ

"ಏಯ್, ಏನೇ ಇದು?"

'.........'

"ಏನಾಯ್ತವ್ವಾ, ಮಾತಿಗೂ ಬರಗಾಲವಾಯ್ತೆ?"

"ಲೋಕಕ್ಕೆ ಹೇಗೂ ಬರಗಾಲ; ಮಾತಿಗೂ ಬಡೀದೇನಂತೆ?"

"ಯಾಕೆ, ಏನಾಯ್ತೀಗ?"

"ಆಗೋದೇನು? ಎಲ್ಲಿ ನೋಡಿದ್ರೂ ಒಂದೇ ರೋಗ...."

"ಅದ್ರಲ್ಲೇನು ಹೊಸ್ತೂಂತ? ಇದ್ದದ್ದೇ ಅನ್ನು..."

'ಸರೀನ್ನಿ ರೋಗವೇನೋ ಇದ್ದದ್ದೇ. ಆದ್ರೆ ಅದು ಹೀಗೆಲ್ಲಾ ಉಲ್ಬಣಿಸುತ್ತಾ ಹೋದ್ರೆ ಮತ್ತೆ ಅದಕ್ಕೂ ಶಸ್ತ್ರ ಚಿಕಿತ್ಸೆಯೇ ಮಾಡಬೇಕಾಗುತ್ತೋ ಏನೋ.."

"ಹ್ಞಾ ಸರೀಲಿ ರಥ..."

"ರಥ ಎಲ್ಲಿಯ ರಥ? ಮಳೆಗಾಲ ಆರಂಭವಾಗಿರೋ ಹೊತ್ನಲ್ಲಿ ರಥವಾದ್ರೂ ಎಲ್ಲಿರುತ್ತೆ?"

'ಹ್ಞಾ... ಅದೂ ಸರೀನ್ನು ಮಾತಿನ ರಥ ಸರೀಲಿ ಅಂದೆ ನಾನು, ಅಷ್ಟು..'

"ಹೌದೌದು, ನಿಮಗೆ ಮಾತೂ ರಥವಾಗುತ್ತೆ, ಮನುಷ್ಯನೂ ರಥವಾಗುತ್ತಾನೆ...."

'ಮತ್ತೆ ಕವಿಪುಂಗವ ಸುಂಸುಮ್ನೆ ಹೇಳಿದ್ದಾನೆಯೆ?'

"ಸರಿಯಪ್ಪ, ಕಲ್ಲಲ್ಲಿ ನಾರೆತ್ತುವ ಅದ್ಭುತವಾದ ಶಕ್ತಿ ನಿಮ್ಮದು. ನೋಡಿ, ಮೊನ್ನೆ ಒಬ್ಬ ಹಠಯೋಗಿಯೂರೋ, ನೀರ ಮೇಲೆ ನಡೆಯುತ್ತೇನೆಂದು ಹೇಳಿ ಪಾದ ಇಟ್ಟದ್ದೇ ತಡ, ಕುಸಿದು ಬಿದ್ದನಂತೆ..."

"ಹೌದು, ಆದರೆ, ನಮ್ಮದು ಹಾಗಲ್ಲ. ಮಾತಿಗೇನು ಬರಗಾಲ? ಒಮ್ಮೆ ರಾಮನೆನ್ನೂ ಬರುತ್ತೆ, ಮರುಕ್ಷಣ ಭೀಮ ಅನ್ನೋಕೂ ಬರುತ್ತೆ...."

"ಅದೇ ನೋಡಿ, ನಿಮ್ಮಂತಹರ ನಾಲಿಗೆ ಅರೆಕ್ಷಣಾನೂ ಬಿಡುವಿಲ್ಲದೆ ದುಡಿಯುತ್ತೆ! ಅದ್ರಿಂದ್ಲೇ ನಿಮ್ಮ ಮಾತಿಗೆ ಬೆಲೆಯಿಲ್ಲ...."

"ಏನಂದೆ? ಮಾತಿಗೆ ಬೆಲೆಯಿಲ್ಲ?"

"ಇದೆಯಾದ್ರೂ ಎಲ್ಲೀಂತ? ನೋಡಿ, ಮೊನ್ನೆ ನಮ್ಮ....ಗೆ ವರ್ಗವಾಯ್ತಂತೆ. ಅಲ್ಲಿ 'ಮಾಮೂಲು ಪ್ರಕಾರ' ಬೀಳ್ಕೊಡುವ ಸಮಾರಂಭ ಮತ್ತೆ ಸಂತರ್ಪಣೆಯಾಯಿತಂತೆ. ಸಮಾರಂಭದಲ್ಲಿ ವಿದಾಯ ಶೋಕದಿಂದ ತತ್ತರಿಸಿ ಮಾತೇ ಆಡಲು ಅಶಕ್ತರಾದ ಅಧ್ಯಕ್ಷ ಮಹನೀಯರು ಸಂತರ್ಪಣೆ ವೇಳೆ ಆಡು ಆಡುತ್ತ ನಾಲ್ಕು ಹೋಳಿಗೆ ಗುಳುಂಕರಿಸಿದರಂತೆ— ನೋಡಿ, ವಿಯೋಗ ದುಃಖ ಅಸಹನೀಯವೆಂದಿದ್ದ ಅವರು ಮುಂದೆ ತಿಂಡಿಗಳ ರಾಶಿಯ ಮುಂದೆ ಎಲ್ಲವೂ ಸಹನೀಯವೆಂದು ಸಾಧಿಸಿಬಿಟ್ರು...'

"ಏನು? ಪೆಟ್ರೋಲಲ್ಲಿ ಕಸ ಸಿಕ್ಕಿಬಿತ್ತೆ?"

"ಎಲ್ಲಿದೇರಿ ಪೆಟ್ರೋಲು? ಬೂಟು ಪಾಲಿಷ್ ಮಾಡೋಕಾದ್ರೂ ಲೀಟರ್ ತನ್ನಿ ಅಂದ್ರೆ..."

"ಹ್ಞಾ, ತರೋಣ, ತರೋಣ, ಅಲ್ಲ ತಂತಿ ಕಡಿಯಿತೇನೂಂತ...."

"ಎಲ್ಲೋ ಗುಡುಗು ಸಿಡಿಲು ಭರದಿಂದ ಬರುತ್ತಿರಬಹುದು. ನಮ್ಮ ಇಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್ ಪ್ರಿಕಾಶನ್ ಅಂತ ಕನೆಕ್ಷನ್ ತೆಗೆದಿರಬಹುದು..."

"ಅದೆಲ್ಲಾ ಇರ್ಲಿ, ನೀನೀಗ ಹೇಳೋಕೆ ಹೊರಟದ್ದಾದ್ರೂ ಏನು? ಹೇಳು...."

"ಹೇಳಿದವ್ರಿಗೇನು ಗೊತ್ತು? ಕೇಳಿದವ್ರಿಗೆ ಗೊತ್ತಿರ್ಬೇಕು...."

"ಒಳ್ಳೆ ಕಥೆಯಾಯ್ತಲ್ಲಾ. ಹೇಳಿದವ್ರು ಹಾಗೆ ಹೇಳಿದ್ದಿಲ್ಲ, ವರದಿ ತಪ್ಪಾಗಿದೇಂತ ಮತ್ತೆ ಪ್ರಕಟಣೆ ಕೊಡ್ತಾರೆ. ಪಾಕಿ ಹೈಕಮಿಶನರ್ ಕೊಟ್ಟಾಗೆ.... ಆದ್ರೆ, ಕೇಳಿದವ್ರು ನಾವು ಹಾಗೆ ಕೇಳಿದ್ದಿಲ್ಲಾಂತ ಇದುವರೆಗೆ ಹೇಳೋಕೆ ಹೊರಡ್ಲಿಲ್ಲ...."

"ಅಂದ್ರೆ ಕೇಳೋರು ಸರಿಯಾಗಿ ಕೇಳ್ಕೋಲ್ಲಾಂತ....'

"ಹೌದು...."

'ಅದ್ಕೇ ನೋಡಿ, ಮಾತಿನ ಬೆಲೆ ಇಳಿದಿದೆ. ಅದ್ರಿಂದ ಅದರ ಅತಿ ಪ್ರಸರಣವನ್ನು ಹೇಗಾದ್ರೂ ತಡೆಯಬೇಕು....'

'ಖೋತಾ ಬಜೆಟನ್ನು ತುಂಬಿಕೊಳ್ಳಲು ರೂಪಾಯಿ ನೋಟು ಪ್ರಿಂಟ್ ಮಾಡಿದ್ರಿಂದ ಅತಿಪ್ರಸರಣ ರೂಪಾಯಿಯಲ್ಲಿ ಆಯ್ತೂಂತ ಹೇಳ್ತಾರೆ, ಒಪ್ಪಿ ಕೊಳ್ಳೋಣ. ಆದ್ರೆ ಮಾತಿನ ಅತಿಪ್ರಸರಣ ಹೇಗೆ?'

'ಅದೇ ನೋಡಿ, ಪ್ರಜಾತಂತ್ರಾತ್ಮಕ ಆಡಳಿತ ಪ್ರಾರಂಭವಾದದಿನದಿಂದ್ಲೇ ಮಾತಿನ ಬೆಳೆ ಹುಲುಸಾಗತೊಡಗಿತು. ನಮ್ಮ ಖೋತ ಬಜೆಟ್ಟಿನ ಹಣ, ವಿದೇಶೀಯರ ಕಣ್ಣುಮುಚ್ಚಾಲೆಯ ಸಹಾಯಧನ— ಮೊದಲಾದುವನ್ನು— ಹೋರಿಯನ್ನು— ನಂಬಿ ಮಂತ್ರಿಗಳು ಮಾತಾಡಲು ತೊಡಗಿದಂದೇ—ನೀರಿಗಿಳಿದಂದೇ, ಅದರ ಅತಿ ಪ್ರಸರಣ ಆರಂಭವಾಯ್ತು! ಇಂದಿರುವುದು ಬರಿಯ ಮಾತು ಮಾತ್ರ, ದೇಶದಲ್ಲೂ, ವಿದೇಶಗಳಲ್ಲೂ...."

'ಸರಿ, ಅದಕ್ಕೇನು? ಮಾತಿನ ಅಪಮೌಲ್ಯವನ್ನು ಘೋಷಿಸಿದರಾಯ್ತು...."

"ಯಾರು?"

'ಮತ್ಯಾರು, ಮಂತ್ರಿಗಳು..."

"ಅದ್ಯಾಗೆ ಆಗುತ್ತೆ? ಭಾರತ ದೇಶದಲ್ಲಿ ಹುಟ್ಟಿದ ನಮಗೆ ಬೇಕಾದಷ್ಟು ಉಣ್ಣೋ, ಉಡೋ ಸ್ವಾತಂತ್ರ್ಯವಿಲ್ಲದಿದ್ರೂ ಮಾತಾಡೋ ಸ್ವಾತಂತ್ರ್ಯವಿದೆ ನೋಡಿ. ಅದನ್ನೂ ಕಿತ್ತು ಕೊಂಡ್ರೆ, ಮತ್ತೆ ನಮ್ಮ ಸ್ವಾತಂತ್ರ್ಯಕ್ಕೆ ಅರ್ಥವಾದರೂ ಏನು?"

'ಮತ್ತೆ, ಮಾತಿನ ಸಮುದ್ರದಲ್ಲೇ ದೇಶವನ್ನೂ ಜನತೆಯನ್ನೂ ಎಳ್ಕೊಳ್ಳುವುದ್ಕೇನು?"

"ಅದೆಲ್ಲಾ ನನಗರಿಯದು. ಬುದ್ಧಿಯಿದ್ದವ್ರು ಹೇಳ್ಬೇಕು...."

"ಕೊನೆಗೂ ನಿನಗೆ ಬುದ್ಧಿಯಿಲ್ಲಾಂತ ಒಪ್ಪಿಕೊಂಡೆಯಲ್ಲಾ ಸಾಕು..."

'ಇರ್ಲಿ ಅದೆಲ್ಲಾ ಆಚೆ. ಇಲ್ಲಿ ನೋಡೀಂದ್ರೆ...."

'ನೋಡ್ತಾನೇ ಇದ್ದೇನಲ್ಲಾ...'

"ಮಾತ್ನಲ್ಲಿ ಹೇಳ್ತೀರಿ. ಅದ್ರ..'

"ಪಜೀತಿಯಾಯ್ತಲ್ಲಾ ಇದು...?"

'ನಿಮಗೆ ಯಾವಾಗ್ಲೂ ಹಾಗೇನೇ. ನಿಮ್ಮ ಮಾತನ್ನ ನಾನು ಕೇಳ್ತಿರ್ಬೇಕು. ನನ್ನದನ್ನು ನೀವು ಕೇಳದಿದ್ರೆ ಮತ್ಯಾರು ಕೇಳ್ಬೇಕು?'

"ಯಾರೂ ಇಲ್ದಾದ್ರೆ ನೋಡು, ಈ ಗೋಡೆ ಇದೆ, ಮರ ಇದೆ, ಕಂಬ ಇದೆ. ಅವುಗಳೊಡನೆ ಆಡೋ ಮಾತಿನ ಅಪಮೌಲ್ಯ ಮಾಡೋ ಅಗತ್ಯಾನೂ ಇಲ್ಲ..."

"ಸರೀನ್ನಿ. ಈಗೀಗ ಆಡೋ ಮಾತಿಗೆ ಮೌಲ್ಯವಿದ್ದರೆ ತಾನೆ ಅಪಮೌಲ್ಯ ಮಾಡೋ ವಿಚಾರ..."

'ಮೌಲ್ಯ ಅಂದ್ರೆ ಪರಿಣಾಮಕಾರಕ ಬೆಲೆ. ಅದು ಇಳೀತೂಂತಾದ್ರೆ ಅದಕ್ಕೆ ಗಿರಾಕಿ ಕಡಿಮೆಯಾಗುತ್ತದೆ. ಆಗ್ಲಾದ್ರೂ ಮುತ್ತು ಸುರಿಯೋ ಮಾತು ಹುಟ್ಟುತ್ತೋ ಕಾಣಬೇಕು"

'ಹೌದು. ಒಪ್ಪಿಕೊಂಡೆ; ನೋಡಿ, ನಮ್ಮ ಇಂದಿರೆ ರಶ್ಯಾಕ್ಕೆ ಹೋಗ್ತಾಳಂತೆ ನೋಡಿ...'

"ಹಾದೆ? ಅದರೆ ಸುದ್ದು...'

'ಅಯ್ಯೋ, ಯಾವ ಇಂದಿರೇಂತ ತಿಳ್ಕೊಂಡ್ರಿ?"

"ಮತ್ಯಾರು, ಆನಂದ್ರಾಯರ...."

"ಛೆ... ಛೆ.... ಅವ್ರು ರಶ್ಯಕ್ಕೆಲ್ಲ, ತಿರುಪತಿಗೆ ಹೊರಡೋದು; ಇದು ನಮ್ಮ ಪ್ರಧಾನಿ....'

'ಓ, ಇಂದಿರಾ ಗಾಂಧೀನೆ? ಸರಿ ಜುಲೈ ೧೨ಕ್ಕೆ ಹೊರಡ್ತಾರಂತೆ...'

'ನಿಮ್ಗೆ ಮೊದ್ಲೇ ಗೊತ್ತಿದೆ...'

'ಲೋಕದ ಕಣ್ಣು ಬಾಯಿ ಕಟ್ಟೋಕಾಗುತ್ಯೆ? ಇದ್ರಲ್ಲಿ ಗುಟ್ಟೇನು?"

'ಇಲ್ಲ, ಹಾಗೇನೂ ಇಲ್ಲ. ಏನು ಸಂಗತೀಂತ?"

"ಅಂತಹ ವಿಶೇಷ ಕಾರ್ಯಕ್ರಮವೇನೂ ಇಲ್ಲಾಂತ ಹೇಳ್ತಾರೆ, ಆದ್ರೂ ಮೂರು ಒಂದು ವಾರದ ಸಂಚಾರ ಮಾಡ್ತಾರೆ....'

'ಮತ್ತೆ ಮಾತಾಡ್ತಾರೇನ್ನಿ...'

"ಇಲ್ಲ ಇಲ್ಲ, ನಿನ್ನ ಹಾಗೆ ಗುಮ್ಮ ಹಾಗೆ ತಿರುಗಾಡ್ತಾರೆ....'

"ಸಾಕು ಬಿಡೀಂದ್ರೆ...."

"ಬಿಡೋಕಲ್ಲ ಕಣೇ ನಿನ್ನನ್ನ ಹಿಡ್ಕೊಂಡದ್ದು...."

"ಅಯ್ಯೋ...."

"ಗೊತ್ತಾಯ್ತೇನು?"

"ಆಯ್ತೂ__ಆಯ್ತು..."

"ಹ್ಞಾಂ..ಹಾಗೆ ಬಾ ಮತ್ತೆ ದಾರಿಗೆ..."

'ಅಲ್ರೀ, ನೋಡೋಣ ಹೇಳಿ ನೀವು ಇಂದಿರಾ—ಸೋವಿಯತ್ ಭೆಟ್ಟಿಯ ಕಥೆ...

'ಕಥೆಯೇನು ಬಂತೆ?'

'ಅಲ್ರಿ, ಸಂದರ್ಶನದಿಂದ ಲಾಭ?'

'ಅದೇ ಅಂದೆನಲ್ಲಾ, ಸಂದರ್ಶನ ಬ... ಯ ಸೌಹಾರ್ದಮಯ....'

'ಬರೀ ಅಷ್ಟಕ್ಕೆ ಹೋಗ್ತಾರೆಯೆ? ನಮ್ಮ ಯೋಜನೆಗೆ ಧನ...'

ಅದಕ್ಕೆಲ್ಲಾ ಯೋಜನಾ ಸಚಿವ... ಜತಾ ಹೋಗ್ತಾರೆ ನಾಳಿದ್ದು...'

'ಮತ್ಯಾಕೆ...'

"ಅದೆಲ್ಲಾ ರಾಜಕೀಯದ ರಹಸ್ಯ....

'ಯಾಕೆ?"

'ನೋಡು, ಭಾರತವು ತನ್ನ ರೂಪಾ... ಯ ಬಾಹ್ಯ ಬೆಲೆಯನ್ನು ಕಡಿದುಕೊಂಡಿತು. ಇದರ ಹಿಂದೆ ಇಲ್ಲ ಇಲ್ಲ ಅಂದ... ಅಮೆರಿಕೆ, ಜಾಗತಿಕ ಬ್ಯಾಂಕುಗಳ ಸಲ... ಯ ಪ್ರಭಾವವಿದೆ. ಅಂತಾರಾಷ್ಟ್ರೀ... ಮಹತ್ವದ ಈ ನಿರ್ಣಯದಿಂದ ಭಾರತ ಪಶ್ಚಿಮದತ್ತ ಹೆಚ್ಚು ವಾಲುತ್ತಿದೆ ಎಂ... ಸಂಶಯ ರಶ್ಯಕ್ಕಿರಬಹುದು.'

"ಹಾಗಾದರೆ...."

"ಹಾಗಾದರೂ ಇಲ್ಲ, ಹೀಗಾದರ... ಇಲ್ಲ. ಇಂದು ಅಮೆರಿಕೆ—ರಶ್ಯಗಳ ... ಎಂಡೇ ಎರಡು. ಭಾರತ ಯಾವ ಬ... ಕ್ಕೂ ಸೇರಬಾರದು; ಪಾಕಿಸ್ತಾನ ಚೀನ... ದ ಹತ್ತಿರ ಹೋಗಬಾರದು. ಇದಕ್ಕೆ ಏ... ಬೇಕೋ ಅದನ್ನು ಮಾಡಲು ಅವು ಸಿದ್ಧ...

"ಅದಕ್ಕೇ ಇರಬೇಕು, ಅಧ್ಯಕ್ಷ ... ನ್ಸನ್ ಬಹಳಷ್ಟು ಸಹಾಯದ ಮಾತೆ... ದ್ದಾರೆ. ರಶ್ಯವೂ ಪಾಕಿಸ್ತಾನಕ್ಕೆ ಶಸ್ತ್ರಾ...

(ಹದಿಮೂರನೇ ಪುಟ ನೋಡಿರಿ)

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

ಕನ್ನಡ ಸಾಹಿತ್ಯದಲ್ಲಿ

ಬೆಳೆದು ಬಾರದ-ವಿಮರ್ಶೆ

ಬರೆದವರು: ಶ್ರೀ ಸ. ನಾರಾಯಣ

ಆಧುನಿಕ ಸಾಹಿತ್ಯ ನಾಡಿನಲ್ಲಿ ಬೇರು ಬಿಟ್ಟು ನಾಲ್ಕು ದಶಕಗಳಿಗೂ ಹೆಚ್ಚಾಯ್ತು. ಆಧುನಿಕ ಸಾಹಿತ್ಯ ಪ್ರಾಕಾರದಲ್ಲಿ ವಿಮರ್ಶಾ ವಿಭಾಗ ನಿರೀಕ್ಷಿಸಿದಷ್ಟು ಮಟ್ಟಿಗೆ ಪ್ರಭಾವಶಾಲಿಯಾಗಿ ಬೆಳೆಯಲಿಲ್ಲ; ಬೆಳೆಯುತ್ತಿಲ್ಲ. ಇಂದಿನ ಕನ್ನಡ ಸಾಹಿತ್ಯದಲ್ಲಿ ಇದೊಂದು ದೊಡ್ಡ ಗಣನೀಯ ಕೊರತೆ.

ಕವನ, ಕಾದಂಬರಿ, ಚಿಕ್ಕ ಕಥೆ, ನಾಟಕ, ಹರಟೆ, ಪ್ರಬಂಧ ಈ ಎಲ್ಲ ಕ್ಷೇತ್ರಗಳಲ್ಲಿಯೂ ತಕ್ಕ ಮಟ್ಟಿನ ಪ್ರಗತಿಯಾಗಿರುವುದು ಕಾಣಬರುತ್ತದೆ. ಈ ಸಾಲಿನಲ್ಲಿ ಪ್ರಬಂಧವೂ ನಿಲ್ಲಲು ಶಕ್ತಿ ಪಡೆದಿಲ್ಲವೇನೋ ಎನ್ನಿಸುತ್ತದೆ. ಅನೇಕ ಜನರಿಗೆ ಕನ್ನಡದಲ್ಲಿ ವಿಮರ್ಶಾ ಸಾಹಿತ್ಯವೇ ಇಲ್ಲವೇನೋ ಎನ್ನಿಸಿದರೆ ಸೋಜಿಗದ ಸಂಗತಿಯೇನಲ್ಲ.

ವಿಮರ್ಶಾ ಸಾಹಿತ್ಯ ಭಾರತೀಯ ಸಾಹಿತ್ಯಕ್ಕೆ ಹೊಸತೂ ಅಲ್ಲ, ಅಪರಿಚಿತವೂ ಅಲ್ಲ ಉದ್ಗ್ರಂಥಗಳಿಗೆ ಭಾಷ್ಯ, ಟೀಕೆ, ವ್ಯಾಖ್ಯಾನ ಬರೆದಿರುವುದು ಸ್ಪಷ್ಟವಾಗಿ ಕಾಣಬರುತ್ತದೆ. ಆಂಗ್ಲ ಸಾಹಿತ್ಯದೊಂದಿಗೆ ವಿಮರ್ಶಾ ಸಾಹಿತ್ಯದ ನಿಕಟ ಸಂಬಂಧ ನಮಗುಂಟಾದುದು ಸಹಜ. ಸೋದರ ಭಾಷೆಗಳಲ್ಲಿ ವಿಮರ್ಶಾ ಸಾಹಿತ್ಯಕ್ಕೆ ದೊರೆತಿರುವ ಪ್ರೋತ್ಸಾಹ, ಸ್ಥಾನ ಕನ್ನಡ ನಾಡಿನಲ್ಲಿ ಬೆಳೆದಿಲ್ಲವೆನ್ನುವುದು ಸಹಜ, ಅಷ್ಟೇ ಶೋಚನೀಯ.

ವಿಮರ್ಶಾ ಸಾಹಿತ್ಯದ ಬೆಳವಣಿಗೆ ಕುಂಠಿತವಾಗಲು ಕಾರಣ ಯಾರು? ಲೇಖಕರೆ? ಪತ್ರಿಕೆಯವರೆ? ಓದುಗರೆ? ಅಥವಾ ಸರ್ಕಾರವೆ? ವಿಮರ್ಶೆ ಬರೆಯುವುದರಿಂದ ಆಗುವ ಲಾಭವೇನು? ವಿಮರ್ಶೆ ಅಭ್ಯಾಸ ಮಾಡುವುದರಿಂದ ಆಗುವ ಪ್ರಯೋಜನವೇನು? ಎಂಬ ಪ್ರಶ್ನೆ ಸರಳವಾದುದು. ಅದರ ಲಾಭ, ಪ್ರಯೋಜನ ಎಲ್ಲವೂ ಸಾಹಿತ್ಯ ಕ್ಷೇತ್ರಕ್ಕೆ, ಸಮಾಜಕ್ಕೆ, ಸಾಹಿತ್ಯಾಭಿಮಾನಿಗಳಿಗೆ, ಸಾಹಿತಿಗಳಿಗೆ ಸಮನಾಗಿ ದೊರೆಯುತ್ತದೆ.

ಹೊಸ ಕೃತಿಯೊಂದು ಅಚ್ಚು ಮನೆಯಿಂದ ಹೊರಬಂದು ಮಾರುಕಟ್ಟೆಯಲ್ಲಿ ಮಾರಾಟಕ್ಕಾಗಿ ನಿಂತಾಗ ಎಲ್ಲರ ಗಮನ ಅತ್ತ ಹರಿಯುವುದು ಸಹಜ. ಹೊಸಕೃತಿ ಓದುಗನ ಕೈ ಸೇರುವ ಮುಂಚೆಯೇ ವಿಮರ್ಶಕನ ಕೈಗೆ ಬಂದಾಗ, ಅವನು ತಾಳ್ಮೆಯಿಂದ ಓದಿ ಗುಣ—ಅವಗುಣಗಳನ್ನೂ ಯಾವ ಸಂದೇಹ ಸಂಕೋಚವೂ ಇಲ್ಲದೆ ತಿಳಿಸುತ್ತಾನೆ. ಅವನು ಹೇಳುವುದು—ಹೇಳಬೇಕಾದದ್ದು ನ್ಯಾಯಾಧೀಶನ ಧಾಟಿಯಲ್ಲಲ್ಲ. ಅಭಿಮಾನಿಯ ಅಭಿಪ್ರಾಯದ ಧಾಟಿಯಲ್ಲಿ ವಿಮರ್ಶಕ ಲೇಖಕ ಮತ್ತು ಓದುಗ ಇವರ ಬಾಂಧವ್ಯದ ಬೆಸುಗೆಯನ್ನು ಭದ್ರಪಡಿಸುವ ಮಧ್ಯಸ್ತಿಕೆಗಾರ. ವಿಮರ್ಶಕನ ನೆರವಿಲ್ಲದೆ ಕೃತಿ ಹೊರಬರುವುದಿಲ್ಲ; ಓದುಗರಿಗೆ ತಲುಪುವದಿಲ್ಲ ಎಂದು ಅರ್ಥವಲ್ಲ. ಆ ಕೃತಿಯ ಪರಿಚಯ ಮಾಡಿಕೊಡುತ್ತಾನೆ, ಅಭಿಪ್ರಾಯ ತಿಳಿಸುತ್ತಾನೆ. ಕೃತಿಯೂ ಒಂದು ಬಗೆಯ ಅಡುಗೆ,ಅದರ ರುಚಿಯನ್ನು ಮೊದಲು ನೋಡಿ ಅಭಿಪ್ರಾಯ ವ್ಯಕ್ತಪಡಿಸುವವನೂ ವಿಮರ್ಶಕ. ಲೇಖಕ ಅಡುಗೆ ಸಿದ್ಧಪಡಿಸುತ್ತಾನೆ. ಓದುಗರು ಅದನ್ನು ಸ್ವೀಕರಿಸಲು ಸಿದ್ಧವಾಗಿರುತ್ತಾರೆ.

ಲೇಖಕನಿಗೆ ತನ್ನ ಮನದ ಮೇಲೆ ಪರಿಣಾಮ ಬೀರಿದ ರಾಗ-ದ್ವೇಷಾದಿ ಸಂಗತಿಗಳ, ಸುಖ-ದುಃಖಗಳ, ಅನುಭವಗಳ ವಿಷಯಗಳನ್ನು ತನ್ನದೇ ಆದ ಶೈಲಿಯಲ್ಲಿ ನಿರೂಪಿಸುವ ಸ್ವಾತಂತ್ರ್ಯವಿದೆ ವಿಮರ್ಶಕನಿಗೂ ಕೃತಿಯ ರೀತಿ-ನೀತಿ, ನಿರೂಪಣೆಗಳ ಬಗ್ಗೆ ಸ್ಪಷ್ಟ, ನಿಷ್ಪಕ್ಷಪಾತಯುತ ಅಭಿಪ್ರಾಯ ಕೊಡುವ ಸ್ವಾತಂತ್ರ್ಯವಿದೆ.

(ಲೇಖಕನ ಬಗೆಗಲ್ಲ).

ಕನ್ನಡದಲ್ಲಿ ಉತ್ತಮ ವಿಮರ್ಶಾ ಗ್ರಂಥಗಳನ್ನು ಬೆರಳಲ್ಲಿ ಎಣಿಸುವಷ್ಟು, ವಿಮರ್ಶಕರ ಸಂಖ್ಯೆಯನ್ನು ಎಣಿಸಿ ಹೇಳಿ ಬಿಡಬಹುದು. ಬರೆದವರೆಲ್ಲರೂ ಹೇಗೆ ಉತ್ತಮ ಬರಹಗಾರರಲ್ಲವೋ—ಉತ್ತಮ ಸಾಹಿತಿಗಳಲ್ಲವೋ ಹಾಗೆ ಅಭಿಪ್ರಾಯ ತಿಳಿಸಿದವರೆಲ್ಲ ಉತ್ತಮ ವಿಮರ್ಶಕರಲ್ಲ. ವಿಮರ್ಶಕನಿಗೆ ಸಾಹಿತಿಯಂತೆಯೇ ಅಪಾರ ಲೋಕಾನುಭವ, ನ್ಯಾಯ-ಅನ್ಯಾಯ, ರೀತಿ-ನೀತಿ ಮೊದಲಾದುವುಗಳ ಪರಿಚಯ, ನಿಷ್ಪಕ್ಷಪಾತ ಮನೋಭಾವ, ಮನದಲ್ಲಿ ಮೂಡಿದ ಅಭಿಪ್ರಾಯವನ್ನು ಯಾವ ಬಗೆಯ ದಾಕ್ಷಿಣ್ಯಕ್ಕೂ ಒಳಗಾಗದೆ ಸ್ಪಷ್ಟವಾಗಿ ಹೇಳುವ ಮನೋಧರ್ಮ ಇರಬೇಕು.

ವಿಮರ್ಶಕನ ಸ್ಥಾನ ಒಂದು ಬಗೆಯಲ್ಲಿ ಉಪಾಧ್ಯಾಯನ ಸ್ಥಾನವಿದ್ದಂತೆ. ಈ ಸ್ಥಾನ ಗುರುತರವಾದ, ಗೌರವಯುತವಾದ ಹಿರಿಯ ಸ್ಥಾನ. ಈ ಸ್ಥಾನದಲ್ಲಿ ಇರುವವನಿಗೆ ಎಚ್ಚರಿಕೆ, ಆತ್ಮವಿಶ್ವಾಸ, ದೃಢ ನಂಬಿಕೆ, ಧೋರಣೆ, ನಿಷ್ಠೆ ಇರಲೇಬೇಕು. ಈ ಬಗೆಯ ರೀತಿ–ನೀತಿ, ಸೂಕ್ತ ಸೂತ್ರಗಳನ್ನು ಅನುಸರಿಸಿ ವಿಮರ್ಶಕನನ್ನು ಹುಡುಕುತ್ತಾ ಹೋದರೆ ಮತ್ತೆ ಮೊದಲ ಸ್ಥಳಕ್ಕೆ ಬರುತ್ತೇವೆ.

ಕನ್ನಡ ನಾಡಿನಲ್ಲಿ ವಿಮರ್ಶಾ ಸಾಹಿತ್ಯ ವಿಶೇಷವಾಗಿ ಬೆಳೆಯದಿರಲು ವ್ಯಾಪಿಸದಿರಲು ಮುಖ್ಯ ಕಾರಣಗಳು ಹಲವಾರು. ಈ "ಹಲವಾರು" ಕಾರಣಗಳನ್ನೇ ಈ ಲೇಖನದಲ್ಲಿ ಪ್ರಸ್ತಾಪಿಸುತ್ತಾ ಹೋದರೆ ಸಮಂಜಸವೆನಿಸಲಾರದು. ಆದರೂ ಕೆಲವು ಸಂಗತಿಗಳನ್ನು ಸೂಕ್ಷ್ಮವಾಗಿ ನಿರೂಪಿಸುತ್ತೇನೆ.

ಕಥೆ, ಕಾದಂಬರಿ, ಕವನ, ನಾಟಕ, ಪತ್ರಿಕೆ ಇವುಗಳ ಸಂಖ್ಯೆ ಮೊದಲಿಂದಲೂ ಕನ್ನಡದಲ್ಲಿ ಒಂದರಿಂದಲೇ ಆರಂಭ. ತಮ್ಮ ಸಂಪ್ರದಾಯ ನಿಷ್ಠೆಗಳನ್ನು ಉಳಿಸಿಕೊಂಡು ಬೆಳೆಸಿದವರು ಕೆಲವರು ಮಾತ್ರ. ನೆರೆಹೊರೆಯ ನಾಡಿನ ಸಾಹಿತ್ಯದ ಗಾಳಿಯೊಂದಿಗೆ ನಮ್ಮದನ್ನೂ ಸಂಗಟ್ಟಲು ಪ್ರಯತ್ನಿಸಿದರೆ ಅಂಜಿಕೆಯಾಗುತ್ತದೆ. ನಮ್ಮ ಸಾಹಿತ್ಯವೆಲ್ಲವೂ ಶ್ರೇಷ್ಠಮಟ್ಟದಲ್ಲ,ಆದರೆ ಕಳಪೆ ಕಡಿಮೆ ಅಷ್ಟೇ ಸಮಾಧಾನ. ಉತ್ತಮ ಸಾಹಿತ್ಯ ಒದಗಿಸುವ ಮಾಸಪತ್ರಿಕೆ, ವಾರಪತ್ರಿಕೆಗಳನ್ನು ಕಾಣಲು ಎಷ್ಟೋ ವರ್ಷಗಳು ಬೇಕಾದವು. ತಲೆ ಎತ್ತಿ ನಿಲ್ಲುವಂತಹ ಒಂದೆರಡು ಪತ್ರಿಕೆಗಳು ತಲೆ ಎತ್ತಿದರೂ ಅವಕ್ಕೆ ಬಾಲಗ್ರಹ ಬಾಧೆ. ಹೇಗೆಯೋ ಅಲ್ಪ ವಯಸ್ಸಿನಿಂದಲೇ ಅನಾರೋಗ್ಯದಿಂದ ಬಳಲುತ್ತಿದ್ದ ಸಾಹಿತ್ಯರಂಗ ಕ್ರಮೇಣ ಆರೋಗ್ಯ ಪಡೆದು ಬೆಳೆಯಲಾರಂಭಿಸಿತು. ಆರೋಗ್ಯ ಇಲ್ಲವಾಗಿದ್ದರೂ ಆಯುಷ್ಯವಿತ್ತು ಅಷ್ಟೇ ಸಮಾಧಾನ.

ಎಲ್ಲ ಪತ್ರಿಕೆಗಳಲ್ಲಿಯೂ ವಿಮರ್ಶೆಗಾಗಿ ಒಂದೆರಡು ಕಾಲಂಗಳು ಮೀಸಲು. ಇದೊಂದು ಸಂಪ್ರದಾಯ. ಒಂದು ಕೃತಿಯನ್ನು ಓದಿ ತೋಚಿದುದನ್ನು ನಾಲ್ಕು ಮಾತುಗಳಲ್ಲಿ ಹೇಳಿ ಮುಗಿಸಿದರೆ ವಿಮರ್ಶೆ ಎನಿಸಲಾರದು. ಕೃತಿಯ ಅಂತರಂಗದ ಶಕ್ತಿ ಇಷ್ಟು ಬೆಲೆ ಇಷ್ಟು (ಪುಸ್ತಕದ ಬೆಲೆ ಅಲ್ಲ) ಎಂದು ಹೇಳುವಂತಹ ದಾಷ್ಟಿಕತನ ವಿಮರ್ಶಕನಲ್ಲಿ ಇರಬೇಕು. ಅಂಜಿಕೆ, ಸಂಕೋಚಗಳಿಗೆ ಅವಕಾಶವಿಲ್ಲದ ಅನುಭವ—ಆಧಾರಯುತ ಅಭಿಪ್ರಾಯವೇ ವಿಮರ್ಶೆ.

ಇತ್ತೀಚಿನ ದಿನಗಳಲ್ಲಿ ಬೆಳಕಿಗೆ ಬರುತ್ತಿರುವ ಎಲ್ಲ ಬರಹಗಾರರ ಕೃತಿಗಳೂ ವಿಮರ್ಶಕರ ಕೈದಾಟಿ ಬರುತ್ತಿವೆ. ಆಯಾ ಕೃತಿಗಳ ಬಗ್ಗೆ ವಿಮರ್ಶಕರೂ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ವಿಮರ್ಶೆಯೂ ಪ್ರತಿ ವಾರವೂ ತಪ್ಪದೆ ಪ್ರಕಟವಾಗಿರುತ್ತದೆ. ವಿಮರ್ಶೆಗಳು ಪ್ರಕಟವಾಗುತ್ತಲೇ ಇರುತ್ತವೆ. ಆದರೆ ಅವುಗಳನ್ನು ತಪ್ಪದೆ ಓದುತ್ತಿರುವವರು ಎಷ್ಟು ಮಂದಿ? ಪುಸ್ತಕಕ್ಕೆ ಬರೆದ ಮೊದಲ ಎರಡು ಪುಟಗಳ ಮುನ್ನುಡಿಯನ್ನು ಓದುವಷ್ಟು ವ್ಯವಧಾನ, ತಾಳ್ಮೆ ನಮ್ಮ ಓದುಗರಿಗಿಲ್ಲ. ಇನ್ನು ವಿಮರ್ಶೆ ಓದುತ್ತಾರೆಯೆ?

ವಿಮರ್ಶಾ ಕ್ಷೇತ್ರ ಲೇಖಕ ಮತ್ತು ವಿಮರ್ಶಕ ಇವರ ದ್ವೇಷ, ಅಸೂಯೆ, ವೈಯಕ್ತಿಕ ಕೋಪ-ತಾಪಗಳ ಆರೋಪಣೆಯ 'ಅಖಾಡ' ವಾದ ಪ್ರಸಂಗಗಳೂ ಹಲವುಂಟು. ಕೃತಿಯ ಬಗ್ಗೆ ವಿಮರ್ಶೆ ಬರೆಯದೆ ಕೃತಿ ಬರೆದವನ ಬಗ್ಗೆ ವಿಮರ್ಶೆ ಬರೆದ ಸಂಗತಿಗಳೂ ಇಲ್ಲದಿಲ್ಲ. ಅನನುಭವಿಗ

(ಹದಿನೆರಡನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. E. P. 305/1965
O. S. No. 305/1963

Y. ಲಕ್ಷ್ಮಣ ಕಾಮತ ಸಹಾ
—ಅರ್ಜಿದಾರರು.

ಅಪೋಲಿ ಡಿ. ಸೋಜ ಸಹಾ—ಎದ್ರಿರು.
3. ತೋಮಾಸ ಡಿ. ಸೋಜ, B. D. ಸೋಜರ ಮಗ, ಮಂಗಳೂರು ತಾಲ್ಲೂಕು ಕೊಲ್ಲೂರು ಗ್ರಾಮದ ಮೇಗಿನಪಿತ್ಲು ಎಂಬಲ್ಲಿ ರುವವ—

3ನೇ ಎದ್ರಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ಡಿಕ್ರಿಯಲ್ಲಿ ಮಾಂಟಳ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ಯೇಲಂಗೆ ಅಪೇಕ್ಷಿಸಿ ಅರ್ಜಿದಾರರು ದಾಖಲ್ಲು ಮಾಡಿದ್ದ ಯೆಲಂ ಯಿಸ್ತಿಹಾರಿನ ಶರ್ತ ನಿರ್ಣಯಿಸುವ ಕುರಿತು ನಿಮಗೆ ಅಖೈರ ನೋಟೀಸಿನ ಬಗ್ಗೆ ಅಮ್ಲುಜ್ಯಾರಿ ತಾ. 29—6—66ಕ್ಕೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ಅಮ್ಲುಜ್ಯಾರಿ ತೀರ್ಮಾನವಾಗುವದು ಎಂತ ಕೋರ್ಟು ಹುಕ್ಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Petitioners

Karkala, 11—6—66

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 57 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0-30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ.

ಚಾರುಚಿತ್ರನ

ದುರ್ಬಲೆಯಲ್ಲದ ಇಂದಿರೆ ಸಬಲೆಯಾಗಬೇಕು

ಮಹಾರಾಷ್ಟ್ರೀಯರ ವಿಸ್ತರಣಾ ವಾದ, ಕೇಂದ್ರ ರಕ್ಷಣಾ ಸಚಿವ ಯಶವಂತ ರಾವ್ ಚವಾನರ ಭದ್ರರಕ್ಷೆ, ಕೇಂದ್ರ ಸರಕಾರದ ಅಸಹಾಯ ಪರಿಸ್ಥಿತಿಗಳೇ ಏಕ ಸದಸ್ಯ ಆಯೋಗ ರಚನೆಗೆ ಪ್ರೇರಣೆಯಿತ್ತುವೆನ್ನಬೇಕು. ಮಹಾರಾಷ್ಟ್ರ—ಕರ್ನಾಟಕದ ಗಡಿತಂಟೆಗಳ ಪರಿಹಾರಕ್ಕಾಗಿ ಏರ್ಪಡಲಿರುವ ಈ ಆಯೋಗವು ಎಂದು ನೇಮಕವಾಗುವುದು, ಇದರ ಕಾ

ರ್ಯವ್ಯಾಪ್ತಿಯೇನು, ಆಯೋಗದ ಏಕ ಮೇವ ಸದಸ್ಯರಾಗುವ ಮಹಾ ಭಾಗ್ಯ ಯಾರದು ಎಂದು ಮುಂತಾದ ವಿವರಗಳು ಇನ್ನೂ ಪ್ರಕಟವಾಗಿಲ್ಲ ಆದರೆ, ಆಯೋಗದ ನೇಮಕವೂ ಕನ್ನಡಿಗರಿಗೆ ದ್ರೋಹವೆಂಬ ಭಾವನೆ, ಮರಾಠಿಗರ ಮುಂದೆ ಕೇಂದ್ರವೂ ತಲೆ ತಗ್ಗಿಸಿತು ಎಂಬ ಸತ್ಯ ಸಂಗತಿ ಯಾರಿಂದಲೂ ಅಡಗಿರಲು ಸಾಧ್ಯವಿಲ್ಲ.

ಮುಖ್ಯಮಂತ್ರಿ ನಿಜಲಿಂಗಪ್ಪನವರು ಏಬಿಸಿಸಿಯಲ್ಲಿ ಆಯೋಗ ನೇಮಕದ ನಿರ್ಣಯವನ್ನು ಪ್ರತಿಭಟಿಸದೆ ಇದ್ದುದಕ್ಕಾಗಿ ಅಪವಾದಕ್ಕೆ ಗುರಿಯಾದರು ತನ್ನ ನಾಯಕತ್ವದಲ್ಲಿ ಕರ್ನಾಟಕಕ್ಕೆ ಹಿತವಾಗುವುದಿಲ್ಲ ಎಂದು ಸುತ್ತುಮುತ್ತಲಿಂದಲೂ ಹೇಳಿಸಿಕೊಂಡರು, ಸಾರ್ವತ್ರಿಕ ಚುನಾವಣೆಯ ನಂತರವೇ ಆಯೋಗ ನೇಮಕವಾಗುವುದೆಂದವರು ಹೇಳಿದರೂ ಅದರಿಂದ ಯಾರಿಗೂ ಸಮಾಧಾನವಿಲ್ಲ. ಇಡಿಯ ರಾಜ್ಯದಲ್ಲಿ, ಮುಖ್ಯವಾಗಿ ಗಡಿಗುಂಟ ಅಹಿಂಸಾತ್ಮಕವಾದ ಚಳವಳ ಆರಂಭವಾಯಿತು. ರೇಲುಗಳನ್ನು ತಡೆಹಿಡಿಯುವುದು, ಏಕ ಸದಸ್ಯ ಆಯೋಗವನ್ನು ಬಹಿಷ್ಕರಿಸುವ ಘೋಷಣೆ ಮಾಡುವುದು—ಇವೇ ಚಳವಳದ ಮುಖ್ಯ ರೀತಿಗಳು. ರೇಲು ಬರುತ್ತಲೇ ಅದು ಮುಂದುವರಿಯದಂತೆ ರೇಲು ಹಳಿಗಳ ಮೇಲೆ ಸತ್ಯಾಗ್ರಹಿಗಳು ಕುಳಿತುಕೊಂಡರು. ಪೋಲೀಸರು ಅವರನ್ನು ಎತ್ತಿ ದೂರ ಕರೆದೊಯ್ದರು—ಅಂತೂ ಪ್ರತಿ ಟ್ರೇನು ಅರ್ಧ ತಾಸಿನಿಂದ ಒಂದು ತಾಸಿನವರೆಗೆ ತಡವಾಗಿ ಹೊರಡುವಂತಾಯಿತು ಕನ್ನಡಿಗರ ಸತ್ಯಾಗ್ರಹ ಪುಂಡಾಟಿಕೆ-ಹಿಂಸೆಗಳಿಂದ ಪ್ರೇರಿತವಾದುದಲ್ಲ, ಮಹಾತ್ಮಾ ಗಾಂಧೀಜಿ ತೋರಿಸಿದ ಅಹಿಂಸಾ ಮಾರ್ಗದಲ್ಲಿ ಮುಂದುವರಿದುದು.

ಬೆಳಗಾಂವಿ, ಧಾರವಾಡ, ಬಿಜಾಪುರ, ರಾಯಚೂರು ಮೊದಲಾದ ಜಿಲ್ಲೆಗಳಲ್ಲಿ ಚಳವಳ ತೀವ್ರ ಸ್ವರೂಪ ತಳೆದಿದೆ. ಉತ್ತರ ಕನ್ನಡದ ಕಾರವಾರದ ಮೇಲೆ ಮರಾಠಿ ಹದ್ದು ದೃಷ್ಟಿ ಹಾಯಿಸಿದೆ ನಿಜವಾದರೂ ಅಲ್ಲಿ ಚಳವಳಿ ಬಲವಾದಂತೆ ತೋರುವುದಿಲ್ಲ. ರಾಜಧಾನಿ ಬೆಂಗಳೂರು ಸತ್ಯಾಗ್ರಹಿಗಳ ಊರೇ ಆಗಿದೆ. ಕನ್ನಡಿಗರ ನ್ಯಾಯವಾದ ಈ ಹೋರಾಟದಲ್ಲಿ ಭಾಗವಹಿಸಲು ರಾಜ್ಯದ ಮೂಲೆ ಮೂಲೆಯ ಸತ್ಯಾಗ್ರಹಿಗಳು ಉತ್ಸುಕರಾಗಿದ್ದಾರೆ. ಇವರಲ್ಲಿ ಮಹಿಳೆಯರ ಸಂಖ್ಯೆಯೂ ಗಣನೀಯವಿದೆ. ಬಂಧಿತರಾದವರಲ್ಲಿ ಹೆಚ್ಚಿನವರನ್ನು ಹಿಂದೆ ಬಿಡುಗಡೆ ಮಾಡಲಾಗಿದೆ, ಕೆಲವರ ಮೇಲೆ ರೇಲ್ವೆ ಶಾಸನದನ್ವಯ ಮುಕದ್ದಮೆ ಹೂಡಲಾಗಿದೆ.

ಚಳವಳಿಯ ಅಂಗವಾಗಿ ರಾಜ್ಯದ ಶಾಸನಸಭೆ, ಲೋಕಸಭೆಯ ಸದಸ್ಯರು ಒಬ್ಬರ ಹಿಂದೊಬ್ಬರಂತೆ ರಾಜೀನಾಮೆ ನೀಡುತ್ತ ಬಂದಿದ್ದಾರೆ. ಚಳವಳಿಯ ಮಾರ್ಗದರ್ಶನ ಗಾಂಧಿ ಅನುಯಾಯಿಗಳಾದ ಹಳ್ಳಿಕೇರಿ, ಪಂಚವಾವಿ ಮೊದಲಾದ ಅಧ್ಯ ನಾಯಕರ ಕೈಯಲ್ಲಿಯೇ ಇದೆ. ಅಹಿಂಸಾತ್ಮಕವಾದ ಈ ಸತ್ಯಾಗ್ರಹ ಜಯಗಳಿಸಲಿ.

ಏಕ ಸದಸ್ಯ ಆಯೋಗ ನೇಮಿಸುವ ನಿರ್ಣಯದಿಂದ ಕನ್ನಡಿಗರಲ್ಲಾದ ವಿವಂಚನೆಯನ್ನು ಲೋಕಸಭಾಸದಸ್ಯರಾದ ಶ್ರೀ ಆರ್. ಆರ್. ದಿವಾಕರರು ರಾಷ್ಟ್ರಪತಿಗಳಿಗೆ ನಿವೇದಿಸಿದ್ದಾರೆ. ಚುನಾವಣೆಗೆ ಮೊದಲು ಸೀಮಾ ಪರಿಶೀಲನೆಯನ್ನು ತಡೆಹಿಡಿಯಬೇಕು ಎಂದವರು ಈ ಸಂಬಂಧದಲ್ಲಿ ರಾಷ್ಟ್ರಪತಿಗಳು ಪ್ರವೇಶಿಸಬೇಕು ಎಂದು ವಿನಂತಿಸಿದ್ದಾರೆ. ಈ ನಡುವೆ ಈ ಇನ್ನೊಂದು ವಿಚಿತ್ರ ನಡೆದಿದೆ. ಮಧ್ಯಪ್ರದೇಶದ ಸಂಚಾರದಲ್ಲಿ ತೊಡಗಿದ್ದ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರನ್ನು ಸೋನೇಗಾಂವ ವಿಮಾನ ನಿಲ್ದಾಣದಲ್ಲಿ ಮಹಾರಾಷ್ಟ್ರದ ಮುಖ್ಯ ಮಂತ್ರಿ ವಿ. ಪಿ. ನಾಯಕರು ಅನಿರೀಕ್ಷಿತವಾಗಿ ಭೆಟ್ಟಿ ಮಾಡಿ ಹದಿನೈದು ನಿಮಿಷಗಳವರೆಗೆ ಮಾತಾಡಿದರು. ಪತ್ರಿಕಾ ಪ್ರತಿನಿಧಿಗಳೊಡನೆ ಮಾತಾಡುತ್ತ ಅವರು ಇನ್ನು ಒಂದು ತಿಂಗಳು ಕಾಯಬೇಕಾಗಿದೆಯೆಂದರೆಂದು ವರದಿಯಾಗಿದೆ. ಒಂದು ವೇಳೆ ಒಂದು ತಿಂಗಳೊಳಗೆ ಆಯೋಗ ನೇಮಕಗೊಳ್ಳದೆ ಹೋದರೆ ... ಇಂದಿರಾ ಗಾಂಧಿಯವರ ಪರಿಸ್ಥಿತಿ ಇಂದು ಉತ್ತಾನಪಾದರಾಯನದೇ. ಧ್ರುವನ ತಾಯಿ ಸುನೀತಿಯ ನೀತಿ ಸರಿಯೆಂದು ಅನಿಸಿದರೂ ಉತ್ತಮನ ತಾಯಿ ಸುರುಚಿಯ ಮುಂದೆ ನಾಲಗೆ ಸಡಿಲಬಿಡುವುದಕ್ಕೆ ಅಂಜಿಕೆ. ಇದಕ್ಕೆ ಪರಿಹಾರವೇನು. ಹಾಲನ್ನು ಹಾಲು, ನೀರನ್ನು ನೀರೆನ್ನುವ ಎದೆಗಾರಿಕೆ ನಮ್ಮ ನಾಯಕರಲ್ಲಿ ಮೊಳೆಯದ ವರೆಗೆ ಅಡಳಿತ ತೀರ ದುರ್ಬಲವೇ. ತಾನು ದುರ್ಬಲೆಯಲ್ಲವೆಂದು ಹೇಳಿಕೊಳ್ಳುವ ಇಂದಿರೆ ಈಗ ಸಬಲೆಯಾಗಬೇಕು. ಸುನೀತಿಯ ನೀತಿಯನ್ನು ಎತ್ತಿ ಹಿಡಿಯಬೇಕು. ಸುರುಚಿಯ ವ್ಯಾಮೋಹಕ್ಕೆ ಬೀಳಬಾರದು. ಅವರು ಹೀಗೆ ಮಾಡದೆ ಹೋದರೆ, ಕನ್ನಡಿಗರು ಧ್ರುವರಾಗಲೇ ಬೇಕಾಗುತ್ತದೆ. ನ್ಯಾಯ ಪಡೆಯುವ ಅಧಿಕಾರ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಇದೆ. ಇದಕ್ಕೆ ಮರಾಠಿಗಳು ಅಡ್ಡಿ ಬರಲಾರರು.

o o o o

ಭಾರತದ ಅರ್ಥ ವ್ಯವಸ್ಥೆಯಲ್ಲಿ ತಲೆದೋರಿರುವ ದೋಷಗಳನ್ನು ತಿದ್ದಿಕೊಳ್ಳಲು ರೂಪಾಯಿಯ ಮೌಲ್ಯ ಪಿಚ್ಛೇದನವು ತೀವ್ರ ಪರಿಹಾರವನ್ನೊದಗಿಸುವುದು—ಇದು ಪ್ರಧಾನಿ ಇಂದಿರಾ ಮೌಲ್ಯ ವಿಚ್ಛೇದನದ ಪ್ರಬಲ ಸಮರ್ಥಕಿಯಾಗಿ ಪಡುವ ಅಭಿಪ್ರಾಯ ಮುಂದುವರಿದು ಅವರೇ ಹೇಳಿದ್ದಾರೆ— ಇದು ಅಲ್ಲಾವುದ್ದೀನನ ದೀಪವಲ್ಲ. ಸಾಕಷ್ಟು ಪರಿಶೀಲನೆ ನಡೆಸಿದ ನಂತರವೇ ಇಂತಹ ಪ್ರಮುಖ ನಿರ್ಧಾರಕ್ಕೆ ಬರಬೇಕು, ಬಂದಿದ್ದಾರೆ. ಬಾಹ್ಯ ಒತ್ತಡದ ಪ್ರಭಾವವಿದ್ದರೂ ಇರಬಹುದು. ಆದರೆ, ಅದು ಗೌಣ'

ಅರ್ಥ ವ್ಯವಸ್ಥೆಯನ್ನು ವ್ಯವಸ್ಥಿತ ರೂಪಕ್ಕೆ ತರಲು ಕೈ ಕೊಂಡ ಹಲವಾರು ಉಪಾಯಗಳು ಪರಿಣಾಮರಹಿತವಾಗದೆ ಹೋದುದರಿಂದ ಅಂತಿಮವಾಗಿ ಈ ಮಹತ್ವದ ನಿರ್ಣಯಕ್ಕೆ ಬರಬೇಕಾಯಿತು—ಇದು ಇಂದಿರಾರ ಹೃದಯದಿಂದ ಮೂಡಿ ಬಂದ ಮಾತು. ಮೌಲ್ಯ ವಿಚ್ಛೇದನದಿಂದ ದೇಶದೊಳಗಡೆ ಉತ್ಪಾದಿತವಾಗುವ ಯಾವ ವಸ್ತುವಿಗೂ ಬೆಲೆಯೇರುವುದಿಲ್ಲ, ವಿದೇಶಗಳಿಂದ ಆಯಾತವಾಗುವ ವಸ್ತುಗಳ ಬೆಲೆ ಏರುವುದು— ಆದರೂ ಜೀವನಾವಶ್ಯಕ ಪದಾರ್ಥಗಳ ಬೆಲೆಯೇರದಂತೆ ಸರಕಾರವು ನೆರವಿನ ಹಣ ನೀಡುವುದು—ಇದು ಉಪಯುಕ್ತ.

ಆದರೆ, ವಿರೋಧಿ ಪಕ್ಷಗಳು ಸರಕಾರದ ಈ ತೀರ್ಮಾನ - ಕಾರ್ಯವನ್ನು ಬಲವಾಗಿ ಖಂಡಿಸಿವೆ. ಬಲ ಕಮ್ಯೂನಿಸ್ಟ್



ಪಕ್ಷವು 'ಇದನ್ನು ರಾಷ್ಟ್ರ ದ್ರೋಹದ ಕೃತಿ' ಎಂದು ಕರೆಯುವಷ್ಟು ಮುಂದುವರಿದಿದೆ. ಸ್ವತಂತ್ರ ಪಕ್ಷವು ಸರಕಾರವು ಅಮೆರಿಕೆಗೆ ಭಾರತವನ್ನು ಮಾರುವಲ್ಲಿ ಮಹತ್ವದ ಹೆಜ್ಜೆ ಇದು ಎಂದು ಅಭಿಪ್ರಾಯ ಪಡಬಹುದು —ಅಪಮೌಲ್ಯದ ನಿರ್ಣಯ ಯಾವ ಸಮಾಧಾನತರಲಿಲ್ಲ,ವಿರುವುದು ಸಾಧ್ಯವೂ ಇಲ್ಲ. ಆದರೆ, ಹಲವಾರು ಕಾರಣಗಳಿಂದಲದು ಅನಿವಾರ್ಯವಾಯಿತ್ತು.ಆಗ ಬೇಕಾಯಿತು ಆದುದರಿಂದ ಜನತೆ ದೇಶದ ಅರ್ಥವ್ಯವಸ್ಥೆಗೆ ಮೂಡಿದ ಈಶಸ್ತ್ರಕ್ರಿಯೆ ಯಶಸ್ವಿಯಾಗುವಂತೆ ಸಹಕರಿಸ ಬೇಕು—ಇದುದೇಶಭಕ್ತಿಯು ಒಂದು ರೂಪವಲ್ಲದೆ ಬೇರೆಯಲ್ಲ.

o o o o

ಭಾರತವು ಸ್ವಾತಂತ್ರ್ಯಗೊಂಡ ನಂತರ ಏನನ್ನು ಸಾಧಿಸಿದೆ? ಈ ಪ್ರಶ್ನೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಿಂದ ಉತ್ತರಿಸಿಯಾರು, ಉತ್ತರಿಸಲೂ ಬೇಕು. ದೇಶವಾಸಿಗಳಲ್ಲೂ ವಿವಿಧ ಪಕ್ಷಗಳ ಅಭಿ



ಪ್ರಾಯ ವಿವಿಧವಾಗಿರುವುದು ಸಹಜವೇ—ಇದೇ ಪ್ರಜಾಪ್ರಭುತ್ವ. ಆದರೆ, ವಿದೇಶೀಯರ ದೃಷ್ಟಿಯಲ್ಲಿ ಭಾರತವು ಬಹಳಷ್ಟು ಪ್ರಗತಿ ಹೊಂದಿದೆ—ಇದು ಸರ್ವಸಾಮಾನ್ಯವಾದ ಅಭಿಪ್ರಾಯ.

ಭಾರತವು ಅಭಿವೃದ್ಧಿ ಯೋಜನೆಗೆಂದು ವಿದೇಶಗಳಿಂದ ನೆರವು ಪಡೆಯುತ್ತಿದೆ. ಇಂದಿನ ದಿನಗಳಲ್ಲಿ ಅಭಿವೃದ್ಧಿ ಪಥಗಾಮಿಯಾಗಿರುವ ದೇಶಗಳು ಪರರಿಂದ ಸಹಾಯ—ಸಾಲ ಪಡೆಯುವುದು ತಪ್ಪಲ್ಲ. ಮನೆ ಕಟ್ಟಿಸುವವ ತನ್ನ ತತ್ಕಾಲದ ಗರ್ಜಿಗಾಗಿ ಬ್ಯಾಂಕುಗಳಲ್ಲಿ ಸಾಲ ತೆಗೆಯದಿರುತ್ತಾನೆಯೆ? ಆದರೆ, ತೀರಿಸಲಾರದ,ಪ್ರಮಾಣದ ಸಾಲ ತೆಗೆಯಲಾರ,ಅಂತಹ ಸಾಲಕಾರನಿಗೆ ಹುಟ್ಟುವುದೂ ಸಾಧ್ಯವಿಲ್ಲ. ವಿದೇಶೀಯರು ಸಾಲಕೊಡುವವರರು, ಮುಕ್ತ ಹಸ್ತದಿಂದ ನಮಗೆನೆ ರವುಕೊಡುತ್ತಾರೆ ಹಿಂದೆಪಡೆಯುವಆಶೆಯು ಅವರಿಗಿಲ್ಲವೆ

(ಹನ್ನೊಂದನೇ ಪುಟ ನೋಡಿರಿ)

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

ಭಾರತದ ಆಧುನಿಕ ಚಿತ್ರಕಲೆ

ಲೇಖಕರು: ಶ್ರೀ ಬಿ. ಸಿ. ಸನ್ಯಾಲ್.

ಬಹು ಹಿಂದಿನ ಕಾಲದಲ್ಲಿ ಭಾರತ ಉಪಖಂಡವು ಸಂಸ್ಕೃತಿಯ ವಿಷಯದಲ್ಲಿ ಭೂಗೋಳಿಕವಾಗಿ ಪ್ರತ್ಯೇಕ ಮತ್ತು ಏಕಾಂಕಿಯಾಗಿ ಉಳಿಯಿತು. ಇದರಿಂದಾಗಿ ಕಲೆಯ ಬಗ್ಗೆ ಕೆಲ ಆದರ್ಶಗಳು ಹುಟ್ಟಿಕೊಂಡವು. ಹೀಗಿದ್ದರೂ ಅದೇ ಕಾಲಕ್ಕೆ ಪ್ರತಿಭಾವಂತರಾದ ಭಾರತೀಯರು, ಪ್ರತ್ಯಕ್ಷ ಮತ್ತು ಲೆಪ್ಪದ ವಿಷಯಗಳಲ್ಲಿ ದೇಶೀಯವಲ್ಲದ ಇತರರ ಅನುಭವಗಳನು ...ಕಂಸಿ ಅವನ್ನು ಅರಗಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ತಮ್ಮ ಕಲೆಯ ಮೂಲ ಸ್ವರೂಪಕ್ಕೆ ವ್ಯತ್ಯಯ ಬಾರದ ರೀತಿಯಲ್ಲಿ ಭಾರತೀಯರು ಸಾಮರಸ್ಯ ಸಾಧಿಸಿದ್ದಾರೆ. ...ಗ್ಗೆ, ಭಾರತೀಯ ಕಲೆಯು ಸಾಮಾನ್ಯ ...ಗ ಜೀವನ ಪಥದ ಒಂದು ಅಭಿವ್ಯಕ್ತ ರೂಪವಾಗಿದೆ. ಕಾಲಕಳೆದಂತೆ, ಕಲೆಯ ಪ್ರಕಾರಗಳು, ವಾಸ್ತುಶಿಲ್ಪ, ಶಿಲ್ಪಕಲೆ, ...ತ್ಯ, ಸಂಗೀತ ಮತ್ತು ಚಿತ್ರಕಲೆ ಇವೆಲ್ಲ. —ಭಾರತದ ಭವ್ಯ ಪರಂಪರೆಯನ್ನೇ ... ಬೆಳಗಿಸಿದವು. ಆದರೆ, ಈ ಪರಂಪರೆ ಪ್ರವಾಹಕ್ಕೆ ಶತಮಾನಗಳ ಹಿಂದೆ, ... ಆತಂಕಗಳು ಬಂದವು. ಚಿತ್ರಕಲೆ ವಿಷಯದಲ್ಲಿಯಂತೂ ಈ ಮಾತು ... ಸತ್ಯ.

ರಾಜಕೀಯ ಪ್ರಕ್ಷೋಭೆ

...ಹದಿನೆಂಟನೇ ಶತಮಾನದ ವೇಳೆಗೆ ಭಾರತವು ರಾಜಕೀಯವಾಗಿ ಒಂದು ಕುದಿವ ಕುಲುಮೆ. ಸಾರ್ವಭೌಮತ್ವ ... ಒಳಸಂಚುಗಳು ನಡೆದವು; ವಿರುದ್ಧ ಶಕ್ತಿಗಳ, ಶಸ್ತ್ರಾಸ್ತ್ರಗಳ ಪ್ರದರ್ಶನ ...ಯಿತು. ಅಧಃಪತನದ ಅಂಚಿಯಲ್ಲಿದ್ದ ಮೊಗಲ್ ಸಾಮ್ರಾಜ್ಯವು ಬಂಗಾಳ, ಬಿಹಾರ್, ಒರಿಸ್ಸಾಗಳ ದಿವಾನಗಿರಿಯ ಈಸ್ಟ್ ಇಂಡಿಯಾ ಕಂಪೆನಿಗೆ ಒಪ್ಪಿಸಿದ್ದವಾಯಿತು. ಬಂಗಾಲವು ಭೀಕರ ಕ್ಷಾಮಕ್ಕೆ ಬಲಿಯಾಯಿತು. ನವಾಬ ಮತ್ತು ಈಸ್ಟ್ ಇಂಡಿಯಾ ಕಂಪನಿಯ ದಬ್ಬಾಳಿಕೆಗೆ ಈಡಾಯಿತು. ...ಜಾಬಿನ ರಾಜಕೀಯದಲ್ಲಿಯ ...ತೆಯು ಸಿಖರು ತಲೆ ಎತ್ತದಂ...ಡಿತು. ಪೋರ್ಚುಗೀಸರು, ಡೇನರು ...ತಾದ ಆಕ್ರಮಣಕಾರರು, ಅಂತಿ...ಧಿಕಾರ ಪಡೆಯಲು ಸಮಯವನ್ನು ...ಹತ್ತಿದರು. ಇಂಗ್ಲೀಷರೇ ಪರಿಸ್ಥಿತಿ ...ಭಗಿಟ್ಟಿಸಿಕೊಂಡು ತಾವು ಸಾಮ್ರಾಜ್ಯಶಾಹಿಯನ್ನು ಭಾರತದ ...ಹೇರಿದರು.

...ಕೀಯ ಅಸ್ಥಿರವಾದಾಗ ಕಲೆ ಬೆಳಗು...ಕು? ರಾಜಕೀಯ ಅಭದ್ರತೆ ಮುಂ...ದಂತೆ ಭಾರತದ ಚಿತ್ರಕಲೆ ಅ...ಮುಖವಾಯಿತು; ಕಟ್ಟಕಡೆಗೆ ಕಸು...ರದ ಆತ್ಮಹೀನ ಅನುಕರಣೆಯಲ್ಲಿ ...ಪಸಾನ ಹೊಂದಿತು. ಕಲೆಯ ಇತಿ...ದಲ್ಲಿಯೇ ಅಭೂತಪೂರ್ವವಾದ ಭಿ...ತ್ತಿ ಮತ್ತು ಸೂಕ್ಷ್ಮ ಪ್ರತಿರೂಪದ ...ಲೆಯಲ್ಲಿಯ ಭಾರತೀಯ ಕೌಶಲ ...ತಾಂತ್ರಿಕ ಜ್ಞಾನಗಳು ಹೆಚ್ಚು ಕಡಿಮೆ ನಶಿಸಿಹೋದವು. ಗತಕಾಲದ ಕಲೆಯ ರೂಪಗಳ ವಿಕೃತ ಪ್ರತಿಗಳು ಮಾತ್ರ ಉಳಿದವು. ಹತ್ತೊಂಬತ್ತನೆ ಶತಮಾನದ ಪ್ರಾರಂಭಕ್ಕೆ ವಿಚಿತ್ರ ಬಗೆಯ ಚಿತ್ರಕಲೆ ಬೆಳೆದು ಬಂದಿತು. ಇದರಲ್ಲಿ ಗತಕಾಲದ ಕೌಶಲ್ಯ ಕಾಣಿಸಿಕೊಂಡರೂ ಉತ್ತಮ ಅಭಿರುಚಿ ಮಾಯವಾಗಿತ್ತು. ಸಮಕಾಲೀನ ಚಿತ್ರಕಲೆಯನ್ನು ವ್ಯಾಪಿಸಿದ ಕೀಳ್ಮಟ್ಟದ ಯುರೋಪಿನ ಚಿತ್ರಕಲಾಪರಂಪರೆಯ ಪ್ರಭಾವವು ಭಾರತದ ಚಿತ್ರಕಲೆಯ ಶೈಲಿಯ ಮೇಲೆ ಬೀಳತೊಡಗಿತು.

ಬ್ರಿಟಿಷರ ಆಳಿಕೆಯ ಪ್ರಾರಂಭದಲ್ಲಿ ಇನ್ನೂ ಕಲೆಯಲ್ಲಿ ಜನಪದ ಸಂಪ್ರದಾಯಗಳು ಕೆಲವೆಡೆಯಲ್ಲಿ ಸತ್ವಪೂರ್ಣವಾಗಿ ಬದುಕಿದ್ದವು. ಆದರೆ ಕ್ಷೀಣವಾಗುತ್ತ ನಡೆದ ಭಾರತೀಯ ಕಲೆಯು ವಿದೇಶಿಯರು ತಂದ ಫ್ಯಾಷನ್ನಿಗೆ ಬಲಿಯಾಯಿತು. ಯುರೋಪಿನ ತೈಲ ಚಿತ್ರಗಳು ಭಾರತೀಯ ಸೂಕ್ಷ್ಮ ಪ್ರತಿರೂಪದ ಉಜ್ವಲ ವರ್ಣ ಚಿತ್ರಗಳನ್ನು ಓಡಿಸಿ ಬಿಟ್ಟವು. ಯುರೋಪಿನಿಂದ ಅಗ್ಗವಾಗಿ ಬಂದ ಕಾರ್ಖಾನೆಯಲ್ಲಿ ನಿರ್ಮಿತವಾದ ಆಧುನಿಕ ವಸ್ತುಗಳು ಭಾರತದ ಸುಂದರ ಸೊಬಗಿನ ಕರಕುಶಲ ಕಲೆಯನ್ನು ಕೆಡಿಸಿ ಅದನ್ನು ನಿರ್ನಾಮ ಮಾಡಿದವು. ಹತ್ತೊಂಬತ್ತನೆಯ ಶತಮಾನದ ಉದ್ದಕ್ಕೂ ಕಲೆಯ ಅಧಃಪತನ ಸತತವಾಗಿ ನಡೆದೇ ಇತ್ತು. ಈ ಶತಮಾನದ ಅಂತ್ಯಕ್ಕೆ ಪರಂಪರಾಗತ ಭಾರತೀಯ ಚಿತ್ರದ ಕಲೆಯು ಕಮರಿ ಕೊನೆಯುಸಿರನ್ನೆಳೆಯಿತು.

ಪೌರ್ವಾತ್ಯ ಮತ್ತು ಪಾಶ್ಚಾತ್ಯ ದೇಶಗಳ ಮಧ್ಯದಲ್ಲಿಯ ಸಾಂಸ್ಕೃತಿಕ ತಾಕಲಾಟದ ಫಲವಾಗಿ ಶೂನ್ಯ ವಾತಾವರಣವು ತಲೆದೋರಿತು, ಯುರೋಪಿನ ವಸಾಹತು ಶಾಹೀ ಕಲೆಯು ಭಾರತದಲ್ಲಿ ಬೇರೂರ ತೊಡಗಿತು. ಭಾರತದಲ್ಲಿ ಅಸಂಖ್ಯಾತ ಭಾರತೀಯರೊಂದಿಗೆ ವಾಸಿಸಬೇಕಾದ ಯುರೋಪಿಯನ್ನರು ಇಲ್ಲಿನ ಜನತೆಯ ರೂಢಿ ಸಂಪ್ರದಾಯಗಳನ್ನು ಕೃತಕವಾಗಿಯಾದರೂ ಅನುಸರಿಸಬೇಕಾಯಿತು. ಆ ಯುರೋಪಿಯನ್ನರು ಸ್ವಲ್ಪ ಮಟ್ಟಿಗೆ ಉಡುಗೆ ತೊಡಿಗೆ, ಊಟ, ರೂಢಿಗಳು, ಮದುವೆ ಮುಂತಾದ ವಿಷಯಗಳಲ್ಲಿ ಭಾರತೀಯ ಜೀವನ ಕ್ರಮವನ್ನು, ಅನುಸರಿಸಿದರು. ಈ ಕೃತಕ ಸಾಮರಸ್ಯದ ಫಲವಾಗಿ ಭಾರತದ ಕಲೆ, ವಾಸ್ತುಶಿಲ್ಪ, ಮತ್ತು ಮನೆಯ ಅಲಂಕಾರಗಳ ವಿಷಯದಲ್ಲಿ ವಿಚಿತ್ರ ಮಿಶ್ರ ತಳಿಯ ಅಭಿರುಚಿ ಹೊರಸೂಸಿತು.

ಹತ್ತೊಂಬತ್ತನೇ ಶತಮಾನದ ಯುರೋಪಿನ ಕಲೆ, ವಾಸ್ತುಶಿಲ್ಪಗಳ ಶೈಲಿಯು ಭಾರತದ ದಿಗಂತವನ್ನು ಪ್ರವೇಶಿಸಿದವು. ಸಮಾಜದ ಸ್ಥಿತಿವಂತರು ವಿಕ್ಟೋರಿಯಾ ಕಾಲದ ಜೀವನ ಮೌಲ್ಯಗಳ ಪ್ರಭಾವಕ್ಕೆ ಈಡಾದರು. ಅನೇಕ ಮಹಲಿನ ಮನೆಗಳನ್ನು ಹಾಲುಗಲ್ಲಿನಲ್ಲಿ ಕಡೆದ ಕುರೂಪಿ ಶಿಲ್ಪವಿನ್ಯಾಸಗಳು ಅಲಂಕರಿಸಿದವು, ಬೇಟೆನಾಯಿಗಳ ಗುಡ್ಡದೊರೆಗಳ ಅರೆನಗ್ನ ಸ್ತ್ರೀಯರ ತೀರ ಕೀಳ್ಮಟ್ಟದ ಅಭಿರುಚಿಯ ಯುರೋಪಿನ ಚಿತ್ರಗಳು ಮಹಲುಗಳ ಗೋಡೆಯನ್ನೇರಿದವು.

ಬ್ರಿಟಿಷ್ ಕಲಾ ಶಾಲೆಗಳು

ತನ್ನ ಆಧಿಕಾರದ ಕಾಲದಲ್ಲಿ ಬ್ರಿಟಿಷರು ಪ್ರಾಂತಗಳ ರಾಜಧಾನಿಗಳಲ್ಲಿ ಕಲಾಶಾಲೆಗಳನ್ನು ಪ್ರಾರಂಭಿಸಿ, ವಿಕ್ಟೋರಿಯನ್ ಕಾಲದ ಅರ್ಥಹೀನ ಚಿತ್ರಕಲೆಯ ಶೈಲಿಯನ್ನು ಪ್ರೋತ್ಸಾಹಿಸಿದರು. ರೈಲ್ವೆ ಮತ್ತು ಸರ್ವೇ ಶಾಖೆಗಳಿಗೆ ಬೇಕಾಗುವ ಡ್ರಾಫ್ಟ್ಸ್‌ಮನ್ ಮತ್ತು ಪೇಂಟರು ನಿರ್ಮಿಸುವದೇ ಇಂತಹ ಶಾಲೆಗಳ ಪರಮೋದ್ದೇಶವಾಗಿತ್ತು.

ಹೀಗಿದ್ದರೂ ಕೆಲವೇ ಅಭಿಜ್ಞ ಭಾರತೀಯರು ಯುರೋಪಿನ ಚಿತ್ರಕಲೆಯಲ್ಲಿಯ ಆಗಿನ ಕಾಲದ ಶೈಲಿಗಳನ್ನು ಅಳವಡಿಸಿಕೊಂಡರು: ತೈಲ ಮತ್ತು ಜಲವರ್ಣದ ತಾಂತ್ರಿಕ ಪದ್ಧತಿಯಲ್ಲಿಯೂ ಪರಿಣತಿಗಳಿಸಿದರು. ಪೌರಾಣಿಕ ವಸ್ತು ವ್ಯಕ್ತಿಗಳ ಚಿತ್ರಕಲೆಯಿಂದ ತಿರುವಾಂಕೂರಿನ ರಾಜಾ ರವಿವರ್ಮನು ಈ ಕಾಲದಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದನು. ಜಮೀನ್ದಾರರು, ಶ್ರೀಮಂತ ವ್ಯಾಪಾರಸ್ಥರು ಮತ್ತು ಕೆಲ ಬ್ರಿಟಿಷ್ ಅಧಿಕಾರಿಗಳು ಆಗಿನ ಕಾಲದಲ್ಲಿ ಜನಪ್ರಿಯವಾದ ಸಾಮಾನ್ಯ ಜೀವನದ ಬಗೆಗಿನ ಚಿತ್ರಗಳಿಗೆ ಪ್ರೋತ್ಸಾಹಕವಿತ್ತರು. ಇಲ್ಲಿ ಕೇವಲ ಕೆಲವೇ ಉದಾರವಾದೀ ಬ್ರಿಟಿಷರ ಬಗ್ಗೆ ಉಲ್ಲೇಖಿಸುವದು ಅಗತ್ಯವಿದೆ. ಈ ಉದಾರವಾದಿಗಳು ಭಾರತಕ್ಕೆ ಬಂದು, [illegible] ಭಾರತದ ಕಲೆಯ ಸೌಂದರ್ಯದ ಕಲ್ಪನೆಯನ್ನು ಮೆಚ್ಚಿಕೊಂಡರು ಮತ್ತು ಅದು ನಶಿಸಿ ಕಣ್ಮರೆಯಾಗುವುದನ್ನು ತಪ್ಪಿಸಿದರು. ಅವರುಗಳಲ್ಲಿ ಕನಿಂಗಹಾಂ, ಫರ್ಗೂಸನ್, ಕಾಜಿನ್ಸ್ ಹೇವೆಲ್ ಮತ್ತು ಪರ್ಸಿ ಬ್ರಾಟನ್ ಇವರು ಮುಖ್ಯರಾಗಿದ್ದಾರೆ.

ರಾಷ್ಟ್ರೀಯ ಶೈಲಿಯ ಉದಯ

ಹತ್ತೊಂಬತ್ತನೆ ಶತಮಾನದ ಕೊನೆಕೊನೆಗೆ ಚಿತ್ರಕಲೆಯ ಕೃತಕ ಪದ್ಧತಿ ನೀರಸತನದ ವಿರುದ್ಧ ಪ್ರತಿಕ್ರಿಯೆಯು ಸ್ಪಷ್ಟವ್ಯಕ್ತವಾಯಿತು. ನೈಜ ಭಾರತೀಯ ಚಿತ್ರಕಲೆಯ ಉದಯಕ್ಕೆ ಸುಮುಹೂರ್ತವೂ ಪ್ರಾಪ್ತವಾಯಿತು.

ಹೊಸ ಕಲಾವಿದರು ಸ್ಫೂರ್ತಿಯ ಕಲೆಗಾಗಿ ಗತಕಾಲದಿಂದ ಬಂದ ವೈಭವದ ಬಳುವಳಿಯತ್ತ ದೃಷ್ಟಿ ತಿರುಗಿಸಿದರು. ಹಾವೆಲ್ಲರ ಸಹೋದ್ಯೋಗಿಯಾದ ಶ್ರೀ ಅಬನೀಂದ್ರನಾಥರು ಚಿತ್ರಕಲೆಯಲ್ಲಿ ಒಂದು ರಾಷ್ಟ್ರೀಯ ಕಲಾ ಶೈಲಿಯನ್ನು ಪುನರಪಿ ಮೂಡಿಸಲು ಮನಸಾ ಪ್ರಯತ್ನಿಸಿದರು. ಅಬನೀಂದ್ರನಾಥ ಮತ್ತು ಅವರ ಶಿಷ್ಯರು ಭಾರತೀಯ ಸೂಕ್ಷ್ಮ ಪ್ರತಿರೂಪದ ಚಿತ್ರಕಲೆಯಲ್ಲಿ, ಭಿತ್ತಿಪತ್ರಗಳಲ್ಲಿ ಸುರುಳಿಯಾಕಾರದ ಚಿತ್ರಗಳಲ್ಲಿಯ ತಾಂತ್ರಿಕ ಕಲೆಯಲ್ಲಿ ಹೊಸ ಪ್ರಯೋಗಗಳನ್ನು ಸತತವಾಗಿ ಕೈಗೊಂಡರು. ಅದಲ್ಲದೆ ಪರ್ಷಿಯನ್ ಜಪಾನ್

(ಹತ್ತನೇ ಪುಟ ನೋಡಿರಿ)

ಉಳಿತಾಯದ ಗಾನ ನುಡಿವ ವರ್ಷಕಾಲ
ದುಡಿಮೆಯ ಫಲ ಚಿಗುರುವ ಪರ್ವಕಾಲ

ಮಳೆಗಾಗಿ ಬಾಯಿಬಿಡುವ ಹೊಲಗದ್ದೆಗಳು ಮಳೆನೀರನ್ನು ತಮ್ಮಲ್ಲಿ ತುಂಬಿಸಿ, ಮಣ್ಣಿನ ಮಕ್ಕಳ ಶ್ರಮದಿಂದ, ಹಸುರನ್ನು ಮೈಗೂಡಿಸಿ, ಅನ್ನವನ್ನು ಸಿದ್ಧಗೊಳಿಸುವ ಕಾಲ — ವರ್ಷಕಾಲ.

ದುಡಿಮೆಯಿಂದ ಗಳಿಕೆ ಸಾಧ್ಯ. ಗಳಿಸಿದುದರಲ್ಲಿ ಅವಶ್ಯಕ್ಕೆ ಉಪಯೋಗಿಸಿ ಮಿಕ್ಕಿದ್ದನ್ನು ಕೂಡಿಟ್ಟಲ್ಲಿ ಮಾತ್ರ ಮಳೆಗಾಲವನ್ನು ಸುಗಮವಾಗಿ ಸಾಗಿಸಬಹುದು.

ಗಳಿಕೆಯಲ್ಲಿ ಉಳಿಸಿದುದನ್ನು ಶೇಖರಿಸಿಡಲು ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಅನುಕೂಲತೆಗೆ ಅನುಗುಣವಾದ ಉಳಿತಾಯ ಯೋಜನೆಗಳಿವೆ: ಪಿಗ್ಮಿ, ಸೇವಿಂಗ್ಸ್ ಬೇಂಕ್, ಕ್ಯುಮುಲೇಟಿವ್ ಡಿಪಾಸಿಟ್, ಫಿಕ್ಸೆಡ್ ಡಿಪಾಸಿಟ್........... ನಮ್ಮಲ್ಲಿ ಒಂದು ಉಳಿತಾಯ ಖಾತೆಯನ್ನು ತೆರೆದು ಕ್ರಮವಾಗಿ ನಿಮ್ಮ ಹಣವನ್ನು ಅದರಲ್ಲಿ ಕೂಡಿಡುತ್ತಾ ಬನ್ನಿರಿ— ಮತ್ತೆ ವರ್ಷಕಾಲ ಸದಾ ನಿಮ್ಮ ಪಾಲಿಗೆ ಪರ್ವಕಾಲವಾಗುವುದು.

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

• • • • ಕವಲು

ಕೇಂದ್ರದ ಮನವು

ಕನ್ನಡಿಗರ ರಾಜ್ಯವ್ಯಾಪೀ ಸತ್ಯಾಗ್ರಹವು

ಬ್ಯಾಟರಿ ಶಕ್ತಿಯಿಂದ ಚಲಿಸಬಲ್ಲ, ವಿದ್ಯುತ್ ಮೋಟಾರು. ಓರ್ವ ಯಾತ್ರಿಕನು ಆರಾಮವಾಗಿ ವೇಗವಾಗಿ ಮಾರ್ಗದಲ್ಲಿ ಪ್ರಯಾಣಿಸಬಲ್ಲ ಈ ಬಗೆಯ ವಾಹನವೀಗ ಅಮೆರಿಕೆಯಲ್ಲಿ ವಿಪುಲವಾಗಿದೆ. ನಮ್ಮೂರಿಗೂ ಬೇಗನೇ ಬರಬಾರದೆ?

ಮಹಾರಾಷ್ಟ್ರ ಮೈಸೂರು ಗಡಿ ತಂಟೆಯ ಪರಿಹಾರಕ್ಕೆ ಏಕಸದಸ್ಯ ಆಯೋಗ ನೇಮಿಸಲು ಎ ಐ ಸಿ ಸಿಯ ಒಪ್ಪಿಗೆ—ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರ ಮೌನ— ವಿರೋಧಿಸಲಿಲ್ಲ, ಅಂದರೆ ಸಮ್ಮತಿಯ ಲಕ್ಷಣ!

ಸಾರ್ವತ್ರಿಕ ಚುನಾವಣೆಗೆ ಮೊದಲೇ ಈ ಆಯೋಗದ ನೇಮಕವಾಗದು— ಅವರ ನಿರೀಕ್ಷೆ. ಆದರೆ ಇದು ಸುಳ್ಳಾಗುವ ದಿನದ ನಿರೀಕ್ಷೆ ಈಗ ಮಾಡಬೇಕಾಗಿದೆ.

ಸೋನೆಗಾಂವದಲ್ಲಿ ಪೂರ್ವ ಏರ್ಪಾಡಿಲ್ಲದೆ ಪ್ರಧಾನಿಯನ್ನು ಆಜ ನಿಮಿಷ ಕಾಲ ಕಂಡು ಬಂದ ಮಹಾರಾಷ್ಟ್ರದ ಮುಖ್ಯಮಂತ್ರಿ ವಿ. ಪಿ. ನಾಯಕರು ಗಡಿ ಆಯೋಗದ ನೇಮಕದ ಬಗ್ಗೆ ಒಂದು ತಿಂಗಳು ಕಾಯೋಣ ಎಂಬ ಉದ್ಗಾರ ಹೊರಡಿಸಿದ್ದರು.

ಅದನ್ನನುಸರಿಸಿ ನವದೆಹಲಿಯಲ್ಲಿ ಪ್ರಧಾನಿ ಗಾಂಧಿ ಘೋಷಿಸಿದ್ದಾರೆ—ಆಯೋಗದ ನೇಮಕ ಶೀಘ್ರದಲ್ಲಿಯೇ ಆಗುವುದು ಎಂದು.

ಮರಾಠಿಗಳಿಗೆ ತೃಪ್ತಿಯನ್ನು ತಂದರೆ, ಕನ್ನಡಿಗರ ಮನಸ್ಸಿಗೆ ಬರೆಯಳೆಯಿತು.

ಎಂ ಪಿ ಸಿ ಸಿ ಸಭೆ ಸೇರಿತು—ಗಡಿ ಆಯೋಗರಚನೆ ಮತ್ತು ಕನ್ನಡಿಗರ ಸತ್ಯಾಗ್ರಹದಬಗ್ಗೆ ಪರಿಶೀಲಿಸಲು—ಇಂದಿರಾ ಹೇಳಿಕೆಯಿಂದ ನಿಜಲಿಂಗಪ್ಪನವರು ಕುಸಿದು ಬಿದ್ದರು. ತಮಗೆ, ತಮ್ಮ ರಾಜ್ಯದ ನ್ಯಾಯ ಬೇಡಿಕೆಗಳಿಗೆ ಕೇಂದ್ರದಲ್ಲಿ ಏನೇನೂ ಸ್ಥಾನವಿಲ್ಲವೆಂಬುದೀಗ ಅವರಿಗೆ ಮನವರಿಕೆಯಾಯಿತು ಸರಿಯಾಗಿ.

ಎ ಐ ಸಿ ಸಿ ಯ ಗೊತ್ತುವಳಿಯ ಪೂರ್ತಿ ಪಾಠ: 'ಮೈಸೂರು—ಮಹಾರಾಷ್ಟ್ರ ಗಡಿ ಸಂಬಂಧದಲ್ಲಿ ತಂಟೆ ಪರಿಹಾರಕ್ಕೆ ಏಕ ಸದಸ್ಯ ಆಯೋಗವನ್ನು ನೇಮಿಸುವ ಕುರಿತಾದ ಆಲೋಚನೆಯನ್ನು ಪ್ರತಿಭಟಿಸಲು ರಾಜ್ಯದ ಜನ, ಅದರಲ್ಲಿಯೂ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳ ಜನರು ಅತ್ಯಂತ ಶಿಸ್ತಿನಿಂದ ನಡೆಸಿದ ಹೋರಾಟವನ್ನು ಕಾರ್ಯಕಾರಿ ಸಮಿತಿಯು ಗಮನಿಸಿದೆ...."

—ಶಿಸ್ತಿನಿಂದ ನಡೆಸಿದ ಸತ್ಯಾಗ್ರಹವು ಕೇಂದ್ರ ಸರಕಾರದ ಗಮನವನ್ನು ಸೆಳೆದ ಉದಾಹರಣೆ ಪ್ರಜಾಸತ್ತಾತ್ಮಕ ಭಾರತದಲ್ಲಿ ಇದುವರೆಗೂ ಇಲ್ಲ. ಬರಿಯ ರಾಜ್ಯ ಗಮನಿಸಿದರೇನು, ಬಿಟ್ಟರೇನು?

"ಸದರಿ ಗಡಿ ವಿವಾದದಲ್ಲಿ ಕೇವಲ ಸಣ್ಣ ಪುಟ್ಟ ಹೊಂದಾಣಿಕೆಗಳನ್ನು ಮಾತ್ರ ಪರಿಶೀಲಿಸುವುದನ್ನು ಬಿಟ್ಟು ಈಗಾಗಲೇ ತೀರ್ಮಾನವಾಗಿರುವ ವಿಷಯಗಳ ಬಗ್ಗೆ ಪುನಃ ಪ್ರಸ್ತಾಪ ಮಾಡುವ ಉದ್ದೇಶದಿಂದ ಆಯೋಗ ರಚಿಸುವುದನ್ನು ರಾಜ್ಯದ ಜನರು ವಿರೋಧಿಸುವುದು ಸ್ವಾಭಾವಿಕವಿದೆ...'

—ಪ್ರಜಾಪ್ರಭುತ್ವದಲ್ಲಿ ಅಂತಿಮ ತೀರ್ಮಾನವೆಂಬುದೇ ಇಲ್ಲವೆಂದು ನೆಹರೂ ಪಾಠ ಹೇಳುತಿದ್ದರು. ಎಲ್ಲವೂ, ಎಲ್ಲರೂ ಟೆಂಪರರಿ. ಮತ್ತವರು ಮಾಡಿದ ತೀರ್ಮಾನ ಮಾತ್ರ ಪರ್ಮನೆಂಟಾಗುವುದೆ? ತಂದೆ ನೀಡಿದ ಉಪದೇಶ ಮಗಳ ಮನಸ್ಸಿನಲ್ಲಿ ಅಚ್ಚಾಗಿ ನಿಂತಿರದಿಲ್ಲ.

'ಇದರಿಂದ ಜನರ ಭಾವನೆಗಳು ಉದ್ರೇಕಗೊಳ್ಳುವುದಲ್ಲದೆ ಮುಂದಿನ ವರ್ಷ ಫೆಬ್ರವರಿ ತಿಂಗಳಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಗಳು ಸುಗಮವಾಗಿ ನಡೆಯುವುದಕ್ಕೆ ತೊಂದರೆಯಾಗುವಂತಹ ಪರಿಸ್ಥಿತಿ, ವಾತಾವರಣ ಉಂಟಾಗುವುದು....'

—ರಾಜ್ಯದ ಹಿತ, ಜನತೆಯ ಕಳವಳಕ್ಕಿಂತಲೂ ಎಂಪಿಸಿಸಿಗೆ ಮುಂದಿನ ಚುನಾವಣೆಯನ್ನು ಗೆಲ್ಲುವ ಚಿಂತೆ ಹೆಚ್ಚಾದಂತಿದೆ. ಅಂದರೆ, ಗಡಿ ಆಯೋಗ ನೇಮಿಸಬಾರದು ಎನ್ನುವುದು ಜನಹಿತದಿಂದಲ್ಲ, ಚುನಾವಣೆಯ ದೃಷ್ಟಿಯಿಂದ! ಇದು ರಾಜಕೀಯ ಸ್ವಾರ್ಥವಲ್ಲವೆ?

'ಈಗಾಗಲೇ ಆಯೋಗದ ವಿರುದ್ಧ ರಾಜ್ಯಾದ್ಯಂತ ಕಂಡು ಬರುತ್ತಿರುವ ಹೋರಾಟ ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ...."

ಕಳೆದ ಫೆಬ್ರವರಿ ತಿಂಗಳ ಮಧ್ಯಾವಧಿಯಲ್ಲಿ ಸಿಂಹಳದಲ್ಲಿ ಭಾರತದ ಹೈಕಮಿಶನರರಾಗಿರುವ ಶ್ರೀ ಭೀಮಸೇನ ಸಾಚಾರರಿಂದ ಸಿಂಹಳದಲ್ಲಿ ಪಾಕಿಸ್ತಾನದ ಹೈಕಮಿಶನರಾಗಿರುವ ಶ್ರೀ ಎನ್‌ವರ್ ಮುರಾದರು ಕೊಲಂಬೋ ಯೋಜನಾ ಮಂಡಳದ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದರು. ಶ್ರೀ ಮುರಾದರ ಹೆಸರನ್ನು ಬರ್ಮಾವು ಸೂಚಿಸಿತು, ಇಂಡೋನೇಶ್ಯಾವು ಅನುಮೋದಿಸಿತು. ತನ್ನ ಪದವಿಯ ಅಧಿಕಾರವನ್ನು ಸ್ವೀಕರಿಸುತ್ತ ಶ್ರೀ ಮುರಾದರು ಸಾಚಾರರ ಅಮೂಲ್ಯ ಮಾರ್ಗದರ್ಶನವನ್ನು ಪ್ರಶಂಸಿಸಿ ಅವರ ಸಾಮರ್ಥ್ಯ, ಪರಿಪಕ್ವ ಬುದ್ಧಿ, ಸಾರ್ವಜನಿಕ ಸೇವಾಸಕ್ತಿಗಳನ್ನು ಉಲ್ಲೇಖಿಸಿದರು. ಮೇಲಿನ ಚಿತ್ರದಲ್ಲಿ ಮುಂದುಗಡೆ ಎಡದಿಂದ ಮೂರನೆಯವರು ಮುರಾದರು.

ಕೊಲಂಬೋ ಯೋಜನೆಯಲ್ಲಿ ಅಂತರ್ಗತವಾ
ನೆರವು ನೀಡುತ್ತಿವೆ. ಆರ್ಥಿಕ ಸಹಾಯ ಮಾತ್ರವಲ್ಲದೆ
ಯುತ್ತದೆ. ಈ ಯೋಜನೆಯಂತೆ ಸಿಂಹಳವು ಹನ್ನೆರಡು
ಕಳಿಸಿತ್ತು. ಇವರಲ್ಲಿ ಆರು ವಿದ್ಯಾರ್ಥಿಗಳು ಇರ್ವರು
ತ್ತಿರುವುದನ್ನು ಇಲ್ಲಿ ಕಾಣಬಹುದು. ನ್ಯೂಜಿಲೇಂಡಿಗೆ

ಪು ದೀಪ • • • •

ಯ ಅಂತಿಮ ಪ್ರಯತ್ನ

...ಗಬೇಕು, ತ್ರಿವಿಕ್ರಮಾವತಾರ ತಾಳಬೇಕು.

—ನಿಜ, ಜನತೆ ಉದ್ರಿಕ್ತವಾಗಿದೆ, ನ್ಯಾಯಕ್ಕಾಗಿ ಅಂತಪರ್ಯಂತ ನ್ಯಾಯಬದ್ಧವಾಗಿ ಹೋರಾಡುವ ದೃಢ ಸಂಕಲ್ಪ ಮಾಡಿದೆ.

'ಮಹಾರಾಷ್ಟ್ರೀಯರು ಕೇಂದ್ರ ಸರಕಾರದ ಮೇಲೆ ಕುತಂತ್ರದಿಂದ ಒತ್ತಾಯ ತರುತ್ತಿರುವುದನ್ನು ಈ ಸಭೆ ವಿರೋಧಿಸುವುದಲ್ಲದೆ ಈಗಾಗಲೇ ತೀರ್ಮಾನವಾಗಿರುವ ವಿಷಯಗಳನ್ನು ಪುನ. ಪರಿಶೀಲಿಸಲು ಗಡಿ ಆಯೋಗಕ್ಕೆ ಮೈಸೂರಿನ ಜನರು ಕಿಂಡಿತ ಅವಕಾಶ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳ ಬಯಸುತ್ತದೆ....'

—ಹೇಳಿರಿ, ನಮ್ಮದು ಪಾರ್ಲಿಮೆಂಟರಿ ಪಾಲಿಸಿ. ಆದರೆ, ಮಹಾರಾಷ್ಟ್ರೀಯರು ಕುತಂತ್ರದಿಂದ ಒತ್ತಾಯ ತರುತ್ತಿದ್ದಾರೆಂಬ ಮಾತಿನಲ್ಲಿ ಹುರುಳಿಲ್ಲ, ತಿರುಳಿಲ್ಲ. ಮೊಸರು ಕುಡಿದು ಆಡಿನ ಮುಖಕ್ಕೆ ಕೈ ಒರಸುವ ಸಾಹಸ ಮಾಡಬೇಡಿ.

'ಮತ್ತು ಕರ್ನಾಟಕಕ್ಕೆ ನ್ಯಾಯವಾಗಿ ಸೇರಬೇಕಾದ ಯಾವ ಪ್ರದೇಶವನ್ನೂ ಅದನ್ನು ಯಾರೇ ಕೇಳಲಿ, ಎಷ್ಟೇ ಜೋರಾಗಿ ಕೇಳಲಿ ಬಿಟ್ಟು ಕೊಡುವುದಿಲ್ಲವೆಂದು ಈ ಸಮಿತಿ ಸ್ಪಷ್ಟ ಪಡಿಸುತ್ತದೆ...'

—ಕೋಳಿಯೊಡನೆ ಕೇಳಿ ಮಸಾಲೆ ಕಡೆಯುತ್ತಾರೆಯೆ?

'ಆದುದರಿಂದ ಪೂರ್ಣವಿಚಾರಮಾಡದೆ ಅವಸರದಿಂದ ಗಡಿ ಆಯೋಗ ರಚಿಸಬಾರದೆಂದೂ ಆಯೋಗವು ತೀರ್ಮಾನಿಸಬೇಕಾದ ವಿಷಯಗಳ ಬಗ್ಗೆ ಸಂಬಂಧಪಟ್ಟ ಸರಕಾರಗಳ ಸಮ್ಮತಿ ಪಡೆಯದೆ ತೀರ್ಮಾನ ಮಾಡಬಾರದೆಂದೂ ವಾದ ಗ್ರಸ್ತ ವಿಷಯಗಳ ಪರಿಶೀಲನೆಯನ್ನು ಸಾರ್ವತ್ರಿಕ ಚುನಾವಣೆಗಳು ಮುಗಿಯುವವರೆಗೆ ಮುಂದಕ್ಕೆ ಹಾಕಬೇಕೆಂದೂ ಸಮಿತಿಯು ಭಾರತ ಸರಕಾರವನ್ನು ಕೇಳಿಕೊಳ್ಳುತ್ತದೆ....'

—ನಾವು ಕೇಳಿದ್ದೇವೆ. ಇಲ್ಲ ಅವಸರವಿಲ್ಲ ಎರಡೂ ಸರಕಾರಗಳ ನಡುವೆ ಒಮ್ಮತಬಂದಿಲ್ಲ, ಬರುವ ಸಾಧ್ಯತೆಯೂ ಇಲ್ಲ. ನೀವು ಕರನ್ನು ಸದ್ಯ ತಡೆಹಿಡಿದರೆ, ನಿಮಗಿಂತ ಜೋರಾಗಿ ಮರಾಠಿಗರು ಬೊಂಬಿಯೇಳುತ್ತಾರೆ.

'ರಾಜ್ಯದ ಜನರ ತೀವ್ರವಾದ ಭಾವನೆಗಳನ್ನು ಕೇಂದ್ರ ಸರಕಾರ ಮತ್ತು ಕಾಂಗ್ರೆಸ್ ಹೈ ಕಮಾಂಡಿನ ಸದಸ್ಯರುಗಳಿಗೆ ತಿಳಿಸುವುದಕ್ಕಾಗಿ ಸರ್ವಶ್ರೀ ಮಹಮದ ಅಲಿ, ಜಿ. ವಿ. ಹಳ್ಳಿಕೇರಿ, ಕೋಳೂರು ಮಲ್ಲಪ್ಪ, ಎಚ್. ಕೆ. ವೀರಣ್ಣ ಗೌಡ, ರಾಮಕೃಷ್ಣ ಹೆಗ್ಗಡೆ ಮತ್ತು ಶ್ರೀಮತಿ ಯಶೋಧರಮ್ಮಾ ದಾಸಪ್ಪನವರನ್ನೊಳಗೊಂಡ ನಿಯೋಗವೊಂದನ್ನು ದಿಲ್ಲಿಗೆ ಕಳಿಸಬೇಕೆಂದು ಸಮಿತಿ ತೀರ್ಮಾನಿಸುತ್ತದೆ.'

—ಒಳ್ಳೆಯ ಕೆಲಸ. ರೇಲ್ವೆ ಹಳಿ ಹರಿಯುವುದು, ತಂತಿ ಕಂಬ ಉರುಳಿಸುವುದು, ಸರಕಾರಿ ಭವನಗಳಿಗೆ ಉರಿ ಹಚ್ಚುವುದು—ಇವನ್ನು ಮಾಡದೆ ನಿಯೋಗ ಕಳಿಸುವ ನಿರ್ಧಾರ ನಿಮ್ಮ ಗಾಂಧೀ ವಾದದಲ್ಲಿನ ವಿಶ್ವಾಸವನ್ನು ತೋರ್ಪಡಿಸುತ್ತದೆ. ನಿಮ್ಮ ನಿಯೋಗಕ್ಕೆ ನಮ್ಮೆರಡು ಕೈಯ ಸ್ವಾಗತ ಏನು ಮಾಡಬಹುದೋ ಅದನ್ನು ಮಾಡುತ್ತೇವೆಂದು ನಿಯೋಗ ಹೊರಡುವುದಕ್ಕೆ ಮೊದಲೇ ಭರವಸೆ ನೀಡುತ್ತೇವೆ.

ನಿಯೋಗದ ಓರ್ವ ಸದಸ್ಯರಾಗಲಿದ್ದ ಹಳ್ಳಿಕೇರಿ ಹೇಳಿದರು—'ಆ ನಿಯೋಗದೊಡನೆ ನಾನು ಹೋಗುವುದಿಲ್ಲ...."

ಏಕೆ?

ಸತ್ಯವಾದ ಕಾರಣ ಆ ರೀತಿ ನಿಯೋಗ ಒಯ್ಯುವುದರಿಂದ ಏನೂ ಪ್ರಯೋಜನವಿಲ್ಲ.

ಮತ್ತೇನು ಮಾಡಬೇಕು?

ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪ್ರಧಾನ ಮಂತ್ರಿಗಳಿಗೆ ನಮ್ಮ ತೀವ್ರಭಾವನೆ

(ಹದಿಮೂರನೇ ಪುಟ ನೋಡಿರಿ)

ಅಟರ್ನಿ ವಿಲ್ಲಿಯಂ ಬೀಸ್ಲಿ ಹರೀಸರ ಪತ್ನಿ ಪೆಟ್ರಿಸಿಯಾ ಹರೀಸರು ಮೂಲತಃ ನೀಗ್ರೋ. ಅಮೆರಿಕೆಯಲ್ಲಿ ನಾಗರಿಕ ಸಮಾನಾಧಿಕಾರದ ಶಾಸನ ಮಂಜೂರಾದಂದಿನಿಂದ ನಿಗ್ರೋಗಳಿಗೂ ಉನ್ನತ ಪದ ದೊರೆಯತೊಡಗಿದೆ. ಈಗ ಶ್ರೀಮತಿ ಹರೀಸರು ಲಕ್ಸೆಂಬರ್ಗಿನಲ್ಲಿ ಅಮೆರಿಕೆಯ ರಾಯಭಾರಿಯಾಗಿದ್ದಾರೆ. ಚಿತ್ರದಲ್ಲಿ ಆಕೆಯನ್ನೂ ಶ್ರೀ ಹರೀಸರನ್ನೂ ಕಾಣಬಹುದು.

...ಭಿವೃದ್ಧಿಗೆ ಯೋಜನೆಯ ಸಂಘಟಕ ರಾಷ್ಟ್ರಗಳು ಬಹುವಿಧದ ...ಕ, ಶಿಕ್ಷಣ ಸೌಲಭ್ಯಗಳೂ ಕೊಲಂಬೋ ರಾಷ್ಟ್ರಗಳಿಗೆ ದೊರೆ...ದಂತ ಚಿಕಿತ್ಸೆಯಲ್ಲಿ ಉನ್ನತ ಶಿಕ್ಷಣ ಪಡೆಯಲು ನ್ಯೂಜಿಲೇಂಡಿಗೆ ...ದ್ಯಾರ್ಥಿಗಳೊಂದಿಗೆ ಹಂಟರ್ ಹೌಸಿನ ಉಪವನದಲ್ಲಿ ಸುತ್ತಾಡು...ಲು ಬಂದ ಮೊತ್ತಮೊದಲಿನ ವಿದೇಶೀ ತಂಡವಿದು.



ಭಾರತದ ಆಧುನಿಕ ಚಿತ್ರಕಲೆ

(ಏಳನೇ ಪುಟದಿಂದ)

ಮತ್ತು ಬೇರೆ ಮುಂತಾದ ಪಾಶ್ಚಾತ್ಯ ದೇಶಗಳ ಚಿತ್ರಕಲೆಯ ಬಗೆಗೂ ಅಭ್ಯಾಸ ನಡೆಸಿದರು. ತಮ್ಮ ಚಿತ್ರಕಲೆಯ ವಿಷಯಗಳನ್ನಾರಿಸಲು ಅವರು ಭಾರತದ ಪುರಾಣ ಗ್ರಂಥಗಳನ್ನೂ, ಭಾರತ ರಾಮಾಯಣ ಮುಂತಾದ ಉದ್ಗ್ರಂಥಗಳನ್ನು ಮತ್ತು ಐತಿಹಾಸಿಕ ಸಂಗತಿಗಳ ರಸನಿಮಿಷಗಳನ್ನೂ ಬಳಸಿಕೊಂಡರು.

ಈ ನವೀನ ಕಲೆಯ ಬಗೆಗಿನ ಶ್ರದ್ಧೆಯು ದೇಶಾದ್ಯಂತ ಹಬ್ಬಿತು. ಕಲ್ಕತ್ತ ಮತ್ತು ಶಾಂತಿನಿಕೇತನಗಳ ಕೇಂದ್ರದ್ವಾರದಿಂದ ಬಂಗಾಳ ಚಿತ್ರಕಲೆಯೆಂಬ ಪದ್ಧತಿಯು ಭಾರತದ ಉಪಖಂಡದ ಕಲಾ ಶಾಲೆಗಳಲ್ಲೆಲ್ಲ ತುಂಬಾ ಪ್ರಭಾವ ಬೀರಿತು. ರಾಷ್ಟ್ರೀಯ ಪ್ರಜ್ಞೆಯಿಂದ ಪ್ರಬುದ್ಧಗೊಂಡ ಈ ಕಲಾವಿದರೆಲ್ಲ ಗತಕಾಲದ ಭಾರತೀಯ ಕಲೆಯ ಸರ್ವೋತ್ಕೃಷ್ಟ ಕೃತಿಗಳ ಅನುಕರಣೆಯನ್ನೂ ಮಾಡಿ ಅವುಗಳಿಗೆ ಹೊಸ ಜೀವಕಳೆ ತುಂಬಿದರು. ಭಾವನಾಪ್ರಧಾನ ಕಲಾ ಪುನರುಜ್ಜೀವನದ ಕಾಲ ಮುಗಿಯುವದೊಂದೇ ತಡ, ಬಂಗಾಲ ಚಿತ್ರಕಲಾ ಪದ್ಧತಿಯು ಆಧುನಿಕ ಸ್ಫೂರ್ತಿಯ ಸೆಳವಿಗೆ ಸಿಲುಕಿತು. ಇಂತು ಸಂಸ್ಕೃತಿಯ ವಿಷಯದಲ್ಲಿ ರಾಷ್ಟ್ರವು ಕಳೆದುಹೋದ ಗೌರವವನ್ನು ಮರಳಿ ಪಡೆಯುವ ಗುರಿ ಸಾಧಿಸಿದಂತಾಯಿತು.

ನವ ಯುಗಾರಂಭ

ಚಿತ್ರಕಲೆಯು ಒಂದು ಕಸುಬು ಮಾತ್ರವಲ್ಲ ಅದು ಮುಖ್ಯವಾದ ಕಲೆ ಎಂಬುದರ ಬಗ್ಗೆ ವಿಮರ್ಶಾತ್ಮಕ ದೃಷ್ಟಿಕೋನದಿಂದ ನೋಡುವ ಸಮಯ ಬಂದಿತು. ಬಂಗಾಳ ಪದ್ಧತಿಯು ಭಾವನಾಪರವಶತೆ ಶಾಂತವಾಗತೊಡಗಿತು. ಗತಕಾಲದ ಕಲೆಗೆ ಮಿತಿಮೀರಿದ ಅವಾಸ್ತವ ಮಹತ್ವಕೊಡುವುದು ಕಡಿಮೆಯಾಯಿತು. ಬುದ್ಧಿಮತ್ತೆಯು ಕೈ ಚಳಕ ಮೊದಲಿಟ್ಟಿತು. ನಮ್ಮ ಅನುಭವಗಳ, ತಿಳುವಳಿಕೆಗಳ ವಿಶ್ಲೇಷಣೆ ಪ್ರಾರಂಭವಾಯಿತು. ಭಾರತೀಯ ಚಿತ್ರಕಲೆಯು ನವಯುಗಾರಂಭದ ಹೊಸ್ತಿಲಿಗೆ ಕಾಲಿಟ್ಟಂತಾಯಿತು.

ಪ್ರಪ್ರಥಮ ಸಲ ಕಲಾತ್ಮಕ ಚಿತ್ರಕಲೆಯ ವಿಷಯ ನಮಗೆ ಕೇಳಬರುತ್ತದೆ. 'ಕಲಾತ್ಮಕ' ಶಬ್ದದ ಸ್ಪಷ್ಟವಾಗಿ ಯಾವ ಅರ್ಥದಲ್ಲಿ ಬಳಸಲಾಗಿದೆ ಎಂದು ಹೇಳಲು ಕಠಿಣ. ಆದರೂ ಈ ತೆರನ ಚಿತ್ರಕಲೆಗಳಲ್ಲಿ ವರ್ಣ ದ್ರವ್ಯಕ್ಕೆ ಅತೀವ ಪ್ರಾಮುಖ್ಯತೆಯಿದ್ದು, ಚಿತ್ರಗಳ ವಿಷಯವೇನೇ ಇದ್ದರೂ, ವರ್ಣ ಜೋಡಣೆಯೇ ಆಧುನಿಕ ಚಿತ್ರಕಲೆಯಲ್ಲಿ ಒಂದು ಮಹತ್ವದ ಘಟಕವಾಗಿದೆ. ವಿಷಯ ನಿರೂಪಣೆಯ ಉದ್ಬುದ್ಧ ಚಿತ್ರಕಲೆಗಳು ಜನರನ್ನು ರಂಜಿಸುವ ಕಾಲ ಸಂದುಹೋಯಿತು.

ಸ್ವಾತಂತ್ರ್ಯನಂತರದ ಕಾಲದಲ್ಲಿ...

ಸ್ವಾತಂತ್ರ್ಯನಂತರದ ಅವಧಿಯಲ್ಲಿ ಆಧುನಿಕ ಕಲೆ ಜನಜೀವಾಳದ ಮೇಲೆ ತನ್ನ ಪ್ರಭಾವವನ್ನು ಪರಿಣಾಮಕಾರಿಯಾಗಿ ಬೀರಿತು. ಪರದಾಸ್ಯ ಶೃಂಖಲೆಯಿಂದ ಮುಕ್ತಗೊಂಡ ದೇಶದಲ್ಲಿ ಕಲೆಯ ಸುಪ್ತಶಕ್ತಿಯು ಪುಟಿದೆದ್ದಿತು. ಪ್ರಬುದ್ಧ ಭಾರತದ ಮನವು ತನ್ನದರಲ್ಲಿಯೇ ರಮಿಸಲು ಬಯಸಲಿಲ್ಲ. ಅಂತಾರಾಷ್ಟ್ರೀಯ ಪ್ರಜ್ಞೆಯು ರಾಷ್ಟ್ರವನ್ನು ಮುಸುಕಿತು. ಭಾರತೀಯರು ವಿದೇಶ ಯಾತ್ರೆಗಳನ್ನು ಕೈಗೊಂಡರು. ಸಾಂಸ್ಕೃತಿಕ ವಿನಿಮಯಗಳು ನಡೆದವು.

ಸಾಂಸ್ಕೃತಿಕ ವಿನಿಮಯದ ದ್ವಿಮುಖ ಮಾರ್ಗ ಕ್ರಮಿಸಿದುದರ ಫಲವಾಗಿ ಚಿತ್ರಕಲೆಯ ಕ್ಷೇತ್ರದಲ್ಲಿಯ ಆಧುನಿಕ ಅಂತರರಾಷ್ಟ್ರೀಯ ಒಲವುಗಳತ್ತ ನಮ್ಮ ಕಲಾವಿದರು ಧಾವಿಸಿದರು. ಸಾಂಸ್ಕೃತಿಕ ಅಲಿಪ್ತತೆ ಏಕಾಕಿತನ ಅಳಿದವು. ಜೆಟ್ ಯುಗಕ್ಕೆ, ಅಂತರಿಕ್ಷ ಯಾನಕ್ಕೆ ಬೇಕಾದಂತಹ ಮನೋಭಾವವನ್ನು ಕಲಾವಿದರು ಪಡೆದರು. ನಮ್ಮ ಮುಂಖಂಡರು ಉಪದೇಶಿಸಿದ ಪ್ರಜಾಸತ್ತೆ, ಸಮಾಜವಾದ ಇವುಗಳಿಂದ ಪ್ರೇರಿತರಾದ ಕಲಾವಿದರು ಬೇಕಾದ ವಿಷಯಗಳನ್ನು ಚಿತ್ರಕ್ಕೆ ಅಳವಡಿಸಿಕೊಳ್ಳಲು ಪ್ರಯೋಗವನ್ನಾರಂಭಿಸಿದರು. ಕಲೆ ಪ್ರಗತಿಶೀಲವಾಯಿತು. ಆಧುನಿಕ ಭಾರತೀಯ ಚಿತ್ರಕಲೆಯು ಗತಕಾಲದ ಬಂಧನದಿಂದ ಪೂರ್ತಿ ಬಿಡುಗಡೆ ಹೊಂದಿತು. ಮತ್ತು ಬೇರೆ ಮಾರ್ಗ ಹಿಡಿಯಿತು. ನಮ್ಮ ಭೂಮಿಯಲ್ಲಿ ಎಂದೆಂದೂ ಕಾಣಿಸಿಕೊಳ್ಳದ ಹೊಸ ಅನುಭವವೇ ಭಾರತದ ಆಧುನಿಕ ಚಿತ್ರಕಲೆಯ ತಿರುಳಾಗಿದೆ.

ಆಧುನಿಕ ಚಿತ್ರ ಕಲೆ ಯಾವುದು? ಆಕೃತಿ, ವರ್ಣ ಮತ್ತು ರೂಪಗಳಿಗೆ ಸಂಬಂಧಿಸಿದುದನ್ನು ಶಬ್ದಗಳಲ್ಲಿ ತಿಳಿಸ ಹೇಳುವುದು ಸುಲಭ ಕಾರ್ಯವಲ್ಲ. ಪ್ರತ್ಯಕ್ಷಿಕ ಕಲೆಯಲ್ಲಿ ನೋಡುವುದೆಂದರೆ, ಕಲೆಯು ವುದೇ ಆಗಿದೆ, ಆದುದರಿಂದ ಕಲಾಕೃತಿಯನ್ನು ಕಣ್ಣು, ಬುದ್ಧಿ ಮತ್ತು ಹೃದಯಗಳಿಂದ ವೀಕ್ಷಿಸಬೇಕು. ನಮ್ಮ ಕಾಲದ ಪರಿಶೋಧಕರಂತೆ ವೈಜ್ಞಾನಿಕರಂತೆ, ಆಧುನಿಕ ಮಹಾನ್ ಕಲಾವಿದರು ಸಾಹಸೀ ಚಿತ್ರಕಲೆಯ ನೂತನ ಪ್ರಯೋಗದ ಆವಿಷ್ಕರ್ತರಾಗಿದ್ದಾರೆ. ಆಧುನಿಕ ಕಲೆ, ಆಧುನಿಕ ಜೀವನ ಜಟಿಲತೆಯನ್ನು ಚಿತ್ರಿಸುತ್ತಿದೆ. ಪಾಶ್ಚಾತ್ಯ ಜೀವನಕ್ಕೆ ಕ್ರಮಕ್ಕೆ ತುಲನೆ ಮಾಡಿದಾಗ ಆಧುನಿಕ ಜೀವನದ ಜಟಿಲತೆ ಎಂತಿದೆ, ಎಂಬ ಪ್ರಶ್ನೆ ಸಹಜ. ಪಾಶ್ಚಾತ್ಯರ ಜೀವನವು ಎರಡು ಭೀಕರ ವಿಶ್ವ ಸಮರಗಳನ್ನು ಎದುರಿಸಿದೆ; ನಾಗರಿಕತೆಯ ಬಗ್ಗೆ ತಮ್ಮದೇ ಆದ ಕೆಲ ಸಮಸ್ಯೆಗಳು ಅವರನ್ನು ಕಾಡಿವೆ. ಬಂಡವಳ ಶಾಹಿಯ ಪ್ರಗತಿ, ಕ್ರಾಂತಿಕಾರೀ ಕಮ್ಯುನಿಸಂ, ಅನಾಗರಿಕ ಫ್ಯಾಸಿಸಂ, ತಾಂತ್ರಿಕ ಅಭಿವೃದ್ಧಿ ಮತ್ತು ಔದ್ಯೋಗೀಕರಣದ ಪರಿಣಾಮಗಳು, ಮನಸ್ಸಿನ ಉಪಪ್ರಜ್ಞೆಯ ಬಗೆಗಿನ ಸಂಶೋಧನೆಗಳು ಒಂದೆ, ಎರಡೇ, ಒಟ್ಟಿನಲ್ಲಿ ಮೇಲಿನ ಅಂಶಗಳು ಪಾಶ್ಚಾತ್ಯರ ಜೀವನದ ಜಟಿಲತೆಯನ್ನು ಹೆಚ್ಚಿಸಿವೆ. ನಾವು ಭಾರತದಲ್ಲಿಂದು ಈಗತಾನೆ ಮಧ್ಯಯುಗ ಕಾಲೀನ ಪರಿಸ್ಥಿತಿಯಿಂದ ಮೇಲೆದ್ದು ಬರುತ್ತಿದ್ದೇವೆ. ಆದುದರಿಂದ ನಮ್ಮ ಮತ್ತು ಪಾಶ್ಚಾತ್ಯರ ಜೀವನ ಜಟಿಲತೆಗಳ ನಡುವೆ ಮಹದಂತರವಿದೆ.

ತೀವ್ರತೆಯ ಪ್ರಮಾಣದಲ್ಲಿ ಮಾತ್ರ ಈ ಅಂತರವು ವ್ಯಕ್ತಪಡುತ್ತದೆ. ಆಧುನಿಕ ಭಾರತದ ಚಿತ್ರಕಲಾ ನಿರ್ಮಾಪಕರು ಪಟ್ಟಣವಾಸಿಗಳಾಗಿದ್ದು, ಆಧುನಿಕ ಜೀವನದ ಸಂಕೀರ್ಣತೆಯಿಂದ ಮುಕ್ತರಾಗುವಂತಿಲ್ಲ. ಅದಲ್ಲದೇ, ಆಧುನಿಕ ಕಲೆಯು ವಿಶ್ವ ಬಾಂಧವ್ಯವನ್ನು ಕಲಾವಿದರು ಬೌದ್ಧಿಕವಾಗಿ ಒಪ್ಪಿಕೊಂಡಿದ್ದಾರೆ; ಆಧುನಿಕ ಮನುಷ್ಯನ ಅನುಭವದಲ್ಲಿ ಪಾಲುಗೊಂಡಿದ್ದಾರೆ.

ಸಾಂಪ್ರದಾಯಿಕ ಕುಂಚ ಬಣ್ಣಗಳ ಉಪಯೋಗವನ್ನು ಮಾತ್ರ ಇಂದಿನ ಚಿತ್ರಕಲೆ ಮಾಡಿಕೊಳ್ಳುವುದಿಲ್ಲ. ತಾಂತ್ರಿಕ ಆವಿಷ್ಕಾರದಿಂದಾಗಿ ಹೊಸ ಮಾಧ್ಯಮಗಳು ಹುಟ್ಟಿವೆ. ಆಧುನಿಕ ಕಲಾಗಾರನನ್ನು ಚಿತ್ರಕಲಾ ನಿಪುಣನೆಂದು ಕರೆಯುವುದು ತಪ್ಪಾದೀತು. ಅವನು ಸೃಷ್ಟ್ಯಾತ್ಮಕ ದೃಷ್ಟಿಯ ತಾಂತ್ರಿಕನಾಗಿದ್ದಾನೆ. ಚಿತ್ರಕಲಾ ಪ್ರವೀಣನಿಂದು ವಾಸ್ತುಶಿಲ್ಪದಲ್ಲಿ ಮನೆಯ ಸಲಕರಣೆಗಳಲ್ಲಿ, ಪ್ಲಾಸ್ಟಿಕ್ ಚರ್ಮದ ಸಾಮಾನುಗಳು, ಗಾಜಿನ ವಸ್ತುಗಳು ಮಣ್ಣಿನ ಒಡವೆಗಳು ಮತ್ತು ಸ್ಟೇನ್‌ಲೆಸ್ ಉಕ್ಕುಗಳನ್ನು ಉಪಯೋಗಿಸುತ್ತಾನೆ.

ಮತ್ತು ಇವೆಲ್ಲವುಗಳು ಪಾಶ್ಚಾತ್ಯ ಕಲಾವಿದರ ಅಳವಿನಲ್ಲಿ ದೊರಕುವಂತಹವೇ ಆಗಿವೆ. ಓಬೀರಾಯನ ಕಾಲದ ಚಿತ್ರಕಲೆಯ ಬದಲು ಕಲಾವಿದನಿಂದು ಇಂತಹ ಸಾಮಗ್ರಿಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಲು ಶಕ್ತನಾಗಿದ್ದಾನೆ.

ಭಾರತೀಯ ಕಲಾವಿದನಿಗೆ ಈ ಬಗೆಯ ಸಾಧನ ಸಾಮಗ್ರಿಗಳ ಗಾಢ ಪರಿಚಯವಿಲ್ಲ. ಆಧುನಿಕ ಕಲೆಯ ಅಂತರಾಳದ ತೀವ್ರತೆಯನ್ನು ವ್ಯಕ್ತಪಡಿಸಲು ಭಾರತೀಯ ಚಿತ್ರಕಲಾ ನಿರ್ಮಾಪಕನಿಗೆ ಸಾಂಪ್ರದಾಯಿಕ ಕಲಾ ಸಾಮಗ್ರಿಗಳು ಸಾಲವು ಎಂಬ ಮಾತು ತಿಳಿದದ್ದೆ. ಭಾರತೀಯ ಚಿತ್ರಕಲೆಯ ಸಾಮಾನ್ಯ ಕಲಾವಿದರ ತಮ್ಮ ರಚನೆಗೊಂಡು ಭಾಷೆಯನ್ನು ಕಲ್ಪಿಸಿಕೊಡುವುದಕ್ಕೆ ಅಂತಾರಾಷ್ಟ್ರೀಯ ಶಬ್ದಕೋಶದತ್ತ ನೋಡುತ್ತಿದ್ದಾರೆ. ಇದರಿಂದಾಗಿ ಆಧುನಿಕ ಭಾರತದ ಚಿತ್ರಕಲೆಯ ಮೌಲಿಕ ಗುಣವುಲುಪ್ತವಾಗುತ್ತಿದೆ. ಕೆಲ ಅಪವಾದಗಳನ್ನು ಬಿಟ್ಟರೆ, ಆವಿಷ್ಕಾರಗಳ ಸಂಶೋಧನೆಯ ಸ್ಥಾನವನ್ನು ಆಡಂಬರ ಕಬಳಿಸಿದೆ.

ಆಧುನಿಕಕಲೆಯ ಬಗೆಗಿನ ಭಾರತೀಯ ಪ್ರಜ್ಞೆಯ ದಿಗಂತವನ್ನು ಇಂದಿನ ಕಲಾವಿದರು ವಿಸ್ತರಿಸುತ್ತಿದ್ದಾರೆ. ಈ ಓಘದಲ್ಲಿ ಕೇಳಭಿರುಚಿಯ ಪ್ರತಿವಾದಕರೂ ತಲೆಯೆತ್ತಿದ್ದಾರೆ. ಕಲಾ ಪ್ರದರ್ಶನಕ್ಕೆ ಭೇಟಿ ಕೊಡುವ ಹಗಲು ಕನಸಿನಲ್ಲಿ ಲೋಲಾಡುವ ಯುವಕ ಯುವತಿಯರು 'ಆಹಾ ಕಲಾವಿದನು ಹೇಳಿದುದರಲ್ಲಿ ಔಚಿತ್ಯವಿದೆ' ಎಂಬ ಉದ್ಗಾರವನ್ನು ತೆಗೆಯುವರು!

ಆಧುನಿಕ ಭಾರತೀಯ ಚಿತ್ರಕಲೆಗೆ ತನ್ನದೇ ಆದ ಹಲ ಕೆಲವು ಸಮಸ್ಯೆಗಳಿವೆ. ಸೌಂದರ್ಯದ ಕಲ್ಪನೆಯ ವಿಷಯದಲ್ಲಿ ವಿದೇಶೀಯರ ಪ್ರಭಾವ ಜಾಲದಿಂದ ಮುಕ್ತಿ ಹೊಂದಿ ಸ್ವಂತ ಶೈಲಿಯೊಂದನ್ನು ನಿರ್ಮಿಸಬೇಕಾಗಿದೆ. ಆ ಮೇಲೆ ಪ್ರೋತ್ಸಾಹದ ಪ್ರಶ್ನೆ ಬರುತ್ತದೆ. ಸ್ವಸ್ಥಾನದಲ್ಲಿ ಪ್ರೋತ್ಸಾಹ ಕಡಿಮೆ ಸಿಗುತ್ತಿರುವ ಕಾರಣ ಹೊಸ ಕಲಾವಿದನು ಪರದೇಶದಲ್ಲಿ ತನ್ನ ಕಲೆಗೆ ಮಾನ ಮನ್ನಣೆಗಳನ್ನು ದೊರಕಿಸಲು ಯತ್ನಿಸುತ್ತಾನೆ. ವಿದೇಶಗಳಲ್ಲಿ ಕಲಾ ಪ್ರದರ್ಶನವೇರ್ಪಟ್ಟಾಗ, ನಮ್ಮ ಕಲಾವಿದರು ಸಾಕಷ್ಟು ಖ್ಯಾತಿಯನ್ನೂ, ಗೌರವವನ್ನೂ ಪಡೆದಿದ್ದಾರೆ. ಬಹುಶಃ ವಿದೇಶೀ ಅಭಿಮಾನಿಗಳ ಅಭಿರುಚಿಗೆ ತಕ್ಕಂತೆ ಕುಣಿವ ಕಲೆಯು ದೃಷ್ಟಿಯು ನಮ್ಮದೆಂತಾಯಿತೇನೋ! ಎಂದು ಅನಿಸುತ್ತಿದೆ

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗದ್ಯಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್

3 H.P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು

(½ H.P. to 30 H.P.) ಪಂಪು ಸೆಟ್ಟುಗಳು.......

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್

ಕಾರ್ಕಳ (ದ. ಕ.)

ಕೃತಿ ಪರಿಚಯ

ರ್ಶನಕ್ಕಾಗಿ ಪುಸ್ತಕಗಳನ್ನು ಕಳಿಸುವ ಪ್ರಕಾಶಕರು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ

ಸಂ. ಸ.

ನೆಯ ಬಯಕೆ:—ಲೇಖಕ: ಶ್ರೀ ರು, ಮುಲ್ಕಿ, ದ. ಕ. ಪ್ರಕಾಶನ: ೬ ಕೆ. ಲಕ್ಷ್ಮೀ, ಕೋಟೆಕೇರಿ, ದಕ್ಷಿಣ ಕನ್ನಡ. ಪುಟಗಳು: ಬೆಲೆ ರೂ. ೨—೦೦.

ತ್ತು ಕಥೆಗಳ ಸಂಗ್ರಹ 'ಕೊನೆಯ .' ಕಥೆಯೆಂಬ ಶಬ್ದಾರ್ಥವನ್ನು ತಗೊಳಿಸುದಾದರೆ, ಇವನ್ನು ಜೀ ತ್ರಗಳೆಂದು ಕರೆಯುವುದೇ ವಾಸಿ. ತ್ತೂರು ಎಂಬ ಕಾವ್ಯ ನಾಮದ ಹಿತ್ಯರಂಗದಲ್ಲೂ ಆಸಕ್ತಿಯಿಂದ ುತ್ತಿರುವ ಶ್ರೀ ಯಂ. ವೆಂಕಟರ ಭಟ್ಟರು ಸ್ವಯಂ ಜೀವನದಲ್ಲಿ ನ್ಯ ನೋವುಂಡವರು, ಪರರ ನ್ನು ಕಣ್ಣಾರೆ ಕಂಡು ಮಿಡಿದವ ಾಗಾಗಿ 'ಪ್ರತಿಯೊಂದಕ್ಕೂ ಪ್ರತ್ಯೇ ಹಿನ್ನೆಲೆ ಇದ್ದೇ ಇದೆ' ಎಂದು ತರು ಕಥೆಗೆ ಮೊದಲೇ ಸೂಚಿಸಿ ಲೆಗಳನ್ನೂ ತಿಳಿಸಿದ್ದಾರೆ. ಅವರ ನುಭವದ ಮೂಸೆಯಲ್ಲಿ ಹೊರ ಈ 'ಕೊನೆಯ ಬಯಕೆ'ಗೆ ಕಥಾ ನಕ್ಕೆ 'ಜೀವನ ಚಿತ್ರಗಳೆ'ಂಬ ಹೆಸ ತ್ತು ಒಪ್ಪುತ್ತದೆ.

ಕಾಣುವ ಹೆಚ್ಚಿನ ಬರಹಗಳಲ್ಲಿ ಸಹಜವಾದ ಪ್ರೇಮಕ್ಕೆ ಪುಟ . ಈ ಪ್ರೇಮ ಬರಿಯ ಲೈಂಗಿಕ ುಲ್ಲಿ ಪರ್ಯವಸಾನಗೊಂಡಿಲ್ಲ; ಬ ಜೀವನದ ಸುತ್ತ ಹರಡಿ ಅದನ್ನೇ ಸಿಕೊಂಡಿದೆ; ಸ್ವರ್ಗೀಯವೆನಿಸಿದೆ; ನಿಸಿದೆ. ಭಾರತೀಯ ಸಂಸ್ಕೃತಿಯ ಇಲ್ಲಿ ಸಮರ್ಪಕವಾಗಿ ಬಿದ್ದಿದೆ. ಚಿತ್ರಗಳು ಅತ್ಯಂತ ಉಪಾದೇ ೆ.

ದಲ 'ಕೊನೆಯ ಬಯಕೆ'ಯ ವಿ ಹಳೆಯದು. 'ಎರಡು ಮುಖ'ದ ಸನ್ಯಾಸಿಗಳು ಸಮಾಜದಲ್ಲಿ ತುಂ ಇದ್ದಾರೆ, ಊರಿದ್ದಲ್ಲಿ ಹೊಲಗೇರಿ ತೆ. 'ಅರಳುವ ಮೊದಲೇ'—ಯ ಲ ಭಾಗದ ವಸ್ತು ಹಳೆಯದು; ಕೊ ಭಾಗದ ವಸ್ತು ಕಲ್ಪನಾತೀತ(?) ಸತ್ಯವೆಂದು ಲೇಖಕರೇ ಹೇಳು ಕೊನೆಯ ಕಥೆ "ಇತ್ತಿಂದತ್ತ— ದಿತ್ತ" ಶ್ರೀ ಪಿತ್ತೂರರ ಸ್ವಾನುಭ ರ್ಗ ಅಕ್ಷರ ಬರುವರೆಲ್ಲರೂ ಲೇಖಕ ುವ ಈ ಕಾಲದಲ್ಲಿ ಬಂದುದೆಲ್ಲವ ಓದಿ ನೋಡುವ ವ್ಯವಧಾನ ಸಂಪಾ ಗೆಲ್ಲಿ? ಇದು ಲೇಖಕರಿಗೆ ಹೇಗೆ ತಿ ಬೇಕು?

ಮಿತ್ತೂರರ ಈ ಕೃತಿಯನ್ನು ಓ ಗ ಬೇಸರ ಬರುವುದಿಲ್ಲ. ಕಥೆಗಳ ತ್ರದ ಒರೆಗಲ್ಲಿನಲ್ಲಿ ಇವುಗಳ ಟ್ಟಿಗೆ ಇಳಿಯಬಹುದು; ಶ್ರೀ ಯು ಹೇಳಿದ್ದಾರೆ; ಕಾದಂಬರಿಯನ್ನು ಕ ಲ್ಲೇ ಮುಗಿಸಿದೆ,.......ತಕ್ಕಷ್ಟು ಈ ನನ್ನ ಎಲ್ಲಾ ಕಥೆಗಳಿಗೂ ತಿಸ್ಪ ಬಹುದು...' ಸಾಹಿತ್ಯದ ದೃಷ್ಟಿ ದ ಇವು ಉತ್ತಮವಿವೆ. ಶೈಲಿ ತಿಳಿ ಿದೆ; ಎಲ್ಲಿಯೂ ಸರಣಿ ಸೆಟೆದಂತೆ ಅನಿಸುವುದಿಲ್ಲ. ಶ್ರೀಯುತರ ಸುಪುತ್ರ ಶ್ಯಾಮಸುಂದರರು ನುಡಿದಂತೆ 'ಕತೆ ಚಂದ ಇದೆ. ಕೇಳಲು ಖುಷಿಯಾಗುತ್ತದೆ. ಇನ್ನೂ ಕೇಳಬೇಕೆಂತ ಆಶೆಯಾಗುತ್ತದೆ. ಹೇಳುವಿರಾ?' ಎಂದು ಕನ್ನಡಿಗರು ಕೇಳಿ ಯೇ ಕೇಳುತ್ತಾರೆ. ಇನ್ನೂ ಇಪ್ಪತ್ತು ಕಥೆ ಗಳನ್ನು ಬಗಲಲ್ಲಿಯೇ ಇಟ್ಟುಕೊಂಡ ಮಿತ್ತೂರುಕಂತೆ ಬಿಡಿಸದಿರುವರೆ?

ಸ್ವರ್ಗದ ಬಾಗಿಲಲ್ಲಿ ನರಕ:—ಲೇಖಕರು: ಶ್ರೀ ನಾ. ಡಿ. ಸೋಜ, ಸಾಗರ್. ಪ್ರಕಾಶನ: ಎ. ಎಂ. ಜಿ. ಸಾಹಿತ್ಯ ಪ್ರಕಾಶನ, ಕಲ್ಸಂಕ, ಉಡುಪಿ—೨. ಪುಟಗಳು: ೫೦. ಬೆಲೆ: ೫೦ ಪೈಸೆ.

ಶ್ರೀ ನಾ. ಡಿ. ಸೋಜರ ಪರಿಚಯ ಕನ್ನಡಿಗರಿಗೆಲ್ಲರಿಗೂ ಇದೆ; ಶ್ರೀಯುತರ ಕಥಾರೂಪದ ಐದು ಬರಹಗಳು ಇಲ್ಲಿ ಪ್ರಕಟವಾಗಿವೆ. ಈ ರಸ್ತೆ ಎಲ್ಲಿ ಹೋಗುತ್ತದೆ?' ಎಂಬ ದಾರಿಗನ ಪ್ರಶ್ನೆ ಅಸಮಂಜಸ, ತಾನೆಲ್ಲಿಗೆ ಹೋಗಬೇಕು ಎಂಬುದು ಮುಖ್ಯ. ಜೀವನದ ಗುರಿ ಯಾವುದೆಂದು ಎಷ್ಟು ಜನಗೊತ್ತು ಮಾಡಿಕೊಳ್ಳುತ್ತಾರೆ? ಸಿಕ್ಕ ದಾರಿಯಲ್ಲಿ ಬೀದಿ ನಾಯಿಯಂತೆ ಅಲೆಯುತ್ತಾರೆ, ಸೋತ ಮೇಲೆ ಸೇರಿದ ಸ್ಥಾನವೇ ತಮ್ಮ ಗುರಿ ಎಂದು ಕೊಳ್ಳುತ್ತಾರೆ— ಇದು ಹೀಗಾಗಬಾರದು ಎಂಬದಾರ್ಶನಿಕದೃಷ್ಟಿ ಈ ಬರಹದಲ್ಲಿ ಇಣುಕು ಹಾಕುತ್ತದೆ.

ಎರಡನೆಯದಾದ "ಅಕ್ಕಾ.." ಸಂಭಾಷಿತರಂತೆ ನಟಿಸುವ ಸಮಾಜ ಘಾತುಕರ ಚರ್ಯೆಯೊಡನೆ ಆಕಸ್ಮಿಕಯೂ ಅದೃಷ್ಟ ಬಲವನ್ನೂ ತೋರಿಸುತ್ತದೆ. ಜೀತದಾಳಿನ ಕರುಣ ಕ್ರಂದನ "ಕುರುಡುದಾರಿಯ ಕೊನೆಯಲ್ಲಿ"ವೆ. "ಸರ್ಗದ ಬಾಗಿಲಲ್ಲಿ ನರಕ"—ಸಮಾಜದ 'ನೀತಿ'ಯ ಚಿತ್ರ—ಸರೋಜಾ ವೇಶ್ಯಾವೃತ್ತಿಗಿಳಿದಳು, ಮುಂದೆ "ಹಣವಂತರು" ಸಾಹುಕಾರರು, ಇವರ ಮೇಲೆ ಸೇಡು ತೀರ್ಸ್ನೋ' ಛಲ ಬೇರೆ! 'ಈಸುಖ ನಿನಗೆ ಬೇಡಣ್ಣಾ' ಅನ್ನೊ ಮಾನವೀಯತೆ.....ನರಕದ ಬಾಗಿಲಲ್ಲೂ ಸ್ವರ್ಗ! ವ್ಯಭಿಚಾರಿಗಳು ಬದುಕ ಬಹುದಾಪ್ರೆ ವ್ಯಭಿಚಾರಕ್ಕೆ ಹುಟ್ಟಿದ ಮಕ್ಕಳು ಯಾಕೆ ಬದುಕಬಾರದು?' ಎಂದು ಸಮಾಜವನ್ನು ಕೇಳುತ್ತದೆ-'ಪಾಪ...'

ಹೀಗೆ ಇಲ್ಲಿನ ಕಥಾರೂಪಕಗಳು ಮನುಷ್ಯನ ಅಂತಸ್ಸತ್ವವನ್ನು ಒಂದಲ್ಲ ಒಂದು ಬಗೆಯಲ್ಲಿ ಕಾಣುತ್ತವೆ, ಪ್ರಶ್ನಿಸುತ್ತವೆ. ಉತ್ತರವನ್ನು ಕಂಡು ಕೊಳ್ಳಲು ಒಳಗಣ್ಣು ತೆರೆಯಬೇಕಾಗುತ್ತದೆ. ಶ್ರೀ ಡಿ. ಸೋಜರ ಶೈಲಿ ನವುರಾಗಿದೆ, ಸರಳವಾಗಿದೆ. ಸ್ವರ್ಗ—ನರಕಗಳೆರಡೂ ಒಂದೆಡೆಯೇ ಇವೆ, ಕಂಡು ಕೊಳ್ಳುವ ದೃಷ್ಟಿ ಎಲ್ಲರಲ್ಲೂ ಮೂಡಿದ್ದರೆ, ನರಕ ಹೇಳ ಹೆಸರಿಲ್ಲದೇ ಓಡಿ ಹೋಗುತಿತ್ತು!

ಈ ಕೃತಿಯನ್ನು ಪ್ರಕಟಿಸಿದ ಪ್ರಕಾಶನ ಸಂಸ್ಥೆಯವರು ಪ್ರತಿ ಎರಡು ತಿಂಗಳುಗಳಿಗೆ ೫೦ ಪೈಸೆಯ ಮುಖ ಬೆಲೆಯ ಸಾಹಿತ್ಯವನ್ನು ಕನ್ನಡಿಗರಿಗೆ ನೀಡುವ ನಿರ್ಧಾರ ಮಾಡಿದ್ದಾರೆ. ವಾರ್ಷಿಕ ಚಂದಾ ರೂ. ೩ಮಾತ್ರ. ಸಮಾಜ ಶಿಕ್ಷಣಕ್ಕೆ ಪೂರಕವಾದ ಸಾಹಿತ್ಯವನ್ನೇ ಒದಗಿಸುವ ದೀಕ್ಷೆ ತೊಟ್ಟಿದ್ದಾರೆ. ಸ್ವರ್ಗದ ಬಾಗಿಲಲ್ಲಿ ನರಕ....? ಈ ದಿಸೆಯ ಒಂದು ಪ್ರಯತ್ನ ಕನ್ನಡಿಗರು ಸಾಹಿತ್ಯ ಮಾಲೆಗೆ ಪ್ರೋತ್ಸಾಹ ನೀಡಬೇಕು—ತಮ್ಮ ಲಾಭಕ್ಕೆ, ಸಾಹಿತ್ಯ ಮಾಲೆಯ ಬದುಕಿ ಬಾಳುವುದಕ್ಕೆ.

ಯಕ್ಷಗಾನ ಛಂದಸ್ಸು:—ಲೇಖಕ ಮತ್ತು ಪ್ರಕಾಶಕ: ಶ್ರೀ ಕ. ಪು. ಸೀತಾರಾಮ ಕೆದಿಲಾಯ, ಪೋಸ್ಟು: ಶಿಶಿಲ. ಬೆಳ್ತಂಗಡಿ ತಾಲೂಕು. ಪುಟಗಳು: ೪೮. ಬೆಲೆ: ರೂ. ೧.

ಕನ್ನಡದಲ್ಲಿ ಯಕ್ಷಗಾನಗಳಿಗೆ ತಮ್ಮದೇ ಸ್ಥಾನವಿದೆ. ಯಕ್ಷಗಾನಕ್ಕೂ ಒಂದು ಛಂದಸ್ಸು ಇದೆ. ಇದು ಹಾಡುವ ಹಾಡಿನ ಮಟ್ಟು. ಯಕ್ಷಗಾನ ರಚನೆ ಮಾಡುವವರಿಗೆ ಈ ಪುಸ್ತಕ ಸಹಾಯಕವಾದರೂ ಆಗ ಬಹುದು. ಛಂದಸ್ಸು ಮೊದಲೇ, ಸಾಹಿತ್ಯ ಮೊದಲೇ ಎಂಬ ಪ್ರಶ್ನೆಗೆ ಸಾಹಿತ್ಯವೇ ಮೊದಲೆಂದು ಉತ್ತರಿಸಬೇಕು. ನಮ್ಮ ಕವಿಗಳ ಸಹಜ ರಾಗ—ಕಾವ್ಯಶಕ್ತಿಯೇ ಛಂದೋಬದ್ಧವಾಗಿ ಕಾವ್ಯ ರೂಪವನ್ನು ಪಡೆಯಿತೆನ್ನಬಹುದು. ಅವರ ಕಾವ್ಯ ಪರಂಪರೆಯಲ್ಲಿ ಕವಿ ಹೃದಯಗಳೂ ಛಂದೋಬದ್ಧ ಕಾವ್ಯವನ್ನು ರಚಿಸಿದರು—ಪರಂಪರೆ ಬೆಳೆಸಿದರು.

ಯಕ್ಷಗಾನದ ಛಂದಸ್ಸೂ ಹೀಗೆಯೇ ಇದ್ದಿರಬಹುದು. ಮೊದಲಲ್ಲಿ ಮಾನವ ಸಹಜ ರಾಗ ಪ್ರಧಾನ ಸಾಹಿತ್ಯ ಸೃಷ್ಟಿಯಾಯಿತು, ಮುಂದೆ ಅದರಲ್ಲೂ ಛಂದಸ್ಸು ಕ್ರಮಬದ್ಧವಾಗಿ ಬಂದಿರುವುದ ಗೋಚರವಾಯಿತು. ಈ ಗ್ರಂಥದಲ್ಲಿ, ಶ್ರೀ ಕೆದಿಲಾಯರು ಯಕ್ಷಗಾನ ಸಾಹಿತ್ಯದಲ್ಲಿನ ಪದ್ಯಗಳ ಛಂದಗಳನ್ನು ವಿವೇಚಿಸಿದ್ದಾರೆ. ಇವಕ್ಕೆ ಯಾವುದೇ ನಿರ್ದಿಷ್ಟ ಹೆಸರಿಲ್ಲನಿಜ; ಆವು ಅನುಸರಿಸಿ ತಾಳಗಳನ್ನು ಅನುಸರಿಸಿ ಮಾತ್ರಾಗಣಗಳು ಅಥವಾ ಅಂಶಿಗಣಗಳು ಕ್ರಮಬದ್ಧವಾಗಿಯೇ ಬರುತ್ತವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆರಂಭದಲ್ಲಿ ಕನ್ನಡದ ಇತರ ಸಾಹಿತ್ಯ ಪ್ರಕಾರಗಳಲ್ಲಿಯೂ ಇರುವ ಖ್ಯಾತಿವೆತ್ತ ಆರು ವೃತ್ತಗಳು, ಷಟ್ಪದಿ, ಕಂದ, ದ್ವಿಪದಿ, ಚೌಪದಿಗಳ ಲಕ್ಷಣವನ್ನೂ ಸಾಮಾನ್ಯ ಛಂದೋ ವಿಚಾರವನ್ನೂ ತಿಳಿಸಿದ್ದಾರೆ.

ಈ ಪುಸ್ತಕ ಆಕಾರದಲ್ಲಿ ಹಿರಿದಲ್ಲ; ಅಥವಾ ಹೊಸ ವಿಷಯವನ್ನು ಪ್ರತಿಪಾದಿಸುವಂತಹುದೂ ಅಲ್ಲ. ಯಕ್ಷಗಾನ ಕೃತಿಗಳಲ್ಲಿರುವ ಸಹಜ ಛಂದದ ಸೌಂದರ್ಯವನ್ನು ನಮ್ಮ ಮುಂದೆ ವಿಶಾಲವಾಗಿ ಹರಡಿಡುವ ಕೃತಿಯಿದು. ಇದನ್ನು ಸವಿಯುವುದೂ ಆನಂದ; ಸವಿದುದರ ಉಪಯೋಗ ಮಾಡಿಕೊಳ್ಳುವುದೂ ಆನಂದವೇ. ಯಕ್ಷಗಾನ ಸಾಹಿತ್ಯದ ಬಗ್ಗೆ ನಡೆಯುತ್ತಿರುವ, ನಡೆಯಬಹುದಾದ ಸಂಶೋಧನೆಗಳಿಗೆ ಈಪುಟ್ಟ ಕೃತಿಯೂ ತನ್ನ ಸಹಕಾರ ನೀಡಿದೆ; ಇದಕ್ಕಾಗಿ ಶ್ರೀ ಕೆದಿಲಾಯರು ನಿಜಕ್ಕೂ ಅಭಿನಂದನಾರ್ಹರು.

—ಗೋರಾ.

ದೌರ್ಬಲ್ಯವು ಸಬಲತೆಯಾಗಬೇಕು

(ಆರನೇ ಪುಟದಿಂದ)

ಇದು ಕೆಲವರಮಾತು. ಕೊಡುವವ ಕೊಡುತ್ತಾನೆ ಕೊಳ್ಳುವವ ನೋಡಿಕೊಳ್ಳಬೇಡವೆ?-ಇದು ಇನ್ನು ಕೆಲವರ ಅಂಬೋಣ. ಎರಡೂ ಸರಿ; ಎರಡೂ ತಪ್ಪು

ನಾವು ವಿದೇಶಿ ನೆರವು ಪಡೆಯುತಿದ್ದೇವೆ. ನಮ್ಮ ಸಂಪತ್ತು ಯೋಜನೆಗಳು ಕಾರ್ಯ ರೂಪಕ್ಕೆ ಬರುವಾಗ ಅದರ ಒಂದು ಪಾಲು ಹೋಗಿರಬೇಕು-ನಿಜ. ಆದರೆ, ನಾವು ಪ್ರಗತಿ ಸಾಧಿಸಿಲ್ಲವೆ? ನಮ್ಮ ಜೀವನಮಟ್ಟ ಏರಿಲ್ಲವೆ? ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಮುನ್ನಡೆದಿಲ್ಲವೆ? ಸಾರಿಗೆ—ಸಂಪರ್ಕ. ಶಿಕ್ಷಣ ಸೌಲಭ್ಯ, ಉದ್ಯಮರಂಗ, ಸಂರಕ್ಷಣಾಕ್ಷೇತ್ರ—ಹೀಗೆ ಒಂದಲ್ಲ, ಎಲ್ಲವುಗಳಲ್ಲಿಯೂ ನಾವು ಉನ್ನತರಾಗಿಲ್ಲವೆ? ಇದು ಪ್ರಗತಿಯ ದ್ಯೋತಕವೇ ಅಲ್ಲವೆ?

ಇದೇ ಮಾತನ್ನು ಹೆಮ್ಮೆಯಿಂದ ಹೇಳುತ್ತಾರೆ, ಭಾರತದಲ್ಲಿ ಅಮೆರಿಕೆಯ ರಾಯಭಾರಿ ಚೆಸ್ಟರ್ ಬೌಲ್ಸ್. ಭಾರತದ ಅರ್ಥವ್ಯವಸ್ಥೆ ಕುಸಿಯುತ್ತಿದೆ. ಎಂದು ವಿರೋಧ ಪಕ್ಷೀಯರು ದೇಶದೊಳಗಡೆ ಪ್ರಚಾರಕ್ಕೆ ತೊಡಗಿದ್ದಾರೆ, ಅವರನ್ನುತ್ತಾರೆ, ಅದು ಬಹಳ ಆಶಾದಾಯಕವಿದೆ ಎಂದು, ಸ್ವಾತಂತ್ರ್ಯಾನಂತರ ಭಾರತವು ಸಾಧಿಸಿದ ಪ್ರಗತಿ ಅದರ ಹಿಂದಿನ ಇನ್ನೂರು ವರ್ಷಗಳ ಪ್ರಗತಿಯನ್ನು ಮೀರುತ್ತದೆ ಎಂದು.

ಇದರಲ್ಲಿ ನೂರಕ್ಕೆ ನೂರರಷ್ಟು ಸತ್ಯಾಂಶವಿರಲಾರದಾದರೂ ಬಹ್ವಂಶ ಇದೆ ಇಂತಹ ಪ್ರಶಂಸೆ ನಮ್ಮನ್ನು ಪ್ರಗತಿ ಪಥ ಭ್ರಮಣ ಕಾರ್ಯದಲ್ಲಿ ಮತ್ತಷ್ಟು ಪ್ರೇರೇಪಿಸಬೇಕು; ಅಪಸ್ವರವನ್ನು ತಡೆಯಬೇಕು.

—ರಾಶಿ.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ

ಬೆಳೆದು ಬಾರದ—ವಿಮರ್ಶೆ

(ಐದನೇ ಪುಟದಿಂದ)

ಳು, ಪಾಂಡಿತ್ಯವಿಲ್ಲದವರು ಗ್ರಂಥಗಳನ್ನು ಬರೆದ ಹಾಗೆಯೇ, ಜ್ಞಾನ-ಅನುಭವಗಳ ಪರಿಚಯವಿಲ್ಲದವರೂ ವಿಮರ್ಶಕರಾದರು.

ವಿಮರ್ಶಕನಿಗೆ ಇಕ್ಕಟ್ಟು-ಜಟಿಲ ಸಮಸ್ಯೆ ತಾನಾಗಿಯೇ ಬಂದೊದಗಿರುತ್ತದೆ. ಗೆಳೆಯನಂತೆ ತಪ್ಪನ್ನೂ ತಿದ್ದಿತೋರಿಸಲೂ ಬೇಕಾಗುತ್ತದೆ; ಉತ್ತಮವಾದುದನ್ನು ತೋರಿಸಿ ಇದು ಸರಿ ಇದರಂತೆಯೇ ಇರಲಿ ಎಂದು ಬೆನ್ನುತಟ್ಟಲೂ ಬೇಕಾಗುತ್ತದೆ. ಅವನ ಲಕ್ಷ್ಯ ಎರಡು ಕಡೆಗೆ, ಒಂದು ಕಣ್ಣು ಬರೆದವನ ಕಡೆಗೆ, ಇನ್ನೊಂದು ಕಣ್ಣು ಓದುವವರ ಕಡೆಗೆ, ಇನ್ನೊಂದು ಕಣ್ಣು ಇದ್ದಿದ್ದರೆ ಲೋಕದ ಕಡೆಗೂ ಇಡಬಹುದಿತ್ತು. ಪುಣ್ಯಕ್ಕೆ ಮೂರನೆಯ ಕಣ್ಣಿಲ್ಲ. ಆದರೆ ಅವನ ಅಂತರಂಗದ ಕಣ್ಣು ಲೋಕದ ಕಡೆಗೆ ಇರಲೇ ಬೇಕಾದದ್ದು ಅನಿವಾರ್ಯ.

ಲೇಖಕ ಮತ್ತು ವಿಮರ್ಶಕ ಒಂದೇ ನಾಣ್ಯದ ಎರಡುಮುಖಗಳು. ಇಬ್ಬರ ಅಗತ್ಯವೂ ಕ್ಷೇತ್ರಕ್ಕೆ. ಸಾಹಿತ್ಯ ಓದುಗರಿಗೆ ಇದೆ ವಿಮರ್ಶಕನ ಕೆಲಸ ಕೆಲವು ಬಾರಿ 'ಅತ್ತೆ'ಯ ಮಾತಾಗಿ ಪರಿಣಮಿಸುವುದೂ ಉಂಟು. ಸಾಹಿತ್ಯ, ಸಾಹಿತಿ ಮತ್ತು ಓದುಗ ಇವರ ದೃಷ್ಟಿಯಿಂದ "ಅತ್ತೆತನ"ದ ಅಗತ್ಯವೂ ಇದೆ.

ವಿಮರ್ಶೆ ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಮೀಸಲಾದುದಲ್ಲ. ಇಡಿ ಕಲಾಕ್ಷೇತ್ರ— ಜೀವನ ಕ್ಷೇತ್ರವೆಲ್ಲವೂ ಅದರ ಆಡೊಂಬಲದಲ್ಲಿವೆ.

ಬದುಕಿನ ರೀತಿ-ನೀತಿಗಳನ್ನು ಕಂಡು ಟೀಕಿಸುತ್ತೇವೆ. ರಾಜಕೀಯ ವಾತಾವರಣ, ವಿಶ್ವ ಸಮಸ್ಯೆಗಳನ್ನು ಎತ್ತಿಕೊಂಡು ಚರ್ಚಿಸಿ ಅಭಿಪ್ರಾಯ ವ್ಯಕ್ತಪಡಿಸುತ್ತೇವೆ. ಸಿನೆಮಾ, ನಾಟಕ, ಕುಸ್ತಿ, ಸಂಗೀತ, ನಾಟ್ಯ, ಗ್ರಂಥ ಹೀಗೆ ಒಂದೇ ಎರಡೇ! ಎಲ್ಲ ವಿಷಯಗಳ ಬಗೆಗೂ ನಮ್ಮ ಅಭಿಪ್ರಾಯ—ವಿಮರ್ಶೆ ನಡೆದೇ ಇರುತ್ತದೆ. ತೋಚಿದುದನ್ನು ಅನುಭವದ ಓರೆಗಲ್ಲಿಗೆ ತಿಕ್ಕಿ ನೋಡಿ ಹೇಳಿದರೆ ವಿಮರ್ಶೆಯಾಗುತ್ತದೆ. ಒಂದೇ ಕೃತಿಯ ಬಗ್ಗೆ ನಾಲ್ಕು ಜನ ವಿಮರ್ಶಕರ ಅಭಿಪ್ರಾಯವೂ ಒಂದೇ ಆಗಿರುವುದಿಲ್ಲ. ಅದಕ್ಕೆ ಅನುಭವ, ಅಭಿಮಾನ, ಸಂಸ್ಕೃತಗಳೇ ಕಾರಣ ಎಂದು ಬೇರೆ ಹೇಳಬೇಕಿಲ್ಲ.

ಅಭಿಪ್ರಾಯ ತಿಳಿಸುವ ಸ್ವಾತಂತ್ರ್ಯವಿದೆ, ಆದರೆ ಅದೇ ಸರಿ ಎಂದು ವಾದ ಮಾಡುವ ಅಧಿಕಾರವಿಲ್ಲ. ಮಾತಿನ ಮೂಲಕ ವಿಮರ್ಶೆ ಮಾಡಿದರೆ ಅಭಿಪ್ರಾಯ ಎನಿಸಿಕೊಳ್ಳಬಹುದು. ಬರಹದ ಮೂಲಕ ಅಭಿಪ್ರಾಯ ವ್ಯಕ್ತಪಡಿಸಿದರೆ ವಿಮರ್ಶೆ ಎನಿಸಿಕೊಳ್ಳಬಹುದು. ವಿಮರ್ಶೆಯ—ವಿಮರ್ಶಕನ ಸ್ಥಾನ, ಮಾನ ಗೌರವ ಗುರುತರ ಎಂಬುದು ಸ್ಪಷ್ಟ.

ನಾಡಿನ ಹೆಸರಾಂತ ವಾರಪತ್ರಿಕೆಗಳ ಪುರವಣಿ, ವಾರಪತ್ರಿಕೆ, ಮಾಸಪತ್ರಿಕೆ ಪಕ್ಷ ಪತ್ರಿಕೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಸಂಗೀತ ಸಾಹಿತ್ಯಾದಿ ಲಲಿತ ಕಲೆಗಳ ಬಗೆಗೆ, ರಾಜಕೀಯ—ಸಾಮಾಜಿಕ ಜೀವನಗಳ ಬಗೆಗೆ ನಿರ್ದಿಷ್ಟ ಅಭಿಪ್ರಾಯ—ವಿಮರ್ಶೆಗಳು ಪ್ರಕಟವಾಗುತ್ತಿರುವುದು ಸಂತಸದ ಸಂಗತಿ. ಅಭಿಪ್ರಾಯ ಸ್ವಾತಂತ್ರ್ಯ ವಿಮರ್ಶಾ ಶೈಲಿ ಒಂದೇ ಕ್ಷೇತ್ರಕ್ಕೆ-ಮಟ್ಟಕ್ಕೆ ಸೀಮಿತವಾಗಿ ಉಳಿಯದೆ ವಿಶಾಲವಾಗಿ ಹರಡುವುದು ಉಚಿತ ಎಂದು ಆಶಿಸದಿರಲು ಸಾಧ್ಯವಿಲ್ಲ. ಆಧುನಿಕತೆಗೆ ಅನುಗುಣವಾಗಿ ಸಂಪ್ರದಾಯಗಳು ಕಟ್ಟುಪಾಡುಗಳ ಅಭಿರುಚಿಗಳ ಮಾರ್ಪಾಟಾಗಬೇಕಾದುದು ಅನಿವಾರ್ಯ ಎಂಬುದು ಪ್ರಸ್ತಾಪಿಸಲು ಯೋಗ್ಯ ಸಂಗತಿ.

ಕನ್ನಡ ನಾಡಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಆಗಬೇಕಾದ ಸುಧಾರಣೆ ಪ್ರಗತಿ ಅಗಾಧವಾಗಿದೆ. ಅದಕ್ಕೆ ಕಾಲಬರಲಿ ಎಂದು ಇಂದಿನ ಜನಾಂಗ ಕೈ ಕಟ್ಟಿ ಕುಳಿತುಕೊಳ್ಳಬೇಕಾದ ಕಾರಣವಿಲ್ಲ, ನಾಳೆ ಬರುವ ಮುಂಚೆ ಇಂದೇ ಕಾರ್ಯ ಪ್ರವೃತ್ತರಾದರೆ ಉಚಿತವಲ್ಲವೆ? ವಿಮರ್ಶಾ ಕ್ಷೇತ್ರ ವಿಶಾಲವಾಗಿ ಬೆಳೆಯಲು, ಬೆಳಗಲು, ಉತ್ತಮ ವಿಮರ್ಶಾಕೃತಿಗಳು ಬೆಳಕಿಗೆ ಬರಲು, ವಿಮರ್ಶೆ ಸಾಹಿತ್ಯದ ಬಗ್ಗೆ ಪ್ರಮಾಣ ಗ್ರಂಥಗಳು ರೂಪುಗೊಂಡು ಹೊರಬರಲು ವಿಳಂಬವಾಗುವುದು ಬೇಡ. ಇಂದಿನ ಹೆಸರಾಂತ ಹಿರಿಯ ಸಾಹಿತಿಗಳು, ಪಂಡಿತರು ಆದಷ್ಟು ಅಲ್ಪ ಸಮಯದಲ್ಲಿ ಇತ್ತ ತಮ್ಮ ಗಮನ ಹರಿಸಿದರೆ ಲೇಸಾದೀತು.

ಇಂದಿನ ಸಾಹಿತ್ಯದ— ಸಾಹಿತಿಗಳ, ಪತ್ರಿಕಾರಂಗದ ಕಷ್ಟ-ನಷ್ಟ ಸಮಸ್ಯೆಗಳು, ಪ್ರಸಂಗಗಳು ಕೇವಲ ಒಂದೊಂದಾಗಿರದೆ ಹತ್ತಾಗಿ ಸುತ್ತಲೂ ಹೆಣೆದು ಕೊಂಡಿವೆ. ಬಿಡುಗಡೆಯ ಕಾಲ ಸನ್ನಿಹಿತವಾಗಿಲ್ಲ. ಆಗುವುದು ಎಂದಿಗೆ ಎಂದು ಕೇಳಲು ಪ್ರಶ್ನೆಗೆ ಮೌನವೇ ಉತ್ತರ. ಸಮಸ್ತ ಜೀವನದ ಸುತ್ತ ವ್ಯಾಪಿಸಿರುವ ಈ ಕಟ್ಟುಗಳನ್ನೂ ಬಿಡಿಸಿಕೊಂಡು ಹೊರ ಬರಬೇಕು. ಇದಕ್ಕೆ ಭೀಮಬಲ, ರಾಮ ನಿರ್ಧಾರ, ಹನುಮ ಭಕ್ತಿ ಬೇಕು. ಸಮಸ್ಯೆಗಳ ನಿವಾರಣೆಗೆ ಸರ್ಕಾರ, ಸಮಾಜಗಳ ಹೊಣೆಯೂ ಇದೆ. ಪರಿಹಾರಕ್ಕೆ ಪ್ರಯತ್ನಿಸುತ್ತಾ ಕುಳಿತುಕೊಳ್ಳದೆ ಕಾರ್ಯೋನ್ಮುಖರಾದರೆ ಗೆಲುವು ದೊರೆತೀತು.

ಇಂದು ಪ್ರಕಟವಾಗುತ್ತಿರುವ ಕೃತಿಗಳ ಬಗ್ಗೆ ವಿಮರ್ಶೆ ಬರೆಯಲು ವಿಮರ್ಶಕ ಕಲಿತ ಬುದ್ಧಿಯನ್ನೆಲ್ಲ ಖರ್ಚು ಮಾಡಿದರೂ ಸಾಲದು ಲೇಖಕನಿಗಾಗಲಿ—ವಿಮರ್ಶಕನಿಗಾಗಲಿ ಅನುಭವ, ಪಾಂಡಿತ್ಯ ಇರಬೇಡವೆ? ವಿಮರ್ಶಕ ತನ್ನ ಕೃತಿಯ ಬಗ್ಗೆ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದಾಗ ಲೇಖಕ ಕೆರಳದೆ ತನ್ನ ತಪ್ಪನ್ನು ತಾನು ಗ್ರಹಿಸಿದರೆ ಅದರಿಂದ ಲಾಭ ವಿಮರ್ಶಕನಿಗಲ್ಲ. ಲೇಖಕನಿಗೆ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೆ; ವಿಮರ್ಶಕರಿಗೆ ಬರುವ ಬರಹ ಕೃತಿಗಳೆಲ್ಲವೂ ಕಳಪೆ ಎಂಬ ಭಾವನೆ ಇರುವುದಿಲ್ಲ. ಆದರೆ ಹೊಸಬರ ಬರಹಗಳನ್ನು ಪರಾಮರ್ಶಿಸಿ, ಹೊಸಬರ
ಕೃತಿಗಳೆಂದರೆ ಸ್ವಲ್ಪ ದೃಷ್ಟಿ ಚುರುಕಾ
ಸ್ತದೆ. ತಮ್ಮ ವಿಮರ್ಶೆಯಲ್ಲಿ ಹೊಸಬ
ಕೆಲಸಕ್ಕೆ ಸಂತೋಷಿಸಿ ಬೆನ್ನು ತಟ್ಟ
ದ್ದರೂ ಅವರ ಉತ್ಸಾಹಕ್ಕೆ ಭಂಗ ತ
ವುದು ಬೇಡ—ಎಂಬುದು ಒಂದು
ಯುವಲ್ಲವೆ?

ಓದುಗನಿಗೆ ಬರಹಗಾರನ-ವಿಮರ್ಶ
ನ ಅಗತ್ಯ ಎಂದೆಂದಿಗೂ ಇದೆ. ಎಲ್ಲ ಕ್ಷೇ
ತ್ರದಲ್ಲಿಯೂ ಕೆಲಸಗಳು ನಿಷ್ಠೆಯಿಂ
ನಿರ್ವಂಚನೆಯಿಂದ ನಡೆದರೆ ಸಾ
ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬೆಳೆಯ
ಉಳಿದಿರುವ ವಿಮರ್ಶಾ ಸಾಹಿತ್ಯ ಹಿರಿ
ಗಿ ಬೆಳೆದು ಹಚ್ಚ ಹಸುರಾಗಿ ಉಳಿದ
ಲಿ ಎಂದು ಮನಸಾರ ಹಾರೈಸೋಣ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL–4.17–4/65–66 dated 26—4—1966.

ಪುತ್ತೂರು ಮುನ್ಸಿಫ್ ಕೋರ್ಟಿನ

R. E. P. 29/19
S. C. 174/6

ಸೇಸ ಗೌಡ —ವಾದಿ ಅರ್ಜಿದಾ

ಪೂವಯ್ಯ ಗೌಡ, ಸೇಸ ಗೌಡನ ಮಗ, ಬೆಳ್ತಂಗಡಿ ತಾಲ್ಲೂಕು ಪುದುಬೆಟ್ಟು ಗ್ರಾಮದ ಸಗೋಳಿ— ಎದ್ರು ಪ್ರತಿವಾ
ಎದ್ರಿಗೆ ಕೋರ್ಟು ಮೂಲಕ ಪ್ರಕಾರ ತಿಳಿಸು
ದೇನೆಂದರೆ—

ವಾದಿಯು ನಿಂಮ ಮೇಲೆ ಪಡೆದ ಮೇ
ದಿಕ್ರಿಯಲ್ಲಿ ನಡ್ಸಿದ ಮೇಲಿನ ಅಮ್ಲುಜ್ಯಾರಿ
ಲ್ಲಿ ನಿಂಮ ಬಾಬ್ತು ಪುದುಬೆಟ್ಟು ಸರ್ವೆನಂ
105/1B, 94/1B, 94/4B, 95/5,
ನೇ ಆಸ್ತಿಗಳನ್ನು ಜಪ್ತಿಪಡ್ಸಿರುವುದ
ನೀವು ಕೋರ್ಟಿನಿಂದ ಯಿನ್ನೊಂದ
ಕೊಡುವ ತನಕ ಸದ್ರಿ ಆಸ್ತಿಯನ್ನು ಪರಾ
ರೆ ವಗೈರೆ ಮಾಡಕೂಡದಂತ ಈ ಮೂಲ
ನಿರ್ಬಂಧಿಸಲ್ಪಟ್ಟಿರುತ್ತೀರೆಂತಲೂ, ಮೇಲಿ
ಅಮ್ಲುಜ್ಯಾರಿಯು ತಾ. 5—7—66ಕ್ಕೆ
ಟ್ಟಿರುತ್ತದೆಂತಲೂ ಈ ಮೂಲಕ ತಿಳಿಸ
ಲಾಗಿಯದೆ.

(Sd) B. Ishwara Bha
Advocate for Plff

ಪುತ್ತೂರು, ತಾ. 9—6—66

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರು ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
**ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ**

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಕನ್ನಡ ಪುಸ್ತಕಗಳು
ಹೈಸ್ಕೂಲ್, ಹಯರ್ ಸೆಕೆಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ
ಕನ್ನಡ ಪುಸ್ತಕಗಳು
ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಪಟ್ಟಿಗಾಗಿಯೂ ವಿಶೇಷ
ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ
ರಿಜಿಸ್ಟರ್ಡ್ ಪಬ್ಲಿಷರ್ಸ್
ಪಾಲುಕೋಟೆ, ಉಡುಪಿ

ಕೇಂದ್ರದ ಮನಮುಟ್ಟಿಸುವ ಅಂತಿಮ ಪ್ರಯತ್ನ

(ಒಂಭತ್ತನೇ ಪುಟದಿಂದ)

ಯನ್ನು ಕಾರ್ಯಮಾಡಿ ತಿಳಿಸ ಬೇಕು.

ಅದು ಹೇಗೆ?

ಅವರಿಗೆ ಗೊತ್ತಾಗುವ ರೀತಿಯಲ್ಲಿ... ಅಂದರೆ? ಕಾದು ನೋಡ ಬೇಕು.

ಸತ್ಯಾಗ್ರಹ ಚಳುವಳಿಯಲ್ಲಿ ಭಾಗ ವಹಿಸುವ ಕಾಂಗ್ರೆಸಿಗರು ಪಕ್ಷಕ್ಕೆ ರಾಜಿನಾಮೆ ನೀಡಿ ಮತ್ತೆ ಚಳುವಳಿ ಮಾಡ ಬೇಕು.

ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಹೀಗೆ ಹೇಳಿದ್ದಾರೆಂದು ಸುದ್ದಿ.

'ನಾವು ರಾಜಿನಾಮೆ ನೀಡುವುದಿಲ್ಲ; ಬೇಕಾದರೆ ಅವರೇ ನಮ್ಮನ್ನು ಹೊರಗೆ ಹಾಕಲಿ?—ಹಳ್ಳಿಕೇರಿಯವರ ಸಿಂಹಧ್ವನಿ ಇನ್ನು ನಿಜಲಿಂಗಪ್ಪನವರು?

ಕನ್ನಡದ ನೆಲವನ್ನು ಕನ್ನಡದಲ್ಲಿ ಉಳಿಸಿಕೊಳ್ಳಲು ಮತ್ತು ತಂದು ಸೇರಿಸಲು ರಾಜಿನಾಮೆಯಿತ್ತಾದರೂ ಹೋರಾಟ ನಡೆಸುವೆ ಎಂದ ಗಂಡು—

ಈಗಲೇ ರಾಜಿನಾಮೆ ನೀಡಲು ಸಮಯ ಪಕ್ವವಾಗಿಲ್ಲ.

ಶಾಂತರೀತಿಯ ಸರ್ವಪ್ರಯತ್ನವನ್ನೂ ಮಾಡಿ ವಿಫಲರಾಗಬೇಕಾದೀತು.

ಅಥವಾ ಇನ್ನೂ ಚುನಾವಣೆಯ ನಂತರವೇ ಆಯೋಗ ನೇಮಕವಾಗುವುದೆಂಬ ಆಸೆಯಿದೆಯೆ?

ರಾಜ್ಯಾದ್ಯಂತ ಅಸಹಕಾರ ಚಳುವಳಿ—

ಸತ್ಯಾಗ್ರಹಿಗಳ ಬಂಧನ- ಹಲವರ ಬಿಡುಗಡೆ—ಕೆಲವರ ಮೇಲೆ ಕಟ್ಲೆ—ದಂಡ ಇಲ್ಲವೆ ಶಿಕ್ಷೆ.

ದಂಡ ತೆರಲು ಸತ್ಯಾಗ್ರಹಿಗಳ ನಿರಾಕರಣೆ—ಜೇಲು ವಾಸದ ಅನುಭವ.

ಕಾಂಗ್ರೆಸ್ಸು ಮಹಾತ್ಮಾ ಗಾಂಧಿಯವರ ಸೂತ್ರಧಾರತ್ವತನಕ್ಕೆ ಬಂದ ಸಮಯದಲ್ಲಿ, ಇಂದಿರಾಗಾಂಧಿಯ ೫ ವರ್ಷ ಪ್ರಾಯದಲ್ಲಿ ವಿದೇಶೀ ಸರಕಾರದ ವಿರುದ್ಧ ಇದೇ ಮೊದಲಿಯ ದೇಶ ವ್ಯಾಪೀ ಚಳವಳಿ ಆರಂಭವಾಗಿತ್ತು.

ಇಂದು ಇಂದಿರೆ ೫೦ ವರ್ಷಕ್ಕೆ ಕಾಲಿರಿಸುತ್ತಿರುವಾಗ ಸ್ವದೇಶೀ ಸರಕಾರದ ವಿರುದ್ಧವೇ ಇಂತಹ ಸತ್ಯಾಗ್ರಹ ಆರಂಭವಾಗುವುದು ಬರಿಯ ದುರದೃಷ್ಟಕರವಲ್ಲ, ತುಂಬ ದುರದೃಷ್ಟಕರ.

ಇಂದಿರೆಯೂ ಈ ಸತ್ಯಾಗ್ರಹವನ್ನು ಹೀಗೆಯೇ ಕರೆದಿದ್ದಾರೆ.

ಎರಡೂ ರಾಜ್ಯಗಳ ಜನ ಬೆದರಿಸಲು ತೊಡಗಿದ್ದಾರೆ. ಯಾರ ಬೆದರಿಕೆಗೆ ಬೆಲೆಯಿಲ್ಲವೋ ಅವರು ಒಪ್ಪಲಾರದ ನಿರ್ಣಯ ಮಾಡಬೇಕು.

ನಾಸ್ತಿಕನಂತೂ ತೀರ್ಥ ಪ್ರಸಾದಕೊಳ್ಳೋದಿಲ್ಲ; ದಕ್ಷಿಣೆ ಸಿಗೋದಿಲ್ಲ. ಆಸ್ತಿಕನಾದರೂ ದಕ್ಷಿಣೆ ಕೊಡಬೇಡವೆ?

ಮರಾಠಿಗರು ಸತ್ಯಾಗ್ರಹಕ್ಕೆ ಹೊರಟರೆ, ಕೀಚಕನದೇ ಕಾರಭಾರ. ಆದುದರಿಂದ ತಮ್ಮನ ಸಮಾಧಾನಕ್ಕಾಗಿ ಸೈರಂಧ್ರಿಯನ್ನು ಆತನತ್ತ ಅಟ್ಟಿದ ಸುದೇಷ್ಣೆಯ ಕೆಲಸ.

ಎರಡೂ ರಾಜ್ಯಗಳಿಗೂ ಸಮಾಧಾನವಾಗುವ ರೀತಿಯಲ್ಲಿ ಗಡಿ ತೀರ್ಮಾನವಾಗಬೇಕು. ಇದು ಹೇಗೆ? ಸಾಧ್ಯವೆ?

ಮಧ್ಯಂತರ ನಿರ್ಣಯವೇ ಬೇಕೋ ಏನೋ— ಚಂಡೀಗಡ ನಿರ್ಧಾರ—

ಕರ್ನಾಟಕ— ಮಹಾರಾಷ್ಟ್ರಗಳ ವಿವಾದ ಗ್ರಸ್ತ ಪ್ರದೇಶಗಳನ್ನು ಗೋವೆಗೆ ಸೇರಿಸಿ ಕೇಂದ್ರಾಧೀನ ಪ್ರದೇಶ ಮಾಡಿದರೆ ಮಂಗನ ಪಾಲು ಸಮವಾಗುವುದು.

ಹಾಗಾಗದೆ ಈ ಸಮಸ್ಯೆ ಶಾಂತವಿಧಾನಗಳಿಂದ ಪರಿಹಾರವಾಗಬೇಕಾದರೆ, ಕನ್ನಡಿಗರೇ ತ್ಯಾಗ ಮಾಡಬೇಕು—ಮರಾಠಿಗರ ಹಂಪ್ರದ ಅರಿವು ಯಾರಿಗಿಲ್ಲ?

ಅಂದರೆ, ಕನ್ನಡಿಗರದು ಜೇಯದ ಬೇಳೆಯೆಂದು ಲೋಕಕ್ಕೇ ಗೊತ್ತು. ಅದನ್ನು ಬೇಯುವ ಬೇಳೆ ಎಂದು ಕಾರ್ಯರೂಪೇಣ ಸಾಧಿಸಿ ತೋರಿಸುವ ಹೊಣೆಗಾರಿಕೆ ನಮ್ಮದು ನಿಮ್ಮದು. ಮರಾಠಿಗಳಿಗೂ ನ್ಯಾಯ ಧರ್ಮ ನೀತಿಗಳ ಪಾಠಗಳನ್ನು ಕಲಿಸುವ ಗುರುತನವನ್ನು ಹೊರಬೇಕಾದವರು ನಾವು, ನೀವು.

ಹೋರೀನ ನಂಬಿ ನೀರಿಗಿಳಿಬ್ಯಾಡ್ವೇ....

(ನಾಲ್ಕನೇ ಪುಟದಿಂದ)

ಕೊಡುತ್ತದಂತೆ...."

'ಏಯ್; ಆದು ಸುಳ್ಳಂತೆ...'

"ಮತ್ತೆ??

"ಭಾರತ — ಪಾಕಿಸ್ತಾನಗಳ ನಡುವೆ ನಿಂತು ಹೋದ ಮಾತುಕತೆಯನ್ನು ಮತ್ತೆ ಚಿಗುರಿಸುವ ಚಿಂತೆ ಕೊಸಿಗಿನರಿಗೆ. ಈ ಸಂಬಂಧದಲ್ಲಿ ಮಾತಾಡುವ ನಿರೀಕ್ಷೆಯಿದೆ...."

"ಏನು ಪ್ರಯೋಜನ? ಪಾಕಿಸ್ತಾನಕ್ಕೆ ಕಾಶ್ಮೀರ ಬೇಕಾಗಿರುವ ವರೆಗೆ ಮಾತು ನಿಷ್ಫಲ...."

"ಆದರೂ ಯಾವುದಾದರೂ ರೀತಿಯಿಂದ ಎರಡೂ ಪಕ್ಷಗಳ ಮೇಲೆ ಒತ್ತಾಯ ಹೇರುವ ಪ್ರಯತ್ನ...'

"ಆದರೂ ಸಾಧ್ಯವಿಲ್ಲ ನೋಡಿ. ಹಿಂದೆ ನೆಹರೂ ಇಂದಿದ್ದರು. ಸಮರ ವಿರಾಮ ರೇಖೆಯನ್ನೇ ಅಂತರಾಷ್ಟ್ರೀಯ ಗಡಿಯೆಂದು ಒಪ್ಪುವಷ್ಟರ ಉದಾರತೆ ಭಾರತ ತೋರಿಸೀತೆಂದು...."

'ಈ ಸಲಹೆ ಕೊಸಿಗಿನ್ನರೂ ನೀಡಿರಬೇಕು, ತಾಷ್ಕೆಂಟದಲ್ಲಿ. ಆದರೆ, ಪಾಕ್ ಆಕ್ರಮಿತ ಕಾಶ್ಮೀರದ ನೆಲವನ್ನು ಯುದ್ಧೇತರ ವಿಧಾನಗಳಿಂದ ಸ್ವಾಧೀನಪಡಿಸುವ ಅಧಿಕಾರವನ್ನು ತ್ಯಜಿಸಲು ಭಾರತ ಸಿದ್ಧವಿರಲಿಲ್ಲ..."

'ಭಲೆ, ಭಲೆ ಲಾಲಬಹದೂರ...."

'ಭಾರತದ ಕಾಶ್ಮೀರ ನೀತಿ ಇಂದಿಗೂ ಅದೇ. ತಾಷ್ಕೆಂಟ್ ಘೋಷಣೆಯ ಪರಿಪಾಲನೆ ಇಬ್ಬರಿಗೂ ಸೇರಿದ್ದು. ಭುಟ್ಟೋ ನಿರ್ಗಮನದಿಂದ ಪಾಕಿನಲ್ಲಿ ಹೊಸ ಗಾಳಿ ಬೀಸುವುದಾದರೆ ಇಂದಿರೆಯ ಭೆಟ್ಟಿಗೊಂದು ಅರ್ಥ ಬಂದೀತು..."

'ಅಲ್ರಿ, ಮತ್ತೆ ಕಾಮರಾಜರೂ ರಶ್ಯಕ್ಕೆ ಹೋಗ್ತಾರಂತೆ..."

'ಹೌದು...ಏನಾಯ್ತು? ಪಕ್ಷ ಸಂಘಟನೆಯ ಕ್ರಮವನ್ನು ಅಧ್ಯಯನ ಮಾಡಲೂ ಬಹುದು..."

"ಹ್ಞಾಂ, ನಮ್ಮ ಇಂದಿರಾ ಮತ್ತೆಲ್ಲಿಗಾದರೂ...."

'ಓಹೋ, ಏನಂತೆ? ಸುತ್ತಾದರೂ ನಸ್ಸೇರರನ್ನು ಕಾಣುವ ಸಂಭವವಿದೆ. ಇದು ದೃಢವಾಗ ಬೇಕಾದರೆ, ಅವರಿಂದ ಮತ್ತೆ ಆಹ್ವಾನ ಬರಬೇಕೆಂದಿತ್ತು. ಕ್ಯಾರೋಗೆ ಹೋಗುವುದಾದರೆ, ಬಲ್ಗ್ರೇಡಿನಲ್ಲಿ ಅಧ್ಯಕ್ಷ ಟಿಟೋರನ್ನೂ ಅಲ್ಪ ಕಾಲ ಕಾಣಬಹುದು. ನವದೆಹಲಿಯಲ್ಲಿ ಅಕ್ಟೋಬರದಲ್ಲಿ ತ್ರಿರಾಷ್ಟ್ರ ಕೂಟ ಪರಿಷತ್ತು ಸೇರುತ್ತದಂತಲ್ಲಾ.."

"ಹ್ಞಾಂ...ಏನೋ ಕಣ್ಣು ಬಾರಿ ಉರಿಯುತ್ತೆ."

'ಈ ಹೊತ್ನಲ್ಲೂ ಹೇಗೆ ಉರಿಯೋದು?'

"ಯಾರಿಗ್ಗೊತ್ತು? ನೋಡಿ, ಭಾರೀ ಕೆಂಪಾಗಿದೆ..."

"ಏನೋ ಕಸಬಿದ್ದಿದೆಯೋ ಏನೊ...'

'ತುಸು ಊದಿ ಬಿಡಿ....'

'ಸರೀನ್ನು ಅಲ್ಲ, ಹೋರೀನ ನಂಬಿ ನೀರಿಗಿಳೀ ಬೇಡ್ವೇ, ಮತ್ತೆ....'

"ನೋಡಿ, ಇದನ್ನೇ ನಮ್ಮ ಸರಕಾರದ ನೀತಿ ನಿರ್ಮಾಪಕರು ತಿಳಿದುಕೊಂಡ್ರೆ....'

'ಪಾಪವೆ, ನಿನಗಿರುವಷ್ಟು ವಿವೇಕ ಅವ್ರಿಗೂ ಉಳಿತಿದ್ರೆ...."

'ಅಯ್ಯೋ, ಎಂಥದಿದು...."

'ಏನೂಂತ ತಿಳಿಯೋಲ್ವೆ?"

"ಹ್ಞಾ ತಿಳಿಯುತ್ತೆ...ಸದ್ಯ...."

'ತಿಳೀತು ಬಿಡು. ಅಪೀಲೇ ಇಲ್ಲ...."

"ಏಕೆ ಇರುತ್ತೆ?"

"ಏಕೆ ಇರಬೇಕು?"

—ಗೋರಾ.

ನವಭಾರತ ಶಾಲಾ ವಾರ್ಷಿಕೋತ್ಸವ

ಕುಂದಾಪುರದ ನವಭಾರತ, ಹಾ. ಎ. ಶಾಲಾ ವಾರ್ಷಿಕೋತ್ಸವವು ಉಡುಪಿ ಸಹಾಯಕ ವಿದ್ಯಾಧಿಕಾರಿ ಶ್ರೀ ಜಿ.ವಿ.ಸಿದ್ಧೇಶ್ವರರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಶಾಲಾ ಮೆನೇಜರ್ ಡಾ. ಕೆ. ಕೆ. ಕಲ್ಕೂರರು, ಸಭಿಕರನ್ನು ಸ್ವಾಗತಿಸಿದರು. ಶ್ರೀ ಕೆ. ವಿ. ಬ್ಯಾಕಿಯವರು ಶಾಲಾ ವರದಿ ವಾಚನ ಗೈದು ಸರ್ವತೋಮುಖ ಅಭಿವೃದ್ಧಿಯನ್ನು ತಿಳಿಸಿದರು.

ಸಾಮೂಹಿಕ ಚಟುವಟಿಕೆಗಳನ್ನು ಬಾಲಕ ಬಾಲಕಿಯರು ಪ್ರದರ್ಶಿಸಿದರು. ಭಕ್ತ ಕುಚೇಲನೆಂಬ ಯಕ್ಷಗಾನ ಬಯಲಾಟವನ್ನು ಬಾಲಕರೂ, ಭಕ್ತ ಮೀರಾ ಎಂಬ ನಾಟಕವನ್ನು ಬಾಲಕಿಯರೂ ಅಭಿನಯಿಸಿದರು.

ಶ್ರೀಮತಿ ಫೆರ್ನಾಂಡಿಸ್ ಪ್ರಭುಗಳು ಬಹುಮಾನ ವಿತರಣೆ ಗೈದರು. ಕುಮಾರಿ ರಮಾ ಮತ್ತು ಡ್ಲೆವಿಯಾರವರ ನೃತ್ಯವು ಶ್ರೀನಿವಾಸ ಆಚಾರ್ಯರ ಹಿಮ್ಮೇಳದಲ್ಲಿ ಪ್ರದರ್ಶಿಸಲ್ಪಟ್ಟಿತು. ಶ್ರೀ ಯನ್. ಶಿವರಾಮ ಸೆಟ್ರುಯವರು ಶಿಕ್ಷಕ ಸಂಘದ ಪರವಾಗಿ ಮಾತನಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪಾಠೇತರ ಚಟುವಟಿಕೆಗಳ ಮಹತ್ವವನ್ನೂ, ರಕ್ಷಕರ ಶಿಕ್ಷಕರ, ಮತ್ತು ವಿದ್ಯಾರ್ಥಿಗಳ ಹೊಂದಾಣಿಕೆಯ ಆವಶ್ಯಕತೆಯನ್ನು ವಿವರಿಸಿ, ಉತ್ತಮ ರೀತಿಯಲ್ಲಿ ನಡೆಸುತ್ತಿರುವ ಈ ಶಾಲೆಗೆ ಸರ್ವರೂ, ತನು, ಮನ, ಧನಗಳಿಂದ ಸಹಾಯಮಾಡಬೇಕೆಂತಲೂ, ಶೀಘ್ರವೇ ಇದು ಒಂದು ಹೈಸ್ಕೂಲಾಗಿ ಪರಿವರ್ತನೆ ಹೊಂದಲೆಂದೂ ಹಾರೈಸಿದರು.

ವಿಶೇಷ ಮಹಾಸಭೆ

ಕನ್ನಡ ಬಳಗ, ಮುಂಬಯಿ, ಇದರ ವಿಶೇಷ ಮಹಾಸಭೆಯು ತಾ. ೫-೬-1966 ರಂದು ಫ್ರಾಫರ್ಕೋರ್ಟ್, ಪಂತ್‌ನಗರದಲ್ಲಿನ 33 ನೇ ಬಿಲ್ಡಿಂಗಿನ ಮೇಲಂಗಣದಲ್ಲಿ ಶ್ರೀ ಸದಾಶಿವ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಕೆ. ಉಳ್ಳಾಲರು ಸಭಿಕರನ್ನು ಸ್ವಾಗತಿಸಿ ಸಭೆಯ ಕಾರ್ಯಕ್ರಮವನ್ನು ತಿಳಿಸಿದರು. ಸಾಕಷ್ಟು ವಿಮರ್ಶೆಯ ನಂತರ ಬಳಗದ ಘಟನೆಯನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ಬಳಿಕ 1966_67 ವರ್ಷಕ್ಕೆ ಈ ಬಳಗಿನ ಕಾರ್ಯ ಸಮಿತಿಯನ್ನು ಸರ್ವಾನುಮತದಿಂದ ಚುನಾಯಿಸಲಾಯಿತು.

ಶ್ರೀ ಸದಾಶಿವ ಪೂಂಜ (ಅಧ್ಯಕ್ಷ) ಶ್ರೀ ಪಿ. ಕೆ. ಮೂರ್ತಿ (ಗೌ. ಕಾರ್ಯದರ್ಶಿ) ಶ್ರೀ ಎಚ್. ಲೋಕನಾಥ್ (ಕೋಶಾಧಿಕಾರಿ) ಶ್ರೀಗಳಾದ ಎ. ಕೆ. ಉಳ್ಳಾಲ್, ಬಾಲಗೋಪಾಲ್, ಕೆ. ಯಂ. ರಾವ್, ಇ. ಡಿ. ಸೋಜ (ಸಮಿತಿ ಸದಸ್ಯರು) ಸಭಿಕರ ಭಾಷಣವಾದ ನಂತರ ಶ್ರೀ ಉಳ್ಳಾಲ್‌ರವರ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು.

ಸಾಲರೂಪದ ವಿದ್ಯಾರ್ಥಿವೇತನ

ಬೆಂಗಳೂರು_13, 1966—67ರ ಬಗ್ಗೆ ಅಖಿಲ ಭಾರತ ಮಾಧ್ವಮಹಾ ಮಂಡಲದ ಕರ್ನಾಟಕ ಶಾಖೆಯ ವಿದ್ಯಾಸಹಾಯ ನಿಧಿಯನ್ನು ವಿಶ್ವ ವಿದ್ಯಾ ನಿಲಯಗಳಲ್ಲಿಯೂ ಮತ್ತು ಔದ್ಯೋಗಿಕ— ತಾಂತ್ರಿಕ ಶಾಲೆಗಳಲ್ಲಿಯೂ ಪ್ರೌಢ ವಿದ್ಯಾಭ್ಯಾಸ ಮಾಡಲು ಅಪೇಕ್ಷಿಸುವ ಹೆಚ್ಚು ದಕ್ಷತೆಯುಳ್ಳ ಮತ್ತು ಬಡವರಾದ ಮಾಧ್ವ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಸಾಲರೂಪದಲ್ಲಿ ವಿದ್ಯಾರ್ಥಿ ವೇತನವನ್ನು ಕೊಡಲಾಗುತ್ತದೆ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಉದ್ಯೋಗ ಪಡೆದ ಮೇಲೆ ಸಾಲವಾಗಿ ಪಡೆದ ಹಣವನ್ನು ಸುಲಭ ಕಂತುಗಳಲ್ಲಿ ಅಲ್ಪ ದರದ ಬಡ್ಡಿಸಹಿತ ಮರಳಿ ಕೊಡಬೇಕಾಗುತ್ತದೆ. ಈ ರೀತಿ ಸಹಾಯ ಪಡೆಯಲು ಅಪೇಕ್ಷಿಸುವ ವಿದ್ಯಾರ್ಥಿಗಳು ಇದಕ್ಕಾಗಿ ನಿಗದಿ ಮಾಡಿರುವ ಅರ್ಜಿ ಫಾರ್ಮುಗಳನ್ನು ಒಂದು ರೂಪಾಯನ್ನು ಸಮಕ್ಷಮದಲ್ಲಿಯಾಗಲಿ ಇಲ್ಲವೆ ಮನಿ ಆರ್ಡರ್ ಮೂಲಕವಾಗಲಿ ಕಾರ್ಯದರ್ಶಿ ಅಖಿಲಭಾರತ ಮಾಧ್ವಮಹಾ ಮಂಡಲ, ಶಿಕ್ಷಣ ನಿಧಿ, ಕರ್ನಾಟಕ ಶಾಖೆ 371, II ಬ್ಲಾಕು ಬೆಂಗಳೂರು—11 ಇಲ್ಲವೆ ವ್ಯವಸ್ಥಾಪಕ ಕಾರ್ಯದರ್ಶಿ, ಅಖಿಲ ಭಾರತ ಮಾಧ್ವ ಮಹಾ ಮಂಡಲ, ಪೂರ್ಣಪ್ರಜ್ಞನಗರ, ಬೆಂಗಳೂರು—4 ಇವರಿಗೆ ಕಳಿಸಿ ತರಿಸಿಕೊಳ್ಳಬೇಕು. ಭರ್ತಿ ಮಾಡಿದ ಅರ್ಜಿಫಾರ್ಮುಗಳನ್ನು ಪ್ರಶಸ್ತಿ ಪತ್ರಗಳ ಸಹಿತ ತಾರೀಖು ೨೦—೭—೧೯೬೬ ರೊಳಗಾಗಿ ಕಳುಹಿಸಬೇಕೆಂದು ಮತ್ತು ಕಳೆದ ವರುಷದಲ್ಲಿ ಸಾಲ ಪಡೆಕೊಂಡ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ಅವಕಾಶವಿದೆಯೆಂದು ಕಾರ್ಯದರ್ಶಿಗಳಾದ ಶ್ರೀ ಕೆ. ಹನುಮಂತರಾಯರು ತಿಳಿಸುತ್ತಾರೆ.

ಇದೀಗ ಪ್ರಕಟವಾಗಿದೆ!

ಮೇರಿ ಕೊಟ್ಟ ಬೆಂಡೋಲೆ

ಯಸ್. ಸದಾಶಿವರಾಯರ ಕಥಾಸಂಕಲನ.

ಮುನ್ನುಡಿ: ನಿರಂಜನ

ತ್ರಿವರ್ಣ ರಕ್ಷಾಪತ್ರ ಬೆಲೆ: ರೂ. ೧-೫೦

ಪ್ರತಿಗಳಿಗೆ—

ನವಯುಗ ಪ್ರೆಸ್, ಉಡುಪಿ

(ಮೂರನೇ ಪುಟದಿಂದ)

ಶೀಲಿಸಲು ಆಯೋಗವೊಂದನ್ನು ನೇಮಿಸುವ ನಿರ್ಧಾರ ಮಾಡಿದೆ. ಇದರ ಕಾರ್ಯವ್ಯಾಪ್ತಿಯು ರಾಜ್ಯ ಸರಕಾರ ಮತ್ತು ಸಾರ್ವಜನಿಕ ರಂಗಗಳಿಗೂ ಅನ್ವಯಿಸುವುದು. ಆಯೋಗದ ಮತ್ತಿತರ ವಿಚಾರಗಳಿನ್ನೂ ತಿಳಿದಿಲ್ಲ. ಈ ಆಯೋಗವು ನೌಕರ ವರ್ಗದವರಿಗೆ ತಮ್ಮ ವೇತನ—ವೆಚ್ಚಗಳನ್ನು ಸರಿದೂಗಿಸಿಕೊಂಡು ಹೋಗುವ ಮಧ್ಯವರ್ತಿ ಸೂತ್ರವೊಂದನ್ನು ಅರಸುವ ಪ್ರಯತ್ನ ಮಾಡುವುದು; ಮಾಡಲಿ. ಆದರೆ, ಇದರ ಜತೆಗೆ ಸರಕಾರಿ ನೌಕರರಲ್ಲದ, ಯಾವ ಅವಾರ್ಡಿಗೂ ಒಳಗಾಗದ, ಅತ್ಯಲ್ಪ ವೇತನದಲ್ಲಿ ನಿಕೃಷ್ಟ ಜೀವನ ಬದುಕುವ ಕೋಟ್ಯಂತರ ಭಾರತೀಯರ ದುರವಸ್ಥೆಯನ್ನೂ ಮರೆಯದಿರಲಿ. ಆಯೋಗವು ಕೈಗೊಳ್ಳುವ ಯಾವುದೇ ನೀತಿಯಿಂದ ಈಗಾಗಲೇ ಕಣ್ಣೀರಾಗಿರುವ ಇವರ ಬದುಕಿನಲ್ಲಿ ಗೋಳಾಟವೂ ಕೂಡದಿರಲಿ; ಸಾಧ್ಯವಿದ್ದರೆ, ಅವರ ಕಣ್ಣೀರನ್ನೂ ಒರಸುವ ಪ್ರಯತ್ನ ಪರೋಕ್ಷವಾಗಿ ಮಾಡಲಿ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 264/1963,
R. E. P. No. 98/1966

ಕೃಷ್ಣಾಬಾಯಿ—ಅರ್ಜಿದಾರಳು

ಮತ್ತು

1. ತಮ್ಮಣ್ಣ ಭಟ್ಟ-ರಾಘವೇಂದ್ರಭಟ್ಟ ಮಗ
2. ಭಾಬಾಚಾರಿ-ವೆಂಕಪ್ಪಾಚಾರಿ ಮಗ—

ಉಡುಪಿ ತಾಲ್ಲೂಕು ಕೊಡವೂರು ಗ್ರಾಮದ ಕಂಬಳಕಟ್ಟ. —ಎದ್ರಿರು.

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ಅಮಲ್ಜಾರಿ ಅರ್ಜಿಯಲ್ಲಿ ಅರ್ಜಿದಾರಳಕಡೆ ದಾಖಲಾದ ಸ್ಥಿರಾಸ್ತಿ ಏಲಂ ಇಸ್ತಿಹಾರಿನ ಶರ್ತಗಳನ್ನು ನಿಶ್ಚೈಸುವರೆ ತಾರೀಕು 8—7—1966ಕ್ಕೆ ಇಡೋದಾಗಿರುವದ್ರಿಂದ ಅದರ ಕುರಿತು ಎದ್ರಿರಿಗೇನಾದರೂ ಆಕ್ಷೇಪಣೆಯಿರುವಲ್ಲಿ ಅದನ್ನು ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. N. Madhava Rao
Vakil for Petitioner

ಉಡುಪಿ, ತಾ. 18—6—1966

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 13/66

ಗುಣಪಾಲ ಕಂಬಳಿ —ವಾದಿ

ಮತ್ತು

ತಂಗಪ್ಪ ಸಹಾ —ಪ್ರತಿವಾದಿರು.

ಕಾರ್ಕಳ ತಾಲ್ಲೂಕು ನೂರಾಲಬೆಟ್ಟು ಗ್ರಾಮದ ಸಿಮಿರ್‌ತೊಟ್ಟು ಎಂಬಲ್ಲಿರುವ ಭೂಬಲಿ ಕಂಬಳಿಯವರ ವಿಧವೆ ಅನಂತಮತಿ ಮತ್ತು ಇವರ ಮಗ ಜಿನರಾಜ ಕೂಡ ಇಬ್ಬರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಮೇಲಿನ ವ್ಯಾಜ್ಯವು ತಾ. 5—7—1966ಕ್ಕೆ ನಿಮ್ಮಿಬ್ಬರ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಅದಿವಸ ಬೆಳಿಗ್ಗೆ 11 ಗಂಟೆಗೆ ಸ್ವತಹಾಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾ ಎಂತ ಮಾಡಿ ದಾವೆಯನ್ನು ಮುಂದುವರಿಸಲಾದೀತು.

N. J. KADAMBA
Advocate for Plaintiff

ಬೆಳ್ತಂಗಡಿ, 20-6-1966.

ಎಲ್ಲೆಲ್ಲಿ ಏನೇನು?

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

ವಾಣಿವಿಲಾಸ ಮೊಹಲ್ಲಾದಲ್ಲಿರುವ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿನಿಲಯವು 1-7-66 ರಿಂದ ಪ್ರಾರಂಭವಾಗುವುದು. ನಿಲಯಕ್ಕೆ ಸೇರಬಿಚ್ಛಿಸುವ ಕಾಲೇಜು ವಿದ್ಯಾರ್ಥಿಗಳು ಗೊತ್ತಾದ ಫಾರಂನಲ್ಲಿ 24—6—66ರ ಒಳಗೆ ಅರ್ಜಿ ಕಳುಹಿಸಬೇಕಾಗಿ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಕೋರಿದ್ದಾರೆ.

ಶಿರ್ವ ಹಿಂದೂಹೈಸ್ಕೂಲಲ್ಲಿಹಾಯರ್ ಸೆಕೆಂಡರಿ XIಸ್ಟಾಂಡರ್ಡ್.

ಶಿರ್ವ, 14—6—66, ಶಿರ್ವ ಹಿಂದೂ ಹೈಸ್ಕೂಲಲ್ಲಿ ಹಾಯರ್ ಸೆಕೆಂಡರಿ XIಸ್ಟ್ಯಾಂಡರ್ಡ್ ತೆರೆಯಲು ಅನುಮತಿ ದೊರೆತಿದ್ದು, ವಿಜ್ಞಾನ ಮತ್ತು ಹ್ಯುಮ್ಯಾನಿಟೀಸ್ ವಿಭಾಗಗಳನ್ನು ತೆರೆಯಲಾಗುವುದೆಂದೂ, ಅಗತ್ಯವಿದ್ದಲ್ಲಿ ಹೋಸ್ಟೆಲ್ ಅನುಕೂಲತೆಯನ್ನೊದಗಿಸಲಾಗುವುದೆಂದೂ ಶಾಲಾಕರೆಸ್ಪೋಂಡೆಂಟ್ ಶ್ರೀ ಪಿ. ಶಿವಾಜಿ ಶೆಟ್ಟಿ ತಿಳಿಸಿರುತ್ತಾರೆ.

ಉಡುಪಿಯಲ್ಲೊಂದು ರಾತ್ರಿ ಕಾಲೇಜು

ಉಡುಪಿಯಲ್ಲೊಂದು ರಾತ್ರಿ ಕಾಲೇಜು ಸ್ಥಾಪಿಸಲು ಪ್ರಯತ್ನಿಸಬೇಕೆಂದು ಸ್ಥಳೀಯ ಎನ್. ಜಿ. ಓ. ಎಸೋಸಿಯೇಶನ್ ನವರು ಅದನ್ನೂರು ಎಜ್ಯುಕೇಶನಲ್ ಕೌನ್ಸಿಲಿಗೆ ಮನವಿ ಮಾಡಿಕೊಂಡ ಪ್ರಕಾರ ಕೌನ್ಸಿಲು ಕಾಲೇಜು ಪ್ರಾರಂಭಿಸಬೇಕಾದರೆ 15 ರೂಪಾಯಿ ಖರ್ಚಿನ ಬಗ್ಗೆ ಮತ್ತು 140 ವಿದ್ಯಾರ್ಥಿಗಳನ್ನು ಮಾಡಿಕೊಡಬೇಕೆಂಬ ಶರ್ತಯಾಕಿದರು.

ಈ ದಿಸೆಯಲ್ಲಿ ಕೆಲಸಮಾಡುವರೆ ಉಡುಪಿ ನಾಗರಿಕರ ಸಭೆಯೊಂದು ತಾ 12ರಂದುಡೋನ್ ಬೋಸ್ಕೊ ಕ್ಲಬ್ಬಿನಲ್ಲಿ ರೆ. ಫಾ. ಸಿಲ್ವೆಸ್ಟರ್ ಡಿ'ಸೋಜರವರ ಅಧ್ಯಕ್ಷತೆಯಲ್ಲಿ ಜರಗಿ ಒಂದು ಕಾರ್ಯಕಾರಿ ಸಮಿತಿಯನ್ನು ಆರಿಸಿತು.

ಶ್ರೀ ವಿ. ಜಿ. ಕೆದ್ಲಾಯ,ಎಡ್ವೊಕೇಟ್ (ಅಧ್ಯಕ್ಷ), ರೆ. ಫಾ. ಸಿಲ್ವೆಸ್ಟರ್ ಡಿಸೋಜ, ಶ್ರೀ ಕಾಳಪ್ಪಶೆಟ್ಟಿ, ಶ್ರೀ ಸೀತಾರಾಮ ರಾವ್ ಉಪಾಧ್ಯಕ್ಷರುಗಳು, ಶ್ರೀ ಎಚ್. ಎಸ್. ಕೆದ್ಲಾಯ (ಕಾರ್ಯದರ್ಶಿ) ಶಿರ್ವಡಿ ವಿಲಿಯಂ ಪಿಂಟೋ—ಎಡ್ವೊಕೇಟ್ (ಜತೆ ಕಾರ್ಯದರ್ಶಿ), ಕೆ. ವರದರಾಯ ಪೈ—ಎಡ್ವೊಕೇಟ್ (ಖಜಾಂಚಿ) ಮತ್ತು ಇನ್ನಿತರ ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ಸರ್ವಾನುಮತದಿಂದ ಆರಿಸಿತು.

ಉಡುಪಿಯಲ್ಲಿ ರಾತ್ರಿ ಕಾಲೇಜು ಪ್ರಾರಂಭಿಸುವ ಬಗ್ಗೆ ಧನಸಹಾಯ ಒಟ್ಟುಗೂಡಿಸುವ ಕಾರ್ಯವನ್ನು ಈ ಸಮಿತಿ ನಡೆಸಿ ಉಡುಪಿ ನಾಗರಿಕರ ಕನಸು—ನನಸು ಆಗುವಂತೆ ಪ್ರಯಿಸುವುದೆಂದು ಜತೆಕಾರ್ಯದರ್ಶಿಗಳು ತಿಳಿಸುತ್ತಾರೆ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 32/66

ಅಕ್ಕು ಯಾನೆ ಚಾಕು ಹೆಂಗ್ಸು—ವಾದಿಳು.

ಮತ್ತು

ಸೋಮಪ್ಪ ಪೂಜಾರಿ ಸಹಾ—ಪ್ರತಿವಾದಿರು.

ಬೆಳ್ತಂಗಡಿ ತಾಲ್ಲೂಕು ಕರಂಬಾರು ಗ್ರಾಮದ ಪುದ್ದರೈಲು ಬಾವಡಿ ಎಂಬಲ್ಲಿರುವ ಕುಂಞ ಹೆಂಗುಸಿನ ಮಗ ಸೋಮಪ್ಪ ಪೂಜಾರಿಗೆ—

ಮೇಲಿನ ವ್ಯಾಜ್ಯದಲ್ಲಿ ನಿಮ್ಮ ಹಾಜ್ರಾತಿ ಬಗ್ಗೆ ತಾ. 4—7—1966ಕ್ಕೆ ಇಟ್ಟಿರುತ್ತದೆ. ಆದ್ದರಿಂದ ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟ ಮುಂದೆ ಸ್ವತಹಾಯಾ ವಕೀಲರ ದ್ವಾರ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾ ಮಾಡಿ ದಾವೆಯನ್ನು ಮುಂದರಿಸಲಾದೀತು.

N. J. KADAMBA
Advocate, Belthangady

ಬೆಳ್ತಂಗಡಿ, 20—6—1966

ಧರ್ಮಸ್ಥಳ ಹೈಸ್ಕೂಲ್ ಉದ್ಘಾಟನೆ

ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ತಿನೇ ಹ್ಯಾಸ್ಕೂಲಿನ ಉದ್ಘಾಟನಾ ಸಮಾರಂಭವು ತಾ. 13ರಂದು ತಾ|ಬೋ| ಅಧ್ಯಕ್ಷ ಶ್ರೀ ಜಿ. ಎಸ್. ಭಿಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಎ. ಶಂಕರಾಳ್ವ ಎಂ. ಪಿ. ಅವರಿಂದ ನೆರವೇರಿತು. ಹೆಡ್‌ಮಾಸ್ಟರ್ ಶ್ರೀ ಶ್ರೀನಿವಾಸ ರಾವ್‌ರವರು ಸ್ವಾಗತಿಸಿದರು. ಧರ್ಮಸ್ಥಳದ ಧರ್ಮದರ್ಶಿ ಶ್ರೀ ರತ್ನವರ್ಮ ಹೆಗ್ಗಡೆಯವರು ಹೈಸ್ಕೂಲಿನ ಅವಶ್ಯಕತೆಗಳ ಕುರಿತು ಮಾತನಾಡಿದರು. ಕೊನೆಯಲ್ಲಿ ಶ್ರೀ ಶ್ರೀನಿವಾಸರಾವ್‌ರವರು ವಂದನಾರ್ಪಣೆಗೈದರು.

ಬಾರಕೂರಲ್ಲಿ ಗರ್ಲ್ಸ್ ಹೈಸ್ಕೂಲ್ ಉದ್ಘಾಟನೆ

ತಾ. 8ರಂದು, ಬೋರ್ಡ್ ಗರ್ಲ್ಸ್ ಹೈಸ್ಕೂಲಿನಉದ್ಘಾಟನಾಸಮಾರಂಭವು ಬಾರಕೂರು ಬ್ಲೋಕಿನ ಡೆಪ್ಯುಟಿ ಬಿ. ಡಿ. ಓ. ಶ್ರೀ ಟಿ. ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಬಿಷಪ್ ಡಾ|| ಬಿ. ಎಸ್. ಡಿ'ಸೋಜರಿಂದ ನೆರವೇರಿತು. ರೆ| ಫಾ. ಎ. ರೋಜಾರಿಯವರು ಸ್ವಾಗತಿಸಿದರು.

ಸ್ಥಳೀಯ ನೇಶನಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಪಿ. ಎಸ್. ಭೋಜರಾಯರೂ ಸ್ಥಳೀಯ ಡಾಕ್ಟರ್ ಯು. ಶೇಷಗಿರಿರಾಯರೂ ಗರ್ಲ್ಸ್ ಹೈಸ್ಕೂಲಿನಅವಶ್ಯಕತೆಯನ್ನು ಕುರಿತು ಮಾತನಾಡಿದರು. ಕೊನೆಯಲ್ಲಿ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಎಂ. ಅಲಿಯೂರವರು ವಂದನಾರ್ಪಣೆಗೈದರು.

ಆಡಳಿತ ಸಮಿತಿ ಸಭೆ

ಉಡುಪಿ, ತಾ. 15, ದೇವಾಡಿಗರ ಸೇವಾ ಸಂಘ (ರಿ) ತೆಂಕಪೇಟೆ, ಉಡುಪಿ, ಇದರ ಆಡಳಿತ ಸಮಿತಿ ಸಭೆಯು ತಾ. 28—5—66ರಲ್ಲಿ ಜರಗಿ ಸಂಘದ ವತಿಯಿಂದ 1966—67 ನೇ ವರುಷಕ್ಕೆ, 4ನೇ ತರಗತಿಯಿಂದ 7ನೇ ರಗತಿಯಲ್ಲಿ ಕಲಿಯುತ್ತಿರುವ ದೇವಾಡಿಗ ಸಮಾಜದ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಕೊಡುವರೆ ನಿರ್ಣಯವನ್ನು ಅಂಗೀಕರಿಸಲಾಯಿತು. ವಿದ್ಯಾರ್ಥಿವೇತನವನ್ನು ಪಡೆಯಲಪೇಕ್ಷಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ತಾ. 30—6—66ರ ಒಳಗೆ ಸಂಘದ ಕಾರ್ಯದರ್ಶಿಯವರಿಗೆ ತಲುಪುವಂತೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 113/1966

M. ವೆಂಕಟೇಶ ಪ್ರಭು —ವಾದಿ.

ಸುಂದರಿ ಶೆಡ್ತಿ ಕೂಡಾ —ಪ್ರತಿವಾದಿರು.

2. Y. ಶೀನ R. ಶೆಟ್ಟಿ, Patel Restaurant, Santhacruz (East) Golibar Bombay No. 55ಎಂಬಲ್ಲಿರುವವ—

2ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ನೀವು ಮತ್ತು 1ನೇ ಪ್ರತಿವಾದಿಳು ವಾದಿಯಳಿಗೆ ಮೂಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ನಡಿಸಾಲಿ ಗ್ರಾಮದ ಆಸ್ತಿ ಬಾಬ್ತು ವಾದಿಗೆ ನಿಮ್ಮಿಂದ ಬರತಕ್ಕ ಕಳೆದ ಕ್ರೋಧಿ ಸಂವ್ರದ ಅಂತ್ಯದ ವರೆಗಿನ 6 ವರುಷಗಳ ಮೂಲಗೇಣಿ ಬಾಕಿ ಬಡ್ಡಿ ಕೂಡಾ ರೂಪಾಯಿ 99-96 ಕ್ಕೆ ವಾದಿಯು ದಾಖ್ಲು ಮಾಡಿದ ಸದ್ರಿ ದಾವೆಯು ತಾರೀಕು 8.7.1966ಕ್ಕೆ ಇಟ್ಟಿದೆ. ಆಕ್ಷೇಪ ಇದ್ದ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉತ್ತರಪಡಿಸಿ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiff.

ಕಾರ್ಕಳ, 19—6—66

ಎಂ. ಜಿ. ಎಂ. ಕಾಲೇಜಿನ ಪರೀಕ್ಷಾ ಫಲಿತಾಂಶಗಳು

ಕಳೆದ ಮಾರ್ಚ ಎಪ್ರಿಲ್‌ನಲ್ಲಿ ನಡೆದ ಪರೀಕ್ಷೆಗಳಲ್ಲಿ ಉಡುಪಿ ಎಂ. ಜಿ. ಎಂ. ಕಾಲೇಜಿನ ಪರೀಕ್ಷಾ ಫಲಿತಾಂಶಗಳು ಈ ಕೆಳಗಿನಂತಿವೆ.

ಪ್ರಿಯುನಿವರ್ಸಿಟಿಯಲ್ಲಿ 334 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, ಅವರಲ್ಲಿ 46 ಮಂದಿ ಪ್ರಥಮ; 65ಮಂದಿ ದ್ವಿತೀಯ, 95 ಮಂದಿ ತೃತೀಯ, ತರಗತಿಯಲ್ಲಿ ಉತ್ತೀರ್ಣರಾಗಿದ್ದಾರೆ, ಒಟ್ಟು ಪಾಸಾದವರ ಸಂಖ್ಯೆ 2.. ಇದ್ದು 62.6% ಫಲಿತಾಂಶ ಬಂದಿರುತ್ತದೆ.

ಬಿ. ಎ. ಡಿಗ್ರಿಯ ಪ್ರಥಮ ಪರೀಕ್ಷೆ ಪ್ರಥಮ ಭಾಗದಲ್ಲಿ 65%, ಉಳಿದ ಎರಡು ಭಾಗಗಳಲ್ಲಿ 100% ನಂತೆ ಪಾಸಾಗಿದ್ದಾರೆ. ಬಿ. ಕಾಂ. ಡಿಗ್ರಿಯ ಪ್ರಥಮ ಪರೀಕ್ಷೆ ಪ್ರಥಮ ಭಾಗದಲ್ಲಿ 77%, ದ್ವಿತೀಯ ಭಾಗದಲ್ಲಿ 100% ತೃತೀಯ ಭಾಗದಲ್ಲಿ 57.7%; ತೆಯೂ ಬಿ. ಎಸ್ ಸಿ. ಡಿಗ್ರಿಯ ಪ್ರಥಮ ಪರೀಕ್ಷೆಯ ಪ್ರಥಮ ಭಾಗದಲ್ಲಿ 56.3% ದ್ವಿತೀಯ ಭಾಗದಲ್ಲಿ 100% ತೃತೀಯ ಭಾಗದಲ್ಲಿ 95%, ನಾಲ್ಕನೇ ಭಾಗದಲ್ಲಿ 89% ವಿದ್ಯಾರ್ಥಿಗಳೂ, ಫೈನಲ್ ಬಿ. ಎ. ಪರೀಕ್ಷೆಯಲ್ಲಿ 92%, ಫೈನಲ್ ಬಿ. ಕಾಂ. ಪರೀಕ್ಷೆಯಲ್ಲಿ 54.3%, ಫೈನಲ್ ಬಿ. ಎಸ್. ಸಿ. (Math Statistics Major, Physi Minor) ಪರೀಕ್ಷೆಯಲ್ಲಿ 86% ಫಲಿತಾಂಶ ಫೈನಲ್ ಬಿ. ಎಸ್. ಸಿ. (Physi Chemistry Majors & Mat Minor) ಪರೀಕ್ಷೆಯಲ್ಲಿ 68% ಫಲಿತಾಂಶವೂ ಫೈನಲ್ ಬಿ. ಎಸ್. ಸಿ. (Botany, Zoology Majors, Chemistry Minor) ಪರೀಕ್ಷೆಯಲ್ಲಿ 60% ಫಲಿತಾಂಶವೂ ಬಂದಿರುತ್ತದೆ.

ಬಿ. ಎ. ಪ್ರಥಮ ಪರೀಕ್ಷೆಯ ನಾಲ್ಕನೇ ಭಾಗದಲ್ಲಿ 3 ನೇ ರೇಂಕನ್ನು ಇಗ್ನೇಷಿಯಸ್ ಡಿ'ಸಿಲ್ವ, ಬಿ. ಎಸ್. ಸಿ ಪ್ರಥಮ ಪರೀಕ್ಷೆಯ ಪ್ರಥಮಭಾಗದಲ್ಲಿ ಪ್ರಥಮ ರೇಂಕನ್ನು ರೂಪರ್ಟ ಎಂ ರುಸಾರಿಯೋ; ಎರಡನೇ ಭಾಗದಲ್ಲಿ 9ನೇ ರೇಂಕನ್ನು ಮಧುಸೂಧನ ಭಾಗವತ್ ಎಂ., ಮತ್ತು 10ನೇ ರೇಂಕನ್ನು ಶ್ರೀನಿವಾಸ ಶಾಸ್ತ್ರಿ ಬಿ., ನಾಲ್ಕನೇ ಭಾಗದಲ್ಲಿ 5ನೇ ರೇಂಕನ್ನು ರೂಪರ್ಟ ಎಂ. ರುಸಾರಿಯೋ ಮತ್ತು ಪ್ರೇಮಲತಾ ಪಿ., 7ನೇ ರೇಂಕನ್ನು ರೂಪಲತಾ ಕೆ., ಹಾಗೂ 9ನೇ ರೇಂಕನ್ನು ಸುಜಾತರವರು ಪಡೆದಿರುತ್ತಾರೆ.

ಬಿ. ಕಾಂ. ಪ್ರಥಮ ಪರೀಕ್ಷೆಯ ದ್ವಿತೀಯ ಭಾಗದಲ್ಲಿ ಮೊದಲನೇ ರೇಂಕನ್ನು ಗೀತಾಬಾಯಿ ಬಿ., ಮೂರನೇ ರೇಂಕನ್ನು ವಾಮನಮೂರ್ತಿ ಕೆ., ನಾಲ್ಕನೇ ರೇಂಕನ್ನು ದಯಾನಂದ ಶೆಟ್ಟಿ, 6ನೇ ರೇಂಕನ್ನು ವಿಲ್ಪ್ರೆಡ್ ರಫಾಯಲ್ ಡಿ'ಸೋಜ, 7ನೇ ರೇಂಕನ್ನು ಮೋಹನ ರಾವ್ ಪಲಿಮಾರು, ಹಾಗೂ ಎಂಟನೇ ರೇಂಕನ್ನು ಮಂಜುನಾಥ ಬಿ. ಪಿ. ಯವರು ಪಡೆದಿರುತ್ತಾರೆ. ಫೈನಲ್ ಬಿ. ಎಸ್. ಸಿ. ಯಲ್ಲಿ ಪ್ರಥಮ ರೇಂಕನ್ನು ಸುಧಾಕರ ಕೆ. ಹಾಗೂ 10 ನೇ ರೇಂಕನ್ನು ಗೋಪಾಲ ಪೂಜಾರಿಯವರು ಪಡೆದಿದ್ದಾರೆ.

ಕೃತಜ್ಞತಾ ಸಮರ್ಪಣೆ

ದಿನಾಂಕ 12—6—66ರಂದು ಕಾರ್ಕಳ ಜೈಹಿಂದ್ ಟಾಕೀಸಿನಲ್ಲಿ ನನ್ನ ಮೊಮ್ಮಗ ಜಯರಾಮನ ವಿವಾಹವು ಕೆದಿಯೂರು ರಘುನಾಥ ಸೆಟ್ಟರ ಪುತ್ರಿ ಸುವರ್ಣಲತಾಳೊಂದಿಗೂ ಮತ್ತು ನನ್ನ ಮೊಮ್ಮಗಳು ಇಂದಿರಾಳ ವಿವಾಹವು ಬಡಗುಬೆಟ್ಟು ಚಂದಯ್ಯ ಹೆಗ್ಡೇರ ಮೊಮ್ಮಗ ಗಣೇಶ್ಯಾಮನೊಂದಿಗೂ ಜರಗಿದ ಸಂದರ್ಭದಲ್ಲಿ ಆಗಮಿಸಿ ಉಡುಗೊರೆಯಿತ್ತು ಆಶೀರ್ವದಿಸಿದ ಮತ್ತು ಶುಭ ಸಂದೇಶಗಳನ್ನು ಕಳುಹಿಸಿದ ಬಂಧುಮಿತ್ರರಿಗೆ ಈ ಮೂಲಕ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಿಂಜೂರು ಚಿತ್ರಬೈಲು ತಿಮ್ಮಪ್ಪ ಸೆಟ್ಟಿ

ಕ್ಷೈತ್ರ ಮುರುಗ

(ಎರಡನೇ ಪುಟದಿಂದ)

'ಹಾಗಾದಲ್ಲಿ ಅದಕ್ಕೇಕೆ ಹಿಂದಕ್ಕೆ ಕೊಟ್ಟುಬಿಡಬಾರದು?'

"ಹಾಗೆಯೇ ಸರಿ; ನಾನೂ ಅದನ್ನೇ ಳುವದು, ಕೇದಾರಿ. ಉತ್ತಮ ಅರ್ಥದಲ್ಲಿ ಹೇಳುವದಾದರೆ ಜೀವಿಗಳೆಲ್ಲವೂ ತಮ್ಮಾರಿಯತ್ತ ಕಂಡು ಹಲುಬುತ್ತಿವೆ. ಸಾವಿರಾರು ವರ್ಷಗಳು ದಾಟಿದರೂ ಈ ಕಾಂಕ್ಷೆಗಳೆಲ್ಲವೂ ನಮ್ಮದೇ ಇವೆ. ಪ್ರಭಾಕರನಿಂದ ಪ್ರಕಾಶ ಹರಿಯುತ್ತಿರುವಂತೆ, ಸ್ವರ್ಗದಲ್ಲಿ ನೋವು ರಹಿತ ಹಾಗೂ ಹಿಂಸಾಶೂನ್ಯ ಬೀಳುತ್ತಿರುವ ಆಹಾರವೇ ಚಲನೆಯ ಕೀರ್ತಿಯನ್ನು ಬೆಳೆಸುತ್ತಿದೆ. ವಿಜ್ಞಾನದ ಆತ್ಮವೇ ಅಹಿಂಸೆ ಇದೆ; ದೈನಂದಿನ ಕೂಲಿಕಾಗಿ ಪಡಬೇಕಾಗಿರುವ ಅಪರಿಮಿತ ಶ್ರಮವನ್ನು ತಪ್ಪಿಸಲಿಕ್ಕಾಗಿ ವಿಜ್ಞಾನವಿದೆ. ವಿಜ್ಞಾನ ಕಾಣಿಕೆಯೂ ದಿನ ಮತೇಯು ಕಾಣಿಕೆಗಳಂತೆ ಮಹತ್ವಪೂರ್ಣವಿದ್ದಿವೆ. ಕೇವಲ ಯೋಚನೆಯೇ ಒಂದು ದಿನ ಶಕ್ತಿಯಾಗಬಹುದು. ಅಂಥೊಂದು ದಿನ ಬರಲಿಕ್ಕಿದೆ, ಆಗ ನಾವು ಮನಸ್ಸು ಬಂದಂತೆ ಎಲ್ಲಿ ಬೇಕಾದರೆ ಅಲ್ಲಿ ಹಾರಾಡಬಹುದು. ಆಗ ವಿಮಾನದ ಕಾಲವು ಮುಗಿದಿರುತ್ತದೆ. ಹಾರಾಡಲಿಕ್ಕೆ ರೆಕ್ಕೆಗಳೂ ಬೇಕಾಗಲಿಕ್ಕಿಲ್ಲ— ಅಂತಹ ಸ್ಥಿತಿ ಬರಬಹುದು. ಆಗ ಮಕ್ಕಳು ಕಣ್ಣು ಮುಚ್ಚಾಲೆ ಆಡುವಂತೆ ನಕ್ಷತ್ರದಿಂದ ನಕ್ಷತ್ರಕ್ಕೆ ನೆಗೆಯ ಬಹುದು.'

"ಆಹಾ! ಚಲೋ ಕನಸು; ತಿಂಗಳ ಬೆಳಕಿಗಿಂತಲೂ ಚಲೋದು. ಈಗ, ರಾಮು ಈ ಸುಂದರ ಕನಸಿನಲ್ಲಿ ನಾವು ಬಂಧಿತರಾಗಿದ್ದೇವೆ...."

"ಹೌದು, ಕೇದಾರಿ. ಜೀವನವೀಗ ಬ್ಯಾಂಕಸನಗಳ ಗೋಲದಂತೆ ಕಾಣುತ್ತದೆ. ನಾವು ಅದಕ್ಕೆ ಸುತ್ತು ಬರುತ್ತಿದ್ದೇವೆ. ನಾವು ತಿಂಬದಕ್ಕೆ ಕೆಲಸಮಾಡುತ್ತೇವೆ; ಕೆಲಸ ಮಾಡಿದ್ದಕ್ಕೆ ತಿನ್ನುತ್ತೇವೆ. ಪ್ರತಿ ಹೆಜ್ಜೆಯೂ ಒಂದನ್ನು ಇನ್ನೊಂದು ಮೀರಲು ಯತ್ನಿಸುತ್ತವೆ. ಈ ಕೆಲಸಕಾರ್ಯಗಳಿಂದ ಮುಕ್ತವಾಗಲು ಜೀವ ಇಚ್ಛೆಪಡುತ್ತದೆ' ಎಂದು ತಿಳಿಸಿದ ರಾಮು ಮುಂದುವರಿಸಿದನು 'ಆದುದರಿಂದಲೇ ಸುಖೀ ಶ್ರೀಮಂತರು ತಮ್ಮ ಆಹಾರಕ್ಕಾಗಿ ಬೆವರನ್ನು ಸುರಿಸುವದಿಲ್ಲ, ಅವರು ಆಲಸಿಗಳಂತೆ ಇದ್ದು ಪ್ರಪಂಚವನ್ನು ನಡೆಸುತ್ತಿದ್ದಾರೆ. ಅವರು ಸಾಹಿತ್ಯ, ಕಲೆ, ವಿಜ್ಞಾನ ಅಲ್ಲದೆ ನಭೋಮಂಡಲದಲ್ಲಿರುವ ನಕ್ಷತ್ರಗಳ ಕುರಿತು ಮೃದು ಸ್ವರದಿಂದ ಕೊಳಲಾಡುತ್ತಾರೆ. ನಮ್ಮ ನಾಗರಿಕತೆಯು ಇಂದು ನಿರ್ಭಾಗ್ಯಸ್ಥಿತಿಗೆ ಬಂದಿದೆ. ನಾವು ನೇಯುತ್ತಿರುವದು ಜೇಡರ ಹುಳದ ಬಲೆಯನ್ನು; ಅದನ್ನು ಗಾಳಿಯು ಒಂದೇ ರಾತ್ರಿಯೊಳಗೆ ಹಾರಿಸಿ ಬಿಡಬಲ್ಲುದು. ಭವಿಷ್ಯತ್ತೇನೋ ದೈವ ನಿಶ್ಚಿತವೇ ನಿಜ. ಆದರೆ ತನ್ನ ಕೋಪ, ವೈರತ್ವ, ಅಜ್ಞಾನಗಳಿಂದ ಮನುಷ್ಯನು ಅಮೃತಫಳಿಗೆ ಆಗಮಿಸುವದನ್ನು ಸ್ವಲ್ಪ ಹಿಂದಕ್ಕೆ ಸರಿಸಬಹುದು. ನಾವು ಯಾವಾಗಲೂ ನಿಶ್ಚಿತ ಧ್ಯೇಯವುಳ್ಳವರಾಗಿರಬೇಕು. ದೈವಿಕ ದಾರಿಯಲ್ಲಿ ಒಂದು ಸಂಯಮದ ಹೆಜ್ಜೆ ಹಾಕಿದರೆ ಸಾಕು."

"ಆದರೆ ರಾಮು, ನಿನ್ನ ತತ್ವೋಪದೇಶಗಳೆಲ್ಲವೂ ಪಿಕಾಸದ ದೃಷ್ಟಿಯಲ್ಲಿ ಒಂದು ಮಿಲಿಯ ವರ್ಷಗಳ ಮೇಲೆ, ಸರ್ವಸಾಧಾರಣ ರೀತಿದ್ದು ಅಲ್ಲದೆ ಬಹುಶಃ ಒಳ್ಳೆಯದೂ ಇರಬಹುದು. ಪೂರ್ತಿ ಅವರ ವಿಷಯ ನಾನು ಹೇಳಲಾರೆ. ನಿನ್ನ ತತ್ವದ ಮುಖ್ಯಾಂಶ ಗೊತ್ತಾಯಿತು. ಆದರೆ ಇಂದಿನ ಈ ಪ್ರಚಲಿತ ಪರಿಸ್ಥಿತಿಯಲ್ಲಿ— ನಾಗರಿಕ ಜೀವನದ ದಾರಿಯನ್ನು ಕಡಿಯದೆ— ನೀನು ಅದೆಂತು ಕಾರ್ಯಮಗ್ನನಾಗಬಹುದು?'

"ಹಾಗೆ ಮಾಡುವದು ಅದು ಬಹಳ ಸುಲಭದ ವಿಷಯ, ಕೇದಾರಿ. ದೃಷ್ಟಿಯನ್ನು ಒಂದೆಡೆಯಲ್ಲಿಯೇ ಕೇಂದ್ರೀಕರಿಸಿ ತಾಳ್ಮೆಯಿಂದ ಆ ನೂಲಿನ ಗಂಟನ್ನು ಬಿಡಿಸಬೇಕು. ಈ ನಾಗರಿಕ ಜೀವನದ ಬಾಹ್ಯಾಡಂಭರದಿಂದ ಜನತೆಯನ್ನು ಮುಕ್ತಗೊಳಿಸಬೇಕಾದರೆ ಬಹಳ ವೇಳೆ ವ್ಯರ್ಥವಾಗಲೂ ಬಹುದು. ಈಗಾವರೂ ಆ ಕಾರ್ಯವನ್ನು ಆರಂಭಿಸಬೇಕು. ನಿನಗೆ ಬೇಕಾಗಿರುವದಕ್ಕಿಂತ ಹೆಚ್ಚಿಗೆ ಆಹಾರಕ್ಕಾಗಿ ನೀನು ಹೋರಾಡಕೂಡದು. ಸ್ವಸಂತೋಷದಿಂದ ನೀನೇ ಮಾಡಿದ ವಸ್ತುವಿನ ಮೇಲೆ ನಿನಗೊಂದಿಷ್ಟು ಅಧಿಕಾರವಿರುವದಿಲ್ಲ. ಅದೇ ಸುವರ್ಣ ಯುಗ— ಅದರಲ್ಲೇ ನಿನ್ನ ಕಷ್ಟಕಾರ್ಪಣ್ಯಗಳ ಆ ಭಾರ ಹೋಗಿಬಿಡಬೇಕು. ನಿನ್ನನ್ನದು ದೈವಿಕತೆಯತ್ತ ಒಯ್ಯಬೇಕು, ಇತರರಿಗೆ ನೀನು ಗುಲಾಮನಾಗಿರಬೇಡ. ಅವರಿಗಾಗಿ ನೀನು ಬೆವರು ಸುರಿಸುವುದೂ ಬೇಡ. ಈ ಒಂದು ಸ್ವಾರ್ಥಪೂರ್ಣ ನಿಯಮವೇ ತ್ಯಾಗಭರಿತ ಫಲವನ್ನೀಯುತ್ತದೆ. ಹಾಗೆ ಮಾಡಿದಲ್ಲಿ ಉತ್ತಮ ಕನಸು ಕಾಣಲು, ಜೀವನದಲ್ಲಿ ಸುಖಪಡಲು ಬೇಕಾದಷ್ಟು ಸಮಯ ಸಿಗುತ್ತದೆ. ಇದುವೆ ಸೋಪಾನದ ಪ್ರಥಮ ಮೆಟ್ಟಿಲು. ಇದುವೆ ಏಳು ಪರ್ವತಗಳಲ್ಲಿಯ ಮೊದಲ ಕಠಿಣ ಪರ್ವತ. ಅದರಾಚೆ ಇರುವದೇ ಬಯಲು ಭೂಮಿ. ಅಲ್ಲಿ ದೇವತೆಗಳು ವಾಸಿಸುತ್ತಿದ್ದಾರೆ. ಅಲ್ಲಿ ಆಶೆ, ನೋವು, ಹಸಿವು ಹಾಗೂ ಸ್ವಾರ್ಥಗಳಿಗೆಡೆಯಿಲ್ಲ. ಅಲ್ಲಿ ಶಾಂತಿ, ಮಮತೆ ಹಾಗೂ ಜ್ಞಾನಕ್ಕೆ ಮಾತ್ರ ಸ್ವಾಗತವಿದೆ.

ಕೇದಾರಿಗೆ ಇದೊಂದೂ ಅರ್ಥವಾಗಲಿಲ್ಲ. ಆದರೆ ಆ ಮಾತಿನ ಸರಣಿಯು ತಿಂಗಳ ಬೆಳಕಿನೊಂದಿಗೆ ಸೇರಿದಾಗ ಅವನಿಗೆ ಆನಂದವಾಯಿತು. ಆದುದರಿಂದ ರಾಮು ಹೇಳುತ್ತ ಹೋಗುತ್ತಿದ್ದಾಗ ನಡುವೆ ಬಾಯಿ ಹಾಕಲು ಅವನಿಗೆ ಧೈರ್ಯ ಬರಲಿಲ್ಲ.

"ಕೇದಾರಿ, ನಮ್ಮ ದುಃಖಾವಸ್ಥೆಯಲ್ಲಿ ಅರ್ಧಾಂಶ ಸ್ವದಂಡನೆ ಹಾಗೂ ಮಾನವ ನಿರ್ಮಿತ. ಸತ್ಯವನ್ನಾಡಲು ಜನರಲ್ಲಿ ಕೆಚ್ಚಿಲ್ಲದಿರುವದೇ ದುಃಖಾವಸ್ಥೆಗೆ ಕಾರಣ. ಸತ್ಯದ ಕುರಿತು ಅವನು ಆಲೋಚಿಸುವದೂ ಇಲ್ಲ. ಅವನು ಸತ್ಯವನ್ನಾಡುವದೂ ಇಲ್ಲ; ಇನ್ನು ಕಾರ್ಯದಲ್ಲಂತೂ ಕೇಳುವದೇ ಬೇಡ. ಅಧಿಕಾರದ ಪಟ್ಟವನ್ನು ಹಾಗೂ ಅತ್ಯಂತ ಆಕರ್ಷಣೆಯುಳ್ಳ ಗದ್ದುಗೆಯನ್ನಾರಿಗೂ ಕೊಡಬಾರದು. ಇನ್ನೊಬ್ಬನಿಗೆ ಆಜ್ಞೆ ನೀಡುವ ಅಧಿಕಾರ ಯಾರಿಗೂ ಇರಬಾರದು. ಇನ್ನೊಬ್ಬನನ್ನು ಯಾವ ಕೆಲಸಕ್ಕಾದರೂ ಬಲಾತ್ಕರಿಸದೇ ಇರುವದು ಸ್ವಚ್ಛ ಮನಸ್ಸಿನ ಲಕ್ಷಣ. ಮನಸ್ಸಿಲ್ಲದೆ ಕೇವಲ ಬಲಾತ್ಕಾರಕ್ಕಾಗಿ ಅಥವಾ ದಾಕ್ಷಿಣ್ಯಕ್ಕಾಗಿ ಮಾಡಿದ ಕೆಲಸವು ಸರಿಯಾಗಿರುವದಿಲ್ಲ. ಯಾವಾಗಲೂ ಫಲಾಪೇಕ್ಷೆ ಮಾಡದೆ ಕಾರ್ಯವನ್ನು ಮಾಡಬೇಕು.

ರಾಮು ಕ್ಷಣಕಾಲ ಸುಮ್ಮಗಾದನು. ಆಗ ಅವನು ಮಳಲ ರಾಶಿಯ ಮೇಲೆ ಮಳಲನ್ನು ಹಾಕಿ, ಚಿಕ್ಕ ಮಗುವಿನ ಹಾಗೆ, ಅದರ ಬೆಳವಣಿಗೆಯನ್ನು ಕಾಣುತ್ತ ಆನಂದಪಟ್ಟನು. ಅನಂತರ ಶಾಂತ ಸ್ವರದಿಂದ ಮುಂದರಿಸಿದನು. "ಕೇದಾರಿ, ನಿಜ ಸಂಗತಿಯೆಂದರೆ ಕಾರ್ಯಕ್ಕೆ ಕಾರಣ ಕಾಮನೆಯಲ್ಲ, ಆದರೆ ಕಾರ್ಯವೇ ಕಾಮನೆಗೆ ಕಾರಣ. ಮಾನವರ ಬಾಳನ್ನು ಅದೊಂದು ರೀತಿಯ ಸಸ್ಯಕ್ಕೆ— ಬೇರುಗಳ ಮೂಲಕ ಹೆಚ್ಚಾಗಿ ಆಹಾರ ಪಡೆದುಕೊಳ್ಳದೆ, ಎಲೆಗಳ ಮತ್ತು ಹೂಗಳ ಮೂಲಕ ಪಡೆದುಕೊಳ್ಳುವ ಸಸ್ಯಕ್ಕೆ ಹೋಲಿಸಬಹುದು. ವಿಕಾಸದ ಗುರಿಯು ನಿಷ್ಕ್ರಿಯೆ, ವಿಶ್ರಾಂತಿ ಮತ್ತು ಶಾಂತಿ. ಹಾಗಿದ್ದಲ್ಲಿ ಮಾತ್ರ ಮಾನವ ಸ್ವತಂತ್ರನಾಗಿ, ಕೆರೆಯಲ್ಲಿರುವ ಕಮಲದ ಹಾಗೆ ಅಥವಾ ಬಯಲಲ್ಲಿರುವ ನೈದಿಲೆಯ ಹಾಗೆ ಬಾಳಬಹುದು. ಹೀಗೆ ಪ್ರೀತಿ ಹಾಗೂ ಬುದ್ಧಿಪೂರ್ವಕವಾಗಿ ಕೆಲಸ ಮಾಡಬೇಕಲ್ಲದೆ, ಸಂಗಾತಿಯು ಕಾರ್ಯಪ್ರವೃತ್ತನಾಗುವಂತೆ ಮಾತ್ರ ನಾವು ಕೆಲಸ ಮಾಡಬಾರದು. ಖಂಡಿತವಾಗಿ, ಹಾಗೆ ಮಾಡಿದದಲ್ಲಿ, ಕ್ಲಿಷ್ಟ ಕಾಲದಲ್ಲಿ ಪರಮೇಶ್ವರನ ಪಾದಪೀಠವನ್ನು ತಲಪಬಹುದು."

"ಇದು ನವಸಂದೇಶ, ರಾಮು, ಬಹುಶಃ ಇಷ್ಟರ ವರೆಗೆ ನನಗೆ ಹಾಗೂ ಸಾಮಾನ್ಯ ಜನತೆಗೆ ಇದು ಹೊಳೆಯದಿರುವ ವಿಷಯ. ಇದು ಬಹಳ ವೈರಾಗ್ಯದ್ದು, ಹೊಸತು ಹಾಗೂ ಸ್ವಚ್ಛತೆಯುಳ್ಳದ್ದು. ಇದು ಸ್ವಾಧವೇ? ನಿನ್ನ ಈ ತತ್ತ್ವಕ್ಕೆ ಗೀತಕ್ಕೆ ಅಧಿಕಾರ ವರ್ಗ ಹಾಗೂ ಸ್ಥಿರ ಪಕ್ಷಪಾತ ಮನೋಭಾವನೆ ಉಳ್ಳವರು ಕಿವಿಗೊಡುವರೇ?"

ಕೇದಾರಿಯ ಮಾತುಗಳಿಗೆ ರಾಮು ಉತ್ತರಕೊಡಲಿಲ್ಲ. ಅವನು ಅವಾಗಲೇ ನಡು ಬಾನಿಗೆ ಬಂದಿದ್ದ ಚಂದ್ರನತ್ತ ನೋಡಿದನು, ಹಾಗೆಯೇ ಚಲಿಸುವ ಮಳಲ ಮೇಲೆ ಮಲಗಿದನು. ಅವನು ಹೊಸ ಆಲೋಚನೆಯ ಆಳಕ್ಕಾಗಿ, ಕಡಲಿನ ಕಲಕಲರವವನ್ನು ಪೂರ್ಣ ಮನಸ್ಸಿನಿಂದ ಕೇಳುತ್ತಿರುವವನಂತೆ ಇದ್ದನು. ಮೌನದಿಂದ ಕೇದಾರಿಯು ತನ್ನ ಗೆಳೆಯನು ಗೀತವನ್ನು ಮುಂದರಿಸುವದನ್ನೇ ಕಾಯುತ್ತಿದ್ದನು. ಆದರೆ ಅವನಿಗೆ ಕೇಳಿ ಬಂದುದ್ದು ಸಮುದ್ರದ ಸ್ವಚ್ಛ ಸ್ವರ ಮಾತ್ರ.

(ಮುಂದುವರಿಯುವದು)

ಉಡುಪಿ ಕರ್ನಾಟಕ ಸಂಘದ

ದೊಂದು ರೂಪಾಯಿ ಬೆಲೆಯ

ನೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ರಾಘವೇಂದ್ರ ಆಚಾರ್ಯ, ಎಂ.ಎ

ಸಾಮಾನ್ಯ ರೋಗಗಳು

ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೆಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ಪರೀಕ್ಷೆ

ಡಿಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ಕಾರ್ಯಾಲಯ ಪುಸ್ತಕ ಭಂಡಾರ, ಉಡುಪಿ

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ

ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-1

NAVAYUGA 23—6—1966
Registered with the Registrar
of News Papers for India
under No. R. N. 3546/'57

REGD. No: B. G. 176
LICENCE No. 31
Licensed to Post without Prepayment

ಖಗೋಳ

ನಮ್ಮ ಭೂಮಿಗೆ ಅನೇಕ ಚಂದ್ರರು

ಭೂಮಿಯು ಸುತ್ತಲೂ ಅನೇಕ ಗ್ರಹಗಳಿವೆ. ಚಂದ್ರ ಗ್ರಹವು ಭೂಮಿಯಿಂದಒಡೆದುಹೋಗಿದೆಯೆಂದು ಕೆಲವರೂ, ಚಂದ್ರಗ್ರಹವು ಹೊರಗೆ ಎಲ್ಲೋ ಸುತ್ತುತ್ತಿದ್ದು ಅಕಸ್ಮಾತ್ ಭೂಮಿಯ ಪಥದೊಳಗೆ ಸಿಕ್ಕಿ, ಸುತ್ತುತ್ತಿದೆ ಎಂದು ಮತ್ತೆ ಕೆಲವರೂ ಅಭಿಪ್ರಾಯ ಪಟ್ಟಿದ್ದಾರೆ.

ರಷ್ಯಾ ದೇಶದ "ಲ್ಯೂನಾ ೯೦" ಕ್ಷಿಪಣಿಯು ಚಂದ್ರ ಮಂಡಲದ ಮೇಲೆ ಇಳಿದುದರಿಂದ ಚಂದ್ರ ಗ್ರಹದ ಮೇಲೆ ಇದ್ದ ಅಭಿಪ್ರಾಯಗಳೇ ಬದಲಾಯಿಸಿವೆ. ಹಿಂದಿನ ಕಾಲದಲ್ಲಿ ಕೆಲವು ವಿಜ್ಞಾನಿಗಳು ಕೆಲವು ಊಹೆಗಳಿಂದ ಗ್ರಹಗಳ ರಚನೆ ಮತ್ತಿತರ ವಿಷಯಗಳನ್ನು ತೀರ್ಮಾನಿಸುತ್ತಿದ್ದರು. ಈಗ ಅಮೇರಿಕಾದಿಂದ ಬಿಟ್ಟ ಅಂತರಿಕ್ಷದ ಕ್ಯಾಪ್ಸೂಲುಗಳು ರಷ್ಯದ ಲ್ಯೂನಾ ಕ್ಷಿಪಣಿಗಳ ಚಂದ್ರಗ್ರಹ ಪ್ರವೇಶದಿಂದಲೂ ಪಶ್ಚಿಮ ಜರ್ಮನಿಯ ಖಗೋಳ ಶಾಸ್ತ್ರಜ್ಞರು ಹೇಳಿದ್ದ ಕೆಲವು ವಿಚಾರಗಳು ಈಗ ನಿಜವೆಂದು ಕಂಡು ಬರುತ್ತಿವೆ. ಪ್ರೊ. ಡಾ. ಹ್ಯಾನ್ಸ್ ಹ್ಯಾಷ್ನರ್‌ರವರು ಹ್ಯಾಂಬರ್ಗ್-ಬರ್ಜ್‌ಗ್ರಾಫ್‌ನಲ್ಲಿನ ವಾತಾವರಣ ಪರೀಕ್ಷಾ ಕೇಂದ್ರದಲ್ಲಿದ್ದಾರೆ. ಅವರು ಸದ್ಯಕ್ಕೆ ಆಫ್ರಿಕಕ್ಕೆ ಹೋಗಿದ್ದಾರೆ. ಯೂರೋಪಿನಲ್ಲೇ ಅತ್ಯಂತ ನಿಪುಣರಾದ ಖಗೋಳ ಶಾಸ್ತ್ರಜ್ಞರಲ್ಲೊಬ್ಬರೆಂದು ಅವರನ್ನು ಪರಿಗಣಿಸಲಾಗಿದೆ.

ಪ್ರೊ. ಹ್ಯಾಷ್ನರ್‌ರವರು ರಷ್ಯಾ ದೇಶದ "ಲ್ಯೂನಾ ೯" ಚಂದ್ರ ಮಂಡಲವನ್ನು ಸೇರಿ ಅಲ್ಲಿಂದ ಚಿತ್ರಗಳನ್ನು ವಾತಾವರಣ ಮೂಲಕ ಕಳುಹಿಸಿ ಜನರನ್ನು ಆಶ್ಚರ್ಯಗೊಳಿಸುವುದಕ್ಕೆ ಮೊದಲೇ ಚಂದ್ರನ ಮೇಲು ಭಾಗವು ಸೂಕ್ಷ್ಮವಾದ ರಂಧ್ರಮಯವಾಗಿದೆಯೆಂದೂ ಆದರೆ ಅದು ಗಟ್ಟಿಯಾಗಿರುವುದಾಗಿಯೂ ಹೇಳಿದ್ದರು. ಆದರೆ "ಲ್ಯೂನಾ ೯" ಕಳುಹಿಸಿದ ಚಿತ್ರಗಳಿಂದಲೂ ಚಂದ್ರನ ಮೇಲು ಭಾಗವು ಸೂಕ್ಷ್ಮವಾದ ಧೂಳಿನಿಂದ ಕೂಡಿದೆಯೆಂದೂ ತಿಳಿದು ಬಂದಿದೆ ಎಂದು ತಿಳಿಸಿರುವುದರಿಂದ ಪ್ರೊ. ಹ್ಯಾಷ್ನರ್‌ರವರ ಅಭಿಪ್ರಾಯವನ್ನು ಸಮರ್ಥಿಸಿದಂತಾಯಿತು.

ಪ್ರೊ. ಹ್ಯಾಷ್ನರ್‌ರವರು ಚಂದ್ರಮಂಡಲವು ಭೂಮಿಯು ತಿರುಗುವ ವೇಗದಲ್ಲಿ ಸಾವಿರಾರು ವರ್ಷಗಳ ಹಿಂದೆ ಹೊರಗೆ ಬಂದ ಭಾಗವಲ್ಲವೆಂದೂ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿ ಎಲ್ಲಾ ಭಾಷೆಗಳಲ್ಲಿಯೂ ಹೊಗಳಿ ಬರೆದಿರುವ ಸುಂದರವಾದ ಚಂದ್ರಗ್ರಹವು ಏಕಾಂಗಿಯಾಗಿ ಆಕಾಶದಲ್ಲಿ ಸುತ್ತುತ್ತಿದ್ದ ಒಂದು ಗ್ರಹವೆಂದೂ ಆಕಸ್ಮಾತ್ತಾಗಿ ಚಲನೆಯ ದಾರಿಯು ತಪ್ಪಿ ಭೂಮಿಯ ಆಕರ್ಷಣೆಗೆ ಸಿಕ್ಕಿ ಬೇರೆ ಅಕ್ಷದ ಮೇಲೆ ಸುತ್ತುತ್ತಿದೆಯೆಂದೂ ಅಭಿಪ್ರಾಯಪಟ್ಟುಕೊಂಡಿದ್ದಾರೆ. ಇದರಿಂದಲೇ ಚಂದ್ರನ ಮೇಲಿನ ಮಚ್ಚೆಗಳು ಧೂಮಕೇತುಗಳು ಬಿರುಸಾಗಿ ತಗಲಿದುದರಿಂದ ಆಗಿದೆಯೆಂದೂ ಕೂಲಂಕುಷವಾಗಿ ಪರಿಶೀಲಿಸಿದಾಗ ಚಂದ್ರನ ಸಾಪೇಕ್ಷ ಸಾಂದ್ರತೆಯು ಕೇವಲ ೩.೩೪ ಗ್ರ್ಯಾಮ್ ಒಂದು ಘನ ಸೆಂಟಿಮೀಟರ್‌ಗೆಂದೂ ಆದರೆ ಭೂಮಿಯ ಸಾಂದ್ರತೆಯು ೫.೫೨ಗ್ರಾಂ ಒಂದು ಘನ ಸೆಂಟಿ ಮೀಟರ್‌ಗೆಂದೂ ತಿಳಿದುಬಂದಿದೆ. ಈ ಫಲಿತಾಂಶಗಳಿಂದ ಚಂದ್ರನು ಭೂಮಿಯ ಭಾಗವಲ್ಲವೆಂದು ಖಚಿತವಾಗಿ ತಿಳಿದುಬರುತ್ತದೆ.

ಆದರೆ ಪ್ರೊ. ರಾಬರ್ಟ್ ಎಸ್. ಡೀಟ್ಜ್ ಮತ್ತು ಸೋವಿಯತ್‌ನ ಪ್ರಾಣಿ ಶಾಸ್ತ್ರಜ್ಞರಾದ ಪ್ರೊ. ಯ್ಯೂರಿಅಲ್ ಪಟೋರವರ ಅಭಿಪ್ರಾಯದಂತೆ ಚಂದ್ರನ ಮೇಲಿನ ಕಲೆಗಳು ಅಗ್ನಿಪರ್ವತದ ಅವಶೇಷಗಳಾಗಿದ್ದಲ್ಲಿ ಆ ಗ್ರಹವೂ ಒಂದಾನೊಂದು ಕಾಲದಲ್ಲಿ ಭೂಮಿಯಿಂದ ಬೇರೆಯಾದ ಭಾಗವೆಂಬ ಅಭಿಪ್ರಾಯ ನಿರ್ಧಾರವಾಗುವುದು. ಆ ರೀತಿಯಾಗಬೇಕಾದರೆ ಭೂಮಿಯು ಈಗ ಸುತ್ತುವ ವೇಗಕ್ಕಿಂತಲೂ ಹೆಚ್ಚು ವೇಗದಲ್ಲಿ ತನ್ನ ಅಕ್ಷದ ಮೇಲೆ ಸುತ್ತುತ್ತಿದ್ದಿರಬೇಕು. ಹಾಗೆ ಸುತ್ತುವಾಗ ಭೂಮಧ್ಯ ರೇಖೆಯ ಭಾಗದಿಂದ ಒಂದು ಚೂರು ಹೊರಕ್ಕೆ ಕವಣೆಕಲ್ಲಿನಂತೆ ಹಾರಿರಬೇಕು. ಜರ್ಮನಿಯ ಮತ್ತೊಬ್ಬ ಖಗೋಳ ಶಾಸ್ತ್ರಜ್ಞರಾದ ಹೇನ್‌ರಿಚ್ ಜರ್‌ಸ್ಟೆನ್‌ಕಾರ್ನ್‌ರವರು ಜರ್ಮನಿಯಲ್ಲಿ ಪ್ರಯೋಗವನ್ನು ನಡೆಸಿ ಕೋಟ್ಯಾಂತರ ವರ್ಷಗಳ ಹಿಂದೆ ಭೂಮಿಯು ತನ್ನ ಅಕ್ಷದ ಮೇಲೆ ೬.೯ ಘಂಟೆಗಳಲ್ಲಿ ಸುತ್ತುತ್ತಿತ್ತೆಂದು ತಿಳಿಸಿದ್ದಾರೆ.

ಈಗಿನ ಜರ್ಮನಿಯ ಭೂಮಿಯ ಭೌತ ಶಾಸ್ತ್ರಜ್ಞರು ಪೆಸಿಫಿಕ್ ಸಾಗರ ವಿಭಾಗದಿಂದ ಭೂಭಾಗವು ಹೊರಕ್ಕೆ ಬಂದು ಚಂದ್ರಗ್ರಹವಾಗಿದೆಯೆಂದೂ ಸಿಯಾಲ್ ಎಂಬ ಪದರವು ಆ ಜಲಭಾಗದಲ್ಲಿ ಈಗ ಇಲ್ಲವೆಂದು ಆ ಪದರದ ಸಾಂದ್ರತೆಯೂ ಚಂದ್ರನ ಸಾಂದ್ರತೆಯೂ ಒಂದೇ ಆಗಿರುವುದೆಂದು ಹೇಳುತ್ತಾರೆ. ಆದರೆ ಈಚೆಗೆ ಚಂದ್ರನ ಮೇಲೆ ಕೆಂಪು ಚುಕ್ಕೆಗಳಿವೆಯೆಂದೂ ಹೇಳಿರುವುದರಿಂದ ಅದು ನಿಜವಾಗಿಯೂ ಅಗ್ನಿ ಪರ್ವತದ ಕಾರ್ಯವೆಂದೂ ಪ್ರೊ. ಆಲ್ಟ್‌ಟೋವ್‌ರವರು ಚಂದ್ರಗ್ರಹವು ಒಂದು ನಿರ್ಜೀವ ಗ್ರಹವಲ್ಲವೆಂದೂ ಅಲ್ಲಿ ಪುರಾತನ ಜೀವಿಗಳಿರಬಹುದೆಂದೂ ಚಂದ್ರನ ಹಾಗೆ ಇನ್ನೂ ಅನೇಕ ಗ್ರಹಗಳಿವೆಯೆಂದೂ ಅವು ಚಂದ್ರಗ್ರಹ ಸೃಷ್ಟಿಯಾದಾಗ ಬೇರ್ಪಟ್ಟುವುಗಳೆಂದೂ ಅಭಿಪ್ರಾಯವನ್ನು ಪಟ್ಟಿದ್ದಾರೆ. ಈ ರೀತಿಯ ಭಿನ್ನಾಭಿಪ್ರಾಯಗಳಿರುವುದರಿಂದ ಸತ್ಯಾಂಶವು ತಿಳಿಯಬೇಕಾದರೆ ಮಾನವನು ಚಂದ್ರ ಮಂಡಲಕ್ಕೆ ಹೋದ ಮೇಲೆಯೇ ಸಾಧ್ಯವೆಂದೂ ಪ್ರೊ. ಡಾ. ಹ್ಯಾಷ್ನರ್‌ರವರ ಅಭಿಪ್ರಾಯ.

ನವಯುಗ

ವಿನಂತಿ

ಕನ್ನಡದಲ್ಲಿ ವಾರಪತ್ರಿಕೆಗಳೇ ಇಲ್ಲದ ಆ ಕಾಲದಲ್ಲಿ ಕನ್ನಡಿಗರಲ್ಲಿ ರಾಷ್ಟ್ರೀಯ ಭಾವನೆಯನ್ನು ಪಸರಿಸಿ ನವಯುಗದ ಸಂದೇಶವನ್ನೂ ಅವರೆಲ್ಲರಿಗೆ ತಲಪಿಸಿ ರಾಷ್ಟ್ರೋದ್ಧಾರಕ್ಕಾಗಿ ಕಳೆದ ೪೫ ವರ್ಷಗಳಿಂದಲೂ ದುಡಿಯುತ್ತಿರುವ ಪತ್ರಿಕೆ ನವಯುಗ. ಕಾಲಕಾಲಕ್ಕೆ ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ, ಜನಮನೋರಂಜಕವಾದ ವಿಷಯಗಳಿಂದಲೂ ವಿಷಯ ಪರಿಪ್ಲುತ ಲೇಖನಾದಿಗಳಿಂದಲೂ ಅಡಕವಾಗಿದ್ದು ಪ್ರತಿವಾರವೂ ನಿಶ್ಚಿತ ದಿನದಂದು ಪ್ರಕಟವಾಗಿ ಚಂದಾದಾರರ ಕೈ ತಪ್ಪದೆ ಸೇರುತ್ತದೆ.

ಪತ್ರಿಕೆಗಳು ಸ್ವಾವಲಂಬಿಯಾಗಿರಬೇಕಾದರೆ ಚಂದಾದಾರರ ಸಂಖ್ಯೆ ಹೆಚ್ಚಿರಬೇಕಲ್ಲದೇ, ಇವರೆಲ್ಲರೂ ತಮ್ಮ ಚಂದಾ ಹಣವನ್ನು ಸಕಾಲದಲ್ಲಿ ರವಾನಿಸುತ್ತಿರಬೇಕು. ಪ್ರತಿಕೋದ್ಯಮವೇ ಕಷ್ಟಮಯವಾಗಿ ಪರಿಣಮಿಸುತ್ತಿರುವ ಈ ಸಮಯದಲ್ಲಿ ಚಂದಾದಾರರೆಲ್ಲರೂ ತಮ್ಮ ಬಾಕಿ ಚಂದಾವನ್ನು ಈ ಕೂಡಲೇ ಮನಿ ಆರ್ಡರ್ ಮೂಲಕವಾಗಿಯಾಗಲಿ, "ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್"ನ ಯಾವ ಶಾಖೆಯಲ್ಲಾದರೂ ನವಯುಗದ ಖಾತೆಗೆ ತುಂಬುವುದರ ಮೂಲಕವಾಗಲಿ ಕಳಿಸಿ ನೆರವಾಗಬೇಕಾಗಿ ವಿನಂತಿ.

ಹಾಗೆಯೇ ತಮ್ಮ ಚಂದಾವನ್ನು ಕ್ರಮವಾಗಿ ಮುಂದುವರಿಸಿಕೊಂಡು ಹೋಗುವುದಲ್ಲದೆ ತಮ್ಮ ಮಿತ್ರರು, ಬಂಧುಗಳಲ್ಲಿಯೂ ನವಯುಗದ ವಿಶಾಲವಾದ ರಾಷ್ಟ್ರೀಯ ಗುರಿಯನ್ನು ವಿವರಿಸಿ ಅವರನ್ನೂ ಚಂದಾದಾರರಾಗುವಂತೆ ಪ್ರೇರೇಪಿಸಿ ಈ ಪ್ರೇರಣೆಯು ಸಫಲವಾಗುವಂತೆ ನೋಡಬೇಕಾಗಿ ಕೋರುತ್ತೇವೆ.

ಚಂದಾದಾರರೇ ಒಂದು ಪತ್ರಿಕೆಯ ನಿಜವಾದ ಆಸ್ತಿ. ಚಂದಾದಾರರು ಕ್ರಮವಾಗಿ ತಮ್ಮ ಹಣವನ್ನು ತೆರುತ್ತ ಬಂದರೆ, ಇವರ ಸಂಖ್ಯೆಯು ಹೆಚ್ಚುತ್ತ ಬಂದರೆ, ಆಗ ಪತ್ರಿಕೆಯೂ ನಿರ್ಭೀತವಾಗಿದ್ದು, ಸ್ವತಂತ್ರವಾಗಿದ್ದು ಬೆಳೆದು ಬರಲು ಅನುಕೂಲವಾಗುವುದು. ನಮ್ಮ ಈ ನಮ್ರ ವಿನಂತಿಯನ್ನು ಸಹಸಾ ಮನ್ನಿಸಿ ತಮ್ಮ ಬಾಕಿ ಚಂದಾಹಣವನ್ನು ಇನ್ನೂ ತಡಮಾಡದೆ ಕೂಡಲೇ ಕಳುಹಿಸಿ ಕೊಡಬೇಕಾಗಿ ವಿನಂತಿಸುತ್ತೇವೆ.

ಇಂತು ತಮ್ಮ ವಿಶ್ವಾಸಿ,
ಕೆ. ಹೊನ್ನಯ್ಯ ಶೆಟ್ಟಿ,
ವ್ಯವಸ್ಥಾಪಕ— ಸಂಪಾದಕ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA

೧೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ —

ಜಾನಕೀ ಪತಿ ರಾಮಚಂದ್ರ ಪದವಿಗಳಿಸಿದ ಅಲನಂತಿಯ ಆಸ್ತಿ ಪಾಸ್ತಿಗಳನ್ನು ಮಾರಿ ಶಿಬಿರ ಗುಮಾಸ್ತನಾದ; ಸುದೈವದಿಂದ ಸರಕಾರದಲ್ಲಿ ಉನ್ನತ ಪದವಿಗೇರಿದ. ಕೀರ್ತಿ ಶಿಖರವೇರಿದ.

ರಾಮುವಿನ ರೈತ ಮುರುಗ ಜಮೀನ್ದಾರನಾದ; ದುರ್ಮಾರ್ಗ ನಡೆಯಿಂದ, ಲೂಟಿಗಾರರ ಯಜಮಾನನಾದ. ರಾಮುವಿನ ಹಿರಿತನದಲ್ಲಿ ಲೂಟಿಗಾರರನ್ನು ಸನ್ಮಾರ್ಗಕ್ಕೆ ತರುವಲ್ಲಿಯೂ ಮುಂದಾದ.

ರಾಮುವಿನ ಬಾಲ ಮಿತ್ರ ಕೇದಾರಿ ವಕೀಲನಾದ ಚುನಾವಣೆಯಲ್ಲಿ ಮಹತ್ತ್ವಾಕಾಂಕ್ಷಿಯಾದ ಆತ ಗೆದ್ದ; ಆದರೆ, ಅಯ್ಯೋ ರದ್ದಾಯಿತು, ಪಾತಾಳಕ್ಕೆ ಕುಸಿದ ಕೇದಾರಿಯನ್ನೆತ್ತಲು ಹಳೆಯ ಮಿತ್ರ, ತಾನು ಮರೆತಿದ್ದ, ರಾಮುವೇ ಬರಬೇಕಾಯಿತು. ಕೋಕಿಲಂಳಿಗೆ ಸಾಂತ್ವನ ನೀಡಲು ಜಾನಕಿಯೂ ಬಂದಳು. ರಾಮು-ಜಾನಕಿಯರ ಸಂಸರ್ಗದಿಂದ ಕೇದಾರಿ ಕೋಕಿಲಂ ಹೊಸಗಾಳಿಯುಸಿರಾಡತೊಡಗಿದರು.

ಮುಂದೆ—

— ೪೫ —

ಹಲವಾರು ವರ್ಷಗಳ ನಂತರ ಇಂದು ಕೇದಾರಿಯ ಮನೆಯಂಗಳದಲ್ಲಿ ಸೂರ್ಯನ ಶಾಂತವಾದ, ಆದರೆ, ಉಲ್ಲಾಸಕರ ಕಿರಣಗಳು ಆಡಲಾರಂಭಿಸಿವೆ.

ರಾಮುವಿನ ಐಂದ್ರಜಾಲಿಕ ಸಾನ್ನಿಧ್ಯದಿಂದ ಕೇದಾರಿಯ ಮನಸ್ಸಿಗಿಂದು ಸಮಾಧಾನ ಸಿಕ್ಕಿದೆ. ಜಾನಕಿಯ ಮುಚ್ಚುಮರೆಯಿಲ್ಲದ ನಗು ಹಾಗೂ ಚುರುಕುತನ ಮತ್ತು ಮಗುವಿನಂಥಹ ಹೊಸತನವು ಕೋಕಿಲಮ್ಮಗೆ ಜೀವನದಲ್ಲಿ ನವಸ್ಫೂರ್ತಿಯನ್ನಿತ್ತಿವೆ. ರಾಮು ಮತ್ತು ಕೇದಾರಿ ಮುಂಜಾನೆಯ ವಾಯು ಸೇವನೆಗಾಗಿ ಅಡಯಾರಿನ ಹಸಿರು ತೋಟಗಳಿರುವ ಹಾದಿ ಹಿಡಿದರು. ಜನಜಂಗುಳಿಯ ಪ್ರವಾಹವನ್ನು ಕಾಣುತ್ತ ಉತ್ಸಾಹದಿಂದ ಜಾನಕಿಯು ಜಗಲಿಯಲ್ಲಿ ನಿಂತುಕೊಂಡು ಕೆರೆಯ ಚೌಕದ ಆಡಂಬರವನ್ನು ನೋಡುತ್ತ ನಿಂತುಕೊಂಡಿದ್ದಳು. ಕೋಕಿಲಂ ಬಳಿಯಲ್ಲೇ ಇದ್ದಳು. ಆಗ ಒಂದು ಚಂದದ ಕಾರು ಆಡಂಬರದಿಂದ ಪಕ್ಕದ ಮನೆಯ ಬಳಿ ಹೋಗಿ ನಿಂತಿತು.

"ಮುದ್ದು ಕೋಕಿಲಂ, ಇಲ್ಲಿ— ಮೈಲಾಪುರದಲ್ಲಿ— ಪ್ರತಿಯೊಬ್ಬರಿಗೂ ಒಂದೊಂದು ಕಾರು ಇದೆ ಎಂದು ಕಾಣುತ್ತದೆ. ನೀವೆಲ್ಲರೂ ಬಹಳ ನಾಜೂಕಿನ ಹಾಗೂ ಶ್ರೀಮಂತ ಜನರು..."

"ಅದೆಲ್ಲಾ ಕೇವಲ ಬಾಹ್ಯಾಡಂಬರ, ಜಾನಕಿ ಹೊಳೆಯುತ್ತಿರುವ ಉಕ್ಕಿನ ತಗಡನ್ನು ಕಂಡು ತಪ್ಪಭಿಪ್ರಾಯಗಳಿಗೆ ಎಡೆಕೊಡಬೇಡ. ಅದರ ಒಳಗಿರುವವರ ಮನಸ್ಸಿಗೆ ನೆಮ್ಮದಿ ಎಂಬುದೇ ಇರುವದಿಲ್ಲ.'

"ಆ ಪಕ್ಕದ ಮನೆಯಲ್ಲಿರುವವರ್‍ಯಾರು? ದೊಡ್ಡ ಜನರ ಹಾಗೆ ಕಾಣುತ್ತಿದ್ದಾರೆ."

"ಹೌದು. ಅವರು ಶ್ರೀಮಂತರಿದ್ದಾರೆ. ಆ ಮನೆಯ ಯಜಮಾನನು ನಗರ ಸಭೆಯಲ್ಲಿ ಯಂತ್ರ ಶಾಸ್ತ್ರಜ್ಞನಿದ್ದಾನೆ. ಅವನಿಗೆ ಸಾವಿರ ರೂಪಾಯಿ ಸಂಬಳವಿದೆ. ಅದು ಕೇವಲ ಈ ಸೋರುತ್ತಿರುವ ಚರಂಡಿಗಳನ್ನು ಒಂದು ದೊಡ್ಡ ಕೊಳವೆಯೊಳಗೆ ಬಿಡುವದಕ್ಕಾಗಿ! ಆದರ ನಿನ್ನ ಸ್ನಾನದ ಕೋಣೆಯ ಕೊಳೆಯನ್ನು ತೊಳೆಯಲು ಬೇಕಾದಷ್ಟು ನೀರು ಸಿಗುವದಿಲ್ಲ! ಇಂತಹ ವಿವಿಧ ವಿಚಿತ್ರ ಹಾಗೂ ಹುಚ್ಚು ವಿಷಯಗಳು ಮದ್ರಾಸಿನಲ್ಲಿ ನಡೆಯುತ್ತವೆ. ಪಟ್ಟಣದವರು ಸ್ವಾರ್ಥಿಗಳು ಹಾಗೂ ಕೆಡುಕರಿದ್ದಾರೆ. ಕೆಲ ವಿಷದ ಹಣ್ಣುಗಳಂತೆ ಹೊರಗಿನಿಂದ ಕಂಡಾಗ ಉತ್ಸಾಹಿಗಳು ಹಾಗೂ ಪ್ರಕಾಶವಂತರಾಗಿ ಕಂಡು ಬರುತ್ತಾರೆ ..."

"ಮತ್ತು ಯಂತ್ರ ಶಾಸ್ತ್ರಜ್ಞನು ಶ್ರೀಮಂತ..."

"ಜಾನಕಿ, ಅದೃಷ್ಟ ಹಾಗೂ ದುರದೃಷ್ಟ, ಯಾವದೂ ಒಂಟಿಯಾಗಿ ಈ ಪ್ರಪಂಚಕ್ಕೆ ಬರುವದಿಲ್ಲ ಕಣೇ. ಈ ಶ್ರೀಮಂತ ಮನುಷ್ಯನಿಗೆ ಅವನಿಗಿಂತಲೂ ಶ್ರೀಮಂತಳಿರುವ ಸಹೋದರಿ ಇದ್ದಾಳೆ. ಅವಳ ಮಗನು ಮದ್ರಾಸಿನಲ್ಲಿ ಶಾಲೆಗೆ ಹೋಗಬೇಕೆಂದು ಕಾವೇರಿಯ ಪಕ್ಕದಲ್ಲಿರುವ ಸ್ವಂತ ಜಮೀನನ್ನು ಬಿಟ್ಟು ಇಲ್ಲಿಗೆ ಬಂದಿದ್ದಾಳೆ.'

ಒಂದು ಕ್ಷಣ ಅವಳು ಮಾತು ನಿಲ್ಲಿಸಿ, ಜೋರಿನಿಂದ ಆಡಲಾರಂಭಿಸಿದಳು. 'ಅಬ್ಬಾ! ಎಂತಹ ಮರವೆಯೇನೇ ನನಗೆ! ಬಹುಶಃ ನಿನಗವಳ ಪರಿಚಯ ಇರಬಹುದು. ಅವಳು ರಾಮುವಿನ ಹಳ್ಳಿ, ಅಲವಂತಿಯಿಂದ, ಬಂದವಳಿದ್ದಾಳೆ ಕಣೇ."

"ಅವಳ ಹೆಸರು ಸೀತಾ ತಾನೇ?"

"ಹೌದು. ಅವಳು ಸೀತಾ— ನನ್ನ ಸ್ವಂತ ವ್ಯವಹಾರದಲ್ಲೇ ಮಗ್ನಳಾಗಿರದಿದ್ದರೆ ನಿನ್ನೆಯೇ ಅವಳ ವಿಷಯ ನಿನಗೆ ತಿಳಿಸುತ್ತಿದ್ದೆ."

"ಹಾಗಿದ್ದಲ್ಲಿ, ಅವಳನ್ನು ನೋಡಬೇಕಾಗಿದೆ. ನಾವು ಬಹಳ ಆಪ್ತಸ್ನೇಹಿತೆಯರಾಗಿದ್ದೆವು..."

ಅವಳು ಮಾತು ಮುಗಿಸುತ್ತಿರುವಾಗಲೇ, ರಸ್ತೆಯಲ್ಲಿದ್ದ ಕಾರನ್ನು ಶಲಪಲು ಆಕೆಯ ಮನೆಯ ಮುಂದುಗಡೆಯಿಂದ ಸೀತಾ ಹುಡುಗನನ್ನು ಕರೆದುಕೊಂಡು ಹೋದಳು.

"ಏನು! ಸೀತಾ ವಿಧವೆ! ಅವಳು ಗಂಡನನ್ನು ಕಳೆದುಕೊಂಡಿದ್ದಾಳೆಯೇ? ಯಾವಾಗ?" ಕೋಕಿಲಮ್ಮಗೆ ಪ್ರಶ್ನೆ ಹಾಕಿದ ಜಾನಕಿ ತನ್ನ ಬಾಲಿಶ ಸ್ವರದಿಂದ "ಸೀತಾ, ಸ್ವಲ್ಪ ಇತ್ತ ನೋಡಲಾರೆಯೇನೇ? ಸೀತಾ, ನಿನ್ನ ಹಳೆಯ ಸ್ನೇಹಿತೆಯ ಗುರುತು ಸಿಕ್ಕುತ್ತದೆಯೇನೇ? ನೋಡು ...."

"ಇದು, ನೀನೇ, ಜಾನಕಿ...."

"ಆಶ್ಚರ್ಯದಿಂದ, ಆದರೆ, ಸಂತೋಷದಿಂದ ಸೀತೆಯು ಉದ್ಗಾರವನ್ನೆತ್ತಿ ಜಾನಕಿ ಇದ್ದಲ್ಲಿಗೆ ಬಂದಳು.

ಸೋಮಾರಿಯಂತೆ ಕಾರು ವಿಶ್ರಾಮ ಪಡೆದುಕೊಳ್ಳುತ್ತಿತ್ತು. ಅವರ ಚಾಲಕನು ಎಡೆಬಿಡದೆ ಆಕಳಿಸುತ್ತ ಯಂತ್ರದ ಮೇಲಿನಿಂದ ಕೈ ತೆಗೆದು ಬಾಯಿಗೆ ಅಡ್ಡ ಹಿಡಿಯುತ್ತಿದ್ದನು. ಹೀಗೆ ಅವರು ಒಂದು ಘಂಟೆಗಿಂತಲೂ ಹೆಚ್ಚು ಹೊತ್ತು ಕಳೆದರು. ಸೀತೆ, ಜಾನಕಿ ಮತ್ತು ಕೋಕಿಲಂ ತಮ್ಮ ಮಾತುಗಳಲ್ಲಿ, ಹಳೆಯ ನೆನಪುಗಳಲ್ಲಿ— ಕ್ಲುಪ್ತ ಕಾಲದಲ್ಲಿ ಮಳೆ ಬಿದ್ದೊಡನೆ ಕಾಡಿನಲ್ಲಿ ಒಡನೆ ಬೆಳೆಯುವ ಬಳ್ಳಿಗಳಂತೆ— ಆನಂದ ತುಂದಿಲರಾದರು.

ಅದಾಗಲೇ ಸೀತೆಯ ಹುಡುಗ ಹಾಗೂ ಜಾನಕಿಯ ಹುಡುಗಿ ಗೆಳೆಯರಾಗಿಬಿಟ್ಟಿದ್ದರು. ಮಕ್ಕಳ ಮತ್ತು ಪ್ರಣಯಗಳ ಚಿವುಟು ಅವರ ನಡುವೆ ಆಡುತ್ತಿತ್ತು. ಹಿಂದಿನ ದಿನ ತಿಂಗಳ ಬೆಳಕಿನಲ್ಲಿ ಯೋಚಿಸಿರುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಬೇಕಾಗಿರುವ ಆಲೋಚನೆಗಳನ್ನು ಮಾಡಿದ್ದ ರಾಮು ಮತ್ತು ಕೇದಾರಿ ವಾಯು ವಿಹಾರದಿಂದ ಹಿಂದಕ್ಕೆ ಬಂದವರು. ಮನೆಯ ಕೂಟದೊಂದಿಗೆ ಸೇರಿಕೊಂಡರು. ಕೇದಾರಿಯ ಮನೆಯು ಕುಟಕ್ಕೆ ಹಾಗೂ ತುದಿ ಬುಡವಿಲ್ಲದ ಸಂತೋಷಕ್ಕೆ ಆಶ್ರಯ ಸ್ಥಾನವಾಯಿತು.

ಎತ್ತರದ ಪರ್ವತ ಪ್ರದೇಶದಲ್ಲಿ ಅವರದಿಂದ ನುಗ್ಗುತ್ತ ನೀರು ಧುಮುಕುವಂತೆ, ಅಲ್ಲಿ ಇಲ್ಲಿಂದ ಅವರ ಮಾತುಗಳು ಉರುತಿದ್ದುವು. ಅದು ಚಂದದ ನೂರು ಜೋಗುಳವಾಗಿ ಸಂಬಂಧವಿಲ್ಲದೆ ಬೀಳುತಿದವು. ಅವೆಲ್ಲವನ್ನೂ ಒಂದೇ ಒಂದು ಕಾಲುವೆಯಲ್ಲಿ ಹರಿಯಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಒಬ್ಬರ ಮನಸ್ಸಿನ ಭಾವನೆಯನ್ನು ಇನ್ನೊಬ್ಬರಿಂದ ಕಂಡು ಹಿಡಿಯಲಿಕ್ಕಾಗದಿದ್ದರೂ ಸಂತೋಷದಿಂದ ಮಾತುಕತೆ ಮುಂದರಿಯುತ್ತಿತ್ತು.

ಎಲ್ಲದಕ್ಕಿಂತಲೂ ಒಂದು ಸ್ವರ ಜೋರಾಗಿ ಕೇಳಿ ಬಂತು. ಅದು ರಾಮುವಿನ ಸ್ವರ.

ಜಾನಕಿಯನ್ನು ಒಂದು ಮಗ್ಗುಲಿಗೆ ಕರೆದುಕೊಂಡು ಹೋಗಿ ರಾಮು ಮೆಲ್ಲನೆ ಹೇಳಿದನು. 'ಪ್ರಿಯೆ, ಸೀತೆಯ ಆತ್ಮ ಅದೆಷ್ಟು ಶುದ್ಧ ಹಾಗೂ ವಾತ್ಸಲ್ಯ ಪೂರ್ಣವಿದೆ? ಅವಳು ಸಾಧು, ಘನ ಸ್ವಭಾವದ

(ಹದಿನೈದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್	ಖಾತೆಯ ಮೇಲೆ	4

ದಿ ಹಾಂಗ್ಕಾಂಗ್‌ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.



ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೨	೩೦—೬—೧೯೬೬	No. 42

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-60

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಧ್ಯಕ್ಷ ಜಾನ್ಸನ್ನರು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರೊಡನೆ ಬ್ಲೈರ್ ಹೌಸ್‌ಗೆ ಕರೆದೊಯ್ಯುತ್ತಿರುವುದು. ರಾಯಭಾರಿ ಬಿ. ಕೆ. ನೆಹರೂರವರು ಚರ್ಚೆಯಲ್ಲಿ ಭಾಗವಹಿಸುತ್ತಿರುವರು.

ನ್ಯಾಯ ದೊರೆತೀತೆ?

ಎಂ ಪಿ ಸಿ ಸಿ ಯು ನೇಮಿಸಿದ ನಿಯೋಗವು ನವ ದಿಲ್ಲಿಗೆ ಹೋಗಿ ಅಲ್ಲಿ ಕನ್ನಡಿಗರ ಕರುಣಾಕಥೆಯನ್ನು ಹೇಳಿ ಹಿಂತಿರುಗಿತು; ಕನ್ನಡಿಗರ ಬಗ್ಗೆ ಕೇಂದ್ರದಲ್ಲಿ ನಿಜವಾಗಿಯೂ ಸಹಾನುಭೂತಿಯಿದೆಯೆಂದೂ ಎ ಐ ಸಿ ಸಿ ಯು ಸ್ವೀಕರಿಸಿದ್ದ ಏಕಸದಸ್ಯ ಆಯೋಗ ನೇಮಕಕ್ಕೆ ಸಂಬಂಧಿಸಿದ ಗೊತ್ತುವಳಿಯನ್ನು ಜುಲೈ ೫ರಂದು ಪುನರ್ವಿಮರ್ಶಿಸಲಾಗುವುದೆಂದೂ ಮನವರಿಕೆ ಮಾಡಿಕೊಂಡು ಬಂದಿತು. ಆದರೆ, ಸಮಸ್ತ ಕನ್ನಡಿಗರಿಂದ ಪ್ರತಿಭಟಿತವಾದ ಈ ಏಕಸದಸ್ಯ ಆಯೋಗ ಗೊತ್ತುವಳಿಯ ಭವಿಷ್ಯವೇನಾಗಬಹುದೆಂದು ನಿಯೋಗಿಗಳನ್ನು ಪ್ರಶ್ನಿಸಿದರೆ, ಉತ್ತರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅಂದರೆ, ಯಾವುದೇ ಖಚಿತ ಭರವಸೆಯೊಂದಲೂ ದೊರೆಯಲಿಲ್ಲ, ನಮ್ಮ ರೊಟ್ಟಿಗೆ ತುಪ್ಪದ ಬಿಂದಿಗೆಯೇ ಕಾಣಿಸಲಿಲ್ಲವೇನೋ—ಎನಿಸುತ್ತದೆ.

ಎಂ ಪಿ ಸಿ ಸಿ ಯು ಐವರು ಪ್ರತಿನಿಧಿಗಳುಳ್ಳ ನಿಯೋಗವೊಂದನ್ನು ನೇಮಿಸಿತ್ತು. ಪ್ರಾದೇಶಿಕ ಕಾಂಗ್ರೆಸ್ಸಿನ ಅಧ್ಯಕ್ಷ ಮಹಮ್ಮದಾಲಿಯವರೇ ಇದರ ನೇತಾರರು. ನಿಯೋಗ ನೇಮಕವಾದೊಡನೆಯೇ ಇದರ ಒಬ್ಬ ಸದಸ್ಯರಾದ ರಾಮಕೃಷ್ಣ ಹೆಗ್ಡೆಯವರು ಯಾರ ಪ್ರೇರಣೆಯಿಂದಲೋ, ನವದೆಹಲಿಗೆ ಧಾವಿಸಿದರು; ಗಡಿ ಆಯೋಗ—ರಾಜ್ಯದ ಜನತೆಯ ತೀವ್ರ ಕಳವಳಗಳನ್ನು ವಿವರಿಸಿ ಹಿಂದೆ ಬಂದರು. ಗೊತ್ತುವಳಿಯ ಪುನರ್ವಿಮರ್ಶೆ ನಡೆಯಬಹುದೆಂದು ಸುದ್ದಿ ತಂದರು — ಈಗ ಮತ್ತೊಮ್ಮೆ ದಿಲ್ಲಿಗೆ ಹೋಗಿ ತಂದುದಾದರೂ ಏನು? ನಿಯೋಗದ ಇತರ ಮೂವರು ಸದಸ್ಯರು ಇಲ್ಲವಾದುದರಿಂದ ಹೆಚ್ಚಿನ ತೊಂದರೆಯೇನೂ ಆಗಲಿಲ್ಲ ಎನ್ನುವ ಮಹಾನುಭಾವರಿಗೆ ಇನ್ನೊಮ್ಮೆ ದೆಹಲಿ ಹಾರುವ ಅಗತ್ಯವೂ ಇರಲಿಲ್ಲವೆಂದು ತಿಳಿಯದೆ ಹೋಯಿತೆ? ಇಲ್ಲಿ ಯೋಚಿಸಬೇಕಾದ ಇನ್ನೊಂದು ವಿಚಾರವೂ ಇದೆ. ಹೆಗ್ಡೆಯವರು ವೈಯುಕ್ತಿಕವಾಗಿ ಮೊದಲು ದಿಲ್ಲಿಗೆ ಹೋಗಿ ಬಂದವರೆಂದೇ ಹೇಳೋಣ, ಕಾಂಗ್ರೆಸ್ ಕಾರ್ಯಕಾರಿಣಿಯು ಗಡಿ ಆಯೋಗದ ಕುರಿತು ಕೇಂದ್ರಕ್ಕೆ ಮನವರಿಕೆ ಮಾಡಲು ನಿಯೋಗವನ್ನು ನೇಮಿಸಿರುವಾಗ, ಇವರು ಮೊದಲೇ ಪೆಟ್ಟಿಗೆ ತೆರೆದದ್ದು ನ್ಯಾಯವೆನ್ನುವಂತಿಲ್ಲ. ತನ್ನ ಕೆಲಸ ಮಾಡಿ ಬರಬಹುದಾಗಿತ್ತು; ಎಂತಲೇ ಹಳ್ಳಿಕೇರಿಯವರು ನಿಯೋಗವನ್ನು ಸೇರಲು ನಿರಾಕರಿಸಿದರೆ, ಉಳಿದಿಬ್ಬರು ಹೆಗ್ಡೆಯವರು ಹೋಗಿ ಬಂದಿದ್ದಾರೆ, ಇನ್ನು ನಾವು ಹೋಗಿ ಮಾಡಬಹುದಾದುದೇನು ಎಂದ ತಿರಸ್ಕಾರ ವ್ಯಕ್ತಪಡಿಸಿದ್ದಾರೆ. ಹೀಗೆ ಯಾರೊಬ್ಬರ ಮನ ನೋಯಿಸಿಯೂ ತನ್ನ ಸ್ವಾರ್ಥ ಸಾಧನೆ ಮಾಡುವುದು ಯಾರಿಗೂ ಶೋಭಿಸುವುದಲ್ಲ.

ಕನ್ನಡಿಗರ ಅಹಿಂಸಾತ್ಮಕ ಚಳವಳಿಯ ಗಾಳಿ ಕೇಂದ್ರದ ಕಡೆಗೆ ತಾನಾಗಿಯೇ ಬೀಸಲಿಲ್ಲ. ಯಾವನೊಬ್ಬ ಕೇಂದ್ರ ನಾಯಕನೂ ತಾನಾಗಿ 'ಕನ್ನಡಿಗರೇ, ಚಳುವಳಿ ಮಾಡಬೇಡಿ" ಎನ್ನಲಿಲ್ಲ. ನಾವೇ ಚಳುವಳಿ ಮಾಡಿದೆವು, ಮುಂದೆಯೂ ಮಾಡುತ್ತೇವೆ. ನಮ್ಮ ನ್ಯಾಯವಾದ ಹೋರಾಟ ಜಯಪ್ರದವಾಗುವ ವರೆಗೆ—ರೇಲು ತಡೆಯುವುದರಲ್ಲಿ, ರಸ್ತೆ ಬಂದ್ ಮಾಡುವುದರಲ್ಲಿ—ಮುಂದುವರಿವೆವು ಎನ್ನುತ್ತಿರುವೆವು. ನಮಗೆ ಕೇಂದ್ರದ ನಾಯಕರ ಸಹಾನುಭೂತಿಯಿಲ್ಲ; ಮಂತ್ರಿಗಳದ್ದಂತೂ ಇಲ್ಲವೇ ಇಲ್ಲ; ರೇಲು ಬಸ್ಸುಗಳಲ್ಲಿ ಸಂಚರಿಸುವ ಉಳಿದ ರಾಜ್ಯಗಳ ನಾಗರಿಕರದ್ದಂತೂ ಏನೇನೂ ಇಲ್ಲ. ನಮಗೆ ನಮ್ಮದೇ ಬೆಂಬಲ — ನಮ್ಮದೇ ಪ್ರಚಾರ— ಹೀಗಿದೆ ನಮ್ಮ ಚಳವಳಿಯ ದಾರಿ. ನಾವು ಅಸಹಾಯ ಶೂರರಾದರೆ ಮಾತ್ರ ಕೇಂದ್ರದಲ್ಲಿ ನಮ್ಮ ನ್ಯಾಯಕ್ಕೆ ಕುಸುಮವಾದರೂ ಬೆಲೆ ಬಂದೀತು. ಗಡಿ ನಿರ್ಣಯವು ಮುಗಿಯದ ಮಾತು ಎಂದು ಇಂದಿರಾ ಗಾಂಧಿಯವರೇ ಹೇಳಿದರು. ಆದುದರಿಂದ, ಕಾರವಾರ, ಬೆಳಗಾಂವಿ, ನಿಪ್ಪಾಣಿ ಮೊದಲಾದುವನ್ನು ಕೇಳುವ ಮರಾಠಿಗರಿಗೆ ಒಂದು ರೆಕ್ಕೆ ಹೆಚ್ಚು ಬಂದಂತಾಯಿತು. ನಾವು ಹೇಳುತ್ತೇವೆ, ಫಜಲ್ ಅಲಿ ಆಯೋಗವು ಮರಾಠಿಗಳ ಬೇಡಿಕೆಯೆಲ್ಲವನ್ನೂ ಕೂಲಂಕಷ ಪರಿಶೀಲಿಸಿಯೇ ಅವನ್ನು ಕನ್ನಡಕ್ಕೆ ಕೊಟ್ಟಿದೆ. ಲೋಕಸಭೆ—ರಾಜ್ಯಸಭೆಗಳೂ ಇದಕ್ಕೆ ಸಮ್ಮತಿಯಿತ್ತಿವೆ. ಇದು ಮುಗಿಯದ ಸಂಗತಿಯಲ್ಲವಾದರೆ, ಮತ್ತೆ ಮುಗಿದುದಾದರೂ ಯಾವುದು? ಇದೇ ಸವಾಲನ್ನು ಕಾಸರಗೋಡನ್ನು ಕೇಳುವ ನಮಗೂ ಕೇಳಿದರೆ ನಾವೇನುತ್ತರಿಸಬೇಕು? ಇದೇ ಈಗ ಯಕ್ಷ ಪ್ರಶ್ನೆ. ಕೇಂದ್ರದಲ್ಲಿ ಮರಾಠಿಗರ ಬೆಂಬಲ—ಬಲ ಅತ್ಯಧಿಕವಿದೆ; ಅವರ ಹಿಂಸಾ ಮನೋವೃತ್ತಿಯ ಮುಂದೆ ನಮ್ಮದು ಏನೂ ಇಲ್ಲ— ಎಂತಲೇ ಕನ್ನಡಿಗರ ಸತ್ಯಾಗ್ರಹ ಮಾಡಬೇಕಾಗಿದ್ದ ಪರಿಣಾಮ ಮಾಡಲಿಲ್ಲ. ಬೆಳಗಾಂವಿ—ಕಾರವಾರ—ನಿಪ್ಪಾಣಿಗಳನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಕಾಸರಗೋಡನ್ನು ಕನ್ನಡಿಗರು ಮರೆತುಬಿಡುತ್ತಾರೆಯೆ?

ಮಾಜಿ ಮುಖ್ಯಮಂತ್ರಿ ಹನುಮಂತಯ್ಯನವರು ಹೇಳಿದರು: ಕೇಂದ್ರವು ಕನ್ನಡಿಗರಿಗೆ ಅನ್ಯಾಯ ಮಾಡುತ್ತಿದೆ. ಪ್ರತಿ ವಿಷಯದಲ್ಲಿಯೂ ಇದು ವ್ಯಕ್ತವಾಗುತ್ತಿದೆ. ನಿಜ. ಮಂತ್ರಿ ಮಂಡಳದಿಂದ ಹಿಡಿದು ಯೋಜನಾ ರೂಪರೇಷೆಗಳ ವರೆಗೂ ಕನ್ನಡಿಗರಿಗೆ ನ್ಯಾಯ ಇದು ವರೆಗೆ ಸಿಗಲಿಲ್ಲ. ಕನ್ನಡಿಗರು ಮಾತಾಡುವುದೂ ಕೊಟ್ಟುದನ್ನು 'ಜೀಯ ಹಸಾದ'ವೆನ್ನುವ ನೀತಿ ನಮ್ಮದು; ಒಂದೊಮ್ಮೆ ಕೇಂದ್ರ ನೀಡಿದ್ದನ್ನು ಬಳಸಿಕೊಳ್ಳದ ಮಿತವ್ಯಯವಾದಿಗಳು ನಾವು. ಆದುದರಿಂದ, ನಮ್ಮಲ್ಲಿ ಕಸುವು ಹೆಚ್ಚದೆ ಹೋದರೆ, ಗೆಲವಿಲ್ಲ— ಕನ್ನಡಿಗರಿಗಾಗುತ್ತಿರುವ ಅನ್ಯಾಯದ ಪರಿಮಾರ್ಜನೆಗಾಗಿ ನ್ಯಾಯ-ನೀತಿ-ನಡವಳಿಕೆಗಳನ್ನು ನಾವು ಸರಿಯಾಗಿ ರೂಢಿಸಿಕೊಳ್ಳಬೇಕು; ನಾವೂ ಮರಾಠಿಗರಂತೆ ಪ್ರಭಾವಶಾಲೀ ಜನಾಂಗವಾಗಬೇಕು. ನಮ್ಮಲ್ಲಿ ಶಕ್ತಿಯಿದ್ದರೆ, ಯಾವುದೇ ಕಾರ್ಯವನ್ನು ನಾವು ಸಾಧಿಸೇವು; ಆದರೆ, ಇರುವ ಶಕ್ತಿಯು ಅಪವ್ಯಯ ಮಾತ್ರ ಕೂಡದು. ಈ ದಿಸೆಯಲ್ಲಿ ನಾವು ಮುಂದರಿಯೋಣ, ನ್ಯಾಯ ದೊರಕಿಸೋಣ.

ವಚನ ಸುಧೆ

ಧೂಮಾಯಂತೇ ವ್ಯಪೇತಾನಿ
ಜ್ವಲಂತಿ ಸಹಿತಾನಿ ಚ।
ಧೃತರಾಷ್ಟ್ರೋಲ್ಮುಕಾನೀವ
ಜ್ಞಾತಯೋ ಭರತರ್ಷಭ

ಉರಿಯುತ್ತಿರುವ ಕೊಳ್ಳಿಗಳು ಬೇರೆ ಬೇರೆಯಾದೊಡನೆಯೇ ಅವು ಉರಿಯುವುದನ್ನು ಬಿಟ್ಟು ಹೊಗೆಯುಗುಳುತ್ತವೆ. ಆದರೆ, ಅವು ಒಂದಾದೊಡನೆಯೇ ಮತ್ತೆ ಉರಿಯಲಾರಂಭಿಸುತ್ತವೆ.

ಕೇರಳದ ಗಾಳಿ—

ಸಮಾಜದಲ್ಲಿ ಗೌರವದ ಸ್ಥಾನದಲ್ಲಿದ್ದು ಅಗೌರವಕ್ಕೆ ತುತ್ತಾಗಬಲ್ಲವರಿದ್ದರೆ, ಅದು ಅಧ್ಯಾಪಕರ ಸಮಾಜ ಮಾತ್ರ. ನಮ್ಮ ಮಂತ್ರಿಮಾಗಧರು ಭವ್ಯ ಭಾರತದ ನಿರ್ಮಾಪಕರೂ ನೀವು ಎಂದು ಹೊಗಳುತ್ತಾರೆ; ಇವರ ಈ ಮಹಾನ್ ಕಾರ್ಯಕ್ಕೆ ಕೊಡುವ ಪ್ರತಿಫಲ ಏನೇನೂ ಸಾಲದೆಂದು ಅವರೇ ಒಪ್ಪುತ್ತಾರೆ. ವರ್ಷದಿಂದ ವರ್ಷಕ್ಕೆ ಶಾಲಾದಿನಗಳನ್ನೂ ಶಾಲಾ ಸಮಯವನ್ನೂ, ತರಗತಿಯ ಗಾತ್ರವನ್ನೂ ಹೆಚ್ಚಿಸುತ್ತಾ ಹೋಗುವ ಸರಕಾರ ಅಧ್ಯಾಪಕರ ಸ್ಥಿತಿಗತಿಗಳತ್ತ ಏನೇನೂ ಗಮನ ಹರಿಸಲಿಲ್ಲ. ಕಾಲೇಜುಗಳ ಪ್ರಾಧ್ಯಾಪಕರ ವೇತನ ಶ್ರೇಣಿಯನ್ನೂ ಹೈಸ್ಕೂಲು ಮತ್ತು ಪ್ರಾಥಮಿಕ ಶಾಲಾ ಅಧ್ಯಾಪಕರ ವೇತನ ಶ್ರೇಣಿಯನ್ನೂ ತೂಗಿ ನೋಡಿದರೆ, ಇರುವ ಅಂತರವು ಮನವರಿಕೆಯಾಗದಿರದು. ಕೇರಳ ರಾಜ್ಯದ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ಬೆಂಗಳೂರು ವಿಶ್ವವಿದ್ಯಾಲಯವು ಕಡಿಮೆ ವಯಸ್ಸಿನವರು ತಜ್ಞರ ಸಮಿತಿಯ ಸಿಫಾರಸು ಪಡೆದು ಕೊಂಡರೆ ಪ್ರವೇಶ ನೀಡಲು ಒಪ್ಪಿದೆಯಂತೆ..."

'ಸಮಿತಿಯ ಸದಸ್ಯರ ಮನೆಯಿಂದ ಹತ್ತು ನೈಲುದ್ದ ಕ್ಕೊ!'

ಧೈರ್ಯವಾಗಿರಿ

ಅಪಮೌಲ್ಯದಲ್ಲಿ ಅಳುವಾದುದೇನೂ ಇಲ್ಲ

ದೇಶದ ಆರ್ಥಿಕಾಭಿವೃದ್ಧಿ ಹಾಗೂ ಸ್ವಾವಲಂಬನೆಯ ಹೋರಾಟದಲ್ಲಿ ನಾಣ್ಯದ ಅಪಮೌಲ್ಯವು ಸೋಲಿನ ಸಂಕೇತವೇ ಎಂಬ ಒಂದು ಪ್ರಶ್ನೆಯಿದೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ದೇಶಗಳು ಸಾಧಿಸಿದ ಅಗಾಧ ಆರ್ಥಿಕ ಬೆಳವಣಿಗೆಯ ಉದಾಹರಣೆಗಳ ಮೂಲಕ ಈ ಪ್ರಶ್ನೆಗೆ ದೃಢವಾದ ಉತ್ತರವನ್ನು ನೀಡಬಹುದು.

ಅಮೇರಿಕದ ಡಾಲರು, ಪ್ರತಿಯೊಂದು ವಿದೇಶಿ ನಾಣ್ಯದ ಮುಖದ ಬೆಲೆಯನ್ನೇ ಪರಿಗಣಿಸುತ್ತದೆ. ಹದಿಮೂರು ವರ್ಷಗಳಿಂದಲೂ ಜಪಾನಿನ ಯೆನ್ ನಾಣ್ಯದ ಬಾಹ್ಯ ಬೆಲೆಯು ಯಾವ ಬದಲಾವಣೆಯನ್ನು ಹೊಂದದೆ, ಹಾಗೆಯೇ ಉಳಿದಿದೆ. ೧೯೬೧ರಲ್ಲಿ ಜರ್ಮನ್ ಮಾರ್ಕ್ ಒಂದು ಅಮೇರಿಕದ ಡಾಲರ್‌ಗೆ ೨೩.೮ ಸೆಂಟ್ಸಿಂದ ೨೫ ಸೆಂಟ್‌ಗಳಿಗೆ ತನ್ನ ನಾಣ್ಯದ ಬೆಲೆಯನ್ನು ಏರಿಸಿಕೊಂಡಿತು.

ಈ ಮೇಲಿನ ಉದಾಹರಣೆಗಳಲ್ಲಿ ವಿದೇಶಿ ವಿನಿಮಯಗಳ ದರ ಹಾಗೂ ಆರ್ಥಿಕ ಅಭಿವೃದ್ಧಿಗಳ ನಡುವೆ ಸಂಬಂಧವನ್ನು ಸೂಚಿಸುತ್ತವೆ, ಆದರೆ, ವಾಸ್ತವವಾಗಿ ಈ ರೀತಿಯ ಸಂಬಂಧವಿರಬೇಕಾದ ಆವಶ್ಯಕತೆ ಏನೂ ಇಲ್ಲ.

ಆರ್ಥಿಕ ಸ್ಥಿತಿಯಲ್ಲಿ ಒಂದೇ ಘಟ್ಟದಲ್ಲಿರುವ ಎರಡು ರಾಷ್ಟ್ರಗಳ ಪೈಕಿ ಒಂದು ರಾಷ್ಟ್ರವು ತನ್ನ ನಾಣ್ಯದ ವಿನಿಮಯದ ಮೌಲ್ಯದಲ್ಲಿ ಇಳುವರಿ ತಂದು, ಇಳುವರಿ ತರದ ಮತ್ತೊಂದು ರಾಷ್ಟ್ರದ ಆರ್ಥಿಕಾಭಿವೃದ್ಧಿಗಿಂತ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿರುವುದನ್ನು ಕಾಣಬಹುದು. ಉದಾಹರಣೆಗೆ ಭಾರತ ಮತ್ತು ಪಾಕಿಸ್ತಾನಗಳನ್ನೇ ತೆಗೆದುಕೊಳ್ಳೋಣ. ಭಾರತವು ಸ್ವಾತಂತ್ರ್ಯದ ನಂತರ ೧೯೪೯ನೇ ಸೆಪ್ಟೆಂಬರ್ ತಿಂಗಳಲ್ಲಿ ಡಾಲರ್ ಹಣಕ್ಕೆ ಅನುಗುಣವಾಗಿ ರೂಪಾಯಿಯ ಅಪಮೌಲ್ಯವನ್ನು ಮಾಡಿತು. ಆಗ್ಗೆ ಪಾಕಿಸ್ತಾನವು ತನ್ನ ರೂಪಾಯಿಯ ಅಪಮೌಲ್ಯವನ್ನು ಮಾಡಲು ಒಪ್ಪಲಿಲ್ಲ. ೧೯೫೫ರಲ್ಲಿ ಪಾಕಿಸ್ತಾನವು ತನ್ನ ರೂಪಾಯಿಯನ್ನು ಅಪಮೌಲ್ಯ ಮಾಡಿ ಅಮೇರಿಕದ ೨೧ ಸೆಂಟ್‌ಗಳಿಗೆ ಸಮ ಮಾಡಿಕೊಂಡಿತು. ಇದೇ ವೇಳೆಗೆ ಭಾರತವು ಆರು ವರ್ಷಗಳ ಹಿಂದೆಯೇ ತನ್ನ ರೂಪಾಯಿಯ ಬೆಲೆಯಲ್ಲಿ ಇಳುವರಿ ತಂದಿದ್ದಿತು.

ಈ ಆರು ವರ್ಷಗಳಲ್ಲಿ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಆರ್ಥಿಕಾಭಿವೃದ್ಧಿ ಹೇಗೆ ನಡೆಯಿತೆಂಬುದನ್ನು ಪರಿಶೀಲಿಸೋಣ. ವಿಶ್ವ ಸಂಸ್ಥೆಯ ವಾರ್ಷಿಕ ಅಂಕಿ ಅಂಶಗಳ ಪುಸ್ತಕದಲ್ಲಿ ೧೯೫೮ರಲ್ಲಿ ೧೦೦ನ್ನು ಸೂಚ್ಯ ಸಂಖ್ಯೆಯೆಂದು ತೆಗೆದುಕೊಂಡಾಗ, ೧೯೪೯ರಲ್ಲಿ ಭಾರತದ ರಾಷ್ಟ್ರೀಯ ಉತ್ಪನ್ನಗಳ ಸೂಚ್ಯ ಸಂಖ್ಯೆಯು ಸ್ಥಿರ ಬೆಲೆ ಪಟ್ಟಿಯಲ್ಲಿ ೭೬ ಇದ್ದಿತು. ೧೯೫೫ರಲ್ಲಿ ಅದು ೯೦ ಆಯಿತು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ರಾಷ್ಟ್ರೀಯ ಉತ್ಪನ್ನವು ಭಾರತದ ರೂಪಾಯಿಯ ಅಪಮೌಲ್ಯವಾದ ೬ ವರ್ಷಗಳ ತರುವಾಯದಲ್ಲಿ, ಶೇಕಡ ೧೮.೪ರಷ್ಟು ಏರಿದಂತಾಯಿತು. ಅದೇ ಅಂಕಿ ಅಂಶಗಳ ಪುಸ್ತಕದಲ್ಲಿ ಪಾಕಿಸ್ತಾನದ ರಾಷ್ಟ್ರೀಯ ಉತ್ಪನ್ನದ ಸೂಚ್ಯ ಸಂಖ್ಯೆಯು ೧೯೪೯ರಲ್ಲಿ ೮೫ ಇದ್ದರೆ, ೫೫ರಲ್ಲಿ ೯೩ ಇತ್ತು. ಅಂದರೆ, ಪಾಕಿಸ್ತಾನವು ಅಪಮೌಲ್ಯ ಮಾಡದ ೬ ವರ್ಷಗಳ ಕಾಲದಲ್ಲಿ ರಾಷ್ಟ್ರೀಯ ಉತ್ಪನ್ನವು ಶೇಕಡ ೮.೩ರಷ್ಟು ಏರಿದಂತಾಯಿತು.

೧೯೪೯ರಲ್ಲಿ ಬ್ರಿಟನ್ ತನ್ನ ಪೌಂಡ್‌ನಲ್ಲಿ ಅಪಮೌಲ್ಯವನ್ನು ತರುವ ನಿರ್ಧಾರ ಮಾಡಿತು. ಇದರ ಕಾರಣವಾಗಿ ಭಾರತದಲ್ಲಿ ರೂಪಾಯಿಯ ಅಪಮೌಲ್ಯ ಮಾಡಬೇಕಾದ ಪ್ರಸಂಗವೊದಗಿತು. ಆಗ್ಗೆ ಪ್ರಧಾನಿಗಳಾಗಿದ್ದ ಜವಾಹರ್‌ಲಾಲ್ ನಹರೂರವರು ನೀಡಿದ ಬಾನುಲಿ ಭಾಷಣದಲ್ಲಿ ರಫ್ತು ವ್ಯಾಪಾರವು ಇಳಿಯದಂತೆ ನೋಡಿಕೊಳ್ಳಲು ರೂಪಾಯಿಯ ಅಪಮೌಲ್ಯವು ಆಗತ್ಯವಾಗಿದೆ ಎಂದು ತಿಳಿಸಿದರು. ಇದರಿಂದ ಪೌಂಡ್ ನಾಣ್ಯಗಳ ರಾಷ್ಟ್ರಗಳೊಡನೆ ಅಧಿಕ ರಫ್ತು ವ್ಯಾಪಾರ ಮಾಡಲು ಅನುಕೂಲವಾಗುವುದು. ಅದೇ ರೀತಿಯಲ್ಲಿ ಡಾಲರ್‌ಗೆ ಅನುಗುಣವಾಗಿ ರೂಪಾಯಿ ಅಪಮೌಲ್ಯ ಮಾಡುವುದೂ ಡಾಲರ್ ರಾಷ್ಟ್ರಗಳಲ್ಲಿ ರಫ್ತು ವ್ಯಾಪಾರ ಕುದುರಿಸಲು ಸಹಾಯಕವಾಗುವುದು ಎಂದೂ ಸಹ ನೆಹರೂ ತಿಳಿಸಿದ್ದರು.

ಬ್ರಿಟನ್ ತನ್ನ ನಾಣ್ಯದ ಅಪಮೌಲ್ಯ ಮಾಡಿದ ನಂತರವೇ ಸ್ಥಿರವಾದ ಆರ್ಥಿಕ ಬೆಳವಣಿಗೆಯನ್ನು ಸಾಧಿಸಿತು. ೧೯೫೦ರಲ್ಲಿ ಬ್ರಿಟನ್ನಿನ ರಾಷ್ಟ್ರೀಯ ಉತ್ಪತ್ತಿಯು ೮೬ ಇದ್ದದ್ದು ೧೯೫೫ರಲ್ಲಿ ೯೮ಕ್ಕೇರಿತು. ಅಲ್ಲಿಂದೀಚೆಗೆ ಬ್ರಿಟನ್ನಿನಲ್ಲಿ ಊರ್ಧ್ವ ರೀತಿಯಲ್ಲಿ ಆರ್ಥಿಕ ಬೆಳವಣಿಗೆಯು ಮುಂದುವರಿದಿದೆ. ೧೯೪೯ರಲ್ಲಿ ಪೌಂಡ್ ನಾಣ್ಯದ ಅಪಮೌಲ್ಯವನ್ನು ಅನುಸರಿಸಿ, ಅನೇಕ ಪಶ್ಚಿಮ ಯುರೋಪ್ ರಾಷ್ಟ್ರಗಳೂ ತಮ್ಮ ನಾಣ್ಯಗಳ ಅಪಮೌಲ್ಯವನ್ನು ಮಾಡಿದವು. ಅವುಗಳ ಆರ್ಥಿಕ ಸ್ಥಿತಿಯು ಅಂದಿನಿಂದ ಉತ್ತಮ ರೀತಿಯಲ್ಲಿ ಪ್ರಗತಿ ಹೊಂದುತ್ತಿದೆ.

ಫ್ರಾನ್ಸಿನಲ್ಲಿ ಡಿಸೆಂಬರ್ ೧೯೫೮ರಲ್ಲಿ ಫ್ರಾಂಕ್ ನಾಣ್ಯದ ಅಪಮೌಲ್ಯವಾಯಿತು. ಇದೊಂದು ಪ್ರಮುಖ ಘಟನೆ. ಭಾರತದಂತೆ ಅಲ್ಲಿಯೂ ಅಪಮೌಲ್ಯ ಮಾಡುವ ಮೊದಲು ರಾಷ್ಟ್ರೀಯ ಬೆಸ್ನದ ಸಾಲ ಆಮದುಗಳ ಮೇಲೆ ಅಧಿಕ ಸುಂಕ, ರಫ್ತು ವ್ಯಾಪಾರಕ್ಕೆ ಸಬ್ಸಿಡಿ ನೀಡುವುದು, ಇವೇ ಮೊದಲಾದ ಕಾರ್ಯಕ್ರಮಗಳ ಮೂಲಕ ವಿದೇಶ ವ್ಯಾಪಾರದಲ್ಲಿ ಸಮತೋಲನ ತರಲು ಯತ್ನಿಸಲಾಯಿತು. ಆದರೆ ನಾಣ್ಯದ ಅಪಮೌಲ್ಯ ಮಾಡುವುದರಿಂದಾಗುವ ಫಲಕ್ಕೆ ಈ ಎಲ್ಲ ಕಾರ್ಯಕ್ರಮಗಳು ಸಮನಾಗಲಿಲ್ಲ. ಆದ್ದರಿಂದ ಭಾರತದಲ್ಲಿ ಜೂನ್ ೫ರಂದು ನಮ್ಮ ಆರ್ಥಿಕ ಸಚಿವರು ಘೋಷಿಸಿದಂತೆ. ಅಂದು ಫ್ರಾನ್ಸಿನಲ್ಲಿ ಫ್ರಾಂಕ್ ನಾಣ್ಯದಲ್ಲಿ ಅಪಮೌಲ್ಯವನ್ನು ಘೋಷಿಸಲಾಯಿತು. ಡಿಸೆಂಬರ್ ೧೯೫೮ರಿಂದೀಚೆಗೆ, ಫ್ರಾಂಕ್ ನಾಣ್ಯದಲ್ಲಿ ಅಪಮೌಲ್ಯ ತಂದಾಗಿನಿಂದ, ಫ್ರಾನ್ಸ್ ದೇಶದ ಆರ್ಥಿಕ ಪರಿಸ್ಥಿತಿ ಮತ್ತೆ ಎಂದಿಗೂ ಇಳಿಮುಖವನ್ನು ಕಾಣಲೇ ಇಲ್ಲ. ಫ್ರಾನ್ಸಿನಲ್ಲಿ ವಿದೇಶೀ ವಿನಿಮಯದ ಸಂಗ್ರಹವು ೧೯೫೮ರಲ್ಲಿ ೧ ಬಿಲಿಯನ್ ಡಾಲರ್‌ಗಳಿದ್ದದು ೧೯೬೫ರ ಕೊನೆಯ ಹೊತ್ತಿಗೆ ಬಿಲಿಯನ್ ಡಾಲರ್‌ಗೆ ಏರಿತು.

ಯುಗೋಸ್ಲಾವಿಯವು ಕೂಡ ತನ್ನ ಆರ್ಥಿಕ ಮುಗ್ಗಟ್ಟನ್ನು ಸರಿಪಡಿಸಲು ೧೯೬೫ನೇ ಜನವರಿಯಲ್ಲಿ ಅಪಮೌಲ್ಯವನ್ನು ಜಾರಿಗೆ ತಂದಿತು. ಇದರ ಪರಿಣಾಮವಾಗಿ ಒಂದು ಡಾಲರ್‌ಗೆ ೫೦ ದಿನಾರ್ ನಾಣ್ಯಗಳು ಸಮವಾಗಿದ್ದುದು, ಒಂದು ಡಾಲರ್‌ಗೆ ೩೦೦ ದಿನಾರ್ ನಾಣ್ಯಗಳು ಸಮವಾದವು. ೧೯೬೦ರ ಡಿಸೆಂಬರ್‌ನಲ್ಲಿ ಮತ್ತೊಂದು ವಿನಿಮಯ ಸುಧಾರಣೆಯನ್ನು ಯುಗೋಸ್ಲಾವಿಯವು ಕೈಗೊಂಡಿತು, ಇದರ ಪರಿಣಾಮವಾಗಿ ೭೫೦ ದಿನಾರ್‌ಗಳಿಗೆ ಒಂದು ಡಾಲರ್ ಸಮ ಎಂದು ಘೋಷಿಸಲಾಯಿತು. ಏಕೆಂದರೆ, ಆಗ ಸರ್ಕಾರದ ದರವು ಒಂದೊಂದು ಡಾಲರಿಗೆ ೩೦೦ ದಿನಾರ್‌ಗಳೆಂದು ಗೊತ್ತು ಮಾಡಿದರೂ ಪ್ರಯೋಗದಲ್ಲಿ ದಿನಾರ್ ನಾಣ್ಯಗಳ ವಿನಿಮಯ ದರವು ವಿವಿಧವಾಗಿತ್ತು. ರಫ್ತು ಮಾಡುವ ಕೆಲವು ಪದಾರ್ಥಗಳಿಗೆ ಒಂದೊಂದು ಡಾಲರಿಗೆ ೩೦೦ ದಿನಾರ್‌ಗಳಿಂದ ೧೫೦೦ ದಿನಾರ್‌ಗಳನ್ನು ನೀಡಬೇಕಾಗಿದ್ದಿತು. ಇದಾದನಂತರ ಕಳೆದ ವರ್ಷ ಜುಲೈ ತಿಂಗಳಲ್ಲಿ ಯುಗೋಸ್ಲಾವಿಯವು ತನ್ನ ನಾಣ್ಯವನ್ನು ಇನ್ನೂ ಅಪಮೌಲ್ಯ ಮಾಡಿ ಒಂದು ಡಾಲರಿಗೆ ೧೨೫೦ ದಿನಾರ್‌ಗಳೆಂದ ಪರಿಗಣಿಸಿತು. ಈ ಸುಧಾರಣೆಗಳೊಡನೆ ಯುಗೋಸ್ಲಾವಿಯವು ರಫ್ತಿಗೆ ನೀಡುತ್ತಿದ್ದ ಸರ್ಕಾರದ ಸಬ್ಸಿಡಿಯನ್ನು ರದ್ದುಮಾಡಿತಲ್ಲದೇ, ಕ್ಲಿಷ್ಟ ರೀತಿಯ ವಿದೇಶಿ ವಾಣಿಜ್ಯ ಪದ್ಧತಿಯನ್ನು ಸಂಳಗೊಳಿಸಲಾಯಿತು. ಅಂತರಾಷ್ಟ್ರೀಯ ಹಣಕಾಸಿನ ನಿಧಿ ಹಾಗೂ ಇತರ ವಿದೇಶಗಳಿಂದ ಸಹಾಯವು ದೊರೆಯಿತು.

ಯುಗೋಸ್ಲಾವಿಯಾದಲ್ಲಿ ನಡೆದ ಅಪಮೌಲ್ಯದ ರೀತಿ ನೀತಿಗಳನ್ನು ಅವಲೋಕಿಸಿದರೆ, ಫ್ರಾನ್ಸಿನಲ್ಲಿ ನಡೆದ ಹಾಗೆ, ರಫ್ತು ವ್ಯಾಪಾರಕ್ಕೆ ನೀಡುತ್ತಿದ್ದ ಸಬ್ಸಿಡಿಯ ರದ್ದು, ವಿದೇಶಿ ವಾಣಿಜ್ಯದ ಹಿಡಿತದಲ್ಲಿ ಸಡಿಲಿಕೆ ವಿದೇಶಿ ಸ್ನೇಹ ರಾಷ್ಟ್ರಗಳ ಹಾಗೂ ಬ್ಯಾಂಕುಗಳಿಂದ ಸಹಾಯ ಇವುಗಳ ಮೂಲಕ ಯುಗೋಸ್ಲಾವಿಯವು ಮುಂದಿನ ಹೊಸ ವಾಸ್ತವಿಕ ಹಾಗೂ ದೃಢವಾದ ಆರ್ಥಿಕಾಭಿವೃದ್ಧಿ ಸಾಧಿಸಿರುವುದನ್ನು ಕಾಣಬಹುದು.

ಭಾರತದಲ್ಲಿಯೂ ಈಗ ಇದೇ ರೀತಿಯ ಸುಧಾರಣೆಯ ಕ್ರಮಗಳ ಮೂಲಕ ವಿಶ್ವ ಬ್ಯಾಂಕಿನಿಂದ, ಅಂತರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯಿಂದ ಮತ್ತು ಭಾರತದ ನೆರವು ಕೂಟದ ಸದಸ್ಯ ರಾಷ್ಟ್ರಗಳಿಂದ ಸಹಾಯವನ್ನು ಪಡೆಯುವ ನಿರೀಕ್ಷೆಯಿಂದ ರೂಪಾಯಿಯ ಅಪಮೌಲ್ಯವನ್ನು ಮಾಡಲಾಗಿದೆ.

(ಹದಿಮೂರನೇ ಪುಟ ನೋಡಿರಿ)

ಪುತ್ತೂರು ಮುನ್ಸೀಫ್ ಕೋರ್ಟಿನಲ್ಲಿ
(ಎಡಿಷನಲ್)
O. S. 722/65

ಕೇಶವ ಭಟ್ಟ — ವಾದಿ
ಮತ್ತು
ರಂಭಟ್ಟ ಕೂಡಾ . ಪ್ರತಿವಾದಿಗಳು.

1ನೇ ಪ್ರತಿವಾದಿ ರಂಭಟ್ರಿಗೆ— ಪುತ್ತೂರು ತಾಲೂಕು ನಾರಾಯಣ ಭಟ್ಟ ಮಗ. ಕರೋಪಾಡಿ ಗ್ರಾಮದ ಮಾಂಬಾಡಿ- ಪೋಸ್ಟು ಕರೋಪಾಡಿ ಬಂಟ್ವಾಳ ತಾಲೂಕು- ದ. ಕ.- ಇವರಿಗೆ ದಾವಾ ನೋಟೀಸು ಏನೆಂದ್ರೆ —

ಮೇಲ್ಕಂಡ ವಾದಿಯು ಹಿಕ್ಕರಬೇಕಾದ ವ್ಯೆರ ನಿವೃತ್ತಿಗಳನ್ನು ಕೇಳಿ ಮೇಲ್ಕಂಡ ದಾವೆಯನ್ನು ಈ ಕೋರ್ಟಿನಲ್ಲಿ ದಾಖಲು ಮಾಡಿರುತ್ತಾರೆ. ಸದ್ರಿ ದಾವೆಯು ನಿಮ್ಮ ಹಾಜರಾತಿ ಬಗ್ಗೆ ಮತ್ತು ಉದಾಹರಣೆ ಬಗ್ಗೆ ತಾ. 6-7-66ನೇ ದಿನಕ್ಕೆ ವ್ಯಾಧೆ ಇದ್ದುತ್ತದೆ. ನೀವು ಸ್ವತಃ ವ ವಕೀಲರ ಮೂಲಕ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು ಎಂತ ತಿಳಿಸೋಣವಾಗಿಯದೆ. ಕೋರ್ಟು ಹುಕುಂ ಮೇರೆಗೆ,

K. Ishwar Bhat
Advocate for Plff.

ಪುತ್ತೂರು, ತಾ. 21—6—66

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ ಸಿ. ಎಲ್. 4. 17—4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ

ಶಬ್ದ ಚಿತ್ರ

ಕನ್ನಡದ ಆಚಾರ್ಯ—ಬಿ.ಎಂ. ಶ್ರೀ

ಕನ್ನಡವೇ ಉಸಿರು, ಕನ್ನಡವೇ ದೇವರು; ಕನ್ನಡದ ಹುಲ್ಲೆ ಶ್ರೀ ತುಳಸಿಯೆಂದು ಹಾಡಿ, ದುಡಿದ ಬಿ.ಎಂ.ಶ್ರೀ ಇಂದು ನಮಗೆ ಪ್ರೇರಕ ಶಕ್ತಿಯಾಗಿದ್ದಾರೆ. ಗಡಿ ಚಳುವಳಿಯ ಈ ವೇಳೆ ಅವರ ವೀರ ವ್ಯಕ್ತಿತ್ವವನ್ನು ಅರಿತುಕೊಳ್ಳುವುದು ಸಮುಚಿತ.

ಬರೆದವರು
"ಕಲಾಪ್ರಿಯ" ಚಿತ್ರದುರ್ಗ.

ಕನ್ನಡ ಪ್ರಿಯರಿಗೆ ಬಿ. ಎಂ. ಶ್ರೀಯವರ ಹೆಸರು ಅಪರಿಚಿತವಲ್ಲ. ಶ್ರೀಯುತರು ಕನ್ನಡ ನಾಡು ನುಡಿಗಳಿಗಾಗಿ ಅವಿಶ್ರಾಂತವಾಗಿ ದುಡಿದು ಮಡಿದ ಮಹಾನುಭಾವರು. ಅವರ ಪಾಲಿಗೆ ಕನ್ನಡವೇ ಉಸಿರು; ಕನ್ನಡವೇ ದೇವರು.

ಕನ್ನಡ ಸಾಹಿತ್ಯದಲ್ಲಿ ಹೊಸ ಸಂಪ್ರದಾಯ; ಕನ್ನಡದ ನೆಲದಲ್ಲಿ ಹೊಸ ಸ್ಫೂರ್ತಿಯನ್ನು ರೂಪಿಸಿದ ಕೀರ್ತಿ ಬಿ. ಎಂ. ಶ್ರೀಯವರದು. 'ಕನ್ನಡಕ್ಕಾಗಿ ದುಡಿಯುತ್ತೇನೆ; ಕನ್ನಡಕ್ಕಾಗಿ ಮಡಿಯುತ್ತೇನೆ' ಎಂದು ಕೆಚ್ಚೆದೆಯಿಂದ ಮುಂದೆ ಬಂದು ಕನ್ನಡ ಸಾಹಿತ್ಯ ಸರಸ್ವತಿಗೆ ಶ್ರದ್ಧೆಯಿಂದ ಸೇವೆ ಸಲ್ಲಿಸಿದ ಮಹಾನುಭಾವರು ಶ್ರೀಯುತರು.

'ಕನ್ನಡದ ಹುಲ್ಲೆನಗೆ ಪಾವನದ ಶ್ರೀ ತುಳಸಿ' ಎಂದು ಕವಿ ಸಾರಿದ ಅಂತರಾರ್ಥ ಸಂದೇಶದ ಅರ್ಥವನ್ನು ಬಿ. ಎಂ. ಶ್ರೀಯವರ ನಡೆ-ನುಡಿಗಳಲ್ಲಿ ಕಾಣಬಹುದಿತ್ತು. ಕನ್ನಡದ ಕೀರ್ತಿ, ಕನ್ನಡದ ಮೇಲ್ಮೆಯೇ ಅವರ ಬಾಳ ಹೆಬ್ಬಯಕೆ-ಗುರಿ.

ಅವರದು ಅರ್ಥಪೂರ್ಣ ಬಾಳು; ಅನುಕರಣೀಯ ಜೀವನ ಅವರ ಸೇವಾಕ್ಷೇತ್ರಗಳ ವ್ಯಾಪ್ತಿ ಕಿರಿದಲ್ಲ ಅಗಾಧ. ಅವರ ಬಾಳಿನಲ್ಲಿ ಒಂದೊಂದು ವರ್ಷವೂ ಅಮೂಲ್ಯ; ೧೮೮೪ನೇ ಇಸವಿ ಜನವರಿ ೩ರಂದು ನಾಗಮಂಡಲ ತಾಲೂಕಿನ ಬೆಳ್ಳೂರಿನಲ್ಲಿ ಜನಿಸಿದ ಶ್ರೀಯುತರು ೧೯೦೩ರಲ್ಲಿ ಬಿ. ಎ. ೧೯೦೬ರಲ್ಲಿ ಬಿ. ಎಲ್. ಮತ್ತು ೧೯೦೭ರಲ್ಲಿ ಎಂ. ಎ. ಪದವೀಧರರಾಗಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ತಮ್ಮ ಸೇವೆಯನ್ನು ಆರಂಭಿಸಿದರು. ಶ್ರೀಯುತರು ಸರ್ಕಾರಿ ಸೇವೆಯಲ್ಲಿ ಬೇರೆ ಇಲಾಖೆಯಲ್ಲಿ ಇದ್ದಿದ್ದರೆ ಕೀರ್ತಿ ಹಣ ಎರಡನ್ನೂ ಸಂಪಾದಿಸಿ ನೆಮ್ಮದಿಯಿಂದ ಇರಬಹುದಿತ್ತು. ಆದರೆ ಅವರು ಆರಿಸಿಕೊಂಡುದು ಅಧ್ಯಾಪಕ ವೃತ್ತಿ. ಆ ಪವಿತ್ರ ವೃತ್ತಿಯಲ್ಲಿ ನಿಷ್ಠಾಪೂರ್ಣ ಸೇವೆಯಿಂದ ಕೀರ್ತಿ ಗಳಿಸಿದರು. ಕನ್ನಡದ ಬದುಕಿನಲ್ಲಿ ಹೊಸ ಬೆಳಕಾದರು.

ಬಿ. ಎಂ. ಶ್ರೀಯವರ ಉಪನ್ಯಾಸಗಳು ರಸಘಟ್ಟ ಇದ್ದಂತೆ. ಅವರ ಶಿಷ್ಯರಾಗಿದ್ದು ಅವರಿಂದ ಪಾಠ ಹೇಳಿಸಿಕೊಂಡ ವ್ಯಕ್ತಿಗಳೇ ಧನ್ಯರು. ಅವರ ಶಿಷ್ಯ ಪರಂಪರೆಯ ಹಲವಾರು ಹಿರಿಯ ತಲೆಗಳನ್ನು ಇಂದಿಗೂ ಕಾಣಬಹುದು.

ಬಿ. ಎಂ. ಶ್ರೀಯವರದು ಆಕರ್ಷಣೀಯ ಆಕಾರ—ಉಡುಗೆ—ತೊಡುಗೆ; ಔದಾರ್ಯ ವಿಚಾರ ಪೂರ್ವ ದೃಷ್ಟಿ, ಶಿಶು ಸದೃಶ ಮೃದು ನಗೆ, ಕಪಟರಹಿತ ಮಾತು-ಕತೆ, ಸೌಜನ್ಯಪೂರ್ಣ ಬಾಳ್ವೆ ಎಲ್ಲವೂ ಭವ್ಯ, ಅವರ ಮಾತಿನ ಮೋಡಿಗೆ ಮರುಳಾಗದ ವ್ಯಕ್ತಿ ಇರಲಿಲ್ಲ. ಮಾತು—ಬರವಣಿಗೆ ಎರಡರಲ್ಲಿಯೂ ಶ್ರೀಯುತರದು ಸ್ವತಂತ್ರ ಶೈಲಿ. ಅವರ ಅಗಾಧ ಪಾಂಡಿತ್ಯಕ್ಕೆ ಅವರ ಬರಹಗಳೇ ಸಾಕ್ಷಿ. ಅವರು 'ಶ್ರೀ' ಎಂಬ ಕಾವ್ಯನಾಮದಿಂದ ಕೆಲವೇ ಅಮೂಲ್ಯ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

೧೯೨೫ರಲ್ಲಿ ಗದಾಯುದ್ಧ ನಾಟಕಂ ರಚಿಸಿ—ಪ್ರದರ್ಶಿಸಿ ಅನಂತರ ೧೯೨೬ರಲ್ಲಿ ಪ್ರಕಟಿಸಿದರು. ಅದೇ ಅವರ ಮೊದಲ ಕೃತಿ ಎಂದು ಹೇಳಬಹುದಾಗಿದೆ. (೧೯೧೧ರಲ್ಲಿ ಕನ್ನಡ ತಲೆ ಎತ್ತುವ ಬಗೆ ಎಂಬ ವಿಷಯದಲ್ಲಿ ಭಾಷಣ ಮಾಡಿ ಪ್ರಕಟಿಸಿದ್ದರು).

ಬಿ. ಎಂ. ಶ್ರೀಯವರಿಗೆ ಕನ್ನಡದ ಬಗೆಗಿದ್ದ ಅಭಿಮಾನ—ಕಳಕಳಿ ಅಗಾಧ. ಶ್ರೀಯುತರು ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾದ ಮೊದಲ ವರ್ಷವೇ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ. ಎ. ತರಗತಿಯನ್ನು ಆರಂಭಿಸಿದರು.

ಕನ್ನಡ ಜನತೆಗೆ ನಾಡ-ನುಡಿಗಳ ಬಗ್ಗೆ ಅಭಿಮಾನ ಮೂಡುವಂತೆ ಮೊಟ್ಟ ಮೊದಲಿಗೆ ಕಳಕಳಿಯ ಕರೆ ಕೊಟ್ಟು ಚಳುವಳಿಗೆ ನಾಂದಿ ಹಾಡಿದವರು ಬಿ.ಎಂ. ಶ್ರೀಯವರೆಂದು ಧಾರಾಳವಾಗಿ ಹೇಳಬಹುದು. ಕನ್ನಡಕ್ಕಾಗಿ ಅನುಭವಿಸಿದ ಶ್ರಮ, ಅನುಸರಿಸಿದ ಮಾರ್ಗ, ಸಲ್ಲಿಸಿದ ಸೇವೆ ಅಭಿನಂದನೀಯ; ಅನುಕರಣೀಯ.

೧೯೨೮ರಲ್ಲಿ ಗುಲ್ಬರ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಬಿ. ಎಂ. ಶ್ರೀಯವರನ್ನು ಆಯ್ಕೆ ಮಾಡಿ ಕನ್ನಡ ಜನತೆ ತನ್ನ ಕೀರ್ತಿಯನ್ನು ಮೆರೆಯಿಸಿತು. ಅಧ್ಯಕ್ಷ ಸ್ಥಾನದಿಂದ ಶ್ರೀಯುತರು ಮಾಡಿದ ಭಾಷಣ ಕನ್ನಡಿಗರ ಜಡ ಹೃದಯವನ್ನು ಬಡಿದೆಬ್ಬಿಸುವ ಪಾಂಚಜನ್ಯವಾಯಿತು.

ಬಿ. ಎಂ. ಶ್ರೀಯವರ ದೇಹದ ರಕ್ತದ ಕಣಕಣವೂ 'ಕನ್ನಡ, ಕನ್ನಡ' ಎಂದು ಮೊರೆಯಿಡುತ್ತಿದ್ದವೆಂದು ತೋರುತ್ತದೆ. ಇಟ್ಟ ಮುಂದಡಿಯನ್ನು ಹಿಂದೆಗೆಯಲಾರೆ ಎಂಬ ದೃಢ ನಿರ್ಧಾರ ಅವರದು, ಸಮಕಾಲೀನ ಸಾಹಿತಿಗಳು ಕೆಲವರು ಅವರನ್ನು ಮನ ಬಂದಂತೆ ನಿಂದಿಸಲೂ ಹಿಂಜರಿಯಲಿಲ್ಲ.

೧೯೩೮ರಿಂದ ೧೯೪೨ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಅಮೂಲ್ಯ ಸೇವೆಸಲ್ಲಿಸಿದರು. ಶ್ರೀಯುತರ ಉಪಾಧ್ಯಕ್ಷ ಪದವಿಯ ಕಾಲ ಸುವರ್ಣಯುಗವೆಂದು ಹೇಳಬಹುದು. ಆ ಕಾಲದಲ್ಲಿ ಪರಿಷತ್ತಿಗೆ ಸರ್ಕಾರದಿಂದ ಹಲಬಗೆಯ ಸೌಲಭ್ಯಗಳು ಒದಗಿದವು. ಕನ್ನಡ ನುಡಿ ಪ್ರಕಟನೆ ಅಚ್ಚುಕೂಟದ ಏರ್ಪಾಡು, ಸ್ಥಾಪನೆ, ಗ್ರಂಥಗಳ ಪರಿಷ್ಕರಣ ಮೊದಲಾದ ಕಾರ್ಯಗಳು ಅವರ ದಕ್ಷ ಕಾರ್ಯ ನಿರ್ವಹಣೆಗೆ ಸಾಕ್ಷಿ.

ಕನ್ನಡದ ಹಳ್ಳಿ ಹಳ್ಳಿಗಳನ್ನು ನಿಹಸು ತ್ತಿ ಕನ್ನಡದ ಕೀರ್ತಿಯನ್ನು ಪ್ರಸಾರ ಮಾಡಿದ ಶ್ರೀಯುತ್ಸು ಬಿ. ಎಂ. ಶ್ರೀಯವರು ಅವರು ಕಾಣದ ನಗರವಿಲ್ಲ. ಅವರ ಉಪನ್ಯಾಸ ಕೇಳದ ಕನ್ನಡ ಸಂಘವಿಲ್ಲ. ನವಜಾಗೃತಿಗೆ ಸಂಘಟನೆಗೆ ಕರೆಯಿತ್ತು ಕನ್ನಡದ ಶ್ರೇಯಸ್ಸಿಗಾಗಿ ಶ್ರಮಿಸಿದರು.

ಮೈಸೂರು ಅರಸರಾಗಿದ್ದ ಕೃಷ್ಣರಾಜ ಒಡೆಯರು ಬಿ. ಎಂ. ಶ್ರೀಯವರ ಕಾರ್ಯದಕ್ಷತೆ, ಸೇವೆಯನ್ನೂ ಗಮನಿಸಿ 'ರಾಜಸೇವಕ' ಎಂಬ ಬಿರುದನ್ನಿತ್ತು ಗೌರವಿಸಿದರು. ೧೯೪೪ರಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತರಾದುದಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದಲೂ ಬಿಡುಗಡೆ ಹೊಂದಿದವರು ಮುಂದೆ ಶ್ರೀಯುತರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿಯೂ ಕೆಲ ಕಾಲ ಸೇವೆಸಲ್ಲಿಸಿದರು.

೧೯೪೪ರಲ್ಲಿ ಧಾರವಾಡದ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ಧಾರವಾಡಕ್ಕೆ ಪ್ರಯಾಣ ಬೆಳೆಸಿದರು. ಬಿ. ಎಂ. ಶ್ರೀಯವರ ಅಂತಿಮ ದಿನಗಳು ಅಷ್ಟಾಗಿ ಹಿತವಾಗಿರಲಿಲ್ಲ. ವೈಮನಸ್ಯಗಳೆರಡೂ ನೊಂದು ಬೆಂದು ನಲುಗಿದ್ದವು. ಅವರನ್ನು ಅವ್ಯಕ್ತ ದುಃಖ, ಕೊರಗು ಕಾಡುತ್ತಿದ್ದವು. ಶ್ರೀಯುತರು ಎಲ್ಲವನ್ನೂ ಅನುಭವಿಸುತ್ತಾ ನಗುನಗುತ್ತಲೇ ಇರುತ್ತಿದ್ದರು.

ಬಿ. ಎಂ. ಶ್ರೀಯವರ ಅಂತಿಮ ದಿನಗಳಲ್ಲಿ ಹಲವಾರು ಸಮಸ್ಯೆಗಳು, ನೋವುಗಳು ಎಡಬಿಡದೆ ಕಾಡುತ್ತಿದ್ದವು. ಗಟ್ಟಿ ಜೀವ ಹಲದಿನಗಳ ವರೆಗೆ ಎಲ್ಲಭಾರವನ್ನು ತಾಳಿಕೊಂಡಿತ್ತು. ಕೊನೆಗೆ ೧೯೪೬ನೇ ಜನವರಿ ೫ರಂದು ಅವರ ೬೩ನೆಯ ವಯಸ್ಸಿನಲ್ಲಿ ಬಿ. ಎಂ ಶ್ರೀಯವರ ಆತ್ಮ ಜ್ಯೋತಿ ಅನಂತ ಶಕ್ತಿಯಲ್ಲಿ ಲೀನವಾಯಿತು. ಅವರ ಹೃದಯ ಸ್ತಂಭನದಿಂದ ಕನ್ನಡಮ್ಮನ ಗುಡಿಯಲ್ಲಿ ದೇದೀಪ್ಯಮಾನವಾಗಿ ಬೆಳಗುತ್ತಿದ್ದ ಒಂದು ದೀಪ ಆರಿತು. ಶ್ರೀಯುತರ ಹೃದಯವನ್ನು ಹಲವಾರು ಪ್ರತಿಭಾವಂತ ವ್ಯಕ್ತಿಗಳಿಗೆ ಅರಿಯಲಾಗಲಿಲ್ಲ. ಕನ್ನಡನಾಡ ದೌರ್ಭಾಗ್ಯ!

ಶ್ರೀಯವರ ಕೃತಿಗಳು ಸಂಖ್ಯೆಯಲ್ಲಿ ಅಲ್ಪ ಆದರೆ ಶೈಲಿ, ಶಕ್ತಿಗಳಲ್ಲಿ ಅಗಾಧವಾದವು. ಅವರದು ಹಿಂದಿನ ಇಂದಿನ ಶೈಲಿ—ಭಾಷೆಯನ್ನು ಬಳಸಿಕೊಂಡು ರೂಪುಗೊಂಡ ವಿನೂತನ ಸಮ್ಮಿಶ್ರ ಶೈಲಿ. ಅದ್ಭುತ ಶೈಲಿ.

ಗದಾಯುದ್ಧ ನಾಟಕಂ, ಇಂಗ್ಲೀಷ್ ಗೀತಗಳು, ಪಾರಸೀಕರು, ಕನ್ನಡ ಭಾವುಟ, ಹೊಂಗನಸುಗಳು, ಕನ್ನಡದ ಕೈಪಿಡಿ—೨, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ ಭಾಗ ೧—೨ ಇವಿಷ್ಟು ಅವರ ಬರಹಗಳು. ಬರಹ ಅಲ್ಪ, ಆದರೆ ಅರ್ಥ ಅಗಾಧ.

ಬಿ. ಎಂ. ಶ್ರೀಯವರ ಹೃದಯಾಂತರಾಳದಿಂದ ಹೊರಹೊಮ್ಮಿದ ಕಳಕಳಿಯ ನುಡಿಯಿಂದ ಅವರ ಅಂತರಾತ್ಮವನ್ನು ಅರಿಯಬಹುದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಪದವಿಯಿಂದ ಬಿಡುಗಡೆಹೊಂದಿದ ದಿನ-'ನನ್ನ ಕನ್ನಡದ ಉರುಬಿನಲ್ಲಿ ಹಲವು ನೋವುಗಳಿಗೆ ಎಡೆ ಕೊಟ್ಟಿದ್ದೇನೆ. ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ, ಹಟಕ್ಕಲ್ಲ, ನಾನು, ಕಂಡ ದಿಟಕ್ಕಾಗಿ, ಮರೆತು ಬಿಡಿ, ಮನ್ನಿಸಿ ಬಿಡಿ. "ನನಗೆ ಯಾರಿಂದ ಹಿಂದಿನ ಸೆಲ್ಲ." ಎಂದು ನುಡಿದಾಗ ಅವರ ಹೃದಯ ಎಷ್ಟು ನೊಂದಿತ್ತು ಎಂಬುದು ಗೊತ್ತಾಗುತ್ತದೆ.

ಶ್ರೀಯವರಿಗೆ ರುದ್ರ ನಾಟಕಗಳ (ಟ್ರಾಜೆಡಿ)ಗಳ ಬಗ್ಗೆ ಅಭಿಮಾನವೂ ಇತ್ತು. ಇವರ ಗದಾಯುದ್ಧ ನಾಟಕ, ಅಶ್ವತ್ಥಾಮನ್, ಪಾರಸೀಕರು ಕೃತಿಗಳನ್ನು ಉದಾಹರಿಸಬಹುದು. ರುದ್ರನಾಟಕಗಳ ಬಗ್ಗೆ (ದುರಂತ ನಾಟಕ) ಅವರ ಮತವಾದ ಸಹಜವೆಂದು ಹೇಳಬೇಕಾಗಿತ್ತು. ಆ ವಿಷಯವನ್ನು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದರು. ಅವರ ಮಾತಿನಲ್ಲಿಯೇ ಹೇಳುವುದಾದರೆ 'ನಮ್ಮ ಸಂಸಾರ ಅನೇಕ ರೀತಿಯಲ್ಲಿ ಟ್ರಾಜಡಿ; ನಮ್ಮ ಜನಾಂಗ ಜೀವನ ಅನೇಕ ರೀತಿಯಲ್ಲಿ ಟ್ರಾಜೆಡಿ. ಟ್ರಾಜೆಡಿಯನ್ನು ಲೋಕದಲ್ಲಿ ಅನುಭವಿಸುವವರು ಸಾಹಿತ್ಯದಲ್ಲಿ ಆಳವಾದ ದೂರದೃಷ್ಟಿಯುಳ್ಳ ಕವಿಗಳ ಕಣ್ಣಿನಿಂದ ನೋಡೋಣ; ಅನುಭವಿಸೋಣ.' ಈ ಮಾತು ಅವರಿಗೆ ಅನ್ವಯಿಸುತ್ತದೆ. ರುದ್ರನಾಟಕ ಬರೆದರು; ಅವರ ಬಾಳು ರುದ್ರನಾಟಕವೇ ಆಯಿತು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 58 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೩

ಇದು ನಮ್ಮ ಸಾಧನೆ

ಅಂಗವಿಕಲರಿಗೊಂದು ಆಶಾಕಿರಣ

ಅಪಘಾತಕ್ಕೆ ಒಳಗಾಗಿ ಅಂಗಾಂಗವನ್ನು ಕಳೆದುಕೊಂಡರೆ, ಅವನ ಪಾಡು ಶೋಚನೀಯವಾಗುತ್ತದೆ. ಯುದ್ಧದಲ್ಲಿ ಅನೇಕರು ಹೀಗೆ ಅಂಗವಿಕಲರಾಗುವುದುಂಟು. ಅಂತಹವರು, ಯಾವನ್ನೂ ಕೆಲಸಕ್ಕೇ ಆಗಲಿ, ಮತ್ತೊಬ್ಬರನ್ನು ಆಶ್ರಯಿಸಬೇಕಾಗುತ್ತದೆ. ಆದರೆ, ಅಂತಹ ಅಂಗವಿಕಲರನ್ನು ಉತ್ತಮ ಪ್ರಜೆಗಳನ್ನಾಗಿ ಮಾರ್ಪಡಿಸುವ ಪ್ರಯತ್ನ ಪೂನಾದಲ್ಲಿಯ ಕೃತಕ ಅಂಗಾಂಗಗಳ ಕೇಂದ್ರದಲ್ಲಿ ನಡೆಯುತ್ತಿದೆ. ಭಾರತದಲ್ಲಿ ಈ ರೀತಿಯ ಕೇಂದ್ರ ಇದೊಂದೆ. ಸಶಸ್ತ್ರ ದಳದವರಿಗಲ್ಲದೇ ಸಾರ್ವಜನಿಕರಿಗೂ ಈ ಕೇಂದ್ರ ಸಕಲ ಸಹಾಯವನ್ನು ನೀಡುವುದು. ಈ ಲೇಖನದಲ್ಲಿ ಈ ಕೇಂದ್ರದ ಕಾರ್ಯ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ.

ಯುದ್ಧದಲ್ಲೋ ಅಥವಾ ಇನ್ನಾವುದಾದರೂ ಅಪಘಾತದಲ್ಲಿ ಕೈ ಕಾಲುಗಳನ್ನು ಕಳೆದು ಕೊಂಡವರು ಕೃತಕ ಅಂಗಾಂಗಗಳನ್ನು ತೊಟ್ಟು, ಜೀವನ ನಡೆಸುತ್ತಿರುವವರ ಕೇಂದ್ರವೊಂದನ್ನು ಪೂನಾದಲ್ಲಿ ಕಾಣಬಹುದು. ಆ ಕೇಂದ್ರದ ಆಟದ ಮೈದಾನದಿಂದ ಸಂತೋಷಭರಿತವಾದ 'ವ್ಹಾ ವ್ಹಾ' 'ಬಹುತ್ ಅಚ್ಛೇ' 'ಪಕಡೋ' 'ವೋ ಮಾರ್' ಮುಂತಾದ ಉದ್ಗಾರಗಳು ಕೇಳಿಬರುವುದೆಂದರೆ ಯಾರಿಗೆ ತಾನೇ ಆಶ್ಚರ್ಯವಾಗುವುದಿಲ್ಲ? ಆ ಮೈದಾನದಲ್ಲಿ ಕೃತಕ ಅಂಗಾಂಗಗಳನ್ನು ಧರಿಸಿದ ಜನರು ಆಟವಾಡುತ್ತಾ ಆಟದ ಪ್ರತಿಯೊಂದು ಕ್ಷಣವನ್ನೂ ಸಂತೋಷದಿಂದ ವೀಕ್ಷಿಸುವುದು ಮತ್ತು ಆಟದಲ್ಲಿ ಭಾಗವಹಿಸುವುದು ನಿಜ. ಈ ಕೇಂದ್ರದಲ್ಲಿ ವಾಸಿಸುವ ಜನರಿಗೆ ವ್ಯಾಯಾಮ ಮತ್ತು ವಾಲೀಬಾಲ್ ಮುಂತಾದ ಕ್ರೀಡೆಗಳನ್ನು ಹೇಳಿಕೊಡಲಾಗುವುದು.

ಈ ಎಲ್ಲಾ ಆಟಗಾರರು ಒಂದಲ್ಲ ಒಂದು ಅಂಗವನ್ನು ಕಳೆದುಕೊಂಡಿರುತ್ತಾರೆ. ಒಬ್ಬರಿಗೆ ಕೈ ಕತ್ತರಿಸಿಹೋಗಿದ್ದರೆ ಮತ್ತೊಬ್ಬರಿಗೆ ಕಾಲು ತುಂಡಾಗಿರುತ್ತದೆ; ಇನ್ನು ಕೆಲವರಿಗೆ ಒಂದು ಕೈ ಮತ್ತು ಒಂದು ಕಾಲು ಅಥವಾ ಎರಡೂ ಕಾಲುಗಳು ಕತ್ತರಿಸಿಹೋಗಿರಬಹುದು. ಹೀಗೆ ಅವಯವಗಳನ್ನು ಕಳೆದುಕೊಂಡ ಜನ ತಕ್ಕ ಚಿಕಿತ್ಸೆ ಪಡೆಯಲು ಈ ಕೇಂದ್ರಕ್ಕೆ ಬರುತ್ತಾರೆ.

ಉದಾಹರಣೆಗೆ ವಾಲೀಬಾಲ್ ಆಟವನ್ನು ಈ ಕೇಂದ್ರದ ಅಂಗಾಂಗ ಕಳೆದುಕೊಂಡ ಜನ ಹೇಗೆ ಆಡುತ್ತಾರೆಂಬುದನ್ನು ಸ್ವಲ್ಪ ಪರಿಶೀಲಿಸೋಣ. ವಾಲೀಬಾಲ್ ಆಟದ ನೆಟ್ಟನ್ನು ಕೆಳಮಟ್ಟದಲ್ಲಿಯೇ ಕಟ್ಟಲಾಗಿರುತ್ತದೆ. ಆಟಗಾರರು ನೆಲದ ಮೇಲೆ ಹಾಸಿರುವ ಚಾಪೆಯ ಮೇಲೆ ಕುಳಿತಿರುತ್ತಾರೆ. ಅವರ ಬಲಹೀನತೆಯಾಗಲೀ ಅಶಕ್ತತೆಯೇ ಆಗಲೀ ಆಟದ ಹುರುಪು, ಹುಮ್ಮಸ್ಸನ್ನು ಸ್ವಲ್ಪವೂ ಕುಂದಿಸುವುದಿಲ್ಲ. ಚೆಂಡನ್ನು ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ಎಸೆದಾಗ ಅದನ್ನು ಹಿಂಬಾಲಿಸುವ ಪ್ರಯತ್ನದಲ್ಲಿ ಆಗಾಗ್ಗೆ ನೆಲಕ್ಕೆ ಉರುಳುವುದುಂಟು. ಈ ಆಟದ ನಿರ್ಣಯಕಾರನೂ ಒಬ್ಬ ಅಂಗರಹಿತನೇ ಇರುತ್ತಾನೆ. ಈ ವಾಲೀಬಾಲ್ ಆಟದ ನಿರ್ಣಯಕಾರನಿಗೆ ಎರಡೂ ಕಾಲುಗಳು ಇಲ್ಲದಿರುವುದನ್ನು ನೋಡಬಹುದು. ಅವನು ರೈಲ್ವೆ ಒಂದರ ಅಪಘಾತಕ್ಕೆ ಒಳಗಾಗಿದ್ದನು. ಗಾಲಿಗಳುಳ್ಳ ಕುರ್ಚಿಯೊಂದರಲ್ಲಿ ಕುಳಿತು ನಿರ್ಣಯಕಾರನು ಆಟದ ಪಾಯಿಂಟುಗಳನ್ನು ಗಂಭೀರವಾಗಿಯೇ ಎಣಿಸುತ್ತಿರುತ್ತಾನೆ. ಈತನು, ಯಾವ ಆಟದ ನಿರ್ಣಯಕಾರನಿಗೂ ಕಡಿಮೆಯವನಿರುವುದಿಲ್ಲ.

ಇಂತಹ ಕ್ರೀಡಾ ದೃಶ್ಯಗಳನ್ನು ಬೆಳಗಿನಿಂದ ಸಂಜೆಯವರೆಗೆ ಪೂನಾದಲ್ಲಿಯ ಕೃತಕ ಅಂಗಾಂಗಗಳ ಕೇಂದ್ರದಲ್ಲಿ ಕಾಣಬಹುದು. ಈ ಕೇಂದ್ರಕ್ಕೆ ಸೇರಲು ಬಂದಾಗ ರೋಗಿಯು ಮನಸ್ಸು ನೊಂದ ಮನಸ್ಸಾಗಿ ನೈತಿಕವಾಗಿ, ಕುಗ್ಗಿರುತ್ತದೆ. ಪ್ರಪಂಚವೇ ಅವನಿಗೆ ಶೂನ್ಯವಾಗಿ ಕಾಣಿಸುತ್ತಿರುತ್ತದೆ. ಉದ್ದೇಶ ಪೂರಿತ ಜೀವನವನ್ನು ನಡೆಸುತ್ತಿದ್ದ ಅವನು ಒಮ್ಮೆಲೆ ಅಂಗಾಂಗವನ್ನು ಕಳೆದುಕೊಂಡಿದುದರಿಂದ, ಎಲ್ಲರ ಅನುತಾಪಕ್ಕೆ ಮತ್ತು ಕನಿಕರಕ್ಕೆ ಒಳಗಾಗುತ್ತಾನೆ. ಈ ಕೇಂದ್ರದಲ್ಲಿ ನಡೆಯುವ ಆಟದಲ್ಲಿ ಭಾಗವಹಿಸುವದರಿಂದ ಕ್ರಮವಾಗಿ ಮನಶ್ಶಾಂತಿಯನ್ನೂ, ಧೃತಿಯನ್ನು ಪಡೆಯುತ್ತಾನೆ ಉಳಿದ ರೋಗಿಗಳೊಡನೆ ಸೇರುವುದರಿಂದ ದುಃಖವು ಶಮನವಾಗಿ ಆಶಾ ಜೀವನವು ಅವನ ಮುಂದೆ ಕುಣಿಯುತ್ತದೆ. ಕಾಲ ಕಳೆದಂತೆ ರೋಗಿಯು ತಲೆಯೆತ್ತಿ ನಿಲ್ಲುತ್ತಾನೆ.

ಪೂನಾದಲ್ಲಿರುವ ಈ ಕೃತಕ ಅಂಗಾಂಗ ಕೇಂದ್ರವು, ಕೃತಕ ಅಂಗಾಂಗಗಳನ್ನು ತಯಾರಿ ಅವುಗಳನ್ನು ಜೋಡಿಸುವ ಕಾರ್ಯಕ್ರಮವನ್ನು ಇಟ್ಟುಕೊಂಡಿದೆ. ಭಾರತದಲ್ಲಿ ಇಂತಹ ಮತ್ತೊಂದು ಕೇಂದ್ರವಿಲ್ಲ. ಕಳೆದ ಯುದ್ಧದ ಕಾಲದಲ್ಲಿ ಶಸ್ತ್ರಾಸ್ತ್ರ ದಳದ ಯೋಧರಿಗೆ ಯುದ್ಧ ಮಾಡುತ್ತಾ ಅಂಗಾಂಗಗಳನ್ನು ಕಳೆದು ಕೊಂಡರೆ ಅವರಿಗೆ ಅನುಕೂಲವಾಗಲೆಂದು ಈ ಕೇಂದ್ರವನ್ನು ಸ್ಥಾಪಿಸಲಾಯಿತು. ಅನಂತರ ಸರ್ಕಾರವು ಮಿತ ಸಂಖ್ಯೆಯ ಸಾರ್ವಜನಿಕರಿಗೂ ಇಲ್ಲಿ ಅವಕಾಶವನ್ನು ಕಲ್ಪಿಸಲು ನಿರ್ಧರಿಸಿತು. ಅಲ್ಲಿಂದೀಚೆಗೆ ದೇಶ ವಿದೇಶದಲ್ಲಿ ಈ ಕೇಂದ್ರವು ಜನಪ್ರಿಯವಾಯಿತು. ೧೯೬೪—೬೫ ನೇ ಸಾಲಿನಲ್ಲಿ ಸುಮಾರು ಒಂದು ಸಾವಿರ ಜನರಿಗೆ ಕೃತಕ ಅಂಗಾಂಗಗಳನ್ನು ಈ ಕೇಂದ್ರದಲ್ಲಿ ಜೋಡಿಸಲಾಯಿತು. ಈ ಕೇಂದ್ರಕ್ಕೆ ಭಾರತದ ನಾನಾ ಮೂಲೆಗಳಿಂದಲ್ಲದೇ, ಅಕ್ಕ ಪಕ್ಕದ ರಾಷ್ಟ್ರಗಳಿಂದಲೂ ರೋಗಿಗಳು ಬರುತ್ತಿದ್ದಾರೆ. ಪ್ರತಿ ವರ್ಷ ಈ ಕೇಂದ್ರವು ಸುಮಾರು ಎರಡು ಸಾವಿರ ಕೃತಕ ಅಂಗಗಳನ್ನು ತಯಾರಿಸುತ್ತದೆ. ಸುಮಾರು ೨೦೦ಕ್ಕಿಂತ ಹೆಚ್ಚು ಜನ ಸಾರ್ವಜನಿಕರು ಈ ಕೇಂದ್ರದ ಉಪಯೋಗ ಪಡೆಯಲು ತಮ್ಮ ಹೆಸರುಗಳನ್ನು ದಾಖಲೆ ಮಾಡಿಸಿರುತ್ತಾರೆ.

ಚಿಕಿತ್ಸಾ ಕ್ರಮ

ಮೊದಲಿಗೆ ರೋಗಿಯ ಮಾನಸಿಕ ದೌರ್ಬಲ್ಯವನ್ನು ನಿವಾರಿಸಲು ಯತ್ನಿಸಲಾಗುವುದು. ಆಟ ಆಡುವುದರ ಮೂಲಕ, ಕೃತಕ ಅಂಗಾಂಗಗಳನ್ನು ಧರಿಸಿ ಉತ್ತಮವಾದಂತಹ ಕೆಲಸಗಳನ್ನು ಕೈಗೊಂಡು ಇತರ ರೋಗಿಗಳನ್ನು ನೋಡುವುದರ ಮೂಲಕ, ಕೇಂದ್ರಕ್ಕೆ ಬಂದ ಹೊಸ ರೋಗಿಗೆ ಚಿಕಿತ್ಸೆಯ ಕ್ರಮದಲ್ಲಿ ನಂಬಿಕೆಯುಂಟಾಗಿ ವೈದ್ಯರೊಡನೆ ತನ್ನ ಸಂಪೂರ್ಣ ಸಹಕಾರವನ್ನು ನೀಡುತ್ತಾನೆ. ಆ ಮೇಲೆಯೇ ವೈದ್ಯರು ಶಸ್ತ್ರ ಚಿಕಿತ್ಸೆಯ ಕಾರ್ಯವನ್ನು ಕೈಗೊಳ್ಳುತ್ತಾರೆ.

ಕೈ ಕಳೆದುಕೊಂಡವರಿಗೆ ನೇರವಾಗಿ ಕೃತಕ ಕೈ ಜೋಡಿಸುವುದರಿಂದ ಏನೂ ಉಪಯೋಗವಾಗುವುದಿಲ್ಲ; ಆದರೆ ಕ್ರುಕೆನ್‌ಬರ್ಗ್ ಚಿಕಿತ್ಸಾ ಕ್ರಮದ ಮೂಲಕ ಕೃತಕ ಕೈಯನ್ನು ಜೋಡಿಸಿದರೆ ಅದು ಬಹು ಪರಿಣಾಮಕಾರಿಯಾಗುತ್ತದೆ. ಏಕೆಂದರೆ ಕ್ರುಕೆನ್‌ಬರ್ಗ್ ಚಿಕಿತ್ಸೆ ಮಾಡುವುದರಿಂದ ರೋಗಿಯು ತನ್ನ ಕೃತಕ ಕೈಯನ್ನು ಉಪಯೋಗಿಸಲು ಬರುವುದಲ್ಲದೇ, ಕೈಯನ್ನು ಉಪಯೋಗಿಸುವಾಗ ತನ್ನ ಚರ್ಮದ ಸ್ಪರ್ಶದ ಮೂಲಕ ತಾನೇ ತನ್ನ ಕೈಗಳನ್ನು ಉಪಯೋಗಿಸುತ್ತಿದ್ದೇನೆ ಎನ್ನುವ ಅರಿವನ್ನು ಪಡೆಯುತ್ತಾನೆ. ಪ್ರತಿ ಬಾರಿಯೂ ಮೊದಲಿಗೆ ಪರೀಕ್ಷಾರ್ಥವಾಗಿ ಕೃತಕ ಅಂಗವನ್ನು ತಯಾರಿಸಿ, ಅದು ಸರಿ ಹೋದರೆ ಅಂತಹ ವ್ಯವಸ್ಥಿತ ಅಂಗವನ್ನು ಮತ್ತೊಮ್ಮೆ ತಯಾರಿಸಬೇಕಾಗುತ್ತದೆ. ಕೃತಕ ಅಂಗಗಳನ್ನು ಅಳತೆ ಮುಂತಾದ ಅಂಕಿ ಅಂಶಗಳಿಲ್ಲದೇ ಒಟ್ಟೊಟ್ಟಿಗೆ ತಯಾರಿಸಲು ಸಾಧ್ಯವಾಗುವುದಿಲ್ಲ. ಪ್ರತಿಯೊಬ್ಬ ರೋಗಿಗೂ ಅವನಿಗೆ ಹೊಂದಿಕೊಳ್ಳುವಂತಹ ಅಂಗವನ್ನು ತಯಾರು ಮಾಡಬೇಕಾಗುತ್ತದೆ.

ಈ ಕೃತಕ ಅಂಗಗಳನ್ನು ಕಾಶ್ಮೀರದ ವಿಲ್ಲೋ ವೃಕ್ಷದಿಂದ ತಯಾರು ಮಾಡಲಾಗುವುದು. ಈ ವೃಕ್ಷದ ಮರವನ್ನು ನಾಲ್ಕು ವರ್ಷಗಳ ಕಾಲ ಕೇಂದ್ರದಲ್ಲಿ ಹದಮಾಡಿ ಅನಂತರ ಅದನ್ನು ಮಸ್ಲಿನ್ ಬಟ್ಟೆಯಿಂದ ಸುತ್ತಿ ಅದರ ಮೇಲೆ ಕಚ್ಚಾ ಚರ್ಮವನ್ನು ಸುತ್ತುವರು; ಅನಂತರ ತಕ್ಕ ಬಣ್ಣವನ್ನು ಬಳಿಯುವರು. ಈ ಕೃತಕ ಅಂಗಗಳನ್ನು ತಯಾರು ಮಾಡುವಲ್ಲಿ ಮತ್ತು ಅದನ್ನು ಸುಂದರವಾಗಿ ರೂಪಿಸುವುದರಲ್ಲಿ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ರೋಗಿಯ ಮೈ ಬಣ್ಣಕ್ಕೆ ಹೊಂದಿಕೊಂಡು ಆ ಕೃತಕ ಅಂಗಕ್ಕೆ ತಕ್ಕ ಬಣ್ಣವನ್ನು ಬಳಿಯಲಾಗುವುದು. ಕೃತಕ ಕಾಲಿಗೆ ಪಾದರಕ್ಷೆಯನ್ನೂ ನೀಡಲಾಗುವುದು.

ಈ ಕೃತಕ ಅಂಗಗಳನ್ನು ರಚಿಸುವುದರಲ್ಲಿ ಉಪಯೋಗಿಸುವ ಪದಾರ್ಥಗಳನ್ನು ಉತ್ತಮಗೊಳಿಸಲು ಮತ್ತು ವಿಲ್ಲೋ ವೃಕ್ಷದ ಬದಲು ಪ್ಲಾಸ್ಟಿಕನ್ನು ಉಪಯೋಗಿಸುವ ಬಗ್ಗೆಯೂ ಅನೇಕ ಪ್ರಯೋಗಗಳು ನಡೆಯುತ್ತಿವೆ. ಸದ್ಯ ಕೃತಕ ಅಂಗಗಳನ್ನು ತಯಾರಿಸಲು ಬೇಕಾದ ವಸ್ತುಗಳನ್ನು ನಮ್ಮ ದೇಶದಲ್ಲೇ ಪಡೆಯಲಾಗುತ್ತಿದೆ.

ಕೃತಕ ಅಂಗವನ್ನು ಜೋಡಿಸಿದ ಮೇಲೆ ರೋಗಿಯು ನಡೆಯುವ ತರಪೇತು ಶಾಲೆಯಲ್ಲಿ" ಮತ್ತು "ಕೈ ಅಂಗ ತರಪೇತು ಶಾಲೆಯಲ್ಲಿ" ತನ್ನ ಹೊಸ ಕೃತಕ ಅಂಗಗಳನ್ನು ಉಪಯೋಗಿಸಲು ಪ್ರಾರಂಭಿಸುವನು. ಈ ತರಪೇತು ಹೊಂದುತ್ತಾ ರೋಗಿಯು ಆತ್ಮ ವಿಶ್ವಾಸ ಪಡೆಯುವನಲ್ಲದೇ ತನ್ನ ಹೊಸ ಕೃತಕ ಅಂಗಗಳ ಸಂಪೂರ್ಣ ಉಪಯೋಗವನ್ನೂ ಪಡೆಯುತ್ತಾನೆ. ಈ ಯತ್ನದಲ್ಲಿ ಯಶಸ್ವಿಯಾದನಂತರ ರೋಗಿಯು ತನ್ನ ಮುಂದಿನ ಪಾಠವನ್ನು ಕಲಿಯುತ್ತಾನೆ. ಅದೇ ಅನೇಕ ವೃತ್ತಿಗಳಲ್ಲಿ ತರಪೇತು ಹೊಂದುವುದು.

ಸಾಮಾನ್ಯವಾಗಿ, ರೋಗಿಯು ಅಂಗವಿಕಲನಾಗುವ ಮುನ್ನ ಯಾವ ಕಸುಬನ್ನು ಮಾಡುತ್ತಿದ್ದನೋ ಆ ಕಸುಬನ್ನೇ ಮುಂದುವರಿಸಲು ಯತ್ನಿಸಲಾಗುವುದು. ಅದು ಸಾಧ್ಯವಾಗದಿದ್ದರೆ, ಅವನಿಗೆ ಹೊಂದಿಕೊಳ್ಳುವಂತಹ ಇತರ ಕೆಲಸವನ್ನು ಕಲಿಸಲಾಗುವುದು. ಈ ಕೇಂದ್ರದ ಗೋಡೆಗಳ ಮೇಲೆ ಅನೇಕ ಸುಂದರವಾದ ಬಣ್ಣಗಳಿಂದ ಚಿತ್ರಗಳನ್ನು ತನ್ನ ಕೃತಕ ಕೈಗಳಿಂದ ಒಬ್ಬ ರೋಗಿಯು ಚಿತ್ರಿಸಿರುವುದನ್ನು ಕಾಣಬಹುದು. ಈ ಚಿತ್ರಗಳು ಯಾವ ವೃತ್ತಿ ಚಿತ್ರಕಾರನ ಚಿತ್ರಗಳಿಗಿಂತ ಕಡಿಮೆ ದರ್ಜೆಯವಲ್ಲ.

ಈ ಕೇಂದ್ರದಲ್ಲಿ ವಿವಿಧ ಕಸುಬುಗಳ ಬಗ್ಗೆ ತರಬೇತಿನ್ನು ಕೊಡಲಾಗುವುದು. ಕೈ ಮಗ್ಗದಲ್ಲಿ ನೇಯುವುದು, ಹೊಲಿಯುವುದು, ಜಮಖಾನ ತಯಾರಿಸುವುದು, ಟೈಪ್ ಮಾಡುವುದು, ಚಿತ್ರಕಲೆ, ಉಣ್ಣೆ ಬಟ್ಟೆಗಳನ್ನು ತಯಾರಿಸುವುದು, ಪ್ಲಾಸ್ಟಿ

(ಹತ್ತನೇ ಪುಟ ನೋಡಿರಿ)

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(½ H.P. ಯಿಂದ 2. H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು.........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ, ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಯಮನಿಗೆ ಹೆದರಬೇಡಿ

ಮನುಷ್ಯ ಬಹುಕಾಲ ಬಾಳಬಲ್ಲ

ತಾನು ಬಹುಕಾಲ ಬದುಕಬೇಕೆಂಬುದೂ ಜವ್ವನವನ್ನು ಹಾಗೇ ಉಳಿಸಿಟ್ಟುಕೊಳ್ಳಬೇಕೆಂಬುದೂ ಮಾನವ ಕುಲವು ಯುಗಾಂತರಗಳಿಂದ ಕಾಣುತ್ತ ಬಂದ ಪ್ರೀತಿಯ ಕನಸಾಗಿದೆ. ಕೇವಲ ಪುರಾಣ ಕಥೆಗಳಲ್ಲೂ ರಮ್ಯ ಕಥೆಗಳಲ್ಲೂ ವಿಷಯವಾಗಿದ್ದ ಶತಮಾನಗಳ ಹಳೆಯ ಈ ಕನಸು ಇಂದು ಅನೇಕ ದೇಶಗಳಲ್ಲಿ ಸರ್ವತೋಮುಖ ಹಾಗೂ ಸಂಪೂರ್ಣ ವೈಜ್ಞಾನಿಕ ಅಧ್ಯಯನದ ವಿಷಯವಾಗಿದೆ. ವೃದ್ಧಾಪ್ಯ ಸಂಶೋಧನ ಶಾಸ್ತ್ರ ಮತ್ತು ವೃದ್ಧಾಪ್ಯ ಚಿಕಿತ್ಸಾ ಶಾಸ್ತ್ರಗಳು ಇಂದು ಹೊಸ ವಿಜ್ಞಾನಗಳೇ ಆಗಿದ್ದು ಇವುಗಳನ್ನು ಯಶಸ್ವಿಯಾಗಿ ಬೆಳೆಸಲಾಗಿದೆ. ಸೋವಿಯುತ್ ಒಕ್ಕೂಟದಲ್ಲಿ ಮಿಕ್ಕೆಲ್ಲ ದೇಶಗಳಿಗಿಂತ ಹೆಚ್ಚು ೧೦೦ಕ್ಕೂ ಮೀರಿದ ವಯಸ್ಸಿನ ಜನರಿದ್ದಾರೆ. ಇಂಥವರ ಸಂಖ್ಯೆ ೨೧,೭೦೦ಕ್ಕಿಂತಲೂ ಹೆಚ್ಚು.

ಈ ಜನರು ವಿವಿಧ ಹವಾಮಾನಗಳಲ್ಲೂ, ಭೌಗೋಲಿಕ ಪರಿಸರಗಳಲ್ಲೂ, ಹಳ್ಳಿ-ಪಟ್ಟಣಗಳಲ್ಲೂ ಸ್ಟೆಪ್ಪೀಗಳಲ್ಲೂ ಪರ್ವತ ಪ್ರದೇಶಗಳಲ್ಲೂ ಇರುತ್ತಿದ್ದು ತುಂಬ ಲವಲವಿಕೆಯಿಂದಲೇ ಕಾರ್ಯ ಮಾಡುತ್ತಾರೆ. ಉರಾಲ್‌ಗಳಲ್ಲಿ, ಯಾಕೂತಿಯದಲ್ಲಿ, ಸೈಬೀರಿಯದ ಟೈಗಾ ಪ್ರದೇಶದಲ್ಲಿ, ಚುಕೋತ್ಕಾ ಮತ್ತು ಸೋವಿಯತ್ ಉಪ ಉಷ್ಣವಲಯದ ಹವಾಮಾನದ ಪ್ರದೇಶಗಳಲ್ಲೂ ಹೆಚ್ಚಾಗಿ ಕಾಣ ಸಿಕ್ಕುತ್ತಾರೆ. ಆದರೆ ಕಾಕಸಸ್ ಪ್ರದೇಶದಲ್ಲಿ ಮಾತ್ರವೇ ಇವರ ಸಂಖ್ಯೆ ಅಧಿಕವಾಗಿದೆ. ಅಜರ್ ಬೈಜಾನ್, ಜಾರ್ಜಿಯ ಮತ್ತು ಅರ್ಮೇನಿಯಾಗಳಲ್ಲಿ ೧೦೦ ವಯಸ್ಸಾದವರು ೫,೮೦೦ ಜನರಿರುವರು ಮತ್ತು ಇವರೆಲ್ಲ ಹೆಚ್ಚಾಗಿ ಗ್ರಾಮಾಂತರ ಪ್ರದೇಶದ ನಿವಾಸಿಗಳಾಗಿದ್ದಾರೆ. ಈ ಗಣರಾಜ್ಯಗಳ ಕೆಲವೊಂದು ಪ್ರದೇಶಗಳ ಜನಸಂಖ್ಯೆಯಲ್ಲಿ ಶೇಕಡಾ ೦.೧೩ರಿಂದ ಶೇಕಡಾ ೦.೧೮ರಷ್ಟು ಇವರಾಗುತ್ತಾರೆ. ತುಲನಾತ್ಮಕವಾಗಿ ಹೇಳಬೇಕಿದ್ದರೆ ಇವರು ಸಂಯುಕ್ತ ರಾಜ್ಯ ಅಮೇರಿಕದಲ್ಲಿ ಶೇಕಡಾ ೦.೦೦೦೩, ಬ್ರಿಟನಿನಲ್ಲಿ ೦.೦೦೦೬ ಫ್ರಾನ್ಸಿನಲ್ಲಿ, ೦.೦೦೦೭ ಮತ್ತು ಜಪಾನಿನಲ್ಲಿ ೦.೦೦೦೧ರಷ್ಟಾಗುತ್ತದೆ. ಟ್ರಾನ್ಸ್‌ಕಾಕೇಶಿಯನ್ ಗಣರಾಜ್ಯಗಳಲ್ಲೇ ೧೦೦ ಮತ್ತು ಅದಕ್ಕೂ ಹೆಚ್ಚು ವಯಸ್ಸಿನವರು ಅಧಿಕ ಸಂಖ್ಯೆಯಲ್ಲಿರುವುದರಿಂದ ದೀರ್ಘಾಯುಸ್ಸಿನ ಬಗ್ಗೆ ವೈಜ್ಞಾನಿಕ ಸಂಶೋಧನೆಗಳನ್ನು ವಿಕಸಿಸುವುದು ತುಂಬ ಮಹತ್ವದ್ದಾಗಿದೆ.

ವಯಸ್ಸಾಗುವಿಕೆ ಮತ್ತು ದೀರ್ಘಾಯುಸಿನ ಕುರಿತು ಮೊಟ್ಟಮೊದಲ ವಿಚಾರಗಳು ಪ್ರಕಟಗೊಂಡಂದಿನಿಂದ ಏನಿಲ್ಲೆಂದರೂ ಈ ಬಗ್ಗೆ ೪೦೦ ಸಿದ್ಧಾಂತಗಳನ್ನು ಮುಂದೆ ಮಾಡಲಾಗಿದೆ. ವಯಸ್ಸಾಗುವಿಕೆಯ ಕಾರ್ಯ ಕಾರಣಗಳನ್ನು ತೋರಿಸಲು ಈ ಸಿದ್ಧಾಂತಗಳು ಪ್ರಯತ್ನಿಸಿದರು. ಆದರೆ ವಯಸ್ಸಾಗುವಿಕೆಯ ಸಂಕೀರ್ಣ ವಿಷಯವನ್ನು ಮಾತ್ರ ಇವು ಸರಿಯಾಗಿ ವಿವರಿಸಲಿಲ್ಲ.

ಮಹಾನ್ ರಶ್ಯನ್ ವಿಜ್ಞಾನಿಗಳಾದ ಅಕಾಡೆಮಿಷಿಯನ್ ಪಾವ್ ಲೋವ್ ಅವರು ಕೇಂದ್ರ ನರವ್ಯೂಹ ಮತ್ತು ಅದರಲ್ಲೂ ಮುಖ್ಯವಾಗಿ ಮೆದುಳಿನ ಹೊರಾವರಣ ಈ ವಿಷಯದಲ್ಲಿ ಬಹು ಮುಖ್ಯ ಪಾತ್ರವನ್ನಾಡುತ್ತವೆಯೆಂದು ಹೇಳಿದಾಗ ಈ ಕ್ರಮಗಳ ವಸ್ತುನಿಷ್ಠ ವಿವರಣೆಯನ್ನು ಅತ್ಯಂತ ಸಮಂಜಸವಾಗಿ ನೀಡಿದರು. ವಯಸ್ಸಾಗುವಿಕೆಯ ದೇಹ ವ್ಯಾಪಾರದ ಸಾರಭೂತವನ್ನು ಅರಿತುಕೊಳ್ಳಲು ವಿಜ್ಞಾನಿಗಳು ಶರೀರ ಕೋಶಗಳಲ್ಲೂ ಅಣುರೇಣುಗಳಲ್ಲೂ ವಿಸ್ತೃತ ಸಂಶೋಧನೆ ನಡೆಸುತ್ತಿದ್ದಾರೆ.

ಮನುಷ್ಯನಿಗೆ ವಯಸ್ಸಾದಂತೆ ಅವನ ಅಂಗಾಂಗಗಳ ಶಕ್ತಿ ಸಾಮರ್ಥ್ಯಗಳು ಉಡುಗಿ ದುರ್ಬಲಗೊಳ್ಳುತ್ತವೆಯೆಂಬುದೂ ಕೆಲವು ಕ್ರಿಯೆಗಳು ನಿಂತು ಹೋಗುತ್ತವೆಯೆಂಬುದೂ ತಿಳಿದ ಸಂಗತಿ. ವಯಸ್ಸಾದ ಜನರೇ ಪದೇ ಪದೇ ಕೆಲವೊಂದು ವಿಧದ ಜಾಡ್ಯಗಳಿಂದ ಬಳಲುತ್ತಾರೆ ಆದರೆ ಇದೇ ಕಾಲಕ್ಕೆ ಅವರ ಅಂಗಾಂಗಗಳಲ್ಲಿ ಕೆಲವೊಂದು ಹೊಂದಾಣಿಕೆ ವ್ಯಾಪಾರಗಳು ಬೆಳೆದು ಬಲಗೊಳ್ಳುತ್ತವೆ. ಜೀವಾಳದ ಕ್ರಮಗಳನ್ನು ಕ್ರಮಪಡಿಸುವಂಥ ಈ ಶರೀರ ವ್ಯಾಪಾರವನ್ನೂ ವಯಸ್ಸಾಗುತ್ತಿರುವ ಇಂದ್ರಿಯಗಳ ಮೇಲೆ ಇವು ಲವಲವಿಕೆಯ ಪ್ರಭಾವ ಬೀರುವಂತೆ ಮಾಡುವುದನ್ನೂ ವಿಜ್ಞಾನವು ಈಗ ಅಭ್ಯಸಿಸಬೇಕಾಗಿದೆ.

ಆದರೆ ಇದೆಲ್ಲ ಏನಿದ್ದರೂ ದೀರ್ಘಾಯುಸ್ಸಿನ ಜೀವ ವೈಜ್ಞಾನಿಕ ತಳಹದಿಯ ವಿಕಾಸ ಹಾಗೂ ಪೂರ್ಣ ಶಾರೀರಿಕ ಮನಶ್ಚೇತನಕ್ಕಾಗಿ ವಿನೂತನ ತಯಾರಿಕೆಗಳ ಸಂಶೋಧನೆಯ ಕೆಲಸಗಳು ಸಾಮಾಜಿಕ ಮತ್ತು ಆರೋಗ್ಯದಾಯಿಯಾದಂಥ ಅನ್ವೇಷಣೆಯೊಡನೆಯೂ ಈಗಾಗಲೇ ಮೂರು ವರ್ಷಗಳಿಂದವರನ್ನು ಅಭ್ಯಸಿಸುವ ಮೂಲಕವೂ ನಡೆಯಬೇಕೆಂದು ಇಂದು ವಿಜ್ಞಾನಿಗಳು ದೃಢವಾಗಿ ನಂಬುತ್ತಾರೆ. ಹೀಗೆ ಮುದಿ ವಯಸ್ಸನ್ನು ತಡೆಗಟ್ಟುವ ಸಮಸ್ಯೆಯನ್ನು ಅಭ್ಯಸಿಸಬೇಕಾಗಿದೆ.

ಜಾರ್ಜಿಯದಲ್ಲಿಯ ಅನೇಕ ವೃದ್ಧ ಜನರ ಕುರಿತು ನಡೆಸಿದ ಅಧ್ಯಯನಗಳು ನಮಗೆ ಬಹಳ ಮಹತ್ವದ ಮಾಹಿತಿಗಳನ್ನು ಒದಗಿಸಿವೆ. ಈ ನಿರೀಕ್ಷೆಗಳೂ, ಅನೇಕಾನೇಕ ದೃಷ್ಟಾಂತಗಳೂ ನಮಗೆ ತೋರಿಸುವ ಮೊಟ್ಟ ಮೊದಲನೇ ಸಂಗತಿಯೆಂದರೆ ಸೋಮಾರಿಯಾದ ವ್ಯಕ್ತಿ ಯಾವತ್ತೂ ಇಷ್ಟೊಂದು ವಯಸ್ಸಿನ ವರೆಗೆ ಬದುಕಿಲ್ಲ ಎಂಬುದು. ಚಟುವಟಿಕೆಯಿಂದ ಕೆಲಸ ಮಾಡುವುದು ಅತಿ ಮಹತ್ತರ ಶಾರೀರಿಕ ಅವಶ್ಯಕತೆಯೆ ಆಗಿದೆ ಮತ್ತು ದೀರ್ಘಾಯುಸ್ಸಿನಲ್ಲಿ ಒಂದು ನಿರ್ಧಾರಕ ಅಂಶವಾಗಿದೆ.

ಮಾನವನಲ್ಲಿ ಯಾವುದೇ ವಿಶೇಷತೆಯಿರುವುದೂ ಮಹತ್ವದ್ದೇನಲ್ಲ. ಮಹತ್ವದ ಸಂಗತಿಯೆಂದರೆ ಅತ ಹೇಗೆ ಕೆಲಸ ಮಾಡುತ್ತಾನೆಂಬುದೇ. ಒಲುಮೆಯ ಕೆಲಸ ತುಂಬ ಚೇತನದಾಯಕ. ಉದಾಹರಣೆಗೆ ಅತ್ಯಂತ ವೃದ್ಧ ನಾಗರಿಕರಾದ ಶಿರಾಲಿ ಮುಸ್ಲಿಮೋವರಿಗೆ ಈಗ ೧೫೦ ವರ್ಷ. ಅವರು ಇಡೀ ಜೀವಮಾನವೆಲ್ಲ ಕೆಲಸ ಮಾಡುತ್ತ ಬಂದಿದ್ದು ಇಂದಿಗೂ ಅವರಿಗೆ ಸಾಧ್ಯವಿರುವಂಥ ಕೆಲಸದಿಂದಲೇ ಅವರ ದಿನ ಆರಂಭವಾಗುತ್ತದೆ. ಸಾಮಾನ್ಯವಾಗಿ ಅವರು ತಮ್ಮ ಕೈ ತೋಟದಲ್ಲಿ ಕೆಲಸ ಮಾಡುತ್ತಾರೆ. ಇಷ್ಟೊಂದು ದೀರ್ಘಾವಧಿಯ ಜೀವಿತಕ್ಕೆ ಏನು ಕಾರಣವೆಂದು ಭಾವಿಸುತ್ತೀರಿ ಎಂದು ಕೇಳಿದಾಗ ಅವರು ಹೇಳಿದರು: "ನನ್ನ ನಿತ್ಯ ಕೆಲಸ."

ಜಾರ್ಜಿಯದಲ್ಲಿ ೮೦ ವರ್ಷಕ್ಕೆ ಮೇಲ್ಪಟ್ಟವರಲ್ಲಿ ಶೇಕಡಾ ೭೦ರಷ್ಟು ಜನರು ನಿಂಬೆ ಮತ್ತು ಚಾ ತೋಟಗಳಲ್ಲಿ ಇಂದಿಗೂ ಕೆಲಸ ಮಾಡುತ್ತಾರೆ. ತಮ್ಮ ಖಾಸಗೀ ತೋಟಗಳಲ್ಲೂ ಕೆಲಸ ಮಾಡುತ್ತಾರೆ ಅಥವಾ ಪಶು ಸಾಕಣೆ, ಕೋಳಿ ಸಾಕಣೆ ಕಾರ್ಯಗಳನ್ನು ಮಾಡುತ್ತಾರೆ ಇಲ್ಲವೆ ಶಿಕಾರಿಗೆ ಹೋಗುತ್ತಾರೆ ಅಥವಾ ಕುದುರೆ ಸವಾರಿ ನಡೆಸುತ್ತಾರೆ. ಮತ್ತೆ ಇವರಲ್ಲಿ ಬಹುತೇಕರು ವಿವಾಹಿತರೆಂಬುದೂ ಇನ್ನೊಂದು ಕುತೂಹಲದ ಸಂಗತಿಯಾಗಿದೆ.

ಈ ಮುದಿ ಜನರಲ್ಲಿ ಬಹುತೇಕರು ಕಾಹಿಲೆ ಬಿದ್ದುದು ಕಡಮೆ. ಅವರ ನರಮಂಡಲ ವ್ಯವಸ್ಥೆ ಚೊಕ್ಕವಾಗಿಯೆ ಇದೆ ಮತ್ತು ಅವರ ಸ್ಮರಣ ಶಕ್ತಿಯೂ ಚೆನ್ನಾಗಿದೆ. ಇವರಲ್ಲಿ ಹೆಚ್ಚಿನವರು ದಿನವೊಂದಕ್ಕೆ ೩-೪ ಬಾರಿ ಊಟ ಮಾಡುತ್ತಾರೆ. ಅವರದು ಮಿತಾಹಾರ. ಯಾವುದರಲ್ಲೂ ಅತಿಶಯವೆಂಬುದಿಲ್ಲ. ಇವರ ಆಹಾರದಲ್ಲಿಯ ಮುಖ್ಯ ಲಕ್ಷಣವೆಂದರೆ ಬಹಳಷ್ಟು ತರಕಾರಿಗಳು, ಹಣ್ಣುಗಳು ಮತ್ತು ಜೇನುತುಪ್ಪ. ಇವರಲ್ಲಿ ಹೆಚ್ಚಿನವರು ಧೂಮ್ರಪಾನ ಮಾಡುವುದಿಲ್ಲ ಮತ್ತು ಮತ್ತೇರಿಸುವ ಪಾನೀಯಗಳನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಮಾದಕಾಂಶವಿಲ್ಲದ ಸ್ವಾಭಾವಿಕ ದ್ರಾಕ್ಷಾರಸವನ್ನು ಮಾತ್ರ ಕುಡಿಯುತ್ತಾರೆ. ಶಾರೀರಿಕ ಸ್ವಚ್ಛತೆಗೆ ವಿಶೇಷ ಗಮನ ಕೊಡುತ್ತಾರೆ. ಬಹಳಷ್ಟು ಕಾಲವನ್ನು ಸ್ವಚ್ಛ ವಾತಾವರಣದಲ್ಲೇ ಕಳೆಯುತ್ತಾರೆ ಹಾಗೂ ಸಾಕಷ್ಟು ನಡೆಯುತ್ತಾರೆ. ಇವರ ಜೀವನದ ವಿವಿಧ ಮುಖಗಳನ್ನು ಅಭ್ಯಸಿಸಿದರೆ ನಾವು ಕೂಡ ನಮ್ಮ ಆಯುಸ್ಸನ್ನು ದೀರ್ಘಗೊಳಿಸಬಹುದೆಂದು ಧಾರಾಳವಾಗಿ ಹೇಳಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ತನ್ನ ಹೊಸ ಮೂರು ಶಾಖೆಗಳನ್ನು ಸದ್ಯದಲ್ಲಿಯೇ ತಮಿಳುನಾಡು, ಗುಜರಾಥ ಮತ್ತು ಆಂಧ್ರ ಪ್ರದೇಶಗಳ ಈ ಕೆಳಗಿನ ಚಾರಿತ್ರಿಕ ನಗರಗಳಲ್ಲಿ ತೆರೆಯಲಿದೆಯೆಂದು ತಿಳಿಸಲು ಹರ್ಷ ಪಡುತ್ತದೆ:

ಮಧುರೈ	72, ಸೌತ್ ಮಾಸಿ ಸ್ಟ್ರೀಟ್.
ಅಹಮದಾಬಾದ್	ಸವಾಕೆಟ್ ಬಿಲ್ಡಿಂಗ್, 4611, ರಿಲೀಫ್ ರೋಡ್.
ವಿಜಯನಗರ	ಕೊಲ್ಲಾ ಬಜಾರ್, ಮೈನ್‌ರೋಡ್.

ಬಹುಜನರ ಸೇವೆಗಾಗಿ ಕಾರ್ಯರಂಗವನ್ನು ಸದಾ ವಿಸ್ತರಿಸಲು ಬಯಸುತ್ತದೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 80 ಕೋಟಿಗೂ ಮಿಕ್ಕಿ.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

• • • • • ಎಲ್ಲಿ

ಜನಸಂಖ್ಯಾ ನಿಯ

ಕ್ರಿ. ಶ. ೨,೦೦೦ದಲ್ಲಿ ಭಾರತದ ಜನಸಂಖ್ಯೆ ೧೦೦ ಕ
ಸಂಪನ್ನ-ವಿಪನ್ನ ಎಲ

ವಾಶಿಂಗ್‌ಟನ್ನಿನಲ್ಲಿ ಜಪಾನದಿಂದ ಬಂದ ಚೇರಿ ಮರಗಳನ್ನು ವೈಭವದಿಂದ ನಾಟಲಾಯಿತು. ಚಿತ್ರದಲ್ಲಿ ಶ್ರೀಮತಿ ಜಾನ್ಸನ್ ಇಂತಹ ಒಂದು ಮರ ನಾಟುತ್ತಿರುವುದನ್ನು ಕಾಣಬಹುದು.

ಗಡಿಯಾರವು ಒಮ್ಮೆ ಟಿಕ್ಕೆನ್ನುವಾಗ ಪ್ರಪಂಚದಲ್ಲಿ ಮೂವರು ಮಕ್ಕಳು ಅವತರಿಸುತ್ತಾರೆ; ಸಮಯ ಕಳೆದಂತೆ ಒಂದು ವಾರದಲ್ಲಿ ೨೦ ಲಕ್ಷ ಮಕ್ಕಳ ಜನನವಾಗುವುದು; ಜನ ಸಂಖ್ಯೆಯ ಸಮಸ್ಯೆ ಇಲ್ಲಿಂದಲೇ ಆರಂಭವಾಗುತ್ತದೆ; ಲೋಕದ ತಲೆ ಕೆಡಿಸುತ್ತದೆ. ಪ್ರಾಜ್ಞರ ಅಭಿಪ್ರಾಯದಂತೆ ಇನ್ನು ಕೆಲ ಸಮಯದಲ್ಲಿ ಈ ಜನ ಸಂಖ್ಯಾ ಸಮಸ್ಯೆಯು ಶಾಂತಿ—ಸಮರಗಳ ಪ್ರಶ್ನೆಯನ್ನೂ ಮೆಟ್ಟಿ ತಲೆಯೆತ್ತಿ ನಿಲ್ಲುವುದು.

ಭಾರತದ ಉದಾಹರಣೆಯನ್ನೇ ತೆಗೆದು ಕೊಳ್ಳೋಣ. ಈ ಕೆಳಗಿನ ಅಂಕೆ-ಸಂಖ್ಯೆಗಳಿಂದ ಈ ಸಮಸ್ಯೆಯು ಬೃಹದ್ರೂಪದ ಸಂಚಯವಾಗುವುದು.

ಇಸವಿ		ಜನ ಸಂಖ್ಯೆ
೧೮೦೦	—	ಸು. ೧೦ ಕೋಟಿ
೧೮೯೦	—	ಸು. ೨೫ ,,
೧೯೩೦	—	ಸು. ೩೦ ,,
೧೯೬೦	—	ಸು. ೪೫ ,,
೨೦೦೦	—	ಸು. ೧೦೦ ,,

ಸದ್ಯ ಕೈಗೊಂಡಿರುವ ಜನನ ನಿಯಂತ್ರಣ ಕಾರ್ಯಕ್ರಮವು ಯಶಗಳಿಸಿದರೆ, ೨೦೦೦ರಲ್ಲಿ ಸು. ೮೦ ಕೋಟಿಯಷ್ಟಾದರೂ ಜನ ಸಂಖ್ಯೆ ನಿಲ್ಲುವುದು.

'ಭಾರತವು ಜನ ಸಂಖ್ಯಾ ನಿಯಂತ್ರಣದಲ್ಲಿ ಆಸಕ್ತಿ ತಳೆದಿದ್ದು ಈ ದಿಸೆಯಲ್ಲಿ ಸರ್ವಪ್ರಯತ್ನವನ್ನೂ ಆದುಮಾಡುವುದು' ಎಂದು ಪ್ರಧಾನಿ ಇಂದಿರಾ ಗಾಂಧಿಯವರ ದೃಢ ಮಾತು. ಪ್ರತಿ ತಿಂಗಳಲ್ಲೂ ಭಾರತದಲ್ಲಿ ಉಣ್ಣುವ ಬಾಯಿಗಳು ಸುಮಾರು ೧೦ ಲಕ್ಷದಷ್ಟು ಹೆಚ್ಚುತ್ತಿದ್ದು ಇದನ್ನು ಹೇಗಾದರೂ ಮಾಡಿ ತಡೆಗಟ್ಟಬೇಕು— ಇದು ಅವರ ಖಚಿತಾಭಿಪ್ರಾಯ.

ಒಂದು ಮಾತು ನಾವು ಮರೆಯಬಾರದು. ಜನಾಧಿಕ್ಯದ ಚಿಂತೆ ಬರಿಯ ಭಾರತಕ್ಕಲ್ಲ; ಜಗತ್ತಿನ ಎಲ್ಲ ದೇಶಗಳಿಗೂ ಹೆಚ್ಚು—ಕಡಿಮೆ ಈ ಚಿಂತೆ ಇದ್ದೇ ಇದೆ. ಜಾಗತಿಕ ಜನ ಸಂಖ್ಯೆ ಇತಿಹಾಸದ ಆರಂಭದಿಂದ ಕ್ರಿ. ಶ. ೧೮೩೦ರ ವರೆಗಿನ ಬಹು ದೀರ್ಘಾವಧಿಯಲ್ಲಿ ೧೦೦ ಕೋಟಿಯನ್ನು ಮುಟ್ಟಲಿಲ್ಲ. ಮುಂದಿನ ನೂರೇ ವರ್ಷಗಳಲ್ಲಿ ಅದು ಇಮ್ಮಡಿಯಾಯಿತು; ಮತ್ತೆ ಮೂವತ್ತು ವರ್ಷಗಳಲ್ಲಿ ೩೦೦ ಕೋಟಿಯನ್ನು ಮುಟ್ಟಿತು!

ಮಳೆ ಬಿದ್ದೊಡನೆ ಬೆಳೆದು ನಿಲ್ಲುವ ಹುಲ್ಲಿನಂತೆ ಜನ ಸಂಖ್ಯೆ ಕಲ್ಪನಾತೀತವಾಗಿ ಹೆಚ್ಚಿತು. ಇದೇ ರೀತಿಯಲ್ಲಿ ಈ ಸಂಖ್ಯೆ ಬೆಳೆಯುತ್ತ ಹೋದರೆ ಕ್ರಿ. ಶ. ೨೦೦೦ದ ಹೊತ್ತಿಗೆ ಜಾಗತಿಕ ಜನ ಸಂಖ್ಯೆ ೬೦೦ ಕೋಟಿಯನ್ನೂ ಮೀರಿ ನಿಲ್ಲುವುದು.

ದಕ್ಷಿಣ ಅಮೇರಿಕೆಯಲ್ಲಿ ಜನನ ಪ್ರಮಾಣ ಹೆಚ್ಚು. ನಿಯಂತ್ರಣ ಕಾರ್ಯವು ಪರಿಣಾಮಕರವಾಗಿ ಸಾಧಿತವಾಗದೆ ಹೋದರೆ, ಈ ಶತಮಾನಾಂತ್ಯದಲ್ಲಿ ಇಂದಿಗಿಂತ ಮೂರು ಪಾಲು ಅಲ್ಲಿ ಜನ ಸಂಖ್ಯೆ ಇರುವುದು (ಸು. ೭೫೦ ಕೋಟಿ.)

ಭಾರತದ ವಿಚಾರ ಬೇರೆಯೇ. ನಮ್ಮ ಪಂಚ ವಾರ್ಷಿಕ ಯೋಜನೆಗಳು ಸಾಧಿಸಿದ ಪ್ರಗತಿಯ ಅನುಭವ ನಮಗಾಗದಿರಲು ಈ ಹೊಸ ಬಾಯಿಗಳೇ ಕಾರಣವೆಂಬುದೀಗ ಮನವರಿಕೆಯಾಗಿದೆ. ಆದುದರಿಂದ ಯೋಜನೆಗಳ ಫಲ ಜನತೆಗೆ ದೊರೆಯುವಂತಾಗಬೇಕಾದರೆ ಏರುತ್ತಿರುವ ಜನಸಂಖ್ಯೆಗೊಂದು ತಡೆ ಹಾಕಲೇ ಬೇಕು ಎಂದು ಅನಿಸಹತ್ತಿದೆ.

ಈ ಸಮಸ್ಯೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಮುಖ್ಯ ಸವಾಲೆನಿಸಿದ್ದರೆ, ಜಗತ್ತೂ ಉತ್ತರಿಸಬೇಕಾದ ಪ್ರಶ್ನೆಯೂ ಹೌದು.

ಅಮೇರಿಕೆಯ ಸ್ಥಿತಿಗತಿಯೂ ಹೀಗೆಯೇ. ಅಲ್ಲಿನ ಜನವೃದ್ಧಿ ವಾರ್ಷಿಕ ಸೇ. ೧.೫ ಮಾತ್ರ. ಈ ರೀತಿಯಲ್ಲೂ ಕ್ರಿ.ಶ. ೨೦೦೦ದ ಸುಮಾರಿನಲ್ಲಿ ಇಂದು ೧೯ ಕೋಟಿಯಿರುವ ಅಮೇರಿಕನ್ನರ ಸಂಖ್ಯೆ ೩೦ ಕೋಟಿಯಾಗುವುದು. ಈ ಹೆಚ್ಚಿನ ಮುಖಗಳು ತಮ್ಮ ಸುವ್ಯವಸ್ಥಿತ ಸಮಾಜದಲ್ಲಿ ಅವ್ಯವಸ್ಥೆಯನ್ನುಂಟು ಮಾಡುವರೆಂಬ ಭಯ ಅಮೇರಿಕನ್ನರಲ್ಲೂ ಮೂಡಿದೆ!

ಭಾರತದಲ್ಲಿ ಕಳೆದ ಶತಮಾನದ ಜನಸಂಖ್ಯೆ ಇಂದಿನದರ ಅರ್ಧಕ್ಕೂ ಕಡಿಮೆಯಿತ್ತು. ೧೯೦೦ರಿಂದ ಸಾರ್ವಜನಿಕ ಆರೋಗ್ಯ-ಮಲೇರಿಯಾ ನಿರ್ಮೂಲನ, ಸೋಂಕುರೋಗಗಳಿಗೆ ತಡೆಮೊದಲಾದುವು—ದಲ್ಲಿ ತುಂಬಾ ಸುಧಾರಣೆಗಳು ನಡೆದುದರಿಂದ ಮರಣಸಂಖ್ಯೆಗಣನೀಯವಾಗಿ ಇಳಿಯಿತು. ಇದರ ಪರಿಣಾಮವಾಗಿ ಜನನಗಳು ಹೆಚ್ಚಿದುವು; ಜನಸಂಖ್ಯೆ ಮಿತಿ ಮೀರಿತು.

...ಅಧ್ಯಕ್ಷ ಜಾನ್ಸನ್ ನೀಗ್ರೋಗಳಿಗೂ ಸಮಾನಾಧಿಕಾರ ನೀಡುವ ಶಾಸನಕ್ಕೆ ಸಹಿ ಹಾಕಿದರು. ಅವರ ಹಿನ್ನೆಲೆಯಲ್ಲಿ ಪ್ರಸಿದ್ಧ ಮಾನವತಾವಾದಿ, ಸಮಾನಾಧಿಕಾರದ ಪ್ರವರ್ತಕ ಅಬ್ರಹಾಂ ಲಿಂಕನ್ನರ ಚಿತ್ರವಿದೆ. — ಈ ಶಾಸನವು ಅಮೇರಿಕೆಯ ಇತಿಹಾಸವನ್ನೇ ಬದಲಾಯಿಸಿತೆನ್ನಬಹುದು.

ದೆಹಲಿ ವಿಶ್ವವಿದ್ಯಾಲಯದ ದೇಹಶಾಸ್ತ್ರ ವಿಭಾಗದಲ್ಲಿ ಧ...
ಕಾರ್ಯಕ್ರಮದ ಸಂಬಂಧದಲ್ಲಿ ಪರಿಶೀಲನೆ...

…ತಿಧ್ವನಿ • • • • •

…ಹೇಗೆ ಸಾಧ್ಯ?

…ರೆ, ಜಾಗತಿಕ ಸಂಖ್ಯೆ ೬೦೦ ಕೋಟಿಗೇರುವುದು—
…ಗೂ ಇದು ತಲೆನೋವು.

ಎಫ್. ಎ. ಓ. ದ ಡೈರೆಕ್ಟರ್ ಜನರಲ್ ಡಾ| ಬಿ. ಆರ್. ಸೇನರು ಹೇಳುತ್ತಾರೆ: 'ಹಸಿವೆ ಮತ್ತು ಬೇಡಿಕೆಗಳು ಪೂರೈಸ್ಯ ಯಾಗುವ ತನಕ ಶಾಂತಿ ಅಥವಾ ಭದ್ರತೆಗಳನ್ನು ನಾವು ನಿರೀಕ್ಷಿಸುವಂತಿಲ್ಲ. ವ್ಯಕ್ತಿಯ ಆರೋಗ್ಯ ಮತ್ತು ಆನಂದಗಳು ಮಾತ್ರ ನಮ್ಮ ಕಠಿನತೆಗಳಲ್ಲ; ನಮ್ಮ ಸ್ವತಂತ್ರ ಮತ್ತು ಪ್ರಜಾತಂತ್ರಾತ್ಮಕ ಸಮಾಜವೇ ಕಠಿನತೆಗಳನ್ನೆದುರಿಸುವುದೇ ನಮ್ಮ ಮುಖ್ಯ ಸಮಸ್ಯೆ. ಇದರಿಂದ ಪಾರಾಗಬೇಕಾದರೆ, ನಾವು ಉತ್ಪಾದನೆಯ ಹೆಚ್ಚಳ ಮತ್ತು ಜನಸಂಖ್ಯೆಯ ನಿಯಂತ್ರಣದ ಬಗ್ಗೆ ಸೂಕ್ತಕ್ರಮ ಕೈಗೊಳ್ಳಬೇಕು. ಇದಕ್ಕೆ ತಪ್ಪಿದರೆ, ನಾವು ದೊಡ್ಡ ಅಪಾಯವನ್ನೂ ಅಪ್ರಸನ್ನತೆಯನ್ನೂ ಎದುರಿಸಬೇಕಾಗುವುದು."

ಇದನ್ನು ನಾವು ಹೇಗೆ ಉತ್ತರಿಸಬೇಕು?

ಬೆಳೆಯುತ್ತಿರುವ ನಮ್ಮ ಜನಸಂಖ್ಯೆಯೊಡನೆ ನಮ್ಮ ಭೂಮಿಯ ಉತ್ಪಾದನೆಯೂ ಹೆಚ್ಚಲು ಹೋರಾಡೋಣ ಎನ್ನುತ್ತಾರೆ, ಅಧ್ಯಕ್ಷ ಜಾನ್ಸನ್.

ಅನೇಕ ವೈಜ್ಞಾನಿಕರು ಹೆಚ್ಚು ಜನರ ಹೊಟ್ಟೆ ತುಂಬಿಸುವ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಹೊಸ ತಳಿಯ ಗೋಧಿ ಬೀಜದಿಂದ ಅರ್ಜಂಟೀನಾ ಮತ್ತು ಆಸ್ಟ್ರೇಲಿಯಾಗಳು ತಮ್ಮ ಉತ್ಪಾದನೆಯನ್ನು ಮೂರು ಪಾಲಷ್ಟು ಹೆಚ್ಚಿಸಿಕೊಂಡಿವೆ. ಸಮುದ್ರದ ನೀರನ್ನೂ ಕೃಷಿಯೋಗ್ಯವಾಗಿ ಮಾಡುವುದರ ಸಾಧ್ಯಾಸಾಧ್ಯತೆಯ ಬಗ್ಗೆ ಪರಿಶೀಲನೆ ಭರದಿಂದ ಸಾಗುತ್ತಿದೆ.

…ಸಂತಾನ ನಿರೋಧ …ಕ್ಷ್ಯ.

ಆದರೆ, ಹೆಚ್ಚಿನ ಪ್ರಾಜ್ಞರ ಅಭಿಪ್ರಾಯವೊಂದೇ—ಸಂತಾನ ನಿರೋಧಕಾರ್ಯಕ್ರಮವೊಂದೇ ಭೀಕರ ದುರವಸ್ಥೆಯಿಂದ ಜಗತ್ತನ್ನು ಉಳಿಸಬಲ್ಲುದು.

ಏಶ್ಯ ಮತ್ತು ದಕ್ಷಿಣ ಅಮೇರಿಕೆಗಳಲ್ಲಿಯೇ ಅಧಿಕ ಜನಸಂಖ್ಯೆ ಏರುವುದು. ಇಲ್ಲಿ ಸಂಪ್ರದಾಯವು ಸಂತಾನ ನಿರೋಧಕ್ಕೆ ಅಡ್ಡ ಬರುತ್ತದೆ. ಇದರಿಂದಾಗಿಯೇ ಇಲ್ಲಿನ ರಾಷ್ಟ್ರಗಳು, ಭಾರತ ಕೂಡಾ, ಸಂತಾನ ನಿರೋಧವನ್ನು ಸರಕಾರದ ನೀತಿಯೆಂದು ಸ್ವೀಕರಿಸಿವೆ; ಅವನ್ನು ಕಾರ್ಯಗತ ಮಾಡುತ್ತಿವೆ. ಜಪಾನವು ಈ ದಿಸೆಯಲ್ಲಿ ಬಹಳಷ್ಟು ಮುಂದುವರಿದಿದೆ. ದೇಶವ್ಯಾಪೀ ಕಾರ್ಯಕ್ರಮ ಕೈಗೊಂಡು, ನಿರೋಧ ಸಾಧನಗಳನ್ನು ಉಚಿತವಾಗಿ ನೀಡಿ, ತರಬೇತಿ ಹೊಂದಿದ ದಾದಿಯರ ಸಹಾಯವೊದಗಿಸಿ ಜಪಾನ ಯಶಪಥದಲ್ಲಿ ಮುನ್ನಡೆಯುತ್ತಿದೆ. ಇಂದು ಜಪಾನಿನ ಗೃಹಸ್ಥರಲ್ಲಿ ನೂರಕ್ಕೆ ಐವತ್ತರಷ್ಟು ಸಂತಾನ ನಿರೋಧ ಮಾಡಿಕೊಂಡಿದ್ದಾರೆ.

ಜಪಾನದಲ್ಲಿ ಈ ಯೋಜನೆ ಹೇಗೆ ಯಶಗಳಿಸಿತು? ಅಲ್ಲಿನ ಉದ್ದಿಮೆದಾರರು ತಮ್ಮ ನೌಕರರಿಗೆ ನಿರೋಧ ಸಾಧನಗಳನ್ನು ಪುಕಟೆಯಾಗಿ ನೀಡಿದ್ದಲ್ಲದೆ, ಸೂಲಗಿತ್ತಿಯರ ವೇತನವನ್ನೂ ಕೊಟ್ಟರು. ಇಂದು ಜಪಾನಿನ ಜನಸಂಖ್ಯಾಭಿವೃದ್ಧಿಯ ಪ್ರಮಾಣ ವಾರ್ಷಿಕ ಸೇ.೧. ಮಾತ್ರ.

ಭಾರತದ ಯೋಜಕರು ಯೋಜನೆಗಿಂತಲೂ ದೇಶದ ವಾರ್ಷಿಕ ೨.೫ ಪ್ರತಿಶತ ಜನ ಸಂಖ್ಯಾಧಿಕ್ಯವನ್ನು ತಡೆಯುವುದರ ಬಗ್ಗೆ ಚಿಂತೆ ಮಾಡುತಿದಾರೆ. ಇದು ಸಾಧಿತವಾಗದೆ ಹೋದರೆ ಆರ್ಥಿಕ ಅಭಿವೃದ್ಧಿಯಿಂದ ನಾವು ವಂಚಿತರಾದಂತೆಯೆಂಬುದು ಸತ್ಯವಾಗಿದೆ.

ಭಾರತವು ಸ್ವತಂತ್ರವಾಗುವುದಕ್ಕೂ ಮೊದಲು ಪಂ. ಜವಾಹರಲಾಲ ನೆಹರೂರ ನಾಯಕತ್ವದಲ್ಲಿ ಕಾಂಗ್ರೆಸ್ಸು ಸಂತಾನನಿಯಂತ್ರಣವನ್ನು ರಾಷ್ಟ್ರೀಯ ನೀತಿಯನ್ನಾಗಿ ಸ್ವೀಕರಿಸಿತ್ತು. ಸ್ವಾತಂತ್ರ್ಯ ದೊರೆತ ಬಳಿಕ ಪರಿಣಾಮಕಾರಿ ಸಂತಾನ ನಿರೋಧವನ್ನು ಬೆಂಬಲಿಸಿದ್ದಲ್ಲದೆ, ಯೋಜನೆಯಲ್ಲಿಯೂ ಅದಕ್ಕೆ ಸ್ಥಾನವನ್ನು ಕಲ್ಪಿಸಿಕೊಟ್ಟಿತು. ಅಶೋಕ ಮಹತಾ ಹೇಳುತ್ತಾರೆ, ಸಂತಾನ ನಿರೋಧವು ನಮ್ಮ ಆದ್ಯ ಕರ್ತವ್ಯವೆಂದು. ಆದುದರಿಂದಲೇ ಮೊದಲ ಯೋಜನೆಯಲ್ಲಿ ೪೭ ಲಕ್ಷ ರೂಪಾಯಿಗಳು ಇದಕ್ಕಾಗಿ ವೆಚ್ಚವಾಗಿದ್ದು ಅದು ಮುಂದಿನ ಯೋಜನೆಗಳಲ್ಲಿ ಹತ್ತರಷ್ಟು ಹೆಚ್ಚಿದೆ. ಪಂಕ್ತಿಗಳ ವಿತರಣಾ ಕಾರ್ಯಕ್ರಮ ಭರದಿಂದ ಸಾಗುತ್ತಿದೆ. ಅಲ್ಪ ವೇತನದಾರರಿಗೆ ಉಚಿತವಾಗಿಯೇ



ದೇಶದಲ್ಲಿನ ಅಲ್ಪವೇತನಿಗಳ, ಅಂಗವಿಕಲರ, ಅಸುವಿಧಾವಂತರ ಮಕ್ಕಳಿಗೆ ಶಿಕ್ಷಣ ನೀಡಲು ರಾಷ್ಟ್ರೀಯ ಅಧ್ಯಾಪಕ ಮಂಡಳಿಯೊಂದನ್ನು ರಚಿಸಬೇಕು—ಎನ್ನುತ್ತಾರೆ, ಅಧ್ಯಕ್ಷ ಜಾನ್ಸನ್. ಇದು ಬರಿಯ ಅಮೇರಿಕೆಯ ಆವಶ್ಯಕತೆಯಲ್ಲ, ಪ್ರತಿ ರಾಷ್ಟ್ರದ ಪ್ರಬಲ ಬೇಕುಗಳಲ್ಲಿ ಒಂದು.

ಇವು ದೊರೆಯುತ್ತವೆ. ದೇಶದಲ್ಲೆಲ್ಲಾ ಸಂತಾನ ನಿರೋಧ ಕೇಂದ್ರಗಳನ್ನು (ಸು. ೧೭,೦೦೦) ತೆರೆಯಲಾಗಿದೆ; ಉಚಿತ ವೈದ್ಯಕೀಯ ಸೌಲಭ್ಯಗಳೂ ಇಲ್ಲಿ ದೊರೆಯುವಂತಹ ವ್ಯವಸ್ಥೆಯಾಗುತ್ತಿದೆ.

ಇತರ ದೇಶಗಳಲ್ಲಿ ಯಶಗಳಿಸಿದ ಸಂತಾನ ನಿರೋಧ ಸಾಧನಗಳನ್ನು ದೇಶದಲ್ಲಿಯೇ ಭಾರತವು ತಯಾರಿಸಲು ನಿರ್ಧರಿಸಿದೆ. ಇದೇ "ಲೂಪ್" ಅಥವಾ ವಂಕಿ. ಇದರ ಉಪಯೋಗವನ್ನು ಸಂತಾನ ಬಯಸದ ಮಹಿಳೆ ಮಾಡಿಕೊಳ್ಳಬಹುದು. ಇದು ಸುರಕ್ಷಿತ, ಸರಳ ಮತ್ತು ಬಹಳ ಅಗ್ಗ. ಇದನ್ನು ತೊಟ್ಟುಕೊಂಡು ಗರ್ಭಿಣಿಯಾಗುವುದನ್ನು ತಡೆಯಬಹುದು; ಮಗು ಬೇಕೆಂದೆನಿಸಿದರೆ, ವೈದ್ಯರ ಸಹಾ…

(ಹದಿಮೂರನೇ ಪುಟ ನೋಡಿರಿ)



ಅಮೇರಿಕೆಯಲ್ಲಿ ನೆಲಸ ಬಯಸುವವರ ಯೋಗ್ಯತೆ ಮತ್ತು ಚಾತುರ್ಯತೆಗಳನ್ನು ಗಮನಿಸಿ ಅವರಿಗೆ ಪ್ರವೇಶ ನೀಡುವ ಹೊಸ ಶಾಸನವೊಂದು ಬಳಕೆಗೆ ಬಂತು. ಸ್ವಾತಂತ್ರ್ಯ ಪುತ್ಥಳಿಯ ಹಿನ್ನೆಲೆಯಲ್ಲಿ ಅಧ್ಯಕ್ಷ ಜಾನ್ಸನ್ ಈ ಸಂಬಂಧದಲ್ಲಿ ಮಾತಾಡುತ್ತಿದ್ದಾರೆ.

ಶಾಂತಿಯ ಸಾಧನೆಗಾಗಿ ಹೋರಾಡಿ ಕೊನೆಯುಸಿರೆಳೆದ ಶಾಂತಿದೂತ—

ಶ್ರೀ ಲಾಲ್ ಬಹದೂರ್ ಶಾಸ್ತ್ರೀಜಿಯವರು

ಬರೆದವರು: ಶ್ರೀ ಮಜಿಬೈಲು ಭಾಸ್ಕರ ಭಂಡಾರಿ.

ಸ್ವಾತಂತ್ರ್ಯವನ್ನು ಗಳಿಸಿದ ಬಳಿಕ, ಭಾರತದ ಪ್ರಧಾನಿ ಪಟ್ಟವನ್ನು ಏರಿ, ಪಂಚಶೀಲ, ಪಂಚವಾರ್ಷಿಕ ಯೋಜನೆ ಮೊದಲಾದ ಯೋಚನೆ, ಯೋಜನೆಗಳಿಂದ ಭಾರತವನ್ನು ಪುನರುದ್ಧರಿಸಲು ಅಹೋರಾತ್ರಿ ಶ್ರಮಿಸಿ, "ಜಗತ್ತಿನ ಶಾಂತಿ ಸಹಬಾಳ್ವೆಗಳಿಗಾಗಿ ಭಾರತವು ನಿರಂತರ ಶ್ರಮಿಸುತ್ತಿದೆ" ಎಂದು ಎತ್ತಿ ತೋರಿಸಿದ ಪಂಡಿತ ಜವಾಹರಲಾಲ ನೆಹರೂರವರು ಒಮ್ಮಿಂದೊಮ್ಮೆಗೆ ಕೊನೆಯುಸಿರೆಳೆದಾಗ ಎಲ್ಲರಲ್ಲೂ ಎದ್ದ ಪ್ರಶ್ನೆಯೊಂದೇ—ಇನ್ನು ಯಾರು?"

ಮೂರ್ತಿ ಸಣ್ಣದಾದರೂ—

ಆಗ ಸದ್ದು ಗದ್ದಲವಿಲ್ಲದೆ ಎದ್ದು ಬಂದು "ನಾನು" ಎಂದವರು ಶಾಸ್ತ್ರಿ! ಮೂರ್ತಿ ಸಣ್ಣದು; ಆದರ ಕರ್ತೃತ್ವದ ಕಲ್ಪನೆ ನಮಗೆ ಅದು ವರೆಗೆ ಇದ್ದುದೂ ಸಣ್ಣ ರೂಪದಲ್ಲೇ...,ಅವರು ಅಧಿಕಾರದಲ್ಲಿ ಉಳಿದುದೂ ಸಣ್ಣ ಅವಧಿಯೇ! ಆದರೆ ಅವರು ಸಾಧಿಸಿದ ಕೆಲಸ, ಕೆಲಸದ ಕೀರ್ತಿ, ಅದರಿಂದ ಅವರಿಗೆ ದೊರಕಿದ ಅಮರತ್ವ ಅದೆಷ್ಟೋ ಪಾಲು ದೊಡ್ಡದು!

ಆಧುನಿಕ ಭಾರತದ ಭವ್ಯ ಚರಿತ್ರೆಯಲ್ಲಿ ಅವರಿಗೆ ಸಲ್ಲಬಹುದಾದ ಸ್ಥಾನ, ಜಗತ್ತಿನ ಶಾಂತಿಯುತ ಸಹಬಾಳ್ವೆಯ ಹೋರಾಟದ ದಿವ್ಯ ಇತಿಹಾಸದಲ್ಲಿ ಅವರಿಗೆ ಸಲ್ಲ ಬೇಕಾದ ಮಾನ—ಎಂದೆಂದಿಗೂ ದೊಡ್ಡದಾಗಿಯೇ ಉಳಿಯುವುದು!

ಸರಳತೆ; ನಿಸ್ವಾರ್ಥ; ತಾಳ್ಮೆ—

ಕೆಲವರು ಹುಟ್ಟಿನಿಂದ ಮಹಾತ್ಮರು ಅವರ ಕ್ರಿಯಾ ಶಕ್ತಿಯ ಕಲ್ಪನೆ ಪವಾಡ ಸದೃಶ! ಆದರೆ ಶಾಸ್ತ್ರೀಜಿಯವರು ಮಾನವನಾಗಿ ಜನಿಸಿ ಮಾನವ ಯೋಗ್ಯವಾದ ಸದ್ಗುಣಗಳನ್ನು ಗಳಿಸಿದ್ದರು. ಅವರ ಸರಳತೆ; ನಿಸ್ವಾರ್ಥ ಬುದ್ಧಿ, ಅನುಕರಣೀಯವಾದುವುಗಳು! ಯಾವುದೇ ಕಠಿಣ ಸಮಸ್ಯೆಯೆದುರಾಗಲಿ, ದಿಗಿಲು ಬೀಳದೆ ಅದನ್ನು ತಾಳ್ಮೆಯಿಂದ ಸ್ವೀಕರಿಸಿಕೊಂಡು ಅತ್ಯಂತ ತಾಳ್ಮೆಯಿಂದಲೇ ಅದಕ್ಕೆ ಬೇಕಾದ ಪರಿಹಾರವನ್ನು ಸೂಚಿಸುತ್ತಿದ್ದರು! ವಾದ ವಿವಾದಗಳ ತೀರ್ಮಾನಗಳಲ್ಲಿ ಅವರದು ಎತ್ತಿದ ಕೈ. ಪ್ರಧಾನಿ ಪಟ್ಟವನ್ನು ಸ್ವೀಕರಿಸುವುದರ ಮೊದಲು ಗೃಹ ಮಂತ್ರಿಗಳಾಗಿ ಅವರು ತೋರಿಸಿದ ಕಾರ್ಯದಕ್ಷತೆ; ಚತುರತೆ, ಕ್ರಿಯಾಶೀಲತೆಗಳೇ ನೆಹರೂರವರ ಮನವನ್ನು ಸೂರೆಗೊಂಡಿದ್ದು, ಕಾಮರಾಜ ತಂತ್ರದಂತೆ ಅಧಿಕಾರದಿಂದ ಹೊರಬಂದ ಶಾಸ್ತ್ರೀಜಿಯವರಿಗೆ ಪುನಃ ಖಾತಾರಹಿತ ಮಂತ್ರಿ ಪದವಿ ದೊರಕಿತ್ತು! ಪ್ರಧಾನಿಯಾದ ಬಳಿಕವಂತೂ, ಯಾರೂ ಕನಸಿನಲ್ಲೂ ನಿರೀಕ್ಷಿಸದ ಮಹತ್ಕಾರ್ಯಗಳನ್ನು ಮಾಡಿ ಅವರು ಜಯಭೇರಿ ಹೊಡೆದರು!

ಹೂವಿಗಿಂತ ಮೃದು;
ಕಲ್ಲಿಗಿಂತ ಕಠಿಣ!

ಹೊರ ನೋಟದಿಂದ ಶಾಸ್ತ್ರೀಜಿಯವರು ಪ್ರೀತಿ ಕರುಣೆಗಳ ಶಾಂತ ಮೂರ್ತಿ ಎಂದು ಹೇಳುವುದು ಬಹಳ ಸುಲಭವಿತ್ತು. ಅದಕ್ಕೆ ತಕ್ಕಂತೆ ಅವರಲ್ಲಿದ್ದ ಮೃದು ಹೃದಯ ಅನ್ಯಾದೃಶವಾಗಿತ್ತು! ಪರದೇಶಗಳ ಸಂಚುಗಳನ್ನೂ, ಹಿಂಸೆ ಆಕ್ರಮಗಳನ್ನೂ ಕಂಡು ಅವರು ಮರುಗುತ್ತಿದ್ದರು! ತನ್ನ ಕೊನೆಯುಸಿರಿನ ವರೆಗೂ ಮಾತೆಯ ಮಮತೆಯ ಬಂಧನದಿಂದ ವಂಚಿತರಾಗದ ಅವರಲ್ಲಿ ಶಿಶುಹೃದಯ ಶೋಭಿಸುತ್ತಿತ್ತು! ಹಾಗೆಂದು ಅವರೆಂದೂ ತನ್ನ ಮೃದು ಹೃದಯದ ದುರುಪಯೋಗಗೊಳಿಸಿದ್ದಿಲ್ಲ! ಭಾರತದಂತಹ ವಿಶಾಲ ದೇಶದ ಪ್ರಧಾನಿ ಪಟ್ಟದಲ್ಲಿದ್ದು ಕೊಂಡು;ಆ ಜವಾಬ್ದಾರಿಯುತ ಕಾರ್ಯ ನಿರ್ವಹಣೆಯಲ್ಲಿ ಅವರು ದೇಶದ ದುರ್ಧ್ಯ ನಾಯಕನೊಬ್ಬನಿಗೆ ಬೇಕಾದ ಧೈರ್ಯ; ಸ್ಥೈರ್ಯಗಳನ್ನು ತೋರಿಸಿ, ತಾನು ಮೃದು ಸ್ವಭಾವದವನಿದ್ದಂತೆಯೇ ಕಠಿಣ ಹೃದಯಿಯೂ ಆಗಬಲ್ಲೆ" ಎಂದು ಸಾರಿದರು. ಭಾರತದ ಮೇಲೆ ಪಾಕಿಸ್ಥಾನವು ಅನ್ಯಾಯವಾಗಿ ಆಕ್ರಮಣವೆಸಗಿದಾಗ, ಟಿ. ಕೆಯವರ ರಾಜೀನಾಮೆಯನ್ನು ಸ್ವೀಕರಿಸಿದಾಗ ಅವರ ಉಕ್ಕಿನ ಹೃದಯದ ಪರಿವೆ ನಮಗಾಗುವುದರೊಂದಿಗೆ ಹಿಂದಿನ ಉಕ್ಕಿನ ಮನುಷ್ಯ ಸರದಾರರ ಸ್ಮರಣೆ ಬರುವುದು ವಿಹಿತ.

ಕಡೆಗೂ ಗೆದ್ದರು

ಪಾಕಿಸ್ತಾನದೊಂದಿಗೆ ಶಸ್ತ್ರಾಸ್ತ್ರಗಳಲ್ಲಿ ಅನೇಕ ದಿನಗಳ ವರೆಗೆ ಹೂಡಿದ ಕದನದಲ್ಲಿ ಸೋಲುಗೆಲುವಿನ ಇತ್ಯರ್ಥವಾಗದೆ ದೇಶವೇ ತಲ್ಲಣಿಸಿದಾಗ, ಶಾಸ್ತ್ರೀಜಿಯವರು ತನ್ನ ನಗು ಮುಖ ಸರಳ ಹೃದಯಗಳಿಂದ ಆಯೂಬನಂತಹ ಸೇನಾಧಿಕಾರಿಯ ಕಠಿಣ ಹೃದಯವನ್ನು ಗೆದ್ದರು! ವಿಶ್ವವೇ ಮೂಗಿಗೆ ಬೆರಳಿಟ್ಟು ಆಶ್ಚರ್ಯಪಡುವಂತೆ ತಾಷ್ಕೆಂಟು ವಿಜಯರಾದರು!

ಅವರ ಆದರ್ಶ—

ಆದರೆ ಈ ತಾಷ್ಕೆಂಟು ವೀರನನ್ನು ಸ್ವಾಗತಿಸಿ ಅವನ ಮುಂದಾಳುತನದಲ್ಲಿ ಮುಂದೆ ಸಾಗುವ ಭಾಗ್ಯ ನಮ್ಮದಾಗಿ ಉಳಿಯಲಿಲ್ಲ! ಕೆಲ ಗಂಟೆಗಳ ಮೊದಲು ಸಂಧಾನದ ಕುರಿತು ಚರ್ಚಿಸಿದ್ದ ಆಯೂಬರೇ ಕಡೆಗೆ ಅವರ ಕಳೇಬರಕ್ಕೆ ಕೈಕೊಡುವಂತಾಯಿತು. ಎಲ್ಲವೂ ವಿಧಿ ಲೀಲೆ. ಆದರೆ ಅವರ ನಶ್ವರ ಭೌತ ಶರೀರ ನಮ್ಮ ಕಣ್ಮರೆಯಾದರೂ, ಅವರು ತೋರಿದ ಆದರ್ಶ ಎಂದೆಂದಿಗೂ ಮರೆಯಲಸಾಧ್ಯವಾದುದು! ಅವರಂತಹ ನಿಸ್ವಾರ್ಥಿ ಕಷ್ಟಸಹಿಷ್ಣು ರಾಜಕಾರಣಿಗಳು ನಮ್ಮ ಭಾರತದ ರಾಜಕೀಯ ರಂಗವನ್ನು ಪ್ರವೇಶಿಸಿದುದೇ ಆದರೆ ನಿಜವಾಗಿಯೂ ಭಾರತವು ಸ್ವರ್ಗಸದೃಶವಾಗಬಹುದು! ಕನಸಿದ ರಾಮರಾಜ್ಯ ನನಸಾಗಬಲ್ಲುದು!

ಅಂಗವಿಕಲರಿಗೊಂದು ಆಶಾಕಿರಣ

(ಆರನೇ ಪುಟದಿಂದ)

ಕ್ ವಸ್ತುಗಳನ್ನು ತಯಾರಿಸುವುದು, ಮುದ್ರಣ ವಿನ್ಯಾಸ ಮತ್ತು ಚಿತ್ರದ ಹೆಣಿಗೆಯ ಕೆಲಸ ಮೊದಲಾದವುಗಳಲ್ಲಿ ತರಪೇತು ಹೊಂದಲು ಈ ಕೇಂದ್ರದಲ್ಲಿ ಅವಕಾಶವಿದೆ. ಈ ಕಸಬುಗಳಲ್ಲಿ ತರಬೇತು ಕೊಡುವ ಶಿಕ್ಷಕರೂ ಕೃತಕ ಅಂಗಗಳನ್ನು ಬಳಸಿರುವ ಅಂಗವಿಕಲರೇ ಆಗಿದ್ದಾರೆ. ಮುದ್ರಣ ಶಾಲೆಯಲ್ಲಿ ಕೆಲಸ ಮಾಡುವವರು, ಕಾಲಿಲ್ಲದವರಾಗಿರುತ್ತಾರೆ. ಉತ್ತಮ ರೀತಿಯ ಪತ್ರಿಕೆಗಳನ್ನು ಮುದ್ರಿಸುವ ಕಾರ್ಯವನ್ನು ಮುದ್ರಣ ಶಾಖೆಯು ಕೈಗೊಳ್ಳುತ್ತದೆ. ಅಂಗವಿಕಲರಲ್ಲಿ, ಅಭಿರುಚಿವುಳ್ಳವರಿಗೆ ಸೈಕಲ್ ತುಳಿಯುವುದು ಮೋಟಾರ್ ಸೈಕಲ್ ಮತ್ತು ಕಾರುಗಳನ್ನು ಬಿಡುವುದರಲ್ಲಿ ತರಪೇತು ಕೊಡಲಾಗುವುದು.

ಕೇಂದ್ರವನ್ನು ಒಮ್ಮೆ ಸಂದರ್ಶಿಸಿದರೆ ಅಲ್ಲಿ ಕಾಣುವ ಅಂಗವಿಕಲರನ್ನು ನೋಡಿ ದುಃಖ ಪೀಡಿತರಾಗುವುದು ಖಂಡಿತ. ಎರಡು ಕೈಗಳನ್ನು ಮತ್ತು ಎರಡು ಕಾಲುಗಳನ್ನು ಕಳೆದುಕೊಂಡ ಅನೇಕ ಜನರನ್ನು ಅಲ್ಲಿ ಕಾಣುತ್ತೇವೆ. ಆದರೆ ಅವರು ತಮಗಾದ ಅಪಘಾತ ಎಷ್ಟೇ ಭೀಕರವಾಗಿದ್ದರೂ ಅದನ್ನು ಗೆಲ್ಲಬಹುದ, ಎನ್ನುವುದನ್ನು ಅತಿ ಶೀಘ್ರದಲ್ಲಿ ಕಲಿಯುತ್ತಾರೆ. ಅವರು ಪುನರ್ವ್ಯವಸ್ಥಿತಗೊಂಡ ಮೇಲೆ ಕೇಂದ್ರದಿಂದ ನಗು ಮುಖದೊಡನೆ ಹೊರಬೀಳುವುದನ್ನು ಕಾಣಬಹುದು.

ಈ ಕೇಂದ್ರದ ಒಂದು ಕಡೆ ಬರೆದಿರುವ ಮಾತುಗಳು ಬಹಳ ಉಚಿತವಾಗಿದೆ. "ತಡೆಗಟ್ಟಲಾಗದ ವಿಪತ್ತನ್ನು ಎದುರಿಸಲು ದೇವರು ನಮಗೆ ಸಮಾಧಾನದ ಮನಸ್ಸನ್ನು ನೀಡಲಿ; ತಡೆಯಬಹುದಾದ ವಿಪತ್ತನ್ನು ತಡೆಯುವಂತೆ ನಮಗೆ ಧೈರ್ಯವನ್ನು ನೀಡಲಿ, ಈ ಭಿನ್ನತೆಯನ್ನು ಅರ್ಥ ಮಾಡಿಕೊಳ್ಳುವ ಜ್ಞಾನವನ್ನು ನಮಗೆ ದಯಪಾಲಿಸಲಿ"

ಮನೆಗಳಲ್ಲಿ ನೀರನ್ನು ಶುದ್ಧಿಮಾಡಲು ಶೋಧಕ

ಕೆಲವು ಸ್ಥಳಗಳಲ್ಲಿ ಭೂಮಟ್ಟಕ್ಕೆ ಮೇಲ್ಭಾಗದಲ್ಲಿ ಸಿಕ್ಕುವ ನೀರನ್ನು ಅಥವಾ ಕೊಳಾಯಿಗಳು ಒದಗಿಸುವ ನೀರನ್ನು ಉಪಯೋಗಿಸಬೇಕಾಗುತ್ತದೆ. ನೀರನ್ನು ಶುದ್ಧಿಮಾಡಲು ಉಪಯೋಗಿಸುವ ಕ್ಲೋರೀನ್ ಮತ್ತಿತರ ಕ್ರಿಮಿನಾಶಕಗಳ ವಾಸನೆಯನ್ನು ಸಹಿಸಲಾಗುವುದಿಲ್ಲ. ಸಂತೋಷಕ್ಕಾಗಿ ಕುಡಿಯುವ ಕಾಫಿ ಮತ್ತು ಟೀಗಳಲ್ಲಿಯೂ ಆ ವಾಸನೆಯು ಇದ್ದೇ ಇರುತ್ತದೆ. ಆದಕ್ಕಾಗಿಯೇ ಪಶ್ಚಿಮ ದೇಶದ ಸಂಸ್ಥೆಯೊಂದು' 'ಪಾಗೇ ಎಗ್ ಒರ್ಟ್ಸ್ ಎನವಿ:'ಉಟ್ರೆಟ್ಟ್ ಎಂಬಲ್ಲಿ ಒಂದು ಮನೆಯ ಶೋಧಕ ಯಂತ್ರವನ್ನು ನಿರ್ಮಾಣಕ್ಕೆ ತಂದಿದೆ. ಇದರಲ್ಲಿ ನೀರನ್ನು ಶೋಧಿಸಿದರೆ ನೀರಿನಲ್ಲಿ ಎಂತಹ ಅಸಹ್ಯಕರವಾದ ವಾಸನೆಯಿದ್ದರೂ ಅದನ್ನು ಹೋಗಲಾಡಿಸಿ ಕುಡಿಯಲು ಹಿತಕರವಾಗಿರುವಂತೆ ಮಾಡುತ್ತದೆ. ಬಳಿಕ ಆಕಾರದ ನೀರಿನ ಪಾತ್ರೆಯೊಂದನ್ನು ಸ್ಥಂಭಾಕಾರದ ಶೋಧಕ ಸಲಕರಣೆಗೆ ಜೋಡಿಸಿದೆ. ಇದರಲ್ಲಿರುವ ಫಿಲ್ಟರ್ ಕಾಟ್ರಿಜ್‌ಗಳಲ್ಲಿ ಆಕ್ಸಿನೇಟೆಡ್ ಕಾರ್ಬನನ್ನು ಇಡಲಾಗಿದೆ. ನೀರಿನ ಪಾತ್ರೆಯನ್ನು ಕಾಟ್ರಿಜ್‌ಗಳೊಡನೆ ಸೇರಿಸಲು ತಿರುಪುಗಳಿವೆ. ನೀರಿನ ಪಾತ್ರೆಯನ್ನು ಕೊಳಾಯಿಯ ನೀರಿನಿಂದ ತುಂಬಿದಾಗ ಸಣ್ಣ ಕೊಳವೆಯೊಂದರ ಮೂಲಕ ಕಾರ್ಬನ್ ಕಳಕ್ಕೆ ನೀರು ಹರಿಯುತ್ತದೆ. ಅದರ ಸಾಲ್ಕು ರಂಧ್ರಗಳ ಮೂಲಕ ಆಕ್ಸಿನೇಟೆಡ್ ಕಾರ್ಬನ್ ಮುಖಾಂತರ ನೀರು ಶುದ್ಧಮಾಡಲ್ಪಟ್ಟು ನೀರು ಕೆಳಗಿನ ಜಾಡಿಗೆ ಬರುತ್ತದೆ. ಈ ರೀತಿಯಾಗಿ ಬಂದ ನೀರು ವಾಸನೆರಹಿತವಾಗಿಯೂ ಕುಡಿಯಲು ಶುಭ್ರವಾಗಿಯೂ ಯೋಗ್ಯವಾಗಿಯೂ ಇರುತ್ತದೆ.

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಉಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26—4—1966.

ಚಾರುಚಯನ

ಕೈಗಂಟಿಗೆ ಸವರುವ ಬೆಲ್ಲ

ಕನ್ನಡಿಗರ ನ್ಯಾಯವಾದ ಹೋರಾಟ ನ್ಯಾಯವಾದುದೆಂದು ಹೇಳುವ ಕಾಂಗ್ರೆಸ್ ಪರಿಷ್ಕರೊಬ್ಬರೂ ಇಲ್ಲವೆಂದೇ ತೋರುತ್ತದೆ. ಆದರೂ ಕನ್ನಡಿಗರ ಹೋರಾಟದಲ್ಲಿ ಸ್ವಲ್ಪವಾದರೂ ಅರ್ಥವಿದೆಯೆಂದೆನಿಸಿಕೊಂಡಿದೆ. ಪ್ರಧಾನಿ ಇಂದಿರಾ ಗಾಂಧಿಯವರಿಂದ ಹಿಡಿದು ಎಲ್ಲ ಕಾಂಗ್ರೆಸ್ ನಾಯಕರ ಮೇಲೂ ಮಹಾರಾಷ್ಟ್ರದ ನಾಯಕರ ಪ್ರಭಾವ ಅಚ್ಚಳಿಯದೆ ಬಿದ್ದಿದೆ; ಅವರು ಎದುರು ನಿಂತರೆ, ಸಮುದ್ರವೇ ಮೇರೆವರಿದಂತೆ ಅನ್ನುವ ಅಭಿಪ್ರಾಯ ಅವರೆಲ್ಲರಲ್ಲೂ ಇದ್ದಂತಿದೆ. ಹಾಗಾಗಿ ಮರಾಠಿಗರಿಗೆ ಮಾತುಕೊಟ್ಟಂತೆ ನಿಯೋಜಿತ ಗಡಿ ಆಯೋಗವನ್ನು ಶೀಘ್ರದಲ್ಲಿಯೇ ನೇಮಿಸಲಾಗುವುದೆಂದು ಅರಿತ ವರ್ತುಲಗಳು ಸಾರಿವೆ. ಆದರ ಜತೆಗೆ ಕನ್ನಡಿಗರನ್ನೂ ಸಮಾಧಾನಗೊಳಿಸುವ ಸಂಚೂ ಕೂಡಿದೆ.

ಕಾಮರಾಜ್

ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ನಾಡಾರರ ರಾಜ ತಂತ್ರದ ಬಲವಾದ ಕೈ ಮುಖ್ಯಮಂತ್ರಿ ನಿಜಲಿಂಗಪ್ಪ ಅಂದರೆ, ಕರ್ನಾಟಕ. ಅವರ ಪ್ರತಿ ಕಾರ್ಯದಲ್ಲೂ ಪ್ರಾಮಾಣಿಕವಾಗಿ, ನಿಷ್ಠೆಯಿಂದ ಸಹಕರಿಸಿದ ಗುಣ, ಅಥವಾ ದೋಷ, ಮುಖ್ಯ ಮಂತ್ರಿಯದು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ನಿಜಲಿಂಗಪ್ಪನವರು ಗೊತ್ತುವಳಿಯನ್ನು ವಿರೋಧಿಸದೆ ಇರುವುದಕ್ಕೂ ಇದೇ ಕಾರಣವಿರಬಹುದು; ಅಥವಾ ಇದಕ್ಕೆ ಇಂತಹ ಪ್ರತಿಕ್ರಿಯೆ ಹೊರಡೀತೆನ್ನುವುದರ ಕಲ್ಪನೆಯೂ ಅವರಿಗೆ ಬಂದಿರಬಹುದು. ಅದೇನೇ ಇದ್ದರೂ ನಿಜಲಿಂಗಪ್ಪನವರು ಪಕ್ಷಕ್ಕೆ ನಿಷ್ಠೆಯಿಂದ ನಡೆಯುವವರು; ಅಂತಹ ಸ್ಥಿತಿ ಈಗ ದಯನೀಯವಾಗಿರುವಾಗ ಕಾಮರಾಜರು ನೆರವಿಗೆ ಬರುವುದು ಸಹಜ.

ಪಾರ್ಲಿಮೆಂ ಪಾಲಿಸಿಯ ಕಾಮರಾಜರು ಅತ್ತ ಹಾವು ಸಾಯಬಾರದು, ಇತ್ತ ಕೋಲು ಮುರಿಯಲೂ ಬಾರದು ಎನ್ನುವ ನೀತಿಯನ್ನು ತತ್ಕಾಲ ತಳೆಯುವರೆಂದು ವರದಿಯಾಗಿದೆ. ಒಂದು ತಿಂಗಳೊಳಗೆ ಆದಷ್ಟು ಶೀಘ್ರದಲ್ಲೇ ಏಕ ಸದಸ್ಯ ಆಯೋಗವನ್ನು ನೇಮಿಸುವುದು— ಇದೇ ದೊಡ್ಡ ತಲೆ ಬೇನೆ— ಆದರೆ. ಆದರ ಕಾರ್ಯವ್ಯಾಪ್ತಿ, ಕರ್ತವ್ಯಗಳನ್ನು ಚುನಾವಣಾನಂತರವೇ ಗೊತ್ತುಪಡಿಸುವುದು. ವರದಿ ಎಂದು ಸಲ್ಲಿಸಬೇಕೆಂದು ನಿರ್ದಿಷ್ಟಪಡಿಸದಿರುವುದು. ಹೀಗೆ ಏರ್ಪಾಡು ಮಾಡುವ ಹವಣಿಕೆ.

ಒಂದು ದೃಷ್ಟಿಯಿಂದ ನಿಜಲಿಂಗಪ್ಪದವರ ಬೇಡಿಕೆಗೆ ಮಾನ್ಯತೆ ದೊರೆತಂತಾಗುವುದು. ಆದರೆ, ಚುನಾವಣೆಯ ನಂತರ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವಾಗ ಬೆಳಗಾವಿ, ಕಾರವಾರ, ನಿಪ್ಪಾಣಿ ಮೊದಲಾದುವುಗಳ ಪ್ರಶ್ನೆ ಮತ್ತೆ ಮುಂದೆ ಬಂದರೆ? ಬರಿಯ ಆಯೋಗ ರಚಿಸುವುದರಿಂದಲೇ ಮರಾಠಿಗಳು ತೃಪ್ತರಾಗುವರೆ?— ಈ ಎರಡೂ ಪ್ರಶ್ನೆಗಳಿಗೆ ಸೂಕ್ತ ಸಮಾಧಾನ ದೊರೆಯುವದಿಲ್ಲ. ಹಾಗಾಗಿ ಅಂತಹ ಘೋಷಣೆಯೇನಾದರೂ ಆದರೆ, ಕನ್ನಡಿಗರ ಕೈಗಂಟಿಗೆ ಬೆಲ್ಲ ಸವರಿದಂತೆ ಮಾತ್ರ ಆದೀತೋ ಏನೋ— ಕಾಮರಾಜರ ಪಾಲಿಸಿ ಸಾಮಾನ್ಯವಾಗಿ ಇದೇ ತಾನೆ?

೦ ೦ ೦ ೦

ಅಯ್ಯೂಬ್

ಫೀಲ್ಡ್ ಮಾರ್ಶಲ್ ಅಯ್ಯೂಬಖಾನರು ತಮ್ಮ ಸರ್ವಾಧಿಕಾರದ ಆಡಳಿತೆಯಲ್ಲಿ ಬಹುಮೌಲ್ಯವಾದ ಮಹತ್ವಪೂರ್ಣವಾದ ಪ್ರಕಟಣೆಯೊಂದನ್ನಿತ್ತು, ಜಾಗತಿಕ ರಾಜಕಾರಣಿಗಳ ನಿರೀಕ್ಷೆಯನ್ನು ಸತ್ಯ ಮಾಡಿದ್ದಾರೆ. ತಮ್ಮ ವಿದೇಶ ಮಂತ್ರಿ, ಕಿರಿ ಪ್ರಾಯದ ಝಡ್. ಎ. ಭುಟ್ಟೋ ಅವರಿಗೆ ಆರೋಗ್ಯ ಸುಧಾರಿಸಿ ಕೊಳ್ಳುವ ಸಲುವಾಗಿ ಅನಿರ್ದಿಷ್ಟ ಅವಧಿಯ ರಜೆಯನ್ನು ಕೊಟ್ಟಿದ್ದಾರೆ. ತಾನು ಸ್ವತಃ ವಿದೇಶ ಮಂತ್ರಿ ಶಾಖೆಯನ್ನು ವಹಿಸಿಕೊಂಡಿದ್ದಾರೆ. ಆದರ ಜತೆಯಲ್ಲಿ ಅ[illegible]ಮಂತ್ರಿಗಳಲ್ಲಿಯೂ ಬದಲಾವಣೆಯನ್ನು ನಿರೀಕ್ಷೆಯಿದೆ. ಅಯ್ಯೂಬ— ಭುಟ್ಟೋರ ನಡುವೆ ಭಿನ್ನಾಭಿಪ್ರಾಯವಿದ್ದಿತ್ತು ಎಂಬ ಮಾತಿಗೆ ಇದು ಒಂದು ಬಗೆಯ ಪೂರ್ಣವಿರಾಮವನ್ನು ಹಾಕಿತು. ಏಕೆಂದರೆ ಸದ್ಯದ ನಿರೀಕ್ಷೆಯಂತೆ ಭುಟ್ಟೋ ಮತ್ತೆ ಮಂತ್ರಿಮಂಡಳಕ್ಕೆ ಹಿಂದಿರುಗುವ ಸಲ್ಲಕ್ಷಣಗಳಿಲ್ಲ.

ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತೆಂಬಂತೆ ಪಾಕ್ ವಿದೇಶ ನೀತಿ ಬಹಳಷ್ಟು ಡೋಲಾಯಮಾನವಾಗಿತ್ತು. ಭುಟ್ಟೋ ಚೀನೀ ಪರತೆ, ಚೀನೀ ನಿಷ್ಠೆಯಲ್ಲಿ ಆಸಕ್ತಿ ತಳೆದು ಪಾಕಿಸ್ತಾನವನ್ನು ಮಾವನತ್ತ ಎಳೆದೊಯ್ಯಲು ಒಂದಲ್ಲ, ನೂರು ರೀತಿಯಿಂದ ಪ್ರಯತ್ನಿಸಿದರು; ಅದರಲ್ಲಿ ಬಹಳಷ್ಟು ಯಶವನ್ನೂ ಗಳಿಸಿದರು. ಭಾರತದ ಅವಿಭಾಜ್ಯ ಅಂಗ ಕಾಶ್ಮೀರದ ಒಂದಂಶವನ್ನು ಆ ಮಾವನಿಗೆ ದಾನ ನೀಡಿ ದಾನಶೂರನೆನಿಸಿದರು. ಆದರೆ, ಅಯ್ಯೂಬರು ಅಮೆರಿಕೆಯಿಂದ ಪ್ರಭಾವಿತರಾದವರು. ಹಾಗಾಗಿ ಅವರಿಬ್ಬರ ಭಿನ್ನಾಭಿಪ್ರಾಯ ಜಾಗತಿಕ ರಾಜಕಾರಣದ ಪ್ರಮುಖಾಂಶವೇ ಆಗಿತ್ತು. ಮನಸ್ಸಿಗೆ ವಿರೋಧವಾಗಿಯೇ ಅಯ್ಯೂಬರು ಭುಟ್ಟೋ ಮಾತಿಗೆ ತಲೆದೂಗಿದ ಹಲವು ಪ್ರಸಂಗಳೂ ಇವೆ. ತಾನು ಅಧ್ಯಕ್ಷನಾಗಿಯೂ ತನ್ನ ವಾಣಿಗೆ ಬೆಲೆಗೊಡದ ಭುಟ್ಟೋ ಅವರಿಗೇ ನುಂಗಲಾರದ ತುತ್ತಾಗಿದ್ದರು. ಏಕೆಂದರೆ, ಪಾಕ್ ಸೇನೆಯಲ್ಲಿ ಪ್ರಜೆಗಳಲ್ಲಿ ಭುಟ್ಟೋ ಪರವಾದ ತಂಡವಿದೆಯೆಂದೂ ಸುದ್ದಿ. ಆದಕ್ಕೆಂದೇ ಅಯ್ಯೂಬರು ಅನಿರ್ದಿಷ್ಟಾವಧಿಯ ವಿರಾಮವಿತ್ತಿದ್ದಾರೆ. ಒಮ್ಮೆಗೆ ಪೀಡೆ ಕಳೆದರೆ ಸಾಕು; ಮುಂದೆ ನೋಡೋಣವೆನ್ನುವ ಆಶಯ ಅವರದಿರಬಹುದು.

ಭುಟ್ಟೋ ನಿರ್ಗಮನದಿಂದ ಭಾರತವೇನು ಹಾರೈಸಬಹುದು? ಪಾಕ್ ಕಾಶ್ಮೀರ ನೀತಿಯಲ್ಲಿ ಯಾವುದೇ ಪರಿವರ್ತನೆಯಾಗುವುದು ಕಷ್ಟ. ಸಮಸ್ಯೆಯ ಯಥಾರ್ಥತೆಯನ್ನು ಅರಿತುಕೊಳ್ಳುವ ವಿವೇಕ ಪಾಕ್ ನಾಯಕರಲ್ಲಿಲ್ಲದಿರುವುದೇ ಇದಕ್ಕೆ ಕಾರಣ. ಆದರೂ ತಾಷ್ಕೆಂಟ್ ಘೋಷಣೆಯ ಕೆಲವಂಶಗಳು ನಿಧಾನವಾಗಿಯಾದರೂ ನಿಷ್ಫಲವೆನಿಸಬಹುದಾದರೂ ಕಾರ್ಯರೂಪಕ್ಕೆ ಬರಬಹುದು. ಇದ್ದುದರಲ್ಲಿ ಸಂತೋಷವೆಂದರೆ, ಭಾರತದ ಮೇಲೆ ಸದಾ ವಿಷಕಾರುವ ಒಂದು ವ್ಯಕ್ತಿ ಪಾಕಿಸ್ತಾನ ಬಿಟ್ಟು ಹೋಯಿತು ಎಂಬುದು.

೦ ೦ ೦ ೦

ಕೊಲಂಬೋ ಸಮ್ಮೇಳನದ ನಾಲ್ವರು ಸದಸ್ಯರಲ್ಲಿ ಒಂದು ಸಂಯುಕ್ತ ಅರಬ ಪ್ರಜಾರಾಜ್ಯ. ಪ್ರಧಾನಿ ಇಂದಿರಾ ಗಾಂಧಿಯವರು ತನ್ನ ಸೋವಿಯತ್ ಸಂಚಾರದ ಕೊನೆಯಲ್ಲಿ ಕೈರೋವಿಗೂ ಭೆಟ್ಟಿಯಿತ್ತು, ಅಧ್ಯಕ್ಷ ನಸ್ಸೇರರೊಡನೆ ಮಾತುಕತೆ ನಡೆಸುವರೆಂದೂ ಇದು ಇದೇ ಆಕ್ಟೋಬರದಲ್ಲಿ ನವದೆಹಲಿಯಲ್ಲಿ ಸೇರಲಿರುವ ತ್ರಿರಾಷ್ಟ್ರ ಕೂಟಕ್ಕೆ ಸಂಬಂಧಿಸಿದಂತಿರುವುದೆಂದೂ ಹೇಳಲಾಗಿತ್ತು. ಆದರೆ, ಸದ್ಯದ ವರದಿಗಳಂತೆ, ಪ್ರಧಾನಿಯವರು ರಶ್ಯಕ್ಕೆಹೋಗುವ ಮುನ್ನವೇ ಕೈರೋಗೆ ಭೇಟಿ ಕೊಡುವ ನಿರೀಕ್ಷೆ ಇದೆ. ಇದರ ರಹಸ್ಯವೇನು?

ಜುಲೈ ಮಧ್ಯಾವಧಿಯಲ್ಲಿ ಚೀನೀಯ ಪ್ರಧಾನಿ ಚೌ. ಎನ್-ಲಾಯ್ ಕೈರೋಗೆ ಸಂದರ್ಶನ ನೀಡುವುದೀಗ ಖಚಿತವಾಗಿದೆ. ಚೀನೀಯ ಅಧಿಕಾರಿಗಳು ಈ ಭೆಟ್ಟಿಯ ಸಂಗತಿಯನ್ನು ರಹಸ್ಯದಲ್ಲಿಯೇ ಇಟ್ಟುಕೊಂಡಿದ್ದಾರೆ. ಕೈರೋದಲ್ಲಿಯೂ ಸರಿಯಾದ ಸುದ್ದಿ ದೊರೆಯುವುದಿಲ್ಲ. ಆದರೆ, ಸ್ವಾಗತದ ಸಿದ್ಧತೆ ಮಾತ್ರ ಭರದಿಂದ ನಡೆಯುತ್ತಿದೆ. ಸಾಮಾನ್ಯವಾಗಿ ಲಾಯ್ ಸಂದರ್ಶನದ ವೇಳೆಯೇ ಗಾಂಧಿಯೂ ಕೈರೋದಲ್ಲಿದ್ದರೆ, ಉಭಯತರರ ಭೆಟ್ಟಿಯನ್ನು ಮಾಡಿಸುವ ಹವಣಿಕೆ ನಸ್ಸೇರರದು ಸರಿಯೇಯಾಕಾಗಬಾರದ.?

ಕೆಂಪು ಚೀನಾ ಕೊಲಂಬೋ ಸಲಹೆಗಳನ್ನು ಮನ್ನಿಸದೆ ಮಾತುಕತೆ ಪ್ರಯೋಜನವಿಲ್ಲ— ಇದು ಭಾರತದ ಸರಕಾರದ ನೀತಿ. ಹಿಂದೆ ಪ್ರಧಾನಿ ಶಾಸ್ತ್ರಿಯವರು ಈ ಕಾರಣದಿಂದಲೇ ಲಾಯ್ ಭೇಟಿಯ ನಸ್ಸೇರ ಪ್ರಯತ್ನವನ್ನು ನಿರಸನಗೊಳಿಸಿದ್ದರು. ಇಂದು ಇಂದಿರಾ ಭೇಟಿಗೆ ಒಪ್ಪಿಯಾರೆ? ಲಾಯ್ ಕೊಲಂಬೊ ಸಲಹೆಗಳನ್ನು ಒಪ್ಪುವ ನಿರೀಕ್ಷೆಯಾದರೂ ಇದೆಯೇ? ರಾಜಕೀಯದಲ್ಲಿ ಆಗೊಮ್ಮೆ ಈಗೊಮ್ಮೆ ಕಣ್ಣು ಮುಚ್ಚಾಲೆಯಾಟ ನಡೆಯುವ ಸಾಧ್ಯತೆಯನ್ನು ಅಲಕ್ಷ್ಯಿಸುವಂತಿಲ್ಲ. ಹಾಗಾಗಿ ಭವಿಷ್ಯವೇ ಇದಕ್ಕೆ ಉತ್ತರಕೊಡಬೇಕಾಗುತ್ತದೆ.

— ರಾಶಿ

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ
ರಿಜಿಸ್ಟರ್ಡ್ ಪಬ್ಲಿಷರ್ಸ್,
ಪಾಖುಕೋಟೆ, ಉಡುಪಿ

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ರಖಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

ವಿದೇಶೀ ವಿದ್ಯಾರ್ಥಿ ಕೇಂದ್ರ

೧೭, ನವೆಂಬರ ವಿಶ್ವ ವಿದ್ಯಾಲಯ

ಚೆಕೊಸ್ಲೊವಾಕಿಯಾದ ಈ ವಿಶ್ವ ವಿದ್ಯಾಲಯದಲ್ಲಿ ೧೦೪ ದೇಶಗಳ ೪,೦೦೦ ವಿದ್ಯಾರ್ಥಿಗಳು ಅಭ್ಯಸಿಸುತ್ತಾರೆ.

ಪಾಠಶಾಲೆಯು ಒಂದು ಸಜೀವ ಸಂಸ್ಥೆ. ಅದನ್ನು ಒಮ್ಮೆಗೇ ನಿರ್ಮಿಸಲಾಗದು. ಪ್ರೌಢ ಶಿಕ್ಷಣದ ದೀರ್ಘ ಪರಂಪರೆಯುಳ್ಳ ಚೆಕೊಸ್ಲೊವಾಕಿಯವು ವಿಕಾಸಶೀಲ ದೇಶಗಳ ಮೇಧಾವಿಗಳಿಗೆ ಶಿಕ್ಷಣ ನೀಡಲು ಸಹಾಯ ಮಾಡುತ್ತಿದೆ. ಇದಕ್ಕಾಗಿಯೇ "೧೭ ನವೆಂಬರ್" ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದ್ದು ಅಲ್ಲಿ ೧೦೪ ದೇಶಗಳಿಂದ ಬಂದಿರುವ ೪೦೦೦ ಜನ ವಿದ್ಯಾರ್ಥಿಗಳು ವ್ಯಾಸಂಗ ನಿರತರಾಗಿದ್ದಾರೆ.

ಅವರ ಚಿತ್ರಗಳಲ್ಲಿ ಅಸಾಧಾರಣ ವರ್ಣ ವೈವಿಧ್ಯಗಳಿರುತ್ತವೆ. ತನ್ನ ತಾಯ್ನಾಡಿಗೆ—ಭಾರತಕ್ಕೆ—ಮರಳಿ ಹೋಗಿದ್ದಾರಾದರೂ ಶ್ರೀ ಜೆ. ಬಿ. ವಿನ್ನಾಂವರ ಚಿತ್ರಗಳು ಪ್ರಾಗ್ ನಗರದಲ್ಲಿ ಅವರ ಮಿತ್ರರ ಮನೆಗಳನ್ನು ಅಲಂಕರಿಸುತ್ತವೆ.

ದಿಲ್ಲಿಯ "ಶಂಕರ್ಸ್ ವೀಕ್ಲಿ" ಪತ್ರಿಕೆಯ ಪ್ರಕಟನಕಾರರ ಪುತ್ರ, ಸಂಗೀತಗಾರ, ಚಲಚ್ಚಿತ್ರಕಾರ, ಕಲಾಕಾರ ಶಂಕರ ಪಿಳ್ಳೆಯವರು ಚೆಕೊಸ್ಲೊವಾಕಿಯದ ಸಂಗೀತ ನಾಟಕ ಅಕಾಡೆಮಿಯ ಕೈಗೊಂಬೆಗಳ ಕಲಾಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದರು. ಪ್ರಸಿದ್ಧ ಚೆಕೊಸ್ಲೊವಾಕ್ ಕಲಾವಿದ ಡಾ. ಅಡಾಲ್ಫ್ ಹೋಫ್—ಮೆಯಿಸ್ಟರ್‌ರವರಲ್ಲಿ ಅವರು ಅಭ್ಯಸಿಸಿದರು. ಈಗ ಅವರು ಹೊಸದಲ್ಲಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ್ ಚೆಕ್ ಪತ್ನಿಯೂ ಸಹ ಭಾರತಕ್ಕೆ ಹೋಗಿದ್ದಾರೆ. ಅವರಿಗೆ ಇರ್ವರು ಮಕ್ಕಳಿದ್ದಾರೆ.

ಭಾರತೀಯ ಶಿಲ್ಪಿ ಅಜಿತ್ ಚಕ್ರವರ್ತಿಯು ಸ್ವದೇಶದಲ್ಲೇ ಪ್ರೌಢ ಶಿಕ್ಷಣ ಪಡೆದು, ಔದ್ಯೋಗಿಕ ಕಲಾವಿದ್ಯಾಲಯದಲ್ಲಿ ಪರಿಣತ ಪದವಿ ಪಡೆಯಲು ಪ್ರಾಗಿಗೆ ಬಂದರು. ಇಲ್ಲಿನ ಐತಿಹಾಸಿಕ ಪುರಾತನ ನಗರ ಭವನದಲ್ಲಿ ನಡೆದ ಅವರ ಪ್ರದರ್ಶನವನ್ನು ಚೆಕೊಸ್ಲೊವಾಕಿಯದ ಸಂಸ್ಕೃತಿ ಸಚಿವರೂ ಸಂದರ್ಶಿಸಿದರು.

ಶ್ರೀ ಪ್ರಮೋದ ಪಾಟರ್ಯವರು ಮುಂಬಯಿಯಲ್ಲಿ ಕಾರ್ಟೂನ್ ಚಲಚ್ಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಕ್ಷೇತ್ರದ ತಜ್ಞ ಕಲಾವಿದರಾದ ಜಿರಿ ಟ್ರಂಕಾ ಮತ್ತು ಕಾರೆಲ್ ಜಮಾನ್‌ರವರು ಚೆಕೊಸ್ಲೊವಾಕಿಯದಲ್ಲಿ ಪ್ರಮೋದರ ಶಿಕ್ಷಕರಾಗಿದ್ದರು.

ಪ್ರಪಂಚದ ೧೦೪ ದೇಶಗಳ ಸುಮಾರು ೪೦೦೦ ಜನ ವಿದ್ಯಾರ್ಥಿಗಳು ಈಗ ಚೆಕೊಸ್ಲೊವಾಕಿಯದಲ್ಲಿ ಅಭ್ಯಸಿಸುತ್ತಿದ್ದಾರೆ. ಏಶಿಯಾ, ಆಫ್ರಿಕ, ಲ್ಯಾಟಿನ್ ಅಮೇರಿಕ ಖಂಡಗಳ ದೇಶಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಜನಶಿಕ್ಷಣಕ್ಕೆ ಸಹಾಯಕವಾಗಲೆಂತಲೇ 'ನವೆಂಬರ್ ೧೭' ವಿಶ್ವ ವಿದ್ಯಾಲಯವನ್ನು ಸ್ಥಾಪಿಸಲಾಯಿತು. ೧೯೩೯ರಲ್ಲಿ ನವೆಂಬರ್ ದಿನಾಂಕ ೧೭ರಂದು ಆಕ್ರಮಣಕಾರೀ ನಾತ್ಸಿಗಳು ಚೆಕ್ ವಿಶ್ವ ವಿದ್ಯಾನಿಲಯಗಳನ್ನೂ, ಇನ್ನಿತರ ಪ್ರೌಢ ವಿದ್ಯಾಲಯಗಳನ್ನು ಮುಚ್ಚಿದರು. ಆ ನೆನಪಿಗಾಗಿಯೇ ಈ ಜಗತ್-ವಿಶ್ವವಿದ್ಯಾನಿಲಯಕ್ಕೆ 'ನವೆಂಬರ್ ೧೭' ಎಂದು ಹೆಸರಿಡಲಾಗಿದೆ. ಈಗ ಅದು ಅಂತಾರಾಷ್ಟ್ರೀಯ ವಿದ್ಯಾರ್ಥಿ ಏಕತೆಗೆ ಸಂಕೇತವಾಗಿದೆ. ಈ ವಿಶ್ವ ವಿದ್ಯಾಲಯವು ಚೆಕೊಸ್ಲೊವಾಕಿಯದಲ್ಲಿ ತನ್ನ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದು ಮಾತ್ರವಷ್ಟೇ ಅಲ್ಲದೆ, ವಿಕಾಸಶೀಲ ದೇಶಗಳಲ್ಲಿ ಶಿಕ್ಷಣ ವ್ಯವಸ್ಥೆಯ ಸ್ಥಾಪನೆಗೆ ಸಹಾಯಕವಾಗುವಂತೆ ತನ್ನ ತಜ್ಞರನ್ನು ಆ ದೇಶಗಳಿಗೂ ಕಳಿಸಿಕೊಡುತ್ತದೆ. 'ಯುನೆಸ್ಕೊ' ದಂತಹ ಸಂಸ್ಥೆಗಳ ಸಮ್ಮೇಲನಗಳಲ್ಲಿ ವಿದೇಶೀ ವಿದ್ಯಾರ್ಥಿಗಳಿಗಾಗಿ ಸಂಯುಕ್ತ ಕೇಂದ್ರವನ್ನು ನಿರ್ಮಿಸಲು ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಪ್ರತಿಯೊಂದು ರಾಷ್ಟ್ರವೂ ತಮಗೆ ಅತ್ಯಾವಶ್ಯಕವಾದ ಕ್ಷೇತ್ರದಲ್ಲಿ ವಿಶೇಷ ಶಿಕ್ಷಣ ಪಡೆಯಲು ತಮ್ಮ ವಿದ್ಯಾರ್ಥಿಗಳನ್ನು ಚೆಕೊಸ್ಲೊವಾಕಿಯಕ್ಕೆ ಕಳಿಸಿ ಕೊಡುತ್ತದೆ. ಭಾರತದಿಂದ ಬರುವ ವಿದ್ಯಾರ್ಥಿಗಳು ಬಹುಮಟ್ಟಿಗೆ ಸ್ನಾತಕೋತ್ತರ ಶಿಕ್ಷಣಕ್ಕಾಗಿಯೇ ಬರುತ್ತಾರೆ. ಪಾಕಿಸ್ತಾನ, ಅಫ್ಘಾನಿಸ್ತಾನ, ಬರ್ಮಾ ದೇಶಗಳ ವಿದ್ಯಾರ್ಥಿಗಳೂ ಇಲ್ಲಿದ್ದಾರೆ.

ವಿದ್ಯಾರ್ಥಿಗಳು ತಮ್ಮ ಸ್ವಂತ ವೆಚ್ಚದಿಂದಲೂ, ತಮ್ಮ ಸ್ವಂತ ಸರಕಾರಗಳ ಅಥವಾ ಚೆಕೊಸ್ಲೊವಾಕ್ ರಾಜ್ಯದ ವಿದ್ಯಾರ್ಥಿ ವೇತನಗಳಿಂದಲೂ, ಅನುದಾನಗಳಿಂದಲೂ, ನವೆಂಬರ್-೧೭ ವಿಶ್ವವಿದ್ಯಾಲಯದ, ಚೆಕೊಸ್ಲೊವಾಕ್ ವೃತ್ತಿ ಸಂಘಗಳ, ಸಹಕಾರೀ ಸಂಸ್ಥೆಗಳ ವಿದ್ಯಾರ್ಥಿ ವೇತನಗಳಿಂದಲೂ, ಪ್ರಪಂಚ ಸಂಸ್ಥೆ, ಯುನೆಸ್ಕೊ, ಅಂತಾರಾಷ್ಟ್ರೀಯ ವಿದ್ಯಾರ್ಥಿ ಸಂಘ, ಜಾಗತಿಕ ಜನವಾದೀ ಯುವ ಸಂಘಟನೆ ಇತ್ಯಾದಿ ಸಂಸ್ಥೆಗಳಿಂದಲೂ ಇಲ್ಲಿ ಅಭ್ಯಸಿಸುತ್ತಾರೆ.

ಪ್ರಾಗ್ ನಗರದಲ್ಲಿ ಯಾವಾಗಲೂ ವಿದೇಶೀ ವಿದ್ಯಾರ್ಥಿಗಳು ಇದ್ದೇ ಇರುತ್ತಾರೆ. ಅವರಿಗಾಗಿ ವಸತಿಗಳನ್ನೊದಗಿಸಲಾಗಿದೆ. ಉಪಾಹಾರ ಗೃಹಗಳಲ್ಲಿ ಅವರು ಊಟ ಮಾಡುತ್ತಾರೆ. ವಿಚಾರ ಗೋಷ್ಠಿಗಳಿಗೂ, ಪ್ರಾತ್ಯಕ್ಷಿಕೆಗಳಿಗೂ ಅವರು ಹಾಜರಾಗುತ್ತಾರೆ. ಚೆಕ್ ಆಹಾರ—ಪಾನೀಯಗಳು ಅವರಿಗೆ ರೂಢಿಯಾಗುತ್ತವೆ. ಹವೆಯೂ ಸಹ ಒಗ್ಗುತ್ತದೆ.

ಚೆಕೊಸ್ಲೊವಾಕಿಯದ ಪ್ರಾಧ್ಯಾಪಕರು ವಿದೇಶೀ ವಿದ್ಯಾರ್ಥಿಗಳಿಗೆ ವಿಶೇಷ ಗಮನವನ್ನೂ ಆಗಾಗ್ಗೆ ಅನೇಕ ಸಲ ಪರಾಮರ್ಶೆಗಳನ್ನು ಹೆಚ್ಚಾಗಿ ನೀಡುತ್ತಾರೆಂದೂ, ಕೆಲವರೊಂದಿಗೆ ಅವರು ಅತ್ಯಂತ ನಿಕಟ ಮಿತ್ರರಾಗುತ್ತಾರೆಂದೂ ಇತರ ಯೂರೋಪಿಯನ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಪರಿಚಯವುಳ್ಳವರು ಹೇಳುತ್ತಾರೆ. ಇಲ್ಲಿ ಅಧ್ಯಾಪಕರು ಇಂಗ್ಲಿಷ್, ಫ್ರೆಂಚ್ ಮಾತನಾಡುತ್ತಾರೆ. ಆದರೆ ವಿದೇಶೀ ವಿದ್ಯಾರ್ಥಿಗಳು ಕೆಲವೇ ತಿಂಗಳುಗಳ ವ್ಯಾಸಂಗದಿಂದ ಬೇಗ ಚೆಕ್ ಭಾಷೆಯನ್ನು ಕಲಿಯುತ್ತಾರೆ.

ವಿದ್ಯಾರ್ಥಿಗಳು ರಾಷ್ಟ್ರೀಯ ಸಂಘಗಳಲ್ಲಿ ಒಟ್ಟುಗೂಡುತ್ತಾರೆ, ಪರಸ್ಪರರಿಗೆ ನೆರವಾಗುತ್ತಾರೆ. ಸ್ವದೇಶಗಳೊಡನೆ ಗಾಢತರ ಸಂಪರ್ಕವನ್ನು ಬೆಳೆಸಿಕೊಳ್ಳುತ್ತಾರೆ. ತಮ್ಮ ಪ್ರಾಗ್ ಸ್ನೇಹ ಸದನದಲ್ಲಿ ಅವರು ಸಾಂಸ್ಕೃತಿಕ ಸಮಾವೇಶಗಳನ್ನೂ, ಪ್ರದರ್ಶನಗಳನ್ನೂ, ತಮ್ಮ ರಾಷ್ಟ್ರೀಯ ಉತ್ಸವ ಸಮಾರಂಭಗಳನ್ನೂ ಏರ್ಪಡಿಸುತ್ತಿರುತ್ತಾರೆ.

ವಿದ್ಯಾರ್ಥಿಗಳು ಚೆಕೊಸ್ಲೊವಾಕ್ ಜೀವನದಿಂದ ಪ್ರತ್ಯೇಕವಾಗಿರದೆ, ಅನೇಕ ಜನ ವಿದ್ಯಾರ್ಥಿ ಮಿತ್ರರನ್ನೂ ಪಡೆದಿರುತ್ತಾರೆ. ಅವರು ಇತರ ಪರಿವಾರಗಳಿಗೆ ಭೇಟಿ ಕೊಡುತ್ತಾರೆ. ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಾರೆ. ತಮ್ಮ ತಮ್ಮ ಅಭಿರುಚಿಗೆತಕ್ಕಂತೆ ಸಂಗೀತ, ನಾಟಕ ಸಮಾರಂಭಗಳಿಗೆ ಹೋಗುತ್ತಿರುತ್ತಾರೆ. ಅವರು ತಮ್ಮ ರಜಾಕಾಲದಲ್ಲಿ ಪರ್ಯಟನೆ ನಡೆಸುತ್ತಿರುತ್ತಾರೆ. ವಿಹಾರ ಶಿಬಿರಗಳಿಗೆ ಹೋಗುತ್ತಾರೆ ಅಥವಾ ಉತ್ಪಾದನೆಯ ಪ್ರಾತ್ಯಕ್ಷಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. ಅವರು ಸ್ವದೇಶಗಳಿಗೆ ಹೋಗಿ ಬಹುಕಾಲ ಕಳೆದ ಮೇಲೆಯೂ ಚೆಕೊಸ್ಲೊವಾಕಿಯನ್ನು ಮರೆಯದಿರುವುದು ಅತ್ಯಂತ ಸಂತೋಷದ ಸಂಗತಿ. ಮಾಜೀ ವಿದ್ಯಾರ್ಥಿಗಳು ತಮ್ಮ ಮಾಜೀ ಪ್ರಾಧ್ಯಾಪಕರೊಡನೆ, ತಮ್ಮ ಸಹಪಾಠಿಗಳೊಡನೆ ಪತ್ರ ವ್ಯವಹಾರದ ಮೂಲಕ ನಿರಂತರ ಸಂಪರ್ಕವನ್ನು ಸ್ಥಾಪಿಸಿಕೊಂಡಿರುತ್ತಾರೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 74/1966.

ಗಿರಿಯಮ್ಮ ಶೆಟ್ತಿ —ವಾದಿಳು.

ಮತ್ತು

ಮಹಾಬಲ ಶೆಟ್ಟಿ ಸಹಾ—ಪ್ರತಿವಾದಿರು.

ಇವರೊಳಗೆ,

ಈ ಮೂಲಕ ಸದ್ರಿ ದಾವೆಯ ಪ್ರತಿವಾದಿರು, ೨. ವಿಟ್ಠಲ ಶೆಟ್ಟಿ, ೬. ನಕೇಲ ಶೆಟ್ಟಿ, ೮. ಸಿದ್ದು ಶೆಟ್ಟಿ, ಬಾಬು ಶೆಟ್ಟಿರ ಮಕ್ಕಳು, ಕಾರ್ಕಳ ತಾಲ್ಲೂಕು ಮುಳ್ಳೆಡ್ಕ ಗ್ರಾಮದಲ್ಲಿರುವವರಿಗೆ ಈ ಮೂಲಕ ತಿಳಿಸುವದೇನೆಂದ್ರೆ.

ವಾದಿಳು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆ ನಿಮ್ಮ ಹಾಜರತಿ ಬಗ್ಗೆ ತಾರೀಕು 10–7–1966ಕ್ಕೆ ಇಟ್ಟಿದೆ. ಆದ್ದರಿಂದ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ದ್ವಾರ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವಾಯ್ ಮಾಡಿ ಮೇಲ್ಕಂಡ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court.

N. Mohandas Adyanthaya
Advocate for Plaintiff.

Karkala, 21—6—1966.

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಣಿನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1–75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ನಿರೂಪಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗಕ್ಕೆ

ಚಂದಾದಾರರಾಗಿ, ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಅಪಮೌಲ್ಯದಲ್ಲಿ ಅಲ್ಲವಾದುದೇನೂ ಇಲ್ಲ

(ನಾಲ್ಕನೇ ಪುಟದಿಂದ)

ಅಪಮೌಲ್ಯದ ನಂತರ ಉಂಟಾಗುವ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ವಿದೇಶಿ ನೆರವು ಅನುಕೂಲವಾದರೂ ವಿದೇಶಿ ನೆರವಿನ ಆಶ್ರಯದಿಂದ ಹೊರತಾಗಲು ಬಯಸುವುದೇ ಅಪಮೌಲ್ಯದ ಉದ್ದೇಶವಾಗಿದೆ. ನಾಣ್ಯದ ಅಪಮೌಲ್ಯ ಮಾಡುವ ಮೂಲಕ ವಿಶ್ವದ ಮಾರು ಕಟ್ಟೆಯಲ್ಲಿ ದೇಶದ ರಫ್ತು ವ್ಯಾಪಾರದ ಸ್ಪರ್ಧಾತ್ಮಕ ಶಕ್ತಿಯನ್ನು ಬಲಗೊಳಿಸಿ ಸ್ವಾವಲಂಬನೆಯನ್ನು ಸಾಧಿಸಬೇಕಾಗಿದೆ. ಈ ಅಪಮೌಲ್ಯದ ಉದ್ದೇಶವು ಈಡೇರಬೇಕಾದರೆ, ದೇಶದಲ್ಲಿಯ ಆರ್ಥಿಕ ವ್ಯವಸ್ಥೆ ಸ್ಥಿರಗೊಳ್ಳಬೇಕು. ಅಪಮೌಲ್ಯದಿಂದುಂಟಾದ ಬೆಲೆಗಳ ಏರಿಕೆಯನ್ನು ತಡೆಗಟ್ಟಲು ಯುಗೋಸ್ಲಾವಿಯದಲ್ಲಿ ಉತ್ಪಾದನೆಯ ಸುಧಾರಣೆ ಮತ್ತು ಆಡಳಿತ ಮಿತವ್ಯಯ ಕಾರ್ಯಗಳನ್ನು ರಾಷ್ಟ್ರದ ಪ್ರಮುಖ ಕಾರ್ಯಗಳೆಂದು ಪರಿಗಣಿಸಿ ಕಾರ್ಯಾಚರಣೆಯಲ್ಲಿ ತರಲಾಯಿತು.

ವಸ್ತುಗಳ ಪರಸ್ಪರ ವಿನಿಮಯದ ಮೂಲಕವೇ ಹೆಚ್ಚಾಗಿ ವ್ಯಾಪಾರ ನಡೆಯುವ ರಷ್ಯಾದಲ್ಲಿಯೂ ತನ್ನ ಅಪರೋಕ್ಷ ಆದಾಯದಲ್ಲಿ ಹೆಚ್ಚಳವನ್ನು ತರಲು ನಾಣ್ಯದ ಅಪಮೌಲ್ಯವನ್ನು ಮಾಡಲಾಯಿತು. ೧೯೫೦ರಿಂದ ರಷ್ಯಾದ ನಾಲ್ಕು ರೂಬಲ್ ನಾಣ್ಯಗಳು ಅಮೇರಿಕದ ಒಂದು ಡಾಲರಿಗೆ ಸಮವೆಂದು ಪರಿಗಣಿಸಲಾಗಿತ್ತು. ೧೯೬೧ನೇ ಜನವರಿ ೧ರಂದು 'ದುಬಾರಿ'ಯ ರೂಬಲನ್ನು ಜಾರಿಗೆ ತರಲಾಯಿತು. ಅದು ಹಳೆಯ ೧೦ ರೂಬಲ್ ಹಣಕ್ಕೆ ಸಮವಾಗಿತ್ತು. ಆದರೂ ಈ ಹೊಸ ರೂಬಲ್ ನಾಣ್ಯದ ಮೌಲ್ಯವನ್ನು ಚಿನ್ನದೊಡನೆ ಹೋಲಿಸಿದಾಗ ಇಳಿಸಲಾಗಿತ್ತು. ಅಂದರೆ ಹಳೆಯ ರೂಬಲ್ ಬೆಲೆಯು ೨೨೨ ಮಿಲಿಗ್ರಾಂ ಚಿನ್ನದ ಹತ್ತರಷ್ಟು ಮೌಲ್ಯದ ಬದಲು ೯೮೭ ಮಿ.ಲಿ ಗ್ರಾಂಗಳಿಗೆ ಹೊಸ ರೂಬಲನ್ನು ನಿಗದಿ ಮಾಡಲಾಯಿತು.

ಹೀಗೆ, ಅನೇಕ ರಾಷ್ಟ್ರಗಳು ನಾಣ್ಯಗಳ ಅಪಮೌಲ್ಯ ಮಾಡಿದ ನಂತರ ಆರ್ಥಿಕ ಭದ್ರತೆಯನ್ನು ದೃಢೀಕರಿಸಿರುವುದನ್ನು ಕಾಣಬಹುದು.

ಆದರೆ, ಯಾವುದೇ ಒಂದು ದೇಶದ ಬಾಕಿ ಹಣ ಪಾವತಿ ಸಂಬಂಧವಾದ ತೊಂದರೆಗಳ ನಿವಾರಣೆಗೆ ನಾಣ್ಯದ ಅಪಮೌಲ್ಯವು ಒಂದು ಸಿದ್ಧೌಷಧವೆಂದು ತಿಳಿಯಬಾರದು. ಉತ್ಪಾದನೆಯನ್ನು ಪುನರುಜ್ಜೀವಿಸಲು, ರಫ್ತು ವ್ಯಾಪಾರವನ್ನು ಹೊಸ ಹಾಗೂ ವಾಸ್ತವ ರೀತಿಯಲ್ಲಿ ನಡೆಸಲು ಸ್ಥಿರವಾದ ರಾಜಕೀಯ ವ್ಯವಸ್ಥೆ ಮತ್ತು ಹಣಕಾಸಿನ ಆಯವ್ಯಯವನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವ ಏರ್ಪಾಡು ಅತ್ಯವಶ್ಯಕವಾಗಿದೆ.

ಇಂಡೋನೇಷ್ಯ, ನಾಣ್ಯದ ಅಪಮೌಲ್ಯದಿಂದ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸಲು ಸಾಧ್ಯವಾಗಲಿಲ್ಲ ಎಂಬುದಕ್ಕೆ ಉದಾಹರಣೆಯಾಗಿದೆ. ಇಂಡೋನೇಷ್ಯದಲ್ಲಿ ೧೯೪೯ರಲ್ಲಿ ಸ್ವಾತಂತ್ರ್ಯವನ್ನು ಪ್ರತಿಷ್ಠಾಪನೆ ಮಾಡಿದ ನಂತರ, ೧೯೫೨ನೇ ಫೆಬ್ರುವರಿಯಲ್ಲಿ ಅಲ್ಲಿನ ರೂಪಿಯದ ಅಪಮೌಲ್ಯವಾಯಿತು. ಒಂದು ಡಾಲರಿಗೆ ೧೧.೪ ರೂಪಿಯಾ ಇದ್ದದ್ದು ೩೮.೭ ರೂಪಿಯಾಗೆ ಏರಿಸಿ, ಅಪಮೌಲ್ಯ ಮಾಡಲಾಯಿತು. ಆದರೆ, ಇಂಡೋನೇಷ್ಯದ ಆರ್ಥಿಕ ಪರಿಸ್ಥಿತಿಯನ್ನು ಅಪಮೌಲ್ಯವು ಉತ್ತಮಪಡಿಸಲಿಲ್ಲ. ಅಧಿಕ ಮಿಲಿಟರಿ ವೆಚ್ಚ ಮತ್ತು ಉತ್ಪಾದನೆಗೆ ಯೋಗ್ಯವಲ್ಲದ ಇತರ ವೆಚ್ಚಗಳಿಂದ ರೂಪಿಯಾದ ಬೆಲೆಯು ಇನ್ನೂ ಕುಗ್ಗಿ ಹೋಯಿತು. ಹಣದ ಉಬ್ಬರವಾಗಿ, ಕಳೆದ ಡಿಸೆಂಬರ್‌ನಲ್ಲಿ ತಂದ ಅಪಮೌಲ್ಯದ ಕಾರಣವಾಗಿ, ಅಮೆರಿಕದ ಒಂದು ಡಾಲರಿಗೆ ೧೦,೦೦೦ ರೂಪಿಯಾಗಳಂತೆ ವಿನಿಮಯ ಬೆಲೆಯನ್ನು ನಿರ್ಧರಿಸಲಾಯಿತು. ಈ ವ್ಯತ್ಯಾಸವನ್ನು ನೋಡಿ. ೧೯೫೨ರಲ್ಲಿ ೩೮ ರೂಪಿಯಾದ ವಿನಿಮಯ ಬೆಲೆಗೆ ಒಂದು ಡಾಲರು ಇದ್ದದ್ದು, ೧೦,೦೦೦ ರೂಪಿಯಾಕ್ಕೆ ಒಂದು ಡಾಲರ್ ವಿನಿಮಯದ ಬೆಲೆಯಾಗಿ ರೂಪಿಯಾದ ಬೆಲೆಯು ಅತ್ಯಂತ ಇಳಿಮುಖವಾಗಿರುವುದನ್ನು ಕಾಣಬಹುದು. ಈ ಕಾರಣವಾಗಿ ಅಂತಾರಾಷ್ಟ್ರೀಯ ಹಣಕಾಸಿನ ನಿಧಿ ಸಂಸ್ಥೆಯ ಬೆಂಬಲವೂ ಸಹಾಯವೂ ಇದಕ್ಕೆ ದೂರವಾಗಿ ಹೋಯಿತು. ೧೯೬೫ನೇ ಜನವರಿಯಲ್ಲಿ ವಿಶ್ವಸಂಸ್ಥೆಯಿಂದ ಹೊರಬಿದ್ದ ನಂತರ ಇಂಡೋನೇಷ್ಯವು ಆಗಸ್ಟ್ ತಿಂಗಳಲ್ಲಿ ಅಂತಾರಾಷ್ಟ್ರೀಯ ಹಣಕಾಸಿನ ನಿಧಿಯಿಂದ ಸದಸ್ಯತನವನ್ನು ಹಿಂತೆಗೆದುಕೊಂಡಿತು.

ಆರ್ಥಿಕಾಭಿವೃದ್ಧಿಯ ಹೋರಾಟದಲ್ಲಿ ಅಪಮೌಲ್ಯದಿಂದ ಸೋಲುಂಟಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರ, ಖಂಡಿತ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. C. 12/66

ಬಿ. ಎಮ್. ಮಹಮ್ಮದ್ — ವಾದಿ

ಮತ್ತು

ಸೀತು ಹೆಂಗಸು ಸಹಾ — ಎದುರು

ಬೆಳ್ತಂಗಡಿ ತಾಲ್ಲೂಕು ಕಳಿಯಾ ಗ್ರಾಮದಲ್ಲಿರುವ ಪೊಂಕ್ರ ನಾಯ್ಕನ ಮಗ ಬಾಬಣ್ಣನವರಿಗೆ—

ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ನಿಮ್ಮ ಮೇಲಿನ ದಾವೆಯು ತಾ. 8—7—1966ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನೀವು ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಯಾ ವಕೀಲರ ದ್ವಾರಾ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ದಾವೆಯಲ್ಲಿ ನಿಮ್ಮನ್ನು ಗೈರ್ಹಾಜರು ಮಾಡಿ ಮುಂದುವರಿಸಲಾದೀತು.

N. J. Kadamba
Advocate for Plaintiff

ಬೆಳ್ತಂಗಡಿ, 18—6—66.

(ಒಂಭತ್ತನೇ ಪುಟದಿಂದ)

ರಿಂದ ತೆಗೆದು ಬಿಡಲೂ ಬಹುದು.

ಇಂತಹ 'ಲೂಪ್' ಭಾರತದಲ್ಲಿ ಸಾರ್ವತ್ರಿಕ ಬಳಕೆಗೆ ಮುನ್ನಡೆ ಪಡೆದಿದೆ. ಕಾನಪುರದಲ್ಲಿ ಸಾರ್ವಜನಿಕ ಕಾರಖಾನೆಯೊಂದು ಪ್ರತಿದಿನ ೧೬,೦೦೦ ವಂಕಿಗಳನ್ನು ತಯಾರು ಮಾಡುತ್ತಿದೆ.

ಸಾರ್ವಜನಿಕರು ನೀಡಿದ ಸ್ವಾಗತವೂ ವಂಕಿಗೆ ಪ್ರೋತ್ಸಾಹಕವಿದೆ. ದೇಶದ ಎಲ್ಲ ಮೂಲೆಗಳಲ್ಲಿಯೂ ವಂಕಿ ಧಾರಣೆಯಾಗತೊಡಗಿದೆ. ಯೋಜಕರ ಗುರಿ ಯಿದು—ನಗರ ಪ್ರದೇಶದಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ೫೦ ದಂಪತಿಗಳು, ಹಳ್ಳಿ ಪ್ರದೇಶದಲ್ಲಿ ೨೩ ದಂಪತಿಗಳು ಸಂತಾನ ನಿರೋಧ ಕ್ರಮವನ್ನು ಸ್ವೀಕರಿಸುವಂತೆ ಮಾಡಬೇಕು.

ಈ ಗುರಿ ಸಿದ್ಧಿಸಿತೆಂದರೆ, ದೇಶದ ಜನಸಂಖ್ಯೆಯು ಮೇಲೊಂದು ಹತ್ತೋಟಿ ಇರುವಂತಾಗುವುದು—ಎರಡೇ ವರ್ಷಗಳಲ್ಲಿ.

'ಭಾರತ ಮುಂದಿರುವ ಕರ್ತವ್ಯ ಬಹು ದೊಡ್ಡದು. ನಮ್ಮ ಸ್ವರ್ಗವಾಸಿಗಳೂ ಗ್ರಾಮನಿವಾಸಿಗಳೂ ಎಲ್ಲ ಮಟ್ಟದ ಆದಾಯವಿರುವವರೂ ಎಲ್ಲಾ ಜಾತಿ—ಪಂಗಡದವರೂ ಹೆಂಗಸರೂ ಗಂಡಸರೂ ಜವಾಬ್ದಾರಿಯನ್ನರಿತವರು. ಹಾಗಾಗಿ ವಂಕಿಯು ಸಂತಾನ ನಿ

ಹಾಗೆ ಆಗಬೇಕೆಂಬುದೇನೂ ಇಲ್ಲ.

ಅಪಮೌಲ್ಯದಿಂದ ಆರ್ಥಿಕ ತೊಂದರೆಗಳನ್ನು ನಿವಾರಿಸುವ ವಾತಾವರಣವನ್ನು ಕಲ್ಪಿಸಲು ಸಾಧ್ಯವಿದೆ. ಹಾಗೂ ಆ ಮೂಲಕ ಸ್ವಾವಲಂಬಿಯಾಗಬಹುದು. ಈಗ ನಮ್ಮ ಮುಂದೆ ನಿಂತಿರುವ ಪ್ರಶ್ನೆ ಈಗ ನಡೆದಿರುವ ರೂಪಾಯಿಯ ಅಪಮೌಲ್ಯವು ಬ್ರಿಟನ್, ಫ್ರಾನ್ಸ್ ಮತ್ತು ಯುಗೋಸ್ಲಾವಿಯಗಳಲ್ಲಿ ಅಪಮೌಲ್ಯವಾದ ನಂತರ ಕಂಡು ಬಂದ ಹಾಗೂ ಭಾರತದಲ್ಲಿ ೧೯೪೯ರಲ್ಲಿ ನಡೆದ ಅಪಮೌಲ್ಯದ ನಂತರ ಕಂಡ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯು ಸುಧಾರಿಸುವುದೇ ಅಥವಾ ಇಂಡೋನೇಷ್ಯದಲ್ಲಿ ನಡೆದ ಹಾಗೆ, ಅಪಮೌಲ್ಯವು ಹಣ ದುಬ್ಬರವನ್ನು ತಡೆಹಿಡಿಯಲಾರದ ಎನ್ನುವುದೇ ಆಗಿದೆ.

ಭಾರತದ ರಾಜಕೀಯ ಪರಿಸ್ಥಿತಿಯು ಭದ್ರವಾಗಿದ್ದು, ಖಾಸಗಿ ಹಾಗೂ ಸರಕಾರಿ ವೆಚ್ಚವನ್ನು ಉತ್ಪಾದನೆಯ ಕಾರ್ಯದ ಕಡೆಗೆ ತಿರುಗಿಸಿ, ಅಂತಾರಾಷ್ಟ್ರೀಯ ಸೌಹಾರ್ದ ಭಾವನೆ ಮತ್ತು ಸಹಾಯವು ನಮಗೆ ದೊರಕುವುದಾದರೆ, ಈ ಪ್ರಶ್ನೆಗೆ ಅನುಕೂಲವಾದ ಉತ್ತರವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

(ಆಕಾಶವಾಣಿ ಕೃಪೆಯಿಂದ).

ಇದೀಗ ಪ್ರಕಟವಾಗಿದೆ!

ಮೇರಿ ಕೊಟ್ಟ ಬೆಂಡೋಲೆ

ಎಮ್. ಸದಾಶಿವರಾಯರ ಕಥಾಸಂಕಲನ.

ಮುನ್ನುಡಿ: ನಿರಂಜನ

ತ್ರಿವರ್ಣ ರಕ್ಷಾಪತ್ರ ಬೆಲೆ: ರೂ. ೧=೮೦

ಪ್ರತಿಗಳಿಗೆ—

ನವಯುಗ ಪ್ರೆಸ್, ಉಡುಪಿ

ಯಂತ್ರಣ ಸಾಧನವೆಂದು ಅವರು ಸ್ವೀಕರಿಸುವರೆಂಬ ವಿಶ್ವಾಸ ನನಗಿದೆ.'"

—ಪ್ರಧಾನಿ ಇಂದಿರಾ ಗಾಂಧಿಯವರ ಈ ವಿಶ್ವಾಸ ಸಫಲವಾಗದೆ ನಮಗೆ ಉನ್ನತಿಯಿಲ್ಲ ಎನ್ನುತ್ತಾರೆ, ವಿಜ್ಞರು.

ಬಿಜಾಪುರ ಸೈನಿಕ ಶಾಲೆ ವಿದ್ಯಾರ್ಥಿ ವೇತನ ವಿವರಗಳು

ಬಿಜಾಪುರದಲ್ಲಿರುವ ಸೈನಿಕ ಶಾಲೆಗೆ ಸೇರುವ ವಿದ್ಯಾರ್ಥಿಗಳಿಗೆ ಸರಕಾರದವರು ಧಾರಾಳವಾದ ವಿದ್ಯಾರ್ಥಿವೇತನಗಳನ್ನು ನೀಡುತ್ತಿದ್ದಾರೆ. 400ರೂ. ಮಾಸಿಕ ಆದಾಯ ವಿರುವವರ ಮಕ್ಕಳಿಗೆ ವರ್ಷವೊಂದಕ್ಕೆ 1,900 ರೂ. ವಿದ್ಯಾರ್ಥಿವೇತನ ಮತ್ತು 800ರೂ. ಬಟ್ಟೆಬರೆಗಾಗಿ ನೀಡಲಾಗುವುದು. ಹಾಗೆಯೇ 401ರೂ. ನಿಂದ 750ರೂ. ಆದಾಯದವರಿಗೆ 1,425ರೂ. ಗಳನ್ನು, ರೂ. 751ರೂ. ನಿಂದ 1000ರೂ.ನ ವರೆಗೆ 950ರೂ. ಗಳನ್ನೂ, ಮತ್ತು 1,001ರೂ. ನಿಂದ 1,200ರೂ. ನ ವರೆಗೆ 475ರೂ. ಗಳನ್ನು ವಿದ್ಯಾರ್ಥಿವೇತನವಾಗಿ ನೀಡಲಾಗುವುದು.

ಯೋಗ್ಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಸೌಲಭ್ಯಗಳನ್ನು ಪಡೆಯುವ ಪ್ರಯತ್ನದ ಮುಖಾಂತರ ಸೈನಿಕ ಶಾಲೆಗೆ ಸೇರಬೇಕೆಂದು ಕೋರಲಾಗಿದೆ.

ಉಡುಪಿ ಶ್ರೀ ಲಕ್ಷ್ಮೀವೆಂಕಟೇಶ ಮಂದಿರದಲ್ಲಿ ಜ್ಞಾನಯಜ್ಞ

ಶ್ರೀಗಳಾದ ಡಾ| ಪಿ. ರಾಘವೇಂದ್ರ ನಾಯಕ್ ಮತ್ತು ನಗರ ಸಭಾಪತಿ ಪಿ. ರಂಗನಾಥ ಶೆಣೈಯವರ ನೇತೃತ್ವದಲ್ಲಿ ದೊಡ್ಡಬಳ್ಳಾಪುರದ ಶ್ರೀ ಯು. ಶ್ರೀನಿವಾಸಆಚಾರ್ಯರಿಂದ ತಾ. 11—6—66ರಿಂದ 19—6—66ರ ತನಕ ಪ್ರತಿದಿನ ಸಂಜೆ ಶ್ರೀಮದ್ಭಗವದ್ಗೀತಾ ಭಕ್ತಿಯೋಗದ ಕುರಿತು ಆಧ್ಯಾತ್ಮಿಕ ಪ್ರವಚನ ಜರಗಿತು. ಮೊದಲಾಗಿ ಶ್ರೀ ಎ. ಲಕ್ಷ್ಮೀನಾರಾಯಣ ಕಿಣಿಯವರು ಪ್ರವಚನಕಾರರ ಪರಿಚಯ ಮಾಡಿ ಜ್ಞಾನಯಜ್ಞದ ಉದ್ದೇಶವನ್ನು ಹೇಳಿದರು. ಶ್ರೀ ಟಿ. ಕೆ. ವ್ಯಾಸರಾಯರು ಜ್ಞಾನಯಜ್ಞವನ್ನು ಉದ್ಘಾಟಿಸಿದರು. ತಾ. 18—6—66ರಲ್ಲಿ ಮಹಾಮಂಗಲಾಚರಣೆಯು ಜರಗಿದಾಗ ಶ್ರೀಮತಿಯರಾದ ಎ. ಶಾರದಾ ಕಾಮತ್ ಮತ್ತು ಎ. ಲೀಲಾಬಾಯಿ ಶರ್ಮಾ ಅವರು ಪ್ರವಚನ ಶ್ರವಣದಿಂದ ತಮಗಾದ ಆಧ್ಯಾತ್ಮಿಕ ಅನುಭವವನ್ನು ವಿವರಿಸಿ ಹೇಳಿದರು. ಕೊನೆಗೆ ಶ್ರೀ ಎ. ಲಕ್ಷ್ಮೀನಾರಾಯಣ ಕಿಣಿಯವರು ಕೃತಜ್ಞತಾ ಸಮರ್ಪಣೆ ಮಾಡಿದರು.

ತಾ. 19—6—66ರಲ್ಲಿ ಪ್ರವಚನಕಾರರು ದ್ರೌಪದೀ ವಸ್ತ್ರಾಪಹರಣದ ಕಥಾಭಾಗವನ್ನು ವಿವರಿಸಿದರು. ಕೊನೆಗೆ ನೆರೆದ ಸ್ತ್ರೀಯರು ಮಾನ್ಯ ಶ್ರೀನಿವಾಸಆಚಾರ್ಯ ದಂಪತಿಗಳಿಗೆ ಬೆಳ್ಳಿಯ ಶ್ರೀ ಕೃಷ್ಣನ ಪ್ರತಿಮೆಯನ್ನು ಕೆತ್ತನೆ ಕೆಲಸದಿಂದ ಕೂಡಿದ ಮಂಟಪದಲ್ಲಿರಿಸಿ, ಪಂಚ ಪ್ರಾಣ ದೀವಿಗೆಗಳ ಸಹಿತ ಸಮರ್ಪಿಸಿದರು. ಕೊನೆಗೆ ಕಲ್ಯಾಣಪುರ ನಾರಾಯಣ ಭಟ್ಟರು ಪ್ರವಚನಕಾರರ ಅಧ್ಯಾತ್ಮಜ್ಞಾನವನ್ನೂ ಸರಳ ಸೌಜನ್ಯಗಳನ್ನೂ ಶ್ಲಾಘಿಸಿ, ಮಾತನಾಡಿದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 23/66

ತಂಗಪ್ಪ ಸಹಾ — ವಾದಿಗಳು

ಕುಸುಮ — ಪ್ರತಿವಾದಿಗಳು

ಬೆಳ್ತಂಗಡಿ ತಾಲ್ಲೂಕು ಕೊಕ್ಕಡ ಗ್ರಾಮದ ಮಿಸ್ಕೂರಬೆಟ್ಟು ಎಂಬಲ್ಲಿರುವ ಶಿದ್ದಮ್ಮನ ಮಗಳು ಕುಸುಮ ಹೆಂಗಸುವಿಗೆ—

ಮೇಲಿನ ವ್ಯಾಜ್ಯವು ತಾ. 8—7—1966ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರು ಎಂತ ಮಾಡಿ ದಾವೆಯನ್ನು ಮುಂದುವರಿಸಲಾದೀತು. ಕೋರ್ಟು ಹುಕುಂ ಪ್ರಕಾರ.

N. J. KADAMBA
Advocate for Plaintiff

ಬೆಳ್ತಂಗಡಿ, 18—6—1966.

ಎಲ್ಲೆಲ್ಲಿ ಏನೇನು?

ಸೇವೆಗಾಗಿ ಸನ್ಮಾನ

ಉಡುಪಿ, ತಾ. 6—6—1966ಕ್ಕೆ ತನ್ನ ಇಪ್ಪತ್ತೈದು ವರುಷಗಳ ನಿರಂತರ ಸೇವೆಯನ್ನು ಸಲ್ಲಿಸಿದ ಸ್ಥಳೀಯ ಸಿಂಡಿಕೇಟ್ ಬ್ಯಾಂಕಿನ ರಥಬೀದಿ ಶಾಖೆಯ ಮೆನೇಜರ್ ಶ್ರೀ ಕೆ. ರಂಗಣ್ಣಭಟ್ಟರನ್ನು ಸನ್ಮಾನಿಸಲೆಂದು ತಾ. 16—6—1966ರಂದು ಶ್ರೀ ನಾರಾಯಣನ್ ಜಿ.—ಇವರ ಅಧ್ಯಕ್ಷತೆಯಲ್ಲಿ ಶಾಖೆಯ ಸಿಬ್ಬಂದಿಯವರು ಗೌರವದ ಸಭೆಯನ್ನು ಏರ್ಪಡಿಸಿದ್ದರು. ಅಸಿಸ್ಟೆಂಟ್ ಮೆನೇಜರ್ ಶ್ರೀ ಪಿ. ರಾಮಚಂದ್ರ ಶೆಣೈಯವರು ತಮ್ಮ ಸ್ವಾಗತ ಭಾಷಣದಲ್ಲಿ ಶ್ರೀ ಭಟ್ಟರ ಸೇವೆಯ ಮಹತ್ವವನ್ನು ಹೇಳಿದರು. ಸಭಿಕರಲ್ಲಿ ಶ್ರೀ ವಿ. ಕೃಷ್ಣ, ಎಸ್. ಶಾಂತಿ ಮತ್ತು ಕೆ. ರಮೇಶ ಪೈಯವರು ಮಾತಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ಭಟ್ಟರ ಸೇವೆಯನ್ನು ಶ್ಲಾಘಿಸಿ ಅವರಿಂದ ಮತ್ತೂ ಹೆಚ್ಚಿನ ಸೇವೆ ಸಲ್ಲುವಂತೆ ಹಾರೈಸಿದರು.

ಆನಂತರ ಶ್ರೀ ರಂಗಣ್ಣಭಟ್ಟರು ಮಾತಾಡುತ್ತಾ ಪಕ್ಷ ಪಾತವಿಲ್ಲದ ಪ್ರಾಮಾಣಿಕ ರೀತಿಯ ಸೇವೆಯಿಂದ ಮಾತ್ರ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿ ಸಾಧ್ಯವೆಂದು ಹೇಳಿದರು. ಕೊನೆಯಲ್ಲಿ ಅಸಿಸ್ಟೆಂಟ್ ಮೆನೇಜರ್ ಶ್ರೀ ರಮೇಶ ಪೈಯವರು ಧನ್ಯವಾದಗಳನ್ನರ್ಪಿಸಿದರು.

(ಮೂರನೇ ಪುಟದಿಂದ)

ಸರಕಾರಿ ಹಾಗೂ ಸರಕಾರೇತರ ಶಾಲೆಗಳ ಅಧ್ಯಾಪಕರ ಸಂಪ. ಉಪ್ಪೇಕ್ಷಣೀಯ. ಬಂಗಾಳದ ನಂತರ ಅಧ್ಯಾಪಕರು ಶಿಕ್ಷಿಗೆ ಮುಂದುವರಿದ ದಾಖಲೆ ಕೇರಳದಲ್ಲೇ ಸರಿ. ಶಿಕ್ಷಣವು ರಾಜ್ಯ ಸರಕಾರಕ್ಕೆ ಸಂಬಂಧಿಸಿದ ವಿಭಾಗ, ಆದುದರಿಂದ, ಸಮಾಜ ನಿರ್ವಾಹಕರು ಸಮಾಜ ನಿರ್ಮಾಪಕರ ಸ್ಥಿತಿಗತಿ ಸುಧಾರಣೆಗಳನ್ನು ತೀವ್ರವಾಗಿ ಕೈಕೊಳ್ಳಲಿ; ಇಲ್ಲವಾದರೆ, ಇಂದು ಕೇರಳದಲ್ಲಿ ನಡೆದುದು ನಾಳೆ ಕರ್ನಾಟಕದಲ್ಲೂ ಕ್ರಾಂತಿ ಮಾಡಿಸಬಲ್ಲುದು. ಕ್ರಾಂತಿಮಯ ವಾತಾವರಣದ ಕ್ರಾಂತಿ ಶಿಕ್ಷಣ ಮಾತ್ರ ದೂರೆತೀತು. ಮತ್ತೆ ಶಾಂತಿ ಸ್ಥಾಪನೆ ಹೇಗಾದೀತು?

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 140/1966

ರುಕ್ಮಪ್ಪ ಕಾಂಚನ್, ಸೇಸಿ ಹೆಂಗ್ಸಿನ ಮಗ, ಮಂಗಳೂರು ತಾಲ್ಲೂಕು ಬಪ್ಪನಾಡ ಗ್ರಾಮಸ್ಥ.

—ವಾದಿ

ಮತ್ತು

ನರಸಿಂಹ ಮಯ್ಯ, ಶ್ರೀನಿವಾಸ ಮಯ್ಯರ ಮಗ. ಮಂಗಳೂರು ತಾಲ್ಲೂಕು ಕಿಲ್ಪಾಡಿಗ್ರಾಮ.

—ಪ್ರತಿವಾದಿ

ಇವರೊಳಗೆ

ವಾದಿಯು, ನಿಮ್ಮಿಂದ ಇಯದೇ ಕಳದಕ್ರೋಧಿ ಸಂವತ್ಸರದ (1964—1965) ಬಾಬ್ತು ಬಸ ಚಾಲಗೇಣಿ ಗೇಣಿ ಬಾಕಿ ರೂಪಾಯಿ 29_940 ಬರಮಾಡುವರೆ ನಿಮ್ಮ ಮೇಲೆ ಮಾಡಿದ ಈ ದಾವೆಯು, ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 18—7—1966ಕ್ಕೆ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಡಲಾಗಿದೆ. ಸದರಿದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ, ನೀವು ಸ್ವತಃ ಅಥವ ವಕೀಲರ ಮುಖಾಂತರ ಹಾಜರಾಗಿ, ಜ್ಯಾಹೀರು ಮಾಡಿಕೊಳ್ಳಬಹುದಾಗಿಯೂ ತಪ್ಪಿದರೆ, ಸದರಿ ದಾವೆಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ, ಕೋರ್ಟು ಹುಕುಂ ಪ್ರಕಾರ, ಈ ಮೂಲಕ ತಿಳಿಯಪಡಿಸಲಾಗುತ್ತದೆ.

S. Rajagopal Achar
Advocate for Plaintiff

Karkala, ತಾರೀಕು 25—6—66.

ಎಸ್. ಎಸ್. ಕೆ. ವಿದ್ಯಾವರ್ಧಕ ಸಂಘ, ಗದಗ.

ನಮ್ಮ ಸಂಘದಿಂದ ಲೋನ್‌ಸ್ಕಾಲರ್‌ಶಿಪ ಪಡೆಯುತ್ತಿದ್ದು ನಮ್ಮ ಸಮಾಜದ ವಿದ್ಯಾರ್ಥಿ ವಿದ್ಯಾರ್ಥಿನಿಯರು, ನಿರ್ದಿಷ್ಟ ಪಡಿಸಿದ ಅರ್ಜಿ ಫಾರ್ಮುಗಳನ್ನು ತುಂಬಿ ಗೌರವ ಕಾರ್ಯದರ್ಶಿಗಳ ಕಡೆಗೆ ದಿನಾಂಕ ೧೫-೭-೧೯೬೬ರೊಳಗೆ ಪೂರ್ಣ ಮಾಹಿತಿಯೊಂದಿಗೆ ಕಳಿಸತಕ್ಕದ್ದು. ಅರ್ಜಿ ಫಾರ್ಮುಗಳನ್ನು ಪತ್ರದ್ವಾರಾ ಇಲ್ಲವೆ ಪ್ರತ್ಯಕ್ಷವಾಗಿ ಗೌರವ ಕಾರ್ಯದರ್ಶಿಗಳವರಿಂದ ಪಡೆಯಬಹುದು. ಅಪೂರ್ಣ ಮಾಹಿತಿಇದ್ದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಪೂರ್ಣಪ್ರಜ್ಞ ವಿದ್ಯಾಪೀಠ

ಬೆಂಗಳೂರು ೧೫:— ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದ ಕುಲಪತಿಗಳಾದ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಈ ಕೆಳಗಿನಂತೆ ಪ್ರಕಟಪಡಿಸಿದ್ದಾರೆ.

ಅಖಿಲ ಭಾರತ ಮಾಧ್ವ ಮಹಾಮಂಡಲದ ಬೆಂಗಳೂರಿನಲ್ಲಿ ಕಳೆದ ಹತ್ತು ವರುಷಗಳಿಂದ ಸ್ಥಾಪಿತವಾಗಿ ನಡೆದುಕೊಂಡು ಬಂದಿರುವ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಈ ವರ್ಷದಲ್ಲಿಯೂ ಕೆಲವು ಹೊಸ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದು.

ಈ ವಿದ್ಯಾಪೀಠದಲ್ಲಿ ಹನ್ನೆರಡು ವರ್ಷ ಗುರುಕುಲ ಪದ್ಧತಿಗೆ ಅನುಸಾರವಾಗಿ ಸಂಸ್ಕೃತ ಸಾಹಿತ್ಯ, ವೇದಾಂತ, ತರ್ಕ, ಶಾಸ್ತ್ರಗಳ ಅಧ್ಯಯನವನ್ನು ಮುಖ್ಯವಾಗಿ ಮಾಡಿಸಲಾಗುವದು. ವ್ಯಾಕರಣ, ಜ್ಯೋತಿಷ್ಯ, ಮೀಮಾಂಸಾ, ಪೌರೋಹಿತ್ಯ, ಇಂಗ್ಲಿಷ್, ಗಣಿತ, ವಿಜ್ಞಾನ ಮುಂತಾದ ಇತರ ವಿಷಯಗಳನ್ನು ವಿದ್ಯಾರ್ಥಿಗಳ ಅಭಿರುಚಿಯೋಗ್ಯತೆ ಮುಂತಾದವುಗಳನ್ನು ಅನುಲಕ್ಷಿಸಿ ಶಿಕ್ಷಣವನ್ನೀಯಲಾಗುವದು.

ವಿದ್ಯಾರ್ಥಿಗಳಿಗೆ ಉತ್ತಮ ಹಾಗೂ ಹಿತಕರವಾದ ಭೋಜನ, ವಸತಿ ಮತ್ತು ಇತರ ಸೌಕರ್ಯಗಳನ್ನು ಉಚಿತವಾಗಿ ನೀಡಲಾಗುವುದಲ್ಲದೆ ಬೇಸಿಗೆಯ ರಜೆಯಲ್ಲಿ ಮನೆಗೆ ಹೋಗಿ ಬರುವ ದಾರೀ ಖರ್ಚನ್ನು ಕೊಡಲಾಗುವುದು. ವಾರ್ಷಿಕ ಹಾಗೂ ಷಾಣ್ಮಾಸಿಕ ಪರೀಕ್ಷೆಯ ಫಲಿತಾಂಶಗಳನ್ನು ಅನುಲಕ್ಷಿಸಿ ಶಿಷ್ಯವೇತನ ಹಾಗೂ ಸಂಭಾವನೆಗಳನ್ನು ಕೊಡಲಾಗುವದು.

ವಿದ್ಯಾರ್ಥಿಗಳಿಗೆ ಶಾಸ್ತ್ರಾಭ್ಯಾಸದ ನಂತರ ಗೌರವಯುತ ಜೀವನವನ್ನು ನಡೆಸಲು ಬೇಕಾದ ಆರ್ಥಿಕ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಗುರುತರವಾದ ಜವಾಬದಾರಿಯನ್ನು ವಿದ್ಯಾಪೀಠವು ಹೊತ್ತಿದೆ. ಸಂಸ್ಕೃತ ಹಾಗೂ ಶಾಸ್ತ್ರಾಭ್ಯಾಸವನ್ನು ಮಾಡಿಸಬೇಕೆಂದು ಬಯಸುವ ಪಾಲಕರು, ತಂದೆ ತಾಯಿಗಳು ಹಾಗೂ ಅಭ್ಯಸಿಸಬೇಕೆಂದು ಅಪೇಕ್ಷಿಸುವ ವಿದ್ಯಾರ್ಥಿಗಳು ೧೯೬೬ನೇ ಜುಲೈ ನಾಲ್ಕನೇ ತಾರೀಖಿನೊಳಗಾಗಿ ನಿರ್ದಿಷ್ಟಪಡಿಸಿದ ಅರ್ಜಿಪತ್ರಿಕೆಯಲ್ಲಿ ಮಾಹಿತಿಯನ್ನು ತುಂಬಿ ಕಳಿಸತಕ್ಕದ್ದು.

ಅರ್ಜಿಪತ್ರಿಕೆಗಳಿಗೆ ಹಾಗೂ ಹೆಚ್ಚಿನ ವಿವರಗಳಿಗೆ ಸಮಕ್ಷಮ ಇಲ್ಲವೆ ಪತ್ರ ಮೂಲಕ ಶ್ರೀ ಅನಂತ ತಪಸ್ವಿ, ವ್ಯವಸ್ಥಾಪಕ ಕಾರ್ಯದರ್ಶಿ, ಅಖಿಲ ಭಾರತ ಮಾಧ್ವಮಹಾಮಂಡಲ, ಪೂರ್ಣಪ್ರಜ್ಞ ನಗರ; ಬೆಂಗಳೂರು—4 ಇವರೊಡನೆ ಸಂಪರ್ಕ ಬೆಳೆಸಬೇಕು.

'ಜೀವನ ಕುಂಕುಮ'ದ ಉದ್ಘಾಟನೆ

ಕಿನ್ನಿಗೋಳಿ, ಶ್ರೀ ಸೊಡಂಕೂರು ತಿರುಮಲೇಶ್ವರ ಭಟ್ಟರಿಂದ ರಚಿಸಲ್ಪಟ್ಟು ಯುಗಪುರುಷ ಪ್ರಕಟನಾಲಯದಿಂದ ಪ್ರಕಟವಾದ ಜೀವನ ಕುಂಕುಮದ ಉದ್ಘಾಟನಾ ಸಮಾರಂಭವು ತಾ. 19—6—66ರಂದು ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಪದ್ಮನಾಭ ಸೋಮಯಾಜಿಯವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಕೊ. ಅ. ಉಡುಪರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಕೆ. ಗಣೇಶ ಮಲ್ಯರು ಅಭಿವಂದನೆ ಸಲ್ಲಿಸಿದರು.

ಹೈಸ್ಕೂಲ್ ಉದ್ಘಾಟನೆ

ಕಲ್ಲಮುಂಡ್ಕೂರು, ಮೂಡಬಿದರೆಯ ಮಹಾವೀರ ವಿದ್ಯಾವರ್ಧಕ ಸಂಘದವರಿಂದ ಕಲ್ಲಮುಂಡ್ಕೂರಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಸರ್ವೋದಯ ಹೈಸ್ಕೂಲನ್ನು ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು ಇತ್ತೀಚೆಗೆ ಉದ್ಘಾಟಿಸಿ ದ. ಕ. ಜಿಲ್ಲೆಯ ವಿದ್ಯಾಸಂಸ್ಥೆಗಳು ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿ ಹೊಸ ಹೈಸ್ಕೂಲಿಗೆ ಶುಭಕೋರಿದರು. ಮಹಾವೀರ ವಿದ್ಯಾವರ್ಧಕ ಸಂಘದ ಜತೆ ಕಾರ್ಯದರ್ಶಿ ಶ್ರೀ ಜಿ. ವಾಸುದೇವ ಪೈಯವರು ಸ್ವಾಗತಭಾಷಣ ಮಾಡಿದರು. ವಿಧಾನ ಸಭಾ ಸದಸ್ಯರಾದ ಶ್ರೀ ಎಸ್. ಡಿ. ಸಾಮ್ರಾಜ್ಯ, ಡಾ|ಸಂಜೀವನಾಥ ಐಕಳ್, ಶಾಲಾ ಮುಖ್ಯೋಪಾಧ್ಯಾಯ ಶ್ರೀ ವಿ. ಜೆ. ಪ್ರಭು ಮೊದಲಾದವರು ಮಾತನಾಡಿ ಶಾಲೆಯ ಅಭಿವೃದ್ಧಿಗಾಗಿ ಊರವರು ಸಹಕರಿಸಿ ದುಡಿಯಬೇಕೆಂದರು. ಅಂತ್ಯದಲ್ಲಿ ಕಾರ್ಕಳ ತಾಲೂಕ್ ಬೋರ್ಡ್ ಅಧ್ಯಕ್ಷ ಶ್ರೀ ಎನ್. ಮೋಹನ್‌ದಾಸ್ ಅದ್ಯಂತಾಯರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ 1 ಗ್ರೇಡ್ ಕಾಲೇಜಿನ ಉದ್ಘಾಟನೆ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನಲ್ ಟ್ರಸ್ಟ್ (ರಿಜಿಸ್ಟರ್ಡ್) ಇದರ ವತಿಯಿಂದ ತಾ| 20—6—66ರಂದು ಎಜಿರೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ 1ಗ್ರೇಡ್ ಕಾಲೇಜನ್ನು ಉಜಿರೆ ಶ್ರೀ ಸಿದ್ಧವನದಲ್ಲಿ ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರು. ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಶ್ರೀ ಆರ್. ಎಮ್. ಪಾಟೀಲ್ ಅವರು ಅಧ್ಯಕ್ಷತೆ ವಹಿಸಿದ್ದರು. ಎಜುಕೇಶನಲ್ ಟ್ರಸ್ಟಿನ ಅಧ್ಯಕ್ಷ ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆಯವರು ಸ್ವಾಗತಿಸುತ್ತಾ, ಬೆಳ್ತಂಗಡಿ ತಾಲೂಕಿನಲ್ಲಿ ಎಂಟು ಹೈಸ್ಕೂಲ್‌ಗಳಿದ್ದು ಸುಮಾರು 200 ವಿದ್ಯಾರ್ಥಿಗಳು ವರ್ಷಪ್ರತಿ ಎಸ್. ಎಸ್. ಎಲ್. ಸಿ. ಪಾಸಾಗುತ್ತಿದ್ದಾರೆಂದೂ ಅವರಿಗೆ ಈ ಕಾಲೇಜು ನೆರವಾಗಲಿದೆಯೆಂದು ಹೇಳಿದರು. ಉದ್ಘಾಟಕ ಶ್ರೀ ನಿಜಲಿಂಗಪ್ಪನವರು ಮನೋಹ್ಲಾದಕರ ವಾತಾವರಣವಿರುವ ಸಿದ್ಧವನದಲ್ಲಿ ಸ್ಥಾಪಿಸಲಾದ ಈ ಕಾಲೇಜಿನ ವಿದ್ಯಾರ್ಥಿಗಳೂ ತಮ್ಮ ಸಿದ್ಧಿ ಸಾಧನೆಯಲ್ಲಿ ಜಯಪಡೆಯಲೆಂದು ಹಾರೈಸಿದರು. ಕಾಲೇಜು ಕಟ್ಟಡಗಳಿಗೆ ಹೆಚ್ಚಿನ ಹಣ ವ್ಯಯಿಸದೆ ಉತ್ತಮ ಪುಸ್ತಕ ಭಂಡಾರ ಹಾಗೂ ಇತರ ಉಪಕರಣಗಳನ್ನು ಒದಗಿಸುವಲ್ಲಿ ವಿಶೇಷ ಗಮನ ಕೊಡಬೇಕೆಂದೂ ಹೇಳಿ ಧರ್ಮದರ್ಶಿ ಶ್ರೀ ರತ್ನವರ್ಮ ಹೆಗ್ಗಡೆಯವರ ಆಸಕ್ತಿಯನ್ನು ಶ್ಲಾಘಿಸಿದರು. ಅಧ್ಯಕ್ಷ ಶ್ರೀ ಪಾಟೀಲರು ಸಂದರ್ಭೋಚಿತವಾಗಿ ಮಾತಾಡಿ ನೂತನ ಕಾಲೇಜಿಗೆ ಶುಭಕೋರಿತು.

ಮಹಾವೀರ ಕಾಲೇಜಿನ ಹೊಸ ಕಟ್ಟಡದ ಪ್ರಾರಂಭೋತ್ಸವ

ಮೂಡಬಿದ್ರೆ, ಇದೇ ತಾ. 20ರಂದು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಸ್ಥಳೀಯ ಆಡಳಿತ ಮಂತ್ರಿ ಶ್ರೀ ಆರ್. ಎಮ್. ಪಾಟೀಲರ ಅಧ್ಯಕ್ಷತೆಯಲ್ಲಿ ಮೂಡಬಿದ್ರೆ ಮಹಾವೀರ ಕಾಲೇಜಿನ ಹೊಸಕಟ್ಟಡವನ್ನು ದ್ಘಾಟನಾ ಸಮಾರಂಭವನ್ನು ನೆರವೇರಿಸಿದರು.

ಆರಂಭದಲ್ಲಿ ಪ್ರಿನ್ಸಿಪಾಲ್ ಆರ್. ಎಸ್. ಮಾಧವರಾಯರು ವರದಿ ಮತ್ತು ಸಂದೇಶಗಳನ್ನು ಓದಿದರು. ಡಾ| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಕಾಲೇಜ್ ಸ್ಥಾಪನೆಯ ಬಗ್ಗೆ ಮೂಡಬಿದಿರೆಯ ಮಹಾಜನರು ತೋರಿದ ಉತ್ಸಾಹವನ್ನು ಅಭಿನಂದಿಸಿದರು. ಸ್ಪೀಕರ್ ಶ್ರೀ ವೈಕುಂಠ ಬಾಳಿಗರು ಪ್ರತಿಬೋಂದು ಕಾರ್ಯಕ್ಕೂ ಸರಕಾರವನ್ನು ಆಶ್ರಯಿಸುವ ಪದ್ಧತಿ ಸರಿಯಲ್ಲವೆಂದರು. ಉದ್ಘಾಟಕರು ಆಹಾರ ಸಮಸ್ಯೆಯು ಭೀಕರವಾಗಿರುವ ಇಂದಿನ ದಿನಗಳಲ್ಲಿ ಕೃಷಿ ಉತ್ಪನ್ನವನ್ನು ಹೆಚ್ಚಿಸಬಲ್ಲ ವ್ಯವಸಾಯ ತಜ್ಞರನ್ನು ತಯಾರಿಸಬಲ್ಲ ವಿದ್ಯಾಸಂಸ್ಥೆಗಳು ಹೆಚ್ಚಾಗಬೇಕೆಂದೂ ಮೂಡಬಿದಿರೆಯವರ ಸಾಹಸವನ್ನು ಕೊಂಡಾಡಿದರು.

ಅಧ್ಯಕ್ಷರು ಮಾತನಾಡುತ್ತ ಕಾಲೇಜಿಗೆ ಸರ್ವ ಯಶ ಕೋರಿದರು. ಶ್ರೀ ಎಸ್. ಡಿ. ಸಾಮ್ರಾಜ್ಯ, ಎಂ. ಎಲ್. ಎ. ಅವರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

O. S. 350/1963

ವಾದಿ— ಕಾವೇರಮ್ಮ

ಪ್ರತಿವಾದಿರು; 1. ಸಂಕಮ್ಮ ಹೆಗ್ಗಡ್ತಿ, 2. ಕೃಷ್ಣಯ್ಯ ಹೆಗ್ಡೆ, 3. ರಾಮಣ್ಣ ಹೆಗ್ಡೆ, 4. ನಾರಾಯಣಹೆಗ್ಡೆ, 5. ಜಲಜಾಕ್ಷಿ, 6. ಪನಜಾಕ್ಷಿ.

ಉಡುಪಿ ತಾಲ್ಲೂಕು ಹೆಗ್ಗುಂಜೆ ಗ್ರಾಮದಲ್ಲಿರುವ ಅಂತಯ್ಯ ಹೆಗ್ಡೇರ ಮಕ್ಕಳು ರಾಮಣ್ಣ ಹೆಗ್ಡೆ| ನಾರಾಯಣ ಹೆಗ್ಡೆ| ಸಂಕಮ್ಮ ಹೆಗ್ಗಡ್ತಿ ಮಗಳು ವನಜಾಕ್ಷಿ| ಕೂಡಾ 3ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿರಿಂದ ವಾದಿಳಿಗೆ ಬರತಕ್ಕ ಮೂಲಗೇಣಿ ಬಾಕಿ ಬರಮಾಡಿಕೊಳ್ಳುವರೆ ವಾದಿಳು ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಮೇಲಿನ ದಾವೆಯು ತಾ. 6—7—1966ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು; ಎಂಬ ಸಂಗ್ತಿ ತಿಳಿಯಪಡ್ಸಿಯದೆ.

(Sd.)N. S. Parameshwaraih
Advocate for Pltf.

Date 19—6—66, Coondapoor.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. 88/1966

ವಿಟಲ ಚರ್ಡಪ್ಪ ಶ್ಯಾನುಭಾಗ— ವಾದಿ.

ಕಾಶಿ ಹೆಂಗ್ಸು ವಗೈರಾ — ಪ್ರತಿವಾದಿರು.

1 ಕಾಶಿ ಹೆಂಗ್ಸು,—ಲಕ್ಷ್ಮಿ ಹೆಂಗ್ಸಿನ ಮಗಳು, 4 ಸೂರು ಮ್ಯೊಲಿ. 6 ಪೊಮ್ಮಕ್ಕ, ಶೇಶಿ ಹೆಂಗ್ಸಿನ ಮಕ್ಕಳು.

ಉಡುಪಿ ತಾಲೂಕು ನಡಿಸಾಲಿಗ್ರಾಮದ ಪಡುಬಿದ್ರಿಯಲ್ಲಿರುವವರು—

ಸದ್ರಿ ಪ್ರತಿವಾದಿಂದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ.

ನೀವು ಪ, ನಿಕ್ಕ ಪ್ರತಿವಾದಿರು ವಾದಿಯ ವಳಿಗೆ ಚಾಲಗೇಣಿ ಹಕ್ಕಿನಿಂದ ಅನುಭವಿಸಿಬರುವ ನಡಿಸಾಲಿಗ್ರಾಮದ ಆಸ್ತಿ ಬಾಬ್ತು ವಾದಿಗೆ ನಿಮ್ಮಿಂದ ಕಳದ ಕ್ರೋಧಿ ಸಂ|ರದ ಅಂತ್ಯಕ್ಕೆ ಬರತಕ್ಕ ಚಾಲಗೇಣಿ ಗೇಣಿ ಬಡ್ಡಿ ಕೂಡ ರೂಪಾಯಿ 181-40 ಕ್ಕೆ ವಾದಿಯು ದಾಖಲ್ಲು ಮಾಡಿದ ಸದ್ರಿ ದಾವೆಯು ತಾರೀಕು 13—7—1966ಕ್ಕೆ ನಿನಗೆ ಆಖೈರ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉಪಾಯರಣೆಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ್ ಹಾಜ್ರಿಯಲ್ಲಿದಾವಾ ತೀರ್ಮಾನ ವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiff

ಕಾರ್ಕಳ, 25—6—66

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. 87/1966

ವಿಟಲಚರ್ಡಪ್ಪ ಶ್ಯಾನುಭಾಗ —ವಾದಿ.

ಕಾಶಿ ಹೆಂಗ್ಸು ವಗೈರಾ —ಪ್ರತಿವಾದಿರು.

1. ಕಾಶಿ ಹೆಂಗ್ಸು, ಲಕ್ಷ್ಮಿ ಹೆಂಗ್ಸಿನ-ಮಗಳು, 4. ಸೂರಮ್ಮೊಲಿ, 6. ಪೊಮ್ಮಕ್ಕ-ಶೇಶಿ ಹೆಂಗ್ಸಿನ ಮಕ್ಕಳು.

ಉಡುಪಿತಾಲ್ಲೂಕು ನಡಿಸಾಲಿಗ್ರಾಮ ಪಡುಬಿದ್ರಿಯಲ್ಲಿರುವವರು—

ಸದ್ರಿ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ.

ನೀವು ವ ನಿಕ್ಕ ಪ್ರತಿವಾದಿರು ವಾದಿವಳಿಗೆ ಚಾಲಗೇಣಿ ಹಕ್ಕಿನಿಂದ ಅನುಭವಿಸಿಬರುವ ನಡಿಸಾಲಿ ಗ್ರಾಮದ ಆಸ್ತಿ ಬಾಬ್ತು ವಾದಿಗೆ ನಿಮ್ಮಿಂದ ಕಳದ ಕ್ರೋಧಿ ಸಂ|ರದ ಅಂತ್ಯಕ್ಕೆ ಬರತಕ್ಕ ಚಾಲಗೇಣಿ ಗೇಣಿಬಡ್ಡಿ ಕೂಡಾ ರೂ. 354 .45ಕ್ಕೆ ವಾದಿಯು ದಾಖಲ್ಲುಮಾಡಿದ ಸದ್ರಿ ದಾವೆಯು ತಾ. 13—7—1966ಕ್ಕೆ ನಿಮಗೆ ಆಖೈರ ನೋಟೀಸಿಗೆ ಇಟ್ಟದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉಪಾಯರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ್ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiff

ಕಾರ್ಕಳ, 25—6—66.

ರೈತ ಮುರುಗ

(ಎರಡನೇ ಪುಟದಿಂದ)

ವಳು, ನಮ್ರಳು ಹಾಗೂ ಕಷ್ಟಪಡುತ್ತಿರುವ ಪ್ರಪಂಚಕ್ಕೆ ಪ್ರೇಮಮಯ ದೀಪ ವಿಧವೆಯು ಬಟ್ಟೆಗಳ ಮೇಲಿನ ಪವಿತ್ರ ಪ್ರಕಾಶ ಆಕೆಯನ್ನು ಆವರಿಸಿಕೊಂಡಿದೆ. ಆಕೆ ಪವಿತ್ರಳಿದ್ದಾಳೆ."

'ಹೌದು ಪ್ರಭೋ! ಈಗ ಆಕೆ ಅಲಂವಂತಿಯು ರಾಣಿಯೇ ಆದರೂ ಬಹಳ ಸರಳ ಹಾಗೂ ಉತ್ತಮ ಸ್ವಭಾವದವಳಿದ್ದಾಳೆ.'

ಜಾನಕಿಯು ತನ್ನ ಎಂದಿನ ಮಾತುಗಳನ್ನೇ ಆಡಿದಳು.

ತನ್ನದೇ ಆದ ಭಾವನಾ ಪ್ರವಾಹದಿಂದ ಕೊಚ್ಚಿ ಕೊಂಡೊಯ್ಯಲ್ಪಟ್ಟಿದ್ದ ರಾಮು ಮಾತನ್ನು ಮುಂದುವರಿಸಲಿಲ್ಲ.

— ೪೩ —

ನಾಗಲಾಪುರಂ ಪರ್ವತದ ಬುಡದಲ್ಲಿ ಆರ್ಣಿ ನದಿಯು ಬಯಲಿಗೆ ಹೊರಡುವಲ್ಲಿ, ಹಲವಾರು ಎಕ್ರೆ ವಿಶಾಲ ಖಾಲಿ ನೆಲವಿದೆ. ಬಿಳಿ ಹಾಗೂ ಹಳದಿ ಕೋಮಲ, ಚಿಕ್ಕ ಹೂಗಳಿಂದ ಅಲಂಕೃತವಾಗಿರುವ ಹಸಿರು ಪೊದರುಗಳಿಂದ ಆ ಭೂಮಿ ಶೃಂಗರಿಸಲ್ಪಟ್ಟಿದೆ. ಪರ್ವತವನ್ನು ಸುತ್ತಿಕೊಂಡು, ಸ್ವಲ್ಪ ತಗ್ಗಿನಲ್ಲಿದ್ದರೂ, ಸಸ್ಯ ಹಾಗೂ ಮೃಗಗಳೆಂಬ ಸಂಪತ್ತಿನಿಂದ ಆ ಭೂಮಿ ತುಂಬಿದೆ. ಎಲ್ಲಾ ತರದ ಸಸ್ಯಕ್ಕೂ ಅಲ್ಲಿ ಆಶ್ರಯವಿದೆ. ಚಲೋ ಅರಮನೆಯನ್ನು ಕಟ್ಟಲು ಬೇಕಾಗುವ ಉತ್ತಮ ಮೋಟಿನ ಮರಗಳು ಹಾಗೂ ನರಳುತ್ತಿರುವ ದೇಹಕ್ಕೆ ಬೇಕಾಗುವ ಆಯ್ದು ಮದ್ದಿನ ಗಿಡಗಳೂ ಅಲ್ಲಿ ಬೆಳೆಯುತ್ತವೆ.

ಬಯಲು ಪ್ರದೇಶದಲ್ಲಿ ಚಿಕ್ಕಪುಟ್ಟ ಅಸಂಖ್ಯಾತ ಬಿಳಿ ಹೂಗಳಿಂದ ಅಲಂಕೃತವಾಗಿರುವ ತುಂಬೆ ಗಿಡಗಳು ಗಾಳಿಯಿಂದಾಗಿ ಹಾಗೂ ಜೇನು ನೊಣಗಳಿಂದಾಗಿ ಬಗ್ಗಿ ನಿಂತುಕೊಂಡಿವೆ. ಇಬ್ಬನಿ ಮಿಶ್ರಿತ ಜೇನನ್ನು ಆ ನೊಣಗಳು ಹೀರುತ್ತಿವೆ. ತುಳಸಿ ಗಿಡಗಳು ತಮ್ಮದೇ ಇರುವ ಒಂದು ಕಾಡನ್ನು ಮಾಡಿಕೊಂಡಿವೆ; ಅವು ಪವಿತ್ರ ವಾತಾವರಣವನ್ನುಂಟು ಮಾಡಿವೆ. ಕುಮುದ ಕೂಡಾ ಅಲ್ಲಿ ಎದ್ದು ಮೆರೆಯುತ್ತಿದೆ. ಅವು ಹಳದಿ ಹಣ್ಣುಗಳನ್ನು ಹೊತ್ತು ಕೊಂಡಿವೆ. ಅದರ ಹಣ್ಣಿನ ರಸವು ಅಶಕ್ತ ನರಗಳಿಗೆ ಉತ್ತಮ ಔಷಧವಿದೆ. ಅಲ್ಲಿ ಇಲ್ಲಿ ಅಶ್ವಗಂಧಿಯು ಮಿತಿಯಾಗಿಯಾದರೂ ಚೆನ್ನಾಗಿ ಬೆಳೆದಿದೆ. ದೇವತೆಗಳಿಗೂ ಮನುಷ್ಯರಿಗೂ ಅದರ ಬೇರು ಉತ್ತಮ ಆಹಾರವಿದೆ. ಹೀಗೆ ಹಲವಾರು ತರದ ಮದ್ದಿನ ಗಿಡಗಳನ್ನೂ ಪರಿಮಳ ಪಸರಿಸುತ್ತಿರುವ ಸಸ್ಯಗಳನ್ನೂ ಮಾನವನಿಗೆ ವನ ದೇವತೆಯು ತನ್ನ ಮಿತ್ರತ್ವದ ಕಾಣಿಕೆಯನ್ನಾಗಿ ಕೊಟ್ಟಿರುವಳು.

ಉದ್ದ ಮರಗಳ ಕೊಂಬೆಗಳಲ್ಲಿ ಹಾಗೂ ಕಡಿದಾದ ಬಂಡೆಗಳ ತಗ್ಗು ಪ್ರದೇಶದಲ್ಲಿ ತಮ್ಮ ಗೂಡುಗಳನ್ನು ಜೇನು ನೊಣಗಳು ಕಟ್ಟಿಕೊಂಡಿವೆ. ಆರ್ಣಿ ನದಿಯು ಎಲ್ಲರಿಗೂ ಸಂತೋಷವನ್ನೀಯುವ ಸಂಗೀತವನ್ನಲ್ಲಿ ಹಾಡುತ್ತಿರುವಳು.

ಪರ್ವತದ ಹುಲ್ಲು ಅರೆಸೊಕ್ಕಿದ್ದು ಅತಿ ಸಿಹಿಯಾಗಿದೆ. ಪ್ರಾಣಿಗಳಿಗಾಗಿ ಇರುವ ಆ ಆಹಾರವನ್ನು ಕಂಡು ಮನುಷ್ಯನೂ ಹೊಟ್ಟೆಕಿಚ್ಚುಪಡುತ್ತಿದ್ದಾನೆ. ಜಿನಗಳೂ ಆಡುಗಳೂ ಮನಸ್ಸಿಗೆ ಕಂಡಂತೆ ಅಲ್ಲಿ ತಿರುಗಾಡುತ್ತಿವೆ. ಅವುಗಳಿಗಾಗಿ ಅಲ್ಲಿ ಮನುಷ್ಯನು ಕ್ಷೇಪೂರ್ಥಕ ಜೋಪಡಿಯ ಹೆಸರಿನಲ್ಲಿ ಶಾಸ್ತ್ರೀಯ ವಿಧಾನದ ಕಾರಾಗೃಹಗಳನ್ನು ಇನ್ನೂ ಕಟ್ಟಿರುವದಿಲ್ಲ. ನೈಸರ್ಗಿಕ ಆರೋಗ್ಯವು ಅಲ್ಲಿ ಎಲ್ಲೆಲ್ಲೂ ಕಂಡು ಬರುತ್ತಿದೆ. ಚಹಾ, ಕಾಫಿಗಳ ನಾಗರಿಕತೆಯ ಪ್ರಸಾರವನ್ನು ಮನುಷ್ಯನಿನ್ನೂ ಆ ಪರ್ವತ ಪ್ರದೇಶಕ್ಕೆ ತೆಗೆದುಕೊಂಡು ಬಂದಿರುವದಿಲ್ಲ.

ನಾಗಲಾಪುರಮಿನ ಬುಡದಲ್ಲಿರುವ ನಿಸರ್ಗಕ್ಕೆ ಅಂದದ ಹಾಗೂ ಹಚ್ಚ ಹೊಸತಿನ ಮುಖಭಾವವಿದೆ. ಆ ರೀತಿ ಅದು ನಿರ್ಜನ ಪ್ರದೇಶದಲ್ಲಿನ ಎಂದರೆ ಅವಿವಾಹಿತ ಸ್ತ್ರೀಯ ಬಾಳು ಹಾಳಾಗವಂತೆ ಅದೂ ಹಾಳಾಗುತ್ತಿದೆ ಎನ್ನುವದು ಸರಿಯಲ್ಲ. ಅದರ ಅಂದಕ್ಕೆ ಒಂದು ಘನ ಉದ್ದೇಶವಿದೆ. ಅದನ್ನು ಕೇವಲ ಅಂದವೆಂದು ಕರೆಯುವದೂ ಸಮಂಜಸವಲ್ಲ. ಅದುವೇ ಅದರ ವೈಶಿಷ್ಟ್ಯ. ಆ ಪರ್ವತದ ಚಂದವು ರಸಭರಿತು, ನೂತನ ಹಾಗೂ ರಕ್ಷಣೆಗಾಗಿ ಇರ ಗೊಂಚಲು ಗೊಂಚಲು ಬಾಳೆಯ ಹೂವಿನಂತೆ ಇದೆ.

ಆರ್ಣಿ ನದಿಯು ತನ್ನ ಕಲಕಲರವದಿಂದ ಸಣ್ಣ ಮಕ್ಕಳು ಅಂಬೆಗಾಲಿಕ್ಕುತಿರುವಂತೆ, ಮುಗ್ಧ ತರುಣಿಯಂತೆ... ಹೀಗೆ ನಾನಾ ವಿಧವಾಗಿ ಮುಂದೆ ಸಾಗುತ್ತಿರುವಳು. ಪರ್ವತದ ಮೇಲಿನಿಂದ ಕೆಳಗೆ ಧುಮುಕುತ್ತಿರುವ ಜಲರಾಶಿ, ತನ್ನ ಮಕ್ಕಳನ್ನು ತಾಯಿ ಅತಿ ಮಧುರವಾಗಿ ಕರೆಯುವಂತೆ, ಗುಂಯ್ ಗುಡುತ್ತಿದೆ. ಬಣ್ಣ ಬಣ್ಣದ ಹಕ್ಕಿಗಳು ಕಾಮನ ಬಿಲ್ಲನ್ನುಂಟು ಮಾಡುತ್ತಿವೆ. ಉದ್ದನೆಯ ಮರದ ಗೆಲ್ಲುಗಳಲ್ಲಿ ಕುಳಿತುಕೊಂಡು, ಪೊದೆಯಲ್ಲಿ ಅಥವಾ ಬೇರೆ ಗೆಲ್ಲುಗಳ ಮೇಲೆ ಅವಿತುಕೊಂಡಿರುವ ತನ್ನ ಸಂಗಾತಿಗಳನ್ನು ಕರೆಯಲು ಮಧುರ ಗೀತಗಳನ್ನು ಹಕ್ಕಿಗಳು ಹಾಡುತ್ತಿವೆ. ನಿರೀಕ್ಷಣೆಯ ನೋಟದಿಂದ ಬೆಳಗ್ಗೆ ಅರಳಿರುವ ಹೂಗಳು ಸಾಯಂಕಾಲದ ವರೆಗೆ ಕಾದು ಬೇಸತ್ತು ಬೇಸರದಿಂದ ಬಾಡುತ್ತಿವೆ. ಗಾಳಿಯು ಜೇನುಗೂಡಿನ ಪರಿಮಳವನ್ನು ಒಯ್ಯುತ್ತಿದೆ. ಆಮಂತ್ರಿತ ಮೋಡವು ತನ್ನ ಭಾರವನ್ನು ಕಡಿಮೆ ಮಾಡಿಕೊಳ್ಳಲು ಅಲ್ಲಿ ನೀರನ್ನು ಚಿಮುಕಿಸುತ್ತದೆ. ಆ ನೀರು ಕೊಳಚೆಯನ್ನು ದೂರದ ಸಮುದ್ರಕ್ಕೆ ಕೊಂಡೊಯ್ದು ಬಿಡುತ್ತದೆ.

ಮಳೆಯಲ್ಲಿ ಸಿಕ್ಕಿಕೊಂಡಿರುವ ಗಾಳಿಯಂತೆ ನಾಗಲಾಪುರಮಿನ ನಿಸರ್ಗವು ಶಾಂತವಾಗಿ, ಅಚಲವಾಗಿದ್ದು ಕಣ್ಣು ಹಾಗೂ ಕಿವಿಗಳಿಗೆ ಕಷ್ಟ ಕೊಡುತ್ತಿರುವ ಉತ್ಸಾಹೀ ಪ್ರಿಯತಮನ ಭಾವದಿಂದಿದೆ. ಅಲ್ಲಿಗೆ 'ದೈವ ನಿಶ್ಚಿತ' ಇನ್ನೂ ಬಂದಿರುವದಿಲ್ಲ. ಸ್ವರ್ಗದಿಂದ ಕೆಳಗಿಳಿಯುತ್ತ ಬರುತ್ತಿರುವಾಗ ಆಗುವ ಹೆಜ್ಜೆಯ ನಾದ ಕೇಳಿಬರುತ್ತಿದೆ.

ಮಹತ್ವಪೂರ್ಣ ವಿಷಯಗಳು ವಿಧಿನಿಯಮದಂತೆ ನಡೆಸುತ್ತವೆ. ಟೆನ್ನಿಸ್ ಅಥವಾ ಕ್ರಿಕೆಟ್ ಪಂದ್ಯಾಟಕ್ಕೆ ಅಲ್ಲದೆ ಉಗುರು ತೆಗೆಯಲೂ ಮನುಷ್ಯನು ಕಾಲ ತಖ್ತೆಯನ್ನು ಹಾಕಿ ಕೊಳ್ಳಬಹುದು. ಆದರೂ ಮಹತ್ವದ ವಿಷಯಗಳೆಲ್ಲವೂ ಆಕಾಶದಲ್ಲಿ ನಕ್ಷತ್ರಗಳು ಚಲಿಸುವಂತೆ, ನಿರ್ದಿಷ್ಟ ಕಾಲದಲ್ಲಿ ಘಟಿಸುತ್ತವೆ.

ರಾಮುವಿನ ಪ್ರಾರಬ್ಧವು ಅವನನ್ನು ನಾಗಲಾಪುರದ ಪರ್ವತ ಬುಡಕ್ಕೆ ಕರೆದು ಕೊಂಡುಬಂದಿದೆ. ಆವನಾದರೋ ಅನೇಕಾನೇಕ ಹಂಚಿಕೆಗಳನ್ನು ಹಾಕಿಕೊಂಡಿದ್ದಾನೆ. ಮುರುಗ, ಮೀನಾಕ್ಷಿ ಮತ್ತು ಅಲವಂತಿಯು ಮಳೆಗಾಲದ ಪ್ರವಾಹ ಹೀಗೆ ಒಂದೊಂದಾಗಿ ಬಂದು ಅವನ ಸ್ಮೃತಿಪಟಲದಲ್ಲಿ ಛಾಯೆಯನ್ನು ಹಾಕುತ್ತಿವೆ. ಆ ಮಹಾನ್ ನೀರಾವರಿ ಹಂಚಿಕೆ ಹಾಗೂ ನವೀನ ಕೃಷಿಯ ವ್ಯವಸ್ಥಾಪನೆಯ ಏಕಮೇವ ಅಧಿಕಾರಿಯಾಗಿ ಅವನೀಗ ಬಂದಿದ್ದಾನೆ.

ಸರಕಾರವು ರಾಮುವಿಗೆ ಪೂರ್ಣ ಸಹಕಾರ ನೀಡಿದೆ. ಬೇಕಾದ ಜನರನ್ನು ಕೆಲಸಕ್ಕೆ ತೆಗೆದು ಕೊಳ್ಳಲು ಅವನಿಗೆ ಪೂರ್ಣ ಅಧಿಕಾರವನ್ನಿತ್ತಿದೆ. ಅವನು ಕೆಲಸವನ್ನು ಮುತುವರ್ಜಿಯಿಂದ ಹಾಗೂ ಶ್ರದ್ಧೆಯಿಂದ ಆರಂಭಿಸಿರುವನಾದರೂ ಅವನ ದೃಷ್ಟಿಕೋನ ಪ್ರಪಂಚ ಹಾಗೂ ಭಾವೀ ಮಾನವ ಕುಲದತ್ತ ಹರಿದಿದೆ.

ರೆಂಟೆ ಹೊಡೆಯುವ 'ಆರಂಭೋತ್ಸವ ಮುರುಗನಿಂದ ನಡೆಯಿತು. ಆರಂಭೋತ್ಸವ ಶಾಸ್ತ್ರೀಯ ರೀತಿಯಲ್ಲೇ ಜರಗಿತು; ನೆರೆದಿದ್ದ ಜನರಿಗೆ ಹಾಗೂ ಕಾಡಿನ ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ವಿಪುಲ ತೆಂಗಿನಕಾಯಿ, ಬಾಳೆಹಣ್ಣು ಮತ್ತು ಅಕ್ಕಿ ಅನ್ನಾದಿಗಳನ್ನು ಹಂಚಲಾಯಿತು. ಸುಮುಹೂರ್ತದಲ್ಲಿ ಪೂರ್ಣ ಹೃದಯದಿಂದ ಕಾರ್ಯಾರಂಭವಾಯಿತು.

ಪಕಾಲತ್ತಿಗೆ, ಕಚ್ಚೆಗಾರರಿಗೆ, ವೈಭವಮಯ ಮನೆಗೆ, ಚಲೋ ಕಾರಿಗೆ, ಮಹತ್ವಾಕಾಂಕ್ಷೆಗೆ ಹಾಗೂ ಕೀರ್ತಿ ಮತ್ತು ಅಧಿಕಾರದ ಕ್ರೂರ ಪ್ರೇಮಕ್ಕೆ ತಿಲಾಂಜಲಿಯಿತ್ತು ಕೇದಾರಿಯು ನಾಗಲಾಪುರಮಿನಲ್ಲಿ ನೆಲೆಸಿದನು. ಅವನು ಮನೆಮತ್ತಿತರ ಸಾಮಗ್ರಿಗಳನ್ನು ಮಾರಿ ಸಾಲವನ್ನೆಲ್ಲಾ ತೀರಿಸಿಕೊಂಡಿದ್ದನು. ನಗು ನಗುತ್ತ ತನ್ನಲ್ಲುಳಿದಿದ್ದ ಆಭರಣಗಳನ್ನು ಕೋಕಿಲಂ ಕೊಟ್ಟಿದ್ದಳು. ಈಗ ಕೇದಾರಿಯು ಬದಲಾಗಿ ಬಿಟ್ಟಿದ್ದಾನೆ. ಕಣ್ಣಿನಲ್ಲಿದ್ದ ಹಿಂದಿನ ಪರೆ ಹೋಗಿದೆ. ಸಾಮೂನ್ಯ ಕಾರ್ಯಕ್ರಮಕ್ಕೆ ಅವನೀಗ ಪೂರ್ಣಶ್ರದ್ಧೆಯಿಂದ ಸಿದ್ಧನಾಗಿದ್ದಾನೆ. ರಾಮು ಅವನೊಂದಿಗೇನೇ ಇರುತ್ತಿದ್ದಾನೆ. ಹೊಸ ರೀತಿಯಲ್ಲಿ ಬಾಲ್ಯದ ಜೀವನ ಪುನಃ ಪ್ರಾಪ್ತವಾಗಿದೆ; ಒಂದು ತಡೆಯ ನಂತರ ಅವರೀಗ ಪುನಃ ಒಂದಾಗಿದ್ದಾರೆ.

ತನ್ನ ಹಿಂದಿನ ರೈತನ ನಿಪುಣತೆಯನ್ನು ಮುರುಗನು ಪ್ರಕಟಪಡಿಸುತ್ತಿದ್ದನು. ಹೊಸ ವಾಸಸ್ಥಾನದಲ್ಲಿ ಅವನು ಪಳಗಿದ ಕೈ. ರಾಮುವಿನ ದರ್ಶನ ಮಾತ್ರದಿಂದ ತೊಪ್ಪೆಯು ಬದಲಾಗಿ ಬಿಟ್ಟಿದ್ದಾನೆ. ಅದು ಯಾಕೆ, ಹೇಗೆ ಎಂಬುದು ಅವನಿಗೇನೇ ಗೊತ್ತಿಲ್ಲ. ಎಚ್ಚರಿಕೆ ಇರದಿದ್ದ ಸ

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.

NAVAYUGA 30—6—1966

Registered with the Registrar of News Papers for India under No. R. N. 3546/'57

REGD. No: B. G: 176
LICENCE No. 31
Licensed to Post without Prepayment

ಮಯದಲ್ಲಿ ದೇವರ ಬೆಳಕು ಅವನ ಆತ್ಮದಲ್ಲಿ ನೆಲಸಿರಬೇಕು. ಅವನೀಗ ಶ್ರಮಿಕ ಸೇನೆಯ ಸೇನಾಧಿಪತಿ. ಆರ್ಣಿ ನದಿಗೆ ದಾಂಪತ್ಯದ ನಡುವಣ ಪಟ್ಟೆಯ ಹಾಗಿರುವ ಅಣೆಕಟ್ಟನ್ನು ಕಟ್ಟುವ ಶಾಂತಿಪೂರ್ಣ ಕೆಲಸಕ್ಕಾಗಿ ಇರುವ ಸೈನ್ಯ ಅದು.

'ಪರ್ವತ— ಶಿಖರ' ಮುಖಂಡನೀಗ ವಾಸಸ್ಥಾನದ ನಿರ್ಮಾಣ ಹಾಗೂ ಇತರ ಕೆಲ ಕೆಲಸಗಳಿಗೆ ಮುಖ್ಯಸ್ಥನು ತನ್ನ ಗುಂಪಿನಲ್ಲಿರುವ ಎಲ್ಲರ— ಹತಮೂರ್ತಿಗಳದ್ದು ಕೂಡಾ— ಪೂರ್ಣ ಸಹಕಾರ ಅವನಿಗಿದೆ. ತನ್ನ ಪಡೆಯ ನಿಧಿಯನ್ನು ಮರ್ಯಾದೆಯಿಂದ ಆವನು ರಾಮುವಿನ ಪದತಲದಲ್ಲಿಟ್ಟಿದ್ದನು. ಅದರಲ್ಲಿ ಹೊಸತು, ಹಳತು; ಬಂಗಾರದ ಹಾಗೂ ಬೆಳ್ಳಿಯ ನಾಣ್ಯಗಳೆಲ್ಲಾ ಒಟ್ಟು ಮೂರು ಲಕ್ಷ ಇದ್ದುವು. ನಿಧಿಯನ್ನು ನೋಡಿದ ರಾಮು ತನ್ನ ಹಂಚಿಕೆಯನ್ನು ವಿಸ್ತರಿಸಿದನು.

ಸೀತೆಯ ಸಹೋದರನೂ ವ್ಯವಸಾಯ ವೃತ್ತಿಯ ಮುಖ್ಯ ಯಂತ್ರಜ್ಞ. ನಿಜವಾಗಿ ಸಾವಿರಾರು ಜನರಿಗೆ ಅವಶ್ಯಕತೆ ಇರುವ ಯಂತ್ರಜ್ಞನ ಕೆಲಸದಿಂದ ಉಪಕಾರ ಮಾಡಲು ಅವನು ಸ್ವ-ಉತ್ಸಾಹದಿಂದ ಬಂದಿದ್ದಾನೆ.

ಇದರಲ್ಲೂ ವನಿತಾ ವರ್ಗ ಹೆಚ್ಚಿನ ಆನಂದದಲ್ಲಿ ತೇಲಾಡುತ್ತಿದೆ. ಸೀತೆಯು ತನ್ನ ಸಹೋದರ, ಮತ್ತು ಆಟದ ಗೆಳತಿ, ರಾಮುವಿನ ಮಗಳನ್ನು, ಬಿಟ್ಟಿರಲು ಒಪ್ಪದ ತನ್ನ ಮಗನೊಂದಿಗೆ ಅಲ್ಲೇ ವಾಸಿಸುತ್ತಿದ್ದಾಳೆ. ಅವಳಿಗೆ ಹೊಸ ಕೆಲಸ ಹಾಗೂ ಸ್ಥಳವನ್ನು ನೋಡಿಕೊಂಡಿರಲು ಜಾನಕಿಯು ಒತ್ತಾಯ ಮಾಡಿದ್ದಳು, ಕೋಕಿಲಮಿಗೆ ಈ ಬದಲಾವಣೆ ಕೇವಲ ದೈವನಿರ್ಮಿತವಿದೆ. ಆಕೆ ಹೊಸ ಜೀವನದ ಸರಳತೆ ಹಾಗೂ ಶಾಂತಿಯಿಂದ ಆನಂದಭರಿತಳಾಗಿದ್ದಾಳೆ. ಪೊನ್ನಿ ಮತ್ತು ಮುರುಗನ ಮಕ್ಕಳು ಸೀತೆಯ ರಕ್ಷಣೆಯಲ್ಲಿ ಅಲಪಂತಿಯಲ್ಲೇ ಇದ್ದರು. ಸೀತೆಯು ಅವರನ್ನು ಕರೆಸಿಕೊಂಡಳು. ಅವರನ್ನು ಕಂಡೊಡನೆ ಮುರುಗನ ಕಣ್ಣುಗಳು ಪ್ರಕಾಶಮಾನವಾದುವು, ಅಂತಹ ಸಂತೋಷದ ಅನುಭವ ತಾರುಣ್ಯ ಮುಗಿದಿರುವ ತಂದೆಗೆ ಮಾತ್ರ ಆದೀತು.

ಮುರುಗನ ಕಿರಿಯ ಮಗಳ ಮೇಲೆ ತೊಪ್ಪೈ ವಿಶೇಷ ಉತ್ಸಾಹವನ್ನು ತೋರಿಸುತಿದ್ದ. ಅವಳು ಆಗಲೇ ತಾರುಣ್ಯಾವಸ್ಥೆಯಲ್ಲಿ ಕಾಲಿಟ್ಟಿದ್ದಳು. ಮುರುಗನು ಸಾಗುವಳಿದಾರನಾದ ದಿನ ಹುಟ್ಟಿದ ಅದೃಷ್ಟಶಾಲಿನಿ ಆಕೆ. ಅವನು ಅಬ್ದುಲ್ಲನೆಂಬ ಮಹಮ್ಮದೀಯ ಹುಡುಗನ ಕುರಿತು ಆಲೋಚಿಸಿಕೊಂಡಿದ್ದ. ತಿರುಚ್ಚಿ ಕಾರಾಗೃಹದಿಂದ ತಪ್ಪಿಸಿಕೊಂಡು ಹೋಗಲು ಆತನು ಪ್ರಾಣವನ್ನು ಪಣವಾಗಿಟ್ಟು ಸಹಾಯ ಮಾಡಿದ್ದ. ಅವನ ಬಿಡುಗಡೆಯಾಗಿರುವುದರಿಂದ ವಾಸಸ್ಥಾನದ ಪತ್ತೆ ಕಂಡುಹಿಡಿಯುವದು ಕಷ್ಟವಿದೆ. ರಾಮು ಇರುವಾಗ ಅವನಿಗೆ ಏನು ಹೆದರಿಕೆ? ಅಬ್ದುಲ್ಲ ಇಲ್ಲದಿದ್ದರೆ ವಸತಿ ಅಪೂರ್ಣವೆಂದವನು ಭಾವಿಸಿ ಕೊಂಡಿದ್ದಾನೆ. ಕೆಲ ತಿಂಗಳು ಎಡೆ ಬಿಡದೆ ಶೋಧನೆ ನಡೆಸಿದುದರಿಂದ ಅಬ್ದುಲ್ಲನು ಕೊಡೈಕೆನಾಲ್ ರಸ್ತೆಯಲ್ಲಿ ಬಸ್ಸು ಶುಚಿ ಮಾಡುವ ಉದ್ಯೋಗದಲ್ಲಿದ್ದಾನೆಂಬುದು ಗೊತ್ತಾಯಿತು.

ಈಗ ಅವರ ವಾಸಸ್ಥಾನ ಪೂರ್ಣ ಹಾಗೂ ಆನಂದಮಯವಿದೆ. ಪಕ್ಕಿಗಳ ಹಾಗೂ ಮಾನವರ ಪ್ರಭಾತ ಕಾಲದ ಹಾಡಿನಿಂದ ವಾತಾವರಣ ತುಂಬಿ ಹೋಗುತ್ತದೆ. ಮರಗಳ ನೆರಳು ಹಾಗೂ ನದಿಯ ದಡ ಅವರಿಗೆ ಮಧ್ಯಾಹ್ನ ಕಾಲದಲ್ಲಿ ಉಲ್ಲಾಸವನ್ನು ಕೊಡುತ್ತವೆ. ಪ್ರತಿಯೊಬ್ಬರೂ ಸಂತೋಷದಲ್ಲಿದ್ದಾರೆ. ಅಂಗನೆಯರು ಅಳಿಲಿನ ಹಾಗೆ ಚುರುಕಾಗಿ ಕೆಲಸ ಮಾಡುತ್ತಾರೆ. ಅವರ ಜೀವನ ಕುಸುಮ ಅರಳಿ ಸುಗಂಧ ಪಸ್ನೀಯುತ್ತಿದೆ. ಕೆಲಸಕ್ಕೆ ಸರಿಯಾಗಿ ವಿನೋದವೂ ಇದೆ. ಎಲ್ಲರೂ ತಮಗಾಗಿ ಆನಂದದಿಂದ ಕಾರ್ಯಮಗ್ನರಾಗಿರುತ್ತಾರೆ. ಅಲ್ಲಿ ಗುಲಾಮಿಯ ಭಾವನೆಗೆ ಎಡೆಯೇ ಇಲ್ಲ. ಎಲ್ಲರಿಗೂ ತಮ್ಮ ಮಾಂಸ ಖಂಡಗಳ ಬಲದ ಅರಿವು ಇರುತ್ತದೆಯೇ ವಿನಃ ಆಯಾಸದ ಅರಿವು ಆಗುತ್ತಿರಲಿಲ್ಲ.

ಆರ್ಣಿ ನದಿಗೋ, ಮದುವೆಯ ದಿನದಂತಿದೆ. ನಾಗಲಾಪುರದ ಪರ್ವತ ಹಾಗೂ ಕಣಿವೆಗಳ ಕೌಮಾರ್ಯತೆಯ ಆಶಾತೃಪ್ತಿಯು ಅಂದು ಆದಂತೆ ಕಂಡು ಬರುತ್ತಿದೆ. ಅವಳು, ತಾರುಣ್ಯಭರಿತೆ ಆರ್ಣಿ ನದಿಯು, ತನ್ನ ತಾರುಣ್ಯದ, ತೆಳ್ಳನೆಯ ಸೊಂಟದ ಸುತ್ತ ಬರುವ ದಾಂಪತ್ಯದ ನಡುವಣ ಪಟ್ಟೆಯನ್ನು ಸಂತೋಷದಿಂದ ಸ್ವಾಗತಿಸಿದಳು. ಕಲ್ಯಾಣ ಮುಹೂರ್ತ ಎರಡು ವಿಧದಲ್ಲಿ ಆಶೀರ್ವದಿಸಲ್ಪಟ್ಟಿದೆ. ಇತ್ತೀಚಿಗಿನ ಪ್ರವಾಹದ ಸಮಯ ಆಕೆಯು ಎತ್ತರದ ಪರ್ವತ ಪ್ರದೇಶದಿಂದ ಉತ್ತಮ ಕಲ್ಲುಗಳನ್ನು ಕೆಳಗೆ ತೆಗೆದುಕೊಂಡು ಬಂದಿದ್ದಳು, ಅಣೆಕಟ್ಟೆಗದು ಉತ್ತಮ ಕಲ್ಲೆಂದು ಸೀತೆಯ ಸಹೋದರನು ಪ್ರಶಂಸೆಗಳನ್ನಿತ್ತಿರುವನು.

ಸ್ವಾತಂತ್ರ್ಯ ಪ್ರೇಮ ನದಿಗೆ ಅಣೆಕಟ್ಟು ರಗಳೆಯಂತೆ ಕಂಡು ಬಂದರೂ ಬಂಧನವು ಪ್ರೇಮದ ದಾರದಿಂದ ಆದಲ್ಲಿ ಆಶೀರ್ವಾದವೆಂಬ ಭಾವನೆ ಬರುತ್ತದೆ.

(ಮುಂದುವರಿಯುವುದು)

ಯಂತ್ರಗಳ ಸಹಾಯದಿಂದ ಓದುಬರಹ ಕಲಿಕೆ

ಗೀಸ್ಸೆನ್ ವಿಶ್ವವಿದ್ಯಾನಿಲಯದಲ್ಲಿ ಹೊಸ ರೀತಿಯ ಶಿಕ್ಷಣ ವ್ಯವಸ್ಥೆ

ಆಧುನಿಕ ಯಂತ್ರಯುಗದಲ್ಲಿ ಮನುಷ್ಯನು ಕೈಯಿಂದ ಮಾಡುತ್ತಿದ್ದ ಕೆಲಸಗಳನ್ನು ಯಂತ್ರಗಳು ನಿರ್ವಹಿಸುತ್ತಿದೆ. ಈ ರೀತಿ ಯಂತ್ರಗಳನ್ನು ಮಾಡಿರುವುದೂ ಅಲ್ಲದೆ ಈಚಿಗೆ ಶಾಲೆಗಳಲ್ಲಿ ಪಾಠಗಳನ್ನು ಕಲಿಸಲೂ ಯಂತ್ರಗಳನ್ನು ಕಂಡು ಹಿಡಿದು ವಿಜ್ಞಾನಾಭಿವೃದ್ಧಿಯು ಪರಮಾವಧಿಯನ್ನು ತಲುಪುತ್ತಿದೆ.

ಗೀಸ್ಸೆನ್, (ದಾಡ್):—ಅತಿ ಶೀಘ್ರದಲ್ಲಿಯೇ ಜರ್ಮನಿಯ ಮಕ್ಕಳಿಗೆ ವಿದ್ಯುಚ್ಛಕ್ತಿಯ ಸಹಾಯದಿಂದ ಓದು ಮತ್ತು ಬರಹಗಳ ಶಿಕ್ಷಣವನ್ನು ಕೊಡುವ ಯಂತ್ರಗಳನ್ನು ತಯಾರಿಸಲಾಗುವುದು. ಗೀಸ್ಸೆನ್ ವಿಶ್ವವಿದ್ಯಾನಿಲಯದ ಪರಿಶೋಧನಾ ವಿಭಾಗದಲ್ಲಿ ಒಂದು ರೀತಿಯ ಪ್ರತ್ಯೇಕ ಯಂತ್ರವನ್ನು ಓದು ಮತ್ತು ಬರಹವನ್ನು ಕೊಡಲು ಸಿದ್ಧಗೊಳಿಸಲಾಗುತ್ತಿದೆ. ಪಶ್ಚಿಮ ಜರ್ಮನಿಯಲ್ಲಿ ಈ 'ಇನ್ಸ್ಟಿಟ್ಯೂಟ್' ಇಂತಹ ಪರಿಶೋಧನೆಗಳಿಗೆ ಏಕೈಕ ಕೇಂದ್ರವಾಗಿದೆ. ಈ ಇನ್ಸ್ಟಿಟ್ಯೂಟಿನ ಡೈರೆಕ್ಟರರಾದ ಪ್ರೊಫೆಸರ್ ಡಾ. ವರ್ನರ್ ಕಾರೆಲ್‌ರವರು ಪ್ರಸಿದ್ಧ ಶರೀರ ಶಾಸ್ತ್ರಜ್ಞರು. ಇವರ ನಾಯಕತ್ವದಲ್ಲಿ ಹೊಸ ರೀತಿಯ ಶಿಕ್ಷಣ ಕ್ರಮಗಳನ್ನು ಈ ವಿಶ್ವವಿದ್ಯಾನಿಲಯದಲ್ಲಿ ಪರಿಶೋಧನೆಯ ವಿಭಾಗದಲ್ಲಿ ಕಾರ್ಯರೂಪಕ್ಕೆ ತರುವ ಯೋಜನೆಯು ಮುಂದುವರಿಯುತ್ತಿದೆ.

ಈ ರೀತಿಯಾದ ನೂತನ ಯಂತ್ರ ಶಿಕ್ಷಣ ಪದ್ಧತಿಯು ಶರೀರ ಶಾಸ್ತ್ರಜ್ಞರನ್ನೇ ಅಲ್ಲದೆ ಉಪಾಧ್ಯಾಯರುಗಳನ್ನೂ ಕೆಲವು ವರ್ಷಗಳಿಂದ ಉತ್ತೇಜನಗೊಳಿಸಿರುವುದನ್ನು ಅಲ್ಲದೆ ಪ್ರಜೆಗಳಲ್ಲಿಯೂ ಉತ್ಸುಕತೆಯು ಹೆಚ್ಚುತ್ತಿದೆ. ಈಗಾಗಲೇ ಅನೇಕ ಶಿಕ್ಷಣ ಕಾರ್ಯಕ್ರಮಗಳು ತಯಾರಾಗಿವೆ. ಹೊಸ ಕಾರ್ಯಕ್ರಮಗಳು ಸಿದ್ಧವಾಗುತ್ತಿವೆ. ವಿದ್ಯಾ ಸಂಸ್ಥೆಗಳೂ, ಖಾಸಗೀ ಪ್ರಕಟಣಾ ಸಂಸ್ಥೆಗಳೂ ಈ ಕಾರ್ಯವನ್ನು ನಿರ್ವಹಿಸಿ ಶಾಲೆಗಳಲ್ಲಿ ಕ್ರಮಬದ್ಧವಾದ ಶಿಕ್ಷಣ ಕ್ರಮವನ್ನು ತಯಾರಿಸುತ್ತಿದೆ. ಆದರೆ ಈ ಪದ್ಧತಿಯು ವೈಜ್ಞಾನಿಕ ಸಹಕಾರಗಳಿಲ್ಲದೆ ಕೈಗೊಳ್ಳಲಾಗಿದೆ. ಆದ್ದರಿಂದಲೇ ಗೀಸ್ಸೆನ್ ವಿಶ್ವವಿದ್ಯಾನಿಲಯವು ವಿಜ್ಞಾನ ಸಂಬಂಧವನ್ನು ಹೊಂದಿಸಿ ಅನೇಕ ಪ್ರಯೋಗಗಳಿಂದ ಪರಿಶೀಲಿಸಲು ಈ ಕಾರ್ಯವನ್ನು ಪ್ರಾರಂಭಿಸಿದೆ. ಮೊಟ್ಟ—ಮೊದಲಾಗಿ ಓದುವ ಶಿಕ್ಷಣದ ಕ್ರಮವನ್ನು ವೃದ್ಧಿಗೊಳಿಸುವ ಕಾರ್ಯವನ್ನು ಸಂಶೋಧನೆಗೆ ತೆಗೆದುಕೊಳ್ಳಲಾಗಿದೆ. ಈ ಕ್ರಮಕ್ಕಾಗಿ ತಯಾರಾಗುತ್ತಿರುವ ಯಂತ್ರವು ಪ್ರಪಂಚದಲ್ಲಿಯೇ ಮೊದಲ ಆವಿಷ್ಕಾರವಾಗಿದೆ. ಇದು ಕ್ರಮೇಣ ಮಕ್ಕಳಿಗೆ ಓದುವುದನ್ನೂ ಮತ್ತು ಬರೆಯುವುದನ್ನೂ ಕಲಿಸುತ್ತದೆ. ಅವರು ಓದುವಾಗ ಅಕ್ಷರಗಳ ಉಚ್ಚಾರಣೆ ಮತ್ತು ಅಕ್ಷರಗಳ ಜೋಡಣೆ ಮತ್ತು ಉಚ್ಚಾರ ಕ್ರಮ ಇವುಗಳನ್ನು ಮಕ್ಕಳಿಗೆ ಕಲಿಸುವ ಕ್ರಮವನ್ನೂ ಸಂಶೋಧನೆಗೆ ತೆಗೆದುಕೊಳ್ಳಲಾಗಿದೆ. ಗೀಸ್ಸೆನ್ ಇನ್ಸ್ಟಿಟ್ಯೂಟ್‌ನಲ್ಲಿ ಸ್ಪೆಲ್ಲಿಂಗ್ ಹೇಳುವಾಗ ಬರುವ ಸಮಸ್ಯೆಗಳನ್ನು ಬಗೆಹರಿಸಲಾಗುವುದು. ಅಲ್ಲದೆ ಹೊಸ ಸಮಸ್ಯೆಗಳನ್ನೂ ಈ ವಿಶ್ವವಿದ್ಯಾನಿಲಯದಲ್ಲಿ ಪರಿಶೀಲಿಸಿ ತಕ್ಕ ಸಂಶೋಧನೆಗಳನ್ನು ಕೈಗೊಳ್ಳಲಾಗುತ್ತದೆ.

ಪ್ರಯೋಗ ಶಾಲೆಯಲ್ಲಿ ಸಂಶೋಧನೆಯನ್ನು ನಡೆಸುವಾಗ ವಿದೇಶಿ ಭಾಷೆಯಲ್ಲಿಯೂ ಶಿಕ್ಷಣವನ್ನು ಕೊಡುವ ರೀತಿಯನ್ನು ಮಕ್ಕಳ ಮಾನಸಿಕ ಪರಿವರ್ತನೆಗಳನ್ನೂ ಗಮನಕ್ಕೆ ತೆಗೆದುಕೊಳ್ಳಲಾಗುವುದು. ಅಂಗವಿಕಲರಾದ ಮಕ್ಕಳಿಗೂ ಶಿಕ್ಷಣ ಕೊಡುವಾಗ ಅನುಕೂಲವಾದ ಕ್ರಮಗಳನ್ನು ನಿಯೋಜಿಸಲು ಗಮನವನ್ನು ಕೊಡಲಾಗುವುದು. ಇದೊಂದು ನೂತನ ಶಿಕ್ಷಣ ವ್ಯವಸ್ಥೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

7—7—1966

೨೦ ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಮೊದಲು—

ಜಾನಕೀ ಪತಿ ರಾಮಚಂದ್ರ ಅಲವಂತಿಯು ತನ್ನ ಆಸ್ತಿ ಪಾಸ್ತಿಗಳನ್ನು ಮಾರಿ ಶಹರ ಸೇರಿದ. ಶಿಬಿರ ಗುಮಾಸ್ತನಾಗಿದ್ದ ಆತ ಗೃಹ ಶಾಖೆಯಲ್ಲಿ ಅಧಿಕಾರಿಯಾದ.

ರಾಮುವಿನ ರೈತ ಮುರುಗ ಜಮೀನ್ದಾರನಾದ; ದುರ್ವ್ಯಸನಿಯಾದ, ಸೆರೆಯಾದ, ತಪ್ಪಿಸಿ ಪುಂಡರ ಗುರುವಾದ. ರಾಮುವಿನ ಮಾನವತೆಯಿಂದ ಲೂಟಿಗಾರರು ಮಾನವರಾದರು.

ರಾಮುವಿನ ಮಿತ್ರ ಕೇದಾರಿ ಸ್ವಪ್ನಲೋಕದಲ್ಲಿ ವಿಹರಿಸುತ್ತಿರುವಾಗಲೇ ರೈತ ಮುರಿಯಿತು. ಪಾತಾಳಕ್ಕೆ ಕುಸಿದ. ಆತನನ್ನು ರಾಮು ಎತ್ತಿದ.

ನಾಗಲಾಪುರದ ಆದರ್ಶ ಗ್ರಾಮದ ರಚನೆಯಾಗಲಿತ್ತು—ರಾಮುವಿನ ನೇತೃತ್ವದಲ್ಲಿ.

ಮುಂದೆ....

— ೪೭ —

ಬಿಸಿಲು ಮಳೆ ಎನ್ನದೆ ಸುಮಾರು ಮೂರು ವರ್ಷ ದುಡಿದಿರುವದರ ಪರಿಣಾಮವಾಗಿ ನೀರಾವರಿ ಯೋಜನೆ ಹಾಗೂ ಹೊಸ ವಾಸಸ್ಥಾನದ ಕೆಲಸ ಮುಗಿಯುತ್ತ ಬಂದಿದೆ. ಹಕ್ಕಿಗಳು ತಮ್ಮ ಗೂಡುಗಳನ್ನು ಕಟ್ಟಿಕೊಳ್ಳುವ ಹಾಗೆ ಮುನ್ನೂರು ಕುಟುಂಬಗಳು ಆನಂದದಿಂದ ಮತ್ತು ಚುರುಕಾಗಿ ಲವಲವಿಕೆಯಿಂದ ಕೆಲಸಮಾಡುತ್ತಿವೆ.

ಎಲ್ಲರಿಗಿಂತಲೂ ಹೆಚ್ಚು ರಾಮುವಿಗೆ ಸಂತೋಷವಾಗಿದೆ. ಅವನು ಎಲ್ಲರೊಡನೆಯೂ ಕಲೆತು ಮಾತನಾಡುತ್ತಾನೆ; ಎಲ್ಲ ದೈಹಿಕ ಶ್ರಮದಲ್ಲೂ ಭಾಗವಹಿಸುತ್ತಾನೆ. ಮುಖ್ಯ ಕೆಲಸಗಳೆಲ್ಲಾ ಮುಗಿಯುತ್ತ ಬಂದಿವೆಯಾದರೂ ರಾಮುವಿನ ಹುಬ್ಬುಗಳು ಚಿಂತಾಕ್ರಾಂತ ಯುವಮಾನವನ ನೋಟವನ್ನು ಸೂಚಿಸುತ್ತಿವೆ. ಅವನ ದೃಷ್ಟಿ ಹೊಳೆಯ ಹೊಯಿಗೆಯ ಮೇಲೆ ಸಂಚರಿಸುತ್ತ, ಮಿನುಗುವ ದಿಗಂತದಲ್ಲಿ ವಿಶ್ರಾಂತಿ ಪಡೆದು, ಕೊನೆಗೆ ಕಾಪಿನ ಮೇಲಿರುವ ಕಾವಲುಗಾರನ ಹಾಗೆ ಇರುವ ತಾಳೆ ಮರಗಳತ್ತ, ಹಾಗೆಯೇ, ಮುಂದರಿದು ವಿಶಾಲ ಹಸುರು ಪರ್ವತಗಳಲ್ಲಿ ಕೊನೆಗೊಂಡಿತು.

ನಾಗಲಾಪುರದ ಪರ್ವತಗಳ ಬುಡದಲ್ಲಿರುವ ನಿಸರ್ಗದ ಅಂದವು ರಾಮುವಿನ ಮೇಲೆ ಬಹಳ ಪರಿಣಾಮವನ್ನುಂಟುಮಾಡಿದೆ. ಆ ಒಂದು ಚಿಕ್ಕ ವಾಸಸ್ಥಾನವನ್ನು ಎಲ್ಲಾ ಕಾಲದ ಹಾಗೂ ನಾಡಿನ ಒಂದು ಆದರ್ಶ ಪ್ರಜಾಸತ್ತೆಯ ರಾಜ್ಯದ ರೀತಿ ಮಾಡಬೇಕೆಂಬುದು ಅವನ ಹಂಬಲ. ಈ ಮೂರು ವರ್ಷಗಳಿಂದ ಅವನ ಹಂಬಲಕ್ಕೆ ಒಂದು ಆಕಾರ ಬರುತ್ತಾ ಇದೆ. ಈಗ ಅವನು ಕೇದಾರಿಯ ಬಳಿ ಸಲಹೆ ಕೇಳಲಾರಂಭಿಸಿದನು.

"ಒಳ್ಳೇದು, ಕೇದಾರಿ", ಸಾಯಂಕಾಲ ನದಿ ದಂಡೆಯಲ್ಲಿ ತಿರುಗಾಡುತ್ತಿರುವಾಗ ಆಸಕ್ತಿಯಿಂದ ರಾಮು ಆರಂಭಿಸಿದನು. "ಮುಂಬರುವ ಜನಾಂಗದ ಆಲೋಚನಾ ಶಕ್ತಿಯುಳ್ಳ ಹಾಗೂ ಪ್ರಗತಿಶೀಲರಿಗೆ ಸಹಾಯವಾಗುವ ಹಾಗೆ ನಮ್ಮ ಜೀವನದ ಹಾಗೂ ಅನುಭವದಿಂದ ಕಲಿತ ರೂಪ ಪಾಠದಿಂದ ಒಂದು ಉತ್ತಮ ಕಾರ್ಯದ ಗುರುತನ್ನು ನಾವು ಬಿಟ್ಟು ಹೋಗಬೇಕು. ನನಗೆ ತೋರುತ್ತಿದೇನೆಂದರೆ, ಮಾನವನು ಪ್ರೌಢನಾಗುವಾಗ ತನ್ನದೇ ಆದ ಸೂಜನ ಶಕ್ತಿ ಸ್ಫೂರ್ತಿಯಿಂದ ಅವನಿಗೆ ರಕ್ಷಣೆಯು ಅತ್ಯಗತ್ಯ. ಆ ಕಲ್ಪನೆ ಹಾಗೂ ಪರೀಕ್ಷಿಸುವ ಮನಸ್ಸಿನಿಂದ ಮತ್ತು ತನ್ನದೇ ಇರುವ ಜಿಜ್ಞಾಸೆ ಹಾಗೂ ಸಾಹಸಗಳ ತಂತ್ರ ಮತ್ತು ಅವಿವೇಕದಿಂದ ರಕ್ಷಿಸಲು ಬೇರದ ಸಂಸ್ಕಾರ ಇರುವದಾದರೂ ಏತಕ್ಕಾಗಿ?

"ನನ್ನದೇ ವಿಷಯ ತೆಗೆದುಕೊಳ್ಳೋಣ, ರಾಮು—ಕಡಿವಾಣ ಇಲ್ಲದ ಆಕಾಂಕ್ಷೆಯ ಕುದುರೆ, ಅಬ್ಬಾ! ಅದೆಂತಹ ಗಲಾಟೆಯನ್ನು ಮಾಡಿತ್ತು?"

"ಹೌದು. ಮುರುಗನ ಜೀವನದತ್ತ ನೋಡು. ಇತರರಿಗೆ ಗುಲಾಮನಾಗಿರಲಿಕ್ಕಾಗಿಯೋ ಏನೋ ಎಂಬಂತೆ ಹುಟ್ಟಿದ್ದ ಮುರುಗನು ಕೆಲ ಘಟನೆಗಳಿಂದಾಗಿ ಹಾಗೂ ಅವನ ಶ್ರಮದ ಫಲದಿಂದಾಗಿ ಸ್ವಲ್ಪ ಸಂಪತ್ತನ್ನು ಸಂಪಾದಿಸಿಕೊಂಡ. ಆ ಸಂಪತ್ತು ಅವನಿಗೆ ಶಾಂತ ಗೌರವ ಪೂರ್ಣ ಹಾಗೂ ತೃಪ್ತಿಕರ ರೀತಿಯಲ್ಲಿ ಮರಣದ ವರೆಗೂ ಸಾಕಾಗುತ್ತಿತ್ತು. ಆದರಿಂದ ಅವನಿಗೆ ತೃಪ್ತಿಯಾಗಲಿಲ್ಲ; ಅಥವಾ ಅವನ ಬಳಿ ಇದ್ದವರಿಗೆ ಅದರಿಂದ ತೃಪ್ತಿಯಾಗಲಿಲ್ಲವೋ ಏನೋ. ಅವನು ಮಹತ್ವಾಕಾಂಕ್ಷೆಯ ಬಂಗಿಕೋರನಾದ. ಹೊಸ ರಕ್ತವು ಹಳೆಯದನ್ನು ಕೊಚ್ಚಿಕೊಂಡು ಹೋಯಿತು. ಅವನೀಗ ಈ ಪರ್ವತಗಳಲ್ಲಿ ನಿಲ್ಲುವಂತಾಗಿದೆ, ಏಕೆ?"

"ಹಾಗಾದರೆ, ಸಮಸ್ಯೆಯನ್ನು ಬಿಡಿಸುವದು ಹೇಗೆ?" ತರ್ಕಾನುರೂಪದ ವಿಚಾರಣೆಯ ರೂಪಕಗಳನ್ನು ನಂಬದಿರುತ್ತಿದ್ದ ಕೇದಾರಿಯು ಸ್ವಲ್ಪ ಆತುರದಿಂದ ಕೇಳಿದನು.

"ಯೋಚನೆ ಹಾಗೂ ಪ್ರಯೋಗಗಳಿಲ್ಲದೆ ವಿಕಾಸ ಅಸಾಧ್ಯ ಕೇದಾರಿ. ಆ ಪ್ರೇರಣೆಗಳ ನಡುವೆ ಮಾನವರನ್ನು ನೈತಿಕ ಅಧಃಪತನದಿಂದ ಪಾರಾಗಿಸಬೇಕಾದಲ್ಲಿ ಮತ್ತು ಹಾಗೆ ಅವನ ಶೋಧನೆ ಹಾಗೂ ಪ್ರಯತ್ನದ ಯೋಗ್ಯತೆಯನ್ನು, ವರ್ಧಿಸಬೇಕಾದಲ್ಲಿ, ಅವನು ವಿಪತ್ತಿನಲ್ಲಿ ಬೀಳಬಹುದಾದಂತಹ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಕನಿಷ್ಟ ಮಿತ ವ್ಯಯದ ಭರವಸೆಯನ್ನವನಿಗೆ ಸಮಾಜವು ನೀಡಬೇಕು."

"ಆ ಮೇಲೆ?" ಕೇದಾರಿಯು ಒಡನೆ ಕೇಳಿದನು.

'ಸರಳ ಜೀವನ ನಡೆಸದಿದ್ದಲ್ಲಿ ಜೀವನವು ಅದೆಂದಿಗೂ ದುಃಖಾವಸ್ಥೆಗೆ ಆಮಂತ್ರಣವನ್ನೀಯುತ್ತದೆ. ಅದು ಇಂದಿನ ಅತ್ಯಾವಶ್ಯಕತೆ ಇದೆ. ಕೇವಲ ಮಾನಸಿಕ ಬೆಳವಣಿಗೆ ಮಾತ್ರ ಸಾಲದು. ಕೇವಲ ಮನೋಬಲವುಳ್ಳ ಮನುಷ್ಯನು ಒರಟು ಹೊಳೆಯ ಹಾಗೆ ವ್ಯರ್ಥ; ಕೆಲ ವೇಳೆ ನೆರೆಕರೆಯವರಿಗೆ ಮಾರಿ ಅಡುಗೆಗಾಗಿ ಯಾವದೂ ಮಡಕೆ ಇಡದಿರುವ ಒಲೆಯಲ್ಲಿ ಉರಿಯುತ್ತಿರುವ ಬೆಂಕಿ. ಅದು ಕೇವಲ ಕರಿ ಮತ್ತು ಹೊಗೆ ಹಾಗೆ ಪೂರ್ಣ ಹಾಳು. ಗ್ರಾಹಕ ಶಕ್ತಿಯನ್ನಿಂದು ಕೇವಲ ಬಂಗಾರದ ಮೊಟ್ಟೆಗಳನ್ನಿಡುವ ಬಾತು ಕೋಳಿಯ ಹಾಗೆ ಪೂಜಿಸುತ್ತಾರೆ; ಹಾಗೆ ಶೀಲ ಮತ್ತು ಮನುಷ್ಯತ್ವವನ್ನು ಸಾಧುವಿನ ಬಳಿ, ಅದಕ್ಕೆ ಅವನೇ ಉತ್ತಮ ರಕ್ಷಕನೆಂಬಂತೆ, ಬಿಡಲಾಗಿದೆ. ಈ ವ್ಯಾಪಾರದ ಹಾಗೂ ಸ್ವಕಾರ್ಯಕ್ಕಾಗಿ ಉಪಯೋಗಿಸಿಕೊಳ್ಳುವ ಮನೋಭಾವನೆಯು ಬದಲಾಗಬೇಕು. ನೀತಿ ಹಾಗೂ ಮನುಷ್ಯತ್ವಗಳಲ್ಲಿ, ಶೀಲ ಮತ್ತು ಸರಳತೆಗಳಲ್ಲಿ ಬೇರು ಬಿಡದಿರುವ ಮನೋಬಲವು ಗೊಂದಲಕ್ಕೆ ಹಾಗೂ ಸ್ವನಾಶಕ್ಕೆ ಕಾರಣವಾಗುತ್ತದೆ. ಅದು ಬೇರೆಯವರನ್ನು ಹಾಗೂ ಅವನನ್ನು ನಾಶ ಮಾಡುತ್ತದೆ. ಹಾಗಾಗಿ ಬದಲಾವಣೆ ನಡೆಯಲೇ ಬೇಕು..."

'ರಾಮು, ನೀನು ಹೇಳುವದೆಲ್ಲಾ ಆಧುನಿಕತೆಯ ಪ್ರವಾಹಕ್ಕೆ ತಡೆಯಲ್ಲವೇನು? ವಿಕಾಸದ ಪ್ರೇರಣೆಯು ಕೂಡಾ ಹಾಗೆಯೇ ಎಂದು ನಾನು ಭಾವಿಸುತ್ತೇನೆ. ಮನುಷ್ಯನಿಂದು ಕೇವಲ ಮೆದುಳು-ಶಕ್ತಿಯನ್ನು ಮಾತ್ರ ವೃದ್ಧಿಪಡಿಸಿಕೊಳ್ಳುತ್ತಿರುವಂತೆ ಕಂಡು ಬರುತ್ತದೆ. ಈ ಅಪೂರ್ವ ಚೇನನ್ನು ಅತಿ ತೀಕ್ಷ್ಣ ಅಲಗಿನಿಂದ ಕಡಿಯುವಂತೆ ಬೇರೆ ಎಲ್ಲವನ್ನೂ ಜಾಳಿಯ ಹೆಸರಿನಲ್ಲಿ ತ್ಯಾಗ ಮಾಡುತ್ತಿದ್ದೇವೆ.'

"ಅದಕ್ಕಿಂತಲೂ ಇಬ್ಬಾಯಿಯ ಆಯುಧವೆಂದು ಹೇಳು. ಅದೆಲ್ಲವೂ ಉಪಯೋಗಿಸಿಕೊಳ್ಳುವದರ ಮೇಲೆ ಹೊಂದಿಕೊಂಡಿದೆ."

"ನೀನಿತ್ತಿರುವ ಹೋಲಿಕೆಗೆಬೆಂಬಲಕೊಡುವದಕ್ಕಾಗಿ ಮೆದುಳು-ಶಕ್ತಿಯನ್ನು ಕೇವಲ ಒಂದು ಕಲ್ಲುಳಿ ಎನ್ನಬಹುದು. ಅದನ್ನು ಪರಿಚಯ ಇರುವ ಶಕ್ತಿಯಿಂದ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಅದು ಅಷ್ಟಕ್ಕೇನೆ ಮುಗಿಯುವದಿಲ್ಲ. ಅದು ತನ್ನಷ್ಟಕ್ಕೇನೆ ವರ್ತಿಸುವದಿಲ್ಲ. ಕೆಲಸಕ್ಕೆ ಶ್ರದ್ಧೆ ಬೇರೆಡೆಯಿಂದ ಬರಬೇಕು. ಅದನ್ನು ಬೇಕಾದಲ್ಲಿ ಗುಣ, ನೀತಿ, ಮತ ದೇವರು ಅಥವಾ ಜಗತ್ತಿನ ಅಂತರಾತ್ಮ ಅಥವಾ ತಿಳುವಳಿಕೆಗೆ ಎಟುಕದ ದೈವಿಕ ಎಂದೆಲ್ಲಾ ಹೇಳಬಹುದು. ಅವೆಲ್ಲಾ ಒಂದೇ ಇದೆ. ಕೇವಲ ಮನೋಬಲದ ಪ್ರಾಣಪೂಜೆ ನಿಲ್ಲಬೇಕು. ಪ್ರತಿಯೊಂದು ಕೆಲಸದಲ್ಲಿ ನಮ್ಮ ಹೃದಯ ಹಾಗೂ ಶಸ್ತ್ರಗಳ ಬದಲಾವಣೆಯಾಗಬೇಕಾದಲ್ಲಿ ಈ ನವನಾಗರೀಕತೆ..."

"ಹಾಗೆಂದರೆ, ಎಲ್ಲರಲ್ಲೂ ಅಂಟಿಕೊಂಡು ಹಿಂದಿನಿಂದ ಬಂದಿರುವ ಹಲವಾರು ಚಾಳಿಗಳು, ರೂಢಿಯಲ್ಲಿರುವ ಅಭಿಪ್ರಾಯಗಳೆಲ್ಲವೂ ಆಮೂಲಾಗ್ರ ಬದಲಾಗಬೇಕೆನ್ನು...'

"ಏನಿದ್ದರೂ ಕೇದಾರಿ, ನಮ್ಮಲ್ಲೇನೂ ನಿಶ್ಚಿತ ಚಾಳಿಗಳು ಇರುವದಿಲ್ಲ, ಹಾಗಾಗಿ ಮಹಾನ್ ಬದಲಾವಣೆಯೂ ನಡೆಯಬೇಕಾಗಿಲ್ಲ, ಕಚ್ಚಾ ಹೊಸ ಪಶ್ಚಿಮದಿಂದ ಬಹಳ ಪುರಾತನ ಪೂರ್ವಕ್ಕೆ ಅಷ್ಟೇ. ಸಾರವಂತವನ್ನಾಗಿ ಮಾಡುವ ಈ ನವೀನ ಆಲೋಚನೆಗಳಿಗಾಗಿ ನಾವು ಐವತ್ತು ವರ್ಷಗಳನ್ನು ತೆಗೆದುಕೊಂಡಿದ್ದೇವೆ. ಕಟ್ಟೆತನವು ಯಾವಾಗಲೂ ಕಾಡು ಬಳ್ಳಿಯಂತೆ ಬಹಳ ಬೇಗನೆ ಹಬ್ಬಿ ಬಲಿತು ಬಿಡುತ್ತದೆ."

ರಾಮುವಿನಲ್ಲಿ ಹೊಸ ಹೊಸ ಆಲೋಚನೆಗಳ ತೆರೆಗಳು ಏಳುತ್ತಿದ್ದುವು. ಅವ

(ಇದಿನ್ನೈದನೇ ಪುಟ ನೋಡಿರಿ)

ಎಸ್. ಆರ್. ಬೀಡಿಗಳು
SR
REGD.
S.R. BEEDI WORKS, UDIPI, S.K.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಬಲ್ಗೇರಿಯದ ಸುಪ್ರಸಿದ್ಧ
ಸಂಗೀತ ಕಲಾವಿದೆ
ರಾಯಿನಾ ಕಬಾಯಿವಾನ್‌ಸ್ಕಾ.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೩	೭—೭—೧೯೬೬	No. 43

ಭಾಗ್ಲ ಧೀರರಾಗಬೇಕು

ಎಂ. ಸಿ. ಛಗಲಾ ಅವರು ಕೇಂದ್ರದಲ್ಲಿ ಶಿಕ್ಷಣ ಮಂತ್ರಿಯಾದ ಮೇಲೆ ಶಿಕ್ಷಣ ರಂಗದಲ್ಲೊಂದು ಹೊಸ ಚೇತನ ಬೀಸುವುದಕ್ಕೆ ಆರಂಭವಾಗಿದೆ. ಭವಿಷ್ಯದ ಭವ್ಯ ಭಾರತ ನಿರ್ಮಾಣವು ಇಂದು ನಾವು ನೀಡುತ್ತಿರುವ ಶಿಕ್ಷಣವನ್ನೇ ಹೊಂದಿಕೊಂಡಿದೆ, ಬಹುವಾಗಿ, ಎಂಬುದು ಸತ್ಯ. ಆದುದರಿಂದ ಸಾರ್ವತ್ರಿಕ ಶಿಕ್ಷಣದ ಈ ದಿನಗಳಲ್ಲಿ ಪ್ರಜಾತಂತ್ರಕ್ಕೆ ಹೊಂದಿಕೊಳ್ಳುವ, ದೇಶದ ಭವಿಷ್ಯ ನಿರೂಪಣೆಗೆ ಅನುಕೂಲವಾದ ಶಿಕ್ಷಣವನ್ನು ಕೊಡಬೇಕು, ಉತ್ತಮ ಶಿಕ್ಷಕರನ್ನೂ ನೇಮಿಸಬೇಕು; ಪಾಠಶಾಲಾ ಕಟ್ಟಡಗಳು, ಬೋಧನೋಪಕರಣಗಳು, ಪಾಠ್ಯ ಪುಸ್ತಕಗಳು—ಹೀಗೆ ಒಂದಲ್ಲ ನೂರು ರಂಗದಲ್ಲಿರುವ ಕುಂದುಕೊರತೆಗಳನ್ನು ತುಂಬಿಕೊಳ್ಳಬೇಕು. ೨೦ ತಿಂಗಳುಗಳ ಹಿಂದೆ ನೇಮಿತವಾದ ಡಾ| ಡಿ. ಸಿ. ಕೊಠಾರಿಯವರು ಅಧ್ಯಕ್ಷರಾಗಿರುವ, ದೇಶೀಯ ವಿದೇಶಿಯ ಶಿಕ್ಷಣವೇತ್ತರು ಸದಸ್ಯರಾಗಿರುವ, ಶಿಕ್ಷಣ ಆಯೋಗಗಳು ಬಹಳಷ್ಟು ಪರಿಶ್ರಮಿಸಿ ತನ್ನ ದೀರ್ಘ ವರದಿಯನ್ನು ಸರಕಾರಕ್ಕೆ ಒಪ್ಪಿಸಿದೆ. ಅದು ಮುಟ್ಟದ ಸೋಗೆಯಿಲ್ಲವೆಂಬಂತೆ ಈ ವರದಿಯೂ ಮುಟ್ಟದ ಶೈಕ್ಷಣಿಕ ರಂಗವಿಲ್ಲವೆನ್ನಬಹುದು.

ಇಂದು ನಮ್ಮ ದೇಶದ ಶಿಕ್ಷಣವು ಆಂಗ್ಲ ಸರಕಾರವು ಸ್ವೀಕರಿಸಿದ ಮೆಕಾಲೆ ಆಯೋಗದ ವರದಿಯನ್ನು ಆಧರಿಸಿದೆ. ಮುಂದೆ ಡಾ| ರಾಧಾಕೃಷ್ಣನ್ ಸಮಿತಿಯ ಸಲಹೆಗಳು ವಿಶ್ವವಿದ್ಯಾಲಯ ಶಿಕ್ಷಣದಲ್ಲೂ, ಡಾ| ಲಕ್ಷ್ಮಣಸ್ವಾಮಿ ಮುದಲಿಯಾರ್ ಸಮಿತಿಯ ಸಲಹೆಗಳು ಮಾಧ್ಯಮಿಕ ಶಿಕ್ಷಣದಲ್ಲೂ, ಡಾ| ಜಾಕೀರ್ ಹುಸೇನ್ ಸಮಿತಿಯ ವರದಿಯು ಬುನಾದಿ ಶಿಕ್ಷಣದಲ್ಲೂ ಅಲ್ಪಸ್ವಲ್ಪ ಬದಲಾವಣೆಯನ್ನು ಮಾಡಿದುವು. ಆದರೆ, ಡಾ| ಕೊಠಾರಿ ವರದಿಯು ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಶಿಕ್ಷಣದ ವರೆಗೂ ತನ್ನ ಕೈಯಾಡಿಸಿದೆ. ಆದುದರಿಂದಲೇ ಈ ವರದಿಯು ಮಹತ್ವದ್ದಿದೆ; ಇದರ ಸಲಹೆಗಳಲ್ಲಿ ಹೆಚ್ಚಿನವನ್ನು ಕಾರ್ಯಗತ ಮಾಡಿದರೆ, ಶಿಕ್ಷಣ ರಂಗದಲ್ಲೊಂದು ಮಹತ್ತರ ಕ್ರಾಂತಿಯೇ ಆವುದೆಂಬುದನ್ನು ಮರೆಯಲಾರೆವು. ವರದಿಯು ಇಂದಿನ ಶಿಕ್ಷಣ ಪ್ರಣಾಳಿಯ ದೇಹವನ್ನು ಮುಟ್ಟುವ ಪ್ರಯತ್ನ ಮಾಡಲಿಲ್ಲ; ಆದರೆ, ಸಾರ್ವತ್ರಿಕ ಶಿಕ್ಷಣದ ದೆಸೆಯಿಂದ ಇಳಿಯುತ್ತಿರುವ ಶಿಕ್ಷಣ ಮಟ್ಟವನ್ನು ಎತ್ತರಿಸುವ ಬಗೆ ಹೇಗೆ ಎಂಬುದನ್ನು ವಿವೇಚಿಸಿದೆ. ಇಂದಿನ ದೇಶ—ಕಾಲಗಳಿಗನುಗುಣವಾದ ಶಿಕ್ಷಣವನ್ನು ಹೇಗೆ ನೀಡಬಹುದೆಂಬುದನ್ನು ಸೂಚಿಸಿದೆ. ಅಂದರೆ, ಮೆಕಾಲೆಯವರು ರೂಪಿಸಿದ್ದ ಕಳೇವರದಲ್ಲಿ ಹೊಸ ಪ್ರಾಣ ಪ್ರತಿಷ್ಠೆ ಮಾಡುವ ಪ್ರಯತ್ನವನ್ನು ಕೊಠಾರಿ ವರದಿಯು ಮಾಡಿದೆ.

ಹನ್ನೆರಡು ವರ್ಷಗಳ ಶಾಲಾ ಶಿಕ್ಷಣ ಮೂರು ವರ್ಷಗಳ ಪದವೀ ಶಿಕ್ಷಣ ಮತ್ತೆ ಎರಡು ಯಾ ಮೂರು ವರ್ಷಗಳ ಸ್ನಾತಕೋತ್ತರ ಶಿಕ್ಷಣ—ಇದು ವರ್ಷಗಳ ಹಂಚಿಕೆ. ಶಾಲಾ ಶಿಕ್ಷಣವೂ ಪ್ರಾಥಮಿಕ ಪ್ರೌಢ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ೫,೩ ಮತ್ತು ೪ ವರ್ಷಗಳದ್ದಿರಬಹುದೆಂದು ಸಮಿತಿಯ ಅಭಿಪ್ರಾಯ. ಅಭ್ಯಾಸ ಪತ್ರಿಕೆಯ ಉತ್ತರಣ, ತ್ರಿಭಾಷಾ ಸೂತ್ರ, ವಿಜ್ಞಾನ—ಗಣಿತಗಳ ಖಡ್ಡಾಯ ಶಿಕ್ಷಣ, ಮಾಧ್ಯಮಿಕ ಹಂತದಲ್ಲಿ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ—ಇವು ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಸಲಹೆಗಳು. ಮಾತೃ ಭಾಷೆಯಲ್ಲಿಯೇ ಶಿಕ್ಷಣ ದೊರೆಯಬೇಕೆನ್ನುವ ವರದಿಯು ವಿಶ್ವವಿದ್ಯಾಲಯಗಳಲ್ಲಿ ಸದ್ಯ ಇಂಗ್ಲಿಷ್ ಮಾಧ್ಯಮವೇ ಇರಬೇಕೆನ್ನುತ್ತದೆ; ಪ್ರತಿ ರಾಜ್ಯದಲ್ಲಿಯೂ ಆ ರಾಜ್ಯದ ಪ್ರಾದೇಶಿಕ ಭಾಷೆಯೇ ಆಡಳಿತ ಭಾಷೆಯಾಗಬೇಕು ಎಂದೂ ಹೇಳುತ್ತದೆ. ಹಿಂದಿಯು ಕ್ರಮೇಣ ಇಂಗ್ಲಿಷಿನ ಸ್ಥಾನವನ್ನು ಹೊಂದಬೇಕೆಂದು ವರದಿ ಸಾರಿದರೂ ಹಿಂದಿಯ ಅಭ್ಯಾಸ—ಅಧ್ಯಯನಕ್ಕೆ ಸರಿಯಾದ ದಾರಿ ತೋರಿಸಿರುವುದಿಲ್ಲ. ತ್ರಿಭಾಷಾ ಸೂತ್ರವನ್ನು ಅದು ಬೆಂಬಲಿಸುತ್ತದಾದರೂ ಹಿಂದಿಯನ್ನು ಬಿಟ್ಟು ಈ ಸೂತ್ರವನ್ನು ಅಳವಡಿಸಿಕೊಳ್ಳುವ ಸಾಧ್ಯತೆಯಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ವರದಿಯ ನ್ಯೂನತೆಯೆಂದರೆ, ಭಾರತೀಯ ಸಂಸ್ಕೃತಿಯ ಜೀವಾಳ ಸಂಸ್ಕೃತ ಭಾಷೆಯ ಅಧ್ಯಯನಕ್ಕೆ ಅಸ್ಪದವೇ ಇಲ್ಲದಂತಿರುವುದು.

ವರದಿಯ ಇನ್ನೊಂದು ವೈಶಿಷ್ಟ್ಯ, ಎದ್ದು ತೋರುವ ವೈಶಿಷ್ಟ್ಯವೆಂದರೆ—ಶಿಕ್ಷಕರ ವೇತನ ಪ್ರಮಾಣದಲ್ಲಿ ಕ್ರಾಂತಿಕಾರಿ ಹೆಚ್ಚಳದ ಸಲಹೆ. ಶಿಕ್ಷಕರು ಸಮಾಜ ನಿರ್ಮಾಪಕರು. ಅತೃಪ್ತ ಶಿಕ್ಷಕರಿಂದ ಶಿಕ್ಷಣ ಯಶಸ್ವಿಯಾಗುವುದಿಲ್ಲ ಮಾತ್ರವಲ್ಲ, ಶಿಕ್ಷಣದ ಅಧಃಪತನವೂ ಆಗುತ್ತದೆ. ಶಿಕ್ಷಕರು ಸ್ವಾವಲಂಬಿಗಳಾಗಿ ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಎತ್ತರಿಸಲು ಅವರ ವೇತನ ಪ್ರಮಾಣ ಹೆಚ್ಚಬೇಕೆಂದು ಸಮಿತಿಯ ಸ್ಪಷ್ಟ ಅಭಿಪ್ರಾಯ. ಅದು ಪ್ರತಿ ವರ್ಗದ ಶಿಕ್ಷಕರ ಕನಿಷ್ಠ ವೇತನ ಪ್ರಮಾಣದ ಸಲಹೆ ಮಾಡಿ ಇವನ್ನು ಕೇಂದ್ರ ಸರಕಾರವೂ ರಾಜ್ಯ ಸರಕಾರಗಳೂ ಈ ಕೂಡಲೇ ಜ್ಯಾರಿಗೆ ತರಬೇಕೆಂದು ಹೇಳಿದೆ. ಕೇಂದ್ರವು ರಾಜ್ಯಗಳಿಗೆ ಉದಾರವಾಗಿ ಧನ ಸಹಾಯ ನೀಡುವ ಸೂಚನೆಯೂ ಇದೆ. ಈ ವೇತನವು ಪ್ರತಿ ಐದು ವರ್ಷಗಳಿಗೊಮ್ಮೆ ಪುನರ್ವಿಮರ್ಶಿತವಾಗಬೇಕೆಂದೂ ಪಾಡಿಕೆಯ ತುಟ್ಟಿ ಭತ್ತೆ ಇದಕ್ಕೆ ಜೊತೆಯಾದುದೆಂದೂ ವರದಿ ಹೇಳುತ್ತದೆ. ಆಕರ್ಷಕ ಸಲಹೆ—ಇದು ಕಾರ್ಯಕವಾದರೆ, ಶಿಕ್ಷಕ ಬಂಧುಗಳು ತನ್ನ ಉದ್ಯೋಗದ ಬಗ್ಗೆ ಹೆಚ್ಚು ನೊಂದುಕೊಳ್ಳಬೇಕಿಲ್ಲ.

ಆದರೆ ಒಂದು ಪ್ರಶ್ನೆಗೆ ಉತ್ತರ ಯಾರೂ ಹೇಳಲಿಲ್ಲ. ಈಗ ಶಿಕ್ಷಣಕ್ಕೆಂದು ವಾರ್ಷಿಕ ಆರು ನೂರು ಕೋಟಿ ರೂಪಾಯಿ ವೆಚ್ಚವಾಗುವುದು; ಅಂದರೆ ತಲಾ ೧೨ ರೂಪಾಯಿ. ಇದು ಇನ್ನು ಇಪ್ಪತ್ತು ವರ್ಷಗಳಲ್ಲಿ ೪ ಸಾವಿರ ಕೋಟಿ, ಅಂದರೆ ತಲಾ ರೂ. ೫೪, ಯನ್ನು ಮುಟ್ಟಬೇಕೆಂದು ಸಮಿತಿಯ ಸಲಹೆ. ಇಷ್ಟೊಂದು ಹಣವನ್ನು ಎಲ್ಲಿಂದ ತರಬೇಕು? ಹೆಚ್ಚಿನ ರಾಜ್ಯ ಸರಕಾರಗಳು ಆರ್ಥಿಕ ದುಸ್ಥಿತಿಯಿಂದ ನರಳುವ ನಿತ್ಯ ರೋಗಿಗಳು. ಅವರಿಂದ ಏನು ನಿರೀಕ್ಷಿಸಬಹುದು? ಕೇಂದ್ರವಾದರೂ ಎಷ್ಟು ಸಹಾಯ ಮಾಡೀತು? ಕರ್ನಾಟಕ ಶಿಕ್ಷಣ ಮಂತ್ರಿ ಎಸ್. ಆರ್. ಕಂಠಿ ಮೊದಲೇ ಉದ್ಗರಿಸಿದ್ದಾರೆ. "ಹಣವೆಲ್ಲಿಂದ?" ಈ ಪರಿಸ್ಥಿತಿಯಲ್ಲಿ ವರದಿಯ ಪರಿಣಾಮದ ಬಗ್ಗೆ ಹೆಚ್ಚು ಆಶಾವಾದಿಗಳಾಗಿರುವುದು ಸಾಧ್ಯವಿಲ್ಲ. ಆದರೂ ಛಾಗ್ಲಾ ಸಾರಿದ್ದಾರೆ, "ವರದಿಯು ಬರಿಯ ಪುಸ್ತಕದ ಬದನೆಕಾಯಿಯಾಗದಂತೆ ನೋಡಿಕೊಳ್ಳಲಾಗುವುದು'—ಈ ಮಾತಿನಲ್ಲಿ ಶಿಕ್ಷಕರು ವಿಶ್ವಾಸವಿಡಬಹುದು.' ಛಾಗ್ಲಾ ಅಂತಹ ವ್ಯಕ್ತಿ—ಇದನ್ನು ಕಾರ್ಯರೂಪಕ್ಕೆ ತರಲು ಛಾಗ್ಲಾ ಧೀರರಾಗಬೇಕು.

ಹೆಬ್ಬಾವಿಗೆ ವಿಷವಿಲ್ಲ.

ಕೆಂಪು ಚೀನಾದ ಪ್ರಧಾನಿ ಚಾ—ಎನ್—ಲಾಯ್ ಮತ್ತೆ ರಾವಲ್ಪಿಂಡಿಗೆ ಹಾರಿದರು; ಅಯ್ಯೂಬರನ್ನು ಕಂಡರು, ವಿಚಾರ ವಿನಿಮಯ ಮಾಡಿದರು; ಪಾಕಿಸ್ತಾನಕ್ಕೆ ಕೆಂಪು ಚೀನಾದ ಸಹಾಯ ಸಂಪೂರ್ಣ ಇದೆಯೆಂದು ಸಾರಿದರು. ವಿದೇಶ ಮಂತ್ರಿ ಭುಟ್ಟೋ ನಿರ್ಗಮನಾನಂತರದ ಈ ಮಹತ್ವದ ಭೆಟ್ಟಿಯ ಒಳಗುಟ್ಟು ಶಿವನಿಗೂ ಅರಿಯದು. ಅಮೆರಿಕೆಯತ್ತ ವಾಲುವ ಅಯ್ಯೂಬರ ಕುತ್ತಿಗೆಗೆ ಪಾಶ ಹಾಕುವ ತಂತ್ರಲಾಯಿದ್ದದ್ದರೂ ಇರಬಹುದು. ಆದರೆ, ಹೆಬ್ಬಾವಿಗೆ ವಿಷವಿಲ್ಲವೆಂದು ಅಯ್ಯೂಬರಿಗೆ ತಿಳಿದಿಲ್ಲವೆ?

ನರಸಣ್ಣನ ಸರಸ

'ಭಾರತ—ಪಾಕಿಸ್ತಾನದ ಸಚಿವ ಮಂತ್ರಿ ಮಟ್ಟದ ಸಭೆ ಪ್ರಾರಂಭವಾಗುತ್ತಂತೆ....'

'ಭುಟ್ಟೋ ನೀತಿಯ ಉತ್ತರ ಕ್ರಿಯೆ ಯಾಗದಂತೂ ಸಾಧ್ಯವಿಲ್ಲ...'

ವಚನ ಸುಧೆ

ನಾಗ್ನಿ ಸ್ತೃಪ್ಯತಿ ಕಾಷ್ಠಾನಾಂ
ನಾಪಗಾನಾಂ ಮಹೋದಧಿ:
ನಾಂತಕ: ಸರ್ವಭೂತಾನಾಂ
ನ ಪುಂಸಾಂ ವಾಮಲೋಚನಾ॥

ಕಟ್ಟಿಗೆಯಿಂದ ಬೆಂಕಿ, ನದಿಯಿಂದ ಸಮುದ್ರ, ಪ್ರಾಣಿಗಳಿಂದ ಮೃತ್ಯು, ಪುರುಷರಿಂದ ವ್ಯಭಿಚಾರಿಣಿಯರು ತೃಪ್ತಿ ಹೊಂದುವುದಿಲ್ಲ.

ಗೇಹ ರಾಜ್ಯದಲ್ಲಿ

ಕಲ್ಪನೆಯ ಸೌಂದರ್ಯ ವ್ಯವಹಾರಕುಂಟೆ?

"ಓಹೋ, ಏನಿದು ಭಾರೀ ಪ್ರಸನ್ನವಾಗಿದೆಯಲ್ಲಾ ಮುಖಾರವಿಂದ?"

"ಮತ್ತೇನು ನಿಮ್ಮ ಹಾಗೆ ಜೋಲು ಮೂತಿ ಹಾಕಿಕೊಂಡಿರಬೇಕಿತ್ತೇನು?"

"ನಾನು ಹಾಗಂದೇನೆ? ಯಾವಾಗಲೂ ನಳನಳಿಸಿ ನಗುತಿರುವ ಹೂವಿನಂತಿರಬೇಕೂಂತ ಹೇಳೋಣವ...."

'ಹೌದಪ್ಪ, ಬೇರೆಯವ್ರೆಲ್ಲಾ ನಗ್ತಾನೇ ಇದ್ರೆ ನಿಮ್ಗೆ ಏನು ಸಂತೋಷ ಆದೀತು?"

"ಯಾಕೆ ಹಾಗಂತೀಯ?"

"ಮತ್ಯಾಕೆ, ನೋಡೋವಾಗ ಗೊತ್ತಾಗೋದಿಲ್ವೆ?"

"ಏನು ಗೊತ್ತಾಗುತ್ತೆ, ಅದನ್ನಾದ್ರೂ ತಿಳಿಸಿ ಬಿಡು..."

'ಅದೆಲ್ಲಾ ನಂಗೊತ್ತಿಲ್ಲ. ನಿಮ್ಮ ಮುಖ ಹೇಳುತ್ತೆ, ಪ್ರಸನ್ನವಿಲ್ಲಾಂತ..."

'ಹ್ಞಾಂ, ಯಾಕೋ ಏನೋ ಬೇಸರ..'

"ಏನಾಯ್ತಂತೆ? ನನಗಂತೂ....'

'ಅದು ಆಗ್ಲೇ ಗೊತ್ತಾಯ್ತು ಬಿಡು. ಸದ್ಯ ನಿನ್ನ ಸಂತೋಷಕ್ಕೆ ಕಾರಣ ಹೇಳಿದ್ರೆ ನನ್ನ ಅಸಂತೋಷದ ಕಾರಣ ಹೇಳ್ತೇನೆ...."

'ಮತ್ಯಾಕ್ರಿ, ಪುಂಡಾಟಿಕೆಯಲ್ಲಿ ಮರಾಠಿಗರದ್ದೇ ಮೇಲುಗೈಯ್ ಅಂತ ಇತ್ತು. ಇನ್ನೂ ನಾಲ್ಕುದಿನ ಸತ್ಯಾಗ್ರಹ ಮುಂದುವರಿಯುವುದರೊಳಗೆ ನಾವೂ ಕಡಿಮೆಯಿಲ್ಲಾಂತ ಸರ್ಟಿಫಿಕೇಟ್ ಸಿಗುತ್ತೆ.'

"ನೀನು ಗಡಿಸತ್ಯಾಗ್ರಹದ ದುರ್ಘಟನೆಗಳ ಬಗ್ಗೆ ಮಾತಾಡ್ತೀಯೇನು?'

"ಮತ್ತೆಂಥದು? ದಾವಣಗೆರೆ—ಹರಿಹರಗಳಲ್ಲಿ ಸರಿಯಾಯ್ತು. ನೋಡಿ, ಎಲ್ಲಿಯೋ ಒಂದು ಕಡೆ ಹಳಿಯ ಬೋಲ್ಟ್ ತಪ್ಪಿಸುವ ಪ್ರಯತ್ನ ನಡೆಯಿತು."

"ಇದು ವಿಫಲವಾಯ್ತಲ್ಲ?"

"ಸೋಲು ಗೆಲವಿನ ಮಾತಲ್ಲ. ದೇಸೂರ ಬಳಿಯ ಅಪಘಾತಕ್ಕೆ ವಿಧ್ವಂಸಕ ಕೃತಿಯೇ ಕಾರಣವೆಂದು ತಾತ್ಕಾಲಿಕ ನಿರ್ಣಯ ಬಂದಿದೆ. ಬೋಲ್ಟ್ ತಪ್ಪಿಸಿ ದೊಡ್ಡ ಅಪಘಾತ ಮಾಡಬಹುದೆಂದು ಲೋಕಕ್ಕೆ ಪಾಠ ದೊರೆಯಿತು. ಇನ್ನೇನು? ಎಲ್ಲೆಲ್ಲಿಯೂ ಹಳಿ ತಪ್ಪಿಸುವಷ್ಟು ಮೂರ್ಖತನ ಯಾರೂ ತೋರಿಸಲಾರರು."

"ಆದರೆ ನೋಡು, ನಮ್ಮದು ಅಹಿಂಸಾಮಯ ಸತ್ಯಾಗ್ರಹ. ಇದರ ಜನಕ ಮಹಾತ್ಮ ಗಾಂಧಿ—ಸತ್ಯ—ನ್ಯಾಯ—ಧರ್ಮ—ನೀತಿ—ಮಾನವತೆಯೇ ಇದರ ಪಂಚಾಂಗ...."

"ಯಾರು ಅಲ್ಲವೆಂದರು?"

"ಹಾಗಿರುವಾಗ ಅದು ಅಸತ್ಯದತ್ತ ವಾಲಲಾರದು, ಅನ್ಯಾಯದತ್ತ ಒಲಿಯಲಾರದು, ಅಧರ್ಮವನ್ನು ಬಿಗಿದಪ್ಪಲಾರದು, ಅನೀತಿಯ ಮುಖ ನೋಡಲಾರದು, ಅಮಾನವತೆಯ ಸ್ಪರ್ಶ ಮಾಡದು..'

"ನೋಡಿ, ನಿಮಗೊಂದು ಮಾತು ಹೇಳ್ತೇನೆ. ಎಲ್ಲವೂ ಆರಂಭವಾಗುವುದು ಒಂದರಿಂದ, ಕೊನೆಗೊಳ್ಳುವುದು ಮಾತ್ರ ಹತ್ತರಲ್ಲಿ. ಈಗಲೇ ನೋಡಿ, ನಿಮ್ಮ ಸತ್ಯಾಗ್ರಹದ ನಾಯಕತ್ವ ಹೇಗಿದೇಂತ?"

"ಏನು ಮಾಡುವುದು? ಹಂಸೆಗಳ ಸಾಲಿನಲ್ಲಿ ಬಕಗಳೂ ಅಪ್ಪಿತಪ್ಪಿ ಸೇರಿಬಿಡುತ್ತವೆ..."

"ಆಗಲೇ ನೋಡಿ, ನಿಮ್ಮ ಗಾಂಧಿ ತೋರಿದ ಸತ್ಯಾಗ್ರಹ-ಅಹಿಂಸೆಯಿಂದ ಕಳಚಿ ಹಿಂಸೆಗೆ ಕಾರಣವಾಗತೊಡಗಿದೆ. ಗೋಳಿಬಾರ್ — ಲಾಟಿ ಪ್ರಹಾರ—ಅಶ್ರುವಾಯು ಪ್ರಯೋಗ—ಸಾವು, ನೋವು—ಇದು ಮರಾಠಿಗರ ಪುಂಡಾಟಿಕೆಯಿಂದ ಹೆಚ್ಚು ದೂರವಿಲ್ಲ. ಇನ್ನೂ ನಾಲ್ಕು ದಿನ ಕಳೆದರೆ, ಮತ್ತೆ ಕೇಳಿ, ಅವರಿಗಿಂತಲೂ ನಾವು ಒಂದು ಹೆಜ್ಜೆ ಮುಂದುವರಿಯುತ್ತೇವೆ."

"ಅದು ಹೇಗೆ?"

"ಅವರು ಗಡಿಕನ್ನಡಿಗರನ್ನು ಹಿಂಸಿಸುತ್ತಾರೆ; ನಾವು ಒಳಗಿನ ಕನ್ನಡಿಗರನ್ನೇ ಬಲಿತೆಗೆಯುತ್ತೇವೆ. ಹೀಗಾದಲ್ಲಿಯೇ ಕೇಂದ್ರ ವರಿಷ್ಠರ ಗಮನ ಸೆಳೆಯಬಹುದು; ಆಗಲಾದರೂ ಕನ್ನಡಿಗರಿಗೆ ನ್ಯಾಯ ದೊರೆಯಬಹುದು...'

"ಆದರೆ...."

'ನೀವೇನೂ ಅನ್ನಬೇಡಿ. ನನಗೆ ಗೊತ್ತು, ನೀವಿದನ್ನು ಒಪ್ಪುವುದಿಲ್ಲಾಂತ. ಮಾವನ ಮನೆಯಿಂದ ಮರಳುವಾಗ ಬಸ್ ಟಿಕೇಟಿನ ಹಣ ಮುಂದೆ ಮಾಡಿದರೆಂದ. ಮಾವನ ಮನೆಗೆ ಹೋಗುವುದನ್ನೇ ನಿಲ್ಲಿಸಿದ ಮರ್ಯಾದಾವಂತರಲ್ಲವೆ?"

"ಏ, ಸಾಕು ಮಾಡೆ ನಿನ್ನ ಪುರಾಣ, ನಾನನ್ನೋದನ್ನ ತುಸು ಕೇಳು...."

"ಅಯ್ಯಪ್ಪ, ನನ್ನದು ಪುರಾಣ, ನಿಮ್ಮದು ಇತಿಹಾಸ ತಾನೆ?"

"ನನ್ನ ಅಭಿಪ್ರಾಯದಲ್ಲಿ ಅನ್ಯಾಯದಿಂದ ಇಡಿಯ ಮಹಾರಾಷ್ಟ್ರ ನಮಗೆ ಸಿಕ್ಕಿದರೂ ಅದು ತ್ಯಾಜ್ಯ."

'ಮತ್ತೆ ನಿಮ್ಮ ನ್ಯಾಯವನ್ನು ಯಾರು ಕೇಳ್ತಾರೆ?'

"ಯಾರು ಕೇಳದೆ ಇದ್ರೂ ದೇವ್ರು ಕೇಳ್ತಾರೆ?

"ಅದು ನಿಜ. ಮತ್ಯಾಕೆ ನೀವು ಸತ್ಯಾಗ್ರಹ ಮಾಡೋಕೆ ಪ್ರೋತ್ಸಾಹ ನೀಡ್ತೀರಿ? ದೇವ್ರ ಮುಂದೆ ಅತ್ತು ಗೋಗರೆದು ಬನ್ನಿ; ಸಿದ್ಧಿಯುತ್ತೆ ಕೆಲಸ...'

'ರೇಗಾಡ್ಬೇಡವೆ.... ತುಸು ಮೆಲ್ಲ ಮಾತಾಡು. ಯಾರಾದರೂ ಕೇಳಿದ್ರೆ..."

'ಈಕೇಡ್ನೊಂದು ಘಡಿ ಗಂಟಲೂಂತ ಅಂದಾರು. ಅಂದುಕೊಳ್ಳಿ ಅವರಂದ ಮಾತ್ರಕ್ಕೆ ನನ್ನಗಂಟೇನು ಮುಳುಗಿ ಬಿಡುತ್ತೆ?"

'ಅಯ್ಯಮ್ಮ ದೇವ್ರು ಕೊಟ್ಟ ವರ ಅದು. ಕೈಕೇಯಿಗೆ ದಶರಥ ಎರಡು ವರ ಕೊಟ್ಟ; ರಾಮನಿಗೆ ವನವಾಸವಾಯ್ತು, ಹದಿನಾಲ್ಕು ವರ್ಷ. ನಿನಗೆ ಹುಟ್ಟುವಾಗಲೇ ದೇವ್ರೇ ಎರಡು ವರ ಕೊಟ್ಟ—ನನಗೆ ಆಯ್ತು ಅಜ್ಞಾತವಾಸ ಆಜೀವ ಪರ್ಯಂತ..."

'ಹ್ಞಾಂ....ಹೌದಪ್ಪ, ಅಂತೂ ನಾನು ನನ್ನ ಗಂಟ್ಲಲ್ಲಿ ಮಾತಾಡಿದ್ರೂ ನಿಮಗೆ ಹೊಟ್ಟೆ ಉರಿಯುತ್ತೆ. ಉಳಿ. ಮತ್ತೆ ಕೇಳ್ರಿ, ಏನು ಪ್ರಸನ್ನವದನಾಂತ ಮೊತ್ತ ಮೊದ್ಲಿಗೆ ಬಾಯಿ ಬಿಚ್ಚಿಸಿದವ್ರು ನೀವು. ಆಗ ಮಾಕೆ ಹಾಂಗೆ ಬಿಮ್ಮನೆ ಕುಳಿತಿರೋದು ಹ್ಯಾಗೆ? ಭಗವಂತ ಕೊಟ್ಟಿರೋದನ್ನ ಸಾರ್ಥಕಪಡಿಸ್ಬೇಕೂಂತ...."

"ಆಯ್ತು, ಅಂದೆನಲ್ಲಾ...'

'ಈಗ ಹೇಳಿ, ದೇವ್ರಿಗೆ ಯಾಕೆ ಮೊರೆಯಿಡೋದಿಲ್ಲ? ಪ್ರಾಯಃ ಮರಾಠಿಗರ ಗಂಟ್ಲ ಮುಂದೆ ನಿಮ್ಮದು ಆತಗೆ ಕೇಳುವುದೇ ಇಲ್ಲ....'

"ನನ್ನದು ಕೇಳಿದ್ರ ಏನಂತೆ? ನಿನ್ನದಾದ್ರೂ ಕೇಳೀತಲ್ಲ?"

"ನೋಡಿ, ಮತ್ತೆ ಸುರು ಮಾಡಿದ್ರಿ....

"ಹಾಗಲ್ವೆ, ನಮ್ಮ ಕರ್ತವ್ಯವನ್ನು ನಾವು ಮಾಡುತಿದ್ರೆ ದೇವ್ರ ಬೆಂಬಲವೂ ಇದೆ."

'ಇದು ಇತಿಹಾಸದಲ್ಲಿ ಪುರಾಣ....'

'ಯಾವುದೇ ಇರ್ಲಿ....ಆದ್ರೆ ಸತ್ಯಾಗ್ರಹದ ರೂಪ ಮಾತ್ರ...."

"ಆಗ್ಲೆ ಅಂದೆನಲ್ಲಾ...."

'ಇಂತಹ ಸಂದರ್ಭದಲ್ಲಿ ಮಹಾತ್ಮರು ಏನು ಮಾಡುತಿದ್ರು ಗೊತ್ತೆ?'

"ಏನು?"

'ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳುತಿದ್ರು...."

"ಓಹೋ, ಅದಕ್ಕೇ ಇಂಬೇಕು, ಮುಖ್ಯಮಂತ್ರಿ.... ಮಹಮ್ಮದಾಲಿಯವ್ರು ನಿಲ್ಲಿಸೋಕೆ ವಿನಂತಿ ಮಾಡಿದ್ದು....'

"ಹ್ಞಾಂ...'

'ಏನ್ಮಾಡ್ತಾರೆ?"

'ಯಾರು?'

'ನೀವೆಲ್ಲಾ...'

'ನೋಡ್ಬೇಕು. ಜುಲೈ ಐದರ ವರೆಗೆ ನಡೆಯುದಿಲ್ವೆ? ಆ ಮೇಲೆ ಕಾಯಬೇಕು....'

"ಅದು ನನಗೂ ಗೊತ್ತಾಯ್ತು...ಏಕಸದಸ್ಯ ಆಯೋಗದ ಬದಲು ತ್ರಿಸದಸ್ಯ ಆಯೋಗವಂತೆ, ಮಹಾರಾಷ್ಟ್ರ - ಕರ್ನಾಟಕ ಗಡಿಯ ಬದಲು ಎಲ್ಲಾ ಗಡಿ ಪರಿಶೀಲನೆಯಂತೆ—ಮುಂಗೈಗೆ ಬೆಲ್ಲ—ಚುನಾವಣೆಯಲ್ಲಿ ಗೆಲ್ಲ..."

"ಮತ್ತೆ ಮಾಡೋದಾದ್ರೂ ಏನು?'

"ಆದರೆ ನೋಡಿ, ಇಷ್ಟರಲ್ಲೇ ಸತ್ಯಾಗ್ರಹ ದುರಾಗ್ರಹವೆನಿಸಿದರೆ?'

"ಅದೇ ಈಗಿನ ಪ್ರಶ್ನೆ...'

'ಪಾಪ, ಯೋಚಿಸಿ ಯೋಚಿಸಿ ತಲೆಕೆಡ್ಸಕೋ ಬೇಡಿ. ಇತ್ತ ಬನ್ನೀಂದ್ರೆ... ತುಸು ಬಾಡಿದ ಮುಖವಾದ್ರೂ...'

'ಈ ದುಃಖದ ನಡುವೆಯೂ ನಿನಗೆ ಸರಸವೆ?"

"ಏನೋಪ್ಪ..ದುಃಖದಲ್ಲಿಯೇ ಸುಖ ಕಾಣಬೇಕೂಂತನ್ನೋವು..."

'ಇಂ....ಇಂದೇನೋ ಮನಸ್ಸಮಾಧಾನವಿಲ್ಲ..ಕಲ್ಪನೆಯ ಸೌಂದರ್ಯ ವ್ಯವಹಾರಕ್ಕಿಲ್ಲ...."

"ಊಟ...."

"ಓ, ಹೇಗೂ ಇಂದು ಸೋಮವಾರ."

"ಹ್ಞಾಂ..ಸರಿ ಹಾಗಾದ್ರೆ..ಹೀಗೆ ಬನ್ನಿಂದ್ರೆ....'

"ಹ್ಞಾಂ...."

'ಹ್ಞಾಂ ಹೀಗೇನೇ...."

— ಗೋರಾ



ಕೊಯಮತ್ತೂರಿನಲ್ಲಿ
1966 ರ ಜುಲೈ 7 ರಿಂದ
ನಿಮ್ಮ ಸೇವೆಯಲ್ಲಿ ತೊಡಗಲಿದೆ

ನಮ್ಮ ಹೊಸ ಶಾಖೆಯು
372, ಒಪ್ಪನಕಾರಾ ರಸ್ತೆ
ಕೊಯಮತ್ತೂರು-1
(ಮದರಾಸು ರಾಜ್ಯ)

ಈ ವಿಳಾಸದಲ್ಲಿ 1966ರ ಜುಲೈ 7ರಿಂದ ಕೆಲಸಮಾಡಲಿದೆಯೆಂದು ತಿಳಿಸಲು ಹರ್ಷಿಸುತ್ತೇವೆ.

ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ : "ವಿಜಯಾ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು-3

ಅಧ್ಯಕ್ಷರು :
ಎಂ. ಸುಂದರರಾಮ ಶೆಟ್ಟಿ

ಕಾರ್ಯದರ್ಶಿ:
ಪಿ. ಜಯರಾಮ ಶೆಟ್ಟಿ

VB-38 KAN.

ಅಪಮೌಲ್ಯದ ಅಪಸ್ವರ

ಬೆಲೆ ತಗ್ಗಿತು

ಬರೆದವರು: “ನವಗಿರಿನಂದ”

ಇದೇ ೧೯೬೬ನೇ ಜೂನ್ ೬ನೇ ತಾರೀಕಿನ ದಿನ ದೇಶದೊಳಗೆಲ್ಲಾ ಒಂದು ‘ಅಪ’ಸ್ವರ ಕೇಳಲಾರಂಭಿಸಿತಷ್ಟೆ? — “ಅಪ—ಅಪ—ಅಪ-’ ಅಂತ?

ಆ ಸಮಯದಲ್ಲಿ ಜನರು ಒಬ್ಬರಿಗೊಬ್ಬರು ಮಾತಾಡಿ ಕೊಂಡದ್ದು:

‘ರೂಪಾಯಿ ಅಪಮೌಲ್ಯವಾಯಿತಂತೆ!’

‘ಅಂದರೆ ಅಪವಿತ್ರವಾಯಿತೆ?’

‘ಛೇ! ಛೇ! ಅದೇನಲ್ಲ. ದಕ್ಷಿಣೆ ಗಿಕ್ಷಿಣೆಯೆಲ್ಲಾ ಧೇಷ್ಟಾಗಿ ಕೊಡಲೂಬಹುದು. ಹಿಡೀಲೂಬಹುದು” ದಕ್ಷಿಣೆ ವಿಷಯ ಹೊರಟದ್ದು ಕೇಳಿ ಪುರೋಹಿತಾಚಾರ್ರು ಸಂಶಯದಿಂದ ‘ಏನು ಕತೆ? ರೂಪಾಯಿಯು ಅಶುದ್ಧ ಆಗಿಲ್ಲ ತಾನೆ?’

“ಅದೇನಿಲ್ಲಂರೀ, ಹೆದರಬೇಡಿ. ಅಪಮೌಲ್ಯ ಆಯ್ತು. ಅಂದರೆ ಡಿವಾಲ್ಯುಯೇಷನ್. ಅಂದರೆ ಅದರ ಬೆಲೆ ತಗ್ಗಿತು! ನಿಮಗೆ ಒಂದು ರೂಪಾಯಿ ದಕ್ಷಿಣೆ ಕೊಟ್ಟರೆ ಹತ್ತಾಣೆ ಸಿಕ್ತು ಅಂದ್ಕೊಳ್ಳಿ. ಕೊಟ್ಟವನೂ ಹಾಗೇ ಅಂದ್ಕೊಂಡು ಕೊಡ್ತಾನೆ”

‘ಅದು ಹ್ಯಾಗೆ ಒಪ್ಪಿಕೊಳ್ಳಿಕ್ಕೆ ಸಾಧ್ಯಾರೀ?’

“ಹ್ಯಾಗಂದ್ರೆ ಎಲ್ಲರ ಬೆಲೆಯೂ ತಗ್ಗಿ ಹೋಗಿರುವಾಗ ತಕರಾರು ಮಾಡಲಿಕ್ಕೆ ನ್ಯಾಯನೇ ಇಲ್ಲಾ ಅಂದುಕೊಳ್ಳಬೇಕು. ಕೊಡುವವರು ತಕ್ಕೊಳ್ಳುವವರು ಇಬ್ರೂನೂ.’

‘ಅದೂ ಹ್ಯಾಗೋ! ಎಂಥದೋ! ದೇವರೇ ಬಲ್ಲ!’

ಕೃಷ್ಣಾರ್ಪಣ! ಗೋವಿಂದ ಗೋವಿಂದ ಎಂದುಕೊಳ್ಳುತ್ತಾ ಪುರೋಹಿತಾಚಾರ್ರು ಅತ್ತ ಹೋದರು.

ಕೈಯಲ್ಲಿ ಪತ್ರಿಕೆಯನ್ನು ಹಿಡಿದುಕೊಂಡು ಇದನ್ನೆಲ್ಲ ಕೇಳುತ್ತಾ ಇದ್ದ ನಮ್ಮ ಸುಬ್ರಾಯ ಗಡಬಡ ಹಾಗು ಗಾಬರಿಯ ಮುಖಭಾವದಿಂದ ತಲೆ ಕೆರೆದುಕೊಳ್ಳುತ್ತಾ, “ಏನು ಕತೆಯಪ್ಪ ಇದು? ನಾನು ಬ್ಯಾಂಕಿನಲ್ಲಿ ಒಂದಿನ್ನೂರು ರೂಪಾಯಿ ಇಟ್ಟಿದ್ದೇನಲ್ಲ! ಅದರ ಗತಿ?” ಎಂದುಕೊಂಡು ತೆರೆದ ಬಾಯಿ ತೆರೆದ ಹಾಗೇ ನಿಂತು ಬಿಟ್ಟಿದ್ದ.

“ಬ್ಯಾಂಕಿನಲ್ಲಿರುವ ಹಣದ ಗತಿಯನ್ನು ನಿರ್ಣಯ ಮಾಡಲಿಕ್ಕೇ ೬ನೇ, ೭ನೇ ತಾರೀಕುಗಳಲ್ಲಿ ಬ್ಯಾಂಕುಗಳಿಗೆಲ್ಲಾ ಒಮ್ಮೆಗೇ ರಜೆ ಸಾರಿವೆಯಲ್ಲ! ರಜೆಯೆಂದರೆ ವ್ಯವಹಾರ ವಹಿವಾಟುಗಳಿಲ್ಲ—ಅಷ್ಟೆ. ಅಲ್ಲಿಯ ಉದ್ಯೋಗಸ್ಥರಿಗೆ ರಜೆಯಿಲ್ಲಂತೆ. ಅವರೆಲ್ಲ ಬಾಗಿಲು ಮುಚ್ಚಿಕೊಂಡು ಲೆಡ್ಜರುಗಳ ಮುಂದೆ ಕೂತುಕೊಂಡು ರೂಪಾಯಿ ಅಪಮೌಲ್ಯವನ್ನು ಕುರಿತು ಲೆಕ್ಕ ಮಾಡುತ್ತಾರಂತೆ!”

ಸುಬ್ರಾಯ ಕೆಲವಾರು ಶಬ್ದಗಳಿಗೆ ‘ಅಪ’ವನ್ನು ಸೇರಿಸಿ ಅದರ ಅರ್ಥವನ್ನು ತರ್ಕಿಸಿಕೊಳ್ಳಲಾರಂಭಿಸಿದ.

‘ಅಪವಿತ್ರ’ ಅಂದರೆ ಪಾವಿತ್ರ್ಯವೇ ಇಲ್ಲದ್ದು. ಆದರೆ ‘ಅಪಮೃತ್ಯು’ ಎಂದರೆ ಸಾಯುವ ಕಾಲ ಬಂದು ಸತ್ತದ್ದು ಅಂತಾಗುವುದಿಲ್ಲ; ಅಕಾಲ ಮರಣವೆನಿಸುತ್ತದೆ. ಹಾಗೆಯೇ ‘ಅಪಘಾತ’ ಎಂದರೆ ಅಪಾಯವೇ ನಡೆಯಲಾರದಂತಹ ಸಂದರ್ಭದಲ್ಲಿ ಆಗುವಂತಹ ಅಪಾಯ. ಹಾಗೆಯೇ ಅಪಮೌಲ್ಯ ಅಂದರೆ?

‘ಅಮೌಲ್ಯತೆ’ಯು? ಅಂದರೆ ಬೆಲೆಯೇ ಇಲ್ಲವೆಂತ ಆಗುತ್ತಲ್ಲಾ!

‘ನಿಮ್ಮದೊಂದು ಅಮೂಲ್ಯ ಲೇಖನ ಕಳಿಸಿಕೊಡಿ’ ಅಂತ ಒಬ್ಬರು ಸಂಪಾದಕರು ಬರೆದರೆ, ಬೆಲೆ ಕಟ್ಟಲು ಸಾಧ್ಯವಿಲ್ಲದ್ದು ಎಂದರ್ಥ. ಕೊಟ್ಟರೆ ಲಕ್ಷವೂ ಕೊಡಬಹುದು, ಕೋಟಿಯೂ ಕೊಡಬಹುದು; ಏನೂ ಕೊಡದೆಯೂ ಇರಬಹುದು. ಎರಡು, ಐದು, ಹತ್ತು, ನೂರು, ಲಕ್ಷ ಹೀಗೆ ಎಷ್ಟು ಕೊಟ್ಟರೂ ಅದೊಂದು ಸನ್ಮಾನ—ಅಷ್ಟೆ. ಯಾವನೋ ರಾಜಕುಮಾರ ಒಂದೇ ಮಾತನ್ನು ಲಕ್ಷ ರೂಪಾಯಿ ಕೊಟ್ಟು ತಕ್ಕೊಂಡನಂತೆ.

ಹಾಗೆ ರೂಪಾಯಿ ‘ಅಮೂಲ್ಯ’ ಅಂತ ಆಗಿಬಿಟ್ಟಿದ್ದರೆ ಮತ್ತೆ ಯಾರೂ ಯಾವುದಕ್ಕೂ ಬೆಲೆ ಕಟ್ಟುವ ತೊಂದರೆಯೇ ಇದ್ದಿಲ್ಲ. ಅಂಗಡಿಗೆ ಹೋಗುವುದು, ಬೇಕಾದ ಸಾಮಾನು ಕೇಳುವುದು; ಇದ್ದಷ್ಟು ದುಡ್ಡು ಕೊಡುವುದು, ಇಲ್ಲದಿದ್ದರೆ ಸುಮ್ಮನೇ ತೆಗೆದುಕೊಂಡು ಬರುವುದು. ಅಂಗಡಿಯವ ಬೆಲೆಯೆಷ್ಟು ಅಂತ ಹೇಳಲಿಕ್ಕೇ ಸಾಧ್ಯವಿಲ್ಲ. ಹೇಳಿದರೆ “ಅಮೂಲ್ಯತೆ’ಯನ್ನು ಅಗೌರವಪಡಿಸಿದ ಹಾಗೆ ತಾನೆ?

ಹೀಗೆಯೇ ಅಕಳಂಕ, ಅನಾಗರಿಕಗಳಲ್ಲಿಯೂ ‘ಅ’ ಮಾತ್ರವೇ ಸೇರಿದ್ದರಿಂದ, ಕಳಂಕವೂ ನಾಗರಿಕತೆಯೂ ಏನೂ ಇಲ್ಲವೆಂತಲೇ ಅರ್ಥ. ಆದ್ದರಿಂದ ‘ಅ’ಕ್ಕೂ ‘ಅಪ’ಕ್ಕೂ ವ್ಯತ್ಯಾಸವಿದೆ. “ಅಪ” ಸೇರಿದರೆ ಯಾವುದಕ್ಕೆ ‘ಅಪ’ ಸೇರಿತೋ ಸ್ವಲ್ಪ ಕಳೆದು ಭ್ರಂಶತೆಯುಂಟಾಯಿತು ಅಂತ ಆಗುತ್ತದೆ.

ಈ ಅರ್ಥದಂತೆ ರೂಪಾಯಿ “ಅಪ” ಮೌಲ್ಯವಾಯಿತು. ಅದರ ಬೆಲೆಯ ಮಾನ ಕಡಮೆಯಾಯಿತು. ಅದೇನೋ ಪೇಪರಿನಲ್ಲಿ ಲೆಕ್ಕ ತೋರಿಸಿಬಿಟ್ಟಿದ್ದರಲ್ಲ— ಸೇಕಡಾ ೩೬½ಯಷ್ಟು ಕಡಮೆಯಾಯಿತೂ ಅಂತ?

ತುಸು ಸಮಾಧಾನದ ಉಸಿರು ಬಂತು ಸುಬ್ರಾಯನಿಗೆ. ಮರುನಿಮಿಷದಲ್ಲಿ ಮತ್ತೊಂದು ಭೀತಿ!

‘ಹಾಗಾದರೆ ಬ್ಯಾಂಕಿನಲ್ಲಿರುವ ನನ್ನ ಹಣದಲ್ಲಿ ಸೇಕಡಾ ೩೬½ಯಷ್ಟು ಕಡಿತಗಡಿತ ಮಾಡಿಬಿಡುವರೇ?’

ಮತ್ತೆ ಪತ್ರಿಕೆಯನ್ನು ಬಹಳ ಸೂಕ್ಷ್ಮವಾಗಿ ಓದಿದ ಸುಬ್ರಾಯ. “ವಿದೇಶ ವ್ಯವಹಾರದಲ್ಲಿ ಮಾತ್ರವೇ ಈ ಅಪಮೌಲ್ಯದ ಲೆಕ್ಕ. ನಮ್ಮ ದೇಶದೊಳಗೆ ಯಾವ ಹೊಸ ಪರಿಣಾಮವೂ ಇಲ್ಲ” ಇದನ್ನು ಮೂರು ನಾಲ್ಕು ಬಾರಿ ಓದಿ ಮನವರಿಕೆ ಮಾಡಿಕೊಂಡ.

ಸಾಯಂಕಾಲ ಬ್ಯಾಂಕಿನಲ್ಲಿ ಕೆಲಸ ಮಾಡುವ ಶ್ರೀಪತಿರಾಯರನ್ನು ಸಂಧಿಸಿ ತನ್ನ ಎಲ್ಲಾ ಸಂದೇಹವನ್ನೂ ಪರಿಹಾರ ಮಾಡಿಕೊಂಡ.

‘ಸದ್ಯ ಬದುಕಿದೆ. ಫಕ್ಕನೆ ಏನೋ ಅಂದುಕೊಂಡೆ ಉಂ, ವಿದೇಶ ವ್ಯಾಪಾರ ನನಗೇನಿದೆ ಮಣ್ಣು? ಎಂದು ತನ್ನ ಪೆದ್ದುತನಕ್ಕೆ ತಾನೇ ನಕ್ಕ.

ಆ ಮೇಲೆ ತನ್ನ ಹಾಗೆ ಬಹಳ ಮಂದಿ ಹೆದರಿಕೊಂಡಿರುವುದನ್ನು ಕಣ್ಣಾರೆ ನೋಡಿ, ಕಿವಿಯಾರೆ ಕೇಳಿದಾಗ, ತಾನೇ ವಾಸಿಯೆನಿಸಿ ಸಮಾಧಾನವೆನಿಸಿತು. ಅಂಥ ಹೆದರಿದವರಿಗೆಲ್ಲ ಧೈರ್ಯ ಹೇಳಲಿಕ್ಕೂ ಮುಂದಿನ ಆಗುಹೋಗುಗಳನ್ನು ವಿವರಿಸಲಿಕ್ಕೂ ಸಮರ್ಥನಾದ ನಮ್ಮ ಸುಬ್ರಾಯ.

° ° ° °

ಆಗ ತಾನೇ ದೇವರ ಪೂಜೆ ಮುಗಿಸಿಕೊಂಡು ಹೊರಗೆ ಬಂದ ಸುಬ್ರಾಯನ ಅಪ್ಪ,’ ಏನೋ ಅದು? ನಿನ್ನೆಯಿಂದ ರೂಪಾಯಿಯ ಬೆಲೆ ಹೋಯ್ತು, ಹೋಯ್ತು ಅಂತ ಊರೆಲ್ಲಾ ಒಂದೇ ಗಲಾಟೆ? ಏನಾಯ್ತಂತೇ ರೂಪಾಯಿಗೆ? ಬರೀ ತಗರದ ರೂಪಾಯಿ ಬರುತ್ತಂತೇನು? ಬರಲೀ, ಕಾಗದದ ರೂಪಾಯಿಗಿಂತ ಅದು ಸ್ವಲ್ಪ ಗಟ್ಟಿಯಾಗಿರುತ್ತದಲ್ಲಾ! ಯಾಕಂತೆ. ಗಾಬರಿ ಈ ಜನರಿಗೆ? ಎಂದರು. ಪಾಪ, ಅವರದು ನಿಶ್ಚಿಂತೆಯ ಪ್ರಶ್ನೆ.

“ಅದೇನಿಲ್ಲಪ್ಪಾ. ರೂಪಾಯಿ ಗೀಪಾಯಿ ಎಲ್ಲ ಈಗ ಇರೋ ಹಾಗೆ ಇರುತ್ತೇ. ಅದರ ಬೆಲೆ ಮಾತ್ರ ತಗ್ಗಿತು.?’

‘ಅದು ಹ್ಯಾಗೋ ಸುಮ್ಮನೆ ತಗ್ಗುತ್ತೆ?”

“ಹ್ಯಾಗಂದ್ರೆ? ಈಗ ನೀವು ನಾವು ಎಲ್ಲಾ ದೇವರ ಮುಂದೆ ನಮ್ಮನ್ನು ಅಲ್ಪರೆನಿಸಿಕೊಂಡು ಬೇಡಿಕೊಳ್ಳೋದಿಲ್ವೆ? ನಮ್ಮ ಗಣ್ಯತೇನೂ ನಮ್ಮ ದೊಡ್ಡಸ್ತಿಕೇನ ತಗ್ಗಿಸಿಕೊಂಡು ‘ನಾವು ನಿನ್ನ ದಾಸಾನುದಾಸರು. ಅಲ್ಪರು. ಕೀಟಕಗಳು” ಅಂತ ಹೇಳಿಕೊಂಡು “ಇಷ್ಟಸಿದ್ಧಿ ಮಾಡೋ ಪರಮಾತ್ಮಾ’ ಅಂತ ಪ್ರಾರ್ಥಿಸಿಕೊಳ್ಳೋದಿಲ್ಲವೆ?”

“ಹೋಗೊ ಹುಚ್ಚ ಹರಟೇ ಮಲ್ಲ! ದೇವರ ಹತ್ರ ಬೇಡಿಕೊಳ್ಳೋದಕ್ಕೂ ಇದಕ್ಕೂ ಎಂಥದೋ ಗಂಟು!”

“ಎಂಥದೂ ಅಂದ್ರೆ? ದೊಡ್ಡವರ ಮುಂದೆ ವಿನಯ ವಿಧೇಯತೆಗಳಿಂದಿರಬೇಕಾದ್ದು ನ್ಯಾಯವಲ್ಲವೇನಪ್ಪಾ? ದೊಡ್ಡ ದೊಡ್ಡ ಪರದೇಶಗಳ ಮುಂದೆ ವಿನಯ ವಿಧೇಯತೆಗಳ ಸೂಚನೆಯಾಗಿಯೇ ರೂಪಾಯಿಯ ಅಪಮೌಲ್ಯತೆ ಮಾಡಿಕೊಂಡಿದೆ ನಮ್ಮ ದೇಶ. ವಿದ್ಯೆಗೆ ವಿನಯ ತಾನೇ ಭೂಷಣ? ಹೆಚ್ಚು ಹೆಚ್ಚು ವಿದ್ಯಾವಂತರಾದ ಹಾಗೆ ಹೆಚ್ಚು ಹೆಚ್ಚು ವಿನಯವೂ ಬೇಕಾದ್ದು ತಾನೆ? ಅಂತಲೇ ನಮ್ಮ ದೇಶದ ವಿದ್ಯಾವಂತ ಮಹನೀಯರೆಲ್ಲ ಒಟ್ಟುಗೂಡಿ ಹೀಗೆ ವಿನಯ ಪ್ರದರ್ಶನ ಮಾಡಿದ್ದಾರೆ. ನಮ್ಮ ಗಣ್ಯತೆಯು, ದೊಡ್ಡಸ್ತಿಕೆಯು ಮಾನವನ್ನು ಕಡಮೆ ಮಾಡಿಕೊಂಡಿದ್ದಾರೆ. ಸಾವಿರ, ಲಕ್ಷ, ಕೋಟಿ ಎಂಬ ತೂಕವೆಲ್ಲವೂ ರೂಪಾಯಿಯ ಮಾನದಲ್ಲಿ ತಾನೇ ಇದೆ? ಭಾರತ ದೇಶದ ಮಾನವೇ ರೂಪಾಯಿಯ ಗಣ್ಯತೆಯಲ್ಲಿದೆ. ಅಂಥಾ ರೂಪಾಯಿಯ ಗಣ್ಯತೆಯನ್ನು ತುಸು ತಗ್ಗಿಸಿಕೊಂಡು,

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 58 ಶಾಖೆಗಳಿಂದ ಹಬ್ಬಿರುವ

“ವಿಜಯ ಬ್ಯಾಂಕಿ”ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— “ವಿಜಯ ಬ್ಯಾಂಕ್ ಬಿಲ್ಡಿಂಗ್”, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ಚಾರುಚಯನ

ಪರ್ವತ ಪ್ರಸವವೇದನೆಯ ಫಲವೇನು?

ಜುಲೈ ಐದನೇ ತಾರೀಕನ್ನು ಕನ್ನಡಿಗರೂ ಮಹಾರಾಷ್ಟ್ರೀಯರೂ ತೆರೆದ ಕಣ್ಣುಗಳಿಂದ ನೋಡುತ್ತಿದ್ದಾರೆ. ಮುಂಬಯಿಯಲ್ಲಿ ಎ ಐ ಸಿ ಸಿ ಸ್ವೀಕರಿಸಿದ ಗಡಿ ಆಯೋಗ ನೇಮಿಸುವ ವಿಚಾರದಲ್ಲಿ ಪುನರ್ವಿಮರ್ಶೆ ನಡೆಯಲಿರುವ ದಿನವದು. ಇಂದು ಎಲ್ಲರೂ ಕೇಳುವ ಪ್ರಶ್ನೆ ಈ ವಿಚಾರದಲ್ಲಿ ಪುನರ್ವಿಮರ್ಶೆ ನಡೆದೀತೇ ಎಂದು. ಆಯೋಗ ರಚನಾನಂತರದಲ್ಲಿ ಕರ್ನಾಟಕದಲ್ಲಿ ಎದ್ದಿರುವ ತೀವ್ರ ಉದ್ವೇಗಮಯ ವಾತಾವರಣವು ಪುನರ್ವಿಮರ್ಶೆಯನ್ನು ಸಮರ್ಥಿಸುವುದಾದರೂ ಇದಕ್ಕಿರುವ ಅಪೂರ್ವ ಹಿನ್ನೆಲೆ ಮತ್ತು ಭವಿಷ್ಯದ ಭೀಷಣ ಕಲ್ಪನೆಗಳು ಅದನ್ನು ಬೆಂಬಲಿಸುವುದಿಲ್ಲ.

ಇಂದಿರಾ ಗಾಂಧಿ

ಗಡಿ ಆಯೋಗದ ನೇಮಕಕ್ಕೆ ಕರ್ನಾಟಕವು ಆರಂಭದಿಂದಲೂ ವಿರೋಧವಿತ್ತು. ಬೆಳಗಾವಿ, ನಿಪ್ಪಾಣಿ, ಕಾರವಾರ ಮೊದಲಾದುವುಗಳೆಲ್ಲಾ ಮುಗಿದ ಪ್ರಶ್ನೆಗಳೇ. ಅವನ್ನು ಮತ್ತೆ ಎತ್ತುವುದಕ್ಕೆ ಸಿದ್ಧವಿಲ್ಲ ಎಂದು ನಾವು ಸಾರುತ್ತ ಬಂದಿದ್ದೇವೆ. ಮಹಾರಾಷ್ಟ್ರ— ಕರ್ನಾಟಕಗಳ ನಡುವೆ ಗಡಿ ತಂಟೆ ಇರುವುದಾದರೂ ಅದು ಬರಿಯ ಹೊಂದಾಣಿಕೆ ಸಂಬಂಧಪಟ್ಟದ್ದು ಎಂದು ನಮ್ಮ ವಾದ. ಸಣ್ಣ ಪುಟ್ಟ ಹೊಂದಾಣಿಕೆಗೆ ನಾವು ಸದಾ ಸಿದ್ಧರೆಂದೂ ಹೇಳುತ್ತ ಬಂದಿದ್ದೇವೆ. ಆದರೆ ಮಹಾನಗರಗಳನ್ನೇ ನುಂಗುವ ಮಹಾರಾಷ್ಟ್ರೀಯರ ವಿಸ್ತಾರವಾದ ಮತ್ತದಕ್ಕೆ ಇರುವ ವರಿಷ್ಠರ ಬೆಂಬಲಗಳಿಂದಾಗಿ ನಮಗೆ ಮುಗಿದ ಪ್ರಶ್ನೆಗಳು ಮರಾಠಿಗರಿಗೆ ಮುಗಿಯದ ಪ್ರಶ್ನೆಗಳಾಗಿವೆ; ಕೇಂದ್ರದ ಮಹಾನಾಯಕರೂ ಇದಕ್ಕೆ ಸಮ್ಮತಿಸುತ್ತಾರೆ.

ಮರಾಠಿಗಳದು ಧಡಿಧ್ವನಿ. ಅದು ಕೇಂದ್ರದ ಕಿವಿಡರಿಗೆ ಸದಾ ಬಡಿಯುತ್ತದೆ. ದ್ವಿಭಾಷಾ ಮುಂಬಯಿ ರಾಜ್ಯವನ್ನಿಟ್ಟು ಕೊಂಡಾಗ ಮರಾಠಿಗರು ಮಹಾರಾಷ್ಟ್ರವನ್ನು ಪಡೆದದ್ದು ಪೊಟ್ಟಿಲು ಶ್ರೀರಾಮುಲುವಂತೆ; ಸತ್ಯಾಗ್ರಹದಿಂದಲ್ಲ; ದುರಾಗ್ರಹದಿಂದಲೇ. ಅದೇ ದುರಾಗ್ರಹ, ಬೆಳಗಾವಿ—ಕಾರವಾರ—ಗೋವೆ—ನಿಪ್ಪಾಣಿಗಳನ್ನು ನುಂಗುವುದರಲ್ಲೂ ತೋರಿಸುತ್ತಿದ್ದಾರೆ. ರಕ್ಷಣಾ ಮಂತ್ರಿ ಚವಾಣರ ಭದ್ರರಕ್ಷೆ, ಎಸ್. ಕೆ. ಪಾಟೀಲರ ಪಟೀಲಿಕೆ ಅವರಿಗಿದೆ. ಈ ನಡುವೆ ಇಂದಿರಾ—ಕಾಮರಾಜರು ಮುಂಗಾಣದಂತಾಗಿದ್ದಾರೆ.

ಆದೇನೇ ಇರಲಿ, ಮರಾಠಿಗಳೂ ಅವರ ಹಿತಾಸಕ್ತಿಯ ಪ್ರಬಲ ಸಮರ್ಥಕರೂ ಆಯೋಗ ನೇಮಕದಿಂದ ಪ್ರಸನ್ನರಾಗಿದ್ದಾರೆ. ಇದು ಶೀಘ್ರವಾಗಿ ನಿಯುಕ್ತವಾಗಬೇಕು, ಚುನಾವಣೆಗೆ ಮೊದಲೇ ಅದರ ವರದಿ ಬರಬೇಕು ಎಂದೂ ಕುಶೂಹಲಿಯೂಗಿದ್ದಾರೆ. ಕನ್ನಡಿಗರು ಯಾರ ಬೆಂಬಲವೂ ಇಲ್ಲದೆ ಮರುಗುತ್ತಾರೆ ಗಾಂಧಿ ತೋರಿಸಿದ ಸತ್ಯಾಗ್ರಹವೇ ಅವರ ಊರುಗೋಲು. ಆಯೋಗ ನೇಮಕವೇ ಕೂಡದು ಎಂದವರ ವಾದ. ಕೇಂದ್ರದಿಂದ ಅನುಕೂಲ ಆಶ್ವಾಸನ ಬರುವ ತನಕ ರಾಜ್ಯದಾದ್ಯಂತ ಸತ್ಯಾಗ್ರಹ ನಡೆಯುವ ಸಂಭವ.— ಸರಿಯೇ, ಇದರ ಗಾಳಿ ಇಡಿಯ ರಾಜ್ಯದಲ್ಲಿ ಹರಡಿದೆ. ಅಲ್ಲಿ-ಇಲ್ಲಿ ಒಂದೊಂದು ದುರ್ಘಟನೆಗಳು ನಡೆದುದನ್ನು ಬಿಟ್ಟರೆ ಸಮುಚಿತ ರೀತಿಯಲ್ಲೇ ನಡೆದಿದೆ— ಗಾಬರಿಗೆ ಅವಕಾಶ ಕಡಿಮೆ. ಆದರೆ, ಇದು ಮುಂದುವರಿದಂತೆ ದುರ್ಘಟನೆಗಳ ಸಂಖ್ಯೆ ಹೆಚ್ಚುವ ಸಂಭವವೇ ಹೆಚ್ಚು—ಈ ಬಗ್ಗೆ ತೀವ್ರ ಎಚ್ಚರಿಕೆ ಅಗತ್ಯ.

ಕಾಮರಾಜ್

ಆದರೆ, ಮರಾಠಿಗಳ ಸತ್ಯಾಗ್ರಹವು ದುರಾಗ್ರಹ ಪ್ರೇರಿತವಾದುದು— ಅದು ಹಿಂಸೆಯಿಂದಲೇ ಆರಂಭವಾಗುವುದು— ಹಿಂಸೆಯಲ್ಲೇ ಕೊನೆಗೊಳ್ಳುವುದು. ಕಾಂಗ್ರೆಸ್ ಕಾರ್ಯಕಾರಿಣಿಯು ಗಡಿ ಆಯೋಗವನ್ನು ತಡೆಹಿಡಿದರೆ ಅವರ ಆಂದೋಲನ ಪ್ರಾರಂಭವಾಗುವುದು—ಉಭಯತರ ಕಷ್ಟವೇ. ಇದರಿಂದ ಪಾರಾಗುವ ಬಗೆ ಹೇಗೆ? ಮರಾಠಿಗರನ್ನು ಎದುರಿಸಲು ಕೇಂದ್ರ ಸರಕಾರ—ಕಾಂಗ್ರೆಸ್ ಸಿದ್ಧವಿಲ್ಲ, ಕನ್ನಡಿಗರ ಮನ ನೋಯಿಸಲೂ ಇಷ್ಟವಿಲ್ಲ. ಮಧ್ಯಂತರ ಮಾರ್ಗ ಯಾರಿಗೂ ಸಮಾಧಾನವಿಲ್ಲ. ಇಲ್ಲಿ ಕಾಂಗ್ರೆಸ್ ಕೈಗೊಳ್ಳಬೇಕಾದ ನಿಲುಮೆಯಾವುದು?

ಪಂಜಾಬ ವಿಭಜನೆಯ ನಿರ್ಧಾರವನ್ನಿಲ್ಲಿ ಎತ್ತಿಕೊಳ್ಳಬಹುದು. ವಿಭಜನೆಯ ಪರ—ವಿರುದ್ಧ ಆಂದೋಲನಗಳು ನಡೆದುವು ಭಾಷಾವಾರು ರಾಜ್ಯರಚನೆಯ ತತ್ವವನ್ನು ಕಾಂಗ್ರೆಸ್ ಒಪ್ಪಿರುವುದರಿಂದ ವಿಭಜನೆಯ ನಿರ್ಧಾರವನ್ನು ಕೇಂದ್ರ ಸಾರಿತು; ನಾಲ್ಕುದಿನ ದೊಂಬಿ-ಗಲಭೆ-ಮತ್ತೆ ಶಾಂತ- ಈ ಮತ್ತೆ ತೊಂದರೆ- ಆದರೂ ಇದು ಸಹ್ಯ-ಚಂಡೀಗಡದ ಬಗ್ಗೆ ಮಾತ್ರ ಭಿನ್ನಮತ. ಇಂತಹುದೇ ಗಂಡು ಹೆಜ್ಜೆಯನ್ನು ಇದು ಇಂದಿರಾಗಾಂಧಿ-ಕಾಮರಾಜರು ಇಡಬೇಕು. ನ್ಯಾಯ—ಧರ್ಮ- ನೀತಿಗಳನ್ನು ತಿಪ್ಪೆಗೆಸೆದು ಬೆದರಿಕೆ-ಗದರಿಕೆಗಳಿಗೆ ಸೊಪ್ಪು ಹಾಕುವ, ಅನ್ಯಾಯದ ಮುಂದೆ ತಲೆ ಬಾಗುವಹೆಪ್ಪ್ಯಾಸಕ್ಕೆ ಹೋಗಬಾರದು. ಅದಕ್ಕಾಗಿ ಆಯೋಗ ನೇಮಕದ ಪ್ರಶ್ನೆಯನ್ನೇ ಮುಂದೂಡಬೇಕು—ಮರಾಠಿಗರು ಸಿದ್ಧರಿದ್ದಾರೆ, ಸಣ್ಣಪುಟ್ಟ ಹೊಂದಾಣಿಕೆಗಳನ್ನು ಮಾಡಲು ಏರ್ಪಾಡು ಮಾಡಬೇಕು.

ಇದಕ್ಕೆ ಎ. ಪಿ. ನಾಯಕರನ್ನು ಒಪ್ಪಿಸುವುದು ಕಾಂಗ್ರೆಸ್ ನಾಯಕರಿಗೆ ಕಠಿಣವಾಗುತ್ತದೆ. ಚುನಾವಣೆಯ ಚಿಂತೆ ಕಾಂಗ್ರೆಸ್ ವರಿಷ್ಠರಿಗೆ-- ಈ ಹಿನ್ನೆಲೆ--ಮುನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿಯ ಪರ್ವತ ಪ್ರಸವವೇದನೆಯ ಫಲವೇನು ಎಂದು ಎಲ್ಲರಿಗೂ ಕುತೂಹಲ.

o o o o

ಡಿಗಾಲೆ

ಚತುರ್ವರ್ಗ ಹಾರಾಷ್ಟ್ರಗಳಲ್ಲಿ ರಶ್ಯವೊಂದು ಏಕಾಕಿಯಾಗಿ, ಉಳಿದ ಮೂರು ಒಂದಾಗಿದ್ದ ಕಾಲವೊಂದಿತ್ತು. ಆದರೆ, ಫ್ರಾನ್ಸಿನಲ್ಲಿ ಅಸ್ಥಿರ ಸರಕಾರಗಳ ತೂಗುಯ್ಯಾಲೆಯಾಡುತಿದ್ದಾಗ ಸೈನಿಕ ಅಧ್ಯಕ್ಷರಾಗಿ ಡಿಗಾಲೆ ಅಧಿಕಾರ ಗದ್ದುಗೆಗೇರಿದ ಮೇಲೆ ಅಲ್ಲಿನ ರಾಜಕಾರಣ ಬದಲಾಗುತ್ತ ಬಂದಿದೆ. ಕಳೆದ ಆರು ವರ್ಷಗಳಿಂದಲೂ ಅನಭಿಷಿಕ್ತದೊರೆಯಾಗಿಮೆರೆಯುತ್ತಿರುದ್ದಾರೆ— ಪಾಕಿಸ್ತಾನದ ಅಯ್ಯೂಬಖಾನರು ವಿರೋಧಿಗಳಿಂದ ರಕ್ಷಣೆ ಪಡೆದುಕೊಳ್ಳಬೇಕಾದೀತು; ಆದರೆ, ಡಿಗಾಲೆಯವರ ಮುಂದೆ ಅಂತಹ ಪ್ರಸಂಗವೇನೂ ಇಲ್ಲ.

ಸೋವಿಯತ್ ಆಮಂತ್ರಣದ ಮೇರೆಗೆ ಚಾರ್ಲ್ಸ್ ಡಿಗಾಲೆ ಅಲ್ಲಿ ಸಂದರ್ಶನ ಕೊಟ್ಟರು. ಉಭಯತರ ಹಿತಾಸಕ್ತಿಯ ಬೆಳವಣಿಗೆಯ ಬಗ್ಗೆ ಮಾತಾಡಿಕೊಂಡರು. ಪಂಡಿತ ನೆಹರುರವರು ಮೋಸ್ಕೋ ಸಂದರ್ಶನ ನೀಡಿದ್ದಾಗ, ಉಕ್ಕಿನ ಪರದೆಯನ್ನೆತ್ತಿ ಸೋವಿಯತ್ತಿನ ನೈಜ ಪ್ರದರ್ಶನ ಮಾಡಿದ್ದಂತೆಯೇ ಇಂದು ಡಿಗಾಲೆಯವರಿಗೆ ಉಪಗ್ರಹ ಹಾರಿಸುವ ಕೇಂದ್ರವನ್ನೂ ಸೋವಿಯತ್ ನಾಯಕರು ತೋರಿಸಿದರು; ಅವರ ಕಣ್ಮುಂದೆಯೇ ಕಾಸ್ಮಾಸ್—೧೨೨ ಉಪಗ್ರಹವನ್ನೂ ಹಾರಿಸಿದರು.

ಡಿಗಾಲೆಯವರ ನಾಯಕತ್ವದಲ್ಲಿರುವ ಫ್ರೆಂಚ ಸರಕಾರದ ನಿಲುಮೆಯೇನು ಎಂಬುದನ್ನು ಅಮೆರಿಕೆ—ಬ್ರಿಟನ್ನಗಳು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಅರ್ಥ ಮಾಡಿಕೊಳ್ಳುವುದೂ ಕಷ್ಟಸಾಧ್ಯ. ಪ್ರಜಾತಂತ್ರ ವಾದಿಗಳು ಮತ್ತು ಸರ್ವಾಧಿಕಾರಿಗಳ ನಿಲುಮೆ ಹೊಂದಿಕೊಳ್ಳುವುದೂ ಅಸಾಧ್ಯವೆಂದು ತೋರುತ್ತದೆ. ಹಲವಾರು ಸೈನಿಕ ಒಡಂಬಡಿಕೆಗಳ ಸದಸ್ಯ ರಾಷ್ಟ್ರವಾಗಿದ್ದ ಫ್ರಾನ್ಸ್ ಇತ್ತೀಚೆಗೆ ಅವುಗಳಿಂದ ಹಿಂದೆ ಸರಿದಿದೆ. ಸಾಮಾನ್ಯ ಪೇಟೆಯ ವಿಚಾರವಾಗಿ ಯೂ ಬ್ರಿಟನ್ನಿನೊಂದಿಗೆ ತುಸು ವಿರಸವಿದೆ. ಅಮೆರಿಕೆಯೊಡನೆಯೂ ಡಿಗಾಲೆ ಸಂಬಧ ನೆಟ್ಟಗಿರುವುದಿಲ್ಲ. ಈಯೆಲ್ಲ ಹಿನ್ನಲೆಯಲ್ಲಿ ನಡೆದ ಸೋವಿಯತ್ ಸಂದರ್ಶನ ಅದ್ಭುತ ಪವಾಡಗಳನ್ನು ಫ್ರಾನ್ಸ್‌ನಲ್ಲಿ ಮಾಡಲಾರದಾದರೂ ಅದರ ಸರಕಾರವು ಪಶ್ಚಿಮದ ಸಂಬಂಧಗಳಿಂದ ಶಿಥಿಲಗೊಳ್ಳುತ್ತಿದೆಯೆಂದು ಊಹಿಸಲು ಸಾಧ್ಯವಾಗಿದೆ.

– ರಾಶಿ

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(¼ H.P. to 30 H.P.) ಪಂಪು ಸೆಟ್ಟುಗಳು.......

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

ಪುತ್ತೂರು ಪ್ರಿನ್ಸಿಪಾಲ್ ಡಿ. ಮುನ್ಸಿಫ್ ಕೋರ್ಟಿನಲ್ಲಿ

S. C. 15/66

ಕುಂಞ ಹಸನೆ ಬ್ಯಾರಿ ....ವಾದಿ

ಮತ್ತು

ರಾಮಣ್ಣ ಗೌಡ ....ಪ್ರತಿವಾದಿ

ಪ್ರತಿವಾದಿ ರಾಮಣ್ಣಗೌಡರಿಗೆ—ಬಡ್ಡಕೋಟೆ—ವೀರಪ್ಪಗೌಡರ ಮಗ, ಕೇನ್ಯ ಗ್ರಾಮ, ಸುಳ್ಯತಾಲೂಕು Post ಬಳ್ಪ (ದ.ಕ.)

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಪ್ರೊನೋಟು ಹಣದ ವಸೂಲಿಗೋಸ್ಕರ ಮಾಡಿದ ಮೇಲಿನ ದಾವೆಯು ಈ ಕೋರ್ಟಿನ ಮುಂದೆ ತಾರೀಕು 13—7—1966ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಗಂಟೆ 11ಕ್ಕೆ ನೀವು ಖುದ್ದಾಗಲೀ, ವಕೀಲರ ಮುಖಾಂತ್ರವಾಗಲೀ ಹಾಜರಾಗಲು ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರಾಗಿ ಮಾಡಿ ತೀರ್ಮಾನಿಸಲಾದೀತು.

(ಕೋರ್ಟಿನ ಹುಕುಂ ಮೇರೆಗೆ)

A. ಕುಂಞಿಪಳ್ಳಿ, B. A. B. L.
ವಾದಿ ಕಡೆ ಎಡ್ವಕೇಟ್.

Puttur, 23—6—1966.

ಪರಿಚಯ

ಭಾರತೀಯ ಜನಪದ ಸಂಪರ್ಕ ಅಧ್ಯಯನ ಸಂಸ್ಥೆ

ಪ್ರಜಾಪ್ರಭುತ್ವದ ಯಶಸ್ಸು ಬಹು ಮಟ್ಟಿಗೆ ಜನಸಂಪರ್ಕವನ್ನೇ ಅವಲಂಬಿಸಿದೆ. ಅಂತೆಯೇ ನಮ್ಮ ಸಾರ್ವಜನಿಕ ಜೀವನದಲ್ಲಿ ಜನಸಂಪರ್ಕಕ್ಕೆ ವಿಶೇಷ ಪ್ರಾಧಾನ್ಯವಿದೆ. ಈ ವಿಷಯದಲ್ಲಿ ಶಿಕ್ಷಣ ನೀಡಲು, ತರಬೇತಿ ಹಾಗೂ ಸಂಶೋಧನೆ ಕೈಗೊಳ್ಳಲು ಸಂಸ್ಥೆಯೊಂದನ್ನು ಸ್ಥಾಪಿಸುವ ವಿಚಾರ ಮೊತ್ತಮೊದಲು ಹೊಳೆದದ್ದು ೧೯೬೧ರಲ್ಲಿ.

ಯೋಜನಾ ಆಯೋಗದವರೊಂದಿಗೆ ಈ ವಿಷಯವನ್ನು ಕುರಿತು ಸಮಾಲೋಚನೆ ನಡೆಸಿದ ನಂತರ ಜನಪದ ಸಂಪರ್ಕ ಸಂಸ್ಥೆಯ ಸ್ಥಾಪನೆಯ ಸಾಧ್ಯತೆಯನ್ನು ಪರಿಶೀಲಿಸಲು ತಜ್ಞರ ತಂಡವೊಂದನ್ನು ಕಳುಹಿಸಿಕೊಡಬೇಕೆಂದು ೧೯೬೨ರ ಮಾರ್ಚ್ ತಿಂಗಳಲ್ಲಿ ಅಮೇರಿಕ ಫೋರ್ಡ್ ಸಂಸ್ಥೆಯನ್ನು ಕೋರಲಾಯಿತು. ಫೋರ್ಡ್ ಸಂಸ್ಥೆಯವರು ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ ಐವರು ಜನಪದ ಸಂಪರ್ಕ ತಜ್ಞರ ತಂಡವೊಂದನ್ನು ಭಾರತಕ್ಕೆ ಕಳುಹಿಸಿಕೊಟ್ಟರು. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಜನಸಂಪರ್ಕ ಸಂಶೋಧನಾ ಸಂಸ್ಥೆಯ ಡೈರೆಕ್ಟರ್ ಡಾ॥ ವಿಲ್ಬರ್ ಸ್ಕ್ರ್ಯಾಮ್ ಅವರು ಈ ತಂಡದ ನಾಯಕರಾಗಿದ್ದರು.

ತಂಡದ ಸದಸ್ಯರು ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಮಂತ್ರಿ ಶಾಖೆಯ ಕೆಲವು ಜನ ಗಣ್ಯ ವಾರ್ತಾಧಿಕಾರಿಗಳ ಸಹಾಯೋಗದಿಂದ ೧೯೬೩ ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ಸಮೀಕ್ಷೆಯೊಂದನ್ನು ಕೈಗೊಂಡರು. ಭಾರತದ ಅಭಿವೃದ್ಧಿಯನ್ನು ತ್ವರಿತಗೊಳಿಸಲು ಜನ ಸಂಪರ್ಕ ಸೌಲಭ್ಯಗಳನ್ನು ಬಳಸುವ ವಿಧಾನವನ್ನು ಆರಂಭಿಸಿದರು. ಕೇಂದ್ರ ಸರಕಾರದ ಶಿಕ್ಷಣ, ಆರೋಗ್ಯ, ವಿದೇಶಾಂಗ ವ್ಯವಹಾರ, ಆಹಾರ ಮತ್ತು ಕೃಷಿ, ಜನಪದ ಅಭಿವೃದ್ಧಿ, ಪಂಚಾಯತ್‌ರಾಜ್ ಮಂತ್ರಿ ಶಾಖೆಗಳು ಮತ್ತು ಇತರ ಸರಕಾರ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ರಾಜ್ಯ ಸರಕಾರಗಳ ಪ್ರಸಿದ್ಧಿ ಇಲಾಖೆಗಳು, ಜಿಲ್ಲಾ ಪ್ರಸಿದ್ಧಿ ಕಛೇರಿಗಳು, ಬ್ಲಾಕ್‌ಗಳು ತಂಡದ ಕಾರ್ಯದಲ್ಲಿ ಸಂಪೂರ್ಣವಾಗಿ ಸಹಕರಿಸಿದವು. ಇವುಗಳಲ್ಲದೇ ಸುದ್ದಿ ಸಂಸ್ಥೆಗಳಾದ ಪಿ. ಟಿ. ಐ. ಇಂಡಿಯನ್ ಪ್ರೆಸ್ ಇನ್‌ಸ್ಟಿಟ್ಯೂಟ್, ಪುಸ್ತಕ ಪ್ರಕಟಣಾಲಯಗಳು, ಮುದ್ರಣಾಲಯಗಳು, ಜಾಹಿರಾತು ಸಂಸ್ಥೆಗಳು ಅಧ್ಯಯನ ತಂಡಕ್ಕೆ ಅಗತ್ಯವಾದ ಸಹಾಯ ಸಹಕಾರಗಳನ್ನು ನೀಡಿದವು.

ಅಧ್ಯಯನ ತಂಡದ ಶಿಫಾರಸು

ಅಧ್ಯಯನ ತಂಡದ ಸದಸ್ಯರು ತಮ್ಮ ವರದಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿಗಾಗಿ ದಕ್ಷ ಜನಪದ ಸಂಪರ್ಕ ಸಂಸ್ಥೆಯ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಭಾರತದಂತಹ ರಾಷ್ಟ್ರಗಳಲ್ಲಿ ಈ ಸಂಸ್ಥೆಯು—ಆರ್ಥಿಕ ಅಭಿವೃದ್ಧಿಯನ್ನು ತ್ವರಿತಗೊಳಿಸುವಲ್ಲಿ—ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಅವರು ತಮ್ಮ ವರದಿಯಲ್ಲಿ ಮುಖ್ಯವಾಗಿ ರಾಷ್ಟ್ರದ ಮೂಲಭೂತ ಅಗತ್ಯಗಳನ್ನು ಪ್ರಸ್ತಾಪಿಸಿದ್ದಾರೆ.

ಮೊದಲನೆಯದಾಗಿ, ರಾಷ್ಟ್ರದ ಅಭಿವೃದ್ಧಿ ಕ್ರಮದಲ್ಲಿ ಲಭ್ಯವಿರುವ ಎಲ್ಲಾ ವಾರ್ತಾ ಮೂಲಗಳಿಂದ ಸಂಪೂರ್ಣ ಪ್ರಯೋಜನ ಪಡೆಯಬೇಕು. ಎರಡನೆಯದಾಗಿ, ಜನಪದ ಸಂಪರ್ಕ ವಿಷಯದಲ್ಲಿ ತರಬೇತಿ ನೀಡುವ ನಿರಂತರ ಕಾರ್ಯಕ್ರಮವೊಂದನ್ನು ಕೈಗೊಳ್ಳಬೇಕು. ಇದರಿಂದಾಗಿ, ಜನಪದ ಸಂಪರ್ಕ ವ್ಯವಸ್ಥೆ ಹಾಗೂ ಜನಪದ ಸಂಪರ್ಕ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಾಗಬಲ್ಲದು. ಮೂರನೆಯದಾಗಿ, ಜನಪದ ಸಂಪರ್ಕ ತರಬೇತಿ ಕೇಂದ್ರವು ಕೆಲವು ವಿಶಿಷ್ಟ ವಿಷಯಗಳಿಗೆ ತರಬೇತಿ ಕೊಡುವ ಬಗ್ಗೆ ಆದ್ಯ ಗಮನ ನೀಡಬೇಕು. ಈ ಕಾರ್ಯಕ್ರಮದ ಅಂಗವಾಗಿ, ಹೊಸದಾಗಿ ಕೇಂದ್ರ ವಾರ್ತಾ ಸೇವೆಯನ್ನು ಸೇರುವವರಿಗೆ ಮತ್ತು ರಾಜ್ಯ ವಾರ್ತಾ ಇಲಾಖೆಗಳ ಸಿಬ್ಬಂದಿಯವರಿಗೆ ತರಬೇತಿ ಕೊಡಲು ತರಬೇತಿ ವರ್ಗಗಳನ್ನು ಆರಂಭಿಸಬೇಕು.

ವಾರ್ತಾಧಿಕಾರಿಗಳು ಮತ್ತು ವಾರ್ತಾ ಇಲಾಖೆಗಳ ಸಿಬ್ಬಂದಿಯವರ ಅಗತ್ಯಗಳನ್ನು ಅನುಸರಿಸಿ ವಿವಿಧ ಮಟ್ಟಗಳಲ್ಲಿ ಅಲ್ಪಾವಧಿಯ ತರಬೇತಿ ವರ್ಗಗಳನ್ನು ವ್ಯವಸ್ಥೆಗೊಳಿಸಬೇಕು. ಪ್ರತಿಭಾಶಾಲಿಗಳಾದ ಕೆಲವು ಜನ ವಾರ್ತಾಧಿಕಾರಿಗಳಿಗೆ ಮತ್ತು ರಾಷ್ಟ್ರಾಭಿವೃದ್ಧಿಗೆ ಸಂಬಂಧಿಸಿದ ಕೆಲವು ಜನ ಕಾರ್ಯಕರ್ತರಿಗೆ ತರಬೇತಿ ಕೊಡಲು ಸ್ಟಾಫ್ ಕಾಲೇಜ್ ಒಂದನ್ನು ಸ್ಥಾಪಿಸಬೇಕು.

ನಾಲ್ಕನೆಯದಾಗಿ, ನಿಯೋಜಿತ ಜನಪದ ಸಂಪರ್ಕ ಕೇಂದ್ರವು ಸಂಶೋಧನಾ ಕಾರ್ಯಕ್ರಮವನ್ನು ಕೈಗೊಳ್ಳುವ ಮುನ್ನ ಈ ಬಗ್ಗೆ ಸಮೀಕ್ಷಣವೊಂದು ಸಮಾವೇಶಗೊಳ್ಳಬೇಕು. ಈ ಸಮೀಕ್ಷಣವು ವಿವಿಧ ಮಟ್ಟಗಳಲ್ಲಿ ಕೈಗೊಳ್ಳಬಹುದಾದ ಜನಪದ ಸಂಪರ್ಕ ಸಂಶೋಧನೆಯ ಸ್ವರೂಪದ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ದೇಶದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಹಾಯವಾಗುವಂತೆ ಜನಪದ ಸಂಪರ್ಕ ಕ್ಷೇತ್ರದಲ್ಲಿ ನಿರಂತರ ಸಂಶೋಧನೆ ಕೈಗೊಳ್ಳಬೇಕು. ಭವಿಷ್ಯದಲ್ಲಿ ಜನಪದ ಸಂಪರ್ಕ ವ್ಯವಸ್ಥೆಯ ಬೆಳವಣಿಗೆಗೆ ಅನುಕೂಲವಾಗುವಂತೆ ಸೌಲಭ್ಯಗಳನ್ನು ಮತ್ತು ತತ್ಸಂಬಂಧವಾದ ಸಂಪನ್ಮೂಲಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ಯೋಜನೆಯೊಂದನ್ನು ರೂಪಿಸಬೇಕು. ಇವು ದೇಶದ ನಾಲ್ಕು ಮೂಲಭೂತ ಅಗತ್ಯಗಳಾಗಿವೆ.

ಜನಪದ ಸಂಪರ್ಕ ಕ್ಷೇತ್ರದಲ್ಲಿ ಉಚ್ಚ ಶಿಕ್ಷಣ ಕೇಂದ್ರವೊಂದನ್ನು ಸ್ಥಾಪಿಸಬೇಕೆಂದು ಅಧ್ಯಯನ ತಂಡದವರು ಶಿಫಾರಸು ಮಾಡಿದ್ದಾರೆ. ಇದು ಅಧ್ಯಯನ ತಂಡದವರು ಮಾಡಿರುವ ಶಿಫಾರಸುಗಳಲ್ಲಿಯೇ ಅತ್ಯಂತ ಮಹತ್ವದ್ದು. ಈ ಸಂಸ್ಥೆಯು ತರಬೇತಿಗೆ ಸಂಬಂಧಿಸಿದಂತೆ ವಾಸ್ತವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದರ ಜೊತೆಗೆ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುವುದು. ಜನಪದ ಸಂಪರ್ಕ ಸಂಸ್ಥೆಯು ಸಮಾಲೋಚನೆ, ತರಬೇತಿ, ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವುದು. ಅಧ್ಯಯನ ತಂಡದವರು ಈ ಸಂಸ್ಥೆಯ ಕಾರ್ಯವಿಧಾನ ಮತ್ತು ಆಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಅನೇಕ ಶಿಫಾರಸುಗಳನ್ನು ಮಾಡಿದ್ದಾರೆ.

(ಹತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕ್

ದೇವಾಲಯಗಳ ಬೀಡಾದ

ಮಧುರೈ

ನಗರದ ಕರೆಗಂಟೆಗೆ

ಓಗೊಡುತ್ತಿದೆ.

ಸಿಂಡಿಕೇಟ್ ಬ್ಯಾಂಕ್

ತನ್ನ ಮಧುರೈ ಶಾಖೆಯನ್ನು

72, ಸೌತ್ ಮಾಸಿ ಸ್ಟ್ರೀಟ್‌ನಲ್ಲಿ

ಜೂನ್ ತಾ. 30, 1966ರಂದು

ತೆರೆದಿದೆಯೆಂದು ತಿಳಿಸಲು ಸಂತೋಷಪಡುತ್ತದೆ.

FAITHFUL · SB · FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಒಟ್ಟು ಠೇವಣಾ ನಿಧಿ: ರೂ. 80 ಕೋಟಿಗೂ ಮಿಕ್ಕಿದೆ.

ಶಾಖೆಗಳು: 210.

ತೆತ್ತ ಭಂಡವಾಳ ಮತ್ತು ಕಾದಿಟ್ಟ ನಿಧಿ: ರೂ. 2 ಕೋಟಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಐತಾಳ್, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—ನವಭಾರತ ಪುಸ್ತಕ ಭಂಡಾರ, ಉಡುಪಿ

ಪುತ್ತೂರು ಪ್ರಿನ್ಸಿಪಾಲ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 14/ 1966.

1. ಶಿವಮ್ಮ, 2. ಸೀತಮ್ಮ, 3. ಜಾನಕಿ 4. ಮೈನರ್ ಗಿಂಡ್ಯ, ಮೈನರ್ ಯಶೋದ—ಕೂಡಾ ಅರ್ಜಿದಾರರು.

ಕೂಸನ್ನು—1ನೇ ಅರ್ಜಿದಾರಳು ಶಿವಮ್ಮನವರ ಮಗಳು. ಪು—ಕೆ. ಬಾಬುಗೌಡರ ಹೆಂಡತಿ, ಸುಳ್ಯ ತಾಲ್ಲೂಕು, ಸುಳ್ಯಕಸಬಾ ಗ್ರಾಮದ ಕೊಡಿಯಾಲಬೈಲು ಎಂಬಲ್ಲಿರುವವಳು—ಎದುರು.

ಸದ್ರಿ ಅರ್ಜಿದಾರರ ಕಡೆಯಿಂದ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ:

ಮೇಲ್ಕಂಡ O. P. No. 14/1966 ನೇ ಅರ್ಜಿಯಲ್ಲಿ ನಮೂದಿಸಿದಂತೆ S. K. A. Co- operative ಮಾರ್ಕೆಟಿಂಗ್ ಸೊಸೈಟಿ Ltd. ಸಹಕಾರಿ ಮಹಾಲ್ ಮಂಗಳೂರು (ದ. ಕ.) ಇದರಲ್ಲಿರುವ ಒಟ್ಟು ರೂಪಾಯಿ 560—80ನ್ನು ವಸೂಲು ಪಡೆಯಲು ವಾರಿಸು ಸರ್ಟಿಫಿಕೇಟ್ ಕೊಡಿಸಬೇಕಾಗಿ, ಅರ್ಜಿದಾರರು ಬರಕೊಂಡ ಅರ್ಜಿಯು ತಾರೀಕು 11—7—1966ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ. ಆ ದಿವಸ ಆಕ್ಷೇಪ ಇದ್ದವರು ತಾವು ಸ್ವತಃ—ವಾ—ವಕೀಲರ ಮುಖಾಂತರ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರೀಗೆಯುಕ್ತಗಂಡಂತೆ ತೀರ್ಮಾನಿಸಲಾದೀತೆಂಬ ಸಂಗತಿಯನ್ನು ಈ ಮೂಲಕ ತಿಳಿಸಿಯದೆ, ತಿಳಿದಿರಲಿ.

(By Court order)

K. Subramanya Gowda.

Advocate for Petrs.

ಪುತ್ತೂರು, 30—6—66.

ಸರ್ವೇಯ…

ಚಂದಮಾಮನ ಮ…



೧

ಅಮೇರಿಕದ ಸರ್ವೇಯರ್ ಅಂತರಿಕ್ಷ ವಾಹನವು ಚಂದ್ರನ ಮೇಲೆ ಬಹಳ ಕೌಶಲ್ಯದಿಂದ ಇಳಿದಾಗ, ಧೂಳಿನ ಒಂದು ಕಣವೂ ಮೇಲೇರಲಿಲ್ಲ. ಪ್ರಾರಂಭಿಕ ಕಾರ್ಯೋತ್ಸಾಹದಲ್ಲಿ ಸರ್ವೇಯರ್ ವಾಹನವು ಚಂದ್ರಲೋಕದ ೧೪೪ ಚಿತ್ರಗಳನ್ನು ಟೆಲಿವೈಸ್ ಮಾಡಿ ಭೂಮಿಗೆ ಕಳುಹಿಸಿತು.

ಸೀ ಆಫ್ ಸ್ಟಾರ್ಮ್ಸ್ ಎಂಬ ಚಪ್ಪಟೆ ಬಯಲಿನ ಮೇಲೆ ಈ ಇತಿಹಾಸ ಮಹತ್ವದ ಮೃದು ಸ್ಪರ್ಶ ನಡೆದುದು ಜೂನ್ ೨ರ ಪ್ರಾತಃಕಾಲ. ಹೀಗೆ ಅಮೇರಿಕವು ತನ್ನ ಪ್ರಥಮ ಪ್ರಯತ್ನದಲ್ಲೇ ಮೆಲ್ಲನೆ ಇಳಿಯುವ ಕಾರ್ಯದಲ್ಲಿ ಸಫಲವಾಯಿತು.

ಮೊದಲನೆಯ ಚಿತ್ರದಲ್ಲಿ ಮೂರು ಪಾದಗಳ ಸರ್ವೇಯರ್‌ನ ಒಂದು ಪಾದ ಕಂಡು ಬಂತು. ಪಾದದ ಮೆತ್ತೆಯು ಚಂದ್ರ ಮಂಡಲಕ್ಕೆ ಸ್ಪರ್ಶಿಸಿದ ಸ್ಥಳದಲ್ಲಿ ಸ್ವಲ್ಪ ತಗ್ಗು ಕಂಡು ಬಂತು. ೧೦ ಅಡಿ ಎತ್ತರದ ಈ ವಾಹನವು ಗಟ್ಟಿಯಾದ ನೆಲದ ಮೇಲೆ ಸರಿಯಾಗಿ ನಿಂತಂತೆ ಕಂಡು ಬಂತು.

ಒಂದು ಅಡಿ ವ್ಯಾಸದ ಒಂದು ಕಲ್ಲು ಮತ್ತು ಇತರ ಚಿಕ್ಕ ಕಲ್ಲುಗಳು ಇತರ ಚಿತ್ರಗಳಲ್ಲಿ ಕಂಡು ಬಂದಿವೆ. ಇನ್ನೊಂದು ದೃಶ್ಯದಲ್ಲಿ ಸುಮಾರು ಎರಡು ಅಡಿ ವ್ಯಾಸದ ಒಂದು ಚಿಕ್ಕ ಜ್ವಾಲಾಮುಖಿಯ ಬಾಯಿ ಕಂಡು ಬಂದಿದೆ.

ಒಂದು ಟನ್ ಭಾರದ ಸರ್ವೇಯರನ್ನು ಮೂರು ದಿನಗಳ, ೨,೩೫,೦೦೦ ಮೈಲಿಗಳ ಚಂದ್ರಲೋಕ ಪ್ರಮಾಣಕ್ಕೆ ಸೋಮವಾರ ಎಸೆಯಲಾಯಿತು. ಫ್ಲಾರಿಡದ ಕೇಪ್ ಕೆನೆಡಿಯಿಂದ ಸರ್ವೇಯರನ್ನು ಮೇಲೇರಿಸಲು ಅಧಿಕ ಚೈತನ್ಯದ ಅಟ್ಲಾಸ್ ಸೆಂಟಾರ್ ರಾಕೆಟ್ಟನ್ನು ಉಪಯೋಗಿಸಲಾಯಿತು. ಅತೀವ ಜಟಿಲವಾದ ಈ ಕಾರ್ಯವು ಪ್ರಾರಂಭದಿಂದ ಕೊನೆಯವರೆಗೆ ದೋಷರಹಿತವಾಗಿತ್ತು.

ಕ್ಯಾಲಿಫೋರ್ನಿಯಾದ ಗೋಲ್ಡ್‌ಸ್ಟೋನಿನಲ್ಲಿರುವ ಗತಿ ಶೋಧಕ ಕೇಂದ್ರದ ದೊಡ್ಡ ಅಂಟೆನ್ನವು ಸರ್ವೇಯರ್‌ನ ಪ್ರಾರಂಭದ ಚಿತ್ರಗಳನ್ನು ಪಡೆಯಿತು. ಅರ್ಧ ಗಂಟೆಯೊಡನೆಯೇ ಅವುಗಳನ್ನು ರಾಷ್ಟ್ರೀಯ ಟೆಲಿವಿಷನ್‌ನಲ್ಲಿ ಪ್ರದರ್ಶಿಸಲಾಯಿತು. ಗುರುವಾರ ಅನೇಕ ಬಾರಿ ಈ ಚಿತ್ರಗಳನ್ನು ಪುನಃ ಪುನಃ ತೋರಿಸಲಾಯಿತು.

ಈ ಹಾರಾಟ ಹತೋಟಿ ಕೇಂದ್ರವಾಗಿರುವ ಜೆಟ್ ಪ್ರೊಪಲ್ಶನ್ ಲ್ಯಾಬರೇಟರಿಯ ಪ್ರಾಜೆಕ್ಟ್ ಅಧಿಕಾರಿಗಳು ಈ ಸಫಲ ಕಾರ್ಯ ನಿರ್ವಹಣೆಯಿಂದ ಅಚ್ಚರಿಗೊಂಡರು ಹಾಗೂ ಸಂತೋಷ ಭರಿತರಾದರು.

ಸೀ ಆಫ್ ಸ್ಟಾರ್ಮ್ಸ್ ಪ್ರದೇಶವು, ಚಪ್ಪಟೆಯಾಗಿರುವ ಒಣಬಯಲು ಎಂಬುದನ್ನು ಈ ಚಿತ್ರಗಳು ದೃಢೀಕರಿಸಿವೆ, ಇದೇ ದಶಕದಲ್ಲಿ ಮನುಷ್ಯ ಸಹಿತ ಅಪೋಲೋ ವಾಹನವು ಇಳಿಯಲು ಇದು ಯೋಗ್ಯ ಸ್ಥಳವೆಂದು ತೋರುತ್ತಿದೆ

ಸರ್ವೇಯರ್ ಚಿತ್ರಗಳ ಪ್ರಥಮ ವೀಕ್ಷಣೆಯಿಂದ, ಅವು ಕಳೆದ ಫೆಬ್ರವರಿಯಲ್ಲಿ ಚಂದ್ರನ ಮೇಲೆ ಮೃದು ಸ್ಪರ್ಶಮಾಡಿದ ರಷ್ಯದ ಲೂನಾ-೯ ವಾಹನವು ತೆಗೆದ ಚಿತ್ರಗಳಿಗೆ "ಸಮಾನ"ವಾಗಿವೆ ಎಂದು ಕಂಡುಬರುತ್ತಿದೆ.

ಕೆಳಗಿಳಿಯುವ ಸ್ಪರ್ಶಕ್ಕೆ ಮುಂಚಿನ ಅರ್ಧಗಂಟೆಯಲ್ಲಿ ನಡೆದ ಅತೀವ ಜಟಿಲವಾದ ಅವರೋಹಣ ಕಾರ್ಯವು ದೋಷ ರಹಿತವಾಗಿ ನಡೆಯಿತು. ವಿಜ್ಞಾನಿಗಳು ಸೆಕೆಂಡಿನ ಭಿನ್ನಾಂಶಕ್ಕೆ ಕರಾರುವಾಕ್ಕಾಗಿ ಆಜ್ಞೆಗಳನ್ನು ಕಳುಹಿಸಿದರು. ಸರ್ವೇಯರ್ ಯಾವುದೇ ನ್ಯೂನತೆಯಿಲ್ಲದೆ ಪ್ರತಿಕ್ರಿಯೆ ನೀಡಿತು. ಕೆಳಗಿಳಿಯುವ ಪ್ರಚಂಡ ಆಂದೋಲನದಲ್ಲಿ ನೆಟ್ಟಗೆ ಇರಲು ಸಾಧ್ಯವಾಗುವಂತೆ, ಅದು ತನ್ನದೊಡ್ಡ ರಿಟ್ರೋ-ಬ್ರೇಕಿಂಗ್ ರಾಕೆಟ್ಟನ್ನು ಮತ್ತು ಮೂರು ಚಿಕ್ಕ ಗೈಡೆನ್ಸ್ ರಾಕೆಟ್‌ಗಳನ್ನು ಆಸ್ಫೋಟಿಸಿತು.

ಮೃದುಸ್ಪರ್ಶದ ಅವರೋಹಣವಾದನಂತರ ಮೊದಲನೆಯ ಚಿತ್ರವನ್ನು ಕಳುಹಿಸಲು ಸರ್ವೇಯರ್‌ಗೆ ಆಜ್ಞೆ ಕೊಡಲಾಯಿತು. ಒಂದು ಅಂಟೆನ್ನವನ್ನು ಉಪಯೋಗಿಸಿ ಅದು ೨೦೦ರೇಖೆಗಳ ಚಿತ್ರವೊಂದನ್ನು ಭೂಮಿಗೆ ಪ್ರಸಾರ ಮಾಡಿತು. ಅನಂತರ ತನ್ನ ವಿದ್ಯುಚ್ಛಕ್ತಿ ಮತ್ತು ವೋಲ್ಟೇಜುಗಳು ಗರಿಷ್ಠ ಪ್ರಮಾಣದಲ್ಲಿವೆಯೆಂದು ಸರ್ವೇಯರ್ ವರದಿಮಾಡಿದಾಗ, ಅದರ ಸೌರ ಫಲಕವನ್ನು ಸೂರ್ಯನತ್ತ ತಿರುಗಿಸಲು, ಅದರ ಹೈಗೈನ್ ಅಂಟೆನ್ನವನ್ನು ಭೂಮಿಯತ್ತ ತಿರುಗಿಸಲು ಮತ್ತು ೬೦೦ರೇಖೆಗಳ ಟೆಲಿವಿಷನ್ ಚಿತ್ರಗಳನ್ನು ಪ್ರಸಾರಮಾಡಲು ಅದಕ್ಕೆ ಆಜ್ಞೆ ಕೊಡಲಾಯಿತು. ಅದು ಆಜ್ಞೆಯನ್ನು ಪಾಲಿಸಿತು.

ಸರ್ವೇಯರ್ ವಾಹನವು ಸ್ವಲ್ಪವೂ



೪



೫

ಸಾರುತ್ತದೆ

ಲ್ಲಿ ಇಳಿಯಬಹುದು

ಹಾಳಾಗದೆ ಚಂದ್ರ ಮಂಡಲದಲ್ಲಿಳಿಯಿತು. ಚಾಂದ್ರಮಾನ ರಾತ್ರಿಯ ಶೀತಳ ಹವೆಯು ಅದರ ಶಕ್ತಿಯನ್ನು ಉಡುಗಿಸುವುದಕ್ಕೆ ಮುಂಚೆ ಒಂದು ಚಾಂದ್ರಮಾನ ದಿನದವರೆಗೆ—ಸುಮಾರು ೧೪ಭೂ ದಿನಗಳವರೆಗೆ—ಅದು ಚಿತ್ರಗಳನ್ನು ತೆಗೆಯುವುದೆಂದು ನಿರೀಕ್ಷಿಸಬಹುದು ಎಂದ ನಿರೀಕ್ಷೆಯಿತ್ತು.

ಇನ್ನು ಚಿತ್ರಗಳನ್ನು ಗ್ರಹಿಸುವಾಗ ವಿಜ್ಞಾನಿಗಳು ಮುಂಚೆಗಿಂತ ಹೆಚ್ಚು ಆಯ್ಕೆ ಮಾಡುವರು. ಪಡೆದಿರುವ ಚಿತ್ರಗಳಲ್ಲಿ ಸ್ವಾರಸ್ಯದ ಅಂಶಗಳನ್ನು ಶೋಧಿಸುವರು, ಹೆಚ್ಚಿನ ವಿವರಗಳನ್ನು ಪಡೆಯಲು ಒಂದು "ಝೂಮ್ - ಇನ್" ಮಸೂರವನ್ನು ಉಪಯೋಗಿಸುವರು.

ವರ್ಣಚಿತ್ರಗಳನ್ನೂ ಕಳುಹಿಸುವ ಸಾಧ್ಯತೆಯಿದೆ, ಆದರೆ ವರ್ಣ ಚಿತ್ರಗಳಿಂದ ಹೆಚ್ಚಿನ ಮಾಹಿತಿ ಲಭಿಸದಿರಬಹುದು ಎಂದು ಡಾ। ಜಾಫೆ ಹೇಳಿದರು. ಭೂಮಿಯ ಕಲ್ಲುಗಳು ಕಾಣಿಸಿಕೊಳ್ಳುವಂತೆ ಚಂದ್ರ ಮಂಡಲದ ಕಲ್ಲುಗಳೂ ಬೂದು ಬಣ್ಣದಲ್ಲಿ ಅಥವಾ ಸ್ವಲ್ಪ ಕಪ್ಪು ಬಣ್ಣದಲ್ಲಿ ಕಾಣಿಸಿಕೊ ಳ್ಳುವುವು.

ಸರ್ವೇಯರನ ಕ್ಯಾಮರದಲ್ಲಿ ಉಪಯೋಗಿಸಿರುವ ಕನ್ನಡಿಯ ಕೋನದಿಂದಾಗಿ, ಭೂಮಿಯ ಚಿತ್ರಗಳನ್ನು ತೆಗೆಯಲು ಸಾಧ್ಯವಾಗಲಾರದು—ಇವು ಊಹಾಪೋಹಗಳು.

ಕ್ಯಾಮರವನ್ನು ಸರ್ವೇಯರನ ಮುಖ್ಯ ಭಾಗದಲ್ಲಿ ಕೆಳಮಟ್ಟದಲ್ಲಿ ಜೋಡಿಸಲಾಗಿದೆ. ಈ ಕ್ಯಾಮರವು ಚಂದ್ರನ ದೃಶ್ಯಗಳನ್ನು ಪಡೆಯಲು ನೆಲದಿಂದ ಐದು ಅಡಿ ಎತ್ತರದಲ್ಲಿ ಇಡಲಾಗಿರುವ ಕನ್ನಡಿಗೆ ಇದಿರಾಗಿರುವುದು. ಭೂಮಿಯಿಂದ ಕಳುಹಿಸುವ ಆಜ್ಞೆಯ ಮೂಲಕ ಅಥವಾ ಮುಂಚೆಯೇ ಸರ್ವೇಯರ್‌ನ ಎಲೆಕ್ಟ್ರಾನಿಕ್ ಮಿದುಳಲ್ಲಿ ಸಂಗ್ರಹಿಸಿರುವ ಆಜ್ಞೆಗಳ ಮೂಲಕ, ಪರಿಶೀಲನ ಕಾರ್ಯಕ್ಕಾಗಿ ಈ ಕನ್ನಡಿಯನ್ನು ೩೬೦ ಡಿಗ್ರಿಗಳ ವರೆಗೆ ತಿರುಗಿಸಲಾಗುವುದು.

ಸರ್ವೇಯರ್ ಚಂದ್ರಮಂಡಲಕ್ಕಿಳಿಯುವ ಮುಂಚೆ ಅದರ ಭಾರವಾದ ರಿಟ್ರೋ ರಾಕೆಟ್ಟನ್ನು ಹೊರಗೆ ಎಸೆಯಲಾಯಿತು. ಚಂದ್ರಮಂಡಲದಲ್ಲಿ ಈಗ ನೆಲೆಸಿರುವ ಸರ್ವೇಯರ್‌ನ ಭಾರ ೬೨೦ ಪೌಂಡುಗಳಷ್ಟು. ಮೂರು ಪಾದಗಳ ಲ್ಯಾಂಡಿಂಗ್ ಗೇರ್‌ನಲ್ಲಿ ಇದರ ಭಾರವನ್ನು ಸಮನಾಗಿ ಹಂಚಲಾಗಿದೆ.

ಚಂದ್ರಲೋಕದ ಮೇಲೆ ಮನುಷ್ಯ ಸಹಿತವಾಗಿ ಇಳಿಯುವ ವಾಹನದ ರಚನೆಯು ಸರ್ವೇಯರ್‌ನಂತೆಯೇ ಇರುವುದು, ಆದರೆ ಅದರ ೧೫ ಟನ್ ಭಾರವನ್ನು ಜೇಡನಂಥ ನಾಲ್ಕು ಪಾದಗಳ ಮೇಲೆ ಹಂಚಲಾಗುವುದು.

ಸರ್ವೇಯರ್‌ನ ಅವರೋಹಣ ಕಾರ್ಯವು ಸಫಲವಾಗಿರುವುದು, ಮನುಷ್ಯ ಸಹಿತ ವಾಹನದ ರಚನಾಕ್ರಮವು ಸರಿಯಾದುದು ಎಂಬ ಭರವಸೆಯನ್ನು ಕೊಡುತ್ತದೆ.

ಈ ಮೃದು ಸ್ಪರ್ಶವು ಸಫಲವಾದುದಕ್ಕೆ ಹಲವು ಕಾರಣಗಳಿವೆ— ಮೇಲೇರುವಾಗ ರಾಕೆಟ್‌ನ ಅತಿ ಕರಾರುವಾಕ್ಕಾದ ಕಾರ್ಯ ನಿರ್ವಹಣೆ, ಸರ್ವೇಯರ್ ಹಾರಾಟ ನಡೆಸುತ್ತಿದ್ದಾಗ ಅದರ ಸ್ಥಿತಿಯ ಬಗೆಗೆ ನಡೆಸಿದ ಉತ್ತಮ ಪರಿಶೀಲನೆ, ಕೊನೆಯ ಇಳಿತಕ್ಕೆ ಭೂಮಿಯಿಂದ ಸೆಕೆಂಡಿನ ಭಿನ್ನಾಂಶಕ್ಕೆ ಕರಾರುವಾಕ್ಕಾಗಿ ಕೊಟ್ಟ ಆಜ್ಞೆಗಳು, ಸರ್ವೇಯರ್‌ನ ಇಲೆಕ್ಟ್ರಾನಿಕ್ ಮಿದುಳುಗಳ ಆಜ್ಞೆಗಳಿಗೆ ಪ್ರತಿ

(ಹದಿಮೂರನೇ ಪುಟ ನೋಡಿರಿ)

ಚಿತ್ರಗಳು

೧. ಈ ವರ್ಷದ ಆರಂಭದಲ್ಲಿ ಚಂದ್ರಲೋಕದತ್ತ ಪಯಣಿಸಿದ ಮಾನವ ರಹಿತ ಉಪಗ್ರಹ ಅಪೊಲ್ಲೊ—೧.

೨. ಗಗನಯಾತ್ರಿ ಡೇವಿಡ್ ಸ್ಕಾಟ್ ಮತ್ತು ನೀಲ್ ಆರ್ಮ್‌ಸ್ಟ್ರಾಂಗರು ಜೆಮಿನಿ—೮ ಉಪಗ್ರಹದ ಯಾತ್ರಿಕರು. ಚಂದ್ರಲೋಕದಲ್ಲಿ ಇಳಿಯಬಹುದೆಂದು ಇವರು ಪ್ರತ್ಯಕ್ಷ ಪಡಿಸಿದರು.

೩. ಮೃದುವಾಗಿ ಚಂದ್ರಲೋಕದ ಸೀ ಆಫ್ ಸ್ಟಾರ್ಮ್ಸ್ (ಜಂಜಾ ಸಮುದ್ರ)ದಲ್ಲಿ ಇಳಿದ ಸರ್ವೇಯರ್ ಹಾರಾಟಕ್ಕೆ ಸಿದ್ಧವಾಗುತ್ತಿದೆ. ಇದೀಗ ಯಶಸ್ವಿಯಾದುದರಿಂದ ಚಂದ್ರನತ್ತ ಕಳಿಸಲಿರುವ ಅಪೊಲ್ಲೋ ಉಪಗ್ರಹಕ್ಕೆ ಬಲಬಂದಿದೆ.

೪. ಬೃಹದ್ ಅಪೊಲ್ಲೊ ಉಪಗ್ರಹ ಯೋಜನೆಯು ಕಾರ್ಯರೂಪಕ್ಕೆ ಬಂದಾಗ ಮೂರು ಲಕ್ಷ ಜನರು ಚಂದ್ರಲೋಕ ಯಾತ್ರೆ ಮಾಡುವರು. ಈ ಸಾಧನಾಪಥದಲ್ಲಿ ವಿಶಿಷ್ಟ ಲೋಹವೊಂದರ ಸುಡುವ ಗುಣವನ್ನು ಎಳೆಯ ಕರ್ಮಚಾರಿ ಧ್ಯಾನದಿಂದ ಪರಿಶೀಲಿಸುತಿದ್ದಾನೆ.

೫. ಚಂದ್ರಲೋಕ ಯಾತ್ರೆಯ ಕುತೂಹಲವು ಏನೋನೋ ಮಾಡಿಸುತ್ತದೆ. ವಿಶಿಷ್ಟತರದ ಲೋಹಗಳನ್ನೂ ಒಂದು ರಾಜ್ಯವು ಇನ್ನೊಂದು ರಾಜ್ಯಕ್ಕೆ ಕಳಿಸುತ್ತದೆ. ಇದು ಇದರ ಒಂದು ನೋಟ.

೬. ಅಪೊಲ್ಲೊ ನಿರ್ದೋಷವಾಗುವಂತೆ ಎಚ್ಚರಿಕೆ ಬಗೆಗೆ. ಇಲ್ಲಿನ ವಿಜ್ಞಾನಿಗೆ ಒಂದು ಸಂದೇಹ ಬಂತು: ಇದು ವಿದ್ಯುತ್ ಸಂಪರ್ಕವೇ, ಮಿಶ್ರಪದ್ಧತಿಯೇ ಎಂದ. ಇದನ್ನು ತಿಳಿಯಲು ಈತ ಟಿಲಿಕ ಮಾಡುತಿದ್ದಾನೆ.

೭. ಅಪೊಲ್ಲೊ ಉಪಗ್ರಹಂಚನೆಗಾಗಿ ಅನೇಕ ಕುಶಲರಲ್ಲಿ ಕುಶಲರಾದ ಕೆಲಸಗಾರರು ಒಂದಾಗುತಿದ್ದಾರೆ. ಉಪಗ್ರಹದ ನಿಯಂತ್ರಕವನ್ನು ಜಾಗರೂಕತೆಯಿಂದ ಕರ್ಮಚಾರ ಜೋಡಿಸುತ್ತಿದ್ದಾನೆ.

೩

೬



೭

ಭಾರತೀಯ ಜನಪದ ಸಂಪರ್ಕ ಅಧ್ಯಯನ ಸಂಸ್ಥೆ

(ಐದನೇ ಪುಟದಿಂದ)

ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರಾತಿನಿಧಿಕ ಸಂಸ್ಥೆಗಳು ರಾಷ್ಟ್ರೀಯ ಅಭಿವೃದ್ಧಿಯ ಕಾರ್ಯಕ್ರಮಗಳ ಪ್ರಾಶಸ್ತ್ಯ ಕುರಿತು ಯೋಜನೆಗಳನ್ನು ಸಿದ್ಧಗೊಳಿಸುವಾಗ ಸಂಶೋಧನೆಗೆ ವಾಸ್ತವ ಮಹತ್ವ ಪ್ರಾಪ್ತವಾಗಬೇಕು.

ಜನಪದ ಸಂಪರ್ಕ ಕ್ರಮಗಳನ್ನು ಕ್ಷೇತ್ರದಲ್ಲಿ ಕಾರ್ಯಗತಗೊಳಿಸುವಾಗ ಸಂಶೋಧನೆಯಿಂದ ಸಾಧ್ಯವಾದಷ್ಟು ಮಟ್ಟಿಗೆ ಪ್ರಯೋಜನಪಡೆಯಬೇಕು.

ಸಂಶೋಧನಾ ಕಾರ್ಯಕರ್ತರು ವಾರ್ತಾ ಸಂಸ್ಥೆಗಳ ಕಾರ್ಯದಕ್ಷತೆಯನ್ನು ಹೆಚ್ಚಿಸುವಂತೆ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಗೊಳಿಸಬೇಕು.

ಉದ್ದೇಶಿತ ಜನಪದ ಸಂಪರ್ಕ ಸಂಸ್ಥೆಯು ಸರಕಾರದ ಮಾಲಿಕತ್ವಕ್ಕೆ ಒಳಪಟ್ಟು ಸ್ವಯಮಾಡಳಿತ ಸಂಸ್ಥೆಯಾಗಿರಬೇಕು. ದಕ್ಷ ಸಿಬ್ಬಂದಿ ಮತ್ತು ಜನಪದ ಸಂಪರ್ಕದ ಗುಣಾಂಶ ಸುಧಾರಣೆ, ಈ ಸಂಸ್ಥೆಯ ಮುಖ್ಯ ಗುರಿಯಾಗಬೇಕು. ಸಂಸ್ಥೆಯು ತನ್ನ ಕೆಲ ಜನ ಸಿಬ್ಬಂದಿಯವರಿಗೆ ತರಬೇತಿ ಕೊಡುವ ಸೌಲಭ್ಯಗಳಿಂದ ಸುಸಜ್ಜಿತವಾಗಿರಬೇಕು.

ರಾಜ್ಯ ಮತ್ತು ಸ್ಥಾನಿಕ ಮಟ್ಟಗಳಲ್ಲಿ ವಾರ್ತಾ ಸೇವೆಯು ಕಾರ್ಯ ತ್ವರಿತಗೊಳ್ಳಬೇಕು. ರಾಷ್ಟ್ರೀಯ ಅಭಿವೃದ್ಧಿಗಾಗಿ ರೇಡಿಯೋಗಳ ಬಳಕೆ ಹೆಚ್ಚಾಗಬೇಕು. ವಿಷಯ ನಿರೂಪಕ ಮತ್ತು ಶಿಕ್ಷಣೋದ್ದೇಶದ ಚಲಚ್ಚಿತ್ರಗಳ ವಿಷಯದಲ್ಲಿ ಈಗ ನೀಡಲಾಗುತ್ತಿರುವ ತರಬೇತಿ ಸೌಲಭ್ಯದಿಂದ ಇನ್ನೂ ಅಧಿಕ ಪ್ರಯೋಜನ ಪಡೆಯಬೇಕು. ಜನಪದ ಸಂಪರ್ಕ ಕ್ಷೇತ್ರದಲ್ಲಿ ಸಾಧ್ಯವಾಗಿರುವ ತಾಂತ್ರಿಕ ಪ್ರಗತಿಯನ್ನು ಆಗಾಗ್ಗೆ ಅಂದಾಜು ಮಾಡಬೇಕು ಎಂದು ಅಧ್ಯಯನ ತಂಡದವರು ಶಿಫಾರಸು ಮಾಡಿದ್ದಾರೆ.

ಅನುಷ್ಠಾನದಲ್ಲಿ ಪ್ರಗತಿ

ಅಧ್ಯಯನ ತಂಡದವರು ಸಲ್ಲಿಸಿದ ವರದಿಯನ್ನು ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಸಾರ ಮಂತ್ರಿ ಶಾಖೆಯವರು ಪರಿಶೀಲಿಸಿದರು. ಹೀಗೆ ಪರಿಶೀಲಿಸುವಾಗ ಅವರು ಕೇಂದ್ರ ಶಿಕ್ಷಣ, ಆರೋಗ್ಯ, ಸಮುದಾಯ ಅಭಿವೃದ್ಧಿ, ಪಂಚಾಯತ್ ರಾಜ್, ಸಹಕಾರ, ಆಹಾರ ಮತ್ತು ಬೇಸಾಯ ಮಂತ್ರಿ ಶಾಖೆಯವರೊಂದಿಗೆ ಸಮಾಲೋಚನೆ ನಡೆಸಿದರು. ಈ ಸಮಾಲೋಚನೆಯ ನಂತರ ಜನಪದ ಸಂಪರ್ಕ ಕ್ಷೇತ್ರದಲ್ಲಿ ಉಚ್ಚ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಸಂಬಂಧವಾಗಿ ಅಧ್ಯಯನ ತಂಡದವರು ಮಹತ್ವಪೂರ್ಣ ಶಿಫಾರಸನ್ನು ಅಂಗೀಕರಿಸಲಾಯಿತು. ಫಲ ಸ್ವರೂಪವಾಗಿ ೧೯೬೫ರ ಅಗಸ್ಟ್ ೧೭ರಂದು ಭಾರತೀಯ ಜನಪದ ಸಂಪರ್ಕ ಸಂಸ್ಥೆಯು ನವದೆಹಲಿಯಲ್ಲಿ ಅಸ್ತಿತ್ವದಲ್ಲಿ ಬಂದಿತು. ಏಷ್ಯಾದಲ್ಲಿ ಜನಪದ ಸಂಪರ್ಕ ವಿಷಯದಲ್ಲಿ ಉಚ್ಚಶಿಕ್ಷಣ ನೀಡುವುದಕ್ಕಾಗಿ ಸಂಸ್ಥೆ ಸಂಸ್ಥಾಪನೆಗೊಂಡಿರುವುದು ಇದೇ ಮೊದಲು.

ಸಂಸ್ಥೆಯ ರೂಪರೇಷೆ

ಮೊದ ಮೊದಲು ಈ ಸಂಸ್ಥೆಯು ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಸಾರ ಮಂತ್ರಿ ಶಾಖೆಯ ಅಧೀನದಲ್ಲಿ ಕಾರ್ಯಾರಂಭ ಮಾಡಿತು. ಬಳಿಕ ೧೯೬೬ರ ಜನವರಿ ೨೨ರಂದು ಸಂಘ ಸಂಸ್ಥೆಗಳ ದಾಖಲಾತಿ ಸಂಬಂಧವಾದ ಕಾನೂನಿನನ್ವಯ ದಾಖಲಾತಿಗೊಂಡಿತು. ಅಂದಿನಿಂದ ಅದು ಸ್ವಯತ್ತಾಧಿಕಾರವುಳ್ಳ ಸಂಸ್ಥೆಯಾಗಿದೆ ಸರಕಾರದಿಂದ ನಾಮಕರಣಗೊಂಡ ಅಧ್ಯಕ್ಷರು ಈ ಮಂಡಲಿಯ ಮುಖ್ಯಸ್ಥರಾಗಿದ್ದಾರೆ. ಪೂರ್ಣಾವಧಿಯ ಡೈರೆಕ್ಟರು ಈ ಪರಿಷತ್ತಿನ ಕಾರ್ಯ ಕಲಾಪಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ. ಭಾರತೀಯ ಜನಪದ ಸಂಪರ್ಕ ಸಂಸ್ಥೆಗೆ ಈಗ ತನ್ನದೇ ಆದ ಸ್ವಂತ ಕಟ್ಟಡವಿಲ್ಲ, ಕೆಲವು ದಿನಗಳಲ್ಲಿಯೇ ಈ ಸಂಸ್ಥೆಯು ನೆಹರೂ ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ವಂತ ಕಟ್ಟಡವೊಂದನ್ನು ಪಡೆಯಬಹುದು.

ಕಾರ್ಯ ವಿಧಾನ ನಿರೂಪಣೆ

ಈ ಸಂಸ್ಥೆಯು ಮುಖ್ಯವಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಾರ್ತಾ ಮತ್ತು ಪ್ರಚಾರ ಶಾಖೆಗಳ ಸಿಬ್ಬಂದಿಯವರಿಗೆ ತರಬೇತಿ ನೀಡುವುದು. ಹೊಸದಾಗಿ ಕೇಂದ್ರ ವಾರ್ತಾ ಸೇವೆಯನ್ನು ಸೇರಿದವರಿಗೆ ಮತ್ತು ಈಗಾಗಲೇ ಸೇವಾ ನಿರತರಾಗಿರುವವರಿಗೆ ಜನಪದ ಸಂಪರ್ಕ ಮತ್ತು ವಾರ್ತಾ ಸೇವೆಗೆ ಸಂಬಂಧಿಸಿದಂತೆ ಮೂಲಭೂತ ತಿಳುವಳಿಕೆ ಮಾಡಿಕೊಡಲು ತರಬೇತಿ ವರ್ಗಗಳನ್ನು ನಡೆಸುವುದು. ಈ ತರಬೇತಿ ವರ್ಗಗಳಲ್ಲದೆ, ಜನಪದ ಸಂಪರ್ಕ, ವಾರ್ತಾ ಮತ್ತು ಪ್ರಸಿದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ವಿಚಾರ ಗೋಷ್ಠಿಗಳನ್ನು ಏರ್ಪಡಿಸುವುದು, ವಾರ್ತೆಗಳು ಜನಸಾಮಾನ್ಯರಿಗೆ ತಲುಪುವ ಬಗೆ, ಮತ್ತು ಅವುಗಳಿಂದ ಜನಸಾಮಾನ್ಯರ ಮೇಲೆ ಆಗಬಹುದಾದ ಪರಿಣಾಮ, ಇವೇ ಮೊದಲಾದ ಮೂಲಭೂತ ವಿಷಯಗಳನ್ನು ಕುರಿತು ಈಗ ನಮಗಿರುವ ತಿಳುವಳಿಕೆಯಲ್ಲಿರುವ ನ್ಯೂನತೆಗಳನ್ನು ನಿವಾರಿಸಲು ಈ ಸಂಸ್ಥೆಯು ಆಗತ್ಯವಾದ ಸಂಶೋಧನೆಯನ್ನು ಕೈಗೊಳ್ಳುವುದು.

ಸಂಸ್ಥೆಯು ಇತ್ತೀಚೆಗೆ, ಭಾರತ—ಪಾಕ್ ಕದನದಲ್ಲಿ ನಮ್ಮ ಪ್ರಚಾರ ವ್ಯವಸ್ಥೆಯು ಪರಿಸ್ಥಿತಿಗೆ ತಕ್ಕಂತೆ ಯಾವ ರೀತಿ ಕಾರ್ಯ ಪ್ರವೃತ್ತವಾಯಿತೆಂಬುದನ್ನು ಅಂದಾಜು ಮಾಡಲು ಒಂದು ಪುಟ್ಟ ಸಂಶೋಧನಾ ಕಾರ್ಯ ಯೋಜನೆಯೊಂದನ್ನು ಸಿದ್ಧಗೊಳಿಸಿತು.

ಪ್ರಯೋಗಿಕ ವರ್ಗ

ಸಂಸ್ಥೆಯು ಕಾರ್ಯಾರಂಭ ಮಾಡಿದ ದಿನವೇ ಪ್ರಯೋಗಿಕ ತರಬೇತಿ ವರ್ಗವನ್ನು ಆರಂಭಿಸಲಾಗಿದೆ. ತರಬೇತಿಯ ಅವಧಿ ಆರು ತಿಂಗಳು. ಈ ವರ್ಗದಲ್ಲಿ ಕೇಂದ್ರ ವಾರ್ತಾ ಸೇವೆಗೆ ಹೊಸದಾಗಿ ಸೇರಿದ ಎರಡನೆಯ ದರ್ಜೆಯ ೧೨ಮಂದಿ ಅಧಿಕಾರಿಗಳು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದ ವಾರ್ತಾ ಇಲಾಖೆಗಳ ೧೩ ಮಂದಿ ಅಧಿಕಾರಿಗಳು ಈ ಮೊದಲನೆಯ ತರಬೇತಿ ವರ್ಗದಲ್ಲಿ ಭಾಗವಹಿಸಿದ್ದಾರೆ.

ಈ ತರಬೇತಿ ವರ್ಗದಲ್ಲಿ ಮುಖ್ಯವಾಗಿ ಪತ್ರಿಕೆಗಳಿಗೆ ರೇಡಿಯೋ ಮತ್ತು ಇತರ ಜನಸಂಪರ್ಕ ಮಾಧ್ಯಮಗಳಿಗೆ ಪ್ರಚಾರ ಸಾಮಗ್ರಿಯನ್ನು ಒದಗಿಸಲು ಅಗತ್ಯವಾದ ಲೇಖನ ಕಲೆಯ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಈ ವಾಸ್ತವ ತರಬೇತಿಯ ಜೊತೆಗೆ ಲೇಖನ ಕಲೆಯನ್ನು ಕುರಿತು ಸೈದ್ಧಾಂತಿಕ ಉಪನ್ಯಾಸಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರದ ಅಗತ್ಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಪರಿಣಾಮಕಾರಿಯಾದ ಜನಪದ ಸಂಪರ್ಕ ತತ್ವಗಳನ್ನು ಬೋಧಿಸಲಾಗುವುದು.

ಪ್ರಸ್ತುತ ವರ್ಷದ ಕಾರ್ಯಕ್ರಮ

೧೯೬೬—೬೭ನೇ ಸಾಲಿನಲ್ಲಿ ಸಂಸ್ಥೆಯು ಆರಂಭಿಸಲು ಉದ್ದೇಶಿಸಿರುವ ತರಬೇತಿ ವರ್ಗಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ.

ಕೇಂದ್ರ ಸರಕಾರದ ವಾರ್ತಾ ಸೇವೆಯನ್ನು ಹೊಸದಾಗಿ ಪ್ರವೇಶಿಸಿದ ನಾಲ್ಕನೆಯ ದರ್ಜೆಯ ಅಧಿಕಾರಿಗಳಿಗಾಗಿ ಇದೇ ೧೯೬೬ರ ಮಾರ್ಚ್ ೧ರಂದು ೧೫ ತಿಂಗಳ ಅವಧಿಯ ತರಬೇತಿಯ ವರ್ಗವನ್ನು ಆರಂಭಿಸಲಾಯಿತು. ವಾರ್ತಾ ಸೇವೆಯ ಎರಡನೆಯ ದರ್ಜೆಯ ಹುದ್ದೆಗಳಿಗೆ ನೇರವಾಗಿ ನೇಮಕಗೊಂಡವರೂ ಈ ವರ್ಗದಲ್ಲಿ ತರಬೇತಿ ಪಡೆಯುವರು.

ಈಗಾಗಲೇ ಸೇವೆಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಾರ್ತಾ ಶಾಖೆಗಳ ಸಿಬ್ಬಂದಿಯವರಿಗಾಗಿ ಇದೇ ನವೆಂಬರ್ ೧ರಿಂದ ೪ ತಿಂಗಳ ಅವಧಿಯ ತರಬೇತಿ ವರ್ಗವನ್ನು ಆರಂಭಿಸಲಾಗುವುದು.

ಕೇಂದ್ರ ವಾರ್ತಾ ಸೇವೆಯ ಎರಡನೆಯ ದರ್ಜೆಯ ಹಿರಿಯ ಅಧಿಕಾರಿಗಳಿಗೆ ಜನಪದ ಸಂಪರ್ಕ ಪರಿಚಯ ಮಾಡಿಕೊಡುವುದಕ್ಕಾಗಿ ೧೯೬೭ರ ಫೆಬ್ರುವರಿ ೧೫ರಿಂದ ನಾಲ್ಕು ವಾರಗಳ ಅವಧಿಯ ತರಬೇತಿ ವರ್ಗವನ್ನು ವ್ಯವಸ್ಥೆಗೊಳಿಸಲಾಗಿದೆ. ಅದೇ ರೀತಿ, ಕೇಂದ್ರ ಮತ್ತು ರಾಜ್ಯ ಸರಕಾರಗಳ ವಾರ್ತಾ ಶಾಖೆಯ ಹಿರಿಯ ಅಧಿಕಾರಿಗಳಿಗಾಗಿ ಆರು ವಾರಗಳ ಅವಧಿಯ ತರಬೇತಿ ವರ್ಗವನ್ನು ಆರಂಭಿಸಲಾಗುವುದು.

ಕೇಂದ್ರ ಸರಕಾರದ ನಿವೃತ್ತ ಪ್ರಧಾನ ವಾರ್ತಾಧಿಕಾರಿಗಳಾದ ಶ್ರೀ ಎಲ್. ಆರ್. ನಾಯರ್‌ರವರು ಈ ಸಂಸ್ಥೆಯ ನಿರ್ದೇಶಕರು.

"ನಾಲಗೆ ಕುಲವನ್ನು ಹೇಳುವದು' ಎಂಬ ಗಾದೆಯ ಮಾತು ತೀರ ಸತ್ಯ. ನಾಲಗೆಯನ್ನು ಬಿಗಿ ಹಿಡಿಯಲು ಸಮರ್ಥನಾದವನಿಗೆ ಈ ಲೋಕದಲ್ಲಿ ಅಪಜಯದ ಭಯವಿಲ್ಲ.

ಹೈಸ್ಕೂಲ್ ಹೊಸಕಟ್ಟಡದ ಉದ್ಘಾಟನೆ

ಅಡ್ಯನಡ್ಕದ ಜನತಾ ಹೈಸ್ಕೂಲಿನ ಹೊಸ ಕಟ್ಟಡದ ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು ಶ್ರೀ ಕೆ. ವೆಂಕಟರಮಣ ಗೌಡ ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಅಡ್ಯನಡ್ಕ ವಿದ್ಯಾ ಸಂಘದ ಅಧ್ಯಕ್ಷ ಶ್ರೀ ಸಾಯ್ಯ ಕೃಷ್ಣಭಟ್ಟರು ಆರಂಭದಲ್ಲಿ ಸ್ವಾಗತಿಸಿದ ಬಳಿಕ ಶಾಲಾ ಕರೆಸ್ಪೋಂಡೆಂಟ್ ಶ್ರೀ ವಿ. ಸುಬ್ರಾಯ ಭಟ್ಟರು ವರದಿಯನ್ನು ಓದಿದರು. ಸಭಿಕರಲ್ಲಿ ಶ್ರೀಗಳಾದ ಎಮ್. ನಾರಾಯಣ ಭಟ್, ಎನ್. ಮೂರಪ್ಪ ಶೆಟ್ಟಿ ಇವರು ಮಾತನಾಡಿದರು. ಉದ್ಘಾಟಕರೂ ಅಧ್ಯಕ್ಷರೂ ಜಿಲ್ಲೆಯ ವಿದ್ಯಾಪ್ರಗತಿಯನ್ನು ವಿವರಿಸಿ ಊರವರ ಸಾಹಸವನ್ನು ಕೊಂಡಾಡಿದರು. ಅಂತ್ಯದಲ್ಲಿ ಹೆಡ್‌ಮಾಸ್ಟರ್ ಶ್ರೀ ಬಿ. ಈಶ್ವರ ಭಟ್ಟರು ಕೃತಜ್ಞತೆಗಳನ್ನರ್ಪಿಸಿದರು.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗಚ್ಚಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶ ವಿದೇಶದ ಮಹಾಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ತ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಅದ್ಭುತ ಪವಾಡ

ಇಂದ್ರಜಾಲ ವಿದ್ಯೆ

ಬರೆದವರು: ಶ್ರೀ ಸ. ನಾರಾಯಣ

ಇಂದ್ರಜಾಲ ವಿದ್ಯೆ ಭಾರತೀಯರಿಗೆ ಅಪರಿಚಿತವಾದುದೇನಲ್ಲ. ಪ್ರಾಚೀನ ಭಾರತದಲ್ಲಿ ಈ ವಿದ್ಯೆಯು ಬಳಕೆ ವಿಶೇಷವಾಗಿತ್ತು ಎಂಬ ಸಂಗತಿ ತಿಳಿದು ಬರುತ್ತದೆ. ಇಂದಿಗೂ ಅನೇಕ ಇಂದ್ರಜಾಲಿಕರು (ಮಾಯಾ ಮಂತ್ರ ತಂತ್ರವಿಶಾರದರು) ತಮ್ಮ ಅದ್ಭುತಪ್ರದರ್ಶನಗಳಿಂದ ಜನತೆಯನ್ನು ಅಚ್ಚರಿಗೊಳಿಸುವುದನ್ನು ಕಾಣುತ್ತೇವೆ. ಮಂತ್ರವಾದಿಗಳು ನಗರಗಳ ಪೇಟೆಗಳಲ್ಲಿ, ಸಂತೆ ಪ್ರದೇಶಗಳಲ್ಲಿ ಜನತೆಯನ್ನು ಆಕರ್ಷಿಸಿ ಪ್ರದರ್ಶನ ನೀಡುವುದನ್ನು ಕಾಣಬಹುದಾಗಿದೆ. ಇಂದಿಗೂ ಅನೇಕ ಭಾರತೀಯ ಇಂದ್ರಜಾಲಿಕರು ರಾಜ್ಯದ ವಿವಿಧ ಭಾಗಗಳಲ್ಲಿ ತಮ್ಮ ಪ್ರದರ್ಶನ ನೀಡಿ ಜನಪ್ರಿಯತೆ ಗಳಿಸಿರುವುದನ್ನು ತಿಳಿಯಬಹುದಾಗಿದೆ.

ಇಂದ್ರಜಾಲ ವಿದ್ಯೆ ಅರವತ್ನಾಲ್ಕು ವಿದ್ಯೆಗಳಲ್ಲಿ ಒಂದು. ಜನಮನರಂಜನೆಯೇ ಅದರ ಮೂಲ ಉದ್ದೇಶ್ಯ ಎಂದು ಹೇಳಲೂ ಅಡ್ಡಿ ಇಲ್ಲ. ಮಂತ್ರ—ತಂತ್ರ ಪ್ರಧಾನವಾದ ವಿದ್ಯೆ. ಹಲವು ಶಕ್ತಿಗಳನ್ನು ಬಲಪಡಿಸಿಕೊಂಡು ತಮ್ಮ ಅಧೀನದಲ್ಲಿಟ್ಟುಕೊಂಡು, ಕೆಲಸ ನೆರವೇರಿಸಿಕೊಳ್ಳುತ್ತಾರೆ ಇಂದ್ರಜಾಲಿಕರು. ಈ ಶಕ್ತಿ ಸಂಪಾದನೆಗೆ ಸಾಧನೆ ಅಗತ್ಯ. ಹಲವು ರೀತಿಯಲ್ಲಿ ವಿದ್ಯೆ- ಶಕ್ತಿಗಳ ದುರುಪಯೋಗವಾಗಿರುವುದೇ ಹೆಚ್ಚು. ಸತ್ಕಾರ್ಯಗಳಿಗೆ"ವಿನೋದಕ್ಕೆ, ಮನರಂಜನೆಗೆ ಬಳಸಿರುವುದು. ಅವರಿಂದ ಉಪಕಾರ ಪಡೆದಿರುವುದು ತೀರಾ ಕಡಿಮೆ. ಹೆಣ್ಣು, ಹೊನ್ನು, ಮಣ್ಣು ಇವುಗಳ ಆಸೆಗಾಗಿ ದುಷ್ಟಶಕ್ತಿಗಳನ್ನು ಬಳಸಿಕೊಂಡು ಅದರಿಂದ ಅನೇಕರನ್ನು ತೊಂದರೆಗೆ ಗುರಿಮಾಡುವ ಪ್ರಸಂಗಗಳೇ ಹೆಚ್ಚು. ಪ್ರಾಣಹರಣ ನಡೆದಿರುವ ಪ್ರಸಂಗಗಳೂ ಉಂಟು. ಇಂದ್ರಜಾಲವಿದ್ಯೆಯ ಸಿದ್ಧಿಗೂ ಜಪ-ತಪಗಳನ್ನು ಮಾಡಬೇಕಾಗುತ್ತದೆ. ನಾನಾ ಬಗೆಯ ಉಪಾಯ—ಸೂತ್ರಗಳನ್ನೂ ಹೇಳುವ ತಂತ್ರ ಗ್ರಂಥಗಳು ವಿಶೇಷವಾಗಿವೆ. ಪುಸ್ತಕಗಳ—ಗ್ರಂಥಗಳ ಪಠನದಿಂದ ಈ ವಿದ್ಯೆ ಲಭಿಸದು. ಈ ಕ್ರಿಯೆಗಳೆಲ್ಲವೂ ಗುರುವಿನ ಮೂಲಕವೇ ಲಭಿಸಬೇಕು. ಆಗಲೇ ಈ ವಿದ್ಯೆಗೆ ಬಲ- ಬೆಲೆ.

ಇಂದ್ರ ಮತ್ತು ಸಂಬರ (ಅಥವಾ)ಶಬರ್ ಎಂಬ ಅಸುರ ಇಂದ್ರಜಾಲ ವಿದ್ಯೆಯ ಆಚಾರ್ಯರು ಎಂಬ ಸಂಗತಿ ರತ್ನಾವಳಿಯಿಂದ ತಿಳಿದು ಬರುತ್ತದೆ. ಇದು ವಂಶಪಾರಂಪರ್ಯವಾಗಿ ಬರುವ ವಿದ್ಯೆಯೂ ಅಲ್ಲ. ಇದರ ಪ್ರಾಪ್ತಿಗೆ ಉತ್ಕಟ ಆಕಾಂಕ್ಷೆಯೊಂದಿಗೆ, ಎದೆಗುಂದದ ನಿರ್ಧಾರವೂ ಬೇಕು.

ಇಂದ್ರಜಾಲ ಎಂದರೆ ಇಂದ್ರಿಯಗಳ ಜಾಲ ಅಥವಾ ಆವರಣ. ಅರ್ಥಾತ್ ಇಂದ್ರಿಯಗಳ ಜಾಲದಂತೆ ಆವೃತವಾಗಿರುವ ವಿದ್ಯೆ. ಪ್ರಾಚೀನ ಕಾಲದಲ್ಲಿ ಇಂದ್ರಜಾಲಿಕರಿಗೆ ರಾಜಸ್ಥಾನದಲ್ಲಿ ವಿಶೇಷ ಗೌರವವಿರುತ್ತಿತ್ತಂತೆ. ತಂತ್ರ ಗ್ರಂಥಗಳಲ್ಲಿ ಇಂದ್ರಜಾಲದ ಅನೇಕ ವಿಧಿಗಳು ಪ್ರಸ್ತಾಪಿಸಲ್ಪಟ್ಟಿವೆ. ದತ್ತಾತ್ರೇಯ ತಂತ್ರದ ಹನ್ನೊಂದನೇ ಪಟಲದಲ್ಲಿ ಮನುಷ್ಯ, ಪ್ರಾಣಿ, ಪಕ್ಷಿ, ಮೃಗಗಳಾಗಿ ಮಾರ್ಪಡುವ ವಿಧಿಗಳು ವಿವರಿಸಲ್ಪಟ್ಟಿವೆ. ಮಾರಣ-ಮೋಹನ, ವಶೀಕರಣ ವಿದ್ಯೆಗಳ ಪ್ರಸ್ತಾಪವೂ ಇದೆ. ಈ ವಿದ್ಯೆಯಿಂದ ಪತಿ ಪತ್ನಿಯರು ಪರಸ್ಪರ ವಶ ಮಾಡಿಕೊಳ್ಳಬಹುದು. ತಾನು ಅಂಜನ ಹಚ್ಚಿಕೊಂಡು ಇತರರಿಗೆ ಕಾಣದಂತೆ ಅದೃಶ್ಯವಾಗಿ ಅವರನ್ನು ನೋಡಬಹುದು. ಇಂದ್ರಜಾಲ ತಂತ್ರ ಸಂಗ್ರಹ ಗ್ರಂಥದಲ್ಲಿ ಕ್ರೂರ ಜಂತುಗಳನ್ನು ನಿವಾರಿಸುವ ಅಗ್ನಿಯನ್ನು ತೋರಿಸುವ, ಬುದ್ಧಿವಿಕಲ್ಪ ಮಾಡುವ, ವಿಚಿತ್ರ ಬಯಕೆಗಳನ್ನು ಮೂಡಿಸುವ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ಇಲ್ಲಿ ಮಂತ್ರ ಸಿದ್ಧಿ, ದ್ರವ್ಯ ಸಿದ್ಧಿಯ ವಿಷಯವೂ ಹೇಳಲ್ಪಟ್ಟಿದೆ. ಇಂದ್ರಜಾಲಿಕರು ರಾಜಸಭೆಯಲ್ಲಿ ಅರಸ ಹಾಗೂ ಸಭಾಸದರ ಮನರಂಜನೆಗಾಗಿ ಅದ್ಭುತ ಪ್ರದರ್ಶನಗಳನ್ನು ನೀಡಿ ಅವರನ್ನು ಚಕಿತಗೊಳಿಸುತ್ತಿದ್ದ ಉದಾಹರಣೆಗಳುಂಟು. ನೆಲದ ಮೇಲೆ ಚಂದ್ರನನ್ನು, ಆಕಾಶದಲ್ಲಿ ಪರ್ವತವನ್ನು, ಜಲದಲ್ಲಿ ಅಗ್ನಿಯನ್ನು, ಕತ್ತಲೆಯಲ್ಲಿ ಸೂರ್ಯನನ್ನು, ಮುಗಿಲಲ್ಲಿ ಪದ್ಮವನ್ನು ತೋರಿಸುವ, ದೇವ ದೇವತೆಗಳನ್ನು ನಿಂತೆಡೆಯಲ್ಲಿಯೇ ತೋರಿಸುವ ಅಪ್ಸರ ಸ್ತ್ರೀಯರ ನಾಟ್ಯ-ಗೀತ, ವಿನೋದಗಳನ್ನು ಪ್ರದರ್ಶಿಸುತ್ತಿದ್ದ ಪ್ರಸಂಗಗಳು ಹಲಗ್ರಂಥಗಳಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಮೂಲತಃ ಗುರುವಿನ ಮಂತ್ರೋಪದೇಶ, ಅವನ ಆಶೀರ್ವಾದ, ಅವನ ಅನುಗ್ರಹವೇ ಈ ಶಕ್ತಿಗೆ ರಹಸ್ಯ ಸ್ಫೂರ್ತಿ-ತೇಜಸ್ಸು ಎಂದು ಹೇಳಬಹುದಾಗಿದೆ. ಆಗಮನೆ ಬೆಂಕಿಯಿಂದ ಉರಿಯುತ್ತಿದ್ದಂತೆಯೂ ಅಲ್ಲಿಗೆ ಓಡಿ ಹೋಗಿ ನೋಡಿದಾಗ ಏನೂ ಇಲ್ಲದಿರುವುದು, ಬೆಂಕಿಯಲ್ಲಿ ಓಡಿಹೋದರೂ ಥಳಥಳಿಸುತ್ತಿರುವುದು ಆಶ್ಚರ್ಯಕರ ಸಂಗತಿಗಳು. ಇವೆಲ್ಲವೂ ಇಂದ್ರಜಾಲವಿದ್ಯೆಯ ರಹಸ್ಯ ಸಂಗತಿಗಳು.

ಇಂದಿಗೂ ಇಂದ್ರಜಾಲಿಕರು ತಮ್ಮ ಅದ್ಭುತ ವಿದ್ಯೆಯಿಂದ, ರಹಸ್ಯ ಶಕ್ತಿ ಬಲದಿಂದ ವಿವಿಧ ಬಗೆಯ ಜಾಣ್ಮೆಯ ಆಟಗಳನ್ನು ಪ್ರದರ್ಶಿಸುವುದು ಅಪರಿಚಿತವೇನಲ್ಲ. ನಾವು ಕಣ್ಣು ತೆರೆದು ನೋಡುತ್ತಿದ್ದಂತೆಯೇ ಅನೇಕ ಆಶ್ಚರ್ಯಕರ ಸಂಗತಿಗಳು ನಡೆದು ಹೋಗಿರುತ್ತವೆ. ಇದು ನಮ್ಮ ದೃಷ್ಟಿ ದೋಷವಲ್ಲ. ಇಂದ್ರಜಾಲ ವಿದ್ಯೆಯ ರಹಸ್ಯ. ಈ ವಿದ್ಯಾ ರಹಸ್ಯವನ್ನು ಅರಿತಿದ್ದರೆ ಆಟದ ಬಗೆಗೆ ಅಭಿಪ್ರಾಯ ತಾನಾಗಿಯೇ ಹೊರ ಬರುತ್ತದೆ.

ಕಾಲಿಕಾ ಪುರಾಣದ ನಿರೂಪಣೆಯಂತೆ (ಶ್ರಾವಣ ಮಾಸದ ಕೃಷ್ಣ ಪಕ್ಷದ ದಶಮಿಯ ದಿನ) ಶಬರೋತ್ಸವ ನಡೆಯುತ್ತಿತ್ತಂತೆ. ಈ ಉತ್ಸವದಲ್ಲಿ ವೇಶ್ಯೆಯರು, ನರ್ತಕರು, ರೂಪಜೀವಿಗಳು ಮತ್ತು ನಾಯಕರು ವಿಶೇಷವಾಗಿ ಭಾಗವಹಿಸುತ್ತಿದ್ದರಂತೆ. ಈ ಉತ್ಸವದಲ್ಲಿ ಭಾಗವಹಿಸುತ್ತಿದ್ದ ನಾಗರಿಕರಾದಿಯಾಗಿ ಸರ್ವರೂ ಅಶ್ಲೀಲವಾಗಿ ಮಾತನಾಡುತ್ತಿದ್ದರಂತೆ. ಅಶ್ಲೀಲ ಸಂಭಾಷಣೆಯೇ ಈ ಉತ್ಸವದ ವಿಶೇಷ ಆಕರ್ಷಣೆ. ಇಂದ್ರಜಾಲ ವಿದ್ಯೆಯ ಅತಿ ಮುಖ್ಯ ಭಾಗವೆಂದರೆ ವಶೀಕರಣ ವಿದ್ಯೆ. ಸುಂದರ—ಶ್ರೀಮಂತ ಯುವಕರನ್ನು ವಶ ಪಡಿಸಿಕೊಳ್ಳುವ ವೇಶ್ಯೆಯರು ವಿಶೇಷವಾಗಿ ಇಂದ್ರಜಾಲಿಕರನ್ನು ಆಶ್ರಯಿಸಿ ಪ್ರಾರ್ಥಿಸಿ ಅವರಿಂದ ತಮ್ಮ ಕಾರ್ಯ ನೆರವೇರಿಸಿಕೊಳ್ಳುತ್ತಿದ್ದರಂತೆ.

ಇಂದ್ರಜಾಲ ವಿದ್ಯೆ ಎರಡಲುಗಿನ ಹರಿತವಾದ ಕತ್ತಿ ಇದ್ದಂತೆ. ನಾಗರ ನೆರಳಿದ್ದಂತೆ. ಹೆಡೆಬಿಚ್ಚಿ ಆಡಿದರೆ ನಾಗರಹಾವಿನ ಹೆಡೆ ನೋಡಲು ಬಹು ಸೊಗಸು. ಕೆರಳಿ ಕಚ್ಚಿದರೆ? ಪ್ರಾಣಹಾನಿ. ಜನಮನರಂಜನೆಯ ಗಡಿಯಲ್ಲಿಯೇ ಇರಬೇಕು ಈ ವಿದ್ಯೆ. ವಿದ್ಯೆಯ ಆಟವನ್ನೇ ಕಾಣುತ್ತೇನೆ, ಶೋಧಿಸುತ್ತೇನೆ ಎಂಬ ಹುಚ್ಚು ಹಟ ಹಿತಕಾರಿಯಲ್ಲ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 53/66.

ತಿಮ್ಮಯ್ಯ ಗೌಡ —ವಾದಿ

ಮತ್ತು

ತಿಮ್ಮಪ್ಪ ಗೌಡ ಕೂಡಾ —ಪ್ರತಿವಾದಿರು

2ನೇ ಪ್ರತಿವಾದಿ ಬೂಚಣ್ಣ ಗೌಡರಿಗೆ.

ಸುಳ್ಯ ತಾಲೂಕು ದೇವಡಳ್ಳ ಗ್ರಾಮದಲ್ಲಿ

ವಾದಿಯು ನಿಮ್ಮ ಮೇಲೆ ಕೂಡಾ ಮಾಡಿದ ಮೇಲೆ ಹೇಳಿದ ದಾವೆಯು ನಿಮ್ಮ ಹಾಜರಾತಿ ಬಗ್ಗೆ ಮತ್ತು ಆಕ್ಷೇಪಗಳಿದ್ದಲ್ಲಿ ತಿಳಿಸುವರೆ ತಾ. 16—7—1966ಕ್ಕೆ ನ್ಯಾದೆ ಇರುತ್ತದೆ. ಆದುದರಿಂದ ನೀವು ಆ ದಿವಸ ಬೆಳಗ್ಗೆ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸಿಕೊಳ್ಳ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಮುಂದುವರಿಸಲಾದೀತೆಂತ ಕೋರ್ಟು ಹುಕ್ಕುಂ ಮೇರೆಗೆ ತಿಳಿಸಲಾಗಿಯದೆ.

(Sd) N. Subramanyan.

Advocate for Plff.

ಪುತ್ತೂರು, 17—6—66.

Navayuga

Announcing

Independence Day Special 1966

You are aware that the INDEPENDENCE SPECIAL of your favourite Weekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 19th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the state.

Kindly send your advertisement material on or before August 5th, 1966.

ADVERTISEMENT RATES

Full Page	... Rs. 200/-	Back Cover Page	... Rs. 500/-
Half Page	... Rs. 100/-	Inside 1st Cover Page	... Rs. 400/-
Quarter Page	... Rs. 60/-	Inside 2nd Cover Page	... Rs. 300/-
One-eigth Page	... Rs. 35/-	Ordinary Full Page in double colours	... Rs. 300/-

MECHANICAL DATA

Paper size ... 15" × 10" (37.5 Cm. × 25 Cm.)   Size of type page ... 13" × 8" Half Crown (32.5 Cm. × 20 Cm.)

Date of Publication : 15—8—1966.

Kindly send the advt. matter to

The Advt. Manager,
NAVAYUGA,
P. B. No. 22, Udipi, S. K.

ಬೆಲೆ ತಗ್ಗಿತು

(ಐದನೇ ಪುಟದಿಂದ)

"ನಮ್ಮದಿಷ್ಟೇ ಸ್ವಾಮಿ" ಎಂದು ವಿನಯ ಮೂರ್ತಿಗಳಾದೆವು. ಠೇಂಕಾರ ಬಿಟ್ಟು ವಿನಯ ಪ್ರದರ್ಶನ ಮಾಡಿದುದರಿಂದ ನಮ್ಮ ಗೌರವ ಹೆಚ್ಚಾಯಿತು ಅಪ್ಪಾ!'

'ಸಾಕು ಬಾಯಿ ಮುಚ್ಚೋ. ನಿನ್ನ ಮಾತಿಗೆ ಕಾಸಿನ ಬೆಲೆಯೂ ಇಲ್ಲ. ಮಂಕ! ಲೆಕ್ಚರ್ ಕೊಡ್ತಾನೆ ದೊಡ್ಡ ಇವನ ಹಾಗೆ. ಇತ್ತ ಕೊಡೋ ಆ ಪತ್ರಿಕೇನ? ಸಂಪಾದಕೀಯ ಓದಿಬಿಟ್ರೆ ಎಲ್ಲಾ ಗೊತ್ತಾಗಿ ಬಿಡುತ್ತೆ."

ಸುಬ್ರಾಯ ಪತ್ರಿಕೆಯನ್ನು ಅಪ್ಪನ ಹತ್ರ ಹಾಕಿ, 'ನಿಧಾನವಾಗಿ ಓದಿನೋಡಿದರೆ ನಿಮಗೇ ಗೊತ್ತಾಗುತ್ತದಪ್ಪಾ, ನನ್ನ ಮಾತಿಗೆ ಕಾಸಿನ ಬೆಲೆಯಿಲ್ಲಾಂತ ನೀವು ಹೇಳಿದರೂ ಇನ್ನೇನೂ ಪರವಾಗಿಲ್ಲ. ಅದಕ್ಕಾಗಿ ನಾನೇನೂ ತಲೆತಗ್ಗಿಸಬೇಕಾಗಿಯೂ ಇಲ್ಲ. ಯಾಕಂತೀರಾ ಅಪ್ಪಾ, ಈಗ ನನ್ನ ಬೆಲೆಯೂ ನಿಮ್ಮ ಬೆಲೆಯೂ ಒಂದೇ ಅಂತ ಸ್ಪಷ್ಟಾಯ್ತು. ಬಡವ—ಧನಿಕ, ಮೇಲಧಿಕಾರಿ, ಕೀಳಧಿಕಾರಿ ಎಂಬ ಭೇದಗೀದಗಳೇನೂ ಇನ್ನಿಲ್ಲ. ಜೇಬಿನಲ್ಲಿ ರೂಪಾಯಿವುಳ್ಳವರೆಲ್ಲರೂ ಒಂದೇ ಬೆಲೆಯವರು, ಸರಿಸಮಾನರು."

'ಅದೇನು ಮಾತೋ? ತಲೆಗಿಲೆ ತಿರುಗಿತೆ? ಅಪ್ಪನ ಮಾತಿಗೂ ಬೆಲೆ ಕೊಡದಷ್ಟು ಬುದ್ಧಿವಂತನಾಗಿ ಬಿಟ್ಟೆಯಾ?'

"ಅದೇನಿಲ್ಲಪ್ಪ. ಅಪ್ಪ ಎಂಬ ಪದಕ್ಕಿರುವ ಬೆಲೆಗೆ "ಅಬ"ಸೇರಿಲ್ಲ. ಅದಿನ್ನೂ ಇದ್ದ ಹಾಗೇ ಇರುತ್ತೆ. ನಮ್ಮೊಳಗೇ ನಾವು ಹೇಗೆ ಬೇಕಾದರೂ ಬೆಲೆಕೊಟ್ಟುಕೊಂಡು ವ್ಯವಹರಿಸಿಕೊಬಹುದು. ಆದರೆ ವಿದೇಶದವರ ಮುಂದೆ ನಮ್ಮೆಲ್ಲರ ಬೆಲೆಯೇನೂ ತಗ್ಗಿಹೋಯಿತೋ ಇಲ್ಲವೋ? ಆ ಲೆಕ್ಕದಲ್ಲಿ ಇನ್ನು ಭಾರತೀಯರಾದ ನಾವೆಲ್ಲರೂ ಸರಿಸಮಾನರಾದೆವು. ಒಗ್ಗಟ್ಟಾಗಿರಲಿಕ್ಕೆ ನಮಗೆಲ್ಲರಿಗೂ ಒಳ್ಳೇನ್ಯಾಯಸೂತ್ರವೂ ಸಿಕ್ಕಿಬಿಟ್ತು."

'ಅದು ಹ್ಯಾಗೋ ನ್ಯಾಯ — ಸೂತ್ರ ಸಿಕ್ಕಿಬಿಟ್ಟಿದ್ದು ನಿನಗೆ?'

"ಕೇಳಿ ಅಪ್ಪಾ, ನಮ್ಮ ರೂಪಾಯಿ ಬೆಲೆಯನ್ನು ತಗ್ಗಿಸಲಾಯಿತೆಂದು ಢಂಗುರವಾಗಿ ಸಾರಲಾಯಿತಷ್ಟೆ? ದೊಡ್ಡ ದೊಡ್ಡ ಮಹಾ ಮಹಾ ಪದರು ಪದರಾದ ಅಂತಸ್ತುಗಳ ಮೇಲೆ ಅಂತಸ್ತಿನಲ್ಲಿರುವ ಪರದೇಶಗಳ ಮುಂದೆ ನಾವೆಲ್ಲಾ ವಿನಯಮೂರ್ತಿಗಳಾದೆವು. ವ್ಯವಸಾಯದ ದೇಶಕ್ಕಿಂತಲೂ, ಕಾರ್ಖಾನೆಗಳ ದೇಶವೇ ಶ್ರೀಮಂತ ದೇಶವಾಗುತ್ತದೆಂತಲೂ, ಇದರಿಂದ ಕಂಡುಹಿಡಿಯ ಬಹುದಲ್ಲ? ಕಾರ್ಖಾನೆಗಳ ದೇಶಗಳು ಮುಂದುವರಿಯುವ ಹಾಗೆ ವ್ಯವಸಾಯದ ದೇಶವೂ ಮುಂದುವರಿಯ ಬೇಕಾದರೆ ಆ ಕಾರ್ಖಾನೆ ದೇಶಗಳ ಸಹಕಾರವೂ ಅಗತ್ಯವಾಗುತ್ತದಷ್ಟೆ? ಆ ಸಹಾಯಕ್ಕಾಗಿಯೂ ಹೀಗೆ ವಿನಯ ತೋರಿಸಲೇ ಬೇಕಾಗುತ್ತದೆ. ಗುರುಗಳ ಮುಂದೆ ಶಿಷ್ಯರು ತಮ್ಮ ಬೆಲೆ ತಗ್ಗಿಸಿಕೊಳ್ಳಬೇಕಲ್ಲಾ! ಹಾಗೆ ನಾವೆಲ್ಲ ದೇಶೀಯರು ಶಿಷ್ಯರಂತಾಗಿರುವಾಗ ಇನ್ನು ನಮ್ಮೊಳಗೆಮೇಲು ಕೀಳು ಅಂತ ಜಂಭ ಏಕೆ ಹೇಳಿ? ಮೇಲಧಿಕಾರಿಗಳ ಮುಂದೆ ಕೆಳಗಿನವರಾಗಲೀ ಉಪಾಧ್ಯಾಯರ ಮುಂದೆ ಹುಡುಗರಾಗಲೀ ಹೆಚ್ಚೇನೂ ತಗ್ಗ ಬೇಕಾಗಿಲ್ಲ. ವರನ ಕಡೆಯ ದಿಬ್ಬಣದವರಿಗೆ ಕೂಡಾ ಬಗ್ಗಿ ಬಗ್ಗಿ ಉಪಚರಿಸಬೇಕಾಗಿಲ್ಲ. ದೇವರ ಮುಂದೆ ಎಲ್ಲರೂ ಹೇಗೆ ಸರಿಸಮಾನ ವಿನಯ ವಿಧೇಯತಾ ಮೂರ್ತಿಗಳೋ, ಅಲ್ಪರೋ ಹಾಗೆಯೇ ಪರದೇಶೀ ದೇವತೆಗಳ ಮುಂದೆ ನಾವೆಲ್ಲಾ ಇದ್ದೇವೆ. ನಮ್ಮೆಲ್ಲರ ಗಣ್ಯತೆಯ ಮಾನವನ್ನು ಅಳೆದು ನೋಡಿ ಕಾಪಾಡ ಬೇಕಾದವರೂ ಅವರೇ. ಕಲ್ಪನೆಯ ನಮ್ಮ ಕಾಣದ ದೇವರಂತೂ ಏನು ಮಾಡಿದರೂ ಮಾತಾಡುವುದಿಲ್ಲ. ಪ್ರತ್ಯಕ್ಷ ದೇವರುಗಳು ಹಾಗಿಲ್ಲವಲ್ಲ?"....

ಮಗನ ಮೋರೆಯನ್ನೇ ದುಚ್ಚಿದ ಹಾಗೆ ಪ್ರಶ್ನಾರ್ಥಕವಾಗಿ ನೋಡುತ್ತಿರುವ ಅಪ್ಪನನ್ನು ಕುರಿತು, ಸುಬ್ರಾಯ ಮುಂದುವರಿಸಿದ:

'ಇದರಿಂದ ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆಬರುತ್ತೇ ಅಂತ ನೆನಸಬೇಡಿ ಅಪ್ಪಾ. ನಾವು ಸ್ವತಂತ್ರರಾಗಿ ಇದ್ದುಕೊಂಡೇ ಬೆಲೆಕೊಟ್ಟು, ಅಥವಾ ಸಾಲವಾಗಿ, ಬಡ್ಡಿ ಕೂಡಾ ಸರಿಯಾಗಿ ಕೊಡುತ್ತ ಇತರರ ಸಹಾಯವನ್ನು ಪಡೆಯುತ್ತೇವಲ್ಲಾ, ಸ್ವಾತಂತ್ರ್ಯದ ಮೂಲವಿಲ್ಲದಿದ್ದರೆ ಸಾಲ ಹುಟ್ಟುತ್ತೆಯೆ? ಇಷ್ಟು ದಿನವೇನೋ ಎಚ್ಚರಿಲ್ಲದವರ ಹಾಗೆ ನಮ್ಮ ನಮ್ಮೊಳಗೆ ಗಣ್ಯರು, ಅಗಣ್ಯರು, ಬೆಲೆಯುಳ್ಳವರು ಬೆಲೆಯಿಲ್ಲದವರು ಅಂದುಕೊಂಡ, ಒಬ್ಬರಿಗೊಬ್ಬರು ತಗ್ಗೀ ಬಗ್ಗೀ ಹೆದರೀ ಬೆದರೀ ನಡೆದುಕೊಂಡು ಬಂದವು.

ಇನ್ನು ಅದನ್ನೆಲ್ಲಾ ಕಟ್ಟಿಟ್ಟು ಬಿಡಬೇಕು. ನಮ್ಮ ಗಣ್ಯತೆ ಇಷ್ಟು ಅಂತ ಈಗ ಬಟ್ಟ ಬಯಲಾಗಿ ಹೋಯ್ತು. ಸತ್ಯವು ಪ್ರದರ್ಶನವಾಯ್ತು. ಇನ್ನೇಕೆ ವ್ಯಥಾ ಪ್ರ್ಯಚಳಿ? ಒಂದು ವೇಳೆ ಈ ರೂಪಾಯಿಯ ಅಪಮೌಲ್ಯತೆ ಬೇಡವೇ ಬೇಡವೆಂದು ಸುಮ್ಮನಿದ್ದರೆ, ಪರದೇಶಗಳವರ ಸಹಕಾರ ನಿಂತು ಹೋಗುತ್ತೆ. ಮತ್ತೆ ನಮ್ಮ ದೇಶ ಹಳೆಯ ಕತ್ತಲೆಯ ಕಾಲಕ್ಕೇ ಹಿಂದಿರುಗ ಬೇಕಾಗುತ್ತೆ. ಅದೆಷ್ಟು ಘೋರ!

ಆದ್ದರಿಂದ ಈಗ ನಾವೆಲ್ಲಾ ಒಗ್ಗಟ್ಟಾಗಿ ದುಡಿದು ಹೆಣಗಾಡಿ ನಮ್ಮ ಗಣ್ಯತೆಯನ್ನು ಇತರ ದೇಶಗಳಿಗೆ ಸರಿಸಮಾನತೆಯಾಗಿ ಕೊಂಡೊಯ್ಯ ಬೇಕಾಗಿದೆ. ಅದಕ್ಕೆ ಉತ್ಪನ್ನ ಹೆಚ್ಚಿಸಬೇಕಾಗುತ್ತೆ—ಅದನ್ನೇ ಬಿಟ್ಟು ನಮ್ಮ ನಮ್ಮೊಳಗೆ ಒಬ್ಬರನ್ನೊಬ್ಬರು ಹೀನವಾಗಿ ಕಾಣುತ್ತ, ತಾನು ಮೇಲು ನೀನು ಕೆಳಗೆ ಅನ್ನುತ್ತ, ಸುಮ್ಮಸುಮ್ಮನೆ ಸುಲಿಯಲು ನೋಡುತ್ತಾ ಇದ್ದರೆ, ಉಳಿದಿರುವ ರೂಪಾಯಿಯ ಬೆಲೆಯೂ ಇಳಿದೀತು. ಅಪಮೌಲ್ಯವಾದ ರೂಪಾಯಿಯನ್ನು ಇನ್ನಷ್ಟು ಅಪಮೌಲ್ಯಮಾಡುತ್ತ ಹೋದರೆ, ನಮ್ಮ ರೂಪಾಯಿಯನ್ನು ನಾವೇ ಅವಮಾನ ಪಡಿಸಿದ ಹಾಗೆ. ಅಂದರೆ ನಮ್ಮನ್ನೇ ನಾವು ಅಪಮಾನ ಪಡಿಸಿಕೊಳ್ಳುವುದು...'

"ಏನೇನೋ ಹಂಟುತ್ತಾನಲ್ಲ ಇವ ನೋಡಿಬಿಡುವ ಎಷ್ಟು ಹುರುಳಿಯದೆ ಅಂತ?" ಎನ್ನುತ್ತ ಪತ್ರಿಕೆಯೊಳಗೆ ತಲೆ ಹೋಗಿಸಿ ಬಹಳ ಆಸ್ಥೆಯಿಂದ ಪಾರಾಯಣ ಮಾಡತೊಡಗಿದರು ಸುಬ್ರಾಯನ ಅಪ್ಪ.

ಕಲಾತ್ಮಕ ರಕ್ಷಾಕವಚ

ಬೆಲೆ: ರೂ. 1-50

ನವಯುಗ ಪ್ರೆಸ್, ಉಡುಪಿ. — ಅಥವಾ — ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಚಂದಮಾಮನ ಮನೆಯಲ್ಲಿ ಇಳಿಯಬಹುದು

(ಒಂಭತ್ತನೇ ಪುಟದಿಂದ)

ಕ್ರಿಯೆ ವ್ಯಕ್ತಪಡಿಸಿದುದು ಮತ್ತು ಸರ್ವೇಯರ್ ವಾಹನವು ಸುದೈವದಿಂದ ಚಪ್ಪಟೆ ನೆಲದಲ್ಲಿ ಇಳಿದುದು— ಇದು ಕಾರ್ಯದ ಸಫಲತೆಗೆ ಕಾರಣಗಳು.

ನಾಲ್ಕು ಸರ್ವೇಯರುಗಳನ್ನು ಕಳುಹಿಸುವವರೆಗೆ, ಎಂದರೆ ಇನ್ನೂ ಒಂದು ವರ್ಷದ ವರೆಗೆ, ಪೂರ್ಣ ಸಫಲತೆ ದೊರಿಕೀತೆಂದು ಅಮೆರಿಕದ ವಿಜ್ಞಾನಿಗಳು ನಿರೀಕ್ಷಿಸಿರಲಿಲ್ಲ.

ಸೋವಿಯತ್ ರಷ್ಯವು ಐದನೆಯ ಪ್ರಯತ್ನದಲ್ಲಿ, ಮೃದು ಸ್ಪರ್ಶದಲ್ಲಿ ಸಫಲವಾಯಿತು. ಆದರೂ, ಸಫಲವಾದ ಲೂನಾ-೬ ಅನೇಕ ನೂರು ಅಡಿ ಎತ್ತರದಿಂದ ಬಿದ್ದು, ನಿರಾತಂಕವಾಗಿ ಚಂದ್ರಮಂಡಲದಲ್ಲಿಳಿಯಿತು. ಮನುಷ್ಯಯಾನಕ್ಕೆ ಯೋಗ್ಯವಾಗಿರಬೇಕಾದ ವಾಹನವು ಈ ರೀತಿ ಬಿದ್ದರೆ ಕೆಟ್ಟು ಹೋಗುವುದು.

ಸರ್ವೇಯರನ್ನು ಭೂಮಿಯಿಂದ ನೇರವಾಗಿ ಚಂದ್ರ ಮಂಡಲಕ್ಕೆ ಕಳುಹಿಸಲಾಯಿತು. ಮೊದಲು ನಿರ್ಣಯಿಸಿದ ಅದರ ಪಥದ ಮೇರೆಗೆ, ವಾಹನವು ನಿಶ್ಚಯಿಸಿದ ಗುರಿ ಪ್ರದೇಶದಿಂದ—ಸೀ ಆಫ್ ಸ್ಟಾರ್ಮ್ಸ್‌ನಲ್ಲಿ ೬೦ ಮೈಲು ವ್ಯಾಸದ ವೃತ್ತದಿಂದ ೨೫೦ ಮೈಲುಗಳ ದೂರದಲ್ಲಿ ಇಳಿಯುವ ಸಂಭವವಿತ್ತು. ಆ ವೃತ್ತ ಪ್ರದೇಶವು ಚಂದ್ರನ ಗೋಚರ ಭಾಗದ ಪಶ್ಚಿಮಾರ್ಧದಲ್ಲಿ ಸಮಭಾಜಕ ವೃತ್ತದಿಂದ ಕೆಳಗಡೆ ಇದೆ.

ಆದರೆ ಜೆಟ್ ಪ್ರೊಪಲ್ಶನ್ ಲ್ಯಾಬರೇಟರಿಯಲ್ಲಿರುವ ಹಾರಾಟ ನಿಯಂತ್ರಕರು, ಸರ್ವೇಯರನ್ನು ಈ ವೃತ್ತದೊಳಗೆ ತರಲು ಒಂದು ಸೂಕ್ಷ್ಮವಾದ ಚಲನೆಯ ತಿದ್ದುಪಡಿಯನ್ನು ಮಾಡಲು ನಿರ್ಧರಿಸಿದರು. ಮಂಗಳವಾರ ಸರ್ವೇಯರ್ ಭೂಮಿಯಿಂದ ಸುಮಾರು —೧,೦೦,೦೦೦ ಮೈಲುಗಳ ದೂರದಲ್ಲಿದ್ದಾಗ, ಜೆಪಿಎಲ್‌ನಿಂದ ಕಳುಹಿಸಿದ ಒಂದು ರೇಡಿಯೋ ಸಂಕೇತವು ಒಂದು ಮಾರ್ಗ ಮಧ್ಯದ ರಾಕೆಟ್ ಮೋಟರನ್ನು ಆಸ್ಫೋಟಿಸಿತು. ಈ ಆಸ್ಫೋಟನೆಯು ಸರ್ವೇಯರನ್ನು ಮುಂಚೆ ಗೊತ್ತುಪಡಿಸಿದ್ದ ಗುರಿಗೆ ಹೋಗುವ ಪಥಕ್ಕೆ ನಿಕಟವಾಗಿ ಆಳವಡಿಸಿತು.

ಮಾರ್ಗ ಮಧ್ಯದ ತಿದ್ದುಪಡಿಗಿಂತ ಮುಂಚೆಯೂ, ಅನಂತರವೂ, ಸರ್ವೇಯರ್ ವಾಹನವು ತನ್ನ ಉಪಕರಣಗಳಿಗೆ ವಿದ್ಯುಚ್ಛಕ್ತಿಯನ್ನು ಆಕರ್ಷಿಸಲು ತನ್ನ ಸೌರ ಫಲಕವನ್ನು ಸೂರ್ಯನತ್ತ ತಿರುಗಿಸಿಕೊಂಡಿತ್ತು; ಹಾರಾಟ ಕಾಲದಲ್ಲಿ ಚಲನೆಯ ಮಾರ್ಗದರ್ಶನಕ್ಕಾಗಿ ತನ್ನ ಪ್ರಕಾಶ—ಸಂವೇದಿ ಸೆನ್ಸರನ್ನು ಉಜ್ವಲ ಅಗಸ್ತ್ಯ ನಕ್ಷತ್ರಕ್ಕೆ ಗುರಿಯಿಟ್ಟಿತ್ತು, ಮತ್ತು ಗೋಲ್ಡ್‌ಸ್ಟೋನ್, ದಕ್ಷಿಣ ಆಫ್ರಿಕ ಮತ್ತು ಆಸ್ಟ್ರೇಲಿಯದಲ್ಲಿನ ಕೇಂದ್ರಗಳಿಗೆ ತನ್ನ ಕಾರ್ಯನಿರ್ವಹಣೆಯ ಬಗೆಗೆ ನಿರಂತರವಾಗಿ ವರದಿ ಮಾಡುತ್ತಿತ್ತು.

ಸೂಕ್ಷ್ಮವಾದ ಹಾಗೂ ಜಟಿಲವಾದ, ಕೊನೆಯ ಹಂತದ ಚಲನಾ ಕಾರ್ಯಗಳು ಇಡಿಟಿ ಪ್ರಾತಃಕಾಲ ೧.೪೫ ಗಂಟೆಗೆ ಪ್ರಾರಂಭವಾದವು. ಆಗ ಸರ್ವೇಯರ್ ಚಂದ್ರನಿಂದ ೧೦೦೦ ಮೈಲುಗಳ ದೂರದಲ್ಲಿತ್ತು ಮತ್ತು ಚಂದ್ರನತ್ತ ಗಂಟೆಗೆ ೬೦೦೦ ಮೈಲುಗಳ ವೇಗದಲ್ಲಿ ಧಾವಿಸುತ್ತಿತ್ತು.

ಭೂಮಿಯಿಂದ ಕಳುಹಿಸಲಾದ ಒಂದು ರೇಡಿಯೋ ಸಂಕೇತವು ಸರ್ವೇಯರ್‌ಗೆ ಸೂರ್ಯ ಹಾಗೂ ಅಗಸ್ತ್ಯ ನಕ್ಷತ್ರಗಳೊಡನಿದ್ದ ಬಂಧಗಳನ್ನು ಕಳಚಿತು. ಬಳಿಕ ಸರ್ವೇಯರ್ ತನ್ನ ರಿಟ್ರೋರಾಕೆಟ್‌ನ ಮೂತಿಯನ್ನು ನೇರವಾಗಿ ಕೆಳಗಡೆ ಚಂದ್ರನತ್ತ ತಿರುಗಿಸಿತು.

ಸರ್ವೇಯರ್ ಚಂದ್ರನಿಂದ ೨೦೦ ಮೈಲುಗಳಷ್ಟು ದೂರದಲ್ಲಿದ್ದಾಗ, ಭೂಮಿಯಿಂದ ಎರಡನೆಯ ಆಜ್ಞೆಯನ್ನು ಕಳುಹಿಸಲಾಯಿತು. ಅವರೋಹಣದ ಬಗೆಗೆ ಹತೋಟಿ ಪಡೆಯಬೇಕೆಂದು ಸರ್ವೇಯರ್‌ನ ರಾಡಾರ್ ವ್ಯವಸ್ಥೆಗೆ ಮತ್ತು ಕಂಪ್ಯೂಟರ್‌ಗೆ ಆಜ್ಞಾಪಿಸಲಾಯಿತು.

ಕಂಪ್ಯೂಟರ್ ಯಂತ್ರವು, ಚಂದ್ರನತ್ತ ಎಸೆದು ಅಲ್ಲಿಂದ ಪುನಃ ನೆಗೆದ ರಾಡಾರ್ ಸಂಕೇತಗಳ ಸಹಾಯದಿಂದ, ಚಂದ್ರನಿಗೆ ತಲುಪಲು ಇರುವ ದೂರವನ್ನು ಲೆಕ್ಕ ಮಾಡುತ್ತ, ಆಜ್ಞಾಪಿಸಿದ ಸಮಯಕ್ಕೆ ಸರಿಯಾಗಿ ೧೦,೦೦೦ ಪೌಂಡ್ ತಳ್ಳುವ ಶಕ್ತಿಯ ರಿಟ್ರೋ—ರಾಕೆಟ್‌ನ ಆಸ್ಫೋಟನೆಯನ್ನು ಪ್ರಾರಂಭಿಸಿತು. ಈ ಆಸ್ಫೋಟನೆಯು ಸರ್ವೇಯರ್‌ನ ಗತಿಯನ್ನು ಗಂಟೆಗೆ ೨೫೦ ಮೈಲುಗಳಷ್ಟು ನಿಧಾನಗೊಳಿಸಿತು.

ದೊಡ್ಡ ರಾಕೆಟ್‌ನ ಆಸ್ಫೋಟನೆಯಾದ ಸಮಯದಲ್ಲೇ, ಸರ್ವೇಯರನ್ನು ಸ್ಥಿರವಾಗಿ ನೆಟ್ಟಗೆ ಇಡಲು ಕಂಪ್ಯೂಟರ್ ಯಂತ್ರವು ಮೂರು ಚಿಕ್ಕ ರಾಕೆಟ್‌ಗಳನ್ನು ಕಾರ್ಯ ಪ್ರವೃತ್ತಗೊಳಿಸಿತು. ಅವರೋಹಣ ಕಾಲದಲ್ಲಿ ನಿರಂತರವಾಗಿ ಚಂದ್ರನಿಂದ ಇರುವ ಕೋನೋನ್ನತಿಯನ್ನು ಅಳೆಯಲು, ಕಂಪ್ಯೂಟರ್ ಯಂತ್ರವು ಮಾರ್ಗದರ್ಶಕ ರಾಕೆಟ್‌ಗಳಿಗೆ ಸಂದರ್ಭಕ್ಕೆ ಅವಶ್ಯವಿದ್ದಂತೆ ವೇಗವಾಗಿ ಅಥವಾ ನಿಧಾನವಾಗಿ ದಹಿಸಲು ಆಜ್ಞೆ ಮಾಡಿತು. ಚಂದ್ರನಿಂದ ೧೪ ಅಡಿ ಎತ್ತರದಲ್ಲಿದ್ದಾಗ, ಮಾರ್ಗದರ್ಶಕ ರಾಕೆಟ್‌ಗಳು ಕಡಿದು ಹೋದವು, ಸರ್ವೇಯರ್ ವಾಹನವು ಗಂಟೆಗೆ ಸುಮಾರು ಐದು ಮೈಲುಗಳ ವೇಗದಲ್ಲಿ ಚಂದ್ರನಮೇಲೆ ಇಳಿಯಿತು. ಮೃದು ಸ್ಪರ್ಶವನ್ನು ಸಾಧಿಸಲಾಯಿತು.

ಸರ್ವೇಯರ್ ವಾಹನವು ೩೦ ನಿಮಿಷಗಳ ವರೆಗೆ, ಎಲ್ಲವೂ ಚೆನ್ನಾಗಿದೆಯೆಂದು ಭೂಮಿಯಲ್ಲಿನ ವಿಜ್ಞಾನಿಗಳಿಗೆ ತಿಳಿಸುತ್ತಿತ್ತು. ಅನಂತರ ಇತಿಹಾಸ ಮಹತ್ವದ ಚಿತ್ರಗ್ರಹಣ ಪ್ರಾರಂಭವಾಯಿತು.

ಕವಲು ದಾರಿ—ಕೆಂಪು ದೀಪ

ಕನ್ನಡಕ್ಕೆ ಹೋರಾಡು ಕನ್ನಡದ ಕಂದಾ

ಕಾಂಗ್ರೆಸ್ ಕಾರ್ಯಕಾರಿಣಿಯ ಬೊಂಬಾಯಿ ಅಧಿವೇಶನ—ಮರಾಠಿಗರ ಒತ್ತಾಯ—ಕೇಂದ್ರದ ವರಿಷ್ಠರ ತಲೆದೂಗು—ಮಹಾರಾಷ್ಟ್ರ—ಮೈಸೂರು ಗಡಿತಂಟೆ ಪರಿಹಾರಕ್ಕೆ ಏಕ ಸದಸ್ಯ ಆಯೋಗ ನೇಮಿಸಬೇಕು—ಇದು ವಿ. ಪಿ. ನಾಯಕರ ಕೇಳಿಕೆಯಲ್ಲ, ಆಜ್ಞೆ.

ನಿಜಲಿಂಗಪ್ಪನವರಿಗೆ ಅಸಮ್ಮತಿ — ತಾನು ಒಪ್ಪಿದ್ದೇ ಆದರೆ ಏನಾದೀತು ಅಂತ ಅಲ್ಲ—ಒಪ್ಪುವುದು ನ್ಯಾಯ—ಅನ್ಯಾಯವೆಂದೂ ಅಲ್ಲ—ಚುನಾವಣೆಯ ಹಿನ್ನೆಲೆಯಲ್ಲಿ ಬೇಡ ಅಂತ.

ಕಾಮರಾಜರು ನಿಜಲಿಂಗಪ್ಪನವರ ಮುಖ ನೋಡಿದರು—ಸುಮ್ಮನೆ ಒಪ್ಪಿಕೊಳ್ಳಿ. ಆಯೋಗ ಈಗ ರಚಿಸುವುದಿಲ್ಲ ಮರಾಠಿಗಳ ಸಮಾಧಾನಕ್ಕೆ ಮಾತ್ರ ಈ ಗೊತ್ತುವಳಿಯೆನ್ನುವ ಭಾವ ಅದರಲ್ಲಿ ಹೊಳೆದಂತಿತ್ತು.

ಸೈಗುಟ್ಟಿದ ನಿಜಲಿಂಗಪ್ಪನವರು ರಾಜ್ಯಕ್ಕೆ ಬರ ಬಾಗಲೇ ಕನ್ನಡಿಗರು ಕೆರಳಿದ ಸರ್ಪವಾಗಿದ್ದರು. ಚುನಾವಣೆಯ ನಂತರವೇ ಈ ಆಯೋಗ ನೇಮಕವಾಗುವುದೆಂದು ತನ್ನ ಅಭಿಪ್ರಾಯವನ್ನು ಅದೆಷ್ಟು ಬಿಂಬಿಸಲು ಅವರು ಪ್ರಯತ್ನಿಸಿದರೂ ಮುಗುಳಿಸಿಕೊಳ್ಳುವುದಾಗಲಿಲ್ಲ.

ರಾಜ್ಯದಲ್ಲಿ ಅಸಮಾಧಾನ— ಕ್ರಾಂತಿಕಾರಿ ಪ್ರವೃತ್ತಿ— ಅಸಮಾಧಾನ— ಶಾಂತಿಪ್ರಿಯ ಕಾಂಗ್ರೆಸ್ ನಾಯಕರೂ ಸೇರಿ ಶಾಂತಿ—ಅಹಿಂಸೆಯ ತಳಹದಿಯಲ್ಲೇ ಸತ್ಯಾಗ್ರಹ—ರೇಲು ಬಂದ್ ರಸ್ತೆ ಬಂದ—

ಅತ್ತ ವಿ. ಪಿ. ನಾಯಕರಿಗೆ ಆತುರ ಆಯೋಗ ನೇಮಕವೆಂದು? ಕಂಡ ಕಂಡಲ್ಲಿ ಪ್ರಧಾನಿಯವರಿಗೆ ಅವರದು ಇದೇ ಪ್ರಶ್ನೆ. ಒಂದು ತಿಂಗಳ ವಾಯಿದೆ. ಇಂದಿರಾ ಹೇಳಿಯೇ ಬಿಟ್ಟರು: ಆಯೋಗದ ನೇಮಕ ಶೀಘ್ರವೇ ಆಗುವುದು.

ಕನ್ನಡಿಗರ ಕೆಚ್ಚು ಭುಗಿಲೆಂದಿತು. ರಾಜ್ಯದಾದ್ಯಂತ ಸತ್ಯಾಗ್ರಹ—ಒಂದು ಎರಡು—ಮೂರು ವಾರಗಳು—ಅನುಕೂಲ ನಿರ್ಣಯವಾಗುವ ತನಕ ಇದರ ಮುಂದರಿಕೆ—ಅಲ್ಲಲ್ಲಿ ಅನ್ನ ಸತ್ಯಾಗ್ರಹ—

ಪ್ರದೇಶ ಕಾಂಗ್ರೆಸ್ಸಿಗೆ ವಿವಂಚನೆ—ಕೇಂದ್ರಕ್ಕೆ ನಿಯೋಗ—ನಿರ್ಣಯವನ್ನು ಪುನಃ ಪರಿಶೀಲಿಸುವ ಆಶ್ವಾಸನೆ—ಇದು ಬರಿಯ ಆಶ್ವಾಸನವಾಗಿಯೇ ಉಳಿದೀತೇ?

ಇಂದಿರಾಗಾಂಧಿಯನ್ನು ಪ್ರಧಾನಿ ಮಾಡಿದವರು ಕಾಮರಾಜರು. ಮುರಾರ್ಜಿಭಾಯಿ ಬೇಡವೆಂದೇ ಇಂದಿರಾರ ಹೆಸರು ಮೇಲೆಬಿತ್ತು. ಕಾಮರಾಜ—ಇಂದಿರಾರ ನಡುವೆ ಹೊಂದಾಣಿಕೆ ಸಮಾನ ನಿಲುಮೆಯ ಅಭಾವದ ಅಂತರ ತುಂಬ—ಇದು ಎಲ್ಲೆಲ್ಲಿಯ ಪ್ರತಿಧ್ವನಿ.

ಮೌಲ್ಯ ವಿಚ್ಛೇದನವನ್ನೇ ತೆಗೆದು ಕೊಳ್ಳೋಣ. ಇಂದಿರಾ ಇದನ್ನು ಒಪ್ಪಿದರೂ ಕಾಮರಾಜರಿದಕ್ಕೆ ಕಬೂಲಿಲ್ಲ. ಇಂತಹುದೇ ಹಲವು ಪ್ರಸಂಗಗಳು ನಡೆಯುತ್ತವೆ. ಇಂದಿರಾಗಾಂಧಿ ಪ್ರಾಯದಲ್ಲಿ ಎಳೆಯವರು; ಕನ್ನ ತಂದೆಯು ಕಾಂಗ್ರೆಸ್ಸಿನ ಪಕ್ಷ—ಸರಕಾರಗಳಲ್ಲಿ ಸಾಧಿಸುವ ಪರಿಣಾಮ ಅನಭಿಷಿಕ್ತ ದೊರೆಯಾಗಿದ್ದಂತೆ ಈಕೆ ಆಗಲು ಹೇಗೆ ಸಾಧ್ಯ? ತಂದೆಯಿರುವನಕ ಮೆರಗುವ ಅವಕಾಶವಿಲ್ಲ. ಆ ಮೇಲೆ ಬಲ ತಿಂಗಳಲ್ಲೇ ಪ್ರಧಾನಿಪದ ಈಕೆಗೆ ಬಂತು.

ಎಲ್ಲರ ದೃಷ್ಟಿ ಇರುವುದು ಮುಂದಿನ ಚುನಾವಣೆಯ ಮೇಲೆ. ಏಕ ಸದಸ್ಯ ಆಯೋಗ ನೇಮಕದಿಂದ ಕರ್ನಾಟಕದಲ್ಲಿ ಕಾಂಗ್ರೆಸ್ಸು ಪೆಟ್ಟು ತಿನ್ನುವುದು; ನೇಮಿಸದೆ ಹೋದರೆ, ಮಹಾರಾಷ್ಟ್ರದಲ್ಲಿ. ಉಭಯ ಸಂಕಟ—ಕರ್ತರೀ ಕ್ರಮುಖ ಸ್ಥಿತಿ.

ಕರ್ನಾಟಕದಲ್ಲಿ ರಾಜ್ಯವ್ಯಾಪೀ ಸತ್ಯಾಗ್ರಹ— ಅಲ್ಲಲ್ಲಿ ದುರ್ಘಟನೆ—

ಹರಿಹರದಲ್ಲಿ ೧೪ ವರ್ಷ ಪ್ರಾಯದ ಬಾಲಕ ಪೋಲೀಸರ ಗುಂಡಿಗೆ ಬಲಿಯಾದ ಹುತಾತ್ಮನೆನಿಸಿದ.

ಉಪಮುಖ್ಯ ಮಂತ್ರಿಗಳ ಸಂಬಂಧಿಕನಂತೆ— ಮರುದಿನ ಬೀದಿಯಲ್ಲಿ ಶವದ ಮೆರವಣಿಗೆಯಾಯಿತಂತೆ— ಊರಿಗೆ ಊರೇ ಕೂಡಿ ಅಂತ್ಯೇಷ್ಟಿ ನಡೆಯಿತಂತೆ—

ದಾವಣಗೆರೆಯಲ್ಲಿ ಗೋಲಿಬಾರು— ಮೂವರ ನಿಧನ—ಗಾಯ— ಕರ್ಫ್ಯೂ.

ಉತ್ತರ ಭಾರತದ ಓರ್ವ ವಿದ್ಯಾರ್ಥಿ ಮೆಡಿಕಲ್ ಕಾಲೇಜು ಸೇರ ಬಂದವನು—ಸತ್ಯಾಗ್ರಹ ನೋಡುವ ಆತುರ ಹೆಚ್ಚಿತೋ ಏನೋ—ಯಮರಾಯ ಆತನನ್ನು ಅಲ್ಲಿಂದಲೇ ಒಯ್ದುಬಿಟ್ಟ—

ಒಂದರ ಹಿಂದೊಂದು ದುರ್ಘಟನೆಗೆ ಆರಂಭ. ರೇಲ್ವೆ ಹಳಿಯ ಬೋಲ್ಟ್ ತಪ್ಪಿಸುವ, ಕಲ್ಲು—ಕಂಬ ಅಡ್ಡ ಇಡುವ, ಹಳಿ ತಪ್ಪಿಸುವ ಕುಕೃತ್ಯಗಳೂ ಅಲ್ಲಲ್ಲಿ ನಡೆಯುವ ಸೂಚನೆಗಳು.

ಸತ್ಯಾಗ್ರಹದ ದುರ್ಲಾಭ ಪಡೆಯುವ ಪುಂಡರು ಅಲ್ಲಲ್ಲಿ ಗೋಚರಿಸಹತ್ತಿದ್ದಾರೆ, ಗೋಚರಿಸುತ್ತಾರೆ.

ಆರಂಭವಾಗುವುದು ಅಹಿಂಸೆಯಿಂದ, ಶಾಂತಿಯಿಂದ.

ಕೊನೆಗೊಳ್ಳುವುದು ಹಿಂಸೆಯಿಂದ, ಅಶಾಂತಿಯಿಂದ.

ಮುಖ್ಯಮಂತ್ರಿಯವರು ಜನತೆಯನ್ನು ಬೇಡಿಕೊಂಡರು. ಚಳವಳವನ್ನು ನಿಲ್ಲಿಸಿ, ಹಿಂಸೆ—ಅಶಾಂತಿಗಳಿಗೆ ಅವಕಾಶ ಕೊಡಬೇಡಿ.

ಕರ್ನಾಟಕಕ್ಕೆ ನ್ಯಾಯ ದೊರಕಿಸಲು ರಾಜಿನಾಮೆ ನೀಡಿ ಹೋರಾಟಕ್ಕೆ ಸಿದ್ಧರೆಂದು ಸಾರಿದ ಮುಖ್ಯ ಮಂತ್ರಿಯವರೇ ಈಗ ಹೋರಾಟ ಬೇಡ ಅನ್ನುತ್ತಾರೆ.

ಜುಲೈ ಐದು ಆಮೋರಿಕ್ಕೆ ಸ್ವಾತಂತ್ರ್ಯ ದೊರೆತ ಶುದಿನ. ಅಂದು ಕನ್ನಡಿಗರಿಗೂ ನ್ಯಾಯ ದೊರಕುವುದೆಂದು ವಿಶ್ವಾಸವೆ? ಏಕೆ ಸಿಗಬಾರದು?

ಪ್ರಧಾನಿ—ಕಾಮರಾಜರು ನಾಯಕರ ಆದಕ್ಕಿಂತ ಮುಖ್ಯವಾಗಿ ಚವನರ ತಲೆದೂಗಿಸಲು ಶಕ್ತರಾದರೆ? ನೀತಿ ನಿಲುವೆಗಳ ಸ್ವರೂಪಕ್ಕೊಂದು ಬೆಲೆಯಿರಬೇಡವೆ? ಇಂದಿನ ರೂಪ ನಾಳೆ ಗೆಬದಲಾಗುತ್ತ ಹೋದ ಹಾಗೆ ಪ್ರಜೆಗೆ ಸರಕಾರದಲ್ಲಿ ವಿಶ್ವಾಸ ಹುಟ್ಟೀತು?

ಇಡುವ ಹೆಜ್ಜೆ ಬಲವಾಗಿ ಬೇಕು, ಇಡುವುದಕ್ಕೆ ಮೊದಲು ಹದನೋಡಬೇಕು. ಈ ವಿವೇಕ ಕಾಂಗ್ರೆಸ್ಸಿನಲ್ಲಿ ಇಂದು ಕಡಿಮೆಯಾಗಿದೆ. ಜವಹರಲಾಲರ ಕಾಲದ ಗಂಭೀರತೆ ಇಂದು ಪಕ್ಷದಲ್ಲೂ ಇಲ್ಲ, ಸರಕಾರದಲ್ಲೂ ಇಲ್ಲ.

ಗೃಹಮಂತ್ರಿ ನಂದಾ ಹೇಳುತ್ತಾರೆ: ಸರಕಾರವು ಜನತೆಗೆ ಕೆಲವೊಂದು ವಾಗ್ದಾನಗಳನ್ನು ಮಾಡಿದೆ—ಬೇಕಾಗಿಯೋ ಬೇಡವಾಗಿಯೋ— ಅವನ್ನು ಹೇಗೆ ಕಾರ್ಯರೂಪಕ್ಕೆ ತರುವುದೋ ತಿಳಿಯುವುದಿಲ್ಲ—

ಇಂದಿನ ನಮ್ಮ ಸರಕಾರದ ನಿಲುವೆಯನ್ನು ವಿವರಿಸಲು ಇದಕ್ಕಿಂತ ಹೆಚ್ಚು ಮಾತು ಅನಗತ್ಯ.

ಕನ್ನಡಿಗರ ಕಲಿತನದ ಬಿಸುಪು ಕಾಂಗ್ರೆಸ್ಸಿನ ಹಿರಿಯ ತಲೆಗಳಿಗೂ ಬಡಿಯಿತಲ್ಲ—

ಇನ್ನಾದರೂ ಕನ್ನಡಿಗರ ತಾಳ್ಮೆಗೆ ಅರ್ಥ ಹಚ್ಚಲಾರರಲ್ಲ?

ಕನ್ನಡಕ್ಕೆ ಹೋರಾಡು ಕನ್ನಡದ ಕಂದಾ....

ಎಲ್ಲೆಲ್ಲಿ ಏನೇನು?

ಉಡುಪಿ ಲಾ ಕಾಲೇಜಿಗೆ ಶಾಶ್ವತ ಮನ್ನಣೆ

ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟಿನ ಶಿಫಾರಸುಗಳ ಪ್ರಕಾರ ೧೯೬೬—೬೭ನೇ ಸಾಲಿನಿಂದ ಎಫ್. ಎಲ್. ಮತ್ತು ಬಿ. ಎಲ್. ತರಗತಿಗಳನ್ನು ನಡೆಸಲು ಅನುಮತಿಯಲ್ಲಿರುವ ಉಡುಪಿ ಲಾ ಕಾಲೇಜಿಗೆ ವಿಶ್ವವಿದ್ಯಾನಿಲಯವು ಶಾಶ್ವತ ಮನ್ನಣೆ (ಅಫಿಲಿಯೇಶನ್) ಕೊಟ್ಟಿದೆ. ಇದಕ್ಕೆ ಸರಕಾರ ಒಪ್ಪಿಗೆ ಕೊಡಬೇಕಾಗಿದೆ.

ಬೊಂಬಾಯಿಯಲ್ಲಿ ವಿಜಯಾ ಬ್ಯಾಂಕಿನ ಎರಡನೇ ಶಾಖೆ

ಇದೇ ಜೂನ್ 27ರಂದು ವಿಜಯಾ ಬ್ಯಾಂಕ್ ಲಿಮಿಟೆಡಿನ ಎರಡನೇ ಶಾಖೆಯೊಂದು ಬೊಂಬಾಯಿಯಲ್ಲಿ ಒಂದು ಪ್ರಮುಖ್ಯ ವಾಣಿಜ್ಯ ಮತ್ತು ವ್ಯಾಪಾರ ಕೇಂದ್ರವಾದ ಗಾಮ್‌ದೇವಿ ಎಂಬಲ್ಲಿ ತೆರೆಯಲ್ಪಟ್ಟಿತು. ಈ ಸಂದರ್ಭದಲ್ಲಿ ಶ್ರೀ ಕೆ. ಯಮ್. ಮುನ್ನಿ, ಶ್ರೀಮತಿ ಲೀಲಾವತಿ ಮುನ್ನಿ, ರಾಜಾ ಸರ್ ಎಂ. ಎ., ಮುತ್ತಯ್ಯ ಚೆಟ್ಟಿಯಾರ್ ಮುಂತಾದ ಅನೇಕ ಪ್ರಮುಖ ವ್ಯಕ್ತಿಗಳು ಪ್ರಾರಂಭೋತ್ಸವ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಇದೊಂದು ಪ್ರಾಮುಖ್ಯ ಸಂಧಿಯಾದುದರಿಂದಲೇ ವಿಜಯಾ ಬ್ಯಾಂಕಿನ ಚೇರ್‌ಮೇನ್ ಶ್ರೀ ಎಂ. ಸುಂದರ್‌ರಾಮ್ ಶೆಟ್ಟರು ಈ ಪ್ರಾರಂಭೋತ್ಸವಕ್ಕಾಗಿಯೇ ಬೊಂಬಾಯಿಗೆ ಆಗಮಿಸಿದ್ದರು. ಬೊಂಬಾಯಿಯ ಫೋರ್ಟಿನ ಹಾರ್ನ್‌ಬಿ ಚೇಂಬರ್ಸ್, ಪಾರ್ಸೀ ಬಜಾರ್ ಸ್ಟ್ರೀಟ್‌ನಲ್ಲಿ ಈ ಮೊದಲೇ ವಿಜಯಾ ಬ್ಯಾಂಕ್ ಲಿಮಿಟೆಡಿನ ಚೆನ್ನಾಗಿ ಕಾರ್ಯವೆಸಗುತ್ತಿರುವ ಉತ್ತಮ ಶಾಖೆಯಿದೆ. ಬೊಂಬಾಯಿಯ ಈ ಎರಡನೇ ಶಾಖೆಯು ಈ ಬ್ಯಾಂಕಿನ 58ನೇ ಶಾಖಾ ಆಫೀಸಾಗಿದೆ. ಇನ್ನು 59ನೇ ಶಾಖೆಯು ಇದೇ ಜುಲಾಯಿ 7ರಂದು ಕೊಯಮುತ್ತೂರಿನಲ್ಲಿ ತೆರೆಯಲ್ಪಡುವುದು.

ರೋಟರಿ ಸಭೆಯಲ್ಲಿ ಶ್ರೀ ಟಿ. ಎ. ಪೈ

ಇತ್ತೀಚೆಗೆ ರಶ್ಯಾ ಮುಂತಾದ ಪೂರ್ವ ಯುರೋಪ್ ರಾಷ್ಟ್ರಗಳನ್ನು ಸಂದರ್ಶಿಸಿ ಮರಳಿದ ಶ್ರೀ ಟಿ. ಎ. ಪೈಗಳು ಉಡುಪಿ ರೋಟರಿ ಕ್ಲಬ್ಬಿನ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ ರಶಿಯಾ ಸಾಧಿಸಿದ ಪ್ರಗತಿಯನ್ನು ಭಾರತದೊಂದಿಗೆ ಹೋಲಿಸಿ ಉಪಯೋಗವಿಲ್ಲವೆಂದು ಪ್ರತಿಪಾದಿಸಿದರು. ರಶಿಯಾ ಜನತೆಯು ಮಟ್ಟಿಗೆ ಬಡತನವನ್ನು ನಿವಾರಣೆಮಾಡಿ ತನ್ನ ಹೆಚ್ಚಿನ ಸಂಪನ್ಮೂಲಗಳನ್ನು ವಿಜ್ಞಾನ ಹಾಗೂ ತಾಂತ್ರಿಕ ಅಭಿವೃದ್ಧಿಗೆ ವಿನಿಯೋಗಿಸಿ, ಸ್ವಂತ ಜೀವನಾಭ್ಯುದ್ಧಿಯ ವಿಚಾರಕ್ಕೆ ಗಮನಕೊಟ್ಟಿಲ್ಲ ಕೊಡುವಂತೆಯೂ ಇಲ್ಲ. ಈ ಪದ್ಧತಿ ಸ್ವಾತಂತ್ರ್ಯದ ರುಚಿ ನೋಡಿದ ಭಾರತೀಯರಿಗೆ ಒಪ್ಪಿಗೆಯಾಗದು ಎಂದು ನುಡಿದರು. ಮುಂದುವರಿಯುತ್ತಾ ಅವರು, ನಾವು ನಮ್ಮ ಶಕ್ತಿಯನ್ನು ದುರ್ವಿನಿಯೋಗ ಮಾಡುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು. ಬಡತನವನ್ನು ನಿವಾರಿಸಲು ದುಡಿಮೆಯೇ ಮುಖ್ಯ ದಾರಿ ಎಂದರು. ರಶ್ಯಾದಲ್ಲಾಗುವ ಮಾರ್ಪಾಟುಗಳನ್ನು ನಾವು ಗಮನಿಸದೇ, ಅವರು ಅಪ್ರಯೋಜಕವೆಂದು ಬಿಟ್ಟಿರುವ ತತ್ವವನ್ನು ನಾವು ಇನ್ನೂ ಅನುಸರಿಸುವುದು ಸರಿಯಲ್ಲ ಎಂದೂ ಶ್ರೀ ಪೈಗಳು ನುಡಿದರು.

ಕೊನೆಯಲ್ಲಿ ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಕೆ. ಪೈಗಳು ಧನ್ಯವಾದ ಸಮರ್ಪಿಸಿದರು.

ಹೋಟೆಲ್ ರೋಯಲ್ ಉದ್ಘಾಟನೆ

ಮಂಗಳೂರು ನಗರದ ಓಲ್ಡ್ ಕೆಂಟ್ ರೋಡಿನಲ್ಲಿ 'ಹೊಟೇಲ್ ರೋಯಲಿನ ಬೋರ್ಡಿಂಗ್ ಎಂಡ್ ಲಾಜಿಂಗ್ ವಿಭಾಗಕ್ಕಾಗಿ ಕಟ್ಟಿಸಲಾದ ನೂತನ ಶೆಟ್ಟಿ ಬಿಲ್ಡಿಂಗ್ ಕಟ್ಟಡದ ಉದ್ಘಾಟನಾ ಸಮಾರಂಭವು ಕಳೆದ ತಾ. 30 ರಂದು, ಶ್ರೀ ಮುಹೇಲ್ ಶ್ರೀನಿವಾಸ ನಾಯಕ್, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಡಾ। ಎಂ. ವಿ. ಶೆಟ್ಟಿಯವರಿಂದ ನೆರವೇರಿತು.

ಅತಿಥಿಗಳ ಪರವಾಗಿ ಡಾ॥ ಕೆ. ಬಿ. ಶೆಟ್ಟಿಯವರು ಮಾತಾಡುತ್ತಾ ಸಂಸ್ಥೆಗೆ ಶುಭಕೋರಿದರು. ಅಧ್ಯಕ್ಷರ ಭಾಷಣಾನಂತರ ಹೊಟೇಲಿನ ಮಾಲಕರಾದ ಶ್ರೀ ಕೆ. ರಾಮಯ್ಯಶೆಟ್ಟಿ ಮತ್ತು ಎ. ಸುಬ್ಬರಾವ್‌ರವರ ಪರವಾಗಿ ಶ್ರೀ ಬಿ. ಗಂಗಾಧರ ದಾಸ್‌ರವರು ವಂದನಾರ್ಪಣೆಗೈದರು.

ಉಪ್ಪು ನೀರು ಸರಬರಾಜು ಯೋಜನೆ

ಕಳೆದ ತಾ. 27ರಂದು ಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಉಡುಪಿಗೆ ಆಗಮಿಸಿ ಉಡುಪಿ ಮುನ್ಸಿಪಲ್ ಸದಸ್ಯರೊಡನೆ ಉಡುಪಿ ನಗರಸಭೆಯ ನೀರು ಸರಬರಾಯಿಯೋಜನೆಯ ಕುರಿತು ಸಮಾಲೋಚನೆ ನಡೆಸಿದರು.

ಆರಂಭದಲ್ಲಿ ನಗರ ಸಭಾಪತಿ ಶ್ರೀ ಪಿ. ರಂಗನಾಥಶೆಣೈಯವರು ನೀರು ಸರಬರಾಯಿ ಯೋಜನೆಯ ವಿಚಾರ ವಿವರಿಸಿದರು. ಉಡುಪಿ ಮಣಿಪಾಲ ಮತ್ತು ಮಲ್ಪೆಯನ್ನು ಸೇರಿಕೊಂಡೇ ಈ ನೀರು ಸರಬರಾಯಿ ಯೋಜನೆಯನ್ನು ಕೈಗೊಳ್ಳಬೇಕೆಂದು, ಶ್ರೀ ನಿಜಲಿಂಗಪ್ಪನವರು ಸಲಹೆಮಾಡಿ ಈಗಾಗಲೇ ಆರಂಭವಾಗಿರುವ ಕಾರ್ಯವನ್ನು ಶೀಘ್ರಗತಿಯಿಂದ ಮುಂದುವರಿಯಲು ಮಾತ್ರವಲ್ಲದೆ ಉಪ್ಪು ನೀರನ್ನು ತಡೆಗಟ್ಟಲು ರಚಿಸಬೇಕಾದ ಕಟ್ಟಗಾಗಿ ರೂ. 15ಲಕ್ಷ ಸಾಲ ನೀಡುವದಾಗಿ ಭರವಸೆಯಿತ್ತರು.

ಯೋಜನೆಯ ವೆಚ್ಚವಾದ 44ಲಕ್ಷ ರೂ. ನಲ್ಲಿ 22ಲಕ್ಷವನ್ನು ಸಾಲರೂಪದಲ್ಲಿ ಸಂಗ್ರಹಿಸಿದ್ದು ಉಳಿದರ್ಧವನ್ನು ಸರಕಾರ ಸಾಲರೂಪದಲ್ಲಿ ನೀಡಿರುತ್ತದೆ. ಅಣೆಕಟ್ಟಿಗೆ ಬೇಕಾಗುವ 15ಲಕ್ಷ ರೂ.ಯನ್ನು ಕೇಂದ್ರ ಸರಕಾರ ಮಂಟ್ಟ ನೀರಾವರಿ ಯೋಜನೆಯಂತೆ ಪಡೆಯಲು ಪ್ರಯತ್ನಿಸಲಾಗುವದೆಂದು ಮಾನ್ಯಮಂತ್ರಿಗಳು ಸೂಚಿಸಿದರು. ಶ್ರೀ ಟಿ. ಎ. ಪೈ. ಮತ್ತು ಎಸ್. ಸೀತಾರಾಮ ಕಾಮತ್ ಮೊದಲಾದವರು ನೀರಿನ ಸರಬರಾಯಿ ಯೋಜನೆಯ ಕುರಿತು ವಿವರಿಸಿದರು.

ವಾರ್ಷಿಕ ಸಭೆ

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ, ಇದರ ಸದಸ್ಯರ ಸಾಮಾನ್ಯ ಸಭೆಯು ತಾ. 25—6—66ರಂದು ಮಂಡಳಿಯ ಆಫೀಸಿನಲ್ಲಿ, ಮಂಡಳಿಯ ಅಧ್ಯಕ್ಷರಾದ ಶ್ರೀ ಎಸ್. ಸಿ. ಪಡುಬಿದ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಗೌರವ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಶಾಂತಾರಾಮರು ಸಭಿಕರನ್ನು ಸ್ವಾಗತಿಸಿದರು. ಮಂಡಳಿಯ 63ನೇ ವಾರ್ಷಿಕ ವರದಿಯನ್ನೂ, ಆಯವ್ಯಯದ ಲೆಖ್ಖಪಟ್ಟಿಯನ್ನೂ ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು. ಕೆಲವು ಅಗತ್ಯದ ಠರಾವುಗಳನ್ನು ಪಾಸುಮಾಡಲಾಯಿತು.

ಸಭಿಕರಲ್ಲಿ ಶ್ರೀಗಳಾದ ಲಿಂಗಪ್ಪ ಕಾಂಚನ್, ಯು. ರಾಮರಾವ್, ಬಿ. ಎ. ಕರ್ಕೇರ, ಐತಪ್ಪ ಬಂಗೇರ, ಎಚ್. ಕೆ. ಪುತ್ರನ್, ಆರ್. ಸಿ. ಕುಂದರ್, ಎಸ್. ಕೆ. ಮೆಂಡನ್ ಮತ್ತು ಮುತ್ತಪ್ಪ ಕೋಟ್ಯಾನ್‌ರವರು ಮಂಡಳಿಯ ಮುಂದಾಭಿವೃದ್ಧಿಯ ಬಗ್ಗೆ ಮಾತನಾಡಿದರು. ಜೊತೆ ಕಾರ್ಯದರ್ಶಿ ಶ್ರೀ ಗೋವಿಂದ ಅಮೀನರು ಧನ್ಯವಾದಾರ್ಪಣೆಗೈದರು.

ರಾಜಪುರ ಸಾರಸ್ವತ ಸಂಘ

ಮುಂಬೈ, ಜೂನ್ ತಾ 29, ರಾಜಾಪುರ ಸಾರಸ್ವತ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆಯು ಜೂನ್ 19ರಂದು ಶ್ರೀ ಕೆ. ಅಪ್ಪ ನಾಯ್ಕರ ಅಧ್ಯಕ್ಷತೆಯಲ್ಲಿ ಪ್ರೀ ಪ್ರೋಟ್ ಗುಜರಾತಿ ಸಭಾಭವನದಲ್ಲಿ ಜರಗಿತು. ಗೌರವ ಕಾರ್ಯದರ್ಶಿ ಶ್ರೀ ಡಿ. ಸುಬ್ರಾಯ ನಾಯ್ಕರು ಸಭೆಗೆ ಸುಸ್ವಾಗತ ಬಯಸಿ, ಶ್ರೀ ಶ್ರೀ ಕೈವಲ್ಯ ಮಠಾಧೀಶರ ಆಶೀರ್ವಾದ ಸಂದೇಶವನ್ನು ಓದಿ ಹೇಳಿದ ಬಳಿಕ ದಿವಂಗತ ಭಾರತರತ್ನ ಶ್ರೀ ಲಾಲ ಬಹಾದೂರ್ ಶಾಸ್ತ್ರಿಯವರಿಗೆ ಗೌರವ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಬಳಿಕ ವಾರ್ಷಿಕ ವರದಿ ಮತ್ತು ಗತ ವರ್ಷದ ಆಯವ್ಯಯಗಳು ಮಂಜೂರು ಮಾಡಲ್ಪಟ್ಟವು.

ಆಗಮಿತ ವರುಷಕ್ಕೆ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕಲಿಯುತ್ತಿರುವ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸಾಲಗಳನ್ನೀಯಲು ರೂ 2,000/- ಮಂಜೂರು ಮಾಡಲಾಯಿತು. ಆ ಬಗ್ಗೆ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲು ತಾ. 5—8—66ನ್ನು ಕೊನೆಯ ದಿನವೆಂದು ನಿರ್ಣಯಿಸಲಾಯಿತು. ಹೈಸ್ಕೂಲ್ ಮಟ್ಟದ ಓರ್ವ ವಿದ್ಯಾರ್ಥಿ ಮತ್ತು ಈರ್ವರು ವಿದ್ಯಾರ್ಥಿನಿಯರಿಗೆ ತಲಾ ರೂ. 20/-ನ್ನು ಪುರಸ್ಕಾರವಾಗಿ ನೀಡಬೇಕೆಂದೂ ಮೆಟ್ರಿಕ್ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿ ಯಾ ವಿದ್ಯಾರ್ಥಿನಿಗೆ "ಸಿ. ಟಿ. ನಾಯಕ್ ಮೆಮೋರಿಯಲ್ ಪ್ರೈಜನ್ನು' ನೀಡಬೇಕೆಂದೂ ವೇದಶಾಸ್ತ್ರ ಮತ್ತು ಪೌರೋಹಿತ್ಯ ಶಾಖೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ "ಶ್ಯಾಮನಾಯಕ್ ಮೆಮೋರಿಯಲ್ ಫಂಡಿ"ನ ಬಡ್ಡಿಯನ್ನು ವಿತರಣೆಗೈಯಬೇಕೆಂದೂ ನಿಶ್ಚಯಿಸಲಾಯಿತು. ಶ್ರೀ ಡಿ. ಡಿ. ಪ್ರಭುರವರು ಸಂಘಕ್ಕೆ ರೂ. 1,000ದ ಇನ್ಸೂರೆನ್ಸ್ ಪಾಲಿಸಿಯನ್ನು ಅರ್ಪಿಸಿ, ಅದು ಬಲಿತ ಬಳಿಕ ಅದನ್ನು ತನ್ನ ಸ್ಮಾರಕಾರ್ಥವಾಗಿ ಶೇಖರಿಸಿಕೊಳ್ಳುವಂತೆ ಸೂಚಿಸಿದರು.

ಸಭಿಕರ ಪರವಾಗಿ, ಶ್ರೀಗಳಾದ ರಾಮಚಂದ್ರ ಭಟ್, ಯು. ಬಿ. ಕಾಮತ್, ಡಿ. ಡಿ. ಪ್ರಭು, ಡಿ. ಸುಬ್ರಾಯ ನಾಯಕ್, ಎ. ಆರ್. ಕಾಮತ್, ವಿ. ಯಸ್. ಪ್ರಭು ಮತ್ತು ಯಸ್. ಡಿ. ಧೋಂಡೆ. ಮಾತನಾಡಿದರು. ಅಧ್ಯಕ್ಷರು ಮಾತನಾಡುತ್ತಾ ಸಮಾಜದ ಅಭಿವೃದ್ಧಿಯನ್ನು ಧಾರ್ಮಿಕ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧಿಸಲು ಅನುಕೂಲವಾಗುವಂತೆ ವಿದ್ಯಾಭ್ಯಾಸವನ್ನು ಹೆಚ್ಚಾಗಿ ವೃದ್ಧಿಸಿಕೊಂಡು, ಮುನ್ನಡೆಯಬೇಕೆಂದರು. ಬಳಿಕ ಧನ್ಯವಾದಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

'ಸಂಧ್ಯಾ ಕಾಲೇಜು'

ಉಡುಪಿ ನಗರದಲ್ಲಿ 'ಸಂಧ್ಯಾ ಕಾಲೇಜ'ನ್ನು ಸ್ಥಾಪಿಸಿ ವಿದ್ಯಾಕ್ಷೇತ್ರದಲ್ಲಿ ಹೊಸ ದಾಖಲೆ ಒಂದನ್ನು ವಿದ್ಯಾಭಿಮಾನಿಗಳಾದ ಉಡುಪಿ ನಾಗರಿಕರ ಸಹಾಯದಿಂದ ಸ್ಥಾಪಿಸಬೇಕೆಂದು ನಿರ್ಧರಿಸಲಾಗಿದೆ. ಆರ್ಥಿಕ ಸಂಕಷ್ಟಗಳಿಂದಾಗಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಅಸಾಧ್ಯವಾಗಿ, ನಗರದ ಮತ್ತು ಆಸುಪಾಸಿನ ಸಂಘ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಅಸಂಖ್ಯಾತ ಸಮರ್ಥ ನೌಕರರಿಗೆ ಅಧ್ಯಾಪಕ ವೃಂದದವರಿಗೆ ಹಾಗೂ ಉತ್ಸಾಹಿ ಯುವಕ ಯುವತಿಯರಿಗೆ 'ಸಂಧ್ಯಾ ಕಾಲೇಜು' ತಮ್ಮ ಜೀವನದ ನಂದಾದೀಪವಾಗುವುದರಲ್ಲಿ ಸಂದೇಹವಿಲ್ಲ.

ಪುರಜನರ ಈ ಕೋರಿಕೆಯನ್ನು ಮನ್ನಿಸಿ ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜು ಸ್ಥಾಪಕರು ಸದ್ರಿ ಕಾಲೇಜನ್ನು ತೆರೆಯುವರೆ ಮುಂದೆ ಬಂದಿರುವುದು ಅಭಿಮಾನಾರ್ಹ. ಸದ್ರಿಯವರು ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅನುಮತಿ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದ್ರಿ ಕಾಲೇಜು ಇದೇ ನವೆಂಬರ ತಿಂಗಳ 1966ರಿಂದ ಪ್ರಾರಂಭವಾಗುವ ಸಂಭವವಿದೆ. ಈ ಪ್ರಯುಕ್ತ ಸದ್ರಿ ಶ್ರೀ ಪೂರ್ಣಪ್ರಜ್ಞ ಕಾಲೇಜು ಸ್ಥಾಪಕರಿಗೆ ತಗಲಬಹುದಾದ ಪ್ರಾರಂಭದ ಖರ್ಚು ರೂ. 15,000/-ನ್ನು ಒದಗಿಸಿಕೊಡುವ ಜವಾಬ್ದಾರಿಯನ್ನು ಈ ಬಗ್ಗೆ ಸ್ಥಾಪಿಸಲಾದ ಉಡುಪಿ ಪುರಜನರ ಸಂಧ್ಯಾ ಕಾಲೇಜು ಸಮಿತಿ ಹೊತ್ತಿರುತ್ತದೆ. ವಿದ್ಯಾಭಿಮಾನಿಗಳಾದ ಮಹಾಜನರು ಈ ಮಹಾಕಾರ್ಯ ತಮ್ಮದೇ ಒಂದು ಕಾರ್ಯಕ್ರಮವೆಂದು ಭಾವಿಸಿ, ಆಶೀರ್ವದಿಸಿ ತನುಮನ ಧನಗಳಿಂದ ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

XIನೇ ತರಗತಿಯ ಉದ್ಘಾಟನೆ

ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲು ಹಯರ್ ಸೆಕೆಂಡರಿಯಾಗಿ XIನೇ ತರಗತಿಯನ್ನು ಉದ್ಘಾಟಿಸುವ ಸಮಾರಂಭವು ಜುಲಾಯಿ 4ರಂದು ಶ್ರೀ ಬಿ. ಭಾಸ್ಕರ ಶೆಟ್ಟಿ, ಎಮ್. ಎಲ್. ಎ. ಇವರಿಂದ ನೆರವೇರಿಸಲ್ಪಟ್ಟಿತು. ಆರಂಭದಲ್ಲಿ ಕರೆಸ್ಪಾಂಡೆಂಟ್ ಶ್ರೀ ಪಿ. ರಾಮದಾಸ್ ನಾಯ್ಕರು ಸ್ವಾಗತ ಭಾಷಣ ಮಾಡಿದರು. ಶ್ರೀ ನಾರಾಯಣ ಭಟ್ಟರು ಸಂದೇಶಗಳನ್ನೋದಿದರು. ಶ್ರೀ ಕೆ. ಗೋಪಾಲ ಶೆಟ್ಟರು XIನೇ ತರಗತಿಗೆ ಸರಕಾರದ ಸಮ್ಮತಿ ದೊರಕಿಸುವಲ್ಲಿ ಶ್ರೀ ಭಾಸ್ಕರ ಶೆಟ್ಟರೇ ಮೊದಲಾದವರು ಮಾಡಿದ ಪ್ರಯತ್ನವನ್ನು ವಿವರಿಸಿ ಆ ವರಿಗುಪಕಾರಸ್ಮರಿಸಿದರು. ಯಮ್. ಜಿ. ಯಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ್ ಭಟ್, ಎಡ್ವಕೇಟ್ ವಿಲಿಯಂ ಪಿಂಟೋ ಮೊದಲಾದವರು ಮಾತಾಡಿ ಹೆತ್ತವರ ವಿದ್ಯಾರ್ಥಿಗಳ ಹಾಗೂ ಉರವರ ಕರ್ತವ್ಯ ಜವಾಬ್ದಾರಿಕೆಯನ್ನು ವಿವರಿಸಿ ಶುಭಕೋರಿದರು.

ಶ್ರೀ ಭಾಸ್ಕರ ಶೆಟ್ಟರು ಈ ಕ್ಷೇತ್ರದ ಪ್ರತಿನಿಧಿಯಾಗಿ ತಾನು ನಿಸ್ಪೃಹತೆಯಿಂದ ತನ್ನ ಕರ್ತವ್ಯ ಮಾಡಿರುವುದಾಗಿ ಹೇಳಿ ವಿದ್ಯಾರ್ಥಿಗಳಲ್ಲಿ ಇಂದು ತಲೆದೋರಿರುವ ಶಿಸ್ತಿನ ಅಭಾವವನ್ನು ಪ್ರಸ್ತಾಪಿಸಿ ಎಲ್ಲರೂ ಕರ್ತವ್ಯಶೀಲರಾಗಬೇಕೆಂದರು. ಹೆಡ್‌ಮಾಸ್ಟರ್ ಶ್ರೀ ಪಿ. ದಯಾನಂದ ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ನಿಧನ

ಶ್ರೀ ಯಂ. ಯುಸ್. ರಾಮನ್ (ಬೆಂಗಳೂರು) ಇವರ ಮಾತೆಶ್ರೀ ಮೂಲ್ಕಿ ಬಪ್ಪನಾಡು ಸೀತಮ್ಮ ಶೆಡ್ತಿಯವರು ಕಳೆದ ತಾ. 17—6—66 ರಂದು 84ನೇ ವರ್ಷದಲ್ಲಿ ಸ್ವರ್ಗಸ್ಥರಾದರು. ಇವರ ಉತ್ತರಕ್ರಿಯೆಯು ತಾ. 29—6—66ರಂದು ಬಪ್ಪನಾಡಿನಲ್ಲಿರುವ ಅವರ ಸ್ವಗೃಹದಲ್ಲಿ ನೆರವೇರಿತು.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಕೈತ್ರ ಮುರುಗ

(ಎರಡನೇ ಪುಟದಿಂದ)

ನ ಕೈಯ್ಯಲ್ಲಿದ್ದ ಚಿತ್ರವೂ ಅತ್ತಿತ್ತ ತಿರಗುತ್ತಿತ್ತು. ಆದರ ಕೊನೆಯಿಂದ ಅವನ ಹೊಳೆಯುತ್ತಿರುವ ಹೊಯಿಗೆಯನ್ನು ಎಡಕ್ಕೂ ಬಲಕ್ಕೂ ಚೆಲ್ಲಿದನು; ತನ್ನ ಸ್ವರಕ್ಕೆ ಇನ್ನಷ್ಟು ಅಭಿಪ್ರಾಯಗಳನ್ನು ತುಂಬುತ್ತ ಗಂಟಲನ್ನು ಸರಿಪಡಿಸಿಕೊಂಡನು.

"ಜೀವನಕ್ಕೆ ಬೇಡವಾಗಿರುವ ನಿಷ್ಪ್ರಯೋಜಕ ವಸ್ತುಗಳನ್ನೆಲ್ಲಾ ಸಂಪೂರ್ಣವಾಗಿ ತೊಡೆದು ಹಾಕಿ ನಮ್ಮ ವಸತಿ ಸ್ಥಳವನ್ನು ಒಂದು ಆದರ್ಶ ಕೇಂದ್ರವನ್ನಾಗಿ ಮಾಡಬೇಕು. ಮತ್ತು ನಾವದನ್ನು ದೇವತೆಗಳಂತಹ ಮಾನವರು ವಾಸಮಾಡುವ ನಿವಾಸಸ್ಥಾನವನ್ನಾಗಿ ಮಾಡಬೇಕು. ಎಲ್ಲಾ ತಂದ ಕಚ್ಚಾಟ ಹಾಗೂ ಸ್ವಾರ್ಥ ವಿನಿಯೋಗವನ್ನು ಇಲ್ಲಿಂದ ಗಡಿಪಾರು ಮಾಡಬೇಕು. ಮನುಷ್ಯನು ಎಂದೆಂದಿಗೂ ತನ್ನ ಜೊತೆಯವರಿಗೆ ಮೋಸಮಾಡಿ ಇತರರ ಖರ್ಚಿನಿಂದ ಶ್ರೀಮಂತನಾಗಬಾರದು. ಈ ನಮ್ಮ ಬೆಟ್ಟ ಪ್ರದೇಶದಲ್ಲಿ, ಹೊಸ ಸ್ಥಳದಲ್ಲಿ, ನೋವು ಹಸಿವು ಹಾಗೂ ಬಡತನಗಳಿಗೆ ಎಡೆಕೊಡಬಾರದು. ಇಲ್ಲಿ ನಮಗೆ ಬೇಕಾಗುವ ಪದಾರ್ಥಗಳು ಕಮ್ಮಿ ಇವೆ. ಅವನ್ನು ನಿಸರ್ಗವು ಕೊಡುತ್ತಾ ಇರುತ್ತವೆ. ಪ್ರತಿಯೊಬ್ಬನೂ ತನಗಾಗಿ ದುಡಿಯುತ್ತಾನಲ್ಲದೆ ಯಾರದ್ದಾದರೂ ಚಾಕರಿ ಮಾಡುವದಿಲ್ಲ, ಅವನು ಕೆಲಸ ಮಾಡುತ್ತಾನಾದಲ್ಲಿ ಅದು ಅವನ ಸಂತೋಷಕ್ಕಾಗಿ, ಒಳ್ಳೆಯದಕ್ಕಾಗಿ ಇವೆ, ಮತ್ತು ಅದು ಬಲಾತ್ಕಾರ ಅಥವಾ ಅತೃಪ್ತಿಯಿಂದ ಇರುವದಿಲ್ಲ— ಎಲ್ಲರಿಗೂ ಪೂರ್ಣ ಸ್ವಾತಂತ್ರ್ಯ; ಚರ್ಚಿಸಲು ಆಲೋಚಿಸಲು, ಕೆಲಸಮಾಡಲು ಹಾಗೂ ನದಿದಡ ಮತ್ತು ಬೆಟ್ಟಗಳ ಯಾಗೆ ಕಣಿವೆಗಳ ನಡುವೆ ನರ್ತಿಸಲು..."

"ಆದರೆ ರಾಮು, ಅದು ಹೇಗೆ ನೀನು ಕಲ್ಪಿಸುತ್ತಿ ನಿನ್ನ ಆದರ್ಶದ ಗುರಿಯನ್ನು? ನೂತನವರನ್ನೂ ಒಳ್ಳೆಟ್ಟನ ಕುರಿತು ಆಲೋಚಿಸುತ್ತಿರುವಾಗ...."

"ಕಾಗದದ ಮೇಲೆ ಕರಡು ಹಂಚಿಕೆಯನ್ನು ರಚಿಸುವದೇನೂ ಬಹಳ ಕಷ್ಟವಲ್ಲ. ನಿನ್ನ ಮಾತನ್ನು ನಾನೂ ಒಪ್ಪುತ್ತೇನೆ. ಹೌದು. ಆ ರೀತಿ ಕಾರ್ಯೋನ್ಮುಖರಾಗಲು ಮನಸ್ಸಾಗುವಂತೆ ಪ್ರೇರೇಪಿಸುವದು ಸಂಪಂಗಿ ಬಳ್ಳಿಯನ್ನು ಬೆಳೆಸುವದಕ್ಕಿಂತಲೂ ಬಹಳ ಜಾಗರೂಕತೆಯದ್ದಿದೆ. ಆದರೆ ನಾನು ಆಶಾವಾದಿ ಇದ್ದೇನೆ ಮತ್ತು ನಿನ್ನಂತಹ ಗೆಳೆಯರೊಂದಿಗೆ...'

"ಆ ಯೋಜನೆ ಯಾವುದು?'

'ಪ್ರತಿಯೊಬ್ಬ ಪುರುಷನಿಗೆ, ಸ್ತ್ರೀಗೆ, ಮಗುವಿಗೆ, ತರುಣನಿಗೆ ಹಾಗೆ ಮುದುಕನಿಗೆ ತಮ್ಮ ವಾಸಸ್ಥಾನವನ್ನು ಕಟ್ಟಿಕೊಳ್ಳಲು ಮೂರು ಎಕ್ರೆ ಭೂಮಿ ಹಾಗೂ ತೋಟಕ್ಕೆ ಸ್ಥಳವನ್ನು ಕೊಡಬೇಕು. ಅದು ಅವರವರ ಕಚ್ಚಾಟ ಹಾಗೂ ಒತ್ತಡಗಳೊಂದಿಗೆ ಅವನೊಟ್ಟಿಗೆ ಇರಬೇಕು. ಅದು ವಂಶಪಾರಂಪರ್ಯವಾಗಿ ಹೋಗಬೇಕು. ಯಾರಿಗೂ ಅದನ್ನು ಹಂಚಿಕೊಳ್ಳುವ ಅಥವಾ ಮಾರುವ ಹಕ್ಕು ಇರಬಾರದು. ಅದನ್ನು ನೋಡಿಕೊಳ್ಳುವದು ಜ್ಯೇಷ್ಠ ಪುತ್ರನ ಕೆಲಸವಾಗಿರಬೇಕು. ಅದು ಮರ್ಯಾದಾಪೂರ್ಣ ಹಾಗೂ ಶಾಂತಿಮಯ ಬಾಳಿಗೆ ಒಂದು ಅಸ್ಥಿವಾರು ಆಗುತ್ತದೆ. ಪ್ರತಿಯೊರ್ವನಲ್ಲೂ ಅದು ಆರ್ಥಿಕ ಸ್ವಾತಂತ್ರ್ಯತೆಯ ಧೈರ್ಯವನ್ನು ಉಂಟು ಮಾಡುತ್ತದೆ. ಇಂದು ಎಲ್ಲೆಲ್ಲೂ ಹಬ್ಬಿರುವ ಭಯಂಕರ ಆಹಾರ ಸಮಸ್ಯೆಯನ್ನು ಅದು ಬಿಡಿಸುತ್ತದೆ. ಆದರಿಂದಾಗಿ ಬಡವನು ಶ್ರೀಮಂತರ ಎದುರಿಗೆ ಹೋಗಿ ತನ್ನ ಕಷ್ಟದ ವಿವರಣೆ ಕೊಟ್ಟು, ಅವರ ಶ್ರೀಮಂತ ಕಣ್ಣೀರಿಗಾಗಿ ಕಾಯುವ ಕೆಲಸ ತಪ್ಪುತ್ತದೆ. ಅವನು ಸರಳ ಜೀವನವನ್ನು ನಡೆಸಿಕೊಂಡು ಇರಬಹುದು, ಶ್ರೀಮಂತನ ಸಮೀಪಕ್ಕೆ ಸಾರಿ, "ನನ್ನ ದೈನಂದಿನ ಆಹಾರವನ್ನು ದಯಪಾಲಿಸು; ನಿನಗೆ ನಾನು ಗುಲಾಮನಾಗಿರುತ್ತೇನೆ' ಎಂದು ಹೇಳ ಬೇಕಾಗಿರುವದಿಲ್ಲ."

"ಸರಿ, ರಾಮು. ಈ ಯೋಜನೆಯು ಒಂದು ಹಳ್ಳಿಮರಿಗೆ ಮಾತ್ರ ಆದರ್ಶವಾಗಿರಬಹುದು. ಕೆಲ ವರ್ಷಗಳ ನಂತರ ಜನಸಂಖ್ಯೆ ಜಾಸ್ತಿಯಾದಾಗ ಆದೇನು ಮಾಡುವದು?"

'ಇನ್ನೊಂದು ನದಿಗೆ ಅಣೆಕಟ್ಟನ್ನು ಹಾಕಿದರಾಯಿತು—ದೇವರ ಪ್ರಪಂಚ ವಿಶಾಲವಾಗಿ ಇದೆ. ಇನ್ನೂ ಅನೇಕಾನೇಕ ಕುಮಾರಿ—ನದಿಗಳು ಇಟ್ಟಿಗೆ ಹಾಗೂ ಗಾರೆಯ ಮಾಲೆಗಳಿಗಾಗಿ ಕಾದುಕೊಂಡಿವೆ. ಅವುಗಳಿಗೂ ಭೂಮಿಯನ್ನು ಬೇಸಾಯಕ್ಕೊಳಪಡಿಸುವದೆಂದರೆ ಬಹಳ ಇಷ್ಟ. ನಿಸರ್ಗವು "ಎಲ್ಲೆಲ್ಲಿಯೂ ಶ್ರೀಮಂತವಾಗಿದೆಯೋ ಅಲ್ಲಿಗೆ ಹೋಗಿ ಮಾನವರು ತಂಗಬೇಕು. ಅವನೂ ಬಂದು ತಿನ್ನುವ ಪ್ರಾಣಿಯಾಗಿರುವುದರಿಂದ ಸ್ವತಂತ್ರವಾಗಿ ವಾಸಿಸಬೇಕಾಗಿದೆ. ರಾಷ್ಟ್ರೀಯ ಹಾಗೂ ಜಾತೀಯ ಭಕ್ತಿ ಅಥವಾ ನಿಷ್ಠೆಯು ಒಮ್ಮೆ ಸಣ್ಣ ಗುಂಪುಗಳನ್ನು ಏಕೀಕರಿಸಲು ಸಹಾಯವಾಗಿದ್ದಿರ ಬಹುದು. ಆದರೆ ಆದೇ ಈಗ ಮಾನವರ ಒಳ್ಳೆಟಿಕ್ಕೆ ಕುಠಾರ ಪ್ರಾಯವಾಗುತ್ತಿದೆ. ಪ್ರಪಂಚ ನಮ್ಮದೆಂಬ ದೃಷ್ಟಿ ಇಂದಿನ ಅತ್ಯಂತ ಅವಸರದ ಅವಶ್ಯಕತೆಗಳಲ್ಲಿ ಒಂದು ಇದೆ."

"ರಾಮು, ನಿನ್ನ ಅಭಿಪ್ರಾಯದ ಸ್ಪಷ್ಟತೆ ಹಾಗೂ ನಿಜತ್ವದ ಅರಿವು ನಮಗೆ ಆಗುತ್ತದೆ. ಆದರೆ ಅಧಿಕಾರದಲ್ಲಿರುವವರಿಗೆ, ಉತ್ತಮ ಸ್ಥಿತಿಯಲ್ಲಿರುವವರಿಗೆ, ಹಾಗೂ ಶ್ರೀಮಂತರಿಗೆ ಅದು ಕೇವಲ ವ್ಯರ್ಥ ಆಲೋಚನೆಯ ಹಾಗೆ ಇದೆ. ತಮ್ಮ ಸಂಪತ್ತಿನ ಮೂಲಕ್ಕೆ ಅದು ಸುರಂಗ ಎಂದು ಅವರು ಭಾವಿಸಿಕೊಳ್ಳುತ್ತಾರೆ. ಇಂದಿನ ಪ್ರಚಲಿತ ಪರಿಸ್ಥಿತಿಯನ್ನು ನೀನು ಅದು ಹೇಗೆ ಹೆಪ್ಪುಗಟ್ಟಿಸುತ್ತೀ? ಇಂದೂ ಸಾವಿರ ಎಕರೆ ಜಮೀನು ಇರುವ ಶ್ರೀಮಂತರಿದ್ದಾರೆ. ಅವರು ಹುಲ್ಲುಗಾವಲಿನಲ್ಲಿರುವ ನಾಯಿಯ ಹಾಗೆ, ಒಂದೋ ತಾವಾಗಿ ಕೃಷಿ ಮಾಡೋದಿಲ್ಲ, ಇಲ್ಲವೆ ಇತರರಿಗೆ ಬಿಟ್ಟು ಕೊಡುವುದೂ ಇಲ್ಲ. ಆದರೆ ಬಡವರನ್ನು ಕಂಡಾಗಲೆಲ್ಲ ತಮಾಷೆ ಮಾಡಿ ಸೇವಕರಿಗಳ ನಗುವನ್ನು ಪ್ರದರ್ಶಿಸುತ್ತಾರೆ.'

"ದೊಡ್ಡ ದೊಡ್ಡ ಕಟ್ಟಡಗಳ ಮೇಲೆ ಬಹಳ ತೆರಿಗೆಯನ್ನು ಹಾಕಬೇಕು. ಸುಮ್ಮನೆ ಅವುಗಳ ಒಡೆಯರಾಗಿದ್ದು ನಷ್ಟಕ್ಕೊಳಗಾಗುವ ಬದಲು ಅವರು ಆ ಕೆಲಸವನ್ನು ಬಿಟ್ಟು ಬಿಡುವಂತಾಗಬೇಕು. ಮೂರು ಎಕರೆಗಿಂತ ಹೆಚ್ಚು ಇರುವ ನೆಲವನ್ನು ಇತರ ಕಾರಣಗಳಿಂದಾಗಿ ಬಿಟ್ಟು ಕೊಡುವಂತೆ ಆಗಬೇಕು. ಆ ಮೂರು ಎಕರೆಯು ತಂದೆಯಿಂದ ಮಗನಿಗೂ, ತಾಯಿಂದ ಮಗಳಿಗೂ ವಂಶ ಪಾರಂಪರ್ಯವಾಗಿ ಹೋಗುತ್ತಿರಬೇಕು. ಭೂಮಿಯನ್ನು ಪರಾಧೀನಗೊಳಸಲಿಕ್ಕಾಗದಿರುವದರಿಂದ ಹಾಗೂ ವಿಭಜಿಸಿಕೊಳ್ಳಲಿಕ್ಕಾಗದಿರುವದರಿಂದ ಎಂದಿಗೂ ಅದನ್ನು ಕಳೆದುಕೊಳ್ಳುವಂತಿಲ್ಲ ಮತ್ತು ತನ್ನ ಆಹಾರಕ್ಕಾಗಿ ಭೂಮಿತಾಯಿಯನ್ನು ನಂಬಿಕೊಂಡು ಇರುವಂತಾಗುತ್ತದೆ."

"ಒಬ್ಬನಲ್ಲಿ ಮೂರು ಎಕರೆಗಿಂತ ಹೆಚ್ಚು ಭೂಮಿ ಇದ್ದಲ್ಲಿ?"

'ಅಂತಹ ಭೂಮಿಯ ಮೇಲೆ ಅವನು ಹೆಚ್ಚಿನ ತೆರಿಗೆಯನ್ನು ಕೊಡಬೇಕಾಗಿರುತ್ತದೆ. ಸರಕಾರವೆಂಬುದು ಇದ್ದಲ್ಲಿ, ಅದು ಅಂತಹ ಕೆಲವು ನೈತಿಕ ನಿಯಮಗಳನ್ನು ಅಥವಾ ಧರ್ಮವನ್ನು ಪ್ರಚಾರಕ್ಕೆ ತಂದು, ಶ್ರೀಮಂತರ ಹಾಗೂ ಬಲಶಾಲಿಗಳ ಮೇಲೆ ಹತೋಟಿ ಇಟ್ಟು ಬಡವರಿಗೆ ಸಹಾಯ ಮಾಡಲಿಕ್ಕಾಗಿ ಇರಬೇಕು. ಒಬ್ಬನಲ್ಲಿರುವ ಭೂಮಿ ಅತ್ಯಂತ ಕನಿಷ್ಠ ಮಿತಿ ಇರುವ ಮೂರು ಎಕರೆಗೆ ಬರುವ ವರೆಗೆ ಮಾರುವ ಹಾಗೂ ಪಾಲು ಮಾಡಿಕೊಳ್ಳುವ ಹಕ್ಕು ಇರುತ್ತದೆ. ಈ ಯೋಜನೆಯನ್ನು ಇಂದು ಕಾರ್ಯರೂಪಕ್ಕೆ ತಂದಲ್ಲಿ, ನಾಳೆ ಬೆಳಿಗ್ಗೆ ಮಹಾನ್ ಬದಲಾವಣೆಯು ಗೋಚರವಾಗದಿದ್ದರೂ, ನೂರು ವರ್ಷಗಳಲ್ಲಿ ಮಹತ್ತರವಾದ ಬದಲಾವಣೆಯನ್ನು ಕಾಣಬಹುದು. ಇಂದು ನೂರು ಜನರ ಬೆವರಿನಿಂದಾಗಿ ಹತ್ತು ಜನರು ಸುಖವಾಗಿದ್ದಲ್ಲಿ ಆಗ ಸಾವಿರಾರು ಜನರು ನಮ್ಮ ಬೆವರಿನಿಂದ, ಆದರೆ ಸ್ವಾಭಿಮಾನದಿಂದ ಹಾಗೂ ಗೌರವದಿಂದ ಸುಖೀ ಜೀವನವನ್ನು ನಡೆಸಿಕೊಂಡಿರಬಹುದಾಗುತ್ತದೆ.'

"ರಾಮು, ಅತ್ಯುತ್ತಮ ಆದರ್ಶ ಹಾಗೂ ಯೋಜನೆ—ಆದಕ್ಕಿನ್ನೂ ಆವರಿಸಿಕೊಂಡಿರುವ ಪೊರೆ ಇದೆ. ಒಬ್ಬನ ಬಳಿ ಮೂರೇ ಎಕರೆ ಇದ್ದಲ್ಲಿ, ಅನೂ ಪರಾಧೀನಗೊಳಿಸಲಿಕ್ಕಾಗದಿರುವಂತಹದಾದಲ್ಲಿ, ಕಷ್ಟಕಾಲದಲ್ಲಿ ಅವನು ತನಗೆ ಬೇಕಾಗುವ ಸಾಲವನ್ನು ಪಡೆಯಲು ಸಾಧ್ಯವಾಗುವದಿಲ್ಲ...."

"ಅಯ್ಯೋ, ಕೇದಾರ! ನಿನಗೂ ನನ್ನ ಹೃದಯದ ಭಾವವನ್ನು ಇನ್ನೂ ತಿಳಿದುಕೊಳ್ಳಲಿಕ್ಕಾಗದೆ ಹೋಯಿತೇ! ಸಾಲ — ಅದು ಅತಿ ದುಃಖಾವಸ್ಥೆ ಇದೆ. ಅದುವೆ ನನ್ನ ಹಾಡಿನ ಪಲ್ಲವಿ. ನನ್ನ ಪ್ರಜಾಪ್ರಭುತ್ವದಲ್ಲಿ ಸಾಲಕೊಡುವವನಾಗಲೀ, ಸಾಲ ತೆಗೆದುಕೊಳ್ಳುವವನಾಗಲೀ ಇರಲಿಕ್ಕೆ ಸಾಧ್ಯವಾಗದು. ಒಬ್ಬನಲ್ಲಿ ದಿನಕ್ಕೆ ಬೇಕಾಗುವದಕ್ಕಿಂತ, ವಾರಕ್ಕೆ ಬೇಕಾಗಿರುವದಕ್ಕಿಂತ ಹಾಗೇ ವರ್ಷಕ್ಕೆ ಬೇಕಾಗಿರುವದಕ್ಕಿಂತ ಜಾಸ್ತಿಯಿದ್ದಲ್ಲಿ ಅದನ್ನು ಸ್ವ ಸಂತೋಷದಿಂದ ನೆರೆಯವನಿಗೆ ನೀಡಬೇಕು."

"ಆದರೆ, ರಾಮು, ನಾನು ಹೇಳುತ್ತಿರುವುದೇನೆಂದರೆ, ಕ್ಷಾಮ, ಡಾಮರ, ಬಂಗಾಲದ ಕಾಲದಲ್ಲಿ ಸಾಲವಿಲ್ಲದೆ, ಪ್ರಜಾಗಣ ಏನು ಮಾಡಬಲ್ಲುದು?"

"ನನ್ನ ಯೋಜನೆಯಲ್ಲಿ ಕ್ಷಾಮಕ್ಕೆ ಸ್ಥಳವೇ ಇಲ್ಲ. ಮಾನವನು ಬಾವಿಯಿಂದ ನೀರು ತೆಗೆಯುತ್ತಾನೆ—ಏನೇನು ಕೆಲಸ ಮಾಡಬೇಕೆಂದು ಸೂಚಿಸಲು ಅತನ ಮೆದುಳು ಶಕ್ತಿಶಾಲಿಯಾಗಿದೆ—ಅವುಗಳ ಜೋಡಣೆಯಿಂದ ಅವನ ಭೂಮಿಯು ಕ್ಷಾಮದಲ್ಲೂ ಹಚ್ಚ ಹಸುರು ನಗುವಂತೆ ಮಾಡುತ್ತಾನೆ. ಆದರೆ ಪಕ್ಕದ ನೀರು ಹೇರಳವಂತಿರುವ ಕೋಟೆಯಿಂದ ಅಂತಹ ಸಂಕಟ ಉಂಟಾಗುವಂತೆ ಮಾಡುವದಲ್ಲ ಸಾಲಕ್ಕಾಗಿ ಕೈ ಎತ್ತುವದಕ್ಕಿಂತ, ಪ್ರತಿಯೊರ್ವನೂ ನಗುನಗುತ್ತ ತನ್ನ ಭೂಮಿಯಲ್ಲೇ ಇರುವಷ್ಟರಲ್ಲೇ ಸಂತೋಷ ಪಡುತ್ತಾನೆ."

(ಮುಂದುವರಿಯುವುದು)

ಪ್ರಭೂಸ್
ಬಾಲಾಮೃತ
ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್
ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ ತಯಾರಿಸಿ ಒದಗಿಸುತ್ತಿರುವೆವು.
ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—
ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.
ಮಾರಾಟ ಡಿಪೋ: – ಸಂತೆಕಟ್ಟೆ, ಉಡುಪಿ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428
ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

READ &
ADVERTISE IN
NAVAYUGA WEEKLY

NAVAYUGA 7—7—1968
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಇತಿಹಾಸ ಶೋಧ

ಬೆಳಕು ಬೀರುವ ಬೀಗದ ಕೈ

ಕೆಲವು ಐತಿಹಾಸಿಕ ಸಮಸ್ಯೆಗಳನ್ನು ಅದರಲ್ಲೂ ಮುಖ್ಯವಾಗಿ ಕುಶಾನ್ ಸಾಮ್ರಾಜ್ಯದ ಕಾಲದ ನಿಗೂಢತೆಯನ್ನು ಬಿಡಿಸುವ ಬಗ್ಗೆ ಅಮೂ–ದಾರ್ಯಾ ಪ್ರದೇಶದಲ್ಲಿ (ಉಜ್ಬೆಕಿಸ್ತಾನ್) ದೊರೆತಿರುವ ಕೆಲವು ಆಧಾರಾಂಶಗಳ ಮೇಲೆ ನಡೆದಿರುವ ಭಾರತ-ಸೋವಿಯೆತ್ ಸಂಯುಕ್ತ ಪ್ರಯತ್ನಗಳ ಕುರಿತು ಈ ಲೇಖನವನ್ನು ಬರೆಯಲಾಗಿದೆ.

ಅರಿಯುವರ ಆಳವನ್ನು ಕೆದಕಿ ನೋಡುವುದೇ ಯಾವುದೇ ವಿಜ್ಞಾನದಲ್ಲಿ ಅತ್ಯಂತ ಕುತೂಹಲಕಾರಿ ಸಂಗತಿ. ಜ್ಞಾನದ ಪ್ರತಿಯೊಂದು ಕ್ಷೇತ್ರದಲ್ಲೂ ವಿಜ್ಞಾನಿಗಳು ತಮ್ಮೆಲ್ಲ ಪ್ರಯತ್ನಗಳನ್ನು ಮೀಸಲಿಡುವಂಥ ಕೆಲವು "ಬಿಳೀ ಕಲೆ"ಗಳಿವೆ. ಈ ಮಾತು ಇತಿಹಾಸಕ್ಕೂ ಅನ್ವಯಿಸುತ್ತದೆ.

ರಹಸ್ಯಮಯ ರಾಜ್ಯ

ಅನೇಕ ಶತಮಾನಗಳ ಹಿಂದೆ ಉತ್ತರ ಭಾರತ, ಅಫಘಾನಿಸ್ತಾನ್ ಮತ್ತು ಏಷ್ಯದ ಪ್ರದೇಶಗಳನ್ನು ವ್ಯಾಪಿಸಿದ್ದ ಕುಶಾನ್ ರಾಜ್ಯವೆಂಬುದೊಂದಿತ್ತು. ಇತಿಹಾಸಕಾರರೂ, ಪಂಡಿತರೂ ಇದನ್ನು ಒಂದು ರಹಸ್ಯ ರಾಜ್ಯವೆಂದು ಕರೆಯುತ್ತಾರೆ. ಯಾಕೆಂದರೆ ಎಲ್ಲರೂ ಒಪ್ಪುವಂಥ ರೀತಿಯಲ್ಲಿ ಈ ಸಾಮ್ರಾಜ್ಯದ ಬಗ್ಗೆ ಹೇಳಬೇಕಾದುದು ಇನ್ನೂ ಬಹಳಷ್ಟಿದೆ.

ಈ ಸಾಮ್ರಾಜ್ಯದ ಪ್ರಭುಗಳು ಯಾರಾಗಿದ್ದರು ಮತ್ತು ಯಾವ ಅನುಕ್ರಮದಲ್ಲಿ ಅವರೆಲ್ಲ ಬಂದರೆಂಬುದು ಇತಿಹಾಸಕಾರರಿಗೂ ಸಂಶೋಧಕರಿಗೂ ಸಾಕಷ್ಟು ತಿಳಿದಿಲ್ಲ. ಇದರಲ್ಲಿ ಮೊದಲಿಗನಾದ ಕನಿಷ್ಕನು ಮಾತ್ರ ಯಾವಾಗ ಅರಸನಾದನೆಂಬುದು ತಿಳಿಯದು. ಅನೇಕ ಇತಿಹಾಸಕಾರರು ಕನಿಷ್ಕನ ಆಡಳಿತ ಕಾಲವನ್ನು ನಿರ್ಧರಿಸಲು ಪ್ರಯತ್ನಿಸಿದ್ದಾರೆ. ಈ ಕುರಿತು ಅನೇಕಾನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಚರ್ಚೆಗಳೂ ನಡೆದಿವೆ. ಆದರೆ ಯಾವೊಂದು ಖಚಿತ ತೀರ್ಮಾನಕ್ಕೂ ಬರಲಿಕ್ಕಾಗಲಿಲ್ಲ.

೧೮೯೦ರಷ್ಟು ಹಿಂದೆಯೇ ಪ್ರೊ. ಆರ್. ಡಿ. ಭಂಡಾರಕರರು (ಭಾರತ) ಕುಶಾನ್ ರಾಜ್ಯದ ಆರಂಭವು ಕ್ರಿಸ್ತನಂತರದ ೭೮ನೇ ವರ್ಷದಲ್ಲಿರಬೇಕೆಂದು ಹೇಳಿದರು. ಇತಿಹಾಸಕಾರರು ಬಹು ಕಾಲದ ಮೇಲೆ ಕಾಲ ದಿನವನ್ನು ಹೇಳಿದರು. ಕೆಲವೊಂದು ಬಾರಿ ಅಸಂಬದ್ಧವಾಗಿಯೂ ಉಚ್ಚರಿಸಿದರು. ಭಂಡಾರಕರರ ಸಿದ್ಧಾಂತವಂತೂ "ತೀರ ಅನುಚಿತ, ಅನಂಗೀಕಾರ್ಹ" ವೆಂದು ಹೇಳಲಾಯಿತು. ಆದರೆ ಇಂದು ಸೋವಿಯೆತ್ ಒಕ್ಕೂಟದ ಭಾರತ ವಿದ್ಯಾವಿದರು ಬೆಂಬಲಿಸುತ್ತಿರುವ ಸಿದ್ಧಾಂತ ಮಾತ್ರ ಇದೇ.

ಕುಶಾನ್ ಸಾಮ್ರಾಜ್ಯದ ಕ್ರಮಾನುಗತ ಚರಿತ್ರೆಯ ಸಮಸ್ಯೆಗಳ ಕುರಿತು ಎರಡು ಅಂತಾರಾಷ್ಟ್ರೀಯ ಸಮ್ಮೇಳನಗಳು ಈ ವರೆಗೂ ನಡೆದಿವೆ. ಒಂದು ೧೯೧೩ರಲ್ಲಿ ಮತ್ತು ಇನ್ನೊಂದು ಇತ್ತೀಚೆಗೆ ಎಂದರೆ ೧೯೬೦ರಲ್ಲಿ. "ಕನಿಷ್ಕನ ಕಾಲ"ದ ಬಗ್ಗೆಯಂತೂ ವಿವಿಧ ಅಭಿಪ್ರಾಯಗಳು ವ್ಯಕ್ತಪಟ್ಟವು. ಇದು ಕ್ರಿಸ್ತಪೂರ್ವದ ಮೊದಲನೇ ಶತಮಾನದಿಂದ ಕ್ರಿಸ್ತಾನಂತರ ಮೂರನೇ ಶತಮಾನದ ಅವಧಿಯ ಒಳಗೆ ಇರಬಹುದೆಂದು ಹೇಳಲಾಯಿತು.

ಬನಾರಸ್ ವಿಶ್ವವಿದ್ಯಾಲಯದ ಪ್ರಾ| ನಾರಾಯಣ ಮತ್ತು ನವದಿಲ್ಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿರುವ ಪುರಾತನ ಅವಶೇಷಗಳ ವಿಭಾಗದ ಡಾ| ಬ್ಯಾನರ್ಜಿ ಅವರುಗಳು ಸ್ವಲ್ಪ ಸಮಯದ ಹಿಂದೆ ಲೆನಿನ್‌ಗ್ರಾಡಿಗೆ ಭೇಟಿಯಿತ್ತು ಅಲ್ಲಿನ ಹರ್ಮಿಟೇಜ್ ವಸ್ತುಸಂಗ್ರಹಾಲಯದಲ್ಲಿರುವ ಸೋವಿಯೆತ್ ಭಾರತ ವಿದ್ಯಾವಿದರೊಂದಿಗೆ ಫಲಪ್ರದ ಚರ್ಚೆಗಳನ್ನು ನಡೆಸಿದರು. ಈ ಸಮಯದಲ್ಲಿ ಭಾರತೀಯ ಚರಿತ್ರಕಾರರಿಗೆ ಲೆನಿನ್‌ಗ್ರಾಡ್ ವಿಜ್ಞಾನಿಗಳು ಕುಶಾನ್ ಸಾಮ್ರಾಜ್ಯದ ಕ್ರಮಾನುಗತ ಚರಿತ್ರೆಯ ಬಗ್ಗೆ ಕೆಲವು ಹೊಸ ಸಂಗತಿಗಳ ಕುರಿತು ಹಾಗೂ ಆಧಾರ ಕಲ್ಪನೆಗಳ ಕುರಿತು ಮಾಹಿತಿ ನೀಡಿದರು.

ಕುತೂಹಲಕಾರಿ ಸಂಗತಿಗಳು

ಕುಶಾನ್ ಕಾಲದ ನಾಣ್ಯಗಳ ಅಧ್ಯಯನ ನಡೆಸಿರುವ ನಾಣ್ಯ ವಿದ್ಯಾಪಂಡಿತ ಎವ್ಗೆನಿ ಜೇಯಿಮಾಲ್ ಅವರೂ ಕನಿಷ್ಕನ ಕಾಲವು ಇತ್ತೀಚೆಗಿನದೇ ಇರಬೇಕೆಂಬ ಅಭಿಪ್ರಾಯದವರಾಗಿದ್ದಾರೆ. ಇನ್ನೋರ್ವ ಸೋವಿಯೆತ್ ಭಾರತ ವಿದ್ಯಾವಿದರಾದ ವ್ಲದಿಮಿರ್ ಲುಕೊನಿನ್ ಕೂಡ ಕುಶಾನ್ ರಾಜ್ಯವು ಕಲ್ಪಿಸುವಷ್ಟು ಹಳೆಯದಲ್ಲವೆಂದು ಭಾವಿಸುವವರಾಗಿದ್ದಾರೆ.

ಉಜ್ಬೆಕಿಸ್ತಾನದಲ್ಲಿರುವ ತೆರ್ಮೇಜ್ ಪಟ್ಟಣದಾಚೆ ಅಮೂ-ದಾರ್ಯಾ ಹೊಳೆ ದಡದಲ್ಲಿ ನಡೆಸಿದ ಅಗೆತದ ಫಲಿತಾಂಶಗಳಲ್ಲಿ ಭಾರತೀಯ ಚರಿತ್ರಕಾರರು ತುಂಬ ಆಸಕ್ತಿ ತೋರಿಸಿದರು. ಬರೀಸ್ ಸ್ತಾವಿಸ್ಕಿಯವರ ನೇತೃತ್ವದಲ್ಲಿ ಸೋವಿಯೆತ್ ಪುರಾತತ್ವ ಸಂಶೋಧಕರ ತಂಡವೊಂದು ಇಲ್ಲಿಯ ಕಾರಾ—ತೇಪೆ ಎಂಬ ದಿಬ್ಬದಲ್ಲಿ ಕುಶಾನ್ ಕಾಲಕ್ಕೆ ಸೇರಿದ ಬೌದ್ಧ ಮಂದಿರದ ಕೆಲವು ಅವಶೇಷಗಳನ್ನು ಪತ್ತೆ ಮಾಡಿದ್ದಾರೆ.

ಗೋಡೆಗಳ ಮೇಲೂ ಪಾತ್ರೆ ಪರಡಿಗಳ ಚೂರುಗಳ ಮೇಲೂ ಕಂಡುಬಂದ ವಿಶಿಷ್ಟ ಉಲ್ಲೇಖಗಳು ಶಿಲ್ಪ ಹಾಗೂ ಪ್ರಾಚೀನ ಮಂಡೋದಕ ಚಿತ್ರಗಳ ಅವಶೇಷಗಳು ಈ ಕಾಲವನ್ನೇ ಸೂಚಿಸುತ್ತವೆ.

ಸೋವಿಯೆತ್ ಮಧ್ಯ ಏಷ್ಯದಲ್ಲಿ ದೊರೆತ ಈ ಅಂಶಗಳು ಕುಶಾನ್ ಕಾಲಕ್ಕೆ ಸಂಬಂಧಿಸಿದಂತಿವೆ. ಅಂತೆಯೆ ಈ ಕುರಿತು ಮಾಹಿತಿ ಭಾರತೀಯ ಚರಿತ್ರಕಾರರಿಗೆ ವಿಶೇಷ ಆಸಕ್ತಿಕರವಾಗಿ ಕಂಡಿತು.

ಕಾರಾ—ತೇಪೆ ಸಂಶೋಧನ ಕಾರ್ಯದ ಬಗ್ಗೆ "ಇಂಟರ್‌ನ್ಯಾಶನಲ್ ಅಕಾಡೆಮಿ ಆಫ್ ಇಂಡಿಯನ್ ಕಲ್ಚರ್" ಎಂಬ ನಿಯತ ಕಾಲಿಕೆಯು ಬಿ. ಸ್ತಾವಿಸ್ಕಿ ಮತ್ತು ವೈ. ಪ್ಚೆಲಿನಾ ಅವರುಗಳ ಲೇಖನವನ್ನು ಪ್ರಕಟಿಸಿತು. ಇದು ಪ್ರಕಟವಾದ ನಂತರ ದಿಲ್ಲಿಯಲ್ಲಿರುವ ವಿಜ್ಞಾನ—ಸಂಸ್ಕೃತಿ ಅಭಿವೃದ್ಧಿ ವಿದ್ಯಾಪೀಠವು ಇತ್ತೀಚೆಗೆ ಪ್ರಕಟವಾದೊಂದು ಪುಸ್ತಕವನ್ನು ಪೂರ್ಣ ಅನುವಾದಿಸಿ ಕೊಡಬೇಕೆಂದು ಸೋವಿಯೆತ್—ಭಾರತ ವಿದ್ಯಾವಿದರಿಗೆ ಕೋರಿಕೊಂಡಿತು. ಇದರಲ್ಲಿ ಕಾರಾ—ತೇಪೆ ಸಂಶೋಧನೆಯ ಕುರಿತು ವಿವರವಾದ ಮಾಹಿತಿ ಇದೆ.

ಈ ಹೊಸ ಸಂಗತಿಗಳು ಭಾರತೀಯ ಮತ್ತು ಸೋವಿಯತ್ ಚರಿತ್ರಕಾರರಿಗೆ ಕುಶಾನರ ಕಾಲಾನುಕ್ರಮ ಚರಿತ್ರೆಯ ಕುರಿತ ವಿಚಾರಕ್ಕೆ ಬಂದಿಷ್ಟು ಆಧಾರ ಒದಗಿಸುತ್ತವೆ. ಇವೆಲ್ಲರ ಸಂಯುಕ್ತ ಪ್ರಯತ್ನವು ಎರಡು ಶತಮಾನಗಳ ದೀರ್ಘ ರಹಸ್ಯವೊಂದನ್ನು ಬಿಡಿಸಿ ತೋರಿಸುತ್ತದೆಯೆಂದು ಆಶಿಸಬಹುದಾಗಿದೆ.

ಈ ಸಂಗತಿಗಳು ಹೆಚ್ಚು ಹೆಚ್ಚು ತಿಳಿಯುತ್ತಿದ್ದು ಸೋವಿಯೆತ್ ಮತ್ತು ಭಾರತೀಯ ಚರಿತ್ರಕಾರರಿಬ್ಬರೂ ಇವುಗಳ ಅಭ್ಯಾಸ ಮಾಡುತ್ತಿದ್ದಾರೆ. ಕುಶಾನ್ ರಾಜ್ಯದ ಸಮಸ್ಯೆಯೊಂದೇ ಅಲ್ಲ, ಎರಡು ದೇಶಗಳ ಚರಿತ್ರಕಾರರೂ, ಸಂಶೋಧಕರೂ ಸಹಕಾರವನ್ನು ಹೆಚ್ಚಿಸಬಹುದಾದಂಥ ಇನ್ನೂ ಹಲವಾರು ಸಂಗತಿಗಳಿವೆ. ಆದರೆ ಇದೆಲ್ಲಕ್ಕಿಂತ ಮಹತ್ವದ್ದೆಂದರೆ ಪರಸ್ಪರ ತಿಳುವಳಿಕೆ, ಸೋವಿಯೆತ್ ಒಕ್ಕೂಟದ ಮತ್ತು ಭಾರತ ದೇಶದ ಚರಿತ್ರಕಾರರ ಹಾಗೂ ಸಂಶೋಧಕರ ನಡುವೆ ನಿರಂತರವಾಗಿ ಸಮಾಚಾರ ವಿನಿಮಯ. ಇದು ಕೊನೆಗೆ ಇತಿಹಾಸದಲ್ಲಿಯ ಕತ್ತಲು ಕವಿದ ಪುಟಗಳ ಮೇಲೆ ಬೆಳಕು ಬೀರುವ ಬೀಗದ ಕೈಯಾಗುತ್ತದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

నవయుగ

14-7-1966

NAVAYUGA

౧౦ పైసె

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ವರೆಗೆ—

ಜಾನಕೀ ಪತಿ ರಾಮುಚಂದ್ರ ಪದವಿಗಳಿಸದೆ ಆಲವಂತಿಯ ಆಸ್ತಿಪಾಸ್ತಿಗಳನ್ನು ಮಾರಿ ಶಿಬಿರ ಗುಮಾಸ್ತನಾದ. ಸುದೈವದಿಂದ ಸರಕಾರದಲ್ಲಿ ಉನ್ನತ ಪದವಿಯನ್ನೂ ಕೀರ್ತಿಯನ್ನೂ ಗಳಿಸಿದ.

ರಾಮುವಿನ ರೈತ ಮುರುಗ ಜಮೀನ್ದಾರನಾದ, ದುರ್ವ್ಯಸನಿಯಾದ, ಲೂಟಿಗಾರರ ಯಜಮಾನನಾದ. ರಾಮುವಿನ ಚಿಂತನದಲ್ಲಿ ಲೂಟಿಗಾರರನ್ನೂ ಸನ್ಮಾರ್ಗಕ್ಕೆ ತರುವಲ್ಲಿ ಮುಂದಾದ.

ರಾಮುವಿನ ಬಾಲಮಿತ್ರ ಕೇದಾರಿ ವಕೀಲನಾದ. ಚುನಾವಣೆಯಲ್ಲಿ ಗೆದ್ದು ಸೋತದರಿಂದ ಮಹತ್ವಾಕಾಂಕ್ಷಿಯಾದ ಕೇದಾರಿ ಕುಸಿದುಬಿದ್ದ. ಆತನ ಸಂಸಾರಕ್ಕೆ ರಾಮುವಿನ ಮಾರ್ಗದರ್ಶನ ಸ್ವರ್ಗಸಾಖ ತಂದಿತು.

ಅರ್ಬೀನದಿಯ ಗುಡ್ಡಗಳಲ್ಲಿ ಮಾಜಿ ಲೂಟಿಗಾರರ ವಸತಿಯೊಂದು ರಾಮುವಿನ ಮೇಲ್ವಿಚಾರಣೆಯಲ್ಲಿ ಸ್ಥಾಪಿತವಾಗಲಿತ್ತು.

ಮುಂದೆ—

ಗಗನದಲ್ಲಿ ಹಾರಾಡುತ್ತಿರುವಾಗ ತನ್ನ ರೆಕ್ಕೆಗೆ ಬಾಣ ತಗಲಿದುದರಿಂದ ಹಕ್ಕಿ ವೇಗವನ್ನು ಕಮ್ಮಿ ಮಾಡುವಂತೆ, ರಾಮು ಕ್ಷಣಕಾಲ ತನ್ನ ಮಾತಿನ ವೇಗವನ್ನು ಕಮ್ಮಿ ಮಾಡಿದನು. ಅವನು ಸ್ವರ ಬದಲಾಯಿಸಿ, "ಕೇದಾರಿ, ನೀನು ಮಾನವನ ಬುದ್ಧಿಶಕ್ತಿಯ ಮೌಲ್ಯವನ್ನು ಕಮ್ಮಿ ಮಾಡುತ್ತಿರುವೆ. ಮಳೆ-ಗಾಳಿ, ಬಿರುಗಾಳಿಗಳಿರಲಿ ಏನೆಂತಹ ಎಡರು ತೊಡರುಗಳೇ ಬರಲಿ, ಅವನಿಗೆ ಬೇಕಾದಲ್ಲಿ, ಅವನು ಮನಸ್ಸು ಮಾಡಿದಲ್ಲಿ ಅವುಗಳಿಗೆ ಅಳುಕದೆ ಆತ ರಾಜ್ಯವನ್ನೇ ಕಟ್ಟಬಲ್ಲ. ಬಿರುಗಾಳಿಗೊಳಗಾಗಿರುವ ಈ ಬಾಳಸಮುದ್ರದಲ್ಲಿ ಆತ ಉತ್ತಮ ಈಜುಗಾರನಿದ್ದಾನೆ. ನಾನು ಕೇಳುತ್ತಿರುವುದು; ಈ ಈಜುಗಾರನಿಗೆ ಕೈ ಸೋತುಹೋದಾಗ ಸಹಾಯಕ್ಕಾಗಿ ಒಂದು ಹಲಗೆಯನ್ನು -- ಮೂರು ಎಕ್ರೆ ನೆಲವನ್ನು—ಕೊಟ್ಟು ಅವನು ಮುಳುಗದಂತೆ ಮಾಡಿಕೊಳ್ಳಬೇಕೆಂದು ಮಾತ್ರ."

"ಅದೆಲ್ಲಾ ಭೂಮಿಯ ವಿಷಯವಾಯಿತು; ನಗದು ಹಣಕ್ಕೆ ನೀನೇನಾದರೂ ರಕ್ಷಣೆ ಕೊಡುತ್ತಿಯೇನು?" ರಾಮುವಿನ ಸ್ವಪ್ನ-ಲೋಕವನ್ನು ಚೂರುಚೂರು ಮಾಡಲು ಭಯಪಟ್ಟ ಹಾಗೂ ವಿಷಯವನ್ನು ಬದಲಾಯಿಸಲು ಉತ್ಸಾಹದಿಂದ ಕೇದಾರಿಯು ಕೇಳಿದನು.

"ಹುರುಳಿಲ್ಲದ ಲೋಹಕ್ಕೆ ರಕ್ಷಣೆ! ನಾನಾರಿಗೂ ಅದನ್ನು ಕೊಡದೆ ಇರಬಹುದು. ಅದು ಆ ಲೋಹ, ಸಂಪತ್ತಿರುವದಿಲ್ಲ, ಕೇವಲ ಚಿಹ್ನೆ ಇದೆ. ನಗದು, ಅದು ಯಾವಾಗಲೂ ನಿಲ್ಲುವಂತಹದ್ದಿರುವದಿಲ್ಲ, ಅದಕ್ಕೆ ಸುಗಂಧ ಲೇಪ...."

"ಹೌದು, ಹೌದು; ರಾಮು. ನಿನ್ನ ಯೋಜನೆಯ ಮುಖ್ಯಾಂಶಗಳು ಮನದಟ್ಟಾದುವು. ಜನೆಲ್ಲವೂ ಒಳ್ಳೆಯವೇ ಇವೆ. ಬಡತನ, ದಾರಿದ್ರ್ಯ ಯಾವದೂ ಮುಂದೆ ಅಲ್ಲಿರುವಂತಿಲ್ಲ. ಸಾಹುಕಾರನ ಲೆಕ್ಕ ಪುಸ್ತಕದಲ್ಲಿ ಚಕ್ರಬಡ್ಡಿ ಬೆಳೆಯುವಂತೆ ಸಮಾಜದಲ್ಲಿ ಬಡತನ ಬೆಳೆಯುತ್ತಿದೆ. ಅದನ್ನು ನಿವಾರಿಸಲು ನೀನು ಹುಡುಕಿರುವ ಯೋಜನೆಗಳೇ ದಿವ್ಯ ಸಂಜೀವಿನಿ ಇದೆ."

ಪ್ರಜಾಪ್ರಭುತ್ವದಲ್ಲಿ ಕೇವಲ ಆಡಂಬರವನ್ನೊದಗಿಸುವ ಯೋಜನೆಯನ್ನು ಮಾಡಿದೊಡನೆ ಎಲ್ಲಾ ಕೆಲಸ ಮುಗಿಯಿತೆಂಬಂತೆ ಮಾತಿನ ಗತಿ ಇತ್ತು. ಆದರೆ ಕೇದಾರಿಯು ಅಷ್ಟಿಗೆ ನಿಲ್ಲಲಿಲ್ಲ.

"ಇನ್ನು ಮಕ್ಕಳ ವಿದ್ಯಾಭ್ಯಾಸಕ್ಕೇ ಸ್ವರ...?"

"ಸಂಸ್ಕೃತಿ, ಕೇದಾರಿ, ಅದೊಂದು ಗಹನ ವಿಷಯವಿದೆ. ಅದು ಪುಸ್ತಕದಲ್ಲಿರುವಾಗ ಚೆನ್ನಾಗಿ ಕಂಗೊಳಿಸುತ್ತದೆ. ಎಲೆಗಳ ನಡುವೆ ಹೂವನ್ನು ಕಿತ್ತರೆ ಅದು ಹೇಗೆ ಇರಬಹುದೋ, ಹಾಗೆ ಸಂಸ್ಕೃತಿಯೂ ಪುಸ್ತಕದಿಂದ ತೆಗೆದರೆ ಇರುತ್ತದೆ. ಸಂಪ್ರದಾಯ ಮತ್ತು ವಾತಾವರಣ—ಇವು ಮಾತ್ರ ನಿಜವಾದ ಶಕ್ತಿಗಳಿವೆ."

"ಹಾಗಾದೊಡನೆ ಯಾರನ್ನೂ ವಿದ್ಯಾವಂತರನ್ನಾಗಿ ಮಾಡುವದು ಸರಿಯಲ್ಲ.'

"ಪೂರ್ಣ ಒಪ್ಪುತ್ತೇನೆ. ಇಲ್ಲೊಂದು ಪರ್ಣ ಕುಟೀರ ಕಟ್ಟಿ ಶಾಲೆಯನ್ನು ಆರಂಭಿಸುವ ಮೂಲಕವಾಗಿರುವ ಹಾಗೂ ಚಿವರು ಬರಿಸುವ ಗೋಡೆಗಳ ಹೊರಗೆ ಮಾತುಕತೆ ಹಾಗೂ ಆಟಗಳ ಮೂಲಕ ವಿದ್ಯಾರ್ಥಿಗಳಿಗೆ ಕಲಿಸಿಕೊಡುವ. ಅವರಿಗೆ ಗುಡ್ಡವನ್ನು, ನಕ್ಷತ್ರವನ್ನು, ಕಣಿವೆಗಳನ್ನು, ನದಿಗಳನ್ನು, ಮರದ ಗೆಲ್ಲಿನಿಂದ ಜೇನು ತೊಟ್ಟಿಕ್ಕುತ್ತಿರುವ ಜೇನುಗೂಡುಗಳನ್ನು ತೋರಿಸುವ. ಅರ್ಬಿ ನದಿಯಲ್ಲಿ ಕಾಡು ಹೂಗಳು ತೇಲುತ್ತಿರುವಂತೆ ಈ ಬಾಲಕರು ಅಡೆತಡೆ ಇಲ್ಲದೆ ನಗುತ್ತ ಕುಣಿಯುತ್ತ ಕಲೆಯುತ್ತಿರಬೇಕು. ಸಾಯಂಕಾಲದಲ್ಲಿ, ಪರ್ವತಭುವನ ಮಕ್ಕಳ ಹಾಗೂ ನಮ್ಮ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತಿರುವಾಗ, ನಾವು ಅವರಿಗೆ ಸಂಭಾವಣೆಯ ಸರಳ ರೀತಿಯಲ್ಲಿ ಭೂಗೋಲ, ಚರಿತ್ರೆಗಳನ್ನು ಹೇಳಿಕೊಡುವ. ಬುದ್ಧಿವಂತ ಬಾಲಕರತ್ತ ಗಮನಕೊಡುತ್ತಿರಬೇಕು. ಅವರನ್ನು ಇಂದು ತೊಟ್ಟಿಲಲ್ಲಿ ಇರುವ ಶಿಶುಗಳಿಗೆ ನಾಳೆ ಅಧ್ಯಾಪಕರನ್ನಾಗಿ ಮಾಡಬಹುದು.'

'ನೀನು ಪಠ್ಯಪುಸ್ತಕಗಳನ್ನು ಉಪಯೋಗಿಸುತ್ತಿಯೇನು?"

'ಪುಸ್ತಕಗಳು! ಅದೆಷ್ಟು ವ್ಯರ್ಥ! ಮೂಲಕಾಡನ್ನು ಕಡಿದು ಮೃದುವಸ್ತುವನ್ನಾಗಿ, ಮೃದುವಸ್ತುವನ್ನು ಕಾಗದವನ್ನಾಗಿ ಆ ಕಾಗದದ ಮೇಲೆ ಶಾಯಿ ಹಾಕಿ, ತಿಕ್ಕಿ ತುಂಡು ಮಾಡಿದಾಗ ಆಗುವುದೇ ಪುಸ್ತಕ. ನೈಜ್ಯ ಜೀವನವನ್ನು ಕಾಣಲಾರದಂತಹ ಕುರುಡರಿಗಾಗಿ ಹಸುರು ಎಲೆಗಳನ್ನು ಬಿಳಿವಸ್ತುವನ್ನಾಗಿ ಮಾಡಿದ್ದಾರೆ. ಆದರೂ ಕೇದಾರಿ, ಮಾನವ ನಿರ್ಮಿತ. ಈ ಪ್ರಪಂಚದಲ್ಲಿ ಪುಸ್ತಕಗಳು ಮಾನವರಿಗೆ ಅನಿಷ್ಟದಂಡನೆ ಇದೆ. ಮಹಾನ್ ವ್ಯಕ್ತಿಗಳ ಅಭಿಪ್ರಾಯವನ್ನು ನಾವು ತಿಳಿದುಕೊಳ್ಳಬೇಕಾದಲ್ಲಿ, ಇನ್ನೊಬ್ಬನಿಗೆ ಹೇಳಿಕೊಡಬೇಕಾದಲ್ಲಿ ನಾವು ಪುಸ್ತಕಗಳ ಮೊರೆ ಹೋಗಲೇಬೇಕಾಗುತ್ತದೆ."

"ಒಳ್ಳೆದು...."

"ಮತ್ತೇ ಬಟ್ಟೆಗೆ..."

ಅಲ್ಲೊಂದು ಇಲ್ಲೊಂದು ಹೀಗೆ ಮನೆಯ ಸುತ್ತಮುತ್ತಲೂ ಹತ್ತಿಯ ಬೀಜ ಹಾಕಬೇಕು. ಆ ಮೃದು ಹತ್ತಿಯನ್ನು ತೆಗೆದು, ನೂಲು ತೆಗೆದು, ಬಟ್ಟೆಯನ್ನಾಗಿ ಮಾಡಬೇಕು. ನಮ್ಮ ದೇಶದಂತಹ ಉಷ್ಣ ಪ್ರದೇಶಗಳಲ್ಲಿ, ನಾವು ಅಲಂಕಾರ ಹಾಗೂ ನಾಗರಿಕತೆಗಳೆಂಬ ಹೆಸರಿನಿಂದ ಬಟ್ಟೆಗಳ ಹೊರೆಯನ್ನೇ ಹೇರಿಕೊಂಡಿದ್ದೇವೆಂದು ನನಗನಿಸುತ್ತದೆ. ಎಲ್ಲರೂ ಕನಿಷ್ಟ ಪ್ರಮಾಣದಲ್ಲಿ ಬಟ್ಟೆಯನ್ನುಪಯೋಗಿಸಿಕೊಂಡರೆ ಸಾಕು.'

ಕೇದಾರಿಯು ಅಸ್ಪಷ್ಟ ಹಾಗೂ ಅನಿಶ್ಚಿತ ರೀತಿಯಲ್ಲಿ ಒಪ್ಪುವ ಹಾಗೂ ಒಪ್ಪದಿರುವ ಕೆಲಶಬ್ದಗಳನ್ನು ಗೊಣಗುಟ್ಟಿದನು.

ನಿನ್ನ ಹೃದಯದಲ್ಲಿ ಅಡಗಿಕೊಂಡಿರುವ ವ್ಯಸನದ ಅರ್ಥ ನನಗಾಗುತ್ತದೆ, ಕೇದಾರಿ; ಮಾನವನು ಕೊಂಡು ಕೊಳ್ಳಬೇಕಾಗುತ್ತದೆ, ಮಾರಬೇಕಾಗುತ್ತದೆ, ಅದಕ್ಕಾಗಿ ಆತ ಮಾರುಕಟ್ಟೆಯಲ್ಲಿ ನಿಲ್ಲಬೇಕಾಗುತ್ತದೆ, ಅಲ್ಪ ಸ್ವಲ್ಪ ಹೊತ್ತು ತನಗಾಗಿ ಹಾಗೂ ಹೆಚ್ಚು ಹೊತ್ತು ಇತರರಿಗಾಗಿ ಗುಲಾಮನಂತೆ ಕಾಯಬೇಕಾಗುತ್ತದೆ. ನಾನು ವಾದ ಹೂಡುತ್ತಿದ್ದೇನೆ, ಅಷ್ಟೇ. ನಿನ್ನ ಗುಲಾಮಿ ಜೀವನದ ದಿನಗಳನ್ನು ಕಡಿಮೆ ಮಾಡಿಕೊಳ್ಳು. ಅವಲಂಬನ ಹಾಗೂ ಕಾಮನೆಗಳನ್ನು ಕಮ್ಮಿ ಮಾಡಿಕೊಳ್ಳು. ಅವು ನಿನ್ನ ಆತ್ಮಕ್ಕೂ ಶಾಂತಿ ನೀಡಲಾರವು, ಮೋಕ್ಷದ ಮಾರ್ಗವನ್ನು ಸುಗಮಗೊಳಿಸಲಾರವು. ಅವು ಕೇವಲ ಹಸಿವನ್ನು ಹೆಚ್ಚಿಸುತ್ತವೆ, ಅಷ್ಟೇ. ನನ್ನ ಪ್ರವಚನವಾದರೋ ಒಬ್ಬನನ್ನು ಶಿಕ್ಷಿತ ಕಾಡು ಜೀವನದತ್ತ ಕೊಂಡೊಯ್ಯುವಂತಹದ್ದಿರಬಹುದು. ಉತ್ತಮ ಮಾನವನು ವಿವಿಧ ವಿಷಗಳಲ್ಲಿ ಶಿಕ್ಷಿತ ಕಾಡು ಜೀವನದತ್ತ ಧಾವಿಸುತ್ತಿದ್ದಾನೆಂದು ನಾನು ಹೇಳಬಲ್ಲೆ. ಇಂದು ನಾಗರೀಕತೆ ಅನ್ನುವದು ದೈಹಿಕ ಹಾಗೂ ಸ್ವಲ್ಪಮಟ್ಟಿಗೆ ಮಾನಸಿಕ ಸಂಬಂಧವಿರುವ ವಿಷಯವಾಗಿದೆ. ಅದನ್ನು ಚೈತನ್ಯ ಹಾಗೂ ಆತ್ಮಕ್ಕೆ ಸಂಬಂಧಪಟ್ಟ ವಿಷಯಗಳನ್ನಾಗಿ ಮಾರ್ಪಡಿಸಿಕೊಳ್ಳಬೇಕು. ಇಂದು ಚೈತನ್ಯ ಹಾಗೂ ಆತ್ಮವು ತಮ್ಮ ಸಹ—ಆತ್ಮದತ್ತ ಬಹು ಕ್ರೂರ ರೀತಿಯಲ್ಲಿ ನೋಡುತ್ತಿವೆ. ಪ್ರತಿಯೋರ್ವನೂ ತನ್ನದೇ ಇರುವ ರೀತಿಯಲ್ಲಿ ಅವನ ಭೂಮಿಯಲ್ಲಿ ಬೇಕಾದಷ್ಟು ಬೆಳೆಸಿಕೊಳ್ಳಲಿ. ಅವನು ಇನ್ನೊಬ್ಬನ ಮಾಂಸ, ಫಸಲು, ಶ್ರಮದ ಮೇಲೆ ಬಂದನಿಕೆಯಂತಿರಬಾರದು. ಕಾಡಿನಲ್ಲಿರುವ ಎಲ್ಲಾ ಮರಗಳು ಒಂದೇ ತರಹದವುಗಳಾಗಿರಬೇಕೆಂದು ನಾನು ಹೇಳುವುದಲ್ಲ. ಪ್ರತಿ ಒಂದಕ್ಕೂ ತನ್ನದೇ ಆದ ರೂಪ, ಲಾವಣ್ಯ, ಆಕಾರಾದಿಗಳು ಇರುತ್ತವೆ. ಆದರೆ ಒಬ್ಬನು ಇನ್ನೊಬ್ಬನಿಂದಾಗಿ ಅಥವಾ ಅವನ ನಿರ್ಮೂಲನದಿಂದಾಗಿ ಬಾಳಬಾರದು. ಪ್ರತಿಯೊಂದಕ್ಕೂ ಈ ವಿಶಾಲ, ಸ್ವತಂತ್ರ ಹಾಗೂ ಶ್ರೀಮಂತ ಪ್ರಪಂಚದಲ್ಲಿ ಸ್ಥಳವಿದೆ." ರಾಮು ವಿಚಾರ ಸಾಗರದಲ್ಲಿ ತೇಲಾಡುತ್ತಿದ್ದನು.

"ನೀನನ್ನುವದು ಸರಿ, ರಾಮು. ಆದರೆ ನೀನನ್ನುವದನ್ನು ಪೂರ್ಣ ಕೇಳಲು, ಕೇಳಿದ್ದನ್ನು ಅರ್ಥಮಾಡಿಕೊಳ್ಳಲು ಈ ಪ್ರಪಂಚಕ್ಕೆ ತಾಳ್ಮೆ ಇದೆಯೇ?"

"ಇದೇ ಪ್ರಶ್ನೆಯನ್ನು ನೀನಂದು, ಬೆಳದಿಂಗಳ ರಾತ್ರಿ, ಕಡಲ ಕರೆಯಲ್ಲಿ ಕೇಳಿರುವೆ. ಆಗ ನಾನು ಉತ್ತರ ಕೊಟ್ಟಿರಲಿಲ್ಲ. ಇಂದು ಉತ್ತರ ಕೊಡುತ್ತೇನೆ. ಕೇದಾರಿ, ನಾವು ಶಂಖವನ್ನು ಊದಬಹುದು, ಅದು ಬೇಕಾದರೆ ಒಡೆದು ಹೋಗಲಿ, ಆದರೂ

(ಹದಿನೈದನೇ ಪುಟ ನೋಡಿರಿ)

ಪ್ರಭೂಸ್

ಬಾಲಾಮೃತ

ನಿಮ್ಮ ಮುದ್ದು ಮಕ್ಕಳ ಸುದೃಢ ಬೆಳವಣಿಗೆಗೆ ಉತ್ಕೃಷ್ಟ ಟಾನಿಕ್

ಅಲ್ಲದೆ ಇನ್ನೂ ಇತರ 250ಕ್ಕೂ ಮಿಕ್ಕಿದ ಆಯುರ್ವೇದೀಯ
ಔಷಧಗಳನ್ನು ಕಳೆದ 40 ವರ್ಷಗಳಿಂದಲೂ ಶಾಸ್ತ್ರೀಯವಾಗಿ
ತಯಾರಿಸಿ ಒದಗಿಸುತ್ತಿರುವೆವು.

ವಿವರಗಳಿಗೆ—ಉಚಿತ ಕ್ರಯ ಪತ್ರಿಕೆಗೆ ಬರೆಯಿರಿ—

ಸ್ವದೇಶಿ ಔಷಧ ಭಂಡಾರ (ರಿ.) ಕುಂಜಾಲು, ದ. ಕ.

ಮಾರಾಟ ಡಿಪೋ:— ಸಂತೆಕಟ್ಟೆ, ಉಡುಪಿ.



Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಸಂತಾನ ನಿಯಂತ್ರಣ ಕಾರ್ಯದ ಪ್ರಗತಿಯನ್ನು ಪರಿಶೀಲಿಸುವ ಸಲುವಾಗಿ ಮನೆಮನೆಯನ್ನು ಯೋಜನೆಯ ಸಂಯೋಜಕರು ಸಂದರ್ಶಿಸುತ್ತಾರೆ.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೪	೧೪—೭—೧೯೬೬	No. 44

ವಚನ ಸುಧೆ

ಸ ಏವ ಖಲು ದಾರುಭ್ಯೋ
ಯದಾ ನಿರ್ಮಥ್ಯ ದೀಪ್ಯತೇ।
ತದ್ದಾರು ಚ ವನಂ ಚಾ
ನ್ಯನ್ನಿರ್ದಹತ್ಯಾಶು ತೇಜಸಾ॥

ಕಟ್ಟಿಗೆಯಲ್ಲಿ ಅಡಗಿರುವ ಬೆಂಕಿಯನ್ನು ಕೆಣಕಿ ಉದ್ದೀಪ್ತಗೊಳಿಸಿದರೆ, ಅದು ತನ್ನ ಉರಿಯಿಂದ ಕಟ್ಟಿಗೆಯನ್ನೂ, ಕಾಡನ್ನೂ ಜತೆಗೆ ಇನ್ನಿತರ ವಸ್ತುಗಳನ್ನೂ ತತ್‌ಕ್ಷಣ ಸುಟ್ಟು ಬಿಡುತ್ತದೆ.

ಮಾನ್ಯ ಸಲಹೆ-ಕರೆ

ವಿಯತನಾಮದತ್ತ ಈಗ ಮತ್ತೊಮ್ಮೆ ಜಗತ್ತಿನ ಕಣ್ಣು ಹರಿದಿದೆ. ಬಹಳಷ್ಟು ಸಮಯದಿಂದ ಅಲ್ಲಿ ಉತ್ತರ— ದಕ್ಷಿಣಗಳ ನಡುವೆ ಹೋರಾಟ ನಡೆಯುತ್ತಿದೆ. ಅಲ್ಲಿನ ಆಂತರಿಕ ಹೋರಾಟಕ್ಕಿಂತಲೂ ವಿದೇಶೀಯರ ಕೈವಾಡವೇ ತಾಳ್ಮೆಗೆಡಿಸುವಂತಹುದು. ಉತ್ತರ ವಿಯತನಾಮದ ಬೆನ್ನ ಹಿಂದೆ ಕೆಂಪು ಚೀನಾ ನಿಂತು ಬೇಕಾದ ರೀತಿಯಲ್ಲಿ ಶಸ್ತ್ರಾಸ್ತ್ರಗಳನ್ನು ಪೂರಯಿಸುಬ್ಬಿಸುತ್ತಿದ್ದರೆ, ದಕ್ಷಿಣ ವಿಯತನಾಮವು ಅಮೇರಿಕೆಯಿಂದ ಸರ್ವ ಸಹಾಯ ಪಡೆಯುತ್ತಿದೆ. ಕೆಂಪು ಚೀನಾ—ಅಮೇರಿಕೆಗಳು ಒಬ್ಬರಿನ್ನೊಬ್ಬರಿಗೆ ಎಚ್ಚರಿಕೆ ನೀಡುತ್ತಲೇ ಹೋರಾಟವನ್ನು ಮುಂದುವರಿಸುವ ಎಲ್ಲ ಮಾರ್ಗಗಳನ್ನೂ ಅನುಸರಿಸುತ್ತವೆ.

ಆಗ್ನೇಯ ಏಶ್ಯಾದ ಈ ರಾಷ್ಟ್ರದಲ್ಲಿ ಸ್ವಾತಂತ್ರ್ಯದ ಹೆಸರಿನಲ್ಲಿ ಚಕಮಕಿ ನಡೆಯುತ್ತಿರುವಂತೆಯೇ, ಅದು ಉರಿಯುಂತೆ ಉಲ್ಬಣಿಸುತ್ತಿರುವಂತೆಯೇ ಶಾಂತಿಯ ಪ್ರಸ್ತಾಪ ಬಂದಿತ್ತು: ಆದರೆ, ಅದನ್ನು ಯಾರೂ ಧ್ಯಾನವಿಟ್ಟು ಅಂದು ಗಮನಿಸಿದಂತಿಲ್ಲ. ಭಾರತ—ಪಾಕಿಸ್ತಾನಗಳ ನಡುವೆ ಹೋರಾಟ ನಿಲ್ಲಬೇಕೆಂದಿದ್ದ ಅಮೇರಿಕೆಯೂ ವಿಯತನಾಮದಲ್ಲಿ ಶಾಂತಿ ಸ್ಥಾಪನೆಗೆ ಅನುಕೂಲ ಪರಿಸ್ಥಿತಿ ನಿರ್ಮಿಸಲು ಸಿದ್ಧವಿಲ್ಲ. ಇತ್ತೀಚಿಗೆ ಈ ಹೋರಾಟ ಹೊಸರೂಪವನ್ನು ತಾಳುತ್ತಿರುವುದು, ಸಾವಿರಾರು ಪ್ರಾಣಗಳನ್ನು ಹಾನಿಗೊಳಿಸಿದುದು, ವಿತ್ತ ಸ್ವತ್ತುಗಳಿಗೆ ನಷ್ಟ ಮಾಡಿದುದು—ಇವೆಲ್ಲವನ್ನು ಗಮನಿಸಿದರೆ, ಹೋರಾಟವು ನಿಲ್ಲುವ ಮಾತೆತ್ತುವುದಿಲ್ಲವೆಂದು ಮನವರಿಕೆಯಾಗುವುದು. ಆದರೆ, ವಿಯತನಾಮದಲ್ಲಿ ಹೋರಾಟ ಮುಂದುವರಿಯುವುದರ ಭೀಕರ ಪರಿಣಾಮ ಅದರ ಮೇಲೆ ಅಥವಾ ಅದರ ಬೆಂಬಲಿಗರ ಮೇಲೆ ಮಾತ್ರ ಆಗುವುದಲ್ಲ, ದಿನಗಳೆದಂತೆ ಈ ಜ್ವಾಲೆಯು ಜಾಗತಿಕ ಶಾಂತಿಗೇನೇ ಮಾರಕವಾಗಿ ಪರಿಣಮಿಸುವುದು. ಆದುದರಿಂದ, ಎಂತಾದರೂ ಈ ಸಮರ ನಿಲ್ಲಬೇಕು, ರಣರಂಗದಿಂದ ಉಭಯ ಪಕ್ಷಗಳು ದೂರ ಸರಿದು ದುಂಡು ಮೇಜಿನ ಬಳಿ ಒಂದುಗೂಡಬೇಕು.

ದಿ| ಪ್ರಧಾನಿ ಲಾಲಬಹದೂರರು ವಿಯತನಾಮದಲ್ಲಿ ಅಮೇರಿಕೆಯು ತಳೆದಿದ್ದ ನೀತಿಯನ್ನು ಮೆಚ್ಚಿರಲಿಲ್ಲ. ಅಮೇರಿಕೆಯು ಅಲ್ಲಿ ಬಾಂಬು ಪ್ರವೇಶ ಮಾಡಬಾರದು, ವಿಯತನಾಮದಲ್ಲಿ ಸಮರ ನಿಂತು ಶಾಂತಿ ನೆಲೆಗೊಳ್ಳಬೇಕು—ಇದು ಅಂದಿನ ಭಾರತದ ನಿಲುವೆಯಾಗಿತ್ತು. ಇದರಿಂದ ಭಾರತವಿಂದಿಗೂ ದೂರ ಸರಿದಿಲ್ಲ. ಮೊನ್ನೆ ಮೊನ್ನೆ ಆಕಾಶವಾಣಿಯಲ್ಲಿ ಮಾತಾಡುತ್ತ ಪ್ರಧಾನಿ ಇಂದಿರಾ ಗಾಂಧಿಯವರು ಇದೇ ಅಭಿಪ್ರಾಯವನ್ನು ಮತ್ತೊಮ್ಮೆ ವ್ಯಕ್ತಪಡಿಸಿದರು. ಎರಡೂ ಪಕ್ಷಗಳು ಹೋರಾಟವನ್ನು ತಕ್ಷಣ ನಿಲ್ಲಿಸಿ ಸಂಧಾನ ಪಥಕ್ಕೆ ಬರುವಂತೆ ಮಾಡಲು ಅವರು ಜಿನೇವಾ ಸಮ್ಮೇಳನವೊಂದನ್ನು ಕರೆಯುವಂತೆ ಸಲಹೆ ನೀಡಿದರು. ಬ್ರಿಟನ್-ರಶ್ಯಗಳಿಗೆ ಅವರು ಇದನ್ನು ಕರೆಯಲು ಕೇಳಿಕೊಂಡರು. ಅಂತಾರಾಷ್ಟ್ರೀಯ ನಿಯಂತ್ರಣ ಮಂಡಳದ ಅಧ್ಯಕ್ಷ ರಾಷ್ಟ್ರವಾದ ಭಾರತವು ಈ ಸಂಬಂಧದಲ್ಲಿ ತನ್ನ ಪಾಲಿಗೆ ಬರುವ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸಿದ್ಧವಿದೆಯೆಂದೂ ಸಾರಿ, ಮುಂದೆ ಕೈರೋವಿಗೆ ಹಾರಿದರು. ಕೈರೋ, ಬೆಲ್ಗ್ರೇಡ್ ಮತ್ತು ಮೋಸ್ಕೋಗಳ ಸಂದರ್ಶನಾರ್ಥ ವಿದೇಶ ಸಂಚಾರ ಕೈಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ನೀಡಿದ ಈ ಇಂದಿರಾ ಗಾಂಧಿಯವರ ಕರೆಗೆ ಹೆಚ್ಚು ಅರ್ಥವಿದೆ.

ಬ್ರಿಟಿಷ್ ಪ್ರಧಾನ ಮಂತ್ರಿ ಹೆರಾಲ್ಡ್ ವಿಲ್ಸನ್ ವಿಯತನಾಮ ಸಂಬಂಧದ ತನ್ನ ನಿಲುವೆಯನ್ನು ತಿಳಿಸಿ ಕೊಸಿಗಿನ್ನರ ಅಭಿಪ್ರಾಯವನ್ನು ತಿಳಿಯಲು ಇದೇ ತಿಂಗಳ ಮಧ್ಯಾವಧಿಯಲ್ಲಿ ಮೋಸ್ಕೋವಿಗೆ ಹೋಗಲಿದ್ದಾರೆ. ಶಾಂತಿಯ ಮಾತುಕತೆಗೆ ರಶ್ಯವು ಒಪ್ಪಿಗೆ ನೀಡುವ ಸಂಭವವಿದೆಯಾದರೂ ಅಮೇರಿಕೆಯು ತನ್ನ ವಿಧ್ವಂಸಕ ಕೃತಿಗಳನ್ನು ನಿಲ್ಲಿಸುವಂತೆ ಮಾಡಲು ಬ್ರಿಟನ್ ಸಮರ್ಥವಾಗುವುದೇ ಎಂಬ ಪ್ರಶ್ನೆಗೆ ವಿಲ್ಸನ್ ಉತ್ತರ ಕೊಡಬೇಕಾಗಿದೆ. ರಶ್ಯದ ನಿಲುಮೆಯನ್ನು ಸರಿಯಾಗಿ ತಿಳಿದ ನಂತರ ತಾನು ಜಾನ್ಸನ್ನರನ್ನೂ ಭೆಟ್ಟಿಯಾಗಿ ಚರ್ಚೆ ನಡೆಸುತ್ತೇನೆ; ಎಂಬುದಕ್ಕಿಂತ ಹೆಚ್ಚಿನ ಉತ್ತರ ವಿಲ್ಸನ್ನರ ಬಳಿಯಿಲ್ಲ. ಇದರಿಂದ ಕೋಸಿಗಿನ್ ತೃಪ್ತಿ ಹೊಂದಿಯಾರೇ—ಇದೂ ಒಂದು ಪ್ರಶ್ನೆ. ಇದಕ್ಕಿಂತ ಮೊದಲೇ ಇಂದಿರಾ ಗಾಂಧಿ-ಕೋಸಿಗಿನ್ ಭೆಟ್ಟಿ ನಡೆಯಲಿದ್ದು, ಅವರಿಬ್ಬರ ನಡುವೆ ವಿಯತನಾಮ ಪ್ರಶ್ನೆಯೂ ಚಾರಡುಳಿಯದು. ಜಿನೇವಾ ಸಮ್ಮೇಳನ ಕರೆಯಲು ರಶ್ಯ ಸಮ್ಮತಿ ನೀಡದೆಯೂ ಇರಲಾರದು. ಇವರಿಬ್ಬರೂ ಮಾತುಕತೆ ವಿಲ್ಸನ್ನರ ಮಾತಿಗೆ ಆಧಾರವಾಗಿ ನಿಲ್ಲುವ ನಿರೀಕ್ಷೆಯಿದೆ.

ಸಂಯುಕ್ತ ರಾಷ್ಟ್ರಸಂಘದ ಪ್ರಧಾನ ಕಾರ್ಯದರ್ಶಿ ಯು. ಥಾ. ಹೇಳುತ್ತಾರೆ—ವಿಯತನಾಮದ ಹೋರಾಟವು ಇದೇ ರೀತಿ ಮುಂದುವರಿದರೆ, ದಿನಗಳೆದಂತೆ ಅದರ ಮುಖ ಬೇರೆಯಾಗುತ್ತ ಹೋಗುತ್ತದೆ. ಪರಿಸ್ಥಿತಿ ಕೈಮೀರುತ್ತದೆ. ಯಾವ ಬೆಲೆ ತೆತ್ತಾದರೂ ಅಲ್ಲಿ ಶಾಂತಿ ಸ್ಥಾಪನೆ ಆಗತಕ್ಕದ್ದು. ಈ ನಿಟ್ಟಿನಲ್ಲಿ ಪ್ರಧಾನಿ ಇಂದಿರಾ ಗಾಂಧಿಯವರು ಅನಿರೀಕ್ಷಿತವಾಗಿ ಮಾಡಿದ ಸಲಹೆ, ನೀಡಿದ ಕರೆ ಶಾಂತಿಯಲ್ಲಿ ಭಾರತಕ್ಕಿರುವ ಅಸೀಮ ಕಾಳಜಿಯನ್ನು ತೋರಿಸುತ್ತದೆ. ಈ ಸಲಹೆ ಸರ್ವಮಾನ್ಯವಾಗಿದೆ.

ಕೇರಳ—ಚುನಾವಣೆ

ಮುಂದಿನ ಫೆಬ್ರವರಿಯಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿದ್ದು ಈಗ ಅದರತ್ತವೇ ಹೆಚ್ಚಿನ ರಾಜಕಾರಣಿಗಳ ಗಮನ ಹರಿಯ ತೊಡಗಿದೆ. ಪಂಜಾಬ—ಒರಿಸ್ಸಾ—ಪಶ್ಚಿಮ ಬಂಗಾಲಕ್ಕಿಂತಲೂ ಕಮ್ಯುನಿಸ್ಟರ ಗಂಡು ಮೆಟ್ಟಿನ ಕೇರಳದ ಬಗ್ಗೆ ಕಾಂಗ್ರೆಸ್ ನಾಯಕರು ಅಂಜುವುದು ಸಹಜ. ಅದರಲ್ಲೂ ಮುಸ್ಲಿಂ ಲೀಗು ಚೀನೀಪರ ಕಮ್ಯುನಿಸ್ಟ್ ಪಕ್ಷದೊಡನೆ ಚುನಾವಣಾ ಮೈತ್ರಿ ಮಾಡಿಕೊಳ್ಳುವುದೆಂದರೆ, ಅದು ರುದ್ರ ಭಯಾನಕ. ಇದರಿಂದಾಗಿಯೇ ಕೇರಳವನ್ನು ಕಾಂಗ್ರೆಸ್ ಅಧ್ಯಕ್ಷರು ಸಂಚರಿಸಿದರು, ಪ್ರಧಾನಿ ಇಂದಿರಾ ನೋಡಿ ಹೋದರು; ಕೇಂದ್ರದ ನೀರಾವರಿ—ವಿದ್ಯುತ್‌ಶಕ್ತಿ ಮಂತ್ರಿ ಫರೂಕ್ ಮಹಮ್ಮದ್ ಮುಸ್ಲಿಂ ನಾಯಕರೊಡನೆಯೂ ಮಾತಾಡಿ ಹೋದರು. (ಮತ್ತೆ ಇವರು ಸದ್ಯವೇ ಬರಲಿದ್ದಾರೆ) ಕೇಂದ್ರ ಗೃಹ ಮಂತ್ರಿ ಎರಡು ವರ್ಷಗಳ ಸುದೀರ್ಘ ಅವಧಿಯ ಬಳಿಕ ಅತ್ಯಲ್ಪ ಕಾಲದ ಭೆಟ್ಟಿಗಾಗಿ ಅವಸರ—ಅವಸರವಾಗಿ ನೋಡಿ ಬಂದರು. ಎಲ್ಲರ ಚಿಂತೆಯೂ ಒಂದೇ—ಚುನಾವಣೆಗಳಲ್ಲಿ ಗೆಲ್ಲುವ ಬಗೆ ಹೇಗೆ? ನ್ಯಾಯ—ಧರ್ಮ—ನೀತಿ—ಧ್ಯೇಯ—ಗುರಿಗಳನ್ನು ಹೊಂದಿಸಿಕೊಂಡು ಕಾಂಗ್ರೆಸ್ ಚುನಾವಣಾ ರಂಗಕ್ಕೆ ಇಳಿಯುತ್ತದೆ. ಇದರಲ್ಲಿ ಜಯಗಳಿಸುತ್ತದೆಂದು ಹಾರೈಸಬಹುದು.

ಸ್ವಾತಂತ್ರ್ಯ ವಿಶೇಷಾಂಕ

ತಾ. 15—8—1966ಕ್ಕೆ ಪ್ರಕಟವಾಗಲಿದೆ.

ನರಸಣ್ಣನ ಸರಸ

'ಪ್ರಧಾನಿ ಇಂದಿರಾಗಾಂಧಿ ರಾಜ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ನೇರಂಗಾಗಿ ಯೋಜನೇತರ ವೆಚ್ಚವನ್ನು ಕಡಿಮೆ ಮಾಡಬೇಕೆಂದು ವಿನಂತಿಸಿದ್ದರಂತೆ...'

"ಓಹೋ! ನಮ್ಮ ಮಂತ್ರಿಗಳು ತಮ್ಮ ಸಂಚಾರವನ್ನಿಲ್ಲಿಸಿ, ಖಂಡಿತವಾದಷ್ಟು ಕಡಿಮೆ ಮಾಡಿಕೊಂಡರೆ ಅಷ್ಟು ಉಳಿತಾಯವಾಗುತ್ತದೆ. ಆದರೆ....?"

ಗೇಹ ರಾಜ್ಯದಲ್ಲಿ
ಹುಣ್ಣಿಮೆ ಬರುವನಕ ಅಮಾವಾಸ್ಯೆ ನಿಲ್ಲದು

'ಕೊನೆಗೂ ನೀವಂದದ್ದೇ ಸದ್ಯ ಆಯ್ತಲ್ರೀ....'

'ಬಹಳ ಸಂತೋಷ. ಆದರೆ, ನಾನೆಂದ ಸಂಗ್ತಿ ಯಾವುದೂಂತ ಕೇಳುವಷ್ಟು ಕೃಪೆ ತೋರಬಹುದೆ?'

"ಅಲ್ಲಾ, ಏನಾಗಿದೆ ಇವತ್ತೂಂತ?"

"ಆಗೋದೇನು ಮಹಾ? ನಿತ್ಯ ಆಗಿರೋದೆಲ್ಲಾ ಆಗಿಯೇ ಆಗ್ತದೆ...."

'ಅದು ಸರೀನ್ರಿ. ಅಲ್ಲಾ, ನೀವಂದ ಮಾತು ನಿಂನ್ಗೇನೇ ಮಗ್ನ ಹೋಯ್ತೂಂತಾದ್ರೆ ಮುಂದೆ..."

'ಹೇಗೆ ದಿನಕಳೆಯೋದೂಂತ ತಾನೇ ನೀನು ಕೇಳೋದು?"

"ನಾನ್ಯಾಕೆ ಹಾಗೆ ಕೇಳಬೇಕಂತೆ?"

"ನೀನೊಬ್ಬಳಲ್ಲದೆ ನನ್ನ ಕೇಳೋರಾದ್ರೂ ಸದ್ಯ ಬೇರ್ಯಾರಿದ್ದಾರೆ?"

"ಹ್ಞಾಂ....ಅಷ್ಟಾದ್ರೂ ಇದೆಯಲ್ಲಾ ಪ್ರೀತಿ...."

"ಏನೇ ಇದು? ನನ್ನ ಪ್ರೀತಿ ನಿನ್ಮೇಲೆ ಅಲ್ದೆ ಮತ್ಯಾರಾರ ಮೇಲೆ ಹೋಗಿರುತ್ತೆ? ಏಕಿರುತ್ತೆ?"

"ಅದೊಂದೂ ನಂಗೊತ್ತಿಲ್ಲ. ನೀವು ನನ್ನ ಮೇಲೆ ರೇಗಾಡ್ತಿರೋದು, ಬಯ್ತಿರೋದು........ಇದನ್ನೆಲ್ಲಾ ನೋಡಿದವ್ರು, ಕೇಳಿದವ್ರು ಹೆಂಡ್ತೀ ಮೇಲೆ ಪ್ರೀತೀನೇ ಇಲ್ಲ, ಉರಿ ಗಂಡಾಂತ ಹೇಳೋಕೆ ಸುರು ಮಾಡ್ತಾರೆ—'

"ನೋಡು, ಊರವರು ಏನೇ ಹೇಳ್ಲಿ, ನೀನು ಏನನ್ನುತ್ತಿ?'

"...................."

"ಯಾಕೆ ದಾಕ್ಷಿಣ್ಯಮೂರ್ತಿಯಾಗುತ್ತಿ? ಹೇಳಿಬಿಡು....'

"ಹ್ಞಾಂ, ನಿಮಗೆ ಏನನ್ನಿಸುತ್ತೆ?"

"ನನಗೆ ಏನನ್ನಿಸುತ್ತೇಂತ ಹೇಳಬೇಕಾದವಳು ನೀನು...'

"ಅಂತೂ ನಾನೇ ಹೇಳಬೇಕು..."

'ನೋಡು, ಅಷ್ಟು ಹೇಳುತ್ಲೇ ಮುಖ ನಸುಗೆಂಪು ಗುಲಾಬಿಯಾಗಿಬಿಟ್ತು...'

'ಇನ್ನೇನಂತೆ? ಕೊಯ್ದು ಮುಡಿಸಿಕೊಳ್ಳೋದು...."

'ಛೆ, ಎಲ್ಲಾದರೂ ಉಂಟೆ? ಹೂ ಗಿಡದಲ್ಲಿದ್ದರೇನೇ ಚಂದ..."

'ಹೌದು, ಒಂದು ದಿನ ಮರುದಿನ ಬಾಡಿ ಉದುರಿ ಹೋಗುತ್ತೆ....'

"ಮತ್ತೆ ಕೊಯ್ದರೆ ಆಗ್ಲೇ ಬಾಡಿ ಹೋಗುತ್ತೆ...."

"ಉಳಿಗ್ಯೆಯಲ್ಲಿ ಕೊಯ್ದರೆ ಹಾಗೇ ಇದೀತು. ನೋವಾಗದಂತೆ ಬೆರಳುಗಳಿಂದ ಮೆತ್ತಗೆ ಕೊಯ್ದರೆ, ಹೂವಿಗೂ ಸಂತೋಷವಾಗುತ್ತೆ. ಅದು ಒಂದಲ್ಲ ಎರಡು ದಿನ ಬಾಡೋದಿಲ್ಲ..."

"ಪರ್ವಾಗಿಲ್ಲ ಕಣೇ ನೀನು. ಭಾರಿ ಹುಷಾರಾಗಿದ್ದಿ. ನೀನು ಇಷ್ಟೆಲ್ಲಾ ಮುಂದು ವರಿಯುತ್ತೀಂತ ನಾನು ಕನಸು ಮನಸ್ಸಿನಲ್ಲೂ ಊಹಿಸಿರಲಿಲ್ಲ...'

"ಕೆಲವೊಮ್ಮೆ ನೋಡಿ, ನಾವು ಎಣಿಸದ್ದೂ ಆಗುತ್ತದೆ...'

"ಆದ್ದರಿಂದಲೇ ಇದು ಪ್ರಪಂಚವಾಗಿಯೇ ಉಳಿದಿದ...."

'ಅದು ಸರೀನ್ರಿ. ಮತ್ತೆ ಕರ್ನಾಟಕ—ಮಹಾರಾಷ್ಟ್ರ ಗಡಿ ವಿವಾದದ ಪ್ರಶ್ನೆ ಮಾತ್ರ ನೀವಂದಂತೇ ಆಗ್ಲಾ ಇದೆ....'

"ಓ, ಹಾಗೆ, ಏನಾಯಿತೀಗ?'

'ಆಗೋದೇನಂತೆ? ಗೊತ್ತಿದ್ದದ್ದೇ ಅನ್ನಿ...."

'ಹ್ಞಾ, ಮತ್ತೆ ಮಾಡೋದೇನು?'

"ಅಂದ್ರೆ?"

"ಅಂದ್ರೆ ಮತ್ತೆಂಥದು? ಹಾವು ಸಾಯಬಾರದು, ಕೋಲು ಮುರೀಬಾರದು. ರಾಮಾಯ ಸ್ವಸ್ತಿ;ರಾವಣಾಯ ಸ್ವಸ್ತಿ...'

"ಅಂದ್ರೆ?"

"ನೋಡು, ಕನ್ನಡಿಗರ ಬೇಡಿಕೆಯೇನು? ಅವರಿಗೆ ದೊರೆತದ್ದಾದರೂ ಏನು?"

'ಗಡಿ ಆಯೋಗ ನೇಮಿಸಬಾರದೂಂತ ನಾವು ಹೇಳುತಿದ್ದೆವು....

"ನೇಮಿಸಿಯೇ ತೀರಬೇಕೂಂತ ಮರಾಠಿಗರ ವಾದವಿತ್ತು ಅಲ್ಲಾ?'

"ಸರಿಯೇ...."

'ಈಗ ಹೇಳು ಗೆದ್ದವರು ಯಾರು?"

"ಯಾರು?'

"ವಾಸ್ತವಿಕವಾಗಿ ಮರಾಠಿಗರೇ ಅಲ್ಲವೆ?"

'ಯಾಕೆ ಹಾಗೆನ್ನುತ್ತೀರಿ? ಇಬ್ಬರೂ ಮುಖ್ಯಮಂತ್ರಿಗಳು ಎರಡು ತಿಂಗಳ ಕಾಲಾವಧಿಯಲ್ಲಿ ಆಯೋಗಕ್ಕೆ ಒಪ್ಪಿಸಬೇಕಾದ ವಿಷಯಗಳ ಬಗ್ಗೆ ಒಮ್ಮನಕ್ಕೆ ಬರಬೇಕಂತೆ. ಆ ಮೇಲೆ ಆಯೋಗದ ನೇಮಕ.'

'ಸರಿಯೇ. ಅಂದರೆ, ಆಯೋಗದ ನೇಮಕವಾಗುವುದು ಖಂಡಿತವೇ.'

'ಹ್ಞಾಂ..'

'ಈಗ ಹೇಳು, ಆಯೋಗ ಬೇಡವೆಂದ ಕನ್ನಡಿಗರು ಗದ್ದರೆ? ಬೆಂಕೆಂದ ಮರಾಠಿಗಳೇ?...."

'ಹ್ಞಾ. ಆದರೂ ಪರಿಶೀಲನಾ ಸಂಗತಿಗಳಲ್ಲಿ ಒಮ್ಮತಕ್ಕೆ ಬರಬೇಕು. ಆಗ ನಾವು ನಮ್ಮ ನ್ಯಾಯದ ದಾರಿ ಬಿಡುತ್ತೇವೆಯೆ? ಹೇಳುತ್ತೇವೆ: ಬರಿಯ ಸಣ್ಣ ಪುಟ್ಟ ಹೊಂದಾಣಿಕೆಗಳನ್ನು ಮಾತ್ರ ಮಾಡಲು ನಾವು ಸಿದ್ಧರೂಂತ....'

'ಸರಿಯೇ, ನಾವು ನಮ್ಮ ಹಾಡಿದ ರಾಗವನ್ನು ಹಾಡುತ್ತೇವೆ. ಅವರೂ ತಮ್ಮ ರಾಗವನ್ನು ಹಾಡುತ್ತಾರೆ. ಬೆಳಗಾಂವಿ ಬೇಕು, ಕಾರವಾರವೂ ನಮ್ಮ ಕವಳ, ನಿಪ್ಪಾಣಿ ನಮ್ಮದೇ ಪಾಣಿ....'

'ಓ....ಆಗ"'

'ಆಗವೇನು? ಒಮ್ಮತವಿಲ್ಲದೆ ಮುಖ್ಯಮಂತ್ರಿಗಳು ಭವನಗಳಿಗೆ ತೆರಳುತ್ತಾರೆ....'

'ಮತ್ತೆ?'

'ಭಿನ್ನಾಭಿಪ್ರಾಯದ ಪರಿಶೀಲನಾ ಕಾರ್ಯಕ್ರಮ ಸಿದ್ಧವಾಗುತ್ತದೆ. ಏಕ ಸದಸ್ಯ ಆಯೋಗ ತನಗೆ ಸರಿ ಕಂಡಂತೆ, ಮರಾಠಿಗರಿಗೆ ಪರವಾಗಿಯೇ ನಿರ್ಣಯ ಕೊಡುತ್ತದೆ..."

'ನೋಡಿ, ನೀವು ಹೀಗೆಲ್ಲಾ ಅಂದರೆ ನಾನು ಒಪ್ಪುವುದಿಲ್ಲ. ಅದು ನಮಗೇನೇ ಪರವಾಗಿ ಯಾಕೆ ನಿರ್ಣಯ ಕೊಡಬಾರದು?"

'ಒಳ್ಳೆಯ ಪ್ರಶ್ನೆ. ಆದರೆ ನೋಡು, ಮರಾಠಿಗರ ದಾಂಡಿಗತನ ಏಕಸದಸ್ಯ ಆಯೋಗಕ್ಕೂ ಗೊತ್ತಿದೆ. ಹೆಚ್ಚೆಂದರೆ, ಕಾರವಾರವೊಂದು ನಮ್ಮ ಕೈಯಲ್ಲೇ ಉಳಿದೀತು..."

ನೀವು ಭಾರಿ ನಿರಾಶಾವಾದಿಗಳು..."

ಜೀವನದಲ್ಲಿ ಒಂದಲ್ಲ ನೂರು ಆಶೆಗಳನ್ನು ಕಟ್ಟಿಕೊಂಡು ಪೂರ್ಣ ನಿರಾಶೆಯನ್ನೇ ಹೊಂದಿದ ಬಡ ಜೀವವಿದು.... ಇದರಲ್ಲಿ ಎಲ್ಲೆಲ್ಲಿಯೂ ದೃಷ್ಟಿಗೋಚರವಾಗುವುದು ನಿರಾಶೆ ಮಾತ್ರ...."

"ಅದೂ ಹೌದೂನ್ರಿ. ಹುಣ್ಣಿಮೆಯು ಬರುವತನಕ ಅಮಾವಾಸ್ಯೆ ನಿಲ್ಲುವುದಿಲ್ಲ..'

'ಅದೇ ಅಂದನಲ್ಲಾ, ನಮಗೀಗ ಅಮಾವಾಸ್ಯೆ. ಇನ್ನು ಹುಣ್ಣಿಮೆ ಬರುವವರೆಗೆ ನಾವು ಬದುಕಿ ಉಳಿಯುತ್ತೇವೆಯೋ, ಅಥವಾ ಕೇರಳ, ತಮಿಳು, ಆಂಧ್ರ, ಮಹಾರಾಷ್ಟ್ರಗಳಲ್ಲಿ ಹಂಚಿ ಹೋಗುತ್ತೇವೆಯೋ ಈಗಲೇ ಹೇಳಬಾರದು.'

"ಎಂಥ ಅಭದ್ರ ಆಡುತ್ತೀರಿ? ಅಷ್ಟು ನಿರಾಸೆಯಾದರೆ ಬದುಕು ಹೇಗೆ ಸಾಗಬೇಕು?

'ಇದು ನಿರಾಸೆಯಲ್ಲವೇ, ಸತ್ಯ ಸಂಗತಿ ಕನ್ನಡದ ಮಕ್ಕಳು ಕನ್ನಡ ಕಲಿಯುವುದನ್ನೇ ಬಿಟ್ಟು ಬಿಡ ತೊಡಗಿದ್ದಾರೆ. ಶಾಲೆ ಮುಚ್ಚಿದೆ. ಸ್ಕೂಲು ಓಪನ್ ಆಗಿದೆ. ಕನ್ನಡ ಮಾಧ್ಯಮದ ಬದಲು ಇಂಗ್ಲೀಷ್. ಹಿಂದೀ ಮಾಧ್ಯಮದ ಪ್ರಚಾರ ಸಾಗುತ್ತಿದೆ. ರಾಜ್ಯಭಾಷೆ ಕನ್ನಡವಾದರೂ ಸರಕಾರದ ಕಾರ್ಯಕಲಾಪಗಳನ್ನೂ ಇಂಗ್ಲೀಷ್‌ನಲ್ಲೇ ಸಾಗುತ್ತಿವೆ. ನಮ್ಮ ಮೂರೂ ವಿಶ್ವವಿದ್ಯಾಲಯಗಳು ಕನ್ನಡದ ಅಧ್ಯಯನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿಲ್ಲ; ಮತ್ತೆ ಕನ್ನಡಮಾಧ್ಯಮದ ಮಾತು ಬಹು ದೂರದ್ದು. ಕನ್ನಡೇತರ ಮಾತೃಭಾಷೆಯವರಾದರೂ ಕನ್ನಡಕಲಿಯತಕ್ಕದ್ದು ಅಗತ್ಯವಿಲ್ಲಾಂತ ಸರಕಾರವೇ ಹೇಳುತ್ತದೆ. ಇಂತಹ ದುರ್ಬಲ ಕರ್ನಾಟಕತಲೆಯೆತ್ತುವಂತಾಗ ಬೇಕಾದರೆ, ಮತ್ತೆ ಬಸವವಿದ್ಯಾರಣ್ಯರು ಹುಟ್ಟಿ ಬರಬೇಕು.'

' ಅಂತೂ ನಮ್ಮದು ಪಡಬಾರದ ಪಾಡು ಅಂತ ತಾನೇ ನೀವನ್ನೋದು?'

' ಹಾಗಲ್ಲವೆ.... ಧ್ಯಾಸವಿಲ್ಲದ ಮನುಜ ಕಾನನಕ್ಕೆ ಹೋದರೇನು? ಅಂತಾರೆ ಹಾಗೆ....'

' ಕನ್ನಡದಲ್ಲಿ ಆಸಕ್ತಿಯಿಲ್ಲದ ಜನರು ಸಾವು ಅನ್ನೋದು ತಾನೇ ನೀವು?,

'ಬೈರಾಗಿಯಾದವನಿಗೆ ಬಯಲೇನು? ಬೇಲಿಯೇನು?'

' ನೀವು ಪೂರಾ ಪೂರಾ ನಿರಾಶವಾದಿಗಳು.

'ಇದು ನಿರಾಶವಾದವಲ್ವೇ... '

' ಮತ್ತು...?'

'ಆಶಾವಾದದ ಪರಾಕಾಷ್ಠೆ....'

'ಅಂದರೆ?'

'ಮಿತಿ ಮೀರಿದ ಆಶಾವಾದ ನಿರಾಶಾವಾದದಲ್ಲೇ ಕೊನೆಗೊಳ್ಳುತ್ತದೆ...'

'ಹೌದು, ನಾಳೆಯದನ್ನು ಇಂದೇ ನೆನೆದು ನೆನೆದು ಕೊರಗಿ ಸಾಯುವುದು...."

'ಸಾಕು ಬಿಡೇ.... ಅಂತೂ ಎರಡು ತಿಂಗಳು ಮುಂದೆ ಸಾಗಿತಲ್ಲಾ? ಮತ್ತು ಒಂದೆರಡು ತಿಂಗಳ ಅವಕಾಶ ನೀಡಿದರೆ ಚುನಾವಣೆ ಮುಂದೆ ಬರುತ್ತೆ; ನಿಜಲಿಂಗಪ್ಪನವರ ಆಶೆ ಈಡೇರದೆ ಹೋದರೂ ಮೂಗು ಉಳಿಯುತ್ತೆ...'

'ಸದ್ಯ ನಿಮ್ಮ ಮೂಗು ಇದೆಯೇ ಇಲ್ಲವೆ?'

"ಏ, ಏನಾಗಿದೇನೆ ನನ್ನ ಮೂಗಿಗೆ?"

"ನೋಡಿ ಹೇಳುತ್ತೇನೆ..."

"ಅಯ್ಯೋ...."

'ಪಾಪವೇ, ಏನು ಕೆಂಪಾಗಿದೆ? ಕೆಂಪು ನಾಗ ಸಂಪಿಗೆಯಂತೆ..."

"ಸಾಕು, ಬಿಡೇ. ಅದ್ರಲ್ಲೊಂದು ಕಜ್ಜಿ ಬೇರೆ ಎದ್ದಿದೆ ..."

"ಹ್ಞಾಂ..ಅದನ್ನು ಬಜ್ಜಿ ಮಾಡಿಬಿಡೋಣ..."

'ಅದನ್ನ ಉಣ್ಣೋರು?'

"ನಾನು...."

"ಮತ್ತು..."

"ನೀವು..."

'ಹ್ಹ...ಹ್ಹ....ಹ್ಹ... ಹ್ಹ....'

'ಶೂ............'

—ಗೋರಾ

ಇದೀಗ ಪ್ರಕಟವಾಗಿದೆ!

ಮೇರಿ ಕೊಟ್ಟ ಬೆಂಡೋಲೆ

ಯಸ್. ಸದಾಶಿವರಾಯರ ಕಥಾಸಂಕಲನ.
ಮುನ್ನುಡಿ: ನಿರಂಜನ

ತ್ರಿವರ್ಣ ರಕ್ಷಾಪತ್ರ — ಬೆಲೆ: ರೂ. ೧=೮೦

ಪ್ರತಿಗಳಿಗೆ—
ನವಯುಗ ಪ್ರೆಸ್, ಉಡುಪಿ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. I. A. 156/66
R. I. A. 130/65
in O. S. 221/64

ತನಿಯಪ್ಪ ಶೆಟ್ಟಿ ಸಹಾ — ವಾದಿಗಳು.
ಮತ್ತು
ಶಿವರಾಮ ಶೆಟ್ಟಿ ಸಹಾ — ಎದುರಿಗಳು.

2ನೇ ವಾದಿಗೆ

ಬೆಳ್ತಂಗಡಿ ತಾಲ್ಲೂಕು ಕಳಿಯೂರು ಗ್ರಾಮದ ಅಗ್ರಮನೆಯಲ್ಲಿರುವ ಮೋನಪ್ಪಗೌಡನ ಮಗ ಅಣ್ಣುಗೌಡರಿಗೆ—

ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ನಿಮ್ಮ ಹೆಸರನ್ನು ಕೈಪೇತಿನಿಂದ ಯಾಕೆ ತೆಗೆದುಹಾಕಬಾರದೆಂಬುದಾಗಿ ತೋರಿಸುವುದಕ್ಕೆ 1ನೇ ವಾದಿಯು ಮಾಡಿದ ಅರ್ಜಿಯು ತಾ. 19—7—1966ಕ್ಕೆ ಇಟ್ಟಿರುತ್ತದೆ. ನೀವು ಆ ದಿವಸ ನಿಮ್ಮ ಉದಾಹರಣೆಯನ್ನು ಕೊಡತಕ್ಕದ್ದು. ತಪ್ಪಿದ್ದಲ್ಲಿ ಮೇಲ್ಕಾಣಿಸಿದ ಕ್ರಮವನ್ನು ಕೈಗೊಳ್ಳಲಾಗುವುದು. ತಿಳಿದಿರಲಿ.

N. J. KADAMBA
ADVOCATE, BELTANGADY.
ಬೆಳ್ತಂಗಡಿ, 29—6—1966.

ಪರಿಚಯ

ಅರ್ಥಶಾಸ್ತ್ರ ರಚಯಿತ್ರ-ಕೌಟಿಲ್ಯ

ಬರೆದವರು

ಶ್ರೀ ಸ. ನಾರಾಯಣ, ಚಿತ್ರದುರ್ಗ.

ಮಗಧ ರಾಜ್ಯದ ರಾಜಧಾನಿಯಾದ ಪಾಟಲೀಪುತ್ರದ ಹೊರಾಂಗಣದ ಮುಂದಿನ ಅನ್ನ ಛತ್ರದ ಕಡೆಗೆ ಕಾವಿಯನ್ನು ಧರಿಸಿದ್ದ ತೇಜಸ್ವಿ ಬ್ರಾಹ್ಮಣನೊಬ್ಬ ಸಾಗಿ ಬರುತ್ತಿದ್ದ. ಮಧ್ಯಾಹ್ನದ ಸಮಯ. ಬಿರುಬಿಸಿಲಿನ ತಾಪಕ್ಕೆ ಬ್ರಾಹ್ಮಣ ಬೆಂದು ಬಸವಳಿದಿದ್ದ. ಹಸಿವು ಅವನನ್ನು ಬಾಧಿಸಿದೆ ಎಂಬುದು ಅವನ ಮುಖಭಾವದಿಂದಲೇ ಗೊತ್ತಾಗುತ್ತಿತ್ತು. ವೇಗದಿಂದ ಛತ್ರದೆಡೆಗೆ ಬರುವಾಗ ಮಾರ್ಗ ಮಧ್ಯದಲ್ಲಿ ಗರಿಕೆಯೊಂದು ಅವನ ಕಾಲಿಗೆ ತಾಕಲಾಗಿ ಮುಗ್ಗರಿಸಿ ಬೀಳುತ್ತಾನೆ. ಅವನಿಗೆ ಎಲ್ಲಿಲ್ಲದ ಕೋಪ ಆವರಿಸುತ್ತದೆ. ತನ್ನ ಕೈಯಲ್ಲಿದ್ದ ದಂಡದಿಂದಲೇ ಬುಡಸಹಿತವಾಗಿ ಗರಿಕೆಯನ್ನು ಕಿತ್ತು ಸುಟ್ಟುಬಿಡುತ್ತಾನೆ. ಅವನ ಕೋಪಾಗ್ನಿ ಶಾಂತವಾಗುತ್ತದೆ.

ಬ್ರಾಹ್ಮಣನ ಕಾರ್ಯ ಚಟುವಟಿಕೆಯನ್ನು ಗಮನಿಸುತ್ತಿದ್ದ ಛತ್ರದ ಮೇಲ್ವಿಚಾರಕ ಆತನ ತೇಜಸ್ಸು, ಕೋಪ, ಹಟಸಾಧನೆಯನ್ನು ಗಮನಿಸಿ ಅವನೆಡೆಗೆ ಓಡಿ ಬಂದು 'ತನ್ನನ್ನು ಅನುಗ್ರಹಿಸಿ ಕಾಪಾಡಿ' ಎಂದು ತನ್ನ ದಾರುಣ ಕಥೆಯನ್ನು ಹೇಳಿಕೊಳ್ಳುತ್ತಾನೆ. ಬ್ರಾಹ್ಮಣನಿಗೆ ತಕ್ಕ ಉಪಚಾರಗಳ ವ್ಯವಸ್ಥೆ ಮಾಡಿ ಸತ್ಕರಿಸುತ್ತಾನೆ. ಬಹು ಬಗೆಯ ಕಷ್ಟಗಳಿಂದ ನೊಂದು, ದುಃಖದಿಂದ ತೊಳಲುವ ಛತ್ರದ ಮೇಲ್ವಿಚಾರಕನ ದಾರುಣ ಕಥೆಯನ್ನು ಅರಿತು ಬ್ರಾಹ್ಮಣ ಅವನಿಗೆ ಅಭಯದಾನ ಮಾಡುತ್ತಾನೆ. ಅವನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿ ಅವನ ಉತ್ಕರ್ಷಕ್ಕೆ ಕಾರಣನಾಗುತ್ತಾನೆ.

ಹಟಸಾಧನೆಯ ಮಹಯೋಗಿ ತೇಜಸ್ವಿ ಬ್ರಾಹ್ಮಣ ಮತ್ತಾರು ಅಲ್ಲ ಕೌಟಿಲ್ಯ. ಅವನ ಅನುಗ್ರಹಕ್ಕೆ ಪಾತ್ರನಾದ ಛತ್ರದ ಮೇಲ್ವಿಚಾರಕನಾಗಿದ್ದ ಯುವಕ ನವನಂದರಿಂದ ಹಲಬಗೆಯ ಕಿರುಕುಳಗಳನ್ನು ಪಡೆದು ರಾಜ್ಯಭ್ರಷ್ಟನಾಗಿದ್ದ ಚಂದ್ರಗುಪ್ತ ಮೌರ್ಯ.

ಕೌಟಿಲ್ಯ ತಾನುಕೊಟ್ಟ ಮಾತನ್ನು ಉಳಿಸಿ ಕೊಳ್ಳುತ್ತಾನೆ. ನವನಂದರನ್ನು ನಿಗ್ರಹಿಸಿ ಚಂದ್ರಗುಪ್ತ ಮೌರ್ಯನನ್ನು ಮಗಧಸಾಮ್ರಾಜ್ಯದ ಸಿಂಹಾಸನದ ಮೇಲೆ ಕೂಡಿಸುತ್ತಾನೆ.

ಕೌಟಿಲ್ಯ ಹೋರಾಡಿದುದು ಸಾಮಾನ್ಯ ವಿರೋಧಿಯೊಂದಿಗಲ್ಲ. ಮಗಧ ಸಾಮ್ರಾಜ್ಯಾಧಿಪತಿಗಳಾದ ಬಲಿಷ್ಠ ನವನಂದರೊಂದಿಗೆ ಕೌಟಿಲ್ಯ ಚಾಕಚಕ್ಯತೆಯಿಂದ ಬರಬಹುದಾದ ಎಡರು—ತೊಡರು, ಸಮಸ್ಯೆಗಳನ್ನು ಮೊದಲೇ ಊಹಿಸಿ ಅವುಗಳನ್ನು ಎದುರಿಸಲು ಸಕಲ ಸಿದ್ಧತೆಗಳನ್ನು ಮೊದಲೇ ನಡೆಸಿಕೊಂಡು ಪ್ರಬಲ ಶತ್ರುಗಳೊಂದಿಗೆ ಹೋರಾಡಿ ಚಂದ್ರಗುಪ್ತನಿಗೆ ಇದ್ದ ಶತ್ರುಗಳನ್ನೆಲ್ಲಾ ಮೂಲೋತ್ಪಾಟನೆ ಮಾಡಿ ಅವನಿಗೆ ಕಂಟಕ ಬಾರದಂತೆ ಅವನ ಸ್ಥಾನವನ್ನು ಭದ್ರಪಡಿಸುತ್ತಾನೆ. ನವನಂದರ ಸ್ವಾಮಿನಿಷ್ಠ ಸೇವಕ ಅಮಾತ್ಯ ರಾಕ್ಷಸನನ್ನು ಬಹು ಬಗೆಯ ಪ್ರಯತ್ನಗಳಿಂದ ತನ್ನ ಬಳಿಗೆ ಕರೆಸಿಕೊಂಡು ಚಂದ್ರಗುಪ್ತನ ಮಂತ್ರಿಯನ್ನಾಗಿಯೇ ನೇಮಿಸಿ ಅರಣ್ಯಕ್ಕೆ ತೆರಳುತ್ತಾನೆ ಕೌಟಿಲ್ಯ.

ಚಂದ್ರಗುಪ್ತ ಸಿಂಹಾಸನವನ್ನೇರಿದ ಮೊದಲ ದಿನಗಳಲ್ಲಿ ಕೌಟಿಲ್ಯನೇ ಅವನ ಮಂತ್ರಿಯಾಗಿ ರಾಜ್ಯ ರಕ್ಷಣೆಯ ವ್ಯವಸ್ಥೆಯನ್ನು ಸಮರ್ಪಕವಾಗಿ ನಡೆಸುತ್ತಾನೆ. ಕೌಟಿಲ್ಯನಂತಹ ರಾಜನೀತಿ ಶಾಸ್ತ್ರಜ್ಞ, ಮೇಧಾವಿ ಮಂತ್ರಿ, ನಿಸ್ಸೀಮ ನಿಷ್ಠಾವಂತ ಹೋರಾಟಗಾರ ದೊರೆಯದಿದ್ದರೆ ಚಂದ್ರಗುಪ್ತ ಮೌರ್ಯ ನವನಂದರನ್ನು ಮೂಲೋತ್ಪಾಟನೆ ಮಾಡುವುದಿರಲಿ ಕೆಣಕಲೂ ಸಾಧ್ಯವಿರುತ್ತಿರಲಿಲ್ಲ. ಕೌಟಿಲ್ಯನ ಹೋರಾಟ ನಿರಪರಾಧಿಗಳಾದ ನವನಂದರೊಂದಿಗಲ್ಲ ಚಂದ್ರಗುಪ್ತನಿಗೆ ಅನ್ಯಾಯವೆಸಗಿ ತಾವೇ ಶ್ರೇಷ್ಠರು ಎಂದು ಮೆರೆಯುತ್ತಿದ್ದ ನವನಂದರೊಂದಿಗೆ. ಪ್ರಬಲರೊಂದಿಗೆ ಹೋರಾಟ ನಡೆಸುವಾಗ ಹಲಬಗೆಯ ಕುಟಿಲ ತಂತ್ರಗಳನ್ನು ಸೃಷ್ಟಿಸಿ ಬಳಸಿಕೊಂಡು ಮುಂದಡಿ ಯಿಡಬೇಕಾಗುತ್ತದೆ ಅದರಲ್ಲಿಯೂ ನವನಂದರಂತಹ ಪ್ರಬಲ ಶತ್ರುಗಳೊಂದಿಗೆ ಹೋರಾಟ ನಡೆಸುವ ಸಂದರ್ಭದಲ್ಲಂತೂ ವಿವೇಕ ಪೂರ್ಣ ವಿಶೇಷ ದೃಷ್ಟಿಯೇ ಬೇಕಾಗುತ್ತದೆ. ಅಂತಹ ವಿವೇಕ ಪೂರ್ಣ ಚತುರತೆ ಇದ್ದುದರಿಂದಲೇ ಕೌಟಿಲ್ಯ ತನ್ನ ಸಾಧನೆಯಲ್ಲಿ ಯಶಸ್ಸುಗಳಿಸಿದುದು.

ಕುಟಿಲತನವನ್ನು ಬಲ್ಲವನಾದುದರಿಂದಲೇ ಅವನಿಗೆ ಕೌಟಿಲ್ಯ ಎಂಬ ಹೆಸರು ಬಂದಿತೆಂದು ಕೆಲವರ ವಾದ. ಆದರೆ ಅನ್ಯಾಯ, ಅಧರ್ಮ, ಅನೀತಿಗಳನ್ನು ಪ್ರತಿಭಟಿಸುವಾಗ ದುರ್ಮಾರ್ಗಿಗಳನ್ನು ದಂಡಿಸುವಾಗ ಕುಟಿಲ ತಂತ್ರವನ್ನು ಬಳಸದೆ ಅನ್ಯಮಾರ್ಗವೇ ಇಲ್ಲ. ಇಲ್ಲಿ ಕೌಟಿಲ್ಯನ ಕುಟಿಲ ತಂತ್ರ ಕಾಣಬಂದರೂ ಅವನ ಸ್ವಾರ್ಥಕ್ಕಾಗಿ ಅಥವಾ ನಿರಪರಾಧಿಗಳನ್ನು ಶೋಷಿಸುವುದಕ್ಕಾಗಿಯಲ್ಲ ದುಷ್ಟರನ್ನು ದೂರವಿಡುವುದಕ್ಕಾಗಿ. ಆದರಿಂದ ಅವನದು ಕುಟಿಲ ತಂತ್ರವಲ್ಲ ದಂಡನಾಮಂತ್ರ.

ಕೌಟಿಲ್ಯ ಚಾಣಕ್ಯ ಎನ್ನುವ ಹೆಸರಿನಿಂದ ಪ್ರಖ್ಯಾತನಾಗಿದ್ದಾನೆ. ಚಂದ್ರಗುಪ್ತನ ಪೂರ್ಣ ಇತಿಹಾಸದಲ್ಲಿ ಚಾಣಕ್ಯನಾಗಿಯೇ ಮೆರೆದಿದ್ದಾನೆ. ಇವನ ಜನ್ಮನಾಮ ವಿಷ್ಣುಶರ್ಮನೆಂದು. ರಾಜಕೀಯ ಕ್ಷೇತ್ರಕ್ಕೆ ಅತ್ಯಮೂಲ್ಯವಾದ 'ಅರ್ಥಶಾಸ್ತ್ರ'ವನ್ನು ರೂಪಿಸುವುದರ ಮೂಲಕ ಕೌಟಿಲ್ಯನಾಗಿಯೇ ಪ್ರತಿಭೆ, ಕೀರ್ತಿಗಳನ್ನು ಸಂಪಾದಿಸಿದ್ದಾನೆ.

ಸ್ಮೃತಿ ಮತ್ತು ಪುರಾಣಗಳಲ್ಲಿ ರಾಜಕೀಯ ಸಂಗತಿಗಳನ್ನು ವಿವರಿಸುವ ಗ್ರಂಥಗಳಿಗೆ ರಾಜನೀತಿ ಅಥವಾ ದಂಡನೀತಿ ಎಂದು ಹೆಸರು. ದಂಡ ನೀತಿ ಎಂದರೆ ಶಿಕ್ಷಿಸುವ ಬಗೆ ಎಂದರ್ಥವಲ್ಲ, ರಾಜ್ಯದ ಅಧಿಕಾರ ಅಥವಾ ರಾಜದಂಡವನ್ನು ಹಿಡಿದು ರಾಜ್ಯವಾಳುವ ಬಗೆ ಎಂದರ್ಥ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ತನಗೆ ಸರಿತೋರಿದ ವಿಷಯಗಳನ್ನು ಬರೆದು ಅದೇ ಸರಿ ಎಂದು ವಾದಿಸಿಲ್ಲ. ಅವನ ಹಿಂದಿನ ಸ್ಮೃತಿ ಪುರಾಣ ಕರ್ತೃಗಳ ಅಭಿಪ್ರಾಯ. ಹಿಂದಿನ ರಾಜನೀತಿಗಳ ರೀತಿ-ನೀತಿ ಮತ್ತು ಸಮಕಾಲೀನ ಸ್ಥಿತಿಗಳನ್ನು ಚಿಂತಿಸಿ ಮಂಥಿಸಿ ಸಮರ್ಥಿಸಿ ಯಾವ ಧರ್ಮ ರಾಜ—ರಾಜ್ಯ—ಜನತೆಯ ಏಳಿಗೆಗೆ ಕಾರಣವಾಗುತ್ತದೆ ಎಂಬುದನ್ನು ಸಮರ್ಥಿಸಿದ್ದಾನೆ ಅಂದಿನ ಭಾರತದ ಜನಜೀವನ— ರಾಜ್ಯಾಡಳಿತ—ಧರ್ಮವಿಚಾರ ಸಮಾಜದ ರೀತಿನೀತಿ ವ್ಯವಸ್ಥೆ ಮೊದಲಾದುವುಗಳನ್ನು ಅರಿಯಲು ಕೌಟಿಲ್ಯನ ಅರ್ಥಶಾಸ್ತ್ರ ನಮಗೆ ಬಹು ಬಗೆಯಲ್ಲಿ ಸಹಕಾರಿಯಾಗಿದೆ.

೧೯೧೫ರಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಮಹಾಗ್ರಂಥ ಇಂಗ್ಲೀಷು ಭಾಷೆಗೆ ಭಾಷಾಂತರವಾಗಿ ಪಾಶ್ಚಾತ್ಯರ ಕೈ ಸೇರಿದ ನಂತರ ರಾಜಕೀಯ ವಿದ್ವಜ್ಜನರ ಮೇಲೆ ವಿಶೇಷ ಪರಿಣಾಮ, ಸ್ಪರ್ಶವನ್ನು ಮೂಡಿಸಿತೆಂಬುದು ಗಮನಾರ್ಹ ಸಂಗತಿ.

ವಿಷ್ಣುಪುರಾಣ, ಕಾಮಂದಕನ ಹೇಳಿಕೆ, ದಂಡಿಯ ದಶಕುಮಾರ ಚರಿತೆ, ಬಾಣನ ಹೇಳಿಕೆ, ಪಂಚತಂತ್ರದ ವಿಷಯಗಳು ಅರ್ಥಶಾಸ್ತ್ರವನ್ನು ಬರೆದ ಚಾಣಕ್ಯ (ಕೌಟಿಲ್ಯ)ನ ಸಂಗತಿಯನ್ನು ವಿಶದಪಡಿಸುತ್ತವೆ. ಅಂದಾಗ ಕೌಟಿಲ್ಯ ಬಹುವರ್ಷಗಳಿಂದಲೂ ಕವಿಗಳಿಗೆ ಚಿರಪರಿಚಿತ ಎಂಬುದು ಸ್ಪಷ್ಟವಾಗುತ್ತದೆ.

ಕೌಟಿಲ್ಯನಂತಹ ದಕ್ಷ ರಾಜನೀತಿ ಶಾಸ್ತ್ರಜ್ಞ, ರಾಜ್ಯ ನಿರ್ಮಾಪಕನ ಮುಖಂಡತ್ವದಲ್ಲಿ ಚಂದ್ರಗುಪ್ತನ ಮೌರ್ಯ ಚಕ್ರಾಧಿಪತ್ಯ ತಲೆ ಎತ್ತಿ ನಿಲ್ಲುತ್ತದೆ.

(ಹನ್ನೆರಡನೇ ಪುಟ ನೋಡಿರಿ)

Navayuga

Announcing

Independence Day Special 1966

You are aware that the INDEPENDENCE SPECIAL of your favourite Weekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 19th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the state.

Kindly send your advertisement material on or before August 5th, 1966.

ADVERTISEMENT RATES

Full Page	... Rs. 200/-	Back Cover Page	... Rs. 500/-
Half Page	... Rs. 100/-	Inside 1st Cover Page	... Rs. 400/-
Quarter Page	... Rs. 60/-	Inside 2nd Cover Page	... Rs. 300/-
One-eigth Page	... Rs. 35/-	Ordinary Full Page in double colours	... Rs. 300/-

MECHANICAL DATA

Paper size ... 15" × 10" (37.5 Cm. × 25 Cm.)   Size of type page ... 13" × 8" Half Crown (32.5 Cm. × 20 Cm.)

Date of Publication : 15—8—1966.

Kindly send the advt. matter to

The Advt. Manager,
NAVAYUGA,
P. B. No. 22, Udipi, S. K.

ಮಾವೋನ ಸುಂದರ ಸ್ವಪ್ನ

ಸಮರದಿಂದಲೇ ಸ್ಥಾನ ಪ್ರಾಪ್ತಿ

ಮಾವೊತ್ಸೆತುಂಗರ ನಂತರ ಅವರ ಗದ್ದುಗೆಗೆ ಲಿನ್ ಪಿಯಾಓ ಬರುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಲಿನ್ ಪಿಯಾಓ ಕಳೆದ ಸೆಪ್ಟೆಂಬರನಲ್ಲಿ ಬರೆದ "ಜನತೆಯ ಯುದ್ಧ" ಎಂಬ ವಿಷಯದ ಬಗ್ಗೆ ಬರೆದ ಲೇಖನವೊಂದು ಈದೀಗ ಲಭ್ಯವಾಗಿದೆ. ಅದರಲ್ಲಿ ಜಗತ್ತಿನಾದ್ಯಂತ ಕ್ರಾಂತಿಯನ್ನು ಹೇಗೆ ಬಲಪಡಿಸಬೇಕು ಮತ್ತು ವಿಶೇಷವಾಗಿ ಅಭಿವೃದ್ಧಿ ಹೊಂದಲೆತ್ನಿಸುವ ದೇಶಗಳಲ್ಲಿ ಕ್ರಾಂತಿಯನ್ನು ಹೇಗೆ ಸಾಧಿಸಬೇಕು ಎಂಬುದರ ಬಗ್ಗೆ ಲಿನ್ ಪಿಯಾಓನ ವಿಚಾರದ ಸರಣಿ ವ್ಯಕ್ತವಾಗಿದೆ. ಲೇಖನದ ತಲೆ ಬರಹವು 'ಜನತೆಯ ಯುದ್ಧದ ವಿಜಯವು ಶಾಶ್ವತವಾಗಿ ಬಾಳಲಿ" ಎಂದಿದ್ದು ಅದು ಮಹತ್ವದ ಘೋಷಣಾ ರೂಪಕ ಲೇಖನ ಸಾಹಿತ್ಯವೆಂದು ಪರಿಗಣಿತವಾಗಿದೆ. ಚೀಣಾದ ಎಲ್ಲ ಪತ್ರಿಕೆಗಳು ಈ ಲೇಖನವನ್ನು ಪ್ರಕಟಿಸಿದವು ಮತ್ತು ವಿದೇಶಗಳಿಗೆಂದು ಸಿದ್ಧವಾದ ನಿಯತ ಕಾಲಿಕಗಳಲ್ಲಿ ಮತ್ತು ಬಾನುಲಿ ಪ್ರಸಾರಗಳಲ್ಲಿ ಈ ಲೇಖನದ ಪ್ರಚಾರ ದೊಡ್ಡ ಪ್ರಮಾಣದಲ್ಲಿ ನಡೆಯಿತು.

ಜಪಾನಿನ ವಿರುದ್ಧ ನಡೆದ ಯುದ್ಧದಲ್ಲಿ ಚೀಣಿಯರು ಗೆರಿಲ್ಲಾ ಯುದ್ಧ ನೀತಿಯನ್ನು ಲಿನ್ ಪಿಯಾಓ ವಿಶ್ಲೇಷಿಸಿದ್ದಾನೆ. ಅಭಿವೃದ್ಧಿ ಹೊಂದುತ್ತಿರುವ ಇತರ ದೇಶಗಳಲ್ಲಿ ಚೀಣಾದ ಮುಖಂಡರು ತಮ್ಮದೇ ಆದ ವಿಧಾನಗಳಿಂದ ಭಾರೀ ಕ್ರಾಂತಿಯನ್ನು ಪ್ರಚೋದಿಸಬಹುದು ಎಂದು ಲಿನ್ ಹೇಳಿಕೊಂಡಿದ್ದಾನೆ. ಹೀಗಿದ್ದರು ಕ್ರಾಂತಿಕಾರೀ ಜನರು ಸ್ವಾವಲಂಭಿತ ಹೋರಾಟವನ್ನು ಕೈಕೊಳ್ಳಬೇಕೆಂದು ಲಿನ್ ಇತ್ತ ಎಚ್ಚರಿಕೆಯ ತಾತ್ಪರ್ಯವು ಚೀನದ ಸಹಾಯ ಅಲ್ಪ, ಸೀಮಿತವಾದದ್ದು ಎಂದೇ ಆಗಿದೆ. ಮರು ಉಸಿರಿನಲ್ಲಿಯೇ ಲಿನ್ ಪಿಯಾಓ ಹೇಳುತ್ತಾರೆ "ಜಗತ್ತಿನ ಯಾವದೇ ಆಕ್ರಮಣಕಾರರನ್ನು ಚೀನಾವು ಗೆರಿಲ್ಲಾ ಯುದ್ಧ ತಂತ್ರದಿಂದ ಜಯಿಸುತ್ತದೆ. ಲಿನ್ ಅವನಿಗೆ ಯುದ್ಧವೇ ಒಂದು ಬೇಕಾದ ವಿಷಯ, ಸಾಧಿಸಬೇಕಾದ ಕಾರ್ಯ. ಅವರು ಹೇಳುತ್ತಾರೆ, "ಯುದ್ಧವು ಜನತೆಗೆ ಸರ್ವನಾಶವನ್ನು ಘೋರ ದುಃಖವನ್ನು ತಂದೊಡ್ಡುತ್ತದೆ. ಆದರೆ ಸಾಮ್ರಾಜ್ಯವಾದಿಯರ ಶಸ್ತ್ರ ಸಜ್ಜಿತ ಆಕ್ರಮಣವನ್ನು ತಡೆಗಟ್ಟದಿದ್ದರೆ ಜನತೆಯ ನಾಶ, ದುಃಖ ಇನ್ನೂ ನಿಕೃಷ್ಟಾವಸ್ಥೆಗೆ ಇಳಿಯುತ್ತದೆ. ಆ ಮೇಲೆ ಜನರು ಗುಲಾಮರಾಗಿ ಬಾಳುವಂತಾಗುತ್ತದೆ. ಸ್ವಲ್ಪ ಸಂಖ್ಯೆಯಲ್ಲಿ ಜನರನ್ನು ಬಲಿದಾನ ಮಾಡಬೇಕಾದುದು ಕ್ರಾಂತಿಯ ಕಾಲದಲ್ಲಿ ಅವಶ್ಯ ವಿಷಯವೇ ಆಗಿದೆ. ಹಾಗೆ ಮಾಡುವುದರಿಂದ ಎಲ್ಲ ದೇಶಕೋಶಗಳೂ ಮಾನವ ಜನಾಂಗವೂ ಭದ್ರತೆಯಲ್ಲಿ ಬಾಳಬಹುದು. ಕ್ಷಣಿಕ ದುಃಖವು ಶಾಶ್ವತ ಶಾಂತಿಗೆ ಮಾರ್ಗ ತೋರಿಸುವುದು. ಯುದ್ಧ ಒಂದೇ ಜನರನ್ನು ಹದಗೊಳಿಸಿ, ಇತಿಹಾಸವನ್ನು ಮುಂದೆ ಒಯ್ಯುವದು. ಈ ಅರ್ಥದಲ್ಲಿ ಸಮರವು ಒಂದು ಪಾಠ ಶಾಲೆಯಾಗಿದೆ.

ಲಿನ್ ಪಿಯಾಓ ಅವರು ವಿಶ್ವಯುದ್ಧ ಅಥವಾ ಅಣ್ವಸ್ತ್ರ ಯುದ್ಧದ ಬಗ್ಗೆ ಹೇಳುವದರ ಮೇಲಿಂದ, ಆಧುನಿಕ ಯುದ್ಧ ತಂದೊಡ್ಡುವ ಭೀಕರ ಪರಿಣಾಮವನ್ನು ನಿರ್ಲಕ್ಷಿಸುವದೇ ಅವನಿಗೆ ಬೇಕಾದಂತಿದೆ. ಸೋವಿಯತ್ ರಷ್ಯ ಹೇಳಿದ ಮಾತು —ಚಿಕ್ಕ ಯುದ್ಧಗಳೂ ಅಣ್ವಸ್ತ್ರ ಕ್ರಾಂತಿಗೇ ಒಯ್ಯುವವು—ಎಂಬ ಮಾತು ಲಿನ್ ಅವರಿಗೆ ಸಮ್ಮತವಿಲ್ಲ. ಯುದ್ಧವು ಬರಲಿ. ಆಗ ಇನ್ನೂ ಲಕ್ಷೋಪಲಕ್ಷ ಜನರು ಸಮಾತಾವಾದಕ್ಕೆ ಬರುತ್ತಾರೆ, ಬಂಡವಾಳ ಶಾಹಿಯು ನಿರ್ನಾಮವಾಗುತ್ತದೆ ಎಂದು ಲಿನ್ ವಾದಿಸುತ್ತಾರೆ.

"ಜನತೆಯ ಯುದ್ಧ" ತತ್ವವನ್ನು ಪ್ರತಿಪಾದಿಸುವ ಲಿನ್ ಪಿಯಾಓ ಅವರು ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕೆಯ ದೇಶಗಳಲ್ಲಿ ಕಮ್ಯುನಿಷ್ಟ ಪ್ರಚೋದಿತ ರಾಜ್ಯ ಕ್ರಾಂತಿಗಳನ್ನು ಚೀಣವು ಕಾರ್ಯಗತ ಮಾಡಬೇಕೆಂದು ಹೇಳಿ ಆ ದೇಶಗಳ ಸರಕಾರಗಳನ್ನು ಉರುಳಿಸಬೇಕು ಎಂದು ಸೂಚಿಸುತ್ತಾನೆ. ಸ್ನೇಹಿತ ರಾಷ್ಟ್ರಗಳು ಎಂದು ಹೇಳಿಕೊಳ್ಳುವ ದೇಶಗಳಲ್ಲೂ ಚೀಣಿ ಪ್ರಚೋದಿತ ರಾಜ್ಯ ಕ್ರಾಂತಿಗೆ ಲಿನ್ ಬೆಂಬಲವಿತ್ತಿದ್ದಾರೆ. ಲಿನ್ ಹೇಳುತ್ತಾರೆ, 'ಹಳೆಯ ಚೀಣಾದಲ್ಲಿ ಕಂಡು ಬರುತ್ತಿದ್ದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳೇ ಈ ದಿನದ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಕಂಡು ಬರುತ್ತಿವೆ. ಈ ಎಲ್ಲಾ ದೇಶಗಳೂ ಪ್ರಪಂಚದ "ಗ್ರಾಮೀಣ" ಪ್ರದೇಶಗಳು, ಇಂತಹ ಪ್ರದೇಶಗಳು 'ಸಾಮ್ರಾಜ್ಯಶಾಹಿಗಳನ್ನು' ಸುತ್ತುವರೆಯಬೇಕು. ಆದರೂ ವಿದೇಶಗಳು ಕ್ರಾಂತಿಯನ್ನು ಆಮದು ಮಾಡಿಕೊಳ್ಳಲು ಸಾಧ್ಯವಿಲ್ಲ, ಕಾರಣ ಅಲ್ಲಿಯ ಜನರೇ ಕ್ರಾಂತಿಗೆ ಮುಂದಾಗಬೇಕು" ಎಂದು ಲಿನ್ ಸಲಹೆ ಮಾಡಿದ್ದಾರೆ. ಅದೇ ಧಾಟಿಯಲ್ಲಿ ಮಾತನಾಡುತ್ತ ಜನತೆಯ ಯುದ್ಧ ತಂತ್ರವನ್ನು ಚೆನ್ನಾಗಿ ಅಭ್ಯಸಿಸಿ ಆ ಮೇಲೆ ಅದನ್ನು ಅಮೆರಿಕೆಯ ಬಂಡವಾಳ ಶಾಹಿಯ ಮೇಲೆ ಯುದ್ಧ ಸಾರಲು ಜನತೆ ಸಿದ್ಧವಾಗಬೇಕಾದುದು ಅವಶ್ಯವಾಗಿದೆ—ಎಂದು ಲಿನ್ ತಿಳಿಸಿದ್ದಾನೆ.

ಜನತಾ ಯುದ್ಧವನ್ನು ಕೈ ಕೊಳ್ಳುವ ಜನರು ಬೇರೆ ಬೇರೆ ವರ್ಗದವರಿರಬಹುದು. ಎಂದು ಜನರ ಸಂಘಟನೆಯ ಅಂಶ ಹೆಚ್ಚು ಕಡಿಮೆಯಾದಿರಬಹುದು. ವಿಜಯವು ಸೀಮಿತವಾಗಬಹುದು. ಆದರೆ ಮಾರ್ಕ್ಸ-ಲೆನಿನ್ ತತ್ವ ಪ್ರಣಾಲಿಯಿಂದ ಪ್ರಚೋದಿತರಾದವರೇ "ಜನತಾ-ಯುದ್ಧ' ವನ್ನು ಮುಂದೆ ಸಾಗಿಸಿಕೊಂಡು ಬಂಡವಾಳಶಾಹಿಯ ವಿರುದ್ಧ ಹೋರಾಡಿ, ರಾಷ್ಟ್ರೀಯಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಕೊನೆಗೆ ಸಮತಾವಾದದ ಅರ್ಥಾತ್ ಕಮ್ಯುನಿಷ್ಟ ಮಾದರಿಯ ಕ್ರಾಂತಿಯನ್ನು ಸಾಧಿಸಬೇಕು ಎಂದು ಲಿನ್ ಬರೆದಿದ್ದಾನೆ.

ಲಿನ್ ಹೇಳುವ ಹಲವು ಮಾತುಗಳನ್ನಾದರೂ ಚೀಣವು ಕೃತಿಗಿಳಿಸಿದೆ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕೆಯ ದೇಶಗಳಲ್ಲಿಯ ಕೆಲಜನರನ್ನು ಗುಂಪುಗಳನ್ನು ಕರೆಯಿಸಿ ಕೊಂಡು ಚೀಣವು ಹಣಕಾಸಿನ ಸಹಾಯ ನೀಡಿ ಸೈನಿಕ ಶಿಕ್ಷಣವನ್ನು ನೀಡುತ್ತಿದೆ.

ಮಾವೋತ್ಸೆತುಂಗರ ಗೆರಿಲ್ಲಾ ಯಂತ್ರವನ್ನೇ ಆಧರಿಸಿಕೊಂಡು, ವಸ್ತು ಸ್ಥಿತಿಗಳ ಹಿಡಿದು ಮುಂದಿನ ವಿವೇಚನೆಯಿಲ್ಲದೆ ಲಿನ್ ಪಿಯಾಓ ತನ್ನ ವಿಚಾರ ಸರಣಿಯನ್ನು ಮಂಡಿಸಿದ್ದಾರೆ— 'ಮಾವೋತ್ಸೆತುಂಗರ "ಗ್ರಾಮೀಣ" ಪ್ರದೇಶಗಳ ಕ್ರಾಂತಿಯು ಜಗತ್ತಿನ "ನಗರಗಳನ್ನು" ಸುತ್ತುವರಿಯಲಿಕ್ಕೆ ಅವಶ್ಯವಾಗಿದೆ. ಇದರಿಂದ ತುಳಿಯಲ್ಪಟ್ಟ ಜನಾಂಗದ ಉದ್ಧಾರಕ್ಕೆ ಇಂತಹ ಕ್ರಾಂತೀಕಾರೀ ಹೋರಾಟದ ಅವಶ್ಯಕತೆ ಬಹಳವಿದೆ ಮತ್ತು ವಿಶೇಷವಾಗಿ ಏಷ್ಯಾದ, ಆಫ್ರಿಕದ ಮತ್ತು ಲ್ಯಾಟಿನ್ ಅಮೇರಿಕೆಯ ಜನರು ಬಂಡವಾಳಶಾಹಿಯ ವಿರುದ್ಧ ಹೋರಾಡುವ ಕ್ರಾಂತಿಯನ್ನು ಸಾಧಿಸುವುದು ಅವಶ್ಯ ವಿಷಯವಾಗಿದೆ. ಇಡಿ ಪ್ರಪಂಚವನ್ನೇ ಗಣನೆಗೆ ತಂದುಕೊಂಡಾಗ ಉತ್ತರ ಅಮೇರಿಕಾ ಖಂಡ ಮತ್ತು ಪಶ್ಚಿಮ ಯುರೋಪ ಜಗತ್ತಿನ ನಗರಗಳಾಗುತ್ತವೆ. ಏಶಿಯಾ, ಆಫ್ರಿಕಾ ಮತ್ತು ಪಶ್ಚಿಮ ಯುರೋಪಿನಲ್ಲಿ ಕೆಲವು ಕಾರಣಗಳ ಮೂಲಕ ಅಲ್ಪ ಕಾಲದವರೆಗೆ ಸ್ವಲ್ಪ ನಿಧಾನವಾಗಿಯೇ ಕಾರ್ಮಿಕರ ಕ್ರಾಂತಿಯು ಹಬ್ಬಿತು, ಏಶಿಯಾ ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕೆಗಳಲ್ಲಿ ಮಾತ್ರ ಈ ಕ್ರಾಂತಿಯು ಪ್ರಜ್ವಲವಾಗಿ ಬೆಳೆಯಿತು. ಒಂದು ಅರ್ಥದಲ್ಲಿ ಈ ದಿನದ ಜಗತ್ತಿನಲ್ಲಿಯೂ "ಗ್ರಾಮೀಣ ಪ್ರದೇಶಗಳು" ಜಗತ್ತಿನ 'ನಗರಗಳನ್ನು' ಸುತ್ತುವರೆದುದನ್ನು ನಾವು ಗುರುತಿಸಬಹುದು. ಕಟ್ಟ ಕಡೆಗೆ, ಜಗತ್ತಿನ ಜನಸಂಖ್ಯೆಯ ಬಹುಮತವಿದ್ದ ಏಶಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕೆಯ ಜನತೆಯ ಕ್ರಾಂತಿಯ ಹೋರಾಟದ ಮೇಲೆಯೇ ಜಗತ್ತಿನ ಮಹಾಕ್ರಾಂತಿಯು ಅವಲಂಭಿಸಿದೆ. ಏಷ್ಯಾ ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾಗಳು ಇಂದಿನ ಹೋರಾಟದ ಮುಖ್ಯ ರಂಗಗಳಾಗಿವೆ; ಮತ್ತು ಈ ದೇಶಗಳಲ್ಲಿಯ ಪರಿಸ್ಥಿತಿಯು ಎಂದಿಗಿಂತಲೂ ಇಂದು ಕ್ರಾಂತಿಗೆ ಪಕ್ವವಾಗಿದೆ. ನಮ್ಮ ಕ್ರಾಂತಿಯು ಫಲಪ್ರದವಾಗಿದೆ; ರಾಷ್ಟ್ರೀಯ ರಚನಾ ಕಾರ್ಯಕ್ರಮ ಮುಂದುವರಿಯುತ್ತಿದೆ, ದೇಶದ ಆದಾಯ ಹೆಚ್ಚಿದೆ. ಆದುದರಿಂದ ಕ್ರಾಂತಿಯ ಕೆಚ್ಚು ಇನ್ನು ಇಳಿಮುಖವಾಗುವದು—ಹೀಗೆಂದು ಯಾರಾದರೂ ಅಂದುಕೊಂಡರೆ. ಅವರು ಹಗಲುಕನಸನ್ನು ಕಾಣುತ್ತಿರಬೇಕು" ಎಂದೂ ಲಿನ್ ಹೇಳಿಕೊಂಡಿದ್ದಾರೆ.

ಲಿನ್ ಪಿಯಾಓಗೆ ಅಮೇರಿಕೆಯ ಭೂತ ಸದಾ ಕಣ್ಣೆದುರು ನಿಂತಿದೆ. ಆದಕ್ಕಂತಲೇ ಅವರು ಹೇಳುತ್ತಾರೆ, "ಅಮೇರಿಕೆಯ ಸಾಮ್ರಾಜ್ಯ ಶಾಹಿಯು ಇದೋ ಈಗ ಹತ್ತಿರಿಸುತ್ತಿದೆ. ಜಗತ್ತಿನ ಜನರೆಲ್ಲ ಒಂದಾಗಿ ಸಂಯುಕ್ತ ರಂಗ ರಚಿಸಿ ಅಮೇರಿಕೆಯ ಬಂಡವಾಳ ಶಾಹಿಯನ್ನು ಸದೆಬಡಿಯಬೇಕು...'

"ಪ್ರತಿಯೊಂದು ವಸ್ತುವೂ ಛಿನ್ನವಿಚ್ಛಿನ್ನವಾಗಬೇಕು. ಅದರಂತೆ ಅಮೇರಿಕೆಯ ಬೃಹತ್ ಸಾಮ್ರಾಜ್ಯ ಶಾಹಿಯೂ ಒಡೆಯಲೇ ಬೇಕು. ಅದನ್ನು ಭಾಗಭಾಗಗಳಲ್ಲಿ ಸೋಲಿಸಬೇಕು. ಏಷಿಯಾ, ಆಫ್ರಿಕ ಮತ್ತು ಲ್ಯಾಟಿನ್ ಅಮೇರಿಕೆಯ ಜನರು ಅಮೇರಿಕದ ಸಾಮ್ರಾಜ್ಯ ಶಾಹಿಯನ್ನು ಕೆಲವರು ಅದರ ತಲೆಗೆ ಹೊಡೆದು ಹಲವರು ಅದರ ಕಾಲಿಗೆ ಬಡಿದು ಒಟ್ಟಿನಲ್ಲಿ ಅದನ್ನು ಚೂರು ಚೂರು ಮಾಡಬಲ್ಲರು ಎಂದು ಲಿನ್ ಬರೆದಿದ್ದಾರೆ. ಅವರ ಈ ಬರವಣಿಕೆಯು ಅಮೆರಿಕೆಯ ಪ್ರಚಂಡ ಶಕ್ತಿಯನ್ನು ಗುರುತಿಸಿದುದರ ದ್ಯೋತಕವೇ. ಏಕೆಂದರೆ ಅಮೆರಿಕೆಯನ್ನು 'ಭಾಗಭಾಗ ಮಾಡಿ ಸೋಲಿಸಲು ಲಿನ್ ಯೋಚಿಸುತ್ತಾರೆ. ಅಮೆರಿಕೆಯೊಂದಿಕೆ ನೇರ ಹೋರಾಟ ಹೂಡಲು ಚೀಣಾ ಅಶಕ್ತವಾಗಿದೆ ಎಂದೇ ಅದರ ಅರ್ಥ.

ಚೀಣಾದ ಬಲಾಢ್ಯ ಮನುಷ್ಯನೆಂದು ಪರಿಗಣಿತರಾದ ಲಿನ್ ಪಿಯಾಓರ ವಿಚಾರಗಳು ಈ ತೆರನಾಗಿವೆ. ಈ ಯುದ್ಧದಾಹದ ನೀತಿಯನ್ನೂ ಮಾವೋರ ವಿಚಾರಗಳು ಎಂಬ ಅಭಿಮಾನದೊಡನೆ ಚೀಣದ ಜನತೆಯ ಮೇಲೆ ಹೇರಲಾಗುತ್ತಿದೆ!

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 59 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

READ &
ADVERTISE IN
NAVAYUGA WEEKLY

ಸಾಮಾಜಿಕ ಸಮಸ್ಯೆ

ವೇಶ್ಯಾ ಪದ್ಧತಿಯ ನಿವಾರಣೆ ಸಾಧ್ಯವೆ?

ವೇಶ್ಯಾವೃತ್ತಿ—ಹಿನ್ನಲೆ

ಪುರುಷನ ಕಾಮ ತೃಪ್ತಿಗಾಗಿ ಯಾವುದಾದರೊಂದು ಬಗೆಯ ಕಾಣಿಕೆಯನ್ನು (ಹಣವನ್ನಾಗಲೀ, ವಸ್ತುವನ್ನಾಗಲಿ) ಪಡೆದು ಸ್ತ್ರೀಯು ನಡೆಸುವ ಔದ್ಯೋಗಿಕ ಚರ್ಯೆಯನ್ನೇ ವೇಶ್ಯಾ ವೃತ್ತಿ ಎಂದು ಕರೆಯಬಹುದು. ಈ ಉದ್ದೇಶಕ್ಕಾಗಿ ಬಹಳ ಕಾಲದಿಂದಲೂ ಸ್ತ್ರೀಯರು ಪೀಡೆಗೊಳಗಾಗುತ್ತಿರುವುದನ್ನು ನಾವು ಕಾಣುತ್ತಲೇ ಇದ್ದೇವೆ. ಇತ್ತೀಚೆಗಂತೂ ಇದು ದಾರುಣ ರೂಪವನ್ನೇ ತಾಳುತ್ತಿದೆ. ಎಲ್ಲ ದೇಶಗಳಲ್ಲಿ, ಎಲ್ಲ ಸಮಾಜಗಳಲ್ಲಿ ಹೊಸ ರೂಪವನ್ನು ತಾಳಿ, ಸಂಸ್ಕೃತಿ, ನಾಗರಿಕತೆ, ಎಂಬ ನೆಪದಲ್ಲಿ ತಾಂಡವವಾಡುತ್ತಿದೆ. ಸರ್ವಾಧಿಕಾರ ವ್ಯಾಪ್ತಿಯುಳ್ಳ ರಾಜ್ಯಗಳಲ್ಲಿ ಮತ್ತು ಶ್ರೀಮಂತರ ಪ್ರೋತ್ಸಾಹವಿರುವೆಡೆಗಳಲ್ಲಿ ಈ ವೇಶ್ಯಾವೃತ್ತಿ ಅತಿಯಾಗಿ ಬೆಳೆಯುತ್ತಿದೆ. ನಗರಗಳು ಬೆಳೆದಷ್ಟೂ ಈ ಸಮಸ್ಯೆ ಭೀಕರವಾಗುತ್ತಿದೆ. ಅಪರಿಚಿತ ವ್ಯಕ್ತಿಗಳ ಚಲನವಲನಗಳು, ಒಡೆದ ಸಂಸಾರಗಳು, ಸ್ವೇಚ್ಛಾವಿಹಾರಿಗಳ ಕೂಟಗಳು, ಈ ವ್ಯಭಿಚಾರಕ್ಕೆ ಪ್ರೋತ್ಸಾಹ ನೀಡುತ್ತವೆ. ಸಾಮಾಜಿಕ, ಆರ್ಥಿಕ, ಮಾನಸಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ನೋಡುವುದಾದರೆ ಎಷ್ಟೋ ವಿಷಯಗಳು ಈ ವೇಶ್ಯಾವೃತ್ತಿಗೆ ಉತ್ತೇಜನ ಕೊಡುತ್ತಿವೆ. ಉದಾಹರಣೆಗೆ ಸಮಾಜದಿಂದ ಬಹಿಷ್ಕರಿಸಲ್ಪಟ್ಟ ಯೌವನಸ್ಥ ವಿಧವೆಯರು, ಅತಿಯಾದ ಬಡತನದಿಂದ ನರಳುತ್ತಿರುವ ಮಹಿಳೆಯರು, ತಂತಮ್ಮ ಪತಿಯರಿಂದ ಸುಖ ಕಾಣದ ಪತ್ನಿಯರು, ಮಕ್ಕಳಿಲ್ಲದ ಬಂಜೆಯರು, ಇವರೆಲ್ಲ ಒಂದಲ್ಲ ಒಂದು ವಿಧದಲ್ಲಿ ಮನೋರೋಗದಿಂದ ನರಳುತ್ತಲೇ ಇರುತ್ತಾರೆ. ಇವರನ್ನು ಧರ್ಮ ಭೀತಿ ಹಾಗೂ ಸಮಾಜ ಭಯ ಕಾಡುತ್ತಿರುತ್ತದೆ. ಆದರೆ ಯಾವ ಭಯವೂ ಇಲ್ಲವೆಂದ ಬಳಿಕ, ಕಂಡೂ ಕಾಣದಂತೆ, ತನಗೇ ತಿಳಿಯದಂತೆ, ವೇಶ್ಯಾವೃತ್ತಿಗೆ ತೊಡಗಿ ಬಿಡುತ್ತಾರೆ. ಅವರು ಯಾಂಗಣ ಸುಖವನ್ನು ಎಂದು ಪಡೆವರೋ ಅಂದೇ ಬಂತು ಅವರ ಸಂಸಾರಕ್ಕೆ ಸಂಚಕಾರ. ದೇವದಾಸಿಯರು, ಬೆರಿಯಾ ಜನಾಂಗದವರು, ನಂಬೂದಿರಿ ಪಂಗಡದವರು, ಇದಕ್ಕೆ ಸಾಕ್ಷಿಗಳಾಗಿದ್ದಾರೆ. ಬಹಳ ಚಿಕ್ಕ ವಯಸ್ಸಿನಲ್ಲೇ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದು, ಹರೆಯದ ವಿಧವೆಯರಿಗೆ ಮದುವೆ ಮಾಡದಿರುವುದು— ತಪ್ಪು ದಾರಿಗೆ ಹೋಗಲು ಕಾರಣಗಳಾಗಿವೆಯೆಂದರೆ ತಪ್ಪಾಗಲಾರದು.

ಈ ಸಮಸ್ಯೆಗೆ ಕಾರಣಗಳೇನು?

ಈ ಸಮಸ್ಯೆಗೆ ಇನ್ನೂ ಕೆಲವು ಕಾರಣಗಳಿವೆ. ಮೊದಲು 'ಪತಿ— ಪತ್ನಿಯರನ್ನೇ ತೆಗೆದುಕೊಳ್ಳೋಣ. ಒಬ್ಬರಲ್ಲಿ ಗತ್ಯಾತ್ಮಶಕ್ತಿ ಹೆಚ್ಚಾಗಿರಬಹುದು. ಇನ್ನೊಬ್ಬರಲ್ಲಿ ಕಡಿಮೆ ಇರಬಹುದು (ಇದನ್ನ ಇಂಗ್ಲಿಷಿನಲ್ಲಿ Adverse Sex Ration ಎನ್ನುತ್ತಾರೆ.) ಗಂಡಸಿನ ಕಾಮುಕ ಶಕ್ತಿ ಹೆಚ್ಚಾಗಿದ್ದು ಪತ್ನಿಯಲ್ಲಿ ಆ ಶಕ್ತಿ ಕಡಿಮೆಯಾಗಿದ್ದರೆ, ಆಗ ಗಂಡು ತಪ್ಪುದಾರಿಗೆ ಹೋಗುವ ಸಂಭವವಿದೆ. ಒಂದು ವೇಳೆ ಹೆಣ್ಣು ಹೆಚ್ಚು ಕಾಮುಕಳಾಗಿದ್ದು, ಪತಿಯು ಅವಳ ಕಾಮೇಚ್ಛೆಯನ್ನು ತೃಪ್ತಿಪಡಿಸಲಾರದಿದ್ದರೆ ಆಗ ಹೆಣ್ಣು ಹೊಸಲು ದಾಟುವ ಸಂಭವವಿದೆ. ಇಂತಹ ಪ್ರಕರಣಗಳನ್ನು ನಾವು ನಮ್ಮ ನಿತ್ಯ ಜೀವನದಲ್ಲಿ ನೋಡುತ್ತಲೇ ಇರುತ್ತೇವೆ. ಹೀಗೆ ಸಮಾಜದಲ್ಲಿ ವೇಶ್ಯೆಯರು ಸೃಷ್ಟಿಯಾಗುತ್ತಾರೆ. ಕೆಲವರು ಕ್ಷಣಿಕ ಜಾರಿಣಿಯರಾಗುತ್ತಾರೆ. ಮುಂದೆ ಸರಿಹೋಗುತ್ತಾರೆ. ಕೆಲವರು ವ್ಯಭಿಚಾರವೂ ಅಲ್ಲದ, ವೇಶ್ಯಾ ಪದ್ಧತಿಯೂ ಅಲ್ಲದ ವಿವಾಹವೂ ಅಲ್ಲದ, ವಿಚಿತ್ರ ರೀತಿಯಲ್ಲಿ, ದಾಂಪತ್ಯ ಸೌಖ್ಯವನ್ನು ಅನುಭವಿಸುತ್ತಿರುತ್ತಾರೆ. ಇದನ್ನು ನಾವು ಗ್ರಾಮಾಂತರಗಳಲ್ಲಿ ಹೇರಳವಾಗಿ ಕಾಣಬಹುದು. ಇದಕ್ಕೆ "ಕೂಡಿಕೆ" ಎನ್ನುತ್ತಾರೆ. ಇದು ಕಾನೂನಿನ ದೃಷ್ಟಿಯಲ್ಲಿ ವೇಶ್ಯಾವೃತ್ತಿಗೆ ಸೇರಿದ್ದಲ್ಲ. ಮತ್ತೆ ಕೆಲವರು ಅವಿವಾಹಿತರಾಗಿದ್ದು ದಾಂಪತ್ಯ ಸುಖದ ಆಶೆಗಾಗಿ ಕಾಮಾತುರತೆಯಿಂದ ಯುವಕರ ಬಲೆಗೆ ಬಿದ್ದು ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತಾರೆ. ಸಕಾಲದಲ್ಲಿ ವಿವಾಹ ಮಾಡಿಕೊಳ್ಳುವುದೊಂದೇ ಅದಕ್ಕೆ ತಕ್ಕ ಪರಿಹಾರ.

ಬಹಳ ಕಾಲದಿಂದಲೂ ಬೆಳೆದು ಬಂದಿರುವ ಈ ವೇಶ್ಯಾ ಪದ್ಧತಿಯ ನಿರ್ಮೂಲಕ್ಕಾಗಿ ಹೋರಾಟವು ನಡೆಯುತ್ತಲೇ ಇದೆ. ಹಿಂದೆ ಇದಕ್ಕೆ ಗುಲಾಮಗಿರಿಯೂ ನವಾಬರ ಜನಾನರು ಕಾರಣರಾಗಿದ್ದರು. ಅಲ್ಲದೆ ಸರಕಾರದವರ ಉದಾಸೀನವೂ, ಅಧಿಕಾರಿಗಳ ಸ್ತ್ರೀ ಲೋಲುಪತೆಯೂ ಪುಟಕೊಡುತ್ತಿದ್ದುವು. ಈ ಪದ್ಧತಿಗೆ ಯಾವ ಸಮಾಜವೂ, ಸಮ್ಮತಿಕೊಡಲಾರದಾದರೂ ಗುಪ್ತವಾಗಿ ಇದು ಸಾಗುತ್ತಲೇ ಇತ್ತು. ವೇಶ್ಯಾಗೃಹಗಳಿಗೆ ಹೋಗುವುದು ಸಂಭಾವಿತನ ಧರ್ಮವೂ ಅಲ್ಲ, ಲಕ್ಷಣವೂ ಅಲ್ಲ. ವೇಶ್ಯೆಯರು ಎಲ್ಲ ಸ್ತ್ರೀಯರಂತೆ ಹೆಚ್ಚು ಸ್ವಾತಂತ್ರ್ಯವನ್ನು ಪಡೆಯಲಾರರು. ಇತರ ಗೃಹಿಣಿಯರಂತೆ ಇವರು ಎಂದಿಗೂ ಬಾಳಲಾರರು. ಇವರಿಗೆ ಊರುಗಳಲ್ಲಿ ಅಥವಾ ನಗರಗಳಲ್ಲಿ ವಾಸಿಸಲು ಅನುಮತಿಯನ್ನು ಸಹ ಕೊಡುತ್ತಿರಲಿಲ್ಲ. ಅವರಿಗೆ ಪ್ರತ್ಯೇಕ ವಾಸಸ್ಥಾನವನ್ನು ಕಲ್ಪಿಸಲಾಗುತ್ತಿತ್ತು. ಅವರ ಪಂಗಡವೆಲ್ಲ ಒಂದೇ ಕಡೆ ನೆಲೆಸಿ, ಅದೇ ಒಂದು ಬೀದಿ ಅಥವಾ ಕೇರಿ ಆಗುತ್ತಿತ್ತು. ಹಿಂದೆ ಕೆಲವು ರಾಜರು ಅವರಿಗೆ ಇಂಥದ್ದೇ ಉಡುಪನ್ನು ಧರಿಸಬೇಕೆಂದೂ ನಿಯಮಿಸಿದ್ದರು. ಕೆಲವು ವೇಳೆ ಅವರನ್ನು ಸಮಾಜದಿಂದ ಬಹಿಷ್ಕರಿಸುತ್ತಿದ್ದುದೂ ಕಂಡು ಬಂದಿದೆ. ಇವರ ಸಹವಾಸ ಮಾಡಿದವರು ಇದ್ದ ಆಸ್ತಿಯನ್ನು ಕಳೆಕೊಂಡು, ನಿರ್ಗತಿಕರಾಗುತ್ತಿದ್ದರು. ಇಲ್ಲವೆ ದೈಹಿಕವಾಗಿಯೂ ನೈತಿಕವಾಗಿಯೂ ಕುಗ್ಗಿ ಹೋಗುತ್ತಿದ್ದರು. ಈ ತೆರನಾದ ಕೇರಿಗಳನ್ನು ಅಥವಾ ಪ್ರದೇಶಗಳನ್ನು 'ಅಪಾಯದ ಕ್ಷೇತ್ರ"ಗಳೆಂದೂ ಕರೆಯುತ್ತಾರೆ. ಇದನ್ನೇ ವಿಚಾರಗೆಟ್ಟ, ಮತಿಹೀನನೊಬ್ಬ "ದೂರವಿರಬೇಕಾದ ದುಷ್ಟ ಚಾಳಿಯ ಕೇರಿ" ಎಂದು ಬುದ್ಧಿ ಬಂದ ಮೇಲೆ ಭಾವಿಸುತ್ತಾನೆ.

ಹಿಂದಿನ ಕಥೆ

೧೯೨೧ರಲ್ಲಿ ಈ ವೇಶ್ಯಾ ಪದ್ಧತಿ, ಅಥವಾ ಸ್ತ್ರೀಯರಲ್ಲಿರುವ ದುರ್ಮಾರ್ಗವನ್ನು ತಡೆಗಟ್ಟಲು ಒಂದು ಅಂತಾರಾಷ್ಟ್ರೀಯ ಅಧಿವೇಶನ ಪ್ರಪ್ರಥಮವಾಗಿ ಜರಗಿತು. ಭಾರತವೂ ಅದರಲ್ಲಿ ಭಾಗವಹಿಸಿದ್ದು, ತಪ್ಪು ದಾರಿಗಳನ್ನು ತಡೆಗಟ್ಟಲು ಸಿದ್ಧವಾಯಿತು. ಹಿಂದಿದ್ದ "ಲೀಗ್ ಆಫ್ ನೇಶನ್ಸ್" ಎಂಬ ಸಂಸ್ಥೆಯೂ ಈಗಿರುವ ವಿಶ್ವ ಸಂಸ್ಥೆಯೂ ಸತತವಾಗಿ ಈ ದಿಶೆಯಲ್ಲಿ ಬಹು ಮಟ್ಟಿಗೆ ಹೋರಾಟ ನಡೆಸಿವೆ. ಎಷ್ಟೋ ರಾಜ್ಯಗಳಲ್ಲಿ ಈ ಪದ್ಧತಿಯನ್ನು ನಿರ್ನಾಮ ಮಾಡಲು ಕಾನೂನುಗಳನ್ನು ಮಾಡಲಾಗಿದೆ. ಹಿಂದೆ ಬ್ರಿಟಿಷರ ಕಾಲದಲ್ಲಿಯೂ ಸ್ವಲ್ಪ ಸ್ವಲ್ಪವಾಗಿ ಈ ಕ್ರಮಗಳು ಜ್ಯಾರಿಗೆ ಬಂದುವು. ಈಗ ಸ್ವರಾಜ್ಯ ಬಂದ ಮೇಲೆ ಅದರಲ್ಲಿಯೂ ೧೯೫೬ರಿಂದ ಅಖಿಲ ಭಾರತ ಮಟ್ಟದಲ್ಲಿ ಒಂದು ಕಾಯದೆಯನ್ನು ಮಾಡಲಾಗಿದೆ. ಈ ಕಾಯದೆಯನ್ನು ನಾವು ವಿಮರ್ಶೆ ಮಾಡುವ ಮುನ್ನ, ವ್ಯಭಿಚಾರ ನಿರೋಧಕ್ಕಾಗಿ ಶಾಸಕರ ಸಾಧನೆ ಸಾಹಸಗಳು ಎಷ್ಟರ ಮಟ್ಟಿಗೆ ಫಲಕಾರಿಗಳಾಗಿವೆ ಎಂಬುದನ್ನು ಗಮನಿಸಬೇಕು. ಯುರೋಪ್ ಮತ್ತು ಇತರ ದೇಶಗಳಲ್ಲಿ ವ್ಯಭಿಚಾರ ನಿರೋಧ ಕಾನೂನು ಜಾರಿಗೆ ಬಂದ ಮೇಲೆ ಬಹಿರಂಗವಾಗಿ ನಡೆಯುತ್ತಿದ್ದ ವೇಶ್ಯಾ ವೃತ್ತಿ ಮತ್ತು ವ್ಯಾಪಾರ ಬಹುಮಟ್ಟಿಗೆ ಕಡಿಮೆಯಾಗಿದೆ. ಸೂಳೆಗಾರಿಕೆಯು ಮತ್ತು ತತ್ಸಂಬಂಧವಾದ ವ್ಯವಹಾರ ಏಜಂಟರ ಸಂಭಾವನೆ ಮುಂತಾದುವು ಕ್ರಮೇಣ ಕಡಿಮೆಯಾಗುತ್ತಿವೆ. ಆದರೆ ಗುಪ್ತವಾಗಿ ನಡೆವ ವೇಶ್ಯಾ ವೃತ್ತಿ ಎಂದಿಗೂ ಇದ್ದೇ ಇದೆ. ವ್ಯಭಿಚಾರ ಸಂಬಂಧವಾದ ಕಾಹಿಲೆಗಳೂ ಬಹು ಮಟ್ಟಿಗೆ ಕಡಿಮೆಯಾಗಿವೆ. ಬಹಿರಂಗವಾಗಿ ಅಧಿಕೃತ ವೇಶ್ಯಾಗೃಹಗಳನ್ನು ನಡೆಸುತ್ತಿದ್ದವರು ಈಗ ಈ ಕಾನೂನಿನ ಪರಿಣಾಮವಾಗಿ ಅವುಗಳನ್ನೆಲ್ಲಾ ಮುಚ್ಚಬೇಕಾಗಿದೆ. ಇತ್ತೀಚೆಗೆ ವೇಶ್ಯಾಗೃಹಗಳಿಗೆ ಬದಲಾಗಿ "ಗಾಯನ ಮತ್ತು ನೃತ್ಯಗಳ ಸಮಾಜ"ಗಳೋ, "ಪೇಯಿಂಗ್ ಗೆಸ್ಟ್ ಹೌಸ್"ಗಳೋ ಹುಟ್ಟಿಕೊಂಡಿವೆ. ಇಂಥ ಸ್ಥಳಗಳಲ್ಲಿ ಅಪೇಕ್ಷಿಸಿದಂಥ ಗಿರಾಕಿಗಳಿಗೆ ಲೈಂಗಿಕ ತೃಪ್ತಿಗಾಗಿ ತಕ್ಕವ್ಯವಸ್ಥೆ ಮಾಡಿದ್ದಾರೆ. ಅಷ್ಟೇ ಅಲ್ಲ ಅನೇಕ ಮೋಹಲ್ಲಾಗಳಲ್ಲಿ, ಕೂಲಿಗಾರರ ಕೇರಿಗಳಲ್ಲಿ, ಮನೋರಂಜಕ ಕ್ಷೇತ್ರಗಳಲ್ಲಿ, ತಮ್ಮ ದೇಹವನ್ನೇ ಮಾರಿಕೊಳ್ಳುವಂಥ ಸ್ತ್ರೀಯರು ಹೇರಳವಾಗಿದ್ದಾರೆ. ಇವರಿಗೆಲ್ಲ ತಕ್ಕ ಪ್ರೋತ್ಸಾಹ ಹಾಗೂ ರಕ್ಷಣೆ ತಾನಾಗಿಯೇ ಒದಗುತ್ತವೆ. ಇಂಥ ಸ್ಥಳಗಳನ್ನ ವೇಶ್ಯಾ

(ಪಕ್ಕನೇ ಪುಟ ನೋಡಿರಿ)

ಗಳಿಸಲಾರದ ದುಡಿಮೆ ಯಾರಿಗಾಗಿ?
ಉಳಿಸಲಾರದ ಗಳಿಮೆ ಯಾತಕಾಗಿ?

ಗಳಿಮೆಗಾಗಿ ದುಡಿಮೆ; ಬದುಕಿನ ಸುಖಕ್ಕಾಗಿ ಗಳಿಮೆ. ಎಲ್ಲವನ್ನು ಇಂದೇ ಉಣ್ಣುವುದಾದರೆ ನಾಳೆಗಾಗಿ ಏನನ್ನು ಉಳಿಸಬಲ್ಲೆವು?

ಉಳಿಸಬಲ್ಲವರಿಗೆ ಇಂದಿನ ದಿನ ಸುದಿನ
ಉಳಿಸಲಾರದವರಿಗೆ ನಾಳೆ ಎಂಬುದು ಕಠಿಣ.

ನಿನ್ನೆಯ ಗರ್ಭದಿಂದ ಇಂದು ಹುಟ್ಟಿದೆ. ಇಂದಿನಂತೆ ನಾಳೆಯೆಂದು ತಿಳಿದರೆ ಮಾತ್ರವೇ ನಾಳೆಯ ಸುಖ ರೂಪುಗೊಳ್ಳುವುದು.

ನಿನ್ನೆಯ ಉಳಿತಾಯ ಇಂದಿನ ಸುಖದ ತಳಪಾಯ
ಇಂದಿನ ಅಪಾವ್ಯಯ ನಾಳೆಯ ದುಃಖದ ಅಡಿಪಾಯ

ನಾಳೆಗಾಗಿ ಇಂದು ಉಳಿಸಿರಿ. ಕ್ರಮವಾಗಿ ನಿಮ್ಮ ಹಣವನ್ನು ಕೂಡಿಡಿರಿ — ಕಾಣದ ಭವಿಷ್ಯವನ್ನು ಎದುರಿಸಲು. ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆಯೊಂದನ್ನು ತೆರೆದು, ಗಳಿಸಿದ ಹಣವನ್ನು ನಾಳೆಯ ಭದ್ರತೆಗಾಗಿ ಉಳಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಇಂದು
ರಾಮಘರ್‌ನ
ಶ್ರೀ

ಇವರ ಮಾದರಿಯ
ಭಾರತದ



ರಾಮಘರ್ ಸಹಕಾರಿ ವ್ಯವಸಾಯ ಕ್ಷೇತ್ರದಲ್ಲಿ ಕಾರ್ಯಮಗ್ನವಾಗಿರುವ ಟ್ರಾಕ್ಟರ್.

ರಾಮಘರ್‌ನಲ್ಲಿ ಇಂದು ರೈತ ನೆಲೆ ನಿಂತಿದ್ದಾನೆ. ಅದೊಂದು ಭಾರತದ ತಿರೋಮಣಿ ಜಮ್ಮು—ಕಾಶ್ಮೀರ ರಾಜ್ಯದ ಹಳ್ಳಿ. ಕಾಶ್ಮೀರ ಸಹಜವಾದ ಬೆಡಗಿಗೆ ರಾಮಘರ್ ಅಪವಾದವಲ್ಲ. ಹಿಂದೆ ಒಂದು ಸಾಮಾನ್ಯ ಹಳ್ಳಿಯಾಗಿದ್ದ ರಾಮಘರ್ ಇಂದು ವ್ಯವಸಾಯೋತ್ಪನ್ನಗಳ ಕಣಜವೇ ಆಗಿದೆ. ಪೈರಿನಿಂದ ನಳನಳಿಸುವ ಗದ್ದೆಗಳಲ್ಲಿ ನಿಜವಾಗಿಯೂ ರೈತನೇ ನೆಲಸಿ ಕಣ್ಣುಗಳಿಗೆ ತಂಪೀಯುತ್ತಾನೆ.

ಇದು ಆದುದ್ದು ಹೀಗೆ:— ಎಲ್ಲೆಡೆಯಂತೆ ಜಮ್ಮುವಿನಲ್ಲಿಯೂ ನಿವೃತ್ತಿ ಹೊಂದಿದ ಸೈನಿಕರನೇಕರಿದ್ದಾರೆ. ಇವರೆಲ್ಲರೂ ಮೂರು ವರ್ಷಗಳಿಗೆ ಮೊದಲು, ಅಂದರೆ, ೧೯೬೩ರಲ್ಲಿ ಒಂದುಗೂಡಿದರು. ಸಹಕಾರೀ ಬೇಸಾಯದಲ್ಲಿ ಆಸಕ್ತಿಯಿದ್ದ ಇವರು "ರಾಮಘರ್ ಸಹಕಾರಿ ವ್ಯವಸಾಯ ಸಂಘ"ವನ್ನು ಕಟ್ಟಿಕೊಂಡರು. ಸೈನಿಕ ಸಹಜವಾದ ಇವರ ಉತ್ಸಾಹಕ್ಕೆ ನಾಲ್ಕು ರೆಕ್ಕೆ ಮೂಡಿತು. ಇಂದು ರಾಮಘರ್ ವ್ಯವಸಾಯ ಕ್ಷೇತ್ರವು ಮಾದರಿ—ಆದರ್ಶ ಸಹಕಾರಿ ಸಂಘವೆನಿಸಿದೆ.

ಆರಂಭದಲ್ಲಿ ಈ ಸಂಘವು ತೊಡಗಿದ್ದು ಅಂಜನ ನಿವೃತ್ತಿ ಪಡೆದ ಸೈನಿಕರ ಸದಸ್ಯತ್ವದಿಂದ ಇವರಿಗೆ ದೊರೆತ ಭಾರತ—ಪಾಕಿಸ್ತಾನ ಗಡಿಯಲ್ಲಿ ಪಾಳು ಬಿದ್ದ—ಆದರೆ ಸುಸಂಪೃದ್ಧವಾದ—೩೬೫ ಎಕ್ರೆ ಜಮೀನಿನಿಂದ, ಬರಿಯ ನಾಲ್ಕು ಸಾವಿರ ರೂಪಾಯಿಗಳ ಬಂಡವಾಳದಿಂದ.

ಸಂಘದ ಕಾರ್ಯ ಉತ್ಸಾಹದಿಂದಲೇ ಆರಂಭವಾಯ್ತು. ಆರಂಭವಾದ ಕಾರ್ಯ ಅಂತೆಯೆ ಮುಂದುವರಿಯಿತು. ಮೊದಲೆರಡು ವರ್ಷಗಳಲ್ಲಿಯೇ ೧೦೧ ಎಕ್ರೆ ಜಮೀನು ಪೈರು ಹೊತ್ತಿತು. ೭೫ ಎಕ್ರೆಗಳು ಕಡಲೆ ಬೆಳೆದರೆ, ೧೩ ಎಕ್ರೆಗಳು ಕಬ್ಬು ಬೆಳೆದುವು. ೧೧ ಎಕ್ರೆ ಹಿತ್ತೋಪಯೋಗಿ ತರಕಾರಿ ಬೆಳೆಯಿತು. ಉಳಿದೆರಡು ಎಕ್ರೆ ಕಾಲ್ನಡೆಗಳಿಗಾಗಿ ಹಸುರು ಹುಲ್ಲು ಬೆಳೆದವು.

ಬೀಳುಬಿದ್ದ ಬಂಜರು ಭೂಮಿಯೇನೋ ಸಂಪೃದ್ಧವಿತ್ತು. ಆದರೆ, ಅದನ್ನು ಸಾಗುವಳಿಯೋಗ್ಯ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ಸೈನಿಕರ ಉತ್ಸಾಹ ಇಲ್ಲಿ ಕಾರ್ಯ ಮಾಡಿತು. ಅನೇಕ ಟ್ರಾಕ್ಟರುಗಳು, ವ್ಯವಸಾಯದ ಯಂತ್ರೋಪಕರಣಗಳು ಇಲ್ಲಿ ಬಂದುವು; ದನಕರುಗಳ ಹಿಂಡು ಇಲ್ಲಿ ಬಂದು ನೆಲಸಿತು. ರಾಮಘರ್ ಗ್ರಾಮ ರೂಪುಗೊಂಡಿತು.

ಭಾರತ—ಪಾಕಿಸ್ತಾನ ಗಡಿಯಲ್ಲಿದೆ ರಾಮಘರ್—ನಮ್ಮ ಗಡಿಯ ಮೇಲೆ, ಪಾಕ್ ಕುದೃಷ್ಟಿ ಎಂದಿನಿಂದಲೂ ಇದೆ. ಗಡಿಯಿಂದೀಚೆಗೆ ಬಂದು ಪಾಕಿಸ್ತಾನಿಗಳು ಉಪಟಳ ನೀಡುತ್ತಿದ್ದರು. ಮುಂದೆಯೂ ನೀಡಬಹುದು. ಇದಕ್ಕಾಗಿ ಮುಂಜಾಗ್ರತೆ ವಹಿಸುವುದು ದೇಶ ಪ್ರಜೆಯ ಕರ್ತವ್ಯವಲ್ಲವೆ? ಕಳೆದ ವರ್ಷ ಸಪ್ಟಂಬರದಲ್ಲಿ ನಮಗೂ ಪಾಕಿಸ್ತಾನಕ್ಕೂ ನಡೆದ ಕದನದ ಸಮಯದಲ್ಲಿ ರಾಮಘರ್ ನಿವೃತ್ತ ಸೈನಿಕರು ಸುಮ್ಮನಿರಲಿಲ್ಲ. ಪಾಕ್ ಆಕ್ರಮಣದಿಂದ ತಮ್ಮ ಬೆಳೆಗಳನ್ನು ಉ



ತಮ್ಮ ಬೆಳೆಗಳ ಸಂರಕ್ಷಣೆ—ತಮ್ಮ ಪಾಲಿನ ಕರ್ತವ್ಯ. ರಾಮಘರ್‌ನ ಸಹಕಾರಿ ವ್ಯವಸಾಯಿಗಳು ತಮ್ಮ ಪಾಲನೆಯಲ್ಲಿ ನಿರತರಾಗಿದ್ದಾರೆ; ಇತರರಿಗೆ ಮಾದರಿಯಾಗಿದ್ದಾರೆ.

ಮುಂಜಾವದ

ಭಾರತ

...ವೃತ್ತ ಸೈನಿಕರು

ಆದರ್ಶ

...ಯೂ ಅನುಸರಿಸಿದರೆ,
...ಲಾಗಲಾರದೆ ?

ಹೊಸ ಬೆಳೆಯನ್ನು ಬಿತ್ತುವುದರಲ್ಲಿ ನಿರತರಾದ ರಾಮಫೋರ್ ನಿವೃತ್ತ ಸೈನಿಕರು.

ಳಿಸಲು ಅವರು ತಮ್ಮದೇ ಆದ ಸುರಕ್ಷಣಾ ಕ್ರಮಗಳನ್ನು ಕೈಗೊಂಡರು; ಪ್ರಶಂಸೆಗೆ ಪಾತ್ರರಾದರು. ಹಗಲು ರಾತ್ರಿ ಸರ್ಪಕಾವಲು ನಡೆಸಿ ಈ ನಿವೃತ್ತ ಸೈನಿಕರು ಪಾಕ್ ವಿಧ್ವಂಸಕರನ್ನೂ ಕಾಡು ಪ್ರಾಣಿಗಳನ್ನೂ ಸದೆ ಬಡಿದರು.

ಹಚ್ಚ ಹಸುರಾಗಿ ಕಂಗೊಳಿಸುತಿದ್ದ ಈ ಹೊಲಗದ್ದೆಗಳನ್ನು ಕಂಡ ಪಾಕ್ ಆಕ್ರಮಣಕಾರರ ಬಾಯಲ್ಲಿ ನಂಜಿನ ನೀರೂರಿತು; ಬೆಳೆಯನ್ನು ಹಾಳುಗೆಡಹುವ ದುರಾಲೋಚನೆ ಅವರ ಮನದಲ್ಲಿ ಹುಟ್ಟಿತು. ಏರಿ ಬಂದ ಅವರನ್ನು ರಾಮಫೋರ್ ಸುರಕ್ಷಾ ಪಡೆಯು ಹಿಮ್ಮೆಟ್ಟಿಸಿತು; ಚಕಮಕಿಯೂ ನಡೆಯದಿಲ್ಲ; ಓರ್ವ ಪಾಕಿಸ್ತಾನಿ ವಿಧ್ವಂಸಕನು ಪ್ರಾಣಕ್ಕೆರವಾದನು.

ನಿವೃತ್ತ ಸೈನಿಕರ ಶ್ರಮ—ಶಿಸ್ತುಗಳು ಬರಿಯ ಬೇಸಾಯಕ್ಕೆ ಮಾತ್ರ ಪರಿಸೀಮಿತವಾಗಿಲ್ಲ. ಅವರು ಸುತ್ತುಮುತ್ತಲಿನಗ್ರಾಮದವರಿಗೆ ಸಮುದಾಯ ಜೀವನದ ಮಾದರಿಯನ್ನು ತೋರಿಸಿದ್ದಾರೆ; ಇವರು ಸೈನಿಕಭೋಜನ ಶಾಲೆಯಂತಹ"ಲನಗರ್" ಎಂಬ ಹೆಸರಿನ ಸಾಮುದಾಯಿಕ ಭೋಜನ ಶಾಲೆಯಿಟ್ಟಿದೆ. ಇಲ್ಲಿ ಅಡುಗೆ ಉಣ್ಣುವವರು ನಿವೃತ್ತ ಸೈನಿಕರು ಮತ್ತವರ ಕುಟುಂಬದ ಸದಸ್ಯರು; ಅಡುಗೆ ಮಾಡುವವನೂ ಸೈನ್ಯದ ಪಾಕಶಾಸ್ತ್ರಿಯಾಗಿದ್ದು ನಿವೃತ್ತನಾದವನೇ. ಈ ವ್ಯವಸ್ಥೆ ಸಂಪೂರ್ಣ ಯಶಗಳಿಸಿದೆ.

ಸಹಕಾರಿ ಸಂಘವು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಇಚ್ಛಿಸುತ್ತಿದೆ. ವರ್ಷದ ಹನ್ನೆರಡು ತಿಂಗಳೂ ಒಂದಲ್ಲ ಒಂದು ಬೆಳೆಯನ್ನು ಬೆಳೆಯಲು ಅದು ಪ್ರಯತ್ನ ನಡೆಸುತ್ತದೆ.

ಸೀಮಾ ಪ್ರದೇಶದಲ್ಲಿನ ಈ ಆದರ್ಶನಗರವನ್ನು ಕಾಣುವಾಗ ಗಡಿಯುದ್ದಕ್ಕೂ ಇಂತಹ ವ್ಯವಸ್ಥೆ ನಡೆದರೆ ಚೆನ್ನಲ್ಲವೇ ಎನಿಸುತ್ತದೆ. "ರಾಮಫೋರ್" ದೇಶಕ್ಕೊಂದು ಸ್ಫೂರ್ತಿ; ಯಶಸ್ಸು ಚಿಮ್ಮಿ ಹಾರುವ ಕಾರಂಜಿ.

...ಕಾರಿ ವ್ಯವಸಾಯ ಸಂಘದ ಸದಸ್ಯರು ಗದ್ದೆಗಳಿಗೆ ನಡೆಯುತ್ತಾರೆ.
...ಲ್ಲಿ ಚಟುವಟಿಕೆಗಳು ಪ್ರಾರಂಭವಾಗುತ್ತವೆ.

ಮಹಿಳಾರಂಗ

ಹೆಂಗಸು ಒಳ್ಳೆಯ ವ್ಯಾಪಾರ ಮಾಡಬಲ್ಲಳು

ಆಧುನಿಕ ನಾಗರಿಕತೆಯ ಪ್ರಭಾವವು ಹೆಚ್ಚಾದಂತೆಲ್ಲಾ ಸ್ತ್ರೀ ಸ್ವಾತಂತ್ರ್ಯವೂ ಸರ್ವತೋಮುಖವಾಗಿ ಹೆಚ್ಚಾಗುತ್ತಿದೆ. ಸಂಸಾರದಲ್ಲಿ ಸ್ತ್ರೀಯರೇ ಹಣಕಾಸಿನ ವ್ಯವಸ್ಥೆಯನ್ನು ಮನೆಗೆ ಬೇಕಾದ ಸಾಮಾನುಗಳನ್ನು ತರಲು ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ.

ಹೆಂಗಸರು ಸಾಮಾನ್ಯವಾಗಿ ಯಾವ ಕಡೆಯಲ್ಲಿ ಕೊಳ್ಳುತ್ತಾರೆ, ಯಾವ ತರಹದ ಜಾಹೀರಾತನ್ನು ಮಾಡಿದರೆ ಅವರು ಹೆಚ್ಚು ಆಕರ್ಷಿತರಾಗುತ್ತಾರೆ, ಅವರು ಯಾವಾಗ ವ್ಯಾಪಾರವನ್ನು ಮಾಡುತ್ತಾರೆ, ಈ ರೀತಿಯ ಮತ್ತು ಇನ್ನೂ ಅನೇಕ ತರಹದ ಪ್ರಶ್ನೆಗಳು ನಿಪುಣ ವ್ಯಾಪಾರಸ್ಥರಿಗೆ ಉತ್ತಮ ಸಲಹೆಗಳನ್ನು ಕೊಡುವಂತಹುದಾಗಿವೆ. ಪಶ್ಚಿಮ ಜರ್ಮನಿಯಲ್ಲಿ ವಿವಾಹವಾದ ಮೇಲೆ ಶೇಕಡ ೭೦ ಭಾಗ ಹೆಂಗಸರ ಕೈಯಲ್ಲಿ ಹಣಕಾಸಿನ ಆಡಳಿತವು ಹೆಚ್ಚಾಗುತ್ತವೆ. ಪ್ರತಿ ಹದಿಮೂರು ಗಂಡಸರಲ್ಲಿ ಒಬ್ಬನು ಮಾತ್ರ ಹಣಕಾಸಿನ, ವೆಚ್ಚದ ಲೆಕ್ಕಾಚಾರಗಳನ್ನು ತಿಂಗಳ ಕೊನೆಯಲ್ಲಿ ಕೇಳುತ್ತಾನೆ. ಇದರಿಂದ ಮನಶ್ಶಾಸ್ತ್ರಜ್ಞರು ಮತ್ತು ಜಾಹೀರಾತು ಪ್ರವೀಣರು ಮತ್ತು ವ್ಯಾಪಾರಸ್ಥರು ತಮ್ಮ ಸ್ತ್ರೀ ಜನಾಂಗದ ಆರ್ಥಿಕ ಪರಿಸ್ಥಿತಿಯನ್ನು ಅದರ ಸ್ಥಿರತೆಯನ್ನು "ಪರೀಕ್ಷಾ ಗುರಿ" ಮಾಡಿ ಅನೇಕ ಆಶ್ಚರ್ಯಕರವಾದ ವಿಷಯಗಳನ್ನು ಕಂಡುಕೊಂಡಿದ್ದಾರೆ.

ಹೆಂಗಸರ ವ್ಯಾಪಾರ ಪದ್ಧತಿಯು ವರ್ಷಗಳು ಕಳೆದಂತೆ ಬದಲಾಗುತ್ತಿರುತ್ತದೆ. ಈಚಿನ ಗಣತಿಯಿಂದ ತಿಳಿದು ಬಂದಿರುವ ಪ್ರಕಾರ ಕೇವಲ ೩೮ ಪ್ರತಿಶತ ಮಾತ್ರವೇ ಹೆಂಗಸರು ಸಾಮಾನುಗಳ ಪಟ್ಟಿಯನ್ನು ತೆಗೆದುಕೊಂಡು ಹೋಗಿ ವ್ಯಾಪಾರವನ್ನು ಮಾಡುತ್ತಾರೆ. ಪಟ್ಟಿಯ ಯೋಜನೆಯು ಈಗಿನ ಯುವತಿಯರಿಗೆ ತೀರ ಅಪ್ರಿಯವೆನಿಸಿದೆ. ಈಚೆಗೆ ವ್ಯಾಪಾರಿ ಪ್ರವೀಣರು ನವೀನ ರೀತಿಯ ವ್ಯಾಪಾರ ವಿಭಾಗಗಳನ್ನು ಮನೆಗಳನ್ನು ಕಟ್ಟುವ ಯೋಜನೆಗಳಿರುವ ಬಡಾವಣೆಗಳಲ್ಲಿ ಇದ್ದಲ್ಲಿ ಕೇವಲ ಕೆಲವೇ ಅಂಗಡಿಗಳು ಇರುವುದರಿಂದ ಒಳ್ಳೆಯ ವ್ಯಾಪಾರ ಮತ್ತು ಸಂಬರಾಜು ಆಗುವುದರ ಜೊತೆಗೆ ಬೆಲೆಗಳನ್ನು ಆಷ್ಟಾಗಿ ಹೋಲಿಸಲು ಆಗಲಾರದೆಂದೂ ತಿಳಿದುಕೊಂಡಿದ್ದಾರೆ. ಅಲ್ಲದೆ ಒಂದೇ ಅಂಗಡಿಯಲ್ಲಿ ಹೆಂಗಸರು ವ್ಯಾಪಾರ ಮಾಡುತ್ತ ಕೆಲವು ರಿಯಾಯಿತಿಗಳನ್ನು ಕೊಡುವ ಅಂಗಡಿಗಳಿಗೇ ಅವರು ಹೋಗುತ್ತಾರೆ. ಅವರು ರಿಯಾಯತಿಯಿಂದ ಬರುವ ಪದಾರ್ಥಗಳನ್ನು ಕೊಳ್ಳಲು ಬಯಸುತ್ತಾರೆ. ಗಂಡಂದಿರೊಂದಿಗೆ ಹೋಲಿಸಿದರೆ ಶೇಕಡ ೭೦ರಷ್ಟು ಹೆಂಗಸರು ಬಹಳ ಬೇಗ ವ್ಯಾಪಾರವನ್ನು ಮುಗಿಸುತ್ತಾರೆ. ಅಂಗಡಿಗಳಲ್ಲಿ ಅಲಂಕರಿಸಿ ಜೋಡಿಸಿಟ್ಟಿರುವ ವಸ್ತುಗಳನ್ನು ಜಾಗ್ರತೆಯಿಂದ ಪರಿಶೀಲಿಸಿ ಸಾವಧಾನವಾಗಿ ವ್ಯಾಪಾರ ಮಾಡುತ್ತಾರೆ. ಆದರೆ ಬಟ್ಟೆ ಅಥವಾ ಉಡುಗೊರೆಗಳ ವಿಚಾರದಲ್ಲಿ ಮಾತ್ರ ಹೆಂಗಸರು ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತಾರೆ. ಇದಕ್ಕಾಗಿಯೇ ಶೇಕಡ ೧೪ ಜನರು ಗಂಡಸರು ತಮ್ಮ ಹೆಂಗಸರೊಂದಿಗೆ ವ್ಯಾಪಾರಕ್ಕಾಗಿ ಹೋಗಿ ಉಡುಪುಗಳನ್ನು ಆಯ್ದುಕೊಳ್ಳಲು ಸಹಾಯ ಮಾಡುತ್ತಾರೆ. ಇಂತಹ ಹತ್ತು ವ್ಯಾಪಾರಗಳಲ್ಲಿ ಏಳು ವ್ಯಾಪಾರಗಳು ಹೆಂಗಸರ ಕೊನೆಯ ತೀರ್ಮಾನದಲ್ಲಿಯೇ ಮುಕ್ತಾಯವಾಗುತ್ತದೆ.

ಅಡಿಗೆಮನೆಯ ಸಾಮಾನುಗಳನ್ನು ಕೊಳ್ಳಲು ಹೆಂಗಸರು ತಮ್ಮ ಗಂಡಸರನ್ನೇ ಮುಂದಕ್ಕೆ ಬಿಡುತ್ತಾರೆ. ಅವರು ಅಂತಹ ಸಾಮಾನುಗಳ ಕೈಗಾರಿಕಾ ಕೌಶಲ, ಅವುಗಳ ನವೀನತೆ, ಪ್ರಯೋಗಗಳ ನಮೂನೆ, ಮಿತವಾದ ಕೆಲಸ ಮತ್ತು ಅವುಗಳನ್ನು ರಿಪೇರಿ ಮಾಡುವ ಅನುಕೂಲಗಳು ಇವನ್ನು ನೋಡಿಯೇ ಕೊಳ್ಳುತ್ತಾರೆ. ಇಷ್ಟು ಪರಿಸ್ಥಿತಿಯಿದ್ದರೂ ವ್ಯಾಪಾರವನ್ನು ಕೊನೆಯಲ್ಲಿ ಮುಗಿಸುವಾಗ ಸ್ತ್ರೀಯರ ಕೈಯೇ ಮೇಲಾಗಿರುವುದು ವ್ಯಾಪಾರಸ್ಥರ ಗಮನಕ್ಕೆ ಚೆನ್ನಾಗಿ ಬರುತ್ತದೆ.

ವೇಶ್ಯಾ ಪದ್ಧತಿಯ ನಿವಾರಣೆ ಸಾಧ್ಯವೆ?

(ಏಳನೇ ಪುಟದಿಂದ)

ಗೃಹಗಳೆಂದಾಗಲೀ, ವ್ಯಭಿಚಾರ ಕೇಂದ್ರಗಳೆಂದಾಗಲೀ ಪರಿಗಣಿಸಿಲ್ಲ.

ಭಾರಿ ನಗರಗಳಲ್ಲಿ ಏನಾಗುತ್ತಿದೆ?

ದೊಡ್ಡದೊಡ್ಡ ನಗರಗಳಲ್ಲಿ ಟ್ಯಾಕ್ಸಿಚಾಲಕರಿಗೆ, ರಿಕ್ಷಾವಾಲರಿಗೆ, ಹೋಟೇಲು ಮಾಲೀಕರಿಗೆ, ಮಧ್ಯವರ್ತಿ ದಳ್ಳಾಳಿಗಳಿಗೆ ಎಲ್ಲೆಲ್ಲಿ ಯಾರ್ಯಾರು, ಇದ್ದಾರೆಂಬುದು ತಿಳಿದಿರುತ್ತದೆ. ಇಂಥವರಿಂದ ಭೋಗಲಾಲಸೆಯುಳ್ಳವರು ಅಪಾರವಾದ ನೆರವನ್ನು ಪಡೆಯುತ್ತಾರೆ; ಹಾಗೂ ಹಣವನ್ನು ಚೆಲ್ಲುತ್ತಾರೆ. ಇಂಥ ವ್ಯಭಿಚಾರ ವೃತ್ತಿಯನ್ನು "ಗುಪ್ತವೇಶ್ಯಾವೃತ್ತಿ" ಎಂದು ಕರೆಯಲಾಗುತ್ತದೆ. ಇಂಥವರಿಂದ ಸಮಾಜಕ್ಕೆ ಹಾನಿಯುಂಟಾಗುವುದಲ್ಲದೆ ಗಿರಾಕಿಗಳ ಆರೋಗ್ಯ ಕೆಡುವುದಕ್ಕೂ ಸಾಧ್ಯವಿದೆ. ಆದುದರಿಂದ ಇದು ಸಮಾಜದ ಭಾರಿ ಶತ್ರುವೆಂದರೂ ತಪ್ಪಾಗಲಾರದು. ಇದನ್ನು ಸರಕಾರದವರು, ಸಮಾಜ ಸುಧಾರಕರೂ ಬಹು ಎಚ್ಚರಿಕೆಯಿಂದ ಎದುರಿಸಬೇಕು. ಪ್ರತಿಯೊಬ್ಬ ಪುರುಷನಿಗೂ ಲೈಂಗಿಕ ಅಭಿರುಚಿ ಇರುವುದು, ಸ್ತ್ರೀಯರಿಗೂ ಅವರಲ್ಲಿ ಆಸಕ್ತಿಯಿರುವುದು ಸಹಜ. ಆದರೆ ಕೆಲವರು ಬಹಿರಂಗವಾಗಿ ವ್ಯಕ್ತಪಡಿಸದೆ ಒಳಗೇ ಕೊರಗುತ್ತಿರುತ್ತಾರೆ. ಮತ್ತೆ ಕೆಲವರು ಕಾಮತೃಪ್ತಿಗಾಗಿ ಯಾವುದಾದರೊಂದು ಮಾರ್ಗವನ್ನು ಹುಡುಕುತ್ತಾರೆ. ವಿವಾಹಿತ ಸ್ತ್ರೀ ಪುರುಷರಿಗೆ ಸಾಕಷ್ಟು ಸಂಭೋಗ ಸೌಖ್ಯ ಪಡೆಯಲು ಅವಕಾಶವಿದ್ದೇ ಇದೆ. ಆದರೆ ಅವಿವಾಹಿತರ ಗತಿ? ವಯಸ್ಕರಾಗಿದ್ದೂ ಮದುವೆಯಾಗದೇ ಇರುವವರು, ಸೈನಿಕದಳದ ಯೋಧರು, ಗೃಹಶಾಂತಿ ಕಾಣದ ವಿವಾಹಿತ ಯುವಕರು, ಹಾಗೂ ಯುವತಿಯರು, ಅತಿಕಾಮಿಗಳು ಈ ಗುಪ್ತ ವೇಶ್ಯಾಪದ್ಧತಿಗೆ ಶರಣು ಹೋಗುತ್ತಾರೆ.

ವೇಶ್ಯೆ—ಅವಳ ಪರಿಹಾರ

ಯಾವುದೇ ಕಾನೂನಾಗಲಿ, ಜನತೆಯ ಬೆಂಬಲ, ಪ್ರೋತ್ಸಾಹಗಳಿಲ್ಲದಿದ್ದರೆ ಅದು ಗುರಿಯನ್ನು ಸಾಧಿಸಲಾರದು. ಪ್ರತಿಯೊಬ್ಬ ವ್ಯಕ್ತಿಯೂ, ವಿದ್ಯಾವಂತನಾಗಿ, ಸುಶಿಕ್ಷಿತನಾಗಿ, ಕಾಯಿದೆಗಳನ್ನು ಧೈರ್ಯವಾಗಿ ಎದುರಿಸುವಂಥ ವಿಚಾರ ಶಾಲಿಯಾದ ಹೊರತು ಕಾನೂನಿಗೆ ಬೆಂಬಲ ದೊರೆಯಲಾರದು. ವ್ಯಭಿಚಾರ ನಿರ್ಮೂಲನೆಗೆ ತಕ್ಕ ಪರಿಹಾರ ಹುಡುಕದೆ, ಜನತೆಗೆ ಸರಿಯಾದ ವಸತಿ ಸೌಕರ್ಯ ಕಲ್ಪಿಸದೆ, ಕ್ರಮಬದ್ಧ ಶಿಕ್ಷಣ ಸೌಕರ್ಯ ನೀಡದೆ, ಅತುರಾತುರವಾಗಿ ಈ ವ್ಯಭಿಚಾರ ನಿಷೇಧ ಕಾಯಿದೆಯನ್ನು ಸರಕಾರವು ಜಾರಿಗೆ ತಂದಿದೆ. ಈ ವೇಶ್ಯಾವೃತ್ತಿಯಲ್ಲಿ ಬಹು ವಿಚಿತ್ರಗಳಿವೆ. ವೇಶ್ಯೆಯೊಬ್ಬಳನ್ನು ಎಚ್ಚರಿಸಿದರೆ ಸಾಲದು ಅವಳೊಬ್ಬಳನ್ನು ಬಂಧಿಸಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಅವಳ ಸುತ್ತಲೂ ಇರುವ ಪರಿವಾರದ ಗತಿ ಏನು? ಸಂಗೀತಗಾರರು, ಅವಳ ಸ್ತುತಿಪಾಠಕರು, ಪತಂಗಗಳಂತೆ ಸುಳಿದಾಡುವ ಮತ್ತು ಅವಳನ್ನೇ ನಂಬಿಕೊಂಡಿರುವ ವಿಟರು, ದಳ್ಳಾಳಿಗಳ ಗತಿ ಏನು? ಇವಳಿಗೆ ಹಣವನ್ನೊದಗಿಸುವ ಮೇಲ್ವಿಚಾರಕರು ಹಾಗೂ ದಳ್ಳಾಳಿಗಳ ಗತಿ ಏನು? ಇವಳ ಸುತ್ತ ನೂರಾರು ಜನ ಇದ್ದೇ ಇರುತ್ತಾರೆ. ಇವಳ ವರಮಾನ ಇಳಿ ಮುಖವಾಯಿತೆಂದರೆ ಇವರೆಲ್ಲರ ಬಾಯಿಗೆ ಮಣ್ಣೆ! ಸಾಲದ್ದಕ್ಕೆ ಅವಳಿಗೇನಾದರೂ ಮಕ್ಕಳಿದ್ದರೆ ಇನ್ನೂ ಕಷ್ಟ. ಆ ಮಕ್ಕಳ ಪೋಷಣೆ, ವಿದ್ಯಾಭ್ಯಾಸ, ಇದಕ್ಕೆಲ್ಲಾ ಏನು ಗತಿ? ಈ ಎಲ್ಲ ಪ್ರಶ್ನೆಗಳನ್ನು ಶಾಸಕರು ನಿಜವಾಗಿಯೂ ಆಲೋಚಿಸಿದ್ದಾರೆಯೆ?

ನಾಗರಿಕತೆಯ ಸೋಗಿನಲ್ಲಿ

ವೇಶ್ಯಾವೃತ್ತಿ ನಿರೋಧ ಕಾನೂನಿನಲ್ಲಿ ಇಂಥ ಆಶ್ರಿತರಿಗಾಗಿ ಯಾವ ರಕ್ಷಣಾ ವ್ಯವಸ್ಥೆಯನ್ನೂ ಮಾಡಿಲ್ಲ. ಅಲ್ಲದೆ ಅವರ ಜೀವನೋಪಾಯಕ್ಕೆ ತಕ್ಕ ವ್ಯವಸ್ಥೆಯನ್ನು ಸಹ ಮಾಡಿಲ್ಲ. ಐರೋಪ್ಯ ದೇಶಗಳಲ್ಲಿ ಮತ್ತು ಅಮೇರಿಕದಲ್ಲಿ ವೇಶ್ಯಾವೃತ್ತಿ ನಿಷೇಧದ ಕಾನೂನುಗಳನ್ನು ಜಾರಿಗೆ ತಂದಿರಬಹುದು. ಬಹಿರಂಗವಾಗಿ ಸ್ತ್ರೀ ವ್ಯಾಪಾರ ನಿಂತಿರಬಹುದು. ಆದರೆ ಗುಪ್ತ ವ್ಯಭಿಚಾರ ಇದ್ದೇ ಇದೆ. ಇದೀಗ ಒಂದು ನವೀನ ರೂಪವನ್ನು ತಳೆದಿದೆ. ನವ ನಾಗರಿಕತೆಯ ಸೋಗಿನಲ್ಲಿ ಒಬ್ಬರ ಮಡದಿಯು ಇನ್ನೊಬ್ಬ ಪುರುಷನ ಸಂಗಡ ಬೆರೆತು ತಿರುಗಾಡಿ ಕುಣಿದಾಡಿ, ನಲಿದಾಡುವುದು ಸಾಮಾನ್ಯ ದಿನಚರಿಯಾಗಿದೆ. ಇವುಗಳನ್ನು ಯಾರೂ ಧೈರ್ಯವಾಗಿ ಅಲ್ಲಗಳೆಯಲಾರರು. ತಂತಮ್ಮ ಮಡದಿಯರನ್ನು ಹಾಗೇನಾದರೂ ಕಟ್ಟುಪಾಡುಗಳಿಗೆ ಸಿಕ್ಕಿಸಿದ್ದೇ ಆದರೆ ಅವರು ಮರುದಿನವೇ ವಿವಾಹ ವಿಚ್ಛೇದನಕ್ಕೆ ಅರ್ಜಿ ಹಾಕಿಕೊಳ್ಳಬಹುದು. ಆದುದರಿಂದ ಇನ್ನು ರಹಸ್ಯವೇಶ್ಯಾ ಪದ್ಧತಿಗೆ ನಿವಾರಣೆ ಎಲ್ಲಿ? ಈ ರೋಗಕ್ಕೆ ಔಷಧಿಯೇ ಇಲ್ಲವಾಗಿದೆ ಎನ್ನಬಹುದು.

ಇಂದಿನ ಕಾನೂನು— ಅದರಲ್ಲಿರುವ ದೋಷಗಳು

ಕಾನೂನಿನಲ್ಲಿಯೇ ದೋಷಗಳಿದ್ದರೆ ಅಥವಾ ಅದರಲ್ಲಿ ವಿವರಗಳಿಗೇ ಕೊಂತೆಯಾದರೆ ಆಡಳಿತಗಾರರು ಹಾಗೂ ಸಮಾಜ ಸುಧಾರಕರು—ಕಾನೂನಿಗೆ ತಕ್ಕಂತೆ ಕ್ರಮ ಕೈಗೊಳ್ಳಲು ಅಸಮರ್ಥರಾಗುತ್ತಾರೆ. ಅವುಗಳನ್ನು ಜಾರಿಗೆ ತರುವುದಕ್ಕೂ ಸಹ ತೊಂದರೆಯಾಗುತ್ತದೆ. ಅಖಿಲ ಭಾರತ ಕಾನೂನು ಈ ಕೆಳಗೆ ಕಂಡ ಮುಖ್ಯಾಂಶಗಳ ಬಗ್ಗೆ ಕ್ರಮ ಕೈ ಕೊಳ್ಳಲು "ಮ್ಯಾಜಿಸ್ಟ್ರೇಟ"ರಿಗೆ ಅಧಿಕಾರ ಕೊಟ್ಟಿರುತ್ತದೆ:—

೧) ಬಾಲಿಕೆಯರನ್ನು ರಕ್ಷಿಸುವುದು.

೨) ವೇಶ್ಯಾ ಗೃಹಗಳನ್ನು ಮುಚ್ಚಿಸುವುದು.

೩) ವೇಶ್ಯಾಂಗನೆಯರನ್ನು ತಾವಿದ್ದ ಸ್ಥಳದಿಂದ ಓಡಿಸುವುದು.

೪) ಅಪರಾಧಿಗಳ ಬಗ್ಗೆ ವಿಚಾರಣೆ ನಡೆಸುವುದು.

೫) ಸೂಕ್ತವಾದ ಶಿಕ್ಷೆ ವಿಧಿಸುವುದು.

ನ್ಯಾಯಾಲಯದಲ್ಲಿ ಈ ಕಾನೂನಿನ ಬಗ್ಗೆ ಅಲ್ಲಲ್ಲಿ ಚರ್ಚೆ ನಡೆದದ್ದೂ ಉಂಟು. ಅಲಹಾಬಾದ್ ಹೈ ಕೋರ್ಟಿನಲ್ಲಿ ಒಮ್ಮೆ ಮೊಕದ್ದಮೆ ನಡೆದು ಶಾಮಾ ಬಾಯಿ ಎಂಬುವವಳನ್ನು ಸೂಳೆಗಾರಿಕೆ ನಡೆಸುತ್ತಿದ್ದಾಳೆಂಬ ಅಪಾದನೆಯಿಂದ ಬಿಡುಗಡೆ ಮಾಡಲಾಯಿತು. "ಸೂಳೆಗಾರಿಕೆ ಒಂದು ಅಪರಾಧವಲ್ಲ, ಅವಳು ತನ್ನನ್ನು ತಾನೇ ಮಾರಿಕೊಳ್ಳಬಹುದು. ಅದು ಅವಳ ಇಚ್ಛೆ. ಅವಳ ಹಣೆಬರಹ"—ಎಂದು ನ್ಯಾಯಾಧಿಪತಿಗಳು ತೀರ್ಪಿತ್ತಿದ್ದರು. ೧೯೫೬ರ ವ್ಯಭಿಚಾರ ನಿಷೇಧ ಕಾನೂನು ಬಹು ದೋಷಪೂರಿತವಾಗಿದೆ. ಅದರಲ್ಲಿರುವ ನಿಯಮಗಳು ಅಸಮರ್ಪಕವಾಗಿವೆ. 'ವೇಶ್ಯಾಗೃಹ' ಎಂದರೇನು.... ಅದರ ಲಕ್ಷಣಗಳೇನು? ಎಂಬಿವುಗಳನ್ನು ಸರಿಯಾಗಿ ತಿಳಿಯಪಡಿಸಿಲ್ಲ. ಆದುದರಿಂದ ನ್ಯಾಯಾಲಯಗಳಲ್ಲಿ ಇಂಥ ಮನೆಯಲ್ಲಿ 'ವೇಶ್ಯಾ ವೃತ್ತಿ ನಡೆದಿದೆ ಎಂಬುದನ್ನು ರುಜುವಾತು ಮಾಡಬೇಕಾದರೆ ತುಂಬಾ ಪ್ರಯಾಸವಾಗುತ್ತದೆ. ನ್ಯಾಯ ಸೂತ್ರಗಳ ದೃಷ್ಟಿಯಿಂದ ಹೀಗಿದ್ದರೆ—ಅದು ವೇಶ್ಯಾಗೃಹ ಎಂಬುದನ್ನು ನಿರ್ಧರಿಸುವಂತೆ....ತಕ್ಕ ನಿರ್ಬಂಧನೆಗಳನ್ನು ಅಳವಡಿಸಬೇಕು. ಇಲ್ಲವಾದರೆ ಅದು ದುಸ್ಸಾಧ್ಯವಾಗುತ್ತದೆ. ಇಂಥ ದೋಷಪೂರಿತ ಕಾನೂನುಗಳಿದ್ದರೆ ನ್ಯಾಯಾಧೀಶರಿಗೂ ಪೋಲೀಸರಿಗೂ ತುಂಬ ವ್ಯರ್ಥ ಶ್ರಮವುಂಟಾಗುತ್ತದೆ.

ನ್ಯಾಯಾಲಯದಲ್ಲಿ ಮೊಕದ್ದಮೆಗಳು

ಎಷ್ಟೋ ವೇಳೆ ಸರಿಯಾದ ಸಾಕ್ಷಿಗಳು ಸಿಗದ ನಿಸ್ಸಹಾಯಕರಾಗಿ ಅನೇಕ ಇಕ್ಕಟ್ಟುಗಳಿಗೆ ಸಿಕ್ಕಿ ಪೋಲೀಸಿನವರು ಪೇಚಾಡಿದ್ದಾರೆ. ಪ್ರತಿಯೊಂದು ಅಪರಾಧಕ್ಕೂ ಒಂದೊಂದು ಸಾಕ್ಷಿ ಬೇಕಾಗುತ್ತದೆ. ಅವರಿಗೆ ಇದೇ ಒಂದು ಸಮಸ್ಯೆಯಾಗುತ್ತದೆ. ನಿಜವಾದ ಅಪರಾಧಿಗಳಿಗೆ ತಕ್ಕ ಶಿಕ್ಷೆ ದೊರೆತೇ ದೊರೆಯುವಂತೆ ದೋಷ ನಿವಾರಣೆಯಾಗಬೇಕು.

ಸರಕಾರಿ ಅಧಿಕಾರಿಗಳು, ಖಾಸಗಿ ದೊಡ್ಡ ಮನುಷ್ಯರು, ಪ್ರಜ್ಞಾವಂತ ಮಹಿಳೆಯರು ಮುಂತಾದವರನ್ನೊಳಗೊಂಡ ಸಮಿತಿಗಳು ಈ ವ್ಯಭಿಚಾರ ನಿರೋಧ ಕಾನೂನುಗಳನ್ನು ಯಶಸ್ವಿಗೊಳಿಸುವುದಕ್ಕಾಗಿ ಏರ್ಪಟ್ಟಿವೆ. ಆದರೆ ಕಾರ್ಯತಃ ಅವು ಮುಂದುವರಿದಿಲ್ಲ. ಕಾಗದದ ಮೇಲೆ ಮಾತ್ರ ಆ ಸಮಿತಿಗಳು ಕಾಣಿಸುತ್ತವೆ. ಸಮಾಜ ಸುಧಾರಕರಂತೂ ಒಂದೊಂದು ವೇಳೆ ಅಧಿಕಾರಗಳ ಕೈಗೊಂಬೆಗಳಾಗಿ ಬಿಡುತ್ತಾರೆ. ಖಾಸಗಿ ದೊಡ್ಡ ಮನುಷ್ಯರಿಂದ ಕೆಲವು ಸಲ ಯಾವ ಸಹಾಯವೂ ದೊರೆಯುವುದಿಲ್ಲ. ಇಂಥ ಸನ್ನಿವೇಶಗಳು ಪುನಃ ಸಂಭವಿಸದಂತೆ ನೋಡಿಕೊಳ್ಳಬೇಕು. ಹಾಗೂ ಅವುಗಳ ನಿವಾರಣೆಗಾಗಿ ತಕ್ಕ ವ್ಯವಸ್ಥೆ ಮಾಡಬೇಕು.

ಮತ್ತಷ್ಟು ತೊಡಕುಗಳು

ವೇಶ್ಯಾವೃತ್ತಿಗೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳಿವೆ. ಜೂಜಾಟ, ಕುಡಿತ, ಕೊಲೆ, ವಿವಾಹ ವಿಚ್ಛೇದನ, ಆತ್ಮಹತ್ಯೆ, ಭ್ರೂಣ ಹತ್ಯೆ ಶಿಶು ಹತ್ಯೆ ಮುಂತಾದುವುಗಳನ್ನು ಉದಾಹರಿಸಬಹುದು. ವೇಶ್ಯಾ ವೃತ್ತಿಯುಳ್ಳವರಿಗಿದಾಗೂ ಅವರೊಡನೆ ಸಂಪರ್ಕವಿಟ್ಟು ಕೊಂಡಿರುವವರನ್ನು ರೋಗಗಳು ಕಿತ್ತುಕೊಂಡು ತಿನ್ನದೆಬಿಡುವದಿಲ್ಲ. ಅನೇಕ ಸಮಸ್ಯೆಗಳಲ್ಲಿ ಈ ರೋಗದ ಸಮಸ್ಯೆಯೂ ಒಂದು. ಆಳವಾಗಿ ಒಳ ಹೊಕ್ಕು ನೋಡಿದರೆ ಈ ವಿಧವಾದ ಅಂಟು ಜಾಡ್ಯಕ್ಕೆ ಮೂಲ ಕಾರಣ ಸ್ತ್ರೀ ಸಂಪರ್ಕವೇ ಎಂದು ವೇದ್ಯವಾಗುತ್ತದೆ. ಅವಳೋರ್ವ ಪ್ರಸಿದ್ಧ ವೇಶ್ಯೆಯಾಗಿರಬಹುದು, ಗುಪ್ತ ಜಾರಿಣಿಯಾಗಿರಬಹುದು, ಅಥವಾ ದೊಡ್ಡ ದೊಡ್ಡ ಸಮಾಜ ಸಭೆ, ಸಂಘಗಳಲ್ಲಿ ಓಡಾಡುವ ಬಣ್ಣದ ಬೀಸಣಿಗೆಯಾಗಿರಬಹುದು, ಅಗ್ಗದ ಸೂಳೆಯಾಗಿರಬಹುದು, ಊರ ಬಸವಿಯಾಗಿರಬಹುದು. ಕೆಲವು ವೇಳೆ "ಖಾಯಂ ಗಿರಾಕಿ"ಯಾಗಿರಬಹುದು. ಇಟ್ಟು ಕೊಂಡಿರುವ ಉಪಪತ್ನಿಯಾಗಿರಬಹುದು ಅಥವಾ ಪ್ರೇಮದ ಗೆಳತಿಯಾಗಿರಬಹುದು. ಆದರೆ, ಎಲ್ಲ ಶಬ್ದಗಳ ಅರ್ಥ ಒಂದೇ. ಇನ್ನೂ ಕಿರಿಯರಾದ ಮುಗ್ಧ ಬಾಲಿಕೆಯರು ಈ ಭಯಂಕರ ಅಪಾಯಗಳಿಂದ ಪಾರಾಗ ಬೇಕಾಗಿದೆ.

ಗುಪ್ತ ರೋಗಗಳು

ಯಾರು ವೇಶ್ಯಾ ವೃತ್ತಿಗೆ ಮಾರು ಹೋಗಿದ್ದಾರೆಯೋ, ಯಾರು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಅದರಲ್ಲಿ ತಲ್ಲೀನರಾಗಿದ್ದಾರೆಯೋ, ಅವರಲ್ಲಿ ಸ್ತ್ರೀ ಸಂಬಂಧವಾದ ಗುಪ್ತ ಕಾಯಿಲೆಗಳು ಇದ್ದೇ ಇರುತ್ತವೆ.

ಉದಾಹರಣೆಗೆ ಟ್ಯಾಕ್ಸಿ ಚಾಲಕರು, ಸಂಗೀತಗಾರರು, ಬಾರ್ ನಡೆಸುವ ಮಾಲಿಕರು ಹಾಗೂ ವೇಶ್ಯೆಗಳ ಏಜಂಟರು, ಇವರಲ್ಲಿ ಈ ರೋಗ ಹಬ್ಬಲು ಸಾಕಷ್ಟು ಅವಕಾಶಗಳಿವೆ. ಏಕೆಂದರೆ ಅವರಿಗೆ ವೇಶ್ಯೆಯರು ಅಥವಾ ಗುಪ್ತ ಜಾರಿಣಿಯರೊಂದಿಗೆ ಒಂದಲ್ಲ ಒಂದು ವಿಧದಲ್ಲಿ ಸಂಪರ್ಕವಿದ್ದೇ ಇರುತ್ತದೆ.

ಈ ವಿಷಯದಲ್ಲಿ ನಾವೊಂದು ಗೌರವಯುತವಾದ ನೀತಿಯನ್ನು ಅನುಸರಿಸುವ ಅವಶ್ಯಕತೆಯಿದೆ. ಆರೋಗ್ಯ ಇಲಾಖೆಯವರು ಸಾಧ್ಯವಾದಷ್ಟು ಎಚ್ಚರಿಕೆಯಿಂದ ಇರಬೇಕು. ಈ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ನಡೆಸಬೇಕು ಹಾಗೂ "ಬ್ರುಸ್ಸೆಲ್ಸ್ ಒಪ್ಪಂದ"ವನ್ನು ನಿರ್ವಂಚನೆಯಿಂದ ನಿಸ್ವಾರ್ಥತೆಯಿಂದ ಪಾಲಿಸಬೇಕು.

ವೇಶ್ಯಾ ಪದ್ಧತಿಯ ಮೇಲೆ ಸರಕಾರದ ಕಣ್ಣಿರಬೇಕು. ಗೃಹಿಣಿಯರಾಗಿದ್ದು ಗುಪ್ತ ಜಾರಿಣಿಯಾಗಿರುವವರ ಮೇಲೂ ಗಮನವಿರಬೇಕು. ಹೀಗಾದಲ್ಲಿ ನಮ್ಮ ಯುವಕರು ಸುರಕ್ಷಿತವಾಗಿರಬಲ್ಲರು. ಇಲ್ಲವಾದರೆ ಅವರ ಗತಿ ಅಧೋಗತಿಯೇ ಸರಿ.

ಲೈಂಗಿಕ ಶಿಕ್ಷಣದ ಅವಶ್ಯಕತೆ

ಹಿಂದೆಯೇ ತಿಳಿಸಿದಂತೆ ಈ ವೇಶ್ಯಾ ವೃತ್ತಿ ನಿವಾರಣೆಗೆ ಮಸೂದೆಗಳಾಗಲೀ ಕಾಯಿದೆಗಳಾಗಲೀ ಮದ್ದಲ್ಲ. ಕೇವಲ ಕಾನೂನುಗಳಿಂದ ಈ ಜಟಿಲ ಸಮಸ್ಯೆಯನ್ನು ಬಗೆಹರಿಸಲು ಎಂದಿಗೂ ಸಾಧ್ಯವಿಲ್ಲ. ವಾಸ್ತವವಾಗಿ ನೋಡಿದರೆ ಈ ವೃತ್ತಿ ಆದಷ್ಟು ಬೇಗನೆ ನಿರ್ಮೂಲ ಮಾಡಬೇಕಾದರೆ ಕಾನೂನು ಯಶಸ್ವಿಯಾಗಬೇಕಾದರೆ ಕೆಲವು ಸಾಮಾಜಿಕ ಕಟ್ಟುಪಾಡುಗಳನ್ನು ಮಾಡುವುದು ಅವಶ್ಯಕ, ಆ ಕಟ್ಟು ಪಾಡುಗಳನ್ನು ಅಥವಾ ನಿ

(ಹದಿಮೂರನೇ ಪುಟ ನೋಡಿರಿ)

ಅಭಿಪ್ರಾಯ

ಪಾನ ಪ್ರತಿಬಂಧ ನೀತಿ

ಬರೆದವರು:
ಶ್ರೀ ಎಂ. ಉಮೇಶ ರಾವ್, ಅಡ್ವೊಕೇಟ್, ಕಾಸರಗೋಡು.

ಜನತೆಯೊಂದಿಗೆ ಬೆರೆಯುತ್ತಿರುವ, ದಿನನಿತ್ಯದ ಆಗುಹೋಗುಗಳನ್ನು ನಿರೀಕ್ಷಿಸುತ್ತಿರುವ, ದೇಶದ ಪ್ರಗತಿಯನ್ನು ನೋಡುತ್ತಿರುವ ರಾಜಕಾರಣಿಗಳು ಪಾನಪ್ರತಿಬಂಧವನ್ನು ಕಿತ್ತು ಹಾಕುವುದಕ್ಕೆ ಕೂಡ, ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಿರುವುದು ನನಗೆ ಸೋಜಿಗವೆನಿಸಿದೆ. ಅವರ ಈ ಬಗೆಯ ನೀತಿಗೆ ಕಾರಣವೇನೆಂಬುದನ್ನು ತಿಳಿಯುವುದು ಕಷ್ಟ. ಚುನಾವಣೆಗಳಲ್ಲಿ ಮತ ಗಿಟ್ಟಿಸಿಕೊಳ್ಳುವ ಸಲುವಾಗಿ ನೀತಿ ರೂಪಿಸುವ ರಾಜಕೀಯ ಪಕ್ಷಗಳನ್ನು ನಿಂದಿಸುವುದು ಇಂದಿಗೆ ಸರ್ವಸಾಮಾನ್ಯ ನಡವಳಿಯೆನಿಸಿದೆ. ಪಾನ ಪ್ರತಿಬಂಧವನ್ನು ಹೆಚ್ಚಿನವರು ವಿರೋಧಿಸುವುದರಿಂದ ಈ ಮಾತು ಈ ವಿಷಯಕ್ಕೆ ಅನ್ವಯಿಸಲಾರದು. ಪಾನಪ್ರತಿಬಂಧ ನೀತಿಯಲ್ಲಿ ಬದಲಾವಣೆಯನ್ನು ವಿರೋಧಿಸುವವರು ನಮ್ಮ ಸಂವಿಧಾನದ ನಿರ್ದೇಶ ತತ್ವಗಳಲ್ಲಿ ಒಂದನ್ನು ಎತ್ತಿ ಹೇಳುತ್ತಾರೆ. ಅದು ಹೇಳುತ್ತದೆ — ಸಾರ್ವಜನಿಕ ಆರೋಗ್ಯಕ್ಕೆ ಬಾಧಕವಾಗುವ ಅಮಲು ಪದಾರ್ಥಗಳ ಸೇವನೆಯನ್ನು ಪ್ರತಿಬಂಧಿಸುವ ಪ್ರಯತ್ನವನ್ನು ರಾಷ್ಟ್ರವು ಮಾಡಬೇಕು.

ಸ್ವಾತಂತ್ರ್ಯ ಹೋರಾಟದ ವೇಳೆ ಕಾಂಗ್ರೆಸ್ಸು ಕೈಕೊಂಡ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಪಾನಪ್ರತಿಬಂಧವೂ ಒಂದಾಗಿತ್ತು. ಜನತೆಯ ಬಡತನ ಮತ್ತು ಕಷ್ಟಕಾರ್ಪಣ್ಯಗಳಿಗೆ ಮದ್ಯ ಸೇವನೆಯೇ ಮೂಲಕಾರಣವೆಂದು ಮನಗಂಡ ನಾವೆಲ್ಲರೂ ಈ ಧ್ಯೇಯ ಸಾಧನೆಗಾಗಿ ದುಡಿದೆವು. ಅಮೆರಿಕೆಯ ಸಂಯುಕ್ತ ಸಂಸ್ಥಾನಗಳು ಪಾನ ಪ್ರತಿಬಂಧವನ್ನು ಪ್ರಯತ್ನಿಸಿ ವಿಫಲವಾದ ಉದಾಹರಣೆ ನಮ್ಮ ಮುಂದಿತ್ತು. ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ಮದ್ಯವನ್ನು ಪ್ರತಿಬಂಧಿಸಿರುವುದರಿಂದ ಇದರಲ್ಲಿ ಸಫಲರಾಗಬಹುದೆಂಬ ಆಶೆಯಿತ್ತು. ನಮ್ಮ ಸಹಕರ್ಮಚಾರಿಗಳಲ್ಲಿ ಬ್ರಿಟಿಷ್ ಸರಕಾರಕ್ಕೆ ನಷ್ಟವುಂಟು ಮಾಡುವ ಏಕಮೇವ ಕಾರಣದಿಂದಲೇ ಪಾನ ಪ್ರತಿಬಂಧವನ್ನು ಬೆಂಬಲಿಸಿದವರೂ ಕೆಲವರು ಇದ್ದರು. ರಾಜಕೀಯ ಗುರಿಯೂ ಇದೇ ಮಾದರಿಯದಿತ್ತು. ಅಧಿಕಾರವು ತನ್ನ ಕೈಗೆ ಬಂದೊಡನೆಯೇ ಕಾಂಗ್ರೆಸ್ ಸರಕಾರ ಹಿಂದೆ ಮುಂದೆ ನೋಡದೆ ಪಾನ ಪ್ರತಿಬಂಧ ಶಾಸನವನ್ನು ವ್ಯವಹೃತಗೊಳಿಸಿತು. ಪ್ರಾಯೋಗಿಕವಾಗಿಯೂ ಕೆಲವೆಡೆ ವ್ಯವಹಾರಕ್ಕೆ ಬಂದಿತು. ಆದರೆ, ನಾವೀಗ ಇದು ಅಸಫಲವಾಗಿದೆಯೆಂದು ಒಪ್ಪಿಕೊಳ್ಳಲೇಬೇಕು. ಮಾತ್ರವಲ್ಲ, ಇದು ಸುವ್ಯವಸ್ಥಿತ ರೀತಿಯ ಲಂಚಗುಳಿತನಕ್ಕೆ ಆಸ್ಪದವನ್ನು ಮಾಡಿಕೊಟ್ಟಿದೆ; ಮದ್ಯತಯಾರಿಯಲ್ಲಿ ಬಳಸಲ್ಪಡುವ ವಸ್ತು ಸಾಧನಗಳು ಆರೋಗ್ಯಕ್ಕೆ ಬಹಳಷ್ಟು ಅಪಾಯಕಾರಿಯೆನ್ನುವುದನ್ನು ತಿರಸ್ಕರಿಸಲಾಗುವುದಿಲ್ಲ. ನ್ಯಾಯಬಾಹಿರವಾಗಿ ಮದ್ಯ ತಯಾರಿಸುವವರ ರಿಜಿಸ್ಟರೊಂದು ಸರ್ವಸಾಮಾನ್ಯವಾಗಿ ಎಲ್ಲ ಪೋಲೀಸು ಸ್ಟೇಶನ್ನುಗಳಲ್ಲಿಯೂ ಅನಧಿಕೃತವಾಗಿರುತ್ತದೆ. ಇದರ ಉಪಯೋಗ ಕಳ್ಳ ಭಟ್ಟಿಯ ಶೋಧನೆಗಾಗಲೀ, ಕಟ್ಟಿಹೊರಿಸುವುದಕ್ಕಾಗಲೀ ಆಗುವುದಲ್ಲ, ಕ್ರಮವಾಗಿ ಲಂಚ ವಸೂಲಿ ಮಾಡುವುದಕ್ಕೆ ಮಾತ್ರ ಸಹಾಯಕವಾಗುತ್ತದೆ. ಇಂತಹ ನ್ಯಾಯಬಾಹಿರ ಗಂಡಂಗುಗಳಲ್ಲಿ ಕಂಠಪೂರ್ತಿ ಕುಡಿದು ಬೀದಿಯಲ್ಲಿ ನಿರ್ಭಯವಾಗಿ ಓಲಾಡುವ ಕುಡುಕರು ಸಮಾಜಕ್ಕೆ ಮಹಾ ಉಪದ್ರಕಾರರು. ಸಭ್ಯ ಸಂಭಾವಿತ ನಾಗರಿಕನೂ ತನ್ನ ನೆರೆಯವನು ಈ ವ್ಯಾಪಾರದಲ್ಲಿ ಸಾವಿರಾರು ಸಂಪಾದಿಸುವುದನ್ನು ಕಾಣುತ್ತಾನೆ, ತಾನು ಚಡಪಡಿಸುತ್ತಾನೆ. ಶರಾಬಿನ ತಯಾರಿ ಮತ್ತು ಮಾರಾಟದ ಸಂಬಂಧದಲ್ಲಿ ಒಂದು ಬಗೆಯ ಒಡಂಬಡಿಕೆಯಾಗಿರುವುದರಿಂದ ಪೋಲೀಸರಿಗೆ ಯಾರೂ ಅಂಜಬೇಕಾದ ಪ್ರಸಂಗವಿಲ್ಲ. ಇವೆಲ್ಲವುಗಳ ದುಷ್ಪರಿಣಾಮ ಸಮಾಜದ ಮೇಲೆ ಬೀಳುತ್ತಿದೆ. ಪರಿಣಾಮಕಾರಿಯಾಗಿ ಇವೆಲ್ಲವಕ್ಕೂ ಇನ್ನೂ ತಡೆಮಾಡದೆ ಉಚಿತರೀತಿಯ ತಡೆ ಹಾಕಬೇಕು. ಸದ್ಯದ ನೀತಿಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕು; ಈ ಮೂಲಕ ಪತನದ ದಾರಿಯಿಂದ ದೇಶವನ್ನುಳಿಸಬೇಕು.

ಆರೋಗ್ಯ

ಟೆಟ್ಯಾನಸ್‌ಗೆ ಪ್ರತಿಬಂಧ ದಾಕು

• ಆಧುನಿಕ ವಿಜ್ಞಾನವು ಅಭಿವೃದ್ಧಿಯಾದಂತೆಲ್ಲಾ ವೈದ್ಯಕೀಯ ರಂಗದಲ್ಲಿಯೂ ಅನೇಕ ರೋಗಗಳನ್ನು ತಡೆಗಟ್ಟಲು ಅವುಗಳಿಂದ ರಕ್ಷಣೆಯನ್ನು ಪಡೆಯಲು ಇನ್ನಾಕ್ಯುಲೇಷನ್ ಪದ್ಧತಿಯನ್ನು ಮಾಡಿರುವಂತೆ ಟೆಟ್ಯಾನಸ್ ವಿಷದಿಂದ ರಕ್ಷಣೆಯನ್ನು ಕೊಡಲಾಗುತ್ತಿದೆ.

ಟೆಟ್ಯಾನಸ್ ವಿಷದಿಂದ ರಕ್ಷಣೆಯನ್ನು ಕೊಡಬೇಕು ಮತ್ತು ಅದರ ಕಾರ್ಯಗಳನ್ನು ಅಭಿವೃದ್ಧಿಗೊಳಿಸಬೇಕು ಎಂಬುದು ಮ್ಯೂನಿಚ್‌ನಲ್ಲಿ ಇತ್ತೀಚೆಗೆ ನಡೆದ ಶಸ್ತ್ರ ಚಿಕಿತ್ಸಕರ ಸಮಾವೇಶದಲ್ಲಿನ ಒಂದು ವಿಷಯವಾಗಿದೆ. ಪಶ್ಚಿಮ ಜರ್ಮನಿಯಲ್ಲಿ ಒಂದರಲ್ಲಿಯೇ ಪ್ರತಿವರ್ಷವೂ ಅನೇಕ ಜನರು ಟೆಟ್ಯಾನಸ್ ವಿಷದಿಂದ ಸಾಯುತ್ತಿದ್ದಾರೆ. ಪಶ್ಚಿಮ ಯುರೋಪಿನಲ್ಲಿ ಇದು ಇನ್ನೂ ಹೆಚ್ಚಾಗುತ್ತಿದೆ. ಈ ರೋಗದಿಂದ ರಕ್ಷಣೆಯನ್ನು ಪಡೆಯಲು ಬೇಕಾದ ದಾರಿಗಳಿದ್ದರೂ ಅದರಿಂದಾಗುತ್ತಿರುವ ಪ್ರಾಣ ಹಾನಿಯನ್ನು ಮಾತ್ರ ತಪ್ಪಿಸಲಾಗುತ್ತಿಲ್ಲ. ಟೆಟ್ಯಾನಸ್ ವಿಷಕ್ಕಾಗಿ ಕೊಡುವ ಇನ್ನಾಕ್ಯುಲೇಷನ್ ಶೇಕಡ ನೂರರಷ್ಟು ರಕ್ಷಣೆಯನ್ನು ಕೊಡುತ್ತದೆ. ಆದ್ದರಿಂದ ಕ್ರಮ ಬದ್ಧ ಇನ್ನಾಕ್ಯುಲೇಷನ್ ಮಾಡಿಸಿಕೊಳ್ಳುವುದರಿಂದ ಈ ವ್ಯಾಧಿಯನ್ನು ತಪ್ಪಿಸಬಹುದೆಂದೂ ಇದು ಒಳ್ಳೆಯ ರಕ್ಷಣೆಯನ್ನು ಕೊಡುವುದೆಂದೂ ಈಚೆಗೆ ಮ್ಯೂನಿಚ್‌ನಲ್ಲಿ ನಡೆದ ಶಸ್ತ್ರ ಚಿಕಿತ್ಸಕರ ಸಮಾವೇಶ ಕಾಲದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ.

ಈ ಟೆಟ್ಯಾನಸ್ ವಿಷ ಕ್ರಿಮಿಗಳು ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಹರಡಿಕೊಂಡಿರುತ್ತವೆ. ಮುಖ್ಯವಾಗಿ ಬೀದಿಗಳಲ್ಲಿ ಏಳುತ್ತಿರುವ ಧೂಳುಗಳಲ್ಲಿಯೂ ಫಲವತ್ತಾದ ಭೂಮಿ ಮತ್ತು ತೋಟ ಇವುಗಳ ಮಣ್ಣಿನಲ್ಲಿಯೂ ಇರುತ್ತವೆ. ಈ ವಿಷಾಣುಗಳು ದೇಹದಲ್ಲಿ ಆಗಿರುವ ಯಾವುದಾದರೂ ಗಾಯಗಳ ಮೂಲಕ ಒಳಗೆ ಪ್ರವೇಶಿಸಿ ಅಲ್ಲಿ ವ್ಯಾಪಿಸಿ ವೃದ್ಧಿಗೊಳ್ಳುವುವು. ಮಾಂಸ ಖಂಡಗಳಲ್ಲಿ ಇವು ವ್ಯಾಪಿಸಿಕೊಂಡ ಕೆಲವು ದಿನಗಳಲ್ಲಿಯೇ ಟೆಟ್ಯಾನಸ್ ವ್ಯಾಧಿಯು ತಲೆದೋರುವುದು. ಪ್ರೊಫೆಸರ್ ಬರ್ಕಲ್ ಡಿಲಾಕ್ಯಾಂಪ್‌ರವರು ಈ ವ್ಯಾಧಿಯನ್ನು ಕುರಿತು ದೀರ್ಘಕಾಲದ ಉಪನ್ಯಾಸವನ್ನು ಕೊಟ್ಟಿದ್ದಾರೆ. ಇನ್ನಾಕ್ಯುಲೇಷನನ್ನು ತೆಗೆದುಕೊಳ್ಳುವುದರಿಂದ ಟೆಟ್ಯಾನಸ್ ಅನ್ನು ಹೀರುವ ದ್ರವವು ದೇಹದಲ್ಲಿ ವ್ಯಾಪಿಸಿ ಅನೇಕ ವರ್ಷಗಳ ವರೆಗೆ ರಕ್ಷಣೆಯನ್ನು ಕೊಡಬಲ್ಲುದೆಂದು ೨೫ ವರ್ಷಗಳ ಮೇಲೆ ಒಂದು ಇಂಜೆಕ್ಷನನ್ನು ತೆಗೆದುಕೊಳ್ಳುವುದರಿಂದ ರಕ್ಷಣೆಯು ಪುನಃ ಏರ್ಪಡುವುದೆಂದೂ ತಿಳಿಸಿದ್ದಾರೆ.

ಡಾಕ್ಟರ್ ಬರ್ಕಲ್‌ರವರು ನೇರವಾಗಿ ರೋಗ ಪೀಡಿತರಾಗದಿದ್ದರೂ ಹತ್ತು ವರ್ಷಗಳಿಗೊಮ್ಮೆ ಪುನಃ ಇಂಜೆಕ್ಷನನ್ನು ತೆಗೆದುಕೊಳ್ಳಬಹುದೆಂದೂ ಈ ರೀತಿಯ ರಕ್ಷಣೆಯನ್ನು ಚಿಕ್ಕಂದಿನಿಂದಲೇ ತೆಗೆದುಕೊಂಡರೆ ಉತ್ತಮವೆಂದೂ ಆ್ಯಂಟಿ ಟೆಟ್ಯಾನಿಕ್ ಇಂಜಕ್ಷನ್ನನ್ನು ತೆಗೆದುಕೊಳ್ಳುವುದರಿಂದ ದೇಹದಲ್ಲಿ ಯಾವ ವಿಧದ ಪ್ರತಿಕ್ರಿಯೆಯಾಗಲೀ ಆರೋಗ್ಯಕ್ಕೆ ಕುಂದು ಬರುವುದೆಂಬ ಭೀತಿಯಾಗಲೀ ಇರುವುದಿಲ್ಲವೆಂದೂ ತಿಳಿಸಿದ್ದಾರೆ. ಅಂತಹ ಭೀತಿಯು ಕೇವಲ ಆಧಾರ ರಹಿತವಾದುದು ಎಂದೂ ಅವರು ಹೇಳಿದ್ದಾರೆ. ವೈದ್ಯಕರಿಯನ್ನೀಗ ಎಲ್ಲೆಲ್ಲಿಯೂ ಮನ್ನಿಸಲಾಗುತ್ತಿದೆ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು.........

ಪ್ರಪ್ರಥಮ ನಿವಾರಣೆ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ
ರಿಜಿಸ್ಟರ್ಡ್ ಪಬ್ಲಿಷರ್ಸ್
ಪಾಲುಕೋಟೆ, ಉಡುಪಿ

ಅರ್ಥಶಾಸ್ತ್ರ ರಚಯಿತ—ಕೌಟಿಲ್ಯ

(ಐದನೇ ಪುಟದಿಂದ)

ಮೌರ್ಯ ಸಾಮ್ರಾಜ್ಯ ನಿರ್ಮಾಣವಾಗುವ ಮುಂಚೆ ಉತ್ತರ ಭಾರತದಲ್ಲಿ ಪ್ರಬಲ ಬಲಿಷ್ಠ ಚಕ್ರಾಧಿಪತ್ಯವಿರಲಿಲ್ಲವೆಂದು ಕಾಣುತ್ತದೆ. ಈ ಕಾರಣವೇ ಸಂಪೂರ್ಣ ಉತ್ತರ ಭಾರತ (ಮಗಧ ರಾಜ್ಯದವಿನಃ) ಗ್ರೀಕ್ ಅರಸು ಅಲೆಗ್ಜಾಂಡರನ ದಂಡ ಯಾತ್ರೆಗೆ ತಲೆಬಾಗಿದುದು. ಅಂದಿನ ಭಾರತದ ಸ್ಥಿತಿಯನ್ನು ತನ್ನ ಗಮನದಲ್ಲಿರಿಸಿಕೊಂಡು ಕೌಟಿಲ್ಯ ತನ್ನ ಅರ್ಥಶಾಸ್ತ್ರವನ್ನು ರಚಿಸಿದ್ದಾನೆ.

ಅರ್ಥಶಾಸ್ತ್ರ ಕೇವಲ ರಾಜಕೀಯ ಸಂಗತಿಗಳನ್ನೇ ವಿವರಿಸುವ ಉದ್ಗ್ರಂಥವಲ್ಲ. ಇದರ ರಚನೆಯಲ್ಲಿ ಕೌಟಿಲ್ಯ ತನ್ನ ಜಾಣ್ಮೆಯನ್ನು ತೋರಿಸಿದ್ದಾನೆ. ಚತುರ್ವಿಧ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ಸಂಗತಿಗಳನ್ನು ಸಮಯೋಚಿತವಾಗಿ ಬಳಸಿಕೊಂಡು ಅವುಗಳ ಆಗು ಹೋಗುಗಳನ್ನು ವಿಮರ್ಶಿಸಿ ಮುಂದಿನ ಪೀಳಿಗೆಗೆ ಸಹಕಾರಿಯಾಗುವಂತೆ ಬಹು ಬುದ್ಧಿಯನ್ನು ಉಪಯೋಗಿಸಿ ಬರೆದಿಟ್ಟಿದ್ದಾನೆ.

ಕೌಟಿಲ್ಯನ ಅರ್ಥಶಾಸ್ತ್ರ ಗ್ರಂಥ ಕಿರಿದಾದುದೇನಲ್ಲ. ಹದಿನೈದು ಅಧಿಕರಣ ನೂರೈವತ್ತು ಪ್ರಕರಣಗಳಿಂದ ಕೂಡಿದೆ. ಇದರಲ್ಲಿ ಮುಖ್ಯವಾಗಿ ರಾಜ್ಯನೀತಿ, ದಂಡನೀತಿ. ರಾಜ-ಅಧಿಕಾರಿಗಳ ಸಂಬಂಧ, ರಾಜ ಮಂತ್ರಿ ಇವರ ಮೈತ್ರಿ ಮತ್ತು ಅಧಿಕಾರ, ಕರ್ತವ್ಯ, ರಾಜ್ಯಾಡಳಿತದ ವ್ಯವಸ್ಥೆ, ವಾಣಿಜ್ಯ, ವಿದ್ಯಾಭ್ಯಾಸ, ವ್ಯವಸಾಯ, ಆರ್ಥಿಕ ವ್ಯವಸ್ಥೆ, ಯುದ್ಧ-ಶಾಂತಿ-ಸಂಧಾನ, ರಾಜ್ಯದ ಉಳಿವು-ಅಳಿವು, ಸಾಮಾಜಿಕ ಜೀವನ ವ್ಯವಸ್ಥೆ ಇವುಗಳನ್ನು ಕೂಲಂಕಷವಾಗಿ ಪ್ರಸ್ತಾಪಿಸಿ ವಿವರಿಸಿದ್ದಾನೆ.

ಅರ್ಥಶಾಸ್ತ್ರ ಕೌಟಿಲ್ಯನ ಕೃತಿಯಾದುದರಿಂದ ಕುಟಿಲತೆಯಿಂದ ತುಂಬಿದೆ ಎಂದು ಹೇಳುವ ಸಂಭವವೂ ಉಂಟು. ಆದರೆ ರಾಜ್ಯ ವ್ಯವಸ್ಥೆ, ಸುಭದ್ರ ರಾಜ್ಯ ಆಡಳಿತ—ವ್ಯವಸ್ಥೆಗಳಿಗೆ, ಸಂಘಟಿತ ರಾಜ್ಯ ನಿರ್ವಹಣಕ್ಕೆ ಕುಟಿಲತೆಯೂ ಅತ್ಯವಶ್ಯಕ ಎಂಬುದನ್ನು ಮನಗಂಡು ಕುಟಿಲತೆಯ ಹಿನ್ನೆಲೆಯಲ್ಲಿರುವ ಕಾರಣವನ್ನು ಅರಿಯಲು ಪ್ರಯತ್ನಿಸಿದರೆ ಸತ್ಯಾಂಶ ಗೋಚರವಾಗುತ್ತದೆ.

ಇಂದಿನ ರಾಜನೀತಿ ಶಾಸ್ತ್ರಜ್ಞರು ವ್ಯವಹಾರ ನಿಪುಣರು, ರಾಜಕರಣಿಗಳು ಅಂದಿನ ಚಾಣಕ್ಯನ ಅರ್ಥಶಾಸ್ತ್ರದಲ್ಲಿ ಅಡಗಿರುವ ಹಲವಾರು ಶ್ರೇಷ್ಠ ಸಂಗತಿಗಳನ್ನು ಮನವರಿಕೆಮಾಡಿಕೊಂಡ, ಆಲೋಚಿಸಬೇಕಾದ ಆವಶ್ಯಕತೆಯೂ ಇಲ್ಲದಿಲ್ಲ.

ಚಂದ್ರಗುಪ್ತನ ಕಾಲದಲ್ಲಿ ರಾಜ್ಯಾಡಳಿತ ವ್ಯವಸ್ಥೆಯ ಮಾದರಿಯನ್ನು ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ನಿರೂಪಿಸಿದ್ದಾನೆ. ರಾಜಧಾನಿ, ನಗರ, ಗ್ರಾಮಗಳ ನಿರ್ಮಾಣ. ಪ್ರಜಾಕ್ಷೇಮಕ್ಕಾಗಿ ರಾಜ ಕೈಗೊಳ್ಳಬೇಕಾದ ಕಾರ್ಯಗಳು, ಕುಟುಂಬದಾರರ ಜೀವನ, ಮೊದಲಾದುವನ್ನು ಕಾಣಿಸಿದ್ದಾನೆ ಕೌಟಿಲ್ಯ.

ಸಮಾಜದಲ್ಲಿ ಮಹತ್ವಪೂರ್ಣಸ್ಥಾನ ಮಹಿಳೆಗೆ ದೊರೆಯಬೇಕು. ಪೋರಿತಿದೆ ಎಂಬುದು ಉಲ್ಲೇಖನೀಯ. ಸಂಸಾರ, ಸಮಾಜದ, ಸಾಮ್ರಾಜ್ಯಗಳಲ್ಲಿ ಮಹಿಳೆಯ ಪಾತ್ರ ಪ್ರಮುಖವಾದುದು ಎಂಬುದನ್ನು ಕೌಟಿಲ್ಯ ಮರೆತಿಲ್ಲ. ಅದನ್ನು ಎತ್ತಿ ಸಾರಿದ್ದಾನೆ.

ಸಮಾಜದಲ್ಲಿ ಹೆಣ್ಣು—ಗಂಡಿನ ಸಂಬಂಧ ಅದರಲ್ಲಿಯೂ ವಿವಾಹದ ವಿಚ್ಛೇದ ಯಾವ ಬಗೆಯದು, ಸ್ತ್ರೀಯರಿಗೆ ದೊರೆಯಬೇಕಾದ ಸಮಾನತೆ ಇವುಗಳ ಪ್ರಸ್ತಾಪವೂ ಇಲ್ಲದಿಲ್ಲ. ಅಂದಿನ ಸಮಾಜದಲ್ಲಿ ಮಹಿಳೆಗೆ ಪೂರ್ಣ ಸ್ವಾತಂತ್ರ್ಯ ಸಮಾನತೆ ದೊರೆತಿತ್ತು ಎಂಬುದು ಸ್ಪಷ್ಟವಾಗಿ ಕಾಣಬರುತ್ತದೆ.

ಸಮಕಾಲೀನ ಸ್ಥಿತಿಗತಿಗಳನ್ನು ಎತ್ತಿ ಸಾರುವ ರನ್ನಗನ್ನಡಿಯಂತಿದೆ ಕೌಟಿಲ್ಯನ ಅರ್ಥಶಾಸ್ತ್ರ. ಅಂತಹ ಮಹತ್ವಪೂರ್ಣ ಗ್ರಂಥವನ್ನು ರಚಿಸಿ ಭಾರತೀಯರಿಗೆ ಒದಗಿಸಿಕೊಟ್ಟು ಕೀರ್ತಿಶಾಲಿಗಯಾಗಿದ್ದಾನೆ ಕೌಟಿಲ್ಯ. ಶತಮಾನಗಳ ಹಿಂದೆಯೇ ಪೂರ್ಣ ವ್ಯವಸ್ಥಿತ ಕಲ್ಪನೆಯ ಸಮಾಜ, ಸರಕಾರ, ರಾಜ, ರಾಜ್ಯಾಂಗಗಳ, ವ್ಯವಸ್ಥೆ ಆಡಳಿತಾಧಿಕಾರಿ ವಿಷಯಗಳನ್ನು ಗ್ರಹಿಸದೆ ನಾವು ಮಾತ್ರ ಉದಾಸೀನರಾಗಿದ್ದೇವೆ. ಕೌಟಿಲ್ಯನ ಅರ್ಥಶಾಸ್ತ್ರವನ್ನು ಓದಿದ ಭಾರತೀಯ "ನಾವು ಯಾವವಿಧದಲ್ಲಿಯೂ ಕಡಿಮೆ ಇಲ್ಲ, ಸರ್ವ ಶ್ರೇಷ್ಠ ಆಡಳಿತ ವ್ಯವಸ್ಥೆಯಿದ್ದ ಭೂಮಿ ನಮ್ಮದು" ಎಂದು ಹೆಮ್ಮೆ ಪಡಬಹುದು.

ಕೆಲವು ರಾಜನೀತಿ ಶಾಸ್ತ್ರಜ್ಞರೇ "ನಮ್ಮಲ್ಲಿಯೂ ಇಂತಹ ಉತ್ತಮ ಉದ್ದಾಮ ಗ್ರಂಥ ಉಂಟೇ!" ಎಂದು ಉದ್ಗಾರವನ್ನು ಎಳೆಯಬಹುದು.

ಕೌಟಿಲ್ಯ ಸನ್ಯಾಸಿ, ವೇದಾಂತಿ, ರಾಷ್ಟ್ರಭಕ್ತ ಅಲ್ಲದೆ ಧರ್ಮ ನಿಷ್ಠನೂ ಹೌದು. ಅವನಿಗೆ ದೇವರು ಹಾಗೂ ಸತ್ಯಾನ್ವೇಷಣೆಯಲ್ಲಿ ಪ್ರಜಾಕೋಟಿಯಲ್ಲಿ ಅಪರಿಮಿತವಾದ ಆದರ ಅಭಿಮಾನಗಳಿವೆ. ಸುವ್ಯವಸ್ಥಿತ ರಾಜ್ಯ ನಿರ್ಮಾಣ ಅದರ ಆಗು ಹೋಗುಗಳ ಕಲ್ಪನೆಯ ಕುರುಹಾಗಿ 'ಅರ್ಥಶಾಸ್ತ್ರ' ರೂಪುಗೊಂಡಿದೆ. ಆ ಕಾರಣದಿಂದಲೇ ಕೌಟಿಲ್ಯನಿಂದ ರಾಜಕೀಯ ನಾಯಕ ಸಾರಸಂಗ್ರಹವಾದ 'ಅರ್ಥಶಾಸ್ತ್ರ' ರೂಪು ತಾಳಿ ನಿಂತುದು.

ನಾವು ಕೌಟಿಲ್ಯನನ್ನು ಗೌರವಿಸಬೇಕಾದುದು ಧ್ಯೇಯವಾದಿ ದುಡುಮೆಗಾರನೆಂದಲ್ಲ. ಕ್ರಿಯಾವಾದಿ ಕರ್ತವ್ಯ ನಿಷ್ಠನೆಂದು ಕೌಟಿಲ್ಯನಂತಹ ರಾಜನೀತಿಜ್ಞ, ವ್ಯವಹಾರ ಚತುರ, ಪ್ರತಿಭಾವಂತ ಪಂಡಿತ ಭಾರತದಲ್ಲಿ ಬದುಕಿದ್ದ ಎಂಬುದೇ ಒಂದು ಹೆಮ್ಮೆಯ ಸಂಗತಿ. ಅವನ ಅರ್ಥಶಾಸ್ತ್ರ ಪುಟ ಸಂಖ್ಯೆಯಲ್ಲಿ ಮಾತ್ರವೇ ಅಲ್ಲದೆ ಗುಣಗಳಲ್ಲಿಯೂ ಪ್ರಮಾಣ ಗ್ರಂಥ.

ಅಮೃತ ಬಿಂದು

ತನ್ನ ಜ್ಞಾನದ ಬಗೆಗೆ ಅಹಂಕಾರ ಪಡುವ ವ್ಯಕ್ತಿಯು ಸ್ವಲ್ಪ ಪುಸ್ತಕವನ್ನು ತಣ್ಣಗಿಟ್ಟುಕೊಂಡು ವಿಚಾರಿಸಿ ನೋಡಬೇಕು. ತಾನು ಪಡೆದುಕೊಂಡ ಜ್ಞಾನ ಎಷ್ಟು ಎಂಬುವುದನ್ನು ಆತ್ಮನಿರೀಕ್ಷಣ ಮಾಡಿಕೊಳ್ಳುವ ವ್ಯಕ್ತಿಯು ಸದಾ ವಿನಯ ಶೀಲನಾಗಿರುವನು.

○ ○ ○ ○

"ಅವಿವೇಕಃ ಪರಮಾಪದಾಪದಂ" "ಅವಿವೇಕವು ಆಪತ್ತುಗಳ ಸ್ಥಾನ" ಎಂಬ ಭಾರತ ಕವಿಯ ವಾಣಿಯು ಸತ್ಯ. ಜೀವನ ಸುಶಿಕ್ಷಿತವೂ ಸುರಕ್ಷಿತವೂ ಆಗಲು ವಿವೇಕವು ಬೇಕು. ವಿವೇಕವೆಂಬುದೊಂದೇ ಮಾನವನ ಮಾನವತೆಯನ್ನು ರಕ್ಷಿಸುವದು.

○ ○ ○ ○

ಜ್ಞಾನಿಯಾಗಲು ಬಯಸುವವನು ಮೊದಲು ತಾನು ಅಜ್ಞಾನಿಯೆಂದು ತಿಳಿದುಕೊಳ್ಳುವಲ್ಲಿ ಸಂಕೋಚ ಪಡಬಾರದು. ತಾನು ಅಜ್ಞಾನಿ ಎಂದು ತಿಳಿಯದವನಿಗೆ ಜ್ಞಾನಿಯಾಗುವ ಅಧಿಕಾರ ಬಾರದು. ಜ್ಞಾನಿಯಾಗಲು ಬಯಸುವವನು ಅನ್ಯರ ಅನುಭವದ ಲಾಭವನ್ನು ಮಾಡಿಕೊಳ್ಳುವಲ್ಲಿ ಹಿಂಜರಿಯಬಾರದು.

○ ○ ○ ○

ಮತ್ತೊಬ್ಬರ ದೃಷ್ಟಿಯಲ್ಲಿ ತಾನು ಅಜ್ಞಾನಿ ಎಂದು ಕಂಡುಬರಬಾರದು ಎಂದು ಅಪೇಕ್ಷಿಸುವವನು ತನ್ನನ್ನು ಜ್ಞಾನಿಯೆಂದು ಅಹಂಕರಿಸಬಾರದು.

○ ○ ○ ○

ಸುಂದರ ಸ್ತ್ರೀಯರಲ್ಲಿ ಸಾದಾಬಟ್ಟೆಯನ್ನು ಉಟ್ಟುಕೊಂಡಿದ್ದರೂ ಆಕೆಯ ಸೌಂದರ್ಯದಿಂದಲೇ ಆ ಬಟ್ಟೆಗೆ ಬೆಲೆ ಬರುವುದಲ್ಲದೆ ಬಟ್ಟೆಯಿಂದ ಆಕೆಯ ಸೌಂದರ್ಯಕ್ಕೆ ಬೆಲೆ ಬಾರದು.

ಸಂಜೆಗೆಂಪು

ಅಂದಿನ ಸಂಜೆಗೆಂಪು
ಕಣ್ಗೆಂಪು
ಮುಂದಿನ ತಂಗಾಳಿ
ಸುಖ ಕೇಳಿ
○ ○ ○ ○
ಸೂರ್ಯಾಸ್ತ ಪ್ರಕಾಶ
ನಿಶೆಪಾಶ
ದೂರದ ಹಿಮ ಶೈಲ
ಮರಳ್ತೈಲ
○ ○ ○ ○
ಇರುಳಿನ ಕರಿ ಛಾಯೆ
ಬರಿ ಮಾಯೆ
ಭರದಲಿ ಬರೆ ದೋಣಿ
ಅಲೆ ಏಣಿ
○ ○ ○ ○
ಆಗಸದಲಿ ತಾರೆ
ಕಲೆದೋರೆ
ಹಾಡುತಲಿರೆ ಹಕ್ಕಿ
ಕಿವಿ ಕುಕ್ಕಿ
○ ○ ○ ○
ಮನದಿ ಮುದದ ಮಾಲೆ
ವಿಧಿಲೀಲೆ
ನನಗದು ಸವಿ ನೆನಪು
ಬಲು ನುಣುಪು
○ ○ ○ ○
ಹೂವೂ ನಾನಾಗಿ
ಮನನೀಗಿ
ದೇವನಿಗೇ ನಮನ
ಹೂದವನ

— ಕುಮಾರಿ ನೇತ್ರಾವತಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ್, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ

ರಿಜಿಸ್ಟ್ರಿ, ಫಾರ್ಮುಗಳಿಗೆ—

ವ್ಯಾಪಾರಿಗಳಿಗೆ ಬೇಕಾಗುವ

ವರ್ಗ, ಊಳಿಗ ಮೊದಲಾದ

ಎಕೌಂಟು ಪುಸ್ತಕಗಳಿಗೆ—

ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ

ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,

ಪಾಲುಕೋಟೆ, ಉಡುಪಿ, ದ. ಕನ್ನಡ.

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=53
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ವೇಶ್ಯಾ ಪದ್ಧತಿಯ ನಿವಾರಣೆ ಸಾಧ್ಯವೇ?

(ಪತ್ತನೇ ಪುಟದಿಂದ)

ಬಂಧನೆಗಳನ್ನು ಸರಿಯಾಗಿ ಆಲೋಚಿಸಿ ಸಿದ್ಧಗೊಳಿಸಬೇಕು.

ಲೈಂಗಿಕ ವಿಜ್ಞಾನವನ್ನು ನಮ್ಮಲ್ಲಿ ಕಡೆಗಣಿಸಲಾಗಿದೆ. ಗಂಡಾಗಲೀ ಹೆಣ್ಣಾಗಲೀ ಪ್ರಾಯಕ್ಕೆ ಬಂದಕೂಡಲೆ, ಅವರಿಗೆ ಲೈಂಗಿಕ ವಿಜ್ಞಾನದ ಶಿಕ್ಷಣ ಕೊಡಬೇಕು. ಹಾಗಾದಲ್ಲಿ ಅನೇಕ ಅಕ್ರಮ ಗರ್ಭಧಾರಣೆಗಳೂ ಗರ್ಭಪಾತಗಳೂ ನಿಲ್ಲುತ್ತವೆ. ಸಂಪೂರ್ಣ ತಿಳುವಳಿಕೆಯುಳ್ಳವರು ಹೀಗೆಲ್ಲಾ ಇಕ್ಕಟ್ಟಿಗೆ ಸಿಕ್ಕಿ ಕೊಳ್ಳುವುದಿಲ್ಲ. ದುಷ್ಟ ರೋಗಗಳಿಗೂ ತುತ್ತಾಗುವುದಿಲ್ಲ. ಲೈಂಗಿಕ ವಿಚಾರವಾಗಿ ಸ್ವಲ್ಪವೇನಾದರೂ ಮಾತುಕತೆ ತೆಗೆದರೆ ಅವನನ್ನು ಹೀಯಾಳಿಸುತ್ತಾರೆ. ಯುವಕ ಯುವತಿಯರು ಲೈಂಗಿಕ ಶಿಕ್ಷಣದಲ್ಲಿ ಸಂಪೂರ್ಣ ತರಬೇತಿ ಪಡೆಯ ಬೇಕಾದುದು ಸಹಜ. ಯೌವನ ಪ್ರಾಪ್ತವಾದ ಕೂಡಲೇ ಅವರಿಗೆ ಲೈಂಗಿಕ ವಿಷಯಗಳಲ್ಲಿ ತಾನಾಗಿಯೇ ಆಸಕ್ತಿ ಮೂಡುತ್ತದೆ. ತಾಯಿ ತಂದೆಗಳು ಈ ವಿಧವಾದ ಶಿಕ್ಷಣ ಕೊಡಲು ಸಾಧ್ಯವಿಲ್ಲ. ಆದುದರಿಂದ ಶಾಲೆಗಳಲ್ಲಿಯೋ ಕಾಲೇಜುಗಳಲ್ಲಿಯೋ ಸರಿಯಾದ, ಕ್ರಮ ಬದ್ಧವಾದ ಲೈಂಗಿಕ ಶಿಕ್ಷಣ ಕೊಡಲು ವ್ಯವಸ್ಥೆ ಮಾಡಬೇಕು.

ಯೋಗ್ಯ ಮಾರ್ಗದರ್ಶನ

ಯುವಕರಿಗೆ ಯೋಗ್ಯವಾದ ಮಾರ್ಗದರ್ಶನ ಮತ್ತು ಬುದ್ಧಿವಾದ ಇಂದು ಅತ್ಯವಶ್ಯವಾಗಿವೆ. ಇದಕ್ಕಾಗಿ ಸರಕಾರದವರು ತಕ್ಕ ವ್ಯವಸ್ಥೆ ಮಾಡಬೇಕಾಗಿದೆ. ಈಗೀಗ ಯುವ ಜನೋತ್ಸವ, ವ್ಯಾಯಾಮ ಪ್ರದರ್ಶನ, ಅಂಗ ಸಾಧನೆ ಮುಂತಾದುವು ನಡೆಯುತ್ತಿವೆ. ಮಕ್ಕಳ ಚಿಕಿತ್ಸಾಲಯಗಳೂ, ಮಕ್ಕಳ ಆಟದ ಬಯಲುಗಳೂ ಅತ್ಯಾವಶ್ಯಕವಾಗಿವೆ. ಮಕ್ಕಳ ಮನೋ ವಿಕಾಸಕ್ಕೆ ಇವುಗಳೆಲ್ಲ ಬೇಕಲ್ಲವೇ? ಅಂತೆಯೇ ಅಜ್ಞಾನಾಂಧಕಾರದಲ್ಲಿ ಮುಳುಗಿರುವ ತಾಯಿ ತಂದೆಗಳಿಗೆ ಆರೋಗ್ಯ, ಮಿತ ಸಂತಾನ, ಗೃಹ ಶೃಂಗಾರ, ಲೈಂಗಿಕ ಶಿಕ್ಷಣ, ದೇಹ ನೈರ್ಮಲ್ಯ, ಇವುಗಳ ಬಗ್ಗೆ ಆಗಾಗ್ಗ ಉಪನ್ಯಾಸಗಳ ಮೂಲಕ ತಿಳುವಳಿಕೆ ಕೊಡಬೇಕು. ಅನೇಕ ಗೃಹಸ್ಥರಿಗೆ ತಮ್ಮ ದೇಹ ಸೌಂದರ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದೇ ತಿಳಿಯದು, ಚೊಕ್ಕಟ ಎಂಬುದು ಕೆಲವರಿಗಂತೂ ಸ್ವಪ್ನವಾಗಿದೆ.

ರಷ್ಯಾದಲ್ಲಿ ಶಿಕ್ಷಾಪದ್ಧತಿ

ವ್ಯಭಿಚಾರದ ದುಷ್ಪರಿಣಾಮಗಳನ್ನು ಕುರಿತು ವಿಚಾರ ಪೂರಿತ ಉಪನ್ಯಾಸಗಳನ್ನು ಏರ್ಪಡಿಸಬೇಕು. ವ್ಯಭಿಚಾರಿಗಳಿಗೆ ಶಿಕ್ಷೆಕೊಡುವುದರ ಜೊತೆಗೆ ಆ ವೃತ್ತಿಗೆ ನೀರೆರೆಯುತ್ತಿರುವ "ವಿಟರಿಗೂ ವೇಶ್ಯಾಭಿ" ಮಾನಿಗಳಿಗೂ, ಶಿಕ್ಷೆ ಕೊಡಬೇಕು. ರಷ್ಯಾ ದೇಶದಲ್ಲಿ ಇಂದಿಗೂ ವೇಶ್ಯೆಯರಿಗೆ ಬದಲಾಗಿ ಅವಳ ಸಂಗಡ ಭೋಗಿಸುವವನಿಗೇ ಶಿಕ್ಷೆಯನ್ನು ವಿಧಿಸುವ ಪದ್ಧತಿ ಇದೆ. ನಮ್ಮ ದೇಶದಲ್ಲಿಯೂ ಹಾಗೆಯೇ ಮಾಡಿದರೆ, ವೇಶ್ಯೆಯ ಬಳಿಗೆ ಹೋಗುವ ಕಾಮಾಂಧರೇ ಕಡಮೆಯಾಗುತ್ತಾರೆ. ಅಲ್ಲಿ ಸಮಾಜ ಕಲ್ಯಾಣದ ಕಾರ್ಯ ಕಲಾಪಗಳೆಲ್ಲ ಕ್ಕೂ ಸರಕಾರಕ್ಕೆ ಬದಲಾಗಿ ಜನತಾ ಸಂಸ್ಥೆಗಳೇ ನಡೆಸುತ್ತವೆ. ದುರ್ಮಾರ್ಗಕ್ಕೆ ಹೋಗಿ ಕಷ್ಟಕ್ಕೆ ಸಿಕ್ಕಿಕೊಂಡಿರುವ ಸ್ತ್ರೀಯರ ರಕ್ಷಣೆಯನ್ನು ಸರಕಾರಕ್ಕೆ ಬದಲಾಗಿ ಜನತಾ ಸೇವಾ ಸಮಾಜಗಳೇ ಮಾಡುತ್ತವೆ. ಒಂದು ವ್ಯಕ್ತಿ ತೀರಾ ಕೆಟ್ಟು ಕಾನೂನು ಭಂಗ ಮಾಡುವವರೆಗೆ ಸುಮ್ಮನಿದ್ದು ಅನಂತರ ಅವರನ್ನು ಹಿಡಿದು; ಬಂಧನಕ್ಕೊಳಪಡಿಸಿ ಕೋರ್ಟಿಗೆಳೆದು ಶಿಕ್ಷೆ ವಿಧಿಸುವ ಬದಲು ಪೂರ್ವಭಾವಿಯಾಗಿಯೇ ಸುಳಿವು ತಿಳಿದು, ಅವರಿಗೇಕೆ ಸರಿಯಾದ ತಿಳುವಳಿಕೆ ನೀಡಬಾರದು? ಹೀಗೆ ಮಾಡಿದಲ್ಲಿ ಎಷ್ಟು ಸಂಸಾರಗಳು ಉಳಿಯುತ್ತವೆ? ಎಷ್ಟು ಯುವತಿಯರು ಬದುಕುತ್ತಾರೆ? ಕೆಟ್ಟಬಳಿಕ ಆ ಸ್ತ್ರೀಗೆ ಸಮಾಜದಲ್ಲಿ ಯಾವ ಗೌರವವೂ ದೊರೆಯಬಾರದು. ಆದುದರಿಂದ ಚಿಹ್ನೆಗಳು ಕಾಣುವಾಗಲೇ ಅವುಗಳನ್ನು ತಡೆಗಟ್ಟಲು ಯತ್ನಿಸಬೇಕು. ಕಾಮ ಸಂಬಂಧವಾದ ವ್ಯಾಪಾರ, ವ್ಯವಹಾರಗಳನ್ನು ಮೊಳಕೆಯಲ್ಲಿಯೇ ಚಿಗುಟಿ, ಬೆಳೆಯದಂತೆ ತಡೆಗಟ್ಟಬೇಕು. ರಷ್ಯಾದೇಶದಲ್ಲಿ ಹೀಗೆ ಇರುವುದರಿಂದಲೇ ಅಲ್ಲಿ ಸ್ತ್ರೀಸಂಬಂಧವಾದ ಕಾಯಿಲೆಗಳು ತೀರಾ ಕಡಿಮೆ; ಹಾಗೂ ವೇಶ್ಯಾ ಪದ್ಧತಿಗಂತೂ ಬೇರೆ ದೇಶಗಳಿಗೆ ಹೋಲಿಸಿ ನೋಡಿದರೆ ಅತ್ಯಂತ ಕಡಿಮೆ ಎನ್ನಬಹುದು. ಆದುದರಿಂದಲೇ ರಶ್ಯನ್ನರು ದೃಢಕಾಯರಾಗಿದ್ದಾರೆ.

ವೇಶ್ಯಾವೃತ್ತಿ—ವೈಯಕ್ತಿಕ

ವೇಶ್ಯಾ ವೃತ್ತಿ ಅಥವಾ ವ್ಯಭಿಚಾರ ಎನ್ನುವುದು ವೈಯಕ್ತಿಕವೇ ಹೊರತು ಸಾಮೂಹಿಕವಲ್ಲ. ಒಬ್ಬ ವ್ಯಕ್ತಿಯನ್ನು ಸರಿಯಾದ ದಾರಿಗೆ ತರುವುದು ಸ.ಶಿಕ್ಷಿತರಿಂದ ಸಾಧ್ಯವಿಲ್ಲವೇ? ಸಾಮೂಹಿಕವಾಗಿ ಅಂದರೆ ಸೂಳೆಗೇರಿಗೆ ಮುತ್ತಿಗೆಹಾಕಿದರೆ—ಫಲ ಖಂಡಿತ ದೊರೆಯಲಾರದು. ಒಬ್ಬೊಬ್ಬ ವ್ಯಕ್ತಿಯೂ (ಹೃದಯ ಪರಿವರ್ತನೆಯಾಗಿ)ತನ್ನನ್ನು ತಾನು ತಿದ್ದಿಕೊಳ್ಳಬೇಕು.

ಸಾಮಾಜಿಕ ಶಿಕ್ಷಣ

ಜನಾರೋಗ್ಯ ಅಧಿಕಾರಿಗಳು, ಆಸ್ಪತ್ರೆಯ ಮೇಲ್ವಿಚಾರಕರು, ಸಮಾಜ ಸುಧಾರಕರು ಈ ಬಗ್ಗೆ ಹೆಚ್ಚಿನ ನೆರವು ನೀಡಲು ಸಾಧ್ಯವಿದೆ. ಸಾಮೂಹಿಕಚಳವಳಿಯನ್ನು ಕೇವಲ ಪ್ರಚಾರಕ್ಕಾಗಿ ಮಾತ್ರ ಮಾಡಬಹುದು. ಸಾಮಾಜಿಕ ಶಿಕ್ಷಣವನ್ನು ಸಹ ಕೊಡುತ್ತಾ ಬಂದರೆ, ಮುಂದೆ ವೇಶ್ಯೆಯರಾಗ ಬಹುದಾದಂಥ ಯುವತಿಯರು ಎಚ್ಚೆತ್ತುಕೊಂಡು ಸನ್ಮಾರ್ಗಕ್ಕೆ ಕಾಲಿಟ್ಟು, ಯೋಗ್ಯರನ್ನುಮದುವೆಯಾಗಿ ಸಂಸಾರಿಗಳಾಗಲು ಖಂಡಿತಾ ಸಾಧ್ಯವಿದೆ. ಇದಕ್ಕಾಗಿ ಚಿಕಿತ್ಸಾಲಯಗಳು, ರಕ್ಷಣಾ ಗೃಹಗಳು, ಸಮಾಜ ಕಲ್ಯಾಣದ ಕಛೇರಿಗಳು,ಮುಂತಾದುವುಗಳನ್ನು ಬಿಗಿಗೊಳಿಸಬೇಕು. ಹಾಗೂ ಇವುಗಳನ್ನು ಹೆಚ್ಚು ಬಲಗೊಳಿಸಬೇಕು.

ಹೀಗಾದಲ್ಲಿ ನಮ್ಮ ನಾಡಿನಲ್ಲಿ ಶುಭೋದಯವಾದಂತೆಯೇ. ವೇಶ್ಯಾ ಪದ್ಧತಿಯ ನಿರ್ಮೂಲನಕ್ಕಾಗಿ ಸರ್ವರೂ ದುಡಿಯಬೇಕು. ದೇಶದ ಜನ ಆರೋಗ್ಯವಂತರಾಗಿ ನೂರ್ಕಾಲ ಬಾಳುವಂತಾಗಬೇಕು.

ಶಿರ್ವ ಹಿಂದೂ ಹಾಯರ್ ಸೆಕೆಂಡರಿ ಶಾಲೆಯ XI ತರಗತಿಯ ಉದ್ಘಾಟನೆ

ಶಿರ್ವ ಹಿಂದೂ ಹಾಯರ್ ಸೆಕೆಂಡರಿ ಶಾಲೆಯ XI ನೆ ತರಗತಿಯನ್ನು ಉದ್ಘಾಟಿಸಿ, ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರರಾದ ಶ್ರೀ ಟಿ. ಎ. ಪೈಗಳು, ಭಾಷಣವೀಯುತ್ತ, ನಮ್ಮ ದೇಶವು ಆರ್ಥಿಕ ಸ್ವಾತಂತ್ರ್ಯ ಪಡೆಯಬೇಕಾದರೆ ಎಲ್ಲರೂ ದುಡಿಯಬೇಕೆಂದೂ, ದುಂದು ವೆಚ್ಚಗಳನ್ನು ನಿಲ್ಲಿಸಬೇಕೆಂದೂ ಪದವಿಗೋಸ್ಕರ ವಿದ್ಯೆಯನ್ನು ಬಯಸಬಾರದೆಂದೂ , ಉದ್ಯೋಗಗಳಲ್ಲಿ ಮೇಲು-ಕೀಳೆಂಬ ಭಾವನೆ ಸಲ್ಲದೆಂದೂ ತಿಳಿಸಿ, ಉತ್ತಮ ನಾಗರಿಕರಾಗುವಂತೆ ವಿದ್ಯಾರ್ಥಿಗಳಿಗೆ ಕರೆ ಇತ್ತರು.

ಸಮಾರಂಭದ ಅಧ್ಯಕ್ಷಸ್ಥಾನವನ್ನು ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೂ, ಶಾಸನ ಸಭೆಯ ಸದಸ್ಯರೂ ಆದ ಶ್ರೀ ಎಮ್. ಮಧ್ವರಾಜರು ವಹಿಸಿದ್ದರು ಅವರು ಅಧ್ಯಕ್ಷ ಭಾಷಣವೀಯುತ್ತ ಶಿಸ್ತು ಮತ್ತು ಪ್ರಾಮಾಣಿಕತೆಯ ಆವಶ್ಯಕತೆಯನ್ನು ಒತ್ತಿ ಹೇಳಿದರಲ್ಲದೆ, ಯೋಗ್ಯ ನಾಗರಿಕರಾಗುವಂತೆ ಹಾರೈಸಿದರು.

ಸಭಿಕರಲ್ಲಿ, ಕಾಪು ಮತದಾರ ಕ್ಷೇತ್ರದ ಶಾಸನ ಸಭಾ ಸದಸ್ಯರಾದ ಶ್ರೀ ಬಿ. ಭಾಸ್ಕರ ಶೆಟ್ಟಿ ಭಾಷಣವೀಯುತ್ತ ಶಿಸ್ತು ಮತ್ತು ಪ್ರಾಮಾಣಿಕತೆಯ ಅವಶ್ಯಕತೆಯನ್ನು ತಿಳಿಸಿ,ವಿದ್ಯಾಸಂಸ್ಥೆಗೆ ಶುಭಕೋರಿದರು.

ಆರಂಭದಲ್ಲಿ ಶಾಲಾ ಕರೆಸ್ಪೊಂಡೆಂಟರಾದ ಶ್ರೀ ಪಿ. ಶಿವಾಜಿ ಶೆಟ್ಟಿ ಸ್ವಾಗತಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಜಯರಾಮ ಶೆಟ್ಟಿ ಸಂದೇಶವಾಚನ ಮಾಡಿ,ಸಾರ್ವಜನಿಕರ ಸಹಾಯ ಸಹಕಾರ ಕೋರಿ ಧನ್ಯವಾದವಿತ್ತರು.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ 26—6—66ರಂದು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರಿಂದ ರಚಿಸಲ್ಪಟ್ಟ "ಶಿವಪಂಚಾಕ್ಷರೀ ಮಹಿಮೆ" ಎಂಬ ಪುಣ್ಯಕತೆಯು ಯಕ್ಷಗಾನ ತಾಳಮದ್ದಳೆಯು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನೆರವೇರಿಸಲ್ಪಟ್ಟಿತು.

ಶ್ರೀ ಯಂ. ತಿಮ್ಮಪ್ಪಗೌಡರ ವತಿಯಿಂದ ಜರಗಲ್ಪಟ್ಟ ಈ ಕಾರ್ಯಕ್ರಮದಲ್ಲಿ ಸರ್ವಶ್ರೀ ಕೀ. ವ. ಕೇಶವ, ಬಿ. ವಿ. ವಿನೋದ, ವೇದಮೂರ್ತಿ ಗುಡ್ಡಪ್ಪ ಗೌಡ, ನಾರಾಯಣ ನಾಯರ್ ಮಾಸ್ತರ್, ಕೆ. ಅಣ್ಣಯ್ಯ ಭಂಡಾರಿ, ಯಂ. ನಾರಾಯಣ ರೈ, ಯಂ. ಯಸ್. ಗೌಡ ಸಾಂತಪ್ಪ ರೈ, ಕೆ. ಬಿ. ರೈ ಮೊದಲಾದವರು ಭಾಗವಹಿಸಿದ್ದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 39/1966

ಮೊಟ್ಟದಡ್ಕ ಮೊಹಿದೀನ್ ಮಸೀದಿ ಭಂಡಾರ—ಅಡ್ಕ ದಾರ ಅಬ್ಬುಬ್ಯಾರಿ —ವಾದಿ.

ಜೊನಾಥನ್ ಜೊಸೆಫ್‌ರವರ ಜೋಸೆಫ್ ಸಹಾ —ಪ್ರತಿವಾದಿಯು.

ಬೆಳ್ತಂಗಡಿ ತಾಲೂಕು ಮಲವಂತಿಗೆ ಗ್ರಾಮದ ಆರಸ ಮಜಲು ಎಂಬಲ್ಲಿರುವ ಶ್ರೀಮಾನ್ ಮುಳರನ್ ಪರೀದ್‌ರವರ ಮಗ ಶ್ರೀ ವಾಲುಕರನ್ ಪರೀದ್‌ರವರಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಿನ ವ್ಯಾಜ್ಯದಲ್ಲಿ ವಾದಿಗೆ ಪ್ರತಿವಾದಿಯು 5—11—64 ಮತ್ತು 5—11—65 ರಲ್ಲಿ ಸಲ್ಲಿಸಬೇಕಾಗಿರುವ ಅಕ್ಕಿಬಾಕಿ ಮತ್ತು ಅದರ ಮೇಲಿನ ಬಡ್ಡಿ ವಸೂಲಿ ಬಗ್ಗೆ ಮಾಡಿದ ದಾವೆಯು ನಿಮ್ಮ ಹಾಜರಾತಿಗೆ ತಾ. 21-7-1966 ಕ್ಕೆ ಇಟ್ಟಿರುತ್ತದೆ. ಸದ್ರಿವ್ಯಾಜ್ಯದ ದಿವಸ ದಾವೆಯ ಕುರಿತುನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರುಹಾಜರಿ ಎಂದು ತೀರ್ಮಾನ ಮಾಡಲಾಗುವುದು.

B. K. Suryanarayana Rao

Advocate, Belthangady (S-K.)

ಬೆಳ್ತಂಗಡಿ, ತಾ. 1—7—66.

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎಸ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುವರೆಗೆ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುವೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ......................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಎಂ.ಒಯಾದರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. E. P. 141/66

O. S. 593/63

ಕುಂಞಣ್ಣ ಶೆಟ್ಟಿ —ಅರ್ಜಿದಾರ

ಸುಬ್ಬಶೆಟ್ಟಿ ಕೂಡಾ —ಎದ್ರಿರು

ಎದ್ರಿರು

10) ಐತ್ತಪ್ಪ, 11) ಸೂವಪ್ಪ—ತನಿಯಪ್ಪೆಯಾನೆ ಮುತ್ತಕ್ಕ ಮಕ್ಕಳು, 14) ನಾರಾಯಣ—ಪೂವಕ್ಕ ಮಗ 15) ಉಮ್ಮಕ್ಕೆ—ಕಿಮ್ಮಕ್ಕೆ ಮಗಳು.

ಸದ್ರಿ ಎದ್ರಿಂಗೆ ಕೋರ್ಟುಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರನು ದಾಖಲು ಮಾಡಿದ ಸ್ಥಿರಾಸ್ತಿಯೇಲಂ ಇಸ್ತಿಹಾರಿನ ಶರತ್ತುಗಳನ್ನು ನಿರ್ಧರಿಸುವ ನೋಟೀಸಿನ ಬಗ್ಗೆ ಮತ್ತು ತನಗೆ ಯೇಲಂಗೆ ಸಲ್ಲುವರೇ ಪರ್ಮಿಶನ್ ಕೇಳಿಯೂ ಮಾಡಿದ R. E. A. 317/66ನೇ ಅರ್ಜಿಯ ನೋಟೀಸಿನ ಬಗ್ಗೆ ತಾ. 20—7—66ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರಾಗಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

(Sd) M. Sadashiva Rao.

Vakil for Petitioner

Puttur, 5—7—66

ಎಲ್ಲೆಲ್ಲಿ ಏನೇನು?

ಆರ್ಡಿಯಲ್ಲಿ ಹೈಸ್ಕೂಲ್ ಕಟ್ಟಡದ ಉದ್ಘಾಟನೆ

ಆರ್ಡಿಯಲ್ಲಿರುವ ಶ್ರೀ ಚಾರಮಕ್ಕಿ ನಾರಾಯಣ ಶೆಟ್ಟಿ ಹೈಸ್ಕೂಲಿನ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ಕಳೆದ ತಾ 28 ರಂದು, ಸ್ಥಳೀಯಾಡಳಿತ ಮಂತ್ರಿ ಶ್ರೀ ಆರ್. ಎಂ. ಪಾಟೀಲ್‌ರವರಿಂದ, ಶ್ರೀ ಕೆ. ಕೆ. ಶೆಟ್ಟಿ ಎಂ ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಪ್ರಾರಂಭದಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎ. ರಾಜೀವ ಶೆಟ್ಟರು ನೂತನ ಕಟ್ಟಡವನ್ನು ಉದ್ಘಾಟಿಸುವಂತೆ ಮಂತ್ರಿಗಳನ್ನು ಕೇಳಿಕೊಂಡರು, ಶ್ರೀ ಎಸ್. ಎಸ್. ಕೊಳ್ಕೆಬೈಲ್ ಎಂ. ಎಲ್. ಎ. ಸ್ವಾಗತಿಸಿದರು. ಶ್ರೀ ಪಾಟೀಲರು ಹೊಸ ಕಟ್ಟಡವನ್ನು ಉದ್ಘಾಟಿಸಿದಲ್ಲದೆ ಶಾಲಾ ಅಭಿವೃದ್ಧಿ ಮತ್ತು ಏಳಿಗೆಗೆ ಕಾರಣರಾದವರ ಭಾವಚಿತ್ರಗಳನ್ನು ಅನಾವರಣ ಮಾಡಿ, ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದವರು, ಹಾಗೂ ಜನತೆಯ ಆದರ್ಶ ಸಹಜೀವನವನ್ನು ಪ್ರಶಂಸಿಸಿದರು. ಅಲ್ಲದೆ ಶಾಲೆಗಾಗಿ ಉದಾರ ದಾನಮಾಡಿರುವ ಶ್ರೀ ಚಾರಮಕ್ಕಿ ನಾರಾಯಣ ಶೆಟ್ಟರ ಧರ್ಮ ಬುದ್ಧಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅನಂತರ ಪಂಚಾಯತ್ ಅಧ್ಯಕ್ಷ ಶ್ರೀ ವಿಠಲ ಶೆಟ್ಟರು ಆರ್ಡಿ ಊರಿಗೆ ಟೆಲಿಫೋನ್, ವಿದ್ಯುತ್ ಸರಬರಾಯಿ, ಆಸ್ಪತ್ರೆಗಳ ಸೌಕರ್ಯಗಳನ್ನು ಏರ್ಪಡಿಸುವಂತೆ ಕೇಳಿಕೊಂಡಿರುವ ಮನವಿಯನ್ನು ಮಂತ್ರಿಗಳಿಗೊಪ್ಪಿಸಿದರು.

ಈ ಸಮಾರಂಭದಲ್ಲಿ ಕುಂದಾಪುರ ತಾಲೂಕು ಎಜ್ಯುಕೇಶನ್ ಸೊಸೈಟಿಯವರಿಂದ ನಡೆಯಲ್ಪಡುತ್ತಿದ್ದ ವಂಡಸೆ ಮತ್ತು ಆರ್ಡಿಯಲ್ಲಿನ ಸಿ. ಎಸ್. ಎಸ್. ಹೈಸ್ಕೂಲುಗಳ ಆಡಳಿತೆಯನ್ನು ಬೋರ್ಡಿನ ವಶಕ್ಕೊಪ್ಪಿಸುವ ಸಮಾರಂಭವೂ ಜರಗಿತು. ಸೊಸೈಟಿಯ ಅಧ್ಯಕ್ಷ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಂ. ಎಲ್. ಎ ಅವರು ಮಾತನಾಡುತ್ತಾ ಹೈಸ್ಕೂಲ್‌ಗಳನ್ನು ಸ್ಥಾಪಿಸಿ ನಡೆಸಿಕೊಂಡು ಬರಲು ಸಹಾಯಮಾಡಿದವರಿಗೆಲ್ಲ ಕೃತಜ್ಞತೆಗಳನ್ನು ಅರ್ಪಿಸಿ, ಬೋರ್ಡಿನ ಆಶ್ರಯದಲ್ಲಿ ಈ ಎರಡೂ ಶಾಲೆಗಳ ಉತ್ತರೋತ್ತರ ಶ್ರೇಯೋಭಿವೃದ್ಧಿಯನ್ನು ಹಾರೈಸಿದರು. ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಂ. ಎಂ. ಹೆಗ್ಗಡೆಯವರು ಈ ಆಡಳಿತವನ್ನು ಸ್ವೀಕರಿಸಿದರು. ಅಧ್ಯಕ್ಷರ ಭಾಷಣಾನಂತರ ಆರ್ಡಿ ನಾರಾಯಣ ಶೆಟ್ಟಿಯವರು ವಂದನಾರ್ಪಣೆಗೈದರು.

ಟೆಂಡರು ಪ್ರಕಟಣೆ

ನಾವು, ನಮ್ಮ ತಾಯಿ ನೀಲಮ್ಮ, ಶ್ರೀಧರ ರೈ, ವಿಠಲ, ಮತ್ತು ಜಯರಾಮ ರೈ, ನಮ್ಮ ತಂದೆ ಸವಣೂರು ವೆಂಕಪ್ಪ ರೈಗಳಿಂದ ತಾ. 28ನೇ ಜನವರಿ 1966 ನೇ ಇಸವಿಯಲ್ಲಿ ರಿಜಿಸ್ಟ್ರಿ ಮಾಡಿಸಿ ವಾಯ್ದೆ ಗೇಣಿಗೆ ಮಾಡಿಕೊಂಡ ಸವಣೂರು ಗ್ರಾಮದ ಪಟ್ಟಾ ನಂಬ್ರ 46 ನೇ ಸರ್ವೆ ನಂಬ್ರ 3-3 ರಲ್ಲಿ ತೋಡಿರುವ ಕೆರೆ ಸಂಬಂಧ ಟೆಂಡರು.

50 ಅಡಿ ಉದ್ದ, 30 ಅಡಿ ಅಗಲ, 10 ಅಡಿ ಆಳ ಇರುವ ಕೆರೆಯನ್ನು ಬರುವ ಮೇ ತಿಂಗಳೊಳಗೆ ತೋಡಿಸಿ ಕೊಡುವ ಬಗ್ಗೆ ಕಂಟ್ರಾಕ್ಟ್‌ದಾರರಿಂದ ಟೆಂಡರ್ ಕರೆಯಲಾಗಿದೆ. ಟೆಂಡರನ್ನು ತಾ. 30—7—66 ರೊಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು, ವಿಶೇಷ ಮಾಹಿತಿಗೆ ಸ್ವತಃ ಬಂದು ವಿಚಾರಿಸುವುದು.

ಬಿ. ಶ್ರೀಧರ ರೈ.
S/o. ಸವಣೂರು ಗುತ್ತು ವೆಂಕಪ್ಪ ರೈ.
ಸವಣೂರು ಪೋಸ್ಟ್.
ಪುತ್ತೂರು ತಾಲೂಕು.

NOTICE

In the Court of the Munsif of Karkala

O. S. No. 320/1965

Between

Pakeera Beary ... Plaintiff

Venkappa Poojari & others... Defendants

To the supplemental defendants

4. Narayana	Children of deceased Balu Poojari
5. Muthu	
6. Honnamma	
7. Ramanna	
8. Padmappa	

All are residing at Kilenjar village of Mangalore Taluk.

Whereas the plaintiff has instituted the above suit for Rs. 329-79 towards rent or damages for use and occupation and subsequent interest and costs etc. and the same stands posted to 18-7-1966 you are hereby informed that you are required to appear before the said Court at 11 A. M. on the said date and plead your defence if any failing which the suit will be decided in your absence.

P. Ramachandra Rao,
Pleader for plaintiff.

Karkala, Dated 8-7-1966.

ಬ್ರಹ್ಮಾವರದಲ್ಲಿ ಹೈಯರ್ ಸೆಕೆಂಡರಿ ಶಾಲೆ

ಬ್ರಹ್ಮಾವರ ಎಸ್. ಎಂ. ಎಸ್. ಹೈಸ್ಕೂಲಿನಲ್ಲಿ ಆರಂಭವಾಗಲಿರುವ ಹೈಯರ್ ಸೆಕೆಂಡರಿ ತರಗತಿಯ ಉದ್ಘಾಟನೆಯನ್ನು ಶ್ರೀ ಎಸ್. ಧರ್ಮಸಾಮ್ರಾಜ್ಯ ಎಂ. ಎಲ್. ಎ. ಅವರು ರೆ॥ ಫಾ॥ ಕ್ರೂಯಿಕೋರರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಆರ್. ಹಂದೆಯವರು ಸ್ವಾಗತಿಸುತ್ತಾ ಹಾಯರ್ ಸೆಕೆಂಡರಿ ಆಗುವಂತೆ ಶ್ರಮಿಸಿದ ಶ್ರೀ ಧರ್ಮಸಾಮ್ರಾಜ್ಯರನ್ನು ವಂದಿಸಿದರು. ದೈಕಾಡಿ ವೆಂಕಟ ಕೃಷ್ಣರಾಯರು ಮತ್ತು ಶ್ರೀ ವಿ. ಕೆ. ಪರೆಲಾಯರು ಪ್ರಸ್ತಾವನ ಭಾಷಣ ಮಾಡಿದರು. ಸಭಿಕರ ಪರವಾಗಿ ಶ್ರೀ ಗೋಕುಲ್ ದಾಸ ಪೈಗಳು ಮಾತನಾಡುತ್ತಾ ವಿದ್ಯಾಕ್ಷೇತ್ರದಲ್ಲಿ ಸೀರಿಯನ್ ಮಿಶನ್ ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿದರು. ಅಧ್ಯಕ್ಷರ ಭಾಷಣಾನಂತರ ಮುಖ್ಯೋಪಾಧ್ಯಾಯರು ಧನ್ಯವಾದ ಸಮರ್ಪಿಸಿದರು.

ಉಡುಪಿ ರೋಟರಿ ಸಭೆ

ಉಡುಪಿ, ಜು. ೯, ಉಡುಪಿ ರೋಟರಿಯ ಸಭೆಯ ನವೀನ ವರ್ಷದ ಪದಾಧಿಕಾರಿಗಳ ಸಭೆಯನ್ನು ಉದ್ದೇಶಿಸಿ ಸ್ಪೀಕರ್ ಬಿ. ವಿ. ಬಾಳಿಗಾರವರು ಮಾತನಾಡುತ್ತಾ, ರೋಟರಿಯ ಸೇವಾ ಮನೋವೃತ್ತಿ ಡಾ॥ ಮಾಧವ ಪೈಗಳ ದೂರ ದರ್ಶಿತ್ವ ಹಾಗೂ ಅಭೂತ ಪೂರ್ವವಾದ ಯೋಜನೆಗಳಿಂದ ವ್ಯಕ್ತವಾ, ರೋಟರಿಯಂಥ ಸೇವಾಸಕ್ತ ಸಂಸ್ಥೆ ದೇಶಕ್ಕೆ ಅವಶ್ಯವೆಂದು ನುಡಿದರು.

ಆರಂಭದಲ್ಲಿ ಡಾ॥ ಮಾಧವ ಪೈಗಳು ಸ್ವಾಗತಿಸಿದರು. ಹಾಗೂ ಮಾಜಿ ಕಾರ್ಯದರ್ಶಿ ಶ್ರೀ ವಿ. ಚಂದ್ರಶೇಖರ್‌ರವರು ಕಳೆದ ವರ್ಷ ರೋಟರಿ ಕೈಗೊಂಡ ಚಟುವಟಿಕೆಗಳನ್ನು ವಿವರಿಸಿದರು. ನೂತನ ಅಧ್ಯಕ್ಷರಾಗಿ ಆಯ್ಕೆ ಹೊಂದಿದ ಡಾ॥ ಕೆ. ಎಲ್. ಐತಾಳರಿಗೂ ಕಾರ್ಯದರ್ಶಿಯಾಗಿ ಆಯ್ಕೆಗೊಂಡ ಡಾ॥ ಸಿ. ಎಚ್. ಶಿವರಾಮನ್‌ರವರಿಗೂ ಡಾ॥ ಪೈಗಳು ಅಧಿಕಾರ ವಹಿಸಿಕೊಟ್ಟರು. ಡಾ॥ ಕೃಷ್ಣಸ್ವಾಮಿ, ಡಾ॥ ಕೆ. ಮೋಹನದಾಸ ಪೈ, ಶ್ರೀ ಡಿ. ಜಿ. ದೇಶಪಾಂಡೆ ಮತ್ತು ಶ್ರೀ ವಿ. ಚಂದ್ರಶೇಖರರವರು ಡೈರೆಕ್ಟರುಗಳಾಗಿರುವರು.

ಶ್ರೀ ಪಿ. ಶ್ರೀಪತಿ ಆಚಾರ್ಯರು ಸ್ಪೀಕರ್ ಬಾಳಿಗಾ ಮತ್ತು ಶ್ರೀ ಟಿ. ಎ. ಪೈಗಳ ಪರಿಚಯ ಮಾಡಿಕೊಟ್ಟು ಟ್ಯೂಬರ್‌ಕ್ಯುಲೋಸಿಸ್ ವಿರೋಧಕ ಚುಚ್ಚುಮದ್ದಿನ ಮೂಲಕ ಧರ್ಮಾರ್ಥ ಸೇವೆ ಸಲ್ಲಿಸುವ ಕಾರ್ಯವನ್ನು ಈ ವರ್ಷವೂ ಮುಂದುವರಿಸಲಾಗುವುದೆಂದು ಹೇಳಿದರು.

ಸಭೆಯ ಮುಖ್ಯ ಅತಿಥಿಗಳಾಗಿದ್ದ ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಗಳು ಭಾಷಣಮಾಡುತ್ತಾ ನಮ್ಮ ರಾಷ್ಟ್ರವು ಪ್ರಗತಿ ಹೊಂದಬೇಕಾದರೆ ಮುಖ್ಯವಾಗಿ ಜನತೆಯು ಹೃದಯಪರಿವರ್ತನೆಗೊಳ್ಳಬೇಕು. ಮುಷ್ಕರ ಮೊದಲಾದ ಹಾನಿಕಾರಕ ಚಳವಳಿಗಳಿಂದ ಸಮಸ್ಯೆ ಪರಿಹಾರವಾಗುವ ಬದಲು ಇನ್ನೂ ಹೆಚ್ಚು ಸಮಸ್ಯೆಗಳನ್ನು ನಾವು ಸೃಷ್ಟಿಸಿದಂತಾಗುವುದು, ಜನರು ಎಚ್ಚೆತ್ತು, ಜಾಗೃತರಾಗಿ, ಕಾರ್ಯನಿಷ್ಠರಾಗಬೇಕು ಎಂದು ನುಡಿದರು.

ಕೊನೆಯಲ್ಲಿ ನೂತನ ಅಧ್ಯಕ್ಷ ಡಾ॥ ಐತಾಳರು ತನ್ನನ್ನು ಆರಿಸಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ಡಾ॥ ಸಿ. ಎಚ್. ಶಿವರಾಮನ್‌ರವರು ಧನ್ಯವಾದ ಸಮರ್ಪಿಸಿದರು.

ಸಿಂಡಿಕೇಟ್ ಬ್ಯಾಂಕಿನ ಮಧುರೈ ಶಾಖೆ

ಜೂನ್ 30ರಂದು ಸಿಂಡಿಕೇಟ್ ಬ್ಯಾಂಕಿನ ಮಧುರೈ ಶಾಖೆಯು 72, ಸೌತ್ ಮಾಸಿ ಸ್ಟ್ರೀಟ್, ಪೋಸ್ಟ್ ಬಾಕ್ಸ್ ನಂ. 41, ಮಧುರೈ. ಎಂಬ ವಿಳಾಸದಲ್ಲಿ ತೆರೆಯಲ್ಪಟ್ಟಿರುವುದು.

ಮಧುರೈ ಶಾಖೆಯು ಮದ್ರಾಸ್ ರಾಜ್ಯದಲ್ಲಿ ಸಿಂಡಿಕೇಟ್ ಬ್ಯಾಂಕಿನ 20ನೇ ಶಾಖೆಯಾಗಿದೆ. ಈ ಶಾಖೆಯು ತೆರೆಯುವಿಕೆಯಿಂದ ಸಿಂಡಿಕೇಟ್ ಬ್ಯಾಂಕಿಗೆ ಈಗ 210 ಶಾಖೆಗಳಾದುವು. ಗುಜರಾತಿನ ರಾಜಧಾನಿ ಅಹಮ್ಮದಾಬಾದಿನಲ್ಲಿ ಇದೇ ಜುಲೈಯಲ್ಲಿ ಬ್ಯಾಂಕು ಅದರ ಶಾಖೆಯನ್ನು ತೆರೆಯಲಿದೆ. ಇದು ಗುಜರಾತು ರಾಜ್ಯದಲ್ಲಿ ಬ್ಯಾಂಕಿನ 2ನೇ ಶಾಖೆಯಾಗಿದೆ. ಒಂದನೇ ಶಾಖೆಯು ಬರೋಡದಲ್ಲಿದೆ.

ಆಂಧ್ರ ಪ್ರದೇಶದ ವಿಜಯನಗರಂ (ವಿಶಾಖಪಟ್ಟಣ ಜಿಲ್ಲೆ), ಯಡಿಕಿ (ಅನಂತಪುರ ಜಿಲ್ಲೆ), ವಾರಂಗಲ್, ನಿಜಾಮಬಾದ್, ಕೋಟಿಕಾರ್ (ದ. ಕ. ಜಿಲ್ಲೆ) ಹಾಗೂ ಪೂನ ಮೊದಲಾದ ಕಡೆಗಳಲ್ಲಿ ಬ್ಯಾಂಕಿನ ಇತರ ಹಲವಾರು ಶಾಖೆಗಳು ಸದ್ಯವೇ ತೆರೆಯಲ್ಪಡಲಿವೆ.

ಗೋಳಿಯಂಗಡಿ ಹೈಸ್ಕೂಲಿನ ನೂತನ ಕಟ್ಟಡದ ಉದ್ಘಾಟನೆ

ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಮಂತ್ರಿ ಶ್ರೀ ಆರ್. ಎಂ. ಪಾಟೀಲರವರು ಉಡುಪಿ ತಾಲೂಕು ಬೋರ್ಡಿನ ಆಶ್ರಯದಲ್ಲಿ ಗೋಳಿಯಂಗಡಿಯಲ್ಲಿ ತೆರೆಯಲಾದ ಹೈಸ್ಕೂಲಿನ ನೂತನ ಕಟ್ಟಡವನ್ನು ಉದ್ಘಾಟಿಸುತ್ತಾ ವಿದ್ಯಾವಂತರಾದ ಜನರೇ ನಾಡಿನ ದೊಡ್ಡ ಸಂಪತ್ತು ಎಂದು ಒತ್ತಿ ಹೇಳಿದರು.

ಆರಂಭದಲ್ಲಿ ಉಡುಪಿ ತಾ. ಬೋರ್ಡು ಅಧ್ಯಕ್ಷ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ. ಅವರು ಸ್ವಾಗತಿಸಿದರು. ಈ ಹೈಸ್ಕೂಲಿಗೆ ಶ್ರೀ ಎಂ. ಮಧ್ವರಾಜ 2 ಸಾವಿರ ರೂ; ಶ್ರೀ ಚಾರಮಕ್ಕಿ ನಾರಾಯಣ ಶೆಟ್ಟರು ರೂ. 1001 ನ್ನು ಸಹಾಯನೀಡುವುದಾಗಿ ವಾಗ್ದಾನ ಮಾಡಿದರು.

ಜಿಲ್ಲಾ ಕಾಂಗ್ರೆಸ್, ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರು ಕಟ್ಟಡ ರಚನೆಯ ಕೆಲಸಗಾರರಿಗೆ ಬಹುಮಾನ ವಿತರಣೆಮಾಡಿ, ಶ್ರೀ ಮಧ್ವರಾಜ್ ಹಾಗೂ ಶ್ರೀ ಚಾರಮಕ್ಕಿ ನಾರಾಯಣ ಶೆಟ್ಟರ ಕಾರ್ಯವನ್ನು ಕೊಂಡಾಡಿದರು. ಶ್ರೀ ಎಸ್. ಎಸ್. ಕೊಳ್ಕೆಬೈಲ್ ಎಂ. ಎಲ್. ಎ. ರವರು ಶ್ರೇಯ ಪ್ರಾರ್ಥನೆ ಮಾಡಿ, ಹೈಸ್ಕೂಲಿನ ರಚನೆಯಲ್ಲಿ ಜನತೆಯ ಆಸಕ್ತಿಯನ್ನು ಅಭಿನಂದಿಸಿದರು.

ಶಾಲಾ ಮುಖೋಪಾಧ್ಯಾಯ ಶ್ರೀ ಪಿ. ಅಚ್ಯುತಯ್ಯನವರು ಶಾಲಾವರದಿಯನ್ನೂ, ಶ್ರೀ ರಾಮರಾಯ ಹಾಲಂದಿಯವರು ಶಾಲಾಸಮಿತಿಯ ವರದಿಯನ್ನೂ ಒಪ್ಪಿಸಿದರು. ಶಾಲಾಸಮಿತಿ ಹಾಗೂ ಹಿಲಿಯಾಣ ಪಂಚಾಯತಿನ ಪರವಾಗಿ ಮಂತ್ರಿಗಳಿಗೆ ಮಾನ ಪತ್ರ ಅರ್ಪಣೆಯಾಯಿತು.

ಕೊನೆಯಲ್ಲಿ ಶ್ರೀ ಹಾಲಾಡಿ ಮಹಾಬಲ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಕಾರ್ಕಳ ಮುನ್ಸೀಫ್ ಕೋರ್ಟಿನಲ್ಲಿ

O. S. No 106/1966.

ದರೆಗುಡ್ಡೆ ಶ್ರೀನಿವಾಸ ತಂತ್ರಿ,
ಶೀತಾರಾಮ ತಂತ್ರಿಗಳ ಮಗ, ದರೆಗುಡ್ಡೆ ಗ್ರಾಮಸ್ಥ. —ವಾದಿ

ಮತ್ತು

ಬೊಗ್ಗಿಯಾನೆ ಮಂಜಮ್ಮ ವಗೈರೆರು.
—ಪ್ರತಿವಾದಿರು.

ಇವರೊಳಗೆ

ಮೇಲ್ಕಂಡ ದಾವೆಯ 10ನೇ ಪ್ರತಿವಾದಿ ನೋನಯ್ಯ ಪೂಜಾರಿ, ಬೊಗ್ಗಿಯಾನೆ ಮಂಜಮ್ಮ ಹೆಂಗ್ಸಿನ ಮಗ, 18ನೇ ಪ್ರತಿವಾದಿ, ಕುಡುಪ ಪೂಜಾರಿ, ಡೊಂಬಿ ಹೆಂಗ್ಸಿನ ಮಗ, ಕಾರ್ಕಳ ತಾಲ್ಲೂಕು ಕೆಲ್ಲಪುತ್ತಿಗೆ ಗ್ರಾಮದ ಕನ್ನಾಡಿ ಎಂಬಲ್ಲಿರುವವರಿಗೆ- ವಾದಿಯು ನಿಮ್ಮ ಮೇಲೆ ಕೂಡ, ತಾರೀಕು 3.9.1949ರಲ್ಲಿ ನೀವು ಕೂಡಾ ಬರೆಕೊಟ್ಟ ಅಡವಿನ ಅಸಲು ಬಡ್ಡಿ ಖರ್ಚು ವಸೂಲು ಮಾಡಿ ಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾ. 4-8-1966 ನೇ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟಿನ ಮುಂದೆ ಇಟ್ಟಿರುವುದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯಿರುವಲ್ಲಿ ನೀವು ಸದರಿ ತಾರೀಕಿನಲ್ಲಿ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ಜವಾಬು ಮಾಡಿಕೊಳ್ಳಬೇಕಾಗಿಯೂ ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆ ಎಂಬುದಾಗಿಯೂ ನಿಮಗೆ ಈ ಮೂಲಕ ತಿಳಿಯಪಡಿಸಲಾಗುತ್ತದೆ.

S. Rajagopal Achar
Advocate for Plaintiff

ಕಾರ್ಕಳ, ತಾ: 9-7-66

ಶುಭಾಶಯಗಳು

ಇದೀಗ ವಜ್ರ ಮಹೋತ್ಸವವನ್ನು ಆಚರಿಸುತ್ತಿರುವ
ದೇಶದ ಪ್ರಮುಖ ಬ್ಯಾಂಕುಗಳಲ್ಲೊಂದಾಗಿ
ಜಿಲ್ಲೆಗೆ ಕೀರ್ತಿ ತಂದ

ಕೆನರಾ ಬ್ಯಾಂಕಿಗೆ

'ನವಯುಗ'ದ ಶುಭಾಶಯಗಳು!

ರೈತ ಮುರುಗ

(ಎರಡನೇ ಪುಟದಿಂದ)

ಬೆಳಗಾಗಬೇಕಾದರೆ ಕಾಯಬೇಕು. ಅಂಧಕಾರದ ಪರದೆಯನ್ನು ಹರಿಯುವದು...."

"ವಾಸಸ್ಥಾನದ ಕುರಿತು ಇನ್ನೇನಾದರೂ ಹೇಳಲಿಕ್ಕಿದೆಯೇನು?"

ಇನ್ನೇನಿಲ್ಲ. ಈಗ ನಿನಗೆಲ್ಲಾ ವಿಷಯಗಳು ತಿಳಿದಿವೆ, ಕೇದಾರಿ. ಈ ವಿಷಯಗಳನ್ನು ಶ್ರೀಯುತ ಕೆಡೆಲರೊಂದಿಗೆ ಚರ್ಚಿಸಿದ್ದೇನೆ. ಅವರೂ ಇದೆಲ್ಲಾ ಸರಕಾರ ಮಾಡಬೇಕಾಗಿರುವ ಮೊದಲ ಕರ್ತವ್ಯವೆಂಬುದನ್ನು ಒಪ್ಪುತ್ತಾರೆ. ಅವರು ಈ ಭೂಮಿ ಎಕರೆ ಹಿಡುವಳಿಯನ್ನು ಪಾಲುಮಾಡಲಿಕ್ಕಾಗದಂತಹ, ಸಾಲಕ್ಕೆ ಒತ್ತೆ ಇಡಲಾಗದಂತಹ, ಅವಿರತವಾದಿಯಿಂದ ಮೊದಲ ಮಗನಿಗೆ, ಆತನಿಂದ ಮೊದಲ ಮಗನಿಗೆ... ಹೀಗೆ ವಂಶ ಪಾರಂಪರ್ಯವಾಗಿ ಹೋಗಬೇಕಾಗಿ ತಿಳಿಸಿದ್ದಾರೆ. ಸರಕಾರವು ಒಂದು ಉದ್ದದ ರಸ್ತೆ. ಮಾನವನು ವಿಕಾಸದ ಪ್ರಯಾಸಮಯ ಗತಿಯಲ್ಲಿ ಸ್ಥಿರವಾಗಿ ಕೆಲಸ ಮಾಡುತ್ತಿದ್ದಾನೆ. ಈ ಎಲ್ಲಾ ಮಹಾನ್ ಸಾಹಸದಲ್ಲೂ ಕೆಲ ಉಪಕಾರಿ ಉದ್ದೇಶ ಅಡಗಿಕೊಂಡಿರುತ್ತದೆ; ಲೋಭಿ ಹಾಗೂ ಜಗಳ ಪ್ರಿಯ ವ್ಯಕ್ತಿಗಳ ಮೇಲೆ ಒತ್ತಾಯವನ್ನು ಮಾಡಬೇಕಾಗುತ್ತದೆ, ಕಾಯುವ ಬೇಲಿಯೇ ಬೆಳೆಯನ್ನು ಮೇದು ನಾಶಮಾಡುವಂತೆ, ಸರಕಾರವು ಇಂದು ಅಧಿಕಾರದ ಶಿಖರದಲ್ಲಿದೆ. ಒಂದು ನಿಶ್ಚಿತ ಒಳ್ಳೆಯದಕ್ಕಾಗಿ ಜನನವಾಗುವಂತೆ ಸರಕಾರವು ಅವತಾರದಂತೆ ಇರಬೇಕು. ಅದು ತನ್ನ ಕಾರ್ಯವನ್ನು ಮಾಡಿ ದುಷ್ಕಾರ್ಯಕ್ಕೆ ಮೆಟ್ಟಿಗೋಲು ಹಾಕಬೇಕು. ವ್ಯಕ್ತಿಯು ಪರಿಪೂರ್ಣತೆ ಹಾಗೂ ಅತ್ಯುತ್ತಮ ಮಟ್ಟದ ನೀತಿ, ಧಾರ್ಮಿಕತೆ ಹಾಗೂ ಸಾಮಾಜಿಕತೆಯ ಮೆಟ್ಟಿಲುಗಳನ್ನೇರಿ ದೈವಿಕ ಪುರುಷನಾಗುವವರೆಗೆ ದೇಶದ ಏಳ್ಗೆಗಾಗಿ ಮಾತ್ರವಲ್ಲ ಜಗತ್ತಿನ ಕಲ್ಯಾಣಕ್ಕಾಗಿ ಸರಕಾರ ಇರಬೇಕಾಗುತ್ತದೆ."

"ನಿನ್ನದೆಲ್ಲವೂ ಮಹಾನ್ ಯೋಜನೆಗಳು, ರಾಮು. ಪ್ರಪಂಚವು ನಿನ್ನಂತೆಯೇ ಅವುಗಳನ್ನು ಕಾಣಬಹುದೆಂದು ನಾನು ಭಾವಿಸುತ್ತೇನೆ. ಆದರೆ ನಿನ್ನನ್ನು ನೀನು ಏನು ಮಾಡಿಕೊಳ್ಳುವಿ? ನೀನೀಗ ಉಪಜಿಲ್ಲಾಧಿಕಾರಿಯ ಸಾಲಿನಲ್ಲಿ..."

"ನನ್ನನ್ನು ಈ ಎರಕದಲ್ಲಿ ಹೊಯ್ದಿರುವ ಮಾನವರೊಂದಿಗೆ ಹಾಗೂ ನನ್ನನ್ನಿಟ್ಟಿರಲಿಕ್ಕಾಗಿ ಸಾನದಷ್ಟೆ ತಿಳಿಸಿ ಕೊಟ್ಟುಬಿಡುತ್ತೇನೆ. ನಿನ್ನೊಂದಿಗೆ ನಾನೂ ಮೂರು ಎಕರೆ ಭೂಮಿಗಾಗಿ ಕೇಳಿಕೊಳ್ಳುತ್ತೇನೆ. ಈ ನಮ್ಮ ಕಾರ್ಯದಲ್ಲಿ ಮೌನವಾಗಿ ಸಹಾಯ ಮಾಡಿರುವವರೆಲ್ಲರಿಗೂ ಭೂಮಿ ಸಿಗಲಿ."

"ಅವರು ಯಾರು?"

"ಶ್ರೀಯುತ ಹಾಗೂ ಶ್ರೀಮತಿ ಕೆಡೆಲ್ಸ್, ಸರ್ವಶ್ರೀ ಕ್ರೈಗ್ ಮತ್ತು ಟರ್ನರ್."

"ಹಾಗೆ ಮಾರ್ಕಂಡಮ್‌ರಿಗಾಗಿ ನಾನು ವಾದಿಸಲೇ? ಅವರು ಪ್ರಪಂಚದಲ್ಲಿ ಅಪರೂಪವಾಗಿರುವ ಆದರೆ ರಸಭರಿತ ಮಾತಗಳನ್ನು ನನಗೆ ಕಲಿಸಿಕೊಟ್ಟಿದ್ದಾರೆ— ಅವರಿಗಾಗಿ ನಾನು...."

'ಸರಿ, ಸರಿ; ಚೆನ್ನಾಗಿದೆ. ನಾನೂ ಒಪ್ಪುತ್ತೇನೆ. ಆದರೆ ಅವರು ಸ್ವೀಕರಿಸುವರೇ?'

"ನಾವು ಕೊಟ್ಟು ನೋಡೋಣ. ಅವರೀಗ ಮುಂಚಿನಂತೆ ಪ್ರಕಾಶಮಾನವಾಗಿ ಮಿನುಗುತ್ತಿರುವ ನಕ್ಷತ್ರವಾಗಿರುವದಿಲ್ಲ. ಈಗಲೂ ಪರಿಸ್ಥಿತಿಗಳು ಒಟ್ಟಾಗಿ ಅವರಿಗೆ ಪಾಠ ಕಲಿಸುತ್ತಿದ್ದಾವೆಂಬುದನ್ನು ನಾನು ಕೇಳಿದ್ದೇನೆ. ಅವರು ಇನ್ನೊಂದು ಜನ್ಮದಲ್ಲಿ ಕಲಿತುಕೊಳ್ಳುವರೆಂದು ನಾನೆಣಿಸಿಕೊಂಡಿದ್ದೆ."

'ಕಾವೇರಿಯ ಪವಿತ್ರೋದಕದ ಮೇಲೆ ತೇಲಾಡುತ್ತಿರುವ ನೊರೆಯಂತೆ, ಈ ಪ್ರಪಂಚದಲ್ಲಿ ಕೆಲವರು ಯಾವಾಗಲೂ ಕೆಟ್ಟ ಕಾರ್ಯಗಳಿಂದಲೇ ಪ್ರಖ್ಯಾತಿಗೆ ಬರುತ್ತಿರುತ್ತಾರೆ. ಅವರ ಕುರಿತು ಚಿಂತನೆ ಮಾಡುವದು ಬೇಡ. ಆದರೆ ನಿಜವಾದ ಮಹಾನ್ ವಿಶ್ವಹೋರಾಟದಲ್ಲಿ ಅವರನ್ನಾರೂ ಎಣಿಕೆಯಲ್ಲಿ ಸೇರಿಸಿಕೊಳ್ಳುವದಿಲ್ಲ. ಅವರು ಕೇವಲ ನೊರೆಯ ಹಾಗೆ ಇರುತ್ತಾರೆ. ಆದರೆ ಅವರಲ್ಲಿ ಕೆಲವರು ನಿಧಾನವಾಗಿ ಅಥವಾ ಸ್ವಲ್ಪ ಶೀಘ್ರವಾಗಿ ಸೌಮ್ಯತೆಯಿಂದ ಮನೆಗೆ ಮರಳಿ ಬಂದು ಪಶ್ಚಾತ್ತಾಪದ ಸ್ವಂದದಲ್ಲಿ ಆಹಾರಕ್ಕಾಗಿ ಕೇಳುವದುಂಟು. ನಾವು ಅವರನ್ನು ಆದೆಂದಿಗೂ ತಳ್ಳಿಬಿಡಬಾರದು. ನಾವೂ ನದಿಯಂತೆ ಸಮುದ್ರದತ್ತ ಚಲಿಸುತ್ತಿರಬೇಕು. ಉಪ್ಪು ನೀರು ಅದು ನಾವು, ಆದರೂ ಸಮುದ್ರದಲ್ಲಿ ಸೇರಿಬಿಡುವದು ಆದರ ಪ್ರೀತಿ ಅಲ್ಲದೆ ಕರ್ತವ್ಯವಲ್ಲವೇ?"

— ೪೮ —

ಅರ್ಣಿ ನದಿಯೊಡಗಿನ ಭಯಂಕರತೆ ಮುಗಿದು ಹೋಗಿದೆ. ಕಣಿವೆಯು ಬಹಳ ಚಂದದ ಸರೋವರವಾಗಿ ಜಲಮಯವಾಗಿದೆ. ನದಿಯನ್ನು ಹಾಗೂ ಸರೋವರವನ್ನು ಹೊಸ ಹಳ್ಳಿಯು ತಲೆಯೆತ್ತಿ ನೋಡುತ್ತಿದೆ. ಕಾಲುವೆಯು ದಡದುದ್ದಕ್ಕೂ ತೆಂಗಿನ, ಕಂಗಿನ ಗಿಡಗಳನ್ನೂ, ಹಣ್ಣುಗಳನ್ನು ಕೊಡುವ ಸಸ್ಯಗಳ ಗಿಡಗಳನ್ನೂ ನೆಡಲಾಗಿದೆ. ಹಳ್ಳಿಯ ನಾಲ್ಕು ಬದಿಗಳಲ್ಲೂ ಕಾಲುವೆಯು ಹರಿಯುತ್ತಿದ್ದು ಹಳ್ಳಿಯನ್ನು ಫಲವತ್ತಾದ ದ್ವೀಪವನ್ನಾಗಿ ಮಾಡಿದೆ. ನಾಲ್ಕು ಬದಿಗಳ ನಡುವೆ, ಎರಡು ಚಿಕ್ಕ ಕಾಲುವೆಗಳು ಎದುರಾಗಿ ಇವೆ. ಹಾಗಾಗಿ ಮಧ್ಯದಲ್ಲಿ ಬಹಳ ಚಂದದ ಕೆರೆ ಉಂಟಾಗಿದೆ. ಕೆರೆಯ ಪೂರ್ವದಲ್ಲಿ ಚಿಕ್ಕದಾದರೂ ಚಂದದ ಒಂದು ದೇವಸ್ಥಾನವಿದೆ.

ಆರೊಂದು ಚಿಕ್ಕ ತೋಟದ ನಗರವಿದೆ. ಪ್ರತಿಯೊಂದು ಗುಡಿಸಲ ಸುತ್ತುಮುತ್ತಲೂ ಮರಗಳಿವೆ. ಆ ಮರಗಳಾದರೋ ಉದ್ದೇಶ ಪೂರ್ವಕವಾಗಿ ಯಾರೋ ಬೆಳೆಸಿಟ್ಟಂತಿವೆ. ಮುನ್ನೂರು ಕುಟುಂಬಗಳ ಪ್ರತಿಯೊರ್ವನಿಗೂ ಅವನದೇ ಆದ ಅಥವಾ ಅಕೆಯದೇ ಇರುವ ಮೂರು ಎಕರೆ ಜಮೀನು, ಮನೆಗೆ ಹಾಗೂ ತೋಟಕ್ಕೆ ಸ್ಥಳ ಇದೆ. ಯಾರಾದರೂ ಇನ್ನು ಬಂದಲ್ಲಿ ಕೊಡಲು ಸ್ವಲ್ಪ ಸ್ಥಳ ಇದೆ. ನಾಗಲಾಪುರಮಿನ ಮಣ್ಣಿನ ಮೇಲೆ ಹಕ್ಕಿರುವ ಜನರನ್ನು ಆಮಂತ್ರಿಸಲು ಕೇದಾರಿಯೊಡನೆ ರಾಮು ಆಲೋಚಿಸುತ್ತ ಇದ್ದನು.

ಕೆಲಸಗಳೆಲ್ಲಾ ಮುಗಿದಿವೆ. ಔಪಚಾರಿಕ ಆರಂಭೋತ್ಸವ ಮಾತ್ರ ಬಾಕಿ ಇದೆ. ಒಂದು ದಿನ ಸಂಜೆ ರಾಮು ಮತ್ತು ಕೇದಾರಿ ತಮ್ಮ ಹಳ್ಳಿಯ ದೃಶ್ಯವನ್ನು ನೋಡಲು ಹೊರಟರು. ಬೆಳೆಯುತ್ತಿರುವ ತೋಟದ ನಗರವನ್ನು ನೋಡಿ ಕೇದಾರಿಗೆ ಆಶ್ಚರ್ಯವಾಯಿತು. ಅವನು ಹರ್ಷಾವೇಶದಿಂದ ರಾಮುವಿಗೆ ಹೇಳಲಾರಂಭಿಸಿದ:

"ರಾಮು, ನೀನು ಕಂಡು ಹಿಡಿದು ರೂಪು ಕೊಟ್ಟಿರುವ ಈ ಯೋಜನೆಯು ಮಹತ್ವಪೂರ್ಣವಾದ್ದಿದೆ. ನಿನ್ನ ಕನಸು ಇಂದು ನೆನಸಾಗಿದೆ. ಇದು ಜನತೆಯ ಎದುರಿಗಿರುವ ಒಂದು ಪ್ರತಿಮೆ ಹಾಗೂ ಅವರಿಗೊಂದು ಮೆಟ್ಟಿಲು.

"ಈ ಹಳ್ಳಿಗೆ ಏನೆಂದು ಹೆಸರಿಡುವೆ? ನಾನು ಹೇಳುವದಿದ್ದಲ್ಲಿ ನಿನ್ನ ಹೆಸರನ್ನೇ ಇಡಬೇಕು, ಯಾಕೆ ಇಡಬಾರದು?"

'ಇಲ್ಲ, ಇಲ್ಲ, ಕೇದಾರಿ, ಆದೆಂದೆಂದಿಗೂ ಕೂಡದು. ಮುರುಗನ ಕೈಯಲ್ಲಿರುವ ಹಾರೆಯಂತೆ ನಾನು ಕೇವಲ ಒಂದು ಸಲಕರಣೆ ಇದ್ದೇನೆ. ನೀನು ಚೆನ್ನಾಗಿ ಆಲೋಚಿಸಿದರೆ ಜ್ಞಾಪಕ ಬರಬಹುದು. ಅವರ ಹೆಸರನ್ನೇ ಇಡಬಹುದು. ಇಷ್ಟೆಲ್ಲದಕ್ಕೂ ಕಾರಣವಾಗಿರುವ ವ್ಯಕ್ತಿ ಇಂದು ನಮ್ಮೊಡನಿಲ್ಲ. ಇರುತ್ತಿದ್ದಲ್ಲಿ ನನ್ನ ಸಾಮರ್ಥ್ಯಪೂರ್ಣ ಮನಸ್ಸಿನ ವಿಚಿತ್ರ ಫಲವನ್ನು ಆ ವ್ಯಕ್ತಿ ಕಾಣಬಹುದಿತ್ತು. ವ್ಯಕ್ತಿಯ ಹೆಸರು ಮೀನಾಕ್ಷಿ. ಆದುದರಿಂದ ನಾವು ಈ ಊರನ್ನು ಮೀನಾಕ್ಷಿಪುರ ಎಂದು ಕರೆಯುವ."

'ಇದು ಬಹಳ ಉತ್ತಮ ಆಲೋಚನೆ. ಹಾಗೆಯೇ ಇರಲಿ. ನನಗೂ ಬಹಳ ಸಂತೋಷ" ಕೇದಾರಿ ಉತ್ತರವಿತ್ತನು.

ಈಶಾನ್ಯದ ಮಳೆಗೆ ಇನ್ನೂ ಒಂದು ತಿಂಗಳಿದ್ದರೂ ಆರಂಭದ ಮಳೆಯ ಹನಿಗಳೇ ಹೊಸತಾಗಿ ತಯಾರಾಗಿರುವ ಕೆರೆಯ ಅರ್ಧಭಾಗದಲ್ಲಿ ಆಶ್ರಯಪಡೆದುಕೊಂಡಿವೆ. ಆರಂಭೋತ್ಸವವನ್ನು ಮಳೆಗಾಲಕ್ಕಿಂತ ಮುಂಚೆಯೇ ಮುಗಿಸಿಬಿಟ್ಟಲ್ಲಿ ಬೇಸಾಯವನ್ನು ಕ್ಲುಪ್ತಕಾಲದಲ್ಲಿ ಪ್ರಾರಂಭಿಸಬಹುದೆಂಬ ಮುರುಗನ ಆಲೋಚನೆ. ರಾಮು ಹಾಗೂ ಕೇದಾರಿ ಆದಕ್ಕೆ ಸಮ್ಮತಿ ಇತ್ತಿದ್ದರು. ಶ್ರೀಯುತ ಯುಜ್. ಕೆಡೆಲ್ಲೀಗ ಮದ್ರಾಸಿನಲ್ಲಿ ಇನ್ನೊಬ್ಬರ ಬದಲಿಗೆ ತಾತ್ಕಾಲಿಕ ಪ್ರಾಂತಪಾಲರಾಗಿದ್ದಾರೆ. ಹೊಸ ಹಳ್ಳಿ ಹಾಗೂ ಹೊಸ ವ್ಯವಸಾಯ ಯೋಜನೆಯನ್ನು ತೆರೆಯುವ ಮಹೋತ್ಸವಕ್ಕೆ ಅವರನ್ನು ಆಮಂತ್ರಿಸಲಾಯಿತು. ಶ್ರೀ ಕೆಡೆಲ್ ಹಾಗೂ ರಾಮು ಸೇರಿ ಮಾತ್ರ ಹಸ್ತವು ಹೊಸ ತೋಟದ ನಗರಕ್ಕೆ ಆಶೀರ್ವದಿಸಬೇಕೆಂದು ನಿಶ್ಚಯಿಸಿಕೊಂಡರು.

ನಾಗಲಾಪುರಮಿಗೆ ಬರಲು ಮದ್ರಾಸಿನ ಅನೇಕ ಗಣ್ಯ ವ್ಯಕ್ತಿಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಯಿತು. ಸರ್ವಶ್ರೀ ಕ್ರಾಯಿಗ್, ಟರ್ನರ್ ಮತ್ತು ಮಾರ್ಕಂಡಂ ಅಯ್ಯರ್‌ರವರಿಗೆ ವಿಶೇಷ ಪತ್ರಗಳೂ ಹೋದವು. ಶ್ರೀಯುತ ಟರ್ನರ್ [ಇ. ಸಿ. ಎಸ್.] ಈಗ ಕೆಲಸದಿಂದ ನಿವೃತ್ತರಾಗಿ ಬೆಂಗಳೂರಿನಲ್ಲಿ ತಂಗಿದ್ದಾರೆ. ಮಾರ್ಕಂಡಂ ಈಗ ವೇದಾಂತಿಗಳಾಗಿ ರಾಮುವನ್ನು ಕಾಣಲು ತವಕ ಪಡುತ್ತಿದ್ದಾರೆ. ರಾಮುವಿನ ಕುರಿತು ಬಹಳ ವಿಷಯ ಅವರ ಕಿವಿಗೆ ಬಿದ್ದಿದೆ.

ಹೊಸ ಹಳ್ಳಿಯಲ್ಲಿ ಪ್ರತಿಯೊಂದೂ ಅದ್ಭುತ ವಿಜಯ. ಆರಂಭೋತ್ಸವವು ನೆರೆಕರೆಯವರ ಮೇಲೆ ಅಚ್ಚಳಿಯದ ಅಚ್ಚನ್ನೊತ್ತಿತು. ನಾಗಲಾಪುರಮಿನ ಕಡಿದಾದ ಪರ್ವತ, ಹಳ್ಳಿಯಲ್ಲಿರುವ ಮನ ಸೆಳೆಯುವ ಶಾಂತತೆ, ವನದೇವತೆ ಕ್ರೀಡೆಯಾಡುತ್ತಿರುವ ಸುಂದರ ಸರೋವರ ಮತ್ತು ಹೊಸ ವಾಸ ಸ್ಥಾನ—ಇವು ಮತ್ತು ಕೇದಾರಿಯಲ್ಲಾಗಿರುವ ಬದಲಾವಣೆ, ರಾಮುವಿನ ನಿಶ್ಚಲತೆ ಮತ್ತು ಸುತ್ತುಮುತ್ತಲಿನ ಪ್ರೀಯರ ಸರಳತೆ ಹಾಗೂ ಸೌಂದರ್ಯವು ಮಾರ್ಕಂಡಂರವರ ಪಟ್ಟಣದ ಮನಸ್ಸಿನ ಮೇಲೆ ಬಲವಾದ ಅಚ್ಚನ್ನೊತ್ತಿತು.

(ಮುಂದುವರಿಯುವುದು)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

NAVAYUGA 14—7—1966
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಇದು ಸಂಪೂರ್ಣ ಸತ್ಯ

ಶಿಲಾಯುಗದಲ್ಲೂ ಖಗೋಳಶಾಸ್ತ್ರಜ್ಞರಿದ್ದರು

ಮಾನವನು ಬಾಹ್ಯಾಕಾಶ ಪರಿಶೀಲನೆಯನ್ನು ತನ್ನ ಸ್ವಂತ ಕ್ಷೇಮಕ್ಕಾಗಿ ಸುಮಾರು ೧೦—೪೦ ಸಾವಿರಗಳಷ್ಟು ಹಿಂದೆಯೇ ಪುರಾತನ ಶಿಲಾಯುಧ ಕಾಲದಲ್ಲಿ ಪ್ರಾರಂಭಿಸಿದನೆಂದು ತಜ್ಞರು ಹೇಳುತ್ತಾರೆ. ಆ ಯುಗದ ಲಲಿತ ಕಲೆಯ ಅವಶೇಷಗಳ ಪರಿಶೀಲನೆಯಿಂದ ಈ ತೀರ್ಮಾನಕ್ಕೆ ಬಂದಿದ್ದಾರೆ ಅವರು.

ಶಿಲಾಯುಧ ಕಲೆಯು ಬೆರಗುಗೊಳಿಸುವಂತಹುದು. ಬೃಹದ್ಗಜದ ದಂತಗಳಿಂದ ಮತ್ತು ಹಿಮಸಾರಂಗಗಳ ಕೊಂಬುಗಳಿಂದ ತಯಾರಿಸಲಾದ ಉಪಕರಣಗಳೂ, ಆಭರಣಗಳೂ ಯೂರೋಪಿನಲ್ಲೂ, ಸೈಬೀರಿಯದಲ್ಲೂ ದೊರೆತಿವೆ. ಇರ್ಕುತ್‌ಸ್ಕ್ ಬಳಿಯ ಮಾಲ್ತ ವಸತಿಯಲ್ಲೂ, ದೇಸ್ನ ನದಿಯ ತೀರದ ಮೇಜಿನ್ ವಸತಿಯಲ್ಲೂ ಇಂತಹ ಸಾವಿರಾರು ವಸ್ತುಗಳು ದೊರೆತಿವೆ. ಪ್ರೊ. ವಾ ಗೆರಾಸಿಮೊವ್‌ರವರಿಗೆ ದೊರೆತಿರುವ ಒಂದು ಚಿಲಕು ಕಟ್ಟಿನಲ್ಲಿ (ಬಕಲ್) ಒಂದು ಕಡೆ ಮೂರು ಹಾವುಗಳನ್ನೂ, ಇನ್ನೊಂದು ಕಡೆ ಜಟಿಲವಾದ ಸುರುಳಿ ಅಲಂಕಾರಗಳನ್ನು ಚಿತ್ರೀಕರಿಸಲಾಗಿದೆ. ಇಲ್ಲಿನ ಮೂಲಭೂಮಿತಿ ರೀತಿಯ ನಮೂನೆಗಳು ಕಲಾವಿದರ ವಿಶ್ವ ಕಲ್ಪನೆಯಿಂದಲೂ, ಅವರ ಪುರಾಣ ಕತೆಗಳಿಂದಲೂ ಸ್ಫೂರ್ತಿ ಪಡೆದಿವೆಯೆಂದು ಪ್ರೊ. ಆ. ಒಕ್ಲಾಡ್ನಿಕೊವ್‌ರವರು ತೀರ್ಮಾನಿಸಿದ್ದಾರೆ.

ಬೆಲ್ಜಿಯಮ್ಮಿನ ಸಂಶೋಧಕರಾದ ಕಾರ್ಲ್ ಹೆಯಿನ್ಟ್ಜೆರವರೂ ಸಹ ಇದೇ ತೀರ್ಮಾನಕ್ಕೆ ಬಂದಿದ್ದಾರೆ. ಸುರುಳಿಗಳೂ, ಸರ್ಪಶಿರಗಳೂ ಅವರಿಗೆ ಪುರಾತನ ಪ್ರಾಚ್ಯ ಖಂಡದ, ಅಮೇರಿಕದ ಎಲ್ಲ ಕಡೆಯೂ ವಿಶೇಷ ವ್ಯಾಪಿಸಿದ್ದ ಚಾಂದ್ರ ಸಂಕೇತಗಳನ್ನು ನೆನಪು ಮಾಡಿಕೊಟ್ಟಿವೆ. ಚಂದ್ರ ಸಮೀಕ್ಷೆ ಮತ್ತು ಚಂದ್ರ ಪೂಜೆಯಿಂದಲೇ ಈ ಕಲೆಗೆ ಸ್ಫೂರ್ತಿ ಬಂದಿರಬೇಕೆಂದು ಅವರ ಅಭಿಪ್ರಾಯ.

ಸಂಯುಕ್ತ ರಾಜ್ಯ ಅಮೇರಿಕದ ವಿಜ್ಞಾನಿ ಅಲೆಕ್ಸಾಂಡ್ರೆ ಮಾರ್ಷಾಕ್‌ರವರು ಉಕ್ರೇನಿನ ಗೋಂತ್ಸಿಯಲ್ಲಿ ದೊರೆತ ಬೃಹದ್ಗಜದ ದಂತದ ತಟ್ಟೆಯ ಕ್ರಮಿಕ ರೇಖಾ ಚಿತ್ರಗಳನ್ನು ಪರಿಶೀಲಿಸಿ, ಅವು ವಸ್ತುತಃ ಚಂದ್ರನ ಕಳೆಗಳನ್ನು ಅಮಾವಾಸ್ಯೆಯಿಂದ ಹುಣ್ಣಿಮೆ ವರೆಗೆ ಮತ್ತು ಹುಣ್ಣಿಮೆಯಿಂದ ಅಮಾವಾಸ್ಯೆ ವರೆಗೆ ಪ್ರತಿಬಿಂಬಿಸುತ್ತವೆಯೆಂದು ತೀರ್ಮಾನಿಸಿದ್ದಾರೆ. ಅಲ್ಲಿರುವ ಶಿಲರೇಖೆಗಳು ಚಾಂದ್ರಮಾಸದ ೨೮ ದಿನಗಳಿಗೆ ಹೊಂದಿಕೊಂಡಿವೆ.

ಆದುದರಿಂದ ಪ್ರಾಗೈತಿಹಾಸಿಕ ಮಾನವನು ಚಕಮುಕಿ ಕಲ್ಲಿನ ಚೂರಿಗಿಂತಲೂ ಉತ್ತಮವಾದ ಉಪಕರಣವಿಲ್ಲದಿದ್ದ ವೇಳೆಯಲ್ಲಿಯೂ ಕೃಷಿಯು ಮತ್ತು ಪಶು ಸಂಗೋಪನೆಯು ತಿಳಿವಳಿಕೆ ಇಲ್ಲದಿದ್ದಾಗಲೂ ಕೂಡ, ಕುಶಲ ಖಗೋಳ ಶಾಸ್ತ್ರಜ್ಞನಾಗಿದ್ದನು.

ಫ್ರೆಂಚ್ ಪುರಾತತ್ವ ಶಾಸ್ತ್ರಜ್ಞ ಫ್ರಾಂಕ್ ಬೂರ್ದಿಯೆರ್‌ರವರು ಇತ್ತೀಚೆಗೆ ಒಂದು ಆಧಾರ ಕಲ್ಪನೆಯನ್ನು ಸೂಚಿಸಿ, ಅದನ್ನು 'ಒಪ್ಪಿಚಿತ ವೈಜ್ಞಾನಿಕ'ವೆಂದು ಕರೆದರು. ಶಿಲಾಯುಗದ ಬೇಟೆಗಾರರು ತಮ್ಮ ಗುಹೆಗಳ ಗೋಡೆಗಳ ಮೇಲೆ ಇಡೀ ನಕ್ಷತ್ರ ಮಂಡಲವನ್ನು ಚಿತ್ರಿಸಿದ್ದಾರೆ! ಈಗಲೂ ಬಿಡಿಸಲಾಗದ ರಹಸ್ಯ ಸಂಕೇತಗಳನ್ನೂ ಕರಡಿಗಳಂತಹ ಪ್ರಾಣಿಗಳಂತಹ ಚಿತ್ರಗಳನ್ನೂ ಬರೆದಿಟ್ಟಿದ್ದಾರೆ. ಇದು ಕುತೂಹಲದ ಭಾವನೆಯಿಂದ ಮಾಡಲಾದ ಕೆಲಸವಲ್ಲ. ನಕ್ಷತ್ರಗಳ ಪರಿಶೀಲನೆಯಿಂದ ಅವರು ಚಳಿಗಾಲವನ್ನೂ ಬೇಸಗೆ ಕಾಲವನ್ನೂ ಲೆಕ್ಕಾಚಾರ ಮಾಡುತ್ತಿದ್ದರು. ತಮಗೆ ಆಹಾರವನ್ನೊದಗಿಸುತ್ತಿದ್ದ ಪ್ರಾಣಿಗಳ ಚಲನವಲನಗಳನ್ನು ಚಿತ್ರಿಸುತ್ತಿದ್ದರು. ಈ ರೀತಿಯಾಗಿ ಪ್ರಾಯಶಃ ಆ ಕಾಲದಲ್ಲಿ ಕರಡಿಯು ಉತ್ತರ ಪ್ರಾಂತಕ್ಕೆ ಸಂಕೇತವಾಗಿದ್ದಿರಬಹುದು.

ಶಿಲಾಯುಧ ಕಾಲದ ಖಗೋಳ ಶಾಸ್ತ್ರ ಸಮಸ್ಯೆಯನ್ನು ಸೋವಿಯತ್ ಸಂಶೋಧಕರು ಇನ್ನೊಂದು ದೃಷ್ಟಿಕೋನದಿಂದಲೂ ಗಮನಿಸುತ್ತಾರೆ. ಪುರಾತನ ಚಿತ್ರಗಳನ್ನು ರಚಿಸಿದವರು ೭,೫ ಅಥವಾ ೧೧ ಪ್ರಕೃತಿ ಶಕ್ತಿಗಳನ್ನು ನಿರಂತರವಾಗಿ ಗುಂಪುಗೂಡಿಸುತ್ತಿದ್ದರು. ಹೀಗಾಗಿ ಮಾಲ್ತ 'ಬಕಲಿ'ನಲ್ಲಿ ಏಳು ಸುರುಳಿಗಳಿವೆ. ನಡುವಣ ಸುರುಳಿಯಲ್ಲಿ ಏಳು ಕುಣಿಕೆಗಳಿವೆ ಪ್ರತಿ ಕುಣಿಕೆಯಲ್ಲೂ ೫ ಅಥವಾ ೧೦ ಚುಕ್ಕೆಗಳಿವೆ.

ಚಾಂದ್ರ ಪಂಚಾಂಗ ಕಾದಿಟ್ಟವರು

ಬೆರಗುಗೊಳಿಸುವ ಈ ಕ್ರಮಬದ್ಧತೆಯು ಗಣಿತಶಾಸ್ತ್ರದ—ವಿಶೇಷತಃ ಗಣನ ಸಾಮರ್ಥ್ಯದ— ಮೂಲ ಸೂತ್ರಗಳನ್ನು ಸೂಚಿಸುತ್ತದೆ. ಶಿಲಾಯುಗದ ಮಾನವನ ವಿಶ್ವಕಲ್ಪನೆಯನ್ನು ಅವರು ವಿಕಾಸಗೊಳಿಸುತ್ತಿದ್ದುದು ವಿಶೇಷಾಸಕ್ತಿಯ ವಿಷಯ. ಸೈಬೀರಿಯ ಆಭರಣಕಾರರಿಗೆ ೭ ಅಂಕಿ ತುಂಬ ಇಷ್ಟ. ಇಡಿ ಪುರಾತನ ಪ್ರಾಚ್ಯ ಖಂಡದಲ್ಲಿ ೭ ಎಂಬ ಸಂಖ್ಯೆ ಪಾವಿತ್ರ್ಯ ದೊರೆಯಲು ವಿಶ್ವಾಂತರಿಕ್ಷ ವಸ್ತುಗಳ ಸಂಬಂಧವೇ ಕಾರಣ. ಚಂದ್ರನ ಕಲೆ ೭ ದಿನಗಳವರೆಗಿರುತ್ತದೆ; ಸಪ್ತರ್ಷಿ ಮಂಡಳದಲ್ಲಿ ೭ ನಕ್ಷತ್ರಗಳಿರುತ್ತವೆ. ದೃಕ್ಸಾಧನಗಳ ಸಹಾಯವಿಲ್ಲದೆಯೇ ಬರಿಗಣ್ಣಿನಿಂದ ೭ "ಚರ" ಆಕಾಶಕಾಯಗಳನ್ನು ಕಾಣಬಹುದು.

ಮಾಲ್ತದಲ್ಲಿ ದೊರೆತ ಚಿಲಕ ಕಟ್ಟಿನಲ್ಲಿ ಮತ್ತು ಇತರ ವಸ್ತುಗಳಲ್ಲೂ ಅರ್ಧಚಂದ್ರಾಕೃತಿಗೆ ವಿಶೇಷಗಮನವನ್ನು ಕೊಡಲಾಗಿದೆ. ಮಹಿಳೆಯರ ಶಿಲ್ಪಾಕೃತಿಗಳ ಮೇಲೆಯೂ ಸಹ ಈ ಚಾಂದ್ರಚಿತ್ರಣ ಕಂಡುಬರುತ್ತದೆ. ಚಾಂದ್ರ ಮತ್ತು ಸ್ತ್ರೀ ಸಂಬಂಧವಾದ ಬಿಂಬ ಪೌರಾಣಿಕ ಸಂಬಂಧವನ್ನು ಹೊಂದಿದೆ. ಚಂದ್ರಮುಖಿ, ಚಂದ್ರಮತಿಯರನ್ನು ಯಾರು ಮರೆಯಬಲ್ಲರು?

ಪ್ರಾಯಶಃ ಸೈಬೀರಿಯದ ಜನತೆ ಈ ಘಟನಾವೈಚಿತ್ರ್ಯದ ವಿಶೇಷತೆಗೆ ಕಾರಣರಾಗಿದ್ದಾರೆ. ಅವರ ಮಹಿಳೆಯರು ತಮ್ಮ ಹೆಂಗೆಯ ಸಮಯವನ್ನು ಚಂದ್ರಕಲೆಗಳ ಆಧಾರದ ಮೇಲೆ ಲೆಕ್ಕಾಚಾರ ಮಾಡುತ್ತಾರೆಂದು ಸೋವಿಯೆತ್ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಗರ್ಭಾವಸ್ಥೆಯು ಹತ್ತು ಚಾಂದ್ರ ಮಾಸಗಳ ಕಾಲಾವಧಿಯದು. ಮಹಿಳೆಯರು ಒಂದು ಬಗೆಯ ಚಾಂದ್ರ ಪಂಚಾಂಗವನ್ನು ಇಟ್ಟುಕೊಂಡಿರುತ್ತಾರೆ. (ಈ ಜನತೆಯಲ್ಲಿ ಸ್ತ್ರೀಯರೇ ಚಾಂದ್ರ ಪಂಚಾಂಗದ ಒಡೆತನವುಳ್ಳವರು.) ಆಭರಣಗಳಲ್ಲೂ ಈ ಪಂಚಾಂಗದ ಮೌಲಿಕ ಉಪಯೋಗವಾಗುತ್ತದೆ. "ನಗನಾಸನ್" ಜನತೆಯಲ್ಲಿ ತಾಯಿಯ ಉಡುಪಿನ ಮೇಲೆ ಹತ್ತು ಬಣ್ಣದ ಪಟ್ಟೆಗಳಿರುತ್ತವೆ. ಶಿಲಾಯುಧಗಳ ನಮೂನೆಗಳಲ್ಲಿ ೧೦ ಮೂಲ ವೃಂದಗಳ ಬಳಕೆಗೆ ಇದೇ ಕಾರಣವಿದ್ದರೂ ಇರಬಹುದು.

ನಮ್ಮ ಪೂರ್ವಜರು ಉದ್ದೇಶಪೂರ್ವಕವಾಗಿ ಆಕಾಶ ವೀಕ್ಷಣೆ ಮಾಡುತ್ತಿದ್ದರೆಂದೂ ತಮ್ಮ ನಿತ್ಯದ ಲೆಕ್ಕಾಚಾರಗಳಲ್ಲಿ ಅವರು ವೀಕ್ಷಣೆಯ ಅಂಶಗಳನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆಂದೂ ನಾವು ಕಂಡಿತವಾಗಿ ಹೇಳಬಹುದು.

ವಿನಯ ಸತ್ಯಗಳು ಪರಸ್ಪರ ಪೋಷಕವಾಗಿರುವವು. ಅವೆರಡರಲ್ಲಿರುವ ಸಂಬಂಧವನ್ನು ತಪ್ಪಿಸಲಾಗುವುದಿಲ್ಲ. ಒಂದು ನಾಣ್ಯದ ಎಡ ಬಲದ ಮುದ್ರೆಗಳಂತೆ ಜ್ಞಾನಿಯಲ್ಲಿ ಅವೆಂದೂ ಇದ್ದೇ ತೀರಬೇಕು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ.
0.30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

21—7—1966



NAVAYUGA

೧೦ ಪೈಸೆ

ಕ್ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ರಾಮಚಂದ್ರ ಅಲವಂತಿಯು ತನ್ನ ಆಸ್ತಿಪಾಸ್ತಿಗಳನ್ನು ಮಾರಿ ಶಹರಸೇರಿದ. ಶಿರ ಗುಮಾಸ್ತನಾಗಿದ್ದಾತ ಗ್ಸಹಶಾಖೆಯಲ್ಲಿ ಹಿರಿಯ ಪದವೇರಿದ.

ರಾಮುವಿನ ಕ್ರೈತ ಮುರುಗ ಜನಾನಾ ರಸಾದ: ದುಷ್ಕೃತ್ಯಸನಿಯಾದ. ಸೆರೆಯಾಟ ತಪ್ಪಿಸಿಕೊಂಡು ಪುಂಡರ ಗುರುವಾದ. ಆದರೆ, ರಾಮುವಿನ ಮಾನವತೆಯಿಂದ ಅವರೆಲ್ಲರೂ ಮಾನವರಾದರು, ಮರಳಿ.

ರಾಮುವಿನ ಮಿತ್ರ ವಕೀಲ ಕೇದಾರಿ ಸ್ವಪ್ನಲೋಕದಲ್ಲಿ ವಿಹರಿಸುತ್ತಲೇ ರೆಕ್ಕೆ ಮುರಿದು ಬಿದ್ದ. ಆತನನ್ನು ರಾಮುವೇ ಎತ್ತಬೇಕಾಯಿತು.

ರಾಮುವಿನ ನೇತೃತ್ವದಲ್ಲಿ ಅಗ್ನೀನದಿಯ ದಡದ ನ್ಯಾಗಲ [illegible] ಗುಡ್ಡಗಳು ಆದರ್ಶ ಗ್ರಾಮವಾಗಿ ರೂಪು ಪಡೆಯತೊಡಗಿದುವು.

ಮುಂದೆ—

ಆರಂಭೋತ್ಸವವಾಗಿ ಗದ್ದೆಗಳು ಫಲ ವತ್ತಾಗುವ ಮೊದಲೇ ಮದ್ರಾಸ್ ನ್ಯಾಯಾಲಯದ ಹಿರಿಯ ವ್ಯಕ್ತಿಯಲ್ಲಿ ವೈರಾಗ್ಯವು ತಲೆದೋರಿತು.

ಮಾರ್ಕಂಡಂರವರು ಕೇದಾರಿಯನ್ನು ತನ್ನೆರಡು ಕೈಗಳಲ್ಲೂ ಹಿಡಿದುಕೊಂಡು, ಒಂದು ಬದಿಗೆ ಕರೆದೊಯ್ದು, ಗಂಭೀರವಾಗಿ ಹೇಳಲಾರಂಭಿಸಿದರು:

"ಕೇದಾರಿ, ನನ್ನನ್ನು ಕ್ಷಮಿಸಿ ಬಿಡು. ಸರಿಪಡಿಸಲಾಗದಂತಹ ಹಾಗೂ ಬಹಳ ದೊಡ್ಡ ತಪ್ಪನ್ನು ನಾನು ನಿನಗೆ ಮಾಡಿದ್ದೇನೆ. ದ್ವೇಷ, ಮತ್ಸರ, ಮಹತ್ವಾಕಾಂಕ್ಷೆ, ಹಾಗೂ ಲೋಭಿತನವು ನನ್ನಲ್ಲಿ ಸೇರಿಕೊಂಡು, ಔದ್ಯೋಗಿಕ ಪಥದಲ್ಲಿ ವಿಜಯ ದೀಪವನ್ನು ತೋರಿಸುವ ನೆವನದಲ್ಲಿ, ಸರ್ವ ಸಾಮಾನ್ಯ ಮಾನವೀಯತೆಯನ್ನು ಕಾಣಲಾಗದಂಥ ಕುರುಡನನ್ನಾಗಿ ಮಾಡಿ ಬಿಟ್ಟಿತು. ನನ್ನನ್ನು ಕ್ಷಮಿಸು. ನಾನು ಮಾಡಿರುವ ಮಹಾಪರಾಧವು ನಿನಗೀಗ ವರ ಸಮಾನವಾಗಿ ರೂಪಾಂತರ ಹೊಂದಿದೆ. ದೈವೇಚ್ಛೆ ನಿಜವಾಗಿ ಬಹಳ ಆಶ್ಚರ್ಯಕರವಿದೆ."

"ಕ್ಷಮಿಸಲಿಕ್ಕೇನೂ ಇಲ್ಲ, ಮಾರ್ಕಂಡಂ. ಆದರ ಬದಲು ನಿಮ್ಮಲ್ಲಿ ನಾನು ಕ್ಷಮೆಯಾಚಿಸಬೇಕಾಗಿದೆ. ನಿಮಗಿಂತಲೂ ಮುಗಿಲೆತ್ತರಕ್ಕೆ ಹಾರಬೇಕೆಂದು ನಮಗೆ ಬಗೆದ ದ್ರೋಹ ಹಾಗೂ ಗೈದ ಕುಕಾರ್ಯಗಳಿಗಾಗಿ ನನಗೆ ಶಿಕ್ಷೆ ಸಿಕ್ಕಿದೆ, ಅಷ್ಟೆ. ನೀವಾದರೋ ನನ್ನನ್ನು ಬಡತನ ಹಾಗೂ ಅಪ್ರಸಿದ್ಧತೆಯಿಂದ ಮೇಲಕ್ಕೆತ್ತಿರುವ ಮಹಾ ಕರುಣಾಳು.

"ಕೇದಾರಿ, ನೀನು ನನ್ನನ್ನು ಬಿಟ್ಟು ಬಂದಂದಿನಿಂದ ನನ್ನ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವದಿಲ್ಲ. ನನ್ನ ಕಥೆಗಳನ್ನು ಕೇಳು, ಅವುಗಳು ಸ್ವಲ್ಪ ಉದ್ದ ಇರಬಹುದು. ಅಂದಿನಿಂದ ನಾನು ದೈಹಿಕ, ಮಾನಸಿಕ, ಆತ್ಮಿಕ ಹಾಗೂ ಸಾಂಪತ್ತಿಕ ಕಷ್ಟಗಳಿಗೀಡಾಗಿದ್ದೇನೆ. ನಿರೀಕ್ಷಿಸಿದುದಕ್ಕಿಂತಲೂ ಶೀಘ್ರವಾಗಿ ಫಲವು ನನಗೆ ದೊರಕಿದೆ— ಮರಳಾದ ಸಮಯದಲ್ಲಿ ಬಿತ್ತಿದ್ದಕ್ಕೆ ಸುಂದರ ಗಾಳಿಯ ಪೈರು. ನನ್ನ ಕೊನೆಗಾಲದಲ್ಲಿ, ನನ್ನನ್ನು ಚೆನ್ನಾಗಿ ಪ್ರೀತಿಸುತ್ತಿದ್ದ, ಚಿಕ್ಕ ಮಗಳು—ಅತ್ಯುತ್ತಮ ರತ್ನ—ನನ್ನ ಕೈ ಬಿಟ್ಟು ಹೋದಳು. ವಿಶೇಷ ತಜ್ಞನೇ ಆವಳ ಕಾಯಿಲೆಯನ್ನು ಪರೀಕ್ಷಿಸಿ ಮದ್ದು ಕೊಡುತ್ತಿದ್ದ, ನಾನು ಹೇಳವಾಗಿ ಆತನಿಗೆ ಹಣಕೊಡುತ್ತಿದ್ದೆ. ಸ್ವತಃ ನಾನು ಕಾಯಿಲೆಯಲ್ಲಿ ಬಿದ್ದಾಗಲೂ ಒಂದೇ ಒಂದು ಬಿಲ್ಲಿಗಾಗಿ ಹಣ ಖರ್ಚು ಮಾಡದಿರುತ್ತಿದ್ದ ನಾನು ಬಹಳಷ್ಟು ಖರ್ಚು ಮಾಡಿದೆ. ನ್ಯೂಯೋರ್ಕಿನಿಂದ ಹೊಸತಾಗಿ ಬಂದಿದ್ದ, ವಿಶೇಷ ಪಾರಂಗತ, ನನ್ನ ಆದಾಯದ ಮೇಲೆ ಹಣ ಕೇಳುವ ಹೊಸ ಮಾದರಿಯ ಡಾಕ್ಟರರೇ ಆಕೆಗೆ ಮದ್ದು ಕೊಡುತ್ತಿದ್ದ. ಆದರೆ ಅಯ್ಯೋ! ವಿಧಿಯೇ! ನನ್ನ ಪಾಲಿಗೆ ಸೋಲೇ ಬಂತು."

'ಕಣ್ಣೀರು ಕರಿಸುವ ಘಟನೆಗಳು, ಮಾರ್ಕಂಡಂ. ನಿಮ್ಮ ಆ ಕೊನೆಯ ಮಗಳು ಎಲ್ಲರಿಗಿಂತಲೂ ಚುರುಕಾಗಿದ್ದಳು '

" ಆಕೆಯ ಆಗಲುವಿಕೆಯಿಂದಾಗಿ, ಹಣ ಪೋಲಾದದ್ದು ಸುರಿಸುವ ಕಣ್ಣೀರಿನೆದರು ಅಷ್ಟೇನೂ ಪ್ರಾಮುಖ್ಯವಿರುವುದಿಲ್ಲ. ಎಲ್ಲವನ್ನೂ ನಿನ್ನ ಬಳಿ ಹೇಳಿ ಹೃದಯದ ಹೊರೆಯನ್ನು ಹಗುರ ಮಾಡಿಕೊಳ್ಳುತ್ತಿದ್ದೇನೆ. ಬೊಂಬಾಯಿ ಸಂತೆಯ ಪಾಲುಗಳು ಮತ್ತು ರಬ್ಬರು, ಸೆಣಬು ಮತ್ತು ಹತ್ತಿಯ ವಿಚಾರ ಗೆಟ್ಟ ವ್ಯಾಪಾರಗಳು ಲಕ್ಷಗಟ್ಟಲೆಯಲ್ಲಿ ಕೈಬಿಟ್ಟು ಪ್ರಶೇಖರಿಸಿಟ್ಟಿದ್ದ ಹಣವೂ ನನ್ನ ಕೈಗೆ ಬರಲಿಲ್ಲ. ಈ ದುಃಖವೆಲ್ಲ ನನ್ನನ್ನು ಗೋರಿಗೆಳೆಯಲು ಬಂದವು ಇರಬೇಕು. ನಾನು ಮಾತ್ರ ಇನ್ನೂ ಅವಸ್ಥೆ ಪಟ್ಟುಕೊಂಡಿದ್ದೇನೆ. ನನ್ನ ಹಿರಿಯ ಮಗ ಅಡ್ಡದಾರಿ ಹಿಡಿದಿದ್ದಾನೆ. ನನ್ನ ಉದ್ಯೋಗದ ಕೂಗಾಟ, ನಿರಂತರ ವೇಗ ಮತ್ತು ಅತ್ಯಾಶೆಗಳ ನಡುವೆ ಆವನ "ವಿದ್ಯಾಭ್ಯಾಸದತ್ತ ಗಮನ ಕೊಡಲು ಸಮಯವೇ ಸಿಗಲಿಲ್ಲ."

"ಅವನು ಕೆಟ್ಟವರ ಸಹವಾಸದಲ್ಲಿದ್ದಾನೆಂಬುದನ್ನು ಮುಂಚೆಯೇ ನಿಮ್ಮ ಗಮನಕ್ಕೆ ನಾನು ತಂದಿದ್ದೆ."

"ಹೌದು, ನೆನಪಿದೆ ಕೇದಾರಿ. ಆದರೆ ವಕೀಲನಿಗೆ ತನ್ನ ಮನೆಯವರು ಸುಖ ಕಷ್ಟಗಳತ್ತ ಗಮನ ಕೊಡಲು ಸಮಯವೆಲ್ಲಿರುತ್ತದೆ? ಆವನು ಇತರರಿಗಾಗಿ ಒತ್ತೆ ಇಡಲ್ಪಟ್ಟವನಿದ್ದಾನೆ. ನನ್ನ ಹಿರೇ ಮಗನು ಒಬ್ಬ ಮಾರವಾಡಿಯ ಹತ್ತಿರ ಶೇಕಡ ಮುವ್ವತ್ತಾರರಂತೆ ಚಕ್ರಬಡ್ಡಿಗೆ ಇಪ್ಪತ್ತು ಸಾವಿರ ರೂಪಾಯಿ ತೆಗೆದುಕೊಂಡಿರುವೆನೆಂದು ಹಾಯಿದ. ಪತ್ರಕ್ಕೆ ಸಹಿಹಾಕಿದ್ದಾನೆ. ಆದರೆ ಆ ಪಾಪದ ಹುಡುಗನಿಗೆ ಇಪ್ಪತ್ತರಲ್ಲಿ ಐದೂ ಸಿಕ್ಕಿರುವುದಿಲ್ಲ. ಆದರೂ ನ್ಯಾಯಾಲಯದ ಅತಿ ಪ್ರಭೆಯನ್ನು ತಪ್ಪಿಸಲಿಕ್ಕಾಗಿ ಪೂರ್ತಿ ಹಣವನ್ನು ನಾನು ತುಂಬಿಸಿದೆ. ಅದೆಷ್ಟೋ ಜನರನ್ನು ನಾನು ಸ್ವಲಾಭಕ್ಕಾಗಿ ದುರುಪಯೋಗಪಡಿಸಿಕೊಂಡಂತೆ, ಮಾರವಾಡಿಗಳೀಗ ನನ್ನನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ನನಗೆ ಜೀವನದಲ್ಲೇ ಬೇಸರ ಬಂದಿದೆ, ಕೇದಾರಿ. ಕೆಲವರ್ಷಗಳ ಮಟ್ಟಿಗಾದರೂ ಶಾಂತಿ ಹಾಗೂ ವಿಶ್ರಾಂತಿಗಾಗಿ ಇಂತಹ ವನ ದೇವತೆಯ ಕರುಣದಲ್ಲಿರಬೇಕೆಂದು ನಾನು ಆಶಿಸುತ್ತಿದ್ದೇನೆ."

"ಆದರೆ ಮಾರ್ಕಂಡಂ, ಆ ನಷ್ಟಗಳೆಲ್ಲವೂ ನಿಮಗೆ ಚಿಕ್ಕದು ಕಡಿತಗಳವೆ. ನೀವು ಮನಸ್ಸು ಮಾಡಿದಲ್ಲಿ ಜಾಗ್ರತೆಯಿಂದ ಒಂದು ವರ್ಷದೊಳಗೆ ಒಂದೆರಡು ಸಾವಿರ ರೂಪಾಯಿ ಸಂಪಾದಿಸಿಕೊಳ್ಳಬಹುದು."

"ಅದು ಈಗ ಸಿಲುವಲ್ಲ, ಕೇದಾರಿ. ನಾನೀಗವಾದರೂ ಸತ್ಯವನ್ನು ಹೇಳುತ್ತಿದ್ದೇನೆ. ನೀನು ನನ್ನನ್ನು ಬಿಟ್ಟು ಬಂದಾಗ—ನಿನಗೆ ಜ್ಞಾಪಕ ಇರಬಹುದು—ಓರ್ವ ಹೊಸ ನ್ಯಾಯಾಧೀಶರು ಬಂದಿದ್ದರು. ಮೊದಲ ವಾರದಲ್ಲೇ ಅವರು ನಮ್ಮಲ್ಲಿ ಆಶ್ಚರ್ಯವನ್ನುಂಟು ಮಾಡಿದರು. ಅವರಿಗೂ ನನಗೂ ಹೊಂದಿಕೊಂಡು ಹೋಗುವುದಿಲ್ಲ; ಕಕ್ಷಿಗಾರರು ಕೇವಲ ಕುರಿಹಿಂಡುಗಳೆನ್ನುವುದು ನಿನಗೆ ಗೊತ್ತಿದೆ."

'ವಿಷಯವಾದರೂ ಏನು?'

"ನವೀನ ರೀತಿಯ ಜನರು ಬರುತ್ತಿದ್ದಾರೆ; ಹೊಸ ನಮೂನೆಯ ವಿಷಯಗಳು ಮುಂದಕ್ಕೆ ಬರುತ್ತಿವೆ. ಈಗಿನ ಈ ಹೊಸ ಆಟದಲ್ಲಿ ತುರುಫಿನ ಎಲೆ ನನ್ನದಲ್ಲ. ಬದಲಾಗಿರುವ ಹೊಸ ಚಾಳಿಗಳನ್ನು ಕಲಿತುಕೊಳ್ಳೋಣವೆಂದರೆ ನನಗೆ ವಯಸ್ಸಾಗಿ ಹೋಗಿದೆ. ಈಗಿನ ಮುಖ್ಯ ನ್ಯಾಯಾಧೀಶರರು ಯಾವಾಗಲೂ ಕಲ್ಪನಾ ರಾಜ್ಯದಲ್ಲಿ ವಿಹರಿಸುತ್ತಿರುತ್ತಾರೆ. ಅವರಿಗೆ ಮಿಂಚಿನಂಥ ಮಾತು, ಚತುರತೆಯ ಮಾತು, ತಮಾಷೆಯ ಮಾತು, ನಾಜೂಕಿನ ನುಡಿ, ಹೊಸ ಮಾತು, ವಿನಯ ಪೂರ್ಣ ಹಾಗೂ ಪ್ರಾರ್ಥಿಸುವ ಮಾತುಗಳು, ಬಣ್ಣದ ಮಾತುಗಳೆಂದರೆ ಬಹಳ ಇಷ್ಟ. ಶಿಷ್ಟಾಚಾರವಲ್ಲದೆ ವಾಸ್ತವ್ಯತೆಯು ದಿನಕಳೆಯಲಾರದು. ನಾನು ಹಳೆಯ ರೀತಿಯವನಿದ್ದೇನೆ, ಬೆಳೆದದ್ದು ಬೇರೆ ವಿಧದ ನಿಯಮಗಳಲ್ಲಿ. ಅದನ್ನು ನನ್ನಿಂದ ಬದಲಾಯಿಸಲು ಅಥವಾ ಹೊಸತನ್ನು ಈಗ ಕಲಿತುಕೊಳ್ಳಲೂ ಸಾಧ್ಯ ಇರುವದಿಲ್ಲ. ಹಾಗಾಗಿ ನನ್ನ ಆಟ ಮುಗಿದಂತೆಯೇ ಸರಿ. ಈ ಎಲ್ಲಾ ತಾಪತ್ರಯಗಳ ದಾಗಿ ನನಗೀಗ ಯಾವುದರಲ್ಲೂ ಮನಸ್ಸೇ ಇಲ್ಲ. ನೀನೀಗ ನ್ಯಾಯಾಲಯದಲ್ಲಿಲ್ಲದಿರುವದು ಅದೆಂತಹ ದುಃಖಜನಕ. ವಿಷಾದ! ನಿನ್ನ ಚತುರೋಕ್ತಿಯ ಆ ಮಿಂಚುಗಳು, ಮನದಟ್ಟುಗೊಳಿಸುವ ಮಾತುಗಳು ಹಾಗೂ ಸಂಸ್ಕೃತಿ—ಇವೆಲ್ಲವೂ ನಿನ್ನನ್ನಿಂದು ಮುಂಚೆ ನಾನಿದ್ದ ಸ್ಥಳದಲ್ಲಿ, ನ್ಯಾಯಾಲದಲ್ಲೇ ಧುರೀಣನನ್ನಾಗಿ ಮಾಡುತ್ತಿದ್ದುವು. ನಿನ್ನ ವಿಜಯ: ಅದು ನನ್ನದೇ ವಿಜಯವೆಂದು ನಾನು ಭಾವಿಸುತ್ತಿದ್ದೆ. ಆದರೆ ಅಯ್ಯೋ! ಅದೂ ಕೂಡಾ ಇಂದು ಏನೂ ನಡೆಯುವಂತಿಲ್ಲ!" "ನನಗೆ ಆಶ್ಚರ್ಯವಾಗುತ್ತಿದೆ, ಮಾರ್ಕಂಡಂ, ನೀವು ಅದು ಹೇಗೆ ಇಷ್ಟು ಬದಲಾಗಿ ಹೋಗಿದ್ದೀರಿ! ಮೂರು ವರ್ಷಗಳೊಳಗೆ ನೀವಿಷ್ಟು ಬದಲಾಗುತ್ತೀರೆಂದು ನಾನು ನಿರೀಕ್ಷಿಸಿಯೂ ಇರಲಿಲ್ಲ..."

"ಹಾಗಾದರೆ, ಕೇದಾರಿ, ನೀನು ಮನುಷ್ಯರನ್ನು ಹಾಗೂ ಘಟನೆಗಳನ್ನು ತೀಕ್ಷ್ಣವಾಗಿ ಮನನ ಮಾಡುತ್ತಿದ್ದಿಯಾದರೂ ನನ್ನ ಕುರಿತು ಮನನ ಮಾಡಿಲ್ಲವೆಂಬುದು ಖೇದದ ವಿಷಯವಿದೆ. ನಿನ್ನ ಕುರಿತು ತಿಳಿದಂದಿನಿಂದಲೇ ನಾನು ಬದಲಾಗಿ ಹೋಗಿದ್ದೇನೆ. ಒಳಗಿಂದೊಳಗೆ ಹೆಪ್ಪು ರಹಸ್ಯವಾಗಿ ಕೆಲಸ ಮಾಡುತ್ತಿತ್ತು. ಅದು ನನ್ನ ಮನಸ್ಸನ್ನು ಅಲ್ಲದೆ ಹೃದಯವನ್ನೂ ಬದಲಾಗಿಸಿಯದೆ. ನನ್ನ ನೇರ ಮಾತಿಗೆ ಕ್ಷಮಿಸಿರಿ. ನೀವು ನನಗೊಂದು ಕನ್ನಡಿಯಂತೆ ಇದ್ದಿರಿ. ನನ್ನ ಮುಖದ ವಿಕಾರತೆಯನ್ನು ನಾನದರಲ್ಲಿ ನೋಡಿಕೊಳ್ಳುತ್ತಿದ್ದೆ. ನಿಮ್ಮ ರೀತಿ ಹಾಗೂ ಕಾರ್ಯಗಳು ನನ್ನದರ ಹಾಗೇ—ಜಯವನ್ನು ಪಡೆದೇ ತೀರುವ ಹಾಗೆ—ಇದ್ದುವು. ನಿಮ್ಮ ನಿರ್ಭೀತ ಕೀರ್ತಿ ಸ್ಪೃಹೆಯ ಕೃತ್ಯಗಳಲ್ಲಿ ನನ್ನ ನೀಚತನವನ್ನೇ ನಾನು ಕಾಣುತ್ತಿದ್ದೆ. ಕಬ್ಬನ್ನು ನಜ್ಜುಗುಜ್ಜು ಮಾಡುವಂತೆ ಇತರರನ್ನು ನಾನು ನಜ್ಜುಗುಜ್ಜು ಮಾಡುತ್ತಿದ್ದೆ—ಅವರಿಗಾಗುತ್ತಿದ್ದ ನೋವಿನತ್ತ ನಿರ್ಲಕ್ಷ್ಯನಾಗಿ ಸಂತೋಷದಿಂದ ರಸವನ್ನು ಕುಡಿಯುತ್ತಿದ್ದೆ. ನೀವು ವಿಜಯದ ಮೆಟ್ಟಲುಗಳನ್ನೇರುತ್ತಿದ್ದಾಗ ನನ್ನ ಮೂರ್ತಿಯನ್ನು ನಿಮ್ಮಲ್ಲಿ ಕಂಡುಕೊಂಡೆ. ಆಗಲೇ ನಮ್ರತೆ ಹಾಗೂ ಪಾಪ ನನ್ನಲ್ಲಿ ಬೇರು ಬಿಟ್ಟವು. ಆದರೆ ಈ ಜೀವನ ನಾಟಕದಲ್ಲಿ ನಾನು ಪಾತ್ರಧಾರಿ ಆಗ ಬೇಕಾಗಿತ್ತು. ಹಾಗಾಗಿ ಮುಖಕ್ಕೊಂದಿಷ್ಟು ಸುಗಂಧ ಧೂಳಿಯನ್ನು ಹಚ್ಚಿಕೊಂಡು ರಂಗಮಂಟಪದಕ್ಕೆ ಜಿಗಿದೆ. ನಾನು ಅಲ್ಲದೆ, ನೀವೂ ನಿರೀಕ್ಷಿಸಿದುದಕ್ಕಿಂತಲೂ ಶೀಘ್ರ ದುರಂತ ದೃಶ್ಯ ಸಮೀಪಿಸಿತು. ಒಟ್ಟಿನಲ್ಲಿ ನಾನು ದುಃಖಪಡುವದಿಲ್ಲ. ತಿಳಿಯದ ಕಾರಣಗಳ ಶಿಕ್ಷೆಯ ಸಮಯ ಇನ್ನೊಂದು ಜನ್ಮಕ್ಕಾಗಿ ಕಾಯುವುದಕ್ಕಿಂತ ಈಗಲೇ ಪ್ರಾಯಶ್ಚಿತ್ತ ಮಾಡಿಕೊಳ್ಳುವದೊಳ್ಳೆಯದು."

ಆಶ್ಚರ್ಯದಿಂದ ಕೇದಾರಿ ಮೂಕನಾದ. ಮಾರ್ಕಂಡಂರವರೇ ಕರುಣಾಜನಕ ಆದರೂ ಶಾಂತಮಯ ಸ್ವರದಿಂದ ಮುಂದರಿಸಿದರು.

"ನಾನುಗಳಿಸಿರುವ ಹಾಗೂ ಕಳೆದುಕೊಂಡಿರುವ ಲಕ್ಷಗಳಿಗಿಂತಲೂ ಹರ್ಷದಿಂದ ತೋಟದಲ್ಲಿ ಹಾಗೂ ಗದ್ದೆಗಳಲ್ಲಿ ದುಡಿದು ಸರಳ ಜೀವನವನ್ನು ನಡೆಸುವದೇ ಒಳ್ಳೆಯದೆಂದು ಈಗ ನನಗೆ ಭಾಸವಾಗುತ್ತಿದೆ. ಕೇದಾರಿ, ಈ ವಿಸ್ತಾರ ಕ್ಷೇತ್ರದಲ್ಲಿ ನನಗೂ ಒಂದಿಷ್ಟು ಆಶ್ರಯವನ್ನು ಕೊಡುವಂತೆ ರಾಮುವನ್ನು ಒಪ್ಪಿಸು. ನಾಶರಹಿತ ಶಾಂತತೆಯ ಈ ಪರ್ವತ ಪ್ರದೇಶದಲ್ಲಿ ಇನ್ನು ಮುಂದೆ ನಾನು ದಿನಕಳೆಯುತ್ತೇನೆ."

(ಹದಿನೈದನೇ ಪುಟ ನೋಡಿರಿ)

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೫	೨೧—೭—೧೯೬೬	No. 45

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಪ್ರಧಾನಿ ಇಂದಿರಾ ಗಾಂಧಿಯವರು ದಿ| ಅಧ್ಯಕ್ಷ ಜಾನ್ ಎಫ್. ಕೆನೆಡಿಯವರ ಸಮಾಧಿಗೆ ಹಾರಾರ್ಪಣೆ ಮಾಡಿದ ದೃಶ್ಯ.

ಯೋಜನೆಯ ಕಣ್ಣುಮುಚ್ಚಾಲೆ

ನಾಲ್ಕನೆಯ ಯೋಜನೆಯ ಮೊದಲ ವರ್ಷ ಕಳೆದ ಎಪ್ರಿಲಿನಿಂದ ಆರಂಭವಾಗಿ ಇದೀಗ ನಾಲ್ಕು ತಿಂಗಳುಗಳು ಕಳೆದರೂ ಯೋಜನೆಯ ಗಾತ್ರವೇನು ಎಂಬುದನ್ನೂ ತಿಳಿದು ಬಂದಿರುವುದಿಲ್ಲ. ರೂ. ೨೨೦೦೦ ಕೋಟಿಯಿಂದ ರೂ. ೨೪೦೦೦ ಕೋಟಿಯ ವರೆಗೆ ಇದು ತೂಗುತ್ತಿದೆ. ಇದಕ್ಕೆ ಕಾರಣವನ್ನು ಅರಸಲು ದೂರ ಹೋಗಬೇಕಾಗಿಲ್ಲ. ನಮ್ಮ ಯೋಜನೆಯು ಮುಖ್ಯವಾಗಿ ಬಾಹ್ಯ ನೆರವನ್ನು ಹೊಂದಿಕೊಂಡಿರುವುದರಿಂದ ವಿದೇಶೀ ಸಹಾಯದ ಮೊತ್ತವನ್ನು ಊಹಿಸದೆ ಯೋಜನೆಯ ಗಾತ್ರವನ್ನು ನಿರ್ಣಯಿಸುವುದು ಸಾಧ್ಯವಿಲ್ಲ. ನಮಗೆ ಸಹಾಯ ನೀಡುವ ದೇಶಗಳು ತಮ್ಮ ಪಾಲೆಷ್ಟು ಎಂಬುದನ್ನೂ ಖಚಿತ ಪಡಿಸಿರುವುದಿಲ್ಲ.

ಇದಕ್ಕೆ ಕಾರಣವೇನು? ಪಾಕಿಸ್ತಾನ—ಭಾರತಗಳ ನಡುವೆ ನಡೆದ ಹೋರಾಟದ ಪರಿಣಾಮವಿದೆಂದರೂ ತಪ್ಪಿಲ್ಲ. ಹಾಗೆಯೇ ಅರ್ಥ ಮಂತ್ರಿ ಖಾತೆಯಲ್ಲಿ ಟಿಟಿಕೆಯವರ ನಿರ್ಗಮನ, ಹೊಸಬರೊಬ್ಬರ ಆಗಮನ, ಇದೇ ವೇಳೆ ಸರಕಾರದ ಧುರೀಣತ್ವದಲ್ಲಿಯೇ ಅನಿರೀಕ್ಷಿತ ಪರಿವರ್ತನ—ಹೀಗೆ ಒಂದಲ್ಲ ಹಲವು ಕಾರಣಗಳು ಮುಂದೆ ಬರುತ್ತವೆ. ಯೋಜನಾ ಆಯೋಗದ ಉಪಾಧ್ಯಕ್ಷರೂ ಯೋಜನಾ ಸಚಿವರೂ ಆದ ಅಶೋಕ ಮೆಹತಾರೊಮ್ಮೆ ವಿದೇಶ ಯಾತ್ರೆ ಮಾಡಿ ಬಂದರು; ಪ್ರಧಾನಿ ಗಾಂಧಿಯವರೂ ನಮ್ಮ ಮುಖ್ಯ ಸಹಾಯಕ ಅಮೇರಿಕವನ್ನು ಸಂದರ್ಶಿಸಿ, ಭಾರತದ ನಿಲುವನ್ನು, ನೀತಿಯನ್ನು ಅಧ್ಯಕ್ಷ ಜಾನ್ಸನ್ನರಿಗೆ ಮನವರಿಕೆ ಮಾಡಿ ಬಂದರು. ಉಭಯ ನಾಯಕರಲ್ಲಿ ಪರಸ್ಪರ ತಿಳುವಳಿಕೆಯೇನೋ ಹೆಚ್ಚಿತು; ಅರ್ಥಿಕ ನೆರವನ್ನು ಭಾರತ-ಪಾಕ್‌ಗಳಿಗೆ ನೀಡುವ ನಿರ್ಧಾರವನ್ನೂ ಇದು ಸಾಧಿಸಿತು. ಆದರೆ ಎಷ್ಟು, ಅದು ಎಷ್ಟರ ವರೆಗೆ? ಜಾಗತಿಕ ಬ್ಯಾಂಕಿನ ಮೂಲಕ ಎಷ್ಟು ಸಾಧ್ಯವಿದೆಯೋ ಅಷ್ಟು! ಇದನ್ನು ನಿರ್ಧರಿಸಲು ಜಾಗತಿಕ ಬ್ಯಾಂಕು ಸಭೆ ಸೇರಬೇಕು.

ಬ್ರಿಟನ್, ಹೊಲ್ಲೆಂಡ್, ಫ್ರಾನ್ಸ್, ಇಟೆಲಿ ಮತ್ತು ಜರ್ಮನಿಗಳಲ್ಲಿ ಸಂಚಾರ ಮಾಡಿದ ಅರ್ಥಮಂತ್ರಿ ಚೌಧುರಿಯವರು ಭಾರತ ಸಹಾಯ ಮಂಡಳದ ಮೂಲಕ ಯೋಜನೆಯ ಮೊದಲ ವರ್ಷಕ್ಕೆ ರೂ. ೭೬೦ ಕೋಟಿಯಷ್ಟು ಸಹಾಯದ ನಿರೀಕ್ಷೆಯಿಟ್ಟುಕೊಂಡಿದ್ದಾರೆ. ರೂಪಾಯಿಯ ಅಪಮೌಲ್ಯವನ್ನು ಮಾಡಿ ತುಸು ತಡವಾಗಿಯಾದರೂ ಪಡೆಯಬಹುದಾದರೆ, ಸೋವಿಯತ್ ರಶ್ಯಕ್ಕೆ ಇವರ ರಹಸ್ಯ ತಿಳಿಯದೆ ಸಮಾಧಾನವಿಲ್ಲ. ಪ್ರಧಾನಿ ಗಾಂಧಿಯವರ ಮಾಸ್ಕೋ ಸಂದರ್ಶನದಿಂದ ಕೊಸಿಗಿನ್ ಸಮಾಧಾನ ತೋರ್ಪಡಿಸಿದರು, ಸಹಕಾರ ಹಸ್ತವನ್ನು ನೀಡಿದರು ನಿಜ; ಆದರೂ ಭಾರತವು ಅಮೇರಿಕೆಯತ್ತ ವಾಲುತ್ತಿದೆ ಎಂಬ ಸಂದೇಹದ ಬೀಜ ಕಿತ್ತು ಹೋಗಿರಲಾರದು. ಹೀಗೆ ನಮ್ಮ ನೆರವುಗಾರರ ಕೂಟ ಕಣ್ಣುಮುಚ್ಚಾಲೆ ಆಡುತ್ತಿದೆ; ಬಹುಮಟ್ಟಿಗೆ ಮುಂದಿನ, ಅಕ್ಟೋಬರ ತಿಂಗಳಲ್ಲಿ ಪ್ರಚಲಿತ ವರ್ಷದ ವಿದೇಶೀ ನೆರವಿನ ಸ್ಪಷ್ಟ ಅಂಕೆ ಸಂಖ್ಯೆಗಳು ಗೊತ್ತಾಗುವ ನಿರೀಕ್ಷೆ. ಮತ್ತೆ ಈ ವರ್ಷದಲ್ಲಿ ಉಳಿದಿರುವುದು ಐದು ತಿಂಗಳುಗಳು ಮಾತ್ರ!

ವಿದೇಶೀ ಸಹಾಯದ ಸ್ಥಿತಿ ಹೀಗೆ ನನೆಗುದಿಗೆ ಬಿದ್ದಿದೆ; ದೇಶದಲ್ಲೂ ಯೋಜನಾ ಆಯೋಗವೇ ಬದಲಾಗುವ ನಿರೀಕ್ಷೆಯೂ ಇದೆ. ಪೂರ್ಣಕಾಲದ ಸದಸ್ಯರಾಗಿರುವ ಡಾ| ವಿ. ಕೆ. ಆರ್. ವಿ. ರಾವ್ ಮತ್ತು ಎಸ್. ಜಿ. ಬರ್ವೆಯವರು ಪ್ರತ್ಯಕ್ಷ ರಾಜಕೀಯದಲ್ಲಿ ಆಸಕ್ತಿ ತೋರಿಸ ತೊಡಗಿ ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಿಸಲು ಬಯಸಿ ತಮ್ಮ ರಾಜೀನಾಮೆಯೀಯುವ ನಿರ್ಧಾರ ಮಾಡಿದ್ದಾರೆ. ಮತ್ತೊಬ್ಬರು ಪ್ರೊ| ಎಮ್. ಎಸ್. ಥಕ್ಕರ್ ಇವರು ಹಿಂದೆಯೇ ಲಾಲ ಬಹದ್ದೂರರಿಗೆ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದು ಈ ಮತ್ತೆ ಇಂದಿರಾ ಗಾಂಧಿಯವರನ್ನು ವಿನಂತಿಸಿದ್ದಾರೆ. ಈ ಮೂವರೂ ಅನುಭವಿ ಯೋಜಕರು ಆಯೋಗದಿಂದ ಹೊರಬಿದ್ದರೆ, ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಅಂತಿಮ ರೂಪಕೊಡುವ ಭಾಗ್ಯ ಬೇರೆಯವರದ್ದಾಗುವುದು. ಮೊದಲೇ ಅನಿಶ್ಚಿತತೆಯಿಂದ ಕೂಡಿದ ಯೋಜನೆಯ ಸ್ವರೂಪ ಸುಂದರವಾಗುವುದರಲ್ಲಿ ಸಂದೇಹ. ಆದರೂ ಈ ತ್ರಿಮೂರ್ತಿಗಳ ನೆರವು—ಸಲಹೆ ಸದಾ ಸಿಗುವಂತೆ ಮಾಡಿದರೆ, ತುಸು ನೆಮ್ಮದಿಯೂ ದೀತು.

ಯೋಜನೆಯ ಗಾತ್ರದ ಬಗ್ಗೆ ಮೆಹತಾ—ಕಾಮರಾಜರ ನಡುವೆ ಭಿನ್ನಾಭಿಪ್ರಾಯವಿತ್ತು. ೨೩,೫೦೦ ಕೋಟಿ ಯೆಂದು ಮೆಹತಾ ಹೇಳಿದರೆ ೨೨,೫೦೦ ಕೋಟಿಯೆಂದು ಕಾಮರಾಜ ವಾದಿಸಿತ್ತು. ಯೋಜಕರೇ ಗಾತ್ರಗೊತ್ತು ಪಡಿಸಬೇಕು ಹಣದ ದಾರಿ ತೋರಿಸಬೇಕು; ನಿಮ್ಮನ್ನಿದ್ದರು ಕಾಮರಾಜರು. ಈಗ ಸ್ವಯಂ ಮೆಹತಾರೇ ಕಾಮರಾಜರ ಮಾತನ್ನು ಒಪ್ಪಿದ್ದಾರೆ. ಅಂದ ಮಾತ್ರಕ್ಕೆ ರೂ. ೨೨|| ಸಾವಿರ ಕೋಟಿಯ ಯೋಜನೆ ಗೊತ್ತಾಯಿತು ಎಂದರ್ಥವಲ್ಲ. ನಿರೀಕ್ಷಿತ ಪ್ರಮಾಣದಲ್ಲಿ ವಿದೇಶೀ ನೆರವು ಈ ವರ್ಷ ಮಾತ್ರವಲ್ಲ, ಮುಂದಿನ ನಾಲ್ಕೂ ವರ್ಷಗಳು ಲಭಿಸಿದರೆ ಗಾತ್ರ ಆಷ್ಟಾಗುವುದು. ಭಾರತ ಸಹಾಯಕ ಮಂಡಳಿ, ಜಾಗತಿಕ ಬ್ಯಾಂಕು ಮಿತ್ರರಾಷ್ಟ್ರಗಳು ದೀರ್ಘಕಾಲದ ಆಶ್ವಾಸನೆಯನ್ನು ನೀಡಲು ಮುಂದಾದರೆ ಮಾತ್ರ ಯೋಜನೆಯು ಪರ್ವತರೂಪ ನವರಂಬದಲ್ಲಾದರೂ ಪ್ರಕಟಗೊಂಡೀತು. ಇಲ್ಲವಾದರೆ, ಯೋಜನೆಯು ವರ್ಷ ಪೂರ್ತಿ ಉರುಳುತ್ತದೆ. ಇಂತಹ ದುರವಸ್ಥೆಯಿಂದ ನಾವು ಎಷ್ಟು ಬೇಗ ಪಾರಾಗುತ್ತೇವೆಯೋ ಅಷ್ಟು ನಮಗೆ ನೆಮ್ಮದಿ; ಕ್ಷೇಮ.

ವಚನ ಸುಧೆ

ಬುದ್ಧಿ ಶ್ರೇಷ್ಠಾನಿ ಕರ್ಮಾಣಿ
ಬಾಹು ಮಧ್ಯಾನಿ ಭಾರತ||
ತಾನಿ ಜಂಘಾ ಜಘನ್ಯಾನಿ
ಭಾರಪ್ರತ್ಯವರಾಣಿ ಚ||

ಬುದ್ಧಿಯಿಂದ ವಿಚಾರಿಸಿ ಮಾಡುವ ಕಾರ್ಯ ಉತ್ತಮ, ಬಾಹುಬಲದಿಂದ ಮಾಡುವ ಕಾರ್ಯ ಮಧ್ಯಮ, ಜಂಘೆಗಳಿಂದ ಮಾಡುವ ಕಾರ್ಯ ಅಧಮ, ಭಾರಹೊರುವ ಕಾರ್ಯ ಅಧಮಾಧಮ.

ನಿರ್ಧಾರಿತ ಕಾಸರಗೋಡು

ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರು ಸದ್ಯ ರಾಷ್ಟ್ರಪತಿ ಆಳಿಕೆಯಲ್ಲಿರುವ ಕೇರಳದ ರಾಜ್ಯಪಾಲರಿಗೆ ಪತ್ರವೊಂದನ್ನು ಬರೆದು ಕರ್ನಾಟಕ—ಮಹಾರಾಷ್ಟ್ರ ಗಡಿಗೆ ಸಂಬಂಧಿಸಿದ ಏಕ ಸದಸ್ಯ ಆಯೋಗ ನೇಮಕದ ಬಗ್ಗೆ ಅಭಿಪ್ರಾಯ ಕೇಳಿದ್ದರು. ಹಾಗೆಯೇ ನ್ಯಾಯವಾಗಿ ಕರ್ನಾಟಕಕ್ಕೆ ಸೇರಬೇಕಾದ ಕಾಸರಗೋಡಿನ ಒಂದು ಭಾಗವನ್ನು ಬಿಟ್ಟು ಕೊಡುವ ವಿಚಾರದಲ್ಲಿ ಕೇರಳ ಸರಕಾರದ ನಿಲುವೇನೆಂಬುದನ್ನೂ ತಿಳಿಯ ಬಯಸಿದ್ದರು. ಇದಕ್ಕೀಗ ಉತ್ತರ ಬರುತ್ತಲಿದೆ. ಅಧಿಕೃತವಾಗಿ ತಿಳಿದು ಬಂದಂತೆ ರಾಜ್ಯ ಪುನರ್ಘಟನಾ ಶಾಸನದನ್ವಯ ೧೯೫೬ರಲ್ಲಿ ಒಮ್ಮೆ ನಿರ್ಧಾರವಾದ ಸಂಗತಿಯನ್ನು ಈಗ ಕೆಣಕುವುದು ಸರಿಯಲ್ಲ. ಇದು ಕೇರಳ ಸರಕಾರದ ನಿಲುವು. ಇದೇ ನಿಲುವನ್ನು ನಿಜಲಿಂಗಪ್ಪನವರೂ ವಹಿಸಿದರೆ, ಕಾರವಾರ—ಬೆಳಗಾಂವಿ ನಿಪ್ಪಾಣಿಗಳು ಕೈತಪ್ಪುವುದಾದರೂ ಉಳಿಯುತ್ತದೆ. ರಾಜ್ಯದಲ್ಲಿ ಜನಪ್ರಿಯ ಸರಕಾರ ಇಲ್ಲದೆ ಇರುವಾಗ ಇಂತಹ ಪ್ರಶ್ನೆಯನ್ನು ಎತ್ತುವುದು ಸೂಕ್ತವಲ್ಲ—ಇದು ಕೇರಳದ ಇನ್ನೊಂದು ಅಭಿಮತ. ಕರ್ನಾಟಕ—ಮಹಾರಾಷ್ಟ್ರಗಳೆರಡರಲ್ಲೂ ಜನಪ್ರಿಯ ಪ್ರಜಾಪ್ರಭುತ್ವಾತ್ಮಕ ಸರಕಾರಗಳಿವೆ. ಆದುದರಿಂದ ಏಕ ಸದಸ್ಯ ಆಯೋಗ ನೇಮಿಸುವುದೇನೂ ಅಪರಾಧವಲ್ಲ—ಕರ್ನಾಟಕ—ಮಹಾರಾಷ್ಟ್ರಗಳ ಸೀಮಾ ನಿರ್ಧಾರಕ್ಕೆ. ಆದರೆ, ಕಾಸರಗೋಡಿಗೆ ಮಾತ್ರ ಕೈಹಾಕಲು ಬರಬೇಡಿ—ಇದು ಸ್ಪಷ್ಟ ಅಭಿಪ್ರಾಯ. ಕಾಸರಗೋಡನ್ನು ಪಡೆಯುವ ಪ್ರಯತ್ನ ಬೆಳಗಾಂವಿ—ನಿಪ್ಪಾಣಿಗಳನ್ನುಳಿಸುವ ಪ್ರಯತ್ನ—ಇದು ಕನ್ನಡಿಗರ ಮಂತ್ರವಾಗಬೇಕು. ನ್ಯಾಯ ದೊರಕಿಸಿಕೊಳ್ಳಲು ನ್ಯಾಯಬದ್ಧವಾಗಿ ಹೋರಾಡಬೇಕು.

ನರಸಣ್ಣನ ಸರಸ

'ಇಂದಿರಾ ಗಾಂಧಿ ಮಾಸ್ಕೋಗೆ ಬಂದು ವಿಯತನಾಮು ಶಾಂತಿ ನಿಯೋಗ ವಿಫಲವಾಯ್ತಂತೆ ...'

'ಅಲ್ವೋ, ಮತ್ತೆ ಧಿಮಾಕು ನಷ್ಟಂತ್ಯ...!'

ಕೃಷ್ಣ

ಗೇಹ ರಾಜ್ಯದಲ್ಲಿ

ವಿವೇಕವೇನೋ ಇದೆ, ಆದರೆ....?

"ನೋಡಿದ್ರ್ಯಾ?"

"ಏನನ್ನ?"

"ಓದ್ಲಿಲ್ವಾ ಪತ್ರಿಕೆಯನ್ನ?"

"ಓದಿದ್ದೇನೆ ಬಿಡು...."

'ಮತ್ತೇನನ್ನೋಂತ ನನ್ನನ್ನೇ ಕೇಳ್ತಾ ಇದೀರಲ್ಲಾ?'

"ಪತ್ರಿಕೇಲಿ ಒಂದಲ್ಲ ನೂರು ವಿಷಯ ಇರುತ್ತೆ. ಸತ್ಯಕಪ್ಪೆಯ ಕಾಲು ಮುರಿದದ್ರಿಂದ ಕೊರಳಿದ್ದ ಮನುಷ್ಯ ಯಮನೂರಿಗೆ ಯಾತ್ರೆ ಕೈಗೊಂಡುದರ ವರೆಗೆ ಇರುತ್ತವೆ. ನೀನನ್ನೋ ಸಂಗ್ತಿ ಯಾವುದೂಂತ...."

"ಸಾಕು ಬಿಡೀಂದ್ರೆ..."

"ಮತ್ತೆ ಬೇಕೂ ಅಂದವ್ರು ಯಾರು?"

'ಬೇಕು ಅಂದವ್ರು ನಾನೇ ಇಲ್ಲಿ ಬೇಕಾದ್ರೆ. ಆದ್ರೆ ನೋಡಿ, ಬೇಕೂಂತ ಬಂದವ್ರು — ನಡು ಮಧ್ಯಾಹ್ನದಲ್ಲಿ, ಅದೂ ಪಾಪ ನಡೆದುಕೊಂಡು ಹದಿನೈದು ಮೈಲು — ನೀವೆ ಅಲ್ಲವೆ? "

'ಹೌದೇ ಅಂದಿನ ನಡಿಗೆಯನ್ನು ನೆನೆಯುವಾಗ ಈಗಲೂ ಮೈ ಜುಮ್ಮೆನ್ನುತ್ತೆ...."

"ಆಗಬೇ ಏನು?'

"ಹ್ಞೂಂ, ಸಾಕು ನಿನ್ನ ಕೊಂಕು."

"ನೋಡಿ, ಇಲ್ಲದ್ದು ಏನೂ ಚನ್ನಬೇಡಿ ನನಗೆ ಮತ್ತೆ ಸಿಟ್ಟುಬರುತ್ತೆ...."

'ಅಲ್ಲ, ಸಿಟ್ಟೂನೂ ಬರೋ ಸಮಯ ತಿಳಿಸಿ ಬರೋಕೆ ಆರಂಭವಾಯ್ತೇನು?'

"ನೋಡಿ, ಸಿವ್ಗೆ ಬೇಡ..."

"ನನ್ಗೆ ಬೇಕೋ ಬೇಡವೋ ಅಂತ ಹೇಳೋ ಅಧಿಕಾರ ಯಾರು ನಿನಗೆ ಕೊಟ್ಟವ್ರು?"

'ಯಾರು ಅಂದ್ರೆ, ನೀವೇ..."

"ಯಾವಾಗ?"

"ಕೈ ಹಿಡಿದಂದೇ...?

'ಹೇಗೆ?...'

'ಅಯ್ಯೊ ನಿಮ್ಮದೊಂದು! ಕಾಲಲ್ಲಿ ಬೊಕ್ಕೆ ಎಬ್ಬಿಸಿ ನಡು ಬಿಸಿಲಿಗೆ ಬಂದು ಹಾರ್ಸಿ ಬಂದಿದ್ದಾರೆ, ಅರ್ಧಾಂಗೀತ ಹೇಳಿದ್ದಾರೆ, ಅಧಿಕಾರ ಮಾತ್ರ ಕೊಡ್ಲಿಲ್ಲಾಂತೆ..."

'ಓ, ಹಾಗೆ....ಅರ್ಧಾಂಗಿ ಆದದ್ರಿಂದ ಅರ್ಧ ಅಧಿಕಾರ ನಿನಗೆ ಬಂದ ಹಾಗಾಯ್ತು ಅಂತ ತಾನೇ ನಿನ್ನ ವಾದ?'

"ಅಲ್ಲ, ಪೂರ್ಣ ಅಧಿಕಾರ..."

'ಅದು ನಾನು ಕಣ್ಮುಚ್ಚಿದ ಮೇಲೆ...'

'ಛಿ, ಎಂತಹ ಅಭದ್ರ ಆಡುತ್ತೀರಿ?'

"ಅಭದ್ರ ಅಲ್ಲವೇ ಅದು...."

'ಮತ್ತೆಂಥದು?"

'ಸತ್ಯ ಸಂಗತಿ....ಆ ಮೇಲಾದ್ರೂ ನಿನ್ನನ್ನ ಗೋಳು ಹೊಯ್ಕೋರು ಯಾರೂ ಇಲ್ಲ ನೋಡು. ನನ್ನ ನಿನ್ನ ಇಬ್ಬರ ಅಧಿಕಾರಾನೂ ನಿನ್ನ ಮುಷ್ಟಿಯೊಳಗೆ...."

"ಈಗ ನನಗೆ ಅಧಿಕಾರ ಬೇಕೂಂತ ಕೆಂಬಾವುಟ ಹಾರ್ಸಿದವರು ಯಾರು?"

'ಯಾರು ಅಂತೆ! ನಿಮ್ಗೆ ಬೇಡಾಂತ ಸಿದ್ಧಾಂತಕ್ಕೆ ಬಂದಿದ್ದಾಳೆ ಮತ್ತೆ ಯಾರು ಅಂತಾಳೆ.......ಅದ್ರ ಮೇಲೆ ಪೂರ್ಣಾಧಿಕಾರವಿದೆಯಂತೆ ಪೂರ್ಣಾಧಿಕಾರ! ಇಂದಿರಾ ಗಾಂಧಿ ಪ್ರಧಾನಿಯಾದದ್ದೇ ತಡ, ಈ ಹೆಂಗಸ್ರಿಗೆಲ್ಲಾ ಸೊಕ್ಕು ನೆತ್ತಿಗೇರಿತು ಅಲ್ವಾ?"

"..............."

"ಮಾತಾಡೇ ಈಗ, ನಿನ್ನ ಮಾರುದ್ದ ನಾಲಗೆಯನ್ನ ತೋರ್ಸು...."

"..............."

"ಯಾಕೆ ಸುಮ್ನೆ ಕುಳಿತೆ? ಇದೆಯಲ್ಲಾ ನಿನಗೆ ಅಧಿಕಾರ? ನಿನ್ನಷ್ಟೇ ಅಧಿಕಾರ ನನಗೂ ಇದೇನ್ನು. ಮತ್ತೆ ನೆನ್ಪಿರಲಿ — ಎಷ್ಟಾದ್ರೂ ಹೆಂಗಸರ ಬುದ್ಧಿ ಮೊಣಕಾಲ ಕೆಳಗೇಂತ. ಏನು ಆದ್ರೆ ಏನು? ಏನು ಮಾಡಿದ್ರೆ ಏನು? ಅವರ ಬುದ್ಧಿ ಬೆಳೆಯೋಲ್ಲ. ಅವರು ಬೇಗನೇ ಯಾರ್ಯಾರದೋ ಕೈಗೊಂಬೆಯಾಗಿ ಬಿಡ್ತಾರೆ....'

"ಹೇಗೆ?"

'ನೀನು ನನ್ನದು ಆಗ್ಲಿಲ್ವೇ ಹಾಗೆ....'

"ಅಬ್ಬಾ ನೀವೆ!"

'ಏನಾಯ್ತು?"

'ಆಗೋದೇನು? ಸಿಂಹಗರ್ಜನೆಮಾಡಿ ಕುರಿಮರಿಯನ್ನು ಕಬಳಿಸಲು ಧಾವಿಸಿ ಬಂದ್ರಿ, ಮರುಕ್ಷಣವೇ ಬಣ್ಣ ಬದಲಾಯಿತು..."

"ಮತ್ತೆ ಮಾಡೋದೇನೆ? ನೀನು ಬಿಡಿ ಬಿಡಿ ಅಂದ್ರೂ ಬಿಡೋಕಾಗುತ್ಯೆ?" ಕಟ್ಟಿಕೊಳ್ಳೋದು ಸುಲಭ, ಹೊತ್ತುಕೊಳ್ಳೋದೇ ಮತ್ತೆ ತಾಪತ್ರಯ...."

ಹ್ಞೂಂ...ತಾಪತ್ರಯವಿರ್ಲಿ ಶತವಿರ್ಲಿ, ತಲೆಕೊಟ್ಮೇಲೆ ಹೊರ್ಲೇಬೇಕು ತಾನೆ? ನಮ್ಮ ಇಂದಿರೆಯ ಕತೆ ನೋಡಿ..."

"ಅದೇ ಅಂದೆನಲ್ಲಾ, ಆ ಇಂದಿರೆಗೆ ಬೇಡವಿತ್ತು ಪ್ರಧಾನಿ ಪಟ್ಟ..."

"ನಿಮ್ಮ ಪುರುಷ ಜಾತಿಯೇ ಹಾಗೆ. ಏನಾಯ್ತಂತೆ ಆಕೆ ಪ್ರಧಾನಿಯಾದ್ದರಿಂದ?"

'ಇನ್ನು ಆಗೋಕೆ ಬಾಕಿಯಾದ್ರೂ ಏನು?'

'ಯಾಕೆ?"

"ಅಲ್ವೆ, ಮನೆಗೆಡೆಯಲಾರದವಳು ಮಾರು ಹೇಗೆ ಗೆದ್ದಾಳು?"

"ಯಾಕೆ, ಏನಾಯ್ತು? ದಿಗ್ವಿಜಯ ಮಾಡಿದ್ದಾಳೆ...'

"ನೀನನ್ನೋ ಸಂಗ್ತಿ ಅಂದ್ರೆ ಇಂದಿರಾ ಕ್ಯೆರೋ, ಬಲ್ಗ್ರೇಡ್, ಮೋಸ್ಕೋಗಳಲ್ಲಿ ಜಯಭೇರಿ ಬಾರ್ಸಿ ಬಂದ್ಳೂಂತ ತಾನೆ?"

'ಹ್ಞೂಂ. ಮತ್ತೇನು? ಆಕೆಗೆ ದೊರೆತ ಸ್ವಾಗತ ಅಪೂರ್ವವಿತ್ತು....'

'ಸರಿಯೇ. ಪ್ರಧಾನಿ ಇಂದಿರಾಗೆ ಪೂರ್ವದಲ್ಲಿ ಇಂತಹ ಸ್ವಾಗತ ದೊರೆತಿಲ್ಲ."

'ಪಾಯಸದಲ್ಲಿ ಪಾಪಾಸು ಯಾಕೆ ಎಸೆಯುತ್ತೀರಿ?"

'ಏನಾಯ್ತು?'

'ಅಲ್ಲ, ನಿಮ್ಗೆ ಈವತ್ತು ಏನಾಗಿದೇಂತ?'

'ಯಾಕೆ?'

"ಮತ್ತೆ ಬಂದವ್ರೇ ಬುಸು ಬುಸು ಗುಟ್ಟೋಕೆ ಆರಂಭ ಮಾಡಿದ್ದೀರಿ..."

"ಇಲ್ಲವಲ್ಲಾ...."

'ಮತ್ತೆ ನಡೆಯಿತು ನನಗೆ ಸಹಸ್ರ ನಾಮ...."

"ಲಲಿತಾ ಸಹಸ್ರನಾಮ ಕೇಳಿದ್ದೇನೆ- ನಿನ್ನದನ್ನ ಕೇಳಿಲ್ಲವಲ್ಲಾ..."

'ಇಲ್ಲಾಂತಾದ್ರೆ ಬರೆಯಿರಿ ಒಂದು....'

'ಓಹೋ ಏನಾಗ್ಬೇಕು? ಅಹಲ್ಯಾ ಗೌತಮ ಪುತಾ ಕಥಾ ದೇವೇಂದ್ರ ವಂಚಿತಾ...'

"ಓಯ್, ಓಯ್...ನಿಲ್ಸಿಂದ್ರೆ....'

'ಯಾಕೆ? ಏನಾಯ್ತು?"

'ಅಲ್ರಿ, ನಿಮ್ಮ ಸಹಸ್ರನಾಮಕ್ಕೆ...."

'ಛೆ ಛೆ, ನನ್ನದಲ್ಲವೇ ಅದು ನಿನ್ನದು ...."

'ಹ್ಞೂಂ...ಹಾಗೇ. ಅದಕ್ಕೆ ಛಂದ ಯಾವುದು?"

"ಛಂದ? ಯಾವುದಾದ್ರೆ ಏನಂತೆ?"

"ಹಾಗೆಂದರಾಗುತ್ತೆಯೆ?"

"ಏನು ಆಗೋದೇ ಇಲ್ಲ ಅಂತೀಯ?"

"ಅದೆಲ್ಲಾ ನಂಗೊತ್ತಿಲ್ಲ. ನೋಡೀ ಸಾಮಾನ್ಯವಾಗಿ ಛಂದ, ದೇವತೆ, ಋಷಿಗಳು ಬೇಕೇ ಬೇಕು ನೋಡಿ..."

"ಓ, ಅದಕ್ಕೇನಂತೆ! ಋಷಿ ಗೌತಮನೇ ಇರಲಿ, ದೇವತೆ ದೇವೇಂದ್ರನೇ. ಇನ್ನು ಇನ್ನು....ಛಂದ...."

'ಛಂದ....ಛಂದ... ಹ್ಞೂಂ ತಿಳೀತು.'

"ಏನು?'

"ಗೋಪೀಛಂದ....'

"ಹ್ಹ ಹ್ಹ ಹ್ಹ ಹ್ಹ....'

"ಏನೇ, ಯಾಕೆ ನಗ್ತೀಯ?'

'ಹ್ಹ ಹ್ಹ ಹ್ಹ ಹ್ಹ ಹ್ಹ...."

'ನೋಡು, ಹೀಗೆಲ್ಲಾ ನಕ್ರೆ ನಿನ್ನ ಹೊಟ್ಟೆಯಲ್ಲಿ ಹುಣ್ಣಾದೀತು....'

'ಆದ್ರೆ, ಅಪರೇಶನ್ ಮಾಡಿಸೋಣ"

"ಮಾಡಿಸೋಣಾಂತ ಅನ್ನೋದು ಛಾರಿ ಸಲೀಸು ಆದ್ರೆ ಮಾಡೋದು?"

"ಅಂತೂ ನಿಮ್ಮ ಲೆಕ್ಕಾಚಾರದಲ್ಲಿ ನಗೋದಕ್ಕೂ ಇಲ್ಲ....'

'ಅಲ್ಲಾ, ನಗೋ ಮಾತಾದ್ರೂ ಏನು ಬಂತು?"

"ಮತ್ತೆ ಏನನ್ಬೇಕು? ನನ್ನ ಸಹಸ್ರ ನಾಮ ಬರೆಯೋ ರಾಪಿನಲ್ಲಿ ಹೊಸ ಛಂದವನ್ನು ಹುಡುಕಿದ್ರಿ...'

"ಓ....ಹಾಗೆ..."

'ಅಯ್ಯೋ ಪಾಪ, ಏನೂ ಗೊತ್ತಿಲ್ಲದ ಮಗು."

'ನನ್ನಮ್ಮನಿಗೆ ನಾನು ಮಗುವೇ...."

'ನಾನೂ ನನ್ನಮ್ಮನಿಗೆ....'

'ಆದ್ರೆ, ನೀನು ಅಮ್ಮನನ್ನು ಬಿಟ್ಟಿರಬಲ್ಲೆ...."

"ಹ್ಞೂಂ... ಅಂತೂ ನಿಮ್ಮದೇ ಕೈ ಮೇಲು..."

'ಅದಕ್ಕೇ ಅಂದಿದ್ದಾರೆ: ಕೊಡುವ ಕೈ ಮೇಲು ಕೊಳ್ಳುವ ಕೈ ಕೆಳಗು ಅಂತ..."

'ಸರಿಯಪ್ಪ.... ಕೊಡಿ ಹಾಗಾದ್ರೆ....'

'ಏನು ಕೊಡ್ಲಿ?"

'ಏನು ಕೊಡ್ತೀರಿ?

'ಏನು ಕೊಡೋಕೆ ಸಾಧ್ಯ ನಿಮ್ಮಿಂದ?"

"ನಿನಗೇನು ಬೇಕು ಹೇಳು..."

'ಬೇಕಾದ್ದನ್ನು ಕೊಡ್ತೀರಾ?'

"ಹ್ಞೂಂ...."

'ನನಗೆ ನೀವೇ ಬೇಕು...."

"ಕೊಟ್ಟು ಬಿಟ್ಟೆ, ತೆಗೆದು ಕೋ...'

"ಈಗ ಹೇಳಿ, ಇನ್ನಾದ್ರೂ ನನ್ನದೇ ಅಧಿಕಾರ ತಾನೆ?"

"ಅಬ್ಬಾ ಹೆಣ್ಣೇ....ಆದ್ರೂ ನೋಡು, ಎಷ್ಟಾದ್ರೂ ಹೆಂಗಸಿಗೆ ಪೂರ್ವಾಪರ ವಿವೇಚನೆಯಿಲ್ಲ....ಅದ್ರಿಂದ್ಲೇ ಅವರು ಸಿಕ್ಕಾಪಟ್ಟೆ ಮಾತಾಡ್ತಾರೆ; ಯಾರ್ಯಾರೋ

(ಹದಿಮೂರನೇ ಪುಟ ನೋಡಿರಿ)

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ|. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಲಾರಂಗ

ಅಮೀರ್ ಖುಸ್ರೋ ಮತ್ತು ಸಿತಾರವಾದ್ಯ

ಬರೆದವರು
ಶ್ರೀ ಸ. ನಾರಾಯಣ

ಅಮೀರ ಖುಸ್ರು ಅಲ್ಲಾವುದೀನ ಖಿಲ್ಜಿಯ ಆಸ್ಥಾನದ ಪಂಡಿತ-ಗಾಯಕ. ಇವನು ಹಿಂದೂ-ಮುಸ್ಲಿಂ ಸಂಸ್ಕೃತಿಯ ಪಿತಾಮಹ. ಕ್ರಿ. ಶ. ೧೨೫೩ರಲ್ಲಿ ಪಟಿಯಾಳದಲ್ಲಿ ಜನಿಸಿದ. ಇವನು ಹುಟ್ಟಿನಿಂದ ಮುಸಲ್ಮಾನ. ಆದರೆ ಇವನ ರಾಷ್ಟ್ರಾಭಿಮಾನ ಉತ್ಕಟವಾದುದಾಗಿತ್ತು. ತಾನು ಭಾರತೀಯನೆಂದೇ ಕರೆದುಕೊಳ್ಳುತ್ತಿದ್ದನಂತೆ. ಇವನು ರಚಿಸಿದ ಸಾಹಿತ್ಯವೂ ಅಪಾರ. ಇವನ ಸಾಹಿತ್ಯದಲ್ಲಿ ಹಿಂದೂ-ಮುಸ್ಲಿಂ ಸಂಸ್ಕೃತಿಯ ಸಂಗಮವಿದೆ.

ಖುಸ್ರು ಅದ್ವಿತೀಯ ಪಂಡಿತ. ಹಿಂದೀ ಸಾಹಿತ್ಯ ಕ್ಷೇತ್ರದ ಆದಿ ಕವಿ ಎಂಬ ಬಿರುದು ಇವನಿಗೆ ಸಲ್ಲುತ್ತದೆ. ಇವನು ಹಿಂದಿಯಲ್ಲಿ ಅಪಾರ ಕವಿತೆಗಳನ್ನೂ, ಗ್ರಂಥಗಳನ್ನೂ ರಚಿಸಿದ್ದಾನೆ. ಪಾರಸಿ ಭಾಷೆಯ ಗದ್ಯ ಶೈಲಿಯ ಗ್ರಂಥ ರಚನೆ ಆರಂಭಿಸಿದವನು ಖುಸ್ರು ಎಂದು ಪಂಡಿತರು ಅಭಿಪ್ರಾಯ ಪಡುತ್ತಾರೆ.

ತನ್ನ ೯ನೆಯ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಖುಸ್ರು ಚಿಕ್ಕ ವಯಸ್ಸಿನಲ್ಲಿಯೇ ಅಪಾರ ದುಃಖಕ್ಕೆ ಒಳಗಾಗುತ್ತಾನೆ. ಅತೀವ ವೇದನೆಯೇ ಅವನ ಕಾವ್ಯ ರಚನೆಗೆ ಸ್ಫೂರ್ತಿ ನೀಡಿತೆಂದು ತೋರುತ್ತದೆ. ಹಿಂದಿಸಾಹಿತ್ಯದಲ್ಲಿ ಖುಸ್ರುವಿನ ಕವಿತೆಗಳಿಗೆ ವಿಶಿಷ್ಟ ಸ್ಥಾನವಿದೆ. ಇವನ ಕಾವ್ಯಗಳಿಗೆ ಮಾರು ಹೋದ ಜನತೆ ಇವನನ್ನು 'ತೋತಿಯೆ ಹಿಂದ್" (ಹಿಂದೂಸ್ಥಾನದ ಗಿಳಿ) ಎಂದು ಹೊಗಳಿದರಂತೆ. ದೆಹಲಿಯ ಬಾದಷಹ ಅಲ್ಲಾವುದೀನ್ ಖಿಲ್ಜಿ ಖುಸ್ರುವಿನ ಪಾಂಡಿತ್ಯ, ಕವಿತಾ ಶಕ್ತಿಗಳಿಗೆ ಮರುಳಾಗಿ ಅವನನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು "ಅಮೀರ್" ಎಂಬ ಬಿರುದಿತ್ತು ಸತ್ಕರಿಸಿದನಂತೆ. ಜನಸಾಮಾನ್ಯರಿಂದ ಚಕ್ರವರ್ತಿಯವರೆಗೆ ಎಲ್ಲ ಜನರ ಪ್ರಶಂಸೆಗೆ ಒಳಗಾದ ವ್ಯಕ್ತಿ ಖುಸ್ರು. ಸರ್ವ ಜನಮನ ರಂಜಿಸಿತು ಅವನ ಕವಿತಾ ಶಕ್ತಿ.

ಖುಸ್ರು ಕೆಲಕಾಲ ಅಲ್ಲಾವುದೀನ್ ಖಿಲ್ಜಿಯ ಆಸ್ಥಾನದ ಕವಿಯಾಗಿದ್ದ. ಇವನು ಪಾರಸೀ, ಹಿಂದೀ, ಅರಬ್ಬೀ, ಸಂಸ್ಕೃತ ಭಾಷೆಗಳಲ್ಲಿ ಅದ್ವಿತೀಯ ಪಂಡಿತ, ಕವಿ, ವಾಗ್ಮಿ. ಭಾರತೀಯ ಸಂಗೀತ ಕ್ಷೇತ್ರಕ್ಕೆ ಖುಸ್ರು ಸಲ್ಲಿಸಿದ ಸೇವೆ ಅಪಾರ. ಸಂತ ಕಬೀರದಾಸ ಮತ್ತು ಪ್ರಸಿದ್ಧ ಸಂಗೀತಾಚಾರ್ಯ ಗೋಪಾಲ ನಾಯಕರ ಮೇಲೆ ಖುಸ್ರು ಸಂಗೀತ ವಿಶೇಷ ಪರಿಣಾಮ ಬೀರಿತ್ತು. ಇವರಿಬ್ಬರೂ ಖುಸ್ರು ಸಂಗೀತಕ್ಕೆ, ಕಾವ್ಯಗಳಿಗೆ ಮಾರು ಹೋಗಿದ್ದರು ಎಂಬ ಅಂಶ ತಿಳಿದು ಬರುತ್ತದೆ.

ಸೈಫುಲದೀನ್ ಮಹಮೂದ್ ಖುಸ್ರು ತಂದೆ. ಮಹಾ ಪಂಡಿತ ನಿಜಾಮುದ್ದೀನ ಅವಲಿಯಾರ ಖುಸ್ರುವಿನ ವಿದ್ಯಾಗುರು. ಮುಸಲ್ಮಾನನಾಗಿ ಹುಟ್ಟಿದ್ದ ಖುಸ್ರುವಿಗೆ ಹಿಂದೂಗಳಲ್ಲಿ, ಹಿಂದೂ ಧರ್ಮದಲ್ಲಿ ವಿಶೇಷ ಗೌರವ-ಭಕ್ತಿ ಇತ್ತು ಎಂಬ ಸಂಗತಿ, ಅವನ ಸಾಹಿತ್ಯದಿಂದ ವ್ಯಕ್ತವಾಗುತ್ತದೆ. ಹಿಂದೂಗಳ ವಸಂತೋತ್ಸವ—ವಿಹಾರ ಸಂದರ್ಭಗಳಲ್ಲಿ ಹಿಂದೂಗಳೊಂದಿಗೆ ಬೆರೆತು ಸಂತೋಷದಲ್ಲಿ ಭಾಗಿಯಾಗುತ್ತಿದ್ದನಂತೆ, ಹಾಡುತ್ತಿದ್ದನಂತೆ.

ಭಾರತವು ಜನ್ಮಭೂಮಿ. ಇಲ್ಲಿ ಬಾಳುವ ಹಿಂದೂ ಮುಸ್ಲೀಮರಿಗೆ, ಭೇದವಿಲ್ಲ. ಎಲ್ಲ ಒಂದೇ ಎಂದು ಭಾವಿಸಿದ್ದನಂತೆ. "ಹಿಂದೂ ಮುಸ್ಲಿಂ ಧರ್ಮಗಳು ಒಂದೇ, ಅವಕ್ಕೆ ಯಾವ ಭೇದವೂ ಇಲ್ಲ, ಹಿಂದೂಗಳು ಇಸ್ಲಾಂ ಮತವನ್ನು ಒಪ್ಪುವುದಿಲ್ಲ. ಆದರೆ ಅವರ ಅನೇಕ ನಂಬಿಕೆ—ನಡವಳಿಕೆಗಳು ನಮ್ಮಂತೆಯೇ ಇವೆ. ಅವರು ವಿಗ್ರಹಾರಾಧಕರು. ಕಲ್ಲು, ಮರ, ಸೂರ್ಯ, ಪಶು, ಮೊದಲಾದುವುಗಳನ್ನು ಪೂಜಿಸುತ್ತಾರೆ. ಕಾರಣ: ಜಗತ್ತಿನ ಎಲ್ಲ ವಸ್ತುಗಳೂ ಪರಮಾತ್ಮನ ಅಂಶ'—ಎಂದು ಖುಸ್ರು ಅಭಿಪ್ರಾಯ ಪಡುತ್ತಿದ್ದನಂತೆ.

ಮತೀಯ ಅಂಧ ಜಾಲದಲ್ಲಿ ನೈಮರಿತು ಬಾಳಲಿಲ್ಲ ಖುಸ್ರು. ಜಾತಿ, ಮತ, ಪಕ್ಷ ಪಂಥಗಳನ್ನೂ ಮರೆತು 'ತಾನು ಭಾರತೀಯ' ಎಂಬ ಭಾವನೆಯಿಂದ ಬದುಕಿದ ಮಾನವತಾವಾದಿ. ತನ್ನ ಬಾಳನ್ನು ಸಂಗೀತದ ಸೇವೆಗೆ ಸಮರ್ಪಿಸಿದ. ಸಿಕೃತಕೃತ್ಯನಾದ. ತನ್ನ ಸೇವೆಯಿಂದ ಭಾರತೀಯ ಸಂಗೀತ ಕ್ಷೇತ್ರದಲ್ಲಿ ವಿಶಿಷ್ಟ ಕೀರ್ತಿ ಪಡೆದ. ಸಂಗೀತ, ಸಾಹಿತ್ಯ ಕ್ಷೇತ್ರಗಳು ಅವನ ಅನುಪಮ ಸೇವೆಯಿಂದ ಹೊಸ ರೂಪು ತಾಳಿದವು. ಅದರಿಂದ ದೊರೆತ ಲಾಭ ಖುಸ್ರುವಿಗಲ್ಲ; ಭಾರತೀಯ ಸಂಗೀತ ಸಾಹಿತ್ಯ ಕ್ಷೇತ್ರಗಳಿಗೆ—ಜನತೆಗೆ.

ಭಾರತದ ಅತಿ ಪ್ರಾಚೀನ ವಾದ್ಯವಾದ ವೀಣೆಯನ್ನು ನೋಡಿ ಅವನ್ನು ಅನುಸರಿಸಿ ಸಿತಾರ ವಾದ್ಯವನ್ನೂ ಮೃದಂಗವನ್ನೂ ಆಧಾರವಾಗಿಟ್ಟು ಕೊಂಡು ಢೋಲಕ ವಾದ್ಯವನ್ನು ಖುಸ್ರು ಆವಿಷ್ಕರಿಸಿದ. ಇದರಿಂದ ವಾದ್ಯಗಳಲ್ಲಿ ಹೊಸ ಬಗೆಯ ಸಂಪ್ರದಾಯವೇ ಬೆಳೆಯಿತು. ವೀಣೆಯ ನಾದ ಮಾಧುರ್ಯವನ್ನು ಅನುಭವಿಸಿದ್ದ ಖುಸ್ರು, ವೀಣೆಯನ್ನು ಅನುಸರಿಸಿ ಸಿತಾರ ವಾದ್ಯವನ್ನು ರೂಪಿಸಿದ. ಸಿತಾರ್ ವಾದ್ಯ ಇಂದಿಗೂ ತನ್ನ ಕೀರ್ತಿಯನ್ನು ಉಳಿಸಿಕೊಂಡಿದೆ. ಭಾರತೀಯ ವಾದ್ಯಗಳಲ್ಲಿ ಗಣ್ಯ ಸ್ಥಾನ ಪಡೆದಿದೆ.

ಆರಂಭದಲ್ಲಿ ಖುಸ್ರು ರಚಿಸಿ ಬೆಳಕಿಗೆ ತಂದ ಸಿತಾರ ವಾದ್ಯಕ್ಕೆ ಮೂರು ತಂತಿಗಳಿದ್ದವಂತೆ. ಖುಸ್ರು ತಾನು ಆವಿಷ್ಕರಿಸಿದ ನೂತನ ವಾದ್ಯಕ್ಕೆ "ಸಹತಾರ್" ಎಂದು ಹೆಸರಿಟ್ಟನಂತೆ. ಪಾರಸೀ ಭಾಷೆಯಲ್ಲಿ 'ಸಹ' ಎಂದರೆ ಮೂರು ಎಂದರ್ಥ. ಮೂರು ತಂತಿಗಳ ಸಿತಾರ್ ವಾದ್ಯವನ್ನು ನುಡಿಸಿ ಅಚ್ಚರಿಗೊಳಿಸುವ ಕಲಾವಿದರು ಇಂದಿಗೂ ಇದ್ದಾರಂತೆ. ಕಾಲಕ್ರಮೇಣ ಸಿತಾರ ವಾದ್ಯದಲ್ಲಿಯೂ ಕೆಲವು ಆಗತ್ಯ ಮಾರ್ಪಾಟುಗಳು ನಡೆದವು. ಸಿತಾರ್ ಸಂಪೂರ್ಣ ವಾದ್ಯವನ್ನಾಗಿ ರಚಿಸಿ ಬಳಕೆಗೆ ತರುವ ವೇಳೆಗೆ ಕೆಲವು ಪ್ರಯೋಗಗಳು ನಡೆದಿದ್ದವು. ಇಂದು ಸಿತಾರ್ ವಾದ್ಯದಲ್ಲಿ ೭ ತಂತಿಗಳು, ೨೫ ಮೆಟ್ಟಿಲುಗಳು. ಮತ್ತು ೧೩ ತರಫುಗಳಿವೆ. 'ಸಪ್ತ ತಾರಾ' ಎಂಬ ಹೆಸರಿನ ಅಪಭ್ರಂಶವೇ ಸಿತಾರ್ (ಸತಾರ್) ಎಂದು ಸಂಶೋಧಕರ ಅಭಿಪ್ರಾಯ.

ಸಿತಾರ್ ವಾದ್ಯದಲ್ಲಿ ವೀಣೆಯಲ್ಲಿ ನುಡಿಸುವಂತೆ ಪದ್ಯ ಬಾರಿಸುವ ಕ್ರಮವಿಲ್ಲ. ಈ ವಾದ್ಯದಲ್ಲಿ ನುಡಿಸುವ ಶಾಸ್ತ್ರೀಯ ಸ್ವರಾಕ್ಷರಗಳ ಸಮುದಾಯಕ್ಕೆ "ಗತ್" ಎಂದು ಕರೆಯುತ್ತಾರೆ. ತಾಳವಾದ್ಯ ಶೈಲಿ, ಜೋಡ, ಆಲಾಪ್, ಝಾಲಾ ಇವುಗಳನ್ನು ಸಮರ್ಪಕವಾಗಿ ಪ್ರದರ್ಶಿಸಬಹುದು. ಈ ಕಾರಣದಿಂದಲೇ ಸಿತಾರ್ ಇಂದು ಭಾರತದ ಆದರಲ್ಲಿಯೂ ಉತ್ತರ ಭಾರತದ ಜನಪ್ರಿಯ ಶ್ರೇಷ್ಠ ವಾದ್ಯ.

ಸಿತಾರ ವಾದ್ಯದಲ್ಲಿಯೂ ಹಲ ಪ್ರಭೇದಗಳುಂಟು. ದೊಡ್ಡ ಸಿತಾರನ್ನು 'ಸೂರ ಶೃಂಗಾರ' ಅಥವಾ 'ಸುಂದರಿ' ಎಂದು ಸಂಬೋಧಿಸುತ್ತಾರೆ. ಸಿತಾರ್ ಮತ್ತು ಬದ್ರವೀಣೆ ಇವುಗಳ ಸೌಲಭ್ಯ—ಸೌಂದರ್ಯಗಳನ್ನು ಒಂದುಗೂಡಿಸಿ 'ಬೀನ್ ಸಿತಾರ್" ರಚಿಸಿದ್ದಾರೆ. ಅಲ್ಲದೆ ಸೋರೆಬುರುಡೆ, ಚರ್ಮ, ಬಿದಿರು, ಕಮಾನುಗಳ ಮೂರು ತಂತಿಗಳಿರುವ "ಪರ್ಸಿಯಾ ಸಿತಾರ್" ಕೂಡಾ ಬಳಕೆಯಲ್ಲಿದೆ. ಈ ಬಗೆಯ ವಾದ್ಯಗಳನ್ನು ಜೈಪುರ ಮತ್ತು ಹೈದರಾಬಾದುಗಳಲ್ಲಿ ಇಂದಿಗೂ ಕಾಣಬಹುದು. ತಾಯೂಸ ವಾದ್ಯ ಸಿತಾರದ ಮತ್ತೊಂದು ಪ್ರಭೇದ. ಇದಕ್ಕೆ ಮಯೂರಿ, ಬಾಲಸರಸ್ವತಿ ವೀಣೆ ಎಂಬ ಹೆಸರುಗಳು ಉಂಟು ಈ ವೀಣೆ ಸಿತಾರಿಗಿಂತಲೂ ಮೊದಲೇ ಬಳಕೆಯಲ್ಲಿತ್ತು ಎಂದು ಸಂಶೋಧಕರ ಅಭಿಪ್ರಾಯ. ಮತ್ತು ಬಾಲ ಸರಸ್ವತೀ ವೀಣೆ ಸರಸ್ವತೀ ವೀಣೆಯ ಸುಲಭ ರೂಪವಿರಬಹುದೆಂಬ ವಾದವೂ ಇದೆ. ಒಟ್ಟಿನಲ್ಲಿ ಖುಸ್ರುವಿನ ಸಿತಾರ ವಾದ್ಯ ವೀಣೆಯ ಆಧುನಿಕ ಸೌಲಭ್ಯದ ರೂಪವೆಂಬುದು ಸಹಜ.

(ಹನ್ನೆರಡನೇ ಪುಟ ನೋಡಿರಿ)

Navayuga

Announcing

Independence Day Special 1966

You are aware that the INDEPENDENCE SPECIAL of your favourite Weekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 19th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the state.

Kindly send your advertisement material on or before August 5th, 1966.

ADVERTISEMENT RATES

Full Page	... Rs. 200/-	Back Cover Page	... Rs. 500/-
Half Page	... Rs. 100/-	Inside 1st Cover Page	... Rs. 400/-
Quarter Page	... Rs. 60/-	Inside 2nd Cover Page	... Rs. 300/-
One-eigth Page	... Rs. 35/-	Ordinary Full Page in double colours	... Rs. 300/-

MECHANICAL DATA

Paper size ... 15" × 10" (37·5 Cm. × 25 Cm.)
Size of type page ... 13" × 8" Half Crown (32.5 Cm. × 20 Cm.)

Date of Publication : 15—8—1966.

Kindly send the advt. matter to
The Advt. Manager,
NAVAYUGA,
P. B. No. 22, Udipi, S. K.

ಕೃಷಿಕರಂಗ

ಎಕ್ರೆಯಲ್ಲಿ ೭೦ ಮುಡಿ ಅಕ್ಕಿ ಬೆಳೆಯಿರಿ

ಬರೆದವರು:

ಶ್ರೀ ನಯಂಪಳ್ಳಿ ರಾಮರಾವ್

ಈ ಲೇಖನದಲ್ಲಿ, ನಮಗೆ ಭತ್ತದ ಫಸಲು ಕಡಿಮೆಯಾಗಲು ಕಾರಣ ಮತ್ತು ಅವುಗಳನ್ನು ಬಗೆಹರಿಸುವುದು ಹೇಗೆಂಬುದನ್ನು ಬರೆಯಲು ತೊಡಗಿದ್ದೇನೆ.

ನಮಗೆ ಭತ್ತದ ಫಸಲು ಕಡಿಮೆಯಾಗಲು ಈ ಕೆಳಗಿನವು ಕಾರಣಗಳಾಗಿವೆ. ಅಥವಾ ಅವುಗಳು ಕಾರಣವಾಗಿವೆಯೆಂದು ನಮ್ಮ ಸಾಮಾನ್ಯ ರೈತನು ಹೇಳುತ್ತಾನೆ.

1) ಅವನ ಭೂಮಿಯು ಫಲವತ್ತಾಗಿಲ್ಲ.

2) ಗೊಬ್ಬರ ಮತ್ತು ಉತ್ತಮ ನೇಗಿಲುಗಳನ್ನು ಕೊಂಡುಕೊಳ್ಳಲು ಅವನ ಹತ್ತಿರ ಹಣವಿಲ್ಲ.

3) ಕೆಲಸಕ್ಕೆ ಬೇಕಾದಷ್ಟು ಕೂಲಿಯವರಿಲ್ಲ. ಕೆಲಸದಲ್ಲಿ ಜಾಗ್ರತೆಯೂ ಇಲ್ಲ; ಮಾಡಿದ ಕೆಲಸವು ಕ್ರಮಬದ್ಧವಾಗಿಯೂ ಇಲ್ಲ.

4) ಈ ವರೆಗೂ ತೆಂಗಿನಕಾಯಿ, ಅಡಿಕೆಗಳಿಗೆ ದೊರೆತಷ್ಟು ಬೆಲೆಯು ಅಕ್ಕಿಗೆ ದೊರೆಯಲಿಲ್ಲ.

ಇವುಗಳಲ್ಲದೆ, ಅವನು ಹಳೆಯದಾರಿ ಹಿಡಿಯುವವನೆಂದೂ ಹೊಸ ಕ್ರಮಗಳನ್ನು ಅನುಸರಿಸಲಾರನೆಂದೂ ಬಡ ಬೇಸಾಯಗಾರನ ಮೇಲೆ ಆರೋಪಗಳೂ ಹೊರಿಸಲ್ಪಟ್ಟಿವೆ.

ನಾನು ನೂರಾರು ಕೃಷಿಕರನ್ನು ಬಲ್ಲೆನಲ್ಲದೆ ಅವರ ಅನುಭವದ ಲಾಭವನ್ನೂ ಪಡೆದಿರುವೆನು. ಆದ್ದರಿಂದ ನಾನು ಕೃಷಿಕನ ಪರವಾಗಿ ಮಾತನಾಡದಿದ್ದರೆ ನನ್ನ ಕರ್ತವ್ಯವನ್ನು ಮಾಡದಂತೆ ಆಗುವುದಿಲ್ಲ. ಕೃಷಿಕನನ್ನು ಯಾವುದಕ್ಕಾಗಿ ನಾವು ಹಳೆಯ ರೀತಿಯವನೆಂದು ಹೇಳುತ್ತೇವೊ ಹಾಗೆ ಹೇಳಲು ಅವನು ಹೊಸರೀತಿಯನ್ನು ತಿರಸ್ಕರಿಸುವವನಲ್ಲವೆಂದೂ, ತೀರ ಸಣ್ಣ ಕಾರಣವೊಂದಕ್ಕಾಗಿ ಅವನು ಅದನ್ನು ಅನುಸರಿಸುತ್ತಿಲ್ಲವೆಂದೂ ಈಗ ಜನರು ತಿಳಿಯ ತೊಡಗಿದ್ದಾರೆ.

ಈಗ ನಾವು, ಅವನು ಹೇಳುವ ತನ್ನ ಭೂಮಿಯು ಫಲವತ್ತಾಗಿಲ್ಲವೆಂಬ ಮಾತನ್ನು ವಿಚಾರಿಸುವ. ತನಗೆಬೇಕಾದಷ್ಟು ಮುಡಿಯಷ್ಟು ಬಯಲುಗದ್ದೆಯಿರುವುದೆಂದೂ ಉಳಿದುದೆಲ್ಲ ಬೆಟ್ಟುಗದ್ದೆಯೆಂದೂ ಹಲವು ಸಲ ರೈತನು ನನ್ನೊಡನೆ ಹೇಳಿದ್ದುಂಟು. ಬೆಟ್ಟುಗದ್ದೆಗಳು ಉತ್ತಮ ಭೂಮಿಯಲ್ಲವೆಂದು ಅವನು ಹೇಳಬಯಸುವುದಾಗಿದೆ. ಆದರೆ ನಮ್ಮ ಹಿರಿಯರು ಹಾಗೆ ಸೂಚನೆ ಮಾಡಿರಲಿಲ್ಲ. ಏಕೆಂದರೆ, "ಬೊಟ್ಟು ಇತ್ತಿನಾಯಗ್ ಪೊಣ್ಣು ಕೊರ್ಲ" ಎಂಬ ಗಾದೆಯಿದೆ. ಬೆಟ್ಟುಗದ್ದೆಯಿರುವವನಿಗೆ ಹೆಣ್ಣು ಕೊಡು ಎಂಬುದು ಅದರ ಅರ್ಥ. ಬೆಟ್ಟುಗದ್ದೆಯಲ್ಲಿ ಹೆಚ್ಚು ಬೆಳೆ ತೆಗೆಯುವ ಕಲೆಯನ್ನು ನಾವೇಕೆ ಮರೆತೆವು? ನಾವೀಗ ಅದನ್ನು ಮಾಡಬಹುದೇ? ಈಗಲೂ ನಾವು ಬೆಟ್ಟುಗದ್ದೆಗಳಲ್ಲಿ ಹೆಚ್ಚು ಬೆಳೆ ತೆಗೆಯಬಹುದೆಂದು ಖಂಡಿತವಾಗಿ ಹೇಳಬಲ್ಲೆ.

ಪುರಾತನ ಕಾಲದಲ್ಲಿ ಎಲ್ಲ ವಿಚಾರಗಳಲ್ಲೂ ಉತ್ತಮ ಕ್ರಮಗಳಿದ್ದುವು. ಮನುಷ್ಯನಲ್ಲಿ ಉತ್ತಮ ಅಭ್ಯಾಸಗಳಿದ್ದುವು. ಮಳೆಯನ್ನೂ ನಂಬಬಹುದಾಗಿತ್ತು. ಆದರೂ ಹತ್ತೋ, ಇಪ್ಪತ್ತೋ ವರುಷಗಳಿಗೆ ಒಮ್ಮೊಮ್ಮೆ ಮಾತ್ರ ಮಳೆ ಮೋಸ ಮಾಡುತಿತ್ತು. ಈಗ ಹಾಗಲ್ಲ. ಆಟಂ ಬಾಂಬಿನಿಂದಾಗಿ, ಅಥವಾ ರಾಜಾಜಿ ಹೇಳುವಂತೆ ನಮ್ಮ ಪಾಪಗಳೆಲ್ಲ ಒಟ್ಟು ಸೇರಿರುವುದರಿಂದಾಗಿ, ಆಗಾಗ್ಗೆ ಮಳೆಯಿಂದ ಮೋಸವೇ ಆಗುತ್ತದೆ.

ಇದರಿಂದಾಗಿ ರೈತನು ಬೇಸರಪಟ್ಟು, ಬೆಟ್ಟುಗದ್ದೆಯ ಬೇಸಾಯವನ್ನು ಕಡೆಗಣಿಸಿ ಬಯಲು ಗದ್ದೆಯ ಬೇಸಾಯದಲ್ಲೇ ಹೆಚ್ಚು ಮನಸ್ಸು ಮಾಡುತ್ತಾನೆ. ಅದರಂತೆ ಬಯಲಿನ ಬೆಳೆಗಾಗಿಯೇ ಹೆಚ್ಚು ಕೆಲಸ ಮಾಡುತ್ತಾನಲ್ಲದೆ ಬೆಟ್ಟುಗದ್ದೆಗಳಿಗೆ ಅಷ್ಟು ಗಮನಕೊಡುವುದಿಲ್ಲ. ಈಗ ನಮ್ಮ ಕೃಷಿಕನಿಗೆ ನಾನು ಒಂದು ಮಾತು ಹೇಳಬಯಸುತ್ತೇನೆ. ನಾನು ಬೆಟ್ಟುಗದ್ದೆಗಳಲ್ಲೇ ಉತ್ತಮ ಬೆಳೆ ಪಡೆಯುತ್ತಿದ್ದೇನೆ. ಅದೂ 'ಬಾನ ಬೆಟ್ಟು' ಗದ್ದೆಗಳು! ಬೆಟ್ಟುಗದ್ದೆಗಳ ಕೃಷಿಯಲ್ಲಿ ರೈತನು ಎಲ್ಲವನ್ನೂ ಮಳೆ ಬರುತ್ತಿರುವಾಗಲೇ ಬೇಗ ಬೇಗನೆ ಮಾಡಬೇಕು. ಸುತ್ತುಮುತ್ತಲಿನ ಬಡ್ಡುಗಳಿಂದ ನೀರು ಒದಗಿಸಿಕೊಳ್ಳಲಿಕ್ಕೆ ಆಗುವುದಾದರೆ, ಅದನ್ನು ಅವನು ಮಾಡಲೇಬೇಕು. ಆ ನೀರಿನಲ್ಲಿ ಒಂದು ಹನಿಯನ್ನೂ ಬಿಡಬಾರದು. ಬೆಟ್ಟುಗದ್ದೆಗಳನ್ನು ಕಡಿಮೆ ಪಕ್ಷ ಎಂಟು ಸಾಲು ಉಳಬೇಕು. ಮಳೆ ಬಂದ ಮರುದಿನವೇ ಒಂದು ಸಾಲು ಉಳುತ್ತಾನೊ ಅವನ ಕೆಲಸ ಸುಲಭವಾಗುತ್ತದೆ. ಬೇಗನೇ ಬೆಳೆಯುವ, ಎಂದರೆ 90 ದಿನಗಳಲ್ಲಿ ಬೆಳೆಯುವ ಬೀಜಗಳೇ ಉತ್ತಮ. ಈಗ ಸಿಗುವ ಪಿ. ಟಿ. ಬಿ—10 ಮತ್ತು ಪಿ. ಟಿ.—9. ಬೆಟ್ಟುಗದ್ದೆಗಳಿಗೆ ಉತ್ತಮವಾಗಿವೆ. ಜಪಾನು ಪದ್ಧತಿಯಂತೆ ನೇಜಿ ತಯಾರಿಸಿ, ಹಗ್ಗ ಹಿಡಿದು ಗೆರೆ ಹಾಕಿದಂತೆ, ನೆಡಬೇಕು. ಎರಡು ಸಲ ಒಳ ಉಳುಮೆ ಮಾಡಬೇಕು. ಒಮ್ಮೆ ಕೈಯಿಂದ, ಇನ್ನೊಮ್ಮೆ ಯಂತ್ರದಿಂದ ಇದನ್ನು ಸರಿಯಾಗಿ ಮಾಡಿದರೆ ಶೇಕಡ 40 ರಷ್ಟು ನೀರು ಉಳಿಯುತ್ತದೆ. ಜುಲಾಯಿ, ಆಗೋಸ್ತು ತಿಂಗಳುಗಳಲ್ಲಿ ನೀರು ಆರಿದರೂ ಅದರಿಂದ ಬೆಳೆಗೆ ತೊಂದರೆಯಾಗುವುದಿಲ್ಲ. ಕಾರಣ ಎರಡು ಸಲ ಮಾಡಿದ ಒಳ ಉಳುಮೆಯು 2ರಿಂದ 3 ಇಂಚುಗಳಷ್ಟು ನೀರನ್ನು ಉಳಿಸಿಕೊಳ್ಳುತ್ತದೆ.

ರೈತನು ತನ್ನಲ್ಲಿ ಹಣವಿಲ್ಲವೆಂದು ಹೇಳುತ್ತಾನೆ. ಅವನು ತಾನು ಮಾಡುವ ಬೇಸಾಯವನ್ನು ಕಡೆಗಣಿಸುತ್ತಾನೆ. ಅದರಿಂದಾಗಿ ಅವನು ಬಡವನಾಗುತ್ತಾನೆ. ಸ್ವಾವಲಂಬನೆ ಮತ್ತು ಅಭಿವೃದ್ಧಿಗೆ ಗಳಿಸಬೇಕೆಂಬ ಮನಸ್ಸು ಅವನ ಧ್ಯೇಯವಾಗಿರಬೇಕು. ಇಂದು ಅವನು ಬಿ. ಡಿ. ಅಧಿಕಾರಿಗಳ ಹತ್ತಿರ ಹೋಗಿ, ತನಗೆ ಸಹಾಯ ಮಾಡಬೇಕೆಂದು ಕೇಳಬಹುದು. ಅವನಿಗೆ ಅವರಿಂದ ಬೇಕಾದ ಸಹಾಯ ದೊರೆಯದಿದ್ದರೆ ಅವನು ಮೇಲಧಿಕಾರಿಗೆ ದೂರು ಕೊಡಬೇಕು. ಸುಮ್ಮನೆ ಕುಳಿತರೆ ಏನೂ ಆಗದು.

ಕಾಲ ಕಾಲಕ್ಕೆ ಸರಿಯಾಗಿ ಕೂಲಿಯವರು ಸಿಗುವುದಿಲ್ಲವೆಂಬ ಕೂಗು ಇದೆ. ಹಿಂದಿನ ಕ್ರಮದಂತೆ ಬೇಸಾಯ ಮಾಡಲು 20 ಜನ ಬೇಕಾದರೆ ಜಪಾನು ಪದ್ಧತಿಯ ಕೃಷಿಗೆ ಅದರ ಅರ್ಧ ಜನ ಸಾಕಾಗಬಹುದು. ಒಮ್ಮೆ ಇಡಿ ಕೊಳಕೆ ಎಂದು ಹೇಳುವ ಕೊಳಕೆ ಬೆಳೆಯಲ್ಲಿ ನಾನೊಂದು ಪ್ರಯೋಗ ಮಾಡಿದ್ದೆ. 10 ಜನ ಸಾಕಾಗಬಹುದಿದ್ದಲ್ಲಿ 30 ಮಂದಿಯನ್ನು ಕೆಲಸಕ್ಕೆ ಇಟ್ಟಿದ್ದೆ. ಅದೊಂದು ಪ್ರಯೋಗವಾದುದರಿಂದ, ಅವರಿಗೆ ಬೇಸರವಾಗದಂತೆ ನೋಡಿಕೊಂಡೆ. ಹಾಗೆ, ಹೆಚ್ಚು ಜನರಿಂದಾಗಿ ಜವಾಗಿ ನಷ್ಟವೇ ಆಗುವುದು. ಆದ್ದರಿಂದ ನಮ್ಮ ರೈತರು ಹೊಸ ಕ್ರಮವನ್ನು ಅನುಸರಿಸಿ, ಕೆಲಸದಾಳುಗಳ ಸಮಸ್ಯೆಯನ್ನು ಪರಿಹರಿಸಬೇಕು.

ಭತ್ತದ ಬೆಳೆಯಿಂದ ಕಡಿಮೆ ಲಾಭವೆಂಬುದನ್ನು ನಾನು ಖಂಡಿತವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಅದನ್ನು ಮಾಡದೆ ನಮಗೆ ಬೇರೆ ಗತಿಯಿಲ್ಲ. ಭತ್ತವು ತನ್ನಷ್ಟಕ್ಕೆ ತಾನೆ ಬೆಳೆಯುತ್ತದೆ. ಅದಕ್ಕೆ ಕೆಲಸದಾಳುಗಳ ಅಗತ್ಯವಿಲ್ಲವೆಂದೇ ನಮ್ಮ ಸರಕಾರವೂ ಭಾವಿಸುತ್ತದೆ. ಇಲ್ಲವಾದರೆ ಒಂದು ಕ್ವಿಂಟಾಲು ಭತ್ತಕ್ಕೆ ಸರಕಾರವು ಕೊಡುವ ರೂ. 42ಕ್ಕೆ ನೀವೇನು ಹೇಳುತ್ತೀರಿ? ಇಲ್ಲಿ ನಾನು ಲೆವ್ವಿಯ ಪ್ರಶ್ನೆಯನ್ನೇ ಎತ್ತುವುದಿಲ್ಲ. ಆದರೆ ಇಂದು ಕೊಡುತ್ತಿರುವ ಬೆಲೆಯು ಕೃಷಿಕನಿಗೊಂದು ಅಪಮಾನವಾಗಿದೆ. ಇಂದು ಬೆಲೆಯೇರಿದೆ ಎಂಬುದನ್ನು ಪ್ರತಿಯೊಬ್ಬನೂ ನೆನಪಿನಲ್ಲಿಡಬೇಕು. ಆದರಂತೆ ಬೇಸಾಯದ ಖರ್ಚೂ ಒಂದು ಎಕ್ರೆಗೆ 10 ಮುಡಿಯಷ್ಟು, ಎಕ್ರೆಗೆ 15ರಿಂದ 16 ಮುಡಿಯಷ್ಟು ಪಡೆಯುವುದರಿಂದ ಬರೀ ಐದು—ಹತ್ತು ಮುಡಿ ಉಳಿದರೆ ಯಾವ ಪುರುಷಾರ್ಥವಿದೆ?

ಒಂದು ಎಕ್ರೆಯಲ್ಲಿ ಮೊದಲ ಏಣೆಲು ಬೆಳೆಯಲ್ಲಿ 35 ಮುಡಿ ಅಕ್ಕಿಯನ್ನೂ ನಂತರದ ಸುಗ್ಗಿ ಬೆಳೆಯಲ್ಲಿ 25ರಿಂದ 30 ಮುಡಿ ಅಕ್ಕಿಯನ್ನೂ ತೆಗೆಯಲು ಆಗದಿದ್ದರೆ ಕೃಷಿ ಮಾಡುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲ. ಇದು ಸಾಧ್ಯವಿದೆ! ಇಷ್ಟು ಬೆಳೆಯನ್ನು ಪಡೆಯಲು ಸಾಧ್ಯವಿದೆಯೆಂದು ನಾನು ಜನರಿಗೆ ಹೇಳಲು ಬಹಳವಾಗಿ ಪ್ರಯತ್ನಿಸಿದ್ದೇನೆ. ಆದರೆ, ಜನರು ಕೃಷಿ ಮಾಡುವ ಆಸಕ್ತಿಯನ್ನೇ ಕಳೆದುಕೊಂಡಿದ್ದಾರೆ. ಬೇರೆ ಯಾವುದನ್ನೂ ಮಾಡಲಾಗದ್ದರಿಂದ, ರೈತರು, ಕೃಷಿ ಮಾಡುತ್ತಿದ್ದಾರೆ. ಆದರಿಂದಾಗಿ ಹಳ್ಳಿಯವರೆಲ್ಲ ಪೇಟೆಗೆ ಬರುತ್ತಿರುವುದು. ನೀವು ಬಯಸಿದರೆ ಇದನ್ನು ತಡೆದು ದೇಶ ಸೇವೆ ಮಾಡಬಹುದು.

(ಗ್ರಾಮ ಸೇವಕದ ಕೃಪೆಯಿಂದ)

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

— ಕುಂಜಾಲು —

ವಿಳಾಸ ಬದಲಾವಣೆ

ನಮ್ಮ ಗ್ರಾಹಕರ ಅನುಕೂಲತೆಗಾಗಿ ನಮ್ಮ ಸಂಸ್ಥೆಯ ಕಾರ್ಯಾಲಯ (Office) ವನ್ನು ಈ ದಿನ (1—7—1966) ಕುಂಜಾಲಿನಿಂದ ಉಡುಪಿಗೆ ಸ್ಥಳಾಂತರಿಸಿರುವೆವು.

ನಮ್ಮ ಗ್ರಾಹಕರು ಇದನ್ನು ಗಮನಿಸಿ ಇನ್ನು ಮುಂದೆ ಈ ಕೆಳಗಿನ ವಿಳಾಸ ದೊಂದಿಗೆ ವ್ಯವಹರಿಸಿ ಸಹಕರಿಸಬೇಕಾಗಿ ಕೋರುತ್ತೇವೆ.

ಸ್ವದೇಶಿ ಔಷಧ ಭಂಡಾರ
(ರಿಜಿಸ್ಟರ್ಡ್)
ಸಂತೆಕಟ್ಟೆ, ಉಡುಪಿ. (ದ. ಕ.)

ಸ್ವದೇಶಿ ಔಷಧ ಭಂಡಾರದ ಪರವಾಗಿ
ಡಾ॥ ಕೆ. ಶಾಂತಾರಾಮ್ ಪ್ರಭು
ಮತ್ತು ಸಹೋದರರು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 59 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಚೀಣೀಯ ವ್ಯವಹಾರ

ಮಾವೊನ ಗದ್ದುಗೆ ಲಿನ್ ಪಿಯಾವೊಗೆ?

ಐವತ್ತೆಂಟು ವರ್ಷದ ಚೀಣೀ ರಕ್ಷಣಾ ಮಂತ್ರಿ ಮಾರ್ಷಲ್ ಲಿನ್ ಪಿಯಾವೋ, ಚೀಣಾದಲ್ಲಿ ಇತ್ತೀಚೆಗೆ ನಡೆದ 'ಶುದ್ಧೀಕರಣದಲ್ಲಿ' ಹೆಚ್ಚು ಬಲಿಷ್ಠರಾಗಿ ಹೊರ ಬಂದಿದ್ದಾರೆ. ಮಾವೋ ಅವರ ಉತ್ತರಾಧಿಕಾರಿಯಾಗಲು ಇವರು ಈಗ ಸಿದ್ಧತೆ ನಡೆಸಿದ್ದಾರೆ.

ಚೀಣಾದ "ರೆಡ್ ಫ್ಲಾಗ್" ಪತ್ರಿಕೆಯು ತನ್ನ ಇತ್ತೀಚಿನ ಸಂಚಿಕೆಯಲ್ಲಿ, ಒಳ್ಳೆಯ ಮಾರ್ಕ್ಸ್‌ವಾದಿಯಾಗಲು ಮಾವೋ ವಿಚಾರಧಾರೆಯನ್ನು ಜೀವನದ ಎಲ್ಲಾ ರಂಗಗಳಲ್ಲೂ ಅಳವಡಿಸಿಕೊಳ್ಳಬೇಕೆಂದು ಕರೆಯಿತ್ತಿದೆ. ಈ ಆದರ್ಶ ಸಾಧನೆಗೆ ಕಾಮ್ರೇಡ್ ಲಿನ್‌ಪಿಯಾವೋ ಅವರ ಸಲಹೆಗಳನ್ನು ಕೂಡ ಕಾರ್ಯಗತಗೊಳಿಸಬೇಕೆಂದು ತಿಳಿಸಿದೆ.

ಪತ್ರಿಕೆಯು ಮಾರ್ಷಲ್ ಲಿನ್ ಪಿಯಾವೋ ಬಗ್ಗೆ ಪ್ರಸ್ತಾಪಿಸಿರುವುದರಿಂದ ಚೀಣಾದಲ್ಲಿ ಅವರ ಪ್ರಭಾವ ಹೆಚ್ಚುತ್ತಿದೆಯೆಂದು ಭಾವಿಸಬಹುದು. ಲಿನ್ ಪಿಯಾವೋ, ಮಾವೋ ತ್ಸೆತುಂಗರ ನಿಷ್ಠಾವಂತ ಅನುಯಾಯಿಗಳು. ಮಾವೋ ಅವರು ಲಿನ್ ಪಿಯಾವೋ ಅವರಲ್ಲಿ ತಮ್ಮ 'ಕ್ರಾಂತಿಕಾರಿ' ವಿಚಾರಗಳನ್ನು ಮುಂದುವರಿಸಿಕೊಂಡು ಹೋಗುವ ಗುಣವನ್ನು ಕಂಡುಕೊಂಡಿದ್ದಾರೆ. ಮಾರ್ಷಲ್ ಲಿನ್‌ಪಿಯಾವೋರಂತೆ ಚೀಣಾದಲ್ಲಿ ಮಾವೋ ನಾಯಕತ್ವದ ರಹಸ್ಯವನ್ನು ಅರ್ಥಮಾಡಿಕೊಂಡವರು ಬಹಳ ಜನರಿಲ್ಲ. ಅಂತರಂಗದಲ್ಲಿ ಮಹಾ ಕ್ರೂರಿಯಾಗಿದ್ದರೂ ತೋರಿಕೆಗೆ ಸೌಜನ್ಯಶೀಲನಂತೆ ನಟಿಸುವುದು ಈ ನಾಯಕತ್ವದ ಹುಟ್ಟುಗುಣ. ಇದೇ ಒಂದು ಕಾರಣದಿಂದ ಚೀಣಾದ ಸಮಗ್ರ ಜನತೆ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು ಕಳೆದ ಎರಡು ವರ್ಷಗಳಿಂದಲೂ 'ಚೀಣಾ ವಿಮೋಚನಾ ಸೇನೆ'ಯ ಸ್ಫೂರ್ತಿಯನ್ನು ಮಾರ್ಷಲ್ ಲಿನ್ ಪಿಯಾವೋ ಸ್ಫೂರ್ತಿಯನ್ನು ರೂಢಿಸಿಕೊಳ್ಳಲು ಆರಂಭಿಸಿದ್ದಾರೆ. "ಪೀಪಲ್ಸ್ ಡೈಲಿ" ಪತ್ರಿಕೆ "ವಿಮೋಚನಾ ಸೇನಾ" ಪತ್ರಿಕೆಗಳ ಸಂಪಾದಕೀಯಗಳನ್ನು ತನ್ನ ಮೊದಲ ಪುಟದಲ್ಲಿ ಉಲ್ಲೇಖಿಸತೊಡಗಿದೆ. ಚೀಣೀಯರು ವರ್ಗಭೇದದ ಹೋರಾಟಕ್ಕೆ ಹೊಂದಿಕೊಂಡು, ಆಡಳಿತ ಪಕ್ಷದ ನಾಶಕಾರಿಗಳು ನಾಶವಾಗುವಂತೆ ಮಾಡಲು ಯಾವ ಕ್ರಮಗಳನ್ನು ಅನುಸರಿಸಬೇಕೆಂಬ ಬಗ್ಗೆ ಈ ಲೇಖನಗಳಲ್ಲಿ ಸ್ಪಷ್ಟ ಸೂಚನೆಗಳಿವೆ.

ಲಿನ್ ಪಿಯಾವೋ ಪ್ರಾಬಲ್ಯ

ಲಿನ್ ಪಿಯಾವೋ ಹೆಸರು, ಚೀಣಾದಲ್ಲಿ ಎಂದೂ ಯಾವಾಗಲೋ ಒಮ್ಮೊಮ್ಮೆ ಕೇಳಿ ಬರುವ ಹೆಸರುಗಳಲ್ಲಿ ಒಂದು. ಚೀಣೀ ಆಡಳಿತಗಾರರು ಅವರನ್ನು ಕಡೆಗಣಿಸಿಲ್ಲವೆಂದು ತೋರಿಸಿಕೊಳ್ಳಲು ಆಗಾಗ್ಗೆ ಈ ಹೆಸರುಗಳಿಗೆ ಪ್ರಾಧಾನ್ಯ ನೀಡುವ ನಾಟಕವಾಡುತ್ತಾರೆ. ಕಳೆದ ವಸಂತದಲ್ಲಿ ಲಿನ್ ಇದ್ದಕ್ಕಿದ್ದಂತೆ ಆರು ಸಲ ಸಾರ್ವಜನಿಕ ಸಭೆಗಳಲ್ಲಿ ಕಾಣಿಸಿಕೊಂಡರು. ಕಳೆದ ಅಕ್ಟೋಬರ್ ೧ರಂದು ರಾಷ್ಟ್ರೀಯ ದಿನದ ಪರೇಡ್ ನಡೆದಾಗ ಅವರ ಸುಳಿವೇ ಇರಲಿಲ್ಲ. ಕಳೆದ ಸೆಪ್ಟೆಂಬರ್‌ನಲ್ಲಿ ಚೀಣಾದ ಸೇನಾಪತಿಗಳು ಮತ್ತು ಆಡಳಿತಗಾರರು — ಮಾವೋ ಲಿ ಯೋ — ಲಿನ್ ಪಿಯಾವೋ ತತ್ವಗಳ ಅಧ್ಯಯನಕ್ಕಾಗಿ ಏರ್ಪಡಿಸಿದ್ದ ಮಿಲಿಟರಿ ಸಭೆಯಲ್ಲಿ ಅವರು ಹಾಜರಿರಲಿಲ್ಲ. ಇದಕ್ಕೆ ಮುಂಚೆ ಅವರು ಅಪರೂಪವಾಗಿ ಸಾರ್ವಜನಿಕವಾಗಿ ಕಾಣಿಸಿಕೊಂಡರು. ಅವರು ಅನೇಕ ವರ್ಷಗಳಿಂದಲೂ, ತೀವ್ರ ಕ್ಷಯರೋಗದಿಂದ ನರಳುತ್ತಿದ್ದರೆಂದ ವದಂತಿಗಳಿದ್ದವು. ಜನ ಭಾವಿಸಿದಂತೆ ಲಿನ್ ಅಸ್ವಸ್ಥದಿಂದ ಶಕ್ತಿಗುಂದಿರಲಿಲ್ಲ. ೧೯೬೦ರಲ್ಲಿ ಮಿಲಿಟರಿಯ ರಹಸ್ಯ ಕಾಗದ ಪತ್ರಗಳಿಂದ ಲಿನ್ ಪಿಯಾವೋರ ನಿಜವಾದ ವ್ಯಕ್ತಿತ್ವ ಪ್ರಕಟಗೊಂಡಿತು. ಅವರು ಈ ಹೊತ್ತಿಗಾಗಲೇ ಸೇನೆಯ ಮೇಲೆ ಸಂಪೂರ್ಣ ಹತೋಟಿ ಪಡೆದಿದ್ದರು. ಅಂದಿನಿಂದ ಈ ವರೆಗೆ ಅವರ ಸ್ಥಾನ ಮಾನ ಹೆಚ್ಚುತ್ತಾ ನಡೆದಿವೆ. ಚೀಣಾದಲ್ಲಿ ಅವರೊಬ್ಬ ರಾಷ್ಟ್ರೀಯ ಮಟ್ಟದ ನಾಯಕರಾಗಿ ಬೆಳಕಿಗೆ ಬಂದಿದ್ದಾರೆ. ಲಿನ್ ಹೆಸರು ಚೀಣಾದ 'ಪೀಪಲ್ಸ್ ಡೈಲಿ'ಯಲ್ಲಿ ವಾರದಲ್ಲಿ ಅನೇಕ ಸಲ ಪ್ರಕಟವಾಗುತ್ತಿದೆ.

ಜಪಾನಿನ ಮೇಲೆ ವಿಜಯ ಗಳಿಸಿದ ಸ್ಮರಣಾರ್ಥ ಚೀಣಾದಲ್ಲಿ ೨೦ನೆಯ ವಾರ್ಷಿಕೋತ್ಸವ ನಡೆದ ಸಂದರ್ಭ ಚೀಣಾದ "ರೆಡ್ ಫ್ಲಾಗ್" ಪತ್ರಿಕೆ ಲಿನ್ ಪಿಯಾವೋ ಅವರ 'ಜನತಾ ಕ್ರಾಂತಿ ಜಯಾಯುವಾಗಲಿ' ಎಂಬ ಲೇಖನವೊಂದನ್ನು ಪ್ರಕಟಿಸಿತು. ವಿದೇಶೀ ಪತ್ರಕರ್ತರ ಈ ಲೇಖನವನ್ನು ಚೀಣೀಯರ ವಿದೇಶ ನೀತಿಯಾಗಿ ಒಂದು ಅತ್ಯಂತ ಮಹತ್ವದ ದಾಖಲೆಯೆಂದು ಭಾವಿಸಿದ್ದಾರೆ. ಲಿನ್ ಪಿಯಾವೋ ಅವರ ಈ ಲೇಖನದ ಒಕ್ಕಣೆ ತುಂಬಾ ಒರಟಾಗಿತ್ತು; ಹಟಮಾರಿತನದ್ದಾಗಿತ್ತು.

ಲಿನ್ ಅವರು ತಮ್ಮ ಈ ಲೇಖನದಲ್ಲಿ, 'ಕಮ್ಯೂನಿಸ್ಟ್ ಪ್ರಸಾರಕ್ಕಾಗಿ ಕೂಟ (ಗೆರಿಲ್ಲಾ) ಯುದ್ಧವನ್ನು ಯಾವರೀತಿ ಬಳಸಿಕೊಳ್ಳಬೇಕು ಎಂಬುದನ್ನು ವಿವರಿಸಿದ್ದಾರೆ. ವಿಶ್ವದ "ಹಳ್ಳಿಗಾಡು ಪ್ರದೇಶಗಳು" ನಗರ ಪ್ರದೇಶಗಳನ್ನು ಹತ್ತಿಕ್ಕಲು ಒಂದಾಗಬೇಕೆಂದು ಕರೆಯಿತ್ತಿದ್ದಾರೆ. ಲಿನ್‌ಪಿಯಾವೋ ದೃಷ್ಟಿಯಲ್ಲಿ ಹಳ್ಳಿಗಾಡು ಪ್ರದೇಶಗಳೆಂದರೆ, ಆಫ್ರಿಕಾ, ಏಷ್ಯ ಮತ್ತು ಲ್ಯಾಟಿನ್ ಅಮೇರಿಕ ಇವೇ ಮೊದಲಾದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು. ನಗರ ಪ್ರದೇಶಗಳೆಂದರೆ ಮುಂದುವರಿದ ರಾಷ್ಟ್ರಗಳು. ಅವರ ಅಭಿಪ್ರಾಯದಲ್ಲಿ ವಿಶ್ವದ ಈ "ಹಳ್ಳಿಗಾಡು ಪ್ರದೇಶಗಳು ನಗರಗಳ ಮೇಲೆ ಧಾಳಿ ಮಾಡಬೇಕು ಅವುಗಳನ್ನು ಸದೆ ಬಡಿಯಬೇಕು.

ಈ ಲೇಖನದಲ್ಲಿ ಹೊಸ ಅಂಶವೇನೂ ಇರಲಿಲ್ಲ. ಚೀಣೀಯರ ಸರ್ವಾಧಿಕಾರಿ ಮಾವೋ ಇದೇ ಮಾತನ್ನೇ ಕಳೆದ ೪೦ ವರ್ಷಗಳಿಂದಲೂ ಹೇಳುತ್ತ ಬಂದಿದ್ದಾರೆ. ಅವರು ಬರೆದ ಪ್ರಬಂಧಗಳು, ಲೇಖನಗಳು ಹಾಗೂ ಪ್ರಕಟಣೆಗಳೆಲ್ಲವನ್ನು ಸಂಗ್ರಹಿಸಿ ಚೀಣೀಯರು "ಮಾವೋ ತ್ಸೆತುಂಗರ ಶ್ರೇಷ್ಠ ಕೃತಿಗಳು" ಎಂಬ ಗ್ರಂಥ ಪ್ರಕಟಿಸಿದ್ದಾರೆ.

ಮೊದಲ ಭೇಟಿ

ಲಿನ್ ಪಿಯಾವೋ, ಮಾವೋ ಅವರನ್ನು ಮೊದಲ ಭೇಟಿಯಾದದ್ದು ೧೯೨೮ರಲ್ಲಿ. ಮಾವೋ ಅವರು ಆಗ ಲಿನ್ ಕುಟುಂಬದವರು ವಾಸಿಸುತ್ತಿದ್ದ ಹುಪೆ—ಲುಂಗ್ ಶಾನ್ ಗ್ರಾಮಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭ ಸಾಧಿಸಿ, ಲಿನ್, ಮಾವೋ ಅವರನ್ನು ಕಂಡರು. ಮುಂದೆ ಮಾವೋ ತತ್ವಗಳ ಬಗ್ಗೆ ತಿಳುವಳಿಕೆ ಮಾಡಿಕೊಡಲು ಹಾಗೂ ಮಕ್ಕಳಲ್ಲಿ ಕ್ರಾಂತಿಯ ಕಿಡಿಯನ್ನು ಹೊತ್ತಿಸಲು ಹಾಳು ಬಿದ್ದ, ದೇವಸ್ಥಾನವೊಂದರಲ್ಲಿ ಶಾಲೆಯನ್ನು ತೆರೆದರು. ಲಿನ್ ಪಿಯಾವೋ, ಮಾವೋನ ಶಿಷ್ಯರಾಗಿದ್ದರು. ಬಳಿಕ ಅವರು ಯುನಾನ್‌ನಲ್ಲಿ ಮಾವೋ ಅವರ ನಿಕಟವರ್ತಿಗಳಾದರು. ಅವರು ಚೀಣಾದ "ವಿಮೋಚನಾ ಸೇನೆ"ಯನ್ನು ಮಂಚೂರಿಯ ಗಡಿಯಿಂದ ದಕ್ಷಿಣ ಚೀಣಾದ ಗಡಿಯ ವರೆಗೆ ಸಾಗಿಸಿ, ೧೯೫೦ರ ಅಕ್ಟೋಬರ್‌ನಲ್ಲಿ ಕೋರಿಯವನ್ನು ಪ್ರವೇಶಿಸಿದರು.

ಲಿನ್, ಚಿಯಾಂಗ್ ಕೈ ಶೇಕ್ ಮತ್ತು ರಷ್ಯಾದ ಗಾಲೇನ್ ಅವರ ಗರಡಿಯಲ್ಲಿ ಮಿಲಿಟರಿ ಶಿಕ್ಷಣ ಪಡೆದರು. ಚೌ ಎನ್ ಲೈ ಮತ್ತು ಲಿನ್ ಚುಹಾನ್, ಅವರಿಂದ ವಾಂಪೋವಾ ಮಿಲಿಟರಿ ಅಕಡಮಿಯಲ್ಲಿ ರಾಜಕೀಯ ಗುಟ್ಟುಗಾರಿಕೆಯನ್ನು ಕಲಿತುಕೊಂಡರು. ಸೇನೆಯ ಮುಖಂಡ ನಾಯಕರು ಎಷ್ಟೇ ಶಕ್ತಿಶಾಲಿಗಳಾದರೂ ಕೊನೆಗೆ ರಾಜಕೀಯ ನಾಯಕರನ್ನೇ ಅವಲಂಬಿಸಬೇಕಾಗುತ್ತದೆ ಎಂಬ ತತ್ವವನ್ನು ಅವರು ಮನನ ಮಾಡಿಕೊಂಡಿದ್ದಾರೆ. ಚೀಣಾದ ದಂಡ ನಾಯಕರೆಲ್ಲರೂ ರಾಜಕೀಯದಲ್ಲಿ ಪಳಗಿದವರು.

ಲಿನ್ ಪಿಯಾವೋ ಈ ಅಕಾಡಮಿಯಿಂದ ಪದವೀಧರನಾಗುವುದಕ್ಕೆ ಮೊದ

(ಹತ್ತನೇ ಪುಟ ನೋಡಿರಿ)

ಪಿಗ್ಮಿಯನ್ನು ಸಂಧಿಸಿರಿ.

ನಾನೊಬ್ಬ ಪಿಗ್ಮಿ. ಹುಟ್ಟು ಸ್ಥಳ......
ಏನು ಆಫ್ರಿಕದ ಅರಣ್ಯಗಳೋ?
ಅಲ್ಲಲ್ಲ! ನೀವು ತಿಳಿದಿರುವ ಪಿಗ್ಮಿ— ಆ ಆಫ್ರಿಕದ ಪಿಗ್ಮಿ—ಕೇವಲ ನನ್ನ ಹೆಸರನ್ನಿಂಗಿಸಿಕೊಂಡ ಇನ್ನೊಬ್ಬ ವ್ಯಕ್ತಿ. ನಾನೋ ನಿಜವಾದ ಪಿಗ್ಮಿ. ಸಿಂಡಿಕೇಟ್ ಬ್ಯಾಂಕ್ ಎಲ್ಲಿದೆಯೋ ಅಲ್ಲಿ ನಾನಿದ್ದೇನೆ.

ನನ್ನ ಆಹಾರ: ನಿಮ್ಮ ಉಳಿತಾಯ— ನೀವು ತೆಗೆದಿಟ್ಟ ಉಳಿತಾಯದ ಹಣ. ದಿನಂಪ್ರತಿ 25 ಪೈಸೆಯಂತೆ ನನಗೆ ಕೊಡುತ್ತಾ ಬನ್ನಿರಿ. ನನ್ನ ಮಂದಿಯನ್ನು ನಿಮ್ಮ ಮನೆ, ಅಂಗಡಿ ಬಾಗಿಲಿಗೆ ವಸೂಲಿಗಾಗಿ ಕಳುಹಿಸುತ್ತೇನೆ. ಏಳು ವರುಷಗಳ ನಂತರ ನೀವು ನನ್ನಿಂದ 700 ರೂಪಾಯಿಯನ್ನು ಪಡೆಯುವಿರಿ.

ಅಂದರೆ ಈ ಮೊತ್ತ ನೀವು ನನಗೆ ಒಟ್ಟು ನೀಡಿದ ಹಣಕ್ಕಿಂತ ಹೆಚ್ಚಿನದು. ಅಂತೆಯೇ, ನೀವು ಪ್ರತಿದಿನ ಕೊಡುವ ಒಂದು ರೂಪಾಯಿ ಮೇಲಿನ ಅವಧಿಯ ಕೊನೆಯಲ್ಲಿ ನಿಮಗೆ ರೂ. 2,800/-ನ್ನೂ, ಹತ್ತು ರೂಪಾಯಿ ರೂ. 28,000/-ನ್ನೂ ತಂದೊಡ್ಡುವುದು.

ನನ್ನನ್ನು ಭೇಟಿಯಾಗಲು ಬಯಸುವಿರಾ?
ತುಂಬು ಸ್ವಾಗತ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಇದರ ಯಾವುದಾದರೊಂದು ಶಾಖೆಗೆ ಬನ್ನಿರಿ. ನನ್ನನ್ನು ಸಂಧಿಸಿ. ನಿಮ್ಮ ಬಗ್ಗೆ ಬಹಳಷ್ಟು ತಿಳಿದುಕೊಳ್ಳುವುದು ನನಗೆ ಆನಂದದ ವಿಷಯ.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಧ್ರುವ ಸಮ್ಮೇಳನಕ್ಕೆ ಧೀರ

ಎತ್ತು ಏರಿಗೆಳೆದರೆ ಹೋರಿ ನೀರಿಗೆಳೆದಂತೆ — ಅ

ವಿಯತ್‌ನಾಮುವತ್ತ ಜಾಗತಿಕ ದೃಷ್ಟಿ ಹರಿದಿರುವ ಸಮಯವಿದು. ಸಂಧಾನಕ್ಕೆ ದಾರಿ ತೋರಿಸುವ ಪ್ರಯತ್ನವೀಗ ನಡೆಯುತ್ತಲಿದೆ. ಕೆಂಪು ಚೀನ ಅರ್ಭಟಿಸಿದೆ—ಅಮೆರಿಕೆಯು ವಿಯತ್‌ನಾಮುದಿಂದ ಕಂಬಿ ಕೀಳದೆ ಮಾತುಕತೆ ಸಾಧ್ಯವಾಗದು. ಉತ್ತರ ವಿಯತ್‌ನಾಮುದ ಅನಭಿಷಿಕ್ತ ದೊರೆ ಹೋ ಚಿ ಮಿನ್ಹ ಘೋಷಿಸಿದ್ದಾರೆ—ಗುಂಡಿನ ಬಾಯಿ ತೆರೆದಿರುವಾಗ ಸಂಧಾನ ಅಸಾಧ್ಯ. ಅಮೆರಿಕೆಗೂ ವಿಯತ್‌ನಾಮುದಿಂದ ದೂರ ಸರಿಯಲು ಮನಸ್ಸಿಲ್ಲ. ಇಂದೀಗ ವಿಯತ್‌ನಾಮುವು ಅಮೆರಿಕೆಯ ಗೌರವ ಮಾನ ಪ್ರತಿಷ್ಠೆಗಳ ಪ್ರಶ್ನೆಯೆನಿಸಿದೆ. ಕೆಂಪು ಚೀನಾ—ಅಮೆರಿಕೆಗಳ ನಡುವಣ ವಿರಸವೇ ವಿಯತ್‌ನಾಮುದ ಹೋರಾಟವುಂದುವರಿಯಲು ಮುಖ್ಯಕಾರಣ.

ವಾಶಿಂಗ್‌ಟನ್ ಪೀಕಿಂಗನ್ನು ಹೇಗೆ ನೋಡುತ್ತದೆ? ಕೆಲಸಮಯದ ಹಿಂದೆ ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕರು ನೀಡಿದ ಕೆಲವು ವಿವರಣೆಗಳಿಂದ ಇದು ಗೊತ್ತಾಗುವುದು.

ಡೀನ್ ರಸ್ಕರು ಚೀನೀಯ ಆಕ್ರಮಣವನ್ನು ಎದುರಿಸಲು ಮಿತ್ರ ರಾಷ್ಟ್ರಗಳಿಗೆ ಸಂಪೂರ್ಣ ಭರವಸೆಯನ್ನು ನೀಡಿದ್ದಾರೆ—ಅಂದರೆ ಕೆಂಪು ಚೀನಾವು ಆಕ್ರಮಣ ಶೀಲ — ಸಾಮ್ರಾಜ್ಯವಾದಿಯೆಂದು ಅಮೆರಿಕೆ ದೃಢವಾಗಿ ನಂಬಿದೆ.

ಪೀಕಿಂಗ್ ವಿವಾದ ಪರಿಹಾರಕ್ಕೆ ಶಕ್ತಿ ಪ್ರಯೋಗವೊಂದೇ ಉತ್ತಮೋಪಾಯ, ಜಾಗತಿಕ ಕ್ರಾಂತಿಯಿಂದಲೇ ಮಾನವೋದ್ಧಾರ ಎಂಬ ತನ್ನ ನಿಲುಮೆಯನ್ನು ತ್ಯಜಿಸಿದರೆ, ವಾಶಿಂಗ್‌ಟನ್ ಅದನ್ನು ಸ್ವಾಗತಿಸುವುದು — ಉಭಯ ರಾಷ್ಟ್ರಗಳಲ್ಲಿಯೂ ನಿಕಟ ಬಾಂಧವ್ಯವೇರ್ಪಡಲು ಸಾಧ್ಯವಾಗುವುದು'— ಹಾವಿನೊಡನೆ ವಿಷ ತ್ಯಜಿಸಿದಂತೆ ಇದು.

ಡೀನ್‌ರಸ್ಕರು ೧೦ ಅಂಶಗಳುಳ್ಳ ಪೀಕಿಂಗ್ ನೀತಿಯನ್ನು ವಿವರಿಸಿದ್ದಾರೆ:

೧. ತಮಗೆ ಪೀಕಿಂಗಿನಿಂದ ಬರುವ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ದಾಳಿಯನ್ನು ಎದುರಿಸಲು ಸಹಾಯ ಬಯಸುವ ಎಲ್ಲಾ ರಾಷ್ಟ್ರಗಳಿಗೂ ಅಮೆರಿಕೆಯು ಖಂಡಿತವಾಗಿಯೂ ಸಹಾಯ ನೀಡುವುದು.

೨. ಆಸ್ಯದ ಕಮ್ಯುನಿಸ್ಟ್ ಒತ್ತಡದಿಂದ ದೂರವಿದ್ದು ತಮ್ಮ ಪ್ರದೇಶಗಳ ಭದ್ರತೆಯನ್ನು ನೋಡಿಕೊಳ್ಳಲು ಅನುಕೂಲವಾಗುವಂತೆ ಪ್ರಗತಿಶೀಲ ಆರ್ಥಿಕ ಮತ್ತು ಸಾಮಾಜಿಕೋನ್ನತಿಗಾಗಿ ಪರಿಣಾಮಕಾರಿಯಾಗಿ ದುಡಿಯುತ್ತಿರುವ ಆಸ್ಯದ ವಿವಿಧ ರಾಷ್ಟ್ರಗಳ ಸರಕಾರಗಳಿಗೆ ಅಮೆರಿಕೆಯು ಸಹಾಯ ನೀಡುವುದು.

೩. ಚೀನಾ ಗಣರಾಜ್ಯ ಮತ್ತು ದರ ಜನತೆಗೆ ಅಮೆರಿಕೆ ನೀಡಿರುವ ಭರವಸೆಗಳನ್ನು ಈಡೇರಿಸಲು ಬದ್ಧವಾಗಿದೆ. ಕಮ್ಯುನಿಜಂನ ಅಡಿಯಲ್ಲಿ ಬದುಕಲು ತೈವಾನದ ಜನತೆ ಬಯಸುವುದಿಲ್ಲ. ಅವರ ಸಂರಕ್ಷಣೆಗಾಗಿ ನೆರವು ನೀಡುವುದರೊಡನೆ ತೈವಾನ ಪ್ರದೇಶದಲ್ಲಿ ಶಕ್ತಿ ಪ್ರದರ್ಶಿಸುವ ಚಟವನ್ನು ಬಿಟ್ಟುಕೊಡುವಲ್ಲಿ ಅಮೆರಿಕೆಯೊಂದಿಗೆ ಕೆಂಪು ಚೀನಾವೂ ಸೇರಿಕೊಳ್ಳುವಂತೆ ಒತ್ತಡ ತರುವುದು.

೪. ಕೆಂಪು ಚೀನಾ ಅಥವಾ ಆದರ ಏಜನ್ಸಿಗಳು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶಿಸದಂತೆ ನೋಡಲು ಅಮೆರಿಕೆ ಪ್ರಯತ್ನ ಮಾಡುತ್ತದೆ. ತನ್ನ ಇಂದಿನ ನಿಲುಮೆಯಲ್ಲಿ ಕೆಂಪು ಚೀನಾ ಸಂ. ರಾ. ಸಂಘದ ತಾಂಮ್ರುಕಟವನ್ನು ಮನ್ನಿಸುವುದು ಸಾಧ್ಯವಿಲ್ಲ. ಕೆಂಪು ಚೀನಾಕ್ಕೆ ಸದಸ್ಯತ್ವವನ್ನು ನೀಡುವುದನ್ನು ಪರಿಶೀಲಿಸುವ ಮೊದಲು ಸಂ. ರಾ. ಸಂಘವು ಕೆಲವೊಂದು ವಿಷಯಗಳನ್ನು ಗಮನಿಸಬೇಕಾಗುತ್ತದೆ.

— ೧೯೫೦ರಲ್ಲಿ ಕೋರಿಯಾದಲ್ಲಿ ಕೆಂಪು ಚೀನಾದ ಆಕ್ರಮಣವನ್ನು ಖಂಡಿಸುವ ಗೊತ್ತುವಳಿಯ ಗತಿಯೇನು?

— ಅಮೆರಿಕನ್ ಆಕ್ರಮಣವನ್ನು ಖಂಡಿಸುವ ಹೊಸ ಗೊತ್ತುವಳಿಯನ್ನು ಸಂ. ರಾ. ಸಂಘ ಮಾಡಬಲ್ಲುದೆ?

— ಸಂ. ರಾ. ಸಂಘದ ಪುನರ್ಘಟನೆಯಾಗಬೇಕು.

— ಚೀನಾ ಗಣರಾಜ್ಯವನ್ನು ಸಂಘದಿಂದ ಹೊರದೂಡಬೇಕು.

— ಕಮ್ಯುನಿಸ್ಟೇತರ ರಾಷ್ಟ್ರಗಳಲ್ಲಿ ಹೆಚ್ಚಿನವನ್ನು ಸಂ. ರಾ. ಸಂಘದಿಂದ ಹೊರ ಹಾಕಬೇಕಾದೀತು —

—ಇವೆಲ್ಲವುಗಳ ಅರ್ಥವೇನು? ಸಂಯುಕ್ತ ರಾಷ್ಟ್ರ ಸಂಘವನ್ನು ನಾಶ ಮಾಡುವುದಲ್ಲದೆ ಬೇರೆಯಲ್ಲ.

೫. ಅಮೆರಿಕೆಗೆ ಕೆಂಪು ಚೀನವನ್ನು ಆಕ್ರಮಿಸುವ ಇರಾದೆಯಿಲ್ಲ. ಆಕ್ರಮಣದ ಅವಕಾಶವಿತ್ತು. ಇದೆ. ೧೯೫೦ರಲ್ಲಿ, ಕೊರಿಯಾದಲ್ಲಿತ್ತು. ೧೯೫೫ ಮತ್ತು ೫೮ರಲ್ಲಿ ತೈವಾನದಲ್ಲಿತ್ತು. ೧೯೬೨ರಲ್ಲಿ ಭಾರತವನ್ನು

ಬಾಲದಿನಾಚರಣೆಯೆಂದು ಜಾಗತಿಕ ಹಬ್ಬ. ಬಲ್ಗೇರಿಯಾದಲ್ಲಿ ಜೂನ್ ೧ರಂದು ಈ ಹಬ್ಬವನ್ನು ಆಚರಿಸುತ್ತಾರೆ. ಇದು ಅದರ ಒಂದು ದೃಶ್ಯ.

ಯಕನೊಬ್ಬ ಬೇಕಾಗಿದ್ದಾನೆ

ಚೀನಾಗಳ ಸಂಬಂಧವೇರ್ಪಡುವುದು ಸಾಧ್ಯವೇ?

ಕೆಂಪು ಚೀನಾ ಆಕ್ರಮಿಸಿದಾಗ; ಇತ್ತು.
ಇಂದು ಇದೇ ಸ್ಥಿತಿ ವಿಯತನಾಮದಲ್ಲೂ
ತಲೆದೋರಿದೆ. ಆದರೆ ಅಮೆರಿಕೆಗೆ ಸಮರ
ಬೇಡ. ಸಮರ ವಾತಾವರಣವನ್ನು ನಿ
ರ್ಮಿಸುವುದೂ ಬೇಡ. ಅಮೆರಿಕೆಯನ್ನು
ಎದುರು ಹಾಕಿಕೊಳ್ಳುವ ಎಲ್ಲ ಅವಕಾಶ
ಗಳನ್ನೂ ಪೀಕಿಂಗ್ ಉಪಯೋಗಿಸಿ ಕೊ
ಳ್ಳುತ್ತ ಬಂದಿದೆಯಾದರೂ ಅದು ಮುಂ
ದುವರಿದಿಲ್ಲ. ಇದನ್ನು ಪೀಕಿಂಗ್ ಸರಿಯಾ
ಗಿ ತಿಳಿದುಕೊಳ್ಳಬೇಕು.

೬. ಕೆಂಪು ಚೀನಾದ ನೀತಿಯಲ್ಲಿ ಮ
ತ್ತು ಕೃತಿಯಲ್ಲಿ ಸ್ಥಿರತೆಯೆಂಬುದಿಲ್ಲ. ಅ
ಮೆರಿಕೆ—ಕೆಂಪು ಚೀನಾಗಳ ಬಗ್ಗೆ ಎದ್ದಿ
ರುವ ಊಹಾ ಪೋಹಗಳನ್ನು ತಡೆಗಟ್ಟ
ಬೇಕು.

೭. ಅಮೆರಿಕೆಯನ್ನು ಪೀಕಿಂಗ್ ನೋ
ಡುವ ದೃಷ್ಟಿಯನ್ನು ನಿಧಾನವಾಗಿಯಾ
ದರೂ ಬದಲಾಯಿಸಲು ಕೆಂಪು ಚೀನಾ
ದೊಡನೆ ಅನಧಿಕೃತ ಸಂಪರ್ಕವೇರ್ಪಡ
ಲು ಅಮೆರಿಕೆ ಉತ್ತೇಜನ ನೀಡುತ್ತದೆ.

—ಕೆಂಪು ಚೀನಾವನ್ನು ಸಂದರ್ಶಿಸು
ವ ಅಮೆರಿಕನ್ನರಿಂದು ಹೆಚ್ಚಾಗಿದ್ದಾರೆ. ಅ
ಮೆರಿಕನ್ ಪುಸ್ತಕ ಭಂಡಾರಗಳು ಕೆಂಪು
ಚೀನಾದ ಪ್ರಕಟಣೆಗಳನ್ನು ಕೊಳ್ಳಲು
ಯಾವ ನಿರ್ಬಂಧವೂ ಇಲ್ಲ. ಎರಡೂ ದೇಶ
ಗಳ ನಡುವೆ ಅಂಚೆ ವ್ಯವಹಾರಗಳು ನಡೆ
ಯಬಹುದು. ಪೀಕಿಂಗ್ ಧಾನ್ಯ ಖರೀದಿಮಾ
ಡಲು ಬಯಸುವುದಾದರೆ, ಅಮೆರಿಕೆಯು
ಅದನ್ನು ಪರಿಶೀಲಿಸಲು ಸಿದ್ಧವಿದೆ. ಪೀಕಿಂ
ಗ್ ಪತ್ರಿಕರ್ತರನ್ನೂ ಅಮೆರಿಕೆ ಸ್ವಾಗತಿ
ಸುತ್ತದೆ. ಅಮೆರಿಕನ್ ವಿಶ್ವವಿದ್ಯಾಲಯ
ಗಳನ್ನು ಪೀಕಿಂಗ್ ವೈಜ್ಞಾನಿಕರು ಸಂದ
ರ್ಶಿಸಲು ಯಾವ ಅಭ್ಯಂತರವೂ ಇಲ್ಲ.

—ಆದರೆ, ಈ ಯಾವ ಅವಕಾಶಗಳ
ನ್ನೂ ಕೆಂಪು ಚೀನಾ ಉಪಯೋಗಿಸಿ
ಕೊಂಡಿಲ್ಲ. ಅದು ಅಮೆರಿಕೆಯಿಂದ ದೂರ
ವಿರಲೇ ಬಯಸುತ್ತದೆ! ಆದರೂ ಅಮೆರಿಕೆ
ಅದಕ್ಕೆ ಬಾಗಿಲು ತೆರೆದೇ ಇಟ್ಟಿದೆ. ಬರು
ವುದು—ಬಿಡುವುದು ಪೀಕಿಂಗಿನ ಇಚ್ಛೆ.
ಆದರೂ ಒಂದಲ್ಲ ಒಂದು ದಿನ ಪೀಕಿಂಗ್
ಪ್ರವೇಶ ನಡೆಯುತ್ತದೆ ಎಂದು ವಾಶಿಂಗ್
ಟನ್ನಿನ ಅಚಲ ವಿಶ್ವಾಸ.

೮. ವಾರ್ಸಾದಲ್ಲಿ ಅಮೆರಿಕೆ ಪೀಕಿಂ
ಗಿನೊಡನೆ ನಿಕಟ ಸಂಬಂಧವಿಟ್ಟು ಕೊ
ಳ್ಳುತ್ತದೆ. ದುರಂತ — ದುರ್ಘಟನೆಗಳ
ವೇಳೆ ವಾರ್ಸಾ ಮಾತುಕತೆಗಳು ಅಲ್ಪ
ಪರಿಹಾರವನ್ನಾದರೂ ತೋರಿಸುತ್ತವೆ.
ವಾರ್ಸಾ ಒಡಂಬಡಿಕೆ — ಮಾತುಗಳು
ಎರಡೂ ದೇಶಗಳ ನಡುವೆ ಇನ್ನೂ
ನೇರವಾದ ಮಾತುಕತೆ ನಡೆಯಲು ನೆರ
ವಾಗುವುದೆಂದು ಅಮೆರಿಕೆಯ ನಂಬಿಕೆ.
ಇದು ಒಂದಲ್ಲ ಒಂದುದಿನ ಸಫಲವಾಗು
ವುದೆಂದೂ ಅದರ ವಿಶ್ವಾಸ.

೯. ಅಣ್ವಸ್ತ್ರ ಪ್ರಯೋಗ ಪ್ರತಿಬಂ
ಧ, ನಿಶ್ಶಸ್ತ್ರೀಕರಣ ಪ್ರಶ್ನೆಗಳ ಬಗ್ಗೆ ಕೆಂ
ಪು ಚೀನಾದೊಂದಿಗೆ ಕೂತು ಚರ್ಚಿಸಲು
ಅಮೆರಿಕೆಯು ಸಿದ್ಧವಿದೆ. ಆದರೆ ಇಂತಹ
ಎಲ್ಲಾ ಆಮಂತ್ರಣವನ್ನು ಪೀಕಿಂಗ್
ತಿರಸ್ಕರಿಸಿದೆ. ಪ್ರಯೋಗ ನಿಷೇಧ ಒಡಂ
ಬಡಿಕೆಯನ್ನು ನಿಂದಿಸಿದೆ. ಅಣು ಶಸ್ತ್ರ
ರಹಿತ ರಾಷ್ಟ್ರಗಳನ್ನು ಅಣುಶಸ್ತ್ರ ಧಾಳಿ
ಭೀತಿಯಿಂದ ಅಂಜಿಸಿದೆ. ಇಂದು
ಎಲ್ಲರೂ ಮಾಡಬೇಕಾದ ಒಂದು
ಕೆಲಸವೆಂದರೆ, ಪೀಕಿಂಗ್ ನಿಲುವಿನಲ್ಲಿ
ಪರಿವರ್ತನೆ ತರಲು ಪ್ರಯತ್ನಿಸುವುದು.

೧೦. ಕೆಂಪು ಚೀನಾದಿಂದ ದೊರೆಯು
ವ ಎಲ್ಲ ತಿಳುವಳಿಕೆಗಳನ್ನೂ ಸಂಗ್ರಹಿಸಿ
ಅದನ್ನು ಅಧ್ಯಯನ ಮಾಡಿ ತನ್ನ ರಾಜ
ಕಾರಣವನ್ನು ಇಂದಿನ ದಿನದ ವರೆಗೂ
ಮುಂದುವರಿಸಿರುತ್ತದೆ, ಅಮೆರಿಕೆ. ಏ
ಶ್ಯಾದ ಮತ್ತು ಪೀಕಿಂಗ್‌ನ ಜನಲ್ಲಿಯತೆ
ಶಾಂತಿ-ಭದ್ರತೆಗಳ ಕಳಕಳಿ ಒಂದಲ್ಲ ಒಂ
ದು ದಿನ ಬೆಳೆಯುವುದೆಂದು ಅದು ನಂಬು
ತ್ತದೆ. ಆಕ್ರಮಣ ಮನೋವೃತ್ತಿ, ಶತ್ರು
ಭಾವನೆಗಳನ್ನು ತ್ಯಜಿಸಿ, ನಿಕಟ ಸಂಬಂ
ಧವನ್ನು ಸ್ಥಾಪಿಸಲು ಚೀನ ಒಂದಲ್ಲ ಒಂ
ದು ದಿನ ಮುಂದೆ ಬರುತ್ತದೆ—ಇದು ಅ
ಮೆರಿಕೆಯ ನೀತಿ.

ಇಂತಹುದೇ ಆರೋಪ ಪಟ್ಟಿಯನ್ನ
ಕೆಂಪು ಚೀನಾವೂ ಮಾಡಿದೆ. ಆದುದರಿಂ
ದಲೇ ಅಮೆರಿಕೆ—ಕೆಂಪು ಚೀನಾ ಉತ್ತ
ರ—ದಕ್ಷಿಣ ಧ್ರುವಗಳಾಗಿವೆ. ಇವು ಹ
ತ್ತಿರ ಬರದೆ ವಿಯತನಾಮ ಪ್ರಶ್ನೆ ಇತ್ಯ
ರ್ಥಗೊಳ್ಳುವುದಿಲ್ಲ. ಈ ಸಾಧನೆಗೆ ಮುಂ
ದೆ ಬರುವ ಧೀರನಾರು?

ವೇದಾಂತ ವಿಷಯಕ ಪ್ರವಚನಕರ್ತೆ

ಅದ್ಭುತ ಬಾಲಿಕೆ—ಸರೋಜಬಾಲಾ

ಹತ್ತು ವರ್ಷದ ಹುಡುಗಿ ಎಲ್ಲರನ್ನೂ ಚಕಿತಗೊಳಿಸುವಂತೆ
ತತ್ವಶಾಸ್ತ್ರ-ತರ್ಕಶಾಸ್ತ್ರಗಳ ಒಡತಿಯಾಗಿದ್ದಾಳೆ.

ಬರೆದವರು: ಶ್ರೀ ಸ್ವಯಂಪ್ರಕಾಶ ಶಾಸ್ತ್ರಿ.

ತನ್ನ ಶಾಸ್ತ್ರಜ್ಞಾನ ಮತ್ತು ತರ್ಕ
ಶಕ್ತಿಯಿಂದ ಎಲ್ಲರನ್ನೂ ಚಕಿತಗೊಳಿಸುವ
ಒಂಭತ್ತರ ಹರೆಯದ ವಿಲಕ್ಷಣ ಬಾಲಿಕೆ
ಯ ಪರಿಚಯ.

ಬಯಲಲ್ಲಿ ಹಸುಗಳು ಮೇಯುತ್ತಿ
ದ್ದುವು. ದನ ಮೇಯಿಸುವ ಬಾಲಕರು
ಆಟದಲ್ಲಿ ಮಗ್ನರಾಗಿದ್ದರು. ಜನರು ಗುಂ
ಪು ಗುಂಪಾಗಿ ಬಂದು ಸೇರ ತೊಡಗಿದ
ರು. ಜನಸ್ತೋಮವನ್ನು ನೋಡುತ್ತಲೆ,
ಬಾಲಕರಲ್ಲಿ ಒಬ್ಬನು ಓಡೋಡಿ ಹತ್ತಿರ
ದಲ್ಲಿದ್ದ ಬಂಡೆಯ ಮೇಲೇರಿ ಗಂ
ಭೀರನಾಗಿ ಪ್ರಶಾಂತನಾಗಿ ಕುಳಿತನು.
ವಾದಿ, ಪ್ರತಿವಾದಿಗಳು ಉಪಸ್ಥಿ
ತರಾದರು. ಬಾಲಕನು ವಾದಿ, ಪ್ರತಿ
ವಾದಿಗಳ ವಿವಾದಗಳಿಗೆ ಸಮಂಜಸ
ವಾದ ತೀರ್ಪನ್ನಿತ್ತನು. ಮತ್ತು ಬಂಡೆ
ಯಿಂದ ಕೆಳಗಿಳಿಯುತ್ತ ಆಶ್ಚರ್ಯಚಕಿತ
ಜನರೆಡೆಗೆ ನೋಡದೆಯೆ ಏನೂ ಅರಿಯ
ದವನಂತೆ ಗೆಳೆಯರೊಂದಿಗೆ ಆಟವಾಡ
ತೊಡಗಿದನು. ಆ ಬಂಡೆಯ ಕೆಳಗಡೆ ರಾ
ಜಾ ವಿಕ್ರಮಾದಿತ್ಯನ ನ್ಯಾಯ ಪೀಠವಿದ್ದಿ
ರಬೇಕೆಂಬು ಜನತೆಯ ವಿಶ್ವಾಸ. ಇದು
ಪ್ರಚಲಿತ ಜನ ಶ್ರುತಿಯು.

ವ್ಯಾಸ ಪೀಠದ ಸರಸ್ವತೀ ಸಿಂಹಾ
ಸನ:—ಕಳೆದ ಮಾರ್ಚ್ ೩೦ರಿಂದ ಏಪ್ರಿ
ಲ್ ೧೧ರ ವರೆಗೆ ಇದೇ ರೀತಿಯ ಸತ್ಯ
ಘಟನೆಯೊಂದನ್ನು ಸಹಸ್ರ ಜನರು ಪ್ರತಿ
ದಿನವೂ ನೋಡಿದರು. ಪ್ರತಿದಿನ ರಾತ್ರಿ
ಎಂಟು ಗಂಟೆಗೆ ಸರಿಯಾಗಿ, ಚಿಕ್ಕ
ಬಾಲಿಕೆಯೊಬ್ಬಳು ವಿಶಾಲ ಜ
ನಸಮುದಾಯದ ಮಧ್ಯದಿಂದ
ಎದ್ದು ಬಂದು ಉನ್ನತ ಆಸನದ ಮೇಲೆ
ಕುಳಿತು ವಂದನೆಯ ಕೆಲವು ಶ್ಲೋಕ
ಗಳನ್ನು ಪಠಿಸುತ್ತಾ, ಪ್ರವಚನ ಕಾರ್ಯ
ವನ್ನು ಆರಂಭಿಸಿದ್ದಳು. ನಗರದ ಹೊರ
ವಲಯದ ತ್ರಿವೇಣಿ ತಟದಲ್ಲಿ ರಾಮೋ
ತ್ಸವದ ಸಂದರ್ಭದಲ್ಲಿ ಪ್ರವ
ಚನಗಳು ಜರಗುತ್ತಿದ್ದುವು. ತನ್ನ ೧೧ ತಾ
ಸುಗಳ ಅವಧಿಯಲ್ಲಿ ಪ್ರವಚನ ವೈ
ಖರಿಯಿಂದ ಸರೋಜಬಾಲಾ
ಜನತೆಯನ್ನು ಮಂತ್ರ ಮುಗ್ಧಗೊಳಿಸುತ್ತಿ
ದ್ದಳು. ಪ್ರವಚನ ಕಾಲದಲ್ಲಿ ವಿಷದ ರೂ
ಪದಲ್ಲಿ ಶ್ರುತಿ ಸ್ಮೃತಿಗಳ, ಉಪನಿಷತ್ತುಗ
ಳ, ವಿವಿಧ ಪುರಾಣಗಳ, ಮಹಾಭಾರ
ತ, ವಾಲ್ಮೀಕಿ ರಾಮಾಯಣ, ಭಾಗವತ,
ರಾಮಚರಿತ ಮಾನಸ, ಸಂತ ಕವಿಗಳ
ಮತ್ತು ಭಕ್ತರ ಸಾಹಿತ್ಯದಲ್ಲಿನ ಅನೇಕ
ಉದಾಹರಣೆಗಳನ್ನು ನೀಡುವಳು. ಈ ಉ
ದಾಹರಣೆಗಳು ಅತ್ಯಂತ ಶುದ್ಧರೂಪದಿಂ
ದ ಉಚ್ಚರಿಸಲ್ಪಡುತ್ತಿದ್ದು, ವಿಷಯ ವ
ಸ್ತುವಿನೊಂದಿಗೆ ಸಮನ್ವಯವಾಗಿರುತ್ತಿ
ದ್ದುವು. ಅವಳು ಭಕ್ತಿಯ ಮಹಿಮೆಯ
ಕುರಿತು ವ್ಯಾಖ್ಯಾನ ನೀಡುತ್ತಿದ್ದಂತೆ, ವೇ
ದಾಂತ ಮೊದಲಾದ ಜಟಿಲ ವಿಷಯಗಳಲ್ಲಿ
ಪ್ರವಚನವನ್ನು ವಿಷಯವು ಯಾ
ವುದೇ ಆಗಿದ್ದರೂ, ಅದರ ಪ್ರಾರಂಭ,
ವಿಸ್ತಾರ ಹಾಗೂ ಉಪಸಂಹಾರವು ಸರಿ
ಯಾದ ಕ್ರಮದಲ್ಲಿರುತ್ತಿತ್ತು.

ವ್ಯಾಸ ಪೀಠದಿಂದ ಕೆಳಗಿಳಿಯುತ್ತಲೇ
ಸರೋಜಳು ಪುನಃ ಮುಗ್ಧ ಸ್ವಭಾವದ
ತುಂಟ ಹುಡುಗಿಯಾಗಿರುತ್ತಿದ್ದಳು. ಇ
ದೇ ಸಭಾಂಗಣದ ಸಮೀಪದಲ್ಲಿ ತನ್ನ ಓ
ಡನಾಡಿಗಳೊಡನೆ ಆಡುತ್ತಿರುವ ಸರೋ

(ಹದಿನೆಂಟನೇ ಪುಟ ನೋಡಿರಿ)

ದಕ್ಷಿಣ ವಿಯತನಾಮಕ್ಕೆ ಅಮೆರಿಕೆಯು ಅಭಿವೃದ್ಧಿ ನೆರವು ನೀಡುತ್ತದೆ. ಅಲ್ಲಿನ ಮೀನುಗಾರರು
ಮೀನು ಹಿಡಿಯಲೆಂದು ಯಂತ್ರ ಸಜ್ಜಿತ ದೋಣಿಗಳನ್ನು ಬಳಸುತ್ತಾರೆ.

ಕನಲು ದಾರಿ—ಕೆಂಪು ದೀಪ

ಜಯತು ಜಯತು ವಿಜಯಾಂತ

ವಿಜಯಾಂತ—

ಸದಾ ವಿಜಯವನ್ನೇ ತರುವವ! ಎಷ್ಟು ಸುಂದರ ಅರ್ಥಪೂರ್ಣ ಹೆಸರು!!

ಈ 'ವಿಜಯಾಂತ' ಯಾರು? ಆವಡಿಯ ಲ್ಲಿಯ ಘನವಾಹನ ಕಾರಖಾನೆಯಲ್ಲಿ ತಯಾರಾಗಿ ಹೊರ ಬೀಳುವ, ತೋಪುಗಳಿಂದ ಸುಸಜ್ಜಿತವಾದ ಮಧ್ಯಮ ಗಾತ್ರದ ಟ್ಯಾಂಕ್! — ಭಾರತದಲ್ಲಿಯೇ ರೂಪಿತವಾದ ಭಾರತೀಯ ಟ್ಯಾಂಕ್!!

ವಿಜಯಾಂತ—ಉಕ್ಕಿನ ಕೋಟೆ, ನೀರು ನೆಲಗಳ ಮೇಲೆ ಏಕ ಪ್ರಕಾರವಾಗಿ ಚಲಿಸ ಬಲ್ಲುದು—ಚಣಾಕ್ಷತನದ ಚಲನವಲನದಲ್ಲಿ ಮಿಗಿಲಾದುದು.

ಟ್ಯಾಂಕಿನ ಹೆಸರು ಕೇಳುತ್ತಲೇ ಕಳೆದ ಸಪ್ಟಂಬರದ ನೆನಹು ಮತ್ತೆ ಚಿಗುರುತ್ತದೆ—

ಅಮೆರಿಕೆಯ ಪ್ಯಾಟನ್ ಟ್ಯಾಂಕುಗಳ ಬಲದಿಂದ ಕೊಬ್ಬಿದ ಪಾಕಿಸ್ತಾನ ಭಾರತ ಪರಮ ಪವಿತ್ರ ಮಣ್ಣನ್ನು ಮುಕ್ಕ ಬಂದಿತು—ಮಣ್ಣು ಮುಕ್ಕಿಯೇ ಮರಳಿತು.

ಶಸ್ತ್ರಾಸ್ತ್ರಗಳನ್ನು ಪರದೇಶಗಳಿಂದ ತರಿಸುವುದೂ ಕಣ್ಣು ಮುಚ್ಚಾಲೆಯಾಡುವುದೂ ಒಂದೇ—ಹಾವಿನೊಡನೆ ಸರಸವಾಡಿದಂತೆ!

ದೇಶದ ಸಾರ್ವಭೌಮತೆ, ಸಮಗ್ರತೆ, ಏಕತೆ, ಸ್ವತಂತ್ರತೆಗಳನ್ನು ಉಳಿಸುವುದು ಪ್ರತಿದೇಶದ ಕರ್ತವ್ಯ—ಅದು ಶಾಂತಿಯಿಂದಾದರೆ ಸರಿಯೇ, ಅಗತ್ಯವೆನಿಸಿದರೆ, ಶಸ್ತ್ರ ಹಿಡಿಯಲೂ ಹಿಂಜರಿಯಬಾರದು.

ಚೀನೀಯ ಹಳದಿ ರಕ್ಕಸ ಹೂಡಿದ, ಹೂಡುತ್ತಿರುವ ಕುತಂತ್ರಗಳ ಪರಿವೇ ನಮಗಿದೆ—

ಏನೇ ಬರಲಿ, ಆಕ್ರಮಣದ ಮುಂದೆ ತಲೆ ಬಾಗುವಷ್ಟು ಭೀರುಗಳು ಭಾರತೀಯರಲ್ಲ—

ನಮ್ಮನ್ನು ಕೆಣಕ ಬಂದವರು ಯಾರೇ ಇರಲಿ, ಅವನ್ನು ಘಾಸಿಗೊಳಿಸದೆ ಬಿಡುವವರು ವೀರ ಭಾರತೀಯರಲ್ಲ.

ವಿದೇಶೀಯ ಆಕ್ರಮಣವನ್ನು ನಮ್ಮ ಸ್ವಾತಂತ್ರ್ಯ ಸಾಮಗ್ರ್ಯಗಳಿಗೆ ಬರಬಹುದಾದ ಆಹ್ವಾನಗಳನ್ನು ಎದುರಿಸಿ ದೇಶ ಸಂರಕ್ಷಣೆಯನ್ನು ಮಾಡುವ ಧೀರ ಪ್ರತಿಜ್ಞೆ ಭಾರತೀಯನದು—ಈ ಪ್ರತಿಜ್ಞೆಯ ದಾರಿಯ ಮಹತ್ವದ ಮೈಲುಗಲ್ಲೊಂದು 'ವಿಜಯಾಂತ'.

ಜುಲೈ ಮೂರು, ೧೯೬೬ ಭಾನುವಾರ.

ಪ್ರಧಾನಿ ಇಂದಿರಾ ಗಾಂಧಿಯವರು 'ಹೆವಿ ವೆಹಿಕಲ್ಸ್' ಕಾರಖಾನೆಯನ್ನು ಆವಡಿಯಲ್ಲಿ ಉದ್ಘಾಟಿಸಿದರು.

೧೯೬೧ರಲ್ಲಿ ಪ್ರಧಾನಿ ಜವಾಹರಲಾಲರ ನೇತೃತ್ವದಲ್ಲಿ ಭಾರತ ನಿರ್ಧರಿಸಿತ್ತು: ದೇಶದಲ್ಲಿ ಶಸ್ತ್ರ ಸಜ್ಜಿತ ಸಂಘರ್ಷಯೋಗ್ಯ ವಾಹನಗಳ ಉತ್ಪಾದನೆಯಾಗಬೇಕು. ಈ ನಿರ್ಧಾರ ಇಂದು ಕಾರ್ಯಗತವಾಯ್ತು.

"ವಿಜಯಾಂತ" ರೂಪುಗೊಂಡಿತು ೧೯೬೫ ದಶಂಬರ ೨೬ರಂದೇ ಮೊತ್ತ ಮೊದಲ "ವಿಜಯಾಂತ" ಹೊರ ಬಂತು. ಇಂದು ನಮ್ಮ ಸೇನೆಯಲ್ಲಿಯೂ ಹಲವು "ವಿಜಯಾಂತ"ಗಳಿವೆ.

ವಿಜಯಾಂತವನ್ನು ನಿರ್ಮಿಸುವಲ್ಲಿ ಭಾರತ ಸರಕಾರವು ಇಂಗ್ಲೆಂಡಿನ ಅನೇಕ ಕಾರಖಾನೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಇದರಿಂದಾಗಿಯೇ "ವಿಜಯಾಂತ ವಿಜಯಿಯಾಗುವುದು ಸಾಧ್ಯವಾಯಿತು.

ಇಂದು ಆವಡಿಯ ಕಾರಖಾನೆ ತನ್ನ ಮಾದರಿಯಲ್ಲಿ ಅದ್ವಿತೀಯ.

ಟ್ಯಾಂಕಿನ ಮುಖ್ಯ ಬಿಡಿಭಾಗಗಳನ್ನು ತಯಾರಿಸಿ, ಅವನ್ನು ಜೋಡಿಸಿ ಒಂದೇ ಮಾಡಿನಡಿಯಲ್ಲಿ ಟ್ಯಾಂಕು ರಚಿಸುವ ಕಾರಖಾನೆ ಇಡಿಯ ಜಗತ್ತಿನಲ್ಲಿ ಬೇರಿಲ್ಲ.

'ವಿಜಯಾಂತ'ದ ರಚನೆ ದೇಶಿಯ ರಚನಾಂಗಗಳು ಎಷ್ಟಿಯವು?

ದೇಶೀಯ ವಸ್ತುಗಳ ಬಳಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡಿದ್ದಾರೆ.

ಮುಂದಿನ ಮೂರು—ನಾಲ್ಕು ವರ್ಷಗಳಲ್ಲೇ 'ವಿಜಯಾಂತದ' ಸೇ. ೮೦ರಷ್ಟು ರಕ್ತ ದೇಶೀಯವಾಗುವುದು. ಆಗ ವಿದೇಶ ವಿನಿಮಯದ ಉಳಿತಾಯವೂ ಆಗುವುದು.

ಕಾರಖಾನೆಯ ಮೊದಲ ಹಂತದಲ್ಲಿಯೇ ಬಿಡಿಭಾಗಗಳ ಯಂತ್ರ ಸಾಮಾಗ್ರಿಗಳ 'ಟೋಲ್ ರೂ.' ಆವಡಿಯಲ್ಲಿ ರಚಿತವಾಗಿದೆ—

ತಾಂತ್ರಿಕ ಜ್ಞಾನದ ಹಿನ್ನೆಲೆ ಒದಗಿಸಲು ವಿನ್ಯಾಸ ಕಚೇರಿಯಲ್ಲಿದೆ; ತಾಂತ್ರಿಕ ಜ್ಞಾನ ನಿಧಿ ಬೆಳೆಸಲು ಆರ್ಟಿಸನ್ ಸ್ಕೂಲೂ ಇಲ್ಲಿದೆ.

"ವಿಜಯಾಂತ"—

ಹೌದು, ದೇಶವನ್ನು ವಿಜಯದೆಡೆಗೊಯ್ಯುವ ಹೆಮ್ಮೆಯ ಸಮರವಾಹನ—ಟ್ಯಾಂಕ್.

ಜಯತು ಜಯತು ವಿಜಯಾಂತ!

ಮಾವನ ಗದ್ದುಗೆ ಲಿನ್ ಪಿಯಾವ್ರೋಗೆ?

(೩ನೇ ಪುಟದಿಂದ)

ಲೇಟುವ ಜನ ಕಮ್ಯೂನಿಸ್ಟ್ ಸಂಸ್ಥೆಯ ಸದಸ್ಯರಾಗಿದ್ದರು. ೧೯೨೫ರಲ್ಲಿ ವಿದ್ಯಾರ್ಥಿಗಳ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ತೆರಳಿದ್ದ ಅವರು ಕಮ್ಯೂನಿಸ್ಟ್ ಸಿದ್ಧಾಂತಗಳಿಗೆ ಸಂಪೂರ್ಣ ಮಾರುಹೋದರು. ೧೯೨೭ರ ವರೆವಿಗೂ ಅವರಿಗೆ ಚೀಣೀ ಕಮ್ಯೂನಿಸ್ಟ್ ಪಕ್ಷದ ಔಪಚಾರಿಕ ಸದಸ್ಯತ್ವ ದೊರೆತಿರಲಿಲ್ಲ.

ಪದವೀಧರರಾದ ಬಳಿಕ ಚೀಣೀ ಪ್ರಾಂತರ "ಕ್ರಾಂತಿಕಾರಿ ಸೇನೆ" ಯಾದ ಕಾವ್ರೋವಿನ್ ಕೋ ಇಂಗ್‌ನಲ್ಲಿ ಕಮಿಷನ ಹುದ್ದೆಗೆ ನೇಮಕಗೊಂಡರು. ಲಿನ್ ಪಿಯಾವ್ರೋ ೧೯ ವರ್ಷದವರಿದ್ದಾಗಲೇ ಒಂದು ಬಟಾಲಿಯನ್ನಿನ ಮುಖ್ಯಸ್ಥರಾದರು. ಮುಂದೆ ೧೯೨೭ರ ಆಗಸ್ಟ್ ತಿಂಗಳಲ್ಲಿ ಈ ಹುದ್ದೆಗೆ ಶರಣು ಹೊಡೆದು ನಾಂಚಾಂಗ್‌ನಲ್ಲಿ ಕೆಂಪು ಕ್ರಾಂತಿಕಾರರನ್ನು ಸೇರಿಕೊಂಡರು.

೧೯೩೭ರ ಅಕ್ಟೋಬರ್ ತಿಂಗಳಲ್ಲಿ ಚೀಣೀ ಪಡೆಗಳು ಆಗ್ನೇಯ ಷಾನ್ಸಿ ಪ್ರಾಂತ್ಯದ ಪಿಂಗ್ ಶಿಂಗ್ ಕಣಿವೆಯಲ್ಲಿ ಜಪಾನಿ ಸೈನಿಕರನ್ನು ಮುತ್ತಿಗೆ ಹಾಕಿ ಜಪಾನಿನ ಮೇಲೆ ನಿರ್ಣಾಯಕ ವಿಜಯ ಸಾಧಿಸಿದವು.

ಲಿನ್ ಮಾವ್ರೋ ಸಿದ್ಧಾಂತದಂತೆ ಮಿಲಿಟರಿ ಸಾಹಿತ್ಯವನ್ನೂ ಚೆನ್ನಾಗಿ ಬಲ್ಲರು. ಲಿನ್ ನೋಡಲು ಸುದೃಢ ವ್ಯಕ್ತಿಯೇನೂ ಅಲ್ಲ. ಅವರು ಹಳ್ಳಿಯ ಬಡಗಿಯಂತೆ ಕಾಣುತ್ತಾರೆ. ಚೀಣೀಯರು ಅವರನ್ನು ಓರ್ವ ವಿದ್ವಾಂಸನೆಂದು ಭಾವಿಸಿದ್ದಾರೆ. ಚೀಣಾದಲ್ಲಿ ಮಾವ್ರೋ ಅವರ ಅವಸಾನಸವಿಾಪಿಸಿದಂತೆ ಲಿನ್ ಮುಂಬೆಳಗಿನಲ್ಲಿ ಬರುತ್ತಿದ್ದಾರೆ.

ಬಿಂಕದ ಹೆಣ್ಣಿಗೆ—

ಬಿಂಕ ಸಾಕೆ, ಕೊಂಕದೇಕೆ
ಎಲೆಲೆ ಹುಚ್ಚು ಹೆಣ್ಣೆ!
ಮಣ್ಣ ದೇಹ ಮರೆಯಬೇಡ!
ಇದಕೆ ಗತಿಯು ಮಣ್ಣೆ!

ಓರೆ ನೋಟವೇನೊ ಮಾಟ
ತುಂಬಿ ನೀನು ನಗಲು!
ಕಾಮ ಪ್ರೇಮವರಿಯದಿರುವ
ಪುರುಷ ನಿನ್ನ ಬಗಲು!

"ನೀನೆ ನಾನು; ನಾನೆ ನೀನು
ನನ್ನ ನಿನ್ನ ಪ್ರೇಮ
ಜೋಡಿಯಿಲ್ಲ ನನಗು ನಿನಗು
ನಾವು ರಾಧೆ ಶ್ಯಾಮ!

ಅಯ್ಯೊ! ನಿನ್ನ ಮರೆಯಲಾರೆ
ನೀನೆ ನನ್ನ ಪ್ರಾಣ!
ಕ್ಷಣವು ನಿನ್ನ ಅಗಲಿರಲ್ಕೆ
ಒಲ್ಲದಲ್ಲೊ ಜಾಣ!"

ಎನ್ನುತೇನೊ ಮರುಳು ಮಾಟ
ಮಾಡಿಯವನ ಸುಲಿದು!
ಕಡೆಗೆ ಕೈಯ ಕೊಡುವ ಹೆಣ್ಣೆ
ಮೆರೆಯ ಬೇಡ ನಲಿದು!

ನೋಡದಲ್ಲಿ ಮಸಣದಲ್ಲಿ
ವಿಕಟ ತಲೆಯ ಬುರುಡೆ!
ನಗುತಲಿಹುದು ನಿನ್ನ ಕಂಡು
ಸಾರಿ 'ದಿನವದೆರಡೆ!'

ಸಣ್ಣ ನಡುವು; ತೊಂಡೆ ತುಟಿಯು
ಮೊಗ್ಗಿನಂತ ಹಲ್ಲು
ಹೋಯಿತೆಲ್ಲ ಮಣ್ಣಿನಲ್ಲಿ
ಲೀನ! ದೇಹ ಸುಳ್ಳು!

ಕ್ಷಣಿಕ ಸುಖದ ಬಯಕೆಯಿಂದ
ಬಾಳ ಮರೆಯ ಬೇಡ!
ಅಳಿಯಲೇನು ಕಾಯ ಕೀರ್ತಿ
ಉಳಿವುದಮರ ನೋಡಾ!

—ಶ್ರೀ ಮುಚಿಬೈಲು ಭಾಸ್ಕರ ಭಂಡಾರಿ
ಮಂಜೇಶ್ವರ

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428
ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು—೧

ಇದೀಗ ಪ್ರಕಟವಾಗಿದೆ!
ಮೇರಿ ಕೊಟ್ಟ ಬೆಂಡೋಲೆ
ಯಸ್. ಸದಾಶಿವರಾಯರ ಕಥಾಸಂಕಲನ.
ಮುನ್ನುಡಿ: ನಿರಂಜನ
ತ್ರಿವರ್ಣ ರಕ್ಷಾಪತ್ರ ಬೆಲೆ: ರೂ. ೧=೫೦
ಪ್ರತಿಗಳಿಗೆ—
ನವಯುಗ ಪ್ರೆಸ್, ಉಡುಪಿ

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಸಂ. ಸ.

ಅಧಿಕಾರೀ ಜ್ಯೋತಿಷಿ: (ಭಾಗ ೧) ಲೇಖಕರು: ಶ್ರೀ ಎನ್. ಕೆ. ಜೋಗಳೇಕರ, ಪ್ರಕಾಶಕರು: ಜ್ಯೋತಿಷ್ಯ ಕಾರ್ಯಾಲಯ, ರವಿವಾರ ಪೇಟೆ, ಧಾರವಾಡ-೧. ಪುಟಗಳು: ೪೬. ಬೆಲೆ: ರೂ. ೧.

'ಜ್ಯೋತಿಷ್ಯದಲ್ಲಿ ಇಂದಿನವರಲ್ಲಿ ನಂಬಿಕೆಯು ಹೊರವಲಯದಲ್ಲಿ ಗೋಚರವಾಗುವುದು ಕಡಿಮೆಯಾದರೂ ಹೆಚ್ಚಿನವರು ಒಂದಲ್ಲ ಒಂದು ಕಾರಣದಿಂದ ಅದರಲ್ಲಿ ವಿಶ್ವಾಸವಿಡುತ್ತಲೇ ಇದ್ದಾರೆ. ಇಂದಿನ ಜನಜೀವನ—ರೀತಿ ನೀತಿಗಳು ಬದಲಾದಂತೆಯೇ ಜನತೆಯ ಸಮಸ್ಯೆಗಳ ಸ್ವರೂಪವೂ ಬದಲಾಗಿದೆ; ಮುಂದೆಯೂ ಇದು ಬದಲಾಗುತ್ತದೆ. ತನ್ನಲ್ಲಿ ಬರುವ ಪ್ರತಿಯೊಬ್ಬ ಪೃಚ್ಛಕನ ಮನಸ್ಸಿಗೂ ನೋವಾಗದಂತೆ, ಸಮಾಧಾನವಾಗುವಂತೆ ಉತ್ತರಿಸುವುದು ಜ್ಯೋತಿಷಿಯ ಕರ್ತವ್ಯ. ರಾಜತ್ವವೇ ಅಳಿದು ಹೋದ ಈ ಕಾಲದಲ್ಲಿ ರಾಜಯೋಗವಿದೆ ಎಂದರೆ ನಗದಿರುವುದು ಸಾಧ್ಯವಿಲ್ಲ. ಹಾಗಾಗಿ ಜ್ಯೋತಿಷಿಗಳು ಪುರಾತನರು ತೋರಿಸಿರುವ ದಾರಿಯನ್ನು ಆಧುನಿಕ ಯುಗಕ್ಕೆ ತಕ್ಕಂತೆ ತಮ್ಮ ಕಾಂಕ್ರೀಟಿನಿಂದ ಬಲಪಡಿಸಿ ಪೃಚ್ಛಕ ಶಂಕಾ ನಿವಾರಣೆ ಮಾಡಬೇಕಾಗುತ್ತದೆ. ಇಂತಹವನೇ ಅಧಿಕಾರಿ ಜ್ಯೋತಿಷಿಯಾಗಬಲ್ಲನು.

ಪ್ರಕೃತದ ಪುಸ್ತಕದಲ್ಲಿ ನಾಲ್ಕು ಲೇಖನಗಳು ಸಂಗ್ರಹವಾಗಿವೆ. ಮೊದಲನೆಯದರಲ್ಲಿ ಪೃಚ್ಛಕರಲ್ಲಿಯ ಪ್ರಕಾರಗಳನ್ನೂ ಎರಡನೆಯದರಲ್ಲಿ ಫಲಜ್ಯೋತಿಷ್ಯ ಮತ್ತು ಅದರ ಮೇಲೆ ಬರುವ ಆಕ್ಷೇಪಣೆಗಳನ್ನೂ ಮೂರನೆಯದರಲ್ಲಿ ಸಮಸ್ಯೆಗಳ ಕ್ಲಿಷ್ಟತೆಯನ್ನೂ ವಿವರಿಸಿರುವ ಜೋಗಳೇಕರರು ನಾಲ್ಕನೆಯದರಲ್ಲಿ ಅಧಿಕಾರಿ ಜ್ಯೋತಿಷಿ ಎಂಥವನಿರಬೇಕೆಂಬುದನ್ನು ತಿಳಿಸಿದ್ದಾರೆ. ಅಲ್ಲಲ್ಲಿ ತನ್ನ ಮುಂದೆ ಬಂದಿರುವ ಸಮಸ್ಯೆ ಮತ್ತವುಗಳಿಂದ ತಾನು ಪಾರಾದ ಬಗೆಗಳನ್ನೂ ಉಲ್ಲೇಖಿಸಿರುವ ಈ ಪ್ರಸಿದ್ಧ ಜ್ಯೋತಿಷಿಗಳ ಕೃತಿ ಆ ವೃತ್ತಿಯವರಿಗೆ ತುಂಬ ಸಹಾಯಕವಾಗಿದೆ. ಕೃತಿಯ ಭಾಷೆ ಸರಳ; ಬೋಧಗಮ್ಯವಿದೆ.

ಸತ್ಯದ ಚಿತ್ರ: (ತುಳು ಕವನಗಳ ಸಂಗ್ರಹ)

ರಚಯಿತರು: ಶ್ರೀ ಬಾಡೂರು ಜಗನ್ನಾಥ ರೈ.

ಪ್ರಕಾಶಕರು: ಅವರೇ.

ಪುಟಗಳು: ೩೯. ಬೆಲೆ: ರೂ. ೧.

ತುಳುನಾಡು ಅಳಿಯ ಸಂತಾನದ ಕಟ್ಟಿಗೆ ಒಳಪಟ್ಟಿದ್ದಾಗಿತ್ತು. ಆದರೆ, ಕಾಲ ಮಹಿಮೆಯಿಂದಾಗಿ ಈ ಕಟ್ಟಿನ ಅವಸ್ಥೆ ಇಂದು ಶೋಚನೀಯವಾಗಿ ಪರಿಣಮಿಸಿದೆ. ಇದರಿಂದ ನೊಂದ ಶ್ರೀ ರೈಯವರು "ಅಳಿಯುತ್ತಿರುವ ಅಳಿಯ ಕಟ್ಟಿಗೆ ಇದೊಂದು ಲೇಖನಿಯ ಕಣ್ಣೀರಿನ ಶ್ರದ್ಧಾಂಜಲಿ' ಯನ್ನು ಅರ್ಪಿಸಿ ತಾನು ಹುಟ್ಟಿದ ಅಳಿಯಕಟ್ಟಿನ ಸಮಾಜಕ್ಕೆ ಅಲ್ಪ ಸೇವೆ ಸಲ್ಲಿಸಿದ ಆತ್ಮತೃಪ್ತಿ ಹೊಂದಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ತುಂಡಾಗಿ ಕೇರಳ—ಕರ್ನಾಟಕಗಳಲ್ಲಿ ಹಂಚಿದಂತೇ ಸತ್ಯದ ಕಟ್ಟು ಅಳಿಯಕಟ್ಟು ತುಂಡಾಯಿತೆಂದು ಕವಿ ನೊಂದಿದ್ದಾರೆ. ಕಾಸರಗೋಡು ಕರ್ನಾಟಕದಲ್ಲಿ ಸೇರಬೇಕೆಂಬುದೇ ಕವಿಯ ಹಾರ್ದಿಕ ಆಶಯ. ಅವರು ಕೇಳುತ್ತಾರೆ:

ನಿನ್ನ ಧ್ವಜದೆತ್ತಿ ಕಾಸರ್‌ಗೋಡುದಾ
ಪೇಟೆ
ನಿನ್ನ ಜಕ್ಕೆಲ್‌ಡೆ ಕುಲ್ಯರ ಕಾಪೊಡಾ
ಪಾಂಟೆ?।—(ಪುಟ ೧೯)

ತುಳುವ, ತುಳುವರ ನೀತಿ-ಕಟ್ಟುಗಳ ದುರವಸ್ಥೆಗೆ ಕವಿ ಕಣ್ಣೀರು ಮಿಡಿಯುತ್ತಾರೆ:

ತುಳು ಕಟ್ಟ್ ನಿಟ್ಟುಳೆಗ್ ಸಿಲೆದಾಂತೆ
ಅಂಡ್
ಸಳೆಪೆತ್ತಿ ದ್ವೆವಳೆಗ್ ಬಲಿಪೂಜೆ
ಓಂಡ್
ಅಳಿದಾಂತಿ ಅಳಿಯ ಕಟ್ಟ್‌ದ ಕೊಲೆನೆ ಅಂಡ್
ನಲೆದಾಂತಿತುಳು ವೆರೆಗ್ ಗತಿದಾಂತೆ
ಪೋಂಡ್॥
—ಪುಟ ೧೯.

ಮಾತೆಯು ಮಕ್ಕಳನ್ನು ಹೇಗೆ ಸಾಕುತ್ತಾಳೆ, ತಿದ್ದಿ ಬೆಳೆಸುತ್ತಾಳೆ ಎಂಬುದನ್ನು "ಅಪ್ಪೆ"ಯಲ್ಲಿ ಕವಿ ಮನಮುಟ್ಟುವಂತೆ ಮಾಡಿ ಕೊಟ್ಟಿದ್ದಾರೆ.

'ಭೂತೋಳು ಕಂಡಿ ಕಟ್ಟ್"ಮುಂದೆ ಭೂತಾಳ ಪಾಂಡ್ಯ ಕಟ್ಟ್ ಆಯಿತೆಂದು ಕ್ಷೇತ್ರಪರ ಅಭಿಪ್ರಾಯ. ಮೈಸೂರಿರಲಿ, ಕರ್ನಾಟಕವಿರಲಿ - ಅದು "ಓಪ್ ಕ್‌ದೊರಿಯಿಂಡ್'— ಇದು ಕವಿಯ ಹೇಳಿಕೆ. "ಸಾಬ್ರಮತಿ ಭೂಮಿಡ್ ಬೆಳ್ಗಿನ ಗಾಂಧಿ ತತ್ವದ ಸಾರ" ಎಂದು ಹಾಡಿದ ಕವಿಗಳು ತಮ್ಮ ಗಾಂಧಿ ತತ್ವ ನಿಷ್ಠೆಯನ್ನು ವ್ಯಕ್ತಪಡಿಸಿದ್ದಾರೆ. ನಾವೆಲ್ಲೇ ಇರಲಿ ಭಾರತ ಮಾತೆಯ ಮಕ್ಕಳೆಂಬ ಅಚಲ ವಿಶ್ವಾಸ ಲೇಖಕರದ್ದು. ಅದನ್ನು ಶತ್ರುಗಳಿಂದ ಉಳಿಸುವುದು ನಮ್ಮೆಲ್ಲರ ಕರ್ತವ್ಯ: 'ಪೇಶಾಭಿಮಾನ ಭಾಷಾಭಿಮಾನದ ದುರಭಿದ್ವೇಷ ಮೋಸೊಡು ಪಾಸಿ'ಯಾಗದಂತೆ ನಾವು ಬದುಕುವಂತಾಗಬೇಕು. ಸತ್ಯವೇ ದೇವರು—ಇದು ತುಳು ಸಂಸ್ಕೃತಿಯ ಮೂಲ— ಇದರಲ್ಲೇ ವಿಶ್ವಾಸವಿಟ್ಟ ರೈಯವರು ಇಂದಿನ ಉಪಾಸನಾ ಪದ್ಧತಿಯ ಮೇಲೆ ನಗೆಯಾಡಿಸುತ್ತಾರೆ.

"ದೇವೆರೆಗ್ ಕಪ್ಪಕಾಣಿಕೆ ದಾಯೆ
ಗಪ್ಪಾ
ಸೇವೆಗೊಲಿಯರೆ ಆರ್ ಮಂತ್ರಿಯ
ತ್ತಪ್ಪಾ"

"ದೇವೆರೆಂದ್‌ಡ ಧರ್ಮ ನ್ಯಾಯ ಅವು ಸತ್ಯ'—ಇದು ಕವಿಯ ವಿಶ್ವಾಸ— ನಂಬಿಕೆ. "ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು' ಎಂದು ಪುನ್ನರಡನೆಯ ಶತಮಾನದಲ್ಲೇ ರಾಘವಾಂಕ ಹಾಡಿದ್ದಾನೆ. ನಿರ್ಗುಣ ಭಕ್ತಿ ಪಂಥದ ಅಭಿಪ್ರಾಯವಿದ್ದಿದ್ದರೂ ಇರಬಹುದು.

'ಸತ್ಯದ ಚಿತ್ರ' ಸತ್ಯದ ನಾಡು ತುಳುನಾಡಿನ ದುರವಸ್ಥೆಯನ್ನೇ ಹೆಚ್ಚಾಗಿ ಕಂಡು ಮರುಗುವ ಕವನ ಸಂಕಲನ, ಲೇಖಕರಿಗಾದ ಹೃದಯಾಘಾತವೇ ಕವಿತೆಯ ರೂಪದಲ್ಲಿ ಹೊರ ಬಂದಂತಿದೆ— ವಾಲ್ಮೀಕಿಗೆ ಶೋಕ ಶ್ಲೋಕ ರೂಪದಲ್ಲಿ ಬಂದಂತೆ. ವಿಧಾನ ಸಭಾಧ್ಯಕ್ಷ ಶ್ರೀ ವೈಕುಂಠ ಬಾಳಿಗರು ಇದಕ್ಕೆ ಮುನ್ನುಡಿ ಬರೆದಿದ್ದಾರೆ. ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯ ಕರ್ತರಾಗಿ ಇಂದು ನಿವೃತ್ತರಾದ ಶ್ರೀ ರೈಯವರ ಹೃದಯಕ್ಕೆ ಅಂಟಿದ ಬರೆ ಪ್ರತಿಕವಿತೆಗೆ ಮೊದಲು ನೀಡಿದ ಕನ್ನಡ ವಿವರಣೆಯಿಂದ ಮುಂದಟ್ಟಾಗುತ್ತದೆ. ಕವಿತೆಯನ್ನು ಹಾಡಲು ಅನುಕೂಲವಾದ ರಾಗ—ತಾಳಗಳನ್ನೂ ಇಲ್ಲಿ ನೀಡಿದ್ದಾರೆ, ಅಂತೂ ಪುಸ್ತಕ ಕಿರಿಯದು; ಆದರೆ, ತುಳುವರಿಗದು ಹಿರಿಯದು. ತುಳುನಾಡು ತುಂಡರಿದರೂ ಅದು ಮತ್ತೆ ಒಂದಾಗಿ ಕರ್ನಾಟಕದಲ್ಲಿ ಸೇರಬೇಕು, ಕರ್ನಾಟಕ ಭಾರತ ಗಣರಾಜ್ಯದ ರಕ್ಷಣೆಯ ವ್ಯವಸ್ಥೆಗಳಲ್ಲಿ ಗಣ್ಯಪಾತ್ರ ವಹಿಸಬೇಕು ಎಂಬ ಮಹಾ ಧ್ಯೇಯ ಕವಿಯದು; ಇದು ಸಿದ್ಧಿಸಲೂ ಬಹುದು, ಆದರೆ ಮುರಿದು ಹೋದ ಅಳಿಯಕಟ್ಟು ಮತ್ತೆ ಜೀವಂತವಾದೀತೆ ಎಂಬುದು ಅಲ್ಪನೆಗೂ ನಿಲುಕದು— ಕಾಲಗರ್ಭವನ್ನು ಬಗಿದು ನೋಡಿದವರಿಲ್ಲ ಎಂಬುದಿಷ್ಟೇ ಸಮಾಧಾನಕ್ಕೊಂದು ಸ್ಫೂರ್ತಿ.

—ಗೋರಾ.

ಹನ್ನೊಂದನೇ ತರಗತಿ ಉದ್ಘಾಟನೆ

ಶಂಕರನಾರಾಯಣ ಬೋರ್ಡ್ ಹೈಸ್ಕೂಲಿನಲ್ಲಿ 11ನೇ ತರಗತಿಯ ಉದ್ಘಾಟನೆಯನ್ನು ಮಂತ್ರಿ ಶ್ರೀ ಆರ್. ಎಂ. ಪಾಟೀಲ್, ರವರು ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ.ಎಲ್.ಎ. ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಆರಂಭದಲ್ಲಿ ಶ್ರೀ ಜಿ. ನರಸಿಂಹ ಆಚಾರ್ಯರು ಪ್ರಾರ್ಥನೆಗೈದರು. ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಂ.ಎಂ. ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಪಿ. ಎಸ್ ಕಾರಂತರು ವರದಿ ವಾಚಿಸಿದರು. ಸಭಿಕರ ಪರವಾಗಿ ಶ್ರೀ ಕೆ. ರ್. ಶೆಟ್ಟಿ, ಎಂ. ಎಲ್. ಸಿ. ಅವರು ಮಾತನಾಡಿದರು. ಕೊನೆಯಲ್ಲಿ ಶ್ರೀ ಜಿ. ಎಸ್. ಆಚಾರ್ಯರು ವಂದನಾರ್ಪಣೆಗೈದರು.

ಉದ್ಘಾಟನಾ ಸಮಾರಂಭ

ಕಾರ್ಕಳ ಬೋರ್ಡ್ ಹಾಯರ್ ಸೆಕೆಂಡರಿ ಶಾಲೆಯ ಉದ್ಘಾಟನೆಯನ್ನು, ಕಳೆದ ತಾ. 4 ರಂದು ವಿಧಾನ ಸಭಾ ಸದಸ್ಯ ಶ್ರೀ ಎಸ್. ಧರ್ಮಸಾಮ್ರಾಜ್ಯರವರು ತಾ. ಬೋ. ಅಧ್ಯಕ್ಷ ಶ್ರೀ ಎಸ್. ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಆರಂಭದಲ್ಲಿ ಶ್ರೀ ಎಸ್. ಆರ್. ಆಚಾರ್ ರವರು ಸ್ವಾಗತಿಸಿದರು. ಉದ್ಘಾಟನಾ ನಂತರ ಶ್ರೀ ಬಿ. ಎಸ್. ಭಂಡಾರಿ, ಶ್ರೀ ಕೆ ವಿ.ಎನ್. ಉಪಾಧ್ಯಾಯ, ರೆ|| ಫಾ|| ಜೆ. ವಿ. ಕುಲಾಸೊ, ಮತ್ತು ಜ|| ಎಫ್. ಎ. ಶುಕೂರ್ ರವರು ಭಾಷಣ ಮಾಡಿದರು. ಶಾಲೆಯ ಅಧ್ಯಾಪಕ ಶ್ರೀ ಪಿ. ಜೆ. ಮೆನ್ನಲಿಯವರು ಮಾತನಾಡುತ್ತಾ ಸಂಸ್ಥೆಗೆ ನೆರವು ನೀಡಬೇಕೆಂದು ಕೇಳಿಕೊಂಡರು. ಕೊನೆಯಲ್ಲಿ ಶ್ರೀ ಯಂ. ರಾಮಭಟ್ಟರವರು ವಂದನಾರ್ಪಣೆಗೈದರು.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು........

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(¼ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಪ್ರಚಲಿತ ಪ್ರಸಂಗ

ವಿಯತ್ನಾಮದಲ್ಲಿ ಶಾಂತಿ ಸಾಧ್ಯವೆ?

ವಿಯತ್ನಾಮದಲ್ಲಿ ಶಾಂತಿ ಸ್ಥಾಪನೆಯಾಗಬೇಕು— ಈ ಸಾಧನೆಗೆ ಭಾರತವೂ ತನ್ನ ಪಾಲಿನ ಕರ್ತವ್ಯ ಪಾಲಿಸುವುದು— ಪ್ರಸಂಗ ಪರಿಶೀಲನೆಗೆ ಜಿನೀವಾ ಪರಿಷತ್ತು ಸೇರಬೇಕು— ಇದು ಪ್ರಧಾನಿ ಇಂದಿರೆಯ ಸಲಹೆ.

ಇದಕ್ಕಿದೆ ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರರ ಬೆಂಬಲ.

ಶಾಂತಿಯ ಇತರ ಮಾರ್ಗಗಳನ್ನು ಸ್ವಾಗತಿಸುವಂತೆಯೇ ಈ ಸಲಹೆಯನ್ನೂ ಅಮೆರಿಕೆಯು ಸ್ವಾಗತಿಸುತ್ತದೆ.

ಯುದ್ಧವು ನಡೆಯುತ್ತಿರುವಾಗ ಶಾಂತಿಯ ಮಾತುಕತೆ ಸಾಧ್ಯವಿಲ್ಲ- ಇದು ಉತ್ತರ ವಿಯತ್ನಾಮದ ಹೋ-ಚಿ-ಮಿನ್ಹರ ಗಂಡು ನುಡಿ.

ಅಮೆರಿಕೆಯು ವಿಯತ್ನಾಮದಿಂದ ಸಂಪೂರ್ಣ ಕಾಲು ಕೀಳದೆ ಸಂಧಾನದ ಮಾತೆತ್ತುವುದು ಇಲ್ಲ— ಇದು ಮಿನ್ಹರ ಬೆಂಗೋಲು ಕೆಂಪು ಚೀನಾದ ದೃಢ ನಿಲುವು.

ವಿಯತ್ನಾಮದಲ್ಲಿ ಶಾಂತಿ ನೆಲಸಬೇಕು. ಅಮೆರಿಕೆಯೂ ಶಾಂತಿಯ ಕೃತಿಗಳನ್ನು ಈಗಾಗಲೇ ಪ್ರಾರಂಭಿಸಿದೆ. ಅಲ್ಲಿನ ಹೋರಾಟ ನಿಲ್ಲುವ ವರೆಗೆ ಅಮೆರಿಕೆ ಕಾಯುತ್ತಿಲ್ಲ— ಇದು ಅಧ್ಯಕ್ಷ ಜಾನ್ಸನ್ನರ ಹೇಳಿಕೆ.

ದಕ್ಷಿಣ ವಿಯತ್ನಾಮದಲ್ಲಿ ಅಮೆರಿಕೆ ಏನು ಪ್ರಗತಿ ಸಾಧಿಸುತ್ತಿದೆ?

ಕೃಷ್ಯುತ್ಪನ್ನಗಳನ್ನು ಹೆಚ್ಚಿಸಲು, ಮೀನುಗಾರಿಕೆಯನ್ನು ಇಮ್ಮಡಿಸಲು, ಆರೋಗ್ಯ ಧಾಮ ಹಾಗೂ ಶಾಲಾಕೋಣೆಗಳನ್ನು ನಿರ್ಮಿಸಲು— ಮಿಲಿಟರಿ ಹೋರಾಟದಷ್ಟೇ ಪ್ರಮುಖವಾದ ಮತ್ತೊಂದು ಹೋರಾಟವನ್ನು ಮುಂದುವರಿಸಲು— ಶಿಕ್ಷಕರಿಗೆ ತರಬೇತಿ ನೀಡಲು ಮತ್ತು ಪಠ್ಯ ಪುಸ್ತಕಗಳನ್ನು ಹಂಚಲು ಸಹಾಯ ಮಾಡಿದೆ— ಇದೇ ಶಾಂತಿ ಕಾರ್ಯಗಳನ್ನು ಮುಂದೆಯೂ ಮುಂದುವರಿಸುವುದು.

ಹೋರಾಟದ ಪರಿಣಾಮವಾಗಿ ಅಮೆರಿಕೆಯು ಇತ್ತೀಚೆಗೆ ನಡೆಸಿದ ವಿಮಾನ ಧಾಳಿಗಳಿಂದ ಉತ್ತರದ ಅಪಾರ ತೈಲ ಸಂಗ್ರಹ ನಷ್ಟವಾಗಿದೆ— ಧಾಳಿ ಯಶಸ್ವಿಯಾಗಿದೆ.

ಅಮೆರಿಕನ್ ವೈಮಾನಿಕರು ಪೌರರಿಗೆ ಹಾನಿಯಾಗದಂತೆ ತಮ್ಮ ಕರ್ತವ್ಯ ನೆರವೇರಿಸುತ್ತಿದ್ದಾರೆ. ಆದರೆ, ಕಮ್ಯುನಿಸ್ಟರ ಕೃತಿ ವಿಧ್ವಂಸಕ.

ವಿಯತ್ನಾಮದಲ್ಲಿ ತನ್ನ ಸೈನಿಕ ಶಕ್ತಿಯನ್ನು ಹೆಚ್ಚಿಸುವುದೇ ಅಮೆರಿಕೆಯ ಗುರಿ— ಅದರ ವಿಯತ್ನಾಮದಿಂದ ಕಾಲ್ತೆಗೆಯುವ ಮಾತು ಬಹು ದೂರವುಳಿಯಿತು.

ರಶ್ಯವನ್ನೊಳಗೊಂಡು ಪೂರ್ವ ಯುರೋಪಿನ ಕಮ್ಯುನಿಸ್ಟ ರಾಷ್ಟ್ರಗಳು ಬುಖಾರೆಸ್ಟಿನಲ್ಲಿ ಸಭೆ ಸೇರಿದಾಗ, ವಿಯತ್ನಾಮದಲ್ಲಿ ಅಮೆರಿಕೆಯ ಆಕ್ರಮಣದಿಂದ ಯುದ್ಧ ವಿಸ್ತಾರದ ಭಯ ಪ್ರದರ್ಶಿಸಿದುವು.

ಹನೋಯಿ ಮತ್ತು ಹೈಫಾಂಗಗಳ ಮೇಲೆ ನಡೆದ ಅಮೆರಿಕನ್ ಬಾಂಬು ಧಾಳಿಯಿಂದ ಅಪಾಯದ ಭೀತಿ ಇನ್ನೂ ಹೆಚ್ಚಿದೆ; ವಿಯತ್ನಾಮವು ಅಂತಾರಾಷ್ಟ್ರೀಯ ಪರಿಸ್ಥಿತಿಯನ್ನು ಗಂಭೀರವಾಗಿ ಹದಗೆಡಿಸುತ್ತ ಪ್ರಪಂಚದ ಶಾಂತಿ—ಭದ್ರತೆಗಳಿಗೆ ಇನ್ನೂ ಅಪಾಯವನ್ನು ತಂದೊಡ್ಡುತ್ತದೆ—

ತಮ್ಮ ಸ್ವಾತಂತ್ರ್ಯ ರಕ್ಷಣೆಗೆ, ಏಕತೆಗೆ, ಪ್ರಾದೇಶಿಕ ಸಮಗ್ರತೆಗೆ ಹೋರಾಡುವ (ಉತ್ತರ) ವಿಯತ್ನಾಮಕ್ಕೆ ಕಮ್ಯುನಿಸ್ಟ ರಾಷ್ಟ್ರಗಳ ಸಂಪೂರ್ಣ ಬೆಂಬಲವಿದೆ—

ಅಮೆರಿಕೆಯ ಕಾರ್ಯಾಚರಣೆ ಹೆಚ್ಚಾದಂತೆ ಶಾಂತಿಗೆ ಭಂಗವಾಗುವುದು, ಮಾನವತೆಗೆ ದ್ರೋಹವಾಗುವುದು— ಅಪರಾಧ ಮಿತಿಮೀರುವುದು, ಪರಿಸ್ಥಿತಿ ತೀರ ಗಂಭೀರವಾಗುವುದು —

ಇಲ್ಲಿಗೇ ಮುಗಿಯಲಿಲ್ಲ, ಅಮೆರಿಕೆಯ ಕಾರುಭಾರು: ಅದು ಇಂಡೋಚೀನಾ ಪರ್ಯಾಯ ದ್ವೀಪದಲ್ಲಿನ ದೇಶಗಳನ್ನು ದಾಸ್ಯ ಶೃಂಖಲೆಯಿಂದ ಬಂಧಿಸಬಯಸುತ್ತದೆ; ಲಾವೋಸಿನ ಆಂತರಿಕ ವ್ಯವಹಾರಗಳಲ್ಲಿ ತನ್ನ ಕೈವಾಡವನ್ನು ಹೆಚ್ಚಿಸುತ್ತದೆ. ಈ ಪ್ರದೇಶವನ್ನು ವಿಮಾನ ಧಾಳಿಗಳಿಗೆ ಗುರಿ ಮಾಡುತ್ತದೆ, ಸ್ವತಂತ್ರ ಕಂಬೋಡಿಯಾದ ವಿರುದ್ಧ ಕಾರ್ಯ ಮುಂದುವರಿಸುತ್ತದೆ.

ಇವೆಲ್ಲದರ ಪರಿಣಾಮ?

ವಿಯತ್ನಾಮ ಸಮರದಲ್ಲಿ ಅದರ ಮಿತ್ರರೂ ಅನಿವಾರ್ಯವಾಗಿ ಪಾಲುಗೊಳ್ಳುವುದು!

೧೯೫೪ರ ಜಿನೀವಾ ಒಡಂಬಡಿಕೆಯೇ ವಿಯತ್ನಾಮ ಸಮಸ್ಯೆಗೆ ಪರಿಹಾರ. ಅದಕ್ಕೆ ಹೊಂದಿಕೊಂಡಿರುವ ವಿಯತ್ನಾಮದ ಜನವಾದೀ ಗಣರಾಜ್ಯದ ನಾಲ್ಕಂಶಗಳ ಕಾರ್ಯಕ್ರಮವನ್ನೂ ದಕ್ಷಿಣ ವಿಯತ್ನಾಮ ರಾಷ್ಟ್ರೀಯ ವಿಮೋಚನಾ ರಂಗದ ಐದಂಶದ ಕಾರ್ಯಕ್ರಮವನ್ನೂ ಕಮ್ಯುನಿಸ್ಟ ರಾಷ್ಟ್ರಗಳು ಬೆಂಬಲಿಸುತ್ತವೆ.

ಅಮೆರಿಕೆ ಮತ್ತು ಕಮ್ಯುನಿಸ್ಟ ರಾಷ್ಟ್ರಗಳು ಪರಸ್ಪರ ದೋಷಾರೋಪಣೆಗಳನ್ನು ಹೊರಿಸುತ್ತ ಕೂರುವುದರಿಂದ ಸಮಸ್ಯೆಗೆ ಪರಿಹಾರ ಮಾರ್ಗ ತೋರುವುದಿಲ್ಲ. ಪ್ರಯತ್ನಶೀಲನಾದರೆ ಮಾತ್ರ ಗುರಿ ಸೇರಬಹುದು.

ಜಿನೀವ ಪರಿಷತ್ತನ್ನು ಮತ್ತೆ ಕರೆಯುವುದು— ವಿಯತ್ನಾಮದ ಎರಡೂ ಪಕ್ಷಗಳನ್ನು ದುಂಡು ಮೇಜಿನ ಬಳಿ ಒಟ್ಟುಗೂಡಿಸುವುದು— ಇಂದಿರಾ ಗಾಂಧಿಯ ಈ ಸಲಹೆ ಸರ್ವತ್ರ ಮಾನ್ಯವಾಗಿದೆ; ಆಗುತ್ತದೆ.

ಆದರೆ ಒಂದು ಮಾತು — ಒಂದೆಡೆ ಮಾನವ ರಕ್ತ ಹರಿಯುತ್ತಿರುವಾಗ ಇನ್ನೊಂದೆಡೆ ಅದನ್ನು ತಡೆಗಟ್ಟುವ ಬಗ್ಗೆ ಮಾತುಕತೆ ನಡೆಯುವುದು ಸಾಧ್ಯವಿಲ್ಲ.

ಉಭಯ ಪಕ್ಷಗಳೂ ಮೊತ್ತಮೊದಲು ಪರಿಣಾಮಕಾರಿ ಸಮರ ವಿರಾಮವನ್ನು ಸಾಧಿಸಬೇಕು. ಕೋಸಿಗಿನ್ನರನ್ನು ಭೆಟ್ಟಿಯಾದ ವಿಲ್ಸನ್, ಜಾನ್ಸನ್ನರನ್ನು ಇದಕ್ಕೆ ಒಪ್ಪಿಸಿಯಾರೆ? ಕೆಂಪು ಚೀನ ನ್ಯಾಯವಾದ ಸಮರವಿರಾಮವನ್ನು ಒಪ್ಪೀತೆ?

ಬೆಳ್ತಂಗಡಿ ಮುನ್ಸೀಫ್ ಕೋರ್ಟಿನಲ್ಲಿ

O. S. 14/66

ಗುಣಪಾಲ ಕಂಬಳಿ —ವಾದಿ.

ಮತ್ತು

ತಂಗಪ್ಪ ಸಹಾ —ಪ್ರತಿವಾದಿರು.

ಕಾರ್ಕಳ ತಾಲ್ಲೂಕು ನೂರಾಲಬೆಟ್ಟು ಗ್ರಾಮದ ಸಿಮಿರ್‌ತೋಟ್ಟು ಎಂಬಲ್ಲಿರುವ ಭುಜಬಲಿ ಕಂಬಳಿಯವರ ವಿಧವೆ ಅನಂತಮತಿ ಮತ್ತು ಇವರ ಮಗ ಜಿನರಾಜಕೊಡಾ ಇಬ್ಬರಿಗೆ ಕೋರ್ಟ್ ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲಿನ ವ್ಯಾಜ್ಯವು ತಾ. 28—7—66ಕ್ಕೆ ನಿಮ್ಮ ಇಬ್ಬರ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಆ ದಿವಸ ಬೆಳಗ್ಗೆ 11ಗಂಟೆಗೆ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷ ಎಂತ ಮಾಡಿ ದಾವೆಯನ್ನು ಮುಂದುವರಿಸಲಾದೀತು.

N. J. KADAMBA

Advocate for Plaintiff.

ಬೆಳ್ತಂಗಡಿ, 8—7—66.

ಅಮೀರ್ ಖುಸ್ರೋ ಮತ್ತು ಸಿತಾರ ವಾದ್ಯ

(ಐದನೇ ಪುಟದಿಂದ)

ಇದು ಸೌಲಭ್ಯ ಪೂರ್ಣ ಸುಂದರ ವಾದ್ಯವಾಗಿಯೇ ಉಳಿದಿದೆ.

ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕ (ದಕ್ಷಿಣಾದಿ) ಸಂಗೀತದ ವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ತಂಜಾವೂರು ಅಥವಾ ಮೈಸೂರು ವೀಣೆಯ ಪ್ರಭಾವ ವಿಶೇಷ. ಈ ಭಾಗದಲ್ಲಿ ವೀಣೆಯ ಬಳಕೆ ಹೆಚ್ಚು. ಇಲ್ಲಿ ವೀಣೆ ತನ್ನ ಸಹಜ ಸೌಂದರ್ಯ, ಶಕ್ತಿಯನ್ನು ಉಳಿಸಿಕೊಂಡು ಬಂದಿದೆ. ವೀಣಾನಾದ ಮಾಧುರ್ಯ ಒಂದು ಬಗೆಯಲ್ಲಿ ರಸಿಕನ ಮೇಲೆ ಸಮ್ಮೋಹನಾಸ್ತ್ರ ಪ್ರಯೋಗವಿದ್ದಂತೆ.

ಉತ್ತರಾದಿ (ಹಿಂದೂಸ್ಥಾನಿ) ಸಂಗೀತ ಕ್ಷೇತ್ರದಲ್ಲಿ ದಕ್ಷಿಣದ ವೀಣೆಯಂತೆಯೇ ಇದ್ದು, ವೀಣೆಯ ಸ್ವರೂಪವನ್ನು ಪ್ರತಿಬಿಂಬಿಸುವ ಸಿತಾರ ವಾದ್ಯದ ಪ್ರಭಾವ ಬಳಕೆ ವಿಶೇಷ. ವೀಣೆ ಮತ್ತು ಸಿತಾರ ವಾದ್ಯಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿರಬಹುದಷ್ಟೆ. ಆದರೆ ಸಂಗೀತಕ್ಕೆ ಎರಡೂ ಅಗತ್ಯವಾದ ವಾದ್ಯಗಳು. ಸಿತಾರ ಉತ್ತರ ಭಾರತದಲ್ಲಿ ಜನಪ್ರಿಯತೆಗಳಿಸಿದ ವಾದ್ಯ. ವೀಣೆ ದಕ್ಷಿಣ ಭಾರತದಲ್ಲಿ ಜನಮನ ರಂಜಿಸಿದ ಸುಂದರ ವಾದ್ಯ. ಎರಡು ವಾದ್ಯಗಳೂ ಸಂಗೀತ ಸರಸ್ವತಿಯ ಎರಡು ಕಣ್ಣುಗಳಿದ್ದಂತೆ. ಸಿತಾರ್ ವಾದ್ಯ ಪಂಡಿತ ಅಮೀರ ಖುಸ್ರು ಭಾರತಕ್ಕೆ— ಭಾರತೀಯರಿಗೆ ಅರ್ಪಿಸಿದ ಅಮೂಲ್ಯ ಕೊಡುಗೆ.

ವಿಶ್ವ ವಿಖ್ಯಾತ ಸಿತಾರ್ ವಾದಕ ಪಂಡಿತ ರವಿಶಂಕರರ ಸಿತಾರ್ ವಾದ್ಯಕ್ಕೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ಒದಗಿಸಿ ಕೊಟ್ಟಿದ್ದಾರೆ. ಅಮೀರ್ ಖುಸ್ರು ಸಿತಾರ್ ವಾದ್ಯವನ್ನು ರೂಪಿಸಿಕೊಟ್ಟು ಅಮರನಾದ. ರವಿಶಂಕರ್ ಸಿತಾರ ವಾದನದಲ್ಲಿ ಗಳಿಸಿರುವ ಪ್ರತಿಭೆ, ನಡೆಸಿರುವ ಸಾಧನೆ, ಸಲ್ಲಿಸಿರುವ ಸೇವೆ ಅವಿಸ್ಮರಣೀಯ.

ಸಿತಾರ್ ಇಂದು ಭಾರತದ ಜನಪ್ರಿಯ ವಾದ್ಯ. ವೀಣೆಯ ಪ್ರತಿರೂಪ. ಸೌಂದರ್ಯ—ಗಾಂಭೀರ್ಯ, ಮಾಧುರ್ಯಗಳನ್ನು ಪಡೆದ ದಿವ್ಯ ವಾದ್ಯ. ಇದು ಮೂಲತಃ ಅಮೀರ ಖುಸ್ರುವಿನ ಸಾಧನೆ ಸಂಸ್ಕಾರ, ಪ್ರತಿಭೆಗಳ ಫಲ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26—4—1966.



ಅದ್ಭುತ ಬಾಲಿಕೆ—ಸರೋಜ ಬಾಲಾ

(ಒಂಭತ್ತನೇ ಪುಟದಿಂದ)

ಳನ್ನು ಯಾರೂ ಗುರುತು ಹಚ್ಚಲಾರರು. ಜಟೆಯಂತಿರುವ ಕೂದಲ ಕಡೆಗೆ ಸರಿಯಾಗಿ ಗಮನಿಸಿದರೆ ಮಾತ್ರವೆ ತಿಳಿಯಬಹುದಾಗಿತ್ತು.

ಸರೋಜ ಬಾಲಾಳ ಈ ವೃತ್ತಾಂತವನ್ನು ತಿಳಿದಾಗ ಸಹಜವಾಗಿಯೆ ಜಿಜ್ಞಾಸೆಯು ತಲೆದೋರುವುದು. ಸರೋಜಳು ಗಿಡ್ಡವಾಗಿ ತೋರುವುದರಿಂದ ಆಕೆಯು ವಯಸ್ಸು ಒಂಭತ್ತೆಂದು ಹೇಳಲಾಗಿದೆಯೆ? (ಜನ್ಮತಿಥಿ ನವೆಂಬರ್ ೧, ೧೯೫೭) ಸರೋಜಳು ವಿಧಿವತ್ತಾಗಿ ಶಾಸ್ತ್ರಗಳನ್ನು ಅಭ್ಯಸಿಸಿರುವಳೆ? ಅಲ್ಲವಾದರೆ, ಅವಳಲ್ಲಿರುವ ವಿಲಕ್ಷಣ ಸ್ಮೃತಿಗೂ, ಪ್ರಖರ ಬುದ್ಧಿಗೂ ಪೂರ್ವ ಜನ್ಮದ ಸಂಬಂಧವನ್ನು ಕಲ್ಪಿಸಬಹುದೆ? ಮತ್ತವಳಲ್ಲಿ ವರ್ತಮಾನ ಹಾಗೂ ಪೂರ್ವ ಜನ್ಮದ ವ್ಯಕ್ತಿತ್ವಗಳು ಸಮಾವೇಶಗೊಂಡಿರುವುವೇ?

ಈ ಬಗೆಯ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಪಡೆಯುವ ಸಲುವಾಗಿ ನಾನು ಪ್ರವಚನ ಕಾಲದಲ್ಲಿ ಮತ್ತು ಇತರ ಸಮಯದಲ್ಲಿ ಕುಮಾರಿ ಸರೋಜ ಬಾಲಾಳ ನಿರೀಕ್ಷಣೆಯನ್ನು ಮಾಡಿದೆ. ಅವಳ ಅಂತರಂಗದ ಗೆಳತಿಯರೊಡನೆ ಚರ್ಚಿಸಿದೆ. ಕೊನೆಗೆ ಆಕೆಯ ತಂದೆ ಶ್ಯಾಮ-ಚರಣ ಶಾಸ್ತ್ರಿಗಳನ್ನೂ ಭೇಟಿಯಾದೆ.

ಈ ಸಮಯದಲ್ಲಿ ಸರೋಜಳು ಒಂಭತ್ತುವರೆ ವರ್ಷ ಪ್ರಾಯದವಳಾಗಿದ್ದಾಳೆ. ಅವಳ ಶಾರೀರಿಕ ವಿಕಾಸವು ಅವಳ ಪ್ರಾಯಕ್ಕೆ ಅನುಗುಣವಾಗಿದೆ. ಅವಳ ಮುಖದಲ್ಲಿ ಗಂಭೀರ ಭಾವವು ತೋರಿ ಬರುವುದು ನಿಜವಾಗಿದ್ದರೂ, ಅವಳ ಶರೀರವನ್ನು ನೋಡಿದಾಗ ಪ್ರಾಯವು ಅಷ್ಟೇ ಇರುವುದೆಂದು ತಿಳಿದು ಬರುತ್ತದೆ. ಗೆಳತಿಯರೊಂದಿಗೆ ನಲಿದಾಡುತ್ತಿರುವ ಸರೋಜಳನ್ನು ನೋಡಿದರೆ ಅವಳ ವಿಶಿಷ್ಟ ಪ್ರತಿಭೆಯನ್ನು ಗುರುತು ಹಚ್ಚಲು ಸಾಧ್ಯವಾಗದು. ಆಕೆಯೊಂದಿಗೆ ಆಡುತ್ತಿರುವ ಗೆಳತಿಯರಿಗೆ ಯಾವುದೇ ವಿಶೇಷ ಅನುಭವವಾಗಿರುವದಿಲ್ಲ. ಸಾಮಾನ್ಯ ಸ್ಥಿತಿಯಲ್ಲಿ ಅವಳ ವ್ಯವಹಾರಗಳೆಲ್ಲ ಅವಳ ವಯಸ್ಸಿನ ಹುಡುಗಿಯರಂತೆ ಇರುತ್ತವೆ. ಇತರಸಂದರ್ಭದಲ್ಲಿ ತಾನೊಬ್ಬ ಗೌರವಾನ್ವಿತೆಯೆಂಬ ಭಾವವನ್ನು ಅವಳು ತಾಳಿರುವುದಿಲ್ಲ.

ರಾಮೋತ್ಸವದ ಕಾರ್ಯಕರ್ತರೊಡನೆ ಕೇಳಿದಾಗ ಸರೋಜಳೊಂದಿಗೆ ಯಾವುದೇ ಗ್ರಂಥವು ಇರುವುದಿಲ್ಲವೆಂದು ತಿಳಿದು ಬಂತು. ನಿವಾಸಸ್ಥಾನಕ್ಕೆ ಹೋಗಿ ನೋಡಿದಾಗಲೂ ಹೀಗೆಯೆ ತಿಳಿದು ಬಂತು. ಸರೋಜಳು ಯಾರೊಡನೆಯೂ ವಿಷಯ ಚಿಂತನೆಯನ್ನು ಮಾಡುತ್ತಿರುವುದು ಕಂಡು ಬರಲಿಲ್ಲ. ಉತ್ಸವದ ಸಂದರ್ಭದಲ್ಲಿ ಭಾಗವಹಿಸುವ ಮೊದಲೇ ಸರೋಜಳಿಗೆ ನಿರ್ದಿಷ್ಟ ವಿಷಯವನ್ನು ಕೊಡಲಾಗುವುದಿಲ್ಲ. ಈ ವಿಷಯದಲ್ಲಿ ಪಂಡಿತ ಶ್ಯಾಮಚರಣ ಶಾಸ್ತ್ರಿಗಳನ್ನು ವಿಚಾರಿಸಿದಾಗ—ಸರೋಜಳಿಗೆ ಮೂರುವರೆ ವಯಸ್ಸಿನಲ್ಲಿ ವರ್ಣಮಾಲೆಯ ಅಭ್ಯಾಸವನ್ನು ಮಾಡಿಸಿದ್ದೆ. ಇದಲ್ಲದೆ ಇವಳು ಬೇರೆಯಾವ ವಿದ್ಯಾಲಯವನ್ನೂ ಪ್ರವೇಶಿಸಿಲ್ಲ. ರಾಮಚರಿತ ಮಾನಸ ಹಾಗೂ ಗೀತೆಯನ್ನು ಅವಳು ಮನೆಯಲ್ಲಿ ಓದುತ್ತಿದ್ದಾಳೆಂಬುದು ನಿಜ, ಆದರೆ ಇವಳು ನೀಡುವ ಶಾಸ್ತ್ರಗಳ ಉದಾಹರಣೆಗಳನ್ನು ನಾನು ಇದುವರೆಗೂ ಎಂದೂ ಕಂಡರಿಯೆನು ಎಂಬುದಾಗಿ ಹೇಳಿದರು.

ಮಾತುಕತೆಯಾಡುತ್ತಿದ್ದಂತೆ ನಾಲ್ಕು ವರ್ಷ ಹಿಂದೆ ಸರೋಜಳ ವಿಷಯದಲ್ಲಿ ಪ್ರಕಟಿಸಲಾದ ಸಮಾಚಾರವು ನನ್ನ ಸ್ಮರಣೆಗೆ ಬಂದಿತು. ಅದರ ಸಂಬಂಧವಾಗಿ ಕೇಳಿದಾಗ ಅದು ೬೧ರ ಅಂತ್ಯದಲ್ಲಿ ಅಥವಾ ೬೨ರ ಆರಂಭದಲ್ಲಿ ಸಂಭವಿಸಿದ ಘಟನೆಯೆಂದು ಶ್ರೀ ಶಾಸ್ತ್ರಿಯವರು ತಿಳಿಸಿದರು. ಕಾನ್‌ಪುರದಲ್ಲಿ ಏರ್ಪಡಿಸಲಾದ ಸಮಾರಂಭದಲ್ಲಿ ಹಿಂದಿನ ರಾಷ್ಟ್ರಪತಿ ದಿವಂಗತ ರಾಜೇಂದ್ರ ಪ್ರಸಾದರು ಆಗಮಿಸಿದ್ದರು. ಆಗ ಸರೋಜಳ ಪರಿಚಯವನ್ನು ಅವರಿಗೆ ಮಾಡಿಕೊಡಲಾಯಿತು. ಅಲ್ಲಿಯೆ ಉಪಸ್ಥಿತರಾಗಿದ್ದ ಕೆಲವು ಪಂಡಿತರು ಅಶುದ್ಧ ಉಚ್ಚಾರಣೆಯಿಂದ ಕೆಲವು ಶ್ಲೋಕಗಳನ್ನು ಪಠಿಸಿದರು. ಪರೀಕ್ಷಣ ರೂಪದಲ್ಲಿ ಪಠಿಸಲಾದ ಈ ಶ್ಲೋಕಗಳನ್ನು ಕುಮಾರಿ ಸರೋಜಳು ಶೀಘ್ರದಲ್ಲಿಯೆ ಉಚ್ಚಾರ ಶುದ್ಧಿಯಿಂದ ಪಠಿಸಿ, ಅವುಗಳ ವ್ಯಾಖ್ಯಾನವನ್ನು ನೀಡಿದಳು. ಆಗ ಆಕೆಯ ವಯಸ್ಸು ಹೆಚ್ಚೆಂದರೆ ಐದು ಆಗಿರಬಹುದು. ಇಷ್ಟು ಅಲ್ಪ ವಯಸ್ಸಿನಲ್ಲಿ ಇಂತಹ ವಿಷಯಗಳ ಅಧ್ಯಯನವು ಎಷ್ಟು ಮಾತ್ರ ಕ್ಕೂ ಸಂಭವವೆಂದು ತೋರಿ ಬರದು. ಇಂತಹ ಅನೇಕ ವಿಶಿಷ್ಟ ಘಟನೆಗಳನ್ನು ಸರೋಜಳ ವಿಷಯದಲ್ಲಿ ಹೇಳಬಹುದಾಗಿದೆ.

ಇದೊಂದು ಪರಾಮನೋವೈಜ್ಞಾನಿಕ ಶೋಧನೆಯ ಕ್ಷೇತ್ರವಾಗಿದೆ. ಪೂರ್ವ ಜನ್ಮದ ವಿಷಯದಲ್ಲಿ ನಂಬಿಕೆಯಿರಲಿ, ಇಲ್ಲದಿರಲಿ; ಆದರೆ ಈ ಬಾಲಿಕೆಯ ವೃತ್ತಾಂತವು ಶೋಧಕರಿಗೆ ಒಂದು ಸಾಧನವಾಗಿದೆ.

(ಕನ್ನಡಕ್ಕೆ ತಂದವರು:
ಶ್ರೀ ಕೆ. ಬಿ. ವಾಸುದೇವ ರಾವ್)

ವಿವೇಕವೇನೋ ಇದೆ ಆದರೆ?

ಹೇಳಿದಂತೆ ಕುಣಿಯುತ್ತಾರೆ...."

'ಯಾಕೆ? ಏನಾಯ್ತು?'

'ನನ್ನ ಮೇಲೆ ಅಧಿಕಾರ ನಿನ್ನದೇ ಆದ್ರೂ ನಾನೆಂದಂತೇನೇ ನೀನು ನುಡಿಯುತ್ತ. ಅಳಿಯ ಸಂತಾನದಲ್ಲಿ ನಮ್ಮ ಕ್ಕಳಿಗೆ ಅಧಿಕಾರವಿಲ್ವೆ? ದಸ್ತಕತ್ತಿನದು ಹಾಗೆ...?

"ಯಾಕೆ? ಇದೆಲ್ಲಾ"

'ಮತ್ತೆ ಏನನ್ನಬೇಕು? ನಿನ್ನ ಇಂದಿರಾ ಗಾಂಧಿಗೆ ಎಲ್ಲಾ ರಾಜ್ಯಗಳ ಗಡಿ ವಿವಾದಗಳು ಮೃತ ಪ್ರಶ್ನೆಗಳಾದರೂ ಮಹಾರಾಷ್ಟ್ರ—ಕರ್ನಾಟಕದ ಗಡಿ ಮಾತ್ರ ಜೀವಂತವಿದೆ."

"ಅಂದ್ರೆ?'

'ಅಂದ್ರೆ ಏನು? ಮರಾಠಿಗರ ಕೈಗೊಂಬೆಯಾಗಿ ಆಕೆ ನುಡಿಯುತ್ತಾರೆ, ನಡೆಯುತ್ತಾರೆ. ಎಲ್ಲಾ ರಾಜ್ಯಗಳಿಗೆ ನ್ಯಾಯ ದೊರಕಿಸಿ ಕೊಡಬೇಕಾದ ಪದದಲ್ಲಿರುವ ಆಕೆ ಹೀಗೆ ಒಂದು ರಾಜ್ಯದ ಬೆನ್ನು ಚಪ್ಪರಿಸುವುದು ಯಾವ ನ್ಯಾಯ?"

"ಅದೂ ಹೌದೂನ್ನಿ....'

"ಮತ್ತೆ ಕೇಳು. ಉಳಿದ ರಾಜ್ಯಗಳ ಗಡಿ ತಂಟೆ ಎತ್ತುವುದರಿಂದ ಹೊಸ ಸಮಸ್ಯೆಗಳು ಹುಟ್ಟುತ್ತವಂತೆ...."

'ಸರೀನ್ನಿ. ಸಂಜೀವ ರೆಡ್ಡಿಯವರು ಬೆಂಗಳೂರಲ್ಲಿ ಅಂದಿದ್ರಲ್ಲಾ—ಆಂಧ್ರ—ಕರ್ನಾಟಕ ಗಡಿ ಪ್ರಶ್ನೆ ಎತ್ತಿದರೆ ಆಂಧ್ರಕ್ಕೆ ಚಿನ್ನದ ಗಣಿ ಸಿಗುತ್ತೆ, ಬಳ್ಳಾರಿ ಸಿಗುತ್ತೆ...'

'ಅದೇ ಅಂದೆನಲ್ಲಾ....ಎಲ್ಲರೂ ನಮ್ಮನ್ನು ಬೆದರಿಸುವವರೇ...."

'ಆದ್ರೆ ಅಷ್ಟು ಸುಲಭದಲ್ಲಿ ಬೆದರೋಕೆ ನಾವೇನು ವಿವೇಕ ಶೂನ್ಯರೆ?'

"ಹಾಗೇನೂ ಇಲ್ಲ. ಈ ಬಂದ ತೊಂದರೆ ಅಂದ್ರೆ ನನ್ನ ನಿನ್ನದ್ದು..."

"ಏನು? ನನಗೆ ವಿವೇಕವಿದೆ....'

"ಮತ್ತೆ ನನಗೆ?"

"ಹ್ಞಾಂ, ನಿನಗೂ ಇದೇನ್ನು..."

'ಅದ್ಯಾಕೆ ಇದೇನ್ನು? ಇದೇನ್ನಿ...."

'ಆಯ್ತಪ್ಪ, ಇದೆ...."

'ಸರಿ...'

"ಆದ್ರೆ ನನ್ನ ವಿವೇಕವನ್ನು ಅರ್ಥ ಮಾಡಿಕೊಳ್ಳೋ ವಿವೇಕ ನಿನಗಿಲ್ಲ...."

"ಚನ್ನಾ....ಏನಂದ್ರಿ ...'

'ಅನ್ನೋದೇನೆ? ಹ್ಹ ಹ್ಹ...."

'ಸಾಕೂಂದ್ರೆ....ಹೊರಡಿ ಇನ್ನಾದ್ರೂ ನೀವು ವಕೀಲರಾಗಬೇಕಿತ್ತು; ನಿಮ್ಮ ಹತ್ರ ವಾದ ಮಾಡಿ ಗೆಲ್ಲೋಕೆ ಸಾಧ್ಯವಿಲ್ಲ...."

'ಅಂತೂ ಇಂದು ಸೋಮವಾರವಲ್ಲ ತಾನೆ?'

'ಬನ್ನಿ ಹಾಗಾದ್ರೆ...'

"ಹ್ಞಾಂ..."

—ಗೋರಾ.

XI ತರಗತಿಯ ಉದ್ಘಾಟನೆ

ಹೆಬ್ರಿ ಬೋರ್ಡ್ ಹೈಯರ್ ಸೆಕೆಂಡರಿ ಶಾಲೆಯಲ್ಲಿ XI ತರಗತಿಯ ಉದ್ಘಾಟನಾ ಸಮಾರಂಭವು ಶ್ರೀ ಯಸ್. ಧರ್ಮ ಸಾಮ್ರಾಜ್ಯ ಎಂ. ಎ. ಎ ಅವರಿಂದ ಶ್ರೀ ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಬೇಳಂಜೆ ವಿಠಲ ಹೆಗ್ಡೆಯವರು ಸ್ವಾಗತಿಸುತ್ತಾ ಸರಕಾರದ ಮಂಜೂರಾತಿ ದೊರಕಿಸಿಕೊಳ್ಳಲು ಸಹಕರಿಸಿದವರನ್ನು ಅಭಿನಂದಿಸಿದರು. ಮಾತ್ರವಲ್ಲದೇ ಹೆಬ್ರಿ ತಾಲೂಕು ಆಗುವಂತೆ ಶ್ರೀ ಧರ್ಮಸಾಮ್ರಾಜ್ಯರು ಪ್ರಯತ್ನಿಸಬೇಕೆಂದು ಕೇಳಿಕೊಂಡರು.

ಉದ್ಘಾಟನಾನಂತರಸಭಿಕರಲ್ಲಿ ಶ್ರೀ ಅಯ್ಯಂಗಾರ್ ಮತ್ತು ಎಚ್. ಆನಂದ ಹೆಗ್ಡೆಯವರು ಮಾತನಾಡುತ್ತಾ ಹನ್ನೊಂದನೇ ತರಗತಿಯ ಉದ್ಘಾಟನೆಯಿಂದಾಗಿ ಮಲೆನಾಡ ಹಳ್ಳಿಯ ಮಕ್ಕಳಿಗೆ ಆಗಿರುವ ಪ್ರಯೋಜನವನ್ನು ವಿವರಿಸಿದರು. ಶುಭಕೋರಿ ಬಂದ ಸಂದೇಶಗಳನ್ನು ಶ್ರೀ ಅಬ್ದುಲ್ ರಜಾಕ್‌ರವರು ಓದಿದರು. ಕೊನೆಯಲ್ಲಿ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ಎಸ್. ರತ್ನಾರವರು ವಂದನಾರ್ಪಣೆ ಗೈದರು.

'ಮಧುರ ಬಂಧನದ ಬಿಡುಗಡೆ'

ಮುಲ್ಕಿ: ಜು.—11 ಇಲ್ಲಿಯ ಜನಜೀವನ ಸಾಹಿತ್ಯ ಸದನದ ಎರಡನೆಯ ಸಾಹಿತ್ಯದರ್ಪಣವಾಗಿ ಶ್ರೀ ಮಿತ್ತೂರರ ಮೂರನೆಯ ಕೃತಿಯಾಗಿ "ಮಧುರ ಬಂಧನ" ಎಂಬ ಸಾಮಾಜಿಕ ಕಾದಂಬರಿಯು ತಾ॥ 11 ರಂದು ಬಿಡುಗಡೆ ಹೊಂದಿದೆ.

ಹೈಸ್ಕೂಲುಗಳಿಗೆ
ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ

ಮೆನೇಜರ್, ನವಯುಗ, ಉಡುಪಿ

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕೆಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಪಟ್ಟಿಗಾಗಿಯೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ
ರಿಜಿಸ್ಟರ್ಡ್ ಪಬ್ಲಿಷರ್ಸ್,
ಪಾಲುಕೋಟೆ, ಉಡುಪಿ

ಶಿಕ್ಷಣ ಕ್ಷೇತ್ರ

ಶಿಕ್ಷಣ ನೀಡುವ ಯಂತ್ರಗಳು

ಇವು ಯಶಸ್ವಿಯಾದರೆ ಮತ್ತೆ ಉಪಾಧ್ಯಾಯರೇ ಬೇಡ, ಯಂತ್ರಚಾಲಕರು ಮಾತ್ರ ಸಾಕು.

ಪ್ರಪಂಚದಲ್ಲಿ ಓದು ಕಲಿತವರ ಸಂಖ್ಯೆಯು ಹೆಚ್ಚಾಗುತ್ತಿದ್ದ ಹಾಗೆ ಶಾಲೆಗಳೂ ಕಲಿಸುವ ಉಪಾಧ್ಯಾಯರುಗಳ ಕೊರತೆಯೂ ಹೆಚ್ಚುತ್ತಿದೆ. ಓದು ಕಲಿಯಲು ಬೇಕಾದ ಕಾಲವನ್ನು ಮಿತಗೊಳಿಸಲು ನೂತನ ಯಂತ್ರದ ಅವಿಷ್ಕಾರ ಮಾಡುದೇ ಇದಕ್ಕೆ ಪರಿಹಾರ.

ಇನ್ನು ಮುಂದೆ ಜರ್ಮನ್ ಫೆಡರಲ್ ಪ್ರಜಾ ಸರಕಾರದಲ್ಲಿ ನಾಲ್ಕು ವರ್ಷದ ಮಕ್ಕಳಿಗೇ ಓದುಬರಹವನ್ನು ಕಲಿಸುತ್ತಾರೆ. ಇದು ಪ್ರೊ| ಡಾ. ವರ್ನೆಲ್ ಕಾರೆಲ್‌ರವರ ಕ್ರಾಂತಿಕಾರಕ ಯೋಜನೆ. ಅವರು ಕ್ರಮಬದ್ಧ ಶಿಕ್ಷಣ ಸಂಸ್ಥೆಯ ವಿಶ್ವವಿದ್ಯಾನಿಲಯದ ಪ್ರಥಮ ಡೈರೆಕ್ಟರ್. ಅವರು ಈ ಅಧುನಿಕ ಯುಗದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ವಿಷಯಗಳನ್ನು ಕಲಿಸಲು ಮತ್ತು ಶಿಕ್ಷಕರ ಅಭಾವವನ್ನು ಸುಧಾರಿಸಲು ಹೊಸ ಮಾರ್ಗವನ್ನು ಹುಡುಕುತ್ತಿದ್ದರು. ಬೆಳೆಯುತ್ತಿರುವ ಮಕ್ಕಳ ಬುದ್ಧಿವರ್ಧತೆಯು ಉಪಯೋಗವಾಗುತ್ತಿರಲಿಲ್ಲ. ಶಾಲೆಗಳಲ್ಲಿ ಓದನ್ನು ಕಲಿಯಲು ಕಾಲವು ವ್ಯರ್ಥವಾಗುತ್ತಿದ್ದಿತು. ಈ ರೀತಿಯಾದ ಮನೋಭಿಪ್ರಾಯದಿಂದ ಡಾ| ಕಾರೆಲ್‌ರವರು ಉಪಾಧ್ಯಾಯರುಗಳಿಗೇ ಆಶ್ಚರ್ಯವನ್ನುಂಟು ಮಾಡುವ ಮಾರ್ಗವನ್ನು ಕಂಡು ಹಿಡಿಯಲು ಕೇವಲ ೩೮ ವರ್ಷ ವಯಸ್ಸಿನ ಅವರು ತಮ್ಮ ತೀರ್ಮಾನವನ್ನು ತಾವು ಮೂರು ವರ್ಷಗಳ ಕಾಲ ಅಮೇರಿಕಾದಲ್ಲಿ ನಿಂತಾಗ ಮಾಡಿಕೊಂಡರು.

ಕಾರೆಲ್‌ರವರು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಅಧ್ಯಾಪಕರಾಗಿದ್ದಾಗ ಪ್ರೊ| ಫ್ರೆಡ್‌ಸ್ಕಿನ್‌ರವರಿಗೆ ಸಹಾಯಕರಾಗಿದ್ದರು. ಕಾರೆಲ್‌ರವರು ಅಲ್ಲಿನ ವಿದ್ಯಾಭ್ಯಾಸ ಪ್ರಗತಿಯ ಪ್ರಯೋಗಗಳ ಅನುಭವದಿಂದಲೂ ಅದರ ಉತ್ತಮ ಫಲಿತಾಂಶಗಳಿಂದಲೂ ತಾವು ಜರ್ಮನಿಗೆ ಹಿಂದಿರುಗಿದ ಮೇಲೆ ಅವರನ್ನು ಕ್ರಮಬದ್ಧ ಶಿಕ್ಷಣದ ಪ್ರಥಮ ವಿಶ್ವವಿದ್ಯಾನಿಲಯ ಸಂಸ್ಥೆಯ ಡೈರೆಕ್ಟರ್ ಆಗಿ ನಿಯಮಿಸಿದ ಮೇಲೆ ಈಸ್ಸೆನ್‌ನಲ್ಲಿಯ ಜಸ್ಟಸ್ ಲೀಬಿಗ್ ವಿಶ್ವವಿದ್ಯಾನಿಲಯದಲ್ಲಿ ಅದನ್ನು ಮುಂದುವರಿಸಲು ಸಹಕಾರಿಯಾಯಿತು. ಅಮೇರಿಕಾದಲ್ಲಿ ಸಾಮಾನ್ಯ ಪದ್ಧತಿಯಾಗಿ ಯೂರೋಪಿನಲ್ಲಿ ಕ್ರಾಂತಿಕಾರಕ ಪದ್ಧತಿಯಾಗಿದ್ದ ಇದು ಜರ್ಮನಿಯಲ್ಲಿನ ಗ್ಲೀಸ್ಸೆನ್‌ನಲ್ಲಿ ಪ್ರಯೋಗ ಯಂತ್ರವಾಯಿತು. ಶಾಲೆಗೆ ಹೋಗದ ಮಕ್ಕಳಿಗೆ ಓದುಬರಹವನ್ನು ಕಲಿಸುವುದಕ್ಕೆ ಪ್ರಯೋಗವಾಯಿತು. ಆ ಯಂತ್ರವು ಸಾಮಾನ್ಯವಾದ ಟೈಪ್‌ರೈಟರ್‌ಗೇನೂ ದೊಡ್ಡದಾಗಿಲ್ಲ. ಕುಶಲ ಯಂತ್ರವನ್ನು ಸಾಮಾನ್ಯ ಶ್ರೀಮಂತನೂ ಕೊಳ್ಳಬಹುದು. ಅದರ ಬೆಲೆಯು ೨,೦೦೦ ಡಿ. ಎಂ. (೫೦೦ ಡಾಲರುಗಳು) ಆಗುತ್ತದೆ. ಈ ಯಂತ್ರವು ಫಲಕಾರಿಯೆಂದೂ ಉತ್ತಮ ರೀತಿಯ ಉಪಯೋಗೀ ವಸ್ತುವೆಂದೂ ತಿಳಿದು ಬಂದಲ್ಲಿ ಜರ್ಮನಿಯ ಶಿಶುವಿಹಾರಗಳಲ್ಲಿ ಇದನ್ನು ಉಪಯೋಗಿಸಲಾಗುವುದು. ಕಿವಿಗೆ ಹಾಕಿಕೊಳ್ಳುವ ಫೋನಿನ ಸಹಾಯದಿಂದಲೂ ಚಿತ್ರಗಳಿಂದಲೂ ಅತೀವ ಜಾಗ್ರತೆಯಿಂದಲೂ ಕುಶಲತೆಯಿಂದಲೂ ಕೊಡುವ ವಿವರಣೆಗಳಿಂದಲೂ ಅಕ್ಷರ ಪಟಗಳಿಂದಲೂ ಕಾಗದ ಸುರುಳಿಯ ಮೇಲೆ ಒತ್ತುವ ಗುಂಡಿಗಳ ಸಹಾಯದಿಂದ ಮಕ್ಕಳಿಗೆ ಕಲಿಸಬಹುದು. ಈ ನವೀನ ಪದ್ಧತಿಯಿಂದ ನಾಲ್ಕು ವರ್ಷದ ಮಕ್ಕಳೂ ಆಡುತ್ತಾ ಆಡುತ್ತಾ ಅತಿ ಹೆಚ್ಚಾಗಿ ಓದುಬರಹವನ್ನು ಕಲಿಯಬಹುದು.

ಪ್ರೊ. ಕಾರೆಲ್‌ರವರ ಅಭಿಪ್ರಾಯದಂತೆ ಓದುವುದನ್ನು ಕಲಿಸುವ ಆ ಯಂತ್ರವು ಪ್ರಾರಂಭ ಕಾರ್ಯವಾಗಿದೆ. ಅನೇಕ ಹಳೆಯ ಕಂದಾಚಾರ ನಂಬಿಕೆಯುಳ್ಳ ಉಪಾಧ್ಯಾಯರುಗಳು ಈ ಯಂತ್ರದ ಉಪಯೋಗವನ್ನು ಒಪ್ಪುತ್ತಿರಲಿಲ್ಲವಾದರೂ ಆಧುನಿಕ ಯುಗದ ಮುನ್ನಡೆಯನ್ನು ಅನುಸರಿಸಿ ಹೊಸ ರೀತಿಯ ಪದ್ಧತಿಗಳನ್ನು ಉಪಯೋಗಿಸಬೇಕಾದ ಅಗತ್ಯವು ಬಂದೇ ಬರುತ್ತದೆ. ಶಾಲೆಗಳಿಗೆ ಹೋಗುತ್ತಿದ್ದ ಹಾಗೆಯೇ ಮಕ್ಕಳು ಓದುವುದನ್ನು ಕಲಿತರೆ ಅಂತಹವರು ಜಾಗ್ರತೆಯುಳ್ಳವರಾಗಿಯೂ, ಉತ್ತಮ ಕಾರ್ಯ ನಿರ್ವಾಹಕರಾಗಿಯೂ ಗ್ರಹಣಶಕ್ತಿಯುಳ್ಳವರಾಗಿಯೂ ಆಗುತ್ತಾರೆ. ಕಂಪ್ಯೂಟರುಗಳ ಸಹಾಯದಿಂದ ಶಿಕ್ಷಣವನ್ನು ಅದರ ರೀತಿಯನ್ನು ನಿಯಮಿತಗೊಳಿಸಿ ಶಿಕ್ಷಣವನ್ನು ಕ್ರಮಕ್ರಮವಾಗಿ ಕಾರ್ಯರೂಪಕ್ಕೆ ತರಬೇಕು. ಉಪಾಧ್ಯಾಯರು ವಿಷಯಗಳನ್ನೂ ಮುಖ್ಯ ಅಂಶಗಳನ್ನೂ ಚರ್ಚೆಗಳಿಂದ ವಿದ್ಯಾರ್ಥಿಗಳಿಗೆ ಉಪಯೋಗವಾಗುವ ರೀತಿಯಲ್ಲಿ ನಿರ್ಧರಿಸುತ್ತಾರೆ. ಕೆಲವರು ವಿದ್ಯಾರ್ಥಿಗಳ ಬುದ್ಧಿ ವಿಕಾಸವಾಗುವ ರೀತಿಯಲ್ಲಿ ವೈಯುಕ್ತಿಕ ಅಭಿವೃದ್ಧಿಗೆ ಇತರರಿಗಿಂತಲೂ ಹೆಚ್ಚು ಮುಂದುವರಿಯಲೂ ಅವಕಾಶನೀಡುತ್ತಾರೆ. ಈ ಕಾರ್ಯವನ್ನು ಯಂತ್ರವೂ ಪೂರ್ಣವಾಗಿ ಸಾಧಿಸಿದರೆ ಇದೊಂದು ವಿದ್ಯಾ ವಿಭಾಗದ ನೂತನ ಸಾಧನೆ.

ರೂ. 1ಕ್ಕೆ ರೂ. 1,10,000 ಗೆಲ್ಲಿರಿ

ಇದೀ ಭಾರತದಲ್ಲಿಯೇ ಅತಿ ಹೆಚ್ಚು 'ಬಾಲಾಜಿ' ಟಿಕೆಟುಗಳನ್ನು ಮಾರಾಟಮಾಡಿ (14ನೇ ರ್‍ಯಾಫಲ್‌ನಲ್ಲಿ) ಮೈಸೂರು ರಾಜ್ಯದಲ್ಲಿ ಹತ್ತಾರು ಜನರಿಗೆ ಬಹುಮಾನ ತರಿಸಿ ಕೊಟ್ಟಿರುವ ನಿಮ್ಮ ಅದೃಷ್ಟ ಹಂಚಿಕೆದಾರರಿಂದ ನಿಸ್ಸಂದಲೇ ಟಿಕೆಟುಗಳನ್ನು ಪಡೆಯಿರಿ.

ಈಗ ಮಾರಾಟಕ್ಕಿವೆ	ಟಿಕೆಟ್ 1ಕ್ಕೆ ಬೆಲೆ	ಪ್ರಥಮ ಬಹುಮಾನ	ಕ್ಲೋಸಿಂಗ್	ಡ್ರಾಯಿಂಗ್
೧) ಬಾಲಾಜಿ ರ್‍ಯಾಫಲ್	ರೂ. 1.00	ರೂ. 1,10,000	7.9.66	2.10.66
೨) ಕೆ. ಸಿ. ಚಾರಿಟೀಸ್	ರೂ. 1.00	ರೂ. 1,16,000	18.8.66	28.8.66
೩) ಡಿ. ಬಿ. ಚಾರಿಟೀಸ್	ರೂ. 2.00	ರೂ. 40,000	12.8.66	2.9.66
೪) ರೆಡ್‌ಕ್ರಾಸ್ ಸ್ಕೀಮ್	ರೂ. 1.00	30% of Colcicoton	12.8.66	4.9.66

ಅಂಚೆ ಮೂಲಕ ಟಿಕೆಟ್ ಬಯಸುವವರು ಮನಿಯಾರ್ಡರು ಅಥವಾ ಪೋಸ್ಟಲ್ ಆರ್ಡರು ಮೂಲಕ ಹಣ ಕಳುಹಿಸಿರಿ. ಮೇಲ್ಕಾಣಿಸಿದ ಎಲ್ಲಾ ಟಿಕೆಟುಗಳನ್ನು ಒಮ್ಮೆಯೇ ತರಿಸಿಕೊಳ್ಳ ಬಯಸುವವರು ರೂ.5/ ನ್ನು ಕಳುಹಿಸಿದರೆ ಸಾಕು. (ಅಂಚೆವೆಚ್ಚ ಉಚಿತ) 5—6—66ರ ಡ್ರಾಯಿಂಗ್‌ನ ಬಾಲಾಜಿ ಪೂರ್ತಿ ಬಹುಮಾನದ ಪಟ್ಟಿಗಾಗಿ ಬರೆಯಿರಿ.

ವಿ. ಶಿವರಾಮ ಹೊಳ್ಳ,

ಅಧಿಕೃತ ಅದೃಷ್ಟವಂತ ಹಂಚಿಕೆದಾರರು ಮತ್ತು ಡ್ರಾ ಕಮಿಟಿಯ ಸದಸ್ಯರು
ರೂಂ ನಂ. ೩ ವೀನಸ್ ಹೋಟೆಲ್ S. C. ರಸ್ತೆ ಬೆಂಗಳೂರು-9.

ಎಲ್ಲೆಲ್ಲಿ ಏನೇನು?

ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ XIನೇ ತರಗತಿಯ ಉದ್ಘಾಟನೆ

ಇದೇ ತಾ. 16ರಂದು ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ XIನೇ ತರಗತಿಯನ್ನು ತೆರೆಯುವ ಸಮಾರಂಭವು ಪೀಪಲ್ಸ್ ಹೋಲ್‌ನಲ್ಲಿ ತಾಲೂಕ್ ಬೋರ್ಡ್ ಅಧ್ಯಕ್ಷ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ. ಅವರಿಂದ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಆರಂಭದಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಎಸ್. ಆಚಾರ್ಯರು ಸ್ವಾಗತ ಭಾಷಣ ಮಾಡುತ್ತ, ಶಾಲೆಯ ಪ್ರಗತಿಯನ್ನು ವಿವರಿಸಿದರು. ಶ್ರೀ ಮಧ್ವರಾಜರು ಉಡುಪಿಯಲ್ಲಿ ಸಿಗುವ ವಿದ್ಯಾ ಸವಲತ್ತು ದೇಶದ ಯಾವುದೇ ಭಾಗದಲ್ಲಿ ಸಿಗುತ್ತಿಲ್ಲವೆಂದೂ, ಸ್ಥಳೀಯ ಕಾಲೇಜುಗಳಲ್ಲಿ ಪ್ರವೇಶದ ಅಭಾವ ತೋರಿಬಂದುದರಿಂದ ಇಲ್ಲಿ XIನೇ ತರಗತಿಯನ್ನು ತೆರೆಯಲೇ ಬೇಕಾಯಿತೆಂದೂ ಹೇಳಿದರು. ಜಿಲ್ಲಾಧಿಕಾರಿಗಳು ಮಾತಾಡುತ್ತಾ ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಮೆಚ್ಚುಗೆ ಸೂಚಿಸಿ ಇಲ್ಲಿ ತಾಲೂಕ್ ಬೋರ್ಡ್‌ಗಳು ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿದರು. ಅಂತ್ಯದಲ್ಲಿ ಶ್ರೀ ಪಿ. ಜಯಣ್ಣ ಶೆಟ್ಟರು ವಂದನಾರ್ಪಣೆ ಗೈದರು.

ವಿಧಾನ ಪರಿಷತ್ತಿಗೆ ಶ್ರೀ ದೂಮಪ್ಪನವರ ಆಯ್ಕೆ

ದ. ಕ. ಜಿಲ್ಲಾ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳೂ ಬಿಲ್ಲವ ಸಮಾಜದ ಪ್ರಮುಖರಲ್ಲೊಬ್ಬರೂ ಆಗಿರುವ ಶ್ರೀ ಕೆ. ದೂಮಪ್ಪನವರನ್ನು ರಾಜ್ಯಪಾಲರು ಮೈಸೂರು ವಿಧಾನ ಪರಿಷತ್ತಿಗೆ ನೇಮಕ ಮಾಡಿರುವರು. ಶ್ರೀಯುತರು ಮೊದಲು ವಿಧಾನ ಸಭಾ ಮೆಂಬರರಾಗಿದ್ದರು.

ಶಾಲಾ ಸರಕಾರ

ಲೋಕ ಸೇವಾ ಹೈಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿ ಸರಕಾರಕ್ಕೆ ಚುನಾವಣೆ ನಡೆದು, ಈ ಕೆಳಗಿನವರು ಅಧಿಕಾರ ಸ್ವೀಕರಿಸಿದರು. ಪ್ರಧಾನಮಂತ್ರಿಯಾಗಿ ಕೆ. ಎಸ್. ಬಾಲಕೃಷ್ಣ, ಗೃಹಮಂತ್ರಿಯಾಗಿ ಕೆ. ಸುಲೋಚನ, ರಕ್ಷಣಾಮಂತ್ರಿಯಾಗಿ ಯಂ. ಸೋಮಪ್ಪ, ಸಾಂಸ್ಕೃತಿಕ ಮಂತ್ರಿಯಾಗಿ ಕೆ. ರವೀಂದ್ರ, ವಿದ್ಯಾಮಂತ್ರಿಯಾಗಿ ಎಸ್. ಶಿವಪ್ಪ ನಾಯಕ್, ಆರೋಗ್ಯ ಮಂತ್ರಿಯಾಗಿ ವಿ. ಈಶ್ವರ ಭಟ್ಟ, ಸಹಕಾರ ಮಂತ್ರಿಯಾಗಿ ಕೆ. ಗಣಪಯ್ಯ, ಕ್ರೀಡಾಮಂತ್ರಿಯಾಗಿ ವಿ. ನರಸಿಂಹ ಭಟ್ಟ, ವಿದ್ಯಾರ್ಥಿನಿಯರ ಪರವಾಗಿ ಭಾರತಿ, ಸ್ಪೀಕರ್ ಆಗಿ ಕೆ. ಸುಂದರ್ ಭಟ್, ವಿಪಕ್ಷ ಆಗಿ ಯಂ. ವಿ. ನಾರಾಯಣ ಇವರು ಮುಖ್ಯೋಪಾಧ್ಯಾಯರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ತಿದ್ದುಪಡಿ

ಕಳೆದ ಸಂಚಿಕೆಯ ಏಳನೇ ಪುಟದಲ್ಲಿ ಪ್ರಕಟವಾದ "ಪರೀಕ್ಷಾ ಪದ್ಧತಿಯ ನಿವಾರಣೆ ಸಾಧ್ಯವೇ?" ಎಂಬ ಲೇಖನ ಬರೆದವರ ಹೆಸರು ಪ್ರಮಾದವಶಾತ್ ಬಿಟ್ಟುಹೋಗಿದೆ. ಇದರ ಮೂಲ ಲೇಖಕರು: ಡಾ| ಆರ್. ಎನ್. ಸಾಕ್ಸೇನಾ (ಡೈರೆಕ್ಟರ್—ಸಮಾಜ ವಿಜ್ಞಾನ ಸಂಸ್ಥೆ, ಆಗ್ರಾ) ಅನುವಾದಕರು: "ವನವಿಹಾರಿ" ಬೆಂಗಳೂರು.

ಬಾರಕೂರು ವೀರಣ್ಣ ಶೆಟ್ಟರ ನಿಧನ

ಕುಂದಾಪುರ, ಸರಳ ಮತ್ತು ಪ್ರಾಮಾಣಿಕ ಜೀವನದಿಂದ ಜನಪ್ರಿಯರಾಗಿದ್ದ ಶ್ರೀ ಬಾರಕೂರು ವೀರಣ್ಣ ಶೆಟ್ಟರು ತಾ. 15—7—66ನೇ ರಾತ್ರೆ ತಮ್ಮ 76ನೇ ವಯಸ್ಸಿನಲ್ಲಿ ಕುಂದಾಪುರದಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರಿಗೆ ಸಿಹಿಮೂತ್ರ ಮತ್ತು ರಕ್ತದ ಒತ್ತಡವಿದ್ದರೂ ಅವರು ನಿಧನರಾಗುವ ವರೆಗೂ ಕ್ರಮವಾದ ಜೀವನನಿರ್ವಹಿಸುತ್ತಿದ್ದರು. ದಿವಂಗತರಿಗೆ ಹಿರಿಯನೇ ಪುತ್ರ, ಅವರೇ ಪುತ್ತೂರಿನಲ್ಲಿ ಪ್ರಿನ್ಸಿಪಾಲ್ ಮುಖ್ಯಸ್ಥರಾಗಿರುವ ಶ್ರೀ ವಿ. ಕೃಷ್ಣಪ್ಪ ಸೆಟ್ಟರು. ಮೃತರ ದುಃಖೀ ಕುಟುಂಬ ಮತ್ತು ಬಂಧು ಬಳಗದವರೊಂದಿಗೆ ನಾವೂ ಸಹಾನುಭೂತಿ ಪಡುತ್ತೇವೆ.

ಉಡ್ಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

O. S. 5/1966

ದಿ. ಜನರಲ್ ಯಿನ್ವೆಸ್ಟ್‌ಮೆಂಟ್ & ಕಮರ್ಶಿಯಲ್ ಕೋರ್ಪೋರೇಶನ್ ಲಿಮಿಟೆಡ್ ಉಡ್ಪಿ. ಯದ್ರ ಮೆನೇಜಿಂಗ್ ಡೈರೆಕ್ಟರ್ T. ರಮೇಶ U. ಪೈ.

— ವಾದಿ.

ಮತ್ತು

ಯಿಮ್ಮಾನುವೇಲ್ ಮಾಬೆನ್—ಯೆಲೀಜ್‌ಮಾಬೆನರ ಮಗ, Lorry owner Gorrygudde, Mangalore.

— 3ನೇ ಪ್ರತಿವಾದಿ.

ಸದ್ರಿ 3ನೇ ಪ್ರತಿವಾದಿಗೆ ತಿಳಿಯ ಪಡಿಸುವುದೇನೆಂದ್ರೆ:

1 ನೇ ಪ್ರತಿವಾದಿ ಸಯ್ಯದ್ ಬ್ಯಾರಿ ನೀವು ಕೂಡಾ 4 ಜನರು ವಾದಿಗೆ ಬರಕೊಟ್ಟ ತಾ. 10.4.1965ನೇ Hire purchase agreement ಪ್ರಕಾರ ಪ್ಲೈಂಟಿನಲ್ಲಿ ಕಾಣ್ಸಿದಂತೆ ಬಹಾ Hire amount, MYX 5411 ನೇ ಲೋರಿ ಡೆಲಿವರಿ ವಗೈರೆ ಕೇಳಿ ದಾಖ್ಲೆ ಮಾಡಿದ ದಾವೆಯು ತಾರೀಕು 30—7—66ಕ್ಕೆ ನಿಮ್ಮ ನೋಟೀಸು ಬಗ್ಗೆ ಯಿಟ್ಟಿದೆ. ಆ ಕುರಿತು ನೀವೇನಾದರೂ ಉಜಾರು ಮಾಡುವಂತಾದಿದ್ದರೆ ಆ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(By order of the Court)
Sri M. Damodhar Kamath.
Advocate for Plaintiff.
Udipi, 14—7—66

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಚೈತ್ರ ಮುರುಗ

(ಎರಡನೇ ಪುಟದಿಂದ)

— ೪೯ —

ಅಲವಂತಿಯಲ್ಲಿ ಕಾವೇರಿ ಗಂಭೀರವಾಗಿಯೇ ಹರಿಯುತ್ತಿದ್ದಾಳೆ. ಆದರೆ ಅಲವಂತಿ ಮಾತ್ರ ತನ್ನ ಜೀವನವನ್ನು ಕಳೆದುಕೊಂಡಂತಿದೆ. ಅದರ ಚೇತನಾಪಕ್ಷಿ ಹಾರಿಹೋಗಿದೆ. ಅದರ ಶೋಭೆ ಹಾಗೂ ರೂಪು ಮುಗಿದು ಹೋಗಿದೆ. ಹಳ್ಳಿ ಈಗ ನಿರ್ಲಕ್ಷ್ಯಕ್ಕೊಳಪಟ್ಟು ಹಾಳು ಸುರಿಯುತ್ತಿದೆ. ಜನವಸತಿ ಇರುವ ಸ್ಥಳಗಳಲ್ಲ ಅದರ ಅಗ್ರಹಾರದಲ್ಲಿ ಮೂರು ಶತಮಾನಗಳಿಂದಿದ್ದ ವಾತಾವರಣವಾಗಲೀ, ಐಕ್ಯಮತ್ಯವಾಗಲೀ ಇಂದು ಕಾಣಸಿಗುವದಿಲ್ಲ. ಪೆರಿಯ ಸ್ವಾಮಿಯ ಪತನದೊಂದಿಗೆ ಬಿಗಿಯಾಗಿದ್ದ ದಾರ ಒಮ್ಮೆಲೇ ತುಂಡಾಗಿ ಬಿಟ್ಟಿತು, ಕಡಿದ ದಾರ ಹೆಣೆದುಕೊಂಡು ಗಂಟಿನಂತಾಯಿತು. ಅಲ್ಲಿ ಇಲ್ಲಿ ಕೆಲವು ಬರಡು ಜೀವಗಳು ಮಾತ್ರ ಈಗ ಅಲ್ಲಿ ಇವೆ. ವ್ಯಥೆಯು ತುಂಬಿರುವ ಆ ಹಳ್ಳಿಗೆ ವೈಧವ್ಯ ಪ್ರಾಪ್ತಿಯಾಗಿರುವಂತೆ ಕಂಡು ಬರುತ್ತದೆ. ಅದರಲ್ಲೂ ನದಿಯ ದೃಶ್ಯವೀಗ ನಿರ್ಜನವಾಗಿದ್ದು ವ್ಯಾಕುಲ ಜನಕವಿದೆ. ಒಮ್ಮೆ ಉಲ್ಲಾಸಮಯವಾಗಿದ್ದ ಸ್ನಾನಘಟ್ಟದಲ್ಲಿಂದು ಕೇವಲ ಐದಾರು ಜನರು ಉದಾಸೀನದ ಜನರಿದ್ದಾರೆ. ಅವರಲ್ಲಿ ಮುಂಚಿನ ಉತ್ಸಾಹವಿಲ್ಲ. ನದಿದಡದಲ್ಲಿ ಕೇಳಿ ಬರುತ್ತಿದ್ದ ಸಂಭಾಷಣೆಗಳೊಂದೂ ಈಗ ಕೇಳಿ ಬರುವದಿಲ್ಲ.

"ಅಲವಂತಿಗೆ ಬಡಿದಿರುವುದು ಯಾವ ವಿಧಿಯ ಶಾಪವೋ! ಇರುವತ್ತು ವರ್ಷಗಳ ಹಿಂದೆ, ಆಗತಾನೇ ಮದುವೆಯಾಗಿ ಬಂದಿದ್ದಾಗ, ವೈಭವಭರಿತ ಪಟ್ಟಣದ ಹಾಗೆ ಅಲವಂತಿಯು ಚೇತನದಿಂದ ತುಂಬಿ ನಲಿಯುತ್ತಿತ್ತು, ಅದರ ಬಲ ಎಲ್ಲೆಲ್ಲಿಯೂ ಕಂಡು ಬರುತ್ತಿತ್ತು. ಅಗ್ರಹಾರದಲ್ಲಿ ಐವತ್ತು ಮನೆಗಳಿದ್ದುವು. ಪಳ್ಳಿಗಳೂ ಪಡ್ಯಾಚಿಗಳೂ ಬಹಳ ಮಂದಿ ಇದ್ದರು. ಅವರು ಜೇನುನೊಣಗಳ ಹಾಗೆ ಯಾವಾಗಲೂ ಕಾರ್ಯನಿರತರಾಗಿರುತ್ತಿದ್ದರು. ಪೆರಿಯ ಸ್ವಾಮಿ, ಎಳೆಯ ವಯಸ್ಸಿನವನಾಗಿದ್ದರೂ, ಕುಳಿತುಕೊಂಡು ರಾಜನಂತೆ ವ್ಯವಹಾರ ನಡೆಸುತ್ತಿದ್ದ. ಅವನಿಗೆದುರಾಗಿ ಮಾತಾಡಲು ಯಾರಿಗೂ ಧೈರ್ಯವಿರಲಿಲ್ಲ. ಮಧ್ಯರಾತ್ರಿಯ ವರೆಗೂ ಅವನ ಆಳುಕಾಳುಗಳು ಹಾಗೂ ಸ್ನೇಹಿತರು ಬೀದಿಗಳಲ್ಲಿ ಸೇರಿಕೊಂಡಿದ್ದು ಅದನ್ನು ವಿಶ್ರಾಂತಿಶೂನ್ಯ ಆಗಿಡುತ್ತಿದ್ದರು. ಅಲ್ಲಿ ವೈಭವ ಹಾಗೂ ಶಕ್ತಿ ಇತ್ತು. ಈಗ ಕತ್ತಲಾಯಿತೆಂದರೆ ನರಿ ನಾಯಿಗಳು ಕೂಗಾಡುತ್ತಿವೆ. ಗೂಡಿನಲ್ಲಿ ಹಳೇ ಹಕ್ಕಿಗಳನ್ನು ಹಾಕಿಡುವಂತೆ ನಮ್ಮನ್ನು ಬೆಳಕು ಬಾರದ ಮನೆಯೊಳಗೆ ಆಹಾರ ಕೊಡದೆ ಇಟ್ಟಿದ್ದಾರೆ." ಸಂಪ್ರದಾಯಸ್ಥೆ ಮುದುಕಿ ಹಲುಬಿದಳು.

ಅಲ್ಲಿ ಸುತ್ತಿದ್ದವರಿಗೆ ಗೋಳಾಟದ ಮಾತುಗಳನ್ನು ಮುಂದರಿಸಲಿಕ್ಕೆ ಇಷ್ಟವಿಲ್ಲದಿದ್ದುದರಿಂದ ಮುದುಕಿ ಮಾತನ್ನು ನಿಲ್ಲಿಸಬೇಕಾಯಿತು. ಆದರೂ ಆ ಗುಂಪಿನಲ್ಲಿ ಇದ್ದಾಕೆ ಒಬ್ಬಳು, ಆ ಅಲಾಪನೆಯು ಕೇವಲ ಉದಾಸೀನತೆಯಲ್ಲಿ ಮುಕ್ತಾಯವಾಗಬಾರದೆಂದು, ಕ್ಷೀಣ ಸ್ವರದಿಂದ, "ದೊಡ್ಡ ಮನೆತನ ನಿರ್ನಾಮವಾದರೆ ವಿಧಿ ಹೀಗಾಗುತ್ತದೆ. ಜೀವದಲ್ಲಿದ್ದಾಗ ಪೆರಿಯ ಸ್ವಾಮಿ ಹೇಗಿದ್ದರೂ ಕೂಡಾ—ಕ್ರೂರಿ ಹಾಗೂ ವ್ಯಭಿಚಾರಿಯಾಗಿದ್ದರೂ ಕೂಡಾ ಈ ಹಳ್ಳಿಯನ್ನು ಚಟುವಟಿಕೆಯಿಂದಿರುವಂತೆ ಹಾಗೂ ಚೈತನ್ಯಮಯವಾಗಿರುವಂತೆ ನಡೆಸಿಕೊಂಡು ಬಂದಿದ್ದ. ಅಕಟಾ! ಅವನು ಅವಮರ್ಯಾದೆ ಹಾಗೂ ಅಪಕೀರ್ತಿಯಿಂದಾಗಿ ಕಾರಾಗ್ರಹದಲ್ಲಿ ಸತ್ತನು. ಅಲವಂತಿಯ ಸುಂದರ ಗುರಾಣಿಯಲ್ಲಿ ಇದೊಂದು ಕಲೆ. ಅವನು ಆತ್ಮಹತ್ಯೆ ಮಾಡಿಕೊಂಡನೆಂದು ಜನರಾಡಿಕೊಳ್ಳುತ್ತಿದ್ದಾರೆ, ನಾನದನ್ನು ನಂಬಲಾರೆ. ಅವನು ನಾಚಿಕೆಯನ್ನು ಸಹಿಸಿಕೊಳ್ಳಲಾರದೆ, ಇತರ ಕೋಮಲ ಮನಸ್ಸಿನ ಹಾಗೂ ಪ್ರಖ್ಯಾತ ವ್ಯಕ್ತಿಗಳು ಮಾಡಿಕೊಳ್ಳುವಂತೆ, ಅವನೂ ಪ್ರಾಣ ಬಿಟ್ಟಿದ್ದಾನೆ.'

"ಅವನ ಮಡದಿ ಮಕ್ಕಳು ಇಂದು ನಿರ್ಧನರಾಗಿದ್ದು ದೈನಂದಿನ ಆಹಾರಕ್ಕಾಗಿ ಕಷ್ಟಪಡುತ್ತಿದ್ದಾರೆ.' ಆ ಹಳ್ಳಿಗೆ ಹೊಸಬಳು ಹಾಗೂ ಆ ಗುಂಪಿನಲ್ಲಿದ್ದವರ ಪೈಕಿ ಕಿರಿಯವಳು ಹೇಳಿದಳು.

"ಹೌದು ಅದು ವಿಷಾದನೀಯ ವಿಷಯವಿದೆ. ಸೀತೆಯು ಪೆರಿಯ ಸ್ವಾಮಿಯ ಭೂಮಿಯನ್ನು ಕ್ರಯಕ್ಕೆ ಪಡೆದುಕೊಂಡಾಗ ನಮಗೆಲ್ಲರಿಗೂ ಒಳ್ಳೆಯದನ್ನೇ ಮಾಡಿಯಾಳೆಂದು ನಾವೆಣಿಸಿಕೊಂಡಿದ್ದೆವು. ಈಗಿನ ದಿನಗಳಲ್ಲಿ ಹಳ್ಳಿಯಲ್ಲಿ ಯಾರಿರುತ್ತಾರೆ, ಅದೂ ಪಟ್ಟಣ ಜೀವನಕ್ಕೆ ಶಕ್ತರಾಗಿರುವವರು? ತನ್ನ ಮಗನ ವಿದ್ಯಾಭ್ಯಾಸದ ಸಲುವಾಗಿ ಆಕೆ ಮದ್ರಾಸಿಗೆ ಹೋಗಿದ್ದಾಳೆ." ಪೆರಿಯ ಸ್ವಾಮಿಯ ಮೇಲೆ ಸಹಾನುಭೂತಿಯಿಂದ ಮಾತಾಡಿದಾಕೆ ಹೇಳಿದಳು.

"ಅಲ್ಲ, ಅಲ್ಲ, ರಾಮುವನ್ನು ಹುಡುಕಿಕೊಂಡು' ಆಗ ತಾನೇ ಗುಂಪಿನಲ್ಲಿ ಸೇರಿಕೊಂಡ ಮಧ್ಯ ವಯಸ್ಸಿನಾಕೆ ಹೇಳಿದಳು, ಪ್ರಾಯ ಹೆಚ್ಚಾಗಿದ್ದಂತೆ ಆಕೆಯ ಮಾಂಸದ ಕಾಂತಿ ಹಾಗೂ ನಾಲಗೆಯ ಬಲ ಕುಂದಿ ಹೋಗಿತ್ತು. ಆದರೂ ಕುಹುಕ ಮಾತುಗಳನ್ನಾಡುವ ಅಭ್ಯಾಸ ಪೂರ್ಣವಾಗಿ ಹೋಗಿಲ್ಲ. "ಇತ್ತೀಚೆಗಿನ ಸುದ್ದಿ ನಿಮಗೆ ಗೊತ್ತಿಲ್ಲವೇನು? ನಿನ್ನೆ ರಾತ್ರಿ ಸೀತೆಯ ಸಹೋದರ ಇಲ್ಲಿಗೆ ಬಂದಿದ್ದ. ಅವನು ಈ ಸಲ ರಾಯಭಾರಿಯಾಗಿ ಬಂದಿದ್ದಾನೆ. ನಮಗೆಲ್ಲರಿಗೂ ಒಳ್ಳೆಯದನ್ನು ಮಾಡಲಿಕ್ಕಾಗಿ. ಪರ್ವತಗಳ ನಡುವೆ ಒಂದು ನವೀನ ಅಲವಂತಿಯನ್ನು ರಚಿಸಿದ್ದರೆಂದು ಕಾಣುತ್ತದೆ, ರಾಮು ಸರೋವರವನ್ನು ತೋಡುತ್ತಿದ್ದಾನೆ. ಸೀತೆಯ ಅಣ್ಣ ನಾಸು ವಿದ್ಯಾವಿಶಾರದನಿದ್ದಾನೆ. ಅವನೀಗ ಇಲ್ಲೇ ಇದ್ದಾನೆ. ರಾಮು ಈಗ ಮಹಪುರುಷನಾಗಿದ್ದಾನೆಂದೂ, ಅವರೆಲ್ಲರೂ ಈಗ ಒಂದು ದೊಡ್ಡ ಪರ್ವತದ ತಪ್ಪಲಲ್ಲಿ ಹೊಸ ಹಳ್ಳಿಯನ್ನು ಸೃಷ್ಟಿಸಿದ್ದಾರೆಂದೂ ಅವನು ಹೇಳುತ್ತಿದ್ದ." ಆಕೆ ತನ್ನ ಗುಪ್ತಪರಿಚಯವನ್ನು ತಿಳಿಸುವಂತೆ ಹೇಳಿದಳು.

'ಸೀತೆಯ ಸಹೋದರನು ಜಮೀನಿನ ಮೇಲ್ವಿಚಾರಣೆಗಾಗಿ ಇಲ್ಲಿಗೆ ಬಂದಿದ್ದಾನೇನು? ದಲ್ಲಾಳಿಗಳುಂಟುಮಾಡುತ್ತಿರುವ ನಷ್ಟ ಹಾಗೂ ಕ್ರೂರತೆಗಳಿಗೆ ಅವನು ಅಡ್ಡಿಬರಬಹುದೆಂದು ನಾನು ಭಾವಿಸುತ್ತೇನೆ. ಪೆರಿಯ ಸ್ವಾಮಿಯ ಮಡದಿ-ಮಕ್ಕಳ ಸುಖ ಕಷ್ಟಗಳನ್ನು ಕಂಡು ಕರುಣೆಯಿಂದ ಸೀತೆಯು ಉಚಿತವಾಗಿ ಸ್ವಲ್ಪ ಸ್ಥಳವನ್ನು ದಾನವಾಗಿ ಕೊಟ್ಟಿದ್ದಳು. ಅದನ್ನೂ ಈ ದಲ್ಲಾಳಿಗಳು ಅಪಹರಿಸಿಕೊಂಡಿದ್ದಾರೆ. ಒಕ್ಕಲಿಲ್ಲದ ಮನೆಯು ಹಾಳಾಗುವಂತೆ, ಯಜಮಾನನಿಲ್ಲದ ಹಳ್ಳಿಯೂ ಹಾಳಾಗುತ್ತದೆ. ಪಳ್ಳಿಗಳೂ ಪಡ್ಯಾಚಿಗಳೂ ನೇಟಾಲ್ ಮತ್ತು ಸಿಂಗಾಪುರಗಳಿಗೆ ಓಡಿ ಹೋಗಿರುವುದರಿಂದ ಸೀತೆಯ ಅರ್ಧಪಾಲು ಆಸ್ತಿ ಪಡಿಲಾಗಿ ಬಿದ್ದಿದೆ. ಅದೇ, ಅವಳ ಹಳೆಯ ಅಲವಂತಿ ಹಾಳಾಗುತ್ತಿರುವಾಗ, ಅಪರಿಚಿತ ಜನರ ಹಾಗೂ ಪರ್ವತಗಳ ನಡುವೆ ತಯಾರಾಗುತ್ತಿರುವ ಹೊಸ ಹಳ್ಳಿಯನ್ನು ನೋಡಿಕೊಂಡು ಆಕೆ ಅಲ್ಲಿ ಯಾಕೆ ಇರಬೇಕೋ?" ಆಗ ತಾನೇ ಸ್ನಾನ ಮುಗಿಸಿದ್ದ ಸಂಪ್ರದಾಯಸ್ಥೆ ಮುದುಕಿ ಶಾಂತವಾಗಿ ಆದರೆ ಗಂಭೀರವಾಗಿ ಹೇಳಿಬಿಟ್ಟು, ಅಂದಿಗೆ ಮಂಗಳೋಪಚಾರದ ಮಾತುಗಳನ್ನಾಡಿದಳು.

'ಸೀತೆಯ ಸಹೋದರ ರಾಯಭಾರಿಯಾಗಿ ಬಂದಿದ್ದಾನೆಂಬುದನ್ನು ಕೇಳುವಾಗ ಸಂತೋಷವಾಗುತ್ತದೆ. ಆಧುನಿಕ ಹಾಗೂ ಆಶ್ಚರ್ಯವನ್ನುಂಟುಮಾಡುವಂತಹ ರೀತಿಯಲ್ಲಿ ತನ್ನ ಆಸ್ತಿಯನ್ನು ದಾನಮಾಡಲಾಕೆ ಇಷ್ಟಪಡುತ್ತಿದ್ದಾಳೆಂದು ಕಾಣುತ್ತದೆ. ಅವಳು ತನಗಾಗಿ ಹಾಗೂ ತನ್ನ ಮಗನಿಗಾಗಿ ಮನೆಯನ್ನು ಮತ್ತು ಒಬ್ಬೊಬ್ಬರಿಗೆ ಮೂರು ಮೂರು ಎಕರೆ ನೆಲವನ್ನು ಮಾತ್ರ ಇಟ್ಟುಕೊಳ್ಳಲಿಕ್ಕಿದ್ದಾಳೆ—ಆ ರಾಯಭಾರಕ್ಕಾಗಿ—ಆಸ್ತಿಯನ್ನು ಹಂಚಿಕೊಡಲಿಕ್ಕಾಗಿ ಆಕೆಯ ಸಹೋದರ ಇಲ್ಲಿಗೆ ಬಂದಿದ್ದಾನೆ. ಅವನಾಗಲೇ ಆ ಕೆಲಸವನ್ನಾರಂಭಿಸಿದ್ದಾನೆ. ಪ್ರತಿಯೊರ್ವನಿಗೂ—ಬ್ರಾಹ್ಮಣ ಪಳ್ಳಿ ಅಥವಾ ಪಡ್ಯಾಚಿ, ಗಂಡಸು ಅಥವಾ ಹೆಂಗಸು, ಹುಡುಗ ಅಥವಾ ಹುಡುಗಿಯೂ ಮೂರು ಎಕರೆ ಧರ್ಮಾರ್ಥವಾಗಿಯೂ ಮತ್ತು ಶಾಶ್ವತವಾಗಿರುವ ರೀತಿಯಲ್ಲಿ ಸಿಗುತ್ತದೆ. ಈಗ ಈ ಹಳ್ಳಿಯಲ್ಲಿ ಈ ಕಷ್ಟದ ದಿನಗಳಲ್ಲಿ ಬೆವರು ಸುರಿಸುತ್ತಿರುವವರಿಗೆ ಮೊದಲು ಸ್ಥಳ ಸಿಗುತ್ತದೆ. ಅನಂತರ ಉಳಿದಲ್ಲಿ, ಇಲ್ಲಿಂದ ಬೇರೆಡೆಗೆ ಹೋಗಿರುವವರಿಗೆ ಸಿಗುತ್ತದೆ." ಮಧ್ಯ ವಯಸ್ಸಿನ ಮಹಿಳೆ ವಿವರಿಸಿದಳು.

"ದಾನಕ್ಕೆ ಏನಾದರೂ ಶರತ್ತುಗಳಿವೆಯೋ?" ಸೀತೆಯ ಪ್ರತಿನಿಧಿಯ ಹೆಂಡತಿ, ಹೊಸದಾಗಿ ಆ ಹಳ್ಳಿಗೆ ಬಂದಿರುವಾಕೆ ವಿಚಾರಿಸಿದಳು.

"ಅದನ್ನು ಮಾರುವ ಅಥವಾ ಅಡವು ಇಡುವ ಅಧಿಕಾರ ಯಾರಿಗೂ ಇರುವುದಿಲ್ಲ. ಹಳ್ಳಿಯಲ್ಲಿದ್ದುಕೊಂಡು ಜಮೀನನ್ನು ನೋಡಿಕೊಂಡಲ್ಲಿ ಮಾತ್ರ ಅದು ಸಿಗುತ್ತದೆ. ಇಲ್ಲದಿದ್ದಲ್ಲಿ ಅದರಮೇಲಿನ ಹಕ್ಕನ್ನು ಕಳೆದುಕೊಳ್ಳಬೇಕಾಗುತ್ತದೆ. ಜಮೀನಿಲ್ಲದ ಬೇರೆ ಯಾರಿಗಾದರೂ ಅದನ್ನು ಕೊಡುತ್ತಾರೆ." ಮಧ್ಯವಯಸ್ಸಿನ ಮಹಿಳೆ ವಿವರಿಸಿದಳು.

"ಇದೊಂದು ಚಂದದ ಹಾಗೂ ಸ್ನೇಹ ಚೈತನ್ಯದ ಕನಸಿನಂತೆ ಕಂಡು ಬರುತ್ತದೆ. ಈ ಪ್ರಪಂಚದಲ್ಲಿ ಯಾರಾದರೂ ಮೋಜಿಗಾಗಿ ಹಾಗೂ ಖ್ಯಾತಿಗಾಗಿ ಜಮೀನನ್ನು ಬಿಟ್ಟು ಕೊಡುವವರಿರುವರೇನು?" ಆ ಮಾತುಗಳನ್ನು ನಂಬಲಾರದಾಕೆ ಕೂಗಿ ಹೇಳಿದಳು, ಹಾಗಿದ್ದರೂ ಮಾತು ಸತ್ಯವಾಗಬೇಕೆಂದು ಆಕೆ ಆಶಿಸುತ್ತಿದ್ದಳು.

"ಇದು ರಾಮುವಿನ ಕನಸೆಂದು ಹೇಳುವುದನ್ನು ಕೇಳಿದ್ದೆ. ರಾಮು ಕನಸು ಕಂಡಲ್ಲಿ ಸೀತೆಯೂ ಅದನ್ನೇ ಕಾಣುತ್ತಾಳೆನ್ನುವದನ್ನು ನಾನು ಯಾವಾಗಲೂ ಹೇಳುತ್ತಿದ್ದೆ. ಇಬ್ಬರೂ ಒಟ್ಟಿಗೆ ಹೋಗುತ್ತಾರೆ." ಹಳೆಯ, ಮತ್ಸರಮಯ ಕಿಡಿ ಆಕೆಯ ಕಣ್ಣುಗಳಿಂದ ಹಾರುತ್ತಿದ್ದುವು. ಸ್ವರ ಮಧುರವಾಗಿಯೇ ಇತ್ತು ಮಾತು ನಯವಾಗಿಯೇ ಇತ್ತು. ಆಕೆಯೇ ಮಧ್ಯವಯಸ್ಸಿನ ಮಹಿಳೆ ಕಾಮು.

"ಆಗ ಪುನಃ ಇನ್ನೊಮ್ಮೆ ಅಲವಂತಿಯು ನಮ್ಮ ಅದೇ ಹಳೆಯ ಪ್ರೀತಿಯ ಅಲವಂತಿಯಾಗುತ್ತದೆ. ಮತ್ತೆ ನದಿ-ಸ್ನಾನವು ಆನಂದದಾಯಕ ಹಾಗೂ ವಿನೋದದಾಯಕವಾಗುತ್ತದೆ. ನಿನ್ನೆ ನನಗೆ ಒಂದು ಕನಸು ಬಿದ್ದಿತ್ತು—ಅದರಲ್ಲಿ ನಾನು ನದಿಯ ದಡದಲ್ಲಿ ಸಿಥಿಯನ್ನು ನೋಡಿದ್ದೇನೆ. ಅದು ಸುಳ್ಳಾಗಲು ಸಾಧ್ಯವೇ ಇಲ್ಲ. ಕಾವೇರಿಯು ಮಹಾತ್ಮಳಿದ್ದಾಳೆ." ಗುಂಪಿನಲ್ಲಿದ್ದ ಕಿರಿಯಾಕೆ ತಿಳಿಸಿದಳು.

"ಆದರೆ, ಗೆಳತಿಯರೇ, ನಾವು ಹಳಬರಾಗುತ್ತ ಬರುತ್ತಿದ್ದೇವೆ. ನಮಗೆ ಗೊತ್ತಾಗದ ಹಾಗೆಯೇ ಕಾಲ ಓಡುತ್ತಿದೆ. ನಾವು ನದಿಯಲ್ಲಾಡಬಹುದು, ಮುಂಚಿನಂತೆ ವಿನೋದದ ಮಾತುಗಳನ್ನಾಡಬಹುದು, ಸೀತೆಯು ಪುನಃ ಅಲವಂತಿಗೆ ಹೊಸ ಹಾಗೂ ಶ್ರೀಮಂತ ಚೈತನ್ಯವನ್ನೀಯಬಹುದು, ಆದರೆ ಅವಳಿಗಾಗಲೀ, ನನಗಾಗಲೀ ಪುನಃ ತಾರುಣ್ಯ ತುಂಬುವದಿಲ್ಲ. ಅಯ್ಯೋ! ಆ ಹಳೆಯ ದಿನಗಳು, ತರುಣ ಪೆರಿಯ ಸ್ವಾಮಿ ಅಲವಂತಿಯ ರಾಜನಾಗಿದ್ದ ಆ ದಿನಗಳು, ಇಂದು ಅವೆಲ್ಲವೂ ಕಳೆದು ಹೋದ ನಿಧಿಗಳೇ ಸರಿ!' ಕಾಮು ಹಲುಬಿದಳು. ಹಲುಬುತ್ತಿದ್ದಂತೆ, ಒಮ್ಮೆ ದೃಢವಾಗಿ ಹಾಗೂ ಆಕಾರಪೂರ್ಣವಾಗಿದ್ದು, ಇಂದು ನಾಜೂಕಿನ ಕುರುಹುಗಳಿರುವ ಎದೆಯತ್ತ ಕದ್ದು ನೋಡಿಕೊಂಡಳು.

(ಮುಂದುವರಿಯುವುದು)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦



NAVAYUGA 21—7—1966
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಚಾರುಚರ್ಯನ

ಇಂದಿರಾ ಗಾಂಧಿಯು ಸರ್ವಾಧಿಕಾರಿಯೇ?

ಇಂದಿರಾ ಗಾಂಧಿ ಮತ್ತು ಕಾಮರಾಜರ ನಡುವಣ ಭಿನ್ನಾಭಿಪ್ರಾಯವಿಂದು ಜಗಜ್ಜನಿತವಾಗಿದೆ. ಸರಕಾರ— ಪಕ್ಷಗಳ ನೀತಿಯಲ್ಲಿ ಅಜಗಜಾಂತರವಿರುವುದು ಎದ್ದು ತೋರತೊಡಗಿದೆ. ಮುಖ್ಯವಾಗಿ ರೂಪಾಯಿಯ ಮೌಲ್ಯ ವಿಚ್ಛೇದನದ ದಿಟ್ಟ ಸಾಹಸ ಕೈಗೊಂಡ ಪ್ರಧಾನಿ ಇಂದಿರಾರ ಬಗ್ಗೆ ಸಚಿವ ಸಂಪುಟದಲ್ಲಿಯೂ ಕಾಂಗ್ರೆಸ್ ಪಕ್ಷದಲ್ಲಿಯೂ ಅಪಸ್ವರವೆದ್ದು ಬಿಟ್ಟಿದೆ. ಇಂದಿರಾಗಾಂಧಿಯ ನಾಯಕತ್ವ ಒಂದು ರೀತಿಯಲ್ಲಿ ಕುಸಿಯುತ್ತಿದೆ. ಆದಕ್ಕೆಂದೇ ಆಕೆ ದೇಶದ ಎಲ್ಲಾ ರಾಜ್ಯಗಳಲ್ಲೂ ಸಂಚರಿಸಿ ತನ್ನ ಪ್ರಭಾವವನ್ನು ಬೀರಲು, ತನ್ನ ಶಕ್ತಿ— ಸಾಮರ್ಥ್ಯಗಳನ್ನು ಪ್ರಜೆಗಳಿಗೆ ಮಾಡಿಕೊಡಲು ಮುಂದಾಗಿದ್ದಾರೆ. ವಿದೇಶ ಯಾತ್ರೆಯಲ್ಲಿಯೂ ಜಯಭೇರಿ ಬಾರಿಸುವ ಆಶೆಯು ಆಕೆಯದು. ಅಮೆರಿಕನ್ ಯಾತ್ರೆ ಒಂದು ರೀತಿಯಲ್ಲಿ ಯಶಸ್ವಿಯೇ ಆಗಿತು. ಇದೀಗ ಸೋವಿಯತ್ತಿನ ಯಾತ್ರೆ ಕೈಗೊಂಡು ಕೊಸಿಗಿನ್ನರಿಗೆ ಭಾರತದ ನೀತಿಯನ್ನು ಸ್ಪಷ್ಟಪಡಿಸಿ ಅವರಿಂದಲೂ ಬೆನ್ನು ತಟ್ಟಿಸಿಕೊಳ್ಳುವ ಇಚ್ಛೆ ಆಕೆಯದು. ಯೋಜನಾ ಸಚಿವ ಅಶೋಕ ಮೆಹತಾ ಈಗಾಗಲೇ ಮೋಸ್ಕೋವಿಗೆ ಹೋಗಿ ಸಾಕಷ್ಟು ಸಹಾಯದ ಭರವಸೆಯನ್ನು ಪಡೆದೇ ಮರಳಿದ್ದಾರೆ. ಇದರಿಂದ ಪ್ರಧಾನಿಯ ದಾರಿ ಪ್ರಶಸ್ತವೇ ಆಯಿತು.

ಆದರೆ, ಪಕ್ಷದೊಳಗಣ ಅಸಮಾಧಾನ ಮಾತ್ರ ಪಕ್ಕನೆ ದೂರವಾಗುವಂತಿಲ್ಲ. ರೂಪಾಯಿಯ ಅಪಮೌಲ್ಯದಂತಹ ಮಹತ್ವಪೂರ್ಣ ಹೆಜ್ಜೆಯಿಡುವಾಗ ಇಂದಿರಾ ಗಾಂಧಿಯವರು ಪಕ್ಷದ ಅಭಿಪ್ರಾಯವನ್ನು ಅವಶ್ಯ ತಿಳಿಯಬೇಕಿತ್ತು. ತನ್ನ ಸಂಪುಟದ ಸಚಿವರಿಗೂ ಬಿಚ್ಚು ಮನಸ್ಸಿನ ಅಭಿಪ್ರಾಯ ವ್ಯಕ್ತಪಡಿಸಲು ಸೂಕ್ತ ಅವಕಾಶ ಒದಗಿಸಬೇಕಿತ್ತು. ಈ ಕಡೆಗೆ ಗಮನ ಹರಿಸದೆ ಪ್ರಧಾನಿಯವರು ತಾನೋರ್ವ ಸರ್ವಾಧಿಕಾರಿಣಿಯಂತೆ ನಡೆದುಕೊಂಡಳೆಂದೂ ಇದರಿಂದ ಹಿರಿಯ ಕಾಂಗ್ರೆಸಿಗರಿಗೇನೇ ಅತೃಪ್ತಿಯುಂಟಾಗಿದೆಯೆಂದೂ ದಟ್ಟವಾದ ವಾರ್ತೆ ನಂಬಲರ್ಹವೇ ಇದೆ. ಬರಿಯ ಮೆಹತಾ— ಸುಬ್ರಹ್ಮಣ್ಯಂರವರ ಬೆಂಬಲದಿಂದ ಅವರು ಮುಂದುವರಿಯುತ್ತಿದ್ದಾರೆಂದೂ ಹೇಳುತ್ತಾರೆ. ಯೋಜನಾ ಯಶಸ್ಸಿಗೆ ಹಣ ಬೇಕಾದುದರಿಂದ, ಆಹಾರಾಭಾವ ನೀಗಿಸಲು ಅಮೆರಿಕೆಯ ಧಾನ್ಯ ಬೇಕಾದುದರಿಂದ, ಅಮೆರಿಕೆಯ ರೂಪಾಯಿ ಅಪಮೌಲ್ಯದ ಸಲಹೆಗೆ ಇವರಿಬ್ಬರೂ ತಲೆದೂಗಿದ್ದರಲ್ಲಿ ಅಪಾರ್ಥವೇನೂ ಇಲ್ಲ. ಆದರೆ, ಪಕ್ಷದಲ್ಲಿ ಮಾತ್ರ ಯಾರು ಎಷ್ಟೇ ಈ ಕೃತಿಯನ್ನು ಸಮರ್ಥಿಸಿಕೊಂಡರೂ ಅದಕ್ಕೆ ಬೆಲೆ ಬರಲಿಲ್ಲ.

ಅದೇನೇ ಇದ್ದರೂ ಇಂದಿರಾ ಗಾಂಧಿಯವರ ನಾಯಕತ್ವಕ್ಕೊಂದು ಬೆಲೆಯಿದೆ. ಮುರಾರ್ಜಿ ಭಾಯಿಯನ್ನು ಅಧಿಕಾರಕ್ಕೇರಲು ಬಿಡದ ಪಂಗಡವೊಂದು ಅನೇಕ ಕಹಿಗುಳಿಗೆಗಳನ್ನು ನುಂಗಿಕೊಂಡಾದರೂ ಗಾಂಧಿಯವರನ್ನೇ ಬೆಂಬಲಿಸದೆ ನಿರ್ವಾಹವಿಲ್ಲ. ಹಾಗಾಗಿ ಕಾಮರಾಜರೂ ನಿರುಪಾಯರಾಗಿದ್ದಾರೆ. ಮುಂದಿನ ಫೆಬ್ರವರಿಯಲ್ಲಿನ ಚುನಾವಣೆಗಳಲ್ಲಿ ಜಯಭೇರಿ ಬಾರಿಸಿದರೆಂದರೆ, ಮಂದಾಳು ಎಂಬ ಪ್ರಶ್ನೆಗೆ ಉತ್ತರ ವರಸುವಲ್ಲಿ ಕಾಮರಾಜರು ಹಿಂದಾಗುವುದಿಲ್ಲ. ಅಷ್ಟು ಹೊತ್ತಿನಲ್ಲೇ ತನ್ನ ಸ್ಥಾನವನ್ನು ಸಾಕಷ್ಟು ಭದ್ರಪಡಿಸುವ ಪ್ರಯತ್ನವನ್ನು, ದೇಶ ವಿದೇಶಗಳಲ್ಲಿ ತನ್ನ ವ್ಯಕ್ತಿತ್ವ— ಪ್ರಭಾವಗಳನ್ನು ಅಚ್ಚೊತ್ತಿ ಬಿಡುವ ಸಾಹಸವನ್ನು ಇಂದಿರಾ ಮಾಡುತ್ತಿದ್ದಾರೆ. ಮುಂದಿನ ಅಕ್ಟೋಬರದಲ್ಲಿ ನವದೆಹಲಿಯಲ್ಲಿ ಸೇರಲಿರುವ ತಟಸ್ಥ ತ್ರಿರಾಷ್ಟ್ರ ಪರಿಷತ್ತೂ ಈ ಪ್ರಯತ್ನಗಳಲ್ಲಿ ಒಂದೆಂದು ಹೇಳಬಹುದು.

o o o o

ಆಜೀವ ಅಧ್ಯಕ್ಷರಾಗಿದ್ದ ಇಂಡೋನೇಶ್ಯದ ಅನಭಿಷಿಕ್ತ ದೊರೆ ಡಾ| ಸುಕರ್ಣರಿಂದು ಹಲ್ಲುಡಿದ ಸಿಂಹವಾಗಿದ್ದಾರೆ. ಅವರು ಪತನದ ದಾರಿಯಲ್ಲಿರುವುದು ನಿಜವೆಂದಾದರೆ, ಅವರ ಮಾಜಿ ವಿದೇಶ ಮಂತ್ರಿ ಸುಬಾಂದ್ರಿಯೋವೇ ಇವರನ್ನು ಆ ದಾರಿಗಿಳಿಸಿದರೆನ್ನಬೇಕು. ಕೆಂಪು ಚೀನಾದ ಬಾಲ ಹಿಡಿದ ಸುಬಾಂದ್ರಿಯೋ ಪದಚ್ಯುತರಾದರು; ಸುಕರ್ಣರನ್ನೂ ತನ್ನತ್ತ ಸೆಳೆದೊಯ್ದರು. ಒಂದು ಕಾಲದಲ್ಲಿ ಜಗತ್ತನ್ನೇ ನಡುಗಿಸುವಂತಹ ಸಿಂಹಗರ್ಜನೆ ಮಾಡುತ್ತಿದ್ದ ಸುಕರ್ಣರು ಇಂದು ತುಟಿ ಬಿಚ್ಚುವುದೂ ಕಷ್ಟದ ಮಾತಾಗಿದೆ. ತನ್ನೆಲ್ಲ ಅಧಿಕಾರವನ್ನೂ ಸೇನಾಪತಿ ಸುಹರ್ತೋ ಅವರಿಗೆ ಒಪ್ಪಿಸಿ ತಾನು ನಾಮಮಾತ್ರ ಅಧ್ಯಕ್ಷರಾಗುಳಿಯುವುದಕ್ಕೆ ಅವರು ಅನಿವಾರ್ಯವಾಗಿ ಒಪ್ಪಲೇ ಬೇಕಾಯಿತು. ಸುಹರ್ತೋ ಹೊರಡಿಸಿದ ಪ್ರತಿ ಆಜ್ಞೆಯೂ ತನ್ನದೇ ಎಂದವರು ಸಾರಲೇ ಬೇಕಾಯಿತು.

ಜಾಗತಿಕ ರಾಜಕಾರಣದಲ್ಲಿ ಸುಕರ್ಣರಿಗಿಂದು ಯಾವ ಸ್ಥಾನವೂ ಉಳಿದಿಲ್ಲ. ಇತ್ತೀಚೆಗೆ ಅವರ ಜೀವಾವಧಿ ಅಧ್ಯಕ್ಷತನಕ್ಕೂ ಸಂಚಕಾರ ಬಂದಿದೆ. ಮುಂದಿನ ಚುನಾವಣೆ ನಡೆಯುವ ತನಕ ಮಾತ್ರ ಅವರು ಅಧ್ಯಕ್ಷರಾಗಿ ಉಳಿಯಬಹುದು. ಅನಂತರ ಇಂಡೋನೇಶ್ಯ ಯಾರನ್ನಾದರೂ ಅಧ್ಯಕ್ಷರನ್ನಾಗಿ ಆರಿಸಿಕೊಳ್ಳಬಹುದು. ಇಂಡೋನೇಶ್ಯನ್ ಕಾಂಗ್ರೆಸ್ಸಿನ ಈ ಅಭಿಪ್ರಾಯಕ್ಕೆ ಸುಕರ್ಣರು ಒಪ್ಪಿದ್ದಾರೆ — ಗತ್ಯಂತರವಿರಲಿಲ್ಲ. ಅಂತಾರಾಷ್ಟ್ರೀಯ ಸಂಘಟನೆಗಳೆಲ್ಲವುಗಳಿಂದಲೂ ಇಂಡೋನೇಶ್ಯವನ್ನು ಸುಕರ್ಣರು ಹೊರತಂದಿದ್ದಾರೆ. ಕೆಂಪು ಚೀನಾದ ನೆರವಿನಿಂದ ಪ್ರತಿಯುಕ್ತ ರಾಷ್ಟ್ರ ಸಂಘವನ್ನು ಕಟ್ಟುವ ಸ್ವಪ್ನವನ್ನೂ ಕಂಡಿದ್ದಾರೆ. ಹಾರಾಡುವ ಪಕ್ಷಿಯ ರೆಕ್ಕೆ ಮುರಿಯಿತು-ಇನ್ನೇನು, ಕೆಲಸಮಯದಲ್ಲೇ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಈ ವೀರಸುಕರ್ಣರ ಹೆಸರೇ ಇಂಡೋನೇಶ್ಯದ ಜನಮುಖದಿಂದ ಮಾಯವಾಗುವ ದಿನಗಳೂ ಬಂದಾವು. ಹೆಸರನ್ನು ಉಳಿಸಿಕೊಳ್ಳುವುದು ಮತ್ತಷ್ಟು ಕಷ್ಟ. ಈ ಸತ್ಯದ ಅರಿವು ಅವರಿಗೆ ಇಂದಾದರೂ ಮನವರಿಕೆಯಾದೀತು.

o o o o

ಇದೇ ವೇಳೆಯಲ್ಲಿ ಕೆಂಪು ಚೀನಾದ ಪ್ರಧಾನಿ ಚೌ-ಎನ್-ಲಾಯ್‌ಯವರು ಯುರೇಶಿಯಾ ಹಾಗೂ ಆಫ್ರಿಕನ್ ದೇಶಗಳಿಗೆ ಸಂಚಾರ ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಅವರು ಸಂಯುಕ್ತ ಅರಬ ಪ್ರಜಾ ರಾಜ್ಯವನ್ನು ಸಂದರ್ಶಿಸಲಿರುವರೆಂದೂ ಆ ಸಮಯದಲ್ಲೇ ಇಂದಿರಾ ಗಾಂಧಿ—ಲಾಯ್ ಭೆಟ್ಟಿ ಮಾಡಿಸುವ ಹಂಚಿಕೆ ನಸ್ಸೇರರದ್ದಿತ್ತೆಂದೂ ಕಿಂವದಂತಿ ಹರಡಿತ್ತು. ಇವುಗಳಲ್ಲಿ ಗಟ್ಟಿಗಿಂತ ಟೊಳ್ಳೇ ಜಾಸ್ತಿ. ಆದರೆ, ಸದ್ಯ ಲಾಯರು ತಮ್ಮ ಕೈರೋ ಸಂದರ್ಶನವನ್ನು ರದ್ದುಮಾಡಿದರು.

ಇದಕ್ಕೆ ಕಾರಣವೇನು? ಸೌಹಾರ್ದ ಹೆಚ್ಚಿಸುತ್ತ ಬಂದ ಕೈರೋ-ಪೀಕಿಂಗ್‌ಗಳ ನಡುವೆ ಈ ಬಗೆಯ ನಿರಸನ ಅನಿರೀಕ್ಷಿತವೇನಲ್ಲ. ಅಧ್ಯಕ್ಷ ನಸ್ಸೇರರು ಮಧ್ಯಪೂರ್ವದಲ್ಲಿ ಪ್ರತಿಭಾ ಸಂಪನ್ನರಾಗಿ ಮೆರೆದಿದ್ದ ಕಾಲವೊಂದಿತ್ತು. ಆದರೆ, ಇಂದು ಹಿಂದಿನಂತಹ ಪ್ರಭಾವವುಳಿದಿಲ್ಲ. ಘಾನಾದ ನುಕ್ರೂಮರಂತೆ ಪೂರ್ಣಪತನ ಹೊಂದಲಿಲ್ಲ; ಇಂಡೋನೇಶ್ಯದ ಸುಕರ್ಣರಂತೆ ನಿಷ್ಫಲರಾಗಲಿಲ್ಲ. ತಾನು ಜಾರುತ್ತಿರುವೆನೆಂಬುದರ ಪರಿವೆ ಅವರಿಗ ಬೇಗನೇ ಆಯಿತು; ಆಧರಿಸಿ ನಿಲ್ಲಲು ಪ್ರಯತ್ನಿಸುತ್ತಿದ್ದಾರೆ.

ಲಾಯರಿಗೆ ನಸ್ಸೇರರ ಮೇಲೆ ಮುನಿಸು. ವಿಯತ್ನಾಮದಲ್ಲಿ ಕ್ರಾಂತಿಯೇಳಬೇಕು, ರಕ್ತದ ಕಾಲುವೆ ಹರಿಯಬೇಕು. ಚೀನೀ ಕೆಂಪು ಎಲ್ಲೆಲ್ಲಿಯೂ ಹರಡಬೇಕು. ರಶ್ಯನ್ ಕೆಂಪು ಮಾಸಬೇಕು— ಇವೆಲ್ಲ ಲಾಯರ ಆಶೋತ್ತರಗಳು. ಆದರೆ, ನಸ್ಸೇರರ ವರ್ತನೆ ಇದಕ್ಕೆ ತಂಪೆರೆಯುವ ಬದಲು ಉರಿಕಾರುತ್ತಿವೆ! ಅವರು ಮೋಸ್ಕೋವಿಗೆ ಭೇಟಿಯಿತ್ತು ಬಂದಂದಿನಿಂದ ಅದರೊಡನೆ ಸಂಬಂಧ ದೃಢವಾಯಿತು. ವಿಯತ್ನಾಮದಲ್ಲಿ ಶಾಂತಿ ಸ್ಥಾಪನೆಯಾಗಬೇಕೆನ್ನುವವರಲ್ಲಿ ನಸ್ಸೇರರೂ ಒಬ್ಬರು—ಹೀಗೆಲ್ಲಾ ಇರುವಾಗ ಲಾಯರು ಎಂದು ಸಹಿಸಿಯಾರು? ಎಂತಲೇ ತನ್ನ ಕೈರೋ ಸಂದರ್ಶನದ ಕಾರ್ಯಕ್ರಮ ರದ್ದು ಮಾಡಿದರು; ನಸ್ಸೇರರ ಭ್ರಮನಿರಸನ ಮಾಡಿದರು. ಆಫ್ರಿಕೆಯ ತನ್ನ ಅಲ್ಪ ಸ್ನೇಹಿತನನ್ನು ಕಾಣದ ವೈಮನಸ್ಯ ಬೆಳಸಿಕೊಂಡರು. ತನ್ನ ಕಾಲಿಗೆ ತಾನೇ ಕೊಡಲಿ ಹಾಕಿಕೊಂಡರೆ?

— ರಾಶಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

28—7—1966

೨೦
ಪೈಸೆ

ಧಾರಾವಾಹಿ ಕಾದಂಬರಿ

ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಅಲಮೇಲು ರಾಮಚಂದ್ರ ಜೀವನದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಿ ಕಷ್ಟನಷ್ಟಗಳಿಗೆ ಗುರಿಯಾಗಿ ಸ್ವಪ್ರಯತ್ನ, ಕಾರ್ಯನಿಷ್ಠತೆಯಿಂದ ನಿಷ್ಠುರಿ ಕೆಡೆಲರ ಪ್ರೀತಿಗೆ ಪಾತ್ರನಾಗಿ ಮುಂದೆ ತನ್ನ ಜೀವನವನ್ನು ರಚನಾತ್ಮಕ ಕಾರ್ಯಗಳಿಗೆ ಮೀಸಲಿಟ್ಟು ಅದರಲ್ಲಿ ಪೂರ್ಣ ಯಶವನ್ನು ಗಳಿಸಿದ ಹೃದಯಸ್ಪರ್ಶಿ ಕಥಾನಕವಿದು. ರಾಮುವಿನ ರೈತ ಮುರುಗ ಕುಸಂಸರ್ಗದಿಂದ ಕುಹಕಿಗಳಲ್ಲಿ ಕುಪ್ರಸಿದ್ಧನಾದರೂ ಮತ್ತೆ ರಾಮುವಿನ ಸುಸಂಸರ್ಗದಿಂದ ತಾನೂ ತನ್ನ ಲೂಟಿಗಾರ ತಂಡದವರೂ ರಾಮುವಿನ ರಚನಾತ್ಮಕ ಕಾರ್ಯವನ್ನು ಪೂರ್ತಿಗೊಳಿಸಲು ಕಟಿಬದ್ಧರಾದರು. ಅಡಂಬರ ಲೋಲ ಕೇದಾರಿ ಕೂಡ ರಾಮುವಿನ ಆಶ್ರಯದಲ್ಲೇ ಶಾಂತಿ ಪಡೆಯುವಂತಾಯಿತು.

ಹೀಗೆ ಕಾವೇರಿ ನದೀ ತೀರದ ಪ್ರಕೃತಿ ಸುಂದರ ಹಳ್ಳಿ, ಅವಲಂತಿಯಲ್ಲಿ ದನಿಯ ಹೊಲದಲ್ಲಿ ದುಡಿಯುತ್ತಿದ್ದ ರೈತ ಮುರುಗ ಅಲ್ಲಿ ನದಿ ತಪ್ಪಲದ ನಾಗಲಾಪುರಕ್ಕೆ ಬಂದು, ತನ್ನ ಸ್ವಂತ ಹೊಲದಲ್ಲಿ ದುಡಿಯ ತೊಡಗಿದ; ಆತನಿಗೆ ಮಾರ್ಗದರ್ಶಕನಾಗಿ ನಿಂತ ರಾಮಚಂದ್ರ. ರಾಮು—ಕೇದಾರಿ—ಮುರುಗರ ಜೀವನ ಸಂಘರ್ಷದ ಸುತ್ತ ಹೆಣೆದ ಈ ಧಾರಾವಾಹೀ ಕಾದಂಬರಿಯ ಕೊನೆಯ ಅಂಶವಿದು; ಇಲ್ಲಿಗೆ ಇದು ಮುಗಿಯಿತು. ನಮ್ಮ ವಾಚಕರಿಗೆ ಈ ಉತ್ತಮ ಆದರ್ಶಮಯ ಕಾದಂಬರಿಯನ್ನು ಓದುವ ಅವಕಾಶ ಒದಗಿಸಿದ ಶ್ರೀ ಶಿವಶಂಕರರಿಗೆ ನಮ್ಮ ಹಾಗೂ ವಾಚಕರ ಕೃತಜ್ಞಪೂರ್ವಕ ಅಭಿವಂದನೆಗಳು.

—ಸಂ. ನ.

ಹೊಸತಾಗಿ ಹುಟ್ಟಿರುವ ಚೈತನ್ಯದಿಂದಾಗಿ ನಾಗಲಾಪುರಂ ಬೆಟ್ಟದ ಬುಡ ಉಲ್ಲಾಸಪೂರ್ಣವಾಗಿದೆ. ವಸಂತ ಋತುವಿನಲ್ಲಿ ಮಳೆ ಬಿದ್ದನಂತರ ಕಾಣುವ ಹುಲ್ಲುಗಾವಲಿನ ಹಾಗೆ ಉಲ್ಲಾಸವೆಂಬುದಿದೆ. ಮುರುಗನು, ವಿದ್ಯಾವಂತ ಜನರಿಂದಾಗಿ ಅಪ್ರಸಿದ್ಧನಾಗಿರುವನಾದರೂ ಹಳ್ಳಿಗಳ ಪಡ್ಡಾಚಿಗಳ ಅಲ್ಲದೆ ದೋಚಲ್ಪಟ್ಟಿರುವ ನೂರಾರು ಜನರ ಪುನರುಜ್ಜೀವನಕ್ಕಾಗಿ ಉಪಾಯವನ್ನು ಹುಡುಕಿದವನು ನಿಜವಾಗಿ ಅವನೇ ಇದ್ದಾನೆ. ಅವನೇ ನಿಜವಾಗಿ ರಾಮುವನ್ನು ಪ್ರೇರೇಪಿಸಿದವನು. ವಿಚಿತ್ರ ಹಾಗೂ ನಂಬಿಗಸ್ತ, ಮತ್ತು ಸ್ವಾಮಿನಿಷ್ಠ ಮುರುಗನ ಮೂಲಕ ಮಿಲಿಯ ಮಿಲಿಯ ಮಾನವರು ಉಪವಾಸದಿಂದ ನರಳುತ್ತಿರುವ ಸಾಧಾರಣ ಪ್ರಪಂಚವನ್ನು ರಾಮುವು ಕಂಡುಕೊಂಡನು.

ತೊಪ್ಪೈ, ಬಂಡುಗಾರನಾದರೂ ಹೊಸ ವಾತಾವರಣದಲ್ಲಿ ತನ್ನ ಜಮೀನಿನ ಆರೈಕೆಯನ್ನು ಮಾಡುವುದರಲ್ಲಿ ಈಗ ಪರಿಣತನಾಗಿದ್ದಾನೆ. ಎಂದಿಗೂ ಬತ್ತದ ಸರೋವರದಿಂದ ತನ್ನ ಜಮೀನಿಗವನು ನೀರು ಹಾಕುತ್ತಾನೆ. ಈ ಮಹಾನ್ ಯೋಜನೆಗೆ ತಾನೇ ಕಾರಣಪುರುಷನೆಂದು ಡಂಗುರ ಹೊಡೆಯುತ್ತ ಇನ್ನೊಂದು ರೀತಿಯಲ್ಲಿ ತನ್ನ ಹೆಮ್ಮೆಯನ್ನಾತ ಪ್ರದರ್ಶಿಸುತ್ತಿದ್ದನು.

ತೊಪ್ಪೈಯ ಡಂಗುರಕ್ಕೆ ರಾಮುವು ವಿವೇಕದಿಂದ ತನ್ನ ಸಮ್ಮತಿಯನ್ನು ಸೂಚಿಸಿದನು. ಈ ಹಂಚಿಕೆಯಲ್ಲಿ ಮೀನಾಕ್ಷಿಗೂ ತೊಪ್ಪೈಗೂ ಪಾಲಿದೆ ಎಂಬುದು ಅವನ ಖಚಿತ ಅಭಿಪ್ರಾಯ. ಈ ತೊಡಕಿನ ಪ್ರಸಂಗದಲ್ಲಿ ಧೈರ್ಯ ಹಾಗೂ ಕ್ರಿಯಾಶೀಲತೆಗೆ ಒಳ್ಳೆಯದರಲ್ಲಿ ಪಾಲಿದೆ.

ಅಗ್ನಿ ನದಿಯಲ್ಲಿ ಮುಳುಗಲು ಹೋಗುತ್ತಿದ್ದ ಸೂರ್ಯನು ಶೋಭಿಸುತ್ತಿದ್ದನು. ಮರಳ ಹಾಸಿಗೆಯಲ್ಲಿದ್ದ ಹರಳುಗಳು ಚಿನ್ನದ ಗಟ್ಟಿಗಳಂತೆ ಮಿನುಗುತ್ತಿದ್ದುವು. ಪೂರ್ವ ಬಾನಂಚಿನಲ್ಲಿ ಪೂರ್ಣಚಂದ್ರನು ಮೇಲೆ ಏರಲು ನಾಚುತ್ತಿದ್ದ. ಆಗ ಮುಸ್ಸಂಜೆಯ ಸೂರ್ಯಕಿರಣ ಮತ್ತು ಚಂದ್ರ ಪ್ರಕಾಶ ಕಲೆತು ಒಂದಾದುವು. ನಿರಾಶೆಯಿಂದ ಸೂರ್ಯನ ಮುಖ ಕಪ್ಪಾಯಿತು. ಒಡನೆ ಚಂದ್ರನು ಮೇಲೆದ್ದು ಮುಖವನ್ನು ಕಾಣಿಸಿದನು. ಸಂತೋಷ ಶಿಬಿರದಲ್ಲಿ ದೀಪವಿಲ್ಲವಲ್ಲಾ ಎಂದು ದೇವತೆಗಳು ನಿರಾಶೆಗೊಂಡಿದ್ದಾಗ "ಇದೋ ದೀಪ" ಎಂದು ಚಂದ್ರನು ಪ್ರಕಾಶಿಸಲಾರಂಭಿಸಿದನು.

ಬಿಳಿಯ ಹೊಯಿಗೆಯ ಹಾಸಿಗೆ ಶುಭ್ರವಾಗಿದ್ದು ಕಣ್ಣು ಸೆಳೆಯುತ್ತಿತ್ತು. ನದಿಯ ನೀರು ಚೆನ್ನಾಗಿ ಆಡುತ್ತಿತ್ತು. ಹಲವಾರು ಜಾತಿ ಪಂಥಗಳ ಹಲವಾರು ಹುಡುಗ—ಹುಡುಗಿಯರು ಆ ನಿವಾಸದಲ್ಲಿ ವಾಸವಾಗಿದ್ದರು; ಅವರು ನದಿದಡದಲ್ಲಿ ಅಲ್ಲಲ್ಲಿ ಸೇರಿಕೊಂಡು ಆನಂದ ಪಡುತ್ತಿದ್ದರು. ಅವರು ಕಣ್ಣುಮುಚ್ಚಾಲೆ ಆಟ ಆಡುತ್ತಿದ್ದರು; ತೇವಭರಿತ ಹೊಯಿಗೆಯಿಂದ ಗೂಡುಗಳನ್ನು ಮಾಡುತ್ತಿದ್ದರು. ಅವರಲ್ಲಿದ್ದ ಕರ್ಮಶೂರ ಬಾಲಕ—ಬಾಲಕಿಯರು ಆದರಿಂದಲೂ ತೃಪ್ತಿಪಡದೆ ಕಡ್ಡಿಗಳನ್ನು ಹೊಯಿಗೆಯನ್ನು ಅಲ್ಲಲ್ಲಿ ಅಡ್ಡರಾಶಿಹಾಕಿ ಅಲ್ಲಿಂದ ನದಿಯ ನೀರು ಹರಿದುಹೋಗುವಂತೆ ಬಲಾತ್ಕರಿಸುತ್ತಿದ್ದರು. ಕೆಲವಾರು ಹುಡುಗ—ಹುಡುಗಿಯರು ಕೆಲವಾರು ತರದ ಆಟಗಳಲ್ಲಿ ಮಗ್ನರಾಗಿದ್ದರು. ಒಂದೂ ತಿಳಿಯದ ಕುಶಲ ಬಾಲಕ ಬಾಲಕಿಯರ ಕೈಗಳಲ್ಲಿ ಮಣ್ಣು, ಗಾಳಿ, ನೀರು ಇವೆಲ್ಲವೂ ಅವರು ಹೇಳಿದ ಹಾಗೆ ಕೇಳುತ್ತಿದ್ದುವು.

ರಾಮು ಮತ್ತು ಕೇದಾರಿ ಅಣೆಕಟ್ಟಿನ ಮೇಲೆ ಕುಳಿತುಕೊಂಡಿದ್ದರು. ಅವರು ಒಮ್ಮೆ ಪರ್ವತಗಳತ್ತ, ಇನ್ನೊಮ್ಮೆ ಸರೋವರದತ್ತ, ಮತ್ತೊಮ್ಮೆ ಹೊಸತಾಗಿ ಸಿದ್ಧವಾಗಿರುವ ವಾಸಸ್ಥಾನದತ್ತ ಸಂತೋಷದಿಂದ ನೋಡುತ್ತಿದ್ದರು. ಆ ವಾಸಸ್ಥಾನವಾದರೋ, ಭೂಮಿಯ ಮೇಲೆ ಉತ್ತಮ ಸ್ಥಳವನ್ನು ಆರಿಸಿಕೊಂಡು ದೇವತೆಗಳು ಶಿಬಿರ ಹಾಕಿರುವ ಹಾಗೆ ಕಂಡುಬರುತ್ತಿತ್ತು.

ಅಂತಹ ಒಂದು ಸಾಯಂಕಾಲದ ಸಮಯದಲ್ಲಿ ರಾಮುವಿಗೊಂದು ಪತ್ರ ಬಂದು ತಲುಪಿತು. ಅದನ್ನು ಅವನು ಬಿಡಿಸಿದನು. ಅದನ್ನೋದಿದ ಮೇಲೆ ಮೌನವಾಗಿ ಕೇದಾರಿಗೆ ಕೊಟ್ಟನು.

ಸರಕಾರಿ ಭವನ,
ಮದ್ರಾಸು,
೨೦, ಅಕ್ಟೋಬರ

ಪ್ರಿಯ ರಾಮು,

ನಿನ್ನ ಮೆಚ್ಚಿನ ಹಾಗೂ ಖ್ಯಾತ ಹೆಸರಿನಿಂದ ನಿನ್ನನ್ನು ಸಂಬೋಧಿಸುವ ಸ್ವಾತಂತ್ರ್ಯವನ್ನು ನಾನೀಗ ತೆಗೆದುಕೊಳ್ಳುತ್ತಿದ್ದೇನೆ. ನಿನ್ನ ಘನ ಸೇವೆಯ ಮೇಲೆ ಇದೀಗ ನಾನು ಹಾಗೂ ಕಾರ್ಯಕಾರಿಣಿ ಸಮಿತಿ ಗಮನ ಕೊಟ್ಟಿದ್ದೇವೆ. ಪ್ರಥಮ ಹೆಜ್ಜೆಯ ರೂಪದಲ್ಲಿ, ಕೆಲ ರಿವಾಜುಗಳ ತೃಪ್ತಿಕರ ಪಾಲನೆಗಾಗಿ, ನಿನ್ನನ್ನು ತಿನ್ನವೇಲಿಯ ಜಿಲ್ಲಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಮುಂದಕ್ಕೆ ನಿನ್ನನ್ನು ನನ್ನ ಕಾರ್ಯಕಾರಿಣಿ ಸಮಿತಿಯಲ್ಲಿ ಸದಸ್ಯನನ್ನಾಗಿ ತೆಗೆದುಕೊಳ್ಳಲಾಗುತ್ತದೆ. ನೀನು ನಿನ್ನ ನಾಡಿನ ಹಾಗೂ ಸರಕಾರದ ಸೇವೆ ಮಾಡಿರುವಾಗ ಈ ಮರ್ಯಾದೆಗಳು ನಿನಗೆ ಸಲ್ಲತಕ್ಕವುಗಳೇ ಇವೆ. ಈಗಿನ ಪ್ರಚಲಿತ ಕಾರ್ಯವನ್ನು ಬಿಟ್ಟು ಹೋಗಲು, ಅದರಲ್ಲೂ ಆ ಸರಳ, ಆದರೆ, ಮಾನವೀಯತೆಯಿಂದ ತುಂಬಿರುವ ಸ್ನೇಹಿತರನ್ನು ಬಿಟ್ಟು ಹೋಗಲು ನಿನ್ನ ಮನಸ್ಸಿಗೆ ಬಹಳ ನೋವಾಗಬಹುದು. ಆದರೆ ದೇಶವು ನಿನ್ನನ್ನು ಇನ್ನೂ ಮೇಲಿನ ಸ್ಥಾನದಿಂದ ದುಡಿಸಿಕೊಳ್ಳಲು ಇಷ್ಟಪಡುತ್ತಿದೆ.

ನನ್ನ ಅತಿಯ ಪ್ರೀತಿಪೂರ್ವಕ ಹಾಗೂ ಹಾರ್ದಿಕ ವಂದನೆ ಸಹಿತ,

ನಿನ್ನ ಪ್ರಾಮಾಣಿಕ ಸ್ನೇಹಿತ,
ಯಚ್. ಕೆಡೆಲ್ಲ್.

"ರಾಜನ ಪರವಾಗಿ ಇರುವ ಪ್ರಾಂತಾಧಿಕಾರಿಯಿಂದ ಪತ್ರ, ಅದೂ ಎಂತಹ ಉದಾರಪೂರ್ಣ ಕಾಣಿಕೆ!" ಕೇದಾರಿಯು ಪತ್ರವನ್ನೋದಿದೊಡನೆ ಆಶ್ಚರ್ಯದಿಂದ ಆಡಿದನು.

ರಾಮು ಮೌನವಾಗಿದ್ದ.

"ನೀನದನ್ನು ಸ್ವೀಕರಿಸಲು ಹೋಗುವೆಯಾ?" ಕೇದಾರಿಯು ಆತುರದಿಂದ ಕೇಳಿದನು.

"ನಿಜವಾಗಿ ಇಲ್ಲ, ಕೇದಾರಿ, ಆತುರಪಡಬೇಕಾಗಿಲ್ಲ. ಈ ಸ್ಥಿತಿಯಲ್ಲಿ ನನಗೆ ರಾಜನ ಪ್ರತಿನಿಧಿಯ ಹುದ್ದೆಯನ್ನು ಕೊಟ್ಟರೂ ನಾನು ಸ್ವೀಕರಿಸಲು ಸಿದ್ಧನಿಲ್ಲ." ರಾಮು ನಸುನಗು ನಗುತ್ತ ಹೇಳಿದನು. 'ನಾನು ನಿಮ್ಮೊಂದಿಗಿಲ್ಲಿ ಜೀವಿಸಲಾರಂಭಿಸಿದ್ದೇನೆ, ಅಲ್ಲದೆ ಇಲ್ಲೇ ಇರಲು ಮನಸ್ಸು ಮಾಡಿದ್ದೇನೆ. ಈ ವಿಷಯವನ್ನು ಹಲವಾರು ಬಾರಿ ನಿನಗೆ ತಿಳಿಯಪಡಿಸಿದ್ದೇನೆ. ಅದೋ! ಅಲ್ಲಿ, ಸೀತಾ, ಕೋಕಿಲಂ ಮತ್ತು ಜಾನಕಿಯರು, ಚಲಿಸುತ್ತಿರುವ ದೀಪದ ವೃಕ್ಷ ಖಂಡದಂತೆ, ಇತ್ತ ಬರುತ್ತಿದ್ದಾರೆ. ಈ ಸಮಾಚಾರವನ್ನು ಅವರ ಕಿವಿಗೆ ಹಾಕಬೇಡ. ಇಂತಹ ವಿಷಯಗಳತ್ತ ಮಹಿಳೆಯ ಮನಸ್ಸು ಹೇಗಿರುತ್ತದೆನ್ನುವದನ್ನು ಹೇಳಲಿಕ್ಕೆ ಬರುವಂತಿಲ್ಲ. ವೈಭವ ಹಾಗೂ ಅಧಿಕಾರವನ್ನು ಅವರು ಬಿಮ್ಮನೆ ಹಿಡಿಯುತ್ತಾರೆ.'

ಸೀತಾ, ಕೋಕಿಲಂ ಮತ್ತು ಜಾನಕಿ ಅವರನ್ನು ಸೇರಿಕೊಂಡರು.

"ಅತ್ತ ನೋಡಿರಿ, ರಾಮು," ನಿರ್ಭಿಡೆಯಿಂದ ಸೊಗಸಾದ ಸ್ವರದಿಂದ ಕೋಕಿಲಂ ಆರಂಭಿಸಿದಳು. 'ಅಲ್ಲಿ ಮರಳ ಮೇಲೆ ಮಕ್ಕಳು ಮೋಜಿನಿಂದಿದ್ದಾರೆ. ಅವರು ಅದೆಷ್ಟು ಚೆನ್ನಾಗಿ, ಹರ್ಷದಿಂದ, ಚುರುಕಾಗಿದ್ದಾರೆ! ನಮೆಲ್ಲರಿಗಾಗಿ ನೀವು ಅಬ್ಬಾ! ಹಾ ದೇವತೆಗಳ ನಿವಾಸ ಸ್ಥಾನವನ್ನೇ ಆರಿಸಿಕೊಂಡಿರುವಿರಿ! ನಿಮ್ಮ ಮಗಳನ್ನು ನೋಡಿ, ಅವಳಲ್ಲಿ ಜಾನಕಿಯ ಬಣ್ಣವನ್ನೂ ನಿಮ್ಮ ನಿಷ್ಕಳಂಕ ಹೃದಯವನ್ನೂ ಕಾಣಬಹುದು. ಅವಳೂ ಸೀತೆಯ ಸುತನೂ ಆದಾಗಲೇ ಗಳಸ್ಯ ಕಂಠಸ್ಯ ಸ್ನೇಹಿತರಾಗಿ ಬಿಟ್ಟಿದ್ದಾರೆ."

ಕೋಕಿಲಂಳ ವರ್ಣನೆಯ ಪದಗಳು ರಾಮುವಿಗೆ ನಿಜವಾಗಿ ಪ್ರವಚನವೇ ಸರಿ. ಅವನು ತನ್ನ ತನುಜೆಯತ್ತ ದೃಷ್ಟಿ ಹಾಯಿಸಿದನು. ಓಹೋ! ಅದು ಶಾಂತಿಯ ಮೂರ್ತಿ! ಚಂದ್ರನ ತೇಜಸ್ಸು ಅಲ್ಲಿ ತಂಗಿದೆ! ತನ್ನ ತನುಜೆಯ ಕೋಮಲ ಮನಸ್ಸಿನ ಬಹು ಶಾಂತ ಹಾಗೂ ವರ್ಧಮಾನ ಅಂದವನ್ನು ಮತ್ತು ಆ ಬಾಲಕನ ಪುಷ್ಪ ಶರೀರವನ್ನು ಹಾಗೆಯೇ ಆಕರ್ಷಣೀಯ ಕಣ್ಣುಗಳನ್ನು ನೋಡುವದರಲ್ಲೇ ರಾಮು ತಲ್ಲೀನನಾದನು. ಅವನು ಆಗ ಮೊದಲ ಬಾರಿಗೆ ತಂದೆತನದ ಪೂರ್ಣ ಆನಂದವನ್ನು ಅನುಭವಿಸಿದನು.

ರಾಮು ಸೀತೆಯತ್ತ ತಿರುಗಿದನು. ಅವನ ಕಣ್ಣುಗಳಲ್ಲಿ ಪ್ರಕಾಶವಿತ್ತು. ಅದೇ ರೀತಿಯ ಪ್ರಕಾಶ ಆಕೆಯ ಕಣ್ಣುಗಳಲ್ಲೂ ಇತ್ತು; ಅವು ಒಂದನ್ನೊಂದು ಕೂ

(ಹನ್ನೊಂದನೇ ಪುಟನೋಡಿರಿ)

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

— ಕುಂಜಾಲು —

ವಿಳಾಸ ಬದಲಾವಣೆ

ನಮ್ಮ ಗ್ರಾಹಕರ ಅನುಕೂಲತೆಗಾಗಿ ನಮ್ಮ ಸಂಸ್ಥೆಯ ಕಾರ್ಯಾಲಯ (Office) ವನ್ನು ಈ ದಿನ (1—7—1966) ಕುಂಜಾಲಿನಿಂದ ಉಡುಪಿಗೆ ಸ್ಥಳಾಂತರಿಸಿರುವೆವು.

ನಮ್ಮ ಗ್ರಾಹಕರು ಇದನ್ನು ಗಮನಿಸಿ ಇನ್ನು ಮುಂದೆ ಈ ಕೆಳಗಿನ ವಿಳಾಸದೊಂದಿಗೆ ವ್ಯವಹರಿಸಿ ಸಹಕರಿಸಬೇಕಾಗಿ ಕೋರುತ್ತೇವೆ.

ಸ್ವದೇಶಿ ಔಷಧ ಭಂಡಾರ
(ರಿಜಿಸ್ಟರ್ಡ್)
ಸಂತೆಕಟ್ಟೆ, ಉಡುಪಿ. (ದ. ಕ.)

ಸ್ವದೇಶಿ ಔಷಧ ಭಂಡಾರದ ಪರವಾಗಿ
ಡಾ। ಕೆ. ಶಾಂತಾರಾಮ್ ಪ್ರಭು
ಮತ್ತು ಸಹೋದರರು.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ— ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಆಸ್ಟ್ರೇಲಿಯಾದ ರಾಜಧಾನಿ ವೆಲ್ಲಿಂಗ್ಟನ್‌ನ ವಿಕ್ಟೋರಿಯಾ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ವಿಯತನಾಮಿ ವಿದ್ಯಾರ್ಥಿಗಳಿಬ್ಬರು ನೃತ್ಯ ಪ್ರದರ್ಶನ ಮಾಡುತಿದ್ದಾರೆ.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೬	೨೮—೭—೧೯೬೬	No. 46

ಇಂದಿರಾ ಯಾತ್ರೆ

ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಕೈರೋ, ಬೆಲ್ಗ್ರೇಡ್ ಮತ್ತು ಮಾಸ್ಕೋಗಳನ್ನು ನೋಡಿ, ಅಲ್ಲಿರುವ ತನ್ನ ಹಾಗೂ ತನ್ನ ದೇಶದ ಸ್ನೇಹಿತರನ್ನು ಕಂಡು ಮಾತಾಡಿ ಬಂದರು. ಹೊರಡುವುದಕ್ಕೆ ಮೊದಲೇ ಅವರು ಹೇಳಿದ್ದಂತೆ, ಮಾತುಕತೆಗಳಿಗೆ ಯಾವ ವಿಷಯ ಸೂಚಿಯೂ ಇರಲಿಲ್ಲ; ಇದು ಬರಿಯ ಸೌಹಾರ್ದ ಸಂದರ್ಶನ— ಇದನ್ನು ಒಪ್ಪುವುದಾದರೆ ಶ್ರೀಮತಿ ಗಾಂಧಿಯವರ ಸಂದರ್ಶನ ಸಫಲವಾಗಿದೆ; ಕೈರೋ-ಬೆಲ್ಗ್ರೇಡ್‌ಗಳಿಗಿಂತಲೂ ಮಾಸ್ಕೋವಿನಲ್ಲಿ ಪ್ರಧಾನಿಗಳಿಗೆ ಅಪೂರ್ವ ಸ್ವಾಗತ ಲಭಿಸಿತ್ತು; ಆಗತಹುದೇ ವಿದಾಯ ಕೂಡ.

ಸಂಯುಕ್ತ ಪ್ರಜಾರಾಜ್ಯ ಮತ್ತು ಭಾರತಗಳು ಜವಾಹರರ ಕಾಲದಲ್ಲಿ ಅಧಿಕ ನಿಕಟವಾಗಿದ್ದುವು; ಆಫ್ರಿಕೆಯಲ್ಲಿ ಇತ್ತೀಚೆಗೆ ನಡೆದ ರಾಜಕೀಯ ಸ್ಥಿತ್ಯಂತರಗಳಿಂದ ಅಧ್ಯಕ್ಷ ನಸ್ಸೇರರೂ ಪ್ರಭಾವಿತರಾಗದುಳಿಯಲಿಲ್ಲ. ಹಾಗಾಗಿ, ಭಾರತದೊಡನೆ ಅವರಿಗಿದ್ದ ಸಂಪರ್ಕ ಶಿಥಿಲವಾಗುತ್ತ ಬರುತಿತ್ತು. ಈ ವೇಳೆಯಲ್ಲಿ ಗಾಂಧಿ—ನಸ್ಸೇರ ಭೆಟ್ಟಿಯು ಅತ್ಯಂತ ಮಹತ್ವಪೂರ್ಣವಾದುದು. ಜಾಗತಿಕ ರಾಜಕಾರಣದಲ್ಲಿ ಸಮತೋಲವನ್ನು ಉಳಿಸಿಕೊಳ್ಳಬೇಕಾದರೆ, ತಟಸ್ಥ ರಾಷ್ಟ್ರಗಳು ಬಲಗೊಳ್ಳಬೇಕು. ಈ ದಿಸೆಯಲ್ಲಿ ಕೈರೋ ಭಾರತದ ಸಮೀಪಕ್ಕೆ ಬರುವಂತಾಯಿತು. ಎಂತಲೇ ವಿಯತನಾಮ ಸಮಸ್ಯಾ ಪರಿಹಾರವು ಜಿನೇವಾ ಪರಿಷತ್ತಿನಿಂದ ಮಾತ್ರ ಸಾಧ್ಯವೆಂಬ ಭಾರತೀಯ ನಿಲುವೆಯನ್ನು ಅದು ಸಂಪೂರ್ಣ ಬೆಂಬಲಿಸಿತು. ಮುಂದಿನ ಅಕ್ಟೋಬರ ತಿಂಗಳಲ್ಲಿ ಹೊಸ ದಿಹಲಿಯಲ್ಲಿ ಸಮಾವೇಶ ಹೊಂದಲಿರುವ ತ್ರಿರಾಷ್ಟ್ರ ಪರಿಷತ್ತು ತಟಸ್ಥರ ಬಲ ಹೆಚ್ಚಿಸುವುದೆಂದೂ ಕೈರೋ—ಬೆಲ್ಗ್ರೇಡ್— ದೆಹಲಿಗಳನ್ನು ಏಕಸೂತ್ರದಿಂದ ಬಂಧಿಸುವುದೆಂದೂ ಆಶಿಸಬಹುದು. ಕೈರೋದಿಂದ ನಿರ್ಗಮಿಸಿದ ಗಾಂಧಿ ಬೆಲ್ಗ್ರೇಡದಲ್ಲಿ ಅಧ್ಯಕ್ಷ ಟಿಟೋರನ್ನು ಕಂಡರು. ಉಭಯ ಹಿತಾಸಕ್ತಿಗಳ ಮಾಮೂಲು ಮಾತುಕತೆಯೊಡನೆ ವಿಯತನಾಮವೂ ಮುಂದೆ ಬಂತು, ಭಾರತಕ್ಕೆ ಬೆಂಬಲವೂ ದೊರಯಿತು ಇದೇನೂ ಅನಿರೀಕ್ಷಿತವಲ್ಲ. ಹಿಂದಿನಿಂದಲೂ ಶಾಂತಿ ಪ್ರಯತ್ನಗಳಿಗೆ ಬೆಲ್ಗ್ರೇಡ್ ಸಹಾಯ ಮಾಡುತ್ತ ಬಂದಿದೆ. ಭಾರತದೊಡನೆ ಅದರ ಸಂಬಂಧ ಉತ್ತಮವಾಗಿಯೇ ಉಳಿದು ಬಂದಿದೆ.

ಒಂದು ಸೋಜಿಗವೆಂದರೆ, ಅಧ್ಯಕ್ಷ ನಸ್ಸೇರರ ಮನೋಭಾವ. ಮುಂದಿನ ಬಾರಿ ಭದ್ರತಾ ಮಂಡಳಿಗೆ ಚುನಾವಣೆ ನಡೆಯುವಾಗ, ಭಾರತವೂ ಸ್ಪರ್ಧಿಸುವುದು ಎಂಬುದೀಗ ಸ್ಪಷ್ಟವಾಗಿದೆ. (ಮತಗಳಿಸುವ ಕಾರ್ಯಕ್ಕಾಗಿಯೇ ಮಂತ್ರಿ—ಮಾಗಧರು ವಿದೇಶ ಸಂಚಾರ ತೊಡಗಿದ್ದಾರೆನ್ನಲಾಗದು.) ಇದರಲ್ಲಿ ಕೈರೋವು ನವದೆಹಲಿಯನ್ನು ಬೆಂಬಲಿಸುವುದಿಲ್ಲವೆಂಬುದೂ ಈಗ ಗೊತ್ತಾಗಿದೆ. ಇದಕ್ಕಿಂತಲೂ ಇದಕ್ಕಿರುವ ಕಾರಣ ಮತ್ತೂ ಸೋಜಿಗ. "ಸಿರಿಯಾವು ಕೂಡ ಭದ್ರತಾ ಸಮಿತಿಯ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಲಿದ್ದು ಒಂದು ಅರಬ ರಾಷ್ಟ್ರವು ಸ್ಪರ್ಧಿಸುವಾಗ, ಅದನ್ನು ಬೆಂಬಲಿಸದೆ ಭಾರತಕ್ಕೆ ಮತ ನೀಡುವುದು ಕೈರೋವಿಗೆ ಕಷ್ಟವಾಗಬಹುದು'— ಕೈರೋ ಅರಬ ಜಗತ್ತನ್ನೇ ಬೆಂಬಲಿಸಲು ಇಚ್ಛಿಸುವಂತಿದೆ. ಅದಕ್ಕೆ ಪ್ರತಿಯಾಗಿ ಅಫಘಾನಿಸ್ಥಾನದ ನೀತಿಯಿದೆ. ಉಪರಾಷ್ಟ್ರಪತಿ ಡಾ| ಜಾಕೀರ್ ಹುಸೇನರ ಇತ್ತೀಚಿನ ಸಂದರ್ಶನದ ವೇಳೆ ಇದು ವ್ಯಕ್ತವಾಗಿದೆ. ಪ್ರತ್ಯೇಕ ಅರಬ ಫಣದಲ್ಲಿ ಅಧ್ಯಕ್ಷ ನಸ್ಸೇರರು ಇನ್ನೂ ವಿಶ್ವಾಸವಿಟ್ಟಿರುವುದು ಎಷ್ಟು ಸಮಂಜಸವೋ ಹೇಳಲಾಗದು.

ಪ್ರಧಾನಿಯವರ ಮಾಸ್ಕೋ ಭೆಟ್ಟಿಯು ಸಾಮಾನ್ಯ ಭಾಷೆಯಲ್ಲಿ ಸಂಪೂರ್ಣ ಯಶಗಳಿಸಿದೆ. ನಮ್ಮ ಯೋಜನೆಗೆ ಸಂಪೂರ್ಣ ಹಾಗೂ ಸರ್ವ ರೀತಿಯ ಸಹಾಯ ನೀಡುವ ಭರವಸೆಯೂ ದೊರೆಯಿತು. ತಾಷ್ಕೆಂಟ್ ಸ್ಫೂರ್ತಿಯ ಬಗೆಗೂ ಮಾತುಕತೆ ನಡೆಯಿತು; ಭಾರತವು ಅದನ್ನು ಅಕ್ಷರಶಃ ಪರಿಪಾಲಿಸುವಲ್ಲಿ ತೋರಿಸುತ್ತಿರುವ ಕಳಕಳಿಗೆ ಪ್ರಶಂಸೆಯೂ ಸಿಕ್ಕಿತು. ಮುಂದೆಯೂ ಭಾರತ-ಪಾಕಿಸ್ಥಾನ ವಿವಾದಗಳು ಸಂಧಾನದ ದಾರಿಯಲ್ಲೇ ಕೊನೆಗೊಳ್ಳಬೇಕು ಎಂಬುದು ಸೋವಿಯತ್ತಿನ ಆಶಯ— ಇದು ಭಾರತಕ್ಕೆ ಅಪ್ರಿಯವಾದುದೇನೂ ಅಲ್ಲ. ಪಾಕಿಗೆ ಶಸ್ತ್ರ ಸಹಾಯವಿಲ್ಲವೆಂಬುದೂ ತಿಳಿಯಿತು. ಭಾರತ— ಪಾಕಿಸ್ಥಾನ ವಿವಾದ ಪರಿಹಾರದಲ್ಲಿ ವಹಿಸಿದ್ದ ಆಸಕ್ತಿಯನ್ನು ವಿಯತನಾಮ ಸಮಸ್ಯಾ ಪರಿಹಾರದಲ್ಲಿ ಸೋವಿಯತ್ತು ತೋರಿಸಲು ಸಿದ್ಧವಿಲ್ಲವೆಂಬುದು ಮನವರಿಕೆಯಾದಾಗ ಪ್ರಧಾನಿ ಇಂದಿರೆಗೆ ದಿಗಿಲಾಗಿರಬೇಕು. ತಾನು ಹೊಸತೊಂದು ಯೋಜನೆಯನ್ನು ಹೊತ್ತು ಕೊಂಡಿದ್ದೇನೆಂದು ಅಕೆ ತಿಳಿದಿದ್ದರೆ, ಅದರ ಗುಣಾವಗುಣಗಳ ಪರಿಣಾಮವೇನೇ ಇರಲಿ, ಪ್ರಯೋಗಕ್ಕೇ ಪ್ರತಿಬಂಧ ಹೇರಿದಂತಾಯಿತು. ಸಮರ ನಿಲ್ಲಿಸುವ ತ್ರಿರಾಷ್ಟ್ರ ಸಂಧಾನದ ಯೋಜನೆ ಸುತ್ತ ನೋಡುವುದು ಸಾಧ್ಯವೇ ಇಲ್ಲ; ಇದನ್ನು ಭಾರತವೂ ಒಪ್ಪುತ್ತದೆ. ಎಂತಲೇ ಅಮೆರಿಕೆಯು ತನ್ನ ಬಾಂಬು ದಾಳಿಯನ್ನು ನಿಲ್ಲಿಸಬೇಕು— ಎಂಬ ಭಾರತದ ಹಳೆಯ ರಾಗಕ್ಕೆ ಮತ್ತೆ ಚೇತನ ಬಂತು. ಇದರಿಂದ ವಿಯತನಾಮ ಪರಿಹಾರದ ಮಾಸ್ಕೋದಲ್ಲಿ ನಂದಿತು; ಹಾಗೆಯೇ ಪ್ರಧಾನಿ ವಿಲ್ಸನ್ನರ ಆಶೆಯೂ ಚಿಗುರೊಡೆಯಲಿಲ್ಲ.

ಪ್ರಧಾನಿ ಇಂದಿರೆಯ ಸಂಚಾರ ದೇಶಕ್ಕೆ ಸಂದಾಯ— ಸದಿಚ್ಛೆಗಳನ್ನು ತಂದಿತು; ಸಹಾಯವನ್ನೂ ಎಳೆಯಿತು; ಮುಂದಿನ ಹಿತಾಸಕ್ತಿಗಳ ಬೆಳವಣಿಗೆಗೊಂದು ಮಾರ್ಗದರ್ಶಕವಾಯ್ತು, ಅಷ್ಟೆ.

ವಚನ ಸುಧೆ

ಅವಿದ್ಯಃ ಪುರುಷಃ ಶೋಚ್ಯಃ
ಶೋಚ್ಯಂ ವ್ಯಭಿಚಾರಿಣೀ ಕುಲಂ
ನಿರಾಹಾರಾಃ ಪ್ರಜಾಃ ಶೋಚ್ಯಾಃ
ಶೋಚ್ಯಂ ರಾಷ್ಟ್ರಮರಾಜಕಂ॥

ವಿದ್ಯಾವಿಹೀನ ಪುರುಷ ಸಂತಾನೋತ್ಪತ್ತಿ ರಹಿತ ಸ್ತ್ರೀ ಪ್ರಸಂಗ, ಅನಿರಾಹಾರಿ ಪ್ರಜೆ, ಅರಾಜಕ ರಾಷ್ಟ್ರ—ಇವುಗಳ ದುರವಸ್ಥೆಗಾಗಿ ಮರುಗಬೇಕು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. I. A. No. 576/1963

O. S. No. 344/1961.

ಎಸ್ತೆಪಿನ ಸಿಲ್ವ ಬ್ಯಾ—ವಾದಿದ್ದು, ಅರ್ಜಿದಾರಳು ಮತ್ತು

ಸಾವ್ಲಿ ಸಿಲ್ವ ಕೂಡಾ —ಎದುರು, ಪ್ರತಿವಾದಿರು,

ಇವರೊಳಗೆ

ಈ ಮೂಲಕ ಸದ್ರಿ ವ್ಯವಹಾರದಲ್ಲಿ ಎದ್ರು.5 ಬೆನೆದಿಕ್ತ ಸಿಲ್ವ 9ಗ್ರೆಗೋರಿ ಸಿಲ್ವ, 13 ಆಗ್ನೆಸ್ ಸಿಲ್ವ, ಮೃತ 1ನೇ ಪ್ರ. ಸಾವ್ಲಿ ಸಿಲ್ವರ ಮಕ್ಕಳು, ಕಾರ್ಕಳ ತಾಲ್ಲೂಕು ಪುತ್ತಿಗೆ ಗ್ರಾಮದ ಕಾಪೆರೊಟ್ಟು ಎಂಬಲ್ಲಿರುವವರಿಗೆ ತಿಳಿಸುವದೇನಂದ್ರೆ—

ವಾದಿಳು ಮಾಡಿದ ಮೇಲಿನ ಹಿಶೆವಾರೆಯ ಪ್ರಾಥಮಿಕ ಡಿಕ್ರಿ ಅರ್ಜಿ ನಿಮ್ಮ ಹಾಜರಾತಿ ಬಗ್ಗೆ ತಾರೀಕು 12—8 1966ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10.30 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉತ್ತರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಸದ್ರಿ ವ್ಯವಹಾರ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು ಎಂತ ಈ ಮೂಲಕ ತಿಳಿಸಲಾಗುತ್ತದೆ.

By order of the Court
N. M. Adyanthaya
Advocate for plaintiffs, Petitioner
Karkala, 22—7—1966.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. P. 14/66

1. ರತಿಶೆಡ್ತಿ, ಅಂಣಯ್ಯ ಶೆಟ್ರ ಹೆಂಡ್ತಿ, 2. ಶಾರದಾ ಶೆಡ್ತಿ, 3. ಪ್ರಫುಲ್ಲ 4. ಪ್ರೇಮಾ ಶೆಡ್ತಿ, 5. ಪ್ರಕಾಶ ಶೆಟ್ಟಿ, ಮೈನರ್ ಗಾರ್ಡಿಯನ್ ಮತ್ತು ರಕ್ಷಕಳು 1ನೇ ಅರ್ಜಿದಾರಳು —ಅಂಣಯ್ಯ ಶೆಟ್ರ ಮಕ್ಕಳು. ಉಡ್ಪಿ ತಾಲ್ಲೂಕು ಕೊರಂಗರಪಾಡಿ ಗ್ರಾಮದಲ್ಲಿರುವವರು —ಅರ್ಜಿದಾರರು.

ಯಾಮೂಲ್ಕ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದ್ರೆ:—

1ನೇ ಅರ್ಜಿದಾರಳ ಗಂಡ—ಮತ್ತು ಮಿಕ್ಕ ಅರ್ಜಿದಾರರ ತಂದೆ ಹಾಲಿ ಉಡ್ಪಿ ತಾಲ್ಲೂಕು ಕೊರಂಗರಪಾಡಿ ಗ್ರಾಮದಲ್ಲಿ ತಾ. 24—1—66ರಲ್ಲಿ ಮೃತು ಪಟ್ಟಿರುವುದರಿಂದ ಅವರಿಗೆ ಬರತಕ್ಕ ಅರ್ಜಿಯಲ್ಲಿ ಕಾಣ್ಸಿದ ಬಾಬ್ತು ಯಾವತ್ತೂ ಹಣಗಳನ್ನು ವಸೂಲು ಪಡಿಯುವರೇ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ 24—8—66ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆಕ್ಷೇಪ ಹೇಳ ತಕ್ಕವರು ಯಿದ್ದಲ್ಲಿ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಹಗಲು 10 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ಯಾವತ್ತೂ ಜನರಿಗೆ ಯೀ ಮೂಲ್ಕ ತಿಳಿಸಲಾಗುತ್ತದೆ.

By order of the Court
(Sd) B. Ananda Shetty
Advocate for Petitioners
Udipi, S. K., Dated 22—7—66.

ಗೇಹೆ ರಾಜವಲ್ಲಿ

ಹಾಗಲಕಾಯಿ ಕಹಿಯಾದರೆ..!

"ಹೌದೇ, ಒಂದು ಸಂಗ್ತಿ ಗೊತ್ತೆ?"

"ಹ್ಞಾಂ.... ಸಂಗ್ತಿ ಒಂದೇಂತೇನು? ನೂರಾರುನೂ ಗೊತ್ತು....'

'ಅದು ಖರೆ, ಆದ್ರೆ ನೋಡು, ನಾನು ಹೇಳೋ ಸಂಗ್ತಿ ನಿಂಗೆ ಖಂಡಿತಕ್ಕೂ ಗೊತ್ತಿಲ್ಲಾಂತ ಬೆಟ್ ಕಟ್ತೇನೆ...."

"ಸೊಂಟಕ್ಕೆ ಬೆಲ್ಟ್ ಕಟ್ಟೋದು, ಕುತ್ತಿಗೆಗೆ ಟೈ ಕಟ್ಟೋದು. ಈ ಬೆಟ್ಟನ್ನ ಕಟ್ಟೋದೇ, ಹೊತ್ತುಕೊಳ್ಳೋದ?"

"ಅಯ್ಯೋ, ಮಹಾರಾಯಿತಿ, ಬೆಟ್ ಅಂದ್ರೆ ಪಂಥ... ಪಂಥ... ಆಣೆ...."

"ಆಣೆ ಪಸ್ರು ಮರ್ತು ಹೋಗಿತ್ತು ಬಂತು. ಪಂಥ? ಹೇಳ್ತಾರಲ್ಲಾ...'

'ಯಾರ್‍ಯಾರು ಏನೇನೋ ಹೇಳ್ಲಿ, ನನಗೇನು? ನಿನಗೇನು? ಸಂಟೆರನು ನಂಬಿ ಮನೆ ಬಿಡಬೇಡ ಅನ್ನೋದಿಲ್ವೆ?'

"ಸರಿಯೇ. ನೀವನ್ನೋ ಭಾರಿ ಸಂಗ್ತಿ ಯಾವುದೂಂತ ನನ್ನ ಯೋಚನೆ....'

'ಮಾಡು ಮಾಡು. ಆದ್ರೆ ನೆನಪಿರಲಿ, ಪ್ರಾಣ ಹೋಗುವ ರೀತಿ ಉಪವಾಸ ಬೇಡ...."

'ಯಾರ್ರಿ ಉಪವಾಸ ಮಾಡೋರು? ಸೋಮವಾರ—ಶುಕ್ರವಾರ ವ್ರತ ಹಿಡೀರಿ ಅಂತ ಅಂದಿದ್ರಿ; ಆದ್ರೆ ನೀವು ಬಿಡಬೇಕಲ್ಲಾ...."

'ಅಯ್ಯೋ, ನಾನು ಬಿಡೋದೆ? ಬಿಡೋಂವ ಹಿಡ್ಕೊಳ್ಳೋ ಹೋಗೋದು ಯಾಕೆ?'

"ಹಾಗಲ್ರಿ, ನೀವೊಂದು...ನೀವು ಬೇಡಾಂತೀರಲ್ಲಾಂದೆ....

"ನೋಡಮ್ಮ, ಈ ಎಳೆಪರೆಯದಲ್ಲಿ ಇನ್ನು ವಾರಕ್ಕೆ ಎರಡ್ಮೂದಿನ ಉಪವಾಸ ಮಾಡಿ ಏನು, ಅಕಾಲ ವೃದ್ಧೆಯಾಗಬೇಕೆಂದು ಆಶೆಯೇನು?"

'ಹ್ಞಾಂ, ಹಾಗೂ ಅನ್ನಬಹುದು....'

'ಯಾಕೆ?'

"ಯಾಕೆ? ಅದನ್ನೂ ನಾನೇ ಹೇಳಬೇಕೆ?"

"ಹ್ಞಾಂ....'

"ಇಲ್ಲ...."

"ಬೇಡ...ಬಿಡು ಆದರೆ ನೋಡು, ಕಾಲ ಮಿಂಚಿಲ್ಲ. ದಿನಕಳೆದಿಲ್ಲ. ವಸಂತದ ಆರಂಭದಲ್ಲೇ ಶಿಶಿರದ ವೈರಾಗ್ಯ ಮಾಡಿದರೆ, ಜೀವನ ರಥ ನಡೆಯುವುದೆಂತು?"

"ನನಗ್ಗೊತ್ತು. ನೀವು ಹೀಗೇ ಅನ್ನುತ್ತೀರೀಂತ. ಇರ್ಲಿ. ಸದ್ಯ ನೀವನ್ನೋ ಭಾರಿ ಸುದ್ದಿ ಯಾವುದೂಂತ..."

"ನೋಡೋಣ, ನನಗೆ ಗೊತ್ತಿರೋ ನೂರಾರು ಸುದ್ದಿಗಳ ಸಾಲಲ್ಲಿ ಇದೂ ಬರುತ್ತೋ ಅಂತ...."

"ನನಗೆ ಗೊತ್ತಿರೋದು.........ಹ್ಞಾಂ, ನಮ್ಮ ಬೆಂಗಳೂರಲ್ಲಿ ವಿಧಾನ ಸಭಾದಿವೇಶನ ಸುರುವಾಯ್ತು....

'ಅಯ್ಯೋ ಇದೆಂತಹ ಸೋಜಿಗವಪ್ಪಾ! ಅದು ಎಂಕ್ಕೆ ಆರಂಭ ಅಂತನ್ನೋ ಸುದ್ದಿ ಯಾವಾಗ್ಲೋ ಥಣಾಡಂಗುರ..."

"ಹ್ಞಾಂ....ದಿಲ್ಲಿಯಲ್ಲಿ ಮುಖ್ಯ ಮಂತ್ರಿಗಳೆಲ್ಲ ಸೇರಿ ಸೇರಿ ಉಳಿತಾಯ ಸಾಧಿಸೋಕೆ, ಇರುವ ಅಕ್ಕಿಯನ್ನ ಹಂಚಿ ತಿನ್ನೋಕೆ ಒಪ್ಪಿಕೊಂಡ್ರು...."

"ಇದ್ರಲ್ಲಿ ಏನು ಬಂತೆ ವಿಶೇಷ?"

"ಇದೂ ಅಲ್ಲಾಂತಾಯ್ತು...ಹ್ಞಾಂ... ರಶ್ಯ ಕಾಸ್ಮೋ ಉಪಗ್ರಹವನ್ನು ಹಾರಿಸಿತು....'

"ಅಯ್ಯೋ, ಇಂಥ ನೂರಾರು ಉಪಗ್ರಹಗಳನ್ನು ಯಾರ್‍ಯಾರೋ ಹಾರಿಸಿರೋವಾಗ ಇದೇನು ದೊಡ್ಡದು?"

"ಹ್ಞಾಂ....ತಿಳೀತು, ಕೊಸಿಗಿನ್—ವಿಲ್ಸನ್...."

"ಛೆ, ಛೆ....ಅಲ್ಲವೇ ಅಲ್ಲ....'

"ಮತ್ತೆ ವಿಯತನಾಮದಲ್ಲಿ....'

"ಊಹ್ಞಾಂ....ಅದೂ ಅಲ್ಲ...'

'ಮತ್ತೆಂಥದಪ್ಪ, ನಿಮ್ಮದೊಂದು....'

"ನೋಡು, ನೂರಾರು ಗೊತ್ತೂಂತ ಬಡಾಯಿ ಕೊಚ್ಚಿದವ್ಳು ನೀನು. ಈಗ ಹೀಗೆಲ್ಲಾ ನನ್ನ ಅಂದು ಕೊಂಡ್ರೆ..."

"ಆಯ್ತು, ನೋಡೋಣ..ಹೇಳ್ತೀನೆ.."

'ಹ್ಞಾಂ...ಬೇಕಾದಷ್ಟು ಹುರುಸೊತ್ತು..."

"ಹ್ಞಾಂ...ನೋಡಿ..."

'ಏನು?"

'...ಊಹ್ಞಾಂ....ಅದು ಇರ್ಲಿಕ್ಕಿಲ್ಲ....

'ಯಾವುದು?'

'ಅಲ್ಲ, ಅಲ್ಲದೆ ಇರುವುದನ್ನ ಹೇಳಿ ಯಾಕೆ...'

'ಅದು ಸರೀನ್ನು. ಆದ್ರೂ ಕೆಲವೊಮ್ಮೆ ನಮಗೆ ಮಹತ್ವದ್ದಲ್ಲಾಂತ ಅನ್ನಿಸಿದ್ದೂ ಕೆಲವ್ರಿಗೆ ಮಹತ್ವದ್ದಾಗುತ್ತೆ....'

"ಒಳ್ಳೇ ಖದೀಮರು ನೀವೆ....

'ಯಾಕೆ?"

"ಪೇಪ್ರಲ್ಲಿ ಮುಖ್ಯ ಮುಖ್ಯ ಸುದ್ದಿಗಳನ್ನು ದಪ್ಪಕ್ಷರಗಳಲ್ಲಿ ಹಾಕ್ತಾರೆ. ಆದ್ರೆ ನೀವನ್ನೋದನ್ನು ಕೇಳುವಾಗ ನಿಮ್ಮ ಭಾರೀ ಸುದ್ದಿ ಅಂಥದ್ದಲ್ಲಾಂತ ಅಂದೇ ಹ..."

'ಹೇಳಿದ್ದಾನೆ ನೋಡು, ಗೀತಾಚಾರ್ಯ—ಸಂಶಯಾತ್ಮಾ ವಿನಶ್ಯತಿ...."

"ಹೇಳ್ಲಿಕ್ಕೆ ಎಲ್ರೂ ಹೇಳ್ತಾರೆ. ಆದ್ರೆ ಮಾಡೋರು ಯಾರು? ಎಲ್ಲಾ ಕಥೆಯಲ್ಲಿ ಆಗುತ್ತೆ...."

'ಏನು?'

"ನೋಡಿ, ನಾನೆಂದು ಕೊಂಡಿದ್ದೇನೆ—ಯಾಕೆ, ನಿರ್ಧಾರಕ್ಕೂ ಬಂದಿದ್ದೇನೆ—ಈ ಕಥೆ ಮತ್ತು ಸಿನೇಮಾ ಜೀವನದಿಂದ ದೂರಾಂತ...'

"ಯಾಕೆ?"

"ಮತ್ತೆಂಥದು? ಕಾರ್ನ್ಕಡಿ ಬಿದ್ದು ಆಪತ್ತಿನಿಂದ ಪಾರಾಗಿ ಮತ್ತೆ "ಲವ್" ಹುಟ್ಟುವುದಂತೆ....ಅಲ್ಲಾ, ಕಾರ್ನ್ಕಡಿ ಬಿದ್ದವರು ಬದುಕುವುದುಂಟೆ?"

"ಕೆಲವರಾದ್ರೂ ಬದುಕುತ್ತಾರೇನ್ನು..'

"ಅಂದ್ರೆ ಅಲ್ಪ ಸಂಖ್ಯಾಕರು..."

"ಹ್ಞಾಂ...."

"ಹಾಗಾದ್ರೆ ನೋಡಿ, ಎಲ್ಲೋ ಅಪರೂಪದ್ದನ್ನ ಎತ್ತಿ ಹಿಡಿಯೋದು ಜನ ಜೀವನದ ಪ್ರತಿಬಿಂಬವೇಂತ..."

"ಹ್ಞಾಂ, ನಿನ್ನ ತರ್ಕ ಸರಿಯೇ ಆದ್ರೆ, ಒಮ್ಮೊಮ್ಮೆ ಹಾಗೂ ಆಗುತ್ತೆ..."

'ಅದೇ ಅಂದೆನಲ್ಲಾ, ಒಮ್ಮೊಮ್ಮೆ ಆಗೋದನ್ನ ಮಾತ್ರ ಎತ್ತಿ ಕಟ್ಟೋದು, ಅದಕ್ಕೆ ಉಪ್ಪುಕಾರ ಹುಳಿ ಸೇರಿಸಿ ರಂಗೀಟು ಮಾಡೋದು...."

'ಅಲ್ಲ, ಏನಾಗಿದೆ ಇವತ್ತೊಂತ?'

'ಯಾಕೆ, ಏನಾಯ್ತು?'

'ನಾನು ಒಂದು ಕೇಳಿದ್ರೆ ನೀನು ಬೇರೊಂದಕ್ಕೆ ಹಾರಿ ಬಿಟ್ಟೆಯಲ್ಲಾಂತ?'

'ಓ, ಸರಿ. ನಿಮ್ಮ ಆ ಭಾರಿ ಸುದ್ದಿ ಪರ್ವತ ಪ್ರಸವಾಂತ ನನಗೂ ಗೊತ್ತು....'

'ನೋಡು, ಹಾಗೆಲ್ಲಾ ಸಸಾರ ಮಾಡಬೇಡ...'

"ಮಾಡಿದ್ರೆ?'

"ಮಾಡೋಹಾಗೇ ಇಲ್ಲ. ಅದು ಅಮೇರಿಕೆಯ ಸುದ್ದಿ. ಅಮೇರಿಕೆಯದ್ದು..."

"ಏನಂತೆ? ವಿಯತನಾಮದಲ್ಲಿ ಬಾಂಬ ದಾಳಿ ನಿಲ್ಲಿಸುವರೇನು?"

'ಛೆ, ಅದಲ್ಲವೇ...."

"ಮತ್ತೆ...."

"ಅಂತೂ ನನ್ನ ಪಂಥ ಗೆದ್ದಿತೂನ್ನು..'

"ನಾನು ಗೆದ್ದರೇನು, ನೀವು ಗೆದ್ದರೇನಂತೆ?"

"ಹ್ಞಾಂ....ಹಾಗೆ ಬಾ....ಇನ್ನಾದ್ರೂ ನಾನು ನಾನೂಂತ ಹಾರ್ಬೇಡ........ಏನು....?"

'ಅಯ್ಯೋ........ನಿಮ್ಮ...ಸಟ್ಯ ಸುದ್ದಿಯೇನೂಂತನ್ರಿ....'

'ಸುದ್ದಿ ಭಾರಿ ವಿಚಿತ್ರ...."

"ಹೌದು, ವಿಚಿತ್ರ—ಭಾರಿ ಅಂತ ಹೇಳೋದು, ಕೊನೆಗೆ...."

'ಹಾಗೆಲ್ಲಾ ಅಪಮಾನ ಮಾಡಬೇಡ ....ಕೇಳು, ಅಮೇರಿಕೆಯ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶ ವಿಲ್ಲಿಯಂ ಡಗ್ಲಸ್ ನಾಲ್ಕನೆಯ ಮದುವೆ ಮಾಡಿಕೊಂಡರಂತೆ....'

'ಅಯ್ಯೋ, ಏನಿದೆ ಇದ್ರಲ್ಲಿ?'

"ಅಲ್ವೆ, ಅವರಿಗೀಗ ೬೭ ವರ್ಷವಂತೆ....'

'ಇರ್ಲಿ, ಮದುಮಗಳಿಗೆ...."

"೨೩...'

(ಒಂಭತ್ತನೇ ಪುಟ ನೋಡಿರಿ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 170/1966.

1 ಆನಂದ ಮಲ್ಯ, 2. ಕೊಪ್ಪಳ ಯಾನೆ ಸರಸ್ವತಿ ಅಮ್ಮ —ಯಿವರ ಜನರಲ್ ಪವರ್ ಆಫ್ ಏಟೋರ್ನಿಹೋಲ್ಡರ್

S. ಉಮಾನಾಥ ಪ್ರಭು —ವಾದಿರು.

ಇಂದಿರ ಶೆಟ್ಟಿ, ಭೋಜರಾಜ ಅಡ್ಯಂತಾಯರ ಹೆಂಡ್ತಿ, C/o Bhojaraja Adyanthaya, Raja Soda Factory Sukrawarapete, Poona-2, ಎಂಬಲ್ಲಿರುವವಳು —ಪ್ರತಿವಾದಿಳು,

ಪ್ರತಿವಾದಿಯಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ.

ನೀವು ವಾದಿರ ವಶಗೆ ಮೂಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಉಳಿಪಾಡಿ ಗ್ರಾಮದ ಅಸಿ ಬಾಬ್ತು ನಿಂಮಿಂದ ವಾದಿರಿಗೆ ಕಳದ ಶೋಭಕೃತು ಮತ್ತು ಕ್ರೋಧಿ ಸಂರಗಳ ಅಂತ್ಯಕ್ಕೆ ಬರತಕ್ಕ 2 ವರುಶಗಳ ಮೂಲಗೇಣಿ ಗೇಣಿ ಬಡ್ಡಿ ಕೂಡಾ ರೂಪಾಯಿ 332-97ಕ್ಕೆ ವಾದಿರು ದಾಖಲ್ಲು ಮಾಡಿದ ಸದ್ರಿ ದಾವೆಯು ತಾರೀಕು 6-8-1966ಕ್ಕೆ ನಿಮಗೆ ಆಕ್ಷೇಪ ನೋಟೀಸಿಗೆ ಇಟ್ಟದೆ. ಆಕ್ಷೇಪ ಇದ್ರೆ ಸದ್ರಿ ದಿನಬೆಳಿಗ್ಯೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiffs.
Karkala, 16—7—66

ವಿಚಾರ ವೀಚಿ

ವ್ಯಾಸ ಮಹರ್ಷಿಯ ಮಹಾಭಾರತ

ವ್ಯಾಸಕೃತ ಮಹಾಮೇರುವಿನ ಶಿಖರವೇರಲು ಯಾರಿಂದಲೂ ಸಾಧ್ಯವಿಲ್ಲ; ಆದರೆ, ಅದರ ಬುಡದಲ್ಲಿ ನಿಂತು ಆನಂದಿಸಲು ಯಾರ ಅಭ್ಯಂತರವೂ ಇಲ್ಲ.

ಬರೆದವರು: ಶ್ರೀ ಸ. ನಾರಾಯಣ.

ಭಾರತ ಒಂದು ಬೃಹತ್ ರಾಷ್ಟ್ರ; ಮಹಾಭಾರತ ಒಂದು ಬೃಹತ್ ಕಾವ್ಯ. ಸಂಸ್ಕೃತ ಮಹಾಭಾರತವನ್ನು ರಚಿಸಿದ ಕವಿ ವ್ಯಾಸ ಮಹರ್ಷಿ. ಅವರಿಗೆ ಬಾದರಾಯಣ ಕೃಷ್ಣದ್ವೈಪಾಯನ, ಎಂಬ ಹೆಸರುಗಳೂ ಇವೆ. ವ್ಯಾಸರು ಅಪರೋಕ್ಷ ಜ್ಞಾನಿಗಳು. ಪಾಂಡಿತ್ಯ ಪ್ರತಿಭೆಗಳ ಮಹಾಮೇರು. ಅವರು ವ್ಯಾಸರಷ್ಟೇ ಅಲ್ಲ ವೇದವ್ಯಾಸರು. ಭಾರತದ ಪ್ರಾಚೀನ ಪರಂಪರೆಗೆ ಆಧಾರ ಸ್ತಂಭಗಳಂತೆ ಉಳಿದಿರುವ ಋಗ್, ಯಜುರ್, ಸಾಮ, ಅಥರ್ವ, ವೇದಗಳ ಕರ್ತೃ.

ಮಹಾಭಾರತ ಲೋಕೋತ್ತರ ಕೃತಿ. ಭಾರತದಲ್ಲಿ, ಸಂಸ್ಕೃತ ಸಾಹಿತ್ಯದಲ್ಲಿ ಅದರ ಸ್ಥಾನ ಅತ್ಯುನ್ನತವಾದುದು. ಭಾರತ ಒಂದು ಲಕ್ಷ ಶ್ಲೋಕಗಳಿಂದ, ಹದಿನೆಂಟು ಪರ್ವಗಳಿಂದ ಕೂಡಿರುವ ಬೃಹತ್ ಗ್ರಂಥ. ಪುಟಗಳ ಸಂಖ್ಯೆಯಿಂದ ಮಾತ್ರವೇ ಅಲ್ಲದೆ ಗುಣದ ದೃಷ್ಟಿಯಿಂದಲೂ ಬಹುದೊಡ್ಡ ಕಾವ್ಯ. ಸತ್ವ, ಸ್ವಾರಸ್ಯಗಳಿಂದ ಕೂಡಿದ ಸುಂದರ ಕಾವ್ಯ, ಸಮಕಾಲೀನ ಭಾರತೀಯ ಸಂಸ್ಕೃತಿ, ಜನಜೀವನ, ಆಚಾರ ವಿಚಾರಗಳ ಸಂಗತಿಯನ್ನು ಆದ್ಯಂತವಾಗಿ ನಿರೂಪಿಸುವ ಶ್ರೇಷ್ಠತಮ ಕೃತಿ.

ವಾಲ್ಮೀಕಿ ಮಹರ್ಷಿಗಳಿಂದ ರಚಿಸಲ್ಪಟ್ಟ 'ರಾಮಾಯಣ' ಆದಿ ಕಾವ್ಯ ಎಂಬ ಹೆಸರಿನಿಂದ ಮೊದಲ ಶ್ರೇಣಿಯಲ್ಲಿ ಉಳಿದಿದೆ. ರಾಮಾಯಣದ ಕಥಾವಸ್ತು, ಸನ್ನಿವೇಶ, ಪಾತ್ರಗಳು ಎಲ್ಲವೂ ಆದರ್ಶಮಯವಾಗಿವೆ. ರಾಮಾಯಣದಲ್ಲಿ ತ್ರೇತಾಯುಗದ ಜೀವನ ಕಥೆಯನ್ನು ಕಾಣುತ್ತೇವೆ. ಅದು ಬಹು ದೂರದ ಸಂಗತಿ ಎಂದು ಹೇಳಲೂ ಬಹುದು. ಭಾರತದ ಕಥೆ ಹಾಗಲ್ಲ. ದ್ವಾಪರ ಯುಗದ, ಬಹು ಸಮೀಪದ ಕಥೆ. ಲೌಕಿಕ ಕಥೆ. ಸತ್ಯ—ಸೌಂದರ್ಯಗಳ ದರ್ಶನ ಮಾಡಿಸುವ ಕಲಾಕೃತಿ. ಮಹಾಭಾರತದ ಘಟನೆ ನಡೆದ, ಮಹಾಭಾರತ ಕಾವ್ಯ ರಚಿಸಲ್ಪಟ್ಟ ಶತಮಾನಗಳೇ ಕಳೆದು ಹೋಗಿರಬಹುದು. ಆದರೆ ಆ ಸನ್ನಿವೇಶ, ಆ ಪಾತ್ರಗಳೂ, ಆ ಕಥೆ ಎಲ್ಲವೂ ಜೀವಂತ. ಇಂದಿಗೂ ಅಚ್ಚಳಿಯದೆ ಉಳಿದಿದೆ ಗತಿಸಿದ ಸ್ಮೃತಿ.

ಮಹಾಭಾರತದ ಕಥೆಗೂ ಅದರ ಕರ್ತೃ ವ್ಯಾಸ ಮಹರ್ಷಿಗಳಿಗೂ ವಿಶೇಷ ಬಾಂಧವ್ಯ ಉಂಟು. ವ್ಯಾಸ ಮಹರ್ಷಿಗಳು ಕುರುವಂಶದ ಆದ್ಯರಲ್ಲೊಬ್ಬರು. ಕುರುವಂಶ ಅಳಿವಿನ ಹಾದಿಯಲ್ಲಿದ್ದಾಗ ಅದಕ್ಕೆ ಜೀವದಾನ ಮಾಡಿದವರು ಮೂಲಪುರುಷರಾಗಿದ್ದ ವ್ಯಾಸರು ಮೂರು ತಲೆಮಾರುಗಳ ಬಾಳು—ಅಳಿವು—ಉಳಿವುಗಳನ್ನು ಕಣ್ಣಾರೆ ಕಂಡು, ಸಮಗ್ರ ಘಟನೆಗಳನ್ನು ಮನದಲ್ಲಿ ಉಳಿಸಿಕೊಂಡು ಚಿಂತಿಸಿ—ಮಂಥಿಸಿ ಶ್ರೇಷ್ಠತಮ ಇತಿಹಾಸಕಾರರಂತೆ ಕುರುಕುಲದ ಪ್ರಬಲ ಪಕ್ಷಗಳಾದ ಕೌರವ ಅಥವಾ ಪಾಂಡವ ಪಕ್ಷ ಒಂದಕ್ಕೆ ಒಲಿಯದೆ ಅನುಭವಕ್ಕೆ ಯೋಗ್ಯವಾದ ಸತ್ಯ ಕತೆಯನ್ನು, ಸತ್ಯ ಘಟನೆಗಳನ್ನು ತಪ್ಪದೇ ಆದ ಶೈಲಿಯಲ್ಲಿ ಕಾವ್ಯವಾಗಿ ಬರೆದಿಟ್ಟಿದ್ದಾರೆ.

ಬೃಹತ್ ಭಾರತದ ಭವ್ಯ ಕಥೆಯನ್ನು ಸಮಗ್ರವಾಗಿ ಅರಿಯಬಲ್ಲ ಶಕ್ತಿಯೂ ನಮಗಿಲ್ಲ. ಆದರೆ ವ್ಯಾಸಮಹರ್ಷಿಗಳು ತಮ್ಮ ಕಾವ್ಯದಲ್ಲಿ ನೂರಾರು ಪಾತ್ರಗಳನ್ನೂ ಅಸಂಖ್ಯಾತ ಸನ್ನಿವೇಶ— ಘಟನೆಗಳನ್ನೂ ಕುಂದಿಲ್ಲದಂತೆ ಅಂದವಾಗಿ ಚಿತ್ರಿಸಿದ್ದಾರೆ.

ಅವರ ಜ್ಞಾನ ಪಾಂಡಿತ್ಯಕ್ಕೆ ಪ್ರತಿಯಾಗಿ ನಿಲ್ಲಬಲ್ಲ ಪ್ರತಿಸ್ಪರ್ಧಿಯೇ ಇಲ್ಲ. ಈ ಮಹಾಭಾರತ ಭಾರತದಲ್ಲಿ ಮಾತ್ರವೇ ಅಲ್ಲದೆ ಜಗತ್ತಿನಲ್ಲಿಯೇ ಬೃಹತ್ ಕಾವ್ಯ. 'ಇಲಿಯಡ್' ಮತ್ತು 'ಒಡಿಸಿ'ಗಳು ಭಾರತದಲ್ಲಿ ಬರುವ ಉಪಕಥೆಗಳಿಗೆ ಸಮಾನ.

ಮಹಾಭಾರತದ ಕಥೆ ಒಂದು ದೊಡ್ಡ ಕಥೆ. ಕುರುಕುಲದ ಮಹಾ ವ್ಯಕ್ತಿಗಳ ಸುತ್ತ ಹೆಣೆದಿರುವ ಈ ಕಥೆಯಲ್ಲಿ ಸೇರಿದಂತೆ ಹಲವು ಉಪಕಥೆಗಳು, ಪ್ರಾಸಂಗಿಕವಾಗಿ ಬಂದಿವೆ. ನೂರಾರು ಕಥೆಗಳು, ಉಪಕಥೆಗಳು, ಪಾತ್ರಗಳು, ಸನ್ನಿವೇಶಗಳು ಈ ಮಹಾ ಕಾವ್ಯದಲ್ಲಿ ಬೆರೆತಿದ್ದರೂ ಮೂಲ ಕಾವ್ಯದ ಒಟ್ಟಿಕ್ಕೆ, ಅದರ ಮಟ್ಟಕ್ಕೆ ಯಾವ ಭಂಗವೂ ಬಂದಿಲ್ಲ. ಸಾಹಿತ್ಯ ಸರಸ್ವತಿಯ ಏಕ ಪುತ್ರರಾದ ವ್ಯಾಸರ ಹಿರಿಮೆ, ಪ್ರೌಢಿಮೆ, ಜ್ಞಾನ, ಪ್ರತಿಭೆ, ಪಾಂಡಿತ್ಯಗಳಿಗೆ ಕುಂದು ಬರುವ ಪ್ರಸಂಗವೇ ಇಲ್ಲ. ರಾಯಾದಿ ಮಾತ್ಸರ್ಯದ ಕುಟುಂಬದ ಅಳಿವು—ಉಳಿವಿನ ಸತ್ಯಕಥೆ ಈ ಮಹಾ ಕಾವ್ಯದಲ್ಲಿ ನಿರೂಪಿಸಲ್ಪಟ್ಟಿದೆ. ಜನತೆಯ ಭಾವನೆ-ಜೀವನಗಳನ್ನು ಸುಂದರವಾಗಿ ಪ್ರತಿಬಿಂಬಿಸುವ ಮಹಾಕಾವ್ಯ—ಮಹಾಭಾರತ.

ಮಹಾಭಾರತದ ಕಥೆಯನ್ನು ಚಿಂತಿಸಿ ಕಲ್ಪಿಸಿದವರು ವ್ಯಾಸ ಮಹರ್ಷಿಗಳು. ಕವಿ ಎಂಬ ಕೀರ್ತಿ ಅವರಿಗೆ ಸಲ್ಲುತ್ತದೆ. ಸಂಸ್ಕೃತ ವಾಙ್ಮಯದ ಮಹಾಗ್ರಂಥಗಳನ್ನು ಬರೆದ ಮಹಾಕವಿಗೆ ಈ ಬೃಹತ್ ಭಾರತ ಕಾವ್ಯವನ್ನು ಬರೆಯುವ ವೇಳೆ ಯಾದರೂ ಎಲ್ಲಿದೆ? ಅವರ ಬೇಡಿಕೆಯನ್ನು ಅಂಗೀಕರಿಸಿ ವಿನಾಯಕ ವ್ಯಾಸರು ಹೇಳಿದಂತೆಯೇ ಬರೆದನಂತೆ. ಮಹಾಭಾರತದ ಕವಿ ವ್ಯಾಸ ಮಹರ್ಷಿಗಳ ಅವತಾರ ಗಜಾನನ.

'ಭಾರತದಿ ಇದ್ದುದನ್ನು ಭಾರತದಲ್ಲಿ ಕಲಿ' ಎಂಬ ನಾಣ್ಣುಡಿ ಉಂಟು. ಜ್ಞಾನ ಉಪದೇಶ, ಉದಾಹರಣೆಗಳ ರಾಶಿಯನ್ನೇ ಹೊಂದಿರುವ ಘಟನ ಕಾವ್ಯ ಮಹಾಭಾರತ. ವಾಕ್ಪವಿಕತೆ, ಅನುಭವ, ಸತ್ಯತೆಗಳನ್ನೂ ಈ ಕಾವ್ಯ ಪಠನೆಯಿಂದ ಪಡೆಯಬಹುದಾಗಿದೆ. ವಿಶಾಲವಾದ ಸತ್ಯ ವಿಶ್ವತೋಮುಖವಾದ ಸಂಗತಿ ಮಹಾಭಾರತದಲ್ಲಿ ಅಡಗಿದೆ. ಅಂದಿನ ಸತ್ಯ, ಶಕ್ತಿ, ಸ್ವರೂಪಗಳು ಈ ಮಹಾಕಾವ್ಯದಲ್ಲಿ ಇಂದಿಗೂ ಉಳಿಯುದಿವೆ. ನಾಳೆಗೂ ಉಳಿಯುತ್ತವೆ. ದೇಶ ವಿದೇಶಿಯರ ಮನ್ನಣೆಗೆ ಪಾತ್ರವಾದ ಈ ಕಾವ್ಯದ ಮೌಲ್ಯ ಹಿರಿದು.

ಅಮೇರಿಕಾದ ಪ್ರೊಫೆಸರ್ ಎ. ಆರ್. ಅರೆಂಜ್ ಎಂಬ ವಿದ್ವಾಂಸರು—"ಸಾಹಿತ್ಯದ ಮೂಲಕ ಸಂಸ್ಕೃತಿಯನ್ನು ಸೃಷ್ಟಿಮಾಡುವ ಪ್ರಯತ್ನಗಳಲ್ಲಿ ಮಹಾಭಾರತವು ಮಾನವ ಇತಿಹಾಸದಲ್ಲಿಯೇ ಏಕೈಕ ಅತ್ಯಂತ ಮಹತ್ವ ಪೂರ್ಣ ಕೃತಿಯಾಗಿದೆ" ಎಂದು ಹೇಳಿದ್ದಾರೆ. ಜನಜೀವನಕ್ಕೆ, ಜಗತ್ತಿಗೆ ಬೇಕಾದ ಎಲ್ಲ ವಿಷಯಗಳೂ ಭಾರತದಲ್ಲಿವೆ. ಭಾರತದಲ್ಲಿ ಇಲ್ಲದ ವಿಷಯವಿಲ್ಲ. ಆಸೆ-ನಿರಾಶೆ, ಸುಖ-ದುಃಖ, ಕಷ್ಟ-ನಷ್ಟ, ಮೊದಲಾದ ಸಂಗತಿಗಳನ್ನು ಪ್ರತಿ ಹೆಜ್ಜೆಗೂ ಕಾಣಬಹುದಾಗಿದೆ. ಧರ್ಮ, ಸತ್ಯ, ಶಾಂತಿ, ಸಹನೆ, ತ್ಯಾಗ, ಭೋಗಗಳ ಪರಿಚಯ ಹೃದಯಂಗಮವಾಗಿದೆ. ಮಹಾಭಾರತದಲ್ಲಿ ಇಂತಹ ವಿಷಯ ಇಲ್ಲವೆನ್ನುವಂತೆಯೇ ಇಲ್ಲ. ಎಲ್ಲವೂ ಇದೆ. ಕಾಲ ಬದಲಾಗಿರ ಬಹುದು. ಹೆಸರುಗಳು ಬದಲಾಗಿರಬಹುದು. ಆದರೆ ಭಾರತದ ಕಥೆಯ ಸನ್ನಿವೇಶ, ಪಾತ್ರಗಳನ್ನು ಇಂದಿಗೂ ಕಣ್ಣೆದುರಿನಲ್ಲಿಯೇ ಕಾಣಬಹುದು. ಜಗತ್ತಿನ ನೆಲವಿಗೆ ಆಧಾರವಾದ ಧರ್ಮದ ಹಲವು ಹತ್ತು ಸಮಸ್ಯೆಗಳನ್ನು ಬಿಡಿಸಿ, ಧರ್ಮವೇ ಮೂಲ ಎಂದು ನಿರೂಪಿಸಿದ ಈ ಕಾವ್ಯ ಪಂಚಮ ವೇದವೆಂದು ಗೌರವಿಸಲ್ಪಡುತ್ತಿದೆ.

ಕಾವ್ಯದ ಕಥೆ ಸ್ವಾರಸ್ಯವಾಗಿ ಉಳಿದಿರಲು ಹಲವಾರು ಕಾರಣಗಳಿವೆ. ಮಹಾಭಾರತದ ಕಥೆ ವ್ಯಾಸ ಮಹರ್ಷಿಗಳ ದೃಷ್ಟಿಯಲ್ಲಿ ಕೇವಲ ಇತಿಹಾಸದ ಕಥೆಯಲ್ಲ. ಅವರು ಐತಿಹಾಸಿಕ ವರದಿಯನ್ನೂ ನೀಡಿಲ್ಲ. ಇತಿಹಾಸ ಮತ್ತು ಧರ್ಮ ಎರಡೂ ಸಮವಾಗಿ ಹಾಲುಗೊಂಡು ಮುಂದೆ ನಡೆದಿವೆ. ಕಾವ್ಯದ ಮಧ್ಯದಲ್ಲಿ ಜನಮೇಜಯರಾಯ, ಧೃತರಾಷ್ಟ್ರ, ಋಷಿಗಳೂ ಧರ್ಮದ ವಿಷಯವಾಗಿ ಜಿಜ್ಞಾಸೆನಡೆಸಿದ್ದಾರೆ. ಯಕ್ಷನಹುಷರು ಧರ್ಮದ ಪರೀಕ್ಷೆಯನ್ನು ನಡೆಸಿದ್ದಾರೆ. ಧರ್ಮವೇ ಈ ಕಾವ್ಯದ ಕೇಂದ್ರ ಶಕ್ತಿ. ಕಾವ್ಯದ ಆದಿಯಿಂದ ಅಂತ್ಯದವರೆಗೆ ಧರ್ಮದ ಧಾರೆಹರಿದಿದೆ.

ಮಹಾಭಾರತ ಮಹಾಕಾವ್ಯದಿಂದ ಪ್ರಯೋಜನ ಪಡೆಯುದಿರುವವರು ವಿರಳ. ಗಾಯಕರು, ಕವಿಗಳು, ಶ್ರೋತೃಗಳು ತಮ್ಮ ಅಭಿರುಚಿಗೆ ತಕ್ಕಂತೆ ಅದರ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದರು. ಈ ಕಾವ್ಯದ ಕಟ್ಟಿನಲ್ಲಿ ಅಳವಡಿಸಿರುವ ವಿಷಯಗಳ ಸಂಖ್ಯೆ ಅಗಾಧ. ಎಷ್ಟು ಜನ ಎಷ್ಟು ಬಗೆಯಲ್ಲಿ ಅದನ್ನು ಬಳಸಿಕೊಂಡರೂ ಅದರ ಸಂಖ್ಯೆ ಅಕ್ಷಯವಾಗುತ್ತಿದೆ. ಭಾರತದ ಹಿರಿಯ ಕಿರಿಯ ನೂರಾರು ಕವಿಗಳು ಉಚಿತವಾದ ರತ್ನವನ್ನು ಈ ಮಹಾಸಾಗರದಿಂದ ಪಡೆದು ಕೊಂಡಿದ್ದಾರೆ. ಹೀಗೆ ಜನಪ್ರಿಯ ಕಾವ್ಯ ಮೆರೆದು ಅಮರತೆಯನ್ನು ಉಳಿಸಿಕೊಂಡ ಮಹಾಕಾವ್ಯ "ಮಹಾಭಾರತ" ಒಂದೇ. ಆದರೆ, ಅದರೊಡನೆ ಸ್ಪರ್ಧೆಗೆ ನಿಲ್ಲಬಲ್ಲ ಕಾವ್ಯವೆಂದರೆ "ರಾಮಾಯಣ".

ಮಹಾಭಾರತದಲ್ಲಿ ಬರುವ ಪಾತ್ರಗಳ

(ಎಂಟನೇ ಪುಟ ನೋಡಿ)

ಉಳಿತಾಯವನ್ನೇ ಖರ್ಚೆಂದು ಬಗೆದರೆ . . .

ಏನನ್ನೂ ಉಳಿಸಲಾರದವರಿಗೆ ಇದೊಂದು ಕಿವಿ ಮಾತು:

ಸಂಪಾದನೆ ನಿಮ್ಮ ಕೈಗೆ ಬಂದಂತೆ, ಏನನ್ನೂ ಉಳಿಸದೆ ಖರ್ಚು ಮಾಡುವುದರಲ್ಲೇ ನಿಮಗೆ ತೃಪ್ತಿಯಿರುವುದಾದರೆ ನಿಮ್ಮ ಖರ್ಚಿನ ಪಟ್ಟಿಯಲ್ಲಿ ಒಂದು ಉಳಿತಾಯದ ಖಾತೆಯನ್ನು ಕೂಡಾ ಸೇರಿಸಿರಿ. ಅದೊಂದು ವೆಚ್ಚದ ಬಾಬ್ತೆಂದು ತಿಳಿದು ತೃಪ್ತಿ ಪಡಿರಿ. ನಿಮ್ಮ ಇತರ ಖರ್ಚುಗಳಂತೆ, ಈ ಖರ್ಚು ಇಂದು ಮಾತ್ರ ತೃಪ್ತಿ ಕೊಟ್ಟು ಮುಂದೆ ಚಿಂತೆಗೆ ಈಡು ಮಾಡುವುದಿಲ್ಲ. ಬದಲಿಗೆ ಅದು ಮುಂದೆ ನೀಡಲಿರುವ ಸಂತೋಷವೇ ಹಿರಿದಾದುದು.

ಈ ಹೊಸ ಖರ್ಚಿನಿಂದ ಹಣ ಮಾತ್ರ ನಿಮ್ಮ ಉಳಿತಾಯ ಖಾತೆಯಲ್ಲೇ ಜಮೆಯಾಗಿ, ಅದು ಕ್ರಮೇಣ ಬೆಳೆದು, ಸಂಪತ್ತಾಗಿ ಮಾರ್ಪಡುವುದು. ಅತೃಪ್ತಿಯ ದಿನಗಳಲ್ಲಿ ಅದು ನಿಮಗೊಂದು ಅಮೂಲ್ಯ ನಿಧಿಯಾಗಿ ಕಾಣುವುದು. ಉಳಿತಾಯವೆಂಬ ಈ ಖರ್ಚಿನ ಸವಿ ಒಮ್ಮೆ ನಿಮ್ಮ ಅನುಭವಕ್ಕೆ ಬಂದರೆ ಮತ್ತೆ ನಿಮ್ಮ ಇತರ ಅನಾವಶ್ಯಕ ಖರ್ಚುಗಳೆಲ್ಲವೂ ಉಳಿತಾಯವಾಗಿ ರೂಪಾಂತರಗೊಳ್ಳುವುದು. ಪರಿಣಾಮ? ನಿಮ್ಮ ಮುಂದಿನ ಬದುಕಿನ ಸುಖ ರೂಪುಗೊಳ್ಳುವುದು.

ಉಳಿತಾಯ ಖಾತೆಯಲ್ಲಿ ಹಣವನ್ನು ಖರ್ಚು ಮಾಡಲು ಇಷ್ಟರಲ್ಲೇ ನೀವು ನಿರ್ಧರಿಸಿದ್ದರೆ ಸಿಂಡಿಕೇಟ್ ಬ್ಯಾಂಕಿನಲ್ಲಿರುವ ಯಾವುದಾದರೊಂದು ಖಾತೆಯಲ್ಲಿ ನಿಮ್ಮ ಇತರ ಖರ್ಚಿನ ಸಂದರ್ಭಗಳಲ್ಲಿ ಹಣ ಉಳಿಸಿರಿ.

ವ್ಯಯದ ಬಣ್ಣ ತಳೆದ ಉಳಿತಾಯ
ನೀಡುವುದು ಸುಖ ಬದುಕಿಗೊಂದು ಅಡಿಪಾಯ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

• • • ಕ್ರೀ
ಅರ್ಜುನ ಪ್ರ

ಜೆಮಿನಿ ೪ ಉಪಗ್ರಹದ ಯಾತ್ರಿ ಯ್ಯೂಜಿನ್ ಸೆರನನ್ ಆಕಾಶದಲ್ಲಿ ಮಾನವ ಉಪಗ್ರಹದಿಂದ ಹೊರಗಿರುವುದೂ ಸಾಧ್ಯವೆಂದು ತೋರಿಸಿದರು. ಚಿತ್ರದಲ್ಲಿ ಸೆರನನ್‌ರವರು ಉಪಗ್ರಹದ ಹೊರಗೆ ಹಾರುತ್ತಿರುವುದನ್ನೂ ಅವರನ್ನು ಒಂದು ತಂತು ಉಪಗ್ರಹಕ್ಕೆ ಜೋಡಿಸಿರುವುದನ್ನೂ ಕಾಣಬಹುದು.

ಮಾಖನ ಸಿಂಗ್

ಮಾಖನ ಸಿಂಗ್ ಟೋಕಿಯೋದಲ್ಲಿ ನಡೆದ ಒಲಿಂಪಿಕ್ ಪಂದ್ಯಗಳಲ್ಲಿ ೪೦.೫ ಸೆಕೆಂಡುಗಳಲ್ಲೇ ಸೆಮಿಫೈನಲ್ ತಲುಪಿದ ಭಾರತದ ೪×೪೦೦ ಮೀಟರ್ ರಿಲೇ ಟೀಂನ ಸದಸ್ಯರು. ಅವರು ಜಕಾರ್ತಾದಲ್ಲಿ ನಡೆದ ಏಷ್ಯಾನ್ ಕ್ರೀಡಾ ಸ್ಪರ್ಧೆಯಲ್ಲಿ ೪೦೦ ಮೀಟರ್‌ಗಳ ಅಂತರವನ್ನು ೪೭.೫ ಸೆಕೆಂಡುಗಳಲ್ಲಿ ಕ್ರಮಿಸಿ, ರಜತ ಪದಕವನ್ನು ಗಳಿಸಿದ್ದಾರೆ. ಇವೇ ಪಂದ್ಯಗಳಲ್ಲಿ ಸುವರ್ಣ ಪದಕ ಗಳಿಸಿದ ಭಾರತದ ೪×೪೦೦ ಮೀಟರ್ ರಿಲೇ ತಂಡದಲ್ಲಿಯೂ ಇವರು ಇದ್ದರು.

ಪಟೌಡಿ ನವಾಬ್

ಪಟೌಡಿ ನವಾಬರು ಯಾರಿಗೆ ತಾನೇ ಗೊತ್ತಿಲ್ಲ? ಅವರು ಕ್ರಿಕೆಟ್ ಕಲಿತದ್ದು ಲಂಡನಿನಲ್ಲಿ. ೧೯೬೦ರಲ್ಲಿ ಲಾರ್ಡ್ಸ್ ಮೈದಾನದಲ್ಲಿ ನಡೆದ ಕ್ರಿಕೆಟ್ ಪಂದ್ಯದಲ್ಲಿ ಅವರು ಮೊದಲ ಬಾರಿಗೆ ಭಾಗವಹಿಸಿ ಆಕ್ಸ್‌ಫರ್ಡ್ ಪರವಾಗಿ ಆಡಿದರು. ಈ ಪಂದ್ಯದಲ್ಲಿ ಅವರು ಕೆಂಬ್ರಿಜ್ ವಿರುದ್ಧ ಸೆಂಚುರಿಯನ್ನು ಹೊಡೆದರು. ೧೯೬೧ರಲ್ಲಿ ಅವರು ಆಕ್ಸ್‌ಫರ್ಡಿನ ಕ್ರಿಕೆಟ್ ತಂಡದ ಕ್ಯಾಪ್ಟನ್ನಾಗಿದ್ದರು.

ವೆಸ್ಟ್ ಇಂಡೀಜಿಗೆ ತೆರಳಿದ ಭಾರತೀಯ ಕ್ರಿಕೆಟ್ ತಂಡಕ್ಕೆ ಇವರು ಉಪನಾಯಕರಾಗಿದ್ದರು. ಈ ತಂಡದ ಕ್ಯಾಪ್ಟನ್ನರಾಗಿದ್ದ ನಾರಿಕಾಂಟ್ರ್ಯಾಕ್ಟರ್ ಗಾಯಗೊಂಡಿದ್ದರಿಂದ ಪಟೌಡಿ ಈ ಟೀಮಿನ ಕ್ಯಾಪ್ಟನ್ನರಾದರು. ಹೀಗೆ ೨೧ರ ಪ್ರಾಯದಲ್ಲೇ ಅವರು ಟೆಸ್ಟ್ ಮ್ಯಾಚ್‌ನಲ್ಲಿ ಭಾಗವಹಿಸಿದ ಅತ್ಯಂತ ಕಿರಿಯ ಕ್ಯಾಪ್ಟನ್ನರೆಂದು ಕೀರ್ತಿಗೊಳಿಸಿದರು. ಎಂ. ಸಿ. ಸಿ. ಆಸ್ಟ್ರೇಲಿಯ, ಸಿಲೋನ್, ನ್ಯೂಜಿಲೇಂಡ್ ಕ್ರಿಕೆಟ್ ಟೀಂಗಳ ವಿರುದ್ಧ ನಡೆದ ಪಂದ್ಯಗಳಲ್ಲಿ ಅವರು ಭಾರತೀಯ ಟೀಮಿನ ನಾಯಕರಾದರು.

ಜರ್ನೇಲ್ ಸಿಂಗ್

ಜರ್ನೇಲ್ ಸಿಂಗ್‌ರು ಶ್ರೇಷ್ಠ ಫುಟ್‌ಬಾಲ್ ಆಟಗಾರರು. ೧೯೬೨ರಲ್ಲಿ ನಡೆದ ಏಷ್ಯನ್ ಕಪ್ ಟೂರ್ನಮೆಂಟ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದರು. ಏಷ್ಯದಲ್ಲಿ ಸರ್ವಶ್ರೇಷ್ಠ ಗೋಲಕೀಪರ್ ಎಂದು ಹೆಸರು ಪಡೆದರು. ೧೯೬೦ರಲ್ಲಿ ರೋಂನಲ್ಲಿ ನಡೆದ ಒಲಿಂಪಿಕ್ ಪಂದ್ಯಗಳಲ್ಲಿ,೧೯೬೪ರಲ್ಲಿ ಒಲಂಪಿಕ್ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದರು.

೧೯೬೧ ಮತ್ತು ೧೯೬೪ರಲ್ಲಿ ನಡೆದ ಮರ್ಡೆಕ ಟೂರ್ನಮೆಂಟ್‌ನಲ್ಲಿ ಅವರು ಭಾರತದ ಪರವಾಗಿ ಭಾಗವಹಿಸಿದರು. ಜಕರ್ತಾದಲ್ಲಿ ೧೯೬೨ರ ನಾಲ್ಕನೆಯ ಏಷ್ಯನ್ ಕ್ರೀಡಾ ಸ್ಪರ್ಧೆಗಳಲ್ಲಿ ಮತ್ತು ೧೯೬೪ರ ಏಷ್ಯನ್ ಕಪ್ ಟೂರ್ನಮೆಂಟ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದರು.

ಎಸ್. ಲಕ್ಷ್ಮಣ

ಸರ್ವೀಸಸ್ ಪರವಾಗಿ ಆಡುವ ಎಸ್. ಲಕ್ಷ್ಮಣ ಶ್ರೇಷ್ಠ ಗೋಲ್ ಕೀಪರ್ ಎಂದು ಹೆಸರು ಗಳಿಸಿದ್ದಾರೆ. ಅವರು ಮೂರು ಒಲಂಪಿಕ್ ಪಂದ್ಯಗಳಲ್ಲಿ ಭಾರತದ ಪರವಾಗಿ ಆಡಿದರು. ೧೯೬೪ರಲ್ಲಿ ಅವರು ಲೈಯನ್ಸ್ ಹಾಕಿ ಟೂರ್ನಮೆಂಟ್‌ನಲ್ಲಿ ಮತ್ತು ಟೋಕಿಯೊದಲ್ಲಿ ಆಡಿದರು. ಈ ಎರಡೂ ಪಂದ್ಯಗಳಲ್ಲಿ ಅವರ ಆಟ ಅತ್ಯಂತ ಶ್ರೇಷ್ಠ ಮಟ್ಟದ್ದಾಗಿತ್ತು. ಟೋಕಿಯೋ ಒಲಂಪಿಕ್ ಆಟಗಳಲ್ಲಿ ಭಾರತ ಪಾಕಿಸ್ತಾನಗಳ ನಡುವೆ ನಡೆದ ಸ್ಪರ್ಧೆಯಲ್ಲಿ ಅವರ ಆಟ ಪ್ರೇಕ್ಷಣೀಯವಾಗಿತ್ತು.

ರಾವ್ ರಾಜಾ ಹನೂತ ಸಿಂಗ್

ಅರವತ್ತಾನಾಲ್ಕು ವರ್ಷದ ರಾವ್ ರಾಜಾ ಹನೂತ್ ಸಿಂಗ್ ತಮ್ಮ ೧೪ನೆಯ ವಯಸ್ಸಿನಿಂದಲೇ ಶ್ರೇಷ್ಠ ಪೋಲೋ ಆಟಗಾರರಾಗಿದ್ದಾರೆ. ೫೦ ವರ್ಷಗಳ ನಂತರವೂ ಅವರು ಅನೇಕ ಚಾಂಪಿಯನ್ ಟೂರ್ನಮೆಂಟ್‌ಗಳಲ್ಲಿ, ಮತ್ತು ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಭಾರತದಲ್ಲಿ ಪೋಲೋ ಕ್ರೀಡಾ ಪ್ರೇಮಿಗಳೆಲ್ಲರೂ ಹನೂತ್ ಸಿಂಗರು, ಈ ಕ್ಷೇತ್ರದಲ್ಲಿ ಗಳಿಸಿದ ಅಪೂರ್ವ ಸಾಧನೆಯನ್ನು ಬಲ್ಲವರಾಗಿದ್ದಾರೆ.

೧೯೫೦ರಲ್ಲಿ ಹನೂತ್ ಸಿಂಗ್‌ರು ಭಾರತ ಮತ್ತು ಇಂಗ್ಲಂಡ್‌ಗಳಲ್ಲಿ ಜಯಪುರ ಟೀಂನ ಪರವಾಗಿ ಆಡಿದರು. ಈ ಟೀಂ ಅವರ ಶ್ರೇಷ್ಠ ಮಟ್ಟದ ಆಟದಿಂದಾಗಿ ಜರುಗಿನ ವಿಜಯಗಳಿಸಿತು.

ರಾಷ್ಟ್ರಪತಿ ಡಾ| ಎಸ್...
ಖ್ಯಾತಿ ಗಳಿಸಿದ ಕ್ರೀಡಾ ಪಟು...
ದರಷ್ಟೆ! ದೇಶದಲ್ಲಿ ಶ್ರೇಷ್ಠ...
ಸಂಪ್ರದಾಯ ನೊತ್ತ ಮೊದಲ...
ಪಡೆದವರ ಸೂಕ್ಷ್ಮ ಪರಿಚ...

ಗೌತಮ ಆರ್. ದಿವಾನ್

ಶ್ರೀ ಆರ್. ದಿವಾನ್ ಭಾರತದ ರಾಷ್ಟ್ರೀಯ ಟೇಬಲ್ ಟೆನಿಸ್ ಸಿಂಗಲ್ಸ ಮತ್ತು ಡಬಲ್ಸ್ ಚಾಂಪಿಯನ್‌ರಾಗಿದ್ದಾರೆ. ೧೯೬೪ರ ಡಿಸೆಂಬರ್ ತಿಂಗಳಲ್ಲಿ ನಡೆದ ರಾಷ್ಟ್ರೀಯ ಟೆಬಲ್ ಟೆನಿಸ್ ಚಾಂಪಿಯನ್ ಶಿಪ್ ಪಂದ್ಯಗಳಲ್ಲಿ ಅವರು ಈ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಈ ಮೊದಲು ಅವರು ನಾಲ್ಕು ಬಾರಿ, ಅಂದರೆ ೧೯೫೬ರಿಂದ ೫೯ರ ವರೆಗೂ, ಸಿಂಗಲ್ಸ್‌ಪ್ರಶಸ್ತಿ ಪಡೆದರು. ೧೯೫೯ರಲ್ಲಿಡಾರ್ಟ್‌ಮಂಡ್ ಮತ್ತು ೧೯೬೩ರಲ್ಲಿ ವಿಶ್ವ ಟೆಬಲ್ ಟೆನಿಸ್, ಚಾಂಪಿಯನ್‌ಶಿಪ್ ಪಂದ್ಯಗಳಲ್ಲಿ ಮತ್ತು ಮನಿಲಾ ಮುಂಬಯಿ ಹಾಗೂ ಸಿಯೋಲ್‌ಗಳಲ್ಲಿ ನಡೆದ ಏಷ್ಯನ್ ಚಾಂಪಿಯನ್ ಶಿಪ್ ಪಂದ್ಯಗಳಲ್ಲಿ ಅವರು ಭಾರತವನ್ನು ಪ್ರತಿನಿಧಿಸಿದರು.

ಭಿಷಂಬರ್ ಸಿಂಗ್

ಭಿಷಂಬರ್ ಸಿಂಗರು ಶ್ರೇಷ್ಠ ಕುಸ್ತಿಪಟುವಾಗಿದ್ದಾರೆ. ೧೯೬೩ರಲ್ಲಿ ಅವರು ರಾಷ್ಟ್ರೀಯ ಚಾಂಪಿಯನ್ ಆದರು. ಪ್ರವಾ



ಕೆರೇಬಿಯನ್ ಸಮುದ್ರ ಪ್ರದೇಶದಲ್ಲಿ ಹಾರಾಡುತ್ತಿದ್ದಾಗ ತೆಗೆದ ಜೆಮಿನಿ-೪ರ ಒಂದು ಚಿತ್ರ.



ಪೋಲ್ ವಾಲ್ಟ್ ...
ಪೋಲ್ ಕೈ ಜಾರಿದ್ದರಿಂದ ...

...ಂಗ • • •

...ಸ್ತಿ ವಿಜೇತರು

...ಅವರು, ಕ್ರೀಡಾರಂಗದಲ್ಲಿ ಬಹುಮುಖ ...ಕ್ಕೆ ಅರ್ಜುನ ಪ್ರಶಸ್ತಿ ನೀಡಿ, ಗೌರವಿಸಿ ...ಗಳಿಗೆ ಪ್ರಶಸ್ತಿ ನೀಡಿ ಪುರಸ್ಕರಿಸುವ ...ಂಭವಾಯಿತು. ಈ ಸಲದ ಪ್ರಶಸ್ತಿ ...ಡಲಾಗಿದೆ.

...ಸಿ ಅಫ್ಘಾನ್ ಟೀಮಿನ ವಿರುದ್ಧ ಆಡಿ ವಿಜಯ ಶಾಲಿಯಾದರೂ. ಅದೇ ವರ್ಷ ಅವರು ಸಿಲೋನಿನಲ್ಲಿ ನಡೆದ ಕುಸ್ತಿ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿ ಜಯಗಳಿಸಿದರು.

೧೯೬೪ ರಲ್ಲಿ ಅವರು ಪುನಃ ರಾಷ್ಟ್ರೀಯ ಚಾಂಪಿಯನ್ ಆದರು. ಪ್ರವಾಸಿ ನ್ಯೂಜಿಲೇಂಡ್ ಟೀಂನೊಂದಿಗೆ ನಡೆದ ಸ್ಪರ್ಧೆಯಲ್ಲೂ ಅವರು ಭಾಗವಹಿಸಿ ಭಾರತಕ್ಕೆ ಕೀರ್ತಿತಂದರು. ಅದೇ ವರ್ಷ ಅವರು ಇರಾನ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದರು. ಅಲ್ಲಿಯೂ ಅವರು ಎಲ್ಲಾ ಸುತ್ತುಗಳಲ್ಲಿ ಗೆದ್ದು ಭಾರತದ ಗೌರವವನ್ನು ಹೆಚ್ಚಿಸಿದರು. ಟೋಕಿಯೋ ಒಲಂಪಿಕ್ ಕುಸ್ತಿ ಪಂದ್ಯಗಳಲ್ಲಿ ಭಾಗವಹಿಸಿ ವಿಶ್ವದ ಆರನೆಯ ಸರ್ವಶ್ರೇಷ್ಠ ಕ್ರೀಡಾಪಟು ಎಂದು ಪ್ರಶಸ್ತಿ ಪಡೆದರು.

೧೯೬೫ರಲ್ಲಿ ಭಾರತೀಯ ಪರ್ವತಾರೋಹಣ ತಂಡದವರು ಸಾಧಿಸಿದ ಅದ್ಭುತ ಯಶಸ್ಸು ಎಲ್ಲರಿಗೂ ಗೊತ್ತಿರುವ ಮಾತಾಗಿದೆ. ಈ ತಂಡದ ಒಂಭತ್ತು ಸದಸ್ಯರು ೧೯೬೫ರ ಮೇ ತಿಂಗಳಲ್ಲಿ ಏಕಕಾಲಕ್ಕೆ ಎವರೆಸ್ಟ್ ಶಿಖರದ ತುದಿಯನ್ನು ಮುಟ್ಟಿ ಹೊಸ ದಾಖಲೆಯನ್ನು ಸ್ಥಾಪಿಸಿದರು. ಲೇ| ಕ| ಎಂ. ಎಸ್. ಕೋಹಲಿ ಅವರು ಈ ಎವರೆಸ್ಟ್ ವಿಜಯಿಗಳ ತಂಡದ ನಾಯಕರಾಗಿದ್ದರು. ಮೇಜರ್ ಎನ್. ಕುಮಾರ ಉಪನಾಯಕರು. ವಿಜಯಕ್ಕೆ ಕಾರಣವಾದ, ಪರ್ವತಾರೋಹಣ ತಂಡದ ಸ್ಫೂರ್ತಿಗೆ ಪ್ರಾಧಾನ್ಯ ನೀಡಲು ಅರ್ಜುನ ಪ್ರಶಸ್ತಿಯನ್ನು ಸಮಗ್ರ ತಂಡದ ಹೆಸರಿನಲ್ಲಿ ಕೊಡಲಾಗಿದೆ.

ಲೇ| ಕ| ಎಂ. ಎಸ್. ಕೋಹಲಿ, ಮೇಜರ್ (ಈಗ ಲೇ| ಕ|) ಎನ್. ಕುಮಾರ್, ಗುರುದಯಾಳ ಸಿಂಗ್, ಶ್ರೀ ಸಿ. ಪಿ. ವೊಹ್ರಾ, ಮೇಜರ್ ಮುಲ್ಕರಾಜ್, ಸೋನಾಂ ಗ್ಯಾಟ್ಸೊ, ಎಚ್. ಸಿ. ಎಸ್. ರಾವತ್, ಸೋನಾಂ ವಾಂಗ್ಯಾಲ್, ಕ್ಯಾಪ್ಟನ್ ಎಚ್. ಎಸ್. ಅಹಲ್ಲುವಾಲಿಯ, ಕ್ಯಾಪ್ಟನ್ ಎಚ್. ವಿ. ಬಹುಗುಣ, ಕ್ಯಾಪ್ಟನ್ ಎ. ಎಸ್. ಚೀಮಾ, ಕ್ಯಾಪ್ಟನ್ (ಈಗ ಮೇಜರ್) ಬಿ. ಪಿ. ಸಿಂಗ್, ನವಾಂಗ್ ಗೊಂಬು, ಆಂಗ್‌ಕಾಮಿ, ಕ್ಯಾಪ್ಟನ್ (ಈಗ ಮೇಜರ್) ಜೆ. ಸಿ. ಜೋಶಿ, ಡಾ| (ಈಗ ಕ್ಯಾಪ್ಟನ್) ಎ. ಕೆ. ಚಕ್ರವರ್ತಿ. ಡಾ| ಡಿ. ವಿ. ತೆಲಂಗ್, ಜಿ. ಎಸ್. ಬಂಗು, ಹವಾಲ್ದಾರ್ ಸಿ. ಬಾಲಕೃಷ್ಣನ್ ಲೆ. ಬಿ. ಎನ್. ರಾಣಾ ಇವರೇ ಅರ್ಜುನ್ ಪ್ರಶಸ್ತಿ ಪಡೆದ ಎವರೆಸ್ಟ್ ತಂಡದ ಸದಸ್ಯರು.

ಕೆ. ಎಲ್. ಪಾವೆಲ್

ಕೆ. ಎಲ್. ಪಾವೆಲ್ ಮೈಸೂರಿನ ಕೋಲಾರ್ ಚಿನ್ನದಗಣಿ (ಕೆ. ಜಿ. ಎಫ್.) ಪ್ರದೇಶದವರು: ೧೦೦ ಮೀಟರ್‌ಗಳ ಅಂತರವನ್ನು ಕೇವಲ ೧೦.೪ ಸೆಕಂಡುಗಳಲ್ಲಿ ಓಡಿ, ಭಾರತದ ಅತಿ ವೇಗದ ಓಟಗಾರರೆಂದು ಹೆಸರು ಪಡೆದರು. ೧೯೬೫ರ ಅಕ್ಟೋಬರ್ ತಿಂಗಳಲ್ಲಿ ಪಾಟಿಯಾಲಾದಲ್ಲಿ ಭಾರತ—ರಷ್ಯಾ ಟೆಸ್ಟ್ ಪಂದ್ಯಗಳಿಗಾಗಿ ಅಭ್ಯರ್ಥಿಗಳನ್ನು ಆರಿಸಲು ಸ್ಪರ್ಧೆಗಳು ನಡೆದಾಗ, ಅವರಿಗೆ ಈ ಗೌರವ ಲಭಿಸಿತು. ಇದೇ ಸ್ಪರ್ಧೆಯಲ್ಲಿ, ಕೆ. ಎಲ್. ಪಾವೆಲ್ ಅವರು ೨೦೦ ಮೀಟರ್‌ಗಳ ಅಂತರವನ್ನು ೨೧.೪ ಸೆಕಂಡುಗಳಲ್ಲಿ ಓಡಿ ಹೊಸ ದಾಖಲೆ ಸ್ಥಾಪಿಸಿದ್ದಾರೆ. ಏಷ್ಯದ ಈ ಹಿಂದಿನ ದಾಖಲೆ ೨೧.೬ ಸೆಕಂಡುಗಳು. ಅದೇ ತಿಂಗಳಲ್ಲಿ ಭಾರತೀಯರು ಮತ್ತು ರಷ್ಯನ್ನರ ನಡುವೆ ನಡೆದ ನಾಲ್ಕು ಟೆಸ್ಟ್ ಪಂದ್ಯಗಳಲ್ಲಿ, ಪಾವೆಲ್‌ರು ಸ್ಪ್ರಿಂಟ್ ಡಬಲ್‌ನಲ್ಲಿ ಖ್ಯಾತಿಯನ್ನು ಗಳಿಸಿಕೊಂಡರು. ನಿಜಕ್ಕೂ ಇದೊಂದು ಗಮನಾರ್ಹ ಸಾಧನೆ. ಪುನಃ ೧೯೬೩ರಲ್ಲಿ ನೈರೋಬಿಯಲ್ಲಿ ನಡೆದ ಆಫ್ರಿಕನ್ ವಿಶ್ವವಿದ್ಯಾನಿಲಯಗಳ ಪಂದ್ಯಗಳಲ್ಲಿ ಭಾಗವಹಿಸಬೇಕೆಂದು ಪಾವೆಲ್‌ರಿಗೆ ಕರೆ ಬಂತು. ಅವರು ಈ ಪಂದ್ಯಗಳ ೨೦೦ ಮೀಟರ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದರು. ಒಲಂಪಿಕ್ ಪೂರ್ವ ತರಬೇತಿ ಮತ್ತು ಸ್ಪರ್ಧೆಗಳಿಗಾಗಿ ಪಶ್ಚಿಮ ಜರ್ಮನಿ, ಹಾಲೆಂಡ್, ಮತ್ತು ಸ್ವಿಜರ್ ಲೇಂಡ್‌ಗಳಲ್ಲಿ ಪ್ರವಾಸ ಮಾಡಿದ ಭಾರತೀಯ ಕ್ರೀಡಾ ತಂಡದಲ್ಲಿ ಇವರು ಭಾಗವಹಿಸಿದ್ದರು. ೧೯೬೪ರಲ್ಲಿ ಅವರು ಟೋಕಿಯೋದಲ್ಲಿ ನಡೆದ ವಿಶ್ವ ಒಲಂಪಿಕ್ ಪಂದ್ಯದಗಳಲ್ಲಿ, ೧೦೦ ಮೀಟರ್ಸ್ ಮತ್ತು ೪—೧೦೦ ಮೀಟರ್ಸ್ ರಿಲೇಗಳಲ್ಲಿ ಭಾಗವಹಿಸಿ ಭಾರತದ ಟೀಮು ಸೆಮಿಫೈನಲ್ ತಲುಪುವಂತೆ ಮಾಡಿದರು. ೧೯೬೫ರ ನವೆಂಬರ್ ತಿಂಗಳಲ್ಲಿ ನವದೆಹಲಿಯಲ್ಲಿ ನಡೆದ ಅಂತಾರೈಲ್ವೆ ಕ್ರೀಡಾ ಸ್ಪರ್ಧೆಯಲ್ಲಿ, ಪೂರ್ವ ರೈಲ್ವೆ ಟೀಮು ಚಿನ್ನದ ಪದಕವನ್ನು ಪಾವೆಲ್‌ರು ಪಡೆದರು.



ಜೆಮಿನಿ—೬ ಉಪಗ್ರಹದ ಯಾತ್ರಿಗಳು ಸಿರಮನ್ (ಎಡ) ಮತ್ತು ಟಾಮ್ ಸ್ಟಫರ್ಡ್ (ಬಲ). ತಮ್ಮ ಮೂರು ದಿನಗಳ ಅಂತರಿಕ್ಷ ಯಾತ್ರೆಯ ನಂತರ ಉಪಗ್ರಹದಿಂದ ಇಳಿದು ನೌಕೆಯನ್ನು ಹತ್ತಿ ಆರಾಮ ಪಡೆಯಲು ದೂರ ಹೋಗುತ್ತಿದ್ದಾರೆ.

ದಿನೇಶ್ ಖನ್ನಾ

ವೃತ್ತಿಯಿಂದ ಸಿವಿಲ್ ಎಂಜನೀಯರ್ ಆಗಿರುವ ದಿನೇಶ ಖನ್ನಾ ೧೯೫೭ ಮತ್ತು ೧೯೫೮ರಲ್ಲಿ ಎರಡು ಬಾರಿ ರಾಷ್ಟ್ರೀಯ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್ ಸ್ಪರ್ಧೆಗಳಲ್ಲಿ ದ್ವಿತೀಯ ಸ್ಥಾನ ಪಡೆದರು. ೧೯೬೧ರಲ್ಲಿ ಅವರು ಮುಂಬೈಯಲ್ಲಿ ಭಾರತದ ಪರವಾಗಿ ಆಟವಾಡಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಪಡೆದರು. ದಿನೇಶ್ ಖನ್ನಾ ೧೯೬೨ರಲ್ಲಿ ಭಾರತೀಯ ವಿದ್ಯಾರ್ಥಿ ನಿಯೋಗದ ಸದಸ್ಯರಾಗಿ ಮಲಯಾಕ್ಕೆ ಭೇಟಿಕೊಟ್ಟರು.

(ಒಂಭತ್ತನೇ ಪುಟ ನೋಡಿರಿ)

ಇದೇನು ಎಂಬ ಕುತೂಹಲವಲ್ಲವೆ? ಕೆಳಗಡೆ ತೋರುತ್ತಿರುವುದು ಅತ್ಲಾಂಟಿಕ ಮಹಾಸಾಗರ. ಅದರಲ್ಲಿ ಅಮೆರಿಕನ್ ನೌಕೆಯೊಂದು ತೇಲುತ್ತಿದೆ. ಮೇಲ್ಗಡೆ ಹಾರುತ್ತಿರುವುದೆ ಜೆಮಿನಿ—೬ ಉಪಗ್ರಹ; ಕೆಲವೇ ಕಿ. ಮೀ. ಅಂತರದಲ್ಲಿರುವ ಉಪಗ್ರಹ ಇನ್ನೇನು ಇಳಿಯುತ್ತದೆ. ಇದನ್ನು ನೋಡಲು ಅಮೆರಿಕೆ—ಯುರೋಪುಗಳಲ್ಲಿ ತೀವ್ರ ಗಡಿಬಿಡಿಯಂತೆ!



...ಹಾರುವುದಕ್ಕೆ ಮೊದಲೇ ...ಅವನ ದುರದೃಷ್ಟ.

ವ್ಯಾಸ ಮಹರ್ಷಿಯ ಮಹಾಭಾರತ

(ಐದನೇ ಪುಟದಿಂದ)

ಲ್ಲವೂ ಮಾನವ ಸಹಜವಾದ ಗುಣ ದೋಷಗಳಿಂದ ಕೂಡಿದ್ದು ಸಜೀವ ವ್ಯಕ್ತಿಗಳಾಗಿ ಉಳಿದಿವೆ. ಅಂದು ಕಾವ್ಯದಲ್ಲಿ ರೂಪಿಸಲ್ಪಟ್ಟ ನೂರಾರು ಹಿರಿಯ ಕಿರಿಯ ಪಾತ್ರಗಳೂ ಇಂದಿಗೂ ನಮ್ಮ ಸ್ಮೃತಿಯಿಂದ ಮರೆಯಾಗುವಂತಿಲ್ಲ. ಜನಜೀವನದ ಸ್ವರೂಪವನ್ನು ಸ್ಪಷ್ಟವಾಗಿ ತೋರಿಸುವ ಭೂತಗನ್ನಡಿ ಈ ಕಾವ್ಯ.

ಲೋಕವಿಖ್ಯಾತ ಭಗವದ್ಗೀತೆಯೂ, ಭಾರತದ ಮಹಾಕಥೆಗಳಲ್ಲಿ ಬರುವ ಸಂಗ್ರಾಮದ ಮೊದಲು ನಡೆಸಿದ ಸಂಭಾಷಣೆ ಎಂಬುದು ಸ್ಪಷ್ಟವಾಗಿದೆ, ಆದರೆ ಕವಿಯ ಕವಿತಾ ಕೌಶಲದಿಂದ ವಿಷಯ ರಸಪೂರ್ಣವಾಗಿ, ಸ್ವಾರಸ್ಯತೆಯಿಂದ ಕೂಡಿ ಸುಂದರ ರೂಪು ತಾಳಿದೆ. ಅನಂತ ಕಾಲದ ವಿಶ್ವವ್ಯಾಪ್ತಿ ಅಡಗಿದೆ.

ಕುರುಕುಲ ಸಾರ್ವಭೌಮರ ಕಥೆಯೇ ಮಹಾಭಾರತದ ಕಥೆ. ಮಹಾಭಾರತದ ಕಥೆ ಭಾರತೀಯರು ಯಾರಿಗೂ ಪರಿಚಯವಿಲ್ಲದಿಲ್ಲ. ಬರಿಯ ಕಥೆ ಅಷ್ಟೇ ಏಕೆ, ಘಟನೆ, ಸನ್ನಿವೇಶ, ಪಾತ್ರ—ಪ್ರಸಂಗಗಳೂ ಚಿರಪರಿಚಿತ. ವ್ಯಾಸ ಭಾರತದ ಪರಿಚಯವಿಲ್ಲದವರಿಗೂ ಗದುಗಿನ ಭಾರತದ ಕಥೆಯಂತೂ ಜನ ಮನೋರಂಜಕ.

ಭೀಷ್ಮ, ದ್ರೋಣ ಧೃತರಾಷ್ಟ್ರ, ದುರ್ಯೋಧನ, ದುಶ್ಶಾಸನ, ಧರ್ಮನಂದನ ಮೊದಲಾಗಿ ಪಂಚ ಪಾಂಡವರು ಪಾಂಚಾಲ, ಶಕುನಿ, ಕುಂತಿ, ವಿದುರ, ಅಶ್ವತ್ಥಾಮ, ಕರ್ಣ, ಶ್ರೀ ಕೃಷ್ಣ, ದ್ರೌಪದಿ ವಿರಾಟರೂ, ಉತ್ತರ, ಶಂತನು ಚಕ್ರವರ್ತಿ ಪಾಂಡು ಮೊದಲಾದವರ ಪಾತ್ರಗಳೂ ಸ್ಪಷ್ಟವಾಗಿವೆ. ಈ ಎಲ್ಲ ಪಾತ್ರಗಳೂ ಜೀವಂತವಾಗಿವೆ. ರಾಜಸೂಯ ಯಾಗ ಕಪಟದ್ಯೂತ,ದ್ರೌಪದಿ ವಸ್ತ್ರಾಪಹರಣ, ವನವಾಸ ಅಜ್ಞಾತವಾಸದ ಅವಧಿ, ಘೋರಸಂಗ್ರಾಮ(ಕುರುಕ್ಷೇತ್ರದಲ್ಲಿ) ಹದಿನೆಂಟು ಅಕ್ಷೋಹಿಣಿ ಸೈನ್ಯದ ನಾಶ, ದುರ್ಯೋಧನ ದುಶ್ಶಾಸನರ ಅಂತ್ಯ—ಹೀಗೆ ಕಥೆ ರಸವತ್ತಾಗಿ ಸಾಗುತ್ತದೆ.

ಹತ್ತನೆಯ ಪರ್ವ ಗದಾಪರ್ವ. ಇಲ್ಲಿಗೆ ಭಾರತದ ಕಥೆ ಒಂದು ಘಟ್ಟವನ್ನೇ ಮುಟ್ಟುತ್ತದೆ. ಮಾನಧನ ಸುಯೋಧನ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಪಾಂಡವರನ್ನು ನಾಶಪಡಿಸಲು ಪ್ರಯತ್ನಿಸಿ ಕೊನೆಗೆ ತೊಡೆ ಮುರಿದು ಸಾಯುತ್ತಾನೆ. ಅಲ್ಲಿಂದ ಮುಂದೆ ಪಾಂಡವರ ಅಭ್ಯುದಯದ ಚಿತ್ರ ಗೋಚರವಾಗುತ್ತದೆ.

ಮಾನವನ ಮನಸ್ಸಿನ ಉತ್ತಮ ಭಾವನೆಗಳನ್ನು ಚಿತ್ರಿಸಲು ನೂರಾರು ಪಾತ್ರಗಳನ್ನು ಸೃಷ್ಟಿಸಿದ್ದಾನೆ ಕವಿ. ಪಾತ್ರಗಳ ಬೆಳವಣಿಗೆಗೆ, ಕಥೆಯ ಓಟಕ್ಕೆ ತಕ್ಕ ಸನ್ನಿವೇಶಗಳು ಸ್ವಾಭಾವಿಕವಾಗಿ ಇವೆ.

ಮಹಾಭಾರತದ ಕಥೆಯನ್ನು ಅಂದಿನಿಂದ ಇಂದಿನ ವರೆಗೂ ಬಹು ಜನರು ಸೂಕ್ತ ಕಂಡಂತೆ ಬಳಸಿ ಕೊಂಡಿದ್ದಾರೆ. ಜೈಮಿನಿ ಮಹರ್ಷಿಗಳು ಜೈಮಿನಿ ಭಾರತವನ್ನು ರಚಿಸಿದರು. ವ್ಯಾಸ ಮತ್ತು ಜೈಮಿನಿ ಮಹರ್ಷಿಗಳ ಭಾರತದ ಬಗ್ಗೆ ದಂತ ಕಥೆಯೊಂದು ಇದ್ದರೂ ಅದಕ್ಕೆ ಪ್ರಾಶಸ್ತ್ಯವಿಲ್ಲ. ಭಾರತದ ಭಿನ್ನ ಭಿನ್ನ ಭಾಷೆಯಲ್ಲಿ ವ್ಯಾಸಕೃತ ಮೂಲ ಸಂಸ್ಕೃತ ಭಾರತದ ಕಥೆ ಸಾಹಿತ್ಯ ಸುಧೆಯಂತೆ ಹರಿದು ಬಂದಿದೆ.

ಕನ್ನಡದ ಆದಿ ಕವಿ ಪಂಪ, ಗದುಗಿನ ನಾರಣಪ್ಪ, ಚನ್ನ ಭೂಪಾಲ, ಮುಮ್ಮಡಿ ಕೃಷ್ಣರಾಜ ಒಡೆಯರು, ಕವಿ ಸಾಳ್ವ ಇವರಿಂದ ಕ್ರಮವಾಗಿ ವಿಕ್ರಮಾರ್ಜುನ ವಿಜಯ, ಗದುಗಿನ ಭಾರತ, ಭಾರತ ಕಥಾ ಸಂಗ್ರಹ, ಕೃಷ್ಣರಾಜ ವಾಣೀ ವಿಲಾಸ ಭಾರತ ಮತ್ತು ನಾಟ್ಯ ಭಾರತ ರಚಿಸಲ್ಪಟ್ಟವೆ. ಇವುಗಳು ಪ್ರಸಿದ್ಧ ಕೃತಿಗಳು. ರನ್ನನ ಗದಾಯುದ್ಧ, ಸುಕುಮಾರ ಭಾರತಿಯ "ಛಾಯಣ ಭಾರತ" ಷಡಕ್ಷರಿಯ ಶಬರ ಶಂಕರ ವಿಲಾಸಂ, ಪಾಂಡವರ ಅಶ್ವಮೇಧಯಾಗ ವರ್ಣನೆಯ ಲಕ್ಷ್ಮೀಶನ ಜೈಮಿನಿ ಭಾರತ, ತಿಮ್ಮಣ್ಣ ಕವಿಯ ಎಂಟು ಅಧ್ಯಾಯಗಳು' ಪ್ರಾಥ, ಜನಪ್ರಿಯ ಕಾವ್ಯಗಳಿಗೆ ಭಾರತದ ಕಥೆಯೇ ಮೂಲ ಎಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮಹಾಭಾರತದ ಕಥೆಯ ಆಧಾರದ ಮೇರೆಗೆ ಸಂಸ್ಕೃತದಲ್ಲಿಯೂ ಅಸಂಖ್ಯಾತ ಕೃತಿಗಳು ರೂಪುಗೊಂಡಿವೆ. ಉದಾಹರಣೆಗೆ ವೇಣಿ ಸಂಹಾರ ಮೊದಲಾದ ಕೃತಿಗಳನ್ನು ಸೂಚಿಸಬಹುದಾಗಿದೆ. ಸಮೃದ್ಧ ಕಾವ್ಯ ಗಂಗೆಯಲ್ಲಿ ಎಷ್ಟು ನೀರನ್ನು ಬಳಸಿಕೊಂಡರೆ ತಾನೆ ಏನು? ಕೊರತೆ ಇಲ್ಲವಲ್ಲ!

ಸಂಸ್ಕೃತ ಕಾವ್ಯ ಶ್ರೇಣಿಯಲ್ಲಿ ಭಾರತದ ಸ್ಥಾನ ಮಹೋನ್ನತವಾದುದು. ಅದರ ಶಿಖರವನ್ನಂತು ಮುಟ್ಟುವಂತಿಲ್ಲ. ಅಡಿಯಲ್ಲಿಯೇ ನಿಂತು ಆನಂದಿಸಲು ಯಾವ ತೊಂದರೆಯೂ ಇಲ್ಲ.

ಸಂಸ್ಕೃತ ವಾಙ್ಮಯಕ್ಕೆ ಮಹರ್ಷಿ ವ್ಯಾಸರು ಅರ್ಪಿಸಿರುವ ಕಾಣಿಕೆ ಅಮೂಲ್ಯವಾದುದು. ಆ ಕಾಣಿಕೆಯೂ ಅತ್ಯಮೂಲ್ಯವಾದುದು. ಮಹಾಭಾರತ ಕಾವ್ಯ, ಸಂಸ್ಕೃತದಲ್ಲಿರುವ ಶಕ್ತಿಯುತ ಸುಂದರ ಕಾವ್ಯದ ಮೊದಲ ಹತ್ತು ಪರ್ವಗಳನ್ನು ಮಾತ್ರ ಗದುಗಿನ ನಾರಣಪ್ಪ ಕನ್ನಡಿಸಿ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾನೆ.

ಸೇವಾಕಾರ್ಯ ತತ್ಪರವಾದ

ಉಡುಪಿಯ ಲಯನ್ಸ್ ಕ್ಲಬ್

ಶ್ರೀ ಟಿ. ಎ. ಪೈ
ಉಡುಪಿ ಲಯನ್ಸ್ ಕ್ಲಬ್ಬಿನ
ಮೊದಲ ಅಧ್ಯಕ್ಷರು

೧೯೧೭ರಲ್ಲಿ ಸೇವೆಯೇ ಗುರಿಯಾಗಿರುವ ಲಯನ್ಸ್ ಕ್ಲಬ್ ಪ್ರಾರಂಭವಾಗಿ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಹರಡಿತು. ನಮ್ಮ ಪುಣ್ಯ ಭೂಮಿಯಲ್ಲೂ ಅದರ ಬೀಜ ೧೯೫೬ರಲ್ಲಿ ಬಿತ್ತಲ್ಪಟ್ಟಿತು. ಅಂದಿನಿಂದ ಇಂದಿನ ವರೆಗೂ ಲಯನ್ಸ್ ಕ್ಲಬ್‌ನ ಹಲವಾರು ಶಾಖೆಗಳು ದೇಶದ ಬೇರೆ ಬೇರೆಡೆ ಹಬ್ಬಿವೆ. ಉಡುಪಿಯ ಕ್ಲಬ್ ಸ್ಥಾಪನೆಗೊಂಡದ್ದು ೧೯೬೦ರ ಮಾರ್ಚಿ ತಾ. ೨೦ರಲ್ಲಿ. ಅದಕ್ಕೆ ಸನದು ದೊರೆತದ್ದು ತಾ. ೨೫—೬—೧೯೬೦ರಲ್ಲಿ. ಅಂದರೆ ಈ ಕ್ಲಬ್ಬಿಗಿಂದು ಆರು ತುಂಬಿತು. ಏಳನೆಯ ಮಳೆಗಾಲ ಆರಂಭವಾಯಿತು. ಈ ಎಳೆ ಹರೆಯದಲ್ಲಿಯೇ ಉಡುಪಿಯ ಲಯನ್ಸ್ ಕ್ಲಬ್ ತನ್ನ ಸೀಮಿತ ಸಾಧನ ಸಂಪತ್ತುಗಳಿಂದ ತನ್ನ ಗುರಿಯನ್ನು ಸಾಧಿಸಲು ಮುಂದಾಗಿದೆ. ಇದು ಪ್ರಶಂಸನೀಯ.

ಉದ್ದೇಶ ಸಾಧನೆಯ ದಾರಿಯಲ್ಲಿ ಅದು ಏನೇನು ಮಾಡಿದೆ? ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೊಂದು ರೆಫ್ರಿಜರೇಟರ್ ಕೊಟ್ಟಿದೆ. ಎಂ. ಜಿ. ಎಂ. ಕಾಲೇಜು ಮತ್ತು ಶ್ರೀ ಭ. ಪನೇಂದ್ರ ಕಾಲೇಜುಗಳಲ್ಲಿ ಬುಕ್ ಬ್ಯಾಂಕ್ ಸ್ಥಾಪಿಸುವಲ್ಲಿ ಸಿಂಡಿಕೇಟ್ ಬ್ಯಾಂಕಿನೊಂದಿಗೆ ಸಹಾಯ ಮಾಡಿದೆ. ಉಡುಪಿಯ ಆಯುರ್ವೇದ ಕಾಲೇಜಿಗೆ ೬ ಸುಸಜ್ಜಿತ ಹಾಸುಗೆಗಳನ್ನು ಪೂರೈಸಿದೆ. ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿ ಬಡ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು, ದೃಷ್ಟಿದೋಷವುಳ್ಳ ಬಡವರಿಗೆ ಕನ್ನಡಕಗಳನ್ನು ಒದಗಿಸಿದೆ. ಉಡುಪಿಯಲ್ಲಿ ಶವಗಳನ್ನು ಸ್ಮಶಾನಕ್ಕೊಯ್ಯಲು ವಾಹನವನ್ನೂ ಆದನ್ನಿಡಲು ಕೋಣೆಯನ್ನೂ ಪ್ರಯಾಣಿಕರಿಗಾಗಿ ಬಸ್ ಶೆಲ್ಟರ್ ಒಂದನ್ನೂ ಕಟ್ಟಿಸಿದೆ. ಇನ್ನು, ನೆರೆಪರಿಹಾರ ನಿಧಿ, ರಾಷ್ಟ್ರೀಯ ರಕ್ಷಣಾ ನಿಧಿಗಳಿಗೆ ಸಹಾಯ ನೀಡಿದ್ದಲ್ಲದೆ ಅತ್ಯಂತಾವಶ್ಯಕತೆಯಿರುವವರಿಗೆ ಮುಂದಿನ ಜೀವನವನ್ನು ಪ್ರಾರಂಭಿಸುವುದಕ್ಕೂ ನೆರವಿತ್ತಿದೆ. ಹೀಗೆ ಕಳೆದ ಆರು ವರ್ಷಗಳಲ್ಲಿ ಲಯನ್ಸ್ ಕ್ಲಬ್ ತನ್ನ ಸೇವಾಕಾರ್ಯಗಳಿಗಾಗಿ ವಿನಿಯೋಗಿಸಿದ ಮೊತ್ತ ಸುಮಾರು ರೂ. ೧೧,೦೦೦.

ಕ್ಲಬ್ಬಿನ ಸದಸ್ಯ ಸಂಖ್ಯೆ ನಲುವತ್ತನ್ನು ಮೀರಿಲ್ಲ. ಇವರೆಲ್ಲರೂ ತಮ್ಮ ರಕ್ತವನ್ನು ಅಗತ್ಯವಿರುವ ರೋಗಿಗಳಿಗೆ ದಾನ ಮಾಡಲು ಸಂಕೋಚವಿಲ್ಲದೆ ಮುಂದೆ ಬಂದಿದ್ದಾರೆ. ಇದೂ ತಮ್ಮ ಸಾಧನೆಯೆಂಬುದು ಇವರಿಗೊಂದು ಹೆಗ್ಗಳಿಕೆ. ಅಂತಾರಾಷ್ಟ್ರೀಯ ಸಂಸ್ಥೆ ಲಯನ್ಸ್ ಕ್ಲಬ್ಬಿನ "ಧ್ಯೇಯ ವಾಕ್ಯ"ವೇ 'ವಿ ಸರ್ವ್' (ನಾವು ಸೇವೆ ಮಾಡುತ್ತೇವೆ.)-ಇದನ್ನು ಯಥಾರ್ಥಗೊಳಿಸುವಲ್ಲಿ ಉಡುಪಿಯ ಕ್ಲಬ್ಬಿನ ಪ್ರಯತ್ನಗಳು— ಅದರ ಚಟುವಟಿಕೆಗಳು ನಿಜಕ್ಕೂ ಗಣನೀಯವೇ.

೧೯೬೬ ಆರನೆ ವರ್ಷದಲ್ಲಿ ಕ್ಲಬ್ಬು ಒಂದು ಸ್ಮರಣ ಸಂಚಿಕೆ (ಸೂವೆನೀರ್ - ನೆನಪೋತ್ತಿಗೆ) ಯನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸಿದೆ. ಶ್ರೀ ಎಂ. ವಿ. ಕಾಮತ್‌ರು 'ದಿ ವನ್—ಆರ್ವ್ಡ್ ನೇಶನ್' ಎಂಬ ಲೇಖನದಲ್ಲಿ ನಮ್ಮಲ್ಲಿ ಸತ್ವದ ಆವಶ್ಯಕತೆಯಿದೆ, ಗತವೈಭವದಿಂದ ಪ್ರಯೋಜನವಿಲ್ಲವೆಂಬುದನ್ನೂ ನಿರೂಪಿಸಿದ್ದಾರೆ. 'ಪ್ರಜಾಪ್ರಭುತ್ವದಲ್ಲಿ ಸಂರಕ್ಷಣಾ ಪಡೆಗಳು ಮತ್ತು ರಾಜಕಾರಣ' ಎಂಬ ಮನ್‌ಫ್ರೆಡ್ಡರ ಲೇಖನ ಕಾಲೋಚಿತವಿದೆ. ಶ್ರೀ ಎನ್. ಎಸ್. ಪರ್ಕಳರು ಪದ್ಮಶ್ರೀ ಡಾ! ಮಾಧವ ಪೈಯವರನ್ನು ಪರಿಚಯ ಮಾಡಿ, ಅವರ ಕಾರ್ಯಸಾಧನೆಯ ವಿವಿಧ ಘಟ್ಟಗಳನ್ನು ವಿವರಿಸಿದ್ದಾರೆ. ಉಡುಪಿಯ ಹಿಂದಿನ ನಿವಾಸಿಯೊಬ್ಬರು ತನ್ನ ಸ್ಮೃತಿಪಟಲದ ಹಲವು ಚಿತ್ರಗಳಿಗೆ ಶಬ್ದರೂಪವಿತ್ತು ಉಡುಪಿ ನಗರ ಸಭೆಗೊಂದು ಪ್ರಶಸ್ತಿ ಪತ್ರ ನೀಡಿದ್ದಾರೆ.

ಸಂಘ ಜೀವನ ಉಪಯುಕ್ತ. ಪರಸ್ಪರರನ್ನು ನಿಕಟದಿಂದರಿಯಲು ಇದು ಅವಶ್ಯ. ಈ ಸಾಧನೆಯಲ್ಲಿ ಲಯನ್ಸ್ ಕ್ಲಬ್ ತನ್ನ ದಾರಿಯಲ್ಲಿ ಮುಂದುವರಿಯುತ್ತಿದೆ. ಅದು ಸ್ವಾಗತಾರ್ಹ, ಪ್ರಶಂಸಾರ್ಹ. ಉಡುಪಿಯ ಲಯನ್ಸ್ ಕ್ಲಬ್ ತನ್ನ ಮೂಲ ಗುರಿಯನ್ನು ಸಾಧಿಸುತ್ತ ಮುಂದುವರಿಯುವುದು ಶ್ಲಾಘನೀಯ. ಆದರಿದಾರಿ ನಿಷ್ಕಂಟಕವಾಗಿರಲಿ. ಕೊನೆಯಿಲ್ಲದ ದಾರಿಯಲ್ಲಿ ಅದು ಬಹುದೂರ ಸಾಗಲಿ, ಜನೋಪಯೋಗಿ, ಜನೋಪಕಾರಿಯೆನಿಸಲಿ.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಅರ್ಜುನ ಪ್ರಶಸ್ತಿ ವಿಜೇತರು

(ಏಳನೇ ಪುಟದಿಂದ)

ಐದು ರಾಷ್ಟ್ರಗಳ ನಡುವೆ ನಡೆದ ಬ್ಯಾಡ್ಮಿಂಟನ ಸ್ಪರ್ಧೆಗಳಲ್ಲಿ ಇವರು ದ್ವಿತೀಯ ಸ್ಥಾನ ಪಡೆದರು. ೧೯೬೩ರಲ್ಲಿ ನ್ಯೂಜಿಲೆಂಡಿನಲ್ಲಿ ನಡೆದ ಥಾಮಸ್ ಕಪ್ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದರು. ೧೯೬೫ ನವೆಂಬರ್ ತಿಂಗಳಲ್ಲಿ ಲಕ್ನೋದಲ್ಲಿ ನಡೆದ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್ ಸ್ಪರ್ಧೆಗಳಲ್ಲಿ ಭಾರತದ ಪರವಾಗಿ ಆಡಿ ಪುರುಷರ ಸಿಂಗಲ್ಸ ಪ್ರಶಸ್ತಿಯನ್ನು ಸಂಪಾದಿಸಿದರಲ್ಲದೆ, ಏಷ್ಯಾದ ಬ್ಯಾಡ್ಮಿಂಟನ ಚಾಂಪಿಯನ್ ಆದರು.

೧೯೬೪ರ ನವೆಂಬರ್‌ನಲ್ಲಿ ನಡೆದ ನೆಹರೂ ಸ್ಮಾರಕ ಬ್ಯಾಡ್ಮಿಂಟನ್ ಸ್ಪರ್ಧೆಗಳಲ್ಲಿಯೂ ಪುರುಷರ ಸಿಂಗಲ್ಸ್ ಪ್ರಶಸ್ತಿಗಳಿಸಿದರು. ಈ ಸ್ಪರ್ಧೆಗಳಲ್ಲಿ ೧೦ ರಾಷ್ಟ್ರಗಳು ಭಾಗವಹಿಸಿದ್ದುವು.

ವಿಜಯ ಮಾಂಜರೇಕರ್

ವಿಜಯ ಮಾಂಜರೇಕರರ ನ್ಯೂಜಿಲಂಡ ಕ್ರಿಕೆಟ್ ಟೀಂನ ವಿರುದ್ಧ ಆಡಿ ಗಳಿಸಿದ ೧೦೨ ಓಟಗಳ ಇನ್ನಿಂಗ್ಸ್, ಮತ್ತು ಮದ್ರಾಸಿನಲ್ಲಿ ನಡೆದ ಪಂದ್ಯದಲ್ಲಿ ಮಧ್ಯ ಪ್ರದೇಶದ ಟೀಮಿನ ವಿರುದ್ಧ ಗಳಿಸಿದ ೧೩೭ ಓಟಗಳು ಅವರ ಶ್ರೇಷ್ಠ ಮಟ್ಟದ ಆಟಗಾರಿಕೆಯನ್ನು ಸೂಚಿಸುತ್ತವೆ. ಟೆಸ್ಟ್ ಪಂದ್ಯಗಳಲ್ಲಿ ಅವರ ಅತಿ ಹೆಚ್ಚಿನ ಸ್ಕೋರ್ ೧೮೯ ಓಟಗಳು ಮತ್ತು ರಣಜೀ ಟ್ರಾಫಿ ಪಂದ್ಯದಲ್ಲಿ ಅವರ ಹೆಚ್ಚಿನ ಸ್ಕೋರ್ ೧೮೬.

ಅರುಣಲಾಲ್ ಘೋಷ್

ಅರುಣಲಾಲ್ ಘೋಷ್‌ರು ಫುಟ್‌ಬಾಲ್ ಆಟದಲ್ಲಿ ಪಳಗಿದವರು. ೧೯೬೦ರಲ್ಲಿ ಅವರು ಮರ್ಡೇಕಾ ಟೂರ್ನ್‌ಮೆಂಟ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದರು. ಪ್ರವಾಸಿ ರಷ್ಯನ್ ಟೀಮಿನ ವಿರುದ್ಧ ಕಲಕತ್ತಾ, ದೆಹಲಿ, ಮುಂಬಯಿ, ಮದ್ರಾಸ್‌ಗಳಲ್ಲಿ ಭಾರತದ ಪರವಾಗಿ ಆಡಿದರು. ದೆಹಲಿಯಲ್ಲಿ ನಡೆದ ಭಾರತ್-ರಷ್ಯಾ ಫುಟ್‌ಬಾಲ್ ಪಂದ್ಯದಲ್ಲಿ ಅಖಿಲ ಭಾರತ ಫುಟ್‌ಬಾಲ್ ಟೀಮಿನ ನಾಯಕರಾಗಿದ್ದರು. ರೋಮಿನ ಒಲಿಂಪಿಕ್ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಲು ಅರುಣಲಾಲ್‌ರನ್ನು ೧೯೬೦ರಲ್ಲಿ ಮೊತ್ತ ಮೊದಲನ ಬಾರಿ ಆರಿಸಲಾಯಿತು. ಅಂದಿನಿಂದ ಈ ವರೆಗೆ ಅವರು ಎಲ್ಲಾ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಫುಟ್ ಬಾಲ್ ಪಂದ್ಯಗಳಲ್ಲಿ ನಿರಂತರವಾಗಿ ಭಾರತೀಯ ಟೀಮಿನ ಸದಸ್ಯರಾಗಿದ್ದಾರೆ. ಘೋಷರು ದೇಶದ ಸರ್ವಶ್ರೇಷ್ಠ ಫುಟ್‌ಬಾಲಾಟಗಾರರಲ್ಲಿ ಒಬ್ಬರು. ಭಾರತೀಯ ಫುಟ್‌ಬಾಲ್ ಟೀಮಿನಲ್ಲಿ ಅವರಿಗೆ ಇತರರಿಗಿಂತ ಹೆಚ್ಚು ಪ್ರಶಸ್ತಿಗಳು ದೊರೆತಿವೆ.

ಉಧಮ ಸಿಂಗ್

ಉಧಮ ಸಿಂಗರು ೧೯೪೮ರಿಂದ ೬೫ರ ವರೆವಿಗೂ ರಾಷ್ಟ್ರೀಯ ಚಾಂಪಿಯನ್ ಶಿಪ್ ಪಂದ್ಯಗಳಲ್ಲಿ ಪಂಜಾಬಿನ ಟೀಮಿನ ನಾಯಕತ್ವವನ್ನು ವಹಿಸಿದ್ದರು. ಏಷ್ಯಾದ ಕ್ರೀಡಾ ಸ್ಪರ್ಧೆಗಳಲ್ಲಿ ೧೯೪೮ರಿಂದ ೬೪ರ ವರೆವಿಗೂ ಅವರು ಭಾರತವನ್ನು ಪ್ರತಿನಿಧಿಸಿದರು. ಉಧಮಸಿಂಗರು ವಿನಯಶೀಲ, ದೃಢವಿಶ್ವಾಸಿ ಆಟಗಾರರಾಗಿದ್ದಾರೆ.

ಕುಮಾರಿ ಎಲ್ವಿರಾ ಬ್ರಿಟೋ

ಕುಮಾರಿ ಎಲ್ವಿರಾ ಬ್ರಿಟೋ ಕಳೆದ ಐದು ವರ್ಷಗಳಿಂದಲೂ ಶ್ರೇಷ್ಠ ಮಟ್ಟದ ಹಾಕಿ ಆಟಗಾರ್ತಿಯಾಗಿದ್ದಾರೆ. ಅವರು ತಮ್ಮ ಅಸದೃಶ್ಯ ಕ್ರೀಡಾ ಕೌಶಲ್ಯದಿಂದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಗೌರವ ಪಾತ್ರರಾಗಿದ್ದಾರೆ. ಕುಮಾರಿ ಬ್ರಿಟೋ ಅನೇಕ ಬಾರಿ ದೇಶ ಮತ್ತು ವಿದೇಶಗಳಲ್ಲಿ ಭಾರತೀಯ ಹಾಕಿ ಟೀಮಿನ ನಾಯಕತ್ವವನ್ನು ವಹಿಸಿ, ಭಾರತಕ್ಕೆ ಮತ್ತು ಮಹಿಳಾ ಹಾಕಿ ಟೀಮಿಗೆ ಗೌರವ ತಂದುಕೊಟ್ಟಿದ್ದಾರೆ. ೧೯೬೫ರಲ್ಲಿ ನಡೆದ ರಾಷ್ಟ್ರೀಯ ಮಹಿಳಾ ಹಾಕಿ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಅವರು ಆರನೆ ಬಾರಿ ಮೈಸೂರು ರಾಜ್ಯದ ಮಹಿಳಾ ಹಾಕಿ ಟೀಮಿನ ನಾಯಕರಾಗಿದ್ದರು. ಅವರ ನಾಯಕತ್ವದಲ್ಲಿ ಮೈಸೂರು ಟೀಮು ಈ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದು ಆರನೆಯ ಸಲವೂ ರಾಷ್ಟ್ರೀಯ ಚಾಂಪಿಯನ ಶಿಪ್ ಗಳಿಸಿತು.

ಬಲಬೀರ್ ಸಿಂಗ್ ಭಾಟಿಯಾ

ಬಲಬೀರ್ ಸಿಂಗ್ ಭಾಟಿಯಾ ಅವರು ಕೊಯಮತ್ತೂರಿನಲ್ಲಿ ನಡೆದ ಭಾರ ಎತ್ತುವ ಸ್ಪರ್ಧೆಯಲ್ಲಿ ೩೭೨.೫ ಕಿಲೊಗ್ರಾಂ ಭಾರವನ್ನು ಎತ್ತಿ ಮೂರನೇ ಬಾರಿ ರಾಷ್ಟ್ರೀಯ ಸನ್ಮಾನಕ್ಕೆ ಪಾತ್ರರಾಗಿದ್ದಾರೆ. ಅವರು ೧೯೫೮ರಿಂದಲೂ ಭಾರತದ ಅಗ್ರಗಣ್ಯ ಚಾಂಪಿಯನ್ನರು.

ಹಾಗಲಕಾಯಿ ಕಹಿಯಾದರೆ.......!

(ನಾಲ್ಕನೇ ಪುಟದಿಂದ)

'ಹ್ಞಾಂ... ಇದು ಸತ್ಯ!"

'ಸತ್ಯ ಮಾತ್ರವಲ್ಲ, ಆತನ ಮೊದಲ ಹೆಂಡಂದಿರು ಜೀವಂತವಿದ್ದಾರೆ....'

"ಓ, ಇದಾದ್ರೆ ಸೋಜಿಗ"

'ಇನ್ನೂ ಇದೆ ನೋಡು, ಮೊದಲಿಬ್ಬರು ಮಾಜಿ ಹೆಂಡಂದಿರು ಆತ ಕ್ರೂರ ರಕ್ಕಸನೆಂದು ದೂರಿದರೆ, ಮೂರನೆಯವಳು ಅತ ದುರ್ನಡತೆಯವನೆಂದಳು...'

'ಹಾಗಾದರೆ?'

'ಅವಳ ಭಾಷೆಯಲ್ಲೇ ಹೇಳುವುದಾದರೆ, ತನ್ನ ಸಂಗತಿಯ ಮೇಲೆ ಕೋಪಿಸಿಕೊಳ್ಳುವುದೇ ದುರ್ನಡತೆ...'

"ಹ್ಞೂ....ನಿಮ್ಮ ಪುರುಷ ಜಾತಿಯೇ ಹಾಗೆ. ಅಲ್ಲ, ಈ ಹೊಸ ಹೆಂಡತಿ ಈ ಮುದುಕನಿಂದ ಹೇಗೆ ಆಕರ್ಷಿತಳಾದಳೊಂತ...."

'ಪ್ರೇಮ ಕಲಿಸಲು ಯಾವ ಗುರು ಬೇಡ,"

"ಈ ಸಾಯುವ ಮುದುಕನಿಗೆ ಯಾಕೆ ಮದುವೇಂತ! ಮುಪ್ಪಿನ ಮದುವೆ ವಿಷಸಮಾನ ಅಂತಾರಲ್ಲಾ...'

'ಅದೆಲ್ಲಾ ನಮ್ಮಲ್ಲಿ. ಅದ್ರೆ ನೋಡು, ಅಮೆರಿಕೆಯಂತ ನೀತಿಗೆಟ್ಟ ದೇಶದಲ್ಲಿ ಏನೂ ಇಲ್ಲ....ಅಲ್ಲಿ ಇಂದು ಮದುವೆಯಾಗ್ತಾರೆ, ನಾಳೆ ಡೈವರ್ಸ್ ಆಗುತ್ತೆ.... ಅದ್ರೆ ಈ ಜಡ್ಜರ ಮದುವೆ ಬಗ್ಗೆ ವಿಚಾರಣೆಯಾಗಬೇಕೂಂತ ಸಿನೇಟರುಗಳು ಅನ್ತಾರೆ..."

"ಇದೂ ಒಂದು ಬಗೆಯ ವ್ಯಾಪಾರ..'

"ಅದೆಂತದೋ, ನಾನನ್ನಲಾರೆ...'

"ಹೇಸಿಗೆ....ಹೇಸಿಗೆ..."

"ಸ್ವರ್ಗದ ಬಾಗಿಲಲ್ಲಿ ನರಕ ಇರುತ್ತೆ. ಸರಿಯೇ, ಆದ್ರೆ ಒಬ್ಬೊಬ್ಬರ ದೃಷ್ಟಿ ಒಂದೊಂದಿರುತ್ತದೆ...."

"ಅಂತೂ ಭೌತಿಕತೆಯಲ್ಲಿ ಭೂಮಿಯನ್ನು ನರಕ ಮಾಡ್ತಾ ಇದ್ದಾರೇನ್ನಿ ಅವರು....'

'ಅದು ನಿನ್ನ ಅಭಿಪ್ರಾಯ....'

'ಮತ್ತು ನಿಮ್ಮದು..."

"..............."

'ಹ್ಞಾಂ...ಆಯ್...ಅಯ್ಯೋ....'

"ಹೆದರಬೇಡವೇ, ವಿಷಪೂ ಅಲ್ಲ, ವಿಷವೂ ಅಲ್ಲ...'

"ಆವರೆ, ಹಾಗಲಕಾಯಿ ಕಹಿಯೆಂದು ಬಿಸುಡ ಬೇಡಿ...."

'ಎಲ್ಲಿ ಬಂತೆ?'

'ಇಲ್ಲ....'

—ಗೋರಾ.

ಸಂಸ್ಕೃತಿಯ ಉದ್ಘಾಟನೆ

ಕಾರ್ಕಳ, ಸ್ಥಳೀಯ ಭುವನೇಂದ್ರ ಸಂಸ್ಕೃತ ಕಾಲೇಜಿನಲ್ಲಿ ತನ್ನ ಜೀವಮಾನವಿಡೀ ಪ್ರಾಧ್ಯಾಪಕರಾಗಿದ್ದು ನಾಡು—ನುಡಿಯ ಒಳಿತಿಗಾಗಿ ಬದುಕಿನ ಕೊನೆಯ ಗಳಿಗೆಯ ವರೆಗೂ ದುಡಿದು ಮಡಿದ ಸಂಸ್ಮರಣೀಯ ದಿ. ಕೆ. ಶ್ರೀನಿವಾಸ ಉಡುಪರ ಕುರಿತಾದ ಪರಿಚಯಪರ "ಸಂಸ್ಕೃತಿ"ಯೆಂಬ ಸತ್ಕೃತಿಯ ಉದ್ಘಾಟನಾ ಸಮಾರಂಭವು ಕಾರ್ಕಳದ ಅನಂತಶಯನ ದೇವಾಲಯದ ಪ್ರಾಂಗಣದಲ್ಲಿ ತಾ. 10—7—66ರಂದು ಎಡ್ವೊಕೇಟ್ ಕೆ. ವಾಸುದೇವ ಕಾಮತರ ಅಧ್ಯಕ್ಷತೆಯಲ್ಲಿ ಎಸ್. ಆರ್. ಆಚಾರ್ ಇವರ ದಿವ್ಯ ಹಸ್ತದಿಂದ ಜರಗಿತು. ಡಾ! ಯಂ. ಜಿ. ಆರ್. ಸಂಪಿಗೆತ್ತಾಯರು ಸ್ವಾಗತಿಸಿದರು. ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರು ಪ್ರಾಸ್ತಾವಿಕವಾಗಿ ಮಾತನಾಡಿ ಸತ್ಕಾರ್ಯಕ್ಕಾಗಿ ಸಹಕರಿಸಿದವರನ್ನು ಅಭಿನಂದಿಸಿದರು.

ಶ್ರೀಗಳಾದ ವೈಕುಂಠನ ಯಸ್, ಕೆ. ಎಸ್. ಪದ್ಮನಾಭಾಚಾರ್ಯ, ನಾರಾಯಣ ಹೆಗ್ಡೆ, ದೇವಪ್ಪ ಆಚಾರ್ಯ, ಕೆ. ನರಸಿಂಹ ಉಪಾಧ್ಯಾಯ ಮತ್ತು ಅನಂತರಾಮ ಉಪಾಧ್ಯಾಯರು ಸಮಯೋಚಿತವಾಗಿ ಮಾತನಾಡುತ್ತಾ ದಿ. ಶ್ರೀನಿವಾಸ ಉಡುಪರ ಸದ್ಗುಣಗಳು ಅನುಕರಣೀಯವೆಂದರು. ಅಧ್ಯಕ್ಷರು ಭಾಷಣ ಮಾಡುತ್ತಾ ವಿನಯವೇ ವ್ಯಕ್ತಿತ್ವಂತಿದ್ದ ದಿ. ಉಡುಪರು ರಾಜಕೀಯ ಭಾಷೆಯಲ್ಲಿ ಅಷ್ಟೊಂದು ಮಹತ್ತರವಾದ ಹಿರಿದಾದ ಕೆಲಸವನ್ನು ಮಾಡದಿರಬಹುದು. ಆದರೆ, ಸಾಮಾನ್ಯರಂತಿದ್ದರೂ ಸಾಂಸ್ಕೃತಿಕವಾಗಿ ಅಸಾಮಾನ್ಯನಂತೆ ಬಾಳಿ ಬದುಕಿ ಜನರ ಸೌಹಾರ್ದಗಳಿಸಿದ ದಿ. ಉಡುಪರ ಹಿಂದೆ ನಿಜವಾಗಿಯೂ ಇದು ಕಾರ್ಕಳವೇ ಅಭಿಮಾನ ಪಡುವಂತಿತ್ತೆಂದು ನುಡಿದರು.

ಶ್ರೀ ಯಂ. ಜಿ. ಆರ್. ಸಂಪಿಗೆತ್ತಾಯರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಬೀಳ್ಕೊಡುವ ಸಮಾರಂಭ

ಉಡುಪಿ, 30—6—66, ಇಲ್ಲಿಂದ ಕಾರವಾರಕ್ಕೆ ವರ್ಗವಾಗಿ ಹೋಗಲಿರುವ ಅಸಿ. ವಿದ್ಯಾಧಿಕಾರಿ ಶ್ರೀ ಸಿದ್ದೇಶ್ವರರನ್ನು ಬೀಳ್ಕೊಡುವ ಸಮಾರಂಭವು ಬೇಸಿಕ್ ಟ್ಯುಟೋರಿಯಲ್ ಕಾಲೇಜಿನಲ್ಲಿ ಡಾ|| ವಿಜಯೇಂದ್ರ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ|| ಕೆ. ಕೆ. ಕಲ್ಕೂರರು ಸ್ವಾಗತಿಸಿದರು. ಅತಿಥಿ ಶ್ರೀ ಸಿದ್ದೇಶ್ವರರು ಮಾತನಾಡಿ ತನಗಿತ್ತ ಸತ್ಕಾರಕ್ಕೆ ಅಭಾರ ಸೂಚಿಸಿದರು. ಸಭಿಕರಲ್ಲಿ ಶ್ರೀಗಳಾದ ಎನ್. ಸೀತಾರಾಮ ಕಾಮತ್, ಬಿ. ಎಸ್. ಲೂವಿಸ್, ರಾಮಕೃಷ್ಣಯ್ಯ ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣಾನಂತರ ಶ್ರೀ ಯು. ಶಿವರಾಯರು ಧನ್ಯವಾದಗಳನ್ನರ್ಪಿಸಿದರು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 59 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ರೈತ ಬಾಂಧವರ ಜೀವನ ಸಂಗಾತಿ...........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P.ಯಿಂದ 2. H.P.ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂಪೀಟರ್ ಸ್ಟಾರ್ಟರುಗಳು..........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

60 ವರ್ಷಗಳ ಪ್ರಗತಿಯ ಪ್ರತೀಕ ನಮ್ಮ ವಜ್ರ ಮಹೋತ್ಸವದ ಸಮಾರಂಭದಲ್ಲಿ 6 ಲಕ್ಷಕ್ಕೂ ಮೀರಿದ ನಮ್ಮ ಗ್ರಾಹಕರೆಲ್ಲರಿಗೂ ಶುಭಾಶಯಗಳನ್ನು ಅರ್ಪಿಸುತ್ತೇವೆ



1966

ನಮ್ಮ ಗ್ರಾಹಕ ವರ್ಗದ ಸಂಪೂರ್ಣ ವಿಶ್ವಾಸ ನಂಬಿಕೆಗಳೇ ನಮ್ಮ ಪ್ರಗತಿಗೆ ಸಹಾಯಕ. ನಾವು ವೈಯಕ್ತಿಕವಾಗಿ ಪ್ರತಿಯೊಬ್ಬರಿಗೂ ಪುಷ್ಪಗುಚ್ಛವನ್ನು ಅರ್ಪಿಸಿ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಬಹುದಾಗಿದ್ದರೆ ಅದೆಷ್ಟು ಸೊಗಸು! ಈ ಚಿರಸ್ಮರಣೀಯ ದಿನದಂದು ನಮ್ಮ ಗ್ರಾಹಕರಿಗೆ, ನೌಕರ ವರ್ಗದವರಿಗೆ ಮತ್ತು ಹಿತೈಷಿಗಳಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ಪ್ರಗತಿಯಿಂದ ಸೇವೆ—ಸೇವೆಯಿಂದ ಪ್ರಗತಿ, ಈ ಧ್ಯೇಯವೇ ನಮ್ಮ ಸಂಪತ್ಸಾಧನಗಳನ್ನು ಅಭಿವೃದ್ಧಿಪಡಿಸಿಕೊಂಡು ನಿಮಗೂ, ದೇಶಕ್ಕೂ ಹೆಚ್ಚು ಹೆಚ್ಚು ಸೇವೆ ಸಲ್ಲಿಸಲು ಸ್ಫೂರ್ತಿಯನ್ನೀಯುತ್ತಿದೆ. ಈ ಸಂದರ್ಭದಲ್ಲಿ ಜನತೆಯ ಸೇವೆಗಾಗಿ ಇನ್ನೂ ಹೆಚ್ಚು ಉತ್ಸಾಹದಿಂದ ಶ್ರಮಿಸುವೆವೆಂದು ಭರವಸೆ ನೀಡುತ್ತೇವೆ.

ವಜ್ರ ಮಹೋತ್ಸವ ಸಮಾರಂಭ
ಜುಲೈ-ಡಿಸೆಂಬರ್-1966

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಲೈಟ್ ಹೌಸ್ ಹಿಲ್, ಮಂಗಳೂರು-1.
ಆಡಳಿತ ಕಛೇರಿ:
112, ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು-2.

SERVING TO GROW · GROWING TO SERVE · CANARA BANK LTD. 1906·1966

110 ಕೋಟಿ ರೂ. ಗಳಿಗೂ ಮೀರಿದ ಸಂಪತ್ಸಾಧನಗಳು
— 340ಕ್ಕೂ ಮಿಕ್ಕಿದ ಶಾಖೆಗಳು
— ಪ್ರಸಂಚವಾದ್ಯಂತ ಪ್ರತಿನಿಧಿಗಳು

SISTA'S-CB-11A kn

ಹೊಸ ಸ್ವರ

ಕರ್ನಾಟಕದ ವಿಧಾನ ಸಭೆ-ಮಂಡಳಿಗಳು ಮಳೆಗಾಲದ ಅಧಿವೇಶನ ಪ್ರಾರಂಭವಾಗಿ ವಾರಗಳಾಗಿವೆ. ಇದಕ್ಕೆ ಹಿಂದಿನ ಅಧಿವೇಶನಗಳಲ್ಲಿ ಒಂದಾದ ಕನ್ನಡ ನಾಡನ್ನು ಒಡೆಯುವ ಯೋಜನೆ-ಸಲಹೆ-ಕಿವಿಮಾತು-ಇನ್ನೂ ಏನೇನೋ ಹೇಳುತ್ತಿದ್ದ ಮಾನ್ಯ ಸದಸ್ಯರು ಈ ಬಾರಿ ಕರ್ನಾಟಕ-ಮಹಾರಾಷ್ಟ್ರ ಗಡಿ ಸಂಬಂಧದ ನಿಯೋಜಿತ ಏಕ ಸದಸ್ಯ ಆಯೋಗ ರಚನೆಗೆ ವಿರೋಧ ಪ್ರಕಟಿಸುವಷ್ಟು ಮುಂದಾಗುತ್ತಾರೆ. ಗಡಿ ಆಯೋಗದ ರಚನೆ ರಾಜ್ಯಾಂಗಕ್ಕೆ ವಿರೋಧವೆನ್ನುವಷ್ಟು ಕೆಲವು ಸದಸ್ಯರ ರಾಜ್ಯಾಭಿಮಾನ ಕೆರಳಿದೆ, ಇದು ಶುಭ ಚಿಹ್ನೆ. ಇದೇ ಬಗೆಯ ಅಭಿಮಾನ ಮುಂದೆಯೂ ಉಳಿಯಲಿ; ಮುಂದುವರಿದು ಒಂದಾದ ಕರ್ನಾಟಕ ತುಂಡಾಗಬೇಕೆಂಬ ಮೊಂಡು ವಾದ ಮುಂದೆ ಏಳದಿರಲಿ. ಹೊಸ ಸ್ವರದ ಭರದಲ್ಲಿ ಅಪಸ್ವರ ಮರೆತುಹೋಗಲಿ.

ಬೇಕಾಗಿದ್ದಾರೆ

ಸೆಕೆಂಡರಿ ಗ್ರೇಡ್ ತರಬೇತಿ ಆದ ಒಬ್ಬ ಉಪಾಧ್ಯಾಯರು 'ಶಾರದಾ ಏಡೆಡ್ ಸ್ಕೂಲ್' ಮೂಡುಮುಂದ'ಕ್ಕೆ ಬೇಕಾಗಿದ್ದಾರೆ. ಎಪ್ಲಿಕೇಶನ್ ಕಳುಹಿಸುವವರು ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

K. L. ಮಂಜಯ್ಯ ಶೆಟ್ಟಿ
ಬೆಳ್ವಾಲ ಗ್ರಾಮ
P. O. ಮೂಡುಮುಂದ
ಕುಂದಾಪುರ ತಾಲ್ಲೂಕ್. S.K.

ಸಿಂಡಿಕೇಟಿನ ಅಹ್ಮದಾಬಾದ್ ಶಾಖೆ

ಮಣಿಪಾಲ, ಜುಲೈ 23, ಗುಜರಾತಿನ ರಾಜಧಾನಿ ಅಹ್ಮದಾಬಾದಿನಲ್ಲಿ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್ ತನ್ನ 211ನೇ ಶಾಖೆಯನ್ನು ನಿನ್ನೆ ತೆರೆಯಿತು. ಈ ಶಾಖೆಯು 4611, ಸವಕೇಟ್ ಬಿಲ್ಡಿಂಗ್, ರಿಲೀಫ್ ರೋಡ್ ಎಂಬಲ್ಲಿದೆ. ಈ ಶಾಖೆಯು ತೆರೆಯುವಿಕೆಯಿಂದ ಸಿಂಡಿಕೇಟ್ ಬ್ಯಾಂಕಿಗೆ ಗುಜರಾಥ ರಾಜ್ಯದಲ್ಲಿ ಈಗ ಎರಡು ಶಾಖೆಗಳಾದಂತಾಯಿತು. ಪ್ರಚಲಿತ ವರ್ಷದಲ್ಲಿ ಸಿಂಡಿಕೇಟ್ ಬ್ಯಾಂಕು ಈಗಾಗಲೇ ಏಳು ಶಾಖೆಗಳನ್ನು ತೆರೆಯಿತು. ಈ ವರ್ಷಾಂತ್ಯದೊಳಗೆ ಇನ್ನೂ ಏಳು 8 ಖೆಗಳನ್ನು ತೆರೆಯಲಿದೆ.

ಸಂಗೀತ ಕಲಾಭ್ಯಾಸ

ಸುರತ್ಕಲ್ಲು ವಿಜಯ ಮಹಲಿನ ಮಹಡಿಯಲ್ಲಿ ಗಣೇಶ ನೃತ್ಯ ಕಲಾ ಕೇಂದ್ರದ ವತಿಯಿಂದ ನಡೆಸುವ ಸಂಗೀತ ಕಲಾಭ್ಯಾಸದ ಉದ್ಘಾಟನೆಯು ತಾ 14ರಲ್ಲು ಶ್ರೀ ಎಸ್. ವಿನ್ ಕಾಮತರಿಂದ ನೆರವೇರಿತು. ಶ್ರೀ ಕೆ. ಎಸ್. ಮಧ್ಯಸ್ಥರು ಸ್ವಾಗತಿಸಿದರು. ಶ್ರೀಮತಿ ಸರೋಜಮ್ಮ ಮೊದಲಾದವರು ಈ ಬಗ್ಗೆ ಸಹಕರಿಸುತ್ತಿದ್ದಾರೆ.

ಯಕ್ಷಗಾನ ಕೂಟ

ಸುರತ್ಕಲ್ಲು ಸಮಾಜ ಮಂದಿರದಲ್ಲಿ ತಾ. 17ರಲ್ಲು ಶ್ರೀ ಮಲ್ಪೆ ಶಂಕರನಾರಾಯಣ ಸಾಮಗ, ಕೆ. ಎಸ್ ಸಿದಂಬೂರ್, ಕುಂಬಳೆ ಸುಂದರ ರಾವ್, ಭೋಜ ಪಂಡಿತ್, ರಮಾನಾಥ ರಾವ್ ಮೊದಲಾದವರ ಕೂಡುವಿಕೆಯಲ್ಲಿ ಅಂಗದ ಸಂಧಾನ ಪ್ರಸಂಗ ಚಿತ್ರಿಸಲಾಗಿದೆ. ಶ್ರೀ ಕೆ. ವಾಸುದೇವ ಪೈ, ಎಚ್. ವೆಂಕಟರಾಯರು ಹಿಮ್ಮೇಳದಲ್ಲಿ ಸಹಕರಿಸಿದ್ದರು. ದಿ|| ಶ್ರೀ ಉಡುಪಿ ಸೀತಾರಾಮಾಚಾರ್ಯರ ನಿಧನದ ಬಗ್ಗೆ ಸಂತಾಪ ಸೂಚನೆಯನ್ನು ಶ್ರೀ ಕೆ. ವೆಂಕಟರಾಯಾಚಾರ್ಯರು ಪ್ರಸ್ತಾಪಿಸಿದರು.

ಕ್ರೈಸ್ತ ಮುರುಗ

(ಎರಡನೇ ಪುಟದಿಂದ)

ಡಿದುವು. ಇಬ್ಬರಲ್ಲೂ ವಿಚಿತ್ರ ಹಾಗೂ ದೈವಿಕ ಆನಂದ ಉಂಟಾಯಿತು. ತಾನು ಎರಕ ಹೊಯ್ದಿರುವ ದೇಹ ಅಂತಹದ್ದೇ ಇನ್ನೊಂದು ದೇಹದೊಂದಿಗೆ ಸೊಗಸಿನ ಆ ತಿಂಗಳ ಬೆಳಕಿನಲ್ಲಿ ಆಡುತ್ತಿರುವದು ಅವರ ಕಣ್ಣಿಗೆ ಹಬ್ಬವಾಯಿತು. ಒಂದೇ ಹುಲ್ಲಿನ ಎಲೆಯ ಮೇಲೆ ಬಿದ್ದ ಇಬ್ಬನಿಯ ಹನಿಗಳು ಒಂದಾಗುವಂತೆ, ಎರಡು ಬಯಕೆಗಳು ಕಲೆತುವು. ಅನುರಕ್ತದ ಸ್ಪರ್ಶ, ನೆರವೇರುವಿಕೆ ಹಾಗೂ ಶಾಂತಿಯ ಅರಿವು ಆ ಜೀವಗಳಲ್ಲಿ ಪ್ರವಹಿಸಿದುವು.

ಜಾನಕಿಯು ತಿಳಿದೂ ತಿಳಿಯದೆಯೂ ಮಗುವಿನ ರೀತಿಯಲ್ಲಿ ರಾಮು ಸೀತೆಯರ ಹರ್ಷಾವೇಶದ ಮೌನಕ್ಕೆ ಭಂಗತಂದಳು.

'ಹೌದು, ನೋಡೀಂದ್ರೆ, ಸೀತಾ ಮತ್ತು ನಾನು ಅದೆಷ್ಟೊ ದಿನಗಳ ಹಿಂದೆಯೇ ಈ ನಿರ್ಣಯಕ್ಕೆ ಬಂದಿದ್ದೇವೆ; ನಮ್ಮ ಹುಡುಗಿಯು ಸೀತಾಳ ಮಗನನ್ನು ಮದುವೆಯಾಗಬೇಕು.'

ಸೀತಾಳು ಗೆದ್ದ ಅತ್ಯಾನಂದದ ಸಮ್ಮತಿ ಸೂಚಕವಾಗಿ ತಲೆ ಅಲ್ಲಾಡಿಸಿದಳು. ಕೋಕಿಲಂ ಸಂತೋಷದಿಂದ ಒಪ್ಪಿಗೆ ಇತ್ತಳು.

ಆಗ ಮುರುಗ ಹಾಗೂ ತೊಪ್ಪೈ ಆ ಕೂಟವನ್ನು ಸೇರಿದರು. ಕೇದಾರಿ ಅವರಿಗೆ ಸ್ವಾಗತವನ್ನೀಯುತ್ತ, 'ನಾವೀಗ ಮದುವೆಯಂತಹ ಶುಭ ಸಮಾಚಾರದ ಕುರಿತು ಮಾತನಾಡುತ್ತಿದ್ದೆವು. ನೀನೇದಾರೂ ಸುದ್ದಿ ತಂದಿರುವೆಯಾ ಮುರುಗ?"

"ತೊಪ್ಪೈಯು ಮೌನವಾಗಿ ಮುಂದಕ್ಕೆ ಬಂದು ರಾಮುವಿನ ಎದುರು ಅಡ್ಡಬಿದ್ದನು. "ನಾನು ಸ್ವಾಮಿಯವರ ಅಪ್ಪಣೆಗಾಗಿ ಪ್ರಾರ್ಥಿಸಿ...." ಅವನಿಂದ ಇನ್ನು ಮುಂದಕ್ಕೆ ಹೇಳಲಾಗಲಿಲ್ಲ.

"ಸ್ವಾಮೀ, ತೊಪ್ಪೈಯು, ನನ್ನ ಅಳಿಯನಾಗಲು ತಮ್ಮ ಆಶೀರ್ವಾದವನ್ನು ಬೇಡುತ್ತಿದ್ದಾನೆ." ಮುರುಗನು ಹೇಳಿದನು.

'ತೊಪ್ಪೈ, ಎದ್ದೇಳು. ಮುರುಗನ ಮಗಳ ಕೈಹಿಡಿಯಲು ನಿನಗಿಂತ ಉತ್ತಮರಾರೂ ಇಲ್ಲ. ದೇವರು ನಿನಗೆ ಆಶೀರ್ವದಿಸುವನು. ನಮ್ಮ ಕಾರ್ಯದ ಆತ್ಮವೇ ನೀನು. ಏಳು, ತೊಪ್ಪೈ.'

ರಾಮು ಶುದ್ಧಾಂತಃಕರಣದಿಂದ ಆಶೀರ್ವಾದವಿತ್ತನು.

ಚಂದ್ರನು ಇನ್ನೂ ಹೆಚ್ಚು ಪ್ರಕಾಶಮಾನನಾದನು.

ರಾಮು ಹಾಗೂ ಕೇದಾರಿ ಅವಳಿ-ಜವಳಿಗಳ ಹಾಗಿದ್ದರು.

ಮುರುಗ ಹಾಗೂ ಪರ್ವತಗಳ ನಾಯಕ ಹರಟೆಗಾರಂಭಿಸಿದರು. ಅವರ ಮಾತುಕತೆಗಳೆಲ್ಲಾ ಭೂತಕಾಲದ್ದಿದ್ದುವು; ಹಳೆಯ ಕಾಲದ ಸಾಹಸಗಳ ಕುರಿತು ಮಾತಾಡುತ್ತಿದ್ದರು. ಅಬ್ದುಲ್ಲಾ, ತೊಪ್ಪೈ ಹಾಗೂ ನಾಯಕನ ಮಗನು ಸೇರಿ ಹರಟೆ ಹೊಡೆಯುತ್ತಿದ್ದರು.

ಸೀತಾ, ಕೋಕಿಲಂ ಮತ್ತು ಜಾನಕಿ — ಈ ಮೂವ್ವರೂ ಒಂದೆ ದಂಡೆಯ ಮೂರು ಧಾರಿಗಳಂತೆ ಒಟ್ಟಿಗೆ ವಾಸಿಸಿಕೊಂಡಿದ್ದರು. ಅಲ್ಲಿದ್ದ ಅನೇಕಾನೇಕ ಜಾತಿಯ ಮಕ್ಕಳು ಆನಂದ ತುಂದಿಲರಾಗಿದ್ದು ನಿಷ್ಕಳಂಕ ಮನಸ್ಸಿನವರಾಗಿದ್ದುದರಿಂದ ಜಾತಿಯ ಅಡೆತಡೆಗಳಿಲ್ಲದೆ ನದಿ ದಡದಲ್ಲೂ, ಪರ್ವತದ ಇಳಿಜಾರಿನಲ್ಲೂ ಒಟ್ಟಾಗಿ ಸೇರಿ ಓಡಾಡುತ್ತಿದ್ದರು.

ಆಗಲೇ, ಚಲಿಸುತ್ತಿದ್ದ ಮೋಡವು ಪ್ರಕಾಶಿಸುತ್ತಿದ್ದ ಚಂದ್ರನಿಗೆ ಮರೆಯಾಗಿ ಬಂತು. ಆ ಮೋಡವಾದರೋ ಒಂಟೆಯ ಗಾತ್ರದಷ್ಟಿತ್ತು. ಕೂಡಲೇ ಈಶಾನ್ಯ ದಿಕ್ಕು ಮತ್ತಷ್ಟು ಅಧಿಕ ಕಪ್ಪಾಯಿತು. ಆಗ ಅಡ್ಡ ಬಂದದ್ದು ಚಲಿಸುತ್ತಿದ್ದ ಮೇಘವಲ್ಲ, ಮಳೆಗಾಲವೇ ಬಂತೆಂಬುದು ಖಚಿತವಾಯಿತು. ಒಂದು ಘಂಟೆಯೊಳಗೆ ಪರ್ವತಗಳಲ್ಲಿ ಗಾಳಿ ಘರ್ಜಿಸಲಾರಂಭಿಸಿತು. ಸಿಡಿಲು ಮತ್ತು ಮಿಂಚು ಸೇರಿ, ಮುಂಚಿನಿಂದ ನಿರೀಕ್ಷಿಸಿಕೊಂಡಿದ್ದುದರ ಜನನವಾಯಿತೆಂಬುದನ್ನು ಘೋಷಣೆಗೈಯ್ದುವು. ಗಾವುದ ಗಾವುದ ಹರಡಿಕೊಂಡಿರುವ ಗಗನವು ಮೇಘಾಚ್ಛಾದಿತವಾಯಿತು. ಮೊದಲ ಹನಿಯು ಮುತ್ತಿನ ಹರಳಿನಂತೆ ಬಿತ್ತು, ಮುತ್ತುಗಳೊಡೆದು ಹನಿಗಳಾದುವು, ಹನಿಗಳೊಡೆದು ವೃಷ್ಟಿಯಾಯಿತು. ವೃಷ್ಟಿಯೊಂದಿಗೆ ಬಿರುಗಾಳಿಯೂ ಸೇರಿಕೊಂಡಿತು, ತುಂತುರಿನಿಂದ ಆಣಿಕಲ್ಲಿನ ವರೆಗೆ, ಮಗುವಿನ ಮನೋಸ್ಥಿತಿಯ ಹಾಗೆ ಒಂದು ವಾರ ಮಳೆ ನಿಲ್ಲಲೇ ಇಲ್ಲ. ಮಳೆಗಾಲ ಪೂರ್ಣವಾಗಿ ಬಂದೇ ಬಿಟ್ಟಿತು. ಹದಿನೈದು ದಿನಗಳ ನಂತರವೇ ಭಾಸ್ಕರನ ಬಿಸಿ ಹಾಗೂ ಪ್ರಕಾಶದ ಅನುಭವ ಅಲ್ಲಿಯವರಿಗೆ ಆಯಿತು. ಪ್ರಕೃತಿ ಹಾಗೂ ಪುರುಷರ ಆರಂಭ ಆಗ ತಾನೆ ಆಯಿತೋ ಎಂಬಂತೆ ಕಂಡು ಬರುತಿತ್ತು.

ಒಂದೆರಡು ದಿನಗಳಲ್ಲಿ ಎತ್ತರ ಪ್ರದೇಶದಲ್ಲಿದ್ದ ನೀರು ಕಮ್ಮಿಯಾಗಿ ಉಳಲಿಕ್ಕೆ ಸರಿಯಾಗಿತ್ತು. ರಾಮು ಮೊದಲೇ ಮಾತುಕೊಟ್ಟಿನಂತೆ ಎಲ್ಲರಿಗೂ ನೇಗಿಲುಗಳನ್ನು ಹಂಚಿದನು. ತನ್ನದೇ ಇರುವ, ಎಂದಿಗೂ ತನ್ನದೇ ಆಗಿರುವ, ಮೂರೆಕರೆ ಪಡಿಲು ಭೂಮಿಯಲ್ಲಿ ಉಳುವಾಗ ಮೊದಲ ಮಣ್ಣಿನ ಗಟ್ಟಿ ಬಂದಾಗ ಮುರುಗನಿಗೆ ಮಹದಾನಂದವಾಯಿತು. ಅಂತಹ ಆನಂದದ ಅನುಭವ ರೈತರಿಗೆ ಮಾತ್ರ ಇರುತ್ತದೆ.

ಮುರುಗನೀಗ ರೈತನಾದ. ನೈಜ್ಯಪ್ರೇಮದಿಂದ ಬಿರಿದ ತುಟಿಗಳಂತೆ, ನೇಗಿಲು ಹೋದಲ್ಲೆಲ್ಲಾ ಬಿರಿದ ಶ್ರೀಮಂತ ಹೊಸಭೂಮಿ ಕಂಡು ಬರುತ್ತಿತ್ತು. ಅದೂ ಕೆಂಪಾಗಿದೆ. ಮುರುಗನ ಕಣ್ಣುಗಳಲ್ಲಿ ಶಾಂತಿ ಹಾಗೂ ಆನಂದದ ಕಿರಣಗಳು ಪ್ರಕಾಶಿಸುತ್ತಿವೆ. ಅವನು ನಿವಾಸಸ್ಥಾನಕ್ಕೆ ಹಾಗೂ ಉಳಿದ ಪ್ರಪಂಚಕ್ಕೆ ಮೇಲ್ಪಂಕ್ತಿಯನ್ನು ಹಾಕಿದನು.

ರಾಮು ಮತ್ತು ಕೇದಾರಿ ಕೂಡಾ ಸುಮ್ಮಗಿರುತ್ತಿರಲಿಲ್ಲ. ಅವರು ತಮ್ಮ ಭೂಮಿಯಲ್ಲಿದ್ದ ಬೇಡದ ಸಸ್ಯಗಳನ್ನು ನಿಷ್ಪ್ರಯೋಜಕ ಹುಲ್ಲುಗಳನ್ನು ತಮ್ಮ ಕೈಗಳಿಂದಲೇ ತೆಗೆಯುತ್ತಿದ್ದರು. ಅವರೂ ಬೇರೆ ಬೇರೆ ಅಂದದ ತೋಟಕ್ಕೆ ಯೋಜನೆ ಹಾಕಿ ಕೊಂಡಿದ್ದಾರೆ. ಅವರು ಬೇಲಿಯ ಮೊದಲ ಸಾಲಿನಲ್ಲಿ ಮುಳ್ಳು ಗಿಡದ ತುಂಡುಗಳನ್ನು ನೆಟ್ಟಿದ್ದಾರೆ. ಎರಡನೆಯ ಸಾಲಿನಲ್ಲಿ ಸುತ್ತಲೂ ತೆಂಗಿನ ಗಿಡಗಳನ್ನೂ, ಅಲ್ಲಲ್ಲಿ ಬಿಲ್ವದ ಸಸಿಗಳನ್ನೂ ಹಾಕಿದ್ದಾರೆ. ಒಳಗೆ ಹಲವಾರು ತರದ ಹಣ್ಣುಹಂಪಲುಗಳ ಗಿಡಗಳನ್ನೂ — ಮಾವಿನಿಂದ ಬೇವಿನ ವರೆಗೂ — ಅನೇಕ ವಿಧದ ಹೂವಿನ ಗಿಡಗಳನ್ನೂ — ಹೊನ್ನೆಯಿಂದ ಪಾರಿಜಾತದ ವರೆಗೂ — ನೆಟ್ಟಿದ್ದಾರೆ. ಹೊಸ ರೀತಿಯ ಜೀವನಕ್ಕೆ ಎಳೆ ಕೈಗಳು ಆಗಲೇ ಸ್ವಾಗತ ಬಯಸಿವೆ.

ನಿವಾಸಿಗಳಿಗೆ ಕೆಲಸವು ಆಟದಂತೆ ಬಹಳ ಲಘುವಾಗಿ ಭಾಸವಾಗುತ್ತಿತ್ತು. ಅವರು ದುಡಿಯುತ್ತಿರುವದು ಅವರವರ ಸುಖಕ್ಕಾಗಿ, ಇನ್ನೊಬ್ಬನ ಬಳಿ ಯಾರೂ ಗುಲಾಮರಾಗಿ ದುಡಿಯಬೇಕಾಗಿರುವದಿಲ್ಲ. ಶ್ರಮವಾದರೋ ದೇಹಕ್ಕೆ, ಮನಸ್ಸಿಗೆ ಮತ್ತು ಆತ್ಮಕ್ಕೆ ಸಾಮರ್ಥ್ಯವನ್ನು ಕೊಡುವಂತಹದ್ದಿದೆ.. ತಾಯಿಯ ತೊಡೆಯ ಮೇಲೆ ಮಗು ಸಂತೋಷದಲ್ಲಿರುವಂತೆ, ನಿಸರ್ಗದ ಮೇಲೆ ಮಾನವರು ಸಂತೋಷಪಟ್ಟುಕೊಂಡು ಸರಳ ಜೀವನವನ್ನು ಸಾಗಿಸುತ್ತಿದ್ದರು.

ಒಂದೇ ಬೇರಿನಿಂದ ಬಂದಿರುವ ಬಳ್ಳಿಗಳ ಹಾಗೆ—ಸೀತಾ, ಕೋಕಿಲಂ ಮತ್ತು ಜಾನಕಿಯರು ಬೆಳೆಯುತ್ತಿದ್ದರು. ಮಹಿಳೆಯರೂ ಪುರುಷರೂ ಅಲ್ಲಲ್ಲಿ ವಿಹರಿಸುತ್ತಿದ್ದರು. ಮಕ್ಕಳು ಎಲ್ಲೆಲ್ಲೂ ಆನಂದ ವಶರಾಗಿದ್ದರು. ಮುರುಗ ಮತ್ತು ನಾಯಕ ಯಾವಾಗಲೂ ಒಟ್ಟಿಗೆ ಇರುತ್ತಿದ್ದರು. ಆದರೂ ಮುರುಗನು ಮಾತ್ರ ಬಲವಂತಿಯ ಹಳೆಯ ಕೈಕೂಲಿಯವನಂತೆ ತನ್ನ ಸ್ವಾಮಿಯನ್ನು ಕಂಡಾಗ ಎಲ್ಲ ಕೈಮುಗಿದು ಮರ್ಯಾದೆ ವ್ಯಕ್ತಪಡಿಸುತ್ತಿದ್ದನು.

ರಾಮು ಮತ್ತು ಕೇದಾರಿಯವರಿಗೆ ಒಕ್ಕಟ್ಟು ಹಾಗೂ ಪ್ರೀತಿ ಬಲ್ಲಿ ಇರುವ ಆನಂದ ಹಾಗೂ ಶಾಂತಿಯ ಅನುಭವವಾಯಿತು. ಅವರು ನಡೆದುಕೊಳ್ಳುವ ರೀತಿ ಅನೇಕತೆಯಲ್ಲಿ ಏಕತೆಯನ್ನು ಸೂಚಿಸುತ್ತಿದ್ದುವು. ಒಂದೇ ಮೇಘದಿಂದ ಬಿದ್ದ ಮಳೆ, ಹಲವಾರು ಪರ್ವತಗಳ ಮೇಲೆ ಹಂಚಿ ಹೋಗಿ, ಹಲವಾರು ಕಣಿವೆ, ಬಯಲು, ಗದ್ದೆ, ತೋಡುಗಳಲ್ಲಿ ಹರಿದು ಕೊನೆಗೆ ಸಮುದ್ರವನ್ನು ಸೇರುವಂತೆ ಇತ್ತು ಅಲ್ಲಿದ್ದವರ ಜೀವನ.

ಎಲೆಗಳಿಂದ ತುಂಬಿರುವ ಗೆಲ್ಲಿನಲ್ಲಿರುವ ಪಕ್ಷಿಗಳ ಗೂಡಿನ ಹಾಗೆ, ಪರ್ವತದ ಕಣಿವೆಗಳಲ್ಲಿದ್ದವರ ವಾಸಸ್ಥಾನ ಕಂಡು ಬರುತ್ತಿತ್ತು. ತೊಟ್ಟಿಲಲ್ಲಿ ಮಗು ಮಲಗಿಕೊಂಡಿರುವಂತೆ ಪರ್ವತಗಳ ನಡುವೆ ಚಲನಾರಹಿತ ಸರೋವರ ಮಲಗಿಕೊಂಡಿದೆ. ಭಾಸ್ಕರ ಆಗ ತಾನೇ ಬಾನಂಚಿನಲ್ಲಿ ಇಣಿಕಿ ನೋಡುತ್ತಿರುವದು, ಆಗಲೇ ಮಂದ ಮಾರುತ ಚೇತೋಹಾರಿಯಾಗಿ ಬೀಸುವದು, ನಿವಾಸ ಸ್ಥಾನಕ್ಕೆ ಜೀವಕಳೆ ತುಂಬಿ ಬರುವದು....ಇವನ್ನೆಲ್ಲಾ ಕಾಣುವಾಗ ಮನಸ್ಸಿಗೆ ಅದೆಷ್ಟು ಸಂತೋಷ! ಬಾಲ ಭಾಸ್ಕರನ ಎಳೆ ಕಿರಣ ಬಿದ್ದೊಡನೆ ಸರೋವರದ ನಿರ್ಮಲ ನೀರು ಹೊಳೆಯಲಾರಂಭಿಸುತ್ತದೆ; ಗಾಳಿ ಬಂದು ಕಚಗುಳಿ ಹಾಕಿದೊಡನೆ ಅದು ಕಿಳಕ್ಕನೆ ಕಿರುನಗೆ ಸೂಸುತ್ತದೆ. ಆಗ ಸರೋವರದ ಗಲ್ಲದ ಮೇಲೆ ನೀಲ ನೆರಿಗೆಗಳುಂಟಾಗುತ್ತವೆ. ಸರೋವರದ ದಡಗಳನ್ನು ಹುಲ್ಲಿನ ಹಸುರು ಕಂಬಳಿ ಮುಚ್ಚಿ ಬಿಟ್ಟಿದೆ. ಅಬ್ಬಾ! ಆ ಹುಲ್ಲುಗಳಾದರೋ ಅದೆಷ್ಟು ಮೃದು, ಕೋಮಲ! ಆ ಹುಲ್ಲಿನ ಎಸಳುಗಳ ಮೇಲಿರುವ ಹನಿಗಳ ಮೇಲೆ ಉದಯ ರವಿಯ ರೇಶಿಮೆ ಬಿದ್ದೊಡನೆ ಅದೆಂತಹ ಬಣ್ಣ ಕಂಡು ಬರುತ್ತದೆ! ಎಲ್ಲೆಲ್ಲೂ ಬಾಲ ಲೀಲೆಯನ್ನು ಕಾಣಬಹುದು. ದೂರದಲ್ಲಿರುವ ಬಂಡೆಗಳ ಹಾಗೂ ಮರಗಳ ನೆರಳನ್ನು ಆ ಸ್ವಚ್ಛ ನೀರಿನಲ್ಲಿ ಕಾಣಬಹುದು. ಪರ್ವತಗಳು ಪಚ್ಚೆ ಹಸುರಾಗಿ ಮನಸೆಳೆಯುವಂತೆ ಇವೆ. ದೂರದ ಜೋಗು ತಾಯಿಯು ಮಗುವನ್ನು ಕರೆಯುವ ಹಾಗೆ ಕರೆಯುತ್ತಿವೆ.

ಈ ಎಲ್ಲಾ ಬೆಟ್ಟಗಳ, ಬಯಲುಗಳ, ಸರೋವರದ, ಅಗ್ನಿ ನದಿಯ, ಕಾಲುವೆಯ, ಗದ್ದೆಗಳ, ದೇವಸ್ಥಾನದ, ಹಳ್ಳಿಯ ಹಾಗೂ ಆ ಮುನ್ನೂರು ಕುಟುಂಬಗಳ ದೃಶ್ಯದತ್ತ ನೋಡುತ್ತಿದ್ದ ರಾಮು, ತಾನೆ ಬೆಸಿಕೊಂಡಿದ್ದ ಕನಸು ತನ್ನ ಜೀವಮಾನದಲ್ಲೇ ನನಸಾಗಿರುವದನ್ನು ಕಂಡು ಅವನ ಕಣ್ಣು ತೇವಭರಿತವಾಯಿತು. ಆ ದೃಶ್ಯದತ್ತ ದೀರ್ಘದರ್ಶಿಯ ದೃಷ್ಟಿಯಿಂದ ಅವನು ನೋಡಲಾರಂಭಿಸಿದನು.

ಶಾಂತ ಸಂಜೆ ಸರೋವರದ ದಂಡೆಯ ಮೇಲೆ ಸೀತಾ, ಕೋಕಿಲಂ, ಜಾನಕಿಯರು ರಾಮುವಿನ ಸುತ್ತ ಕುಳಿತು ಅವನಿಂದ ಆಧ್ಯಾತ್ಮಿಕತೆಯ ಕುರಿತು ಕೇಳುತ್ತಿದ್ದರು. ಅವನ ಶ್ರೀಮಂತ ತಾತ್ವಿಕ ಜ್ಞಾನಜ್ಯೋತಿಯನ್ನು ಅವರು ಬೆಳಗಿಸುತ್ತಿದ್ದರು. ಸಂಸ್ಕೃತ ಮಾತೃತ್ವದ ದಿವ್ಯ ಸನ್ನಿಧಿಯಲ್ಲಿ ಗಾಳಿಯು ಪವಿತ್ರವಾಗುತ್ತಿತ್ತು. ಆಗ ರಾಮುವಿನ ಸ್ವರವು ಆ ಬೆಟ್ಟಗಳಾಚೆಯಿಂದ, ಜೋಗಿನಾಚೆಯಿಂದ ಕೇಳಿ ಬರುವ ನಾದದಂತೆ ಹೊರ ಬರುತ್ತಿತ್ತು.

(ಮುಗಿದುದು)

Notice

In the Court of the Munsif of Karkala.

O .S. No. 525/1965

Daniel Padivala alias Santhamayora ... Plaintiff

Lilly Fernandes and others ... Defendants

To

The 1st defendant

Lilly Fernandes, widow of Bazil Fernandes and daughter of Manuel Miranda of Kallabettu village, at present at 25 Stand House, Opposite Stand Cinema, Colaba, Bombay-5.

Please take notice that the above suit filed by the plaintiff for Rs .682-50 due towards mortgage and future interest and costs stands posted to 29—7—1966 and if you fail to appear before the said Court on the said date at 11 A. M. and plead your defence if any the suit will be decided in your absence.

P. Ramachandra Rao,

Pleader for Plaintiff.

Karkala, Dated 16-7-66.

NAVAYUGA 28—7—1966
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಚಾರುಚಯನ

ವಿಯತನಾಮದಲ್ಲಿ 'ಶಾಂತಿ ಸಾಧ್ಯವಿಲ್ಲ?

ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಪ್ರಮುಖ ರಾಜಕಾರಣಿಗಳೊಡನೆ ಸಮಾಲೋಚನೆ ನಡೆಸಿಯೇ ವಿಯತನಾಮ ಪ್ರಶ್ನೆ ಪರಿಹಾರಕ್ಕೆ ಜಿನೇವಾ ಪರಿಷತ್ತು ಸೇರಬೇಕೆಂದು ಘೋಷಿಸಿದ್ದರು. ಇದಕ್ಕೆ ಸರ್ವತ್ರವೂ ಸರ್ವ ಸಾಮಾನ್ಯ ರೀತಿಯ ಸ್ವಾಗತ ದೊರೆಯಿತು. ಇದರೊಂದಿಗೆ ತನ್ನ ವಿದೇಶ ಯಾತ್ರೆಯನ್ನು ಆರಂಭಿಸಿದ ಇಂದಿರಾ ಗಾಂಧಿಯವರಿಗೆ ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರ ಮತ್ತು ಯುಗೊಸ್ಲಾವಿಯಾದ ಮಾರ್ಶಲ್ ಟಿಟೋರ ಬೆಂಬಲ ದೊರೆಯಿತು, ಅದೂ ಬಹಳ ಸುಲಭದಲ್ಲಿ.

ಇಂಡೋ—ಚೈನಾ ಸಮಸ್ಯೆಯ ಪರಿಹಾರಕ್ಕೆ ಜಿನೇವಾ ಪರಿಷತ್ತು ಸೇರಿತ್ತು; ಯಶವನ್ನೂ ಗಳಿಸಿತ್ತು. ಅದು ವಿಯತನಾಮ ಪ್ರಶ್ನೆಗೂ ತಾಂಕೋಪಾಯವಾಗುವುದು ಕಠಿಣ ಸಾಧ್ಯವೇನೂ ಅಲ್ಲ. ಇದರ ಸಹಾಧ್ಯಕ್ಷರು ಬ್ರಿಟನ್ ಮತ್ತು ರಷ್ಯ. ಪರಿಷತ್ತು ಕರೆಯುವ ಸಂಬಂಧದಲ್ಲಿ ರಷ್ಯದ ನಿಲುಮೆಯೇನು ಎಂಬುದು ಇಷ್ಟರಲ್ಲಿಯೇ ಬ್ರಿಟಿಷ್ ಪ್ರಧಾನಿ ವಿಲ್ಸನ್ನರಿಗೆ ತಿಳಿದಿದೆ. ಕೊಸಿಗಿನ್—ವಿಲ್ಸನ್ ಭೆಟ್ಟಿಯು ವಿಯತನಾಮ ಸಮಸ್ಯೆಗೆ ಸೂತ್ರ ಪರಿಹಾರವನ್ನು ಕಂಡು ಹಿಡಿಯಲು ಸಾಧ್ಯವಾಗಲಾರದು. ಇದು ಅನಿರೀಕ್ಷಿತವೂ ಅಲ್ಲ. ಪ್ರಧಾನಿ ಗಾಂಧಿಯವರೊಡನೆ ಮಾತನಾಡುವಾಗ ಕೊಸಿಗಿನ್ ಸ್ಪಷ್ಟವಾಗಿ ಹೇಳಿದ್ದಾರೆ: "ಜಿನೇವಾ ಒಡಂಬಡಿಕೆಯ ಮೇರೆಗೆ ಪರಿಹಾರ ಸಾಧಿಸಬೇಕು; ಆದರೆ, ಶಾಂತಿ ಸ್ಥಾಪನೆಯ ಬಗ್ಗೆ ಉತ್ತರ ವಿಯತನಾಮದಿಂದ ಬೇಡಿಕೆ ಬರಬೇಕು.' ಇದೇ ಉತ್ತರ ವಿಲ್ಸನ್ನರಿಗೂ.

ಉತ್ತರ ವಿಯತನಾಮವೇನು ಹೇಳುತ್ತದೆ? ವಿದೇಶೀ ಸೇನೆಯು ವಿಯತನಾಮದಿಂದ ಹೊರ ನಡೆಯಬೇಕು. ಗುಂಡು, ಬಾಂಬು ದಾಳಿ ನಿಲ್ಲಬೇಕು. ಅದಕ್ಕೆ ಮೊದಲು ಸಂಧಾನವಿಲ್ಲ. ಅದರ ಈ ಕರಾರನ್ನೇ ಗಾಂಧಿ—ಕೊಸಿಗಿನ್ ಜಂಟಿ ಹೇಳಿಕೆ ಅವ್ಯಕ್ತವಾಗಿ ಪ್ರತಿಧ್ವನಿಸುತ್ತದೆ. ವಿಯತನಾಮದಲ್ಲಿ ಅಮೇರಿಕೆಯು ನಡೆಸುವ ಬಾಂಬು ದಾಳಿಯನ್ನು ಆರಂಭದಿಂದಲೂ ಭಾರತ ಖಂಡಿಸುತ್ತ ಬಂದಿದೆ, ಇಂದಿಗಾದರೂ ಅದೇ ನೀತಿ ತಳೆದಿದೆ.

ದಕ್ಷಿಣ ವಿಯತನಾಮಿಗಳೂ ಅಮೇರಿಕನ್ನರೂ ಈಕ್ಷಣ ಸಂಧಾನಕ್ಕೆ ಸಿದ್ಧರಿದ್ದಾರೆ. ಆದರೆ, ಸೇನೆ ಹಿಂದೆ ತೆಗೆಯುವುದು ಸಂಧಾನ ಮಾತುಕತೆ ಆರಂಭವಾಗುವುದು ನಿಜವೆಂದಾದರೆ, ಬಾಂಬುದಾಳಿಯನ್ನಾದರೂ ಅಮೇರಿಕೆ ನಿಲ್ಲಿಸಬಹುದು—ತನ್ನ ಮಾನಭಂಗವೆಂದು ಅಮೇರಿಕೆಯು ನಂಬಿದೆ. ಹಾಗೆಯೇ ಉತ್ತರ ಭಾಗ ಕೂಡಾ. ಸೋವಿಯತ್ತೂ ಈ ವಿಚಾರದಲ್ಲಿ ಹಾಗೆಯೇ ತಿಳಿದಿದೆ. ಇದಕ್ಕೆ ಯಾವ ಆಧಾರವಿಲ್ಲವಾದರೂ ಪೂರ್ವಗ್ರಹಪೀಡಿತರ ಮುಂದೆ ಎಲ್ಲವೂ ಅರಣ್ಯರೋದನವಾಗಿದೆ.

ದಕ್ಷಿಣ-ಉತ್ತರ ವಿಯತನಾಮಗಳು ಮುಖಾಮುಖಿ ಭೇಟಿಯಾಗಬೇಕೆಂದು ಈಗ ಸಲಹೆಯಿಲ್ಲ. ಪರಿಹಾರವರಸುವಲ್ಲಿ ಮೂರನೆಯವರೇ ಬಂದು ಸೇರುತ್ತಾರೆ; ಪರಿಹಾರ ಸೂಚಿಸುತ್ತಾರೆ. ಅದನ್ನು ಕಾರ್ಯ ರೂಪಕ್ಕೆ ತರುವ ಹೊಣೆ ಮಾತ್ರ ಸಂಬಂಧಿತ ರಾಷ್ಟ್ರಗಳದ್ದು. ಹೀಗೆ ಮಾಡುವುದರಿಂದ ಯಾರ ಮಾನ ಹೋಗುವುದೂ ಇಲ್ಲ ಪ್ರತಿಷ್ಠೆ ಬೆಳೆಯುವುದೂ ಇಲ್ಲ. ಆದರೆ, ಇಂತಹ ಅವಕಾಶವಾಗಲು ಕಾಲ ಪಕ್ವವಾಗಿಲ್ಲವೆಂದೇ ತೋರುತ್ತದೆ. ಏಕೆಂದರೆ, ಶಾಂತಿಯ ಪ್ರಯತ್ನವನ್ನು ಅಧ್ಯಕ್ಷ ಜಾನ್ಸನ್ ಸ್ವಾಗತಿಸಿದರೂ. ಏಕಪಕ್ಷೀಯವಾಗಿ ಶಸ್ತ್ರ ಸನ್ಯಾಸ ಕೈಕೊಳ್ಳಲು ಅವರು ಸಿದ್ಧರಾಗುವುದು ಸಾಧ್ಯವಿಲ್ಲ.

ವಿಯತನಾಮ ಸಮಸ್ಯಾ ಪರಿಹಾರಕ್ಕೆ ಜಿನೇವಾ ಪರಿಷತ್ತೇ ಮಾಧ್ಯಮ-ಆಸ್ಟ್ರೇಲಿಯಾ ಫ್ರಾನ್ಸ್ ಹೀಗೆ ಎಲ್ಲರೂ ಒಪ್ಪುತ್ತಾರೆ. ರಷ್ಯದ ಉತ್ತರ ವಿಯತನಾಮ ಪರನೀತಿಯಲ್ಲಿ ತುಸು ಪರಿವರ್ತನೆಯಾದರೆ ಅದು ಸಾಧ್ಯ. ಸೋವಿಯತ್ ಮಂಗ ಮುಷ್ಟಿ ಸಡಿಲದೆ ಹೋದಕ್ಕೆ, ಸಮಸ್ಯೆ ಉಲ್ಬಣಿಸುವುದು, ಅಶಾಂತಿ ಹೆಚ್ಚುವುದು. ಮೂರನೆಯ ಮಹಾ ಸಂಗ್ರಾಮಕ್ಕೆ ನಾಂದಿಯೂ ಆಗಬಹುದು. ಬಹ ಭವಿಷ್ಯ ಹೇಳಲಾಸಲ್ಲ.

○ ○ ○ ○

ಬೊಂಬಾಯಿ ನಗರದಲ್ಲಿ ನೀರಿನ ಅಭಾವ—ಮನುಷ್ಯರಿಗೇನೇ ಕುಡಿಯಲು ನೀರು ಪೂರೈಸುವುದು ಸಾಧ್ಯವಿಲ್ಲ, ಇನ್ನು ಕಾರಖಾನೆಗಳಿಗೆ ನೀರು ಎಲ್ಲಿ? ಬಹು ದಿನಗಳಿಂದಲೂ ಬೊಂಬಾಯಿವಾಲಾರು ಮಳೆಯನ್ನು ಸ್ವಾಗತಿಸಲು ತುದಿಗಾಲ ಮೇಲೆ ನಿಂತೇ ಇದ್ದರು. ಮಳೆರಾಯ ಬರಲಿಲ್ಲ; ಆಗ ಮನದ ಸೂಚನೆ— ಬಿರುದು ಬಾವಲಿಗಳು—ಒಂದೂ ಇಲ್ಲ.

ಅಧಿಕಾರಿಗಳ ದಿಗಿಲೇರಿತು. ಏನು ಏನು? ನಲ್ವತ್ತು ಲಕ್ಷ ನಾಗರಿಕರಿಗೆ ಕುಡಿಯಲು ಎಲ್ಲಿಂದ ನೀರು? ಸರಬರಾಯಿ ಕೇಂದ್ರದ ಕೆರೆಗಳೆಲ್ಲ ಒಣಗಿವೆ—ವೈಶಾಖದ ಗಿರಿನದಿಗಳಂತೆ ಮಳೆರಾಯ ಬಂದಾನು, ನೀರು ತಂದಾನು, ಆದರೆ, ಎಂದು? ಆತ ಬರುವನಕ—ಅದೂ ಅನಿಶ್ಚಿತ— ಸ್ನಾನಕ್ಕಲ್ಲವಾದರೂ ತೀರ್ಥಕ್ಕಾದರೂ ನೀರು ಬೇಕಲ್ಲಾ—?

ಇದಕ್ಕೆ ಪರಿಹಾರ—ಸಾಧ್ಯವಿದ್ದಷ್ಟು ಸ್ಥಾನಾಂತರ! ಇದರ ನೀಲಿನಕ್ಷೆ—ದುಡಿತ—ವೆಚ್ಚ—ಇನ್ನೇನು, ನಾಳೆ ಸ್ಥಾನಾಂತರ ಆರಂಭವಾಗಬೇಕು—ಬಂದೇಬಿಟ್ಟ ಮಳೆರಾಯ—ಊರು ಕೇರಿಗಳನ್ನು ತೊಯ್ದು ಬಿಟ್ಟ. ಮಳೆಯಲ್ಲಿ ನನೆದವರೆಷ್ಟೋ! ಹೊರಳಾಡಿದವರೆಷ್ಟೊ! ಕಣ್ಣೀರು- ಸಂತೋಷದಿಂದ—ಸುರಿಸಿದವರೆಷ್ಟೊ!

ಮಾನವ ಪ್ರಕೃತಿಯನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಹೋರಾಡುತ್ತಾನೆ. ಆಕಾಶದಿಂದ ಬಿದ್ದ ನೀರನ್ನು ಸಂಗ್ರಹಿಸಿ ನೀರಾವರಿ ಮಾಡುತ್ತಾನೆ, ಗುಡ್ಡಗಳಿಗೂ ಅದನ್ನು ಹರಿಸುತ್ತಾನೆ- ಬೆಳೆ ಬೆಳೆಯುತ್ತಾನೆ. ತನ್ನ ಭೌತಿಕ ಸಾಧನಗಳ ಕೊಬ್ಬಿನಲ್ಲಿ ಪ್ರಕೃತಿಯನ್ನೇ ಮರೆಯುತ್ತಾನೆ. ಮಳೆಯೇ ಸುರಿಯದಿದ್ದರೆ, ಆತನ ಅಣೆಕಟ್ಟು ತುಂಬುವುದೆಂತು? ಬರಿಯ ಕೊಳ್ಳ ಕಾಲುವೆಗಳೇನು ಮಾಡಿಯಾವು?

ಬೊಂಬಾಯಿವಾಲಾರು ಐಹಿಕದನಸುವೆಲ್ಲವನ್ನೂ ಮರೆತವರು. ಗಾಳಿಗೆ ಫೇನಿದೆ, ನೀರಿಗೆ ನಳ್ಳಿಯಿದೆ, ಮನಸರಂಜನೆಗೆ ಸಿನೆಮಾ ಇದೆ, ಉಣ್ಣಲು ಹೋಟಲಿದೆ, ಉಳಿಯಲು ಬೀದಿ ಬಾಗಿಲಾದರೂ ಇದೆ.........ಖರ್ಚಿಗೆ ಹಣ? ಹೇಗಾದರೂ ಆಗುತ್ತದೆ. ಯಾರ ಗೊಡವೆ ಅವರಿಗೆ ಬೇಕು? ಮಳೆ ಬರಲಿಲ್ಲ, ನೀರು ಸಿಗಲಿಲ್ಲ. ಸ್ಥಾನಾಂತರವನ್ನೂ ಮಾಡಬಹುದು—

ಇವರ ಈ ಗಂಡುತನಕ್ಕೆ ಪ್ರಕೃತಿ ನಿಲ್ಲಲಾರದೆ ಹೋಯಿತೋ! ಅರ್ಜುನನ ಗಂಡಿಗೆ ಕಿರಾತ ಮೆಚ್ಚಿದಂತೆ ಇವರ ಸಾಹಸಕ್ಕೆ ಮಳೆರಾಯ ಮೆಚ್ಚಿ ಪ್ರತ್ಯಕ್ಷನಾದನೋ! ಅಥವಾ ಐಹಿಕ ಸುಖಭೋಗಗಳಲ್ಲೇ ಮೈಮರೆತ ಬೊಂಬಾಯಿವಾಲರೊಂದಿಗೂ ಪ್ರಕೃತಿ ಅಣಕವಾಡಿತೋ!

ಏನೇ ಆಗಲಿ, ಸದ್ಯ ಮಳೆರಾಯನ ಆಗಮನವಾಯ್ತಲ್ಲ, ನೆಮ್ಮದಿಯ ಉಸಿರು ಬೊಂಬಾಯಿವಾಲಾರು ಮಾತ್ರವಲ್ಲ, ಎಲ್ಲ ಭಾರತೀಯರೂ ಬಿಡುತ್ತಾರೆ. ಏಕೆ? ಬೊಂಬಾಯಿ ಬೇರೆಯಲ್ಲ, ಭಾರತ ಬೇರೆಯಲ್ಲ.

○ ○ ○ ○

ಮುಂದಿನ ಫೆಬ್ರವರಿಯಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳಿಗೆ ಅಭ್ಯರ್ಥಿಗಳನ್ನು ಆರಿಸಲು ಕಾಂಗ್ರೆಸ್ ಪಕ್ಷದ ಪ್ರಾದೇಶಿಕ ಚುನಾವಣಾ ಸಮಿತಿಗೆ ಆಯ್ಕೆ ನಡೆಯಿತು. ಅತ್ಯಧಿಕ ಬಹುಮತದಿಂದ ಮೊದಲ ಸುತ್ತಿನಲ್ಲಿಯೇ ಏಳು ಜನರು ಆಯ್ಕೆಯಾದರು—ಸ್ವಾರಸ್ಯದ ಸಂಗತಿಯೆಂದರೆ, ಇವರಲ್ಲಿ ನಾಲ್ವರು ಮಂತ್ರಿ ಮಹಾಶಯರು!

ರಾಜ್ಯದ ಕಾಂಗ್ರೆಸ್ಸಿನಲ್ಲಿ ಗುಂಪುಗಳಿರುವುದನ್ನು ಒಪ್ಪುವುದಾದರೆ, ಚುನಾವಣಾ ಸಮಿತಿಯ ಏಳು ಜನ ಸದಸ್ಯರೂ ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಪ್ರಬಲ ಬೆಂಬಲಿಗರು. ಇವರಲ್ಲಿ ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವ ಕೂಡಾ ಸೇರಿದ್ದಾರೆ. ಪಕ್ಷದ ನೀತಿ—ನಿಲುವುಗಳಿಗೆ ಹೆಸರಾದ ನಿಜಲಿಂಗಪ್ಪನವರು ಪಕ್ಷ ಕಟ್ಟುವಲ್ಲಿ ತುಂಬ ಹೆಣಗಿ ಯಶಗಳಿಸಿದವರು. ಆಡಳಿತದಲ್ಲಿ ಮಾತ್ರ ಜನ ನಿರೀಕ್ಷಿಸಿದಷ್ಟು ಪಡೆಯಲಿಲ್ಲ. ಇದಕ್ಕೆ ಒಂದಲ್ಲ ನೂರು ಕಾರಣಗಳು....!

ಆಯ್ಕೆಗೊಂಡ ಸಮಿತಿಯು ನಿಜಲಿಂಗಪ್ಪ ಗುಂಪಿನದ್ದಲ್ಲ, ಅದು ಇಡಿಯ ಕಾಂಗ್ರೆಸ್ ಪಕ್ಷದ್ದು. ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳವರು ನಿಷ್ಪಕ್ಷಪಾತತನ, ನ್ಯಾಯಗಳ ಮುಂದೆ ತಲೆಬಾಗುತ್ತಾರೆಯೇ ಹೊರತು ಗುಂಪುಗಾರಿಕೆಯಲ್ಲಿ ವಿಶ್ವಾಸವಿಡುವುದಿಲ್ಲ. ಇದೀಗ ಭಾವಿ ಚುನಾವಣೆಗೆ ನಾಂದಿ ಇಟ್ಟಾಯಿತು. ಅಭ್ಯರ್ಥಿಗಳ ಆಯ್ಕೆಯಲ್ಲಿ ನ್ಯಾಯ ನಿಷ್ಠುರವಾಗಿ ಸಮಿತಿ ನಡೆದುಕೊಳ್ಳಲಿ; ಯೋಗ್ಯಹುರಿಯಾಳುಗಳೇ ಆಯ್ಕೆಗೊಳ್ಳಲಿ.

— ರಾಶಿ

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

........."ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುವರೆಗೆ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪ್ಪೊ, ತಾಲುಕೋಟೆ, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

4—8—1966

NAVAYUGA

೨೦ ಪೈಸೆ

ಕಥಾ ಪ್ರಪಂಚ

ಭಾರತದ ಮಣ್ಣು— ನನಗದು ಹೊನ್ನು!

ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

೧೯೬೫ನೆಯ ಇಸವಿ ಸಪ್ಟೆಂಬರ ತಿಂಗಳ ಏಳನೆಯ ತಾರೀಕು. ಅಂದೇಕೋ ಲೆಫ್ಟಿನೆಂಟ್ ಸುಬ್ಬಯ್ಯನ ಮನಸ್ಸು ತೂರಾಡುತಿತ್ತು. ಏಕೋ ಏನೋ ಅಲ್ಲ; ಕಾರಣವೂ ಇತ್ತು. ಅಂದೇ ಅವನ ಚೊಚ್ಚಲ ಗರ್ಭಿಣಿಯಾದ ರಾಧೆಯನ್ನು ಹೆರಿಗೆ ಆಸ್ಪತ್ರೆಗೆ ಸೇರಿಸಲಾಗಿತ್ತು. ತನಗೆ ಹುಟ್ಟುವ ಶಿಶು ಗಂಡೋ— ಹೆಣ್ಣೋ—ಅದರ ಮುಖವು ಹೇಗಿದ್ದೀತು— ಇತ್ಯಾದಿ ಕುತೂಹಲವೂ ಅವನಲ್ಲಿ ತುಂಬಿತ್ತು. ಅಂತೆಯೇ ತನ್ನ ಪತ್ನಿಯು ಹಡೆಯುವಾಗ ಎಷ್ಟೆಲ್ಲಾ ಕಷ್ಟಗಳಿವೆಯೋ ಎಂಬ ಭಯವೂ ಅವುಗಳೊಂದಿಗೇ ಸೇರಿತ್ತು.

"ನಾನು ಹಡೆಯುವ ತನಕ ನೀವು ನನ್ನನ್ನು ಅಗಲಬಾರದು. ನನಗೆ ಭಯವಾಗುತ್ತದೆ" ಎಂಬ ತನ್ನ ಪ್ರೀತಿಯ ಮಡದಿ ರಾಧೆಯ ಮಾತನ್ನು ಮೀರುವುದೇ?

ಕೂಡಲೇ ಮನೆಗೆ ಹೋಗಿ ತನ್ನ ಯುನಿಟಿಗೆ ಒಂದು ಮನವಿಯನ್ನು ಸಲ್ಲಿಸಿದನು. ತನ್ನ ರಜೆಯನ್ನು ಇನ್ನೂ ೧೫ ದಿನಗಳು ಹೆಚ್ಚಿಸಬೇಕೆಂದು ಅದರಲ್ಲಿ ಬರೆದಿದ್ದನು. ತನಗೆ ರಜೆಯು ಗ್ರ್ಯಾಂಟ್ ಆದಂತೆಯೇ ಸರಿ—ಎಂಬ ಅಭಿಮಾನದಿಂದ ಅಂದೇ ಮಧ್ಯಾಹ್ನ ಮೂರುಗಂಟೆಯ ಸುಮಾರಿಗೆ ನೇರವಾಗಿ ಪೋಸ್ಟ್ ಆಫೀಸಿಗೆ ತೆರಳಿದನು. ಟಪ್ಪಾಲು ಪೆಟ್ಟಿಗೆಗೆ ಹಾಕಿ ಮರಳಿ ಬರುವಾಗ ದಾರಿಯಲ್ಲಿ ಅವನ ಹಳೆಯ ಸ್ನೇಹಿತ ತಿಮ್ಮು ಇದಿರಾದನು.

"ಹಲೋ! ತಿಮ್ಮು! ಹೇಗಿರುವೆ?" ಎಂದು ಸಂತೋಷ ಭರದಲ್ಲಿ ಒಮ್ಮೆಲೇ ಕೇಳಿದನು.

'ಕ್ಷೇಮವೇ ಸರಿ. ನೀವೇನು ಇತ್ತ ಕಡೆ ಸವಾರಿ? ಹವ್ ಆರ್ ಯು?' ಎಂದು ತಿಮ್ಮುವೂ ನಗುತ್ತಾ ನುಡಿದನು

'ನನ್ನ ವೈಫ್ ಹೆರಿಗೆಯ ಆಸ್ಪತ್ರೆಯಲ್ಲಿದ್ದಾಳೆ— ಅಂದರೆ ನಾನು ಅಲ್ಲಿಗೆ ಎಡ್ಮಿಟ್ ಮಾಡಿಸಿದ್ದೇನೆ....'

'ಓ—ಸೀ. ಅವಳು ಚೊಚ್ಚಲ ಬಸುರಿಯಿರಬೇಕು ಅಲ್ಲವೇ?'

'ಟೀಕ್ ಹೈ ತಿಮ್ಮು! ಈಗಲೋ ಮತ್ತೆಯೋ ಹಡೆಯುವುದರಲ್ಲಿದ್ದಾಳೆ. ಅಚ್ಚಾ, ಅಂದಹಾಗೆ ನಿನಗೂ—ನನ್ನ ಹೆಂಡತಿಯ ಪರಿಚಯವಿರಬೇಕಲ್ಲವೇ?'

"ಹೆಚ್ಚಿನಂಶ ಇರಬೇಕು. ನನ್ನ ಹೆಂಡತಿಗೆ ಹೇಗೂ ಪರಿಚಯವಿದೆ. ಏಕೆಂದರೆ ಅವರಿಬ್ಬರು ಸಹಪಾಠಿಗಳಂತೆ...'

"ಹಾಗಾದರೆ ಮತ್ತೇನು...."

'ನಿಮಗೀಗ ಡ್ಯೂಟಿಗೆ ಹಾಜರಾಗಲಿಕ್ಕಿಲ್ಲವೇ?' ತಿಮ್ಮು ಆಶ್ಚರ್ಯ ಹಾಗೂ ಕುತೂಹಲದಿಂದ ಕೇಳಿದನು.

"ಡ್ಯೂಟಿಗೆ ಹಾಜರಿಯಾಗಬೇಕು. ಆದರೆ ನಾನೀಗ ೧೫ ದಿನಗಳು ರಜೆಯನ್ನು ಹೆಚ್ಚಿಸಬೇಕೆಂದು ಬರೆದು ಪೋಸ್ಟ್ ಮಾಡಿ ಬರುತ್ತಿರುವೆ..."

"ಒಳ್ಳೆ ತಮಾಷೆ! ಹಾಗಾದರೆ ಪತ್ರಿಕೆಯಲ್ಲಿ ಈ ಪ್ರಕಟಣೆಯೇಕೆ?" ಎನ್ನುತ್ತಾ ತಿಮ್ಮುವು ತನ್ನ ಕೈಯಲ್ಲಿದ್ದ ಪತ್ರಿಕೆಯನ್ನು ಬಿಡಿಸಿ ಪ್ರಕಟಣೆಯನ್ನು ತೋರಿಸಿದನು.

"ನಮ್ಮ ಸೈನಿಕರಿಗೂ ಪಾಕ್ ಸೈನಿಕರಿಗೂ ಯುದ್ಧ....' ಇತ್ಯಾದಿ ವಿಚಾರ ತುಂಬಿತ್ತು. ಅದನ್ನು ಓದಿ ಸುಬ್ಬಯ್ಯನು ಸ್ವಲ್ಪ ಸಮಯ ಮಾತನಾಡದೇ ನಿಂತಿದ್ದನು. ಕೊನೆಗೆ

'ಅಚ್ಚಾ, ನನ್ನೊಂದಿಗೆ ಆಸ್ಪತ್ರೆ ತನಕ ಬರುವಿಯೋ?"

'ಅಗತ್ಯವಾಗಿ—ಹೋಗೋಣ—ನಡೆ'

ಸುಬ್ಬಯ್ಯನೂ ತಿಮ್ಮುವೂ ಕೈ ಕೈ ಹಿಡಿದುಕೊಂಡು ಲೋಕಾಭಿರಾಮವಾಗಿ ಮಾತನಾಡುತ್ತಾ ಆಸ್ಪತ್ರೆಯತ್ತ ಸಾಗಿದರು.

೦ ೦ ೦

ರಾಧೆಗೆ ತನ್ನ ಮಿತ್ರ ತಿಮ್ಮುವಿನ ಪರಿಚಯವನ್ನು ಸುಬ್ಬಯ್ಯನು ಮಾಡಿಸಿದನು. ಕೂಡಲೇ ರಾಧೆಯು ಸಂತೋಷದಿಂದ ನಗುತ್ತಾ. "ಗೀತಾ ಹೇಗಿದ್ದಾಳೆ?" ಎನ್ನುತ್ತಾ ತನ್ನ ಸಹಪಾಠಿಯ ವೃತ್ತಾಂತವನ್ನು ಕೇಳಿ ತುಂಬಾ ಆನಂದಗೊಂಡಳು. ಸುಬ್ಬಯ್ಯ ಅಲ್ಲೇ ಇದ್ದ ತನ್ನ ಅತ್ತೆಯನ್ನು ತೋರಿಸಿ" ಇವರು ಹಳೇ ಹೆಂಗಸು-- ನನ್ನ ಅತ್ತೆ' ಎಂದು ನಗುತ್ತಾ ನುಡಿದನು. ಸ್ವಲ್ಪ ಸಮಯ ಅವರೊಳಗೆ ತಮಾಷೆಯ ಮಾತುಕತೆಗಳು ನಡೆದವು.

"ಅಚ್ಚಾ, ಒಂದು ನಿಮಿಷದಲ್ಲಿ ಬರುವೆನು. ಇದೇ ಕುರ್ಚಿಯಲ್ಲಿ ಕುಳಿತಿರು" ಎಂದು ಹೇಳಿ ತಾನು ರಿಪೇರಿಗೆ ಕೊಟ್ಟಿದ್ದ ರಿಸ್ಟ್‌ವಾಚನ್ನು ತರಲು ಹೋದನು.

ರಾಧೆಯು ತಿಮ್ಮುವಿನೊಂದಿಗಿದ್ದ ಪತ್ರಿಕೆಯನ್ನು ತೆಗೆದುಕೊಂಡು ಓದತೊಡಗಿದಳು. ಸುಬ್ಬಯ್ಯನು ಮರಳಿ ಬಂದು ಕೋಣೆಯೊಳಗೆ ಪ್ರವೇಶಿಸುತ್ತಲೇ, ತನ್ನ ಅತ್ತೆ ತನ್ನ ಹೆಂಡತಿ ಅಳುತ್ತಿದ್ದುದನ್ನು ಕಂಡು ಸುಮ್ಮನೆ ನಿಂತನು. ತಿಮ್ಮುವಿನ ಮುಖವನ್ನು ನೋಡಿದನು. ಆತನು ತನ್ನ ಮುಖವನ್ನು ಕೆಳಗೆಮಾಡಿ ಕುಳಿತ್ತಿದ್ದನು. "ರಾಧಾ, ಏನಿದು! ಧೈರ್ಯದಿಂದಿರು. ಸೈನ್ಯಾಧಿಕಾರಿಯ ಪತ್ನಿಯು ಹೀಗೆ ಅಳುತ್ತಾ ಕುಳಿತರೆ ತಿಮ್ಮುವು ಏನೆಂದು ಆಲೋಚಿಸಲಿಕ್ಕಿಲ್ಲ?' ದುಃಖದಿಂದ ತುಂಬಿದ್ದ ನಿನ್ನ ಮುಖವನ್ನು ನನಗೀಗ ಕಾಣಿಸಬೇಡ. ಸಂತೋಷದಿಂದ ಇದ್ದು —ನನಗೆ ಜಯವನ್ನು ಬಯಸು" ಎಂದನು.

ಮತ್ತೆಹೀಗೆಂದನು:"ರಾಧಾ, ನೋಡಿಲ್ಲಿ. ನಾನು ಈ ರಾತ್ರಿಯೇ ಹೊರಡಲಿಕ್ಕಿದ್ದೇನೆ. ನಿನಗೆ ಬೇಕಾದ ಸೌಖರ್ಯಗಳನ್ನೆಲ್ಲಾ ಒದಗಿಸಿದ್ದೇನೆ. ಈ ಸಂದರ್ಭದಲ್ಲಿ ನೀನು ಚಿಂತಿಸಕೂಡದು. ನನ್ನ ನರನಾಡಿಗಳಲ್ಲಿ ರಕ್ತ ಹರಿಯುವ ತನಕ ವೈರಿಗಳೊಡನೆ ಕಾದಾಡುವೆನು. ಭಾರತ ಮಾತೆಯ ಹಿಡಿ ಹಿಡಿ ಮಣ್ಣು ಕೂಡಾ ನನಗೆ ಹೊನ್ನು! ಇಂತಹ ಪುಣ್ಯಕಾರ್ಯದಲ್ಲಿ ಭಾಗವಹಿಸುವ ಈ ಸಮಯದಲ್ಲಿ ನೀನು ದುಃಖಿಸಬಾರದು"

ರಾಧೆ ಏನೂ ಹೇಳಲಿಲ್ಲ—ಅಲ್ಲ--ಅವಳಿಗೆ ಏನು ಹೇಳಲಿಕ್ಕೂ ಹೊಳೆಯಲಿಲ್ಲ-ಅವಳ ತಾಯಿಯೂ ದುಃಖದಿಂದ ಕುಳಿತಿದ್ದಳು. ಸ್ವಲ್ಪ ಹೊತ್ತಿನ ತನಕ ಅಲ್ಲಿ ಸ್ಮಶಾನ ಮೌನವು ಆವರಿಸಿತು. ಕೊನೆಗೆ ತಿಮ್ಮುವು ಆ ಮೌನವನ್ನು ಮುರಿದು ನಡುಗುತ್ತಿರುವ ಸ್ವರಗಳಿಂದ—"ರಾತ್ರಿ ನೀವು ಹೊರಡುವುದು ನನಗೆ ಸರಿಕಾಣುವುದಿಲ್ಲ. ನನಗೂ ಭಯವಾಗುತ್ತಿದೆ" ಎಂದನು.

ಸುಬ್ಬಯ್ಯನು ತನ್ನ ರಿಸ್ಟ್‌ವಾಚ್ ನೋಡಿಕೊಂಡು, ಕೊನೆಗೆ ನಿಧಾನವಾಗಿ ಹೀಗೆಂದನು. 'ಹೌದು. ಅದೇ ಉತ್ತಮ. ನಾಳೆ ಬೆಳಗ್ಗೆ ೬ ಗಂಟೆಗೆ ಹೊರಟರೆ ಸಂಜೆಯ ಮದ್ರಾಸ ಮೈಲ್ ಕ್ಯಾಚ್ ಮಾಡಬಹುದು. ಆದರೆ, ಈಗ ಮಾತ್ರ ನನಗೆ ನನ್ನ ಊರಿಗೆ ಅಗತ್ಯವಾಗಿ ಹೋಗಲಿಕ್ಕಿದೆ. ಏಕೆಂದರೆ ಆಫೀಸಿಗೆ ಸಂಬಂಧಿಸಿದ ಕಾಗದ ಪತ್ರಗಳೆಲ್ಲಾ ಅಲ್ಲೇ ಇವೆ."

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

— ಕುಂಜಾಲು —

ವಿಳಾಸ ಬದಲಾವಣೆ

ನಮ್ಮ ಗ್ರಾಹಕರ ಅನುಕೂಲತೆಗಾಗಿ ನಮ್ಮ ಸಂಸ್ಥೆಯ ಕಾರ್ಯಾಲಯ (Office) ವನ್ನು ಈ ದಿನ (1—7—1966) ಕುಂಜಾಲಿನಿಂದ ಉಡುಪಿಗೆ ಸ್ಥಳಾಂತರಿಸಿರುವೆವು.

ನಮ್ಮ ಗ್ರಾಹಕರು ಇದನ್ನು ಗಮನಿಸಿ ಇನ್ನು ಮುಂದೆ ಈ ಕೆಳಗಿನ ವಿಳಾಸದೊಂದಿಗೆ ವ್ಯವಹರಿಸಿ ಸಹಕರಿಸಬೇಕಾಗಿ ಕೋರುತ್ತೇವೆ.

ಸ್ವದೇಶಿ ಔಷಧ ಭಂಡಾರ
(ರಿಜಿಸ್ಟರ್ಡ್)
ಸಂತೆಕಟ್ಟೆ, ಉಡುಪಿ. (ದ. ಕ.)

ಸ್ವದೇಶಿ ಔಷಧ ಭಂಡಾರದ ಪರವಾಗಿ
ಡಾ। ಕೆ. ಶಾಂತಾರಾಮ್ ಪ್ರಭು
ಮತ್ತು ಸಹೋದರರು.

"ಆದರೆ....ಆದರೆ ನೀವು ಇಷ್ಟು ಬೇಗನೇ ಹೋಗುವಿರೇನು?"

"ಹೌದು. ಹೌದು ರಾಧಾ. ಹೋಗದೆ ಸಾಧ್ಯವೇ ಇಲ್ಲ. ಪತ್ರಿಕೆಯಲ್ಲಿನ ಪ್ರಕಟಣೆಯನ್ನು ಕಣ್ಣಾರೆ ನೀನು ನೋಡಿಲ್ಲವೇ?"

"ಯುನಿಟ್‌ನಿಂದ ಟೆಲಿಗ್ರಾಮ್ ಬರುವ ತನಕವಾದರೂ ದಯವಿಟ್ಟು ಕುಳಿತುಕೊಳ್ಳಲಾರಿರಾ?" ಎಂದು ರಾಧೆ ಅತ್ತಳು.

"ಏನು ಹೇಳುತ್ತಿರುವೆ? ನಮ್ಮ ಊರಿಗೆ ಟೆಲಿಗ್ರಾಮ್ ತಲಪಲಿಕ್ಕೇ ೧೫ ದಿನಗಳಾದರೂ ಬೇಕು. ಅಷ್ಟು ಸಹನೆ ನನಗಿಲ್ಲ. ಅದು ಧರ್ಮವೂ ಅಲ್ಲ. ದೇಶವು ಗಂಡಾಂತರ ಪರಿಸ್ಥಿತಿಯಲ್ಲಿರುತ್ತಿರಲು, ಸೈನ್ಯಾಧಿಕಾರಿಯಾದ ನಾನು ಕರ್ತವ್ಯ ಬಾಹಿರನಾಗಲೇ?" ಎಂದು ಹೇಳುತ್ತಾ ಹೊರಡಲನುವಾದನು.

"ದಯಮಾಡಿ ಹೋಗಬೇಡಿ. ನನ್ನನ್ನು ಬಿಟ್ಟು ಹೋಗಬೇಡಿ" ರಾಧೆಯ ಮುಖವು ಕಣ್ಣೀರಿನಿಂದ ಒದ್ದೆಯಾಯಿತು. ಸುಬ್ಬಯ್ಯನಿಗೆ, ಪುನಃ ಹತ್ತಿರ ಬಂದು ಅವಳನ್ನು ಸಾಂತ್ವನಗೊಳಿಸದೆ ಸಾಧ್ಯವಿಲ್ಲವಾಯಿತು.

'ರಾಧಾ, ಏನಿದು? ನಾನು ಈಗಲೇ ಹೊರಡುವದಿಲ್ಲ. ನಮ್ಮ ಮನೆಯಲ್ಲಿದ್ದ ನನ್ನ ಬೇಕಾದ ಸಲಕರಣೆಗಳನ್ನು ಕೂಡಿಕೊಂಡೇ ಮತ್ತೆ ಸಂಜೆಯ ಹೊತ್ತಿಗೆ, ಇಲ್ಲಿಗೆ ಬರುವೆನು. ನಾಳೆ ಬೆಳಗ್ಗೆ ಇಲ್ಲಿಂದ ಹೊರಡುವೆನು"

"ಆದರೆ ನಾನು ಹಡೆಯುವ ತನಕವಾದರೂ ನಿಲ್ಲಲಾರಿರೇ? ಹುಟ್ಟಿದ ಮಗುವನ್ನು ನೋಡಿಯಾದರೂ ತೆರಳಿರಿ.'

"ನನಗೇನೂ ಹೇಳಲು ಹೊಳೆಯುತ್ತಿಲ್ಲ. ನೀನು ಅಳಬೇಡ. ಸುಮ್ಮನೆ ಮಲಗು. ಸಂಜೆ ನಿನ್ನೊಂದಿಗೆ ಮಾತನಾಡುವೆನು. ನನಗೂ ತಿಳಿದಿದೆ ನಿನ್ನ ದುಃಖ" ಎಂದು ಹೇಳಿ ಎದ್ದು ಕುಳಿತುಕೊಂಡು ಇದ್ದ ತನ್ನ ಪತ್ನಿಯನ್ನು ಮಲಗಿಸಿದನು.

ತಿಮ್ಮುವು ಇವೆಲ್ಲವನ್ನು ಕಂಡು ತುಂಬಾ ವ್ಯಸನಗೊಂಡನು. ಏನು ಸಹಾಯ ಮಾಡಲೂ ತಿಮ್ಮುವು ಹಲ್ಲಿಲ್ಲದ ಹಾವಿನಂತಾಗಿದ್ದನು.

೦ ೦ ೦

ಅಂದು ೧೯೬೫ ನೇ ಇಸವಿ ಸಪ್ಟೆಂಬರ್ ೮, ಬೆಳಗ್ಗೆ ೫ ಗಂಟೆಯ ಸಮಯ. ನಗರವು ಕತ್ತಲೆಯಿಂದಲೂ, ಮೌನದಿಂದಲೂ ಕೂಡಿತ್ತು. ಟಾರ್ಚ್ ಲೈಟಿನ ಮೂಲಕ ಕತ್ತಲನ್ನು ಭೇದಿಸಿಕೊಂಡು, ಒರ್ವ ವ್ಯಕ್ತಿಯು ವೇಗವಾಗಿ ಆಸ್ಪತ್ರೆಯ ಬಳಿಗೆ ಬರುತ್ತಿತ್ತು. ಸಿವಿಲ್ ಆಸ್ಪತ್ರೆಯ ಕಂಪೌಂಡನೊಳಗೆ ತಲಪುತ್ತಲೇ ವ್ಯಕ್ತಿಯು

(ಹದಿನೈದನೇ ಪುಟ ನೋಡಿರಿ)

Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೭	೪—೮—೧೯೬೬	No. 47

ಯಥಾರ್ಥ ಉದ್ರೇಕ

ಗಡಿ ಆಂದೋಲನದ ನಾಯಕರಾದ ಶ್ರೀ ಜ. ಹಳ್ಳಿಕೇರಿಯವರು ವಿಧಾನ ಪರಿಷತ್ತಿನಲ್ಲಿ ಮಾಡಿದ ಭಾಷಣವು ಭಾವೋದ್ರೇಕದಿಂದ ಕೂಡಿತ್ತಾದರೂ ಯಥಾರ್ಥವಾಗಿತ್ತು. ಅವರು ಅಂತಿಮವಾಗಿ ಕನ್ನಡಿಗರಿಗೆ ಕರೆ ನೀಡಿದರು— "ಗಡಿ ಪ್ರಶ್ನೆಯ ಸಂಬಂಧದಲ್ಲಿ ಒಬ್ಬೊಬ್ಬರು ಒಂದೊಂದು ಬಗೆ ಆಡುವುದು, ಹೇಳಿಕೆ ನೀಡುವುದು ಸಲ್ಲದು, ಇಡಿಯ ರಾಜ್ಯದಲ್ಲಿ ಈ ಸಂಬಂಧದಲ್ಲಿ ಒಂದೇ ನೀತಿಯಿರಬೇಕು— ನಾಡು ನುಡಿಗಳಿಗಾಗಿ ಹೋರಾಡುವ ದೃಢ ಪ್ರತಿಜ್ಞೆಯನ್ನು ನಾವು ಮಾಡಬೇಕು." ಇದು ವಾಸ್ತವವಾದುದು. ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಆಡ ಹೊರಟರೆ ನಮ್ಮ ಬಲಗುಂದುತ್ತದೆ, ನಮ್ಮ ಗಂಡು ನೆಲವನ್ನು ಸೆಳೆಯಬಯಸುವ ಮರಾಠಿಗರಿಗೆ ಲಾಭವಾಗುತ್ತದೆ.

ಈ ಸಾಮಾನ್ಯ ನೀತಿಯಾದರೂ ಯಾವುದು? ಬರಿಯ ಸಣ್ಣ ಪುಟ್ಟ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ನಾವು, ಮಹಾರಾಷ್ಟ್ರ—ಕರ್ನಾಟಕ ಗಡಿಯಲ್ಲಿ ಸಿದ್ಧರು. ನಿಯೋಜಿತ ಆಯೋಗವನ್ನು ನೇಮಿಸುವುದಕ್ಕೆ ಮೊದಲು ಅದರ ಕಾರ್ಯವ್ಯಾಪ್ತಿಯೆಷ್ಟೆಂಬುದನ್ನು ನಿರ್ಧರಿಸಬೇಕೆಂಬುದೇ ನಮ್ಮ ನಿಲುವು. ನಿಜ ಹೇಳುವುದಾದರೆ, ಈ ಗಡಿಯ ನಿರ್ಧಾರವು ಹಿಂದೆಯೇ ಆಗಿಬಿಟ್ಟಿದೆ. ಹಾಗಿದ್ದರೂ ಸಣ್ಣ ಪುಟ್ಟ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ನಾವು ಹಿಂಜರಿಯುವುದಿಲ್ಲ. ಆದರೆ ಇದಕ್ಕಾಗಿ ಆಯೋಗ ನೇಮಿಸುವ ಅಗತ್ಯವಿಲ್ಲ, ವಲಯ ಸಮಿತಿಯ ಮೂಲಕವೇ, ಮಾತುಕತೆಗಳ ತಳಹದಿಯಲ್ಲಿಯೇ ಇವು ಬಗೆಹರಿಯಬೇಕು. ರಾಜ್ಯ ಪುನರ್ಘಟನಾ ಕಾಯಿದೆಗೆ ಈ ಆಯೋಗದ ರಚನೆ ವಿರೋಧವಾದುದು— ಇದು ಹೆಚ್ಚಿನ ಕನ್ನಡಿಗರ ಸ್ಪಷ್ಟ ಅಭಿಮತ. ರಾಜ್ಯದ ಮುಖ್ಯಮಂತ್ರಿಯಾದಿಯಾಗಿ ಎಲ್ಲರೂ ಈ ನಿಲುಮೆಯನ್ನು ಸಮರ್ಥಿಸುತ್ತಾರೆ. ಆದರೂ ಇಬ್ಬರೂ ಮುಖ್ಯ ಮಂತ್ರಿಗಳು ಆಯೋಗದ ಕಾರ್ಯವ್ಯಾಪ್ತಿಯನ್ನು ಗೊತ್ತುಪಡಿಸಲು ಎರಡು ತಿಂಗಳ ಕಾಲಾವಧಿಯನ್ನು ಕಾಂಗ್ರೆಸ್ ಕಾರ್ಯಕಾರಿಣಿ ನೀಡಿದೆ. ಇದರಂತೆ ಇದೇ ಏಳರಂದು, ನಾಯಕ್—ನಿಜಲಿಂಗಪ್ಪ ಭೆಟ್ಟಿ ನಡೆಯುವುದು. ಇಬ್ಬರ ಮಾತುಕತೆಗಳು ಸೌಹಾರ್ದಮಯವಾಗಿಯೇ ನಡೆಯುವುದಾದರೂ ಇವರುಗಳಲ್ಲಿ ಒಮ್ಮತ ಮಾತ್ರ ಸಾಧ್ಯವಿಲ್ಲವೆಂಬುದು ಖಂಡಿತ. ಹಾಗಾದರೆ ಏನು ಮಾಡಬೇಕು? ಇದು ಯಕ್ಷ ಪ್ರಶ್ನೆಯೇ ಆಗಿದೆ.

ನಾಯಕರು ಬೆಳಗಾಂವಿ, ನಿಪ್ಪಾಣಿ, ಕಾರವಾರಗಳ ಬಗ್ಗೆ ಮರಾಠಿಗಳ ಬೇಡಿಕೆಯನ್ನು ಮುಂದಿಡುವರು—ನಿಜಲಿಂಗಪ್ಪನವರಿದನ್ನು ತಿರಸ್ಕರಿಸುವರು— ಇಲ್ಲಿಗೆ ಒಮ್ಮತದ ಮಾತುಕತೆ ಮುರಿದು ಬಿದ್ದಂತಾಗುವುದು— ಮುಂದೆ? ಸಂಪೂರ್ಣ ಮಹಾರಾಷ್ಟ್ರ ಏಕೀಕರಣ ಸಮಿತಿಯು ಹೇಳುತ್ತದೆ: "ಮಹಾರಾಷ್ಟ್ರ-ಕರ್ನಾಟಕ ಗಡಿಯ ಬಗ್ಗೆ ರಾಜ್ಯಗಳು ಆಸಕ್ತರಾಗಬಾರದು. ಕೇಂದ್ರ ಸರಕಾರವು ತನಗೆ ಸರಿ ಕಂಡಂತೆ ಇದನ್ನು ಬಗೆಹರಿಸಿ ಅಂತಿಮ ನಿರ್ಧಾರಕ್ಕೆ ಬರಬೇಕು. ಇದನ್ನು ಉಭಯತರರೂ ಒಪ್ಪಬೇಕು." ಹೀಗಾದಲ್ಲಿ ಪ್ರಜಾಸತ್ತೆ ಎಲ್ಲಿ ಉಳಿಯಿತು? ಕೇಂದ್ರ ಸರಕಾರವು ಮರಾಠಿಗಳ ಪ್ರಭಾವದಿಂದಾಗಿಯೇ ನಿದ್ರೆ ಹೋಗಿದ್ದ ಈ ಪ್ರಶ್ನೆಯನ್ನು ಮತ್ತೆ ಎತ್ತಿತೆಂಬುದನ್ನು ಅಲ್ಲಗಳೆಯಲು ಹೇಗೆ ಸಾಧ್ಯ? ಹಾಗಾಗಿ ಕೇಂದ್ರದ ನಿರ್ಣಯ ಮರಾಠಿಗರಿಗೆ ಅನುಕೂಲವಾಗಿಯೇ ಬರುವುದು ಖಂಡಿತ. ಆದುದರಿಂದ ಇಂತಹ, ಪ್ರಜಾಹಿತಕ್ಕೆ ಕಳಂಕ ತರುವಂತಹ ನೀತಿಯನ್ನು ಬೆಂಬಲಿಸುವುದು ಸಾಧ್ಯವಿಲ್ಲ. ಆದುದರಿಂದಲೇ ಶ್ರೀ ಹಳ್ಳಿಕೇರಿಯವರು ಹೇಳಿದಂತೆ "ಕನ್ನಡಿಗರು ಜೀವಂತವಿರುವವರೆಗೆ ಬೆಳಗಾಂವಿ, ನಿಪ್ಪಾಣಿ, ಕಾರವಾರಗಳನ್ನು ಮರಾಠಿಗರಿಗೆ ಕೊಡಲು ಬಿಡುವುದಿಲ್ಲ. ನಮ್ಮ ಹೆಣಗಳ ಮೇಲೆಯೇ ಅವನ್ನು ಅವರಿಗೆ ಕೊಡಬೇಕು" — ಇದು ಉದ್ರೇಕವೆನಿಸಬಹುದು. ಆದರೆ ಇದು ಯಥಾರ್ಥ ಉದ್ರೇಕ. ಕನ್ನಡಿಗರ ಹೃದಯಾಂತರಾಳದಿಂದ ಹೊರಟ ದೃಢ ನಿರ್ಧಾರ ಇದರಿಂದ ಎಳ್ಳಷ್ಟು ವಿಚಲಿತರಾದರೆ ಕನ್ನಡಿಗರಿಗೆ ಅನ್ಯಾಯವಾಗುವುದು ನಿಶ್ಚಯ. ಕೇಂದ್ರ ನಾಯಕರ ತಲೆಯಲ್ಲಿ ಆಯೋಗ ರಚನೆಯೇ ಗಡಿ ವಿವಾದಕ್ಕೆ ಪರಿಹಾರವೆಂಬ ಭೂತ ಸಂಚಾರ ಮಾಡುತ್ತಿದೆ. ಹಾಗಾಗಿ ಅವರು ಕೇಳುತ್ತಾರೆ—"ನೀವು ಆಯೋಗಕ್ಕೇಕೆ ಹೆದರುತ್ತೀರಿ?" ಇಲ್ಲಿ ಹೆದರುವ ಪ್ರಶ್ನೆಗಿಂತ ನ್ಯಾಯ-ನೀತಿಗಳ ಪ್ರಶ್ನೆ ದೊಡ್ಡದು. ರಾಜ್ಯ ನಡೆಸುವವರಿಗೆ ಅರ್ಥವಾದ ಈ ಧರ್ಮ ದೇಶ ನಡೆಸುವವರಿಗೆ ಗೊತ್ತಾಗುವುದಿಲ್ಲವಲ್ಲಾ ಎಂದು ಖೇದವಾಗುತ್ತದೆ.

ಆಷಾಢದ ಗುಡುಗು

ಇಂಡೋನೇಶ್ಯದ ಸುಕರ್ಣರ ಕಲ್ಲುಗಳು ಕಳಚಿ ಬೀಳುತ್ತ ಬಂದಿವೆ. ಈ ಹಳೆಯ ಹುಲಿ, ಇಂದು ತೀರ ನಿರ್ಬಲವಾದರೂ ಮತ್ತೆ ಗರ್ಜಿಸುವ ಮೋಜು ತೋರಿಸಿತು. ನಾಮ ಮಾತ್ರಕ್ಕೆ ಸರಕಾರದ ಮುಖ್ಯಸ್ಥರಾಗಿರುವ—ಅಧ್ಯಕ್ಷ ಅಥವಾ ಪ್ರಧಾನಿ — ಸುಕರ್ಣರು ಎಲ್ಲ ಅಧಿಕಾರಗಳನ್ನು ದಂಡಾಧಿಕಾರಿ ಸುಹರ್ತೋರವರಿಗೆ ನೀಡಿದ್ದರು. ಮತ್ತೀಗ ಸಚಿವ ಸಂಪುಟವನ್ನು ಅವರ ಸಲಹೆಯಂತೆಯೇ ಸುಕರ್ಣರು ನೇಮಿಸಿದರು. ಅದರ ಸಭೆಯಲ್ಲಿ ಮಾತನಾಡುತ್ತ ಸುಕರ್ಣರು ಗುಡುಗಿದರು—"ಇನ್ನು ಮುಂದೆಯೂ ನಾನು ಪ್ರಧಾನಿ—ಸರಕಾರದ ಮುಖ್ಯಸ್ಥ." ತತ್ಕ್ಷಣ ನಂತರ ಸುಹರ್ತೋ ಉದ್ಗರಿಸಿದರು— "ಸುಕರ್ಣರಿಂದು ಇಂಡೋನೇಶ್ಯದ ಪ್ರಧಾನಿಯಾಗಿ ಉಳಿದಿಲ್ಲ—ಬರಿಯ ಸರಕಾರದ ಮುಖ್ಯಸ್ಥರಾಗಿದ್ದಾರೆ." ತನ್ನ ಪತನವಾಯಿತು ಎಂದು ನಂಬಿದ್ದವರನ್ನು ಎಚ್ಚರಿಸಲೆಂದು ಸುಕರ್ಣ ಗುಡುಗಿದುದು ನಿಜ. ಆದರೆ, ಆಷಾಢದ ಗುಡುಗಿಗೆ ಹೆದರುವವರು ಯಾರು?

ವಚನ ಸುಧೆ

ಅನಾರಭ್ಯಾ ಭವಂತ್ಯರ್ಥಾ
ಕೇಚಿನ್ನಿತ್ಯಂ ತಥಾಗತಾಃ।
ಕೃತಃ ಪುರುಷಕಾರೋಽಪಿ
ಭವೇತ್ ಯೇಷು ನಿರರ್ಥಕಃ॥

ಅಪ್ರಾಪ್ತವಾಗುವ ಕಾರ್ಯಗಳನ್ನು ಎಂದಿಗೂ ಆರಂಭಿಸಬಾರದು. ಏಕೆಂದರೆ, ಅವಕ್ಕೋಸ್ಕರ ಪಡುವ ಪ್ರಯಾಸ ಸಂಪೂರ್ಣ ನಿಷ್ಫಲವಾಗುವುದು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R. I. A. 473/1966
in O. P. 27/1962.

1. ಸುಗುಣ ಬಲ್ಲಾಳ್ತಿ- H. ತಿಮ್ಮಹೆಗ್ಗಡೆರ ವಿಧವೆ

2. H. ಬಾಲಕೃಷ್ಣ ಹೆಗ್ಡೆ, 3. ದೂಗಿ ಹೆಗಡ್ತಿ, 4. ಅರುಂಧತಿ ಹೆಗ್ಗಡ್ತಿ—H. ತಿಮ್ಮಪ್ಪ ಹೆಗ್ಗಡೆರ ಮಕ್ಕಳು—

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ:—

ಉಡುಪಿ ಕಸ್ಬೆಯಲ್ಲಿ ತಾರೀಕು 11-8-1961 ರಲ್ಲು ಮೃತಪಟ್ಟ H. ತಿಮ್ಮಪ್ಪಹೆಗ್ಗಡೆರ ಬಾಬ್ತು ಅರ್ಜಿಯಲ್ಲಿ ವಿವರಿಸಿದ ಗವರ್ನಮೆಂಟು ಪ್ರೊಮಿಸರಿ ನೋಟುಗಳ ಮತ್ತು ನೇಶನಲ್ ಸರ್ಟಿಫಿಕೇಟುಗಳ ಆವೇಜುಗಳನ್ನು ದಸೂಲುಮಾಡುವರೆ ಸದ್ರಿ ತಿಮ್ಮಪ್ಪಹೆಗ್ಗಡೆರು ತಾರೀಕು 16—9—1945 ರಲ್ಲು ಬರೆದಿಟ್ಟ ರಿಜಿಸ್ಟ್ರು ಸಿಕಿಂ ವೀಲು ನಾಮುಪ್ರಕಾರ ಹಕ್ಕು ಹೊಂದಿರುವ ಅರ್ಜಿದಾರ್ರ ಹೆಸರಲ್ಲಿ Extended ವಾರೀಸು ಹಕ್ಕು ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 9-8-1966 ಕ್ಕೆ ಮುಟ್ಟುತ್ತದೆ. ಆಕ್ಷೇಪವುಳ್ಳವರು ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಬ್ಯಾಹೀರು ಮಾಡಿಕೊಳ್ಳಬಹುದು.

K. Balachandra Rao
Advocate for Petitioners
Udipi, 25—7—1966

ನರಸಣ್ಣನ ಸರಸ

"ವೇತನ ಸ್ಥಗಿತವಿಲ್ಲವೆಂತ ಅರ್ಥ ಮಂತ್ರಿ ಭರವಸೆ ನೀಡಿದ್ದಾರೆ."

"ರೂಪಾಯಿ ಮೌಲ್ಯವಿಚ್ಛೇದನವಿಲ್ಲೆಂತಲೂ ಭರವಸೆ ಕೊಡಲಿಲ್ಲವೇನು?"

ಮುಖಪುಟದಲ್ಲಿ:



ಸಂಯುಕ್ತ ರಾಷ್ಟ್ರ ಸಂಘದಲ್ಲಿರುವ ಭಾರತೀಯ ಅಧಿಕಾರಿಯೊಬ್ಬನ ಐದು ವರ್ಷದ ಮಗಳು—ಅಪರ್ಣಾ ಮೆಹ್ರೋತ್ರ, ಪ್ರಧಾನಿ ಇಂದಿರಾ ಗಾಂಧಿಯವರನ್ನು ನ್ಯೂಯಾರ್ಕ್ ನಗರಕ್ಕೆ ಸ್ವಾಗತಿಸಿದ ರಸಮಯ ಸನ್ನಿವೇಶ.

ಗೇಹ ರಾಜ್ಯದಲ್ಲಿ

ಪ್ರಮುಖನೇ ವಿಮುಖನಾದರೆ?

"ಅಂತೂ : ಊರಿಗೂ ಸುಖವಿಲ್ಲ ನನ್ಗೂ...."

"ಪಾಪ, ನಗರದಲ್ಲಿದ್ದರೇನಂತೆ? ಅವ, ನಿಗೂ ನರಕ ಭಯ ತಪ್ಪುವುದುಂಟೆ?"

'ಅಥವಾ ಹೀಗನ್ನಿ, ಪದಕವಲ್ಲಿ ಬಿದ್ದರೂ ಬಯಕೆ ತಪ್ಪುವುದೆ?'

'ಪರವಾಗಿಲ್ಲ ಕಣೇ ನೀನು, ಅಲ್ಲಿ, ಒಂದು ಕೂಡಲೇ ಸುಮ್ಮನಿಲ್ಲಾಂತ ರಾಗ ಎಳೆ ದೆಯಲ್ಲಾ...

ನಿನ್ನ...."

"ಯಾವ ಘರ್ಷಣೆಯಿಂದ ದೇವಿಯವರನ್ನ ರೋಸಿ ಹೋಯಿತು?'

'ನಿಮ್ಮ ಟೋಪಿ ಸರಕಾರವಿರುವನಕ ಒಂದೇದೇನು, ಎಲ್ಲವೂ ದುರ್ಘಟನೆಗಳಲ್ಲವೇ ಪ್ರಾಣನಾಥ?"

"ಓಹೋ ಹಾಗೋ? ಇರಲಿ. ಹಾಗಿದ್ದರೂ ಯಾವ ಪ್ರಮುಖ ಘಟನೆಯನ್ನು ನೆನೆನೆನೆದು ಪ್ರಾಣಪ್ರಿಯೆಯ ಸುಕೋಮಲ ಕುಸುಮ ಹೃದಯ ಕ್ಲಾಂತವಾಗಿದೆಯೆಂದು ತಿಳಿಯಲೆಳಸ ಬಹುದೆ?"

'ಓಹೋ ಅಡ್ಡಿಯೇನಂತೆ! ತಮ್ಮ ಟೋಪೀ ಸರಕಾರ ಆಡಳಿತೆ ನಡೆಯುವವರೆಗೆ ಏನೇನೂ ನೆಮ್ಮದಿಯಿಲ್ಲವೆಂಬುದೀಗ ಮತ್ತೊಮ್ಮೆ ಸ್ಪಷ್ಟವಾಯಿತಲ್ಲಾ?

'ಅದು ಹೇಗೆ ರಮಣಿ?"

"ಪಾರ್ಲಿಮೆಂಟಿನ ಹಗರಣ ಕೇಳಿದಿರಾ?"

"ಗುಲ್ಲು ಗಲಭೆ, ಕೂಗಾಟ....'

'ಇದೆಲ್ಲ ಅವಿಧೇಯತನವಲ್ಲವೆ?"

"ಸದಸ್ಯರನ್ನು ಅಂಕಿತದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ ಅಂದರೆ?"

"ಅಂದರೆ ಮಾಡುವುದೇನು ಪ್ರಿಯೆ? ... ತಾಸನದಲ್ಲಿ ಮಂಡಿಸಿ ಬಂದಲ್ಲಿ ... ಕ್ಷೇತ್ರದಲ್ಲಿ ಶಿಸ್ತು—ಸಂಯಮಗಳ ಸುದೀರ್ಘ ಭಾಷಣ ಬಿಗಿಯುವ ಈ ಎಂ. ಪಿ., ಎಸ್. ಪಿ. ... ಎಂ. ಎಲ್. ಸಿ.ಗಳೇ ಅಧ್ಯಕ್ಷರಿಂದ ವರ್ತಿಸಿದರೆ ಮತ್ತು ಳಿದವರು ಮಾಡೇನು? ಪ್ರಮುಖನೇ ವಿಮುಖನಾದರೆ....?'

'ಅಲ್ರಿ, ಅಧ್ಯಕ್ಷರು ಯಾರೋ ಒಬ್ಬರನ್ನ ಹೊರನಡೆಯಲು ಹೇಳಿದ್ರಂತೆ. ನಡೆಯದಿರಲು ಮಾರ್ಶಲ್ಲರನ್ನು ಕರೆದರಂತೆ. ಆಗ-ಉಳಿದ ಕೆಲ ಸದಸ್ಯರು ಮಾರ್ಶಲ್ಲರನ್ನು ಮೈಮುಟ್ಟಬೇಡಿ ಅಂದ್ರರಂತೆ. ನೋಡಿ, ಹೀಗೆಲ್ಲಾ ಜನಸೇವೆ ಮಾಡೋ ಗೀಳು ಅಂಟಿಸಿಕೊಂಡವ್ರು, ಸಭಾಪತಿಗಳಿಗೆ ಅಪಮಾನ ಮಾಡಿದ್ರೆ, ಶಾಲೆಯಲ್ಲಿ ಮಕ್ಳು ಅಧ್ಯಾಪಕರಿಗೆ ಅವಿಧೇಯರಾಗುವುದು, ಎದುರು ಮಾತಾಡುವುದು ಏನು ವಿಶೇಷ?"

"ಎಲ್ಲಾ ಸರೀನ್ನು. ಇದನ್ನೇ ನೋಡು ಒಬ್ಬ ಕವಿ ಹೇಳಿದ್ದಾರೆ...."

"ಏನೂಂತ?"

"ಕನ್ನಡ ಮಾಧ್ಯಮವಾಗಲಿ ಬೇಕು ಮೊದಲೀ ಕವಿಗಳಿಗೆ—ಕನ್ನಡ ಕವಿಗಳಿಗೆ......."

'ಭಾರಿ ಚಂದ ಇದೇನ್ರಿ. ಕನ್ನಡ ಕವಿಗಳು ಕನ್ನಡದಲ್ಲಿ ಮಾತಾಡದೆ ಬರೆಯದೆ ಮತ್ಯಾವುದರಲ್ಲಿ ಇದ್ದಾರೆ?'

'ಏನೋ, ನಮ್ಮ ಕನ್ನಡದ ದುರವಸ್ಥೆ ಗೊತ್ತಿಲ್ವೇನೆ? ಕನ್ನಡ ತಾಯಿಯ ಐವರು ಮಕ್ಕಳ ಗುಣ ಎಂಟು ರೀತಿ...'

'ಅದ್ದರಿಂದಲೇ ಕನ್ನಡ ನಾಡೂ ಬೆಳೆಯೋದಿಲ್ಲ....'

'ಬೆಳೆಯೋ ಮಾತು ದೂರವಿಡು. ಸದ್ಯ ಎಳೆಯದಾಗುತ್ತ ಬಾರದಿದ್ದರೆ ಸಾಕು...."

'ಮುಖ್ಯ ಮಂತ್ರಿ ನಿಜಲಿಂಗಪ್ಪ ಹೇಳಿದ್ದಾರಲ್ಲಾ—ಸಣ್ಣ ಪುಟ್ಟ ಹೊಂದಾಣಿಕೆಯನ್ನು ಮಾತ್ರ ಮಾಡಲು ಸಿದ್ಧವೆಂದು.'

'ಅವರು ಹೇಳುತ್ತಲೇ ಇದ್ದಾರೆ. ಆದರೆ ಮರಾಠಿ ಹದ್ದಿಗೆ ಕೋಳಿ ಮೊಟ್ಟೆಯಾಕೆ ಬೇಕು? ಅದಕ್ಕೆ ಬೇಕಾಗಿರೋದು ಬೆಳಗಾಂವಿ ಹುಂಜ, ನಿಪ್ಪಾಣಿ ಹೇಂಟೆ, ಕಾರವಾರದ ಮರಿ...."

"ಅದೆಲ್ಲ ಬಿಡಿ. ನಮ್ಮ ನಿಜಲಿಂಗಪ್ಪ ಇರುವ ವರೆಗೆ ಅದು ಸಾಧ್ಯವಿಲ್ಲ...."

"ಅಥವಾ ಹೀಗೆ ಅನ್ನಿ....ಅದು ಸಾಧ್ಯವಾದರೆ ನಿಜಲಿಂಗಪ್ಪನವ್ರೇ ಇಲ್ಲಾಂತ......"

"ಎಂತಹ ಮಾತಾಡ್ತೀರಿ? ನೋಡಿ, ಅವರೇ ಹೇಳಿದ್ದಾರೆ, ಹೇಳುತ್ತಾರೆ—ಕರ್ನಾಟಕಕ್ಕೆ ಅಹಿತವಾದುದನ್ನು ಇದುವರೆಗೆ ಮಾಡಿಲ್ಲ; ಇನ್ನು ಮುಂದೆಯೂ ಮಾಡಲಾರೆ..."

"ಸರಿಯೇ... ಆಗಲಿ; ಹಾಗೇ ಆಗಲಿ. ಈಗಲಾದರೂ ನಿಜಲಿಂಗಪ್ಪನವರ ಗಂಡು ಹೃದಯದ ಪರಿಚಯ ಆಯ್ತಲ್ಲ?"

"ಹ್ಞೂಂ... ನೋಡಿ, ಆಗಸ್ಟ್ ೭ನೇ ತಾರೀಕಿಗೆ ಮಹಾರಾಷ್ಟ್ರದ ವಿ. ಪಿ. ನಾಯಕರು ಬೆಂಗಳೂರಿಗೆ ಬರುತ್ತಾರಂತೆ...'

'ಹೌದು, ಇಬ್ಬರು ಮುಖ್ಯಮಂತ್ರಿಗಳು ನಿಯೋಜಿತ ಗಡಿ ಆಯೋಗದ ಕಾರ್ಯವ್ಯಾಪ್ತಿಯನ್ನು ಚರ್ಚಿಸುತ್ತಾರಂತೆ ..'

'ಆಗ ಹೇಳ್ತಾರೆ ನಮ್ಮವ್ರು ಬರಿಯ ಸಣ್ಣ ಪುಟ್ಟ ಹೊಂದಾಣಿಕೆಯನ್ನು ಮಾತ್ರ ಮಾಡಬಹುದೂಂತ....'

'ನಾಯಕರು ಒಪ್ಪದೆ ಹೋದರೆ?'

'ಚಿನ್ನ ಟಿಪ್ಪಣಿಗಳಿಂದ ಕಾರ್ಯ ವ್ಯಾಪ್ತಿ ನಿರ್ಧಾರವಾಗುತ್ತೆ....'

'ಮತ್ತೆಂಥದು? ಇಂಡಿಯಾ ರಬ್ಬರಿನಂತೆ ಮೊದಲಿದ್ದಲ್ಲಿಗೇ ಸಮಸ್ಯೆ ಬಂದು ನಿಲ್ಲುತ್ತದೆ...."

'ಒಂದು ವೇಳೆ ಹಾಗೇ ಆದರೆ?'

'ಆವರೆ...?'

'ಅಲ್ಲ, ಏನಾದೀತೂಂತ?'

"ತಾಳ ಬೇಕು, ತಾಳಿ ನೋಡಬೇಕು...."

'ಅದು ಇದೆಯಲ್ಲ? ಆದರೂ ನಿಮ್ಮ ಅಭಿಪ್ರಾಯದಲ್ಲಿ..."

'ನನ್ನ ನಿನ್ನ ಅಭಿಪ್ರಾಯವನ್ನು ಕೇಳುತ್ತಾರೆ ಯಾರು?

"ನಾನಿಲ್ಲವೆ?"

"ಅಯ್ಯೋ, ಆದ್ರೆ ನೀನು ಕೇಳ್ತಿದ್ರಿಂದ ಗಳಿಸೋ ಪುರುಷಾರ್ಥ?'

'ನಾಲ್ಕರಲ್ಲಿ ಯಾವುದಾದರೊಂದು...'

"ಹ್ಞೂಂ....ನೀನು ಸುಮ್ಮನೆ ಬಿಡೋದಿಲ್ಲ. ಆಗಲಿ, ನಾನನ್ನೋದು ಅಂತಹ ಸಂದರ್ಭದಲ್ಲಿ ಎರಡು ನ್ಯಾಯದ ದಾರಿಯೇ ಇಲ್ಲ."

"ಅಂದ್ರರೆ?"

"ಮಹಾರಾಷ್ಟ್ರ... ಕರ್ನಾಟಕ ಗಡಿ ಸಮಸ್ಯೆಯೇ ಇಲ್ಲ ... ಎಂಬ ... ನಿರ್ಧಾರಕ್ಕೆ ಬರಬೇಕು."

'ಯಾಕೆ? ಕೇಂದ್ರ ಸರಕಾರ ತಾನೇ ಒಂದು ನಿರ್ಣಯ ಮಾಡಬಾರದೇಕೆ?"

"ಅದಾಗದು..."

"ಯಾಕೆ?"

"ನೋಡು, ರಾಜ್ಯ ಪುನರ್ವಿಂಗಡಣಾ ಶಾಸನದಲ್ಲಿ ಹೊಂದಾಣಿಕೆಗೆ ಅವಕಾಶವಿದೆ ನಿಜ. ಆದರೆ ಈ ಹೊಂದಾಣಿಕೆಗೆ ಸಂಬಂಧಪಟ್ಟ ರಾಜ್ಯಗಳ ಒಪ್ಪಿಗೆ ಬೇಕು. ನಾವು ಬೆಳಗಾಂವಿ— ನಿಪ್ಪಾಣಿ—ಕಾರವಾರಗಳನ್ನು ಬಿಡಲು ಒಪ್ಪದೆ ಹೋದರೆ ಸರಿ...'

'ಅದು ಸರೀನ್ರಿ. ಆದರೆ ಹಾಗಿರುವಾಗ ನಮ್ಮ ಕಾಸರಗೋಡು, ಮತ್ತೆ ಮಡಕಶಿರ... ಉದಕ ಮಂಡಲ...'

'ಅವನ್ನು ಬಿಟ್ಟು ಕೊಡಲು ಅರಾಜ್ಯಗಳು ಒಪ್ಪುವುದಿಲ್ಲ....'

'ಹಾಗಾದರೆ, ನಮಗೆ ಕಾಸರಗೋಡು ಸಿಗುವುದೇ ಇಲ್ಲ....'

'ಇಷ್ಟು ಬೇಗ ನಿರಾಶೆಪಟ್ಟುಕೊಳ್ಳಬೇಡವೇ. ನಮಗೆ ತೊಂದರೆ ಈಗ ಕಳೆದುಕೊಂಡ ಪ್ರದೇಶಗಳನ್ನು ಮರಳಿ ಪಡೆಯುವ ಪ್ರಯತ್ನಕ್ಕಿಂತ ... ರುವ ಪ್ರದೇಶವನ್ನು ಉಳಿಸಿಕೊಳ್ಳಲು ಹೆಚ್ಚಿನ ದೃಢತೆ ಬೇಕಾಗಿದೆ...."

'ಅಂದರೆ, ಕಾಸರಗೋಡನ್ನು ಬಲಿಕೊಟ್ಟಂತೆಯೇ..."

"ಬಲೀಂತ ಯಾಕೆ ಅನ್ನುತ್ತೀ?"

"ಮತ್ತೇನು ಕಾಣಿಕೆ ಅನ್ನಬೇಕೆ?"

"ಕೊಟ್ಟ ಕಾಣಿಕೆಯನ್ನು ಮರಳಿ ಪಡೆಯುವುದಕ್ಕಿಲ್ಲ...'

"ಅಂತೂ ನಮ್ಮದು ಕರುಣ ಕಥೆ..."

"ಕಥೆಯಲ್ಲ, ಕ್ರಂದನ!"

"ಆದರೇನು? ಅದು ಅರಣ್ಯರೋದನ..."

'ಪ್ರಜಾಪ್ರಭುತ್ವದಲ್ಲಿ ಅಂತಿಮ ನಿರ್ಧಾರವೆಂಬುದೇ ಇಲ್ಲ ನೋಡು... ಇಂದು ರಾಜ್ಯವಿಭಜನೆಯಾಗುತ್ತ ಬಂದಂತೆ ನಾಳೆ ಏಕೀಕರಣವಾದರೂ ಆಗಬಹುದು. ದ್ರಾವಿಡ ರಾಜ್ಯ ರಚನೆಯಾದರೆ ಕನ್ನಡ ಕೈಬಿಟ್ಟ ಪ್ರದೇಶವೆಲ್ಲ ನಮಗೆ ಸಿಗುತ್ತೆ...."

"ಸುರುವಾಯ್ತು ನಿನ್ನದ್ದೊಂದು ಅಧ್ವಾನ....'

"ಯಾಕೆ ಹಾಗಂತೀ?'

"ಎಲ್ಲಾ ಬಿಟ್ಟ ಮಗ ಭಂಗಿ ನೆಟ್ಟ ಅಂದ ಹಾಗೆ...."

'ಯಾಕೆ?'

'ಮತ್ತೆ ಎಲ್ಲಾ ಬಿಟ್ಟು ದ್ರಾವಿಡ ರಾಜ್ಯದ ಕನಸು ಕಂಡ್ರಲ್ಲಾ...'

"ಏನೋ ಕಣ್ಣೆವೆಗಳ ನಡುವೆ ನಿದ್ರೆ ಕುಣಿಯುತ್ತೆ...."

'ಅಯ್ಯೋ ಪಾಪ! ಇರಲಿ, ಇನ್ನು ಹೊರಡಿ....'

"ಹೊರಡೋದೇನು ಬಂತೆ, ನೀನು ಮೊದಲು..."

"ಹ್ಞೂಂ...."

— ಗೋರಾ.

ಪುತ್ತೂರ್ ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

... ೩೦೭/೧೯೬೫

ಬಿ. ... —ವಾದಿ

ಮತ್ತು

ಯಂ. ಅನಂತಕೃಷ್ಣ ಆಚಾರ್—ಪ್ರತಿವಾದಿ.

ಸದ್ರಿ ಪ್ರತಿವಾದಿ ಯಂ. ಅನಂತಕೃಷ್ಣ ಆಚಾರ್, ಡ್ರೈವರ್, ಶಂಕರ್ ಬಸ್ ಸರ್ವಿಸ್ ಕೊಪ್ಪ, Post ಕೊಪ್ಪ. ಇವರಿಗೆ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಗೆ ನಿಮ್ಮಿಂದ ಬರತಕ್ಕ ಆವೇಜು ರೂಪಾಯಿ 390/—ಕ್ಕೆ ಮಾಡಿದ ವ್ಯಾಜ್ಯದ ವ್ಯಾಜ್ಯದೆಯು ತಾರೀಖು 17—8—1966 ಕ್ಕೆ 11 ಗಂಟೆಗೆ ನಿಮ್ಮ ಹಾಜರಿಯ ಬಗ್ಗೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಣೆ ಏನಾದರೂ ಇದ್ದಲ್ಲಿ ಆ ದಿನ ಕೋರ್ಟಿಗೆ ಹಾಜರಾಗಿ ಹಾಜರು ಮಾಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷೀಯವಾಗಿ ಕಂಡ ರೀತಿಯಲ್ಲಿ ತೀರ್ಮಾನಿಸಲಾದೀತು. ತಿಳಿದಿರಲಿ.

(Sd) B. T. Rai
Advocate for Plaintiff.

ಪುತ್ತೂರು, ತಾರೀಖು 28—7—1966.

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ—ಶ್ರೀ ಎನ್. ಭಟ್, ಶಿರಾಡಿಪಾಲ್

"ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ......................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ| 120 ಪುಟಗಳು| ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೋ, ಪಾಲುಕೋಟೆ, ಉಡುಪಿ.

ಪರಿಚಯ

ಮೈಸೂರಿನ ಗಂಡುನೆಲ—ಶ್ರೀರಂಗಪಟ್ಟಣ

ಬರೆದವರು

ಶ್ರೀ ಸ. ನಾರಾಯಣ.

ಶ್ರೀರಂಗ ಪಟ್ಟಣ ಮೈಸೂರಿನಿಂದ ಪೂರ್ವಕ್ಕೆ ೧೦ ಮೈಲಿ ದೂರದಲ್ಲಿ ಬೆಂಗಳೂರು ಹಾದಿಯಲ್ಲಿರುವ ತಾಲ್ಲೂಕಿನ ಮುಖ್ಯ ಸ್ಥಳ. ಪುರಾತನ ಪ್ರಸಿದ್ಧ ಪಟ್ಟಣ. ಚರಿತ್ರಾರ್ಹ ನೆಲೆ–ಪುರಾಣ ಕಾಲದ ಪುಣ್ಯ ಭೂಮಿ.

ಮಹರ್ಷಿ ಗೌತಮರು ತಪಸ್ಸನ್ನಾಚರಿಸಿ ಶ್ರೀ ರಂಗನಾಥನನ್ನು ಪ್ರತ್ಯಕ್ಷವಾಗಿ ಕಂಡ ನೆಲ. ಶ್ರೀರಂಗ ಪಟ್ಟಣದಿಂದ ಪಶ್ಚಿಮಕ್ಕೆ ದ್ವೀಪದ ಆಕಾರದಲ್ಲಿದೆ. ಇಲ್ಲಿ ಕಾವೇರಿ ನದಿ ಎರಡು ಕವಲಾಗಿ ಮುಂದ ಸಾಗುತ್ತದೆ. ಈ ಪ್ರದೇಶದಲ್ಲಿ ಉತ್ತರದಲ್ಲಿರುವ ಎರಡು ದೊಡ್ಡ ಗುಹೆಗಳನ್ನು ಗೌತಮರ ಗುಹೆಗಳೆಂದು ನಿರ್ದೇಶಿಸಿ ಇಂದಿಗೂ ತೋರಿಸುತ್ತಾರೆ. ಶ್ರೀರಂಗ ಪಟ್ಟಣ ಪುರಾತನ ಗೌತಮ ಕ್ಷೇತ್ರ ಎಂಬುದು ಸರ್ವವಿದಿತ. ಉತ್ತರ ದಿಕ್ಕಿನ ಎದುರು ದಂಡೆಯಲ್ಲಿ ಕಾಣುವ ಶತಮಾನದ ಗಂಗರಸರ ಕಾಲದ ಶಿಲಾಶಾಸನವಿದೆ.

ಕಾವೇರಿ ತೀರದಲ್ಲಿ ಮುಖ್ಯವಾಗಿ ಮೂರು ಸ್ಥಳಗಳಲ್ಲಿ ಶ್ರೀರಂಗನಾಥ ಸ್ವಾಮಿಯ ದೇವಾಲಯಗಳಿವೆ. ಅವು ಕ್ರಮವಾಗಿ ಶ್ರೀರಂಗ ಪಟ್ಟಣ, ಶಿವಸಮುದ್ರ ಮತ್ತು ಶ್ರೀ ರಂಗಂ (ತಿರುಚಿನಾಪಳ್ಳಿ ಸಮೀಪ) ಕ್ಷೇತ್ರಗಳಲ್ಲಿವೆ. ಇವುಗಳಿಗೆ ಕ್ರಮವಾಗಿ ಆದಿರಂಗ, ಮಧ್ಯರಂಗ, ಮತ್ತು ಅಂತ್ಯರಂಗ ಎಂಬ ಹೆಸರು ವಾಡಿಕೆಯಲ್ಲಿದೆ.

ಕ್ರಿ. ಶ. ೮೯೪ರಲ್ಲಿ ಕನ್ನಡ ನಾಡನ್ನಾಳಿದ ಗಂಗರಸರ ಪ್ರತಿನಿಧಿ ತಿರುಮಲಯ್ಯ ಎಂಬುವನು ತಾನು ಮನೆಯಂತಿದ್ದ ಈ ಸುಂದರ ಪ್ರದೇಶವನ್ನು ಗಮನಿಸಿ, ಈ ದ್ವೀಪದ ಸೌಂದರ್ಯಕ್ಕೆ ಮರುಳಾಗಿ ಇಲ್ಲಿದ್ದ ಕಾಡನ್ನು ಕಡಿದು ಶ್ರೀ ರಂಗನಾಥ ಮತ್ತು ತಿರುಮಲದೇವ ದೇವಾಲಯಗಳನ್ನು ಚಿಕ್ಕ ಪ್ರಾಕಾರಗಳಿಂದ ನಿರ್ಮಿಸಿ ಈ ಕ್ಷೇತ್ರಕ್ಕೆ ಶ್ರೀ ರಂಗಪಟ್ಟಣ (ಶ್ರೀರಂಗಪುರ) ಎಂಬ ಹೆಸರಿಟ್ಟನೆಂದು ಗೊತ್ತಾಗುತ್ತದೆ.

ಕ್ರಿ. ಶ. ೧೧೧೭ರಲ್ಲಿ ಶ್ರೀ ವೈಷ್ಣವ ಧರ್ಮ ಪ್ರಸಾರಕ್ಕೆ ಬಂದ ಆಚಾರ್ಯ ರಾಮಾನುಜರ ಅನುಗ್ರಹಕ್ಕೆ ಪಾತ್ರನಾದ ಹೊಯ್ಸಳ ಅರಸು ಬಿಟ್ಟಿದೇವ ಆಚಾರ್ಯರ ಪ್ರಭಾವ ಪೂರ್ಣ ವ್ಯಕ್ತಿತ್ವಕ್ಕೆ ತಲೆಬಾಗಿ ಶ್ರೀ ವೈಷ್ಣವ ಧರ್ಮವನ್ನು ಸ್ವೀಕರಿಸಿದ. ವಿಷ್ಣುವರ್ಧನ ಶ್ರೀ ವೈಷ್ಣವ ಬ್ರಾಹ್ಮಣರಿಗೆ (ಹೆಬ್ಬಾರ್) ಕಾವೇರಿಯ ಎರಡು ದಂಡೆಗಳಲ್ಲಿ ಅಗ್ರಹಾರಗಳನ್ನು ಕಟ್ಟಿಸಿ ಕೊಟ್ಟ ಸಂಗತಿಯನ್ನು ಶಾಸನಗಳಿಂದ ತಿಳಿಯಬಹುದು. ಹಾಗೆಯೇ ಅಷ್ಟಗ್ರಾಮ (ಎಂಟು ಹಳ್ಳಿ) ಪ್ರದೇಶವನ್ನು ಇಂದಿಗೂ ಕಾಣಬಹುದು.

ಶ್ರೀರಂಗ ಪಟ್ಟಣದಲ್ಲಿ ದೊರೆಯುವ ಶಾಸನದ ಪ್ರಕಾರ ಕ್ರಿ. ಶ. ೧೧೫೪ರಲ್ಲಿ ಹೊಯ್ಸಳ ಅರಸು ವಿಷ್ಣುವರ್ಧನನ ಸೋದರ ಉದಯಾದಿತ್ಯ ಶ್ರೀರಂಗ ಪಟ್ಟಣದ ಪೇಟೆ ಮತ್ತು ಕೋಟೆಯನ್ನು ಮೊಟ್ಟಮೊದಲಿಗೆ ಕಟ್ಟಿಸಿದನೆಂದು ತಿಳಿದು ಬರುತ್ತದೆ.

೧೪೫೪ರಲ್ಲಿ ತಿಮ್ಮಣ್ಣನೆಂಬ ನಾಗಮಂಡಲದ ಓರ್ವ ದಂಡನಾಯಕ ವಿಜಯನಗರದರಸರ ಅನುಮತಿಪಡೆದು ಶ್ರೀರಂಗ ಪಟ್ಟಣದ ಭದ್ರವಾದ ಕೋಟೆಯನ್ನು ಕಟ್ಟಿಸಿದ ಎಂಬ ಸಂಗತಿಯೂ ತಿಳಿದು ಬರುತ್ತದೆ. ಮತ್ತು ಶ್ರೀರಂಗನಾಥ ಸ್ವಾಮಿ ದೇವಾಲಯವನ್ನು ಶಿಲ್ಪ ಸಂಪ್ರದಾಯಗಳಿಗನುಸಾರವಾಗಿ ಭವ್ಯದೇವಮಂದಿರ ನಿರ್ಮಾಣ ಮಾಡಲು ಪ್ರಯತ್ನಿಸಿದ ಎಂಬುದು ಸ್ಪಷ್ಟವಾಗಿದೆ. ೧೪೯೫ರಲ್ಲಿ ಶ್ರೀರಂಗ ಪಟ್ಟಣ ವಿಜಯನಗರದ ನೇರ ಆಳ್ವಿಕೆಗೆ ಒಳಪಟ್ಟ ಹಾಗೆ ತೋರುತ್ತದೆ.

೧೬೧೦ರಲ್ಲಿ ತಿರುಮಲ ರಾಜ (ವಿಜಯನಗರದರಸು)ರ ಶಕ್ತಿ ಹೀನವಾದ ಕಾರಣ ಮೈಸೂರಿನ ಉದಯೋನ್ಮುಖ ಅರಸ ರಾಜ ಒಡೆಯರು ಶ್ರೀರಂಗ ಪಟ್ಟಣವನ್ನು ತಮ್ಮ ವಶಕ್ಕೆ ತೆಗೆದು ಕೊಂಡರು. ಮುಂದೆ ಶ್ರೀರಂಗ ಪಟ್ಟಣ ಮೈಸೂರು ಅರಸರ ರಾಜಧಾನಿಯಾಯಿತು. ೧೭೯೯ ರಲ್ಲಿ ನಡೆದ ೪ ನೇ ಮೈಸೂರು ಯುದ್ಧದಲ್ಲಿ ಸರ್ವಾಧಿಕಾರಿ ಟಿಪ್ಪು ಸುಲ್ತಾನ್ ಮಡಿದು ಶ್ರೀರಂಗ ಪಟ್ಟಣ ಬ್ರಿಟಿಷ್ ಸೈನ್ಯದ ವಶವಾಗುವವರೆಗೆ ಮೈಸೂರು ಅರಸರ ಕೀರ್ತಿಯನ್ನು ಮೆರೆಸುವ ಮುಖ್ಯ ಕೇಂದ್ರವಾಗಿತ್ತು, ಭವ್ಯ ನೆಲೆಯೂ ಆಗಿತ್ತು.

ಶ್ರೀರಂಗ ಪಟ್ಟಣ ಹಲವಾರು ಬಾರಿ ಶತ್ರುಗಳ, ಪಾಳೆಯಗಾರರ ದಾಳಿಯನ್ನು ಎದುರಿಸಬೇಕಾಗುತ್ತಿತ್ತು. ಇದರ ಸುತ್ತಲೂ ಇರುವ ಭವ್ಯವಾದ ವಜ್ರ ಕವಚದಂತಿದ್ದ ಕೋಟೆ ಶತ್ರುಗಳ ತೋಪಿಗೆ, ಗುಂಡಿಗೆ ಉತ್ತರ ಕೊಟ್ಟಿದೆ. ಕೋಟೆಯ ಭದ್ರತೆಯನ್ನು ಇಂದಿಗೂ ಗಮನಿಸಬಹುದಾಗಿದೆ. ದುರಾದೃಷ್ಟದಿಂದ ೧೭೯೯ರಲ್ಲಿ ದ್ರೋಹಿಗಳ ಒಳಸಂಚಿನಿಂದ ಕೋಟೆ ಬಿರುಕುಬಿಟ್ಟು ಶತ್ರುಗಳ ಆಗಮನಕ್ಕೆ ಅವಕಾಶ ಮಾಡಿಕೊಟ್ಟಿತು.

ಕೆಲಕಾಲಾನಂತರ ಮೈಸೂರು ಅರಸರು ರಾಜಧಾನಿಯನ್ನೇ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಬದಲಿಸಿದರು.

ಶ್ರೀರಂಗ ಪಟ್ಟಣದಲ್ಲಿ ಕೋಟೆ, ಪೇಟೆ ಪ್ರದೇಶದಲ್ಲಿರುವ ಪ್ರತಿ ಐತಿಹಾಸಿಕ ಸ್ಥಳಗಳೂ ಪ್ರೇಕ್ಷಕರಿಗೆ ಗತ ಸ್ಮೃತಿಯನ್ನು ನೆನಪು ಮಾಡಿಕೊಡುತ್ತವೆ. ಪಟ್ಟಣದ ಹೊರ-ಒಳ ವಲಯಗಳಿಂದ ಕಾಣುವ ಭವ್ಯ ನೋಟವೂ ಅಷ್ಟೇ ರಮ್ಯ. ಮೈಸೂರು ಚರಿತ್ರೆಯ ರೋಮಾಂಚಕಾರಕ ಅಧ್ಯಾಯ ಒಂದರ ನೆಲೆ ಶ್ರೀರಂಗ ಪಟ್ಟಣ.

ಶ್ರೀರಂಗ ಪಟ್ಟಣದಲ್ಲಿ ದರ್ಶನೀಯ ಸ್ಥಳಗಳು ಒಂದಲ್ಲ ಹತ್ತಾರು. ಪಡರ್ ಗಂಜಾಂ, ದರಿಯಾ ದೌಲತಾ ಬಾಗ್, ಲಾಲ್‌ಬಾಗ್, ದೊಡ್ಡ ಮಸೀದಿ, ವೆಲ್ಲೆಸ್ಲಿ ಸೇತುವೆ, ಐರೋಪ್ಯರ ಸ್ಮಾರಕಗಳು, ಸುಂದರ ದೇವಾಲಯಗಳು, ಅರಮನೆಗಳು ಎಲ್ಲವೂ ಕಳೆದ ಘಟನೆಗಳ ನೆನಪನ್ನು ಮಾಡಿ ಕೊಡುತ್ತವೆ.

ಶ್ರೀರಂಗನಾಥ ದೇವಾಲಯ ದ್ರಾವಿಡ ಶಿಲ್ಪ ಸಂಪ್ರದಾಯವನ್ನು ಅನುಸರಿಸಿ ನಿರ್ಮಿಸಿರುವ ಭವ್ಯ—ರಮ್ಯ ದೇವಾಲಯ. ಮುಂಭಾಗದಲ್ಲಿರುವ ಗೋಪುರ ದೇವಾಲಯಕ್ಕೆ ಅಪೂರ್ವ ಶೋಭೆಯನ್ನು ನೀಡಿದೆ.

ಗರ್ಭ ಗೃಹದಲ್ಲಿ ಶ್ರೀರಂಗನಾಥ ಆದಿಶೇಷನ ಮೇಲೆ ಪವಡಿಸಿದ್ದಾನೆ. ಗೌತಮರ ಪ್ರತಿಮೆ ಶ್ರೀರಂಗನಾಥನ ಪಾದದ ಬಳಿ ಇದೆ. ದೇವರ ಪಾದದ ಬಳಿ ಶ್ರೀದೇವಿ ಮತ್ತು ಭೂದೇವಿಯರ ವಿಗ್ರಹಗಳಿಗೆ ಬದಲಾಗಿ ಕಾವೇರಿಯ ಪ್ರತಿಮೆಯಿದೆ. ಕಾವೇರಿಯ ಒಂದು ಕೈಯಲ್ಲಿ ಪದ್ಮವಿದೆ. ಸ್ಥಳ ಪುರಾಣದ ಪ್ರಕಾರ ಗೌತಮ ಮತ್ತು ಕಾವೇರಿಯರ ಪ್ರಾರ್ಥನೆಯ ಮೇರೆಗೆ ಶ್ರೀರಂಗನಾಥ ಒಲಿದು ನೆಲೆಸಿದ ಎಂದು ತಿಳಿಯಬಹುದಾಗಿದೆ. ದೇವಾಲಯದ ಪ್ರಾಕಾರದಲ್ಲಿ ಶ್ರೀವೈಷ್ಣವ ಆಳ್ವಾರರು (ಶ್ರೀವೈಷ್ಣವ ಸಂತರು)ಗಳ ವಿಗ್ರಹಗಳಿವೆ. ಪ್ರವೇಶ ದ್ವಾರದ ಎರಡು ಬದಿಯಲ್ಲಿರುವ ಎರಡು ಕಂಬಗಳಿಗೆ ಚತುರ್ವಿಂಶತಿ ಕಂಬಗಳೆಂದು ಕರೆಯುತ್ತಾರೆ.

ಆವರಣದಲ್ಲಿ ಅಧಿಕ ಸಂಖ್ಯೆಯಲ್ಲಿ ಶಾಸನಗಳಿವೆ. ಗರ್ಭಗೃಹದ ಹೊರ ಗೋಡೆಯ ಮೇಲೆ ಕ್ರಿ. ಶ. ೧೪೫೪ರ ತಮಿಳು ಶಾಸನ ಒಂದಿದೆ. ಪ್ರಾಚೀನ ಸಂಗತಿಗಳನ್ನು ಅರಿಯಲು ಈ ಶಾಸನ ಸಹಕಾರಿಯಾಗಿದೆ.

ಟಿಪ್ಪುನಿಂದ ಮುಸಲ್ಮಾನರಾದರೂ ಹಿಂದೂ ಧರ್ಮ-ದೇವರುಗಳಲ್ಲಿ ಗೌರವ ಭಾವ ತಾಳಿದ ಹೈದರ್ ಮತ್ತು ಅವನ ಮಗ ಟಿಪ್ಪು ಶ್ರೀರಂಗನಾಥ ಸ್ವಾಮಿ ದೇವಾಲಯದ ಬಗ್ಗೆ ತೋರಿದ ಭಕ್ತಿ, ಸಲ್ಲಿಸಿದ ಸೇವೆ, ನೀಡಿದ ಕಾಣಿಕೆ ಎಲ್ಲವನ್ನೂ ಇಂದಿಗೂ ಕಾಣಬಹುದು. ಹಲವಾರು ರಜತ ಪಾತ್ರೆ, ಸುವರ್ಣ—ರತ್ನಾಭರಣಗಳ ಮೇಲೆ ಟಿಪ್ಪು ಹೆಸರನ್ನು ಕಾಣಬಹುದಾಗಿದೆ. ದೇವಾಲಯದ ಆದಾಯ, ಆಸ್ತಿ, ಸುವರ್ಣ ಅಮೂಲ್ಯವಾಗಿತ್ತೆಂದು ಸಾಕ್ಷ್ಯಾಧಾರಗಳಿಂದ ತಿಳಿಯಬಹುದು.

ಶ್ರೀ ರಂಗನಾಥ ಸ್ವಾಮಿಯ ದೇವಾಲಯವನ್ನಲ್ಲದೆ ದ್ರಾವಿಡ ಶಿಲ್ಪ ಸಂಪ್ರದಾಯದ ಗಂಗಾಧರೇಶ್ವರ, ನರಸಿಂಹ ದೇವರ ಭವ್ಯ ದೇವಾಲಯಗಳನ್ನು ಕಾಣಬಹುದು. ಗಂಗಾಧರೇಶ್ವರ ದೇವಾಲಯದಲ್ಲಿರುವ ಉತ್ಸವ ಮೂರ್ತಿ ದಕ್ಷಿಣಾಮೂರ್ತಿಯ ಪ್ರತಿಮೆ ಅಂದವಾಗಿದೆ. ಆದಿನಾಥ ಬಸದಿ, ರಾಮ, ಲಕ್ಷ್ಮೀನಾರಾಯಣ, ಜ್ಯೋತಿರ್ಮಯೇಶ್ವರ, ಜನಾರ್ಧನ ಮೊದಲಾದ ದೇವಾಲಯಗಳು ದರ್ಶನ ಯೋಗ್ಯವಾಗಿವೆ.

ಪುರಾಣ ಇತಿಹಾಸಗಳ ಕಾಲದಲ್ಲಿ ವೈಭವದಿಂದ ಮೆರೆದ ಈ ಕ್ಷೇತ್ರ ಇಂದು ಪ್ರೇಕ್ಷಕರ ನೆಲೆ ಎಂದು ಧಾರಾಳವಾಗಿ ಹೇಳಬಹುದು.

ಪಿಗ್ಮಿಯಲ್ಲಿ ಕೂಡಿಡಿರಿ ವಾರದ ಏಳು ದಿನವೂ
25 ಪೈಸೆ ನೀಡಿದರೆ ಏಳು ವರುಷದ ಕೊನೆಗೆ
ಖಾತೆಯಲಿ ತುಂಬುವುದು ಏಳು ನೂರು ರೂಪಾಯಿ.

ಮಿತ ವ್ಯಯದ ಪಾಠ ಮತ್ತು ಉಳಿತಾಯದ
ಪರಿಪಾಠವನ್ನು ಕಲಿಸುವ ಪಿಗ್ಮಿ ನಿಮ್ಮ
ಸಂಪತ್ತನ್ನು ಸರಳವಾಗಿ ರೂಪಿಸುವ ಶಕ್ತಿ.

ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಉಳಿತಾಯ ಖಾತೆಯಲ್ಲಿ ಹಣವನ್ನು ಕ್ರಮವಾಗಿ ಕೂಡಿಟ್ಟು, ಈ ಸರಳ ಯೋಜನೆಯ ಸೌಲಭ್ಯ ಮತ್ತು ಪ್ರಯೋಜನವನ್ನು ಪಡೆದು ನಿಮ್ಮ ಸಂಪತ್ತನ್ನು ಬೆಳೆಸಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಕೃಷಿಕರ ರಂಗ

ಕಡಿಮೆ ವೆಚ್ಚದಲ್ಲಿ ಹೆಚ್ಚು ಭತ್ತ

ಲೇಖಕರು
ಶ್ರೀ ನಯಂಪಳ್ಳಿ ರಾಮರಾವ್.

ಚೀನದ ಆಕ್ರಮಣವನ್ನು ನಾವು ಎದುರಿಸಬೇಕಾಗಿದೆಯೆಂದು ನಿಮಗೆಲ್ಲ ತಿಳಿದಿರಬಹುದು. ಒಮ್ಮೆ ನಮ್ಮ ದೇಶಕ್ಕೆ ಗಂಡಾಂತರ ಬಂದಾಗ ರಾಷ್ಟ್ರವು ಎಚ್ಚರಗೊಂಡಿತು. ತಾತ್ಕಾಲಿಕವಾಗಿ ಅಪಾಯ ಶಮನವಾದರೂ ಆ ಅಪಾಯ ಇದ್ದೇ ಇದೆ.

ಕ್ಷಾಮವೆಂಬ ಇನ್ನೊಂದು ಅಪಾಯವು ನಮಗಾಗಿ ಕಾದಿದೆ ಎಂಬುದನ್ನು ಕೆಲವೇ ಮಂದಿ ತಿಳಿದಿರುತ್ತಾರೆ. ರಣರಂಗದಲ್ಲಿ ಜವಾನರು ತಮ್ಮ ಕರ್ತವ್ಯವನ್ನು ಪೂರೈಸಿದ್ದಾರೆ. ಆಹಾರ ರಂಗದಲ್ಲಿ ಹೋರಾಡಲು ಕೃಷಿಕರು ಮುಂದೆ ಬರಬೇಕಾಗಿದೆ.

ತಮಗೆ ಇರುವ ಕಷ್ಟಗಳೇನೆಂದು ನಾನು ತಿಳಿದಿರುವೆನು. ಆದರೆ ಎಲ್ಲ ಸಮಸ್ಯೆಗಳಿಗಿಂತ ಆಹಾರ ಸಮಸ್ಯೆಯು ಮುಖ್ಯವಾದುದೆಂದು ಸರಕಾರವೀಗ ಮನಗಂಡಿದೆ. ಸರಕಾರದ ಮಟ್ಟಿಗೆ ಅವರಿಗಿರುವ ಶಕ್ತಿಯನ್ನೆಲ್ಲ, ಅವರು ಈ ಸಮಸ್ಯೆಗಾಗಿ ಉಪಯೋಗಿಸಿ, ತಮ್ಮ ಮಾತುಗಳನ್ನು ನಡೆಸಿಕೊಡುವರು.

ಸರಕಾರವು ಬೀಜ, ಗೊಬ್ಬರ, ವಿದ್ಯುಚ್ಛಕ್ತಿ, ಬೇಕಾದ ಸಾಲಗಳು, ಎಲ್ಲವನ್ನೂ ಒದಗಿಸಬಹುದು. ಆದರೆ ಈ ಸವಲತ್ತುಗಳನ್ನು ಪಡೆದುಕೊಂಡು ಅದರಿಂದ ಪ್ರಯೋಜನ ಹೊಂದುವುದು ಕೃಷಿಕರನ್ನು ಸೇರಿದೆ. ಈ ಸಂದರ್ಭದಲ್ಲಿ ಹಳ್ಳಿಯಲ್ಲಿರುವ ಪಂಚಾಯತ ಬೋರ್ಡು, ಸಹಕಾರಿ ಇಲಾಖೆ, ಮತ್ತು ಸಾರ್ವಜನಿಕ ಉತ್ಸಾಹವುಳ್ಳ ಗೃಹಸ್ಥರು ಸಹಾಯ ಮಾಡಬೇಕಾಗಿದೆ. ಪಂಚಾಯತ ಬೋರ್ಡುಗಳೂ ಸಹಕಾರಿ ಖಾತೆಯೂ ನಿಮ್ಮ ಬೆಂಬಲಕ್ಕೆ ಇವೆಯೆಂದು ಆಗಲೆ ಮಾತು ಕೊಟ್ಟಿದೆ. "ನೀನು ಕುದುರೆಯನ್ನು ನೀರು ಇರುವಲ್ಲಿ ಒಯ್ಯಬಹುದು; ಆದರೆ ಅದನ್ನು ನೀರು ಕುಡಿಯುವಂತೆ ನೀನು ಮಾಡಲಾರೆ" ಎಂಬ ಗಾದೆ ಒಂದು ನಮ್ಮಲ್ಲಿದೆ. ಅದರಂತೆ ಎಲ್ಲ ಸೌಕರ್ಯಗಳನ್ನು ಕೃಷಿಕರಿಗೆ ಒದಗಿಸಿದರೂ ಅವನು ಅದರ ಪ್ರಯೋಜನ ಪಡೆಯುವುದು ಅವನನ್ನೇ ಹೊಂದಿದೆ.

ನಮ್ಮಲ್ಲಿ ಒಂದು ಎಕ್ರೆಗೆ 20 ಮುಡಿ ಭತ್ತ ದೊರೆಯುತ್ತದೆ ಎಂದು ಹೇಳುತ್ತಾರೆ. ನಿಜವಾಗಿ ನೋಡಿದರೆ, ಒಂದು ಎಕ್ರೆಗೆ 50 ಮುಡಿ ಭತ್ತ ದೊರೆಯುವಂತಹ ಗದ್ದೆಗಳೂ ಇರಬಹುದು. ಜನರಲ್ಲಿ ಒಂದು ರೀತಿಯ ಭಯವನ್ನು ಉಂಟುಮಾಡುವುದಕ್ಕಾಗಿ ಎಕ್ರೆಗೆ 20 ಮುಡಿ ಎಂದಿರಬಹುದು. ನಮ್ಮ ಜಿಲ್ಲೆಯ ಜನಸಂಖ್ಯೆಯು 16 ಲಕ್ಷಗಳೆಂದು ನಿಮಗೆಲ್ಲ ಗೊತ್ತಿದೆ. ಈ ಸಂಖ್ಯೆಯಲ್ಲಿ ಒಂದು ವರುಷದೊಳಗಿನ ಚಿಕ್ಕ ಕೂಸುಗಳೂ ಸೇರಿವೆ. ಒಬ್ಬನಿಗೆ ವರ್ಷಕ್ಕೆ 4 ಮುಡಿ ಅಕ್ಕಿಯ ಲೆಕ್ಕ ಹಿಡಿದರೆ ನಮಗೆ ವರ್ಷಕ್ಕೆ 64 ಲಕ್ಷ ಮುಡಿ ಅಕ್ಕಿ ಬೇಕಾಗುವುದು. ಈಗ ಜಿಲ್ಲೆಯಲ್ಲಿ 5 ಲಕ್ಷ ಎಕ್ರೆಗಳಷ್ಟು ಭೂಮಿಯಲ್ಲಿ ಕೃಷಿಯಾಗುತ್ತದೆ. ಎಕ್ರೆಗೆ 20 ಮುಡಿಯಂತೆ ಉತ್ಪತ್ತಿ ಆದರೂ ಅದನ್ನು ಕಡಿಮೆ ಅಂದಾಜು ಎಂದು ಹೇಳುವಂತಿಲ್ಲ. ಈಗಿನ ಕೊರತೆಯನ್ನು ಪರಿಗಣಿಸಿ ನಮ್ಮ ಸರಾಸರಿ ಉತ್ಪತ್ತಿಯು 16ರಿಂದ 18 ಮುಡಿ ಎಂದರೂ ಅದರಿಂದ ಹೆಚ್ಚಿನ ತೊಂದರೆಯಾಗದು.

ನಮ್ಮಲ್ಲಿ ಇಂದು ಉಂಟಾದ ಪರಿಸ್ಥಿತಿಗೆ ಕೃಷಿಕರೇ ಕಾರಣರೆಂದು ಕೆಲವರು ಯೋಚನೆ ಮಾಡದೆ ಹೇಳುತ್ತಿದ್ದಾರೆ. ನಮ್ಮ ಕೃಷಿಕನು ಹೊಸ ಕ್ರಮಗಳನ್ನು ಅಂಗೀಕರಿಸದವನೆಂದೂ ಆಲಸಿ ಎಂದೂ ಅವರು ಹೇಳುತ್ತಾರೆ. ನಾನು ನಿಮ್ಮ ಒಡನಾಡಿ ಆಗಿರುವುದರಿಂದ, ನಿಮ್ಮ ಕಷ್ಟಗಳೇನೆಂದು ನನಗೆ ತಿಳಿದಿದೆ. ನೀವು ಹೊಸ ಕ್ರಮಗಳನ್ನು ಸರಿಯಾದ ರೀತಿಯಲ್ಲಿ ಅನುಸರಿಸಿದರೆ ನಮ್ಮ ಕಷ್ಟಗಳೆಲ್ಲ ಪರಿಹಾರವಾಗಬಹುದೆಂದು ನಾನು ಭರವಸೆ ಕೊಡಬಲ್ಲೆ.

ಹೊಸ ಕ್ರಮಗಳಾದ "ಜಪಾನು" ಪದ್ಧತಿಯಲ್ಲಾಗಲೀ "ಕೋರಾ" ಪದ್ಧತಿಯಲ್ಲಾಗಲೀ ವಿಶೇಷವಾಗಿ ಕೆಲಸವಿಲ್ಲ. ಅದಕ್ಕೆ ವೆಚ್ಚವೂ ಹೆಚ್ಚಿಲ್ಲ. ಫಸಲನ್ನು ಇಮ್ಮಡಿಗೊಳಿಸುವುದು ಒಂದು ಮಕ್ಕಳ ಆಟವೇ ಆಗಿದೆ. ಅದನ್ನು ಮಾಡಲೇಬೇಕೆಂಬ ಒಂದು ಗಟ್ಟಿ ಮನಸ್ಸು ನಿಮಗೆ ಇರಬೇಕು. ಇದು ಅತ್ಯಗತ್ಯವಾದುದು. ಮತ್ತು ಅದರಲ್ಲಿ ಹೇಳುವ ಸೂಚನೆಗಳನ್ನೆಲ್ಲ ಅಕ್ಷರಶಃ ಪಾಲಿಸಬೇಕು.

ಈ ಪದ್ಧತಿಯನ್ನು ನಮ್ಮ ಕೃಷಿಕರು ಬಹಳ ಹಿಂದೆಯೇ ತಿಳಿದು ಉಪಯೋಗಿಸುತ್ತಿದ್ದರು. ಆದರೆ ದುರದೃಷ್ಟವಶಾತ್ ನಮ್ಮಲ್ಲಿರುವ ಕೆಲವರಿಂದ ಹೀಗಾಗಿದೆ. ಅವರು ತಮಗೆ ಸರಿಯಾದ ತಿಳುವಳಿಕೆ ಇಲ್ಲದಿದ್ದರೂ, ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಆ ಪದ್ಧತಿಗೆ ಖರ್ಚು ಹೆಚ್ಚು; ಮತ್ತು ಅವರು ಹೇಳುವ ಅಂಕೆ-ಸಂಖ್ಯೆಗಳು ಸುಳ್ಳು—ಎಂದೂ ಹೇಳುತ್ತಾರೆ. ಇವರು ನಮ್ಮ ರಾಷ್ಟ್ರಕ್ಕೆ ಚೀನಾದವರಿಗಿಂತಲೂ ದೊಡ್ಡ ಶತ್ರುಗಳೆಂದು ನಾನು ಹೇಳಬಲ್ಲೆ. ಅದಲ್ಲದೆ ಈ ಹೊಸ ಪದ್ಧತಿಯನ್ನು ಅನುಸರಿಸಿದ ಕೆಲವರಿಗೆ ತಪ್ಪಾಗಿ ಹೇಳಿ ಕೊಟ್ಟಿದ್ದಾರೆ. ಇದರಿಂದಲೂ ದೋಷವಾಗಿದೆ.

ಹೊಸ ಪದ್ಧತಿಯು ನಮ್ಮ ಹಳೆ ಪದ್ಧತಿಯಿಂದ ವಿಶೇಷವಾಗಿ ಬೇರೆಯಾಗಿಲ್ಲದಿರುವುದರಿಂದ, ನಮ್ಮ ರೈತರು ಹೊಸದಾಗಿ ಕಲಿಯುವಂಥಾದ್ದು ಇಲ್ಲ. ಕೆಳಗಿನ ನಾಲ್ಕು ವಿಚಾರದಲ್ಲಿ ಮಾತ್ರ ಹೊಸ ಪದ್ಧತಿಯು ಬೇರೆಯಾಗಿದೆ—

1. ನೇಜಿ ತಯಾರಿಸುವುದು. 2. ನೇಜಿ ನೆಡುವುದು. 3. ಬೂದಿ ಮತ್ತು ಗೊಬ್ಬರಗಳ ಉಪಯೋಗ. 4. ಎರಡು ಒಳೆ ಉಳುಮೆಗಳು-ಒಂದು ಕೈಯಿಂದ, ಇನ್ನೊಂದು ಯಂತ್ರದಿಂದ.

ಬೀಜಗಳ ಆಯ್ಕೆ

ಒಳ್ಳೆ ಬೆಳೆಗೆ ಒಳ್ಳೆ ಬೀಜ ಅಗತ್ಯ. ಉತ್ತಮ ಬೀಜವನ್ನು ಆರಿಸಿದ ಮೇಲೆ ಉತ್ತಮ ನೇಜಿ ತಯಾರಿಸಬೇಕು. ಮೊದಲಾಗಿ ನೀವು ಯಾವ ರೀತಿಯ ಬೀಜ ಆರಿಸಬೇಕೆಂದು ನಾನು ಹೇಳಲಾರೆ. ಯಾಕೆಂದರೆ ಈಗ ಸರಕಾರದ ಕೃಷಿ ಇಲಾಖೆಯು ಅದರ ಏಜಂಟರ ಮೂಲಕ ಒದಗಿಸುವ ಹಲವು ರೀತಿಯ ಬೀಜಗಳನ್ನು ನೀವು ನೋಡಿರಬೇಕು. ನನಗೆ ಹೆಚ್ಚು ಪರಿಚಯವಿರುವ ಕೆಲವು ಬೀಜಗಳ ಪಟ್ಟಿ ಕೊಡುತ್ತೇನೆ.

ಮೊದಲ ಬೆಳೆಗೆ: (ಏಣೆಲು) ಎಂ. ಟಿ. ಯು—3, 130ರಿಂದ 140 ದಿನಗಳ ಬೆಳೆ. ಎಂ. ಟಿ. ಯು—20—120 ದಿನಗಳಲ್ಲಿ. ಎಂ. ಜೆ. ಎಲ್—1—130 ದಿನಗಳಲ್ಲಿ. ಎಂ. ಜೆ. ಎಲ್—5—120 ದಿನಗಳು. ಎಂ. ಜೆ. ಎಲ್—2—130 ದಿನಗಳು. ಪಿ. ಟಿ. ಬಿ—9—120 ದಿನಗಳು, ಪಿ. ಟಿ. ಬಿ—10—90 ದಿನಗಳು.

ಎರಡನೆ ಬೆಳೆಗೆ:(ಸುಗ್ಗಿ) ಪಿ. ಟಿ. ಬಿ—20—120 ದಿನಗಳು. ಸಿ. ಒ—25—150 ದಿನಗಳು. (ಇದು ಪಟ್ಲ ಗದ್ದೆಗಳಿಗೆ ಉತ್ತಮ.) ಎಂ. ಜೆ. ಎಲ್—7—130 ದಿನಗಳು.

ಮೂರನೆಯ ಬೆಳೆಗೆ:(ಕೊಳಕೆ) ಪಿ. ಟಿ. ಬಿ— 10—90 ದಿನಗಳು.

ಈ ಪಟ್ಟಿಯಲ್ಲಿ ನನಗೆ ಪರಿಚಯ—ಇರುವ ಸಣ್ಣ ಪಟ್ಟಿಯನ್ನೇ ನಿಮ್ಮ ಮುಂದೆ ಇಟ್ಟಿರುವೆನು. ನೀವು ಯಾವ ಬೀಜವನ್ನು ಉಪಯೋಗಿಸಬೇಕೆಂದು ನಾನು ಹೇಳಲಾರೆ, ನಾನು ಅಷ್ಟು ಸಮರ್ಥನಲ್ಲ. ಅದನ್ನು ನೀವೇ ತಿಳಿದು ಕೊಳ್ಳಬೇಕು.

ಇಂಡೋ-ಜಾಪನಿಕಾ ಎಂಬ ಒಂದು ಹೊಸ ಬೀಜದ ಕುರಿತು ಹೆಚ್ಚು ಮಾತು ಹೇಳುತ್ತಾರೆ. ಅದು ತನ್ನ ಬೆಳವಣಿಗೆಯಲ್ಲಿ ದಿನಕ್ಕೆ 40 ಪೌಂಡಿನಷ್ಟು ಭತ್ತ ಕೊಡುವುದೆಂದು ಅವರು ಹೇಳುತ್ತಾರೆ. ಹೊಸ ರೀತಿಯಲ್ಲಿ ಕೃಷಿ ಮಾಡಿದರೆ, ನಾನು ಹೇಳಿದ ಬೀಜಗಳಿಂದ ಹೆಚ್ಚು ಫಸಲು ಬರುವುದೆಂಬುದು ನನಗೆ ಖಚಿತವಾಗಿದೆ. ಆದ್ದರಿಂದ ಅವುಗಳು ಉತ್ತಮ ಬೀಜಗಳೇ ಆಗಿವೆ. ನನಗೆ ಈ ಕೆಳಗಿನಂತೆ ಬೆಳೆಯಾಗಿದೆ. ಪಿ. ಟಿ. ಬಿ—10ನ್ನು ಉಪಯೋಗಿಸಿ 90 ದಿನಗಳಲ್ಲಿ 3,600 ಪೌಂಡುಗಳಾಗಿವೆ. ಎಂ. ಟಿ. ಯು—20ರಿಂದ ಸುಮಾರು 4,800 ಪೌಂಡುಗಳು. ಪಟ್ಲ ಗದ್ದೆಗಳಲ್ಲಿ ಸಿ. ಒ—25ರ ಕೃಷಿ ಮಾಡಿದರೆ ಕನಿಷ್ಠ ಸು... ಅತಿ ಸುಲಭದಲ್ಲಿ 6,500ರಿಂದ 7,500 ಪೌಂಡುಗಳಷ್ಟು ಆಗುವುದು. ನಮ್ಮ ಹಳೆಯ ಕಯಮೆ ಬೀಜವೂ ಅಥವಾ ಎಂ. ಜೆ. ಎಲ್—2, ಆದರೂ 4,500ರಿಂದ 4,800 ಪೌಂಡುಗಳಷ್ಟು ಭತ್ತ ಕೊಡುವುದು. ಇನ್ನು ಇಂಡೋ-ಜಪಾನಿಕಾ ಬೀಜದ ಕುರಿತು ಹೇಳುವುದಾದರೆ, ಅದು ನಮ್ಮ ಕೃಷಿಕರನ್ನು ಮುಟ್ಟಲು ಕಡಿಮೆ ಪಕ್ಷ 3 ವರ್ಷವಾದರೂ ಬೇಕು.

(ಗ್ರಾಂವ್ ಸೇವಕದ ಕೃಪೆಯಿಂದ)

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜೀನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್
ಕಾರ್ಕಳ (ದ. ಕ.)

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ

— ನಮ್ಮ ಕಣ್ಣುಗಳ ಮುಂದೆ —

ಮಾತೇನೋ ಅಮೃತ ಆದರೆ ಹೃದಯ....

ಕಳಿಸಿದವರು
ಶ್ರೀಮತಿ ಪಿ. ಯಶೋದಾ ಯನ್. ಜೆನ್ನಿ

ನಮ್ಮ ಪರಿಚಿತ ಮಹಿಳೆಯೊಬ್ಬರಿದ್ದಾರೆ. ಯಾರನ್ನಾದರೂ ಪರಿಚಯವಾದ ಒಂದೆರಡೇ ನಿಮಿಷಗಳೊಳಗೆ ಬರಿಯ ಒಂದೆರಡು ಮಾತುಗಳೊಂದಿಗೆ ಸೌಮ್ಯವಾದ ಮುಗುಳ್ನಗುವನ್ನು ಬೀರಿ ತನ್ನವರನ್ನಾಗಿ ಮಾಡಿಕೊಳ್ಳುವ ಚಾಕಚಕ್ಯತೆಗೆ ನಾವೆಲ್ಲ ಬೆರಗಾಗಿ ಹೋಗಿದ್ದೇವೆ.

ನಾನಾದರೂ ಎಲ್ಲರಂತೆ ಅವರ ಮಾತಿನ ಮೋಡಿಗೆ ಮರುಳಾಗಿ ಸೋತು ಹೋಗಿದ್ದೆ. ಅವರ ಅತಿಯಾದ ಒಳ್ಳೆಯತನದ ಮಾತುಗಳನ್ನು ಕೇಳಿ ವಿಸ್ಮಯಗೊಂಡಿದ್ದೆ.

"ಹೌದಮ್ಮಾ ನಾವೆಲ್ಲಾ ಒಂದೇ ಕಡೆ ಇರುವವರಂದ ಮೇಲೆ ಅಕ್ಕ ತಂಗಿಯರಂತೆ ಪ್ರೀತಿ, ವಿಶ್ವಾಸ, ಸ್ನೇಹದಿಂದಿರ್ಬೇಕು. ಮನುಷ್ಯ ಜನ್ಮ ಅಂದ್ರೆ ನೀರ ಮೇಲಿನ ಗುಳ್ಳೆಯಂತೆ. ಏನು ಶಾಶ್ವತ ಹೇಳಿ? ಇರುವ ಈ ಮೂರು ದಿನದ ಬಾಳುವೆಯಲ್ಲಿ ಅನ್ಯಾಯ, ಮೋಸ, ಮತ್ಸರ, ಯಾಕೆ ಹೇಳಿ?" ಎನ್ನುವ ಬೆಣ್ಣೆಯಂತಹ ಮಾತುಗಳನ್ನು ಕಿವಿಗೆ ಮಧುರವಾದ ಧಾಟಿಯಲ್ಲಿ ಹೇಳುವಾಗ ನಾವೆಲ್ಲ ಮುಗ್ಧರಾಗಿ ಕೇಳುತ್ತಿದ್ದೆವು. ಎಂದರೆ ನಮಗೇನೂ ಅಂತಹ ತತ್ತ್ವೋಪದೇಶದ ನೀತಿಯ ಮಾತುಗಳು ಗೊತ್ತಿರಲಿಲ್ಲವೆಂತಲ್ಲ, ಆದರೆ ಅವರು ಹೇಳುವ ಆಕರ್ಷಕ ರೀತಿ ಅಷ್ಟೊಂದು ಸೊಗಸಾಗಿರುತ್ತಿತ್ತು. ಅದನ್ನು ಅನುಭವಿಸಿಯೇ ತಿಳಿಯಬೇಕು.

ಸ್ತ್ರೀಯರಿಗೆ ಪತಿಭಕ್ತಿ, ಮಕ್ಕಳಿಗೆ ಮಾತೃಭಕ್ತಿ, ವಿದ್ಯಾರ್ಥಿಗಳಿಗೆ ಗುರುಭಕ್ತಿ, ಈ ಎಲ್ಲ ವಿಚಾರಗಳನ್ನೆತ್ತಿಕೊಂಡು ಮಾತಿಗೊಮ್ಮೆ ದೇವರ ನಾಮವನ್ನು ಸ್ಮರಿಸಿಕೊಂಡು ಮಹಿಳಾ ಕೂಟದಲ್ಲಿ ಅಮೃತದ ಪ್ರವಾಹವನ್ನೇ ಹರಿಯಿಸುವ ಆಕೆಯ ಇಂತಹ ಮಾತುಗಳನ್ನು ಕೇಳಿದರೇನೇ ನಾವೆಲ್ಲ ಮೂಕರಂತೆ ಮೌನ ತಾಳುತ್ತಿದ್ದೆವು. ಕೆಲವೇ ಮಹಿಳೆಯರಿದ್ದ ನಮ್ಮೀ ಸಣ್ಣ ಗುಂಪಿಗೆ ಆಕೆಯ ಪ್ರವೇಶವಾದ ಮೇಲೆ ಹರಟೆಯಲ್ಲಿ ಮಿಗಿಲೆನಿಸಿಕೊಂಡಿದ್ದ ನಮಗ್ಯಾರಿಗೂ ಮಾತೆತ್ತುವ ಅವಕಾಶವಾಗಲೀ ಧೈರ್ಯವಾಗಲೀ ಇರಲಿಲ್ಲ. ಏಕೆಂದರೆ ವಯಸ್ಸಿನಲ್ಲೂ ಆಕೆ ನಮ್ಮೆಲ್ಲರಿಗಿಂತ ಹಿರಿಯರಾಗಿದ್ದುದಲ್ಲದೆ ಅನುಭವ, ಹಿತೋಪದೇಶಗಳಲ್ಲಿ ಅತ್ಯಂತ ಹಿರಿಯ ಪಾತ್ರವನ್ನು ವಹಿಸುವವರಾಗಿದ್ದರು. ನಾವಾದರೋ ಮಾನವ ಸಹಜವಾದ ದೃಷ್ಟಿಯಲ್ಲಿ ಪ್ರಪಂಚದ ಆಗುಹೋಗುಗಳ ವಿಚಾರವಾಗಿ ಚರ್ಚೆ, ವಿಮರ್ಶೆ, ನಡೆಯಿಸಿದಾಗ ಆಕೆ ದೇವತಾ ಸ್ತ್ರೀಯಂತೆ "ತಾಳುವಿಕೆಗಿಂತನ್ಯ ತಪವು ಇಲ್ಲಾ...." ಎಂದು ಹಾಡುತ್ತಾ ತಾತ್ಪರ್ಯ ವಿಚಾರವಾಗಿ ಗಂಟೆಗಟ್ಟಲೆ ಉಪದೇಶದ ಮಳೆಗರೆಯುವರು. ಎಂದ ಮೇಲೆ ನಾವೆಲ್ಲ ನಮ್ಮ ನಾಲಗೆ ಚಾಪಲ್ಯವನ್ನು ಸಾಧ್ಯವಾದಷ್ಟು ಹತೋಟಿಯಲ್ಲಿಟ್ಟುಕೊಳ್ಳದೆ ನಿರ್ವಾಹವಿರಲಿಲ್ಲ. ಆದರೆ.... ಕೆಲವು ದಿನಗಳಾದ ಮೇಲೆ ಆ ಸ್ತ್ರೀ ದೇವತೆಯ ನಿಜವಾದ ಬಣ್ಣ ಬಯಲಿಗೆ ಬರಲಾರಂಭಿಸಿತು. ಆಕೆಯ ಮಾತುಗಳೆಲ್ಲವೂ ಸರ್ವಮಾನ್ಯವಾಗಲೇಬೇಕು. ಎಂದಾದರೊಮ್ಮೆ ಯಾರಾದರೊಬ್ಬರು ಆಕಸ್ಮಾತ್ತಾಗಿ ಅವರ ಮಾತಿನ ಬಗ್ಗೆ ತಮ್ಮ ಸೂಕ್ಷ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಕೆರಳಿದ ಸಿಂಹಿಣಿಯಂತೆ ಗರ್ಜಿಸಲಾರಂಭಿಸುತ್ತಿದ್ದರು. ಹೋಗಲಿ, ಅವರವರ ಅಭಿಪ್ರಾಯ ಅವರವರಿಗೆ, ನಮಗೇನಂತೆ ಎಂದು ಮೌನ ತಾಳಿದರೆ ತಾನು ಸತೀ ಸಾವಿತ್ರಿಯಂತೆ ಪತಿಭಕ್ತಿಯುಳ್ಳವರು. ಈಗಿನ ಮಹಿಳೆಯರಿಗೆ ಪತಿಭಕ್ತಿ ಪ್ರೀತಿ, ಎಂದರೇನೆಂಬುದೇ ತಿಳಿಯದು ಎಂಬ ಕಟು ಟೀಕೆಗೆ ಬೇಕಷ್ಟು ಮಾತೆತ್ತಿದರೆ ಮುಗಿಯಿತು. ಅಮೃತದಂತಹ ಮಾತು ಎಲ್ಲಿ ಮಾಯವಾಗುತ್ತಿತ್ತೋ ಅದರ ಬದಲಾಗಿ ವಿಷದ ವಾಗ್ಬಾಣಗಳ ಸುರಿಮಳೆಯನ್ನು ಸಹಿಸಲು ಸಾಧ್ಯವಾಗುವಂತಹುದಲ್ಲ. ಸ್ವಾರ್ಥ, ಮೋಸ, ಪರನಿಂದೆ, ಆತ್ಮಸ್ತುತಿ, ಮತ್ಸರ, ಎಂಬೆಲ್ಲ ಗುಣಗಳನ್ನು ಎಲ್ಲರಿಗಿಂತಲೂ ಎಷ್ಟೋ ಪಾಲು ಅಧಿಕವಾಗಿ ತನ್ನೊಳಗೆ ಹುದುಗಿಸಿಟ್ಟುಕೊಂಡು ಅತಿ ಒಳ್ಳೆಯತನದ ಸೋಗು ಹಾಕಿ ಮುಗುಳ್ನಗುವಿನ ಮುಖವಾಡದಿಂದ ಎಲ್ಲರನ್ನು ಬಲ್ಲೆ ಎನ್ನುವ ಹೆಮ್ಮೆಯ ಮುಖವಾಡದ ಆಕೆಯ ಹೃದಯದ ವಿಷ ಎಷ್ಟೇ ಹುದುಗಿಸಿಟ್ಟರೂ, ಸಂದರ್ಭ ಒದಗಿದಾಗ ತನ್ನಿಂದ ತಾನೇ ಹೊರ ಬೀಳುವುದನ್ನು ನೋಡಿದ ಮೇಲೆ ನಮಗೆಲ್ಲ ಅತ್ಯಂತ ಆಶ್ಚರ್ಯವಾಗಿದೆ. ಏಕೆಂದರೆ ಈಗಲೂ ಅಷ್ಟೇ. ಹೊಸಬರ್‍ಯಾರಾದರೂ ನೋಡಿದಾಗ ಅವರ ಗುಣ ನಡತೆಗಳನ್ನು ಹೊಗಳದಿರಲಾರರಲ್ಲದೆ ನಮಗೂ ಅವರ ವಿಚಾರವಾಗಿ ಮಾತೆತ್ತುವ ಧೈರ್ಯ, ಸಾಹಸ ಇಲ್ಲವೆಂದೇ ಹೇಳಬಹುದು. ಬೆಣ್ಣೆ ಸವರಿದ ವಿಷದ ಉಂಡೆಯನ್ನು ನಾಲಗೆಯಿಂದ ಸುರಿಸುವ ಅವರ ವಿಚಾರದಲ್ಲಿ ಭೀತಿಯೋ, ಗೌರವವೋ. ಅಂತೂ ಅವರಿದಿರು ವಾದಿಸುವ ಧೈರ್ಯ ನಮಗಿಲ್ಲ. ಅದರಿಂದ ಅವರಿಗಂತೂ, ಬಲು ಹೆಮ್ಮೆ; ಎಲ್ಲರ ಪ್ರೀತಿ, ಭೀತಿ, ಗೌರವಗಳಿಗೆ ಕಾರಣವಾದ ಹಿರಿತನ ತನ್ನಲಿದೆ ಎನ್ನುವ ಒಣ ಹೆಮ್ಮೆ.

ಮಾತು ಮೃದುವಾಗಿರಬೇಕು; ನಿಜ. ಆದರೆ ಗೋಮುಖವ್ಯಾಘ್ರಗಳಂತಿರಬಾರದಲ್ಲವೇ?

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು, ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

ಅಮೃತ ಬಿಂದು

ಧಾರ್ಮಿಕ ಸಂಸ್ಕಾರ ಪಡೆಯದ ಹೃದಯದ ಬೌದ್ಧಿಕ ಸಂಸ್ಕಾರವು ಹಿಡಿಯಿಲ್ಲದ ಕತ್ತಿಯಂತೆ, ಎಣ್ಣೆಯಿಲ್ಲದ ಬತ್ತಿಯಂತೆ!

o o o o

ಈರ್ಷೆ, ದ್ವೇಷಗಳಿರುವ ಮನುಷ್ಯನು ತನ್ನ ವೈರಿಗೆ ವಿಷ ಹಾಕಿಕೊಂಡು ಊಟ ಮಾಡುವವನಂತೆ ತನಗೇ ಕೆಡುಕು ತಂದುಕೊಳ್ಳುವನು.

o o o o

ತನ್ನ ದುಃಖ ಸಂತಾಪಗಳನ್ನು ಅಡಗಿಸಿಟ್ಟುಕೊಳ್ಳಬಲ್ಲವನಿಗಿಂತಲೂ ತನ್ನ ಸುಖ ಆನಂದಗಳನ್ನು ಅಡಗಿಸಿಟ್ಟುಕೊಳ್ಳಬಲ್ಲವನು ದೊಡ್ಡವನು.

o o o

ದುಃಖದ ನೋವನ್ನು ಅರಿಯಲಾರದವನು ಸುಖದ ಸೌಖ್ಯವನ್ನು ತಿಳಿಯಲಾರ.

o o o

ರೋಗಹಿಡಿದ ಶರೀರಕ್ಕೆ ಔಷಧದಂತೆ ಜೀವನದಲ್ಲಿ ದುಃಖ ಬೇಕು, ಶರೀರ ಬೆಳೆಯಲು ಬೇಕಾದ ಆಹಾರದಂತೆ ಸುಖವಿರಬೇಕು.

o o o

ನಮ್ಮ ಗಡಿಯಾರಗಳಂತೆ ನಮ್ಮ ತೀರ್ಮಾನಗಳೂ ಕೂಡ! ಹೇಗೆ ಎರಡು ಗಡಿಯಾರಗಳು ಒಂದೇ ಸಮಯ ತೋರಿಸುವುದಿಲ್ಲವೋ ಅದರಂತೆ ಎರಡು ವ್ಯಕ್ತಿಗಳು ಒಂದೇ ಅಭಿಪ್ರಾಯ ಕೊಡಲಾರರು.

o o o

ಪ್ರತಿಯೊಂದರಲ್ಲಿಯೂ ನ್ಯಾಯ ನಿಷ್ಠೆಯನ್ನು ಬಿಡದವನಿಗೂ ದೇವರಿಗೂ ವ್ಯತ್ಯಾಸವಿಲ್ಲ. ಆದರೆ ಆ ಎತ್ತರಕ್ಕೇರದಿದ್ದರೂ ನಮ್ಮ ಶಕ್ತಿಗೆ ತಕ್ಕಂತೆ ನ್ಯಾಯ ಪಾಲನೆ ಮಾಡುವುದು ಮಾನವನ ಘನತೆಯಾಗಿದೆ.

o o o

ನ್ಯಾಯಕ್ಕೆ ಮಿತ್ರರೆಂದಿಲ್ಲ, ಬಂಧು ಬಳಗದವರೆಂದಿಲ್ಲ, ಒಡಹುಟ್ಟಿದವರೆಂದಿಲ್ಲ. ಆದ್ದರಿಂದಲೇ ನ್ಯಾಯವು ಕುರುಡೆಂದು ಕರೆಯಲ್ಪಟ್ಟಿದೆ.

o o o

ಒಬ್ಬನೆ ವಾದದಿಂದಲೇ ಪ್ರಭಾವಿತನಾಗುವುದು ನ್ಯಾಯವಾದಿಯ ಲಕ್ಷಣವಲ್ಲ. ಪ್ರತಿ ನಾಣ್ಯಕ್ಕೂ ಎರಡು ಬದಿಗಳಿರುವಂತೆ ಪ್ರತಿವಾದಕ್ಕೂ ಎರಡು ಮುಖಗಳಿವೆ.

o o o

ದಯೆಯು ದೇವರ ಭಾಷೆ. ಆ ಭಾಷೆಯನ್ನು ಕುರುಡನೂ ಕಾಣುತ್ತಾನೆ. ಹೆಳವನೂ ಕೇಳುತ್ತಾನೆ. ಜಗತ್ತಿನ ಎಲ್ಲರಿಗೂ ಅರ್ಥವಾಗುವ ಭಾಷೆ ಇದೊಂದೆ.



ಬೆಂಗಳೂರಿನಲ್ಲಿ ನಾಲ್ಕನೆಯದು
1966 ರ ಆಗಸ್ಟ್ 4 ರಿಂದ
ನಿಮ್ಮ ಸೇವೆಯಲ್ಲಿ ತೊಡಗಲಿದೆ.

ನಮ್ಮ ಹೊಸ ಶಾಖೆಯನ್ನು
29, ಕೆಂಗಲ್ ಹನುಮಂತಯ್ಯ ರಸ್ತೆ,
ಶಾಂತಿನಗರ, ಬೆಂಗಳೂರು-27

ಈ ವಿಳಾಸದಲ್ಲಿ 1966 ರ ಆಗಸ್ಟ್ 4 ರಂದು ತೆರೆಯಲಾಗುವುದೆಂದು ತಿಳಿಸಲು ಹರ್ಷಿಸುತ್ತೇವೆ.

ವಿಜಯಾ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಚೇರಿ:
"ವಿಜಯಾ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ರಸ್ತೆ, ಮಂಗಳೂರು 3

ಅಧ್ಯಕ್ಷರು:
ಎಂ. ಸುಂದರ ರಾಮ ಶೆಟ್ಟಿ

ಕಾರ್ಯದರ್ಶಿ:
ಪಿ. ಜಯರಾಮ ಶೆಟ್ಟಿ

VB-40 KAN

ಭಾರತೀಯ ...

ಅಮೆರಿಕನ್ನರು ...

ಮದ್ರಾಸದ ನೇಕಾರ ಮ...
ಭಾರತ ಸ್ಟೋರ್ಸ್ ಲಕ್ಷ...
ಸಂದರ್ಶನ

ಅಂತರಿಕ್ಷ ಯಾತ್ರೆಯಲ್ಲಿ ಒಂದು ವಾಹಕದಿಂದ ಇನ್ನೊಂದಕ್ಕೆ ಸ್ಥಾನಾಂತರ ಹೊಂದುವುದೂ ಸಾಧ್ಯವೆಂದು ಸಾಧಿಸಿದ ಗಗನಯಾತ್ರಿ ಡೇವಿಡ್ ಸ್ಕಾಟ್ (ಎಡ) ಮತ್ತು ನೀಲ್ ಆರ್ಮ್‌ಸ್ಟ್ರಾಂಗ್ (ಬಲ).

ಬ್ರಾಡ್‌ವೇಯಲ್ಲಿ ಮದ್ರಾಸಿನ ನೇಕಾರರ ಪ್ರಾಚೀನ ಕಲೆಯ ಪ್ರದರ್ಶನವೇ? ನ್ಯೂಯಾರ್ಕ ನಗರದಿಂದ ಹೊರಗೆ ಹೋಗದೆ ಭಾರತ ಸಂದರ್ಶನವೇ?

ನ್ಯೂಯಾರ್ಕಿನ ಒಂದು ದೊಡ್ಡ ಡಿಪಾರ್ಟ್‌ಮೆಂಟ್ ಸ್ಟೋರಿನಲ್ಲಿ ಭಾರತ ವೈಭವ ಹಾಗೂ ಆಕರ್ಷಣೆಯನ್ನು ಪ್ರಸಾರ ಮಾಡಲಾಗುತ್ತಿದೆ.

ಮೇ ತಿಂಗಳ ಎರಡು ವಾರಗಳ ಅವಧಿಯಲ್ಲಿ ಬ್ರಾಡ್‌ವೇಯ ೩೩ನೆಯ ಬೀದಿಯಲ್ಲಿರುವ ಜಿಂಬೆಲ್ಸನ್ನು ಜನರು ಸಾವಿರಾರು ಸಂಖ್ಯೆಯಲ್ಲಿ ಸಂದರ್ಶಿಸಿದರು. ಭಾರತವನ್ನು "ನೋಡುವುದು" ಇವರ ಸಂದರ್ಶನದ ಉದ್ದೇಶವಾಗಿತ್ತು. ಜಿಂಬೆಲ್ಸ್‌ನ "ಆಧುನಿಕ ಭಾರತದರ್ಶನ" (ಸೆಲ್ಯೂಟ್ ಟು ಮಾಡರ್ನ್ ಇಂಡಿಯಾ) ಎಂಬ ಕಾರ್ಯಕ್ರಮವು ಭಾರತದ ಸ್ವಕರಾಂಶಿಕೆ, ಕರಕೌಶಲ್ಯದ ಕಸಬುಗಳು ಮತ್ತು ಕಲೆಗಳ ವಿಶೇಷ ಪ್ರದರ್ಶನವನ್ನು ನೀಡಿ, ಪ್ರಪಂಚದ ಸಂಸ್ಕೃತಿಗೆ ಮತ್ತು ಪ್ರಪಂಚದ ಮಾರುಕಟ್ಟೆಗಳಿಗೆ ಭಾರತ ಸಲ್ಲಿಸಿರುವ ಕಾಣಿಕೆಗಳನ್ನು ವಿಶದಗೊಳಿಸಿದೆ.

ಭಾರತದ ಹ್ಯಾಂಡಿಕ್ರಾಫ್ಟ್ಸ್ ಅಂಡ್ ಹ್ಯಾಂಡ್ ಲೂಮ್ಸ್ ಎಕ್ಸ್‌ಪೋರ್ಟ್ ಕಾರ್ಪೋರೇಷನ್‌ನ ಸಹಕಾರದೊಡನೆ ವ್ಯವಸ್ಥೆಗೊಳಿಸಲಾದ ಈ ಕಾರ್ಯಕ್ರಮವು ಸ್ಟೋರಿನ ಹೊರಗೆ, ರಸ್ತೆಯ ಬದಿಗಳಲ್ಲಿ ಸಂಚರಿಸುವವರನ್ನೂ ಆಕರ್ಷಿಸಿತು. ಮದರಾಸು ಜವುಳಿಯ ಮತ್ತು ಭಾರತೀಯ ಶೈಲಿಯ ಫ್ಯಾಶನ್‌ಗಳಿದ್ದ ಕಿಟಕಿ ಪ್ರದರ್ಶನಗಳನ್ನು ದಾರಿಹೋಕರು ಕುತೂಹಲದಿಂದ ನೋಡುತ್ತಿದ್ದರು. ಹೀಗೆ ಒಳಗೆ ಪ್ರವೇಶಿಸಲು ಆಕರ್ಷಿತರಾದ ಸಂದರ್ಶಕರ ಆಸಕ್ತಿ, ಒಳಗಿನ ಮಂಟಪಗಳನ್ನು ಹಾಗೂ ಪ್ರದರ್ಶನ ಕವಾಟಗಳನ್ನು ಕಂಡು ಮತ್ತಷ್ಟು ಕೆರಳಿತು. ಭಾರತದ ವೈವಿಧ್ಯಮಯ ವಸ್ತುಗಳ ಸೊಗಸಿನಿಂದ ತುಂಬಿದ ಈ ಸ್ಟೋರ್‌ನಲ್ಲಿ ಸಂಚರಿಸಿದಂತೆ, ತಾವು ಭಾರತದ ರಮಣೀಯ ಸ್ಥಳಗಳಲ್ಲಿ ಸಂಚರಿಸುತ್ತಿರುವೆವೋ ಎಂಬ ಭಾವನೆ ಅವರಲ್ಲಿ ಉಂಟಾಗುತ್ತಿತ್ತು.

'ಈ ಹದಿನೈದು ದಿನಗಳ ಮನೋರಂಜಕ ಕಾರ್ಯಕ್ರಮದಲ್ಲಿ ಎಲ್ಲಕ್ಕಿಂತಲೂ ಹೆಚ್ಚಿನ ಆಕರ್ಷಣೆಯಾಗಿದ್ದವರೆಂದರೆ ಪಿ. ಮುನುಸ್ವಾಮಿ. ಇವರು ಮದರಾಸಿನ ಒಬ್ಬ ತರುಣ ನೇಕಾರರು. ಜಿಂಬೆಲ್ಸ್‌ನ ಐದನೇ ಮಹಡಿಯಲ್ಲಿದ್ದ ಇವರ ದೊಡ್ಡ ಮಗ್ಗದ ಸುತ್ತಲೂ ಸದಾ ಕುತೂಹಲಿ ಪ್ರೇಕ್ಷಕರು ನೆರೆದಿರುತ್ತಿದ್ದರು. ನೆಯ್ಗೆಯ ಕಾರ್ಯದಲ್ಲಿ ಇವರು ಒಡ್ಡೆ ಹತ್ತಿಯನ್ನು ಏಕೆ ಉಪಯೋಗಿಸುತ್ತಾರೆ ಎಂದು ಅನೇಕರು ಕುತೂಹಲಿಗಳಾದರು.

"ಹತ್ತಿಯು ಒದ್ದೆಯಾಗಿರುವಾಗ ಹೆಚ್ಚು ಗಟ್ಟಿಯಾಗಿರುತ್ತದೆ. ಭಾರತದ 'ಮದರಾಸು' ಬಟ್ಟೆಯನ್ನು ಬಲಿಷ್ಟವಾದ ಎಳೆಗಳಿಂದ ತಯಾರಿಸಬೇಕಾಗಿದೆ" ಎಂದವರು ವಿವರಿಸಿದರು. ಇದೊಂದು ಬಹು ಸ್ವಾರಸ್ಯದ ಸಂಗತಿ ಎಂದು ಭಾವಿಸಿದ ಅನೇಕ ಪ್ರೇಕ್ಷಕರು ಸ್ವತಃ ಮಗ್ಗವನ್ನು ತಿರುಗಿಸಲು ಇಚ್ಛಿಸಿದರು. ಅವರಿಗೆ ನೆಯ್ಗೆ ಕಲಿಯಲು ಬಹಳ ಆಸಕ್ತಿ ಇದ್ದಂತೆ ಕಂಡು ಬಂತು.

ಮಗ್ಗದಲ್ಲಿ ತಮ್ಮ ಕೌಶಲ್ಯ ಪರೀಕ್ಷಿಸದಿದ್ದ ಜನರೂ ಸರಕು ಕೊಳ್ಳುವುದರಲ್ಲಿ ಬಹಳ ಆಸಕ್ತಿಯನ್ನು ತೋರಿಸಿದರು. ನೇಕಾರನ ಪಕ್ಕದಲ್ಲಿದ್ದ ವಿಭಾಗದಲ್ಲಿ ಅವರು ತಮಗೆ ಬೇಕಾದ ವಸ್ತುಗಳನ್ನು ಖರೀದಿ ಮಾಡಬಹುದಾಗಿತ್ತು. ತಯಾರಾದ ಉಡುಪುಗಳನ್ನು ಬಯಸಿದವರಿಗೆ—ಗಂಡಸರಿಗೆ, ಹೆಂಗಸರಿಗೆ ಮತ್ತು ಮಕ್ಕಳಿಗೆ—ಎಲ್ಲ ರೀತಿಯ ಬಟ್ಟೆಗಳು, ಮದರಾಸು ಜವುಳಿ ಅಥವಾ ಸೀರೆಗಳು ಜಿಂಬೆಲ್ಸ್‌ನಲ್ಲಿದ್ದವು.

ಅಮೆರಿಕದಲ್ಲಿ ಮದರಾಸು ಜವುಳಿ ಬಹು ಜನಪ್ರಿಯವಾಗಿರುವುದರಿಂದಾಗಿ, ಮದರಾಸಿನ ಗ್ರಾಮಗಳ ನೇಕಾರರು ಅದಕ್ಕೆ "ಅಮೆರಿಕನ್ ಬಟ್ಟೆ" ಎಂಬ ಹೆಸರನ್ನಿಟ್ಟಿದ್ದಾರೆ.

ಮುನುಸ್ವಾಮಿಯವರ ಮಗ್ಗವನ್ನು ನೋಡಿದ ನಂತರ, ಪ್ರೇಕ್ಷಕರು ಮೇಲಿನ ಮಹಡಿಗೆ ಹೋಗಿ ಒಂದು ಕಪ್ ಟೀ ಕುಡಿದು ಭಾರತದ ಅತಿಥಿ ಸತ್ಕಾರವನ್ನು ಪಡೆಯಬಹುದಾಗಿತ್ತು. ಅಥವಾ ಕೆಳಗಿನ ಮೂರನೆಯ ಮಹಡಿಗೆ ಹೋಗಿ ಸೋನಾ ಎಂಬ ಹೆಸರಿನ ಭಾರತದ ರಮಣೀಯ ಕುಟೀರದ ಸೊಗಸನ್ನು ನೋಡಬಹುದಾಗಿತ್ತು. ಮುಂಚೆ ಈಸ್ಟ್ ೫೫ನೆಯ ಬೀದಿಯಲ್ಲಿದ್ದ ಸೋನಾದ ಕೇಂದ್ರ ಕಚೇರಿಯನ್ನು ಈ ಕಾರ್ಯಕ್ರಮಕ್ಕಾಗಿ ಇಲ್ಲಿಗೆ ಸ್ಥಾನಾಂತರಗೊಳಿಸಲಾಗಿತ್ತು. ೧೯೬೫ನೆಯ ಜೂನ್‌ನಲ್ಲಿ, ವಿಶ್ವ ಸಂಸ್ಥೆಗೆ ಅಮೆರಿಕದ ರಾಯಭಾರಿಯಾಗಿದ್ದ ದಿವಂಗತ ಆಡ್ಲೀ ಇ. ಸ್ಟೀವನ್ಸನ್ ಅವರು ಈಸ್ಟ್ ೫೫ನೆಯ ಬೀದಿಯಲ್ಲಿ ಸೋನಾದ ಪ್ರಾರಂಭೋತ್ಸವದ ಅಧ್ಯಕ್ಷತೆ ವಹಿಸಿದ್ದರು.

ಸೋನಾದ ಪ್ರತಿನಿಧಿ ಮಿಸ್ ವೀಣಾ ದಲಾಲ್ ಅವರು ಜಿಂಬೆಲ್ ಕೇಂದ್ರಕ್ಕೆ ಸಂದರ್ಶಕರನ್ನು ಸ್ವಾಗತಿಸಿದರು. ಗ್ರಾಹಕರ ಪ್ರತಿಕ್ರಿಯೆಗಳಿಂದ ತನಗೆ ಹಾಗೂ

ಸ್ಯಾಂಡ್ ಡಿಯಾಗೋ ಪ್ರಯೋಗಶಾಲೆಯಲ್ಲಿ ಉಪ್ಪು ನೀರಿನಿಂದ ಸಿಹಿ ನೀರು ತಯಾರಿಸುವ ಪ್ರಯೋಗವೊಂದನ್ನು ನಡೆಸಲಾಗುತ್ತಿದೆ.

ಮೊತ್ತ ಮೊದಲ ಬಾರಿಗೆ ಅಂತರಿಕ್ಷದಲ್ಲಿ ನಿಲ್ದಾಣ ಕಟ್ಟಿದ ಜೆ...

ಲೆ ಯಿ ಂ ದ
ರ್ಷಿತರಾಗಿದ್ದಾರೆ

ಬುವರ ನಾಯಕತ್ವದ
ರಿಕನ್ ನಾಗರಿಕರ
ಗಿದೆ.

ನ್ನ ಸಹ ಕಾರ್ಯಕರ್ತರಿಗೆ 'ಅತ್ಯಂತ ಸಂತೋಷ' ವಾಗಿದೆ ಎಂದಾಕೆ ಹೇಳಿದ ರು. "ನಮ್ಮ ಸರಕುಗಳತ್ತ ಇನ್ನೂ ಅನೇ ಕ ಅಮೆರಿಕನ್ನರ ಗಮನ ಸೆಳೆಯಲು ಇ ದೊಂದು ಅತ್ಯುತ್ತಮ ವಿಧಾನವಾಗಿದೆ. ಅಮೆರಿಕನ್ ಪ್ರೇಕ್ಷಕರ ಪ್ರತಿಕ್ರಿಯೆಗ ಳಿಂದಾಗಿ, ಅನೇಕ ಅಮೆರಿಕನ್ನರಿಗೆ ಭಾರ ತವನ್ನು ಸಂದರ್ಶಿಸುವ ಹಂಬಲ ಉಂ ಟಾಗಿದೆ ಎಂದು ನಾನು ಭಾವಿಸುತ್ತೇನೆ" ಎಂದಾಕೆ ಹೇಳಿದರು.

"ಭಾರತದ ಅದ್ಭುತ ನೋಟ" ಎಂಬು ದಾಗಿ ಜಿಂಬೆಲ್ಸ್ ಜಾಹೀರಾತುಗೊಳಿಸಿದ ಸೋನಾದಲ್ಲಿ ಭಾರತದ ಗ್ರಾಮಗಳ ಕುಶ ಲ ಕರ್ಮಿಗಳ ಕೃತಿಗಳನ್ನು ಪ್ರದರ್ಶಿಸ ಲಾಯಿತು. ಸೊಗಸಾದ ರೇಶ್ಮೆಗಳು ಮ ತ್ತು ಮದರಾಸಿನ ಕೈ ಮಗ್ಗದಬಟ್ಟೆಗಳು; ಮರ ಕಲ್ಲು ಮತ್ತು ಕಂಚಿನಲ್ಲಿ ನಿರ್ಮಿಸಿದ ಕುಶಲ ಕೆತ್ತನೆಗಳು; ಶ್ರೇಷ್ಠ ಪ್ರಾಚೀನ ಕಲಾಕೃತಿಗಳು; ಮಿರುಗುವ ಬಳೆಗಳಿಂದ ಶ್ರೇಷ್ಠ ವಜ್ರಗಳವರೆಗಿನ ಸುಂದರ ರತ್ನಾ ಭರಣಗಳು; ಚಿತ್ರವಿಚಿತ್ರವಾ ಗಿ ರು ವ ಕೊಂಡಪಳ್ಳಿ ಆಟದ ಸಾಮಾನುಗಳು, ಮೃಗಾಕೃತಿಗಳು ಮತ್ತು ಇತರ ಅನೇಕ ಸರಕುಗಳು ಸೋನಾದಲ್ಲಿದ್ದವು. ಪೌರಾಣಿ ಕ ವ್ಯಕ್ತಿಗಳ ಉಜ್ವಲ ವರ್ಣದ ಪುರಿ ಪೈಂಟಿಂಗ್‌ಗಳು; ಕಚ್ಛಾ ರೇಶ್ಮೆ ಜರತಾರಿ ಬಟ್ಟೆಗಳು. ಚಿನ್ನ ಮತ್ತು ಬೆಳ್ಳಿಯ ಕಸೂ ತಿಯ ಈವಿನಿಂಗ್ ಹ್ಯಾಂಡ್ ಬ್ಯಾಗ್‌ಗ ಳು, ತಿರುಪತಿಯಲ್ಲಿ ತಯಾರಿಸಲಾದ ದೇ ವ ದೇವಿಯರ ಮರದ ಕೆತ್ತನೆಗಳು ಸೋ ನಾದಲ್ಲಿದ್ದವು.



ಪ ಚಿತ್ರಗಳು.

ಜಿಂಬೆಲ್ಸ್‌ಗೆ ಬಂದ ಗ್ರಾಹಕರ ಆಸಕ್ತಿ ಗಳೇನಿದ್ದರೂ, ಅವರ ಕುತೂಹಲ ಕೆರಳಿ ಸುವ ವಸ್ತುಗಳು ಅಲ್ಲಿದ್ದವು. ಆಗ್ರಾದ ಸೊಗಸಾದ ರತ್ನಭರಿತ ಅಮೃತ ಶಿಲೆಯ ಪೆಟ್ಟಿಗೆ, ಉಜ್ವಲ ಎನಾಮಲ್ ಕೊಟ್ಟಿ ದ್ದ ಜಟಿಲ ರಚನೆಯ ಬಾಗಿಲ ಗುಂಡಿ, ಚಪ್ಪಲಿಗಳು, ಕೃಷ್ಣ ಪರಮಾತ್ಮನ ಭಿತ್ತಿ ಚಿತ್ರ, ಕೈ ಮಗ್ಗದ ಕಂಬಳಿಗಳು ಮುಂ ತಾದ ಹಲವು ಸ್ವಾರಸ್ಯದ ವಿಷಯಗಳಿದ್ದ ವು.

ಪ್ರತಿದಿನ ಸಂಜೆ ನಾಲ್ಕು ಗಂಟೆಗೆ, ಆರನೆಯ ಮಂದಡಿಯ ಸ್ಪೆಷಲ್ ಇವೆಂ ಟ್ಸ್ ಸೆಂಟರಿನಲ್ಲಿ ಭಾರತದ ಮೃದು ಮ ಧುರ ಸಂಗೀತದ ಹಿನ್ನೆಲೆಯಲ್ಲಿ, ಭಾರತ ದ ಅಪೂರ್ವ ಶಿಲ್ಪ ಕಲಾಕೃತಿಗಳ ಮ ಧ್ಯೆ, ಶೋಭಿಸುವ ಸೀರೆಯುಟ್ಟ ಭಾರತೀ ಯ ಚಲನಚಿತ್ರಗಳ ಪ್ರ ದ ರ್ಶ ನವಿರು ತ್ತಿತ್ತು.

ಯೋಗದ ಬಗೆಗೆ ರಿಚರ್ಡ್ ಹಿಟ್ಲ ಮನ್ ಅವರ ಉಪನ್ಯಾಸ ಮತ್ತು ಪ್ರಾ ತ್ಯಕ್ಷಿಕೆ, ಭಾರತದ ದರ್ಶನ ಕಾರ್ಯಕ್ರ ಮದ ಇನ್ನೊಂದು ವೈಶಿಷ್ಟ್ಯವಾಗಿತ್ತು. ಯೋಗದ ಬಗೆಗೆ ವಿಶೇಷ ಅಧ್ಯಯನ ನ ಡೆಸಿರುವ ಹಿಟ್ಲಮನ್ ಅವರು ನ್ಯೂಯಾ ರ್ಕ್ ನಗರದಲ್ಲಿ ವಾರದಲ್ಲಿ ಐದು ದಿನಗಳ ಕಾಲ ಯೋಗವನ್ನು ಕುರಿತು ಟೆಲಿ ವಿಷ ನ್ · ಕಾರ್ಯಕ್ರಮವೊಂದನ್ನು ನಡೆಸು ತ್ತಾರೆ.

ಭಾರತ ದರ್ಶನ ಕಾರ್ಯಕ್ರಮದ ವಿ ಧ್ಯುಕ್ತ ಪ್ರಾರಂಭೋತ್ಸವದಲ್ಲಿ, ಭಾರತ ದ ರಾಯಭಾರಿ ಬಿ. ಕೆ. ನೆಹರೂ, ಅವರ ಪತ್ನಿ ಶ್ರೀಮತಿ ನೆಹರೂ, ಮದರಾಸಿನ ಕೈ ಗಾರಿಕಾ ಸಚಿವ ಆರ್. ವೆಂಕಟರಾಮನ್, ನ್ಯೂಯಾರ್ಕಿನಲ್ಲಿ ಭಾರತದ ಕಾನ್ಸಲ್ ಜನರಲ್ಲರಾಗಿರುವ ಡಾ| ಎಸ್. ಗುಪ್ತ ಮತ್ತು ನ್ಯೂಯಾರ್ಕಿನ ಹ್ಯಾಂಡಿಕ್ರಾ ಪ್ಟ್ಸ್ ಅಂಡ್ ಹ್ಯಾಂಡ್ ಲೂಮ್ಸ್ ಕಾ ರ್ಪೋರೇಷನ್ನಿನ ಜನರಲ್ ಮ್ಯಾನೇಜರ್ ಎಂ. ವರದರಾಜನ್ ಅವರು ಭಾಗವಹಿ ಸಿದ್ದರು.

ಪ್ರಾರಂಭೋತ್ಸವದಲ್ಲಿ, ಅಮೆರಿಕದ ಇಬ್ಬರು ಪ್ರಸಿದ್ಧ ಉಡುಪು ತಯಾರಕರಾ ಗಿರುವ ಅಡಿಲೀ ಸಿಂಪ್ಸನ್ ಮತ್ತು ಟೀನಾ ಲೆಸರ್ ಅವರು ಭಾರತೀಯ ಶೈಲಿಯಿಂದ ಸ್ಫೂರ್ತಿಪಡೆದು ಸಿದ್ಧಗೊಳಿಸಿದ ಫ್ಯಾಶನ್ ಗಳ ಪ್ರೀ—ವ್ಯೂ ತೋರಿಸಲಾಯಿತು. ಉಭಯ ದೇಶಗಳನ್ನು ಪ್ರತಿನಿಧೀಕರಿಸಿದ ಈ ಸುಂದರ ಮಾಡೆಲ್‌ಗಳಲ್ಲಿ ಈಗ ಅಮೆ ರಿಕದಲ್ಲಿ ತೋರಿಸಲಾಗುತ್ತಿರುವ "ಶೇಕ್ಸ್ ಪಿಯರ್ ವಾಲಾ" ಎಂಬ ಚಲನ ಚಿತ್ರ ದಲ್ಲಿ ಅಭಿನಯಿಸಿರುವ ತಾರೆ ಮಾಧುರ್ ಜಾಫ್ರೆಯವರೂ ಇದ್ದರು.

೧೪ ವರ್ಷಗಳ ಹಿಂದೆ ಶ್ರೀಮತಿ ನೆಹ ರೂ ಅವರಿಂದ ಸೀರೆಯ ಪರಿಚಯ ಪಡೆದ ಶ್ರೀಮತಿ ಸಿಂಪ್ಸನ್ ಅವರು ಅದನ್ನು

ಗಗನಯಾತ್ರಿ ಎಡ್ವರ್ಡ್ ವೈಟ್ ತನ್ನೊಡನೆ ಸಂ. ರಾ. ಸಂಘದ ಧ್ವಜ ವನ್ನೂ ಒಯ್ದಿದ್ದರು. ಈ ಧ್ವಜವನ್ನು, ಮರಳಿ ಬಂದ ಬಳಿಕ, ಸಂ. ರಾಷ್ಟ್ರ ಸಂಘದ ಪ್ರಧಾನಕಾರ್ಯದರ್ಶಿ ಯು. ಥಾ. ಅವರಿಗೆ ಒಪ್ಪಿಸಿದ ಸನ್ನಿವೇಶವಿದು. ಸಂ. ರಾ. ಸಂಘದಲ್ಲಿ ಅಮೆರಿಕನ್ ಪ್ರತಿನಿಧಿ ಗೋಲ್ಡ್ ಬರ್ಗ್ ರನ್ನೂ ಇಲ್ಲಿ ಕಾಣಬಹುದು.

"ಪ್ರಪಂಚದ ಅತ್ಯಂತ ಸ್ತ್ರೀ ಸಹಜ ಉ ಡುಪು" ಎಂದು ಪರಿಗಣಿಸುತ್ತಾರೆ. ಆಕೆ ಯ ಹೊಸ ಸಂಗ್ರಹದಲ್ಲಿ ಕಸೂತಿಯ ಸೀರೆಯ ಬಟ್ಟೆಯಿಂದ ಶೃಂಗರಿಸಿರುವ ಡಿ ನ್ನರ್ ಸೂಟುಗಳು ಮತ್ತು ಜ್ಯಾಕೆಟ್ ಗಳು ಇವೆ. ಅಮೆರಿಕದ ಶೈಲಿಗನುಗುಣ ವಾಗಿ ಭಾರತದಲ್ಲಿ ತಯಾರಿಸಿರುವ ಉಡು ಪುಗಳಿಂದಾಗಿ, ಒಮ್ಮೆ ನಿವೃತ್ತರಾಗಿದ್ದ ಮಿಸ್ ಲೆಸರ್ ಪುನಃ ಅಮೆರಿಕದ ಫ್ಯಾಶ ನ್ ವಲಯಗಳಲ್ಲಿ ಪ್ರಸಿದ್ಧಿಗೆ ಬಂದರು. ಜಿಂಬೆಲ್ಸಿನ ಭಾರತ ದರ್ಶನವನ್ನು ನೋ ಡಲು ಬಂದ ಅಮೆರಿಕದ ಗಿರಾಕಿಗಳುಯಾ ವ ಪ್ರತಿಕ್ರಿಯೆ ವ್ಯಕ್ತ ಪಡಿಸಿದರು? ಅವ ರ ಉತ್ಸಾಹವು ಬಹಿರಂಗವಾಗಿ ವ್ಯಕ್ತವಾ ಗುತ್ತಿತ್ತು.

"ಇವು ನಮ್ಮ ಮನಸ್ಸನ್ನು ಸೆಳೆದಿವೆ."

"ಭಾರತದ ನಿಜ ಸ್ವರೂಪವನ್ನು ಸಾ ಮಾನ್ಯ ಅಮೆರಿಕನ್ನರಿಗೆ ತೋರಿಸಲು ಉ ತ್ತಮ ಸಾಧನ"

"ನಾವು ಕೂಡಲೇ ಭಾರತಕ್ಕೆ ವಿಮಾ ನ ಯಾನ ಮಾಡುವೆವು."

"ಅಮ್ಮಾ ನನ್ನ ಪದವೀದಾನ ಸಮಾ ರಂಭದಲ್ಲಿ ಉಡಲು, ಆ ಸೀರೆಯನ್ನು ನಾ ವು ಕೊಂಡುಕೊಳ್ಳಲೇ?"

ಇವು ವ್ಯಕ್ತವಾದ ಪ್ರತಿಕ್ರಿಯೆಯ ಕೆಲ ವು ಮಾತುಗಳು.



ಇದು ಒಂದು ನೀರು ಪಂಪಿನ ಮಾದರಿ. ಜನಸಂಖ್ಯೆ ಹೆಚ್ಚಿದಂತೆ ನಾಗರಿಕ ನೀರು ಸರಬರಾಯಿಯ ಪ್ರಶ್ನೆ ಜಟಿಲವಾಗುತ್ತ ಬರುತ್ತಿದೆ. ರಿಯೋ ಡಿ ಜನಿರೋ (ದ. ಅಮೆರಿಕಾ) ಭಾರಿ ಮುಂದಾಲೋಚನೆಯಿಂದ ಈ ಶತಮಾ ನಾಂತ್ಯದ ಹೊತ್ತಿಗೂ ಸಾಕಾಗುವಷ್ಟು ನೀರೊದಗಿಸುವ ಪಂಪು ತಯಾರಿಸ ಹತ್ತಿದೆ.

ವಿಚಾರ ವೀಚಿ

ಸ್ಮರಣ ಶಕ್ತಿಯ ರಹಸ್ಯಗಳು

ಸ್ಮರಣ ಶಕ್ತಿ ಎಂದರೇನು? ಮಿದುಳಿನಲ್ಲಿಯೂ, ಅವರ ನರಕೋಶಗಳಲ್ಲಿಯೂ ಸಂಭವಿಸುವ ಯಾವ ಪ್ರಕ್ರಿಯೆಗಳು ಕಂಡ, ಕೇಳಿದ, ಅನುಭವಿಸಿದ ವಿಷಯಗಳ ಜ್ಞಾಪಕವನ್ನು ದೃಢಗೊಳಿಸುತ್ತವೆ? ಮಸ್ತಿಷ್ಕದಲ್ಲಿ ಹಿಂದೆಂದೋ ಮೂಡಿದ ಚಿತ್ರಗಳ ಪುನಶ್ಚಿತ್ರಣದ ಯಾಂತ್ರಿಕ ಕ್ರಿಯೆಗಳು ಯಾವುವು? ಈ ವಿಷಯಗಳ ಕುರಿತು ಅನೇಕ ವರ್ಷಗಳಿಂದ ಜಾರ್ಜಿಯಾದ ವಿಜ್ಞಾನದ ಅಕಾಡೆಮಿಯು ಪರಿಶೀಲನೆ ನಡೆಸುತ್ತಿದೆ.

ಜ್ಞಾಪಕ ಶಕ್ತಿಯ ಕುರಿತು ಕೂಡ ಅನೇಕ ಭಿನ್ನಾಭಿಪ್ರಾಯಗಳಿವೆ. ಆದರೆ ಸ್ಮರಣ ಶಕ್ತಿಯಲ್ಲಿ ಎರಡು ಬಗೆಗಳು- ಅಲ್ಪಕಾಲಿಕ ಮತ್ತು ದೀರ್ಘಕಾಲಿಕ— ಇವೆಯೆಂಬುದನ್ನು ಎಲ್ಲ ವಿಜ್ಞಾನಿಗಳೂ ಒಪ್ಪುತ್ತಾರೆ. ಪ್ರತಿ ದಿನವೂ ಮಾನವನು ಅಪರಿಮಿತ ಪ್ರಮಾಣದ ಸಮಾಚಾರಗಳನ್ನು ಪಡೆಯುತ್ತಿರುತ್ತಾನೆಯಾದರೂ ಅವುಗಳಲ್ಲಿ ಒಂದಂಶವನ್ನು ಮಾತ್ರವಷ್ಟೇ ಸ್ಮರಿಸಿ ಕೊಳ್ಳುತ್ತಾನೆ. ಈ ಪೈಕಿ ಕೆಲವು ಸಮಾಚಾರವನ್ನು ಮೆದುಳು ಆರಿಸಿಕೊಂಡು ದೀರ್ಘ ಕಾಲದ ವರೆಗೆ ಉಳಿಸಿಕೊಳ್ಳುತ್ತದೆ; ಮಿಕ್ಕ ವಿಷಯಗಳನ್ನು ಸ್ವಲ್ಪ ಸಮಯದ ತರುವಾಯ ಮರೆಯುತ್ತದೆ.

ಈ ಎರಡು ಬಗೆಯ ಸ್ಮರಣ ಶಕ್ತಿಗಳ ಯಾಂತ್ರಿಕ ವ್ಯವಸ್ಥೆಯು ಬೇರೆ ಬೇರೆಯಾಗಿರುತ್ತದೆ. ಅಲ್ಪ ಕಾಲದ ಜ್ಞಾಪಕಶಕ್ತಿಯು ನರವ್ಯೂಹದ ಮೂಲಕ ಆವೇಗದ ಪ್ರಸಾರಾಧಾರವುಳ್ಳದ್ದಾಗಿರುತ್ತದೆ. ಈ ಆವೇಗವು ಕೆಲವು ಸೆಕೆಂಡುಗಳವರೆಗೆ ಅಥವಾ ಕೆಲವು ನಿಮಿಷಗಳವರೆಗೆ ಮಾತ್ರವಷ್ಟೇ ಇರುತ್ತದೆ. ಆವೇಗವು ನಿಶ್ಚೇಷ್ಟಿತವಾದಾಗ, ಆ ಆವೇಗವನ್ನು ಉಂಟುಮಾಡಿದ ಘಟನೆಯನ್ನೂ—ಈ ಮಧ್ಯೆ ಇನ್ನೊಂದು ಯಾಂತ್ರಿಕ ಕ್ರಿಯೆಯು ತಲೆದೋರಿ ಆವೇಗದ ಲೇಪಗಳನ್ನು ದೀರ್ಘಕಾಲದವರೆಗೆ ಸ್ಥಿರಗೊಳಿಸದಿರುವ ಪಕ್ಷದಲ್ಲಿ,— ಪುನಃ ಸ್ಮರಿಸಿಕೊಳ್ಳಲಾಗದು.

ಈ ಇಬ್ಬಗೆಯ ಸ್ಮರಣ ಶಕ್ತಿಗಳ ಕುರಿತು ಪರಿಶೀಲನೆಗಳು ನಡೆಯುತ್ತಿವೆ. ಸ್ಮರಣ ಶಕ್ತಿಯು ಮಿದುಳಿನ ಯಾವುದಾದರೊಂದು ನಿರ್ದಿಷ್ಟ ವಿಭಾಗದಲ್ಲಿಲ್ಲವೆಂಬುದನ್ನು ಶರೀರ ಶಾಸ್ತ್ರಜ್ಞರು ಸ್ಪಷ್ಟವಾಗಿ ಬಲ್ಲರು.

ಮಿದುಳಿನ ಎಲ್ಲ ಭಾಗಗಳಿಗೂ ಪ್ರಚೋದನೆಗಳನ್ನು ಸಂಗ್ರಹಿಸುವ ಸಮಾನಾವಕಾಶಗಳಿವೆಯೇ? ಈ ಅಲ್ಪ, ದೀರ್ಘ ಕಾಲೀನ ಸ್ಮರಣ ಶಕ್ತಿ ಸಂಗ್ರಹದಲ್ಲಿ ಮಿದುಳಿನ ಬೇರೆ ಬೇರೆ ಭಾಗಗಳು ಎಷ್ಟೆಷ್ಟು ಭಾಗವಹಿಸುತ್ತವೆ?

ವಿಜ್ಞಾನಿಗಳು ಒಂದು ಪ್ರಯೋಗವನ್ನು ನಡೆಸಿದರು. ಆ ಪ್ರಯೋಗಶಾಲೆಯ ದೃಶ್ಯವಿಷ್ಟು: ಪೆಟ್ಟಿಗೆಯೊಂದರಲ್ಲಿ ಪ್ರಾಣಿಗಳನ್ನು ಕೂಡಿಸಲಾಯಿತು. ಪೆಟ್ಟಿಗೆಯಲ್ಲಿ ಮುಚ್ಚಿದ ಅನೇಕ ತೆರೆಗಳನ್ನು ಸ್ಥಾಪಿಸಲಾಗಿತ್ತು. ಒಂದು [illegible] ಮುಂದಿನ [illegible] ಅದನ್ನು [illegible] ಲಾಯಿತು. [illegible] ಅಥವಾ ಬೆಕ್ಕು [illegible] ಪೆಟ್ಟಿಗೆ ಕೆಲವೇ ಸೆಕೆಂಡುಗಳಲ್ಲಿ ಅಥವಾ ನಿಮಿಷಗಳಲ್ಲಿ ಆ ಪ್ರಾಣಿಯು ಬೆಳಕಿನ ಸಂಕೇತದ ಬಳಿಗೆ ಹೋಯಿತು. ಎಂದರೆ ಕಣ್ಣಿನ ಮೂಲಕ ದೊರೆತ ಪ್ರಚೋದನೆಯ ಅಂಶಗಳನ್ನು ಅವುಗಳ ನರವ್ಯೂಹವು ಉಳಿಸಿಕೊಂಡಿದ್ದಿತೆಂದು ವ್ಯಕ್ತಪಟ್ಟಂತಾಯಿತು. ಇದೇ ಅಲ್ಪ ಕಾಲದ ಜ್ಞಾಪಕ ಶಕ್ತಿ. ಈ ಜ್ಞಾಪಕ ಶಕ್ತಿಯು ನಾಯಿಗಳಲ್ಲಿ ೧೦—೧೫ ನಿಮಿಷಗಳ ವರೆಗೆ ಇರುತ್ತದೆ, ಬೆಕ್ಕುಗಳಲ್ಲಿ ಈ ಸಮಯ ೫ ನಿಮಿಷಗಳಿಗಿಂತಲೂ ಹೆಚ್ಚು ಉಳಿಯದು.

ಜ್ಞಾಪಕವನ್ನು ದೀರ್ಘಗೊಳಿಸಲೂ ಬಹುದು. ನಾಯಿಯನ್ನು ಪ್ರಯೋಗಶಾಲೆಯ ಮೂಲೆಗೆ ಕೊಂಡೊಯ್ದು ತೆರೆಯ ಹಿಂದೆ ಇಡಲಾಗಿದ್ದ ಮಾಂಸದ [illegible]ವನ್ನು ತೋರಿಸಿ- ಅದು ಅದನ್ನು ಮೂಸಿ ನೋಡುವಂತೆ ಮಾಡಲಾಯಿತು. ಇದರಿಂದ [illegible], ಗ್ರಾಹಕ ಸರ್ವಾಂಗಗಳು ಒಡನೆಯೇ ಉದ್ರಿಕ್ತವಾಗುತ್ತವೆ. ನಡಿಗೆಯಲ್ಲಿ ಉಂಟಾದ ಸ್ನಾಯು ಸಂಕುಚನಗಳು, ತಲೆಯ ಮತ್ತು ದೇಹದ ಪರಿವರ್ತಿತ ವಿನ್ಯಾಸ, ದೃಷ್ಟಿ ಮತ್ತು ಪರಿಮಳ ಗ್ರಾಹಕ ನರಗಳೆಲ್ಲವೂ ಇದರಿಂದ ಉದ್ರಿಕ್ತವಾದುವು.... ಮಾರನೆಯ ದಿನ ನಾಯಿಯನ್ನು ಪ್ರಯೋಗಶಾಲೆಗೆ ಕರೆದುಕೊಂಡು ಹೋದಾಗ, ಅದು ಹಿಂದಿನ ದಿನ ತಾನು ಆಹಾರದ ಪ್ರಾಂತವನ್ನು ಕಂಡಿದ್ದ ಕಡೆಗೆ ನೇರವಾಗಿ ಮುನ್ನುಗ್ಗಿತು. ಇದೇ ದೀರ್ಘಕಾಲದ ಜ್ಞಾಪಕ ಶಕ್ತಿ.

ಅಲ್ಪ ಕಾಲದ ಜ್ಞಾಪಕ ಶಕ್ತಿಯು ಮಿದುಳಿನ ಶಸ್ತ್ರ ಕ್ರಿಯೆಯ ತರುವಾಯ ಕುಂದುತ್ತದೆ. ಈ ಶಸ್ತ್ರ ಕ್ರಿಯೆಯು ಪ್ರಚೋದನೆಯ ಗ್ರಾಹಕ ಶಕ್ತಿಯ ಮೇಲೇನೂ ಪ್ರಭಾವ ಉಂಟು ಮಾಡದು. ಆ ನಾಯಿಯು ಕಣ್ಣೆದುರಾಗಿ ಮಾಂಸವನ್ನಿಟ್ಟರೆ, ಅದು ನೇರವಾಗಿ ಅದರ ಬಳಿಗೆ ಹೋಗುತ್ತದೆ. ಆದರೆ ಮಾಂಸವನ್ನು ತೆರೆಯ ಹಿಂದೆ ಅಡಗಿಸಿಟ್ಟರೆ, ಎರಡು ಸೆಕೆಂಡುಗಳ ತರುವಾಯ ಅದನ್ನು ನಾಯಿಯು ಕಂಡು ಹಿಡಿಯಲಾರದು.

ಮಸ್ತಿಷ್ಕದ ಮುಂಭಾಗದ ಹಿಂದಿನ (ಪ್ರಿ ಫ್ರಂಟಲ್) ಕ್ಷೇತ್ರ ಮಾತ್ರವಲ್ಲದೆ, ಇತರ ಗ್ರಾಹಕ ವಲಯಗಳೂ ಜ್ಞಾಪಕ ಶಕ್ತಿಯ ಮೇಲೆ ಪ್ರಭಾವ ಬೀರುತ್ತವೆ. ಗ್ರಾಹಕಗಳ ಏರು ಮಾರ್ಗಗಳು ಮಿದುಳಿನ ಹೊರ ಆವರಣದಲ್ಲಿ ಕೊನೆಗಾಣುವ ಕ್ಷೇತ್ರಗಳನ್ನು ಮೂಲಗ್ರಾಹಕ ಕ್ಷೇತ್ರಗಳೆಂದು ಅಖಂಡಗೊಳಿಸಲಾಗಿದೆ. ಅವುಗಳ ತರುವಾಯದ ವಲಯಗಳಲ್ಲಿರುವ 'ನ್ಯೂರಾನು"ಗಳಿಗೆ ಮುಖ್ಯವಾಗಿ ಮೂಲವಲಯದ "ನ್ಯೂರಾನು"ಗಳಿಂದ ಪ್ರಚೋದನೆಗಳುಂಟಾಗುತ್ತವೆ. ಮೂಲ ಮತ್ತು ಗೌಣ ವಲಯಗಳ ಮತ್ತು ಇತರ ಗ್ರಾಹಕ ವಲಯಗಳ ಉದ್ರಿಕ್ತತೆಯು ಏಕ ಕಾಲದಲ್ಲೇ ಉಂಟಾಗುವುದರ ಪರಿಣಾಮವಾಗಿ ಜಟಿಲವಾದ ಬಂಧಿತ ನರವ್ಯೂಹ ವಲಯಗಳನ್ನು ನಿರ್ಮಿಸಲಾಗುತ್ತದೆ. ಈ ವಲಯಗಳ ಉದ್ರಿಕ್ತತೆಯು ಬಾಹ್ಯೋತ್ತೇಜನೆಯನ್ನು ನಿಲ್ಲಿಸಿದೊಡನೆಯೇ ನಿಲ್ಲುವುದಿಲ್ಲ. ಅದು ಅನೇಕ ಸೆಕೆಂಡುಗಳ ವರೆಗೆ 'ಸುಸ್ಥಿರ"ವಿರಬಹುದು. ಲುಪ್ತವಾದ ತರುವಾಯವೂ, ವೃದ್ಧಿಗೊಂಡ ಉದ್ರಿಕ್ತತೆಯು ಅನೇಕ ನಿಮಿಷಗಳ ವರೆಗೆ ಇದ್ದೇ ಇರುತ್ತದೆ. ಪ್ರಚೋದನೆಯ ಮೂಲವು ಪುನಃ ಕಾಣಿಸಿಕೊಂಡರೆ, ಉದ್ರಿಕ್ತತೆಯು ಇನ್ನೂ ವೃದ್ಧಿಯಾಗಬಹುದು.

ಜ್ಞಾಪಕ ಶಕ್ತಿಯಲ್ಲಿ ಮಿದುಳಿನ ಶರೀರದ ತಳಭಾಗ ಮತ್ತು ಹಿಪ್ಪೊ[illegible] ವಹಿಸುವ ಪಾತ್ರವನ್ನು ಶರೀರ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಬಗೆಬಗೆಯ ಜ್ಞಾಪಕ ಶಕ್ತಿಗಳಿಗೆ ಮಿದುಳಿನ ಹೊರ ಆವರಣದ ಕಣತಲೀಯ ಹಾಲೆಗಳ (ಟೆಂಪೊರಲ್ ಲೋಬ್ಸ್) ಮತ್ತು ಇತರ ಭಾಗಗಳ ಮಹತ್ವವನ್ನು ತೋರಿಸುವ ಆಧಾರಾಂಶಗಳನ್ನು ವಿಜ್ಞಾನಿಗಳು ಒದಗಿಸಿದ್ದಾರೆ.

ಈ ರೀತಿಯಾಗಿ, ಜ್ಞಾಪಕ ಶಕ್ತಿಯು ಇಡಿ ಮಸ್ತಿಷ್ಕದ ಸಹಜ ಕ್ರಿಯೆಯೆಂದು [illegible] ಹೇಳಬಹುದಾಗಿದೆ. ಆದರೆ ಎಲ್ಲ ವಿಭಾಗಗಳೂ— ಬೇರೆ ಬೇರೆ ಪ್ರಮಾಣದಲ್ಲಿ —ಲಘು ಸಮಯದ ಮತ್ತು ದೀರ್ಘ ಕಾಲದ ಸ್ಮರಣ ಶಕ್ತಿಯಲ್ಲಿ ಭಾಗವಹಿಸುತ್ತವೆ. ಈ ಸಂಶೋಧನೆಗಳು ಮೊದಲು ದೊರೆತ ಕಾರ್ಯೋಪಯೋಗೀ ಆಧಾರ ಕಲ್ಪನೆಗಳನ್ನು ಮಾತ್ರವಷ್ಟೇ ನೀಡಿವೆಯೆಂಬುದು ನಿಜವಾದರೂ, ಇದು ಮಸ್ತಿಷ್ಕದ ಅತ್ಯಂತ ಸ್ವಾರಸ್ಯಕರವಾದ ಜಟಿಲ ಸಹಜ ಕ್ರಿಯೆಯಾದ ಜ್ಞಾಪಕ ಶಕ್ತಿಯ ಪರಿಶೀಲನೆಯಲ್ಲೊಂದು ಮುನ್ನಡೆಯಾಗಿದೆಯೆಂಬುದರಲ್ಲಿ ಸಂದೇಹವೇನೂ ಇಲ್ಲ.

ಸಾಗರದಲ್ಲಿ ಸಚಿವ ಶ್ರೀ ಕೆ. ಪುಟ್ಟಸ್ವಾಮಿ

ರಾಜ್ಯದ ಸಹಕಾರ ಸಚಿವರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಸಾಗರದಲ್ಲಿ ಕಾಲೇಜನ್ನು ಕಟ್ಟಿಸುವ ನಿವೇಶನವನ್ನು ಪರಿಶೀಲಿಸಿ, ಕಾಲೇಜಿನ ಆಡಳಿತ ಸಮಿತಿಯವರು ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿದ್ದರು. ಸಚಿವರನ್ನು ಕಾಲೇಜಿನ ಆಡಳಿತ ಸಮಿತಿಯ ಅಧ್ಯಕ್ಷರೂ, ಸದಸ್ಯರುಗಳೂ ಸ್ವಾಗತಿಸಿದರು.

ಪ್ರಾರಂಭದಲ್ಲಿ ಸಾಗರ ಪ್ರಾಂತ್ಯ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಕೆ. ಎಚ್. ಶ್ರೀನಿವಾಸರವರು ಸ್ವಾಗತಿಸಿ, ಕಾಲೇಜಿನ ಪ್ರಗತಿಯನ್ನು ವಿವರಿಸಿದರಲ್ಲದೇ, ಸರಕಾರದ ಸಹಕಾರವನ್ನು ಕೋರಿ, ಸಂಪರ್ಕ ಮಾಧ್ಯಮವಾದ "ತ್ರೈಮಾಸಿಕ ಪತ್ರಿಕೆ"ಯನ್ನು ಉದ್ಘಾಟಿಸಬೇಕೆಂದು ವಿನಂತಿಸಿದರು.

ಶ್ರೀ ಕೆ. ಪುಟ್ಟಸ್ವಾಮಿಯವರು ತ್ರೈಮಾಸಿಕ ಪತ್ರಿಕೆಯಾದ "ವಿದ್ಯಾಸಾಗರ"ವನ್ನು ಉದ್ಘಾಟಿಸುತ್ತಾ, ಕಾಲೇಜಿಗೆ ಶುಭ ಹಾರೈಸಿದರು. ಖಾಸಗಿ ವಿದ್ಯಾ ಸಂಸ್ಥೆಗಳಿಂದ ಹೆಚ್ಚಿನ ಪ್ರಗತಿ ಸಾಧ್ಯ ಎಂದು ನುಡಿದರು. ಮಾತ್ರವಲ್ಲದೇ ತಮ್ಮ ಪೂರ್ಣ ಸಹಾಯವಿರುವುದಾಗಿ ಭರವಸೆ ನೀಡಿದರು.

ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಟಿ. ಮಹಾಬಲೇಶ್ವರ ಭಟ್ಟರು ವಂದನಾರ್ಪಣೆ ಮಾಡಿದರು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 59 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕೆಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ
ಕನ್ನಡ ಪುಸ್ತಕಗಳು
ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಪಟ್ಟಿಗಾಗಿಯೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ
ರಿಜಿಸ್ಟರ್ಡ್ ಪಬ್ಲಿಷರ್ಸ್
[illegible]ಕೋಟೆ, ಉಡುಪಿ

ನಮ್ಮ ಸಾಹಸದ ಗುಟ್ಟು

ಸೈನಿಕರಿಗೆ ನಾಗರಿಕ ಶಿಕ್ಷಣ

ಭಾರತೀಯ ಸೇನೆ ರಾಷ್ಟ್ರದ ಅತಿ ದೊಡ್ಡ ವಯಸ್ಕರ ಶಿಕ್ಷಣ ಕೇಂದ್ರ. ಸೈನಿಕ ಶಿಕ್ಷಣ ದಳವು ಸೈನಿಕನನ್ನು ಉತ್ತಮ ಯುದ್ಧಪಟುವನ್ನಾಗಿ, ಉತ್ತಮ ನಾಗರಿಕನನ್ನಾಗಿ ರೂಪಿಸುತ್ತದೆ.

ಇಂದು ಸೈನಿಕನಿಗೆ ಬರಿಯ ಬಾಹುಬಲವಿದ್ದರೆ ಸಾಲದು, ಆತನಿಗೆ ಬುದ್ಧಿ ಬಲವೂ ಅವಶ್ಯ ಬೇಕು. ಹಿಂದೆ ಕೇವಲ ಶೌರ್ಯ—ಸಾಹಸಗಳನ್ನೇ ಸಮರತಂತ್ರ ನೆಚ್ಚಿಕೊಂಡಿದ್ದರೆ, ಇಂದು ಪರಿಸ್ಥಿತಿ ಬದಲಾಗಿದೆ. 'ಗುಂಡಿಯನ್ನೊತ್ತಿ ಯುದ್ಧ ಪ್ರಾರಂಭಿಸುವ' ಈ ಕಾಲದಲ್ಲೂ ಸಮರವು ಬುದ್ಧಿ ಪ್ರಧಾನತೆಯನ್ನೂ ಕಳೆದು ಕೊಂಡೀತು. ಅದೇನೇ ಇದ್ದರೂ ಯುದ್ಧ ಕಾಠಿಣ್ಯವನ್ನು ಸೈನಿಕ ತಡೆದು ಕೊಳ್ಳಬೇಕು, ಅದಕ್ಕಾಗಿ ಬಲಶಾಲಿಯೂ ಗಿರಬೇಕು; ತನ್ನೊಡನಿರುವ ಶಸ್ತ್ರಾಸ್ತ್ರಗಳನ್ನು ಸರಿಯಾಗಿ ಬಳಸಿಕೊಳ್ಳುವ ಮೇಧಾವಿಯೂ ಅವನಾಗಬೇಕು; ತಾನು ಯಾವ ಕಾರಣದಿಂದ ರಣರಂಗಕ್ಕೆ ದುಮುಕಿದ್ದೇನೆಂಬುದರ ಅರಿವು ಆತನಿಗಿರಬೇಕು; ಸರ್ವ ವಿಧದಲ್ಲೂ ಶತ್ರುವನ್ನು ಎದುರಿಸಿ ನಿಲ್ಲುವ ತಾಕತ್ತು ಅವನಿಗಿರಲೇಬೇಕು. ಇದಕ್ಕೆ ತಕ್ಕ ತರಬೇತಿ — ಶಿಕ್ಷಣವೂ ಸ್ವಪ್ರಜ್ಞೆಯೊಂದಿಗೆ ಬೇಕು.

ಮೂವತ್ತು ವರ್ಷಗಳ ಹಿಂದೆ ಭಾರತೀಯ ಸೈನಿಕ ಶಿಕ್ಷಣ ದಳವು ಆರಂಭವಾಯಿತು. ಇದು ಸೈನಿಕನಿಗೆ ತನ್ನ ವೃತ್ತಿಪರ ಶಿಕ್ಷಣದೊಡನೆ ಈ ಬಗೆಯ ಶಿಕ್ಷಣವನ್ನೂ ಕೊಡುತ್ತದೆ. ಯೋಧನ ಮಾನಸಿಕ ಪ್ರವೃತ್ತಿ ವಿಕಾಸ ಮತ್ತು ಪ್ರಚೋದನೆಯೇ ಈ ಶಿಕ್ಷಣದ ಉದ್ದೇಶ. ಇದರಿಂದ ಆತನ ವೃತ್ತಿ ತರಬೇತಿಯು ಸುಗಮವಾಗುವುದು; ವೃತ್ತಿಯಿಂದ ಪರಿಪೂರ್ಣ, ಬುದ್ಧಿಯಿಂದ ತೀಕ್ಷ್ಣ ಆದ ಆದರ್ಶ ಯೋಧನನ್ನಾಗಿ ಅವನನ್ನು ರೂಪಿಸುವುದು ಸಾಧ್ಯ. ಯೋಧನು ಬರಿಯ ಸಾಹಸ ಪಟುವಾದರೆ ಸಾಲದು, ಉತ್ತಮ ನಾಗರಿಕನೂ ಆಗಬೇಕು—ಇದು ಗುರಿ.

ಸೈನಿಕ ದಳದ ರೆಜಿಮೆಂಟಲ್ ತರಬೇತಿ ಕೇಂದ್ರದಲ್ಲಿ ಒಂದು ಪರೀಕ್ಷೆ ನಡೆಯುತ್ತದೆ. ನಾಯಕ ಹುದ್ದೆಗೇರಲು ಇದರ ಮೂರನೆಯ ವರ್ಗದ ಪ್ರಶಸ್ತಿಪತ್ರ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕು. ಹವಾಲ್ದಾರನಾಗ ಬೇಕಾದರೆ ಇದರ ಮುಂದಿನ (೨ನೆ ವರ್ಗದ) ಪರೀಕ್ಷೆ ತೇರ್ಗಡೆಯಾಗಬೇಕು. ಒಂದನೆ ವರ್ಗದ ಪರೀಕ್ಷೆಗಳಲ್ಲಿ ಉತ್ತೀರ್ಣನಾದರೆ, ಪದದಲ್ಲಿ ಬಡತಿ ದೊರೆಯುತ್ತ ಹೋಗುವುದು. ಪರೀಕ್ಷೆಗಳಲ್ಲಿ ಹಿಂದಿ, ಅಂಕಗಣಿತ, ಸೈನಿಕ ಇತಿಹಾಸ ಮತ್ತು ಸಾಮಾನ್ಯ ಜ್ಞಾನಗಳು ಅಧ್ಯಯನ ವಿಷಯಗಳಾಗಿದ್ದು ಶಿಕ್ಷಣ ಮಾಧ್ಯಮವು ಹಿಂದೀ ಭಾಷೆಯಾಗಿದೆ. ಬ್ರಿಟಿಷರ ಕಾಲದಲ್ಲಿ ಮಾಧ್ಯಮ ರೋಮನ್—ಉರ್ದೂ ಆಗಿತ್ತು.

ಇನ್ನೂ ಒಂದು ಪರೀಕ್ಷೆಯಿದೆ. ಅದರಲ್ಲಿ ಗಣಿತ, ಭೂಗೋಳ, ಭಾರತದ ಇತಿಹಾಸ, ಇಂಗ್ಲಿಷ್ ಮತ್ತು ಹಿಂದಿ ಇಲ್ಲವೇ ಯಾವುದಾದರೊಂದು ಪ್ರಾದೇಶಿಕ ಭಾಷೆಯನ್ನು ತೆಗೆದುಕೊಳ್ಳಬೇಕಾಗುವುದು. ಈ ಶ್ರೇಷ್ಠ ಪರೀಕ್ಷೆಯನ್ನು ತೇರ್ಗಡೆ ಮಾಡಿದರೆ, ಕಮಿಷನ್ಡ್ ಆಫೀಸರ್ ಆಗಿ ನೇಮಕಗೊಳ್ಳುವ ಸಾಧ್ಯತೆ ಹೆಚ್ಚು.

ವಾಸ್ತವಿಕ ಜ್ಞಾನವನ್ನು ಹೆಚ್ಚಿಸುವುದು, ಸ್ವಯಂ ಶಿಕ್ಷಣದ ಉತ್ಸಾಹ ಸೈನಿಕರಲ್ಲಿ ಕೆರಳಿಸುವುದು ಈ ಪರೀಕ್ಷೆಗಳ ಗುರಿ. ಸೈನಿಕರಲ್ಲಿ ಜ್ಞಾನದಾಹ ತಣಿಸಲು ಪ್ರತಿ ಸೈನಿಕ ಘಟಕದಲ್ಲಿಯೂ ಪುಸ್ತಕ ಭಂಡಾರವಿದೆ, ವೃತ್ತಿ ಸಂಬಂಧಿತ ಸಾಹಿತ್ಯದೊಡನೆ ಮನೋರಂಜಕ ಹೊತ್ತಿಗೆಗಳೂ ಇದರಲ್ಲಿವೆ. ಪ್ರಾತ್ಯಕ್ಷಿಕ ಶಿಕ್ಷಣದ ಕೊಠಡಿಗಳೂ ಇವೆ. ವಾಚನಾಲಯವೊಂದಿದ್ದು ಎಲ್ಲ ಭಾಷೆಗಳ ನಿಯತ ಕಾಲಿಕೆಗಳನ್ನು ಇಲ್ಲಿಗೆ ಒದಗಿಸುತ್ತಾರೆ.

ಸೈನಿಕ ಶಿಕ್ಷಣ ಪಠ್ಯಕ್ಷ ಯುದ್ಧದ ಅವಧಿಯಲ್ಲಿ ಮಾತ್ರವಲ್ಲ. ವಿವಿಧ ತತ್ವ ಪ್ರಣಾಳಿಗಳ ಬಗ್ಗೆ ಯುದ್ಧ ನಡೆಯುತ್ತಿರುವ ಈ ದಿನಗಳಲ್ಲಿ ಸೈನಿಕರಿಗೆ ಶಿಕ್ಷಣ ತರಬೇತಿ ನೀಡುವುದರಿಂದ ಅವರು ತಮ್ಮ ಪ್ರಜಾ ಸತ್ತೆಯ ಉಳಿವಿಗೆ, ಮಾತೃಭೂಮಿಯ ರಕ್ಷಣೆಗೆ ತಾವು ಹೋರಾಡುತ್ತಿದ್ದೇವೆಂಬುದರ ಬಗ್ಗೆ ಅಧಿಕ ವಿಶ್ವಾಸ ಹೊಂದುತ್ತಾರೆ.

ಸೈನಿಕರಿಗೆ ನಾಗರಿಕ ಶಿಕ್ಷಣವೂ ದೊರೆಯುತ್ತದೆ. ಪೌರನೀತಿಯು ಸೈನಿಕ ಪರೀಕ್ಷೆಯ ಪಾಠ್ಯ ವಿಷಯ. ಗ್ರಾಮ ಪಂಚಾಯತಿ, ಸಮಾಜ ಸೇವೆಗಳು, ಭಾರತದ ಸಂವಿಧಾನ, ಕುಟುಂಬ, ಗ್ರಾಮ, ಪೌರನ ಹಕ್ಕು ಮತ್ತು ಕರ್ತವ್ಯಗಳು—ಇವುಗಳನ್ನು ಆತ ಅವಶ್ಯ ಕಲಿತುಕೊಳ್ಳಬೇಕು.

ನಮ್ಮ ಜವಾನ ಮೊದಲು ಉತ್ತಮ ನಾಗರಿಕನಾಗಲು ಅರ್ಹತೆ ಪಡೆಯುತ್ತಾನೆ, ಮುಂದೆ ವೀರ ಯೋಧನಾಗುತ್ತಾನೆ. ಆದುದರಿಂದಲೇ ತನ್ನ ದೇಶದ ಬಗ್ಗೆ ತನ್ನ ಕರ್ತವ್ಯ ಪಾಲಿಸುವಲ್ಲಿ ಆತ ಸದಾ ತತ್ಪರನಾಗುತ್ತಾನೆ. ಆತನು ಸೈನಿಕ ಜೀವನದಿಂದ ನಾಗರಿಕ ಜೀವನಕ್ಕೆ ಮರಳಿ ಹೋದಾಗ, ಶಿಸ್ತಿನ ನಿಷ್ಠಾವಂತ ಸುಶಿಕ್ಷಿತ ನಾಗರಿಕನಾಗುತ್ತಾನೆ; ಸಮಾಜದಲ್ಲಿ ತನ್ನ ಸ್ಥಾನವನ್ನು ಹೊಂದಿಯೇ ಹೊಂದುತ್ತಾನೆ.

ದಕ್ಷಿಣ ಕನ್ನಡ ಜಿಲ್ಲೆಯ ರೈತಬಾಂಧವರಲ್ಲಿ ವಿಜ್ಞಾಪನೆ

ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾರತದ ರೈತವರ್ಗದ ಪಾತ್ರ ಹಿರಿದಾದುದು. ಹಳ್ಳಿಗಾಡಿನ ರೈತನ ಅರ್ಧನಗ್ನಾವಸ್ಥೆಯಲ್ಲಿ ಸಹಭಾಗಿಯಾಗಲು, ರಾಷ್ಟ್ರಪಿತ ಗಾಂಧೀಜಿ ತನ್ನ ಉಡುಪನ್ನೆಲ್ಲ ತೊರೆದು ಒಂದೇ ಒಂದು ಬಟ್ಟೆಯನ್ನುಡಲಾರಂಭಿಸಿದರು. ದರಿದ್ರ ನಾರಾಯಣನೆನಿಸಿದ ಗಾಂಧೀಜಿಗೆ ದೇಶದ ಕೃಷಿಕವರ್ಗವೆಲ್ಲ ಉತ್ಸಾಹಪರ ಬೆಂಬಲವಿತ್ತರು. ದೇಶವು ಸ್ವತಂತ್ರವಾದೊಡನೆ ರೈತವರ್ಗದವರ ಜೀವನಸ್ಥಿತಿ ಸುಧಾರಿಸುವುದೆಂಬ ಆಶೋದಯದಿಂದ ಕೃಷಿಕರೆಲ್ಲ ಉತ್ಸಾಹಿತರಾಗಿದ್ದರು.

ಆದರೆ ಇಂದೀಗ ಸ್ವರಾಜ್ಯ ದೊರೆತು 18 ವರ್ಷ ದಾಟಿದರೂ ಗಾಂಧೀಜಿಯ ಕನಸು ಕನಸಾಗಿಯೇ ಉಳಿದಿದೆ. ಸರ್ವಸಾಮಾನ್ಯ ಕೃಷಿಕ ಸಾಂಪತ್ತಿಕ ಸ್ಥಿತಿಯು ಮಟ್ಟಿಗೆ ಸುಧಾರಿಸಿಲ್ಲ. ಅವನ ಉತ್ಪಾದನೆ ಹೆಚ್ಚಿಲ್ಲ. ಅವನ ಖರ್ಚುವೆಚ್ಚ ಬಹಳವಾಗಿ ಹೆಚ್ಚಿದರೂ, ಅವನ ಉತ್ಪತ್ತಿಗೆ ತಕ್ಕ ಬೆಲೆ ದೊರೆಯುತ್ತಿಲ್ಲ. ಕೃಷಿಯು ಲಾಭದಾಯಕ ವೃತ್ತಿಯಾಗದೆ ಮೂಲೆಗುಂಪಾಗಿದೆ. ಆಧುನಿಕ ಉಪಕರಣ, ಸಲಕರಣೆ, ವಿಜ್ಞಾನಾದಿಗಳನ್ನು ಉಪಯೋಗಿಸಿಕೊಳ್ಳುವ ಶಕ್ತಿಯಾಗಲಿ, ತಿಳುವಳಿಕೆಯಾಗಲಿ ಸರ್ವಸಾಮಾನ್ಯ ಕೃಷಿಕನಿಗಿಲ್ಲದೆ ದೇಶದ ಬೆಂಗೋಲಾಗಿರುವ ಕೃಷಿಕವರ್ಗವು ತಲೆಯೆತ್ತದಂತಾಗಿದೆ.

ಪಟ್ಟಣಗಳಲ್ಲಿನ ವ್ಯಾಪಾರೋದ್ಯಮಿಗಳು, ಒಕ್ಕಟ್ಟಿನಿಂದ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ತಮಗೆ ಬೇಕಾದ ಸೌಲಭ್ಯಗಳನ್ನು ಸರಕಾರದಿಂದ ಪಡೆದು ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಶ್ರಮಿಸುತ್ತಿದ್ದಾರೆ. ನಗರಗಳಲ್ಲಿರುವ ಮಜೂರರು ಕೂಡಾ, ತಮ್ಮ ಟ್ರೇಡ್ ಯೂನಿಯನುಗಳನ್ನು ಸ್ಥಾಪಿಸಿ, ತಮ್ಮ ಜೀವನಗತಿಯನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ಹಲವು ಹಕ್ಕುಬಾಧ್ಯತೆಗಳನ್ನು ಗಳಿಸಿಕೊಂಡಿದ್ದಾರೆ. ಆದರೆ ರೈತವರ್ಗದ ಹಿತಾಸಕ್ತಿಯನ್ನೆತ್ತಿ ಹಿಡಿದು ಹೋರಾಡಲು ಅವರಿಗೆ ಸರಕಾರವು ಕೊಡುವ ಸೌಲಭ್ಯಗಳನ್ನೊದಗಿಸಿಕೊಳ್ಳಲು ಅವರದೇ ಆದ ಯಾವ ಸಂಘಟಿತ ಸಂಸ್ಥೆಯೂ ಇಲ್ಲ.

ಇಂದೀಗ ಆಪತ್ತಿನಲ್ಲೊಂದು, ಸಂಪತ್ತಿನಲ್ಲೊಂತೆ, ದೇಶದಲ್ಲುಂಟಾದ ಆಹಾರಧಾನ್ಯಗಳ ತೀವ್ರ ಕೊರತೆಯಿಂದಾಗಿ ಸರಕಾರವು ಕಣ್ಣು ತೆರೆದಂತಾಗಿದೆ. ರೈತರ ಹಿತವನ್ನು ಕಡೆಗಣಿಸಿ, ಅವರನ್ನು ಎಲ್ಲಾ ರೀತಿಯ ಶೋಷಣೆಗೀಡುಮಾಡಿದ ಪರಿಣಾಮವಾಗಿಯೇ ಕೃಷಿ ಪ್ರಧಾನವಾದ ಭಾರತದಲ್ಲಿ ದವಸಧಾನ್ಯಗಳ ತೀವ್ರ ಕೊರತೆಯುಂಟಾಗಿದೆಯೆಂಬುದನ್ನು ಸರಕಾರವೂ ಜನಪ್ರತಿನಿಧಿಗಳೂ ಮನಗಾಣುವಂತಾಗಿದೆ. ಸರಕಾರವು ಈಗ ಕೃಷಿಯ ಅಭಿವೃದ್ಧಿಗಾಗಿ, ಆಧುನಿಕ ವಿಧಾನವನ್ನುಪಯೋಗಿಸಿ, ಉತ್ಪತ್ತಿಯನ್ನು ಹೆಚ್ಚಿಸುವುದಕ್ಕಾಗಿ ಹಲವು ಯೋಜನೆಗಳನ್ನು ಕೈಕೊಂಡಿದೆ. ಕೋಟಿಗಟ್ಟಳೆ ಹಣವನ್ನು ವಿನಿಯೋಗಿಸುತ್ತಿದೆ.

ಉತ್ಪತ್ತಿ ಹೆಚ್ಚಿಸಲು, ಮತ್ತು ರೈತನ ಜೀವನ ಸ್ಥಿತಿಗತಿಯನ್ನು ಸುಧಾರಿಸಲು ಸರಕಾರವು ಕೈಕೊಂಡಿರುವ ವಿವಿಧ ಮುಖ ಯೋಜನೆ ವಿನಿಯೋಗಿಸುತ್ತಿರುವ ಹಣದ ಪ್ರಯೋಜನವನ್ನು ರೈತನು ನೇರವಾಗಿ ಪಡೆದು ತನ್ನ ಉತ್ಪತ್ತಿ ಹೆಚ್ಚಿಸಿ, ಜೀವನ ಸ್ಥಿತಿ ಸುಧಾರಿಸುವಂತೆ ಸಂಘಟಿತ ಪ್ರಯತ್ನ ಮಾಡುವುದು ಆತ್ಯಾವಶ್ಯಕ. ಇಷ್ಟು ಮಾತ್ರವಲ್ಲದೆ ಭೂಸುಧಾರಣೆಯೇ ಮೊದಲಾದ ಹಲವು ಕಾನೂನುಗಳಿಂದಾಗಿ ರೈತವರ್ಗದ ಜೀವನ ಅಸ್ತವ್ಯಸ್ತವಾಗಿದೆ. ಆದುದರಿಂದ ಜಿಲ್ಲೆಯ ರೈತರು ಎಚ್ಚತ್ತು, ಹಿಂದಿನ ಹಾನಿಕರ ಪದ್ಧತಿಯನ್ನೆಲ್ಲ ತ್ಯಜಿಸಿ, ಇಂದಿನ ಪರಿಸ್ಥಿತಿಗೆ ಹೊಂದಿಕೊಂಡು ನಡೆದು ನಮ್ಮ ಬೇಸಾಯ ವೃತ್ತಿಯನ್ನು ಲಾಭದಾಯಕ ವೃತ್ತಿಯಾಗಿ ನಡೆಸಲು ಸೊಂಟಕಟ್ಟಬೇಕು. ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಒಕ್ಕಟ್ಟಿನಿಂದ ಹೋರಾಡಲು ಮುಂದಾಗಬೇಕು. ಸರಕಾರದ ಎಲ್ಲಾ ಸೌಲಭ್ಯಗಳನ್ನು ನೇರವಾಗಿ ಪಡೆದು ಪ್ರಯೋಜನ ಹೊಂದಲು ಪ್ರಯತ್ನಿಸಬೇಕು.

ಜಿಲ್ಲೆಯ ರೈತವರ್ಗದವರೆಲ್ಲ ಜಾಗ್ರತೆಯನ್ನುಂಟುಮಾಡಿ, ಅವರ ಹಿತಾಸಕ್ತಿ ಮತ್ತು ಹಕ್ಕುಬಾಧ್ಯತೆಯ ಸಾಧನೆಗಾಗಿ ಉತ್ಸಾಹ ಹಾಗೂ ನಿಷ್ಠೆಯಿಂದ ಶ್ರಮಿಸುವ ರೈತ ಕಾರ್ಯಕರ್ತರನ್ನು ಸಂಘಟಿಸಿ, ಕೃಷಿಯನ್ನು ಇತರ ಉದ್ಯಮಗಳಂತೆಯೇ ಲಾಭದಾಯಕ ಆಕರ್ಷಕ ವೃತ್ತಿಯಾಗಿಮಾಡುವ ಆಕಾಂಕ್ಷೆಯಿಂದ ಚೇಂಬರ್ ಆಫ್ ಕಾಮರ್ಸಿನ (ವ್ಯಾಪಾರಿ ಸಂಘ) ಮಾದರಿಯಲ್ಲಿ, ಚೇಂಬರ್ ಆಫ್ ಅಗ್ರಿಕಲ್ಚರನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಕೆಲವು ರೈತ ಹಿತಚಿಂತಕರು ಸೇರಿ ಮಂಗಳೂರಲ್ಲಿ, ಸೌತ್ ಕೆನರಾ ಚೇಂಬರ್ ಆಫ್ ಅಗ್ರಿಕಲ್ಚರನ್ನು ಸ್ಥಾಪಿಸಿರುತ್ತಾರೆ. ಅದನ್ನು ಮೈಸೂರು ಸರಕಾರದ ಕೃಷಿ ಇಲಾಖೆಯ ಮಂತ್ರಿ ಶ್ರೀ ಜಿ. ನಾರಾಯಣ ಗೌಡರು ಉದ್ಘಾಟಿಸಿರುತ್ತಾರೆ. ಈ ಸಂಘದ ಘಟನೆ ಮತ್ತು ನಿಯಮಾವಳಿಯು ತಯಾರಾಗಿ ಅದು ಬೇಗನೆ ರಿಜಿಸ್ಟ್ರಿಯಾಗಲಿದೆ. ಸಂಘಕ್ಕೆ ರೂ. 200ನ್ನು ಏಕಗಂಟಿನಿಂದ ಕೊಡುವವರು ಆಜೀವ ಸದಸ್ಯರಾಗುತ್ತಾರೆ. ರೂ. 100 ಕೊಟ್ಟವರು ಪೋಷಕರಾಗುತ್ತಾರೆ. ರೂ 10 ಕೊಡುವವರು ಸಾಮಾನ್ಯ ಸದಸ್ಯರಾಗುತ್ತಾರೆ. ಸಾಮಾನ್ಯ ಸದಸ್ಯರು ಪ್ರತಿವರ್ಷ ರೂ. ೮ ಕೊಟ್ಟು ಸದಸ್ಯತನವನ್ನು ನವೀಕರಿಸತಕ್ಕದ್ದು.

ಜಿಲ್ಲೆಯ ರೈತಬಂಧುಗಳೆಲ್ಲ ಈ ಸಂಸ್ಥೆಗೆ ಉತ್ಸಾಹಪರ ಬೆಂಬಲವಿತ್ತು ಅದೊಂದು ಜಿಲ್ಲೆಯ ರೈತವರ್ಗದ ಪ್ರಾತಿನಿಧಿಕ ಸಂಸ್ಥೆಯಾಗಿ ರೈತರ ಹಿತಸಾಧನೆಗಾಗಿ ಹೋರಾಡುವ ಉಪಯುಕ್ತ ಮತ್ತು ಜೀವಂತ ಸಂಸ್ಥೆಯಾಗಿ ನೆರವಾಗಬೇಕಾಗಿ ವಿನಂತಿ.

ಕೆ. ಕೆ. ಶೆಟ್ಟಿ,
ಅಧ್ಯಕ್ಷ.

ಕೆ. ಚಂದ್ರಶೇಖರ ಶೆಟ್ಟಿ,
ಕಾರ್ಯದರ್ಶಿ.

ಸೌತ್ ಕೆನರಾ ಚೇಂಬರ್ ಆಫ್ ಅಗ್ರಿಕಲ್ಚರ್,
ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ, ಮಂಗಳೂರು—3.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 498/1965
O. S. No. 39/1958.

ಶೆಟ್ಟಿ ಶೆಡ್ತಿ ಸಹಾ —ಅರ್ಜಿದಾರರು
ಮತ್ತು
ನಾಗಪ್ಪ ಶೆಟ್ಟಿ ಸಹಾ —ಎದುರು.
ಇವರೊಳಗೆ

ಈ ಮೂಲಕ ಮೇಲಿನ ವ್ಯವಹರಣೆಯ ೩ನೆ ಎದುರು ಶಾಮ ಶೆಟ್ಟಿ-ಬಿಡ್ಡ ಶೆಡ್ತಿರನು ಗ. ಉಡುಪಿ ತಾಲ್ಲೂಕು ಶಿರ್ವ ಗ್ರಾಮದ ಕುಂಡು ಮನೆಯಲ್ಲಿರುವವರಿಗೆ ಈ ಮೂಲಕ ತಿಳಿಸುವದೇನಂದ್ರೆ —

ಅರ್ಜಿದಾರರು ನಿಮ್ಮ ಹಕ್ಕಿನ ಸ್ಥಿರಾಸ್ತಿ ಯೇಲಂ ಬಗ್ಗೆ ಮುಸ್ತಾಯಿ ದಾಖಲು ಮಾಡಿ ಆ ಕುರಿತು ನಿಮಗೆ ನೋಟೀಸು ಬಗ್ಗೆ ಮೇಲಿನ ಅಮಲ್‌ಜಾರಿ ತಾರೀಕು 19—8—66ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ, ಉದಯರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರು ಮಾಡಿ ಸದ್ರಿ ಅಮಲ್‌ಜಾರಿಯೇಕ ಪಕ್ಷವಾಗಿ ತೀರ್ಮಾನಿಸಲಾದೀತು.

By order of the court

N. M. Adyanthaya
Advocate for Petitioners

Karkala, 24—7—66.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಚಾರುಚಯನ

ಕಾಮರಾಜರ ಜಯಭೇರಿ

ಸ್ವಾತಂತ್ರ್ಯಕ್ಕೆ ಮೊದಲು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೊಂದು ಗೌರವವಿತ್ತು; ಸ್ವಾತಂತ್ರ್ಯಾನಂತರ ಅದು ಉಳಿಯಲಿಲ್ಲ. ಪಕ್ಷದ ವರಿಷ್ಠಮಂಡಳಿ, ಆಡಳಿತ ಪಕ್ಷದ ವರಿಷ್ಠರಲ್ಲಿ ಹಲವು ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡುವು. ನೆಹರೂ—ಕೃಪಲಾನಿ ಭಿನ್ನಾಭಿಪ್ರಾಯಗಳನ್ನೇ ನಾವು ಉದಾಹರಿಸಬಹುದು. ಹಾಗಾಗಿ ಕಾಂಗ್ರೆಸ್ ಅಧ್ಯಕ್ಷ ಗದ್ದುಗೆ ಎಲ್ಲರಿಗೂ ಅಪ್ರಿಯವಾಗಿ ಪರಿಣಮಿಸಿತ್ತು; ಕೆಲವೊಮ್ಮೆ ಪ್ರಧಾನಿ ಪದದೊಂದಿಗೆ ಪಂ| ನೆಹರೂರವರೇ ಇದನ್ನೂ ಹೊತ್ತುಕೊಳ್ಳಬೇಕಾಗಿ ಬಂದಿತ್ತು.

ಅಂದರೆ; ಕಾಂಗ್ರೆಸ್ ಅಧ್ಯಕ್ಷಪದ ಯಾರಿಗೂ ಬೇಡವಾದುದು—ಶ್ರೀಮತಿ ಇಂದಿರಾ ಗಾಂಧಿಯವರು, ನೀಲಂ ಸಂಜೀವ ರೆಡ್ಡಿಯವರು—ಎಲ್ಲರೂ ಒಂದು ಅವಧಿಯಲ್ಲೇ ಬೇಸತ್ತಿದ್ದವರು. ಇದಕ್ಕಿಂತ ಸರಕಾರದಲ್ಲಿ ಮಂತ್ರಿಯೊಂದು ಸ್ಥಾನ ಗಿಟ್ಟಿಸುವುದೇ ಲೇಸೆಂಬ ಭಾವನೆಯಿದ್ದಿದ್ದರೂ ಇರಬಹುದು. ಆದರೆ ಇವೆಲ್ಲರ ದಾಖಲೆಯನ್ನು ಮುರಿದವರು ಮದ್ರಾಸಿನ ಕಾಮರಾಜ್. ಅವರು ಒಂದು ಅವಧಿ ಮುಗಿದಲ್ಲಿ, ಎರಡನೆಯ ಅವಧಿಗೂ ಒಪ್ಪಿಗೊಳ್ಳಲು ಅನುಕೂಲವಾಗುವಂತೆ ಕಾಂಗ್ರೆಸ್ ಘಟನೆಯನ್ನೇ ತಿದ್ದಿಸಿಕೊಂಡ ಮಹಾಧೀರರು.

ಕಾಮರಾಜ್

ಕಾಮರಾಜರು ಕಾಮವನ್ನು ಗೆದ್ದವರು, ಶುದ್ಧ ಬ್ರಹ್ಮಚಾರಿಗಳು. ಇತರಭಾಷೆ ಸರಿಯಾಗಿ ಬಾರದ ಇವರು ರಾಜಾಜಿಯ ನಂತರ ಮದ್ರಾಸ ರಾಜ್ಯದಲ್ಲಿ ಹತ್ತು ವರ್ಷ ಅನಭಿಷಿಕ್ತ ದೊರೆಯಂತೆ ರಾಜ್ಯಭಾರ ಮಾಡಿದವರು. ಇನ್ನೂ ಹೇಳುವುದಾದರೆ, ಯಾವ ಗೊಂದಲ-ಕ್ಷೋಭೆಗಳಿಗೂ ಅವಕಾಶ ಕೊಡದೆ ಶಾಂತಿಪೂರ್ಣ ಆಳಿಕೆಗೆ ಇವರು ಹೆಸರಾದವರು. ತನ್ನದೇ ಒಂದು ಯೋಜನೆಯನ್ನು ರೂಪಿಸಿ ತಾನೇ ಸರಕಾರದಿಂದ ಹೊರಬಂದು ಪಕ್ಷದ ಸೂತ್ರಧಾರಿಪದವನ್ನು ವಹಿಸಿ ಅದನ್ನು ಯಶಃಪಥದತ್ತ ಒಯ್ಯುವ ಹೊಣೆಗಾರಿಕೆಯನ್ನು ಹೊತ್ತ ಧೀರರು. ಯಾರೂ ಒಲ್ಲದ ಈ ಮುಳ್ಳಿನ ಮುಕುಟವನ್ನು ಹೊತ್ತುಕೊಂಡವರು.

ಕಾಮರಾಜರ ಕಾಂತಿ ಪ್ರಕಟಗೊಳ್ಳುವ ಸನ್ನಿವೇಶಗಳೂ ಒದಗಿ ಬಂದುವು. ಜವಾಹರಲಾಲರ ಉತ್ತರಾಧಿಕಾರಿಯನ್ನು ಆರಿಸುವ ಗಹನತರ ಜಟಿಲ ಸಮಸ್ಯೆಯನ್ನು, ಕಗ್ಗಂಟನ್ನು ಇವರು ಯಶಸ್ವಿಯಾಗಿ ಬಿಡಿಸಿದರು—ಮುಂದೆ ಲಾಲಬಹದೂರರ ಅಕಾಲ ನಿಧನದಿಂದ ತೆರವಾದ ಪ್ರಧಾನಿ ಪಟ್ಟಕ್ಕೆ ಶ್ರೀಮತಿ ಗಾಂಧಿಯವರನ್ನು ತರುವುದರಲ್ಲಿ, ಮುರಾರಜಿ ಭಾಯಿಯನ್ನು ದೂರವಿರಿಸುವಲ್ಲಿ ಇವರು ಪಟ್ಟ ಶ್ರಮ ಅವರ್ಣನೀಯ.

ಕಾಂಗ್ರೆಸ್ ಪಕ್ಷದ ಸಂಘಟನೆಗಾಗಿ ಕಾಮರಾಜರಿಂದು ತನ್ನ ಬದುಕನ್ನು ಮೀಸಲಿಟ್ಟಿದ್ದಾರೆ. ೬೪ ವಸಂತಗಳನ್ನು ಪ್ರಶಸ್ತವಾಗಿಯೇ ಕಳೆದ ಕಾಮರಾಜರು ಪಕ್ಷೀಯ ಸಂವರ್ಧನೆ, ಗುಂಪುಗಾರಿಕೆಯ ನಾಶ, ಸದಸ್ಯರಲ್ಲಿ ಸಂಘಟನೆ, ಶಿಸ್ತುಪಾಲನಾ ನೀತಿ— ಮೊದಲಾದುವು ಹೇಗೆ ಸಾಧ್ಯವೆಂಬುದಾಗಿ ಅಹರ್ನಿಶಿ ಚಿಂತಿಸುತ್ತಿದ್ದಾರೆ. ಮುಂದಿನ ಫೆಬ್ರವರಿಯಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ ವಿರೋಧಿ ಪಕ್ಷಗಳ ಪ್ರಬಲ ಪ್ರತಿರೋಧ ಅಪಪ್ರಚಾರ, ಕುತಂತ್ರಗಳ ನಡುವೆಯೂ ಜಯಭೇರಿ ಬಾರಿಸಲಿರುವ ಧೀರ ಕಾಮರಾಜರು ಸೋವಿಯತ್ ನಾಡನ್ನು ಸಂಚರಿಸಿ ಬಂದಿದ್ದಾರೆ. ನಮ್ಮದು ಸಮಾಜವಾದಿ ಮಾದರಿಯ (ಪ್ರಜಾಸತ್ತೆಯ ತಳಹದಿಯಲ್ಲಿ) ಕಲ್ಯಾಣರಾಷ್ಟ್ರ—ಅದು ಸಾಮ್ಯವಾದಿ ದೇಶ. ಆದರೂ ಕಬ್ಬು ಸಿಹಿಯೇ. ಪಕ್ಷ ಸಂಘಟನಾ ತಂತ್ರ ಎಲ್ಲಿಯೂ ಉಪಯೋಗಿ.

ದಕ್ಷಿಣ ಭಾರತದ ತಮಿಳು ಭಾಷಿ ಕಾಮರಾಜರು ತನ್ನ ವ್ಯಕ್ತಿತ್ವ, ಕರ್ತವ್ಯನಿಷ್ಠೆ ಮತ್ತು ಕಾರ್ಯಸಾಧನೆಗಳಿಂದ ವಿಶ್ವವ್ಯಕ್ತಿಯಾಗಿದ್ದಾರೆ. ನಾಲ್ಕುವರ್ಷಗಳಿಗೆ ಮೊದಲು ಕಾಮರಾಜರೆಂದರೆ ಯಾರಿಗೂ ತಿಳಿದಿರಲಿಲ್ಲ. ಪಂ| ನೆಹರೂ ಬೆಳಕಿಗೆ ತಂದ ಎಲೆ ಮರೆಯ ಕಾಯಿಗಳಲ್ಲಿ ಲಾಲಬಹದೂರ್ ಮತ್ತು ಕಾಮರಾಜರನ್ನು ಭಾರತ, ಯಾಕೆ ಲೋಕವೇ ಮರೆಯದು.

° ° °

ಲೋಕಸಭೆಯಲ್ಲಿ ಎಲ್ಲರದೂ ಒಂದು ರೀತಿಯಾದರೆ, ಒಬ್ಬರದು ಇನ್ನೊಂದು. ಹುಂಡಿ ವಿಷ್ಣು ಕಾಮತ್ ಅಗ್ಗಲಕಿರಿದಾದ ಪಶ್ಚಿಮ ಕರಾವಳಿಗೆ ಸೇರಿದವರಾದರೂ ಅವರ ಕಾರ್ಯಕ್ಷೇತ್ರ ವಿಕಸಿತವಾಗಿದೆ. ಅವರು ಭಾರತೀಯ ಲೋಕಸಭೆಗೆ ಚೇತನವನ್ನೂ ಕಳೆಯನ್ನೂ ನೀಡಿದ, ನೀಡುತ್ತಿರುವ ವ್ಯಕ್ತಿ. ಕಾಮತರಿಲ್ಲದ ಲೋಕಸಭೆ ಬೆಳಕಿಲ್ಲದ ಮನೆ—ಅಥವಾ ಮಗುವಾಡದ ಅಂಗಳ.

ಸತ್ಯ—ನ್ಯಾಯಗಳ ಮೂಲಕ ವಾದ ಮಾಡುವ ಅಪೂರ್ವ ಶಕ್ತಿ ಶ್ರೀ ಕಾಮತರಿಗಿದೆ. ತನ್ನ ಅಭಿಪ್ರಾಯವನ್ನು ಸುಸ್ಪಷ್ಟವಾಗಿ ನಿರರ್ಗಳ ವಾಣಿಯಿಂದ ವ್ಯಕ್ತಪಡಿಸುವ ವಾಗ್ವಿದಗ್ಧತೆಯೂ ಇವರಿಗಿದೆ. ಕೆಲವೊಮ್ಮೆ ಸಭಾಧ್ಯಕ್ಷರ ಅಪಕೃಪೆಗೂ ಪಾತ್ರರಾಗುವುದುಂಟು, ಸರಕಾರಿ ಪಕ್ಷದ ಕ್ರೋಧಾನಲವು ಇವರನ್ನು ಸುಡ ಬರುವುದೂ ಉಂಟು. ಅದೇನೇ ಇದ್ದರೂ ಕಾಮತ್ ಲೋಕಸಭೆಗೊಂದು ಪ್ರಾಣ, ತ್ರಾಣ.

ಪ್ರಜಾ ಸಮಾಜವಾದಿ ಪಕ್ಷದ ತತ್ವಗಳನ್ನು ಕೃಪಲಾನಿ ರೂಪಿಸಿದಾಗ, ಅವುಗಳಿಂದ ಪ್ರಭಾವಿತರಾದ ಕಾಮತ್ ಅಂದಿನಿಂದಲೂ ಪ್ರಜಾಸಮಾಜವಾದಿಯಾಗಿದ್ದರು. ಆದರೆ, ಇಂದು ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಪಕ್ಷವು ಅನುಸರಿಸುವ ನೀತಿಯಿಂದ ನೊಂದ ಇವರು ರಾಜಿನಾಮೆಯಿತ್ತಿದ್ದಾರೆ.

ವಿರೋಧಿ ಪಕ್ಷಗಳ ಗುರಿ ಒಂದೇ—ಹೇಗಾದರೂ ಮಾಡಿ ಕಾಂಗ್ರೆಸ್ಸನ್ನು ಸೋಲಿಸಬೇಕು ಎಂಬುದು. ಇದಕ್ಕಾಗಿ ಪರಸ್ಪರ ವಿರೋಧೀ ಧೋರಣೆಗಳುಳ್ಳ ಪಕ್ಷಗಳೂ ಒಂದಾಗುತ್ತವೆ— ಭವಿಷ್ಯ ಏನೇ ಆಗಲಿ; ಆ ಕಥೆ ಬೇರೆ. ಪ್ರಜಾ ಸಮಾಜ ಪಕ್ಷವೂ ಮುಸ್ಲಿಂಲೀಗ್ ಕಮ್ಯೂನಿಸ್ಟ್ ಮೊದಲಾದ ವಿನಾಶಕಾರಿ ನೀತಿ ತಳೆದ ಪಕ್ಷಗಳೊಡನೆ ಚುನಾವಣಾ ಒಡಂಬಡಿಕೆ ಮಾಡಲು ಒಪ್ಪಿದುದರಿಂದ ಕಾಮತ್ ಪಕ್ಷದಿಂದ ಹೊರ ಬಂದರು—ತನ್ನ ನೀತಿಯನ್ನು ಪಟ್ಟು ಹಿಡಿದರು.

ಪಕ್ಷವು ಕೆಲವರನ್ನು ನಿರ್ಮಿಸುತ್ತದೆ, ಕೆಲವರು ಪಕ್ಷವನ್ನು ಸೃಷ್ಟಿಸುತ್ತಾರೆ. ಎಚ್. ವಿ. ಕಾಮತ್ ಈ ಎರಡೂ ವರ್ಗಗಳಿಗೆ ಸೇರಿದವರಲ್ಲ. ಪ್ರಜಾಸಮಾಜವಾದದ ನೀತಿ ಮೆಚ್ಚುಗೆಯಾಯಿತು, ಅದನ್ನು ಸೇರಿದರು; ಈಗ ಜಗುಪ್ಸೆ ಬಂತು ತ್ಯಜಿಸಿದರು—ಒಳ್ಳೆಯ ಕೆಲಸ ಮಾಡಿದರು. ಆದರೆ, ಮುಂದೆ?

° ° °

ಪಾಕಿಸ್ತಾನದ ವಿದೇಶ ಮಂತ್ರಿಯಾಗಿದ್ದ ಝಡ್. ಎ. ಭುಟ್ಟೊ ನಿರ್ಗಮನದಿಂದ ಯಾರೂ ಏನನ್ನೂ ನಿರೀಕ್ಷಿಸಿರಲಿಲ್ಲ. ಮನಬಂದಂತೆ ಹಾರುವ ಚಿಟ್ಟೆಯೊಂದು ರೆಕ್ಕೆ ಸುಟ್ಟುಕೊಂಡಿತು ಎಂದು ಮಾತ್ರ ಅಂದುಕೊಂಡಿದ್ದರು. ಇದೀಗ ಸ್ಪಷ್ಟವಾಗ ತೊಡಗಿದೆ. ಅಧ್ಯಕ್ಷ ಅಯ್ಯೂಬಖಾನರು ಶರೀಫ ಉದ್ದೀನ ಪಿರಜಾದಾರನ್ನು ವಿದೇಶ ಮಂತ್ರಿಯಾಗಿ ನೇಮಿಸಿದ್ದಾರೆ. ಪಿರಜಾದಾರ ಹೇಳಿಕೆಯಂತೆ ಪಾಕಿಸ್ತಾನದ ವಿದೇಶ ನೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ೧೯೬೦ರಲ್ಲಿ ಅಧ್ಯಕ್ಷ ಅಯ್ಯೂಬರು ಘೋಷಿಸಿದ್ದ ವಿದೇಶನೀತಿಯೇ ಇನ್ನು ಮುಂದೆಯೂ ಊರ್ಜಿತವಿರುವುದು.

ಅಯ್ಯೂಬಖಾನ್

ಕಾಶ್ಮೀರ ನೀತಿಯ ಬಗ್ಗೆ ಹೇಳುವುದಾದರೆ, ಅಲ್ಲಿನ ಜನತೆಗೆ ಬೆಂಬಲ ಕೊಡುವುದೇ ಸರಕಾರದ ನೀತಿ. ಇದು ಹೇಗೆ? ಎಂಬುದು ಬೇರೆ ವಿಷಯ.

ಭುಟ್ಟೋ ನಿರ್ಗಮನಾನಂತರದ ಅಯ್ಯೂಬರ ಬಣ್ಣ ಹೀಗೆ ಒಂದೊಂದಾಗಿ ವ್ಯಕ್ತವಾಗ ತೊಡಗಿವೆ. ತಾಷ್ಕೆಂಟ್ ಒಡಂಬಡಿಕೆಯಂತೆ ಉಭಯ ರಾಷ್ಟ್ರಗಳ ನಡುವಣ ವಿವಿಧ ಕ್ಷೇತ್ರಗಳಲ್ಲಿ ಸಂಬಂಧ ಬೆಳೆಯಲು ವಿವಿಧ ಹಂತಗಳಲ್ಲಿ ನೇರ ಮಾತುಕತೆ ನಡೆಯಬೇಕಾಗಿದೆ. ಇದರಂತೆ ಹಿಂದೊಮ್ಮೆ ಸ್ವರ್ಣಸಿಂಗ—ಭುಟ್ಟೊ ಒಂದಾಗಿದ್ದರು. ಆದರೆ, ಅದು ಯಾವ ಪ್ರಗತಿಯನ್ನೂ ಸಾಧಿಸಲಿಲ್ಲ—ಕಾರಣ ಭುಟ್ಟೋ ನೇರವಾಗಿ ಕಾಶ್ಮೀರವನ್ನೇ ಎತ್ತಿಕೊಳ್ಳ ಬಯಸಿದರ.

ಇಂದು ಮತ್ತೆ ಮಂತ್ರಿಮಟ್ಟದ ಸಭೆ ಸೇರುವ ಸೂಚನೆಯಿದೆ—ಇದು ಹೊರಟದ್ದು ಭಾರತದಿಂದಲೇ. ಆದರೆ, ಪಾಕಿಸ್ತಾನವು ಮಾತುಕತೆಗೆ ಹಲವಾರು ಪೂರ್ವಕರಾರುಗಳನ್ನು ಹೇರಿದೆ. ತಮ್ಮ ಹಿತಾಸಕ್ತಿಯ ವಿಷಯವನ್ನು ಪ್ರಸ್ತಾಪಿಸಲು ಮತ್ತು ಚರ್ಚಿಸಲು ಅವಕಾಶವಿರಬೇಕು ಎಂಬುದು ಒಂದು ಶರ್ತ. ಅಂದರೆ, ಕಾಶ್ಮೀರ ತನ್ನದು ಎಂಬ ಅನ್ಯಾಯದ ವಾದಕ್ಕೆ ಭಾರತ ತಲೆಬಾಗಬೇಕು. ಇಲ್ಲವಾದರೆ, ಸಭೆ ಸೇರಬೇಕೆಂಬ ಸೂಚನೆ ಮಾಡುವುದನ್ನಾದರೂ ಬಿಡಬೇಕು. ತಾಷ್ಕೆಂಟ್ ಘೋಷಣೆಯನ್ನು ಕಸದ ಬುಟ್ಟಿಗೆ ತಳ್ಳುವ ಹೊಸ ಪ್ರಯತ್ನ—ಇದು ಅಯ್ಯೂಬ್—ಪಿರಜಾದಾರು ಪ್ರಸವಿಸಿದ ಹೊಸ ಪಾಕ್ ಕುತಂತ್ರ ನೀತಿ.

—ರಾತಿ.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ
ಫೋನ್: 77 ಕುಂದಾಪುರ, ದ. ಕ.

ಸಾಹಿತ್ಯ ಸಂಸದ

ರಶ್ಯನ್ ಭಾಷೆಯಲ್ಲಿ ಭಾರತೀಯ ಕೃತಿಗಳು

ಕಬೀರರ ಪದ್ಯಗಳು

ಮಧ್ಯ ಯುಗೀನ ಭಾರತದ ಸರಿಸಾಟಿಯಿಲ್ಲದ ಕವಿ ಕಬೀರ್ ದಾಸರು ಇತ್ತೀಚಿನ ವರೆಗೂ ಸೋವಿಯತ್ ದೇಶದಲ್ಲಿ ಕೆಲವು ಪಂಡಿತರು ಮತ್ತು ಅವರ ಸಾಹಿತ್ಯಪ್ರಿಯರನ್ನು ಬಿಟ್ಟರೆ ಯಾರಿಗೂ ಗೊತ್ತಿರಲಿಲ್ಲವೆಂದು ಹೇಳಬಹುದು.

ಕಬೀರರ ಪದ್ಯಗಳನ್ನು ಆಯ್ದುಕೊಂಡು ರವೀಂದ್ರನಾಥ ಠಾಕೂರರು ರಚಿಸಿದ ಒಂದು ಕವಿತಾ ಸಂಗ್ರಹದಿಂದ ಇಷ್ಟಕ್ಕೆ ಮೊದಲು ಇನ್ನೂ ಕೆಲವರಿಗೆ ಕಬೀರರ ಪರಿಚಯವಾಗಿತ್ತು. ಈ ಪುಸ್ತಕದಲ್ಲಿಯ ಪದ್ಯಗಳು ಅಕ್ಷರಶಃ ಭಾಷಾಂತರಗಳೇನಾಗಿರಲಿಲ್ಲ, ಆದರೆ ಕಬೀರರ ಪದ್ಯಗಳ ಭಾವಾನುವಾದಗಳಾಗಿದ್ದವು. ಹಿಂದಿ (ಬ್ರಜ) ಭಾಷೆಯಿಂದ ಬಂಗಾಳಿ ಭಾಷೆಗೆ, ಬಂಗಾಳಿಯಿಂದ ಇಂಗ್ಲೀಷಿಗೆ ಅನಂತರ ಇಂಗ್ಲೀಷಿನಿಂದ ರಷ್ಯನ್ ಭಾಷೆಗೆ ಹೀಗೆ ಮೂರು ರೀತಿಯ ಭಾಷಾಂತರಗಳ ಮೂಲಕ ಅವು ರಷ್ಯನ್ ವಾಚಕರನ್ನು ತಲುಪಿದವು.

ಇಷ್ಟೊಂದು ಭಾಷಾಂತರಗಳ ಬಳಿಕ ಮೂಲಕಾವ್ಯ ಎಷ್ಟೊಂದು ಉಳಿಯಿತು ಎಂದು ಯಾರಿಗೂ ಅಚ್ಚರಿಯಾಗುವುದು ಸ್ವಾಭಾವಿಕ. ಆದರೆ ಇಷ್ಟು ಮಾತ್ರ ಹೇಳಬಹುದು: ಬ್ರಜ ಭಾಷೆಯಿಂದ ನೇರವಾಗಿ ಅನುವಾದಿಸಿದುದಕ್ಕಿಂತಲೂ ಈ ಭಾಷಾಂತರಗಳಲ್ಲಿ ಕಬೀರರ ಕಾವ್ಯಚೇತನ ಉತ್ತಮವಾಗಿ ಪ್ರತಿಬಿಂಬಿತವಾಗಿತ್ತೆಂದು ಹೇಳಬಹುದು.

ಕಬೀರರ ಕಾವ್ಯವನ್ನು ಮೂಲದಿಂದಲೇ ಅಭ್ಯಸಿಸುವ ಕಾರ್ಯ ಸೋವಿಯೆತ್ ಒಕ್ಕೂಟದಲ್ಲಿ ಇತ್ತೀಚೆಗಷ್ಟೆ ಆರಂಭವಾಯಿತೆಂದು ಹೇಳಬೇಕು. ಅವರ ಕವಿತೆಗಳ ಮೊದಲ ಅನುವಾದ ೧೯೫೬ರಲ್ಲಿ ಪೌರ್ವಾತ್ಯ ಸಾಹಿತ್ಯ ಮಾಲಿಕೆಯಲ್ಲಿ ಪ್ರಕಟವಾಯಿತು. ಶಬ್ದಶಃ ಭಾಷಾಂತರ ಕಾರ್ಯವನ್ನೂ ಕವಿ ಕೃತಿಯ ಕುರಿತು ಅಲ್ಪ ಪರಿಚಯವನ್ನೂ ಇಗೋರ್ ಸೆರೆಬ್ರ್ಯಾಕೋವ್ ಅವರು ಪೂರೈಸಿದರು ಮತ್ತು ಸೆಮ್ಯೋನ್ ಲಿಪ್‌ಕಿನ್‌ರು ಕಾವ್ಯಾನುವಾದ ಮಾಡಿದರು.

೧೯೬೫ರಲ್ಲಿ [illegible] ಸಾಹಿತ್ಯ ಪ್ರಕಟಣ ಮಂದಿರವು [illegible] "ಭಾವ ಗೀತೆಗಳ ಭಂಡಾರ"ವನ್ನು ಪ್ರಕಟಿಸಿತು. ಕಬೀರರ ಗೀತೆಗಳನ್ನು ಅತ್ಯಂತ ಸುಂದರವಾಗಿ ಇದರಲ್ಲಿ ಪ್ರಕಟಿಸಲಾಗಿದೆ.

ಇದನ್ನು ಸಿದ್ಧಪಡಿಸಿದ ಸೆಮ್ಯೋನ್ ಲಿಪ್ಕಿನ್ ಮತ್ತು ಇಸ್ರಾಯಿಲ್ ರಬಿನೋವಿಚ್ ಅವರುಗಳು ತಾವು ಬರೆದಿರುವ ಪ್ರಸ್ತಾವನೆಯಲ್ಲಿ ಕಬೀರರ ಜೀವನದ ಕುರಿತು ಅನೇಕಾನೇಕ ದಂತ ಕಥೆಗಳನ್ನು ಪ್ರಸ್ತಾಪಿಸಿದ್ದಾರೆ. ಕಬೀರರ ಕಾವ್ಯದ ವಿಶಿಷ್ಟ ಲಕ್ಷಣಗಳಾದ ಗಹನತೆಯನ್ನೂ, ವೈರುಧ್ಯಗಳನ್ನೂ ಅವರು ಸ್ವಲ್ಪದರಲ್ಲಿ ಬಣ್ಣಿಸಿ ಭಕ್ತಿ ಪಂಥದ ಧಾರ್ಮಿಕ ಮತ್ತು ತಾತ್ವಿಕ ಮುಖಗಳನ್ನು ವಾಚಕರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ.

ರಬಿನೋವಿಚ್ ಮತ್ತು ಲಿಪ್‌ಕಿನ್‌ರ್ ಕಬೀರರ ಕಾವ್ಯದಲ್ಲಿ ಕಂಡುಬರುವ ಹಿಂದೂ ಮುಸ್ಲಿಂ ಐಕ್ಯತೆಯ ಹಂಬಲ, ಹಿಂದೂ ಮುಸ್ಲಿಮರೆಂಬ ಭಿನ್ನ ಭಾವವಿಲ್ಲದೆ ಎಲ್ಲ ಠಕ್ಕ ಧಾರ್ಮಿಕ ಗುರುಗಳ ಬಗ್ಗೆ ತುಂಬಿದ ತುಚ್ಛೀಕಾರ ಮೊದಲಾದುವುಗಳನ್ನು ಒತ್ತಿ ಹೇಳುತ್ತಾರೆ. ಆದರೆ ಭಕ್ತಿ ಮತ್ತು ಸೂಫಿ ಪಂಥದ ಧೋರಣೆಯಲ್ಲಿ ಬೆಳೆದ ಈ ಮಧ್ಯ ಯುಗೀನ ಕವಿಯ ಕಾವ್ಯವಿವರಣೆಗೆ ಇಷ್ಟೇ ಸಾಲದು ಎನ್ನಿಸಿದರೂ ಒಪ್ಪುತ್ತದೆ.

ಭಾರತೀಯ ಸಾಹಿತ್ಯದಲ್ಲಿ ಕಾವ್ಯವೇ ಒಂದು ಪ್ರಧಾನ ಬಗೆಯಾಗಿದೆ. ಪ್ರಾಚೀನ ಭಾರತದ ಮಹಾ ಕಾವ್ಯಗಳ ಅಧ್ಯಯನದೊಡನೆಯೆ ರಷ್ಯನ್ ಭಾಷೆಯಲ್ಲಿ ಭಾರತ ವಿದ್ಯಾಧ್ಯಯನ ಆರಂಭವಾಯಿತೆಂದು ಹೇಳಬೇಕು. ಸೋವಿಯೆತ್ ಭಾರತ ವಿದ್ಯಾವಿದರ ಮತ್ತು ಭಾಷಾಂತರದ ಕಾರ್ಯದಲ್ಲಿ ಪ್ರಾಚೀನ, ಮಧ್ಯ ಯುಗೀನ ಮತ್ತು ಆಧುನಿಕ ಭಾರತದ ಕಾವ್ಯವೇ ಮಹತ್ವದ ಸ್ಥಾನ ಹಿಂದಿನಿಂದಲೂ, ಮತ್ತು ಈಗಲೂ ಹೊಂದಿದೆ.

ಅಂಥವುಗಳಲ್ಲಿ ಇತ್ತೀಚೆಗೆ ಭಾಷಾಂತರಗೊಂಡು ಪ್ರಕಟವಾಗಿರುವ ಕೃತಿಯೆಂದರೆ ತಿರುವಳ್ಳುವರರ ಕುರಳ್ ಆಗಿದೆ. ತಮಿಳು ನಾಡಿನ ಈ ಪವಿತ್ರ ಕಾವ್ಯವನ್ನು ಏಷ್ಯಾ ಜನಾಂಗಗಳ ಸಂಸ್ಥೆಯ ಯೂರಿ ಗ್ಲಜೋವ್ ಮತ್ತು ಭಾರತೀಯ ವಿದ್ವಾಂಸರಾದ ಕೃಷ್ಣಮೂರ್ತಿಯವರು ಪ್ರಕಟಣೆಗೆ ಸಿದ್ಧಪಡಿಸಿದ್ದಾರೆ.

ಕುರಳ್ ಕಾವ್ಯವನ್ನು ರಷ್ಯನ್ ಭಾಷೆಗೆ ಸುಂದರ ಗದ್ಯದಲ್ಲಿ ಅನುವಾದಿಸಲಾಗಿದೆ, ಪದ್ಯದಲ್ಲಲ್ಲ. ಇದೇ ಸರಿಯಾದ ರೀತಿ ಏಕೆಂದರೆ ಭಾರತೀಯ ಕಾವ್ಯ ಭಾಷೆಯ ವೈಶಿಷ್ಟ್ಯವನ್ನೂ ಸೌಂದರ್ಯ ಕಲ್ಪನೆ, ಬಿಂಬಗಳನ್ನೂ ರಷ್ಯನ್ ಭಾಷೆಗೆ ಅನುವಾದಿಸುವುದು ಅಷ್ಟೊಂದು ಸುಲಭವಲ್ಲ.

ಕುರಳ್ ಕೃತಿ ಪ್ರಕಟಣೆಯೊಂದೇ ತಮ್ಮ ಕಾರ್ಯವೆಂದು ಯೂರಿ ಗ್ಲಜೋವ್ ಭಾವಿಸಲಿಲ್ಲ. ಆದಕ್ಕೊಂದು ಸಂಗ್ರಹೀತ ಪರಿಚಯ ಲೇಖನವನ್ನೂ ಉತ್ತಮ ವ್ಯಾಖ್ಯಾನವನ್ನೂ ನೀಡಿದ್ದಾರೆ. ಇದಕ್ಕೆ ಬೇಕಾಗಿ ಅವರು ಕೌಟಿಲ್ಯನ ಅರ್ಥಶಾಸ್ತ್ರ, ತೊಲ್‌ಕಪ್ಪಿಯಂ, ಶಿಲಪ್ಪದಿಕಾರಂ ಮತ್ತು ಮಣಿಮೇಕಲೈಗಳಂಥ ಮಹಾನ್ ಕೃತಿಗಳನ್ನು ಅಭ್ಯಸಿಸಿದರು. ಉಲ್ಲೇಖಿಸಿದ ಈ ಕೃತಿಗಳ ಜನ್ಮ ಯಾವಾಗ ಆಯಿತೆಂಬುದು ತಿಳಿದ ಸಂಗತಿ. ಈ ಕೃತಿಗಳಲ್ಲಿ ಕುರಳ್‌ನಲ್ಲಿಯ ಕೆಲವಾರು ಅಂಶಗಳು ಬರುತ್ತವೆ ಅಥವಾ ಕುರಳ್‌ನ ಪ್ರಸ್ತಾಪ ಬರುತ್ತದೆ. ಮೂಲ ಕೃತಿಗಳ ತುಲನಾತ್ಮಕ ಅಭ್ಯಾಸ ನಡೆಸಿ, ವಿಮರ್ಶಾತ್ಮಕ ಮತ್ತು ಆತ್ಮ ಚರಿತ್ರಾತ್ಮಕವಾದ ಅನೇಕಾನೇಕ ಲೇಖನಗಳನ್ನೂ ಪರಿಶೀಲಿಸಿ ಲೇಖಕರು ಪ್ರಾಯಶಃ ಕುರಳ್ ಕ್ರಿಸ್ತನಂತರ ೪ ಅಥವಾ ೫ನೇ ಶತಮಾನದಲ್ಲಿ ಬರೆಯಲ್ಪಟ್ಟಿರಬೇಕೆಂಬ ತೀರ್ಮಾನಕ್ಕೆ ಬರುತ್ತಾರೆ.

ಕುರಳ್ ಗ್ರಂಥವು ಬರೆಯಲ್ಪಟ್ಟ ಕಾಲದಲ್ಲಿಯ ಸಾಮಾಜಿಕ ಜೀವನವನ್ನೂ ಲೇಖಕರು ಇದರಲ್ಲಿ ಬಣ್ಣಿಸಿದ್ದಾರೆ. ಕುರಳ್ ಕೌಟಿಲ್ಯನ ಅರ್ಥಶಾಸ್ತ್ರದ ತಮಿಳು ಭಾಷಾನುವಾದವೆಂಬ ವಾದವನ್ನು ಒಪ್ಪಿ ಲೇಖಕರು ಮುಕ್ತಾಯದಲ್ಲಿ ಹೀಗೆ ಬರೆಯುತ್ತಾರೆ: "ತಮಿಳು ಜನರ ಜೀವನದ ಮೇಲೆ ಆಗಿರುವ ಪ್ರಭಾವವನ್ನು ನಾವು ಊಹಿಸಬಹುದಾದರೂ ತಮಿಳು ಸಾಹಿತ್ಯದ ಮೇಲೆ ಈ ಗ್ರಂಥದ ಪ್ರಭಾವ ಎಷ್ಟು ದೊಡ್ಡದೆಂದು ಅಂದಾಜು ಮಾಡುವುದು ಮಾತ್ರ ಕಷ್ಟ. ಇಂದಿಗೂ ಕೂಡ ತಮಿಳರ ನಾಡಿನಲ್ಲಿ ಆಗಾಗ ಅಷ್ಟೇಕೆ ಪದೇ ಪದೇ ಉಲ್ಲೇಖಿಸಲ್ಪಡುವ ಗ್ರಂಥ ಇದಾಗಿದೆ."

ತತ್ವವಿದ ಅಪೂರ್ವ ಪ್ರತಿಭೆ, ಅವರ ನಿಜವಾದ ಕಾವ್ಯಶಕ್ತಿ ಮತ್ತು ಮಾನವ ಬುದ್ಧಿ-ಮತ್ತೆಗಳು ಅಧಿಕಾರ ಪದವಿಗಳದ್ದಾಗಲೂ ಸಂಕುಚಿತತೆಯಿಂದ ಪಾರಾಗಿ ಓರ್ವ ಸಾಮಾನ್ಯ ಕೌಟುಂಬಿಕನಂತೆ ಪ್ರವಹಿಸಿರುವ ಈ ವಿಚಾರ ಧಾಟಿಯ ಪಾತ್ರ ತಮಿಳು ಸಾಹಿತ್ಯದಲ್ಲಿ ಎಂಥದೆಂಬುದನ್ನು ವಿವರಿಸಬಹುದಾಗಿದೆ.

"ಕುರಳ್ ಭಾರತೀಯ ವಿಚಾರ ಸರಣಿಯ ಕಾಂತಿಯಂತಿದೆ, ಭಾರತೀಯ ವಿದ್ವತ್ತತೆಯ ಉತ್ಕೃಷ್ಟ ಅಭಿವ್ಯಕ್ತಿಯಂತಿದೆ.

ಗ್ಲಜೋವರ ಭಾಷಾಂತರವು ವಾಚನಕ್ಕೆ ಅತ್ಯಂತ ಸುಲಭವಾಗಿದೆ. ಪ್ರಾಚೀನ ಭಾರತ ಸಾಹಿತ್ಯದ ಈ ಶ್ರೇಷ್ಠ ಕೃತಿ ಕೇವಲ ತಜ್ಞರನ್ನು ಮಾತ್ರವೇ ಆಕರ್ಷಿಸುವುದಿಲ್ಲ, ವಿಸ್ತೃತ ವಾಚಕ ವೃಂದದ ಆಸಕ್ತಿಗೂ ಪಾತ್ರವಾಗುತ್ತದೆ."

ಇತ್ತೀಚಿನವರೆಗೂ ಸೋವಿಯತ್ ವಾಚಕರಿಗೆ ಪ್ರಾಚೀನ ತಮಿಳು ಸಾಹಿತ್ಯದಂತೆ ಅರ್ವಾಚೀನ ತಮಿಳು ಸಾಹಿತ್ಯದ ಬಗ್ಗೆಯೂ ಸಾಕಷ್ಟು ತಿಳಿದಿರಲಿಲ್ಲ. ೨೦ನೇ ಶತಮಾನದಲ್ಲಿ ಪ್ರಖ್ಯಾತ ದಕ್ಷಿಣ ಭಾರತ ಕವಿಗಳಾಗಿದ್ದ ಶ್ರೀ ಸುಬ್ರಹ್ಮಣ್ಯ ಭಾರತಿಯವರ ಕವಿತಾ ಸಂಗ್ರಹವೊಂದು ಇತ್ತೀಚೆಗೆ ಪ್ರಕಟಿಸಲ್ಪಟ್ಟಿದೆ.

Navayuga

Announcing

Independence Day Special 1966

You are aware that the INDEPENDENCE SPECIAL of your favourite Weekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 19th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the state.

Kindly send your advertisement material on or before August 5th, 1966.

ADVERTISEMENT RATES

Full Page	... Rs. 200/-.	Back Cover Page	... Rs. 500/-
Half Page	... Rs. 100/-	Inside 1st Cover Page	... Rs. 400/-
Quarter Page	... Rs. 60/-	Inside 2nd Cover Page	... Rs. 300/-
One-eigth Page	...Rs. 35/-	Ordinary Full Page in double colours	... Rs. 300/-

MECHANICAL DATA

Paper size ... 15" × 10" (37·5 Cm. × 25 Cm.)   Size of type page ... 13" × 8" Half Crown (32.5 Cm. × 20 Cm.).

Date of Publication : 15—8—1966.

Kindly send the advt. matter to

The Advt. Manager,
NAVAYUGA,
P. B. No. 22, Udipi, S. K.

ಕವಲುದಾರಿ—ಕೆಂಪು ದೀಪ

ಸ್ವಯಂವರ ಪದ್ಧತಿ ಬೇಕು

ಮಧುರೈ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಸುದ್ದಿ—

ವಿಜ್ಞಾನದಲ್ಲಿ ಸ್ನಾತಕೋತ್ತರ ತರಗತಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ಸಂಬಂಧಿಸಿದ್ದು—

ಮುವತ್ತೆಂಟು ಅಭ್ಯರ್ಥಿಗಳಿಗೆ ಸ್ಥಳ ನಿಗದಿಯಾಗಿತ್ತು. ಅಲ್ಲಿ ಇಂಟರ್‌ವ್ಯೂಗೆ ಹಾಜರಾದವರು ಸುಮಾರು ಮೂನ್ನೂರು ಜನರು.

ವಿಶೇಷವೇನಿಲ್ಲ ... ಮದುವೆಯಾಗದ ಗಂಡಿಗೆ ಮನ್ನೂರು ಕುಮಾರಿಯರ ಹೆತ್ತವರು ಮುತ್ತಿಗೆ ಹಾಕುವುದಿಲ್ಲವೆ?

ಆದೂ ಸಾಲದೆ ಕೆಲವೊಮ್ಮೆ ಮುದ್ದಾದ ಕುಮಾರಿಯರೇ ದಾರಿಗಡ್ಡ ಬರುವುದೂ ಇದೆ.

—ಅಥವಾ ಹೀಗನ್ನಲೂ ಅವಕಾಶವಿದೆ: ಹತ್ತವರಿಂದ ದೂರವಾಗಿ ಕನ್ಯೆ ಬರುವಾಗಲೇ ಗಂಡು ಅಡ್ಡ ಕಡೆಯಬಾರದೇಕೆ?

—ಇಲ್ಲಿಂದಲೇ ನಮ್ಮ ಸಿನೇಮಾ ಆರಂಭವಾಗುತ್ತದೆ, ಇದೇ ರೀತಿಯಲ್ಲೇ ಮುಂದುವರಿಯುತ್ತದೆ, ಕೊನೆಗೆ...?

ಸಿನೇಮಾದಲ್ಲೇನೋ ಸುಖಾಂತವಾಗುವುದೂ ಇದೆ—ಇದು ಭಾರತೀಯ ಸುಖಾಂತ ಮನೋವೃತ್ತಿಯ ನಿರ್ಮಾಪಕರ ಕೈಗಳಲ್ಲಿ ಉಳಿದರೆ! ಅಲ್ಲಿಂದ ಜಾರಿ ಪಾಶ್ಚಾತ್ಯ ಪ್ರೇಮಿಯ ಕೈಸೇರಿತೆಂದರೆ ಮತ್ತೆ ಬಾವಿಯೋ, ಸಮುದ್ರವೋ ಗತಿ.

—ಈಗ ಅಷ್ಟು ದೂರಕ್ಕೂ ಹೋಗಬೇಕಾಗಿಲ್ಲ. ಮನೆಯೊಳಗಡೆ ಸ್ಪ್ರಿಂಗಿನ ತಲ್ಪದಲ್ಲಿ ಶಯನಾಸನದಲ್ಲಿಯೇ ಇಲಿಪಾಷಾಣ ಮೆಲ್ಲಬಹುದು, ಪೆಟ್ರೋಲ್ ಸೇವಿಸಬಹುದು... ಒಂದಲ್ಲ ನೂರು ಬಗೆಯವು ಇವೇನ್ನಿ.

—ಒಬ್ಬಾಗೆಳೆಯ ಅಂದಿದ್ದ— ಮಹಾಕವಿ ಕಾಳಿದಾಸ ಶಾಕುಂತಲನಾಟಕವನ್ನು ಅನಾವಶ್ಯಕ ಬೆಳೆಸಿದ—ಆಡುವ ನಟರಿಗೂ ಶ್ರಾಮತ್ರಯ—ನೋಡುವ ಪ್ರೇಕ್ಷಕರಿಗೂ ಬೇಸರ—

ಅವನ ಅಭಿಪ್ರಾಯವಿದು... ದುಷ್ಯಂತನಿಂದ ತಿರಸ್ಕೃತೆಯಾದ ಶಕುಂತಲೆ ಆತನಿಗೆ ... ಇಲ್ಲ ... ಮಾಡುವುದರ ... ದೇಶ ... ಉಪವನದ ಬಾವಿಗೆ ಹಾರಿ ಬಿಡಬೇಕಾಗಿತ್ತು—ಪ್ರೇಮಿಕನಿಗೆ ಮಗಳ ಮೇಲೆ ಮೋಹವಿದೆಯೆಂಬುದನ್ನು ತೋರಿಸಲೇ ಬೇಕೆಂದಿದ್ದರೆ, ಆಕೆಯ ಪ್ರಾಣವನ್ನು ಮೇನಕೆ ತನ್ನೊಂದಿಗೆ ಒಯ್ದು ಸ್ವರ್ಗಕ್ಕೇರಿಸಲಿ— ಆಗ ಶಕುಂತಲೆಯ ವ್ಯಕ್ತಿತ್ವಕ್ಕೆ ಪುಟ ಬರುತ್ತದೆ—

—ಆಕೆ ಇಂದಿನ ನವನಾಗರಿಕ ನವಯುವತಿಯರಿಗೆ, ದುಷ್ಯಂತ ಸುಶಿಕ್ಷಿತ ಯುವಕರಿಗೆ ಸರಿಯಾದ ಮಾರ್ಗದರ್ಶನ ನೀಡಿದಂತಾಗುತ್ತದೆ—

ಆದಕ್ಕಿಂತ ಮಿಗಿಲಾಗಿ ಶಕುಂತಲೆ ಆ ಕಾಲದಲ್ಲೇ ತೀವ್ರ ಪ್ರಗತಿವಾದಿಯಾಗುತ್ತಾಳೆ. ಆಕೆಯ ಪ್ರಗತಿವಾದಿತೆಯನ್ನು ಚಿತ್ರಿಸಿದ ಕಾಲಿದಾಸ 'ಮಹಾಕವಿ' ಯಲ್ಲ, ಪ್ರಗತಿವಾದಿ ಕವಿಯೆನಿಸುತ್ತಾನೆ. ನೋಬೆಲ್ ಪಾರಿತೋಷಕವೂ ಆತನಿಗೆ ಮರಣೋತ್ತರವಾಗಿಯಾದರೂ ದೊರಕುವ ಸಂಭವವಿತ್ತು—

—ಸುಮಾರು ಒಂದೂವರೆ ಸಾವಿರ ವರ್ಷಗಳ ನಂತರ ತನ್ನ ಕೃತಿಗೂ ತನಗೂ ರಾಜ್ಯ, ರಾಷ್ಟ್ರ, ವಿಶ್ವಮಟ್ಟದಲ್ಲಿ ಪುರಸ್ಕಾರ ದೊರೆಕದೂ ದೊರೆಯಬಹುದೆಂಬುದರ ಕಲ್ಪನೆ ಆತನಿಗೆ ಅಂದು ಹೊಳೆಯಲಿಲ್ಲ.

—ಅಲಕಾಪುರಿಯ ತನ್ನ ಪ್ರೇಯಸಿಗೆ ಸಂದೇಶವನ್ನು ಕಳಿಸಿದ ಯಕ್ಷನ ಕಲ್ಪನಾಲಹರಿ ಚಿತ್ರಿಸಿದ ಕಾಲಿದಾಸನಿಗೆ ತನ್ನ ಬಗೆಗೆ ಏನೂ ಹೊಳೆಯದೆ ಹೋಯಿತು—

ಇರಲಿ—

ಮಧುರೈ ವಿಶ್ವವಿದ್ಯಾಲಯದಲ್ಲಿ ನಡೆದ ವಧು ಪರೀಕ್ಷೆಯ ಬಗ್ಗೆ ಅನೇಕರ ಅಸಮಾಧಾನ— ಅಲ್ಲಿ ನಿಮ್ಮ ಜಾತಿ ಯಾವುದು? ಎಂಬ ಪ್ರಶ್ನೆಗೆ ಪ್ರಾಧಾನ್ಯವಿತ್ತು.

—ಇಂದು ಶಿಕ್ಷಣ ರಂಗದಲ್ಲಿ ಬಾಗಿಲು ಎಲ್ಲರಿಗೂ ತೆರೆಯಬೇಕು. ಜಾತಿ-ಮತ—ಕೋಮು ಭೇದಕ್ಕೆ ಅವಕಾಶವಿಲ್ಲ.

—ಬಾಗಿಲು ತೆರೆದೇ ಇತ್ತು—ಯಾರಾದರೂ ಒಳ ಬರಬಹುದಾಗಿತ್ತು. ಆದರೆ, ಕೂತುಕೊಳ್ಳುವ ಅವಕಾಶ ಮಾತ್ರ ವಿಶಿಷ್ಟ ಜಾತಿಯವರಿಗೆ?

—ಇದಕ್ಕೆ ವಿಶ್ವವಿದ್ಯಾಲಯದವರ ಸ್ಪಷ್ಟೀಕರಣ— ಪರಿಶಿಷ್ಟ ವರ್ಗದವರಿಗೆ ಸಾಮಾಜಿಕ ನ್ಯಾಯ ದೊರಕಿಸಲು ಜಾತಿಯನ್ನು ಕೇಳಲಾಯಿತು.

—ಇನ್ನು ಆಯ್ಕೆ ಮಾಡುವಾಗ?

—ಕೆಲವರನ್ನು ಶಿಕ್ಷಣ ನಿಲ್ಲಿಸಿ ಈಗ ಮತ್ತೆ ಮುಂದುವರಿಸ ಬಯಸಿದ್ದರಿಂದ ಆಯ್ಕೆ ಮಾಡಲಿಲ್ಲ.

—ಕೆಲವರು ಅವಶ್ಯಕ ಗುಣ ಪಡೆಯಲಿಲ್ಲ.

—ಹೆಚ್ಚಿನವರು ವಧುಪರೀಕ್ಷೆಯಲ್ಲಿ ತೃಪ್ತಿಕರವಾಗಿ ವರ್ತಿಸಲಿಲ್ಲ.

—ನಿಯಮವಿದೆ—ದಾಖಲೆಗಳಲ್ಲಿ—ಆಚರಣೆಯಲ್ಲಿ?

—ತಮಗೆ ಬೇಕಾದವರನ್ನು ಆಯ್ದುಕೊಳ್ಳುವ ಗೂಢ ತಂತ್ರ—

—ಇದು ಮಧುರೈ ವಿಶ್ವವಿದ್ಯಾಲಯಕ್ಕೆ ಮಾತ್ರ ಬಡಿದ ರೋಗವಲ್ಲ—ಎಲ್ಲೆಡೆಯೂ ಹರಡಿದ ಸೋಂಕು ಜಾಡ್ಯ.

—ಇದು ಇರುವವರೆಗೆ ಭಾರತದ ಉದ್ಧಾರವಿಲ್ಲ—

ದೇವಾಲಯದಲ್ಲಿ ಎಲ್ಲರನ್ನೂ ಒಳಬಿಡುವ ಚಳವಳ ಯಶಗಳಿಸುತ್ತಿದೆ.—ಸರಸ್ವತಿಯ ದೇವಾಲಯದಲ್ಲಿ ಮಾತ್ರ ವಿಶಿಷ್ಟ ಹಿತಾಸಕ್ತಿಯ ಗುಂಪು ಮಾತ್ರ ಕಾರಬಾರು ಮಾಡುತ್ತಿದೆ.

—ಇದು ನಮ್ಮ ಭಾರತ, ಸರ್ವರಿಗೂ ಸಮಾನಾವಕಾಶ ನೀಡುವ ಘಟನೆ ಪಡೆದಿರುವ ಪ್ರಜಾಸತ್ತಾತ್ಮಕ ಭಾರತ! ನಮಗಿಂದು ಬೇಕು ಸ್ವಯಂವರ—ಪರೀಕ್ಷೆಯಲ್ಲ.

—ಕವಿಪಾಲು.

ಎಲ್ಲೆಲ್ಲಿ ಏನೇನು?

ಪೂರ್ಣಪ್ರಜ್ಞ ಕಾಲೇಜ್ ಯೂನಿಯನ್

ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜ್ ಯೂನಿಯನಿನ ಚುನಾವಣೆಯು ಜರಗಿ ಶ್ರೀ ಪಿ. ವಿಜಯ ಕುಮಾರ ಹೆಗ್ಡೆಯವರು ಯೂನಿಯನಿನ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವರು. ಲಲಿತಕಲಾ ಸಂಘದ ಕಾರ್ಯದರ್ಶಿಗಳಾಗಿ ಶ್ರೀ ಮಹಾಬಲೇಶ್ವರ ಅಡಿಗರು, ಭಾಷಾ ಸಂಘದ ಕಾರ್ಯದರ್ಶಿಗಳಾಗಿ ಶ್ರೀ ರಾಜೇಂದ್ರ ಆಚಾರ್ಯರು, ಸ್ಪೋರ್ಟ್ಸ್ ಮತ್ತು ಗೇಮ್ಸ್ ಕಾರ್ಯದರ್ಶಿಗಳಾಗಿ ಶ್ರೀ ರತ್ನಾಕರ ಶೆಟ್ಟರು, ಮ್ಯಾಗಜಿನ್ ಕಾರ್ಯದರ್ಶಿಗಳಾಗಿ ಶ್ರೀ ರಮೇಶರಾಯರೂ, ಹೆಣ್ಣುಮಕ್ಕಳ ಪ್ರತಿನಿಧಿಯಾಗಿ ಕು. ಮೇರಿ ಶ್ರೀವಿಯ ರಬೆಲ್ಲೊ ರವರೂ ಆರಿಸಲ್ಪಟ್ಟಿರುವರು.

ಎನ್. ಸಿ. ಸಿ. ತರಬೇತಿ

ಮಣಿಪಾಲ, ಜು. 21—ಕಾಲೇಜುಗಳಲ್ಲಿ ಎನ್. ಸಿ. ಸಿ. ತರಬೇತಿ ಕೊಡುವುದರ ವಿವಿಧ ಅಂಶಗಳನ್ನು ಇಂದಿಲ್ಲಿ ಸೇರಿದ್ದ ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಪ್ರಿನ್ಸಿಪಾಲರುಗಳು ಹಾಗೂ ಎನ್. ಸಿ. ಸಿ. ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಲಾಯಿತು.

ಎಕಾಡೆಮಿಯ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ|| ಟಿ. ಎಂ. ಎ. ಪೈಯವರುಮಾತನಾಡಿ ಎನ್. ಸಿ. ಸಿ. ಯನ್ನು ಸದುಪಯೋಗಪಡಿಸಿಕೊಂಡು ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ರೂಢಿಸಬೇಕೆಂದರು.

ಎನ್. ಸಿ. ಸಿ ಯ ಗ್ರೂಪ್ ಕಮಾಂಡರ್ ಲೆ| ಕ| ಬಿ. ಸಿ. ಜೋಶಿಯವರು ಮಾತನಾಡಿ ಸಂಬಂಧಪಟ್ಟವರೆಲ್ಲ ಎನ್. ಸಿ. ಸಿ. ತರಬೇತಿ ಉಪಯುಕ್ತ ಹಾಗೂ ಅನುಕೂಲ ಆಗುವಂತೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸಾರ್ವಜನಿಕರ ಅವಗಾಹನೆಯ ಬಗ್ಗೆ

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಜುಲಾಯಿ 1966ಕ್ಕೆ ಈ ಕೆಳಗಿನ ಪರಿಮಾಣದ ಆಹಾರ ಸಾಮಗ್ರಿಗಳನ್ನು ಬಿಡುಗಡೆ ಮಾಡಲಾಗಿದೆ.

ಸಕ್ಕರೆ	6712	ಕ್ವಿಂಟಾಲುಗಳು.
ಮೈದ	874 (40 ಕೆ. ಜಿ. ಯ ಚೀಲಗಳಲ್ಲಿ)	
ಇಟೇಲಿಯನ್ ಮೈದ	640	ಕ್ವಿಂಟಾಲುಗಳು.
ಆಟ್ಟ	228	ಕ್ವಿಂಟಾಲುಗಳು
ಗೋದಿ	8612	"
ಕೇಸರಿ ಜೋಳ	8200	"
ಕಡ್ಲೆ	515	"
ಕಡ್ಲೆಬೇಳೆ	1255	"

ಮಂಗಳೂರು ನಗರದಲ್ಲಿ ಪ್ರತಿಯೊಬ್ಬರಿಗೆ ಸಕ್ಕರೆಯನ್ನು 800ಗ್ರಾಮ್ ನಂತೆ ಗೋದಿಯನ್ನು ವಯಸ್ಕರಿಗೆ 3 ಕೆ. ಜಿ ಯಂತೆ ಮತ್ತು ಮಕ್ಕಳಿಗೆ 1½ ಕೆ. ಜಿ. ಯಂತೆ, ಕೇಸರಿಜೋಳವನ್ನು ವಯಸ್ಕರಿಗೆ 2 ಕೆ. ಜಿ. ಯಂತೆ ಮತ್ತು ಮಕ್ಕಳಿಗೆ 1 ಕೆ. ಜಿ. ಯಂತೆ, ಕಡ್ಲೆ, ಮೈದ, ಮತ್ತು ಕಡ್ಲೆಬೇಳೆಗಳನ್ನು ಕ್ರಮವಾಗಿ ವಯಸ್ಕರಿಗೆ 250, 400 ಮತ್ತು 250 ಗ್ರಾಮ್‌ನಂತೆಯೂ ಮಕ್ಕಳಿಗೆ 125, 200 ಮತ್ತು 125ಗ್ರಾಮ್‌ನಂತೆಯೂ ನ್ಯಾಯಬೆಲೆಯ ಅಂಗಡಿಗಳ ಮೂಲಕ ವಿತರಣೆ ಮಾಡುವ ಏರ್ಪಾಟು ಮಾಡಲಾಗಿದೆ. ಗ್ರಾಹಕರು ಅವುಗಳನ್ನು ಪಡೆಯಬಹುದೆಂದು ಕೋರಲಾಗಿದೆ.

ಸಹಿ/-ಹೆಚ್. ಎಲ್. ನಾಗೇಗೌಡ
ಜಿಲ್ಲಾ ಡೆಪ್ಯೂಟಿ ಕಮಿಶನರವರು.

ಶಾಂತಪರಿಸ್ಥಿತಿ

ಮಣಿಪಾಲ, ಜು. ೨೨—ಅಧಿಕಾರಿಗಳ ಜಾಗ್ರತೆ ಹಾಗೂ ಶೀಘ್ರ ಕ್ರಮಗಳಿಂದಾಗಿ ಇಲ್ಲಿ ಕಾಲೇಜು ವಿದ್ಯಾರ್ಥಿಗಳೊಳಗೆ ನಡೆಯಬಹುದಾಗಿದ್ದ ಘರ್ಷಣೆ ತಪ್ಪಿದಂತಾಗಿದೆ.

ಅನಗತ್ಯ ಘಟನೆಗಳು ಸಂಭವಿಸುವುದನ್ನು ತಪ್ಪಿಸುವುದಕ್ಕಾಗಿ ಅಧಿಕಾರಿಗಳು ಕಸ್ತೂರಬಾ ಮೆಡಿಕಲ್ ಕಾಲೇಜು ಮತ್ತು ಮಣಿಪಾಲ ಇಂಜಿನಿಯರಿಂಗ್ ಕಾಲೇಜನ್ನು ಸ್ವಲ್ಪ ಕಾಲ ಮುಚ್ಚಿದ್ದಾರೆ. ಅಧಿಕಾರಿಗಳು ವಿದ್ಯಾರ್ಥಿಗಳಿಗೆ ರಕ್ಷೆಕೊಡುವುದಾಗಿ ಭರವಸೆ ಇತ್ತಿದ್ದಾರೆ.

ಉಪ ಪೋಲೀಸ್ ಮುಖ್ಯಾಧಿಕಾರಿ ಶ್ರೀ ಬ್ರೌನ್‌ರವರ ಕ್ರಮದಿಂದ ಶಾಂತವಾಗಿರುವ ಪರಿಸ್ಥಿತಿಯನ್ನು ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡ, ಅಸಿಸ್ಟೆಂಟ್ ಕಮಿಷನರ್ ಶ್ರೀ ಅಲೆಕ್ಸಾಂಡರ್ ಮತ್ತು ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ಶ್ರೀ ಪೆರೇರಾರವರು ನಿನ್ನೆ ಪರಿಶೀಲಿಸಿದರು.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ

ಋತುಭೇದ ಮೊದಲಿಲ್ಲದೆ

ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು:
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು: 126 ಬೆಲೆ: ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಭಾರತದ ಮಣ್ಣು — ನನಗದು ಹೊನ್ನು!

(ಎರಡನೇ ಪುಟದಿಂದ)

ನೇರವಾಗಿ ವಿದ್ಯುದ್ದೀಪಗಳಿಂದ ಬೆಳಗುತ್ತಿದ್ದ ಆಸ್ಪತ್ರೆಯ ಸ್ಪೆಷಲ್ ಮೆಟರ್ನಿಟೀ ವಾರ್ಡಿನ ಕೋಣೆಯೊಂದರ ಬಳಿಗೆ ತಲಪಿ ಬಾಗಿಲನ್ನು ನಿಧಾನವಾಗಿ ಬಡಿಯಿತು. ಆದರೆ ಬಾಗಿಲು ತೆರೆಯಲಿಲ್ಲ.

"ಸುಬ್ಬು.... ಸುಬ್ಬು...." ಎಂದು ಕರೆದನು.

ಬಾಗಿಲು ತೆರೆಯಿತು.

'ಓ, ನೀನು! ಏನು ಸಮಾಚಾರ?' ಎಂದು ಆಶ್ಚರ್ಯದಿಂದ ಸುಬ್ಬಯ್ಯನು ಕೇಳಿದನು.

"ಹೌದು, ನಾನು ನಿನ್ನನ್ನು ನೋಡಲಿಕ್ಕೆಂದೇ ಬಂದಿರುವೆ. ವೆಂಗುಡ್! ಯು ಆರ್ ರೆಡಿ ಏಸ್ ಯೆ ಆರ್ಮೀ ಆಫೀಸರ್! ನಿಜವಾಗಿಯೂ ನೀವು ಸೈನ್ಯಾಧಿಕಾರಿಯೇ!' ಎಂದು ತಿಮ್ಮುವು ನಗುತ್ತಾ ನುಡಿದನು. ಆ ನಗೆಯ ಮಾತಿನಲ್ಲಿ ವ್ಯಸನವೂ ತುಂಬಿತ್ತು.

"ರಾಧ, ನಾನು ತಿಮ್ಮುವಿನೊಡನೆ ಎಲ್ಲಾ ಹೇಳಿದ್ದೇನೆ. ಅವನು ನಿನಗೆ ಎಲ್ಲಾ ವಿಚಾರದಲ್ಲೂ ಸಹಕರಿಸುತ್ತಾನೆ. ಧೈರ್ಯವಾಗಿರು" ಎಂದು ಹೇಳಿ ತಿಮ್ಮುವನ್ನುದ್ದೇಶಿಸಿ—'ತಿಮ್ಮು, ನಾನು ಎಷ್ಟು ಹೇಳಿದರೂ ಅವಳು ಅಳುತ್ತಾಳೆ, ಹೆಂಗಸು ಹೆಂಗಸೇ. ಹೋದ ಇಡಿ ರಾತ್ರೆ ಅವಳಿಗೆ ನಿದ್ರೆಯೇ ಇಲ್ಲ.'

ಚಾಪೆಯಲ್ಲಿ ಕುಳಿತಿದ್ದ ರಾಧ ತಲೆ ಕೆಳಗೆ ಮಾಡಿದಳು.

"ಟೈಮ್ ಆಯಿತು. ಇನ್ನು ಹೊರಡುವುದು ಒಳ್ಳೆಯದು" ಎನ್ನುತ್ತಾ ತಿಮ್ಮುವು ಸುಬ್ಬಯ್ಯನ ಲಗ್ಗೇಜನ್ನು ಹೊರಗಿಂಸಿದನು.

"ಹೌದು" ಎನ್ನುತ್ತಾ ಸುಬ್ಬಯ್ಯನು ತನ್ನ ತಲೆಗೆ ಹ್ಯಾಟನ್ನು ಸಿಕ್ಕಿಸಿ, ತನ್ನ ಅತ್ತೆಯೊಂದಿಗೆ—"ನಾನು ಹೋಗಿ ಬರುತ್ತೇನೆ. ಏನೂ ಚಿಂತಿಸ ಬೇಡಿ. ಯಾವ ಸಂದರ್ಭದಲ್ಲೂ ನನ್ನ ಮಿತ್ರ ತಿಮ್ಮುವು ನಿಮಗೆ ಸಹಕಾರಿಯಾಗಿದ್ದಾನೆ. ನಾನು ತಲಪಿದೊಡನೆಯೇ ಪತ್ರ ಹಾಕುವೆನು ಅಂತೆಯೇ ಇಲ್ಲಿನ ಕ್ಷೇಮ ಸಮಾಚಾರಗಳನ್ನು ನನ್ನ ಮಿತ್ರ ತಿಮ್ಮು ತಿಳಿಸುವನು. ನನಗೀಗ ಆಶೀರ್ವದಿಸಿರಿ" ಎಂದು ಹೇಳಿ ಅತ್ತೆಯ ಪಾದಗಳನ್ನು ಮೂರುಬಾರಿ ಮುಟ್ಟಿದನು, ತನ್ನ ಅತ್ತೆಯ ಕಾಲುಗಳಿಗೆರಗಿ ಏಳುತ್ತಿದ್ದಂತೆಯೇ ಸುಬ್ಬಯ್ಯನ ಕಣ್ಣುಗಳಲ್ಲಿ ನೀರು ತುಂಬಿತ್ತು. ಅತ್ತೆಯೂ ಕಣ್ಣೀರಿನೊಂದಿಗೆ ಆಶೀರ್ವಾದ ಮಾಡಿದಳು. ರಾಧಳ ಕಡೆಗೆ ತಿರುಗಿ 'ರಾ....ರಾಧಾ, ಎನ್ನುತ್ತಾ ಅವಳ ಎರಡೂ ಕೈಗಳನ್ನು ಹಿಡಿದು ರಾಧಾ ಇಲ್ಲಿ ನೋಡು....' ಎಂದನು ಸುಬ್ಬಯ್ಯ.

ರಾಧಳು ಅಳುತ್ತಾ ಮುಖವನ್ನೆತ್ತಿಯೂ ನೋಡಲಿಲ್ಲ.

"ರಾಧಾ, ನೋಡು ನನ್ನನ್ನೊಮ್ಮೆ. ನಗುತ್ತಾ ನನ್ನನ್ನು ಕಳುಹಿಸು. ನನ್ನ ಹೊರಡುವ ಈ ಸಂದರ್ಭದಲ್ಲಿ ಅಳಬೇಡ. ನಾನು ಭಾರತ ಮಾತೆಯ ಪುತ್ರ! ಭಾರತ ಭೂಮಿ ಪವಿತ್ರ ಭೂಮಿ.! ನನಗೆ ಹೋಗಗೊಡು'

ಆಗ ರಾಧಳ ತಾಯಿಯೂ ಅಳುವುದನ್ನು ನಿಲ್ಲಿಸಿ ಕಲ್ಲು ಮನಸ್ಸುಮಾಡಿ—

'ಹೌದು ಮಗಳೇ, ಅತ್ತು ಪ್ರಯೋಜನವೇನು? ಅವನ ಪಾದಗಳಿಗೆರಗಿ ಆಶೀರ್ವಾದ ಪಡೆ!" ಎಂದಳು.

ರಾಧಳು ದುಃಖಿಸುತ್ತಾ ತನ್ನ ಗಂಡನ ಪಾದಗಳಿಗೆರಗಿ ಪಾದವನ್ನು ಮೂರು ಬಾರಿ ಮುಟ್ಟಿದಳು. ಸುಬ್ಬಯ್ಯನು ತನ್ನ ಕೈಯ್ಯನ್ನಾಧರಿಸಿ ಅವಳನ್ನು ಎತ್ತಿ ಹಿಡಿದು ಪುನಃ ಹಾಸಿಗೆಯಲ್ಲಿ ಮಲಗಿಸಿದನು.

ಸ್ವಲ್ಪ ಹೊತ್ತು ಗಂಭೀರ ಮೌನವು ಆವರಿಸಿತು. ಪ್ರತಿಯೊಬ್ಬರೂ ಮಾತನಾಡಲು ಬಯಸುವವರೇ ಆದರೂ ಗಂಭೀರ ಮೌನವು ಆವರಿಸಿತು. ಕೊನೆಗೆ ತಿಮ್ಮು ಕೈ ಗಡಿಯಾರವನ್ನು ನೋಡಿ "ಓ, ಮೈಗಾಡ್! ಹನ್ನೊಂದು ಹೊಡೆಯಿತು! ಹರೀ ಅಪ್" ಎಂದೊಡನೆಯೇ ಸುಬ್ಬಯ್ಯನು ನಿದ್ರೆಯಿಂದ ಎಚ್ಚತ್ತವನಂತೆ ಅವರೆಲ್ಲರನ್ನೂ ಕೂಡಲೇ ಬೀಳ್ಕೊಂಡು ತಿಮ್ಮುವನ್ನು ಕೂಡಿಕೊಂಡು ಬಸ್ ಸ್ಟ್ಯಾಂಡಿಗೆ ಧಾವಿಸಿದನು.

ಬಸ್ಸಿನೊಳಕ್ಕೆ ಹೋಗುವ ಮೊದಲು ಸುಬ್ಬಯ್ಯನು ತಿಮ್ಮುವಿನ ಕೈಯನ್ನು ಹಿಡಿದು: 'ತಿಮ್ಮು, ನೀನೊಬ್ಬನೇ ನನಗೆ ಸಹಾಯಕ. ಮರೆಯಬೇಡ. ನನಗೇನಾದರೂ ಆದಲ್ಲಿ ನೀನೇ... ದಯಮಾಡಿ.... ಕಾಪಾಡು...'

'ಛೆ...' ಎನ್ನುತ್ತಾ ತಿಮ್ಮುವು ಅರ್ಧದಲ್ಲೇ ಮಾತನ್ನು ತಡೆದನು. 'ದೇವರ ದಯೆಯಿಂದ ಹಾಗಾಗಲಾರದು. ಏನೇನು ಮಾತನಾಡದಿರು" ಎಂದು ಹೇಳಿದನು ತಿಮ್ಮು ವ್ಯಸನದಿಂದ.

"ಹಾಗಲ್ಲ. ನಾನು ನನಗಾಗಿ ಚಿಂತಿಸಿಲ್ಲ. ನನ್ನ......"

'ಸರಿ....ನನಗೆ ತಿಳಿಯಿತು. ನನ್ನ ಮೇಲೆ ಇನ್ನೂ ಭರವಸೆ ಇಲ್ಲವೇ?" ಎನ್ನುತ್ತಿರಲು ಬಸ್ಸು ಹೊರಡುವ ಸೂಚನೆಗೆಂದು ಡ್ರೈವರನು ಹಾರ್ನ್ ಮಾಡತೊಡಗಿದನು. ಸುಬ್ಬಯ್ಯನು ತಿಮ್ಮುವಿಗೆ ಶೇಕ್‌ಹ್ಯಾಂಡ್ ಕೊಟ್ಟು, ಬಸ್ಸಿನೊಳಗೆ ಹೋಗಿ ಕುಳಿತಂತೆಯೇ ಬಸ್ಸು ಹೊರಡಲನುವಾಯಿತು. ತಿಮ್ಮು ಕೈ ಮೇಲೆ ಮಾಡುತ್ತಾ, ಶುಭವನ್ನು ಕೋರುತ್ತಾ, "ಗುಡ್‌ಲಕ್ ಮೈ ಬ್ರೇವ್ ಬಾಯ್! ವಿಶ್ ಯು ಸಕ್ಸೆಸ್" ಎಂದನು.

"ಥ್ಯಾಂಕ್ ಯು ಮೈ ಫ್ರೆಂಡ್! ನನ್ನ ದೇಹದಲ್ಲಿ ರಕ್ತವಿರುವ ತನಕ ವಿರೋಧಿಗಳೊಡನೆ ಹೋರಾಡಿ ಜಯಶೀಲನಾಗಿ ಬರುವೆ" ಎಂದು ಸುಬ್ಬಯ್ಯನು ಹೇಳುತ್ತಲೇ ಬಸ್ಸು ವೇಗವಾಗಿ ಹೊರಟಿತು. ಕಣ್ಮರೆಯಾಯಿತು.

o o o

ಯುದ್ಧದ ವಾರ್ತೆಗಳು ಆಗಿಂದಾಗ್ಗೆ ಪತ್ರಿಕೆಗಳಲ್ಲಿ, ರೇಡಿಯೋದಲ್ಲಿ ಬರತೊಡಗಿದವು. ಭಾರತದ ಸೈನಿಕರು ಬಹಳ ವೀರತನದಿಂದ ಹೋರಾಡುತ್ತಿದ್ದರು. ವಿರೋಧಿಗಳ ಹಲವಾರು ಪೇಟನ್ ಟ್ಯಾಂಕ್‌ಗಳು ನಮ್ಮ ಸೈನಿಕರಿಂದ ನಾಶಗೊಂಡುವು.

ಇತ್ತ ರಾಧಳಿಗೆ ಪ್ರಸವ ವೇದನೆ ಹೆಚ್ಚಿತು. ಮಧ್ಯಾಹ್ನ ಗಂಟೆ ಒರಕ್ಕೆ ರಾಧಳ ಸಮೀಪ ತಿಮ್ಮು, ತಿಮ್ಮುವಿನ ಹೆಂಡತಿ, ರಾಧಳ ಅತ್ತೆ ಎಲ್ಲಾ ಇದ್ದರು. ಅಂದಿಗೆ ಸುಬ್ಬಯ್ಯನು ಹೋಗಿ ೬ ದಿನಗಳು ಕಳೆದಿದ್ದುವು. ಮೊದಲಿನ ದಿನವೇ ತಾನು ಕ್ಷೇಮದಿಂದ ತಲಪಿರುವ ಪತ್ರವು ಬಂದಿತ್ತು. ರಾಧಳು ತನ್ನ ಪತಿಯ ಕುರಿತೇ ಆಲೋಚಿಸುತ್ತಿದ್ದಳು. "ಅಯ್ಯೋ, ನನ್ನ ಪತಿಯವರು ಈಗ ಯುದ್ಧ ಮಾಡುತ್ತಿದ್ದಾರೋ.... ಏನಾಗುವುದೋ.... ದೇವರೇ... ಕಾಪಾಡು...." ಇತ್ಯಾದಿ ಹೇಳುತ್ತಲೇ ಇದ್ದಳು. ಅಷ್ಟರಲ್ಲಿ ಲೇಡಿ ಡಾಕ್ಟರು ಬಂದು ಪರೀಕ್ಷಿಸಿ— "ನಾಳೆ ಬೆಳಗ್ಗಿನ ಒಳಗೆ ಪ್ರಸವವಾಗಲಿದೆ" ಎಂದರು. ತಿಮ್ಮು ಹಾಗೂ ಅವನ ಹೆಂಡತಿ ಇಬ್ಬರೂ ಮನೆಗೆ ಹಿಂತಿರುಗಿದರು.

ಅಂದು ರಾತ್ರಿ ೧೦.೩೦ರ ಸಮಯ. ತಿಮ್ಮುವು ಆಲ್ ಇಂಡಿಯಾ ರೇಡಿಯೋವನ್ನು ಆಲಿಸುತ್ತಿದ್ದನು. ಇಂಡಿಯಾದ ಸೈನಿಕರಿಂದ ಹಲವು ಟ್ಯಾಂಕ್‌ಗಳು ನಾಶ ಮಾಡಲ್ಪಟ್ಟುವು. ತುಂಬಾ ವಿರೋಧಿ ಸೈನಿಕರು ಬಂಧಿಸಲ್ಪಟ್ಟರು. ಕೊನೆಗೆ ರೇಡಿಯೋ ಹೀಗೆಂದಿತು. 'ಇಲ್ಲಿನ ವಾರ್ತೆಗಳು ಮುಗಿಯುವ ಮೊದಲು ಇನ್ನೊಂದು ಪ್ರಾಮುಖ್ಯ ವಿಚಾರವಿದೆ...'

ಇದನ್ನು ಕೇಳಿ ತಿಮ್ಮುವು ಕಿವಿ ನಿಮಿರಿಸಿ ಕುತೂಹಲದಿಂದ ರೇಡಿಯೋದ ಸಮೀಪಕ್ಕೆ ಹೋಗಿ ಆಲಿಸತೊಡಗಿದನು. ಅಷ್ಟರಲ್ಲೇ ಹೊರಗಿನಿಂದ ಯಾರೋ ಬಾಗಿಲು ಬಡಿಯತೊಡಗಿದರು. ತಿಮ್ಮುವಿನ ಎದೆಯು ಹೆದರಿಕೆಯಿಂದ ಬಡಬಡನೆ ಬಡಿಯತೊಡಗಿತು. ಯಾರಾಗಿರಬಹುದು? ಎಂದು ಸ್ವಲ್ಪಹೊತ್ತು ಯೋಚಿಸಿದನು. ಆಸ್ಪತ್ರೆಯಿಂದ ಯಾರೋ ಬಂದಿರಬೇಕೆಂದು ನಿರ್ಧರಿಸಿ ಕೂಡಲೇ ಬಾಗಿಲು ತೆರೆದನು, ಹೊರಗಿನ ವ್ಯಕ್ತಿಯು "ಟೆಲಿಗ್ರಾಮ್" ಎಂದಿತು. ನಡುಗುತ್ತಿರುವ ಕೈಗಳಿಂದ ತಿಮ್ಮುವು ಸಹಿಹಾಕಿ ಅತನನ್ನು ಕಳುಹಿಸಿದನು. ತಿಮ್ಮುವಿನ ಹೆಂಡತಿಯೂ ಓಡೋಡಿಬಂದಳು. "ಟೆಲಿಗ್ರಾಮ್!" ಎನ್ನುತ್ತಾ ಒಮ್ಮೆಲೇ ಭಯದಿಂದ ನೋಡತೊಡಗಿದಳು.

"ಹೌದು" ಎನ್ನುತ್ತಾ ತಿಮ್ಮು ಟೆಲಿಗ್ರಾಮನ್ನು ಬಿಡಿಸಿದನು. ಅದು ನಮ್ಮ ಸಾಯಿಕಾನಿಂದಲೇ ಬಂದ ಟೆಲಿಗ್ರಾಮ್ ಆಗಿತ್ತು. ತನ್ನ ಹೆಂಡತಿಯ ಯೋಗ ಕ್ಷೇಮದ ಕುರಿತು ಅದರಲ್ಲಿ ಕೇಳಿದ್ದನು, ಅಷ್ಟೆ.

o o o

ಮರುದಿನ ಬೆಳಗ್ಗೆ ನಸುಕಿನಲ್ಲೇ ಎದ್ದು ಆಸ್ಪತ್ರೆಗೆ ತ್ವರಿತವಾಗಿ ಹೋದನು. ಅಂದು ರಾಧಳು ಹೆರಿಗೆಯಾಗಿರಬೇಕಿದ್ದ ದಿನ. ಕುತೂಹಲ, ಗಲಿಬಿಲಿ, ಭಯಗಳಿಂದ ತಿಮ್ಮುವು ರಾಧಳಿರುವ ವಾರ್ಡ್‌ನ ಬಳಿಗೆ ಬಂದನು. ಅಲ್ಲಿ ವಾರ್ಡ್ ಬಾಯ್ ನಿಂತಿದ್ದನು. ಏನು ಸಮಾಚಾರ?" ಎಂದನು ತಿಮ್ಮು.

"ಮತ್ತಿನ್ನೇನು? ಬಹಳ ಕಷ್ಟ ತರದ ಓಪರೇಶನಿಂದಾಗಿ ರಾಧಳು ಗಂಡು ಮಗುವನ್ನು ಹಡೆದಳು....."

"ಓಪರೇಷನ್!"

"ಹೌದು. ಆದರೆ ಗಾಬರಿ ಪಡಬೇಕಾಗಿಲ್ಲ. ಮಗುವೂ ತಾಯಿಯೂ ಕ್ಷೇಮವಾಗಿದ್ದಾರೆ." ಎಂದನಲ್ಲದೆ ಈ ವಿಚಾರವನ್ನು ಅವಳ ಗಂಡನಿಗೆ ಕೂಡಲೇ ವಯರ್ ಮಾಡಲು ಹೇಳಿದನು.

ಡಾಕ್ಟರರೂ ಬಂದು ತಿಮ್ಮುವಿನೊಡನೆ 'ತಾಯಿಯೂ, ಮಗುವೂ ಕ್ಷೇಮದಲ್ಲಿದ್ದಾರೆ.' ಎಂದಳು.

ಯುದ್ಧರಂಗದಲ್ಲಿದ್ದ ಸುಬ್ಬಯ್ಯನಿಗೆ ತಿಮ್ಮುವು ಕಳುಹಿಸಿದ ಟೆಲಿಗ್ರಾಮ್ ಸಿಕ್ಕಿತು. 'ಶುಭವಾರ್ತೆ! ನಿನಗೆ ಪುತ್ರ ಜನಿಸಿದ್ದಾನೆ! ಆಶೀರ್ವದಿಸಬೇಕು." ಎಂದಿತ್ತು. ಸುಬ್ಬಯ್ಯನು ಆನಂದದಿಂದ "ಭಾರತ್ ಮಾತಾಕೀ ಜೈ! ಜೈ! ಜವಾನ್" ಎಂದು ಹರ್ಷೋದ್ಗಾರ ಮಾಡಿದನು.

[ನ್ಯೂಮೆಗಜಿನ್ ಕೃಪೆಯಿಂದ]



"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. C[illegible]–4.17–4/65–66 dated 26–4–1966.

NAVAYUGA 4—8—1966
Registered with the Registrar
of News Papers for India
under No. R. N. 3546/'57

REGD. No. M. G. 176
LICENCE No. 31
Licensed to Post without Prepayment

ಕವಲುದಾರಿ—ಕೆಂಪು ದೀಪ

ಎಲ್ಲರಿಗೂ ಉಳಿತಾಯದ ಹುಚ್ಚು

ಇಂದು ನಮ್ಮ—ನಮ್ಮ ಸರಕಾರದ—ಗುರಿ ಉಳಿತಾಯ.

ಪ್ರಧಾನಿ ಇಂದಿರಾ ಗಾಂಧಿಯವರು ತನ್ನ ಸರಕಾರದ ವೆಚ್ಚದಲ್ಲಿ ಸೇ. ೧೦ರಷ್ಟು ಉಳಿತಾಯ ಸಾಧಿಸುವ ನಿರ್ಧಾರ ಮಾಡಿದ್ದಾರೆ. ವಿವಿಧ ರಾಜ್ಯಗಳ ಮುಖ್ಯ ಮಂತ್ರಿಯವರಿಗೂ ಪತ್ರ ಬರೆದು ಈ ಗುರಿಯನ್ನು ಸಾಧಿಸುವಂತೆ ವಿನಂತಿಸಿದ್ದಾರೆ. ನವದೆಹಲಿಯಲ್ಲಿ ಕರೆದ ಮುಖ್ಯ ಮಂತ್ರಿ ಪರಿಷತ್ತಿನಲ್ಲೂ ಇದಕ್ಕೆ ಮತ್ತಷ್ಟು ಬಲ ನೀಡಿದ್ದಾರೆ.

ನಿಜ—ನಮಗಿಂದು ಬೇಕು ಉಳಿತಾಯ. ನಮ್ಮ ದೇಶದ ಅಭಿವೃದ್ಧಿ ಸಾಧನೆಗೆ, ಭಾರತದ ಭವಿಷ್ಯ ಬರೆಯುವ ನಮ್ಮ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಬೇಕು ನಮಗೆ ಹಣ.

ಈ ಹಣ ಎಲ್ಲಿಂದ ಬರುತ್ತದೆ?

ರಾಜ್ಯಗಳು ಕೊರತೆಯ ಮುಂಗಡ ಪತ್ರಗಳನ್ನು ಮುಂದಿಡುತ್ತವೆ. ರಿಜರ್ವ ಬ್ಯಾಂಕಿನಿಂದ ಓವರ್ ಡ್ರಾಫ್ಟ್ ಪಡೆಯುತ್ತವೆ. ಕೇಂದ್ರದಿಂದ ಹೆಚ್ಚಿನ ಸಹಾಯ—ಪಾಲು ಬೇಡುತ್ತೇವೆ— ಈ ವರ್ಷ ಇದು ಇನ್ನೂ ಹೆಚ್ಚು ಚುನಾವಣೆ ವರ್ಷ— ಅಧಿಕ ಕರ ಹಾಕಲು ಮನಸ್ಸು ಹೇಗೆ ಬಂದೀತು?

ಕೇಂದ್ರವೇನು ಮಾಡುತ್ತದೆ?

ವಿದೇಶಗಳ ಮುಂದೆ ಕೈ ಚಾಚುತ್ತದೆ. ದೊರೆತಷ್ಟು ದಕ್ಕಿತು—ಉಳಿದದ್ದು ಇದ್ದೇ ಇದೆ. ಒಂದು ರೂಪಾಯಿಯ ನೋಟುಗಳನ್ನು ಅಚ್ಚು ಮಾಡಿಸಿದರಾಯಿತು.

—ಕೊರತೆ ಧನ ವಿನಿಯೋಗ!

ಇದು ಆಪದ್ಧನ—ಬೇರೆಡೆಯಲ್ಲ. ಆದರೆ, ನಮ್ಮ ದೇಶಕ್ಕಿದೊಂದು ಕಾಮಧೇನು.

ಈ ಕಾಮಧೇನುವಿನಿಂದಾಗಿಯೇ ದೇಶದಲ್ಲಿ ಆರ್ಥಿಕ ಬಲ ಕುಗ್ಗಿದೆ—ಅತಿ ಪ್ರಸರಣ ಹೆಚ್ಚಿದೆ. ರೂಪಾಯಿಯ ಬಾಹ್ಯ ಮೌಲ್ಯದ ಅಪಮೌಲ್ಯ ಮಾಡಬೇಕೆಂಬ ಒತ್ತಾಯವೂ ನಮ್ಮ ಮೇಲೆ ಬಂತು. ನಾವೂ ತಲೆದೂಗಿದೆವು.

ಹೌದು— ಗತ್ಯಂತರವಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ, ಕೋಟಿ ಕೋಟಿ ರೂಪಾಯಿ ನೋಟು ಅಚ್ಚು ಮಾಡುತ್ತಾ ಹೋದರೆ, ಒಂದು ದಿನ ಭಾರತ ಸಮೃದ್ಧವಾದೀತು- ಭಾರತ ರೂಪಾಯಿ ನೋಟುಗಳ ಬೆಲೆಯಿಂದ ಆದರೆ, ಸಸ್ಯ ಶ್ಯಾಮಲೆಯಾಗದು— ಆಹಾರ— ವಸತಿಗಳಿಂದಾಗಲಾರದು.

ಇದ್ದವರು ಮತ್ತೂ ದೊಡ್ಡದಾಗುವರು— ಇಲ್ಲದವರು ಸುಡುಗಾಡಲ್ಲಿ ಹೊರಳಾಡುವರು— ನೆರಳು ನೀಡುವ ಮರಗಳೂ ಆಗ ಉಳಿಯಲಾರವು—

ಇದು ರುದ್ರ ಭಯಾನಕ!

ಇದಕ್ಕೆ ಏಕಮೇವ ಪರಿಹಾರ ಉಳಿತಾಯ—ಆಂತರಿಕ ಸಂಪತ್ತಿನ ಪರಿಪೂರ್ಣ ಉಪಯೋಗ.

ಉಳಿತಾಯದ ಕೆಲವು. ವಿಚಿತ್ರ ಸೂಚನೆಗಳು ರಾಜಕಾರಣಿಗಳಿಂದ ಮುಂದೆ ಬಂದಿವೆ:

ಇರುವ ನೌಕರರನ್ನು ಕಿತ್ತು ಹಾಕುವಂತಿಲ್ಲ; ಆದುದರಿಂದ ಹೊಸಬರನ್ನು ನೇಮಿಸುವಾಗ ಕಾಲವಿಳಂಬ ಮಾಡಲು ಸಾಧ್ಯವಿದೆ.

—ಏಕೆ? ಹೊಸಬರನ್ನು ನೇಮಿಸದೇ ಇರುವುದಕ್ಕೂ ಸಾಧ್ಯವಿದೆಯೆಂಬುದು ಮರೆತೇ ಹೋಯಿತು. ತುಂಬ ಕರ್ಣನ ಸರಕಾರಕ್ಕೆ ನೌಕರರಾದರೂ ಏಕೆ ಬೇಕು?

ಪ್ರಯಾಣಭತ್ತೆ ಕಾರುಗಳ ಉಪಯೋಗ—ಇವುಗಳಲ್ಲೂ ಕಡಿತ ಇತ್ಯಾದಿ.

—ನೌಕರರ ಪ್ರಯಾಣ ಭತ್ತೆಯಲ್ಲಿ ಅವಶ್ಯ ಕಡಿತ ಮಾಡಲೇ ಬೇಕು— ಇಲ್ಲವಾದರೆ ಅವರು ಸುಳ್ಳು ಡೈರಿ ಬರೆಯಲು ಅವಕಾಶವೆಲ್ಲಿ?

ಇದೆಲ್ಲಕ್ಕಿಂತ ತಮ್ಮತ್ತ ನಾಯಕರು ನೋಡಿಕೊಳ್ಳಬೇಕು— ಇದರಿಂದ ಸೇ. ೧೦ ಅಲ್ಲ ೨೦ ಉಳಿತಾಯವಾಗುವುದು ಸಾಧ್ಯವಿದೆ.

—ಪ್ರತಿ ರಾಜ್ಯಗಳಲ್ಲೂ ಮಂತ್ರಿ ಮಂಡಳದ ಗಾತ್ರ ಕಡಿಮೆಯಾಗಬೇಕು—ಹೆಚ್ಚೆಂದರೆ, ಮಂತ್ರಿ, ಉಪಮಂತ್ರಿ, ಪಾರ್ಲಿಮೆಂಟರಿ ಸೆಕ್ರೆಟರಿ ಎಲ್ಲ—ಹತ್ತಕ್ಕಿಂತ ಹೆಚ್ಚಿರಬಾರದು.

—ಕೇಂದ್ರದ ಮಟ್ಟಿಗೆ ಇದನ್ನು ೨೦ಕ್ಕೆ ಏರಿಸಬಹುದು.

ಮಂತ್ರಿಗಳು ಪದೇ ಪದೇ ಸಂಚಾರ ಕೈಗೊಳ್ಳಬಾರದು. ಅವರಿಗೂ ಗೊತ್ತುಪಡಿಸಿದ ಪ್ರಮಾಣ ಭತ್ತೆ ನೀಡಿದರೆ ಎಲ್ಲವೂ ಸರಿ ಹೋಗುತ್ತದೆ.

—ಅರ್ಥವಿಲ್ಲದ, ಅನರ್ಥಕಾರಿಯಾದ, ಅಪೂರ್ಣವಾದ ಆಜ್ಞೆ ವಿಧಿಸುವುದನ್ನು ನಿಲ್ಲಿಸಬೇಕು. ಒಂದು ಆಜ್ಞೆ ಹೊರಡಿಸಿದರೆ, ಅದು ಪರಿಪೂರ್ಣ ವಿವೇಚನಾ ನಂತರವೇ ಹೊರಡುವಂತಾಗಬೇಕು.

—ಕನ್ನ ನೌಕರರಿಂದ ಸರಕಾರ ದುಡಿಸಿಕೊಳ್ಳುವುದನ್ನು ಕಲಿಯಬೇಕು. ಅವಶ್ಯಕತೆಗಿಂತ ಹೆಚ್ಚು ನೌಕರರನ್ನು ಎಲ್ಲಿಯೂ ಇಡಬಾರದು.

—ಜಾಹೀರಾತುಗಳನ್ನು ಕೊಟ್ಟು ಮತ್ತೆ ಅದಕ್ಕೆ ತಿದ್ದುಪಡಿ ಜಾಹೀರಾತು ಕೊಡುವುದು ನಿಲ್ಲಬೇಕು.

—ಮಂತ್ರಿಗಳು ತಾವು ಜನ ನಾಯಕರು ಮಾತ್ರವಲ್ಲ, ಜನ ಸೇವಕರ ಸೇವಕರೆಂದು ಕಾರ್ಯಮಾಡಬೇಕು — ಕರ್ತವ್ಯ ಪೂರಯ್ಸಬೇಕು—ನೌಕರರು ತಾವು ಜನ ಸೇವಕರೆಂದು ತಿಳಿಯಬೇಕು.

ಇದಕ್ಕೆಲ್ಲಾ—

ನಾವು— ಭಾರತೀಯರು—

ಜಲದಂತೆ ಪರಿಶುದ್ಧರಾಗಬೇಕು,—

ಅಗ್ನಿಯಂತೆ ಅನಿರುದ್ಧರೆನಿಸಬೇಕು—

ಪವನನಂತೆ ಸತ್ಕೃತಿ ಶೀಲರಾಗಬೇಕು

ಅವನೀತಳದಂತೆ ಧೃತಿ ಶೀಲರಾಗಬೇಕು —

ನಭದಂತೆ ಶುಚಿರ್ಭೂತರಾಗಬೇಕು.

ಹೀಗಾದರೆ ಸೇ. ೧೦ ಉಳಿತಾಯ ಮಾತ್ರವಲ್ಲ, ಹಾಲು ಹರಿವ ಜೇನು ಸುರಿವ ದಿನವೇ ನಮ್ಮ ಭಾರತವಾಗುವುದು. ಈದು ಸಾಧ್ಯವಾದೀತೆ?

ದಿ॥ ಶ್ರೀ ಉಡುಪಿ ಸೀತಾರಾಮಾಚಾರ್ಯರು

ಸುರತ್ಕಲ್ಲು ಕೇಂದ್ರದ ಪೇಜಾವರದಲ್ಲಿ ಜನಿಸಿದರೂ ಉಡುಪಿ ಸೀತಾರಾಮಾಚಾರ್ಯರೆಂದೇ ಪ್ರಸಿದ್ಧರಾದ ಇವರು ತಾ. 12ರ ಸಂಜೆ 6—25ಕ್ಕೆ ಕಾಲಾಧೀನರಾದರು. ಸಂಸ್ಕೃತ—ಕನ್ನಡ ವಿದ್ವಾಂಸರೊಬ್ಬರು ಕಣ್ಮರೆಯಾದರು. ಮೈಸೂರು ಮೊದಲಾದೆಡೆ ವಿದ್ಯಾಭ್ಯಾಸ ಮಾಡಿದ ಇವರು ಮಂಗಳೂರು, ಅನಂತಪುರ ಮದ್ರಾಸ್ ನಗರಗಳಲ್ಲಿ ಇರುವ ಸರಕಾರಿ ಕಾಲೇಜುಗಳಲ್ಲಿ ಕರ್ನಾಟಕ ಭಾಷಾಪಂಡಿತರಾಗಿ ಅನೇಕ ವಿದ್ಯಾರ್ಥಿ ವೃಂದಕ್ಕೆ ಜ್ಞಾನ ದಾನವಿತ್ತವರು. ಅಂತೆ, ಮದ್ರಾಸ್ ವಿಶ್ವವಿದ್ಯಾಲಯವು ಪ್ರಕಟಿಸಿದ ಸೂರ್ಯ ಶಾಸ್ತ್ರಿ ಮಂಗರಸನ ಅಭಿನವಾಭಿಧಾನವೆಂಬ ಕನ್ನಡ ಕೋಶ (ಪದ್ಯಕೃತಿಗಳು) ಇವುಗಳ ಸಂಗ್ರಹ ಕಾರ್ಯದಲ್ಲಿ ತುಂಬಾ ಸಹಕರಿಸಿದ್ದರು. ಮದ್ರಾಸ್ ವಿಶ್ವವಿದ್ಯಾಲಯವು ಏರ್ಪಡಿಸಿದ ಹಲವಾರು ವಿದ್ವತ್ಪರೀಕ್ಷಕರ ಮಂಡಳಿಯ ಸದಸ್ಯರಾಗಿದ್ದರು. ಮಂಗಳೂರಿನಲ್ಲಿ ಇತ್ತೀಚೆಗೆ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಕಟವಾದ "ಪಂಚಕಜ್ಜಾಯ"ದ ಸಂಪಾದಕ ವರ್ಗದಲ್ಲಿ ಇವರೊಬ್ಬರು. ಈ ಜಿಲ್ಲೆಯ ಹಲವೆಡೆ ನೆರೆದ ಯಕ್ಷಗಾನ ಗೋಷ್ಠಿಗಳು ಹಾಗೂ ಸಾಹಿತ್ಯ ಸಭೆಗಳಲ್ಲಿ ಅಧ್ಯಕ್ಷರಾಗಿಯೂ ಭಾಷಣಕಾರರಾಗಿಯೂ ಹಲವಾರು ಪುರಾಣ-ಕಾವ್ಯಗಳ ಒಳ ತಿರುಳನ್ನು ಜನತೆಗೆ ತಿಳಿಯಿಸಿದರು. ಶ್ರೀಪೇಜಾವರ ಮಠಾಧೀಶರೇ ಮೊದಲಾದವರೂ, ಶ್ರೀಕುತ್ತೆತ್ತೂರ್ ಹಯಗ್ರೀವಾಚಾರ್ಯರೇ ಮುಂತಾದವರೂ ಇವರನ್ನು ಗೌರವಾದರಗಳಿಂದ ಮನ್ನಿಸುತ್ತಿದ್ದರು. ಇವರು ನಿವೃತ್ತರಾಗಿ ಹೊಸಬೆಟ್ಟಿನಲ್ಲಿ ನೆಲೆಯೂರಿದ ಮೇಲೆ ಸುರತ್ಕಲ್ಲು ವಿಜಯಸಾಹಿತ್ಯ ಮಾಲೆಯ ಸಲಹೆಗಾರರಲ್ಲೊಬ್ಬರಾಗಿದ್ದರು.

ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳೂ ಸಾಹಿತ್ಯಕ ಬಂಧುಗಳೂ ಇವರ ನಿಧನದಿಂದ ದುಃಖಿತರಾಗಿದ್ದಾರೆ. ಎಪ್ಪತ್ತೇಳು ವರ್ಷದ ಯಾವಜ್ಜೀವನದಲ್ಲಿ ಧಾರ್ಮಿಕ ನಿತ್ಯಾನುಷ್ಠಾನಗಳನ್ನು ನೆರವೇರಿಸುತ್ತಾ, ತನ್ನಿಂದ ಆಗುವ ಯಾವತ್ಸಹಾಯಗಳನ್ನು ಪರರಿಗೆ ಒದಗಿಸುತ್ತಿದ್ದರು. ಕೆಲವು ದಿನಗಳಲ್ಲಿ ಅಸ್ವಸ್ಥರಾಗಿದ್ದು, ಇದೇ ತಾ. 12ರಲ್ಲಿ ಇಹ ಜೀವನ ಮುಗಿಸಿದರು, ಸಾರ್ಥಕ ಜೀವಿತರಾದರು. ಇವರ ಆತ್ಮಕ್ಕೆ ದೇವರು ಸದ್ಗತಿ ನೀಡಲಿ.

—ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ॥ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

11—8—1966

೨೦ ಪೈಸೆ

ಕಥಾ ಪ್ರಪಂಚ

ಅವರು ಬಯಸಲಿಲ್ಲ, ಆದರೆ ...!

ಬರೆದವರು
ಶ್ರೀಮತಿ ರಮಾ ನಾಗೇಶ್

ವರ್ಣರಂಜಿತವಾಗಿ ಬೆಳಗುತಿದ್ದ ವಿದ್ಯುದ್ದೀಪಗಳೆಲ್ಲಾ ಒಮ್ಮೆಲೆ ನಂದಿದುವು. ಹಾಲ್ಪೇಳಲ್ಲಿ ಶೋಭಿಸುತಿದ್ದ ಮದುವೆ ಮಂಟಪ ಕತ್ತಲ ಸೆರೆಯಲ್ಲಿ ಸೇರಿತು. ವಧುವರರು ಅಗ್ನಿಗೆ ಸುತ್ತು ಬರುತಿದ್ದ ಸಮಯವದು. ಕತ್ತಲಲ್ಲಿ ಜ್ವಾಲೆಯಾಗಿ ಕಾಣಿಸಿತು ವಧುವಿನ ಸೀರೆಯ ಸೆರಗಿನ ಕೊನೆಗೆ ತಾಗಿದ್ದ ಬೆಂಕಿ. ವಾಸುದೇವ ಅದನ್ನು ನಂದಿಸಲು ಪ್ರಯತ್ನಿಸಿದ. ಆಗ, ಬೆಂಕಿ ಆತನ ಜೋಲುತಿದ್ದ ಶಾಲಿಗೆ ತಗಲಿತು. ಶಾಲನ್ನು ಕೆಳಗಿಕ್ಕಿ ಕಾಲಲ್ಲಿ ಒತ್ತಲು ಹವಣಿಸುತ್ತಿರುವಾಗಲೇ ಸೀರೆಗೆ ತಗುಲಿದ್ದ ಬೆಂಕಿ ಆರಿತ್ತು. ಅಷ್ಟರಲ್ಲಿಯೇ ಮೂರ್ಛೆತಪ್ಪಿದಳು ಸುಶೀಲ, ಕಲ್ಲ (ಕೆಳಗುರುಳಿ) ದಳು.

ಂ ಂ ಂ

ಅಂದೇಕೋ, ಕೃಷ್ಣ ಆ ಪೆಟ್ಟಿಗೆಗೆ ಕೈಯಿಕ್ಕಿದ. ಅವನಿಗೊಂದು ಪತ್ರ ಸಿಕ್ಕಿತು. ಓದಿದ.... ಓದುತಿದ್ದಂತೆಯೇ ಮನಸ್ಸಿನೊಳಗೆ ಏನೋ ಕಸಿವಿಸಿಯಾಯಿತು. ಪತ್ರ ಮಡಚಿ ಕಿಸೆಗೆ ತುರುಕಿಕೊಂಡ ಪೆಟ್ಟಿಗೆಯನ್ನು ಪುನಃ ಹುಡುಕಿದ. ಬೇರಾವ ಪತ್ರವೂ ಸಿಕ್ಕಲಿಲ್ಲ. ಯೋಚನೆಗೀಡಾದ ಕೃಷ್ಣ, ನಾಳಿಗೆ ಮೆಟ್ಟಲುಗಳನ್ನಿಳಿದು ಜಾವಡಿಗೆ ಬಂದ; ಅಂಗಳಕ್ಕೆ ಇಳಿದ, ಹೆಬ್ಬಾಗಿಲು ತೆರೆದು ಮನೆಯ ಮುಂದಿನ ಹಾದಿಗೆ ಹೋದ. ಮರದಿಂದ ಮರಕ್ಕೆ ಸುತ್ತುತ್ತಾ ಒಂದು ಮರದ ನೆರಳಲ್ಲಿ ಆಲೋಚನಾ ಮಗ್ನನಾಗಿ ಕೆಳಮುಖನಾಗಿ ಕುಳಿತ.

"ನಾನೇನು ಮಾಡಲಿ; ನಡೆಯಗೊಡಲಾರೆ; ಅಸಾಧ್ಯ; ಅಧಮ; ಸ್ತ್ರೀ ವ್ಯಾಮೋಹಿ, ನೀಚ, ಲಂಚಕೋರ, ಬೂಟಾಟಿಕೆಯ ಪ್ರತಿಮೂರ್ತಿ; ಸಾಧ್ಯವೇ ಇಲ್ಲ, ಊಹೂಂ" ಮನಸ್ಸು ಆಲೋಚಿಸುತ್ತಲೇ ಇತ್ತು.

"ಹೀಗೇಕೆ ಮಾಡಿದಳು ನನ್ನ ಅಕ್ಕ? ಹಾಗಾದರೆ ಮುಂದೇನು?.... ಮುಂದೇನು?"... ಬಗೆಹರಿಯಲಿಲ್ಲ.

ಂ ಂ ಂ

ಯಾರನ್ನು ಇವರಿಲ್ಲೀ ವ್ಯಂಗ್ಯವಾಗಿ ಹಳಿಯುತಿದ್ದನೋ, ಯಾರ ವಿಚಾರವಾಗಿ ತನ್ನ ಗೆಳೆಯರೊಡನೆ ಸೇರಿ ತಮಾಷೆ ಮಾಡುತಿದ್ದನೋ, ಆ ವಾಸುದೇವ ತನ್ನ ಭಾವನಾಗುವುದು ಕೃಷ್ಣನಿಗೆ ಹಿತಕರವಾಗಿ ಕಾಣಲಿಲ್ಲ. ಕಾರಣ ಅವರ ಮನೆತನ, ಬೆಳೆದ ವಾತಾವರಣ; ಅವನ ಮನೆಯ ಜೀವನದ ಪುಟ್ಟ. ಹಾಗಾಗಿ ಕೃಷ್ಣನ ಯೋಚನೆಗೆ ಪೂರ್ಣವಿರಾಮ ಹಾಕುವ ಸಮಯ ನ ಸಿಗದಾಯಿತು.

ಸುಶೀಲ ಕೃಷ್ಣನ ಅಕ್ಕ. ಪದವೀಧರೆ. ವಾಸುದೇವ ಸುಶೀಲ ಸಹೋದ್ಯೋಗಿಗಳು. ಸೆಕೆಂಡರಿ ಉಪಾಧ್ಯಾಯನಾದ ವಾಸುದೇವನಿಗೆ ಹೇಳಿಕೊಳ್ಳುವ ಕೆಲಸವಿತ್ತಿರಲಿಲ್ಲ. ರೂಪವಂತನಾದ ವಾಸುದೇವ ಉಡುಪನ್ನು ಧರಿಸುವುದರಲ್ಲಿ ಕುಶಲ; ನಿರರ್ಗಳವಾಗಿ ಇಂಗ್ಲಿಷ್ ಮಾತನಾಡಬಲ್ಲ. ಡಂಭಪ್ರಪಂಚ ದರ್ಪದ ನಡತೆ, ಸಾಹಸಿ, ಏನಾಗಿಯೋ, ಹೇಗೋ, ಸುಶೀಲ ಅವನನ್ನು ಮೆಚ್ಚಿದಳು. ಪ್ರೇಮಿಸಿದಳು; ಮದುವೆಯಾಗಿ ಕೂಡಿ ಬದುಕುವ ಮನಸ್ಸನ್ನು ತಾಳಿದಳು. ಅಂಥ ಸಂದರ್ಭದ ಒಂದು ಪತ್ರ ಕೃಷ್ಣನ ಕೈಗೆ ಸಿಕ್ಕಿದ್ದು. ಅವ ಅದನ್ನು ಓದಿ ಒದ್ದಾಡಿದ್ದು; ಆಲೋಚನೆಗೀಡಾದ್ದು.

ಂ ಂ ಂ

ಮನೆತನದಲ್ಲಿ ಅನುಕೂಲಸ್ಥರಿಂದ ಬಾಬುರಾಯರು ನೂರು ರೂಪಾಯಿ ಪೆನ್ಷನ್‌ದಾರರೂ ಹೌದು; ಆಸ್ತಿವಂತರೂ, ಸ್ಥಿತಿವಂತರೂ ಹೌದು. ಪ ನೆತನಸ್ಥರೂ, ದೂರದರ್ಶಿಗಳಾದ ದಂಪತಿಗಳಿಗೆ ಆರು ಮಂದಿ ಗಂಡು ಮಕ್ಕಳೂ ಮೂವರು ಹುಡುಗಿಯರೂ ಇದ್ದರು.

ಸುಶೀಲೆಯ ಮದುವೆಯ ಹೊಣೆಗಾರಿಕೆ ಅವರ ಹಿರಿಯ ಮಗನ ಮೇಲೆ ಬಿದ್ದಿದ್ದರೂ, ಕಾರಣಾಂತರಗಳಿಂದ ದೂರದ ದಿಲ್ಲಿಯಲ್ಲಿದ್ದ ಆತನಿಗೆ ಊರಿನಲ್ಲಿರುವ ತಂಗಿಗೊಪ್ಪ ಗಂಡನನ್ನು ಹುಡುಕಲು ಸಮಯ ದೊರೆಯಲಿಲ್ಲ. ಹಾಗಾಗಿ ಪ್ರೌಢ ವಿದ್ಯಾಭ್ಯಾಸ ಮುಗಿಸಿ ಗೃಹಿಣಿಯಾಗಿ ಬಾಳಲು ತನ್ನನ್ನು ತಾನು ಸಿದ್ಧ ಮಾಡಿಕೊಳ್ಳ ತೊಡಗಿದ್ದ ಸುಶೀಲೆಗೆ, ಕಾಲೇಜ್ ಮೆಟ್ಟಲೇರುವ ಅವಕಾಶ ಒದಗಿತು. ಅನುಕೂಲಸ್ಥ ಮನೆತನದ ಸುಶೀಲಗೆ ಕಾಲೇಜ್ ವಿದ್ಯಾಭ್ಯಾಸ ಪರಿಶ್ರಮದ್ದಾಗಿ ಕಾಣಿಸಲಿಲ್ಲ; ಕಲಿಯುತ್ತಾ ಹೋಗಿ B.Ed. ಪರೀಕ್ಷೆಯನ್ನು ಮುಗಿಸಿದಳು. ತನ್ನೂರಿಗೆ ಹಿಂತಿರುಗಿ ಹೈಸ್ಕೂಲಿನಲ್ಲಿ ಉಪಾಧ್ಯಾಯಿನಿಯಾದಳು.

ಉಪಾಧ್ಯಾಯಿನಿಯಾಗಿ ಕೆಲಸ ಮಾಡುತ್ತಿರುವಾಗ ತನ್ನ ನೆಂಟಸ್ತಿಕೆಯ ಬಗ್ಗೆ ತಂದೆ ಅಣ್ಣಂದಿರು ನಡೆಸಿದ ಪ್ರಯತ್ನ, ತಾನು ಹತ್ತಾರು ಹುಡುಗರ ಮುಂದೆ ಪ್ರದರ್ಶನದ ವಸ್ತುವಾಗಿ ಕಾಣಿಸಿಕೊಂಡದ್ದು; ಮುಂದಿನ ಮನೋ ಬದಲಾವಣೆ ಎಲ್ಲವೂ ಅಲೆ ಅಲೆಯಾಗಿ ಬಂದು ಹೋದ ಘಟನೆಗಳು.

ಂ ಂ ಂ

"ಸುಶೀ"

"ಏನಮ್ಮಾ?"

'ಚಂದ್ರಶೇಖರರಾಯರೂ, ಅವರ ಪತ್ನಿಯೂ ಇವತ್ತು ನಮ್ಮ ಮನೆಗೆ ಬರುತ್ತೇನೆಂದಿದ್ದಾರೆ. ನೀನು ಇವತ್ತು ಎಲ್ಲಿಗೂ ಹೋಗುವುದು ಬೇಡ'

"ಅವರಿಲ್ಲಿಗೆ ಬರುವಾಗ ನಾನು ಯಾಕಮ್ಮಾ ಇಲ್ಲಿ?"

'ಅವರ ಮಗನ ಜಾತಕ, ನಿನ್ನ ಜಾತಕ ಕೂಡಿ ಬರುತ್ತದಂತೆ. ನೋಡಿ ಹೋಗ್ತಾರಂತೆ.'

ಅಂದು ಸಂಜೆ ಹುಡುಗನ ಹೊರತು ನೋಡಬೇಕಾದವರೆಲ್ಲ ಬಂದರು. ಸುಶೀಲ ಕಾಫಿ ತಿಂಡಿ ಹಿಡಿದುಕೊಂಡು ಅವರ ಮುಂದೆ ಬಂದಳು. ಭಾವಿ ಅತ್ತೆ ಅವಳನ್ನು ಮಾತಾಡಿಸಿದರು.

"ಈ ಸೀರೆ ಎಲ್ಲಿಂದ ಸುಶೀಲ?"

"ಬೊಂಬಾಯಿಯ ಶಶಿಕಲಕ್ಕ ಕಳುಹಿಸಿದ್ದು"

"ಚೆನ್ನಾಗಿ ಒಪ್ಪುತ್ತದೆ ನೋಡಮ್ಮಾ"

"ಸುಶೀಲ ನಕ್ಕಳು. ಮುಂದೆ ಮೌನ ಮಾತಾಯಿತು.

"ಶಾಲೆಯಲ್ಲಿ ಯಾವ ಪಾಠ ಕಲಿಸ್ತಾ ಇದ್ದೀಯಾ?"

"S.S.L.C.ಗೆ ಇಂಗ್ಲಿಷ್ II ಪೇಪರ್; V Form ಮತ್ತು VI ಗೆ ಲೆಕ್ಕಪಾಠ"

"ಶಾಲೆ ಜೀವನ ಹೇಗಾಗುತ್ತದೆ?"

ಸುಶೀಲ ನಕ್ಕಳು. ಹಾಗೆ ಕಾಫಿ ತಿಂಡಿ ಕೊಟ್ಟು ಒಳ ತೆರಳಿದಳು. ಮುಂದೆ ಹೆತ್ತ ಹೆತ್ತವರೊಳಗೆ ಮಾತುಕತೆ ಆರಂಭವಾದುವು. ಚಂದ್ರಶೇಖರರಾಯರು ಆಕ್ಷೇಪಯವಾಗಿ ಮಾತನ್ನಾಡುತ್ತಾ ಆಡುತ್ತಾ.

"ನೀವು ವರದಕ್ಷಿಣೆ ಎಷ್ಟು ಕೊಡುವವರು?" ಎಂದರು.

"ನೀವೆಷ್ಟು ತೆಗೆದುಕೊಳ್ಳುವವರು?" ಎಂದರು ಬಾಬುರಾಯರು ಉತ್ತರವಾಗಿ.

ಚಂದ್ರಶೇಖರರಾಯರು ಗೌರಿ ಮುಖ ನೋಡಿದರು. ಅವರು ನಕ್ಕು,

"ಏನೋ, ಹೆಚ್ಚು ಕಡಿಮೆ ಮಾಡಿಕೊಳ್ಳಿ" ಎಂದರು.

"ಹೆಚ್ಚು ಕಡಿಮೆ ಏನು? ಅಪೇಕ್ಷೆ ತಿಳಿಸಿರಿ" ಎಂದರು ಬಾಬುರಾಯರು.

'ಐದು ಸಾವಿರ ಕೊಟ್ಟು ಚಿನ್ನಾಭರಣ, ಮನೆಪಾತ್ರ, ಸೀರೆ ಉಡುಗೊರೆ ಎಲ್ಲಾ ಕ್ರಮವಾಗಿ ಆಗಬೇಕು"

"ಜಾಸ್ತಿ' ಎಂದರು ಬಾಬುರಾಯರು.

"ಹುಡುಗನಿಗೆ M. B. B. S. ಆಗಿ ಒಳ್ಳೇ ಪ್ರೇಕ್ಟೀಸು ಇದೆ. ನಿಮ್ಮ ಆಲೋಚನೆ ನೋಡಿ.'

"ಮೂರು ಸಾವಿರಕ್ಕೊಪ್ಪಿ; ಉಳಿದದ್ದೆಲ್ಲಾ ಇದೆಯಲ್ಲಾ. ಇನ್ನು ಮದುವೆಯ ವೆಚ್ಚ, ವರೋಪಚಾರ ಎನ್ನುವಾಗ ಹತ್ತು ಸಾವಿರಕ್ಕೆ ಮುಟ್ಟುತ್ತದೆ,' ಎಂದರು ಬಾಬುರಾಯರು.

"ಹಾಗೆಂದರೆ ಹೇಗೆ?" ಎಂದರು ಚಂದ್ರಶೇಖರರಾಯರು.

"ಈಗ ಎಲ್ಲಾ ನಿಶ್ಚಯ ಬೇಡ. ಹುಡುಗಿ ಪಾಸಾಯಿತಲ್ಲ ನಿಮಗೆ" ಎಂದರು ಬಾಬುರಾಯರು ಗೆಲುವಿನಿಂದ.

"ನಮ್ಮ ಮಟ್ಟಿಗಾಯಿತು. ಇನ್ನು ರಮೇಶ ನೋಡಿದ ಬಳಿಕ ನಿಶ್ಚಯ ಮಾಡುವುದು." ಎಂದರು ಬಾಬುರಾಯರು.

'ಅವನನ್ನು ಕರೆದು ತರಬಹುದಿತ್ತಲ್ಲಾ'

"ಇವತ್ತೊಂದು ಕೇಸು ಬಂದಿತ್ತು. ಹಾಗಾಗಿ ನೀವು ಹೋಗಿ ಬನ್ನಿ; ನಿಮ್ಮ ದಾದ ನಂತರ ತಾನು ನೋಡ್ತೇನೆ ಅಂದಿದ್ದ, ಅವನನ್ನು ವಿಚಾರಿಸಿ ಬರೆಯುತ್ತೇನೆ" ಎಂದರು ಚಂದ್ರಶೇಖರರಾಯರು.

ಪರಸ್ಪರ ನಮಸ್ಕರಿಸಿ ಮಾತುಗಳನ್ನು ಆ ಧಾಟಿಯಲ್ಲಿಯೇ ನಿಲ್ಲಿಸಿದಂತೆ ಮಾಡಿ ಹೊರಟರು. ಹೋದ ಬಳಿಕ ರಮೇಶ ಇನ್ನೆಂಟು ದಿನಕ್ಕೆ ಬರುತ್ತಾನೆಂದು ತಿಳಿಸಿದರು.

ಆ ದಿನ ಸುಶೀಲ ಬಹಳ ಓರಣವಾಗಿ ಮನೆಯನ್ನ ಸಿಂಗರಿಸಿದಳು; ತನ್ನನ್ನು ಸಿಂಗರಿಸಿಕೊಂಡಳು. ಮಾಳಿಗೆಯಲ್ಲಿದ್ದು ರಮೇಶನನ್ನು ಬರುವಾಗಲೇ ನೋಡಿದಳು. ಅವಳ ಮನಸ್ಸಿಗೆ ಸಮಾಧಾನವಾಗಿತ್ತು. ಆದರೆ ಆ ಸಮಾಧಾನ ಬಹಳಷ್ಟು ಹೊತ್ತು ಉಳಿಯಲಿಲ್ಲ. ರಮೇಶ ಸುಶೀಲಳನ್ನು ಕಂಡ; ಅವನ ಮೇಲೆ ಅವಳೇನೂ ಪ್ರಭಾವ ಬೀರಲಿಲ್ಲ. ಪರಿಣಾಮವಾಗಿ ಮುಂದೆ ಎರಡು ದಿನಗಳೊಳಗಾಗಿ ಸುಶೀಲಳಿಗೆ ಬೇರೆ ಗಂಡನ್ನು ಹುಡುಕಬಹುದೆಂದು ಚಂದ್ರಶೇಖರರಾಯರ ಪತ್ರ ಬಂದಿತು. ಈ ಘಟನೆಯ ಬಳಿಕ ತನ್ನ ಭವಿಷ್ಯವನ್ನು ತಾನೇ ನಿರ್ಧರಿಸುವ ಮನೋಸ್ಥಿತಿಗೆ ಸುಶೀಲ ಬಂದು ತಲುಪಿದಳು.

ಂ ಂ ಂ

ಮುಂದೆ ಆದುದೇ ವಾಸುದೇವನ ಸ್ನೇಹ. ದಿನಕ್ಕೆ ಹಲವು ಸಂದರ್ಭಗಳನ್ನು ಉಪಯೋಗಿಸಿಕೊಂಡು ವಾಸುದೇವ ಅವಳನ್ನು ಮಾತನಾಡಿಸಿ, ಹುರಿದುಂಬಿಸಿ, ಅವಳೆಲ್ಲಾ ಭಾವನೆಗಳಿಗೆ ಬೆಂಬಲ ಕೊಟ್ಟನು. ಸುಶೀಲೆಯ ಕಂಡೆಯ ಸ್ನೇಹದ ನೆಪದಿಂದ ಅವಳನ್ನು ಮಾತನಾಡಿಸಲು ಅವರಲ್ಲಿಗೆ ಒಂದಲ್ಲ ಒಂದು ಕಾರಣಗಳಿಂದ ಬರುತಿದ್ದ ವಾಸುದೇವನನ್ನು ಅವಳು ಒಲಿದ ರೀತಿ ಬೇರೆಯೇ ಆಗಿತ್ತು.

ವಾಸುದೇವ ಸುಶೀಲೆಯರೊಳಗಿನ ಮಧುರ ಸಂಬಂಧ ಬೆಳೆಯುತಿದ್ದ ಕಾಲದ ಪತ್ರ, ಸುಶೀಲೆಯ ತಮ್ಮ ಕೃಷ್ಣನ ಕೈ ಸೇರಿದುದು. ಅಂದು ಸಂಜೆ ಅದನ್ನು ಆತ ತಂದೆಯವರಿಗೆ ತಲುಪಿಸಿದ. ಪತ್ರವನ್ನು ಓದಿದ ಬಾಬುರಾಯರಿಗೆ ಬಹಳ ವ್ಯಸನವಾಯಿತು. ಸುಶೀಲೆಯ ತಾಯಿಗೂ ಆ ವಿಚಾರ ತಿಳಿಯಿತು.

ಪತ್ರ ತಂದೆ ಕೈಗೆ ದೊರಕಿದ ಸಂಜೆ, ಶಾಲೆಬಿಟ್ಟು ಮನೆಗೆ ಸೇರಿದಳು ಸುಶೀಲ. ಮನೆಯಲ್ಲಿ ವ್ಯಾಪಿಸಿದ ಮೌನವನ್ನರಿತಳು. ತಮ್ಮಂದಿರ ವರ್ತನೆಯನ್ನು ಕಂಡು ಸಂಶಯ ತಾಳಿದ ಸುಶೀಲಳಿಗೆ ಏನೊಂದೂ ತೋಚಲಿಲ್ಲ. ರಾತ್ರೆಯೂ ಮೌನದಲ್ಲೇ ಕಳೆದು ಹೋಯಿತು. ಆಲೋಚನಾ ಮಗ್ನರಾದ ತಂದೆಯನ್ನು ಕಂಡಳು. ಏನು? ಏಕೆ? ಹೇಗೆ? ಎಂದು ತಿಳಿಯದೆ ಒದ್ದಾಡಿದಳು.

ದಿನವೂ ನಕ್ಕು ನಲಿವಿನಲ್ಲಿರುತಿದ್ದ ಮನೆಯಲ್ಲಿ ಮೌನ ನಾಟ್ಯವಾಡುತಿತ್ತು. ದಿನ ಪೂರ್ತಿ ಅಭಿಮಾನದಿಂದ ಮಾತನಾಡಿಸುವ ತಂದೆ ಮೌನಿ. ಬದಲಾಗಿ ಕೃಷ್ಣ ತಂದೆ ಬರೆದ ಒಂದು ಕಾಗದ ತಂದು ಅಕ್ಕನ ಕೈಗೆ ಕೊಟ್ಟು, ಅಲ್ಲೇ ನಿಂತು ಅವಳ ಮುಖವನ್ನು ತಿರಸ್ಕಾರ ಭಾವದಿಂದ ಅವಲೋಕಿಸ ತೊಡಗಿದ. ಒಂದೇ ಮನೆಯಲ್ಲಿದ್ದು ನಲುಮೆಯ ನುಡಿಗಳನ್ನಾಡುತಿದ್ದ ಬಾಯಿಗಳು ಕಟ್ಟಿದ್ದುವು; ಗದ್ದಲಕ್ಕೆ ಪ್ರವೇಶವಿರಲಿಲ್ಲ. ನೋವಿನ ಹೊಗೆ ಎದ್ದು ಕಾಣುತಿತ್ತು. ಕಟ್ಟಿದ ಬಾಯಿ ಕೈಯಿಂದ ಮಗಳ ವಿ

(ಹನ್ನೊಂದನೇ ಪುಟ ನೋಡಿರಿ)



Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ವ್ಯವಸ್ಥಾನುಸಾರವಲ್ಲದ ಗಿರಾಕಿಗಳು

ಹುಲ್ಲು ಬಾಚುವೊಂದನ್ನು ಖರೀದಿಸಿದ ಅಮೇರಿಕದ ದಂಪತಿಗಳು "ದ ಸೆಂಚ್ಯುರಿ ಆರ್ಟ್" ಸಂಗ್ರಹದ ಮಾರಾಟ ಕೇಂದ್ರವನ್ನು ವೀಕ್ಷಿಸುತ್ತಿರುವುದು.

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪೮	೧೧—೮—೧೯೬೬	No. 48

ತಾಷ್ಕೆಂಟ್ ಗಾಳಿಪಟ

ತಾಷ್ಕೆಂಟ್ ಘೋಷಣೆಯಂತೆ ಭಾರತ—ಪಾಕಿಸ್ತಾನಗಳ ನಡುವೆ ಶಶ್ವತ ರೀತಿಯ ಸಂಪರ್ಕ ಬೆಳೆಯಲು ಕಾರಣವಾಗುವಂತೆ, ಕಡಿದು ಹೋದ ವ್ಯಾವಹಾರಿಕ ಸಾಂಸ್ಕೃತಿಕ ಮೊದಲಾದ ಸಂಬಂಧಗಳು ಮತ್ತೆ ಚಿಗುರೊಡೆಯಲು ಅನುಕೂಲವಾಗುವಂತೆ ವಿವಿಧ ಮಟ್ಟಗಳಲ್ಲಿ ಎರಡೂ ದೇಶಗಳ ನಾಯಕರು ಸಭೆಸೇರಬೇಕಾದುದು ಅಗತ್ಯ. ಸುಮಾರು ಆರು ತಿಂಗಳುಗಳಿಗೆ ಮೊದಲು ವಿದೇಶ ಮಂತ್ರಿಗಳ ಒಂದು ಸಭೆ ರಾವಲ್‌ಪಿಂಡಿಯಲ್ಲಿ ಜರಗಿದುದನ್ನೂ ಅಲ್ಲಿ ಮುಂದಿನ ಸಭೆಯು ನವದಿಲ್ಲಿಯಲ್ಲಿ ಸೇರಬೇಕೆಂಬ ಒಂದು ನಿರ್ಧಾರವನ್ನು ಬಿಟ್ಟರೆ ಮತ್ತೇನನ್ನೂ ಸಾಧಿಸುವುದು ಅಸಾಧ್ಯವಾದುದನ್ನೂ ನಾವು ನೆನೆಯ ಬಹುದು. ಕಳೆದಷ್ಟು ಸಮಯದಲ್ಲಿ ಎರಡನೆಯ ಸಭೆ ಸೇರಲೇ ಇಲ್ಲ. ಈ ನಡುವೆ, ಭಾರತ— ಪಾಕಿಸ್ತಾನಗಳ ನಡುವಣ ವಿರಸವನ್ನು ಕುದಿಯುವ ಬಿಂದುವಿಗೆ ಏರಿಸಿದ ವಿದೇಶಮಂತ್ರಿ ಭುಟ್ಟೋ ಪಾಕ್ ಸಂಪುಟದಿಂದ ನಿವೃತ್ತರಾದರು. ಆದರೂ ಪಾಕ್ ನಿಲುವಿಯಲ್ಲಿ ಯಾವ ಬದಲಾವಣೆಯನ್ನು ಯಾರೂ ನಿರೀಕ್ಷಿಸುವಂತಿಲ್ಲ. ಇದಕ್ಕೆ ಪುಟವಿಡುವಂತೆ ಅಧ್ಯಕ್ಷ ಅಯ್ಯೂಬಖಾನರು ತನ್ನ ವರ್ತನೆಯನ್ನು ಪ್ರದರ್ಶಿಸುತಿದ್ದಾರೆ. ನಿಯೋಜಿತ ನವದೆಹಲಿ ಸಭೆಯ ಬಗ್ಗೆ ಅವರ ಪತ್ರವೇ ಪಾಕಿಸ್ತಾನ ಏನು ಬಯಸುತ್ತದೆ ಎಂದು ಹೇಳಲು ಸಾಕು.

ಭಾರತ ಸರಕಾರವು ನವದೆಹಲಿ ಸಭೆಯು ಬೇಗ ಸೇರಬೇಕು, ವೈಮನಸ್ಯದ ಕಾವು ಇಳಿದು ಸಾಮರಸ್ಯ ಬೇಗ ಹರಿಯಬೇಕು ಎಂದು ಕೇಳಿಕೊಂಡರೆ, ಇಂತಹ ಸಭೆಯಿಂದ ಯಾವುದೇ ಪ್ರಯೋಜನವಿಲ್ಲವೆಂದು ಕಡಾಕಂಡಿತವಾಗಿ ಅಯ್ಯೂಬ್ ಹೇಳಿಯೇ ಬಿಡುವುದೆ? ಮೊದಲ ಸಭೆಯಲ್ಲಿ ಆರಂಭದಲ್ಲೇ ಕಾಶ್ಮೀರ ಪ್ರಶ್ನೆಯನ್ನು ಎತ್ತಿ ಕೊಂಡು ಭುಟ್ಟೋ ವಿಚಾರ ವಿನಿಮಯಕ್ಕೆ ಮುಟ್ಟುಗೋಲು ಹಾಕಿದ್ದರು. ಈಗ ಅಯ್ಯೂಬರು ಹೇಳುವುದೂ ಇದನ್ನೇ "ಕಾಶ್ಮೀರದ ಬಗ್ಗೆ ಚರ್ಚಿಸಲು ಅವಕಾಶವಿಲ್ಲದ ಸಭೆ ವ್ಯರ್ಥ"-ಇದರ ಅರ್ಥವೇನು? ತಾಷ್ಕೆಂಟ್ ಘೋಷಣೆಯಲ್ಲಿ ಏನೇ ಹೇಳಿರಲಿ, ಅವು ಅಯ್ಯೂಬರಿಗೆ ಮುಖ್ಯ ವಲ್ಲ; ಅವರಿಗೆ ಬೇಕಾಗಿರುವುದು ಕಾಶ್ಮೀರ ಮಾತ್ರ. ಇದನ್ನು ಭಾರತ ಸರಕಾರ ಎಂದಿಗೆಂದಿಗೂ ಒಪ್ಪುವುದು ಸಾಧ್ಯವಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ತಾಷ್ಕೆಂಟ್ ಘೋಷಣೆಯನ್ನು ಅಕ್ಷರಶಃ ಪಾಲಿಸಲು ಬದ್ಧಕಂಕಣರಾಗಿದ್ದಾರೆ. ಆದರ ಚೌಕಟ್ಟಿನೊಳಗೆ ಕಾಶ್ಮೀರವೂ ಬರುತ್ತದು, ನಿಜ. ಆದರೆ ಕಾಶ್ಮೀರದ ಪ್ರಶ್ನೆಯೊಂದು ಬಲವಾದ ಸಿಕ್ಕು. ಆದನ್ನು ಬಿಡಿಸುವುದಕ್ಕೇ ಮೊದಲು ಕುಳಿತರೆ ಆದು ವ್ಯರ್ಥ ಕಾಲಹರಣ, ಕಾಶ್ಮೀರವು ಭಾರತ ಒಕ್ಕೂಟದ ಒಂದು ರಾಜ್ಯ. ಅದನ್ನು ಕೇಳುತ್ತಾರೆ, ಪಾಕ್ ನಾಯಕರು. ಅದನ್ನು ಕೈಯೆತ್ತಿ ಕೊಡುವುದೆಂದರೆ ಹೇಗೆ ಸಾಧ್ಯ? ಭಾರತದ ಕಾಶ್ಮೀರ ನೀತಿ ಬದಲಾಗಿಲ್ಲವೆನ್ನುವುದಕ್ಕಿಂತಲೂ ಕಾಶ್ಮೀರ ನಮ್ಮ ಒಕ್ಕೂಟದ ಒಂದು ರಾಜ್ಯವಲ್ಲವೆನ್ನಲು ಭಾರತೀಯರಿಗೆ ಶಿರೋಭ್ರಮಣೆಯಾಗಿಲ್ಲವೆನ್ನುವುದೇ ಮೇಲು. ಯಾರು ಏನೇ ಹೇಳಲಿ, ಕಾಶ್ಮೀರವು ಭಾರತದ ಒಂದು ಅಂಗ, ಅಲ್ಲಿ ಆಕ್ರಮವಾಗಿ ಪಾದವೂರಿದವರು ಪಾಕಿಸ್ತಾನಿಗಳು. ಇದು ಸತ್ಯ ಸಂಗತಿ. ಇದನ್ನು ಮರೆಸಲು ಅದಾವ ಕುತಂತ್ರಗಳನ್ನೇ ಪಾಕಿಸ್ತಾನ ಮತ್ತದರ ಪುರಸ್ಕರ್ತರು ಹೂಡಲಿ, ಅದಕ್ಕೆ ಸೊಪ್ಪು ಹಾಕುವಷ್ಟು ನಿರ್ವೀರ್ಯರು ವೀರ ಭಾರತೀಯರಲ್ಲ-ಇದು ಜಗಜ್ಜನಿತ.

ಮುಂದೇನು? ಅಯ್ಯೂಬರು ಕಾಶ್ಮೀರದ ಚರ್ಚೆಗೆ ಅವಕಾಶವಿದ್ದರೆ ಮಾತ್ರ ಸಭೆಯೆಂದರೆ ಗಾಂಧಿ ಹೇಳುತ್ತಾರೆ- ಸಭೆಯಲ್ಲಿ—ಎರಡೂ ದೇಶಗಳಿಗೆ ಸಂಬಂಧಿಸಿದ ಯಾವುದೇ ಪ್ರಸಂಗವನ್ನು ಎತ್ತಿಕೊಳ್ಳಲು ಅವಕಾಶವಿದೆ; ಆದರೆ, ಯಾವುದೇ ಪೂರ್ವಕರಾರುಗಳು ಇರುವಂತಿಲ್ಲ. ಜೊತೆಗೆ ಭಾರತದ ಕಾಶ್ಮೀರ ಸಂಬಂಧದ ನಿಲುಮೆಯಲ್ಲಿ ಯಾವ ಬದಲಾವಣೆಯೂ ಇಲ್ಲ. (ಪಾಕ್ ಕಾಶ್ಮೀರ ನೀತಿಯೂ ಅಚಲವೆನ್ನಿ.) ತಾಷ್ಕೆಂಟ್ ಘೋಷಣೆಯನ್ನು ಪಾಲಿಸುವ ಇರಾದೆ ಪಾಕಿಸ್ತಾನಕ್ಕಿರುವುದಿಲ್ಲ; ಕಾಶ್ಮೀರವನ್ನು ಕಬಳಿಸಲು ಅದು ಕಿಂಚಿತ್ತಾದರೂ ಸಹಾಯ ಮಾಡುವುದಾದರೆ ಆಗಲಿ ಎಂದು ಅಯ್ಯೂಬರು ಅದನ್ನು ಒಪ್ಪಿದ್ದರಷ್ಟೆ! ಕಚ್ ಗಡಿ ತಂಟೆಯ ಒಡಂಬಡಿಕೆಯನ್ನು ಕಸದ ಬುಟ್ಟಿಗೆ ಸೇರಿಸಿದ ಫೀಲ್ಡ್ ಮಾರ್ಶಲ್ ಅಯ್ಯೂಬ ಖಾನರು ತಾಷ್ಕೆಂಟ್ ಘೋಷಣೆಯ ಗಾಳಿಪಟ ಹಾರಿಸಿಬಿಟ್ಟರೆ ಆಶ್ಚರ್ಯವೇನು?

ಜಯಪ್ರಕಾಶ—ಅಬ್ದುಲ್ಲಾ

ರಾಜಕೀಯದಿಂದ ನಿವೃತ್ತರಾಗ ಬಯಸಿ ಎಲ್ಲ ರಾಜಕೀಯ ಪಕ್ಷಗಳಿಂದ ದೂರವುಳಿದು ಜಯಪ್ರಕಾಶ ನಾರಾಯಣರು ವಿನೋಬಾರವರ ಸರ್ವೋದಯ ಚಳವಳಿಯಲ್ಲಿ ನೆರವಾಗಲು ಸರ್ವೋದಯ ನಾಯಕರೆನಿಸಿದರು. ಆದರೆ, ಅವರು ಸರ್ವೋದಯ ಚಳವಳಿಯಲ್ಲಿ ಭಾಗವಹಿಸಿದ ಉದಾಹರಣೆಗಳು ತೀರ ಕಡಿಮೆಯೇ. ಸರ್ವೋದಯದ ಕಾರ್ಯ ಮಾಡದೇನೇ ಅವರಿಗೆ ಆದರ ನಾಯಕ ಪದ ಸಿಕ್ಕಿದಯೆಂದರೂ ತಪ್ಪಲ್ಲ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಅವರು ರಾಜಕಾರಣದಿಂದ ದೂರ ಸರಿದರೂ ರಾಜಕಾರಣ ಅವರಿಂದ ದೂರವುಳಿಯಲು ಬಯಸುವುದಿಲ್ಲ. ಒಂದಲ್ಲ ಒಂದು ರಾಜಕೀಯ ಸಿಕ್ಕಿನಲ್ಲಿ ಅವರು ತಮಗೆ ಬೇಡವಾಗಿಯಾದರೂ ಸಿಕ್ಕಿಕೊಳ್ಳುತ್ತಾರೆ. ಈಗ ಕೊಡೈಕನಾಲದ ಸೆರೆಮನೆಯಲ್ಲಿ ಸ್ಥಾನಬದ್ಧತೆಯಲ್ಲಿರುವ ಕಾಶ್ಮೀರದ ಮಾಜಿ ಪ್ರಧಾನಿ ಶೇಕ ಅಬ್ದುಲ್ಲಾರನ್ನು ಕಂಡು ಮಾತಾಡಿದರು. ಸ್ವತಂತ್ರ ಕಾಶ್ಮೀರದ ಕನಸನ್ನು ಇನ್ನೂ ಕಾಣುತ್ತಿರುವ ಈ ಹಲ್ಲುಡಿದ ಸಿಂಹದೊಡನೆ ಜಯಪ್ರಕಾಶರು ನಡೆಸಿದ ಮಾತುಕತೆಯ ವಿವರಗಳು ಸರಿಯಾಗಿ ತಿಳಿದಿಲ್ಲ—ಇವು ಶೇಕ್ ಅಬ್ದುಲ್ಲಾರ ಮನಃ ಪರಿವರ್ತನೆಯ ಕಾರ್ಯದಲ್ಲಿ ಮೊದಲ ಹೆಜ್ಜೆಯಾದೀತೆ?

ವಚನ ಸುಧೆ

ಧೃತಿಃ ಶಮೋ ದಮಃ ಶೌಚಂ
ಕಾರುಣ್ಯಂ ವಾಗ ನಿಷ್ಠುರಾ।
ಮಿತ್ರಾಣಾಂ ಚಾನಭಿದ್ರೋಹಃ
ಸಪ್ತೈತಾಃ ಸಮಿಧಃ ಶ್ರಿಯಃ॥

ಧೈರ್ಯ, ಮನೋನಿಗ್ರಹ, ಇಂದ್ರಿಯ ಸಂಯಮ, ಪವಿತ್ರತೆ, ಕಾರುಣ್ಯ, ಮೃದು ಮಾತು, ಮಿತ್ರನಿಗೆ ದ್ರೋಹವೆಸಗದಿರುವುದು—ಇವು ಸಂಪತ್ ಸಮೃದ್ಧಿಯ ಮೂಲ ಕಾರಣಗಳು.

ನಿರೀಕ್ಷಿಸಿರಿ!

ಬರುವ ವಾರ

ನವಯುಗ

ಸ್ವಾತಂತ್ರ್ಯ ವಿಶೇಷಾಂಕ

ವೈವಿಧ್ಯಪೂರ್ಣ ಲೇಖನಗಳಿಂದೊಡಗೂಡಿ ಪ್ರಕಟವಾಗುವುದು.

ಬಿಡಿ ಪ್ರತಿ : 0—50 ಪೈಸೆ

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ತಾ. 30—7—66ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಆಶ್ರಯದಲ್ಲಿ 'ಸೀತಾಪಹಾರ' ಎಂಬ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ನಡೆಸಲ್ಪಟ್ಟಿತು.

ವೇಷಧಾರಿ ಶ್ರೀ ಮುದಿಯಾರು ನಾರಾಯಣ ರೈಗಳ ವತಿಯಿಂದ ಜರಗಲ್ಪಟ್ಟ ಈ ಕಾರ್ಯಕ್ರಮದಲ್ಲಿ ಕಲಾವಿದರನೇಕರು ಭಾಗವಹಿಸಿದ್ದರು. ಆರಂಭದಲ್ಲಿ ಶ್ರೀ ನಾರಾಯಣ ನಾಯಕ್ ಮಾಸ್ತರರು ಸ್ವಾಗತಿಸಿದ್ದು, ಕೊನೆಯಲ್ಲಿ ಶ್ರೀ ಕೆ. ಬಿ. ರೈಗಳು ಧನ್ಯವಾದವಿತ್ತರು.

ನರಸಣ್ಣನ ಸರಸ



'ರೂಪಾಯಿಯ ಮೌಲ್ಯವಿಚ್ಛೇದನದ ಬಗ್ಗೆ ಕಂಡು ಬಂದ ರಾಷ್ಟ್ರೀಯ ಜಾಗೃತಿಯೇ ಇಂದಿರಾ ಸರಕಾರದ ಮೇಲೆ ಅವಿಶ್ವಾಸವೂ ದಲು ಕಾರಣವಂತೆ ...."

ಗೇಹರಾಜ್ಯದಲ್ಲಿ

ಫ್ಯಾಷನ್ನು ಅಂದರೆ ಮಹಾಪಾಪ

"ಭಾರಿ ಚಲೋದು, ಭಾರಿ ಚಲೋದು ..."

'ಏನ್ರೀ ಅದು?"

'ಭಾರಿ ಚಲೋದು, ಭಾರೀ ಛಲೋದು ...."

"ಅಲ್ಲ ಚಲೋದು ಚಲೋದೂಂತ ಉರು ಹೊಡೀತಾ ಇದ್ದೀರಲ್ಲಾ ಏನದು ಅಂಥದ್ದು?"

"ಅಯ್ಯೋ, ಭಾರೀ ಛಲೋದೂಂ. ದ್ದಲ್ಲಾ?"

'ಹೌದ್ರಿ, ಏನು ಚಲೋದು, ಯಾಕೆ ಚಲೋದೂಂತ ನಾನೀಗ ಕೇಳ್ತಾ ಇರೋದು...."

"ಅಲ್ವೇ, ನೀನು ಕೇಳ್ತಾ ಇರದೆ ಹೋದ್ರೂ ಚಲೋದು ಚಲೋದೇ ಅಲ್ವೆ?"

'ಅಲ್ರಿ, ಮೈಮೇಲೆ ಜ್ಞಾಪಕ ಇದೆಯೋ ಇಲ್ವೆ?"

'ಭಾರಿ ಚಲೋ ಸುದ್ದಿ—ಸಾಯೋತನಕನೂ ಜ್ಞಾಪಕದಿಂದ ಹಾರಿ ಹೋಗೋದಲ್ಲ...'

'ಅಂತಹ ಸುದ್ದಿ ಏನೂಂತಾದ್ರೂ ಕೇಳಬಹುದೇ?"

"ಕೇಳದ್ರೆ ಸಾಲ್ದು, ತಿಳ್ಕೋಬೇಕು....'

"ಹ್ಞಾಂ..."

'ಅದ್ರಲ್ಲೂ ನಿನ್ನಂಥವ್ರು ಅಗತ್ಯ ತಿಳ್ಕೋಬೇಕು..."

'ಅದ್ಕೇ ಅಲ್ವೆ ಏನೂಂತ ಕೇಳಿದ್ದು, ನೀವು ಮಾತ್ರ ಭಾರೀ ಛಲೋದೂಂತ ಹಾಡಾಡ್ತಾ ಇದ್ರಿ...."

'ಮತ್ತೆ ಸುಂಸುಮ್ನೆ ಹೇಳಿದೇಂತ ಅಂದ್ಕೊಂಡೆಯೊ? ಇದು ಭಾರಿ ಚಲೋ ಸುದ್ದಿ, ನಿನ್ನಂಥವರು ಅವಶ್ಯ ತಿಳ್ಕೊಂಡು ನಡೀ ಬೇಕಾಗೋದು, ಆಚರಿಸ ಬೇಕಾಗೋದು....'

"ಸರಿ, ಆದ್ರೆ ಅಂಥ ಮಹತ್ವ ಸುದ್ದಿ ಏನೂಂತ...."

'ಮಹತ್ವ? ಇದು ನಿಮಗೆ ಮಾತ್ರವಲ್ಲ, ನಿಮ್ಮ—ನಮ್ಮ ಕಾಲಕ್ಕೆ ಮಾತ್ರವಲ್ಲ, ನಮ್ಮ ನಿಮ್ಮ ಯಾರ್ಯಾರ ಮಕ್ಕಳ ಮಕ್ಕಳ ಮಕ್ಕಳ ಮಕ್ಕಳ ಮಕ್ಕಳ ಮಕ್ಕಳ...."

"ಎಂಥದ್ರಿ ಇದು ಮಕ್ಕಳ ಮಕ್ಕಳಾಂತ ರಂಪಾಟ...."

'ಮತ್ತೆ ಹೇಗೆ ಹೇಳ್ಲಿ?....ಹ್ಞಾಂ, ಇದು ಮಾನವರ ಪರಂಪರೆಗೆ ಸಂಬಂಧಪಟ್ಟ ಅತ್ಯಂತ ಮಹತ್ವದ ಅತ್ಯಮೂಲ್ಯ ಸುದ್ದಿ...."

"ಸರಿ, ಇದನ್ನ ಹೊಂಡಿಸಿರೋರು"

'ಅದೆ? ಅತ್ಯಂತ ಫೇಷನ್ ಪ್ರಿಯರಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪಶ್ಚಿಮ ಜರ್ಮನಿಯ ಹೆಸರು ಕೇಳಿಲ್ಲವೆ?"

'ಹ್ಞಾಂ....ಇನ್ನು ಯಾರೂಂತ?"

"ಅಲ್ಲಿನ ವೈದ್ಯ ವಿಶಾರದರೆಲ್ಲರು...."

"ಓ, ಹಾಗಾದರೆ ಸುದ್ದಿ ಮಹತ್ವದ್ದೇ ಇರಬೇಕು...'

'ಮತ್ತೆ ನನಗೇನು ಹುಚ್ಚು ಹಿಡಿದಿಲ್ಲ."

"ಯಾರು ಹಾಗಂದರು?"

'ಕೇಳು, ಇದು ಫೇಷನ್ ಹುಚ್ಚು ಹಿಡಿದಿರೋರಿಗೊಂದು ಗಂಭೀರ ಎಚ್ಚರಿಕೆ.... ಏಕೆಂದರೆ ಈ ಸುದ್ದಿ ಫೇಷನ್ನ್‌ದಾರ, ದಾರಿಯರಿಗೆ ಸಂಬಂಧಿಸಿದು....?

"ಏನಂತೆ?'

"ಮತ್ತೇನಿಲ್ಲ. ನೋಡು, ಹಿರಿಯರು ಹೇಳ್ತಾರೆ—ಶೋಕಿ ಮಾಡ್ಬೇಡ, ಭೂತ ಪ್ರೇತ ಬಡಿದೀತೂಂತ....'

"ಹ್ಞಾಂ....'

"ಆದ್ರೆ ನಾವು ಕೇಳೋಲ್ಲ. ಹೊತ್ತಿಗೊಂದು ಅಲಂಕಾರ, ವೈಯ್ಯಾರ, ಶೃಂಗಾರ, ಅಂಗಾರ, ಸಿಂಧೂರ, ಮಂದಾರ, ಹಿಂಗಾರ...."

"ಹ್ಞಾಂ, ಅಂತೂ ನೀವು ನಮ್ಮನ್ನ ಬೈಯುವುದು ತಾನೆ?'

'ಇಲ್ಲಮ್ಮ, ಯಾಕೆ ಬೈಬೇಕು? ನೋಡು, ನೀನು ಶೋಕಿ ಮಾಡಿದರೆ, ಅದರ ಪರಿಣಾಮ ನಿನ್ನ ಮೇಲೆ, ಆದಕ್ಕಿಂತ ಹೆಚ್ಚು ನಿನ್ನ ಮಕ್ಕಳ ಮೇಲೆ ಬೀಳುವುದಂತೆ... ಇದು ಬರೀ ಮಾತಲ್ಲ, ವೈದ್ಯರ ಪರಿಶೀಲನೆಯ ಪರಿಣಾಮ....'

"ಅಂದರೆ?"

"ನೋಡು, ಪ್ಯೊಂಟೆಡ್ ಶೂ ಇದೆಯಲ್ಲಾ?"

"ಹ್ಞಾಂ..."

'ಅದನ್ನು ಮೆಟ್ಟಿದವರ ಮಕ್ಕಳ ಪಾದ ವಕ್ರವಾಗುತ್ತದೆ.... ಮೆಟ್ಟಿದವರೂ ಎಳೆಯವರಾದರೆ ಅವರದ್ದು ವಕ್ರವಾಗುವ ಸಂಭವವಿದೆ...."

'ಹ್ಞಾಂ...ಏನಂದಿರಿ?'

'ಹ್ಞಾಂ...ಮತ್ತೂ ನೋಡು, ಬಿಗಿಯಾದ ಚಪ್ಪಲಿ ಮೆಟ್ಟಿದ್ರೂ ಇದೇ ರೋಗದ ಬೀಜ ಬಿತ್ತಿದಂತಾಗುತ್ತೆ. ಹೈಹೀಲ್ ಚಪ್ಪಲಿಯಿಂದ ಬೆಂಗೋಲೇ ಬಾಗಿ ಹೋಗುತ್ತೆ...."

'ಆ ಮೇಲೆ?'

"ಆ ಮೇಲೆ ಏನು? ಬಿಗಿಯಾದ ಉಡುಗೆ ತೊಡುಗೆಗಳು ಹೊಸ ಹೊಸ ರೋಗಗಳಿಗೆ ಕಾರಣವಾಗುತ್ತವೆ, ಅವನ್ನ ಗುಣ ಪಡಿಸುವುದೂ ಸಾಧ್ಯವಿಲ್ಲ ಎಂಬುದು ವೈದ್ಯರ ಅಭಿಪ್ರಾಯ...."

"ಅಂದರೆ?"

'ಉದಾಹರಣೆಗೆ ಉಡುಗೆಯನ್ನೇ ತೆಗೆದುಕೋ. ಅದು ಬಿಗಿಯಾಗಿದ್ದರೆ ಶರೀರಕ್ಕೆ ವಾಯು ಸ್ಪರ್ಶವಾಗುವುದಿಲ್ಲ. ಇನ್ನು ಕೆಲವು ಬಟ್ಟೆಗಳು ವಾಯು ಸಂಚಾರವನ್ನೂ ತಡೆಯುತ್ತವೆ. ಇದು ಅತ್ಯಧಿಕ ಬೆವರು ಹರಿಯುವುದಕ್ಕೆ ಕಾರಣವಾಗುತ್ತದೆ. ಇದೊಂದು ಹೊಸರೋಗ—ಫ್ಯಾಷನ್ ರೋಗ...ಉಳಿದ ಕರ್ಮೇಂದ್ರಿಯಗಳ ದುರ್ಬಲತೆಗೆ ಕಾರಣ..."

"ಅಂದರೆ ಟೆರಿಲಿನ್ ಬಟ್ಟೆ..."

"ನೈಲಾನ್ ಕೂಡ...."

"ಹ್ಞಾಂ....ಮುಂದೇನು?'

'ಮೈ ಮುಚ್ಚಿಕೊಳ್ಳಲು ಸಂಕೋಚ ಪಡುವುದೂ ಒಂದು ರೋಗ. ಇದರಿಂದ ಅಂಗಾಂಗಗಳು ವಿಕಾರಗೊಳ್ಳುವ ಸಂಭವವಿದೆ. ಮೈ—ಕೈಗಳಿಗೆ ಬಿಳಿ—ಕೆಂಪು ಬಳೆಯುವ ಫ್ಯಾಶನ್ ಅವುಗಳ ಸಹಜ ಗುಣವನ್ನು ಕುಂದಿಸಿ ಹೊಸ ರೋಗಗಳಿಗೆ ನಾಂದಿಯಾಡುತ್ತವೆ.'

'ಡೊಂಕು ಅಂದರೆ?'

"ಅಲ್ರಿ, ನಿಮ್ಮ ಈ ರೋಗ ಸ್ತ್ರೀಯರಿಗೆ ಮಾತ್ರವೆ? ಪುರುಷರಿಗೂ ಇದೆಯೆ?"

"ಇಲ್ಲದೆ ಉಂಟೆ? ಮುಖ್ಯವಾಗಿ ಸ್ತ್ರೀ ಕುಲೋದ್ಧಾರಕಳು. ಅವಳು ರೋಗದ ಬೀಜ ಬಿತ್ತಿದರೆ ಗಂಡು—ಹೆಣ್ಣು ಎಲ್ಲರಲ್ಲೂ ಅದು ಬೆಳೆದೇ ಬೆಳೆಯುತ್ತದೆ....

"ಇದೆಲ್ಲಾ ಸತ್ಯವೇಂತ?"

"ಅಯ್ಯೋ, ನಾನ್ಯಾಕೆ ಸುಳ್ಳುಹೇಳಬೇಕು? ಕೇಳು, ಪಶ್ಚಿಮ ಯುರೋಪಿನಲ್ಲಿನ ಮಹಿಳೆಯರಲ್ಲಿ ನೂರಕ್ಕೆ ತೊಂಬತ್ತೈದರಷ್ಟು ಹೆಂಗಸರ ಪಾದಗಳು ಡೊಂಕಾಗಿವೆಯಂತೆ. ಇದು ಫ್ಯಾಷನ್ನಿನ ಪರಮಾವಧಿ..."

"ಅಂತೂ ನನ್ನ ನಿನ್ನ ಪಾದಗಳ ಹಾಗೆ ಇಲ್ಲ....ನಡೆಯಲು ಒಂದು ತರಾ ಆಗುತ್ತದೇನು. ಇದೇ ರೋಗ ಇವರಿಗೆ ಹುಟ್ಟಿದ ಮಕ್ಕಳಲ್ಲಿ ಉಲ್ಬಣಿಸುತ್ತದೆ. ಮುಂದೆ ಯಾವುದೋ ತಾಯಿ ತಂದೆ ಅಪರಾಧ ಮಾಡಿದ್ದಕ್ಕೆ ಜನಾಂಗಕ್ಕೆ ಜನಾಂಗವೇ ಮರುಗಬೇಕಾಗುತ್ತೆ...'

'ಹೌದೆ?"

'ಮತ್ತೆ ನೋಡು, ಒಂದು ಕಾಲೇಜಿನಲ್ಲಿ ನಡೆಸಿದ ಸಮೀಕ್ಷೆಯಲ್ಲಿ ತಿಳಿದುಬಂದಿದೆ—ಅಲ್ಲಿನ ಹೆಣ್ಣು ಹುಡುಗಿಯರು ಚಿಕ್ಕ ಚಪ್ಪಲಿಯೊಳಗೆ ದೊಡ್ಡ ಪಾದ ತುರುಕಿಸುವ ಫ್ಯಾಷನ್ ಶೀಲೆಯರು. ಇವರಲ್ಲಿ ನೇ. ಎಂಬತ್ತು ನವಯುವತಿಯರ ಪಾದಗಳು ತಮ್ಮ ಸ್ವಾಭಾವಿಕತೆಯನ್ನು ಕಳೆದುಕೊಂಡು ವಕ್ರವಾಗುತ್ತ ಬರತೊಡಗಿವೆ...ಹಾಗೆಯೇ ಪುರುಷರದ್ದೂ ಎನ್ನು...."

'ಅಂದರೆ ಯಾವ ಫ್ಯಾಷನನ್ನೂ ಉಚಿತವಲ್ಲಾಂತ....'

'ಉಚಿತ—ಅನುಚಿತದ ಪ್ರಶ್ನೆ ಬೇರೆ. ದೇವರು ಕೊಟ್ಟಿರೋ ಸೌಂದರ್ಯದಿಂದ ತೃಪ್ತರಾಗಬೇಕ ; ಅದು ಹೊರತು ಕೃತಕ ಸೌಂದರ್ಯದಿಂದ..'

'ಓಯ್ ಇಲ್ಲಿ ಕೇಳಿ....'

"ಏನು?"

"ಒಂದು ತಮಾಷೆ...."

'ಏನಂತೆ?'

"ಇವತ್ತು ದೇವಸ್ಥಾನಕ್ಕೆ ಹೋಗ್ತಾ ಇದ್ದೆ."

"ಹ್ಞಾಂ...."

"ಯಾರೋ ಒಬ್ಬಾಕೆ ಎರಡಂಗುಲದ ಬಾಡೀ ಹಾಕಿ ಆದನ್ನು ನಾಲ್ಕೈದು ಅಂಗುಲ ಬ್ಲಾಸಿನಿಂದ ಬಿಗಿಯಾಗಿ ಬಿಗಿದಿದ್ದಳು. ಎದೆಯ ನೋ ಆರಂಗುಲ ಉಬ್ಬಿತ್ತು. ಅಷ್ಟೆ ಬಿಗಿ ಸೊಂಟದಲ್ಲೂ ಇತ್ತಮ್ಮ. ಪಾಪ ಹೊಟ್ಟೇನೂ ನಾಲ್ಕುಅಂಗುಲ .."

'ಹ್ಹಹ್ಹಹ್ಹ... ಈಗಿನ ಕಾಲ! ಮಾಡಿದ್ದೆಲ್ಲಾ ಫ್ಯಾಶನ್. ಆದರೆ ದುಃಖ ಇಂದರೆ, ತಾವು ಮಾಡಿದ ಫ್ಯಾಶನ್ ಹೇಗಿದೇಂತ ನೋಡಿಕೊಳ್ಳೋ ಗೌಜಿನಲ್ಲಿ ಮೈ ಮೇಲೆ ಮೋಟಾರು ಹಾದ್ರೂ ಗೊತ್ತಾಗೋದಿಲ್ಲಲ್ಲಾಂತ....'

"ಅದ್ಕೇ ಇರಬೇಕು, ಈಗ ಫ್ಯಾಶನ್ ನೋಡಿ ಗದಾ ಪ್ರಹಾರವಾಗ ತೊಡಗಿರೋದು....'

"ಅದ್ರೂ ಫ್ಯಾಷನ್ ಒಂದು ಸೋಂಕು ರೋಗ....ಇದನ್ನು ತಡೆಗಟ್ಟಲು ಯಾವ ಸೂಜಿ ಮದ್ದೂ ಇಲ್ಲ...'

"ಪಾಪ ಮಾಡ್ದಿದ್ದರ ಫಲ ತಿನ್ನೋ ಹಂತೆಯೇ ಫ್ಯಾಷನ್‌ನ ಫಲ ತಿನ್ನಬೇಕು ....'

'ಅಂದರೆ, ಫ್ಯಾಷನ್ ಮಹಾ ಪಾಪ ..."

'ಹ್ಹಹ್ಹಹ್ಹ...ಸರಿ ಹೋಯ್ತು ಬಿಡಿ. ಅದ್ರೆ, ನನಗೇನು, ನಿಮಗೇನು?"

"ನನಗೆ? ನಿನಗೆ?......ಮತ್ತೆನ್ನೇನು ಇದೇ...."

—ಗೋರಾ.

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು..........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ, ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,

ನವಯುಗ, ಉಡುಪಿ.

ಜಾದುಕೆಯೊನ

ಹೆಳವನಿಗೆ ಕಾಣಿದಾಡೊ ಚಿಂತೆ

ಪ್ರಧಾನಿ ಇಂದಿರಾ ಗಾಂಧಿ ಪೇಚಿನಲ್ಲಿ ಸಿಕ್ಕ ರಾಜಕಾರಣಿಯಂತಾಗಿದ್ದಾರೆ. ಬ್ರಿಟನ್ನಿನಲ್ಲಿ ವಿಲ್ಸನ್ ಸರಕಾರವು ಒಂದೆರಡು ಬಜೆಟುಗಳನ್ನು ಉಳಿಸಿ ಮುಗ್ಗರಿಸುತ್ತೆ ಎಂದು ಹೇಳುತ್ತಿದ್ದರು. ಇದರಿಂದ ಅವಹೇಳನೆ, ಟೀಕೆ, ನಿಂದೆಗಳಿಗೆ ಗುರಿಯಾದ ವಿಲ್ಸನ್ನರು ಅನಿಶ್ಚಿತತೆಯನ್ನು ದೂರ ಮಾಡಲು ಸಾರ್ವತ್ರಿಕ ಚುನಾವಣೆಯನ್ನೇ ಎದುರಿಸಿದರು—ಪರಿಣಾಮವಾಗಿ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಗೆದ್ದರು. ನಿಜ, ದೇಶದ ಸಮಸ್ಯೆಗಳಿಗೆ ಉತ್ತರ ನೀಡಲು ಅವರು ಅಸಮರ್ಥರಾಗಿದ್ದಾರೆ, ಒಂದರ ಹಿಂದೊಂದರಂತೆ ಗಂಭೀರ ಕ್ರಮ ಕೈಗೊಳ್ಳುತ್ತಿದ್ದಾರೆ. ಬ್ಯಾಂಕ್ ದರ ಸರ್ವತ ಪ್ರಮಾಣಕ್ಕೆ ತಂದರು, ಒಂದು ವರ್ಷದ ಮಟ್ಟಿಗೆ ವೇತನ ಹೆಚ್ಚಳವನ್ನು ಸ್ಥಗಿತಗೊಳಿಸಿದರು—ಆದರೂ ವಿಲ್ಸನ್ ತೂಗುತ್ತಲೇ ಇದ್ದಾರೆ. ದ್ವಿತೀಯ ಲೋಕ ಸಂಗ್ರಾಮದ ವೇಳೆಯೂ ಕಂಗಾಲಾಗದ ಬ್ರಿಟನ್ ಇಂದು ತಲೆಕೆಳಗಾಗ ತೊಡಗಿದ ದೇಶದ ಮಾನ, ಪ್ರತಿಷ್ಠೆಗಳಿಗಿಂತಲೂ ಆರ್ಥಿಕ ಪತನದಿಂದ ಎದ್ದು ಬರುವ ಪ್ರಶ್ನೆ ಮಹಾನೆನಿಸಿದೆ. ಇನ್ನುಳಿದಿರುವುದು—ಅಂತಿಮಾಸ್ತ್ರ ಪೌಂಡಿನ ಅಪಮೌಲ್ಯ ಮಾತ್ರ— ಇದಕ್ಕೂ ವಿಲ್ಸನ್ ಹಿಂಜರಿಯುವರೆಂದು ಹೇಳುವಂತಿಲ್ಲ.

ಭಾರತದ ಸ್ಥಿತಿಗತಿ ಬ್ರಿಟನ್ನಿನದಕ್ಕಿಂತ ಹೆಚ್ಚು ಭಿನ್ನವಿಲ್ಲ. ಸಿಕ್ಕಿಬಿದ್ದ ಬಹುಮತವಿರುವ ಗಾಂಧಿ ಮತ್ತೊಮ್ಮೆ ಚುನಾವಣೆಗೆ ನಿಂತರೂ ಗೆದ್ದು ಬರುವುದು ಖಂಡಿತವೇ. ಕಳೆದ ವರ್ಷದಲ್ಲಿ ಬ್ಯಾಂಕು ದರ ಸೇ. ಒನ್ನು ಮುಟ್ಟಿದೆ. ಇನ್ನು ಬ್ರಿಟನ್ನಿನಂತೆ ಅದನ್ನು ಏಕ್ಕ ಏರಿಸುವುದು ಮಾತ್ರ ಉಳಿದಿದೆ. ಆದರೆ, ಬ್ಯಾಂಕು ದರ ಏರಿಕೆಯಿಂದ ಲಾಭದ ಪ್ರಮಾಣಕ್ಕಿಂತ ಹಾನಿಯೇ ಹೆಚ್ಚುವ ನಿರೀಕ್ಷೆಯಿರುವುದರಿಂದ, ಬ್ಯಾಂಕುಗಳ ರಾಷ್ಟ್ರೀಕರಣದತ್ತ ಕೆಲವರ ಮನಸ್ಸು ಹೊರಳುತ್ತಿದೆ. ಆದರೆ, ಇದರಿಂದಲೂ ಸರಕಾರಕ್ಕೆ ಹೆಚ್ಚಿನ ಬಂಡವಾಳ ದೊರೆಯುವುದೆಂದು ನಂಬಲಾಗದಾದರೂ ಕಾಂಗ್ರೆಸ್ಸು ತನ್ನ ಮುಂದಿನ ಚುನಾವಣಾ ಘೋಷಣೆಯಲ್ಲಿ ಇದನ್ನು ಸೇರಿಸುವುದೆಂದು ನಂಬಲಾಗಿದೆ. ರೂಪಾಯಿಯ ಅಪಮೌಲ್ಯದ ಗುಣಾವಗುಣಗಳೇನೇ ಇರಲಿ ಸರಕಾರಿ ಪಕ್ಷದಲ್ಲೂ, ವಿರೋಧೀ ಪಕ್ಷಗಳಲ್ಲೂ ಇದು ತೀವ್ರ ಪ್ರತಿಕ್ರಿಯೆಯನ್ನು ಎಬ್ಬಿಸಿತ್ತು.

ಇದಕ್ಕೆ ಕಾರಣವೂ ಇಲ್ಲದಿಲ್ಲ. ಯೋಜನಾ ಸಚಿವರು, ಅರ್ಥ ಸಚಿವರು ಬಹು ಕಾಲದಿಂದಲೂ ರೂಪಾಯಿಯ ಮೌಲ್ಯ ವಿಚ್ಛೇದನದ ಪ್ರಶ್ನೆಯನ್ನು ಅಲ್ಲಗಳೆಯುತ್ತ ಬಂದಿದ್ದರು, ಅಂತಹ ಕ್ರಮ ಕೈಗೊಳ್ಳುವುದಿಲ್ಲವೆಂದು ಭರವಸೆಯನ್ನೂ ನೀಡಿದ್ದರು. ಇತ್ತ ವಿಶ್ವಾಸವನ್ನು ಹಾರಿಸುವಾಗ ಕೂಗಾಡದವರೂ ಕೈಯರ್ಗಡುವುದು ಸಹಜ. ಹೀಗೆಯೇ ಆದರೆ ಸರಕಾರದ ಯಾವ ನೂತನ ಮೇಲೆ ವಿಶ್ವಾಸವಿಡಬಹುದು ಎಂದು ಯಾರಾದರೂ ಕೇಳಬಹುದು. ಅದೇನೇ ಇರಲಿ, ಆದೀಗ ಮುಗಿದ ಪ್ರಶ್ನೆಯಾಗಬೇಕು. ಆದರೆ, ಇದರ ಹಿಂದೆ, ವೇತನ ಸ್ಥಗಿತದ ಸಂಭಾವನೆಯನ್ನು ಕೆಲವು ಮಂತ್ರಿಗಳು ಅಲ್ಲಗಳೆದಿದ್ದಾರೆ. ಇದನ್ನು ಎಷ್ಟರ ಮಟ್ಟಿಗೆ ನಂಬಬಹುದು? ಅಪಮೌಲ್ಯದಿಂದ ನಿರೀಕ್ಷಿತ ಪರಿಣಾಮ ದೊರೆಯದೆ ಹೋದರೆ ಮತ್ತೆ ಈ ಅಸ್ತ್ರವೆ? ರಾಣಿ ಹೊಡೆಯಲು ಬಳಸಿದ ಬಾಣ ಕಾಮನ್‌ವೆಲ್ತ್ ಅನಂತರ ಬಳಸಿಕೊಂಡರೆ, ಅದು ಮಹಾಪರಾಧವಾಗದು.

ಶ್ರೀಮತಿ ಗಾಂಧಿಯವರು ತನ್ನ ಸ್ವಭಾವದಿಂದ ಜನನಾಯಕಿಯೆನಿಸುವ ಹಂಬಲದಲ್ಲಿದ್ದಾರೆ. ವಿದೇಶಗಳಲ್ಲಿ ಜವಾಹರಲಾಲರ ಪುತ್ರಿ, ಅವರ ಗರಡಿಯಲ್ಲಿ ಬೆಳೆದವಳು, ರಾಜಕೀಯ ಪರಿಣತಳು ಎಂಬ ಸಾಮಾನ್ಯ ಅಭಿಪ್ರಾಯವಿದೆ; ಪರಿಸ್ಥಿತಿಗಳು ಸಮಗೊಂಡರೆ, ತಂದೆಯಂತೆಯೇ ಮಗಳೂ ಭಾರತವನ್ನು ಸರಿದಾರಿಯಲ್ಲಿ ಮುಂದೊಯ್ದಾಳು ಎಂಬ ವಿಶ್ವಾಸವೂ ಇದೆ. ಇದು ಆಕೆಗೆ ತನ್ನ ವಿದೇಶ ಯಾತ್ರೆಯ ವೇಳೆ ಮುಂದಟ್ಟಾಗಿದೆ. ಆದರೆ, ದೇಶದೊಳಗಡೆ ಇಂದಿರೆಯು ಅಷ್ಟು ಪ್ರಸಿದ್ಧಿ ಪಡೆದಿರುವುದಿಲ್ಲ. ಆಕೆಗಿಂತ ಹಿರಿಯರು, ಅನುಭವಿ ಮಂತ್ರಿಗಳ ನಡುವೆ ಇಂದಿರಾ ಇನ್ನೂ ಎಳೆ ಕೂಸು. ಆದರೂ ಕಾಂಗ್ರೆಸ್ಸಿನ ಒಂದು ಗುಂಪನ್ನು ಅಧಿಕಾರದಿಂದ ದೂರ ಮಾಡಲು ಇಂದಿರೆಯನ್ನೇ ಗದ್ದುಗೆಗೇರಿಸಲಾಯಿತು; ಆಕೆಗೆ ಈ ಪಟ್ಟ ದೊರೆಯಬೇಕೆಂದುದು ನ್ಯಾಯವಾದರೂ ಕಾಲ ಪರಿಪಕ್ವವಾಗಿಲ್ಲದಿರುವುದೇ ಆಕೆಯನ್ನು ಪೇಚಿನಲ್ಲಿ ತಳ್ಳಿದೆ. ಒಂದರ ಹಿಂದೊಂದರಂತೆ ಸಮಸ್ಯೆಗಳನ್ನು ಆಕೆ ಎದುರಿಸುತ್ತ ಬರಬೇಕಾಯಿತು. ಇವನ್ನು ಎದುರಿಸುವಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆಗಳನ್ನೂ ಗಮನಿಸದಿರುವುದು ಸಾಧ್ಯವಿಲ್ಲ. ಅಂತೂ ಇಂದಿರೆಯನ್ನು ಪ್ರಧಾನಿಯಾಗಿ ಆರಿಸುವಾಗ ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಎರಡು ಅಂಶಗಳನ್ನಿಟ್ಟುಕೊಂಡಿದ್ದರು. ಮುರಾರ್ಜಿಭಾಯಿ ಮತ್ತವರ ಪಂಗಡವು ಅಧಿಕಾರದ ಗದ್ದುಗೆಯೇರದಂತೆ ನೋಡುವುದು, ಮತ್ತು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸು ಗೆದ್ದು ಬರುವಂತೆ ಮಾಡುವುದು. ಇದಕ್ಕಾಗಿಯೇ ಶ್ರೀಮತಿ ಗಾಂಧಿ ಯೋಜನಾ ಆಯೋಗದ ಮೇಲೆ ತನ್ನ ರಾಜಕೀಯ ವರ್ಚಸ್ಸು ಬೀರ ತೊಡಗಿದ್ದಾರೆಂದೂ ವದಂತಿಯಿದೆ.

○ ○ ○

ಕರ್ನಾಟಕ—ಮಹಾರಾಷ್ಟ್ರಗಳ ಮುಖ್ಯ ಮಂತ್ರಿಗಳು ಬೆಂಗಳೂರಿನಲ್ಲಿ ತಾ. ೨ರಂದು ಒಂದಾಗಿ ನಿಯೋಜಿತ ಗಡಿ ಆಯೋಗದ ಕಾರ್ಯವ್ಯಾಪ್ತಿಯನ್ನು ಚರ್ಚಿಸಿದರು. ಇದರ ವಿವರಗಳು ಏನೇ ಇರಲಿ, ಇದಕ್ಕೆ ಪೂರ್ವಭಾವಿಯಾದ ಪ್ರಸಂಗಗಳನ್ನು ಪರಿಶೀಲಿಸಬೇಕು. ವಿ. ಪಿ. ನಾಯಕರು ದಹಲಿಗೆ ಹೋದರು, ಅಲ್ಲಿ ಪ್ರಧಾನಿ ಹಾಗೂ ಇತರ ನಾಯಕರೊಡನೆ ಗಡಿ ವಿವಾದದ ಸಂಬಂಧದಲ್ಲಿ ವಿಚಾರವಿನಿಮಯ ಮಾಡಿದರು; ಕೇಂದ್ರ ನಾಯಕರೂ ತಮ್ಮ ಅಭಿಪ್ರಾಯವನ್ನು ತಿಳಿಸಿದರಲ್ಲ. ಮುಖ್ಯವಾಗಿ ಚುನಾವಣೆಯನ್ನು ಮುಂದಿಟ್ಟುಕೊಂಡು ಯಾರೊಡನೆಯೂ ನಿಷ್ಠುರ ಕಟ್ಟಿಕೊಳ್ಳಲು ಕಾಂಗ್ರೆಸ್ಸು ವರಿಷ್ಠರು ಸಿದ್ಧರಿಲ್ಲ. ಏಕೆಂದರೆ, ಆಯೋಗ ನೇಮಕದ ನಿರ್ಧಾರವಾದೊಡನೆಯೇ ಕರ್ನಾಟಕದಲ್ಲಿ ಉಂಟಾದ ತೀವ್ರ ಪ್ರತಿಕ್ರಿಯೆ ಅವರ ಮನಸ್ಸಿಗೆ ನಾಟಿದೆ. ಇನ್ನೂ ಕನ್ನಡಿಗರನ್ನು ನೋಯಿಸಿದರೆ, ಉರಿವ ಕಿಚ್ಚಿಗೆ ತುಪ್ಪ ಸುರಿದಂತೆ; ಅಸಂತೃಪ್ತ ಕಾಂಗ್ರೆಸಿಗರ ಒಂದು ಪಂಗಡ ರಾಜ್ಯದಲ್ಲಿದೆ; ಕೇರ

(ಎಂಟನೇ ಪುಟ ನೋಡಿರಿ)

ಶ್ರುತಿ ತಪ್ಪಿದ ಗಾನ

ತಾಳ, ಲಯ, ಸ್ವರ ಎಷ್ಟು ಹಿತವಾಗಿದ್ದರೇನು,
ಶ್ರುತಿ ತಪ್ಪಿದ ಗಾನ ಕಿವಿಗೆ ಮಧುರವೆನಿಸೀತೇ?

ಮನೆ, ಬದುಕು, ಉದ್ಯೋಗ ಎಷ್ಟು ಹಸನಾಗಿದ್ದರೇನು,
ಉಳಿತಾಯ ಸಾಧಿಸದ ಬದುಕಿನ ನೆಲೆ ಭದ್ರವಾದೀತೇ?

ಉಳಿತಾಯದ ಶ್ರುತಿಯ ಹಿನ್ನೆಲೆಯಲ್ಲಿ ಬದುಕಿನ ಗಾನವನ್ನು
ನುಡಿದರೇನೇ ಬಾಳಿನಲ್ಲಿ ಸರಸತಿ ಉಳಿದೀತು.

ಬದುಕಿನ ಗಾನಕ್ಕೆ
ಉಳಿತಾಯವೇ ಶ್ರುತಿ

ಸಿಂಡಿಕೇಟ್ ಬ್ಯಾಂಕ್
ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು:
ಮಣಿಪಾಲ.
(ಮೈಸೂರು ರಾಜ್ಯ)

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. P. 18/1966

ಚೆನ್ನಪ್ಪ ಗೌಡ ಕೂಡಾ— ಅರ್ಜಿದಾರರು.

Vs.

ಹೊನ್ನಮ್ಮ, ಸೂಜಾಲು ಕುಕ್ಕಣ್ಣ ಗೌಡರ ಹೆಂಡ್ತಿ-ವ-ಅರ್ಕ್ಯ ಯಾನೆ ಸುಬ್ಬಮ್ಮ ಗೌಡರ ಮಗಳು. ಸುಳ್ಯ ತಾಲ್ಲೂಕು ಐವರ್ನಾಡು ಗ್ರಾಮದಲ್ಲಿರುವುದು.

— ಎದ್ರಿಳು.

ಈ ಮೂಲಕ ಎದ್ರಿಗೆ ಮತ್ತು ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿದಾರರು ವಾರೀಸು ಸರ್ಟಿಫಿಕೇಟು ಬಗ್ಗೆ ದಾಖಲು ಮಾಡಿದ ಅರ್ಜಿಯು ತಾ. 29-8-1966ಕ್ಕೆ ತನಿಖೆ ಬಗ್ಗೆ ಇಟ್ಟಿರುವುದರಿಂದ ಆ ಬಗ್ಗೆ ಯಾರಿಗಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿನ ಹಗಲು ಗಂಟೆ ಹತ್ತಕ್ಕೆ ಕೋರ್ಟು ಮುಂದೆ ಹಾಜರಾಗಿ ಉದಯರಿಕತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಕೋರ್ಟಿನವರಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾಗುವುದು ತಿಳಿದಿರಲಿ.

(By order of the Court)

Pundarika M. K.

Advocate for Petitioners

ಪುತ್ತೂರು, 18-7-66

ಪುತ್ತೂರು II nd A. ಮುನ್ಸಿಫ್ ಕೋರ್ಟಿನಲ್ಲಿ

R. E. P. 218/66. O. S. 255/62.

ಅನಂತಮತಿ ಅಂಬ ಕೂಡಾ

— ಅರ್ಜಿದಾರರು

ನಾರ್ಣಪ್ಪ ಪೂಜಾರಿ ಕೂಡಾ— ಎದ್ರಿರು.

1ನೇ ಎದ್ರಿ ನಾರ್ಣಪ್ಪ ಪೂಜಾರಿ, 4 ನೇ ಎದ್ರಿ ದಾಸಪ್ಪ ಪೂಜಾರಿ.

ಶಿವಪ್ಪ ಹೆಂಗ್ಸಿನ ಮಕ್ಕಳು, ಪುತ್ತೂರು ತಾಲ್ಲೂಕು ಕಬಕ ಕಬಕ ಗ್ರಾಮ ಕೇವಳ.

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ಅರ್ಜಿದಾರರು ಸದ್ರಿ ನಮ್ಮರ ಮೂಲಕ ಹಕ್ಕಿನ ಸ್ಥಿರಾಸ್ತಿಯನ್ನು ಏಲಂಗೆ ಇಟ್ಟಿರುತ್ತಾರೆ. ಸದ್ರಿ ಏಲಂನ ಶರ್ತುಗಳನ್ನು ನಿರ್ಣಯಿಸುವರೆ ತಾರೀಕು 27-8-1966ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸಿಕೊಳ್ಳತಕ್ಕದ್ದೆಂತ ಈ ಮೂಲಕ ನಿಮಗೆ ತಿಳಿಸಲಾಗುತ್ತದೆ.

(By order of the Court)

P. A. ARIGA.

Advocate for Petitioner.

ಮೊಕ್ಕಾಂ: ಪುತ್ತೂರು, ತಾ. 1-8-1966

ಕವಲು ದಾ…
ರಾಜದಂಡವಿ…

"ವಿಯತ್ನಾಮದಲ್ಲಿ ಶಾಂತಿ ಸ್ಥಾಪನೆಯ ಪ್ರಯತ್ನಗಳನ್ನು ಸ್ವಾಗತಿಸುತ್ತೇವೆ. ಆದರೆ ಅಲ್ಲಿನ ಕಮ್ಯೂನಿಸ್ಟ್ ಆಕ್ರಮಣವೆದುರಿಸಲು ನಾವು ಬದ್ಧಕಟಿಯಾಗಿದ್ದೇವೆ" ಎನ್ನುವ ಶಾಂತಿಪ್ರಿಯ ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕ್.

ವಿಯತ್ನಾಮ—

ಹಲವು ಸಮಯಗಳಿಂದದು ಸಮರಾಂಗಣ. ಉತ್ತರ—ದಕ್ಷಿಣ ವಿಯತ್ನಾಮಗಳ ಹೋರಾಟವೀಗ ಬಂಡವಳ ಶಾಹಿ—ಸಾಮ್ಯವಾದಿಗಳ ನಡುವಣ ಸಂಘರ್ಷಣೆ.

ಹೋರಾಟ, ಧಾಳಿ, ಕೊಲೆ, ಸುಲಿಗೆ ರಕ್ತನದಿ ಪ್ರವಹನ, ವಿತ್ತ ಜೀವಿತಗಳಿಗೆ ಹಾನಿ-ನಷ್ಟ—ಇದು ಸಹಜ. ಯುದ್ಧದಲ್ಲಿ ಇವೆಲ್ಲವೂ ಅನಿವಾರ್ಯ.

ಪರಸ್ಪರ ದೋಷಾರೋಪಣೆಯನ್ನು ಹೊರಿಸುತ್ತ ಕಾದಾಡುವುದೂ ಸಮರ ರಂಗದ ಸಹಜ ಕಾರ್ಯಕ್ರಮ.

—ನಮಗೆ ಯುದ್ಧ ಬೇಡ, ಆಕ್ರಮಣಕಾರರನ್ನು ಹೊರದಬ್ಬುವುದೇ ನಮ್ಮ ಉದ್ದೇಶ—ಇದೂ ಒಪ್ಪಬೇಕಾದುದೇ.

—ಶಾಂತಿ ಮಂತ್ರವನ್ನು ಪಠಿಸುತ್ತಲೇ ಉತ್ತರ—ದಕ್ಷಿಣಗಳು ಪರಕೀಯ ರಾಷ್ಟ್ರಗಳ ಹಸ್ತಕರಾಗಿ ಹೋರಾಡುತ್ತವೆ—ಇದೀಗ ಅಮೆರಿಕೆ ಮತ್ತು ಕೆಂಪು ಚೀನಾಗಳ ಹೋರಾಟವೆನಿಸಿದೆ—ಕೆಂಪು ಚೀನಾ ಕೈಲ್ಲವಾದರೂ ಉತ್ತರ ವಿಯತ್ನಾಮಕ್ಕೆ ಹೆಚ್ಚಿನ ಕಮ್ಯುನಿಸ್ಟ್ ದೇಶಗಳ ಬೆಂಬಲವಿದೆ.

ವಿಯತ್ನಾಮದ ಪ್ರಶ್ನೆ—ಹೋರಾಟ ಚಿಕ್ಕದು. ಒಂದು ಬೆಂಕಿ ಕಿಡಿ. ಆದರಿಂದ ಅದು ಉರಿಯ ತೊಡಗಿದೆ. ಇದೇ ರೀತಿ ಕೆಲ ಸಮಯ ಕಳೆದರದು ದಳ್ಳುರಿಯಾಗುತ್ತದೆ— ವಿಯತ್ನಾಮವನ್ನು ಮಾತ್ರವಲ್ಲ, ಆಗ್ನೇಯ ಏಶ್ಯಾವನ್ನಲ್ಲ, ಇಡಿಯ ಜಗತ್ತನ್ನು ಅದು ಆಹುತಿಗೊಳ್ಳುತ್ತಿದೆ— ಮೂರನೆಯ ಲೋಕ ಸಂಗ್ರಾಮದ ಆರಂಭವೇ ಆಟಂ—ಹೈಡ್ರೋಜನ್ ಬಾಂಬುಗಳಿಂದಲಾಗುತ್ತದೆ— ಕೊನೆ ನೋಡಲು ಉಳಿವವರು ಯಾರೆಂದು ಹೇಗೆ ಹೇಳಬಹುದು?

ಅಲ್ಲಲ್ಲಿ, ದೇಶ ದೇಶಗಳ ನಡುವಣ ಸ್ಥಳೀಯ ಯುದ್ಧವೂ ಈ ಬೀತಿಗೆ ಬೆಂಬಲ ನೀಡುವುದು. ಬೇಕಾಗಿಯೂ ಬೇಡವಾಗಿಯೂ ದುರ್ಬಲ ರಾಷ್ಟ್ರಗಳು—ಸ್ವನಿಕ ದೃಷ್ಟಿಯಲ್ಲಿ — ಯಾವುದಾದರೊಂದು ಪಕ್ಷವನ್ನು ವಹಿಸಲೇ ಬೇಕಾಗುತ್ತದೆ, ಅಥವಾ ತಟಸ್ಥರೆಲ್ಲರೂ ಒಂದಾಗಿ ನಮ್ಮ ಶಕ್ತಿ—ದೃಢ ನೀತಿಯಿಂದ ದೂರವುಳಿದರೆ, ತಲೆಗೆ ಬರುವುದು ಬೆರಳಲ್ಲಿ ಹೋದೀತು.

ವಿಯತ್ನಾಮ ಶಾಂತಿಯ ಪ್ರಶ್ನೆ ಇಂದು ಅತ್ಯಂತ ಮುಖ್ಯವಾದುದು. ಅಲ್ಲಿ ಹೋರಾಟ ಆರಂಭವಾದಂದೇ ಸಂಯುಕ್ತ ರಾಷ್ಟ್ರದ ಪ್ರಧಾನ ಕಾರ್ಯದರ್ಶಿ ಯು. ಥಾ. ಶಾಂತಿಯ ಪ್ರಸ್ತಾಪ ಮಾಡಿದ್ದರು. ಆದರೆ ಅಂದದು ಇಷ್ಟೊಂದು ಗಂಡಾಂತರಕಾರಿಯಾದೀತೆಂದು ಅಮೆರಿಕೆ ಭಾವಿಸಿರಲಿಲ್ಲ; ಕೆಂಪು ಚೀನಾಕ್ಕೂ ಇದು ಕಲ್ಪನಾತೀತ.

ಭಾರತದ ಪ್ರಧಾನಿ ಇಂದಿರಾ ಗಾಂಧಿಯವರು ಶಾಂತಿ ನಿಯೋಗದ ಸಂಯೋಜಕರಾಗಿ ಮುಂದುವರಿದರು—ಜಿನೇವಾ ಪರಿಷತ್ತು ಕೂಡಲಿ ಎಂದರು. ನಿಜ, ಎಲ್ಲಿಡೆಯೂ ಇದಕ್ಕೆ ಸ್ವಾಗತ. ಹೋರಾಟ ನಿಲ್ಲಿಸುವ ಮಾತು ಯಾರೂ ಎತ್ತಲಿಲ್ಲ. ಏನಾದರೂ ಮಾಡಲು ಮುಂದೆ ಬಂದಾಗ ಏನನ್ನಾದರೂ ಬಲಿಕೊಡಬೇಡವೆ?

ಜಿನೇವಾ ಪರಿಷತ್ತು ಎರಡು ಕೀಲಿಗಳಿಂದ ಕೂಡಿದೆ. ಒಂದು ಬ್ರಿಟನ್ ಮತ್ತೊಂದು ಸೋವಿಯತ್.

ಸೋವಿಯತ್ ರಶ್ಯ ಭಾರತದ ಸಲಹೆಯನ್ನು ಕೇಳಲಿಲ್ಲ. ಅದು ಮುಂದೆ ಮಾಡಿದ ಕಾರಣವೊಂದೆ — ಅಮೆರಿಕೆಯು ಉತ್ತರ ವಿಯತ್ನಾಮದ ಮೇಲೆ ಬಾಂಬುದಾಳಿ ಮಾಡುವಾಗ, ವಿತ್ತ ಜೀವಿತಗಳಿಗೆ ಹಾನಿ ತಂದೊಡ್ಡುತ್ತಿರುವಾಗ ಸೇನೆಯನ್ನು ಹೆಚ್ಚಿಸುತ್ತಿರುವಾಗ ನೀವು ಹೋರಾಡಬೇಡಿರೆಂದು ಉತ್ತರ ವಿಯತ್ನಾಮಕ್ಕೆ ಹೇಗೆ ಹೇಳುವುದು? ಶಾಂತಿಯ ಬೇಡಿಕೆ ಉತ್ತರ ವಿಯತ್ನಾಮದಿಂದ ಬಂದರೆ ಆಗ ಪರ್ಯಾಲೋಚಿಸಬಹುದು.

ಇದು ಒಂದು ರೀತಿಯಿಂದ ಸರಿಯೇ. ನಾವು ಮಾಡಿದ್ದೇನು? ಸಮರ ವಿರಾಮ—ವಿದೇಶೀ ಸೇನೆಯ ನಿರ್ಗಮನ—ಇವು ಯಾವುದೇ ಶಾಂತಿ ಮಾತುಕತೆಯ ಮೊದಲ ಆವಶ್ಯಕತೆಗಳು. ಇದನ್ನು ಅಲ್ಲಗಳೆಯಲಾರದೆ ಇಂದಿರಾಗಾಂಧಿ ಒಪ್ಪಲೇಬೇಕಾಯಿತು. ವಿಯತ್ನಾಮದಲ್ಲಿ ಅಮೆರಿಕನ್ ಬಾಂಬುದಾಳಿ ನಿಲ್ಲಬೇಕು.

—ಅಂದು ಲಾಲ್ ಬಹದೂರ್ ಶಾಸ್ತ್ರಿ ಅಮೆರಿಕನ್ನರ ಅವಕೃಪೆಗೆ ಪಾತ್ರರಾದರು. —ಕೊನೆಗೂ ಅಮೆರಿಕೆಯನ್ನು ಕಾಣದೇನೇ ತಾಷ್ಕೆಂಟ ವೀರರಾದರು.

—ಇಂದು ಇಂದಿರಾ ಇದನ್ನೇ ಬೆಂಬಲಿಸಿದ್ದಾರೆ. ಭಾರತ ಸರಕಾರದ ನೀತಿ ಬದಲಾಗಿಲ್ಲವೆಂಬುದನ್ನುಳಿದರೆ ಮತ್ತಾವ ದೃಷ್ಟಿಯಿಂದಲೂ ಇಂದಿರೆಯ ಶಾಂತಿ ಪ್ರಸ್ತಾಪ ಪ್ರಯೋಜನಕಾರಿಯಾಗಲಿಲ್ಲ.

ಬ್ರಿಟನ್ ಪ್ರಧಾನಿ ವಿಲ್ಸನ್‌ರೂ ಇದೇ ರೀತಿ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ರಶ್ಯ ನಿರ್ಗಮಿಸಿದರು.

ಭಾರತ—ಪಾಕ್ ಹೋರಾಟದ ವೇಳೆ ಶಾಂತಿಯ ಬಗ್ಗೆ ತೀವ್ರ ಕಳಕಳಿ ವಹಿಸಿದ ರಶ್ಯ ವಿಯತ್ನಾಮದ ಬಗ್ಗೆ ಏಕೆ ಆಸಕ್ತವಾಗಿಲ್ಲ? ಅದು ಸೈಗಾಟ್ಟುವುದೇ ತಡ, ಜಿನೇವ ಪರಿಷತ್ತು ಸೇರುತ್ತದೆ—ಹಾಗಿರುವಾಗ ಅದೇಕೆ ಸ್ಪಷ್ಟವಾಗಿ ನಿರಾಕರಿಸುತ್ತದೆ?

ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಉತ್ತರ ವಿಯತ್ನಾಮವಿಂದು ಕೆಂಪು ಚೀನಾದ ಮುಷ್ಟಿಯಲ್ಲಿದೆ.

ಕೆಂಪು ಚೀನಾ—ರಶ್ಯಗಳ ಸಂಬಂಧ ಜಗಜ್ಜನಿತ. ತನ್ನ ಮಾತಿಗ ಪರ್ಯಾಲೋಚನೆಯ ಸ್ವಾಗತವೂ ದೊರೆಯದೆ ಹೋದರೆ, ಚೀನಾದ ಕೈಯೇ ಮೇಲಾಗುವುದಲ್ಲವೆ? ತಿಳಿತಿಳಿದೂ ಏಕೆ ಗುಂಡಿಗಿಳಿಯಬೇಕು?

ಅದಕ್ಕಾಗಿ ಶಾಂತಿಯ ಆಶಯ ಉತ್ತರ ವಿಯತ್ನಾಮ ವ್ಯಕ್ತಪಡಿಸಬೇಕು.

ಯು. ಥಾ ಮತ್ತೆ ಸೋವಿಯತ್ ನಾಯಕರನ್ನು ಭೆಟ್ಟಿಯಾದರು. ಶಾಂತಿ ಸ್ಥಾಪನೆಯ ಸಾಧ್ಯತೆಯನ್ನು ಚರ್ಚಿಸಿದರು. ಆದರೆ, ಕೊಸಿಗಿನ್ ಅಚಲ ನಿಲುವು ತಳೆದಿದ್ದಾರೆ— ಅರೆಯ ಎದೆಯಿಂದ ನೀರ ಸಲೆ ಚಿಮ್ಮಲಿಲ್ಲ— ಅವರವರ ರಾಜಕಾರಣದ ಚಿಂತೆ ಅವರವರಿಗೆ.

ಅತ್ತ ಅಮೆರಿಕ—

ಶಾಂತಿ ಸ್ಥಾಪನೆಯ ಯಾವ ಪ್ರಯತ್ನವನ್ನೂ ಸ್ವಾಗತಿಸುತ್ತದೆ.

—ಪ್ರಯತ್ನ ಮಾಡಬೇಕು—ಪರರು. ತಾನು ಅದನ್ನು ಸ್ವಾಗತಿಸುವುದು ಮಾತ್ರ.

—ಇದರಿಂದ ಏನು ಲಾಭ?

ಭಾರತ — ಪಾಕ್ ಹೋರಾಟದಲ್ಲಿಯೂ ಅಮೆರಿಕನ್ ನೀತಿ ಇದೇ—ನಿಜವಾದ ಆಕ್ರಮಣಕಾರ ಪಾಕಿಸ್ತಾನವೆಂದು ಹೇಳಲು ಅದು ಇಂದಿಗೂ ಸಿದ್ಧವಿಲ್ಲ.

—ಇತ್ತೀಚೆಗಿನ ಒಂದು ಘಟನೆ.

ಅಮೆರಿಕೆಯ ವಿದೇಶ ಮಂತ್ರಿ ಹೊಣೆಗೆಟ್ಟ ಹೇಳಿಕೆ ಕೊಟ್ಟರು—

• ಭಾರತ—ಪಾಕಿಸ್ತಾನಗಳ ಹೋರಾಟಕ್ಕೆ ಜಾತೀಯತೆಯೇ ಕಾರಣವಂತೆ!

—ಅಂದು ಕಾಮನ್‌ವೆಲ್ತಿನ ರಾಣಿ ಬ್ರಿಟನ್ನದ ಪ್ರಧಾನಿ ಅಂದಿದ್ದರು—ಭಾರತವೇ ಅಂತಾರಾಷ್ಟ್ರೀಯ ಗಡಿಯನ್ನು ಮೊದಲು ಮೀರಿ ಪಾಕಿಸ್ತಾನದ ಮೇಲೆ



ಅಣುಶಕ್ತಿಯುತ ಅಮೆರಿಕನ್ ಜಲಾಂತರ್ಗಾಮಿ "ಸ್ಯಾಮ್ ರೇಬರ್ನ್"—ಯುದ್ಧ ಕಾರ್ಯಕ್ಕಿಂತ ಈ ಜಲಾಂತರ್ಗಾಮಿಯು ಶಾಂತಿ ಕಾರ್ಯದಲ್ಲಿ ಮಗ್ನವಾಗಿದೆ. ಆದರೆ, ಮುಂದೆ ಸಮರದಲ್ಲೂ ಅಣುಶಕ್ತಿಯುತ ನೌಕೆಗಳು ಭಾಗವಹಿಸುವ ದಿನ ಬಾರದುಳಿದೀತೆ?

ಕೆಂಪು ದೀಪ

ದ ಶ್ವೇತಛತ್ರ

ಆಕ್ರಮಣ ಮಾಡಿದೆ—

—ಮುಂದೆ ತಿದ್ದಿಕೊಂಡರು ಎನಿ.

—ತಾವು ಯಾರ ಪಕ್ಷ ಹಿಡಿಯುತ್ತೇವೆಯೋ ಅವರು ಸಂಭಾವಿತರು, ದೇವತಾ ಮನುಷ್ಯರು ಉಳಿದವರೆಲ್ಲ ರಾಕ್ಷಸರು

—ಇದು ಇವರ ನೀತಿ.

ವಿಯೆಟ್ನಾಮಿನಲ್ಲಿ ಅಮೆರಿಕೆಯು ಹೋರಾಡುತ್ತಿದೆ—

—ಈಗ ವಿಯೆಟ್ನಾಮು ಅದರ ಮಾನ ಪ್ರತಿಷ್ಠೆಗಳ ಪ್ರಶ್ನೆಯೆನಿಸಿದೆ. ಕಜ್ಜಿ ಬೆಳೆದು ವ್ರಣವಾಗಿದೆ.

—ತಾನು ಬಾಂಬ ದಾಳಿ ನಿಲ್ಲಿಸಿದರೆ, ಸೇನೆ ಹಿಂತೆಗೆದರೆ ತನ್ನ ಮಾನಕ್ಕೆ ಕುಂದು.

—ಅತ್ತ ಕೆಂಪು ಚೀನಾವೂ ಹೀಗೆಯೇ ತಿಳಿಯುತ್ತದೆ.

—ಶಾಂತಿಯ ಮಾತು ಕೆಂಪು ಚೀನಕ್ಕಿಂತಲೂ ಇಂದು ಹೆಚ್ಚು ಬೇಕು ಅಮೆರಿಕೆಗೆ. ಕಮ್ಯೂನಿಸ್ಟ್ ತತ್ವದ ವಿರುದ್ಧ ಅದು ಹೋರಾಡುವುದು ನಿಜ. ಆದರೆ, ಎಲ್ಲಿ ಅಮೆರಿಕೆ, ಎಲ್ಲಿ ವಿಯೆಟ್ನಾಮು?

ಭಾರತ ಏಕ ಪಕ್ಷೀಯವಾಗಿ ಪಾಕಿಸ್ತಾನದೊಡನೆ ವೈತ್ರಿಯುತ ನಿಲುವು ತಳೆಯಬೇಕೆನ್ನುವ ಇವರು ಏಕ ಪಕ್ಷೀಯವಾಗಿ ಸಮರ ವಿರಾಮವನ್ನೇಕೆ ಸಾಧಿಸಬಾರದು? ಇಷ್ಟೆಲ್ಲ ರಾಷ್ಟ್ರಗಳು ಕರೆ ನೀಡುವಾಗ ಆ ಮಾತಿಗೆ ಬೆಲೆಯಿತ್ತು ನೆಂದು ತನ್ನ ಮೂಗನ್ನೇಕೆ ಉಳಿಸಿಕೊಳ್ಳಬಾರದು?

ಇದೂ ರಾಜಕೀಯದ ಚದುರಂಗದಾಟ.

ಅದೇ ರೀತಿಯ ರಾಜತಂತ್ರಾಂಗ ಕಾರ್ಯದರ್ಶಿ ಡೀನ್ ರಸ್ಕ್ ಹೇಳುತ್ತಾರೆ—ವಿಯೆಟ್ನಾಮಿನಲ್ಲಿ ಶಾಂತಿ ಸ್ಥಾಪಿಸಲು ಎಲ್ಲ ಬಗೆಯ ಪ್ರಯತ್ನಗಳನ್ನೂ ನಾವು ಸ್ವಾಗತಿಸುತ್ತೇವೆ. ಅವನ್ನು ತಾಳ್ಮೆಯಿಂದ ಪರಿಶೀಲಿಸುತ್ತೇವೆ. ಆದರೆ, ಅಲ್ಲಿ ಕಮ್ಯೂನಿಸ್ಟ್ ಆಕ್ರಮಣವನ್ನೆದುರಿಸಲು ಸದಾ ಕಾಲ ಸಿದ್ಧರಾಗಿಯೇ ಇರುತ್ತೇವೆ.

ಅತ್ತ ಹೋಚಿ ಮಿನ್ಹ ಸಾರುತ್ತಾರೆ—ಅಮೆರಿಕನ್ ಸೇನೆ ವಿಯೆಟ್ನಾಮಿನಿಂದ ಹೊರನಡೆಯದೆ ಸಂಧಾನವಿಲ್ಲ. ಚೀನಾದ ಬೆಂಬಲ ಅವರಿಗಿದೆ ಕಮ್ಯೂನಿಸ್ಟ್ ರಾಷ್ಟ್ರಗಳ ನೈತಿಕ ಬೆಂಬಲ ವಿಶ್ವಾಸಗಿದೆ

ಈ ವಿಸಂಗತಿಯಲ್ಲಿ ಸಂ. ರಾ. ಸಂಘದ ಹೊಣೆಗಾರಿಕೆ ಹೆಚ್ಚಿದೆ. ಯು. ಥಾಂಟ್ ರೋಸಿ ಹೋಗಿದ್ದಾರೆ ಅವರ ಪದವಿ ದೊಡ್ಡದು, ಆದರೆ ಅಧಿಕಾರವಿಲ್ಲದ ಶ್ವೇತಛತ್ರದ ಓರೆ ಯಾರಿಗೆ ಪ್ರಿಯವಾಗಿದೆ? ಅವರ ಅವಧಿ ಇದೇ ವರ್ಷ ಮುಗಿಯಲಿದೆ. ಎರಡನೆ ಅವಧಿಗೆ ಅವರು ಎಂದೂ ಹುದ್ದೆ ಬಯಸುವುದಿಲ್ಲ, ಅವಧಿಗೆ ಮೊದಲೇ ರಾಜಿನಾಮೆ ನೀಡುವ ಪ್ರಮೇಯವೂ ಬಂದೊದಗಬಹುದು. ಆದರೆ, ಒಂದು ಮಾತು ನಿಜ—ಇನ್ನು ಮುಂದೆ ಈ ಹುದ್ದೆಗೆ ಜನ ಆರಿಸುವುದೇ ತಾಪತ್ರಯವೆನಿಸಬಹುದು!

ಜನರಾಜ್ ವಾರಪತ್ರಿಕೆಯ ಉದ್ಘಾಟನೆ

ಕಳೆದ ತಾ॥ ೨೨ರಂದು ಕೋಟೆಕಾರಿನಲ್ಲಿ ಹೊಸತಾಗಿ ಪ್ರಕಟಗೊಳ್ಳಲಿರುವ ಜನರಾಜ್" ಪತ್ರಿಕೆಯ ಉದ್ಘಾಟನಾ ಸಮಾರಂಭವು ಮಂಗಳೂರಲ್ಲಿ ಪದ್ಮಶ್ರೀ ಡಾ|| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ, ನವಭಾರತ ಸಂಪಾದಕ ಶ್ರೀ ವಿ. ಎಸ್. ಕುಡ್ವಾರವರಿಂದ ನೆರವೇರಿತು

ಪ್ರಾರಂಭದಲ್ಲಿ "ಜನರಾಜ್" ಪತ್ರಿಕೆಯ ಸಂಪಾದಕ ಶ್ರೀ ಎನ್. ಆರ್. ಉಭಯರವರು ಅತಿಥಿಗಳನ್ನು ಸ್ವಾಗತಿಸಿ, ಶುಭಕೋರಿ ಬಂದ ಸಂದೇಶಗಳನ್ನು ಓದಿದರು ಶ್ರೀ ಬಿ. ಎಂ ಇದಿನಬ್ಬನವರು ಸಭಿಕರ ಪರವಾಗಿ ಮಾತಾಡುತ್ತ 'ಜನರಾಜ್' ವಾರಪತ್ರಿಕೆಯ ಸ್ಥಾಪನೆಯನ್ನು ಸ್ವಾಗತಿಸಿದರು.

ಶ್ರೀ ಕುಡ್ವಾರವರು ಉದ್ಘಾಟಿಸುತ್ತಾ ವಾರ್ತಾ ಪತ್ರಿಕೆಗಳು ಸುದ್ದಿಗಳನ್ನಾಗಲೀ ಅಥವಾ ಇನ್ನಾವುದೇ ಲೇಖನಗಳನ್ನಾಗಲೀ ಪ್ರಕಟಿಸುವಾಗ, ಅವುಗಳನ್ನು ಇದಕ್ಕಿದ್ದಂತೆಯೇ ಪ್ರಕಟಿಸಬೇಕಲ್ಲದೆ, ಓದುಗರ ಭಾವೋದ್ರೇಕಗೊಳಿಸುವ ರೀತಿಯಲ್ಲಿರಬಾರದು' ಎಂದು ನುಡಿದರು.

ಅಧ್ಯಕ್ಷರು ಮಾತಾಡುತ್ತ, ಇಂದಿನ ಜನಜೀವನದಲ್ಲಿ ಪತ್ರಿಕೆಗಳ ಮಹತ್ವ ಬಹಳಷ್ಟಿದೆ ಎಂದೂ ಪತ್ರಿಕೆಗಳ ಧ್ಯೇಯ ಉತ್ತಮವಾಗಿರಬೇಕೆಂದೂ ಹೇಳಿದರು ಕೊನೆಯಲ್ಲಿ ಸಂಪಾದಕರು ವಂದನಾರ್ಪಣೆಗೈದರು.



"ವಿಯೆಟ್ನಾಮಿನಲ್ಲಿ ಶಾಂತಿ ನೆಲಸಬೇಕು, ನನ್ನ ಮೂಗು ಉಳಿಯಬೇಕು, ಕಮ್ಯುನಿಸ್ಟ್ ಮೂಗು ಹರಿಯಬೇಕು ಹೇಗೆ?" ಎಂಬುದೇ ಬೃಹದ್ ಚಿಂತೆ ಅಧ್ಯಕ್ಷ ಲಿಂಡನ್ ಬಿ ಜಾನ್‌ಸನ್ನರಿಗೆ.



"ಪ್ಯಾಟಾ"ವೆಂಬ ಹೊಸ ಮಾದರಿಯ ಅಮೆರಿಕನ್ ವಾಹನವಿದು. ನೆಲ ಜಲಗಳೆರಡರಲ್ಲಿ ೧½ ಟನ್ ಭಾರವೆಳೆಯುವ ಈ ಪ್ಯಾಟಾ ಅಮೆರಿಕನ್ ಸೇನೆಯ ಪ್ರಮುಖಾಂಗವೆನಿಸುವ ನಿರೀಕ್ಷೆಯಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಸಾಧನವು
ಬೆಲೆ. ರೂ.ಎರಡು ಉತ್ತಮ ಪ್ರತಿ-ರೂ ಎರಡೂವರೆ (ಟ.ವ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗ ...
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ...
ಬೆಲೆ.ರೂ. 1-25 (ಟ. ವ ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮಶ್ಲೋಕ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಶ್ಲೋಕಗಳೂ ಅನುವಾದದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ... ಆಫೀಸು
ನವಯುಗ ಪ್ರೆಸ್, ಉಡುಪಿ

ಮಿಡು

ಹೇಳುವವನಿಗೆ ಕೇಳಿದಾರೋ ಚಿಂತೆ

(ಐದನೇ ಪುಟದಿಂದ)

ಳ ಕಾಂಗ್ರೆಸ್ಸಿನಂತೆಯೇ ಕನ್ನಡ ಕಾಂಗ್ರೆಸ್ಸು ಸ್ಥಿತಲೆಯುತ್ತಿದ್ದರೆ ಕೇಂದ್ರಕ್ಕೆ ತುಂಬಿ ಬಾರದ ಹಾನಿ.

ಕನ್ನಡಿಗರ ನಿಯೋಗವೊಂದು ಪ್ರಧಾನಿಯವರನ್ನು ಡಾ| ಆಳ್ವಾರ ನಾಯಕತ್ವದಲ್ಲಿ ಕಂಡು ಈ ಸಂಬಂಧದಲ್ಲಿ ವಿಚಾರ ವಿನಿಮಯ ಮಾಡಿತು. ಮುಖ್ಯಮಂತ್ರಿಗಳ ಸಭೆಯಲ್ಲಿ ಒಮ್ಮತದ ನಿರ್ಧಾರವಾಗುವುದು ಕಠಿನವೆಂಬ ಎಲ್ಲರಿಗೂ ತಿಳಿದಿರುವ ಸಂಗತಿಯನ್ನು ಅವರಿಗೆ ತಿಳಿಸಿತು. ಅದಕ್ಕೆ ಇಂದಿರಾ ಏನೆಂದರು? ಅವರಿಗೂ ಹಾಗೇ ಅನಿಸುತ್ತದಂತೆ! ಆದುದರಿಂದ ಗಡಿ ವಿವಾದ ಪರಿಹಾರಕ್ಕೆ ಸೂಕ್ತ ಸಲಹೆ ನೀಡಬೇಕಂತೆ!

ಎಂತಹ ಸಲಹೆ ಅವರು ಬಯಸಿಯಾರು? ವಿ. ಪಿ. ನಾಯಕರು ಒಪ್ಪಲಾರದ ಸಲಹೆಗಳು ಸಮಸ್ಯಾ ಪರಿಹಾರಕ್ಕೆ ಪೋಷಕವಾಗಲಾರವು. ಅಂದರೆ, ಮಹಾರಾಷ್ಟ್ರೀಯರು ಕೇಳುವಷ್ಟು ಕನ್ನಡದ ಗಂಡು ನೆಲವನ್ನು ಬಿಟ್ಟು ಕೊಡಲು ಕರ್ನಾಟಕದ ಜನರ ಮನವೊಲಿಸುವುದೊಂದೇ ದಾರಿ! ನಾಯಕರಿಂದ ಇಂತಹ ಸಲಹೆಯನ್ನು ಇಂದಿರಾಜಿ ನಿರೀಕ್ಷಿಸಿಯಾರೆ?

ಈಗ ಇರುವ ದಾರಿಯೊಂದೇ—ಉಭಯ ಮುಖ್ಯಮಂತ್ರಿಗಳಲ್ಲಿ ಒಮ್ಮತ ಸಾಧ್ಯವಾಗದಿದ್ದರೆ, ಗಡಿ ಪ್ರಶ್ನೆ ಮುಗಿದ ಪ್ರಶ್ನೆಯೆಂದು ಘೋಷಿಸಿ ಬಿಡುವುದು—ಮತ್ತೂ ಮತ್ತೂ ಇದನ್ನು ಜಗಿಯುವ ಅವಕಾಶ ನೀಡದಿರುವುದು. ಆದರೆ, ಖೇದದ ಸಂಗತಿಯೆಂದರೆ, ನಮ್ಮ ಪ್ರಜಾಪ್ರಭುತ್ವದಲ್ಲಿ ಹೊಸ ಶಾಸನ ಬರುವುದಕ್ಕಿಂತ ಇರುವ ಶಾಸನಗಳಿಗೆ ಬರುವ ತಿದ್ದುಪಡಿಗಳೇ ಹೆಚ್ಚು. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಅಂತಿಮ ನಿರ್ಧಾರವೆಂಬುದಿಲ್ಲವೆಂಬ ತತ್ವಕ್ಕೆ ನೇಣು ಹಾಕಿಕೊಳ್ಳುವಷ್ಟು ಪ್ರಜಾಪ್ರಭುತ್ವವಾದಿಗಳು ನಾವು!

o o o

ಸೋವಿಯತ್ ರಶ್ಯದಲ್ಲಿ ಪ್ರಧಾನಿ ಅಲೆಕ್ಸಿ ಕೊಸಿಗಿನ್ನರು ನಿವೃತ್ತರಾಗುವರು ಎಂಬ ವಾರ್ತೆ ದಟ್ಟವಾಗಿ ಎರಡೇ ದಿನಗಳಲ್ಲಿ ಹರಡಿತು. ಸುಪ್ರೀಮ ಸೋವಿಯತ್ ಸಭೆ ಸೇರುವುದರ ಹಿನ್ನೆಲೆಯಲ್ಲಿ ಈ ಸುದ್ದಿ ಹುಟ್ಟಿಕೊಂಡಿತ್ತು. ಇದಕ್ಕೆ ಒಂದಲ್ಲ, ಮೂರು ಕಾರಣಗಳೂ ಇವೆ. ಮೊದಲನೆಯದಾಗಿ, ಅನಾರೋಗ್ಯದ ಕಾರಣವನ್ನು ಮುಂದಿಟ್ಟುಕೊಂಡು ಅವರು ರಾಜಿನಾಮೆ ನೀಡುವ ಮನ ಮಾಡಿದ್ದರು; ಎರಡನೆಯದಾಗಿ ಪ್ರಧಾನಿ ಇಂದಿರಾ ಗಾಂಧಿಯವರು ಭಾರತವನ್ನು ಸಂದರ್ಶಿಸಲು ಅವರಿಗೆ ಆಮಂತ್ರಣ ನೀಡಿದಾಗ, ತನ್ನ ಅಧಿಕಾರ ಮುಂದುವರಿಕೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದರು, ಮೂರನೆಯದು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಸೋವಿಯತ್ತಿನ ಸುಪ್ರೀಮಿನಲ್ಲಿ ಅನಿರೀಕ್ಷಿತಗಳೇ ನಡೆಯುವುದು ಹೆಚ್ಚು. ಅದು ಎಷ್ಟೋ ಜನರನ್ನು ಬೆಳಕಿಗೆ ತಂದಿದೆ, ಬೆಳಕಿನಿಂದ ಕತ್ತಲೆಗೆ ತಳ್ಳಿದೆ.

ಈಗ ನಡೆದುದೂ ಇದೇ. ಮೂರನೆಯದೇ ನಿಜವಾಯಿತು. ಅಲೆಕ್ಸಿ ಕೊಸಿಗಿನ್ ನಿವೃತ್ತರಾಗಿ ಮೂಲೆ ಪಾಲಾಗುವರೆಂಬ ಸುದ್ದಿಯನ್ನು ಸುಪ್ರೀಮ ಸೋವಿಯತ್ ಸುಳ್ಳಾಗಿಸಿತು. ಮತ್ತೆ ಅವರನ್ನು ಪ್ರಧಾನಿಯನ್ನಾಗಿ ಆರಿಸಲಾಯಿತು. ಇಂದಿನ ಜಾಗತಿಕ ಪರಿಸ್ಥಿತಿಯನ್ನು ಅವಲೋಕಿಸುವಾಗ, ಸೋವಿಯತ್ ನೀತಿ ತುಸು ಬಿಗಿಯಾಗಿಯೇ ಇದೆಯೆನ್ನಬೇಕಾಗುತ್ತದೆ. ವಿಯತ್ನಾಮದಲ್ಲಿ ಶಾಂತಿ ಸಾಧ್ಯವಾಗದೆ ಹೋದರೆ, ಮೂರನೆಯ ಜಾಗತಿಕ ಸಮರಕ್ಕೆ ಅದು ನಾಂದಿಯಾಗುವುದು ಎಂಬ ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿ ಯು. ಥಾಂಟ್ ರ ಮಾತು ಅಕ್ಷರಶಃ ಸತ್ಯ. ಇದರ ಹೊಣೆ ಹೊರುವವರು ರಶ್ಯ ಮತ್ತು ಅಮೆರಿಕಾಗಳು. ಫಲವುಣ್ಣುವವರು ನಾವು, ನೀವು, ಎಲ್ಲರೂ!

—ರಾಶಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 160/1966

ಚಿನ್ನಪ್ಪ ಪಡಿವಾಳ — ವಾದಿ.

ಅಂತೋಣಿ ಮಿನೇಜಿಸ ಸಹಾ —ಪ್ರತಿವಾದಿರು.

2 ದಾ ನಿ ಜೆ ದೇವಪ್ಪ ರಾಯ ಡೇವಿಡ್ ರ ಮಗ, ಕಾರ್ಕಳ ತಾಲ್ಲೂಕು ಮಿಯ್ಯಾರು ಗ್ರಾಮದ ನಿವಾಸಿ ಪತ್ನಿ ಯೆಂಬಲ್ಲಿರುವವ—

3ನೇ ಪ್ರತಿವಾದಿ ಅದನಿಮಗೆ ಈ ಮೂಲಕ ತಿಳಿಸುವದೇನೆಂದರೆ—

1ನೇ ಪ್ರತಿವಾದಿಯು ವಾದಿಯ ವಶಕ್ಕೆ ಮೂಲಗೇಣಿ ಪಕ್ಕಿನಿಂದ ಅನುಭವಿಸಿಬರುವ ಮಿಯ್ಯಾರು ಗ್ರಾಮದ ಅಸ್ತಿ ಬಾಬ್ತು ವಾದಿಗೆ ಕಳದ ಕ್ರೋಧಿ ಸಂ|ರದ ಅಂತ್ಯಕ್ಕೆ ಬಂತಕ್ಕ ಮೂಲಗೇಣಿ ಗೇಣಿ ಬಡ್ಡಿ ಸಹಾ ರೂಪಾಯಿ 132—ಕ್ಕೆ ವಾದಿಯು ದಾಖಲ್ಮಾಡಿದ ಖದ್ಯಮೆಯು ತಾ. 25—8—1966ಕ್ಕೆ ನಿಮಗೆ ಆಕ್ಷೇಪ ನೋಟೀಸಿಗೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ದರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ನೀವೇ ಖುದ್ದ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ದಾಖಲು ಮಾಡತಕ್ಕದ್ದು. ತಪ್ಪಿದ್ದ ನಿಮ್ಮ ಗೈರ ಹಾಜರಿಯಲ್ಲಿ ದಾವಾ ತೀರ್ಮಾನವಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath

Advocate for Plaintiff

Karkala 3—8—66

ವಿಚಾರ ವೀಚಿ

ನಮ್ಮ ಭಾಗ್ಯನಿಧಿ-ಪ್ರಾಣಿ ಸಂಪತ್ತು

"ಯಜಮಾನಸ್ಯ ಪಶೂನ್ ಪಾಹಿ" ಎಂಬುದು ಯಜುರ್ವೇದದ ಒಂದು ಅರ್ಥಗರ್ಭಿತ ಶ್ಲೋಕ. ದೇವ ದೇವನಾದ ಭಗವಂತನು ಸೃಷ್ಟಿಸಿದ ಪ್ರಾಣಿಗಳನ್ನು ಮಾನವನು ದಯೆ ಮತ್ತು ಅನುಕಂಪದಿಂದ ಕಾಣಬೇಕೆಂದು ಈ ಶ್ಲೋಕವನ್ನು ರಚಿಸಿದ ಋಷಿಪುಂಗವರು ಒತ್ತಿ ಹೇಳಿದ್ದಾರೆ. ಸಹಸ್ರಾರು ವರ್ಷಗಳ ಹಿಂದೆ ಈ ಋಷಿವಾಣಿ ಮೊಳಗಿತು. ಈಗಲೂ ಈ ವಾಣಿ ಅಮರವಾಗಿದೆ. ಸಸ್ಯ ಜೀವಗಳನ್ನು ರಕ್ಷಿಸುವ ಮಾನವನ ಕರ್ತವ್ಯವನ್ನು ನೆನಪು ಮಾಡಿಕೊಡುತ್ತದೆ.

ನೂರು ವರ್ಷಗಳ ಹಿಂದೆ, ಭಾರತದಲ್ಲಿ ವಿಪುಲವಾದ ಪಶು ಸಂಪತ್ತು ಇದ್ದಿತು. ಭಾರತದ ಅರಣ್ಯಗಳಲ್ಲಿ ವನ್ಯ ಪ್ರಾಣಿಗಳು ನಿರ್ಭಯವಾಗಿ ಸಂಚರಿಸುತ್ತಿದ್ದವು. ಅವುಗಳ ಸಾಮ್ರಾಜ್ಯ ಪ್ರಶಾಂತವಾಗಿತ್ತು. ಆಗಿನ ಕಾಲದ ಬ್ರಿಟಿಷ್ ಅಧಿಕಾರಿಗಳಿಗೆ ಬೇಟೆಯೆಂದರೆ ಎಲ್ಲಿಲ್ಲದ ಉತ್ಸಾಹ. ದಿನವೂ ಒಂದಲ್ಲೊಂದು ಬೇಟೆಯ ಕಾರ್ಯಕ್ರಮವನ್ನು ಅವರು ಕೈಗೊಳ್ಳುತ್ತಿದ್ದರು. ಬ್ರಿಟಿಷ್ ಅಧಿಕಾರಿಗಳ ಮನರಂಜನೆಗಾಗಿ ಅನೇಕ ಪ್ರಾಣಿಗಳು ಬಲಿಯಾದವು.

ಇತ್ತೀಚಿನ ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ ಜನ ಸಂಖ್ಯೆಯು ತ್ವರಿತಗತಿಯಿಂದ ಅಭಿವೃದ್ಧಿಯಾಯಿತು. ವಸತಿ ಸಂಬಂಧವಾದ ಅಗತ್ಯಗಳ ಪೂರೈಕೆಗಾಗಿ ಹಾಗೂ ಸಾಗುವಳಿಗಾಗಿ ಜನರು ಅರಣ್ಯಗಳನ್ನು ಕಡಿಯ ತೊಡಗಿದರು. ಇದರಿಂದಾಗಿ ಹಸಿರಾಗಿ ಕಂಗೊಳಿಸುತ್ತಿದ್ದ ಅರಣ್ಯಗಳು ಕಣ್ಮರೆಯಾಗ ತೊಡಗಿದವು. ಈ ಅರಣ್ಯಗಳಲ್ಲಿ ವಾಸಿಸುತ್ತಿದ್ದ ವನ್ಯ ಪ್ರಾಣಿಗಳು ಕಾಲ ಕ್ರಮದಲ್ಲಿ ನಾಶವಾಗುತ್ತ ಬಂದವು. ಎರಡನೆಯದಾಗಿ ಬೇಟೆಯ ಹವ್ಯಾಸವುಳ್ಳ ಕೆಲವು ಜನರು ಅವುಗಳನ್ನು ಮನ ಬಂದ ಹಾಗೆ ಬೇಟೆಯಾಡಿದರು.

ಪಕ್ಷಿಗಳ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗುತ್ತಿದೆ. ಸಾಮಾನ್ಯವಾಗಿ ಪಕ್ಷಿಗಳ ವಾಸ ಸ್ಥಳಗಳಾದ ಮರಗಳ, ಪೊಟರೆಗಳು, ಜಲಾಶಯಗಳು ಇವೇ ಮೊದಲಾದವುಗಳನ್ನು ಬೇಸಾಯ ಮತ್ತು ಕೈಗಾರಿಕಾ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಆರಂಭಿಸಿದ್ದರಿಂದ ಪಕ್ಷಿಗಳು ನಾಶವಾದುವಲ್ಲದೆ, ಅವು ಸ್ಥಾನಪಲ್ಲಟವಾದವು. ಈ ರೀತಿಯಾಗಿ ಬಹುತೇಕ ಪಕ್ಷಿಗಳು ಮತ್ತು ಪ್ರಾಣಿಗಳು ಇಂದು ಅಪರೂಪವಾಗುತ್ತಿವೆ. ಅವುಗಳಲ್ಲಿ ಕೆಲವು ಪ್ರಾಣಿಗಳು ಮತ್ತು ಪಕ್ಷಿಗಳ ಕುಲವೇ ನಾಶವಾಗಿವೆ. ಅನೇಕ ಪ್ರದೇಶಗಳಲ್ಲಿ ಈಗ ನೋಡಬೇಕೆಂದರೆ ಒಂದು ಪಕ್ಷಿಯಾಗಲಿ ಪ್ರಾಣಿಯಾಗಲಿ ಕಾಣುವಂತಿಲ್ಲ. ಒಂದು ಕಾಲದಲ್ಲಿ ಈ ಪ್ರದೇಶಗಳು ಅಸಂಖ್ಯ ಪ್ರಾಣಿ ಹಾಗೂ ಪಕ್ಷಿಗಳಿಗಾಗಿ ಹೆಸರಾಗಿದ್ದವು. ವನ್ಯ ಜೀವಿಗಳು ಅಲ್ಲಿ ನಿರಾತಂಕವಾಗಿ ಬದುಕುತ್ತಿದ್ದವು. ಅವುಗಳಿಗೆ ಯಾವುದೇ ಭೀತಿ ಇರಲಿಲ್ಲ. ಈ ಹಿಂದೆ ಪಶ್ಚಿಮ ಪಂಜಾಬದವರೆಗೂ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತಿದ್ದ ಖಡ್ಗ ಮೃಗಗಳು ಇಂದು ಆಸ್ಸಾಂ ಮತ್ತು ಉತ್ತರ ಬಂಗಾಳದ ಕೆಲವೇ ಸ್ಥಳಗಳಲ್ಲಿ ಮಾತ್ರ ನೋಡಲು ಸಿಗುತ್ತಿವೆ. ಒಂದು ಕಾಲದಲ್ಲಿ ಉತ್ತರ ಭಾರತದ ಅರಣ್ಯಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸಿಗುತ್ತಿದ್ದ ಏಷ್ಯದ ಸಿಂಹಗಳು ಈಗ ಗಿರ್ ಅರಣ್ಯಗಳಲ್ಲಿ ಮಾತ್ರ ಸಿಗುತ್ತಿವೆ. ಸಿಂಹಗಳ ಕುಲ ಬಹುಮಟ್ಟಿಗೆ ನಾಶವಾದಂತೆ ಆಗಿದೆ. ಮಧ್ಯ ಪ್ರದೇಶದಲ್ಲಿ ವಿಪುಲವಾಗಿದ್ದ ಶಿಕಾರಿ ಚಿರತೆಗಳನ್ನು ಈಗ ಪ್ರಾಣಿ ಸಂಗ್ರಹಾಲಯಗಳಲ್ಲಿ ಮಾತ್ರ ಕಾಣಬಹುದಾಗಿದೆ. ಇದೇ ರೀತಿ ಕಾಡು ಕೋಣಗಳಿಗೂ ದುರ್ಗತಿ ಒದಗಿದೆ. ಕಾಜಿರಂಗ ಮತ್ತು ಮಾನಸ್ ಪ್ರಾಣಿಗಳನ್ನು ಸಂಗೋಪನಾಲಯಗಳಲ್ಲಿ, ಮಧ್ಯ ಪ್ರದೇಶ ಮತ್ತು ಒರಿಸ್ಸದ ಕೆಲವು ಭಾಗಗಳಲ್ಲಿ ವೀಕ್ಷಿಸಬಹುದು. ಈಗ ನಾಶವಾಗುತ್ತಿರುವ

In the Court of Munsiff, Belthangady, S. K.

Insolvency petition 1 of 1966.

Between -

Devaraya Pai ... Petitioner.

and

Shankara Rao ... Respondent.

Whereas the petitioner above named has filed an application to be adjudged himself as insolvent, in the above court and the same is posted to 16—8—1966. If anybody is interested in opposing the said application, they may appear in person or by a pleader duly authorised by him to appear and oppose the same, at 11 A. M. on 16—8—1966 before the above Court.

(By order of Court)

Pulu. Narayana Bhat,

Advocate for petitioner

Belthangady, 29—7—1966.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 59 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪ್ರಾಣಿಗಳ ಮತ್ತು ಪಕ್ಷಿಗಳ ಕುಲವನ್ನು ರಕ್ಷಿಸುವುದು ಜನತೆಯ ಆದ್ಯ ಕರ್ತವ್ಯವಾಗಿದೆ.

ನಾವು ಅಮೂಲ್ಯವೆಂದು ಪರಿಗಣಿಸುತ್ತಿರುವ ಚಿರತೆಗಳು, ಕಸ್ತೂರಿ ಮೃಗಗಳು, ಕಾಶ್ಮೀರ ಸಾರಂಗಗಳು, ಬಾತು ಕೋಳಿಗಳು, ಕಾಡ ಕೋಳಿಗಳು ಈಗ ಅಪರೂಪವಾಗುತ್ತಿವೆ; ಭಾರತದಲ್ಲಿ ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಅನಾದಿ ಕಾಲದಿಂದಲೂ ಒಂದು ಮುಖ್ಯ ಸ್ಥಾನವನ್ನು ನೀಡಲಾಗಿದೆ. ಭಾರತೀಯ ಜನ ಜೀವನದಲ್ಲಿ, ಧರ್ಮದಲ್ಲಿ, ಕಲೆಯಲ್ಲಿ, ಜಾನಪದ ಸಾಹಿತ್ಯದಲ್ಲಿ ಪ್ರಾಣಿ ಮತ್ತು ಪಕ್ಷಿಗಳಿಗೆ ನೀಡಿರುವ ಮಹತ್ವವನ್ನು ಗಮನಿಸಬಹುದು. ಪ್ರಾಣಿಗಳ ಸಾಮ್ರಾಜ್ಯಕ್ಕೂ ನಮಗೂ ನಿಕಟ ಸಂಬಂಧವಿದೆ. ಮನುಷ್ಯರಂತೆ ಪ್ರಾಣಿಗಳೂ ಪ್ರೇಮ, ಅನುರಾಗ ಕ್ರೋಧ, ಸಂತೋಷ ಇವೇ ಮೊದಲಾದ ಭಾವನೆಗಳನ್ನು ಹೊಂದಿವೆ. ದುಃಖ ಬಂದಾಗ, ಸಂತೋಷವಾದಾಗ, ಮತ್ತು ಭೀತಿಯಾದಾಗ ಅವು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತವೆ. ಪ್ರಾಣಿಗಳ ನೋಟದಲ್ಲಿ ಚಲನವಲನಗಳಲ್ಲಿ ಈ ಭಾವನೆಗಳು ವ್ಯಕ್ತವಾಗುತ್ತವೆ. ಪ್ರಾಣಿಗಳ ಜೀವನವು ನಮ್ಮ ಜೀವನದೊಂದಿಗೆ ನಿಕಟವಾಗಿ ಹೆಣೆದುಕೊಂಡಿದೆ. ಭಾರತೀಯ ಜೀವನದಲ್ಲಿ ನಿರಂತರವಾಗಿ ಪ್ರಾಣಿ ಮತ್ತು ಮಾನವನ ನಡುವಣ ಸಹ ಜೀವನವನ್ನು ಪ್ರತಿಪಾದಿಸಲಾಗಿದೆ. ಈಗ ವಿಜ್ಞಾನವು ಸಹ ಇದೇ ಸತ್ಯಾಂಶವನ್ನು ಒತ್ತಿ ಹೇಳುತ್ತದೆ. ನಾವು ಪ್ರಾಣಿ ಸಂಕುಲದ ರಕ್ಷಣೆಯ ಕಾರ್ಯವನ್ನು ಬಿರುಸಿನಿಂದ ಮಾಡುತ್ತಿಲ್ಲ. ಕಳೆದ ಎರಡು ದಶಕಗಳಿಂದಲೂ ಈ ಕಾರ್ಯದ ಪ್ರಗತಿ ತೃಪ್ತಿಕರವಾಗಿಲ್ಲ. ನಮ್ಮ ಭಾಗ್ಯ ನಿಧಿ ಎಂದೆನಿಸಿದ ವನ್ಯ ಜೀವಿಗಳ ಕುಲವು ಉಳಿಯ ಬೇಕಾದರೆ ಪ್ರಾಣಿಗಳ ಬೇಟೆಯಾಡುವದು, ಕೊಲ್ಲುವದು ಕೊನೆಗೊಳ್ಳಬೇಕು.

ಶುದ್ಧವದಿಂದ ಈ ಶತಮಾನದ ಆದಿ ಭಾಗದಲ್ಲಿ ಕೆಲವು ಮಂದಿ ವನ್ಯ ಜೀವಿ ಶಾಸ್ತ್ರಜ್ಞರು ಭಾರತದ ಖಡ್ಗ ಮೃಗ, ಏಷಿಯಾದ ಸಿಂಹ ಮತ್ತು ಇತರ ಪ್ರಾಣಿಗಳ ಕುಲವನ್ನು ರಕ್ಷಿಸಲು ಕ್ರಮ ಕೈಕೊಂಡರು. ಕಳೆದ ದಶಕದಲ್ಲಿ ಭಾರತ ಸರಕಾರವು ವನ್ಯ ಜೀವಿಗಳ ರಕ್ಷಣೆ ಮಂಡಳಿಯನ್ನು ಸ್ಥಾಪಿಸಿ ವನ್ಯ ಜೀವಿಗಳ ಸಂರಕ್ಷಣೆಗೆ ಅಧಿಕ ಪ್ರಧಾನ್ಯ ನೀಡಿತು. ವನ್ಯ ಜೀವಿ ರಕ್ಷಣಾ ಮಂಡಳಿಯವರು ದೇಶದಲ್ಲಿ ಈ ವಿಷಯದ ಬಗ್ಗೆ ಅಧ್ಯಯನ ಮಾಡಿ ಅನೇಕ ಉಪಯುಕ್ತ ಶಿಫಾರಸುಗಳನ್ನು ಮಾಡಿದರು. ಪ್ರತಿ ವರ್ಷವು ವನ್ಯ ಪ್ರಾಣಿ ಸಪ್ತಾಹವನ್ನು ಆಚರಿಸಬೇಕೆಂದು ಈ ಮಂಡಳಿಯವರು ಮಾಡಿದ ಮಹತ್ವದ ಶಿಫಾರಸುಗಳಲ್ಲಿ ಒಂದು. ಈ ಸಪ್ತಾಹವನ್ನು ಆಚರಿಸುವ ಮೂಲಕ ಜನರಲ್ಲಿ ವನ್ಯ ಜೀವಿಗಳ ಬಗ್ಗೆ ಪ್ರೇಮ, ಹಾಗೂ ಅನುಕಂಪದ ಭಾವನೆಗಳನ್ನು ಜಾಗೃತಗೊಳಿಸುವುದು ಮುಖ್ಯ ಉದ್ದೇಶವಾಗಿದೆ. ಪ್ರಾಣಿಗಳ ರಕ್ಷಣೆಗಾಗಿ ಭಾರತ ಸರಕಾರದ ಪರು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಅನೇಕ ರಾಜ್ಯಗಳಲ್ಲಿ ವನ್ಯ ಜೀವಿ ರಕ್ಷಣೆಗಾಗಿ ಕಾನೂನುಗಳನ್ನು ಪುನರ್ವಿಮರ್ಶಿಸಲಾಗುತ್ತಿದೆ. ಅರಣ್ಯಗಳಲ್ಲಿ ಅಥವಾ ಬಯಲು ಪ್ರದೇಶಗಳಲ್ಲಿ ಪ್ರಾಣಿಗಳಿಗೆ ರಕ್ಷಣೆ ಒದಗಿಸುವುದೇ ಈ ಕ್ರಮದ ಗುರಿಯಾಗಿದೆ. ಎಲ್ಲ ರಾಜ್ಯಗಳಲ್ಲಿಯೂ ಅಪರೂಪವಾಗುತ್ತಿರುವ ಪ್ರಾಣಿ ಮತ್ತು ಪಕ್ಷಿ ಸಂಕುಲಗಳ ರಕ್ಷಣೆಗಾಗಿ ವಿಶಿಷ್ಟ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪಕ್ಷಿಗಳ ಜೀವನವನ್ನು ಸುಗಮಗೊಳಿಸಲು ಅರಣ್ಯಾಧಿಕಾರಿಗಳು ಅವುಗಳಿಗಾಗಿ ಗಿಡ ಮರಗಳನ್ನು ನೆಡುತ್ತಿದ್ದಾರೆ. ಪಕ್ಷಿಗಳಿಗೆ ಆಹಾರ ಮತ್ತು ಆಶ್ರಯವನ್ನು ಒದಗಿಸಲು ಏರ್ಪಾಡು ಮಾಡುತಿದ್ದಾರೆ. ಸಂಚಾರಿ ಪಕ್ಷಿಗಳಿಗೆ ವಿಶೇಷವಾಗಿ ಜಲಾಶಯಗಳು ಮತ್ತು ಕಾಲುವೆಗಳ ಹತ್ತಿರದಲ್ಲಿರುವ ಪಕ್ಷಿಗಳಿಗೆ ಆದ್ಯ ಗಮನ ನೀಡಲಾಗುತ್ತಿದೆ ದೇಶದಲ್ಲಿ ಇಂದು ಅಧಿಕ ಸಂಖ್ಯೆಯಲ್ಲಿರುವ ಪ್ರಾಣಿ ಮತ್ತು ಪಕ್ಷಿಗಳ ಸಂಗೋಪನ ಕೇಂದ್ರಗಳು ಸ್ಥಾಪನೆಗೊಳ್ಳಬೇಕಾಗಿದೆ. ಈಗಿರುವ ನಾಲ್ಕು ರಾಷ್ಟ್ರೀಯ ಉಪವನಗಳನ್ನು ಮತ್ತು ಇತರ ವನ್ಯ ಜೀವಿ ಸಂರಕ್ಷಣಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗಿದೆ.

ಇತ್ತೀಚೆಗೆ ಸಾರ್ವಜನಿಕರಲ್ಲಿ ವನ್ಯಜೀವಿ ಸಂರಕ್ಷಣೆಯ ಮಹತ್ವ್ವದ ಅರಿವು ಹೆಚ್ಚಾಗುತ್ತಿದೆ. ದೇಶದಲ್ಲಿರುವ ವನ್ಯಜೀವಿ ಸಂರಕ್ಷಣಾ ಸಂಸ್ಥೆಗಳು ಈ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸಬೇಕು. ಈ ಅಮೂಲ್ಯವಾದ ಈ ಪರಂಪರೆಯನ್ನು ಮುಂದಿನ ಪೀಳಿಗೆಗಳಿಗೆ ಹಾಕಿ ಕೊಡಬೇಕು.

ಸ್ವಲ್ಪ ವೆಪೋರಬ್‌ನ್ನು ಮೆತ್ತನೆ ತಿಕ್ಕಿರಿ
ಅಂದರೆ ಕೂಡಲೆ ಅದರ ಉಷ್ಣತೆಯಿಂದ
ಮಗುವಿಗೆ ಆರಾಮ ಎನಿಸುವುದು
ನಿರಾತಂಕವಾಗಿ ಉಸಿರಾಡುವುದು
ಇಡೀ ರಾತ್ರಿ ಸುಖವಾಗಿ ಮಲಗುವದು

ವಿಕ್ಸ್ ವೆಪೋರಬ್ ನೆಗಡಿಗೆ ಇಂದೇ ರಾತ್ರಿ ತಿಕ್ಕಿರಿ
ರಿಚರ್ಡ್‌ಸನ್ ಹಿಂದುಸ್ಥಾನ್ ಲಿಮಿಟೆಡ್ ಅವರ ಒಂದು ಉತ್ಕೃಷ್ಟ ತಯಾರಿಕೆ

ಸಂಕೀರ್ಣ ಪತ್ರಿಕೆಗಳಿಗಾಗಿ ಮನವಿ

ಮಣಿಪಾಲ, ಆ,೪— ಇಲ್ಲಿಯ ಕಸ್ತೂರಬಾ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರುವ ರೋಗಿಗಳ ಉಪಯೋಗಕ್ಕಾಗಿ ಒಂದು ಪುಸ್ತಕ ಭಂಡಾರವನ್ನು ಆರಂಭಿಸಲು ಆಸ್ಪತ್ರೆಯ ಸಮಾಜ ಸೇವಾ ವಿಭಾಗ ನಿರ್ಧರಿಸಿದೆ. ಆದ್ದರಿಂದ ವಿವಿಧ ಭಾಷೆಗಳ ಸಂಕೀರ್ಣ ಪತ್ರಿಕೆಗಳನ್ನೂ, ಪುಸ್ತಕಗಳನ್ನೂ ಈ ಪುಸ್ತಕ ಭಂಡಾರಕ್ಕೆ ಉದಾರವಾಗಿ ದಾನ ಮಾಡಬೇಕೆಂದು ಸಮಾಜ ಸೇವಾ ವಿಭಾಗದ ಕಾರ್ಯಕರ್ತರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಅಂತಹ ಕಾಣಿಕೆಗಳನ್ನು ದಾನಿಗಳು ಆಸ್ಪತ್ರೆಯ ಆ ವಿಭಾಗಕ್ಕೆ ಕಳುಹಿಸಬಹುದಾಗಿದೆ. ಇಲ್ಲದಿದ್ದಲ್ಲಿ ವಿಳಾಸ ತಿಳಿಸಿದರೆ ಅವುಗಳನ್ನು ದಾನಿಗಳ ಸ್ಥಳಗಳಿಂದ ತರಿಸಿಕೊಳ್ಳುವ ವ್ಯವಸ್ಥೆ ಮಾಡಲಾಗುವುದು.

ವಿಜಯಾ ಬ್ಯಾಂಕಿನ 60ನೇ ಶಾಖೆ

ಇದೇ ತಾ. 4ರಂದು ಬೆಂಗಳೂರಲ್ಲಿ, 29, ಕೆಂಗಲ್ ಹನುಮಂತಯ್ಯ ರೋಡ್, ಶಾಂತಿನಗರ ಎಂಬಲ್ಲಿ ವಿಜಯಾಬ್ಯಾಂಕ್ ಲಿಮಿಟೆಡ್‌ನ 60ನೇ ಶಾಖೆಯು ತೆರೆಯಲ್ಪಟ್ಟಿತು. ಇದು ಬೆಂಗಳೂರಲ್ಲಿ ಬ್ಯಾಂಕಿನ 4ನೇ ಶಾಖೆಯಾಗಿದೆ.

ವಿಜಯಾ ಬ್ಯಾಂಕಿನ ಪ್ರಗತಿಯು ಬಹುವೇಗವುಳ್ಳದ್ದಾಗಿದೆ. 1961ರ ಅಂತ್ಯದಲ್ಲಿಬ್ಯಾಂಕಿಗೆ 31ಶಾಖೆಗಳಿದ್ದು ಅವೀಗ 60ಕ್ಕೆ ಏರಿವೆ. 5ವರ್ಷಗಳೊಳಗಾಗಿಯೇ 31ಹೆಚ್ಚಿನ ಶಾಖೆಗಳು ತೆರೆಯಲ್ಪಟ್ಟವು. ಗ್ರಾಹಕರಿಗೆ ಕ್ರಮಾಗತವಾದ ಎಲ್ಲಾ ಬ್ಯಾಂಕಿಂಗ್ ಸೌಕರ್ಯಗಳಲ್ಲದೆ, ಹಲವಾರು ಹೊಸ ಸೌಲಭ್ಯಗಳನ್ನೂ ಬ್ಯಾಂಕು ಒದಗಿಸುತ್ತಿದೆ. ಇತ್ತೀಚೆಗೆ ಅದು ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿಬೋರ್ಡಿಗೆ ಕನ್ಸ್ಯೂಮರರಿಂದ ಅವರಿಗೆಯಾವುದೊಂದು ಹೆಚ್ಚಿನ ಖರ್ಚು ಇಲ್ಲದೆ ವಿದ್ಯುಚ್ಛಕ್ತಿ ಚಾರ್ಜನ್ನು ಸಂಗ್ರಹಿಸುವ ಸೌಲಭ್ಯ ಒದಗಿಸಿದೆ. ಈ ಸೌಕರ್ಯವನ್ನು ಇಲೆಕ್ಟ್ರಿಸಿಟಿ ಬೋರ್ಡು ಪ್ರಕೃತ ಹುಬ್ಬಳ್ಳಿಗೆ ಒದಗಿಸಿದೆ. ಇದು ಸದ್ಯವೇ ಮೈಸೂರಿನ ಪ್ರಮುಖ ನಗರಗಳಿಗೂ ವಿಸ್ತರಿಸಲ್ಪಡುವ ಸಂಭವವಿದೆ. ಹುಬ್ಬಳ್ಳಿಯ ವಿದ್ಯುಚ್ಛಕ್ತಿ ಗ್ರಾಹಕರು ಇದು ತಮಗೆ ದೊಡ್ಡದೊಂದು ಸಹಾಯವೆಂಬುದನ್ನು ಕಂಡುಕೊಂಡಿದ್ದಾರೆ. ಏಕೆಂದರೆ ಇದರಿಂದ ಕ್ಯೂ ನಿಲ್ಲುವುದೇ ಮೊದಲಾದ ಹಲವಾರು ತೊಡಕು ತೊಂದರೆ ಮತ್ತು ಅನಾನುಕೂಲತೆಗಳು ಅವರಿಗೆ ತಪ್ಪಿದಂತಾಗಿದೆ.

ಬೆಂಗಳೂರಿನ ಅನೇಕ ಪ್ರತಿಷ್ಠಿತರು ಶಾಂತಿನಗರದ ಹೊಸ ಶಾಖೆಗೆ ಸಂದರ್ಶನವಿತ್ತರು. ಅವರನ್ನು ಬ್ಯಾಂಕಿನ ಚೇರ್‌ಮೇನ್ ಶ್ರೀ ಎಮ್. ಸುಂದರ್‌ರಾಮ ಶೆಟ್ಟರು ಮತ್ತು ಬ್ಯಾಂಕಿನ ಇತರ ಉಚ್ಚಾಧಿಕಾರಿಗಳು ಸ್ವಾಗತಿಸಿದರು. ಶಾಂತಿನಗರದ ಶಾಖೆಯಲ್ಲಿ ಅಲ್ಲಿಯ ನಿವಾಸಿಗಳ ಅನುಕೂಲತೆಗಾಗಿಬ್ಯಾಂಕು ಬೆಳಿಗ್ಗೆ 8—30ಘಂಟೆಯಿಂದ 10—30ರ ವರೆಗೂ ಮಧ್ಯಾಹ್ನ 2—30ಘಂಟೆಯಿಂದ 4—30ರ ವರೆಗೂ ಕಾರ್ಯನಿರ್ವಹಿಸುತ್ತದೆ.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

ಮೈಸೂರು ವಾಣಿ ವಿಲಾಸ ಮೊಹಲ್ಲಾದಲ್ಲಿರುವ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಸಭೆಯು ಶ್ರೀ ರಾಜೀವ ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿ ವಿದ್ಯಾರ್ಥಿ ಸಂಘದ ಮುಂದಿನ ಸಾಲಿನ ಅಧಿಕಾರ ವರ್ಗವನ್ನು ಚುನಾಯಿಸಿತು. ಅದರಂತೆ ಈ ಕೆಳಗಿನವರು ಚುನಾಯಿತರಾಗಿದ್ದಾರೆ.

ನಿಲಯದ ವಾರ್ಡನ್‌ರವರು ಅಧ್ಯಕ್ಷರು ಶ್ರೀ ಎಂ. ನರೇಂದ್ರನಾಥ ಶೆಟ್ಟಿ ಉಪಾಧ್ಯಕ್ಷರು, ಶ್ರೀ ಪ್ರಭೋದ ಕುಮಾರ ಮಲ್ಲಿ (ಕಾರ್ಯದರ್ಶಿ) ಶ್ರೀ ಎ. ಬಾಲಪ್ಪಶೆಟ್ಟಿ (ಜಂಟಿ ಕಾರ್ಯದರ್ಶಿ) ಶ್ರೀ ಕೆ. ವೈ. ತೇಜೋಮಯ (ಕ್ರೀಡಾಕಾರ್ಯದರ್ಶಿ) ಮತ್ತು ಪಿ. ಸತೀಶ ರೈ (ವಾಚನಾಲಯ ಕಾರ್ಯದರ್ಶಿ.) ವಿದ್ಯಾರ್ಥಿನಿಲಯಕ್ಕೆ ಫೋನ್ ಬಂದಿದೆ. ನಂಬರ್ 1821.

ವರಮಾನಗಳು, ಬೆಲೆಗಳು, ಬಳಕೆ

ಪಾಶ್ಚಾತ್ಯ ಜಗತ್ತಿನಲ್ಲಿ ವೇತನಗಳ ಮತ್ತು ಬೆಲೆಗಳ ನಡುವಣ "ಸ್ಪರ್ಧೆಯು" ಸರ್ವಸಾಮಾನ್ಯವಾಗಿ ಕಂಡುಬರುವ ಆರ್ಥಿಕ ಘಟನೆ. ವೇತನ ವೃದ್ಧಿಯನ್ನು ಬೆಳೆಯುತ್ತಿರುವ ಬೆಲೆಗಳು "ನುಂಗಿಬಿಟ್ಟವೆ" ಯೆಂಬ ದೂರೂ ಆಗಾಗ್ಗೆ ಕೇಳಿಬರುತ್ತಿರುತ್ತದೆ. ಕೆಲವು ವೇಳೆ ಬೆಲೆಗಳು ಏರುತ್ತಿರುವಾಗಲೇ ವೇತನಗಳನ್ನು 'ತಡೆಹಿಡಿಯಲಾಗುತ್ತದೆ.'

ಸೋವಿಯೆತ್ ನಾಡಿನ ಸ್ಥಿತಿ ಬೇರೆ. ಸೋವಿಯೆತ್ ಮೌಲ್ಯ ಮತ್ತು ವರಮಾನ ನೀತಿಯು ಮೂಲತಃ ಬೇರೆಯದಾಗಿದೆ. ವೇತನ ವೃದ್ಧಿಯು ನೇರವಾಗಿ ಉತ್ಪಾದನೆಯು ಮತ್ತು ಉತ್ಪಾದಕತೆಯ ಬೆಳವಣಿಗೆಯನ್ನು ಅವಲಂಬಿಸಿಕೊಂಡಿರುತ್ತದೆ. ಉನ್ನತತರ ವೇತನಗಳಿಗೆ ದಾರಿ ಮಾಡಿಕೊಡದಿರುವ ಸೋವಿಯೆತ್ ಆರ್ಥಿಕ ಅಭಿವೃದ್ಧಿ ನೀತಿಯು ಇಲ್ಲಿ ಎಂದಿಗೂ ಸಾಧ್ಯವಿಲ್ಲ.

ಪತ್ರಿಕಾ ವರದಿಗಳ ಪ್ರಕಾರ, 1957 ರಿಂದೀಚೆಗೆ ಫ್ರಾನ್ಸ್‌ದೇಶದಲ್ಲಿ ಉತ್ಪಾದನೆಯು 50 ಶತಾಂಶದಷ್ಟು ವೃದ್ಧಿಯಾಗಿದೆ, ಉತ್ಪಾದಕ ಶಕ್ತಿಯು ಸೇಕಡ 40 ರಷ್ಟಕ್ಕಿಂತ ಹೆಚ್ಚು ವೃದ್ಧಿಯಾಗಿದೆ. ಫ್ರೆಂಚ್ ಕಾರ್ಮಿಕರ ಕ್ರಯ ಶಕ್ತಿಯು ಮಾತ್ರ ಏನೂ ಬದಲಾಯಿಸಿಲ್ಲ. ಅದಕ್ಕೆ ಸರಕುಗಳ ಮತ್ತು ಸೇವೆಗಳ ಬೆಲೆಗಳು ಹೆಚ್ಚಾಗಿರುವುದೇ ಕಾರಣ.

1959—1965ರ ಕಾಲಾವಧಿಯಲ್ಲಿ, ಮಾನಸಿಕ ಉದ್ಯೋಗಿಗಳ ವೇತನಗಳು ಸೋವಿಯೆತ್ ನಾಡಿನಲ್ಲಿ ಸರಾಸರಿ 17 ರೂಬಲ್ಲುಗಳಷ್ಟು ವೃದ್ಧಿಯಾದುವು. ಇದಲ್ಲದೆ ಪ್ರತಿಯೊಬ್ಬ, ಕಾರಖಾನೆ, ಕಛೇರಿ ಕೆಲಸಗಾರರೂ ಬೇರೆ ಬೇರೆ ಧನ ಸಹಾಯಗಳನ್ನೂ, ಉಚಿತವಾದ ಅಥವಾ ಕಡಮೆ ಬೆಲೆಯ ಸೇವೆಗಳನ್ನು ಪಡೆದಿದ್ದಾರೆ. ಮಾಸಿಕ ವೇತನಗಳ ಜತೆಗೆ ಈ 'ಅದೃಶ್ಯ' ಸಂದಾಯಗಳು ಸುಮಾರು 24 ರೂಬಲ್ಲುಗಳಷ್ಟಾಗುತ್ತವೆ. ಇತ್ತೀಚಿನ ವರ್ಷಗಳಲ್ಲಿ ಮುಖ್ಯಾಧಾರವಾದ ವಸ್ತುಗಳ ಮತ್ತು ಕೆಲವು ಆಹಾರ ಪದಾರ್ಥಗಳ ಬೆಲೆಗಳೂ ಪುನಃ ಪುನಃ ಕಡಮೆಯಾಗಿವೆಯೆಂಬುದು ಗಮನಾರ್ಹ. ತತ್ಪರಿಣಾಮವಾಗಿ, ಕಳೆದ ಏಳು ವರ್ಷಗಳಲ್ಲಿ ಸೋವಿಯೆತ್ ಜನತೆಯ ಕ್ರಯಶಕ್ತಿಯು ಗಮನಾರ್ಹವಾಗಿ ಬೆಳೆಯಿತು.

ಶ್ರೀ ಕಾಮರಾಜರ ಭೇಟಿಯ ಕುರಿತು "ಪ್ರಾವ್ದ" ಪತ್ರಿಕೆಯಲ್ಲಿ ಲೇಖನ

ಮಾಸ್ಕೋ, 31-7-1966.

ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜರು ಸೋವಿಯೆತ್ ಒಕ್ಕೂಟಕ್ಕೆ ನೀಡಿದ ಭೇಟಿಯ ಪರಿಣಾಮಗಳ ಕುರಿತು ಬರೆಯುತ್ತ, ಈ ಭೇಟಿಯು ಸೋವಿಯೆತ್—ಭಾರತೀಯ ಸ್ನೇಹೋದ್ದೇಶ ಸಾಧನೆಗೆ, ಜಾಗತಿಕ ಶಾಂತಿಯ ಉದ್ದೇಶ ಸಾಧನೆಗೆ ಇನ್ನೊಂದು ಕಾಣಿಕೆಯಾಗಿರುವುದೆಂದು ಪ್ರಾವ್ದ ಪತ್ರಿಕೆಯು ಭರವಸೆಯನ್ನು ವ್ಯಕ್ತಪಡಿಸಿದೆ.

ಇತ್ತೀಚೆಗೆ ಶ್ರೀಮತಿ ಇಂದಿರಾ ಗಾಂಧಿಯವರೂ ಮತ್ತು ಶ್ರೀ ಕುಮಾರ ಸ್ವಾಮಿ ಕಾಮರಾಜರೂ ಸೋವಿಯೆತ್ ಒಕ್ಕೂಟಕ್ಕೆ ನೀಡಿದ ಭೇಟಿಗಳು "ನಮ್ಮ ದೇಶಗಳ ಮಧ್ಯೆ ಅಸ್ತಿತ್ವದಲ್ಲಿರುವ ಸ್ನೇಹಮಯ ಸಹಕಾರದ ಪರಂಪರಾಗತ ಸಂಬಂಧಗಳನ್ನು ವ್ಯಕ್ತಪಡಿಸುತ್ತವೆ ಮತ್ತು ವಿಕಾಸಗೊಳಿಸುತ್ತವೆ'ಯೆಂದು ಸೋವಿಯೆತ್ ಜನತೆಯು ಭಾವಿಸುತ್ತಾರೆಂದು ಈ ಲೇಖನ ಕರ್ತೃ ಅ. ಮಾಸ್ಲೆನ್ನಿಕೊವ್‌ರವರು ಬರೆದಿದ್ದಾರೆ.

ಶಾಂತಿಗಾಗಿಯೂ ಮತ್ತು ಅಂತಾರಾಷ್ಟ್ರೀಯ ಉದ್ರಿಕ್ತತೆಯ ಸಡಿಲತೆಗಾಗಿಯೂ ನಡೆಯುವ ಸಂಘರ್ಷದಲ್ಲಿ ಸೋವಿಯೆತ್ ಒಕ್ಕೂಟ ಮತ್ತು ಭಾರತ ದೇಶಗಳ ನಡುವಣ ಸಹಕಾರವು,—ಆಗ್ನೇಯ ಏಶಿಯದಲ್ಲಿ ಈಗ ಅಮೆರಿಕನ್ ಸಾಮ್ರಾಜ್ಯವಾದಿಗಳು ತಮ್ಮ ದುರಾಕ್ರಮಣವನ್ನು ಹೆಚ್ಚಿಸುತ್ತಿರುವ ಸಮಯದಲ್ಲಿ,— ವಿಶೇಷ ಮಹತ್ವವನ್ನು ಪಡೆಯುತ್ತದೆ. ಜಾಗತಿಕ ಶಾಂತಿಯ ಕೇಂದ್ರೀಕರಣದ ಬಗ್ಗೆ ಅವರಿಗೆ ಇರುವ ಕಳವಳವನ್ನು, ಸೋವಿಯೆತ್ ನಾಡಿನ ಸಚಿವ ಸಂಪುಟಾಧ್ಯಕ್ಷ ಅಲೆಕ್ಸೇಯ್ ಕೊಸಿಗಿನ್ನರೂ, ಭಾರತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರೂ ಇತ್ತೀಚೆಗೆ ಹಸ್ತಾಕ್ಷರ ಮಾಡಿದ ಸಂಯುಕ್ತ ಸೋವಿಯೆತ್— ಭಾರತೀಯ ಪ್ರಕಟನೆಯಲ್ಲಿ ವ್ಯಕ್ತಪಡಿಸಲಾಗಿದೆ. ನಮ್ಮ ನಾಡಿನಲ್ಲಿ ಶ್ರೀ ಕಾಮರಾಜರು ಸಹ ಇದೇ ಅಭಿಪ್ರಾಯವನ್ನು ಅನೇಕ ಸಲ ಪ್ರಕಟಿಸಲಾಯಿತು"-ಎಂದು ಮಾಸ್ಲೆನ್ನಿಕೊವ್ ರವರವರು ಬರೆದಿದ್ದಾರೆ.

ಕಾಲೇಜುಗಳು ತೆರೆಯಲ್ಪಟ್ಟವು

ಮಣಿಪಾಲ, ಆ. ೩ — ಇಲ್ಲಿಯ ಕಸ್ತೂರಬಾ ಮೆಡಿಕಲ್ ಕಾಲೇಜು ಮತ್ತು ಮಣಿಪಾಲ ಇಂಜಿನಿಯರಿಂಗ್ ಕಾಲೇಜನ್ನು ತಾ. ೮ನೇಸೋಮವಾರ ಪುನಃ ತೆರೆಯಲಾಗಿದೆ.

ವಿದ್ಯಾರ್ಥಿಗಳೊಳಗೆ ನಡೆದ ಘರ್ಷಣೆ ಅನಪೇಕ್ಷಿತ ರೀತಿಯಲ್ಲಿ ಮುಂದುವರೆಯದಂತೆ ಮೊದಲು ಎರಡು ಕಾಲೇಜುಗಳನ್ನೂ ಮುಚ್ಚಲಾಗಿತ್ತು.

Wented a Secondary Grade Trained Teacher. Appointment temporary. Apply immediately. The Manager, V. H. Aided Ele. School, Kenjoor, Udipi Taluk, South Kanara.

ಮುಂಬೈಯ ಬಂಟರ ಯೂನೆ ನಾಡವರ ಸಂಘವು ತನ್ನ ನಿಯೋಜಿತ ತಾಂತ್ರಿಕ ಶಾಲಾ ಕಟ್ಟಡದ ಸಹಾಯಾರ್ಥವಾಗಿ, ಷಣ್ಮುಗಾನಂದ ಹಾಲ್‌ನಲ್ಲಿ ಏರ್ಪಡಿಸಿದ್ದ, ಯಕ್ಷಗಾನ ನಾಟಕ ಮಹೋತ್ಸವವನ್ನು ಮೈಸೂರಿನ ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವ ಅವರು ಉದ್ಘಾಟಿಸುತ್ತಿರುವ ದೃಶ್ಯ:—



ಎಡದಿಂದ ಬಲಕ್ಕೆ:— ಸರ್ವಶ್ರೀ ಶಕ್ತ ಕರುಣಾಕರ ಶೆಟ್ಟಿ, ಕೆ. ಸದಾಶಿವ ಭಂಡಾರಿ, ಯಸ್. ಗೋಪಾಲ ಶೆಟ್ಟಿ, ಡಾ| ಯಚ್. ಬಾಲಕೃಷ್ಣ ಶೆಟ್ಟಿ (ಅಧ್ಯಕ್ಷ), ಡಾ| ನಾಗಪ್ಪ ಆಳ್ವ, ಕೆ. ವಿಠಲ ಶೆಟ್ಟಿ, ಯಸ್. ಕೃಷ್ಣದಾಸ ಶೆಟ್ಟಿ ಮತ್ತು ಶೀನಪ್ಪ ಶೆಟ್ಟಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. S. No. 99/1966.

ಪೂಂಜ ಟ್ರ್ಯಾವೆಲ್ ವರ್ಕ್ಸ್ ಗಂಜಿಮಠ, ಇದರ ಮೆನೇಜಿಂಗ್ ಪಾರ್ಟ, ನರ M.R.H. ಪೂಂಜ. —ವಾದಿ.

ಮತ್ತು

ಶ್ರೀನಿವಾಸ ಪೊಳ್ಳ, ಮಾಸ್ತೀವ ಪೊಳ್ಳರ ಮಗ, ತೋಡಾರು, ಮಂ ಬಂಟವಾಳ ತಾಲ್ಲೂಕು ಅಮ್ಮಾಡಿ ಗ್ರಾಮದಲ್ಲಿರುವವ —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದ್ರೆ,

ವಾದಿ ನಿಂಮ ಮೇಲೆ ಮಾಡಿದ ಮೇಲಿನ ದಾವೆ ನಿಂಮ ಹಾಜರಿ ಬಗ್ಗೆ ತಾರೀಕು 31—8—1966ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10ಗಂಟೆಗೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉತ್ತರಕೊಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿವಾಯಿ ಮಾಡಿ ಸದ್ರಿ ದಾವೆ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court

M. J. Hegde
Advocate for Plff.

Kárkla, 7—8—66.

READ & ADVERTISE IN NAVAYUGA WEEKLY

ಅವರು ಬಯಸಲಿಲ್ಲ, ಆದರೆ……!

(ಎರಡನೇ ಪುಟದಿಂದ)

ತಿರ ಕೇಳಿತ್ತು. ಬ ಹೆಪ್ಪು ಕೇಳ್ಪೆಣಿವಾತ್ತು. ಓದಿ ಏನೂ ಆಗದವಳಂತೆ ಮರು ನ ಶಾಲೆಗೆ ಹೋದಳು. ವಾಸುದೇವನಿಗೆ ಷಯ ತಿಳಿಸಿದಳು. ಅವನು ಕೊಟ್ಟ ಸ ಹೆಗಳಿಂದ ದೃಢ ನಿಲುವು ತಳೆದು ಮನೆ ೇರಿದಳು ಮರುದಿನ ಸಂಜೆ.

o o o

ತಂದೆ ಮಗಳಿಂದ ನಾಲ್ಕಾರು ದಿನಗ ವರೆಗೆ ಉತ್ತರಕ್ಕಾಗಿ ಕಾದರು. ಮತ್ತೆ ಲ್ಲಿಗೆ ಪತ್ರ ಬರೆದು ಹಿರಿಯ ಮಗನನ್ನು ರೆಯಿಸಿ ಕೊಂಡರು.

ಶ್ರೀನಿವಾಸ ಬಂದ ದಿನ ಸುಶೀಲ ಬೇ ರತಲೇ ಮನೆಯಲ್ಲಿ ಇದ್ದಳು. ಅಣ್ಣ ಂದಿಗಾತ ಮಾತು ಕೇಳಿಸಿ ಕೊಳ್ಳುವ ಲೋಚನೆಯಿಂದ. ಆ ರೆ ತಂದೆ ಮಗ ನೊಡ ಮಾತನ್ನಾ ವ ಳೆದುರು ಆಡಿಕೊ ಲಿಲ್ಲ

ತಂದೆ ಮಗ ಕೂಡಿ ವಿಚಾರವನ್ನು ಲೋಚಿಸಿದರು ತಾಯಿ ಮಗ ಕೂಡಿ ಲೋಚಿಸಿದರು, ತಮ್ಮಂದಿರಿಬ್ಬರೊಡನೆ ೂನಾಡಿ, ಶ್ರೀನಿವಾಸ ವಿಷಯ ಸಂ ಗ್ರಹಿಸಿಕೊಂಡನ. ಎಲ್ಲರ ಅಭಿಪ್ರಾಯ ಳನ್ನು ಕೇಳಿ ನೂಡ ಬಳಿಕ ತಂಗಿಯ ನ್ನು ಕಂಡು ಸಮಾಧಾನ ಚಿತ್ತದಿಂದಲೇ ಲ್ಲವನ್ನೂ ಕೇಳಿಕೊಂಡ. ಸುಶೀಲ ತ ಮ್ಮಬ್ಬರ ವಿಚಾರವಾಗಿ ಅಣ್ಣನಿಂದ ಸ ಹಾನುಭೂತಿ ಪಡೆಯುವ ರೀತಿಯಲ್ಲಿ ಹೇ ಕೊಂಡಳು. ವಾಸುದೇವ ಬರೆದ ಎಲ್ಲಾ ತ್ರಗಳನ್ನು ಅಣ್ಣನಿಗೆ ಕೊಟ್ಟಳು. ಎಲ್ಲ ನ್ನೂ ಓದಿಕೊಂಡು, ಎಲ್ಲರ ವಿಚಾರ ಳೊಂದಿಗೆ ತುಲನೆ ಮಾಡಿ ಕೊನೆಗೊಂ ು ಮಾತನ್ನ ತಂಗಿಗೆ ಹೇಳಿದ ಶ್ರೀನಿ ಾಸ.

"ನಿನ್ನ ಜೀವನ ಎಂದೂ ನಮ್ಮೆಲ್ಲರ ೀವನ ಆಗಲಾರದು. ನಾಳೆ ವಾಸುದೇ ನೊಡನೆ ಕೂಡಿ ಬಾಳುವವಳು ನೀನು. ಲ್ಲಾ ಸುಖದುಃಖಗಳಿಗೂ ನೀನೇ ಹೊ ಣೆ. ನಮ್ಮ ನಿನ್ನ ನೆಯ ಮುಖ ಸಂಸ್ಕೃತಿ ... ನಿನಗೆ ಚೆನ್ನಾಗಿ ತಿಳಿದಿದೆ ಸಮಾಜದಲ್ಲಿ ನಮ್ಮ ಮನೆಯ ಸ್ಥಾನವೇನೆಂದೂ ನಿನಗೆ ಗೊತ್ತು. ಈ ಅಂತಸ್ತು ನೀನು ಹೊಂದುವೆಯೋ ಇಲ್ಲ ವೋ ನಾನು ಹೇಳಲಾರೆ. ಎಲ್ಲಕ್ಕೂ ನೀನೇ ಜವಾಬ್ದಾರಿ. ನಮ್ಮ ಯಾರದ್ದೂ ದೂರು ಮಂ ಇಲ್ಲ. ನೀನು ತಿಳಿದ ಪ್ರೌಢೆ. ನಿನ್ನ ಸುಖ ದುಃಖದ ಕಲ್ಪನೆ ನಿನಗಿರುವಷ್ಟು ಚೆನ್ನಾಗಿ ನಮಗಿರಲಾರದು. ನಿನ್ನ ಬಾಳಿನ ಕುರಿತು ನಿನ್ನ ಕಣ್ಣುಗಳು ಯಾವಲ್ಲಾ ಕನಸುಗಳನ್ನು ಕಂಡಿವೆಯೋ ನಿನಗೆ ವಿದಿತ ...ಗಿರುವಂಗ ಇನ್ನೂ ಚೆನ್ನಾಗಿ ಆಲೋಚಿಸಿಕೋ ' ಎಂದು ಹೇಳಿ ಮಂದುವರಿ 'ನಾನೊಮ್ಮೆ ವಾಸುದೇವನನ್ನ ಕಾಣಬೇಕು. ನೀನು ಓದುವ ... ಈ ವಾರದೊಳ ಆಗಬೇಕು. ನಿನಗೆ ರಜೆ ಹೆಚ್ಚಿಗೆ' ಎಂದು ಮಾತನ್ನು ಆ ದಿನಕ್ಕೆ ಮುಗಿಸಿದ.

ಬಾಣ ಸ್ಥಾನದ ಸುಶೀಲೆ ಅಣ್ಣ ವಾಸುದೇವನನ್ನು ... ಅವರ ಮದುವೆ ಮಾಡಿಕೊಡುವ ... ಅರ್ಹ ತೆಗಳಿವೆಯೋ ಎಂದು ತಿಳಿಯುವ ಅವಕಾಶವನ್ನು ದೊರಕಿಸಿ ಕೊಂಡನು. ವಾಸುದೇವನೊಡನೆ ಮಾತನಾಡಿ ಅವನ ಸ್ಥಿತಿಗತಿ, ಆಸೆ, ಆಕಾಂಕ್ಷೆಗಳೆಲ್ಲವನ್ನೂ ತಿಳಿದುಕೊಂಡನು. ಬಳಿಕ ಶ್ರೀನಿವಾಸ ಎಲ್ಲವನ್ನೂ ಪತ್ರವರಿಗೆ ತಿಳಿಸಿ, ತಾವು ಅವರನ್ನು ವಿರೋಧಿಸಿದರೆ ಆಗ ಬಹುದಾದ ಘಟನೆಗಳ, ಅನಾಹುತಗಳ ವಿಚಾರವಾಗಿ ಮಾತನಾಡಿಕೊಂಡರು. ದೀರ್ಘ ಮಾತು ಕತೆಗಳ ಅಂತ್ಯದಲ್ಲಿ "ಎಳೆಯ ಬದುಕು ಬಾಳಲಿ, ಜೀವನ ಸುಗಮವಾಗಲಿ, ಬಾಳು ಬೆಳಗಲಿ" ಎಂಬ ಹಾರೈಕೆಯಿಂದ ನಡೆದ ಕಾರ್ಯ, ಕ್ರಿಯೆಗಳ ಘಟನೆಗೆ ಸುಖ ರೂಪ ಕೊಡುವ ಬಯಕೆಯನ್ನು ತಿಳಿಸಿದನು. ತಂದೆ, ತಾಯಿ ಇಬ್ಬರೂ ಒಪ್ಪದಾದರು; ಸಹಿಕರಾದರು.

"ನಾನು ನನ್ನ ಕೈಗಳಿಂದ ವಾಸುದೇವನಿಗೆ ಸುಶೀಲಳನ್ನು ಧಾರೆ ಎರೆದು ಕೊಡಲಾರೆ" ಎಂಬ ನಿರ್ಣಯವನ್ನು ಖಚಿತವಾಗಿ ಬಾಬುರಾಯರು ಹೇಳಿದರು.

ರಜೆ ಕಳೆದ, ಬಿಡಿಸದ ಸಮಸ್ಯೆಯ ಜಾಗವನ್ನ ... ಜೊತೆ ಕ ಂದು ಶ್ರೀನಿವಾಸ ದಿಲ್ಲಿಗೆ ಹೋದನು. ತಿಂಗಳುಗಳು ರುಳಿದ ಬಳಿಕ ಮೂರು ಪತ್ರಗಳನ್ನು ಬರೆದನು. ತಂದೆಗೆ ಬರೆದ ಪತ್ರದಲ್ಲಿ,

"ನೀವು ಸುಶೀಲಳನ್ನು ವಾಸುದೇವನಿಗೆ ಧಾರೆಎರೆದು ಕೊಡಲು ನಾನು ಒತ್ತಾಯ ಮಾಡಲಾರೆ. ನಿಮ್ಮ ನೋವೇನೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ಸಮಾಜದಲ್ಲಿ ನಿಮ್ಮ ಸ್ಥಾನ, ಮಾನವೇನೆಂದು ನನಗೆ ತಿಳಿದಿದೆ. ಆದರೂ, ಅವಳು ನಿಮ್ಮ ಮಗಳಾಗಿ ನನ್ನ ತಂಗಿಯಾಗಿ ಇದಿಷ್ಟು ದಿನ ಬೆಳೆದು ಬಾಳಿದವಳು. ಅವಳನ್ನು ನಿರ್ಗತಿಕಳನ್ನಾಗಿ ಹೊರ ಹೋಗು, ಎನ್ನ ಬಹುದ ದಂಗ, ... ಒದಲಾಗಿ ... ಅವಳಿಗೆ ಕೊಟ್ಟು ಮದುವ ಮಾಡಿದರೆ ... ಬಾಳಿಗೆ ನಾವು ... ನಮ್ಮ ಹೊಣೆಯ ನ್ನು ತೀರಿಸಿದಂತೆ ... ಅವಳು ತಪ್ಪು ಹೆಜ್ಜೆ ಇಟ್ಟಳೇನೋ ಹೌದು. ತನ್ನ ಬಾಳನ್ನು ... ರುವುದನ್ನು ಅನ ಭವಿಸ ವವಳು ತಾನೇ ಎಂಬ ಹೊಣೆ ತಿಳಿದ ಅವಳಿಗೆ ಜೊತೆದ ದಾರಿಯಲ್ಲಿ ಕಳುಹಿಸಿ ಕೊಡುವಾ ಎನ್ನುವ ... ಹಾರೈಕೆ ನನ್ನದು. ಅವಳಿಗೂ ನಮ ಗೂ ಇರುವ ಸಂಬಂಧ ಹಸುರಾಗಿ ಉಳಿಯಲಿ ಎಂಬ ಆಸೆ ನನ್ನದು. ಒಪ್ಪಿಗೆ ಕೊಡಿ ಎಂದು ಒತ್ತಾಯಿಸ ಲ್ಲೇನೆಂದು ತಿಳಿದು ಬೇಸರಿಸಬಾರದು. ನೀವು ತಿಳಿದ ಅನುಭವಿಗಳು. ಹಾಗಾಗಿ ಇದಿಷ್ಟು ಬು..ಹವನ್ನು ಒರೆಯುವ ಮನಸ್ಸು ಮಾಡಿದೆ" ಎಂದಿತ್ತು.

ಸುಶೀಲ, ವಾಸುದೇವರಿಗೆ ಬರೆದ ಪತ್ರಗಳಲ್ಲಿ ಗೃಹಸ್ಥ ಜೀವನದ ಹೊಣೆಗಾರಿಕೆ, ಸಮಾಜದ ಆಸರಲ್ಲಿ ಅವರ ವ ದ ಪ್ರಯೋಗದ ಬಹುದಾದ ಅಭಿಪ್ರಾಯ ಬೇಧಗಳು; ಸಮಾಜದಲ್ಲಿ ಅವರಿಬ್ಬರ ಸ್ಥಾನ, ಇವುಗಳ ಕುರಿತು ಬರೆದು ಅವರಿಬ್ಬರ ಅಂತಿಮ ನಿರ್ಣಯಕ್ಕಾಗಿ ತಾನು ಕಾಯುತ್ತಿರುತ್ತೇನೆಂದು ಬರೆದಿತ್ತು.

o o o

ರಜೆಯಲ್ಲಿ ಶ್ರೀನಿವಾಸ ಊರಿಗೆ ಬಂದನು; ಸುಶೀಲ ವಾಸುದೇವರು ತಮ್ಮ ಮದುವೆಗೆ ಹಿರಿಯರಿಂದ ಒಪ್ಪಿಗೆ ಪಡೆಯಲು ಅವನನ್ನು ಹಲವು ಸಂದರ್ಭಗಳಲ್ಲಿ, ಹಲವು ರೀತಿಗಳಿಂದ ಒತ್ತಾಯಿಸಿದರು. ಇದರಿಂದಾಗಿ ಶ್ರೀನಿವಾಸ ತಂದೆಯೊಡನೆ ಇನ್ನೊಮ್ಮೆ ಮಾತನಾಡಬೇಕಾಯಿತು. ತಂದೆ ತನ್ನ ದೃಢ ನಿರ್ಧಾರದಿಂದಲೇ ವಿರೋಧಿಸಿದರು; ಕೊನೆಗೆ ಶ್ರೀನಿವಾಸನೇ ಹೊಣೆ ನಿರ್ವಾಹಿಸುವುದಾದರೆ ತಮ್ಮ ಅಡ್ಡಿ ಆಂತಕಗಳಿಲ್ಲವೆಂದು ಅರೆ ಮನಸ್ಸಿನಿಂದ ಹೇಳಿದರು.

"ಮನೆಯಿಂದ ಅವಳು ನಿರ್ಗತಿಕಳಾಗಿ ಹೊರಡಬೇಕೆ?" ಎಂದನು ಶ್ರೀನಿವಾಸ.

"ಮತ್ತೆ ಏನು ಮಾಡಬೇಕಂತೆ?" ಎಂದರು ಬಾಬುರಾಯರು. 'ಅವಳ ಪಾಲಿನದಾಗಿ ಅವಳಿಗೆ ಕೊಡುವುದನ್ನು ಕೊಡುವಾ' ಎಂದನು ಶ್ರೀನಿವಾಸ.

'ನನ್ನನ್ನು ಹೀಗೆ ಗೋಳು ಹೊಯ್ಯುದವಳಿಗೆ'

'ಹಾಗೆ ಏನಬಾರದಪ್ಪಾ'

'ಹೇಗಾಗುತ್ತದೆ ಶ್ರೀನಿ? ಹೊಟ್ಟೆ ಉರಿಯುತ್ತದೆ. ಎಲ್ಲರೂ ನನ್ನನ್ನೇ ಬೊಟ್ಟು ಮಾಡಿ ಮಾತನಾಡುವಾಗ, ನೋಡುವಾಗ, ತೋರಿಸುವಾಗ— ಈ ಪ್ರಾಯದಲ್ಲಿ ಈ ಶಿಕ್ಷೆಯೇ ಎಂದಾಗುತ್ತದೆ."

'ಅವಳು ಆತ್ಮಹತ್ಯೆ ಮಾಡಿಕೊಂಡರೆ'

'...............'

'ಮನೆ ಬಿಟ್ಟು ಹೋಗಿ ಅವನನ್ನು ಸೇರಿಕೊಂಡರೆ?"

'ನಾಚಿಕೆ, ನಾಚಿಕೆ"

"ಅದಕ್ಕೇ ಎಂದೆ, ನಾವೊಂದು ಸುಖ ರೂಪಕೊಟ್ಟು ಕಳುಹಿಸುವಾ"

"ಏನು ಬೇಕಾದರೂ ಮಾಡಿಕೋ, ಅವಳನ್ನು ಕಳುಹಿಸಿ ಬಿಡು, ಹೋಗ್ಲಿ, ಹೋಗ್ಲಿ....."

o o o

ತಂದೆಯನ್ನು ಒಪ್ಪಿಸಿ ಅವಳಿಗೆ ವಜ್ರದ ಬೆಂಡೋಲೆ ಚಿನ್ನದ ಬಳೆ, ಸರ, ಮನೆ ಮಾಡಲು ಬೇಕಾದ ಪಾತ್ರೆ ಪರಡೆಗಳನ್ನು ಕೊಡಲು ಮನಸ್ಸುಮಾಡಿ ಎಲ್ಲವನ್ನೂ ಸಿದ್ಧಗೊಳಿಸಿ ಕೊಟ್ಟ ಶ್ರೀನಿವಾಸ. ಮಾತ್ರವಲ್ಲ ತಮ್ಮ ಮನೆಯಿಂದ ಹದಿನೆರಡು ಮೈಲು ದೂರದಲ್ಲಿರುವ ದೇವಸ್ಥಾನ ಒಂದರಲ್ಲಿ ಮದುವೆಯಾಗುವುದೆಂದು ನಿಶ್ಚಯಿಸಿದ. ಮದುವೆಯ ದಿನ ಸುಶೀಲೆ ತನ್ನ ತಂದೆ ತಾಯಿಂದಿರು ಇದ್ದರೂ ಇಲ್ಲದವಳಾಗಿ, ಶ್ರೀನಿವಾಸನಿಂದಲೇ ಎಲ್ಲವನ್ನೂ ಮಾಡಿಸಿಕೊಂಡಳು.

o o o

ಸುಶೀಲೆ ಸತ್ತೆರೆಯುವಾಗ ಶ್ರೀನಿವಾಸ ಮಗ್ಗುಲಲ್ಲಿದ್ದ. ಅವಳಿಂದಲ್ಪಲ್ಪ ದೂರದಲ್ಲಿ ಬಾಬುರಾಯರು ಕುಳಿತಿದ್ದರು, ತಾಯಿ ತನ್ನ ಬಲಗಡೆಯಲ್ಲಿ ಕುಳಿತುಕೊಂಡೆಯ. ವೇಲೆ ... ಕೈಯಾಡಿಸುತಿದ್ದಳು. ಆಗ, ಆ ಸ್ಥಾನಕ್ಕೆ ಸುಶೀಲೆಗೆ ಕಾಣದವನೆ ಇದ್ದ ಮೊಗ ಮಂ ಐದ ವಾಸುದೇವನದು ಮಾತ್ರ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 436/1965
O. S. 158/1953

ಅರ್ಜಿದಾರ- ತಿಂಮಪ್ಪ ಹೆಗ್ಡೆ.

ಎದುರಿಗೆ- ಮುಹಮ್ಮದ ಗೌಸ್ ಖಾನ್ ಸಾಹೇಬ್ ಮ್ಯಾನೇಜರು ಇಲ್ಲಿ

ಎದುರು 1. ಮಹಮ್ಮದ ಗೌಸ್ ಖಾನ್ 2. ಹಮೀದ್ ಬೀಬಿ—ಅಲ್ಲಿಖಾನ್ ಸ್ತ್ರೀ ರ ಮಕ್ಕಳು, ಕುಂದಾಪುರ ಕಸಬಾ ಗ್ರಾ. ರಿಗೆ.

ಮೇಲ್ಕಂಡ ಅಮಲ್ಜಾರಿಯಲ್ಲಿ ಡಿಕ್ರಿಯಲ್ಲಿ ಹೂಂಡಕ್ಕೆ ವಿಧಿಯಿಂದ ಸ್ಥಿರ ಆಸ್ತಿ ಗಳ ಹೀಲಂ ಬಗ್ಗೆ ಅರ್ಜಿದಾರನು ಹುಜ್ರಿ ಪಡಿಸಿ ಯಲಂ ಇಸ್ತಿಹಾರಿನ ಶರ್ತು ಗಳ ರ್ಣಯ ದ ಬಗ್ಗೆ ಮೇಲ್ಕಂಡ ದ ಕೋರ್ಟಿನ ಲ್ಲಿ ತಾ. 13—8—1966ಕ್ಕೆ ಟ್ಟಿರುತ್ತದೆ. ಈ ಕುರಿತು ನಿಮ್ಮ ಆಕ್ಷೇಪಣೆ ರಾದರೂ ಇದ್ದಲ್ಲಿ ಸದ್ರಿ ದಿವಸ ಹಗಲು 11 ಂಟೆಗೆ ಹಾಜರು ಪಡಿಸತಕ್ಕದ್ದು ಎಂದ ತಿಳಿಸಿ ಪಡಿಸಿರುತ್ತದೆ.

(ಕೋರ್ಟ್ ಹುಕುಂ ಪ್ರಕಾರ)

A. R. Shetty,
B. A., B. Com., B.L.
Advocate for Petitioner

ಕುಂದಾಪುರ, 1—6—1966.

ಅತ್ಯಾಧುನಿಕ ನೆಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶ್ರೀ ವೆಂಕಟೇಶ ಪ್ರಸಾದ

ಫೋನ್: 77 ಕುಂದಾಪುರ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. C1—4.17—4/65—66 dated 26—4—1966.

NAVAYUGA 11—8—1966
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಮೂರ್ಛೆ ರೋಗಿಗಳಿಗೆ

ಮೆಟ್ಟಿಲಿಲ್ಲದ ಶಾಲಾಭವನ

ಅನೇಕ ದುಷ್ಕಟಗಳ ಹಾಗೆ ಕೆಟ್ಟ ರೋಗಗಳು ಸಹ 'ಗಿಡವಾಗ್ಗಿ ಬಗ್ಗದ್ದು ಮರವಾಗ್ಗಿ ಬಗ್ಗೀತೆ?' ಎನ್ನುತ್ತಾರೆ. ಆ ಅನುಭವದ ಹಿನ್ನೆಲೆಯಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಮೂರ್ಛೆ ರೋಗವನ್ನು ವಾಸಿ ಮಾಡುವ ಜರ್ಮನರ ಪ್ರಯತ್ನದ ಚಿತ್ರ ಇಲ್ಲಿದೆ.

ಅದೊಂದು ಶಾಲೆ, ಅದಕ್ಕೆ ಹೊಸ್ತಿಲುಗಳಿಲ್ಲ; ಮೆಟ್ಟಿಲುಗಳಿಲ್ಲ, ವಿಶಾಲ ಆವರಣಗಳು ಮತ್ತು ಎಲಿವೇಟರ್ಸ್ ಮಾತ್ರ ಇವೆ. ಮೂರ್ಛೆ ರೋಗದಿಂದ ಬಳಲುತ್ತಿರುವ ಚಿಕ್ಕಮಕ್ಕಳಿಗಾಗಿ ಈ ಶಾಲೆಯನ್ನು ಫ್ರಾಂಕ್‌ಫರ್ಟ್‌ನಲ್ಲಿ ಈಗ ಕಟ್ಟಲಾಗುತ್ತಿದೆ. ಮೂರ್ಛೆ ರೋಗದ ಮಕ್ಕಳಿಗೆ ಮಾಮೂಲು ಜೀವನವನ್ನು ಅನುಸರಿಸುವಂತಾಗಲು ಸಹಾಯಕವಾಗುವುದೇ ಈ ಶಾಲೆಯ ಉದ್ದೇಶ. ಇಂಥ ಶಿಕ್ಷಣ ಸಂಸ್ಥೆಯನ್ನು ಹೊಂದುತ್ತಿರುವಲ್ಲಿ ಫ್ರಾಂಕ್‌ಫರ್ಟ್ ನಗರವೇ ಮೊದಲಿನದು.

ಮೂರ್ಛೆ ರೋಗದ ಮಕ್ಕಳ ರೋಗ ನಿವಾರಣೆಗಾಗಿ ಕಟ್ಟಲಾಗುತ್ತಿರುವ ಈ ಶಾಲೆಗೆ ವಿಶೇಷ ಉಪಕರಣಗಳು ಸೇರಿ ತಗಲುವ ವೆಚ್ಚ ನಲವತ್ತು ಲಕ್ಷ ಡಿ.ಎಂ. ಅಥವಾ ೧೦ ಲಕ್ಷ ಡಾಲರುಗಳು. ಶಾಲೆಯಲ್ಲಿ ೭೦ರಿಂದ ೮೦ರ ವರೆಗೆ ವಿದ್ಯಾರ್ಥಿಗಳಿರುವ ಹತ್ತು ತರಗತಿಗಳನ್ನು ಹೊಂದಲು ಇಲ್ಲಿ ಸಾಧ್ಯ. ಇಲ್ಲಿ ಬೆಳಗ್ಗೆ ಮಾತ್ರ ವಿದ್ಯಾರ್ಥಿಗಳು ತರಗತಿಗಳಿಗೆ ಬರಬೇಕು. ಶಾಲೆಯ ಮುಖ್ಯ ಕಟ್ಟಡದಲ್ಲಿ ಆರು ತರಗತಿಗಳ ಕೊಠಡಿಗಳಲ್ಲದೆ, ಕಾರ್ಯಾಗಾರ, ಸಂಗೀತ ಕೊಠಡಿ ಮತ್ತು ಒಂದು ಸಭಾ ಭವನ ಸಹ ಇವೆ. ಪಕ್ಕದ ಕಟ್ಟಡದಲ್ಲಿ ಮಕ್ಕಳಿಗಾಗಿ ಆಟದ ಕೊಠಡಿ, ವಿಶ್ರಾಂತಿ ಕೋಣೆಗಳು ಮತ್ತು ಊಟದ ಹಾಲ್ ಇವೆ. ಶಾಲಾ ಅಂಗಣವು ಇತರ ಶಾಲೆಗಳದ್ದಕ್ಕಿಂಥ ಭಿನ್ನವಿದೆ. ಇದು ಆಟದ ಅಂಗಣ ಮಾತ್ರವಲ್ಲ ಅನೇಕ ತರಬೇತಿಗಳ ಬಯಲೂ ಸಹ ಹೌದು. ಮರಳು, ಸಣ್ಣ ಕಲ್ಲು ಮತ್ತು ಒಡೆದ ಕಲ್ಲುಗಳ ಹಾದಿಗಳು ಈ ಅಂಗಣಕ್ಕಿವೆ. ಸ್ಕೂಟರ್ ಮತ್ತು ಮೂರು ಗಾಲಿಗಳ ಸೈಕಲ್ಲನ್ನು ಓಡಿಸುವ ಮಾರ್ಗವಿದೆ. ವ್ಯಾಯಾಮಕ್ಕನುಕೂಲವಾದ ಸುಸಜ್ಜಿತ ೪೦೦ ಅಡಿ ಬಯಲೂ ಇದೆ.

ಈ ಚಿಕಿತ್ಸಾ ಕಾರ್ಯಕ್ರಮದಲ್ಲಿ ವ್ಯಾಯಾಮದ ಸ್ಥಾನ ಬಹಳ ಪ್ರಮುಖವಾದುದು. ಮಕ್ಕಳನ್ನು ನೋಡಿಕೊಳ್ಳುವ ವೈದ್ಯರ ಕೊಠಡಿಗಳು ಚಿಕಿತ್ಸಾ ಕೊಠಡಿಗಳು ಶಾಲೆಯ ನೆಲಮಾಳಿಗೆಯೊಳಗಿವೆ. ಈಜುವ ಕೊಳ ಮತ್ತು ಮಕ್ಕಳು ತಾವೇ ಅಡಿಗೆ ಮಾಡಲು ಸಾಧ್ಯವಾಗುವಂಥ "ಹೊಸ ರೀತಿಯ" ಸ್ಟೌವ್‌ಗಳನ್ನು ಜೋಡಿಸಲಾದ ಅಡಿಗೆ ಕೋಣೆಯನ್ನೂ ಇಲ್ಲಿ ನಿರ್ಮಿಸಲಾಗುವುದು.

ಮೂರ್ಛೆ ರೋಗವು ಎಂಥ ಬೃಹತ್ ಸಮಸ್ಯೆ ಎಂಬುದು ಕಳೆದ ಆರು ವರ್ಷಗಳಿಂದ ಫ್ರಾಂಕ್‌ಫರ್ಟ್‌ನಲ್ಲಿ ಅಧಿಕೃತ ಸಲಹಾ ಮಂಡಲಿಯು ನಡೆಸಿದ ಕಾರ್ಯದಿಂದ ಸ್ಪಷ್ಟವಾಗುತ್ತದೆ. ಕಳೆದ ವರ್ಷ ಒಂದರಲ್ಲೇ ಸುಮಾರು ೧೭೭ ಮಂದಿ ಮೂರ್ಛೆ ರೋಗಿಗಳ ತಂದೆ ತಾಯಿಯವರು ಫ್ರಾಂಕ್‌ಫರ್ಟ್ ಸಲಹಾ ಮಂಡಲಿಗೆ ಬಂದು ಸಮಾಲೋಚನೆ ನಡೆಸಿದರು. ದೇಹದ ದುರ್ಬಲತೆ ಮತ್ತು ಅನಾರೋಗ್ಯ ಕಾರಣ ಈ ಎಲ್ಲ ಮಂದಿ ಮಕ್ಕಳು ಮಾಮೂಲು ಶಾಲೆಗಳಿಗೆ ಹೋಗಲಾರರು. ಇವರಿಗೆ ಈ ನೂತನ ಶಾಲೆ ಒಂದು ಹೊಸ ಸದವಕಾಶ.

ಮೂರ್ಛೆ ರೋಗದಿಂದ ನರಳುತ್ತಿರುವ ಎಳೆ ಮಕ್ಕಳಿಗೆ ಸಹ ಚಿಕಿತ್ಸೆ ಮಾಡಲು ಈಗ ಸಾಧ್ಯವಿದೆಯೆಂದೂ ಫ್ರಾಂಕ್‌ಫರ್ಟ್ ಸಲಹಾ ಕೇಂದ್ರದ ಮುಖ್ಯಾಧಿಕಾರಿ ಡಾ. ಸ್ಟೀನ್ ಬೌರ್ಡೀನ್ ನುಡಿಯುತ್ತಾರೆ. ಫ್ರಾಂಕ್‌ಫರ್ಟ್ ಪ್ರದೇಶದಲ್ಲಿರುವ ಮಕ್ಕಳು ವಾರಕ್ಕೆ ಎರಡು ಬಾರಿ ಚಿಕಿತ್ಸೆಗೆ ಬರುತ್ತಾರೆ. ಇತರ ಮಕ್ಕಳು ತಿಂಗಳಿಗೆ ಒಮ್ಮೆ ಬರುತ್ತಾರೆ. ಮಕ್ಕಳ ತಾಯಿಗೆ ಸಹ ಚಿಕಿತ್ಸಾ ಅಂಗವಾದ ವ್ಯಾಯಾಮದ ಬಗೆ ತಿಳಿಯಪಡಿಸಲಾಗುವುದು. ಏನಿದ್ದರೂ ಚಿಕಿತ್ಸೆ ಬಹಳ ಚಿಕ್ಕ ವಯಸ್ಸಿನಲ್ಲಿಯೇ ಆರಂಭವಾಗುವುದರಿಂದ ರೋಗ ಗುಣ ಹೊಂದುವ ಅವಕಾಶವೂ ಹೆಚ್ಚೆಂಬುದು ನಿಸ್ಸಂಶಯ

ವಿಜ್ಞಾನ ವಿಸ್ಮಯ

ರುಂಡವನ್ನೂ ಬಗೆದು ಜೋಡಿಸಬಹುದು

ಮಧ್ಯ ಯುಗದಲ್ಲಿ 'ಪ್ಲೇಗು' ಅತ್ಯಂತ ಭಯಾನಕ ಉಪದ್ರವವಾಗಿತ್ತಾದರೆ, ಇಂದು ಮಾನವಕುಲವು ಭಯಂಕರ ಸ್ವರೂಪದಲ್ಲಿ ಅದಕ್ಕಿಂತಲೂ ಕಡಿಮೆಯೇನೂ ಅಲ್ಲದ, ಮಸ್ತಿಷ್ಕ ರಕ್ತಸ್ರಾವಗಳಿಗೆ ಸಂಬಂಧಪಟ್ಟ ರೋಗಗಳನ್ನು ಎದುರಿಸಬೇಕಾಗಿದೆ. ಕಾರಣಗಳು ಬೇರೆ ಬೇರೆಯಾಗಿರಬಹುದಾದರೂ ಪರಿಣಾಮವು ಸಾಮಾನ್ಯವಾಗಿ ಮಾರಕವೇ. ಮೃತ್ಯುವಿಗೆ ಮೊದಲು ಅಸಹನೀಯವಾದ ವೇದನೆಯನ್ನೂ, ಕೈಕಾಲುಗಳ ಪಾರ್ಶ್ವವಾಯುವನ್ನೂ, ಶ್ರವಣ, ದೃಷ್ಟಿ, ವಾಕ್ ದೋಷಗಳನ್ನೂ ಅನುಭವಿಸಬೇಕಾಗುತ್ತದೆ.

ಉಕ್ರೇನಿನ ಜ್ಞಾನತಂತು-ಶಸ್ತ್ರವೈದ್ಯ ಸಂಶೋಧನ ಸಂಸ್ಥೆಯು ಪ್ರಧಾನ ಮಸ್ತಿಷ್ಕದ ರಕ್ತಸ್ರಾವಗಳ ಪರಿಣಾಮಗಳನ್ನು ನಿವಾರಿಸುವ ದೃಷ್ಟಿಯಿಂದ ಅನೇಕ ಪ್ರಯೋಗಗಳನ್ನು ನಡೆಸುತ್ತ ಬಂದಿದೆ. ಈ ಶಸ್ತ್ರ ಕ್ರಿಯೆಗಳು ಜಟಿಲವಾಗಿವೆಯಾದರೂ, ಶಸ್ತ್ರ ಚಿಕಿತ್ಸೆಗೆ ಮೊದಲೇ ರೋಗಿಗಳ ಸ್ಥಿತಿಯು ಚಿಂತಾಜನಕವಾಗಿರುತ್ತದೆಯಾದರೂ, ಸುಮಾರು ಕಾಲು ಪಾಲಿಗಿಂತ ಹೆಚ್ಚು ಮಂದಿ ರೋಗಿಗಳನ್ನು ನರ—ಶಸ್ತ್ರ ವೈದ್ಯರು ಮೃತ್ಯು ಮುಖದಿಂದ ಕಸಿದು ಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಬಳಸಲಾಗುವ ಶಸ್ತ್ರ ಚಿಕಿತ್ಸಾ ವಿಧಾನವು ಸುಪರಿಚಿತವಾಗಿದೆಯಾದರೂ, ಮಹತ್ತರ ಅಪಾಯಗಳನ್ನೆದುರಿಸಬೇಕಾಗುತ್ತದೆ. ಏಕೆಂದರೆ ಶಸ್ತ್ರ ವೈದ್ಯರು ರುಂಡದ ವಿಶಿಷ್ಟ ವಿಭಾಗವನ್ನು ತೆರೆದೇ ಮಿದುಳನ್ನು ಮುಟ್ಟಬೇಕಾಗುತ್ತದೆ.

ರುಂಡದ ಶಸ್ತ್ರ ಚಿಕಿತ್ಸೆಯ ಆವಶ್ಯಕತೆಯಿಲ್ಲದ ನೂತನ ವಿಧಾನಗಳನ್ನು ಈಗ ಪ್ರೊ. ಆ. ಇ. ಅರುತ್ಯುನೊವ್‌ರವರೂ ಮತ್ತು ಅ. ಪ. ಬುರ್ಲ್ಯಾತ್‌ಸ್ಕಿಯವರೂ ರೂಪುಗೊಳಿಸಿದ್ದಾರೆ. ೧೯೬೬ರಲ್ಲಿ ಲೆನಿನ್‌ಗ್ರಾಡಿನಲ್ಲಿ ನಡೆದ ಸೋವಿಯತ್ ನಾಡಿನ ಜ್ಞಾನತಂತು ಶಸ್ತ್ರ ವೈದ್ಯರ ಮಹಾಸಭೆಯಲ್ಲಿ ಈ ವಿಧಾನವನ್ನು ವಿವರಿಸಲಾಯಿತು. ಅದರ ಸಾರಾಂಶವನ್ನು ಇಲ್ಲಿ ಸ್ವಲ್ಪ ಮಟ್ಟಿಗೆ ನಿದರ್ಶನದೊಂದಿಗೆ ವಿವರಿಸಲಾಗಿದೆ.

ಚೆರ್ಕಾಸಿ ಪ್ರಾಂತದ ಫ. ನಿಕೊಲಾಯ್ ಎಂಬಾತನು ತನ್ನ ಕೆಲಸ ಮುಗಿಸಿಕೊಂಡು ಮನೆಗೆ ಮರಳಿ ಹೋಗುತ್ತಿದ್ದಾಗ ರಸ್ತೆಯ ತಿರುವೊಂದರಲ್ಲಿ ಮೋಟರು ಕಾರಿಗೆ ಸಿಕ್ಕಿದನು. ಈ ಪ್ರಹಾರದ ಪರಿಣಾಮವಾಗಿ, ಆತನ ತಲೆಗೆ ರಕ್ತವನ್ನೊಯ್ಯುವ ಪ್ರಧಾನ "ಕರೋಟಿಡ್" ಶುದ್ಧ ರಕ್ತನಾಳವು ಕಣ್ಣಿನ ಪಟ್ಟೆದಲ್ಲಿ ಕಡಿದು ಹೋಯಿತು. ರಕ್ತನಾಳದಿಂದ ಹರಿದ ರಕ್ತವು ಗಾಯದಲ್ಲಿ ತುಂಬಿಕೊಂಡಿತು. ಅದರ ಒತ್ತಡದ ಪರಿಣಾಮವಾಗಿ ಕಣ್ಣು ಊದಿಕೊಂಡಿತು. ಸ್ಮರಣ ಶಕ್ತಿಯೂ ದೃಷ್ಟಿ ಶಕ್ತಿಯೂ ಲುಪ್ತವಾದುವು.

ಶಸ್ತ್ರವೈದ್ಯರು ಆರು ಗಂಟೆ ಕಾಲ ಚಿಕಿತ್ಸೆ ನಡೆಸಿದರು, ರೋಗಿಯ ಕೊರಳಿನ ಬಳಿಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿ "ಕರೋಟಿಡ್" ರಕ್ತನಾಳಕ್ಕೆ ಮಾರ್ಗ ಮಾಡಲಾಯಿತು. ಬೇಕಾಗಿದ್ದಷ್ಟು ಉದ್ದವಾದ ಒಳ ಚರ್ಮದ ಪಟ್ಟಿಯನ್ನು ವಿಶೇಷೋಪಕರಣದ ಮೂಲಕ ಬಿರಿತದವರೆಗೆ "ಕರೋಟಿಡ್" ರಕ್ತನಾಳದಲ್ಲಿ ಸೇರಿಸಲಾಯಿತು. ತೇಪೆಯು ಸರಿಯಾಗಿ ನಿಲ್ಲಲು "ಕಪ್ರಾನ್" ದಾರದಿಂದ ಹೊಲಿಯಲಾಯಿತು. (ರೇಷ್ಮೆ ದಾರವನ್ನೂ ಬಳಸಬಹುದು). ಕಣತಲೆಯ ಬಳಿಯಿದ್ದ ಗಾಯವು ಮುಚ್ಚಿಕೊಂಡುದನ್ನು ಛಾಯಾಚಿತ್ರಗಳು ತೋರಿಸಿದುವು. ತೇಪೆ ಸೇರಿದ್ದ ರಡಿ ಒಹಾರವನ್ನು ಚರ್ಮಕ್ಕೆ ಸೇರಿಸಿ ಹೊಲಿಯಲಾಯಿತು. ಇದರಿಂದ ನಾಳವು ಸರಿಯಾಗಿ ಕೂಡಿಕೊಳ್ಳುವ ವರೆಗೂ ಸ್ವಸ್ಥಾನದಲ್ಲಿರುವುದು ಸಾಧ್ಯವಾಗುತ್ತದೆ. ದಾರವು ಕಡೆತನಕ ಉಳಿದಿರುವುದಾದರೂ ಅದರಿಂದ ವ್ಯಕ್ತಿಗೆ ಯಾವ ಅಪಾಯವೂ ಇಲ್ಲ.

ಶಸ್ತ್ರ ಚಿಕಿತ್ಸೆ ನಡೆದ ಐದು ದಿನಗಳ ತರುವಾಯ ರೋಗಿಯ ದೃಷ್ಟಿದೋಷ ನಿವಾರಣೆಯಾಯಿತು. ಆತನ ಕಣ್ಣು ಯಥಾಸ್ಥಿತಿಗೆ ಬಂದು ತನ್ನ ಸಹಜ ಸ್ವರೂಪವನ್ನು ಪಡೆಯಿತು.

ಸಂಪೂರ್ಣ ಸ್ವಸ್ಥತೆಗೆ ಒಂದೆರಡು ತಿಂಗಳು ಕಾಲ ಬೇಕಾಗುತ್ತದೆ.

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಣ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

నవయుగ

NAVAYUGA

INDEPENDENCE DAY SPECIAL

1966

౫౦ పైసలు

ಸ್ವಾತಂತ್ರ್ಯದಿನದ ಶುಭಾಶಯಗಳು!

THE VIJAYA BANK

1. ಶ್ರೀ ಯಂ. ಸುಂದರ್‌ರಾಮ ಶೆಟ್ಟಿ, ಬೆಂಗಳೂರು. (ಚೆಯರ್‌ಮೇನ್)	7. ಡಾ। ಕೆ. ಬಾಲಪ್ಪ ಶೆಟ್ಟಿ, ಮಂಗಳೂರು.
	8. ಶ್ರೀ ಬಿ ಟಿ ರವೀಂದ್ರನಾದ ಪೂಂಜ, ಬೆಂಗಳೂರು.
2. " ಕೆ. ಸುಂದರರಾಮ ಶೆಟ್ಟಿ, ಮಂಗಳೂರು.	9. " ಬಿ. ಜಿ. ವೀರಣ್ಣ, ಬೆಂಗಳೂರು
3. " ಬಿ. ರಾಜೀವ ಶೆಟ್ಟಿ, ಮಂಗಳೂರು.	10. " ಕೆ. ಸಿ ಪುಟ್ಟಯ್ಯ, ದೊಡ್ಡಬಳ್ಳಾಪುರ.
4. " ಕೆ. ಯಲ್. ಭಂಡಾರಿ, ಮೈಸೂರು.	11. " ಯಚ್. ಟಿ. ಭಂಡಾರಿ, ಮುಂಬಾಯಿ.
5. " ಡಿ. ರತ್ನವರ್ಮ ಹೆಗ್ಗಡೆ, ಧರ್ಮಸ್ಥಳ.	12. " ಕೆ. ಪಿ. ಮಾಧವನ್ ನಾಯರ್, ಉಟಕಮಂಡ್.
6. ಡಾ। ಕೆ. ವಿಠಲ ಶೆಟ್ಟಿ, ಕಾಪು.	13 " ಆನಂದರಾವ್ ಬಿಂದೂರಾವ್ ದೇಸಾಯಿ, ಹುಬ್ಬಳ್ಳಿ.
ಆಡಿಟರ್— ಶ್ರೀ ಪಿ. ಯಂ. ಹೆಗ್ಡೆ.	ಸೆಕ್ರಿಟರಿ— ಶ್ರೀ ಪಿ ಜಯರಾಮ ಶೆಟ್ಟಿ

ಡೆಪ್ಯುಟಿ ಸೆಕ್ರಿಟರಿ—
ಶ್ರೀ ಯಸ್. ವಿಠಲ ಶೆಟ್ಟಿ.

ನಮ್ಮ ಶಾಖೆಗಳು:—

ಮೈಸೂರು ರಾಜ್ಯದಲ್ಲಿ	—	35
ಕೇರಳ ರಾಜ್ಯದಲ್ಲಿ	—	19
ಮದ್ರಾಸ್ ರಾಜ್ಯದಲ್ಲಿ	—	3
ಮಹಾರಾಷ್ಟ್ರ ರಾಜ್ಯದಲ್ಲಿ	—	2

ಸದ್ಯದಲ್ಲಿಯೇ ನಮ್ಮ ಹೊಸ ಶಾಖೆಗಳನ್ನು ಬೆಂಗಳೂರು (ಶಾಂತಿ ನಗರ), ಕಲ್ಲಿಕೋಟೆ (ಚೆರೂಟಿ ರೋಡ್), ಮದ್ರಾಸ್, ಮಂಡ್ಯ, ಕಾಸರ್ಗೋಡು, ಬಿ. ಸಿ. ರೋಡ್ ಇತ್ಯಾದಿ ಕಡೆಗಳಲ್ಲಿ ತೆರೆಯಲಿದ್ದೇವೆ

ಒಟ್ಟು ಚಲಾವಣಾ ಭಂಡವಾಳ– ತಾ. 18—7—1966ಕ್ಕೆ 6-75 ಕೋಟಿ ರೂಪಾಯಿಗಳಿಗೆ ಮಿಕ್ಕಿರುತ್ತದೆ.
(Working Capital)

ರಿಜಿಸ್ಟರ್ಡ್ ಆಫೀಸು: "ವಿಜಯಾ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3.

ಸ್ಥಾಪನೆ: 1931
ಫೋನ್ ನಂಬ್ರ– 4640

ಸ್ಥಾಪಕರು:
ಡಾ. ಎ. ಬಿ. ಶೆಟ್ಟರು

ಸಂಚಾಲಕ-ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಫೋ : 226

ಸಂಪುಟ : ೪೫

ಸಂಚಿಕೆ : ೪೯

ಸ್ವಾತಂತ್ರ್ಯ ವಿಶೇಷಾಂಕ ೧೯೬೬

NAVAYUGA - Independence Day Special 1966

ಸಂಪಾದಕೀಯ

ನಮ್ಮ ನಾವು ನೋಡಿಕೊಳ್ಳೋಣ

ಸ್ವಾತಂತ್ರ್ಯದಿನ ಮತ್ತೆ ಬಂದಿದೆ. ಹಳೆಯ ವರುಷ ಹೊರಳಿ ಹೊಸ ವರುಷ ಕಾಲಿರಿಸಿದೆ; ಅದು ಹೊಸ ಹರುಷವನ್ನು ತಂದಿದೆಯೆ? ತರುವ ಸೂಚನೆಯಾದರೂ ಇದೆಯೆ? ಹಳೆ ವರುಷಗಳ ಸಿಹಿ-ಕಹಿಗಳ ಸ್ಮೃತಿಯನ್ನಾದರೂ ನಾವು ಮಾಡಿಕೊಂಡು ಹೊಸ ವರುಷದ ಬಗ್ಗೆ ಕಲ್ಪನೆಯನ್ನಾದರೂ ಮಾಡಿದ್ದೇವೆಯೆ? ನಮ್ಮಲ್ಲಿ ಯಾರನ್ನು ಕೇಳಿದರೂ ಎಲ್ಲರ ಉತ್ತರವೊಂದೇ— ನಮಗೇನು ಸುಖ? 'ಹೊಸ ವೈದ್ಯನಿಗಿಂತ ಹಳೆಯ ರೋಗಿಯೇ ವಾಸಿ' ಎಂದು ಇಂದಿಗೂ ಸ್ವದೇಶೀ ಸರಕಾರವನ್ನು ಮೆಚ್ಚದ ಮಹನೀಯರೂ ಇಲ್ಲದಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ಸ್ವಾತಂತ್ರ್ಯ ಗಳಿಸುವುದಕ್ಕೆ ಮೊದಲು ತುಂಬಿ ತುಳುಕಾಡುತಿದ್ದ ಉತ್ಸಾಹವಿಂದು ನಮ್ಮಲ್ಲಿಲ್ಲ. ಅಂದು ಕಟ್ಟಿದ್ದ ನಮ್ಮ ಸುಂದರ ಸ್ವಪ್ನಗಳು ಹೆಚ್ಚಿನವರಿಗೆ ಬರಿಯ ಕನಸುಗಳಂತಾಗಿವೆ; ನಿರಾಶೆ ತುಂಬಿದೆ. ಇಂದು ಭಾರತೀಯರು ಸ್ವತಂತ್ರರು ಎನ್ನುವುದಕ್ಕಿಂತಲೂ ನಿರಾಶರು ಎಂದರೆ ಸರಿ ಹೋದೀತ; ಹಾಗಿದ್ದರೂ ಒಂದು ಸಂತೋಷ, ನಾವು ಸ್ವತಂತ್ರ ನಿರಾಶರು. ಬ್ರಿಟಿಷರ ಆಡಳಿತೆಯಲ್ಲಿ ನಮಗೆ ನಿರಾಶರಾಗುವುದಕ್ಕೂ ಸ್ವಾತಂತ್ರ್ಯವಿರಲಿಲ್ಲ.

ಇಂತಹ ಪರಿಸ್ಥಿತಿ ಅನಿಯಮಿತವಾಗಿ ನಿರವಧಿಯಾಗಿ ಮುಂದುವರಿಯುವುದು ರಾಷ್ಟ್ರದ ಆರೋಗ್ಯಕ್ಕೆ ನೆಮ್ಮದಿ ತರುವುದಿಲ್ಲ. ಆದುದರಿಂದ ಇದನ್ನು ದೂರ ಮಾಡಲು ನಿರ್ಧಾರದಿಂದ ಹೋರಾಡಲು ನಾವು ಮುಂದಾಗಬೇಕು. ನಮ್ಮ ನಮ್ಮ ಆತ್ಮವನ್ನೇ ಒರೆಗಲ್ಲಿಗೆ ಹಚ್ಚಿ ನೋಡಬೇಕು; ನಮ್ಮ ಬಣ್ಣವೆಷ್ಟು ಎಂಬುದನ್ನು ಮೊದಲಿಗೆ ಅರಿತುಕೊಂಡು, ಅದನ್ನು ತಿಳಿ ಬಣ್ಣಗಳಿಗೆ ಏರಿಸಬೇಕು. ಪೌರ ಧರ್ಮವೆಂಬುದು ಅಧಿಕಾರದಲ್ಲಿರುವವರಿಗೆ ಅಥವಾ ಅದಕ್ಕಾಗಿಯೇ ಮಡಿಯಲು ಸಿದ್ಧರಾಗಿರುವ ಕೆಲವರಿಗಷ್ಟೇ ಪರಿಮಿತವಾದುದಲ್ಲ. ಪ್ರತಿ ಭಾರತೀಯನೂ ದೇಶದ ಪೌರ. ಆತನು ತನಗೆ ಸಂವಿಧಾನವು ಕೊಡಮಾಡಿದ ಅಧಿಕಾರಗಳನ್ನು ಹೊಂದುವಂತೆಯೇ ತನ್ನ ಕರ್ತವ್ಯವನ್ನು ಪಾಲಿಸುವುದರಲ್ಲೂ ಮುಂದಾಗಬೇಕು. ಪ್ರತಿಯೊಂದಕ್ಕೂ ಸರಕಾರವನ್ನೇ ಬೊಟ್ಟು ಮಾಡಿ ತೋರಿಸುವ ಪ್ರವೃತ್ತಿ ಆರೋಗ್ಯದಾಯಕವಾಗಿಲ್ಲ. ದೇಶದಲ್ಲಿ ಕಾಂಗ್ರೆಸ್ ಸರಕಾರ ಆಡಳಿತೆ ನಡೆಸುವುದಕ್ಕೂ, ಮಳೆ—ಬೆಳೆ ಕಡಿಮೆಯಾಗುವುದಕ್ಕೂ ಯಾವ ಸಂಬಂಧವಿದೆ? "ರಾಜಾ ಕಾಲಸ್ಯ ಕಾರಣಂ" ಎಂಬ ಹಿಂದಿನ ಉಕ್ತಿಯನ್ನು ಕೆಲವರು ಸಾಧಿಸಹೊರಡುತ್ತಾರೆ. ಪ್ರಜಾಸತ್ತೆಯಲ್ಲಿ ಪ್ರಜೆಗಳೇ ರಾಜರು ಎಂಬ ಸತ್ಯವನ್ನವರು ತಿಳಿದುಕೊಳ್ಳುವುದಿಲ್ಲ. ಯಾವ ದೇಶದ ಜನರು ಪ್ರಜ್ಞಾವಂತರೂ ಕರ್ತವ್ಯಶೀಲರೂ ಆಗಿರುತ್ತಾರೆಯೋ ಅಂತಹ ದೇಶದಲ್ಲಿ ಉತ್ತಮ ಸರಕಾರದ ರಚನೆ ಸಾಧ್ಯ. ಆದುದರಿಂದ ಇಂದಿನ ಪವಿತ್ರ ದಿನದಲ್ಲಿ ನಾವು ಮಾಡಲೇಬೇಕಾದ ಕೆಲಸವೊಂದೇ— ನಮ್ಮ ನಮ್ಮ ಆತ್ಮ ಶೋಧನೆಯಲ್ಲಿ ನಾವು ತೊಡಗಬೇಕು; ಒಂದು ಸ್ವತಂತ್ರ ಪ್ರಜಾತಂತ್ರದ ಪೌರನಲ್ಲಿರಬಾರದ ಮನೋವೃತ್ತಿಗಳು ನಮ್ಮಲ್ಲಿದ್ದರೆ, ಅವನ್ನು ದೂರ ಮಾಡಬೇಕು. ಎಲ್ಲ ಬಗೆಯ ಸಂಕುಚಿತ ಪ್ರವೃತ್ತಿಯನ್ನು ದೂರಮಾಡಿ ರಾಷ್ಟ್ರೀಯತೆಯ ಉಜ್ವಲ ದೀಪವನ್ನು ನಮ್ಮ ಹೃದಯ ಹಣತೆಯಲ್ಲಿ ಬೆಳಗಿಸಬೇಕು. ಆ ಬೆಳಕಿನಡಿಯಲ್ಲಿ ನಮ್ಮ ಸೌಂದರ್ಯವನ್ನು ನೋಡಬೇಕು.

ಕಳೆದ ಹತ್ತೊಂಬತ್ತು ವರ್ಷಗಳು ನಮ್ಮ ಸ್ವಾತಂತ್ರ್ಯದ ಆರಂಭದ ದಿನಗಳು. ಸ್ವಾತಂತ್ರ್ಯದೊಡನೆಯೇ ನಮಗೆ ಕಾಣಿಕೆಯಾಗಿ ಹಲವಾರು ಸಮಸ್ಯೆಗಳೂ ಬಂದುವು. ನಮ್ಮ ಬಡತನವನ್ನು, ಅಭಾವಗಳನ್ನು ನೀಗಿಸಲು ಪಂಚವಾರ್ಷಿಕ ಯೋಜನೆಗಳೇ ತಾರಕವೆಂದು ಮನಗಂಡ ಅರ್ಥಶಾಸ್ತ್ರಜ್ಞರು ಯೋಜನೆಯನ್ನು ರೂಪಿಸಿದರು; ಅವು ಕಾರ್ಯರೂಪಕ್ಕೂ ಬಂದುವು. ಇವುಗಳ ಪರಿಣಾಮವಾಗಿಯೇ ಸಾರಿಗೆ ಸಂಪರ್ಕ, ಶಿಕ್ಷಣ, ವಿದ್ಯುಚ್ಛಕ್ತಿ, ಅಂಚೆ-ತಂತಿ, ನೀರಾವರಿ ಎಲ್ಲವೂ ಬೃಹದಾಕಾರದಲ್ಲಿ ಹೆಚ್ಚಿರುವುದನ್ನು ಯಾವನೂ ಅಲ್ಲಗಳೆಯಲಾರ. ನಮ್ಮ ಔದ್ಯಮಿಕ ರಂಗವೂ ಪ್ರಗತಿ ಸಾಧಿಸಿಲ್ಲವೆ? ಪಾಕ್ ಆಕ್ರಮಣಕಾರರೊಂದಿಗೆ ಭಾರತೀಯ ವಿಮಾನ ಹೋರಾಡಿ ಯಶಗಳಿಸಿದೆ. ಸೈನಿಕ ಶಸ್ತ್ರಾಸ್ತ್ರಗಳ ತಯಾರಿ, ಹಡಗು ನಿರ್ಮಾಣ, ಉಕ್ಕು ಮೊದಲಾದುವೆಲ್ಲವೂ ಇಂದು ಸ್ವದೇಶಿಯಾಗಿವೆ. ಒಂದು ಕಾಲದಲ್ಲಿ ಗುಂಡುಸೂಜಿಗಳನ್ನೂ ನಾವು ವಿದೇಶಗಳಿಂದ ಆಮದುಮಾಡಿಕೊಳ್ಳುತಿದ್ದೆವು— ಇಂದು ಬರಿಯ ಕೆಲವು ಭಾರಿ ಯಂತ್ರಗಳನ್ನುಳಿದರೆ ಉಳಿದುವೆಲ್ಲವೂ ನಮ್ಮವೇ. ಇದು ನಮ್ಮ ಪ್ರಗತಿಯ ಒಂದು ಚಿತ್ರ— ಅಲ್ಲಗಳೆಯುವುದು ತೀರ ವಿಚಿತ್ರ. ಇವು ಸಾಲದು— ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ ನಿಜ. ಆದರೆ, ಮೊದಲು ನೀರೂ ಸಿಗದಿದ್ದಲ್ಲಿ ಇಂದು ಮಜ್ಜಿಗೆಯಾದರೂ ಸಿಗುತ್ತಿದೆಯೆಂದು ಸಮಾಧಾನ ತಾಳದೆ ಬರಿಯ ನಿರಾಶರಾಗುತ್ತ ಕುಳಿತರೆ ಯಾರು ನಿಕಟ ಬರುತ್ತಾರೆ?

ಜನ ಕಂಗೆಡುವುದು — ಬೆಲೆಯೇರಿಕೆಯಿಂದ. ದ್ವಿತೀಯ ಜಾಗತಿಕ ಸಮರದ ವೇಳೆ ಏರುತ್ತ ಬಂದ ಬೆಲೆಯಿಂದು ಪ್ರಖರ ಸೂರ್ಯನಂತಾಗಿದೆ. ಅಂದಿಗೂ ಇಂದಿಗೂ ತುಲನೆ ಮಾಡುವ ಬಹುಮಂದಿ ನಮ್ಮಲ್ಲಿದ್ದಾರೆ. ಆದರೆ, ಅಂಥವರು ಬರಿಯ ರೂಪಾಯಿ—ಪ್ರಮಾಣವನ್ನಷ್ಟೇ ನೋಡುತ್ತಾರೆ ವಸ್ತುವಿನ ಬೆಲೆಯೇರುತ್ತ ಬಂದಂತೆಯೇ ಗ್ರಾಹಕನ ಕೊಂಡುಕೊಳ್ಳುವ ಶಕ್ತಿಯೂ ಏರುತ್ತ ಬಂದಿದೆ. ಇದು ನಮ್ಮ ಯೋಜನೆಗಳಿಂದ, ಕೆಲ ಪಾಲು ಅತಿ ಪ್ರಸರಣದಿಂದ. ಆದರೆ, ಸತ್ಯವನ್ನು ಮರೆ ಮಾಜುವುದು ಸಾಧ್ಯವಿಲ್ಲ. ಶ್ರೀಮಂತರಾಗುತ್ತ ಬಂದ ಕೆಲ ಶ್ರೀಮಂತರನ್ನೂ ಬಡವರಾಗುತ್ತ ಬಂದ ಕೆಲವು ಬಡವರನ್ನೂ ಬಿಟ್ಟರೆ, ಉಳಿದವರು— ಹೆಚ್ಚಿನವರು— ಹಿಂದಿಗಿಂತ ಇಂದು ಉತ್ತಮ ಜೀವನ ನಡೆಸುತ್ತಾರೆ. ಒಂದು ಬಟ್ಟೆಕೊಳ್ಳುತಿದ್ದವನಿಂದು ಎರಡು ಬಟ್ಟೆಕೊಳ್ಳಲು ಶಕ್ತನಾಗಿದ್ದಾನೆ. ಸುಧಾರಣೆ—ಪ್ರಗತಿ ಉನ್ನತಿ ಅಂದರೆ ಏನು? ಬ್ಯಾಂಕುಗಳಲ್ಲಿ ಕೂಡಿಸಿಟ್ಟ ಹಣ ಹೆಚ್ಚಾದ ಮಾತ್ರಕ್ಕೆ ಅದು ಪ್ರಗತಿಯಾಗದು. ಜನ ಜೀವನದ ಎತ್ತರಿಕೆಯೇ ನಿಜವಾದ ಪ್ರಗತಿ. ಬೆಲೆಯೇರಿಕೆಯ ಈ ದಿನಗಳಲ್ಲೂ ಪೇಚಾಡುತ್ತಲಾದರೂ ತನ್ನ ಬೇಕುಗಳಲ್ಲಿ ಹೆಚ್ಚಿನವನ್ನು— ಇವುಗಳಲ್ಲಿ ಹಲವು ಹಿಂದೆ ಅಸಾಧ್ಯ—ಅಪ್ರಾಪ್ಯವೇ ಆಗಿತ್ತು— ನಾಗರಿಕ ಪೂರೈಸಿಕೊಳ್ಳುತ್ತಾನೆ ಎನ್ನುವಾಗ ನಮ್ಮ ಪ್ರಗತಿಯಾಗಿಲ್ಲ ಎಂದು ಹೇಳುವುದು ಹೇಗೆ? ಅದು ಬರಿಯ ಅಪಸ್ವರ.

ಆದರೂ ಒಂದು ಮಾತು ನಿಜ. ನಮ್ಮ ಪ್ರಗತಿ ನಮ್ಮ ನಿರೀಕ್ಷೆಯ ಗುರಿಯನ್ನು ಮುಟ್ಟಿಲ್ಲ. ಕಾಲಿರುವಷ್ಟು ಹಾಸುಗೆ ಉದ್ದವಾಗಿಲ್ಲ. ಇದಕ್ಕೆ ನಮ್ಮ ಹಲವು ಸಮಸ್ಯೆಗಳೊಡನೆ ಆಡಳಿತೆಯೂ ಕಾರಣವಾಗಿದೆ. ಪ್ರಾಕೃತಿಕ ಸಮಸ್ಯೆಗಳನ್ನು ಭೌತಿಕವಾಗಿ ನಿವಾರಿಸುವುದು ಕಷ್ಟ. ಆಡಳಿತೆಯ ಶಿಥಿಲತೆಗೆ, ನಾವು ಪೌರರೇ ಕಾರಣರು. ನಾವು ಶಿಥಿಲರಾದುದರಿಂದ ನಮ್ಮ ಸರಕಾರದಲ್ಲಿ ಶಿಥಿಲತೆ ಮೂಡಿತು. ನಾವು ಸ್ವಾರ್ಥ ಸಾಧನೆಗಳಿಗಾಗಿ ಅಧಿಕಾರಿಗಳ ಬಾಲ ಬಡುಕರಾದೆವು, ಲಂಚರುಷುವತ್ತುಗಳಿಂದ ಅವರನ್ನು ಒಲಿಸತೊಡಗಿದೆವು. ಇದಕ್ಕೆ ಯಾರನ್ನು ದೂರಬೇಕು? ಅವರನ್ನು ನಾವೇ ಭ್ರಷ್ಟರನ್ನಾಗಿ ಮಾಡಿ ಮತ್ತೆ ಭ್ರಷ್ಟಾಚಾರದ ವಿರುದ್ಧ ಘೋಷಣೆ ಮಾಡತೊಡಗಿದೆವು. ದೈನಂದಿನ ಆಡಳಿತೆಯ ನಡುವೆ ಕೈ ಹಾಕಿ ಅಲ್ಲಿ ವಿಳಂಬವನ್ನು ತಂದುಕೊಂಡೆವು-- ಇದೇ ಬಗೆಯಲ್ಲಿ ಎಲ್ಲವೂ. ಇದಕ್ಕೆ ಪ್ರಧಾನಿ ಇಂದಿರಾ ಗಾಂಧಿಯಾಗಲಿ, ಕಾಂಗ್ರೆಸ್ ಅಧ್ಯಕ್ಷ ಕಾಮರಾಜರಾಗಲೀ ಏನು ಮಾಡಬೇಕು? ಅಕ್ಬರ ಹೇಳಿದ— ತೊಟ್ಟಿಕ್ಕೆ ಹಾಲು ಸುರಿಯಿರಿ ಎಂದು. ಎಲ್ಲರೂ ಒಪ್ಪಿ ಸುರಿದರು ಬರಿಯ ನೀರು— ತಾನೊಬ್ಬ ನೀರು ಸುರಿದರೆ ಅರಸನಿಗೆ ಹೇಗೆ ತಿಳಿಯಬೇಕು ಎಂಬ ಯೋಗ್ಯ ವಿಚಾರ ಸರಣಿಯಿಂದ. ನಮ್ಮ ಪಾಡು ಇದಕ್ಕಿಂತ ಬೇರೆಯೇನಿದೆ?

ಆದುದರಿಂದ ನಾವು ಈ ಪರ್ವದಿನದಲ್ಲಿ ಬದ್ಧಿವಾದಿಗಳಾಗಬೇಕು; ನಾವು ಪ್ರತ್ಯಕ್ಷಪ್ರತ್ಯಕ್ಷ ಪರೋಪದೇಶಿಗಳಲ್ಲ, ಸ್ವತಂತ್ರ ಭಾರತೀಯರು ಎಂಬುದನ್ನು ಅರಿತು ಅದರಂತೆ ನಡೆಯಬೇಕು. ಆರ್ಷೇಯರು ಸಾರಿದಂತೆ, "ನಾವು ಒಂದಾಗಿ ತೇಜೋವಂತರಾಗೋಣ, ಒಂದಾಗಿ ಉಣ್ಣೋಣ, ಒಂದಾಗಿ ರಕ್ಷಣೆ ಮಾಡಿಕೊಳ್ಳೋಣ, ನಮ್ಮೊಳಗೆಂದೆಂದೂ ಹೊಡೆದಾಡದಿರೋಣ." ಇದಕ್ಕೆ ಪೂರ್ಣ ಪ್ರತಿಜ್ಞೆಯಿಂದು ಮಾಡೋಣ— ಅದರಂತೆ ನಡೆಯತೊಡಗೋಣ.

ಶ್ರೀ ಟಿ. ಎ. ಪೈ

ಆಹಾರೋತ್ಪಾದನೆ ಹೇಗೆ ಹೆಚ್ಚಬಹುದು?

ಆದರ್ಶದ ಕುದುರೆ ಕಾನೂನಿನ ಕಡಿವಾಣ ರಾಜಕಾರಣದ ಬಾರ ಕೋಲುಗಳಿಂದ ಆಹಾರ ಹೆಚ್ಚು ಬೆಳೆಯಲು ಸಾಧ್ಯವಿಲ್ಲ ರೈತನಿಗೆ ವ್ಯಾವಹಾರಿಕ ಪ್ರೋತ್ಸಾಹ ನೀಡುವುದೇ ಆಹಾರ ಸಮಸ್ಯೆಗೆ ನಿಜವಾದ ಪರಿಹಾರ.

ಭಾರತವು ಕೃಷಿ ಪ್ರಧಾನ ದೇಶ. ಆದರೆ ನಮ್ಮ ಕೃಷಿ ಉತ್ಪನ್ನದ ಪ್ರಮಾಣವೆಷ್ಟು? ಇದು ತೀರಾ ನಿರಾಶಾದಾಯಕ. ಇದಕ್ಕೆ ಕಾರಣವೇನು? ಇದು ವಿಚಿತ್ರವೆನಿಸಿದರೂ ಸತ್ಯ. ನಾವು ತುಂಬ ಮಾತಾಡುತ್ತೇವೆ, ಮೂರು ಯೋಜನೆಗಳನ್ನು ಮುಗಿಸಿದೆವು ಆದರೆ, ಎಲ್ಲರಿಗಿಂತಲೂ ದೇಶದಲ್ಲಿ ಕಡೆಗಣಿಸಲ್ಪಟ್ಟ ವ್ಯಕ್ತಿಯೆಂದರೆ, ರೈತ. ಇಂದಿನ ಸ್ಥಿತಿಗತಿಗಳು ವಿವಂಚನೆಗೆ ಆಸ್ಪದ ಕೊಡುತ್ತಿವೆ. ಸರಕಾರವು ರೈತನಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಬಹುದು, ಪಂಪ್ ಸೆಟ್ಟು ಕೊಡಬಹುದು. ಎಲ್ಲ ದೊರೆತರೂ ಅವನು ಆಹಾರ ಧಾನ್ಯ ಬೆಳೆಸಲು ನಿರಾಕರಿಸುತ್ತಾನೆ. ಇದೇಕೆ ಎಂಬುದನ್ನು ಯಾರೂ ಗಮನಿಸಿಲ್ಲ. ರೈತನ ಅಭಿಲಾಷೆಯೇನೆಂದು ಯಾರೂ ತಿಳಿದುಕೊಳ್ಳುವ ಪ್ರಯತ್ನ ಮಾಡಲಿಲ್ಲ.

ಹಾಗೆಂದು ರೈತನಲ್ಲಿ ತಪ್ಪು ಹುಡುಕುವಂತಿಲ್ಲ. ಇಂದು ಆಹಾರಧಾನ್ಯ ಬೆಳೆಸಿದರೆ, ರೈತನಿಗೆ ನಷ್ಟ. ಆಹಾರಧಾನ್ಯಗಳಿಗೆ ಬೆಲೆಗೊತ್ತು ಪಡಿಸಿದಂತೆ ಹಣದ ಬೆಳೆಗಳಿಗೆ ನಿಗದಿ ಪಡಿಸಿಲ್ಲ. ಆಹಾರಧಾನ್ಯಗಳನ್ನು ಬೆಳೆಸಿದರೆ ಲೆವ್ವಿ ತೆರಬೇಕಾಗುವುದು. ಇಂತಹ ಪರಿಸ್ಥಿತಿಯಲ್ಲಿ ಅನಪೇಕ್ಷಣೀಯ ಶಿಕ್ಷೆಗೆ ಗುರಿಯಾಗಲು ರೈತನೇಕೆ ಮುಂದೆ ಬಂದಾನು? ಇದರ ಪರಿಣಾಮವಾಗಿಯೇ ಹಿಂದೆ ಆಹಾರಧಾನ್ಯ ಬೆಳೆಯುತ್ತಿದ್ದ ಗದ್ದೆಗಳಿಂದು ಹಣದ ಬೆಳೆಯ ಹೊಲಗಳಾಗುತ್ತಿವೆ. ರೈತನು ದೊರೆಯುವ ಎಲ್ಲ ಸೌಲಭ್ಯಗಳನ್ನು ಪಡೆದು ಹಣದ ಬೆಳೆ (ಕಬ್ಬು ಇತ್ಯಾದಿ)ಯನ್ನು ಬೆಳೆಯುತ್ತಾನೆ—ಆಹಾರ ಧಾನ್ಯಗಳ ಉತ್ಪಾದನೆ ಸ್ವಾಭಾವಿಕವಾಗಿ ಇದರಿಂದ ಇಳಿದಿದೆ.

ಅಧಿಕ ಆಹಾರೋತ್ಪಾದನೆ ನಮ್ಮ ಗುರಿ. ಇದಕ್ಕಾಗಿ ರೈತರ ಮನವೊಲಿಸಬೇಕು—ಸರಕಾರದ ಧೋರಣೆ ಆಮೂಲಾಗ್ರ ಬದಲಾಗಬೇಕು. ಆಹಾರ ಧಾನ್ಯಗಳ ಬೆಳೆಯೂ ಹಣದ ಬೆಳೆಯಂತೆಯೇ ಲಾಭದಾಯಕವೆನಿಸುವ ನೀತಿ ನಮ್ಮದಾಗಬೇಕು. ಆಕರ್ಷಕವಾದ ಕನಿಷ್ಠ ಬೆಲೆಯನ್ನು ಎರಡೂ ಬಗೆಯ ಬೆಳೆಗಳಿಗೆ ಗೊತ್ತುಮಾಡಬೇಕು—ಸಮಗ್ರ ದೇಶದಲ್ಲಿ ಈ ಬೆಲೆಯಲ್ಲಿ ಸಮಾನತೆಯಿರಬೇಕು. ಎಲ್ಲ ಬೆಳೆಗಳಿಗೂ ಕ್ರಮಬದ್ಧ ಲೆವ್ವಿ ವಿಧಿಸಬೇಕು. ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಕಾನೂನಿನಿಂದ ಬೆಳೆ ಬೆಳೆಯಲಾಗುವುದಿಲ್ಲ ಯೋಗ್ಯ ಬೆಲೆಯಲ್ಲಿ ಆತನ ಉತ್ಪಾದನೆಯಲ್ಲಿ ಸೇ. ೧೦ನ್ನು ಸರಕಾರ ಕೊಂಡು ಕೊಂಡು ಉಳಿದುದನ್ನು ಮಾರಲು ಆತನಿಗೆ ಸ್ವಾತಂತ್ರ್ಯ ನೀಡಬೇಕು. ನಮ್ಮ ದೇಶದಲ್ಲಿ ಆಹಾರಧಾನ್ಯಗಳ ಉತ್ಪಾದನೆಯ ವೆಚ್ಚ ಹೆಚ್ಚು. ವಿದೇಶಗಳಲ್ಲಿ ಇದು ಕಡಿಮೆ. ರೈತನು ಸರಕಾರದ ಸಹಾಯ ಪಡೆಯ ಬೇಕಾದಲ್ಲಿ ಹತ್ತಾರು ಆಫೀಸುಗಳ ಮೆಟ್ಟಲು ಹತ್ತಿ ಇಳಿಯಬೇಕಾಗುವುದು. ಆಡಳಿತ ವೆಚ್ಚದ ಆಧಿಕ್ಯದಿಂದ ಉತ್ಪಾದನೆಯ ವೆಚ್ಚ ಹೆಚ್ಚುವುದು. ಇದು ಕಡಿಮೆಯಾದರೆ ರೈತನಿಗೆ ದೊರೆವ ಲಾಭವೂ ಹೆಚ್ಚುವುದು.

ಭೂಸುಧಾರಣೆಯಿಂದ ಗೊಂದಲವೆದ್ದಿದೆ. ಇದನ್ನು ಪರಿಣಾಮಕಾರಿಯಾಗಿ ವ್ಯವಹಾರಕ್ಕೆ ತಾರದೆ ಯಾವ ಲಾಭವೂ ಇಲ್ಲ. ಹೊಲದೊಡೆಯರು—ಒಕ್ಕಲುಗಳು ಎಲ್ಲರೂ ಸಂಶಯ ಗ್ರಸ್ತರೇ. ಪಂಪ್ ಸೆಟ್ಟು ಒಕ್ಕಲಿಗೆ ದೊರೆಯುವುದಿಲ್ಲ. ಭೂಮಿಯ ಒಡೆಯನಿಗೆ ಉತ್ಪಾದನೆಯ ಚಿಂತೆಯಿಲ್ಲದೆ?

ಆಡಳಿತ ಯಂತ್ರವೂ ಅಷ್ಟೇ. ಮುಂಗಡ ಪತ್ರದಲ್ಲಿ ಗೊತ್ತು ಮಾಡಿದಹಣ ನುಂಗುತ್ತದೆ—ಯಾರಿಗೂ ಪ್ರಯೋಜನವಿಲ್ಲ. ರೈತ ಮತ್ತು ವ್ಯವಸಾಯಕ್ಕೆ ಸಂಬಂಧಿಸಿದಹಾಗೆ ಒಂದೇ ಸಂಸ್ಥೆ ರಚಿಸಿದರೆ,ರೈತನಿಗೂ ಆತನ ಕೆಲಸ, ಆಡಳಿತೆಯೂ ಸರಳವಾಗುವುದು. ಲಂಚರುಷುವತ್ತುಗಳಿಗೆ ಎಡೆಯಿಲ್ಲದಂತಾಗುವುದು. ರೈತನ ಮನೆ ಬಾಗಿಲಿಗೆ ನೆರವಿತ್ತರೆ ವಿಳಂಬವೂ ದೂರವಾಗುವುದು.

ಲೇಖಕರು

ಉತ್ಪಾದನೆಯಂತೆ ಮಾರಾಟ-ಸಂಗ್ರಹಗಳೂ ಮುಖ್ಯ. ಅಧಿಕಾರಿ ವರ್ಗವನ್ನು ಪರಿಮಿತಗೊಳಿಸಿದರೆ ಇಲ್ಲಿಯೂ ವಿಳಂಬ—ನಷ್ಟ ಆಗುವುದಿಲ್ಲ. ಆಹಾರಧಾನ್ಯ ಮಾರಾಟ ತೆರಿಗೆ ಕಿತ್ತು ಹಾಕಬೇಕು. ಉದ್ಯಮಿಗಳಿಗೆ ಸರಕಾರ ಆರಂಭದಲ್ಲೇ ಸಾಲನೀಡುತ್ತದೆ. ರೈತನಾಗುವವನಿಗೂ ಏಕೆ ಕೊಡಬಾರದು?

ನಮ್ಮ ಆಹಾರದ ಬಳಕೆಯಲ್ಲಿಯೂ ಪರಿವರ್ತನೆಯಾಗ ಬೇಕು. ಮುಖ್ಯವಾಗಿ ಆಹಾರವನ್ನು ಹಾಳು ಮಾಡುವ ಹವ್ಯಾಸ ನಿಲ್ಲ ಬೇಕು. ಇದರಿಂದ ಪೋಲಾಗುವ ಆಹಾರ ಉಳಿತಾಯವಾಗುತ್ತದೆ. ಸರಕಾರ—ಜನತೆಗಳು ಒಂದಾಗಿ ದುಡಿದರೆ ಮಾತ್ರ ನಮ್ಮ ಸಮಸ್ಯೆ ಪರಿಹಾರವಾಗುತ್ತದೆ. ಇಲ್ಲವಾದರೆ, ಇಬ್ಬರೂ ಭೀಕರ ಪರಿಣಾಮವನ್ನೆದುರಿಸ ಬೇಕಾಗುತ್ತದೆ.

ಸ್ವಾತಂತ್ರ್ಯ ದಿನದ ಶುಭಾಶಯಗಳು!

ರೋಯಲ್ ಮಹಾಲ್
ಉಡುಪಿ

ಸಕಲ ಸೌಕರ್ಯಗಳಿರುವ ಮೇಲ್ದರಗತಿಯ ಪ್ರಪ್ರಥಮ
ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್,
ವ್ಯಾಪಲಕರು

Phone: 169

ROYAL MAHAL
Up-to-date Boarding & Lodging
UDIPI, S. K.

ಪಾಸ್ ಕೋಲೇಜ್ ಉಡುಪಿ
Tuitions
Teaching

Visitors Say
The biggest and the best. Why?

1. ಸ್ಟೇಟಿನಲ್ಲೇ ಅತೀ ಹೆಚ್ಚಿನ ಬ್ರೇಂಚು, ಸ್ಟಾಪು ಮತ್ತು ವಿದ್ಯಾರ್ಥಿಗಳುಳ್ಳದ್ದು.
2. ಯಾವಾಗಲೂ ಸಂಖ್ಯೆಯಲ್ಲಿ 100% ಹತ್ತಿರ ಫಲಿತಾಂಶ ಗಳಿಸುವುದು.
3. ಭವ್ಯ ಕಟ್ಟಡ ಮತ್ತು ಶಾಂತ ವಾತಾವರಣದಲ್ಲಿರುವುದು.
4. ಅನುಭವಸ್ಥರ ಮೇಲ್ವಿಚಾರಣೆಯಲ್ಲಿ ನುರಿತ ಟ್ರೈನ್ಡ್ ಶಿಕ್ಷಕರುಳ್ಳದ್ದು.
5. ಉತ್ತಮ ವ್ಯವಸ್ಥೆ ಮತ್ತು ಸಲಕರಣೆಗಳಿಂದ ಕೂಡಿದುದು.

ಬ್ರೇಂಚ್:- ಕುಂದಾಪುರ; ಕಾರ್ಕಳ; ಪುತ್ತೂರು.ದ.ಕ.

ರೈತ ಭಾಂದವರ ಜೀವನ ಸಂಗಾತಿ...........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H.P.) ಮತ್ತು ಪಂಪು ಸೆಟ್ಟುಗಳು..........

ಎಸ್.ಇ.ಐ. ಇಲೆಕ್ಟ್ರಿಕ್ ಮೋಟಾರು
(½ H.P.ಯಿಂದ 2. H.P.ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂಮೀಟರ್ ಸ್ಟಾರ್ಟರುಗಳು...........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—
ಸ್ವಾಮಿ ಇಲೆಕ್ಟ್ರಿಕಲ್ಸ್,
ರಿ. ಆಫೀಸು: ಕಾರ್ಕಳ, ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು........

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್
ಕಾರ್ಕಳ (ದ. ಕ.)

ಶ್ರೀ ಕೆ. ಜಿ. ಹೆಗಡೆ, ಮುಂಬಯಿ

ಒಂದು ವಿವೇಚನೆ

ಸ್ವರಾಜ್ಯ ಸಿಕ್ಕಿತು; ಸ್ವಾತಂತ್ರ್ಯ ಸಿಗಲಿಲ್ಲ

ಇದು ವಿರೋಧಿ ಪಕ್ಷಗಳ ಚುನಾವಣಾ ಕಹಳೆ. ಚುನಾವಣಾ ಕ್ಷೇತ್ರಗಳೆಲ್ಲವಕ್ಕೂ ಅಭ್ಯರ್ಥಿಗಳನ್ನು ನಿಲ್ಲಿಸಲು ತಾಕತ್ತಿಲ್ಲದ ವಿರೋಧಿ ಪಕ್ಷಗಳು ಅಧಿಕಾರ ಚಲಾಯಿಸುವ ಕನಸು ಕಾಣುತ್ತಿವೆ. 'ನಮ್ಮ ಕೈಗೆ ಅಧಿಕಾರ ಕೊಡಿ, ಮೂರು ದಿನಗಳಲ್ಲಿ ನಿಮ್ಮ ಮನೆ ಮುಂದೆ ನಂದನವನ ನಿರ್ಮಾಣ' ವೆನ್ನುತ್ತಿವೆ— ಪ್ರಾಯಃ ಇನ್ನೂ ನೂರು ವರ್ಷ ಅಧಿಕಾರ ಸಿಗಲಾರದು ಎಂಬ ದೃಢ ವಿಶ್ವಾಸವಿರಬೇಕು ಅವುಗಳಲ್ಲಿ. ಆದರೂ ಕಾಂಗ್ರೆಸ್ಸನ್ನು ಸೋಲಿಸುವ ಗುರಿ ಅವರದು— ಕಾಂಗ್ರೆಸ್ಸು ಸೋತರೆ, ಅಧಿಕಾರವೇರಲು ಯಾರಿಗೂ ಬಲವಿಲ್ಲ, ಅರಾಜಕತೆ, ಆಗ ತಮ್ಮ ಡೊಂಬರಾಟವಾಡಲು ಉಚಿತ ಪರಿಸ್ಥಿತಿ! ಭಾರತೀಯರೇ ಎಚ್ಚರಾಗಿರಿ...

ಸ್ವರಾಜ್ಯ ಸಿಕ್ಕಿತು; ಸ್ವಾತಂತ್ರ್ಯ ಸಿಗಲಿಲ್ಲ! ಎಂಬ ಕೂಗು ಅಲಲ್ಲಿ ಕೇಳಿಬರುತ್ತಿದೆ. ಈ ಘೋಷಣೆಯಲ್ಲಿ ದೇಶದಾದ್ಯಂತ ಅದೀಗ ಒಂದು ಗೊಂದಲದ ಕೋಲಾಹಲ ಘೋಷಣೆ ಬೆಳೆಯುತ್ತ ಬಂದಿದೆ. ಸದ್ಯ ರಾಜಕೀಯ ರಾಜ ಋಷಿಯೆನಿಸಿಕೊಳ್ಳುವ ರಾಜಾಜಿಯವರೇ ಈ ಕೂಗಿನ ಸೂತ್ರಧಾರಿ ಇಲ್ಲವೆ ಪಿತಾಮಹನೆಂದು ತಿಳಿದು ಬಂದಾಗ ಭಾರತದ ರಾಜಕೀಯ ಇತಿಹಾಸವನ್ನು ಬಲ್ಲ ಸಾಮಾನ್ಯ ಮಟ್ಟದ ನಾಗರಿಕನಿಗೂ ಮರುಕವಾಗದಿರದು!

ಸ್ವರಾಜ್ಯ ಸಿಕ್ಕಿದಂದಿನಿಂದ, ಅಂದರೆ ಸುಮಾರು ಇಪ್ಪತ್ತು ವರ್ಷಗಳಿಂದ ಭಾರತ ಸರಕಾರದ ರಾಜಕೀಯ ಸಂಚಲನಾ ಸೂತ್ರವನ್ನು ಕಾಂಗ್ರೆಸ್ಸು ಸಮಾಧಾನಕರವಾಗಿ ನಡೆಸಿ ತಂದಿದೆ. ಮುನ್ನಡೆಸಿಕೊಂಡೊಯ್ಯುತ್ತಿದೆ. ಆದರೆ ಈ ಪ್ರಗತಿಯನ್ನು ಕಂಡು ಅನೇಕರಿಗೆ ಆಶ್ಚರ್ಯವಾಗುತ್ತಿದೆ, ವಿಷಾದವೂ ಆಗುತ್ತಿದೆ. ಕಾರಣ ವಿರೋಧೀ ಬಣಗಳ ವಿಚಾರ ಲಹರಿ ಯೋಜನೆಗಳೆಲ್ಲ ಕನಸಿನ ಮಂಡಿಗೆಯಾಗಿ ಉಳಿದುವೇ ವಿನಃ ಕರಗತವಾಗಿಲ್ಲ.

ಏಸ್ಯಾ ಮತ್ತು ಆಫ್ರಿಕಾ ಖಂಡಗಳ ನವೀನ ಪ್ರಜಾಪ್ರಭುತ್ವಗಳ ಚರಿತ್ರೆಯಲ್ಲಿ ಭಾರತೀಯ ಸರಕಾರದ ಪರಂಪರೆ ನಿಜಕ್ಕೂ ಅಭಿನಂದನೀಯವಾಗಿದೆ. ಭಾರತ ದೇಶ ಸ್ವಾತಂತ್ರ್ಯ ಗಳಿಸಿದ ನಂತರ ಸ್ವತಂತ್ರ ಗಳಿಸಿಕೊಂಡ ಹೊರ ವಲಯದ ಪ್ರಜಾಪ್ರಭುತ್ವಗಳು ಭಾರತೀಯರಂತೆ ಯಶಸ್ವಿಯಾಗಿಲ್ಲ. ಕೆಲವೆಡೆಯಲ್ಲಿ ಕ್ರಾಂತಿ, ಅರಾಜಕತೆ, ಸರ್ವಾಧಿಕಾರ, ಶಿಥಿಲ ಸರಕಾರ, ಅಶಾಂತಿ, ಸಂಚು ಮುಂತಾಗಿ ಬೇರೆ ರಾಷ್ಟ್ರಗಳ ಚಲನ ವಲನಗಳನ್ನು ನಿರೀಕ್ಷಿಸಿದರೆ ಭಾರತ ಸರಕಾರ ವಿಜಯ ಗಳಿಸಿದೆ. ಯಶಸ್ವೀ ರಾಜಕೀಯ ಕಾರ್ಯಭಾರ ಮತ್ತು ಸರಕಾರಗಳಿಂದ ಪ್ರಬಲ ಪ್ರಜಾಪ್ರಭುತ್ವವೆಂದು ಜಗತ್ತಿನಲ್ಲೇ ಹೆಸರು ಹೋಗಿದೆ. ಈ ಗೋಡೆಗಳನ್ನು ಉರುಳಿಸಲು ಬಾಯಿ ಮಾತುಗಳಿಂದ ಸಾಧ್ಯವಾದೀತೇ?

ರಾಜಕೀಯ ರಾಜನೀತಿಗಳಲ್ಲಿ ನಿಷ್ಣಾತರೆನಿಸಿಕೊಂಡ ಅನೇಕ ಪಾಶ್ಚಾತ್ಯ ರಾಜ್ಯಪಟುಗಳು, ವಿದೇಶೀ ಪಂಡಿತರು ಭಾರತದಲ್ಲಿ "ರಾಜಕೀಯ ಗ್ರಹಣ" ನಿಶ್ಚಯವೆಂದು ಭವಿಷ್ಯ ಹೇಳಿದ್ದರು! ಅರಾಜಕತೆ ಖಂಡಿತವೆಂದು ಎಣಿಸಿದ್ದರು! ಮುಕ್ಕಾಲು ಪಾಲು ಜನ ವಿದ್ಯಾಹೀನರಾಗಿದ್ದ ದೇಶದಲ್ಲಿ ಪ್ರಜಾಪ್ರಭುತ್ವ ಸಫಲವಾದೀತೇ ಎಂದು ಸಂಶಯ ತೊಟ್ಟಿದ್ದರು! ಆದರೆ ಅವರೆಲ್ಲರೂ ಅದೀಗ ಅಚ್ಚರಿಪಡುವಂತಾಗಿದೆ. ನಾಚಿಕೆಯಿಂದ ತಲೆಬಗ್ಗಿಸಬೇಕಾಗಿದೆ. ಯಾಕೆಂದರೆ ನಮ್ಮ ಪ್ರಭುತ್ವ ದಿನೇ ದಿನೇ ಭದ್ರವಾಗುತ್ತಾ ಸಾಗಿದೆ. ನಮ್ಮ ತಪಾಯ ಶಿಲೆಯು ಮಾಗುತ್ತಿದೆ.

ಈ ಮಹಾನ್ ಪ್ರಗತಿಯನ್ನು ಕಂಡು ಅನೇಕ ವಿದೇಶೀ ರಾಷ್ಟ್ರಗಳ ರಾಜಕಾರಣಿಗಳು ಕಿಚ್ಚು ಕಾರುತ್ತಿದ್ದಾರೆ! ಸಮಯ ಸಾಧಿಸಿ ನಮ್ಮ ಸರಕಾರದ ಪರಂಪರೆಯನ್ನೇ ಕೆಡಹಲು ಹೊಂಚು ಹಾಕುತ್ತಿದ್ದಾರೆ. ಸ್ವಾಭಿಮಾನ, ವಿನಯ, ನಮ್ರತೆ ಮತ್ತು ಕೃತಜ್ಞತೆಗಳಿಂದ ತುಂಬಿದ ಭಾರತ ಮಾತ್ರ ಅನೀತಿ ಅಸತ್ಯಗಳಿಗೆ ತಲೆಬಾಗದೆ ಮುನ್ನಡೆಯುತ್ತಿದೆ. ರಾಜಕೀಯ ಚದುರಂಗದಾಟದಲ್ಲಿ ಕೈಲಾದ ಮಟ್ಟಿಗೆ ಕೈಯೂಡಿಸುತ್ತ ಕೆಲಸ ಸಾಗಿಸುತ್ತಿದೆ.

ಇದರ ಸಂಪೂರ್ಣ ಕೀರ್ತಿ ಕಾಂಗ್ರೆಸ್ಸಿಗೇ ಸಲ್ಲಬೇಕು.

ಇದನ್ನು ಕಂಡು ವಿರೋಧೀ ಪಕ್ಷಗಳಲ್ಲಿ ನಾನಾ ರೀತಿಯ ಕಳವಳ ಗೊಂದಲಗಳಿಗೆ ಆಸ್ಪದವಾಗಿದೆ. ಪ್ರಜಾಪ್ರಭುತ್ವ—ತತ್ವ ಹೆಸರು ಹಿನ್ನೆಲೆಗಳಲ್ಲಿ ಕಾಂಗ್ರೆಸ್ಸನ್ನೇ ಉರುಳಿಸುವ ಮಹಾ ಪ್ರಯತ್ನಗಳು ಜರಗುತ್ತಿವೆ; ರೂಪುಗೊಳ್ಳುತ್ತಿವೆ. ಪ್ರಜಾಪ್ರಭುತ್ವದ ಯಶಸ್ವೀ ಕಾರ್ಯಾಚರಣೆಗೆ ಬಲವಾದ ವಿರೋಧ ಯಾ ವಿರುದ್ಧ ಪಕ್ಷವಿರಬೇಕಾದುದೇನೋ ನಿಜ. ಆದರೆ ನಮ್ಮ ರಾಜಕೀಯ ವಾತಾವರಣವನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಇಂದಿನ ಪರಿಸ್ಥಿತಿಯಲ್ಲಿ ಒಂದು ಪಕ್ಷವಾದರೂ ರಾಜ್ಯ ಭಾರವನ್ನು ವಹಿಸಿಕೊಳ್ಳುವಷ್ಟು ಪರಿಪಕ್ವವಾಗಿಲ್ಲ. ಹೆಚ್ಚಿನ ಪಕ್ಷಗಳು ಹೊಣೆಯನ್ನು ವಹಿಸುವ ಯೋಗ್ಯತೆಯನ್ನೇ ಪಡೆದಿಲ್ಲ. ಇದು ನಿಜಕ್ಕೂ ಬೇಸರದ ಸಂಗತಿ.

ಸಮಾಜವಾದಿಗಳಿಂದ ಹಿಡಿದು, ಸ್ವತಂತ್ರ ಪಕ್ಷವೆನಿಸಿಕೊಂಡವರೆಲ್ಲ ಬೊಬ್ಬಿಡುವವರೇ ವಿನಃ ಸಮಾಜ ಕಲ್ಯಾಣ ಚಟುವಟಿಕೆಗಳಲ್ಲಿ ಮನಃಪೂರ್ವಕ ಯಾರೂ ಭಾಗವಹಿಸುವುದಿಲ್ಲ. ರಚನಾತ್ಮಕ ಕಾರ್ಯಕ್ರಮವನ್ನೂ ಇಟ್ಟುಕೊಂಡಿಲ್ಲ. ಆದರೆ ಕಾಂಗ್ರೆಸ್ಸನ್ನು ಉರುಳಿಸಬೇಕೆಂಬ ಒಂದೇ ಬುಡುಬುಡಿಕೆ ಎಲ್ಲರ ಕೈಯಲ್ಲೂ ಬಡಬಡಿಸುತ್ತದೆ.

ಈ ವಿಘಾತಕ ಘೋರಣೆಯನ್ನು ವಹಿಸಿದ ವಿವಿಧ ವಿರೋಧೀ ಪಕ್ಷಗಳಲ್ಲೇ ಒಮ್ಮತ ಇಲ್ಲವಾಗಿದೆ. ನಿರ್ದಿಷ್ಟ ಗುರಿ ಮತ್ತು ಕಾರ್ಯಕ್ರಮಗಳು ಕಾಣದಾಗಿವೆ. ಅಂತಹ ಬಾಯಿ ಮಾತುಗಳಲ್ಲಿ ಸತ್ಯವಡಗಿದೆಯೇ? ಈ ಪುಢಾರಿಗಳಿಂದ ಸಮಾಜ ಕಲ್ಯಾಣವಾದೀತೇ ಎಂಬುದನ್ನು ನಾವೆಲ್ಲರೂ ಯೋಚಿಸಬೇಕಾಗಿದೆ.

ಪ್ರತಿಯೊಂದು ಪಕ್ಷವೂ "ರಾಜ್ಯಾಡಳಿತ ನಮ್ಮ ಕೈಯಲ್ಲಿ ಬರಲಿ" ಅನ್ನುತ್ತದೆ. ಬಂದರೆ ಭಾರತವನ್ನು 'ಭೂ ಕೈಲಾಸ" ಮಾಡುತ್ತೇವೆ ಎನ್ನುವ ಆಶ್ವಾಸನ. ಇಂತಹ ರಾಜಕೀಯ ಪಟುಗಳಿಂದ ಇಂದಿಗೂ ಒಂದು ಸಮ ಬಲ ವಿರೋಧೀ ಪಕ್ಷದ ರಚನೆಯಾಗಿಲ್ಲ. ಬೆನ್ನೆಲುಬು ಮೂಳೆಗಳಿಲ್ಲದ ಆದರ್ಶ ತತ್ವಗಳ ಮೇಲೆ ಇಮಾರತನ್ನು ಕಟ್ಟಲು ಹವಣಿಸಿದರೆ ಮಣ್ಣು ಹೊನ್ನಾಗುವ ಬಗೆಯೆಂತು? ಸದ್ಯ ದೇಶದ ಆಗುಹೋಗುಗಳನ್ನು ಅವಲೋಕಿಸಿದರೆ ಇನ್ನೂ ಕನಿಷ್ಠ ಇಪ್ಪತ್ತು ವರ್ಷಗಳು ಸಂದರೂ ಸಮಬಲ ವಿರೋಧಿಪಕ್ಷ ಆಗುವಂತಿಲ್ಲ.

ಯಾಕೆಂದರೆ ದೇಶದ ದೃಷ್ಟಿಯಿಂದ, ಪ್ರಜಾಪ್ರಭುತ್ವದ ದೃಷ್ಟಿಯಿಂದ, ಜನತಾ ಕಲ್ಯಾಣದೃಷ್ಟಿಯಿಂದ, ಸಮಾಜ ಮಂಗಳ ದೃಷ್ಟಿಯಿಂದ ಈ ಪಕ್ಷಗಳ ನಿರ್ಮಾಣವಾಗಿಲ್ಲ. ಈ ಪರಿಸ್ಥಿತಿ ಮತ್ತು ಹಿನ್ನೆಲೆಯಲ್ಲಿ ಇವುಗಳ ಪುನರ್ಜನ್ಮವೂ ಆಗುವಂತಿಲ್ಲ. ಮುಕ್ಕಾಲು ಮೀಕ ನಮ್ಮ ದೇಶದ ಪಕ್ಷ ಪಂಗಡಗಳು ಅಧಿಕಾರ ಲಾಲಸೆಯಿಂದಲೇ ಹುಟ್ಟಿಕೊಂಡಿವೆ. ನಮಗೆ ರಾಜ್ಯ ಸಿಕ್ಕಿದರೆ ನಿಮಗೆ ನಂದನವನವೆನ್ನುವುದು ಮಾತ್ರವೇ.

ಕಳೆದ ಇಪ್ಪತ್ತು ವರ್ಷಗಳಲ್ಲಿ ಕಾಂಗ್ರೆಸ್ಸು ಜನತೆಗೆ ಏನು ಮಾಡಿದೆ ಎಂದು ಕೇಳುವ ಧೂರ್ತರೂ ಇದ್ದಾರೆ. ನಮ್ಮ ಈ ಪುಣ್ಯ ಭೂಮಿ ಭಾರತದಲ್ಲಿ ಕಾಂಗ್ರೆಸ್ಸು ಏನು ಮಾಡಿದೆಯೆಂದು ಕೇಳುವ ಬದಲು ಏನು ಮಾಡಿಲ್ಲ ಎಂಬ ಪ್ರಶ್ನೋತ್ತರ ಸಮಂಜಸವಾಗಿದೆ.

ಇದುವರೆಗೆ ದೇಶದಲ್ಲಾದ ಪ್ರಗತಿ ಪ್ರಶಂಸನೀಯವಾಗಿದೆ. ಬಾಯಿ ಮುಖದಿಂದ ತುಂಬಿದೆ. ಇದನ್ನು ತಿಳಿಸಬೇಕಾದ ಅವಶ್ಯಕತೆಯೇ ಇಲ್ಲ! ಕಾರಣ ದೇಶದಾದ್ಯಂತ ಈ ಪ್ರಗತಿಯ ಚಿಹ್ನೆಗಳು ಕುಂಬನಿಗೂ ಕಾಣಸಿಗುತ್ತಿವೆ. ಕಾಂಗ್ರೆಸ್ಸಿನ ಪಂಚವಾರ್ಷಿಕ ಯೋಜನೆಗಳು "ಪಂಚಾಮೃತ"ದಂತೆ ಪರಿಪೂರ್ಣವಾಗಿಲ್ಲವೇ

(ಮೂವತ್ತೆರಡನೇ ಪುಟ ನೋಡಿರಿ)

ಸ್ವಾತಂತ್ರ್ಯ ದಿನದ ಶುಭಾಶಯಗಳು!

ಸ್ಥಾಪನೆ 1914

ಜಗತ್ಪ್ರಸಿದ್ಧವಾದ

ಜೈ ಹಿಂದ್ ಹಂಚುಗಳು

ಇವುಗಳನ್ನೇ ಸದಾ ಉಪಯೋಗಿಸಿರಿ

ಫೋನ್: 3428 ತಯಾರಕರು: [ಟೆಲಿಗ್ರಾಂ: 'ಸುದರ್ಶನ'

ಸುದರ್ಶನ ಟೈಲ್ ವರ್ಕ್ಸ್

ಬೋಳಾರ, ಮಂಗಳೂರು-1

ಟಿ. ಗೋಪಾಲ ಭಂಡಾರಿ
ಪ್ರೊಪ್ರೈಟರ್

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ
ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು: ಬೆಂಗಳೂರು, ಮಂಗಳೂರು, ಮೈಸೂರು.

The South Canara Central Cooperative Bank Ltd.,

Kodialbail, MANGALORE.3

Phone: 3469 Grams: CENCOBANK

Branches at
COONDAPOOR and PUTTUR

1. Share Capital	.... Rs.	18 · 02 lakhs
2. Reserves	... Rs.	8 . 35 lakhs
3. Deposits	.... Rs.	109 . 15 lakhs
4. Working Capital	.... Rs.	211 · 32 lakhs

Attractive rates on deposits
upto 7½% p. a. offered

For further particulars, contact our nearest Office

B. Prabhakara Rao, M A.,B.L., Vice-President

B. Narayana Nayak, President

ಸ್ವಾತಂತ್ರ್ಯ ದಿನದ ಶುಭಾಶಯಗಳು!

ಸೌಜನ್ಯ, ಸೌಲಭ್ಯ ಹಾಗೂ ಭದ್ರತೆಗಳ ಹೆಗ್ಗುರುತು—

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್,

(ಶೆಡ್ಯೂಲ್ಡ್ ಬ್ಯಾಂಕ್)
ವಿವಿಧ ಬ್ಯಾಂಕಿಂಗ್ ಸೌಕರ್ಯಗಳು:
ಕಠಿ, ಚಿಕ್ಕ ಪಾಯಿದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು.
ಬಡ್ಡಿ ಸೇಕಡಾ ೭ರ ವರೆಗೆ
ಚಲಾವಣಾ ಭಂಡವಾಳ ರೂ. 2 ಕೋಟಿಗೂ ಮಿಕ್ಕಿದೆ.
ಪ್ರಗತಿ ಪಥದಲ್ಲಿ ಮುಂಬಡಿಯಿಡುತ್ತಿರುವ ನಾಯಕ್ ಬ್ಯಾಂಕ್ ಪ್ರತಿಯೊಬ್ಬರಿಗೂ
ಏಕಪ್ರಕಾರದ ಸೌಜನ್ಯದ ಸೇವೆ ಸಲ್ಲಿಸಲು ಸಿದ್ಧವಿದೆ.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಶಾಖಾ ಕಛೇರಿಯನ್ನು ಸಂದರ್ಶಿಸಿರಿ.

THE PANGAL NAYAK BANK LIMITED

(SCHEDULED BANK)
ESTD: 1920
Regd. Office: UDIPI, S. Kanara.

ರಾಷ್ಟ್ರದ ಪ್ರಾಣ ಗ್ರಾಮದಲ್ಲಿ ಪ್ರತಿಷ್ಠೆಯಾಗಲಿ

ಶ್ರೀ ಪೈಕಾಡಿ
ವೆಂಕಟಕೃಷ್ಣರಾಯ,
ಬ್ರಹ್ಮಾವರ

ಸ್ವತಂತ್ರ ಭಾರತದೊಳಪ್ಪ ಪಾಶ್ಚಾತ್ಯ ಮಾದರಿಯ ಅನುಕರಣದತ್ತ ವಾಲಿಕೊಂಡಿರುವುದೇ ನಮ್ಮ ಕ್ಷಿಪ್ರ ತರ ಬೇನೆಯ ಸಮಸ್ಯೆಗಳ ಮೂಲ. ರಾಷ್ಟ್ರದ ಪ್ರಾಣ ಏಕ ಸಾಮ್ರಾಜ್ಯ, ಕೇಂದ್ರೀಕರಣದತ್ತ ಸಾಗಬಾರದು; ಅದು ಗ್ರಾಮ ಗ್ರಾಮದಲ್ಲಿ ಪ್ರತಿಷ್ಠೆಯಾಗಬೇಕು. ಆಗಲೇ ನಮ್ಮ ನೇತಾರರ ರಾಮರಾಜ್ಯ—ಗ್ರಾಮರಾಜ್ಯ ನಿರ್ಮಾಣ—ಅಗಲೇ ಸ್ವತಂತ್ರ್ಯ-ಪ್ರಜಾಸತ್ತೆಗಳಿಗೊಂದು ಅರ್ಥ.

ಯುರೋಪಿನಲ್ಲಿ ಔದ್ಯೋಗಿಕ ಕ್ರಾಂತಿ—ಕೈಗಾರಿಕಾ ಕ್ರಾಂತಿ ನಡೆದಾಗಲೇ ಭಾರತದಲ್ಲಿ ನಿರುದ್ಯೋಗ ಹೆಚ್ಚಿದ್ದು. ಅಂದು ಆಗ ನಮ್ಮನ್ನು ಆಳುತ್ತಿದ್ದವರು ಬ್ರಿಟಿಷರು. ಭಾರತದ ಸರ್ವ ಸಂಪತ್ತನ್ನೂ ತಮ್ಮ ಚಕ್ರಾಧಿಪತ್ಯವನ್ನು ಉಳಿಸಿಕೊಳ್ಳಲು—ಬೆಳೆಸಿಕೊಳ್ಳಲು ಬಳಸಿಕೊಂಡರು. ಇಲ್ಲಿನ ಅಸಿದ್ಧ ವಸ್ತುಗಳು ಇಂಗ್ಲೆಂಡಿನ ಕಾರ್ಖಾನೆಗಳಲ್ಲಿ ಬಳಕೆ ವಸ್ತುಗಳಾಗಿ ನಮ್ಮ ಮಾರುಕಟ್ಟೆಯಲ್ಲಿಯೇ ಮಾರಾಟವಾಗ ಹತ್ತಿದವು. ನಾವು ಕೇವಲ ಕೊಳ್ಳುವ ಗಿರಾಕಿಗಳಾದೆವು. ಅಧಿಕ ಉತ್ಪಾದನೆಯಲ್ಲಿ ನಿರತವಾದ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳಿಗೂ ಏಕ್ಯಖಂಡ ಮುಖ್ಯವಾಗಿ ಭಾರತ ಉತ್ತಮವಾದ ಮಾರುಕಟ್ಟೆ. ಈ ಸ್ಥಿತಿ ಇಂದಿಗೂ ಬದಲಾಗಲಿಲ್ಲ. ಇದಕ್ಕಾಗಿಯೇ ರಾಷ್ಟ್ರ ರಾಷ್ಟ್ರಗಳೊಳಗೆ ಪೈಪೋಟಿ, ಶೀತಳ ಯುದ್ಧ, ದ್ವೇಷ ಇತ್ಯಾದಿ. ಅನ್ಯ ರಾಷ್ಟ್ರಗಳು ಸ್ವಾವಲಂಬಿಯಾಗಬಾರದೆಂಬುದೇ ಅವರ ಉದ್ದೇಶ. ಬ್ರಿಟಿಷರಂತೂ ನಮ್ಮನ್ನಾಳಿದಷ್ಟು ದಿನ ನಮ್ಮ ಉಸಿರನ್ನು ತಡದು ಹಿಡಿದಿದ್ದರು. ನಮಗೆ ಸ್ವರಾಜ್ಯ ಕೊಟ್ಟ ಹಗೆತನ ಅವರನ್ನು ಇನ್ನೂ ಬಾಧಿಸುತ್ತಿದೆ. ಇದು ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ಶೋಷಿಸುವ ಇನ್ನೊಂದು ರೀತಿ.

ಬ್ರಿಟಿಷರ ಕಾಲದಲ್ಲಿ ಅವರ ಆಡಳಿತದ ನೀತಿಯಿಂದ ನಮ್ಮ ಗ್ರಾಮಗಳು ಬರಡಾದವು. ಜನರು ನಿರುದ್ಯೋಗಿಗಳಾದರು. ನಮ್ಮ ಹಳ್ಳಿಗಳಲ್ಲಿ ಬಡತನ, ರೋಗ, ನಿರಕ್ಷರತೆ ಎಲ್ಲ ಹೆಚ್ಚಿತು. ಬಹುಕಾಲದಿಂದ ಯಶಸ್ವಿಯಾಗಿ ನಡೆದುಕೊಂಡು ಬಂದಿರುವ ನಮ್ಮ ಗ್ರಾಮರಾಜ್ಯ ನಿರ್ನಾಮವಾಯಿತು.

ಭಾರತ ಹಳ್ಳಿಗಳ ರಾಜ್ಯ. ಭಾರತದ 5,50,000 ಹಳ್ಳಿಗಳಲ್ಲಿ ನಮ್ಮ ಒಟ್ಟು ಪ್ರಜಾಸಂಖ್ಯೆಯ ನೇ. ೮೦ರಷ್ಟು ಜನ ವಾಸಿಸುತ್ತಿದ್ದಾರೆ. ಈ ಬಹು ಸಂಖ್ಯಾ ಪ್ರಜೆಗಳ ಕಲ್ಯಾಣವೇ ರಾಷ್ಟ್ರದ ಕಲ್ಯಾಣವಾಗುತ್ತದೆ. ನಮ್ಮ ಪ್ರಜಾಪ್ರಭುತ್ವ ಸ್ವಾತಂತ್ರ್ಯ ಇವೆಲ್ಲ ಸಫಲವಾಗಬೇಕಾದರೆ ನಮ್ಮ ಗ್ರಾಮಗಳು ಸ್ವಾವಲಂಬಿಯಾಗಬೇಕು. ನಮ್ಮ ಗ್ರಾಮಗಳೇ ಔದ್ಯೋಗಿಕ ಕೇಂದ್ರಗಳಾಗಬೇಕು, ಅವುಗಳೇ ಉತ್ಪಾದನಾ ಕೇಂದ್ರಗಳೂ ಆಗಬೇಕು. ಗ್ರಾಮದಲ್ಲಿನ ನಿರುದ್ಯೋಗ ನಿವಾರಣೆಯಾಗಬೇಕು. ಹೀಗೆ ಆಡಳಿತ, ಕೈಗಾರಿಕೆ—ಉದ್ಯೋಗ ಆರ್ಥಿಕ—ಈ ಎಲ್ಲ ರಂಗಗಳಲ್ಲಿ ವಿಕೇಂದ್ರೀಕರಣ ನೀತಿ ಆಚರಣೆಗೆ ಬಂದರೆ ಮಾತ್ರ ನಾವು ನೆನಸಿದ ಸ್ವರಾಜ್ಯ—ಗ್ರಾಮರಾಜ್ಯ—ರಾಮರಾಜ್ಯ ಅಸ್ತಿತ್ವಕ್ಕೆ ಬಂದಂತಾಗುತ್ತದೆ.

ಈ ಹದಿನೇಳು ವರ್ಷಗಳ ನಮ್ಮ ರಾಷ್ಟ್ರ ಸ್ವಾತಂತ್ರ್ಯ ಜೀವನದಲ್ಲಿನ ಗ್ರಾಮದ ಸ್ಥಿತಿಯನ್ನು ನೋಡಿದರೆ—ಅಲ್ಲಿನ ಬಹುಸಂಖ್ಯಾಕ ಜನರ ಬದುಕನ್ನು ಗಮನಿಸಿದರೆ ನಾವು ಘೋಷಿಸಿದ ಸ್ವಾತಂತ್ರ್ಯ ಪ್ರಜಾ ಪ್ರಭುತ್ವ ಇವೆಲ್ಲ ಗ್ರಾಮ ಜೀವನದಲ್ಲಿ ಹರಿದು ಬಂದಿಲ್ಲ ಎನ್ನುವಂತಿದೆ. ಸೂರ್ಯೋದಯದ ಅನುಭವ ನಗರಗಳಲ್ಲಿ, ಹಳ್ಳಿಗಳಲ್ಲಿ, ಏಕ ಕಾಲದಲ್ಲಿ ಜನ ಅನುಭವಿಸುತ್ತಿದ್ದಾರೆ. ಈ ಅನುಭವ ಅವರಲ್ಲಿ ಕಾಣುತ್ತದೆ. ನಮ್ಮ ಸ್ವಾತಂತ್ರ್ಯ ಭಾಸ್ಕರ ಮಾತ್ರ ಹಳ್ಳಿಗಳಲ್ಲಿ ಇನ್ನೂ ಉದಯವಾಗಬೇಕಾಗಿದೆ. ಹಾಗೆಂದು ಈ ವಿಜ್ಞಾನದ ಯುಗದ ಹದಿನೇಳು ವರ್ಷದ ಅವಧಿ ಸಣ್ಣದಲ್ಲ.

ಪ್ರಯತ್ನ ಏನೋ ತುಂಬ ನಡೆದಿದೆ. ಹಳ್ಳಿಗಳಲ್ಲೂ ಕೆಲಸ ಭಾರೀ ಪ್ರಮಾಣದಲ್ಲಿ ನಡೆದಿದೆ. ಯಾವುದೂ ಗುರಿಮುಟ್ಟಲಿಲ್ಲ. ಕಡ್ಡಾಯ ಪ್ರಾಥಮಿಕ ಶಿಕ್ಷಣವಂತೆ—ಉಚಿತ ನೆರೆಂಡರಿ ಶಿಕ್ಷಣವಂತೆ—ಸಮಾಜ ಶಿಕ್ಷಣವಂತೆ—ಕಡ್ಡಾಯ ಶಿಕ್ಷಣ ಅಕ್ಷರಸ್ಥರ ಬದಲು ರಾಕ್ಷಸರನ್ನು ಹೆಚ್ಚಿಸಬಹುದು, ಅಜ್ಞಾನ ಬಗೆಹರಿಯದು. ಸಮಾಜ ಶಿಕ್ಷಣ ಕಾರ್ಯದಿಂದಲೂ ಗ್ರಾಮ ಜೀವಿಗಳ ಆತ್ಮ ಬೆಳಗಲಿಲ್ಲ. ಇನ್ನು

(ಮೂವತ್ತನೇ ಪುಟ ನೋಡಿರಿ)



ಸ್ವಲ್ಪ ವೆಪೋರಬ್‌ನ್ನು ಮೆತ್ತನೆ ತಿಕ್ಕಿರಿ
ಅಂದರೆ ಕೂಡಲೆ ಅದರ ಉಷ್ಣತೆಯಿಂದ
ಮಗುವಿಗೆ ಆರಾಮ ಎನಿಸುವುದು
ನಿರಾತಂಕವಾಗಿ ಉಸಿರಾಡುವುದು
ಇಡೀ ರಾತ್ರಿ ಸುಖವಾಗಿ ಮಲಗುವದು



ವಿಕ್ಸ್ ವೆಪೋರಬ್ ನೆಗಡಿಗೆ ಇಂದೇ ರಾತ್ರಿ ತಿಕ್ಕಿರಿ

ರಿಚಾರ್ಡ್‌ಸನ್ ಹಿಂದುಸ್ಥಾನ್ ಲಿಮಿಟೆಡ್ ಅವರ ಒಂದು ಉತ್ಕೃಷ್ಟ ತಯಾರಿಕೆ

ಶ್ರೀ ಕಯ್ಯಾರ ಕಿಞ್ಞಣ್ಣ ರೈ

ಗಡಿ ಸಮಸ್ಯೆ

ಬೆಳಗಾವಿ ಮತ್ತು ಕಾಸರಗೋಡು

ಗಡಿ ಆಯೋಗ ರಚನೆಗೆ ಮಿಶ್ರ ಪ್ರತಿಕ್ರಿಯೆ ಕನ್ನಡಿಗರದು. ಕಾಸರಗೋಡಿನ ಬಲಿಯಿತ್ತು ಬೆಳಗಾವಿಯನ್ನು ಉಳಿಸಿಕೊಳ್ಳುವುದು ಒಂದು ಪಂಗಡದ ಇಂಗಿತ. ಇದನ್ನು 'ನವಯುಗ' ಮೊದಲೇ ತಿಳಿಸಿದೆ. ಸೂಕ್ಷ್ಮವಾಗಿ. ಆದರೆ, ಕನ್ನಡಿಗರು "ಇತೋ ಭ್ರಷ್ಟಃ ತತೋ ಭ್ರಷ್ಟಃ"—ಆಗದಿದ್ದರೆ ಸಾಕು ಎಂದು ಹಾರೈಸುತ್ತಾರೆ ಗಡಿನಾಡಿನ ಕಯ್ಯಾರರು.



ಲೇಖಕರು

ಮೈಸೂರು ಮಹಾರಾಷ್ಟ್ರ ಮತ್ತು ಮೈಸೂರು ಕೇರಳಗಳ ಗಡಿವಿವಾದ ಇತ್ಯರ್ಥಕ್ಕಾಗಿ ಆಯೋಗವೊಂದನ್ನು ನೇಮಿಸತಕ್ಕದೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯಿಸಿತು. ಈ ನಿರ್ಣಯವು ಕೇವಲ ಒಂದು ಪಕ್ಷದವರು ಮಾಡಿದ ನಿರ್ಣಯವಾದರೂ, ದೇಶವನ್ನು ಆಳುತ್ತಿರುವ ಪಕ್ಷದ ನಿರ್ಣಯವೆಂಬುದರಿಂದ ಅದರ ಕುರಿತು ವಿರೋಧ – ಪರ ಸಮ್ಮಿಶ್ರ ಪ್ರತಿಕ್ರಿಯೆ ಸಾಕಷ್ಟು ಉಂಟಾಯಿತು.

ಹತ್ತು ವರ್ಷಗಳ ದೀರ್ಘ ಹೋರಾಟ ಒಮ್ಮೆ ಹೀಗೆ ಸಾರ್ಥಕತೆಯ ಹಂತವನ್ನು ಮುಟ್ಟುವಂತಾಯಿತೇ ಎಂದು ಮಹಾರಾಷ್ಟ್ರದವರು ಸಂತೋಷ ಪಟ್ಟಂತೆ ತೋರುತ್ತದೆ. ಕಾಸರಗೋಡಿನಂತಹ ಅಚ್ಚಗನ್ನಡ ಪ್ರದೇಶಗಳು ಮರಳಿ ಮೈಸೂರಿಗೆ ಸೇರ್ಪಡೆಯಾಗಲು ಅವಕಾಶವಾಯಿತೆಂದು ಕನ್ನಡಿಗರಲ್ಲಿಯೂ ಸಂತಸಗೊಂಡವರು ಹಲವರಿದ್ದಾರೆ.

ಆದರೆ ಬೆಳಗಾವಿ ಧಾರವಾಡ ಈ ಪ್ರಾಂತಗಳನ್ನೇ ಹೆಚ್ಚಾಗಿ ಪ್ರತಿನಿಧೀಕರಿಸುವ ಪ್ರಬಲವಾದ ಒಂದು ಜನವಿಭಾಗ— ಈ ನಿರ್ಣಯವನ್ನು ಉಗ್ರವಾಗಿ ವಿರೋಧಿಸಿತು; ಆಂದೋಲನ ನಡೆಸಿತು; ಅಖಿಲ ಕರ್ನಾಟಕದ ಹೆಸರಲ್ಲಿ ಈ ಗೊಂದಲ ಎಬ್ಬಿಸಲ್ಪಟ್ಟಿತು! ಕಾಂಗ್ರೆಸ್ ವರ್ಕಿಂಗ್ ಕಮಿಟಿ ಈ ಪರಿಸ್ಥಿತಿಯನ್ನೂ ಪರ್ಯಾಲೋಚನ ಮಾಡಿತು! ಇಬ್ಬರು ಮುಖ್ಯ ಮಂತ್ರಿಗಳೂ ಕೂಡಿ ಮಾತನಾಡಿ ಒಂದು ಒಪ್ಪಂದಕ್ಕೆ ಬರಬೇಕೆಂದು ಆಶಿಸಿತು. ಅದಕ್ಕಾಗಿ ಎರಡು ತಿಂಗಳ ಅವಧಿ ಕೊಡಲಾಯಿತು.

'ಶುಭಸ್ಯ ಶೀಘ್ರಂ' ಎಂದು ತಿಳಿದವರಿಗೆ ಇದರಿಂದ ಆತಂಕ ಆಗಿದೆ!

'ಅಶುಭಸ್ಯ ಕಾಲಹರಣಂ' ಎಂದು ನಂಬಿದವರಿಗೆ ಸಂತೋಷವಾಗುವುದು ಸಹಜವಷ್ಟೆ?

ಈ ಆಯೋಗವಾದರೆ ಬೆಳಗಾವಿ ಮುಂತಾದ ಪ್ರದೇಶಗಳು ಕೈಬಿಟ್ಟು ಹೋಗುವವೆಂದು ಆಂದೋಲನಕ್ಕಿಳಿದ ಕನ್ನಡಿಗರು ಅಂಜಿದಂತಿದೆ. ನ್ಯಾಯವಾಗಿ ನಮ್ಮಲ್ಲಿಯೇ ಇರಬೇಕಾದ ಪ್ರದೇಶಗಳು- ಹಾಗೆ ಇರಲು ಸಾಕಷ್ಟು ಆಧಾರ ನಮ್ಮಲ್ಲಿ ಇದ್ದರೆ- ಆಯೋಗವಾಗಲಿ, ಆಕಾಶ ಹರಿದು ಬೀಳಲಿ ನಮ್ಮಲ್ಲಿಯೇ ಖಂಡಿತ ಉಳಿದೀತು. ಹೋದೀತೆಂಬ ಅಂಜಿಕೆ ಅಷ್ಟು ಒಳ್ಳೆಯ ಲಕ್ಷಣವಲ್ಲ; ಭೀರುಗಳಾಗಿ ಬದುಕು ಕಷ್ಟ. ನಮಗೆ ಬರಬೇಕಾದ— ಕಾಸರಗೋಡಿನಂತಹ ಪ್ರದೇಶಗಳು— ಆಯೋಗವಾದರೆ ಬರಲು ಅವಕಾಶ ಆಗಲಿಲ್ಲವೆ? ಅವುಗಳನ್ನು ನಾವು ಮರಳಿ ಪಡೆಯಬೇಡವೆ? ಆ ದಿಶೆಯಲ್ಲಿ ನಾವು ಮಾಡಿದ ಹಾಗೂ ಮಾಡುವ ಪ್ರಯತ್ನ ಸಾಹಸವೇನು? ಇಂತಹ ಸಾಹಸ ಪ್ರಯತ್ನಗಳು ಶೂರರ ಲಕ್ಷಣ. ಕನ್ನಡಿಗರು ಭೀರುತ್ವ ಬಿಟ್ಟು ಸಾಹಸಿಗಳಾಗಬೇಡವೆ?

ಭಾಗ್ಯವಶಾತ್, ಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಸ್ಪಷ್ಟ ಹಾಗೂ ದೃಢ ನಿಲುಮೆಯುಳ್ಳವರಾಗಿ ತೋರುತ್ತಾರೆ. 'ಬರಬೇಕಾದ್ದನ್ನು ಪಡೆಯುತ್ತೇವೆ, ಕೊಡಬೇಕಾದ್ದನ್ನು ಕೊಡುತ್ತೇವೆ'—ಎಂದು ಹಿಂದೆಯೇ ಅವರು ನಿರ್ವಂಚನೆಯಿಂದ ಹೇಳಿದ್ದರು; ಅದೃಷ್ಟವಶಾತ್ ಅದೇ ರೀತಿಯ ಹೊಂದಾಣಿಕೆಗೆ ಒಪ್ಪುತ್ತೇವೆನ್ನುತ್ತಾರೆ. ಬೆಳಗಾವಿಯನ್ನು ಬಿಡಕೂಡದೆಂಬಂತೆ ಕಾಸರಗೋಡನ್ನು ಪಡೆದೇ ತೀರಬೇಕೆಂದು ಸ್ಪಷ್ಟವಾಗಿ ಹೇಳುತ್ತಾರೆ.

○ ○ ○

ಈ ಸಲದ ಮೈಸೂರು ಶಾಸನ ಸಭೆಗಳ ಅಧಿವೇಶನ ನಾಡಿನ ಮಿಶ್ರ ಪ್ರತಿಕ್ರಿಯೆಗಳನ್ನು ಪ್ರತಿಬಿಂಬಿಸಿತು; ಮಾನ್ಯ ಸದಸ್ಯರೊಬ್ಬರು ಉದ್ಗರಿಸಿದಂತೆ, ಅಲ್ಲಿ ಕಾಸರಗೋಡು ಪಕ್ಷ— ಬೆಳಗಾವಿ ಪಕ್ಷಗಳೆಂಬ ಎರಡು ವಿಭಾಗ ಸ್ಪಷ್ಟವಾಗಿ ತೋರುತ್ತಿತ್ತು. ಆಂದೋಲನದ ಅಧ್ವರ್ಯುಗಳು ಪಾರ್ಲಿಮೆಂಟ್ ನಿರ್ಣಯಿಸಲಿ ಎಂದು ಆಯೋಗ ಕೂಡದೆಂದೂ, ಬೆಳಗಾವಿ ಹೋದೀತೆಂದೂ ಹೇಳಿದರೆ, ಕಾಸರಗೋಡು ಬರಬೇಕೆಂಬವರು ಆಯೋಗವನ್ನು ಸ್ವಾಗತಿಸಿದರು. ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಚರ್ಚೆಗೆ ಉತ್ತರಿಸುತ್ತಾ ಮುತ್ಸದ್ಧಿತನದ ಮಾತನ್ನೇ ಆಡಿದರು. ಆಂದೋಲನಕಾರರ ಪಾಳಿನಲ್ಲಿ ಕೈವಶ ಇದ್ದುದನ್ನು ಸರ್ವಥಾ ಬಿಡಕೂಡದೆಂಬ ಆಗ್ರಹವೇ ಹೆಚ್ಚಿತ್ತಲ್ಲದೆ ನ್ಯಾಯವಾಗಿ ಬರಬೇಕಾದುದನ್ನು ಪಡೆಯುವ ಪ್ರಯತ್ನ ಕಂಡು ಬರಲೇ ಇಲ್ಲ. ಕಾಸರಗೋಡು ಪರವಾಗಿದ್ದವರು ಬೆಳಗಾವಿ ಹೋಗಕೂಡದೆಂಬುದರ ಜತೆಗೆ ಕಾಸರಗೋಡನ್ನು ಪಡೆಯಲು ಇಂದು ಅವಕಾಶ ಆಗಿದೆಯೆಂದರು. ಬೆಳಗಾವಿಯನ್ನು ಬಿಟ್ಟುಕೊಡಲು ಕನ್ನಡಿಗರು ಎಂದೂ ಒಪ್ಪಿಲ್ಲ; ಕಾಸರಗೋಡಿನ ಭಾಗವನ್ನು ಬಿಟ್ಟುಕೊಡಲು ಕೇರಳದವರು ಒಂದಲ್ಲ ಒಂದು ಸಲ ಎಲ್ಲರೂ ಒಪ್ಪಿದ್ದಾರೆ. ಹಾಗಾಗಿ ಕಾಸರಗೋಡು ಬರಬೇಕಾಗಿದೆಯೆಂದೂ ತ ಪ್ರಯತ್ನ ಮಾಡುತ್ತೇನೆಂದೂ ಮುಖ್ಯ ಮಂತ್ರಿಗಳು ಹೇಳಿಕೆಯಿತ್ತರು!

○ ○ ○

ಮೇಲಿಂದ ಮೇಲೆ ನೋಡಿದರೆ, ಆಳುವ ಪಕ್ಷದಲ್ಲಿ— ಕಾಂಗ್ರೆಸ್ಸಿನಲ್ಲಿ— ಈ ವಿಚಾರದ ಕುರಿತು ಒಡಕು ಉಂಟಾಗಿದೆಯೋ ಎಂಬ ಸಂಶಯ ತೋರುವಂತೆ ಆಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಆಯೋಗ ರಚನೆ ಮಾಡಲು ನಿರ್ಣಯಿಸಿತು; ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿ ಆಯೋಗ ರಚನೆಯನ್ನು ವಿರೋಧಿಸಿತು. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ ಆಯೋಗವನ್ನು ಸ್ವಾಗತಿಸಿದೆ. ಹೈಕಮಾಂಡಿನ ನಿರ್ಣಯಕ್ಕೆ ಪ್ರದೇಶ ಕಾಂಗ್ರೆಸ್ ಕಮಿಟಿ ವಿರೋಧವಾಗಿದೆ, ಜಿಲ್ಲಾ ಕಾಂಗ್ರೆಸ್ ಕಮಿಟಿ ವಿಧೆಯವಾಗಿದೆ. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಆಯೋಗಕ್ಕೆ ಒಪ್ಪಿಗೆ ಇತ್ತಿದ್ದಾರೆ; ಧರ್ಮರಾಯನಾಗಿ! ಶ್ರೀ ಗುಡ್ಲೆಪ್ಪನವರು ಆಯೋಗ ಆಗ ಕೂಡದೆಂದು ಉಗ್ರ ವಿರೋಧಿಗಳಾಗಿದ್ದಾರೆ, ಭೀಮನಾಗಿ! ಶ್ರೀ ಕೆ. ಕೆ. ಶೆಟ್ಟರು ಹಾಗೂ ದ. ಕನ್ನಡದ ಮುಖಂಡರು ಶ್ರೀ ನಿಜಲಿಂಗಪ್ಪನವರನ್ನು ಬೆಂಬಲಿಸುತ್ತಾರೆ; ವಿವೇಕಿಗಳಾಗಿ! ಇದೇ ಸುಸಂದರ್ಭವೆಂದು ತಿಳಿದುಕೊಂಡು ಮೈಸೂರಿನ ವಿರೋಧ ಪಕ್ಷಗಳ ಕೆಲ ಮುಖಂಡರು [ಅವರ ಕನ್ನಡದ ಅಭಿಮಾನದ ಬಗ್ಗೆ ಸಂಶಯವೇ ಇಲ್ಲ] ಈ ಒಡಕನ್ನು ಉಪಯೋಗಿಸಿಕೊಂಡು ಗೊಂ

(ಇಪ್ಪತ್ತೊಂಭತ್ತನೇ ಪುಟ ನೋಡಿರಿ)

"ದೀಪಾವಳಿ ಉಡುಗೊರೆ"
ಬಾರಾಬತಿ ರ್‍ಯಾಫೆಲ್ (ಡ್ರಾ. 2—10—66)
(ಒರಿಸ್ಸಾ ಸರಕಾರದಿಂದ ಮಾನ್ಯತೆ ಪಡೆದಿದೆ)
ಟಿಕೆಟ್ 1ಕ್ಕೆ ರೂ. 1-00 ಅಥವಾ 15 ಟಿಕೆಟ್‍ಗಳ ಪುಸ್ತಕ 1ಕ್ಕೆ ರೂ. 10-00
ಪ್ರಥಮ ಬಹುಮಾನ ರೂ. 1,10,000
ಮತ್ತು 1,000ಕ್ಕೂ ಹೆಚ್ಚು ಇತರ ಬಹುಮಾನಗಳು

"ಬಾರಾಬತಿ ರ್‍ಯಾಫೆಲ್ ಸಂಸ್ಥೆಯಿಂದ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸಂಸ್ಥೆಯನ್ನು ನಾನು ಅಭಿನಂದಿಸುವುದು ಮಾತ್ರವಲ್ಲದೆ ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ಅರ್ಪಿಸುತ್ತೇನೆ. ಸಂಸ್ಥೆಯು ಒರಿಸ್ಸಾದಲ್ಲಿ ಮಾತ್ರವಲ್ಲದೆ ದೇಶದ ಇತರ ಭಾಗಗಳಲ್ಲಿಯೂ ಅವಶ್ಯಕ ಜನೋಪಯೋಗಿ ಕಾರ್ಯಕ್ರಮಗಳನ್ನು ನಡೆಸಲು ಮುಂದೆ ಬಂದೀತೆಂದು ನನಗೆ ಭರವಸೆ ಇದೆ. ಈ ರೀತಿಯ ಸಂಸ್ಥೆ ಮತ್ತು ಕಾರ್ಯಕ್ರಮಗಳಿಂದ ದೇಶವು ಉದ್ಧಾರವಾಗಲು ಹಾಗೂ ಮುಂದುವರಿಯಲು ಸಾಧ್ಯವಿದೆ."
— ಶ್ರೀಮತಿ ಇಂದಿರಾ ಗಾಂಧಿ

"pro-paid" ಟಿಕೆಟ್‍ಗಳು ತಾ. 7—9—66ರ ವರೆಗೂ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಹಂಚಿಕೆದಾರರು ಹಾಗೂ ಡ್ರಾ ಕಮಿಟಿಯ ಸದಸ್ಯರಲ್ಲಿ ದೊರೆಯುತ್ತವೆ
ಅಂಚೆ ಮೂಲಕ ಟಿಕೆಟ್ ಬಯಸುವವರು ಟಿಕೆಟ್ ಬೆಲೆಯೊಂದಿಗೆ 16 ಪೈಸೆ ಹೆಚ್ಚಾಗಿ ಸೇರಿಸಿ ಮನಿಯಾರ್ಡರು ಮೂಲಕ ಹಣ ಕಳುಹಿಸಿರಿ.
ವಿ. ಶಿವರಾಮ ಹೊಳ್ಳ,
ರೂಂ ನಂ. 8, ವೀನಸ್ ಹೋಟೆಲ್,
S. C. ರಸ್ತೆ, (ಕೆಂಪೇಗೌಡ ಸರ್ಕಲ್ ಸಮೀಪ) ಬೆಂಗಳೂರು-9.

ಸ್ವಾತಂತ್ರ್ಯ ದಿನದ ಶುಭಾಶಯಗಳು!
ಇತ್ತೀಚೆಗೆ ಮಂಗಳೂರಲ್ಲಿ ಉದ್ಘಾಟಿಸಲ್ಪಟ್ಟ
ನವೀನತೆ—ಆಧುನಿಕತೆಗಳ ತವರುಮನೆ—
ಶೆಟ್ಟಿ ಬಿಲ್ಡಿಂಗ್
ಸಕಲ ಸೌಕರ್ಯಗಳಿಂದೊಡಗೂಡಿದ
ಹೊಟೆಲ್ ರೋಯಲ್
ಇಧರ ಊಟ ವಸತಿ ವಿಭಾಗ
ಓಲ್ಡ್ ಕೆಂಟ್ ರೋಡು, ಮಂಗಳೂರು—1
ಉಳಕೊಳ್ಳಲು ಅತ್ಯನುಕೂಲ ವಸತಿ ಗೃಹ
ಸುಸಜ್ಜಿತ ಕೊಠಡಿಗಳು ಸುಖಕರ ವಾತಾವರಣ
ಮ್ಯಾನೇಜರು:
ಕೆ. ರಾಮಯ ಶೆಟ್ಟಿ ಮತ್ತು ಎ. ಸುಬ್ಬರಾವ್
ಫೋನ್ : 6195

ಪ್ರೊ| ಎಂ. ಎಸ್. ಎಸ್. ರಾವ್.

ವಿಜ್ಞಾನ ಮತ್ತು ಧರ್ಮ

ವಿಜ್ಞಾನವು ಉನ್ನತಿ ಹೊಂದುತ್ತ ಸಾಗುತ್ತಿರುವಂತೆ ಧರ್ಮದ ಮೇಲೆ ಅವಿಶ್ವಾಸ ಹೆಚ್ಚುತ್ತ ಬರುತ್ತಿದೆ. ಈ ವಿಜ್ಞಾನ–ಧರ್ಮಗಳ ನಡುವಣ ಸಂಘರ್ಷಗಳೇನಾದರೂ ಅವೆರಡನ್ನೂ ಒಂದಾಗಿ ಬೆಸೆಯುವುದು ಸಾಧ್ಯವೆ?

ಕೆಲವು ಪ್ರಾಚೀನ ಹಾಗೂ ಧಾರ್ಮಿಕ ಗ್ರಂಥಗಳಲ್ಲಿ 'ಈ ವಿಶ್ವವು ದೇವರ ಚಮತ್ಕಾರದಿಂದ ಸೃಷ್ಟಿಯಾಯಿತು. ಮೊಟ್ಟಮೊದಲಿಗೆ ಈ ಭೂಮಿಗೆ ಯಾವ ನಿರ್ದಿಷ್ಟ ಆಕಾರವೂ ಇರದೆ, ಎಲ್ಲೆಲ್ಲೂ ಕತ್ತಲು ಆವರಿಸಿತ್ತು. ಆಗ ದೇವರ ಒಂದು ಆತ್ಮಸ್ವರೂಪ ನೀರಿದ್ದಲ್ಲೆಲ್ಲಾ ಸಂಚರಿಸಿತು. ಆಡೆಗೆ ಒಂದು ಸಂದರ್ಭದಲ್ಲಿ ಎಲ್ಲೆಲ್ಲೂ ಬೆಳಕು ಆವರಿಸಲಿ ಎಂದು ದೇವರು ಹೇಳಿದ ಕ್ಷಣವೇ ಎಲ್ಲೆಲ್ಲೂ ಪ್ರಕಾಶ ಮೂಡಿ ಬಂದಿತು. ಕ್ರಮೇಣ ದೇವರು ತನ್ನ ಪ್ರತಿರೂಪವನ್ನೇ ಪಡೆದ ಒಬ್ಬ ಮಾನವನನ್ನು ಸೃಷ್ಟಿಸಿದನು. ಮುಂದೆ ಪುರುಷ ಮತ್ತು ಸ್ತ್ರೀ ಎಂಬ ಪ್ರಭೇದಗಳುಂಟಾಗಿ ಅವರಿಂದ ಮಾನವ ಸಂತತಿ ಬೆಳೆಯಲಾರಂಭಿಸಿತು' ಎಂಬರ್ಥ ಬರುವ ಸೃಷ್ಟಿಯ ವಿವರಣೆಗಳು ಕಂಡು ಬರುತ್ತವೆ. ಬೈಬಲ್ ನಂತಹ ಧಾರ್ಮಿಕ ಗ್ರಂಥಗಳಷ್ಟೇ ಅಲ್ಲದೆ ಇತರ ಅನೇಕ ಧಾರ್ಮಿಕ ಗ್ರಂಥಗಳೂ ಈ ವಿಶ್ವವು ದೇವನೊಬ್ಬನಿಂದಲೇ ಸೃಷ್ಟಿಯಾಯಿತು ಎಂದು ಪ್ರತಿಪಾದಿಸುತ್ತವೆ.

ಹೀಗೆಯೇ ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಧರ್ಮಗಳೂ ಆತ್ಮ ಮತ್ತು ಅದರ ಚಿರಂತನತೆ ಹಾಗೂ ಅಸ್ತಿತ್ವಗಳ ಬಗ್ಗೆ ಮಾನವನ ನಂಬಿಕೆಯನ್ನು ಕುದುರುವಂತೆ ಪ್ರತಿಪಾದಿಸುತ್ತವೆ. ಅಷ್ಟೇ ಅಲ್ಲದೆ ಸ್ವರ್ಗ ಮತ್ತು ನರಕ ಎಂಬುವುಗಳ ಕಲ್ಪನೆ ಜಗತ್ತಿನ ಅನೇಕ ಧರ್ಮಗಳಲ್ಲಿ ಅಚಲವಾಗಿ ಉಳಿದು ಕಂಡು ಬರುತ್ತದೆ, ಶತಮಾನಗಳು ಉರುಳಿ ಹೋದರೂ ಮಾನವನು ದೇವರು, ಆತ್ಮ, ಸ್ವರ್ಗ, ನರಕ, ಪುನರ್ಜನ್ಮ ಇತ್ಯಾದಿಗಳಲ್ಲಿ ಅಚಲ ವಿಶ್ವಾಸವನ್ನಿರಿಸಿಕೊಂಡು ಬಂದಿದ್ದಾನೆ.

೧೯ನೇ ಶತಮಾನದಲ್ಲಿ ಚಾರ್ಲ್ಸ್ ಡಾರ್ವಿನ್ನನಿಂದ 'ವಿಕಾಸ ವಾದ'ದ ಬಗ್ಗೆ ವೈಜ್ಞಾನಿಕ ವಿವರಣೆಗಳು ಹೊರಬಿದ್ದವು. ಆಗ 'ವಿಕಾಸ ವಾದ'ವೆಂಬುದು ಕೆಲ ಜನರ ಮನಸ್ಸಿನಲ್ಲಿ ತಲ್ಲೋಲ ಕಲ್ಲೋಲವನ್ನುಂಟು ಮಾಡಿದ್ದಷ್ಟೇ ಅಲ್ಲದೆ ಕೆಲ ಜನರ ವಿಚಾರ ಶಕ್ತಿಯನ್ನು ವಿಕಾಸಗೊಳಿಸಿತು. ಅದರ ಪ್ರಭಾವ ಕೆಲ ಜನರ ಮೇಲೆ ಅತೀವವಾಗಿ, ಅಂತಹವರ ಧಾರ್ಮಿಕ ಭಾವನೆಗಳನ್ನು ಕೆರಳಿಸಿತು. ಆಗ ಅವರು ವಿಜ್ಞಾನದಲ್ಲಿ ಅಥವಾ ವೈಜ್ಞಾನಿಕರಲ್ಲಿ ದೇವರಿಗೆ ಒಂದು ವಿಶಿಷ್ಟ ಸ್ಥಾನವಿರದೆ ಹೋದರೆ, ದೇವರ ಅಸ್ತಿತ್ವಕ್ಕೆ ಎಡೆಯೆಲ್ಲಿದೆ? ಎಂದು ಪ್ರಶ್ನಿಸ ತೊಡಗಿದರು. ಹೀಗಾಗಿ ಇಂಗ್ಲೆಂಡಿನಲ್ಲಿ ವಿಕ್ಟೋರಿಯಾ ರಾಣಿಯ ಆಳ್ವಿಕೆಯ ಕಾಲದಲ್ಲಿ 'ವಿಜ್ಞಾನ ಮತ್ತು ಧರ್ಮದ ನಡುವಿನ ಹೋರಾಟ' ಎಂಬ ಬೃಹತ್ ಸಮಸ್ಯೆ ಎದ್ದು ನಿಂತಿತು. ಆ ಸಮಸ್ಯೆ ಇಂದಿಗಾದರೂ ಒಂದಲ್ಲ ಒಂದು ರೂಪದಲ್ಲಿ ಉಳಿದುಕೊಂಡೇ ಬಂದಿದೆಯೆನ್ನಬಹುದು.

ವಿಜ್ಞಾನಿಗಳು ತಮ್ಮ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಗಳಿಂದ ಉನ್ನತರಾಗಿ, ಈ ಜಗತ್ತಿನಲ್ಲಿ ಎಲ್ಲವೂ ವಸ್ತು (Matter) ಮತ್ತು ಶಕ್ತಿ (energy) ಗಳಿಂದಾಗಿದ್ದು, ಅದರಲ್ಲಿ ದೇವರ ಕೈವಾಡ ಏನೂ ಇರಲಾರದೆಂದೂ, ಆತ್ಮ, ದೇವರ ಸ್ವರ್ಗ, ನರಕ ಇತ್ಯಾದಿ ವಿಷಯಗಳೆಲ್ಲ ಕಟ್ಟು ಕಥೆಗಳೆಂತಲೂ ವಾದಿಸುತ್ತಾರೆ ಎಂದು ಕೆಲವರು ದೂರುವುದುಂಟು. ಧರ್ಮ ಪ್ರತಿಪಾದಕರಾದರೂ ಅಷ್ಟೇ ಉದ್ವೇಗದಿಂದ ಪ್ರತ್ಯುತ್ತರ ನೀಡುತ್ತ, ದೇವರು ಮತ್ತು ಆತ್ಮಾದಿಗಳ ಬಗ್ಗೆ ಇರುವ ಧಾರ್ಮಿಕ ಭಾವನೆಗಳು ನಿಜವೆಂತಲೂ, ಅವುಗಳ ಬಗ್ಗೆ ಪ್ರಶ್ನಿಸುವುದಾಗಲೀ ಸಂದೇಹಪಡುವುದಾಗಲೀ, ಸವಾಲು ಹಾಕುವುದಾಗಲೀ ತರವಲ್ಲ ಎಂದು ಪ್ರತಿಪಾದಿಸುತ್ತಾರೆ.

ಇತ್ತಿತ್ತಲಾಗಿ ವಿಜ್ಞಾನ ಜಗತ್ತಿನಾದ್ಯಂತ ಲಕ್ಷಾಂತರ ಜನರ ಮನಸ್ಸಿನಲ್ಲಿ ಧಾರ್ಮಿಕ ಭಾವನೆಗಳ ಬಗ್ಗೆ ಇದ್ದ ನಂಬಿಕೆಯನ್ನು ಅಲುಗಾಡಿಸಿ ಧರ್ಮಕ್ಕೆ ಒಂದು ಕೊಡಲಿ ಪೆಟ್ಟನ್ನೇ ಹಾಕಿದೆ ಎನ್ನಬಹುದು. ಆ ದೃಷ್ಟಿಯಿಂದ ಬೈಬಲ್, ಖುರಾನ್ ಮತ್ತು ಅಂತಹ ಇತರ ಪವಿತ್ರ ಗ್ರಂಥಗಳೇ ಧರ್ಮವೆಂದು ಭಾವಿಸಿದರೆ, ಮತ್ತು ಆಯಾ ಧರ್ಮಗಳಲ್ಲಿ ನಮೂದಿಸಿರುವ ಸದಾಚಾರ, ಸದ್ವರ್ತನೆ, ಪರೋಪಕಾರ ಪರಹಿತ ಚಿಂತನೆ, ಆತ್ಮೋದ್ಧಾರ, ಮುಂತಾದುವುಗಳನ್ನು ಆಚರಣೆಗೆ ತರದೆ, ಕೇವಲ ಮೂಢ ನಂಬಿಕೆಗಳಿಗೇ ಪ್ರಾಧಾನ್ಯ ಕೊಟ್ಟು ವರ್ತಿಸಿದರೆ, ಅಂತಹ ಧರ್ಮಕ್ಕೆ ವಿಜ್ಞಾನ ಒಂದು ಪರಮ ವೈರಿಯಂತೆ ವರ್ತಿಸಿದೆ ಎಂದು ಆರೋಪ ಮಾಡುವವರೂ ಕೆಲವರಿದ್ದಾರೆ. ಹೀಗಾಗಿ ವಿಜ್ಞಾನ ಮತ್ತು ಧರ್ಮಗಳ ನಡುವೆ ಕಲ್ಪಿತವಾದ ವಿರೋಧ ಹಾಗೂ ವಿಷಮ ಹೋರಾಟ ನಿಜಕ್ಕೂ ಇಂದಿನ ಭಾವುಕ ಹಾಗೂ ಧಾರ್ಮಿಕ ಜೀವಿಗಳು ಮತ್ತು ವೈಜ್ಞಾನಿಕ ವಿಚಾರ ಸರಣಿ ಉಳ್ಳ ಮುತ್ಸದ್ದಿಗಳು ಇವರಿಬ್ಬರಲ್ಲಿ ಪದೇ ಪದೇ ಚರ್ಚೆಗೆ ಬರತಕ್ಕ ಒಂದು ಸಾಮಾನ್ಯ ವಿಷಯವಾಗಿದೆ.

"ಧರ್ಮವಾದರೋ ಜನತೆಗೆ ಅವರವರ ಕಷ್ಟ ಕಾಲದಲ್ಲಿ ಒಂದಲ್ಲ ಒಂದು ವಿಧದ ಮಾನಸಿಕ ಸಮಾಧಾನ ಮತ್ತು ಸಾಂತ್ವನ ಶಕ್ತಿಯನ್ನು ಒದಗಿಸುತ್ತ ಬಂದಿದೆ. ಆ

(ಇಪ್ಪತ್ತೆಂಟನೇ ಪುಟ ನೋಡಿ)

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

ಆರ್ಯ ವೈದ್ಯ ಶಾಲಾ,

ಕೋಟ್ಟಕ್ಕಲ್ (ಕೇರಳ ರಾಜ್ಯ)

ಸ್ಥಾಪನೆ 1002

ಹೆಡ್ ಆಫೀಸು. ಕೋಟ್ಟಕ್ಕಲ್ ಫೋನ್ ನಂ. 44 (ತಿರೂರು ಎಕ್ಸ್‌ಚೇಂಜ್)

ಶಾಖೆಗಳು.

1 ಕೋಯಿಕ್ಕೋಡ್ (ಫೋನ್ ನಂ. 2155) ಕಲ್ಲಾಯಿ ರೋಡ್
2. ತಿರೂರು (ಫೋನ್ ನಂ. 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್ ನಂ. 104) ಪಡಕ್ಕಂಗರ.
4. ಪಾಲ್ಘಾಟ್ ಸೇಲ್ಸ್ ಡಿಪೋ ಜಿ. ಬಿ ರೋಡ್
5. ಎರ್ನಾಕುಳಂ (ಫೋನ್ ನಂ. 3026) ಮಹಾತ್ಮಾ ಗಾಂಧೀ ರೋಡ್.
,, ವೈದ್ಯರ ನಿವಾಸ (ಫೋನ್ ನಂ. 674)
6. ತ್ರಿವೇಂಡ್ರಮ್ (ಫೋನ್ ನಂ. 3924) ಸ್ಟೇಚು ರೋಡ್.
7 ಈರೋಡು (ಫೋನ್ ನಂ 172) 45, ಕಾವೇರಿ ರೋಡ್.
8. ಆಳ್ವಾಯಿ ಸೇಲ್ಸ್ ಡಿಪೋ ಬ್ಯಾಂಕ್ ರೋಡ್.

ಕೋಟ್ಟಕ್ಕಲ್‌ನಲ್ಲಿರುವ ನಮ್ಮ ಪ್ರಧಾನ ಕಛೇರಿಯಲ್ಲಿ ಮತ್ತು ಶಾಖೆಗಳಲ್ಲಿ ಖ್ಯಾತಿಯಾದ ಉತ್ಕೃಷ್ಟ, ಶುದ್ಧ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತದೆ. ಕೋಟ್ಟಕ್ಕಲ್‌ನ ನಮ್ಮ ಪ್ರಧಾನ ವೈದ್ಯರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯರ ಮೇಲ್ವಿಚಾರಣೆಯಲ್ಲಿ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್

ಇಲ್ಲಿ ನಡೆಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ದಯಮಾಡಿ ಬರೆಯಿರಿ.

ಮ್ಯಾನೇಜಿಂಗ್ ಟ್ರಸ್ಟಿ, ಆರ್ಯ ವೈದ್ಯ ಶಾಲಾ, ಕೋಟ್ಟಕ್ಕಲ್.

ಶ್ರೀ ತಡ್ಡಲಸೆ ವಿಘ್ನೇಶ್ವರ ಶರ್ಮಾ, ಸಿರಸಿ

ಶರೀರಕ್ಕೆ ನಿರಾಹಾರವೆನಿಸಿ ಆರೋಗ್ಯಕ್ಕೆ ಆಹಾರವೆನಿಸಿದ

ಉಪವಾಸ

ಉಪವಾಸ— ಅದು ಬರಿಯ ಧಾರ್ಮಿಕ ಆಚರಣೆಯಲ್ಲ, ಆರೋಗ್ಯ ರಕ್ಷಣೆಯ ಪರಮ ಸಾಧನ; ದೇಶದ ಆರ್ಥಿಕ—ಆಹಾರ ಉಳಿತಾಯಕ್ಕೆ ಕಾರಣ. ಉಪವಾಸ ಮಾಡಿದರೆ, ಪಕ್ಷಕ್ಕೊಂದು ದಿನ, ನೀವು ದೇಶಸೇವೆಯನ್ನೂ ಆತ್ಮಸೇವೆಯನ್ನೂ ಒಟ್ಟಿಗೆ ಮಾಡಿದಂತಾಗುತ್ತದೆ.

ನಮ್ಮ ಮೈ-ಮನಸ್ಸುಗಳ ಸ್ವಾಸ್ಥ್ಯ ಸುಧಾರಣೆಗಳ ಮೇಲೆ ಆಹಾರ-ವಿಹಾರ ಎಷ್ಟು ಪ್ರಭಾವ ಬೀರುತ್ತವೋ ಹಾಗೆಯೇ ನಿರಾಹಾರವೂ ಪ್ರಬಲವಾದ ಪರಿಣಾಮವನ್ನುಂಟು ಮಾಡುವದೆಂಬುದನ್ನು ತಿಳಿಯಬೇಕು. ಶರೀರೇಂದ್ರಿಯಗಳ ಸತ್ವಾಂಶಗಳ ಮೇಲೆ ಸರಿಯಾದ ಸತ್ಕಾರ ಮಾಡಬಲ್ಲ ಶಕ್ತಿ ಈ ನಿರಾಹಾರಕ್ಕಿದೆ. ಹಾಗಾಗಿ ಇದನ್ನು ಪವಿತ್ರವಾದ ಒಂದು ವಿಧಿವಿಯಮವನ್ನಾಗಿ ತಿಳಿದು "ಉಪವಾಸ"ವೆನ್ನುವ ಹೆಸರಿನಿಂದ ಕರೆಯಲಾಗುತ್ತಿದೆ. ಪಕ್ಷದ ಅಂದರೆ ಹದಿನೈದು ದಿನಕ್ಕೊಮ್ಮೆಯಾದರೂ ಇದರ ಆಚರಣೆ ನಡೆಯಲೇಬೇಕೆಂಬುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ನಾವು ಯಾವದೇ ರೀತಿಯ ಆಹಾರ ತೆಗೆದುಕೊಳ್ಳದೇ ಇರುವದೇ ಈ ಉಪವಾಸದ ಮುಖ್ಯ ತತ್ವವಾಗಿದೆ. ಅಂದರೆ ನಿರಾಹಾರವು ಒಂದು ಬಗೆಯ ಆಹಾರವೇ ಆಗಿ ಆರೋಗ್ಯಕಾರಿಯಾಗಿದೆಯೆಂದರೆ ಆಶ್ಚರ್ಯವಾಗದೇ ಇರದು.

ಯಾಕೆಂದರೆ ಆಹಾರವಿಲ್ಲದೆ ಇರುವದೂ ಶರೀರಕ್ಕೆ ಅದೊಂದು ಬಗೆಯ ಆಹಾರವೇ ಆಗಿದೆಯೆಂದು ಹೇಳಿದಾಗ ಕೆಲವರಿಗೆ ನಂಬುಗೆಯಾಗಲಿಕ್ಕಿಲ್ಲ. ಆಹಾರವಿಲ್ಲದಿದ್ದರೆ ಶರೀರವು ಕೃಶವಾಗಿ ಬಳಲುತ್ತದೆಂಬ ಕಲ್ಪನೆ ಸಾಮಾನ್ಯವಾಗಿ ಬರುವದುಂಟು. ಆದರೆ ಅದು ಸತ್ಯವೆನಿಸಿದರೂ ಹದಿನೈದು ದಿನಕ್ಕೊಮ್ಮೆ ಆಹಾರವಿಲ್ಲದೆ ಇರುವದರಿಂದ ಶರೀರವು ದುರ್ಬಲವಾಗುವದರ ಬದಲು ಸಬಲವೇ ಆಗುತ್ತದೆ.

ಶರೀರವನ್ನು ಬಲಗೊಳಿಸಲು, ಬದುಕಿಸಲು ಸರಿಯಾದ ಆಹಾರವು ಬೇಕು. ಆದರೆ ಈ ಆಹಾರವು ಅತಿಯಾದರೆ ಅಷ್ಟೇ ಅಪಾಯಕಾರಿಯೂ ಆಗುತ್ತದೆ. ಸದಾಕಾಲ ಕೆಲಸ ಮಾಡುತ್ತಿರುವ ಶರೀರದ ಪಚನೇಂದ್ರಿಯಗಳಿಗೆ ಕೆಲಕಾಲ ವಿಶ್ರಾಂತಿಯೂ ಬೇಕು. ಈ ವಿಶ್ರಾಂತಿಯನ್ನು ಅವಶ್ಯವಾಗಿ ಒದಗಿಸುವ ಕಾರ್ಯ ನಾವು ಮಾಡಬೇಕಾಗುತ್ತದೆ. ಶರೀರಕ್ಕೆ ವಿಶ್ರಾಂತಿ ಅವಶ್ಯವಾದಂತೆ ಪಚನೇಂದ್ರಿಯಗಳಿಗೂ ವಿಶ್ರಾಂತಿಬೇಕು. ಹೆಚ್ಚೆಚ್ಚು ತಿನ್ನುವದರಿಂದ ಅದರ ಮೇಲೆ ಹೆಚ್ಚೆಚ್ಚು ಭಾರವೂ ಬೀಳುತ್ತದೆ. ಹಾಗಾಗಿ ತಿಂದ ಆಹಾರವು ಸರಿಯಾಗಿ ಅರಗದೆ. ಹೆಚ್ಚೆಚ್ಚು ಸಂಗ್ರಹವಾಗಿ (ಕೊಳೆತು) ಬೇರೆ ಬೇರೆ ರೋಗಗಳಿಗೂ ಆಸ್ಪದ ಮಾಡಿಕೊಟ್ಟಂತಾಗುತ್ತದೆ.

ಸಾಮಾನ್ಯವಾಗಿ ಅವರವರ ಪ್ರಕೃತಿಯನ್ನವಲಂಬಿಸಿ ಆಹಾರ ತಿನ್ನುವ ಪರಿಪಾಠವಿಟ್ಟುಕೊಳ್ಳಬೇಕು. ನಮಗಾಗಿ ಆಹಾರವಿರಬೇಕೆ ವಿನಃ ಆಹಾರಕ್ಕಾಗಿ ನಾವಿರಬಾರದು. ಈ ಅಭಿಪ್ರಾಯಕ್ಕೆ ನಾವು ಒಳಗಾದರೆ ಮಾತ್ರ ಹಿತವಾಗಿ— ಮಿತವಾಗಿ ಬೇಕು ಬೇಕಾದ ಆಹಾರಗಳನ್ನು ನಿಯಮಿತವಾಗಿ ಸೇವಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅನೇಕರಿಗೆ ಇದನ್ನು ಸಾಧಿಸುವದೇ ಕಷ್ಟವಾಗುತ್ತದೆ. ನಾಲಿಗೆಯ ಹಿಡಿತ, ಮನಸ್ಸಿನ ಸಂಯಮವಿದ್ದವರಿಗೆ ಮಾತ್ರ ಆಹಾರವೂ ಹಿಡಿತದಲ್ಲಿರುತ್ತದೆ. ಆಹಾರವು ರುಚಿಯಾಗಿರಬೇಕೇ ಹೊರತು ಆದರಲ್ಲಿ ನಾಲಿಗೆಯ ರುಚಿ ಪ್ರಧಾನವಾಗಿರಬಾರದು. ಆದರಿಂದ ಹೆಚ್ಚೆಚ್ಚು ತಿನ್ನುವದು ಕಾನಾಗಿ ಅಭ್ಯಾಸವಾಗುವ ಸಂಭವವುಂಟು.

ಬೇಕಾಗುವಷ್ಟೇ ಆಹಾರ ಸೇವಿಸಿ ಅದು ಜೀರ್ಣವಾದಾಗ ಶರೀರದಲ್ಲಿ ಉತ್ಸಾಹ ಬೆಳೆಯುತ್ತದೆ. ನಮ್ಮ ಕಾರ್ಯಶಕ್ತಿಯೂ ಹೆಚ್ಚುತ್ತದೆ. ಹಾಗೆಯೇ ಈ ಉಪವಾಸ ಮಾಡುವದರಿಂದಲೂ ಹಿಂದೆ ಅತಿಯಾಗಿ ಎಲ್ಲಿಯಾದರೂ ಕೂಡಿ ಬಿದ್ದ ಆಹಾರವು ಜೀರ್ಣವಾಗಿ ನಮ್ಮ ಶರೀರಕ್ಕೆ ಹೊಸ ಚೈತನ್ಯ ಬರಲೆಂಬ ಉದ್ದೇಶಕ್ಕಾಗಿಯೇ ಇವನ್ನು ಪ್ರಾಚೀನ ಕಾಲದಿಂದಲೂ ಅನುಷ್ಠಾನದಲ್ಲಿ ತರಲಾಗಿದೆಯೆಂದು ತಿಳಿಯಬಹುದು. ಯಾವುದೇ ಒಂದು ಶುಭಕಾರ್ಯದಲ್ಲಿ ಅಥವಾ ನಿಯಮ—ನಿಷ್ಠೆಗಳಿಂದ ನಡಿಸುವಂಥ ಕೆಲಸಗಳಲ್ಲಿ ಮುಂಚೆ ಉಪವಾಸವಿರಬೇಕೆಂದು ಶಾಸ್ತ್ರಗಳ ಅಭಿಪ್ರಾಯ. ಇದು ಕೇವಲ ಹಿಂದು ಶಾಸ್ತ್ರಗಳಲ್ಲಿ ಮಾತ್ರವಲ್ಲ, ಕ್ರಿಶ್ಚಿಯನ್—ಮುಸಲ್ಮಾನ ಧರ್ಮಗಳಲ್ಲಿ ಸಹ ಈ ಉಪವಾಸದ ಆದೇಶವುಂಟು. ಬಹುಶಃ ಎಲ್ಲ ಧರ್ಮ—ಪಂಥಗಳಲ್ಲಿಯೂ ಈ ಉಪವಾಸದ ಬಗ್ಗೆ ಮಹತ್ವ ಕೊಟ್ಟದ್ದು ಕಂಡು ಬರುತ್ತದೆ. ಧರ್ಮಾಂತರ ಅಥವಾ ವಿಶೇಷ ಸಂಸ್ಕಾರ ಪಡೆಯುವಾಗ ಕೆಲವು ದಿನಗಳ ಮುಟ್ಟಿಗೆ ಈ ಉಪವಾಸದಲ್ಲಿರಬೇಕೆಂಬ ನಿಯಮವುಂಟು. ಒಂದೊಂದು ಪಂಥಕ್ಕೆ ಸೇರುವಾಗ ಕನಿಷ್ಠ ಇಂತಿಷ್ಟು ದಿನಗಳವರೆಗೆ ಉಪವಾಸವಿರಬೇಕೆಂಬ ವಿಧಾನವುಂಟು. ಇದು ಕೇವಲ ಧಾರ್ಮಿಕ ಕ್ರಿಯೆಗಾಗಿ ಮಾತ್ರವಿರದೇ ಶಾರೀರಕ ಸ್ವಾಸ್ಥ್ಯ—ಸುಧಾರಣೆಗಳಿಗೂ ಸಂಬಂಧಿಸಿದ್ದಿರುತ್ತದೆ.

(ಇಪ್ಪತ್ತೇಳನೇ ಪುಟ ನೋಡಿರಿ)

ನಮ್ಮ ಗ್ರಾಹಕರು, ಹಿತೈಷಿಗಳು, ಪ್ರೋತ್ಸಾಹಕರಿಗೆಲ್ಲಾ
ಸ್ವಾತಂತ್ರ್ಯ ದಿನದ ಶುಭಾಶಯಗಳು

ಉತ್ಕೃಷ್ಟತೆಗೆ ಹೆಸರಾದ

ಖೀರಾ ಉಕ್ಕಿನ ಫರ್ನಿಚರುಗಳು

ಮನೆ, ಆಫೀಸು, ಆಸ್ಪತ್ರೆಗಳಿಗೆಲ್ಲಾ ಬೇಕಾಗುವ ಕಪಾಟು, ಕುರ್ಚಿ, ಮೇಜು ಮೊದಲಾದ ಯಾವತ್ತೂ ಖೀರಾ ಉಕ್ಕಿನ ಫರ್ನಿಚರುಗಳು, ಉಪಕರಣಗಳು, ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ರೋಲಿಂಗ್ ಶಟ್ಟರ್ಸ್, ಉಕ್ಕಿನ ಕಿಟಕಿ ಬಾಗಿಲುಗಳು, ಚಿತ್ರದ ಸಾಹಿತ್ಯೋಪಕರಣಗಳು, ಮಕ್ಕಳಿಗಾಗಿ ನವೀನ 'ಬೇಬಿ ವಾಕರ್' ಇತ್ಯಾದಿಗಳಿಗೆ ವಿಚಾರಿಸಿರಿ.

ಇಬ್ಬಗೆಯ ಉಪಯೋಗದ 'ಸೋಫಾ-ಕಂ-ಬೆಡ್', ಬೇಕಾದಂತೆ ಶಾಖ-ತಂಪು ಕೊಡುವ ಫ್ಯಾನು
ಇತ್ಯಾದಿಗಳಿಗೆ ಹಂಪನಕಟ್ಟೆಯಲ್ಲಿರುವ ನಮ್ಮ ಶೋ ರೂಮನ್ನು ಸಂದರ್ಶಿಸಿರಿ

ಹೆಚ್ಚಿನ ವಿವರಗಳಿಗೆ—

ಶಾಸ್ತ್ರಿ & ಕೊ Shastry & Co.

ಹಂಪನಕಟ್ಟೆ, HAMPANKATTA,
ಮಂಗಳೂರು. MANGALORE.

ಫೋನ್: 3788 Telegrams: "SHASTRYCO"

ಡಾ। ವಿ. ಕೆ. ಆರ್. ವಿ. ರಾವ್

ನೆಹರೂ ಕಲ್ಪನೆಯ ಸಮಾಜವಾದೀ ಸಮಾಜ

ಭಾರತದ ಬಡತನ ನೀಗಲು ಸಮಾಜವಾದೀ ಸಮಾಜ ರಚನೆಯೇ ಔಷಧವೆಂದು ನಂಬಿದ ಮಹಾಪುರುಷ ಜವಾಹರಲಾಲರು. ಅವರು ಬಯಸುವ ಸಮಾಜ ನಿರ್ಮಿಸುವಲ್ಲಿ ನಮ್ಮ ಜವಾಬ್ದಾರಿಯೂ ಅತ್ಯಧಿಕ. ಅದನ್ನು ನಿರ್ವಹಿಸಲು ನಾವು ಹೆಣಗಬೇಕು; ಅದಕ್ಕಾಗಿ ನೆಹರೂ ಬಯಸುವ ಸಮಾಜವಾದಿ ಸಮಾಜದ ಪರಿಚಯ ಅಗತ್ಯ.

ರಾಷ್ಟ್ರವನ್ನು ಸಮಾಜವಾದೀ ಸಮಾಜದ ಹಾದಿಯಲ್ಲಿ ಮುನ್ನಡೆಯುವಂತೆ ಮಾಡಿದ ಪ್ರಯತ್ನವೇ ನೆಹರೂರವರು ಭಾರತದ ಇತಿಹಾಸಕ್ಕೆ ಸಲ್ಲಿಸಿರುವ ಮಹಾ ಕಾಣಿಕೆಯಾಗಿದೆ. ೧೯೨೭ರಲ್ಲಿ ಅವರು ರಷ್ಯಾ ದೇಶಕ್ಕೆ ಭೇಟಿ ಕೊಟ್ಟುದೂ, ಮೊದಲಿಗೆ ಮಾರ್ಕ್ಸ್ ಪಂಥದ ಪುಸ್ತಕಗಳನ್ನು ಓದಿದುದೂ ಅವರ ಸಮಾಜವಾದದ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿದೆ ಎಂಬುದು ಸತ್ಯ ಸಂಗತಿ. ಜನರ ಬಡತನ, ಪರಂಪರಾಗತ ನಂಬಿಕೆಗಳು ಹಾಗೂ ಮೂಢ ನಂಬಿಕೆಗಳು, ಜಮೀನ್ದಾರಿ ಪದ್ಧತಿ ಮುಂತಾದ ವಿಚಾರಗಳ ತೀವ್ರ ಅರಿವು ನೆಹರೂರಲ್ಲಿದ್ದಿತು. ಭಾರತದ ಸಮಾಜವನ್ನು ಸಮಾಜವಾದ ರೀತಿಯಲ್ಲಿ ಪುನರ್ ರಚಿಸುವುದರ ಮೂಲಕವೇ ಆರ್ಥಿಕ, ಸಾಮಾಜಿಕ ಅಥವಾ ಸಾಂಸ್ಕೃತಿಕ ಅಭಿವೃದ್ಧಿಯು ಸಾಧ್ಯವೆಂಬುದರ ಬಗ್ಗೆ ಸಂಪೂರ್ಣ ನಂಬಿಕೆ ನೆಹರೂರವರಿಗಿತ್ತು.

ಗಾಂಧೀಜಿಯವರಿಂದಲೂ ನೆಹರೂರವರು ಪ್ರಭಾವಿತರಾಗಿದ್ದರು. ಸಮಾಜ ವ್ಯವಸ್ಥೆಯ ಬದಲಾವಣೆಯನ್ನು ಅಹಿಂಸೆ ಹಾಗೂ ಪ್ರೀತಿಯಿಂದಲ್ಲದೇ ಪಂಗಡ ಜಗಳ ಮತ್ತು ವೈರತ್ವದಿಂದ ಸಾಧ್ಯವಿಲ್ಲವೆಂಬುದನ್ನು ಅವರು ಅರಿತಿದ್ದರು. ಭಾರತದ ಜನತೆಯಲ್ಲಿ ಸಾಮಾಜಿಕ ಮತ್ತು ಇತರ ಅಸಮಾನತೆಯನ್ನು ಬಿತ್ತಿದ ಮತ ಪದ್ಧತಿಯಿಂದ ಏನೂ ಪ್ರಯೋಜನವಿಲ್ಲವೆಂದು ಅವರು ಒಗೆದಿದ್ದರು.

ಇದೇ ರೀತಿಯಲ್ಲಿ ಅನೇಕ ಕಾರ್ಮಿಕರ ಮತ್ತು ರೈತರ ವ್ಯಕ್ತಿಗತ ಶಕ್ತಿಯನ್ನು ಸಂವರ್ಧಿಸುವುದಕ್ಕೆ ಅವಕಾಶ ನೀಡದೇ, ಪಂಗಡಗಳ ಭಿನ್ನತೆಯನ್ನುಂಟು ಮಾಡಿದ್ದ ಜಮೀನ್ದಾರಿ ಅಥವಾ ಬಂಡವಾಳಶಾಹಿಗಳ ಬಗ್ಗೆಯೂ ನೆಹರೂರವರಿಗೆ ಅನಾದರಣೆ ಇತ್ತು. ಹಾಗೆಯೇ ಅವಲಂಬನೆಯ, ಅಸಮಾನತೆಯ ಹಾಗೂ ನಿಸ್ತೇಜ ಜೀವನ ನಡೆಸುವುದಕ್ಕೆ ಸಹಕಾರಿಯಾಗಿದ್ದ, ಜನರಲ್ಲಿ ಮನೆಮಾಡಿಕೊಂಡಿದ್ದ ಮೂಢನಂಬಿಕೆಗಳು, ಅಂಧಪರತ್ವಗಳು, ಆಚಾರ ಪದ್ಧತಿಗಳು ಮುಂತಾದವುಗಳನ್ನೆಲ್ಲಾ ಅವರು ತೆಗಳಿದ್ದರು. ಸಮಾಜವಾದದಲ್ಲಿ ಈ ಪ್ರವೃತ್ತಿಗಳನ್ನು ತೊಡೆದು ಹಾಕುವ ಸಾಧನೆಯನ್ನು ಕಂಡುಕೊಂಡಿದ್ದ ನೆಹರೂರವರು ತಮ್ಮ ರಾಜಕೀಯ ಆರಂಭ ಕಾಲದಿಂದಲೂ ಸಮಾಜವಾದಿ ಸಮಾಜ ರಚನೆ ಬಗ್ಗೆ ಪ್ರತಿಪಾದಿಸುತಿದ್ದರು. ಸ್ವತಂತ್ರ ಭಾರತಕ್ಕೆ ಸಮಾಜವಾದೀ ಸಮಾಜ ಪದ್ಧತಿಯ ಜೀವನವು ಅನುಕೂಲವಾದುದೆಂದು ನೆಹರೂರವರು ಆಗಾಗ್ಗೆ ಒತ್ತಿ ಹೇಳುತ್ತಿದ್ದುದರಿಂದ, ಅವರ ಪರಂಪರೆಯಲ್ಲಿ ಬೆಳೆದು ಬಂದ ಯಾರಲ್ಲೇ ಆಗಲೀ ಸಮಾಜವಾದಿ ಸಮಾಜ ಅಥವಾ ಸಮಾಜವಾದ ಜೀವನವು ಭಾವಾತ್ಮಕವಾಗಿ ಮತ್ತು ಮಾನಸಿಕವಾಗಿ ಮೂಡಿಬಂದಿರುವುದನ್ನು ಗುರುತಿಸಬಹುದು.

ನೆಹರೂರವರ ಸಮಾಜವಾದ

ವ್ಯಕ್ತಿಗತವಾದ ಗೌರವಾಧಾರದ ಮೇಲಿನ ಸಾಮಾಜಿಕ ಆದರ್ಶದ ಮೇಲೆ ಮಾತ್ರವೇ ನೆಹರೂರವರ ಸಮಾಜವಾದವು ರೂಪಿತವಾಗಿಲ್ಲ. ಪ್ರತಿಯೊಬ್ಬರಿಗೂ ಸಮಾನವಕಾಶ ನೀಡುವ ಮತ್ತು ಆದಾಯ ಹಾಗೂ ಸಂಪತ್ತುಗಳಲ್ಲಿ ಕಾಣಬರುವ ಅಸಮಾನತೆಯನ್ನು ತೊಡೆದು ಹಾಕುವ ಹಾಗೂ ಸಂಪತ್ತು ಒಂದೇ ಕಡೆ ಕೇಂದ್ರೀಕರಿಸದಂತೆ ನಿವಾರಿಸುವ ಸಾಮಾಜಿಕ ನ್ಯಾಯ ಸಿದ್ಧಾಂತದ ಮೇಲೆ ಮಾತ್ರವೇ ಅದು ರೂಪಗೊಂಡಿಲ್ಲ. ಆರ್ಥಿಕ ಪ್ರಜಾಪ್ರಭುತ್ವವಿಲ್ಲದೇ ರಾಜಕೀಯ ಪ್ರಜಾಪ್ರಭುತ್ವವು ಅರ್ಥಪೂರ್ಣವೂ ಅಲ್ಲ, ಸ್ಥಿರವೂ ಅಲ್ಲ ಎನ್ನುವ ಸಿದ್ಧಾಂತದ ಆಧಾರದ ಮೇಲೆ ಮಾತ್ರವೇ ಅದು ರಚಿತವಾಗಿಲ್ಲ. ಸಮಾಜವಾದದ ಆಧಾರದ ಮೇಲೆ ರೂಪಿತವಾದ ಆರ್ಥಿಕ ಯೋಜನೆಯನ್ನು ಜಾರಿಗೆ ತರುವುದರ ಮೂಲಕವಲ್ಲದೇ ಬೇರಾವ ಮಾರ್ಗದಿಂದಲೂ ಭಾರತದ ಸಾರ್ವತ್ರಿಕ ಬಡತನ ಮತ್ತು ರಾಷ್ಟ್ರದ ಆರ್ಥಿಕ ಪ್ರಗತಿ ಕುಂಠಿತಗೊಳ್ಳುವುದನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದು ನೆಹರೂರವರು ಭಾವಿಸಿದ್ದರು. ದೇಶದ ಉತ್ಪಾದನೆಯ ಸಾಮರ್ಥ್ಯವನ್ನು ಪ್ರವರ್ಧಿಸಬೇಕಾದರೆ, ಬಂಡವಾಳ ಹಾಗೂ ಉಳಿತಾಯವನ್ನು ತೀವ್ರತರವಾಗಿ ಅಧಿಕಗೊಳಿಸಬೇಕು ಎಂಬ ಬಗ್ಗೆ ಅವರು ಗಮನವಿಟ್ಟಿದ್ದರು. ಸಮಾಜವಾದಿ ಆದರ್ಶಕ್ಕೆ ಅಂಟಿಕೊಂಡ ಸರಕಾರವು ಆರ್ಥಿಕ ಯೋಜನೆಯನ್ನು ತನ್ನ ಆದರ್ಶದ ಸಾಧನೆಗೆ ಉಪಯೋಗಿಸುವುದರಿಂದ ಮಾತ್ರ ದೇಶದ ಉತ್ಪಾದನೆಯ ಸಾಮರ್ಥ್ಯ ಪ್ರವರ್ಧಿಸಲು ಸಾಧ್ಯವಾಗುವುದೆಂದು ನೆಹರೂರವರು ಅಭಿಪ್ರಾಯಪಟ್ಟಿದ್ದರು. ಬಂಡವಾಳ ನಿರ್ಮಿಸುವ, ಅಗತ್ಯವಾದ ಸಾಮಾಜಿಕ ಮತ್ತು ಆರ್ಥಿಕ ತಳಪಾಯಗಳನ್ನು ರಚಿಸುವ, ಯಂತ್ರ ನಿರ್ಮಾಣಗಳ ಸಾಮರ್ಥ್ಯವನ್ನು ಉಂಟುಮಾಡುವ ಮತ್ತು ವಿಜ್ಞಾನ ಹಾಗೂ ತಾಂತ್ರಿಕ ವಿಜ್ಞಾನದಲ್ಲಿ ಸಂಶೋಧನೆ ಹಾಗೂ ಕುಶಲತೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಬಂಡವಾಳವನ್ನು ತೊಡಗಿಸುವ ಪದ್ಧತಿಯಲ್ಲಿ ಮಾರ್ಪಾಡನ್ನು ಮಾಡಬೇಕೆಂದೂ ನೆಹರೂರವರು ತಿಳಿದಿದ್ದರು.

ಇದೆಲ್ಲಕ್ಕೂ ಯೋಜನೆ ಬೇಕು. ಸಾರ್ವಜನಿಕ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕು. ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು ಸ್ಥಾಪಿಸಬೇಕು. ಈ ಉದ್ದೇಶದಿಂದಲೇ ಯೋಜನೆ ಆರ್ಥಿಕಾಭಿವೃದ್ಧಿ ಮತ್ತು ಸಮಾಜವಾದಿ ಪದ್ಧತಿ ಇವುಗಳ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೆಹರೂರವರು ನೀಡಿದ್ದರು. ಅವರ ದೃಷ್ಟಿಯಲ್ಲಿ, ಈ ಮೂರು ಅಂಶಗಳು ಸಮಗ್ರವಾಗಿ ಸುಸಂಬಂಧವಾಗಿ ಹೆಣೆದುಕೊಂಡಿದ್ದವು. ಏಕೆಂದರೆ, ಆರ್ಥಿಕಾಭಿವೃದ್ಧಿಯಿಲ್ಲದೇ ಸಮಾಜವಾದವಿಲ್ಲ, ಯೋಜನೆಯಿಲ್ಲದೇ ಆರ್ಥಿಕಾಭಿವೃದ್ಧಿಯಿಲ್ಲ; ಸಮಾಜವಾದವಿಲ್ಲದೇ ಯೋಜನೆಯಿಲ್ಲ. ನೆಹರೂರವರ ಈ ವಿಚಾರಧಾರೆಯನ್ನು ನಿರಂತರವಾಗಿ ರೂಪಿಸಿದ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಬಿಂಬಿತವಾಗಿರುವುದನ್ನು ಕಾಣಬಹುದು. ವಾಸ್ತವವಾಗಿ, ಮೂರನೇ ಪಂಚವಾರ್ಷಿಕ ಯೋಜನೆಯ ಮೊದಲನೇ ಪರಿಚ್ಛೇದದಲ್ಲಿ ಸ್ವಲ್ಪ ವಿವರವಾಗಿ ಕಾಣಬರುವ ಯೋಜನಾಭಿವೃದ್ಧಿಯ ಸಮಾಜವಾದ ಉದ್ದೇಶದ ಒಂವಣಿಗೆಯನ್ನು ನೆಹರೂರವರೇ ಬರೆದಿದ್ದಾರೆ.

ಖಾಸಗೀ ಕ್ಷೇತ್ರ

ನೆಹರೂರವರು ಸಿದ್ಧಾಂತಕ್ಕೆ ಕಟ್ಟುಬಿದ್ದ ಸಮಾಜವಾದಿಗಳಾಗಿರಲಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು. ಅವರ ಸಮಾಜವಾದೀ ವ್ಯವಸ್ಥೆಯಲ್ಲಿ ಖಾಸಗೀ ಕ್ಷೇತ್ರಕ್ಕೆ ಒಂದು ಭದ್ರವಾದ ಸ್ಥಾನವಿತ್ತು. ಅವರು ಕಂಡ ಸಮಾಜವಾದವು ಸ್ವಾಯತ್ತ ಸರ್ವಾಧಿಕಾರಿ ವ್ಯವಸ್ಥೆಯಾಗಿರಲಿಲ್ಲ. ರಾಷ್ಟ್ರಕ್ಕೆ ನಾಗರಿಕರ ಸ್ವಾತಂತ್ರ್ಯವನ್ನು ಬಲಿಕೊಡುವುದಿಲ್ಲ. ನಿರಂತರವಾಗಿ ವಿಕಾಸಗೊಳ್ಳುತ್ತಿರುವ ಸಹಕಾರಿ ಕ್ಷೇತ್ರದ ಪಾತ್ರದ ಬಗ್ಗೆ ನೆಹರೂರವರಿಗೆ ದೃಢವಾದ ವಿಶ್ವಾಸವಿತ್ತು. ಖಾಸಗೀ ಉದ್ಯಮಗಳಿಗೆ ಎಲ್ಲವನ್ನೂ ಅವಕಾಶ ಹಾಗೂ ಕಾರ್ಯೋತ್ಸಾಹ ನೀಡುವ ಮಿಶ್ರವಾದ ಆರ್ಥಿಕ ವ್ಯವಸ್ಥೆ ಬಗ್ಗೆ ಅವರಿಗೆ ನಂಬಿಕೆಯಿತ್ತು. ಅವರು ಅನುಸರಿಸಿದ ಮಾರ್ಗ ವ್ಯವಹಾರಿಕವಾಗಿತ್ತೇ ವಿನಃ ಯಾವುದೇ ತತ್ವಕ್ಕೆ ಅಂಟಿ ಕೊಳ್ಳುವುದಾಗಿರಲಿಲ್ಲ. ಹಾಗೆಯೇ ಅವರ ವ್ಯಾವಹಾರಿಕತ್ವವು ಸಮಾಜವಾದೀ ವ್ಯವಸ್ಥೆಯ ನಂಬುಗೆಯಲ್ಲಿ ಭದ್ರವಾಗಿನೆಲೆಯೂರಿತ್ತು. ದಕ್ಷತೆ ಹಾಗೂ ಪರಮಾವಧಿ ಉತ್ಪಾದನೆ ಬಗ್ಗೆ ಅವರು ಒತ್ತಿ ಹೇಳುತ್ತಿದ್ದರು ಅದರ ಜೊತೆಗೆ, ನ್ಯಾಯಸಮ್ಮತ ವಿತರಣೆ ಹಾಗೂ ಸಮಾನಾವಕಾಶಗಳಿಗೂ ಆದ್ಯತೆ ನೀಡಿದ್ದರು.

ನೆಹರೂರವರು, ತಮ್ಮ ಮಹಾಗುರು ಗಾಂಧೀಜಿಯವರಂತೆ ನ್ಯಾಯ ಸಮ್ಮತ ಗುರಿಗೆ ನ್ಯಾಯ ಸಮ್ಮತ ಸಾಧನೆಯು ಅಗತ್ಯವೆಂಬುದಾಗಿ ಭಾವಿಸಿದ್ದರು ಅಧಿಕ ಸಾಮಾಜಿಕ ನ್ಯಾಯವನ್ನು ಹಾಗೂ ಪರಮಾವಧಿ ಉತ್ಪಾದನೆಯನ್ನು ಏಕ ಕಾಲದಲ್ಲಿ ಸಾಧಿಸುವ ಆರ್ಥಿಕಾಭಿವೃದ್ಧಿ ವ್ಯವಸ್ಥೆಯನ್ನು ನಿರ್ಮಿಸುವ ಆಸೆಯನ್ನಿಟ್ಟುಕೊಂಡಿದ್ದರು. ಸಂಪತ್ತಿಕ ಗುರಿ ಸಾಧನೆಯೇ ಅವರ ಸಮಾಜವಾದದ ಗುರಿಯಾಗಿರಲಿಲ್ಲ. ಅವರ ಸಮಾಜವಾದವು ವ್ಯಕ್ತಿಸ್ವಾತಂತ್ರ್ಯದ ಹಿನ್ನೆಲೆಯನ್ನು ಹೊಂದಿತ್ತಲ್ಲದೇ ನೈತಿಕ ಮೌಲ್ಯಗಳ ಮೇಲೆ ಆಧಾರಗೊಂಡಿತ್ತು. ಅದು ಆರ್ಥಿಕ ಸಂಸ್ಥೆಯ ರೂಪವಾಗಿ ಉಳಿಯದೇ ಜೀವನದ ಕ್ರಮವನ್ನು ನಿರೂಪಿಸುವಂತಹದಾಗಿತ್ತು. ನೆಹರೂರವರು ವಿವರಿಸಿರುವ ಈ ಸಮಾಜವಾದ ವ್ಯವಸ್ಥೆಯು ನೆಹರೂರವರು ನಮಗೆ ನೀಡಿರುವ ಮಹತ್ವದ ಬಳುವಳಿ. ನೆಹರೂರವರ ಈ ಬಳುವಳಿಯು ಆರಂಭದ ಹಂತದಿಂದ ಇನ್ನೂ ಹೆಚ್ಚಿನ ಮುನ್ನಡೆಯನ್ನು ಸಾಧಿಸಬೇಕಾಗಿದೆ.

ಸಮಾಜವಾದೀ ಸಮಾಜದ ಬಗ್ಗೆ ನೆಹರೂರವರು ನೀಡಿದ್ದ ಮಹತ್ವಕ್ಕೆ ತಕ್ಕಷ್ಟು ಪ್ರಾಧಾನ್ಯ ಸಿಕ್ಕಿಲ್ಲ. ಅದರ ಅನುಷ್ಠಾನದ ಆರಂಭದಲ್ಲಿಯೇ ಟೀಕಾಕಾರರು ಮತ್ತು ಸಂದೇಹವಾದಿಗಳು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿನ ಸಮಾಜವಾದೀ ತತ್ವವನ್ನು ತೊಡೆದುಹಾಕಲು ಉದ್ದೇಶಿಸಿದ್ದಾರೆ. ನೆಹರೂರವರ ಈ ಬಳುವಳಿಯ ಭವಿಷ್ಯವನ್ನು ದೇಶದ ಜನತೆಯು ಎಚ್ಚರಿಕೆಯಿಂದ ಲಕ್ಷಿಸಬೇಕು. ಏಕೆಂದರೆ, ಅದನ್ನು ಯಶಸ್ವಿಯಾಗಿ ಪೂರ್ತಿಗೊಳಿಸುವುದರ ಮೇಲೆಯೇ ನೆಹರೂರವರ ಕನಸಿನ ಭಾರತದ ನಿರ್ಮಾಣವು ಅವಲಂಬಿಸಿದೆ. ಅಲ್ಲದೇ ನಮ್ಮೆಲ್ಲರಿಗೂ ಬೇಕಾದ ಭಾರತವೂ, ನೆಹರೂರವರ ಕಲ್ಪನೆಯ ಸಮಾಜವಾದದ ಭಾರತವೇ ಆಗಿದೆ.

ಶ್ರೀ ಕು. ಗೋ.

ಅವಳು

ಬಾಲವಿಧವೆ ಅವಳೆಂದು ತಿಳಿದಾಗ ಸಮಾಜವನ್ನೆದುರಿಸಲು ಧೈರ್ಯಸಾಲದ ನವಯುವಕನ ಹೃದಯದೌರ್ಬಲ್ಯ, ಸಮಾಜ ಹಾಕಿದ ಚೌಕಟ್ಟಿನಲ್ಲಿಯೇ ಇದ್ದು ಸುಖವನ್ನೇ ಉಣ್ಣುವ ಅವಳ ಹೃದಯ ವೀರ್ಯ—ಯಾರ ಹೃದಯ ಸೆಳೆಯಲಾರದು?

ದುಂಡಗಿನ ಸುಂದರ ಮುಖ, ಹೊಳೆಯುವ ದಂತ ಪಂಕ್ತಿ, ಬೆಳ್ಳಗಿನ ಸುಕೋಮಲ ಕಾಯ, ನೀಳ ಕೇಶರಾಶಿ– ಎಂಥವರೂ ಇನ್ನೊಮ್ಮೆ ನೋಡಬೇಕೆನಿಸುವ ಸೌಂದರ್ಯ ರಾಶಿ ಅವಳದು. ಪ್ರತಿನಿತ್ಯವೂ ಅದೇ ಸ್ಟ್ಯಾಂಡಿನಲ್ಲಿ ಬಸ್ಸಿಗಾಗಿ ಕಾಯುತ್ತಾಳೆ, ಅದೇ ಬಸ್ಸಿನಲ್ಲಿ ಪ್ರಯಾಣ, ಅದೇ ಆಫೀಸಿನಲ್ಲಿ ಕೆಲಸ. ಯಾರೊಡನೆಯೂ ಹೆಚ್ಚು ಮಾತಿಲ್ಲ, ಕತೆಯಿಲ್ಲ. ಎಷ್ಟುಬೇಕೋ ಅಷ್ಟೇ. ಯಾರಾದರೂ ಮಾತನಾಡಿಸಿದರೆ ಮಾತ್ರ ನಂಥ ಮಾತನ್ನಾಡುವಳು. ಅದರೊಂದಿಗೇ ಸೌಮ್ಯ ನಗು. ಆ ನಗು ಎಂಥ ಆಯಾಸವನ್ನೂ ಪರಿಹರಿಸುವಂಥದು, ಯಾವ ದುಗುಡವನ್ನೂ ಮರೆಸುವಂಥದು. ಪ್ರತಿ ನಿತ್ಯವೂ ಅವಳನ್ನು ನೋಡುತ್ತೇನೆ, ಅವಳ ಸೌಂದರ್ಯವನ್ನು ವೀಕ್ಷಿಸುತ್ತೇನೆ, ಅವಳ ನಗುವನ್ನು ಕಂಡು ನನ್ನ ಮನದ ದುಗುಡವನ್ನು ಮರೆಸುತ್ತೇನೆ.... ಹೂವಿಲ್ಲದ ತುರುಬು, ಅರಶಿನ ಕಾಣದ ಕಪೋಲಗಳು, ಹಣೆಯಲ್ಲಿ ಕುಂಕುಮದ ಬೊಟ್ಟು, ಕೊರಳಲ್ಲೊಂದು ಚಿನ್ನದ ಸರ, ಎಡಕೈಯಲ್ಲೊಂದು ರಿಸ್ಟ್ ವಾಚ್, ಕೊರಳಲ್ಲಿ ಕರಿಮಣಿ ಇಲ್ಲ. ಅವಿವಾಹಿತೆ ಇರಬೇಕು. ಆದರೆ ವಿವಾಹವಾಗುವ ವಯಸ್ಸು ಮೀರಿದಂತಿದೆ. ಬಹುಶಃ ಇಪ್ಪತ್ತಾಲ್ಕು ಇಥವಾ ಇಪ್ಪತ್ತೈದು ವರ್ಷಗಳಾಗಿರಬಹುದು. ಯಾವ ಕಷ್ಟವೂ ಇಲ್ಲದೆ ಸುಖದಲ್ಲಿ ಬೆಳೆದಂತಿದೆ ಆ ಶರೀರ. ಮರ್ಯಾದಸ್ಥ ಮನೆತನದ, ಶ್ರೀಮಂತರ ಮನೆಯ ಹೆಣ್ಣಿರಬಹುದು ಆಕೆ. ಅವಳ ನಡೆಯ ರೀತಿ, ನಿಲ್ಲುವ ರೀತಿ, ಮಾತನಾಡುವ ರೀತಿ ಎಲ್ಲವೂ ಅದನ್ನೇ ಹೇಳುತಿತ್ತು. ಸೀರೆ ಕುಪ್ಪಸಗಳೂ ಅಷ್ಟೇ! ದಿನ ದಿನವೂ ಹೊಸ ಹೊಸ ಸೀರೆ ಕುಪ್ಪಸಗಳು ಅವಳ ಮೈಯನ್ನು ಅಲಂಕರಿಸುತ್ತವೆ. ಅವು ಅವಳಿಗೆ ಚೆನ್ನಾಗಿ ಒಪ್ಪುತ್ತವೆ; ಅವಳ ಸೌಂದರ್ಯವನ್ನು ಒಮ್ಮೊಮ್ಮೆ ಇಮ್ಮಡಿಸುತ್ತವೆ. ಅವಳಲ್ಲಿ ಯೌವನವಿದ್ದರೂ ಆ ಹಾರಾಟವಿಲ್ಲ, ಆ ದರ್ಪವಿಲ್ಲ, ಆ ಬಿಸಿ ಕಾಣದು. ತುಂಬು ಜೀವನದ ಇಂಬುಂಡವಳಂತೆ—ಅಷ್ಟು ಸೌಮ್ಯ, ಅಷ್ಟು ಸರಳ. ಮನಸ್ಸು ಪಕ್ವವಾದಂತೆ, ಆಕೆ ಸಂತೃಪ್ತಿಯ ಜೀವನವನ್ನು ಅನುಭವಿಸುತ್ತಿದ್ದಂತೆ ಕಾಣುತ್ತಿತ್ತು. ಆಕೆ ಇನ್ನೊಬ್ಬರನ್ನು ನೋಡುತಿದ್ದ ರೀತಿಯೂ ಅಷ್ಟೆ—ಒಬ್ಬ ಸೋದರಿ ಸೋದರನನ್ನು ಕಂಡಂತೆ, ತಾಯಿಯಾದವಳು ಮಗುವನ್ನು ನೋಡುವಂತೆ, ಶಿಷ್ಯನಾದವನು ಗುರುವನ್ನು ನೋಡುವಂತೆ–ಅಷ್ಟು ಪ್ರೀತಿ, ಅಷ್ಟು ಮಮತೆ, ಅಷ್ಟು ಭಕ್ತಿ, ಅಷ್ಟು ಸ್ನೇಹ ಆ ನೋಟದಲ್ಲಿ.

ಬೇರೆಯವರಲ್ಲೂ ಈ ಗುಣಗಳಿರಬಹುದು. ಆ ರಸ್ತೆಯಲ್ಲಿ ನಡೆಯುವವರಲ್ಲಿ ಅವಳಿಗಿಂತಲೂ ಉತ್ತಮ ರೂಪರಾಶಿ, ನಡತೆ, ಗುಣಗಳನ್ನು ಪಡೆದವರಿರಬಹುದು. ಆದರೂ ಆಕೆಯ ರೀತಿಯೇ ಬೇರೆ, ಆಕೆಯಲ್ಲಿರುವ ಆಕರ್ಷಣೆಯೇ ಬೇರೆ ಮತ್ತೂ ಮತ್ತೂ ನೋಡಬೇಕೆನಿಸುತ್ತದೆ ಆಕೆಯೊಬ್ಬಳೇ ನಡೆದು ಹೋಗುತ್ತಿರುವಾಗ–ಕಾಮದೃಷ್ಟಿಯಿಂದಲ್ಲ, ಆದರೆ ಪ್ರೇಮದೃಷ್ಟಿಯಿಂದ. ಅವಳನ್ನು ಮಾತನಾಡಿಸೋಣವೇ, ಅವಳ ಹೃದಯದ ಪರಿಚಯವನ್ನು ಮಾಡಿಕೊಳ್ಳೋಣವೇ ಎನಿಸುತ್ತದೆ. ಆದರೆ ಧೈರ್ಯಸಾಲದು. ಅಪರಿಚಿತ ವ್ಯಕ್ತಿಯೊಬ್ಬ ಒಬ್ಬ ಸ್ತ್ರೀಯನ್ನು ಅದೂ ಒಬ್ಬ ತರುಣಿಯನ್ನು ಯಾವಕಾರಣವೂ ಇಲ್ಲದೆ ಮಾತನಾಡಿಸುವುದಾದರೂ ಹೇಗೆ? ಆದರೂ ಮಾತನಾಡಿಸದೇ ಇರುವುದಾದರೂ ಹೇಗೆ?

ಏನೋ ಕುತೂಹಲ, ಏನೋ ಆಸಕ್ತಿ, ಏನೋ ಬಯಕೆ, ಏನೋ ಸಂಕಟ. ಬರೀ ನೋಡಿದರೆ ಸಾಲದು, ಆಕೆಯೊಡನೆ ಹೃದಯ ಬಿಚ್ಚಿ ಮಾತನಾಡಬೇಕೆಂಬ ಚಪಲ, ಹಂಬಲ. ಒಬ್ಬ ತಮ್ಮನಾಗಿ ಅಥವಾ ಅಣ್ಣನಾಗಿ ಏನೂ ಆಗದೆಯೇ ಆಕೆಯೊಡನೆ ಮಾತನಾಡಬೇಕೆನಿಸುತ್ತದೆ ಆಸೆ ಚಿಗುರುತ್ತದೆ, ಚಿಗುರು ಕವಲೊಡೆಯುತ್ತದೆ. ಯೋಚನಾ ತರಂಗಗಳು ಏಳುತ್ತಲೇ ಇರುತ್ತವೆ. ಆಕೆಯ ಬಗ್ಗೆಯೇ ಪ್ರಶ್ನೆಗಳು ಹಾಕಲ್ಪಡುತ್ತವೆ- ಒಂದರ ಮೇಲೊಂದು. ಆಕೆ ಯಾರು? ಎಲ್ಲಿಂದ ಬರುತ್ತಿದ್ದಾಳೆ? ಅವಳ ತಂದೆ ತಾಯಿ ಯಾರು? ಆಕೆ ವಿವಾಹಿತಳೇ ಅಥವಾ ಅವಿವಾಹಿತಳೇ? ವಿವಾಹಿತಳಾಗಿದ್ದರೆ ಕರಿಮಣಿ ಏಕಿಲ್ಲ? ಬಹುಶಃ ಆಧುನಿಕ ಫ್ಯಾಶನ್ ಎಂದು ಕರಿಮಣಿ ತಾಳಿ ತೆಗೆದಿರಿಸಿದ್ದಾಳೋ? ಆದರೂ ಆಕೆ ಹೂವನ್ನೇಕೆ ಮುಡಿಯುವುದಿಲ್ಲ? ಗಿಡದಲ್ಲಿ ಅರಳುವ ಹೂವನ್ನು ಕೀಳಿ ತನ್ನ ಆನಂದಕ್ಕಾಗಿ ಉಪಯೋಗಿಸುವ ಹಂಬಲವಿಲ್ಲವೋ ಏನೋ ಆಕೆಗೆ ಒಂದುವೇಳೆ ಆಕೆಗೆ ಮದುವೆಯಾಗದಿರಲಿಕ್ಕೂ ಸಾಕು. ಅವಳು ಎಂದೂ ತನ್ನ ಗಂಡನೊಡನೆ ತಿರುಗಾಡಲು ಹೊರಟದ್ದು ಕಾಣದು. ಬಹುಶಃ ಮದುವೆಯಾಗಿರಲಿಕ್ಕಿಲ್ಲ. ಅಷ್ಟು ಸುಂದರಿಯಾಗಿ, ಅಷ್ಟು ಶ್ರೀಮಂತಳಾಗಿದ್ದೂ ಆಕೆ ಇನ್ನೂ ಮದುವೆಯಾಗದಿರಲು ಕಾರಣ? ಕಂಕಣ ಬಲಕೂಡಿ ಬಾರದಿರಬಹುದು, ಅಥವಾ ಅವಳಿಗೆ ವಿವಾಹವಾಗಲು ಮನಸಿಲ್ಲದಿರಬಹುದು. ಒಂದೂ ಅರ್ಥವಾಗುತ್ತಿಲ್ಲ. ಯಾರಾದರೂ ಆಕೆಯನ್ನು ಪ್ರೇಮಿಸಿದವರು ಪರದೇಶದಲ್ಲಿರಬಹುದೇ? ಅವರು ಬರುವವರೆಗೂ ಆಕೆ ಕಾಯುತ್ತಿರಬಹುದೇ? ಅಲ್ಲ ಯಾರಾದರೂ ಪ್ರೇಮಿಸಿ ದ್ರೋಹ ಬಗೆದುಹೋದರೇ ಅದರಿಂದ ಆಕೆ ರೋಸಿ ಇನ್ನು ಮುಂದೆ ಗಂಡು ಜಾತಿಯ ಸಂಪರ್ಕವೇ ಬೇಡವೆಂದು ಕುಳಿತಿರಬಹುದೇ? ಇದ್ದರೂ ಇರಬಹುದು, ಯಾರು ಬಲ್ಲರು? ಕೇವಲ ದೈಹಿಕ ಸಂತೃಪ್ತಿಗಾಗಿ ಪುರುಷ ಸಂಪರ್ಕವನ್ನು ಹೊಂದಿ ಸಂಸಾರವೆಂಬ ಸಾರವಿಲ್ಲದ ಕೂಪದಲ್ಲಿ ಬಿದ್ದು ಹೊರಳಾಡಲು ಆಕೆಗೆ ಮನಸ್ಸಿಲ್ಲವೋ ಏನೋ! ಅದಕ್ಕಾಗಿಯೇ ಸಮಾಜದಲ್ಲಿದ್ದೂ ಇಲ್ಲದವಳಂತೆ ನಟಿಸುತ್ತಾ ಇರಬೇಕು. ಯಾರು ಬಲ್ಲರು ಅವಳ ಮಾನಸಿಕ ಧೋರಣೆಯನ್ನು. ಯಾರು ಬಲ್ಲರು ಅವಳ ಬಾಳ ಮರ್ಮವನ್ನು! ಒಂದೂ ಅರ್ಥವಾಗುತ್ತಿಲ್ಲ.

....ಆಹ! ಅವಳ ನಗು ಆ ಮುಖ, ಆ ಕಣ್ಣುಗಳು—ಏನೋ ಅಡಗಿದೆ ಅವುಗಳಲ್ಲಿ. ಎಷ್ಟು ಚೆಂದ, ಆ ಹಾರಾಡುವ ಗುಂಗುರು ಕೂದಲು. ಕೈ ಬೀಸಿ ಕರೆಯುತ್ತಿದೆ, ರಸಿಕನಾಗು ಎನ್ನುತ್ತಿದೆ....ಆಕೆ ಅವಿವಾಹಿತೆಯಾಗಿಯೇ ಇದ್ದಿದ್ದರೆ, ಯಾರೂ ಇದುವರೆಗೆ ಅವಳ ಕೈ ಹಿಡಿಯಲು ಮುಂದೆ ಬಾರದಿದ್ದರೆ....ನಾನೇಕೆ?....ನಾನೇಕೆ?... ಛೀ—ನನಗೇಕೆ ಈ ಭಾವನೆ ಬರುತ್ತಿದೆ! ಎಂದೂ ಇದರ ಯೋಚನೆ ಮಾಡದವನಿಗೆ ಇಂದೇಕೆ ಈ ಭಾವನೆ ಉಂಟಾಗುತ್ತಿದೆ? ಎಲ್ಲೆಲ್ಲೂ ದ್ವೇಷ, ಅಸೂಯೆ, ಮದ, ಮಾತ್ಸರ್ಯಗಳನ್ನೇ ಕಾಣುತ್ತಿರುವ ನನಗೆ ಪ್ರೇಮಮಯ ಮೂರ್ತಿಯಾಗಿರುವ ಆಕೆಯ ಕೈ ಹಿಡಿದು ಶಾಂತಿ ದೊರಕೀತೇ? ನನ್ನ ಜೀವನ ಸುಖಮಯವಾಗಬಹುದೇ? ಅವಳೊಂದಿಗೆ ಬೆರೆತ ಜೀವಕ್ಕೆ ಪೂರ್ಣ ಸುಖ ದೊರಕೀತೇ? ಮನದಲ್ಲಿ ನಡೆಯುತ್ತಿರುವ ಶೀತಯುದ್ಧ ನಿಂತೀತೇ? ಮಾನಸಿಕ ಹಾಗೂ ದೈಹಿಕ ಸುಖ ದೊರಕೀತೇ? ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ಕಲ್ಪಿಸೀತೇ! ಅವಳೊಂದಿಗೆ ಸೇರಿದರೆ ಎಲ್ಲವೂ ಸಾಧ್ಯವಾಗಬಹುದು. ಇವೆಲ್ಲವೂ ಸಾಧ್ಯವಾದೀತು. ಲಂಗುಲಗಾಮಿಲ್ಲದ ಮನಸ್ಸಿನ ಹುಚ್ಚು ಓಟಕ್ಕೆ ಆಕೆ ಲಗಾಮು ಹಾಕಿಯಾಳು. ಇಲ್ಲಸಲ್ಲದ ಯೋಚನೆಗಳನ್ನು ಕೊನೆಗಾಣಿಸಿಯಾಳು. ಅಪಕ್ವಜೀವನವನ್ನು ಪಕ್ವಗೊಳಿಸಿಯಾಳು. ಆಕೆಯ ಅದೃಷ್ಟದಿಂದ ನನ್ನ ಅದೃಷ್ಟವೂ ಬದಲಾದೀತು. ಏನೇ ಆಗಲಿ, ಆಕೆ ಏನೇ ತಿಳಿದುಕೊಳ್ಳಲಿ; ಆಕೆಯನ್ನು ಭೇಟಿಯಾಗಿ ಆಕೆಯೊಡನೆ ಮಾತಾಡಲೇ ಬೇಕು. ಸಂಕೋಚವನ್ನು ಅದುಮಿಟ್ಟು ಧೈರ್ಯತಾಳಿ ಆಕೆಯೊಡನೆ ನಾಳೆ ಮಾತನಾಡಲೇ ಬೇಕು....ಖಂಡಿತ ಮಾತನಾಡಲೇಬೇಕು.

ಆ ನಾಳೆ ಬಂತು. ಆಫೀಸು ಬಿಟ್ಟೊಡನೆಯೇ ಹೊರಟೆ. ಹೃದಯ ಬಡಿತ ಜೋರಾಗಿತ್ತು. ತನ್ನ ಮನದ ನಿರ್ಧಾರ ಯಾರಿಗೂ ಗೊತ್ತಾಗಬಾರದೆಂದು ಒಬ್ಬನೇ ಹೊರಟೆ. ಆಕೆ ಒಬ್ಬಳೇ ಇದ್ದಾಗ ಮಾತನಾಡಬೇಕೆಂದು ಯೋಚಿಸಿದ್ದೆ. ಆದರೆ ಅವಳೊಡನೆ ಮತ್ತೊಬ್ಬಳಿದ್ದಾಳಲ್ಲ! ಇಂದೇಕೆ ಹೀಗಾಯ್ತು? ಹೇಗೆ ಮಾತಾಡಿಸುವುದು? ಗೆಳೆಯ ರಾಮನ ಕೈ ನನ್ನ ಹೆಗಲನ್ನು ಬಡಿಯಿತು. ಸಿಟ್ಟು ನೆತ್ತಿಗೇರಿತು. ಆದರೆ ಪ್ರದರ್ಶಿಸಲಾಗಲಿಲ್ಲ, ಆ ಸಿಟ್ಟನ್ನು. ಏನೇನೋ ಹರಟೆ ಕೊಚ್ಚುತ್ತಿದ್ದ ಅತನ

(ಇಪ್ಪತ್ತೈದನೇ ಪುಟ ನೋಡಿರಿ)

ತಂತಿ: "ಸಹಕಾರಿ"] ಸ್ಥಾಪನೆ: 1919 ಫೋನ್: 4637

THE
S. K. A. C. M. SOCIETY LTD.
MANGALORE-1.

ದ. ಕ. ಕೃಷಿಕರ
ಸಹಕಾರಿ ಮಾರಾಟ ಸಂಘ, ಲಿ.,
ಸಹಕಾರಿ ಮಹಲ್,
ಮಂಗಳೂರು - ೧.

ಅಡಿಕೆ, ಯಾಲಕ್ಕಿ, ಕಾಳು ಮೆಣಸು, ತೆಂಗಿನಕಾಯಿ, ಬಾಳೆಕಾಯಿ ವಗೈರೆ ವ್ಯವಸಾಯದ ಎಲ್ಲಾ (ಅಕ್ಕಿ ಭತ್ತ ಹೊರತು) ಉತ್ಪತ್ತಿಗಳನ್ನು ಕಮಿಶನ್ ವ್ಯಾಪಾರಕ್ಕೆ ಪಡೆಕೊಂಡು ಯೋಗ್ಯ ಬೆಲೆಗೆ ವಿಕ್ರಯಿಸುವ ಜಿಲ್ಲೆಯ ಏಕಮಾತ್ರ ಸಹಕಾರಿ ಮಾರಾಟ ಸಂಘ.
ಮೆಂಬರರಿಗೆ ಇಂಡೆಂಟು ಮೂಲಕ ಗೃಹಕೃತ್ಯದ ಸಾಮಾನುಗಳನ್ನು ಒದಗಿಸುವ ಏರ್ಪಾಡಿದೆ.

ಜಿಲ್ಲೆಯ ಎಲ್ಲಾ ಕೃಷಿಕರ ಸಹಕಾರವನ್ನು ಸಂಘವು ಅಪೇಕ್ಷಿಸುತ್ತದೆ.

ಬಿ. ಪ್ರಭಾಕರ ರಾವ್, M.A., B.L., ಅಧ್ಯಕ್ಷ.
ಎಸ್. ನರಸಪ್ಪಯ್ಯ, B.A., B.L., ಉಪಾಧ್ಯಕ್ಷ.

ಶ್ರೀ ಎಂ. ಉಮೇಶ ರಾವ್—

ದೇಶಭಕ್ತ- ಕಾರ್ನಾಡು ಸದಾಶಿವರಾವ್

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ನಾಡು ಸದಾಶಿವರಾಯರು ಸುಖದ ಸುಪ್ಪತ್ತಿಗೆಯನ್ನು ತ್ಯಜಿಸಿ ಸ್ವಾತಂತ್ರ್ಯಕ್ಕಾಗಿ ತನುಮನಧನಗಳನ್ನು ಉಪಯೋಗಿಸಿ ಅಪಾರ ನಷ್ಟ-ಕಷ್ಟಗಳಿಗೊಳಗಾದವರು. ಅವರನ್ನು ಅಧಿಕಾರ ಲಾಲಸಿಗಳು ಪದದಿಂದ ತಳ್ಳಿದರೂ ಅಂದಿನ ಜನತೆಯ ಮೇಲೆ ಅವರಿಗಿದ್ದ ಗೌರವ— ಅಧಿಕಾರ ಪದದಿಂದ ತಳ್ಳಲಾಗಲಿಲ್ಲ; ಕಾರ್ನಾಡರ ಬದುಕು ಕಣ್ಣೀರಿನದಾದರೂ ಅದರಿಂದ ಅವರು ಕೊನೆತನಕವೂ ವಿಚಲಿತರಾಗಲಿಲ್ಲ.

ಮಾನವನ ಜೀವನದಲ್ಲಿ, ಆವನು ಬಹಳ ಸಂತೋಷದಿಂದ ಜ್ಞಾಪಿಸುವ, ನಿರ್ದಿಷ್ಟವಾದ ಒಂದು ಸಮಯವಿರುತ್ತದೆ. ಅದು ವಯಸ್ಸನ್ನಾಗಲೀ, ಲೌಕಿಕ ಸುಖವನ್ನಾಗಲೀ ಹೊಂದಿಕೊಂಡಿರುವುದಿಲ್ಲ, ಹಿಂದಿನ ಕಾಲವೊಂದರ ನೆನಪು, ಆವನ ಮನಸ್ಸನ್ನು ತಾತ್ಕಾಲಿಕ ಸಮಸ್ಯೆಗಳಿಂದ ಮೇಲೆತ್ತುತ್ತದೆ. ದಿವಂಗತ ಕಾರ್ನಾಡು ಸದಾಶಿವರಾಯರೊಂದಿಗೆ ಸುಮಾರು ಹದಿನೈದು ವರ್ಷಗಳ ಕಾಲ ನಾನು ದುಡಿದಿದ್ದರೂ, ಅವರ ನಿಕಟವಾದ ಸಂಪರ್ಕ ನನಗೆ ದೊರಕಿದುದು, ೧೯೨೧ರಿಂದ ೧೯೩೭ರ ಕಾಲಾವಧಿಯಲ್ಲಿ, ಆ ಸುಸಂಧಿ ನನಗೆ ದೊರಕಿದುದು, ನನ್ನ ಭಾಗ್ಯವೆಂದು ತಿಳಿದಿರುತ್ತೇನೆ. ನಾವು ಹಿರಿಯರ ಹಿರಿಮೆ ಹಾಗೂ ಬಲಿದಾನಗಳ ಬಗ್ಗೆ ಕೇಳುತ್ತೇವೆ. ಅವನ್ನು ಕೊಂಡಾಡುತ್ತೇವೆ. ಆದರೆ ಇಂತಹ ಮಾನ್ಯ ವ್ಯಕ್ತಿಗಳ ಬಗೆಗಿನ ಸ್ವಂತ ತಿಳುವಳಿಕೆ ಮತ್ತು ಅನುಭವ ಉಳ್ಳವರು ಕೆಲವೇ ಮಂದಿ. ಕೆಲವು ವ್ಯಕ್ತಿಗಳ ಸದ್ಗುಣಗಳು ಬಹಳವಾಗಿ ಹೊಗಳಲ್ಪಡುತ್ತವೆ. ಆದರೆ ಅವರಲ್ಲಿ ಕಂಡು ಬರುವ ದೌರ್ಬಲ್ಯಗಳು ಅವರ ಶೀಲಕ್ಕೆ ಕಳಂಕವನ್ನು ತರುತ್ತವೆ. ಉದಾರ ಹೃದಯಿಯೂ, ಉತ್ತಮನೂ, ಪ್ರಾಮಾಣಿಕತೆ, ಯೋಗ್ಯತೆ ಮತ್ತು ತ್ಯಾಗ ಶೀಲತೆಗಳಿರುವವನೂ, ಆದ ವ್ಯಕ್ತಿಯು ದೊರೆಯುವುದು ದುರ್ಲಭ, ಸದಾಶಿವರಾಯರು ಅಂತಹ ವ್ಯಕ್ತಿಗಳಲ್ಲೊಬ್ಬರೆಂದು ಹೇಳಲು ನಾನು ಹೆಮ್ಮೆಪಡುತ್ತೇನೆ.

೧೯೧೬ — ೨೦ರಲ್ಲಿ ಮಂಗಳೂರಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ, ಅವರನ್ನು ಹಲವು ಬಾರಿ ಕಂಡಿದ್ದೆ. ಅವರು, ಹೆಚ್ಚಿನ ಭೂಮಿ ಕಾಣಿಗಳಿರುವ ವಕೀಲರಾಗಿದ್ದರು. ಬ್ರಹ್ಮ ಸಮಾಜದ ಓರ್ವ ಸದಸ್ಯರಾಗಿದ್ದರು. ಕುದ್ಮಲ್ಲೂರು ರಂಗರಾಯರ (ಬಳಿಕ ಸ್ವಾಮಿ ಈಶ್ವರಾನಂದರು) ಸಂಗಡಿಗರಾಗಿ, ದಲಿತ ವರ್ಗದವರ ಉದ್ಧಾರಕ್ಕಾಗಿ ಸ್ಥಾಪಿಸಲ್ಪಟ್ಟ ಡಿಪ್ರೆಸ್ಡ್ ಕ್ಲಾಸಸ್ ಮಿಶನ್‌ನಲ್ಲಿ ದುಡಿಯುತ್ತಿದ್ದರು. ಆಗಲೇ ಅವರು ತಮ್ಮ ಸ್ವತಂತ್ರ ಮತೀಯ ವಿಚಾರಗಳ, ಸಭ್ಯ ನಡತೆಯ, ಧಾರ್ಮಿಕ ಮನೋಭಾವದ ಬಗ್ಗೆ ಹೆಸರುಗೊಂಡಿದ್ದರು. ಅವರ ಉಡಿಗೆ ತೊಡುಗೆಗಳು, ಯಾವಾಗಲೂ ಚೊಕ್ಕವಾಗಿರುತ್ತಿದ್ದವು. ಅವರ ಉಡುಗೆಯ ವಸ್ತ್ರಗಳು ಬಹಳ ಬೆಲೆಯವುಗಳೆಂದ, ವಿದ್ಯಾರ್ಥಿಗಳು ಮಾತನಾಡುತ್ತಿದ್ದರು. ಮಹಾತ್ಮಾ ಗಾಂಧಿಯವರು, ಕಾಂಗ್ರೆಸಿನ ಮುಂದಾಳುತನವನ್ನು ವಹಿಸಿ, ಅಸಹಕಾರ ಚಳವಳಿಯನ್ನು ಆರಂಭಿಸಿದಾಗ, ಕೂಡಲೇ ಉತ್ತರಿಸಿದ, ಮೊತ್ತ ಮೊದಲ ಕೆಲವೇ ಮಂದಿಯಲ್ಲಿ, ಸದಾಶಿವರಾಯರೂ ಒಬ್ಬರಾಗಿದ್ದರು. ತಮ್ಮ ಉದ್ಯೋಗವನ್ನು ಬಿಟ್ಟು ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದ ಅವರು, ತಮ್ಮ ಮರಣದ ತನಕ, ಪ್ರಾಮಾಣಿಕತೆಯಿಂದ ಅನವರತ ದುಡಿದರು. ತಮ್ಮ ಐಶ್ವರ್ಯವನ್ನೆಲ್ಲಾ ತ್ಯಾಗ ಮಾಡಿದುದರ ಪರಿಣಾಮವಾಗಿ, ಅವರು ತಮ್ಮ ಬಾಳ್ವೆಯ ಕೊನೆಯ ಎಂಟು ಹತ್ತು ವರ್ಷಗಳಲ್ಲಿ, ಬಹಳಷ್ಟು ಕಷ್ಟಕ್ಕೆ ಒಳಗಾಗಬೇಕಾಯಿತು. ಅಮೋಘ ಸೇವೆಯ ಫಲವಾಗಿ, ಅವರು ದೇಶಭಕ್ತರೆಂಬ ಬಿರುದಿಗೆ ಮಾನ್ಯರಾದರು. ಅವರ ಬಾಳ್ವೆಯ ಕೊನೆಯ, ಹಾಗೂ ಮುಂದಿನ ಕೆಲವು ವರ್ಷಗಳಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಕ್ಷೇತ್ರದಲ್ಲಿ ಬೆಳೆದು ಬಂದ, ಅಧಿಕಾರ ದಾಹ, ಅಸೂಯೆ ಮತ್ತು ಒಳಜಗಳಗಳ ಪರಿಣಾಮವಾಗಿ, ಜಿಲ್ಲೆಯಲ್ಲಿ ಅವರ ತ್ಯಾಗಕ್ಕೆ ಸರಿಯಾದ ಪುರಸ್ಕಾರ ದೊರೆಯದಿದ್ದರೂ, ಆ ಬಳಿಕ, ಬೆಂಗಳೂರಿನ ಕಾಂಗ್ರೆಸ್ ನಗರವು ಅವರ ಹೆಸರಿನಿಂದ ಕರೆಯಲ್ಪಟ್ಟುದೂ, ವಿವಿಧ ರಾಜಕೀಯ ಪಕ್ಷಗಳ ಮುಖಂಡರೂ, ಅವರ ಪರಿಚಿತರೂ ಅವರ ಹಿರಿಮೆಯನ್ನು ಸ್ಮರಿಸಿ, ಗೌರವವನ್ನು ಸಲ್ಲಿಸಿದ್ದೂ, ಸಂತೋಷದ ವಿಷಯ.

೧೯೨೧ರ ಆರಂಭದಲ್ಲಿ ನಾನು ಸದಾಶಿವರಾಯರನ್ನು ಮುಂಬಾಯಿಯಲ್ಲಿ ಭೇಟಿಯಾದಾಗ, ಅವರು ಬಿಳೀ ದೊರಗು ಖಾದಿ ಧೋತಿಯನ್ನೂ ಚಿಕ್ಕ ಕೋಟಿನ ಶರ್ಟನ್ನೂ, ಟೊಪ್ಪಿಯನ್ನು ಧರಿಸಿದ್ದರು. ನಾನು ಕೂಡಾ ಚಳವಳಿಯನ್ನು ಸೇರಲು ನಿಶ್ಚಯಿಸಿದ್ದು ಮಾರ್ಗದರ್ಶನಕ್ಕಾಗಿ ಎದುರು ನೋಡುತ್ತಿದ್ದೆ. ನನ್ನ ನಿರ್ಣಯದ ವಿಚಾರವನ್ನು ತಿಳಿದು, ಅವರು ನನ್ನನ್ನು ಹಾರ್ದಿಕವಾಗಿ ಅಭಿನಂದಿಸಿ, ಮಂಗಳೂರಿಗೆ ಹೋಗಿ ತನ್ನೊಡನೆ ಕೆಲಸಮಾಡಲು ಕೇಳಿಕೊಂಡರು. ಅವರ ಸೊಗಸಾದ ರೀತಿ ನೀತಿಗಳೂ ಸೌಮ್ಯತೆಯಿಂದ ಕೂಡಿದ ನುಡಿಗಳೂ ನನ್ನ ಮೇಲೆ ಪವಿತ್ರವಾದ ಅಜ್ಞೆಯ ಪ್ರಭಾವವನ್ನು ಬೀರಿದುವು. ಕೆಲವೇ ದಿನಗಳಲ್ಲಿ ನಾನು ಮಂಗಳೂರಿನ ಓರ್ವ ಕಾಂಗ್ರೆಸ್ ಪ್ರವರ್ತಕನಾದೆ.

ಶ್ರೀ ಸದಾಶಿವರಾಯರು, ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಮೂಲಕ, ಜನಸಮುದಾಯದಲ್ಲಿ ರಾಜಕೀಯ ಜಾಗ್ರತಿಯನ್ನು ಉಂಟುಮಾಡುವುದು ಸುಲಭವೆಂಬುದನ್ನು ಅರಿತಿದ್ದರು. ಕಾಂಗ್ರೆಸಿನಿಂದ ನಿರ್ದೇಶಿಸಲ್ಪಟ್ಟ, ಹಲವಾರು ರಚನಾತ್ಮಕ ಕಾರ್ಯಕ್ರಮಗಳು, ಶಾಲೆಗಳ ಮೂಲಕ, ಸುಲಭವಾಗಿ ಸಿದ್ಧಿಸಲ್ಪಡುವುದು ಸಾಧ್ಯವೆಂದು ತಿಳಿದಿದ್ದರು. ಆದುದರಿಂದ, ಅವರು ತಮ್ಮ ಜಿಲ್ಲೆಯಲ್ಲಿ, ಹಲವಾರು ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿದರು. ಮಾಸಿಕ ವಂತಿಗೆ, ಇತರ ಧನಸಹಾಯ, ಮತ್ತು ಮುಷ್ಟಿ ಫಂಡುಗಳ ಮೂಲಕ ಸಾರ್ವಜನಿಕರಿಂದ ಸಂಗ್ರಹಣ ಕಾರ್ಯವು ಸಾಧ್ಯವಾಗಿದ್ದರೂ ಅಧ್ಯಾಪಕರನ್ನೂ, ಕಾಂಗ್ರೆಸ್ ಕೆಲಸಗಾರರನ್ನೂ ಸಲಹುವರೆ, ಅವರು ದೊಡ್ಡ ಮೊತ್ತಗಳನ್ನು ವೆಚ್ಚಮಾಡಿದರು. ವಿವಿಧ ಉಪಜಾತಿಗಳ ಹರಿಜನ ವಿದ್ಯಾರ್ಥಿಗಳು, ಮಂಗಳೂರಿನ ತಿಲಕ ವಿದ್ಯಾಲಯದಲ್ಲಿಯೂ, ಇತರ ರಾಷ್ಟ್ರೀಯ ಶಾಲೆಗಳಲ್ಲೂ, ನಿರಾತಂಕವಾಗಿ ಸೇರಿಸಲ್ಪಟ್ಟರು. ತಿಲಕ ವಿದ್ಯಾಲಯದ ಒಬ್ಬ ಹರಿಜನ ಅಧ್ಯಾಪಕರು, ಕೆಲವು ಬಾರಿ, ನನ್ನೊಂದಿಗೆ ಸದಾಶಿವರಾಯರ ಭೋಜನಶಾಲೆಯಲ್ಲಿ ಊಟಮಾಡಲು ಕುಳಿತುಕೊಳ್ಳುತ್ತಿದ್ದರು. ಹರಿಜನ ವಿದ್ಯಾರ್ಥಿಗಳಿಗೆ ಖಾದಿಯ ಉಡುಪುಗಳೂ ಸಾಬೂನುಗಳು ಕೊಡಲ್ಪಡುತ್ತಿದ್ದುವು. ನೂಲುವುದು, ನೇಯುವುದು ಮತ್ತು ಮರಗೆಲಸಗಳು ಶಾಲೆಗಳಲ್ಲಿ ಕಲಿಸಲ್ಪಡುತ್ತಿದ್ದವು. ಒಂದು ರಾಷ್ಟ್ರೀಯ ಶಾಲೆಯು, ಕಾಂಗ್ರೆಸ್ ಚಟುವಟಿಕೆಗಳ ಕೇಂದ್ರವಾಗಿದ್ದಿತು. ಇವುಗಳಲ್ಲಿ ಹಲವು ಮುಸ್ಲಿಂ ವಿದ್ಯಾರ್ಥಿಗಳಿರುತ್ತಿದ್ದರು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ, ಒಂದು ವರ್ಷ ಒಬ್ಬ ಮುಸ್ಲಿಮರಿದ್ದರು. ಜಿಲ್ಲೆಯ ಹಲವೆಡೆಗಳಲ್ಲಿ, ಮುಸ್ಲಿಂ ಕಾಂಗ್ರೆಸ್ ಪ್ರವರ್ತಕರು ನಿಷ್ಠೆಯಿಂದ ದುಡಿಯುತ್ತಿದ್ದರು. ಕಾಂಗ್ರೆಸ್ ಮತ್ತು ಖಿಲಾಫತ್ ಕಮಿಟಿಗಳು ಸಾಮರಸ್ಯದಿಂದ ಕೆಲಸ ಮಾಡುತ್ತಿದ್ದುವು. ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಂದ ನಡೆಸಲ್ಪಟ್ಟ ಪ್ರಭಾತ ಫೇರಿಗಳೂ, ಮೆರವಣಿಗೆಗಳೂ ದೊಡ್ಡ ಸಂಖ್ಯೆಯಲ್ಲಿ ತರುಣರನ್ನೂ ವಯಸ್ಕರನ್ನೂ ಆಕರ್ಷಿಸಿ, ಜನತೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಉತ್ತೇಜನವನ್ನುಂಟುಮಾಡಿದುವು. ಆದುದರಿಂದಲೇ, ರಾಜಕೀಯ ವಾತಾವರಣವು ಸ್ವಲ್ಪ ತಣ್ಣಗಾದ ಬಳಿಕ, ಸಾರ್ವಜನಿಕರ ಕೊಡುಗೆಗಳು ಕಡಿಮೆಯಾದರೂ ಶಾಲೆಗಳನ್ನು ಮುಚ್ಚುವ ಸೂಚನೆಗಳನ್ನು ಸದಾಶಿವರಾಯರು ವಿರೋಧಿಸಿದರು.

ಸದಾಶಿವರಾಯರು ಬಡ ಹಾಗೂ ನಿರುದ್ಯೋಗಿ ಜನತೆಗೆ ಉದ್ಯೋಗವನ್ನು ಕಲ್ಪಿಸುವುದರಲ್ಲಿ, ನೂಲುವುದರ ಉಪಯುಕ್ತತೆಯ ಕುರಿತು ಅಸಾಧಾರಣವಾದ ವಿಶ್ವಾಸವುಳ್ಳವರಾಗಿದ್ದರು. ಮೊತ್ತ ಮೊದಲು ಅವರು ೫೦೦ ಚರಕಗಳನ್ನು ತಯಾರಿಸಿ. ಅವುಗಳನ್ನು ಬಡ ಜನರಿಗೆ ವಿತರಣೆ ಮಾಡಿದರು. ನೂಲುವುದನ್ನು ಕಲಿಸುವರೆ ತಕ್ಕ ಏರ್ಪಾಡು ಮಾಡಲಾಯಿತು. ಕೆಲಕಾಲ, ಅವರ ಉದ್ದೇಶವು ಈಡೇರಿದಂತೆ ತೋರಿತು. ನೂಲುವುದು ಜನಪ್ರಿಯವಾಯಿತು. ನೂತ ನೂಲನ್ನು ಕೊಂಡುಕೊಳ್ಳಲು ತಕ್ಕ ವ್ಯವಸ್ಥೆಯ ಆವಶ್ಯಕತೆ ತಲೆದೋರಿತು. ಈ ಉದ್ದೇಶದ ಪರಿಪೂರ್ಣತೆಗಾಗಿ ಒಂದು ಅಂಗಡಿಯನ್ನು ತೆರೆಯಲಾಯಿತು. ಚರಕಗಳಿಗಾಗಿ ಬಂದ ಬೇಡಿಕೆಗಳ ಸಂಖ್ಯೆ ಬಹಳ ಹಿರಿದಾಗಿತ್ತು. ಅವುಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಿ, ಬಹುಮಟ್ಟಿಗೆ ಧರ್ಮಾರ್ಥವಾಗಿ ಹಂಚಲಾಯಿತು. ಈ ಸಂದರ್ಭವನ್ನು ಕೆಲವು ಸ್ಥಳೀಯ ವರ್ತಕರು, ತಮ್ಮ ಸ್ವಾರ್ಥಸಾಧನೆಗಾಗಿ ಉಪಯೋಗಿಸಿ, ಗಿರಣಿಗಳಲ್ಲಿ ಹಾಳಾದ ಹತ್ತಿಯಿಂದ ತಯಾರಿಸಿದ ಹಂಜಗಳನ್ನು ಹೆಚ್ಚಿನ ಬೆಲೆಗೆ ಜನರಿಗೆ ಮಾರಿದರು. ಇವುಗಳಿಂದ ಸುಲಭವಾಗಿ ನೂಲನ್ನು ತಯಾರಿಸಬಹುದಾಗಿದ್ದರೂ ನೂಲು ಬಹಳ ದಪ್ಪವಾಗಿಯೂ ಬಲಹೀನವಾಗಿಯೂ ಇದ್ದು ಹೆಚ್ಚು ಕಾಲ ಬಾಳಿಕೆಗೆ ಬರುತ್ತಿರಲಿಲ್ಲ. ಜನರು ಕೊಂಡು ಬರುವ ನೂಲು ಯಾವುದೇ ತರಹದ್ದಾಗಿದ್ದರೂ ಅದನ್ನು ನಿರಾಕರಿಸಕೂಡದೆಂದು, ನೂಲಿನ ಅಂಗಡಿಗೆ ಆದೇಶವೀಯಲಾಯಿತು. ನೂಲುವವರು, ಸದಾಶಿವರಾಯರ ಮುಂದೆ ಕಣ್ಣೀರಿಡುತ್ತಾ, ತಮಗೆ ಕೊಡಲ್ಪಡುವ ನೂಲಿನ ದರವು ಬಹಳ ಕಡಿಮೆಯೆಂದು ತಿಳಿಸಿದಾಗ, ಇನ್ನು ಮುಂದೆ ಹೆಚ್ಚಿನ ದರವನ್ನು ಕೊಡಬೇಕೆಂದು ಅವರು ನಿರ್ದೇಶನವಿತ್ತರು. ಹೀಗಾಗಿ, ಒಂದೆರಡು ವರ್ಷಗಳಲ್ಲಿ, ನೂಲಿನ ರಾಶಿರಾಶಿಗಳೇ ಕೂಡಲ್ಪಟ್ಟವು. ಈ ನೂಲನ್ನು ನೇಯುವರೆ, ನೇಕಾರರು ಸಿಗುವುದು ಬಹಳ ಕಷ್ಟವಾಗಿತ್ತು. ಸಮಯ ಹೋದಂತೆ ನೂಲು ಬಹಳ ದುರ್ಬಲವಾಗುತ್ತಾ ಬಂತು. ಹಳ್ಳಿಗಳಿಂದ ನೇಕಾರರು ಕರೆಯಿಸಲ್ಪಟ್ಟು, ಅವರಿಗೆ ಹೆಚ್ಚಿನ ವೇತನ ಕೊಡಲಾಯಿತು. ಸದಾಶಿವರಾಯರ ಮನೆಯ ವಠಾರದಲ್ಲಿ ಒಂದು ನೇಯ್ಗೆಯ ಕಾರ್ಖಾನೆಯನ್ನು ತೊಡಗಲಾಯಿತು. ಇನ್ನೊಂದು ಭಾಗದಲ್ಲಿ ಆ ಮೊದಲೇ ತಿಲಕ ವಿದ್ಯಾಲಯದ ಕಟ್ಟೋಣವಿದ್ದಿತು. ದೊಡ್ಡ ಪ್ರಮಾಣದಲ್ಲಿ ನೂಲು ಹಾಳಾಯಿತು. ತಯಾರಿಸಿದ ಬಟ್ಟೆಯು ಬಹಳ ದೊರಗಾಗಿದ್ದು, ಅದನ್ನು ಮಾರುವುದು ಕಷ್ಟವಾಯಿತು. ಸಿಬಂದಿಗಳ ವೇತನದ ಬಗ್ಗೆ ದೊಡ್ಡ ಮೊತ್ತದಲ್ಲಿ ಹಣವನ್ನು ವೆಚ್ಚಮಾಡಲಾಯಿತು. ಈ ರೀತಿ ಕೇವಲ ನೂಲುವುದು ಮತ್ತು ನೇಯ್ಗೆಗಳಿಗಾಗಿ, ಅವರು ೮೦,೦೦೦ ರೂಪಾಯಿಗಳಿಗೂ ಮಿಕ್ಕಿದ ಹಣವನ್ನು ವ್ಯಯಿಸಿದರೆಂದು ನಾನು ಯಾವುದೇ ಸಂದೇಹವಿಲ್ಲದೆ ಹೇಳಬಲ್ಲೆ. ಆ ಸಮಯದಲ್ಲಿ ನೂಲುವ ತರಗತಿಗೆ ಭೇಟಿ ಇತ್ತ ಒಬ್ಬ ನ್ಯಾಯಾಧೀಶರು 'ನೂಲುವ ಕೈಗಾರಿಕೆಯು ಈ ರೀತಿ ಬೆಳೆಯುತ್ತಾ ಹೋದರೆ, ಕಳವೇ ಮೊದಲಾದ ತಕ್ಸೀರುಗಳು ದೊಡ್ಡ ಪ್ರಮಾಣದಲ್ಲಿ ಮಾಯವಾಗುವುವು ಎಂದು ನನಗೆ ಸಂಪೂರ್ಣ ವಿಶ್ವಾಸವಿದೆ' ಎಂದು ನುಡಿದುದು ನನಗೆ ನೆನಪಿಗೆ ಬರುತ್ತಿದೆ. ಅಂದಿನ ದಿನಗಳಲ್ಲಿ ಸದಾಶಿವರಾಯರು ಪ್ರಾಂತೀಯ ಮುಂದಾಳುಗಳಲ್ಲಿ ಬಹಳ ಪ್ರಖ್ಯಾತಿ ಪಡೆದವರಾಗಿದ್ದರು. ಜನಪ್ರಿಯರಾದುದರಿಂದ ಎಲ್ಲೆಡೆಗಳಿಂದಲೂ ಅವರು ಆಮಂತ್ರಿಸಲ್ಪಡುತ್ತಿದ್ದರು. ಕಾಂಗ್ರೆಸಿನ ಪರವಾದ ಪ್ರಚಾರಕ್ಕಾಗಿ ಅವರು

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

“ನವಗಿರಿನಂದ”

ನಾನೇನೂ ಬರೆಯಲಾರೆ

ಸಂಪಾದಕರ ಪತ್ರ ತಲುಪಿ ತಾನು “ಸುವಿಖ್ಯಾತ”ರಲ್ಲಿ ಒಬ್ಬನೆಂದು ಸಂತೋಷವಾದರೂ ಅವರು ಬಯಸುವ ಲೇಖನ ಬರೆಯಲು ಅಸಾಧ್ಯವಾಗಿ ತಲೆನೋವು ಬಂತು; ಆ ತಲೆನೋವಿಗೆ ಸಂಪಾದಕರೇ ವೈದ್ಯರಾಗಿ ಬಂದು ಸಾರಿಡಾನ್ ಸಲಹೆಮಾಡಿ ನೆಮ್ಮದಿ ತರಬೇಕಾಯಿತು.

ಲೇಖಕರು

“ನಾಡಿನ ಸುವಿಖ್ಯಾತ ಬರೆಹಗಾರರ ರಾಜಕೀಯ ಹಾಗು ಸಾಂಸ್ಕೃತಿಕ ಮೌಲ್ಯವಿರುವ ಲೇಖನ ‘ಳ” ವಿಶೇಷ ಸಂಚಿಕೆಯಂತೆ.

ಅದಕ್ಕೆ ನನ್ನದೊಂದು ಲೇಖನ ಅಗತ್ಯ ಕಳುಹಿಸಿಕೊಡಬೇಕಂತೆ.

ನಾನೊಬ್ಬ ಸುವಿಖ್ಯಾತ ಬರೆಹಗಾರನೆಂದೇ ನನಗೆ ಈ ಪತ್ರ ಕಳುಹಿಸಿದ್ದಾರೆ ಸಂಪಾದಕರು.

ಈ ಪತ್ರ ನೋಡಿದ ಕೂಡಲೇ ನನ್ನ ತಲೆ ಆನಂದದಿಂದ ತಣ್ಣಗಾಯಿತು. ಏನೋ ಒಂದು ಬರೆಯಲೇಬೇಕೆಂದುಕೊಂಡು ಕಾಗದ, ಪೆನ್ನು ಸಿದ್ಧಮಾಡಿಕೊಂಡು ಕುಳಿತೆ. ನೆನಸಿದ ಮಾತ್ರಕ್ಕೇ ಕತೆ ಕಾದಂಬರಿಗಳನ್ನು ಬರೆಬರೆದು ಬಿಸುಡುವ ನನಗೆ, ರಾಜಕೀಯ, ಸಾಂಸ್ಕೃತಿಕ ಮೌಲ್ಯವಿರುವ ಒಂದು ಲೇಖನ ಕೀಡಿಬಿಡುವುದೇನು ಕಷ್ಟ?

ಆದರೆ ವಿಷಯ ಬೇಕಲ್ಲ?

ರಾಜಕೀಯ, ಸಾಂಸ್ಕೃತಿಕ, ಮೌಲ್ಯ ಇವು ಮೂರೂ ಒಟ್ಟು ಸೇರುತ್ತವೆಯೆ? ನೋಡೋಣ:—

ರಾಜಕೀಯದಲ್ಲಿ ಸಾಂಸ್ಕೃತಿಕವೇನಿದೆ! ರಾಜಕೀಯವೆಂದರೆ ಐದೈದು ವರ್ಷಗಳಿಗೊಮ್ಮೆ ಮಹಾ ಚುನಾವಣೆ ಎಂಬ ಒಂದೊಂದು ಪುಟ ತಿರುವಿಹಾಕೋದು ತಾನೆ? ಆ ಸಮಯಕ್ಕೆ ಯಾರು ಯಾರೋ ದೊಡ್ಡ ದೊಡ್ಡ ಅಲಂಕಾರ ಚಪ್ಪರದ ಮೇಲೇರಿಕೊಂಡು ಮೈಕ್ ರಾಕ್ಷಸನ ಕಂಠದಿಂದ, “ನನ್ನ ಕಡೆಗೇ ನಿಮ್ಮ ಓಟುಗಳನ್ನೆಲ್ಲ ಹಾಕಿರೀ! ನಾ ನಿಮಗೆಲ್ಲ ಹಾಗೆ ಮಾಡ್ತೇನೇ! ಹೀಗ ಮಾಡ್ತೇನೇ! ನಾನೇ ಸೃಷ್ಟಿಕರ್ತ ಬ್ರಹ್ಮ” ಅಂತ ಜಡಿದು ಜಡಿದು ಹೇಳುವಾಗ, ಅವನಿಗಿದಿರಾಗಿ ಇನ್ನೊಬ್ಬನೂ ಹೀಗೆಯೇ ಶೃಂಗಾರ ಚಪ್ಪರದ ಮೇಲೇರಿ ಮಾತಿನ ಹುಡಿ ಹಾರಿಸುತ್ತಾನೆ; ಅವನಿಗಿಂತಲೂ ಜೋರಾದ ರಕ್ಕಸ ಕೂರಳಿನಿಂದ—“ನನ್ನ ಕಡೆಗೇ ನಿಮ್ಮ ಓಟು ಕೇಳಿರೀ. ನನ್ನ ಮೇಲೇ ಛೀ ಕೊಟ್ಟು ನೋಡಿರಿ ನಿಮ್ಮ ಹುಲ್ಲು ಮುಂಯದ ಎಷ್ಟು ಗಟ್ಟಿಯಾಗಿರುತ್ತೋ ಅಂತ ಪರೀಕ್ಷೆ ಮಾಡಕೊಳ್ಳಿ” ಎಂಬ ರೀತಿಯಾಗಿ ಒತ್ತಾಯ ಮಾಡುತ್ತ ಸವಾಲು ಬಿಡುತ್ತಾ ಇರುತ್ತಾನೆ. ಹೀಗೆ ಇಬ್ಬರೇ ಅಲ್ಲ, ಒಬ್ಬರನ್ನೊಬ್ಬರು ಮೀರಿಸುವ ಹುಮ್ಮಸ್ಸಿನಾವೇಶಗೊಂಡಿರುವ ಎಷ್ಟೋ ಪಕ್ಷ ಮುಖಂಡಮೂರ್ತಿಗಳು. ಈತ ಆತನ್ನ ಬಯ್ಯೋದೇನು ಆತ ಈತನ್ನ ಮಾತಿನ ಕತ್ತಿಯಿಂದ ತಿವಿಯೋದೇನು; ಉಪಾಯವಾಗಿ ಇನ್ನೊಬ್ಬನನ್ನು ಹೇಗೆ ಬಯ್ಯಬೇಕು? ಬಯ್ಯುವುದರಲ್ಲಿ ಎಷ್ಟೆಷ್ಟು ಜೋರುಜೋರಾದ ಸುಧಾರಣೆಗಳಾಗಿವೆ? ಸಂಸ್ಕಾರಗೊಂಡ ಶಬ್ದಗಳೆಷ್ಟಿವೆ? ಇದನ್ನೆಲ್ಲಾ ನೋಡಿ ಕಲಿಯುತ್ತ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಉಪಾಧ್ಯಾಯರುಗಳನ್ನು ತಮ್ಮ ತಮ್ಮ ಅಂಕೆಯೊಳಗಿಟ್ಟುಕೊಂಡು ಎಷ್ಟು ಒಳ್ಳೆಯ ಶಿಸ್ತು ಕಲಿಯುತ್ತಾರೆ? ಸಂಸ್ಕಾರ ಹೊಂದುತ್ತಾರೆ? ಇಂಥಾ ಓಟು ಬೇಟೆ ಎಂಬ ರಾಜಕೀಯದ ಕುಸ್ತಿಕುಸ್ತಿಗಳಲ್ಲಿ ಭಾರಿ ಮೌಲ್ಯವೂ ಖರ್ಚಾಗುತ್ತದಂತೆ. ಆ ಪಕ್ಷ ಇಷ್ಟು ಲಕ್ಷ ಖರ್ಚು ಮಾಡಿದರೆ, ಈ ಕೂಟ ಇಷ್ಟು ಖರ್ಚು ಮಾಡಿತು ಎಂದು ಸ್ಪರ್ಧೆ ಕಟ್ಟಿ ಹಣ ಚೆಲ್ಲಾಡುವ ಮಹಾ ಲೀಲೆ. ಇದರಲ್ಲಿ ಕಾಣುವ ಮೌಲಿಕ ಪ್ರಭಾವವೇನು! ಪ್ರಕಾಶವೇನು!

ಇವುಗಳನ್ನೆಲ್ಲ ವಿವರಿಸಿ ಘನಜೋರಾ ಬರೆದು ಬಿಟ್ಟೆನೆಂದರೆ ಉತ್ತಮವಾದ ರಾಜಕೀಯ ಸಾಂಸ್ಕೃತಿಕ ಮೌಲ್ಯವುಳ್ಳ ಲೇಖನವಾಗಿಬಿಡುವುದರಲ್ಲಿ ಸಂಶಯವಿದೆಯೆ? ಆದರೆ ಈ ಗೊಂದಲಮಯ ಲೇಖನವನ್ನು ಶುರುಮಾಡುವುದೆಲ್ಲಿಂದ? ಪವಿತ್ರವಾದ ಸ್ವಾತಂತ್ರ್ಯದಿನದಿಂದ ಶುರು ಮಾಡಲು ಕೈಯೇ ಬರಲಿಲ್ಲ....ಸರಿ, ಎಲ್ಲಿಂದಲೋ ಶುರು ಮಾಡಿದರೂ ಮುಗಿಸುವುದು ಎಲ್ಲಿಗೆ?....ಎಲ್ಲಿಯೋ ಮುಗಿದರೂ, ಯಾರು ತಾನೇ ಓದಿಯಾರು? ಎಲ್ಲರಿಗೂ ಗೊತ್ತಿರುವ, ಎಲ್ಲರೂ ಅನುಭವಿಸುತ್ತಿರುವ ಈ ರಾಜಕೀಯ ಸಾಂಸ್ಕೃತಿಕ, ಮೌಲ್ಯವುಳ್ಳ ಲೇಖನ ಯಾರಿಗೆ ಬೇಕು? ರಾಜಕೀಯ ಪುಢಾರಿಗಳಿಗೂ ಬೇಡ, ಪ್ರಜೆಗಳಿಗೂ ಬೇಡ, ಏನೋ ಸಂಪಾದಕರು ಮಾತ್ರ ಒಮ್ಮೆ ಓದಿ ನೋಡಿ, ಛೀ ಅಂತ ಹರಿದು ಬುಟ್ಟಿಗೆ ಹಾಕಿಯಾರು. ಕಾರಣ ಇದು ಕಲಸುಮೇಲೋಗರದಂತೆಯೇ ಅವರಿಗೆ ಕಂಡೀತು.

ಹೋಗಲಿ, ರಾಜಕೀಯ, ಸಾಂಸ್ಕೃತಿಕ, ಮೌಲಿಕ ಈ ಮೂರರಲ್ಲಿ ಯಾವುದೋ ಒಂದನ್ನು ಕುರಿತು ಮಾತ್ರ ಬರೆದರೇನೇ ಸಾಕಲ್ಲ! ಅದು ತಾನೇ ಸಂಪಾದಕರ ಅಭಿಪ್ರಾಯ? ಅದು ತಿಳಿಯದೆ ಒಟ್ಟು ಕಲಸಿಕೊಂಡ ನನ್ನ ಮಿದುಳಿಗೆ ಏನು ಹೇಳಲಿ?

ನನ್ನೊಳಗೆ ನಾನೇ ಮುಗುಳು ನಗುತ್ತ ರಾಜಕೀಯ ಮಾತ್ರವನ್ನೇ ಬರೆಯೋಣವೆಂದುಕೊಂಡೆ:

ಅದೇ ಚುನಾವಣೆ, ಹೊಸ ಮಂತ್ರಿಸಭೆ, ಅದನ್ನು ಉರುಳಿಸಲು ಎದುರುಪಕ್ಷಗಳ ಒಳ ಪ್ರಯತ್ನ—ಹೊಸ ಪ್ರಯತ್ನಗಳು; ಐದೈದು ವರ್ಷಗಳ ಭಾರೀ ಭಾರೀ ಯೋಜನೆಗಳು; ಆಕಾಶಗೋಪುರಗಳು; ಅದಕ್ಕೆ ಬೇಕಾದ ಕೋಟಿ ಕೋಟಿಗಳು, ಆರ್ಥಿಕ ಮಂತ್ರಿ ಪುಂಗಾವರ ಬಜೆಟ್ ಸಮರ್ಪಣೆ, ಯಾವ ಸಂಧಿಗೆ ತೆರಿಗೆ ಬಿದ್ದಿಲ್ಲವೆಂಬ ಸರ್ಚ್‌ಲೈಟಿನ ಹುಡುಕಾಟ; ಒಂದಾಗೇ ಹೊಸ ಹೊಸ ತೆರಿಗೆಗಳು, ಬೆಲೆಗಳ ಕಸರತ್ ಪಟ್ಟು, ಆಕಾಶದ ಬ್ಯಾಲೆನ್ಸ್, ಕಾಳಸಂತೆಯ ಬಧೀರ ಪ್ರೇಕ್ಷಕರ ಕೈಚಪ್ಪಳೆ, ಕಂಟ್ರಾಕ್ಟುದಾರರ ಕೊಂಡಾಟ, ಲಂಚ ಇನಾಮುಗಳ ಪರಿಮಳೀಯ ಸುಳಿದಾಟ, ಪಾಮರ ಪ್ರಜೆಗಳ ಗೋಳಾಟ, ಸಂಪು, ಮುಷ್ಕರ, ಬಲಾತ್ಕಾರ, ಗೋಲೀಬಾರು, ಸಾವು, ರೋದನೆ......ಛೀ ಛೀ! ಛೀ ಛೀ! ರಾಜಕೀಯ ಲೇಖನ ಬರೀ ಬೀಭತ್ಸ! ಅಶೋಕನು ನೋಡಿದ ಯುದ್ಧ ಭೂಮಿಯ ಹಾಗೆ! ಅಯ್ಯೋ! ಇಂಥಾ ರಾಜಕೀಯ ಲೇಖನ ಓದಿದ ಪ್ರತಿಯೊಬ್ಬನೂ ಅಶೋಕನ ಹಾಗೆಯೇ ವೈರಾಗ್ಯಭಾವ ತಾಳಿ—ಅಶೋಕನೇನೋ ಮಹಾರಾಜನಾದುದರಿಂದ ಬೇಕಾದಷ್ಟು ಸಂಪತ್ತಿತ್ತು. ಧರ್ಮಪ್ರಚಾರ ಮಾಡಿದ, ಬೋಧನೆಗಳ ಕಂಬಗಳನ್ನು ನೆಟ್ಟ ಒಳ್ಳೆ ಹೆಸರು ಪಡೆದ. ಆದರೆ ಈ ಬಡಪಾಯಿ ಪ್ರಜೆಗಳು ವೈರಾಗ್ಯಭಾವದಿಂದ ಕಾಡುಗಳನ್ನು ಹುಡುಕುತ್ತಾ, ಭಾರತ ದೇಶದಲ್ಲೆಲ್ಲೂ ಅಂಥಾ ವನಸಂಪದವುಳ್ಳ ಕಾಡುಗಳನ್ನೂ ಕಾಣದೆ ತಿರುಗಿ ತಿರುಗಿ ಹಸಿದು ಕಂಗಾಲಾಗಿ ಎಲ್ಲಾದರೂ ಸುಡುಗಾಡಿನ ಹತ್ತಿರವಿರುವ ಪಾಳು ಬಾವಿಗೆ ಬೀಳಬೇಕಾದೀತು. ಪಾಪ ಪಾಪ! ಬೇಡವೇ ಬೇಡ, ಈ ರಾಜಕೀಯ ಲೇಖನಕ್ಕೂ ನನಗೂ ಬಹಳ ದೂರ.

ಹೋಗಲಿ, ಸಾಂಸ್ಕೃತಿಕ ಲೇಖನವನ್ನು ಬರೆಯಬಹುದಲ್ಲ, ಜಮ್ಮಂತಿರುತ್ತೆ. ಹಾಯಾಗಿರುತ್ತೆ. ಬಹಳ ಗೌರವದ ಸಭ್ಯ ವಿಷಯ. ಅಲ್ಲವೇ ಮತ್ತೆ? ಭಾರತ ದೇಶದ ಸಾಂಸ್ಕೃತಿ ಎಂದರೇನು ಸಾಮಾನ್ಯವೆ? ನಮ್ಮದೇ ಒಂದು ಸಾಂಸ್ಕೃತಿ ಹಿಂದೂ ಸಂಸ್ಕೃತಿ. ಇದರೊಳಗೆ ಒಳ್ಳೊಳ್ಳೇ ರಾಜಪಥದಂತಹ ಮತಗಳಿವೆ; ಧರ್ಮಗಳಿವೆ; ನೀತಿಗಳಿವೆ, ನಿಯಮಗಳಿವೆ, ಕಲೆ, ಸಾಂಪ್ರದಾಯ, ಹೀಗೆ ಪ್ರತಿಯೊಂದೂ ಸಾಂಸ್ಕೃತಿಕವಾದುವುಗಳೇ.

ಎಲ್ಲ ನಿಜ. ಇದನ್ನು ಯಾವ ವಾಚಕನಿಗೇ ಅಂತ ಬರೆಯಬೇಕಪ್ಪಾ? ಬರೆಯುವುದಾದರೆ ಆಧುನಿಕ ಸಂಸ್ಕೃತಿಯನ್ನು ಕುರಿತೇ ಬರೆಯಬೇಕಾಗಿದೆ. ಏಕೆಂದರೆ ಮತ ಧರ್ಮ ನಿತ್ಯ ಕರ್ಮಾನುಷ್ಠಾನಗಳೆಲ್ಲ ಹಳೆಯ ಗೊಡ್ಡುಗಳ ಸಂಸ್ಕೃತಿಯೆಂದು ಹೇಳುತ್ತಾರೆ ಆಧುನಿಕರು. ಆಧುನಿಕ ಜೀವನದಲ್ಲಿ ಎದ್ದು ಕಾಣುವಂಥಾದ್ದೆಂದರೆ ಕಾರ್ಮಿಕ ಜೀವನ. ಕೃಷಿಕ ಜೀವನವೇ ಮುಖ್ಯವೆನಿಸಿದ ಗ್ರಾಮಗಳಲ್ಲಿ ಕೂಡಾ ಕಾರ್ಮಿಕ ಜೀವನದ ಘೋರಣೆಯೇ ತಲೆ ಹಾಕಿ ಬಿಟ್ಟಿದೆ.

ಹಾಗಾದರೆ ಕಾರ್ಮಿಕರ ಕ್ಷೇತ್ರವೆನಿಸಿದ ನಗರಗಳಲ್ಲಿ ಒಂದು ಸಂಸ್ಕೃತಿ ಉಂಟಲ್ಲ, ನಾಗರಿಕತೇ ಅಂತ? ಅದನ್ನು ಕುರಿತೇ ಬರೆದರೆ?.......

ಅಯ್ಯೋ! ಅಲ್ಲಿಯ ಕಾರ್ಮಿಕರಿಗಂತೂ ದಿನ ದಿನಾ ಬದಲಾವಣೆಯಾಗುತ್ತಿರುವ ಬೆಲೆಯೇರಿಕೆಯ ಶಕ್ತಿಯೊಂದಿಗೆ ಎಳೆದಾಡಿಕೊಳ್ಳುವುದಕ್ಕೇ ಸರಿ ಹೋಯ್ತು ಕಲ್ಲಿದೆ ಸಂಸ್ಕಾರವನ್ನು ಕುಂತು ಅವರೇನು ಕಂಡಯ್ಯ? ಅದನ್ನು ನೋಡಬೇಕಾದರೆ ಅಲ್ಲಿಯ ತುಸು ಶ್ರೀಮಾನ್‌ಗಳಾದ ನಾಗರಿಕ ಸ್ಕೂಟರ್ ವಾಹಕರನ್ನೂ, ಬಹು ಶ್ರೀಮಂತರಾದ ಕಾರು ದಾರಿಗರನ್ನೂ ನೋಡಬೇಕು; ಅವರೊಳಗಿನ ತರಗತಿಗಳಿಗನುಸಾರವಾಗಿ ಅವರವರ ಸಾಂಸ್ಕೃತಿಕತೆಯನ್ನು ನೋಡಬೇಕು.

ಪಾದಚಾರಿಗಳೂ, ಬತ್ತೀ ಪಾತ್ರಧಾರಿಗಳೂ, ಸೈಕಲ್ ಸವಾರರು ಸಣ್ಣ ಪುಟ್ಟ, ಸುಮಾರಿನ, ತುಸುದೊಡ್ಡ ನಾಗರಿಕರು ಪಾಪ! ಅವರನ್ನೂ ಅವರ ಪಾಡಿಗೆ ಬಿಟ್ಟು, ಆಫೀಸರರೆನಿಸತಕ್ಕಂತವರಾದ ಸ್ಕೂಟರ್ ನಾಗರಿಕರು, ತಮ್ಮಸಿಂಗಾರದ

(ಇಪ್ಪತ್ತಮೂರನೇ ಪುಟ ನೋಡಿರಿ)

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ತ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಶ್ರೀ ಯು. ನಾ. ಉಡುಪ

ನಮಸ್ಕಾರ - ಅದರ ಮಹತ್ವ

ನಮಸ್ಕಾರವೊಂದು ಶಾಸ್ತ್ರ, ಜತೆಗೆ ಶಸ್ತ್ರವಾಗಲೂ ಬಹುದು. ಅಧಿಕಾರಿ ವರ್ಗಕ್ಕೆ ಲಂಚಕೊಟ್ಟು ಸ್ವರಾಜ್ಯ ಯುಗವನ್ನು ನಿರ್ಮಿಸುವುದಕ್ಕಿಂತ ಧರ್ಮಬಾಹಿರವಲ್ಲದ ನಮಸ್ಕಾರ ತೆರುವುದು ಎಷ್ಟೋ ಲೇಸು. ಅದಕ್ಕಾಗಿ 'ನಮಸ್ಕಾರ—ಅದರ ಮಹತ್ವ'ವನ್ನು ಮೊದಲು ತಿಳಿದುಕೊಳ್ಳಿರಿ.

'ನಮಸ್ಕಾರ ಸ್ವಾಮಿ!' ಇದು ಶಿಷ್ಟ ಸಂಪ್ರದಾಯವನ್ನು ಬಲ್ಲವರ ಮಾತಿನ ಹಿನ್ನೆಲೆ. ಮಾತು ಬಲ್ಲ ವ್ಯವಹಾರಜ್ಞರೆಲ್ಲಾ ನಮಸ್ಕಾರಗಳ ಪ್ರಯೋಗೋಪಸಂಹಾರದಲ್ಲಿ ಪಾರಂಗತರಿರಲೇಬೇಕು. ಇಂತಹರೂ ವಾರಿಗಳು ನಮಸ್ಕಾರದಿಂದಲೇ ವಜ್ರಹೃದಯವನ್ನು ಕುಸುಮಕೋಮಲವಾಗಿಯೂ ಕುಸುಮ ಹೃದಯವನ್ನು ತಂಪಿನ ಒಸರಾಗಿಯೂ ರೂಪಾಂತರಿಸಬಲ್ಲರು. ಇಂದಿನ ತರುಣ ಜನಾಂಗವು ನಮಸ್ಕಾರದ ಹಿರಿಮೆಯನ್ನರಿಯದೆ—ಅದರ ವಿಶ್ವರೂಪದ ದಿವ್ಯಶಕ್ತಿಯನ್ನು ಅರ್ಥಮಾಡಿಕೊಳ್ಳಲಾರದೆ ಉದ್ಯೋಗ ಸಮಸ್ಯೆಯಲ್ಲಿ ನಿರಾಶವಾಗುತ್ತಿದೆ! ನಮಸ್ಕಾರವು ನಿರುದ್ಯೋಗಿಗೆ ಉದ್ಯೋಗ ತರಬಲ್ಲುದು; ಉದ್ಯೋಗಿಗೆ ಮೇಲಧಿಕಾರಿಗಳಿಂದ ಮನ್ನಣೆ ದೊರಕಿಸಿ ಕ್ರಮೇಣ "ಪ್ರಮೋಶನ್" ಕೊಡಬಲ್ಲುದು. ಪ್ರಯಾಣಿಕರಿಗೆ ಬಸ್ಸು ಕಂಪೆನಿಯ 'ಕ್ಲಾರ್ಕು'ಗಳಿಂದ ಸರಾಗವಾಗಿ ಟಿಕೇಟು ಕೊಡಿಸಬಲ್ಲುದು. ವಿದ್ಯಾರ್ಥಿಗಳು ಇದರ ಮಹದಾಶ್ರಯದಿಂದಲೇ ಉಪಾಧ್ಯಾಯರ ಹೃದಯಹಾರಿ ಶಿಷ್ಯರಾಗಬಲ್ಲರು. ವಿನಯಕ್ಕೆ ನಮಸ್ಕಾರವೇ ಉತ್ತಮ ಭೂಷಣ, ಇಂದಿನ ಜಗತ್ತಿನ ಏರು ತಗ್ಗುಗಳನ್ನು ವಿನಯಪೂರ್ಣ ಹತೋಟಿಗೆ ತರಬಲ್ಲುದು. ಮನುಷ್ಯ ಜೀವನದ ಅಧಿಕ ಇಳಿತ ಭರತಗಳು- ಅಶಾಂತಿ ಪ್ರಮೋದಗಳು ನಮಸ್ಕಾರದ ವಿಮುಖತೆಯ ಮತ್ತು ಪ್ರಸನ್ನತೆಯ ಪ್ರಭಾವ! ಹಾರ್ದಿಕ ನಮಸ್ಕಾರಗಳು ಶುಷ್ಕ ಹೃದಯದಿಂದಲೂ ಪ್ರೇಮದ ಬುಗ್ಗೆಯನ್ನು ಹೊರಡಿಸಿ, ದಾನವ ಭೂಮಿಯಲ್ಲಿ ದೇವತ್ವದ ರೇಖೆಗಳನ್ನು ಮಿಂಚಿಸಬಲ್ಲವು. ಆದಕ್ಕಾಗಿಯೇ ಸಂಭಾಷಣೆಯ ಆದಿ ಅಂತ್ಯವನ್ನು ನಮಸ್ಕಾರದಿಂದ ಆಕರ್ಷಕವಾಗಿ ಮಾಡಿಕೊಳ್ಳಬೇಕೆನ್ನುವುದು. ನಮಸ್ಕಾರವೇ, ಪುರಾಣ ಕಾಲದ ಸಮ್ಮೋಹನಾಸ್ತ್ರವೇ ನೀನಾಗಿ ಅವತರಿಸಿರಬಹುದೇ? ವಾನರರೆಲ್ಲಾ ಬಿಳಿ ಜನರಾಗಿ, ಇಲ್ವಲ ವಾತಾಪಿಗಳು ನೀರುಳ್ಳಿ ಬೆಳ್ಳುಳ್ಳಿಗಳಾಗಿ ಅವತರಿಸಿರುವಾಗ ನೀನು ನಮಸ್ಕಾರವಾಗಿ ಏಕೆ ಅವತರಿಸಿರಬಾರದು? ದ್ವಾಪರಯುಗದಲ್ಲಿ ನೀನು ಅವತರಿಸಿದರೆ ಉತ್ತರ ಗೋಗ್ರಹಣ ಕಾಲದಲ್ಲಿ ಅರ್ಜುನನು ನಿನ್ನನ್ನೇ ಆಶ್ರಯಿಸುತ್ತಿದ್ದನು! ಸಂಧಾನಕ್ಕೆ ಹಸ್ತಿನಾ ನಗರಕ್ಕೆ ತೆರಳಿದ ಶ್ರೀ ಕೃಷ್ಣನು ಸಂಗ್ರಾಮವನ್ನೇ ನಿರ್ಧರಿಸಿ ಬರುತ್ತಿರಲಿಲ್ಲ! ನಿನ್ನ ಪ್ರಸನ್ನತೆಯ ಮರ್ಮವನ್ನು ತಿಳಿದಿದ್ದರೆ ಪ್ರಥಮ- ದ್ವಿತೀಯ ಜಾಗತಿಕ ಯುದ್ಧವೇ ಆಗುತ್ತಿರಲಿಲ್ಲ! ಗುಡ್ಡದಂತಹ ತಲೆಹೊರೆಯನ್ನೂ ಕಡ್ಡಿಯಂತೆ ತೇಲಿಸಿಬಿಡುವ ನಿನಗೆ ಅನಂತ ವಂದನೆಗಳು!

ನಮಸ್ಕಾರವು ಶಾಸ್ತ್ರವೇನೋ ಹೌದು; ಶಸ್ತ್ರವೂ ಹೌದೆನ್ನುವರು. ಶಾಸ್ತ್ರದಲ್ಲಿ ಭಿನ್ನ ಪಂಥಗಳಿದ್ದಂತೆ ಇದರಲ್ಲಿ ಹಲವು ಪಥಗಳಿವೆ. 'ನಮಸ್ಕಾರ ಸಾರ್' ಎನ್ನುವ ಇಂದಿನ ವಿದ್ಯಾರ್ಥಿಗಳು ಎದೆಯ ಮುಂದುಗಡೆ ಒಂದು ಹಸ್ತವನ್ನು ಬಾಗಿಸುವರು. ಇದಕ್ಕೆ ಹರಕೆಯ ನಮಸ್ಕಾರವೆನ್ನುತ್ತಾರೆ. ವಿದ್ಯಾರ್ಥಿಯು ಪುರಾಣ ಸಂಪ್ರದಾಯವಾದಿಯಾಗಿದ್ದರೆ ಎರಡೂ ಹಸ್ತಗಳನ್ನು ಹುಬ್ಬಿನ ನಡುವೆ ಅಥವಾ ಹೃದಯದ ಸಾನ್ನಿಧ್ಯದಲ್ಲಿ ಜೋಡಿಸುವನು. ಇದೇ ಸದ್ವಿನಯದ ಉತ್ತಮ ನಮಸ್ಕಾರ. ಮನುಷ್ಯನು ನಾಗರಿಕತೆಯ ಹಂತಕ್ಕೇರಿದ ಮೇಲೆಯೇ ಈ ಬಗೆಯ ನಮಸ್ಕಾರಕ್ಕೆ ಆರಂಭಿಸಿ, ಇಂದಿನ ನವ (?) ನಾಗರಿಕತೆಯ ಯುಗದಲ್ಲಿ ಈ ಪದ್ಧತಿಯನ್ನು ಮರೆಯುತ್ತಿದ್ದಾನೆ. ಸರಕಾರಿ ನೌಕರನಾಗಿದ್ದು ಅಧಿಕಾರಿಗಳಿಂದ ಉಪೇಕ್ಷಿತನಾಗುವ ಸಂಭವವಿದ್ದರೆ ಜೋಡಿಸಿದ ಹಸ್ತದೊಡನೆ ತಲೆಯೂ ತಗ್ಗಬೇಕಾಗುವುದು. ಇದನ್ನು ದೀನದಲಿತರ ನಮಸ್ಕಾರವೆನ್ನುತ್ತಾರೆ. ಈ ನಮಸ್ಕಾರವೀಯುವಲ್ಲಿ 'ಅಹಂ' ಚಿಹ್ನೆಯೂ ಕಾಣಿಸುವ ಸಂಭವ ಕಡಿಮೆ. ದರಿದ್ರನು ಧನಿಕನ ಮುಂದೆ ಇರುವ ವರೆಗೆ ಈ ನಟನೆಯನ್ನು ನಡೆಸಿದರೆ ಅವನ ಸಂಪೂರ್ಣ ಕೃಪೆಗೆ ಪಾತ್ರನಾಗಬಹುದು. ತಾವು ಸುಧಾರಕ ಪಂಥಕ್ಕೆ ಸೇರಿದವರೆನ್ನಿಸಬೇಕಾದರೆ 'ನಮಸ್ತೆ' ಅಥವಾ 'ರಾಮ್‌ರಾಮ್' ಎಂದರಾಯಿತು. ಇದು ಸುಧಾರಕರ ನಮಸ್ಕಾರ. ಆಂಗ್ಲ ಪದ್ಧತಿಯವರೆನ್ನಿಸಬೇಕಾದರೆ 'ಗುಡ್ ಮೋರ್ನಿಂಗ್' 'ಗುಡ್ ಈವ್ನಿಂಗ್' ಎನ್ನಬೇಕು. ಇದು ಆಂಗ್ಲರ ನಮಸ್ಕಾರ. ಹೀಗೆನ್ನುವವರು ಪರಕೀಯರ ಗುಲಾಮಚಿಹ್ನೆ ತಮ್ಮಲ್ಲಿ ಕಾಣಿಸುವುದೆಂದು ಭಾವಿಸದೆ 'ಫೆನವ್ಯಜರ್'ಯವರೆಂದು ತಿಳಿದುಕೊಳ್ಳುತ್ತಾರೆ. 'ಸಲಾಂ' ಎನ್ನುವವರೆಲ್ಲಾ ಮುಸ್ಲಿಂ ಪದ್ಧತಿಗೆ ವಿಕ್ರಯವಾದವರು. ಸನಾತನ ಧರ್ಮಪ್ರಿಯರು ದೇವರಿಗೆ ಸಾಷ್ಟಾಂಗ ಅಥವಾ ದಂಡವತ್ ಪ್ರಣಾಮ ಮಾಡುತ್ತಾರೆ. ಇದು ಗೌರವದ ಪರಮಾವಧಿಯನ್ನು ತೋರಿಸುವುದು. ತಂದೆತಾಯಿಗಳಿಗೂ ಇದೇ ನಮಸ್ಕಾರ ಸ

(ಇಪ್ಪತ್ತೆರಡನೇ ಪುಟ ನೋಡಿರಿ)

Buy BINNY FABRICS
at Controlled rates
at 5 Star
(Fully air conditioned)
EXCLUSIVELY FOR
BINNY's Textiles
Hampankatta MANGALORE-1
Props. Chandarana Bros.
(Estd. 1935)
BINNY - a great name in Textiles.

SRINIVAS BROTHERS
Phone: 3449 CAR STREET Grams: ACTIVE
Post Box No. 130 — MANGALORE - 1.
Distributors for Mysore State for
SESHASAYEE PAPER & BOARDS LTD.,
PALLIPALAYAM (Salem Dist.)
Agents for South Kanara for
• BAMBOO BRAND PAPERS
• J. B. A. PRINTING INKS
• JAYKAY TYPEWRITERS
• BRIL WRITING INKS

ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಕೌಶಿಕ ರಾಮಾಯಣ

(ಬತ್ತಲೇಶ್ವರನ ಕೃತಿ)

ಕನ್ನಡದಲ್ಲಿಯೂ ಒಂದಲ್ಲ, ಹಲವು ರಾಮಾಯಣಗಳು ರಚಿತವಾಗಿವೆ. ಕೆಲವಾದರೂ ಅಚ್ಚಿನ ಮನೆ ಕಂಡಿವೆ. ಬತ್ತಲೇಶ್ವರನಿಂದ ರಚಿತವಾದ ಕೌಶಿಕ ರಾಮಾಯಣ ಇತ್ತೀಚೆಗೆ ಬೆಳಕು ಕಂಡ, ರಾಮಕಥೆ. ಇದರ ಸರಸತೆಯ ಪರಿಚಯದಿಂದ ಕೃತಿ ಅಧ್ಯಯನದ ಜಿಜ್ಞಾಸೆ ಬೆಳೆಯಲು ಅನುಕೂಲವಾಗುವುದು.

ಕನ್ನಡ ಸಾಹಿತ್ಯ ಭಾಂಡಾರದಲ್ಲಿ ಅನೇಕ ಪುರಾತನ ನೂತನ ಕೃತಿಗಳು ಸೇರುಗೊಂಡಿವೆ. ಕೆಲವು ಕೃತಿಗಳು ಪೂರ್ಣಾಂಶವಾಗಿ ಮುದ್ರಿತವಾಗಿ ಜನರಿಗೆಲ್ಲಾ ಓದಲು ಅನುವಾಗಿವೆ. ಹಲವು ಕೃತಿಗಳು ಇನ್ನೂ ತಾಳೆಯೋಲೆ—ಕಾಗದಗಳಲ್ಲಿ ಬರೆಯಲ್ಪಟ್ಟು ಮುದ್ರಣಾಲಯವನ್ನು ಹೊಕ್ಕಿಲ್ಲ! ಒಮ್ಮೆ ಅಚ್ಚಾದ ಕೃತಿಗಳ ಪುನಃ ಮುದ್ರಣ ಹಾಗೂ ಸಂಗ್ರಹರೂಪ ಪ್ರಕಟನೆಗಳು ಆಗಾಗ ನಡೆಯುತ್ತಿವೆಯಾದರೂ, ಮೂಲೆಗುಂಪಾದುವನ್ನು ಒಮ್ಮೆ ಕಣ್ಣೆತ್ತಿ ನೋಡುವವರಾಗಲೀ, ಕಿವಿಯಾರೆ ಕೇಳುವವರಾಗಲೀ, ಬಾಯಾರೆ ಕೊಂಡಾಡುವವರಾಗಲೀ ವಿರಳವೆಂದರೆ ತಪ್ಪಲ್ಲ. ಈಗ ಮುದ್ರಣಕಾರರು—ಸಂಪಾದಕರು—ಲೇಖಕರು ಯಾರು ಎಂಬ ದಿಟ್ಟಿಯನ್ನೇ ಅವಲಂಬಿಸಿ ಜನರು ಗ್ರಂಥವನ್ನು ಓದುವರಲ್ಲದೆ, ಗ್ರಂಥದ ಉತ್ತಮಿಕೆಯನ್ನು ಗ್ರಹಿಸಿಕೊಳ್ಳುವಂತೆಳಸುವುದಿಲ್ಲ! ಇದು ಸಾಹಿತ್ಯ ಕ್ಷೇತ್ರದ ದೊಡ್ಡ ತಡೆಯಾಗಿ ಪರಿಣಮಿಸದಂತೆ, ಲೌಕಿಕ ಜಾಗೃತಿ ಹುಟ್ಟಬೇಕು. ಈ ಪ್ರಕೃತ, ಕೌಶಿಕರಾಮಾಯಣ ಬತ್ತಲೇಶ್ವರ ಕವಿ ರಚಿತವು, ಶ್ರೀ ಶಿವರಾಮ ಕಾರಂತರು ಪ್ರಕಟಿಸಿದವರು. ಉಭಯ ವಿಧದಲ್ಲೂ ಈ ಕೃತಿ ವಾಚಕರಿಗೆ ರುಚಿಸತಕ್ಕುದಾಗಿದೆ. ಇಲ್ಲಿ ಅದರ ಕೆಲವು ಸವಿಗಟ್ಟಿನ ತುಣುಕುಗಳನ್ನು ಬರೆಯಲೆಳಸಿದುದು; ಇದರಿಂದ ಮೂಲಿಕ ಕೃತಿಯ ನಿರೀಕ್ಷಣೆಗೆ ವಾಚಕರು ಗಮನಿಸಬಹುದೆಂದು ಕಾಣುತ್ತದೆ.

ಈ ಕವಿಯು ಸ್ತುತಿಸಿದ, ಸಹ್ಯಾದ್ರಿಯಲ್ಲಿರುವ ಭೈರವೇಶ್ವರ ದೇವಳವು (ಕೇವಲ ಶಿಲೆಯ ನೆಲೆಯೂ) ಉತ್ತರ ಕನ್ನಡ ಜಿಲ್ಲೆಯ ಕುಮಟ—ಸಿರಸಿಗಳ ಸಮೀಪದ 'ಯಾಣ'ವೆಂದು ಸೂಚಿಸಿ, ಆ ನೆಲೆಯ ಚಿತ್ರವು ಮುದ್ರಿಸಲಾಗಿದೆ. 'ಯಾಣ'ವೆಂದರೇನೆಂದು ತುಸ ಚರ್ಚಿಸಿದೆ, ಅಲ್ಲಿನ ಐತಿಹ್ಯ ವಿಚಾರಣೀಯಗಳಾಗಿವೆ.

ಈ ಕೃತಿಯು ಕಲಾವಿಚಾರವಾಗಿ ಸೂಚಿಸಿದ ಪದ್ಯಾಂಶವು ಪುರಂದರದಾಸರ ಕೃತಿಯಲ್ಲಿದೆ, ಇಸ್ವಿ 1638ರ ಪ್ರತಿಯೂ ಸಿಕ್ಕಿದೆ. ಆದುದರಿಂದ ಇದರ ಕಾಲ ಇಸ್ವಿ 1500ರ ಪೂರ್ವಕ್ಕೆ(?) ಸರಿಯಿಸಬಹುದೆಂದಿದೆ. ಪರಂತು, ಸೀತಾ ವಿವಾಹದ ಘಟ್ಟದಲ್ಲಿ (ಅ—36, 37)-ರಾವಣನನ್ನು ಕಂಡು ಅಲ್ಲಿದ್ದವರೆಲ್ಲಾ ಎದ್ದು ಬಂದರೆಂದರು, ರಾವಣನೊಬ್ಬನು ಎದ್ದು ಬಂದಿಲ್ಲ; ಆಗ ಶ್ರೀ ರಾಮನು 'ಮುಳಿದು ಚರಣದಲ್ಲೊತ್ತಿದನು ಧರೆಯ! ಆಗ 'ಎರಗಿದುದು ಮಣಿಸೀಠ ರಕ್ಕಸನೊರಗಿ ಕೆಡೆದಂದದಲ್ಲಿ ಬಿದ್ದನು' ಎಂದುದನ್ನೂ ನೋಡುವೆವು. ಕುಮಾರವ್ಯಾಸನು ತನ್ನ ಭಾರತದಲ್ಲಿ—'ಕೌರವನು ತನ್ನೆಡೆಗೆ ಬಂದ ಕೃಷ್ಣನನ್ನು ಸನ್ಮಾನಿಸಲು ಏಳದಾಗ, ಕೃಷ್ಣನು ಚರಣದಿಂದ ನೆಲಕ್ಕೆ ಒತ್ತಿದ್ದನೆಂದೂ, ಆಗ ಕೌರವನು ಮಣಿಪೀಠ (ಸಿಂಹಾಸನ)ದಿಂದ ನೆಲಕ್ಕುರುಳಿದನೆಂದೂ ಹೇಳಿದ್ದಾನೆ. ಈ ಬತ್ತಲೇಶ್ವರ ಕವಿಯು ಕುಮಾರವ್ಯಾಸನ ಕೃತಿಯನ್ನು ಅನುಸರಿಸಿರಬಹುದೆಂದು ಕಾಣುತ್ತದೆ. "ಕುಮಾರವ್ಯಾಸನು (ಇಸ್ವಿ 1250—1300) ಹದಿಮೂರನೆಯ ಶತಕದ ಉತ್ತರಾರ್ಧದಲ್ಲಿ ಇದ್ದನೆಂದು ಇತ್ಯರ್ಥಿಸಬಹುದು" (ಸಾಹಿತ್ಯದ ಹಿನ್ನೆಲೆ ಪುಟ,36—41) ಈ ಮೇರೆಗೆ ಈ ಕವಿಯು ಇ. 1300 ರಿಂದ ಈಚೆಗೆ, ಇ. 1600ರ ಪೂರ್ವ ಇದ್ದಿರಬಹುದೆಂದು ತಿಳಿಯಬೇಕು.

ಈ ಕವಿಯ ಹೆಸರು ಬತ್ತಲೇಶ್ವರನೆಂದು. ಇದರಲ್ಲಿ ಇರುವ ಮೈರಾವಣ(ಐರಾವಣ) ಕಾಳಗದಲ್ಲಿ (39—40ನೆಯ ಸಂಧಿಗಳಲ್ಲಿ) ಬಂದಿದೆ; ಬೇರೆಡೆ ಬಂದಿಲ್ಲವಾದರೂ ಈ ಕೃತಿಯಲ್ಲಿ ಈ ಘಟ್ಟ ಸೇರಿದ್ದುದರಿಂದ ಇದನ್ನೇ ಕವಿನಾಮವೆಂದು ನಾವು ಅಂಗೀಕರಿಸಬೇಕು. ಕವಿನಾಮದ ನಿರುಕ್ತದ ಬಗ್ಗೆ ನನಗೆ ಅಷ್ಟೊಂದು ನಿರ್ಧಾರಕ್ಕೆಡೆಯಿಲ್ಲ, ಪ್ರಾಚೀನ ನಾಮಗಳಲ್ಲಿ ಕೆಲವು ಹೀಗೆ ಗಡಚಾಗಿವೆ. ಈ ಐರಾವಣ ಕಾಳಗವೂ ಕುಮಾರ ವಾಲ್ಮೀಕಿ ರಚಿತ ರಾಮಾಯಣದಲ್ಲಿದೆ (ಕೆಲವು ಪ್ರತಿಗಳಲ್ಲಿ ಒಟ್ಟಿಗೆ ಬರೆದಿದೆ, ಕೆಲವು ಬೇರೆ ಪ್ರತಿಗಳಲ್ಲಿದೆ). ಅವನು ಐರಾವತ ಕಾಳಗದಲ್ಲಿ ಶೃಂಗೇರಿಯ 'ಪರಮ ಹಂಸ ವಿದ್ಯಾಶಂಕರ'ರನ್ನು ಸ್ಮರಿಸಿದ್ದುದರಿಂದ ಹದಿನಾಲ್ಕನೆಯ ಶತಕದವನೆಂದೇ ತಿಳಿಯುತ್ತದೆ. (ಸಾಹಿತ್ಯದ ಹಿನ್ನೆಲೆ. ಪುಟ 39—40) ಅರ್ಥಾತ್, ಈ ಮೇಲಿಂದ ಕಾಲಮಾನಕ್ಕೆ ಇದು ಪೋಷಕವಿದೆ.

ಇದರ ಕೆಲವು ಪ್ರತಿಯಲ್ಲಿರಬಹುದಾದ ಬೇರೆ ಘಟ್ಟಗಳು (ರುಂಡ ಭೈರವ, ಮೂಲಿಕಾಸುರನ ಕತೆಗಳು) ಇವನದಲ್ಲೆಂದು ಬಿಟ್ಟಿದ್ದಾರೆ. ಇವುಗಳ ಕರ್ತೃ ವಿಚಾರದಲ್ಲಿ ಬಲ್ಲವರು ಹೆಚ್ಚು ವಿವೇಚಿಸಬೇಕಾಗಿದೆ. ಇದೀಗಣ ಕೃತಿಯಲ್ಲಿ 44 ಸಂಧಿಗಳಿವೆ, 2550ಕ್ಕೂ ಮಿಕ್ಕಿ ಪದ್ಯಗಳಿವೆ,570 ಪುಟದಲ್ಲಿ ಅಚ್ಚಾಗಿದೆ. ರಮ್ಯ ಕಾಗದಗಳುಳ್ಳ ಈ ಪುಸ್ತಕಕ್ಕೆ ಈಗಿನ ಕಾಲದಂತೆ ಕೊಡುವ ಬೆಲೆ ಹೆಚ್ಚಾಗದು (ಹತ್ತು ರೂಪಾಯಿ). ಇಂತಹ ಸರಸ ಕೃತಿ ರತ್ನಗಳು ಕನ್ನಡ ಸಾಹಿತ್ಯ ಭಾಂಡಾರದಲ್ಲಿ ಒಮ್ಮೆಯಾದರೂ ಮುದ್ರಣಗೊಂಡು ರಾರಾಜಿಸುತ್ತಿವೆಯೆನ್ನಬಹುದು! ಇದರಲ್ಲಿಯ ಕೆಲವು ಸುರಸತೆಗಳೇನೆಂದು ಮಾತ್ರ ಇಲ್ಲಿ ಬರೆಯಲಿವೆ.

"ಹರಿಕಥಾ ಪರಮಾನ್ನ ಸಪ್ತ |
ಸ್ವರ ಸುವಾಚಿತ ಗಾನ ನವಘೃತ |
ವೆರಸಿದುವೆ ಗೀತಾಳಿ ಶಾಖ
ವ್ಯಂಜನಾದಿಗಳು ||
ಪರಿಮಳಿಸುವಿತಿಹಾಸ ಭಕ್ಷ್ಯವ |
ಸರಸ ಕವಿ ಬಡಿಸುವನು ಮುದದಲಿ |
ಕರೆಯಲಿಂದೆಡೆಯಾಯ್ತು ಉಂಬರೆ
ಬನ್ನಿ ಹಸಿದವರು ||"

ಇದು ಸರಸತೆಯ ರೂಪಕವೆಂದೆನ್ನಬಹುದು.

ಶ್ರೀ ರಾಮನಾಗಿ ಹರಿಯು ಅವತರಿಸುವ ಕಾರಣವಿದು:

"ಸಿರಿಯರಸ ನಾರದನ ಶಾಪವ |
ಧರಿಸಿ ನರವೇಷದಲಿ ನಟಿಸುವ |
ಪರಕಥಾಮೃತಗಳನು ಸುಜನರು
ಕೇಳಿ ಬಣ್ಣಿಸುವೆ ||"

'ಅದ್ಭುತ ರಾಮಾಯಣ'ದಲ್ಲೀ ಕತೆ ಹೇಳಿದೆ, ಇಲ್ಲಿಗೆ ಸಂದಿಸಿದ್ದು ಉಚಿತವಿದೆ. ದಶರಥನಿಗೆ ಮಕ್ಕಳಾಗಿಲ್ಲವೆಂಬುದರಿಂದ ಅದೆಷ್ಟು ಕಾಂತಿಹೀನವೆಂಬುದು ಹೇಳಿದೆ:

"ಹಂಸನಿಲ್ಲದ ಸರಸಿ, ಬಲು ವಿ |
ದ್ವಾಂಸರಿಲ್ಲದ ಸಭೆ, ಷಡಂಘ್ರಿಗೆ|
ಮಿಸಲೆನಿಸದ ಕಮಲ, ಸಂಭೃತವಿಲ್ಲದ
ಉದ್ಯಾನ ||
ಲಾಸವಿಲ್ಲದ ಗಾನ, ಪೀತ ಸು|
ವಾಸವಿಲ್ಲದ ತೊಡುಗೆಯಂತಾ |
ವಾಸ ನೆರೆಯದು ಮಕ್ಕಳಿಲ್ಲದೆ
ಭೂಪ ದಶರಥಗೆ||"

ದಶರಥನಿಗೆ ಋಷಿಶಾಪವೊದಗಿದ ಮೇಲೊಂದು ದಿನ ಸಭೆಗೆ ವಸಿಷ್ಠ ಬಂದಾಗ, ತನ್ನ ಸ್ವಪ್ನವರುಹುವನು:

"ಒಂದು ಕೋಡಿನ ಗೊರವನಿತ್ತನು
ನಾಲ್ಕು ಕಳಭಗಳ||
ಬಂಧಿಸಿದೆನರಮನೆಯೊಳೆನ್ನಕೆ |
ದಂದಶೂಕನು ಪಂಚಮುಖದಲಿ |
ತಿಂದುದಾಕ್ಷಣ ಭುಜದಿ ನೆತ್ತರು
ಸುರಿಯೆ ಕಣ್ದೆರೆದೆ."

ಇದಕ್ಕೆ 'ನಿನ್ನಲ್ಲಿ ಹರಿಯು ನಾಲ್ವರು ಮಕ್ಕಳಾಗಿ ಅವತರಿಸುವನೆಂಬ' ಒಂದು ಬಗೆ ಅರ್ಥ ಹೇಳಿದ್ದೆ, ಮಾತ್ತೊಂದು ಹೇಳಿಲ್ಲ!

ರಾಮನು "ಹುಡಿಯೂಟ"ವಾಡುವಾಗಲೊಂದು ಭೂತ ಹಿಡಿಯಿತು, "ನಾನು ಪಿಡಿದವ ಬ್ರಹ್ಮ ರಾಕ್ಷಸ ದಾನಗೊಡದಿರೆ ಬಿಡೆನು ತದ್ವಿಪ್ರನು ಶಾಪದಿ ಬಂದುದೀ ವಿಧಿ ಹಿಂದೆ ತನಗೆಂದ, ಏತರಿಂದು ಪಶಾಂತಿ ನಿನಗೆನೆ, ಭೂತಪತಿಗೆ ಶನಿಪ್ರದೋಷದಿ ಪೋತು ಸಾವಿರ ಬಿಲ್ವಪತ್ರಾರಾಧನದ ಫಲವ' ಕೊಟ್ಟರೆ ಬಿಡುವಂತೆನ್ನಲು, ಕೂಡಲೆ ಅದನ್ನೀಯಲು, ಅದು ಬಿಟ್ಟಿತಂತೆ! ಬಾಲಚೇಷ್ಟೆಯಲ್ಲಿ ಕೃಷ್ಣನು ಅದ್ಭುತನಾಗಿದ್ದಂತೆ, ರಾಮನ, ಪರಿಸರದಿಂದಹಾಗೆನ್ನಲಾಗುತ್ತಾನೆ.

"ಆಳಲುಮಿಗೆ ಮಾರೀಚ ತಾಪಸರೊಳಗೆ ಹಾರುವನಾಗಿ ಬೆರೆಯಲು' ಅವನಿಗೆ

(ಇಪ್ಪತ್ತೊಂದನೇ ಪುಟ ನೋಡಿರಿ)

for BEST TEAS
CONTACT
PUNJA & CO., MULKI
Phone No: Office: 26. Res. 36.
Dealers of:
Waterfall
Waverley
Rousdon Mullai
Sholayar
TEAS

Best Quality
TORCH BRAND
MANGALORE
TILES
MFRS:- PUNJA TILE WORKS - MANGALORE

ಡಾ। ಯು. ಕೃಷ್ಣ, ಮುನಿಯಾಲು.

ಕನಸು ಕಂಡ ಒಂದು ಸತ್ಯಕತೆ

ಕಂಡ ಕನಸು ಕೆಲವೊಮ್ಮೆ ವಿಚಿತ್ರವಾಗಿರುವುದೂ ಉಂಟು. ಕನಸಿನಲ್ಲಿ ಕಂಡ ಹೃದಯಸ್ಪರ್ಶಿ ಘಟನೆಯು ಸತ್ಯ ಘಟನೆಗಿಂತಲೂ ರೋಮಾಂಚಕವಿರುವುದೂ ಸತ್ಯಕ್ಕೆ ಹತ್ತಿರವಿರುವುದೂ ಉಂಟು. ಇಲ್ಲಿ ಡಾ| ಕೃಷ್ಣರು ಇಂತಹ ಒಂದು ಕತೆಯನ್ನು ನೇಯ್ದಿದ್ದಾರೆ.

ಊರಿಗೆ ಹೋಗದೆ ಬಹಳ ಕಾಲವಾಗಿತ್ತು! ಹುಟ್ಟೂರಿನ ಸಂಪರ್ಕವೇ ಕಳಚಿಕೊಂಡಂತಿತ್ತು. ಇಪ್ಪತ್ತೈದು ವರುಷಗಳಿಂದ ಜೀವನ ನಡೆಸಿದ ಊರು ಮುಂಚಿನ ಇಪ್ಪತ್ತೆರಡು ವರುಷ ಹುಟ್ಟಿ ಬಾಳಿದ ಊರಿನ ಮೋಹವನ್ನು ಒತ್ತಿ ಅಡಿಗಿಟ್ಟಿತ್ತು. ಹೆಂಡತಿ, ಮಕ್ಕಳು, ಸಂಸಾರ ಅದನ್ನು ನಡೆಸಿಕೊಂಡು ಹೋಗುವ ತ್ರಾಸ ಇದರಲ್ಲಿಯೇ ಸಮಯ ಕಳೆದು ಹೋಗುತಿದ್ದುದರಿಂದ ಊರ ಕಡೆಗಿನ ಸಂಪರ್ಕ ಇಟ್ಟುಕೊಳ್ಳಲು ಬಿಡುವೇ ಸಿಗುತಿದ್ದಿಲ್ಲ. ನೆನವಾದಾಗ ಅಂದಿನ ಗೆಳೆಯರು ಇಂದೂ ಅವರ ತಾರುಣ್ಯದ ರೀತಿಯಲ್ಲಿಯೇ ಮನಸ್ಸಿನಲ್ಲಿ ಮೂಡಿ ಹಳೆಯ ನೆನಪನ್ನು ಹೊಸತು ಮಾಡುತಿದ್ದರು. ಗೆಳೆಯ ಶ್ರೀನಿವಾಸನೊಡನೆ ಗುಡ್ಡದ ಮೇಲಿರುವ ಹಳೆಯ ದೂಪದ ಮರದ ಕೊಂಬೆಯಲ್ಲಿ ಕುಳಿತು ಅವನ ದೊಡ್ಡಪ್ಪನ ಶ್ರಾದ್ಧದ ಒಡೆಯನ್ನು ತಿನ್ನುತಿದ್ದಾಗ ಕಾಗೆಯೊಂದು ಹಾರಿ ಬಂದು ಒಡೆಯನ್ನು ಕೈಯಿಂದ ಕಿತ್ತುಕೊಂಡು ಹಾರಿದ ನೆನಪು, ಕೃಷ್ಣಪ್ಪನೊಡನೆ ತಾಳೆಯ ಬೊಂಡವನ್ನು ಕರಡ ತುಂಬಿದ ಲಚ್ಚಿಲಿನಲ್ಲಿ ಕುಳಿತು ಕೆತ್ತುತ್ತಿದ್ದಾಗ ಎಡೆಯಲ್ಲಿ ಬುಸುಗುಟ್ಟುತಿದ್ದ ಕನ್ನಡಿ ಹಾವನ್ನು ಕಂಡು ಜಿಗಿದ ಸ್ಮರಣೆ ಇವೆಲ್ಲ ಒಂದೊಂದಾಗಿ ಮನಸ್ಸಿನಲ್ಲಿ ಮೂಡಿ ಮಾಯವಾಗುತ್ತಿದ್ದುವು.

ದಿನವೆಲ್ಲ ದುಡಿಮೆಯಲ್ಲಿ ಕಳೆದು ರಾತ್ರಿ ವಿರಾಮವಾಗಿ ಕುಳಿತಾಗ ಭಾವನೆಗಳು ಸುರುಳಿ ಸುರುಳಿಯಾಗಿ ತಲೆಯಲ್ಲಿ ಸುತ್ತಿ ಜೀವನದುದ್ದಕ್ಕೂ ಕಳೆದು ಹೋದ ದಿನಗಳ ಮಾಲೆಯಲ್ಲಿ ಹಿಂದೆ ಮುಂದೆ ಓಡಾಡುತ್ತಿರುತ್ತದೆ. ಎಷ್ಟೋ ವೇಳೆ ಈ ಜೀವನಕ್ಕೇನರ್ಥ? ಏಕಾಗಿ ಇದೆ? ಎಂದೂ ಅನ್ನಿಸುವುದುಂಟು. ಯಾವುದನ್ನೋ ಅರ್ಥ ಮಾಡಿಕೊಳ್ಳುವುದಕ್ಕಾಗಿಯೇ ಈ ಜೀವನವಿದೆಯೇ? ಅದು ಯಾವುದರಿಂದ, ಹೇಗೆ ಮಾಡುವುದರಿಂದ ಸಾಧ್ಯ ಎಂದೆಲ್ಲ ಚಿಂತಿಸಿ ಮತ್ತೆ ಗೀತೆಯಲ್ಲಿಯ ಕರ್ಮಯೋಗದತ್ತ ಬುದ್ಧಿ ಹೊರಳಿಸಿ, ಅದೆಲ್ಲ ನನ್ನಂಥವರಿಗೆ ಎಷ್ಟು ಅರ್ಥವಾಗುತ್ತದೆಂಬ ಪ್ರಶ್ನೆ ನನಗೆ ನಾನೇ ಹಾಕಿಕೊಂಡು,ಫಲಾಪೇಕ್ಷೆಯನ್ನು ಹಚ್ಚಿಕೊಳ್ಳದೆ ಕರ್ಮ ಮಾಡುವುದೇ ಕರ್ಮಯೋಗವೆಂಬ ಭಾವನೆಗೆ ಬಂದು ಮತ್ತೂ ಏನೇನೋ ಯೋಚಿಸಿ ಅಲ್ಲಿಗೆ ನಿದ್ದೆ ಹೋದೆ!...

ಅಂದು ಹುಣ್ಣಿಮೆ ನಾನು ಊರಿಗೆ ಹೋದವ ಎಲ್ಲೆಲ್ಲೋ ಸುತ್ತುತ್ತ ನನ್ನ ಹಳೆಯ ಗೆಳೆಯನೊಬ್ಬ— ಶೀನ — ಅವನ ತಂದೆಯನ್ನು ಮಾತಾಡಿಸಲು ಹೋದೆ. ಆತ ಅಂಗಳದಲ್ಲಿ ನಿಂತು ಚೆಲ್ಲಿಕೊಂಡ ತಿಂಗಳ ಬೆಳಕನ್ನು ತಡೆಯಲು ನಿಂತ ತೆಂಗಿನ ಮರಗೆಳೆಡೆಯಿಂದ ಹರಿದು ಅಂಗಳಕ್ಕೆ ಸೋರಿದ ಬಿಳಿಯ ಬೆಳಕಿನ ರಾಶಿಯಲ್ಲಿ ಬಲೆಗೆ ಬೇಕಾದ ನಾರು ಹೆಣೆಯುತ್ತಿದ್ದ. ಎಳೆದು ಕಟ್ಟಿಕೊಂಡ ಬಿಳಿಯ ಕೂದಲಿನ ರಾಶಿಯೊಡನೆ ಸೋರಿ ಬಂದ ಬೆಳದಿಂಗಳು ಹಾಸ್ಯವಾಡುತಿತ್ತು; ಯಾರು ಹೆಚ್ಚು ಬಿಳಿ ಎಂದು! ಆ ಹಾಸ್ಯದಲ್ಲಿ ತಾನು ಸೇರಿಕೊಳ್ಳದೆ ಬಲಕಾಲೆತ್ತಿ ಎಡಕೈಯಲ್ಲಿ ಎತ್ತಿ ಹಿಡಿದ ನಾರಿನ ಚೆಂಡಿನಡಿಯಲ್ಲಿ ತಕ್ಕಲಿಯಂತೆ ತೂಗುತಿದ್ದ ನಾರಿನ ಮಧ್ಯವನ್ನು ಹಿಡಿದು ಎಳೆದು ಕಾಲಿಗೆ ಸಿಕ್ಕಿಕೊಂಡು ಮತ್ತೆ ತಕ್ಕಲಿಯನ್ನು ತಿರುಗಿಸುತ್ತಾ ತಲ್ಲೀನನಾಗಿ ಯಾವುದೋ ಒಂದು ಪ್ರಪಂಚದಲ್ಲಿ ಶ್ರದ್ಧೆಯನ್ನು ಹಾಯಿಸಿ ಬಿಟ್ಟಿದ್ದ ದ ದ! ಎಷ್ಟೋ ಹೊತ್ತು ಆ ಇಳಿವಯಸ್ಸಿನ ವ್ಯಕ್ತಿ ರೂಢಿಯಾದ ಕೆಲಸವನ್ನು ಮಾಡುತ್ತ ವಿರಾಮವಿಲ್ಲದೆ ಮುಂದುವರಿಸುವುದನ್ನು ನಾನೂ ನೋಡುತ್ತ ನಿಂತೆ! ಆಗ ಅವನ ಮನೆಯ ನಾಯಿ ನನ್ನನ್ನು ನೋಡಿ ಬೊಗಳಿತು. ದಾದು ತಿರುಗಿ ನೋಡಿದ, "ಯಾರದು," ಎಂದು ತನ್ನ ಎತ್ತರ ಸ್ವರದಲ್ಲಿ ಎತ್ತಲೋ ಹರಿದು ಹೋಗಿದ್ದ ಚಿತ್ತವನ್ನು ಹಿಂದೆಳೆಯುತ್ತಾ ಕೇಳಿದ. ನನ್ನ ಗುರುತಾಗಲು ಹೊತ್ತು ಹೆಚ್ಚು ಹಿಡಿಯಲಿಲ್ಲ. ಎಡೆಯ ಪಡಿಮಂಚದಲ್ಲಿ ನನ್ನನ್ನು ಕೂಡ್ರಿಸಿ,ಬಿಡಿಸಿ ಬೇಂಟ್ಟಿದ್ದ ಪಂಚೆಯನ್ನು ಸೊಂಟಕ್ಕೆ ಸುತ್ತಿಕೊಂಡು ದಬ್ಬನೆ ನನ್ನೆರಡೂ ಕೈಗಳನ್ನು ಅಪ್ಪಿ ಹಿಡಿದು ಅಳಹತ್ತಿದ.

ದಾದು ನನ್ನನ್ನು ಅವನ ಮಗನಂತೆಯೇ ಪ್ರೀತಿಸುತ್ತಿದ್ದ! ನಾನೂ ಶೀನನೂ ಒಟ್ಟಿಗೆ ಶಾಲೆಗೆ ಹೋಗುತ್ತಿದ್ದೆವು ಸಂಜೆ ಶಾಲೆಯಾದ ಮೇಲೆ ನಾನವನೊಟ್ಟಿಗೆ ಬಂದು ದಾದುವಿನ ದೋಣಿ ಹಿಡಿದುಕೊಂಡು ಹೊಳೆಯಲ್ಲಿ ಸುತ್ತಾಡುತಿದ್ದೆವು! ಅವರ ತೋಟದ ತಗ್ಗಿನ ಮರಗಳಿಂದ ಎಳನೀರು ತೆಗೆದು ಕುಡಿದು ಬೊಂಡ ಒಡೆದು ತಿನ್ನುತಿದ್ದೆವು. ಬಹಳ ಹೊತ್ತು ಸುತ್ತಾಡಿ ದೋಣಿಯಿಂದ ಹೊಳೆಗೆ ಹಾರಿ ಈಜಾಡುತಿದ್ದೆವು. ಒಮ್ಮೊಮ್ಮೆ ಸಣ್ಣ ವಿಷಯವನ್ನು ಹಿಡಿದುಕೊಂಡು ಜಗಳಾಡಿಕೊಂಡಾಗ ದಾದು ಮಧ್ಯ ಪ್ರವೇಶವಾಗಿ ಬೇಯಿಸಿದ ಗೆಣಸನ್ನೋ, ಕಾಯಿಸಿದ ಹಪ್ಪಳವನ್ನೋ ಕೊಟ್ಟು ನಮ್ಮನ್ನು ರಾಜಿ ಮಾಡಿ ನನ್ನನ್ನು ಮನೆಯ ತನಕ ಬಿಟ್ಟು ಹೋಗುತಿದ್ದನು. ಅವನ ಪ್ರೀತಿಯು ಇಬ್ಬರಲ್ಲಿಯೂ ಒಂದೇ ತೆರವಾಗಿತ್ತು. ಶೀನನೂ ನಾನೂ ಎಂಟನೆಯ ತರಗತಿಯ ತನಕ ಒಟ್ಟಿಗೆ ಕಲಿತು ನಾನು ಮುಂದಿನ ವಿದ್ಯೆಗೆ ಸಮೀಪದ ಹೈಸ್ಕೂಲಿಗೆ ಹೋದಾಗ ಅವನು ದುಡಿಮೆಗೆಂದು ಬೊಂಬಾಯಿಗೆ ಹೋಗಿದ್ದ ಬೊಂಬಾಯಿಗೆ ಹೋದ ಮೇಲಿನ ಅವನ ವಿಚಾರ ನನಗೆ ಸರಿಯಾಗಿ ತಿಳಿದಿರಲಿಲ್ಲ. ಹಿಂದೊಮ್ಮೆ ಕೆಲವು ವರುಷಗಳ ಹಿಂದೆ ಊರ ಜಾತ್ರೆಯಲ್ಲಿ ದಾದು ನನ್ನನ್ನು ಕಂಡಾಗ ಅಳುತ್ತಾ ನನ್ನ ಮಗನ ಸುದ್ದಿಯೇ ಇಲ್ಲವೆಂದ ನೆನಪು ನನಗಾಗುತ್ತದೆ. ಆದರ ಮೇಲೆ ಇದೇ ನಾನವನನ್ನು ನೋಡುತ್ತಿರುವುದು. ಅವನ ಕಣ್ಣೀರಿನಿಂದ ನನ್ನ ಎರಡೂ ಕೈಗಳು ಒದ್ದೆಯಾಗಿದ್ದುವು. ಅವನು ಅಳುವಷ್ಟು ಅಳಲೆಂದು ಸುಮ್ಮನಿದ್ದೆ. ಅಳು ಮನಸ್ಸನ್ನು ಹಗುರ ಮಾಡುತ್ತದೆಂದು ನಮ್ಮ ವೈದ್ಯಕೀಯ ಶಾಸ್ತ್ರ ಹೇಳುತ್ತಿದೆ ತಾನೆ?

ದಾದು ಮತ್ತೆ ಹೆಚ್ಚು ಮಾತನಾಡಲಿಲ್ಲ. ಮುಂದೆ ನಡೆಯುತ್ತ ಹೋದ. ನಾನೂ ಅವನ ಹಿಂದೆ ಹೋದೆ. ಅವನು ಮನೆಯ ಹಿಂಬದಿಯಲ್ಲಿ ಹರಿಯುತ್ತಿದ್ದ ಸುವರ್ಣೆಯ ದಡದಲ್ಲಿ ಅಸಿಸಿಟ್ಟ ದೋಣಿಯನ್ನು ದೂಡಿಯೇ ಬಿಟ್ಟ,ದೋಣಿ ಹತ್ತಿ ಜಲ್ಲ ಎತ್ತಿಕೊಂಡ. ನಾನೂ ಹತ್ತಿಕೊಂಡೆ. ಮೌನವಾಗಿ ರಾಶಿ ರಾಶಿಯಾಗಿ ನೀರ ಮೇಲೆ ಹಾಸಿಕೊಂಡ ಹುಣ್ಣಿಮೆಯ ಚಂದ್ರ ಕಿರಣವನ್ನು ಸೀಳಿಕೊಂಡು ದೋಣಿ ಹೊರಟಿತು. ನನಗೆ ಮಾತು ಪ್ರಾರಂಭಿಸಲೇ ಧೈರ್ಯವಾಗಲಿಲ್ಲ!

ದಾದು ಮೌನ ಮುರಿದ, "ಅಯ್ಯ". ಎಂದ.ನಾನುತಡೆದು ನನ್ನನ್ನು ಹಾಗೆ ಕರೆಯಬಾರದೆಂದೂ, ಮೊದಲಿನಂತೆ ಹೆಸರೆತ್ತಿಯೇ ಕರೆಯಬೇಕೆಂದೂ ಹಾಗೆ ಕರೆಯುವುದರಿಂದ ತಾಯನ್ನು ಕಳೆದುಕೊಂಡ ನನಗೆ ತಾಯಿಯಿಂದ ಕರೆಸಿಕೊಂಡ ನೆಮ್ಮದಿಯಾಗಬಹುದೆಂದೂ ಹೇಳಿದೆ. ಜಲ್ಲದಿಂದ ಒಂದು ಕೈಯನ್ನು ತಪ್ಪಿಸಿ ಹೆಗಲ ಮೇಲಿನ ಚಿಕ್ಕ ಬಟ್ಟೆಯಿಂದ ಕಣ್ಣೊರಸಿಕೊಳ್ಳುತಿದ್ದುದು ನನಗೆ ಕಾಣಿಸದಿರಲಿಲ್ಲ. 'ಕೃಷ್ಣ' ನನಗೆ ನನ್ನ ಶೀನನೇ ಮನೆಗೆ ಬಂದಂತಾಗಿದೆ! ಮೂವತ್ತು ವರುಷಗಳಿಂದ ಕಾಯುತ್ತಿದ್ದ ನನಗೆ ಇಂದು ನಿನ್ನ ಬರದಿಂದ ಆನಂದವಾಗಿದೆ. ನಿನಗೆ ದೋಣಿಯಲ್ಲಿ ತಿರುಗುವುದೆಂದರೆ ಅಂದಿನಿಂದಲೂ ಆನಂದವೆಂಬುದನ್ನು ಬಲ್ಲೆ, ಆದಕ್ಕಾಗಿಯೇ ನಾನು ದೋಣಿ ಹತ್ತಿಕೊಂಡೆ. ನನ್ನ ಮಗ ಇಲ್ಲದಿದ್ದರೇನಂತೆ? ನೀನಾದರೂ ಪ್ರೀತಿಯಿಟ್ಟು ಈ ಮುದುಕನನ್ನು ಮಾತನಾಡಿಸಲು ಬಂದೆಯಲ್ಲ? ಅದೇ ನನಗೆ ಹಿಡಿಸಲಾರದಷ್ಟು ಹರ್ಷ ತಂದಿದೆ." ಆವೇಶದಲ್ಲಿ ಮಾತನಾಡುತ್ತ ದೋಣಿ ಮುಂದೆ ಒತ್ತಿದ ನಾವು ತಾಯಿ ಸುವರ್ಣೆಯಲ್ಲಿ ಮುಂದೆ ಮುಂದೆ ಸಾಗಿದೆವು. ದಡದಲ್ಲಿ ಈ ಮನೋಹರ ಹುಣ್ಣಿಮೆಯ ರಾತ್ರಿಯಲ್ಲಿ ಬೆಳ್ದಿಂಗಳಿಂದ ಸಿಂಗರಿಸಿಕೊಂಡು ತಾಯಿ ಸುವರ್ಣೆ ಹೇಗೆ ಕಾಣುತ್ತಾಳೆ! ನಿಂತು ನೋಡುತ್ತಿರುವ ತೆಂಗು ಕಂಗುಗಳು, ಪೈರಿಂದ ತುಂಬಿಕೊಂಡ ಬಯಲುಗಳು, ತಲೆಯೆತ್ತಿ ನೋಡುತ್ತಿರುವ ಹಸಿರು ತುಂಬಿದ ಗುಡ್ಡಗಳು ಅತಿ ಮನೋಹರವಾಗಿ ಅಂದು ನಾನು ಎಲ್ಲಿದ್ದೇನೆಂದೇ ಮರೆತು ಬಿಟ್ಟು ಇದೇ ಸ್ವರ್ಗವೇನೋ ಎಂದುಕೊಂಡು ಸ್ತಬ್ಧನಾಗಿ ನೋಡುತ್ತಿದ್ದೆ. ದಾದು ಏನೆಲ್ಲ ಹೇಳು

(ಇಪ್ಪತ್ತನೇ ಪುಟ ನೋಡಿರಿ)

With the compliments
of the Season:

JYOTHI
TALKIES

MANGALORE

Your favourite
Picture House

ಶ್ರೀ ಶಿವಾಂಜೆ ಪಡಾರಿ, ಮುಂಬಯಿ.

ಶಿರ[illegible] - ಮುರುವು

ಬಡವರನ್ನು ದೇ[illegible] ಏಕೆ ಸೃಷ್ಟಿಸುತ್ತಾನೆ? — ಇದು ಯಕ್ಷ ಪ್ರಶ್ನೆ. ಇದರ ಉತ್ತರ ಬಡವರಿ[illegible] ಅರಿಯದು; ಶ್ರೀಮಂತರಿಗೂ ತಿಳಿಯದು; ಆದರೆ, ದೇವರು ಮಾತ್ರ ಉತ್ತ[illegible] ಕೊಟ್ಟೇ ಕೊಡುತ್ತಾನೆ, ಅದೂ ಅತೀವ ಸರಳ ಸಹಜವಾಗಿ. ಅದನ್ನು ಅರ್ಥೈಸುವ ಶಕ್ತಿ—ಬುದ್ಧಿ ಮಾನವನಿಗಿದೆಯೆ?

ಬಡ ಕೂಲಿಯವನೊಬ್ಬ ದಿನವಿಡೀ ತನ್ನ ಮೈಯ ನೆತ್ತರನ್ನೇ ಹರಿಸಿ, ದುಡಿದು, ಸಾಯಂಕಾಲ ಹೊತ್ತು ಪರಿಶ್ರಮದ ಫಲವಾಗಿ ದೊರಕಿದ ಎರಡಾಣೆಯನ್ನು ಅಂಗವಸ್ತ್ರದ ಕೊನೆಯಲ್ಲಿ ಕಟ್ಟಿಕೊಂಡು, ಪೇಟೆಯಿಂದ ಹೊರಗಿರುವ-ಕೂಲಿಕಾರರ ವಸತಿಯಲ್ಲಿರುವ ತನ್ನ ಗುಡಿಸಲಿನತ್ತ ಹೊರಟಿದ್ದನು. ಬಹಳ ದೂರದಿಂದಲೇ ಅವನು ಒಮ್ಮೆ ತನ್ನ ಮನೆಯ ಕಡೆ ನೋಡಿದನು. ಗುಡಿಸಲಿನ ಮೇಲ್ಛಾವಣಿಯ ರಂಧ್ರಗಳಿಂದ ಮಂದವಾಗಿ ಮೇಲಕ್ಕೇರುತಿದ್ದ ಹೊಗೆಯನ್ನು ಕಂಡು ಅವನಿಗೆ ಸಂತೋಷವಾಯಿತು. 'ನನ್ನ ತಾಯಿ ನನಗಾಗಿ ಅಡುಗೆ ಮಾಡುತ್ತಿರಬೇಕು' ಎಂದು ಅವನು ತನ್ನ ಮನದಲ್ಲಿಯೇ ನಿರ್ಧರಿಸಿ ಕೊಂಡನು.

ಅವನ ತಲೆ ಕಾಲುಗಳೆರಡೂ ನಗ್ನವಾಗಿದ್ದವು. ಅವನ ಗುಡಿಸಲಿನಲ್ಲಿ ಮುದುಕಿ ತಾಯಿಯ ಹೊರತು ಬೇರೆ ಸಂಬಧಿಕರು ಯಾರೂ ಇರಲಿಲ್ಲ. ಅಲ್ಲಿ ಒಂದು ಮಣ್ಣಿನ ಒಲೆ ಮತ್ತು ನಾಲ್ಕೈದು ಮಣ್ಣಿನ ಪಾತ್ರೆಗಳ ವಿನಾ ಬೇರಾವ ಸಾಮಾನು ಇರಲಿಲ್ಲ. ಆದರೂ ಅವನು ಸಂತೋಷವಾಗಿದ್ದನು. ಅವನ ಕೊಳಕು ಅಂಗವಸ್ತ್ರದ ಕೊನೆಯಲ್ಲಿ ಎರಡಾಣೆಯ ನಾಣ್ಯವಿತ್ತು; ಅವನ ಹೃದಯ ಆಸೆ ಉತ್ಸಾಹಗಳಿಂದ ಸಮೃದ್ಧವಾಗಿತ್ತು.

ಎದುರು ಗಡೆಯಿಂದ ಒಂದು ಮದುವೆಯ ದಿಬ್ಬಣ ಬರುತ್ತಿತ್ತು. ಅದನ್ನು ನೋಡಿ ಬಡ ಕೂಲಿಯವನು ತನ್ನ ಮನದಲ್ಲೇ ಮಂಡಿಗೆಯುಣಲಾರಂಭಿಸಿದನು. ಒಂದು ದಿನ ನನಗೂ ಮದುವೆ ಆಗಬಹುದು, ನಾನು ಕೂಡ ಇದೇ ರೀತಿ ಮದುವೆಯ ಮೆರವಣಿಗೆ ತೆಗೆದು ಮೆರೆಯಬಹುದು. ಆಗ ನಾನು ಎಷ್ಟು ಸಂತೋಷವಾಗಿರಬಹುದು! ನಾನು ಕೂಡ ಅಂದು ಹೀಗೇ ಓಲಗ, ಬ್ಯಾಂಡು, ಸಾಲುದೀಪ ಎಲ್ಲ ತರಬೇಕು, ಮತ್ತು........

"ಲೇ ಮಗ್ನೇ, ಬದಿಗೆ ಹೋಗೋ"— ದಿಬ್ಬಣದ ಮುಂದಿನಿಂದ ಪೆಟ್ರೋಮ್ಯಾಕ್ಸ್ ದೀಪ ಹಿಡಿದು ಬರುತ್ತಿದ್ದ ಕೆಲಸದ ಆಳುಗಳು ಕಿರುಚಿಕೊಂಡರು.

ಬಡ ಕೂಲಿಯ ಮದುವೆಯ ಸುಂದರ ಸ್ವಪ್ನಭಂಗವಾಯಿತು. ಪರಿಣಾಮದ ಅವನ ಸುಖಮಯ ಕಾವ್ಯ—ಕಲ್ಪನೆಯೆಲ್ಲವೂ ಮಂಗಮಾಯವಾಯಿತು.— "ಬದಿಗೇಕೆ ಹೋಗಲಿ? ಈ ಮಾರ್ಗ ನಿನ್ನದಲ್ಲ. ನಾವು ಇದರಲ್ಲಿ ನಡೆಯಬಹುದು" ಎಂದು ಉತ್ತರಿಸಿದ ಕೂಲಿಯವ.

ದಿಬ್ಬಣದಲ್ಲಿ, ಮದೋನ್ಮತ್ತ ಆನೆಯಂತೆ ನಿಧಾನವಾಗಿ ಮುಂದುವರಿಯುತ್ತಿದ್ದ ಜನರಲ್ಲಿ ಕೆಲವರು, ಮುಂದೆ ಬಂದು ಬಡ ಕೂಲಿಯವನನ್ನು ಬಿಗಿಯಾಗಿ ಹಿಡಿದು, ಅವನ ರುಮಾಲನ್ನು ಕಸಿದು, ಹರಿದು, ಬಿಸಾಡಿ, ಅನಂತರ ಎತ್ತಿ ಮಾರ್ಗದ ಮೂಲೆಗೆಸೆದು ಗಹಗಹಿಸಿ ನಗುತ್ತಾ ಮುಂದುವರಿದರು.

ದಿಬ್ಬಣ ಮುಂದೆ ಹೋಯಿತು. ಓಲಗ ಬ್ಯಾಂಡುಗಳ ಮಹಾರವ ಮುಂದುವರಿದು ಪೇಟೆಯ ಕಣ್ಣು ಕುಕ್ಕುವ ಪ್ರಕಾಶದಲ್ಲಿ ಲೀನವಾಯಿತು. ಅಲ್ಲಿ ಈಗ ಬಡ ಕೂಲಿಯವನೊಬ್ಬನೇ ಇದ್ದ. ಅವನ ನಾಲ್ಕೂ ಬದಿಯಲ್ಲಿ ರಾತ್ರಿಯ ನಿಶ್ಶಬ್ಧತೆಯಿತ್ತು. ನಿರಾಶೆಯ ಕತ್ತಲೆಯಿತ್ತು, ದುಃಖೀ ಹೃದಯದ ನಿಟ್ಟುಸಿರಿತ್ತು! ಅವನು ಹಾಗೇ ನೆಲದ ಮೇಲೆ ಮೊಣಕಾಲೂರಿ ಕುಳಿತು, ಆಕಾಶದತ್ತ ಮೊಗವೆತ್ತಿ—'ಹೇ ಪ್ರಭೂ, ನಮ್ಮ ಬಳಿ ಧನ—ಕನಕವಿಲ್ಲ. ನಮ್ಮ ಬಳಿ ಮಹಲು—ಬಂಗಲೆಗಳಿಲ್ಲ, ಸೇವೆಗಾಗಿ ನೌಕರ—ಚಾಕರರೂ ಇಲ್ಲ. ಆದರೂ ನೀನು ನಮ್ಮನ್ನೇಕೆ ಹುಟ್ಟಿಸಿದೆ? ಶ್ರೀಮಂತರ ನೌಕರರು ಬಂದು ಹೊಲಸು ನಾಯಿಯ ಕುನ್ನಿಯಂತೆ ಹಿಡಿದು ಮಾರ್ಗದ ಬದಿಗೆ ಎಸೆಯಲಿ ಎಂದೇ ನಮಗೆ ಜನ್ಮವಿತ್ತೆಯಾ? ಈ ಜಗತ್ತಿನಲ್ಲಿ ನಮ್ಮ ಉಪಯೋಗವಾದರೂ ಏನು? ಎಂದು ಗದ್ಗದ ಕಂಠದಿಂದ ಪ್ರಾರ್ಥಿಸಿದನು.

[illegible] ಲೇಖಕರು [illegible]

— ೨ —

ಎಷ್ಟೋ ವರ್ಷಗಳು ಕಳೆದು ಹೋದುವು.

ಬಡ ಕೂಲಿಯವನು ಮೈಮುರಿದು ದುಡಿದ. ಹಗಲಿನ ವಿರಾಮ, ರಾತ್ರಿಯ

(ಹತ್ತೊಂಭತ್ತನೇ ಪುಟ ನೋಡಿರಿ)

In the tradition of the famous

"CANARA" Springs

now another excellent product:

'CANARA' BRAKE DRUMS

for all popular vehicles:

They are made from quality material, modern machines and with rigid quality control under watchful eyes of a modern laboratory. These drums matching the best of the International makes are made to suit Indian Road Conditions incorporating experience gained by lengthy practical road tests.

THE CANARA WORKSHOPS LIMITED

MANGALORE-3.

With the Season's Greetings

To all our Patrons & Well-wishers

From:—



K. VASUDEVA KINI

Proprietor

SHARADA INDUSTRIES

RICE, OIL, FLOUR & SAW MILLS

KATAPADI, S. KANARA.

Phone: 132

ಶ್ರೀ ಶಿವಶಂಕರ, ಮದ್ರಾಸು

ಜಯ್ ಕಿಸಾನ್

ದಿವಂಗತ ಪ್ರಧಾನ ಮಂತ್ರಿ ಭಾರತೀಯರಿಗೆ ನೀಡಿದ ಹೊಸ ಘೋಷಣೆ— ಜಯ್ ಕಿಸಾನ್! ಜಯ್ ಹಿಂದ್, ಜಯ್ ಜವಾನ್, ಜಯ್ ಕಿಸಾನ್— ಈ ಮೂರು ಘೋಷಣೆಗಳು ಭಾರತೀಯರ ಭವಿಷ್ಯ ನಿರ್ಣಾಪಕಗಳು, ನಾವು ಇವನ್ನೆಷ್ಟು ಕಾರ್ಯರೂಪಕ್ಕೆ ತರುತ್ತೇವೆಯೋ ಅಷ್ಟು ಭದ್ರರಾಗುತ್ತೇವೆ. ಆದರೆ ಘೋಷಣೆಗಳ ಕಾಲದಲ್ಲಿ ಅವುಗಳ ಅಪಮೌಲ್ಯವಾಗುವುದೂ ಅನಿವಾರ್ಯ— ಇದು ತಪ್ಪದೆ ನಮ್ಮ ಉದ್ಧಾರವೂ ಅಸಾಧ್ಯ.

“ಜಯ ಕಿಸಾನ್”— ಪಾಕಿಸ್ತಾನ ಇತ್ತೀಚೆಗೆ ಭಾರೀ ಆಕ್ರಮಣ ನಡೆಸಿದಾಗ ಭಾರತದಲ್ಲಿ ಕೇಳಿ ಬಂದ ಘೋಷಣೆ ಇದು. ಹಲವಾರು ಘೋಷಣೆಗಳಲ್ಲಿ ಇದೂ ಒಂದು. ಈ ಘೋಷಣೆ ಎಲ್ಲರಿಗೂ ಸಂಬಂಧಪಟ್ಟದ್ದೇ ಇದೆ ಅದು ಕೇವಲ ಕೃಷಿಕನಿಗೆ ಮಾತ್ರ ಇರುವದಿಲ್ಲ. ಕೃಷಿಕನನ್ನೇ ನಂಬಿಕೊಂಡಿರುವ ಸಾಮಾನ್ಯ ಶ್ರಮಿಕನಿಗೂ ಸಂಬಂಧಪಟ್ಟದ್ದಿದೆ. ಅಂತೆಯೇ ಜಿಗಣೆಯಂತೆ ಕೃಷಿಕನ ರಕ್ತವನ್ನು ಹೀರುತ್ತಿರುವ ಧನಿಕ ವರ್ಗಕ್ಕೂ ಸಂಬಂಧಪಟ್ಟದ್ದಿದೆ. ಅಲ್ಲದೆ ಅಧಿಕಾರದ ಲಗಾಮನ್ನು ಹಿಡಿದುಕೊಂಡಿರುವ ಸರಕಾರಕ್ಕೂ ಸಂಬಂಧಪಟ್ಟದ್ದಿದ ಎನ್ನುವಾಗ ಸಾಮಾನ್ಯ ಪ್ರಜೆಯ ವಿಷಯ ಹೇಳುವದೇ ಬೇಡ. ಅದುದರಿಂದಲೇ ಅದರ ಮೌಲ್ಯವನ್ನರಿತೇ ಆಗ ಪ್ರಧಾನಿ ಪಟ್ಟದಲ್ಲಿ ಮಿಂಚಿಸುತ್ತಿದ್ದ ಶ್ರೀ ಲಾಲ್‌ಬಹದೂರ ಶಾಸ್ತ್ರಿಯವರು ಈ ಘೋಷಣೆಗೆ ಬಹಳಷ್ಟು ಪ್ರಚಾರ ನೀಡಿದ್ದರು.

ಕೃಷಿಕನೇ ಭಾರತದ ಬೆನ್ನೆಲುಬು. ಕೃಷಿ ಪ್ರಧಾನ ರಾಷ್ಟ್ರ— ಭಾರತ. ಇಲ್ಲಿ ಭೂಮಿ ಪೂಜೆ ನಡೆಯುತ್ತದೆ. ಇಲ್ಲಿಯವರು ಬೆಳಿಗ್ಗೆ ಎದ್ದೊಡನೆ ‘ಕರಾಗ್ರೆ ವಸತೇ ಲಕ್ಷ್ಮೀ ......ಪಾದಸ್ಪರ್ಶಂ ಕ್ಷಮಸ್ವಮೇ ... ..” ಎಂದ ಪ್ರಾರ್ಥಿಸುತ್ತಾರೆ ಭೂದೇವಿಯ ಬಳಿ. ಇಲ್ಲಿಯವರು ಗೋಪೂಜೆ ಮಾಡುತ್ತಾರೆ. ಇಲ್ಲಿಯ ಜನರು ಜೋಡೆತ್ತಿನ ಚಿಹ್ನೆಗೆ ಮತದಾನ ಮಾಡುತ್ತಾರೆ ..ಹೀಗೆ ಕೃಷಿ ಪ್ರಧಾನವಾಗಿರುವದರಿಂದಲೇ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಜೀಯವರು ‘ತರುಣರೇ, ತೆರಳಿರಿ ಹಳ್ಳಿಗೆ’ಂದು ಬುದ್ಧಿವಾದ ಹೇಳಿದ್ದರು.

ಹಳ್ಳಿಗೆ ಹೋಗಬೇಕು...ಕೃಷಿ ಮಾಡಬೇಕು...ಕೃಷಿಕನಿಗೆ ಜಯವಾಗಲಿ. ಅಲ್ಲವೇ ಮತ್ತೆ ಅನ್ನದಾತನಿಗೆ ಜಯವಾಗುವದು ಬೇಡವೆ? ಹಳ್ಳಿಯ ಕೃಷಿಕ— ಅನ್ನದಾತನಿಗೆ ಜಯವಾಗದಿದ್ದಲ್ಲಿ ದಿಲ್ಲಿಯ ದೂರದರ್ಶದಿಂದ ಘೋಷಣೆ ಹಾಕಲು ಸಾಧ್ಯವೇನು? ಆದರೆ, ಆ ಹಳ್ಳಿಯ ಸ್ಥಿತಿ ಚಿತ್ರ ಹೇಗಿದೆಂಬುದು ಘೋಷಣೆಯದಾತನಿಗೆ ಗೊತ್ತೇನು?

ಹಳ್ಳಿಗೆ ಹೋಗಬೇಕು. ಇದು ಅಂದಿನ ಆವಶ್ಯಕತೆ ಪರಕೀಯ ಬ್ರಿಟಿಷರ ಹಿಡಿತದಿಂದ ಬನ್ನಲು ಬನ್ನು ತಪ್ಪಿಸಿಕೊಳ್ಳಲು ಹಳ್ಳಿಗೆ ಹೋಗಿರಿ ಮಹಾತ್ಮಾಜೀ ಹೇಳಿರುವದಲ್ಲ, ಕೃಷಿ ಮಾಡಲಿಕ್ಕೆ ಹೋಗಿರೆಂದು ಅವರು ಹೇಳಿದ್ದು. ಯಾರಿಷ್ಟು ಭೂಮಿಯನ್ನು ಕೃಷಿ ಮಾಡುವದು ಇಲ್ಲಿ? ಆದಕ್ಕೂ ವಿಪರ್ಯಾಸವಾಯಿತೆನ್ನುವಾಗ ಬೇರೆ ಸಮಸ್ಯೆ ಸಧ್ಯ ಈ ಸಮಸ್ಯೆಯ ಸಂಶೋಧನವನ್ನು ಏಳುವದು ಬೇಡ; ಒಡನೆಯಿಂದಲೇ ಸ್ವಲ್ಪ ಯೋಚಿಸಬೇಕಾಗಿರುತ್ತದೆ. ಚಿಕ್ಕ ವಿಷಯವೊಂದನ್ನು ಯೋಚಿಸಿಕೊಂಡರೆ ಮತ್ತೆ ಎಂಟನೂ ಪರ್ವತದಾಚೆ ಹಾರಬಹುದು.

ಅದ್ಯಾವ ಮುತ್ತಾತನ ಪುಣ್ಯಬಲದಿಂದಲೋ ಒಂದಿಷ್ಟು ನೆಲ (ಜಮೀನು— ಭೂಮಿ) ಸಿಕ್ಕಿತೆ. ಕೃಷಿ ಮಾಡುವ ಯೋಚನೆ ಬಲವಾಯಿತು. ಯಾವ ಬೆಳೆ ಬೆಳೆಸುವದು? ಹತ್ತಿಪ್ಪತ್ತು ತೆಂಗಿನ— ಕಂಗಿನ ಸಸಿಗಳನ್ನು ನೆಟ್ಟುಬಿಟ್ಟನು. ಒಮ್ಮೆ ಭಾರಿ ಶ್ರಮಪಟ್ಟರೆ ಆಯಿತು, ಅನಂತರ ಅಲ್ಪ ಶ್ರಮದಲ್ಲಿ ಕುಳಿತು ಕೊಂಡಲ್ಲಿಗೇನೇ ಹಣ ಬರುತ್ತದೆ. ಆದರೆ ಸ್ವಲ್ಪ ಸಮಯ ಕಾಯಬೇಕಾಗುತ್ತದೆ. ಅದು ಬೇಡ ಗಾಳಿಮರ ಇಟ್ಟುಬಿಡಲೇ? ಹೊಗಸೊಪ್ಪು ಹಾಕಲೇ? ನೆಲಕಡಲೆ ನೆಡಲೇ? . ಅದೆಲ್ಲಾ ಸದ್ಯಕ್ಕೆ ಬೇಡ. ಈಗ ಮುಖ್ಯವಾಗಿ ಬೇಕಾಗಿರುವದು ದಾಸರ ಗಮನ ಸೆಳೆದಿರುವ ಗೇಣು ಹೊಟ್ಟೆಯನ್ನು ತುಂಬಿಸಿಕೊಳ್ಳಲು ಉಪಾಯ. ಸರಿ. ಭತ್ತದ ಬೆಳೆಯೇ ಆಗಲಿ. ಬೆಳೆ ಎಂದರೆ ಸುಮ್ಮನಾಗುತ್ತದೆಯೇ! ಗದ್ದೆ ಮಾಡಬೇಕು. ಅಂದರೆ ಜಮೀನಿನ ನಾಲ್ಕು ಬದಿಗಳಲ್ಲೂ ಸ್ವಲ್ಪ ಎತ್ತರ ದಿನ್ನೆಯ ಹಾಗೆ ಮಾಡಬೇಕು, ಆಗ ಗದ್ದೆಯಲ್ಲಿ ನೀರು ನಿಲ್ಲಲು ಸಾಧ್ಯವಾಗುತ್ತದೆ. ಈ ದಿನ್ನೆ ಅಥವಾ ಹುಣಗಟ್ಟಿಯಾಗಿಲ್ಲವಾದಲ್ಲಿ ಹೊರಗಿನ ಉಸುಬು— ಕಸಕಡ್ಡಿ ಅಡತಡ ಇಲ್ಲದೆ ಒಳಗ ಬರಬಹುದು; ಹಾಗೆಯೇ ಒಳಗೆ ಬಿತ್ತಿದ ಬೀಜ ಹೊರಗೆ ಹೋಗಿ ಬಿಡಬಹುದು. ಅಂದರೆ ಹುಣಿ ಭದ್ರವಾಗಿರಲೇಬೇಕು. ಹಾಗೆನೇ ಗದ್ದೆಯಿಡಿ ಹುಣಿಗಳನ್ನು ಮಾಡಿ ಹಾಕಿದರೂ ಚೆನ್ನಾಗಿರುವದಿಲ್ಲ. ಅಯ್ಯೋ! ಹುಣಿಕಟ್ಟಿಕೊಂಡಿರುವಾಗಲೇ ಆಕಾಶ ಕಪ್ಪಾಯಿತಲ್ಲಾ! ಸಿಡಿಲು-ಗುಡುಗು ಆರಂಭವಾಯಿತಲ್ಲಾ! ಮಿಂಚು ಕಣ್ಣು ಕೋರೈಸಲು ತೊಡಗಿದೆಯಲ್ಲಾ! ಓಡೋಣ! ಮನೆಗೆ ಹೋಗಿ ಬೆಚ್ಚಗಿರೋಣ...

ಪುನರ್ ಪಾಕಿಸ್ತಾನ ಆಕ್ರಮಣ ಮಾಡಿಯುತ್ತದೆ.... ವಾಮನಮೂರ್ತಿ ಶ್ರೀ ಲಾಲಬಹದ್ದೂರ ಶಾಸ್ತ್ರೀಜೀ ಪ್ರಧಾನಿ ಪಟ್ಟದಿಂದ ರಾಷ್ಟ್ರದ ರಕ್ಷಣೆಗಾಗಿ “ಜೈ ಜವಾನ್ —ಜೈ ಕಿಸಾನ್” ಘೋಷಿಸುತ್ತಾರೆ.

ಮಳೆ ಜೋರಾಗಿ ಬರುತ್ತಿದೆ, ಹುಣಿ ಏನಾಗುತ್ತದೋ? ಭೀತಿ ...

ರಾಷ್ಟ್ರದ ರಕ್ಷಣೆ ...ಘಾಳಿಗಾರರ ಪ್ರವಾಹ ಬರುತ್ತಿದೆ. .. ಕಳವಳ.

ಭೀತಿ ಕಳವಳ ನಡುವೆ ಯೋಚನೆಯ ಮಿಂಚೊಂದು ಹೊಳೆಯಿತು ಜೈ ಜವಾನ್ —ಜೈ ಕಿಸಾನ್— ಯಾವುದು ಮುಖ್ಯ, ಯಾವುದು ಬೀಜ? ಅಂದರೆ ನಮ್ಮ ರಾಷ್ಟ್ರದ ಸೀಮೆ ಸ್ಪಷ್ಟವಾಗಿಲ್ಲವೇನು? ಸ್ಪಷ್ಟ, ಮಾತ್ರವಲ್ಲ, ಸುಸ್ಪಷ್ಟವಾಗಿದೆನ್ನುತ್ತಾರೆ ಮಹಾ ನಾಯಕರು. ಆದರೆ ಅಧಿಕಾರದ ಅಂಕುಶವನ್ನು ಹಿಡಿದುಕೊಂಡಿರುವ ದಿಲ್ಲಿಯ ದೊರೆಗಳು ಹಾಗೂ ಭಾರೀ ಭೂಧನಿಕರು ಭೂ ಪ್ರದೇಶ ಬಿಟ್ಟು ಕೊಡುವ ಗಡಿಬಿಡಿಯ ಮಾತನ್ನೇಕೆ ಆಡ್ತಾರೆ? ಒಪ್ಪಂದದ ಹೆಸರಲ್ಲಿ ಚಕ್ಕಂದದ ಮಾತುಗಳೇಕೆ? ಅದು ಶಾಂತಿಯುತ, ಸಮರರಹಿತ, ಸಹಬಾಳ್ವೆಗೆ ಅತ್ಯಾವಶ್ಯಕವೆನ್ನುವ ದೊಡ್ಡ ಮಾತನ್ನಾಡಿ ಬಿಟ್ಟು ಚಿಕ್ಕ ಭೂಪ್ರದೇಶ ಬಿಟ್ಟುಕೊಡುವದೆಂದು ಅವರು ಬಹಳ ನಯ ನಾಜೂಕಿನಿಂದ ಹೇಳುತ್ತಿದ್ದಾರೆ. ದೊಡ್ಡವರ ಈ ದೊಡ್ಡ ಮಾತು ಪಾಪದ ಬಡ ಜನತೆಗೆ ಅರ್ಥವಾಗುವದು ಸ್ವಲ್ಪ ಕಷ್ಟವೇ ಸರಿ.

ನಮ್ಮ ಕಣ್ಣುಗಳತ್ತವೇ ಬೆರಳು ತೋರಿಸಿ ‘ಇದೋ, ಇಲ್ಲಿದೆ ಉತ್ತರ’ವೆನ್ನುತ್ತಾರೆ ಇಲ್ಲಿಯ ಕಮ್ಯೂನಿಸ್ಟರು. ಅವರೇನೂ ಅಂತಹ ‘ಅತ್ಯಮೂಲ್ಯ’ ದೊಡ್ಡ ಮಾತುಗಳನ್ನಾಡದೆ, ಸ್ವಭಾವಸಿದ್ಧ ದೈನಂದಿನ ಜೀವನದತ್ತ ನಮ್ಮ ದೃಷ್ಟಿಯನ್ನು ಸೆಳೆಯುತ್ತಾರೆ. ಅವರ ಪ್ರಶ್ನೆಗಳೋ ಬಹಳ ಸರಳ. ಮೈಸೂರು ಅಥವಾ ಕರ್ಣಾಟಕದಲ್ಲಿರುವದೂ ಕಾಂಗ್ರೆಸ್ ಸರಕಾರ, ಮಹಾ ರಾಷ್ಟ್ರದಲ್ಲಿರುವದೂ ಅದೇ ಜೋಡೆತ್ತಿನ ಕಾಂಗ್ರೆಸ್ ಸರಕಾರ. ಈ ಕಾಂಗ್ರೆಸಿಗರು ಹೊಡೆದಾಡುವದಾದರೂ ಏತಕ್ಕೆ? ಒಂದಿಷ್ಟು ನೆಲಕ್ಕೆ ತಾನೇ? ಅಂದರೆ ಈ ಕಾಂಗ್ರೆಸಿಗರು ಕಾದಾಡುತ್ತಿರುವದು ಅನ್ಯರ ನೆಲವನ್ನು ಕಬಳಿಸಲಿಕ್ಕಾಗಿ ತಾನೇ? ಇಲ್ಲೇ ಹೀಗೆ ಮಾಡುತ್ತಿರುವ ಕಾಂಗ್ರೆಸ್ ಹೊರಗೆ ಪಾಕಿಸ್ತಾನದ್ದೋ, ಚೈನಾದ್ದೋ ಭೂಮಿಯನ್ನು ಆಕ್ರಮಿಸಿಕೊಂಡಿರಲಿಕ್ಕಿಲ್ಲವೆಂದು ಹೇಗೆ ಹೇಳುವಿರಿ? ಅವರಲ್ಲೂ ಎರಡೂ ‘ರಾಜ್ಯ’ಗಳಲ್ಲಿ ಕಾಂಗ್ರೆಸ್ ಆಳ್ವಿಕೆ ಇರುವಾಗಲೇ, ರಕ್ಷಣಾ ಮಂತ್ರಿಯಾಗಿರುವ ಮಹಾ ರಾಷ್ಟ್ರದ ಶ್ರೀ ಯಶವಂತ ಚವ್ಹಾಣರು ಕರ್ನಾಟಕದ ಕಾರವಾರ, ಬೆಳಗಾಂವ್, ನಿಪ್ಪಾಣಿಯನ್ನು ಒಳಹಾಕಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದರೆ ಅವರು ಪಾಕಿಸ್ತಾನ ಅಥವಾ ಚೈನಾದ ಭೂಮಿಯನ್ನು ಬಿಡುವದುಂಟೇ? ದೇಶದಾದ್ಯಂತ ಇಂತಹ ಗಲಭೆಗಳೇಳುವಂತೆ ಪ್ರಯತ್ನಿಸುತ್ತಿದ್ದು, ಆ ಬಲೆಯಲ್ಲಿ ಬಹಳ ಸುಲಭವಾಗಿ ಬೀಳುತ್ತಿರುವ ಕಾಂಗ್ರೆಸಿಗರ ಕಿಡಿಗೇಡಿ ವರ್ತನೆಯನ್ನು ಮುಗ್ಧ ಜನತೆಯೆದುರಿಗೆ ಬೃಹದಾಕಾರ ಮಾಡಿ ತೋರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಕೃತ್ರಿಮ ದೇಶಭಕ್ತ ಕಮ್ಯೂನಿಸ್ಟರು ಪ್ರಯತ್ನಿಸುತ್ತಿದ್ದಾರೆ. ಅವರೇನೋ ಬಹಳ ಸುಲಭವಾಗಿ ಗಲಭೆಯ ವಿಷ ಬೀಜ ಬಿತ್ತಿ ಬಿಡುತ್ತಾರೆ. ಅದರ ಫಲ ಹೋಗುತ್ತಿರುವದು ಕಾಂಗ್ರೆಸಿಗರಿಗೆ! ಅವರಾದರೋ ಬಹಳ ಸಂತೋಷದಿಂದಲೇ ಅದನ್ನು ತಿಗದುಕೊ...

(ಹದಿನೆಂಟನೇ ಪುಟ ನೋಡಿರಿ)

ನಮ್ಮ ವಿಪುಲ ಗ್ರಾಹಕರಿಗೆ —
ಸಕಲ ಹಿತೈಷಿಗಳಿಗೆ—
ನಂಬರ್ 30 ಬೀಡಿಯ ನಮ್ಮ ಸ್ಟಾಕಿಸ್ಟರಿಗೆ—
ಸ್ವಾತಂತ್ರ್ಯ ದಿನದ ಶುಭಾಶಯಗಳು!



(ಪ್ರೊಪ್ರೈಟರ್ - ಎಂ ಎಲ್. ಶೆಟ್ಟಿ)
ಎಂ. ಎಲ್. ಶೆಟ್ಟಿ ಎಂಡ್ ಸನ್ಸ್
ನ್ಯೂ ಕರ್ನಾಟಕ ಸ್ಟೋರ್ಸ್,
ಕಾರವಾರ

With compliments from -
M/s. M L. Shetty & Sons
NEW KARNATAKA STORES,
Imperial Tobacco Dealers &
No 30 Beedies Stockists,
KARWAR

ನಾವು ಸ್ವತಂತ್ರರಾಗಿ ಕಳೆಯಿತು ಹತ್ತೊಂಬತ್ತು ವರುಷಗಳು. ನಮ್ಮ ಕೈಗಳಿಗೆ ಬ್ರಿಟಿಷರು ಸ್ವಾತಂತ್ರ್ಯ ಕೊಡುವಾಗ ಹೇಗೆ ನಡೆದುಕೊಂಡರು? ದೇಶ ವಿಭಜನೆಯ ತಂತ್ರವನ್ನೇಕೆ ಕೈಗೊಂಡರು? ನಾವದಕ್ಕೆ ಏಕೆ ಒಪ್ಪಿಕೊಂಡೆವು? — ಇವೆಲ್ಲ ನಮ್ಮ ಪ್ರಶ್ನೆಗಳಿಗೆ ಉತ್ತರ ಒಂದೇ— ಪರಿಸ್ಥಿತಿಯ ದಾಸರಾದರು — ಎಲ್ಲರೂ.

ಸ್ವಾತಂತ್ರ್ಯ

ಭಾರತವು ಸ್ವತಂತ್ರವಾಗಿದೆ. ಆ ಸ್ವಾತಂತ್ರ್ಯ ಸಾಧನೆ ಅದರೊಂದಿಗೆ ಹಲವಾರು ಸಮಸ್ಯೆಗಳನ್ನೂ ತಂದಿರುತ್ತದೆ. ವ್ಯಕ್ತಿ, ಸಮಾಜ, ಹಾಗೂ ರಾಷ್ಟ್ರಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸಹಜವೂ ಆಗಿದೆ. ಆದರೆ ಭಾರತವು ಅದರ ಸ್ವಾತಂತ್ರ್ಯವನ್ನು ಸಂಧಾನದ ಮೂಲಕ, ಒಪ್ಪಂದದ ದ್ವಾರದಿಂದ ಪಡೆಯಿತು. ಈ ಚಾರಿತ್ರಿಕ ಘಟನೆಯು ಅದರ ಇಂದಿನ ಪ್ರಧಾನ ಪ್ರಶ್ನೆಗಳ ಮೂಲಕಾರಣವಾಗಿದೆ. ಉದಾಹರಣೆಗಾಗಿ ಕಾಶ್ಮೀರ ಪ್ರಶ್ನೆ, ರಕ್ಷಣೆಗಾಗುವ ಅಧಿಕ ವೆಚ್ಚ ಕಾಮನ್‌ವೆಲ್ತ್ ಒಕ್ಕೂಟದ ಸದಸ್ಯತನ—ಇವುಗಳೆಲ್ಲಾ ಈ ಚಾರಿತ್ರಿಕ ಸಂಬಂಧದಿಂದ ಹುಟ್ಟಿಕೊಂಡು ಬಂದಿವೆ. ಅದರೊಂದಿಗೆ ಹೊಸತಾಗಿ ಭಾರತದಿಂದಲೇ ಸಿಡಿದು ಬಂದು ಸ್ಥಾಪನೆಯಾಗಿರುವ ಪಾಕಿಸ್ಥಾನವು ಭಾರತದ ದೊಡ್ಡ ಚಾರಿತ್ರಿಕ ಪ್ರಶ್ನೆಯೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ನೆರೆಕರೆಯ ಈ ರಾಷ್ಟ್ರದೊಂದಿಗೆ ಭಾರತವು ಅನುಸರಿಸಬೇಕಾದ ನೀತಿ—ಪಾಕಿಸ್ಥಾನವು ಭಾರತದಲ್ಲಿರುವ 50 ಮಿಲಿಯ ಮುಸ್ಲಿಮರ ಹಕ್ಕು ಬಾಧ್ಯತೆಗಳ ಬಗ್ಗೆ ತನ್ನ ಪ್ರಜೆಗಳಿಗಿಂತಲೂ ಹೆಚ್ಚಿನ ವಾತ್ಸಲ್ಯ ತೋರಿಸುವ ನೀತಿ—ಇವೆಲ್ಲದರ ಮುಖ್ಯ ಕಾರಣವು 1947ರಲ್ಲಿ ಭಾರತದ ಮುಂದಾಳುಗಳು ಕೈಗೊಂಡ ನಿರ್ಣಯದಲ್ಲಿದೆ ಎಂಬುದನ್ನು ಅಲ್ಲಗಳೆಯುವುದಾದರೂ ಹೇಗೆ? ಯುದ್ಧಾನಂತರ (1939—45) ಏಸ್ಯಾದಲ್ಲಿ ಅನೇಕ ರಾಷ್ಟ್ರಗಳು ಸ್ವತಂತ್ರವಾದುವು. ಆದರೆ ಅವುಗಳೆಲ್ಲಾ ರಾಷ್ಟ್ರೀಯವಾದ ತಳಹದಿಯಲ್ಲಿ ತಲೆಯೆತ್ತಿ ನಿಂತುವು. ಅವುಗಳು ಅನೇಕ ವರ್ಷಗಳ ಹೋರಾಟದ ಬಳಿಕ ಸಾಮ್ರಾಜ್ಯಶಾಹಿಗಳಿಂದ ವಿಮೋಚನೆಗೊಂಡವು. ಆದರೆ ಭಾರತ ಪ್ರತ್ಯೇಕಗೊಂಡ ಪಾಕಿಸ್ಥಾನದ ಕಥೆಯೇ ಬೇರೆ "ರಾಷ್ಟ್ರೀಯ ತಳಹದಿಯ ಬದಲು ಧಾರ್ಮಿಕ ಬುನಾದಿಯ ಮೇಲೆ ರಚಿಸಲ್ಪಟ್ಟ ಏಕ ಮಾತ್ರ ರಾಜ್ಯವು ಪಾಕಿಸ್ಥಾನವಾಗಿದೆ." ಮುಸ್ಲಿಂ ರಾಷ್ಟ್ರೀಯ ವಾದವು—ದ್ವಿರಾಷ್ಟ್ರ ತತ್ವವು ವಸಾಹತು ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ನೆರವಿಂದ ಬೆಳೆದು ಬಂದ ನೀತಿಯಾಯಿತು. (Y. U. Gankovsky & L. R. Gordon Polonskaya: A History of Pakistan, 1964) ಈ ನೀತಿಗೆ ಹಿಂದೂ ಜಾತೀಯವಾದಿಗಳೂ ಬಲಿ ಬಿದ್ದಿದ್ದರು. ಕಾಂಗ್ರೆಸ್ ಮುಂದಾಳುಗಳೂ ಬ್ರಿಟಿಷ್ ಧೋರಣೆಯ ಪರಿಣಾಮಗಳನ್ನು ದೂರ ದೃಷ್ಟಿಯಿಂದ ಪರಿಶೀಲಿಸಲು ಅಸಮರ್ಥರಾಗಿದ್ದರು. ಇದರ ಪರಿಣಾಮವೇ ಪಾಕಿಸ್ಥಾನ, ದೇಶ ವಿಭಜನೆ—ಅದರೊಂದಿಗೆ ಸ್ವಾತಂತ್ರ್ಯ ಪ್ರಾಪ್ತಿಯೂ ಆಯಿತು.

ದ್ವಿತೀಯ ಯುದ್ಧಾನಂತರ ಭಾರತದ ಸ್ವಾತಂತ್ರ್ಯದ ಬೇಡಿಕೆಯನ್ನು ಮುಂದೂಡುವ ಪ್ರಶ್ನೆ ಅಸಾಧ್ಯವೆಂದೇ ಬ್ರಿಟಿಷ್ ಸರಕಾರ ತಿಳಿದಿರಬೇಕು. ಯುದ್ಧಾನಂತರ ಬ್ರಿಟನ್ ಜಗತ್ತಿನ ಪ್ರಬಲ ರಾಷ್ಟ್ರಗಳ ಪಂಕ್ತಿಯಲ್ಲಿ ಉಳಿಯಲಿಲ್ಲ. ಈಗಾಗಲೇ ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯವನ್ನು ಪಡೆಯುವ ಹಲವು ಸಂದರ್ಭಗಳನ್ನು ಕಳೆದುಕೊಂಡಿತ್ತು. 1921ರಲ್ಲಿ ಆ ಬಳಿಕ 1930ರ ಅವಧಿಯಲ್ಲಿ, ಅನಂತರ ಕಾಂಗ್ರೆಸ್ ಪಕ್ಷಗಳು 1939ರಲ್ಲಿ ರಾಜೀನಾಮೆ ಕೊಡದೆ 1935 ಶಾಸನದ ಪ್ರಕಾರ ಪ್ರಾಂತೀಯ ಸರಕಾರಗಳನ್ನು ನಡೆಸಿಕೊಂಡು ಹೋಗುತ್ತಿದ್ದರೆ, 1940ರ ವೈಯಕ್ತಿಕ ಸತ್ಯಾಗ್ರಹ ಹಾಗೂ 1942 "ಭಾರತದಿಂದ ತೊಲಗಿರಿ' ಚಳುವಳಿಯನ್ನು ನಡೆಸದಿರುತ್ತಿದ್ದರೆ 1947ರಲ್ಲಿ ನಡೆದ ದುರಂತವನ್ನು ದೇಶ ತಪ್ಪಿಸಬಹುದಿತ್ತು. ಕ್ರಿಪ್ಸ್ ಕೊಡುಗೆಯನ್ನು ಕೂಡಾ ನಿರಾಕರಿಸದಿರುತ್ತಿದ್ದರೆ ಯುದ್ಧಾನಂತರ ಬ್ರಿಟಿಷ್ ಸರಕಾರವು ದೇಶದ ಪ್ರಧಾನ ಪಕ್ಷದೊಡನೆ ಸಂಧಾನ ಮಾಡಬೇಕಾಗಿ ಬರುತ್ತಿತ್ತು. ಅದೊಂದು ಅತ್ಯಂತ ದೊಡ್ಡ ಅವಕಾಶವೇ ಆಗಿತ್ತು. ಭಾರತದ ರಾಜಕೀಯದಲ್ಲಿದ್ದು, ಅನಂತರ ದೂರ ಸರಿದು ಆಧ್ಯಾತ್ಮ ಸಾಧನೆಯಲ್ಲಿದ್ದ ಶ್ರೀ ಅರವಿಂದ ಘೋಷರೂ ಕ್ರಿಪ್ಸ್ ಕೊಡುಗೆಯನ್ನು ಒಪ್ಪಬೇಕೆಂದು ತಿಳಿಸಿದ್ದರು. ಈ ಅವಕಾಶವನ್ನೂ ಗಾಂಧಿಯವರೂ ಕಾಂಗ್ರೆಸ್ ಪಕ್ಷವೂ ನಿರಾಕರಿಸಿದವು. ಕಾಂಗ್ರೆಸ್ ಮಂತ್ರಿಮಂಡಲಗಳ ರಾಜೀನಾಮೆ ಮುಸ್ಲಿಂಲೀಗಿಗೆ ತನ್ನ ಪ್ರಭಾವ ಬೀರಲು ಬಹಳ ಅವಕಾಶ ಕೊಟ್ಟಿತು. ಕಾಂಗ್ರೆಸ್ಸಿನ ಬಗ್ಗೆ ಬ್ರಿಟಿಷರು ತೀರಾ ಕಠಿಣವಾದ ಧೋರಣೆಯನ್ನು ಅನುಸರಿಸಿದರು. ಜಾಗತಿಕ ಪರಿಸ್ಥಿತಿಯೇ ಪ್ರತಿಕೂಲವಾಗಿರುವಾಗ ಕಾಂಗ್ರೆಸ್ ಪಕ್ಷವು ಸತ್ಯಾಗ್ರಹ ಚಳುವಳಿಗಿಳಿದುದು ಪರಿಸ್ಥಿತಿಯನ್ನು ತೀರಾ ವಿಷಮಗೊಳಿಸಿತು.

ಈ ಮಧ್ಯೆ ಮುಸ್ಲಿಂ ಬೇಡಿಕೆಯ ಪರಿಹಾರವನ್ನು ಹುಡುಕುವ ಪ್ರಶ್ನೆಯನ್ನು ಮುಂದಾಳುಗಳು ನಿರಾಕರಿಸುವಂತಿರಲಿಲ್ಲ. ಮುಸ್ಲಿಮರ ಆಶೆ ಆಕಾಂಕ್ಷೆಗಳನ್ನು ಈಡೇರಿಸಲು ಅವರು ಅಧಿಕ ಸಂಖ್ಯೆಯಲ್ಲಿರುವ ಪ್ರಾಂತಗಳ ಪುನರ್ ವಿಂಗಡಣೆ ಮಾಡಿ ಅವುಗಳಿಗೆ ಸ್ವಾಯತ್ತತೆಯ ಅಧಿಕಾರ ಕೊಡುವ ಪರಿಹಾರವನ್ನು ರಾಜಾಜಿಯವರು ಗಾಂಧೀಯವರಿಗೆ ಸೂಚಿಸಿದ್ದರು. (1946ರ ಏಪ್ರಿಲಿನ ಪೂನಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಠರಾವು) ಆಜಾದರ ಠರಾವು ಕೂಡಾ ಇದರ ಮುಂದುವರಿಕೆಯೇ ಆಗಿತ್ತು. ಇದರಿಂದಾಗಿ ಭಾರತವು ಒಂದು ಮಾದರಿಯ ಸೋವಿಯಟ್ ಸರಕಾರವಾಗುತ್ತಿತ್ತು, ಈ ಒಕ್ಕೂಟವು ಮುಸ್ಲಿಂ ಹಾಗೂ ಮುಸ್ಲಿಮೇತರ ರಾಜ್ಯಗಳ ಒಂದು ಒಕ್ಕೂಟವಾಗುತ್ತಿತ್ತು. ಆದರೆ ಅದು ಇಡೀ ಭಾರತವನ್ನು ಪಾಕಿಸ್ಥಾನೀಕರಿಸುವುದೆಂದು ಸರದಾರ ಪಟೇಲರು ಅಭಿಪ್ರಾಯ ಪಟ್ಟಿದ್ದರು. ಜೂನ್ 14, 1947ರ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಅದೇ ಅಭಿಪ್ರಾಯವನ್ನು ಪಡೆದಿತ್ತು. ಇಂತಹ ಅಭಿಪ್ರಾಯ ಹಿಂದೂ ಜಾತೀಯವಾದದ ಪುನರುಜ್ಜೀವನವನ್ನು ಪ್ರತ್ಯಕ್ಷ ಪಡಿಸಿತು. ಆದುದರಿಂದಲೇ ಪಾಕಿಸ್ಥಾನವು ಭಾರತದ ಪ್ರಾಯಶ್ಚಿತ್ತ—ಸ್ವಾತಂತ್ರ್ಯವನ್ನು ಪಡೆಯಲು ಮಾಡಬೇಕಾಗಿ ಬಂದ ಪರಿಹಾರವೆಂದು ಮ. ತಯೆಬುಲ್ಲಾರವರು ಬಗೆದಿರುವರು. (M. Tayyebulla: Between the Symbol And the Idol, 1964) ಪಟೇಲರೂ ಪಂಡಿತ ನೆಹರೂರವರು ಮೌಂಟ್ ಬೇಟನ್ ಕೊಡುಗೆಯನ್ನು ಸ್ವೀಕರಿಸಲು ಮುಖ್ಯಕಾರಣಕರ್ತರು. ಅದರೊಂದಿಗೆ ಈ ಕಾರ್ಯದ ಪ್ರಧಾನ ಶಿಲ್ಪಿಗಳು ಚರ್ಚಿಲರು ಎಂದು ತಯೆಬುಲ್ಲಾ ಬರೆದಿರುವರು.

ಮೌಂಟ್ ಬೇಟನ್ ಕೊಡುಗೆ— ದೇಶ ವಿಭಜನೆ ಹಾಗೂ ಸ್ವಾತಂತ್ರ್ಯ ಪ್ರಾಪ್ತಿ —ಇವು ಬ್ರಿಟಿಷ್ ಸರಕಾರವು ಅನಿವಾರ್ಯವಾಗಿ ಕೈಗೊಳ್ಳಬೇಕಾದ ಪ್ರಸಂಗವಾಯಿತು. ದ್ವಿತೀಯ ಯುದ್ಧಾನಂತರ ಬ್ರಿಟಿಷ್ ಸಾಮ್ರಾಜ್ಯವು ಮೊದಲಿನಂತೆಯೇ ಉಳಿಯುವುದು ಅಸಾಧ್ಯವಾಯಿತು. ಆದರೆ ಬ್ರಿಟಿಷರು ಅಧಿಕಾರ ವರ್ಗಾಯಿಸಲು ಸಿದ್ಧರಾಗಿದ್ದಿಲ್ಲ. ಅವರು ಹಿಂದಿನಿಂದ ಅನುಸರಿಸಿದ ಧೋರಣೆ- ಮುಸ್ಲಿಂ ಮತ್ತು ಇತರ ಅಲ್ಪಸಂಖ್ಯಾಕರ ಪ್ರಶ್ನೆಯನ್ನು ಎದುರಿಗಿರಿಸಿ ಪ್ರತಿಯೊಂದು ಘಟನಾತ್ಮಕವಾದ ಸುಧಾರಣೆಯನ್ನು ತಡೆಯುವ ನೀತಿ— ಬದಲು ಮಾಡಲಾರದೆ ಹೋದರು. ಅವ್ಯಾವಹಾರಿಕ ಹಾಗೂ ಅಸಾಧ್ಯವೆಂದು ತಿಳಿಯಲಾಗಿದ್ದ ಪಾಕಿಸ್ಥಾನ— ಜಿನ್ನಾರವರಿಗೂ ಆಶ್ಚರ್ಯವೆಂದು ಕಂಡ ಹೊಸ ರಾಜ್ಯ ರಚನೆಯು ಇದರ ಪ್ರತಿಫಲವಾಗಿ ಜನನಕ್ಕೆ ಬರುವಂತಾಯಿತು. ಈ ಕಾರ್ಯದಲ್ಲಿ ಬ್ರಿಟಿಷ ಅಧಿಕಾರಿಗಳು ದೇಶದ ಸ್ವಾತಂತ್ರ್ಯವನ್ನು ತಡೆಯುವ ಉದ್ದೇಶದಿಂದ ಮುಸ್ಲಿಂಜಾತೀಯತೆಯನ್ನು ಬೆಳೆಸಿಕೊಂಡು ಬಂದಿದ್ದ ಧೋರಣೆಯು ಯುದ್ಧಾನಂತರ ಬ್ರಿಟಿಷ್ ಸರಕಾರವನ್ನೇ ದಂಗುಬಡಿಸುವಂತಾಯಿತು! ಪಾಕಿಸ್ಥಾನದ ರಚನೆಯು ಜಿನ್ನಾರವರಿಂದಲೇ ಅಸಾಧ್ಯವಾಗುತ್ತಿತ್ತು. ಅದಕ್ಕೆ ಈ ಮೊದಲೇ ಬುನಾದಿಯನ್ನು ಹಾಕಲಾಗಿತ್ತು. 1906ರಿಂದ 1935ರ ವರೆಗಿನ ಘಟನಾ ಸುಧಾರಣೆಗಳು ಇದಕ್ಕೆ ನಾಂದಿಯಾಗಿದ್ದುವು. ಅವುಗಳು ಧಾರ್ಮಿಕ ಹಾಗೂ ಜಾತೀಯ ತೀವ್ರಗಾಮಿ ಧೋರಣೆಗೆ ಆಹ್ವಾನವಾಗಿದ್ದವು. ಇದರ ಪ್ರತಿಫಲವಾಗಿ ಕಾರ್ಯರೂಪಕ್ಕೆ ಬಂದ ಚುನಾವಣಾ ಪದ್ಧತಿಯು ದೇಶ ವಿಭಜನೆಗೆ ದಾರಿಮಾಡಿಕೊಟ್ಟಿತು. (Peter Stursburg: Agreement in Principle.)

1947ರ ಚಾರಿತ್ರಿಕ ಬದಲಾವಣೆಯಲ್ಲಿ ಜಿನ್ನಾರವರ ವರ್ತನೆಯನ್ನು ಅಲ್ಲಗಳೆಯುವುದು ಅಸಾಧ್ಯ. ಭಾರತ ಉಪಖಂಡದ ಚರಿತ್ರೆಯಲ್ಲಿ ಜಿನ್ನಾರವರ ವರ್ತನೆ ಹಾಗೂ ನೀತಿಯನ್ನು ಪರಿಶೀಲಿಸುವುದು ಅಗತ್ಯ. ಜಿನ್ನಾರವರ ರಾಜಕೀಯ ತೀರಾ ವಿಚಿತ್ರ. ಅದು ವಿಶ್ಲೇಷಣೆಗೆ ನಿಲುಕುವಂತಹದ್ದೂ ಅಲ್ಲ. ಜಿನ್ನಾರವರು ಕಾಂಗ್ರೆಸ್ಸಿನ ಮುಂದಾಳುಗಳಲ್ಲೊಬ್ಬರಾಗಿದ್ದರು. ಅವರು ಡಾ|ಅನ್ನಿಬೆಸೆಂಟರ ಹೋಂ ರೂಲ್ ಚಳವಳದಲ್ಲಿಯೂ ಸಕ್ರಿಯ ಕಾರ್ಯಕರ್ತರಾಗಿದ್ದರು. ಅವರು ಗೋಖಲೆಯವರ ಶಿಷ್ಯರಾಗಿಯೂ ಇದ್ದರು. ಅಂದಿನ ಭಾರತದ ರಾಜಕೀಯದಲ್ಲಿ ಜಿನ್ನಾರವರು ತನ್ನದೇ ಆದ ಸ್ಥಾನ ಹಾಗೂ ಕೀರ್ತಿಯನ್ನು ಗಳಿಸಿದ್ದರು. ಭಾರತದ ರಾಜಕೀಯ ಕ್ಷೇತ್ರಕ್ಕೆ ಗಾಂಧಿಯವರು ಪ್ರವೇಶಿಸಿದ ಬಳಿಕ—ಅವರು ತೀವ್ರಗಾಮಿ ಧೋರಣೆಯನ್ನು ತಂದಾಗ ಜಿನ್ನಾರವರು ಅದು ತೀರಾ ತಪ್ಪಾದ ದಾರಿಯೆಂದೂ ಅದು ನಕಾರಾತ್ಮವಾದ ನೀತಿಯೆಂದೂ ಕಾಂಗ್ರೆಸ್ಸನ್ನು ತ್ಯಜಿಸಿ ದೂರ ಸರಿದರು. 1930ರ ಸಾಲಿನಲ್ಲಿ ದುಂಡು ಮೇಜಿನ ಪರಿಷತ್ತಿನ ಕಾಲದಲ್ಲಿ ಗಾಂಧಿಯವರ ಹಾಗೂ ಕಾಂಗ್ರೆಸ್ಸಿನ ನೀತಿಯನ್ನು ಜಿನ್ನಾರವರು ವಿರೋಧಿಸಿದರು. ಈಗ ಮೊದಲೇ ಜಿನ್ನಾರವರು ಖಿಲಾಫತ ಚಳುವಳಿಯನ್ನೂ ವಿರೋಧಿಸಿದ್ದರು. ಅವರು ಅಸಹಕಾರ ಚಳುವಳಿಯ ಬಗ್ಗೆಯೂ ತೀರಾ ಅತೃಪ್ತಿಯನ್ನು ಸೂಚಿಸಿದ್ದರು. ಜಿನ್ನಾರವರು ಆಗ ಹಿಂದೂ ಮುಸ್ಲಿಂ ಮೈತ್ರಿಯ ರಾಯಭಾರಿಯಾಗಿದ್ದರು. ಮೊಂಟೆಗ್ಯೂ ಚೆಮ್ಸ್‌ಫರ್ಡ್ ಸುಧಾರಣೆಗಳ ಬಳಿಕ ಅವರ ಅತೃಪ್ತಿ ಅಧಿಕವಾಯಿತು. ಗಾಂಧಿಯವರು ದೇಶದ ಸಾಮಾನ್ಯ ಪ್ರಜೆಗಳನ್ನು ಸಾಮೂಹಿಕ ಚಳುವಳಿಗಿಳಿಸಿದರು. ಅಂತಹ ಆಂದೋಲನದ ನಾಯಕತ್ವವನ್ನು ನಿರ್ವಹಿಸಿಕೊಂಡರು. ಆದರೆ ಜಿನ್ನಾರವರು ಕೇವಲ ಘಟನಾತ್ಮಕ ಧೋರಣೆಯನ್ನೇ ಅನುಸರಿಸಿದರು. 1923ರಲ್ಲಿ ಜಿನ್ನಾರವರು ಅವಿರೋಧವಾಗಿ ಕೇಂದ್ರ ಎಸೆಂಬ್ಲಿಗೆ ಆಯ್ಕೆಗೊಂಡಾಗ "ತಾನು ಸರಕಾರದಲ್ಲಿ ಯಾವ ಹುದ್ದೆಯನ್ನೂ ಸ್ವೀಕರಿಸುವುದಿಲ್ಲ. ನನ್ನ ಏಕ ಮಾತ್ರ ಉದ್ದೇಶವು ದೇಶದ ಸೇವೆಯನ್ನು ಮಾಡುವುದಾಗಿದೆ" ಎಂದು ಹೇಳಿದ್ದರು. ಮರುವರ್ಷ ಲಾಹೋರಿನಲ್ಲಿನ ಮುಸ್ಲಿಂ ಲೀಗಿನ ಸಭೆಯಲ್ಲಿಯೂ "ಹಿಂದೂ ಮುಸ್ಲಿಮರು ಐಕ್ಯ ಸಾಧಿಸಿದ ಮರು

ಬಂದ ಬಗೆ

ಲೇಖಕರು:
ಶ್ರೀ ಮ. ರಾಜೀವ,
ಲೆಕ್ಚರರ್, ಯಂ. ಈ. ಯಸ್. ಟೀಚರ್ಸ್ ಕಾಲೇಜು,
ಬೆಂಗಳೂರು.

ದಿನವೇ ಭಾರತವು ಸ್ವಾತಂತ್ರ್ಯವನ್ನು ಪಡೆಯುವುದು" ಎಂದು ಘೋಷಿಸಿದ್ದರು. ಆದರೆ 1924ರ ಬಳಿಕ ಜಿನ್ನಾರ ಅಭಿಪ್ರಾಯ ಬದಲಾಯಿತು. 1930ರಲ್ಲಿ ಸೇರಿದ ದುಂಡುಮೇಜಿನ ಪರಿಷತ್ತುಗಳಲ್ಲಿ ನಡೆದ ಮಾತುಕತೆಗಳು ಜಿನ್ನಾರವರ ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನುಂಟು ಮಾಡಿದುವು. ಇಪ್ಪತ್ತು ವರ್ಷಗಳಿಂದ ತಾನು ತಳೆದಿದ್ದ ಅಭಿಪ್ರಾಯಕ್ಕಿಂತ ತೀರಾ ಹೊಸತಾದ ನಿಲುವನ್ನು ಜಿನ್ನಾರವರು ಕೈಕೊಂಡರು. 'ಭಾರತದ ಜನರು ಒಂದೇ ತಳಕಟ್ಟಿನ ಜನಾಂಗವೆಂಬ ಕಲ್ಪನೆಯ ತಳಹದಿಯಲ್ಲಿ ರಾಜ್ಯಾಂಗ ಘಟನೆಯನ್ನು ತಯಾರಿಸುವುದಾಗಲೀ ಅಥವಾ ಬ್ರಿಟಿಷ್ ಪ್ರಜಾಸತ್ತಾತ್ಮಕ ತತ್ವಗಳನ್ನು ಭಾರತಕ್ಕೆ ಅನ್ವಯಿಸುವುದಾಗಲೀ—ಇವೆರಡು ದಾರಿಗಳೂ ದೇಶವನ್ನು ಅಂತಃಕಲಹದ ದಾರಿಗೊಯ್ಯುವಂತಹದ್ದಾಗಿದೆ" ಎಂದು ನುಡಿದರು. "ನನ್ನ ಜೀವನದ ಅತ್ಯಂತ ದೊಡ್ಡ ಆಘಾತವನ್ನು ಅಲ್ಲಿ (ದುಂಡುಮೇಜಿನ ಪರಿಷತ್ತಿನಲ್ಲಿ) ಪಡೆದೆ. ಹಿಂದೂ ಮನೋವೃತ್ತಿ ಹಿಂದೂ ಮನಸ್ಸು ಐಕ್ಯದ ಆಸೆಯು ಸಾಧ್ಯವಿಲ್ಲವೆಂದು ನನಗೆ ಖಚಿತಪಡಿಸಿದೆ ನನ್ನ ದೇಶದ ಬಗ್ಗೆ ನಾನು ತುಂಬಾ ನಿರಾಶೆಯುಳ್ಳವನಾಗಿದ್ದೇನೆ ...."ಎಂದು ಜಿನ್ನಾರವರು 1938ರಲ್ಲಿ ಅಲಿಘರದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದರು. ಆದರೂ ಜಿನ್ನಾರವರಿಗೆ ಭಾರತವು "ನನ್ನ ದೇಶ"ವಾಗಿತ್ತು. (Hector Bolitho: Jinnah, 1954) 1937ರಲ್ಲಿ ಕೂಡಾ ಚುನಾವಣೆಗಳು ನಡೆಯುವ ಮೊದಲು ಜಿನ್ನಾರವರು "ಹಿಂದುಗಳೂ, ಮುಸ್ಲಿಮರು ಪ್ರತ್ಯೇಕವಾಗಿ ಸಂಘಟಿಸಲ್ಪಟ್ಟರೆ ಅವರಿಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡುವರು.. ನಾನು ಎಂಭತ್ತುಮಿಲಿಯ ಜನರಿಗೆ (ಮುಸ್ಲಿಂ) ಸಹಾಯ ಮಾಡುತ್ತಿದ್ದೇನೆ. ಅದರಿಂದಾಗಿ ಅವರು ರಾಷ್ಟ್ರೀಯ ಹೋರಾಟಕ್ಕೆ ಹೆಚ್ಚು ಸಹಾಯಕರಾಗುವರೆಂದು ನಂಬಿದ್ದೇನೆ "ಎಂದು ಜಿನ್ನಾರವರು ಹೇಳುತ್ತಿದ್ದರು. 1937ರ ಚುನಾವಣೆಯ ಬಳಿಕ ಕಾಂಗ್ರೆಸ್ಸ್ ಪಕ್ಷವು ತಮ್ಮೊಂದಿಗೆ ಸಹಕರಿಸುವುದೆಂದು ಜಿನ್ನಾರವರು ತಿಳಿದಿದ್ದರು. 1937ರಲ್ಲಿ ಕಾಂಗ್ರೆಸ್ ಪಕ್ಷವು ಉತ್ತರ ಪ್ರದೇಶದಲ್ಲಿ ಮುಸ್ಲಿಂಲೀಗಿನೊಂದಿಗೆ ಸಂಪುಟ ರಚಿಸುವುದೆಂದು ಜಿನ್ನಾರವರು ತಿಳಿದಿದ್ದರಂತೆ. ನೆಹರೂರವರು ಇದಕ್ಕೆ ತೀರಾ ವಿರುದ್ಧವಾಗಿದ್ದರು. ಇದುವೇ ಲೀಗಿನ ತೀವ್ರಗಾಮಿ ಧೋರಣೆ—ಪಾಕಿಸ್ತಾನದ ಕೇಳಿಕೆ ಹಾಗೂ ದೇಶ ವಿಭಜನೆಗೆ ಕಾರಣವಾಯಿತೆಂದು ಮೌಲಾನಾ ಆಜಾದರು ಅಭಿಪ್ರಾಯ ಪಟ್ಟಿದ್ದಾರೆ. (A.K. Azad: India Wins Freedom.) ಕಾಂಗ್ರೆಸಿನ ಈ ಧೋರಣೆಯಿಂದ ಜಿನ್ನಾರವರು ಕಿಡಿಕಿಡಿಯಾದರು. ಕಾಂಗ್ರೆಸ್ಸ್ ಸರಕಾರಗಳು 1939ರಲ್ಲಿ ರಾಜಿನಾಮೆ ಕೊಟ್ಟಾಗ ಅವರು ಮುಸ್ಲಿಮರಿಗೆ "ವಿಮೋಚನೆಯ ದಿನ"ವನ್ನು ಆಚರಿಸಲು ಕರೆಕೊಟ್ಟರು! 1940ರಲ್ಲಿ ಪಾಕಿಸ್ತಾನದ ಕೇಳಿಕೆಯೂ ಬಂದಿತು. ಒಮ್ಮೆ "ಹುಚ್ಚು ಹುಡುಗರ ಸ್ವಪ್ನ" ಹಾಗೂ "ಕೇವಲ ಕಲ್ಪನೆ" "ಅವ್ಯಾವಹಾರಿಕವೂ" 'ಅಸಂಗತವೂ'ಆಗಿರುವ ಕೇಳಿಕೆಯನ್ನು ಜಿನ್ನಾರವರು ಧೈರ್ಯದಿಂದ ಮುಸ್ಲಿಮರ ಮುಂದಿರಿಸಿದರು! ಕಾಂಗ್ರೆಸ್ ಪಕ್ಷವು ಬ್ರಿಟಿಷರಿಗೆ 'ದೇಶವನ್ನು ಬಿಟ್ಟುತೊಲಗಿರಿ' ಎಂದು ಘೋಷಿಸಿದಾಗ ಜಿನ್ನಾರವರು "ದೇಶವನ್ನು ವಿಭಜಿಸಿ,ತೊಲಗಿರಿ" ಎಂದು ಸಾರಿದರು. 1939ರಲ್ಲಿ ಕಾಂಗ್ರೆಸ್ಸ್ ಸರಕಾರಗಳು ರಾಜಿನಾಮೆಯಿತ್ತುದೊಂದು ರಾಜಕೀಯ ಪ್ರಮಾದವಾಗಿತ್ತು. ಅದು ಮುಸ್ಲಿಂಲೀಗ್ ಅನಂತರ ಅನುಸರಿಸಿದ ದುರಂತ ರಾಜಕೀಯಕ್ಕೆ ರಾಜಮಾರ್ಗವನ್ನು ಮಾಡಿಕೊಟ್ಟಿತು. (Frank Moraes: Yonder One World) 1940ರ ವೈಯುಕ್ತಿಕ ಸತ್ಯಾಗ್ರಹವೂ 1942 "ಕ್ವಿಟ್ ಇಂಡಿಯಾ' ಚಳುವಳಿಯೂ' ದೇಶವನ್ನು ಮುಂದಿನ ದುರಂತಕ್ಕೆ ದೂಡಿದುವು. 1942ರ ಚಳುವಳಿಯೂ ಸಂಘಟನೆ ಹಾಗೂ ಸರ್ವ-ಪಕ್ಷ ಮುಂದಾಳುಗಳಿಲ್ಲದೆ ಕೊನೆಗೊಳ್ಳುವಂತಾಯಿತು. ಕ್ರಿಪ್ಸ್ ಯೋಜನೆಯನ್ನು ನಿರಾಕರಿಸಿ ಕಾಂಗ್ರೆಸ್ ಪಕ್ಷವು ಒಂದು ಸುಸಂಧಿಯನ್ನು ಕಳಕೊಂಡಿತು. 1946ರ ಕ್ಯಾಬಿನೆಟ್ ಮಿಶ್ಯನ್ ಯೋಜನೆಯು ಅಖಂಡ ಭಾರತವನ್ನು ಉಳಿಸುವ ಅತಿ ಕೊನೆಯ ಪ್ರಯತ್ನವಾಗಿತ್ತು. ಅ ವರೆಗೂ ಪಾಕಿಸ್ತಾನ ಕೇವಲ ಕಾಲ್ಪನಿಕ ಕೇಳಿಕೆಯೇ ಆಗಿತ್ತು. ದೇಶ ವಿಭಜನೆಯ ಒಪ್ಪಿಗೆಯನ್ನು ಕಾಂಗ್ರೆಸ್ ಒಪ್ಪಿಯೇ ಇರಲಿಲ್ಲ. ಬ್ರಿಟಿಷ್ ಸರಕಾರವೂ ಅಂತಹ ಅಂತಿಮ ನಿರ್ಣಯವನ್ನು ಮಾಡಿದ್ದಿಲ್ಲ. 1946ರ ಮಾರ್ಚ್ ತಿಂಗಳ ವರೆಗೆ ದೇಶ ವಿಭಜನೆಯ ಯಾವ ಯೋಜನೆಯೂ ಸರಕಾರದ ಮುಂದೆ ಬರಲಿಲ್ಲ. ಈ ನಡುವೆ ದೇಶದ ಚರಿತ್ರೆಯಲ್ಲಿಯೇ ಬಹುಶಃ ಭಯಂಕರವಾದ ನರಹತ್ಯೆ ನಡೆಯಿತು. ಬ್ರಿಟಿಷ್ ಆಳ್ವಿಕೆಯ ಅಂತ್ಯದಲ್ಲಾದ ಈ ದುರಂತವು ಪೂರ್ವ ವಿಭಾಗದ ಸೈನ್ಯಾಧಿಕಾರಿ ಸರ್ ಫ್ರಾನ್ಸಿಸ್ ಟಕರ್‌ರವರು ತನ್ನ (While Memory Serves) (1946) ಎಂಬ ಪುಸ್ತಕದಲ್ಲಿ ವಿವರಿಸಿದ್ದಾರೆ. ಬಂಗಾಳ, ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ಹಿಂದೆಂದೂ ಆಗದ ಪ್ರಮಾಣದ ಹಿಂಸಾಮಯ ನರಹತ್ಯೆಯು ನಡೆದು ಲಕ್ಷಗಟ್ಟಲೆ ಹಿಂದೂ, ಮುಸ್ಲಿಮರು ಮೃತರಾದರು. ಬ್ರಿಟಿಷ್ ಸರಕಾರವು ಈ ಅನಿರೀಕ್ಷಿತ ಘಟನೆಗಳಿಂದಾಗಿ ಅವಸರದ ನಿರ್ಣಯವನ್ನು ಕೈಗೊಳ್ಳಬೇಕಾಯಿತು. ದೇಶವಿಭಜನೆಯು ಭಾರತವನ್ನು ಅರಾಜಕತೆಗಿಳಿಸುವುದೆಂದು ದೃಢವಾಗಿ ನಂಬಿದ್ದ ಲಾರ್ಡ್ ವೇವಲರನ್ನು ಬ್ರಿಟಿಷ್ ಸರಕಾರವು ಹಿಂದಕ್ಕೆ ಕರೆದುಕೊಂಡಿತು. ಭಾರತಕ್ಕೆ ಲಾರ್ಡ್ ಮೌಂಟ್‌ಬೇಟನರು ವೈಸರಾಯಿಯಾಗಿ ನೇಮಕಗೊಂಡರು. ಮೌಂಟ್‌ಬೇಟನ್ ಕೊಡುಗೆಯು ದೇಶವಿಭಜನೆಯೇ ಭಾರತದ ಸಮಸ್ಯೆಗೆ ಸರಿಯಾದ ಹಾಗೂ ಸೂಕ್ತ ಪರಿಹಾರವೆಂದು ಸೂಚಿಸಿತು.

ಈ ಪರಿಹಾರದ ಸೂಕ್ಷ್ಮ ಪರಿಶೀಲನೆಯು ಅಗತ್ಯ. 1857ರಿಂದಲೇ ಮುಸ್ಲಿಮರ ಭವಿಷ್ಯದ ಬಗ್ಗೆ ಭಿನ್ನಾಭಿಪ್ರಾಯಗಳು ಪ್ರಾರಂಭವಾಗಿದ್ದುವು. ಆದರೆ ಮುಸ್ಲಿಮರು ಪ್ರತ್ಯೇಕ ಜನಾಂಗ, ಆದುದರಿಂದ ದೇಶದ ಸ್ವಾತಂತ್ರ್ಯವೆಂದರೆ ಮುಸ್ಲಿಮರು ತಮ್ಮದೇ ಆದ ಸ್ವತಂತ್ರರಾಷ್ಟ್ರದರಚನೆಯನ್ನು ಮಾಡುವುದು ಎಂದು ಯಾರೂ ಘೋಷಿಸಿದ್ದಿಲ್ಲ. ದ್ವಿರಾಷ್ಟ್ರ ಕಲ್ಪನೆಯು ರೂಪುಗೊಂಡುದು 1940ರಲ್ಲಿ. ಹಿಂದೂ ಹಾಗೂ ಮುಸ್ಲಿಮರಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳಿಗೆ ಬ್ರಿಟಿಷರು ಸಾಕಷ್ಟು ಬೆಂಬಲ ಕೊಟ್ಟಿದ್ದರು. ಅವರ ಧೋರಣೆಯು ಈ ಭಿನ್ನಾಭಿಪ್ರಾಯಗಳನ್ನು ಹೆಚ್ಚಿಸುತ್ತಾ ಹೋಗಿತ್ತು. ದ್ವಿತೀಯ ಯುದ್ಧಾವಧಿಯಲ್ಲಿ ಪಾಕಿಸ್ತಾನ ಚಳುವಳಿಯು ಬಲಗೊಂಡು ಹೊಸ ರೂಪ ತಳೆಯಿತು. ಕಾಂಗ್ರೆಸ್ಸಿನ ಮುಂದಾಳುಗಳು ಜೈಲಿನಲ್ಲಿದ್ದರು. ಬ್ರಿಟಿಷ್ ಸರಕಾರವು ಯುದ್ಧದಲ್ಲಿ ಮಗ್ನವಾಯಿತು. ದೇಶದ ಸ್ವಾತಂತ್ರ್ಯದ ಪ್ರಶ್ನೆಯನ್ನು ಜನರ ವಿಮೋಚನ ಹಾಗೂ ಸ್ವಾಧೀನತೆಯಲ್ಲ ತರಬೇತಿಯೆಂದು ತಿಳಿಯುವ ಬದಲು ಬ್ರಿಟಿಷರು "ಧಾರ್ಮಿಕ ತಳಹದಿಯಲ್ಲಿ ದೇಶ ವಿಭಜನೆಯನ್ನು ಮಾಡಲು ಸಿದ್ಧರಾದರು. ಬ್ರಿಟಿಷ್ ಸರಕಾರವು ಮುಸ್ಲಿಂ ಲೀಗಿನ ಸಮ್ಮತಿಯ ವಿನಾ ಯಾವ ಘಟನಾತ್ಮಕವಾದ ಬದಲಾವಣೆಯನ್ನು ತರುವುದಿಲ್ಲವೆಂಬ ಭರವಸೆಯನ್ನು ಕೊಟ್ಟಿತ್ತು. ಅನಂತರವೇ ಲೀಗಿನ ಮುಂದಾಳುಗಳು ವಾಯವ್ಯ ಗಡಿನಾಡು ಪ್ರಾಂತ, ಸಿಂಧ್ ಮತ್ತು ಅಸ್ಸಾಮಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಳಗಳ ರಾಜಿನಾಮೆಗಳ ಬಳಿಕ ಪ್ರಾಂತೀಯ ಸರಕಾರ ರಚಿಸಲು ಒಪ್ಪಿಕೊಂಡವು. ಈ ಮಧ್ಯೆ ಅನೇಕ ಹಿಂದೆಂದೂ ನಡೆಯದಂತಹ ಜಾತೀಯ ಕಲಹಗಳು ಪ್ರಾರಂಭವಾದುವು. ಅವು ಮುಸ್ಲಿಂಲೀಗಿನ ವಾದವನ್ನು —ಹಿಂದುಗಳೂ ಮುಸ್ಲಿಮರು ಒಂದೇ ಸರಕಾರದ ಅಧಿಕಾರಕ್ಕೊಳಗಾಗಿ ಬಾಳುವುದು ಅಸಾಧ್ಯ—ಎಂಬ ಭಾವನೆಯನ್ನು ಬೆಂಬಲಿಸಿದುವು.

ದೇಶದ ದೊಡ್ಡ ರಾಜಕೀಯ ಪಕ್ಷವಾದ ಕಾಂಗ್ರೆಸು ಮುಸ್ಲಿಂಲೀಗಿನ ಹಾಗೂ ಬ್ರಿಟಿಷ್ ಸರಕಾರದ ಒತ್ತಾಯಕ್ಕೆ ಯಾಕೆ ತಲೆಬಾಗಿತ್ತು? ದೇಶವಿಭಜನೆಯ ಹಾಗೂ ದ್ವಿರಾಷ್ಟ್ರವಾದವನ್ನು ವಿರೋಧಿಸುತ್ತಿದ್ದ ಈ ರಾಷ್ಟ್ರೀಯ ಪಕ್ಷವು ಕೊನೆಗೇಕೆ ಸಂಧಾನಕ್ಕೊಪ್ಪಿತು.? ಕಾಂಗ್ರೆಸ್ಸಿನ ಮುಂದಾಳುಗಳು ಅನೇಕ ವರ್ಷಗಳಿಂದ ಮುಸ್ಲಿಂ ಪ್ರಶ್ನೆಯನ್ನು ಯಾವ ಘಟನಾತ್ಮಕ ವಿಧಾನದಿಂದವಾದರೂ ಬಗೆಹರಿಸಲು ಅಸಮರ್ಥರಾದುದೇ ಇದರ ಮುಖ್ಯವಾದಕಾರಣ. ರಾಜಗೋಪಾಲಾಚಾರಿಯವರು ಇದನ್ನು 1942ರಲ್ಲಿಯೇ ಸೂಚಿಸಿದ್ದರು. ಲಾರ್ಡ್ ಮೌಂಟ್‌ಬೇಟನರು ಬಲಯುತವಾದ ಕೇಂದ್ರ ಸರಕಾರದ ಒಕ್ಕೂಟ ರಚಿಸಲು ಇದೊಂದೇ ಮುಖ್ಯ ಪರಿಹಾರವೆಂದು ಸೂಚಿಸಿದ್ದರು. ನೆಹರೂ ಮತ್ತು ಪಟೇಲರು ಇದುವೇ ಅತ್ಯುತ್ತಮವಾದ ದಾರಿಯೆಂದು ಮೌಂಟ್ ಬೇಟನ್ ಯೋಜನೆಯನ್ನು ಕೂಡಲೇ ಒಪ್ಪಿಕೊಂಡರು. "ಪಾಕಿಸ್ತಾನದ ಕೇಳಿಕೆಯನ್ನು ಮನ್ನಿಸದಿರುವುದರ ಪ್ರತಿಕ್ರಿಯೆ ಅಂತಃಕಲಹ"ವಾಗುವುದೆಂದು ಬ್ರಿಟಿಷ್ ಸರಕಾರಕ್ಕೆ ಎಚ್ಚರಿಕೆ ಕೊಟ್ಟರು. ಕಾಂಗ್ರೆಸ್ಸಿನ ಮುಂದಾಳುಗಳು ದೇಶದ ಗಂಭೀರ ಸ್ಥಿತಿಯನ್ನು ಅರ್ಥ ಮಾಡಿಕೊಂಡು ದೇಶ ವಿಭಜನೆಯನ್ನು ಸೂಚಿಸುವ ಠರಾವನ್ನು ಮಾರ್ಚ್ 8, 1947ರಲ್ಲಿ ಮಂಜೂರು ಮಾಡಿದರು. ನೆಹರೂರವರು ಬಹುಶಃ ಮೌಂಟ್‌ಬೇಟನ್ ದಂಪತಿಗಳ ಪ್ರಭಾವದಿಂದ ಈ ನಿರ್ಣಯ ಕೈಗೊಂಡಿರಬಹುದು. ತನ್ನ ಮುದಿತನವೂ ಈ ನಿರ್ಣಯಕ್ಕೆ ಕಾರಣವಾಗಿರಬಹುದೆಂದೂ ನೆಹರೂರವರೇ ಬ್ರೆಚರ್‌ರವರಿಗೆ 1960ರಲ್ಲಿ ತಿಳಿಸಿದ್ದಾರೆ.(Nehru A Poletical Biography Michael Brecher) ಬ್ರಿಟಿಷರು ನೆಹರೂರವರೇ ಮುಂದಿನ ಪ್ರಧಾನಿಯೆಂದು ಈ ಮುಂಚೆಯೇ ನಿಶ್ಚಯ ಮಾಡಿಕೊಂಡಿದ್ದರು. ಭಾವೀ ಪ್ರಧಾನಿಯ ಬಗ್ಗೆ ಬ್ರಿಟನಿನಲ್ಲಿ ಶ್ರೀ ಕೃಷ್ಣ ಮೆನನ್ ಸಾಕಷ್ಟು ಪ್ರಚಾರವನ್ನು ಮಾಡಿದ್ದರು. ನೆಹರೂರವರು ದೇಶ ವಿಭಜನೆಯ ಯೋಜನೆಯನ್ನೊಪ್ಪಲು ಅವರೂ ಮುಖ್ಯ ಕಾರಣ ಪುರುಷರಾಗಿದ್ದರು. (Saradhar Sinha: Indian Independence in Perspective) ತನ್ನ ರಾಜಕೀಯಜೀವನಕಾಲದಲ್ಲೆಲ್ಲಾ ದ್ವಿರಾಷ್ಟ್ರತತ್ವವನ್ನು ವಿರೋಧಿಸಿದ್ದ ಗಾಂಧಿಯವರು ಮೌಂಟ್‌ಬೇಟನ್ ಯೋಜನೆಯನ್ನು ಹೇಗೆ ಒಪ್ಪಿದರು? ಗಾಂಧಿಯವರು ಜೂನ್ 4, 1947ರಲ್ಲಿ ಕೂಡಾ ತನ್ನ ಪ್ರಾರ್ಥನಾ ಸಭೆಯಲ್ಲಿ ಇದನ್ನು ವಿರೋಧಿಸಿದ್ದರು. ಬ್ರಿಟಿಷ್ ಸರಕಾರಕ್ಕೆ ಗಾಂಧಿಯವರ ಭಯವಿತ್ತು. ಮೌಂಟ್‌ಬೇಟನ್ ಆದುದರಿಂದ ಬಹಳ

(ಇಪ್ಪತ್ತೊಂಭತ್ತನೇ ಪುಟ ನೋಡಿರಿ)

ಜಯ್ ಕಿಸಾನ್

(ಹದಿನೈದನೇ ಪುಟದಿಂದ)

ಸ್ವೃತ್ತಿದ್ದಾರೆ. ಕಮ್ಯೂನಿಸ್ಟರು ಬೆಳೆಸಿಟ್ಟಿರುವ ವಿಷ ಕನ್ಯೆಯ ಹಾವಭಾವ, ಬೆಡಗು ಬಿನ್ನಾಣಕ್ಕೆ ಕಾಂಗ್ರೆಸಿಗರು ಬಹಳಷ್ಟು ಲಭವಾಗಿ ಮಾರು ಹೋಗುತ್ತಾರೆ. ಕೊನೆಯಲ್ಲಿ ಒಪ್ಪಂದದ ಹೆಸರಿನಲ್ಲಿ ಚಕ್ಕಂದದ ಮಾತಿಗಾರಂಭಿಸುತ್ತಾರೆ. ಆದರೆ ಈ ದೇಶದಲ್ಲಿ ಅನೇಕಾನೇಕ ದೇಶಭಕ್ತರಿದ್ದಾರೆಂಬುದನ್ನು ಯಾರೂ ಮರೆಯುವಂತಿಲ್ಲ. ತಾತ್ಕಾಲಿಕ ಭಾಷಾ ಉದ್ವೇಗಕ್ಕೆ ಬಲಿಯಾಗದ ಭಾರತೀಯರಿದ್ದಾರೆಂಬುದನ್ನು ಅಲ್ಲಗಳೆಯುವದು ಅಸಾಧ್ಯ. ಅವರಿಗೆ ಮೈಸೂರೂ ಒಂದೇ, ಮಹಾರಾಷ್ಟ್ರವೂ ಒಂದೇ. ಅವೆಲ್ಲಾ ಸೇರಿಯಾಗುವದೇ ಅಖಂಡ ಭಾರತ. ಕಮ್ಯೂನಿಸ್ಟರ ಕುತಂತ್ರಕ್ಕೆ ಬಲಿಯಾಗದಿರುವವರು ಅವರು. ಕಮ್ಯೂನಿಸ್ಟ್ ಕಾಳಿಂಗವನ್ನು ಮರ್ದನಗೈಯುವ ಗೋಪಾಲಕೃಷ್ಣರವರು. ಏನೇ ಆಗಲಿ ಕಮ್ಯೂನಿಸ್ಟ್ ಚೈನಾದ ಆಕ್ರಮಣದೆದುರು ಭಾರತ ತಲೆಬಾಗುವಂತಾಗಬೇಕೆಂದು ಕಮ್ಯೂನಿಸ್ಟರು ಹೂಡುತ್ತಿರುವ ಮೋಸಕ್ಕೆ ಮಾರು ಹೋಗದ ಜನತೆ ಒಕ್ಕಟ್ಟಿನಿಂದ ಭಾರತದ ಗಡಿಯ ಸಂರಕ್ಷಣೆಗೆ ಮುಂದೆ ಬರುವದರಲ್ಲಿ ಸಂದೇಹವೇ ಇಲ್ಲ. ಇಂದು ಬೇಕಾಗಿರುವದು ಮಹಾರಾಷ್ಟ್ರ ಏಕೀಕರಣ ಸಮಿತಿ ಅಥವಾ ಕರ್ನಾಟಕ ಏಕೀಕರಣ ಸಂಘವಲ್ಲ—ಬೇಕಾಗಿರುವದು ಭಾರತ ಏಕೀಕರಣ ಸಂಘ ಅಥವಾ ಭಾರತೀಯ ಜನತೆಯ ಮಹಾ ಸಂಘ. ಅಂತೆಯೇ ಬೇಕಾಗಿರುವದು ಸಂಪೂರ್ಣ ಮಹಾರಾಷ್ಟ್ರ ಸಮಿತಿ ಅಥವಾ ಸಂಪೂರ್ಣ ಕರ್ನಾಟಕ ಸಮಿತಿ ಅಲ್ಲ-ಬೇಕಾಗಿರುವದು ಅಖಂಡ ಭಾರತ ಅಥವಾ ಸಂಪೂರ್ಣ ಭಾರತ ಸಮಿತಿ. ಇದನ್ನು ಗಮನದಲ್ಲಿಟ್ಟುಕೊಂಡು ನಾವು—ಭಾರತೀಯರೆನ್ನುವ—ಒಂದೇ ಒಂದು ಸತ್ಯವಾಕ್ಯಕ್ಕೆ ಒಳಗಾಗಿ ಒಕ್ಕಟ್ಟಿನಿಂದ ಆಕ್ರಮಣಗಾರರನ್ನು ಓಡಿಸೋಣ. ಆಗ ಮಾತ್ರ ಜಯ ನಮಗೆ ಕಟ್ಟಿಟ್ಟ ಗಂಟು.......

ಯೋಚನೆಯ ಅಲೆ ಅವ್ಯಾಹತವಾಗಿ ಬಂದು ಅಪ್ಪಳಿಸುತ್ತಿದೆ ದಡಕ್ಕೆ....ಮಳೆ ನಿಂತಿದೆ ನಮ್ಮ ಗದ್ದೆ ಏನಾಗಿದೆ ನೋಡೋಣ.

ಅದೋ ಅಲ್ಲಿ ಮಂಳುಒಳ್ಳ ಹೊಕ್ಕಿದೆ. ಅಂದರೆ ಅಲ್ಲಿಯ ಹುಣಿ ಗಟ್ಟಿಯಾಗಿರಲಿಲ್ಲ. ಹೌದು ನೂರಕ್ಕೆ ನೂರರಷ್ಟು ಸತ್ಯ. ದೇಶದ ಗಡಿ ಎಲ್ಲಿ ಭದ್ರವಾಗಿಲ್ಲವೋ ಅಲ್ಲಿ ನಡೆಯುತ್ತದೆ ಆಕ್ರಮಣ ಅತಿ ಸುಲಭವಾಗಿ. ಅದನ್ನು ಸರಿಪಡಿಸಿದ್ದಾಯಿತು....

ನೈಸರ್ಗಿಕ ಹುಣಿ ಇರುವ ಗದ್ದೆಯಾದರೂ ಇಷ್ಟು ವಿಶಾಲವಾಗಿರುವ ಗದ್ದೆಯನ್ನು ಸಾಗುವಳಿ ಮಾಡುವದು ಕಷ್ಟ. ಮಧ್ಯದಲ್ಲಿ ಅಲ್ಲಲ್ಲಿ ಚಿಕ್ಕ ಪುಟ್ಟ ಹುಣಿಗಳನ್ನು ಮಾಡಿ ಜೋರಾಗಿ ಫಲ ತೆಗೆಯೋಣ...ಅಂತೆಯೇ ಹಲವಾರು ಚಿಕ್ಕ ಹುಣಿಗಳನ್ನು ಸಿದ್ಧಗೊಳಿಸಿದ್ದಾಯಿತು. ಹಾ! ಪುನಃ ಆಕಾಶ ಕಪ್ಪಾಯಿತು. ಮಳೆ ಧಾರಾಕಾರವಾಗಿ ಬರಲಾರಂಭವಾಯಿತು. ಆದರೂ ಧೈರ್ಯದಿಂದ ಬೀಜ ಬಿತ್ತಿ ಮನೆಗೋಡೋಣ.

ಯೋಚನೆಯ ಕುದುರೆಯ ಬೆನ್ನು ಹತ್ತೋಣ. ಅಬ್ಬಾ! ಅದೆಲ್ಲೆಲ್ಲಿಗೋ ನಮ್ಮನ್ನೊಯ್ದು ಬಿಡುತ್ತದೆ!...

ಸ್ವಲ್ಪ ಸಮಯದ ನಂತರ ಗದ್ದೆಯತ್ತ ಹೋಗಿ ನೋಡಿದಲ್ಲಿ ಅನೇಕ ಚಿಕ್ಕ ಪುಟ್ಟ ಹುಣಿಗಳು ಮಣ್ಣಿನಲ್ಲಿ ಒಂದಾಗಿಬಿಟ್ಟು, ಕುರುಹಿಗೂ ಏನನ್ನೂ ಇಟ್ಟಿರುವದಿಲ್ಲ, ಒಂದೆರಡು ಪುಟ್ಟ ಹುಣಿಗಳು ಉಳಿದಿರುವಲ್ಲಿ ಆ ಸ್ಥಳದಲ್ಲಿ ಪೈರೇ ಇಲ್ಲವಲ್ಲಾ! ಕೆಲವೆಡೆ ಇವೆಯಾದರೂ ಅವು ಒಣಗಿ ಕಡ್ಡಿಯಾಗಿವೆ. ಅಯ್ಯಯ್ಯೋ! ಏನಾಯಿತಿದು...ಆಕಾಶ ಕಪ್ಪಾಯಿತು. ಮಾಡಿನಡಿಯಲ್ಲಿ ತಂಗಿದ್ದ ಯೋಚನಾ ಕುದುರೆಯ ಮೇಲೇರಿ ಕುಳಿತಾಯಿತು.

ಹೌದು, ಹೌದು, ನೈಸರ್ಗಿಕ ಗಡಿ,ಸ್ಪಷ್ಟ ಸೀಮೆ ಇರುವ ಭಾರತವನ್ನು ತುಂಡಾಗಿ ಮಾಡಿ, ನಾಗಾ ಲೇಂಡ್, ಮಿಝೋ ಲೇಂಡ್, ದ್ರಾವಿಡನಾಡು, ಗೋವಾಲೇಂಡ್ ಮಾಡಿದರೂ ಚೆನ್ನಾಗಿರುವದಿಲ್ಲ. ಕೇವಲ ಕೆಲ ಪುಢಾರಿಗಳು ತಮ್ಮ ಮೆರೆದಾಟಕ್ಕಾಗಿ ಇಂತಹ ತಂತ್ರಗಳನ್ನು ಹೂಡಬಹುದು ಅಷ್ಟೇ. ರಾಷ್ಟ್ರೀಯತೆಯ ವಿಪುಲ ಮಳೆಬಂದಾಗ ಇಂತಹ ಮಿಥ್ಯಾರಾಷ್ಟ್ರೀಯ ಅಡೆತಡೆಗಳು ಅದರಲ್ಲಿ ಒಪ್ಪೆ ತಪ್ಪೆಯೂ ಉಳಿಯದೆ ಕೊಚ್ಚಿಕೊಂಡು ಹೋಗಿ ನೈಜರಾಷ್ಟ್ರೀಯತೆ ಗಂಗೆಯಲ್ಲಿ ಒಂದಾಗಿ ಬಿಡುತ್ತವೆ. ಆಗ ಅಲ್ಲಿ ವಿಭಜನಾವಾದಿಗಳ, ಪ್ರತ್ಯೇಕತಾವಾದಿಗಳ ಸ್ವರಕೇಳಿಬರಲಾರದು. ಕಟ್ಟೆ ಮೇಲೆಯೇ ಬುದ್ಧಿಬರುವ ಕಾಂಗ್ರೆಸ್ಸಿಗರಿಗೆ ಅದು ಆರಂಭದಲ್ಲಿ ಅರ್ಥವಾಗುವದೇ ಇಲ್ಲ. ದಿಲ್ಲಿಯ ದರಬಾರಿನ ಮೋಹದಿಂದಾಗಿ ಅವರು ಸುಲಭವಾಗಿ ಚಿಕ್ಕ ಹುಣಿಗಳ ತಯಾರಿಗೆ ಸಿದ್ಧ ಅನ್ನುತ್ತಾರೆ. ಪಾಕಿಸ್ತಾನ ನಿರ್ಮಾಣದ ನಂತರ ಕೂಡಾ ದುರದೃಷ್ಟವಶಾತ್ ಅವರಿಗೆ ಬುದ್ಧಿ ಬಂದಿರುವದಿಲ್ಲ. ಮುಂಚಿನ ಪ್ರಕಾಶದಂತೆ ಅವರಲ್ಲಿ ಅನುಭವದ ಜ್ಞಾನೋದಯವಾದರೂ ಅದು ತಾತ್ಕಾಲಿಕವೇ. ಕೇರಳ—ಕರ್ನಾಟಕಗಳಂತಹ ಪ್ರಾಂತ್ಯಗಳೂ ಹೋರಾಟ ನಡೆಸುತ್ತಿರುವದನ್ನು ಕಂಡು, ನಾಗಾಲೇಂಡ್—ವಿಧರ್ಭಾದಿ ಪ್ರತ್ಯೇಕ ರಾಜ್ಯಗಳಿಗಾಗಿ ಹರಮಾಟ ನಡೆಸುತ್ತಿರುವದನ್ನು ಕಂಡೂ, ದ್ವಿರಾಷ್ಟ್ರನಂಬುವ ಕಾಂಗ್ರೆಸ್ ನಾಯಕರು ಪಂಜಾಬಿ ಸುಭಾದ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದರು. ವಿಭಜನೆಯ ಊನದಿಂದ ನರಳುತ್ತಿರುವ ಪಂಜಾಬಿನ ಕುರುಪಿನ ಮೇಲೆ ಇನ್ನೊಂದು ಬೊಕ್ಕೆಯೇ ಬಂದುಬಿಟ್ಟಿತು. ಸೀಮೆಯ ಸ್ಥಳ ವೆಂಬುದನ್ನು ಅವರು ಗಣನೆಗೆ ತೆಗೆದುಕೊಳ್ಳದೆ ಅಧಿಕಾರದ ಆಂಗಳಕ್ಕಾಗಿ ಆಟವಾಡಿದರು.

ಹೇಗೂ ಆಳಿದುಳಿದ ಸಸಿ ಸೊರಗಿ ನಿಂತಿದೆ; ದೊಡ್ಡದಾಗಿದೆ—ಅದಿರು ಕಂಗೊಳಿಸುತ್ತಿದೆ......

ಅಬ್ಬಾ! ಅದನ್ನು ಸುಮ್ಮಗೆ ಬಿಡುವಂತಿಲ್ಲ ಅದನ್ನು ಕಾಪಾಡಬೇಕಾಗಿದೆ. ಕಾಡು ಹಂದಿ, ಹಕ್ಕಿ ಮುಂತಾದವುಗಳಿಂದ ಅದನ್ನು ರಕ್ಷಿಸಬೇಕು. ಪೈರಿನ ನಾಶಕ್ಕಾಗಿ ಅವು ಹರಿಕಪಿಸುತ್ತಿವೆ. ದಿಢೀರನೆ ಎಲ್ಲಿದ್ದೋ ಮೋಡ ಓಡಿಬಂತು. ಅಲ್ಲಿಂದ ಕಾಲ್ಕಿತ್ತು ಓಡಿ ಬಂದು ಯೋಚನಾ ಕುದುರೆಯನ್ನೇರಿದುದೇ ತಡ. ಅಬ್ಬಾ! ಅದರ ವೇಗವೇ! ನಮ್ಮನ್ನದು ಅದೆಲ್ಲೆಲ್ಲಿಗೋ ಕೊಂಡೊಯ್ಯುತ್ತದೆ.

ಅಬ್ಬಾ! ಎಂತಹ ಭೀಕರ ಕಾಡು. ಗಂದಿಗಳು! ಆಹಾ! ಎಂತಹ ಮನಮೋಹಕ ಚಿಲಿಪಿಲಿ ಹಕ್ಕಿಗಳು. ಇಲ್ಲವೇ ಮತ್ತೆ.... ಕ್ರೂರ ಇಸ್ಲಾಮ್ ಹಾಗೂ ಕಮ್ಯೂನಿಸಂ ಕಾಡು ಹಂದಿಗಳು, ತಳಕು ಬೆಳಕಿನ ಕ್ರಿಶ್ಚಿಯನರ ಮುತ್ತಿಗೆ. ಶಾಲೆ—ಆಸ್ಪತ್ರೆ—ಮನಸೂರೆಗೈಯುವ ವಿಧಾನಗಳು...

ಕೊನೆಯಲ್ಲಿ ಕೊಯ್ಲು ನಡೆದ ನಂತರ ಸಿಕ್ಕಿದ್ದಾದರೂ ಏನು? ಆದರೆ ಅದಕ್ಕಾಗಿ ತೆಗೆದು ಕೊಂಡಿರುವ ಸಾಲ, ಕೊಡಬೇಕಾಗಿರುವ ತೆರಿಗೆ ನಮ್ಮನ್ನು ಊರಿನಲ್ಲಿರಲು ಬಿಡುತ್ತದೆಯೋ?....

ಹಾಗಾದರೆ ಭಾರತ ತೆಗೆದು ಕೊಂಡಿರುವ ಕೋಟಿ ಕೋಟಿ ರೂಪಾಯಿ ಸಾಲದ ಹೊರೆಯಿಂದ ಪಾರಾಗುವದೆಂತು....

ಯೋಚಿಸುತ್ತಿದ್ದಂತೆ ಹಳ್ಳಿಬಿಟ್ಟು ದಿಲ್ಲಿಗೆ ಧಾವಿಸ ಬೇಕಾಗ ಬರುತ್ತದೆ. ಅಲ್ಲಿ ಅದೇ ಜೋರಾಗಿ ಕೇಳಿಬರುತ್ತಿದೆ—ಜೈ ಜವಾನ್—ಜೈ ಕಿಸಾನ್. ಒಂದಕ್ಕೊಂದು ಸಂಬಂಧಿಸಿರುವ ಘೋಷಣೆಗಳು. ಆದರಿಂದ ಕೇವಲ ಕಂಠಶೋಷಣೆಗಳಾಗಿ ಪರಿಣಮಿಸಿವೆ. ಇಲ್ಲದಿದ್ದಲ್ಲಿ ಜೈಕಿಸಾನ್ ಎಂದೊಡನೆ ನಮ್ಮ ಕಣ್ಮುಂದೆ ಬರುವ ಚಿತ್ರವಾದರೂ ಹೇಗಿರುತಿತ್ತು? ತನ್ನ ಬೆಳೆಯನ್ನು ರಕ್ಷಿಸಲು ಭದ್ರ ಬೇಲಿ ಹಾಕಿ, ಕಣ್ಣಿಗೆ ಎಣ್ಣೆ ಹಾಕಿಕೊಂಡು ಕಾಯುತ್ತಾನೆ ಕಿಸಾನ್. ಘೋಷಣಾ ಕರ್ತೃಗಳು ಆ ರಾತ್ರಿ ಮಾಡುತ್ತಿದ್ದಾರೇನು? ಭದ್ರ ರಕ್ಷಣೆಗೆ ಏರ್ಪಾಟಿದ್ದಲ್ಲಿ ಪುನಃ ಪುನಃ ಶತ್ರುಗಳು ಹೇಗೆ ಆಕ್ರಮಣ ನಡೆಸಲು ಸಾಧ್ಯ? ಇಲ್ಲಿ ಬಂದು ನಮ್ಮ ಕಾವಲುಗಾರರನ್ನು ಕದ್ದೊಯ್ಯಲೆಂತು ಸಾಧ್ಯ? ಬೇಲಿಯೇ ಹೊಲವನ್ನು ಮೇಯುತ್ತಿದಂತೆ! ಅದನ್ನಲ್ಲವೇ ನಾವು ಕಾಣುತ್ತಿರುವದು? ನಮ್ಮ ರಕ್ಷಣಾ ಮಂತ್ರಿಗಳು ಮಾಡುತ್ತಿರುವದೇನು? ಶ್ರೀ ಕೃಷ್ಣ ಮೆನೊನ್ ಎಲ್ಲಾ ಹಾಳು ಮಾಡಿದರೆನ್ನಲಾಗುತ್ತಿದೆ. ಅವರು ಕಮ್ಯೂನಿಸ್ಟ್ ಸಹಚರರಿರುವದರಿಂದ ಹಾಗೆ ಮಾಡಲೂ ಬಹುದು. ಬಾದ ರಕ್ಷಣಾ ಮಂತ್ರಿಗಳಿಗೇನಾಯಿತು? ಅವರಿಗೆ ಶಕ್ತಿಯಕ್ಕಿಂತ ಕಾರವಾರ ಮುಖ್ಯವೇನು? ನೇಫಾಕ್ಕಿಂತ ನಿಪ್ಪಾಣಿ ಮುಖ್ಯವೇನು? ಬೆರುಬಾರಿ ಪಾಕಿಸ್ಥಾನಕ್ಕೆ ಹೋದರೂ ಚಿಂತೆ ಇಲ್ಲ, ಬೆಳಗಾಂವ್ ಕರ್ನಾಟಕದಲ್ಲಿರಬಾರದು! ಇಂತಹ ರಕ್ಷಣಾ ಮಂತ್ರಿಗಳ ರಕ್ಷಣೆಯಲ್ಲಿರುವ ಭಾರತವನ್ನು ಯಾರು ಕಾಪಾಡುವರೋ?

ಹೀಗೆ "ಜಯ್ ಕಿಸಾನ್" ಕೇವಲ ಹೊಟ್ಟೆಗಾಗಿರುವ ಒಂದು ಒಣ ಘೋಷಣೆಯಲ್ಲಿ ಅರ್ಥಪೂರ್ಣ ತಾರಕ ಮಂತ್ರವಿದೆ. ದಿಲ್ಲಿಯ ದೊರೆಗಳು ಅದರ ನಿಜವಾದ ಅರ್ಥವನ್ನರಿತು ಅದನ್ನು ಜನತೆಗೆ ತಿಳಿಸಬೇಕು. ಕೃಷಿಕನು ಗದ್ದೆಯನ್ನು ಚೆನ್ನಾಗಿಟ್ಟುಕೊಟ್ಟು, ಬೇಲಿ ಹಾಕಿ, ಉತ್ತಮ ಬೀಜಬಿತ್ತಿ, ಕಾಡುಪ್ರಾಣಿ, ಹಕ್ಕಿ ವಗೈರೆಗಳಿಂದ ಪೈರನ್ನು ರಕ್ಷಿ

ಶ್ರಾವಣ ಮಾಸ

— ಪಲ್ಲವಿ —

ಶ್ರಾವಣ ಮಾಸವಿದು ಭುವಿಯಲಿ
ಹಬ್ಬದ ಕೂಟವಿದು,
ಶ್ರಾವಣ ಮಾಸವಿದು!

(೧)

ಶ್ರಾವಣ ಗೌರಿಯ ಪೂಜೆಯ ಮಾಟ
ಹೋಳಿಗೆ ಕಡುಬಿನ ರುಚಿಯಾದ ಊಟ!
ಊರಿನ ನಾರಿಯರೊಂದೆಡೆ
ಕೂಡುವ ಕೂಟ
ಜೀಕಾಡಿ ಜೀಕಾಡಿ ಜೋಕಾಲಿ
ಆಡುವ ಆಟ||

(೨)

ನಾಗರ ಪಂಚಮಿ ನಾಡಿನ ಹಬ್ಬ
ಸಂತೋಷ ಉಕ್ಕಿಸಿ ಹಾಡುವ ಕಬ್ಬ|
ನಾಗರ ಪೂಜಿಪ ನಾರಿಯರ ಉಬ್ಬ
ಹರಿದೋಡಿ ಹೋಯಿತೊ
ಹೃದಯದ ಮಬ್ಬ||

(೩)

ಜಿಟಿ ಜೀಟಿ ಜಿಟಿ ಜೀಟಿ
ಸುರಿಯುವ ಮಳೆಯು
ಹೊಲತುಂಬ ನೆಲತುಂಬ
ಹಸಿರಿನ ಬೆಳೆಯು!
ರೈತನು ತೆಗೆಯುವ ಹಸನಾದ ಕಳೆಯು
ಸುತ್ತೆಲ್ಲ ಹರಡಿದೆ ಸೌಂದರ್ಯ ಸುಳಿಯು||

(೪)

ಮೋಹನ ದಾಸನು ಮಾಡಿದ ಸಾಸ
ಭಾರತ ಬಂಧನ ಬಿಡಿಸಿದ ಮಾಸ|
ಜಗದೊಡೆಯ ಭುವಿಗಿಳಿದ
ಮಾನುಷ ವೇಷ
ಯೋಗಿ ಅರವಿಂದನುದಿಸಿದ
ಶ್ರಾವಣ ಮಾಸ||

—ದಿಗಂಬರ ಜೋಶಿ, ಬೆಳಗಾವಿ.

ಸುಮಂತೆದಿಲ್ಲೀಶರು ಕೂಡಾ ಭಾರತದ ಗಡಿಯನ್ನು ರಕ್ಷಿಸಬೇಕು,ಶಸ್ತ್ರಸಜ್ಜಿತ ಸೈನ್ಯವನ್ನಿಡಬೇಕು. ಅರಾಷ್ಟ್ರೀಯ ಹಾಗೂ ದುಷ್ಟ ವೃತ್ತಿ ವಿಭಜನಾವಾದಿಗಳಿಗೆ ಡೆಗೊಡಬಾರದು. ಶುದ್ಧ ರಾಷ್ಟ್ರೀಯತೆಯ ಬೀಜ ಹಾಕಬೇಕು. ಅನ್ಯರ ಆಕ್ರಮಣವನ್ನೆದುರಿಸಬೇಕು. ಅಲ್ಲದೆ ಜನತೆಯನ್ನು ಎಲ್ಲಾ ದೃಷ್ಟಿಯಿಂದಲೂ ಕಾಪಾಡಬೇಕು. ಹಾಗಾದಲ್ಲಿ ಮಾತ್ರ "ಜಯ್ ಕಿಸಾನ್" ಘೋಷಣೆಯ ಅರ್ಥ ಸಾರ್ಥಕವಾದೀತು, ಭಾರತದ ಸ್ವಾತಂತ್ರ್ಯ ಉಳಿದೀತು.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್. ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ತಿರುವು-ಮುರುವು

(ಹದಿನಾಲ್ಕನೇ ಪುಟದಿಂದ)

ಸಿದ್ದ ಎಲ್ಲವನ್ನು ಕಡೆಗಣಿಸಿ ಅವನು ದುಡಿದ. ಜೀವನದ ಹಲವು ದಾರಿ-ಹಲವು ಪಂಥಗಳಲ್ಲಿ ಅತ ಚದುರಂಗದ ಆಟ ಆಡಿದ. ಛಲ, ಕಪಟ, ಮೋಸ, ಧೂರ್ತತನ ಎಂಬುದು ಯಾವುದನ್ನೂ ಗಣಿಸದೆ ಅವನು ಧನಾರ್ಜನೆ ಗೈದನು. ಅಂತೂ ಕೊನೆಗೊಂದುದಿನ ಅವನು "ನಗರದ ಶ್ರೀಮಂತರಲ್ಲಿ ಒಬ್ಬ" ಎಂದು ಗಣಿಸಲ್ಪಟ್ಟನು.

ಈಗ ಅವನು ಬಡ ಕೂಲಿಯವನಲ್ಲ, ನಗರದ ಶ್ರೀಮಂತರಲ್ಲಿ ಅವನೂ ಒಬ್ಬ. ಅವನ ಕಪಾಟುಗಳು ನೋಟು ಮತ್ತು ನಾಣ್ಯಗಳಿಂದ ತುಂಬಿದ್ದುವು. ಅವನ ತಿಜೋರಿ ಅಮೂಲ್ಯ ಮುತ್ತು—ರತ್ನಗಳಿಂದ ತುಂಬಿತ್ತು. ವಾಸಿಸಲು ಅರಮನೆಯಂತಹ ಮಹಲು ಅವನ ಬಳಿ ಇತ್ತು. ನೂರಾರು ದಾಸ ದಾಸಿಯರು ಸೇವೆಗಾಗಿ ತಮ್ಮ ಸರದಿ ಯಾವಾಗ ಬರುತ್ತದೋ ಎಂದು ಕಾಯುತ್ತಾ ನಮ್ರರಾಗಿ ಸಾಲಾಗಿ ನಿಂತಿರುತ್ತಿದ್ದರು. ಅವನ ಸವಾರಿಗಾಗಿ ಕುದುರೆ ಪಾಲಕಿಗಳಿದ್ದುವು. ಜನ ಅವನ ಮುಂದೆ ತಲೆ ತಗ್ಗಿಸಿ ನಡೆಯುತ್ತಿತ್ತು.

ಒಂದು ದಿನ ಸಾಯಂಕಾಲದ ಹೊತ್ತು ಪಾಲಕಿಯಲ್ಲಿ ಕುಳಿತು ಅವನು ತನ್ನ ವಿಶಾಲ ಮಹಲಿಗೆ ಹಿಂದಿರುಗುತ್ತಿದ್ದನು. ಇದ್ದಕ್ಕಿದ್ದಂತೆಯೇ ಅವನ ಪಾಲಕಿ ನಿಂತಿತು. "ಯಾಕ್ರೋ ನಿಂತಿರಿ?" ಎಂದು ಪಾಲಕಿಯೊಳಗಿಂದಲೇ ಬೋಯಿಗಳನ್ನು ಗದರಿ ಕೊಂಡ ಶ್ರೀಮಂತ.

'ಕೂಲಿಕಾರರ ಮದುವೆಯ ದಿಬ್ಬಣವೊಂದು ಬರುತ್ತಿದೆ ಸಾಹುಕಾರ್ರೇ' ಎಂದು ನಮ್ರ ಸ್ವರದಲ್ಲಿ ಬೋಯಿಗಳು ಉತ್ತರಿಸಿದರು

"ಒಂದು ಪಕ್ಕಕ್ಕೆ ಸರಿಯಲು ಹೇಳ್ರೋ ಅವರಿಗೆ"

"ಮಾರ್ಗ ಬರೇ ನಿಮಗೆ ಮಾಡಿಸಿದ್ದಲ್ಲ, ನಾವೂ ಇದರ ಮೇಲೆ ನಡೆಯಬಹುದು ಎಂದು ಹೇಳುತ್ತಾರೆ ಸಾಹುಕಾರ್ರೆ'

"ಬಡಿಯಿರೋ ಕಳ್ಳ ಮಕ್ಕಳಿಗೆ, ಅವರು ನಮ್ಮ ದಾರಿಯನ್ನು ಏಕೆ ತಡೆಯಬೇಕು?"

"ಕೂಲಿಕಾರರ ದಿಬ್ಬಣವನ್ನು ಶ್ರೀಮಂತನ ನೌಕರರು ಮನ ಬಂದಂತೆ ಥಳಿಸಲಾರಂಭಿಸಿದರು. ಕ್ಷಣಾರ್ಧದ ಬಳಿಕ ಅಲ್ಲಿ ಒಬ್ಬರೂ ಇರಲಿಲ್ಲ. ಆದರೆ ಅವರ ಬೊಬ್ಬೆ, ಗಲಾಟೆ, ಚೀತ್ಕಾರಗಳಿಂದ ಶ್ರೀಮಂತನ ಮಸ್ತಿಷ್ಕ ಬಿಸಿಯೇರಿತ್ತು-'ಓಹ್ ನನ್ನನ್ನು ಪಾಲಕಿಯಿಂದ ಕೆಳಗಿಳಿಸಿ, ನಾನಿಲ್ಲಿ ತುಸು ವಿಶ್ರಮಿಸಬೇಕು' ಎಂದು ಧನಿಕನು ಅಪ್ಪಣೆ ಗೈದನು.

ಕೂಡಲೇ ನೌಕರರು ಮಾರ್ಗದ ಪಕ್ಕದಲ್ಲಿಯೇ ದಿಂಬು ಲೋಡುಗಳನ್ನು ಒತ್ತರಿಸಿಟ್ಟು, ಆದರ ಮೇಲೆ ರತ್ನಗಂಬಳಿ ಹಾಸಿ ತಮ್ಮ ಧನಿಯನ್ನು ಅದರ ಮೇಲೆ ಕುಳ್ಳಿರಿಸಿದರು. ತಾನು ಇದೇ ಸ್ಥಳದಲ್ಲಿ ಹಿಂದೆಯೂ ಒಮ್ಮೆ ಕುಳಿತುಕೊಂಡಿದ್ದಂತೆ ಶ್ರೀಮಂತನಿಗೆ ಅನಿಸಿತು. ಎಲ್ಲೋ ಬಹಳ ವರ್ಷಗಳ ಹಿಂದೆ, ಪ್ರಾಯಶಃ ಹಿಂದಿನ ಜನ್ಮದಲ್ಲಿರಬೇಕು!

ಈಗ ಅವನ ಶರೀರ, ಅವನ ಪೋಷಾಕಿನೊಳಗೆ ಬೆಚ್ಚಗಿತ್ತು. ಎದುರಲ್ಲಿ ಅವನ ಸೇವಕರು ಕೈಕಟ್ಟಿಕೊಂಡು, ತಲೆ ಬಾಗಿ ನಿಂತಿದ್ದರು. ನಗರದಲ್ಲಿರುವ ರಾಜಮಹಲಿನಂತಹ ವಿಶಾಲ ಬಂಗಲೆಯ ಮಹಾದ್ವಾರ ಅವನಿಗಾಗಿ ಮಾತ್ರ ತೆರೆಯಲ್ಪಡುತಿತ್ತು.

ಇದ್ದಕ್ಕಿದ್ದಂತೆಯೇ ಅವನು ತನ್ನ ಮೃದುವಾದ ರತ್ನಗಂಬಳಿಯ ಮೇಲೆ ಪದ್ಮಾಸನ ಹಾಕಿ ಕುಳಿತು, ಆಕಾಶದತ್ತ ಮೊಗವೆತ್ತಿ— "ಹೇ ಪ್ರಭೋ, ಈ ನಿರ್ಭಾಗ್ಯ ಕೂಲಿಕಾರರ ಬಳಿ ಧನ—ಕನಕವಿಲ್ಲ, ಮನೆ-ಬಂಗಲೆಗಳಿಲ್ಲ, ನೌಕರ—ಚಾಕರರೂ ಇಲ್ಲ. ಆದರೂ ನೀನು ಇವರನ್ನು ಏಕೆ ಹುಟ್ಟಿಸಿದೆ? ಇವರು ಸದಾ ನಮ್ಮ ಮಾರ್ಗದಲ್ಲಿ ತಡೆಯಾಗಿ ನಿಂತಿರಲಿ ಎಂದೇ ಇವರನ್ನು ಹುಟ್ಟಿಸಿದೆಯೊ? ನಮ್ಮ ಅಮೂಲ್ಯ ಸಮಯವನ್ನು ಇವರು ಹಾಳು ಮಾಡಲೆಂದೇ ನೀನು ಇವರನ್ನು ಸೃಷ್ಟಿಸಿದೆಯೊ? ಜಗತ್ತಿನಲ್ಲಿ ಇವರ ಅಗತ್ಯವಾದರೂ ಏನು?' ಎಂದು ಗೊಣಗಿಕೊಂಡ ಶ್ರೀಮಂತ.

—[Sudarshan]

ರಾಮರಾಜ್ಯ

ಎಲ್ಲಿಯರಸುವೆ ಬುದ್ಧಿ
ಪಡೆಯಲಮೃತ ಸಿದ್ಧಿ;
ದಾರಿಯೇ ತಪ್ಪಾಗೆ
ಸೇರಲುಂಟೆ ಗುರಿ? ॥ ೧ ॥

ಗಾಳಿಗುದ್ದಾಟದಲಿ
ವೇಳೆ ಸತ್ತುದೆ ಬಂತು
ಕುಲವನುಳಿಸುವ ಹಸುಳೆ
ಹುಟ್ಟಲೆಂತು? ॥ ೨ ॥

ಶಾಂತಿ ಸಂಸ್ಕೃತಿಗಳ
ವರದ ಅಕ್ಷಯ ಪಾತ್ರೆ
ಇರುವ ಗುಪ್ತಿನ ಜಾಗ
ಹೊರಗಲ್ಲ ಒಳಗೆ. ॥ ೩ ॥

ಹೃದಯ ಸಾಗರದಲ್ಲಿ
ಮೋದ ಮುತ್ತಿನ ಗಿಡದಿ;
ಇಳಿದು ಎತ್ತಲಿಕೆಳಸು
ಎಲವೊ ವೇದಾಂತಿ. ॥ ೪ ॥

ರಾಮರಾಜ್ಯವ ಬಗೆವ
ರಾಜಕಾರಣ ಬುದ್ಧಿ
ಮಿದುಳಿನಲಿ ಮಿಡಿದಿರಲಿ
ಸಾಮ ಶ್ರುತಿ. ॥ ೫ ॥

ತಮದತಲೆಯೊಳುವೆಡೆ-
-ಯಲ್ಲಿ ರಾವಣ ರಾಜ್ಯ
ಪ್ರೇಮವೆದೆಯೊಳುವೆಡೆ
ರಾಮರಾಜ್ಯ. ॥ ೬ ॥

"ಸಾರಗ್"

"BICCO"
Food Products for every home.





Mfrs:-
Bharath Industrial & Canning Co. Ltd.
KAUP. S. Kanara.
Gram: BICCO
Phone: 29.

MODERN GARAGE
UDIPI
With
Service Station
attached
Undertakes OVERHAULING & MAINTENANCE OF BENZ VEHICLES
By
Technically Qualified
Benz Experts
Phone 65 / 234
Residence: 186

ಕನಸು ಕಂಡ ಒಂದು ಸತ್ಯಕತೆ

(ಹದಿನೈದನೆಯ ಪುಟದಿಂದ)

ತ್ತಲೇ ಇದ್ದ. ದೋಣಿ ಮುಂದೆ ಸಾಗುತ್ತಲೇ ಇತ್ತು. ಒಡನೆಯೇ ದೋಣಿಯನ್ನು ಮಧ್ಯಹೊಳೆಯಲ್ಲಿ ನಿಲ್ಲಿಸಿ,"ಕೃಷ್ಣ" ಎಂದ. ನಾನು ಬೆಚ್ಚಿ ಬಿದ್ದು, "ಏನು" ಎಂದೆ. 'ಇದೋ ಈ ಕಡವು ನೋಡು. ಇದರದೊಂದು ಕತೆಯೇ ಇದೆ. ಕೇಳುತ್ತೀಯಾದರೆ ಹೇಳುತ್ತೇನೆ.' ಎಂದ. ನಾನು ಕೇಳಲು ಆತುರತೋರಿಸಿದೆ. ಅವ ಹೇಳಹತ್ತಿದ.

"ಇದೋ ನೋಡು. ನಮ್ಮ ದೋಣಿ ಮುಂದೆ ಹೋಗುವುದರ ಬದಲು ತಿರುಗಹತ್ತಿದೆ. ಇದೊಂದು ಸುಳಿ. ಮಳೆಗಾಲದಲ್ಲಿ ಇದರಲ್ಲಿ ದೋಣಿ ದಾಟಿಸುವುದೇ ಬಲು ಕಷ್ಟ. ಆದರಲ್ಲೂ ನೆರೆ ಏರಿತೆಂದರೆ ಸಾಧ್ಯವೇ ಇಲ್ಲ. ಈಗಲಾದರೂ ಸುಲಭವೇನೂ ಅಲ್ಲ. ದೋಣಿ ಮುಂದೆ ಹೋಗದೆ ಸುತ್ತಿಕೊಳ್ಳುತ್ತದೆ. ಮಳೆಗಾಲದಲ್ಲಿ ನೆರೆ ಬಂದಾಗ ಈ ಹೊಳೆ ಅದ್ಭುತವಾಗುತ್ತದೆ. ಈ ಸುಳಿ ಮಾರಕವಾಗುತ್ತದೆ. ಬಹಳ ಜನರನ್ನು ಆಹುತಿ ಪಡಕೊಂಡ ಚರಿತ್ರೆಯೇ ಇದಕ್ಕಿದೆ." ಮತ್ತೆ ದೋಣಿ ಮುಂದೆ ಮುಂದೆ ಓಡಹತ್ತಿತು! ಸುಳಿಯಿಂದ ಗಾಟ ಕೊಂಡಿತು.

"ಇಲ್ಲಿ ಆಚೆ ದಡದಲ್ಲಿ ಒಬ್ಬ ದೊಡ್ಡ ಶ್ರೀಮಂತನಿದ್ದ. ಪೇದ್ರು ಎಂದರೆ ಈ ಪ್ರದೇಶಕ್ಕೆ ದೊಡ್ಡಸ್ತಿಕೆಗೆ ಹೆಸರಾಂತ ಮನುಷ್ಯ. ಸಾವಿರ ಮುಡಿ ಅಕ್ಕಿ ಹುಟ್ಟುವಳ್ಳಿ, ಹತ್ತುಸಾವಿರ ರೂಪಾಯಿ ಕ್ರಯಬಾಳುವ ತೆಂಗಿನಕಾಯಿ, ಇನ್ನೆಷ್ಟೋ ಉತ್ಪತ್ತಿ ವ್ಯಾಪಾರದಿಂದ ವರುಷ ವರುಷಕ್ಕೂ ಆಗುತ್ತಿತ್ತು ಅವನಿಗೆ. ಈ ಊರಲ್ಲಿ ಅವನೊಬ್ಬ ದೊಡ್ಡ ಶ್ರೀಮಂತ. ಅಂದು ಮಳೆಗಾಲ. ಮಳೆ ಬಹಳ ಬಂದು ಹೊಳೆ ಉಬ್ಬಿ ನೆರೆಯಾಗಿ ತನ್ನ ಅದ್ಭುತತೆಯನ್ನು ತೋರಿಸಿದ ದಿನ. ಸಾಯಂಕಾಲವಾಗುತ್ತಾ ಬಂದಂತೆ ಮಳೆ ಹೆಚ್ಚುತ್ತಾ ಹೋಗಿ ಹೊಳೆ ಭಯಾನಕವಾಯಿತು. ಅದೇ ಸಮಯಕ್ಕೆ ನಾಲ್ಕು ಜನ ತರುಣರು ಪೇದ್ರು ಮನೆಗೆ ಹೋಗುವ ನೆಂಟರು ಬಂದರು. ಅವರಿಗೆ ಹೊಳೆ ದಾಟಿ ಆಚೆ ಹೋಗಬೇಕಿತ್ತು. ಈ ಕಡವು ದಾಟಿಸುವ ಕೆಲಸ ನಮ್ಮ ತುಕ್ರ ಭಾವ ಮಾಡುತಿದ್ದ. ಅವ ಆಸುಪಾಸಿನಲ್ಲಿ ಸತ್ಯಕ್ಕೆ ಹೆಸರಾದವ. ಬೆಳಿಗ್ಗೆ ಎದ್ದವನೇ ತಾಯಿ ಸುವರ್ಣೆಗೆ ಕೈ ಮುಗಿದು ಕೆಲಸಕ್ಕೆ ಪ್ರಾರಂಭಿಸಿದರೆ ದಿನವಿಡೀ ಬಂದ ಜನರನ್ನು ಈಚೆಯಿಂದಾಚೆ ಆಚೆಯಿಂದೀಚೆ ದಾಟಿಸುತ್ತಿದ್ದನು. ಅವರು ಕೊಟ್ಟದ್ದನ್ನು ಪಡಕೊಂಡು ಅದರಿಂದ ದಿನ ಕಳೆಯುತ್ತಿದ್ದನು. ಮಧ್ಯಾಹ್ನ ಮನೆಯವರು ತಂದುಕೊಡುವ ಬುತ್ತಿಯನ್ನದಿಂದ ಹೊಟ್ಟೆ ತಣಿಸಿಕೊಂಡು ದಿನ ದೂಡುತಿದ್ದ. ಆ ದಾರಿಯಲ್ಲಿ ತಿರುಗುವವರಿಗೆಲ್ಲ ಅವನ ಮೇಲೆ ಬಹಳ ಆದರ. ಆತ ಯಾರೊಡನೆಯೂ ಅಷ್ಟು ಕೊಡಿ ಇಷ್ಟು ಕೊಡಿ ಎಂದು ಕೇಳಿದವನಲ್ಲ. ಕೊಟ್ಟದ್ದನ್ನು ಪಡಕೊಂಡು ಇದ್ದುದರಲ್ಲೇ ತೃಪ್ತನಾಗಿ ಹಗಲಲ್ಲಿ ಸೂರ್ಯದೇವರನ್ನೂ ರಾತ್ರಿಯಲ್ಲಿ ಚಂದ್ರದೇವರನ್ನೂ ನಂಬಿಕೊಂಡು ಬದುಕು ಸಾಗಿಸಿದ್ದವನ.

"ನಮ್ಮನ್ನು ಆಚೆಗೆ ಹಾಕು. ನಿನಗೆ ಬೇಕಷ್ಟು ಇನಾಮು ಕೊಡುತ್ತೇವೆ' ಎಂದರು ಬಂದವರು. ದಡಕ್ಕೆ ಎಳೆದಿಟ್ಟ ದೋಣಿಯಲ್ಲಿ ಹತ್ತಿಕೊಂಡುದೂ ಆಯಿತು. ತುಕ್ರ ಭಾವ ಅವರಿಗೆ ಎಲ್ಲವನ್ನು ವಿವರಿಸಿ ಹೇಳಿ ಈ ದಿನ ಹೊಳೆ ದಾಟುವುದು ಅಸಾಧ್ಯ ಸಂಗತಿಯೆಂದೂ, ದಾಟಲು ಹೋದರೆ ಜೀವ ಕಳೆದುಕೊಳ್ಳಬೇಕಾಗಬಹುದೆಂದೂ ತನ್ನ ಮನೆಯಲ್ಲೇ ರಾತ್ರಿ ಕಳೆಯಿರೆಂದೂ ಹೇಳಿದ. ಅವರು ತಾವು ಪೇದ್ರು ಪರ್ಬುಗಳಲ್ಲಿಗೆ ಹೋಗುವವರೆಂದೂ ಎಂತಹ ಗಂಡಾಂತರ ಬಂದರೂ ತಾವು ನೋಡಿಕೊಳ್ಳುವುದಾಗಿಯೂ ಎಷ್ಟು ದುಡ್ಡು ಬೇಕಾದರೂ ಕೊಡುತ್ತೇವೆಂದೂ ಹೇಳಿದರಂತೆ. ತುಕ್ರ ಭಾವ ಈ ಹೊಳೆಯಲ್ಲಿಯೇ ಪಳಗಿದವ. ವಿಷಯ ಸರಿಯಾಗಿಯೇ ಗೊತ್ತಿರುವಾಗ ದೋಣಿ ಹೊಳೆಗಿಳಿಸಿದರೆ ಸಾವು ನಿಶ್ಚಯವೆಂದು ತಿಳಿದಿರುವಾಗ ಅವನು ಹೋದಾನೆಯೇ? ಅವರ ಪ್ರಯತ್ನ ಪ್ರಯೋಜನಕ್ಕೆ ಬರಲಿಲ್ಲ! ಆ ಮೇಲೆ ಅವನ ಮನೆಗೆಯೇ ಹೋಗಿ ಅವರು ಕೊಟ್ಟ ತಿಂಡಿ ತಿನಸುಗಳನ್ನು ತಿಂದು ರಾತ್ರಿ ಜೆಚ್ಚನೆಯಲ್ಲಿ ಕಳೆದು ಬೆಳಿಗ್ಗೆ ಇಳಿದುಕೊಂಡ ಹೊಳೆಯನ್ನು ಅವನ ದೋಣಿಯಲ್ಲಿಯೇ ದಾಟಿ ಆಚೆ ದಡ ಸೇರಿದರು.

ಪೇದ್ರು ಇವರನ್ನು ಮಾಡಿಟ್ಟ ಅಡಿಗೆ ಅಟ್ಟಣೆಯಲ್ಲಿ ಬೆಳಗಾಗುವ ತನಕವೂ ಕಾದಿದ್ದ. ನೆಂಟರನ್ನು ಕಾಯುತ್ತ ಅವನ ಇಷ್ಟಮಿತ್ರರೂ ಹಲವರು ಸೇರಿದ್ದರು. ಬೇಕಾದಷ್ಟು ಸಿದ್ಧತೆಯನ್ನೂ ಮಾಡಿದ್ದರು. ಗೋವೆಯ ಮಾಲೂ ತರಿಸಿದ್ದರು! ಬಾರದ ನೆಂಟರನ್ನು ಕಾದು ತಯಾರಿಸಿದ್ದುದನ್ನೆಲ್ಲ ತಿಂದು ಬಾಟ್ಲೆಗಳನ್ನೂ ಬರಿದು ಮಾಡಿ ಸ್ವಲ್ಪ ರೇಗಿಯೇ ಬೆಳಗು ಮಾಡಿದ್ದರು. ಬಂದ ನೆಂಟರು ರಾತ್ರಿ ನಡೆದ ವಿಚಾರವನ್ನೂ ಹೇಳಿದರು. ಪೇದ್ರು ತುಕ್ರನಿಗೆ ತನ್ನ ಮನೆಗೆಂದು ಹೇಳಲಿಲ್ಲವೇ ಎಂದು ತೊದಲುವ ನಾಲಗೆಯಲ್ಲಿ ಕೆಂಪಾದ ಕಣ್ಣನ್ನು ಅರಳಿಸಿ ಕೇಳಿದ! "ನಾವೆಲ್ಲವನ್ನೂ ಹೇಳಿದೆವು. ಅವನು ಇಂದಿನ ಮಟ್ಟಿಗೆ ಸಾಧ್ಯವೇ ಇಲ್ಲವೆಂದ. ಮತ್ತೆ ಅವನ ಜಗುಲಿಯಲ್ಲಿ ಮಲಗಿ ಬೆಳಗು ಮಾಡಿ ಇಂದು ಬಂದೆವು," ಎಂದರು. ಪೇದ್ರು ಕಿಡಿಕಿಡಿಯಾದ! ಬಾಯೊಳಗೆ ಏನೋ ಹೇಳುತಿದ್ದ. ಬಹುಶಃ ಈ ವಿಚಾರ ಅವನ ಪ್ರತಿಷ್ಠೆಗೆ ತಟ್ಟಿರಬೇಕು! ಅವನ ಕೋಪ ಏರುತ್ತಲೇ ಹೋಯಿತು!

ಬಂದ ಅತಿಥಿಗಳು ತಮ್ಮ ಕೆಲಸಮಾಡಿಕೊಂಡು ಹೋದರು. ಡಿನ್ನರುಗಳು ರಾತ್ರಿ ಆದಂತೆಯೆ ಆಯಿತು. ಆದರೆ ಪೇದ್ರು ಮಾತ್ರ ತಣಿಯಲೇ ಇಲ್ಲ. ಅವನಿಗೆ ಬಂದವರೆಲ್ಲ ಅಗಲಿದರೆ ಸಾಕಿತ್ತು!" ದಾದು ದೋಣಿ ನಿಧಾನ ಮಾಡಿ ನನ್ನನ್ನು ಕರೆದ. ಬಹುಶಃ ನಾನು ಕೇಳುತ್ತಿಲ್ಲವೇನೋ ಎಂದು ಅವನ ಭಾವನೆ, ನಾನು 'ಮುಂದೇನಾಯಿತು?' ಎಂದು ಕೇಳಿದೆ.

"ಎಲ್ಲರೂ ಅಗಲಿದರು. ಪೇದ್ರು ನಾಲ್ಕಾರು ಜನ ಕಿಲಾಡಿಗಳಿಗೆ ಹೇಳಿ ಕಳುಹಿಸಿದ. ಅವರು ಬಂದೇ ಬಂದರು. ಅವರ ಕೈಗೆ ನೂರು ರೂಪಾಯಿಯ ನೋಟನ್ನು ಕೊಡುತ್ತ ಇಂದಿನಿಂದ ಒಂದು ವಾರದೊಳಗೆ ತುಕ್ರನ ದೋಣಿ ಪುಡಿಸಿ ಹಾಕಿ ಬರಬೇಕೆಂದೂ, ಅವನ ಎದುರಿಗೇ ಈ ಕೆಲಸ ಆಗಬೇಕೆಂದೂ ಅವನೇನಾದರೂ ಅಂದರೆ ಮರಕ್ಕೆ ಕಟ್ಟಿ ಹಾಕಬೇಕೆಂದೂ ಅಪ್ಪಣೆ ಕೊಡಿಸಿದ.

ಒಂದೆರಡು ದಿನಗಳಲ್ಲೇ ಆ ಕೆಲಸ ನೆರವೇರಿತು. ತುಕ್ರನ ಎರಡೂ ಕೈಗಳನ್ನು ಕಟ್ಟಿಟ್ಟು ಅವನೆದುರಿಗೇ ಅವನ ಹೊಟ್ಟೆಯ ಅನ್ನವಾದ ಅವನ ದೋಣಿಯನ್ನು ಒಡೆದು ಪುಡಿ ಮಾಡಿ ಎಣ್ಣೆ ಎರೆದು ಬೆಂಕಿ ಕೊಟ್ಟು ಸುಟ್ಟು ಹಿಡಿ ಬೂದಿ ಮಾಡಿಯೂ ಆಯಿತು! ತುಕ್ರ ಭಾವ ಅಳುತ್ತಲೇ ಇದ್ದ. ಅವನ ಕೇರಿಯ ಗಂಡಸರೆಲ್ಲ ಬೇಸಣಕ್ಕೆ ಹೋಗಿದ್ದರು. ಹೆಂಗಸರು ಮೀನು ಮಾರಲು ಹಳ್ಳಿಗಳ ಮೇಲೆ ಹೋಗಿದ್ದರು. ಪಾಪ ಒಬ್ಬೊಂಟಿಗನಿಂದೇನಾದೀತು? ಅಳುತ್ತ ಮುಖವೆತ್ತಿ ಆಕಾಶ ನೋಡಿದ. ಸೂರ್ಯ ದೇವರನ್ನು ನೆನಪು ಮಾಡಿದ. "ಏನೂ ತಪ್ಪು ಮಾಡದ ನನಗೆ ಹೊಟ್ಟೆಗೇ ಪೆಟ್ಟು ಕೊಟ್ಟ ಪೇದ್ರು ಪರ್ಬುಗಳನ್ನು ದೋಣಿಯೇ ಸತ್ತಲ್ಲಿ ಸಾಯಿಸಲಿ!" ಎಂದು ಶಾಪಕೊಟ್ಟು ಕಲ್ಲಿನಂತೆ ನಿಂತು ಬಿಟ್ಟ. ಎಲ್ಲರೂ ನಗಾಡಿದರು ಇವನ ಶಾಪಕ್ಕೆ. ಕೈ ಬಿಡಿಸಿ ಒಬ್ಬೊಬ್ಬರು ಒಂದೊಂದು ಬರೆ ಕೊಟ್ಟು ಹೋಗಿಯೇ ಬಿಟ್ಟರು.

ಪೇದ್ರುಗೆ ವಾರ್ತೆ ಸಿಕ್ಕಿತು ತುಕ್ರನ ಅಹಂಕಾರಕ್ಕೆ ಪ್ರತಿಯಾದುದಕ್ಕೆ ಆನಂದವಾಯಿತು." ನನ್ನಂತಹ ಊರ ಯಜಮಾನನ ಮನೆಗೆ ಬರುವ ನೆಂಟರನ್ನು ದಾಟಿಸದ ಇವನ ಅಹಂಕಾರ ನಿಂತಿತಲ್ಲವೇ?" ಎಂದು ಹಿಗ್ಗಿದ. 'ಅವನು ಮಾಡಿದ ಅಪರಾಧಕ್ಕೆ ಇದು ಪ್ರತೀಕಾರವೆಂದು ನೆಮ್ಮದಿಯಾದ.

ನಾವು ಬಹಳ ಮುಂದೆ ಬಂದಿದ್ದೆವು. ಮೀನೊಂದು ಹೊಳೆಯಿಂದ ಜಿಗಿದು ಮೇಲೇರಿ ಚಂದ್ರಕಿರಣದಲ್ಲಿ ಹೊಳೆದು ಮತ್ತೆ ಹೊಳೆಗೇ ಬಿದ್ದಿತು.

"ನಾವಿನ್ನು ಹಿಂದೆ ಹೋಗೋಣ. ರಾತ್ರಿ ಬಹಳವಾಯಿತು. ನಿನಗೂ ಆಯಾಸವಾಗಿರಬೇಕು" ಎಂದೆ. ಆತ ದೋಣಿ ತಿರುಗಿಸಿದ. "ಇನ್ನುಳಿದ ಕತೆ ಕೇಳುವುದಿಲ್ಲವೇ?" ಎಂದ. "ಇನ್ನು ಉಳಿದಿದೆಯೇ? ದೋಣಿ ಸುಟ್ಟಾಯಿತಲ್ಲವೆ?" ಮತ್ತೇನು ಉಳಿದಿದೆ?" ಎಂದೆ. "ಅದೇ ಶಾಪ ಉಳಿದಿದೆಯಲ್ಲ. ತುಕ್ರ ಭಾವನ ಶಾಪ ಹುಸಿಯಾದೀತೇ?" ಎಂದ. ಸಮ್ಮತಿಸಿದೆ. ಅವ ಹೇಳಹತ್ತಿದ.

"ವರುಷಗಳು ಉರುಳಿದುವು ತುಕ್ರ ಭಾವ ಇನ್ನೂ ಇದ್ದಾರೆ. ನನಗಿಂತ ಹತ್ತು ವರುಷಕ್ಕೆ ದೊಡ್ಡವನವ. ಈಗ ಹುಟ್ಟು ತಿರುಗಾಡಲಿಕ್ಕಾಗುವುದಿಲ್ಲ. ಕುಳಿತಲ್ಲಿಯೇ ಇದ್ದು ಹುರಿಹಗ್ಗ ಹೆಣೆಯುತ್ತಾನೆ. ಪೇದ್ರು ಪರ್ಬುಗಳು ಈಗಿಲ್ಲ. ಅವರಿಗೇನೋ ಕಾಯಿಲೆ ಸುರುವಾಗಿ ಸತ್ತರು." ಎಂದು ದಾದು ಜಲ್ಲ ಮೇಲಕ್ಕೆತ್ತಿ ಮತ್ತೆ ಕೆಳಕ್ಕಿಳಿಸುತ್ತಾ ದೋಣಿಯನ್ನು ಮುಂದೋಡಿಸಿದ. "ಬಹುಶಃ ನಿನ್ನ ತುಕ್ರ ಭಾವನ ಶಾಪದಿಂದ ಸತ್ತಿರಬೇಕಲ್ಲವೇ?" ಎಂದೆ ನಾನು ಅವನ ಅಂಥ ವಿಶ್ವಾಸವನ್ನು ಕಣಕುವ ಮೋಡಿಯಲ್ಲಿ! 'ಅವನು ಸತ್ತುದ್ದಕ್ಕೂ ತುಕ್ರ ಭಾವನ ಶಾಪಕ್ಕೂ ಸಂಬಂಧವಿಲ್ಲ. ಎಲ್ಲರೂ ಸಾಯುತ್ತಾರೆ. ಆದರೆ ತುಕ್ರ ಭಾವನ ಶಾಪ ಅವ ಸಾಯಬೇಕೆಂದಿರಲಿಲ್ಲ. ದೋಣಿಯೇ ಅವನನ್ನು ಸತ್ತಲ್ಲಿ ಸಾಯಿಸಲಿ ಎಂದಿತ್ತು. ಆತ ತನ್ನ ಕಷ್ಟ ಕಾಲದಲ್ಲಿ ಮನಸ್ಸಿಗೆ ನೋವಾದಾಗ ಹಿಂಸೆ ತಡೆಯಲಾರದೆ ಏನೋ ಹೇಳಿ ಬಿಟ್ಟ. ಆದರೆ ಆ ಶಾಪ ನಡೆದೇ ಹೋಯಿತು.' ಎಂದು ಉದ್ದ ಉಸಿರು ಬಿಟ್ಟ ಮುದುಕ. ಅವನಿಗೆ ಆಯಾಸವೂ ಆಗಿತ್ತು. ಆವೇಶವೂ ತುಂಬಿತ್ತು.

'ಶಾಪ ಹೇಗೆ ಫಲಿಸಿತು.' ಎಂದು ಕೇಳಿದೆ ನಾನು ಆತುರನಾಗಿ. ಆತ ಹೇಳಿದ 'ಪೇದ್ರುವಿನ ಹೆಣವನ್ನು ಸಮೀಪದ ಇಗರ್ಜಿಗೆ ದಫನಕ್ಕೆಂದು ಶೃಂಗರಿಸಿದ ಶವಪೆಟ್ಟಿಗೆಯಲ್ಲಿ ವಿಜೃಂಭಣೆಯಿಂದ ಹೊತ್ತು ತರುತಿದ್ದರು. ಅಷ್ಟರಲ್ಲಿ ಒಂದು ತಿರುಗು ರಸ್ತೆಯಲ್ಲಿ ಮುಂದುವರಿಸುತಿದ್ದಾಗ ಹೆಣದ ಪೆಟ್ಟಿಗೆ ಕೆಳಕ್ಕೆ ಬಿತ್ತು. ಪೆಟ್ಟಿಗೆಯಿಂದ ಹೆಣ ಹೊರಕ್ಕೆ ಬಿತ್ತು. ಎಲ್ಲರೂ ಗಾಬರಿಯಾದರು! ಆ ದಾರಿಗೆ ಸೇರುವ ಇನ್ನೊಂದು ದಾರಿಯಿಂದ ಒಂದು ಹೊಸ ದೋಣಿಯನ್ನು ತುಂಬಿಸಿಕೊಂಡು ಬರುತ್ತಿದ್ದ ಎತ್ತಿನ ಗಾಡಿಯಿಂದ ಮುಂದುವರಿಸಿನಿಂತ ದೋಣಿ [illegible] ಹೆಣದ ಪೆಟ್ಟಿಗೆಗೆ ಆಕಸ್ಮಾತ್ ತಾಗಿದುದರಿಂದ ಕ್ಷಣಾರ್ಧದಲ್ಲಿ ಇದೆಲ್ಲ ನಡೆದು ಹೋಗಿತ್ತು! ದೋಣಿ ಪೇದ್ರುವನ್ನು ಸತ್ತಲ್ಲಿಗೆ ಸಾಯಿಸಿತು!". ದಾದು ಮುಗಿಸುವಾಗ ನಾವು ಹೊರಟಲ್ಲಿಗೆ ಬಂದಿದ್ದೆವು. ದೋಣಿಯಿಂದ ಇಳಿಯುವಾಗ ನಾನು ಕೇಳಿದೆ, "ನೀನು ಶೀನನ ಸುದ್ದಿ ಹೇಳಲೇ ಇಲ್ಲ." ಎಂದು ದಾದು ಕಣ್ಣೊರೆಸುತ್ತಾ ಅಂದ, "ನೀನಾ ಪ್ರಶ್ನೆ ಕೇಳಬಾರದೆಂದೇ ನಾನಾ ಕಥೆ ಹೇಳಿದುದು. ಯಾವುದು ಇಡೀ ನನ್ನ ಜೀವಮಾನದಲ್ಲಿ ನನ್ನನ್ನು ಕದಿಸಿತ್ತೋ ಅದನ್ನು ಯಾರು ಕೇಳಿದರೂ ನನ್ನ ಹೃದಯ ಕುದಿಯ ತೊಡಗುವುದರಿಂದ ಅದನ್ನು ಮರೆಯಲೆಂದೇ ಪ್ರಯತ್ನಿಸುತ್ತೇನೆ!"

ಹೊರಗಿನಿಂದ ಕಳೆದು ಹೋದ ರಾತ್ರಿಯನ್ನು ಬೀಳ್ಗೊಡಲೋ ಯಾ ಬರುತ್ತಿರುವ ಹಗಲನ್ನು ಸ್ವಾಗತಿಸಲೋ ಹಕ್ಕಿಗಳೆಲ್ಲ ಸಂಗೀತಕ್ಕೆ ತೊಡಗಿದ್ದುವು. ನನಗೆ ಆಗಲೇ ಎಚ್ಚರವಾಗಿ ಕನಸು ಕಂಡುದು ಒಂದು ಸತ್ಯ ಕತೆ ಎಂಬ ಅರಿವಾಯಿತು.



ಧ್ವಜವೇದನೆ!

"ಸ್ವಾತಂತ್ರ್ಯ ದಿನದಂದು ಮಂಗಲ ಪ್ರಭಾತದಲಿ
ಏಕಿಂತು ಬಾನಬಳಿ ಬಿಸುಸುಯ್ಯುವೆ?
ಮೂರು ಬಣ್ಣದ ನಡುವೆ ಆ ಅಶೋಕನ ಚಕ್ರ!
ಇದ್ದರೂ ನಿನಗಿನ್ನು ಬಹುಶೋಕವೇ? ||೧||

ಹದಿನೆಂಟು ಕಳೆದಿರುವ ಈ ಹೊಸತು ಹರೆಯದಲಿ
ಇಂತೇಕೆ ಮ್ಲಾನವತಿಯ ಮೂಕ ರುದನ?
ಓ ಭವ್ಯ ಭಾರತದ ನಮ್ಮ! ಜಯ ಕೇತನವೇ
ಹೇಳಿ ಬಿಡು ಏಕಿಂತು ಈ ವೇದನ! ||೨||

ನಮ್ಮ ಸಾಸಿರ ದೋಷಗಳ ನೀನು ಕ್ಷಮಿಸಿ ಬಿಡು
ಧ್ರುವತಾರೆಯೊಲು ಬೆಳಗು ನೀನೆತ್ತರ
ಹಾರಿಸಲು ಏರಿಸಲು ನಿನ್ನ ಮೆರೆದಾಡಿಸಲು
ಹರಿಸಿಹರು ನಮ್ಮವರು ಬಿಸಿ ನೆತ್ತರ!" ||೩||

o o o o

"ಹೇಳುವದು ಉಳಿದಿಲ್ಲ ಕೇಳುವರ ಗತಿ ಇಲ್ಲ
ಇಂದು ನಡೆದಿಹುದೆನ್ನ ಬಾಳ ಹೋರಿ
ನನ್ನಡಿಗೆ ಖಾದಿಯನು ಧರಿಸಿ ಭಾಷಣ ಬಿಗಿದ
ನೋಡು ದೇ.ಭ. ನ ಭ್ರಷ್ಟ ಆಚಾರ ಕೇಳಿ ||೪||

ಅಂದು ಆ ಸ್ವಾತಂತ್ರ್ಯ ನಂದನೋದ್ಯಾನದಲಿ
ಗಾಂಧಿ ಬಿತ್ತಿದ ಸತ್ಯ ಬರಲು ಅರಳಿ
ಇಂದು ನಂದನ ವನವ ಬಟ್ಟಬಯಲಾಗಿಸಿದೆ
ಕೋಡನವೆ ತೀರಿಸಲು ಈ ಪುಂಡ ಗೂಳಿ ||೫||

ಧರ್ಮ ಸಂಸ್ಕೃತಿಯರಿವು ಸತ್ಯ ನೀತಿಯ ತಿಳಿವು
ಆ ಮಹಾತ್ಮನ ರೋಮದಷ್ಟು ಇಹುದೇ?
ಸ್ವಾತಂತ್ರ್ಯ ಶಿಲ್ಪಿ ಆ ತಂದೆ ಗಾಂಧಿಯ ಅಡಿಯ
ನಮಿಪ ನೈತಿಕ ಛಲವು ಇವನಿಗಿಹುದೇ? ||೬||

ನನ್ನ ತೇಜೋಬಲವು ಕುಗ್ಗುತ್ತ ನಡೆದಿಹುದು
ಇಂಥ ದೇ. ಭ. ನ ಹಸ್ತ ಸ್ಪರ್ಶದಿಂದ
ಮದ್ಯ, ಲಂಚ, ಅನೀತಿ, ಸ್ವಾರ್ಥತೆಯ ತಾಂಡವವು
ನೋಡಲಾಗದು ಅಕಟ! ಇನ್ನು ನನ್ನಿಂದ!
||೭||

ಭಾರತದ ಕುಲಕೋಟಿ ಒಕ್ಕೊರಲಿನಲಿ ನುಡಿದ
ಜಯಗೀತವೊಳಗಿಹುದು ನಭವನಿಂದು!
[ಪಂಜಾಬ ಸಿಂಧು ಗುಜರಾಥ....ಉಚ್ಛಲ ಜಲಧಿತರಂಗ]
ಈ ವಿಡಂಬನೆಯೇಕೆ ಹುಸಿಯ ಘೋಷಣೆಯೇಕೆ
ನಿನ್ನದಾಗಿಯೇ ಇಹುದೇ ಪಂಜಾಬ ಸಿಂಧು?"

—ಕೃಷ್ಣ ಶರ್ಮಾ, ಹೊನ್ನಾವರ.

ನಮ್ಮ ಗ್ರಾಹಕರಿಗೆಲ್ಲ
ಸ್ವಾತಂತ್ರ್ಯ ದಿನದ ಶುಭಾಶಯಗಳು!

ಶ್ರೇಷ್ಠತೆಯ ಹೆಗ್ಗುರುತು-
ಉಡುಪಿ ಶ್ರೀ ಕೃಷ್ಣ ವಿಲಾಸ
ಕಾರವಾರ (ಉತ್ತರ ಕನ್ನಡ)
ವಿನಯಶೀಲ ಉಪಚಾರ ಶುಚಿ-ರುಚಿ ಉಪಾಹಾರ
ಗ್ರಾಹಕರ ಸಂತೃಪ್ತಿಯೇ ನಮ್ಮ ಧ್ಯೇಯ.
ಕೆ. ಸಂಜೀವ ರಾವ್
ಪ್ರೊಪ್ರೈಟರ್.

ಕೌತಿಕ ರಾಮಾಯಣ

(ಹನ್ನೆರಡನೇ ಪುಟದಿಂದ)

ಬಾಣವೆಸೆದು ದೂರಕ್ಕೆಸೆದ ರಾಮನ ಮಹಿಮೆ ಹೇಳಿದೆ. ಇಲ್ಲವಾದರೆ, ಅಲ್ಲೇ ಏಕೆ ಅವನನ್ನು ಕೊಂದಿಲ್ಲವೆಂಬ ಪ್ರಶ್ನೆಗೆ ಯುಕ್ತಿಯು ಮಾತಾಗಿದೆ.

ಸೀತೆಯನ್ನು ವರಿಸಲೆಂದು ಬ್ರಹ್ಮ, ಶಂಕರ, ಸೂರ್ಯಾದಿ ದಿಕ್ಪತಿಗಳು ಬಂದಿದ್ದರೂ ಅವರಲ್ಲಿದ್ದ ವಿಗುಣಗಳನ್ನು ಸಖಿಯರು ಸೂಚಿಸುತ್ತಾರೆ. ರಾವಣನು ಧನುವೆತ್ತಲಾರದೆ ಬಿದ್ದು ನಗೆಗೀಡಾಗಿದ್ದನಂತೆ, ಮತ್ತೆ ರಾಮ ಬಂದು ಕೊಳ್ಳುವ ಮೊದಲು, ಲಕ್ಷ್ಮಣನೇಳಲು ಮುನಿ ತಡೆಯುವನು, ರಾಮನು ಬಿಲ್ಲನ್ನೆತ್ತುವಾಗ ತುಂಡಾಯ್ತು. 'ಧರಣಿಸುತೆ ನವಪುಷ್ಪದಾಮವ ಹರಿಯ ಕಂಠದಲಿಕ್ಕಿ ಮಂಗಳಮಹಿಮನೊಪ್ಪಿದನು.'

ಮದುವೆಯೂಟಮಾಡಿ ಬರುವ ವಿಪ್ರನನ್ನು ಮಂಥರೆ ಕೆಣಕಿದಳು, ಆಕೆಗೆ ರಾಮ ಶಾಸ್ತಿಮಾಡಿದನ, ಇದೇ ಮುಂದೆ ಚಾಡಿಗೆ ಕಾರಣವೆಂದು ಹೇಳಿದಂತಿದೆ. ಈ ಊಟಕ್ಕೆ ಕನ್ನಡದ, ತೆಲುಗಿನ, ಹೊಯ್ಸಳದ, ಲಾಳದಹೆಂಗುಸರು, ಬಡಿಸುತ್ತಿದ್ದರಂತೆ! ಸೀತೆಗೆ ಜನಕನು ಹೇಳಿದ ಬುದ್ಧಿವಾದಗಳು ಒಂಬತ್ತು ಪದ್ಯಗಳಲ್ಲಿವೆ (೩'1-9)

ಶ್ರೀರಾಮನು 'ತಲೆಯುಲುಸುರುಳ್ಳನ್ನ' ಕಾಡಿನಲ್ಲಿರಲೆಂದು, ಭರತೆಗೆ ಈಗಲೆ ಪಟ್ಟಗಟ್ಟೆಂದು ಕೈಕೆ ವರ ಕೇಳಿದಳಂತೆ. ಮುಂದೆ ವಸಿಷ್ಠನು 'ಹದಿನಾಲ್ಕು ವರ್ಷ'ದ ವನವಾಸವೆಂದು ಅವಧಿ ಹೇಳಿದನಂತೆ!

ಲಕ್ಷ್ಮಣನು ಕಾಡಿನಲ್ಲಿ ಶೂರ್ಪನಖಿಯ 'ಮೂಗು ಕಿವಿ'ಗಳನ್ನು 'ಅಸಿಯಿಂದರಿದನು'. ರಾಮನನ್ನು ಹುಡುಕಲು ಲಕ್ಷ್ಮಣನು ಹೊರಡುವಾಗ 'ಗೆರೆ'ಯೆಳೆದಿದ್ದನು; ಆಕೆ 'ಗೆರೆಯ ದಾಂಟಿ' ಬಂದು ರಾವಣನಿಗೆ ಭಿಕ್ಷೆಯಿಕ್ಕಿದ್ದಳಂತೆ! ಈ ಎರಡು ವಿಚಾರ ಯಕ್ಷಗಾನ ಪ್ರಸಂಗಗಳಲ್ಲಿದ್ದು, ಈ ಕೃತಿಯು ಅನುಸರಣೆಯಿರಬಹುದೇನೋ ಎನ್ನುವಂತಿವೆ!

ಈ ಕೃತಿಯಲ್ಲಿ ರಾವಣ ವಧೆಯಾಗಿ ರಾಮನು ಅಯೋಧ್ಯೆ ಸೈದಿ, ಪುನಃ ಪಟ್ಟಾಭಿಷೇಕವಾದುದು ಹೇಳಿದೆ. 521 ಪುಟಗಳಷ್ಟು ದೊಡ್ಡ ಪುಸ್ತಕದಲ್ಲಿ ಮುದ್ರಿತವಾದ ಈ ಕೃತಿಯ ಕೆಲವು ಸರಸತೆಗಳು ಇಲ್ಲಿ ಹೇಳಿವೆ. ಈ ಕೃತಿ ರತ್ನವು ಇಲ್ಲಿಗೆ ಮುಗಿದುದು, ಆದರೆ, ಒಂದು ಪದ್ಯದಲ್ಲಿ 'ಉತ್ತರ ಕಾಂಡ'ದ ಕತೆ ಹೇಳಿದೆ:

'ಸಿರಿಯವಲ್ಲಭನೊಲಿದು ರಾಜಾ|
ಧ್ವರವನಾನಲು ಕಾಲ ಭಾಗ್ಯವ|
ಭರತ ಬಣ್ಣಿಸನಾವ
ಪರಮಾನಂದ ಮಯವಾಯ್ತು||'

ಕನ್ನಡದಲ್ಲಿ ನಾರಾಯಣ ಕವಿ ಬರೆದ 'ಉತ್ತರ ರಾಮ ಕಥೆ'ಯಲ್ಲಿ ಈ 'ಉತ್ತರ ಕಾಂಡ'ದ ಕತೆ ಬೇರೆ ಹೇಳಿದೆ. ಕನ್ನಡಿಗರು ಇವೆರಡು ಕೃತಿಗಳನ್ನು ಓದಿ ಆನಂದಿಸಲಿ; ಆಗ ತಾನೇ ಕವಿಯ—ಪ್ರಕಾಶಕರ—ಶ್ರಮ ಸಾರ್ಥಕವಾದೀತು. 'ಶ್ರೀರಾಮ ಚಂದಿರಂ ಗೆಲ್ಗೆ!' ಇತ್ಯಲಮ್!

— —

ಅಮೃತ ಬಿಂದು

ಜನಹಿತ ಸಾಧನೆಗಾಗಿ ಕಾರ್ಯವನ್ನು ಮಾಡಲೇಬೇಕು.

o o o o

ಜನರೊಳಗೆ ಮತಭೇದ ಹುಟ್ಟಿಸಲು ವಿಚಾರಗಳಿಗಿಂತ ಸ್ವಭಾವ ವೈಚಿತ್ರ್ಯಗಳೇ ಹೆಚ್ಚು ಕಾರಣವಾಗುತ್ತವೆ.

o o o o

ಜೀವನದ ಧ್ಯೇಯಗಳ ಬಗ್ಗೆ ನಮ್ಮಲ್ಲಿರುವ ಅನಿರ್ಧಾರ, ಹಾಗೂ ಅವನ್ನು ಕೈಗೂಡಿಸಿ ಕೊಳ್ಳುವ ಕುರಿತು ನಮ್ಮ ಚಾಂಚಲ್ಯ ವೃತ್ತಿಯಿಂದಲೇ ನಮಗೆ ದುಃಖವು ಲಭಿಸುತ್ತದೆ.

o o o o

ಆಸೆ ಭಯಗಳ ಜಾಲದಿಂದ ದೂರವಿರಲು ಕಲಿತವನಿಗೆ ದುಃಖ ಬಾಧೆಯೆಂದೂ ಆಗದು.

o o o o

ಮಕ್ಕಳಿಗೆ ಸದ್ಗುಣಗಳನ್ನು ಕಲಿಸದೆ ಅವರಿಗೆ ಅಪಾರ ಸಂಪತ್ತನ್ನು ಬಿಟ್ಟು ಹೋಗುವವರೂ ಕುದುರೆಗಳಿಗೆ ತರಬೇತಿ ಕೊಡದೆ ಅವುಗಳನ್ನು ಹುಟ್ಟಿ ಹರಿಯುವಂತೆ ಮೇಯಿಸುವವರೂ ಒಂದೇ.

o o o o

ನಿಷ್ಕಾಮ ಸೇವಾ ಭಾವನೆಯು ಮಾನವನಲ್ಲಿ ಬೆಳಗುವ ದೈವೀ ಸಂಪತ್ತು.

o o o o

ಯುದ್ಧಕ್ಕೆ ಸನ್ನದ್ಧವಾಗಿರುವದು ಶಾಂತಿ ಸಂರಕ್ಷಣೆಯ ಪರಿಣಾಮಕಾರಕ ಉಪಾಯಗಳಲ್ಲಿ ಒಂದು.

o o o o

ಮನೆಗಿಂತ ಮನದೊಡ್ಡದಾಗಿರಲಿ; ಹಣಕ್ಕಿಂತ ಗುಣ ಹೆಚ್ಚಾಗಿರಲಿ.

o o o o

ರಾಜಕಾರಣವು ರಾಷ್ಟ್ರದ ಜೀವನದ ಮೇಲೆ ನೈತಿಕ ಜೀವನದ ಮೇಲೆ ಮಾಡುವ ಪರಿಣಾಮ ಎಷ್ಟು ಅಲ್ಪ; ಒಂದೇ ಒಂದು ಪುಸ್ತಕವು ಜನ ಜೀವನದ ಮೇಲೆ ಅದಕ್ಕಿಂತ ಹೆಚ್ಚು ಪ್ರಭಾವ ಬೀರುತ್ತದೆ.

o o o o

ಕೀರ್ತಿ ಮಂದಿರವು ಮೃತರ ಗೋರಿಗಳ ಮೇಲೆ ಕಟ್ಟಿರುವದು. ಅದರಲ್ಲಿ ಬೆಳಗುವ ಪ್ರಭೆಯು ಮೃತ ಜೀವಿಗಳ ಭಸ್ಮದಿಂದ ಹೊತ್ತಿರುವದು.

o o o o

ಸುಳ್ಳು ಕಲ್ಲಿದ್ದಲಿಗಿಂತಲೂ ಕರಿದು; ಅದಕ್ಕಿಂತಲೂ ಅಸಹ್ಯವೂ ಹಿರಿದು.

o o o o

ಧನವಂತರು ತಮ್ಮ ಆಸ್ತಿಪಾಸ್ತಿಗಳನ್ನು ನಿಸ್ವಾರ್ಥ ತ್ಯಾಗಶೀಲಿಗಳಾಗಿಯೂ ಜನಸೇವೆಗಾಗಿಯೂ ಉಪಯೋಗಿಸುವರೋ ಇಲ್ಲವೋ ಸ್ವಂತ ಭೋಗಾಭಿಲಾಷೆಗಳಿಗಾಗಿ ಬಳಸುತ್ತಿರುವರೋ ಎಂಬುದನ್ನು ದೇವರು ಪರೀಕ್ಷಿಸುತ್ತಿದ್ದಾನೆ.

o o o o

ಉತ್ಸಾಹ ಕಳಕೊಳ್ಳುವದು ದಿವಾಳಿ ತೆಗೆದಂತೆ. ಸರ್ವವನ್ನು ಕಳಕೊಂಡರೂ ಹುರುಪೊಂದುಳಿದರೆ ತಿರುಗಿ ಯಶಸ್ಸು ಲಭಿಸುವುದು.

o o o o

ಪ್ರೌಢನಾಗಿ ಮತದ ಹಕ್ಕು ಪಡೆದ, ಮತ ಕೊಟ್ಟು ಕೆಟ್ಟೆನೆಂದು ಗೋಳಿಟ್ಟ.

ಇಷ್ಟತೆಂದು

ನಮಸ್ಕಾರ – ಅದರ ಮಹತ್ವ

(ಹದಿನೈದನೇ ಪುಟದಿಂದ)

ಲ್ಲಿನದು. ಗಂಡನ ಹಿರಿಮೆಯನ್ನೊಪ್ಪುವ ಪತ್ನಿಯೂ ಪತಿಯನ್ನು ಹೀಗೆಯೇ ಸನ್ಮಾನಿಸುತ್ತಾಳೆ. ಕಾಲು ಗಂಟುಗಳನ್ನು ಮಡಚಿ ಕೂತು ಬಾಗಿ ತಲೆಯನ್ನು ಮಾತ್ರ ನೆಲಕ್ಕೆ ತಾಗಿಸುವುದೂ ಪವಿತ್ರ ನಮಸ್ಕಾರ. ಶ್ರೀರಾಮಕೃಷ್ಣಾಶ್ರಮದ ಬ್ರಹ್ಮಚಾರಿಗಳೂ, ಸನ್ಯಾಸಿಗಳೂ ಇದೇ ನಮಸ್ಕಾರವನ್ನು ಬಳಕೆಗೆ ತಂದಿದ್ದಾರೆ. ಗೃಹದೀವಿಗೆಗಳಾದ ಸ್ತ್ರೀಯರು ಎರಡೂ ಹಸ್ತಗಳಿಂದ ಕ್ರಮವಾಗಿ ಕಿವಿ ಮತ್ತು ನೆಲ ಮುಟ್ಟಿ ಆದೊಂದು ಬಗೆಯಿಂದ ನಮಸ್ಕರಿಸುತ್ತಾರೆ. ಹಿರಿಯರಿಗೆಲ್ಲಾ ಮಹಿಳೆಯರು ಹೀಗೆಯೇ ವಂದಿಸುವರು. ಇದನ್ನೇ ಮಂಗಲ್ಯದ ನಮಸ್ಕಾರವೆನ್ನುವರು. ಬ್ರಹ್ಮಚಾರಿಯು ಗುರು.ಹಿರಿಯರಿಗೆ ವಂದಿಸುವಾಗ ಮತ್ತು ಗೋತ್ರಾಭಿವಂದನವನ್ನು ಮಾಡುವಾಗ ಯಾವ ಬಗೆಯಿಂದ ನಮಸ್ಕರಿಸುವನೆಂದು ಬಲ್ಲಿರಾ? ಸ್ವಸ್ತಿಕ ಮುದ್ರೆಯ ಹಸ್ತಗಳಿಂದ ತನ್ನ ಕಿವಿ ಮುಟ್ಟಿ ಗುರುವಿನ ಪಾದ ಅಥವಾ ನೆಲವನ್ನು ಮುಟ್ಟುವನು. ಇದೂ ಸನಾತನ ನಮಸ್ಕಾರವೇ, ಸನಾತನ ಸಂಪ್ರದಾಯ ಪ್ರಿಯರು, ಈ ಕ್ರಮದಲ್ಲಿ ಇಂದೂ ಹಿರಿಯರನ್ನು ವಂದಿಸುತ್ತಾರೆ. ಪ್ರಪಂಚದಲ್ಲಿ ನಮಸ್ಕಾರಗಳ ತರತಮ ಸ್ಥಾನ ವೈವಿಧ್ಯವು ಭಾರತಕ್ಕೆ ಮಾತ್ರ ಮೀಸಲೆಂದು ತೋರುತ್ತದೆ. ಈ ಧರ್ಮದಲ್ಲಿ ನಮಸ್ಕಾರಕ್ಕೆ ತುಂಬಾ ಪ್ರಾಶಸ್ತ್ಯವಿದೆಯೆಂಬುದನ್ನು ಅದರ ವೈವಿಧ್ಯ ವೈಶಿಷ್ಟ್ಯಗಳೇ ಸಾರುವುವು.

ಮಾನವನು ಇತರರ ಆತ್ಮವನ್ನು ಗೌರವಿಸುವುದಕ್ಕಾಗಿಯೇ "ನಮೋ ನಮಃ' ಎನ್ನುವುದು. ದುರ್ಜನರಿಗೆ ದೂರದಿಂದ ನಮಸ್ಕಾರವೆನ್ನುವುದುಂಟು. ಇಲ್ಲಿ ನಮಸ್ಕಾರದ ಬದಲು ತಿರಸ್ಕಾರದಭಾವವೇ ಕಾಣಿಸುವುದು. ಹೊಗಳಿಕೆಯಿಂದ ಹಿಗ್ಗುವ ಮನುಷ್ಯ ಜಾತಿಯನ್ನು ಶಕುನಿಯ ಅಪರಾವತಾರಿಗಳು ನಮಸ್ಕಾರದಿಂದಲೇ ಕೊಳ್ಳೆ ಹೊಡೆಯುವುದೂ ಉಂಟು. ಇದೊಂದು ಇಂದಿನ ಬುದ್ಧಿವಂತರ ಸಂಪಾದನೆಯ ದಾರಿ.

ಮಹಾಮಂತ್ರಗಳೆಲ್ಲಾ ಪರಮಾತ್ಮನಿಗೆ ನಮಸ್ಕಾರ ಸಲ್ಲಿಸುವುದರಲ್ಲಿಯೇ ಮುಕ್ತಾಯ ಹೊಂದಿವೆ. ಎಲ್ಲಾ ಸಹಸ್ರನಾಮಾವಳಿಗಳೂ ನಮಸ್ಕಾರಗಳ ಮಾಲೆ. ಸಂಸ್ಕೃತ ಭಾಷೆಯಲ್ಲಿ "ಶಿವನಿಗೆ ನಮಸ್ಕಾರ" 'ನಾರಾಯಣನಿಗೆ ನಮಸ್ಕಾರ" 'ಭಗವಂತನಾದ ವಾಸುದೇವನಿಗೆ ನಮಸ್ಕಾರ"ವೆಂದರೆ ಪಂಚಾಕ್ಷರಿ, ಅಷ್ಟಾಕ್ಷರಿ, ದ್ವಾದಶಾಕ್ಷರಿ ಮಂತ್ರಗಳಾಗುವುವು. ಅಹಂಕಾರಕ್ಕೆ ನಮಸ್ಕಾರವೇ ಮದ್ದು. ದೇವರ ದೃಷ್ಟಿಯಲ್ಲೇ ನಮಸ್ಕಾರಕ್ಕೊಂದು ಉನ್ನತ ಸ್ಥಾನವಿದೆ. ಪ್ರದಕ್ಷಿಣೆಯೂ ನಮಸ್ಕಾರದ ಒಂದು ಅಂಗವೇ. ಭೂಮಿಯು ಸೂರ್ಯನನ್ನು ಸುತ್ತುವುದು ಈ ಗೌರವಾರ್ಥದಲ್ಲಿರಬಹುದೇ? ಯಾರಿಗೆ ಗೊತ್ತು?

ಪ್ರಕೃತಿಯು ಮನುಷ್ಯನ ಆರೋಗ್ಯಕ್ಕೆ ಸೂರ್ಯನಿಗೆ ನಮಸ್ಕಾರ ಸಲ್ಲಿಸೆಂದು ಪ್ರಚೋದಿಸುತ್ತಿದೆ. ಸೂರ್ಯನಮಸ್ಕಾರವು ಮಾನವನಿಗೆ ಆರೋಗ್ಯ ಆಯುಷ್ಯ, ಆನಂದ, ಐಶ್ವರ್ಯ ಮತ್ತು ಕಾಂತಿಶಾಂತಿಗಳನ್ನು ದಯಪಾಲಿಸುವ ಒಂದು ದಿವ್ಯವರ. ಕೇವಲ ಸೂರ್ಯನಮಸ್ಕಾರ ಒಂದೇ ಹುಲುಮಾನವನನ್ನು ಸಿಂಹಪರಾಕ್ರಮಿಯಾಗುವಂತೆ ರೂಪಿಸಬಲ್ಲುದು. ಮಹಾರಾಷ್ಟ್ರದಲ್ಲಿಂದೂ ದಿನನಿತ್ಯವೂ ಸಹಸ್ರ ಸೂರ್ಯನಮಸ್ಕಾರಗಳನ್ನು ಹಾಕುವ ದೇವಮಾನವರು ಹಲವರಿದ್ದಾರಂತೆ! ಇದು ಭವಿಷ್ಯ ಜಗತ್ತಿಗೇ ಗಂಭೀರ ಶಕ್ತಿಪೂರ್ಣ ಚಲನೆಯನ್ನು ಕೊಡಬಲ್ಲುದು. ನಮಸ್ಕಾರ ಒಂದರಿಂದಲೇ ಅಕ್ರೂರನು ಪರಮ ಪದವಿಯನ್ನು ಪಡೆದನು! ಸಾರಾಂಶ—ಪಾರಮಾರ್ಥಿಕ ಮಾರ್ಗಕ್ಕೂ ನಮಸ್ಕಾರವೇ ಜೀವಾಳ. ಪರಮಾತ್ಮನೇ ಹಾರ್ದಿಕ ನಮಸ್ಕಾರಕ್ಕೊಲಿಯುವಾಗ ಯಃಕಶ್ಚಿತ್ ಮನುಷ್ಯನು ಮೆಚ್ಚುವುದೊಂದು ಆಶ್ಚರ್ಯವೇ?

ಮನುಷ್ಯನು ಇಂದಿನ ಬಿರುಗಾಳಿ ಯುಗದಲ್ಲಿ ಮಹಾ ವೃಕ್ಷದಂತೆ ಸೆಟೆದು ನಿಂತರೆ ಕ್ಷಣ ಕ್ಷಣಕ್ಕೂ ಅಪಾಯವನ್ನಿದಿರಿಸ ಬೇಕಾಗುವುದು. ಅವನಿಗೆ ಜಗತ್ತನ್ನು ಬಾಗಿಸುವ ಕೆಚ್ಚು ದೊರೆಯುವ ಒಂದು ದಿನವಿದೆ. ಆಗ ಹುಲುಮಾನವನು ದೇವಮಾನವನಾಗಿ ಪರಿವರ್ತನೆ ಹೊಂದುವನು. ಆಗ ಆಂಥವನ ನಾಮೋಚ್ಚಾರಣೆಯಿಂದ ಮಾತೃಭೂಮಿಯು ಪಾವನವಾಗುವುದು. ಅವನ ದರ್ಶನ ಸಂಭಾಷಣೆಗಾಗಿ ಜಗತ್ತು ಹಾತೊರೆಯುವುದು. ಅವನಿಗೆ ಜನತೆಯು ವಂದನೆಯನ್ನರ್ಪಿಸಿ ಪುಲಕಿತವಾಗುವುದು. ಇಂತಹ ವ್ಯಕ್ತಿಗಳನ್ನು ಯುಗಪುರುಷನು ಅವರೂಪವಾಗಿ ರಂಗಭೂಮಿಗೆ ಕರುತ್ತಿರುವನು. ನಮಸ್ಕಾರದಿಂದಲೇ ಅಮರ ಪದವಿಯನ್ನು ಹೊಂದಿದ ಇವರಿಗೆ ನಮ್ಮ ಅನಂತಾನಂತ ನಮಸ್ಕಾರಗಳು ಸಲ್ಲಲಿ! ನಮಸ್ಕಾರದ ಹಿರಿಮೆಯನ್ನರಿಯದವರು ನೊಸೆ ಹುಲ್ಲಿನಂತೆ ಬಾಗುವುದನ್ನಾದರೂ ಅಭ್ಯಾಸ ಮಾಡದರೆ ವ್ಯವಹಾರದಲ್ಲಿ ನಿರ್ಭೀತಿಯಿಂದ ಇರಲು ಸಾಧ್ಯವಿದೆ. ಇಲ್ಲದಿದ್ದರೆ ಈ ನಿಷ್ಠುರ ಜಗತ್ತು ಬಾಳ್ವೆಯನ್ನು ನರಕ ಕುಂಡದಲ್ಲಿ ಮುಳುಗಿಸಿ ಏಳಿಸೀತು. ಜಾಗ್ರತೆ!

ಕೆಲವು ಮಹಾನುಭಾವರೆನ್ನಿಸಿ ಕೊಂಡವರಲ್ಲಿ ನಮಸ್ಕಾರವನ್ನು ವಿರೋಧಿಸಿ ಟೀಕಿಸುವವರಿದ್ದಾರೆ. ಇವರು—'ಜನವರೆಲ್ಲಾ ಸಹೋದರರು, ಸಹೋದರರು ಪರಸ್ಪರ ನಮಸ್ಕಾರಗಳ ವಿನಿಮಯ ಪದ್ಧತಿಯನ್ನಿಟ್ಟು ಕೊಳ್ಳುವುದುಂಟೆ? ಒಬ್ಬ ಮಾನವನು ತನ್ನಂತಿರುವ ಇನ್ನೊಬ್ಬ ಮಾನವನಿಗೆ ಕೈ ಜೋಡಿಸುವುದೆಂದರೆ ಒಂದು ಹೈಲು!" ಎಂದು ಘೋಷಿಸುತ್ತಿದ್ದಾರೆ. ಸನಾತನ ಭಾರತೀಯರಲ್ಲಿ ಸಹೋದರರಲ್ಲೂ ನಮಸ್ಕಾರಕ್ಕೆ ಎಡೆ ಇದೆ– ಎಂದು ಹಿಂದೆಯೇ ಹೇಳಿದೆ. ಇಂತಹ ಕ್ರಾಂತಿ ಪ್ರಿಯರು ಗೊಡ್ಡು ಭಾವನೆಗಳ ಗುಲಾಮರಿಗಿಂತ ಉತ್ತಮರಾದರೂ, ಇವರಲ್ಲಿ ಹಲವರು ನಮಸ್ಕಾರದ ಮಟ್ಟಿಗೆ ಈ ವಾದವನ್ನೊಪ್ಪಿಸುವ ಆಷಾಢಭೂತಿಗಳು! ಈಗೀಗ ಜನರಲ್ಲಿ ಆಷಾಢಭೂತಿಗಳ ಸಂಖ್ಯೆ ಏರುತ್ತಿದೆ. ಇವರು ಹೇಳುವುದು ಶಾಸ್ತ್ರ; ಹಾಕುವುದು ಗಾಳ. ಋಗ್ವೇದವು ಸಂಪೂರ್ಣ ನಮಸ್ಕಾರಮಯವೆಂಬುದನ್ನು ನೆನಪಿಡಿರಿ.

ಇಂದಿನ ಕಪಟಿಗಳ ಕೃತಘ್ನರ ಜಗತ್ತಿನಲ್ಲಿ ತುಸುವಾದರೂ ಸುಖಹೊಂದಬೇಕೆಂದಿದ್ದರೆ ಆಸಕ್ತಿಯಿಂದ ನಮಸ್ಕಾರ ಶಾಸ್ತ್ರವನ್ನೊಮ್ಮೆ ತಿರುವಿಹಾಕಿರಿ. ಅದರ ವೈವಿಧ್ಯವನ್ನೊಮ್ಮೆ ಮನನಮಾಡಿರಿ. ಅಧಿಕಾರಿ ವರ್ಗಕ್ಕೆ ಲಂಚ ಕೊಟ್ಟು ವೈಶಾಚಿಕ ಯುಗವನ್ನು ನಿರ್ಮಿಸುವುದಕ್ಕಿಂತ ಧರ್ಮಬಾಹಿರವಲ್ಲದ ನಮಸ್ಕಾರವನ್ನು ತೆರುವುದು ಎಷ್ಟೋ ಲೇಸು. ಇಂದಿನ ಜಗತ್ತು ಹೇಳುವುದೇನು ಬಲ್ಲಿರಾ? ಬಗಲಲ್ಲಿ ದೊಣ್ಣೆಯಿಟ್ಟುಕೊಂಡಿದ್ದರೂ, ಬಾಯಿಯಲ್ಲಿ 'ರಾಮ ರಾಮ' ಎನ್ನು ಎಂದು; ಕೊರಳು ಕೊಯ್ಯುವ ಮನೋವೃತ್ತಿ ಇದ್ದರೂ, ಬಾಯಿಯಲ್ಲಿ 'ನಮಸ್ತೆ' ಎನ್ನುವುದನ್ನು ಮರೆಯಬೇಡವೆಂದು. ಹೇಗಿದ ಯುಗ ಮಹಿಮೆ!

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭ್ರಾತೃಕ ದರ್ಶನ
ಬಡಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ



Most economical pumpset for small farms and Wells.
3 HP
WATER COOLED
DIESEL ENGINE
PUMPING SETS
AUTHORISED DISTRIBUTORS
ಮೇಲ್ಮಟ್ಟದ ತಯಾರಿಕೆಯಿಂದ ಕೂಡಿದ
ನೀರು ಹಾಯಿಸುವ
'ಕಿರ್ಲೋಸ್ಕರ್' ಪಂಪು ಸೆಟ್ಟುಗಳು
ಶ್ರೇಷ್ಠತೆಗೂ ಭದ್ರತೆಗೂ ಪ್ರಸಿದ್ಧವಾಗಿವೆ.
ನಿಮ್ಮ ಸಮೀಪದ ವಿತರಣೆಗಾರರು:
ಕರ್ಕೇರ ಸನ್ಸ್ & ಕೊ.,
ಮೈದಾನ್ ವೆಸ್ಟ್ ರೋಡು   Phone No. 3967
ಮಂಗಳೂರು–೧

ವೈಷ್ಣವ ಶಿಖಾಮಣಿ
ಕನಕದಾಸ ರಚಿತ
ಹರಿಭಕ್ತಿಸಾರ
ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ.
0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ:-
ನವಯುಗ ಪ್ರೆಸ್, ಉಡುಪಿ.

READ &
ADVERTISE IN
NAVAYUGA WEEKLY

ನಾನೇನೂ ಬರೆಯಲಾರೆ

(ಹತ್ತನೇ ಪುಟದಿಂದ)

ಪತ್ನಿಯನ್ನು ಹಿಂದಿನಿಂದ ಕೂಡಿಸಿಕೊಂಡು, ಮುಂದಿನಿಂದ ತಮ್ಮ ಪುಟ್ಟ ಕುಲದೀಪಕನನ್ನು ಕೂಡಿಸಿ ಕೊಂಡು "ನೋಡಿದಿರಾ ನಮ್ಮ ಠುಶಿ" ಎಂಬಂತಹ ತಮ್ಮ ಕುಟುಂಬದ ಬಣ್ಣದ ಸೆರಗಿನ ಜಾಂಡಾ ಹಾರಿಸಿಕೊಂಡು, ಸಿನಿಮಾ ಮೊದಲಾದ ತಿರುಗಾಟಕ್ಕೆ ಹೋಗ ತ್ತಾರಲ್ಲ— ಇದೊಂದು ಸಂಸ್ಕಾರ—ಜಕುಂ ಸಂಸ್ಕಾರ. ಇವರಿಗಿಂತ ಮೇಲಿನವಂತದ ಕೆಳಗಿನವರ ಸಂಸ್ಕೃತಿ ಎಂತೆಂತಹುದೆಂಬುದು ಯಾರಿಗೂ ಗೊತ್ತಾಗುವಂಥಾದ್ದಲ್ಲ. ಅದೆಲ್ಲ ಶ್ರೀಮಂತರ ಲೆಕ್ಕದ್ದು. ಈ ಬಗೆಯ ನಾಗರಿಕ ಸಂಸ್ಕಾರಗಳ ಪರಿಣಾಮ ಎಲ್ಲಿಗೆ ಹೋಗಿ ಮುಟ್ಟುತ್ತೇ ಅಂತ ಗೊತ್ತಾಗದೆ ಅದನ್ನು ಕುರಿತು ಹೇಗೆ ತಾನೇ ಬರೆಯಲಿ?

ಮೂಲವನ್ನು ನೋಡಿ ಪರಿಣಾಮ ತಿಳಿಯಬಹುದೋ ಅಂತ ಆಲೋಚನೆ ಮಾಡುವಾಗ, ಮಾನವರ ಸಂಸ್ಕೃತಿಗಳಿಗೆಲ್ಲ ಮೂಲ ವಿದ್ಯಾರ್ಥಿದೆಶೆಯ ಶಿಸ್ತು ಪದ್ಧತಿಗಳೇ ಅಂತ ಕಾಣುತ್ತದೆ. ಅದನ್ನು ಶಾಲಾ ವಿದ್ಯಾರ್ಥಿಗಳಲ್ಲಿ ನೋಡಬೇಕು ತಾನೇ? ಅವರ ಸಮವಸ್ತ್ರ, ಸಮನಡಿಗೆಗಳನ್ನೆಲ್ಲ ನೋಡುವಾಗ ಉತ್ತಮ ಸಂಸ್ಕೃತಿಯ ಮೂರ್ತಿಗಳಾಗಿಯೇ ಕಾಣಿಸುತ್ತಾರೆ. ಈ ಬಗೆಯ ಸಂಸ್ಕಾರದಲ್ಲಿ ಬೇಗಬೇಗನೇ ಬೆಳೆದು ಬರುವ ಬೀದಿ ಕಾಮಣ್ಣಂದಿರು, ಸ್ಟ್ರೀಟ್ ಲೌವರ್ರು, ರಸ್ತೇಸಿಂಗರ್ರು, ಟಿಕೆಟ್‌ಲೆಸ್ ಚೆಲೋವರ್ರು, ಏನು ಬಂದ್ರೂ ಡೋಂಟ್‌ಕೇರ್ ಎಂಬವರ್‌ಗಳನ್ನು ಉಪಾಧ್ಯಾಯರ್, ಪ್ರೊಫೇಸರ್, ಪ್ರಿನ್ಸಿಪಾಲರ್‌ಗಳನ್ನೇ ಹೆದರಿಸಿ ತಮಗೆ ಬೇಕಾದ ಪಾಠಗಳನ್ನು ಕಿವಿಹಿಂಡಿ ಹೇಳಿಸಿಕೊಂಬವರನ್ನೂ ಕುರಿತು ನಾನೇನಾದರೂ ಗೀಚಿದೆನೆಂದರೆ ಬಡಪಾಯಿಯಾದ ನನ್ನನ್ನು ಕಾಪಾಡುವವರಾರು? ನನ್ನ ಸಹಾಯಕ್ಕೆ ಪೋಲೀಸರು ಬಂದರೂ ಅವರಿಗೆಲ್ಲ ಡೋಂಟ್ ಕೇರ್. ಇದನ್ನೆಲ್ಲ ಸರಿಪಡಿಸಿಕೊಳ್ಳಬೇಕಾದರೆ ವಿದ್ಯಾಸಂಸ್ಥೆಗಳ ಮೂಲಭೂತ ವಿಧಾನ, ಯೋಜನೆ ಮುಂತಾದುವುಗಳಲ್ಲಿಯ ತೂತು, ತೊರ್ತೆಗಳನ್ನು ಕುರಿತು ಟೀಕಾಟಿಪ್ಪಣಿ ಎಷ್ಟೋ ಮಾಡಬೇಕಾದೀತಲ್ಲ. ನನ್ನಂಥವನಿಗೆ ಏಕೆ ಬೇಕು ಈ ಕರ್ಮ? ಬೇಡವೇ ಬೇಡ ಈ ಸಂಸ್ಕಾರದ ಗೊಡವೆ.

ತಲೆಕೊಡರಿ ಆ ವಿಚಾರಗಳೆಲ್ಲವನ್ನೂ ಜಾಡಿಸಿ, ಮೌಲ್ಯವಿರುವ ಲೇಖನವೇನಾದರೂ ಬರೆಯೋಣವೆಂದು ನೋಡಿದೆ.

ಮೌಲ್ಯವಿರುವ ಲೇಖನ ಬರೆಯಲು ಮೊತ್ತಮೊದಲು ಬೇಕಾದ್ದು ಬಹಳ ಬೆಲೆಬಾಳುವ ಕಾಗದ, ಸುಪೀರಿಯರ್ ಕ್ವಾಲಿಟಿಯ ಗ್ಲೇಜ್ ಪೇಪರ್—ಅಂಥಾದ್ದರಲ್ಲೇ ಬರೆಯಬೇಕು. ಅದನ್ನು ಕಳುಹಿಸುವಾಗ ರಿಜಿಸ್ಟರಿನಲ್ಲೇ ಕಳುಹಿಸಬೇಕು. ಒಳಗೆ ಮರು ರಿಜಿಸ್ಟರಿಗೆ ತಕ್ಕಷ್ಟು ಸ್ಟಾಂಪುಗಳನ್ನೂ ಲಗತ್ತಿಸಿರಬೇಕು. ಅದನ್ನು ಬಿಡಿಸಿ ನೋಡುತ್ತಲೇ ಸಂಪಾದಕರು ಹೆದರಿಕೊಂಡು, ಭಾರೀ ಮೌಲ್ಯವುಳ್ಳ ಲೇಖನವೆಂದು ನಿಃಸಂಶಯವಾಗಿ ಮನಗಂಡು ಓದಿ ನೋಡದೆಯೇ ಕಂಪೋಜಿಟರ್ ಹತ್ತಿರ ಕಳುಹಿಸಿ ಬಿಡುತ್ತಾರೆ. ಅದೆಲ್ಲ ಸರಿ. ಆ ಕಾಗದದಲ್ಲಿ ನಾನೇನಾದರೂ ಬರೆದಿದ್ದರೆ ತಾನೇ ಕಂಪೋಜ್ ಮಾಡಲು ಸಾಧ್ಯ?

ಏನು ಬರೆಯಬಹುದು ಮೌಲಿಕ ವಿಷಯದಲ್ಲಿ? ಅಸಲೇ ರೂಪಾಯಿಯ ಅಪಮೌಲ್ಯವಾದ ದಿನಗಳಿವು. ಇದೇನೋ ವಿದೇಶೀ ವಿನಿಮಯದಲ್ಲಿ ಮಾತ್ರವೇ ಹೊರತು ನಮ್ಮ ದೇಶಕ್ಕೇ ಏನೂ ದುಷ್ಪರಿಣಾಮ ಇಲ್ಲ ಅಂತ ಹೇಳಿದ್ದಾರೆ. ಯಾಕೆಲ್ಲ ಎಲ್ಲಾ ಉಂಟೂ ಅಂತ ಕೆಲವರು ಅದನ್ನು ಖಂಡಿಸುತ್ತಲೂ ಇದ್ದಾರೆ. ಒಳದೇಶ ವಸ್ತುಗಳಿಗೂ ಬೆಲೆ ಏರುತ್ತಾ ಇರುವಾಗ, ಅಪಮೌಲ್ಯದ ಬಿಸಿ ತೀರ ಬಡಪ್ರಜೆಗೂ ತಾಗುತ್ತಿರುವಾಗ, ಯಾರೂ ಬೆಲೆಯೇರಿಸಬಾರದೆಂದು ಎಚ್ಚರಿಕೆ ಕೊಡುತ್ತ, ಏನೋ ಬಂದೋಬಸ್ತು ಮಾಡುವ ಅಧಿಕಾರಗಳನ್ನು ಬಿಡುಗಡೆ ಮಾಡುತ್ತ ಇರುವುದನ್ನು ನೋಡುವಾಗ ಕಳ್ಳರ ಗುಂಪು ಬರುತ್ತದೆಂದು ತಿಳಿದಿರುವ ಹಾಗೇ ಇದೆ. ಕಳ್ಳರು ಒಳಗೆ ಬಾರದಂತೆ ತಡೆಯುವ ಕೋಟೆಯ ಮೂಲೆಯಲ್ಲಿ ಕೆಲವು ಕಲ್ಲುಗಳು ಜಂದು ಬಿದ್ದು ದ್ವಾರ ವುಂಟಾಯಿತೆನ್ನುವ ಅದು ಮುಚ್ಚಲಾಗದ ದ್ವಾರ. ಇನ್ನು ಕಳ್ಳರು ಬಾರದಂತೆ ತಡೆಯಬೇಕೆಂಬುದೇ ಮುಖ್ಯ ಎಚ್ಚರಿಕೆಯ ವಿಷಯವಾಯಿತು. ನುಗ್ಗಲಾಗುವ ಕಳ್ಳರು ನುಗ್ಗುವುದಂತೂ ಖಡಾ ತಾನೆ? ಇದನ್ನು ಮುಚ್ಚಲು ಅಂದರೆ, ರೂಪಾಯಿಯ ಮೌಲ್ಯ ತಗ್ಗಿದ್ದಕ್ಕೆ ಸರಿಹೋಗುವ ಹಾಗೆ, ಅಂದರೆ ಅದರ ತಗ್ಗಿದ ಮೌಲ್ಯವನ್ನು ಏರಿಸಲು ದೇಶೀಯ ಉತ್ಪತ್ತಿ ಹೆಚ್ಚಾಗಬೇಕಂತೆ. ಆಗ ತಾನೇ ಮರ್ಯಾದೆ ಉಳಿಯುವುದಂತೆ. ಇದು ನನ್ನೊಬ್ಬನ ಪ್ರಶ್ನೆಯಲ್ಲ. ಪ್ರತಿಯೊಬ್ಬನ ಪ್ರಶ್ನೆ. ಆದ್ದರಿಂದ ದೇಶೀಯ ಉತ್ಪನ್ನ ಹೆಚ್ಚಿಸಲು ಎಲ್ಲರೂ ಹೆಣಗಾಡಬೇಕಾಗಿದೆ. ಹೆಣಗುತ್ತಲೇ ಇದ್ದಾರಂತೆ ಧುರೀಣರೆಲ್ಲ. ಅದೆಲ್ಲ ಆಗಿ ಸತ್ಪರಿಣಾಮ ಕಂಡಾಗ ತಾನೇ ಏನಾದರೂ ಮೌಲ್ಯವುಳ್ಳ ಲೇಖನ ಬರೆಯಲು ಸಾಧ್ಯ? ಬರೀ ಪುಂಗಟ್ಟೆ ಲೇಖನ ಬರೆದು ಮೌಲ್ಯ ಸಂಪಾದಿಸುವುದಾದರೂ ಹೇಗೆ? ಬರೆಯುವುದಾದರೂ ಏನು ಅಂತ?

ಮೌಲ್ಯವುಳ್ಳ ಲೇಖನ ಬರೆಯುವ ಕಾಲ ಇದಲ್ಲ—ಮುಂದೆ.

ಆದುದರಿಂದ ಪ್ರಸ್ತುತ ರಾಜಕೀಯ ಸಾಂಸ್ಕೃತಿಕ, ಮೌಲ್ಯವುಳ್ಳ ಲೇಖನ ಬರೆಯಲು ನನ್ನಿಂದ ಸಾಧ್ಯವಿಲ್ಲವೆಂಬುದನ್ನು ಸಂಪಾದಕರಿಗೆ ತಿಳಿಸಿ ಬಿಡುತ್ತೇನೆ.

(ಇದು ಹೇಗೆ ಪ್ರಕಟವಾಯಿತೆಂದರೆ, "ನಿಮ್ಮ ವಿಶೇಷ ಸಂಚಿಕೆಗೆ ನೀವು ಕೇಳಿದ ರೀತಿಯ ಲೇಖನ ಬರೆಯಲು ನನ್ನಿಂದ ಸಾಧ್ಯವಿಲ್ಲ ಕ್ಷಮಿಸಿ' ಎಂದು ಈ ಲೇಖಕರಿಂದ ಒಂದು ಕಾಗದ ನಮಗೆ ಬಂತು. ನಾನು ಸ್ವತಃ ಅವರ ಮನೆಗೆ ಹೋಗಿ ಕಾರಣ ವಿಚಾರಿಸಿದಾಗ, ಅವರು ತಮ್ಮ ಡೈರಿಯನ್ನು ತೆಗೆದು ನನ್ನ ಮುಂದಿಟ್ಟರು. ಅದನ್ನು ಓದಿ ನೋಡಿದ ಮೇಲೆ ಅದನ್ನೇ ಕಾಪಿ ತೆಗೆಯಿಸಿಕೊಂಡು ಬಂದು, ಪ್ರಕಟಿಸಲಾಯಿತು.

—ಸಂಪಾದಕ)

ತನ್ನನ್ನು ಗಾಢವಾಗಿ ಆವರಿಸಿದ ಪರಾಭವನೆಯ ಕತ್ತಲೆಯನ್ನು ಹೋಗಲಾಡಿಸಿ ನಿಜ ಜೀವನದ ದೈವೀ ಪ್ರಕಾಶದಲ್ಲಿ ಬಾಳುವಂತೆ ಮಾಡುವ ಉಪಾಯಗಳಲ್ಲಿ ವಿವೇಕವೇ ಮೊದಲನೆಯದು.

ಕನ್ನಡದಲ್ಲಿ ಬೆಳಕಿಗೆ ಬಾರದಿರುವ ಭಾರತೀಯ ವೀರ ರಮಣಿಯರ ದಿಟ್ಟೆದೆಯ ಸಾಹಸಮಯ ಜೀವನ-ಘಟನೆಗಳು!

ಕಲಾತ್ಮಕ ರಕ್ಷಾಕವಚ

ಬೆಲೆ: ರೂ. 1—50

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಅಬಲೆಯರು ಸಬಲವಾದ ನಾರೀಶಕ್ತಿಯನ್ನು ಪ್ರದರ್ಶಿಸಿದ ರೀತಿ-ನೀತಿಯ ನವೀನ ಐತಿಹಾಸಿಕ ಗ್ರಂಥ!

ನವಯುಗ ಪ್ರೆಸ್, ಉಡುಪಿ – ಅಥವಾ – ನವಭಾರತ ಪುಸ್ತಕ ಭಂಡಾರ, ಉಡುಪಿ

ದೇಶಭಕ್ತ — ಕಾರ್ನಾಡು ಸದಾಶಿವರಾವ್

(ಒಂಭತ್ತನೇ ಪುಟದಿಂದ)

ಯೂ ವಾಗಲೂ ಪ್ರವಾಸವನ್ನು ಕೈಕೊಳ್ಳಬೇಕಾಗಿದ್ದಿತು — ನೂರಾರು ಮಂದಿ ನೂಲುವುದನ್ನು ಕಲಿತು, ತಮ್ಮ ಬಾಳ್ವೆಯ ಅನ್ನವನ್ನು ಗಳಿಸಲು ಶಕ್ತರಾದುದೂ ಬಹಳೇ ಕಡಿಮೆ ಉತ್ಪತ್ತಿಯಿರುವ ಹಲವರು, ನೂಲುವುದರಿಂದ ಅದನ್ನು ಭರ್ತಿ ಮಾಡಲು ಸಾಧ್ಯವಾದುದೂ, ಸದಾಶಿವರಾಯರಿಗೆ ಹೆಚ್ಚಿನ ಸಂತೋಷವನ್ನು ಉಂಟು ಮಾಡಿದುದರ ಪರಿಣಾಮವಾಗಿ, ಅದರ ಖರ್ಚಿನ ಕಡೆಗೆ ಅವರ ಗಮನವೇ ಹರಿಯಲಿಲ್ಲವೆಂದು ತಿಳಿಯಬೇಕಾಗುತ್ತದೆ. ಅದೂ ಅಲ್ಲದೆ, ಅಂತಹ ದೊಡ್ಡ ವಹಿವಾಟನ್ನು ತಾನೊಬ್ಬನೇ ನಡೆಸಲು ಸಾಧ್ಯವೇ, ಇದ್ದರೂ ಎಷ್ಟರ ತನಕ, ಎಂಬುದನ್ನು ಅವರು ಗಣನೆಗೆ ತರಲಿಲ್ಲ ಹೀಗಾಗಿ, ಅವರು ಸ್ನೇಹಿತರಿಂದ ಹಣವನ್ನು ಪಡೆಯುತ್ತಾ, ಸಾಲವು ಅಧಿಕವಾಗುತ್ತಾ ಹೋಯಿತು.

ಅಂದಿನ ದಿನಗಳಲ್ಲಿ, ಅವರೆಡೆಗೆ ಸಹಾಯವನ್ನು ಬೇಡಲು ಹೊರಟ ಯಾವನೂ ನಿರಾಶನಾಗಿ ಮರಳಲಿಲ್ಲ. ತಮಗೆ ಹೇಳಲ್ಪಟ್ಟ, ಪ್ರತಿಯೊಂದು ತರುಣಿಯ ಕಥೆಯನ್ನೂ ಬಡತನದ ಗೋಳನ್ನೂ ಅವರು ನಂಬುತ್ತಿದ್ದರು. ಅದೊಂದೇ ಅವರ ಮನಸ್ಸಿನ ದೌರ್ಬಲ್ಯವಾಗಿದ್ದಿತು ರಾಷ್ಟ್ರೀಯ ಶಾಲೆಗಳನ್ನು ಸೇರಿದುದಕ್ಕಾಗಿ ಮನೆಯಿಂದ ಹೊರಡಿಸಲ್ಪಟ್ಟ ವಿದ್ಯಾರ್ಥಿಗಳೂ, ಕಾಂಗ್ರೆಸ್ ಅಧಿವೇಶನಗಳಲ್ಲಿ ಭಾಗವಹಿಸಲು ಉತ್ಸುಕರಾಗಿದ್ದರೂ ಹಣದ ಅಭಾವದಿಂದ ಕಷ್ಟಪಡುತ್ತಿರುವವರೂ ಆರ್ಥಿಕ ಅಡಚಣೆಗಳುಳ್ಳ ಕಾಂಗ್ರೆಸ್ ಕೆಲಸಗಾರರೂ ಮಾತ್ರವಲ್ಲದೆ ಇನ್ನೂ ಹಲವಾರು ಮಂದಿ, ಅವರಿಂದ ಸಹಾಯವನ್ನು ಪಡೆಯುತ್ತಿದ್ದರು, ವಾಸ್ತವವಾಗಿ, ಇತರರಿಗೆ ನೆರವು ನೀಡಲು ಅವರು ಒಮ್ಮೆಯಾದರೂ ನಿರಾಕರಿಸಿದ ಘಟನೆಯು, ನನ್ನ ನೆನಪಿಗೆ ಬರದು. ೧೯೨೨—೨೩ರ ಎರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಆ ಮೊದಲು ಎಂದೂ ಸಂಭವಿಸದಂತಹ, ಭೀಕರ ನೆರೆಗಳು, ಜಿಲ್ಲೆಯ ನೂರಾರು ಹಳ್ಳಿಗಳನ್ನು ಬಾಧಿಸಿದುವು. ಸದಾಶಿವರಾಯರು ನೆರೆಹಾವಳಿಗೆ ತುತ್ತಾದ ಜನರ ಸಹಾಯಾರ್ಥವಾಗಿ ಒಂದು ಕಮಿಟಿಯನ್ನು ಸ್ಥಾಪಿಸಿ, ದೊಡ್ಡ ಪ್ರಮಾಣದಲ್ಲಿ ಅಕ್ಕಿಯನ್ನೂ ಹಣವನ್ನೂ ಸ್ವತಃ ಸಹಾಯವಿತ್ತರು. ತಮ್ಮ ಬಳಗಳಿಗೆ ನೆರೆಯಿಂದ ಉಂಟಾದ ನಾಶದ ಬಗ್ಗೆ ಅವರ ಒಕ್ಕಲುಗಳು ಗೋಳಿಟ್ಟಾಗ, ಅವರಿಗೆ ಉದಾರ ಹೃದಯದಿಂದ ರಿಯಾಯತಿ ಇತ್ತರು.

೧೯೨೩ರ ಅಂತ್ಯದಲ್ಲಿ, ಅವರಿಗೆ ಹಣದ ಅಭಾವವಿದ್ದಿತೆಂದು ನನಗೆ ಸಂಶಯ ಬಂದಾಗ, ಅವರ ಆರ್ಥಿಕ ಪರಿಸ್ಥಿತಿಯ ಕುರಿತು ನಾನು ಬಹಳ ಸಂಕೋಚದಿಂದ ಒಂದೆರಡು ಬಾರಿ, ಪ್ರಶ್ನಿಸಿದೆ. ಗಾಬರಿಪಡತಕ್ಕುದಿಲ್ಲವಾಗಿ, ನನಗೆ ಆಶ್ವಾಸನೆಯಿತ್ತು ನನ್ನನ್ನು ಸಮಾಧಾನ ಪಡಿಸಿದರು. ಅದೇ ಸಮಯದಲ್ಲಿ, ಕದ್ರಿಯಲ್ಲಿ ಸಾಧಕಾಶ್ರಮದ ಕಟ್ಟೋಣಗಳನ್ನು ಕಟ್ಟಿಸುವರೆ ತುಂಬ ಹಣ ವೆಚ್ಚ ಮಾಡಿದರು. ಅಂದಿನ ದಿನಗಳಲ್ಲಿ, ನಿರ್ಭೀತಿಯಿಂದ ನಾನು ಅವರನ್ನು ಆಗಿನ ವಿಷಮ ಪರಿಸ್ಥಿತಿಯ ಕುರಿತು ಎಚ್ಚರಿಸದೆ ಇದ್ದುದಕ್ಕಾಗಿ, ಕೆಲವು ವರ್ಷಗಳ ನಂತರ ಪಶ್ಚಾತ್ತಾಪ ಪಟ್ಟಿರುತ್ತೇನೆ. ಆದರೂ ಆ ಕಾಲದಲ್ಲಿ, ನಾನು ಅನುಭವವಿಲ್ಲದ ಯುವಕನಾಗಿದ್ದು, ಪರಿಸ್ಥಿತಿಯು ಎಷ್ಟರ ಮಟ್ಟಿಗೆ ಹೀನವಾಗಿದ್ದಿತೆಂಬುದನ್ನು, ತಿಳಿದಿರಲಿಲ್ಲವೆಂಬುದು ನನ್ನ ಮನಸ್ಸಿಗೆ ಸಮಾಧಾನವನ್ನುಂಟುಮಾಡಿದೆ. ಅವರು ದನಿಕರೆಂದು ತಿಳಿದಿದ್ದರೂ, ಅವರಿಗಿರುವ ಜಮೀನು ಯಾ ಐಶ್ವರ್ಯದ ಪರಿಮಿತಿಯು, ಎಷ್ಟೆಂದು, ಕಿಂಚಿತ್ತಾದರೂ ನಾನು ತಿಳಿದಿರಲಿಲ್ಲ, ಅವರ ಮೇಲಿನ ವಿಶೇಷ ಗೌರವದಿಂದಾಗಿ, ಅವರ ವ್ಯಕ್ತಿಪರವಾದ ವಿಷಯಗಳ ಕುರಿತು ಪ್ರಶ್ನಿಸಲು, ನಾನು ಹಿಂಜರಿಯುತ್ತಿದ್ದೆ. ಅಲ್ಲದೆ, ಅವರಿತ್ತ ಆಶ್ವಾಸನೆಯು, ಸುಳ್ಳಾಗಿರಲಾರದೆಂದು, ನನಗೆ ಸಂಪೂರ್ಣ ಭರವಸೆ ಇದ್ದಿತು.

ಹುಟ್ಟು ಬಡವನಾಗಿದ್ದು ಬಡಜನರ ಕಷ್ಟ ಕಾರ್ಪಣ್ಯಗಳ ಅನುಭವವು ನನಗೆ ಚೇಕಷ್ಟಿದೆ. ಆದರೆ, ಧನಿಕನಾಗಿ ಹುಟ್ಟಿ ಬೆಳೆದು, ಜೀವನದ ಅಧಿಕಕಾಲವನ್ನು ಸುಖಸಮೃದ್ಧಿಯಿಂದ ಕಳೆದು, ಕೊನೆಯ ಕೆಲವು ವರ್ಷಗಳಲ್ಲಿ ಮಾತ್ರ, ದಾರಿದ್ರ್ಯವನ್ನು ಅನುಭವಿಸಬೇಕಾಗಿ ಬಂದವರ ಯಾತನೆಯು, ಎಷ್ಟು ಕಠಿಣವಾಗಿರಬಹುದೆಂದು ಊಹಿಸಲಾರೆ. ಕೆಟ್ಟ ಯೋಜನೆಯನ್ನು ಮಾಡುವುದಾಗಲೀ, ನಿರ್ದಯತೆಯಿಂದ ಕೂಡಿದಮಾತುಗಳನ್ನಾಡುವುದಾಗಲೀ ಸದಾಶಿವರಾಯರ ನಿರ್ಮಲಶಾಂತ ಸ್ವಭಾವಕ್ಕೆ ವಿರೋಧವಾಗಿದ್ದಿತು ಅವರು ದೈವಭಕ್ತಿಯುಳ್ಳವರಾಗಿದ್ದು ದೋಷರಹಿತ ಗುಣನಡತೆಯವರಾಗಿದ್ದರು. ವಿನಾಕಾರಣವಾದ ಪೀಡನೆಗೆ ಅವರನ್ನು ಗುರಿಪಡಿಸಿದಾಗ ಕೂಡಾ ಅವರ ಬಾಯಿಯಿಂದ ಕರ್ಕಶವಾದ ಮಾತು ಹೊರಡುತ್ತಿರಲಿಲ್ಲ. ಎಲ್ಲವನ್ನೂ ಅವರು ಸಮಾಧಾನ ಚಿತ್ತದಿಂದ ಸಹಿಸುತ್ತಿದ್ದರು.

ಈ ಎಲ್ಲಾ ಶ್ರೇಷ್ಠ ಗುಣಗಳಿಗಾಗಿಯೂ, ದೇಶದ ಒಳಿತಿಗಾಗಿ ತನ್ನ ಸರ್ವಸ್ವವನ್ನು ತ್ಯಾಗಮಾಡಿ ತನ್ನ ಅಪಾರ ಐಶ್ವರ್ಯವನ್ನೂ ಜನತೆಯ ಬಗ್ಗೆ ಧಾರೆ ಎರೆದುದಕ್ಕಾಗಿಯೂ ಸದಾಶಿವರಾಯರು ಜಿಲ್ಲೆಯ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಆದರೆ, ಅವರ ಕೊನೆಯ ದಿನಗಳಲ್ಲಿ ಅಂದಿನ ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳು ಮಾತ್ರ ಅವರನ್ನು ಜಿಲ್ಲೆಯಿಂದ ಹೊರದಬ್ಬಿದರೆಂದು ಹೇಳಿದರೆ ತಪ್ಪಾಗಲಾರದು. ಮದ್ರಾಸ್ ನ್ಯಾಯ ವಿಧಾಯಕ ಸಭೆಯ ಚುನಾವಣಾ ಕಾಲದಲ್ಲಿ ಸದಸ್ಯ ಸ್ಥಾನಕ್ಕೆ ಉಮೇದುವಾರರಾಗಲು ಅವರು ಅರ್ಜಿ ಸಲ್ಲಿಸಿದಾಗ, 'ಅವರು ದರಿದ್ರರು, ಹಣದ ಕೊರತೆಯಿಂದಾಗಿ ಚುನಾವಣೆಯಲ್ಲಿ ಗೆಲ್ಲಲು ಅಸಮರ್ಥರು' ಎಂಬ ನೆವನಗಳನ್ನು ತಂದೊಡ್ಡಿ, ಅವರ ಹೆಸರನ್ನು ಶಿಫಾರಸು ಮಾಡಲಿಲ್ಲ. ಅವರನ್ನು ಉಮೇದುವಾರರನ್ನಾಗಿ ಆರಿಸಿದ್ದೇ ಆದರೆ, ಬಹು ಮಟ್ಟಿಗೆ, ಯಾರೂ ಅವರ ಎದುರು ಸ್ಪರ್ಧಿಸಲು ಮುಂದೆ ಬರುತ್ತಿರಲಿಲ್ಲ, ಒಂದು ವೇಳೆ, ಯಾರಾದರೂ ಸ್ಪರ್ಧಿಸಿದರೂ, ಸದಾಶಿವರಾಯರು ಚುನಾವಣೆಯಲ್ಲಿ ಅತ್ಯಧಿಕ ಬಹುಮತದಿಂದ ಆರಿಸಲ್ಪಡುತ್ತಿದ್ದರೆಂಬುದು ನಿಸ್ಸಂಶಯವಾಗಿದ್ದಿತು. ಕಾಂಗ್ರೆಸ್ ಜಿಲ್ಲೆಯ ಹದಿನೈದು ಮಂದಿ ಪ್ರತಿನಿಧಿಗಳಲ್ಲಿ ಒಬ್ಬರನ್ನಾಗಿ ಕೂಡಾ ಅವರನ್ನು ಆರಿಸಲಿಲ್ಲವೆಂಬುದನ್ನೂ ಅವರು ಅಧಿವೇಶನಕ್ಕೆ ಪ್ರೇಕ್ಷಕರಾಗಿಹೋಗಬೇಕಾಯಿತೆಂಬುದನ್ನೂ ಯಾರೂ ಸುಲಭವಾಗಿ ನಂಬಲಾರರು. ಅವರನ್ನು ಸಾರ್ವಜನಿಕ ಜೀವನದಿಂದ ಹೊರದಬ್ಬುವರೆ ಒಳಸಂಚು ನಡೆಸಿದುದು, ಅವರು ಜಿಲ್ಲೆಯ ಮುಖಂಡರಾಗಿರುವ ತನಕ, ತಮಗೆ ಸ್ಥಾನವು ದೊರೆಯಲಾರದೆಂಬ, ಒಂದೆರಡು ವ್ಯಕ್ತಿಗಳ ದುರಾಲೋಚನೆಯ ಫಲವಲ್ಲದೆ ಬೇರೇನೂ ಅಲ್ಲ. ಇದೀಗ ಅಧಿಕಾರದಾಹದಿಂದುಂಟಾದ ಘೋರ ಅನ್ಯಾಯ.

ಕೆಲವು ವರ್ಷಗಳ ಬಳಿಕ ನಾನು ಟಾಲ್‌ಸ್ಟಾಯರ ಜೀವನ ಚರಿತ್ರೆಯನ್ನು ಓದಿದಾಗ, ನನಗೆ ಸದಾಶಿವರಾಯರ ಹೆಸರು ನೆನಪಿಗೆ ಬಂತು. ಟಾಲ್‌ಸ್ಟಾಯರು, ಕಷ್ಟಕ್ಕೀಡಾದ ಬಡ ಜನತೆಯ ಸುಧಾರಣೆಗಾಗಿ ನಡೆಸಿದ ಪ್ರಯತ್ನವನ್ನೂ, ಅವರ ಬೇನೆ ಬವಣೆಗಳನ್ನು ಕಂಡು ತಮ್ಮ ಬಾಳ್ವೆಯ ಗತಿಯನ್ನೇ ಬದಲಿಸಿದುದನ್ನೂ ನಾನು ಅರಿತೆ. ಇದೇ ರೀತಿಯಲ್ಲಿ ಸದಾಶಿವರಾಯರೂ, ತಾವು ಹೊಂದಿಕೊಂಡಿದ್ದ ಆಡಂಬರಗಳನ್ನು ತ್ಯಜಿಸಿ, ಸಾದಾ ಜೀವನವನ್ನು ನಡೆಸಿದರು. ಅವರಿಬ್ಬರ ಉದಾತ್ತ ಧ್ಯೇಯಗಳೂ, ಕಪಟರಹಿತ ಉದ್ದೇಶಗಳೂ, ಸಂಪೂರ್ಣ ನಿಸ್ವಾರ್ಥ ತ್ಯಾಗವೂ ಸಮಾನತೆವುಳ್ಳವುಗಳೆಂದು ನನಗೆ ತೋರಿದುವು. ತಾವು ಮೇರೆ ಮೀರಿ ವ್ಯಯಿಸಿರುವುದು ಸದಾಶಿವರಾಯರ ತಿಳುವಳಿಕೆಗೆ ಬಂದಾಗ, ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ಅವರಿಗೆ ದೂರವಾಗಿ ಹೋಗಿರಬಹುದು. ಆ ಬಳಿಕವೂ ಗೆಳೆಯರ ಬೆಂಬಲದಿಂದ ತಾವು ಆರ್ಥಿಕ ಅಧಃಪತನದಿಂದ ಪಾರಾಗಬಹುದೆಂಬ ಆಶೆಯೂ ಅವರಲ್ಲಿತ್ತು. ಆದರೆ ಇವರಲ್ಲಿನ ಅನೇಕರು ತಾವು ಸದಾಶಿವರಾಯರಿಗಿತ್ತ ಹಣದಲ್ಲಿ ಎಷ್ಟಂಶ ಅವರ ಆಸ್ತಿಯ ಮಾರಾಟದಿಂದ ತಮಗೆ ಹಿಂದೆ ದೊರಕಬಹುದೆಂಬ ಯೋಚನೆಯಲ್ಲಿ ನಿರತರಾಗಿದ್ದರೆಂದು ತೋರುತ್ತಿದೆ. ಕೆಲವು ಕಾಲದ ತನಕ ಮಹಾತ್ಮಾಗಾಂಧೀಜಿಯವರ ಸಹೋದ್ಯೋಗಿಯಾಗಿದ್ದ ಶಂಕರಲ್ ಬ್ಯಾಂಕರ್‌ರವರು ಅವರ ರಕ್ಷಣೆಗೆ ಬರಬಹುದೆಂಬ ಸುದ್ದಿ ಹಬ್ಬಿತ್ತು, ಸದಾಶಿವರಾಯರ ಪರವಾಗಿ ಪ್ರಯತ್ನಿಸಲು ಗಾಂಧೀಜಿಯವರು ಬ್ಯಾಂಕರರನ್ನು ಕೇಳಿದ್ದರು ಎನ್ನುವುದನ್ನು ನಾವು ಅರಿತಿದ್ದೆವು. ಆದರೆ ಯಾರನೆಂವೂ ದೊರಕಲಿಲ್ಲ. ಬಹುಶಃ ಸದಾಶಿವರಾಯರು ಅಪಮಾನದ ಕಟು ವಿಷಯವನ್ನು ಸವಿಯಬೇಕೆನ್ನುವುದೂ ಇತರರ ಬಡತನವನ್ನು ನೀಗಿಸುವುದಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ, ತಾನೇ ಆ ಬಡತನದ ಬೇಗೆಗೆ ಈಡಾಗಬೇಕೆನ್ನುವುದೂ ಬ್ರಹ್ಮಲಿಖಿತವಾಗಿದ್ದಿತೇನೋ! ನಿಜವಾಗಿಯೂ ಅವರು ಶ್ರೇಷ್ಠ ಹುತಾತ್ಮರೇ ಸರಿ.

With best compliments from

HOTEL SHIVAPRASAD

COONDAPUR

Phone. 77



ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಕುಂದಾಪುರ

ಫೋನ್: 77

ಅವಳು

(ಎಂಟನೇ ಪುಟದಿಂದ)

ಬಾಯಿಯಲ್ಲಿ ಗಂಭೀರವಾದ ಮಾತು ಹೊರಡತೊಡಗಿದಾಗ ಎಲ್ಲಿಲ್ಲದ ಆಶ್ಚರ್ಯವಾಯ್ತು. ಅಲ್ಲದೆ ಒಬ್ಬನೇ ಹೋಗಗೊಡದಿದ್ದುದಕ್ಕಾಗಿ ಬೇಸರವೂ ಆಯ್ತು, ಕೋಪವೂ ಬಂತು. ಆದರೇನು ಮಾಡುವುದು? ಆಕೆ ಒಬ್ಬಳೇ ಆಗಿ ಹೋಗುವುದನ್ನು ಕಾಯುತ್ತಾ ಇದ್ದೆ, ರಾಮನನ್ನು ಓಡಿಸುವ ಉಪಾಯವನ್ನೂ ಯೋಚಿಸುತ್ತಿದ್ದೆ. ಎರಡೂ ಬೇಗನೇ ಆಗುವಂತೆ ಕಾಣಲಿಲ್ಲ. ರಾಮನೆಂದ—"ಒಂದು ಆಸರೆಯಿಲ್ಲದ ಬಳ್ಳಿಗೆ ಆಸರೆ ಕೊಡಬಾರದೇ? —ಎಂದು.

"ಅಂದರೆ?"

'ಅಂದರೆ ಪಾತಾಳಕ್ಕೆ ತಳ್ಳಲ್ಪಟ್ಟಿರುವ ಒಂದು ಜೀವಿಯನ್ನು ಮೇಲೆ ತರಬಾರದೇ?"

"ಅಂದರೆ?"

"ಗೊತ್ತಿದ್ದೂ ಏನೂ ಗೊತ್ತಿಲ್ಲದವನಂತೆ ಮಾತನಾಡುತ್ತಿದ್ದೀಯಲ್ಲಾ? ನಿನ್ನ ಸ್ಥಾನದಲ್ಲಿ ನಾನಿರುತ್ತಿದ್ದರೆ ನಾನೆಂದೋ ಆ ಕೆಲಸವನ್ನು ಮಾಡುತಿದ್ದೆ. ನೀನೇಕೆ ಇಷ್ಟು ಜರಿಯುತ್ತಿರುವೆಯೆಂದು ನನಗೆ ಅರ್ಥವಾಗುತ್ತಿಲ್ಲ."

ಅಂದರೆ?

ಅಂದರೆ ನನಗೆ ಮದುವೆಯಾಗಿದೆ. ನನ್ನ ಜಾತಿಯೂ ಬೇರೆ ಆದರೆ ನೀನು ಹಾಗಲ್ಲ. ನೀನು ಅವಿವಾಹಿತ...ಅದೇ ಜಾತಿಯವ. ಆಕೆಯನ್ನು ಖಂಡಿತ ಮದುವೆಯಾಗಬಹುದು. ಅವಳ ಭಾವೀ ಜೀವನವನ್ನ ಸುಖವಾಗಿಸಬಹುದು."

'ನೀನು ಏನನ್ನು ಹೇಳುತಿದ್ದೀ ರಾಮ? ಯಾರ ವಿಷಯವಾಗಿ ನೀನು ಮಾತನಾಡುತಿದ್ದೀ?"

"ಶ್ರೀಮತಿಯನ್ನು ನೀನೇಕೆ ಮದುವೆಯಾಗಬಾರದು?

'ಯಾವ ಶ್ರೀಮತಿ? ಎಲ್ಲಿದ್ದಾಳೆ?"

"ನಿನ್ನ ಕಣ್ಣ ಮುಂದೇ ಹೋಗುತಿದ್ದಾಳೆ ನೋಡು, ಆ ಕೆಂಪು ರೇಶಿಮೆಯ ಸೀರೆಯುಟ್ಟಿರುವ ಹುಡುಗಿ..."

"ಹಾದು ಹಾದು....ಅವಳಿಗೆ ಮದುವೆಯಾಗಿಲ್ಲವೇ! ನನ್ನ ಊಹೆ ಸರಿಯಾಯ್ತು ಅವಳಿಗೇನಾಗಿದೆ, ಅವಳಿಗೇನಾಗಿದೆ!'

"ಏನೂ-ಆಗಿಲ್ಲ. ಆಕೆ ಬಾಲವಿಧವೆ... ವಿಧವೆ."

ಮೌನ. ಮನಸ್ಸಿನ ಯೋಚನಾ ತರಂಗಗಳು ಕಡಿದುವು.

ಹುಚ್ಚು ಕಲ್ಪನೆಗಳೆಲ್ಲ ಮಾಯವಾದುವು ....ರಾಮ ಎಚ್ಚರಿಸಿದ. "ಏನೆನ್ನುವೆ ನೀನು?"—ದೊಡ್ಡ ಪ್ರಶ್ನೆಯನ್ನು ಮುಂದಿಟ್ಟ ರಾಮ. ಉತ್ತರಿಸಲಾರದ ಪ್ರಶ್ನೆ ಸಮಾಜ, ಸಂಸಾರ, ಹಿರಿಯರು, ಮನೆತನದ ಗೌರವ—ಎಲ್ಲವೂ ಬೆಟ್ಟದಾಕಾರದಲ್ಲಿ ನಿಂತುವು. ಅವನ್ನು ಗೆಲ್ಲಲು ನನ್ನಿಂದ ಸಾಧ್ಯವಾದೀತೇ? ವಿಧವೆಯೊಬ್ಬಳನ್ನು ಮದುವೆಯಾಗಿ ಸಮಾಜದಲ್ಲಿ ನಿಲ್ಲುವಷ್ಟು ಧೈರ್ಯ ನನಗಿದೆಯೇ? ಆ ಎದೆಗಾರಿಕೆ ನನಗೆ ಬಂದೀತೇ? ಆ ಎದೆಗಾರಿಗೆ ಇದ್ದರೆ ಎಷ್ಟು ಒಳ್ಳೆಯದಾಗುತಿತ್ತು. ಆ ಹುಡುಗಿಯ ಬಾಳಿಗೆ ಎಷ್ಟು ಮಹತ್ವ ಬರುತಿತ್ತು! ಚಿನ್ನದ ಹೂವಿಗೆ ಪರಿಮಳ ಬಂದಂತಾಗುತಿತ್ತು. ಪ್ರಗತಿಪರ ಸಮಾಜ ನನ್ನನ್ನು ಗೌರವಿಸೀತು, ತರುಣ ವೃಂದ ಬೆನ್ನು ತಟ್ಟೀತು, ಆಕೆ ಆನಂದ ಸಾಗರದಲ್ಲಿ ತೇಲಾಡಿಯಾಳು, ಆಕೆಯ ಬಂಧುಬಳಗ ಸಂತೋಷದಲ್ಲಿ ಕುಣಿದಾಡೀತು ಮರುಳುಗಾಡನ್ನು ಸುಂದರ ವನವನ್ನಾಗಿಸಿದ ಕೀರ್ತಿ ನನಗೆ ಲಭಿಸೀತು...ಪ್ರಶ್ನೆಗಳು ಊಹೆಗಳು ಲೆಕ್ಕವಿಲ್ಲದಷ್ಟು ಉದ್ಭವಿಸಿದವು. ಉತ್ತರಕೊಡುವ ಧೈರ್ಯ ಮಾತ್ರ ಕೊನೆಗೂ ಉಂಟಾಗಲಿಲ್ಲ. 'ಯೋಚಿಸಿ ನೋಡು' -ಎಂದು ರಾಮ ತನ್ನ ದಾರಿ ಹಿಡಿದ.

ಇನ್ನು ಆಕೆಯೊಡನೆ ಮಾತನಾಡುವುದಾದರೆ ಈ ವಿವಾಹದ ಬಗ್ಗೆಯೇ ಮಾತನಾಡುವುದು.

ಮನೆಯಲ್ಲಿ ಗುಜು ಗುಜು ಶುರುವಾಯ್ತು—ನನ್ನ ಮನದ ನಿರ್ಧಾರವನ್ನು ತಿಳಿಸಿದೊಡನೆಯೇ. ಅಣ್ಣ ಹಾರಾಡಿದ, ಅಮ್ಮ ಬೆರಗಾದಳು, ಅಕ್ಕ ಕಣ್ಣೀರಿಟ್ಟಳು, ಅಯ್ಯೋ ಎಂದಳು, ಅಪ್ಪ ರೇಗಾಡಿದರು....ಬೇಡ, ಬೇಡ, ಬೇಡ. ಮೂಲೆ ಮೂಲೆಯಿಂದಲೂ ಕೇಳಿ ಬಂತು...ಬೇಡ, ಬೇಡ, ಬೇಡ. ಪರಿಪರಿಯಾಗಿ ಹೇಳಿದರೂ ಫಲಕಾರಿಯಾಗಲಿಲ್ಲ. ದುರ್ಬಲ ಮನಸ್ಸು ದೃಢವಾದ ಸೂಚನೆ ಕಂಡು ಬರಲಿಲ್ಲ. ಈ ವಿವಾಹವಾದರೆ ಎರಡು ಜೀವ ಹೋಗಬೇಕಾದೀತು, ಎಲ್ಲರಿಂದಲೂ ಬಹಿಷ್ಕಾರ ಹಾಕಿಸಿ ಕೊಳ್ಳಬೇಕಾದೀತು, ಮನೆ ಬಿಟ್ಟು ಹೋಗಬೇಕಾದೀತು. ಎಲ್ಲವಕ್ಕೂ ಸಿದ್ಧವಾಯಿತು, ಮನಸ್ಸು, ಒಂದು ಬಾರಿ. ಇನ್ನೊಂದು ಬಾರಿ ಹೊಯ್ದಾಡಿತು.

'ಇದರಿಂದ ತಪ್ಪೇನು? ವಿಧವೆಯನ್ನು ವಿವಾಹವಾದರೆ ನಿಮಗಾಗುವ ನಷ್ಟವಾದರೂ ಏನು? .... ಒಳ್ಳೆಯದಾಗಲೀ ಕೆಟ್ಟದಾಗಲೀ ಈ ಮದುವೆಯೇ ಬೇಡ. ಬೇಡವೇ ಬೇಡ....ಎಲ್ಲರ ಅಪೇಕ್ಷೆಯೂ ಇಷ್ಟೇ ಆಯ್ತು ಅನಿಶ್ಚಯತೆಯ ಶೃಂಖಲೆಯಿಂದ ಬಂಧಿಸಲ್ಪಟ್ಟು ಬೇಕೂ ಬೇಡಗಳ ಉಯ್ಯಾಲೆಯಲ್ಲಿ ತುಯ್ದಾಡಿತು ದುರ್ಬಲ ಮನಸ್ಸು. ಮನದ ಕಡಲ ಕುಣಿತ ಜೋರಾಯ್ತು.

ಅವಳನ್ನು ಕಂಡು ಮಾತನಾಡ ಬೇಕೆನ್ನುವ ಆಸೆಗೆ ಎಳ್ಳು ನೀರು ಬಿಡಲೇಬೇಕಾಯ್ತು. ವೈಧವ್ಯದ ಶಾಪವನ್ನು ಮರೆತು ಹೊಸಜೀವನವನ್ನು ಪ್ರಾರಂಭಿಸಿರುವ ಶ್ರೀಮತಿಗೆ ನನ್ನ ಮನದ ಕಡಲ ಕುಣಿತದವಾರ್ತೆ ಗೊತ್ತಾದರೆ ಗತಿ? ಬೇಡ, ಬೇಡ ಆಕೆಗೆ ಇದು ಗೊತ್ತಾಗದೆ ಹೋಗಲಿ. ಅಯ್ಯೋ ವಿಧಿಯೇ, ಮುಂದಿನ ಜನ್ಮದಲ್ಲಾದರೂ ಅಂಥ ಜೀವಿಯೊಂದನ್ನು ಉದ್ಧರಿಸುವ ಅವಕಾಶ ಕೊಡು ಎಂದು ಮೌನವಾಗಿಯೇ ಪ್ರಾರ್ಥಿಸಿದೆ.

ಮಾರನೆಯ ದಿನವೂ ಕಂಡೆ ಆಕೆಯನ್ನು. ಎಂದಿನಂತೆಯೇ ಸೌಮ್ಯ, ಸರಳ, ಮುಗ್ಧ, ಮನೋಹರ. ನನ್ನ ಮನದ ಕಡಲ ಕುಣಿತದ ಸದ್ದನ್ನು 'ಅರಿಯದೆಯೇ ಪ್ರಶಾಂತವಾಗಿತ್ತು ಅವಳ ಸುಂದರ ಮನಸ್ಸು. ಅವಳು ಸುಖವಾಗಿಯೇ ಇರಲಿ ಎಂದು ಹಾರೈಸಿತು ಮನದ ಒಂದು ಮೂಲೆ, ಹಾರೈಸುತ್ತಲೇ ಇದೆ ಮನದ ಇನ್ನೊಂದು ಮೂಲೆ.

TELEGRAM: "**FOOD**" TELEPHONE: **5012**

THE SOUTH KANARA CENTRAL CO-OPERATIVE WHOLESALE STORES Ltd.

Post Box No. 124, "SAHAKARI MAHAL",

MANGALORE-1.

—o—

DEALERS IN

Rice, Wheat and Wheat Products, Mill Cloth, Handloom Cloth, Silk, Grains and Provisions etc. Oil and Oil Cakes, Cattle Food, Manures and Insecticides, Consumers Goods, Kerosine, Iron and Steel etc. etc.

WHOLESALE CLOTH DEPOT

at

MARUTHI VITHIKA, UDIPI.

Telephone: 172

Sri K. B. Jinaraja Hegde. *B. Sc., LL. B.,* Vice-President.

Sri S. Narsapaya, *B. A., B. L.,* President.

INSIST ON

PINTO TILES.

THAT DEFY AND TEST

FACTORIES:

ORIENTAL TILE WORKS	Phone: 5081
BATTERY TILE WORKS	Phone; 5081A
MANGALORE TILES COMPANY	Phone: 4692
POMPEI TILE WORKS	Phone: 3467
STANDARD TILE COMPANY	Phone: 3181
J. H. MORGAN & SON	Phone: 3649
BHARAT TILE COMPANY, Kallianpur	Phone: 179 (Udipi)

B. PINTO & COMPANY

Largest Manufactures & Exporters,

MANGALORE-1.

Phones: Res: 5091, 3606 and 4557. Grams: "EXCELSIOR"

Bombay Office: Mazagaon, Bombay-10

B. PINTO

(Estd: 1875)

Phones: Office: 71674 Residence: 71466 Grams: "SHIPBRAND"

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್

— ಮಹಾವೀರ —
ಕರ್ನಲ್, ಲೆ| ಮೇಘ ಸಿಂಹ!

"ಕೇವಲ ೬೦ ಮಂದಿ ಮುಸ್ಲಿಂ ಸೈನಿಕರೊಡನೆ, ಸುಮಾರು ೬೦೦ ಮಂದಿ ಪಾಕಿಸ್ತಾನೀ ಆಕ್ರಮಣಕಾರಿಗಳನ್ನು ಕೊಂದ, ಅಥವಾ ತೀವ್ರ ಜಖಂ ಗೊಳಿಸಿದ ಈ ವೀರನ ಅದ್ಭುತ ಶೌರ್ಯ ಅನುಪಮೇಯವಾಗಿದೆ!"

ಪಾಕಿಸ್ತಾನೀ ಆಕ್ರಮಣವನ್ನು ಪ್ರತಿಭಟಿಸಿ, ಅದ್ಭುತ ಪರಾಕ್ರಮವನ್ನು ತೋರಿಸಿ 'ವೀರಚಕ್ರ'ವೇ ಮೊದಲಾದ ಸನ್ಮಾನಗಳನ್ನು ಪಡೆದ ಅನೇಕ ಮಂದಿ ವೀರರಲ್ಲಿ ಲೆಫ್ಟಿನೆಂಟ್ ಕರ್ನಲ್ ಮೇಘ ಸಿಂಹನು ಪ್ರಮುಖ ವೀರನಾಗಿದ್ದಾನೆ. ನಾಲ್ವತ್ತು ವಯಸ್ಸಿನ ದೇಹದಾರ್ಢ್ಯ ಸಂಪನ್ನನಾದ ಲೆ| ಕರ್ನಲ್ ಮೇಘ ಸಿಂಹನು ಪಾಕಿಸ್ತಾನೀ ಆಕ್ರಮಣದ ಕೆಲವು ದಿನಗಳ ಮೊದಲು— ತನ್ನನ್ನು ಸೈನ್ಯದಿಂದ ನಿವೃತ್ತಿಗೊಳಿಸಬೇಕೆಂಬುದಾಗಿ ಮೇಲಧಿಕಾರಿಗಳಿಗೆ ಪ್ರಾರ್ಥನಾಪತ್ರವನ್ನು ಕಳುಹಿಸಿದ್ದನು. ಸೇನೆಗೆ ಭರ್ತಿಯಾದಂದಿನಿಂದ ವಿಶೇಷ ಶೌರ್ಯ ಪ್ರದರ್ಶನ ಮಾಡಿದ್ದ ಈತನು ತನ್ನ ಮುಂದಿನ ಜೀವನವನ್ನು ತನ್ನ ಹುಟ್ಟೂರಾದ ಜೋಧಪುರದಲ್ಲಿ ಕೃಷಿ ಕ್ಷೇತ್ರದಲ್ಲಿದ್ದುಕೊಂಡು ಕಳೆಯಬೇಕೆಂದು ಸಂಕಲ್ಪಿಸಿದ್ದನು. ಇದೇ ಕಾಲಕ್ಕೆ ಪಾಕಿಸ್ತಾನ್— ಭಾರತ— ಘರ್ಷಣೆ ಪ್ರಾರಂಭವಾಯಿತು.

ದ್ವಿತೀಯ ಮಹಾಯುದ್ಧದಲ್ಲಿ ಲೆಫ್ಟಿನೆಂಟನಾಗಿ ಮತ್ತೆ ಇತ್ತೀಚೆಗೆ ನಡೆದ ಚೀನಾ ಆಕ್ರಮಣದ ಕಾಲದಲ್ಲಿ ಮೇಜರನಾಗಿ ಹೋರಾಡಿದ ಈ ವೀರನು ವೈರಿಗಳನ್ನು ನಾನಾ ವಿಧದಿಂದ ಸದೆಬಡಿಯುವ ಕಾರ್ಯದಲ್ಲಿ ಅತ್ಯಂತ ಚತುರತೆ ಹಾಗೂ ಸಾಹಸವನ್ನು ತೋರಿಸಿದ್ದನು. ವೈರಿ ಸೈನ್ಯದ ಕಡೆಯವರಿಗೆ ಭೀತಿ ಹುಟ್ಟಿಸುವ ಕಲೆ ಈ ವೀರನಿಗೆ ಹಸ್ತಗತವಾಗಿತ್ತು. ಈ ಕಾರಣದಿಂದ ಈ ಚತುರ ವೀರ ಮೇಘ ಸಿಂಹನನ್ನು ಈ ಸಂದರ್ಭದಲ್ಲಿ ನಿವೃತ್ತಿಗೊಳಿಸಲು ಮೇಲಧಿಕಾರಿಗಳಿಗೆ ಮನಸ್ಸಿರಲಿಲ್ಲ. ಮೇಘಸಿಂಹನ ಪ್ರಾರ್ಥನಾ ಪತ್ರಕ್ಕೆ ಉತ್ತರವಾಗಿ ಕಮಾಂಡಿಂಗ್ ಆಫೀಸರ್ ಹರ್‌ಭಕ್ಷ ಸಿಂಹರು-'ಈತನ ಪ್ರಾರ್ಥನೆಯನ್ನು ಸದ್ಯಕ್ಕೆ ರದ್ದುಗೊಳಿಸಲಾಗಿದೆ. ಅಲ್ಲದೆ ಈತನನ್ನು ವೈರಿಗಳನ್ನೆದುರಿಸಲು ಅತ್ಯಂತ ಅಪಾಯಕರವಾದ ಸ್ಥಳಕ್ಕೆ ಕಳುಹಿಸತಕ್ಕದ್ದು!' ಎಂದು ಆಜ್ಞೆ ಮಾಡಿದರು.

ನಿವೃತ್ತನಾಗುವ ಇಚ್ಛೆ ಇದ್ದರೂ ಮಾತೃ ಭೂಮಿಗೆ ಒದಗಿರುವ ಗಂಡಾಂತರ ಸಂಸ್ಥಿತಿಯನ್ನರಿತ ಈ ವೀರನು ಕೂಡಲೇ ಆಜ್ಞೆಯನ್ನು ಅಂಗೀಕರಿಸಿಕೊಂಡನು. ಆತನಿಗೆ ಬೇಕಾದ ಸೈನಿಕರ ಪಡೆಯನ್ನು ಸ್ವತಃ ಆತನೇ ಆರಿಸಿಕೊಳ್ಳುವಂತೆ ಆಜ್ಞೆ ನೀಡಲಾಯಿತು. ಅನುಭವಿಯಾದ ಮೇಘ ಸಿಂಹನು ರಾಜಸ್ಥಾನದ ಅರುವತ್ತು ಮಂದಿ ಮುಸ್ಲಿಂ ಯೋಧರನ್ನು ಆರಿಸಿಕೊಂಡು ತನ್ನ ಜೀವನ—ಮರಣದ ಒಡನಾಡಿಗಳಂತೆ ಭಾವಿಸಿ ತನ್ನ ಈ ಪಡೆಯೊಡನೆ ಕಾರ್ಯರಂಗಕ್ಕಿಳಿದನು.

ಪಾಕಿಸ್ತಾನೀ ಠಾಣ್ಯದ ಮೇಲೆ ಧಾಳಿ

ಪ್ರಪ್ರಥಮವಾಗಿ 'ಥಂಬ್' ಕ್ಷೇತ್ರದಲ್ಲಿ ಒಂಭತ್ತು ಮೈಲುಗಳಷ್ಟು ಮುಂದುವರಿದು ಅಲ್ಲಿಯ ಒಂದು ಮಹತ್ವಪೂರ್ಣವಾದ ಸೇತುವೆಯನ್ನು ಧ್ವಂಸ ಮಾಡುವ ಕಾರ್ಯವನ್ನು ಕರ್ನಲ್ ಲೆ|| ಮೇಘ ಸಿಂಹನಿಗೆ ಒಪ್ಪಿಸಲಾಯಿತು. ಈ ಸ್ಥಳದಲ್ಲಿ ವೈರಿಗಳ ಸುಸಜ್ಜಿತವಾದ ಸೈನ್ಯವಿತ್ತು. ಸೆಪ್ಟೆಂಬರ್ ತಾರೀಖು ೧ರಂದು ಪಾಕಿಸ್ತಾನಿಗಳು ಯುದ್ಧ ವಿರಾಮವನ್ನು ಉಲ್ಲಂಘಿಸಿ ಥಂಬ್, ಪ್ರಾಂತ್ಯದ ಮೇಲೆ ಧಾಳಿ ನಡೆಸಿದ್ದರು. ಈ ಸಂದರ್ಭದಲ್ಲಿ ವೈರಿಗಳು ಅಲ್ಲಿದ್ದಂತೆಯೇ ಮೇಘ ಸಿಂಹನು ತನ್ನ ೧೭ ಮಂದಿ ಶೂರ ಸಿಪಾಯಿಗಳೊಡನೆ ವೈರಿಗಳ ಏಳು ಠಾಣ್ಯಗಳನ್ನು ಚೆಕ್ಕಿನ ನಡಿಗೆಯಿಂದ ದಾಟಿ ಮುಂದೆ ಹೋಗಿ ಕ್ಷಣಾರ್ಧದಲ್ಲೇ ಆ ಸೇತುವೆಯನ್ನು ಧ್ವಂಸ ಮಾಡಿ ಬಿಟ್ಟನು. ವೈರಿಗಳ ಮೂಗಿನೆದುರೇ ಇಷ್ಟು ದೊಡ್ಡ ಕೆಲಸ ನಡೆದಿದ್ದರೂ, ವೈರಿಗಳಿಗೆ ಅದರ ಸುಳಿವೇ ಹತ್ತಲಿಲ್ಲ.

ಇದಾದ ಬಳಿಕ ಸೆಪ್ಟೆಂಬರ್ ೬ರಂದು ಯುದ್ಧವಿರಾಮ ರೇಖೆಯಿಂದ ನಾಲ್ಕು ಮೈಲುಗಳಷ್ಟು ಮುಂದುವರಿದು, ಶತ್ರು ಠಾಣ್ಯದ ಮೇಲೆ ಧಾಳಿನಡೆಸಬೇಕೆಂಬ ಆಜ್ಞೆ ಕೊಡಲ್ಪಟ್ಟಿತು. ಆ ಠಾಣ್ಯವನ್ನು ೪೦ ಮಂದಿ ಪಾಕ್ ಸೈನಿಕರು ಎಚ್ಚರಿಕೆಯಿಂದ ರಕ್ಷಿಸುತಿದ್ದರು. ಮೇಘಸಿಂಹನ ಕಡೆಯವರು ಆ ಠಾಣ್ಯವನ್ನು ಸಮೀಪಿಸುವುದರೊಳಗೆ ಶತ್ರು ಸೈನಿಕರಿಗೆ ತಿಳಿದು ಹೋಯಿತು. ಅವರು ತಮ್ಮ ರೈಫಲ್ ಮಿಷನ್ ಗನ್‌ಗಳನ್ನು ಎತ್ತುವುದರೊಳಗೆ, ಚತುರನಾದ ಮೇಘಸಿಂಹನು ತನ್ನ ಸೈನಿಕರೊಡನೆ ಆ ವೈರಿಗಳ ಮೇಲೆ ಗುಂಡಿನ ಸುರಿಮಳೆಗರೆದನು. ಈ ಭಯಂಕರವಾದ ಧಾಳಿಯನ್ನು ಕಂಡ ಪಾಕ್ ಸೈನಿಕರು ಪದರಿ ಓಡತೊಡಗಿದರು. ಇಬ್ಬರು ಕೊಲ್ಲಲ್ಪಟ್ಟರು. ಇನ್ನಿಬ್ಬರಿಗೆ ತೀವ್ರ ಜಖಂ ಆಗಿ ಮತ್ತಿಬ್ಬರು ಕೈಸೆರೆಯಾದರು. ಈ ಧಾಳಿಯಲ್ಲಿ ಒಂದು ಗುಂಡು ಕರ್ನಲ್ ಲೆ|| ಮೇಘಸಿಂಹನ ಮೈಗೆ ತಾಗುತ್ತಲೇ ಮುಂದೆ ಹೊರಟುಹೋಯಿತು. ಆದರೆ ಆತನ ಮೈಗೆ ಗುಂಡಿನ ಸ್ಪರ್ಶವಾಯಿತೇ ಹೊರತು ಏನೂ ಅಪಾಯವಾಗಲಿಲ್ಲ. ಅಲ್ಲಿಂದ ಮುಂದೆ ಎರಡು ಮೈಲುಗಳ ಅಂತರದಲ್ಲಿ ಪಾಕಿಸ್ತಾನಿಗಳ ಮತ್ತೊಂದು ಬಲವಾದ ಠಾಣ್ಯವಿರುವುದನ್ನರಿತ ಮೇಘ ಸಿಂಹನು, ತನ್ನ ಚಿಕ್ಕ ತುಕಡಿಯೊಡನೆ ಆ ಠಾಣ್ಯವನ್ನು ಮುರಿದಿಕ್ಕಲು ಅತಿ ಧೈರ್ಯದಿಂದ ಮುಂದುವರಿದನು. ಕರ್ನಲನ ಈ ಸಾಹಸ ಅಸಾಮಾನ್ಯವಾದ ಸಾಹಸವಾಗಿತ್ತು. ಏಕೆಂದರೆ ಅಲ್ಲಿ ಶತ್ರು ಸೈನಿಕರು ನಮ್ಮ ಸೈನಿಕರಿಗಿಂತ ಎರಡು ಪಟ್ಟು ಹೆಚ್ಚಾಗಿದ್ದರು.

ಶತ್ರು ಠಾಣ್ಯಕ್ಕೆ ಸುಮಾರು ೩೦ಗಜದಷ್ಟು ದೂರವಿರುವಾಗಲೇ ಮೇಘಸಿಂಹನೂ ಮತ್ತವನ ಸೈನಿಕರೂ, ಸೇರಿ ವೈರಿಗಳ ಹೃದಯ ಬಿರಿಯುವಂತೆ ಹಿಂದೂಸ್ತಾನ್ ಜಿಂದಾಬಾದ್! ಎಂಬ ಘೋಷಣೆಯನ್ನು ಮಾಡಿದರು. ಈ ಘೋಷಣೆಯು ಪ್ರತಿಧ್ವನಿ ಗಗನದಲ್ಲಿ ಪ್ರತಿಧ್ವನಿಸುತ್ತಿದ್ದ ಹಾಗೆಯೇ ಭಯಂಕರವಾದ ಧಾಳಿಯನ್ನೂ ಮಾಡಲಾಯಿತು. ಅನಿರೀಕ್ಷಿತವಾದ ಈ ಧಾಳಿಯಿಂದ ಪಾಕ್ ಸೈನಿಕರು ಹೆಚ್ಚು ಸಂಖ್ಯೆಯಲ್ಲಿದ್ದರೂ, ಹೆದರಿಹೋದರು. ತಮ್ಮ ರೈಫಲ್ ಮತ್ತು ಮೆಷಿನ್ ಗನ್‌ಗಳನ್ನೂ ಅಲ್ಲಿಯೇ ಬಿಟ್ಟು ಅವರೆಲ್ಲರೂ ಪಲಾಯನ ಮಾಡಿದರು. ಈ ಎರಡೂ ಠಾಣ್ಯಗಳ ಮೇಲಿನ ವಿಜಯವು ನಂಬುವಂತಿರಲಿಲ್ಲ. ಆದರೆ ಬ್ರಿಗೇಡಿಯರ್ ಕಮಾಂಡರು ಆ ಸ್ಥಳಕ್ಕೆ ಬಂದು ಸರಿಯಾಗಿ ತಪಾಸಣೆ ಮಾಡಿದ ಬಳಿಕವೇ ಅವರಿಗೆ ಮೇಘ ಸಿಂಹನ ಈ ಅದ್ಭುತಸಾಹಸದ ಪರಿಚಯವಾಯಿತು.

ಮತ್ತೊಂದು ಅದ್ಭುತ ಸಾಹಸ

ಇದೇ ರೀತಿ ಉಡಿಪೂಂಛ್ ಕ್ಷೇತ್ರದಲ್ಲಿಯೂ ಕರ್ನಲ್ ಮೇಘ ಸಿಂಹನು ಅದ್ಭುತ ಸಾಹಸವನ್ನು ತೋರಿಸಿದನು. ಸೆಪ್ಟೆಂಬರ್ ತಾ. ೧೧ರಂದು ಪಾಕಿಸ್ತಾನೀ ಪ್ರದೇಶದಲ್ಲಿದ್ದ ವೈರಿಗಳ ತೋಪುಖಾನೆಯನ್ನು ನಾಶಮಾಡಿದ ಮೇಘ ಸಿಂಹನು ಮತ್ತೊಂದು ಪವಾಡವನ್ನೇ ಈ ಮೂಲಕ ಪ್ರದರ್ಶಿಸಿದನು. ಕತ್ತಲೆಯಲ್ಲೇ ಮುನ್ನಡೆದು ತೋಪುಖಾನೆಯ ಹತ್ತಿರ ತಲುಪಿದೊಡನೆಯೇ ಬೇರೆ ಬೇರೆ ವಿಭಾಗದ ಸೈನಿಕರು ಇದ್ದಾರೆಂದು ತಿಳಿಯುವಂತೆ ಘೋಷಿಸತೊಡಗಿದನು. 'ಎಡಕ್ಕೆ ತಿರುಗಿ ಬಲಕ್ಕೆ ಧಾಳಿಮಾಡಿ, ಎಂದು ತೀಕ್ಷ್ಣವಾಗಿ ಆಜ್ಞೆ ಮಾಡ ತೊಡಗಿದಾಗ ಆ ಶೂರ ಸೈನಿಕರೂ ಸಹ 'Yes sir' ಎನ್ನುತ್ತಿರಲು ಈ ಕ್ರಮದಿಂದಾಗಿ ಪಾಕಿಗಳು ಮೋಸ ಹೋದರು. ಇದೇ ವೇಳೆ ಮೇಘಸಿಂಹನು ತನ್ನ ಕಡೆಯವರೊಡನೆ ನೇರಾಗಿ ಶತ್ರುಗಳ ಮೇಲೆ ಗುಂಡಿನ ಸುರಿಮಳೆ ಸುರಿಸಿದನು. ಶತ್ರುಗಳು ಎಡ ಬಲಗಳಲ್ಲಿ ಗುಂಡು ಹಾರಿಸುತ್ತಿದ್ದಾಗ ಈ ಹೋರಾಟ ನಡೆಯಿತು! ಓರ್ವ ಯೋಧನು ಒಂದೇ ಗುಂಡಿನಿಂದ ತೋಪುಖಾನೆಯ ಕಮಾಂಡರನನ್ನು ಉರುಳಿಸಿದನು. ಕೇವಲ ೬೦ ಮಂದಿ ಸೈನಿಕರು,೩೦೦ ಮಂದಿ ವೈರಿಗಳೊಡನೆ ಹೋರಾಡಿ ೪೫ ಮಂದಿ ಪಾಕಿಸ್ತಾನ್ ಸೈನಿಕರನ್ನು ಕೊಂದರು! ೫೦ ಮಂದಿಯನ್ನು ತೀವ್ರವಾಗಿ ಗಾಯಗೊಳಿಸಿದರು. ಆದರೆ ಆಶ್ಚರ್ಯವೆಂದರೆ ನಮ್ಮ ಸೈನಿಕರಿಗೆ ಯಾರಿಗೂ ಏನೂ ಅಪಾಯವಾಗಲಿಲ್ಲ.

ಈ ರೀತಿ ಕರ್ನಲ್ ಮೇಘ ಸಿಂಹನು ಸೆ. ೧ರಿಂದ ತಾ. ೨೨ರ ವರೆಗೆ ಮಾಡಿದ ಒಂಭತ್ತು ಭಯಂಕರವಾದ ಧಾಳಿಗಳಲ್ಲಿ ತಾನು ಸ್ವಲ್ಪ ಜಖಂಗೊಂಡರೂ ತೋರಗೊಡದೆ ಸುಮಾರು ೬೦೦ — ಮಂದಿಯನ್ನು ಕೊಂದು ಅಥವಾ ಜಖಂಗೊಳಿಸಿ ವಿಜಯ ಧ್ವಜವನ್ನು ಹಾರಿಸಿದನು.

ನವಂಬರ ತಾ. ೧೮ರಂದು ಮೇಜರ್ ಶೈತಾನ ಸಿಂಹನ ಬಲಿದಾನದ ದಿನಾಚರಣೆಯಂದು, ತುಂಬಿದ ಸಭೆಯಲ್ಲಿ ಲೆ। ಕರ್ನಲ್ ಮೇಘ ಸಿಂಹರು ನಾಲ್ಕು ಮಾತು ಹೇಳಿದರು. ಅವರು—"ನನಗೆ ಭಾಷಣ ಕೊಡಲು ಬರುವುದಿಲ್ಲ.ನಾನು ಎರಡು ಶಬ್ದಗಳ ಮನುಷ್ಯ! ಆ ಶಬ್ದಗಳು "ಆಗೇ ಬಢೋ ಮಾರೋ!' ಎಂಬಷ್ಟೇ ಆಗಿವೆ. ನಮ್ಮ ವೀರ ಸೈನಿಕರು ಪ್ಯಾಟನ್ ಟ್ಯಾಂಕುಗಳನ್ನು ಮಣ್ಣಿನ ಮಡಕೆಗಳಂತೆ ಒಡೆದಿದ್ದಾರೆ! ಸೇಬರ್ ಜೆಟ್ ವಿಮಾನಗಳನ್ನು ಹಕ್ಕಿಗಳನ್ನು ಹೊಡೆದು ಉರುಳಿಸುವಂತೆ ಉರುಳಿಸಿದ್ದಾರೆ! ನಮ್ಮ ಸೇನೆಯ ಮುಂದೆ ಪಾಕಿಸ್ತಾನೀ ಸೈನಿಕರು ಹುಲಿಗಳ ಮುಂದೆ ಸಿಕ್ಕಿದ ದನಗಳಂತೆ ಆಗಿ ಹೋದರು! ಕೆಲವರು ಸತ್ತರು! ಕೆಲವರು ಹೇಡಿಗಳಾಗಿ ಓಡಿದರು! ಮತ್ತೆ ಕೆಲವರು ಸಿಕ್ಕಿ ಬಿದ್ದರು! ಏನಿದ್ದರೂ ನಮ್ಮ ಮಾತೃಭೂಮಿಯ ರಕ್ಷಣೆಗಾಗಿ ದುಡಿ! ಇಲ್ಲವೇ ಮಡಿ! ಎಂಬುದೇ ನನ್ನ ಭಾಷಣ! ಅದೇ ನನ್ನ ಜೀವನ ಸರ್ವಸ್ವ!" ಎಂದು ಹೇಳಿ ಮಾತು ಮುಗಿಸಿದಾಗ ನೂರಾರು ಜನರು ಈ ವೀರನ ಬಗೆಗೆ ಅತ್ಯಂತ ಅಭಿಮಾನದಿಂದ ವಿಜಯ ಘೋಷ ಗೈದರು!

ಜೈಹಿಂದ್ —(ಹಿಂದಿಯಿಂದ)

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ

ಮಾನವತೆಯು ಕೇವಲ ಆಕೃತಿಯಿಂದ ಸಿದ್ಧಿಸುವಂತಹದಲ್ಲ. ಅದಕ್ಕಾಗಿ ಸಮುಚಿತ ಗುಣಕ್ರಿಯೆಗಳ ಅವಶ್ಯಕತೆಯುಂಟು. ಮಾನವತೆಯ ಆಧಾರ ಶೀಲವು ಏವೇಕ. ಅದಿಲ್ಲದವನು ವೃತ್ತಿ ಪ್ರವೃತ್ತಿಗಳಿಂದ ಪಶುವೇ ಆಗುವನು.

೦ ೦ ೦ ೦

ಉಪವಾಸ

(ಆರನೇ ಪುಟದಿಂದ)

ಆಹಾರವಿಲ್ಲದೆ ನಾವು ಬದುಕಲಾರೆವು ಎಂಬ ಮಾತಿನಲ್ಲಿ ಸತ್ಯಾಂಶವಿರುವದಿಲ್ಲ. ಮನುಷ್ಯ ಅವನವನ ಪ್ರಕೃತಿಯನ್ನವಲಂಬಿಸಿ ಸಾಮಾನ್ಯ ಮೂವತ್ತು ದಿನದಿಂದ ನೂರುದಿನಗಳ ಪರ್ಯಂತರ ಆರೋಗ್ಯದಿಂದ ಬದುಕಬಲ್ಲರು ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಬೇರೆ ಬೇರೆ ಪ್ರಾಣಿಗಳೂ ತಿಂಗಳುಗಟ್ಟಲೇ ಆಹಾರವಿಲ್ಲದೆ ಉಳಿಯುವದುಂಟು. ಹಿಂದೆ ಮಾನವನೂ ವ್ಯವಸ್ಥಿತ ಜೀವನವಿಲ್ಲದೆ ಊರಿಂದೂರಿಗೆ ಅಲೆಯುವಂಥ ಸಂದರ್ಭವಿತ್ತು. ಆಗ ಅವನಿಗೆ ಕಾಲ ಕಾಲಕ್ಕೆ ಆಹಾರಗಳು ಸಿಗದೆ ಕಳೆಯುವ ಪ್ರಸಂಗ ಬರುತ್ತಿತ್ತು. ಅಂಥ ಸಂದರ್ಭಗಳಲ್ಲಿ ಮಾನವನು ಸದೃಢನಾಗಿ ಬಾಳಿ ಬದುಕಿದ ಉದಾಹರಣೆಗಳನ್ನು ನಮ್ಮ ಇತಿಹಾಸವು ಹೇಳುತ್ತದೆ. ಅಷ್ಟೇ ಏಕೆ? ನಮ್ಮ ಮ. ಗಾಂಧಿ ಮುಂತಾದವರು ತಿಂಗಳುಗಟ್ಟಲೆ ಉಪವಾಸವನ್ನಾಚರಿಸಿ ಹೊಸ ಚೈತನ್ಯ ಸಂಪಾದಿಸಿದ ಸಂಗತಿ ನಮಗೆ ಮರೆತಿಲ್ಲ. ಅಂದಾಗ ನಿಯಮಿತವಾದ ಉಪವಾಸವು ನಮಗೆ ಸ್ಫೂರ್ತಿ ಮತ್ತು ಚೈತನ್ಯವನ್ನು ಒದಗಿಸುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ವೈದ್ಯಕೀಯ ವಿದ್ವಾಂಸರು ಈ ಉಪವಾಸವನ್ನು ಒಂದು ಉಪಚಾರವನ್ನಾಗಿಯೂ ತಿಳಿಯುತ್ತಾರೆ. "ಲಂಘನಂ ಪರಮೌಷಧಂ" ಎಂಬಂತೆ ಹಲವಾರು ರೋಗಗಳ ನಿವಾರಣೆಗಾಗಿ ಈ ಉಪವಾಸ ಚಿಕಿತ್ಸೆಯು ಉತ್ತಮ ಪರಿಣಾಮಕಾರಿಯಾಗಿದೆಯೆಂದು ತಿಳಿಯಲಾಗಿದೆ. ಉಪವಾಸವಿದ್ದಾಗಲೇ ಪ್ರಕೃತಿಯ ಪರೀಕ್ಷೆ ನಡೆಸುವದು ಯೋಗ್ಯವೆಂದು ವೈದ್ಯಕೀಯ ಅಭಿಪ್ರಾಯವಿದೆ. ಮತ್ತು ಎಷ್ಟೋ ರೋಗಗಳಿಗೆ ಉಪವಾಸವಿರುವದರಿಂದಲೇ ಶರೀರ ಶುದ್ಧವಾಗಿ ರೋಗ ನಿವಾರಣೆಯಾಗುವದುಂಟು. ಎಷ್ಟೋ ರೋಗಗಳಿಗೆ ಅನ್ನದ ಅಭಾವವೇ ರೋಗನಿರ್ಧಾನ ಕಾರಣನಾಗುವದಿದೆ. ಪೈಲಿ. ಉಪದಂಶಗಳಲ್ಲಿ ಉಪವಾಸವು ಎವದೇ ಉಪಚಾರದ ಏಕಮೇವ ಉಪಾಯವೆಂದು ಕೆಲವರು ಹೇಳುತ್ತಾರೆ. ಶರೀರದಲ್ಲಿ ವ್ರಣ, ಘಾಯಗಳಿದ್ದಾಗ ಉಪವಾಸ ಮಾಡುವದರಿಂದ ತೀವ್ರ ಗುಣವಾದ ಉದಾಹರಣೆಗಳಿವೆ. ಇದು ಕೇವಲ ಭಾರತೀಯ ಸಂಪ್ರದಾಯ ಶಾಸ್ತ್ರಜ್ಞರ ಅಭಿಪ್ರಾಯವೊಂದೇ ಅಲ್ಲ. ಬೇರೆ—ಬೇರೆ ಪಾಶ್ಚಾತ್ಯ ವಿದ್ವಾಂಸರೂ ಇದನ್ನು ಒಪುತ್ತಾರಲ್ಲದೇ ಅಲ್ಲಿಯೂ ಸಹ ಅಂಥ ಪ್ರಯೋಗಗಳು ಅಸ್ತಿತ್ವದಲ್ಲಿವೆ.

ಉಪವಾಸಕ್ಕಾಗಿ ನಮ್ಮ ಶಾಸ್ತ್ರಜ್ಞರು ಏಕಾದಶಿಯನ್ನು ಆರಿಸಿರುತ್ತಾರೆ. ಚಂದ್ರನ ಸಮುಸ್ಥಿತಿಯನ್ನು ತಿಳಿದು ನಮ್ಮ ಶರೀರದ ಮೇಲೆ ಹೆಚ್ಚಿನ ಪ್ರಭಾವ ಬೀರುವದನ್ನು ಕಂಡು ಕೊಂಡೇ ಉಪವಾಸದ ದಿನವೆಂತ ಆಚರಿಸುತ್ತ ಬರಲಾಗಿದೆ. ಉಪವಾಸದಿಂದ ಚಿತ್ತ ಶುದ್ಧಿಯಿರುವದರಿಂದ ಪ್ರಾರ್ಥನೆಯೂ ಆ ದಿನದ ಅನುಷ್ಠಾನಗಳಲ್ಲಿ ಮುಖ್ಯ ಕಾರ್ಯಗಳಾಗಿವೆ.

ಸಾಮಾನ್ಯವಾಗಿ ಉಪವಾಸದಿಂದ ನಮ್ಮ ಮಾನಸಿಕ ಸಂಯಮಕ್ಕೆ ಒಳ್ಳೆಯ ಸಂಸ್ಕಾರ ಸಿಗುವದರ ಜೊತೆಯಲ್ಲಿ ಆರ್ಥಿಕ ಅನುಕೂಲಕ್ಕೂ ಸಹಾಯಕವೆಂಬುದು ಗಮನಾರ್ಹ ಸಂಗತಿ, ಪಕ್ಷದ ಒಂದು ದಿನದ ಆಹಾರದ ಉಳಿತಾಯ ವರ್ಷದ ಕೊನೆಯಲ್ಲಿ ಇಪ್ಪತ್ನಾಲ್ಕು ದಿನಗಳ ಆದಾಯವೇ ಆದಂತಾಗುತ್ತದೆ. ನಮ್ಮ ರಾಜ್ಯದ ಮಾನದಿಂದ ಲೆಕ್ಕಹಾಕಿದರೆ ಪ್ರತಿ ತಿಂಗಳಿಗೆ ನಾಲ್ಕು ಕೋಟಿ ಜನರ ಆಹಾರ ಉಳಿದಂತೆಯೇ. ಮತ್ತೆ ಇದರ ಜೊತೆಯಲ್ಲಿ ಆರೋಗ್ಯವೂ ದೊರೆತಂತಾಗುತ್ತದೆ. ಹಾಗಾಗಿ ನಮ್ಮ ಮತ್ತು ದೇಶದ ಹಿತದ ದೃಷ್ಟಿಯಲ್ಲಿ ಬೇರೆ ಔಷಧಗಳನ್ನು ಉಪಯೋಗಿಸಿ ಅಜೀರ್ಣ ಅಗ್ನಿಮಾಂದ್ಯ, ಮುಂತಾದವುಗಳನ್ನು ಹೋಗಲಾಡಿಸಿಕೊಳ್ಳುವದಕ್ಕಿಂತಲೂ ಉಪವಾಸದಿಂದ ಅವನ್ನು ಸುಲಭವಾಗಿ ಪರಿಣಾಮಕಾರಿಯಾಗಿ ನಿವಾರಿಸಿಕೊಳ್ಳಲು ಸಾಧ್ಯವುಂಟು. ಇದು ರೋಗಹರವಿದ್ದಂತೆ ರೋಗ ಪ್ರತಿಬಂಧಕವೂ ಆಗಿದೆ. ಹಾಗಾಗಿ ನಿಸರ್ಗ ಸಿದ್ಧವಾದ ಉಪವಾಸದ ಆಚರಣೆಯಿಂದ ನಮ್ಮ ಆರೋಗ್ಯ ಹೆಚ್ಚಿಸುವದರ ಜೊತೆಯಲ್ಲಿ ದೇಶದ ಆರ್ಥಿಕ ಮತ್ತು ಆಹಾರಗಳ ಉಳಿತಾಯಕ್ಕೂ ನಾವು ಗಮನ ಕೊಟ್ಟಂತಾಗುತ್ತದೆ. ಅಪ್ರತ್ಯಕ್ಷವಾಗಿ ಶಕ್ತಿ—ಚೈತನ್ಯಗಳ ಆರಾಧನೆಯನ್ನೇ ಮಾಡಿದಂತಾಗುತ್ತದೆ.

(ಆಕಾಶವಾಣಿ ಕೃಪೆಯಿಂದ)

ಬೇಸಾಯದವ ಬೇಗ ಸಾಯು

ಭವ್ಯ ಭಾರತದ ಬೆನ್ನೆಲುಬು
ನಾನೊಬ್ಬ ರೈತ;
ರಕ್ತ, ಮಾಂಸಗಳಿಲ್ಲ—
ಬರಿಯೆಲುಗೂಡು,
'ಬೇಸಾಯದವ ಬೇಗತಾ ಸಾಯು.'
ಕಾಲನೂ ಕಡೆಗಣಿಸಿ
ಎನ್ನ ಬಳಿ ಸುಳಿಯಲಾರ.
ಹಣ್ಣು ಮಾಂಸಲ ಮೆದ್ದು, ಬೀದಿಗೆಸೆಯುವ
ಗೊರಟೆ,
ಜಗಿ ಜಗಿದು ರಸ ಹೀರಿಪುಳುವ ಕಬ್ಬ ಹಿಪ್ಪೆ
ನಾನು; ಭಾರತದ ನವ ಶಿಲ್ಪಿ ರೈತ!
ಮತ್ತೇಕೆ ಆ ಕಡೆಗೆ ಲಕ್ಷ್ಯ?
ಹಸಿದ ಹೊಟ್ಟೆಯ ತುಂಬಿ
ಹಸುಗೆ ಪದ್ಧತಿ ಸಾಕೆ
ಗ್ರಾಮ ರಾಜ್ಯದ ನಮ್ಮ ತವಂನಲ್ಲಿ?
ಮತ್ತೆ ನಮ್ಮದು ರಾಮ ರಾಜ್ಯದ ಕನಸು,

ಅದು ಬರಿಯ ತಿರುಕ ಕನಸು!
ರಾಜ ಕಾರಣಿಗೆ ಅದುವೆ ತಿನಿಸು (?)
ದೀನ ಜನತೋದ್ಧಾರ!
ಬೆನ್ನಿಗಂಟಿದ ಹೊಟ್ಟೆ!
ಗ್ರಾಮ ರಾಜ್ಯದ ಮತ್ತೆ ರಾಮ ರಾಜ್ಯದ

ಭಾಷಣದ ಘೋಷಣೆಗೆ
ಬೇಕು ಡುಬ್ಬ ಹೊಟ್ಟೆ!
ಅದಕಾಗಿ ಮಾಡುತಿಹ ಶೋಷಣೆಗೆ
ಪಾಪ! ನಾನಲ್ಲದೆ ಮತ್ತಲ್ಲಿ ಬೇರೆ ಬಟ್ಟೆ?

—ಶ್ರೀ ಪಿ. ಶ್ಯಾಮ ಭಟ್, ಪೆರಡಾಲ.

ಜೀವನ ರಹಸ್ಯ

ಒಮ್ಮೆ ಸಾಧುಗಳಿಬ್ಬರು ದೇಶ ಸಂಚಾರಕ್ಕೆ ಹೊರಟಿದ್ದರು. ನದೀ ತಟದ ಸಮೀಪದಲ್ಲಿ ಸಂಚರಿಸುತ್ತಿದ್ದಾಗ ಅವರಲ್ಲಿ ವೇದಾಂತಿಯಾದ ಸಾಧುವು ಓರ್ವ ಹುಡುಗಿಯನ್ನು ಕಂಡನು. ನೆರೆಯುಬ್ಬರದಲ್ಲಿದ್ದ ನದಿಯ ಒಂದು ದಡದಿಂದ ಇನ್ನೊಂದು ದಡವನ್ನು ಸೇರಲು ಆ ಹುಡುಗಿಯು ಕಷ್ಟಪಟ್ಟು ಪ್ರಯತ್ನಿಸುತ್ತಿದ್ದಳು. ವೇದಾಂತಿಯು ಶೀಘ್ರದಲ್ಲಿಯೇ ನೀರಿಗೆ ಹಾರಿ ಹುಡುಗಿಯನ್ನು ತನ್ನ ಕೈಗೆತ್ತಿಕೊಂಡು ಆಕೆಯನ್ನು ಇನ್ನೊಂದು ದಡಕ್ಕೆ ಸುರಕ್ಷಿತವಾಗಿ ಬಿಟ್ಟು ಬಂದನು.

ಮತ್ತೊಬ್ಬ ಸಾಧುವು ಸಂಪ್ರದಾಯವಾದಿಯಾಗಿದ್ದನು. ಆತನು ವೇದಾಂತಿಯ ಈ ಕಾರ್ಯವನ್ನು ಕಂಡು ಕೋಪಗೊಂಡನು. ಕೊಂಚ ಕಾಲ ಯೋಚಿಸಿದ ತರುವಾಯ ವೇದಾಂತಿಯೊಡನೆ "ನೀನೇಕೆ ಆ ಹುಡುಗಿಯನ್ನು ಸ್ಪರ್ಶಿಸಿದೆ? ಯಾಕಾಗಿ ಆಕೆಯನ್ನು ನಿನ್ನ ಕೈಗಳಿಂದ ಎತ್ತಿದೆ? ಇದು ಆಶ್ರಮ ಧರ್ಮಕ್ಕೆ ವಿರುದ್ಧವೆಂದು ನೀನು ತಿಳಿದಿಲ್ಲವೆ?" ಎಂದು ಪ್ರಶ್ನಿಸಿದನು.

ಧ್ಯಾನ್ಯ ಮಗ್ನ ಸ್ಥಿತಿಯಿಂದ ಎಚ್ಚೆತ್ತು, ತನ್ನ ಪ್ರಜ್ವಲಿತ ನೇತ್ರಗಳನ್ನು ತೆರೆದು ವೇದಾಂತಿಯು ಹೀಗೆಂದು ನುಡಿದನು—"ಸಹೋದರನೆ, ನಾನು ಆಕೆಯನ್ನು ನನ್ನ ಕೈಗೆತ್ತಿಕೊಂಡು ಇನ್ನೊಂದು ದಡಕ್ಕೆ ಆಗಲೇ ತಲುಪಿಸಿ ಬಂದಿರುವೆನು. ಆದರೆ ನೀನಿನ್ನೂ ಆಕೆಯನ್ನು ನಿನ್ನೊಡನೆಯೆ ಕರೆತಂದಿರುವೆಯೇನು?"

ಇದುವೆ ನಿಜವಾದ ಜೀವನದ ರಹಸ್ಯವು. ಬಾಳಿನಲ್ಲಿ ತನ್ನನ್ನು ತಾನು ಮರೆತಿರಬೇಕು. ದೂರ ನಿಂತು ನೋಡುವುದರಿಂದ ಏನೂ ಸಂಭವಿಸದು. ಎಲ್ಲರಲ್ಲಿ ಭಗವತ್ ಸ್ವರೂಪವೆ ಪ್ರಕಾಶಿಸುತ್ತಿದೆ. ಆಂತೆಯೆ, ನಮ್ಮ ದೃಷ್ಟಿಯು ಸದಾ ಭಗವಂತನ ಕಡೆಗೆ ಇರಬೇಕೆಂಬುದರ ತಿಳಿವಿರಲಿ. ಭಗವಂತನಲ್ಲಿಯೇ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿ ಕಾರ್ಯ ಪ್ರವೃತ್ತರಾಗೋಣ.

ಸಂಗ್ರಹ:—
ಶ್ರೀ ಕೆ. ಬಿ. ವಾಸುದೇವ ರಾವ್

ನಮ್ಮ ಗ್ರಾಹಕರು ಹಾಗೂ ಹಿತೈಷಿಗಳಿಗೆ

ಸ್ವಾತಂತ್ರ್ಯ ದಿನೋತ್ಸವದ

ಹಾರ್ದಿಕ ಶುಭಾಶಯಗಳು!

ಅಪ್ಸರಾ ಟೆಕ್ಸ್‌ಟೈಲ್ಸ್

ಹಂಪನಕಟ್ಟೆ — ಮಂಗಳೂರು

APSARA TEXTILES

Fancy Cloth Merchants,

HAMPANKATTA, MANGALORE

ಆನಂದ ಕುಸುಮಾಕರ ಲೇಹ್ಯ

ಹಲವು ಬಗೆಯ ಉತ್ತಮ ಮೂಲಿಕೆಗಳನ್ನು ಸೇರಿಸಿ ಆಯುರ್ವೇದ ವಿಧಿ ಪ್ರಕಾರ ಉಂಟು ಮಾಡಿದ ಈ ಲೇಹ್ಯ ದೇಹದಲ್ಲಿರುವ ರಕ್ತವನ್ನು ಹೆಚ್ಚು ಮಾಡಿ ಶುದ್ಧ ರಕ್ತವನ್ನಾಗಿ ಮಾಡಲು ಶಕ್ತಿ ಉಳ್ಳದು. ಕೆಟ್ಟ ಚಾಳಿಗಳಿಂದ ಬಾಲ್ಯದಲ್ಲಿ ಸಂಭವಿಸುವ ಉಷ್ಣ ರೋಗ, ಧಾತು ಕ್ಷಯ, ಹುಣ್ಣುಗಳೂ ಮುಂತಾದ ರೋಗಗಳನ್ನು ಗುಣ ಮಾಡಿ ಶರೀರವನ್ನು ಪುಷ್ಟಿ ಮಾಡುತ್ತದೆ. ಬೆಲೆ: 250 gms. 3-50.

2. ನವಮೂಲನಾಶಿನಿ ಸರ್ವ ವಿಧವಾದ ಗುಹ್ಯ ರೋಗಗಳೂ ಈ ಔಷಧ ಸೇವಿಸುವಲ್ಲಿ ಶೀಘ್ರದಲ್ಲಿ ಗುಣವಾಗುತ್ತದೆ.
ಬೆಲೆ: ಟಿನ್ 1ಕ್ಕೆ ರೂ. 3-50.

3. ಸೂತಕರೋಗ ವಿಧ್ವಂಸಿನಿ ಸ್ತ್ರೀಗಳಿಗೆ ಆರ್ತವ ಸರಿಯಾಗದೆ ಗರ್ಭಾಶಯದಲ್ಲಿ ಮತ್ತು ಹೊಟ್ಟೆಯಲ್ಲಿ ಉಂಟಾಗುವ, ಗುನ್ಮ, ಅತಿಸಾರ, ಹೊಟ್ಟೆ ನೋವು, ಉನ್ಮಾದ ಮುಂತಾದ ರೋಗಗಳಿಗೆ ಈ ಔಷಧವು ಅತ್ಯುತ್ತಮವು. ಬೆಲೆ: ಕುಪ್ಪಿ 1ಕ್ಕೆ ರೂ. 3-50.

ಎಲ್ಲಾ ಔಷಧಗಳ ವಿವರವೂ ಇರುವ ದೊಡ್ಡ ಕ್ಯಾಟಲಾಗಿಗೆ ಬರೆಯಿರಿ.

ಮೆನೇಜರ್, ಮಲಯಾಳ ಮಾಂತ್ರಿಕ ವೈದ್ಯಶಾಲೆ,
ಮೆಯಿನ್ ರೋಡ್, ಕೊಲ್ಲಂ P. O., Kerala State.

ವಿಜ್ಞಾನ ಮತ್ತು ಧರ್ಮ

(ಐದನೇ ಪುಟದಿಂದ)

ಷ್ಟೇ ಅಲ್ಲದೆ ನಿರಾಶೆ ಹಾಗೂ ದುಃಖ ಪ್ರಸಂಗಗಳಲ್ಲಿ ಧರ್ಮ ಮತ್ತು ವೇದಾಂತ ಜನತೆಗೆ ಒಂದು ದೊಡ್ಡ ಆಧಾರಸ್ತಂಭ ಅಥವಾ ಆಶಾಕಿರಣವಿದ್ದಂತೆ! ಧರ್ಮವು ಒದಗಿಸಿದ್ದ ಇಂತಹ ಒಂದು ಸಾಂತ್ವನ ಸುಖ—ಶಾಂತಿಯನ್ನು ದೈಹಿಕ—ಮಾನಸಿಕ ಚಟುವಟಿಕೆಗಳಲ್ಲಿ ಮಾಡುತ್ತಿದ್ದ ತಿಗ್ಗು—ಸಂಯಮ, ವಿಚಾರ ಶುದ್ಧಿ ಮುಂತಾದುವನ್ನು ವಿಜ್ಞಾನವು ಕಸಿದುಕೊಳ್ಳುವಂತೆ ವರ್ತಿಸುತ್ತಿದೆ. ಇದರಿಂದ ಸಾಮಾನ್ಯ ಜನರಲ್ಲಿ ಒಂದು ಬಗೆಯ ಅನಿಶ್ಚಿತ, ಅನಿರ್ಧಾರ ಮತ್ತು ಅಸಂತುಷ್ಟತೆ ಆವರಿಸುತ್ತಿದೆ. ಹೀಗಾಗಿ ಇಂದಿನ ವೈಜ್ಞಾನಿಕ ಯುಗದಲ್ಲಿ ಆಧುನಿಕ ನಾಗರಿಕತೆ ಮತ್ತು ವೈಜ್ಞಾನಿಕ ಸಾಧನ ಸಲಕರಣೆಗಳ ಮೇಲೆ ಅತೀವ ಅವಲಂಬನದಿಂದಾಗಿ ಮಾನವನು ಅವುಗಳ ಗುಲಾಮನಾಗುತ್ತ ಬಂದು, ಕಡೆಗೆ ತಾನೇ ನಿರ್ಮಿಸಿದ ಯಾಂತ್ರಿಕ ಸಾಧನಗಳ ಕೈಗೊಂಬೆಯಾಗುತ್ತಿರುವುದರಿಂದ ಆತನಿಗೆ ಜೀವನದಲ್ಲಿ ಏನೆಲ್ಲ ಸಂಪತ್ತಿದ್ದರೂ ತೃಪ್ತಿ-ಸಂತುಷ್ಟತೆ ಎಂಬುದಿಲ್ಲದೆ ಮಾನಸಿಕ ಸಮತೋಲನವೇ ಬುಡ ಮೇಲಾಗುತ್ತಿರುವಂತೆ ತೋರುತ್ತದೆ" ಎಂದು ಕೆಲವರು ಶಂಕಿಸುವುದುಂಟು. ಇಂತಹ ಆಧ್ಯಾತ್ಮಿಕ ಅನಿಶ್ಚಿತತೆ, ಮತ್ತು ಉದ್ವೇಗದ ಬಗೆಗೂ, ಆಧ್ಯಾತ್ಮಿಕ ಸಮತೋಲನದ ಅಸ್ತವ್ಯಸ್ತದಿಂದಾಗುವ ದುಷ್ಪರಿಣಾಮಗಳ ಬಗೆಗೂ ಉದ್ದಾಮ ಕವಿಗಳೂ ವೇದಾಂತಿಗಳೂ ಆಗಾಗ ಎಚ್ಚರಿಕೆ ನೀಡಿರುವುದನ್ನು ಹಾಗೂ ಉದ್ಗಾರಗಳನ್ನು ತೆಗೆದಿರುವುದನ್ನು ನಾವು ಕಾಣಬಹುದು.

ಹೀಗಾಗಿ ಜನತೆಯ ಮನಸ್ಸಿನಲ್ಲಿ ಒಂದು ರೀತಿಯ ಇಬ್ಬಗೆಯ ಅಥವಾ ದ್ವಂದ್ವ ವಿಚಾರಗಳು ಮೂಡುವುದು ಅನಿವಾರ್ಯ. ಅದರಿಂದ ವಿಜ್ಞಾನ ಮತ್ತು ಧರ್ಮ ಇವೆರಡರ ನಡುವೆ ಇರುವ ಪರಸ್ಪರ ಘರ್ಷಣೆಯ ಬಗ್ಗೆ ಜನತೆ ನಿಶ್ಚಿತವಾದ ಯಾವ ಧ್ಯೇಯ ಧೋರಣೆಗಳನ್ನು ಕೈಕೊಳ್ಳಲೂ ಅಸಮರ್ಥವಾಗುತ್ತದೆ. ಮೇಲಾಗಿ ಈ ವಿಶ್ವದ ನಾನಾ ವಿಧದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಅಡ್ಡಿಯಾಗಿ ಬರುವ ಈ ವೈಚಾರಿಕ ಗೊಂದಲ ಒಂದು ರೀತಿಯ ಅಸಹಾಯಕತೆ ಹಾಗೂ ಅಸಮರ್ಥತೆಯಿಂದ ಜನತೆ ಒಮ್ಮೊಮ್ಮೆ ಜಿಗುಪ್ಸೆಗೊಂಡು ದಾರಿ ಕಾಣದಂತಾದರೆ ಆಶ್ಚರ್ಯವೇನಲ್ಲ.

ಒಂದು ದೃಷ್ಟಿಯಿಂದ ನೋಡಿದರೆ, ವಿಜ್ಞಾನ ಮತ್ತು ಧರ್ಮ ಎಂಬುವುದನ್ನು ಒಂದುಗೂಡಿಸುವುದು ಅತಿ ದುಸ್ತರವೇ ಸರಿ! ಒಂದು ಕಡೆ ನೋಡಿದರೆ, ಈ ವಿಶ್ವದಲ್ಲಿ ಎಲ್ಲೆಲ್ಲೂ ವಸ್ತು ಮತ್ತು ಶಕ್ತಿಯನ್ನು ಬಿಟ್ಟರೆ ಮತ್ತೇನೂ ಇಲ್ಲವೆಂಬ ವಿಜ್ಞಾನದ ನಿರ್ಣಯ ಜನತೆಯ ಕಣ್ಮುಂದೆ ಬಂದು ನಿಲ್ಲುತ್ತದೆ. ಇತ್ತೀಚೆಗೆ ಕೆಲ ವಿಜ್ಞಾನಿಗಳು ಸತ್ತವರನ್ನು ಪುನಃ ಕೆಲಕಾಲವಾದರೂ ಬದುಕಿಸುವುದರಲ್ಲಿ ಯಶಸ್ವಿಯಾಗಿದ್ದಾರೆ, ಅದರಿಂದ ಆತ್ಮವೆಂಬುದೊಂದು ಇರುವುದು ಎಲ್ಲಾದರೂ ಸಾಧ್ಯವೇ ಎಂಬ ಶಂಕೆ ಮೂಡುವುದು ಸಹಜವೇ! ಮೇಲಾಗಿ ಅಂತರಿಕ್ಷಯಾನ, ಟೆಲಿವಿಷನ್ ಅಣು ಮತ್ತು 'ಜಲಜನಕ ಬಾಂಬುಗಳು, ಪ್ರಣಾಳಿಕೆಯಲ್ಲಿ ಬೆಳೆಸುವ ಜೀವ ಮುಂತಾದ ವೈಜ್ಞಾನಿಕ ಸಾಧನೆಗಳ ಯುಗದಲ್ಲಿ ಇರುವವರಿಗೆ ಧರ್ಮದ ಬಗ್ಗೆ ಪ್ರಚಲಿತವಿರುವ ಮೂಢನಂಬಿಕೆಗಳಲ್ಲಿ ವಿಶ್ವಾಸ ಕಾಪಾಡಿಸುವುದು ಒಂದು ಪ್ರಯಾಸವೇ ಸರಿ!

ಇನ್ನೊಂದು ದೃಷ್ಟಿಯಿಂದ ನೋಡಿದರೆ ಜನತೆ ಅಥವಾ ಮಾನವನಲ್ಲಿ ಆಧ್ಯಾತ್ಮಿಕ ಶಕ್ತಿಯೆಂಬುದೊಂದಿದ್ದು, ಅದು ಮಾನವನಿಗೆ ಒಂದಲ್ಲ ಒಂದು ಬಗೆಯ ಸಮಾಧಾನ, ಸಂತುಷ್ಟತೆ ಮತ್ತು ಚಿತ್ತ ಸ್ಥೈರ್ಯವನ್ನು ತಂದೊಗಿಸುತ್ತದೆ. ಅತ್ಯಂತ ಕಷ್ಟಕಾಲದಲ್ಲಿ ಆಪ್ತೇಷ್ಟರ ಸಾವಿನಿಂದ ಉಂಟಾಗುವ ಕೆಲವು ವಿಶಿಷ್ಟ ಹಾಗೂ ವೈಯಕ್ತಿಕ ಸಂಕಟ ಪ್ರಸಂಗಗಳಲ್ಲಿ ಜನತೆ ನೀರಿನಲ್ಲಿ ಮುಳುಗುವವನು ಅಥವಾ ಗಂಡಾಂತರವನ್ನು ಎದುರಿಸುವವನು ಆಪತ್ಕಾಲದಲ್ಲಿ ತನಗೆ ಸಿಕ್ಕಿದುದನ್ನು ಹಿಡಿದುಕೊಂಡು ಜೀವವುಳಿಸಿಕೊಳ್ಳಲು ಯತ್ನಿಸುವಂತೆ ಯಾವುದೇ ಒಂದು ಬಗೆಯ ಆಧಾರ ಅಥವಾ ಆಶ್ರಯವನ್ನು ಅಪೇಕ್ಷಿಸುವುದು, ಮತ್ತು ಧಾರ್ಮಿಕ ಅಥವಾ ಆಧ್ಯಾತ್ಮಿಕ ಶಕ್ತಿ ಒದಗಿಸಬಲ್ಲ ಯಾವುದೇ ಬಗೆಯ ಸಮಾಧಾನ ಹಾಗೂ ಸಾಂತ್ವನ ಶಕ್ತಿಗೆ ಜೋತು ಬೀಳುವುದು, ಇವೆರಡೂ ಸಹಜವೇ!

ಹೀಗೆ ವಿಜ್ಞಾನ ಮತ್ತು ಧರ್ಮ ಇವೆರಡರ ನಡುವೆ ಇರುವ ತಾತ್ವಿಕ ಘರ್ಷಣೆಯಿಂದ ಜನತೆ ಇಂದು ಕೆಲಮಟ್ಟಿಗೆ ದಿಗ್ಭ್ರಾಂತ ಹಾಗೂ ದಿಙ್ಮೂಢವಾಗುವುದು ಅಸಹಜವೇನಲ್ಲ. ಸಾಮಾನ್ಯ ಸುಶಿಕ್ಷಿತ ಜನತೆ ವಿಜ್ಞಾನಿಗಳ ಪ್ರತಿಪಾದನೆ ಹಾಗೂ ಸಾಧನೆಗಳಲ್ಲಿ ಇರುವ ಸತ್ವ, ಶಕ್ತಿಯನ್ನು ಒಪ್ಪುತ್ತಿದೆ ಮೆಚ್ಚುತ್ತಿದೆ; ಆದರೆ ತನ್ನಲ್ಲಿ ಹುದುಗಿರುವ ಹಳೆಯ ಧಾರ್ಮಿಕ ಹಾಗೂ ಮೂಢ ಭಾವನೆ — ನಂಬಿಕೆಗಳನ್ನು ಒಮ್ಮೆಲೆ ಬಿಡಲೂ ಒಪ್ಪುವದಿಲ್ಲ.

ಏನೇ ಇದ್ದರೂ ವಿಜ್ಞಾನ ಮತ್ತು ಧರ್ಮಗಳ ನಡುವೆ ಒಂದಲ್ಲ ಒಂದು ಬಗೆಯ ಸಮರಸತೆಯನ್ನುಂಟು ಮಾಡಲು ಜಗತ್ತಿನಲ್ಲಿ ಅನೇಕ ಪ್ರಮುಖ ವೈಚಾರಿಕರು, ದಾರ್ಶನಿಕರು, ಮೇಧಾವಿಗಳು ಹಲವಾರು ಪ್ರಯತ್ನಗಳನ್ನು ಆಗಾಗ ಕೈಕೊಂಡಿರುವುದನ್ನು ನಾವು ಕಾಣುತ್ತೇವೆ. ಅವರ ದೃಷ್ಟಿಯಲ್ಲಿ ವಿಜ್ಞಾನವು ಅನೇಕ ಸತ್ಯ ಸಂಗತಿಗಳನ್ನು ಹಾಗೂ ಈ ಭೌತಿಕ ಜಗತ್ತಿನ ಪ್ರಕೃತಿ ನಿಯಮಗಳನ್ನು ಸಂಶೋಧಿಸುವುದಾದರೆ ಧರ್ಮವು ಮಾನವನ ಆಧ್ಯಾತ್ಮಿಕ ಹಾಗೂ ಆತ್ಮಜ್ಞಾನಗಳ ಬಗೆಗಿರುವ ಆವಶ್ಯಕತೆಗಳನ್ನು ಪೂರೈಸುತ್ತದೆ. ಆದ್ದರಿಂದ ವಿಜ್ಞಾನ ಮತ್ತು ಧರ್ಮ ಇವೆರಡರ ನಡುವೆ ಘರ್ಷಣೆಗೆ ಆಸ್ಪದವೇ ಇಲ್ಲ. ಮೇಲಾಗಿ ಒಂದೊಂದೂ ತನ್ನ ತನ್ನ ಕ್ಷೇತ್ರದಲ್ಲಿ ತನ್ನ ಮಟ್ಟಿಗೆ ಶ್ರೇಷ್ಠತೆ ಹಾಗೂ ಪ್ರಭುತ್ವವನ್ನು ಹೊಂದಿದ್ದು, ಮಾನವನಿಗೆ ಮಹದುಪಕಾರ ಮಾಡುತ್ತಿವೆ. ಇತ್ತಿತ್ತಲಾಗಿ ಅನೇಕ ಸುಶಿಕ್ಷಿತ ಹಾಗೂ ಆಧುನಿಕ ಧರ್ಮ ಪ್ರತಿಪಾದಕರು ಬೈಬಲ್ ನಂತಹ ಹಲವಾರು ಧರ್ಮ ಗ್ರಂಥಗಳು ಕೆಲವು ವೈಜ್ಞಾನಿಕ ವಿಷಯಗಳ ಮೇಲೆ ಮೂಲಭೂತ ಸ್ಥೂಲ ವಿವರಣೆಗಳನ್ನು ನೀಡುವುವೆಂತಲೂ, ಆದರೆ ಇಂದಿನ ಆಧುನಿಕ ಸಂಶೋಧನೆಗಳ ಬೆಳಕಿನಲ್ಲಿ ಆ ತರ್ಕಸರಣಿಗಳು ಪರೀಕ್ಷೆಗೆ ಅಥವಾ ವಾದಕ್ಕೆ ನಿಲ್ಲುವುದಿಲ್ಲವೆಂತಲೂ ಭಾವಿಸುತ್ತಾರೆ. ಹೀಗೆ ವಿಜ್ಞಾನ ಮತ್ತು ಧರ್ಮ ಇವೆರಡರ ನಡುವೆ ಹೊಂದಾಣಿಕೆ ಹಾಗೂ ಸಮರಸತೆಯನ್ನು ಬೆಸೆಯುವಲ್ಲಿ ಆಗಾಗ ಕೆಲವು ಪ್ರಯತ್ನಗಳು ನಡೆಯುತ್ತಿದ್ದು, ಅವು ಕೆಲ ಮಟ್ಟಿಗೆ ಫಲಪ್ರದವಾಗುತ್ತಿವೆಯೆನ್ನಬಹುದು.

ಜಯತು ಭಾರತ ಜನನಿ!

— ಕೆ. ಜಿ. ಶೆಟ್ಟಿ, ಕಡಂದಲೆ.

ಜಯತು ಜಯತು ಭಾರತಿ!
ಜಯತು ಭಾಗ್ಯದಾಯಿನಿ
ಜಯತು ವಿಶ್ವ ನಾಯಕಿ
ಜಯತು ಜಗದ ರಕ್ಷಕಿ!
ಜಯತು ಜನನಿ ಭಾರತಿ— ಬಾಗಿ ಬೆಳಗುವಾರತಿ
ಬೆಳಗಿಸೆಮ್ಮ ಕೀರುತಿ— ನೀಡು ಎಮಗೆ ಶುಭಮತಿ ॥ ೧ ॥

ನಿನ್ನ ಜೀವಕಣಗಳಾವು!
ನಿನ್ನ ಮಡಿಲ ಎಮ್ಮ ಠಾವು
ಪೊರೆಯುತಿರಲಿ ನಿನ್ನ ಬಾಹು—
ಅದುವೆ ನಮ್ಮ ಬಾಳ ಗೆಲವು!
ಒಂದೆ ಮತದಿ, ಕೂಡಿ ಹಿತದಿ - ನಿನ್ನ ಕೀರ್ತಿ ಮೆರೆವುದು,
ನಮ್ಮ ನೆಲವನುಳಿಪ ಛಲವೆ— ನಮ್ಮ ಭೀಮ ಬಲವಿದು! ॥ ೨ ॥

ಎನಿತೊ ಪುಣ್ಯ ಪುರುಷರನ್ನು-
ಕೆಚ್ಚೆದೆಯ ಕಲಿಗಳನ್ನು-
ಪರರ ಕೈಯ ಕಡಿದು, ಮೈಯ
ಮೆರೆಸಿದಂಥ ಯೋಧರನ್ನು-
ಪಡೆದು ಪೊರೆದ ಜನುಮದಾತೆ— ಅಖಿಲ ವಿಶ್ವ ವಂದಿತೆ!
ನಿನ್ನ ಪುಣ್ಯ ಗರ್ಭದಲ್ಲಿ ಜನಿಸಿರುವುದೆ ಪುಣ್ಯತೆ! ॥ ೩ ॥

ರಾಮಕೃಷ್ಣ, ಬುದ್ಧ, ಸಂತ-
ಕಬೀರ, ತುಳಸಿದಾಸ ಪಂಥ-
ಗಾಂಧಿ, ನೆಹರು, ತಿಲಕರಂಥ,
ಪುರುಷ ರತ್ನರೊರೆದ ತತ್ವ—
ದಮೃತದೊಸರ ಸವಿದು ಬಾಳ್ವ ಬುದ್ಧಿ ಸಾಧನೆ ಕೋರುವೆ.
ಸಮತೆಯಿಂದ ಬಾಳ್ವೆ ಮಮತೆಯದನು ಎಂದು ತೋರುವೆ? ॥ ೪ ॥

ಸತ್ಯ ಧರ್ಮವನ್ನು ಮೆರೆಸಿ,
ತ್ಯಾಗದಿಂದ ಜಯವ ಗಳಿಸಿ,
ನಿನ್ನ ಬಂಧನವನು ಬಿಡಿಸಿ,
ಸುಖದ ದಾರಿ ತೋರಿಸಿ—
ಅಳಿದು ಹೋದ ಹಿರಿಯರನ್ನು ನೆನೆದು ವಂದನದಿ ಮಣಿವೆವು
ಅವರ ದಾರಿಯನ್ನೆ ತುಳಿವೆವೆನುವ ಪಣವ ತೊಡುವೆವು! ॥ ೫ ॥

ನಿನ್ನ ಸೇವೆಗೆನ್ನ ಜೀವ—
ಸವೆದು ಹೋಗಲೆನುವ ಭಾವ—
ಎಲ್ಲರೆದೆಯೊಳುದಿಸುವಂತೆ,
ವರವ ಕೊಟ್ಟು ಹರಸುತ
ಪೊರೆಯೊ ತಾಯೆ, ನಿನ್ನ ಚರಣಕೆರಗಿ ಬೇಡ್ವ ಭಿಕ್ಷೆಯು
ನಿನ್ನ ಉಳಿವೆ ನಮ್ಮ ಗೆಲವು ಅದುವೆ ಬಾಳ ರಕ್ಷೆಯು ॥ ೬ ॥

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬರದ ಮುಗಿಲು	1—50
ಅನುವಾದಿತ ಕತೆಗಳು	1—25
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—75
ಪಂಚಗವ್ಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶ ವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಬೆಳಗಾವಿ ಮತ್ತು ಕಾಸರಗೋಡು

(ನಾಲ್ಕನೇ ಪುಟದಿಂದ)

ದಲ ಹೆಚ್ಚಿಸಲು ಪ್ರಯತ್ನ ಮಾಡಿದಂತೆಯೂ ತೋರುತ್ತದೆ; (ದ. ಕ. ಜಿಲ್ಲೆಯ ವಿರೋಧ ಪಕ್ಷದವರನ್ನು ಹೊರತು) ಆದರೆ ಇವರಲ್ಲಿ ಸಮಸ್ಯೆಯ ಕುರಿತು ಸ್ಪಷ್ಟ ನಿಲುವು ತೋರಿ ಬಂದಂತೆ ಕಾಣುವುದಿಲ್ಲ.

ಇದೇ ಸಂದರ್ಭದಲ್ಲಿ ಬೆಂಗಳೂರಲ್ಲಿರುವ ಅಖಿಲ ಕರ್ನಾಟಕ ಗಡಿ ಹೋರಾಟ ಸಮಿತಿಯವರೂ ಗಡಿಗಳ ಬಗ್ಗೆ ಹೋರಾಡಲು ಬದ್ಧಕಂಕಣರಾಗಿದ್ದಾರೆ. ಅವರೂ ಪಾರ್ಲಿಮೆಂಟ್ ನಿರ್ಣಯ ಕೊನೆಯದು; ಗಡಿ ವಿವಾದ ಎತ್ತಕೂಡದು; ಆಯೋಗ ಆಗಕೂಡದೆಂದು ವಾದಿಸುತ್ತಾರೆ. ಅವರ ದೃಷ್ಟಿಯಲ್ಲಿಯೂ ಬೆಳಗಾವಿಯೇ ಇದೆ ಹೊರತು ಕಾಸರಗೋಡು ಇದ್ದಂತೆ ಕಾಣುವುದಿಲ್ಲ. ಕೇರಳದೊಳಗಿರುವ ಕನ್ನಡದ ಗಡಿಗಾಗಿ ಕಳೆದ ಹತ್ತು ವರ್ಷಗಳಿಂದಲೂ ಸಾರ್ಥಕ ಹೋರಾಟ ಹೂಡಿದ ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿ ಆಯೋಗವನ್ನು ಸ್ವಾಗತಿಸಿದೆ. ಅ. ಕ. ಗಡಿ ಹೋರಾಟ ಸಮಿತಿಯ ಈ ವಿರೋಧಾಭಾಸವನ್ನು ಕಂಡು ಕಾಸರಗೋಡಿನ ಕನ್ನಡಿಗರ ಪ್ರತಿನಿಧಿ ಶ್ರೀ ಮಹಾಬಲ ಭಂಡಾರಿಗಳು ಪ್ರತಿಭಟಿಸಿದ್ದಾರೆ. ಕಾಸರಗೋಡನ್ನು ಮೈಸೂರಿಗೆ ಸೇರಿಸುವಲ್ಲಿ ನಿಷ್ಕ್ರಿಯವಾಗಿ, ಬೆಳಗಾವಿಯನ್ನು ಉಳಿಸಿಕೊಳ್ಳುವ ಆಗ್ರಹವೇ ಅಧಿಕವಾಗಿರುವ ಈ ಸಮಿತಿ ಅ. ಕ. ಗಡಿಗಳ ಪ್ರಾತಿನಿಧ್ಯ ವಹಿಸಬಲ್ಲುದೇ ಎಂಬುದನ್ನು ಅವರೇ ವಿಚಾರಿಸಬೇಕಾಗಿದೆ.

ೊ ೦ ೦

ಮಹಾರಾಷ್ಟ್ರದವರು ತಮಗೆ ಬರಬೇಕಾದ ಪ್ರದೇಶಗಳ ಬಗ್ಗೆ ಕಳೆದ ಹತ್ತು ವರ್ಷಗಳಿಂದ ನಿರಂತರ ಹೋರಾಡುತ್ತಾರೆ. ಅಲ್ಲಿ ಎಲ್ಲ ಪಕ್ಷದವರು ಈ ಕುರಿತು ಒಮ್ಮತದವರಿದ್ದಾರೆ. ಗಡಿ ಪ್ರದೇಶಗಳ ಜನಮತವನ್ನು ಒಂದಲ್ಲ ಹಲವು ಸಲ ತೋರಿಸಿದ್ದಾರೆ. ಕಳೆದು ಹೋದುದನ್ನು ಪಡೆಯಲು ಶಕ್ತಿ ಧೈರ್ಯ ಸಾಹಸ ತೋರ್ಪಡಿಸಿದ್ದಾರೆ. ಇದರ ಜತೆಗೆ ಮೈಸೂರಿಗೆ ಸೇರಬೇಕಾದ ಕೆಲವು ಗ್ರಾಮಗಳನ್ನು ಅವರಾಗಿಯೇ ಬಿಟ್ಟುಕೊಡಲು ಒಪ್ಪುತ್ತಾರೆ. ಇಂತಹ ಅವರ ವಾದದಲ್ಲಿ ನ್ಯಾಯವಿರಬಹುದೇ ಎಂದು ಕೇಂದ್ರ ಸರಕಾರ ಕಣ್ತೆರೆವಂತೆ ಆಗಿದೆ.

ಮೈಸೂರಿನ ಈ ಗಡಿ ಆಂದೋಲನದ ಮುಖಂಡರು ಬರಬೇಕಾದ ಕನ್ನಡ ಪ್ರದೇಶಗಳ ಬಗ್ಗೆ ಏನು ಪ್ರಯತ್ನ ಮಾಡಿದ್ದಾರೆಂದು ಅವರವರ ಆತ್ಮ ಸಾಕ್ಷಿಯನ್ನೇ ಕೇಳಿ ನೋಡಲಿ! ಬರಬೇಕಾದ್ದು ಬರದಿದ್ದರೂ ಆದೀತು. ಕೈವಶ ಬಂದದ್ದನ್ನು ಉಳಿಸಿಕೊಂಡರೆ ಸಾಕು ಎಂಬೀ ಧೋರಣೆ ಎಲ್ಲೆಡೆಯಲ್ಲಿಯೂ ಎದ್ದು ತೋರುತ್ತಿರುವಾಗ, ಕೇಂದ್ರ ಸರಕಾರವಾದರೂ ಈ ದೌರ್ಬಲ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡಿರಬೇಕು!

೦ ೦ ೦

ಈ ಅಸ್ತವ್ಯಸ್ತ—ಈ ಗೊಂದಲ—ಏನೇ ಇದ್ದರೂ, ಕಳೆದ ಹತ್ತು ವರ್ಷಗಳಿಂದ ಗಡಿನಾಡಿನ ಕನ್ನಡಿಗರು ಮಾಡಿದ ಸುದೀರ್ಘ ಹೋರಾಟ, ತ್ಯಾಗ, ಬಲಿದಾನ, ಕಷ್ಟ-ಕಾರ್ಪಣ್ಯಗಳ ರೋಮಾಂಚಕ ಇತಿಹಾಸ ಉಲ್ಲೇಖನೀಯವಿದೆ.

ಪ್ರಕೃತ ಕಾಸರಗೋಡಿನ ಕುರಿತು ಈ ಮಾತುಗಳು: ಕಾಸರಗೋಡು ಕರ್ನಾಟಕದ ಭಾಗವೆಂದು ಒಪ್ಪಿ ನಮ್ಮನ್ನು ಆ ಮೇಲೆ ವಂಚಿಸಿದವರು ಸ್ವರ್ಗಸ್ಥರಾದ ಶ್ರೀ ಪಣಿಕ್ಕರರು. ಅವರು ಜೀವಂತ ಇರುವಾಗಲೇ ಅವರ ಮೇಲೆ ಈ ಆರೋಪ ಪಾರ್ಲಿಮೆಂಟಿನಲ್ಲಿ ಬಂದಿತ್ತು; ಅನುತ್ತರಿತವಾಯಿತು! ಆಡಳಿತ ಸೌಕರ್ಯಕ್ಕಾಗಿ ಕಾಸರಗೋಡು ಕೇರಳಕ್ಕೆ ಬಲಿಕೊಡಲಾಯಿತೆಂದು ಶಾಸನ ಬರೆದರೂ, ಇಂದಿಗೂ, ಉಪ್ಪು ಮೆಣಸಿನಂತಹ ಜೀವನಾವಶ್ಯಕ ಸಕಲವಸ್ತುಗಳಿಗೂ ನಾವು ಮಂಗಳೂರನ್ನೇ ಹೊಂದಿಕೊಳ್ಳದೆ ಬೇರೆ ಗತಿಯೇ ಇಲ್ಲ! ಇಂತು ಕಾಸರಗೋಡಿಗಾದ ಅನ್ಯಾಯವನ್ನು ಸಕಲ ಪಕ್ಷದವರೂ ಪ್ರತಿಭಟಿಸಿದರು; ಸತ್ಯಾಗ್ರಹ ಹೂಡಿದರು; ಮಕ್ಕಳು ಮುದುಕರು ಕೂಡಾ ಸೆರೆಮನೆ ಸಂಕಷ್ಟವುಂಡರು!

ಆ ಮೇಲಿನ, ಪ್ರಥಮ ಚುನಾವಣೆಯಲ್ಲಿ ಕಾಸರಗೋಡಿನ ಕನ್ನಡಿಗರ ಮುಂದಾಳು ಶ್ರೀ ಉಮೇಶರಾಯರು ಅವಿರೋಧವಾಗಿ ಆಯ್ಕೆಗೊಂಡರು. ಎರಡನೆಯ ಮತ್ತು ಮೂರನೆಯ ಚುನಾವಣೆಗಳಲ್ಲಿ ಶ್ರೀ ಮಹಾಬಲ ಭಂಡಾರಿಗಳೂ ವಿಜಯಿಗಳಾದರು. ಈ ಮಧ್ಯೆ ಪಾರ್ಲಿಮೆಂಟಿಗೆ ಅವಿರೋಧವಾಗಿ ಅಂತ ಕಮ್ಯುನಿಸ್ಟ್ ಶ್ರೀ ಎ. ಕೆ. ಗೋಪಾಲನ್ ಕನ್ನಡಿಗರಿಗೆ ನ್ಯಾಯ ದೊರಕಿಸುವ ಭರವಸೆಯಿತ್ತು ಗೆದ್ದು ಬಂದರು. ಮುಂದಿನ ಪಾರ್ಲಿಮೆಂಟ್ ಚುನಾವಣೆಗೆ ಶ್ರೀ ಕೆ ಆರ್. ಕಾರಂತರನ್ನು ಆಗಿನ ಮುಖ್ಯಮಂತ್ರಿ ಶ್ರೀ ಪಟ್ಟಂಥಾನು ಪಿಳ್ಳೆ ಪ್ರಭೃತಿಗಳು ನಿಲ್ಲಿಸಿದಾಗ ಕೇರಳದ ಪಿ. ಎಸ್. ಪಿ. ಕನ್ನಡಿಗರಿಗಾದ ಅನ್ಯಾಯದ ಪರಿಮಾರ್ಜನೆಯ ಆಶ್ವಾಸನೆ ನೀಡಿತು. ಶ್ರೀ ಸಿ. ಕೆ. ಗೋವಿಂದನ್ ನಾಯರರ ಕಾಲದಿಂದ ಇಂದಿನ ಶ್ರೀ ಅಬ್ರಹಾಮ್ ತನಕ ಕೇರಳದ ಕಾಂಗ್ರೆಸ್ ಮುಖಂಡರು ಬರೆಹ ಮೂಲಕ ಕನ್ನಡಿಗರಿಗೆ ಭರವಸೆ ನೀಡಿದರು. ಮುಖ್ಯಮಂತ್ರಿಗಳಾಗಿದ್ದ ಕಮ್ಯುನಿಸ್ಟ್ ಶ್ರೀ ನಂಬೂದರಿಪಾಡರೂ ಸಮ್ಮತಿ ವ್ಯಕ್ತಪಡಿಸಿದ್ದರು.

ಹೀಗಿದ್ದರೂ ಮೈಸೂರಿನ ಈ ಗಡಿ ಹೋರಾಟದ ಮುಖಂಡರು ಹೇಳುವುದೇನು? ಪಾರ್ಲಿಮೆಂಟ್ ನಿರ್ಣಯ ಕೊನೆಯದು—ಗಡಿ ಪ್ರಶ್ನೆ ಎತ್ತಬಾರದು ಎಂದೆ? ಅದರ ಅರ್ಥ ಬೆಳಗಾವ್ ಹೋಗಕೂಡದು—ಕಾಸರಗೋಡು ಬರಕೂಡದು ಎಂದಿಷ್ಟೇ ಅಲ್ಲವೆ? ಈ ಭಾಷೆ ಈಗ ಕೇರಳದ ಮುಖಂಡರಿಗೂ ಅರ್ಥವಾಗಿದೆ. ಪಾರ್ಲಿಮೆಂಟ್ ನಿರ್ಣಯ ಕೊನೆಯದು—ಗಡಿ ಪ್ರಶ್ನೆ ಎತ್ತಕೂಡದೆಂದು ಅವರೂ ಈಗ ಮೈಸೂರಿನ ಮೇಲ್ಪಂಕ್ತಿಯಂತೆ ಬರೆಯತೊಡಗಿದ್ದಾರೆ! ಸಾಲದ್ದಕ್ಕೆ ಜನಪ್ರಿಯ ಸರಕಾರ ಕೇರಳದಲ್ಲಿ ಈಗ ಇಲ್ಲವೆನ್ನುತ್ತಾರೆ. ಕೇರಳದಲ್ಲಿ ಹಿಂದೆಯೂ—ಪ್ರಾಂತ ಪುನಾರಚನೆಯ ದಾಗಲೂ, ಮುಂದೆಯೂ, ಜನಪ್ರಿಯ ಸರಕಾರ ಇರಲಿಲ್ಲ. ಇರುವುದು ಸಾಧ್ಯವೂ ಇಲ್ಲವೆಂದು ವಿಚಾರವಂತರು ಬಲ್ಲರು. ಹಾಗಾದರೆ ಕಾಸರಗೋಡಿನ ಕನ್ನಡಿಗರ ಗತಿಯೇನು?

ಮೈಸೂರು ಮಹಾರಾಷ್ಟ್ರವಾದದ ಕುರಿತು ಮುಖ್ಯಮಂತ್ರಿಗಳ ಮಾತುಕತೆ ಆಗುತ್ತದೆ. ಅವರು ಇತ್ಯರ್ಥಕ್ಕೆ ಬರದಿದ್ದರೆ ಮುಂದೆ ಏಕಸದಸ್ಯ ಆಯೋಗ ನೇಮಕ ಮಾಡಿದಲ್ಲಿ ಆದೇಶಕೊಡುತ್ತದೆ.

ಹಾಗಾದರೆ ಕಾಸರಗೋಡು?

ಬರಬೇಕಾದನ್ನು, ಬರಬಹುದಾದುದನ್ನು ಪಡೆಯಲು ವಿವೇಕವಿಲ್ಲದೆ, ಬಿಡಬಾರದ್ದನ್ನು—ಬಿಡಕೊಳ್ಳಬೇಕಾದ್ದನ್ನು ಬಿಟ್ಟುಕೊಟ್ಟು—ಕನ್ನಡಿಗರು—

"ಇತೋ ಭ್ರಷ್ಟ: ತತೋ ಭ್ರಷ್ಟ" ಎಂಬಂತೆ ಆಗದಿದ್ದರೆ ಸಾಕು.

ಸ್ವಾತಂತ್ರ್ಯ ಬಂದ ಬಗೆ

(ಹದಿನೇಳನೇ ಪುಟದಿಂದ)

ಜಾಗರೂಕತೆಯಿಂದ ವರ್ತಿಸುತ್ತಿದ್ದರು. (Allan Campbell Johnson: Mission with Mountbatten). ದೇಶವಿಭಜನೆಯ ವಿರೋಧದಲ್ಲಿ ದೇಶದ ಜನರು ತನ್ನೊಡನೆಯಿದ್ದಾರೆಯೆಂದೂ ಗಾಂಧಿಯವರು ಭಾವಿಸಿದ್ದರು. ಆದರೆ ಕಾಂಗ್ರೆಸ್ ಪಕ್ಷದ ಮುಂದಾಳುಗಳು ಅವರನ್ನು ಅನುಸರಿಸಲು ಆಗ ತಯಾರಿದ್ದಿಲ್ಲ—ಮುಖ್ಯವಾಗಿ ನೆಹರೂ ಪಟೇಲರ ಪಂಗಡ. ಹಾಗಾದರೆ ಗಾಂಧಿಯವರು ದೇಶ ವಿಭಜನೆಯನ್ನು ವಿರೋಧಿಸುವ ಕರೆಯನ್ನೇಕೆ ಕೊಡಲಿಲ್ಲ? ಕಾಂಗ್ರೆಸ್ಸು ತಪ್ಪನ್ನು ಮಾಡುತ್ತದೆ ಎಂದು ತಿಳಿದಿದ್ದರೂ ಅದನ್ನು ತನ್ನ ವಾದಕ್ಕೆ ಪರಿವರ್ತಿಸಲು ಅಸಾಧ್ಯವೆಂದು ಗಾಂಧಿಯವರು ತಿಳಿದಿದ್ದರು. (N. K. Bose: Days with Gandhi) ಇದನ್ನು ಶ್ರೀ ಪ್ರಕಾಶರೂ ಅನುಮೋದಿಸಿದ್ದಾರೆ. (Sri Prakasa: Pakistan: Its Birth And Early Years)

ಸ್ವಾತಂತ್ರ್ಯ ಬಂದಿತು. ಆದರೆ ನಮ್ಮ ನಾಯಕರು ಅದನ್ನು ಪಡೆಯಲು ಸಿದ್ಧರಾಗಿದ್ದರೇ? ಅವರು ಕೈಗೊಂಡ ನಿರ್ಣಯ ಸ್ವಾಗತ ಪ್ರಯೋಜನಕಾರಿಯಾಯಿತೇ? ಇವುಗಳೆಲ್ಲ—"ಆದುದು ಆಯಿತು, ಅವುಗಳ ಚಿಂತೆ ಇನ್ನು ಯಾಕೆ?" ಎಂದು ಹೇಳುವವರು ಗತಕಾಲದಿಂದ ಅನುಭವ ಪಡೆಯಲು ಸಿದ್ಧರಿಲ್ಲ. ಅದರ ಅರ್ಥ ಅವರು ಪರಿಸ್ಥಿತಿಯ ಗುಲಾಮರಾಗುವರಲ್ಲದೆ, ಭವಿಷ್ಯತ್ತನ್ನು ಜನರ ಹಿತಕ್ಕಾಗಿ ರೂಪಿಸಲೂ ಅಸಮರ್ಥರೂ ಆಗುವರು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

FOR MODERN MAN AN ACCURATE WRIST WATCH IS AN ESSENTIAL TOOL!

FOR ALL TYPES OF
- WATCHES
- CLOCKS
- TIMEPIECES

VISIT OUR NEW ENTERPRISE

KARNATAK WATCH CO.,

13, GUNBOW STREET,

BOMBAY-1



We undertake all sorts of repairings of all types of watches, clocks, timepieces etc., under supervision of experts.

Prop: Kadekar Krishna N. Shetty

ರಾಷ್ಟ್ರದ ಪ್ರಾಣ ಗ್ರಾಮದಲ್ಲಿ ಪ್ರತಿಷ್ಠೆಯಾಗಲಿ

(ಮೂರನೇ ಪುಟದಿಂದ)

ಸಮಾಜ ವಿಕಾಸ ಯೋಜನೆ ಪಂಚಾಯತ್ ರಾಜ್ಯ—ವಿವಿಧೋದ್ದೇಶ ಸಹಕಾರಿ ಸಂಘಗಳ—ಸಹಕಾರ ಚಳವಳಿ—ಗ್ರಾಮ ಸೇವಕರು, ವಿಸ್ತರಣಾಧಿಕಾರಿಗಳು—ಮಹಿಳಾ ಮಂಡಳ—ಕಲ್ಯಾಣ ಕೇಂದ್ರ—ಇನ್ನು ಏನೇನೋ—ಆದರ್ಶ ದೊಡ್ಡದು. ಆದರೆ ವ್ಯವಹಾರದಲ್ಲಿ ತರಬೇಕಾದಷ್ಟು ಫಲ ತರಲಿಲ್ಲ. ಅಂದರೆ ನಾವು ಇಂದು ಇನ್ನೊಬ್ಬರ ಉಡುಪು ಧರಿಸಲು ಹೊರಟ ಮರ್ಕಟನಂತಾಗಿದ್ದೇವೆ. ಪರಾವಲಂಬನ ಪರಾನುಕರಣೆ ಎಂದೂ ಉತ್ತಮ ಆದರ್ಶಗಳಲ್ಲ.

ಹಾಗಾದರೆ ರಾಷ್ಟ್ರದ ಪ್ರಾಣವನ್ನು ಗ್ರಾಮದಲ್ಲಿ ಪ್ರತಿಷ್ಠಿಸುವಲ್ಲಿ ನಾವು ಎಲ್ಲಿ ದಾರಿ ತಪ್ಪಿದ್ದೇವೆ? ಕೊಂಚ ನಮ್ಮ ಆತ್ಮಸಂಶೋಧನಾ ಕಾರ್ಯ ನಾವೇ ನಡೆಸಿಕೊಳ್ಳೋಣ.

ರಾಷ್ಟ್ರದ ಕಲ್ಯಾಣ ಎಂದರೆ ರಾಷ್ಟ್ರದ ಬಹುಸಂಖ್ಯಾಕ ಪ್ರಜೆಗಳ ಕಲ್ಯಾಣವಷ್ಟೆ? (ಮಾನವ ಸಮಾಜ ಘಟಕಗಳಲ್ಲಿ ರಾಷ್ಟ್ರವೇ ದೊಡ್ಡದು, ಅದರ ಚಿಕ್ಕರೂಪವೇ ಗ್ರಾಮ, ಅತೀ ಚಿಕ್ಕದೆಂದರೆ ಕುಟುಂಬ.) ಈ ಬಹುಸಂಖ್ಯಾಕ ಪ್ರಜೆಗಳು ಎಂದರೆ ಯಾರು? ಅವರೇ ನಮ್ಮ ಗ್ರಾಮವಾಸಿಗಳು. ಈ ಗ್ರಾಮವಾಸಿಗಳ ಬಡತನ, ಹಸಿವು, ನಿರುದ್ಯೋಗ ಎಲ್ಲ ನಿವಾರಣೆ ಆಗಬೇಕು. ಅಂದರೆ ಪ್ರಾಯ ಪ್ರಬುದ್ಧವಾದ ಆರೋಗ್ಯವಂತ ಪ್ರತಿಯೊಂದು ಹೆಣ್ಣು ಗಂಡಿಗೂ ತಾನು ನೆಲಸಿದ ನೆಲೆಯಲ್ಲಿಯೇ ವಿದ್ಯೆ—ಉದ್ಯೋಗ ಎಲ್ಲ ದೊರಕಬೇಕು. ದೇಶದ ಉತ್ಪಾದನಾ ಕಾಲದಲ್ಲಿ ಪ್ರತಿಯೊರ್ವ ಗ್ರಾಮಜೀವಿಯೂ ಪಾಲುಗೊಳ್ಳುವಂತಿರಬೇಕು.

ಸ್ವಾತಂತ್ರ್ಯ ಚಳುವಳಿ ಕಾಲದಲ್ಲಿ ನಮ್ಮ ಧ್ವಜದಲ್ಲಿ ಈ ಗ್ರಾಮ ಉದ್ಯೋಗ ಸಂಕೇತವಾಗಿ ಚರಖಾ ಚಿತ್ರಿಸಿದ್ದೇವೆ. ಖಾದಿ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಒಂದಾಗಿತ್ತು, ಅದೇ ಪ್ರಧಾನ ಕಾರ್ಯವಾಗಿತ್ತು.

ಆದರೆ ಇಂದು ಸ್ವಾತಂತ್ರ್ಯ ಪಡೆದ ನಂತರದಲ್ಲಿ ನಮ್ಮ ಕೈಗಾರಿಕಾ ನೀತಿ ಸಂಪೂರ್ಣ ಬದಲಾಗಿದೆ. ನಾವು ಯಂತ್ರಗಳ ಉಪಾಸಕರಾಗಿದ್ದೇವೆ. ಭಾರೀ ಕಾರ್ಖಾನೆಗಳ ಸ್ಥಾಪನೆಯಲ್ಲಿ ನಿರತರಾಗಿದ್ದೇವೆ. ನಮ್ಮ ಪ್ರಧಾನ ಕಸುಬಾದ ವ್ಯವಸಾಯ ಉದ್ಯೋಗದಲ್ಲಿಯೂ ಯಂತ್ರಗಳ ಬಳಕೆ ಬಗ್ಗೆ ಪ್ರಚಾರ ನಡೆಸುತ್ತಿದ್ದೇವೆ. ಅಧಿಕ ಉತ್ಪಾದನೆ ನಮ್ಮ ಮಂತ್ರವಾಗಿದೆ. ಈ ಯಾಂತ್ರೀಕೃತ — ಕೇಂದ್ರೀಕೃತ ಕೈಗಾರಿಕೆ ನಮ್ಮಲ್ಲಿ ಕೆಲವೇ ಲಕ್ಷ ಮಂದಿಗೆ ಉದ್ಯೋಗ ದೊರಕಿಸಿಕೊಟ್ಟಿದೆ. ಉತ್ಪಾದನೆ ಉದ್ಯೋಗ ಉದ್ದಿಮೆ ಇವೆಲ್ಲ ಕೇಂದ್ರೀಕೃತವಾಗಿ ದೇಶದಲ್ಲಿ ಕೆಲವೇ ಮಂದಿ ಇದರ ಲಾಭ ಪಡೆಯುವಂತಾಗಿ ಅವರಲ್ಲಿ ಶ್ರೀಮಂತಿಕೆ ಕೇಂದ್ರೀಕೃತವಾಗಿದೆ. ಉಳಿದ ಕೋಟಿ ಜನ ನಿರುದ್ಯೋಗದಲ್ಲಿ—ಬಡತನದಲ್ಲಿ ಶೋಷಣೆಯಲ್ಲಿ ನರಳುವಂತಾಗಿದೆ. ಸಮಾಜ ಸಮತಾವಾದದ ದಾರಿ ತಪ್ಪಿ ಬಂಡವಾಳ ಶಾಹಿತ್ವದ ಕಡೆ ಎರಗುತ್ತದೆ. ನಗರಗಳು ಉತ್ಪಾದನಾ ಕೇಂದ್ರಗಳಾಗಿ ಗ್ರಾಮಗಳು ಗ್ರಾಮ ಜೀವಿಗಳು ಮೂಕ ಬಳಕೆಗಾರರಾಗಿ ಉಳಿಯ ಬೇಕಾಗಿದೆ. ನಗರಗಳು ಗ್ರಾಮಗಳ ಶೋಷಣೆ ನಡೆಸುವಂತಾಗಿದೆ. ಗಾಂಧೀಜಿ ಇದನ್ನು ವಿರೋಧಿಸುತಿದ್ದು, ಮಾನವ ಶಕ್ತಿಯ ಎದುರು ಯಂತ್ರ ಶಕ್ತಿಯು ಒಂದು ಶಾಪ ಎಂದಿದ್ದರು.

ಈ ರೋಗ ನಮಗೆ ಅಂಟಿದ್ದು ನಮ್ಮ ಪೂರ್ವದ ಆಡಳಿತದಾರರ ಕಾಲದಲ್ಲಿ ಅನ್ನೋಣ. ಚರಿತ್ರೆಯನ್ನೂ ಹಳಿಯೋಣ. ಆದರೆ ಇನ್ನಾದರೂ ನಾವು ಈ ರೋಗವನ್ನು ವಾಸಿಮಾಡಿಕೊಳ್ಳ ಬೇಡವೇ?

ಆಹಾರ ಧಾನ್ಯಗಳ ಉತ್ಪಾದನೆ—ಅಂದರೆ ಕೃಷಿ ಇಂದಿಗೂ ಗ್ರಾಮ ಉದ್ಯೋಗವಾಗಿ ಉಳಿದಿದೆ. ಅದರಲ್ಲೂ ಇಂದು ಯಂತ್ರಗಳ ಪ್ರವೇಶವಾಗುತ್ತದೆ. ಕೃಷಿ ಉದ್ಯೋಗವೇ ಒಂದು ಪೂರ್ತಿ ಕಾಲದ ಉದ್ಯೋಗವಲ್ಲದಿರುವಾಗ ಅಧಿಕ ಉತ್ಪಾದನಾ ಹಂಬಲದಿಂದ ಈ ಕ್ಷೇತ್ರದಲ್ಲೂ ಯಂತ್ರ ಬಳಸಿದರೆ ಇನ್ನಷ್ಟು ನಿರುದ್ಯೋಗ ಹೆಚ್ಚುತ್ತದೆ. ಕೃಷಿಯೂ ಕೆಲವೇ ಶಕ್ತಿವಂತರ ಉದ್ದಿಮೆಯಾಗುತ್ತದೆ. ಅಲ್ಲದೆ ಇಂದಿನ ಭೂಶಾಸನದ ರೀತಿಯಿಂದ ಈ ಉದ್ಯೋಗದಲ್ಲಿ ನಿರತರಾಗಿರುವವರಿಗೆ ಸಾಕಷ್ಟು ಭೂಮಿಯೂ ಒದಗುತ್ತಿಲ್ಲ. ಪರಿಣಾಮವಾಗಿ ಪ್ರತಿಯೊಂದು ಗ್ರಾಮದಲ್ಲೂ ಸ್ವತಂತ್ರವಾದ ಕೃಷಿಕನಿಗಿಂತ ಕೃಷಿ ಕಾರ್ಮಿಕರು ಅಥವಾ ದಿನಕೂಲಿಗಳ ಬಳಗವೇ ಜಾಸ್ತಿ. ಇವರಿಗೂ ಪೂರ್ತಿಹೊತ್ತಿನ ಉದ್ಯೋಗವಿಲ್ಲ.

ಸಂಘಟನೆ, ಚಳವಳಿ, ಇವುಗಳ ಪ್ರಭಾವದಿಂದ ಇತರ ಕ್ಷೇತ್ರಗಳಲ್ಲಿ ಕಾರ್ಮಿಕರ ಹಿತರಕ್ಷಿಸಲ್ಪಟ್ಟಿದ್ದರೆ ಕೃಷಿಕಾರ್ಮಿಕರ ಸುಧಾರಣೆ ಇನ್ನೂ ಆಗದೆ ಉಳಿದಿದೆ. ಇಷ್ಟೊಂದು ವಿಪುಲವಾದ ಮಾನವ ಶಕ್ತಿ ಉತ್ತಮ ಔದ್ಯೋಗಿಕ ನೀತಿಯ ಧೋರಣೆಯ ಅಭಾವದಿಂದಾಗಿ ನಷ್ಟವಾಗುತ್ತದೆ. ಇದು ಘನವಾದ ರಾಷ್ಟ್ರೀಯ ನಷ್ಟ.

ಅಸಿದ್ಧ ವಸ್ತುಗಳ ತಾಯ್ನಾಡಾದ ನಮ್ಮ ಗ್ರಾಮಗಳು ಅತ್ಯುತ್ತಮ ಉತ್ಪಾದನಾ ಕೇಂದ್ರಗಳೂ ಆಗ ಬಲ್ಲವು. ದೇಶದ ಸಂಪತ್ತನ್ನೂ ಹೆಚ್ಚಿಸ ಬಲ್ಲವು; ಕೈ ಮಗ್ಗದ ಬಟ್ಟೆ, ಎಣ್ಣೆ ಗಾಣ, ಕುಟ್ಟಿದ ಅಕ್ಕಿ ಚರ್ಮದ ಕೈಗಾರಿಕೆ, ಕಂಚು ಹಿತ್ತಾಳೆ ಪಾತ್ರೆಗಳು, ಮರದ ಕೆಲಸ, ಹಂಚು ತಯಾರಿಕೆ, ಸಿಲ್ಕು, ಜೇನಬಿನ ಕೈಗಾರಿಕೆ, ಬೆಲ್ಲ ತಯಾರಿಕೆ, ಹುಂಜಗ—ಇವೆಲ್ಲ ಉತ್ತಮ ಗ್ರಾಮ ಕೈಗಾರಿಕೆಗಳಲ್ಲವೇ? ಇವುಗಳು ಯಂತ್ರಗಳಿಗೆ ಒಳಪಡಬೇಕೆ?

ನಮ್ಮ ದೇಶದ ಬಟ್ಟೆಬರೆಗಳ ಒಟ್ಟು ಆವಶ್ಯಕತೆಯಲ್ಲಿ ಸೇ. 30 ರಷ್ಟನ್ನು ಕೈಮಗ್ಗಗಳೇ ಪೂರೈಸಬಲ್ಲುವು ಎಂದು ಕಾಲು ಶತಮಾನದ ಹಿಂದೆಯೇ ನಮ್ಮ ತಜ್ಞರು ಲೆಕ್ಕ ಹಾಕಿದ್ದರು. ಇದೊಂದೇ ಉದ್ಯೋಗ ಎಷ್ಟೋ ಲಕ್ಷ ಮಂದಿಗೆ ಉದ್ಯೋಗ ಒದಗಿಸಬಲ್ಲುದು.

ಅಂತೆಯೇ ನಮ್ಮ ಭಾರೀ ಸಕ್ಕರೆ ಕಾರ್ಖಾನೆಗಳ ಬದಲು ಬೆಲ್ಲ ತಯಾರಿಕೆ—ಇತ್ಯಾದಿ ಎಡೆಗಳಲ್ಲೆಲ್ಲಾ ಗ್ರಾಮ ಕೈಗಾರಿಕೆಗೆ ಹೆಚ್ಚು ಪ್ರೋತ್ಸಾಹ ದೊರೆತರೆ ನಮ್ಮ ಗ್ರಾಮ ಜೀವನ ಉತ್ತಮಗೊಳ್ಳುತ್ತದೆ.

ಗುಡಿ ಕೈಗಾರಿಕೆ ಸಂಸ್ಥೆಯೊಂದಿದೆ—ಅನೇಕ ಕೈಗಾರಿಕಾ ಸಹಕಾರೀ ಸಂಸ್ಥೆಗಳೂ ಇವೆ, ಕೆಲವು ವಿವಿಧೋದ್ದೇಶವುಳ್ಳವೂ ಆಗಿವೆ. ಪರಿಹಾರವೂ ಹರಿಯುತ್ತಿದೆ. ಆದರೆ ಇವೆಲ್ಲ ದೇವಾಲಯಕ್ಕೆ ಕೊಟ್ಟ ನಂದಾದೀಪದ ಎಣ್ಣೆಯಂತೆ—ಪೂಜಾರಿಯನ್ನೇ ಸೇರುತ್ತಿವೆಯೇ ಹೊರತು ದೀಪ ಉರಿಯಲು ಸಹಾಯವಾಗುತ್ತಿಲ್ಲ.

ನಮ್ಮ ಕೈಗಾರಿಕಾ ನೀತಿಯಲ್ಲಿ ಕ್ರಾಂತಿಕಾರೀ ಬದಲಾವಣೆಯಾಗಬೇಕು. ನಾವು ಕೇವಲ ಪಾಶ್ಚಾತ್ಯ ರಾಷ್ಟ್ರಗಳ ಅಲ್ಲಿನ ತಂತ್ರಜ್ಞರ ಹಿಂಬಾಲಕರಾಗಬಾರದು. ನಮ್ಮ ಕೈಗಾರಿಕೆಗಳಲ್ಲಿ ನಮ್ಮದೇ ಸ್ವಾಮ್ಯ ನಮ್ಮದೇ ರೀತಿ ನೀತಿ ಇರಬೇಕು. ನಮ್ಮಲ್ಲಿ ಒದಗುವ ನಿಸರ್ಗದತ್ತವಾದ ಅನೇಕ ಸೌಲಭ್ಯವನ್ನು ನಾವು ಅಲಕ್ಷಿಸಬಾರದು.

ನಮ್ಮ ದೇಶದ ನಿಸರ್ಗ ಸಂಪತ್ತನ್ನು ಪ್ರಕೃತಿ ದತ್ತವಾದ ಶಕ್ತಿಯನ್ನು ವಿಶಿಷ್ಟವಾಗಿ ನಾವು ಬಳಸಿಕೊಂಡು ನಮ್ಮ ಉತ್ಪಾದನೆಯನ್ನು ಹೆಚ್ಚಿಸಬೇಕಾದರೆ ನಮ್ಮ ರಾಷ್ಟ್ರದ ಸಮಸ್ತ ಪ್ರಜೆಯೂ ದೇಶದ ಉತ್ಪಾದನಾ ಕಾರ್ಯದಲ್ಲಿ ಪಾಲುಗೊಳ್ಳುವಂತಾಗಲೇಬೇಕು. ವಿಪುಲವಾದ ಮಾನವ ಶಕ್ತಿಯನ್ನು ಅದುಮಿ ಹಿಡಿದು ಯಂತ್ರಗಳಿಗೆ ಸ್ವರಾಜ್ಯವನ್ನು ಕೊಡುವ ಈ ಪಾಶ್ಚಾತ್ಯ ತಜ್ಞರ ಬಂಡವಾಳಶಾಹಿ ಧೋರಣೆ ನಮ್ಮ ಭಾರತಕ್ಕೆ ತಕ್ಕುದಲ್ಲ.

ಕೈಗಾರಿಕೆಯ ಈ ನೀತಿಯನ್ನು ಅರ್ಥಮಾಡಿಕೊಳ್ಳದೇ ನಾವು ಅಜ್ಞಾನಿಗಳಂತೆ ದೇಶದಲ್ಲಿ ಜನಸಂಖ್ಯೆ ಏರುತ್ತಿದೆ, ಇದೊಂದು ಭಾರಿ ಸಮಸ್ಯೆ ಎನ್ನುತ್ತಿದ್ದೇವೆ. ತೆರೆದ ಬಾಯಿಯ ಜನತೆಯಲ್ಲಿಯೇ ಸುದೃಢವಾದ ದೇಹ, ಸಬಲವಾದ ಎರಡು ಕೈಗಳು ಬುದ್ಧಿ ಶಕ್ತಿ ಎಲ್ಲಿ ಇವೆ. ಕೈಗಳಿಗೆ ಬುದ್ಧಿ ಶಕ್ತಿಗೆ ಕೆಲಸ ಕೊಟ್ಟರೆ ಬಾಯಿಗೆ ಆಹಾರವು ದೊರೆಯುತ್ತದೆ ಎಂಬುದನ್ನು ನಾವು ಮರೆತಿದ್ದೇವೆ.

ಇನ್ನಾದರೂ ನಮ್ಮ ಪಂಚವಾರ್ಷಿಕ ಯೋಜನೆಗಳು ಬುದ್ಧಿಪೂರ್ವಕವಾಗಿ ಗ್ರಾಮ ಮೂಲವಾಗಿ ಗ್ರಾಮ ಕೇಂದ್ರವಾಗಿರಲಿ. ಆಗಲೇ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮುಂತಾದ ಮಾತುಗಳಿಗೆ ಬೆಲೆ ಬರುತ್ತದೆ.

ಗಾಂಧಿ ಉವಾಚ

ಸ್ವರ್ಗದಿಂದ ಖಾದಿಯ ಮಳೆಗೈದರೆ ಅದೊಂದು ಅನಾಹುತವೇ ಸೈ. ಖಾದಿಯಲ್ಲಿ ಸ್ವಯಂ ಪ್ರೇರಣೆ ಇದೆ. ಅದು ಸಕಲ ಭ್ರಾಂತಕ್ಕೂ ಅನ್ವಯಿಸುವುದು. ಅಂತೆಯೇ ಅದಕ್ಕೆ ಮಹತ್ವವಿದೆ.

੦ ੦ ੦

ನಾನು ಪರಿಪೂರ್ಣನೆಂದು ಹೇಳಿಕೊಳ್ಳುವುದಿಲ್ಲ; ಆದರೆ ದೇವರಿಗೆ ಇನ್ನೊಂದು ಹೆಸರೆನಿಸಿರುವ ಸತ್ಯದ ನಿಸ್ಸೀಮ ನಿಷ್ಠೆಯುಳ್ಳ ಉಪಾಸಕನೆಂದು ಮಾತ್ರ ಹೇಳಬಲ್ಲೆನು.

ನಮ್ಮ ಅಪಾರ ಗ್ರಾಹಕರಿಗೂ ಹಿತೈಷಿಗಳಿಗೂ
ಸ್ವಾತಂತ್ರ್ಯ ದಿನದ ಶುಭಾಶಯಗಳು

14 ಕೆರೆಟ್ ಚಿನ್ನದ ಆಭರಣ, ಚೊಕ್ಕ ಬೆಳ್ಳಿಯ ವಿವಿಧ ಆಭರಣ ಸಾಮಾನು ಇತ್ಯಾದಿಗಳಿಗೆ

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್
ತೆಂಕಪೇಟೆ — (Phone 66) — ಉಡುಪಿ

●

ರೇಡಿಯೋ, ಟ್ರಾನ್ಸಿಸ್ಟರ್, ಇಲೆಕ್ಟ್ರಿಕಲ್ ಸಾಮಾನು, ಸ್ಟೈನ್‌ಲೆಸ್ ಸ್ಟೀಲ್, ಸ್ಟೀಲ್ ಕೆಬಿನೆಟ್, ಸೋಫಾ ಕಂ-ಬೆಡ್ ಇತ್ಯಾದಿಗಳಿಗೆ ವೈವಿಧ್ಯಪೂರ್ಣ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

●

ಸುಲಭ ಕಂತುಗಳಲ್ಲಿ ಸಾಮಾನುಗಳನ್ನು ಪಡೆಯುವ ನವೀನ ಯೋಜನೆಗೆ

ಶ್ರೀ ಕೃಷ್ಣಾ ಗಿಫ್ಟ್ ಸ್ಕೀಮ್

●

ದಕ್ಷ ಹೊಸ ಆಡಳಿತದಲ್ಲಿ ಜನಪ್ರಿಯವಾದ

ಗೋಪಾಲಾಶ್ರಮ
(Phone No. 266)
ಶುಚಿ-ರುಚಿ ಊಟ ಮತ್ತು ಫಲಾಹಾರ ಮಂದಿರ
ಹೆಡ್ ಪೋಸ್ಟ್ ಆಫೀಸು ರೋಡು, ಉಡುಪಿ.

30 ಸ್ವಾತಂತ್ರ್ಯವು ಚಿರಾಯುವಾಗಲಿ 30

ಪ್ರತಿಯೊಬ್ಬನೂ ತನ್ನ ಕಾರ್ಯದಲ್ಲಿ ದ್ವಿಗುಣಿತ ಉತ್ಸಾಹ ತಾಳುವ ಪ್ರತಿಜ್ಞೆ ಮಾಡುವ ಈ ದಿನದಂದು—

ಮುವತ್ತು ಮಾರ್ಕಿನ ಬೀಡಿಗಳು

—ನಾವು ಸ್ವಾತಂತ್ರ್ಯಕ್ಕಾಗಿ ತಮ್ಮನ್ನರ್ಪಿಸಿಕೊಂಡವರೆಲ್ಲರನ್ನೂ ಸ್ಮರಿಸಿ, ಸದಾ ನಮ್ಮ ಪಾಲಿನ ಸೇವೆಯನ್ನು ಸಲ್ಲಿಸುವವೆಂಬ ಆಶ್ವಾಸನೆಯೀಯುವೆವು. ಇಂದು ಮೂವತ್ತಆರು ವರ್ಷಗಳನ್ನು ಕಳೆದು ಮೂವತ್ತೇಳನೇ ವರ್ಷದಲ್ಲಿ ಪ್ರವೇಶಿಸುವ ನಾವು, ಭಾರತದ ರಾಜ್ಯಗಳಲ್ಲಿ—ದೂರ ದೂರದ ಕೇಂದ್ರಗಳಲ್ಲೂ—ಹರಡಿರುವ ಅಸಂಖ್ಯಾತ ಮಂದಿಯನ್ನು ಅಖಂಡ ಸ್ನೇಹ ಬಂಧನದಲ್ಲಿ ತಂದು, ನಮ್ಮ ಹೃದಯದಲ್ಲಿ ಚಿರಸ್ಥಾಯಿಯಾಗಿ ಮಾಡಿಕೊಂಡಿರುವೆವು.

"ಉತ್ತಮದಿಂದ ಉತ್ತಮತರ"ಕ್ಕೆ ಎಂಬುದೇ ನಮ್ಮ ಧ್ಯೇಯ.

ಭಾರತ ಬೀಡಿ ವರ್ಕ್ಸ್, (ರಿಜಿಸ್ಟರ್ಡ್) ಕಾರ್ಕಳ. (ದ. ಕ.)

ಫೋನ್:— ಕಾರ್ಕಳ: 30 & 37
ಮಂಗಳೂರು: Office: 3330
Res: 3930

ಟೆಲಿಗ್ರಾಮ್ಸ್ "DAMODAR"

They're here!

The '1210' Series



TATA MERCEDES-BENZ VEHICLES

Authorised Dealers:

ARVIND MOTORS

BALMATTA ROAD, MANGALORE.

Telephone: 4762 Telegram: 'ARVIND'

ಸ್ವರಾಜ್ಯ ಸಿಕ್ಕಿತು; ಸ್ವಾತಂತ್ರ್ಯ ಸಿಗಲಿಲ್ಲ

(ಒಂದನೇ ಪುಟದಿಂದ)

ದರೂ ಕೆಲಸ ಮೇಲೋಗರವಾಗಿಲ್ಲ. ದೇಶವಿದೇಶಗಳ ತಜ್ಞರ ಮೆಚ್ಚುಗೆ ಪಡೆದಿದೆ. ಶ್ರೀ ಕಾರ್ಯಭಾರ ಇದುವರೆಗೆ ವ್ಯರ್ಥವಾಗಿಲ್ಲ; ನಿರರ್ಥಕವಾಗುವಂತೆಯೂ ಇಲ್ಲ.

ಕಾರಣಾಂತರಗಳಿಂದ ಅನೇಕ ಯೋಜನೆಗಳು ಕಾರ್ಯಗತವಾಗಿಲ್ಲ. ನಿಯೋಜಿಸಿದ ಗುರಿಯನ್ನು ತಲುಪಿಲ್ಲ. ಅಥವಾ ಫಲಕಾರಿಯಾಗಿಲ್ಲ. ಆದರೂ ಇವೆಲ್ಲ ಖಂಡಿತ ಯಶಸ್ಸನ್ನು ಗಳಿಸುವುವು ಎಂಬುದರಲ್ಲಿ ಸಂಶಯವಿಲ್ಲ. ಸಮಯ ಮಾತ್ರ ಇದಕ್ಕೆ ಸಾಕ್ಷಿ ನುಡಿದೀತು. ವಿವಿಧ ಎಡರು ತೊಡರುಗಳನ್ನು ಎದುರಿಸಿ ಇಪ್ಪತ್ತು ವರ್ಷ ಕಾರ್ಯಭಾರ ಸಂಕಾರವನ್ನು ಸುಸೂತ್ರವಾಗಿ ನಡೆಸಿದ ಕಾಂಗ್ರೆಸು ಇನ್ನು ನೂರು ವರ್ಷಗಳಾದರೂ ಸೋಲುತ್ತದೆಂದು ಬಗೆಯುವುದರಲ್ಲಿ ಅರ್ಥವಿಲ್ಲ.

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಕನಿಷ್ಠ ನೂರು ಬಾರಿ ಸಣ್ಣ ದೊಡ್ಡ "ಕ್ಷಾಮ"ಗಳು ಲಕ್ಷೋಪಲಕ್ಷ ಜನರನ್ನು ಆಹುತಿಗೊಂಡಿದ್ದುವು. ಸ್ವತಂತ್ರ ಭಾರತದಲ್ಲಿ ಇದು ವರೆಗೆ ಒಂದು ಕ್ಷಾಮಕ್ಕಾದರೂ ಅವಕಾಶ ಕೊಟ್ಟಿಲ್ಲ. ಅನ್ನ ಆಹಾರಗಳ ಅಭಾವದಿಂದಾಗಿ ಪ್ರಾಣಹಾನಿಯ ಪ್ರಶ್ನೆ ಉದ್ಭವಿಸಿಲ್ಲ. ಸಾಧ್ಯ ಮತ್ತು ಅಗತ್ಯವಿದ್ದೆಡೆಗಳಲ್ಲೆಲ್ಲ "ರೇಷನ್" ಪದ್ಧತಿಯಿಂದ ಸಮವಿತರಣೆಯ ಆಹಾರ ಸಂಬರಾಯಿ ಆಗುತ್ತಿದೆ. ಅಮೆರಿಕೆಯಿಂದ ಅಪರಿಮಿತ ಅಕ್ಕಿ ಗೋದಿಗಳ ಆಮದು ಆಗುತ್ತದೆಂಬ ಕೂಗು ಕೇಳಿ ಬರುತ್ತಿದೆ ನಿಜ. ದೇಶದಲ್ಲಿ ಆಹಾರ ಧವಸ ಧಾನ್ಯಗಳ ಉತ್ಪತ್ತಿ ಅಧಿಕವಾದಂತೆ ಈ ಆಯಾತ ತನ್ನಿಂದ ತಾನೇ ಮಾಯವಾಗುವುದು. ನಮ್ಮ ಅಣೆಕಟ್ಟುಗಳು, ನೀರಾವರಿ ಯೋಜನೆಗಳು ಮತ್ತು ಕೃಷಿ ಸಂಪತ್ತು ಉತ್ಪಾದನಾ ಯೋಜನೆಗಳು ಪರಿಪೂರ್ಣವಾಗಲಿವೆ.

ಭಾರತದ ಯಾವತ್ತೂ ನಗರಗಳನ್ನು ಸಂದರ್ಶಿಸಿದರೆ ಜನಸಾಮಾನ್ಯರ ವೇಷಭೂಷಗಳನ್ನೂ ಗಮನಿಸಿದರೆ ಬಟ್ಟೆ ಬರೆಗಳ ಉತ್ಪಾದನಾ ಪ್ರಗತಿ ನಮಗೆ ಮನದಟ್ಟಾಗುವುದು. ಈ ಪರಿಸ್ಥಿತಿ ಪಟ್ಟಣಗಳಿಗೂ ಅನ್ವಯಿಸುತ್ತದೆ. ಗುಡಿಕೈಗಾರಿಕೆ, ಕೈಮಗ್ಗಗಳು—ಖಾದಿ ಮುಂತಾದೆಡೆಗಳಲ್ಲಿ ವಿಶೇಷ ಪ್ರಗತಿಯಾಗಿಲ್ಲವಾದರೂ ಪ್ರಸ್ತುತ ಪರಿಸ್ಥಿತಿ ಕರುಣಾಜನಕವಾಗಿಲ್ಲ. ಜನರೆಲ್ಲ ಗಿರಣಿ ಬಟ್ಟೆಗಳಿಗೆ ಮರುಳು ಹೋಗುವಾಗ, ಯಾಂತ್ರಿಕ ಸಾಧನೋತ್ಪಾದನೆ ಸುಲಭವೂ--ಸುಂದರವೂ—ತೃಪ್ತಿಕರವೆಂದು ಕಂಡಾಗ ಯಾಂತ್ರಿಕೋತ್ಪಾದನಗಳನ್ನು ಕಡೆಗಣಿಸುವಂತಿಲ್ಲ. ವಿಧವಿಧ ಕೈಗಾರಿಕೋದ್ಯಮಗಳ ಪ್ರಗತಿಯೂ ಕುಂಠಿತವಾಗಿಲ್ಲ. ಹಳ್ಳಿಪಳ್ಳಿಗಳನ್ನೇ ಉದಾಹರಣೆಗೆ ಕೈಗೊಂಡರೂ ಜನರ ಒಟ್ಟುಬರೆಗಳು ಇಪ್ಪತ್ತು ವರ್ಷಗಳ ಹಿಂದಿನವುಗಳಿಗಿಂತ ಇಂದು ಹಿತಮಿತವಾಗಿವೆ. ಯಾಂತ್ರಿಕ ವಸ್ತು ಪೊಡವೆ ಸಾಧನ ಸಾಮಾಗ್ರಿಗಳ ಬಳಕೆಯೂ ಹೆಚ್ಚುತ್ತ ಬಂದಿದೆ.

ಇನ್ನುಳಿದುದು ವಸತಿ. ಮನೆ ಮಠಗಳ ನಿರ್ಮಾಣ ಕಾರ್ಯ ಹಿಂದುಳಿದಿಲ್ಲ. ಉಕ್ಕು— ಸಿಮೆಂಟುಗಳ ಸಂಬರಾಯಿ ಹಿತಕರವಾಗಿದೆ. ಈ ವಿಷಯವನ್ನು ನಗರದಲ್ಲೇ ಕಾಣಬೇಕು. ಇಪ್ಪತ್ತು ವರ್ಷಗಳ ಹಿಂದೆ ಮುಂಬಯಿಯನ್ನು ಕಂಡವರು ಇಂದು ಕಂಡರೆ "ಇದು ಮುಂಬಯಿಯೇ? ನ್ಯೂಯಾರ್ಕ್" ಎನ್ನುವಂತಾಗಿದೆ. ಹತ್ತರಿಂದ ಇಪ್ಪತ್ತು ಮಹಡಿಗಳ ಮನೆ ವಸತಿ ನಿರ್ಮಾಣ ಸಾಮಾನ್ಯವಾಗಿದೆ. ಕಟ್ಟಡಗಳ ಪ್ರಗತಿಯನ್ನು ಕಣ್ಣಾರೇ ಕಾಣಬೇಕೇ ವಿನಃ ಬರೆದು ಪ್ರಯೋಜನವಿಲ್ಲ. ಆದರೆ ಗೃಹ ನಿರ್ಮಾಣಕಾರ್ಯಗಳಿಗೆಂದು ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ನಿಯೋಜಿಸಿದ ಧನದಲ್ಲಿ ಮುಂಬಯಿ ಮಾತ್ರ ಸದುಪಯೋಗಗೊಳಿಸಿ ಕೃತಕೃತ್ಯವಾಗಿ ಜನರ ಮನ್ನಣೆಗೆ ಪಾತ್ರವಾಗಿದೆ.

ಬೇರೇನು? ಯಾವ ದೆಸೆಯಲ್ಲಿ ಪ್ರಗತಿಯಾಗಿಲ್ಲ? ಹಾದಿ ಬೀದಿ ಹೆದ್ದಾರಿಗಳೆ? ಶಾಲಾ ಕಾಲೇಜುಗಳೆ? ಸಾರಿಗೆ ಸಂಪರ್ಕಗಳೇ? ಅಧಿಕಾಭಿವೃದ್ಧಿಯೆ? ಸ್ವಾತಂತ್ರ್ಯವಿಲ್ಲವೇ? ವ್ಯಕ್ತಿ ಸ್ವಾತಂತ್ರ್ಯವಿದೆ. ವಾಕ್ ಸ್ವಾತಂತ್ರ್ಯವಿದೆ. ನಮಗೀಗ ಯಾವ ಸ್ವಾತಂತ್ರ್ಯವಿಲ್ಲ? ಪಂಚಾಯತ ಅಧ್ಯಕ್ಷರನ್ನು ಮೊದಲ್ಗೊಂಡು ಪ್ರಜಾಪ್ರಭುತ್ವದ ರಾಷ್ಟ್ರಪತಿಗಳನ್ನೂ ನಾವು ಟೀಕಿಸುತ್ತೇವೆ! ಸಚಿವರನ್ನು ತೆಗಳುತ್ತೇವೆ! ಅಧಿಕಾರಿಗಳನ್ನು ತಿರಸ್ಕರಿಸುತ್ತೇವೆ. ಶ್ರೇಷ್ಠ ನ್ಯಾಯಾಧೀಶರಿಂದ ಬಂದ ತೀರ್ಪುಗಳಿಗೂ ಟಿಪ್ಪಣಿ ಬರೆಯುತ್ತೇವೆ. ಸಿಕ್ಕಾಪಟ್ಟೆ ಜರೆಯುತ್ತೇವೆ. ನಿರಂಕುಶವಾದಿಗಳಂತೆ ವರ್ತಿಸುತ್ತೇವೆ. ಅರಾಜಕತೆ, ಅನೀತಿ, ವಿಧ್ವಂಸಕ ಕಾರ್ಯಗಳೆಲ್ಲ ವ್ಯವಹರಿಸುತ್ತೇವೆ. ದೇಶದ ವಿಧಾನ ಸಭೆಗಳಲ್ಲಿ ಜಗಳಾಡುತ್ತೇವೆ. ಶಾಲೆಯ ಮಕ್ಕಳು ನಾಚುವಂತಹ ರೀತಿಯಲ್ಲಿ ಪುಂಡಾಟ ಮಾಡುತ್ತೇವೆ. ಇದಲ್ಲ ಏಕೆ!

ನಮಗೆ ಸ್ವರಾಜ್ಯ ಸಿಕ್ಕಿದೆ; ಆದರೆ ಸ್ವಾತಂತ್ರ್ಯ ಸಿಗಲಿಲ್ಲ, ಎಂಬ ಕಪಟ ಮನೋವೃತ್ತಿಯಿಂದ ಮುನ್ನಡೆಯುತ್ತೇವೆ.

ಕಾಂಗ್ರೆಸ್ಸು ಏನು ಮಾಡಿದೆ, ಏನು ಮಾಡುತ್ತಲಿದೆ, ಮುಂದೇನು ಮಾಡಲಿದೆ ಎಂಬ ತಿಳುವಳಿಕೆ ಜನಸಾಮಾನ್ಯರಲ್ಲಿ ಈಗ ಮೂಡಿ ಬಂದಿದೆ. ಆದ್ದರಿಂದಲೇ ಅದು ಇದುವರೆಗೆ ಬದುಕಿದೆ. ಆದ್ದರಿಂದ ಭಾರತೀಯ ಸ್ವಾತಂತ್ರ್ಯ ಸ್ಮರಣಾ ಮಹೋತ್ಸವದ ಸಂದರ್ಭದಲ್ಲಿ ನಾವು ಕಾಂಗ್ರೆಸ್ಸಿನ ಬಹುಮುಖ ಕಾರ್ಯಕಲಾಪ ಪ್ರಗತಿಗಳಿಗಾಗಿ ಹೆಮ್ಮೆ ಪಡಬೇಕಾಗಿದೆ. ಸಾವಿರಾರು ಶ್ರೇಷ್ಠ ಭಾರತೀಯ ನಿಷ್ಠಾವಂತ ದೇಶಪ್ರೇಮಿಗಳು ಕಟ್ಟಿದ್ದ ಕಾಂಗ್ರೆಸನ್ನು ಗದ್ದಿಗೆಯಿಂದ ಉರುಳಿಸುವುದು ಸಾಧ್ಯವಿಲ್ಲ. ಕಾರಣ ಕಾಂಗ್ರೆಸ್ಸಿಗೆ ಸರಕಾರದ ಅಧಿಕಾರ ಪದವಿ ಮಾತ್ರ ಬೇಕಾಗಿಲ್ಲ. ಜನತೆಯ ಸುಖ ಸಂಪದ ಶ್ರೇಯೋಭಿವೃದ್ಧಿ ಮುಖ್ಯವಾಗಿದೆ. ಆದರೆ ಬೇರೆ ಪಕ್ಷಗಳಿಗೆ ಅಧಿಕಾರ ಮಾತ್ರ ಬೇಕಾಗಿದೆ ಅದನ್ನು ಕಾಂಗ್ರೆಸ್ಸಿನಿಂದ ಕಸಿದುಕೊಳ್ಳಲು ನೋಡುತ್ತಿವೆ. ಒಮ್ಮೆ ಅದನ್ನು ಅವರಿಗೆ ಜನರು ಗಿಟ್ಟಿಸಿ ಕೊಟ್ಟರೆ, ಕಾಂಗ್ರೆಸ್ಸು ನೂರು ವರ್ಷಗಳಲ್ಲಿ ಮಾಡಲಾರದ್ದನ್ನೆಲ್ಲ ಅವರು ಮೂರು ವರ್ಷಗಳಲ್ಲಿ ಮಾಡುವೆವು ಎನ್ನುತ್ತಾರೆ. ಜನರೇ ಜಾಗ್ರತರಾಗಿರಿ!.

In the Court of Munsiff,
Belthangady, S. K.

O. S. 45/1966

Between:—

Mahabala Aithala — Plaintiff
and
Muthanna Shetty and others— Defendants

To

1, Smt. Puttakka, D/o Elliappe alias Suvamma and w/o Narayana Shetty. Residing in Mangalore Taluk Bunder Coolies C. P. C. Compound, Shediguddc, Post: Mangalore, S. K.

2. Sri Babu Shetty S/o Elliappe alias Suvamma, Firewood Broker, Residing at Garodi of Kankanady village, Mangalore Taluk, Post: Mangalore, S. K.

Take notice that the above suit filed by the plaintiff against you also, stands posted to 19—8—1966 for your appearence at 11 A. M. in the above court and you can appear on 19-8-1966 at 11 A. M. before the above said Court personally or by an Advocate duly instructed, otherwise the suit will be proceeded with in your absence.

(By order of the Court)

Pulu Narayana Bhat,
Advocate for plaintiff.

Belthangady, 2-8-1966.



ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
P.C.

O. S. 9/1966.

ಬಾಟಿ ಹೆಂಗ್ಸು ಕೂಡಾ —ವಾದಿರು.
ಕುಂಬೆಚ್ಚಿ ಕೂಡಾ —ಪ್ರತಿವಾದಿರು.

2. ಚಂದು ಭಂಡಾರಿ, ಕೋಚು ಭಂಡಾರಿ ಆಳಿಯ, ಪಡುವನ್ನೂರು ಗ್ರಾಮದ ಮಾಬಾಲ ಎಂಬಲ್ಲಿ.

3. ಸೀತು ಹೆಂಗ್ಸು ಬಟಿಯ ಭಂಡಾರಿ ಹೆಂಡ್ತಿ— ಕಾಸರಗೋಡು ತಾಲೂಕು ಕುಕ್ಕಂಜ ಗ್ರಾಮ, Post ನೀರ್ಚಾಲು, 2—3 ನೆ ಪ್ರತಿವಾದರಿಗೆ—

ವಾದಿಯು ಪ್ರತಿವಾದಿರ ಮೇಲೆ ದಾವಾ ಆಸ್ತಿ ಸಮ ಹದಿಮೂರು ಪಾಲು ಮಾಡಿ ಒಂದು ಪಾಲನ್ನು ವಾದಿರಿಗೆ ಕೊಡಿಸುವಂತೆಯೂ, ಉಟ್ಟುವಳಿ ಮಿಗ್ತೆಗೂ ಕೂಡಾ ಮಾಡಿದ ಹಿಸೆ ದಾವೆಯಲ್ಲಿ 2—3ನೆ ಪ್ರತಿವಾದಿರ ಕೃಪೇತು ನೋಟೀಸಿನ ವ್ಯಾದೆ ತಾ. 29—8—1966ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಪ್ರತಿವಾದಿರು ಆ ವಾಯಿದೆ ದಿನ 11 ಘಂಟೆಗೆ ಈ ಕೋರ್ಟು ಮುಂದೆ ತಪ್ಪದೆ ಹಾಜರಾಗಿ ತಮ್ಮ ಆಕ್ಷೇಪಗಳೇನಾದರೂ ಇದ್ದರೆ [illegible] ಮೂಲಕ ಉದಹರಿಸತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಶಿವಾಯಿ ಎಂತ ಮಾಡಿ ಈ ದಾವೆಯನ್ನು ಮುಂದಿನ ತನ್ಖಿಯಿಂದ ತೀರ್ಮಾನಿಸೋದಾಗುವದು ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ—

B. L. N. Rai
Advocate for Plaintiffs

ಪುತ್ತೂರು, ತಾ. 7—8—1966.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. I. A. I 584/66
O.S. 214/66.

ಶಿವಪದಕಣ್ಣಾಯ— ಅರ್ಜಿದಾರ —ವಾದಿ
ವಿಷ್ಣುಮೂರ್ತಿ ಹೆಬ್ಬಾರ—ಎದ್ರಿ-ಪ್ರತಿವಾದಿ

ಪುತ್ತೂರು ತಾಲೂಕು ಕೆಮ್ಮಿಂಜ ಗ್ರಾಮದ ತಾರ್ಕಯೆಂಬಲ್ಲಿರುವ ಲಕ್ಷ್ಮೀನಾರಾಯಣ ಹೆಬ್ಬಾರರ ಮಗ ವಿಷ್ಣುಮೂರ್ತಿ ಹೆಬ್ಬಾರರಿಗೆ

ಮೇಲ್ಕಂಡ ಕೋರ್ಟಿನಲ್ಲಿ ವಾದಿಯು, ನಿಮ್ಮಿಂದ ಬರತಕ್ಕ ಆವೇಜು ಬಾಬ್ತು ದಾವೆ ಮಾಡಿ ನಿಮ್ಮ ಮುಚ್ಚೃತಿಗೆ ತಾ. 26—8—66ಕ್ಕೆ ಇದೆ. ಆ ದಿವಸ, ನೀವು, ವಕೀಲರ ಮುಖಾಂತರ ಹಾಜರಾಗಿ, ಉದಹರಿಸಲು ತಪ್ಪಿದಲ್ಲಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾದೀತೆಂದು ಈ ಮೂಲಕ ತಿಳಿಸಿದೆ.

(By order)

ವೆಂಕಟ್ರಮಣ ಬಿ. ಯನ್.
ವಾದಿ ಕಡೆ ವಕೀಲ.

Puttur, 3—8—66.

ಕೃಷಿಕರ ಸೇವೆಯಲ್ಲಿ

ರೂರಲ್ ಎಗ್ರಿಕಲ್ಚರಲ್ ಸಿಂಡಿಕೇಟ್

ಪ್ರಮುಖ ಸರಬರಾಯಿದಾರರು

• • •

FACT ರವರ ಭತ್ತ, ತೆಂಗು, ಕಂಗು, ಮೆಣಸು, ತರಕಾರಿ ಮತ್ತಿತರ ಹಣ್ಣುಹಂಪಲುಗಳ ಕೃಷಿಗೆ ಯೋಗ್ಯವಾದ ರಾಸಾಯನಿಕ ಗೊಬ್ಬರದ ಸಮತೂಕದ ಮಿಶ್ರಣಗಳು.

SHAW WALLACE ರವರ ಸಸ್ಯ ಸಂರಕ್ಷಣಾ ಔಷಧಿಗಳನ್ನು ಸಿಂಪಡಿಸುವ ಯಂತ್ರೋಪಕರಣಗಳು.

GOVARDHAN ರವರ ನೀರಾವರಿಗಾಗಿ ಉತ್ತಮ ತರದ ಪಂಪು ಸೆಟ್‌ಗಳು–
$\frac{1}{4}$ H. P. ಯಿಂದ 20 H. P. ವರೆಗೆ

MEASUREALL ರವರ 5 H. P. ಡಿಸೆಲ್ ಇಂಜಿನ್.

SANDOZ ರವರ ವಿವಿಧ ರೀತಿಯ ಸಸ್ಯ ಸಂರಕ್ಷಣಾ ಔಷಧಿಗಳು.

CHELSEA ರವರ ಜಾನುವಾರು ಹಾಗೂ ಕೋಳಿಗಳ ಔಷಧಿ ಮತ್ತು ಪೌಷ್ಟಿದಾಯಕ ಆಹಾರ ವಸ್ತುಗಳು.

ಹಾಗೂ

ಇನ್ನಿತರ ಕೃಷಿ ಸಲಕರಣೆಗಳಿಗೆ ವಿಶ್ವಾಸಾರ್ಹ ಸಂಸ್ಥೆ

ರೂರಲ್ ಎಗ್ರಿಕಲ್ಚರಲ್ ಸಿಂಡಿಕೇಟ್ (ಪ್ರೈ) ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ *Phone:* **243**

ಬ್ರಾಂಚ್ ಆಫೀಸು: ಕುಂದಾಪುರ

ಸತ್ಯಧನ

ಬಡವರ ದೇವನೆ ಬಡಕಲು ಕಾಯನೆ,
ನಡೆಸೈ ಭಾರತವನೆ ಬಂದು,
ಅಡಿಯುಡಿಯನು ತವ ನುಡಿಯಿಂದದಳಿಡೆ,
ಕೊಡು ಸನ್ಮತಿಯನೆ ನೀನಿಂದು;
ಸತ್ಯದ ಶಾಂತಿಯ ಸತ್ಪಥ ನಿನ್ನದು,
ಇತ್ತಿದೆ ಜಗಕಿದೊ ನವ ಕ್ರಾಂತಿ,
ಸತ್ಯಾಗ್ರಹದಲಿ ಸತ್ಯದ ಸಾಧನೆ,
ಗೈಯುತ್ತೀಟ್ಟಿಹೆ ಬರಿ ಭ್ರಾಂತಿ;
"ದೊರೆಗಳ ಎದುರಿನ ಕುರಿ" ನೀನಾದರು
ಮರಣಕ್ಕಂಜದೆ ಶ್ರಮಿಸಿದೆಯೋ;
"ಅರೆ ಮಂಗಳನು ಬರಿತಿರುಕನು" ಎನ್ನುವ
ನಿಂದೆಗೆ ಬೆದರದೆ ಗೆದ್ದಿಹೆಯೋ?;
ಕರ್ಮಾತ್ಮನೆ; ಧರ್ಮಾತ್ಮನೆ ಸಾರಿಹೆ;
ಪರಮಾತ್ಮನ ದಿವ್ಯೈಕ್ಯತೆಯ;
ಧರ್ಮ ಗ್ರಂಥಗಳೆಲ್ಲವ ಪರಿಕಿಸುತ
ಸಾರಿದೆ ತೋರಿದ ಐಕ್ಯತೆಯ;
ಸರಳತೆಗಂಡೆ ಧರೆಯಲಿ ಜೀವಿಸಿ
ಒರೆದೆಯೊ ನೀ ಹೊಸ ಪಾಠವನು;
ಧರೆಯಲಹಿಂಸೆಯ ಮಹಿಮೆಯ ಸಾರುತ
ಸೆಳೆದೆಯೊ ಜನತೆಯ ನೋಟವನು;
ದೇಶದಧೋಗತಿಯನ್ನು ಸುಧಾರಿಸೆ
ದಲಿತರ ನೊಯ್ದೆಯೊ ಉನ್ನತಿಗೆ;
ಕ್ಲೇಶನದಿಹುದೇ ರೋಷವು ಬಹುದೇ
ಈಶನ ವರವಹ ತವಮತಿಗೆ;
ವಿಜ್ಞಾನದ ಸುಜ್ಞಾನದ ಸ್ವಾರ್ಥಕೆ
ನವೆಸುತಲಿಹರೀ ಜಗದ ಜನ;
ಸುಜ್ಞಾನವ ತವ ಅಜ್ಞಾತದ ನಡೆ
ಮಾಡಿಸಲವರಲ ಸತ್ಯಧನ;

— ಶ್ರೀ ಮಂಜಿಬೈಲು ಭಾಸ್ಕರ
ಭಂಡಾರಿ, ಮಂಜೇಶ್ವರ.

"ಬಡವ"

ಕಾಣದ, ಕೇಳದ ತಾಣದಿ ಕೂಗಿದೆ
ಕೂಗಾಗಿದೆ ಬಡವ,
ಹೊಟ್ಟೆಗೆ ಬಟ್ಟೆಗೆ ಗಿಟ್ಟಿಸಲಾರದೆ
ತನು ನೀಗುವೆ ತೃಣವು!
ಸಿರಿವಂತನ ಸಿರಿಸಂಪದ ಮಿಗಿಸಿದೆ
ವೇತನ ನಿನಗೆಷ್ಟು,
ಬಹು ಕಾಲದ ಮೊದಲಿದ್ದುದೆ ಪರಿಮಿತಿ
ಎರಡು ಎಳ್ಳಿನಷ್ಟು.
ನಾಲ್ಕಾರಿರುವರು ಮನೆಯಲಿ ಮಕ್ಕಳು
ಪಡಿ ಭತ್ತವು ಕೂಲಿ,
ಅಂದಿನ ದುಡಿಮೆಯೆ ಅಂದಿಗೆ ಸಾಲದು
ತರಬೇಕಿದ್ದುದು ಖಾಲಿ.
ಅಳಿನ ಹಾಲಾಹಲವನು ತಿಳಿಯದ
ಅನುಕೂಲತೆಯೇಕೆ,
ಅಭಿಮಾನದ ಜೀವನ ಸಾಗಿಸಲಾಗದ
ಬಾಳಿದು ನಿನಗೇಕೆ?
ನೀನೆಂದಾದರು ಮನಮೆಚ್ಚುವ ತೊಡು
ಗೆಯನುಡ ಬಯಸಿಲು,
ದೊರಕಿದ್ದುವೆ ನವ ಉಡುಪುಗಳೆಂದಿಗು
ನಿಂತು ಬಡಕಲು ಬಾಳು!
ಆಶೋತ್ತರಗಳ ಸೊನ್ನೆಯ ಸುಳಿಯಲಿ
ಸುರುಳಿಸಿ ಬದಿಗಿರಿಸು,
ಕನ್ನಡಿಯೊಳಗಿನ ಕನಸಿನ ಕಟ್ಟನು
ಕಂಡರು ಕಡೆಗಣಿಸು.
ಎಲ್ಲಾ ಭರವಸೆ, ಕನಿಕರ ಹಾವಸೆ
ಕೈಜಾರುವ ಮಾತು,
ಎಲ್ಲಾ ಕಾವಲಿಯೊಳಗಡೆ ಮಾಗುತ
ದೋಸೆಗೆ ಇವೆ ತೂತು.

ಕವಿ: ಅಬ್ದುಲ್ ರಹಿಮಾನ್,
ಅರಸಳಿಕೆ.

ಗಾಂಧಿ ಉವಾಚ

ಪ್ರೀತಿಯು ಎಂದೂ ಬೇಡುವುದಿಲ್ಲ, ನೀಡುತ್ತದೆ; ಪ್ರೀತಿಯಿದ್ದಲ್ಲಿಯೇ ದೇವರ ಸಾನಿಧ್ಯ.

○ ○ ○

ಹೆಂಡತಿ ಗಂಡನ ಗುಲಾಮಳಲ್ಲ. ಸಂಗಾತಿ, ಸಹಕಾರಿಣಿ, ಅವನ ಸುಖ, ದುಃಖಗಳ ಸಮಭಾಗಿನಿ. ತನಗೆ ಬೇಕಾದ ಮಾರ್ಗವನ್ನು ಕ್ರಮಿಸಲು ಗಂಡನಷ್ಟೇ ಆಕೆ ಸ್ವತಂತ್ರಳಿದ್ದಾಳೆ.

○ ○ ○

ಪೂಜೆ ಅಥವಾ ಪ್ರಾರ್ಥನೆಯು ವಾಕ್ ಸಾಮರ್ಥ್ಯದ ದ್ಯೋತಕವಾಗಿರದೆ; ಒಟಗುಡುವ ಗೌರವವಾಗಿರದೆ, ಹೃದಯದಿಂದ ಪುಟಿದು ಬರುವಂತಾದ್ದಾಗಿರಬೇಕು.

○ ○ ○

ಭೀತಿಯಿರುವಲ್ಲಿ ಧರ್ಮವಿಲ್ಲ.

○ ○ ○

ದೇವರಲ್ಲಿ ವಿಶ್ವಾಸವಿಡುವುದೇ ಎಲ್ಲಾ ಧರ್ಮಗಳ ಮೂಲವಾಗಿದೆ.

○ ○ ○

ಹಿಂದು ಧರ್ಮವು ಬೆಲೆಯಿಲ್ಲದ ರತ್ನಗಳಿಂದ ತುಂಬಿದ ಅಪಾರ ಸಾಗರದಂತಿದೆ.

○ ○ ○

ವಸ್ತುಗಳ ವಿಷಯವಾಗಿಯಷ್ಟೇ ಅಲ್ಲದೆ ವಿಚಾರಗಳಲ್ಲಿ ಸಹ ಅಪರಿಗ್ರಹವನ್ನು ಪಾಲಿಸಬೇಕು.

○ ○ ○

ನಮ್ಮ ಅಸ್ತಿತ್ವದ ವಿಷಯದಲ್ಲಿ ನಾವು ಹೇಗೆ ವಾದ ವಿವಾದ ಮಾಡುವುದಿಲ್ಲವೋ ಹಾಗೆಯೇ ದೇವರ ಅಸ್ತಿತ್ವದ ವಿಷಯದಲ್ಲೂ ವಾದ ವಿವಾದ ಮಾಡಬೇಡಿರೆಂದು ನನ್ನ ಸೂಚನೆ.

○ ○ ○

ರಾಷ್ಟ್ರೀಯ ಶಬ್ದ ಕೋಶದಲ್ಲಿ ಹೇಡಿ ಶಬ್ದಕ್ಕೆ ಸ್ಥಾನವೇ ಇಲ್ಲ.

○ ○ ○

ಪ್ರತಿಯೊಬ್ಬರೂ ತಮ್ಮ ಹಕ್ಕುಗಳ ಬಗ್ಗೆ ಆಗ್ರಹಪಟ್ಟು ಕರ್ತವ್ಯ ಮರೆತರೆ ಸಂಪೂರ್ಣ ಗೊಂದಲ ಮತ್ತು ಅವ್ಯವಸ್ಥೆಯ ಪರಿಸ್ಥಿತಿಯುಂಟಾಗುವುದು.

○ ○ ○

ಹಿಂಸಾತ್ಮಕ ವೈರಿಗೆ ಅನಿಷ್ಟ ಬಯಸದೆ ಸಂತೋಷದಿಂದ ಮೃತ್ಯುವನ್ನಪ್ಪಿ ವೈರಿಯ ಹೃದಯ ಪರಿವರ್ತನ ಮಾಡಿದ ಹಲವು ಉದಾಹರಣೆಗಳು ಇತಿಹಾಸದಲ್ಲಿವೆ.

○ ○ ○

ಅಂತರ್ಜಾತೀಯ ಭೋಜನ, ವಿವಾಹ ಇವು ಸ್ವಾತಂತ್ರ್ಯವೆಂದು ನೀವು ಭಾವಿಸುವುದಾದರೆ ತಪ್ಪು, ನೀವು ಸತ್ಯ ಅಹಿಂಸೆಯಲ್ಲಿ ನಂಬಿಕೆಯಿಡಬೇಕು. ಸತ್ಯ ಮತ್ತು ಅಹಿಂಸೆಯ ಮಾರ್ಗದಿಂದ ಮಾತ್ರ ರಾಮರಾಜ್ಯ ಸಾಧ್ಯ.

○ ○ ○

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.



PHONE 247

SREE KRISHNA MOTOR SERVICE,

HASSAN (MYSORE STATE)

BRANCHES: KADUR AND BIRUR

After arrival of all important Trains, we run the following routes with LUXURIOUS type buses for the convenience of Travelling Public, without EXCHANGE AT CHARMADY-GADY.

I. BIRUR TO MANGALORE & BACK

L.	BIRUR	12.00 NOON	R	MANGALORE	8.05 P. M.
L.	MANGALORE	05.45 A. M.	R.	BIRUR	1.30 P. M.

II. BIRUR TO MANGALORE & BACK (EXPRESS)

L.	BIRUR	4.10 A. M.	R.	MANGALORE	11.15 A. M.
L.	MANGALORE	4.00 P. M.	R.	BIRUR	10.55 P. M.

III. BIRUR TO UDIPI VIA DHARMASTALA & BACK

L.	BIRUR	5.20 A. M	R	UDIPI	05.55 P. M.
L.	UDIPI	9.00 A. M.	R.	BIRUR	08.50 P. M.

and gives Connection to all important Trains.

M. Krishna,
Proprietor,
SREE KRISHNA MOTOR SERVICE,
HASSAN.

NAVAYUGA
18th August, 1966

REGD. No. B G. 178
LICENCE No. 31
Licensed to Post without Prepayment



ಪ್ರಾಚೀನ ವಾಸ್ತುಶಿಲ್ಪಗಳು ನಾಡಿನ ಸಾಂಸ್ಕೃತಿಕ ವೈಭವದ ಕುರುಹುಗಳು.
ವ್ಯಾಪಕವಾಗಿ ಹಬ್ಬಿರುವ ಬ್ಯಾಂಕಿನ ಶಾಖೆಗಳು ಆರ್ಥಿಕ ಭದ್ರತೆಯ ಹೆಗ್ಗುರುತುಗಳು

ಸಿಂಡಿಕೇಟ್ ಬ್ಯಾಂಕ್

ಆಂಧ್ರ, ಗೋವಾ, ಗುಜರಾಥ, ಕೇರಳ, ಮದರಾಸು, ಮಹಾರಾಷ್ಟ್ರ, ಮೈಸೂರು, ದೆಹಲಿ, ಪಶ್ಚಿಮ ಬಂಗಾಳ— ಈ ರಾಜ್ಯಗಳಲ್ಲಿ **210**ಕ್ಕೂ ಮಿಕ್ಕಿದ ಶಾಖೆಗಳ ಮೂಲಕ ಬ್ಯಾಂಕಿಂಗ್ ಸೇವೆಯನ್ನು ಕೈಗೊಳ್ಳುತ್ತಿದೆ.

ಕಳೆದ ಏಳು ತಿಂಗಳಲ್ಲಿ ಬ್ಯಾಂಕು ತೆರೆದ ಏಳು ಶಾಖೆಗಳು.	ಸದಾಶಿವ ಘಡ್ (ಉತ್ತರ ಕನ್ನಡ), ಚೀಟಿಮ್ (ಗೋವಾ), ದೆಹಲಿ-ಚಾಂದಿನಿ ಚೌಕ್, ಮೈಸೂರು-ವಿ.ವಿ. ಮೊಹಲ್ಲಾ, ವಂಜಿಮ್ (ಗೋವಾ), ಮಧುರೈ, ಮತ್ತು ಅಹ್ಮದಾಬಾದ್.
ಬ್ಯಾಂಕು ಸದ್ಯವೇ ತೆರೆಯಲಿರುವ ಹೊಸ ಶಾಖೆಗಳು.	ವಿಜಯನಗರಂ, ನಿಜಾಮಾಬಾದ್, ವಾರಂಗಲ್, ಯಾಡಿಕಿ, ಬೆಂಗಳೂರು — ಎಚ್. ಎ. ಎಲ್., ಕೋಟೆಕಾರ್...............

ವ್ಯಾಪಕ ಪ್ರಮಾಣದ ಪರಿಪೂರ್ಣ ಆರ್ಥಿಕ ಸೇವೆಯೇ
ಸಿಂಡಿಕೇಟ್ ಬ್ಯಾಂಕಿನ ಮೂಲಸೂತ್ರ.



ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸ್ಥಾಪನೆ: 1925

ಸಾಧನ ಸಂಪತ್ತು: ರೂ. **80** ಕೋಟಿ. ತೆತ್ತ ಭಂಡವಾಳ ಮತ್ತು ಕಾದಿಟ್ಟ ನಿಧಿ: ರೂ. **2** ಕೋಟಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

25-8-1966

NAVAYUGA

೨೦ ಪೈಸೆ

ಸಹಕಾರ ರೈತನ ಕಲ್ಪವೃಕ್ಷ

ದೇಶದಲ್ಲಿ ಹರಡಿವೆ ಸಹಕಾರಿ ಸಂಸ್ಥೆಗಳು. ಅವುಗಳ ಪೂರ್ಣ ಪ್ರಯೋಜನವನ್ನು ರೈತರು ಮಾಡಿಕೊಳ್ಳಬೇಕು. ತಮಗೆ ಬೇಕಾದಂತೆ ಸಂಘವನ್ನು ರೂಪಿಸುವ ಅಧಿಕಾರ ಸದಸ್ಯರಿಗೇ ಇರುವಾಗ, ವ್ಯರ್ಥ ಟೀಕಿಸುತ್ತ ಕುಳಿತರೆ ಪ್ರಯೋಜನವೇನು?

ಶ್ರೀ ಶೀತರ್ಪಾಡಿ ವಿಲಿಯಂ ಪಿಂಟೋ

ಸ್ವತಂತ್ರ ಭಾರತದ ಪ್ರಧಾನಿ ರೈತನ ಮಗನಾಗಬೇಕೆಂದು ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಆಶಯವಾಗಿತ್ತು. ಆದರೆ ಸ್ವಾತಂತ್ರ್ಯ ಪಡೆದ ೧೮ ವರ್ಷಗಳ ನಂತರ ಚಿತ್ರ ಭೀಕರವಾಗಿದೆ. ಆ 'ಪ್ರಧಾನಿ' ರೈತನಿಗೆ ಹೊಟ್ಟೆ ತುಂಬ ಉಣ್ಣಲು ಅನ್ನವಿಲ್ಲ, ಪೌಷ್ಟಿಕ ಆಹಾರವಿಲ್ಲ, ಉಡಲು ಬಟ್ಟೆಯಿಲ್ಲ. ಆ ಬಡಕಲು ಕೋಲು ಶರೀರ ಚಳಿ, ಮಳೆ ಬಿಸಿಲು ಹೇಗೆ ತಡೆದೀತು? ಹಗಲಿರುಳು ಹೊಲಕ್ಕೆ ಹೋಗಿ ಆತ ಹೇಗೆ ದುಡಿದಾನು? ಈ ಬಾಡಿ, ಒಣಗಿ, ಸೊರಗಿ, ಚಿಂತೆಯಿಂದ ಸುಕ್ಕುಕಟ್ಟಿ ಹೋದ ನೇಗಿಲ ಯೋಗಿಯ ಕೈಯಲ್ಲಿ ಕೃಷಿ ಹೇಗೆ ಏಳಿಗೆಯಾದೀತು? ಭಾರತದ ರೈತನೆಂದರೆ ಆದಿಶೇಷನಂತೆ—ಆದಿಶೇಷ ಯಾವ ರೀತಿಯಲ್ಲಿ ಭೂಮಿಯ ಭಾರ ಹೊತ್ತು ಬಳಲಿ ಗಾಳಿ ಸೇವಿಸಿ ಬದುಕುತ್ತಾನೋ ಹಾಗೇ ಈ ರೈತ ರಾತ್ರಿ ಹಗಲು ದುಡಿದು, ಸೊಪ್ಪು ರಾಗಿ ಗಂಜಿ ತಿಂದು ಬದುಕುತ್ತಾನೆ. ಸರ್ವಜ್ಞನೇ ಹೇಳುವಂತೆ "ರೈತರು ದುಡಿಯುವುದು ಚೋಟುದ್ದ ಹೊಟ್ಟೆಗೆ ಮತ್ತು ಗೇಣುದ್ದ ಬಟ್ಟೆಗೆ". ಮದುಮಗನನ್ನು ಬಿಟ್ಟು ಮದುವೆಗೆ ಹೋದ ಹಾಗೆ ಒಕ್ಕಲಿಗನ ಸಂಕಷ್ಟಗಳನ್ನು ಪರಿಹಾರ ಮಾಡದೆ—ಬಂಡವಾಳಗಾರರ ದವಡೆಯಿಂದ ಆತನನ್ನು ತಪ್ಪಿಸದೆ, ಅವನ ಮಕ್ಕಳಿಗೆ ವಿದ್ಯಾಭ್ಯಾಸ, ಇರುವ ಭೂಮಿಯ ಭದ್ರತೆ, ಕಡಿಮೆ ಗೇಣಿ, ಉತ್ತಮ ಪೌಷ್ಟಿಕ ಆಹಾರವನ್ನು ಒದಗಿಸದೆ ಒಕ್ಕಲುತನದ ಸುಧಾರಣೆ ಹೇಗೆ ಆದೀತು?

"ಭಾರತ ಸಂಪತ್ತಿನಿಂದ ತುಂಬಿ ತುಳುಕಾಡುತ್ತಿದ್ದ ರಾಷ್ಟ್ರ, ಜೇನು ಹಾಲುಗಳು ಹರಿಯುತ್ತಿದ್ದ ರಾಷ್ಟ್ರವೆಂದು" ಇತಿಹಾಸದಲ್ಲಿ ಓದಿದಾಗಲೆಲ್ಲ ಅದೊಂದು ಕನಸೆಂದು ಭಾಸವಾಗುತ್ತದೆ. ನಮ್ಮ ರಾಷ್ಟ್ರೀಯ ಆದಾಯ ತಲಾ ಒಂದರ ೪೭ ಪೈಸೆ ಎಂದಾದರೆ ನಾವು ಎಷ್ಟೊಂದು ಹಿಂದುಳಿದಿದ್ದೇವೆ? ಪಾಶ್ಚಾತ್ಯ ರಾಷ್ಟ್ರಗಳೊಡನೆ ನಮ್ಮ ರಾಷ್ಟ್ರವನ್ನು ಹೋಲಿಸಿ ನೋಡುವಾಗ್ಯೆ ಭಯಂಕರ ವ್ಯತ್ಯಾಸ ಎದ್ದು ಕಾಣುತ್ತಿದೆ.

ನಮ್ಮ ರಾಷ್ಟ್ರದ ಬಡತನವನ್ನು ಬಡಿದೋಡಿಸುವ ಕಠಾರಿ 'ಸಹಕಾರ'. ರಾಷ್ಟ್ರದ ಸಮಸ್ಯೆಗಳಾದ ಬಡತನ, ಆಹಾರದ ಕೊರತೆ, ಅಜ್ಞಾನ, ನಿರುದ್ಯೋಗಗಳಿಂದ ಬಡ ರೈತನನ್ನು ಪಾರುಗೊಳಿಸಿ ಆತನ ಅಂಧಕಾರಮಯ ಜೀವನದಲ್ಲಿ ದಾರಿ ತೋರಿಸುವ ದಾರಿದೀಪ 'ಸಹಕಾರ'ವಾಗಿದೆ. 'ಸಹಕಾರ' ಎಂಬ ಪದಕ್ಕೆ ಒಟ್ಟುಗೂಡಿ ಕೆಲಸ ಮಾಡುವುದು ಎಂದರ್ಥ. 'ನನಗೆ ನೀನಾಗು ನಿನಗೆ ನಾನಾಗುವೆನು' ಎಂಬುದೇ ಸಹಕಾರದ ಮೂಲತತ್ವ. ಜೇನುನೊಣಗಳು ಹನಿಹನಿಯಾಗಿ ತಂದ ಸಿಹಿ ಮಕರಂದವನ್ನು ಒಟ್ಟುಗೂಡಿಸಿ ಅತ್ಯಮೋಘವಾದ ಬೆಲೆ ಬಾಳುವ ಜೇನನ್ನು ತಯಾರಿಸುತ್ತವೆ. ಮಾನವನು ಮಾನವನಾಗಿ ಹುಟ್ಟಿ, ಕಷ್ಟದಲ್ಲಿರುವ ತನ್ನ ಸಹೋದರನಿಗೆ ಸಹಾಯ ಮಾಡದಿದ್ದಲ್ಲಿ—ಜೇನುನೊಣಗಳಿಗಿಂತಲೂ 'ಕೀಳು' ಎಂದು ಪರಿಗಣಿಸಲ್ಪಡುವುದರಲ್ಲಿ ಸಂದೇಹವಿಲ್ಲ.

ಪ್ರಪಂಚದಲ್ಲಿ ಅತಿ ಸಣ್ಣ ರಾಷ್ಟ್ರಗಳಲ್ಲೊಂದು ಡೆನ್ಮಾರ್ಕ್ ದೇಶ— ಜನಸಂಖ್ಯೆ ಕೇವಲ ೩೫ ಲಕ್ಷ. ಜರ್ಮನಿಂದ ಯುದ್ಧದಲ್ಲಿ ಸೋತು ತನ್ನ ಸಂಪದ್ಭರಿತ ಭೂಮಿಯನ್ನು ಕಳಕೊಂಡಿತು. ಉಳಿದುದು ನಿಸ್ಸಾರ ಭೂಮಿ. ಡೇನಿಷ್ ಪ್ರಜೆಗಳು ಇದರಿಂದ ಧೃತಿಗೆಡಲಿಲ್ಲ— ವೀರಾವೇಶದಿಂದ ಸಹಕಾರ ಮಂತ್ರವನ್ನು ಜಪಿಸಿದರು. ನಿಸ್ಸಾರ ಭೂಮಿ ಬಂಗಾರದಂತಹ ಬೆಳೆಯನ್ನೇ ಕೊಟ್ಟಿತು. ಜಗತ್ತಿನ ಜನ ಈ ಪ್ರಗತಿ ನೋಡಿ ಉಗುರು ಕಚ್ಚಬೇಕಾಯಿತು. ಈಗ ಅಲ್ಲಿ ೧೧,೦೦೦ ಸಹಕಾರ ಸಂಘಗಳಿದ್ದು ೧೭ ಲಕ್ಷ ಜನರು ಸದಸ್ಯರಾಗಿದ್ದಾರೆ. ಬೆಳೆಯ ಉತ್ಪತ್ತಿ ಮಾರಾಟದ ವ್ಯವಸ್ಥೆ ಸಹಕಾರಿ ರೀತಿಯಿಂದಲೇ ನಡೆಯುತ್ತಿದೆ. ಚಿಕ್ಕ ರಾಷ್ಟ್ರ ಪಾಲೆಸ್ಟೈನ್ ಕೂಡಾ ಸಹಕಾರ ತತ್ವದ ಟೀಕಾಗಾರರ ಬಾಯಿಯನ್ನು ಮುಚ್ಚಿಸಿಬಿಟ್ಟಿತು. ಸಹಕಾರ ತತ್ವ ಅಷ್ಟು ಸಣ್ಣ ರಾಷ್ಟ್ರಗಳಲ್ಲಿ ಜಯಭೇರಿ ಹೊಡೆದಿರುವಾಗ ೪೪ ಕೋಟಿ ಪ್ರಜೆಗಳಿರುವ ಭಾರತದಲ್ಲಿ ಅದು ಸೋಲುವುದಾದರೂ ಹೇಗೆ?

"ಭಾರತದ ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲೇ ಬೆಳೆದು ಸಾಲದಲ್ಲೇ ಸಾಯುವವನೆಂದು ಪಾಶ್ಚಾತ್ಯ ಲೇಖಕನೊಬ್ಬ ಹೇಳಿದ ಮಾತು ನೂರಕ್ಕೆ ನೂರು ಸತ್ಯ, ಬಡತನದ ಫಲ ಸಾಲ. "ಹಳ್ಳಿಯಲ್ಲಿ ಬಂಡವಾಳಗಾರರು, ವ್ಯಾಪಾರಿಗಳೆಂದರೆ ರೈತರಿಗೆ ಕಷ್ಟಕಾಲದಲ್ಲಿ ಮರುಭೂಮಿಯಲ್ಲಿರುವ ಜಲಾಶಯದಂತೆ" 'ಹೊಲಿ' ಪದ್ಧತಿ ಜಾರಿ ಇರುವಲ್ಲಿ ರೈತ ೩-೪ ತಿಂಗಳುಗಳ ವ್ಯಾದಿಗೆ ಮುಡಿ ಅಕ್ಕಿಗೆ ಒಂದೂವರೆ ಮುಡಿ ಅಕ್ಕಿ ಧನಿಕನಿಗೆ ಮರುಪಾವತಿ ಮಾಡಬೇಕಾಗಿದೆ. ಬಡ್ಡಿ ದರ ಸೇ. ೧೦೦ - ೧೫೦. ಇನ್ನು ಅವನ ಬೆಳೆಯ ವಿಷಯ. ಹಸನಾಗಿ ಬಿತ್ತಿ ಉತ್ತಮ ಬೆಳೆ ಪಡೆದ ಒಬ್ಬ ರೈತನು ತನ್ನ ಬೆಳೆಯನ್ನು ಮಾರಿದಾಗ ಆತನಿಗೆ ಅತಿ ಕಡಿಮೆ ಹಣ ಸಿಕ್ಕುತ್ತದೆ. ಅಗ್ಗದರದಲ್ಲಿ ಮಾರಬೇಕಾಗುತ್ತದೆ. ಮಾರದಿದ್ದರೆ ಸಾಲಗಾರರಿಂದ ಪಾರಾಗುವುದು ಹೇಗೆ? 'ಬೆಳೆವವನಿಗಿಲ್ಲ, ಬೆಳೆಸಿಕೊಂಬವನಿಗಿಲ್ಲ; ಗಳಿಸುವನು ನಡುವಿನವನು' ಎಂಬಂತೆ ವ್ಯಾಪಾರಿಗಳೇ ಇವರಿಂದ ಹೆಚ್ಚಿನ ಲಾಭಗಳಿಸುತ್ತಾರೆ. ನಮ್ಮ ದೇಶದ ಪ್ರತಿಯೊಬ್ಬ ರೈತನ ಸಂಸಾರಿ ವರಮಾನ ವರ್ಷಕ್ಕೆ ಕೇವಲ ೮೫ ರೂಪಾಯಿ ಆದರೆ ಅಮೇರಿಕದ ರೈತನ ಸಂಸಾರಿ ವರಮಾನವು ೧೭೫೫ ರೂ. ವ್ಯಾ ಆಗಿರುತ್ತದೆ. ಈ ದೇಶಗಳು ಸಹಕಾರ ತತ್ವವನ್ನು ಚೆನ್ನಾಗಿ ಅರ್ಥ ಮಾಡಿವೆ. ಸಿದ್ಧಿ ಪಡೆದಿವೆ.

ಈಗೀಗ ಎಲ್ಲ ಹಳ್ಳಿಗರಿಗೂ ಅನುಕೂಲವಾಗುವಂತೆ ಅಲ್ಲಲ್ಲಿ ಸಾಲ ಕೊಡುವ ಸಹಕಾರ ಸಂಘಗಳು ಸ್ಥಾಪಿಸಲ್ಪಟ್ಟು ರೈತರು ಅವುಗಳ ಲಾಭ ಪಡೆಯುತ್ತಾರೆ. ಅಗತ್ಯ ಇರುವವರಿಗೆ ಸಾಲ ಸಿಗದೆ— ಪ್ರಭಾವವಿರುವ ವ್ಯಕ್ತಿಗಳೇ ಇಂತಹ ಸಹಕಾರ ಸಂಸ್ಥೆಗಳ ಪ್ರಯೋಜನ ಪಡೆಯುತ್ತಾರೆ ಎಂಬ ದೂರು ಕೇಳಿ ಬರುತ್ತದೆ. ಇದು ಹೌದಾದರೆ— ಸಹಕಾರಿ ಸಂ

(ಹನ್ನೊಂದನೇ ಪುಟ ನೋಡಿರಿ)

ಪ್ರಕಟಣೆ

ಶಾಬಾದಿನಲ್ಲಿರುವ ತೆಕ್ಕಟ್ಟೆ ವೆಂಕಟ್ರಮಣ ಕಲ್ಕೂರರ ಮಗ ರಾಮದಾಸ ಕಲ್ಕೂರರೀಗೆ ಕೋಟೇಶ್ವರ ವೆಂಕಟ್ರಮಣ ಐತಾಳರ ಮಗ ಮಂಜುನಾಥ ಐತಾಳನು ತಿಳಿಸುವುದೇನೆಂದ್ರೆ ನೀವು ನನ್ನಿಂದ ತಾ. 14-8-1955ರಲ್ಲಿ ಬಾಡಿಗೆ ಪಡದ ಬಾಬ್ತು ಹೋಟೆಲ್ ಕಟ್ಟಡಗಳು, ಮನೆ ಕಟ್ಟಡ, ಪಟ್ಟಿ, ತೆಂಗಿನ ಮರ 2 ಹಲಸಿನ ಮರ 1 ಸಹಾ ಶ್ರೀನಿವಾಸ ಕಲ್ಕೂರರು, ಅನಂತಯ್ಯ, ನಾರಾಯಣ ಸೆಟ್ಟಿಗಾರಗೆ ಕೂಡಾ ಅಕ್ರಮವಾಗಿ ಕೊಟ್ಟಿರುತ್ತೀರಿ ಮತ್ತು ಸದ್ರಿ ಸೊತ್ತುಗಳು ನನಗೇನೇ ಅವಶ್ಯ ಇದ್ದುವುದ್ರಿಂದ ಅವುಗಳನ್ನು 30-9-1966ಕ್ಕೆ ಸರಿಯಾಗಿ ಬಾಡಿಗೆ ಬಾಕಿ ಸಮೇತ ನನ್ನ ಸ್ವಾಧೀನ ಬಿಟ್ಟುಕೊಡ ತಕ್ಕದ್ದು. ತಪ್ಪಿದ್ರೆ ನಿಮ್ಮ ಮೇಲೆ ಅಗತ್ಯವುಳ್ಳ ಸಿವಿಲ್ ವವಹಾರ ನಡಿಸುತ್ತೇನೆ. ನಿಮ್ಮ ಖರ್ಚು ಸಹಿಸಿಕೊಂಡು ನನ್ನ ಎಲ್ಲಾ ಖರ್ಚು ನಷ್ಟ ತೆರಬೇಕಾದೀತು.

K. Manjunatha Aithala,
ಕೋಟೇಶ್ವರ, 16-8-1966

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
O.S. No.120/1966

ರುಕ್ಮಿಣಿ ಶೆಟ್ತಿ ಸಹಾ —ವಾದಿರು
ಮತ್ತು
ಹೊಂನಯ್ಯ ಶೆಟ್ಟಿ ಕೂಡಾ —ಪ್ರತಿವಾದಿರು
ಇವರೊಳಗೆ

ಈ ಮೂಲಕ ಸದ್ರಿದಾವೆಯ 2ನೇ ಪ್ರತಿವಾದಿ ಬೋಜ ಶೆಟ್ಟಿ—ಪದ್ದು ಶೆಟ್ತಿ ಮಗ್ಗ, ಉಡ್ಪಿ ತಾಲ್ಕು ನಂದಿಕೂರು ಗ್ರಾಮದ ಕಂಕಣಗುತ್ತು Post ನಂದಿಕೂರು, ಇವರಿಗೆ ಯೀ ಮೂಲಕ ತಿಳಿಸುವದೇನಂದ್ರೆ-

ವಾದಿರು ನಿಮ್ಮ ಮೇಲೆ ಹೂಡಿದ ಮೇಲಿನ ದಾವಾ ನಿಮ್ಮ ಹಾಜರಿ ಬಗ್ಗೆ ತಾರೀಕು 8-9-66ಕ್ಕೆ ಇಟ್ಟಿದೆ, ಸದ್ರಿ ದಿನ ಬೆಗ್ಗೆ 11 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿವಾಯಿ ಮಾಡಿ ಸದ್ರಿ ದಾವಾ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋದಾಗ್ತದೆ.

By order of the Court
N. M. Adyanthaya
Advocate for Plaintiff.
Karkala, 13—8—1966.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(¼ H.P. to 30 H.P.) ಪಂಪು ಸೆಟ್ಟುಗಳು.......

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೊಟೆಲ್ ಶಿವಪ್ರಸಾದ
ಫೋನ್: 77 ಕುಂದಾಪುರ, ದ. ಕ.

Telephone 226.

Estd. 1921
NAVAYUGA
Leading Kannada Weekly
UDIPI, S. Kanara
ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಹಾಳೆಯ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಮೆರಿಕಾದ ಸಂಯುಕ್ತ ಸಂಸ್ಥಾನದ ಒಂದು ಅಂಗವಾದ ಕೆಂಟುಕಿಯ ಗವರ್ನರರು ಅಬ್ರಹಾಮ ಲಿಂಕನ್ನರ ಮೂರ್ತಿಯ ಅಡಿಯಲ್ಲಿ ಮಾನವನ ಮೂಲಭೂತ ಹಕ್ಕಿನ ಕಾನೂನಿಗೆ ಸಹಿ ಹಾಕುತ್ತಿರುವುದು. ಇದರಿಂದ ಕೆಂಟುಕಿಯ ಪ್ರಜೆಗಳಿಗೆ ಸಮಾನ ಹಕ್ಕು ಸಿಕ್ಕಿದೆ.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೫೦	೨೫—೮—೧೯೬೬	No. 50

ನಾಲ್ಕನೆಯ ಯೋಜನೆ

ಅತ್ತ ಇತ್ತ ತೂಗುತ್ತಿದ್ದ ನಮ್ಮ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕರಡೀಗ ಸಂಪೂರ್ಣವಾಗಿ ಇನ್ನೇನು, ಮಂಜೂರಾಗಲಿದೆ. ಮಂತ್ರಿಮಂಡಳ, ರಾಷ್ಟ್ರೀಯ ಅಭಿವೃದ್ಧಿ ಮಂಡಲಗಳ ಅಂತಿಮ ಪರಿಶೀಲನಾನಂತರ ಲೋಕ—ರಾಜ್ಯ ಸಭೆಗಳಲ್ಲಿ ಇದೇ ವಾರದಲ್ಲಿ ಅದು ಮಂಡಿಸಲ್ಪಡುವ ನಿರೀಕ್ಷೆಯಿದೆ. ಈ ಅಧಿವೇಶನದಲ್ಲಿ ಚರ್ಚೆಗೆ ಇದನ್ನು ಎತ್ತಿಕೊಳ್ಳಲಾಗದೆ ಹೋದರೂ ಶರದ್ ಅಧಿವೇಶನವು ಯೋಜನೆಯನ್ನು ಸ್ವೀಕರಿಸುವುದು ಖಂಡಿತ. ನಮ್ಮ ನಾಲ್ಕನೆಯ ಯೋಜನೆಯ ಪ್ರಮಾಣ (ಮೌಲ್ಯ ಭೇದನೆಗೆ ಮೊದಲ ಬೆಲೆಯಲ್ಲಿ) ರೂ. ೨೩,೭೫೦ ಕೋಟಿಯಿರಬೇಕೆಂದು ಕೊನೆಗೆ ಒಪ್ಪಲಾಗಿದೆ. ಇದರಲ್ಲಿ ರೂ. ೧೬,೦೦೦ ಕೋಟಿಯನ್ನು ಸರಕಾರಿ ರಂಗದಲ್ಲಿಯೂ ಉಳಿದ ರೂ. ೭,೭೫೦ ಕೋಟಿಯನ್ನು ಖಾಸಗಿ ರಂಗದಲ್ಲಿಯೂ ವಿನಿಯೋಗಿಸಬೇಕೆಂದು ಗೊತ್ತು ಮಾಡಿದ್ದಾರೆ. ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಗಳ ಪಾಲು ಎಷ್ಟು ಎಂಬುದು ಮಾತ್ರ ಇನ್ನೂ ಗೊತ್ತಾಗಿರುವುದಿಲ್ಲ.

ನಾಲ್ಕನೆಯ ಯೋಜನೆಯು ಸರ್ವಸಾಮಾನ್ಯವಾಗಿ ಸ್ವಯಂ ಸಂಪನ್ಮೂಲಗಳ ಲಭ್ಯತೆಯತ್ತ ವಿಶೇಷ ಗಮನವಿರಿಸಿದೆಯೆಂದು ಹೇಳಬಹುದು. ಅಭಿವೃದ್ಧಿ ಪಥದಲ್ಲಿ ಮುಂದುವರಿಯುವ ದೇಶಗಳು ವಿದೇಶೀ ನೆರವನ್ನು ಸ್ವೀಕರಿಸುವುದು ಸ್ವಾಭಾವಿಕ. ಆದರೆ, ಕಳೆದ ವರ್ಷ ಪಾಕಿಸ್ತಾನವು ನಮ್ಮ ಪವಿತ್ರ ಮಾತೃಭೂಮಿಯನ್ನು ಆಕ್ರಮಣ ಮಾಡಿದ ವೇಳೆ ವಿದೇಶೀಯರು—ಮುಖ್ಯವಾಗಿ ಅಮೆರಿಕೆ—ಆಡಿದ ಕಣ್ಣುಮುಚ್ಚಾಲೆಯನ್ನು ನಮ್ಮ ಯೋಜಕರು ಮರೆಯಲಿಲ್ಲ. ಇದಕ್ಕೆಂದೇ ವಿದೇಶೀ ನೆರವು ರೂ. ೪,೦೦೦ ಕೋಟಿಯೆಂದು ನಿರೀಕ್ಷೆ ಮಾಡಿರುವುದಾದರೂ ಇದರಲ್ಲಿ ಕೊಂಚ—ಅಥವಾ ವಿಶೇಷವೇನಾದರೂ ಕಂಡು ಬಂದರೆ, ಅಂತಹ ಸಂದರ್ಭಗಳಲ್ಲಿ ಯೋಜನೆಯ ಗಾತ್ರವನ್ನು ಇಳಿಸುವುದಕ್ಕೂ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಇದೊಂದು ವೈಶಿಷ್ಟ್ಯ. ಹಾಗೆಯೇ ಆಂತರಿಕ ಸಂಪನ್ಮೂಲಗಳ ಅಭಾವದಿಂದಾಗಲಿ, ಅಥವಾ ಇನ್ನಿತರ ಕಾರಣಗಳಿಂದ ಯೋಜನೆಗೆ ಹಣವೊದಗದಿದ್ದಾಗ ಅದರ ಗಾತ್ರ ತಗ್ಗಿಸುವ ಸೌಲಭ್ಯವಿದೆ. ಚೀನೀಯರ ಮತ್ತು ಪಾಕಿಸ್ತಾನದ ಆಕ್ರಮಣಗಳಿಂದ ನಮ್ಮ ಮೂರನೆಯ ಯೋಜನೆಯು ಕೊನೆಗೆ ಕುಂಟುತ್ತ ಸಾಗಬೇಕಾಯಿತೆಂಬುದನ್ನು ಈ ಸಂದರ್ಭದಲ್ಲಿ ನಾವು ನೆನೆಯಬಹುದು. ಸೈನಿಕ ವೆಚ್ಚದಲ್ಲಿ ಅ[illegible]ವಾಗಿ ಹೆಚ್ಚಳವಾದಾಗ ಯೋಜನೆಗೆ ಹಣತರುವುದು ದುಸ್ತರವಾಗುವುದು ಅನುಭವ ವೇದ್ಯ. ಇಂತಹ ಯಾವುದಾದರೂ ಅನಿರೀಕ್ಷಿತ ಸಂಭವಿಸಿದರೆ, ಆಗ ಯೋಜನೆಯ ಪ್ರಮಾಣವನ್ನು ಕಡಿಮೆ ಮಾಡಬರುವಂತೆಯೇ ಅದರ ರೂಪರೇಷೆಗಳನ್ನು ರೂಪಿಸಿದ್ದುದು ಜಾಣತನದ್ದಿದೆ.

ನಮ್ಮ ನಾಲ್ಕನೆಯ ಯೋಜನೆಯು ಸುಮಾರು ಶೇ. ೨೦ರಷ್ಟು ವಿದೇಶ ನೆರವನ್ನೇ ಹೊಂದಿಕೊಂಡಿದೆ. ಮೂರು ಯೋಜನೆಗಳಿಗೆ ಅಧಿಕ ಪ್ರಮಾಣದ ನೆರವಿತ್ತ ಅಮೆರಿಕೆಯು ತನ್ನ ಪಾಲನ್ನು ನೀಡುವುದೆಂದು ಘೋಷಿಸಿದ್ದರೂ ಇದರ ಹಿಂದೆ ರಾಜಕೀಯ ನೀತಿಯ ಕೈವಾಡವಿದೆ. ಅಮೆರಿಕೆ ಹೇಳುವಂತೆ ಪಾಕಿಸ್ತಾನದೊಡನೆ ಯಾವ ಬೆಲೆತೆತ್ತಾದರೂ ರಾಜಿ ಮಾಡಿಕೊಳ್ಳಲು ಭಾರತ ಸಿದ್ಧವಿಲ್ಲ. ವಿಯತ್ನಾಮದಲ್ಲಿ ಅಮೆರಿಕೆಯು ಮಾಡುತ್ತಿರುವ ಅಮಾನುಷ ಬಾಂಬು ದಾಳಿಯನ್ನು ಖಂಡಿಸದೆ ಮೌನ ವಹಿಸಲು ಭಾರತಕ್ಕೆ ನಿರ್ವಾಹವಿಲ್ಲ. ರಾಜಕಾರಣದ ಅಮಲು ಕುಡಿದ ನೆರವು ನೀಡುವ ಉದಾರ ನೀತಿ ಇಂದು ಅಮೆರಿಕೆಯದಾಗಿ ಉಳಿದಿಲ್ಲ. ವಿಯತ್ನಾಮವಿಂದು ಅಮೆರಿಕೆಯ ಮಾನ ಪ್ರತಿಷ್ಠೆಯ ಏಕ ಕೇಂದ್ರ. ಇಲ್ಲಿಂದ ಎಲ್ಲಿಯೂ ಹೇಳುವಂತ ಹಿಂಜರಿದರೆ, ವಿಶ್ವರಂಗ ಕಾರಣದಲ್ಲಿ ಅದು ಸ್ಥಾನಮಾನಕ್ಕೆ ಬೆಲೆಯೇನು ಬಂತು? ನ್ಯಾಯಾನ್ಯಾಯಗಳ ಗೋಜಿಗೆ ಹೋಗದೆ ಜಯಭೇರಿ ಬಾರಿಸಿ ಮಾನ ಉಳಿಸಿಕೊಳ್ಳುವುದೇ ಅಮೆರಿಕೆಗೆ ಬೇಕಾಗಿದೆ. ಅದೇನೇ ಇರಲಿ, ಈ ಬಾರಿ ಅಮೆರಿಕನ್ ನೆರವು ಪರಿಮಿತವಾಗುವುದು—ಕೆಲವೊಂದು ಸಶರ್ತವಾಗಿ ಬಂದರೂ ಬರಬಹುದು; ಇಂತಹ ಸಶರ್ತ ನೆರವನ್ನು ನಾವು ನಿರಾಕರಿಸಲೇ ಬೇಕು. ರಷ್ಯದ ನೆರವು ಇದ್ದೇ ಇದೆ. ಉಳಿದ ದೇಶಗಳು ಸಮಂಜಸ ಸುಮಾರಿಗೆ ತಾವು ನೀಡಬಹುದಾದ ನೆರವನ್ನು ಒದಗಿಸಿಕೊಡುವ ನಿರೀಕ್ಷೆಯಿದೆ. ಆ ಮೇಲೆಯೇ ಖಚಿತವಾದ ಅಂಕೆ ಸಂಖ್ಯೆಗಳು ದೊರೆಯಬಹುದು. ಜಾಗತಿಕ ಬ್ಯಾಂಕು ಮತ್ತು ನೆರವು ನೀಡುವ ದೇಶಗಳು ಎಲ್ಲವೂ ಒಂದಾಗಿ ನಿರೀಕ್ಷಿತ ಮೊತ್ತವನ್ನು ನಿಶ್ಶರ್ತವಾಗಿ ಒದಗಿಸಲೂ ಬಹುದು; ಏಕೆಂದರೆ, ಸಶರ್ತ ಸಹಾಯವನ್ನು ಭಾರತ ಬಹಿರಂಗವಾಗಿಯೇ ನಿರಾಕರಿಸುವುದೆಂದು ಅವರಿಗೂ ತಿಳಿದಿದೆ. ಹಾಗಿದ್ದರೂ ವಿದೇಶೀ ನೆರವು [illegible] ಮಾತ್ರ ನಾವು ಎದುರಿಸಬೇಕಾಗುವ [illegible]. ಆಮದುಗಳನ್ನು ಕಡಿಮೆಗೊಳಿಸಿ, ನಿರ್ಯಾತಗಳನ್ನು ಅಭಿವೃದ್ಧಿಗೊಳಿಸುವುದೇ ಇದಕ್ಕಿರುವ ಏಕಮಾತ್ರ ವಿಧಾನ. ಆದುದರಿಂದ ವಿದೇಶಗಳಲ್ಲಿ ಬೇಡಿಕೆಯಿರುವ ಭಾರತೀಯ ಸರಕುಗಳ ಆಂತರಿಕ ಬಳಕೆ ಕಡಿಮೆ ಮಾಡುವತ್ತ, ಅವುಗಳ ಉತ್ಪಾದನೆಗೆ ವಿಶೇಷ ಗಮನ ನೀಡುವತ್ತ ನಮ್ಮ ದೃಷ್ಟಿ ಹರಿಯಬೇಕು.

> **ಸೂಕ್ತಿ ಸುಧಾ**
> ಅಕಸ್ಮಾದೇವ ಕುಪ್ಯಂತಿ
> ಪ್ರಸೀದಂತ್ಯನಿಮಿತ್ತತಃ ।
> ಶೀಲಮೇತದಸಾಧೂನಾಂ
> ಅಭ್ರಂ ಪಾರಿಪ್ಲವಂ ಯಥಾ ॥
> ದುರ್ಜನರ ಸ್ವಭಾವವು ಮೋಡದಂತೆ ಚಂಚಲವಾದುದು. ಅವರು ಒಮ್ಮೆಲೇ ಕೋಪಗೊಳ್ಳುತ್ತಾರೆ; ಅಕಾರಣವಾಗಿ ಪ್ರಸನ್ನರೂ ಆಗುತ್ತಾರೆ.

ಯೋಜನೆಗೆ ಕೊರತೆ ಬೀಳುತ್ತಿದ್ದ ಹಣವನ್ನು ಕೊರತೆ ಧನ ವಿನಿಯೋಗ ವಿಧಾನದಿಂದ ತುಂಬಿಕೊಳ್ಳುವ ಪರಿಪಾಠವು ನಾಲ್ಕನೆಯ ಯೋಜನಾವಧಿಯಲ್ಲಿ ನಿಲ್ಲಲಿದೆ. ಈಗಾಗಲೇ ದೇಶದಲ್ಲಿ ಭೀಮಾಕೃತಿ ತಳೆದಿರುವ ಅತಿಪ್ರಸರಣ—ಬೆಲೆಯೇರಿಕೆಗಳಿಗೆಲ್ಲ ಈ ಕೊರತೆ ಧನ ವಿನಿಯೋಗವೇ ಕಾರಣವಾಗಿದೆ. ಆದುದರಿಂದ ಎಂತಹ ಸಂದರ್ಭ ಬಂದರೂ ಯೋಜನೆಯ ಗಾತ್ರವನ್ನಿಳಿಸಿಕೊಳ್ಳಲಿ; ಕೊರತೆ ಧನವಿನಿಯೋಗಕ್ಕೆ ಕೈ ಹಾಕಬಾರದೆಂಬ ನಿರ್ಧಾರ ರಾಷ್ಟ್ರೀಯ ಬೃಹತ್ ಸಮಸ್ಯೆಯ ಪರಿಹಾರದತ್ತ ಯೋಜಕರ ದೃಷ್ಟಿ ಹರಿದಿದೆಯೆಂಬುದರ ದ್ಯೋತಕ. ಇದು ಸ್ವಾಗತಾರ್ಹ ನಿಲುವು— ಇದು ಬದಲಾಗದಿರಲಿ.

ಕಾಮರಾಜ ವಿಜಯ

ಸೋವಿಯತ್ ರಷ್ಯ ಮತ್ತು ಇತರ ಪೂರ್ವ ಯುರೋಪಿನ ಸಮಾಜವಾದಿ ರಾಷ್ಟ್ರಗಳಲ್ಲಿ ದಿಗ್ವಿಜಯ ಮಾಡಿ ಬಂದ ಕಾಮರಾಜರನ್ನು ಗೌರವಿಸುತ್ತ ಪ್ರಧಾನಿ ಇಂದಿರಾ ಗಾಂಧಿಯವರು ಉದ್ಗರಿಸಿದರು: "ನಮ್ಮ ನಾವೆಯನ್ನು ನಡೆಸಲು ನಿಮ್ಮಂತಹ ಕಪ್ತಾನನು ದೊರಕಿದ್ದ ನಮ್ಮ ಮಹಾ ಭಾಗ್ಯ." ಕಾಮರಾಜರು ಉತ್ತಮ—ಸಮರ್ಥ—ಸರ್ವ ಸಮರ್ಥ ಕಪ್ತಾನನೆಂಬುದಕ್ಕೆ ಎರಡು ಬಾರಿ ಪ್ರಧಾನಿಗಳ ಆಯ್ಕೆ ನಡೆದಾಗಲೇ ನಿದರ್ಶನ ದೊರೆತಿವೆ. ಸಮಾಜವಾದಿ ಸಮಾಜ ರಚನೆ—ಪ್ರಜಾಪ್ರಭುತ್ವದ ತಳಹದಿಯಲ್ಲಿ—ಯನ್ನು ಉದ್ದೇಶಿಸಿರುವ ಭಾರತೀಯ ಕಾಂಗ್ರೆಸ್ಸು ಈ ದಿಸೆಯಲ್ಲಿ ಹೇಗೆ ಮುಂದುವರಿಯಬಹುದೆಂದು ಕಾಮರಾಜರು—ಸೂತ್ರಧಾರರು—ಅಧ್ಯಯನ ಮಾಡುತ್ತಾರೆ. ಈಗ ತಾನು ಪಡೆದ ಅನುಭವದಿಂದ ಭಾರತೀಯ ಸಮಾಜಕ್ಕೆ ಹೊಂದಿಕೊಂಡು ದೇಶವನ್ನು ನಿರ್ದೇಶಿತ ಗುರಿಯತ್ತ ಒಯ್ಯಲು ಸುದೀರ್ಘ ಕ್ರಮವೊಂದನ್ನು ಅವರು ಎಳೆಯಲಿರುತ್ತಾರೆಯೆ?

ನರಸಣ್ಣನ ಸರಸ



"ಸುಬ್ರಹ್ಮಣ್ಯಂರ ವರ್ತನೆ ಕಾಮರಾಜರಿಗೆ ಸರಿಬರಲಿಲ್ಲವಂತೆ....'

"ಯಾಕೆ ಸರಿ ಬಂದೀತು? ಅವರು ರಾಜಾಜಿ ಶಿಷ್ಯರೆಂಬುದನ್ನು ಮರೆತಿಲ್ಲದಿರಬಹುದು.'

ಗೇಹ ರಾಜ್ಯದಲ್ಲಿ

ಕನಸಿನ ಸ್ವರ್ಗದಲ್ಲೇ ಸುಖ

"ಶುಸು ಇಲ್ಲಿ ಕೇಳೀಂದ್ರೆ...."

"ಕೇಳ್ತಾನೇ ಇರ್ತೀನಲ್ಲಾ...."

"ಹೌದು. ನೀವು ಕೇಳ್ತಾನೇ ಇರ್ತೀರಿ. ಮಕ್ಳು ಶಾಲೆಯೊಳಗಡೆ ಪಾಠ ಕೇಳೋದಿಲ್ವೇ ಹಾಗೆ."

"ಅಂದ್ರೆ ಮೇಸ್ಟ್ರು ಪಾಠ ಮಾಡ್ತಿರೋವಾಗ ಮಕ್ಳು ನಿದ್ದೆ ಮಾಡ್ತಿರಂತೇನು ನಿನ್ನ ದೂರು?...."

"ಹಾಗೇನೂ ಇಲ್ಲ. ಆದರೆ ಸಾಮಾನ್ಯವಾಗಿ ನೂರಕ್ಕೆ ತೊಂಬತ್ತೈದರಷ್ಟು ಮಕ್ಕಳು ಪಾಠದಲ್ಲಿ ತನ್ಮಯರಾಗುವುದಿಲ್ಲ..."

'ನೋಡು, ಹೀಗೇಗೆಲ್ಲಾ ಆರೋಪ ಹೊರಿಸಿದ್ರೆ ಸಾಲ್ದು. ಅದಕ್ಕೆ ಪ್ರಮಾಣ ಕೊಡಬೇಕು.'

'ಓಹೋ, ಏನಂತೆ? ನೋಡಿ, ದೀರ್ಘ ಪರಿಶೀಲನಾನಂತರ ಹೊರಟ ವರದಿಯಿದು. ಒಂದು ಶಾಲೆಯ ನೂರಾಆರು ವತ್ತೈದು ವಿದ್ಯಾರ್ಥಿಗಳನ್ನು ಪರಿಶೀಲಿಸಲಾಯಿತು. ಇವರಲ್ಲಿ ಸೇ. ೫೦ರಷ್ಟು ತಮ್ಮ ತಮ್ಮ ಅಂದ ಚೆಂದ ನೋಡುವುದರಲ್ಲಿ, ಪರರ ಅಂದಚೆಂದ ಶೃಂಗಾರಗಳನ್ನು ಮಾನಸಿಕವಾಗಿ ತುಲನೆ ಮಾಡುವುದರಲ್ಲಿ ತಮ್ಮನ್ನು ತಾವು ಮರೆತಂತೆ ಕಂಡಿತು. ಇವರಲ್ಲಿ ಸೇ. ೭೫ರಷ್ಟು ಹೆಮ್ಮಕ್ಕಳು. ಸೇ. ೩೦ರಷ್ಟು ಶಾಲೆಯ ಕಿಟಕಿ ಬಾಗಿಲುಗಳ ಮೂಲಕ ಹೊರಗಿನ ವಾತಾವರಣವನ್ನು ಆಸಕ್ತಿಯಿಂದ ಈಕ್ಷಿಸುತ್ತಿದ್ದರು. ಸೇ. ೧೦ರಷ್ಟು ಕಟ್ಟಡದ ಹಂಚು—ಪಕ್ಕಾಸುಗಳನ್ನು, ಗೋಡೆಯನ್ನು ಗಣಿಸುತ್ತಲೂ ನೋಡುತ್ತಲೂ ಇದ್ದರು. ಸೇ. ೫ರಷ್ಟು ತಮ್ಮ ಬಳಿಯಲ್ಲಿ, ಮುಂದುಗಡೆ ಕುಳಿತವರಿಗೆ ಚೇಷ್ಟೆ ಮಾಡುವುದರಲ್ಲಿ ನಿರತರಾಗಿದ್ದರು. ಇವರ್‍ಯಾರೂ ಪಾಠದಲ್ಲಿ ಆಸಕ್ತರಾದಂತೆ ಕಂಡುಬರಲಿಲ್ಲ."

"ಸರಿ. ಇದು ಎಂಥಹ ಸಮೀಕ್ಷೆ ಅಂತ?

"ಸಮೀಕ್ಷೆ—ಸಾಮಾನ್ಯವಾದುದು. ಇನ್ನು ಶಾಸ್ತ್ರೀಯವಾಗಿ ನಡೆಸಿದರೆ ಆಗ ಎಲ್ಲಾ ಬಣ್ಣ ಬಯಲಾದೀತು...."

"ಅದು ಸರಿ. ನಮ್ಮ ಸೋಮಯ್ಯ ಮಾಸ್ತರರೂ ಹಾಗೇ ಹೇಳ್ತಾರೆ. ಆದರೆ ಯಾಕೆ ಹೀಗೇಂತ?'

"ಮತ್ತೆಂಥದು? ಕಣ್ಣು ಕಾಲು ಇರುವವರೆಲ್ಲರನ್ನೂ ಅಕ್ಷರ ವಿದ್ಯೆಗೆ ಹಚ್ಚಿದ್ರೆ ಅವ್ರು ಮಾಡಬೇಕಾದ್ದೂ ಏನು? ಮೇಸ್ಟ್ರು ಅವರಿಗೆ ಹೊಡೀತಾರೆ, ಅವ್ರು ನೊಣ ಹೊಡೀತಾರೆ....'

"ಹ್ಹ...ಹ್ಹ ಹ್ಹ.... ಆದ್ರೆ ನೋಡು, ಕಲ್ಯಾಣ ರಾಷ್ಟ್ರದಲ್ಲಿ ಅನಕ್ಷರಸ್ಥರಿರಬಾರದು. ಅದಕ್ಕೆಂದೇ ನಮ್ಮ ಸರಕಾರ ಸೆಕೆಂಡರಿ ಶಿಕ್ಷಣವನ್ನೂ ನಿಶ್ಶುಲ್ಕಗೊಳಿಸಿದೆ."

"ನೋಡಿ, ಅದರ ಪ್ರಭಾವವೇ ಇದು.'

"ಯಾಕೆ?"

'ಆದರ್ಶದ ಕುದುರೆ ಬಾಲ ಹಿಡಿದೇ ನಮಗೀ ದುರ್ಗತಿ ಬಂದಿರೋದು."

'ಯಾಕೆ? ಏನಾಯ್ತು?'

"ನೂರಕ್ಕೆ ಇಪ್ಪತ್ತು ಮಾರ್ಕು ಸೇರ್‍ಸಿದ್ರೂ ಫಲಿತಾಂಶ ಸೇ. ಐವತ್ತು ಮುಟ್ಟೋದಿಲ್ಲ."

"ಅದಕ್ಕೆ ಏನು ಮಾಡೋದು? ಮೇಸ್ಟ್ರು ಕಲಿಸೋದಿಲ್ಲ. ಮಕ್ಳು ಪಾಸಾಗೋದಿಲ್ಲ..."

'ಬೇಷ್....ಬೇಷ್...'

'ಯಾಕೆ? ಏನಾಯ್ತು?"

'ಅಲ್ಲಿ ಚುನಾವಣೆಗೆ ಹತ್ತಿರ ಬಂತು...

"ಹ್ಞಾಂ....ಫೆಬ್ರವರಿಯಲ್ಲಿ...."

'ಹೌದು, ಸಪ್ಟಂಬರದೊಳಗೆ ನಾಮಿನೇಷನ್ನು ಹಾಕಬೇಕಂತೆ ನೋಡಿ..."

"ಅಲ್ಲ, ನಾಗರ ಪಂಚಮಿಗೂ ಪಳ್ಳಿಬ್ಯಾರಿಗೂ ಏನು ಸಂಬಂಧಾಂತ?'

"ನಿಮ್ಮ ಸೆಕ್ಯುಲರ್ ಸ್ಟೇಟಿನಲ್ಲಿ ಎಲ್ಲರೂ ಸರಿಸಮಾನರಲ್ವೇ?"

"ಹ್ಞಾಂ...ಅದು ಸರೀನ್ನ ಕೃಷ್ಣ ಭಟ್ರ ಇಗರ್ಜಿಗೆ ಹೋಗಬಹುದು...''

"ಹೌದು ಹೌದು. ನೀವು ಕೃಷ್ಣ ಭಟ್ರನ್ನು ಮಕ್ಕಕ್ಕೂ ಕಳಿಸ್ತೀರಿ, ಜೆರೂಸಲೇಮು ಯಾತ್ರೆಯನ್ನೂ ಮಾಡಿಸ್ತೀರಿ. ಆದ್ರೆ ನೋಡಿ, ಫ್ರಾನ್ಸಿಸ್ಕರನ್ನು ಏನು ಮಾಡ್ತೀರಿ? ಮೊಯಿದಿನಬ್ಬನನ್ನು ಏನು ಮಾಡ್ತೀರಿ?"

"ನೋಡಪ್ಪಾ, ಅವರೆಲ್ಲ ಅಲ್ಪ ಸಂಖ್ಯಾಕರು. ಅವರ ಹಿತರಕ್ಷಣೆ ಬಹುಸಂಖ್ಯಾತರ ಪರಮ ಕರ್ತವ್ಯ. ನೀನೇ ಹೀಗೆಲ್ಲಾ ಮಾತಾಡಿದ್ರೆ ಹೇಗೇಂತ?"

"ಅಯ್ಯಪ್ಪ: ನಿಮ್ಮ ನ್ಯಾಯ ನಿಮಗೆ ಬೇಕಾಗಿ. ಇಲ್ಲಿ ನಾವು ಪಾಡು ಪಡುತ್ತ ಇದ್ದೇವೆ. ನೀವು ಅಲ್ಪ ಸಂಖ್ಯಾಕರಿಗಾಗಿ ನಮ್ಮನ್ನೇ ಬಲಿಕೊಡೋ ಮಾತಾಡ್ತೀರಿ.'

"ಹಾಗೆಲ್ಲಾ ಅನ್ನಬಾರದು. ತಾನು ಎಲ್ಲರಿಗಾಗಿ ಎಂದಲ್ಲವೇ ಆಯೋಕ್ತಿ?..'

'ಎಲ್ಲರು ತನಗಾಗಿ ಎಂದೂ ಅದರ ಮುಂದಿನ ಪಾದವಿದೆಯಲ್ಲಾ....'

"ಹೌದು. ಆದರೆ ಅದು ಪ್ರಕ್ಷಿಪ್ತ...'

'ಅಂದರೆ?"

'ನೋಡು, ವ್ಯಾಸರು ಬರೆದ ಭಾರತಕ್ಕೆ ಮುಂದಿನ ನೂರಾರು ಕವಿಗಳು ತಮ್ಮ ಬರೆದ ಶ್ಲೋಕಗಳನ್ನೂ ಸೇರಿಸಿ ಅದನ್ನು ಬಡಾಯಿಸಿದಂತೆ— ವ್ಯಾಸರದ್ದು ಮೂಲ—ಇವರದ್ದೆಲ್ಲ ಪ್ರಕ್ಷಿಪ್ತ...."

"ಸರಿ. ಹೇಗೆ ಸಾಧಿಸುತ್ತೀರಿ?"

'ನೋಡು, ಅಂಗೈ ನೋಡಲು ಕನ್ನಡಿ ಏಕೆ ಬೇಕು?"

'ಅರ್ಥವಾಗಲಿಲ್ಲ..."

'ಭಾರತ ಇತಿಹಾಸ—ಪುರಾಣ ಕಾಲದಿಂದಲೂ ಸಾರಿದ ಏಕಮೇವ ದೇಶ—ಪರೋಪಕಾರಾರ್ಥಮಿದಂ ಶರೀರಂ ಎಂದು.'

'ಹೌದು, ಏನಾಯ್ತು? ಸಾರಿದೆ ಮಾತ್ರವಲ್ಲ ನಡೆದೂ ಬಂದಿದೆ. ಶಿಬಿ, ಬಲಿ, ದಧೀಚಿ ...."

'ಸರಿಯೇ. ಅಂದರೆ, ಪರಾರ್ಥದ ಮುಂದೆ ಸ್ವಾರ್ಥವನ್ನು ತೃಣ ಸಮಾನವಾಗಿ ಬಗೆದು ಬಳೆದು ಬಂದ ದೇಶ.'

'ಹ್ಞಾಂ....ಗತ ವೈಭವದ ಕಥೆ ಹೃದಯಾಕರ್ಷಕನೇ..."

'ಇಂತಹ ದೇಶದಲ್ಲಿ ಎಲ್ಲವರು ತನಗಾಗಿ ಎಂಬ ಮಾತು ಹೊರಡುವುದು ಸಾಧ್ಯವಿಲ್ಲ...."

'ಯಾಕೆ?'

'ಇದರಲ್ಲಿ ಸ್ವಾರ್ಥಭಾವನೆಯಿದೆ. ನಿಷ್ಕಾಮ ಕರ್ಮವನ್ನು ಬೋಧಿಸಿದ ಶ್ರೀಕೃಷ್ಣನ ದೇಶದಲ್ಲಿ ಎಲ್ಲರನ್ನೂ ತನಗಾಗಿ ಬಳಸಿಕೊಳ್ಳುವ ಹವ್ಯಾಸ ಹುಟ್ಟುವುದು ಸಾಧ್ಯವೇ ಇಲ್ಲ..."

"ಇದೊಂದು ಆದರ್ಶದ ಬಿಸಿಲ್ಗುದುರೆ..."

"ನೀನು ಬಿಸಿಲ್ಗುದುರೆಯನ್ನು, ಮತ್ತೇನಾದರೂ ಎನ್ನು. ವಿದೇಶೀಯರು, ಎಲ್ಲರನ್ನೂ ಸ್ವಲಾಭಕ್ಕಾಗಿ ಬಳಸಿಕೊಳ್ಳುವ ಕುತಂತ್ರಗಳ ಪ್ರಭಾವದಿಂದಾಗಿ ನಮ್ಮ ತಾನು ಎಲ್ಲರಿಗಾಗಿಯ ಮುಂದೆ ಆವರ ಬಲ್ಲವರು ತನಗಾಗಿ ಎಂಬುದು ಸೇರಿತು—"

'ಇದು ಹೇಗೆ ಸಿದ್ಧಾಂತ?"

'ಸಾಧನೆ ಮೊದಲೇ ಆಗಿದೆ ತಾನೆ!"

"ಹ್ಞಾಂ... ಇರಬಹುದು. ಆದರೆ ಒಂದು ಮಾತು. ಇಂದು ಜಗತ್ತು ನೋಡ್ಕೊ, ಚಂದ್ರಲೋಕ—ಇಂದ್ರಲೋಕವನ್ನು ಮುಟ್ಟುತ್ತಿರುವಾಗ ನಾವು ಮಾತ್ರ ಸ್ವರ್ಗದ ಸುಂದರ ಸ್ವಪ್ನ ಕಾಣುತ್ತ ಕುಳಿತಿರುವುದೆ?'

"ಬೇಡ, ನಾವು ಕನಸಿನಲ್ಲೇ ಎದ್ದು ಹಾರಾಡೋಣ..."

"ಸರಿಯಾಗಿ ಹೇಳಿದಿರಿ. ನಾವೆಂದು ಮಾಡುತ್ತಿರುವುದನ್ನೇ ನಿಮ್ಮ ಬಾಯಿಯಿಂದ ನುಡಿಯಿಸಿತು ದೈವ.

'ಏನು?'

"ಮತ್ತೆಂಥದು? ನಿಮ್ಮ ಶಾಲೆ ಅಂದರೆ ಸರಕಾರ ದೊಡ್ಡ ..'

'ಯಾಕೆ?'

"ನೋಡಿ, ನಿಮ್ಮ ಮಂತ್ರಿಗಳೇ ಹೇಳ್ತಾರೆ: ೯೦೦ ಮಕ್ಕಳಿಗಾಗಿ ಕಟ್ಟಿಸಿದ ಶಾಲೆಯಲ್ಲಿ ಮೂರು ಸಾವಿರ ಮಕ್ಕಳಿವೆ..."

"ಮಾತ್ರವಲ್ಲ, ಮೇಸ್ಟ್ರು ಸಂಖ್ಯೆಯೂ ......'

'ಅದೆಲ್ರಿ? ಏ ತನ್ನಯದ ಗಾಳಿ ಮೊದಲಿಗೆ ಬಡಿಯೋದೇ ಇಲ್ಲಿಗೆ. ನೂರು—ಇನ್ನೂರು ಮಕ್ಕಳನ್ನು ಒಂದೆಡೆ ಕೂಡ್ರಿಸಿ ಒಬ್ಬ ಒಣ ಶರೀರದ ಮೇಸ್ಟ್ರನ್ನು ದಿನಾ ಆರು ಗಂಟೆ ಪಾಠ ಮಾಡ್ರಿ ಅಂತ ಅಂದ್ರೆ ತಿಂಗಳಿಗೆ ನೂರೈವತ್ತು ಪಗಾರ ಕೊಟ್ರೆ—ಅದೂ ಒಂದಾಗ ತೆರೋ ಕಂಡೀಶನ್ನಿನಲ್ಲಿ—ಮಕ್ಳು ಮಾಡಬೇಕಾದ್ದೂ ಏನು? ಸಂಬಳವನ್ನು ಮೇಸ್ಟ್ರನ್ನ ಬಿಟ್ಟು ಮಾಡಿದ್ರೆ ಏನು ಬಂದೀತು?'

"ಹ್ಞಾಂ...ಏನೋ ಇವತ್ತು...'

"ಅಲ್ರಿ, ಮೇಸ್ಟ್ರು ಅಂದ್ರೆ ಮಕ್ಕ ಹೆತ್ತವರಿಗೆ ದನಕಾಯೋ ಗೋಪಾಲನಿಗೂ ಕಡೆ, ಮತ್ತೆ ಮಕ್ಕಿಗೆ....ಕಂಸಾಸುರ....'

'ಅಂತೂ ನಮ್ಮ ಮನಸ್ಸು ಇವತ್ತಾದ್ರೂ ಇತ್ತ ಹರೀತಲ್ಲಾ...ಇದೇ ಬುದ್ಧಿ ಇಂದಿರಾ ಗಾಂಧಿಗೂ ಬಂದಿದ್ರೆ ಆದರ್ಶದ ಬದಲು ವ್ಯವಹಾರ ಗೆಲ್ಲಬಹುದೋ ಏನೋ...ಏಕೆಂದ್ರೆ ಈ ಪ್ರಪಂಚದಲ್ಲಿ ಪುಕ್ಕಟೆಗೆ ಮರ್‍ಯಾದೆಯಿಲ್ಲ....ಗೌರವವಿಲ್ಲ..'

"ಓಹೋ, ಅದಕ್ಕೇ ನೀವು ನನ್ನ.... ಅಂದು...'

ಶ್ಶೂ....ಬಾಯಿ ಮುಚ್ಚೇ...."

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O·P. ನಂಬ್ರ 17/1966.

ವಿನ್ನಿಫ್ರೆಡ್ ಡಿ'ಸೋಜ ಕೂಡಾ—ಅರ್ಜಿದಾರರು.

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—

ಉಡುಪಿ ತಾಲ್ಲೂಕು ಉದ್ಯಾವರ ಗ್ರಾಮದಲ್ಲಿದ್ದ—ಚಾರ್ಲ್ಸ್ ಡಿ'ಸೋಜರು ತಾ ೧೬—೬—1959ರಲ್ಲಿ ಬೊಂಬಾಯಿಯಲ್ಲಿ ಮರಣಪಟ್ಟಿರುವುದರಿಂದ ಅವರಿಗೆ ಸಲ್ಲತಕ್ಕ ಅರ್ಜಿಯಲ್ಲಿ ನಮೂದಿಸಿದ ಬ್ಯಾಂಕಿನ ವಸೂಲು ಕೇಳಿ ಅರ್ಜಿದಾರರ ಪರವಾಗಿ 1ನೇ ಅರ್ಜಿದಾರರ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ತಾ ೧೬ನೇ 16—9—1966ಕ್ಕೆ ಈ ಕೋರ್ಟಿನಲ್ಲಿ ತನಿಗೆ ಇಟ್ಟಿರುತ್ತದೆ. ಆ ಕುರಿತು ಯಾರದ್ದಾದರೂ ಆಕ್ಷೇಪಣೆಯಿದ್ದಲ್ಲಿ ಮೇಲಿನ ತಾರೀಕು ಹಗಲು ಘಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಯಪಡಿಸಲಾಗಿಯದೆ.

(ಕೋರ್ಟು ಹುಕುಂ ಪ್ರಕಾರ)

K. Vishwanatha Hegde·

Advocate for Petitioners.

ಉಡುಪಿ, ತಾ. 18—8—1966.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 69/1966.

ದಿ ಬೆಂಗಾಳ ನ್ಯಾಶನಲ್ ಬ್ಯಾಂಕ್ ಲಿಮಿಟೆಡ್ ಉಡುಪಿ —ವಾದಿ

ಮತ್ತು

ಯು. ಬಿ. ಆನಂದ್ರಾವ್, ಯು. ಬಿ. ಛೀ ನಾರಾಯಣ ಮಗ—ಕುಂದಾಪುರ ಕಸಬಾ— —ಪ್ರತಿವಾದಿ.

ಸದರಿ ಪ್ರತಿವಾದಿಗೆ—

ಪ್ರತಿವಾದಿಯು ವಾದಿ ಬ್ಯಾಂಕಿಗೆ ತಾರೀಕು 20—4—1964ರಲ್ಲಿ ರೂಪಾಯಿ 450/-ಕ್ಕೆ ಬರಕೊಟ್ಟ ಡಿಮಾಂಡ್ ನೋಟು ಪ್ರಕಾರ ಆಗ ಪಡದ ಸಾಲದ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಬೇಕಾದ ಅಸಲು ಬಡ್ಡಿ ಕೂಡಾ ರೂಪಾಯಿ 290—32ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ದಾವೆಯು ತಾರೀಕು 12—9—66ಕ್ಕೆ ತನಿಖೆಗೆ ಇಡೋ ಆಗಿಯದೆ. ಆದಿನ್ನ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗದೆ ಇದ್ದ್ರೆ ಆತನ ಗೈರು ಹಾಜರಿಯಿಂದ ಸದರಿ ವ್ಯಾಜವು ತೀರ್ಮಾನಿಸಲ್ಪಡುವದೆಂದು ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಲಾಗಿಯದೆ—

H. Ramanath Pai

Advocate for Plff.

ಉಡುಪಿ, ತಾ. 18—8—1966.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26—4—1966.

ನಮ್ಮ ಕ್ರಿಕೆಟ್ ಸಂದರ್ಶಕರು

ಆಂಗ್ಲೇಯರ ಆಟ ಕ್ರಿಕೆಟ್ ಅವರೊಂದಿಗೆ ಜಗತ್ತಿನಾದ್ಯಂತ ಹರಡಿತು. ಇಂದು ಆಂಗ್ಲೇಯರೂ ವೆಸ್ಟ್ ಇಂಡೀಸ್, ಭಾರತಗಳಿಂದ ಸೋಲುಂಡಿದ್ದಾರೆ. ಮುಂದಿನ ಹೇಮಂತದಲ್ಲಿ ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡ ಭಾರತದಲ್ಲಿ ನಿರ್ಣಾಯಕವಾಗಿ ಆಡಲಿದೆ. ಜಗತ್ತಿನಲ್ಲಿ ಅದ್ಭುತ ದಾಖಲೆ ನಿರ್ಮಿಸಿರುವ ಈ ತಂಡದ ಭವಿಷ್ಯ ಭಾರತದಲ್ಲಿ ಬದಲಾದೀತೆ?

ಶ್ರೀ ಎಸ್. ಕೆ. ಪೈ

ಕ್ರಿಕೆಟ ಆಟವು ಆಂಗ್ಲೇಯರ ಆಟವು. ಆಂಗ್ಲೇಯರು ತಾವು ನೆಲೆಸಿದ್ದ ಸ್ಥಳಗಳಲ್ಲಿ ತಮ್ಮ ಈ ಆಟವನ್ನು ಪ್ರಚಾರ ಮಾಡಿ ಕ್ರಿಕೆಟ ಯುನಿಯನ್ ಜ್ಯಾಕ ಧ್ವಜವನ್ನು ಹಿಂಬಾಲಿಸುತ್ತದೆ ಎಂಬ ನಾಣ್ಣುಡಿಯನ್ನು ಬಳಕೆಗೆ ತಂದರು. ಭಾರತದಲ್ಲಿ ಕ್ರಿಕೆಟ ಬೇರೂರಿ ಈಗ ಬಹಳ ಜನಪ್ರಿಯವಾದ ಆಟವಾಗಿದೆ. ವೆಸ್ಟಇಂಡಿಸ್ ದ್ವೀಪಗಳಲ್ಲಿ ಆಂಗ್ಲೇಯರೇ ಈ ಆಟವನ್ನು ಬಿತ್ತಿದರು. ಅಲ್ಲಿಯ ತೋಟದ ಮಾಲಿಕರಾದ ಬ್ರಿಟಿಷರು ತಮ್ಮ ವಿನೋದಕ್ಕಾಗಿ ಅವರ ಜೀವಾಳವಾದ ಈ ಕ್ರಿಕೆಟ ಆಟವನ್ನು ಆರಂಭಿಸಿದರು. ಅಲ್ಲಿಯ ಕರಿಯ ಜನರು ತಮ್ಮ ತೀಕ್ಷ್ಣವಾದ ದೃಷ್ಟಿಯ ಸಹಾಯದಿಂದಲೂ ಲಂಬವಾದ ಕೈಕಾಲುಗಳ ಬಲದಿಂದಲೂ ಉತ್ತಮ ಆಟಗಾರರಾಗಿ ಈಗ ವಿಶ್ವದ ಕ್ರಿಕೆಟ ಸಾರ್ವಭೌಮತೆಯನ್ನು ಪಡೆದಿರುವರು.

ಆಟದ ಬಾಲ್ಯಾವಸ್ಥೆ

ಆರಂಭದಲ್ಲಿ ಇಲ್ಲಿಯ ಆಟಗಾರರು ಬರೇ ತೀವ್ರಗತಿಯ ಬೌಲರುಗಳು ಮತ್ತು ಬರ್ಜರಿ ಏಟುಗಳನ್ನು ಹೊಡೆಯುವ ಆಟಗಾರರೂ ಆಗಿದ್ದರು. ಬೌಲಿಂಗ ಕ್ಷೇತ್ರದಲ್ಲಿ ಮಂದಗತಿಯ ಸ್ಪಿನ್ ಬೌಲಿಂಗ ಎಂಬುದು ಅವರು ಅರಿಯದ ಮಾತಾಗಿತ್ತು. ಎಲ್. ಎನ್. ಕಾನ್ಸ್ಟೆಂಟೈಯಿನರು ತೀವ್ರಗತಿಯ ಬೌಲಿಂಗಿಗೂ ಬರ್ಜರಿ ಏಟುಗಳನ್ನು ಆಟದ ಕ್ಷೇತ್ರದ ಎಲ್ಲಾ ದಿಕ್ಕುಗಳಲ್ಲಿಯೂ ಹೊಡೆಯಲಿಕ್ಕೆ ನೈಪುಣ್ಯತೆಯನ್ನು ಪಡೆದವರಾಗಿದ್ದರು. ಇವರ ಫಿಲ್ಡಿಂಗ್ ವೀಕ್ಷಿಸುವುದೆಂದರೆ ಪ್ರೇಕ್ಷಕರ ಕಣ್ಣಿಗೆ ಹಬ್ಬವು. ಇವರು ಬೌಲಿಂಗ್, ಫಿಲ್ಡಿಂಗ್, ಬ್ಯಾಟಿಂಗ್ ಕ್ಷೇತ್ರಗಳಲ್ಲಿಯೂ ತನ್ನ ಪ್ರಬಲ ಶಕ್ತಿ ಸಾಮರ್ಥ್ಯಗಳಿಂದ ನಿರ್ಣಾಯಕ ಪಂದ್ಯಾಟಗಳಲ್ಲಿಯೂ ಉತ್ತಮ ಪ್ರದರ್ಶನವಿತ್ತು 'ವಿದ್ಯುತ್ತಿನ ಆಟಗಾರ'ನೆಂಬ ಬಿರುದನ್ನು ಗಳಿಸಿದರು. ಈಗ ಅವರು ವೆಸ್ಟ ಇಂಡಿಸ್ ಕ್ರಿಕೆಟ ತಂಡದ ಇಂಗ್ಲೆಂಡಿನ ಪ್ರವಾಸದ ಕುರಿತು ವರದಿಗಳನ್ನೂ ಲೇಖನಗಳನ್ನೂ ಭಾರತದ ಹಲವಾರು ಪತ್ರಿಕೆಗಳಿಗೆ ಬರೆಯುತ್ತಾರೆ.

ಆನಂತರ ಜೋರ್ಜ ಹೆಡ್ಲಿ ಎಂಬ ಇನ್ನೊಬ್ಬ ಹೆಸರಾಂತ ಆಟಗಾರನು ಸಾಧಾರಣ ೧೫ ವರ್ಷಗಳ ಕಾಲ ವೆಸ್ಟಇಂಡಿಸಿನ ಕ್ರಿಕೆಟ ಆಟವನ್ನು ಊರ್ಜಿತ ಸ್ಥಿತಿಗೆ ತಂದು ಆಟಕ್ಕೆ ಭದ್ರತೆ ಮತ್ತು ವೈಜ್ಞಾನಿಕ ರೂಪವನ್ನು ಕೊಟ್ಟಿದ್ದನು. ಇವನು ತನ್ನ ಮನಮೋಹಕ ಸ್ಟ್ರೋಕ್ಸ ಆಟದಿಂದ ತ್ರಾಸವಿಲ್ಲದೆ ಇಂಗ್ಲೆಂಡು, ಆಸ್ಟ್ರೇಲಿಯಗಳ ವಿರುದ್ಧ ನಿರ್ಣಾಯಕ ಪಂದ್ಯಾಟಗಳಲ್ಲಿ ಶತಕಗಳನ್ನು ಬಾರಿಸಿ "ಕರಿಯ ಬ್ರೆಡಮನ್" ಎಂಬ ಹೆಸರನ್ನು ಗಳಿಸಿದನು. ಈ ಸಮಯದಲ್ಲಿ ಒಂದೆರಡು ನಿರ್ಣಾಯಕ ಪಂದ್ಯಾಟಗಳಲ್ಲಿ ವೆಸ್ಟ ಇಂಡಿಸ್ ಇಂಗ್ಲೆಂಡನ್ನು ಸೋಲಿಸಿದ್ದಿತು.

ಆಧುನಿಕ ಸಾರ್ವಭೌಮತೆ

ಎರಡನೆಯ ಜಾಗತಿಕ ಯುದ್ಧಾನಂತರ ಜಗದ್ವಿಖ್ಯಾತ ವಾಲ್ಕೋಟ್, ಎವರ್ಟನ್ ವೀಕ್ಸ್ ಮತ್ತು ಫ್ರೇಂಕಿ ವಾರೆಲ್ಲ "3W's" ಇವರ ಯುಗವು ಬಂತು. ಇವರ ಮತವೇ ಆಕ್ರಮಣವು ರಕ್ಷಣೆಯ ಮೂಲ ಸಾಧನ. ಇವರು ನಿರ್ಣಾಯಕ ಪಂದ್ಯಾಟಗಳನ್ನು ತಮ್ಮ ಅಮೋಘ ಬ್ಯಾಟಿಂಗ್ ಪ್ರದರ್ಶನದಿಂದ ಹತೋಟಿಯಲ್ಲಿಟ್ಟು, ಕ್ರಿಕೆಟಿನ ಪ್ರಬಲ ರಾಷ್ಟ್ರಗಳಿಂದ ಮನ್ನಣೆಯನ್ನು ಪಡೆದರು. ಭಾರತೀಯ ಆಟಗಾರರು ಇವರ ಆಟದ ಕಲಾ ಕೌಶಲ್ಯ, ಸಾಮರ್ಥ್ಯಗಳನ್ನು ನೋಡಿ ಬೆರಗಾಗಿರುವರು. ಈ ಸಮಯದಲ್ಲಿ ತೀವ್ರಗತಿಯ ಭೀತಿ ಉತ್ಪಾದಕ ಬೌಲರುಗಳು ತಮ್ಮ ಪಕ್ಷದಲ್ಲಿ ಇಲ್ಲದಿದ್ದರೂ ಸ್ಪಿನ್ ಬೌಲಿಂಗಿನ ಅವಳಿ ಜವಳಿ ಕುವರರೆಂದು ಹೆಸರಿರುವ, ಸೊನಿರಮಾದಿನ್ ಮತ್ತು ಅಲ್ಫ ವೆಲೆಂಟೈನ್‌ರು ಇದ್ದು ಇಂಗ್ಲಿಷ ಆಟಗಾರರೂ ಇವರಿಗೆ ಮಣಿಯಬೇಕಾಯಿತು.

ಈ ದಶಕದ ಏಳಿಗೆ

ಈ ದಶಕದಲ್ಲಿ 1960-1966 ವೆಸ್ಟ ಇಂಡಿಸ್ ಆಟಗಾರರು ತಮ್ಮ ಮನಮೋಹಕ ಸ್ಟ್ರೋಕ್ಸ ಆಟದ ಪ್ರದರ್ಶನದಿಂದ ಆಕರ್ಷಕ ಆಟವನ್ನು ಆಡಿಯೂ, ಭೀತಿ ಉತ್ಪಾದಕ ತೀವ್ರಗತಿಯ ಬೌಲಿಂಗಿನಿಂದಲೂ, ಮಾರಕ ಸ್ಪಿನ್ ಬೌಲಿಂಗಿನಿಂದಲೂ, ಉಚ್ಚಮಟ್ಟದ ಫಿಲ್ಡಿಂಗ್ ಪ್ರದರ್ಶನದಿಂದಲೂ "ವಿಶ್ವದ ವಿಜಯಿಗಳು' ಎಂದು ಯಶಸ್ಸನ್ನು ಗಳಿಸಿರುವರು. 1962ರಲ್ಲಿ ಭಾರತದ ಯುವಕ, ಕ್ರಿಕೆಟ ತಂಡವು ಈ ದ್ವೀಪಗಳನ್ನು ಸಂದರ್ಶಿಸಿದ ಸಮಯದಲ್ಲಿ ಭಾರತದ ಸಾಮರ್ಥ್ಯವನ್ನು ಮಣ್ಣುಪಾಲು ಮಾಡಿರುವರು. ಅನಂತರ ಪ್ರಬಲ ಆಸ್ಟ್ರೇಲಿಯನ್ ಟೀಮಿನ ಪ್ರಾಬಲ್ಯವನ್ನು ಅರಿಸಿರುವರು. ಈ ಮೊದಲೇ ಯುವಕ ಪಾಕಿಸ್ತಾನಿ ಟೀಮನ್ನು ಧ್ವಂಸಗೊಳಿಸಿರುವರು. ಕ್ರಿಕೆಟಿನ ಪಿತರು ಆದ ಆಂಗ್ಲೇಯರನ್ನು ಇದೇ ಋತುವಿನಲ್ಲಿ ಸಂಪೂರ್ಣ ಸಂಹರಿಸಿರುವರು. ಹೀಗಾಗಿ ನಾಡದ್ದು ಹೇಮಂತ ಋತುವಿನಲ್ಲಿ ಭಾರತವನ್ನು ಸಂದರ್ಶಿಸಲಿರುವ ಪ್ರಬಲ ವೆಸ್ಟ ಇಂಡಿಸ್ ಕ್ರಿಕೆಟ ತಂಡವು ತಮ್ಮ ಧವಳ ಕೀರ್ತಿಯಿಂದ ಭಾರತದ ಮರ್ಧನಕ್ಕಾಗಿ ಸಿದ್ಧರಾಗಿರುವುದು.

ನಮ್ಮ ಹಿಂದಣ ಭೇಟಿಗಳು

ಇಂದಿನ ತನಕ ಭಾರತವು ವೆಸ್ಟ ಇಂಡಿಸ್ ವಿರುದ್ಧ 4 ಸಲ ಒಟ್ಟು 20 ನಿರ್ಣಾಯಕ ಪಂದ್ಯಾಟಗಳನ್ನು ಆಡಿದೆ. 1948-49ರಲ್ಲಿ ವೆಸ್ಟ ಇಂಡಿಸ್ ಟೀಮು ಪ್ರಥಮ ಬಾರಿ ಭಾರತವನ್ನು ಸಂದರ್ಶಿಸಿ 5 ನಿರ್ಣಾಯಕ ಪಂದ್ಯಾಟಗಳನ್ನು ಆಡಿರುವುದು. ಅನಂತರ 1952—53ರಲ್ಲಿ ಭಾರತವು ವೆಸ್ಟ ಇಂಡೀಸ್ ದ್ವೀಪಗಳನ್ನು ಸಂದರ್ಶಿಸಿ 5 ನಿರ್ಣಾಯಕ ಪಂದ್ಯಾಟಗಳನ್ನೂ, 1958-59ರಲ್ಲಿ ಪುನಃ ವೆಸ್ಟ ಇಂಡೀಸ್ ಟೀಮು ಭಾರತದ ಪ್ರವಾಸವನ್ನು ಕೈಕೊಂಡು 5 ನಿರ್ಣಾಯಕ ಪಂದ್ಯಾಟಗಳನ್ನೂ ಹಾಗೂ 1962-63ರಲ್ಲಿ ಭಾರತವು ವೆಸ್ಟ ಇಂಡಿಸ್ ದ್ವೀಪಗಳನ್ನು ಸಂದರ್ಶಿಸಿ 5 ನಿರ್ಣಾಯಕ ಪಂದ್ಯಾಟಗಳನ್ನೂ ಆಡಿರುವುದು. ಈ ಒಟ್ಟು 20 ನಿರ್ಣಾಯಕ ಪಂದ್ಯಾಟಗಳಲ್ಲಿ ವೆಸ್ಟಇಂಡಿಸ್ ತಂಡವು 10 ವಿಜಯಗಳನ್ನು ಗಳಿಸಿತ್ತು. ಮತ್ತು 10 ಪಂದ್ಯಾಟಗಳು ಡ್ರೋದಲ್ಲಿ ಮುಕ್ತಾಯವಾಗಿದ್ದವು. ಈ ಡ್ರೋದಲ್ಲಿ ಮುಕ್ತಾಯವಾದ ಪಂದ್ಯಾಟಗಳಲ್ಲಿ ಒಂದು ಭಾರತದಲ್ಲಿ ನಡೆದ ಪಂದ್ಯಾಟ ಮತ್ತು 2 ವೆಸ್ಟ ಇಂಡಿಸ್‌ನಲ್ಲಿ

(ಎಂಟನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 120/66

ವಾದಿ —ಮಹಾಬಲ ಸೆಟ್ಟಿ.

ಪ್ರತಿವಾದಿರು ಕೊರಗಮ ಹೆಗ್ಡೆತಿ ಕೂಡಾ ೬ಜನರು.

4ನೇ ಪ್ರತಿವಾದಿಗೆ ತಿಳಿಸುವದೇನೆಂದರೆ,

4ನೇ ಪ್ರತಿವಾದಿ, ನಾರಾಯಣ ಶೆಟ್ಟಿ. ತುಂಗಮ ಸೆಟ್ಟಿ ಮಗ, ಮೊಳಹಳ್ಳಿ ಗ್ರಾಮಸ.

ವಾದಿಯು ಗೇಣಿ ಬಾಕಿ ಬಗ್ಗೆ ಮೇಲ್ಕಂಡ ದಾವೆಯನ್ನು ನಿಮ್ಮ ವಗೈರೆ ಮೇಲೆ ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾರೀಕು 8—9—66ಕ್ಕೆ ತನಿಖೆಗೆ ಮುಂದೋಡಾಗಿರುತ್ತದೆ. ಆದುದರಿಂದ ಸದ್ರಿ ದಾವೆಯಲ್ಲಿ ನಿಮ್ಮ ಉದಾಹರಣೆಯಿದ್ದ ಪಕ್ಷದಲ್ಲಿ ಸದ್ರಿ ತಾರೀಕು ಹಗಲು 11ಗಂಟೆಗೆ ಮೇಲಂಡ್ಕ ಕೋರ್ಟಿನಲ್ಲಿ ನೀವು ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಮಿಕ್ಕೆ ತಪ್ಪಿದಲ್ಲಿ ಸದ್ರಿ ದಾವೆಯನ್ನು ನಿಮ್ಮ ಗೈರುಹಾಜರಿಯಲ್ಲಿ ತೀರ್ಪು ಮಾಡಲಾಗುವದೆಂತ ಈ ಮೂಲಕ ತಿಳಿಸಲಾಗುತ್ತದೆ.

M. Madhava Rao.
Advocate for Pltf.

ತಾರೀಕು 13—8—66,
ಮೊಕ್ಕಾಂ: ಕುಂದಾಪುರ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. I. A. 1150/66
O. S. 455/64.

ಸೋಮಪ್ಪ ಗೌಡ —ಅರ್ಜಿದಾರ ವಾದಿ.

ಮತ್ತು

ಲಿಂಗಪ್ಪ ಗೌಡ ಕೂಡಾ—ಎದುರು ಪ್ರತಿವಾದಿರು

10ನೇ ಪ್ರತಿವಾದಿ ಅಬ್ಬಾಸ್ ಬ್ಯಾರಿ. ಬನ್ನಂಗಳ ಮಮ್ಮದೆ ಬ್ಯಾರಿಗಳ ಮಗ, ಕಾಸರಗೋಡು ತಾಲ್ಲೂಕು ಅರಿಕ್ಕಾಡಿ ಗ್ರಾಮದಲ್ಲಿ. ಇವರಿಗೆ ಕೋರ್ಟು ಪ್ರಾಕಾರ ತಿಳಿಸುವುದೇನೆಂದರೆ,

ಮೇಲ್ಕಂಡ ಡಿಕ್ರಿ ಮೇಲೆ ವಾದಿಯು ದಾವಾ ಆಸ್ತಿ ವಾಂಟದ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಮಾಡಿದ ಮೇಲ್ಕಂಡ ಅರ್ಜಿಯು ತಾ. 5—9—66ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹ ಯಾ ವಕೀಲರ ದ್ವಾರಾ ಹಾಜರಾಗಿ ಉದಪಡಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿದೆ.

(Sd.) C. S. Shastry,
Vakil for Petitioner.

ಪುತ್ತೂರು, ತಾ. 13-8-66.

ನಿಮ್ಮ ಹಣ ಸರ್ಪಗಾವಲಿನಲ್ಲಿ ....

ಹಿಂದಿನ ಕಾಲದ ತುಂಡರಸರು, ಧನಿಕರು, ವರ್ತಕರು ತಮ್ಮ ಮುಂದಿನ ಪೀಳಿಗೆ ಯವರ ಅನುಭೋಗಕ್ಕಾಗಿ ನಿಧಿಯನ್ನು ಸಂಚಯಿಸಿಟ್ಟು ಕೊಂಡಿದ್ದರು. ರಾಜ್ಯಗಳು ಪಾಳು ಬಿದ್ದಾಗ ಅವು ಭೂಗರ್ಭ ಸೇರಿಕೊಂಡವು. ಮಣ್ಣಿನಲ್ಲಿ ಹೂತಿರುವ ಈ ಕೊಪ್ಪರಿಗೆಗಳು, ಅವುಗಳ ಒಡೆಯರು ಅಪೇಕ್ಷಿಸಿದ್ದ ಮಂದಿಗಲ್ಲದೆ ಅನ್ಯರ ವಶ ಹೋಗದಂತೆ ಸರ್ಪಗಳು ಅವುಗಳ ಸುತ್ತ ಕಾವಲಿರಿಸಿಕೊಂಡಿವೆಯೆಂಬ ಪ್ರತೀತಿಯಿದೆ. ಈ ಸರ್ಪಗಾವಲು ಸಂಪತ್ತಿನ ಭದ್ರತೆಗೆ ನಿಸರ್ಗದ ವರವೆನಿಸಿದೆ.

ನಮ್ಮ ಕಾಲದ ಜನರು ತಾವು ಗಳಿಸಿ, ಕೂಡಿಟ್ಟ ಹಣಕ್ಕೆ
ಸರ್ಪಗಾವಲಿನಷ್ಟೇ ಸುರಕ್ಷಿತತೆ ಬಯಸುವುದು ಸಹಜ.

ಸಿಂಡಿಕೇಟ್ ಬ್ಯಾಂಕಿನ ಯಾವುದಾದರೊಂದು ಉಳಿತಾಯ ಖಾತೆಯಲ್ಲಿ ನೀವು ಕೂಡಿಟ್ಟ ಹಣ ಸರ್ಪಗಾವಲಿನಲ್ಲಿರಿಸಿದ ಸಂಪತ್ತಿನಂತೆ. ಅದು ಅಷ್ಟು ಭದ್ರವಾಗಿಯೂ ಸುರಕ್ಷಿತವಾಗಿಯೂ ಉಳಿದು, ಕಾಲ ಸರಿದಂತೆ ಬೆಳೆದು, ನಿಮ್ಮ ಮುಂದಿನ ದಿನಗಳ ಆವಶ್ಯಕತೆಗೆ ಇಲ್ಲವೆ ನಿಮ್ಮ ಮಕ್ಕಳ ಜೀವನಕ್ಕೆ ಅದು ದೊರಕುವುದು.

ಸಂಪತ್ತಿನ ಭದ್ರತೆ ಮತ್ತು ಸುರಕ್ಷಿತತೆಗೆ
ನೀವು ಆರಿಸಬೇಕಾದ ಸಂಸ್ಥೆ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲು ಮೈಸೂರು ರಾಜ್ಯ.



ಜೆಮಿನಿ ೧೦ ಉಪಗ್ರಹದ ಯಾತ್ರಿಗಳು ಜಾನ್ ಯಂಗ್ (ಎಡ) ಮತ್ತು ಮೈಕಲ್ ಕೋಲಿನ್ಸ್ (ಬಲ)

ಕೆಂಪು ಕೋಟೆ—

ಭಾರತದ ಚರಿತ್ರೆಯನ್ನು ಬರೆಯುವ ಮಹತ್ವಪೂರ್ಣ ಸ್ಥಾನ.

—ಮೊಗಲ ಬಾದಶಹ ಶಹಜಹಾನನು ಅದನ್ನು ಯಾವ ಉದ್ದೇಶದಿಂದ ಕಟ್ಟಿಸಿದ್ದನು? ಮೃತ ಮಡದಿಯ ಶವದ ಮೇಲೆ ವಿಶ್ವಸುಂದರ ತಾಜಮಹಲನ್ನು ನಿರ್ಮಿಸಿದ ಈ ಕಲಾಪ್ರಿಯ ಮಹಾರಾಜ ಕೆಂಪು ಕೋಟೆಯನ್ನು ಬರಿಯ ಕೋಟೆಯೆಂದೇ ಕಟ್ಟಿಸಿರಬಹುದೆ? ಆತನ ಸುಪುತ್ರ ಅವರಂಗಜೇಬನ ಕಾಲದಲ್ಲಿಯೇ ಶಿಥಿಲವಾಗುತ್ತ ಬಂದ ಕೆಂಪು ಕೋಟೆಯ ಪ್ರಭುತ್ವ—ಮಹತ್ವ ಮುಂದೆ ಜೀರ್ಣ ಶೀರ್ಣವಾಯಿತು—ಭಾರತ ಪರಹಸ್ತಗತವಾಯಿತು. ಕೆಂಪುಕೋಟೆ ಕುಸಿಯತೊಡಗಿತು.

ಭಾರತವು ಸ್ವತಂತ್ರವಾದೊಡನೆಯೇ ಕೆಂಪುಕೋಟೆಗೆ ಹೊಸ ಜೀವಕಳೆ ಬಂತು. ೧೯೪೭ರ ಆಗಸ್ಟ್ ೧೫ರಿಂದ ನಿರಂತರ ೧೭ ವರ್ಷಗಳ ಕಾಲ ಪಂಡಿತ ಜವಾಹರಲಾಲರು ಭಾರತದ ತ್ರಿವರ್ಣ ಪತಾಕೆಯನ್ನು ಹಾರಿಸಿದರಿಲ್ಲಿ.

ಕಳೆದ ವರ್ಷ ಲಾಲ ಬಹದ್ದೂರರು ಧ್ವಜ ಹಾರಿಸಿದ್ದರ ಈ ವರ್ಷ ನೆಹರು ಪುತ್ರಿ ಇಂದಿರಾಗಾಂಧಿಯವರು ಕೆಂಪು ಕೋಟೆಯನ್ನು ಏರಿದರು. ೧೭ ವರ್ಷಗಳ ಕಾಲ ನಿರಂತರ ತನ್ನ ತಂದೆಯು ಹಾರಿಸಿದ್ದ ರಾಷ್ಟ್ರಧ್ವಜವನ್ನು ಈಗ ಮಗಳು ಹಾರಿಸಿದಳು—ಇದೂ ಒಂದು ಚರಿತ್ರೆಯ ಘಟನೆಯಾಗದುಳಿಯದು.

ಪಂಡಿತ ನೆಹರು ವರ್ಷ ವರ್ಷವೂ ಹೊಚ್ಚ ಹೊಸ ವಿಚಾರಗಳನ್ನು ಜನರ ಮುಂದೆ ಇಡುತಿದ್ದರು. ಜನತೆಯು ಅವನ್ನು ಪ್ರಚಂಡ ಹರ್ಷಾತಿರೇಕದಿಂದ ಸ್ವಾಗತಿಸುತಿತ್ತು. ಮುಂದಿನ ವರ್ಷ ತಮ್ಮ ಈ ನೆಚ್ಚಿನ ನಾಯಕ ಇನ್ನೂ ಪ್ರಗತಿಶೀಲ ವಿಚಾರಗಳೊಂದಿಗೆ ತನಗೆ ಭೆಟ್ಟಿ ಕೊಡುವನೆಂಬ ಭರವಸೆ ಜನತೆಗಿತ್ತು. ೧೭ ವರ್ಷಗಳ ಕಾಲ ಸಫಲವಾದ ಅವರ ವಿಶ್ವಾಸ ವಿಧಿಗೆ ಸರಿಬರಲಿಲ್ಲ, ಆದು ಪಂಡಿತರನ್ನು ಕಬಳಿಸಿ ಹೋಯಿತು.

ಮೊತ್ತಮೊದಲಿಗೆ ಇಂದಿರಾ ಗಾಂಧಿ ಇತಿಹಾಸ ಪ್ರಸಿದ್ಧ ಕೆಂಪು ಕೋಟೆಯೇರಿದರು. ಜನರ ಹರ್ಷಾತಿರೇಕ ಸಹಜವಾಗಿತ್ತು. ಪ್ರಚಂಡ ಬಹುಮತ ಗಳಿಸಿ ಅವಿಶ್ವಾಸ ಸೂಚನೆಯ ಒರೆಗಲ್ಲಿನಲ್ಲಿ ಒರೆಯಿಸಿಕೊಂಡು ಬಂದ ಇಂದಿರಾ ಸರಕಾರದ ಮೇಲೆ ಜನತೆಗೆ ವಿಶ್ವಾಸವಿಲ್ಲವೆಂದರೆ ಆಶ್ಚರ್ಯವಲ್ಲವೆ? ಮುಂದಿನ ಫೆಬ್ರುವರಿಯಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿದ್ದು ಕೆಲವರು ಶ್ರೀಮತಿ ಇಂದಿರಾ ಗಾಂಧಿಯವರು ಮುಂದಿನ ಆಗಸ್ಟ ೧೫ರಂದು ಕೆಂಪು ಕೋಟೆಯನ್ನೇರಲಿರುವರೆ ಎಂಬ ಪ್ರಶ್ನೆ ಕೇಳುತ್ತಾರೆ. ಹೆಚ್ಚಿನವರು ಹೌದು ಎಂದೇ ಉತ್ತರಿಸುತ್ತಾರೆ.

ತನ್ನ ತಂದೆ ಜವಾಹರಲಾಲರು, ಪೂರ್ವದ ಲಾಲ ಬಹದೂರರು ಎದುರಿಸಬೇಕಾಗಿರದಂತಹ ಸಮಸ್ಯೆಗಳು ಇಂದಿರಾ ಎದುರಿಸಬೇಕಾಗಿದೆ— ಅವರಿಬ್ಬರಿಗಿಂತ ಹೆಚ್ಚಾಗಿ ತಲೆಕೆಡಿಸಿಕೊಳ್ಳಬೇಕಾಗಿದೆ.

ಆಕೆಯ ಹಿಂದಿನವರು ಜನತೆಯ ಐಕ್ಯ ಮತ್ತು ಸಹಕಾರಗಳನ್ನು ಬಯಸುತಿದ್ದರು. ವಿದೇಶೀಯರ ಆಕ್ರಮಣ ಭೀತಿಯು ಅವರಿಗೆ ನೆರವಾಗಿತ್ತು. ಚೀನೀಯ ಆಕ್ರಮಣವನ್ನು ಪಂಡಿತ ನೆಹರೂ ಎದುರಿಸಿದ್ದರೆ, ಪಾಕ್ ಆಕ್ರಮಣವನ್ನು ಲಾಲ್ ಬಹದ್ದೂರ್ ಹಿಮ್ಮೆಟ್ಟಿಸಿದರು.

ದೇಶದ ಸಂರಕ್ಷಣೆಯ ಕಾರ್ಯದಲ್ಲಿ ಇಡಿಯ ದೇಶ ಒಂದಾಗಲು ಈ ಆಕ್ರಮಣ ಭೀತಿಯೇ ಸಾಕಾಗಿತ್ತು. ದೇಶಕ್ಕೆ ದೇಶವೇ ನಾಯಕರ ನೆರವಿಗೆ ಸಿದ್ಧವಾಗಿತ್ತು. ಅವರ ಕರೆಗೆ ಓಗೊಟ್ಟಿತ್ತು.

ಇಂದಿರೆಯ ಮುಂದಿರುವ ಸಮಸ್ಯೆಗಳ ಸ್ವರೂಪವೇ ಬೇರೆ. ಮಿತಿಮೀರಿದ ಸಂರಕ್ಷಣಾ ವೆಚ್ಚ, ದೇಶದ ಆರ್ಥಿಕ ಬಲದಲ್ಲಿ ಹ್ರಾಸ—ಇವುಗಳಿಂದಾಗಿ ಆರ್ಥಿಕ ಸಂಗ್ರಾಮ ಪ್ರಾರಂಭವಾಗಿದೆ ದೇಶದಲ್ಲಿ. ಇದನ್ನು ಎದುರಿಸುವ ಎದೆಗಾರಿಕೆ ಇಂದಿರೆ ತೋರಿಸಬೇಕು. ಇದನ್ನು ಅರಿತುಕೊಂಡೇ ಇಂದಿರೆ ಗದ್ದುಗೆಯೇರಿದ್ದಾರೆ.

'ಚಿತ್ರಮಯ ತಂದೆಯ ಚಿತ್ರಮಯ ಮಗ" ಎಂದು ಪಂ. ಜವಾಹರಲಾಲರ ಬಗ್ಗೆ ಒಬ್ಬ ಇತಿಹಾಸಕಾರ ಬರೆದ. ಇದು ಸತ್ಯ. ಸ್ವಾತಂತ್ರ್ಯ ಸಮರದ ವೇಳೆ ನಮ್ಮ ದೇಶದಲ್ಲಿ ಪ್ರಬಲ ನಾಯಕರು ಹಲವರಿದ್ದರು.

ಅಥವಾ ಹೀಗೂ ಹೇಳಬಹುದು: ಹೋರಾಟದ ವೇಳೆ ಅನೇಕ ನಾಯಕರ ಅಗತ್ಯ ಬೀಳುತ್ತದೆ. ಈಗ ಪ್ರಧಾನಿಯಾಗಲು ಒಬ್ಬರೇ ಸಾಕಾಗುತ್ತದೆ.

ಇಂದಿರೆಯ ಬಗ್ಗೆ ಹೇಳುವುದಾದರೆ ಆಕೆಯು ತಂದೆಯ ಮಗಳೆ? ತಂದೆಯಂತ ಎರಡು ಪೀಳಿಗೆಯಲ್ಲೂ ಯಶ ಗಳಿಸಬಲ್ಲ ವ್ಯಕ್ತಿಗಳು ಅಪರೂಪ, ಅವರಿಗೆ ಅಂತಹ ಅವಕಾಶವೂ ದೊರೆಯಲಾರದು.

ಮೋತಿಲಾಲ— ಜವಾಹರಲಾಲರ ನಡುವೆ ಭಿನ್ನತೆಯಿತ್ತು. ಜವಾಹರ—ಇಂದಿರೆಯರಲ್ಲಿ ಏಕತೆ ಹೆಚ್ಚಿ?.

ಮೂವತ್ತು ಸೆಂಟಿ ಮೀಟರ್ ಉದ್ದ ಹದಿನೈದು ಸೆಂಟಿ ಮೀಟರ್ ಎತ್ತರದ ಚಂದ್ರನ ಮೈಯಲ್ಲಿನ ಬಂಡೆ ಮತ್ತಿತರ ಕಲ್ಲು ಚೂರುಗಳ ಚಿತ್ರ. ಬಿರುಗಾಳಿಗಳ ಸಾಗರದ ಬಳಿಯಲ್ಲಿ ಈ ಚಿತ್ರವನ್ನು ತೆಗೆಯಲಾಗಿತ್ತು.

ಕೇವಲು

ಇಂದಿರೆಯ ದ್ವಾ

ಅವಿಶ್ವಾಸದ ಒರೆಗಲ್ಲಿನಲ್ಲಿ ...
ಅವರ ...

ಜವಾಹರಲಾಲರು ಪಾರ್ಲಿಮೆಂಟನ್ನು ಪ್ರವೇಶಿಸುವಾಗಲೇ ಸಭೆಯಲ್ಲಿ ವಿದ್ಯುತ್ ಸಂಚಾರವಾಗುತಿತ್ತು ತಮ್ಮ ಒಂದೇ ನೋಟದಿಂದ ಇಡಿ ಸಭೆಯ ಆಗುಹೋಗುಗಳನ್ನು ಅವರು ಅರಿತುಕೊಳ್ಳುತಿದ್ದರು. ವಿರೋಧಿ ಪಕ್ಷೀಯರು ಅವರನ್ನು ಹೆದರಿಸುತ್ತಿದ್ದಿರಬಹುದು, ದ್ವೇಷಿಸುತ್ತಿದ್ದಿರಬಹುದು. ಆದರೆ, ಹೃತ್ಪೂರ್ವಕ ಮೆಚ್ಚುತಿದ್ದರು—ಇದು ನಿಸ್ಸಂಶಯ.

ಇಂದಿರಾ ಗಾಂಧಿಯವರ ಪರಿಸ್ಥಿತಿ ಹೀಗಿರುವುದಿಲ್ಲ.

—ಆಕೆಯ ತಂದೆ ಪಾರ್ಲಿಮೆಂಟನ್ನು ಪ್ರೀತಿಸುತಿದ್ದರು ಲೋಕ ಸಭೆಯ ನಾಯಕತ್ವವನ್ನೂ ತಾವೇ ಇಟ್ಟುಕೊಂಡಿದ್ದರು. ಪ್ರಶ್ನೋತ್ತರ—ಚರ್ಚೆಯ ವೇಳೆ ಏಕಮನಸ್ಕರಾಗಿರುತಿದ್ದರು. ತಮ್ಮ ಮಂತ್ರಿಗಳ ರಕ್ಷಣೆಗೆ ಅಯಾಚಿತವಾಗಿಯೇ ಧಾವಿಸುತಿದ್ದರು.

ಇಂದಿರೆ ತನ್ನ ತಂದೆ ಅಥವಾ ಲಾಲ ಬಹದೂರರು ಪಾರ್ಲಿಮೆಂಟಿನಲ್ಲಿ ಉಪಯೋಗಿಸುತಿದ್ದ ಸಮಯದ ಅರ್ಧಾಂಶವನ್ನೂ ಕಳೆಯುವುದಿಲ್ಲ. ತನ್ನ ತಂದೆಯು ೧೭ ವರ್ಷಗಳ ಕಾಲ ಮಂಡಿಸಿದ್ದ ಆಸನದ ಪಕ್ಕದಲ್ಲಿ ಕೂತುಕೊಳ್ಳುತ್ತಾರೆ—ನಾಯಕತ್ವವನ್ನು ಬೇರೆಯವರಿಗೆ ಬಿಟ್ಟುಕೊಟ್ಟಿದ್ದಾರೆ.

—ತೀರ ಅನಿವಾರ್ಯ ಪ್ರಸಂಗಬಾರದೆ ಮಾತಾಡಲು ಎದ್ದು ನಿಲ್ಲುವುದೂ ಇಲ್ಲ. ಇದಕ್ಕೆ ಕಾರಣವೂ ಇಲ್ಲದಿಲ್ಲ. ತನ್ನ ಮಂತ್ರಿಗಳು ತಮ್ಮ ಸಮರ್ಥನೆಯನ್ನು ರಕ್ಷಣೆಯನ್ನು ತಾವೇ ಮಾಡಿಕೊಳ್ಳುವಲ್ಲಿ ಸಮರ್ಥರಾಗಬೇಕು.

—ಸ್ವಾವಲಂಬನೆಯು ಪಾರೆ ಮಂತ್ರಿಗಳಿಗೆ ಮೊದಲಾಗಬೇಕು.

ಜೆಮಿನಿ ೧೦ ಉಪಗ್ರಹದಲ್ಲಿ
ಮೀಟರ್ ಎತ್ತರದಲ್ಲಿ ಜೆಮಿ

ಂಪು ದೀಪ

...ಾಗಲವಾಯಿತು

...ಂದಿರೆ ಶುದ್ಧ ಬಂಗಾರವಾದರು—
...ಮವಾಗಲಿ.

—ಪಂಡಿತ ನೆಹರುರಂತಹ ಸಿದ್ಧ ಹಸ್ತ ರಾಜಕಾರಣಿ ಪ್ರತಿ ತಲೆಮಾರಿನಲ್ಲೂ ಬರುವುದು ಸಾಧ್ಯವಿಲ್ಲ. ಜನತೆಯ ಹಲವು ತಲೆಮಾರಿನ ಭಾಗ್ಯವಿಶೇಷದಿಂದ ಅತ್ತಿಯ ಹೂವಂತೆ ಅಸರೂ ಪಕ್ಕೆ ಬರುತ್ತಾರೆ.

ತಂದೆಯಂತೆ ಮಗಳೂ ಎಡಕಾಂಗ್ರೆಸ್ಸಿನವಳು ಎನ್ನುವವರು ಕೆಲವರಿದ್ದಾರೆ. ಆದುದರಿಂದಲೇ ತಾವು ಆಕೆಯನ್ನು ಬೆಂಬಲಿಸುತ್ತಿರುವುದಾಗಿಯೂ ಅವರು ಘೋಷಿಸುತ್ತಾರೆ.

—ಇಂದಿರೆ ಎಡ—ಬಲ—ನಡು ಯಾವುದು? ಯಾರೂ ಹೇಳಲಾರರು. ಲಾಲ್ ಬಹದೂರ್ ಹೇಳುತ್ತಿದ್ದರು."ನಾನು ಕಾಂಗ್ರೆಸಿಗ" ಎಂದು. ಇಂದಿರೆಯೂ ಈ ಸಂಬಂಧದಲ್ಲಿ ಶಾಸ್ತ್ರಿಯವರಿಗೆ ಹತ್ತಿರದವರು. ಪಕ್ಷದಲ್ಲಿ ಶಾಸ್ತ್ರಿ ದಾರಿ ಹಿಡಿದು ಯಶಗಳಿಸುತ್ತಾರೆ. ವಿರೋಧಿ ಪಕ್ಷಗಳನ್ನು ಶಾಸ್ತ್ರಿಯವರಂತೆ ಎದುರಿಸಲು ಪ್ರಯತ್ನಿಸುತ್ತಾರೆ.

ಇಂದಿರೆಯ ಮುಂದೆ ಬಂದ ಸಮಸ್ಯೆಗಳು ಒಂದೆರಡಲ್ಲ. ಬರಿಯ ಎಂಟು ತಿಂಗಳಲ್ಲಿ ಹದಿನಾರು ಮಹತ್ವದ ಪ್ರಶ್ನೆಗಳು—ಸತ್ವ ಪರೀಕ್ಷೆಯ ಪ್ರಶ್ನೆಗಳು—ಆಕೆಯ ಮುಂದೆ ನಿಂತುವು.

ತಾಷ್ಕೆಂಟ್ ಘೋಷಣೆಯನ್ನು ಕಾರ್ಯರೂಪಕ್ಕೆ ತರುವ ಹೊಣೆಗಾರಿಕೆ, ಕೇರಳದ ಆಹಾರ ಸಮಸ್ಯೆಯ ತುರುಸಿನ ಚರ್ಚೆ, ಪಶ್ಚಿಮ ಬಂಗಾಳ ಬಂದ್, ಮಿಜೋ ಗುಡ್ಡಗಾಡಿನ ಕಿರುಕುಳ, ಬಸ್ತಾರದ ದುರಂತ—ಮಹಾರಾಷ್ಟ್ರ—ಕರ್ನಾಟಕ ಗಡಿ ವಿವಾದ, ಪಂಜಾಬ ವಿಭಜನೆ—ಇನ್ನು ಎಲ್ಲಕ್ಕಿಂತ ಹೆಚ್ಚಾಗಿ ರೂಪಾಯಿಯ ಅಪಮೌಲ್ಯ....

ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಅಧಿಕಾರ ಸೂತ್ರ ಚಾಲನೆಯೆಂದರೆ ಅಸಿಧಾರಾವ್ರತವಲ್ಲದೆ ಮತ್ತೇನು? ವಿರೋಧಿ ಪಕ್ಷಗಳ ತಾಳವನ್ನು ಕೇಳುವ ಅವಕಾಶವಾದರೂ ಎಲ್ಲಿದೆ?

ಇಂದಿರೆಯ ಒಂದು ಗುಣ ಮೆಚ್ಚತಕ್ಕದ್ದು. ಅನುಭವದಿಂದ ತಿಳಿದುಕೊಂಡ ಜ್ಞಾನಾಂಶ ಕಡಿಮೆಯಾದರೂ ಆಕೆಯಲ್ಲಿ ಮಿತಿಮೀರಿದ ಆತ್ಮ ವಿಶ್ವಾಸವಿದೆ—ಇದರ ಬಲದಿಂದಲೇ ಆಕೆ ಶೀಘ್ರ ನಿರ್ಧಾರಕ್ಕೆ ಬರಲು ಶಕ್ತರಾಗಿದ್ದಾರೆ.

ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿಮಂಡಳವನ್ನು ಎದುರಿಸುವುದು, ಬೊಂಬಾಯಿಯ ವಿಭಜನೆ ಮೊದಲಾದ ಮಹತ್ವಪೂರ್ಣ ನಿರ್ಧಾರಗಳನ್ನು ಕಾಂಗ್ರೆಸ್ ಮಾಡಿದಾಗ ಶ್ರೀಮತಿ ಗಾಂಧಿಯವರು ಪಕ್ಷದ ಅಧ್ಯಕ್ಷರಾಗಿದ್ದರು—ಶೀಘ್ರ ನಿರ್ಧಾರದ ಗುಣದಿಂದಲೇ ಇವು ಸಾಧ್ಯವಾಯಿತು.

ಶ್ರೀಮತಿ ಗಾಂಧಿಯವರಿಗಿಂತ ಪ್ರಾಯದಲ್ಲಿ, ಅನುಭವದಲ್ಲಿ, ಬುದ್ಧಿಯಲ್ಲಿ ಹಿರಿಯರಾದ ಪುರುಷರೂ ಸ್ತ್ರೀಯರೂ ದೇಶದಲ್ಲಿ ಅನೇಕರಿದ್ದಾರೆ. ಆದರೆ, ಇಂದಿರೆಯಂತೆ ಹೃದಯಾಂತರಾಳದಿಂದ ಕಾರ್ಯವೆಸಗುವವರು ಕಡಿಮೆ. ಹುಟ್ಟಿದಂದಿನಿಂದಲೇ ಸ್ವಾತಂತ್ರ್ಯ ಹೋರಾಟದ ಗಾಳಿ ಉಸಿರಾಡಿದ ಈ ಭಾರತೀಯ ಪುತ್ರಿ ಸ್ವತಂತ್ರ ಭಾರತದಲ್ಲಿ ಪ್ರಥಮ ಮಹಿಳಾ ಪ್ರಧಾನಿಯಾಗುವ, ಪ್ರಥಮ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆಯಾಗುವ ಗೌರವ ಪಡೆದುದು ವಿಸ್ಮಯಕಾರಕವಲ್ಲ.

ಪ್ರಧಾನಿಯಾಗಿ ಆಯ್ಕೆಗೊಂಡೊಡನೆಯೇ ಆಕೆಯನ್ನು ಕೇಳಿದರು: ಮಹಿಳಾ ಪ್ರಧಾನಿಯಾಗಿ ಆಯ್ಕೆಗೊಂಡುದರಿಂದ ಹೇಗೆ ಅನಿಸುತ್ತದೆ?

ಅವರ ಉತ್ತರ ಹೀಗೆ: ನಮ್ಮ ಸಂವಿಧಾನದಲ್ಲಿ ಎಲ್ಲರೂ ಸಮಾನರು ಲಿಂಗ ಜಾತಿ—ಮತ-ಧರ್ಮ ಯಾವ ಭೇದವೂ ಅಗಣ್ಯ. ನಾನು ದೇಶದ ಪ್ರಥಮ ಸೇವಕಿ.

ಎಂಟು ತಿಂಗಳುಗಳಿಗೆ ಮೊದಲು ಇಂದಿರಾ ಹೇಳಿದಂತೆ ಇಂದಿಗೂ ಆಕೆ ದೇಶದ ಪ್ರಥಮ ಸೇವಿಕೆಯಾಗಿದ್ದಾರೆ. ಲೋಕಸಭೆಯಲ್ಲಿ ಪ್ರಚಂಡ ವಿಶ್ವಾಸ ಮತಗಳಿಸಿ ತನ್ನ ಗಾದಿಯನ್ನು ಅಗಲಿಸಿಕೊಂಡಿದ್ದಾರೆ;

ಸ್ವಾತಂತ್ರ್ಯಪೂರ್ವ ದಿನಗಳಲ್ಲಿದ್ದ ಉತ್ಸಾಹವನ್ನು ಪುನಶ್ಚೇತನಗೊಳಿಸಿ ದೇಶವು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳಿಗೆ ಐಕ್ಯ ಹಾಗೂ ದೃಢ ನಿರ್ಧಾರದಿಂದ ಎದೆಯೊಡ್ಡಿ ಯಶಗಳಿಸಬೇಕು—ಇದು ಇಂದಿರೆಯ ಇಂಗಿತ. ಸಮಾಜವಾದ ಮಾದರಿಯ ಸಮಾಜ ರಚನೆಗೆ ಇದುವೇ ತಾರಕ.

ಮಹಾತ್ಮಾ—ಪಂಡಿತ—ಬಹದೂರ ತೋರಿದ ದಾರಿಯಲ್ಲಿ ಗಾಂಧಿ ನಡೆಯುತ್ತಾರೆ. ದೇಶ ಅವರಿಗೆ ಸಹಯೋಗ ನೀಡಬೇಕು.



ಜೂನ್ ೨ರಂದು ಚಂದ್ರನ ಮೈಯಲ್ಲಿ ತಂಗಿದ್ದ ಚಾರಿತ್ರಿಕ ದಾಖಲೆ ಸ್ಥಾಪಿಸಿದ ಉಪಗ್ರಹ ಸರ್ವೇಯರ್ ಗಿರ ಮಾದರಿಯಿದು.

ಮಂತ್ರಿಗೆ ಮನವಿ

ಸ್ವಾತಂತ್ರ್ಯ ಬಂತೆಂದು ಅಂದು ಹಿಗ್ಗಿದ ನಾವೆ
ಪರತಂತ್ರ್ಯ ಸವಿ ನೆನಹ ಮೆಲುಕಾಡಲಾಯ್ತು!
ಕ್ರಾಂತಿ ಹಿಂಸೆಗಳನ್ನು ತೊಡೆವ ಸತ್ಯಾಗ್ರಹವು
ಹೊಟ್ಟೆ ಬಟ್ಟೆಗು ತೊಡಗಿ ಕಾಲಕಸವಾಯ್ತು!

ಕೊಡಿರನ್ನ ವಸತಿ ಬಟ್ಟೆಗಳೆಂದು ಕೇಳಿದರೆ
ಕೊಡುವರವರೊಂದಾಗಿ ಅಂಕೆ ಸಂಖ್ಯೆಗಳ
ಪರದೇಶಗಳ ಬೇಡಿ ಸಂದ ಸಾಲಗಳಲ್ಲಿ
ನಡೆಸಿದಾ ಯೋಜನೆಗಳಾಯ್ತು ಪತ್ರಗಳ!

ಈ ಸಮಸ್ಯೆಗಳನ್ನು ಬಿಡಿಸಲಾರದ ಮಂತ್ರಿ
ಹೆಚ್ಚಿಸುವೆಯೇಕೆ ಬರಿದವುಗಳನ್ನು?
'ಅಭಿವೃದ್ಧಿ' 'ಮುಂದರಿಕೆ' ಎಂದೇನೊ ಹೇಳುತಲಿ
ಕೊಲ್ಲುತಿಹೆಯೇಕೆಂತು ಬಡ ಜನರನು!

ರಾಜ ಭವನದಿ ನಿಂತು ಪ್ರಶ್ನೆಗುತ್ತರ ಕೊಡಲು
ರಾಜನಾದೆಯ ಸಚಿವ? ರಾಜ್ಯಾಳುವೆಯ?
ಮಾತು ಮಾತಿಗೆ ತಕ್ಕ ಮಾತು ಕೋಟೆಗಳಂಟು
ಮಾತಿನಾ ಬಲೆ ರಾಜಕೀಯವೆನ್ನುವೆಯ?

ರಾಮ ರಾಜ್ಯದ ಕನಸು, ಗಾಂಧಿ ತೋರಿದ ಹಾದಿ
ಬಾಯ ಬರಿಯಾದರ್ಶ ದೇಶದುದ್ಧಾರ?
ಬಡ ಜನರ ಸುಲಿದು ಹೇರಿದ ತೆರಿಗೆ ಹಣದಿಂದ
ಲಾಭಕೋರರ ಜತೆಗೆ ನಿನ್ನ ಸಿಂಗಾರ?

ಓಟು ಬೇಟೆಗೆ ಬರುವ ನಿನ್ನ ಬಣ್ಣವ ...
ಸೀಟು ಮಂತ್ರಿಯ ಸಿಗಲು ನೀನೆ ಬದಲು!
ಮರೆಯದಿರು ಜನರಿಂದ ಜನರದೇ ಸರಕಾರ
ಬಹುದು ದಿನ ಈ ರಹಸ್ಯಗಳೆಲ್ಲ ಬಯಲು!

ನಿಸ್ವಾರ್ಥ ತ್ಯಾಗ ಸರಳತೆಗಳಿಗೆ ಗೌರವವು
ಗಾಂಧಿ ಶಾಸ್ತ್ರಿಗಳನ್ನು ಮರೆಯಬೇಡ!
ಕಾಯುವಳಿದರು ಕೀರ್ತಿ ಉಳಿವ ಆಶಿಸುನಿಟ್ಟು
ದುಡಿ; ದೇಶದುದ್ಧಾರಕಾಗಿ ನೋಡ!

—ಶ್ರೀ ಮಂಜೇಶ್ವರ ಭಾಸ್ಕರ ಭಂಡಾರಿ,
ಮಂಜೇಶ್ವರ.

...ಯಾನಾಂತರಕ್ಕೆ ಸಿದ್ಧರಾಗಿದ್ದಾರೆ. ಚಿತ್ರದಲ್ಲಿ ಭೂಮಿಯಿಂದ ೩೦೦ ಕಿಲೋ... ಮತ್ತು ಅಗೆನಾ ವಾಹನ (ಎಡ) ಹಾರುತ್ತಿರುವುದನ್ನು ಕಾಣಬಹುದು.

ನಮ್ಮ ಕ್ರಿಕೆಟ್ ಸಂದರ್ಶಕರು

(ಐದನೇ ಪುಟದಿಂದ)

ನಡೆದ ಪಂದ್ಯಾಟಗಳು ಭಾರತೀಯರಿಗೆ ಅನುಕೂಲವಾಗಿದ್ದು ಭಾರತವು ಜಯವನ್ನು ಸಾಧಿಸುವ ಸೌಲಭ್ಯವನ್ನು ಕಳೆದುಕೊಂಡಿತ್ತು. ಉಳಿದ ಪಂದ್ಯಾಟಗಳಲ್ಲಿ ಭಾರತವು ಬಹಳ ಲಜ್ಜಾಸ್ಪದವಾದ ಸೋಲನ್ನು ಅನುಭವಿಸಿರುವುದು.

ಭಾರತೀಯರ ಆಟದ ಪ್ರಗತಿ

ಈಗ ಭಾರತೀಯರ ಕ್ರಿಕೆಟ ಆಟದ ಮಟ್ಟವು ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ. ನಮ್ಮ ತಂಡವು ಇಂಗ್ಲೆಂಡು ಆಸ್ಟ್ರೇಲಿಯಾಗಳನ್ನು ಸೋಲಿಸಿ ತಮ್ಮ ಕ್ರಿಕೆಟ ಪ್ರತಿಷ್ಠೆಯನ್ನು ಸ್ಥಾಪಿಸಿರುವುದು. ಬರೇ ತೀವ್ರಗತಿಯ ಬೌಲಿಂಗ ಕ್ಷೇತ್ರ ಬಿಟ್ಟು ಉಳಿದ ಎಲ್ಲಾ ಕ್ಷೇತ್ರಗಳಲ್ಲಿ— ಬ್ಯಾಟಿಂಗ್, ಫಿಲ್ಡಿಂಗ್, ಬೌಲಿಂಗ ಇತರ ರಾಷ್ಟ್ರಗಳ ವಿರುದ್ಧ ತಮ್ಮ ಮೇಲ್ಮೆಯನ್ನು ತೋರಿಸಿರುವದು. ಅನೇಕ ವರ್ಷಗಳಿಂದ ಭಾರತದ ತಂಡಕ್ಕೆ ನುರಿತ ನಾಯಕರ ಕೊರತೆಯು ಇತ್ತು. ಈಗ ಪಟ್ವಾಡಿಯ ನವಾಬರು ಈ ಕ್ಷೇತ್ರದಲ್ಲಿ ಬರೇ ಎಳೆಪ್ರಾಯದಲ್ಲಿಯೇ ಯೋಗ್ಯ ನಾಯಕತ್ವವನ್ನು ಪ್ರದರ್ಶಿಸಿ ಹೆಸರನ್ನು ಗಳಿಸಿರುವರು. ಆಟಗಾರರಿಂದ ಉತ್ತಮ ಹೊಂದಾಣಿಕೆಯ ಆಟದ ಪ್ರಯೋಜನವನ್ನು ಗಳಿಸುವ ಶಕ್ತಿಯಿರುವ ನಾಯಕರಾಗಿರುವರು. ಇದು ಭಾರತೀಯರ ಸೌಭಾಗ್ಯವು. ಉತ್ತಮ ಸ್ಟ್ರೋಕ್ಸ ಆಟಗಾರರಾಗಿ ಕುಂದರಂ, ಜಯಸಿಂಹ, ಸರ್ದೇಸಾಯ್, ಹನುಮಂತ ಸಿಂಘ, ಪಟ್ವಾಡಿಯ ನವಾಬರು, ಬೋರ್ಡೆ, ವಿಜಯ ಮೆಹ್ರಾ, ಎಂಜಿನಿಯರ್, ಸುಬ್ರಮಣ್ಯಂ ಮೊದಲಾದವರು ಇರುವರು. ಇವರಿಗೆ ಯೋಗ್ಯ ರೀತಿಯ ಸಹಕಾರ ಕೊಡಲು ಸೂರ್ತಿ, ಕೃಪಾಲಸಿಂಘ್, ಸಲೀಮ ದುರ್ರಾನಿ, ನಾಡಕರ್ಣಿ ಮೊದಲಾದ ಪ್ರಸಿದ್ಧ ಆಲ್‌ರೌಂಡ ಆಟಗಾರರೂ, ಹಾಗೂ ಚಂದ್ರಶೇಖರ, ವೆಂಕಟ ರಾಘವನ್, ಬಾಲಗುಪ್ತೆ, ಪ್ರಸನ್ನ ಇವರೇ ಮೊದಲಾದ ಮಂದಗತಿಯ ಪೂರಕ ಸ್ಪಿನ್ ಬೌಲರುಗಳೂ ಇರುವರು. ಇಂಥ ಕ್ರಿಕೆಟ ಸಂಪತ್ತು ಭಾರತದಲ್ಲಿರುವುದರಿಂದ ಭಾರತವು ನಿರ್ಣಾಯಕ ಪಂದ್ಯಾಟಗಳಲ್ಲಿ ಇತರ ರಾಷ್ಟ್ರಗಳಿಗೆ ಮಣಿಯ ಬೇಕೆಂದಿಲ್ಲ.

ಭಾರತಕ್ಕೆ ಈ ಹೇಮಂತ ಋತುವಿನಲ್ಲಿ ಬರಲಿಕ್ಕಿರುವ ವೆಸ್ಟ್ ಇಂಡಿಸ್ ಕ್ರಿಕೆಟ ತಂಡವು ಎಲ್ಲಾ ಕ್ಷೇತ್ರಗಳಲ್ಲಿಯೂ ಬಹಳ ಸಮರ್ಥವಾಗಿರುವುದು. ಉಳಿದ ರಾಷ್ಟ್ರಗಳ ಪ್ರಮುಖ ಆಟಗಾರರಿಗೆ ಭಾರತವನ್ನು ಸಂದರ್ಶಿಸುವುದು ಅಂದರೆ ತಾತ್ಸಾರವು. ಆದರೆ ವೆಸ್ಟ ಇಂಡಿಸ್ ಆಟಗಾರರು ಭಾರತದ ಸಂದರ್ಶನವನ್ನು ಬಹಳ ಉತ್ಸಾಹದಿಂದ ನಿರೀಕ್ಷಿಸುತ್ತಾ ಇರುವರು. ಭಾರತಕ್ಕೂ ಈ ದ್ವೀಪಗಳ ನಿವಾಸಿಗಳಿಗೂ ನಿಕಟ ಸಂಬಂಧವು ಇದೆ. ಆದುದರಿಂದ ಅವರ ಆಟಗಾರರು ಇಂಥ ಸುಸಂದರ್ಭವನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಸ್ವಲ್ಪ ಸಮಯದ ಹಿಂದಿನ ವರೆಗೆ ಆಂಗ್ಲೇಯರೇ ವೆಸ್ಟ ಇಂಡಿಸ್ ಕ್ರಿಕೆಟ ತಂಡದ ನಾಯಕರಾಗಿರುವ ವಾಡಿಕೆಯಿತ್ತು. ಆದರೆ ಫ್ರೆಂಕಿ ವಾರೆಲ್‌ರಿಂದ ಈಗ ಕರಿ ಜನರೇ ನಾಯಕರಾಗಿ ಅವರ ತಂಡವು ಇನ್ನೂ ಪ್ರಬಲವಾಗಿದೆ. ಇವರ ಬ್ಯಾಟಿಂಗ ಕ್ಷೇತ್ರದಲ್ಲಿ ಹಂಟ್, ಕೆರ್ಲ್ರಿ, ಮೆಕ್ಮೊರಿಸ್, ಕನ್ಹಾಯ್ ಬುಚ್ಚರ್, ಸೊಬರ್ಸ್, ನೊಲಮನ್, ಹೊಲ್ಪರ್ ಮೊದಲಾದ ಹೆಸರಾಂತ ಆಟಗಾರರು ಇರುವರು. ನಾಯಕತ್ವದಲ್ಲಿ ಜಗದ್ವಿಖ್ಯಾತ ಆಲ್‌ರೌಂಡ ಆಟಗಾರರಾದ ಗರಿಫಡ್ ಸೋಬರ್ಸರು ಇರುವರು. ಇವರ ಆಟ ಪ್ರದರ್ಶನವು ಪ್ರೇಕ್ಷಕರ ಕಣ್ಣಿಗೆ ಹಬ್ಬವು ಆದರೆ ಭಾರತೀಯ ಬೌಲರುಗಳಿಗೆ ಪ್ರಾಣ ಸಂಕಟವು. ಅನಂತರ ತೀವ್ರಗತಿಯ ಭೀತಿ ಉತ್ಪಾದಕ ಬೌಲಿಂಗ ಕ್ಷೇತ್ರದಲ್ಲಿ ಹೊಲ, ಗ್ರಿಫಿತ್, ಸೊಬರ್ಸ ಎಂಬ ವೀರತ್ರಯರು ಇರುವರು. ಪೂರಕ ಸ್ಪಿನ್ ಬೌಲಿಂಗಿಗೆ ಗಿಬ್ಸ, ಸೊಬರ್ಸ, ಸೊಲಮನ್ಸರು ಇರುವರು. ಹೀಗಾಗಿ ಈ ವರ್ಣರಂಜಿತ, ಮನಮೋಹಕ ಹಾಗೂ ರೋಮಾಂಚಕಾರಿ ಆಟ ಪ್ರದರ್ಶಿಸುವ ಆಟಗಾರರನ್ನೂ, ತೀವ್ರಗತಿಯ ಬೌಲರುಗಳನ್ನೂ ವೀಕ್ಷಿಸಲು ನಮ್ಮ ಕ್ರೀಡಾಂಗಣಗಳು ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿ ಹೋಗುವುದು ಮತ್ತು ವ್ಯವಸ್ಥಾಪಕರಿಗಂತೂ ಹಣದ ಸುರಿ ಮಳೆಯೇ ಆಗುವುದು. ಭಾರತವು ಈ ದಶಕದಲ್ಲಿ ಭಾರತದಲ್ಲಿ ಇತರ ರಾಷ್ಟ್ರಗಳ ವಿರುದ್ಧ ಉತ್ತಮ ಪ್ರದರ್ಶನವನ್ನು ನೀಡಿರುವುದು. ಭಾರತವು ಈ ವಿಶ್ವವಿಜಯಿಗಳಾದ ವೆಸ್ಟ ಇಂಡಿಸ್ ವಿರುದ್ಧ ತಮ್ಮ ಮೇಲ್ಮೆಯನ್ನು ತೋರಿಸುವುದೆ?

(ಸ್ವಾತಂತ್ರ್ಯ ವಿಶೇಷ ಸಂಚಿಕೆಗೆ ಬಂದುದು)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. C. 156/66

O. S. 318/64

ಅರ್ಜಿದಾರ — ಶಿವರಾಮ ಸೆಟ್ಟಿ.

ಎದುರು:-ತೇಜಪ್ಪ ಸೆಟ್ಟಿ ಕೂಡಾ 5 ಜನರು

1ನೇ ಎದುರಿಗೆ ಈ ಮೂಲಕ ತಿಳಿಸುವದೇನೆಂದರೆ,

1ನೇ ಎದುರು ತೇಜಪ್ಪ ಸೆಟ್ಟಿ, ಮಂಜಯ್ಯ ಸೆಟ್ರ ಮಗ, ಅಂಪಾರುಗ್ರಾಮ.

ಮೇಲ್ಕಂಡ ದಾವೆಯಲ್ಲಿ ಆದ ಡಿಕ್ರಿಯ ಹಕ್ಕನ್ನು ಅರ್ಜಿದಾರನು ಟ್ರಾನ್ಸಫರ ಪಡೆದು ಸದ್ರಿ ಡಿಕ್ರಿಯ ಮೇಲೆ ಮೇಲ್ಕಂಡ ಅಮಲ್‌ಜಾರಿ ಅರ್ಜಿಯನ್ನು ದಾಖಲು ಮಾಡಿರುತ್ತಾನೆ. ಸದ್ರಿ ಅಮಲ್‌ಜಾರಿ ಅರ್ಜಿಯು ತಾರೀಕು 9—9—66ಕ್ಕೆ ತನಿಖೆಗೆ ನಿಗದಿಯಾಗಿದೆ. ಆ ಕುರಿತು ನಿಮ್ಮ ಆಕ್ಷೇಪಣೆ ಏನಾದರೂ ಇದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದು. ಇದ್ದಕ್ಕೆ ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಕೇಳಿ ತೀರ್ಮಾನ ಮಾಡಲಾಗುವದೆಂತ ಈ ಮೂಲಕ ತಿಳಿಸಲಾಗುತ್ತದೆ.

M. Madhava Rao.
Advocate for Petitioner

ತಾರೀಕು 13—8—66,
ಮೊಕ್ಕಾಂ: ಕುಂದಾಪುರ.

ಅಭಿಪ್ರಾಯ

ಅಸಹಾಯಕ ಸರಕಾರ

ಶ್ರೀ ಶಿವಶಂಕರ

ಪರದೇಶಿ ಕ್ರಿಸ್ತೀಯ ಮತಪ್ರಚಾರಕರು, ಅನ್ಯಾನ್ಯ ರಾಷ್ಟ್ರಗಳ ಕಮ್ಯೂನಿಸ್ಟರು ಹಾಗೂ ಪಾಕಿಸ್ಥಾನದ ಭುಟ್ಟೋ ನಂತಹವರು ಭಾರತೀಯರ ಅವಹೇಳನೆಗಾಗಿ ಸಿಕ್ಕಿದ ಪ್ರಚಾರ ಸಾಧನಗಳನ್ನುಪಯೋಗಿಸಿಕೊಂಡಿದ್ದಾರೆ. ಅವರು ಪುಸ್ತಕ, ಪತ್ರಿಕೆ ಹಾಗೂ ಚಲಚಿತ್ರಗಳ ಮೂಲಕ ತಮ್ಮ ಕುಪ್ರಚಾರದ ದುಷ್ಕಾರ್ಯವನ್ನು ನಡೆಸುತ್ತ ಬಂದಿದ್ದಾರೆ. ಭಾರತೀಯರನ್ನು ಪಾಪಿಗಳು, ಗುಲಾಮರು, ಬೋರ್ಝ್ವಾಗಳು, ಕಾಫಿರರು.... ಈ ರೀತಿ ಅವರು ವರ್ಣಿಸಿರುವರು. ಇದು ಈಗ ಇರುವ ಭಾರತೀಯರ ವಿಷಯದಲ್ಲಿ ಮಾತ್ರವಲ್ಲ, ಹಲವಾರು ಶತಮಾನಗಳ ಹಿಂದೆ ಇದ್ದ ನಮ್ಮ ಪೂರ್ವಜರ ಕುರಿತೂ ಅವರು ಅದೇ ರೀತಿಯ ಅಪಪ್ರಚಾರ ನಡೆಸಿರುವರು. ಅದೇ ಗರಡಿಯಲ್ಲಿ ಪಳಗಿರುವ ಭಾರತೀಯರು, ಕ್ರಿಸ್ತೀಯ ಮತ ಪ್ರಸಾರಕರ ಶಾಲೆ-ಕಲಾಶಾಲೆಗಳಲ್ಲಿ ಕಲಿತವರು, ಪರದೇಶಗಳಿಗೆ ಹೋಗಿ ಬಂದವರು ಈ ಅಪಪ್ರಚಾರದ ಪ್ರವಾಹದಲ್ಲಿ ಸುಲಭವಾಗಿ ಸಿಕ್ಕಿಬಿಟ್ಟಿದ್ದಾರೆ.

ತಮಿಳುನಾಡಿಗೆ ಬಂದಿದ್ದ ಪಾದ್ರಿಯೊಬ್ಬನು ತಾನು ಬಹಳ ಶ್ರಮಪಟ್ಟು ಹೊಸ ಸಿದ್ಧಾಂತವನ್ನು ಕಂಡುಹಿಡಿದವನೆಂಬಂತೆ ನಟಿಸಿಕೊಂಡು, ತಮಿಳರ ಕಲಾಚಾರ—ಸಂಪ್ರದಾಯವು ಇತರ ಭಾರತೀಯರಿಗಿಂತ ಭಿನ್ನವಾದದ್ದು ಹಾಗೂ ಅವರು ಪ್ರತ್ಯೇಕ ಜನಾಂಗ, ಅವರ ಮೇಲೆ ಉತ್ತರದ ರಾಮನು ಬಂದು ಆಕ್ರಮಣ ನಡೆಸಿದನು. ಆ ಕಥೆಯೇ ರಾಮಾಯಣ.. ಈ ರೀತಿ ತಮಿಳುನಾಡಿನ ಬಾಂಧವನೆಂಬಂತೆ ಬಡಬಡಿಸಿ ಕೆಲವರನ್ನು ತನ್ನ ಬುಟ್ಟಿಯಲ್ಲಿ ಹಾಕಿಕೊಂಡನು. ಇದರ ಪರಿಣಾಮದಿಂದಾಗಿ ಶ್ರೀ ರಾಮಸ್ವಾಮಿ ನಾಯ್ಕರವರು ದ್ರಾವಿಡ ಕಳಗಮನ್ನು ಸ್ಥಾಪಿಸಿ ಅದೇ ಪ್ರಚಾರಕ್ಕಾರಂಭಿಸಿದರು. ಭಾರತದಿಂದ ಬ್ರಿಟಿಷರು ಹೋದ ಮೇಲೆ, ಚುನಾವಣೆಯ ವಾಸನೆ ಹಬ್ಬಿದಾಗ ದ್ರಾವಿಡಕಳಗಮಿನಿಂದ ಒಂದು ಗುಂಪು ಹೊರಬಂದು ದ್ರಾವಿಡಮುನ್ನೇಟ್ರ ಕಳಗಮೆಂಬ ಹೆಸರಿನಿಂದ ರಾಜಕೀಯ ಪಕ್ಷವಾಗಿ ಆರಂಭವಾಯಿತು. ದ್ರಾವಿಡ ಮುನ್ನೇಟ್ರಕಳಗಮಿನಿಂದ ಒಂದು ಗುಂಪು ಸಿಡಿದು ಹೊರಬಂದು ಕಾಂಗ್ರೆಸ್ಸಿನೊಂದಿಗೆ ಕರಗಿ ಹೋಯಿತು. ಅದಕ್ಕೆ ಕಾರಣವೆಂದರೆ ದ್ರಾವಿಡಕಳಗಮಿನವರು ಕಾಂಗ್ರೆಸ್ಸಿಗೆ (ತಿರು ಕಾಮರಾಜರವರಿಗೆ) ಬೆಂಬಲ ಕೊಡಲಾರಂಭಿಸಿದುದರಿಂದ ಆ ಗುಂಪು ನೇರ ಕಾಂಗ್ರೆಸ್ಸಿನಲ್ಲಿ ಸೇರಿಕೊಂಡಿತು. ಇತ್ತ ದ್ರಾವಿಡ ಕಳಗಂ ರಾಜಕೀಯ ಪಕ್ಷವಲ್ಲದ ಕಾರಣ ಅದರಿಂದ ಕೆಲವರು ಸ್ವತಂತ್ರರಾಗಿ ಚುನಾವಣೆಯಲ್ಲಿ ಭಾಗವಹಿಸುತ್ತಿದ್ದು, ಆ ಸ್ಥಾನಗಳಲ್ಲಿ ಕಾಂಗ್ರೆಸ್ಸಿನ ಅಭ್ಯರ್ಥಿಗಳು ಪೋಟಿ ನಡೆಸುವದಿಲ್ಲ, ಮಾತ್ರವಲ್ಲ, ಅವರ ಪ್ರಚಾರಕ್ಕೆ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಕಾಮರಾಜರೇ ಸ್ವತಃ ಬೀದಿ ಬೀದಿಗಳಲ್ಲಿ ಅಲೆಯುತ್ತಾರೆ ತನ್ನೆರಡೂ ಕೈಗಳನ್ನು ಮುಗಿದುಕೊಂಡು. ಈ ರೀತಿ ಆಡಳಿತ ಪಕ್ಷ ಕಾಂಗ್ರೆಸ್ಸಿನ ಸಂಪೂರ್ಣ ಸಹಕಾರ ಹಾಗೂ ಆಧಾರ (ಬೆಂಬಲ) ಇರುವದರಿಂದ ದ್ರಾವಿಡ ಕಳಗಮಿನವರೂ ಕ್ರಿಸ್ತೀಯ ಮತಪ್ರಸಾರಕರಂತೆ ಅಪಪ್ರಚಾರಕ್ಕೆ ಬಹಳ ಮುಂದೆ ಬಂದಿದ್ದಾರೆ.

ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀ ರಾಮಚಂದ್ರನೆಂದರೆ ತಿರುರಾಮಸ್ವಾಮಿ ನಾಯ್ಕರರಿಗೆ ಅದೇನೋ ಆಗುವದಿಲ್ಲ. ಆದರೂ ಆ ಹೆಸರನ್ನು ಬದಲಾಯಿಸಿಕೊಳ್ಳಲು ಅವರಿಗೆ ಇಷ್ಟವಿಲ್ಲ. ಕೆಲ ದಿನಗಳಹಿಂದೆ ತಿರುರಾಮಸ್ವಾಮಿ ನಾಯ್ಕರ ಪರಹಿಂಬಾಲಕರು ರಾಮಾಯಣದ ಅಪಪ್ರಚಾರಕ್ಕಾಗಿ ನಾಟಕವೊಂದನ್ನು ಅಭಿನಯಿಸಿದ್ದರು. ಅಲ್ಲದೆ ಶ್ರೀರಾಮ ನವಮಿಯ ಸಮಯ ಬಂದಾಗಲೂ ಇವರು ಕೆಲ ಭಿತ್ತಿಪತ್ರಗಳನ್ನೂ ಹಂಚುವ ಅಭ್ಯಾಸವನ್ನಿಟ್ಟುಕೊಂಡಿದ್ದಾರೆ. ಇದೀಗ ಇವರು ಇನ್ನೊಂದು ಆಟವನ್ನು ಆರಂಭಿಸಿದ್ದಾರೆ. ಅವರು ಅಲ್ಲಲ್ಲಿ 'ರಾಮಾಯಣದ ಮೇಲೆ ಭಾಷಣ"ವನ್ನಿತ್ತು ಅದರ ಅವಹೇಳನೆ ಮಾಡುತ್ತಿದ್ದಾರೆ. ಭಗವಾನ್ ಶ್ರೀರಾಮಚಂದ್ರ ಹಾಗೂ ಮಾತೆ ಸೀತಾದೇವಿಯ ಕುರಿತು ಬಹಳ ಹೀನಾಯವಾಗಿ ಮಾತಾಡುವದು ಅವರ ಅಭ್ಯಾಸ. ಇದನ್ನು ಸರಕಾರವು ತಡೆಗಟ್ಟಬೇಕೆಂದು ತಮಿಳುನಾಡಿನ ವಿಧಾನ ಸಭಾ ಸದಸ್ಯರು ಮುಖ್ಯ ಮಂತ್ರಿ ಶ್ರೀ ಭಕ್ತವತ್ಸಲಂರನ್ನು ಕೇಳಿಕೊಂಡರು.

ಈ ರಾಮಾಯಣ ಭಾಷಣವು ಸಾರ್ವ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 60 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಜನಿಕರ ನೈತಿಕ ಮಟ್ಟದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ ಮತ್ತು ಹಿಂದೂಗಳ ಧಾರ್ಮಿಕ ಮನೋಭಾವನೆಗೆ ನೋವನ್ನುಂಟು ಮಾಡುತ್ತದೆಂದು ಸದಸ್ಯರೊಬ್ಬರು ಹೇಳಿದಾಗ ಮುಖ್ಯ ಮಂತ್ರಿಯವರು, ಅದು ಸರಕಾರದ ಗಮನವನ್ನಾಗಲೇ ಸೆಳೆದು ಕೊಂಡಿದೆಯೆಂದೂ, ನ್ಯಾಯಾಲಯದ ದೃಷ್ಟಿಯಿಂದ ಹೇಗೆ ಕ್ರಮ ತೆಗೆದುಕೊಳ್ಳಬಹುದೆಂಬುದರ ಕುರಿತು ಯೋಚಿಸಲಾಗುತ್ತಿದೆಯೆಂದು ಹೇಳಿದರು. ಅದೇ ರೀತಿ ಇನ್ನೊಬ್ಬರ ಬೇರೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ- ಅದೆಲ್ಲಾ ಸರಿ, ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಸರಕಾರಕ್ಕೆ ಬಲ ಇದೆಯೇ ಎನ್ನುವದೇ ಮುಖ್ಯ ಪ್ರಶ್ನೆಯೆಂದರು. ಅದಕ್ಕೆ ಒಡನೆ ಓರ್ವ ಸದಸ್ಯರು—ಏನು, ಸರಕಾರ ಅಷ್ಟರ ಮಟ್ಟಿಗೂ ಅಸಹಾಯಕವೇ ಎಂದು ಕೇಳಿ ಬಿಟ್ಟರು. ಶ್ರೀ ಭಕ್ತವತ್ಸಲಂ (ಮುಖ್ಯ ಮಂತ್ರಿ) ತಮ್ಮ ಅಸಹಾಯಕತೆಯನ್ನೊಪ್ಪಿಕೊಂಡು ತಮ್ಮ ಬಳಿ ಸಾಕಾದಷ್ಟು ತಡೆಗಟ್ಟಲು ಕಾನೂನು ಇಲ್ಲವೆಂಬುದನ್ನು ಸ್ಪಷ್ಟಪಡಿಸಿದರು.

ಪರದೇಶಗಳಲ್ಲಿ ಹಲವಾರು ವರ್ಷಗಳಿಂದ ಬಳಕೆಯಲ್ಲಿದ್ದ ಪುಸ್ತಕವೊಂದನ್ನು ಭಾರತೀಯ ಪುಸ್ತಕ ಪ್ರಚಾರ ಸಂಸ್ಥೆಯೊಂದು ಮುದ್ರಿಸಿ ಮಾರಾಟ ಮಾಡಲು ಆರಂಭಿಸಿದುದೇ ತಡ; ಕೆಲವರ ಪತ್ರಿಕೆಯು ಮಹಿಳೆಯರ ಕುರಿತು ಅದರಲ್ಲಿ ಸರಿಯಾಗಿ ಬರೆದಿಲ್ಲವೆಂಬ ಕಾರಣದಿಂದ ಅವರು ಗಲಾಟೆ ಮಾಡಲಾರಂಭಿಸಿದುದೇ ತಡ ಸರಕಾರವು ಪುಸ್ತಕದ ಎಲ್ಲಾ ಪ್ರತಿಗಳನ್ನು ಜಪ್ತು ಮಾಡಿತು. ಅಷ್ಟು ದೂರ ಯಾಕೆ? ಇದೇ ತಮಿಳುನಾಡಿನಲ್ಲಿ ಒಂದು ತಮಿಳು ಪತ್ರಿಕೆಯು ನಾಸ್ತಿಕತೆಯ ಪ್ರಚಾರ ಮಾಡುತ್ತಿದ್ದು, ಒಮ್ಮೆ ಒಂದು ಮತದ ಕುರಿತು ಏನೋ ಬರೆಯಿತೆಂಬ ಕಾರಣಕ್ಕಾಗಿ ನ್ಯಾಯಾಲಯ ಅದರ ಮೇಲೆ ದಂಡ ವಿಧಿಸಿತ್ತು. ಅಂತಹ ಸಂದರ್ಭಗಳಲ್ಲಿ ಸರಕಾರವು ತನ್ನ ಅಸಹಾಯಕತೆಯನ್ನು ಬಹಿರಂಗಪಡಿಸಿರುವದಿಲ್ಲ. ಕಾಶ್ಮೀರದಲ್ಲಿ ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಎರಡು ಮತೀಯ ಪೂಜಾ (ಪ್ರಾರ್ಥನಾ) ಮಂದಿರಗಳಿಂದ ಕೆಲ ವಸ್ತುಗಳು ಕಳವಾದುವು. ಅದರಲ್ಲಿ ಒಂದು ಕೋಮಿನವರ ವಸ್ತುವಿಗಾಗಿ ರಾತ್ರಿ ಹಗಲು ಶೋಧ ನಡೆಸಿ ಕಂಡು ಹಿಡಿಯಲಾಯಿತು. ಇನ್ನೊಂದ ಮತದವರ ವಸ್ತುವನ್ನು ಇದುವರೆಗೂ ಕಂಡು ಹಿಡಿಯಲಿಕ್ಕಾಗಿರುವದಿಲ್ಲ. ಯಾಕೆ ಈ ರೀತಿ ಆಗುತ್ತದೆ? ಸರಕಾರ ಇಲ್ಲಿ ತನ್ನ ಅಸಹಾಯಕ ದಾರುಣ ಪರಿಸ್ಥಿತಿಯನ್ನು ವ್ಯಕ್ತಪಡಿಸಿಕೊಳ್ಳಬೇಕಾಗುತ್ತದೆ? ಇವರು ಮಾಡಿರುವ ಅನ್ಯಾಯವಾದರೂ ಏನು? ದೇವಸ್ಥಾನಗಳಿಂದ ಮೂರ್ತಿ ಮುಂತಾದ ಮುಖ್ಯ ವಸ್ತುಗಳು ಕಳವಾಗದಂತೆ ನೋಡಿಕೊಳ್ಳಬೇಕು, ಮಂದಿರಗಳು ನಾಶವಾಗದಂತೆ ಎಚ್ಚರಿಕೆ ವಹಿಸಿಕೊಳ್ಳಬೇಕು, ಪೂಜ್ಯ ಗೋಮಾತೆಯ ವಧೆಯನ್ನು ನಿಷೇಧಿಸಬೇಕು, ಹಿಂದೂಗಳ ಧಾರ್ಮಿಕ ನಂಬಿಕೆಯ ಮಹಾನ್ ಗ್ರಂಥಗಳಿಗೆ ಅಪಮಾನವಾಗದಂತೆ ನೋಡಿಕೊಳ್ಳಬೇಕು, ಭಾರತ ಮಾತೆಗೆ ಜಯವಾಗಲೆಂದು ಹೇಳುವದನ್ನು ತಡೆಯುವವರನ್ನು ಬಗ್ಗು ಬಡಿಯಬೇಕೆಂದು ಸರಕಾರದ ಬಳಿ ಯಾರಾದರೂ ಕೇಳಿಕೊಂಡರೆ ಸರಿ, ಈ ಸರಕಾರ ತನ್ನ ಅಸಹಾಯಕತೆಯ ನಗ್ನ ಪ್ರದರ್ಶನಕ್ಕೆ ಮುಂದಾಗುತ್ತದೆ. ಇದು ತಮಿಳುನಾಡಿಗೆ ಮಾತ್ರ ಸೀಮಿತವಲ್ಲ. ದಿಲ್ಲೀಶರೂ ಮಾಡುವದು ಅಷ್ಟೇ. ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಂಬಂತೆ ದಿಲ್ಲೀಶರ ಮಾರ್ಗವನ್ನೇ ಪ್ರಾಂತ ಸರಕಾರಗಳು ಅನುಸರಿಸುತ್ತಿವೆ.

ಇದರಲ್ಲಿ ತಮಾಷೆಯ ವಿಷಯ ಬೇರೊಂದಿದೆ. ಮುಖ್ಯ ಮಂತ್ರಿಯವರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ ಮೇಲೆ ಅಂತಹ ಕೆಲಸಗಳಿಗೆ ಜನತೆಯೇ ಮುಂದಕ್ಕೆ ಬರಬೇಕೆಂದು ಭಿನ್ನವಿಸಿಕೊಂಡಿದ್ದಾರೆ. ಅದು ಅವರ ಅನುಭವವೂ ಇದೆ. ಕನ್ಯಾಕುಮಾರಿಯ ಕೊನೆಯಲ್ಲಿ ಕಡಲ ನಡುವೆ, ವಿವೇಕಾನಂದ ಸ್ವಾಮೀಜೀ ಅಖಂಡ ಧ್ಯಾನದ ಸ್ಪಷ್ಟ ಪರಿಚಯ ಮಾಡಿಕೊಂಡ ಬಂಡೆಗಲ್ಲಿನ ಮೇಲೆ ಅವರ ಶತಮಾನೋತ್ಸವದ ಸಮಯ ಸ್ಮರಣ ಚಿನ್ಹೆಯನ್ನು ಸ್ಥಾಪಿಸಬೇಕೆಂದು ಸ್ವಯಂ ಸೇವಕರು ಸಾಗಿ ಬಂದಾಗ ಕೆಲ ದುಃಶ್ಶಕ್ತಿಗಳು ಎದುರು ಬಂದಾಗಲೂ ಸರಕಾರವು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿತ್ತು. ಜನತೆಯೇ ಅದನ್ನು ಸರಿಗಟ್ಟಿತ್ತು. ಆದರೆ ಪ್ರತಿ ಸಲವೂ ಹೀಗೇನೇ ನಡೆಯುವದಾದರೆ ಸರಕಾರ ಇರುವದಾದರೂ ಏಕೆ? ಇಂತಹ ಸುಲಭ ಪರಿಹಾರೋಪಾಯವನ್ನು ಹಿಂದೂಗಳಿಗೆ ಮಾತ್ರ ಹೇಳಿ ಕೊಡಲಾಗುತ್ತಿದೆ (ವಂಕಿ ಪ್ರಯೋಗದಂತೆ!) ಪುಸ್ತಕದ ಮೇಲೆ ಭಾರೀ ಗಲಾಟೆ ನಡೆದಾಗಲೂ ಅದೇ ರೀತಿ ಹೇಳಬಹುದಿತ್ತಲ್ಲಾ? ಮನಸ್ಸು ನೋಯುತ್ತದಾದಲ್ಲಿ ಆ ಪುಸ್ತಕವನ್ನು ಓದಬೇಡಿರೆಂದು ಹೇಳಬಹುದಿತ್ತಲ್ಲಾ?—ಮತ್ತೇಕೆ ಆ ಪುಸ್ತಕದ ಪ್ರತಿಗಳನ್ನು ವಶಪಡಿಸಿಕೊಳ್ಳಲಾಯಿತು? ಮತ್ತೆ ಮದ್ಯಪಾನ ಪ್ರತಿಬಂಧ ಕಾನೂನಾದರೂ ಏತಕ್ಕೆ? ಅದು ಕೆಟ್ಟದಾದಲ್ಲಿ ಜನತೆಯೇ ನಿಲ್ಲಿಸಿ ಬಿಡುತ್ತಿತ್ತಲ್ಲ?

ಅಸಹಾಯಕತೆಯ ಹಿಂದೆ ಅಡಗಿರುವ ವಿಷಯ ಬೇರೆಯೇ ಇದೆ. ಅದುವೇ ದ್ರಾವಿಡ ಕಝಗಂ—ಕಾಂಗ್ರೆಸ್ಸಿನೊಳಗಿರುವ ಸಂಬಂಧ, ಶ್ರೀ ಭಕ್ತವತ್ಸಲಂ ಅದೇನಾದರೂ ಕ್ರಮಕೈಗೊಂಡಲ್ಲಿ ಶ್ರೀ ರಾಮಸ್ವಾಮಿ ನಾಯ್ಕರ್‌ರವರು ಶ್ರೀ ಕಾಮರಾಜರ ಕಿವಿ ಹಿಂಡುತ್ತಾರೆ. ಅದರ ಪರಿಣಾಮ ಶ್ರೀ ಭಕ್ತವತ್ಸಲಂರವರ ಮೇಲಾಗುತ್ತದೆ. ಚುನಾವಣೆ ಹತ್ತಿರಕ್ಕೆ ಬರುತ್ತಿರುವದರಿಂದ ಶ್ರೀ ಭಕ್ತವತ್ಸಲಂ ಈಗ ತನ್ನ ಧೈರ್ಯ ಪ್ರಕಟಿಸುವಂತಿಲ್ಲ. ಈ ಕಹಿ ಗುಳಿಗೆಯನ್ನು ನುಂಗಿಕೊಂಡು ತನ್ನ ಅಸಹಾಯಕತೆಯ ಆಟ ಆಡುತ್ತಿರಬೇಕು. ಇದೇ ದ್ರಾವಿಡ ಕಝಗಂ ಇಂದು ಕಾಂಗ್ರೆಸ್ಸಿಗೆ ವಿರೋಧವಾಗಿದ್ದಲ್ಲಿ, ಸರಕಾರಕ್ಕೆ ಅದೇ ನೆಪನ ನಾಶಕ್ಕೆ ಸಾಕಾಗುತ್ತಿತ್ತು. ಅದರ ನಾಶಕ್ಕೆ. ಅಸಹಾಯಕತೆಯ ಗುಟ್ಟು ಇರುವದು ಇಲ್ಲಿ ಇದೇ ರೀತಿಯ ಆಟವನ್ನು ಹಿಂದಿ ವಿರೋಧಿ ಚಳುವಳಿಯ ಸಮಯವೂ ಆಡಲಾಗಿತ್ತು. ಆಗ ಕೇವಲ ಮೌನ—ವೇಷ ಎಳೆಸಿದ ಶ್ರೀ ಭಕ್ತವತ್ಸಲಂ (ಮುಖ್ಯ ಮಂತ್ರಿ) ಮೌನವಾಗಿರಬಹುದಿತ್ತಲ್ಲ್ಲ? (ಸೂಕ ಸಿಕ್ಕಿದವನನ್ನು ಸೆರೆಮನೆಯೊಳಗೆ ಕಳುಹಿಸಿದ್ದು? ಅಷ್ಟು ಹಳೆಯ ವಿಷಯ ಯಾಕೆ? ಇನ್ನೀಗ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಜಿಯವರು ಇತ್ತ ಬಂದಿದ್ದಾಗ ಯಾರ ಯಾರನ್ನೋ ಎಲ್ಲಾ ಬೈದು ಮಾಡಲಾಯಿತು? ತನಗೆ ಬೇಕಾದಾಗ ಮಾತ್ರ ಬಲ ಬರುತ್ತದೆ ಈ ಸರಕಾರಕ್ಕೆ! ಇತರ ಸಮಯದಲ್ಲಿ ಅಸಹಾಯಕತೆಯ ಪ್ರದರ್ಶನ! ಶ್ರೀಮದ್ ರಾಮಾಯಣದ ಮೇಲೆ ಅಪಪ್ರಚಾರ ನಡೆಯುವಂತೆ ಅನ್ಯಮತೀಯರ ಮತೀಯ ಗ್ರಂಥಗಳ ಮೇಲೆ ನಡೆಯುತ್ತಿದ್ದಲ್ಲಿ, ಈ ಸರಕಾರ ಹಾಗೂ ಮುಖ್ಯ ಮಂತ್ರಿ ಭಕ್ತವತ್ಸಲಂ ಸುಮ್ಮಗಿರುತ್ತಿದ್ದರೇ—ಅದೂ ಚುನಾವಣೆ ಹತ್ತಿರಕ್ಕೆ ಬರುತ್ತಿರುವಾಗ? ಖಂಡಿತವಾಗಿ ಅವರು ತಮ್ಮ ಶಕ್ತಿಯ ಪ್ರದರ್ಶನ ಮಾಡುತ್ತಿದ್ದರು. ಇಂದು ನಿಜವಾಗಿ ಸರಕಾರ ಅಸಹಾಯಕ ಪರಿಸ್ಥಿತಿಯಲ್ಲಿರುವದಿಲ್ಲ, ಅಸಹಾಯ ಸಂಸ್ಥಿತಿಯಲ್ಲಿರುವದು ಶ್ರೀ ಭಕ್ತವತ್ಸಲಂ ತನ್ನ ನಿಧಾನವಾದ ವ್ರತಗಳಿಗಾಗಿ. ಅವರು ಸರಕಾರ ಅಸಹಾಯಕ ಪರಿಸ್ಥಿತಿಯಲ್ಲಿದೆಯೆಂದು ಹೇಳಿ ತನ್ನ ಮುಖ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಯೇ? ಸರಕಾರದ ಗೌರವಕ್ಕೆ ಕುಂದು ಎನ್ನ ಸ್ವಾನದ ಘನತೆಯೇ ಅವರಿಗೆ ಮುಖ್ಯವೇನು?

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 131/63
O. S. No. 363/58

ಚಿನರಾಜಯ್ಯ —ಅರ್ಜಿದಾರ

ಮತ್ತು

ಜಾಕಿ ಸಂತಾನ್ ಸೋಜ (ಪೌತಿ) ಕೂಡಾ —ಎದ್ರಿರು

ಇವರೊಳಗೆ

ಉಡ್ಪಿ ತಾಲ್ಲೂಕು ನೀಲಾವರ ಗ್ರಾಮದ ಕದ್ರು ಜಾಕಿ ಸಂತಾನ್ ಸೋಜನ ಮಗ 9ನೇ ಎದ್ರಿ ಜೀವಾಂ ಸೋಜಗೆ ತಿಳಿಸುವುದು. ಇಸ್ತಿಹಾರು ನೋಟೀಸು ಬಗ್ಗೆ ತಾ. 25—8—66 ಕ್ಕೆ ಇಡಲ್ಪಟ್ಟ ಮೇಲ್ಕಾಣಿಸಿದ ಅಮಲ್‌ಜ್ಯಾರಿಯಲ್ಲಿ ನಿಮ್ಮದ್ದೇನಾದರೂ ಆಕ್ಷೇಪಇದ್ದರೆ ನೀವು ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟ ಮುಂದೆ ಹಾಜರು ಆಗಿ ಉದರಿಸಿ ಕೊಳ್ಳತಕ್ಕದ್ದು.

P. N. K. Rao
B. A., L. L. B.
ಅರ್ಜಿದಾರನ ಕಡೆ ಎಡ್ವಕೇಟ್.

ತಾ. 16—6—66, ಉಡ್ಪಿ: ದ. ಕ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 124/1966

ತೊಬಿಯಾಸ ವಲಿವೇರಾ —ವಾದಿ

ಮತ್ತು

ಅಂಜಲೀನ ವಲಿವೇರಾ ಕೂಡಾ—ಪ್ರತಿವಾದಿರು

5ನೇ ಪ್ರತಿವಾದಿ ಸಾಮುವೇಲ ವಲಿವೇರಾ —ರಫೇಲ ವಲಿವೇರನ ಮಗ, ಕುಂದಾಪುರ ತಾಲೂಕು ಹೆಮ್ಮಾಡಿ ಗ್ರಾಮದವಾಸವಾಗಿರುವ—

ವಾದಿಗೆ ಪ್ರತಿವಾದಿರಿಂದ ವಿಶ್ವಾಸಘಾತ ಸಂಬಂಧ ಬರಬೇಕಾದ ಆರನಾರ್ಕಡ ಅಕ್ಕಿ ಮಾರಿದ ಬಗ್ಗೆ ಮಾಡಿದ ಮೇಲೆ ಕಾಣಿಸಿದ ದಾವೆಯು ತಾ. 9—9—66ರಕ್ಕೆ ಕಸ್ಸಿಗೆ ಇಟ್ಟಿರುತ್ತದೆಂತಲೂ ಸದ್ರಿ ದಿವಸ ಹಗಲು 10 ಘಂಟೆಗೆ ಸದ್ರಿ 5ನೇ ಪ್ರತಿವಾದಿಯ ಹಾಜರಾಗಲಿಕ್ಕೆ ತಪ್ಪಿದ್ರೆ ಸದ್ರಿದಾವೆಯು ಮುಂದಿನ ತನ್ನಿಯು ನಡೆಯುವುದೆಂತಲೂ ಸದ್ರಿ 5ನೇ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ.

G. Sanjiva Rao.
Vakil for Plaintiff

ತಾ. 16—8—66, ಕುಂದಾಪುರ.

ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ

ಉಡುಪಿ ಅಜ್ಜರಕಾಡಿನ ಗಾಂಧಿ ಮೈದಾನಿನಲ್ಲಿ, ಮುಂಜಾನೆ ಧ್ವಜಾರೋಹಣ ಸಮಾರಂಭವು, ಉಡುಪಿ ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರಿಂದ ನಡೆದು, ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ಸಂಜೆ, ನಗರ ಸಭೆ ಹಾಗೂ ಸಾರ್ವಜನಿಕರ ನೇತೃತ್ವದಲ್ಲಿ ಬೋರ್ಡ ಹೈಸ್ಕೂಲಿನಲ್ಲಿ, ಶ್ರೀ ವಿ. ಜಿ. ಕೆದ್ಲಾಯ, ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಪ್ರಾರಂಭದಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿದರು. ಈ ಸಮಾರಂಭದಲ್ಲಿ ಡಾ| ಮೋಹನದಾಸ ಪೈ, ಶ್ರೀ ಕೆ. ಸುಬ್ರಾಯ ಆಚಾರ್ಯ ಮೊದಲಾದವರು ಮಾತಾಡಿದರು. ಅಧ್ಯಕ್ಷರು ಮಾತನಾಡುತ್ತಾ, ದೇಶದ ಪ್ರಗತಿ ಐಕ್ಯಮತ ಮತ್ತು ಕರ್ತವ್ಯ ನಿಷ್ಠೆಯಿಂದ ಸಾಧ್ಯವೆಂದರು, ಶ್ರೀ ಕೆ. ಕೇಶವ ಕುಂದರ ವರು ವಂದನಾರ್ಪಣೆ ಗೈದರು.

ಸತ್ಕಾರ ಕೂಟ

ಕಾಸರಗೋಡು, ಆಗೋಸ್ತು 4. ಸಾಹಿತ್ಯ ಸಂಶೋಧಕರೂ ಜ್ಞಾನ ವೃದ್ಧರೂ ಆದ ಶ್ರೀ ವೇಕಲ ರಾಮನಾಯಕರ ಹಾಗೂ ಉದಯೋನ್ಮುಖ ಚಿತ್ರಕಲಾವಿದ ಶ್ರೀ ಪಿ. ಎಸ್. ಪುಣಿಂಚಿತ್ತಾಯರ ಗೌರವಾರ್ಥವಾಗಿ, ಸ್ಥಳೀಯ ಬಿ. ಇ. ಎಂ. ಹೈಸ್ಕೂಲಿನಲ್ಲಿ ಗೀತಾ ಪ್ರಕಾಶನದ ವತಿಯಿಂದ ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಶ್ರೀ ಕಳ್ಳಿಗೆ ಮಹಾಬಲ ಭಂಡಾರಿಯವರು ಈ ಸಮಾರಂಭದ ಅಧ್ಯಕ್ಷತೆವಹಿಸಿದ್ದರು.

ಪ್ರಾರಂಭದಲ್ಲಿ ಶ್ರೀ ಅನಂತಪದ್ಮನಾಭ ಉಪಾಧ್ಯಾಯರು ಸ್ವಾಗತಿಸಿದರು. ಶ್ರೀ ಕೆ. ಎಸ್. ಶರ್ಮರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಶ್ರೀ ನಾಯಕರೂ, ಶ್ರೀ ಪುಣಿಂಚಿತ್ತಾಯರೂ, ಸಲ್ಲಿಸುತ್ತಿರುವ ಸೇವೆಯನ್ನು ಪ್ರಶಂಸಿಸಿ, ಅವರಿಗೆ ಇನ್ನಷ್ಟು ಯಶಸ್ಸು ಕೋರಿದರು.

ಶ್ರೀಗಳಾದ ಕಯ್ಯಾರ ಕಿಂಞಣ್ಣ ರೈ, ಎಚ್. ಎಂ. ನಾರಾಯಣ ಭಟ್, ಕ. ವಿನಾಯಕ ಶೆಣೈ ಮುಂತಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಶ್ರೀ ರಾಮನಾಯಕರೂ, ಶ್ರೀ ಪುಣಿಂಚಿತ್ತಾಯರೂ ಸಂದರ್ಭೋಚಿತ ಮಾತುಗಳನ್ನಾಡಿ, ತಮ್ಮ ಕೃತಜ್ಞತೆಗಳನ್ನರ್ಪಿಸಿದರು.

ಶ್ರೀ ಅನಂತಪದ್ಮನಾಭ ಉಪಾಧ್ಯಾಯರು ಧನ್ಯವಾದಾರ್ಪಣೆ ಮಾಡಿದರು.

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 244/66
in O S. No. 344/64.

ಕುಂಞಾ ರಾಮ ಮಣಿಯಾಣಿ—ಅರ್ಜಿದಾರ

ಮತ್ತು

ಅಬ್ದುಲ್ ಖಾದ್ರಿ ಬ್ಯಾರಿ—ಎದ್ರಿ.

ಸದ್ರಿ ಎದ್ರಿ ಅಬ್ದುಲ್ ಖಾದ್ರಿ ಬ್ಯಾರಿ, ಸಂಪಾಜೆ ಮಮ್ಮದ ಬ್ಯಾರಿ ಮಗ ಸಂಪಾಜೆ ಗ್ರಾಮ, ಸುಳ್ಯ ತಾಲೂಕು ಇವರಿಗೆ ಕೋರ್ಟು ಹುಕುಂ ಮೇರೆಗೆ ತಿಳಿಯಪಡಿಸುವುದೇನೆಂದರೆ—

ಸದ್ರಿ ಅರ್ಜಿದಾರನು ಅಮಲ್ದಾರಿ ತೆಗೆದು ನಿಮ್ಮ ಪಕ್ಕದ ದರಖಾಸ್ತು ಆಸ್ತಿಯನ್ನು ಏಲಂ ಮಾಡಿಸಲು ಹಾಕಿದ ಅರ್ಜಿದ ಇಸ್ತಿಹಾರಿಗೆ ನಿಮ್ಮ ಆಕ್ಷೇಪಣೆ ಏನಾದರೂ ಇದ್ದಲ್ಲಿ ತಾರೀಕು 6—9.1966ಕ್ಕೆ ಸದ್ರಿ ಕೋರ್ಟಿಗೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ದಾಖಲು ಮಾಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರೆಂದು ತೀರ್ಮಾನ ಮಾಡಿ ಯಾವ ರೀತಿಯಲ್ಲಿ ತೀರ್ಮಾನವಾಗುವುದೆಂದು ತಿಳಿದಿರಿ.

B. T. RAI
Advocate for Petitioner

ಪುತ್ತೂರು, ತಾರೀಕು 17—8—1966.

ಎಲ್ಲೆಲ್ಲಿ ಏನೇನು?

ಸ್ವಾತಂತ್ರ್ಯ ದಿನೋತ್ಸವ

ಮಂದಾರ್ತಿ, ಶ್ರೀ ಮಂದಾರ್ತಿ ದುರ್ಗಾ ಪರಮೇಶ್ವರೀ ಅಮ್ಮನವರ ಸಾನ್ನಿಧಿಯಲ್ಲಿ ಬೆಳಿಗ್ಗೆ ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಊರ ಅಧ್ಯ ಮಹನೀಯರೊಡಗೂಡಿ, ಶಾಲಾ ಬಾಲಕ ಬಾಲಕಿಯರ ಕೂಡುವಿಕೆಯಿಂದ ವಿಶೇಷ ಪೂಜೆಯನ್ನು ಮಾಡಲಾಯಿತು

ನಂತರ ಆಫೀಸಿನಲ್ಲಿ ಸದ್ರಿ ದೇವಸ್ಥಾನಕ್ಕೆ ಕಳೆದ 32 ವರುಷಗಳಿಂದಲೂ ನಿರಂತರ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಾ ಬಂದ ಕಟ್ಟಿನ ಬಾಗಿಲ ಕೂಸ ಮರಕಾಲರಿಂದ ಧ್ವಜಾರೋಹಣ ಕಾರ್ಯಕ್ರಮವು ನೆರವೇರಲ್ಪಟ್ಟಿತು. ಬಳಿಕ ಸಿಹಿತಿಂಡಿ ಹಂಚೋಣದ ನಂತರ ಜನಗಣ ಮನದೊಂದಿಗೆ ಸಭೆ ವಿಸರ್ಜನೆಯಾಯಿತು.

ಪೂರ್ಣಪ್ರಜ್ಞ ಕಾಲೇಜು

ಉಡುಪಿ, ತಾ. 12-8-66ರಂದು ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಲಲಿತ ಕಲಾ ಸಂಘ ಮತ್ತು ಭಾಷಾ ಸಂಘಗಳ ಉದ್ಘಾಟನಾ ಸಮಾರಂಭವು ಜರಗಿತು. ಶ್ರೀ ಕುಮಾರಿ ವಸುಧಾರವರ ಪ್ರಾರ್ಥನಾ ಗೀತದ ನಂತರ ಲಲಿತ ಕಲಾ ಸಂಘದ ಕಾರ್ಯದರ್ಶಿ ಶ್ರೀ ಎಸ್ ಮಹಾಬಲೇಶ್ವರ ಅಡಿಗರವರು ಪ್ರಧಾನ ಅತಿಥಿಗಳ ಪ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S C 559/1965

ವಾದಿ— ಪಟೇಲ್ ಕೃಷ್ಣಭಟ್ಟ.

ಪ್ರತಿವಾದಿರು — 1. ರಾಮಕೃಷ್ಣಯ್ಯ, 2. ಪ್ರಹಲ್ಲಾದ ರಾವ್.

ಶಿವಮೊಗ್ಗಾ ಡಿಸ್ಟ್ರಿಕ್ಟ್, ಶಿವಮೊಗ್ಗಾ ಟೌನ್ ಮಾರುತಿ ಭವನದಲ್ಲಿರುವ ಮಂಜುನಾಥಯ್ಯನವರ ಮಗ ಪ್ರಹಲ್ಲಾದ ರಾವ್ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ವಾದಿಯು ಕಳೆದ ಶುಭಕೃತು ಶೋಭಕೃತು ಮತ್ತು ಕ್ರೋಧಿ ಸಂವತ್ಸರಗಳ ಗೇಣಿ ಬಾಕಿ ಬರ ಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 8—9—1966ಕ್ಕೆ ಮೇಲಿನ ಕೋರ್ಟಿನಲ್ಲಿ ತಸ್ಕಿಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

N. S. Parameshwaraih
Advocate for Pltf

Date: 15-8-66, Coondapoor.

In the Court of the Munsiff of Coondapoor.

S. C No 220/1966

Between—

Chandu Hengsu—Plaintiff.

and

Venkamma Shedthy, dauther of Socramma Shedthy, Kanyane Village, Coondapoor Taluk.

—Defendant

Please take notice that the above suit filed against you for recovering the amounts due to the Plaintiff under the pro-note dated 24—5—1962 stands posted to 12—9—66 at 11 a m before the above Court If you fail to appear you will be declared Exparte and further orders will be passed

(Sd.) K. Ramappayya,
B A, BL.
Advocate for Plaintiff

Coondapoor, 18—8—66

ಹುಬ್ಬಳ್ಳಿ ಹೇಳಿತು.
"ನಾವು ಬರುತ್ತಿದ್ದೇವೆ"



ವಿಜಯಾ ಹೇಳಿತು:
"ನಿಮಗೆ ಸುಸ್ವಾಗತ"

ಈ ಜೆಟ್ ಯುಗದಲ್ಲಿ ಭಾರತೀಯ ಬ್ಯಾಂಕಿಂಗ್ ಉದ್ಯಮದ ಪ್ರಗತಿಯಲ್ಲಿ ತನ್ನ ವೇಗಗತಿಯಿಂದ ಪ್ರಮುಖ ಸ್ಥಾನ ಹೊಂದಿರಲು ವಿಜಯಾ ಬ್ಯಾಂಕಿಗೆ ಹೆಮ್ಮೆಯೆನಿಸುತ್ತದೆ

ಈ ಬಾರಿ ಹುಬ್ಬಳ್ಳಿ ಸಿಟಿ ಬ್ಯಾಂಕ್ ಲಿಮಿಟೆಡ್ ವಿಜಯಾ ಬ್ಯಾಂಕ್ ಲಿಮಿಟೆಡ್ ಜತೆ ಸ್ವಯಂಪ್ರೇರಿತವಾಗಿ ವಿಲೀನವಾಗುತ್ತದೆ

ಈ ವಿಲೀನವು 1966ರ ಆಗಸ್ಟ್ 27ರಿಂದ ಜಾರಿಗೆ ಬರುವುದು ದುರ್ಗದಬೈಲು ಮತ್ತು ವಿದ್ಯಾನಗರದಲ್ಲಿ ಇರುವ ಹುಬ್ಬಳ್ಳಿ ಸಿಟಿ ಬ್ಯಾಂಕಿನ ಎರಡು ಕಛೇರಿಗಳು 1966ರ ಆಗಸ್ಟ್ 29ರಿಂದ ವಿಜಯಾ ಬ್ಯಾಂಕಿನ ಶಾಖೆಗಳಾಗಿ ಕೆಲಸಮಾಡುವುವು 62 ಶಾಖೆಗಳನ್ನು ಹೊಂದಿದ್ದು ಸ್ವಾಗತ ವೈಯಕ್ತಿಕ ಗಮನದ ಸೇವಾ ಸಂಪ್ರದಾಯದೊಂದಿಗೆ ವಿಜಯಾ ಬ್ಯಾಂಕ್ ಮುನ್ನಡೆಯುತ್ತದೆ

ವಿಜಯಾ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್
ವಿಜಯಾ ಬ್ಯಾಂಕ್ ಬಿಲ್ಡಿಂಗ್" ಲೈಟ್‌ಹೌಸ್ ಹಿಲ್ ರಸ್ತೆ, ಮಂಗಳೂರು 3
ಅಧ್ಯಕ್ಷರು ಎಂ. ಸುಂದರ ರಾಮ ಶೆಟ್ಟಿ ಕಾರ್ಯದರ್ಶಿ ಪಿ. ಜಯರಾಮ ಶೆಟ್ಟಿ

ರಿಚಯ ಮಾಡಿಸಿ ಅವರನ್ನು ಸ್ವಾಗತಿಸಿದರು ಪ್ರಧಾನ ಅತಿಥಿಗಳಾದ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಉದ್ಘಾಟನಾ ಭಾಷಣ ಮಾಡುತ್ತಾ ಪ್ರಾಚೀನ ಕನ್ನಡ ಸಾಹಿತ್ಯದ ರಚನಾ ವೈಶಿಷ್ಟ್ಯವನ್ನು ಪಂಪನ ಕೃತಿಯ ಉದಾಹರಣೆಗಳಿಂದ ವಿವರಿಸುತ್ತಾ ಆಧುನಿಕ ಕವಿಗಳ ಉಚ್ಛೃಂಖಲ ಕವಿತೆಗಳ ಅರ್ಥಹೀನ ಶಬ್ದರಾಶಿಗಳ ಕುರಿತು ಉಲ್ಲೇಖಿಸಿ ವಿದ್ಯಾರ್ಥಿಗಳಿಗೆ ಭಾಷಾ ಶುದ್ಧಿಯ ಆವಶ್ಯಕತೆಯನ್ನು ತೋರಿಸಿದರು. ಪಠ್ಯ ಪುಸ್ತಕಗಳು ಕೂಡಾ ಈ ಉದ್ದೇಶ ಸಾಧನೆಗೆ ಬಾಧಕವಾಗಿರುವುದನ್ನು ಅನೇಕ ಉದಾಹರಣೆಗಳಿಂದ ಪರಿಹಾಸ ಪೂರ್ಣವಾದ ಶೈಲಿಯಲ್ಲಿ ವಿವರಿಸಿದರು. ಕಾಲೇಜಿನ ಪ್ರಿನ್ಸಿಪಾಲರಾದ ಇನಾಂದಾರರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಭಾಷಾ ಸಂಘದ ಕಾರ್ಯದರ್ಶಿ ಶ್ರೀ ಬಿ. ರಾಜೇಂದ್ರ ಆಚಾರ್ಯರು ಧನ್ಯವಾದಾರ್ಪಣೆ ಮಾಡಿದರು

ರಾವ್ ಬಹಾದೂರ್ ಅಡ್ಯಂತಾಯರ ನಿಧನ

ಮಂಗಳೂರು, ಕಳೆದ ತಾ. 8ರಂದು ರಾವ್ ಬಹದೂರ್ ಎನ್. ಎಂ ಅಡ್ಯಂತಾಯ, ರಿಟೈರ್ಡ್ ಡೈರೆಕ್ಟರ್ ಓಫ್ ಇಂಡಸ್ಟ್ರೀಸ್ ಎಂಡ್ ಕೋಮರ್ಸ್, ಮದ್ರಾಸು ಇವರು ತಮ್ಮ 76ನೇ ವಯಸ್ಸಿನಲ್ಲಿ ನಿಧನರಾದರು. ಇವರು ಮದ್ರಾಸು ಸರಕಾರದ ಹಿರಿಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಮಾತ್ರವಲ್ಲದೆ ಸಂಗೀತ ಕಲೆಯ ಮೇಲೆ ಅತ್ಯಾಸಕ್ತಿ ಹೊಂದಿದ್ದು ಅವರ ನಿಧನವು ಜಿಲ್ಲೆಯ ಸಂಗೀತ ಪ್ರಪಂಚಕ್ಕೊಂದು ತುಂಬಲಾರದ ನಷ್ಟವೆಂದು ಹೇಳಲಾಗಿದೆ. ಇವರು ಜಾಗತಿಕ ಯುದ್ಧದಲ್ಲಿ ಗ್ರೌಂಡ್ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿದವರು. ಮಂಗಳೂರು ಕರ್ನಾಟಕ ಪೊಲಿಟೆಕ್ನಿಕ್ ಸಂಸ್ಥೆಯ ಸ್ಥಾಪನೆಯ ಕಾರಣ ಪುರುಷರಲ್ಲಿ ಇವರು ಒಬ್ಬರು ಅಣ್ಣಾಮಲೈ ಯೂನಿವರ್ಸಿಟಿಯ ಸಿಲೆಕ್ಷನ್ ಬೋರ್ಡಿನ ಸದಸ್ಯರಾಗಿಯೂ ಇದ್ದರು ವಿಜಯಾ ಬೇಂಕಿನ ಮಾಜಿ ಡೈರೆಕ್ಟರ್ ರಾಗಿದ್ದ ಇವರು ಇಂಡಿಯನ್ ಬ್ಯಾಂಕಿನ ಸಲಹೆಗಾರರಾಗಿದ್ದರು ಅಲ್ಲದೆ, ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನ ಉಪಾಧ್ಯಕ್ಷರಾಗಿದ್ದು ಹಲವು ಸಂಸ್ಥೆಗಳೊಡನೆ ಸಂಪರ್ಕವಿರಿಸಿಕೊಂಡಿದ್ದರು

ಬಂಟರ ಯಾನೆ ನಾಡವರ ಸಂಘದ ಸದಸ್ಯರು, ರಾಮಕೃಷ್ಣ ವಿದ್ಯಾರ್ಥಿ ಭವನದ ನಿವಾಸಿಗಳು ಮತ್ತು ರಾಮಕೃಷ್ಣ ವಿದ್ಯಾರ್ಥಿನಿ ಭವನದ ನಿವಾಸಿಗಳು ಸಭೆ ಸೇರಿ ಅಡ್ಯಂತಾಯರ ನಿಧನಕ್ಕಾಗಿ ಸಂತಾಪ ವ್ಯಕ್ತಪಡಿಸಿ ದಿವಂಗತರು ಸಂಘಕ್ಕೆ ಮಾಡಿದ ಸೇವೆಯನ್ನು ಸ್ಮರಿಸಿದರು.

ಶ್ರಮದಾನ ಶಿಬಿರ

ಕಿಲ್ಲೂರು ಬೋರ್ಡ್ ಪ್ರಾಥಮಿಕ ಶಾಲೆಯ ವಠಾರಕ್ಕೆ ಆವರಣ ನಿರ್ಮಾಣದ ಕೆಲಸವನ್ನು 11—8—66ರಂದು ಶ್ರಮದಾನದ ಮೂಲಕ ಮಿತ್ತಬಾಗಿಲು ಪಂಚಾಯತ್, ಯುವಕ ಮಂಡಲಗಳ ಸದಸ್ಯರು, ಬಂಗಾಡಿ ಗ್ರಾಮ ಸೇವಕರ ಮತ್ತು ಬೇಸಿಕ್ ಹೆಲ್ತ್ ವರ್ಕರವರ ಸಂಯುಕ್ತ ನಿರ್ದೇಶನದಲ್ಲಿ ಊರ ಪರವೂರ ಮಹನೀಯರ ಸಹಕಾರದಿಂದ ಯಶಸ್ವಿಯಾಗಿ ಸಂಪೂರ್ಣಗೊಳಿಸಲ್ಪಟ್ಟಿತು ಈ ಶ್ರಮದಾನ ಶಿಬಿರದಲ್ಲಿ 59 ಮಂದಿ ಸಹ ಭಾಗಿಗಳಾಗಿದ್ದರು. ಶಿಬಿರಾರ್ಥಿಗಳಿಗೆ ಕೆಲವು ಮಹನೀಯರ ಉದಾರದಾನಗಳಿಂದ ಗಂಜಿ ಊಟ ಮತ್ತು ಚಹ ಪಾನಗಳ ವ್ಯವಸ್ಥೆ ಒದಗಿಸಲ್ಪಟ್ಟಿತು ಈ ಹಿಂದೆ ತಾ 8—8 66ರಲ್ಲೂ ಮತ್ತು ಈ ದಿನ ಕೂಡಾ ಎರಡು ದಿನಗಳ ಶ್ರಮದಾನದಿಂದ ರೂಪಾಯಿ 400/—ರಷ್ಟು ಕೆಲಸ ಪೂರ್ಣವಾಗಿರುತ್ತದೆ

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R E A 358/1966 O. S 231/62

ಕಮಲಾವತಿ ಅಂಮ — ಅರ್ಜಿದಾರಳು.

&

1. ದೂಮ ಪೂಜಾರಿ, ವೆಂಕಪ್ಪ ಪೂಜಾರಿ ಅಳಿಯ. 2 ಗಿರಿಯಪ್ಪ ಪೂಜಾರಿ, 1ನೇ ಎದ್ರಿಯ ಮೊಮ್ಮಗ, ಬಂಟ್ವಾಳ ತಾಲ್ಲೂಕು ಸರಪಾಡಿ ಗ್ರಾಮ — ಎದ್ರಿರು

ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ—

ಮೇಲ್ಕಂಡ ಡಿಕ್ರಿಯನ್ನು ಬಂಟ್ವಾಳ ಮುನ್ಸಿಫ್ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡಬೇಕಾಗಿ ಮಾಡಿದ ಮೇಲ್ಕಂಡ ಅರ್ಜಿಯು ನಿಮ್ಮ ಹಾಜರಾತಿಗೆ ತಾರೀಕು 9—9—1966ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಂವುದೇನಾದರೂ ಆಕ್ಷೇಪಗಳಿದ್ರೆ ಸದ್ರಿ ದಿವಸ ಪುತ್ತೂರು ಕೋರ್ಟು ಮುಂದೆ ನೀವು ಸ್ವತಹ ವಕೀಲರ ದ್ವಾರಾ ಹಾಜರಾಗಿ ಉದಹರಿಸಿ ಕೊಳ್ಳತಕ್ಕದ್ದು ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(Sd) C. V. Shastry
Advocate for Petitioner

ತಾ. 19—8—66, ಪುತ್ತೂರು

ಸಹಕಾರ ರೈತನ ಕಲ್ಪವೃಕ್ಷ

(ಎರಡನೇ ಪುಟದಿಂದ)

ಘದ ಸರ್ವ ಸದಸ್ಯರುಗಳೇ ಇಂತಹ ಪರಿಸ್ಥಿತಿಗೆ ಕಾರಣವೆಂದು ವಿಷಾದದಿಂದಲೇ ಹೇಳಬೇಕಾಗಿದೆ. ಸಹಕಾರಿ ಸಂಘದಲ್ಲಿ—ಚುನಾವಣಾ ಪದ್ಧತಿ ಇದ್ದು ತಮಗೆ ಇಚ್ಛೆ ಇರುವ ಉತ್ತಮ ನಡತೆಯ ಡೈರೆಕ್ಟರುಗಳನ್ನು ಆರಿಸುವ ಹಕ್ಕು ಸರ್ವ ಸದಸ್ಯರುಗಳಿಗೆ ಇದೆ. ಸಹಕಾರಿ ಸಂಘವನ್ನು ತನ್ನ ಸ್ವಂತ ಸ್ವಾರ್ಥಕ್ಕಾಗಿ ಉಪಯೋಗಿಸಿದ-ಅನ್ಯಾಯ ಮಾಡಿದ ಡೈರೆಕ್ಟರುಗಳಿದ್ದರೆ-ಅವರನ್ನು ಗದ್ದಿಗೆಯಿಂದ ಕೆಳಗಿಳಿಸಿ—ಹೀಗೆ ಮಾಡದೆ ಕೇವಲ ಕಲ್ಲಸಲ್ಲದ ಟೀಕೆ ಮಾಡುವುದರಿಂದ ಏನೂ ಪ್ರಯೋಜನವಾಗದು.

ಈಗಾಗಲೇ ೩ ಲಕ್ಷಕ್ಕಿಂತ ಹೆಚ್ಚು ಸಹಕಾರಿ ಸಂಘಗಳು ಭಾರತದಾದ್ಯಂತ ಸ್ಥಾಪಿಸಲ್ಪಟ್ಟಿರುವುವು. ಇವುಗಳಲ್ಲಿ ಎಷ್ಟೋ ಹಳ್ಳಿಗಳಲ್ಲಿ ಹೆಸರಿಗೆ ಮಾತ್ರ ಸಂಘ ಇದ್ದು ಕಾರ್ಯ ಮಾತ್ರ ನಡೆಯುದಿರಲು ಜನರಲ್ಲಿ ಜಾಗೃತಿ ಉಂಟಾಗದಿರುವುದೇ ಕಾರಣ.

ಸಹಕಾರಿ ಸಂಘಗಳ ಮುಖಾಂತರ ಪ್ರತಿಯೊಬ್ಬ ರೈತನು ಪರಮಾವಧಿ ಲಾಭವನ್ನು ಪಡೆಯಲು ಮುಂದೆ ಬರಬೇಕು. ರೈತನಿಗೆ ಸಾಲವನ್ನು ಕೊಡುವುದಷ್ಟೇ ಅಲ್ಲ ಆತನ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿ ಆತನು ಬೆಳೆದಂತಹ ಸರಕುಗಳು ಯೋಗ್ಯ ಬೆಲೆಗೆ ಮಾರಾಟವಾಗುವ ಏರ್ಪಾಡನ್ನು ಸಹ ಈ ಸಂಘಗಳು ಮಾಡುತ್ತಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಇದರಿಂದಾಗಿ ರೈತರಿಗೆ ತುಂಬಾ ಲಾಭವಾಗುತ್ತದೆ. ಸಹಕಾರ ತತ್ವದ ಮೇಲೆ ಉದ್ಯೋಗಗಳನ್ನು ಜನತೆಗೆ ಲಾಭ ಮತ್ತು ಹಿತವಾಗುವ ರೀತಿಯಲ್ಲಿ ನಡೆಸುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ.

ಕಾರ್ಯ ವಿಸ್ತಾರ ಹೊಂದಿದಂತೆಲ್ಲ ಸದಾ ಸಂಘದ ಸೂತ್ರಧಾರರಂತಿರುವ ಯುವಕ ಕೆಲಸಗಾರರ ಜವಾಬ್ದಾರಿ ಬೆಳೆಯುತ್ತ ಹೋಗುತ್ತದೆ. ನುರಿತ ಪ್ರಾಮಾಣಿಕ ಯುವಕ ಮುಖಂಡರು ಸಹಕಾರಿ ತತ್ವ ಯಶಸ್ವಿಗೊಳಿಸುವ ಪ್ರತಿಜ್ಞೆಗೈದು —ದೇಶದ ಮೂಲೆ— ಮೂಲೆಗಳಲ್ಲಿ—ಹೊಸ ಹೊಸ ರೂಪದ ಸಂಘಗಳನ್ನು ಸ್ಥಾಪಿಸಿ—ಹಬ್ಬಿರುವ ಸಮಸ್ಯೆಗಳ, ಕಾಳಸಂತೆ ಖದೀಮರ ನಿರ್ನಾಮ ಮಾಡಲು ಮುಂದಾಗಬೇಕು. ಶೋಷಣೆಯಿಂದ ಮುಕ್ತರಾಗಬೇಕಾದರೆ ಸಹಕಾರ ಒಂದೇ ಮಾರ್ಗ. ಸಮಾಜವಾದಿ ಸಮಾಜ ಸ್ಥಾಪನೆಯಾಗಬೇಕಾದರೆ ಶೋಷಣೆ ತಪ್ಪಬೇಕು. ನಮ್ಮಲ್ಲಿಯ ಸಾಂಪತ್ತಿಕ ಅಂತರ ಇಲ್ಲದಂತಾಗಿ ಆರ್ಥಿಕ ಸಾಮಾಜಿಕ ಹಾಗೂ ರಾಜಕೀಯ ಸರಿಸಮಾನತೆಯನ್ನು ಹೊಂದುವ ಉದ್ದೇಶ ಈಡೇರಬೇಕಾದರೆ ಸಹಕಾರ ತತ್ವವು ಎಲ್ಲ ವಿಧದಿಂದಲೂ ಸಹಾಯಕಾರಿಯಾಗದಿಯಲ್ಲದೆ ಪ್ರತಿಯೊಬ್ಬ ಪ್ರಜೆಯಲ್ಲಿಯೂ ಒಂದು ಹೊಸ ಚೈತನ್ಯ ತುಂಬುವ ಶಕ್ತಿಯನ್ನು ಈ ತತ್ವ ಪಡೆದಿವೆ. ನಮ್ಮ ಹಳ್ಳಿ ಹಳ್ಳಿಗಳಲ್ಲಿ ಸಹಕಾರದ ಸುವರ್ಣ ಧ್ವಜ ಹಾರಾಡಬೇಕು. ಆರ್ಥಿಕ ಮುಗ್ಗಟ್ಟಿನಲ್ಲಿ ನರಳುತ್ತಲಿಯಲ್ಲಿ ದಾರಿ ಕಾಣದೆ ಬಳಲುತ್ತಿರುವ ಭಾರತೀಯರಿಗೆ ಸಹಕಾರ ನಂದಾದೀಪವಾಗಿ ಬೆಳಕು ತೋರಿ ಪ್ರಗತಿ ಮಾರ್ಗದಲ್ಲಿ ಕೊಂಡೊಯ್ಯಲಿ.

(ಸ್ವಾತಂತ್ರ್ಯ ವಿಶೇಷಾಂಕಕ್ಕೆ ಬಂದ ಲೇಖನ)

ಸ್ವಾತಂತ್ರ್ಯ ಸ್ಮರಣೆ

ಹಲವು ಶತಮಾನಗಳ ದಾಸ್ಯದ ತಮವು ದೂರಕೆ ಸರಿದಿದೆ
ಭಾರತದ ಬಾಂದಳದಿ ವರ ಸ್ವಾತಂತ್ರ್ಯ ರವಿ ಥಳಥಳಿಸಿದೆ
ಚಂಚಕಿರಣವು ಹರಡಿದೆ
ಭಾರತವು ಚೇತನಗೊಂಡಿದೆ
ರವಿಯುದಿಸಿ ಬರೆ ಮೂಡುದೆಸೆಯಲಿ ಮುಂಬೆಳಕು ಹೊರ ಚಿಮ್ಮಿತು
ಪಂಚವಾರ್ಷಿಕ ಯೋಜನೆಯು ಕಲ್ಯಾಣ ನಾಂದಿಯ ಹಾಡಿತು.
ಸುಖದ ಸ್ವಪ್ನವ ಕಂಡಿತು
ಜನ ಕೋಟಿ ಸಂತಸವಡೆಯಿತು.
ಬಹಳ ವರ್ಷಗಳಿದ್ದ ಹಸುಗೆಯ ಪದ್ಧತಿಯು ರದ್ದಾಯಿತು
ಹೊಟ್ಟೆ ತುಂಬಾ ಉಂಡು ಬಾಳುವ ಭಾಗ್ಯದಾ ದಿನ ಬಂದಿತು
ಉಂಡು ದರ್ಪನೆ ತೇಗುತ
ಸುಖದಿಂದ ಬಾಳ್ದೆವು ಸಂತತ
ರೂಪುಗೊಂಡಿತು ಭಾರತದಿ ರಾಷ್ಟ್ರಾಭಿವೃದ್ಧಿಯ ಯೋಜನೆ
ಕೋಟಿಗಟ್ಟಲೆ ಹಣವ ಕರಗಿಸಿ ಮಾಡಲಾಯಿತು ಸಾಧನೆ
ರಸ್ತೆ ಕೃಷಿ ಮೇಣ್ ವಿದ್ಯೆಯು
ಅಭಿವೃದ್ಧಿ ಯಾದುದು ವಿಸ್ಮಯ!
ಸುಖದ ಹೊಂಬಿಸಿಲುದುಗುತ ಸ್ವಾತಂತ್ರ್ಯರವಿ ಮೇಲೇರಲು
ದವಸ ಧಾನ್ಯದ ಬೆಲೆಯು ದಿನ ದಿನಕೇರುತಿರಲದ ತಡೆಯಲು
ಆಯ್ತು ಬೆಲೆಯ ನಿಯಂತ್ರಣ
ಆಹಾರ ಸಿಗದಾಯ್ತಾಕ್ಷಣ.
ಹಸುಗೆ ಪದ್ಧತಿ ಜಾರಿಯಾಯಿತು ಕಾಳ ಸಂತೆಯು ನಡೆದುದ.
ಉಂಡು ಸುಖದಿಂ ಬಾಳುವರೆ ಸ್ವಾತಂತ್ರ್ಯ ತಾನಿರದಾದುದು.
ಲಂಚ ವಂಚನೆ ನಡೆವುದು.
ಸ್ವಾತಂತ್ರ್ಯ ಸ್ವೇಚ್ಛೆಯದಾದುದು.
ಕಾಮಧೇನುವ ಕಟ್ಟಿ ಕರೆದೀ ಭಾರತವು ಬರಡಾಯಿತೆ?
ಅಂಕೆ ಸಂಖ್ಯೆಯ ಹೆಚ್ಚಳದಿ ಸಂಪನ್ನರಾಷ್ಟ್ರವಿದೆನಿಸಿತೆ?
ರಾಮ ರಾಜ್ಯದ ಹೆಮ್ಮೆಯ
ಸ್ವಾತಂತ್ರ್ಯವಿದುವೇ ನಮ್ಮಯ?

—ಎಸ್. ತಿರುಮಲೇಶ್ವರ ಭಟ್ಟ, ವಿದ್ವಾನ್.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ

ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ ಅಥವಾ

ನವಯುಗ ಪ್ರೆಸ್, ಉಡುಪಿ.

5-8-1966

K... ನೋಂದಣಿ : Registrar of News ... India under No. ...2048/'57

REGD. No. B. G. 176
LICENCE No. 31
Licensed to Post without Prepayment

ಚಾರುಚಿಂತನ

ಅಗ್ನಿ ಪರೀಕ್ಷೆಯ ಹಾವಳಿಯಲ್ಲಿ

ತಾಂಡವವಾಡಿದ ಆಹಾರದ ಕೊರತೆಯು ವೇಳೆಯೂ ಹೆಚ್ಚು ತಲೆ ಕೆಡಿಸಿಕೊಳ್ಳುವಂತೆ ತೋರದ ಸುಬ್ರಹ್ಮಣ್ಯಂ ಇಂದು ತುಂಬ ಕಸಿವಿಸಿಗೊಂಡಿದ್ದಾರೆ. ಪೂರ್ವ ಕರ್ಮದ ಫಲ ಬೆನ್ನು ಬಿಡದೆ ಅವರನ್ನು ಕಾಡತೊಡಗಿದೆ. ಮಂತ್ರಿ ಮಂಡಳದಲ್ಲಿ ಎಳೆ ಹರೆಯದವರಾದ ಸುಬ್ರಹ್ಮಣ್ಯಂ ಹಲವಾರು ದಾಖಲೆಗಳನ್ನು ನಿರ್ಮಿಸಿದವರು. ಮದ್ರಾಸದ ಯಶಸ್ವೀ ಆಳಿಕೆಗೆ ಇವರು ಸಲ್ಲಿಸಿದ ಸೇವೆ ಅನುಪಮವಾದುದು. ತೃತೀಯ ಸಾರ್ವಜನಿಕ ಚುನಾವಣಾನಂತರ ದಿ| ಪ್ರಧಾನಿ ನೆಹರು ಅವರು ಇವರನ್ನು ದೆಹಲಿಗೆ ಒಯ್ದರು. ಹೊಸ ರಕ್ತಕ್ಕೆ ಸ್ಥಾನ ಕೊಡುವ ಅವರ ವಿಚಾರಕ್ಕೆ ಸುಬ್ರಹ್ಮಣ್ಯಂ ಸುಲಭದಲ್ಲಿ ಹೊಂದಿಕೊಂಡರು. ಅಂದು ಅವರಿಗೆ ಭಾರಿ ಉದ್ದಿಮೆಗಳ ಖಾತೆ ನೀಡಲಾಗಿತ್ತು. ಅಮೀನ ಚಂದ ಪ್ಯಾರೇ ಲಾಲ ಕಂಪೆನಿಯೊಂದಿಗಿನ ಉಕ್ಕಿನ ವ್ಯವಹಾರದ ಸಂಬಂಧದಲ್ಲಿ ಇವರು ಒಮ್ಮೆ ತೆಗೆದುಕೊಂಡ ನಿರ್ಧಾರವನ್ನು ಪ್ರಬಲ ಕಾರಣವಿಲ್ಲದೆ ಬದಲಿಸಿದ್ದರಿಂದ ದೇಶಹಿತಕ್ಕೆ ದಕ್ಕೆಯುಂಟಾಗಿದೆ ಎಂಬ ಆರೋಪವನ್ನು ಅವರ ಮೇಲೆ ಸರಕಾರಿ ಲೆಕ್ಕಪತ್ರ ಸಮಿತಿಯ ವರದಿ ಹೊರಿಸಿದ್ದು, ಇದು ಲೋಕ ಸಭೆಯಲ್ಲಿ ಸಾಕಷ್ಟು ಗೊಂದಲಕ್ಕೆ ಕಾರಣವಾಗಿದೆ.

ಪ್ರಧಾನಿ ಲಾಲಬಹದೂರರ ಕಾಲದಲ್ಲಿ ಆಹಾರ ಖಾತೆಗೆ ಬಂದ ಸುಬ್ರಹ್ಮಣ್ಯಂರನ್ನು ಇಂದಿರಾ ಗಾಂಧಿಯವರೂ ಅದೇ ಖಾತೆಯಲ್ಲಿ ಇರಿಸಿಕೊಂಡಿದ್ದಾರೆ. ದೇಶದಲ್ಲಿ ಸಾಕಷ್ಟು ಪ್ರಕೃತಿಯ ಕರುಣೆ, ರೈತರ ಉತ್ಸಾಹ ಹಾಗೂ ಆಹಾರ ಧಾನ್ಯಗಳ ಬೆಲೆ ನಿರ್ಧಾರ ಮತ್ತು ವಿದೇಶೀ ಸಹಾಯಗಳಿಂದ ಆಹಾರದ ಅಭಾವ ಉಲ್ಬಣಾವಸ್ಥೆಗೇರಿಲ್ಲ ನಿಜ. ಆಹಾರ ಮಂತ್ರಿ ಖಾತೆಯನ್ನು ಯಶಸ್ವಿಯಾಗಿ ನಿರ್ವಹಿಸಿದವರು ಭಾರತದ ಇತಿಹಾಸದಲ್ಲಿಯೇ ಇಲ್ಲ. ಶ್ರೀ ಸುಬ್ರಹ್ಮಣ್ಯಂ ಇದಕ್ಕೊಂದು ಅಪವಾದವೆನಿಸಿದರೂ ಎನಿಸಬಹುದಿತ್ತು.

ಸುಬ್ರಹ್ಮಣ್ಯಂ ಪ್ರಧಾನಿ ಗಾಂಧಿಯವರ ಪ್ರಬಲ ಸಮರ್ಥಕರು. ಸಲಹೆಗಳನ್ನು ನೀಡುವಲ್ಲಿಯೂ ಮುಂದಾಗುವವರು. ಮೌಲ್ಯ ವಿಚ್ಛೇದನದಂತಹ ಮಹತ್ವಪೂರ್ಣ ಸರಕಾರಿ ನಿರ್ಧಾರದ ಹಿಂದೆ ಸುಬ್ರಹ್ಮಣ್ಯಂ ಬೆಂಬಲವಿತ್ತೆಂದು ಹೇಳಲಾಗುತ್ತದೆ. ಭಾಷಾ ಗೊಂದಲವು ಮದ್ರಾಸದಲ್ಲಿ ನಡೆವಾಗ ನನ್ನ ರಾಜಿನಾಮೆಯನ್ನಿತ್ತು. ಸುಬ್ರಹ್ಮಣ್ಯಂ ಈಗ ಮತ್ತೆ ರಾಜಿನಾಮೆ ನೀಡುವರೇ ಎಂಬ ಸಂದೇಹ ಹುಟ್ಟಿದೆ. ಲೋಕ ಸಭೆಯಲ್ಲಿ ಹೇಳಿಕೆ ಕೊಡುತ್ತ ಅವರು ಸಾರಿದರು: "ಅಮೀನ ಚಂದ ಪ್ಯಾರೇ ಲಾಲ್ ಕಂಪೆನಿಯ ಸಂಬಂಧದಲ್ಲಿ ನಿರ್ಣಯ ಬದಲಿಸುವಾಗ ದೇಶಹಿತವನ್ನು ಕಡೆಗಣಿಸಿಲ್ಲ." ಪ್ರಧಾನಿ ಗಾಂಧಿಯವರೂ ಇದೇ ಅಭಿಪ್ರಾಯವನ್ನು ತಳೆದವರು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಬಾಯಿ ಹಾರಿಕೆಯಿಂದ ಪವಿತ್ರತೆಯುಳಿಸಿಕೊಂಡರೆ ನೆಮ್ಮದಿಯಿಲ್ಲ. ಇದಕ್ಕೆಂದೇ ಹಿರಿಯ ಮಂತ್ರಿಗಳು ಸುಬ್ರಹ್ಮಣ್ಯಂರ ಅಗ್ನಿ ಪರೀಕ್ಷೆಯಾಗಲಿ ಎಂದಿದ್ದಾರೆ. ಲೋಕ ಮತವನ್ನು ಮನ್ನಿಸುವ ಆಲೋಚನೆಯಿದು. ಆದುದರಿಂದ ಇಂದಿರಾ ಗಾಂಧಿಯವರು ನ್ಯಾಯಾಂಗ ವಿಚಾರಣೆ ನಡೆಸುವುದರ ಬಗ್ಗೆ ಗಂಭೀರಾಲೋಚನೆ ಮಾಡುತಿದ್ದಾರೆ. ಇದರಲ್ಲಿ ಸುಬ್ರಹ್ಮಣ್ಯಂ ಗೆದ್ದರೆಂದರೆ, ಅವರಿಗೆ ಮಾತ್ರವಲ್ಲ, ಕಾಂಗ್ರೆಸ್ ಪಕ್ಷಕ್ಕೆ ಹೊಸ ಹುರುಪು ಬರುವುದು.

o o o

ಮುಖ್ಯ ಮಂತ್ರಿ ನಿಜಲಿಂಗಪ್ಪನವರು ರಾಜ್ಯಹಿತವನ್ನು ಅಲಕ್ಷ್ಯಿಸಿದವರು ಅಲ್ಲ; ರಾಜ್ಯದ ರಾಜ್ಯಕಾರಣಿಗಳಲ್ಲಿ ಸಿಕ್ಕು ಅವರ ಅಪೇಕ್ಷೆಯಂತೆ ರಾಜ್ಯಹಿತ ಸಾಧನೆ ಮಾತ್ರ ಸಾಧ್ಯವಾಗಲಿಲ್ಲ. ಅವರಲ್ಲಿನ ದಾಕ್ಷಿಣ್ಯ ಪ್ರವೃತ್ತಿಯೇ ಇದಕ್ಕೆ ಕಾರಣವಿದ್ದರೂ ಇರಬಹುದು. ಪ್ರಜೆಗಳಿಂದ ಕನಕ ವೃಷ್ಟಿ ಸುರಿಸಿಕೊಂಡ ಇವರು ರಾಜ್ಯಕ್ಕಾಗಿ ತುಂಬ ದುಡಿದಿದ್ದಾರೆ, ದುಡಿಯುತ್ತಿದ್ದಾರೆ. ಆದರೆ, ಅದೇನೋ, ದೇಶದಲ್ಲಿ—ದೇಶದ ರಾಜ್ಯಕಾರಣದಲ್ಲಿ—ಕನ್ನಡದ ಬೆಳಕು ಕಂಡು ಬರುವುದು ಅಪರೂಪವೇ.

ಇತ್ತೀಚೆಗೆ ಬೆಂಗಳೂರಿನಲ್ಲಿ ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಕಂಚಿನ ಪುತ್ಥಳಿಯನ್ನು ಸುಮಾರು ೫೦ ಸಾವಿರ ರೂಪಾಯಿ ವೆಚ್ಚದಲ್ಲಿ ಸ್ಥಾಪಿಸಲು ನಾಗರಿಕರು ನಿರ್ಧರಿಸಿದ್ದಾರೆ. ಬೆಂಗಳೂರು ನಗರಕ್ಕೆ ಮುಖ್ಯ ಮಂತ್ರಿಯವರು ಸಲ್ಲಿಸಿದ ಸೇವೆಗೆ ಕೃತಜ್ಞತಾ ಸಮರ್ಪಣೆಯು ಇದು ಎಂದೂ ನಾಗರಿಕರ ಪರವಾಗಿ ವಾದಿಸಲಾಗುತ್ತದೆ. ಆದರೆ, ಅದೇನೇ ಇದ್ದರೂ ಈ ಯೋಜನೆಯು ತೀರ ಹುಚ್ಚುತನದ್ದೆಂದೂ ಮೂರ್ಖತನದ್ದೆಂದೂ ಸಹೃದಯ ನಿಜಲಿಂಗಪ್ಪನವರು ಹೇಳಿ ಇಂತಹ ಹುಚ್ಚುತನಕ್ಕೆ ಕೈಹಾಕಬೇಡಿರೆಂದೂ ಮನವಿ ಮಾಡಿಕೊಂಡಿದ್ದಾರೆ. ತಾನು ಜೀವಂತವಾಗಿರುವಾಗ ಮೂರ್ತಿ ಸ್ಥಾಪನೆ ಅನರ್ಥಕಾರಿಯೆಂದೂ ಸಾರಿದ್ದಾರೆ.

ಪ್ರಚಾರ ಪ್ರಿಯರಲ್ಲದ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಸರಳ ಹೃದಯರು, ಕುಟಿಲತೆಯು ಅವರಲ್ಲಿ ನೋಡ ಸಿಗದು. ರಾಜ್ಯಕ್ಕಾಗಿ ತಾನು ಮಾಡಿದ ಒಳಿತಿದ್ದರೆ, ಅದು ತನ್ನ ಕರ್ತವ್ಯ ಪಾಲನೆಯ ನಿರ್ವಹಣೆ ಮಾತ್ರವೆಂದು ಹೇಳಿಕೊಳ್ಳುವ ನಿರಹಂಕಾರಿ ಇವರು. ರಾಜ್ಯಕೀಯದಲ್ಲಿ ಅವಶ್ಯಕವಾದ ಕೊಂಕು ಜಟಿಲತೆಗಳಿಂದ ದೂರವಾದುದರಿಂದಲೇ ಆಗೊಮ್ಮೆ ಈಗೊಮ್ಮೆ ಅವರು ಬಿರುಗಾಳಿಯನ್ನೆದುರಿಸಬೇಕಾಗಿದೆ. ಪುತ್ಥಳಿಯ ಸ್ಥಾಪನೆಯೇನೋ ಒಳ್ಳೆಯದೇ. ಆದರೆ ಮುಖ್ಯ ಮಂತ್ರಿಗಳ ಮನಸ್ಸಿಗೆ ವಿರೋಧವಾಗಿ ಕ್ರಮ ಕೈಗೊಳ್ಳುವುದು ಎಷ್ಟು ಸಾಧುವಾದುದು?

ಇನ್ನೂ ಒಂದು ವಿಚಾರ. ದೇವತೆಗಳ ಮೂರ್ತಿಗಳನ್ನು ವಿದೇಶೀಯರು ಒಡೆದ ದೇಶವಿದು. ವಿದೇಶೀಯರ ಮೂರ್ತಿಗಳನ್ನು ಸ್ಥಾನಾಂತರ ಮಾಡಿದ ದೇಶೀಯರ ನಾಡಿದು. ಮುಂದೆ ದೇಶೀಯರ ವಿಗ್ರಹಗಳನ್ನೇ ಕಿತ್ತು ಬಿಡುವ ದೇಶೀಯರೂ ಅಧಿಕಾರ ಗದ್ದುಗೆಗೇರಲಾರರೆಂದು ಹೇಳಲಾದೀತೆ? ಪುತ್ಥಳಿ ಸ್ಥಾಪನೆಯಿಂದ ಏನು ಸಾಧಿಸಿದಂತಾದೀತು?

o o o

ಮೊದಲು ಹುಟ್ಟಿದ ಕಿವಿಗಳಿಗಿಂತ ಮುಂದೆ ಮೂಡುವ ಕೊಂಬುಗಳು ಗಟ್ಟಿ. ಹಾಗೆಯೇ ಲೋಕದಲ್ಲಿ ಮೊತ್ತಮೊದಲ ಕಮ್ಯುನಿಷ್ಟ ರಾಷ್ಟ್ರ ಸೋವಿಯತ್ತನ್ನು ಕೆಂಪು ಚೀನಾ ಮೀರಿಸಹತ್ತಿದೆ. ಈ ಎರಡು ದೇಶಗಳ ನಡುವಣ ನೈತಿಕ ಭಿನ್ನಾಭಿಪ್ರಾಯ ಜಗಜ್ಜನಿತವಾದುದು. ಇದು ದಿನೇ ದಿನೇ ಬೆಳೆಯುತ್ತಲೂ ಬರುತ್ತಿದೆ. ಜೊತೆಗೆ ಎರಡೂ ದೇಶಗಳ ನಡುವೆ ಸೀಮಾವಿವಾದವೂ ತಲೆಹಾಕಿದೆ—ರಷ್ಯ—ಕೆಂಪು ಚೀನಾಗಳ ನಡುವಣ ವಿರಸವು ಹೆಚ್ಚಲು ಬೇರೆ ಕಾರಣ ಬೇಕಾಗಿಲ್ಲ.

ಕೆಂಪು ಚೀನಾದ ಮಾವೋತ್ಸೆತುಂಗರ ನೇತೃತ್ವದಲ್ಲಿ ಇತ್ತೀಚೆಗೆ ೧೨ ದಿನಗಳ ತನಕ ಅಲ್ಲಿನ ಕಮ್ಯುನಿಷ್ಟ ಪಕ್ಷದ ಕೇಂದ್ರ ಸಮಿತಿಯ ಸಭೆ ಸೇರಿತು. ೭೨ ವರ್ಷದ ಮಾವೋರವರ ಆಡಳಿತೆಯಲ್ಲಿ ಇದು ತನ್ನ ವಿಶ್ವಾಸವನ್ನು ಪ್ರದರ್ಶಿಸಿತು; ಅಂದರೆ, ಮಾವನ ಮಾತನ್ನೇ ವೇದವಾಕ್ಯವೆಂದು ಮನ್ನಿಸಿತು. ರಷ್ಯದ ಧುರೀಣರು ಕಮ್ಯುನಿಜಂ ದ್ರೋಹಿಗಳೆಂದು ಹೆಸರಿಸಿತು. ಅವರೊಡನೆ ಕೂಡಿ ಕೆಲಸ ಮಾಡುವುದು ಅಸಾಧ್ಯವೆಂದು ಸಾರಿತು. ಮಾರ್ಕ್ಸ್ ಮತ್ತು ಲೆನಿನ್ನರಿಗೆ ದ್ರೋಹವೆಸಗಿ ಬಂಡವಳ ಶಾಹಿಯನ್ನು ಪುನರುಜ್ಜೀವನಗೊಳಿಸಿದವರು ಎಂದು ಸೋವಿಯತ್ ನಾಯಕರ ಮೇಲೆ ಆರೋಪ ಹೊರಿಸಿತು.

ತಮ್ಮ ದೇಶದ ಮೇಲೆ ಸಾಮ್ರಾಜ್ಯಶಾಹಿಗಳು ಸದಾ ಕಣ್ಣಿಡುತ್ತಿರುವರೆಂದೂ, ಯಾವ ಕಾಲಕ್ಕೂ ಆಕ್ರಮಣದ ಭೀತಿಯು ತಪ್ಪಿದ್ದಲ್ಲವಾದುದರಿಂದ ಎಚ್ಚರಿಕೆಯಿಂದಿರಬೇಕೆಂದೂ ಅಭಿಪ್ರಾಯಪಟ್ಟ ಸಮಿತಿಯ ಈ ನಿರ್ಣಯಗಳು ಕೊಸಿಗಿನ್ನರವರು ರಷ್ಯದ ಪ್ರಧಾನಿಯಾಗಿ ಪುನರಾಯ್ಕೆಗೊಂಡುದರ ಬಗ್ಗೆ ಮಾವೋರವರ ಪ್ರತಿಕ್ರಿಯೆ ಎಂದರೂ ತಪ್ಪಲ್ಲ. ಕೆಂಪು ಚೀನಾವು ಶಾಂತಿಯ ಹೆಸರಿನಲ್ಲಿ ಅಶಾಂತಿಯನ್ನು ಹರಡಿಸುವುದು, ಆಕ್ರಮಣ ನೀತಿಯನ್ನು ಬಿಟ್ಟುಕೊಡಲು ಸಿದ್ಧವಿಲ್ಲವೆಂಬುದು, ತನ್ನದೇ ಕಮ್ಯುನಿಜಂ ಎಂಬ ಜಂಬ ಕೊಚ್ಚುತ್ತಿರುವುದು—ಈ ಬಹಿರಂಗಾಧಿವೇಶನದಲ್ಲಿ ಬಹಿರಂಗವಾಯಿತು.

— ರಾತಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 141/1966.

ವಾಸುದೇವ ಭಟ್ ತಾಳೆ ..ವಾದಿ

ಮತ್ತು

ವಿಟೋಭ ಮೈಪಾಡಿ ಕೂಡಾ—ಪ್ರತಿವಾದಿಗಳು,

2ನೇ ಪ್ರತಿವಾದಿ—ಶೇಷಗಿರಿ ಮೈಪಾಡಿ, ಕೃಷ್ಣಪ್ಪ ಮೈಪಾಡಿಯವರ ಮಗ, ಉಪ್ಪಿನಕುದ್ರು ಗ್ರಾಮ.

ವಾದಿಯು ಪ್ರತಿವಾದಿರಿಂದ ಬರಬೇಕಾದ ವಿಳಂಬಿ ಸಂವತ್ಸರದ ಲಾಗ್ಯಾತು ಕ್ರೋಧಿ ಸಂವತ್ಸರದ ವರೆಗಿನ ಗೇಣಿ ಬಾಕಿ ಬಗ್ಗೆ ಮಾಡಿದ ಮೇಲೆ ಕಾಣಿಸಿದ ದಾವೆಯು ತಾ. 9—9—66ಕ್ಕೆ ತನಿಗೆ ಇಟ್ಟಿರುತ್ತದಂತಲೂ ಸದ್ರಿ ದಿವಸ ಹಗಲು 10ಘಂಟೆಗೆ 2ನೇ ಪ್ರತಿವಾದಿಯು ಹಾಜರಾಗಲಿಕ್ಕೆ ತಪ್ಪಿದ್ರೆ ಸದ್ರಿ ದಾವೆಯು ಮುಂದಿನ ತನಿಖೆಯು ನಡೆಯುವುದೆಂತಲೂ ಸಹಾ ಈ ಮೂಲಕ ಸದ್ರಿ 2ನೇ ಪ್ರತಿವಾದರಿಗೆ ತಿಳಿಸಲಾಗುತ್ತದೆ.

G. Sanjiva Rao,
Vakil

Coondapur,
ತಾ. 15—8—66.

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 45ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 46ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಅಂತೂ ಚಂದಾಹಣವು ಸಕಾಲದಲ್ಲಿ ಬಾರದಿದ್ದಲ್ಲಿ ನಾವು ಬರುವ ತಿಂಗಳ ಆರಂಭದ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.